(2) The inter-state seniority list included persons of Ex-B.S.R.T.C., who were allotted to the new State of Mysore on 1st January 1957.

(3) The preparation of the inter-state seniority list under Section 115 (5) of the S.R. Act by the Government of Mysore is an usurpation

[illegible] the power of Central Government; and (4) the integration of service of personnel not folling under Section 115 of the S.R. Act cannot be dealt with under the provisions of that Section. The judgment however, finally makes it clear that it does not and will not prevent the Government from reconsidering or re doing the matter in exercise of the power which they may have under the Constitution and subject to the provisions of the S.R. Act to the extent they are applicable to the situation.

(*b*) Yes.

(*c*) The employees of the B.S.R.T.C. though originally not civil servants of any State Government by virtue of legislation undertaken pursuant to Secion 109 of the S.R. Act, they subsequently acquired that status as from 1st January 1957 the date on which they were appointed by the New State of Mysore. There was no M.S R.T.C., in the New State of Mysore as on 1st January 19 7 but there was a Department of Government of Mysore called "MGRTD" as on that date. The employees of BSRTC., were transferred as from 1st January 1957 to serve in connection with the affairs of the New State of Mysore under B.S.R.T.C Order No. 2-T (30)/57, dated 31st December 1956. These persons were appointed by the New State of Mysore by Notification No. T. 8552-54/RT/190-56-2 dated 21st January 1957.

(*d*) The Interestate seniority list pulished by the Government of of Mysore in the Gazette dated 25th December 1969 was in respect of the MGRTD., employees as on 1st November 1956. It is true that the said inter-state Seniority list was published with the concurrence of the Government of India as contemplated under Section (5) 115 of the S.R. Act.

(*e*) The High Court of Mysore has in the Judgment dated 14th August 1972 in W.P. No. 448/69 observed that the final inter-state seniority list relating to the officials coming from the other regions have been made by the Union Government and that the list of the officials who are allotted from the B.S.R.T.C., as on 1st January 1957 is also available, and it would be necessary to prepare a gradation list as on 1st January 1957. In pursuance of the direction contained in this judgment and Article 30 of the Constitution, the Government of Mysore have now prepared and published a provisional gradation list of all the employees as on 1st January 1957, calling for objections to the same. These objections are yet to be considered and the list finalised thereafter.

(*f*) No. In view of the replies to clauses (*a*) and (*e*) there was no occasion to take the matter to the Supreme Court.

Chitradurga Town as a Tourist Centre

320. Sri **C. R. MOHAMED SAIFUDDIN** (Chitradurga).—

Will the Minister for Labour be pleased to state :—

(a) whether Chitradurga Town has been included as a place of tourist interest ;

(b) the places of tourist interest in Chitradurga town ;

(c) whether any steps have been taken up to improve the places of tourist interest in Chitradurga Town ?

Sri **AZEEZ SAIT** (Minister for Labour).—

(a) Yes.

(b) (1) Fort (2) Jamia Mosque.

(c) Yes.

Famine in Gulbarga District

341. Sri **BAPU GOWDA** (Shahapur).—

Will the Minister for Revenue be pleased to state :—

(a) whether there is famine in Gulbarga District ;

(b) if so, the reason for not declaring Gulbarga District as famine-stricken district ;

(c) the conditions required to declare this district as famine-stricken district ?

Sri **N. HUTCHAMASTHY GOWDA** (Minister for Revenue).—

(a) Acute scarcity conditions prevail in Gulbarga District.

(b) and (c) The old famine codes which are no longer relevant to the present day conditions did provide for declaring certain areas as "Famine affected" The scope and concept of "famine relief" have over the years undergone radical change and it is no longer necessary or desirable to declare any area which is affected by drought as famine area. Formal declaration of any areas as "Famine area" is an antiquated notion, which has no meaning in the present day circumstances.

Munireddy Palyam Disturbances

400. **Sri ABDUL KHUDDUS ANWAR** (Bhadravathi).—

Will the Chief Minister be pleased to state :—

(*a*) the number of deaths occurred during the Minireddy Palyam disturbance in Bangalore City ;

(*b*) the loss of property due to this incident ;

(*c*) the amount of compensation paid to the victims ;

(*d*) whether it has come to the notice of the Government that some of the top ranking Police officials are responsible for these riots ; if so, the action taken against such officers ?

Sri D. DEVARAJ URS (Chief Minister).—

(*a*) Four.

(*b*) About Rs. 2,33,806.

(*c*) An ex-gratia relief of Rs. 5,000 has been granted to the family of the deceased Police Constable, 643 Channarayappa of City Armed Reserve, Bangalore, who died while on duty during the communal disturbances at Munireddy Palya on 17th October 1972.

(*d*) No.

Elections to Belgaum Municipality

599. **Sri P. A. PAWASHE** (Uchagaon).—

Will the Minister for Municipal Administration be pleased to state :—

(*a*) the reasons for not publishing the programme of elections to the Belgaum Mumicipality even though its term has expired on 28-2-1973 ;

(*b*) whether it is a fact that the election cannot be held because of the delay in depositing the probable expenses for getting the electoral rolls printed by the Municipality ;

(*c*) when the direction to deposit the amount was given to the Municipal Council and why it was not deposited although the amount was provided for in the Municipal budget ;

(*d*) the person responsible for this ?

Sri B. BASAVALINGAPPA (Minister for Municipal Administration).

(*a*) Territorial divisions of—

(i) the Belgaum Municipality have not been finalised.

(ii) Government have since extended the term of the Municipal Council by six months.

(*b*) No.

(*c*) On 21-9-1972. Reason not known.

(*d*) Does not arise in view of reply to clause (*c*).

Calling Attention to a Matter of Urgent Public Importance

re: Purchase of land for construction of work-shop etc., in Raichur

Sri KAGODU THIMMAPPA (Sagar).—I beg to call the attention of the hon. Minister for Labour to the purchase of land for construction of workshop, etc., at Raichur.

Sri AZEEZ SAIT (Minister for labour).—I state as follows, Madam.

The Mysore State Road Transport Corporation constituted a committee to go into the question of establishing a Division at Raichur and for locating the Divisional Workshop, Offices, etc., and put up its recommendations.

Accordingly, the Committee after inspecting all the available lands decided that the workshop etc. should be located on the Raichur, Yeramarus Road and selected 20 acres of vacant land a little away from the office of the Superintendent of police. This land vests with the Mathadipathy of the Naradagudda Mutt. Proposal for the acquisition of this area was forwarded to the Deputy Commissioner, Raichur District, Raichur. The latter, however, intimated that this area is already under acquisition for the Mysore State Industrial Area Development Board, Bangalore and hence it was not available and Mysore State Road Transport Corporation may propose some other suitable land.

The Committee in its report has stated if no other land is available, the Mysore State Road Transport Corporation may acquire land belonging to a private party situated on the Raichur-Kurnool Road, the owner of which is one Sri Lakshman.

In view of the non-avilability of the land vested with Naradagudda Mutt as the same was required by the Institution indicated above, fresh inspection was conducted at Raichur by the Hon'ble Minister for Transport and the Chairman, M.S.R.T.C. along with Revenue Authorities and it was found that taking all aspects into consideration including the extent of land available to suit the need of a division in one compact area and other facilities like supply of water, accessibility. etc., the alternative site belonging to the private party *viz.* Sri Lakshman suggested by the Committee was large enough in area (32 acres) and suitable for locating the workshop, offices etc.'

This land is proposed to be acquired under the Mysore Land Acquisition Act and not by direct purchase from the party and the Corporation Board has approved of the acquisition of the same. In this context it is to be stated that the location of the Divisional Workshop etc. is done after much deliberation taking into account the advantage to the Corporational from the operational view point and its location, extent available, with relation to the existing bus stand and depot.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಇದಕ್ಕೆ ಸ್ಥಳದ ಪರಿಶೀಲನೆಗೋಸ್ಕರ ಎಂ. ಎಸ್. ಆರ್. ಟಿ. ಸಿ. ಅವರು ಒಂದು ಸಬ್‌ಕಮಿಟಿಯನ್ನು ಮಾಡಿದ್ದನ್ನರೇ ? ಆ ಸಬ್‌ಕಮಿಟಿಯವರು ಆ ನಿವೇಶನ ನಾಲಾಯಕ್ ಎಂದು ತಮ್ಮ ಅಭಿಪ್ರಾಯವನ್ನು ಬೋರ್ಡಿಗೆ ಕೊಟ್ಟಿದರೇ ? ಮತ್ತು ತಾವು ಸ್ಥಳದ ಪರೀಶಿಲನೆಗೆ ಹೋಗುವುದಕ್ಕೆ ಬೋರ್ಡಿನವರು ಕೇಳಿಕೊಂಡಿದ್ದರೇ ಅಥವಾ ತಾವೇ ಸ್ವಯಂಪ್ರೇರಣೆಯಿಂದ ಹೋಗಿ ನೋಡಿ ತಮ್ಮ ಅಭಿಪ್ರಾಯವನ್ನು ಸೂಚನೆಮಾಡಲಾಯಿತೆ ಎಂಬುದರ ಬಗ್ಗೆ ಉತ್ತರ ಬೇಕು ?

ಶ್ರೀ ಅಜೀಜ್‌ಸೇಟ್.- ಸಬ್‌ಕಮಿಟಿಯವರು ಈ ಜಾಗ ನಾಲಾಯಕ್ ಎಂದು ಹೇಳಿರುವುದು ಬೋರ್ಡಿನ ಗಮನಕ್ಕೂ ಬಂದಿಲ್ಲ, ನನ್ನ ಗಮನಕ್ಕೂ ಬಂದಿಲ್ಲ, ಮತ್ತು ನಾನು ಬೋರ್ಡಿಗೆ ಯಾವ ಡೈರೆಕ್ಷನ್‌ನ್ನೂ ಕೊಟಿಲ್ಲ ; ನಾನು ರಾಯಚೂರಿನ ಒಂದು ಸಮಾರಂಭಕ್ಕೆ ಹೋಗಿದ್ದಾಗ, ಆ ಸಂದರ್ಭದಲ್ಲಿ ಇನ್‌ಪೆಕ್ಷನ್ ಮಾಡಿದ್ದು ನಿಜ. ಆ ರೀತಿ ಇನ್‌ಪೆಕ್ಷನ್ ಮಾಡಬಾರದೆಂದು ಯಾವ ಕಾನೂನಿನಲ್ಲಿಯೂ ಹೇಳಿಲ್ಲ. ಮಾನ್ಯ ಸದಸ್ಯರ ಊಹೆಗಳು ಏನಿವೆ ಅವು ಬರೀ ಊಹೆಗಳು ಎಂದು ಹೇಳಬಹುದು.

Sri KAGODU THIMAPPA.—Is it a fact that a sub-committee was specially constituted to visit the spot and submit a report. On that basis is it not a fact that the sub-committee has submitted a report to the Board ?

Sri AZEEZ SAIT.—It is not correct.

ಶ್ರೀ ಕಾಗೋಡು ತಿಮ್ಮಪ್ಪ.—ಈ ನಿವೇಶನವನ್ನು ತೆಗೆದುಕೊಳ್ಳುವ ಸಂಬಂಧದಲ್ಲಿ ರಾಯಚೂರಿನ ಜಿಲ್ಲಾಧಿಕಾರಿಯವರು ಒಂದು ಎಕರೆಗೆ 7 ಸಾವಿರ ರೂಪಾಯಿಗಳನ್ನು ಕೊಡುವುದು ರೀಜನಬಲ್ ದರ ಎಂದು ಬರೆದಿದ್ದಾರೆ ಅಲ್ಲವೇ ?

Sri AZEEZ SAIT.—The Special Depty Commissioner has intimated that the rate of 7000/- per acre including the cost of well, and other structures is reasonable and acceptable to the M.S.R.T.C. ಅವರು ಎಂ. ಎಸ್. ಆರ್. ಟಿ. ಸಿ. ಗೆ ಬರೆದಿದ್ದಾರೆ.

Free sites to the poor in Bangalore

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಇಂದು ಸಾವಿರಾರು ಜನರು ಸೈಟ್ ಬೇಕೆಂದು ಮೆರವಣಿಗೆಯಲ್ಲಿ ಬಂದಿದ್ದಾರೆ. ಬೆಂಗಳೂರು ನಗರದಲ್ಲಿರುವ 18 ಲಕ್ಷ ಪ್ರಜೆಗಳ ಪೈಕಿ ಬಡವರಿಗೆ ಯಾರಿಗೂ ಉಚಿತವಾಗಿ ಸೈಟ್‌ಗಳನ್ನು ಕೊಟ್ಟಿಲ್ಲದಿರುವುದರಿಂದ ಅವರು ಮೆರವಣಿಗೆಯಲ್ಲಿ ಅದೂ ಬಿಸಿಲಿನಲ್ಲಿ ಬಂದಿದ್ದಾರೆ. ಮಾನ್ಯ ಅಧ್ಯಕ್ಷರು ಸಹ ಆ ಕಡೆಯಿಂದ

(ಶ್ರೀ ಕೆ. ಎಂ. ನಾಗಣ್ಣ)

ಬರುವಾಗ ಆ ಜನರನ್ನು ನೋಡಿರಬಹುದು. ಆದಕಾರಣ ಸಂಬಂಧಪಟ್ಟ ಮಂತ್ರಿಗಳು ಅಲ್ಲಿಗೆಹೋಗಿ ಅವರನ್ನು ಭೇಟಿ ಮಾಡಿ ಅವರಿಗೆ ಏನಾದರು ಹೇಳುವುದು ಒಳ್ಳೆಯದು.

ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಯಾರು ಯಾರೋ ಗುಂಪುಕಟ್ಟಿಕೊಂಡು ಬಂದರೆ ನಾವು ಹೋಗಿ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್‌ನಾಗರಾಜ್ (ಚಾಮರಾಜಪೇಟೆ).—ತೀರಾ ಬಡವರು ಮೆರವಣಿಗೆಯಲ್ಲಿ ಬಂದಿದ್ದಾರೆ. ಅವರು ಮೆರವಣಿಗೆಯಲ್ಲಿ ಬಂದಿರುವುದು ಶ್ರೀಮಾನ್ ಶಾಮಣ್ಣನವರ, ಶ್ರೀಮಾನ್ ನಾಗಣ್ಣನವರ ಮತ್ತು ನನ್ನ ನೇತೃತ್ವದಲ್ಲಿ. ಯಾರು ಯಾರೋ ಗುಂಪುಕಟ್ಟಿಕೊಂಡು ಬರುತ್ತಾರೆಂದು ತಾವು ಲಘುವಾಗಿ ಹೇಳಬಾರದು. ಒಂದು ಕಡೆ ಬಡವರಿಗೆ ಸೈಟ್‌ಗಳನ್ನು ಉಚಿತವಾಗಿ ಕೊಡುತ್ತೇವೆಂದು ವೇದಾಂತ ಹೇಳುತ್ತೀರಿ, ಇನ್ನೊಂದು ಕಡೆ ಕಟ್ಟಿಸಿಕೊಂಡಿರುವ ಮನೆಗಳನ್ನು ಒಡೆಸಿ ಹಾಕುತ್ತಿದ್ದೀರಿ. ಹೊಸಹಳ್ಳಿಯಲ್ಲಿ ಒಂದು ಮನೆಯನ್ನು ಒಡೆಸಿಹಾಕಿ 9 ತಿಂಗಳಾಯಿತು; ಇನ್ನೂ ಪರಿಹಾರ ಕೊಟ್ಟಿಲ್ಲ. ಬಡವರ ಉದ್ಧಾರ ಮಾಡುತ್ತೇವೆಂದು ಮಂತ್ರಿಗಳು ಹೇಳುತ್ತಾರೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮನೆಯನ್ನು ಒಡೆದು ಹಾಕಿದ್ದರೆ, ಅದಕ್ಕೆ ಕಾನೂನು ಇದೆ, ಕೋರ್ಟು ಇದೆ, ಅಲ್ಲಿ ಪರಿಹಾರವಾಗುತ್ತದೆ. ಇಲ್ಲಿ ಅದನ್ನು ಮಾತನಾಡುವುದರಿಂದ ಪ್ರಯೋಜನವಿಲ್ಲ; ಅದು ಕೇವಲ ಕಾಲಹರಣವಾಗುತ್ತದೆ. ಮನೆ ಇಲ್ಲದವರು ಮೆರವಣಿಗೆಯಲ್ಲಿ ಬಂದಾಕ್ಷಣ ಅದು ಪರಿಹಾರವಾಗುವುದಿಲ್ಲ, ಬಗೆಹರಿಯುವುದಿಲ್ಲ. ಅವರ ಒಂದು ಮನವಿ ನನ್ನ ಕೈಗೆ ಬಂದಿದೆ. ಅದರಲ್ಲಿ ಗೃಹಹೀನರಿಗೆ ನಿವೇಶನ ಉಚಿತವಾಗಿ ಹಂಚುವಂತೆ ಏರ್ಪಾಡು ಮಾಡಬೇಕೆಂದು ಹೇಳಿದ್ದಾರೆ. ಸೈಟ್‌ಗಳನ್ನು ಕೊಡುವ ವಿಚಾರದಲ್ಲಿ ಗ್ರಾಮಾಂತರ ಪ್ರದೇಶದ ಜನರಿಗೂ ಇವರಿಗೂ ಭೇದ ಕಲ್ಪಿಸಿದ್ದೀರಿ ಎಂದು ಸಹ ಅವರಲ್ಲಿ ಹೇಳಿದ್ದಾರೆ. ಮೊದಲಿಗೆ ಇದು ಪಾಲಿಸಿಮ್ಯಾಟರ್‌ಗೆ ಸಂಬಂಧಪಟ್ಟಿದ್ದು. ಬೆಂಗಳೂರು ನಗರದಲ್ಲಿರುವ ಬಡವರಿಗೆ ಉಚಿತವಾಗಿ ಸೈಟ್‌ಗಳನ್ನು ಹಂಚುತ್ತೇವೆಂದು ನಾವು ಎಲ್ಲಿಯೂ ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಚುನಾವಣೆ ಕಾಲದಲ್ಲಿ ಹೇಳಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ನೀವೂ ಸಹ ಚುನಾವಣೆಯಲ್ಲಿ ಹೇಳಿಕೊಳ್ಳಿ, ನಾವು ಚುನಾವಣಾ ಸಮಯದಲ್ಲಿ ಹೇಳಿದ್ದರೆ ಜನರಿಗೆ ಉತ್ತರ ಕೊಡುತ್ತೇವೆ. ಚುನಾವಣೆ ಕಾಲದಲ್ಲಿ ಹೇಳಿದ್ದರೆ ಅದು ಅಸೆಂಬ್ಲಿಗೆ ಸಂಬಂಧಪಡುವುದಿಲ್ಲ. ಆ ರೀತಿ ಹೇಳಿದ್ದರೆ ಅದನ್ನು ಅರಗಿಸಿಕೊಳ್ಳುವ ಶಕ್ತಿ ನಮಗೆ ಗೊತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಚುನಾವಣೆಯಲ್ಲಿ ಹೇಳಿದ್ದನ್ನು ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುತ್ತದೆ;

ಶ್ರೀ ಡಿ. ದೇವರಾಜ ಅರಸ್.—ನಾವು ಸೈಟುಗಳನ್ನು ಕೊಡುವುದಿಲ್ಲ ಎಂದು ಬೇಕಾದರೆ ತಾವು ಪ್ರಚಾರ ಮಾಡಿ, ಆ ರೀತಿ ಪ್ರಚಾರ ಮಾಡುವುದರಿಂದ ಜನರು ನಿಮ್ಮ ಕಡೆಗೆ ಬಂದರೆ ಬರಲಿ;

ಶ್ರೀ ವಾಟಾಳ್ ನಾಗರಾಜ್.—ಇದು ಅತಿರೇಕವಾಯಿತು. ಇಂದು ಸೈಟ್‌ಗಳು ಯಾರಿಗೆ ಸಿಗುತ್ತಿದೆ ಎಂಬುದನ್ನು ನೋಡಬಹುದು,

ಅಧ್ಯಕ್ಷರು —ತಾವು ಮತ್ತು ಮಾನ್ಯ ಬಂಗಾರಪ್ಪನವರು ಈ ರೀತಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಮಧ್ಯೆ ಮಧ್ಯೆ ಎದ್ದುನಿಂತು ಮಾತನಾಡುವುದು ಸರಿಯಲ್ಲ. ಅವರು ಚುನಾವಣೆ ಸಮಯದಲ್ಲಿ ಹೇಳಿದ್ದರೆ ನಾವು ಸಹ ಚುನಾವಣೆ ಸಮಯದಲ್ಲಿ ಹೇಳಬಹುದು ಈಗ ಮಾನ್ಯ ಶಾಮಣ್ಣನವರು ಮತ್ತು ಮಾನ್ಯ ನಾಗಣ್ಣನವರು ಕೇಳಿರುವ ಪ್ರಶ್ನೆಗೆ ಉತ್ತರ ಕೊಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಚುನಾವಣೆಯಲ್ಲಿ ನಾವು ಹೇಳಬೇಕಾದರೆ ಇನ್ನೂ 4 ವರ್ಷಗಳ ಕಾಲ ಕಾಯಬೇಕು ;

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ , ಬೆಂಗಳೂರು ನಗರದಲ್ಲಿರುವ ಬಡವರಿಗೆ ಉಚಿತವಾಗಿ ಸೈಟ್‌ಗಳನ್ನು ಕೊಡಬೇಕೆಂದು ಕೇಳಿದ್ದಾರೆ. ನಮ್ಮ ಅಭಿಪ್ರಾಯದಲ್ಲಿ ಆ ರೀತಿ ಉಚಿತವಾಗಿ ಬೆಂಗಳೂರು ಮತ್ತು ಇತರ ನಗರಗಳಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲ. ಹಳ್ಳಿಗಾಡಿನಲ್ಲಿರುವ ಜಮೀನು ಇಲ್ಲದ ಮತ್ತು ನಿವೇಶನ ಇಲ್ಲದ ಬಡವರಿಗೆ, ಅವರು ಯಾವ ಜಾತಿಯ ಜನರೇ

[illegible], ಉಚಿತವಾಗಿ ಸೈಟ್‌ಗಳನ್ನು ಒದಗಿಸುವ ಬಗ್ಗೆ ಕೇಂದ್ರಸರ್ಕಾರದ ಒಂದು ಸ್ಕೀಮ್ ಇದೆ. ಅದನ್ನು ಕಾರ್ಯಗತ ಮಾಡುತ್ತಿದ್ದೇವೆ. ಈಗಾಗಲೇ ಎರಡು ಲಕ್ಷಕ್ಕೂ ಹೆಚ್ಚು ಸೈಟ್‌ಗಳನ್ನು ಉಚಿತವಾಗಿ ಹಂಚಿಕೆ ಮಾಡಿದ್ದೇವೆ. ಆದರೆ ಬೆಂಗಳೂರು ನಗರದಲ್ಲಿ ಉಚಿತವಾಗಿ ಸೈಟ್‌ಗಳನ್ನು ಬಡವರಿಗೆ ಕೊಡುತ್ತೇವೆಂದು ಎಲ್ಲಿಯೂ ನಾವು ಹೇಳಿಲ್ಲ ; ಇದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈಗತಾನೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಹರಿಜನ ಮತ್ತು ಗಿರಿಜನರಿಗೆ ಮತ್ತು ಬಡವರಿಗೆ 30 ಅಡಿ 45 ಅಡಿ ಇರತಕ್ಕಂಥ ಚಿಕ್ಕ ಚಿಕ್ಕ ಸೈಟ್‌ಗಳನ್ನು ಮಾಡಿ ಅರ್ಧ ರೇಟಿನಲ್ಲಿ ಹಂಚುವುದಕ್ಕೆ ರೂಲ್ಸ್‌ನ್ನು ಬದಲಾವಣೆ ಮಾಡಿದ್ದೇವೆಂದು, ಹೇಳಿದ್ದಾರೆ. ಆ ರೀತಿ ಸರ್ಕಾರ ಒಂದು ನೀತಿಯನ್ನು ಹಾಕಿಕೊಂಡು ಕೆಲಸ ಮಾಡುತ್ತಿದೆ ಇವರುಗಳನ್ನು ಬಿಟ್ಟು ಬೇರೆಯವರಿಗೆ ಉಚಿತವಾಗಿ ಸೈಟ್‌ಗಳನ್ನು ಕೊಡುವುದು ಸಾಧ್ಯವಿಲ್ಲದಮಾತು. ಒಂದು ಪಕ್ಷ ನಾವು ಜನತೆಗೆ ಭರವಸೆ ಕೊಟ್ಟಿದ್ದರೆ ಅದನ್ನು ಉಳಿಸಿಕೊಳ್ಳುತ್ತೇವೆ ಈಗ ನಾವು ಬೆಂಗಳೂರು ನಗರದಲ್ಲಿ ಸೈಟ್‌ಗಳನ್ನು ಹಂಚಬೇಕಾದರೆ ಸರ್ಕಾರದ ಭೂಮಿ ಇರುವುದಿಲ್ಲ. ಇದ್ದರೂ ಅದನ್ನು ಟ್ರಸ್ಟ್‌ಬೋರ್ಡ್ ಮೂಲಕ ಮತ್ತು ಕಾರ್ಪೊರೇಷನ್ ಮೂಲಕ ಹಂಚಬೇಕಾಗುತ್ತದೆ. ಬೇರೆಯವರ ಜಮೀನಾಗಿದ್ದರೆಅದನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ, ಲೇ-ಔಟ್ ಮಾಡಬೇಕಾಗುತ್ತದೆ. ಇದನ್ನೆಲ್ಲಾ ಕ್ರಮವಾಗಿ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ - ಟ್ರಸ್ಟ್‌ಬೋರ್ಡ್ ಮತ್ತು ಹೌಸಿಂಗ್ ಬೋರ್ಡ್ ಇರುವುದು ಬಡವರಿಗೆ ಅಲ್ಲ, ಶ್ರೀಮಂತರಿಗಾಗಿ, ಮಂತ್ರಿಗಳಿಗೆ ಬೇಕಾದವರಿಗಾಗಿ, ಐ.ಎ.ಎಸ್. ಮತ್ತು ಐ.ಪಿ.ಎಸ್. ನಂತಹ ಅಧಿಕಾರಿಗಳಿಗಾಗಿ, ದೊಡ್ಡ ದೊಡ್ಡ ಮನುಷ್ಯರಿಗಾಗಿ, ಮಂತ್ರಿಗಳ ಲೆಫ್ಟ್ ಹ್ಯಾಂಡ್, ರೈಟ್ ಹ್ಯಾಂಡ್ ಯಾರು ಇರುತ್ತಾರೋ ಅಂತಹವರಿಗಾಗಿ; ಇಂದು ರಾಜಮಹಲ್ ಗುಟ್ಟಹಳ್ಳಿ, ಸದಾಶಿವನಗರದಲ್ಲಿ ಬಡವರಿಗೆ ಶೇಕಡ 2 ರಷ್ಟು ಕೂಡ ಕೊಟ್ಟಿಲ್ಲ ; ಈ ಎರಡು ಪರ್ಸೆಂಟ್ ಕೂಡ ನೂರಾರು ಸಲ ಅರ್ಜಿ ಹಾಕಿಕೊಂಡವರಿಗೆ ಮಾತ್ರ. ಬಡವರಿಗೂ ಮನೆ ನಿವೇಶನ ಉಚಿತವಾಗಿ ಕೊಡಬೇಕೆಂದು ಮಾನ್ಯ ಬಸವಲಿಂಗಪ್ಪನವರಿಗೂ ಮನವಿ ಕೊಟ್ಟಿದ್ದಾಗಿದೆ. ಆದಕಾರಣ ಇದನ್ನು ರಾಜಕೀಯ ಪ್ರಶ್ನೆಮಾಡದೆ, ಬಡವರು ಎಷ್ಟಿದ್ದಾರೆ ಎಂಬ ಬಗ್ಗೆ ಸರ್ವೆಮಾಡಿಸಿ ಎಲ್ಲರಿಗೂ ಸಂಪೂರ್ಣವಾಗಿ ಸೈಟ್‌ಗಳನ್ನು ಕೊಡುವ ಬಗ್ಗೆ ಆಶ್ವಾಸನೆ ಕೊಡಬೇಕು.

2-00 P.M.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ ಮಾತನ್ನು ಪೂರ್ಣವಾಗಿ ಒಪ್ಪುತ್ತೇನೆ. ಟ್ರಸ್ಟ್‌ಬೋರ್ಡಿನವರು ಬಡವರಿಗೆ ಸೈಟ್‌ಗಳನ್ನು ಕೊಡಲಿಲ್ಲ, ಶ್ರೀಮಂತರಿಗೇ ಕೊಟ್ಟಿದ್ದಾರೆಂಬ ಮಾತು ಹಿಂದಿನ ಕಥೆ ; ಅದನ್ನು ಬಿಟ್ಟುಬಿಡಿ. ಇನ್ನು ಮೇಲೆ ತಾವೇ ಬೇಕಾದರೂ ಅದನ್ನು ಹೇಳಬಹುದು. ಮಾನ್ಯ ಸದಸ್ಯರ ದೃಷ್ಟಿಯಲ್ಲಿ ಯಾರು ಬಡವರು ಎಂದು ಇದ್ದಾರೆ ಅಂಥವರು ಒಂದು ಪಟ್ಟಿಯನ್ನು ಮಾಡಿ ಅವರು ನಮಗೆ ಕಳುಹಿಸಿದರೆ, ಹೇಳಿವರೆ ಅದನ್ನು ಮಾಡಬಾರದು ಎಂದು ನಮ್ಮದೇನೂ ಇಲ್ಲ. ಜಾಗ ಇರಬೇಕು. ಅದಕ್ಕೆ ಸ್ವಲ್ಪ ವೇಳೆಯಾಗುತ್ತದೆ. ಟ್ರಸ್ಟ್‌ಬೋರ್ಡ್ ಅದು ಒಂದು ನೀತಿಯ ಮೇಲೆ ಶ್ರೀಮಂತರಿಗೆ ಮನೆಯು ಸೈಟು ಇಲ್ಲದಿದ್ದರೆ ಶ್ರೀಮಂತರಿಗೂ ಸೈಟು ಕೊಡಬೇಕಾಗುತ್ತದೆ, ಬಡವರಿಗೆ ಸೈಟು ಇಲ್ಲದಿದ್ದರೆ ಬಡವರಿಗೂ ಸೈಟನ್ನು ಕೊಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಕನಿಷ್ಠ ಯಾರಿಗೆ ಸೈಟು ಇಲ್ಲ ಅವರಿಗೆ ಸೈಟನ್ನು ಕೊಡಬೇಕು ಎಂದು ನೀತಿ ಇದೆ. ಕಾರಣಾಂತರದಿಂದ ಇಂಟರ್‌ಪ್ರಿಟೇಷನ್ ಬಂದು ಬೆಂಗಳೂರು ಪಟ್ಟಣದಲ್ಲಿ ಇಲ್ಲದೇ ಹೋದರೂ ಕೂಡ, ಅವರು ಬೇರೆ ಕಡೆ ಇದ್ದರೂ ಅಂಥವರಿಗೂ ಸೈಟುಗಳನ್ನು ಕೊಡಬೇಕು ಎಂದು ಒಂದು ನೀತಿಯನ್ನು ಹಾಕಿಕೊಂಡು ಬಂದಿದ್ದೇವೆ ಹೊರಗಡೆ ಮನೆಗಳು ಇದ್ದರೂ ಬೆಂಗಳೂರು ಪಟ್ಟಣದಲ್ಲಿ ನಿವೇಶನಗಳನ್ನು ತೆಗೆದುಕೊಳ್ಳುತ್ತಾರೆ ಎನ್ನುವುದರ ಮೇಲೆ ವ್ಯಾಖ್ಯಾನ ಮಾಡಬೇಕಾದ್ದಿಲ್ಲ. ಬಡವರಿಗೆ ಕೊಟ್ಟಿಲ್ಲ, ಸ್ವಲ್ಪ ಕೊಡಿಸಿ ಎಂದು ಹೇಳಿ. ಇದುವರೆಗೆ ಏತಕ್ಕೆ ಕೊಡಲಿಲ್ಲ, ಯಾವ ಕಾರಣದಿಂದ ಹೆಚ್ಚಿಗೆ ಕೊಡಲಿಲ್ಲ ಎಂಬುದು ಈಗ ಬೇಡ. ಇನ್ನು ಮೇಲೆ ಸ್ಪಷ್ಟವಾಗಿ ಹೇಳುತ್ತೇನೆ. ಮನೆ ಇಲ್ಲದ ಬಡವರಿಗೆ ಟ್ರಸ್ಟ್‌ಬೋರ್ಡ್ ಮುಖಾಂತರ ನಿವೇಶನವನ್ನು ಒದಗಿಸುವುದಕ್ಕೆ ನಾವು ಸರ್ವ ಪ್ರಯತ್ನವನ್ನೂ ಮಾಡುತ್ತೇವೆ. ಮನೆ ಮತ್ತು ಸೈಟು ಇದ್ದೂ ಮತ್ತೆ ಸೈಟುಗಳನ್ನು ಕೊಟ್ಟಿದ್ದರೆ ಅದು ತಪ್ಪು.

ಶ್ರೀ ಎಸ್. ಬಂಗಾರಪ್ಪ.—ಹೊರಗಡೆ ಅನೇಕ ಜನ ಮೆರವಣಿಗೆ ಬಂದಾಗ ಯಾರು ಯಾರು ಮೆರವಣಿಗೆ ಬರುತ್ತಾರೆಯೋ ಅವರಿಗೆಲ್ಲಾ ಉತ್ತರ ಹೇಳುವುದಕ್ಕಾಗುವುದಿಲ್ಲ ಎಂದು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪನವರು ಹೇಳಿದ್ದು ಸರಿಯಲ್ಲ.

ಅಧ್ಯಕ್ಷರು.—ಆ ವಿಷಯವನ್ನು ಶ್ರೀಮಾನ್ ನಾಗಣ್ಣನವರು ಹೇಳಿದ್ದಾರೆ. ಅದಕ್ಕೆ ಮುಖ್ಯ ಮಂತ್ರಿಗಳು ಉತ್ತರವನ್ನು ಹೇಳಿದ್ದಾರೆ. ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೋಣಂದೂರುಲಿಂಗಪ್ಪ.—ಮಾನ್ಯ ಅಧ್ಯಕ್ಷರೇ ಈ ತಿಂಗಳು 9 ನೇ ತಾರೀಖು 312 ನೇ ರೂಲ್ ಪ್ರಕಾರ ನಾನು ಒಂದು ನೋಟೀಸ್ ಕಳುಹಿಸಿದ್ದೇನೆ. ಅದು ಬಹಳ ಗಹನವಾದ ವಿಷಯ.

ಅಧ್ಯಕ್ಷರು.—ನಾನು ಅದನ್ನು ನೋಡಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ

Scope of Matters raised under Rule 312

Sri K. PUTTASWAMY (Chamandeshwari).—Madam, I rise on a point of order. It has been the practice in this House to raise certain matters for discussion under Rule 312 and I have been waiting for an opportunity of this kind to urge for your consideration a definite rulling on the scope of Rule 312. In my humble opinion this rule has not been used properly by the hon. Members of this House. Rule 312 reads thus:

> "A member who wishes to bring to the notice of the Assembly any matter which is not a point of order shall give notice to the Secretary in writing stating briefly the point which he wishes to raise in the Assembly together with reasons for wishing to raise it and he shall be permitted to raise it only after the Speaker has given his consent and at such time and date as the Speaker may fix."

Madam, I would like you to mark the words 'which is not a point of order'. A point of order can be raised only when a matter is being discussed. It presupposes that if a member wants to raise a discussion under Rule 312, the matter must have already been discussed. If the discussion goes on according to the Rules of Procedure, no point of order can be raised. If it is a matter relating to that discussion and if it is a very important matter, then it can be raised under Rule 312. Then, the member concerned will have to write to the Speaker, obtain permission of the Speaker and then only he can raise it. Now what is happening is that Rule 312 is being made use of for raising certain matters which according to the hon. Members are important. I do not think that falls within the scope of rule 312. If a matter is important, the hon. Members are entitled to make use of other provisions of the Rules of Procedure, *viz.* adjournment motion, two-and a-half hours' discussion or Calling Attention Notice. But I have been seeing that very sensitive and important matters are sought to be raised under rule 312 and very often I was not in a position to raise any point of order because the matter was so sensitive. I was afraid that I might be misunderstood by the House as trying to obstruct that very sensitive matter being brought before the House. I would very strongly urge the Speaker to kindly consider my point of order and give a considered ruling thereon so that it might act as a guidance to hon. Members in this behalf. According to mey knoweledge, rule 312 almost absolete and it is not made use of anywhere for raising a discussion because the scope is very much limited but in practice it is being enlarged. I would there request you, Madam, to kindly bestow your attention on this matter and give a ruling.

MADAM SPEAKER-- There is lot of force and I will examine it and give a ruling late.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಹೇಳಿದ ವಿಚಾರವೇ ತಮಗೆ ಪ್ರಧಾನವಾಗಿ ಕಂಡರೆ ಸ್ವಲ್ಪ ಕಷ್ಟ.

ಅಧ್ಯಕ್ಷರು.—ಅವರು ಹೇಳಿದ್ದರಲ್ಲಿ ಫೋರ್ಸ್ ಇದೆ ಎಂದು ಹೇಳಿದ್ದೇನೆ ಅಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ.—ಪಾಯಿಂಟ್ ಆಫ್ ಆರ್ಡರ್ ಹೊರತಾಗಿ ಎಲ್ಲಾ ವಿಷಯಗಳನ್ನು ಪ್ರಸ್ತಾಪಮಾಡಬಹುದು ಎಂದು ಇದೆ. ರೂಲಿನಲ್ಲಿ ಅದು ಸ್ಪಷ್ಟವಾಗಿ ಇದೆ.

> 312. "any... Matter which is not a point of order shall give notice to the Secretary in writing stating briefly the point which he wishes to raise in the Assembly......"

ಎಂದು ಇದೆ. ಆದ್ದರಿಂದ ನಾವು ಆ ವಿಚಾರವನ್ನು ಎತ್ತುವುದಕ್ಕೆ ಅವಕಾಶ ಇದೆ. ಒಂದು ಪ್ರಮುಖವಾದ ವಿಚಾರದ ಬಗ್ಗೆ ಒಬ್ಬ ಸದಸ್ಯನಿಗೆ ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ಆ ವಿಚಾರವನ್ನು ಎತ್ತುವುದಕ್ಕೆ ಅವಕಾಶ ಇದೆ. ಆದರ ಮಾನ್ಯ ಪುಟ್ಟಸ್ವಾಮಿಯವರು ಒಬ್ಬ ವ್ಯಕ್ತಿಗೆ ಒಂದು ವಿಚಾರ ಪ್ರಮುಖವಾಗಿ ಕಂಡರೂ ಈ ಸದನಕ್ಕೆ ಅದು ಪ್ರಮುಖವಾದ ವಿಚಾರವೆಂದು ಕಾಣದೆ ಇರಬಹುದು ಎಂದು ಹೇಳಿದರು. ಆದರೆ ಒಂದು ವಿಚಾರ ಬಹಳ ಪ್ರಮುಖವಾದುದು ಎಂದು ಒಬ್ಬ ಸದಸ್ಯ ತಮಗೆ ಮನವಟ್ಟು ಮಾಡುವುದಕ್ಕೆ ಮೊದಲು ತಮ್ಮ ಅನುಮತಿ ಪಡೆದುಕೊಂಡು ಅದನ್ನು ಹೇಳಿ, ಸರ್ಕಾರದ ವತಿಯಿಂದ ಒಂದು ಹೇಳಿಕೆ ಬರುವುದಕ್ಕೆ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಆ ದೃಷ್ಟಿಯಿಂದ ತಮ್ಮ ಅನುಮತಿ ಪಡೆದು ತನ್ಮೂಲಕ ಒಂದು ವಿಚಾರವನ್ನು ಎತ್ತುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ಅದನ್ನು ಗಮನದಲ್ಲಿಟ್ಟುಕೊಂಡು ತಮ್ಮ ರೂಲಿಂಗ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri C. M. ARUMUGHAM.—Madam Speaker, this is a point one which the hon. members of this House are entitled to express their views b cause any ruling that the Chair might give, if it goes in favour of Sri K. Puttaswamy, then the rule mentioned here needs to be redrafted or amended. But, before the Chair gives its ruling, I want to submit my views. The learned member is a practising Advocate and he mentioned what is meant by a point of order, when it can be raised, and all that. A point of order can be raised only when a matter is before the House. The rule provides an opportunity to a member to raise an issue, when the matter is not under discussion, provided the consent of the Sp·aker is there. It is the general permission given to the members subject to the decision of the Speaker. For all other things, there are separate provisions *viz.*, calling attention, adjournment, motion, etc. But so far as matters raised under tule 312 are concerned, it says that the matter can be raised with the permission of the Speaker. That is how all these days matters have been raised and therefore is no deviation from the rule. Therefore I submit that it does not warrant any ruling of the Chair.

MADAM SPEAKER.—When there is a point of order, there should be a ruling.

Sri C. M. ARUMUGHAM.—I submit that this rule 312 has stood the test of time all these years. It does not require any change in the present set up.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂತಹ ಪುಟ್ಟಸ್ವಾಮಿಯವರು ಬಹಳ ಪ್ರಾಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಜೀರೋ ಅವರ್ ಎಂದು ಏನು ಕರೆಯುತ್ತೇವೆ ಅದನ್ನು ಕೂಡ ರೂಲ್ 312 ರ ಜೊತೆಗೆ ಅವರು ಪ್ರಸ್ತಾಪ ಮಾಡಿದ್ದಾರೆ. ರೂಲ್ 312ರಲ್ಲಿ "Any matter" ಎಂದು ಇದೆ. ಮಾನ್ಯ ಪುಟ್ಟಸ್ವಾಮಿಯವರ ಅಭಿಪ್ರಾಯದಲ್ಲಿ ಅವರು ಎರಡು ಕಾರಣವನ್ನು ಹೇಳಿದರು. ಒಂದು ಇಂಪಾರ್ಟೆಂಟ್ ಇರಬಹುದು; ಇನ್ನೊಂದು ಸೆನ್ಸಿಟಿವ್ ಎಂದು ಹೇಳಿದರು. ತಾವು ಒಂದು ವೇಳೆ 312 ರ ಪ್ರಕಾರ ಅದನ್ನು ಎತ್ತುವ ಹಾಗೆ ಇಲ್ಲವೆಂದು ರೂಲಿಂಗ್ ಕೊಟ್ಟರೆ, ನಮಗೆ ಆ ಮೇಲೆ ಯಾವ ವಿಚಾರವನ್ನು ಸಹ ಎತ್ತುವುದಕ್ಕೆ ಅವಕಾಶ ಇರುವುದಿಲ್ಲ. ಆದ್ದರಿಂದ ತಮ್ಮ ರಕ್ಷಣೆ ಕೇಳುವುದು ಇಷ್ಟೆ. ನಮಗಿರತಕ್ಕಂತಹ ಹಕ್ಕನ್ನು ಎತ್ತಿ ಹಿಡಿಯದಿದ್ದರೆ ಈ ಪ್ರಶ್ನೆ ಪರಿಹಾರ ಸಿಗುವುದಿಲ್ಲವೆಂಬ ಅಭಿಪ್ರಾಯ ನಮಗೆ ಇದೆ. ಆ ದೃಷ್ಟಿಯಿಂದ 312 ರೂಲ್ ಪ್ರಕಾರ ಇನ್ ರೈಟಿಂಗ್ ನೋಟೀಸ್ ಕೊಡಬೇಕೆಂದು ಇದ್ದರೂ ಕೂಡ, ರೂಲ್ 312 ರ ಪ್ರಕಾರ ನೋಟೀಸ್ ರೈಟಿಂಗ್‌ನಲ್ಲಿ ಕೊಡದಿದ್ದರೂ ಹಾಗೆಯೇ ರೈಸ್ ಮಾಡಬಹುದು ; ಮತ್ತು ಅದನ್ನು ಹಿಂದಿನಿಂದಲೂ ಹಾಗೆ ರೈಸ್ ಮಾಡುವುದಕ್ಕೆ ಅವಕಾಶ ಕೊಟ್ಟುಕೊಂಡು ಬಂದಿದ್ದಾರೆ. ಆದ್ದರಿಂದ ಅದೊಂದು ಹಿಂದಿನಿಂದಲೂ ನಡೆದುಕೊಂಡು ಬಂದ ಕನ್‌ವೆನ್‌ಶನ್. ಆದ್ದರಿಂದ ಅದನ್ನು ರೂಲಿಂಗ್ ಕೊಡುವಾಗ ಎತ್ತಿಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಪುಟ್ಟಸ್ವಾಮಿಯವರು ರೂಲ್ 312ರ ವಿಚಾರವನ್ನು ಇಲ್ಲಿ ಎತ್ತುವ ಬಗ್ಗೆ ಏನೊಂದು ಕ್ರಿಯಾಲೋಪವನ್ನು ಎತ್ತಿದ್ದಾರೆ, ಅದರ ಬಗ್ಗೆ ಹೇಳುವುದಾದರೆ, ರೂಲ್ 312 ಕೆಳಗಡೆ ಯಾವುದೇ ವಿಷಯ ಪ್ರಸ್ತಾಪ ಮಾಡುವುದಕ್ಕೆ ಮೊದಲು ಅಧ್ಯಕ್ಷರು ಅನುಮತಿ ಕೊಡದಿದ್ದರೆ ಎತ್ತುವುದಕ್ಕೆ ಸಾಧ್ಯವಿಲ್ಲ. ಅನುಮತಿ ಇದುವರೆಗೂ ಕೊಟ್ಟಿದ್ದರೆ, ರೂಲ್ 312ನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಲ್ಲವೆಂದು ಅರ್ಥವಾಗುತ್ತದೆ. ಮತ್ತು ರೂಲ್ಸ್ 312ನ್ನು ಅಧ್ಯಕ್ಷರು ಮಿಸ್ ಯೂಸ್ ಮಾಡಿದ್ದಾರೆಂದು ಅರ್ಥವಾಗುತ್ತದೆ. ಆ ಅರ್ಥ ಇದರಿಂದ ಬರುತ್ತದೆ. ಪ್ರಮುಖವಾದ ವಿಷಯಗಳ ಬಗ್ಗೆ ಚರ್ಚೆಮಾಡಲು ಅವಕಾಶ ಕೊಡಬಹುದು. ಆದರೆ ಈ ವಿಷಯವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡುವುದಕ್ಕಿಂತ ಮುಂಚೆ ಅದು ಪ್ರಮುಖವಾದ ವಿಷಯ ಅಲ್ಲವೇ, ಹೌದೇ ಎಂದು ನಿರ್ಣಯಕ್ಕೆ ಬರುವುದಕ್ಕೆ ಸಾಧ್ಯವಿಲ್ಲ, ಅಂಥಾದ್ದನ್ನು ಸ್ಪೀಕರ್ ಅವರು ತೀರ್ಮಾನ ಮಾಡಬಹುದು.

Sri K. PUTTASWAMY.—I did not raise the point of order because vary sensitive matter were raised. I didn't try to obstruct.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರು ಇದರ ಬಗ್ಗೆ ರೂಲಿಂಗ್ ಕೊಡುವ ಕಾಲದಲ್ಲಿ 312ನೇ ರೂಲ್ ಇದಕ್ಕೆ ಹೇಗೆ ಅನ್ವಯವಾಗುತ್ತದೆ ಎಂಬುದನ್ನು ಗೈಡ್ ಮಾಡುವ ಶಕ್ತಿಯನ್ನು ತಾವೇ ಆಲೋಚನೆಮಾಡಿ ಕೊಡುವುದು ಒಳ್ಳೆಯದು.

ಶ್ರೀ ಡಿ. ದೇವರಾಜ ಅರಸ್.—ನಾನೇನು ಇದರ ಬಗ್ಗೆ ಪ್ರಸ್ತಾಪಮಾಡುವ ಅಗತ್ಯ ಇಲ್ಲದಿದ್ದರೂ ಪದೇಪದೇ ಈ ವಿಚಾರ ಬಂದಾಗ ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ, ನಮ್ಮ ಹಕ್ಕು ಮೊಟಕು ಆಗುತ್ತಿದೆ, ಆ ರೀತಿ ಮೊಟಕು ಆಗದಹಾಗೆ ನೀವು ನೋಡಿಕೊಳ್ಳಬೇಕೆಂದು. ಇದು ಯಾರ ಹಕ್ಕು? ಇಲ್ಲಿ ಎಲ್ಲ ಸದಸ್ಯರ ಹಕ್ಕು ಇದೆ. ಅವರ ಕಡೆ ಯಾವ ಸದಸ್ಯರಿಗೆ ಅವರ ಇಷ್ಟಬಂದ ಹಾಗೆ ಮಾತನಾಡುವುದಕ್ಕೆ ಮೊಟಕು ಆಗುತ್ತದೆ? ತಿಳಿಸಲಿ. ನಮಗೂ ಅದೇ ರೀತಿ ಹಕ್ಕು ಇದೆ. ಯಾರಾದರೂ ವಿನಾ ಕಾರಣ ಈ ಮನೆಯ ಕಾಲವನ್ನು ತೆಗೆದುಕೊಳ್ಳುವುದು ಆದರೆ, ನಮ್ಮ ಹಕ್ಕನ್ನೂ ಸಹ ತೆಗೆದುಕೊಂಡಂತೆ ಆಗುತ್ತದೆ. ಹಕ್ಕು ಎಂಬುದು ನಾನಾ ರೀತಿ ಇದೆ. ಮಾತನಾಡುವದಕ್ಕೂ ಒಂದು ಹಕ್ಕು ಇದೆ. ಯಾರು ಏನು ಬೇಕಾದರೂ ಮಾತನಾಡಬಹುದು ಎಂಬುದಕ್ಕೆ ಹಾಗೂ ಎಲ್ಲರ ಹಕ್ಕನ್ನು ಕಾಪಾಡುವುದಕ್ಕೆ ಎಲ್ಲರೂ ರೂಲ್ಸ್ ಪ್ರಕಾರ ನಡೆಯಬೇಕು. ಅದು ಎಲ್ಲರ ಹಕ್ಕುಬಾಧ್ಯತೆಯನ್ನು ಕಾಪಾಡುವ ವಿಧಾನವೆಂದು ನಾನು ತಿಳಿದುಕೊಂಡಿದ್ದೇನೆ. ನಾನೇ ಆಗಲೀ ಅಥವಾ ಯಾರೇ ಆಗಲಿ ಕಾನೂನು ಬಿಟ್ಟು ಹೋದರೆ, ಈ ಮನೆಯ ಹಕ್ಕಿಗೆ ಚ್ಯುತಿ ಬರುತ್ತದೆ. ಪಾಯಿಂಟ್ ಆಫ್ ಆರ್ಡರನ್ನು ಮಾನ್ಯ ಶ್ರೀ ಪುಟ್ಟಸ್ವಾಮಿಯವರು ರೈಜ್ ಮಾಡುತ್ತಾ ರೂಲ್ 312 ಇರುವಾಗ ಈ

ರೀತಿಯಾಗಿ ಹೋಗುವುದು ಸರಿಯಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಕನ್‌ವೆನ್‌ಷನ್ಸ್ ರೂಲ್ಸ್‌ಗಿಂತ ವಿಪರೀತವಾಗಿಬಿಟ್ಟರೆ, ಸ್ವಲ್ಪಮಟ್ಟಿಗೆ ರೂಲ್ಸ್ ಕಡೆಗೇ ಗಮನಕೊಡಬೇಕಾಗುತ್ತದೆ. ಆದ್ದರಿಂದ ಈಗ ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಿರುವುದನ್ನು ರೂಲ್ಸ್ ಪ್ರಕಾರ ನೋಡಬೇಕಾಗುತ್ತದೆ. ಮಾನ್ಯ ಶ್ರೀ ಅಮುರ್ಗಂ ಅವರು ಹೇಳಿದ ಹಾಗೆ ಇದು ಒಂದು ಕನ್‌ವೆನ್‌ಷನ್ನಾಗಿದ್ದರೂ, ಇಂತಹ ಕನ್‌ವೆನ್‌ಷನ್‌ಗಳಿಂದ ರೂಲ್ಸ್ ಪೂರ್ತಿಯಾಗಿ ಮರೆತುಹೋಗುತ್ತದೆಂದು ಹೇಳುವುದಕ್ಕಾಗುತ್ತದೆಯೇ ? ಆಗ ಇರತಕ್ಕ ರೂಲನ್ನೇ ತೆಗೆದುಹಾಕಬೇಕಾಗುತ್ತದೆ.

Sri H D. DEVEGOWDA.—We have never raised any matter under rule 312 unless it is permitted by the Hon. Speaker. ಇದರ ಬಗ್ಗೆ ನಾನು ಜಸ್ಟಿಫೈ ಬೇಕಾದರೆ ಮಾಡಬಹುದು. ತಮಗೆ ಇದರ ಬಗ್ಗೆ ಅನುಮಾನ ಬಂದರೆ, ಈ ರೀತಿಯಾಗಿ ಅವಕಾಶ ಕೊಡುವುದಕ್ಕಾಗುವುದಿಲ್ಲವೆಂದು ತಮ್ಮ ಗಮನಕ್ಕೆ ಬಂದರೆ, ತಮಗೆ ಪೂರ್ಣ ಹಕ್ಕಿದೆ ಇದರ ಬಗ್ಗೆ ಅವಕಾಶ ಕೊಡಬೇಕೋ ಬೇಡವೋ ಎಂಬುದಕ್ಕೆ. ಒಂದುವೇಳೆ ಇಂತಹ ಸಂದರ್ಭಗಳಲ್ಲಿ ನಮಗೆ ಅವಕಾಶ ಕೊಡಬೇಕೆಂದು ಕೇಳಿದಾಗ, ಹಿಂದೆ ಸ್ಪೀಕರ್ ಆಗಿದ್ದಂತಹ ಕೆಲವರು ಇಂತಹ ವಿಚಾರಗಳು ಬಂದಾಗ ಅವರಿಗೆ ಅನುಮಾನ ಬಂದಾಗ್ಗ ಸಂಬಂಧಪಟ್ಟವರನ್ನು ಕರೆಯಿಸಿಕೊಂಡು ಮಾತನಾಡಿರುವುದೂ ಉಂಟು. What is sought to be raised according to rule 312 under the plea that we are going to justify the grant of permission by the Speaker is also not correct. ರೂಲ್‌ನಲ್ಲಿ ಈ ರೀತಿ ಹೇಳಿದೆ.—

> "Shall give notice to the Secretary in writing stating briefly the point which he wishes to raise in the Assembly together with reasons for wishing to raise it... .."

ಹಾಗೆ ಅದಕ್ಕೆ ಕಾರಣವನ್ನೂ ಕೂಡ ಕೊಡಬೇಕೆಂದು ಇದೆ. ತಮ್ಮ ಮಾನಸ್ಸಿಗೆ ಸರಿ ಬಂದರೆ ತಮಗೆ ಇಷ್ಟಬಂದರೆ ಅವರನ್ನು ಕರೆಸಿ ಕೇಳಬಹುದು. ತಾವು ಆ ಒಂದು ಅಧಿಕಾರವನ್ನು ಹೊಂದಿರುತ್ತೀರಿ. ಅಷ್ಟು ವಿನಹ ಇದನ್ನೇ ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ, ಆದ್ದರಿಂದ ಅಧ್ಯಕ್ಷರ ಒಂದು ಡೈರೆಕ್ಷನ್ ಮೇಲೆ ಈ ವಿಚಾರದಲ್ಲಿ ಹೋಗೋಣವೆಂದು ನನ್ನ ಒಂದು ಅಭಿಪ್ರಾಯ.

Sri D. DEVARAJ URS.—That is alright.

ಶ್ರೀ ಕೋಣಂದೂರು ಲಿಂಗಪ್ಪ.—ನಾನು 9ನೇ ತಾರಿಖಿನಲ್ಲಿಯೇ ನೋಟೀಸ್ ಕಳುಹಿಸಿದ್ದೇನೆ. ತಾವು ಅದಕ್ಕೆ ಒಪ್ಪಿಗೆ ಕೊಡುತ್ತೀರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—312ರ ಪ್ರಕಾರ ಒಂದು ನೋಟೀಸ್ ಕೊಟ್ಟಲ್ಲಿ ಒಂದು ವಾರದಲ್ಲಿ ಯಾವುದಾದರೂ ಒಂದು ರೀತಿಯಲ್ಲಿ ಒಂದು ಸಂದರ್ಭವನ್ನು ಅದಕ್ಕೆ ನಿಗದಿ ಮಾಡಬೇಕು.

ಅಧ್ಯಕ್ಷರು.—ನಾನು ನಿಮ್ಮನ್ನು ಕರೆಸಿ ಕೇಳುತ್ತೇನೆ.

Promises if any by the Prime Minister while on tour in drought affected Areas in the State.

ಶ್ರೀ ವಾಟಾಳ್ ನಾಗರಾಜ್—ಈ ಪ್ರಶ್ನೆ ಇರುವುದು ಬರಗಾಲದ ಪ್ರದೇಶಕ್ಕೆ ಸಂಬಂಧಪಟ್ಟದ್ದು.

ಅಧ್ಯಕ್ಷರು.—ತಮಗೆ ಈಗಾಗಲೇ ತಮ್ಮ ನೋಟೀಸಿಗೆ ಜವಾಬು ಕೊಟ್ಟಿದ್ದೇನೆ. ಅದು ಈಗ ನಿಮ್ಮ ಮನೆಗೆ ಹೋಗಿದೆಯೋ ಏನೋ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಬಿಜಾಪುರದ ಜನರು ಈಗ ಪ್ರತಿಭಟನೆ ಮಾಡಿದ್ದಾರೆ. ಪ್ರಧಾನಿಯವರು ಅಲ್ಲಿಗೆ ಬಂದಾಗ ಏನು ಭರವಸೆಯನ್ನು ಕೊಟ್ಟಿದ್ದಾರೆ, ಏನಾದರೂ ಆಶ್ವಾಸನೆಯನ್ನು ಕೊಟ್ಟಿದ್ದಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಆ ವಿಷಯ ಮಾತನಾಡತಕ್ಕ ಸಂದರ್ಭ ಬಂದಾಗ, ಅದರ ಬಗ್ಗೆ ಅವಶ್ಯವಿದ್ದರೆ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಆರ್ಥಿಕ ಮಂತ್ರಿಗಳು ಅವರ ಭಾಷಣದಲ್ಲಿ ಪ್ರಧಾನಮಂತ್ರಿಗಳ ಭೇಟಿ ಬಗ್ಗೆ ಒಂದು ಮಾತನ್ನು ಹೇಳಿದ್ದರು. ಆದ್ದರಿಂದ ಈಗ ಅವರ ಭೇಟಿಯಾದಮೇಲೆ ಫರ್ದರ್ ಡೆವಲಪ್‌ಮೆಂಟ್ಸ್ ಏನಾದರೂ ಆಗಿದ್ದರೆ, ಅದನ್ನು ಈ ಸಭೆಗೆ ತಿಳಿಸಿದರೆ ಚರ್ಚೆಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಪ್ರಧಾನಮಂತ್ರಿಗಳು ಬಹಿರಂಗವಾಗಿ ಮಾಡಿದ ಭಾಷಣದಲ್ಲಿ ಹೇಳಿರುವುದಕ್ಕಿಂತ ಹೆಚ್ಚಿಗೆ ಹೇಳುವುದು ಏನೂ ಇಲ್ಲ. ಅಂತಹ ಹೊಸ ವಿಚಾರಗಳು ಯಾವುದೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ತಾವೂ ಮತ್ತು ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರು ಒಟ್ಟಿಗೆ ಕೂಡಿಕೊಂಡು ಮಾತನಾಡಬೇಕೆಂದು ಸೇರಿದ್ದರೆಂದು ವಿಚಾರ ತಿಳಿದು ಬಂದಿದೆ. ಪ್ರಧಾನ ಮಂತ್ರಿ ಗಳ ಹತ್ತಿರ ಇವರಿಬ್ಬರೂ ಏನೋ ರಾಜಕೀಯ ನಡೆಸುತ್ತಿದ್ದಾರೆಂದು ಕಾಣುತ್ತದೆ. ಆದರ ಬಗ್ಗೆ ಇವರು ಏನು ಹೇಳುತ್ತಾರೆ ? ಅಲ್ಲಿ ಹೋಗಿ ಹೊಂದಾಣಿಕೆ ಮಾಡಿಕೊಳ್ಳುತ್ತಾರೋ ಏನೋ ! ಇವರ ರಾಜಕೀಯ ಏಕೋ ನನಗೆ ಅರ್ಥವಾಗುತ್ತಾ ಇಲ್ಲ. ತಾವಾದರೂ ಈ ಸಭೆಗೆ ಆ ವಿಷಯದ ಬಗ್ಗೆ ತಿಳಿಸಿ. ಇದರಲ್ಲಿ ಮಾನ್ಯ ಶ್ರೀ ವೀರೇಂದ್ರ ಪಾಟೀಲರ ಹಾಗೂ ಮಾನ್ಯ ಶ್ರೀ ದೇವೇಗೌಡರ ವಿಷಯವೇನಿಲ್ಲ. ನಾವು ಬೇರೆ ಪಕ್ಷದವರು. ನಮಗೆ ಆ ವಿಷಯವನ್ನು ತಿಳಿಸಿ ಅವರಿಬ್ಬರಿಗೂ ಹಳೆಯ ಸಂಬಂಧವಿರುತ್ತದೆ. ಒಬ್ಬರಿಗೊಬ್ಬರು ಈಗ ಸೇರುತ್ತಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಅವರು ಬೇರೆ ಬೇರೆ ಪಕ್ಷದಲ್ಲಿದ್ದರೆ ಅವರೊಡನೆ ಮಾತನಾಡಕೂಡದು ಎಂಬುದಾಗಿ ಹೇಳಿದರೆ ಹೇಗೆ ?

MADAM SPEAKER.—Now we shall go to the next item. Hon. Leader of Opposition to initiate the general discussion on Buget.

Budget Estimates for 1973-74 General Discussion.

†ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಧ್ಯಕ್ಷಣಿಯವರೇ, 1973–74 ನೇ ವರ್ಷದ ಈ ಮುಂಗಡಪತ್ರದ ಪರಿಶೀಲನೆಯ ಸಂದರ್ಭದಲ್ಲಿ ನಾನು ಈ ರಾಜ್ಯದಲ್ಲಿ ಸರ್ಕಾರದವರು ಕಳೆದ ಒಂದು ವರ್ಷದಿಂದ ಸಾಧಿಸಿರುವ ಪ್ರಗತಿ ಮುಂತಾದ ವಿಷಯಗಳನ್ನು ವಿಮರ್ಶೆಮಾಡಲಿಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಪ್ರಥಮದಲ್ಲಿ ನಾನು ಬರಗಾಲದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ, ಅನಂತರ ಆರ್ಥಿಕ ಪರಿಸ್ಥಿತಿಯ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಈ ಸಭೆಯಲ್ಲಿ ನಾನು ಕಳೆದ ಸಾರಿ ಮಾತನಾಡುವಾಗ ಒಂದು ಮಾತನ್ನು ಹೇಳಿದ್ದೆ. ನಾನು ಇನ್ನು ಮುಂದೆ ಬರಗಾಲದ ಬಗ್ಗೆ ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲವೆಂದು. ಪ್ರತಿಸಾರಿಯೂ ನಮ್ಮನ್ನು ಈ ಬರಗಾಲ ಪರಿಸ್ಥಿತಿಯ ಬಗ್ಗೆ ಮಾತನಾಡಬೇಕೆಂದು ಹೇಳುತ್ತಲೇ ಇದ್ದಾರೆ. ಈ ಪರಿಸ್ಥಿತಿ ಬರುತ್ತಲೇ ಇದೆ. ಕಾರಣವಾದರೂ ಇಷ್ಟೇ. ನಮ್ಮ ಅರ್ಥಸಚಿವರು ಅವರ ಭಾಷಣದಲ್ಲಿ ಪ್ರಧಾನಿಯವರ ಭೇಟಿಯನ್ನು ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದಾರೆ. ಆ ಒಂದು ಹಿನ್ನೆಲೆಯಿಂದ ನಾನು ಈಗ ಒಂದೆರಡು ವಿಷಯಗಳನ್ನು ಹೇಳಲೇ ಬೇಕಾಗಿದೆ. ಗತ್ಯಂತರವಿಲ್ಲ.

2–30 P.M.

ಶ್ರೀ ಘೋರ್ಪಡೆ ಅವರು ಅವರ ಭಾಷಣದಲ್ಲಿ ಒಂದು ಹೊಸ ಆಸೆಯನ್ನು ವ್ಯಕ್ತಪಡಿಸಿದ್ದರು. ಬಹುಶಃ ಮಾರ್ಚಿ 7ನೇಯ ತಾರೀಖು ಮತ್ತು ಮಾರ್ಚಿ 10ನೇ ತಾರೀಖು–ಈ ಎರಡು ದಿನಗಳನ್ನು ಬರಗಾಲದ ಬವಣೆಗೆ ಸಿಕ್ಕಿ ಹಣದ ಉಬ್ಬರದಿಂದ ಬಳಲಿ ಬೆಂಡಾಗಿ–ಕಂಗಾಲಾಗಿದ್ದ ಜನರು ಕಣ್ಣನ್ನು ಅರಳಿಸಿಕೊಂಡು ಪ್ರಧಾನಿಯವರ ಬರುವಿಕೆಯ ಆ 2 ದಿನಗಳನ್ನೇ ಕಾದು ಕುಳಿತಿದ್ದರು. ಆ ಬರಗಾಲ ಪೀಡಿತ ಪ್ರದೇಶದ ಜನ ಈ ಹೊಸ ವರ್ಷದಲ್ಲಿ ಮಾನ್ಯ ಅರ್ಥ ಸಚಿವರ ಕೊಡಿಗೆಯೇನು-ಆ ಬರತಕ್ಕ ಪ್ರಧಾನಿಯವರ ಕೊಡುಗೆ ಏನು ಎಂಬುದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದರು. ಮಾನ್ಯ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಬರಗಾಲಕ್ಕೆ ಸಿಕ್ಕಿರತಕ್ಕ ಪ್ರದೇಶದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅವರು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎಂಬುದನ್ನು

ಅವರ ಭಾಷಣದಲ್ಲಿ ವಿವರಿಸಿದ್ದಾರೆ. ಹಾಗೆ ಅವರು ಆ ವಿವರಣೆಯನ್ನು ಕೊಡುವ ಕಾಲದಲ್ಲಿ ತಮ್ಮ ಭಾಷಣದಲ್ಲಿ ಆ ಪ್ರಧಾನಿಯವರಿಗಾಗಿ ಒಂದು ಪುಟವನ್ನೇ ಮುಡುಪಾಗಿಟ್ಟಿದ್ದಾರೆ. ಆದರೆ ಆ ಹಿಂದೆ ಪ್ರಧಾನಿಯವರು ನಮ್ಮ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗಿ ನರಳತಕ್ಕ ಜನರ ಗೋಳನ್ನು ನೋಡಿ ಅವರ ಕಷ್ಟನಿವಾರಣೆಗೆ ಸಹಾಯ ನೀಡತಕ್ಕ ಬಗ್ಗೆ ಅವರು ನಮ್ಮ ರಾಜ್ಯಕ್ಕೆ ಭೇಟಿಯನ್ನೇ ನೀಡಲಿಲ್ಲ ; ಅವರು ಇದೇ ರೀತಿ ಬರಕ್ಕೆ ತುತ್ತಾಗಿ ನರಳತಕ್ಕ ರಾಜ್ಯಗಳಿಗೆ ಪ್ರಧಾನಿಯವರು ಭೇಟಿ ಕೊಟ್ಟು ಅಲ್ಲಿನ ಜನಕ್ಕೆ ಅನೇಕ ಸಹಾಯಗಳನ್ನು ನೀಡತಕ್ಕ ಭರವಸೆಯನ್ನು ಸ್ಥಳದಲ್ಲೇ ಕೊಟ್ಟಿದ್ದರೂ, ಇಲ್ಲಿಗೆ ಬರಲಿಲ್ಲ ಎಂದು, ಬಹುಶಃ ವಿರೋಧಪಕ್ಷದಲ್ಲಿರತಕ್ಕ ಎಲ್ಲಾ ಸದಸ್ಯರೂ ಟೀಕೆಗಳನ್ನೂ ಕೂಡ ಮಾಡಿದ್ದೇವೆ. ಪ್ರಧಾನಿಯವರಿಗೆ ನಮ್ಮ ರಾಜ್ಯದ ಬಗ್ಗೆ ಬಹಳ ನಿರ್ಲಕ್ಷ್ಯ ಮನೋಭಾವವಿದೆ ಎಂದು ಕೂಡ ನಾವು ಹೇಳಿದ್ದೇವೆ. ಆಯಿತು ಈಗ ಪ್ರಧಾನಿಯವರೂ ಸ್ಥಳಕ್ಕೆ ಭೇಟಿಕೊಟ್ಟಿದ್ದಾಯಿತು. ಆದರೆ ಆ ಭೇಟಿಯನ್ನು ಕೊಟ್ಟಿದ್ದರಿಂದ ಆದ ಫಲವೇನು ? ಮಾನ್ಯ ಅರ್ಥಸಚಿವರು ತಮ್ಮ ಭಾಷಣದಲ್ಲಿ ಕೃಷ್ಣ ಮೇಲ್ದಂಡೆಯ ಯೋಜನೆಯನ್ನು, ನಿಜಕ್ಕೂ ಅದೊಂದು ರಾಷ್ಟ್ರೀಯ ಮಹತ್ವದ ಯೋಜನೆಯಾಗಿರುವುದರಿಂದ ಅದನ್ನು ರಾಷ್ಟ್ರೀಯ ಯೋಜನೆಯಾಗಿ ಕೈಗೊಳ್ಳುವುದು ಅಗತ್ಯವೆಂಬುದಾಗಿ ಭಾರತ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆಂದು ಕೂಡ ಹೇಳಿದ್ದಾರೆ. ಆದರೆ ಈ ದಿವಸ ಆದುದಾದರೂ ಏನು ? ಅವರು ಹೇಳುತ್ತಿರುವಂತೆಯೇ ಆ ಪ್ರಧಾನಿಯವರು ಬಂದರು-ಅವರ ಕೈಲಿಯೇ ಆ ಬಡಜನತೆಯ ಕಣ್ಣೀರನ್ನು ಅವರು ಒರೆಸಿ ಹೋದರು ಎಂಬುದಾಗಿ ಹೇಳಿದ್ದಾರೆ. ಆದರೆ ಆ ಪ್ರಧಾನಿಯವರು ಆ ಸಂಕಷ್ಟ ಪ್ರದೇಶದ ಜನಕ್ಕೆ ಆ ಬೃಹತ್ ನೀರಾವರಿ ಯೋಜನೆಯ ಬಗ್ಗೆ ಏನು ನಿರ್ಣಯವನ್ನು ಕೊಟ್ಟು ಹೋಗಿದ್ದಾರೆ ? ಯಾರ ಹೃದಯಗಳು ಮರುಗಿ ಬೆಂದು ಬೆಂಡಾಗಿದ್ದವೋ ಅಂಥವರ ಮನಸ್ಸಿನ ಮೇಲೆ ಆ ಪ್ರಧಾನಿಯವರು ಒಂದು ದೊಡ್ಡ ಆಘಾತ ಮಾಡಿಹೋಗಿದ್ದಾರೆಂದರೆ ಅದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಮಾನ್ಯ ಪ್ರಧಾನಿಯವರು ತಮ್ಮ ಭಾಷಣದಲ್ಲಿ ಏನು ತಿಳಿಸಿದ್ದಾರೆ ಅಥವಾ ಅವರು ಇಲ್ಲಿಗೆ ಬಂದಿದ್ದಾಗ ರಾಜ್ಯದ ಬರಗಾಲಕ್ಕೀಡಾದ ಜನರ ಬಗ್ಗೆ ಏನು ಆಶ್ವಾಸನೆ ಕೊಟ್ಟಿದ್ದಾರೆಂಬುದರ ಬಗ್ಗೆ ಸಭೆಗೆ ಏನಾದರೂ ತಿಳಿಸುವುದಿದೆಯೇ ಎಂದು ಮುಖ್ಯಮಂತ್ರಿಗಳನ್ನು ಕೇಳಿದ್ದಕ್ಕೆ ಅವರು ಹೆಚ್ಚಿಗೆ ಏನೂ ಇಲ್ಲ, ಪತ್ರಿಕೆಗಳಲ್ಲೇನು ವರದಿಯಾಗಿದೆ ಅದಕ್ಕಿಂತ ಹೆಚ್ಚಿನದೇನೂ ಇಲ್ಲ ಎಂದು ಈಗತಾನೆ ತಿಳಿಸಿದರು. ಆದರೆ ಆ ಪ್ರಧಾನಿಯವರು ರಾಜ್ಯದಲ್ಲಿ ಆಡಳಿತದ ಹೊರೆಯನ್ನು ಹೊತ್ತಿರತಕ್ಕ ಜನರ ಸಂಕಷ್ಟವನ್ನು ನೋಡಲಾರದೆ ಅಂದರೆ ಅವರ ಬಗ್ಗೆ ವಿರೋಧಪಕ್ಷಗಳವರು ಸುರಿಸುತ್ತಿದ್ದ ಟೀಕೆಗಳಿಂದ ವಿಮುಕ್ತರನ್ನಾಗಿ ಮಾಡುವ ಉದ್ದೇಶದಿಂದ ಆ ಪ್ರಧಾನಿಯವರು ಇಲ್ಲಿಗೆ ಬಂದು ಹೋಗಿದ್ದಾರೆಂದು ಹೇಳದಿದ್ದರೆ ವಿಧಿಯಿಲ್ಲ. ಆದರೆ ಜನರೇನು ಆ ಪ್ರಧಾನಿಯವರು ತಮ್ಮ ದೊಡ್ಡ ಆಸೆಯನ್ನು ಈಡೇರಿಸುತ್ತಾರೆಂದು ಕಾತುರದಿಂದ ಅವರ ಆಗಮನವನ್ನೇ ನಿರೀಕ್ಷಿಸುತ್ತಿದ್ದರೋ ಅಂಥ ಜನರಿಗೆ ಇಂದು ಏನು ಒಂದು ಮನಸ್ಸಿನಲ್ಲಿ ಮೂಡಿರಬಹುದೆಂಬ ಒಬ್ಬ ಕವಿಯು ಹೇಳಿರತಕ್ಕ ಒಂದು ಮಾತನ್ನಿಲ್ಲಿ ನಾನು ಉಚ್ಚರಿಸಬೇಕಾಗಿದೆ :— “ನೋಡುತ್ತ ನೋಡುತ್ತ ಚಂದ್ರ ಬಿಂಬ, ನೋಡಿಲ್ಲಿ ನೋಡಿಲ್ಲ ರಾಂದ್ರ ಕಂಬ” ಎಂದು ಈ ಮಾತನ್ನು ನಾನೀಗ ನಮ್ಮ ಅರ್ಥ ಸಚಿವರಿಗೆ ಹೇಳಬೇಕಾಗಿದೆ ಇಂದಿರಾಗಾಂಧಿಯವರು ಬರಗಾಲ ಪೀಡಿತ ಪ್ರದೇಶಕ್ಕೆ ಭೇಟಿ ಕೊಟ್ಟರು. ಅವರ ಒಟ್ಟು ಆರು ಗಂಟೆಗಳ ಪ್ರವಾಸದಲ್ಲಿ ಮೂರು ಪ್ರದೇಶಗಳನ್ನು ಅಂದರೆ-ಆಲಮಟ್ಟಿ, ಗುಲ್ಬರ್ಗ ಮತ್ತು ಬಸವಕಲ್ಯಾಣ ಈ ಮೂರು ಸ್ಥಳಗಳನ್ನು ಭೇಟಿ ಮಾಡಿ ರಾಜ್ಯದ ಆಡಳಿತವನ್ನು ಹೊತ್ತಿರತಕ್ಕ ನಾಯಕರ ಬೆನ್ನುಗಳನ್ನು ತಟ್ಟಿ ಅವರು ವಿರೋಧ ಪಕ್ಷಗಳ ಟೀಕೆಗೆ ಒಳಗಾಗಿ ಸಂಕಷ್ಟಕ್ಕೆ ಸಿಕ್ಕಿದ್ದವರನ್ನು ಆ ಗೊಂದಲದಿಂದ ಪಾರು ಮಾಡಿ, ಆ ಕಷ್ಟದ ಪರಿಸ್ಥಿತಿಯಿಂದ ಅವರನ್ನು ವಿಮುಕ್ತರನ್ನಾಗಿ ಮಾಡುವುದಕ್ಕೆ ಪ್ರಧಾನಿಯವರೆಷ್ಟು ಪ್ರಯತ್ನ ಮಾಡಬೇಕೋ ಅಷ್ಟನ್ನು ಮಾತ್ರ ಅವರು ಚೆನ್ನಾಗಿ ನೆರವೇರಿಸಿದ್ದಾರೆಂದು ಹೇಳುವುದರಲ್ಲಿ ಏನೂ ಸಂದೇಹವಿಲ್ಲ. ಇದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಆದರೆ ಇದರಲ್ಲಿ ಒಂದು ಬಹಳ ಪ್ರಾಮುಖ್ಯವಾದ ಅಂಶ ಎಂದರೆ ರಾಜ್ಯದ ಅರ್ಥಮಂತ್ರಿಗಳು ತಾವು ಬರಗಾಲದ ಪ್ರದೇಶಕ್ಕೆ ಅನುಕೂಲ ಮಾಡಲು ಕೇಂದ್ರದ ಮುಂದೆ 151 ಕೋಟಿ ರೂಪಾಯಿಗಳ ಬೇಡಿಕೆಯನ್ನು ಇಟ್ಟಿದ್ದೇವೆಂದು ಇವರು ಏನೊಂದು ಹೇಳಿಕೆ ಕೊಡುತ್ತಿದ್ದರು ಅದು ಇಂದು ಮಾಯವಾಗಿ ನಮಗೆ ಕೇಂದ್ರದಿಂದ ದೊರೆತ ಸಹಾಯ 54 ಕೋಟಿ ರೂಪಾಯಿ—ಇಷ್ಟೇ ಎಂಬುದು ಖಚಿತವಾಯಿತು. ಅಂದರೆ ಕೇಂದ್ರದವರ ಸಹಾಯ 151 ಕೋಟಿ ರೂಪಾಯಿಗಳಿಂದ 54 ಕೋಟಿ ರೂಪಾಯಿಗಿಳಿಯಿತು. ಬಹುಶಃ ಈ 54 ಕೋಟಿ ರೂಪಾಯಿಯಲ್ಲೂ ಎಷ್ಟು ಖಚಿತವಾಗಿ ಬರುತ್ತದೆಂಬುದನ್ನು ನಾವೆಲ್ಲರೂ ಮತ್ತೆ ಇಲ್ಲಿ ಬರುವ ಅಕ್ಟೋಬರ್—ನವೆಂಬರುಗಳಲ್ಲಿ ಸಭೆ ಸೇರಿದಾಗ ಅದನ್ನು ಚರ್ಚೆ ಮಾಡಬೇಕಾಗುವುದು ಆ ದಿವಸ ಅದರ ಪ್ರಸ್ತಾಪ. ಆದರೆ ಈ ದಿವಸ ರಾಜ್ಯದಲ್ಲಿ ಆಡಳಿತ ಸೂತ್ರ ಹಿಡಿದಿರತಕ್ಕ ಜನರು ಈ ವಿಚಾರದಲ್ಲಿ ಒಂದು ದೊಡ್ಡ ಗೊಂದಲ

(ಶ್ರೀ ಎಚ್. ಡಿ. ದೇವೇಗೌಡ)

ವನ್ನೇ ಎಬ್ಬಿಸಿದ್ದಾರೆ. ಮೊದಲು ತಮಗೆ ಇವರು ಕೇಂದ್ರದಿಂದ 28 ಕೋಟಿ ರೂಪಾಯಿ ಸಹಾಯ ದೊರೆಯುತ್ತದೆಂದು ಹೇಳಿದರು, ಅನಂತರ 151 ಕೋಟಿ ರೂಪಾಯಿಗೇರಿಸಿದರು, ಈಗ ಮತ್ತೆ 54 ಕೋಟಿ ರೂಪಾಯಿಗಿಳಿಸಿದ್ದಾರೆ. ಆದರೆ ಇವರಲ್ಲಿ ನಿಜಾಂಶವೆಷ್ಟು ಎಂಬುದನ್ನು ಪರೀಕ್ಷೆ ಮಾಡತಕ್ಕ ಕಾಲ ಇನ್ನು ಬಹಳ ದೂರವಿಲ್ಲ. ಆದರೆ ಈ ವಿಚಾರದಲ್ಲಿ ನಮಗೆ ಯಾರಿಗೂ ಒಂದು ರಾಜಕೀಯ ಮಾಡಬೇಕೆಂಬ ಇಚ್ಛೆಯಿಲ್ಲ. ಆದರೆ ಆ ರಾಜಕೀಯದ ಒಂದು ಹಿನ್ನೆಲೆಯನ್ನಿಟ್ಟುಕೊಂಡು ಇದಕ್ಕೆ ಇಲ್ಲದ ರಾಜಕೀಯದ ಬಣ್ಣ ಕಟ್ಟುವುದಕ್ಕೆ ಯಾರು ಪ್ರಯತ್ನ ಮಾಡುತ್ತಿದ್ದಾರೋ ಅವರೇ ಕಡೆಗೆ ಇದರಲ್ಲಿ ದೊಡ್ಡ ಪೆಟ್ಟನ್ನು ತಿನ್ನಬೇಕಾಗುತ್ತದೆ. ಆ ಪೆಟ್ಟು ಆಡಳಿತ ಪಕ್ಷಕ್ಕೆ ತಪ್ಪಿದ್ದಲ್ಲ ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಅವರು ಎಲ್ಲರೂ ತಮ್ಮ ತಮ್ಮ ತಮ್ಮಹೃದಯವನ್ನು ಮುಟ್ಟಿಕೊಂಡು ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ. ಆದರೆ ಈ ದಿವಸ ನಮ್ಮ ವಿರೋಧ ಪಕ್ಷ ಮಾಡದ ಇದ್ದಂಥ ಕಟು ಟೀಕೆಯನ್ನು ಆ ಬರಗಾಲ ಪ್ರದೇಶದ ಬಗ್ಗೆ ಇಂದು ಆಡಳಿತ ಪಕ್ಷದಲ್ಲಿರತಕ್ಕ ಪಾರ್ಲಿಯಮೆಂಟಿನ ಅದೇ ಪಕ್ಷದ ಸದಸ್ಯರು ಹೇಳಿದ್ದಾರೆ, ಅದೇ ರೀತಿಯ ಕಟು ಟೀಕೆಗಳನ್ನು ರಾಜ್ಯದ ಶಾಸಕರೂ ಹೇಳಿದ್ದಾರೆ, ಆ ಪ್ರದೇಶದ ಕಾಂಗ್ರೆಸ್ ಮುಖಂಡರುಗಳು ಹೇಳಿದ್ದಾರೆ. ಇದೇ ವಿಚಾರದಲ್ಲಿ ಗುಲ್ಬರ್ಗಾ ಜಿಲ್ಲೆಯ ಸದಸ್ಯರು ಮುಖ್ಯಮಂತ್ರಿಗಳ ಮನೆಯ ಮುಂದೆ ಸತ್ಯಾಗ್ರಹ ಮಾಡುವುದಾಗಿ ಪ್ರಕಟಣೆ ಹೊರಡಿಸಿದ್ದರು. ಅದೇ ಸಂಬಂಧದಲ್ಲಿ ದೆಹಲಿಗೆ ಹೋಗಿ ಪ್ರಧಾನಿ ಅವರ ನಿವಾಸದ ಮುಂದೆ ಪ್ರಚಾರ ನಡೆಸುವುದಾಗಿ ಹೇಳಿದ್ದಾರೆ ; ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಅದರಲ್ಲಿ ಸೇರಿದ್ದಾರೆಂದು ಪ್ರಕಟಣೆಯಾಗಿತ್ತು. ಇಷ್ಟೇ ಅಲ್ಲದೆ ಶಾಸಕರಾದ ಸುರಪುರ ಮಲ್ಲಪ್ಪನವರು ಶಾಸಕರ ಭವನದ ಮುಂದೆ ಸತ್ಯಾಗ್ರಹ ಮಾಡಿದ್ದರು. ನಾನು ಸ್ವಂತವಾಗಿ ಇವುಗಳೊಂದನ್ನೂ ಹೇಳುತ್ತಿಲ್ಲ. ಇವುಗಳನ್ನೂ ಇವರು ರಾಜಕೀಯ ಎಂದು ಹೇಳುವುದಕ್ಕೆ ಸಾಧ್ಯವೇ ? ನಾನು ಈ ಹೇಳಿಕೆಗೆ ಸಂಬಂಧಪಟ್ಟ ಪತ್ರಿಕೆಗಳ ಕಟ್ಟಿಂಗನ್ನು ಇಟ್ಟಿದ್ದೇನೆ. ಏಕೆಂದರೆ ಶ್ರೀಮಾನ್ ಬಸವಲಿಂಗಪ್ಪನವರು ಬಡವರಿಗೆ ಕೂಲಿ ಸಿಗುತ್ತಿಲ್ಲವೆಂದು ಕೋಲಾರದಲ್ಲಿ ಭಾಷಣ ಮಾಡಿದರು. ಅದು ಪತ್ರಿಕೆಯಲ್ಲಿ ಬಂದಿದೆ. ಶ್ರೀ ಎಂ. ವಿ. ಕೃಷ್ಣಪ್ಪನವರು ಅದೇ ರೀತಿ ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಇವರೆಲ್ಲಾ ಆಡಳಿತ ಕಾಂಗ್ರೆಸ್ ಪಕ್ಷದವರು, ಬೇರೆಯವರು ಇದನ್ನು ಹೇಳಿದರೆ ರಾಜಕೀಯವಾಗುವುದು. ಆಡಳಿತ ಕಾಂಗ್ರೆಸ್ಸಿನವರು ಇದನ್ನು ಹೇಳಿದರೆ ರಾಜಕೀಯವಾಗುವುದಿಲ್ಲವೇ ? ಹಾಗಿರುವಾಗ ಬೇರೆಯವರ ಮೇಲೆ ಆರೋಪಮಾಡುವುದು ಯೋಗ್ಯವಲ್ಲ, ಸಹಜವಲ್ಲ. ಇದರ ಬಗ್ಗೆ ಹೆಚ್ಚು ಹೇಳುವುದಿಲ್ಲ. ಅದರ ಅವಶ್ಯಕತೆ ಇಲ್ಲ. ಸಾಕಷ್ಟು ಆ ವಿಷಯ ಚರ್ಚೆಯಾಗಿದೆ, ಬರಗಾಲ ಪರಿಸ್ಥಿತಿ ಚರ್ಚೆಗೆ ಈ ಸಭೆಯ ಬಹಳ ಕಾಲವನ್ನು ತೆಗೆದುಕೊಂಡಿದ್ದೇವೆ. ಶ್ರೀಮಾನ್ ಘೋರ್ಪಡೆಯವರು ಇಲ್ಲಿಗೆ ಬಂದಿದ್ದಾರೆ. ಅವರು ಬರಗಾಲ ಪರಿಸ್ಥಿತಿ ಬಗ್ಗೆ ಕೆಲವು ಕೆಲಸಗಳನ್ನು ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಅದು ಎಷ್ಟುಮಟ್ಟಿಗೆ ಕಾರ್ಯಗತವಾಗುತ್ತದೆ ಎಂಬುದನ್ನು ಕಾದು ನೋಡೋಣ. ಅವರು ಇದರ ಬಗ್ಗೆ ಕೊಟ್ಟಿರುವ ಪಟ್ಟಿ ನೋಡಿದ್ದೇನೆ. ಇದರ ಬಗ್ಗೆ ಈಗ ವ್ಯಾಖ್ಯಾನ ಮಾಡುವುದಿಲ್ಲ. ಈ ಕೆಲಸ ಕಾರ್ಯಗತವಾದ ಮೇಲೆ ಇದರ ಪ್ರೋಗ್ರೆಸ್ ನೋಡಿ ಮಾತನಾಡೋಣ. ಇಂದು ಪ್ರಧಾನಿಗಳ ಭೇಟಿಯಾದ ಮೇಲೆ ಕಷ್ಟದಲ್ಲಿರುವ ಜನರಿಗಾಗಿ ಅವರು ಬ್ಲಾಂಕ್ ಚೆಕ್ ಕೊಟ್ಟಿರುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ಕೇಂದ್ರದ ಸಚಿವರು ಬ್ಲಾಂಕ್‌ಚೆಕ್ ಕೊಟ್ಟಿಲ್ಲವೆಂದು ಹೇಳಿರುವುದಾಗಿ ಪತ್ರಿಕೆಯಲ್ಲಿ ಬಂದಿರುವಾಗ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಏನು ಬೇಕಾದರೂ ಮಾಡಬಹುದೆಂದು ಇಲ್ಲಿ ಹೇಳುತ್ತಿದ್ದಾರೆ. ಆರ್ಥಿಕ ಸಚಿವರೂ ಕೂಡ ಇದನ್ನು ಪರೋಕ್ಷವಾಗಿ ಹೇಳುತ್ತಿದ್ದಾರೆ, ಖರ್ಚುಮಾಡುವ ಕಪ್ಯಾಸಿಟಿ ಮುಖ್ಯ ಎಂದು ಹೇಳಿದ್ದಾರೆ. ಹಣವಿದ್ದೂ ಖರ್ಚುಮಾಡಲು ಸಾಧ್ಯವಿಲ್ಲ ಎಂದರೆ ಆಡಳಿತ ಯಂತ್ರದಲ್ಲಿ ಲೋಪದೋಷ ಇದೆ ಎಂದು ನಂಬಬೇಕೇ ಅಥವಾ ಆಡಳಿತ ಯಂತ್ರದ ಕೈಗೆ ನಿಲುಕದೇ ಇರುವ ವಿಚಾರವೇ ? ಇದನ್ನು ಅಂತಿಮವಾಗಿ ಸ್ಟಾಕ್ ಚೆಕಿಂಗ್ ಮಾಡುವಾಗ ಯೋಚನೆಮಾಡೋಣ.

ಕೊನೆಯದಾಗಿ ಬರಗಾಲಕ್ಕೆ ಸಂಬಂಧಪಟ್ಟಹಾಗೆ ನೇಕಾರರ ಬವಣೆ ಬಗ್ಗೆ ಶ್ರೀ ಕೃಷ್ಣರವರು ಒಂದು ಮಾತನ್ನು ಹೇಳಿದರು, ಒಂದು ಕೋಟಿ 30 ಲಕ್ಷದ ಯೋಜನೆ ತಯಾರು ಮಾಡಿ ಬರಗಾಲದಲ್ಲಿರುವ ಜನರ ಪರಿಸ್ಥಿತಿ ಸುಧಾರಿಸಲು ಕೇಂದ್ರ ಸರ್ಕಾರಕ್ಕೆ ಕಳಿಸಿರುವುದಾಗಿ ಹೇಳಿದರು. ಈ ಯೋಜನೆ ವಿಚಾರದಲ್ಲೇನಾಗಿದೆ ಎಂದು ಅರ್ಥ ಸಚಿವರು ತಿಳಿಸಬೇಕಾಗಿತ್ತು. ಈಗಾಗಲೇ ಸ್ವಲ್ಪ ಹಣ ಒದಗಿಸಿ ಕೆಲವು ಕಡೆ ಡಿಪೋ ತೆರೆದು ನೂಲನ್ನು ಹಂಚಲು ಪ್ರಯತ್ನ ಮಾಡಿದ್ದಾರೆ.

ದ್ಧವೀರಪ್ಪನವರು ಈ ಸಭೆಯಲ್ಲಿಲ್ಲ. ಅವರು 1968ರಲ್ಲಿ ಭಾಷಣ ಮಾಡಿದಾಗ ಉಪಗಿಸಿರುವ ಭಾಷೆಯನ್ನು ಇವತ್ತು ವಿರೋಧ ಪಕ್ಷದವರು ಬಳಸುವ ಭಾಷೆಯೊಂದಿಗೆ ಹೋಲಿಸಿ ಇಂದು ಉಪಯೋಗಿಸುವ ಭಾಷೆ ಅಷ್ಟು ಕಠಿಣವಾಗಿರುವುದಿಲ್ಲ ಎಂದು ಹೇಳಿದರೆ ತಪ್ಪಾಗ ದು. ಇಂದು ಬಂದಿರುವ ಬರಗಾಲ ಪರಿಸ್ಥಿತಿ ಹಿಂದೆ ನೋಡಿರಲಿಲ್ಲ, ಬಹುಶಃ 110–150 ವರ್ಷಕ್ಕೊಂದು ಸಲ ಇಂಥ ಪರಿಸ್ಥಿತಿ ಬರಬಹುದು ಎಂದು ಹೇಳಿದ್ದಾರೆ. ಆರ್ಥಿಕ ಸಚಿವರು ಬಹಳ ವಾಗಿ ಬೆನ್ನು ತಟ್ಟಿಕೊಂಡಿದ್ದಾರೆ, ಇಷ್ಟು ಹಣ ಖರ್ಚುಮಾಡಿದ್ದೇವೆ ಎಂಥು ಹೇಳಿಕೊಂಡಿದ್ದಾರೆ. ಇಷ್ಟು ಹಣ ಕೇಂದ್ರ ಸರಕಾರದ 25 ವರ್ಷಗಳಲ್ಲಿ ಯಾವಾಗ ಒದಗಿಸಿದ್ದಾರೆ ಎಂದು ಕೇಳುತ್ತೇನೆ. 190 ಕೋಟಿ ರೂಪಾಯಿ ವೆಚ್ಚಮಾಡುವುದಾಗಿ ಶ್ರೀ ಸಿಂಧೆಯವರು ಪಾರ್ಲಿಮೆಂಟಿನಲ್ಲಿ ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಬಹುಶಃ ಹೀಗೆ ಹೇಳಿ ಬೆನ್ನು ತಟ್ಟಿಕೊಂಡಿದ್ದಾರೆ. 1968ರಲ್ಲಿ ಚರ್ಚೆಯಾದಾಗ ಜನರ ಕ್ರಾಂತಿಗೆ ಎಡೆ ಕೊಡುವುದು ಸರಕಾರ ಪರಿಸ್ಥಿತಿ ಸುಧಾರಿಸದಿದ್ದರೆ ಎಂದು ಹೇಳಿದ್ದಾರೆ. ಶ್ರೀ ಪುಟ್ಟಸ್ವಾಮಿಯವರ ಸರಕಾರಕ್ಕೆ ಶ್ರೀ ಸಿದ್ಧವೀರಪ್ಪನವರು ಎಚ್ಚರಿಕೆ ಕೊಟ್ಟಿದ್ದಾರೆ. ಇಂದು ಮನುಷ್ಯರನ್ನು ಮನುಷ್ಯರು ತಿನ್ನುವ ಪರಿಸ್ಥಿತಿಯಿದೆ. ಭೀಮ ಎಂಬ ಹರಿಜನ ಹೊಟ್ಟೆಗಿಲ್ಲದೆ ನೇಣು ಹಾಕಿಕೊಂಡಿದ್ದಾನೆ. ಎಂದರೆ ಇದಕ್ಕಿಂತ ಘೋರಸನ್ನಿವೇಶ ಇನ್ಯಾವುದಿದೆ ! ಇಂಥ ಉಲ್ಬಣ ಪರಿಸ್ಥಿತಿ ಇರುವಾಗ ಈಗ ಮಾಡುತ್ತಿರುವ ಕೆಲಸ ಸಾಕೆ ? ನಮ್ಮ ಪಕ್ಷ ಮಾತ್ರವಲ್ಲದೆ ಸರಕಾರಿ ಪಕ್ಷದವರು, ಗುಲ್ಬರ್ಗ ಡಿ.ಸಿ.ಸಿ. ಪ್ರೆಸಿಡೆಂಟ್ ಚೌಧರಿಯವರು ಮುಂತಾದವರು ಟೀಕಿಸಿದ್ದಾರೆ. ನಾವು ಸಹಕಾರ ಕೊಡುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಸಹಕರಿಸಬೇಕೆಂದು ಹೇಳಿದ್ದಾರೆ. ಯಾರು ಸಹಕಾರ ಕೊಡುವುದಿಲ್ಲವೆಂದು ಹೇಳಿದ್ದಾರೆ ? ಮೊದಲು ಸರಕಾರದವರು ಯಾವ ಸಹಕಾರವನ್ನೂ ಕೇಳದೆ ಕೆಲಸ ಕಾರ್ಯ ಪ್ರಾರಂಭಿಸಿದರು. ಬೇರೆಯವರ ಸಹಕಾರ ಕೇಳಲಿಲ್ಲ. ಸಹಕಾರ ಸಂಘಗಳನ್ನು ಕಿತ್ತು ಹಾಕಿದರು. ಇಂದು ಸಹಕಾರ ಬೇಕೆಂಧು ಹೇಳುತ್ತಿದ್ದಾರೆ. ಕಳೆದ ಶಾಸನಸಭೆ ಸೇರುವುದಕ್ಕೆ ಮುಂದೆ ಶ್ರೀ ದೇವರಾಜ ಅರಸರವರು ಒಂದು ಸಮಿತಿ ರಚಿಸಿ ಅದರ ಮೀಟಿಂಗ್ ಕರೆದರು. ಬಹುಶಃ 4ನೇ ತಾರೀಖು ನೋಟೀಸು ಬಂತು, 5, 6 ಮತ್ತು 7 ರಂದು ನನಗೆ ಬಳ್ಳಾರಿ ಪ್ರವಾಸವಿತ್ತು. ನಾನು ಅಲ್ಲಿಂದ ವಾಪಸು ಬಂದ ಮೇಲೆ ನೋಟೀಸು ಸಿಕ್ಕಿತ್ತು. ಸಹಕಾರ ಕೇಳುವ ರೀತಿನೀತಿ ಸರಿಯೇ ಎಂದು ಕೇಳಿದವರು ತಮ್ಮ ಮನಸ್ಸಿಗೆ ಪ್ರಶ್ನೆ ಹಾಕಿಕೊಳ್ಳಬೇಕು. ಸಹಕಾರ ಪಡೆಯುವ ಒಂದು ಕಾರ್ಯ ತಮ್ಮ ಮೇಲಿದೆ. ಸಹಕಾರ ಕೊಡಲು ಹಿಂದೆಗೆಯುವುದಿಲ್ಲ. ಇಷ್ಟು ಹೇಳಿ ಬರಗಾಲ ಪರಿಸ್ಥಿತಿ ಬಗ್ಗೆ ನನ್ನ ಮಾತನ್ನು ಮುಗಿಸುತ್ತೇನೆ.

ಇನ್ನು ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಹೇಳುವುದಾದರೆ ಮಾನ್ಯ ಆರ್ಥಿಕ ಸಚಿವರು ಬಹಳ ಬುದ್ಧಿವಂತರು. ನಾನು ಅವರ ಬುದ್ಧಿವಂತಿಕೆ ಪ್ರಶ್ನೆ ಮಾಡುವುದಿಲ್ಲ. ಏಕೆಂದರೆ ಕಳೆದ 10 ವರ್ಷದಿಂದ ಅವರ ಜೊತೆಯಲ್ಲಿ ಈ ಸಭೆಯಲ್ಲಿ ಕೆಲಸಮಾಡುವ ಅವಕಾಶ ನನಗಿತ್ತು. ಒಂದು ಸಮಿತಿಯಲ್ಲಿ ಅವರ ಜೊತೆಯಲ್ಲಿ ಕೆಲಸಮಾಡಿದೆ. ನನಗೆ ವ್ಯಕ್ತಿಶಃ ಅವರಲ್ಲಿ ಗೌರವವಿದೆ. ಆದರೆ ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಅವರು ಪ್ರಾಮಾಣಿಕವಾದ ಅಭಿಪ್ರಾಯವನ್ನು ಸೂಚಿಸುವುದಕ್ಕೆ ಪ್ರಯತ್ನ ಮಾಡಿಲ್ಲ ಅಂದರೆ ತಪ್ಪಾಗಲಾರದು.

ಇವತ್ತು ನಾನು ತಮ್ಮನ್ನು ಕೇಳುತ್ತೇನೆ, ಕಳೆದ ಸಾರಿ ಭಾಷಣ ಮಾಡುವ ಕಾಲದಲ್ಲಿ ಫಿನಾನ್ಸಿಯಲ್ ಡಿಸಿಪ್ಲಿನ್ ತರುತ್ತೇವೆಂದು ಹೇಳಿದಿರಿ, ಇದು ಏನು ಫಿನಾನ್ಸಿಯಲ್ ಡಿಸಿಪ್ಲಿನ್ ? ನೀವು 1972–73 ನೇ ಸಾಲಿನ ಮುಂಗಡ ಪತ್ರವನ್ನು ಸಭೆಯಲ್ಲಿ ಇಟ್ಟಂಥ ಕಾಲದಲ್ಲಿ ಮೂರೂವರೆ ಕೋಟಿ ರೂಪಾಯಿ ಖೋತಾ ಎಂದು ತೋರಿಸಿ 29 ಕೋಟಿ ರೂಪಾಯಿ ಖೋತಾ ತೋರಿಸಿದ್ದೀರಿ. ಕೆಲವು ಕಡೆ ಈ ತಿಂಗಳ ಪೇಮೆಂಟ್ ಆಗತಕ್ಕದ್ದನ್ನು ತಡೆಹಿಡಿದಿದ್ದಾರೆ. ಲೋಕೋಪಯೋಗಿ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಈ ಸೂಚನೆಯನ್ನು ಕೊಟ್ಟು ಬಟವಾಡೆ ಮಾಡುವುದನ್ನು ತಡೆಹಿಡಿದಂಥ ಕಾರಣವಾದರೂ ಇಷ್ಟು, ಈ 29 ಕೋಟಿ ರೂಪಾಯಿ ಖೋತಾ ಏನು ತೋರಿಸಿದ್ದಾರೆ ಅದು ರಿವೈಸ್ಡ್ ಆಗಿ 31–32 ಕೋಟಿ ರೂಪಾಯಿಗೆ ಹೋಗಬಹುದು ಎನ್ನುವ ಹಿನ್ನೆಲೆಯಲ್ಲಿ ಈ ಕೆಲಸಮಾಡಿದ್ದಾರೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯಿಂದ ಕೂಡಿದ ಮಾತಲ್ಲ. ರಾಜ್ಯದ ಆಯವ್ಯಯವನ್ನು ಪರಿಶೀಲನೆ ಮಾಡುವ ಕಾಲದಲ್ಲಿ ಕೇಂದ್ರದ ಆಯವ್ಯಯವನ್ನು ಹೋಲಿಕೆ ಮಾಡಿ ರಾಜ್ಯಗಳ ಪರಿಸ್ಥಿತಿ, ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಹೇಗೆ ಇದೆ ಎಂದು ತುಲನೆಮಾಡುವುದು ಅವಶ್ಯ. 1972–73 ನೇ ಕೇಂದ್ರದ ಆಯವ್ಯಯದಲ್ಲಿ 250 ಕೋಟಿ ರೂಪಾಯಿ ಖೋತಾ ಎಂದು ಹೇಳಿ 500 ಕೋಟಿ ರೂಪಾಯಿ ಖೋತಾವನ್ನು ಮಾನ್ಯ ಚವಾಣರು ಮೊನ್ನೆ ಪಾರ್ಲಿಮೆಂಟಿನಲ್ಲಿ ಇಟ್ಟಿರತಕ್ಕ ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಇವತ್ತು 1973–74ನೇ ಇಸವಿಯ ಅಂದಾಜು ಪಟ್ಟಿಯಲ್ಲಿ ಸುಮಾರು 85 ಕೋಟಿ ರೂಪಾಯಿಗಳ ಖೋತವನ್ನು ತೋರಿಸಿಕೊಂಡಿದ್ದಾರೆ. ಅದು 18 ಕೋಟಿ ರೂಪಾಯಿ

(ಶ್ರೀ ಎಚ್. ಡಿ. ದೇವೇಗೌಡ)

ಗಳ ಪ್ರತ್ಯಕ್ಷ ತೆರಿಗೆ, 116 ಕೋಟಿ ರೂಪಾಯಿ ಎಕ್ಸೈಸ್ ಡ್ಯೂಟಿ, 156 ಕೋಟಿ ರೂಪಾಯಿ ತೆರಿಗೆ ಸೇರಿ ಒಟ್ಟು 262 ಕೋಟಿ ರೂಪಾಯಿಗಳ ಪರೋಕ್ಷ ತೆರಿಗೆ. ಈ ಪರೋಕ್ಷ ತೆರಿಗೆಗಳನ್ನು ತೆಗೆದು ಸುಮಾರು 85 ಕೋಟಿ ರೂಪಾಯಿಗಳನ್ನು ಖೋತ ಎಂದು ಕೇಂದ್ರದ ಅರ್ಥಸಚಿವರು ತಿಳಿಸಿದ್ದಾರೆ. ಇದನ್ನು ಯಾವರೀತಿ ತುಂಬಿಕೊಳ್ಳುತ್ತಾರೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಮೂರನೆಯ ಪೇ ಕಮಿಷನ್‌ನವರು ಏನು ನಿರ್ಣಯವನ್ನು ಕೊಡುತ್ತಾರೋ ಎನ್ನುವುದನ್ನು ಕಾದು ನೋಡಬೇಕಾಗಿದೆ. ಪತ್ರಿಕೆಯಲ್ಲಿ ವರದಿಯಾಗಿರುವ ರೀತ್ಯ, ಇದರಿಂದ 250 ಕೋಟಿ ರೂಪಾಯಿ ನಮ್ಮ ಸರ್ಕಾರದ ಖಜಾನೆಯಿಂದ ವೆಚ್ಚ ತಗಲತಕ್ಕ ಸಾಧ್ಯತೆಯನ್ನು ಅವರು ಹೇಳಿದ್ದಾರೆ. ಬಹುಶಃ 300 ಕೋಟಿ ರೂಪಾಯಿಗಳ ಕೇಂದ್ರದ ಅಂದಾಜದಲ್ಲಿ ಖೋತ ಬೀಳುವುದನ್ನು ನಾವು ಊಹಿಸಬಹುದು. ಹೀಗೆ 9 ರಾಜ್ಯಗಳಲ್ಲಿ ಈಗಾಗಲೇ 1973—74 ರ ಅಂದಾಜು ಪಟ್ಟಿಗಳು ಹೊರಬಿದ್ದಿವೆ. 200 ಕೋಟಿ ರೂಪಾಯಿಗಳು ಈಗಾಗಲೇ ಖೋತಾ ಬಿದ್ದಿವೆ. ಇದು ಅನ್‌ಕವರ್ಡ್ ಡಿಫಿಸಿಟ್. ಕೇಂದ್ರದ್ದು 300 ಕೋಟಿ ರೂಪಾಯಿ, ಅಂದಾಜು ಪಟ್ಟಿ ಹೊರಬಿದ್ದಿರುವ ರಾಜ್ಯ ಸರ್ಕಾರಗಳದ್ದು 200 ಕೋಟಿ ರೂಪಾಯಿ ಖೋತ ಇದೆ. ಇದನ್ನು ತುಂಬಲಿಕ್ಕೆ ಇರತಕ್ಕ ಮಾರ್ಗವಾದರೂ ಏನು ? ಬಹುಶಃ ನೀವು ಕೇಂದ್ರದ ಮೊರೆ ಹೋಗಬಹುದು, ನಿಮ್ಮ ವೇಸ್ ಅಂಡ್ ಮೀನ್ಸ್ ಆಡ್ವಾನ್ಸ್ ಇರುವುದು ಎಲ್ಲಿಂದ ಕೊಡತಕ್ಕದ್ದು ? ನಾವು ಓವರ್‌ಡ್ರಾಫ್ಟ್ ಮಾಡುವುದಿಲ್ಲ ಎಂದು ಹೇಳಿದಿರಿ, ಓವರ್ ಡ್ರಾಫ್ಟನ್ನು ಕೈಬಿಟ್ಟಿದ್ದೇವೆ ಎಂದು ಹೇಳಿದಿರಿ, ಹಣಕಾಸಿನಲ್ಲಿ ಡಿಸಿಪ್ಲಿನ್ ತರತಕ್ಕ ರೀತಿ ಎಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ ಪರಿಸ್ಥಿತಿ ಏನಾಗಿದೆ ? ಕೇಂದ್ರದವರು ನಾಸಿಕ್ ಪ್ರಿಂಟಿಂಗ್ ಪ್ರೆಸ್ ಮುಂದೆ ಹೋಗಬೇಕು. ನೋಟ್ ಪ್ರಿಂಟ್ ಮಾಡಿ ಸಪ್ಲೈ ಮಾಡಬೇಕು. ಅದಕ್ಕೂ ಇತಿ ಮಿತಿ ಇದೆ, ಮಾನ್ಯ ಪುಟ್ಟಸ್ವಾಮಿಯವರು 10 ವರ್ಷಗಳವರೆಗೆ ಮಂತ್ರಿಗಳಾಗಿದ್ದಾರೆ, ಇದರ ಬಗ್ಗೆ ನನಗೆ ಅನುಭವ ಸಾಲದು, ಅವರಿಗೆ ಇದರ ಬಗ್ಗೆ ಅನುಭವ ಇದೆ. ಪ್ಲಾನಿಂಗ್ ಕಮಿಷನ್‌ನವರು ಹೇಳುತ್ತಾರೆ ಇದು 7 ಪರ್ಸೆಂಟ್‌ಗಿಂತ ಹೆಚ್ಚಾಗಬಾರದು ಎಂದು, ಮಾರ್ಕೆಟ್‌ಗೆ ಈ ರೀತಿ ನೋಟುಗಳನ್ನು ಡಂಪ್ ಮಾಡುವುದರಿಂದ ಯಾವ ಪರಿಸ್ಥಿತಿಗೆ ಹೋಗುತ್ತದೆ ? ನ್ಯಾಷನಲ್ ಎಕನಾಮಿಕ್ ಗ್ರೋತ್ 5 ಪರ್ಸೆಂಟ್‌ಗಿಂತ ಕೆಳಗೆ ಇಳಿಯಬಾರದು. ಇವತ್ತು ರಾಷ್ಟ್ರೀಯ ವರಮಾನ 5.5 ಪರ್ಸೆಂಟಿಗಿಂತ ಕೆಳಗಡೆ ಹೋಗುತ್ತ ಇದ್ದಂಥ ಕಾಲದಲ್ಲಿ 7 ಪರ್ಸೆಂಟ್ ಹಣವನ್ನು ಪುಷ್ ಮಾಡುವುದಾದರೆ ಹಣದ ಉಬ್ಬರವನ್ನು ತಡೆಯಲಿಕ್ಕೆ ಸಾಧ್ಯವಾಗಬಹುದು. ಇಂದು ಪರಿಸ್ಥಿತಿ ಏನಾಗಿದೆ ? ನೀವು ಸುಮಾರು 12 ರಿಂದ 13 ಪರ್ಸೆಂಟ್‌ವರಗೆ ಅಡಿಷನಲ್ ಕರೆನ್ಸಿಯನ್ನು ಪುಷ್ ಮಾಡುತ್ತಾ ಇದ್ದೀರಿ. ಈಗ ಪರಿಸ್ಥಿತಿ ಏನಾಗಿದೆ ಎಂದರೆ ಬೆಲೆಗಳು ಗಗನಕ್ಕೆ ಹೋಗಿವೆ. ಇವತ್ತು ಜೀವನದ ವೆಚ್ಚ ನಮ್ಮ ಹಿಡಿತದಲ್ಲಿಲ್ಲ. ಅದಕ್ಕೆ ಹೊಣೆ ಯಾರು ? ಇದು ನಿಮ್ಮ ಆರ್ಥಿಕ ಧೋರಣೆಯ, ನಿಮ್ಮ ಆರ್ಥಿಕ ನೀತಿಯ ವೈಫಲ್ಯತೆ ಅಲ್ಲವೇ ? ಎಂಬುದನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ಇವತ್ತು ನೋಟನ್ನು ಮುದ್ರಣ ಮಾಡಿ ಮಾರ್ಕೆಟ್ಟಿಗೆ ಬಿಡತಕ್ಕ ಪಾಲಿಸಿ ಏನು ಇದೆ, ಆ ಒಂದು ಪರಿಸ್ಥಿತಿಯ ಆಧಾರದ ಮೇಲೆ ಇವರ ವ್ಯವಹಾರ ನಡೆಯುತ್ತಾ ಹೋದರೆ ಮಾನ್ಯ ಸದಸ್ಯರಾದ ಶ್ರೀರಾಮುಲು ಅವರು ನಾವುಗಳು ಬೆಲೆ ಏರಿಕೆಯ ಬಗ್ಗೆ ಹತೋಟಿಯನ್ನು ಇಡಲಿಕ್ಕೆ ಅಸಮರ್ಥರಾಗಿದ್ದೇವೆ ಎಂದು. ಅದಕ್ಕೆ ಕಾರಣೀಭೂತರು ಯಾರು ? ಬೆಲೆಗಳ ಏರಿಕೆಯನ್ನು ತಡೆಗಟ್ಟುವುದಕ್ಕೆ ಏನು ಮಾರ್ಗವನ್ನು ಕಂಡುಹಿಡಿದಿದ್ದಾರೆ ಎಂದು ಹೇಳಬೇಕು. ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ, ಮಾರ್ಚ್ 28, 1973 ನೇ ತಾರೀಖಿನಿಂದ ಮೂರು ದಿವಸ ಆದಮೇಲೆ 86 ಕೋಟಿ ರೂಪಾಯಿ ಅಡಿಷನಲ್ ಕರೆನ್ಸಿಯನ್ನು ನೀವು ಓಪನ್ ಮಾರ್ಕೆಟ್ಟಿಗೆ ಪುಷ್ ಮಾಡಿದ್ದೀರಿ. ಕಾರಣ ಏನು ! ಪರಿಸ್ಥಿತಿ ಎಷ್ಟು ವಿಷಮವಾಗಿದೆ ? ರಿಸರ್ವ್ ಬ್ಯಾಂಕಿನವರು ತಮ್ಮ ಒಂದು ಬುಲೆಟಿನ್‌ನಲ್ಲಿ ಈ ಮಾತನ್ನು ಹೇಳಿದ್ದಾರೆ. ಪ್ರಧಾನಿಯವರು 1973 ನೇ ಇಸವಿಯಲ್ಲಿ ಚಿಂತಾಜನಕ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ ಎಂದು ಹೇಳಿದ್ದಾರೆ. ಆರ್ಥಿಕವಾಗಿ ನಾವು ಕಷ್ಟಕಾಲವನ್ನು ಕಾಣತಕ್ಕ ಪರಿಸ್ಥಿತಿ ಇದೆಯೆಂದು ಹೇಳಿದ್ದಾರೆ. ಈ ಹಿನ್ನೆಲೆಯನ್ನು ಏತಕ್ಕೆ ಪ್ರಸ್ತಾಪಮಾಡುತ್ತೇನೆ ಎಂದರೆ, ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಯಾವ ಮಟ್ಟದಲ್ಲಿ ಇದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೋಸ್ಕರ. ತಾವು ಕಳೆದ ಬಡ್ಜೆಟ್ ಮಂಡಿಸಿದಾಗ ಬೆನ್ನು ತಟ್ಟಿಕೊಂಡಿರಿ, ಬಹಳ ಹೆಮ್ಮೆಯಿಂದ, ನಾವು ಸ್ವಲ್ಪ ಸರ್ಪ್ಲಸ್ ಕೂಡ ಇಟ್ಟಿದ್ದೇವೆ ಎಂದು ಹೇಳಿದರು. ಪತ್ರಿಕೆಯಲ್ಲಿಯೂ ಇದುವರದಿಯಾಗಿದೆ. ಮಂತ್ರಿಗಳು ಬಂದ ಎರಡು ಮೂರು ದಿವಸದಲ್ಲಿ ಓವರ್‌ಡ್ರಾಫ್ಟ್ ಕಮಿಟ್‌ಮೆಂಟ್ 70 ಕೋಟಿ ರೂಪಾಯಿಗಳನ್ನು ತೀರಿಸಿದ್ದೇವೆ ಎಂದು ಹೇಳಿದರು. ನಮ್ಮ ಆಡಳಿತ ಇದ್ದಾಗ 30 ಕೋಟಿ ಓವರ್ ಡ್ರಾಫ್ಟ್ ಇತ್ತು, ಧರ್ಮವೀರ ಅವರ ಆಡಳಿತದಲ್ಲಿ ಅದು 70 ಕೋಟಿ ರೂಪಾಯಿ ಆಗಿದೆ. ನಾವು ಆಡಳಿತಕ್ಕೆ

ಮೇಲೆ 70 ಕೋಟಿ ರೂಪಾಯಿಗಳ ಸಾಲವನ್ನು ತೀರಿಸಿದ್ದೇವೆ ಮತ್ತು ರಾಜ್ಯ ಸುಭಿಕ್ಷೆ ತಿಯನ್ನು ಕಂಡಿದೆ ಎನ್ನುವ ಸ್ಥಿತಿಯಲ್ಲಿವೆ ಎಂದು ಹೇಳಿದ್ದಾರೆ. ಇವತ್ತು ನಾನು ಹೇಳು 62 ಕೋಟಿ ರೂಪಾಯಿಗಳ ವೇಸ್ ಅಂಡ್ ಮೀನ್ಸ್ ಓವರ್‌ಡ್ರಾಫ್ಟ್ಸ್ ತೋರಿಸಿಕೊಡು ವದಕ್ಕೆ ಅವಕಾಶ ಮಾಡಿಕೊಟ್ಟಿರಿ ಎಂದು. ಆದಕ್ಕೆ ನಿಮ್ಮ ಅರ್ಥಸಚಿವರು 22 ಕೋಟಿ ರೂಪಾಯಿ ನ್ನು ಮರುಪಾವತಿ ಈ ವರ್ಷ ಮಾಡಬೇಕಾಗುತ್ತದೆಂದು ಹೇಳುತ್ತಾರೆ. ಎರಡು ವರ್ಷದ್ದೂ 22 ಕೋಟಿ ರೂಪಾಯಿಗಳನ್ನು ಮರುಪಾವತಿ ಮಾಡಬೇಕಾಗುತ್ತದೆ ಮೊದಲನೆಯ ದ್ದು 9 ಕೋಟಿ ಚಿಲ್ಲರೆ ಎರಡನೆಯ ವರ್ಷದ್ದು 12 ಕೋಟಿ ಚಿಲ್ಲರೆ, ಕಳೆದ ಸಾರಿ 30 ಕೋಟಿ ಸಾರಿ (ಆಂಟಿಸಿಪೇಟೆಡ್) 36.1 ಕೋಟಿ ರೂಪಾಯಿ. ಇನ್ನು ಮೂರನೆಯ ವೇತನ ಆಯೋಗ ದವರು ಕೇಂದ್ರದ ನೌಕರರಿಗೆ ವೇತನ ನಿಗಧಿಮಾಡುತ್ತಾರೆ. ಅವರ ಒಂದು ಅವಾರ್ಡ್ ಬಂದಮೇಲೆ ಇದರ ಪರಿಣಾಮ, ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಏನಾಗುತ್ತದೆ ಎನ್ನತಕ್ಕ ಹಿನ್ನಲೆಯಲ್ಲಿ ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಏಕೆಂದರೆ, ಸೆಂಟ್ರಲ್ ಮತ್ತು ಸ್ಟೇಟ್ ಎಂಪ್ಲಾಯೀಸ್‌ಗೆ ಕೊಡತಕ್ಕ ಡಿ. ಎ. ಅನ್ನು ಸರಿಸಮಾನವಾಗಿ ಮಾಡತಕ್ಕದ್ದಾಗಿದೆ ಎಂದು ತಾವೇ ಒಪ್ಪಿಗೆ ಕೊಟ್ಟಿದ್ದೀರಿ.

3-00 P. M.

ಮೂರನೇ ವೇತನ ಆಯೋಗದವರು ಕೊಡತಕ್ಕ ತೀರ್ಪಿನಿಂದ ನಿಮ್ಮ ಬೊಕ್ಕಸದ ಮೇಲೆ ಏನು ಪರಿಣಾಮವಾಗುತ್ತದೆ? ಆ ಹಿನ್ನೆಲೆಯಿಂದ ಮತ್ತೆ 36.1 ಕೋಟಿ ರೂಪಾಯಿ 1973-74ಕ್ಕೆ ಏನು ಖೋತಾವನ್ನು ತೋರಿಸಿದ್ದೀರಿ ಅಲ್ಲಿಗೆ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಇದರ ಜೊತೆಗೆ ನೀವು ಅಂದಾಜು ಪಟ್ಟಿಯನ್ನು ಪರಿಶೀಲನೆ ಮಾಡಿ ನೋಡದೆ ಏನು ಭೂ ಸುಧಾರಣೆಯನ್ನು ದೇಶದಲ್ಲಿ ಕಾರ್ಯಗತಮಾಡಲಿಕ್ಕೆ ಎಷ್ಟು ಹಣ ಒದಗಿಸಿದ್ದೀರಿ? ಇದನ್ನು ಕಾರ್ಯಗತ ಮಾಡುತ್ತೀರಾ! ಇಲ್ಲವೇ? ಅದಕ್ಕೆ ಸರ್ಕಾರದವರು ರಿಸೋರ್ಸಸ್ ಕಂಡುಹಿಡಿದಿದ್ದೀರಾ ಎಂದು ದಯಮಾಡಿ ಈ ಸಭೆಗೆ ತಿಳಿಸಿ. ಹುಚ್ಚಮಾಸ್ತಿಗೌಡರು ಹೇಳುತ್ತಿದ್ದರು ಪರಿಹಾರವನ್ನು ಕೊಡುವುದು ಮಾರ್ಕ್ಸಿಯಲ್ಲಿ ಎಂದು. ಪರಿಹಾರ ಕೊಡುವುದಕ್ಕೆ ಹಣ ಎಲ್ಲಿ ಇಟ್ಟಿದ್ದೀರಿ ಗೊತ್ತಿಲ್ಲ. ಮುಂದೆ ಬರತಕ್ಕ ವೆಚ್ಚದ ಹಣವನ್ನು ತುಂಬುವುದಕ್ಕೆ ಆಲೋಚನೆ ಮಾಡಿದ್ದೀರಾ? ಈಗ ಪ್ರಸ್ತಾಪಮಾಡಿರುವುದು 36.1 ಕೋಟಿ ರೂಪಾಯಿ ಖೋತಾ 1973-74ಕ್ಕೆ ಏನು ವ್ಯಕ್ತಪಡಿಸಿದೆ ಅದು ಅಷ್ಟಕ್ಕೆ ನಿಲ್ಲುವುದಿಲ್ಲ. ಆದರ ಜೊತೆಗೆ ಶ್ರೀಮಾನ್ ಘೋರ್ಪಡೆಯವರು ಬಂದಮೇಲೆ ಕೆಲವು ಹೊಸ ಬದಲಾವಣೆಗಳು ಆಗುತ್ತವೆ, ಅವರು ಆರ್ಥಿಕವಾಗಿ ಬಹಳ ಅಭ್ಯಾಸ ಮಾಡಿದ ವ್ಯಕ್ತಿ ಎಂದು ತಿಳಿದುಕೊಂಡಿದ್ದೆವು. ಇವೊತ್ತು ಲಂಪ್‌ಸಮ್ ಪ್ರಾವಿಷನ್ಸ್ ಕೆಲವು ಯೋಜನೆಗಳಿಗೆ ಇಟ್ಟಿದ್ದೀರಿ. ಇವೊತ್ತು ಟೋಕನ್ ಗ್ರ್ಯಾಂಟ್ಸ್ ಕೆಲವು ಯೋಜನೆಗಳಿಗೆ ಇಟ್ಟಿದ್ದೀರಿ. ಪುನಃ ಯೋಜನೆಗಳಿಗೆ ಸಭೆಯಮುಂದೆ ಸಪ್ಲಿಮೆಂಟರಿ ಗ್ರ್ಯಾಂಟ್ ರೂಪದಲ್ಲಿ ತರುತ್ತೀರಿ. ಹಲವಾರು ಯೋಜನೆಗಳನ್ನು ಸ್ಯಾಂಕ್ಷನ್ ಮಾಡಿದಮೇಲೆ ಆಗತಕ್ಕ ಆರ್ಥಿಕ ವೆಚ್ಚ ಮಿತಿಯಿಂದ ಹೆಚ್ಚಿಗೆ ಕಮಿಟ್‌ಮೆಂಟ್ ಆಗುವುದಿಲ್ಲವೇ? ಇವೊತ್ತು ಏನು ಟೋಕನ್ ಗ್ರ್ಯಾಂಟ್ ಕೆಲವು ಸ್ಕೀಮುಗಳಿಗೆ ಕೊಟ್ಟಿದ್ದೀರಿ ಅವು ಸ್ಕ್ರೂಟಿನಿ ಸ್ಟೇಜಿನಲ್ಲಿ ಇರಬಹುದು. ಆ ಸ್ಕೀಮುಗಳಿಗೆ ಮಂಜೂರಾತಿ ಕೊಟ್ಟ ಮೇಲೆ ಆಗತಕ್ಕ ಫರ್‌ದರ್ ಕಮಿಟ್‌ಮೆಂಟ್ ಲೆಕ್ಕ ಹಾಕಿ ನೋಡಿದರೆ ಖೋತಾ ಊಹೆಮಾಡಿ ನೋಡಿದರೆ 50 ಕೋಟಿ ರೂಪಾಯಿಗೂ ಹೆಚ್ಚು ಹೋಗಬಹುದು. ಆದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಚಿಂತಾಜನಕ ಪರಿಸ್ಥಿತಿಯಲ್ಲಿ ಇದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆಮೇಲೆ ನಮ್ಮ ಮಿತ್ರರಾದ ಶ್ರೀಮಾನ್ ಘೋರ್ಪಡೆಯವರು ಬಡ್ಜೆಟ್ಟನ್ನು ಮಂಡಿಸಿದ ಕಾಲದಲ್ಲಿ ಅವರ ಕಡೆ ಸದಸ್ಯರು ಮೇಜನ್ನು ಬಡಿದರು. ಕೆಲವುಸಾರಿ ಸ್ಪೀಕರ್‌ರವರು ಕಿವಿಗೆ ಹತ್ತಿ ಇಟ್ಟುಕೊಳ್ಳಬೇಕು ಎಂದು ಹೇಳುತ್ತಿರುತ್ತಾರೆ. ಆ ರೀತಿ ಹತ್ತಿ ಇಟ್ಟುಕೊಳ್ಳಬೇಕು ಎಂದು ನಾನು ಹೇಳುವುದಿಲ್ಲ. ಆದರೆ ಅಷ್ಟೊಂದು ಕರ್ಕಶವಾದ ರೀತಿಯಲ್ಲಿ ಅವರು ಬಡಿದರು. ಇದು ತೃಪ್ತಿಕರವಾಗಿಲ್ಲದ ಬಡ್ಜೆಟ್ ಆಗಿದೆ. ಶ್ರೀಮಾನ್ ಘೋರ್ಪಡೆಯವರು ಎಕಾನಾಮಿಕ್ ಸ್ಟುಡೆಂಟ್ ನಿಮ್ಮವರೇ ಒದಗಿಸಿಕೊಟ್ಟಿರತಕ್ಕ ಅಂಕಿ ಅಂಶಗಳ ಆಧಾರದ ಮೇಲೆ ಹೇಳುವುದಾದರೆ ಇವೊತ್ತು ಬೆಲೆಗಳು ನವೆಂಬರ್‌ನಿಂದ 17 ಪರ್ಸೆಂಟ್ ಜಾಸ್ತಿಯಾಗಿದೆ ಎಂದು ಶ್ರೀಮಾನ್ ಚವಾಣ್‌ರವರು ಹೇಳಿದ್ದಾರೆ. ಇವೊತ್ತು 100 ರೂಪಾಯಿ ಬೆಲೆ ಬಾಳತಕ್ಕ ಒಂದು ಪದಾರ್ಥ 117 ರೂಪಾಯಿ ಆದರೆ ಆ 17 ರೂಪಾಯಿಗಳಿಗೆ ಮಾರಾಟ ತೆರಿಗೆಯನ್ನು ವಿಧಿಸುವುದಿಲ್ಲವೇ? 128 ಕೋಟಿ ರೂಪಾಯಿ ಸ್ಟೇಟ್ ಟ್ಯಾಕ್ಸ್ ಏನು ಬರುತ್ತದೆ 1972-73ರಲ್ಲಿ ಎಂದು ತಿಳಿಸಿದ್ದೀರಿ ಅದು 133 ಕೋಟಿ ರೂಪಾಯಿ ಬರುವುದಾಗಿ ಅಂದಾಜು ಮಾಡಿದ್ದೀರಿ. ಇದನ್ನು ಆಲೋಚನೆ ಮಾಡಬೇಕು. ಆನ್ ಅಕೌಂಟ್ ಆಫ್ ಎನಾನ್ಸ್‌ಮೆಂಟ್ ಆಫ್ ಟ್ಯಾಕ್ಸ್ ಏನಿದೆ ಇದು ಬಳಕೆದಾರರ

(ಶ್ರೀ ಎಚ್. ಡಿ. ದೇವೇಗೌಡ)

ಮೇಲೆ ಬೀಳುವ ತೆರಿಗೆ ಅಲ್ಲವೇ ? ಇದನ್ನು ಶ್ರೀಮಾನ್ ಬಸವಲಿಂಗಪ್ಪನವರು ಹೇಳಬೇಕು. ಏನು ತೆರಿಗೆ ರಹಿತ ಬಡ್ಜೆಟ್ ಎಂದು ಅನೇಕ ಮಿತ್ರರು ಬೆನ್ನನ್ನು ತಟ್ಟಿಕೊಂಡರು ಅವರು ತಮ್ಮ ಮನಸ್ಸಿನಲ್ಲಿ ಪ್ರಶ್ನೆ ಹಾಕಿಕೊಳ್ಳಲಿ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ರಿಸರ್ವ್ ಬ್ಯಾಂಕ್ ಕೊಟ್ಟಿರತಕ್ಕ ಅಂಕಿ ಅಂಶಗಳ ಬಗ್ಗೆ ಬಹಳ ಹೇಳುವುದು ಇದೆ. ಬರೀ 17 ಪರ್ಸೆಂಟ್ ರೈಸ್ ಆಗಿಲ್ಲ ಕೆಲವು ಕಮಾಡಿಟಿ 60—70 ಪರ್ಸೆಂಟ್ ಜಾಸ್ತಿಯಾಗಿದೆ. ಒಂದು ಮೂಟೆಗೆ 135 ಇದ್ದದ್ದು ಇವೊತ್ತು 150 ರೂಪಾಯಿ ಆಗಿದೆ ಎಂದು ಹೇಳಿದರೆ ಅದು ಏನು ಉತ್ಪ್ರೇಕ್ಷೆ ಮಾತಲ್ಲ ಎಂದು ತಿಳಿದುಕೊಳ್ಳಬೇಕು. ಇದು ಯಾರ ಮೇಲೆ ಬೀಳುತ್ತದೆ? ಈ ಪರಿಸ್ಥಿತಿಗೆ ಯಾರು ಕಾರಣರು?

ಶ್ರೀ ಬಿ. ಬಸವಲಿಂಗಪ್ಪ.—ಪ್ರಕೃತಿಯ ವಿಕೋಪವೇ ಕಾರಣ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಅಷ್ಟೊಂದು ಲಘುವಾಗಿ ಮಾತನಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ರಿಸರ್ವ್ ಬ್ಯಾಂಕ್‌ನವರು ಒದಗಿಸಿರತಕ್ಕ ಅಂಕಿಅಂಶಗಳ ಆಧಾರದ ಮೇಲೆ ಹೇಳುತ್ತೇನೆ.

The prices shot up by 17%. The country has been carrying on with the khariff crop of the last year. So, the impact of the drought on prices would be mainly felt only in the coming year.

ನಾನು ಬರಗಾಲದಿಂದ ಏರಿಕೆಯಾಗಿದೆ ಎಂದು ಸಮರ್ಥನೆ ಮಾಡುವುದಕ್ಕೆ ತಯಾರಿಲ್ಲ. 1972-73ರ ಬರಗಾಲದ ಪರಿಣಾಮ 1973-74ಕ್ಕೆ ಬರುತ್ತದೆ 1971-72ರಲ್ಲಿ ಆದರ ಬೆಳೆ 108 ಮಿಲಿಯನ್ ಟನ್‌ಗಳು. 1971-72ರ ಫುಡ್‌ಪ್ರೊಡಕ್ಷನ್ 1972-73ರಲ್ಲಿ 104 ಕೋಟಿ ಟನ್ ನಿರೀಕ್ಷೆ ಮಾಡುತ್ತಿದ್ದೀರಿ. ರಿಸರ್ವ್ ಬ್ಯಾಂಕಿನವರು ಕೊಟ್ಟಿರತಕ್ಕ ಅಂಕಿ ಹಿಡಿದು ನೋಡಿದರೆ 5 ಪರ್ಸೆಂಟ್ ಆಗುವ ಸಾಧ್ಯತೆ ಇದೆ. 100 ಮಿಲಿಯನ್ ಟನ್ಸ್‌ಗೆ ನಿಲ್ಲಬಹುದು. ಈ ವರ್ಷ ಬೆಲೆಗಳ ಏರಿಕೆ ಬರಗಾಲದ ದೆಸೆಯಿಂದ ಬರುವುದಿಲ್ಲ ಎಂದು ಸಮರ್ಥನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಕಳೆದಸಾರಿ ಬೆಳೆ ಇತ್ತು ಆದರೂ ಆದರ ಹೊಡೆತ ಹೋದವರ್ಷದ ಮೇಲೆ ಬಿದ್ದಿಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತನೆ. ಬೆಲೆ ಏರಿಕೆ ಬರಗಾಲದ ಪರಿಸ್ಥಿತಿಯಿಂದ ಆಗಿದೆ ಎಂದು ಅದಕ್ಕೆ ಹೊಂದಿಸುವುದು ಅದು ಅರ್ಥರಹಿತವಾದ ಮಾತು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜೊತೆಗೆ ಇವೊತ್ತು ನಾನು ತಮಗೆ ಮೊದಲೇ ತಿಳಿಸಿದ ಹಾಗೆ ತಾವು ಕೇಂದ್ರದ ಕೃಪಾಕಟಾಕ್ಷದಲ್ಲಿ ನೀವು ಎಷ್ಟೇ ಸಮರ್ಥ ಆರ್ಥಿಕ ಸಚಿವರಾಗಿದ್ದರೂ ತಮ್ಮ ಮುಂದಿನ ಪ್ರಗತಿ ಹೆಜ್ಜೆಯನ್ನು ಇಡಬೇಕಾಗುತ್ತದೆ ಇಲ್ಲದಿದ್ದರೆ ಸಾಧ್ಯವಿಲ್ಲ ಎಂಬುದನ್ನು ಇವೊತ್ತು ಒಪ್ಪಿಕೊಳ್ಳುತ್ತೀರಾ ಎಂದು ಕಾಣುತ್ತದೆ. ಏನು ಹೊಸ ರಾಜಕೀಯ ವಾತಾವರಣ ಇದೆ ಈ ಹೊಸ ವಾತಾವರಣದಿಂದ ಕೇಂದ್ರದ ಮತ್ತು ರಾಜ್ಯದ ಪರಸ್ಪರ ಹೊಂದಾಣಿಕೆ, ಒಂದು ಪರಸ್ಪರ ಬಾಂಧವ್ಯ ಮತ್ತು ನೆಂಟಸ್ತನ ಮೂಡಿಸಿಲಕ್ಕೆ ಸಾಧ್ಯ. ಇದನ್ನು ಉಳಿಸಿಕೊಳ್ಳದಿದ್ದರೆ ಕಷ್ಟ ಇದೆ. ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಪ್ರಯತ್ನಪಟ್ಟಾಗ ಇವೊತ್ತು ರಾಜ್ಯಗಳ ಸ್ಥಿತಿಯನ್ನು ನೋಡಿದ್ದೇ ಆದರೆ ಆದರ ಬಗ್ಗೆ ನಾನು ದೊಡ್ಡ ಅರ್ಥವನ್ನು ಕಲ್ಪಿಸುವುದಕ್ಕೆ ಹೋಗುವುದಿಲ್ಲ. ಇವೊತ್ತು ರಾಜ್ಯಗಳ ಪರಿಸ್ಥಿತಿ ಪೌರಸಭೆಗಳಿಗಿಂತಲೂ ಕಡಿಮೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಪುರಸಭೆಗಳು ಒಂದಾನೊಂದು ಕಾಲದಲ್ಲಿ ಬಹಳ ಉತ್ತಮ ಆಗಿತ್ತು. ಇವೊತ್ತು ರಾಜ್ಯಗಳ ಪರಿಸ್ಥಿತಿ ಕೂಡ ಕೀಳುಮಟ್ಟಕ್ಕೆ ಹೋಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ಆರ್ಥಿಕಸಚಿವರು ಒಂದು ಮಾತು ಹೇಳಿದ್ದಾರೆ. ಆಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಕೂಡ ಜನರಲ್ ಇನ್‌ಕಮ್ ಜೊತೆಗೆ ಸೇರಿಸಿ ಇವೊತ್ತು ವರಮಾನ ತೆರಿಗೆ ಹಾಕಲಕ್ಕೆ ಒಂದು ಸೂಚನೆ ಕೊಟ್ಟಿದ್ದಾರೆ. ಅಗ್ರಿಕಲ್ಚರ್ ಈಸ್ ಎ ಸ್ಟೇಟ್ ಸಬ್ಜೆಕ್ಟ್. ಈ ಹೊತ್ತು ವ್ಯವಸಾಯ ವರಮಾನದ ಮೇಲೆ ಹಾಕತಕ್ಕ ತೆರಿಗೆಯನ್ನು ಕೇಂದ್ರದವರು ಕಸಿದುಕೊಳ್ಳುವುದಾದರೆ, ಡಿವಿಸಿಬಲ್ ಪೂಲ್‌ನಲ್ಲಿ ಏನು 'ಸಿಕ್ಕುತ್ತದೆ? ಆದಕ್ಕೆ ಭಿಕ್ಷೆ ಪಾತ್ರೆಯನ್ನು ಒಡ್ಡಿ ನಿಲ್ಲಬೇಕು. ನಾನು ಇದಕ್ಕೆ ಒಂದು ಎಚ್ಚರಿಕೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ, ಕೇಂದ್ರ ರಾಜ್ಯಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಇರತಕ್ಕ ಎಲ್ಲ ಸಂಪನ್ಮೂಲಗಳನ್ನೂ ಒಂದಲ್ಲ ಒಂದು ರೀತಿ ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಾದರೆ ತಾವು ದಿಟ್ಟತನದಿಂದ ಹೋರಾಟ ಮಾಡಿ ಪ್ರತಿಭಟನೆ ಮಾಡಬೇಕಾಗುತ್ತದೆ, ಇದನ್ನು ಕೊಡಲಕ್ಕೆ ಸಾಧ್ಯವಾಗುವುದಿಲ್ಲವೆಂದು.

ಮಾನ್ಯ ಅರ್ಥ ಸಚಿವರು ಒಂದು ಹೆಜ್ಜೆ ಮುಂದೆ ಹೋಗಿ ಹೇಳಿದ್ದಾರೆ ಈ ಹೊತ್ತು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕ ಯೋಜನೆಗಳೇನಿವೆ, ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ಸ್ ವರಾಹಿ, ಕಾಳಿನದಿ ಪ್ರಾಜೆಕ್ಟ್ ಒಂದು ಮತ್ತು ಎರಡನೇ ಹಂತ, ಶರಾವತಿ ಟೇಲ್ ರೇಸ್ ಮುಂತಾಗಿ ಹೇಳಿದಾರೆ. ಅದನ್ನೆಲ್ಲ ನಾನು ವಿವರಿಸುವುದಕ್ಕೆ ಹೋಗುವುದಿಲ್ಲ. 336 ಕೋಟಿ ರೂಪಾಯಿಗಳನ್ನು ಈ ಯೋಜನೆಗಳಿಗೆ ನಿರೀಕ್ಷಣೆ ಮಾಡಿದ್ದಾರೆ. ನ್ಯಾಷನಲ್ ಪವರ್‌ಗ್ರಿಡ್ ಮಾಡಿ ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಸಂಪನ್ಮೂಲಗಳನ್ನು ಒದಗಿಸತಕ್ಕ ಯೋಜನೆಗಳನ್ನು ಕೇಂದ್ರ ತನ್ನ ಹಿಡಿತಕ್ಕೆ ಪಡೆಯಲಿಕ್ಕೆ ಪ್ರಯತ್ನಪಟ್ಟಾಗ ಅದಕ್ಕೆ ಎದುರು ನಿಲ್ಲಬೇಕಾಗುತ್ತದೆ. ಏಕೆಂದರೆ ಈ ಹೊತ್ತು ಪವರ್ ಪ್ರಾಜೆಕ್ಟ್ಸ್ ಮೇಲೆ ಖರ್ಚು ಮಾಡತಕ್ಕ ಹಣ ಅತ್ಯಲ್ಪ ಕಾಲದಲ್ಲಿ ವಾಪಸ್ಸು ಬರುತ್ತದೆ ಎನ್ನುವುದಕ್ಕೆ ಶರಾವತಿ ನಿದರ್ಶನವೊಂದೇ ಸಾಕು. ಈ ಹೊತ್ತು ಕೇಂದ್ರ ಒಂದಲ್ಲ ಒಂದು ರೀತಿಯಿಂದ ರಾಜ್ಯಕ್ಕೆ ಸಂಪನ್ಮೂಲಗಳನ್ನು ಒದಗಿಸತಕ್ಕ ಹಲವಾರು ಯೋಜನೆಗಳನ್ನು ಅವರ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಾಗ ರಾಜ್ಯ ಸರ್ಕಾರ ಮೆಟ್ಟಿ ನಿಲ್ಲಬೇಕಾಗುತ್ತದೆ ಎಂದು ಹೇಳುತ್ತೇನೆ. ನಾನು ಕೇಂದ್ರ ವಿಧಿಸಿರತಕ್ಕ ಪರೋಕ್ಷವಾದ ತೆರಿಗೆಯ ವಿಷಯದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದರ ಇಂಪ್ಯಾಕ್ಟ್ ಕೇವಲ ಶ್ರೀಮಂತರಿಗೆ ಮಾತ್ರ ಬೀಳುತ್ತದೆ ಎನ್ನತಕ್ಕ ವಾದಸರಣಿಯನ್ನು ನಾನು ಒಪ್ಪಲು ತಯಾರಿಲ್ಲ. ಅದು ವಿಷಸ್ ಸರ್ಕಲ್. ಮಾನ್ಯ ಚವಾಣ್ ಅವರು ಭೋಗವಸ್ತುಗಳ ವಿಷಯ ಅವರ ಭಾಷಣದಲ್ಲಿ ಹೇಳಿದ್ದಾರೆ. ಅವರು ತಮ್ಮ ಗುರಿ ಏನು ಎಂದು ತಿಳಿಸತಕ್ಕ ಕಾಲದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ :—

> " The Finance Minister listed five minimum tasks for the countries economy :—
>
> (1) The inflationary pressures have to be contained through judicious combination demand management and increased production of basic wide gaps and strengthening the public distribution system .
>
> (2) In order to improve growth prospects, vigorious efforts have to be made to increase the rate of savings and investment.
>
> (3) Greatest viability of external front which can only be achieved from higher exports and restraint in imports.
>
> (4) Rapid increase in employment opportunities both in rural and urban areas to tackle the unemployment problem.
>
> 5. Determined efforts are necessary to reduce disparties in income and consumption : to secure greater social justice programme does not provide minimum basic amenities to all citizens must be expanded in scope and coverage.

ಈ ಐದು ಮುಖ್ಯ ಗುರಿಗಳನ್ನು ಇಟ್ಟುಕೊಂಡಿರುವುದಾಗಿ ಶ್ರೀಮಾನ್ ಚವಾಣ್ ಅವರು ಅವರ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಈ ಹೊತ್ತು 262 ಕೋಟಿ ರೂಪಾಯಿಗಳ ಪರೋಕ್ಷ ತೆರಿಗೆಯನ್ನು ವಿಧಿಸಿದ್ದಾರೆ. ಬಹುಶಃ ಇದು ಕೆಲವೇ ಶ್ರೀಮಂತರಿಗೆ ಮತ್ತು ಮಧ್ಯಮ ವರ್ಗದವರಿಗೆ ಮಾತ್ರ ಬೀಳುತ್ತದೆಂದು ತಿಳಿದುಕೊಂಡಿದ್ದರೆ ತಪ್ಪಾಗುತ್ತದೆ. ಭೋಗವಸ್ತುಗಳನ್ನು ಉತ್ಪಾದನೆ ಮಾಡತಕ್ಕ ಕೈಗಾರಿಕೆಗಳೇನಿವೆ ಅವುಗಳ ಮೇಲೆ 55 ಪರ್ಸೆಂಟ್ ಬಂಡವಾಳವನ್ನು ಹೂಡಿದ್ದಾರೆ. ಭೋಗವಸ್ತುಗಳನ್ನು ಉತ್ಪಾದನೆ ಮಾಡತಕ್ಕ ಕೈಗಾರಿಕೆಗಳ ಪೈಕಿ ಹೂಡಿರತಕ್ಕ ಬಂಡವಾಳ ಅವರೇ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ 55 ಪರ್ಸೆಂಟ್ ಆಗುತ್ತದೆ. ಆದರೆ ಇದರ ಫಲವನ್ನು ಊಟ ಮಾಡುವವರು ರಾಷ್ಟ್ರದಲ್ಲಿ 5 ಪರ್ಸೆಂಟ್. ಈ ಭೋಗವಸ್ತುಗಳಿಂದ ಆದಾಯ ಬಹಳವಿದೆ ಎಂದು ತಿಳಿದಿರಬಹುದು. ವರಮಾನ ತೆರಿಗೆಯ ಮೂಲಕ ನಮಗೆ ಹಣ ವಾಪಸು ಬರುತ್ತದೆ ಎಂದು ತಿಳಿದುಕೊಂಡಿರಬಹುದು. ವರಮಾನ ತೆರಿಗೆಯ ಪರಿಮಿತಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರತಿಯೊಬ್ಬ ಕೈಗಾರಿಕೋದ್ಯಮಿಯೂ ಪ್ರಯತ್ನ ಮಾಡುತ್ತಾನೆ. ಬಹುಶಃ ಇದನ್ನು

(ಶ್ರೀ ಎಚ್. ಡಿ. ದೇವೇಗೌಡ)

ಸಾಕಷ್ಟು ತಡೆಗಟ್ಟಲಿಕ್ಕೆ ಸಾಧ್ಯವಾಗಿಲ್ಲ. ವರಮಾನ ತೆರಿಗೆಯ ಪಟ್ಟಿಯನ್ನು ನೋಡುವುದಾದರೆ 10 ಲಕ್ಷ ರೂಪಾಯಿ ವರಮಾನ ಬರುವವರು ಸುಮಾರು 9 ಲಕ್ಷ 46 ಸಾವಿರ ರೂಪಾಯಿ ತೆರಿಗೆಯ ರೂಪದಲ್ಲಿ ಕೊಡಬೇಕಾಗುತ್ತದೆ. ಸರ್ಚಾರ್ಜ್ ಸೇರಿಸಿದರೆ ಅದಕ್ಕಿಂತ ಮೇಲೆ ಹೋಗುತ್ತದೆ. ಆದುದರಿಂದ ಯಾವ ಕೈಗಾರಿಕೋದ್ಯಮಿಯೂ ಪ್ರಾಮಾಣಿಕವಾದ ಲೆಕ್ಕವನ್ನು ಕೊಡುವುದಕ್ಕೆ ತಯಾರಾಗಿರುವುದಿಲ್ಲ. ಹತ್ತು ಲಕ್ಷ ರೂಪಾಯಿ ವರಮಾನ ಬಂದರೆ ಅದಕ್ಕೆ 10 ಲಕ್ಷ 20 ಸಾವಿರ ರೂಪಾಯಿ ತೆರಿಗೆ ಕೊಡುವುದಕ್ಕೆ ಯಾವನು ತಾನೇ ತಯಾರಾಗಿರುತ್ತಾನೆ! ಸಾಧ್ಯವೇ ಇಲ್ಲ. ಆದ್ದರಿಂದ ಹಣ ಮಾಡುವುದಕ್ಕೆ ಅನೇಕ ಮಾರ್ಗಗಳನ್ನು ಹುಡುಕಲೇ ಬೇಕಾಗುತ್ತದೆ ಮತ್ತು ಅದಕ್ಕೆ ಪ್ರಯತ್ನ ಮಾಡುತ್ತೇನೆ. ಪ್ರತಿಯೊಬ್ಬ ಕೈಗಾರಿಕೋದ್ಯಮಿ ಮಾಡತಕ್ಕದ್ದೂ ಆ ಕೆಲಸವನ್ನೇ. ಯಾವಾಗ ತೆರಿಗೆಯನ್ನು ಕೊಡಲಿಕ್ಕೆ ತಪ್ಪಿಸಿಕೊಳ್ಳುತ್ತಾನೆ, ಅದರಿಂದ ಬರತಕ್ಕ ಕಪ್ಪು ಹಣವನ್ನು ಉಪಯೋಗಿಸಿ ಸಮಾಜದಲ್ಲಿ ಘಾತುಕತನವನ್ನು ಮಾಡಲಿಕ್ಕೆ ಅವಕಾಶವಿದೆ. ಇದು ಒಂದು ವಿಷಸ್ ಸರ್ಕಲ್ ಇದ್ದ ಹಾಗೆ ಇದನ್ನು ಭೇದಿಸಲಿಕ್ಕೆ ಸಾಧ್ಯವೇ ಇಲ್ಲ. ವಾಂಛೂ ಕಮಿಟಿ ರಿಪೋರ್ಟಿನ ಪ್ರಕಾರ ದೇಶದಲ್ಲಿ 7 ಸಾವಿರ ಕೋಟಿ ರೂಪಾಯಿ ಕಪ್ಪು ಹಣವಿದೆ. ಈ ಕಪ್ಪು ಹಣವನ್ನು ಭೇದಿಸಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಕೈ ಹಾಕುವುದು ಬಹಳ ಕಷ್ಟವಿದೆ. ಮಾನ್ಯ ದೇವರಾಜ ಅರಸ್‌ರವರು ಮಾಡುತ್ತೇವೆಂದು ಹೇಳುವುದಕ್ಕೂ ಸಾಧ್ಯವಿಲ್ಲ, ಯಾರು ಬಂದರೂ ಮಾಡುವುದಕ್ಕೆ ಸಾಧ್ಯವಿಲ್ಲ. ಇಂಥ ವಿಷಮ ಪರಿಸ್ಥಿತಿಯಲ್ಲಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.--ಕಪ್ಪು ಹಣ ಕಾಳಿಂಗ ಸರ್ಪವಿದ್ದ ಹಾಗೆ.

ಶ್ರೀ ಎಚ್. ಡಿ. ದೇವೇಗೌಡ.- ಒಂದೊಂದು ಸಲ ಕಷ್ಟವಾಗುತ್ತದೆ ಅದರ ಪರಿಸ್ಥಿತಿ ಹಾಗಿದೆ ಹೆಚ್ಚು ಮೊತ್ತದ ಕರೆನ್ಸಿ ನೋಟುಗಳನ್ನು ಅಪಮೌಲ್ಯ ಮಾಡಿದರೆ ಸಾಧ್ಯವೆಂದು ಕೆಲವರು ಹೇಳುತ್ತಾರೆ, ಸಾಧ್ಯವಿಲ್ಲ ಏಕೆಂದರೆ ಕಪು ಹಣಕ್ಕೆ ಎಲ್ಲರೂ ಪರೋಕ್ಷವಾಗಿ ನೆರವಾಗುತ್ತಾರೆ. ಶ್ರೀಮಾನ್ ಚವಾಣ್ ಅವರು ಹೇಳುವ ಮಾತಿನಲ್ಲಿಯೇ ಹೇಳುವುದಾದರೆ ಅದು ಬಹಳ ಕಷ್ಟದ ಕೆಲಸ. ಒಂದೇ ಒಂದು ನಿದರ್ಶನವನ್ನು ಕೊಡುವುದಾದರೆ ಈ ಹೊತ್ತು ರಾಜಕೀಯ ಪಕ್ಷಗಳು ಯಾವ ವಂತಿಗೆಯನ್ನೂ ಕಂಪೆನಿಗಳಿಂದ ಪಡೆಯಬಾರದು ಎಂದ ತೀರ್ಮಾನ ಮಾಡಿವೆ. ಆದರೆ ಯಾರೂ ಅದರ ಪಾಲನೆಗೆ, ಅದನ್ನು ಜಾರಿಗೆ ಕೊಡುವುದಕ್ಕೆ ತಯಾರಾಗಿಲ್ಲ. ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಮಾತ್ರ ಈ ಮಾತು ಅನ್ವಯವಾಗುತ್ತದೆಂದು ನಾನು ಹೇಳುವುದಕ್ಕೆ ಸಿದ್ಧನಾಗಿಲ್ಲ. ಕಂಪೆನಿಗಳಿಂದ ಬರತಕ್ಕ ಹಣವನ್ನು ತೆಗೆದುಕೊಂಡು ಅದರ ಹಂಗಿಗೆ ತುತ್ತಾದ ಮೇಲೆ ಕಪ್ಪು ಹಣವನ್ನು ತಡೆಗಟ್ಟಲಿಕ್ಕೆ ನಮಗೆ ಕಷ್ಟವಿದೆ ಎಂದು ಪ್ರಾಸಂಗಿಕವಾಗಿ ಇದನ್ನು ಪ್ರಸ್ತಾಪ ಮಾಡಿದ್ದೇನೆ.

ಈವೊತ್ತು ಕಪ್ಪು ಹಣದ ಸಮಾಜ ಘಾತುಕತನ ಬಹುಶಃ ನಿರೀಕ್ಷೆಗೆ ನಿಲುಕಲಾರದಷ್ಟು ಉಲ್ಬಣಾವಸ್ಥೆಗೆ ಹೋಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಈವೊತ್ತು ಮೊದಲೇ ತಿಳಿಸಿದ ಹಾಗೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಯಾವ ಒಂದು ಸಂಕಷ್ಟದ ಪರಿಸ್ಥಿತಿಯಲ್ಲಿದೆ ಎನ್ನುವುದನ್ನು ಈ ಒಂದು ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರು ಜಾಣ್ಮೆಯಿಂದ ಎಷ್ಟೇ ವಿಷಯವನ್ನು ಮುಚ್ಚಿಡಲಿಕ್ಕೆ ಪ್ರಯತ್ನಪಟ್ಟರೂ ಕೂಡ ಅದು ಹೊರಬೀಳಲು ಬಹಳ ಕಾಲ ಬೇಕಾಗಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಜೊತೆಗೆ ಈವೊತ್ತು ಆರನೇ ಆರ್ಥಿಕ ಆಯೋಗದವರಿಂದ ಬಹಳ ಹೆಚ್ಚಿಗೆ ನಿರೀಕ್ಷಣೆ ಮಾಡಿಕೊಂಡಿದ್ದೇವೆ ಎಂದು ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದ ನೌಕರರಿಗೆ ಕೇಂದ್ರ ಮಟ್ಟದ ತುಟ್ಟಿಭತ್ಯವನ್ನು ಕೊಡತಕ್ಕ ಕಾಲದಲ್ಲಿ 3-4 ತಿಂಗಳ ಮುಂಚೆ ಈ ನಿರ್ಣಯವನ್ನು ತೆಗೆದುಕೊಂಡಿದ್ದ ಪಕ್ಷದಲ್ಲಿ ಹೆಚ್ಚಿನ ಸಹಾಯವಾಗುತ್ತಿತ್ತು ಎನ್ನುವುದನ್ನು ನಾನು ವೈಯಕ್ತಿಕ ಭಾವದಿಂದ ಹೇಳುತ್ತಿದ್ದೇನೆ. ನೀವು ಸ್ವಲ್ಪ ವಿಳಂಬ ಮಾಡಿದ್ದುದರಿಂದ ಸ್ವಲ್ಪ ತೊಂದರೆ ಆಗಿರಬಹುದು ಎನ್ನುವ ಸಂಶಯ ನನ್ನಲ್ಲಿ ಇದೆ. ಈ ಸಂಶಯವನ್ನು ನಿವಾರಣೆ ಮಾಡಲಿಕ್ಕೆ ಪ್ರಯತ್ನ ಪಟ್ಟಿದ್ದೀರಿ. ಆರನೇ ಆರ್ಥಿಕ ಆಯೋಗದವರಿಗೆ ಮೊದಲೇ ಕೊಟ್ಟಿರುವ ಮೆಮೋರ್ಯಾಂಡಂ ನೋಡಿದ್ದೇನೆ. 90 ಪರ್ಸೆಂಟ್ ಡಿವಿಜಬಲ್ ಪೂಲ್ ಕೊಡಬೇಕೆಂದು ಕೇಳಿದ್ದಾರೆ. ಅವರು ಎಷ್ಟರಮಟ್ಟಿಗೆ ಪುಷ್ಟೀಕರಿಸುತ್ತಾರೋ ಗೊತ್ತಿಲ್ಲ. ಆ ಆಶೆಯನ್ನು ಇಟ್ಟುಕೊಂಡಿದ್ದೀರಿ. ಆ ಆಶೆ ಗಗನಕುಸುಮ ಆಗಬಾರದು. ತಮ್ಮ ಪಕ್ಷದ ಯಾವುದೇ ಒಂದು ಪಟ್ಟಿಯನ್ನು ಹಾಕಿದರೂ ಕೂಡ ಎಲ್ಲಕ್ಕೂ ಸಹ ಕೇಂದ್ರದ ಕಡೆ ಕೈ ಇಟ್ಟುಕೊಂಡಿದ್ದೀರಿ. ಆರನೇ ಪಂಚವಾರ್ಷಿಕ ಯೋಜನೆ ಬಗ್ಗೆ ಮೆಮೋರ್ಯಾಂಡಂ ಕೊಟ್ಟಿದ್ದೀರಿ. ಈ ಬಗ್ಗೆ ತಾವು 825 ಕೋಟಿ ರೂಪಾಯಿಗಳಷ್ಟು ನಿರೀಕ್ಷಣೆ ಇಟ್ಟುಕೊಂಡಿದ್ದೀರಿ. 825 ಕೋಟಿ ರೂಪಾಯಿಗಳನ್ನು ತುಂಬಲಿಕ್ಕೆ ಏನು ಉದ್ದೇಶಗಳನ್ನು

ಇಟ್ಟುಕೊಂಡಿದ್ದೀರೋ ಗೊತ್ತಿಲ್ಲ. ಅಡಿಷನಲ್ ರೀಸೋರ್ಸಸ್ ಮೊಬಲೈಸ್ ಮಾಡುತ್ತಾರೋ ಏನೋ ಗೊತ್ತಿಲ್ಲ. ಈ ಸಂದರ್ಭದಲ್ಲಿ 5ನೇ ಪಂಚವಾರ್ಷಿಕ ಯೋಜನೆ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಈ ಸಭೆಯಲ್ಲಿ ಕರಡು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇರುವ ಕಾಲದಲ್ಲಿ ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುವುದಿಲ್ಲ. ಆದರೆ ಈ ಬಗ್ಗೆ ನಾನು ಒಂದೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಸಾಕಷ್ಟು ಆರ್ಥಿಕ ನೆರವು ಇಲ್ಲಿಯವರೆಗೂ ಬಂದಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಾನು 1-2-3ನೇ ಯೋಜನೆಗಳಲ್ಲಿ ಹಾಗೂ ಅನ್ಯುಯಲ್ ಪ್ಲಾನ್ ಏನು ಇದೆ 1969ರವರೆಗೆ ಈ ಮೂರು ಅನ್ಯುಯಲ್ ಪ್ಲಾನ್‌ನಲ್ಲಿ ಆಂಧ್ರಕ್ಕೆ ಸುಮಾರು 538 ಕೋಟಿ ರೂಪಾಯಿ ಸೆಂಟ್ರಲ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆ. ಬಿಹಾರಿಗೆ 400 ಕೋಟಿ ರೂಪಾಯಿ ಸೆಂಟ್ರಲ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆ, ಮಧ್ಯಪ್ರದೇಶಕ್ಕೆ 527 ಕೋಟಿ ರೂಪಾಯಿ ಸೆಂಟ್ರಲ್ ಅಸಿಸ್ಟೆನ್ ಕೊಟ್ಟಿದ್ದಾರೆ, ಉತ್ತರ ಪ್ರದೇಶಕ್ಕೆ 708 ಕೋಟಿ ರೂಪಾಯಿ ಸೆಂಟ್ರಲ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆ. 370 ಕೋಟಿ ರೂಪಾಯಿ ಮೈಸೂರಿಗೆ ಸೆಂಟ್ರಲ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆ. From the commencement of first plan till the end of 1968-69 ಎಷ್ಟು ಬಂದಿದೆಯೋ ಗೊತ್ತಿಲ್ಲ. 4ನೇ ಪ್ಲಾನ್‌ನಿಂದ ಇದುವರೆಗೂ ಎಷ್ಟು ಬಂದಿದೆಯೋ ಗೊತ್ತಿಲ್ಲ. 5ನೇ ವರ್ಷಕ್ಕೆ ಎಷ್ಟು ಬಂದಿದೆಯೋ ಗೊತ್ತಿಲ್ಲ. ನಮ್ಮ ರಾಜ್ಯಕ್ಕೆ ಬಂದಿರತಕ್ಕಂಥ ಕೈಗಾರಿಕೆಗಳೂ ಸಹ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಏರಲಿಲ್ಲ. ಮುಂದೆ ಇರತಕ್ಕಂಥ ಬೃಹತ್ ಸಮಸ್ಯೆ ನೀರಾವರಿ ಬಗ್ಗೆ ಬಹಳ ಹಣ ಬೇಕಾಗುತ್ತದೆ. ರಾಜ್ಯದ ಪ್ರಗತಿಗೆ ಇನ್ನೂ ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತರತಕ್ಕದ್ದಾಗಿದೆ ಅದಕ್ಕಾಗಿ ಹೆಚ್ಚಿಗೆ ಹಣ ಬೇಕಾಗಿರುವುದರಿಂದ ಕೇಂದ್ರದಿಂದ ಹೆಚ್ಚು ಹಣ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಪ್ರಯತ್ನ ಮಾಡಬೇಕು ಎಂದು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ಜೊತೆಗೆ ಕೇಂದ್ರದ 100 ಕೋಟಿ ರೂಪಾಯಿಗಳ ಯೋಜನೆ ಏನು ಇದೆ ಆ ಹಣವನ್ನು ದೊರಕಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ತಿಳಿಸಿದ್ದಾರೆ. ಯಾವೊಂದು 5 ಲಕ್ಷ ಜನಕ್ಕೆ ಕೆಲಸವನ್ನು ಒದಗಿಸುವುದಕ್ಕೆ ಕೇಂದ್ರದ ಆಯವ್ಯಯದಲ್ಲಿ 100 ಕೋಟಿ ರೂಪಾಯಿಗಳನ್ನು ಏನು ಇಟ್ಟಿದ್ದಾರೋ ಅದರಿಂದ ಹೆಚ್ಚು ಸ್ಟೈಫಂಡರಿ ಸ್ಕೀಮುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದು. ಮತ್ತು ರಿಸರ್ವ್ ಬ್ಯಾಂಕ ನವರು ಕೊಟ್ಟಿರತಕ್ಕ ಅಭಿಪ್ರಾಯದ ಪ್ರಕಾರ ಅವರ ಬುಲೆಟಿನ್ ಹೇಳುತ್ತದೆ ಒಬ್ಬ ವ್ಯಕ್ತಿಗೆ ಕೆಲಸವನ್ನು ಒದಗಿಸುವುದಕ್ಕೆ 8 ಸಹಸ್ರ ರೂಪಾಯಿ ಬಂಡವಾಳವನ್ನು ಒದಗಿಸಬಹುದು ಎಂದು. ಈ ಹಿನ್ನೆಲೆಯನ್ನು ನಾವು ಆಲೋಚನೆ ಮಾಡುವುದಾದರೆ ಸುಮಾರು 400 ಕೋಟಿ ರೂಪಾಯಿಗಳು ಬಹುಶಃ ಈ 5 ಲಕ್ಷ ಜನ ವಿದ್ಯಾವಂತರಿಗೆ ಒಂದು ವರ್ಷಕ್ಕೆ ಕೆಲಸವನ್ನು ಒದಗಿಸುವುದಕ್ಕೆ ಬೇಕಾಗುತ್ತದೆ ಎನ್ನತಕ್ಕ ಅಭಿಪ್ರಾಯಕ್ಕೆ ನಾವು ಬರಬೇಕಾಗುತ್ತದೆ. ಈ ನಿರ್ಣಯ, ಈ ಸಮಸ್ಯೆ ಇಡೀ ರಾಷ್ಟ್ರವನ್ನು ಕಟ್ಟುತಕ್ಕ ಸಮಸ್ಯೆ- ಈ ಜನ 1971ರಲ್ಲಿ 44.95 ಲಕ್ಷ ಇದ್ದರೆ 1972ರಲ್ಲಿ 56.83 ಲಕ್ಷ ಜನ ಇದ್ದಾರೆ. ಈ ಹೊತ್ತಿನ ದಿವಸ ಆ ನಿರುದ್ಯೋಗಿಗಳಿಗೆ ಕೆಲಸವನ್ನು ಒದಗಿಸುವುದಕ್ಕೆ ಇನ್ನೂ ಸರಿಯಾದಂಥ ವಾತಾವರಣವನ್ನು ನಿರ್ಮಾಣ ಮಾಡಿಲ್ಲ. ಕೇಂದ್ರದ ಮಂತ್ರಿಗಳಾದ ಶ್ರೀಮಾನ್ ಚವಾಣ್‌ರವರು ಹೇಳಿರತಕ್ಕಂಥದ್ದನ್ನು ನಾನು ಪುನಃ ಈ ಸಭೆಯಲ್ಲಿ ಓದಬೇಕಾಗಿಲ್ಲ. ಅವರು ಹೇಳುತ್ತಾರೆ ಇನ್ನೂ ಕೆಲವು ಧೋರಣೆಗಳು ಅನಿಶ್ಚಿತ ವಾತಾವರಣದಲ್ಲಿದೆ ಎಂದು. ಮತ್ತು ಖಾಸಗಿಯವರು ಬಂಡವಾಳವನ್ನು ಹೂಡಲಿಕ್ಕೆ ಹಿಂತೆಗೆದಿದ್ದಾರೆ. ಇದೂ ಒಂದು ಕಾರಣ ಎಂದು ಅವರು ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ, ಈ ಅನಿಶ್ಚಿತ ವಾತಾವರಣವನ್ನು ಹೋಗಲಾಡಿಸುವುದಕ್ಕೆ ಖಾಸಗಿಯವರು ಬಂಡವಾಳ ಹಾಕಲಿಕ್ಕೆ ಮುಂದೆ ಬರಬೇಕು ಎನ್ನುವ ನಿರ್ಣಯ ಏನು ಇದೆ ಅದು ಪುಸ್ತಕದಲ್ಲಿರುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರದಲ್ಲಿ ರಾಜ್ಯಸರ್ಕಾರ ಯಾವುದೇ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ. ಕೇಂದ್ರದವರು ಈ ಬಗ್ಗೆ 100 ಕೋಟಿ ರೂಪಾಯಿಯ ಯೋಜನೆ ಏನು ಇಟ್ಟಿದ್ದಾರೆ ಅದನ್ನು ಪಡೆಯಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಅವರು ಭಾಷಣದಲ್ಲಿ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಈವೊತ್ತು ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಸುಮಾರು 2 ಲಕ್ಷಕ್ಕಿಂತ ಹೆಚ್ಚು ಇದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ತಾವು ಎಲ್ಲಾ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈವೊತ್ತು ನೀವು ಒಂದು ಆಶ್ವಾಸನೆ ಕೊಟ್ಟು ಇಲ್ಲಿ ಬಂದಿದ್ದೀರಿ. ನೀವು ರಾಷ್ಟ್ರದಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ಓಡಿಸುವಂತೆ ಆಶ್ವಾಸನೆ ಕೊಟ್ಟಿದ್ದೀರಿ. ಆ ಆಶ್ವಾಸನೆಯನ್ನು ಈಡೇರಿಸಲಿಕ್ಕೆ ವಿಫಲವಾದರೆ ಪರಿಣಾಮ ಕೆಟ್ಟದ್ದಾಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

(ಶ್ರೀ ಎಚ್. ಡಿ. ದೇವೇಗೌಡ)

ಮೈಸೂರು ರಾಜ್ಯದಲ್ಲಿ ಕೈಗಾರಿಕೆ ಬೆಳವಣಿಗೆ ಬಗ್ಗೆ ವಿಶದವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಯಾವ ಹೊಸ ಕೈಗಾರಿಕೆಯನ್ನು ತಾವು ನಮೂದು ಮಾಡಿಲ್ಲ. ತಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳಿರುವಂತೆ ವಿಜಯನಗರದ ಸ್ಟೀಲ್ ಪ್ಲಾಂಟ್ ಬಗ್ಗೆ ಮಾತ್ರ ಮಾತನಾಡಿದ್ದೀರಿ. ಅವಕ್ಕೆ ಕೇಂದ್ರದ ಅಯವ್ಯಯದ ಬಜೆಟ್ಟಿನಲ್ಲಿ ಸ್ವಲ್ಪ ಹಣವನ್ನು ಇಟ್ಟುಕೊಂಡಿದ್ದಾರೆ ಎಂದು ನೀವು ನಮೂದು ಮಾಡಿದ್ದೀರಿ.

3-30 P.M.

ಫಿಸಿಬಿಲಿಟಿ ರಿಪೋರ್ಟ್ ಈ ಬಗ್ಗೆ ತಯಾರಾಗಿದೆಯೋ ಎಂದು ನಾನು ಕೇಳುತ್ತೇನೆ. ಬಳ್ಳಾರಿಯಲ್ಲಿ ಒಂದು ಕಡೆ ಮುಖ್ಯಮಂತ್ರಿಗಳು ಭಾಷಣ ಮಾಡುತ್ತಾ, ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಗಾಗಿ ಹತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ ವಿಜಯನಗರ ಉಕ್ಕಿನ ಕಾರ್ಖಾನೆಗೆ ಖರ್ಚು ಮಾಡುವ ಹಣವನ್ನು ಸಹ ಸೇರಿಸಿ ಆ ರೀತಿ ಹೇಳಿರಬಹುದೆಂದು ಕಾಣುತ್ತದೆ. ಫೀಸಿಬಿಲಿಟಿ ರಿಪೋರ್ಟ್ ತಯಾರಾಗದಿರುವಾಗ ಇನ್ನು ಈ ಯೋಜನೆ ಕಾರ್ಯಗತವಾಗುವುದಾದರೂ ಯಾವಾಗ? ಇದರ ಬಗ್ಗೆ ನಾಲ್ಕೂವರೆ ಸಾವಿರ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಸಾಕಷ್ಟು ಆಗದೇ ಹೋದರೆ ಬಹುಶಃ ಈ ನಿರುದ್ಯೋಗ ಸಮಸ್ಯೆಯನ್ನು ಬಿಡಿಸುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ರಾಜ್ಯದ ಪ್ರಗತಿ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಮುಂದೆ ಹೋಗುವುದಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದಕಾರಣ ಕೈಗಾರಿಕೆಗಳ ಬಗ್ಗೆ ತಮ್ಮ ನೀತಿಯನ್ನು ನಿರೂಪಣೆ ಮಾಡಿಕೊಳ್ಳಬೇಕು. ಇಂಡಸ್ಟ್ರಿಯಲ್ ಪ್ರೊಡಕ್ಷನ್ನಿನಲ್ಲಿ ನಮ್ಮ ಟಾರ್ಗೆಟ್ 9 ಪರ್ಸೆಂಟ್ ಇದ್ದರೆ ನಾವು ರೀಚ್ ಆಗಿರುವುದು 3 ಪರ್ಸೆಂಟ್. ಟೆಕ್ಸ್‌ಟೈಲ್‌ನ್ನು ಸೇರಿಸಿಕೊಂಡರೆ 6 ಅಥವಾ 7 ಪರ್ಸೆಂಟಿಗೆ ಹೋಗಬಹುದು. ಈ ವಿಚಾರದಲ್ಲಿ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಮುಂದೆ ಹೋಗಿಲ್ಲ ಎಂಬುದು ಇಲ್ಲಿ ಕೊಟ್ಟಿರುವ ಅಂಕಿಅಂಶಗಳಿಂದ ಗೊತ್ತಾಗುತ್ತಿದೆ. ಇನ್ನೂ ಅನಿಶ್ಚಿತ ವಾತಾವರಣವೇ ಇದೆ. ನ್ಯಾಷನಲ್ ಇಕನಾಮಿಕ್ ಗ್ರೋಥ್ 5.5 ನಿರೀಕ್ಷೆ ಮಾಡಿದ್ದರೆ ಎರಡುವರೆ ಪರ್ಸೆಂಟ್ ಕೂಡ ರೀಚ್ ಆಗಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರದವರು ರಾಜ್ಯದ ಪ್ರಗತಿಯ ಕಡೆ ಹೆಚ್ಚು ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ವ್ಯವಸಾಯದ ಬಗ್ಗೆ ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. 1971-72ನೇ ಸಾಲಿಗಿಂತ 1972-73ರಲ್ಲಿ ಆಹಾರ ಧಾನ್ಯದ ಉತ್ಪಾದನೆ ಕಡಿಮೆಯಾಗಿದೆ. ಶೇಕಡ 25 ಪರ್ಸೆಂಟ್ ಕಡಿಮೆಯಾಗಿದೆ. ಇದಕ್ಕೆ ಕಾರಣವನ್ನು ಸಹ ಕೊಟ್ಟಿದ್ದಾರೆ. ಈ ಒಂದು ಆಹಾರದ ಬೃಹತ್ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರದವರು ಹೆಚ್ಚು ಶ್ರಮಿಸಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಅರ್ಥಸಚಿವರು ಪರೋಕ್ಷವಾಗಿ ಒಂದು ವಿಚಾರವನ್ನು ಹೇಳಿಕೊಂಡಿದ್ದಾರೆ. ಬಳ್ಳಾರಿ ಜಿಲ್ಲೆಯ ಸೊಂಡೂರಿನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಬೇಕೆಂಬ ಆಶೆ ಅವರಿಗೆ ಇರಬೇಕೆಂದು ಕಾಣುತ್ತದೆ. ನಿಮ್ಮ ಒಂದು ಭಾಷಣವನ್ನು ಓದಿದ ಮೇಲೆ ನನಗೆ ಆ ರೀತಿ ಭಾಸವಾಗುತ್ತಿದೆ. ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ವಿದ್ಯಾ ಸಚಿವರು ಒಂದು ಕಡೆ ಈ ಬಗ್ಗೆ ಹೇಳಿಕೊಂಡಿದ್ದಾರೆ, ಅರಣ್ಯ ಸಚಿವರು ಒಂದು ಕಡೆ ಈ ಬಗ್ಗೆ ಹೇಳಿಕೊಂಡಿದ್ದಾರೆ; ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡತಕ್ಕಂಥ ವಿಷಯದಲ್ಲಿ ಸಚಿವರುಗಳ ಆಶೆಗಳು ಏನಿದೆ, ಅದನ್ನು ನಮ್ಮ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಯೋಚನೆ ಮಾಡಬೇಕಾಗುತ್ತದೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸಮಾಜ ಕಲ್ಯಾಣಕ್ಕೆ ಸಾಕಷ್ಟು ಹಣವನ್ನು ಇಟ್ಟಿಲ್ಲ. ಒಂದೂವರೆ ಕೋಟಿಯಿಂದ ಎರಡು ಕೋಟಿ ರೂಪಾಯಿ ಹೆಚ್ಚು ಮಾಡಿದ್ದಾರೆ. ಈಗಿನ ರೂಪಾಯಿಯ ಬೆಲೆ 39 ಪೈಸೆ ಎಂದು ನಾವು ತಿಳಿದುಕೊಂಡಿರುವ ಕಾಲದಲ್ಲಿ ಒಂದೂವರೆ ಕೋಟಿ ರೂಪಾಯಿಗಳನ್ನು ಎರಡು ಕೋಟಿ ರೂಪಾಯಿಗಳಿಗೆ ಹೆಚ್ಚಿಸಿರುವುದು ಸಾಕಾಗುವುದಿಲ್ಲ. ಆದಕಾರಣ ಈ ಬಾಬಿಗೆ ಹೆಚ್ಚು ಹಣ ಒದಗಿಸಬೇಕೆಂದು ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ.

ಸ್ಲಮ್ ಕ್ಲಿಯರೆನ್ಸ್ ಪ್ರೋಗ್ರಾಮ್ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಗುದ್ದಲಿಪೂಜೆಯನ್ನು ಮಾಡಿಸಿದ್ದಾರೆ. ಅದಕ್ಕೆ ಎಷ್ಟು ಹಣ ಒದಗಿಸಿದ್ದಾರೆಂಬುದನ್ನು ಇದರಲ್ಲಿ ತಿಳಿಸಿಲ್ಲ. ಇದು

ಕೇವಲ ವಾಗಾಡಂಬರ ಯೋಜನೆ ಎಂದು ಹೇಳಿದರೆ ತಪ್ಪಾಗಲಾರದು ; ಇದು ಕೇವಲ ಡೊಂಗಿ ಘೋಷಣೆಯಾಗಬಾರದೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಕನ್ನಡದ ಅಭಿವೃದ್ಧಿಗಾಗಿ 13 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರೆ ಈ ಸಲ ಕನ್ನಡ ಸಾಹಿತ್ಯ ಪರಿಷತ್ತಿಗೆ ಕೇವಲ 50 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಹೋದ ವರ್ಷಕ್ಕಿಂತ ಕಡಿಮೆ ಒದಗಿಸಿದ್ದಾರೆ. ಕನ್ನಡವನ್ನು ರಾಜ್ಯಮಟ್ಟದಲ್ಲಿ ಆಡಳಿತ ಭಾಷೆಯನ್ನಾಗಿ ಮಾಡಬೇಕೆಂದು ಹೇಳುತ್ತಿರುವ ಜನರು ಈ ಬಾಬಿಗೆ ಹೆಚ್ಚು ನೆರವು ಕೊಡಬೇಕಾಗಿತ್ತು, ನಾನು ಕಳೆದ ಸಲ ಈ ಸಭೆಯಲ್ಲಿ ಪಿ.ಎಸ್.ಸಿ. ರಿಪೋರ್ಟ್ ಬಗ್ಗೆ ಮಾತನಾಡುವ ಕಾಲದಲ್ಲಿ ಹೇಳಿದೆ, ಪಿ.ಎಸ್.ಸಿ. ಪರೀಕ್ಷೆಗಳನ್ನು ಕನ್ನಡದಲ್ಲಿಯೇ ನಡೆಸಬೇಕೆಂದು ಈಗಾಗಲೇ ನಮ್ಮ ನೆರೆ ರಾಜ್ಯಗಳಲ್ಲಿ ಅಲ್ಲಿಯ ಪ್ರಾಂತ್ಯ ಭಾಷೆಗಳಲ್ಲಿಯೇ ನಡೆಸುತ್ತಿದ್ದಾರೆ. ಅದರಂತೆ ನಮ್ಮ ರಾಜ್ಯದಲ್ಲಿಯೂ ಅನುಷ್ಠಾನದಲ್ಲಿ ತರಬೇಕೆಂದು ತಿಳಿಸಿದಾಗ ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿರಲಿಲ್ಲ. ಆಗ ಮಾನ್ಯ ಸಿದ್ಧವೀರಪ್ಪನವರು ಉತ್ತರ ಕೊಡುತ್ತಾ ಆ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದ್ದರು. ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಈ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ಗ್ರಾಮಾಂತರ ಪ್ರದೇಶದ ಮಕ್ಕಳ ಬಗ್ಗೆ ರಿಯಾಯಿತಿ ತೋರಿಸಬೇಕೆಂದು ಸಹ ಹೇಳಿದ್ದೆ. ಅದನ್ನು ಸಹ ಪರಿಶೀಲನೆ ಮಾಡುವುದಾಗಿ ಮಾನ್ಯ ಸಿದ್ಧವೀರಪ್ಪನವರು ಹೇಳಿದ್ದರು. ಮುಖ್ಯವಾಗಿ ಕನ್ನಡ ಮಾಧ್ಯಮವನ್ನು ಎಲ್ಲ ಹಂತಗಳಲ್ಲಿಯೂ ಜಾರಿಗೆ ತರಲಿಕ್ಕೆ ಹೆಚ್ಚು ಶ್ರಮ ವಹಿಸಬೇಕೆಂದು ಸರ್ಕಾರಕ್ಕೆ ಹೇಳಲಿಚ್ಛಿಸುತ್ತೇನೆ.

ಮುನಿಸಿಪಾಲಿಟಿಗಳಿಂದ 12 ಕೋಟಿ ರೂಪಾಯಿಗಳವರೆಗೆ ಬಾಕಿ ಬರುವುದು ಇದೆ. ಇದನ್ನು ವಸೂಲ ಮಾಡುವುದು ಕಷ್ಟವಿದೆ. ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದರೂ ಸಹ ವಸೂಲು ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಒಂದು ಹೊಸ ವ್ಯವಸ್ಥೆ ಮಾಡಬೇಕು. 20 ಅಥವಾ 15 ವರ್ಷದ ಧೀರ್ಘಾವಧಿಯ ಸಾಲ ಎಂದು ಪರಿಗಣಿಸಿ ಇದನ್ನು ವಸೂಲ ಮಾಡತಕ್ಕಂಥ ಒಂದು ಹೊಸ ರೀತಿಯ ಕ್ರಮವನ್ನು ಅನುಸರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪುರಸಭೆಗಳಿಗೆ ಚುನಾವಣೆ ನಡೆಸುವ ವಿಚಾರವನ್ನು ಆ ಡಿಮ್ಯಾಂಡ್ ಬಂದಾಗ ಪ್ರಸ್ತಾಪ ಮಾಡುತ್ತೇನೆ.

ನನ್ನ ಮಿತ್ರರಾದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮೊನ್ನೆಯಲ್ಲಿ ಕಳೆದ ಹತ್ತು ವರ್ಷಗಳ ಆಡಳಿತದ ಪಾಪದ ಫಲದ ಬಗ್ಗೆ ಪೂರ್ತಾ ವಿವರಗಳನ್ನು ಕೊಟ್ಟಿದ್ದಾರೆ, ಆದ್ದರಿಂದ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. 1961 ರಿಂದ 1971 ರವರೆಗೆ ಅಂಕಿಅಂಶಗಳ ಸಮೇತ ಅವರು ಹೇಳಿದ್ದಾರೆ. ಈಗ ನಾನು ತಮ್ಮ ಅನುಮತಿ ಕೇಳಿ ಕಳೆದ ಹತ್ತು ತಿಂಗಳಲ್ಲಿ ಈ ಸರ್ಕಾರದವರು ಮಾಡಿರುವ ಪುಣ್ಯದ ಗಂಟನ್ನು ದೇಶದ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಈ ಒಂದು ಕರ್ತವ್ಯವನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಸರ್ಕಾರದ ಹತ್ತು ತಿಂಗಳ ಪುಣ್ಯದ ಕೆಲಸವನ್ನು ದೇಶದ ಮುಂದೆ ಬಿಚ್ಚಿಡದಿದ್ದರೆ ಜಮಾಖರ್ಚು ಸರಿಹೋಗುವುದಿಲ್ಲವೆಂದು ತಿಳಿದುಕೊಂಡು ಅದನು ಹೇಳಬೇಕೆಂದಿದ್ದೇನೆ. ಅದು ರೀತಿ ಇದೆ :—

1 ಕಳೆದ 10 ತಿಂಗಳಲ್ಲಿ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ಎಂದರೆ ಹೊಸ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮೊದಲ ಮೂರು ತಿಂಗಳ ಕಾಲ ಆಡಳಿತದಲ್ಲಿ ಭ್ರಷ್ಟಾಚಾರ ನಿರ್ಮೂಲ ಮಾಡಲು ಮೇಲಿಂದಮೇಲೆ ಹೊರಡಿಸಿದ ಘೋಷಣೆ ಅದು ಈಗ ಪೂರ್ಣ ಫಲಕಾರಿಯಾಗಿದೆ. ಈಗ ಆ ಮಾತೇ ಇಲ್ಲ. ಇದು ಮೊದಲನೇ ಸಾಧನೆ.

2 ಹಿಂದಿನ ಆಡಳಿತದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಬೆಂಗಳೂರು ನಗರ ಸಭೆಯಲ್ಲಿ ಮತ್ತು ನಗರಾಭಿವೃದ್ಧಿ ಮಂಡಲಿಯಲ್ಲಿ ಮತ್ತು ಅರಣ್ಯ ಇಲಾಖೆಯಲ್ಲಿ ನಡೆದು ಹೋದ 78 ಕೋಟಿ ರೂಪಾಯಿಗಳ ಅಪವ್ಯಯವನ್ನು ಪತ್ತೇ ಹಚ್ಚಿ ಮಾಡಿದ ಉಪಕಾರ. ಇದು ಎರಡನೆಯ ಸಾಧನೆ.

3 ಲೋಕೋಪಯೋಗಿ ಇಲಾಖೆಯ 15 ಹಿರಿಯ ಅಧಿಕಾರಿಗಳಿಗೆ ಹಠಾತ್ ಸಸ್‌ಪೆನ್‌ಷನ್. ಗೌರವ ಸಲ್ಲಿಸಿ ನಡುಕ ಉಂಟು ಮಾಡಿದ್ದು ಮತ್ತು ಅದರಿಂದ ಅದ್ಭುತ ಶಿಸ್ತು ಜಾರಿಗೆ ಬಂದಿರುವುದು. ಇದು ಮೂರನೆಯ ಸಾಧನೆ.

4 ಸಂಪುಟದ ಸಹೋದ್ಯೋಗಿಗಳ ಸನ್ನಡತೆಯಿಂದ ತೃಪ್ತರಾದ ಮುಖ್ಯ ಮಂತ್ರಿಗಳು ಆಚಾರ ಸಂಹಿತೆಯನ್ನು ಸಿದ್ಧಪಡಿಸುವ ಅಗತ್ಯ ಮನಗಂಡದ್ದು.

5 ಎರಡು ಜನ ಸಚಿವರ ವೈಯಕ್ತಿಕ ವ್ಯವಹಾರ ಕುರಿತು ಪೋಲೀಸ್ ತನಿಖೆ ಮಾಡಿಸಿದ್ದು.

6 ಲೈಸೆನ್ಸ್ ಇಲ್ಲದೆ ಸೀಮೆಎಣ್ಣೆ ಮಾರಿದವರಿಗೆ ಅಪಾಯದಿಂದ ರಕ್ಷಿಸಿದ್ದು.

(ಶ್ರೀ ಎಚ್. ಡಿ. ದೇವೇಗೌಡ)

7 ವಿದ್ಯಾಸಂಸ್ಥೆಯೊಂದರಿಂದ ಹೊರದೂಡಲ್ಪಟ್ಟಿದ್ದ ಕಂಟ್ರಾಕ್ಟರೊಬ್ಬರನ್ನು ಮೇಜರ್ ಇರಿಗೇಷನ್ ಕಂಟ್ರೋಲ್ ಬೋರ್ಡಿಗೆ ನಾಮಕರಣ ಮಾಡಿ ಪುನರ್ವಸತಿಗೆ ನೆರವಾದದ್ದು.

8 ಶರಾವತಿ ಕರ್ಮಕಾಂಡದ ಬಗ್ಗೆ ಜನತೆಯ ಕಣ್ಣುತೆರೆಸಿ ಸಕಾಲದಲ್ಲಿ ಸೂಕ್ತವಿಚಾರಣೆಯ ಉದ್ದಂಡ ಭರವಸೆ ನೀಡಿದ್ದು.

9 ಅಧಿಕಾರಕ್ಕೆ ಸೇರುವ ಮೊದಲು ನೆರವಾದ ಅಪ್ತ ಗೆಳೆಯರಿಗೆ ನೀಡಿ ಪೊಗದಸ್ತಾದ ಕೊಡುಗೆ.

10 ಅಧಿಕಾರಕ್ಕೆ ಬಂದೊಡನೆ ತಿಂಗಳಿಗೆ 3000 ರೂಪಾಯಿ ಎರಡು ಹುದ್ದೆ ನಿರ್ಮಾಣ ಮಾಡಿದ್ದು.

11 ಮುಖ್ಯಮಂತ್ರಿಗಳ ಅತ್ಯಂತ ಸಮೀಪದ ಬಂಧುಗಳಿಗೆ ಎರವಲು ಏಣಿ ಕೊಟ್ಟಿರುವುದಲ್ಲದೆ ಇತ್ತೀಚೆಗೆ ಬರಗಾಲ ಬವಣೆಗೆ ಸಿಕ್ಕಿ ನರಳುತ್ತಿರುವ ಜನರಿಗೆ ಸಮಾಧಾನವುಂಟು ಮಾಡಲು ಅವರ ರೇಡಿಯೋ ಭಾಷಣಕ್ಕೆ ಅವಕಾಶ ಮಾಡಿದ್ದು.

12 ಜನಜೀವನ ಮಟ್ಟ ಏರಲು ಸಹಾಯಕವಾದ ಅನೇಕ ಘೋಷಣೆಗಳನ್ನು ಸಕಾಲಕ್ಕೆ ಮೊದಲೇ ಡಂಗೂರ ಹೊಡೆದು ಬೆಲೆ ಏರಿಕೆಯನ್ನು ಸುಧಾರಿಸಿದ್ದು ಮತ್ತು ಬಡವರನ್ನು ಅವರ ಬಡತನವನ್ನು ನಿರ್ಮೂಲ ಮಾಡಲು ಹಗಲಿರುಳು ಶ್ರಮಿಸುತ್ತಿರುವುದು.

13 ನಿರುದ್ಯೋಗ ನಿವಾರಣೆಯ ಬಗ್ಗೆ ಆಕರ್ಷಕ ನಿರ್ಧಾರಗಳನ್ನು ಪ್ರಕಟಣೆಯ ಮೂಲಕ ತೃಪ್ತಿ ದೊರಕಿಸಿ ಕೊಟ್ಟಿರುವುದು.

14 ಬರಗಾಲ ಬವಣೆಯನ್ನು ತೊಡೆದುಹಾಕಲು 28 ಕೋಟಿ ರೂಪಾಯಿ ಸಾಕೆಂದು ಹೇಳಿದ 120 ದಿವಸಗಳಲ್ಲಿಯೇ 151 ಕೋಟಿ ರೂಪಾಯಿಗಳನ್ನು ಕೇಳಿ ನೆರೆಯ ಮಹಾರಾಷ್ಟ್ರ ಸರ್ಕಾರದ ಮುಖದ ಮೇಲೆ ಸೆರಗೆಳೆದು ರಾಜನೈತಿಕ, ಆರ್ಥಿಕ ನೈಪುಣ್ಯವನ್ನು ವ್ಯಕ್ತಗೊಳಿಸಿದ್ದು.

15 ಪತ್ರಿಕಾ ಹೇಳಿಕೆಯ ಮುಖೇನ ಗಂಜಿ ಕೇಂದ್ರಗಳನ್ನು ತೆರೆದು ಸುಖಡಿ ತಯಾರು ಮಾಡಿಸಿಕೊಟ್ಟು ಜನತೆಯನ್ನು ತೃಪ್ತಿಗೊಳಿಸಿದ್ದು.

16 ರಾಜ್ಯದಲ್ಲಿ ಬರಗಾಲದ ಬವಣೆ ಇದ್ದರೂ ಅದರ ಬೇಗೆ ಜನತೆಗೆ ತಟ್ಟದಂತೆ ಮಾಜಿ ರಾಜಧಾನಿಯಲ್ಲಿ ನಯನ ಮನೋಹರ ಹೇಮಮಾಲಿನಿಯ ನೃತ್ಯ ಏರ್ಪಡಿಸಿದ್ದು.

17 ಜಯಲಲಿತಾ ಪ್ರಕರಣದ ಮೂಲಕ ಸ್ತ್ರೀ ಸಮುದಾಯಕ್ಕೆ ಸೌಜನ್ಯ ಪೂರ್ಣ ವರ್ತನೆಯ ಭರವಸೆ ನೀಡಿದ್ದು.

18 ಬಡರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡಲು ಸಹಕಾರ ಸಂಘಗಳಿಗೆ ಆದೇಶ ನೀಡಿದ್ದು.

19 ಕೊಯ್ನಾ ನೀರನ್ನು ಕರ್ನಾಟಕಕ್ಕೆ ಹರಿಸಲು ಮಾಹಾರಾಷ್ಟ್ರಕ್ಕೆ 6 ಲಕ್ಷ ರೂಪಾಯಿ ವಿದ್ಯುಚ್ಛಕ್ತಿ ನೀಡಿದ್ದು.

20 ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಬಗ್ಗೆ ಕಠಿಣ ಕ್ರಮ ತೆಗೆದುಕೊಂಡು ಕ್ಯಾಪಿಟೇಷನ್ ಫೀ ಸದ್ದಿಲ್ಲದಂತೆ ಮಾಡಿದ್ದು.

21 ತುಂಗಭದ್ರಾ ಜಲಾಶಯದಿಂದ ಆಂಧ್ರಕ್ಕೆ ನೀರುಕೊಡಲು ಸಾಧ್ಯವಿಲ್ಲವೆಂದು ಗರ್ಜಿಸಿದ ಸರ್ಕಾರ ಮರುದಿನ ಕಳೆಯುವುದರೊಳಗೆ ಸದ್ದಿಲ್ಲದೆ ನೀರು ಬಿಟ್ಟು ರಾಜ್ಯಕ್ಕೆ ಉಪಕಾರ ಮಾಡಿದ್ದು.

22 ರಾಜ್ಯಸರ್ಕಾರವನ್ನು ಲೆಕ್ಕಿಸದೆ ತುಂಗಭಧ್ರಾ ಮಂಡಲಿಯ ಅಧ್ಯಕ್ಷರು 525 ಕ್ಯೂಸೆಕ್ಸ್ ನೀರು ಬಿಟ್ಟಿದ್ದನ್ನು ಬಹುಬೇಗ ಕಂಡು ಹಿಡಿದು ಸಕಾಲದಲ್ಲಿ ಕ್ರಮ ಕೈಗೊಂಡು ರಾಜ್ಯದ ಹಿತ ಗೌರವಉಳಿಸಿದ್ದು.

23 ರಾಜ್ಯಸರ್ಕಾರವಿದೆ ಎಂಬುದನ್ನು ಅಕಸ್ಮಾತ್ ಮರೆತ ಕೇಂದ್ರ ಸರ್ಕಾರ ಗುಲ್ಬರ್ಗದ ಎಂ. ಎಸ್. ಕೆ. ಗಿರಣಿಯನ್ನು ತಾವೇ ವಹಿಸಿಕೊಂಡಾಗ ಮೂಕಯಾತನೆ ಅನುಭವಿಸಿದ್ದು.

24 ರಾಜ್ಯದ ಜನತೆಗೆ ಸಾಕಷ್ಟು ಹೆಚ್ಚಿನ ಪ್ರವಾಸಾನುಕೂಲ ಒದಗಿಸಲು ರಾಷ್ಟ್ರೀಕೃತ ಮಾರ್ಗಗಳಲ್ಲಿ ಕಾಂಟ್ರಾಕ್ಟ್ ಕ್ಯಾರೇಜುಗಳ ಸಾಲುಗಟ್ಟಿ ರಾಷ್ಟ್ರೀಕರಣ ನೀತಿಯನ್ನು ಸಫಲಗೊಳಿಸುತ್ತಿರುವುದು.

25 ನಿಗದಿಯಾದ ಬೆಲೆಗೆ ರಾಸಾಯನಿಕ ಗೊಬ್ಬರವನ್ನು ಸಕಾಲಕ್ಕೆ ರೈತನ ಮನೆಬಾಗಿಲಗೆ ಒದಗಿಸುತ್ತಿರುವುದು.

26 ಪ್ರತಿ ಜಿಲ್ಲೆಗೊಂದು ಕೃಷಿ ಶಾಲೆಯನ್ನು ಒದಗಿಸುವ ಭರವಸೆ ನೀಡಿದ್ದು.

27 ಸಂವಿಧಾನ ತಿದ್ದುಪಡಿ ಕುರಿತು ಸರ್ವೋಚ್ಚ ನ್ಯಾಯಾಲಯಾದಲ್ಲಿ ವಾದವಿವಾದ ನಡೆಸುತ್ತಿರುವುದನ್ನು ವೀಕ್ಷಿಸಲು ಸರಕಾರದ ವಕೀಲರಿಗೆ ದಿನಕ್ಕೆ 1500 ರೂಪಾಯಿ ವೆಚ್ಚ ಮಾಡಿರುವುದು.

28 ತಾಂತ್ರಿಕ ಅಭಿಪ್ರಾಯ ಧಿಕ್ಕರಿಸಿ ಬೆಡ್ ಫೋರ್ಡ್, ಫಾರ್ಗೋ, ಚಾಸಿಗಳನ್ನು ಕೊಂಡು ಸಾರಿಗೆ ಅಭಿವೃದ್ಧಿಪಡಿಸುತ್ತಿರುವುದು.

29 ಸಮಾಜವಾದಿ ಕಾರ್ಯಕ್ರಮದ ಅಂಗವಾಗಿ ಹೋಬಳಿಗೊಂದು ಚಲನ ಚಿತ್ರ ಮಂದಿರಗಳ ನಿರ್ಮಾಣಕ್ಕೆ ಮುಕ್ತ ಅವಕಾಶ ನೀಡಿರುವುದು.

30 ಬರಗಾಲ ಪರಿಹಾರ ಕಾಮಗಾರಿಗಳಲ್ಲಿ ಕಂಟ್ರಾಕ್ಟರುಗಳ ಹೇಳ ಹೆಸರಿಲ್ಲದಂತೆ ಮಾಡಿ ಗ್ರಾಮ ಮುಖಂಡರೆಂಬ ಪಕ್ಷದ ಕಾರ್ಯಕರ್ತರ ಗರೀಬಿ ಹಠಾವೋ ಮಾಡಿಸಿದ್ದು.

31 ಪೌರ ಜೀವನ ಉತ್ತಮಗೊಳಿಸಲು ರಾಜ್ಯದ 96 ಪುರಸಭೆಗಳನ್ನು ತಬ್ಬಲಗೊಳಿಸಿರುವುದು.

32 ಎದುರು ಪಕ್ಷಗಳ ಹಿಡಿತದಲ್ಲಿರುವ ಎಲ್ಲ ಸಂಘಸಂಸ್ಥೆಗಳನ್ನು ಮಟ್ಟ ಹಾಕುವ ಪರಾಕ್ರಮ ಪ್ರದರ್ಶನ.

33 ಸಮಾಜವಾದದ ಸಾಧನೆಯ ಅಂಗವಾಗಿ ಮಾಜಿ ರಾಜರ ಹಿತ ಕಾಪಾಡಲು ಕೈಗೊಂಡಿರುವ ನಾಲ್ಕಾರು ಜನೋಪಯೋಗಿ ಕೆಲಸ.

34 ರಾಜ್ಯದಲ್ಲಿ ವಸತಿ ಹೀನರಿಗೆ ಎರಡು ಲಕ್ಷ ನಿವೇಶನಗಳನ್ನು ಹಂಚಿಸಿದ್ದು.

35 ಸತ್ಯದ ನೆರೆ ಕಂಡುಕೊಳ್ಳದೆ ಮಹಾತ್ಮ ಗಾಂಧಿಯವರಿಗೆ ಮರಣೋತ್ತರ ಶಿಕ್ಷಣಕ್ಕೆ ಏರ್ಪಾಡು ಮಾಡಿ ಅವರ ಹೆಸರಿಗಂಟಿದ್ದ 'ಮಹಾತ್ಮ' ಕಳಂಕವನ್ನು ತೊಡೆಯಲು ಸಹಕಾರ ನೀಡುತ್ತಿರುವುದು.

36 ಬರಗಾಲ ಪೀಡಿತರ ಕಣ್ಣೀರನ್ನು ಪ್ರಧಾನಿ ಕೈಗಳಿಂದಲೇ ಒರೆಸಿ ಅವರ ಸಮಸ್ಯೆಯನ್ನು ಬಗೆಹರಿಸಿದ್ದು.

ಈ ಒಂದು ಸಾಧನೆ 10 ತಿಂಗಳಲ್ಲಿ ಏನು ಮಾಡಿದ್ದೀರಿ ಇದು ಇಂದಿನ ಸರ್ಕಾರ ಏನು ಪಾಪದ ಕೆಲಸ ಮಾಡಿತ್ತು, ಅದರ ಬದಲಾಗಿ ಮಾಡಿದ್ದೀರಿ ಎಂದು ಮೇಲ್ಮನೆಯಲ್ಲಿಯೂ ಹೇಳಿದ್ದಾರೆ. ನಾನು ಕೆಲವು ವಿಷಯಗಳನ್ನು ಇವತ್ತು ದೇಶದ ಜನತೆಗೆ ಗೊತ್ತಾಗಲ ಎಂದು ಪ್ರಸ್ತಾಪ ಮಾಡಿದ್ದೇನೆ. ಇನ್ನು ನಮ್ಮ ಫಿನಾನ್ಸಿಯಲ್ ಡಿಸಿಪ್ಲಿನ್ ಎಂದು ಏನು ಹೇಳುತ್ತೇವೆ, ಅದನ್ನು ಬಗಿ ಮುಷ್ಟಿಯಿಂದ ಹಿಡಿದುಕೊಂಡು ನಿಜಕ್ಕೂ ಅದರಿಂದ ರಾಜ್ಯದ ಪ್ರಗತಿಗೆ ಧಕ್ಕೆ ಉಂಟಾಗುವಂತಹ ಕೆಲಸ ಕಾರ್ಯಗಳನ್ನು ಮಾಡಬಾರದು ಎಂದು ತಿಳಿಸುತ್ತೇನೆ. ಆ ಮೇಲೆ ಕೇಂದ್ರದಿಂದ ಏನು ನೆರವು ನಿರೀಕ್ಷಿಸಿದ್ದೀರಿ ಅದನ್ನು ಪಡೆಯುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಹೇಳಿ, 6ನೇ ಯೋಜನೆಯ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡದೆ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಕರಿಯಪ್ಪ (ಕನಕಪುರ).—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಂದಿರತಕ್ಕಂತಹ ಬಜೆಟ್ ಮೇಲೆ ಹಲವಾರು ಅಂಶಗಳನ್ನು ತಿಳಿಸಲಪೇಕ್ಷೆ ಪಡುತ್ತೇನೆ. ನಾವು ಇವತ್ತು ಬಹಳ ಕಷ್ಟಕಾಲದಲ್ಲಿದ್ದೇವೆ. ಸರ್ಕಾರದವರು ಬಹಳ ಕಷ್ಟವನ್ನು ಎದುರಿಸಬೇಕಾದ ಪರಿಸ್ಥಿತಿ ಒದಗಿ ಬಂದಿದೆ. ಒಂದು ಕಡೆ ಕ್ಷಾಮ ಡಾಮರಗಳು; ಮತ್ತೊಂದು ಕಡೆ ಏರುತ್ತಿರುವ ಬೆಲೆಗಳು; ಇನ್ನೊಂದು ಕಡೆ ಮುಷ್ಕರ ಇತ್ಯಾದಿಗಳು. ಇವುಗಳ ಮಧ್ಯೆ ಸರ್ಕಾರ ಕಣ್ಣು ಕಣ್ಣು ಬಿಡತಕ್ಕ ಪರಿಸ್ಥಿತಿ ಬಂದಿದೆ. ಇಂತಹ ಸಂದರ್ಭದಲ್ಲಿ ಸರ್ವಸಮರ್ಪಕವಾದ ಬಜೆಟನ್ನು ಸಭೆಯ ಮುಂದೆ ಮಂಡಿಸತಕ್ಕದ್ದು ಬಹಳ ಕಷ್ಟಕರವಾದ ಕೆಲಸ. ಆದರೂ ನಮ್ಮ ಅರ್ಥ ಸಚಿವರು ಬಹಳ ಎದೆ

(ಶ್ರೀ ಎಸ್. ಕರಿಯಪ್ಪ)

ಗಾರಿಕೆಯಿಂದ, ನಮ್ಮ ಮುಂದೆ ಇಂತಹ ಒಂದು ಬಜೆಟನ್ನು ಮಂಡಿಸಿದ್ದಾರೆ. ಯಾವಾಗಲೂ ಸರ್ಪ್ಲಸ್ ಅಥವಾ ಡಿಫಿಸಿಟ್ ಬಜೆಟನ್ನು ಮಂಡಿಸುವುದು ಬಹಳ ಸುಲಭ. ಆದರೆ ಖೋತಾ ಬಜೆಟ್ ತಯಾರಿಸಬೇಕಾದರೆ ಬಹಳ ಎದೆಗಾರಿಕೆ ಬೇಕು. ಸಮತೋಲನ ಬಜೆಟ್ ಇಡಬೇಕಾದರೂ ಅಲ್ಲಿಂದ ಇಷ್ಟು, ಇಲ್ಲಿಂದ ಇಷ್ಟು ತೆಗೆದು ಸರಿಮಾಡಬಹುದು. ಆದರೆ ದೇಶದ ಪ್ರಗತಿಗೆ ಅನುಗುಣವಾದ ಬಜೆಟ್ಟನ್ನು ತಯಾರು ಮಾಡುವುದು ಬಹಳ ಕಷ್ಟಕರ. ಆದರೆ ಅಂಥ ಬಜೆಟನ್ನು ನಮ್ಮ ಅರ್ಥ ಸಚಿವರು ತಯಾರಿಸಿ ನಮ್ಮ ಮುಂದೆ ಇಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸಬೇಕಾಗಿದೆ. ಅಭಿವೃದ್ಧಿಯ ಕೆಲಸಗಳಲ್ಲಿ ಮುಖ್ಯವಾಗಿ ಹೆಚ್ಚು ಖರ್ಚು ಮಾಡಬೇಕಾದ ಇಲಾಖೆಗಳು ಅಂದರೆ, ವಿದ್ಯಾಭ್ಯಾಸ ಮತ್ತು ನೀರಾವರಿ ಇಲಾಖೆಗಳು. ಇವೆರಡಕ್ಕೂ ಸಮರ್ಪಕವಾಗಿ ಹಣವನ್ನು ಒದಗಿಸಿದ್ದಾರೆ. ಕಷ್ಟದ ಕಾಲ, ಹಣವಿಲ್ಲದ ಕಾಲ ಮತ್ತು ಕ್ಷಾಮಡಾಮರುಗಳು ಇದ್ದ ಕಾಲವಾದರೂ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಕೊಟ್ಟರೂ ಒಂದು ಅಂಶವನ್ನು ಮರೆತಹಾಗೆ ಕಾಣುತ್ತದೆ. ಅದು ಅರ್ಥ ಸಚಿವರ ತಪ್ಪಲ್ಲ; ವಿದ್ಯಾ ಸಚಿವರ ತಪ್ಪೇನೋ ಎಂದು ಹೇಳಲಾಗುವುದಿಲ್ಲ. ವಿದ್ಯಾಭ್ಯಾಸದಲ್ಲಿ ವಿದ್ಯಾರ್ಥಿಗಳಲ್ಲಿ ಒಳ್ಳೆಯ ಗುಣವನ್ನು ಬೆಳೆಸುವುದಕ್ಕೆ ಮತ್ತು ನಿರುದ್ಯೋಗ ಕಡಿಮೆ ಮಾಡುವುದಕ್ಕೆ ಸಹಕಾರಿಯಾದ ಕ್ರಮಗಳನ್ನು ಅನುಸರಿಸಬೇಕು. ಆದರೆ ಆ ದೆಸೆಯಲ್ಲಿ ನಮ್ಮ ವಿದ್ಯಾಭ್ಯಾಸ ಸಾಗುತ್ತಾ ಇಲ್ಲ. ಹೆನ್ರಿ ಡ್ಯೂಯಿ (Dewy) ವಿದ್ಯಾಭ್ಯಾಸ ವಿಚಾರದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಪ್ರತೀ ಶಾಲಾ ಕಾಲೇಜುಗಳಲ್ಲಿ ಕೈಗಾರಿಕೆಯನ್ನು ಕುರಿತು ವಿದ್ಯಾಭ್ಯಾಸ ಇರಬೇಕು; ಆಗ ಮಾತ್ರ ವಿದ್ಯಾಭ್ಯಾಸ ಸರಿಯಾಗುತ್ತದೆ. ಮತ್ತು ನಿರುದ್ಯೋಗ ಕೂಡ ಕಡಿಮೆಯಾಗುತ್ತದೆ ಎಂದು ಹೇಳಿದ್ದಾರೆ. ಆದರೆ ವಿದ್ಯಾಭ್ಯಾಸ ತಜ್ಞರು ಮತ್ತು ಪ್ರವೀಣರು ಹೇಳಿದಂತಹ ಮಾತುಗಳನ್ನು ನಾವು ಕಾರ್ಯಾಚರಣೆಯಲ್ಲಿ ತರುವುದಕ್ಕೆ ಪ್ರಯತ್ನಿಸಿಲ್ಲ. ಅಮೇರಿಕದಲ್ಲಿ ಒಂದು ಪದ್ಧತಿ ಇತ್ತು. ''ಎಜುಕೇಶನ್ ಫಾರ್ ಲೈಫ್'' ಎಂದು ಇತ್ತು. ಅಲ್ಲಿ ಮೂರು ನಾಲ್ಕು ವರ್ಷಗಳಿಗೊಮ್ಮೆ ಅಲ್ಲಿನ ವಿದ್ಯಾವಂತರು ಸೇರಿ ಚರ್ಚೆ ಮಾಡಿ, ಒಂದು ಸರಿಯಾದ ನೀತಿ ನಿಯಮವನ್ನು ಪಾಲಿಸುತ್ತಾರೆ. ಈಗ ಅಲ್ಲಿಯೂ ಎಜುಕೇಶನ್ ಫಾರ್ ಲೈಫ್ ಹೋಗಿ ಎಜುಕೇಶನ್ ಇಟ್ ಸೆಲ್ ಮಸ್ಟ್ ಬಿಕಂ ಲೈಫ್ ಆಗಬೇಕೆಂದು ಹೇಳುತ್ತಿದ್ದಾರೆ. ನಮ್ಮ ವಿದ್ಯಾಭ್ಯಾಸದಲ್ಲಿ ಸಹ ಅಗ್ರಿಕಲ್ಚರಲ್ ಬಯಾಸ್, ಇಂಡಸ್ಟ್ರಿಯಲ್ ಬಯಾಸ್ ಹೋಗಿ Education must become life ಆಗ ಬೇಕು. ಹೊಸ ಕೈಗಾರಿಕೆಗಳ ನೀತಿಗೆ ಹೊಂದಿಕೆ ಇರುವಂತಹ ವಿದ್ಯಾಭ್ಯಾಸವನ್ನಾಗಿ ನಮ್ಮ ವಿದ್ಯಾಭ್ಯಾಸ ಕ್ರಮವನ್ನು ಮಾರ್ಪಾಟು ಮಾಡಬೇಕು. ಆದರೆ ಎಜ್ಯುಕೇಶನಿನಲ್ಲಿ ಇರಬೇಕಾದ ಮೂಲ ಅಂಶ ಇವತ್ತು ಇಲ್ಲ. ಮನೆಯಲ್ಲಿ ಮಕ್ಕಳು ನೀತಿಯನ್ನು ಕರೆಯಬೇಕು; ಶಾಲೆಯಲ್ಲಿ ಬುದ್ಧಿ ವಿಕಾಸವನ್ನು ಪಡೆಯಬೇಕು. ಆದರೆ ಅವೆರಡೂ ಸಹ ಇವತ್ತು ವಿದ್ಯಾರ್ಥಿಗಳಲ್ಲಿ ಹೊರ ಹೊಮ್ಮಿ ಕಾಣುತ್ತಾ ಇಲ್ಲ.

4-00 P. M.

ಇನ್ನು ಶಾಲೆಗಳಲ್ಲಿ ಕೊಡತಕ್ಕ ವಿದ್ಯಾಭ್ಯಾಸ ಯಾವ ನೀತಿಯನ್ನೂ ಮಕ್ಕಳ ಜೀವನದಲ್ಲಿ ಬೆಳೆಸುವುದಕ್ಕೆ ಸಹಾಯಕವಾಗಿಲ್ಲ. ಮನೆಗಳಲ್ಲಿ ನೀತಿ ಪಾಠ ಇಲ್ಲವೇ ಇಲ್ಲ. ಕೈಗಾರಿಕೆ ಕೆಲಸಗಳಲ್ಲಿ ತೊಡಗಿರತಕ್ಕವರು ಬೆಳಗಿನಿಂದ ಸಂಜೆಯವರೆಗೂ ಕಾಲ ಕಳೆಯುತ್ತಾರೆ. ಮಕ್ಕಳ ಜೊತೆಯಲ್ಲಿ ಇರುವುದಿಲ್ಲ. ಹಳ್ಳಿಗಾಡುಗಳಲ್ಲಿರತಕ್ಕ ತಂದೆ ತಾಯಿಗಳು ವಿದ್ಯಾವಂತರಲ್ಲ. ಅವರಿಗೆ ಮಕ್ಕಳ ನೈತಿಕ ಜೀವನವನ್ನು ಉತ್ತಮಪಡಿಸುವ ರೀತಿನೀತಿ ಗೊತ್ತಿಲ್ಲ ಅವರು ಅದಕ್ಕೆ ತಯಾರಾಗಿಲ್ಲ. ಹೀಗಾಗಿ ವಿದ್ಯಾಭ್ಯಾಸ ಪ್ರಗತಿಗೆ ಸಹಾಯಕವಾಗುವುದಕ್ಕೆ ಬದಲಾಗಿ ದೇಶದ ಪ್ರಗತಿಗೆ ವಿರೋಧವಾಗಿದೆಯೆಂದು ನಾನು ಬಹಳವಾಗಿ ಒತ್ತಿ ಹೇಳಬೇಕಾಗಿದೆ. ವಿದ್ಯಾಭ್ಯಾಸಕ್ಕೆ ಖರ್ಚುಮಾಡತಕ್ಕ ಹಣ ಅಗಾಧವಾಗಿದೆ. ಅಷ್ಟೊಂದು ಅಗಾಧವಾಗಿ ಹಣವನ್ನು ಖರ್ಚುಮಾಡಿ ನಾವು ಪಡೆಯತಕ್ಕಂಥ ಫಲವಾದರೂ ಎಷ್ಟೆಂಬುದನ್ನು ನಾವು ಲೆಕ್ಕ ಹಾಕಿದರೆ ಬಹಳ ವ್ಯಸನವಾಗುತ್ತದೆ. 100 ರೂಪಾಯಿಗಳು ಖರ್ಚು ಮಾಡಿ 30-35 ರೂಪಾಯಿಗಳನ್ನು ವ್ಯಾಪಾರ ಮಾಡಿ ಸಂಪಾದನೆ ಮಾಡಬಹುದೆಂದು ಹೇಳಿದರೆ ಹೇಗೆ ? ನಮ್ಮ ವಿದ್ಯಾಭ್ಯಾಸದ ಪರಿಸ್ಥಿತಿ ಹಾಗೆ ಅಗಿದೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಪಡೆಯತಕ್ಕ ಪ್ರಯೋಜನ ಕೇವಲ ಹಲವಾರು ಸಾವಿರಗಳಾಗಿದೆ. ಇದಕ್ಕೆಲ್ಲಾ ಕಾರಣ ಸರ್ಕಾರದವರು ಸ್ವಲ್ಪಮಟ್ಟಿಗೆ ಎಂದು ಹೇಳಬಹುದು. ಆದರೆ ಇದಕ್ಕೆ ಕಾರಣರು ಹೆಚ್ಚಿಗೆ ಈಗಿನ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕ ವರ್ಗದವರು ಗಲಾಟೆ ಮಾಡುವುದನ್ನೇ ವಿದ್ಯಾರ್ಥಿಗಳು ಯಾವಾಗಲೂ ಯೋಚನೆಮಾಡುತ್ತಿದ್ದಾರೆ.

ಯಾವಾಗ ನಾವು ಸ್ಟ್ರೈಕ್ ಮಾಡೋಣ ಎಂದು ವಿದ್ಯಾರ್ಥಿಗಳು ನಾವು ಸ್ಟ್ರೈಕ್ ಮಾಡಿಸಿ ಸ್ವಲ್ಪ ರಜ ಪಡೆಯೋಣವೆಂಬ ಕೆಲವು ಮಂದಿ ಉಪಾಧ್ಯಾಯರೂ ಇದ್ದಾರೆ. ಇದಕ್ಕೆಲ್ಲಾ ಯಾವ ಮಾರ್ಗವನ್ನು ಕಂಡುಹಿಡಿಯಬೇಕು, ಇದಕ್ಕೆ ಔಷಧಿ ಏನೆಂಬುದನ್ನು ಕುರಿತು ಆಲೋಚನೆಮಾಡಿ ಈ ಕುಂದನ್ನು ಪರಿಹಾರ ಮಾಡಬೇಕು. ಆ ರೀತಿಯಾಗಿ ಮಾಡದೇ ಹೋದರೆ ಈ ದೇಶ ಇನ್ನೆಲ್ಲಿಗೆ ನಮ್ಮನ್ನು ತೆಗೆದುಕೊಂಡು ಹೋಗುತ್ತದೋ, ಎಂಬುದಾಗಿ ನನಗೆ ಅನುಮಾನವಾಗುತ್ತಿದೆ. ಈಗ ಸರ್ಕಾರದವರು ಯಾವುದನ್ನಾದರೂ ತೆಗೆದುಕೊಂಡರೆ ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಅದಕ್ಕೆ ಪರಿಹಾರ ಕಂಡುಹಿಡಿಯಬೇಕೆಂದು ಒಂದು ಸ್ಥಿಮಿತವಾದ ಸ್ಥಿತಿಯನ್ನು ಹೊಂದಿಲ್ಲವೆಂದು ನಾನು ಬಹಳವಾಗಿ ಒತ್ತಿ ಹೇಳಬೇಕಾಗಿದೆ. ಮಾನ್ಯ ಶ್ರೀ ಸ್ಯಾಮ್ಯುಯಲ್ ಮಥಾಯ್ ಅವರು ಬೆಂಗಳೂರು ಯೂನಿವರ್ಸಿಟಿ ವಿಷಯವಾಗಿ ಒಂದು ರಿಪೋರ್ಟನ್ನು ಕೊಟ್ಟರು. ಅದನ್ನು ಕೊಟ್ಟು ಒಂದು ವರ್ಷದ ಮೇಲೆಯೇ ಆಗಿದೆ ಅದು ಇನ್ನೂ ಈ ಸಭೆಯ ಮುಂದೆ ಚರ್ಚೆಗೆ ಬಂದಿಲ್ಲ. ಅವರು ಎಷ್ಟೋ ವಿಷಯಗಳನು ಹೇಳಿದ್ದಾರೆ. ಅದರಲ್ಲಿ ಕೆಲವು ಮುಖ್ಯ ವಿಷಯಗಳನ್ನು ಮಾತ್ರ ಚರ್ಚೆಮಾಡಿ ಮಾನ್ಯ ಸದಸ್ಯರು ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಾಗುತ್ತಿತ್ತು. ಆದರೆ ಆ ಒಂದು ಅವಕಾಶವನ್ನು ಸರ್ಕಾರದವರು ನಮಗೆ ಕೊಡದೇ ಹೋಗಿದ್ದಾರೆ. ಈಗ ಒಂದು ಹುಚ್ಚು ಹಿಡಿದುಬಿಟ್ಟಿದೆ. ಅದು ನಮ್ಮ ವಿದ್ಯಾಮಂತ್ರಿಗಳಿಗೇ ಹಿಡಿದಿದೆಯೋ ಏನೋ ಗೊತ್ತಿಲ್ಲ. ಯೂನಿವರ್ಸಿಟಿಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಅದಕ್ಕಾಗಿ ಅದು ಶಿವಮೊಗ್ಗಾದಲ್ಲಿ ಆಗಬೇಕು, ಮಂಡ್ಯಾದಲ್ಲಿ ಆಗಬೇಕು, ಮಂಗಳೂರಿನಲ್ಲಿ ಆಗಬೇಕು, ಸಂಡೂರಿನಲ್ಲಿ ಆಗಬೇಕು ಎಂಬುದಾಗಿ ನಮ್ಮ ಮಿತ್ರರಲ್ಲೊಬ್ಬರು ಹೇಳಿದರು. ಯೂನಿವರ್ಸಿಟಿಗಳ ಸಂಖ್ಯೆಯನ್ನು ಹೆಚ್ಚುಮಾಡುವುದರಿಂದ ವಿದ್ಯಾ ಪ್ರಗತಿ ನಾವು ಆಶಿಸುವಂತೆ ನಡೆಯುತ್ತದೆಂಬ ಭಾವನೆ ಇಟ್ಟುಕೊಂಡಿದ್ದರೆ ಅದು ತಪ್ಪು ಎಂದು ಹೇಳಬೇಕಾಗುತ್ತದೆ. ಇಂಗ್ಲೆಂಡಿನಲ್ಲಿಯೂ ಯೂನಿವರ್ಸಿಟಿಗಳು ಇವೆ. ಅವುಗಳು ಕಾನ್‌ಸ್ಟಿಟ್ಯೂಯೆಂಟ್ ಕಾಲೇಜುಗಳು ಇವತ್ತೂ ಯೂನಿವರ್ಸಿಟಿಗಿಂತಲೂ ದೊಡ್ಡದಾಗಿ ಬೆಳೆದಿವೆ. ಆ ರೀತಿಯಲ್ಲಿ ನಮ್ಮ ಯೂನಿವರ್ಸಿಟಿಗಳು ಸರಿಯಾಗಿ ಕೆಲಸಮಾಡಿಕೊಂಡು ಹೋಗತಕ್ಕ ಕಡೆಗೆ ನಮ್ಮ ಗಮನವನ್ನು ಕೊಡಬೇಕೇ ಹೊರತು ಸುಮ್ಮನೆ ಯೂನಿವರ್ಸಿಟಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಹೋಗುವುದರಿಂದ ಯಾವ ಫಲವೂ ನಮಗೆ ದೊರೆಯುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಾದರೆ ಈಗ ಪ್ರೊಪೋಸ್ಡ್ ಮಾಡಿರುವ ನಂದೀಪುರ ಮೆಡಿಕಲ್ ಯೂನಿವರ್ಸಿಟಿ ಬೇಡವೆಂದು ಮಾನ್ಯ ಸದಸ್ಯರ ಅಭಿಪ್ರಾಯವೇ ?

ಶ್ರೀ ಎಸ್. ಕರಿಯಪ್ಪ.—ಆ ಒಂದು ಮೆಡಿಕಲ್ ಯೂನಿವರ್ಸಿಟಿಯನ್ನು ನಾವು ಸ್ವಾಗತಿಸಬೇಕಾಗಿದೆ. ಅಮೇರಿಕಾದಲ್ಲಿಯೂ ಅನೇಕ ಮೆಡಿಕಲ್ ಇನ್‌ಸ್ಟಿಟ್ಯೂಷನ್ಸ್ ಇವೆ. ಅಲ್ಲಿ ಯೂನಿವರ್ಸಿಟಿ ಎಂದು ಕರೆಯುತ್ತಾ ಇಲ್ಲ. ಇಂಗ್ಲೆಂಡಿನಲ್ಲಿ ಮೂರು ನಾಲ್ಕು ಇವೆ. ಅಲ್ಲಿಯೂ ಅವುಗಳನ್ನು ಮೆಡಿಕಲ್ ಯೂನಿವರ್ಸಿಟಿ ಎಂದು ಕರೆಯುತ್ತಾ ಇಲ್ಲ. ಯುನಿವರ್ಸಿಟಿಗಳನ್ನು ಅಲ್ಲಿ ಇನ್‌ಸ್ಟಿಟ್ಯೂಟ್ಸ್ ಎಂದು ಕರೆಯುತ್ತಾರೆ. ಇಲ್ಲಿಯೂ ಸರ್ಕಾರದವರು ಅಂಥ ಒಂದು ಆಲೋಚನೆಯನ್ನು ಮಾಡಿದ್ದಾರೆ. ಅದು ಧೈರ್ಯದಿಂದ ಕೂಡಿರತಕ್ಕ ಅಲೋಚನೆ ಎಂದು ನಾನು ಹೇಳಬೇಕಾಗಿದೆ. ಇಲ್ಲಿ ಸುಮಾರು 7-8 ಮೆಡಿಕಲ್ ಕಾಲೇಜುಗಳಿವೆ. ಆಯುರ್ವೇದಿಕ್ ಕಾಲೇಜು ಇದೆ. ಯೂನಾನಿ ಕಾಲೇಜು ಇದೆ. ಅವುಗಳ ಮೇಲೆ ಪೂರ್ಣ ಗಮನವನ್ನು ಕೊಟ್ಟು ಅವುಗಳಲ್ಲಿ ಕೆಲಸ ಸಮರ್ಪಕವಾಗಿ ನಡೆಯುವಂತಾಗಬೇಕು. ಆ ರೀತಿಯಾಗಿ ನಡೆದುಕೊಳ್ಳಬೇಕಾದರೆ ಆ ಕಡೆ ಮೆಡಿಕಲ್ ಯೂನಿವರ್ಸಿಟಿಯ ಅವಶ್ಯಕತೆ ತುಂಬಾ ಇದೆ. ಅದನ್ನು ಆಲೋಚನೆ ಮಾಡಿರತಕ್ಕ ಸರ್ಕಾರದವರು ನಿಜವಾಗಿ ವಂದನಾರ್ಹರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸರ್ಕಾರೀ ಕಾಲೇಜುಗಳಿವೆ, ಪ್ರೈವೇಟ್ ಕಾಲೇಜುಗಳೂ ಸಹ ಅನೇಕ ಇವೆ. ಬಹುತರವಾಗಿ ಮಕ್ಕಳ ವಿದ್ಯಾಭ್ಯಾಸ ನಡೆಯುತ್ತಾ ಇರತಕ್ಕದ್ದು ಪ್ರೈವೇಟ್ ಕಾಲೇಜುಗಳಿಂದ. ಇಂಗ್ಲೆಂಡಿನಲ್ಲಿ ಕೂಡ ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಿಂದಲೇ ಜಾಸ್ತಿ ವಿದ್ಯಾಭ್ಯಾಸ ನಡೆಯುತ್ತಿರುವುದು. ಅಮೇರಿಕಾದಲ್ಲಿ ಅವುಗಳೇ ದೇಶಾದ್ಯಂತ ವಿದ್ಯಾಭ್ಯಾಸವನ್ನು ನೋಡಿಕೊಳ್ಳುತ್ತಾ ಇವೆ. ಆದರೆ ಆ ದೇಶದವುಗಳಿಗೂ ನಮ್ಮ ದೇಶದಲ್ಲಿರತಕ್ಕವುಗಳಿಗೂ ಒಂದು ತಾರತಮ್ಯವನ್ನು ನಾವು ಕಾಣುತ್ತಿದ್ದೇವೆ. ಅಲ್ಲಿ ಒಂದು ಸ್ಕೂಲ್‌ನಲ್ಲಿರತಕ್ಕ ಪಠ್ಯಭಾಗ ಇನ್ನೊಂದು ಸ್ಕೂಲಿನಲ್ಲಿಲ್ಲ. ಒಂದು ಶಾಲೆಯಲ್ಲಿರತಕ್ಕ ಕೋರ್ಸಸ್ ಆಫ್ ಸ್ಟಡೀಸ್ ಮತ್ತೊಂದರಲ್ಲಿಲ್ಲ. ಇಲ್ಲಿ ಅದು ವಿಪರೀತಕ್ಕೆ ಇಟ್ಟುಕೊಂಡಿದೆ. ಇಲ್ಲಿರತಕ್ಕ ಯೂನಿವರ್ಸಿಟಿಗಳಲ್ಲೆಲ್ಲಾ ಒಂದೇ ಬಗೆಯಾದ ವಿದ್ಯಾಭ್ಯಾಸ ಇರಬೇಕೆಂಬ ಭಾವನೆ ಈಚೆಗೆ ಬೆಳೆಯುತ್ತಾ ಇದೆ. ಎಲ್ಲಾ ಯೂನಿವರ್ಸಿಟಿಗಳಲ್ಲಿಯೂ ಒಂದೇ ತರಹ

(ಶ್ರೀ ಎಸ್. ಕರಿಯಪ್ಪ)

ವಿದ್ಯಾಭ್ಯಾಸ ಕೊಡುವುದಾದರೆ ತಂದೆತಾಯಿಗಳಾಗಲೀ, ಮಕ್ಕಳಿಗಾಗಲೀ ತಾನು ಇಚ್ಛೆಪಡತಕ್ಕ ವಿದ್ಯೆಯನ್ನು ಕಲಿತುಕೊಳ್ಳುವುದಕ್ಕೆ ಅವಕಾಶ ಎಲ್ಲಿ ಇರುತ್ತದೆ? ಯೂನಿವರ್ಸಿಟಿಗಳಲ್ಲಿ ನಿಜವಾಗಿ ಸ್ವತಂತ್ರತೆ ಬೇಕು. ಅಲ್ಲಿ ಅವರಿಗೆ ಬೇಕಾದ ಕೋರ್ಸನ್ನು ಕೊಡುವಂತಿರಬೇಕು. ಅದನ್ನು ಹೇಳಿ ಬರೆಸುವುದಕ್ಕೆ ಹೋದರೆ ಅದು ನಿಜವಾಗಿ ತಪ್ಪಾಗುತ್ತದೆಂದು ನಾನು ಭಾವಿಸುತ್ತೇನೆ. ಇನ್ನು ಪ್ರೈವೇಟ್ ಕಾಲೇಜುಗಳ ವಿಷಯವಾಗಿ ಒಂದು ವಿಷಯವನ್ನು ಹೇಳಬೇಕೆಂದು ನನಗೆ ಮನಸ್ಸು ಇದೆ. ನನ್ನ ಮಾನ್ಯ ಮಿತ್ರರು ಇಲ್ಲಿಯೂ ಕೂಡ ಪ್ರೈವೇಟ್ ಕಾಲೇಜುಗಳ ಮೇಲೆ ಕೆಂಡ ಕಾರುತ್ತಾ ಇದ್ದಾರೆ. ಮೇಲ್ಮನೆಯಲ್ಲಿ ಅಂತೂ ಅದು ಅಗಾಧವಾಗಿದೆ. ದೇಶದ ವಿದ್ಯಾಭ್ಯಾಸವನ್ನು ಮುಂದೆ ಸಾಗಿಸುವುದಕ್ಕೆ ಬಹುಮಟ್ಟಿಗೆ ಸಹಕಾರಿಯಾಗಿರತಕ್ಕ ಈ ಸಂಸ್ಥೆಗಳನ್ನು ಈ ರೀತಿಯಾಗಿ ಕಾಣುವುದು ಸರಿಯಲ್ಲ. ಹಾಗೂ ಏನು ತಪ್ಪಿದ್ದರೂ ಅದನ್ನು ಕಂಡುಹಿಡಿದು ಬಯಲಿಗೆ ಎಳೆಯತಕ್ಕಂಥ ಉದ್ದೇಶವನ್ನು ಮಾಡಿಕೊಂಡು ಈಗ ಒನ್‌ಮ್ಯಾನ್ ಕಮಿಷನ್ನನ್ನು ಏರ್ಪಾಡುಮಾಡಿದ್ದಾರೆ. ಅವರು ಅವರ ಕಾರ್ಯವನ್ನು ನಡೆಸುತ್ತಾ ಇದ್ದಾರೆ. ಆದರೆ ಅದರ ಜೊತೆಗೆ ಇದೇ ಸಭೆ 4-5 ಜನರನ್ನು ಗೊತ್ತುಮಾಡಿ 10-15 ದಿವಸಗಳಲ್ಲಿ ಎಲ್ಲಾ ಕಾಲೇಜುಗಳನ್ನು ನೋಡಿ ಸರಿಯಿಲ್ಲದವನ್ನು ಒಂದು ರಿಪೋರ್ಟನ್ನು ತೆಗೆದುಕೊಂಡು ಯಾವುದು ಸರಿ, ಯಾವುದು ಸರಿಯಿಲ್ಲವೋ ಅದನ್ನು ನೋಡಿ ಮುಚ್ಚಿಸಿ ಎಂದು ಹೇಳುತ್ತೇನೆ. ನನ್ನದೇನೂ ಅಷ್ಟು ದೊಡ್ಡದಲ್ಲ. ನನ್ನದು 10-12 ಇನ್‌ಸ್ಟಿಟ್ಯೂಷನ್‌ಗಳಿಂದ ಕೂಡಿದೆ. ವಿಮರ್ಶನಾ ತಂಡವನ್ನು ಏರ್ಪಡಿಸಿದರೆ ನಾನೂ ಬರುತ್ತೇನೆ. ತಪ್ಪು ತೋರಿಸಿ. ಅಲ್ಲಿಯೇ ಅದನ್ನು ಮುಚ್ಚಿಬಿಡೋಣ. ಕೆಲವರು ಹೇಳುತ್ತಾ ಇರುವುದನ್ನು ಕೇಳಿಕೊಂಡು ಕಿವಿ ಮುಚ್ಚಿಕೊಂಡು ಇರುವುದು ಸರಿಯಲ್ಲ. ಜನರಲ್ಲಿ ಒಂದುದೇಶಭಾವನೆ ಹುಟ್ಟಿಸುವುದಕ್ಕೆ ಅವಕಾಶವಾಗುತ್ತದೆ. ರೂರಲ್ ಕಾಲೇಜಿನಲ್ಲಿ ಅಲ್ಲಿರತಕ್ಕ ಪಿ. ಎಫ್. ಹಣವನ್ನು ತಿಂದು ಹಾಕಿದ್ದಾರೆ. ಎಂದು ದೂರುತ್ತಾ ಇದ್ದಾರೆ. ಬೀದಿಯಲ್ಲಿ ಕಾಗದಗಳನ್ನು ಹಂಚಿದ್ದಾರೆ. ಅದಕ್ಕೆಲ್ಲಾ ಕಾರಣರು ಎಂದರೆ ಆ ಎಂ. ಎಲ್. ಎ. ರಾಯರು. ಅವರ ಮೇಲೆ ಅನೇಕ ಅಪಾದನೆಗಳಿವೆ. ಅವರು ಇರುವುದು ಒಂದು ಗಾಜಿನ ಮನೆ. ನಾವು ಇರುವುದು ಒಂದು ಮಣ್ಣಿನ ಮನೆ. ಅವರ ಮೇಲೆ ಅಷ್ಟೊಂದು ಆಪಾದನೆಗಳಿದ್ದರೂ ನಮ್ಮ ಮಂತ್ರಿಗಳು ಇನ್ನೂ ಏತಕ್ಕೆ ಸುಮ್ಮನಿದ್ದಾರೋ ಕಾಣೆ. ಆದರೆ ಈ ಖಾಸಗೀ ಸಂಸ್ಥೆಗಳನ್ನು ನಡೆಸತಕ್ಕವರಲ್ಲಿ ಕೆಲವರಲ್ಲಿ ಸಣ್ಣಪುಟ್ಟ ತಪ್ಪುಗಳಿರಬಹುದು, ಇನ್ನು ಕೆಲವರಲ್ಲಿ ದೊಡ್ಡ ತಪ್ಪುಗಳೂ ಇರಬಹುದು. ಆದರೆ ನಾನು ನಡೆಸತಕ್ಕ ಸಂಸ್ಥೆಯ ಬಗ್ಗೆ ಅಂಥಾ ಯಾವ ಅಪಾದನೆಗಳೂ ಇಲ್ಲ. ಆದರೆ ಈ ವಿದ್ಯಾ ಇಲಾಖೆಯವರು ಮಾಡತಕ್ಕ ಒಂದು ತಪ್ಪೇನೆಂದರೆ–ಈ ಶಾಲಾ ಕಾಲೇಜುಗಳ ಬಗ್ಗೆ ಸರಿಯಾದ ಒಂದು. ಶಿಸ್ತನ್ನು ನೋಡಿಕೊಳ್ಳತಕ್ಕವರು ಆ ಮ್ಯಾನೇಜ್‌ಮೆಂಟನ್ನು ನೋಡಿಕೊಳ್ಳತಕ್ಕವರೆಂಬುದನ್ನು ಮರೆತಿದ್ದಾರೆ. ಆ ಕಾಲೇಜಿನ ಪ್ರಿನ್ಸಿಪಾಲರು ಅಲ್ಲಿನ ಶಿಸ್ತಿಗೆ ಇವರು ಮುಖ್ಯ ಜವಾಬ್ದಾರರು ಆದರೆ ಇವರ ಮಧ್ಯೆನಂದೆಲ್ಲಡಿಲ ಎಂದು ಈ ಯೂನಿವರ್ಸಿಟಿಯವರು ಇದರಲ್ಲಿ ಏತಕ್ಕೆ ಕೈಹಾಕಬೇಕು? ಇಂಥಾ ವಿಚಾರಗಳನ್ನು ಯಾವತ್ತೂ ಆ ಮ್ಯಾನೇಜ್‌ಮೆಂಟಿನವರಿಗೂ ಮತ್ತು ಪ್ರಿನ್ಸಿಪಾಲರಿಗೂ ಬಿಡಬೇಕೇ ವಿನಾ ಅಧರಲ್ಲಿ ಇವರು ಕೈಹಾಕಬಾರದು. ಈಗಾಗಲೇ ಸುಮಾರು 30-40 ಸಂಸ್ಥೆಗಳು ಕೆಲಸವನ್ನು ನಿಲ್ಲಿಸಿವೆ. ಸರ್ಕಾರದವರೂ ಕೂಡ ಅವುಗಳಿಗೆ ಕೊಡುತ್ತಿದ್ದ ಗ್ರ್ಯಾಂಟನ್ನು ನಿಲ್ಲಿಸಿದ್ದಾರೆ. ಅವುಗಳನ್ನು ನಿಲ್ಲಿಸಿದರೆ ಮುಂದೆ ರಾಜ್ಯದಲ್ಲಿ ವಿದ್ಯಾ ಪ್ರಸಾರಕ್ಕೆ ಎಷ್ಟು ತೊಂದರೆಯಾಗುತ್ತದೆ. ಎಂಬುದನ್ನೂ ಸಭೆ ಆಲೋಚಿಸಬೇಕಾಗಿದೆ. ಆದರೆ ಸಾಮಾನ್ಯವಾಗಿ ನಾವು ಖಾಸಗೀ ಸಂಸ್ಥೆಗಳನ್ನು ಉತ್ತೇಜನಕೊಟ್ಟು ಬೆಳೆಸಬೇಕೇ ವಿನಾ ಅವುಗಳನ್ನು ಮೊಟಕು ಮಾಡಬಾರದು.

ಇನ್ನು ನೇಕಾರರಿಗೆ ಬಹಳ ಕಷ್ಟ ಬಂದಿದೆ. ಇಲ್ಲಿಯವರೆಗೂ ಇವರಿಗೆ ನೂಲನ್ನು ಹಂಚುತ್ತಾ ಇತ್ತು ಮತ್ತು ಅವರಿಂದ ನೇಯ್ದ ಸರಕುಗಳಿಗೆ ಗಿರಾಕಿಗಳನ್ನು ಪಡೆದು ಮಾರಾಟ ಮಾಡತಕ್ಕ ಕೆಲಸ ಸೊಸೈಟಿಗಳಿಗಿತ್ತು. ಆದರೆ ಆ ಸೊಸೈಟಿಗಳವರು ಈ ಬಾಬಿಗೆ ಸೇರಿದ ಹಣವನ್ನೆಲ್ಲಾ ತಿಂದು ತೇಗಿ ನೀರನ್ನು ಕುಡಿದುಬಿಟ್ಟಿದ್ದಾರೆ. ಅವರಿಗೆ ಹೀಗಾಗಿ ಅವರಿಗೆ ನೂಲು ಸಿಕ್ಕುತ್ತಿಲ್ಲ. ಬಂದ ನೂಲನ್ನು ಮಧ್ಯವರ್ತಿ ಜನರು ಅವಿದ್ಯಾವಂತರ ಹೆಬ್ಬೆಟ್ಟನ್ನು ಒತ್ತಿಸಿ ಅದನ್ನು ಮಧ್ಯದಲ್ಲೇ ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾರೆ. ಹೀಗೆ ಹಾಳಾಗಿ ಹೋಗಿರತಕ್ಕ ಸೊಸೈಟಿಗಳನ್ನು ಈಗ ಮತ್ತೆ ಪುನರುಜ್ಜೀವಗೊಳಿಸಬೇಕಾಗಿದೆ. ಇವುಗಳಲ್ಲಿ ದುಡ್ಡು ತಿಂದವರು ಯಾರೋ? ಅಲ್ಲಿ ಆಡಳಿತ/ನಡೆಸುತ್ತಿರುವವರು ಯಾರೋ? ಈಗ ಇರತಕ್ಕವುಗಳನ್ನೆಲ್ಲಾ ಸಂಪೂರ್ಣವಾಗಿ ವಜಾ ಮಾಡಿ ಮತ್ತೆ ಹೊಸದಾಗಿ ಇವುಗಳನ್ನು ಸ್ಥಾಪಿಸಬೇಕೆಂದು ಹೇಳುತ್ತೇನೆ. ಹೀಗಾದರೆ ಅವರು

ಉಳಿಯುತ್ತಾರೆ. ಹಿಂದೆ ಇದ್ದ ಸರ್ಕಾರ ಬಂಗಾರದ ಕಂಟ್ರೋಲ್ ಆಜ್ಞೆಯನ್ನು ಜಾರಿಗೆ ತಂದಾಗ ಇಲ್ಲದ್ದ ಅನೇಕ ಜನ ಅಕ್ಕಸಾಲಿಗರಿಗೆ ಉದ್ಯೋಗವಿಲ್ಲದಂತಾಯಿತು. ಆಗ ಅವರು ಆ ಜನರಿಗೆ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗುವುದಕ್ಕೆ ಅನೇಕ ರೀತಿಯಲ್ಲಿ ಸಹಾಯ ಸಹಕಾರಗಳನ್ನು ನೀಡಿದರು. ಅದೇ ರೀತಿಯಲ್ಲಿ ಇಂದು ಈ ನೇಕಾರರಿಗೂ ಮಾಡಬೇಕು ಸರ್ಕಾರದವರೇ ಈ ದಿವಸ ಈ ನೇಕಾರರಿಗೆ ನೂಲನ್ನು ಒದಗಿಸುವುದಕ್ಕೂ, ಅವರು ತಯಾರಿಸಿದ ಬಟ್ಟೆಗಳನ್ನು ಮಾರಾಟ ಮಾಡುವುದಕ್ಕೂ ಒಂದು ಸರಿಯಾದ ಏಜನ್ಸಿಯನ್ನು ಗೊತ್ತುಮಾಡಬೇಕಾಗಿದೆ. ಇವರೂ ಕೂಡ ನಮ್ಮ ದೇಶದ ಪ್ರಜೆಗಳೇ. ಇವರನ್ನು ಕಾಪಾಡಬೇಕಾದುದೂ ನಮ್ಮ ಸರ್ಕಾರದವರ ಕರ್ತವ್ಯ. ಆದುದರಿಂದ ಈ ಕಾರ್ಯವನ್ನು ಸರ್ಕಾರದವರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನೀರಾವರಿ ಕಾಮಗಾರಿಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ದೇಶದಲ್ಲಿ ಆಹಾರ ಧಾನ್ಯಗಳ ಬೆಲೆಗಳು ಮುಗಿಲನ್ನು ಮುಟ್ಟುತ್ತಿವೆ ಎಂದು ಹೇಳುತ್ತಿದ್ದೇವೆ. ಇದನ್ನು ಒಂದು ಹತೋಟಿಯಲ್ಲಿ ಇಡತಕ್ಕ ಬಗ್ಗೆ ಕೆಲವರು ಧಾರಣೆಗಳನ್ನು ತಗ್ಗಿಸಬೇಕೆಂದು ಹೇಳುತ್ತಿದ್ದಾರೆ. ಇದು ಸಾಧ್ಯವೇ? ಈ ಧಾರಣೆವಾಸಿಗಳು ಏರುವುದು ಅಥವಾ ಇಳಿಯುವುದು ಡಿಮ್ಯಾಂಡ್ ಅಂಡ್ ಸಪ್ಲೈ ನೀತಿಯ ಮೇಲೆ ಹೋಗತಕ್ಕದ್ದಾಗಿದೆ. ಸರ್ಕಾರದವರು ಧಾರಣೆವಾಸಿಗಳನ್ನು ವರ್ತಕರು ಕೂಡಲೇ ತಗ್ಗಿಸಬೇಕೆಂದು ಒಂದು ಆಜ್ಞೆ ಹೊರಡಿಸಿದರೆ ಬಜಾರಿನಲ್ಲಿ ಧಾನ್ಯಗಳ ಬೆಲೆಗಳು ಇಳಿಯುವುದಿಲ್ಲ. ಅದರಿಂದ ದೇಶದಲ್ಲಿ ಬ್ಲಾಕ್ ಮಾರ್ಕೆಟ್ ಇನ್ನೂ ಜಾಸ್ತಿ ಆಗುತ್ತದೆ. ಆದರೆ ಈ ತೊಂದರೆಯನ್ನು ತಪ್ಪಿಸುವುದಕ್ಕೆ ಆ ಕಾಮಗಾರಿ ಇಲಾಖೆ ಒಂದರಿಂದಲೇ ಸಾಧ್ಯ. ದೇಶದಲ್ಲಿ ಹೇರಳವಾಗಿ ಧವಸ ಧಾನ್ಯಗಳು ಉತ್ಪನ್ನವಾದರೆ ಬೆಲೆಗಳು ತಾನೇ ತಾನಾಗಿ ಇಳಿಯುತ್ತವೆ. ಆದುದರಿಂದ ಮುಖ್ಯವಾಗಿ ದೇಶದಲ್ಲಿ ಹೆಚ್ಚು ಹೆಚ್ಚು ನೀರಾವರಿ ಯೋಜನೆಗಳನ್ನು ಅಳವಡಿಸುತ್ತಾ ಹೋಗಬೇಕಾದ್ದು ಅಗತ್ಯ. ಅದರ ಜೊತೆಗೆ ರೈತನಿಗೆ ಅಗತ್ಯವಾಗಿ ಬೇಕಾದ ಗೊಬ್ಬರ ಸುಲಭವಾಗಿ ಅಗ್ಗದ ದರದಲ್ಲಿ ದೊರೆಯಬೇಕು. ಮತ್ತು ರೈತನು ಬೆಳೆಯತಕ್ಕ ಮಾಲನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದಕ್ಕೆ ರಾಜ್ಯದಲ್ಲಿ ಒಳ್ಳೇ ಸಾರಿಗೆ ಸಂಪರ್ಕಗಳಿರಬೇಕು. ಇಷ್ಟು ಸೌಲಭ್ಯಗಳು ರೈತನಿಗೆ ದೊರೆತರೆ ಧಾನ್ಯಗಳ ಬೆಲೆಗಳು ತಾನಾಗೇ ಬಿದ್ದು ಹೋಗುತ್ತವೆ. ಇದನ್ನು ಮಾಡದೆ ಸುಮ್ಮನೆ ಜನರೆಲ್ಲರೂ ಬೆಲೆಗಳು ತಗ್ಗಬೇಕೆಂದು ಕೂಗಿಕೊಂಡರೆ ಅಥವಾ ಸರ್ಕಾರದವರು ಒಂದು ಆಜ್ಞೆ ಹೊರಡಿಸಿಬಿಟ್ಟರೆ ಈ ಬೆಲೆಗಳು ಇಳಿಯಲು ಎಂದಿಗೂ ಸಾಧ್ಯವಿಲ್ಲ. ಇಲ್ಲಿ ಸರ್ಕಾರದವರು ಬಹಳ ಪ್ರಾಮುಖ್ಯವಾಗಿ ಗಮನಿಸಬೇಕಾದ ಒಂದಂಶವೇನೆಂದರೆ ಅವರು ರಾಜ್ಯದಲ್ಲಿ ಅನ್‌ಪ್ರೊಡಕ್ಟೀವ್ ಯೋಜನೆಗಳಿಗೆ ವಿಶೇಷ ಹಣವನ್ನು ಸುರಿಯುತ್ತಿದ್ದಾರೆ. ಅದನ್ನು ಕೆಲವು ವರ್ಷಗಳು ಸಂಪೂರ್ಣವಾಗಿ ನಿಲ್ಲಿಸಿ ಆ ಹಣವನ್ನೆಲ್ಲಾ ನೀರಾವರಿ ಯೋಜನೆಗಳಿಗೆ ತಿರುಗಿಸಿದರೆ, ಈ ಒಂದು ನೈಪುಣ್ಯತೆ ರಾಜ್ಯದಲ್ಲಿ ಸುಭಿಕ್ಷವನ್ನು ತರಬಲ್ಲದೇ ವಿನಾ ಬೇರೆ ಯಾವ ಮಾರ್ಗಗಳಿಂದಲೂ ಸಾಧ್ಯ ಎಂದು ಸಾರಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಊರಿಗೆ ಬೆಂಕಿ ಬಿದ್ದಾಗ ಭಾವಿಯನ್ನು ತೆಗೆದರು ಎಂದ ಹಾಗೆ ಈಗ ಇದಕ್ಕೆ ಕೈ ಹಾಕಬಹುದೇ ಎಂದು ಕೆಲವರು ಕೇಳಬಹುದು. ರೈತರಾದವರೂ ಕೂಡ ಬಹಳ ಆಸಕ್ತಿಯಿಂದ ಕೂಡಿದ್ದಾರೆ. ಯಾವುದರಲ್ಲಿಯೂ ರೈತ ಮೊದಲಿದ್ದ ಹಾಗೆ ಇಲ್ಲ. ತುಂಬಾ ಆಸಕ್ತಿ ಇದೆ. ರೈತ ಹೆಚ್ಚು ಬೆಳೆಯುತ್ತಾನೆ ಅದರಲ್ಲಿಯೂ ಅವರಿಗೆ ಉತ್ತಮವಾದಂಥ ಬಿತ್ತನೆಯ ಬೀಜಗಳು ಬಂದಿವೆ ಸಂತೋಷ. ಅವರಿಗೆ ಬೇಕಾಗಿರುವುದು ನೀರು ಮತ್ತು ಗೊಬ್ಬರದ ಪೂರೈಕೆಗಳು. ಇವನ್ನು ಅವರಿಗೆ ಸಕಾಲದಲ್ಲಿ ಒದಗಿಸುವ ಕಡೆಗೆ ಸರ್ಕಾರದವರು ಗಮನಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಈಗ ಹೆಚ್ಚಿಗೆ ಅದು ಸಿಕ್ಕಿದೆ ಎನ್ನುತ್ತಾರೆ. ಆ ರೀತಿ ಇಲ್ಲ. ಈ ವರ್ಷ ಜಾಸ್ತಿ ಕೊಟ್ಟಿದ್ದೇವೆಂದು ಹೇಳುತ್ತಾರೆ. ನಾವು ಈಗ ಬಹಳ ವಿಶೇಷವಾದಂಥ ಸನ್ನಿವೇಶದಲ್ಲಿದ್ದೇವೆ. ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದೇವೆ. ಆದ್ದರಿಂದ ಸರ್ಕಾರದವರು ಈಗ ಧೈರ್ಯ ಮಾಡಿ ಹೆಚ್ಚು ಹಣವನ್ನು ಒದಗಿಸಿ ಕಷ್ಟದಲ್ಲಿರುವ ಜನರನ್ನು ಕಷ್ಟದಿಂದ ಪಾರು ಮಾಡುವ ಕಡೆಗೇ ಹೆಚ್ಚು ಗಮನ ಕೊಡಬೇಕು.

[MR DEPUTY SPEAKER in the Chair]

ಇನ್ನು ವಿದ್ಯಾರ್ಥಿಗಳಲ್ಲಿ ಅಶಾಂತಿ ಹುಟ್ಟುವುದಕ್ಕೆ ಹಲವಾರು ಕಾರಣಗಳಿವೆ. ಅವರಲ್ಲಿ ಓದುತ್ತಿರುವ ಕಾಲದಲ್ಲಿ ಒಂದು ಭೀತಿ ಬರುತ್ತದೆ. ಓದಿದ ಮೇಲೆ ಏನು ಮಾಡಬೇಕೆಂಬುದು. ಮನೆಯಲ್ಲಿ ಹೋದರೆ ತಂದೆ ತಾಯಿಗಳು ಓದುವುದಕ್ಕೆ ಸಾಲಸೋಲಮಾಡಿ ಕಳಿಸಿರುತ್ತಾರೆ. ನಾವು ಪಾಸ್ ಮಾಡಿಕೊಂಡು ಹೋದರೆ ಕೆಲಸ ಸಿಗುವುದಿಲ್ಲವೆಂದು ದಿಗಿಲು, ಭಯ ಬಂದು, ಅವರು ಇನ್ನು ಬೇರೆಬೇರೆ ಅವಕಾಶಗಳನ್ನು ಹುಡುಕುತ್ತಾರೆ ಅವುಗಳಲ್ಲಿ ಮುಖ್ಯವಾದದ್ದು ಸ್ಟ್ರೈಕ್, ವಿದ್ಯಾ

(ಶ್ರೀ ಎಸ್. ಕರಿಯಪ್ಪ)

ಭ್ಯಾಸ ಕ್ರಮದಲ್ಲಿ ಮಾರ್ಪಾಡು ಮಾಡುವ ಮೂಲಕ ಇದನ್ನು ಬಹುಮಟ್ಟಿಗೆ ತಗ್ಗಿಸಬಹುದು ಅಷ್ಟೇ ಅಲ್ಲದೆ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರು ಮನಸ್ಸು ಮಾಡಿದರೆ ಅಲ್ಲಿಯೂ ಕೂಡ ಸಾಧ್ಯವಿದೆ. ಈಗ ವಿದ್ಯಾರ್ಥಿಗಳಲ್ಲಿ ಒಂದು ಭಾವನೆ ಬಂದಿದೆ. ಕೈ ಕಾಲು ಉಪಯೋಗಿಸಿ ಕೆಲಸ ಮಾಡುವುದು ಎಂದು ಹೇಳಿದರೆ ತಮ್ಮ ಯೋಗ್ಯತೆಗೆ ಕಡಿಮೆ ಎಂದು. ಈ ಮನೋಭಾವ ಮೊದಲು ನಮ್ಮ ವಿದ್ಯಾರ್ಥಿಗಳಲ್ಲಿ ತೊಲಗುವಂತೆ ಮಾಡಬೇಕು. ಕೆಲವು ಸಂಸ್ಥೆಗಳಲ್ಲಿ ಈ ವ್ಯವಸ್ಥೆ ಇದೆ. ಇನ್ನು ಕೆಲವು ಸಂಸ್ಥೆಗಳಲ್ಲಿ ಆ ತರಹ ಭಾವನೆ ಇಲ್ಲ. ಅಂತಹ ಸಂಸ್ಥೆಗಳನ್ನು ವಿದ್ಯಾಭ್ಯಾಸ ಇಲಾಖೆಯವರು ಕೂಡಲೇ ತೆಗೆಯಬೇಕು. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರೂ ಕೂಡ ಅಲ್ಲಲ್ಲಿ ಸಣ್ಣ ಸಣ್ಣ ಕಾರ್ಖಾನೆಗಳನ್ನು ತೆರೆದು ನಿರುದ್ಯೋಗಿ ವಿದ್ಯಾವಂತರೂ ಸಾಮಾನನ್ನು ತಯಾರು ಮಾಡುವಂತೆ ವ್ಯವಸ್ಥೆ ಮಾಡಬೇಕು. ಆ ರೀತಿಯಾಗಿ ತಯಾರುಮಾಡಿದಂಥ ಸಾಮಾನುಗಳನ್ನು ಕೊಂಡುಕೊಂಡು ಬೇರೆಬೇರೆ ಕಡೆಗಳಲ್ಲಿ ಮಾರಬಹುದು. ಹೀಗೆ ಇನ್ನೂ ಅನೇಕ ಸಣ್ಣ ಪುಟ್ಟ ಸಾಮಾನುಗಳನ್ನು ತಯಾರುಮಾಡತಕ್ಕ ಸೌಲಭ್ಯವನ್ನು ನಿರುದ್ಯೋಗಿಗಳಿಗೆ ಒದಗಿಸಬೇಕು. ಸಾರ್ವತ್ರಿಕವಾಗಿ ಅದನ್ನು ಅವಲಂಬಿಸಿದರೆ ಒಳ್ಳೆಯದು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರು ಎಷ್ಟೆಷ್ಟೋ ದುಡ್ಡನ್ನು ಖರ್ಚುಮಾಡುತ್ತಾರೆ. ಎಷ್ಟೋ ದುಡ್ಡು ದುರ್ವ್ಯಯವೂ ಆಗುತ್ತದೆ. ಆದುದರಿಂದ ವಿದ್ಯಾರ್ಥಿಗಳ ತಂಡಗಳನ್ನು ಮಾಡಿ ಮೇಲ್ವಿಚಾರಣೆಯನ್ನಿಟ್ಟುಕೊಂಡು ಚಿಕ್ಕ ಚಿಕ್ಕ ಕೈಗಾರಿಕೆಗಳನ್ನು ತೆರೆಯಬೇಕೆಂದು ಸಲಹೆ ಮಾಡುತ್ತೇನೆ. ಇದರಿಂದ ನಾವು ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯನ್ನು ತಪ್ಪಿಸಬಹುದು. ಕೆಲವರು ಹಳ್ಳಿಗಾಡುಗಳಲ್ಲಿ ಇನ್ನೂ ನಿರುದ್ಯೋಗ ಇದೆಯೆಂದು ಹೇಳಿದರು. ಅದನ್ನು ನಾನು ಒಪ್ಪುವುದಿಲ್ಲ. ಇದು ಸಾರ್ವತ್ರಿಕವಾಗಿದೆಯೋ ಏನೋ ಗೊತ್ತಿಲ್ಲ. 5 ರೂಪಾಯಿಗಳ ಕೂಲಿ ಕೊಡುತ್ತೇವೆಂದು ಹೇಳಿದರೂ ಕೂಲಿ ಸಿಗುವುದಿಲ್ಲ. ಹೀಗಾಗಿ ಅನೇಕರು ವ್ಯವಸಾಯ ಭೂಮಿಯನ್ನು ಸ್ವಲ್ಪ ಮಟ್ಟಿಗೂ ಮಾಡದೇ ಹಾಳು ಬಿಟ್ಟು ಬಿಟ್ಟಿದ್ದಾರೆ. ನಿರುದ್ಯೋಗ ನಿವಾರಣೆಯನ್ನು ಅದನ್ನು ಎರಡು ರೀತಿಯಲ್ಲಿ ಮಾಡಬೇಕು. ಆದರೆ ಈಗಿನ ವಿದ್ಯಾಭ್ಯಾಸ ಕ್ರಮವನ್ನು ಮಾರ್ಪಾಟು ಮಾಡುವುದು ಒಂದು. ಒಂದೇ ದಿವಸದಲ್ಲಿ ಇದನ್ನು ಮಾಡಲು ಆಗುವುದಿಲ್ಲ. ಬಹಳ ಕಾಲ ಬೇಕು, ಯಾವ ರೀತಿಯಲ್ಲಿ ಅದನ್ನು ಮಾಡಬೇಕಾದರೂ ಸರಿಯಾದ ಅಧ್ಯಾಪಕ ವರ್ಗದವರು ಬೇಕು. ನಮಗೆ ಇರತಕ್ಕ ಅಧ್ಯಾಪಕ ವರ್ಗದಲ್ಲಿ ಶೇಕಡ 25 ಜನರೂ ಕೂಡ ಹೊಸ ವಿದ್ಯಾಭ್ಯಾಸ ಕ್ರಮಕ್ಕೆ ಹೊಂದಿಕೊಳ್ಳತಕ್ಕವರು ಸಿಕ್ಕುವುದಿಲ್ಲ. ಈ ಹೊಸ ಶಿಕ್ಷಣವನ್ನು ಕೊಡುವುದಕ್ಕೆ ಈಗಿರುವ ಅಧ್ಯಾಪಕರುಗಳಿಂದ ಸಾಧ್ಯವಾಗುವುದಿಲ್ಲ. ಈಗಿರುವುದರಲ್ಲಿ ಶೇಕಡ 25 ಮಂದಿ ಅಧ್ಯಾಪಕರು ಹೊಸ ಕ್ರಮಕ್ಕೆ ಹೊಂದಿಕೊಳ್ಳತಕ್ಕ ಮನಸ್ಸಿನವರಿರುತ್ತಾರೆಂದರೆ ಅದು ನಮ್ಮ ಪುಣ್ಯವೆಂದು ಹೇಳಬೇಕು. ಈ ಜನರನ್ನು ತಯಾರುಮಾಡಬೇಕೆಂದು ಹೇಳುವಾಗ, ಆ ರೀತಿಯಾಗಿ ನಾವು ಖಚಿತವಾಗಿ ಮಾಡಬೇಕೆಂದು ಹಠವಾರಿತನದಿಂದ ಮಾಡಿದರೆ ನಿಜವಾಗಿಯೂ ನಿರುದ್ಯೋಗ ಸಮಸ್ಯೆಯನ್ನು ತೊಲಗಿಸುವುದಕ್ಕೆ ಸಾಧ್ಯ. ಇಲ್ಲದೆ ಹೋದರೆ ಸುಮ್ಮನೆ ಬಾಯಲ್ಲಿ ಭಾಷಣ ಮಾಡಿದರೆ ಏನೂ ಆಗುವುದಿಲ್ಲ. ನಾವು ನಿಜವಾಗಿಯೂ ಕೂಡ ಅದಕ್ಕೆ ಕೈಹಾಕಿ ಸಾಧಿಸಬೇಕು. ಜರ್ಮನಿಯೊಳಗೆ ಎರಡನೆಯ ಯುದ್ಧದ ಮೊದಲು ಈ ತರಹ ಅಭಿಪ್ರಾಯವನ್ನು ಇಟ್ಟುಕೊಂಡಿದ್ದರು. ಜರ್ಮನಿಯಲ್ಲಿ ಈ ಪ್ರಯೋಗವನ್ನು ಸರ್ಕಾರೀ ಶಾಲೆಗಳಲ್ಲಿ ಪ್ರಯೋಗ ಮಾಡುತ್ತಿರಲಿಲ್ಲ. ಅವರು ಮಾಡುತ್ತಿದ್ದುದು ಖಾಸಗೀ ಶಾಲೆಗಳಲ್ಲಿ ಮೊದಲು ಖಾಸಗೀ ಶಾಲೆಗಳಲ್ಲಿ ಪ್ರಯೋಗಗಳನ್ನು ಮಾಡಿ ಅವರ ಫಲಿತಾಂಶವನ್ನು ಕೊಡುತ್ತಿದ್ದರು. ಆಮೇಲೆ ಅದನ್ನು ಸರ್ಕಾರೀ ಕಾಲೇಜುಗಳಲ್ಲಿ ಆಚರಣೆಗೆ ತರುವಂತೆ ಮಾಡುತ್ತಿದ್ದರು. ಅದು ನಿಜವಾಗಿ ಯಶಸ್ವಿಯಾಗಿ ನಡೆಯುತ್ತಿತ್ತು. ಇವತ್ತು ಜರ್ಮನಿ ಇಷ್ಟೊಂದು ಕೈಗಾರಿಕೆಗಳಲ್ಲಿ ಮುಂದುವರಿಯಬೇಕಾದರೆ, ಅಲ್ಲಿ ಕೊಡುತ್ತಿದ್ದಂಥ ಶಿಕ್ಷಣವೇ ಕಾರಣವೆಂದು ಹೇಳಬೇಕಾಗಿದೆ. ಆದ್ದರಿಂದ ಈಗ ನಾವು ಹೊಸರೀತಿಯಲ್ಲಿ ಆಲೋಚನೆ ಮಾಡದೆ ಸಾರೋದ್ಧಾರವಾಗಿ ಬಂದಿರತಕ್ಕ ಕ್ರಮವನ್ನೇ ಅನುಸರಿಸುತ್ತೇವೆಂದು ಹೇಳಿದರೆ ಅದು ಹೇಗೆ ಸಾಧ್ಯವೆಂಬುದನ್ನು ವಿಚಾರವಂತರೆಲ್ಲರೂ ಆಲೋಚನೆ ಮಾಡಬೇಕು. ಆ ಪಕ್ಷ, ಈ ಪಕ್ಷ ಎಂಬುದಾಗಿ ಭೇದಭಾವನೆ ಮಾಡದೆ ಇದನ್ನು ಕಾರ್ಯಗತ ಮಾಡಬೇಕು. ದೇಶದಲ್ಲಿರತಕ್ಕ ಈ ಅನಿಷ್ಟವನ್ನು ಕೂಡಲೇ ಹೋಗಲಾಡಿಸಬೇಕೆಂಬುದಾಗಿ ಒಂದು ದೃಢ ನಿಶ್ಚಯ ಮಾಡಬೇಕು. ನಾವು ಬರೀ ಮಾತಿನಲ್ಲೇ ಮನೆ ಕಟ್ಟುತ್ತೇವೆಂದು ಕುಳಿತರೆ ಇಂತಹ ಮಹಾಸಾಧನೆಗಳನ್ನು ಸಾಧಿಸುವುದು ತುಂಬಾ ಕಷ್ಟವಾಗುತ್ತದೆ. ಕೊನೆಯದಾಗಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri N. B. SIRDESAI (Khanapur).— Mr. Deputy Speaker, Sir, I rise to oppose the Budget for 1973-74 because it is silent in respect of many matters. Really, I feel that the deficit of 67 crores shown in the Budget is not unreal and certainly the Central Government must come to the rescue of this State with sufficient financial aid. But, on going through the Budget, and the Annual Plan Schemes, I feel that it is disappointing in respect of the border areas. To me and to the Marathi-speaking people of border areas, it appears that this Government and the previous Government are the two faces of one and the same coin, because they have discriminated between the Kannada and Marathi areas. Their structure is the same, the change is only in their names. And more or less the policies of both Governments in respect of that Marathi areas and border areas are just the same. I feel on going through the Budget, that considerable political discrimination has been shown in the Budget and Marathi areas, have been completely neglected while considering the works to be taken up there. The same policy of the sons of the soil is being continued and adopted by this Government also as it used to be adopted by the former Government. The attitude of vengence is in no way less than that of the previous Government, because in order to take revenge on the people who have not helped this Government or the previous Government works have been taken at unwanted places and places where works ought to have been taken up, have been neglected.

4-30 P.M.

The unemployment problem is at a standstill as it was before. Only slogans are being given out without any concrete achievements Further this Budget deserves a compliment because it is a tax-free budget. No new taxes have been levied by this Government. In the annual plan schemes it is shown that the State Plan is Rs. 91.89 crores and Centrally sponsored schemes plan is 13.89 crores, out of which the Central aid is of Rs. 40.15 crores by way of Rs. 12.5 crores as grant and Rs. 28.10 crores as loan. It is of no use to border areas because in the plan schemes, no schemes have been undertaken or included in the Budget for the benefit of the border areas of Khanapur taluka, Belgaum Taluka and other areas. In the Plan schemes, no provision has been made for the protection of forests because the Government and the smugglers have cleared up the forest wealth. So, now they are feeling that there is no necessity to give protection to the forests.

Now the Government have shown their parochialism by not taking up irrigation projects, irrigation tanks, irrigation bhandaras and Barrages in Marathi areas though proposals have been submitted well in advance. Works now included in the Budget are only in Kannada areas.

Sri AZEEZ SAIT.—Kannada is the State language and all areas are Kannada areas.

Sri N. B. SIRDESAI.—But there are some areas where Marathi speaking people are living. Works that have been included in the Budget have been proposed and recommended by persons and officers who have got the highest respect for the previous Government. And this clearly shows the political discrimination of this Government also. I have written to the Chief Minister of this State well in advance and proposed some works and requested him to make budgetary provision for these works. And copies of all these letters have been endorsed to the Minister for Public Works, Minister for Revenue and they too have kept silent. Even the Engineer-in-Chief has been apprised of this and he has also proved to be a bird of the same feather. So long as we are ruled by this Government, the Government should not show such parochialism and discrimation, there is no hope for the people of border areas. They can, on the other hand spend money in these areas and whatever amount they spend on border areas, they may claim from the Maharashtra State. They will not be put to loss, even though they spend now.

Then Sir, this Budget does not contain any relief for the Panchayats. They have meager income out of which they are paying the salary of the Secretaries of Panchayats. Government should make some provision for the payment of the salary of the Panchayet secretary. They should have treated them as Government servants and they should not have been interviewed for confirmation of their services as they are doing now. They must be merged in the cadre of village accountants taking into consideration their expecience and service. In the Budget Mr. Deputy Speaker, no provision is made for the expansion and improvement of the dispensaries in the Marathi areas like Khanapur taluk. No provision has been made for the lift irrigation schemes, national rural water supply scheme though I have brought this to the notice of the Government and stated that there is dire necessity of taking up the NRWS and Lift irrigation schemes by the Government. But the Government have not carried for my proposals and they have not included the proposed schemes in the Budget.

No provision has been made in the Budget for irrigation Barrages and irrigation projects though representation has been submitted to the Government well in advance. This shows the parochialism of this Government and hatred towards the Marathi speaking people and Marathi areas. This is nothing but political discrimination of the Govenment.

No provision has been made for the asphalting of roads in the border areas and for the improvement of the roads.

Sri S. M. SHERANALI CHANDRASEKHAR.—If the Hon. Member can yield, I want to ask him.......

Sri N. B. SIRDESAI.—I am not going to yield. Mr. Deputy Speaker, the Government should have made provision for the payment of family pension to be paid to the teachers in the aided schools whereas teachers in the Government schools are getting that concession. Government should have made provision for the Tripple benefit scheme for the teachers in the aided schools, because, 3 per cent of their salary is being deducted for the the payement towards triple benefit scheme; whereas in the Government high schools, they need not pay.

In the Budget, no provision has been made for the bus stand in the Khanapur taluka and other Marathi areas.

Then there is no privision in the budget for the supply of vehicles to the Tahsildars in the malnad areas. In the budget no provision has made for the payment of arrears of emoluments to the Village Officers though the Government have declared on the floor of the Assembly that they have issued orders in that behalf. There is no special provision for the opening of Government High Schools in Khanapur Taluka. Though I have represented to the Government that my area is a forest-covered area and uptil new not a single high school has been opened in any constituency by the Government. I have requested the Government to open high schools in the interior parts of the forest area like Jamboti, Kankumbi and Gunji.

Sri D. DEVARAJ URS.—No high schools now ?

Sri N. B. SIRDESAI.—There are private schools. but Government has not opened any high schools. The private management are being encouraged by this Government and they are extracting money from the poor people.

No provision has also been made for the establishment of any industry in the Marathi areas and the Government could have earned revenue and solve the unemployment problem if they had established them.

I would like to suggest some ways and means for augmenting the State income. I hope that the Government would not take my suggestions lightly or take them to be trivial. The Government is not making water supply available to the agricultural land and is trying to recover water rate and irrigation cess. That is why there is great opposition. If they construct irrigation projects and barrages, they can easily collect water rate and irrigation cess and they can augment the income in that way. The Public Works Department could have saved a lot of money by adopting honest methods of execution of works instead of that, they are following dishonest procedures and are wasting Government and public money.

Government should also augment their income by extending power supply facilities on a large scale. In spite of requests from the villagers Government are not extending these facilities. They are not energising I.P. sets or electrifying the villages. Government should demand more help from the Central Government for Centrally sponsored schemes. By expediting phodi and survey cases Government can collect large revenue. They are being delayed for want of staff. Three

(SRI N. B. SIRDESAI)

or four Surveyors should be appointed for each taluk and these cases should be expedited so that Government can get large revenue out of this. The Government have increased the betting tax because large amount has been lavishly spent over betting. Government should cancel transfer orders of the primary school teachers and other officers till they tide over the critical drought situation and they can save quite a lot of money which may be spent on their T.A. Government should discontinue the practice of granting permits for plyihg private buses, and they should undertake the responsibility of plying buses at all places ; they should add to the State income by starting their own buses at all places.

It is my sincere opinion that after the transfer of the portfollio of Transport and Tourism to the present Minister, the affairs of M.S.R.T.C. are going from bad to worse because the Hon. Minister is taking everything lightly and he is not caring much about his responsibility. The staff of the M.S.R.T.C. is getting very arrogant and irresponsible and they are not caring even for members. Whenever we ask for journey forms they say that they have no knowledge about them. They are not stopping buses even at request. Such arrogance and irresponsible behaviour must be put an end to.

The Marathi people of Kanapur Taluk have given a highest lead and helped the ruling party in the election to the Lok Sabha but this Government has proved unworthy of their help, because this Government has ignored our Marathi area.

As this is a highly disappointing budget, as there is no mention of any works in the border areas, as political discrimination has been deliberately shown by this Government as it used to be done by the previous Government, I put both the Governments on the same footing and I oppose this budget. With these few words I conclude my speech and thank the Chair for giving me this opportunity to speak.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ).—ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದೆ ಅರ್ಥಸಚಿವರು ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ಹೃತ್ಪೂರ್ವಕವಾಗಿ ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ಸೂಕ್ತಸಲಹೆಗಳನ್ನು ಈ ಸಂದರ್ಭದಲ್ಲಿ ಕೊಡಬೇಕೆಂದು ಇಚ್ಚಿಸುತ್ತೇನೆ. ನಮ್ಮ ಸರ್ಕಾರದವರು ಎಷ್ಟು ಜವಾಬ್ದಾರಿ ನಾವು ಹೊತ್ತಿದ್ದೇವೆ, ಈ ಕರ್ನಾಟಕದ 2 ಕೋಟಿ 90 ಲಕ್ಷ ಜನ ಪ್ರಜೆಗಳಿಗೆ ಯಾವ ರೀತಿ ನ್ಯಾಯ ನೀತಿ, ಧರ್ಮ ಕೊಡಬೇಕು ಎನ್ನುವುದಕ್ಕೆ ಅರ್ಥ ಸಚಿವರು ಅವರ ಭಾಷಣದ ಮೊದಲವೆ ಪ್ಯಾರಾದಲ್ಲಿ,

> "In this dark hour of famine and distress, Government is fully alive to its responsibility and will do its, utmost to provide work, water, food and fooder to the people of the scarcity affected areas."

ಎಂದು ಹೇಳಿದ್ದಾರೆ. ಸರ್ಕಾರದವರು ಎಷ್ಟು ಜಾಗರೂಕರಾಗಿದ್ದಾರೆ ಎಂದು ಇದರಿಂದ ನಮಗೆ ಚೆನ್ನಾಗಿ ಅರ್ಥವಾಗುತ್ತದೆ. ಈ 11 ತಿಂಗಳ ಆಳ್ವಿಕೆ ನೋಡಿದರೆ 25 ವರ್ಷಗಳಿಂದ ಯಾವುದನ್ನು ಸಾಧಿಸಿದರೋ ಅದನ್ನು 11 ತಿಂಗಳಲ್ಲಿ ನಾವು ಸಾಧಿಸಿದ್ದೇವೆಂದು ಘಂಟಾಘೋಷವಾಗಿ ಈ ಸಂದರ್ಭದಲ್ಲಿ ಹೇಳಬಹುದು. ಇದಕ್ಕೆ ಬೇರೆ ಭಾಷಣಗಳು ಬೇಕಾಗಿಲ್ಲ. ಇಲ್ಲಿರತಕ್ಕ ಅಂಕಿಅಂಶಗಳ

ಆಧಾರದಿಂದಲೇ ಅದು ವ್ಯಕ್ತವಾಗುತ್ತದೆ. ಮತ್ತು ಇದಕ್ಕೆ ಯಾವ ವ್ಯಕ್ತಿಯನ್ನು ಅಥವಾ ಪಕ್ಷವನ್ನು ನಾವು ಕೇಳಬೇಕಾಗಿಲ್ಲ. ಜನತೆ ಮುಂದೆ ಅಂಕಿಅಂಶಗಳನ್ನು ಇಟ್ಟ ಕಾಲದಲ್ಲಿ ಅವರಿಗೆ ಇದು ತನಗೆತಾನೇ ಮನವರಿಕೆಯಾಗುತ್ತದೆ. ಇದು ಏನೇ ಇರಲಿ, ಯಾವ ಸರ್ಕಾರವೇ ಇರಲಿ ಸಾಮಾನ್ಯ ಮನುಷ್ಯನಿಗೆ ಬೇಕಾದುದು ಮೊದಲು ಊಟ, ಬಟ್ಟೆ, ವಸತಿ, ವಿದ್ಯಾಭ್ಯಾಸ ಮತ್ತು ಆರೋಗ್ಯ. ಈ 5 ಅಂಶಗಳನ್ನು ಸಹ ನಮ್ಮ ಆಯವ್ಯಯ ಪಟ್ಟಿಯಲ್ಲಿ ನಮೂದಿಸಲಾಗಿದೆ. ತಮಗೆಲ್ಲಾ ಗೊತ್ತಿದ್ದ ಹಾಗೆ ಇದಕ್ಕೆ ಸಾರ್ವಜನಿಕರ ಸಹಕಾರ ಸಾಕಾದಷ್ಟು ಸರ್ಕಾರಕ್ಕೆ ಬೇಕಾಗುತ್ತದೆ.

ಮೊಟ್ಟಮೊದಲನೆಯದಾಗಿ ಇದು ಮಧ್ಯಮವರ್ಗದವರಿಗೆ ಮತ್ತು ಬಡವರಿಗೆ ಸಹಾಯ ಮಾಡತಕ್ಕ ಬಜೆಟ್ ಎಂದು ಹೇಳಬಹುದು. ಮುಖ್ಯವಾಗಿ ಈ ಸಲ ನಾವು ಖರ್ಚು ಮಾಡತಕ್ಕ ಕಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಸಂದರ್ಭದಲ್ಲಿ ಹೇಳಿರುವಂತೆ ಮೊದಲು ನಾವು ಹೆಚ್ಚು ಆಹಾರ ಬೆಳೆಯುವುದಕ್ಕೆ ಬೇಕಾದಷ್ಟು ಪ್ರಯತ್ನ ಮಾಡಬೇಕು. ನೀರಾವರಿ ಸಂಬಂಧದಲ್ಲಿ ನಾವು ಘಟಪ್ರಭ, ಮಲಪ್ರಭ, ಅಪ್ಪರ್ ಕೃಷ್ಣ, ಕಾರಂಜಿ, ತುಂಗಭದ್ರ ಇತ್ಯಾದಿ ಪ್ರಾಜೆಕ್ಟ್‌ಗಳನ್ನು ಪೂರೈಸಬೇಕಾದರೆ ನಮಗೆ ಇನ್ನೂ 250 ಕೋಟಿ ರೂಪಾಯಿ ಬೇಕಾಗುತ್ತದೆ. ಬೇಕಾದಷ್ಟು ಹಣವನ್ನು ಹಿಂದೆ ಒದಗಿಸಿದ್ದರೂ ಆ ಹಣವೇನಾಯಿತು ಎನ್ನುವ ಪ್ರಶ್ನೆ ಬರುತ್ತದೆ. ಕೆಲವು ಸಂದರ್ಭದಲ್ಲಿ ಅಣೆಕಟ್ಟು ಕಟ್ಟಿರುತ್ತಾರೆ ಆದರೆ ಕಾಲುವೆಗಳು ಇರುವುದಿಲ್ಲ, ಕೆಲವು ಸಂದರ್ಭಗಳಲ್ಲಿ ಕಾಲುವೆಗಳಿರುತ್ತವೆ ಆದರೆ ಅಣೆಕಟ್ಟು ಆಗಿರುವುದಿಲ್ಲ, ಕೆಲವು ಸಂದರ್ಭಗಳಲ್ಲಿ ಅಣೆಕಟ್ಟು ಮತ್ತು ಕಾಲುವೆ ಎರಡೂ ಇರುವುದಿಲ್ಲ ಆದರೆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಬೇಕಾದಷ್ಟು ಹಣವನ್ನು ಕೊಟ್ಟಿರುತ್ತಾರೆ. ಇಂಥ ನಿದರ್ಶನಗಳು ಬೇಕಾದಷ್ಟು ಇವೆ. ಹಣವನ್ನು ಈ ರೀತಿ ಉಪಯೋಗಿಸಿಯೂ ಕೂಡ ಈಗಿನ ಬರಗಾಲ ಬಂದಿದೆ. ಬರಗಾಲ ನಮಗೆ ಹೊಸದೇನೂ ಅಲ್ಲ. ಇದನ್ನು ನಾವು ಮಾಡಿದ್ದಲ್ಲ. ಬರಗಾಲ ಪ್ರದೇಶಕ್ಕೆ ಸಂಬಂಧಪಟ್ಟಂತೆ ನೇಮಕವಾಗಿದ್ದ ಏಕ ಸದಸ್ಯ ಆಯೋಗದ ವರದಿಯ ಆಧಾರದ ಮೇಲೆ ಹೇಳುವುದಾದರೆ ಸುಮಾರು 10–15 ವರ್ಷಗಳಿಂದ ಮಳೆ ಬಿದ್ದಿರುವುದನ್ನು ನೋಡಿದರೆ ಅರ್ಥವಾಗುತ್ತದೆ. ಈ ಸಲ ಮಳೆ ಸ್ವಲ್ಪ ಕಡಮೆಯಾಗಿರಬಹುದು ಅದರಿಂದ ಇನ್ನೂ ಉಲ್ಬಣ ಸ್ಥಿತಿ ಬಂದಿದೆ. ಇವು ಕ್ರಾನಿಕ್ ಅಫೆಕ್ಟೆಡ್ ಏರಿಯಾಗಳು. ಹಿಂದಿನದನ್ನು ನೋಡಿದರೆ ಆ ಭಾಗಗಳಲ್ಲಿ ಸುಮಾರು ಅರೇಳು ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದರು. ಈ ಹೊತ್ತು ನಮ್ಮ ಸರ್ಕಾರ 54 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಮುಂದೆ ಬಂದಿದೆ. ಇದು ಸಾಧನೆಯಲ್ಲವೇ? ನೂರಾರು ಜನಗಳಿಗೆ, ಸಾವಿರಾರು ಜನಗಳಿಗೆ ಕೆಲಸಕಾರ್ಯಗಳನ್ನು ಏರ್ಪಾಟು ಮಾಡಿದ್ದಾರೆ. ಮತ್ತು ಅದಕ್ಕೆ ತಕ್ಕ ಸೌಕರ್ಯಗಳನ್ನು ಕೂಡ ಒದಗಿಸಿಕೊಟ್ಟಿದ್ದಾರೆ, ಸರ್ಕಾರದ ಯಂತ್ರ ಕೂಡ ಅದಕ್ಕೆ ತಯಾರಿದೆ. ಏಕಸದಸ್ಯ ಆಯೋಗದ ವರದಿಯಲ್ಲಿ ಹೇಳಿರುವಂತೆ ಹಿಂದೆದೂ ಕಾಣದಷ್ಟು ರಸ್ತೆಗಳನ್ನು ಮಾಡಿದ್ದಾರೆ. ಮುಖ್ಯವಾಗಿ ಅಭಾವ ಪರಿಸ್ಥಿತಿ ಇರುವ ಕಾಲದಲ್ಲಿ ಸಾಮಾನು ಸರಕುಗಳನ್ನು ಸಾಗಿಸಬೇಕಾದರೆ ರಸ್ತೆಗಳ ಅನುಕೂಲತೆ ಬೇಕು. ಈ ಹೊತ್ತು ನಮ್ಮ ಸರ್ಕಾರ ರಸ್ತೆ ಕೆಲಸಗಳನ್ನೆಲ್ಲ ಪೂರೈಸಿದೆ. ಇದರ ಜೊತೆಗೆ ಅಥಣಿ ಜಮಖಂಡಿ ಪ್ರದೇಶದ ಹಿಪ್ಪರಗಿ ಯೋಜನೆಗೆ ಎರಡು ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ಸರ್ಕಾರಕ್ಕೆ ಎಷ್ಟು ಹಣ ಇದಕ್ಕಾಗಿ ಬೇಕು ಎಂದು ಯೋಚನೆ ಮಾಡಬೇಕು. ಮಾನ್ಯ ಅರ್ಥ ಸಚಿವರು ಬಹಳ ಜಾಗರೂಕತೆಯಿಂದ ಹಣವನ್ನು ಎಲ್ಲ ಭಾಗಗಳಿಗೂ ಹಂಚಿದ್ದಾರೆ. ಆಹಾರಾಭಾವ ಬಂದಂಥ ಕಾಲದಲ್ಲಿ ನೀರಿಲ್ಲದೆ ಯಾರಿಗೂ ತೊಂದರೆಯಾಗಬಾರದೆಂದು ನೂರು ಎತ್ತಿನ ಗಾಡಿಗಳ ಮೂಲಕ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದಾರೆ. ಜಾನುವಾರುಗಳಿಗೆ, ಮನುಷ್ಯರಿಗೆ ನೀರನ್ನು ಒದಗಿಸುವುದಲ್ಲದೆ ಆಹಾರಾಭಾವ ಕ್ಷಾಮ ಪ್ರದೇಶದಲ್ಲಿ ಕಾಣದ ಹಾಗೆ ಮಾಡುವುದಕ್ಕೋಸ್ಕರ ಏಳು ಸಾವಿರ ಫೇರ್ ಪ್ರೈಸ್ ಡಿಪೋಗಳನ್ನು ತೆರೆದಿದ್ದಾರೆ. ಅದರ ಜೊತೆಗೆ ನಮ್ಮ ರಾಜ್ಯಕ್ಕೆ ಸುಮಾರು 15,000 ಟನ್ ಗೋಧಿ ಪ್ರತಿ ತಿಂಗಳೂ ಕೇಂದ್ರದಿಂದ ಬರುತ್ತಿತ್ತು. ಈಗ ಇನ್ನೂ ಹೆಚ್ಚು ಗೋಧಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಎಮರ್ಜೆನ್ಸಿ ಫೀಡಿಂಗ್ ಪ್ರೋಗ್ರಾಂ ಪ್ರಕಾರ ನಾಲ್ಕೂವರೆ ಲಕ್ಷಕ್ಕೆ ಮೇಲ್ಪಟ್ಟು ಗರ್ಭಿಣಿ ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ನ್ಯೂಟ್ರಿಷನ್ ಪ್ರೋಗ್ರಾಂ ಮಾಡಿರುವುದು ಸಾಧನೆಯಲ್ಲವೇ? ಬರಗಾಲ ಪ್ರದೇಶದಲ್ಲಿ ಜೂನ್ ಜುಲೈ ತಿಂಗಳಿನಲ್ಲಿ ಮಳೆ ಬಂದಂಥ ಕಾಲದಲ್ಲಿ ಬಿತ್ತನೆ ಬೀಜವನ್ನು ಸಹ ಒದಗಿಸುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೂ ಕೂಡ ವಿರೋಧ ಪಕ್ಷದವರು ಹೇಳುತ್ತಿದ್ದಾರೆ, ಮೊನ್ನೆ ತಾನೇ ಪ್ರಧಾನಿಯವರು ಬರಗಾಲ ಪ್ರದೇಶಕ್ಕೆ ಮೊನ್ನೆ ಬಂದಾಗ ನಮಗೆ ಏನೂ ಸಹಾಯ ಮಾಡಿಲ್ಲ ಎಂದು. ನಾನು ಈ ಸಂದರ್ಭದಲ್ಲಿ ಹೇಳುವುದಾದರೆ ಹಣಕ್ಕೋಸ್ಕರ ತೊಂದರೆ ಪಡಬೇಕಾದ್ದಿಲ್ಲ, ಕಾರ್ಯಕ್ರಮ ಏನು ಹಾಕಿಕೊಂಡಿದ್ದೀರಿ ಅದನ್ನು ಸಾಧಿಸಿಕೊಂಡು ಹೋಗಿ, ಅದಕ್ಕೆಲ್ಲ ಬೇಕಾದ ಹಣವನ್ನು ಕೊಡುತ್ತೇವೆಂದು

(ಶ್ರೀ ಕೆ. ಆರ್. ಶ್ರೀನಿವಾಸಲ ನಾಯ್ಡು)

ಪ್ರಧಾನಿಯವರು ಒಪ್ಪಿಕೊಂಡಿದ್ದಾರೆ. ಪದೇ ಪದೇ ಹಣವನ್ನು ಕೇಳತಕ್ಕ ಪ್ರಮೇಯ ಬರುವುದಿಲ್ಲ. ಯಾವ ಪ್ಲಾನ್ ಮತ್ತು ಪ್ರೋಗ್ರಾಂ ಹಾಕಿಕೊಂಡಿದ್ದೇವೆ ಅದನ್ನು ಮಾಡಿಕೊಂಡು ಹೋದರೆ ಬೇಕಾದಷ್ಟು ಹಣ ನಮಗೆ ಕೇಂದ್ರದಿಂದ ಬರುತ್ತದೆ, ಹಣದ ಅಭಾವ ಎಂದಿಗೂ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಬರಗಾಲ ಪೀಡಿತ ಪ್ರದೇಶಗಳಲ್ಲಿನ ಕೆಲಸಕಾರ್ಯಗಳನ್ನು ನೋಡಿಕೊಳ್ಳಲು ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿಕೊಂಡಿದ್ದಾರೆ. ಈ ಭಾಗಗಳಲ್ಲಿರುವ ಜನ ಬರಗಾಲದ ಬಗ್ಗೆ ಏನೂ ವ್ಯಸನಪಡಬೇಕಾದ್ದಿಲ್ಲ, ಅವರ ಕಷ್ಟಸುಖಗಳನ್ನು ನೋಡಿಕೊಳ್ಳಲು ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿರುವುದರಿಂದ ಅವರು ಎಲ್ಲವನ್ನೂ ನೋಡಿಕೊಳ್ಳುತ್ತಾರೆ. ಇದರ ಜೊತೆಗೆ ರಬಕವಿ, ಬನಹಟ್ಟಿ ಭಾಗದಲ್ಲಿರುವ ನೇಕಾರರಿಗೆ ಹೆಚ್ಚಿನ ಪ್ರಮಾಣದಲ್ಲಿ ನೂಲನ್ನು ಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದಾರೆ ಮತ್ತು ಅವರಿಗೋಸ್ಕರ 55 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 15 ರಿಲೀಫ್ ಕೇಂದ್ರಗಳನ್ನು ತೆರೆದಿದ್ದಾರೆ.

ಮನೆಯ ವಿಷಯ—ನಮಗೆಲ್ಲ ಗೊತ್ತಿದ್ದಹಾಗೆ ಪಕ್ಷಿಗಳಿಗೂ ವಾಸ ಮಾಡಲು ಒಂದು ಗೂಡು ಬೇಕು. ಹೀಗಿರುವಾಗ ಜನರಿಗೆ ವಾಸಕ್ಕೆ ಮನೆಗಳು ಬೇಡವೇ? ಎಲ್ಲರಿಗೂ ಮನೆಗಳನ್ನು ಒದಗಿಸುವ ದೃಷ್ಟಿಯಿಂದ ಎರಡೂವರೆ ಲಕ್ಷ ಜನರಿಗೆ ನಿವೇಶನಗಳನ್ನು ಸರ್ಕಾರದವರು ಹಂಚಿದ್ದಾರೆ. ಒಂದೇ ವರ್ಷದಲ್ಲಿ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಇದು ನಮ್ಮ ರಾಜ್ಯದ ಪ್ರಶ್ನೆಯಲ್ಲ, ಇಡೀ ಭಾರತ ದೇಶದ ಪ್ರಶ್ನೆ. ಮನೆ ಕಟ್ಟುವ ವಿಷಯದಲ್ಲಿ ನಾವು ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ಇದಕ್ಕೆ ಕೇಂದ್ರದ ನೆರವು ಇದೆ. ಗೃಹ ನಿರ್ಮಾಣ ಕಾರ್ಯಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಹೌಸ್ ಬಿಲ್ಡಿಂಗ್ ಕೋಆಪರೇಟೀವ್ ಸೊಸೈಟಿಗಳು ಇದ್ದ ಹಾಗೆ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಮಾಡಿದ್ದಾರೆ. ಅದರ ಮೂಲಕ ಅನೇಕ ಮನೆಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದೂ ಅಲ್ಲದೆ ಪ್ರತಿ ತಾಲ್ಲೂಕಿನಲ್ಲಿಯೂ ಸುಮಾರು 150-200 ಮಾಡಲ್ ಹೌಸಸ್ ಕಟ್ಟುತ್ತೇವೆಂದು ಮಾನ್ಯ ಅರ್ಥ ಮಂತ್ರಿಗಳು ಹೇಳಿದ್ದಾರೆ. ಅದಕ್ಕೋಸ್ಕರ ಒಂದು ಟೆಕ್ನಿಕಲ್ ಕಮಿಟಿ ಮಾಡಿದ್ದಾರೆ. ಬಡ ಜನಗಳಿಗೆ ಯಾವ ರೀತಿ ಮನೆ ಮಾಡಿದರೆ ಅನುಕೂಲವಾಗುತ್ತದೆ ಎನ್ನುವುದಕ್ಕೆ ಈ ಕಮಿಟಿಯನ್ನು ಮಾಡಿದ್ದಾರೆ. ಮತ್ತು ಮನೆಗಳನ್ನು ಕಟ್ಟುವುದಕ್ಕೆ ಬೇಕಾದಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದಾರೆ, ಮುಂದೆಯೂ ಸಹ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇದಕ್ಕೆಲ್ಲ ಸಾರ್ವಜನಿಕ ಸಹಕಾರ ಬೇಕು. ಬರೀ ಟೀಕೆ ಟಿಪ್ಪಣಿಗಳಿಂದ ಪ್ರಯೋಜನವಿಲ್ಲ. ಸಾಮಾನ್ಯವಾಗಿ ನಾವು ಏನು ಮಾಡಬೇಕಾದರೂ ಒಂದು ಕನ್‌ಸ್ಟ್ರಕ್ಟಿವ್ ಪ್ರೋಗ್ರಾಂ ಕೊಡಬೇಕಾಗುತ್ತದೆ. ಸರ್ಕಾರ ಮತ್ತು ಸಾರ್ವಜನಿಕರು ಗಾಡಿಯ ಎರಡು ಚಕ್ರಗಳಿದ್ದ ಹಾಗೆ. ಇಬ್ಬರೂ ಸಹಕರಿಸಿದರೆ ಈ ಯೋಜನೆ ಯಶಸ್ವಿಯಾಗುತ್ತದೆ. ರೂರಲ್ ಹೌಸಿಂಗ್ ಸ್ಕೀಂ ಏನಿದೆ ಅದು ಇಡೀ ಭಾರತ ದೇಶದಲ್ಲಿ ಮಾದರಿಯಾದ ಸ್ಕೀಂ ಆಗುತ್ತದೆ ಎನ್ನುವ ಆಶಯವಿದೆ.

ನೀರಾವರಿ ಬಗ್ಗೆ ಹೇಳುವುದಾದರೆ ನಾವು ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಬೇಕು ಎನ್ನುವ ಉದ್ದೇಶದಿಂದ ಮೇಜರ್, ಮೀಡಿಯಂ ಮತ್ತು ಸ್ಮಾಲ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ನಮ್ಮ ಇರಿಗೇಷನ್ ಪೊಟೆನ್‌ಷಿಯಲ್ ಈಗ 8 ಪರ್ಸೆಂಟ್ ಮಾತ್ರವಿದೆ. ನೆರೆ ರಾಜ್ಯಗಳಲ್ಲಿ ಬಹಳ ಉತ್ತಮ ರೀತಿಯಲ್ಲಿ ನೀರಾವರಿಯನ್ನು ಮಾಡಿಕೊಂಡಿರುವುದರಿಂದ ಅವರಿಗೆ ಆಹಾರದ ಅಭಾವವಿಲ್ಲ. ಆದ್ದರಿಂದ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಸಾಧ್ಯವಿದೆ ಅಲ್ಲೆಲ್ಲ ನೀರನ್ನು ಸದುಪಯೋಗ ಮಾಡಿಕೊಂಡು ನೀರಾವರಿ ಸೌಲಭ್ಯಗಳನ್ನು ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ.

5—00 P. M.

ಇರ್ರಿಗೇಷನ್ ಪ್ರಾಜೆಕ್ಟ್ಸ್ ಮಾಡಲಿಕ್ಕೆ ಮೊದಲೇ ಹೇಳಿದ್ದ 250 ಕೋಟಿ ರೂಪಾಯಿ ಬೇಕು ಎಂದು. ಟ್ರಿಬಲಿಂಗ್ ಇರ್ರಿಗೇಷನ್ ಪೊಟೆನ್ಸಿಯಲಿಟಿ ಬಗ್ಗೆ ಸರ್ಕಾರದವರು ತೀರ್ಮಾನ ಮಾಡಿದ್ದಾರೆ ಎಂದು ಮೊದಲೇ ಹೇಳಿದ್ದೇನೆ. ಅದರ ಜೊತೆಗೆ ನ್ಯಾಷನಲೈಸ್ಡ್ ಬ್ಯಾಂಕ್ಸ್ ಅದೂ ಸಹ ಹೆಚ್ಚಿನ ರೀತಿಯಲ್ಲಿ ಸಹಾಯ ಒದಗಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಯಾವ ಯೋಜನೆಯೇ ಆಗಲಿ ಒಂದು ಯೋಜನೆ ಇಟ್ಟುಕೊಂಡು ಕೆಲಸ ಮಾಡಬೇಕು. ಇದುವರೆಗೂ ಪ್ಲಾನ್ಸ್, ಪಾಲೀಸೀಸ್ ಮೇಲಿಂದ ಏನು ಬರುತ್ತದೆ ಅದು ಕೆಳಗಿನಿಂದ ಹಿಡಿದು ಎಲ್ಲಾ ಲೆವಲ್‌ನಲ್ಲೂ ಬೈ ದಿ

ಪಿಪಲ್, ಫಾರ್ ದಿ ಪೀಪಲ್, ಟು ದಿ ಪೀಪಲ್ ಮಟ್ಟದವರೆಗೂ ಕೂಡ ಪ್ಲಾನ್ ಇಂಪ್ಲಿಮೆಂಟೇಷನ್ ಎಂದು ಏನು ಹೇಳುತ್ತೇವೋ ಅದರಲ್ಲಿ ಪ್ರತಿಯೊಬ್ಬ ಪ್ರಜೆಯೂ ಅಂದರೆ ರಾಜ್ಯದ 2 ಕೋಟಿ 90 ಲಕ್ಷ ಜನ involves themselves in the plans and programmes given by the party. ಈ ಇಂಪ್ಲಿಮೆಂಟಿಂಗ್ ಏಜೆನ್ಸಿ ಯಾರು ಎಂದರೆ ಸರ್ಕಾರ ಮತ್ತು ಸಾರ್ವಜನಿಕರು Panchayats and people will have participation to the maximum extent. in the implementation of the plans ಎಂದು ಹೇಳಿದ್ದಾರೆ. ಇದರ ಜೊತೆಗೆ ಬಡವರಿಗೆ ತೊಂದರೆಯಾಗಿದೆ. ಈ 11 ತಿಂಗಳಿನಲ್ಲಿ ನಿಮ್ಮ ನಿರ್ಣಯ ಯಾವುದೂ ಹಿಡಿಸಲಿಲ್ಲ. ನಮ್ಮ ದೇಶದಲ್ಲಿ 925 ಯೂನಿವರ್ಸಿಟಿಗಳು ಇವೆ. 30 ಲಕ್ಷ ಗ್ರಾಜುಯೇಟ್‌ಗಳು ಇದ್ದಾರೆ. They are actually manufacturing graduates ಜೊತೆಗೆ 5 ಲಕ್ಷ ಟೆಕ್ನಿಕಲ್ ಗ್ರಾಜುಯೇಟ್ ಆಗುತ್ತಾ ಇದ್ದಾರೆ. ಯಾವ ಸರ್ಕಾರವೇ ಆಗಲಿ 11 ತಿಂಗಳಿನಲ್ಲಿ ಅವರಿಗೆ ಕೆಲಸ ಕೊಡುವುದಕ್ಕೆ ಸಾಧ್ಯವೇ ? ಮಾನ್ಯ ಮಂತ್ರಿಗಳಿಗೆ ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ಇನ್ನು ಮೇಲಾದರೂ ಕೂಡ ನೈಪುಣ್ಯತೆ ಇರುವವರಿಗೆ ಕೆಲಸ ಸಿಕ್ಕಬಹುದು ಎನ್ನುವ ಆಸೆ ಇದೆ. ವಿದ್ಯಾರ್ಥಿಗಳು ಕಾಲೇಜಿಗೆ ಹೋಗಿ ಬಿ.ಎ.ಬಿ.ಎಸ್.ಸಿ.ಎಂ.ಎಸ್.ಸಿ. ಪಾಸು ಮಾಡಿರಬಹುದು. ಆದರೆ ಬಡಬೋರೇ ಗೌಡನ ಮಗನಿಗೆ ವಿಧಾನಸೌಧದಲ್ಲಿ ಕೆಲಸ ಸಿಕ್ಕುತ್ತದೆ ಎನ್ನುವ ಆಸೆ ಕಡಿಮೆ ಆಗಬೇಕು. ಹೈಸ್ಕೂಲ್ ಎಜುಕೇಷನ್ ವಿದ್ಯಾಭ್ಯಾಸ ಕೊಟ್ಟಾದ ನಂತರ, ಆ ವಿದ್ಯಾರ್ಥಿಗಳಿಗೆ ಜಾಬ್ ಒರಿಯೆಂಟಡ್ ಎಜ್ಯುಕೇಷನ್ ತೆಗೆದುಕೊಂಡು ಅವರು ತಮ್ಮ ಕಾಲಿನಮೇಲೆ ನಿಂತುಕೊಳ್ಳುವ ನಂಬಿಕೆ ಬರಬೇಕು. Earn while you learn, ಇದು ಜಾರಿಗೆ ಬರಬೇಕು. ಈ ಉದ್ದೇಶ ಸರ್ಕಾರಕ್ಕೆ ಇದೆ. ಕಾರಣಾಂತರದಿಂದ ಪ್ರೈವೇಟ್ ಏಜೆನ್ಸಿ ಮೂಲಕ ಕಮರ್ಷಿಯಲೈಸ್ಡ್ ಎಜ್ಯುಕೇಶನ್ ಆಗಿದೆ. ಇದು ಹೋಗಬೇಕು. Education is not an end in itself. It is only a means to an end. ಇಂತಹ ದೊಡ್ಡ ಜವಾಬ್ದಾರಿ ನಮ್ಮ ಸರ್ಕಾರಕ್ಕೆ ಇದೆ. ದಕ್ಕೆ ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್‌ನವರು ಇದಷ್ಟು ಸಹಾಯ ಮಾಡುತ್ತಾರೆ ಎನ್ನುವ ಂಬಿಕೆ ಇದೆ. ಜೊತೆಗೆ ನಮ್ಮಲ್ಲಿರತಕ್ಕಂಥ ರಿಸೋರ್ಸ್‌ನ್ನು ನಾವು ಹೆಚ್ಚಿಸುತ್ತಾ ಇದ್ದೇವೆ. ನ್ನೆ ತಾನೇ ಒಂದು ಆಶ್ವಾಸನೆ ಕೊಟ್ಟರು. ಅದು ಏನೆಂದರೆ ಎಲ್ಲಾ ಭಾಗದಲ್ಲೂ ಇರತಕ್ಕಂಥ ೖಮರಿ ಎಜುಕೇಷನ್‌ನ್ನು ಸರ್ಕಾರದವರೇ ವಹಿಸಿಕೊಳ್ಳುತ್ತಾರೆ ಎಂದು ಅದಕ್ಕಾಗಿ ಯೂನಿ ಟಿ ಗ್ರಾಂಟ್ಸ್ ಕಮೀಷನ್‌ನವರು ನಮಗೆ ಹೆಚ್ಚಿನ ರೀತಿಯಲ್ಲಿ ರಿಯಾಯಿತಿ ಕೊಡಬೇಕೆಂದು ಕೊಳ್ಳುತ್ತೇನೆ.

ಇನ್ನು ಕೈಗಾರಿಕೆ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದ ಕೈಗಾರಿಕೆ ಇಡೀ ಭಾರತ ದೇಶದಲ್ಲಿ ಮಾದರಿಯಾಗಿದೆ. ಈ ಒಂದು ಸ್ಥಾನ ಹಿಂದಿನಿಂದಲೂ ಬಂದಿದೆ. ಡಾ. ಸರ್. ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಒಂದು ಮಾತು ಹೇಳುವುದಾದರೆ ಇಂಡಸ್ಟ್ರಿಯಲಾಯಿಜ್ ಆರ್ ಪೆರಿಶ್ ಎಂದು ಹೇಳಿದ್ದಾರೆ. ಇದು 30 ವರ್ಷಗಳ ಹಿಂದೆಯೇ ಇಂಡಸ್ಟ್ರಿಜ್ ಇನ್ ಇಂಡಿಯಾ ಎನ್ನುವ ಪುಸ್ತಕದಲ್ಲಿ ಬರೆದಿದ್ದಾರೆ. ಆದುದರಿಂದ ಈ ಕೈಗಾರಿಕೆಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಗತಿ ಸಾಧಿಸಬೇಕು. ಅದಕ್ಕೆ ಸಾಧನೆ ಆಗಬೇಕಾದರೆ ಮುಖ್ಯವಾಗಿ ನಾನು ಈ ಸಂದರ್ಭದಲ್ಲಿ ಒಂದು ಸಲಹೆ ಕೊಡುತ್ತೇನೆ. ಟೆಕ್ನೋ ಎಕಾನಮಿಕ್ ಸರ್ವೆ ಇಡೀ ಸಂಸ್ಥಾನದಲ್ಲಿ ಆಗಬೇಕು. ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕಾ ಮಟ್ಟದ ಕೈಗಾರಿಕೆಯಲ್ಲಿ ಯಾವ ಪ್ರದೇಶ ಹಿಂದುಳಿದಿದೆ ಅದನ್ನು ಮುಂದಕ್ಕೆ ತರಲಿಕ್ಕೆ ಪ್ರಯತ್ನ ಪಡಬೇಕು. ನಮ್ಮ ಸಂಸ್ಥಾನದಲ್ಲಿ ಬೇಕಾದಷ್ಟು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ಮೀಡಿಯಮ್ ಇಂಡಸ್ಟ್ರೀಸ್ ಮತ್ತು ಕಾಟೇಜ್ ಇಂಡಸ್ಟ್ರೀಸ್ ಮಾಡಲು ಅವಕಾಶವಿದೆ. ಈ ಸಂದರ್ಭದಲ್ಲಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಜ ಮತ್ತು ಕಾಟೇಜ ಇಂಡಸ್ಟ್ರಿಜ್ ಯಾವುವು ಹೊಸದಾಗಿ ಆಗಬೇಕಾದರೂ ಅದರ ಅವಶ್ಯಕತೆ ಇದೆ. ಆದುದರಿಂದ ಆಯಾಯ ಭಾಗಗಳನ್ನು ವಿಂಗಡಿಸಿ ಅದಕ್ಕೇನೇ ಒಂದು ಸಪರೇಟ್ ಡೈರೆಕ್ಟೊರೇಟ್ ಅಪಾಯಿಂಟ್ ಮಾಡಬೇಕು ಎಂದು ಹೇಳುತ್ತೇನೆ. ಜೊತೆಗೆ ನಮ್ಮ ಸಂಸ್ಥಾನದಲ್ಲಿ ಇಂಡಸ್ಟ್ರಿಯಲ್ ಪೊಟೆನ್ಸಿಯಲ್ ಏನು ಇದೆ ಅದನ್ನು ಸರ್ವೆ ಮಾಡುವುದಕ್ಕೋಸ್ಕರ ಒಂದು ಇಂಡಸ್ಟ್ರಿಯಲ್ ಕಮೀಷನ್ ಆಗಬೇಕು ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಅಲ್ಲದೆ ನಮ್ಮ ರಾಜ್ಯಕ್ಕೆ ಹೊಸ ಕೈಗಾರಿಕೆಗಳು ಬರುವುದು ಸಹ. ಇದನ್ನೆಲ್ಲಾ ನೋಡಿದರೆ ಇದರಲ್ಲಿ ಕೆಲವು ಲೋಪದೋಷಗಳು ಇವೆ. ಅದನ್ನು ನಾವು ಸರಿಪಡಿಸಿಕೊಳ್ಳಬೇಕು. ಡೀಸೆಂಟ್ರಲೈಸೇಷನ್ ಆಫ್ ಇಂಡಸ್ಟ್ರೀಸ್ ಈವೊತ್ತಿನ ದಿವಸ ಯಾವ ಕೈಗಾರಿಕೆಗಳು ಇವೆ ಅವು ಒಂದೇ ಕಡೆಯಲ್ಲಿ ಒಂದೇ ಜಾಗದಲ್ಲಿ ಕೇಂದ್ರೀಕೃತವಾಗುತ್ತಿದೆ. ತಾವು ಕಂಡ ಹಾಗೆ ಬೆಂಗಳೂರು ಜನಸಂಖ್ಯೆ ಹಿಂದೆ 2 ಲಕ್ಷ ಇದ್ದುದು ಈವೊತ್ತಿನ ದಿವಸ 19—20 ಲಕ್ಷ ಆಗಿದೆ. ಹಾಗೂ ಇಲ್ಲಿ ಆಕ್ಸಿಲರಿ ಇಂಡಸ್ಟ್ರೀಸ್ ಮತ್ತು ಸಬ್ಸಿಡಿಯರಿ ಇಂಡಸ್ಟ್ರೀಸ್ ಡೆವಲಪ್

(ಶ್ರೀ ಕೆ.ಆರ್. ಶ್ರೀನಿವಾಸುಲು ನಾಯ್ಡು)

ಆಗುತ್ತಾ ಇವೆ. ರೂರಲ್ ಇಂಡಸ್ಟ್ರೀಸ್ ಬೆಳೆಯುತ್ತಾ ಇವೆ. ಇಲ್ಲಿ ಆಧುನಿಕ ಕೈಗಾರಿಕೆಗಳು ಬೆಳೆಯುತ್ತಿರುವುದರಿಂದ ಬಹಳಷ್ಟು ಜನ ಇಲ್ಲಿಗೆ ವಲಸೆ ಬಂದು ಜೀವನ ಮಾಡುತ್ತಿದ್ದಾರೆ ಎಂದು ಕಾಣುತ್ತದೆ. ಇದರಿಂದ ಇಲ್ಲಿ ಜನಸಂಖ್ಯೆ ಜಾಸ್ತಿಯಾಗುತ್ತಿದೆ, ಸ್ಲಂಸ್ ಸಹ ಜಾಸ್ತಿಯಾಗುತ್ತಿದೆ ಮತ್ತು ಆಹಾರ ಅಭಾವವೂ ಕೂಡ ಜಾಸ್ತಿಯಾಗುತ್ತಿದೆ. ಜನಗಳ ತಿಕ್ಕಾಡಕ್ಕೆ ಸಿಕ್ಕಬೇಕಾದರೆ ಸಂದರ್ಭ ಒದಗುತ್ತದೆ. ಆದುದರಿಂದ ಈ ಸಂದರ್ಬದಲ್ಲಿ ಒಂದು ಮಾತು ಹೇಳುತ್ತೇನೆ. ಡಿಸೆಂಟ್ರಲೈಶೇಷನ್ ಆಫ್ ಇಂಡಸ್ಟ್ರೀಸ್ ಹೆಚ್ಚಿಗೆ ಬಾಂಬೆ, ಕಲ್ಕತ್ತ, ಡೆಲ್ಲಿ, ಪೂನಾ, ಬೆಂಗಳೂರು, ಮದ್ರಾಸ್‌ನಲ್ಲಿ ಕೇಂದ್ರೀಕೃತವಾಗಿರುವುದನ್ನು ನೋಡಿದ್ದೇನೆ. ಅರ್ಬನೈಸೇಷನ್ ಆಫ್ ಇಂಡಸ್ಟ್ರೀಸ್ ಇವು ಜಾಸ್ತಿ ಆಗುವುದರಿಂದ ಜಾಸ್ತಿಯಾಗುತ್ತದೆ. ಈ ಕಾರಣದಿಂದ ಎಷ್ಟೋ ಜನ ಬಡತನಕ್ಕೆ ಸಿಕ್ಕಿ ನೊಂದಿರುತ್ತಾರೆ, ಉಪವಾಸ ಇರುತ್ತಾರೆ, ಕೂಲಿ, ಸಿಕ್ಕುವುದಿಲ್ಲ ಇಂಥವರು ವಲಸೆ ಬಂದು ಬೆಂಗಳೂರಿಗೆ ಬಂದು ನೆಲಸುತ್ತಾರೆ ಹಳ್ಳಿಗಳಲ್ಲಿ ವಾಸ ಮಾಡುವುದನ್ನು ಬಿಟ್ಟು ಇಲ್ಲಿಗೆ ಬಂದು ವಾಸ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ಆದುದರಿಂದ ಇನ್ನು ಪಟ್ಟಣಗಳು ಬೆಳೆಯುವುದು ಸಾಕು. ಬಾಂಬೆ ಕಲ್ಕತ್ತಾ ಡೆಲ್ಲಿ ಇವುಗಳನ್ನು ನೋಡಿದರೆ ನಮಗೆ ಏನು ಅನಿಸುತ್ತದೆ ಎಂದರೆ ಇನ್ನು ಪಟ್ಟಣಗಳ ಬೆಳವಣಿಗೆ ಆಗತಕ್ಕದ್ದು ಬಹಳ ತೊಂದರೆ ಇದೆ ಅದಕ್ಕೆ ಅಡ್ಡ ಕೊಡಬೇಕು ಎಂದು ಹೇಳುತ್ತೇನೆ. ಅದರ ಜೊತೆಗೆ ನಮ್ಮ ಸರ್ಕಾರದವರು ಮಂಗಳೂರು ಫರ್ಟಿಲೈಸರ್ಸ್ ಪ್ರಾಜೆಕ್ಟ್ ಕಾರ್ಯಗತವಾಗುತ್ತಾ ಇದೆ. ಆಡಳಿತದಲ್ಲಿ ಏನೇ ಲೋಪದೋಷಗಳು ಇದ್ದರೂ ಸಹ ಹಣ ವಸೂಲ್ಮಾಡುವ ಕಾಲದಲ್ಲಿ ಎಷ್ಟು ಹಣ ಬೇಕೋ ಅಷ್ಟು ಸಬ್‌ಸ್ಕ್ರೈಬ್ ಆಗಿರುವುದು ಸಂತೋಷದ ಸಂಗತಿ. ಆದುದರಿಂದ ನಮ್ಮ ಸರ್ಕಾರದವರು ಯಾವ ಕೆಲಸಗಳನ್ನೂ ಮಾಡಿದರೂ ಸಹ ಯೋಚನೆ ಮಾಡಿ ಮಾಡುತ್ತಾರೆಂದು ಎನ್ನುವುದರಲ್ಲಿ ಸಂದೇಹವಿಲ್ಲ. ಅದಕ್ಕಾಗಿ ಮೈಸೂರು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಎಂದು ಹೊಸದಾಗಿ ಸ್ಥಾಪನೆ ಮಾಡಿದ್ದಾರೆ.

ಇನ್ನು ವಿಜಯನಗರದ ಸ್ಟೀಲ್ ಪ್ಲಾಂಟ್ ಪ್ರಾಜೆಕ್ಟ್ ತೆಗೆದುಕೊಂಡರೆ ಅದು ಕೂಡ ನಮ್ಮಲ್ಲಿ ಬರುವಂತೆ ಪ್ರಯತ್ನ ಮಾಡಬೇಕು. ನಮ್ಮಲ್ಲಿ ಬೇಕಾದಷ್ಟು ಇಂಡಸ್ಟ್ರೀಸ್ ಮಾಡಲು ಪೊಟೆನ್ಸಿಯಾಲಟಿ ಇದೆ. ಆದುದರಿಂದ ನಾನು ಮೊದಲೇ ಹೇಳಿದ ಹಾಗೆ ಈ ಬಗ್ಗೆ ಒಂದು ಟೆಕ್ನಿಕಲ್ ಎಕನಾಮಿಕ್ ಸರ್ವೆ ಆಗಿದ್ದರೆ ಚೆನ್ನಾಗಿರುತ್ತಿತ್ತು. ಈ ವಿಜಯನಗರದ ಸ್ಟೀಲ್ ಪ್ಲಾಂಟ್ ಸ್ಥಾಪನೆ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದಾರೆ. ಇದಕ್ಕೆ ಬೇಕಾಗಿರತಕ್ಕಂಥ 6 ಸಾವಿರ ಎಕರೆ ಜಮೀನನ್ನು ಅಕ್ವೈರ್ ಮಾಡಿದ್ದಾರೆ. ಇದಕ್ಕೆ ಬೇಕಾದಷ್ಟು ಹಣ ಒದಗಿಸಿದ್ದಾರೆ.

ಇನ್ನು ನಂದಿಹಳ್ಳಿಯಲ್ಲಿ ಪೋಸ್ಟ್ ಗ್ರಾಜುಯೇಟ್ ಎಜುಕೇಷನ್ ಕೋರ್ಸ್ ಒಂದನ್ನು ಓಪನ್ ಮಾಡುತ್ತಾರೆ. ಅಲ್ಲಿ ಒಂದು ವಿದ್ಯಾ ಸಂಸ್ಥೆ ಬರುತ್ತದೆ. ಅದು ಒಂದು ಟೆಕ್ನಿಕಲ್ ಯೂನಿವರ್ಸಿಟಿ ಸಹ ಆಗುತ್ತದೆ. ಈ ರೀತಿ ಇಂತಹ ಒಂದು ದೊಡ್ಡ ಪ್ರಗತಿಪರವಾದ ಕಾರ್ಯ ನಮ್ಮ ಸರ್ಕಾರದವರು ಮಾಡಿದ್ದಾರೆ, ಅದಕ್ಕಾಗಿ ನಾವು ಹೆಮ್ಮೆಪಡಬೇಕು.

ಇನ್ನು ಹುಲಕೋಟೆಯಲ್ಲಿ ಕೋಆಪರೇಟಿವ್ ಸೆಕ್ಟರ್‌ನಲ್ಲಿ ಒಂದು ಯಾರ್ನ್ ಫ್ಯಾಕ್ಟರಿ ಸ್ಥಾಪನೆ ಮಾಡಿದ್ದಾರೆ. ಅದರ ಜೊತೆಗೆ ತಾಲ್ಲೂಕಾ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಒಂದು ಇಂಡಸ್ಟ್ರೀಯಲ್ ಸಬರ್ಬ ಮಾಡಬೇಕು ಎಂದು ಶುರು ಮಾಡಿದ್ದಾರೆ. ಮುಖ್ಯವಾಗಿ ರೇಷ್ಮೆ ಕೈಗಾರಿಕೆಯನ್ನು ಕ್ವೀನ್ ಆಫ್ ಇಂಡಸ್ಟ್ರಿ ಎಂದು ಕರೆಯಬಹುದು. ಇಡೀ ಭಾರತದೇಶದಲ್ಲಿ ನಮ್ಮ ರಾಜ್ಯ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಹೆಚ್ಚು ರೇಷ್ಮೆಯನ್ನು ತಯಾರುಮಾಡಲಾಗುತ್ತಿದೆ. ಇದರಿಂದ ಬೇಕಾದಷ್ಟು ಫಾರಿನ್ ಎಕ್ಸ್‌ಚೇಂಜ್ ಬರುತ್ತಿದೆ. ಆದಕಾರಣ ಈ ಕೈಗಾರಿಕೆಗೆ ಇನ್ನೂ ಹೆಚ್ಚಿನ ಉತ್ತೇಜನವನ್ನು ಸರ್ಕಾರದವರು ಕೊಡಬೇಕು. ಹುಳು ಸಾಕಾಣಿಕೆಯಲ್ಲಿ ಮನೆಯಲ್ಲಿರುವ ಪ್ರತಿಯೊಬ್ಬ ಮಕ್ಕಳಿಗೂ ಸಹ ಕೆಲಸ ಒದಗಿಸುವ ಕೈಗಾರಿಕೆಯಾಗಿದೆ. ಮುಖ್ಯವಾಗಿ ಟೆಕ್ಸ್‌ಟೈಲ್ ಇಂಡಸ್ಟ್ರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡಬೇಕೆಂದು ಒತ್ತಿ ಹೇಳುತ್ತೇನೆ.

ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆ ವಿಷಯದಲ್ಲಿ ಸಹ ನಾವು ಸಾಕಾದಷ್ಟು ಮುಂದೆ ಬಂದಿದ್ದೇವೆ. ನಮ್ಮ ಆರೋಗ್ಯ ಮಂತ್ರಿಗಳು ಹೇಳಿದಂತೆ ನಮ್ಮ ರಾಜ್ಯದಲ್ಲಿ ಆರೋಗ್ಯ ಸೇವಾ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲು ಹಣ ಒದಗಿಸಲಾಗಿದೆ. ಈ ವಿಶ್ವವಿದ್ಯಾನಿಲಯದ ಜೊತೆಗೆ ನಂದಿಹಳ್ಳಿಯಲ್ಲಿ ವಿಜ್ಞಾನಗಳ ಬಗ್ಗೆ ಒಂದು ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲಾಗುವುದು. ವ್ಯವಸಾಯದ ವಿಶ್ವವಿದ್ಯಾನಿಲಯ ಈಗ ನಮ್ಮ

ರಾಜ್ಯದಲ್ಲಿ ಇದೆ. ಕಳೆದ 11 ತಿಂಗಳಲ್ಲಿ ನಾವು ಎಷ್ಟೊಂದು ಸಾಧನೆ ಮಾಡಿದ್ದೇವೆಂಬುದನ್ನು ನೋಡಬಹುದು. ಈವರೆಗೆ ತಾಲ್ಲೂಕ್ ಬೋರ್ಡ್ ಔಷಧಾಲಯಗಳ ಪರಿಪಾಲನೆಯ ವೆಚ್ಚದ ಅರ್ಧಾಂಶವನ್ನು ತಾಲ್ಲೂಕ್ ಬೋರ್ಡುಗಳೇ ವಹಿಸಿಕೊಳ್ಳಬೇಕಾಗಿತ್ತು ; ಈಗ ನಮ್ಮ ಸರ್ಕಾರದವರು ತಾಲ್ಲೂಕ್ ಬೋರ್ಡಿನವರಿಗೆ ಆ ಒಂದು ಭಾರವನ್ನು ಕಡಿಮೆ ಮಾಡಿ ಸರ್ಕಾರದವರೇ ಎಲ್ಲ ವೆಚ್ಚವನ್ನು ವಹಿಸಿ ಕೊಂಡಿದ್ದಾರೆ. ಇದಕ್ಕಾಗಿ ಅವರು ಖರ್ಚು ಮಾಡುತ್ತಿದ್ದ ಹಣವನ್ನು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ ಉಪಯೋಗಿಸಿಕೊಳ್ಳಬಹುದು ಎಂದು ಸರ್ಕಾರದವರು ಹೇಳಿದ್ದಾರೆ. ಇದರ ಜೊತೆಗೆ ಸಮಾಜ ಕಲ್ಯಾಣದ ಅಭಿವೃದ್ಧಿಗಾಗಿ ಇದುವರೆಗೆ ಒಂದೂವರೆ ಕೋಟಿ ರೂಪಾಯಿಗಳನ್ನು ಏನು ಒದಗಿಸಲಾಗುತ್ತಿತ್ತು. ಅದನ್ನು ಈಗ ಎರಡು ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಇನ್ನೂ ಹೆಚ್ಚಿಸಿದ್ದರೆ ಚೆನ್ನಾಗಿರುತ್ತಿತ್ತು ಎಂದು ಮಾನ್ಯ ಅರ್ಥಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಮುಖ್ಯವಾಗಿ ಬೆಂಗಳೂರು ನಗರದಲ್ಲಿರುವ 3000 ಹರಿಜನ ಕಾಲೇಜು ವಿದಾರ್ಥಿಗಳ ಅನುಕೂಲಕ್ಕಾಗಿ ಸರ್ಕಾರದವರು ಎರಡು ದೊಡ್ಡ ಹಾಸ್ಟೆಲುಗಳನ್ನು ಕಟ್ಟಿಸಲು ನಿರ್ಧಾರ ಕೈಕೊಂಡಿದ್ದಾರೆ. ಇದರಿಂದ ಹರಿಜನ ವಿದ್ಯಾರ್ಥಿಗಳಿಗೆ ಆಗುತ್ತಿರುವ ತಾಪತ್ರಯ ಕಡಿಮೆಯಾಗುತ್ತದೆ. ಮತ್ತು ಹರಿಜನರ ಹಾಸ್ಟಲ್ ಆಗಲಿ, ಜನರಲ್ ಹಾಸ್ಟಲ್ ಆಗಲಿ, ಬಡ ವಿದ್ಯಾರ್ಥಿಗಳಿಗೆ ಇದುವರೆಗೆ ಬೋರ್ಡಿಂಗ್ ವೆಚ್ಚಕ್ಕಾಗಿ ಒದಗಿಸಲಾಗುತ್ತಿದ್ದ 30 ರೂಪಾಯಿಗಳನ್ನು 40 ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ವಿಶೇಷ ಆಹಾರ ಪೋಷಣೆ ಕಾರ್ಯಕ್ರಮವನ್ನು ಸಹ ಮುಂದುವರೆಸುತ್ತಿದ್ದಾರೆ. ಇದರ ಜೊತೆಗೆ ಕುಟುಂಬ ವೇತನವನ್ನು 30 ರೂಪಾಯಿಗಳಿಂದ 40 ರೂಪಾಯಿಗಳಿಗೆ ಏರಿಸಿದ್ದಾರೆ, ಇದರಿಂದ ಸುಮಾರು 8 ಸಾವಿರ ಕುಟುಂಬಗಳಿಗೆ ಸಹಾಯವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸದಸ್ಯರು ಹೊಗಳುಭಟ್ಟರಂತೆ ಮಾತನಾಡುತ್ತಿದ್ದಾರೆ. ದೇವಸ್ಥಾನಕ್ಕೆ ಹೋದರೆ ಅರ್ಚಕರು ನಾಮನಕ್ಷತ್ರವನ್ನು ಕೇಳಿ ಯಾವ ರೀತಿ ಭವಿಷ್ಯವನ್ನು ಹೇಳುತ್ತಾರೋ ಅದೇ ರೀತಿ ಇವರು ಸಹ ಮಾತನಾಡುತ್ತಿದ್ದಾರೆ. ಇಂತಹ ಹೊಗಳುಭಟ್ಟರ ಒಂದು ಗುಂಪು ಇರಬೇಕು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಸರ್ಕಾರದ ಧ್ಯೇಯಧೋರಣೆಗಳನ್ನು ಕುರಿತು ನಾವು ಮಾತನಾಡುವಾಗ ಅಂಕಿಅಂಶಗಳ ಆಧಾರದ ಮೇಲೆ ಮಾತನಾಡುವುದು ನಮ್ಮ ಕರ್ತವ್ಯ. ಅದರಂತೆ ನಾನು ಪ್ರತಿಯೊಂದಕ್ಕೂ ಅಂಕಿಅಂಶಗಳನ್ನು ಕೊಡುತ್ತಾ ಹೇಳುತ್ತಿದ್ದೇನೆ. ನಮ್ಮ ಸರ್ಕಾರದವರು ಕೈಕೊಳ್ಳುತ್ತಿರುವ ಯೋಜನೆಗಳ ವಿವರಗಳನ್ನು ಹೇಳುತ್ತಿದ್ದೇನೆ: ಕುಡಿಯುವ ನೀರು ಇಲ್ಲದ ಪ್ರತಿಯೊಂದು ಗ್ರಾಮಕ್ಕೂ ನೀರನ್ನು ಒದಗಿಸಲು ಸರ್ಕಾರದವರು ವ್ಯವಸ್ಥೆ ಮಾಡುತ್ತಿದ್ದಾರೆ. ಬೆಂಗಳೂರಿನ ಪ್ರಜೆಗಳಿಗೆ ಕುಡಿಯುವ ನೀರಿನ ಸೌಕರ್ಯ ಒದಗಿಸಲು ಕಾವೇರಿ ಯೋಜನೆಯ ಕೆಲಸವನ್ನು ತ್ವರಿತಗತಿಯಿಂದ ಮಾಡಿಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿರುವ ಮೂರು ವಿಶ್ವವಿದ್ಯಾನಿಲಯಗಳಿಂದ ಪ್ರತಿವರ್ಷ ಪಾಸಾಗುವ 50 ಸಾವಿರ ಜನರಿಗೆ ಉದ್ಯೋಗ ಒದಗಿಸುವುದಕ್ಕೆ ಎಲ್ಲಿ ಸಾಧ್ಯವಾಗುತ್ತದೆ ? ಆದರೂ ಇದನ್ನು ಹಂತಹಂತವಾಗಿ ನಿವಾರಿಸಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಅದರಂತೆ ವಿಶೇಷತಃ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸಲು ಸರ್ಕಾರದವರು ಹೆಚ್ಚಿನ ಗಮನ ನೀಡುತ್ತಿದ್ದಾರೆ.

ಮುಖ್ಯವಾಗಿ ಬೆಲೆಗಳ ಏರಿಕೆಗೆ ಸಮಾಜಘಾತುಕ ವ್ಯಕ್ತಿಗಳೇ ಕಾರಣವೆಂದು ಹೇಳಬಹುದು. ಸ್ಮಗ್ಲರ್ಸ್, ಹೋರ್ಡರ್ಸ್, ಸ್ಪೆಕ್ಯುಲೇಟರ್ಸ್, ಬ್ಲಾಕ್—ಮಾರ್ಕೆಟಿಯರ್ಸ್, ಸೆಲ್ಫ್ ಸ್ಟೈಲ್ಡ್ ಲೀಡರ್ಸ್, ಇವರೇ ಬೆಲೆಗಳ ಏರಿಕೆಗೆ ಕಾರಣಕರ್ತರಾಗಿದ್ದಾರೆ. ಇವರುಗಳಿಗೆ ಹಿಂದಿನ ಸರ್ಕಾರದವರು ರಕ್ಷಣೆ ಕೊಟ್ಟುಕೊಂಡು ಬಂದರು. ಅಂದಮೇಲೆ ಈ ಬೆಲೆಗಳ ಏರಿಕೆ ಹಿಂದಿನ ಸರ್ಕಾರದವರ ಪ್ರಸಾದವೆಂದು ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್.—ಇವರೂ ಸಹ ರಕ್ಷಣೆ ಕೊಡುತ್ತಿದ್ದಾರೆ ;

ಶ್ರೀ ಕೆ. ಆರ್ ಶ್ರೀನಿವಾಸಲು ನಾಯ್ಡು.—ಬೆಲೆಗಳ ಏರಿಕೆಗೆ ನಾವೆಲ್ಲ ಕಾರಣಕರ್ತರು ಎಂಬುದನ್ನು ಘಂಟಾಘೋಷವಾಗಿ ಹೇಳಿದ್ದೇವೆ. ಮುಖ್ಯವಾಗಿ ಬೆಲೆಗಳ ಏರಿಕೆಯನ್ನು ತಡೆಗಟ್ಟಲು ಸಾರ್ವಜನಿಕರು ಮತ್ತು ವಿರೋಧಪಕ್ಷದವರು ಸರ್ಕಾರದೊಡನೆ ಸಹಕರಿಸಬೇಕು. ಇದು ಸಾಮಾನ್ಯ ಪ್ರಜೆಯ ಪ್ರಶ್ನೆಯಾಗಿದೆ. ಗಾಡಿ ಮುಂದೆ ಹೋಗಲು ಎರಡು ಚಕ್ರಗಳು ಹೇಗೆ ಮುಖ್ಯವೋ ಅದರಂತೆ ಬೆಲೆಗಳನ್ನು ಇಳಿಸಲು ಎಲ್ಲರೂ ಸರ್ಕಾರದೊಡನೆ ಸಹಕರಿಸಬೇಕು. ಈ ವಿಚಾರದಲ್ಲಿ ಪಕ್ಷಭಾವನೆಯನ್ನು ಬಿಟ್ಟು ಪ್ರತಿಯೊಬ್ಬರು ಸಹಕಾರ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈಗ ಅಕ್ಕಿ ಮತ್ತು ಗೋಧಿಯ ಸಗಟು ವ್ಯಾಪಾರವನ್ನು ಸರ್ಕಾರದವರೇ ವಹಿಸಿಕೊಳ್ಳುವು

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ದಕ್ಕೆ ತೀರ್ಮಾನ ತೆಗೆದುಕೊಂಡಿದ್ದಾರೆ. ಇದರಿಂದ private capital has become shy. ಸರ್ಕಾರದವರು ಏನೂ ವರ್ತಕರನ್ನು ಮರೆತಿಲ್ಲ. ಈಗ ಏನು ಅಂಗಡಿಗಳು ಇವೆ, ಅವುಗಳನ್ನೇ ನ್ಯಾಯಬೆಲೆಯ ಅಂಗಡಿಗಳು ಎಂದು ಸರ್ಕಾರದವರು ರೆಕಗ್ನೈಜ್ ಮಾಡಿ, ಅವುಗಳ ಮೂಲಕ ಸಾರ್ವಜನಿಕರಿಗೆ ಅಕ್ಕಿ ಮತ್ತು ಗೋಧಿಯನ್ನು ಹಂಚುವುದಕ್ಕೆ ಏರ್ಪಾಡು ಮಾಡುತ್ತಾರೆ. ಈ ಕಾರ್ಯಕ್ರಮವನ್ನು ಜಾರಿಗೆ ತರಲು ಸ್ವಲ್ಪ ನಿಧಾನವಾಗಬಹುದು ; ಸಗಟು ವ್ಯಾಪಾರವನ್ನು ಸರ್ಕಾರದವರು ವಹಿಸಿಕೊಳ್ಳದಿದ್ದರೆ ನಾನು ಮೇಲೆ ಹೇಳಿದಂತಹ 5 ರೀತಿಯ ಜನರು ಬೆಲೆಗಳನ್ನು ಹೆಚ್ಚು ಮಾಡಿಕೊಂಡು ಹೋಗುತ್ತಲೇ ಇರುತ್ತಾರೆ. ಇದಕ್ಕೆ ಅವಕಾಶ ಕೊಡದಂತೆ ಪಕ್ಷದ ಪ್ರಶ್ನೆಯನ್ನು ಬಿಟ್ಟು ಎಲ್ಲರೂ ಅವರುಗಳ ವಿರುದ್ಧ ಹೋರಾಟ ಮಾಡಬೇಕು. ಅದಕ್ಕಾಗಿ ಪ್ರತಿಯೊಂದು ಜಿಲ್ಲೆ, ತಾಲ್ಲೂಕ್, ಹೋಬಳಿ ಮತ್ತು ಮೊಹಲ್ಲಾದಲ್ಲಿಯೂ ಪ್ರೈಸ್ ಕಂಟ್ರೋಲ್ ಸೆಲ್‌ನ್ನು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್.— ಈಗಾಗಲೇ 12 ಸೆಲ್‌ಗಳು ಇವೆ. ಇದು 13ನೇಯದು ಎಂದು ಕಾಣುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ಸಾರ್ವಜನಿಕ ಹಿತದೃಷ್ಟಿಯಿಂದ ಸರ್ವಿಸ್ ಸೆನ್ಸ್ ಎಲ್ಲರಲ್ಲಿಯೂ ಡೆವಲಪ್ ಆಗಬೇಕೆಂದು ಅದರಲ್ಲಿಯೂ ಸರ್ಕಾರದ ಅಧಿಕಾರಿಗಳಲ್ಲಿ ಆಗಬೇಕೆಂದು ಕೇಳಿಕೊಳ್ಳುತ್ತೇನೆ. Democracy is standing on three pillars : the legislative, the judiciary and the Executive. ಈ ವಿಚಾರ ಎಲ್ಲರಿಗೂ ಗೊತ್ತಿದೆ. ಈ ಮೂರು ಹೊಂದಾಣಿಕೆಯಿಂದ ಹೋಗಬೇಕೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತೇವೆ. ನಾವೇನೋ ಯಾವ ಬಿಲ್‌ನ್ನು ಆದರೂ ಇಲ್ಲಿ ಪಾಸು ಮಾಡಿಬಿಡುತ್ತೇವೆ. ಆದರೆ ಅವನ್ನು ಕಾರ್ಯಗತ ಮಾಡುವವರು ಎಕ್ಸಿಕ್ಯುಟಿವ್ ಅಧಿಕಾರಿಗಳು ಇಂದು ನಮ್ಮ ರಾಜ್ಯದಲ್ಲಿ ಬೆಲೆಗಳ ಏರಿಕೆಯ ಜೊತೆಗೆ ಕ್ಷಾಮಡಾಮರಗಳು ಸಹ ಬಂದಿವೆ. ಮಳೆ ಹೋಗಿದೆ. ಇಂತಹ ಸಂದರ್ಭದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಜನತೆಯ ಹಿತದೃಷ್ಟಿಯಿಂದ ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳು ಶ್ರಮವಹಿಸಬೇಕು ಮತ್ತು ವಿರೋಧಪಕ್ಷದವರು ಸಹ ಸಹಕಾರ ಕೊಡಬೇಕೆಂದು ಈ ಸಂದರ್ಭದಲ್ಲಿ ಕೈಜೋಡಿಸಿ ಕೇಳಿಕೊಳ್ಳುತ್ತೇನೆ.

ಬೆಲೆ ಏರಿಕೆಯನ್ನು ತಡೆಗಟ್ಟುವ ವಿಷಯದಲ್ಲಿ ಮೊದಲು ವರ್ತಕರ ಹೃದಯ ಪರಿವರ್ತನೆ ಆಗಬೇಕು. ಜೊತೆಗೆ ಆ ಕಡೆ ಮತ್ತು ಈ ಕಡೆಯ ಸದಸ್ಯರೆಲ್ಲರ ಸಹಕಾರ ಮತ್ತು ಸಾರ್ವಜಕರ ಸಹಕಾರವೂ ಬೇಕು ಎಂದು ನಾನು ಹೇಳುತ್ತೇನೆ.

ಕನ್ನಡ ಭಾಷೆಯನ್ನು ಅಭಿವೃದ್ಧಿ ಮಾಡುವ ಬಗ್ಗೆ ಸರ್ಕಾರದವರು ಸಾಕಷ್ಟು ಗಮನವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಈ ವರ್ಷದ ಬಡ್ಜೆಟ್ಟಿನಲ್ಲಿ ಸುಮಾರು 13 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಕನ್ನಡ ಮತ್ತು ಕರ್ನಾಟಕಮಾತೆಯಲ್ಲಿ ಶ್ರೀಮಾನ್ ವಾಟಾಳ್ ನಾಗರಾಜ್ ಅವರಿಗೆ ಎಷ್ಟು ಭಕ್ತಿ ಇದ್ದೆಯೋ ಅಷ್ಟೇ ಭಕ್ತಿ ನಮಗೂ ಇದೆ. ನಾವೂ ಅಚ್ಚ ಕನ್ನಡಿಗರು. ಮಾನ್ಯ ಹಣಕಾಸಿನ ಸಚಿವರು ತಮ್ಮ ಭಾಷಣದಲ್ಲಿ 13 ಲಕ್ಷ ರೂಪಾಯಿ ವೆಚ್ಚದ ಇನ್ನಷ್ಟು ವ್ಯಾಪಕ ಕಾರ್ಯಕ್ರಮ ಒಂದನ್ನು ಸಿದ್ಧಪಡಿಸಲಾಗಿದೆ. ಈ ಕಾರ್ಯಕ್ರಮದ ಮೇರೆಗೆ ಸರ್ಕಾರಿ ಆಡಳಿತಕ್ಕೆ ಸಂಬಂಧಪಟ್ಟ ಗ್ರಂಥಗಳ ಅನುವಾದ, ಕನ್ನಡ ಪತ್ರವ್ಯವಹಾರದ ಬಗ್ಗೆ ತರಗತಿಗಳ ವ್ಯವಸ್ಥೆ, ಶೀಘ್ರಲಿಪಿಯ ಬಗ್ಗೆ ಮತ್ತು ಕನ್ನಡ ಟೈಪ್‌ರೈಟರ್ ಖರೀದಿ ಬಗ್ಗೆ ವಾಣಿಜ್ಯ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಮತ್ತು ಗ್ರಾಂಟ್ ನೀಡಿಕೆ, ಅಗ್ಗ ಬೆಲೆಯ ಕನ್ನಡ ನಿಘಂಟು ಪ್ರಕಟನೆಗಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಆರ್ಥಿಕ ಸಹಾಯ, ಈ ರೀತಿಯಾಗಿ ಕನ್ನಡದ ಅಭಿವೃದ್ಧಿಗಾಗಿ ಸರ್ಕಾರದವರು ಹಣಸಹಾಯವನ್ನು ಮಾಡುತ್ತಾರೆ ಎಂದು ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ. ಈ ಭಗ್ಗೆ ನನ್ನದು ಒಂದು ಆಶೆ ಇದೆ ಅದು ಏನೆಂದರೆ ಕನ್ನಡ ಮತ್ತು ತೆಲುಗು ಎರಡನ್ನೂ ಒಂದುಗೂಡಿಸಿ ಒಂದು ಭಾಷೆ ಮಾಡಬೇಕು ಎಂಬ ಆಶೆ ನನಗೆ ಇದೆ. ಆಂದ್ರ ಪ್ರಾಂತ್ಯದವರು ಕನ್ನಡಿಗರ ಅಣ್ಣತಮ್ಮಂದಿರು ಆದ್ದರಿಂದ ಆ ರೀತಿ ತೆಲುಗು ಭಾಷೆ ಬೆಳೆಯುವುದಕ್ಕೆ ಸಹಾಯ ಮಾಡಬೇಕು ಎಂದು ನಾನು ಒತ್ತಿ ಹೇಳುತ್ತೇನೆ.

ನಮ್ಮ ರಾಜ್ಯದ ಹಣಕಾಸಿನ ರಿಸೋರ್ಸಸ್ ಬಗ್ಗೆ ಏನು ಮಾಡಬೇಕು, ಯಾವ ರೀತಿ ಮಾಡಬೇಕೆಂಬುದನ್ನು ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ಬಹಳ ಜಾಣಾಕ್ಷತೆಯಿಂದ ಮತ್ತು ಜಾಣ್ಮೆಯಿಂದ ಮಾಡಿದ್ದಾರೆ. 5ನೇ ಫೈನಾನ್ಸ್ ಕಮಿಷನ್ನಿನಿಂದ ನಮ್ಮ ರಾಜ್ಯಕ್ಕೆ ಆದಂತಹ

ತೊಂದರೆಯನ್ನು, ಲೋಪದೋಷಗಳನ್ನು ನಮ್ಮ ಸರ್ಕಾರದವರ ಕೇಂದ್ರ ಸರ್ಕಾರದವರ ಗಮನಕ್ಕೆ ಆಗಿದಾಗ್ಯೆ ತಂದಿದ್ದಾರೆ. ಮತ್ತು ಮೊನ್ನೆ 6ನೇ ಫೈನಾನ್ಸ್ ಕಮಿಷನ್ನಿನವರು ನಮ್ಮ ರಾಜ್ಯಕ್ಕೆ ಬಂದಿದ್ದಾಗ ನಮ್ಮ ತೊಂದರೆಗಳನ್ನೂ ಮತ್ತು ನಮ್ಮ ಬೇಡಿಕೆಗಳನ್ನೂ ಅವರ ಮುಂದೆ ಇಟ್ಟಿದ್ದಾರೆ. 5ನೇ ಫೈನಾನ್ಸ್ ಕಮಿಷನ್ನಿನಿಂದ ನಮ್ಮ ರಾಜ್ಯಕ್ಕೆ ಆದ ತೊಂದರೆ ಮತ್ತು ಲೋಪದೋಷಗಳನ್ನು ಕೇಂದ್ರ ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಸ್ವಲ್ಪ ಉದಾರ ಮನಸ್ಸಿನಿಂದ ಹಣ ಸಹಾಯವನ್ನು ಕೊಟ್ಟರೆ ನಮ್ಮದು ಡಿಫಿಜಿಟ್ ಬಡ್ಜೆಟ್ ಬರುವುದಿಲ್ಲ. ಕೇವಲ 13 ಕೋಟಿ ಡಿಫಿಜಿಟ್ ಬರುತ್ತದೆ. 300 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವಾಗ 13 ಕೋಟಿ ರೂಪಾಯಿಗಳ ಡಿಫಿಜಿಟ್ ಏನೂ ಜಾಸ್ತಿ ಅಲ್ಲ.

ಶ್ರೀ ಎಸ್. ಬಂಗಾರಪ್ಪ.—ಯಾವ ಮಹಾ ದೊಡ್ಡ ಕಾರ್ಯಕ್ರಮ ಹಾಕಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ತೆರಿಗೆ ರಿಹಿತವಾದ ಬಡ್ಜೆಟ್ ಇಟ್ಟಿದ್ದಾರೆ. ಇನ್ನೇನು ಆಗಬೇಕು. 15 ಸರಕುಗಳ ಮೇಲೆ ತೆರಿಗೆಯನ್ನು ಸಿಂಗರ್ ಪಾಯಿಂಟ್ ಮಾಡಿದ್ದಾರೆ. ಮುಖ್ಯವಾಗಿ ಬತ್ತ, ರಾಗಿ, ಬಟ್ಟೆ ಮುಂತಾದ ಸರಕುಗಳಿಗೆ ಸಿಂಗರ್ ಪಾಯಿಂಟ್ ತೆರಿಗೆಯನ್ನು ವಿಧಿಸಿರುವುದರಿಂದ ಬಡವರಿಗೆ ಅನುಕೂಲವಾಗಿಲ್ಲವೇ? ಪ್ರತಿನಿತ್ಯ ಜನಗಳು ಉಪಯೋಗಿಸುವ ಸಾಮಾನುಗಳ ಟ್ಯಾಕ್ಸ್ ಅನ್ನು ಸ್ವಲ್ಪ ಕಡಿಮೆ ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಿದ್ದಾರೆ. ಮಾನ್ಯ ಹಣಕಾಸಿನ ಸಚಿವರು ಬಹಳ ಬುದ್ಧಿವಂತಿಕೆಯಿಂದ ಬಡ್ಜೆಟ್ಟನ್ನು ತಯಾರು ಮಾಡಿದ್ದಾರೆ. ನಮ್ಮ ರಾಜ್ಯದ್ದು 72 ಕೋಟಿ ರೂಪಾಯಿಗಳು ಓವರ್‌ಡ್ರಾಫ್ಟ್ ಇತ್ತು. ಈಗ ಆ ಸಾಲವನ್ನು ತೀರಿಸಿದ್ದಾರೆ. ಆರನೇ ಫೈನಾನ್ಸ್ ಕಮಿಷನ್ನಿನವರು ಬಂದಾಗ ನಮ್ಮ ಕಷ್ಟಸುಖಗಳನ್ನು ಅವರ ಮುಂದೆ ಹೇಳಿ ಹಣಕಾಸಿನ ಮುಗ್ಗಟ್ಟು ಏನಿದೆ ಎಲ್ಲವನ್ನೂ ನಿವೇದನೆ ಮಾಡಿಕೊಂಡಿದ್ದಾರೆ. ಅದರಿಂದ ನಮಗೆ ಅನುಕೂಲವಾಗಬಹುದು ಎನ್ನುವ ಆಸೆ ಇದೆ. ಮನುಷ್ಯನಿಗೆ ಯಾವಾಗ ಕೊಂಡುಕೊಳ್ಳತಕ್ಕ ಶಕ್ತಿ ಬರುತ್ತದೆ ಎಂದರೆ ನಿರುದ್ಯೋಗ ತೊಲಗಬೇಕು. ಕೆಲಸ ದೊರೆಯುವ ಅವಕಾಶವನ್ನು ಕಲ್ಪಿಸಿಕೊಡಬೇಕು. ಸಂಪಾದನೆ ಜಾಸ್ತಿಯಾಗಬೇಕು. ಗ್ರಾಮಾಂತರ ಪ್ರದೇಶದಲ್ಲಿ ಕಾಟೇಜ್ ಇಂಡಸ್ಟ್ರಿ, ವಿಲೇಜ್ ಇಂಡಸ್ಟ್ರಿ, ಒರಿಜನಲ್ ಇಂಡಸ್ಟ್ರಿ ಡೆವಲಪ್ ಆಗಬೇಕು.

ಈಗ ಬರಗಾಲ ಪೀಡಿತ ಪ್ರದೇಶಗಳಾದ ಬಿಜಾಪುರ, ಬೀದರ್. ಗುಲ್ಬರ್ಗ, ಮತ್ತು ರಾಯಚೂರು ಈ ಪ್ರದೇಶಗಳಲ್ಲಿ ಸುಮಾರ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಮಾಡಬಹುದು. ಈಗ ಬೇರೆ ಕಡೆ ಎಲ್ಲಾ ರಸ್ತೆ ಮತ್ತು ಸೇತುವೆ ಕೆಲಸಗಳನ್ನೆಲ್ಲಾ ನಿಲ್ಲಿಸಿ ಬರಗಾಲ ಪೀಡಿತ ಪ್ರದೇಶದ ಯೋಜನೆಗಳನ್ನು ಕಾರ್ಯಗತ ಮಾಡುವ ಸದುದ್ದೇಶದಿಂದ ಅಲ್ಲಿ ಜನಗಳಿಗೆ ಕೆಲಸವನ್ನು ಒದಗಿಸಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ಆಹಾರ ಇಲ್ಲದೆ ಎಷ್ಟೋ ಜನ ಸತ್ತಿದ್ದಾರೆ. ಆದರೂ ಸಹ ಸರ್ಕಾರದವರು ಆಹಾರ ಇಲ್ಲದೆ ಯಾರೂ ಸತ್ತಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ನಮ್ಮ ರಾಜ್ಯದಲ್ಲಿ ಬರಗಾಲ ಪೀಡಿತ ಪ್ರದೇಶದಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವಾಗ ಕೆಲಸ ಮಾಡಿದ ಬಡ ಜನಗಳಿಗೆ ನೇರವಾಗಿ ಸರ್ಕಾರದ ವತಿಯಿಂದ ಹಣವನ್ನು ಕೊಡತಕ್ಕ ಏರ್ಪಾಟನ್ನು ಸರ್ಕಾರದವರು ಮಾಡಿದ್ದಾರೆ. ನಮ್ಮ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಮೊನ್ನೆ ಬರಗಾಲ ಪೀಡಿತ ಪ್ರದೇಶಕ್ಕೆ ಭೇಟಿ ಕೊಟ್ಟಾಗ ಅನೇಕ ಜನಗಳು ಗುಂಪು ಗುಂಪಾಗಿ ಹೋಗಿ ಪ್ರಧಾನಿಯವರನ್ನು ಆದರದಿಂದ ಸ್ವಾಗತಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಒಬ್ಬೊಬ್ಬರಿಗೆ 10 ರೂಪಾಯಿ ಕೂಲಿ ಕೊಟ್ಟು 10 ಸಾವಿರ ಜನಗಳನ್ನು ಕರೆದುಕೊಂಡು ಹೋಗಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಆ ತರಹ ಜನಗಳನ್ನು ಕರೆದುಕೊಂಡು ಬಂದು ಭಾಷಣಮಾಡುವ ಕಾಲಹೊರಟು ಹೋಯಿತು. ಬೇಕಾದರೆ ತಮಗೆ ಅಂಕಿ ಅಂಶಗಳನ್ನು ಕೊಡುತ್ತೇನೆ.

ಬೆಲೆಗಳ ಏರಿಕೆ ಏನಿದೆ ಇದು ನಮ್ಮ ಮೈಸೂರು ಸಂಸ್ಥಾನ ಅಷ್ಟೇ ಅಲ್ಲ. ಇಡೀ ರಾಷ್ಟ್ರದಲ್ಲಿ ಬೆಲೆಗಳ ಏರಿಕೆ ಆಗಿದೆ. ಮಹಾರಾಷ್ಟ್ರದಲ್ಲಿ, ಆಂಧ್ರದಲ್ಲಿ, ಮಧ್ಯಪ್ರದೇಶದಲ್ಲಿ ಎಲ್ಲಾ ಕಡೆಗಳಲ್ಲಿಯೂ ಬೆಲೆಗಳ ಏರಿಕೆ ಆಗಿದೆ. ಅದೇ ರೀತಿ ನಮ್ಮಲ್ಲಿಯೂ ಬೆಲೆಗಳ ಏರಿಕೆ ಆಗಿದೆ. ಆದರಲ್ಲಿ ಆಶ್ಚರ್ಯವೇನೂ ಇಲ್ಲ. ಈಗ ನಮ್ಮ ರಾಜ್ಯದಿಂದ ಬೊಂಬಾಯಿ ಮತ್ತು ಕೇರಳ ಮುಂತಾದ ಕಡೆಗೆ ಅಕ್ಕಿಯು ಹೋಗುತ್ತಿದೆ. ಇದರ ಜೊತೆಗೆ ನಮ್ಮ ರಾಜ್ಯಕ್ಕೆ ಆಂಧ್ರ ಪ್ರಾಂತ್ಯದಿಂದ ಬರು

(ಶ್ರೀ ಕೆ. ಆರ್ ಶ್ರೀನಿವಾಸಲು ನಾಯ್ಡು)

ತ್ತಿದ್ದು ಅಕ್ಕಿ ನಿಂತು ಹೋಗಿದೆ. ಅಲ್ಲಿ ಸ್ಟ್ರೈಕ್ ನಡೆಯುತ್ತಿದೆ. ನಮಗೆ ಆಂಧ್ರದಿಂದ ಅಕ್ಕಿಯು ಬಂದಿದ್ದರೆ ನಮಗೆ ಇಷ್ಟೊಂದು ತೊಂದರೆಯಾಗುತ್ತಿರಲಿಲ್ಲ. ಅಲ್ಲಿಂದ ಅಕ್ಕಿ ಸಪ್ಲೈ ಆಗದೇ ಇರುವುದರಿಂದ ಈಗ ನಮ್ಮಲ್ಲಿ ಅಕ್ಕಿಯ ಬೆಲೆ ಜಾಸ್ತಿಯಾಗಿದೆ. ಈಗ ತಾನೇ ಮುಖ್ಯ ಮಂತ್ರಿಯವರು ಅಧಿಕಾರಕ್ಕೆ ಬಂದ ಮೇಲೆ ಮುಖ್ಯವಾಗಿ ಇರಿಗೇಶಂಗೆ ಪ್ರಾಮುಖ್ಯತೆ ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ನಾನು ಅಂಕಿ ಅಂಶಗಳ ಆಧಾರದ ಮೇಲೆ ಹೇಳುತ್ತಿದ್ದೇನೆ.

5-30 P.M.

Mr. DEPUTY SPEAKER.—The Hon. Member who is on his legs is entitled to be heard with rapt attention. Too much of interference is too bad. I am requesting both Sriyuths Vatal Nagarj and Bangarappa not to disturb the Hon. Member. Frequent interference by these members is too much. There are some rules and regulations to be followed. If everybody observes the rules, there will be no difficulty on the part of the Speaker to conduct the business of the House. I urge upon the Hon. Members to observe restraint and allow the Hon. Member to proceed with his speech.

ಶ್ರೀ ವಾಟಾಳ್ ನಾಗರಾಜ್.— ರಾಮರಾಜ್ಯದಲ್ಲಿ ಮಾತನಾಡಬೇಕಾದ ಮಾತನ್ನು ಶ್ರೀಮಾನ್ ಅರಸ್‌ರವರ ರಾಜ್ಯದಲ್ಲಿ ಮಾತನಾಡಿದರೆ ಪರಸ್ಥಿತಿ ಏನಾಗುತ್ತದೆ ಎಂದು ಕೇಳಬೇಕಾಗುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ನಮ್ಮ ಉದ್ದೇಶ ರಾಮರಾಜ್ಯ ತರಬೇಕೆಂಬುದು. ಅದಕ್ಕೋಸ್ಕರ ನಮ್ಮ ಪಕ್ಷದ 165 ಮಂದಿ ಸದಸ್ಯರು ಹಗಲಿರುಳು ದುಡಿಯುತ್ತಿದ್ದಾರೆ. ಆ ಮೇಲೆ ಇದು ಒಂದು ತೆರಿಗೆ ರಹಿತವಾದ ಬಜೆಟ್ ಇದರಲ್ಲಿ ಯಾವ ಫ್ರೆಶ್ ಟ್ಯಾಕ್ಸೇಶನ್ ಕೂಡ ಇಲ್ಲ. ಸಾಧಾರಣವಾಗಿ ನಮ್ಮ ಅನುಭವದಲ್ಲಿ ಬಜೆಟ್ ಬರುವ ಮೊದಲು ಸುಮಾರು ಎರಡು ದಿವಸಗಳ ಮುಂಚೆಯೇ ಬೆಲೆಗಳು ಏರುತ್ತಿತ್ತು. ಆದರೆ ಈ ಸಾರಿ ಹಾಗೆ ಆಗಲಿಲ್ಲ.

ಇದರ ಜೊತೆಗೆ ಕೇಂದ್ರಮಟ್ಟದ ತುಟ್ಟಿಭತ್ಯವನ್ನು ರಾಜ್ಯಸರ್ಕಾರದ ನೌಕರರಿಗೆ ಸಹ ಸರ್ಕಾರ ಮಂಜೂರು ಮಾಡಿದೆ. ಹಿಂದೆ ಒಂದು 5-10 ರೂಪಾಯಿ ಸರ್ಕಾರೀ ನೌಕರರಿಗೆ ಕೊಡಬೇಕಾದರೆ ಅದಕ್ಕೆ ಹಲವು ಬಾರಿ ಮುಷ್ಕರಗಳನ್ನು ಮಾಡಿ ತೆಗೆದುಕೊಳ್ಳಬೇಕಾಗಿತ್ತು. ಆದರೆ ನಮ್ಮ ಸರ್ಕಾರದವರು ಆ ರೀತಿಯ ವಾತಾವರಣಕ್ಕೆ ಅವಕಾಶ ಮಾಡದೆ, 5ರಿಂದ 37-50 ರೂಪಾಯಿ ಜಾಸ್ತಿ ಕೊಡುತ್ತೇವೆಂದು ಹೇಳಿದ್ದಾರೆ. ಅದನ್ನು 6 ತಿಂಗಳವರೆಗೆ ಪ್ರೊವಿಡೆಂಡ್ ಫಂಡಿನಲ್ಲಿ ಇಟ್ಟು ನಂತರದ ಹಣವನ್ನು ಕ್ಯಾಶ್ ಕೊಡುವುದು ಎಂದು ಹೇಳಿದ್ದಾರೆ. ಆದ್ದರಿಂದ ಇದು ಬ್ಲಾಕ್ ಮಾರ್ಕೆಟಿಯರ್ಸ್ ಮತ್ತು ಬಂಡವಾಳಶಾಹಿಗಳಿಗೆ ಸಹಾಯ ಮಾಡುವಂತಹ ಬಜೆಟ್ ಅಲ್ಲ ; ಇದು ಸಾಮಾನ್ಯ ಜನರಿಗೆ ಸಹಾಯ ಮಾಡುವಂತಹ ಬಜೆಟ್.

ಇನ್ನು ತಾಲ್ಲೂಕು ಎಂಬುದು ನಮ್ಮ ಆಡಳಿತದ ಬೇಸಿಕ್ ಯುನಿಟ್. ಇದುವರೆಗೆ ಏನಾಗಿದೆ ಎಂದರೆ ಯಾರೋ ಒಬ್ಬ ಎಕನಾಮಿಸ್ಟ್ ಆರ್ಮ್ ಚ್ಯಾರಿ ಪಾಲಿಟೀಶಿಯನ್ ಮಾಡುತ್ತಿದ್ದರು. ಆದರೆ ಈಗ ನಮ್ಮ ಪಕ್ಷದವರು ಸಾಮಾನ್ಯ ಜನತೆಯ ಕಷ್ಟಸುಖಗಳನ್ನು ಅರಿತು ಅದಕ್ಕೆ ತಕ್ಕ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಆದ್ದರಿಂದ ಈ ಬಜೆಟನ್ನು ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ಮಾಡಿದ್ದಾರೆಂದು ಯಾರೂ ಮರೆಯಬಾರದು.

ಶ್ರೀ ಎಚ್. ಡಿ. ದೇವೇಗೌಡ.—5ನೇ ಯೋಜನೆಗೆ ನಿಮ್ಮ ಸಲಹೆ ಯಾವಾಗ ಕೇಳಿದರು ಮತ್ತು ಯಾವಾಗ ಸಲಹೆ ಕೊಟ್ಟರು ?

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ನಮ್ಮ ದೇಶಕ್ಕೆ ಸರ್ ವಿಶ್ವೇಶ್ವರಯ್ಯನವರು ಯಾವ ರೀತಿ ಯೋಜನೆಯನ್ನು ಹಾಕಬೇಕೆಂದು ಹೇಳಿ ಕಲಿಸಿದ್ದಾರೆ. ಯೋಜನೆ ನಮಗೆ ಹೊಸದೇನೂ ಅಲ್ಲ. ಆದರೆ ಅದನ್ನು ಕಾರ್ಯಗತ ಮಾಡತಕ್ಕ ಮ್ಯಾಶಿನರೀಸ್ ಏನಿವೆ, ಅದು ಹೊಸತು. ಆದ್ದರಿಂದ ನಮ್ಮ ಪಕ್ಷದ ನೇತೃತ್ವದಲ್ಲಿ ಮಾದರಿ ಕರ್ನಾಟಕ ಆಗಬೇಕೆಂದು ಎಲ್ಲರಿಗೂ ಆಶೆ ಆಕಾಂಕ್ಷೆ ಇದೆ.

ಇವತ್ತು ಭಾಷಣಗಳಿಂದ ಏನೂ ಆಗುವುದಿಲ್ಲ. ಕಾರ್ಯದಲ್ಲಿ ಮಾಡಬೇಕಾಗಿದೆ. ಒಟ್ಟಿನಲ್ಲಿ ಆಯವ್ಯಯ ಪತ್ರ ಏನಿದೆ, ಇದು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ಮಾಡಿದಂತಹ ಬಜೆಟಾಗಿದೆ. ಇನ್ನು ಅಗ್ರಿಕಲ್ಚರಲ್ ಮತ್ತು ಫಾರೆಸ್ಟ್ ಇಲಾಖೆಯು ಬಹಳ ಮುಖ್ಯವಾದುದು. ಇವತ್ತು ಸಾಧಾರಣವಾಗಿ ನೂರಕ್ಕೆ 80 ಜನರು ವ್ಯವಸಾಯವನ್ನೇ ನಂಬಿಕೊಂಡು ಇರುವವರು. ರಾಷ್ಟ್ರ ಮಟ್ಟದ ಅಂಕಿ ಅಂಶವನ್ನು ತೆಗೆದುಕೊಂಡರೆ, ನಮ್ಮ ರಾಜ್ಯದ ಅರಣ್ಯ ಸಂಪತ್ತು 23ವರೆ ಪರ್ಸೆಂಟ್ ಇದೆ. ಈಗ ಅರಣ್ಯ ಸಂಪತ್ತು ನಮ್ಮ ದೇಶದಲ್ಲಿ ಕಡಿಮೆಯಾಗುತ್ತಾ ಇದೆ. ಈಗ ಹೆಚ್ಚು ಹೆಚ್ಚು ಯುಕ್ಲಿಪಟಸ್ ಗಿಡಗಳನ್ನು ಹಾಕುವ ಬದಲು ಹೆಚ್ಚು ಹೆಚ್ಚು ಹಣ್ಣುಹಂಪಲುಗಳ ಗಿಡಗಳನ್ನು ನಾವು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು.

ನಮ್ಮ ದೇಶ ಬಡದೇಶ, ಅನೇಕರು ವ್ಯವಸಾಯಗಾರರಿದ್ದಾರೆ, ಮನೆ ಮಂದಿಯಲ್ಲಾ ಮಕ್ಕಳಿಂದ ಹಿಡಿದು ದೊಡ್ಡವರವರೆಗೂ ವ್ಯವಸಾಯದ ಕೆಲಸ ಮಾಡುವರು. ಅರಣ್ಯ, ಪಶು ಸಂಗೋಪನೆ ಮುಂತಾದ ಇಲಾಖೆಗಳಿಂದ ನೇರವಾಗಿ ರೈತರಿಗೆ ಸಹಾಯವಾಗುವುದು, ಉಳುವವನೆ ಹೊಲದ ಒಡೆಯ ಎಂದು ನಾವು ಒಪ್ಪಿಕೊಳ್ಳಬೇಕು. ಬಡವರಿಗೆ ಸಹಾಯವಾಗಬೇಕಾದರೆ ವ್ಯವಸಾಯಕ್ಕೆ ಅನುಕೂಲತೆಗಳನ್ನು ಕಲ್ಪಿಸಬೇಕು.

ಮೆಡಿಕಲ್‌ಎಡ್. ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ವೈದ್ಯಕೀಯ ಪದ್ಧತಿಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಡಾ ಮೇಲ್ಕೋಟೆಯವರ ವರದಿ ಬಂದ ಕೂಡಲೆ ಅದಕ್ಕೆ ಮನ್ನಣೆ ಕೊಟ್ಟು ಜಾರಿಗೆ ಕೊಡಬೇಕು.

ಉದ್ಯೋಗವನ್ನು ವಿದ್ಯಾವಂತ ನಿರುದ್ಯೋಗಿಗಳಿಗೆ ಒದಗಿಸಬೇಕಾಗಿದೆ. ಬಡತನದ ನಿವಾರಣೆ, ಆಹಾರ, ವಸತಿ, ಬಟ್ಟೆ, ವಿಧ್ಯಾಭ್ಯಾಸ. ಆರೋಗ್ಯ ಮುಂತಾದುವುಗಳು ಜನತೆಗೆ ದೊರೆಯಲು ನಮ್ಮ ಸರಕಾರ ಹಗಲಿರಳೂ ದುಡಿಯುತ್ತಿದೆ. ಸರಕಾರ ನಮ್ಮ ಮುಂದಿಟ್ಟಿರುವ ಆಯವ್ಯಯ ಪಟ್ಟಿಯನ್ನು ನಾನು ಸ್ವಾಗತಿಸುತ್ತೇನೆ. ಇಷ್ಟು ಹೇಳಿ ನಮಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ. ಜೈ ಕರ್ನಾಟಕ.

†**Smt. ADDY SALDHANA** (Mangalore-1).–Mr. Deputy Speaker, I fully support the budget placed before the House by the Finance Minister. We are passing through abnormal times, time of famine and drought unprecendented in the country's history. Naturally, the budget presented by the Finance Minister reflects the economic situation in Karnataka. He has had the unenviable tasks of preparing the estimates of revenue and expenditure at a time of shrinking revenue and mounting expenditure. The budget speech has been, by the compulsion of events a depressing record of struggling against tremendous odds. Even so, the Financc Minister has stated ; "I am making no proposals for fresh taxation". Unkind critics may say that there is no taxation because the saturation point has already been reached and there is no more taxable capacity. I believe the financial ingenuity of a Finance Minister is not so easily challenged. He can always find ways and means of taxing a little more in a hundred directions. But our Finance Minister has stayed his hand. If he can promote the welfare of the people by methods other than heavier taxation, he will do so.

Mr. Hegde called it an Indira Budget he did it in a derogatory spirit but I also call it an Indira Budget, because it tries to incorporate the great ideals of the nation which have come to be associated with our Prime Minister and the party she heads. There is, in the budget, much more than lip sympathy. There is an anxious striving that despite all difficulties interposed by drought and destitution and by a lack of adequate appreciation of our needs by the Centre as was disclosed by the Finance Commission allotments to Mysore ; there is, as I have

(SMT. ADDY SALDANHA)

said, an anxious striving to tender a good account of the stewardship of the country's slender resources and to wrestle manfully with the insistent problems of poverty, inequality, unemployment and above all, the problem of scarcity of food and all the basic necessities of life. When food is scarce everything else becomes scarce and when food is plenty and is within the reach of the masses, there is happiness in the land.

I judge the budget from this angle *viz.*, what it is doing to the people and for the people, what practical measures it proposes to take towards the Garibi Hatao goal, how much unemployment will vanish as a result of its administrative measures, how much more of water, of electricity, of irrigation and of encouragement to industrial expansions, how much of better education we have now passed the stage of talking about mass education and come to qualitative from quantitative education and how much of land is given to the tiller, housing for the houseless, health facilities for the multitudes of the sick and ailing. The Budget presented to us is a well-thought out and a well co-ordinated programme of action. Evidently, it is presented with a view to evoke enthusiastic co-operation, for in this as in everything else, as we sow, so we will reap.

I particularly commend the wisdom of our Government in taking full advantage of the current critical situation not only to bring in adequate measures adequate within our means but also to engage in large-scale enterprises to solve once and for all our perennial problems of water, electricity, land management, food supply and unemployment.

I thank the Chair for giving me this opportunity to speak. Thank you.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ರಾಜ್ಯದ ಆಯವ್ಯಯ ಪಟ್ಟಿಯನ್ನು ನಮ್ಮ ಅರ್ಥ ಮಂತ್ರಿಗಳು ಬಹಳ ಅರ್ಥಗರ್ಭಿತವಾಗಿ ಅವರದೇ ಆದಂಥ ಶೈಲಿಯಿಂದ ನೀಡಿದ್ದಾರೆ. ಅವರು ಆರ್ಥಿಕ ವಿಚಾರದಲ್ಲಿ ಬಹಳ ಬುದ್ಧಿವಂತರು ಹೌದು, ಜೊತೆಗೆ ರಾಜಕಾರಣದ ಸೋಂಕಿನಲ್ಲಿ ಸಿಕ್ಕಿದವರು ಹೌದು. ಅವರು ಅನೇಕ ವಿಧವಾಗಿ ಪ್ರಯತ್ನಪಟ್ಟಿದ್ದಾರೆ. ಒಬ್ಬ ಆರ್ಥಿಕ ತಜ್ಞರಾಗಿ ಹಾಗೆಯೇ ಒಬ್ಬ ರಾಜಕಾರಣ ಮಂತ್ರಿ ಕೂಡ ಆಗಿ ಅವರ ದೃಷ್ಟಿಯಿಂದ ಒಂದು ತೀರ್ಮಾನಕ್ಕೆ ಬಂದು ಆಯವ್ಯಯ ಪಟ್ಟಿಯನ್ನು ತಯಾರಿಸಿದ್ದಾರೆ. ಆದರೆ ಅವರು ರಾಜಕಾರಣಿಯಾಗಿ ಯಶಸ್ವಿಯಾಗಿಲ್ಲ. ಬಹುಶಃ ಆರ್ಥಿಕ ತಜ್ಞರಾಗಿ ಈ ರಾಜ್ಯದ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಿದ್ದರೆ ಇದಕ್ಕಿಂತ ಉತ್ತಮವಾದ ಆಯವ್ಯಯ ಪಟ್ಟಿಯನ್ನು ನೀಡಬಹುದಾಗಿತ್ತು. ಅವರಿಂದ ನಿರೀಕ್ಷೆ ಮಾಡಿದಷ್ಟು ಕೆಲಸವಾಗಿಲ್ಲ. ಅವರು ಹೊರಗಿದ್ದಾಗ ಹೆಚ್ಚಿನ ಸಹಾಯ ನಿರೀಕ್ಷಣೆ ಮಾಡಬಹುದು. ಅವರು ಅಲ್ಲಲ್ಲಿ ಕೇವಲ ಒಬ್ಬ ಆರ್ಥಿಕ ತಜ್ಞರಾಗಿ ಸಲಹಾರೂಪವಾಗಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ಎಲ್ಲ ಸರಕಾರವನ್ನು ಕಾರ್ಯಕ್ರಮಕ್ಕೆ ಬದ್ಧಪಡಿಸಬೇಕೋ ಅಂಥ ಕಡೆ ಬೇರೆ ರೀತಿಯಲ್ಲಿ ವಾದವನ್ನು ಅಳವಡಿಸಿಕೊಂಡಿದ್ದಾರೆ. ಅವರು ಇದನ್ನು ಎರಡು ಮುಖಗಳಿಂದ **ನೋಡಿದ್ದಾರೆಂಬುದನ್ನು** ಸಿದ್ಧಪಡಿಸುವುದಕ್ಕೆ ಸಾಕಷ್ಟು ಆಧಾರಗಳಿವೆ.

ಇವರು ತಮ್ಮ ಭಾಷಣದ ಪ್ಯಾರಾ (11)ರಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಗ್ರಾಮ ಮಟ್ಟದಲ್ಲಿ ಸರ್ಕಾರಿ ನೌಕರರಿಗೆ ವಸತಿ ಸೌಕರ್ಯ ಮತ್ತಿತರ ಅತ್ಯವಶ್ಯ ಕಾರ್ಯಕ್ರಮಗಳನ್ನು ಸಾಕಷ್ಟು ತ್ವರಿತಗತಿಯಲ್ಲಿ ನಿರ್ವಹಿಸುವುದಕ್ಕಾಗಿ ಇದೇ ಬಗೆಯ ಕಾರ್ಯತಂತ್ರವೊಂದನ್ನು ಕೈಗೊಳ್ಳಬೇಕಾಗುವುದು. ಇಂತಹ ಉಪಕ್ರಮ ನಮ್ಮ ದೇಶದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿ

ಗಳಿಗೆ ಅನುಗುಣವಾಗಿಯೋ ಇರುವುದಾಗಿದೆ. ಈ ಉದ್ದೇಶಕ್ಕಾಗಿ ಮೂಲ ಕೌಶಲ್ಯಗಳಲ್ಲಿ ಕೊಂಚ ತರಬೇತಿ ನೀಡುವುದಕ್ಕೂ ಏರ್ಪಾಡು ಮಾಡಬೇಕಾಗುತ್ತದೆ. ಜಿಲ್ಲಾ ಮತ್ತು ತಾಲ್ಲೂಕ್ ಮಟ್ಟದ ಅಧಿಕಾರಿಗಳು ಮನೆ ನಿವೇಶನಗಳ ಹಂಚಿಕೆಯಂತೆಯೇ ಈ ಕಾರ್ಯಕ್ರಮವನ್ನೂ ಸಹಾ ಜನತೆಯ ಸಹಕಾರದಿಂದ ಯಶಸ್ವಿಗೊಳಿಸಬೇಕಾಗಿದೆ. ಅವರು ಈ ಕೆಲಸದಲ್ಲಿ ಪೂರ್ಣವಾಗಿ ಭಾಗಿಗಳಾಗ ಬೇಕು. ಗ್ರಾಮೀಣ ಭಾರತದಲ್ಲೂ ಕೊಳಚೆ ಪ್ರದೇಶದಲ್ಲಿ ವಸತಿ ಸಮಸ್ಯೆ ಇನ್ನೂ ಅಗಾಧವಾಗಿದೆ. ಆದರೆ ಅದನ್ನೂ ಕೂಡ ಕಡೆಗಣಿಸುವಂತಿಲ್ಲ ಅರ್ಥ ವ್ಯವಸ್ಥೆಯ ಅಭಿವೃದ್ಧಿ ವಲಯಗಳು ಬಡ ಜನತೆಯ ಉದ್ಧಾರಕ್ಕಾಗಿ ಇನ್ನಷ್ಟು ಸಾರ್ಥಕ ರೀತಿಯಲ್ಲಿ ನೆರವಾಗಬೇಕು . ಇದೊಂದು ಸಾಮಾಜಿಕ ಹೊಣೆ, ಸಾಮಾಜಿಕ ಕರ್ತವ್ಯ. ಯಾರೂ ಇದನ್ನು ತಪ್ಪಿಸಿಕೊಳ್ಳುವಂತಿಲ್ಲ. ಎಂದು ಹೇಳಿದ್ದಾರೆ. ಅವರು ಇನ್ನೂ ಒಂದು ಹೆಜ್ಜೆ ಹಾಗೇ ಮುಂದೆ ಹೋಗಿ ಪುಟ 15ರಲ್ಲಿ ಹೀಗೆ ಹೇಳಿದ್ದಾರೆ.—" ಯೋಜನೆಗಳ ರೂಪದಲ್ಲಿ ಹಾಗೂ ಅನುಷ್ಠಾನದಲ್ಲಿ ಜನತೆಯ ಸಹಯೋಗವನ್ನು ಹೆಚ್ಚಿಸುವುದಕ್ಕೆ ಪಂಚಾಯಿತಿ ರಾಜ್ಯ ಸಂಸ್ಥೆಗಳನ್ನು ಬಲಪಡಿಸಬೇಕು. ನಗರಗಳಲ್ಲಿರುವ ಸ್ಥಳೀಯ ಸಂಸ್ಥೆಗಳನ್ನು ಸಹಾ ಏಕ ರೂಪಕ್ಕೆ ತಂದು ಬಲಪಡಿಸಬೇಕು. ಮುನಿಸಿಪಾಲಿಟಿಗಳ ಹಣಕಾಸಿನ ಸ್ಥಿತಿಯನ್ನು ಪರಿಶೀಲಿಸಿ, ಸಂಪನ್ಮೂಲಗಳಲ್ಲಿ ಮತ್ತು ಕಾರ್ಯರೀತಿಗಳಲ್ಲಿ ಸುಧಾರಣೆಗಳನ್ನು ಸೂಚಿಸುವುದಕ್ಕೆ ಒಂದು ಸಮಿತಿಯನ್ನು ರಚಿಸಲಾಗುತ್ತಿದೆ. ಐದನೇ ಯೋಜನೆಯ ಮತ್ತು ನಮಗೆ ಬೇಕಾಗುವ ಮೂಲ ಭೂತ ಸೌಕರ್ಯಗಳ ಮತ್ತು ಉದ್ಯೋಗ ಹಾಗೂ ಉತ್ಪಾದನೆಗೆ ಅನುಕೂಲವಾಗುವ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಪಂಚಾಯಿತಿ ರಾಜ್ಯಗಳ ಮತ್ತು ತಾಲ್ಲೂಕು ಮಂಡಲಿಗಳ ಕಾರ್ಯರೀತಿಗಳ ಬಗೆಗೂ ಅದೇ ರೀತಿ ವಿಶ್ಲೇಷಣೆ ಪಡೆಯಬೇಕು ಎಂಬುದಾಗಿ ಈ ಒಂದು ಮಾತನ್ನು ಎಲ್ಲರಿಗೂ ಒಪ್ಪಿಸುತ್ತಿದ್ದಾರೆ ಇಲ್ಲಿ ವಿಚಾರಗಳನ್ನು ನಮ್ಮ ಅರ್ಥಸಚಿವರು ಒಬ್ಬ ಆರ್ಥಿಕ ತಜ್ಞರಂತೆ ವಿಷಯಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಹಾಗೆ ಒಂದು ವಾಸ್ತವ ಸ್ಥಿತಿಯನ್ನು ಕಂಡುಕೊಂಡನಂತರ ಅದಕ್ಕೆ ಸರ್ಕಾರವನ್ನು ಯಾವರೀತಿ ಎಷ್ಟರಮಟ್ಟಿಗೆ ಬದ್ಧವನ್ನಾಗಿ ಅದಕ್ಕೆ ಗುರಿಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ಆ ಪ್ರಯತ್ನದಲ್ಲಿ ಅವರು ವಿಫಲರಾಗಿದ್ದಾರೆ. ಹಾಗೆ ಒಂದು ಖಚಿತಾಭಿಪ್ರಾಯ ವ್ಯಕ್ತಪಡಿಸುವುದರಲ್ಲಿ ಇವರು ಸೋತಿದ್ದಾರೆ. ರಾಜ್ಯಾಭಿವೃದ್ಧಿ ದೃಷ್ಟಿಯಿಂದ ಮಾನ್ಯ ಅರ್ಥ ಸಚಿವರು ತಮ್ಮ ಎರಡು ದೃಷ್ಟಿಕೋಣಗಳಲ್ಲಿ ಒಂದರ ಕರ್ತವ್ಯವನ್ನು ನೆರವೇರಿಸಿ ತಮ್ಮ ಇನ್ನೊಂದು ದೃಷ್ಟಿಕೋಣದಲ್ಲಿ ರಾಜ್ಯದ ಸಚಿವರಾಗಿ ತಮ್ಮ ಹೊಣೆಗಾರಿಕೆಯನ್ನು ಎಷ್ಟರಮಟ್ಟಿಗೆ ನೆರವೇರಿಸಿದ್ದಾರೆಂಬುದನ್ನು ವಿವೇಚಿಸಿ ನೋಡಿದಾಗ ಅವರ ಈ ಮುಂಗಡಪತ್ರದಲ್ಲಿ ರಾಷ್ಟ್ರ ಜನಜೀವನದ ಬಗ್ಗೆ ಏನೊಂದು ಕಾರ್ಯಕ್ರಮಗಳನ್ನು ರೂಪಿಸಬೇಕಾಗಿತ್ತೋ ಅವನ್ನು ಅವರು ರೂಪಿಸಲಿಲ್ಲ ಎಂದು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಈ ಕಾರ್ಯದಲ್ಲಿ ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ.

ಇತ್ತರಾಗಿ ರಾಜ್ಯದಲ್ಲಿ ಜನರಿಗಾದರೋ ಈ ಒಂದು ಮುಂಗಡ ಪತ್ರವನ್ನು ಸ್ವಲ್ಪ ಹೆಚ್ಚು ಕಡಿಮೆ ತುಲನಮಾಡಿ ನೋಡತಕ್ಕ ಶಕ್ತಿ ನಮ್ಮ ರಾಜ್ಯದಲ್ಲಿ ಎಷ್ಟು ಜನರಿಗಿದೆ ! ಈ ಮುಂಗಡಪತ್ರ ರಾಜ್ಯದ ಜನತೆಯ ಜೀವನವನ್ನು ಎಷ್ಟರಮಟ್ಟಿಗೆ ಪರಿವರ್ತನೆ ಮಾಡುವುದಾಗಿದೆ, ಅನ್ನತಕ್ಕ ವಿಚಾರದಲ್ಲಿ ಮುಂಗಡಪತ್ರ ಒಂದು ಪ್ರಮುಖ ಪಾತ್ರವನ್ನು ವಹಿಸಿರುತ್ತದೆ. ಅಂಥಾ ಒಂದು ಅಂಶವನ್ನು ಮನಗಾಣತಕ್ಕ ಜನತೆ ರಾಜ್ಯದಲ್ಲಿ ಎಷ್ಟು ಪರ್ಸೆಂಟಿದೆ ? ರಾಜ್ಯದಲ್ಲಿ ಕಳೆದ 25 ವರ್ಷಗಳಿಂದಲೂ ಈ ರೀತಿಯಾಗಿ ಒಂದು ಬಡ್ಜೆಟ್ಟನ್ನು ಶಾಸನ ಸಭೆಯ ಮುಂದೆ ಇಡತಕ್ಕದ್ದು ವಾಡಿಕೆಆಗಿದೆ. ಅದರಂತೆ ಈ ವರ್ಷವೂ ಒಂದು ಬಡ್ಜೆಟ್ಟನ್ನು ಇವರು ತಯಾರಿಸಿ ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ದುರದೃಷ್ಟವಶಾತ್ ರಾಜ್ಯದಲ್ಲಿರತಕ್ಕ ಶೇ. 70 ರಷ್ಟು ಜನರಿಗೆ ಮಾನ್ಯ ಆರ್ಥಿಕಸಚಿವರು ಈ ದಿವಸ ಸಭೆಯ ಮುಂದೆ ಇಟ್ಟಿರತಕ್ಕ ಬಡ್ಜೆಟ್ಟಿನಲ್ಲಿ ನನಗೇನು ಸಿಕ್ಕುತ್ತದೆ ? ನನಗೇನು ಪರಿಹಾರವನ್ನು ಒದಗಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳುವಷ್ಟು ಜನರು ಇನ್ನೂ ವಿದ್ಯಾವಂತರಾಗಿರುವುದಿಲ್ಲ. ರಾಜ್ಯದ ಜನತೆ ಬಹುಪಾಲು ಇನ್ನೂ ಅವಿದ್ಯಾವಂತರಾಗೇ ಉಳಿದಿದ್ದಾರೆ. ರಾಜ್ಯದಲ್ಲಿ ಈ ದಿವಸ ಪತ್ರಿಕೆಗಳನ್ನು ಓದತಕ್ಕವರ ಸಂಖ್ಯೆ ಎಂದರೆ ಶೇ ; 10ಕ್ಕೆ ಮೇಲಿಲ್ಲ. ರಾಜ್ಯದಲ್ಲಿರತಕ್ಕ ಒಟ್ಟು ಮೂರು ಕೋಟಿ ಜನಸಂಖ್ಯೆಯಲ್ಲಿ ಎರಡು ಕೋಟಿಗೂ ಮೀರಿದ ಜನರು ಈ ಬಡ್ಜೆಟ್ಟಿನ ಪರೀಕ್ಷೆ ಮಾಡಿ ಇದರಿಂದ ನಮಗೆ ಒಳ್ಳೆಯದಾಗುತ್ತದೆಯೇ ಅಥವಾ ಕೆಟ್ಟದಾಗುತ್ತದೆಯೋ ಎಂಬುದನ್ನು ತಿಳಿಯುವುದಕ್ಕೆ ಇನ್ನೂ ಶಕ್ತರಾಗಿಲ್ಲ. ಆ ಮಟ್ಟದಲ್ಲಿ ಇದರ ಚರ್ಚೆ ನಡೆಯುತ್ತಿಲ್ಲ. ಈ ದಿವಸ ಹೊರಗಡೆಯಲ್ಲಿ ಈ ಮುಂಗಡ ಪತ್ರದ ಚರ್ಚೆ ಏನಿದ್ದರೂ ಕೇವಲ ಅಲ್ಪ ಸಂಖ್ಯೆಯ ವಿದ್ಯಾವಂತ ಜನರ ಮಟ್ಟದಲ್ಲಿ ಮಾತ್ರ ಚರ್ಚೆಯಾಗುತ್ತಿರುವುದಷ್ಟೇ ನಮಗೆ ಕಾಣುತ್ತಿರುವುದು. ಅಂದರೆ ರಾಜ್ಯದಲ್ಲಿ ಇನ್ನೂ ಅಸಂಖ್ಯಾತ ಜನರು ವಿದ್ಯಾರ್ಜನೆಯಲ್ಲಿ ಕುರುಡರಾಗಿದ್ದಾರೆ. ಅವರಿಗೆ ಇದನ್ನು ಪರಿಶೀಲನೆ ಮಾಡುವುದಕ್ಕೆ ಬರುವುದಿಲ್ಲ. ಏನೋ ಇವರು ಇಲ್ಲಿ ಈ ಸಭೆ ಒಂದರಿಂದ ಪಾರಾಗಿಬಿಟ್ಟರೆ ನಾಳೆ ದೇಶದಲ್ಲಿರತಕ್ಕ ಜನರಿಗೆ ಏನೋ ಒಂದು ಹೇಳಿಬಿಟ್ಟರಾಯಿತು ಅನ್ನುವುದೇ ಇವರ ಮೂಲ ಉದ್ದೇಶ.

(ಶ್ರೀ ಕಾಗೋಡು ತಿಮ್ಮಪ್ಪ)

ಆದರೆ ಇದನ್ನೇ ಇವರು ಬಹಳ ದಿವಸ ಒಂದು ಬಂಡವಾಳವಾಗಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇದರಲ್ಲಿ ಮೂಲಭೂತ ಬದಲಾವಣೆಗಳು ಮೆಟ್ಟಲು ಮೆಟ್ಟಲಾಗಿ ಬದಲಾವಣೆ ಆಗುತ್ತಾ ಹೋಗಬೇಕಾದ್ದು ಅಗತ್ಯ. ಹಾಗಾದರೇನೇ ರಾಜ್ಯದ ಜನಜೀವನ ತಾನೇತಾನಾಗಿ ಸ್ವಲ್ಪ ಸ್ವಲ್ಪ ಉತ್ತಮಗೊಳ್ಳುತ್ತಾ ಬರುತ್ತದೆ. ಜನಜೀವನದ ಏಳಿಗೆಗೆ ಮತ್ತು ಅವರ ಉದ್ಧಾರಕ್ಕೆ ಈ ವಾರ್ಷಿಕ ಬಡ್ಜೆಟ್ಟುಗಳು ಒಂದು ಅಡಿಪಾಯವಾಗಬೇಕು. ಅದಕ್ಕಾಗಿ ರಾಜ್ಯದಲ್ಲಿರತಕ್ಕ ಸ್ವಾಭಾವಿಕ ಸಂಪನ್ಮೂಲಗಳೇನೇನು ಎಂಬುದನ್ನು ಆಳವಾಗಿ ಅಭ್ಯಾಸಮಾಡಬೇಕಾಗಿದೆ, ವಿಶಾಲದೃಷ್ಟಿಯಿಂದ ವಿಮರ್ಶೆ ಮಾಡಬೇಕಾಗಿದೆ. ಆ ದೃಷ್ಟಿಯಿಂದ ಈಗ ಈ ಬಡ್ಜೆಟ್ಟನ್ನು ಪರಿಶೀಲನೆ ಮಾಡುವುದು ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಈ ಬಡ್ಜೆಟ್ಟನ್ನು ಮಾಮೂಲಾಗಿ ಕಳೆದ 25 ವರ್ಷಗಳಿಂದಲೂ ಒಂದೇ ಸಮನಾಗಿ ತಯಾರಿಸಲಾಗುತ್ತದೆ ಆದರ ಇದರಲ್ಲಿ ಅನೇಕ ಅಸಮಾನತೆಗಳಿವೆ. ಇದೊಂದು ಅಸಮಾನತೆಗಳ ಪರಂಪರೆಯೇ ಎನ್ನಬಹುದು ?

Mr. DEPUTY SPEAKER.—The hon. member may resume his speech tomorrowow the house will adjourned to meet at 1 p.m. tomorrow.

The House adjourned at Siz of the Clock to meet again at One of the Clock on Tuesday, the 13th March 1973.

WD 19636—GPB—550—6-6-1974

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Tuesday, 13th March, 1973, Phalguna 22,1894 S. E.

The House met in the Assembly Chamber, Vidhana Soudha, at of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

25% Cut in Power Consumption

152. **Sri K. SRIRAMULU** (Gandhinagar).—

Will the Minister for Public Works and Electricity be pleased to state :—

(*a*) whether 25% cut in power consumption imposed by Government has been applied to all the officers of M.S.E.B. except the class IV Employees ;

(*b*) if not, the reasons for giving exemption to these employees while enforcing the same on the Industries engaged in increasing national income and other consumers ?

Sri H. M. CHANNABASAPPA (Minister for Public Works and Electricity).—

(*a*) The power cut applies to all the employees of the Board, including Class IV employees.

(*b*) Does not arise in view of reply to clause (*a*).

ಶ್ರೀ ಕೆ. ಶ್ರೀರಾಮುಲು.—ಉತ್ತರ (ಅ) ದಲ್ಲಿ ಬೋರ್ಡ್ ಎಲ್ಲರಿಗೂ ಅನ್ವಯವಾಗುತ್ತದೆ ಎಂದು ಹೇಳಿದ್ದೀರಿ. ಆದರೆ ಇಲ್ಲಿರುವ ಎಲ್ಲ ನೌಕರರುಗಳಿಗೂ ಪುಕ್ಕಟೆಯಾಗಿ ಪವರು ಕೊಡವುದಕ್ಕಿಂತ ಕೇವಲ ನಾಲ್ಕನೆ ದರ್ಜೆಯವರಿಗೆ ಕೊಟ್ಟು ಇತರ ಜನರಿಂದ ಏಕೆ ಚಾರ್ಜನ್ನು ವಸೂಲು ಮಾಡಬಾರದು ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ನೀತಿಯ ವಿಷಯ. ಮೊದಲಿನಿಂದಲೂ ಈ ಬೋರ್ಡಿನ ಎಲ್ಲ ನೌಕರರುಗಳಿಗೂ ಪುಕ್ಕಟೆಯಾಗಿ ಕೊಡಬೇಕೆಂದು ಇದೆ. ಅದರಂತೆ ಈಗಲೂ ಕೊಡಲಾಗಿದೆ.

---

† Indicates that remarks or speeches have not been revised by the member concerned.

ಶ್ರೀ ಕೆ. ಶ್ರೀರಾಮುಲು.—ಖಾಸಗಿ ಕೈಗಾರಿಕೆಗಳಿಗೆ ಪವರಿಲ್ಲ ಎಂದು ಹೇಳುವಾಗ ಇಲ್ಲಿನ ನೌಕರರುಗಳಿಗೇಕೆ ಪುಕ್ಕಟೆಯಾಗಿ ಪವರನ್ನು ಕೊಡಬೇಕು ? ಇದನ್ನು ನಿಲ್ಲಿಸುವುದು ಸರಿಯಾಗಿರುತ್ತದಲ್ಲವೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದು ನೀತಿಯ ಪ್ರಶ್ನೆ. ಆದರೆ ಇದರಲ್ಲಿ ಪವರ್ ಕಟ್ ಎಲ್ಲರಿಗೂ ಅನ್ವಯವಾಗುವಂತೆ ಇವರಿಗೂ ಆಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಇರುವ ಶೇಕಡಾ 25 ರಷ್ಟು ಪವರ್ ಕಟ್‌ನ್ನು ಶೇಕಡಾ 35 ರವರೆಗೆ ಏರಿಸುತ್ತೀರಿ ಎನ್ನುವ ಸುದ್ದಿ ಕೇಳಿದೆವು. ಅಲ್ಲದೆ ತಮಿಳುನಾಡಿನ ಸರಕಾರ ಪವರು ಕಟ್ ಹೆಚ್ಚು ಮಾಡಿರುವಂತೆ ಇಲ್ಲೂ ಮಾಡುತ್ತಾರೆಂದು ಕೇಳುತ್ತೇವೆ, ಇದು ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮಿಳುನಾಡಿನಂತೆ ಮಾಡುತ್ತಾರೆಂದು ಹೇಳುವುದು ಸುಳ್ಳು ಮತ್ತು ಶೇಕಡಾ 35 ರಷ್ಟು ಪವರು ಕಟ್ ಮಾಡುತ್ತೇವೆಂದು ಹೇಳುವುದೂ ಸರಿಯಲ್ಲ.

ಶ್ರೀ ಎಚ್. ಜಿ. ಚನ್ನಪ್ಪ.—ಹಾಸ್ಟಲ್ ವಿದ್ಯಾರ್ಥಿಗಳಿಗೆ ಪವರ್ ಕಟ್‌ಗಾಗಿ ವಿನಾಯತಿ ಕೊಟ್ಟಿರುವಂತೆ ಈಗ ಪರೀಕ್ಷಾ ಕಾಲವಾಗಿರುವುದರಿಂದ ಮನೆಗಳಲ್ಲಿರುವ ವಿದ್ಯಾರ್ಥಿಗಳಿಗೂ ದೀಪಗಳಿಲ್ಲದೆ ತೊಂದರೆಯಾಗುತ್ತಿದೆ, ಇವರಿಗೆ ಅನುಕೂಲವಾಗುವಂತೆ ಸರಕಾರ ಸಹಾಯ ಮಾಡಲು ಯೋಚಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಾಕ್ಟಿಕಲ್ ಆಗಿ ಇದು ಕಷ್ಟವಾಗುತ್ತದೆ. ಮತ್ತು ಎಲ್ಲರ ಮನೆಗಳಲ್ಲೂ ವಿದ್ಯಾರ್ಥಿಗಳಿರುವುದರಿಂದ ಇದರಲ್ಲಿ ನಿರ್ದಿಷ್ಟವಾಗಿ ಕೊಡುವುದು ಕಷ್ಟವಾಗುತ್ತದೆ, ತಾವು ಹೇಳುವ ಸಲಹೆ ಅಪ್ಯಾಯಮಾನವಾಗಿದ್ದರೂ ಅದನ್ನು ಕಾರ್ಯಗತ ಮಾಡುವುದು ಕಷ್ಟ.

ಶ್ರೀ ಕೆ. ಶ್ರೀರಾಮುಲು.—ವಿದ್ಯುಚ್ಛಕ್ತಿ ಇಲಾಖೆಯವರು ಎಂದು ಇವರು ಬೇಕಾದ ಹಾಗೆ ರೇಡಿಯೋ [illegible] ಸಲಕರಣೆಗಳು ಇತ್ಯಾದಿಗಳಿಗೆಲ್ಲಾ ಪವರನ್ನು ಪುಕ್ಕಟೆಯಾಗಿ ಪಡೆಯುವುದನ್ನು ತಪ್ಪಿಸಿ ಇದರಿಂದ ಬರುವ ಪವರನ್ನು ಕೈಗಾರಿಕೆಗಳಿಗೇಕೆ ಕೊಡಬಾರದು ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದು ನೀತಿಯ ಪ್ರಶ್ನೆ, ಹಿಂದಿನಿಂದ ಅನುಸರಿಸಿಕೊಂಡು ಬರಲಾಗಿದೆ. ಈಗ ತಾವು ಸಲಹೆ ಮಾಡುತ್ತಿರುವುದರಿಂದ ಸರಕಾರ ಈ ವಿಷಯವನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಪರೀಕ್ಷಾ ಕಾಲವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಬೆಳಕಿನ ತೊಂದರೆಯಿರುವುದರಿಂದ ಇವರಿಗೂ ಕೂಡ ಸ್ವಲ್ಪ ಬೆಳಕನ್ನು ಕೊಡಲು ಉದಾರತೆಯಿಂದ ಪರಿಶೀಲಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿರ್ದಿಷ್ಟವಾಗಿ ಇದರ ಬಗ್ಗೆ ಯಾವ ನೀತಿಯೂ ಇಲ್ಲ.

Penalty on Extra Consumption of Electricity

597. **Smt. WINNIFRED F. FERNANDES** (Coondapur).—

Will the Minister for Public Works and Electricity be pleased to state :—

(*a*) whether it is a fact that since the imposition of the 25% cut on the consumption of electricity for any consumption above the limit fixed for a consumer the same is to be further deducted from his consumption during the succeeding months, in addition to his having to pay penalty on the extra consumption ;

(*c*) whether Government will be pleased to allow adjustment of units, less consumed by a consumer in any month against over consumption above his limit, in any subsequent month and/or give such consumer some bonus, for the less consumed units of power in a month ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) No.

(*c*) No.

Smt. WINNIFRED F. FERNANDES.—In answer to (b) the reply is 'No'. How can the answer be 'No' when a person is penalised twice for a single offence ?

†**ಶ್ರೀ ಎಚ್. ಎಂ. ಚನ್ನಬಸಪ್ಪ.**—ಇದೇನೂ ಐ. ಪಿ. ಸಿ. ಕೋಡಿನಲ್ಲಿರುವಂತೆ ಅಫೆನ್ಸ್ ಆಗುವುದಿಲ್ಲ.

Smt. WINNIFRED F. FERNANDES.—If a person consumes more than the allotted units he has to pay penalty, and also in the next month he has to make good the excess units consumed. Will the Government consider and see that penalty is not levied in such cases ?

Sri H. M. CHANNABASAPPA.—It cannot be done.

ಶ್ರೀ ಎಂ. ಎಸ್. ಕೃಷ್ಣನ್.—ನೆರೆ ರಾಜ್ಯಗಳಲ್ಲಿ ಎಂದರೆ ತಮಿಳುನಾಡಿನಲ್ಲಿ ಪವರು ಕಟ್‌ನ್ನು ಶೇಕಡಾ 50—60 ರಷ್ಟು ಹೆಚ್ಚು ಮಾಡುತ್ತಾರೆಂದು ಕೇಳುತ್ತೇವೆ. ಅದೇ ರೀತಿ ಇಲ್ಲೂ ಹೆಚ್ಚು ಪವರ್ ಕಟ್ಟನ್ನು ಮಾಡಲು ಸರ್ಕಾರದವರು ಯೋಚಿಸುತ್ತಿದ್ದಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೆರೆ ರಾಜ್ಯಗಳಲ್ಲಿ ಮಾಡುವಂತೆ ಇಲ್ಲಿ ಮಾಡುತ್ತಿಲ್ಲ. ಮುಂಜಾಗರೂಕತೆಯಿಂದ ನಮ್ಮ ರಾಜ್ಯ ಈಗಾಗಲೇ ಪವರ್ ಕಟ್ಟನ್ನು ಜಾರಿಗೆ ತಂದಿರುವುದರಿಂದ ನಮ್ಮ ರಾಜ್ಯದಲ್ಲಿ ಶೇಕಡಾ 25 ರಷ್ಟು ಮಾತ್ರ ಕಟ್ ಮಾಡಲಾಗಿದೆ. ಇದನ್ನು ಇನ್ನು ಹೆಚ್ಚು ಮಾಡುವುದಿಲ್ಲ.

ಶ್ರೀ ಕೆ. ಬಿ. ಕೊಳೀವಾಡ.—ಐ. ಪಿ. ಸೆಟ್‌ಗಳಿಗೆ ಹಾಗೂ ಅಕ್ಕಿ ಗಿರಣಿಗಳಿಗೆ ತಾತ್ಕಾಲಿಕವಾಗಿಯಾದರೂ ಪವರು ಕಟ್ಟನ್ನು ಸಡಿಲ ಮಾಡಲು ಸಾಧ್ಯವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದಕ್ಕೆ ಸಾಧ್ಯ, ಹಾಗೂ ಇಲ್ಲ ಎನ್ನುವುದಕ್ಕೆ ಅವರ ಮನವಿಗಳು ಬಂದ ಮೇಲೆ ಅವಶ್ಯಕತೆ ದೃಷ್ಟಿಯಿಂದ ಪರಿಶೀಲನೆ ಮಾಡಬೇಕಾಗುತ್ತದೆ, ಮತ್ತು ಯಾವ ಆಶ್ವಾಸನೆಯನ್ನೂ ಕೊಡುವುದಕ್ಕಾಗುವುದಿಲ್ಲ.

Smt. WINNIFRED F. FERNANDES.—If a consumer has consumed less than his limit, will the Government allow him to consume the remaining units in the next succeeding month ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಮಾಡಲಾಗುವುದಿಲ್ಲ.

N.R.W.S. Schemes in Kallambella Constituency

224. **Sri T. TARE GOWDA** (Kallambella).—

Will the Minister for Community Development and Social Welfare be pleased to state :—

(*a*) whether the V. P. Chairman, Kallambella, Sira Taluk, Thimmanahalli, Kandikere Hobli, Chiknaikanahalli Taluk and Hagalwadi, Gubbi Taluk have been urging for L.R.A. Grants for meeting the balance of 10 per cent contribution towards the rural water supply schemes to these three places ;

(*b*) whether the Secretary to Government D.H.P.C., Department has requested the Divisional Commissioner, Bangalore Division, Bangalore to give 10 per cent L.R.A. Grant as a special case to Thimmanahalli, V. P. Kandikere Hobli, Chiknaikanahalli Taluk in his letter No. DPC 12 VRW 73 dated 19-1-1973 regarding the Rural Water Supply Scheme ;

(*c*) if so, the steps taken to instruct the Divisional Commissioner, Bangalore to give only the balance of 10 per cent L.R.A. grant to Kallambella V.P., Sira Taluk and Hagalwadi V.P. Gubbi Taluk towards Rural Water Supply Schemes ;

(*d*) whether, there is any proposal before Government to sanction National Rural Water Supply Schemes to the above three Hobli Headquarters' big villages in Sira, Chiknaikanahalli and Gubbi Taluks of 'Kallambella Constituency in Tumkur District ?

Sri M. MALLIKARJUNASWAMY (Minister for Community Development and Social Welfare).—

(*a*) In the case of Thimmanahalli, V.P. representation was received for providing assistance out of 10% L.R.A Grants. In respect of Hagalwadi Water Supply Scheme a sum of Rs. 4,150 has already been provided, out of 10% L.R.A. grant. In the case of Kallambella Water Supply Scheme no representation has been received for providing assistance out of 10% L.R.A. grants.

(*b*) Yes.

(*c*) Does not arise since no representations are received.

(*d*) No.

ಶ್ರೀ ಟಿ. ತಾರೇಗೌಡ.—ತಿಮ್ಮನಹಳ್ಳಿ ಪಂಚಾಯಿತಿಯವರು ಹಾಗೂ ತಾಲ್ಲೂಕಾ ಬೋರ್ಡಿನವರು ಅವರ ವಂತಿಗೆಯನ್ನು ಕೊಡಲು ಒಪ್ಪಿರುವುದರಿಂದ ಇಲ್ಲಿ ನೀರು ಸರಬರಾಜು ಯೋಜನೆಯನ್ನು ಏಕೆ ಮುಗಿಸಬಾರದು ?

†**ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.**—ತಿಮ್ಮನಹಳ್ಳಿ ಪಂಚಾಯಿತಿಯವರು ಎಲ್. ಆರ್. ಎ. ಮೂಲಕ 4,150 ರೂಪಾಯಿಗಳನ್ನು ಕೊಟ್ಟಿದ್ದಾರೆ ಇನ್ನೂ 12,950 ರೂಪಾಯಿಗಳನ್ನು ಕೊಡಬೇಕಾಗಿದೆ, ಇದರ ಜೊತೆಗೆ ಹಾಗಲವಾಡಿ ಪಂಚಾಯಿತಿಯವರು 4,150 ರೂಪಾಯಿಗಳನ್ನು ಕೊಟ್ಟಿದ್ದಾರೆ ಇನ್ನೂ 8,800 ರೂಪಾಯಿಗಳು ಬರಬೇಕಾಗಿದೆ. ಕಳ್ಳಂಬೆಳ್ಳ ಪಂಚಾಯತಿಯವರು 5,150 ರೂಪಾಯಿಯವರೆಗೆ ಕೊಟ್ಟಿದ್ದಾರೆ, ಇನ್ನೂ 10,380 ರೂಪಾಯಿಗಳನ್ನು ಕೊಡಬೇಕಾಗಿದೆ.

ಶ್ರೀ ಟಿ. ತಾರೇಗೌಡ.—ಅಭಾವ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುತ್ತೇವೆಂದು ಹೇಳಿದಿರಿ, ಎರಡು ಮೂರು ವರ್ಷಗಳಿಂದ ಎಸ್ಟಿಮೇಟು ಸಿದ್ಧವಾಗಿ ಹಣ ಕೊಟ್ಟರೂ ಎಲ್. ಆರ್. ಗ್ರಾಂಟ್ ಅಡ್ಜಸ್ಟ್ ಮಾಡಿ ಬ್ಯಾಲೆನ್ಸ್ ಅಮೌಂಟ್ ಕೊಡುವುದಕ್ಕೆ ದೊಡ್ಡ ಮನಸ್ಸು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ದೊಡ್ಡ ಮನಸ್ಸಿನ ಪ್ರಶ್ನೆಯಲ್ಲ. ಎಲ್.ಆರ್. ಎಷ್ಟು ಕೊಡಬೇಕೋ ಅಷ್ಟನ್ನು ಕೊಟ್ಟಿದ್ದೇವೆ. ಪಂಚಾಯಿತಿಯವರು ಕೊಡಬೇಕಾದ ಹಣವನ್ನು ಕೊಡಲಿಲ್ಲ. ಪಂಚಾಯಿತಿಯಲ್ಲಿ ಟ್ಯಾಕ್ಸ್, ವಗೈರೆ ಅನ್ನು ಸರಿಯಾಗಿ ವಸೂಲು ಮಾಡುತ್ತಾ ಇಲ್ಲ. ಸ್ಟೇಟ್‌ನಲ್ಲಿ ಸುಮಾರು ಐದುಕೋಟಿ ರೂಪಾಯಿ ಪಂಚಾಯಿತಿಯಿಂದ ವಸೂಲಾಗದೆ ನಿಂತಿದೆ. ಇವರು ಪಂಚಾಯಿತಿ ಹಣವನ್ನು ಬೇಗ ಕೊಟ್ಟರೆ ಎಲ್. ಆರ್. ಗ್ರಾಂಟ್ ಅನ್ನು ಏನು ಕೊಡಬೇಕೋ ಅದನ್ನು ಕೊಡುತ್ತೇವೆ.

ಶ್ರೀ ಟಿ. ತಾರೇಗೌಡ.—ತಿಮ್ಮನಹಳ್ಳಿ ಪಂಚಾಯಿತಿಯವರು 12ನೇ ತಾರೀಖು ಮೂರು ಸಾವಿರ ರೂಪಾಯಿಗಳನ್ನು ಸರ್ಕಾರಕ್ಕೆ ಕಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಇತ್ತೀಚೆಗೆ ಕಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ. ಕಟ್ಟಿದ್ದರೆ ಅಲ್ಲಿಯ ಕೆಲಸ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಯಂಕಟಪ್ಪ.—ಪಂಚಾಯಿತಿಯವರು ಕೊಡಬೇಕಾದ ವಂತಿಗೆ ಐದು ಕೋಟಿ ರೂಪಾಯಿಗಳು ಇನ್ನೂ ವಸೂಲಿಯಾಗಬೇಕು ಎಂದು ಹೇಳಿದಿರಿ, ಸರ್ಕಾರದವರು ನೇಮಕ ಮಾಡಿರತಕ್ಕ ವಿಲೇಜ್ ಅಕೌಂಟೆಂಟುಗಳು, ಪಂಚಾಯಿತಿ ಕಾರ್ಯದ ಬಗ್ಗೆ ಹೆಚ್ಚು ಗಮನ ವಹಿಸುತ್ತಿಲ್ಲ, ಅವರು ವಸೂಲಿಯ ಬಗ್ಗೆ ಏನು ಕ್ರಮ ತೆಗೆದುಗೊಂಡಿಲ್ಲ, ಇದಕ್ಕೆ ಪಂಚಾಯಿತಿಯವರು ಕಾರಣರೋ ಅಥವಾ ವಿಲೇಜ್ ಅಕೌಂಟೆಂಟ್‌ರುಗಳು ಕಾರಣರೋ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎನ್. ಬಸವಯ್ಯ.—ತಿಮ್ಮನಹಳ್ಳಿ, ಚಿಕ್ಕನಾಯಕನಹಳ್ಳಿ ಪಂಚಾಯಿತಿಯವರಿಂದ 10 ಪರ್ಸೆಂಟ್ ಹಣವನ್ನು ಕೊಡುವುದಕ್ಕಾಗುವುದಿಲ್ಲ. ಗ್ರಾಮದ ಇತರೆ ಕೆಲಸಗಳಿಗೋಸ್ಕರ ಹಣವನ್ನು ಉಪಯೋಗಿಸಬೇಕು, ಪಂಚಾಯಿತಿಯವರು ಐದು ಪರ್ಸೆಂಟ್ ಹಣವನ್ನು ಕೊಡುತ್ತಾರೆ ಇನ್ನು ಐದು ಪರ್ಸೆಂಟ್ ಅನ್ನು ಎಲ್. ಆರ್. ಗ್ರಾಂಟಿನ ಮೂಲಕ ಕೊಡಿಸಿ ಕೊಡಿ ಎಂದು ಕೇಳುತ್ತೇನೆ. ಆದಷ್ಟು ಬೇಗ, ಇದು ದೊಡ್ಡ ಗ್ರಾಮವಾಗಿರುವುದರಿಂದ ನೀರನ್ನು ಒದಗಿಸಿ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ತಾರೇಗೌಡ.—ಕಳ್ಳಂಬೆಳ್ಳದಲ್ಲಿ ಕುಡಿಯುವ ನೀರು ಇಲ್ಲದೆ ಕೆರೆಯ ನೀರನ್ನು ಕುಡಿಯುತ್ತಿದ್ದಾರೆ. ಹಾಗಲವಾಡಿಯಲ್ಲಿಯೂ ನೀರು ಇಲ್ಲದೆ ಇರುವುದರಿಂದ ತೊಂದರೆಯಾಗಿ ಜನ ಕಷ್ಟದಲ್ಲಿದ್ದಾರೆ. ಆ ಜನಕ್ಕೆ ಮುಖ್ಯವಾಗಿ ಕುಡಿಯುವ ನೀರಿನ ಅವಶ್ಯಕವಿರುವುದರಿಂದ ಸರ್ಕಾರದವರು ರಿಯಾಯಿತಿ ತೋರಿಸಿ ಅವರಿಗೆ ಗ್ರಾಂಟ್‌ನ್ನು ಮಂಜೂರು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ರಿಗ್ ವೆಲ್ಸ್, ಬೋರ್‌ವೆಲ್ಸ್ ಹಾಕಿ ಕೊಡೋಣ. ವಾಟರ್ ಸಪ್ಲೈ ಸ್ಕೀಂ ಅನ್ನು ಮಂಜೂರು ಮಾಡುವುದಕ್ಕೆ ಬರುವುದಿಲ್ಲ. ಇದಕ್ಕೆ ಅವರು 10 ಪರ್ಸೆಂಟ್ ಕಂಟ್ರಿಬ್ಯೂಷನ್ ಅನ್ನು ಕೊಡಬೇಕಾಗುತ್ತದೆ.

Irrigation Tank near Iehalayallapur Village

264. **Sri M. M. NADAF** (Shiggoan).—

Will the Minister for Public Works and Electricity be pleased to state.—

(*a*) whether it has come to the notice that an Irrigation tank is being built near Ichalayallapur village of Savanur Taluk ;

(SRI **M**. M. NADAF)

(*b*) whether it has come to their notice that the work has not been completed even though its work was started 6 to 7 years ago ;

(*c*) the extent of land to be irrigated under this tank and the estimated cost of construction of the same ;

(*d*) the amount spent by Government so far in this behalf ;

(*e*) the action the Government will take to complete this work speedily ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) Yes.

(*c*) It is estimated that 262 acres of land will be irrigated under this tank. Estimate cost : Rs. 2,51,000.

(*d*) Rs. 89,905.

(*e*) As the present contractor has not started the work, efforts will be made to complete the work as early as possible by entrusting the same to another contractor.

ಸ್ವಾಮಿ, 'ಬಿ' ಪ್ರಶ್ನೆಗೆ 'ಎಸ್' ಎಂದು ಕೊಟ್ಟಿದ್ದಾರೆ ಅದನ್ನು ದಯವಿಟ್ಟು 'No' ಎಂದು ಬರೆದುಕೊಳ್ಳಬೇಕು.

ಶ್ರೀ ಎಂ. ಎಂ. ನದಾಫ್.—ಈ ಕೆರೆಯನ್ನು ಪ್ರಾರಂಭಿಸಿ 6–7 ವರ್ಷವಾದರೂ 300 ಎಕರೆ ಜಮೀನಿಗೆ ನೀರಾವರಿಯಾಗುವಾಗ, ಈ ಕೆರೆಯ ಕೆಲಸವನ್ನು ಪೂರೈಸುವುದಕ್ಕಾಗಲಿಲ್ಲ. ಇದಕ್ಕೆ ಏನು ಕಾರಣ ತಿಳಿಸುತ್ತೀರಾ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—6–7 ವರ್ಷವಾಗಿರುವುದು ಎಂದು ಹೇಳುವುದು ತಪ್ಪು, ಕೆರೆಯ ಕೆಲಸವನ್ನು ಪ್ರಾರಂಭಿಸಿ ನಾಲ್ಕೂವರೆ ವರ್ಷವಾಗಿದೆ. ಮತ್ತೆ ಕೆರೆಯ ಕೆಲಸ ನಿಧಾನವಾಗಿರುವುದಕ್ಕೆ 2-3 ಕಾರಣಗಳು ಇವೆ. 1968ನೇ ಇಸವಿಯ ಕೊನೆಯ ಭಾಗದಲ್ಲಿ ಟೆಂಡರ್ ಕಾಲ್‌ಫಾರ್ ಮಾಡಿ ಎರಡು ಪರ್ಸೆಂಟ್ ಎಕ್ಸೆಸ್ ಬಂದು ಕ್ಯಾನ್ಸಲ್ ಮಾಡಿದ್ದೇವೆ. ತಿರುಗಿ ಟೆಂಡರ್ ಕಾಲ್‌ಫಾರ್ ಮಾಡಿ, ಅದನ್ನೂ ಕ್ಯಾನ್ಸಲ್ ಮಾಡಿದೆವು. 7–8–1969ರಲ್ಲಿ ಡಿಪಾರ್ಟ್‌ಮೆಂಟ್ ಮೂಲಕ ಕೆಲಸ ಪ್ರಾರಂಭವಾಗಿ 89,905 ರೂಪಾಯಿ ಖರ್ಚಾಗಿದೆ. ಆದಾದ ಮೇಲೆ ಚೀಫ್ ಇಂಜನಿಯರ್ ಟೆಂಡರ್ ಕಾಲ್‌ಫಾರ್ ಮಾಡಿ, ಕೆಲಸ ಮಾಡಲಿಕ್ಕೆ ಹುಕುಂ ಮಾಡಿದರು. 22–3–1970ರಲ್ಲಿ ಮತ್ತೆ ಟೆಂಡರ್ ಕಾಲ್‌ಫಾರ್ ಮಾಡಿ, ಕಂಟ್ರ್ಯಾಕ್ಟ್ ಕೊಟ್ಟರ ಮೂರು ವರ್ಷದಿಂದ ಕೆಲಸ ಮಾಡಿಲ್ಲ. ಕೆಲಸ ಮುಂದುವರೆದಿಲ್ಲ. ಇದರ ಬಗ್ಗೆ ಸರ್ಕಾರ ತೀವ್ರಗತಿಯಿಂದ ಪ್ರಯತ್ನ ಮಾಡುತ್ತಾ ಇದೆ. There is some lapse somewhere. ಮೂರು ವರ್ಷಗಳಿಂದ ಕೆಲಸ ನಿಲ್ಲಿಸಲಿಕ್ಕೆ ಏನು ಕಾರಣ ಎಂದು ವಿಚಾರಣೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ಮಾಡಿ ಕೆಲಸವನ್ನು ಮುಂದುವರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಎಂ. ನದಾಫ್.—ತಾವು ಡಿಪಾರ್ಟ್‌ಮೆಂಟಿನ ಮುಖಾಂತರ ವರ್ಕ್ಸ್ ತೆಗೆದುಕೊಂಡಿದ್ದೇವೆ ಎಂದು ಹೇಳಿದಿರಿ, ಅನಂತರ ಇದನ್ನು ಮೊದಲನೆಯ ಕಂಟ್ರಾಕ್ಟರಿಗೆ ಕೊಟ್ಟಿದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದನ್ನೆ ಹೇಳಿದೆ, ಇದರಲ್ಲಿ ಏನೋ ಅಚಾತುರ್ಯ ನಡೆದಿದೆ, ವಿಚಾರಣೆ ನಡೆಸಿ ನಿಮ್ಮ ಕೆಲಸ ಮುಂದುವರಿಸುತ್ತೇನೆ ಎಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಬಿ. ಜಿ. ಬಣಕಾರ.—ಈಗ ಮಾಡುತ್ತಾ ಇರುವ ಪ್ರಕಾರ, ಅವನಿಂದ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅವನ ಅಪ್ಪನಿಂದಲೂ ಕೆಲಸ ಮಾಡುವುದಕ್ಕಾಗುವುದಿಲ್ಲ, ಇಂಥವರು ಬೇಕಾದಷ್ಟು ಜನ ಇದ್ದಾರೆ. ಅವರ ಮೇಲೆ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಇಂಥ ಕಂಟ್ರ್ಯಾಕ್ಟರುಗಳನ್ನು ರದ್ದುಪಡಿಸಿ, ಅಧಿಕಾರಿಗಳು ಒಂದು ವೇಳೆ ನಿರ್ದಾಕ್ಷಿಣ್ಯವಾಗಿ ಇವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ, ಇದನ್ನೆಲ್ಲಾ ನೋಡಿಕೊಂಡು ಡಿಪಾರ್ಟ್‌ಮೆಂಟಿನವರಾಗಲಿ ತೀವ್ರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಧಾರವಾಡ ಜಿಲ್ಲೆಯಲ್ಲಿ, ಅದರಲ್ಲೂ ಕೂಡ ಈ ಭಾಗದಲ್ಲಿ ಬ್ಲಾಕ್ ಕಂಟ್ರ್ಯಾಕ್ಟರ್ಸ್ ಇದ್ದಾರೆ ಎಂದು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ಕೆಲಸವನ್ನು ಬ್ಲಾಕ್ ಲಿಸ್ಟ್ ಮಾಡಿದ್ದೇನೆ. ಮುಂದೆ ನೋಡಿ ಬರತಕ್ಕ ಬ್ಲಾಕ್ ಕಂಟ್ರ್ಯಾಕ್ಟರ್ಸ್ ಅನ್ನು ಬ್ಲ್ಯಾಕ್ ಲಿಸ್ಟ ಮಾಡುತ್ತೇನೆ.

ಶ್ರೀ ಎಂ. ಎಂ. ನದಾಫ್.—ಈಗ ಕಂಟ್ರ್ಯಾಕ್ಟ್ ಕೊಟ್ಟಿರುವದು ಮೊದಲನೆಯ ಕಂಟ್ರ್ಯಾಕ್ಟರ್ ಮಗನಿಗೆ ಎಂದು ತಮಗೆ ತಿಳಿದು ಬಂದಿದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ವಿವರಗಳನ್ನು ಹೇಳಬೇಕಾದದು ಅನಗತ್ಯ. ಏನು ಅಚಾತುರ್ಯ ನಡೆಯುತ್ತಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ತೀವ್ರವಾಗಿ ಪರಿಶೀಲಿಸಿ ವಿಚಾರಣೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ಮಾಡಿ ಕೆಲಸ ಮುಂದುವರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಇದೇ ಪ್ರಶ್ನೆಯನ್ನು ಪುನಃ ಕೇಳಿದರೆ ಏನು ಹೇಳಲಿ.

KELAGUR BRIDGE IN MUDIGERE TALUK

270. **Sri G. PUTTASWAMY** (Mudigere).—

Will the Minister for Public Works and Electricity be pleased to state.—

(*a*) whether it has come to the notice of the Government that Kelagur bridge on Kottigere-Kalasa road of Mudigere taluk is in dangerous condition and thereby inconvenience is caused for the movement of people and cattle ;

(*b*) if so, whether the Government have thought of constructing a new bridge by demolising the said bridge ;

(*c*) if so, whether the said work would be taken up during 1972-73 by making provision in the present year's budget ?

Sri H. M. CHANNABASAPPA (Minister for Public Works and Electricity).—

(*a*) Yes. The bridge is not in such a condition which is likely to collapse immediately and there may not be any difficulty for movement of the people.

(*b*) Under the consideration of the Government.

(*c*) No. It will be considered for including the same in 1973-74 Budget. But this is subject to availability of funds.

Sri G. PUTTASWAMY.—You have accepted the dangerous condition of the Kelgur bridge on Kottigere-Kalasa Road. Will you kindly explain the extent of damage caused to this bridge ?

†ಶ್ರೀ ಎಚ್. ಎಂ. ಚನ್ನಬಸಪ್ಪ.—1961ನೇ ಇಸವಿಯಿಂದಲೂ ಈ ಬ್ರಿಡ್ಜ್ ಮೇಲೆ ನೀರು ಓವರ್‌ಫ್ಲೋ ಆಗಿದ್ದು, ಡ್ಯಾಮ್‌ನೊಳಗೆ ಎಂಬ್ಯಾಂಕ್‌ಮೆಂಟ್ ಅರ್ಚ್ ಡ್ಯಾಮೇಜ್ ಆಗಿದೆ. ಈ ಎರಡನ್ನೂ ರಿಪೇರಿ ಮಾಡಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಇದು ಲಕ್ಷಾಂತರ ಜನ ತಿರುಗಾಡತಕ್ಕ ಸ್ಟೇಟ್ ಫಂಡ್ ರೋಡು, ಮತ್ತು ದೊಡ್ಡ ದೊಡ್ಡ ಭಾರವಾದ ಲಾರಿಗಳು, ಭಾರ ಹೊತ್ತ ಬಸ್ಸುಗಳು ಟ್ರಾಫಿಕ್ ವಿಶೇಷವಾಗಿರುವುದರಿಂದ, ಇದು ಅಪಾಯ ಸ್ಥಿತಿಯಲ್ಲಿರುವುದರಿಂದ, ಜನಗಳು ಭಯ ಪಡುತ್ತಿದ್ದಾರೆ. ತಾವು ಭರವಸೆಕೊಟ್ಟಿರುವ ರೀತಿಯಲ್ಲಿ ಇದಕ್ಕೆ ಬಜೆಟ್ಟಿನಲ್ಲಿ ಹಣವನ್ನು ಪ್ರೊವೈಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ !

ಶ್ರೀ ಎಚ್.ಎಂ. ಚೆನ್ನಬಸಪ್ಪ.—ತಾವು ಇದು ಮುಖ್ಯವಾದ ರಸ್ತೆ ಎನ್ನತಕ್ಕ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ತಾವು ಹೇಳಿದ ರೀತಿಯಲ್ಲಿ ಇಲ್ಲಿ ಅಪಾಯ ಏನೂ ಇಲ್ಲ. ಆದರೆ ಅನಾನುಕೂಲ ಇದೆ. ಅಪಾಯಕ್ಕೂ ಅನಾನುಕೂಲಕ್ಕೂ ವ್ಯತ್ಯಾಸ ಇದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಬ್ರಿಡ್ಜ್ ಸೀಳು ಬಿಟ್ಟಿಲ್ಲವೆ !

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದನ್ನು ಪರೀಕ್ಷೆಮಾಡಿಸಿವೆ, ನನಗೆ ಬಂದಿರುವ ವರದಿ ಪ್ರಕಾರ ಇದು 12 ಅಡಿ ಅಗಲ ಇರುವುದರಿಂದ, ದೊಡ್ಡ ದೊಡ್ಡ ಬಸ್ಸುಗಳು, ಲಾರಿಗಳು ಹೋಗುವುದಕ್ಕೆ ಅನಾನುಕೂಲ ಇದೆ. ಒಪ್ಪಿಕೊಳ್ಳುತ್ತೇನೆ. ಆದರೆ ಅಪಾಯ ಮಾತ್ರ ಇಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಇನ್ನೊಂದು ವಿಷಯ ಏನೆಂದರೆ, ಈಗ ಕುದುರೆ ಮುಖ ಓರ್‌ಗೆ ಈ ರಸ್ತೆ ಸೇರುವುದರಿಂದ ಇದು ಬಹಳ ಪ್ರಮುಖವಾದ ರಸ್ತೆಯಾಗುತ್ತದೆ. ಹೆಚ್ಚಿನ ಭಾರವನ್ನು ಲಾರಿಗಳವರು ಹಾಕಬೇಕಾತ್ತದೆ. ಆದ್ದರಿಂದ ಬೇರೆ ಸೇತುವೆಯನ್ನು ಕಟ್ಟಿಸಿಕೊಡಬೇಕು ಎಂದು ಸರ್ಕಾರ ಆಲೋಚನೆ ಮಾಡುತ್ತಿದೆ.

Lift Irrigation Work at Goundahal, Hyati, Lachankere and Hirebaganahal of Koppal Taluk

376. **Sri M. VIRUPAKSHAPPA** (Koppal).—

Will the Minister for Public Works and Electricity be pleased to state :—

the reasons for the inordinate delay in taking up the Lift Irrigation work at Goundahal, Hyati, Lachankere and Hirebaganahal villages of Koppal Taluk for the benefit of re-settlers from Tungabhadra Project ?

Sri H. M. CHANNABASAPPA (Minister for Public Works and Electricity.—

These Lift Irrigation Schemes are on foreshore of Tungabhadra Reservoir and hence were not taken up so far. It is now proposed to take them subject to availability of funds.

ಶ್ರೀ ಎಂ. ವಿರೂಪಾಕ್ಷಪ್ಪ.—ಯಾತದ ಯೋಜನೆಗಳಿಗೆ ತಗಲತಕ್ಕ ಖರ್ಚು ಕೂಡ ತೀರಾ ಕಡಿಮೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ತೀರಾ ಕಡಿಮೆ ಅಥವಾ ಹೆಚ್ಚು ಎನ್ನತಕ್ಕದು ಒಂದಕ್ಕೊಂದಕ್ಕೆ ಹೋಲಿಸಿ ನೋಡಿದರೆ ಗೊತ್ತಾಗುತ್ತದೆ. ಕಡಿಮೆ ಅಥವಾ ಹೆಚ್ಚು ಎಂದು ಹೇಳುವುದು ಕಷ್ಟ.

ಶ್ರೀ ಎಂ. ವಿರೂಪಾಕ್ಷಪ್ಪ.—ಬರಗಾಲ ಪರಿಸ್ಥಿತಿಯನ್ನನ್ನು ಸರಿಸಿ ಈ ಯೋಜನೆಗಳನ್ನು ತೀವ್ರ ಕೈಕೊಳ್ಳುವರೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೂರು ನಾಲ್ಕು ಯೋಜನೆಗಳು ಏನು ಹೇಳಿದ್ದಾರೆ ಅವು ಸರ್ಕಾರದಲ್ಲಿನ ಹಣವನ್ನು ಅವಲಂಬಿಸಿದೆಯೋ ಹೊರತು ಯೋಜನೆಗಳನ್ನು ಮಾಡಬಾರದು ಎನ್ನುವ ಪ್ರಶ್ನೆ ಇಲ್ಲ. ಅಭಾವ ಪರಿಸ್ಥಿತಿ ಇರೋದರಿಂದ ಇವುಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಬೇಕು ಎಂಬುದು ಸರ್ಕಾರದ ಮನಸ್ಸಿನಲ್ಲಿದೆ. ಹಣ ಒದಗಿಸಿದ ಕೂಡಲೇ ವ್ಯವಸ್ಥೆ ಮಾಡುತ್ತೇವೆ.

Electrification of Villages in Chikodi Constituency

409. **Sri P. P. HEGRE** (Chikodi).—

Will the Minister for Public Works and Electricity be pleased to state :—

(*a*) the names of the villages in Chikodi Constituency where electricity has not been supplied ;

(*b*) of them, the names of villages for which estimates in respect of supply of electricity have been prepared ;

(*c*) of them, the number of estimates sanctioned ;

(*d*) the names of villages where the work relating to the supply of electricity has been started ?

Sri H. M. CHANNABASAPPA (Minister for Public Works and Electricity).—

(*a*) *Vide* list appended.

(*b*) (1) Kadapur.
(2) Girgaon.
(3) Jainapur.
(4) Shirgaonwadi.
(5) Yadur.

(*c*) Three in respect of Kadapur, Girgaon and Yadur villages.

(*d*) Work in respect of one village *viz.*, 'Yadur' has been taken up.

List

Showing unelectrified villages in Chikodi Assembly Constituency

1. Chandur
2. Ingali
3. Kerur
4. Jada Kurli
5. Tovarhalli
6. Hottewad
7. Bidrolli
8. Magannur
9. Handinal, K. K
10. Mamadapur
11. Jagunal, K. K.
12. Majalhalli
13. Kajadlhatti
14. Kadapur
15. Girgaon
16. Jainapur
17. Shirgaonwadi
18. Yadur.

ಶ್ರೀ ಪಿ. ಪಿ ಹೆಗರೆ.– ವಿದ್ಯುಚ್ಛಕ್ತಿ ಇಲ್ಲದೆ ಇರುವ ಗ್ರಾಮಗಳ ಹೆಸರುಗಳನ್ನು ಕೊಡಲಾಗಿದೆ. ಇವಲ್ಲದೆ ವಿದ್ಯುಚ್ಛಕ್ತಿ ಇಲ್ಲದೆ ಇರುವ ಗ್ರಾಮಗಳಲ್ಲಿ ಎಲ್ಲಿ ಕೆಲಸ ಷುರುವಾಗಿಲ್ಲ ಆ ಗ್ರಾಮಗಳ ಗತಿ ಏನು ? ಯಾವ ಹಂತದಲ್ಲಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಬಹುಶಃ ಅವು ಹಾಮ್ಲೆಟ್ಸ್ ಇರಬಹುದು. ಗ್ರಾಮಗಳ ಹೆಸರುಗಳನ್ನು ಕೊಡುತ್ತೇವೆ, ಹ್ಯಾಮ್ಲೆಟ್ಸ್ ಹೆಸರುಗಳನ್ನು ಕೊಡುವುದಿಲ್ಲ.

ಶ್ರೀ ಪಿ. ಪಿ. ಹೆಗರೆ.—ಐದು ಗ್ರಾಮಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಪ್ಲಾನ್ ಮತ್ತು ಎಸ್ಟಿಮೇಟ್ ಆಗಿದೆ ಎಂದು ಹೇಳಿದ್ದಾರೆ. ಇದರ ಕೆಲಸ ಯಾವಾಗ ಪ್ರಾರಂಭ ಮಾಡುತ್ತಾರೆ ಮತ್ತು ಎಷ್ಟು ಕಾಲದೊಳಗೆ ಮುಗಿಯುತ್ತದೆ ? ಉಳಿದ 13 ಗ್ರಾಮಗಳಲ್ಲಿ ಕೆಲಸ ಮುಗಿಯಲು ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—13 ಹಳ್ಳಿಗಳ ಕಾರ್ಯಕ್ರಮ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂನಲ್ಲಿ ಸೇರಿಸಿ ಮತ್ತು ಐದು ವರ್ಷಗಳ ಫೇಸ್ಡ್ ಪ್ರೋಗ್ರಾಂನಲ್ಲಿ ಮಾಡುತ್ತೇವೆ.

Disparity in Service Conditions of Employees of Government and Panchayats

462. **Sri JAYAPRAKASH SHETTY** (Brahmavar).—

Will the Minister for Community Development and Social Welfare be pleased to state :—

(*a*) whether there is any disparity in the conditions of service between the State Government employees and Panchayathraj employee to the disadvantage of the latter ;

(*b*) if so, the steps taken or propose to be taken to remove the same ?

Sri M. MALLIKARJUNA SWAMY (Minister for Community Development and Social Welfare).—

(*a*) and (*b*) The Government employees and Panchayathiraj employees are governed by different sets of rules. The Panchayathiraj Institutions are at liberty to adopt any pay scales to their employees within the maximum stipulated in the Mysore Panchayats and Taluk Boards Employees (Recruitment and Service Conditions of Service) Rules, 1962, subject to their financial position being satisfactory and subject to approval by the competent authority. Thus the pay scales are different even among the Panchayathiraj Institutions. In view of this position the disparity in the conditions of service between the State employees and Panchayathiraj employees may exist and it cannot be helped.

ಶ್ರೀ ಜಯಪ್ರಕಾಶ ಶೆಟ್ಟಿ.—ಸರ್ಕಾರೀ ನೌಕರರಿಗೆ ಮತ್ತು ಪಂಚಾಯಿತಿ ನೌಕರರಿಗೆ ವಿವಿಧ ರೀತಿಯಲ್ಲಿ ಅಸಮಾನತೆ ಮತ್ತು ವ್ಯತ್ಯಾಸವಿದೆ. ಸರ್ಕಾರಿ ನೌಕರರಿಗೆ ಸಿಕ್ಕತಕ್ಕ ಪ್ರಾವಿಡೆಂಟ್ ಫಂಡ್, ಪ್ರಮೋಷನ್, ಸಬ್‌ಸಿಸ್ಟೆನ್ಸ್ ಅಲೋಯೆನ್ಸ್ ಸೌಲಭ್ಯಗಳು ಪಂಚಾಯಿತಿ ರಾಜ್ಯ ನೌಕರರಿಗೆ ಸಿಕ್ಕುವುದಿಲ್ಲ. ನಮ್ಮ ರಾಜ್ಯದಲ್ಲಿ ಪಂಚಾಯಿತಿ ರಾಜ್ಯ ನೌಕರರು 10 ಸಾವಿರ ಜನರಿದ್ದಾರೆ. ಸರ್ಕಾರಿ ನೌಕರರಿಗೆ ಅನ್ವಯವಾಗುವ ರೀತಿಯಲ್ಲಿ ಪಂಚಾಯಿತಿರಾಜ್ಯ ನೌಕರರಿಗೂ ಮೈಸೂರ್ ಸಿವಿಲ್ ಸರ್ವಿಸ್ ರೂಲ್ಸ್ ಅಪ್ಲೈ ಆಗಬೇಕು ಮತ್ತು ಎಲ್ಲ ಸೌಲಭ್ಯಗಳೂ ಲಭಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರೇ ಸಮಾಚಾರ ತಿಳಿಸಿರುವುದರಿಂದ ಮಂತ್ರಿಗಳು ಉತ್ತರ ಹೇಳುವ ಅವಶ್ಯಕತೆಯೇ ಇಲ್ಲ.

Sri N. B. SIRDESAI.—In accordance with Government notification dated 1—7—1969 the Bombay Village Panchayat Secretary's Conditions of Service 1948 have been repealed and they have been appointed as Government servants. In accordance with Government Order No. 915 SNL/70 dated 23—11—1970 the Secretaries who have put in one year continuous service are to be treated as regularly appointed Secretaries. I want to know whether any action has been taken in the matter ?

Sri M. MALLIKARJUNASWAMY.—This question does not arise out of this question.

ಶ್ರೀ ಟಿ. ಎಂ. ಮಂಜುನಾಥ.—ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಪ್ರಪ್ರಥಮವಾಗಿ ಎರಡನೇ ದರ್ಜೆ ಗುಮಾಸ್ತರನ್ನಾಗಿ ನೇಮಕ ಮಾಡಿಕೊಂಡಿರುತ್ತೇವೆ. ಅವರಿಗೆ ಪ್ರಮೋಷನ್ ಕೊಡುವ ದೃಷ್ಟಿಯಿಂದ ಫಸ್ಟ್ ಡಿವಿಜನ್ ಕ್ಲಾರ್ಕ್ ಆಗಿ ಕೊಟ್ಟಿರುತ್ತೇವೆ. ಅದಕ್ಕೆ ವಿದ್ಯಾರ್ಹತೆಗಳು ಇರಬೇಕು ಎಂದು ಹೇಳುತ್ತೀರಾ ಅಥವಾ ಅನುಭವ ಇರುವವರನ್ನು ಮೇಲಿನ ಹುದ್ದೆಗೆ ಪ್ರಮೋಟ್ ಮಾಡಬಹುದೇ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ವಿದ್ಯಾರ್ಹತೆಯ ಜೊತೆಗೆ 10 ವರ್ಷವಾದರೂ ಅನುಭವ ವಿರಬೇಕು ಎನ್ನುವುದು ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಪಂಚಾಯಿತಿರಾಜ್ ನೌಕರರಿಗೆ ಮತ್ತು ಸರ್ಕಾರಿ ನೌಕರರಿಗೆ ಸಂಬಳಸಾರಿಗೆಗಳಲ್ಲಿ ಅವರ ಸರ್ವಿಸ್ ಕಂಡೀಷನ್‌ಗಳಲ್ಲಿ ಅಜಗಜಾಂತರ ವ್ಯತ್ಯಾಸವಿರುತ್ತದೆ. ಆ ವ್ಯತ್ಯಾಸವನ್ನು ಸ್ವಲ್ಪಮಟ್ಟಿಗಾದರೂ ಸರಿತೂಗಿಸುವುದಕ್ಕೆ ಮಾನ್ಯ ಮಂತ್ರಿಗಳು ಅಧಿಕಾರದಲ್ಲಿರುವಾಗಲೇ ಏನಾದರೂ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಹೇಳುವಂತೆ ಬಹಳ ವ್ಯತ್ಯಾಸವಿರುವುದು ವಾಸ್ತವ. ಈಗಾಗಲೇ ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ, ರಾಜ್ಯ ಸರ್ಕಾರದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ, ಸ್ಥಳೀಯ ಸಂಸ್ಥೆಗಳಲ್ಲಿರುವ ಅಧಿಕಾರಿಗಳಿಗೆ, ಪಂಚಾಯಿತಿಯಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಸಂಬಳ ಸಾರಿಗೆಗಳಲ್ಲಿ ವ್ಯತ್ಯಾಸವಿದೆ. ಪಂಚಾಯಿತಿಗಳ ಆರ್ಥಿಕ ಸ್ಥಿತಿಯನ್ನು ನೋಡಿ ಅದಕ್ಕನುಗುಣವಾಗಿ ಅವರಿಗೆ ಒಂದು ಅವಕಾಶವನ್ನು ಮಾಡಿಕೊಟ್ಟಿದೆ. ಅದರ ಮೇಲೆ ಕಾಂಪಿಟೆಂಟ್ ಅಥಾರಿಟಿ ಒಪ್ಪಿಗೆಯನ್ನು ತೆಗೆದುಕೊಂಡು ಎಷ್ಟೆಷ್ಟು ಸಂಬಳ ಸಾರಿಗೆ ಇರಬೇಕು ಎನ್ನುವುದನ್ನು ಈಗಾಗಲೇ ತೀರ್ಮಾನ ಮಾಡಲಾಗಿದೆ.

Smt. WINNIFRED F. FERNANDES.—Is it not a fact that there is a Government Order sanctioning the grant-in-aid to Local Bodies who have given the enchanced D.A. to their employees. What is the grant you have given to the Local Bodies so far ?

Sri M. MALLIKARJUNASWAMY.—If the Hon. Member puts a separate question I will answer. But this question does not arise out of this.

ಶ್ರೀ ಜಯಪ್ರಕಾಶ ಶೆಟ್ಟಿ.—ಇತ್ತೀಚೆಗೆ ಮಾನ್ಯ ಮಂತ್ರಿಗಳು ಸಂದರ್ಶನವಿತ್ತಾಗ ಪಂಚಾಯಿತಿ ನೌಕರರು ಒಂದು ಮನವಿಯನ್ನು ಕೊಟ್ಟಿದ್ದಾರೆ ಹಾಗೂ 62 ಜನ ಎಂ. ಎಲ್. ಎ. ಗಳು ಸಹಿ ಹಾಕಿದ ಮನವಿ ಪತ್ರವನ್ನು ಕೊಟ್ಟಿದ್ದಾರೆ. ಈ ಮನವಿಗಳ ಮೇಲೆ ಯಾವ ತರಹ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಏನು ಮನವಿಗಳನ್ನು ಕೊಟ್ಟಿದ್ದಾರೆ ಅವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿವೆ ಎಂದು ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

Starting of Fourth University

511. **Sri S. M. SHEERANALY CHANDRASEKHAR** (Hosanagar).—

Will the Minister for Education be pleased to state :—

(*a*) whether a final decision has been taken in the matter of starting of the fourth University in the State ;

(*b*) if so, the place of its location ?

Sri A. R. BADARINARAYANA (Minister for Education).—

(*a*) No.

(*b*) Does not arise.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸಂಸ್ಥಾನದಲ್ಲಿರತಕ್ಕ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಕಾಲೇಜುಗಳ ಸಂಖ್ಯೆಗನುಗುಣವಾಗಿ ನಾಲ್ಕನೇ ವಿಶ್ವವಿದ್ಯಾನಿಲಯದ ಅವಶ್ಯಕತೆ ಇದೆ ಎಂದು ಮಾನ್ಯ ಮಂತ್ರಿಗಳು ಭಾವಿಸುವುದಿಲ್ಲವೇ ಸ್ವಾಮಿ ?

† ಶ್ರೀ ಎ. ಆರ್. ಬದರಿನಾರಾಯಣ.—ನಾನು ಭಾವಿಸುವ ಪ್ರಶ್ನೆ ಇಲ್ಲ. ಗಜೇಂದ್ರಗಡ್ಕರ್ ಅವರ ಸಮಿತಿಯವರು 30ಕ್ಕಿಂತ ಕಡಮೆಯಾಗಿ 60ಕ್ಕಿಂತ ಜಾಸ್ತಿಯಾಗಿ ಕಾಲೇಜುಗಳು ಯಾವ ವಿಶ್ವವಿದ್ಯಾನಿಲಯದಲ್ಲಿಯೂ ಇರಬಾರದು, ಹೆಚ್ಚಿಗೆ ಕಾಲೇಜುಗಳಿದ್ದರೆ ಬೇರೆ ವಿಶ್ವವಿದ್ಯಾನಿಲಯವಿರಬೇಕು, ವಿದ್ಯಾಭ್ಯಾಸ ಸರಿಯಾಗಿ ನಡೆಯುವುದಕ್ಕೆ ಈ ರೀತಿಯಾಗಿರಬೇಕು ಎನ್ನುವ ಒಂದು ಮಾದರಿ (ನಾರ್ಮ್ಸ್) ಹಾಕಿಕೊಂಡಿದ್ದಾರೆ.

1-30 P. M.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾನು ಕೇಳಿದ್ದು ಮೈಸೂರು ಸಂಸ್ಥಾನದಲ್ಲ ನಾಲ್ಕನೇ ವಿಶ್ವವಿದ್ಯಾನಿಲಯ ಬೇಕು ಎಂದು ಹೇಳುತ್ತೀರಾ ಅಥವಾ ಬೇಡ ಎಂದು ಹೇಳುತ್ತೀರಾ ?

Sri A. R. BADARINARAYANA —We have appointed a Committee. It is going into that question. The question has not been decided.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು (ಅ)ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಹಾಗಾದರೆ ಎಷ್ಟು ಕಾಲ ಬೇಕಾಗುತ್ತದೆ ? ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಿ ? ಈ ಪ್ರಶ್ನೆ ಉದ್ಭವಿಸಿ ಬಹಳ ಕಾಲ ಆಯಿತು. ಯಾವಾಗ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೀರಿ ?

Sri A. R. BADARINARAYANA.–The financial implications will have to be examined. A detailed and thorough examination of the matter has got to be conducted and it is being done.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ರಾಜ್ಯದಲ್ಲಿ 4ನೇ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವುದಕ್ಕೆ ಹಣದ ಕೊರತೆ ಇದೆ ಎಂದು ಹೇಳಿದಿರಿ. ಈ ಸಂದರ್ಭದಲ್ಲಿ ಬೇರೆ ವಿಶ್ವವಿದ್ಯಾನಿಲಯವನ್ನೂ, ಬೇರೆ ಕಾಲೇಜುಗಳನ್ನೂ ಆರಂಭಿಸುತ್ತಾ ಇರುವಾಗ ಸರ್ಕಾರ ಅದಕ್ಕೆ ಮಾತ್ರ ದುಡ್ಡು ಇದೆ, ಇದಕ್ಕೆ ಮಾತ್ರ ದುಡ್ಡು ತಮ್ಮ ಸರ್ಕಾರದಲ್ಲಿ ಇಲ್ಲವೇ ?

ಶ್ರೀ ಎ. ಆರ್. ಬದರಿನಾರಾಯಣ.—ಹಣದ ಕೊರತೆ ಇದೆ ಎಂದು ಹೇಳಲಿಲ್ಲ. It is still under examination ಎಂದು ಹೇಳಿದೆ.

Borewell Scheme in Shikaripur Taluk

545. **Sri K. YENKATAPPA** (Shikaripur).—

Will the Minister for Co-operation be pleased to state :—

(*a*) whether the sanction of Bore-well scheme through the Land Development Bank under the World Bank aid in some parts of Valagund, Udagani, Hosur and Anjanapur Kasaba of Shikaripur taluk is under the consideration of the Government ;

(*b*) if so, whether the scheme has been prepared by the Geological departmental officers ;

(*c*) if so, whether Government intend to issue any orders so as to take up this scheme in the above mentioned areas ?

Sri A. SHANKARA ALVA (Minister for Co-operation).—

(*a*) The scheme has already been implemented.

(*b*) The scheme is prepared according to the advice of the Geological Department.

(*c*) The Shikaripur Primary Land Development Bank has already been instructed to receive loan applications from the ryots.

ಶ್ರೀ ಕೆ. ಯಂಕಟಪ್ಪ.—(ಅ)ಗೆ ಉತ್ತರವಾಗಿ ಈ ಯೋಜನೆಯನ್ನು ಆಗಲೇ ಜಾರಿಗೆ ತರಲಾಗಿದೆ ಎಂದು ಹೇಳಿದ್ದೀರಿ. ನಾನು ಕೇಳಿದ್ದು ಆ ರೀತಿ ತೆಗೆದುಕೊಂಡಂಥ ಯೋಜನೆಯು ಬಗ್ಗೆ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎ. ಶಂಕರ ಆಳ್ವ.—ಆ ಸ್ಕೀಮು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಆಗಬೇಕು.

ಶ್ರೀ ಕೆ. ಯಂಕಟಪ್ಪ —ಲ್ಯಾಂಡ್ ಡೆವಲಪ್‌ನೆಂಟ್ ಬ್ಯಾಂಕ್‌ನಿಂದ ಸಾಲ ಕೊಟ್ಟು ರೈತರೇ ತೆಗೆದುಕೊಳ್ಳುವುದಕ್ಕೆ ಆದೇಶ ನೀಡಿದ್ದಾರೆ. ಅದರ ಬದಲು ಸರ್ಕಾರವೇ ಈ ಕಾರ್ಯಕ್ರಮ ತೆಗೆದುಕೊಂಡು ಅದನ್ನು ಯೋಜನಾ ರೂಪದಲ್ಲಿ ಮಾಡಿ ರೈತರಿಗೆ ಕಂತುಗಳ ಮೇಲೆ ಕೊಡಲಕ್ಕೆ ಅವಕಾಶ ಮಾಡಿಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಶಂಕರ ಆಳ್ವ.—ಸಧ್ಯಕ್ಕೆ ಆ ಯೋಜನೆ ಇಲ್ಲ.

ಶ್ರೀ ಕೆ. ಯಂಕಟಪ್ಪ.—ಶಿಕಾರಿಪುರ ತಾಲ್ಲೂಕು ವಾಳಗುಂಡ. ಉಡಗಣಿ, ಹೊಸೂರು. ಮತ್ತು, ಅಂಜನಾಪುರ ಕಸಬಾದ ಕೆಲವು ಭಾಗಗಳಲ್ಲಿ ಅರ್ಜಿಗಳನ್ನು ಕೊಟ್ಟರೆ ಕೆಲಸ ಬಹಳ ನಿಧಾನವಾಗುತ್ತದೆ. ಇದಕ್ಕೆ ಮೂಲಕಾರಣ ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನವರು ಏನಾದರೂ ಕಾರಣವನ್ನು ಹೇಳಿ ನಿಧಾನಮಾಡುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ತಾವು ಏನಾದರೂ ಡೈರೆಕ್ಷನ್ ಕೊಡಬಲ್ಲಿರಾ !

ಶ್ರೀ ಎ. ಶಂಕರ ಆಳ್ವ.—ಶಿಕಾರಿ ಪುರದಲ್ಲಿ ಜಿಯಾಲಾಜಿಕಲ್ ಸರ್ವೆ ಆಗಿದೆ. ಅಪ್ಲಿಕೇಷನ್ ಫಾರ್ ಓಪನ್ ವೆಲ್ಸ್‌ಗೆ ಬಂದ ಅರ್ಜಿಗಳ ಪೈಕಿ 19 ಬೋರ್‌ವೆಲ್ಸ್‌ಗೆ ಶಿಫಾರಸ್ಸು ಮಾಡಿ ಅರ್ಜಿಗಳನ್ನು ಕಳಿಸಿಕೊಟ್ಟಿದ್ದಾರೆ. 32 ಅರ್ಜಿಗಳು ಉಂಟು. ಅದನ್ನು ಪ್ರೊಸೆಸ್ ಮಾಡುವುದಕ್ಕೆ ಶೀಘ್ರವಾಗಿ ಕಳಿಸಿಕೊಡುತ್ತೇವೆ.

ಶ್ರೀ ಕೆ. ಯಂಕಟಪ್ಪ.—ಅರ್ಜಿಗಳನ್ನು ಕಳಿಸಬೇಕಾದರೆ ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟಿನವರು ರಿಗ್ಸ್ ಬೋರ್ ಸಾಮಗ್ರಿ ಬಗ್ಗೆ ಸರ್ಟಿಫಿಕೇಟ್ ಕೊಡಬೇಕು ಎನ್ನುವ ಆದೇಶ ಇದೆ. ನಮಗೆ ರಿಗ್ಸ್ ಸಿಕ್ಕುತ್ತಾ ಇಲ್ಲ. ಬೋರ್ಸ್ ಸಿಕ್ಕುತ್ತಾ ಇಲ್ಲ. ಆದುದರಿಂದ ರಿಗ್ಸ್ ಮತ್ತು ಬೋರ್ಸ್ ವ್ಯವಸ್ಥೆ ಮಾಡಿದರೆ ಸರ್ಟಿಫಿಕೇಟ್ ಸಿಕ್ಕಿದಾಗ ಲೋನ್ ಸಿಕ್ಕುವುದಕ್ಕೆ ಅನುಕೂಲವಾಗುತ್ತದೆ. ಶಿಕಾರಿಪುರ ತಾಲ್ಲೂಕಿಗೆ ಇನ್ನು 2-3 ಬೋರ್‌ವೆಲ್ಸನ್ನು ಒದಗಿಸುವುದಕ್ಕೆ ಸಾಧ್ಯವೇ ?

ಶ್ರೀ ಎ. ಶಂಕರ ಆಳ್ವ.—ರಿಗ್ಸ್ ಅಭಾವ ಇದೆ. ಬಾಕಿ ಕಡೆ ಹೋಗಿದೆ. ಆದಷ್ಟು ಬೇಗ ತರಿಸಿ ಒದಗಿಸಿ ಕೊಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟಿನವರು ತೋರಿಸಿದ ಜಾಗದಲ್ಲೇ ನೀರು ಬರದೇ ಇದ್ದರೆ ಅಂಥಾ ಸಂದರ್ಭದಲ್ಲಿ ಆ ಸಾಲದ ಹಣವನ್ನು ಮನ್ನಾ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅದಕ್ಕೆ ಒಂದು ಸ್ಕೇಲ್ ಇಟ್ಟಿದ್ದೇವೆ. ಅವರು ತೋರಿಸಿಕೊಟ್ಟ ಸ್ಥಳದಲ್ಲಿ ಬಾವಿ ತೋಡಿ ನೀರು ಸಿಗದಿದ್ದರೆ ಡೆಪ್ಯೂಟಿ ಕಮೀಷನರು ಒಂದು ಸರ್ಟಿಫಿಕೇಟ್ ಕೊಟ್ಟರೆ ಇಷ್ಟು ರಿಯಾಯಿತಿ ಕೊಡಬೇಕು ಎನ್ನುವುದು ಉಂಟು, ಅಷ್ಟು ರಿಯಾಯಿತಿ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ರಿಗ್ ಯಂತ್ರವನ್ನು ಖಾಸಗಿಯವರಿಂದ ಬಾಡಿಗೆಗೆ ತೆಗೆದುಕೊಳ್ಳುವ ಬದಲು ಸರ್ಕಾರದವರೇ 10-20 ರಿಗ್ಸ್‌ಗಳನ್ನು ಕೊಂಡುಕೊಂಡು ಏತಕ್ಕೆ ಕೊಡಬಾರದು.

ಶ್ರೀ ಡಿ. ದೇವರಾಜ ಅರಸ್.—ರಿಗ್ಸ್ ಅಭಾವ ಇದೆ. ಡ್ರಾಟ್ ಕಂಡೀಷನ್ಸ್ ಇರುವ ಕಡೆಗೆ ಅದನ್ನು ಕಳುಹಿಸಿ ಕೊಟ್ಟಿದೆ. ಆದಷ್ಟು ಬೇಗ ಅಲ್ಲಿಗೂ ಕಳಿಸಲು ಪ್ರಯತ್ನ ಮಾಡುತ್ತಾ ಇದ್ದೇವೆ. ರಿಗ್ ನಮ್ಮ ಇಂಡಿಯಾದಲ್ಲಿ ಮ್ಯಾನುಫ್ಯಾಕ್ಚರ್ ಮಾಡುವ ಒಂದೆರಡು ಕಂಪನಿಗಳು ಇವೆ. ಯಾರು ಕೇಳಿದರೂ 8 ತಿಂಗಳು ಅವಧಿ ಬೇಕಾಗುತ್ತದೆ. ಪ್ರಯರ್ ಆರ್ಡರ್ಸ್ ಕೊಟ್ಟಿದ್ದೇವೆ. ಆ ಕಮಿಟ್‌ಮೆಂಟ್ ಆನರ್ ಮಾಡಬೇಕಾದರೆ 6—7 ತಿಂಗಳು ಬೇಕು. ಈವೊತ್ತು ಆರ್ಡರ್ ಕೊಟ್ಟರೆ 6–8 ತಿಂಗಳು ಆದಮೇಲೆ ನಮಗೆ ಸಿಕ್ಕಬಹುದು. ತಕ್ಷಣ ಸಿಕ್ಕುವುದಿಲ್ಲ. ಇಂಡಿಯಾ ದೇಶದಲ್ಲಿರುವ ಕಂಪನಿಗಳ ವಿಚಾರವೂ ಅಷ್ಟೆ. ಹೊರಗಡೆಯಿಂದ ಅಡ್ವಾನ್ಸ್ ಬುಕ್ಕಿಂಗ್ ಮಾಡಿಕೊಂಡಿರುತ್ತಾರೆ, ಅದಕ್ಕಾಗಿ ಖಾಸಗಿ ಜನರು ಸಹ ಇದ್ದರೆ, ಸರ್ಕಾರಕ್ಕೆ ಬೇಕು ಎಂದರೆ ಅವರೂ ತರಿಸಿಕೊಡುತ್ತಾರೆ. ಅದಕ್ಕೆ ಅನುಮಾನ ಬೇಡ. ಈವೊತ್ತು 15 ರಿಗ್ ಬೇಕು ಎಂದು ಗೌರ್ನಮೆಂಟ್ ಆಫ್ ಇಂಡಿಯಾದವರಿಗೆ ಅರಿಕೆ ಮಾಡಿದ್ದೇವೆ. ಅದಕ್ಕೆ ಬೇಕಾಗತಕ್ಕ nearly crores of Rupees of foreign exchange release ಮಾಡುತ್ತೇವೆ ಎಂದು ಹೇಳಿ ಅವರು ಒಪ್ಪಿದ್ದಾರೆ. ಇದು ಖಾಸಗೀ ಜನರಲ್ಲಿ ಏನಾದರೂ ಇದೆಯೋ ಹೇಳಿ. ಅವರೂ ಕೂಡ ನಮ್ಮ ಬೇಡಿಕೆ ಕೊಟ್ಟರೆ ಅದನ್ನು ತರಿಸಿಕೊಡುತ್ತೇವೆ.

Reservation of Posts to S. C., S. T. and O.B.C. by Public Undertakings

578 Sri K. SIDDIAH (Santhemarahally).—

Will the Minister for Industies be pleased to state :—

(*a*) whether the instructions regarding the classification, rotation and reservation of posts for Scheduled Castes, Scheduled Tribes and other Backward Classes issued in G. O. No. GAD 42 SRR 69/1, dated 6-9-1969 and the subsequent Government orders thereon have been given effect to by the Public Undertakings in the State ;

(*b*) if not, the names of such public undertakings and the reasons therefor ?

SRI A. R. BADARINARAYANA (Minister for Education)].—[On behalf of Sri S. M. KRISHNA (Minister for Industries)

(*a*) Yes.

(*b*) Does not arise in view of the reply to clause (*a*) above.

ಶ್ರೀ ಕೆ. ಸಿದ್ದಯ್ಯ.—(ಅ) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಯಾವ ಯಾವ ವರ್ಗದಲ್ಲಿ ಯಾವ ಯಾವ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಜಾರಿಗೆ ಕೊಟ್ಟಿವೆ ಎಂಬುದನ್ನು ತಿಳಿಸುತ್ತೀರಾ ?

†ಶ್ರೀ ಎ. ಆರ್. ಬದರಿನಾರಾಯಣ.—ಎಲ್ಲಾ ಪಬ್ಲಿಕ್‌ಅಂಡರ್ ಟೇಕಿಂಗ್ಸ್‌ನಲ್ಲೂ ಕೊಟ್ಟಿದೆ. ಬಂದಿರತಕ್ಕಂಥ ಸಮಾಚಾರದ ಪ್ರಕಾರ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿ., ಗೌರ್ನಮೆಂಟ್ ಸ್ಪನ್ ಸಿಲ್ಕ್ ಮಿಲ್ಸ್ ಚೆನ್ನಪಟ್ಟಣ ಮತ್ತು ರೇಡಿಯೋ ಅಂಡ್ ಎಲೆಕ್ಟ್ರಿಕಲ್ ಮಾನುಫ್ಯಾಕ್ಚರಿಂಗ್ ಕಂಪನಿ ಲಿ., ಇದರಲ್ಲಿ 25 ಭಾಗ ಮೊದಲು ಷಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಅವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಸಿದ್ದಯ್ಯ.—ಇದರಲ್ಲಿ ಅನೇಕ ಗೌರ್ನಮೆಂಟ್ ಡಿಪಾರ್ಟ್‌ಮೆಂಟ್‌ನ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಾರ್ಪೋರೇಷನ್ಸ್ ಏನು ಇದೆ ಅದರಲ್ಲಿ ಬಹುಭಾಗ ಷೇರು ಇರತಕ್ಕ ಕೆಲವು ಫರ್ಮ್‌ಗಳು ಏನು ಇವೆ ಅವರು ಆ ಭಾಗದವರನ್ನೇ ಇಟ್ಟಿದ್ದಾರೆ. ತಾವು ಅವರೆಲ್ಲರೂ ಕೊಟ್ಟಿದ್ದಾರೆ ಎಂದು ತಿಳಿಸಿದ್ದೀರಿ. ಮತ್ತು ತಮ್ಮ ಉತ್ತರದಲ್ಲಿ ಒಂದೆರಡು ಮಾತ್ರ ತಿಳಿಸಿದ್ದೀರಿ, ಹಾಗಾದರೆ ಬಾಕಿ ಕಂಪನಿಗಳು ಈ ಗೌರ್ನಮೆಂಟ್ ಆರ್ಡರನ್ನು ಜಾರಿಗೆ ಕೊಟ್ಟಿಲ್ಲ ಎಂದು ಅರ್ಥವೇ ?

ಶ್ರೀ ಎ. ಆರ್. ಬದರಿನಾರಾಯಣ.—6-9-1969 ರಲ್ಲಿ ಗೌರ್ನಮೆಂಟ್ ಆರ್ಡರ್ ಪ್ರಕಾರ ಸ್ಟ್ರಿಕ್ಟ್ ಆಗಿ ಇನ್‌ಸ್ಟ್ರಕ್ಷನ್ ಕೊಟ್ಟಿದೆ. ಇನ್‌ಸ್ಟ್ರಕ್ಷನ್ಸ್ ಪ್ರಕಾರ ಅವರು ಮಾಡುತ್ತಾ ಇದ್ದಾರೆ. ಕೆಲವು ಹೇಳಿದ್ದು ಮೊದಲು 25 ಪರ್ಸೆಂಟು ಕೆಲಸಕ್ಕೆ ತೆಗೆದುಕೊಂಡಿದ್ದಾರೆ ಎನ್ನತಕ್ಕದ್ದು ಮಾತ್ರ ಹೇಳಿದೆ. ಬಾಕಿದು ರಿಕ್ವೈರ್ಡ್ ಪ್ರಿನ್ಸಿಪಲ್ ಪ್ರಕಾರ ಕೊಟ್ಟಿದೆ.

ಶ್ರೀ ಕೆ. ವೆಂಕಟಪ್ಪ.—ನನ್ನ ಪ್ರಶ್ನೆಗೆ ಸಮಂಜಸವಾದ ಉತ್ತರ ಇಲ್ಲ ಎಂದು ಭಾಸವಾಗುತ್ತದೆ. ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್ ಆಗಲಿ, ಕಾರ್ಪೋರೇಷನ್ ಆಗಲಿ ಇತರ ಫರ್ಮ್‌ಗಳಾಗಲ ಅಂಥಾವಕ್ಕೆ ರಿಸರ್ವೇಷನ್ ಆರ್ಡರ್ ಪ್ರಕಾರ ಯಾವ ಯಾವ ತಾರೀಖುಗಳಲ್ಲಿ ಕೊಟ್ಟಿದ್ದಾರೆ ಎಂದು ತಿಳಿಸುತ್ತೀರಾ ?

Sri A. R. BADARINARAYANA.—The Question confines only to undertakings and not others. ಪಬ್ಲಿಕ್‌ಅಂಡರ್ ಟೇಕಿಂಗ್ಸ್‌ನಲ್ಲಿ ಏನೇನು ಮಾಡಬೇಕೋ ಅದನ್ನು ಮಾಡಿದೆ ಎಂದು ಹೇಳಿದೆ. ವಿವರಗಳು ಬೇಕಾದರೆ ಈಗ ನನ್ನ ಹತ್ತಿರ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ನ್ಯೂ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಸೋಪ್ ಫ್ಯಾಕ್ಟರಿಗಳಲ್ಲಿ ಏನು ರಿಸರ್ವೇಷನ್ ಮಾಡಬೇಕು ಅದನ್ನು ಮಾಡಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ! ರಿಸರ್ವೇಷನ್ ಮಾಡಿದ್ದಾರೆ ಎಂದರೆ ಎಷ್ಟು ಪರ್ಸೆಂಟೇಜ್ ಕೊಟ್ಟಿದ್ದಾರೆ !

ಶ್ರೀ ಎ. ಆರ್. ಬದರಿನಾರಾಯಣ.—ಸರ್ಕಾರದ ಇನ್‌ಫರ್‌ಮೇಷನ್ ಪ್ರಕಾರ ಅವರು ಕಾನೂನು ಪ್ರಕಾರ ಎಷ್ಟು ಪರ್ಸೆಂಟೇಜ್ ರಿಸರ್ವ್ ಮಾಡಬೇಕಾಗಿತ್ತೋ ಅದನ್ನು ಮಾಡಿದೆ ಎನ್ನತಕ್ಕದ್ದು ರಿಪೋರ್ಟ್ ಬಂದಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಸರ್ಕಾರಿ ಸಂಸ್ಥೆಗಳು ಅಲ್ಲದೆ ಅಟಾನಮಸ್ ಬಾಡಿಗಳಿಗೆ ಎಲ್ಲ ವಕ್ಕೂ ಕೂಡ ಸರ್ಕಾರ ಸರ್ಕಾರದ ಆಜ್ಞೆಯನ್ನು ಎಕ್ಷ್‌ಟೆಂಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಅಧ್ಯಕ್ಷರು.—ಅದು ಇನ್ನೊಂದು ಪ್ರಶ್ನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಮಾನ್ಯ ಮಂತ್ರಿಗಳು ಕೇವಲ ನಾಲ್ಕು ಫ್ಯಾಕ್ಟರಿಗಳ ಹೆಸರು ಓದಿದರು. ಈ ಲೆಜಿಸ್ಲೆಚರ್ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯವರಿಗೆ ವಹಿಸಿರತಕ್ಕ 22 ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗಳಿಗೂ ಇದನ್ನು ಅನ್ವಯಿಸುವಂತೆ ಮಾಡುತ್ತೀರಾ ? 22 public undertakings are assigned to the Public Undertakings Committee of the Legislature. Whether this order applies to all these public undertakings or only to the 3 or 4 units which the Minister read out ?

Sri A. R. BADARINARAYANA.—The reservation order is for all the Public Undertakings as they are understood commonly.

ಶ್ರೀ ಕೆ. ಸಿದ್ದಯ್ಯ.—ನಾನು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಬರಲಿಲ್ಲ. ನನ್ನ ಪ್ರಶ್ನೆ ಏನು ಎಂದರೆ ನಮ್ಮ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಯಾವುವು ? ಸರ್ಕಾರಿ ಆರ್ಡರನ್ನು ಜಾರಿಗೆ ಯಾರು ಯಾರು ಕೊಟ್ಟಿದ್ದಾರೆ ? ಸೋಪ್ ಫ್ಯಾಕ್ಟರಿ, ಗೌರ್ನಮೆಂಟ್ ಸಿಲ್ಕ್ ಫ್ಯಾಕ್ಟರಿ ಎಂ.ಎಸ್.ಆರ್.ಟಿ.ಸಿ, ಐರನ್ ಅಂಡ್ ಸ್ಟೀಲ್ ವರ್ಕ್ಸ್ ರವೊಕ್ಕೀ ಫ್ಯಾಕ್ಟರಿ ಈ ಎಲ್ಲಾ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಮತ್ತು ಇನ್ನೂ ಇತರೆ ಅಂಡರ್‌ಟೇಕಿಂಗ್ಸ್‌ಗಳಲ್ಲಿ ಸರ್ಕಾರಿ ಆರ್ಡರ್‌ನ್ನು ಯಾವಾಗ ಜಾರಿಗೆ ಕೊಟ್ಟಿದ್ದಾರೆ ? ಯಾವ ಯಾವ ವರ್ಷಗಳಲ್ಲಿ ಕೊಟ್ಟಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

Sri A. R. BADARINARAYANA.—To the question " whether subsequent Governmet orders have been given effect to " the reply is furnished as "YES," which means that it has been applied and the order is complied with

Integrated Development of Western Ghat Region

606. **Sri N. B. SIRDESAI** (Khanapur).—

Will the Minister of State for Planning and Information be pleased to state :—

(*a*) whether Khanapur taluk of Belgaum District has been selected for the Integrated Development under the Integrated Development of Western Ghat Region Scheme by the Cell created under the Chairmanship of Development Commissioner, Mysore, Bangalore ;

(*b*) whether M.L.A., Khanapur, through his letter dated 10-10-1972, addressed to Development Commissioner and copies endorsed to (1) Chief Engineer, M.I.P.H., Bangalore (2) Chief Engineer C and B, Bangalore (3) Chief Engineer, M.S.E.B., Bangalore (4) Deputy Secretary, Planning Department, Government of Mysore (5) Secretary to Government, Public Works Department, Bangalore has suggested schemes for the consideration of Government taking into account the availability of vast resources in the fields of water, power, forest, horticulture, minerals, tourism, fisheries and roads ;

(*c*) if so, when Government would like to start investigation of the proposed scheme ?

Sri D. DEVARAJ URS (Chief Minister). [On behalf of Sri Devendrappa Ghalappa (Minister of State for planning and Information)]

(*a*) Yes,

(*b*) Yes.

(*c*) Action has been initiated. A detailed plan is being formulated for the integrated development of Western Ghats Region during the Fifth Five Year Plan in which Schemes for the development of Khanapur taluk will also be included.

Sri N. B. SIRDESAI.—May I know Sir, on what lines the Plan is [illegible] formed and what schemes would be included in the Plan ?

Sri D. DEVARAJ URS.—All these details will come out in the [illegible] as it appears. The Hon'ble Member is anxious to know whether [illegible] taluk would be included. I have said YES. He wants to know what are the schemes and localities : all that will come with the plan when it comes out.

Sri N. B. SIRDESAI.—May I know what regions come under the western Ghats region ; and how many taluks have been included in the scheme ?

Sri D. DEVARAJ URS.— Madam Speaker, I will say if you permit. Otherwise, the question he has asked is only for Khanapur.

Sri N. B. SIRDESAI.—I am satisfied with the answer, Sir.,

Supersession of T.A.P.M.C. Society, Limited, Hiriyur

64[illegible]. **Sri V. MASIYAPPA** (Challakere).—

Will the Minister for Co-operation be pleased to state :—

(*a*) whether the Taluk Agricultural Produce Marketing Co-operative Society, Limited, Hiriyur has been superseded ;

(*b*) if so, from what date ;

(*c*) the reasons for the supersession ;

(*d*) whether any amount of the Society has been misappropriated ;

(*e*) if so, the number of persons who have misappropriated and the action taken to recover the amount so misappropriated ;

(*f*) whether any prosecution cases have been launched against any of them or whether any case has been referred to police ;

(*g*) whether any such cases are pending with the police ; if so, since how long ?

Sri [illegible] SHANKARA ALVA (Minister for Co-operation).—

(*a*) Yes.

(*b*) From 11-8-1970.

(*c*) (1) Misutilisation of Government share capital.

(2) Misutilisation of sales proceeds of consignment dues.

(3) Advancing huge amounts indiscriminately to the Directors *Ex*-Directors and to the employees of the Society.

(RI A. SHANKARA ALVA)

(4) Advancing huge amounts to contractors.

(5) Not implementing schemes sanctioned to the Society.

(6) Not convening the Annaul General Body Meeting of the society.

(*d*) Yes. Rs. 97,291-55 has been misappropriated.

(*e*) 8 persons. Out of these 7 persons disputes have been filed in respect of 7 persons. As regards remaining 1 person dispute was not filed since whereabouts of the incumbent are not known. Out of 7 disputes filed one dispute was dismissed since it was time-barred. Award has been passed in respect of one dispute. Remaining 5 disputes are pending.

(*f*) Out of 8 persons, authorisation has already been issued to police to launch criminal cases against 2 persons, but these cases have not yet been registered for want of certain additional information. Action is being taken to supply necessary information required by the police authorities to see that the cases are registered without delay. As regards remaining 6 persons action is being taken to refer the cases to the police after taking legal opinion in the matter.

(*g*) No case is pending with Police.

ಶ್ರೀ ವಿ. ಮುನಿಯಪ್ಪ.—ಸ್ವಾಮಿ (ಸಿ) ಪ್ರಶ್ನೆಗೆ ಉತ್ತರವಾಗಿ ಬೇರೆ ಬೇರೆ ಬಾಬುಗಳಲ್ಲಿ ಹಣ ದುರುಪಯೋಗವಾಗಿದೆ ಎಂದು ತಿಳಿಸಿದ್ದೀರಿ ? Misutilisation of Share Capital ; Misutilisation of sale proceeds of consignment dues ; and Advancing hurge amounts indiscriminately to the Dirsctors, Ex-Directors, and to the Employees of the Society, ಈ ಬಾಬುಗಳಲ್ಲಿ ಎಷ್ಟೆಷ್ಟು ಹಣ ದುರುಪಯೋಗ ಮಾಡಿದ್ದಾರೆ ಎನ್ನುವುದನ್ನು ತಿಳಿಸುತ್ತೀರಾ ?

† ಶ್ರೀ ಎ. ಶಂಕರ ಆಳ್ವ.—ಪ್ರತ್ಯೇಕವಾಗಿ ಆಯಾ ಐಟಮ್ಸ್‌ಗಳಲ್ಲಿ ಎಷ್ಟೆಷ್ಟು ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ವಿ. ಮುನಿಯಪ್ಪ.—ಡೈರೆಕ್ಟರ್ಸ್ ಮತ್ತು ಎಕ್ಸ್-ಡೈರೆಕ್ಟರ್ಸ್, ಎಂಪ್ಲಾಯೀಸ್ ಈ ಮೂರರಲ್ಲಿ ದುರುಪಯೋಗ ಮಾಡಿರತಕ್ಕದ್ದು ಹೇಳಿದ್ದೀರಿ. ಯಾರು ಯಾರು ಎಷ್ಟೆಷ್ಟು ಹಣ ದುರುಪಯೋಗ ಮಾಡಿದ್ದಾರೆ ಹೇಳುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಶ್ರೀಯುತರು, ಜಿ. ರಾಮರೆಡ್ಡಿ 2 ಸಾವಿರ ರೂಪಾಯಿ, ಇ. ಕೊಟ್ರಪ್ಪ 6 ಸಾವಿರ ರೂಪಾಯಿ, ವಿಶ್ವನಾಥರಾವ್ 13,400 ರೂಪಾಯಿ, ಹೊರಕೇರಯ್ಯ ರೂ. 559-02, ಜಿ. ತಿಪ್ಪೇಸ್ವಾಮಿ ರೂ. 783-63, ಎ.ಎಸ್. ತಿಪ್ಪೇಸ್ವಾಮಿ ರೂ. 57,837-18, ಪಿ. ತಿಮ್ಮಯ್ಯ ರೂ. 13,168-79 ಬಿ.ವಿ. ದೇವಿಚಂದ್ ನಾಯಕ್ ರೂ. 1,328-81, ಒಟ್ಟು 97,291 ರೂಪಾಯಿ 5 ಪೈಸೆ ಈ ಎಂಟು ಜನರಿಂದ ದುರುಪಯೋಗವಾಗಿದೆ.

ಶ್ರೀ ವಿ. ಮುನಿಯಪ್ಪ.—ಒಟ್ಟು 97,291 ರೂಪಾಯಿ 5 ಪೈಸೆ ದುರುಪಯೋಗ 8 ಜನರಿಂದ ಆಗಿದೆ ಎಂದು ಹೇಳಿದ್ದೀರಿ. ಅವರು ಯಾರುಯಾರು ; ಎಷ್ಟೆಷ್ಟು ಹಣ ತಿಳಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅವರ ಮೇಲೆ ಕೇಸ್ ಪೆಂಡಿಂಗ್ ಇದೆ. ಒಬ್ಬರದು ಟ್ರಿಬ್ಯೂನಲ್ ನಲ್ಲಿ ಉಂಟು. ಕೊಟ್ರಪ್ಪನವರ ಕೇಸ್ ಟೈಮ್ ಬಾರ್ ಆಗಿ ಡಿಸ್‌ಮಿಸ್ ಆಗಿದೆ, ವಿಶ್ವನಾಥ ರಾವ್ ಕೇಸ್ ಆರ್ಬಿಟ್ರೇಟರ್ ಅವರ ಹತ್ತಿರ ಪೆಂಡಿಂಗ್ ಇದೆ. ಹೊರಕೇರಯ್ಯ ಅವರದು ಕೂಡ ಆರ್ಬಿಟ್ರೇಟರ್ ಹತ್ತಿರ ಪೆಂಡಿಂಗ್ ಇದೆ. ಜಿ. ತಿಪ್ಪೇಸ್ವಾಮಿ ಅವರು ಎಲ್ಲಿ ಇದ್ದಾರೆ ಗೊತ್ತಿಲ್ಲ, ಅದ

ಡಿಸ್‌ಪ್ಯೂಟ್ ಆಗಲಿಲ್ಲ. ಎ. ಎಸ್. ತಿಪ್ಪೇಸ್ವಾಮಿ ಅವರದು ಕೂಡ ಅರ್ಬಿಟ್ರೇಟರ್ ಹತ್ತಿರ ಂಗ್ ಇದೆ. ಪಿ. ತಿಮ್ಮಯ್ಯ ಅವರದು ಕೂಡ ಆರ್ಬಿಟ್ರೇಟರ್ ಹತ್ತಿರ ಪೆಂಡಿಂಗ್ ಇದೆ. ಇನ್ನು ಚಂದ್ ನಾಯಕ್ ಅವರ ಮೇಲೆ ಅವಾರ್ಡ್‌ಪಾಸ್ ಆಗಿದೆ.

ಶ್ರೀ ಪಿ. ಮಸಿಯಪ್ಪ.—ಡೈರೆಕ್ಟರ್ಸ್ ಮತ್ತು ಎಕ್ಸ್ ಡೈರೆಕ್ಟರ್ಸ್ ವಿಷಯ ಬರಲಿಲ್ಲ ಅದ ಸ್ಕರ ಕೇಳಿದೆ.

ಶ್ರೀ ಎ. ಶಂಕರ ಆಳ್ವ.—ಇಷ್ಟು ಜನರ ಮೇಲೆ ಕೇಸ್ ದಾಖಲೆಯಾಗಿದೆ. ಪ್ರತ್ಯೇಕವಾಗಿ ರೆಕ್ಟರ್ಸ್ ಯಾರು ಎಂದು ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ.

MADAM SPEAKER.—Now Question Hour is over.

QUESTIONS FOR ANSWERS ON THE DAY

(But not taken up)

Electricity Line on Banks of Krishna and Bheema Rivers

348. **Sri BAPUGOWDA** (Shahapur).—

Will the Minister for Public Works and Electricity be pleased to state :—

(*a*) the number of miles of electricity line laid on the banks of Krishna and Bheema Rivers in Gulbarga District ;

(*b*) whether any pumpsets on behalf of Government installed on these Banks to lift the water for irrigation in this famine district, if so, their number ;

(*c*) if not installed, the reasons for the delay ?

Sri H. M. CHANNABASAPPA (Minister for Public Works and Electricity).—

(*a*) 63 Kms. on the bank of the River Bhima only.

(*d*) Yes. 9 pumpsets have been installed.

(*c*) Does not arise in view of reply to clause (*b*).

Vacancies of Junior Engineers (Graduated and non Graduated)

354. **Sri H. D. DEVE GOWDA** (Holenarasipur).—

Will the Minister for Public Works and Electricity be pleased to state :—

(*a*) (i) the number of vacancies of Junior Engineers (Graduates and Non-graduates) as on 31st December 1972 ;

(ii) out of them the number of Civil and Mechanical Engineers posts that are vacant ;

(SRI H. D. DEVEGOWDA)

(*b*) the number of vacancies in respect of which the P.S.C. has called for applications through advertisement ;

(*c*) out of the posts so adverticed the number of posts remarked for Junior Engineers (Civil Graduates), Junior Engineers (Civil-Non-Graduates), Junior Engineers (Mechanical-Graduates), Junior Engineers (Mechanical-Diplomas) ;

(*d*) whether it is the intention of the Government to reserve more number of such posts as the posts of Junior Engineers (Non-gazetted) were not filled up during the last 8 years ?

Sri H. M. CHANNABASAPPA (Minister for Public Works and Electricity).—

(*a*) (i) Vacancy position of Junior Engineers as on 20th February 1973.—

(1)	Junior Engineers (Graduates)	1,254
(2)	Junior Engineers (Non-Graduates).	577
		1,831

(ii) As per the cadre and Recruitment Rules, the vacancies of Junior Enginiers are not classified into Civil and Mechanical. However, keeping in view of the need of the Department for the Mechanical Engineers, 10 per cent. of the posts in the cadre of Junior Engineers are being filled by appointment of Graduates and non-Graduates in Mechanical Engineering.

(*b*) The cadre of Junior Engineers consists of both Civil and Mechanical Engineers.

(*c*) There is no resevation for Mechanical and Civil Engineering Graduates and Diploma Holders. The requirements of Junior Engineers under each category is recruited keeping in view the need and the demands of the Department at the relevant time.

(*d*) The working strength of Non-graduate Junior Engineers is now more than the cadre strength fixed for them. As such the question of reserving more number of posts does not arise.

Sanction of Advance Incrments to Teachers

44[illegible] **Sri V. N. PATIL** (Humnabad).—

Will the Minister for Education be pleased to state :—

(*a*) whether the benefit of four advance increments or ad hoc twelve rupees increase in the salary granted to the teachers of lower grade who complete their graduation during their service is being continued even to-day ;

(*b*) if not, the date on which it was stopped and the reasons for doing so ;

(*c*) whether the Director of Public Instruction has recommended for the revival of the practice of granting of advance increments or *ad hoc* increase ?

Sri A. R. BADARINARAYANA (Minister for Education).—

(*a*) No.

(*b*) From 18th February 1970. As there is no provision according to G. O. No. FD 73 SRP (I) 69, dated 18th February 1970 in view of extension of Tukol Pay Commission scales.

(*c*) Yes. The proposals could not be accepted. However on further repreerntation, the question is being examined.

CALLING ATTENTION TO MATTERS OF URGENT PUBLIC IMPORTANCE :

(*i*) *re* : termination of services of teachers.

Sri S. M. SHEERNALY CHANDRASEKHAR.—Madam, I call the attention of the Hon'ble Minister for Education *re* : termination of services of teachers in the State.

Sri A. R. BADARI NARAYANA (Minister for Education).—Madam Speaker, this notice refer to the termination of teachers : which teachers, whether it is aided-school teachers, or private school teachers, or high school teachers or college teachers, it is not definite, it is not clear.

MADAM SPEAKER.—We disallowed the notice in the first instance. Then the Hon'ble Member came to me and requested me. I said if he could give definite information, then he may raise it.

Sri S. M SHEERANALY CHANDRASEKHAR.–Madam Speaker, the Hon. Minister has given a statement. My submission is that last month about 800 teachers of Government High Schools have been terminated because Taluk Board High schools, previously were taken over to Government.

MADAM SPEAKER.—Why did not the member write all these things in his notice ? I had told him to make it clear. But he just went away.

Sri S. M. SHEERANALY CHANDRASEKHAR.–Now I am apprising the situation.

MADAM SPEAKER.—It is not like that. That is not the procedure.

Sri A. R. BADARI NARAYANA.—Sir, I state :—

District Recruitment Committees were constituted during the year 1972 for recruitment of Primary School teachers in each District. As it would take some time for the Recruitment Committees to recruit candidates local appointments were being made as a stop-gap arrangement.

Wherever District Recruitment Committees have not finalised the list, the local candidates are continued up to end of February 1973. There is a proposal for further continuance of these local candidates, particularly, in tutorial cadre till the end of 10th April 1973, *i.e.*, end of the present academic year. This proposal is under examination of Government. By virtue of the recruitment to be effected by the District Recruitment Committees, there is no shrinkage or loss in the employment potential but on the contray the stop gap arrangement made by recuiting local candidates is sought to be placed on a permanent and statutory footing.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮಾನ್ಯ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟಿನಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ವಿವರವಾಗಿ ಹೇಳಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ತಾಲ್ಲೂಕ್ ಬೋರ್ಡಿನ ಹೈಸ್ಕೂಲುಗಳನ್ನು ಸರ್ಕಾರದವರು ವಹಿಸಿಕೊಂಡಾಗ ಹಿಂದೆ ತಾಲ್ಲೂಕ್ ಬೋರ್ಡಿನವರು ನೇಮಕ ಮಾಡಿಕೊಂಡಂಥ ಉಪಾಧ್ಯಾಯರುಗಳನ್ನು ಟರ್ಮಿನೇಟ್ ಮಾಡಿದ್ದಾರೆ. ಇದರಿಂದ ಬಹಳಷ್ಟು ಜನರಿಗೆ ಕೆಲಸ ಇಲ್ಲದೆ ತೊಂದರೆಯಾಗಿದೆ. ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ?

Sri A. R. BADARINARAYANA.–Madam, I thought he wanted information about primary school teachers. I did not anticipate what type of tetchers he had in mind. Now he is saying he wants information about Taluk Board teachers. If that is so, he can send a separate calling attention notice and I shall answer it.

(*ii*) *re* : Termination of the Service of Typists in Major Irrigation Project

Sri K. H. HANUME GOWDA (Hassan).—Madam, I call the attention of the Minister for Public Works and Electricity to the termination of the services of typists in Major irrigation projects.

Sri H. M. CHANNABASAPPA (Minister for Public Works and Electricity).—Madam, I wish to make the following statement :

1. The point raised in the Calling Attention Notice No. 50 by Shri K. H. Hanume Gowda is that some of the candidates working as Typists in PWD in Major Irrigation Projects on temporary basis since two years have been relieved contrary to the assurances given by the Hon'ble Chief Minister.

2. There were a number of vacancies of posts of Typists in the Zone of the Irrigation South. Since Superintending Engineers of the Irrigation South were pressing for the filling up of the posts of Typists, the Chief Engineer, Irrigation, South asked them to take action to appoint local candidates from Employment Exchanges as per the orders in the G. O. No. GAD 90 SRR 70, dated 22-9-1971. Accordingly typists have been appointed by the Superintending Engineers as local candidates.

3. The Chief Engineer (C and B) had called for applications for regular recruitment to the posts of Typists in his Notification No. DRC 10 NTN (i) 71-72, dated 14th April, 1972. There after, a final selection of candidates for the posts of Typists was made by the Departmental Recruitment Committee of the PWD. and the following number of candidates have been selected and allocated among the Circles by the Secretary of the Departmental Recruitment Committee of Public Works Dept.

1.	Bangalore Circle Unit	...	23
2.	Shimoga Circle Unit	...	52
3.	Mangalore Circle Unit	...	18
4.	Belgaum Circle Unit	...	27
		Total	120

4. The following number of typists have been posted to the Projects.—

Hemavathy Pproject	...	19
Bhadra Project	...	5
Harangi Project	..	12

It is, therefore, likely that the following number of local candidates in the cadre of Typists would be displaced consequent on the reporting for duty the typists who have been regularly recruited by the Departmental Recruitment Committee of Public Works Dept.

Hemavathy Project	...	12
Bhadra Project	...	3
Harangi Project	...	9

5. In O. M. No. GAD 6 SRL 72, date, 24-2-1973 instructions have been issued directing that the local candidates working in Class III Posts may *if necessary* be continued beyond 28-2-1973 till 30-4-1973 or till the posts are filled in regularly as per rule, whichever is earlier

(SRI H. M. CHANNABASAPPA)

In a further O. M. No. Gad 6 SDL 72, dt. 27-2-1973 it is clarified that the local candidates will be continued till 30-4-1973 *if their services are necessary*.

6. As the number of local candidates relieved after the regular appointment of candidates recruited by the Public Works Dept. Recruitment Committee, are only a few, proposals are under consideration how best to provide them alternative appointments in the Public Works Department.

ಕೆ. ಎಚ್. ಹನುಮೇಗೌಡ.—ಸುಮಾರು 120 ಜನ ಟೈಪಿಸ್ಟರನ್ನು ಹೊಸದಾಗಿ ಇಲಾಖೆಯ ರೆಕ್ರೂಟ್‌ಮೆಂಟ್ ಕಮಿಟಿಯವರು ನೇಮಕ ಮಾಡಿಕೊಂಡಿದ್ದಾರೆ. ಮೊದಲು ಇದೇ ಪೋಸ್ಟ್‌ಗಳಲ್ಲಿ 3-4 ವರ್ಷಗಳಿಂದ ಕೆಲಸ ಮಾಡುತ್ತಿದ್ದವರ ಕೇಸನ್ನು ಗಣನೆಗೆ ತೆಗೆದುಕೊಳ್ಳದೆ ತಮಗೆ ಬೇಕಾದವರನ್ನು, ತಮ್ಮ ಸ್ನೇಹಿತರ ಮಕ್ಕಳನ್ನು ಇನ್‌ಫ್ಲೂಯೆನ್ಸ್ ಮೂಲಕ ನೇಮಕ ಮಾಡಿಕೊಂಡಿರುವುದರಿಂದ ಇಂದು 34 ಜನರು ಕೆಲಸ ಕಳೆದುಕೊಂಡಿದ್ದಾರೆ. ಅದು ಅನ್ಯಾಯವಲ್ಲವೇ ? ಹಂಗಾಮಿ ಜಾಗಗಳಿಗೆ ಖಾಯಂ ಫಿಲಪ್ ಮಾಡುವಾಗ ಹಂಗಾಮಿ ನೌಕರರ ಕೇಸನ್ನು ಗಣನೆಗೆ ತೆಗೆದುಕೊಳ್ಳಲಾಗುವುದೆಂದು ಮುಖ್ಯಮಂತ್ರಿಗಳು ಹೇಳಿದ್ದರೂ ಸಹ ಈ ರೀತಿ ಮಾಡಿದ್ದಾರೆ. ಯಾವ ಚಾರ್ಜಸ್ ಇಲ್ಲದೆ ಚೆನ್ನಾಗಿ ಕೆಲಸಕಾರ್ಯ ಮಾಡುತ್ತಿದ್ದ 34 ಜನ ಟೈಪಿಸ್ಟ್‌ಗಳು ಕೆಲಸ ಕಳೆದುಕೊಳ್ಳಲು ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಮೇಜರ್ ಇರಿಗೇಷನ್‌ಗೆ ಸಂಬಂಧಪಟ್ಟ ಪ್ರಶ್ನೆಯನ್ನು ಕೇಳಿ ಈಗ ದೇಶದಾದ್ಯಂತವಿರುವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಹಂಗಾಮಿ ನೌಕರರನ್ನು ಸಂದರ್ಭಕ್ಕೆ ತಕ್ಕಂತೆ ನೇಮಕ ಮಾಡಿಕೊಳ್ಳಲಾಗುತ್ತದೆ. ಮುಂದೆ ಇಲಾಖೆಯ ರೆಕ್ರೂಟ್‌ಮೆಂಟ್ ಕಮಿಟಿಯವರು ನೇಮಕ ಮಾಡುವಾಗ ಆ ಕಮಿಟಿಯ ಮುಂದೆ ಹಾಜರಾಗುವವರ ಪೈಕಿ ಯೋಗ್ಯರಾದವರು ಇರಬಹುದು, ಅಥವಾ ಇಲ್ಲದವರೂ ಸಹ ಇರಬಹುದು. ಸ್ಥಳೀಯ ಅಭ್ಯರ್ಥಿಗಳು ಪಿ.ಎಸ್.ಸಿ. ಮುಂದೆ ಅಥವಾ ರೆಕ್ರೂಟ್‌ಮೆಂಟ್ ಕಮಿಟಿಯ ಮುಂದೆ ಹೋದಾಗ ಪರೀಕ್ಷೆಯಲ್ಲಿ ಅವರು ಯಾವ ಒಂದು ಮಟ್ಟಕ್ಕೆ ಬರಬೇಕೋ ಆ ಮಟ್ಟಕ್ಕೆ ಬರದೇ ಹೋದರೆ ಮಾಡತಕ್ಕದ್ದು ಏನಿದೆ ? ಹಂಗಾಮಿಯಾಗಿ ನೇಮಕ ಮಾಡಿಕೊಂಡವರನ್ನೆಲ್ಲಾ ಕಾಯಂ ಮಾಡಬೇಕೆಂದು ಹೇಳುವುದಾದರೆ ಪಿ.ಎಸ್.ಸಿ. ಆಗಲೀ, ಇಲಾಖಾ ರೆಕ್ರೂಟ್‌ಮೆಂಟ್ ಕಮಿಟಿಗಳಾಗಲೀ ಅನಾವಶ್ಯಕ. Therefore local candidates will have to be scrutinised and selections made based on merit. ಇವರುಗಳ ಪೈಕಿ 8 ಜನರಿಗೆ ಕೆಲಸ ಸಿಕ್ಕಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಅವರಿಗೆ ಆಲ್ಟರ್‌ನೇಟಿವ್ ಅಪಾಯಿಂಟ್‌ಮೆಂಟ್ ಏನು ಕೊಡುವುದಕ್ಕೆ ಸಾಧ್ಯ ಎಂಬುದನ್ನು ಸರ್ಕಾರ ಸಹಾನುಭೂತಿಯಿಂದ ಯೋಚನೆ ಮಾಡುತ್ತದೆ.

Procedure for taking up Calling Attention Notices

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಮಾನ್ಯ ಅಧ್ಯಕ್ಷರೇ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಅದು ಏನಾಯಿತು ?

ಅಧ್ಯಕ್ಷರು.—ಇವೊತ್ತು ಕಾಲ್ ಅಟೆನ್‌ಷನ್ ನೋಟೀಸ್ ಎರಡೂ ಹಾಕಿದ್ದೇವೆ. ಇನ್ನು ಮುಂದೆ ಒಂದಕ್ಕೇ ಇಳಿಸುತ್ತೇವೆ. ಪ್ರಯಾರಿಟಿ ಪ್ರಕಾರ ನಿಮ್ಮದು ಬಂದಾಗ ತೆಗೆದುಕೊಳ್ಳುತ್ತೇವೆ.

2-00 P.M.

Sri D. DEVARAJ URS (Chief Minister).—It is nowhere stated that every call attention notice sent should be brought before the House. If that were to be so, it would mean all the 200 members should have time for every call attention notice they send. Generally call attention notices are sent on certain important matters and it is ultimately the discretion of the Chair to admit such notices.

Murder of a Political Leader at Puttur

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಒಂದು ಅತ್ಯಂತ ಮುಖ್ಯವಾದ ವಿಷಯವನ್ನು ನಾನು ಇವೊತ್ತು ತಮ್ಮ ಗಮನಕ್ಕೆ ತರಬಯಸುತ್ತೇನೆ. ಪುತ್ತೂರಿನಲ್ಲಿ ಒಂದು ರಾಜಕೀಯ ಪಕ್ಷದ ಮುಖಂಡರನ್ನು ಕೊಲೆ ಮಾಡಿದ್ದಾರೆ.

ಅಧ್ಯಕ್ಷರು.—ನೀವು ಆ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್ ಏನು ಕಳುಹಿಸಿದ್ದೀರಿ ಅದಕ್ಕೆ ನಾವು ನಿಮಗೆ ಉತ್ತರ ಕಳುಹಿಸಿದ್ದೇವೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೋಣಂದೂರು ಲಿಂಗಪ್ಪ.—ಆ ಬಗ್ಗೆ ಪೋಲೀಸಿನವರು ಏನು ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಅವರು ಯಾವುದೇ ಪಕ್ಷದವರಾಗಲಿ, ಅಲ್ಲಿ ಯಾರ ಕೈವಾಡವೂ ನಡೆಯುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಇದನ್ನು ಪೋಲೀಸಿನವರಿಂದ ಕೂಲಂಕಷವಾಗಿ ಪರಿಶೀಲನೆ ಮಾಡಿ ಇದಕ್ಕೆ ಸಂಬಂಧಪಟ್ಟವರು ಯಾರು ಎಂಬುದನ್ನು ತಿಳಿದುಕೊಂಡು ಅರೆಸ್ಟ್ ಮಾಡಿಸುತ್ತೇವೆ, ಕೇಸು ಹಾಕಬೇಕಾದ್ದನ್ನು ಕೇಸು ಹಾಕುತ್ತೇವೆ. ಮುಂದಿನ ಕೆಲಸ ಕಾನೂನು ಯಾವರೀತಿ ಇದೆಯೋ ಆ ರೀತಿ ಆಗುತ್ತದೆ.

Maharashtra-Mysore Border Affairs

ಶ್ರೀ ಪಾಟಾಳ್ ನಾಗರಾಜ್ (ಚಾಮರಾಜಪೇಟೆ).—ಈಗ ಮಹಾರಾಷ್ಟ್ರದಲ್ಲಿ ಆ ರಾಜ್ಯದ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸರ್ವ ಪಕ್ಷಗಳ ನಿಯೋಗ ಗಡಿ ಸಮಸ್ಯೆಯ ಬಗ್ಗೆ ಮಾತನಾಡಲು ದೆಹಲಿಗೆ ಹೋಗುತ್ತದೆ. ನಮ್ಮ ಮುಖ್ಯ ಮಂತ್ರಿಗಳು ಏನು ಮಾಡುತ್ತಾರೆ? 16 ವರ್ಷಗಳಾದರೂ ನಮ್ಮ ರಾಜ್ಯದ ಗಡಿ ಸಮಸ್ಯೆ ಬಗೆಹರಿಯಲಿಲ್ಲ. ನಮ್ಮ ಮುಖ್ಯ ಮಂತ್ರಿಗಳು ದೆಹಲಿಗೆ ಒಂದು ಸರ್ವ ಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗುತ್ತಾರೆಯೋ ಹೇಗೆ? ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ತಿಳಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಅವರು ಹೋಗಿ ಬರಲಿ ಏನೇನು ಆಗುತ್ತದೆ ಎಂಬುದನ್ನು ನೋಡೋಣ.

ಶ್ರೀ ಬಿ. ವಿ. ಕಕ್ಕಿಲಾಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಅಭಾವದ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

Mistake in the L. A. Proceedings for 3-7-1972

ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ).—ಮಾನ್ಯ ಅಧ್ಯಕ್ಷರೇ ಕಳೆದ ಅಧಿವೇಶನದಲ್ಲಿ ಈ ಸಭೆಯಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಟೊಳ್ಳು ಎಂದು ಕರೆದರೆಂದು ಕಾಂಗ್ರೆಸ್ಸಿನ ಸದಸ್ಯರಾದ ಶ್ರೀ ಶೀರನಾಳಿ ಚಂದ್ರಶೇಖರ್ ಅವರು ಒಂದು ಪ್ರಿವಿಲೇಜ್‌ಮೋಷನ್ ತಂದಿದ್ದರು. ಅದರ ಈ ಸಭೆಯ ಕಾರ್ಯಕಲಾಪದ ವರದಿಯ ಪಾರ್ಟ್ 4 ಪುಟ 272 ಜುಲೈ 3ನೇ ತಾರೀಖು 1972ನೇ ಇಸವಿ ಇದರಲ್ಲಿ ಗಟ್ಟಿ ಚಂದ್ರಶೇಖರ್ ಎಂದ ನನ್ನ ಹೆಸರು ಬಂದು ಬಿಟ್ಟಿದೆ.

ಅಧ್ಯಕ್ಷರು.—ಅದು ಮುದ್ರಣದ ದೋಷ. ಅದಕ್ಕೆ ಎರಾಟ ಇಷ್ಯೂ ಮಾಡುತ್ತೇವೆ.

Difficulties in issue of Public Gallery Passes

ಶ್ರೀ ಪಾಟಾಳ್ ನಾಗರಾಜ್.—ಅಧ್ಯಕ್ಷರೇ ಗ್ಯಾಲರಿಗೆ ಪಾಸು ಕೊಡುವುದಕ್ಕೆ ನಾವು ಬರೆದು ಕಳುಹಿಸಿದರೂ ಜನಗಳಿಗೆ ಪಾಸು ಕೊಡುವುದಿಲ್ಲ. ಇದರಿಂದ ನಮಗೆ ತುಂಬಾ ಕಷ್ಟವಾಗಿದೆ.

(ಶ್ರೀ ವಾಟಾಳ್ ನಾಗರಾಜ್)

ನಮಗೆ ಪರಿಚಯವಿರತಕ್ಕ ನೂರಾರು ಜನಗಳು ಈ ಸಭೆಯ ಕಾರ್ಯಕಲಾಪ ನಡೆಯುವುದನ್ನು ನೋಡಬೇಕೆಂದು ಬರುತ್ತಾರೆ. ಅವರಿಗೆ ಪಾಸು ಕೊಡದಿದ್ದರೆ ಹೇಗೆ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಕೊಡಬೇಕು ಪಾಸು ಎಂದು ಚೀಟಿ ಕಳುಹಿಸುವಾಗ ನಮ್ಮ ಕಡೆಯವರು ಇಂತಿಥವರು ಇದ್ದಾರೆ ಅವರಿಗೆ ಪಾಸು ಕೊಡಬೇಕೆಂದು ಅವರ ಹೆಸರನ್ನು ಬರೆಯಬೇಕು. ಸುಮ್ಮನೆ 20 ಪಾಸು ಕೊಡಿ ಎಂದು ಬರೆದು ಕಳುಹಿಸಿದರೆ ಆ ರೀತಿ ಪಾಸು ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ನನ್ನ ಪರಿಚಯಸ್ತರಿಗೆ ಪಾಸ್ ಕೊಡಿ ಎಂದು ಚೀಟಿ ಬರೆದಿದ್ದೇನೆ. ಪಾಸು ಕೊಡದೇ ಇರುವುದರಿಂದ ನನಗೆ ಬಹಳ ಅವಹೇಳನ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ದಯವಿಟ್ಟು ಇಂತಹ ಪರಿಸ್ಥಿತಿಯನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮೊನ್ನೆಯ ದಿವಸ ಯಾರು ಅಲ್ಲಿ ಗಲಾಟೆ ಮಾಡಿದರು ಅವರ ಅಡ್ರೆಸ್ ಮತ್ತು ಹೆಸರು ಎಲ್ಲವೂ ಇದೆ. ಆದ್ದರಿಂದ ಅಂಥವರು ಇದ್ದಾರೆಂದು ಪಾಸ್ ಕೊಡಲಿಲ್ಲವೋ ಏನೋ ಅದನ್ನು ವಿಚಾರಿಸುತ್ತೇನೆ. ಯಾರಿಗೂ ಸದಸ್ಯರಿಗೆ ತೊಂದರೆ ಮಾಡಬೇಕೆಂಬುದು ನಮ್ಮ ಉದ್ದೇಶವಲ್ಲ. ಗ್ಯಾಲರಿ ಇರುವುದು ಜನರಿಗೋಸ್ಕರ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಗ್ಯಾಲರಿ ಭರ್ತಿಯಾಗದೆ ಖಾಲಿಯಾಗಿದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಗ್ಯಾಲರಿಗೆ ಏಕೆ ಮಾತನಾಡಬೇಕು !

ಶ್ರೀ ಎಂ. ಎಸ್. ಕೃಷ್ಣನ್.—ನಾವು ಇಲ್ಲಿ ನಿಂತುಕೊಂಡು ಗ್ಯಾಲರಿಯ ಜನರಿಗೆ ಮೆಚ್ಚಿಗೆಗೋಸ್ಕರ ಮಾತನಾಡುತ್ತಾ ಇಲ್ಲ. ಆ ಅರ್ಥದಲ್ಲಿ ತಾವು ಮಾತನಾಡಬಾರದು. ಆದರೆ ಇವತ್ತು ಈ ರೀತಿ ಮಾಡಿದ್ದರಿಂದ ಅನೇಕ ಜನರಿಗೆ ತೊಂದರೆಯಾಗಿದೆ.

BUDGET ESTIMATES FOR 1973-74 General Discussion

(Debate Continued)

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಮಾತನಾಡುವಾಗ ನಮ್ಮ ರಾಷ್ಟ್ರದಲ್ಲಿರತಕ್ಕಂತಹ ಅಸಮಾನತೆಗಳ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೆ. ರಾಷ್ಟ್ರ ಜೀವನದಲ್ಲಿ ಕಂಡು ಬರತಕ್ಕಂಥ ಅಸಮಾನತೆಗೆ ಒಳಪಟ್ಟದ್ದು ನಮ್ಮ ರಾಜ್ಯವೂ ಒಂದಾಗಿದೆ. ಇಂತಹ ಅಸಮಾನತೆ ಇರುವಾಗ ಸ್ವಾಭಾವಿಕವಾಗಿ ಸಾಮಾಜಿಕ ಜೀವನದಲ್ಲಿ ಮನುಷ್ಯರಿಗೆ ಬಡತನ ಮತ್ತು ಜೀವನಕ್ಕೆ ಬೇಕಾಗಿರತಕ್ಕಂತಹ ಕನಿಷ್ಟ ಪ್ರಮಾಣದ ಸೌಕರ್ಯ ಇಲ್ಲದಿರತಕ್ಕಂತಹ ಸಮಯದಲ್ಲಿ, ಒಂದು ರೀತಿಯಲ್ಲಿ ಇವರ ಘೋಷಣೆಗೆ ಮಾರುಹೋಗುವುದು ಸ್ವಾಭಾವಿಕ. ಇಂತಹ ಪರಿಸ್ಥಿತಿ ಒಂದು ಕಡೆ ಇರುವಾಗ, ಇನ್ನೊಂದು ಕಡೆ ಅಭಾವದ ಹೊರೆ ಇರುವಾಗ ಕಳೆದ 25 ವರ್ಷಗಳ ಯೋಜನೆಯ ಫಲವಾಗಿ ನಾವು ಕಂಡದ್ದಾದರೂ ಏನು ? ನಮ್ಮ ರಾಜ್ಯದಲ್ಲಿ ಇವತ್ತು ಅಭಾವ ಪರಿಸ್ಥಿತಿ ಒಂದು ಭೀಕರ ಸ್ವರೂಪವನ್ನು ತಾಳಿದೆ. ಇದರಿಂದ ಸರ್ವೆ ಸಾಮಾನ್ಯವಾಗಿ ನಮ್ಮ ಜೀವನ ಅತ್ಯಂತ ದುಸ್ಥಿತಿಗೆ ಮುಟ್ಟಿದೆ ಎಂದು ಹೇಳಬಹುದು. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಅಪೇಕ್ಷೆಪಡುತ್ತೇನೆ. ಕೆಲವು ತಜ್ಞರು ನಮ್ಮ ರಾಷ್ಟ್ರದ ಬಗ್ಗೆ ಹೇಳಿದ ಅಭಿಪ್ರಾಯವನ್ನು ಇಲ್ಲಿ ಹೇಳುವುದು ಸೂಕ್ತವೆಂದು ಕಾಣುತ್ತದೆ. ದೆಹಲಿಯಲ್ಲಿ ನಡೆದ ಒಂದು ವಿಚಾರಗೋಷ್ಟಿಯಲ್ಲಿ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದಾರೆ. ಅದು ಹಿಂದೂಸ್ತಾನ್ ಟೈಂಸ್ ಪತ್ರಿಕೆಯಲ್ಲಿ ಸಹ 2-2-1972 ರಲ್ಲಿ ಪ್ರಕಟವಾಗಿದೆ. ಅದು ಈ ರೀತಿ ಇದೆ. ‘‘ಭಾರತವು ಜಗತ್ತಿನ ದೃಷ್ಟಿಯಲ್ಲಿ ದುರ್ಬಲ, ಹಸಿದ, ಅತಿ ಹೆಚ್ಚು ಜನಸಂಖ್ಯೆಯ ಆರ್ಥಿಕವಾಗಿ ದಿವಾಳಿಯಾದ, ಸಾಮಾಜಿಕವಾಗಿ ಹಿಂದುಳಿದ ಮತ್ತು ಶೀಘ್ರ ಅಭಿವೃದ್ಧಿಯು ಅಸಾಧ್ಯವೆನಿಸುವ ರಾಷ್ಟ್ರವಾಗಿದೆ ಎಂದರೆ ಇದೊಂದು ‘‘ತಳಕಾಣದ’’ ಒಂದು ಹಳ್ಳವಾಗಿದೆ.’’ ಪ್ರಪಂಚದ ಅನೇಕ ಭಾಗಗಳಿಂದ ಬಂದಿರತಕ್ಕಂತಹ ಅನೇಕ ತಜ್ಞರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಆಳ ಎಷ್ಟು ಇದೆಯೆಂದರೆ ಶೀಘ್ರವಾಗಿ ನಾವು ಮೇಲಕ್ಕೆ ಬರುವುದಕ್ಕೆ ಸಾಧ್ಯವಿಲ್ಲವೆಂಬುದನ್ನು ಊಹಿಸಿಕೊಳ್ಳಬಹುದು. ಇಂತಹ ದುಸ್ಥಿತಿ ಇರುವಾಗ ನಮ್ಮ ರಾಜ್ಯದ ಸ್ಥಿತಿಯನ್ನು

ಯಾವ ರೀತಿಯಲ್ಲಿ ಸರಿಪಡಿಸುತ್ತಾರೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಆದ್ದರಿಂದ ಆಯವ್ಯಯ ಪಟ್ಟಿಯಲ್ಲಿ ಏನೊಂದು ಆಶ್ವಾಸನೆ ಕೊಟ್ಟಿದ್ದಾರೆ, ಮತ್ತು ಏನೇನು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಅದರಲ್ಲಿಯೂ ಕಳೆದ ಆಯವ್ಯಯ ಪಟ್ಟಿಯನ್ನು ಮಂಡಿಸುವಾಗ ಈ ಸರ್ಕಾರ ಆಡಳಿತಕ್ಕೆ ಬಂದ ತಕ್ಷಣ ಗಡಿಬಿಡಿಯಲ್ಲಿ ಇದ್ದುದರಿಂದ ಹೆಚ್ಚು ಸಮಂಜಸವಾದ ಆಯವ್ಯಯ ಪತ್ರವನ್ನು ಮಂಡಿಸಲಾಗಲಿಲ್ಲವೆಂದು ಹೇಳಿದ್ದಾರೆ. ಆದರೆ ಈ ವರ್ಷವಾದರೂ ಕಳೆದ ಚುನಾವಣೆಯ ಕಾಲದಲ್ಲಿ ಕೊಟ್ಟಂತಹ ಭರವಸೆಗಳನ್ನು ಈಡೇರಿಸುವುದರ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಯೇ ಮತ್ತು ಕಾರ್ಯಗತಮಾಡಿದ್ದಾರೆಯೇ ಎಂದು ನೋಡಿದರೆ ಅದು ಯಾವುದೂ ಇಲ್ಲದೆ ಮತ್ತೆ ದೇಶದ ಜನತೆಯನ್ನು ಇವರು ವಂಚನೆ ಮಾಡಿದರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಚುನಾವಣೆಯ ಕಾಲದಲ್ಲಿ ಒಂದು ಘೋಷಣೆ ಮಾಡಿದ ಪ್ರತಿ ನನ್ನಲ್ಲಿ ಇದೆ. ದೇಶದಲ್ಲಿ ಸ್ವಾಭಾವಿಕವಾಗಿ ನಿರ್ಗತಿಕರಾದವರು ಈ ಆಶೆಯನ್ನು ತೋರಿಸುವುದರಿಂದ ನಂಬಿ ಬೆಂಬಲ ಕೊಡುವುದು ಸಹಜವಾದ ಮನುಷ್ಯನ ಲಕ್ಷಣ. ಹಾಗೆ ಕಳೆದ 25 ವರ್ಷಗಳಿಂದ ಶೋಷಣೆಗೆ ಒಳಪಟ್ಟ ಜನರು ಏನಿದ್ದಾರೆ, ಅವರು ಇಂತಹ ಇವರ ಘೋಷಣೆಗೆ ಮೋಸ ಹೋಗಿಬಿಟ್ಟರು. ಇಂತಹ ಆಶೆಯನ್ನು ತೋರಿಸಿ ಸಾಮಾನ್ಯ ಜನರ ಬೆಂಬಲವನ್ನು ದೊರಕಿಸಿಕೊಂಡರು. ಇವರ ಘೋಷಣೆಯಲ್ಲಿ ಉಳುವವನಿಗೆ ಹೊಲ, ಸರ್ವರಿಗೂ ಉದ್ಯೋಗ ಮತ್ತು ಅಸಮಾನತೆಯ ನಿವಾರಣೆ—ಹೀಗೆ ಮೂರು ಘೋಷಣೆಗಳನ್ನು ಮುದ್ರಿಸಿ ಸಾಮಾನ್ಯ ಜನರಿಂದ ಓಟನ್ನು ಗಿಟ್ಟಿಸಿಕೊಂಡಿದ್ದಾರೆ. ಈ ರೀತಿಯ ಮೂರು ಮಾತುಗಳನ್ನು ಹಸಿದ ಹೊಟ್ಟೆಯ ಜನರಿಗೆ ಹೇಳಿದರೆ, ಅವರು ನಂಬುವುದು ಸ್ವಾಭಾವಿಕ. ಇದರಿಂದಾಗಿ ಇವರ ಪಕ್ಷಕ್ಕೆ ಅನಿರೀಕ್ಷಿತವಾದ ಬೆಂಬಲ ಸಿಕ್ಕಿತು. ಇನ್ನೊಂದು ಕಡೆಯಿಂದ ಸಮಾಜಕ್ಕೆ ವಿರೋಧವಾಗಿರುವ ಶಕ್ತಿಗಳನ್ನು ಹೊರಗೆ ಹಾಕತಕ್ಕ ದೃಶ್ಯವನ್ನು ತೋರಿಸಿಕೊಟ್ಟಿದ್ದಾರೆ. ಆದರೆ ಅಧಿಕಾರದಲ್ಲಿದ್ದ ಪಕ್ಷ ಘೋಷಣೆಗಳನು ಮಾಡಿದ ರೀತಿಯಲ್ಲಿ ಬಡ ಜನರ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಯಾವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಆದ್ದರಿಂದ ಇಂತಹ ಬೆಂಬಲ ಸಿಕ್ಕಿದಾಗ ಇಂತಹ ಘೋಷಣೆಗಳನು ಕಾರ್ಯಗತಮಾಡುವ ಜವಾಬ್ದಾರಿ ಈ ಸರ್ಕಾರಕ್ಕೆ ಇದೆ. ಆದರೆ ಇವರು ಎಷ್ಟರಮಟ್ಟಿಗೆ ಇದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆಂಬುದು ನಮ್ಮ ಮುಂದಿರುವ ಪ್ರಶ್ನೆ. ನಮಗೆ ಬೇಕಾಗಿರುವುದು ಜನರಿಗೆ ಇವತ್ತು ಕನಿಷ್ಟ ಕೆಲವು ಸೌಕರ್ಯಗಳನ್ನು ಒದಗಿಸಿಕೊಡಬೇಕಾಗುದುದು ಪ್ರಜಾಪ್ರಭುತ್ವ ಸರ್ಕಾರದ ಕರ್ತವ್ಯ. ಅದರಲ್ಲಿಯೂ ಕೂಡ ಸರ್ಕಾರ ಏನೊಂದು ಘೋಷಣೆಗಳನ್ನು ಮಾಡಿಕೊಂಡು ಅಧಿಕಾರಕ್ಕೆ ಬಂದಿದೆಯೋ ಅವೆಲ್ಲವನ್ನೂ ಕಾರ್ಯಗತಮಾಡುವುದು ಸರ್ಕಾರದ ಪ್ರಥಮ ಕರ್ತವ್ಯ. ಅದನ್ನು ಅವರು ಎಷ್ಟರಮಟ್ಟಿಗೆ ಮಾಡಿದ್ದಾರೆಂಬುದನ್ನು ನಾನು ಈಗ ನಿವೇದಿಸಿಕೊಳ್ಳುತ್ತೇನೆ. ಜನಸಾಮಾನ್ಯರಿಗೆ ಬೇಕಾದಷ್ಟು ದುಡಿಯುವುದಕ್ಕೆ ಕೆಲಸ, ವಾಸಕ್ಕೆ ಮನೆ, ಅವರಿಗೆ ಜೀವನ ನಡೆಸುವುದಕ್ಕೆ ಉತ್ತಮವಾದಂಥ ರಕ್ಷಣೆ ಹಾಗೂ ವಿದ್ಯಾಭ್ಯಾಸ ಮತ್ತು ವೈದ್ಯಕೀಯ ಸೌಕರ್ಯ—ಇವು ಮೂಲಭೂತವಾಗಿ ನಾಗರೀಕ ಸೌಲಭ್ಯಗಳು ಮನುಷ್ಯನಿಗೆ ಸಿಕ್ಕಿದರೆ ಸಾಕು. ಆಗ ಯಾವ ಒಂದು ಹೆಚ್ಚಿನ ಅಧಿಕಾರವನ್ನು ಜನ ನಿರೀಕ್ಷಣೆ ಮಾಡುವುದಿಲ್ಲ. ಎಲ್ಲಕ್ಕಿಂತಲೂ ಹೆಚ್ಚಿಗೆ ಕನಿಷ್ಟ ಅಗತ್ಯಗಳನ್ನು ಯಾವ ರೀತಿಯಲ್ಲಿ ಜನರಿಗೆ ಒದಗಿಸಿಕೊಡಬೇಕೆಂಬುದನ್ನು ಅದರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದನ್ನು ಅರ್ಥಮಂತ್ರಿಗಳು ವಿಶ್ಲೇಷಣೆ ಮಾಡಿದ್ದಾರೆ. ಒಂದು ಮಾತನ್ನು ಮಾತ್ರ ಬಹಳ ಜಾಣರಾಗಿ ಕೈಬಿಟ್ಟಿದ್ದಾರೆ. ಜನರಿಗೆ ಉದ್ಯೋಗ ಕೊಡುವುದು ನನ್ನದಲ್ಲವೆಂದು ಹೇಳಿದ್ದಾರೆ. ಆದ್ದರಿಂದ ನಾನು ತಿಳಿದಿರುವ ಹಾಗೆ ಅವರು ಶಿಕ್ಷಣ, ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಕೆಲವು ಕನಿಷ್ಟ ಅಗತ್ಯವಾದ ಕಾರ್ಯಕ್ರಮಗಳನ್ನು ಮಾತ್ರ ಅವರು ವಿಶ್ಲೇಷಣೆ ಮಾಡಿದ್ದಾರೆಯೇ ವಿನಹ ಮನುಷ್ಯನಿಗೆ ದುಡಿಯುವುದಕ್ಕೆ ಕೆಲಸವನ್ನು ಒದಗಿಸುವ ಕೆಲಸ ನನ್ನದಲ್ಲವೆಂದು ಕೈಬಿಟ್ಟಿದ್ದಾರೆ. ಜನರಿಗೆ ಉದ್ಯೋಗಗಳನ್ನು ಒದಗಿಸಿಕೊಡುವ ಪ್ರಯತ್ನದಲ್ಲಿ ಈ ಆಯವ್ಯಯ ಸಂಪೂರ್ಣವಾಗಿ ವಿಫಲವಾಗಿದೆ. ಇವತ್ತು ಜನರಿಗೆ ದುಡಿಯುವುದಕ್ಕೆ ಅಪಾರವಾದ ಪ್ರೇಮ ಇದೆ. ಅಪಾರವಾಗಿ ಜನಸಂಖ್ಯೆಯೂ ಇದೆ. ಯೋಗ್ಯರಾದ ಜನರೂ ಇದ್ದಾರೆ. ಅವರಿಗೆ ಕೆಲಸವಿಲ್ಲದೆ ಜೀವನ ನಡೆಸುವುದು ಬಹಳ ಕಷ್ಟವಾಗಿದೆ. ಅವರಿಗೆ ಬಹು ಮುಖ್ಯವಾಗಿ ಬೇಕಾಗಿರುವುದು ಕೆಲಸ. ಕೆಲಸ ಕೊಟ್ಟರೆ ಅವರ ಜೀವನ ನಡೆಯುತ್ತದೆ, ರಾಜ್ಯದ ಉತ್ಪಾದನಾ ಶಕ್ತಿಯೂ ಹೆಚ್ಚಾಗುತ್ತದೆ, ಜನರಿಗೆ ಕೊಡುವ ಕೆಲಸ ಹೇಗಿರಬೇಕೆಂದರೆ ದುಡಿಮೆ ಕ್ಷೇತ್ರದಲ್ಲಿ ಅವರನ್ನು ಸೇರಿಸಿ ಅಲ್ಲಿ ಅವರು ಕೆಲಸವನ್ನು ಮಾಡುವಂತೆ ಮಾಡುವುದು ಮುಖ್ಯ. ದುಡಿಯುವುದಕ್ಕೆ ಅವರನ್ನು ಹಚ್ಚಬೇಕಾಗಿದೆ, ತಮಗೆಲ್ಲರಿಗೂ ತಿಳಿದಿರುವ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸೇಕಡ 40ರಷ್ಟು ಜನರು, ನಗರ ಪ್ರದೇಶಗಳಲ್ಲಿ ಸೇಕಡ 50ರಷ್ಟು ಜನರು ಈ ಒಂದು ಬಡತನ ಬೇಗೆಯಲ್ಲಿ ಸಿಕ್ಕಿ ನರಳುತ್ತಾ ಬಹಳ ಕೀಳುಮಟ್ಟದ ಜೀವನ

(ಶ್ರೀ ಕಾಗೋಡು ತಿಮ್ಮಪ್ಪ)

ನಡೆಸುತ್ತಿದ್ದಾರೆ. ದೊಡ್ಡ ಪ್ರಮಾಣದ ಜನಸಂಖ್ಯೆ ಕನಿಷ್ಟ ಪ್ರಮಾಣದ ಸೌಕರ್ಯಗಳನ್ನು ಪಡೆಯದೇ ಇರತಕ್ಕ ದುರ್ಬಲವರ್ಗ ನಮ್ಮ ದೇಶದಲ್ಲಿದೆ. ಇಂತಹ ಜನರಿಗೆ ಯಾವ್ಯಾವ ಕೆಲಸಗಳನ್ನು ಕೊಡಬೇಕೆನ್ನುವುದು ಬಹಳ ಮಹತ್ವವಾದಂಥ ವಿಚಾರ. ನಮ್ಮ ಕನಿಷ್ಟ ಅಗತ್ಯವಾದ ಕಾರ್ಯಕ್ರಮಗಳ ವಿಶ್ಲೇಷಣೆಯ ಕಡೆ ನಮ್ಮ ಅರ್ಥ ಮಂತ್ರಿಗಳು ಬಹಳ ಸೊಗಸಾದ ಭಾಷೆಯನ್ನು ಉಪಯೋಗಿಸಿದ್ದಾರೆ. ಅವರ ಭಾಷೆಯ ವಿಚಾರ ದೃಷ್ಟಿಯಿಂದ, ಅಂತಹ ಭಾಷೆಯನ್ನು ಅವರು ಬಳಸಿರತಕ್ಕದು ಏಕೆಂದರೆ ಅವರು ಅರ್ಥ ಸಚಿವರಾಗಿರುವುದೇ ಕಾರಣವೆನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಇದರಲ್ಲಿ ಅವರು ಕರ್ತವ್ಯನಿಷ್ಠರು ಎಂಬುದನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅವರು ವಿಶ್ಲೇಷಣೆ ಮಾಡುತ್ತಿದ್ದ ನಮ್ಮ ಪರಿಸ್ಥಿತಿಯ ಬಗ್ಗೆ ನಾನು ನೇರವಾಗಿ ಅರ್ಥಮಾಡಿಕೊಂಡಿದ್ದೇನೆ. ಅವರು ವಸ್ತುಸ್ಥಿತಿಯನ್ನು ಹೇಳಿದ್ದಾರೆ. ಅವರು ಹೇಳಿರತಕ್ಕ ಮಾತಿನಿಂದ ಎಲ್ಲವೂ ಅರ್ಥವಾಗುತ್ತದೆ. ಒಟ್ಟಿನಲ್ಲಿ ಈ ರಾಜ್ಯದಲ್ಲಿರತಕ್ಕ ದುರ್ಬಲವರ್ಗಕ್ಕೆ ನಾವು ಅಗತ್ಯವಾಗಿ ಕೆಲವಾರು ಕೆಲಸಗಳು ಸಿಗುವಂತೆ ವ್ಯವಸ್ಥೆ ಮಾಡಬೇಕು. ಆದು ಒಂದು ಸಾಮಾಜಿಕ ಹೊಣೆ, ಸಾಮಾಜಿಕ ಕರ್ತವ್ಯ ಎನ್ನುವ ಪದಗಳನ್ನು ಉಪಯೋಗಿಸಿದ್ದಾರೆ. ಈ ಮಾತುಗಳನ್ನು ಹೇಳುವಾಗ ದುರ್ಬಲವರ್ಗಕ್ಕೆ ಏನೇನು ಆವಶ್ಯಕವಾಗಿ ದೊರಕಿಸಿಕೊಡಬೇಕು ಎಂಬುದನ್ನು ಬಹು ಸೂಕ್ಷ್ಮವಾಗಿ ವಿಚಾರಮಾಡಿದ್ದರೆ ಚೆನ್ನಾಗಿತ್ತು. ಇವರ ಮಾತು ಒಂದು ರೀತಿಯಲ್ಲಿ ವಸ್ತುನಿಷ್ಟವಾಗಿದೆಯೇ ಹೊರತು ಅದು ಅವರ ಕರ್ತವ್ಯನಿಷ್ಠೆಯಾಗಿಲ್ಲ. ಆದಕ್ಕೆ ಪೂರ್ವಭಾವಿಯಾಗಿ ಯಾವದೊಂದು ಕಾರ್ಯಕ್ರಮವೂ ಇಲ್ಲದೇ ಇರುವುದರಿಂದ ಯಾರಿಗೇ ಆಗಲೀ ಇದರಿಂದ ಒಂದು ನೆಮ್ಮದಿ, ಸಮಾಧಾನವನ್ನು ಪಡೆಯುವುದಕ್ಕಾಗುವುದಿಲ್ಲ. ಕರ್ತವ್ಯನಿಷ್ಠೆಯಿಂದ ಕೆಲಸಮಾಡಿದ್ದೇ ಆದರೆ ಆಗ ಒಂದು ರೀತಿಯ ನೆಮ್ಮದಿಯನ್ನು ನಾವು ಪಡೆಯಬಹುದು. ಈ ರಾಜ್ಯದ ಜನರಿಗೆ ಏನಾದರೂ ಒಂದು ಆಶೆಯನ್ನು ಸಹ ತೋರಿಸಬಹುದು. ನಾವು ಚುನಾವಣೆಯಲ್ಲಿ ಆರಿಸಿ ಬಂದಮೇಲೆ ಹೆಚ್ಚು ಕಡಿಮೆ ಈ ರಾಜ್ಯದಲ್ಲಿರತಕ್ಕ ಜನರು ತಮ್ಮ ಹಿತ ರಕ್ಷಣೆಯನ್ನು ನೋಡುತ್ತಿರುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಕರ್ತವ್ಯನಿಷ್ಠೆ ಅಂದರೆ ಹೇಗೆ ಇರಬೇಕೆಂಬುದನ್ನು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಹೆಚ್ಚು ಕಡಿಮೆ ಈ ರಾಜ್ಯದ ಜನರ ಭವಿಷ್ಯವನ್ನು ಕಾಪಾಡಲು ಸರ್ಕಾರ ಬಹಳ ಹೆಚ್ಚಿನ ಜವಾಬ್ದಾರಿಯಿಂದ ವರ್ತಿಸಬೇಕು. ಈ ರಾಜ್ಯದ ಜನರ ಕನಿಷ್ಟ ಸೌಕರ್ಯಗಳನ್ನು ಒದಗಿಸುವ ದೃಷ್ಟಿಯಿಂದ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ನಾನು ಈಗ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇವತ್ತು ಬಹು ಮುಖ್ಯವಾಗಿ ಬಡವರಿಗೆ ವಸತಿ ಸೌಕರ್ಯಗಳನ್ನು ಕೊಡುವಂತಹ ಒಂದು ಉತ್ತಮವಾದಂಥ ಯೋಜನೆಯನ್ನು ಪ್ರಾರಂಭ ಮಾಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಅದು ಒಂದು ಸಣ್ಣ ಯೋಜನೆಯಾದರೂ ಒಂದು ನಿರ್ದಿಷ್ಟವಾದ ಕ್ರಮವನ್ನು ಅವರ ಬಗ್ಗೆ ತೆಗೆದುಕೊಂಡಿದ್ದಾರೆ. ಆ ಒಂದು ಕಾರ್ಯವನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ.

ಶ್ರೀ ಕೆ. ಸಿದ್ದಯ್ಯ —ಆದು ವಸ್ತುನಿಷ್ಠೆಯಲ್ಲ ಅಂದಮೇಲೆ ಅದು ಕರ್ತವ್ಯನಿಷ್ಠೆಯಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ.—ಈಗ ದುರ್ಬಲ ಜನರಿಗೆ ಕನಿಷ್ಠ ಪ್ರಮಾಣದ ವಸತಿಯನ್ನು ಕೊಡತಕ್ಕ ಯೋಜನೆಗಾಗಿ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿ ಮನೆಗಳನ್ನೂ ಸಹ ಕಟ್ಟಿಕೊಡುತ್ತೇವೆಂದೂ ಸಹ ಹೇಳಿದ್ದಾರೆ. ಹಿಂದೆ ಕೆಲವು ನಡೆದಿರತಕ್ಕಂಥ ಉದಾಹರಣೆಗಳನ್ನು ಹೇಳಿದರೆ ಒಳ್ಳೆಯದೆಂದು ಕಾಣುತ್ತದೆ. ಮನೆಗಳ ವಸತಿ ಸೌಕರ್ಯಗಳನ್ನು ಒದಗಿಸುವ ಸಂದರ್ಭದಲ್ಲಿ ಸರ್ಕಾರ ಸ್ವಲ್ಪ ಹುಷಾರಾಗಿ ಇರಬೇಕು. ಹಿಂದೆ 54—55 ನೇ ಇಸವಿಯಲ್ಲಿ ಹರಿಜನ, ಗಿರಿಜನರಿಗೆ ಅಪಾರವಾದ ಮನೆಗಳನ್ನು ಕಟ್ಟಿಸಿಕೊಟ್ಟರು. ಹಾಗೆಯೇ ಅವರಿಗೆ ಸ್ವಲ್ಪ ಹಣವನ್ನೂ ಕೊಟ್ಟರು. 'ಮನೆಗೆ ಬೇಕಾದಂಥ ಸಾಮಾನುಗಳನ್ನೂ ಸಹ ಒದಗಿಸಿಕೊಟ್ಟರು. ನಮ್ಮಲ್ಲಿ ಮಾವು, ಆಲದ ಮರ ಮುಂತಾದ ಬೆಂಡು ಮರಗಳಿವೆ. ಈ ಮರಗಳನ್ನು ಮನೆಗೆ ಹಾಕುವುದಿಲ್ಲ. ಅವನ್ನು ಅವರಿಗೆ ಕೊಡುವುದೇ ಇಲ್ಲ. ಸಾಮಾನ್ಯವಾಗಿ ಒಂದು ಮನೆಯನ್ನು ಕಟ್ಟಿದರೆ ಅದಕ್ಕೆ 50—60 ವರ್ಷಗಳವರೆಗೆ ಆಯುಸ್ಸು ಇರುತ್ತದೆ. ಸರ್ಕಾರ ಒದಗಿಸಿಕೊಡುವಂಥ ಮರಮುಟ್ಟುಗಳಿಂದ ಮನೆಗಳನ್ನು ಕಟ್ಟಿದರೆ ಅದು ಸುಮಾರು 5 ವರ್ಷಗಳಲ್ಲಿಯೇ ಗೆದ್ದಲು ತಿಂದು ಬಿದ್ದುಹೋಗುತ್ತದೆ. ಆದ್ದರಿಂದ ಈಗ ಅಂತಹ ಕೆಲಸವನ್ನು ಈ ಸರ್ಕಾರ ಮಾಡುವುದಕ್ಕೆ ಹೋಗಬಾರದು. ಸಾಮಾನ್ಯ ಮನೆ ಕಟ್ಟಿದರೂ ಅದು ಕನಿಷ್ಠ ಪಕ್ಷ 50 ವರ್ಷಗಳಾದರೂ ಇರ

ಬೇಕು. ಇಲ್ಲಧಿದ್ದರೆ ಇದು ತೀರಾ ಚೌಕಾಸಿಯಾಗುತ್ತದೆ. ಈ ಬಾಬಿಗೆ ಪ್ರತಿವರ್ಷವೂ ಹಾಕುವ ದುಡ್ಡು ವೃಥಾ ಅನ್ಯಾಯವಾಗದೆ ಇರುವ ಹಾಗೆ ಸರ್ಕಾರದವರು ನೋಡಿಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ಈಗ ನಾನು ಮಧ್ಯೆ ಇಂಟರ್‌ವೀನ್ ಮಾಡಬೇಕೆಂದಿರಲಿಲ್ಲ. ಈ ವಿಚಾರದಲ್ಲಿ ನಾನು ಮೊದಲೇ ಸೂಕ್ಷ್ಮವಾಗಿ ಮಾನ್ಯ ಸದಸ್ಯರಿಗೆ ಪರಿಚಯ ಮಾಡಿಸಿಕೊಟ್ಟರೆ ಬಹುಶಃ ಹೆಚ್ಚಿನ ಸಹಾಯವಾಗುತ್ತದೆಂದು ನಾನು ಕೆಲವು ವಿಷಯಗಳನ್ನು ಈಗ ಹೇಳಬೇಕಾಗಿದೆ. ಈಗ ಅವರಿಗೆ ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅವರಿಗೆ ಕಟ್ಟಿ ಹೋಗಿರತಕ್ಕ ಸಾಮಾನುಗಳನ್ನು ಕೊಡಬೇಕೆಂಬ ದೃಷ್ಟಿ ಸರ್ಕಾರಕ್ಕೆ ಇಲ್ಲ. ಮನೆ ಕಟ್ಟಿ ಕೊಳ್ಳುವುದಕ್ಕೋಸ್ಕರವಾಗಿ ಏನೋ ಒಂದು ಲೆಕ್ಕ ಬರೆಯುತ್ತಾರೆಂದು ಅನಾದರಣೆಯಿಂದ ಕೆಲಸಮಾಡುವುದಲ್ಲ. ಆ ರೀತಿ ಮಾಡುವುದು ಅಗತ್ಯವಿಲ್ಲ. ಈ ಸ್ಕೀಮಿನಲ್ಲಿ ಮನೆ ಕಟ್ಟಿಕೊಡುವುದಕ್ಕೆ ಯೋಗ್ಯವಾಗಿ ಅವರಿಗೆ ಸಹಾಯ ಮಾಡಬೇಕಾಗಿದೆ. ಜಂಗಲ್‌ವುಡ್ ವೆರೈಟೀಸ್ ಬೇಕಾದಷ್ಟಿವೆ. ಹಳ್ಳಿಗಳಲ್ಲಿ ಹುಲ್ಲು ಮನೆ ಕಟ್ಟಿದ್ದರೂ ಅನೇಕ ಸಂದರ್ಭಗಳಲ್ಲಿ ಅವುಗಳಿಗೆ 50 ವರ್ಷಗಳಾದರೂ ಗೆದ್ದಲು ಹಿಡಿಯುವುದಿಲ್ಲ. ಹೊಸದಾಗಿ ಅಂತಹ ಮನೆಗಳನ್ನು ಕಟ್ಟಿದರೆ ಅಷ್ಟಾಗಿ ಗೆದ್ದಲು ಹಿಡಿಯುವುದಿಲ್ಲ. ಅದರ ಅನುಭವ ಹಳ್ಳಿಗಾಡಿನಲ್ಲಿರುವವರಿಗೆ ಜಾಸ್ತಿ ಇದೆ. ಮರಮುಟ್ಟುಗಳ ವಿಚಾರ ನನಗೆ ಗೊತ್ತಿದೆ. ಯಾವಾಗ, ಏನಾಯಿತು ಎಂಬ ಅನುಭವ ಇದರ ಬಗ್ಗೆ ನನಗೆ ಇರುವುದರಿಂದ, ಆ ತಪ್ಪುಗಳನ್ನು ಪುನಃ ಯಾರೂ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಇದು ಏನೋ ಕಣ್ಣು ಒರಿಸುವುದಕ್ಕೆ ಮಾಡುವ ಯೋಜನೆಯಲ್ಲ. ಎರಡನೆಯ ವಿಚಾರವೇನೆಂದರೆ, ಮಾನ್ಯ ದೇವೇಗೌಡರು ಅವರ ಪಕ್ಷದ ನಾಯಕರಾಗಿ ಹೇಳಬೇಕಾದುದನ್ನು ಹೇಳುತ್ತಾರೆ. ಒಂದೊಂದು ಸಾರಿ ಬಹಳ ಆತುರದಿಂದ ಡಿಫೆಂಡ್ ಮಾಡುವುದಕ್ಕೆ ಹೋಗುವಾಗ ಅವರೇ ಮುಗ್ಗರಿಸುತ್ತಾರೆ.

ಇದೇನು ಹೊಸದೇ ? ಅದೂ ಹಳೇದೇ. ಆದರೆ ಅದನ್ನು ಮಾಡತಕ್ಕ ವಿಧಾನ ಹೊಸದಾಗಿ ಕಾಣಬಹುದು ಅಷ್ಟೆ. ನಾವು ಹಿಂದೆಲ್ಲಾ ಇದೇ ವಿಷಯವನ್ನು ಎಷ್ಟೋ **ಸಾರಿ** ವಿಚಾರ ಮಾಡಿದ್ದೇವೆ. ಆದರೆ ಆಗ ಇಷ್ಟು ಕರ್ತವ್ಯ ನಿಷ್ಠೆ ಇರಲಿಲ್ಲ ಎನ್ನುವುದನ್ನು ಒಪ್ಪಬಹುದು. ಹಿಂದೆ ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಆ ಏನೋ ಒಂದು ಆತುರದಲ್ಲಿ ನಾಲ್ಕೂವರೆ ಕೋಟಿ ರೂಪಾಯಿ ಹಣವನ್ನು ತಂದೆವು. ಒಳ್ಳೆಯ ಉದ್ದೇಶದಿಂದಲೇ ಸೊಸೈಟಿಗಳನ್ನು ಮಾಡಿದೆವು. ಸೊಸೈಟಿಗಳ ಮೂಲಕ ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಹಣವನ್ನು ಕೊಡಲಾಯಿತು. ಆದರೆ ಇಲ್ಲಿಯವರೆಗೆ ಆ ಬಾಬಿನಲ್ಲಿ ವಾಪಸ್ ಬಂದಿರುವುದು ಕೇವಲ 4) ಸಾವಿರ ರೂಪಾಯಿಗಳು ಮಾತ್ರ. ಸುಮಾರು 17 ಸಾವಿರ ಮನೆಗಳನ್ನು ಕಟ್ಟಿಸಲು ಆ ಹಣವನ್ನು ಕೊಡಲಾಯಿತು. ಆ ದಿವಸ ಕೆಲವರು ದೂರಾಲೋಚನೆ ಇಲ್ಲದೆ ಸುಮ್ಮನೆ ಅದು ಉದ್ದ ಇಷ್ಟಿರಬೇಕು ಅಗಲ ಇಷ್ಟಿರಬೇಕು ಎಂದು ಉದ್ದಕ್ಕೆ 30 ಅಡಿ ಅಗಲ 40 ಅಡಿ ಉದ್ದಕ್ಕೆ ಗೋಡೆಗಳನ್ನೆತ್ತಿ, ಮೇಲೆ ಹೊದಿಸುವುದಕ್ಕೆ ಹಂಚಿಗೆ ದುಡ್ಡಿಲ್ಲ ಎಂದು ಹಾಗೇ ಉಳಿದಿರತಕ್ಕವೂ ಎಷ್ಟೋ ಇರಬಹುದು. ಏಕೆಂದರೆ ಈ ಜನರಿಗೆ ಕೊಟ್ಟ ದುಡ್ಡು ವಾಪಸ್ ಬರುತ್ತದೆ ಅನ್ನತಕ್ಕ ಮಾತೇ ಇಲ್ಲ. ಈ ಮನೆಗಳನ್ನು ಕಟ್ಟತಕ್ಕ ವಿಚಾರ ಏನಿದೆ ಇದು ‘‘ಅಸ್ ಓಲ್ಡ್ ಆಸ್ ಮ್ಯಾನ್’ ಆದರೆ ಈ ದಿವಸ ಅದನ್ನು ಕಟ್ಟತಕ್ಕ ವಿಧಾನ ಹೊಸದಷ್ಟೇ. ಈ ದಿವಸ ನಾವು ಮಾಡುತ್ತಿರುವುದು ಕೂಡ ಹೊಸದೇನೂ ಅಲ್ಲ. ಹಿಂದಿನವನ್ನೇ ಬೇರೊಂದು ರೀತಿಯಲ್ಲಿ ಮಾಡುತ್ತಿದ್ದೇವೆ. ಭಾರತದಲ್ಲಿ ವಾಸಕ್ಕೆ ಮನೆಯಿಲ್ಲದಂಥ ಜನರ ಸಂಖ್ಯೆ ಲಕ್ಷಗಟ್ಟಲೆ ಇದೆ—ಅಂದರೆ ಹಿಮಾಲಯದಂಥ ಒಂದು ಬೃಹತ್ ಸಮಸ್ಯೆಯಾಗಿದೆ ಇದು. ಏನೋ ಈ ದಿವಸ ಇಂಜಿನಿಯರಿಂಗ್ ಬಹಳ ಮುಂದುವರಿದಿದೆ, ಆದ್ದರಿಂದ ಮನೆಗಳನ್ನು ಕಟ್ಟತಕ್ಕ ವಿಚಾರದಲ್ಲಿ ಇಟ್ಟಿಗೆ ಗೋಡೆಗಳನ್ನೇ ಹಾಕಬೇಕು, ಪ್ರತಿ ಗೋಡೆಯಲ್ಲೂ ನಾಲ್ಕು ಕಿಟಕಿಗಳನ್ನೇ ಇಡಬೇಕು, ತಾರಸಿ ಮಾಳಿಗೆಯನ್ನೇ ಹಾಕಬೇಕು ಎಂದು ಹೀಗೆಲ್ಲಾ ಒಂದು ಮಾಡರನ್ ಅಪ್ರೋಚ್ ಇಟ್ಟುಕೊಂಡು ಹೊರಟರೆ ತೊಂದರೆಯಾಗುತ್ತದೆ. I am against this modern approach to the

2-00 P. M.

economy. This modern approach has created havoc in this country and it has not solved the problem of the poorer sections on a massive scale. ನಮ್ಮಲ್ಲಿ ಹೀಗೆ ಇದೊಂದು ಲಾಟ್ರಿ ಇದ್ದ ಹಾಗಾಗಿದೆ. ದುಡ್ಡು ಕೊಡತಕ್ಕವರು ಬಹಳ ಜನಗಳಾದರೆ ಲಾಟ್ರಿಯಲ್ಲಿ ಬಹುಮಾನ ಪಡೆಯತಕ್ಕವರು ಒಬ್ಬರೋ, ಇಬ್ಬರೋ ಅಷ್ಟೇ. ಆದರೆ ಇದು ಹೀಗಾಗಬಾರದೆಂಬುದು ನನ್ನ ಖಚಿತವಾದ ಅಭಿಪ್ರಾಯ; ಅದನ್ನು ತಾವುಗಳೂ ಕೂಡ ಒಪ್ಪುತ್ತೀರೆಂದು ನಾನು ನಂಬಿದ್ದೇನೆ. ಎಲ್ಲರಿಗೂ ಮನೆಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನು ಕೊಡಬೇಕೆಂದು

(ಶ್ರೀ ಡಿ. ದೇವರಾಜ ಅರಸ್)

ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ ಈ ವಿಷಯ ತಮಗೂ ಚೆನ್ನಾಗಿ ಅನುಭವವಿರಬೇಕು. ತಾವೂ ಕೂಡ ಹಳ್ಳಿಯ ವಾಸದ ಅನುಭವ ಪಡೆದಿದ್ದೀರಿ. ಹಿಂದೆ ನಮ್ಮ ಹಿರಿಯರು ಯಾರೂ ಅಷ್ಟಾಗಿ ಇಟ್ಟಿಗೆ ಮನೆಯನ್ನು ಕಟ್ಟಿಸುತ್ತಿರಲಿಲ್ಲ. ಅವರು ಸಾಮಾನ್ಯವಾಗಿ ವಾಸ ಮಾಡುತ್ತಿದ್ದ ಮನೆಗಳೆಲ್ಲಾ ಮಣ್ಣಿನ ಮನೆಗಳೇ. ಅವು ನೂರು ಇನ್ನೂರು ವರ್ಷಗಳವರೆಗೂ ಹಾಗೆ ಭದ್ರವಾಗಿ ನಿಂತಿರುತ್ತವೆ. ಅನೇಕರಿಗೆ ಈ ಅನುಭವ ಇದೆ. ಆದರೆ ನಾನು ಹೇಳುತ್ತಿರುವುದು ಈ ದಿವಸ ನಾವು ಕಟ್ಟತಕ್ಕ ಮನೆಗಳೇನಿವೆ ಅವು ಅಷ್ಟು ವರ್ಷಗಳ ಕಾಲ ಇರಬೇಕಾದ್ದಿಲ್ಲ. ಅವು 50 ವರ್ಷ ಕೂಡ ಇರಬೇಕಾಗಿಲ್ಲ. ನನ್ನ ದೃಷ್ಟಿಯಲ್ಲಿ ಅವು 25—30 ವರ್ಷ ಇದ್ದರೆ ಸಾಕೆಂಬ ಅಭಿಪ್ರಾಯ ನನ್ನದು. ಅಷ್ಟರಲ್ಲಿ ಪ್ರಪಂಚದಲ್ಲಿ ಇನ್ನೂ ಏನೇನು ಬದಲಾವಣೆಗಳು ಬರುತ್ತವೆಯೋ ಯಾರು ಕಂಡಿದ್ದಾರೆ ? ಅಷ್ಟರಲ್ಲಿ ಇನ್ನೂ ಅನೇಕ ಹೊಸ ಹೊಸ ವಿಚಾರಗಳು ಈ ವಿಚಾರದಲ್ಲಿ ತಲೆದೋರಬಹುದು. ಆದರೆ ನನಗೆ ಇನ್ನೂ ಒಂದು ಏನು ಮನಸ್ಸಿನಲ್ಲಿ ಅನಿಸುತ್ತಿದೆ ಎಂದರೆ ಈ ಹರಿಜನರಿಗೆ ಮೊಟ್ಟಮೊದಲನೆಯದಾಗಿ ಸಂಪಾದನಾ ಶಕ್ತಿ ಇಲ್ಲ. ಅಂಥವರಿಗೆ ನಾವು ಏನು ಮಾಡಿಕೊಟ್ಟರೂ ಅದು ಉಳಿಯುವುದಿಲ್ಲ. ಆದುದರಿಂದ ನಾವು ಅವರಿಗೆ ಕಟ್ಟುತಕ್ಕ ಮನೆಗಳಿಗೆ ಹಣವನ್ನು ಅಪಾರವಾಗಿ ವೆಚ್ಚ ಮಾಡದೆ, ಆ ಜನರಲ್ಲಿ ಹೆಚ್ಚು ಸಂಪಾದನಾ ಶಕ್ತಿಯನ್ನು ಹುಟ್ಟಿಸುವುದಕ್ಕಾಗಿ ಹಣವನ್ನು ಹೆಚ್ಚು ಖರ್ಚು ಮಾಡೋಣ ಅನ್ನುವುದು ನನ್ನ ಉದ್ದೇಶ. ಅಲ್ಲದೆ ಈ ಮನೆಗಳನ್ನು ಯಾರಿಗೂ ಉಚಿತವಾಗಿ ಕೊಡಬೇಕು ಅನ್ನತಕ್ಕ ಮಾತೇ ಇಲ್ಲ. ಎಲ್ಲರೂ ಅವರವರ ಒಂದು ಜವಾಬ್ದಾರಿಯನ್ನು ಅವರು ಅರಿತು ಅದರ ಬಗ್ಗೆ ಅವರಿಗೆ ಒಂದು ಆಸಕ್ತಿ ಇದ್ದರೇನೇ ಅವರು ಆ ಆಸ್ತಿಯನ್ನು ಉಳಿಸಿಕೊಳ್ಳುವುದು—ಇಲ್ಲದಿದ್ದರೆ ಅವರು ಅದನ್ನು ಉಳಿಸಿಕೊಳ್ಳುವುದೂಇಲ್ಲ—ಇತ್ತಲಾಗಿ ಅದನ್ನು ಬೇರೊಬ್ಬರು ಕೊಂಡುಕೊಳ್ಳುವ ಹಾಗೂ ಇರುವುದಿಲ್ಲ. ಏಕೆಂದರೆ ಅದು ಹರಿಜನರಿದ್ದ ಮನೆ ಎಂದು ಯಾರೂ ಅದನ್ನು ಕೊಂಡುಕೊಳ್ಳುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಅವರಿಗೆ ಕಟ್ಟಿಸತಕ್ಕ ಮನೆಗಳೇನಿವೆ ಅವುಗಳಿಗೆ ಆಯಾಯ ಸ್ಥಳದಲ್ಲಿ ಏನೇನು ವಸ್ತುಗಳು ದೊರೆಯುತ್ತವೆಯೋ ಅವುಗಳನ್ನು ಉಪಯೋಗ ಮಾಡೋಣ ಅನ್ನುವುದು ನನ್ನ ಉದ್ದೇಶ. ಈ ದಿವಸ ಮೈಸೂರು ನಗರದಲ್ಲಿ ಬಿದಿರನ್ನು ಉಪಯೋಗ ಮಾಡಿ ಕಟ್ಟಿಸಿರತಕ್ಕ ಮಹಡಿ ಮನೆಗಳಿವೆ. ಈ ವಿಚಾರ ಮಾನ್ಯ ಅಧ್ಯಕ್ಷರಿಗೆ ಚೆನ್ನಾಗಿ ಗೊತ್ತಿದೆ. ನಮ್ಮಲ್ಲಿ ಹಿಂದೆ ಎಂಥೆಂಥಾ ಮನೆಗಳನ್ನು ಅಲ್ಲಲ್ಲೇ ದೊರೆಯತಕ್ಕ ಸಾಮಾನುಗಳನ್ನು ಬಳಸಿ ಕಟ್ಟಿಸಿದ್ದಾರೆ ಎಂಬುದನ್ನು ನೋಡಿದರೆ ನಾವು ಅದೇ ಮಾರ್ಗದಲ್ಲಿ ಹೋಗೋಣ, ಆ ಹಿಂದಿನವರು ಏನು ಮಾಡಿದ್ದಾರೆ ಅದನ್ನೇ ಮತ್ತೆ ರಿವೈಸ್ ಮಾಡೋಣ ಎಂದು ಮನಸ್ಸು ಮಾಡಿದ್ದೇನೆ. ಆದರೆ ನಾವು ಇದನ್ನು ತೋರಿಕೆಗಾಗಿ ಅಥವಾ ಎದುರು ಪಕ್ಷದವರನ್ನು ಸಮಾಧಾನ ಮಾಡುವುದಕ್ಕಾಗಿ ಮಾಡತಕ್ಕ ಕೆಲಸವೇನೂ ಇಲ್ಲ ಇಲ್ಲಿ ಲಕ್ಷಾಂತರ ಜನರಿಗೆ ನೆಗಳನ್ನು ಕಟ್ಟಿಸಬೇಕು ಎಂಬ ಬೃಹತ್ ಯೋಜನೆ ಮುಂದಿರುವಾಗ ಸಾಮಾನ್ಯವಾಗಿ ಒಳ್ಳೆಯ ಮಣ್ಣಿ ಮನೆಗಳನ್ನೇ ಕಟ್ಟಿಸಿದರೆ ಸಾಕೆಂಬುದು ನನ್ನ ಅಭಿಪ್ರಾಯ. ಈ ಯೋಜನೆಯಲ್ಲಿ ಸ್ಥಳೀಯ ಮುಖಂಡರನ್ನೂ ಸೇರಿಸಬೇಕಾಗಿದೆ. ಸ್ಥಳೀಯ ಸಾಮಾನುಗಳನ್ನೇ ಬಳಸಿ ಅಲ್ಲಿ ದೊರೆಯತಕ್ಕ ಮಣ್ಣನ್ನೇ ಬಳಸಿ ಮನೆಗಳನ್ನು ಕಟ್ಟಿಸೋಣ ಎಂಬ ಉದ್ದೇಶ ನನಗಿದೆ. ಹಿಂದೆ ಇದರ ವಿಚಾರದಲ್ಲಿ ಒಂದು ದೊಡ್ಡ ಕಥೆಯೇ ಆಗಿತ್ತು...

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಕಂಪೆನಿಯಲ್ಲಿರತಕ್ಕವರೇ ಅವರಲ್ಲೂ ಇದ್ದರು ಅವರ ಹೆಸರನ್ನು ಬೇಕಾದರೂ ಹೇಳು ಎಂದರೆ ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಹೌದು ನನಗೂ ಗೊತ್ತಿದೆ ಅವರ ಜಾತಿ ಮತ್ತು ಹೆಸರು ಎಲ್ಲಾ. ಆದರೆ ನಮ್ಮ ಮಾನ್ಯ ದೇವೇಗೌಡರಿಗೆ ಆ ಪಕ್ಷದಲ್ಲಿ ಸೇರಿದ ನಂತರ ಅವರಿಗೊಂದು ಭ್ರಾಂತಿ ಹುಟ್ಟಿದೆ. ಅವರಿಗೆ ಅಲ್ಲಿ ಇರುವುದಕ್ಕೆ ಮನಸಿಲ್ಲ—ಬೇರೇ ಗತಿಯಿಲ್ಲ ಅನ್ನುವಂತೆ ಆಗಿದೆ ಅವರ ವಿಚಾರ. I do not accept the philosophy behind this.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾವೂ ಕೇಳುತ್ತಿದ್ದೇವೆ—ನೀವು ಅವರನ್ನು ಪದೇ ಪದೇ ಊಟ ಉಪಚಾರಕ್ಕೆ ಕರೆಸಿಕೊಳ್ಳುತ್ತಾ ಇದ್ದೀರಿ ಎಂದು...

ಶ್ರೀ ಡಿ. ದೇವರಾಜ ಅರಸ್.—ಅಷ್ಟು ಸುಲಭವಾಗಿ ಕೊಂಡುಕೊಳ್ಳುವುದಕ್ಕೆ ದೊರೆಯತಕ್ಕಂಥ ವ್ಯಕ್ತಿಯಲ್ಲ ಅವರು. ಹಿಂದೆ ಏನೇನೋ ನಡೆಯಿತು. ಆದರ ವಿಚಾರ ಈಗ ಬೇಡ. ಸರ್ಕಾರದ ಕಾಡು ಬೇಕಾದಷ್ಟು ಇದೆ. ಅದರಲ್ಲಿ ನಾವೀದಿವಸ ಕೋಟ್ಯಾಂತರ ರೂಪಾಯಿಗಳ ನಾಟಾವನ್ನು ಕಡಿದು ಬೇರೆಯವರಿಗೆ ಮಾರಾಟ ಮಾಡುತ್ತಿದ್ದೇವೆ. ಆ ಮರವನ್ನೇ ಇದಕ್ಕೆ ನಾವು

ಈ ದಿವಸ ಏತಕ್ಕೆ ಉಪಯೋಗ ಮಾಡಬಾರದು ಎಂದು ಆಲೋಚನೆ ಮಾಡುತ್ತಿದ್ದೇವೆ... ಇತ್ತೀಚೆಗೆ ವುಡ್ ಸ್ಟೈನ್ಸ್ ಸ್ವಲ್ಪ ಬೆಳೆದಿದೆ, ಸಾಫ್ಟ್ ವುಡ್ ಹಾರ್ಡ್ ವುಡ್ ಮಾಡುವ ಪ್ರೋಸೆಸ್ ಇದೆ, ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಮನೆಗಳ ಆವಶ್ಯಕತೆ ಇರುವವರನ್ನೂ ಇನ್‌ವಾಲ್ವ್ ಮಾಡಬೇಕು, ಹೀಗೆ ಮಾಡಿ ಮನೆಗಳ ಸಮಸ್ಯೆ ಬಗೆಹರಿಸಬೇಕು, ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಯಾರು ಮನೆ ಕಟ್ಟಿಕೊಂಡು ಸಂಸಾರಿಯಾಗಿ ಬಾಳಬೇಕೆಂದಿರುವರೋ ಅವರೂ ಸ್ವಲ್ಪ ಶ್ರಮವಹಿಸಬೇಕು ಎಂಬ ಭಾವನೆ ಇದೆ. ಪ್ರಾಣಿಗಳೂ ಕೂಡ ಮನೆ ಅಥವ ಗೂಡು ಕಟ್ಟಿಕೊಳ್ಳುವುದಕ್ಕೆ ಸಾಹಸ ಮಾಡುವುವು; ಇದು ನೈಸರ್ಗಿಕ ನಿಯಮ. ಅದರಂತೆ ಸ್ವಶಕ್ತಿಯ ಮೇಲೆ ಮನುಷ್ಯರೂ ಕೂಡ ನಿಲ್ಲಲು ಪ್ರಯತ್ನಿಸಬೇಕು. ಸಾಮೂಹಿಕವಾಗಿ ಮನೆ ಬೇಕೆನ್ನುವವರು ಯಾರಿರುವರೋ ಅವರಿಂದಲೂ ಕೆಲಸ ಮಾಡಿಸಿ ಮನೆ ಕಟ್ಟಿಸಲು ವ್ಯವಸ್ಥೆ ಮಾಡಬೇಕು ಎಂಬ ಉದ್ದೇಶವಿದೆ. ಇದರ ಬಗ್ಗೆ ಉಪಯುಕ್ತವಾದ ಯಾವ ಸಲಹೆ ಕೊಟ್ಟರೂ ಸ್ವಾಗತ ಮಾಡಲು ಸಿದ್ಧ ಎಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ವಸತಿ ಸೌಕರ್ಯ ಒದಗಿಸುವಾಗ ಟ್ರೈಪ್ ಡಿಸ್ಟ್ರಿನ್ ತೆಗೆಯುವಿರಾ!

ಶ್ರೀ ಡಿ. ದೇವರಾಜ ಅರಸ್.—ಆಗಬಹುದು.

ಶ್ರೀ ಎಚ್.ಡಿ. ದೇವೇಗೌಡ.—ಮುಖ್ಯಮಂತ್ರಿಗಳು ನನ್ನ ಹೆಸರು ಹೇಳಿ ವ್ಯಾಖ್ಯಾನ ಮಾಡಿದರು, ಹಳ್ಳಿಯ ಅಭ್ಯಾಸ ನನಗೂ ಸಹ ಹೆಚ್ಚಾಗಿದೆ. ಹಿಂದೆ ಹಳ್ಳಿಗಳಲ್ಲಿ ಕಾಡು ಮರ ಉಪಯೋಗಿಸಿ ಮನೆ ಕಟ್ಟಿದ್ದಾರೆ. ಹರಿಜನರು 2 ಸಾವಿರ ರೂಪಾಯಿಗಳಲ್ಲಿ ಮನೆ ಕಟ್ಟಿದ್ದಾರೆ, ಅದಕ್ಕೆ ಹೊನ್ನೆ, ಟೀಕ್‌ವುಡ್ ಮುಂತಾದ್ದನ್ನು ಉಪಯೋಗ ಮಾಡಿಲ್ಲ, ಊರ ಬಳಿ ದೊರೆಯುವ ಮರ ಉಪಯೋಗ ಮಾಡಿ ಕಟ್ಟಿದ್ದಾರೆ. ಸ್ಥಳದಲ್ಲಿ ದೊರೆಯುವ ಮಣ್ಣು, ಮರ ಮುಂತಾದ್ದನ್ನು ಉಪಯೋಗ ಮಾಡಿ ಹರಿಜನರು 2 ಸಾವಿರರೂಪಾಯಿ ಖರ್ಚಿನಲ್ಲಿ ಮನೆ ಕಟ್ಟಿದ್ದಾರೆ. ಆದರೆ ಸೊಸೈಟಿಗಳಿಗೆ ಡಿಫಾಲ್ಟರ್ಸ್ ಆಗಿದ್ದಾರೆ, ಹಣ ವಾಪಸು ಕೊಡುವುದಕ್ಕಾಗಿಲ್ಲ. ಪುಕ್ಕಟ್ಟೆ ಕೊಡಲು ಸಾಧ್ಯವಿದೆಯೋ ಹೇಳಿ.

ಶ್ರೀ ಡಿ. ದೇವರಾಜ ಅರಸ್.—ಅದು ಸಾಧ್ಯವಿಲ್ಲ. ಲಕ್ಷಗಟ್ಟಲೆ ಜನರಿಗೆ ಪುಕ್ಕಟ್ಟೆ ಸೌಕರ್ಯ ಕೊಡಲು ಸಾಧ್ಯವೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮುಖ್ಯಮಂತ್ರಿಗಳು ಹೇಳಿದ ಮಾತನ್ನು ಕೇಳಿದಮೇಲೆ ಇನ್ನೊಂದು ಸಲಹೆ ಕೊಡುತ್ತೇನೆ. ಮನೆ ಪಡೆಯುವ ಜನರು ನಿರ್ಗತಿಕರು, ಯಾವುದೇ ರೀತಿಯ ಆಸ್ತಿಯಿಲ್ಲದಿರುವವರು. ಅವರಿಗೆ ಮನೆ ಕೊಡುವಾಗ ದುಡಿಮೆಗೆ ಹಚ್ಚಿ ಒಂದು ವ್ಯವಸ್ಥೆ ಮಾಡಬೇಕು. ಅದಕ್ಕೆ ಹೇಳುವುದು 50 ಎಕರೆ ಭೂಮಿ ಸಿಕ್ಕುವ ಕಡೆ 10 ಕುಟುಂಬಗಳನ್ನಿಟ್ಟು ಅವರಿಗೆ ಮನೆ ಮತ್ತು ಭೂಮಿ ಎರಡೂ ಕೊಟ್ಟು ಅನುಕೂಲ ಮಾಡಬೇಕು ಯಾವುದೇ ಕ್ಷೇತ್ರದಲ್ಲಾಗಲಿ ದುಡಿಮೆ ಮಾಡುವವರಿಗೆ ಅವರನ್ನು ಕಂಡುಹಿಡಿದು ಅವರಿಗೆ ಅನುಕೂಲ ಕಲ್ಪಿಸಬೇಕು. ವ್ಯವಸಾಯದ ಕೂಲಿಗಳಿಗೆ 12 ತಿಂಗಳೂ ವರ್ಷದಲ್ಲಿ ಕೂಲಿ ಸಿಕ್ಕುವುದಿಲ್ಲ, 3 ತಿಂಗಳೂ ಸಿಕ್ಕಬಹುದು ಇದನ್ನು ತಜ್ಞರು ಪರಿಶೀಲಿಸಿದ್ದಾರೆ. ಅವರಿಗೆ ವಸತಿ ಸೌಕರ್ಯ ಕಟ್ಟಿಸಿಕೊಟ್ಟು ಅವರು ಉತ್ಪತ್ತಿ ಮಾಡುವುದಕ್ಕೂ ಅನುಕೂಲವಾಗುವಂತೆ ಅವಕಾಶ ಕಲ್ಪಿಸಲು ತಕ್ಕ ಕಾರ್ಯಕ್ರಮ ರೂಪಿಸಿಕೊಳ್ಳಬೇಕು. ಟಿಬೆಟ್ ಮುಂತಾದ ಕಡೆಗಳಿಂದ ಬಂದಿರುವವರಿಗೆ ವ್ಯವಸ್ಥೆ ಮಾಡಿರುವಂತೆ ಕಾಲೋನಿ ಮಾಡಿ ಸೌಕರ್ಯ ಕಟ್ಟಿಸಬೇಕು ಉದ್ಯೋಗ ಒದಗಿಸಬೇಕು. ಇದನ್ನು ಸರಕಾರ ಗಮನಿಸಬೇಕು. ಮನೆಗಳಿಗೆ ಈಗ ಅನೇಕರಿಗೆ ನಿವೇಶನ ಕೊಡಲಾಗಿದೆ. ಅದು ಸಾಲದು ನಾನು ಹೇಳಿದಂತೆ ಸೌಕರ್ಯ ಕಲ್ಪಿಸಬೇಕು.

ಇಂದು ನಮ್ಮ ರಾಜ್ಯದಲ್ಲಿ ಉದ್ಯೋಗ ಜನತೆಗೆ ಒದಗಿಸುವುದು ಒಂದು ಬೃಹತ್ ಸಮಸ್ಯೆಯಾಗಿದೆ. ಮಾನ್ಯ ಅರ್ಥಿಕ ಸಚಿವರು ಒಂದು ವಿಚಾರ ಹೇಳಿದ್ದಾರೆ. ಬಡತನ ಮತ್ತು ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡಲು, ಉದ್ಯೋಗದ ಅವಕಾಶ ಹೆಚ್ಚಿಸಲು ಇರುವ ಕಾರ್ಯಕ್ರಮಗಳಿಗೆ ಆದ್ಯತೆ ಕೊಡಲಾಗುವುದು ಎಂದು ತಿಳಿಸಿದ್ದಾರೆ. ಈ ದಿವಸ ಕೋಟ್ಯಾಂತರ ರೂಪಾಯಿ ಹಣ ಹಾಕಿ ಕಾರ್ಖಾನೆ ಮಾಡುವರು. ಆದರೆ ಅದು ಲೇಬರ್ ಒರಿಯೆಂಟೆಡ್ ಆಗಿರುವುದಕ್ಕೆ ಬದಲಾಗಿ ಮೆಷೀನ್ ಒರಿಯೆಂಟೆಡ್ ಆಗುತ್ತಿದೆ, ಇದನ್ನು ತಡೆಯಬೇಕು. ಕನಿಷ್ಠ ಒಂದು ಕೋಟಿ ರೂಪಾಯಿ ಹಾಕಿರುವ ಒಂದು ಉದ್ಯಮದಲ್ಲಿ 1 ಸಾವಿರ ಜನರಿಗಾದರೂ ಉದ್ಯೋಗ ಒದಗಿಸಬೇಕು. ಹರಿಹರದಲ್ಲಿ ಒಂದು ಕಾರ್ಖಾನೆ ಇದೆ, ಅದಕ್ಕೆ 8–10 ಕೋಟಿ ಖರ್ಚುಮಾಡಿದ್ದಾರೆ, ಆದರೆ ಅಲ್ಲಿ 500 ಜನರು ಸಹ ಕೆಲಸಮಾಡಲು ಸಾಧ್ಯವಿಲ್ಲ. ಮಂಗಳೂರಿನಲ್ಲಿ ಫರ್ಟಿಲೈಜರ್ ಕಾರ್ಖಾನೆಯಿಂದ, ಕೋಟ್ಯಾಂತರ ರೂಪಾಯಿ ಅಲ್ಲಿಗೆ ಖರ್ಚಮಾಡಿದರೂ ಕಡಮೆ ಕೆಲಸಗಾರರಿಗೆ ಅವಕಾಶವಿದೆ ಲೇಬರ್ ಒರಿಯೆಂಟೆಡ್ ಯೋಜನೆಯಾಗಬೇಕು.

ಶ್ರೀ ಡಿ. ದೇವರಾಜ ಅರಸ್.—ಅದು ಎಲ್ಲಾ ಕಡೆ ಮಾಡುವುದು ಕಷ್ಟ.

ಶ್ರೀ ಕಾಗೋಡು ತಿಮ್ಮಪ್ಪ.—ಇಂದು 3 ಲಕ್ಷ ಜನ ನಿರುದ್ಯೋಗಿಗಳಿದ್ದಾರೆ, ಜೊತೆಗೆ ಕೃಷಿ ಕಾರ್ಮಿಕರು ಸರಕಾರಿ ಅಂಕಿ ಅಂಶದ ಪ್ರಕಾರ 26 ಲಕ್ಷ ಇದ್ದಾರೆ. ಪ್ರತಿವರ್ಷ ಆಯವ್ಯಯದಲ್ಲಿ ಸರಕಾರಿ ನೌಕರರಿಗೆ ಒಂದಲ್ಲ ಒಂದು ರೀತಿಯಲ್ಲಿ ಪರಿಹಾರ ಸಿಕ್ಕುವುದು. ಆದರೆ ಕೃಷಿ ಕಾರ್ಮಿಕರಿಗೆ ಕೂಲಿ ಜಾಸ್ತಿ ಮಾಡಿಲ್ಲ. ಅವರಿಗೆ ಕಾನೂನು ಮೂಲಕ ರಕ್ಷಣೆ ನೀಡಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲೂ ಕೃಷಿ ಕಾರ್ಮಿಕರನ್ನು ನಿಯಂತ್ರಿಸುವ ಎಷ್ಟು ಜನ ಅಧಿಕಾರಿಗಳಿದ್ದಾರೆಂಬುದನ್ನು ನೋಡಿ. ಕೃಷಿ ಕಾರ್ಮಿಕರನ್ನು ಇಂದು ಕೈಬಿಟ್ಟಿದ್ದೇವೆ. ಅವರು ಸಂಘಟಿತರಾಗಿಲ್ಲ, ಅವರಲ್ಲಿ ರಾಜಕೀಯ ಪ್ರಜ್ಞೆಯಿಲ್ಲ, ಪ್ರಜ್ಞೆ ಇರುವವರು ಸಂಘಟಿತರಾಗಿದ್ದಾರೆ. ಸಂಘಟಿತರಾಗಿರುವವರಿಗೆ ಹೆಚ್ಚು ಸಹಾಯ ದೊರೆಯುತ್ತಿದೆ. ಅಸಂಖ್ಯಾತರಾಗಿರುವ ಕಾರ್ಮಿಕರ ಶೋಷಣೆ ನಡೆಯುತ್ತಿದೆ. ಆದರಿಂದ ಅವರನ್ನು ಮುಕ್ತರನ್ನಾಗಿ ಮಾಡುವವರೆಗೆ ಆರ್ಥಿಕ ಕ್ಷೇತ್ರ ಬೆಳೆಯುವುದಿಲ್ಲ. ಸರಕಾರಿ ಅಂಕಿ ಅಂಶಗಳ ಪ್ರಕಾರ ಸುಮಾರು 3 ಸಾವಿರಕ್ಕಿಂತ ಹೆಚ್ಚು ಕಾರ್ಖಾನೆಗಳಿವೆ, ಅವುಗಳಲ್ಲಿ ಕನಿಷ್ಠ 20 ಜನರಿಗಾದರೂ ಪ್ರತಿಯೊಂದರಲ್ಲೂ ಉದ್ಯೋಗ ಅವಕಾಶ ಜಾಸ್ತಿ ನಿರ್ಮಾಣಮಾಡಬೇಕು. ಹಾಗೆ ಮಾಡಿದರೆ ಸುಮಾರು 60 ಸಾವಿರ ಜನರಿಗೆ ಕಾರ್ಖಾನೆಗಳಲ್ಲಿ ಉದ್ಯೋಗ ಕೊಡಬಹುದು. ಸರಕಾರ ಇದನ್ನು ತೀವ್ರವಾಗಿ ಯೋಚನೆಮಾಡಬೇಕು. ಜೊತೆಗೆ ನಮ್ಮಲ್ಲಿರುವ 3 ಲಕ್ಷ ನಿರುದ್ಯೋಗಿಗಳಿಗೆ ಅಗತ್ಯವಾದ ಕೆಲಸ ಕೊಡಲೇಬೇಕು.

ಅವರಿಗೆ ಪ್ರತಿವರ್ಷ ಕನಿಷ್ಠ ಪಕ್ಷ ಸರ್ಕಾರ 20 ಕೋಟಿ ರೂಪಾಯಿಗಳನ್ನು ಈ ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕು. ಹೊಸ ಉದ್ಯಮಗಳನ್ನು ಪ್ರಾರಂಭ ಮಾಡಿದ್ದೇವೆ. ಸರ್ಕಾರ ಮಾಡಿರತಕ್ಕ ಉದ್ಯಮದಲ್ಲಿ, ಕೊನೆಯಲ್ಲಿ ಕಾರ್ಮಿಕರಿಗೋಸ್ಕರವಾಗಿ ಕೇವಲ 6 ಕೋಟಿ 13 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಿಂದ ಯಾವ ಉದ್ಯಮವನ್ನೂ ಸ್ಥಾಪನೆ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರ ಒಂದು ತಾಲ್ಲೂಕಿನಲ್ಲಿ ಒಂದು ಸಾವಿರ ಜನಕ್ಕೆ ಹೊಸದಾಗಿ ಉದ್ಯೋಗವನ್ನು ಕೊಡತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕು. ಕನಿಷ್ಠ ಪಕ್ಷ ಎರಡು ಕೋಟಿ ರೂಪಾಯಿಗಳನ್ನು ಒಂದು ತಾಲ್ಲೂಕಿನಲ್ಲಿ ಖರ್ಚು ಮಾಡಿದರೆ ಒಂದು ಸಾವಿರ ಜನಕ್ಕೆ ಉದ್ಯೋಗ ಕೊಡುವುದಕ್ಕೆ ಆಗುತ್ತದೆ. ಎಲ್ಲಾ ತಾಲ್ಲೂಕಿನಲ್ಲಿ ಮಾಡುವುದು ಬೇಡ, ಪ್ರತಿವರ್ಷ ಒಂದು ಫೇಸ್ ಪ್ರೋಗ್ರಾಂ ಹಾಕಿಕೊಂಡು 10 ತಾಲ್ಲೂಕುಗಳನ್ನು ಚುನಾಯಿಸಿ, 10 ತಾಲ್ಲೂಕುಗಳಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಸಾವಿರ ಜನಕ್ಕೆ ಉದ್ಯೋಗ ನಿರ್ಮಾಣ ಮಾಡಿ ಉತ್ಪಾದನಾ ಕ್ಷೇತ್ರದಲ್ಲಿ ಇವರನ್ನು ತೊಡಗಿಸುವ ದೃಷ್ಟಿಯಿಂದ ಕಾರ್ಯಕ್ರಮ ಹಾಕಿಕೊಳ್ಳಬೇಕು. ಎರಡು ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರ ತೆಗೆದು ಇಟ್ಟುಕೊಂಡರೆ ಖಂಡಿತವಾಗಿ ನಾನು ಹೇಳಿದ ಪ್ರಕಾರ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಸಾವಿರ ಜನಕ್ಕೆ ಉದ್ಯೋಗವನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಈ ಕಾರ್ಯಕ್ರಮವನ್ನು ತಾವು ತೀವ್ರವಾಗಿ ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಒಂದೊಂದು ವರ್ಷ ಒಂದು ತಾಲ್ಲೂಕಿನಲ್ಲಿ ಮಾಡಿದರೆ ಬೇರೆಯವರು ಸುಮ್ಮನೆ ಇರುತ್ತಾರೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಜಿಲ್ಲೆಯಲ್ಲಿ ಒಂದು ತಾಲ್ಲೂಕು ಎಂದು ಇಟ್ಟುಕೊಳ್ಳಿ, ಎಲ್ಲಾ ತಾಲ್ಲೂಕಿಗೂ ಬಂದೇ ಬರುತ್ತದೆ. ಮಾಡತಕ್ಕ ಕಾರ್ಯಕ್ರಮದಲ್ಲಿ ಒಂದೆರಡು ಇದ್ದರೆ ಯಾರಿಗೆ ಕೊಡುವುದು ಯಾರಿಗೆ ಬಿಡುವುದು ಎಂಬ ಪ್ರಶ್ನೆ ಬರುತ್ತದೆ. ಎಲ್ಲ ತಾಲ್ಲೂಕಿಗೂ ಇಂಥ ಅವಕಾಶ ಸಿಕ್ಕುತ್ತದೆ ಎನ್ನುವ ಖಾತ್ರಿ. ಆದರೆ ಆಗ ಯಾರೂ ಅನುಮಾನ ಮಾಡತಕ್ಕ ಸಂದರ್ಭ ಇರುವುದಿಲ್ಲ. ಇವತ್ತಲ್ಲ ನಾಳೆ ಬಂದೇ ಬರುತ್ತದೆ ಎಂದು ಸುಮ್ಮನಿರುತ್ತಾರೆ ಈ ಯೋಜನೆಯನ್ನು ತರುವುದಕ್ಕೆ ತೀವ್ರವಾಗಿ ಆಲೋಚನೆ ಮಾಡದೇ ಹೋದರೆ, ನಮ್ಮಲ್ಲಿರುವ ಜನಗಳಿಗೆ ಉದ್ಯೋಗ ಕೊಡುವುದಕ್ಕೆ ಆಗುವುದಿಲ್ಲ. ಉದ್ಯಮಕೋಸ್ಕರ ಕೇಂದ್ರ ಸರ್ಕಾರ ಪ್ರಮುಖವಾಗಿ ಒಂದು ಯೋಜನೆಯನ್ನು ಮಾಡುತ್ತಾ ಇದೆ ಎಂದು ಹೇಳಿದ್ದಾರೆ ಅವರು ಸುಮಾರು 100 ಕೋಟಿ ರೂಪಾಯಿಗಳನ್ನು ನಿರುದ್ಯೋಗ ನಿವಾರಣೆಗೆ ಉಪಯೋಗಿಸುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ನಮ್ಮ ರಾಜ್ಯಕ್ಕೆ ಅದರಲ್ಲಿ ಐದು ಅಥವಾ ಆರು ಕೋಟಿ ರೂಪಾಯಿಗಳು ಬರಬಹುದು ಎಂದು ಊಹಿಸಿದರೂ ಕೂಡ, ಇದರ ಜೊತೆಗೆ ನಾವು 15 ಕೋಟಿ ರೂಪಾಯಿಗಳನ್ನು ಸೇರಿಸಿಕೊಂಡರೆ, ಒಟ್ಟು 20 ಕೋಟಿ ರೂಪಾಯಿಗಳು ಒಂದು ವರ್ಷಕ್ಕೆ ನಮಗೆ ಸಿಕ್ಕುತ್ತದೆ, ಇದರಿಂದ ಕನಿಷ್ಠ ಪಕ್ಷ ಒಂದು ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ, ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಅರ್ಥ

ಮಂತ್ರಿಗಳು ಉದ್ಯಮದ ಬಗ್ಗೆ ಪ್ರಸ್ತಾಪ ಮಾಡುತ್ತಾ ಒಂದು ಮಾತನ್ನು ಹೇಳಿದರು. ನಂದಿಹಳ್ಳಿಯಲ್ಲಿ ಪ್ರಾರಂಭವಾಗತಕ್ಕ ಸ್ನಾತಕೋತ್ತರ ಕೇಂದ್ರದ ಬಗ್ಗೆ ಅವರು ಉಲ್ಲೇಖ ಮಾಡಿದ್ದಾರೆ ಹೊಸಪೇಟೆಯಲ್ಲಿ ಪ್ರಾರಂಭವಾಗತಕ್ಕ ಉಕ್ಕಿನ ಕಾರ್ಖಾನೆಗೆ ಕುಮಾರಸ್ವಾಮಿ ದೇವಸ್ಥಾನದ ಹತ್ತಿರ ನಂದಿಹಳ್ಳಿಯಲ್ಲಿ ಸ್ನಾತಕೋತ್ತರ ಕೇಂದ್ರದ ಸ್ಥಾಪನೆಯ ಬಗ್ಗೆ ಉಲ್ಲೇಖಮಾಡಿದ್ದಾರೆ. ಅದಕ್ಕಾಗಿ 10 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಹೊಸಪೇಟೆಗೂ ಮತ್ತು ನಂದಿಹಳ್ಳಿಗೂ ಸುಮಾರು 20 ಮೈಲಿ ದೂರವಿದೆ, ಈ ಕೇಂದ್ರದ ಸ್ಥಾಪನೆಗೆ ಈಗಾಗಲೇ ಆರು ಸಾವಿರ ಎಕರೆ ಭೂಮಿಯನ್ನು ಸರ್ಕಾರದವರು ವಶಪಡಿಸಿಕೊಂಡಿದ್ದಾರೆ. ಅಲ್ಲಿ ಇವರು ಇದನ್ನು ಪ್ರಾರಂಭ ಮಾಡುತ್ತಾ ಒಂದು ಮಾತು ಹೇಳಿದರು ಸೊಂಡೂರಿನ ಅಭಿವೃದ್ಧಿಯನ್ನು ಕುಂಠಿತಗೊಳಿಸುವುದಕ್ಕೆ ಏನೋ ಮಾಡುತ್ತಾರೆ ಎನ್ನುವ ಅಭಿಪ್ರಾಯವನ್ನು ಸೂಚಿಸಿದರು. ನಾವು ಸೊಂಡೂರಿನ ಅಭಿವೃದ್ಧಿಯನ್ನು ಕುಂಠಿತಗೊಳಿಸುವುದಕ್ಕೆ ಸ್ವಲ್ಪವೂ ಚಿಂತೆ ಮಾಡುವುದಿಲ್ಲ. ಎರಡು ಕೋಟಿ ರೂಪಾಯಿಯ ಕಾರ್ಖಾನೆಯನ್ನು ಮೊದಲು ಸೊಂಡೂರಿಗೆ ಹಾಕಿ ನಾವು ಬೇಡ ಎಂದು ಹೇಳುವುದಿಲ್ಲ ಆದರೆ ನಂದಿಹಳ್ಳಿಯಲ್ಲಿ ಇರುವ ಇನಾಂ ಜಮೀನು ರೈತರಿಗೆ ಸಾಗುವಳಿಯಾಗತಕ್ಕ ಯೋಗ್ಯ ಜಮೀನು. ಅಲ್ಲಿ ಕೃಷಿಕಾರ್ಮಿಕರು ಇದ್ದಾರೆ, ಅಂಥ ಜನರಿಗೆ ಈ ಭೂಮಿಯನ್ನು ಕೊಡಬೇಕೆಂದು ಒತ್ತಾಯ ಮಾಡತಕ್ಕ ಕಾಲದಲ್ಲಿ, ಕಣಿವೆಯಲ್ಲಿರತಕ್ಕ ಪ್ರದೇಶವನ್ನು ವ್ಯವಸಾಯಕ್ಕೆ ಯೋಗ್ಯವಾದ ಪ್ರದೇಶವನ್ನು ಈ ಸ್ನಾತಕೋತ್ತರ ಕೇಂದ್ರದ ಅಭಿವೃದ್ಧಿಗೆ ಕೊಟ್ಟರೆ ಏನು ಪ್ರಯೋಜನ ಯಾವ ಜಮೀನು ಉತ್ಪಾದನೆಗೆ ಯೋಗ್ಯವಾಗಿದೆಯೋ, ಅದನ್ನು ಉತ್ಪಾದನೆಗೆ ಬಿಡುವುದಕ್ಕೆ ಬದಲಾಗಿ ಅನುತ್ಪಾದನ ಕೇಂದ್ರಕ್ಕೆ ಕೊಡುತ್ತೇವೆ. ಎಂದರೆ ಎಷ್ಟರಮಟ್ಟಿಗೆ ಉತ್ಪಾದನೆಗೆ ಸಹಾಯ ಮಾಡುತ್ತಾರೆ ಎಂದು ಯೋಚನೆ ಮಾಡಿ. ಅರ್ಥಮಂತ್ರಿಗಳು ದಯವಿಟ್ಟು ನಂದಿಹಳ್ಳಿಯಲ್ಲಿರತಕ್ಕ ಸಾಗುವಳಿಗೆ ಯೋಗ್ಯವಾದ ಜಮೀನನ್ನು ಕೃಷಿಕಾರ್ಮಿಕರಿಂದ ಕಿತ್ತುಕೊಳ್ಳುವುದಕ್ಕಿಂತ ಸಾಗುವಳಿಗೆ ಯೋಗ್ಯವಲ್ಲದ ಭೂಮಿಯಲ್ಲಿ ಇದನ್ನು ಸ್ಥಾಪನೆ ಮಾಡಬೇಕು. ಮತ್ತು ನಂದಿಹಳ್ಳಿಯ ಭೂಮಿಯನ್ನು ಕೃಷಿ ಕಾರ್ಮಿಕರಿಗೆ ಕೊಡುವುದಕ್ಕೆ ಇವರು ಮನಸ್ಸು ಮಾಡಬೇಕು ಎಂದು ನಾನಾದರೂ ಕೇಳಿಕೊಳ್ಳುತ್ತೇನೆ.

ಇನ್ನು ವೈದ್ಯಕೀಯದ ಬಗ್ಗೆ ಒಂದು ಮಾತು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಹೆಚ್ಚಿನ ಬೆಡ್ಡುಗಳು ಇರತಕ್ಕ ಆಸ್ಪತ್ರೆಗಳು ಹೆಚ್ಚಾಗಿ ನಗರ ಪ್ರದೇಶಗಳಲ್ಲಿವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಆಸ್ಪತ್ರೆಗಳು ಎಂದರೆ ಹೆಲ್ತ್ ಯುನಿಟ್‌ಗಳು. ಇಲ್ಲಿ ಏನಾಗಿದೆ ಎಂದರೆ ಬಡ ರೋಗಿಗಳು ಬಂದರೆ ಇರುವುದಕ್ಕೆ ಯಾವ ವ್ಯವಸ್ಥೆಯೂ ಇಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 2275 ಹೆಲ್ತ್ ಯುನಿಟ್‌ಗಳು ಇವೆ. ಪ್ರತಿಯೊಂದು ಹೆಲ್ತ್ ಯುನಿಟ್‌ಗಳಿಗೂ ಐದು ಬೆಡ್ಡುಗಳ ಸೌಕರ್ಯವನ್ನು ಒದಗಿಸಿಕೊಟ್ಟರೆ ಗ್ರಾಮಾಂತರ ಪ್ರದೇಶದ ಜನರು ಪೇಟೆಗೆ ಬಂದು ದುಡ್ಡು ಖರ್ಚುಮಾಡಿ ವೈದ್ಯಕೀಯ ಸೌಲಭ್ಯವನ್ನು ಪಡೆಯುವುದನ್ನು ತಪ್ಪಿಸುವುದಕ್ಕೆ ಅವಕಾಶವಾಗುತ್ತದೆ. ಸುಮಾರು 25—30 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಕನಿಷ್ಠ 1000—1500 ಹೆಲ್ತ್ ಯುನಿಟ್‌ಗಳಿಗೆ ಐದು ಬೆಡ್‌ಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಆಸ್ಪತ್ರೆಯಲ್ಲಿ ಒಂದು ದಿವಸ ಉಳಿದು ಚಿಕಿತ್ಸೆ ಪಡೆಯುತ್ತೇನೆ. ಎನ್ನುವ ಸೌಕರ್ಯ ಇಲ್ಲದೆಹೋದರೆ ಅವ ಎಲ್ಲಿ ಇರಬೇಕು ? ಎನ್ನುವ ಪ್ರಶ್ನೆ ಬರುತ್ತದೆ. ಈ ದೃಷ್ಟಿಯಿಂದ ಪ್ರತಿಯೊಂದು ಹೆಲ್ತ್ ಯುನಿಟ್‌ಗಳಲ್ಲಿಯೂ ಐದು ಬೆಡ್ಡುಗಳ ಸೌಕರ್ಯವನ್ನು ಒದಗಿಸುವುದಕ್ಕೆ ಅವಕಾಶಮಾಡಿಕೊಡಬೇಕು ಎಂದು ಅರ್ಥಮಂತ್ರಿಗಳಲ್ಲಿ ಒತ್ತಾಯಮಾಡುತ್ತೇನೆ.

ಸಮಾಜಕಲ್ಯಾಣದ ಅಂಗವಾಗಿ, ವಿದ್ಯಾರ್ಥಿನಿಲಯಗಳಿಗೆ ಕೊಡತಕ್ಕಂಥ ಹಣ ಸಾಲುವುದಿಲ್ಲ. ತಾಲ್ಲೂಕು ಮಟ್ಟದ ವಿದ್ಯಾರ್ಥಿ ನಿಲಯಗಳಿಗೆ ಬರತಕ್ಕ ಹಣವನ್ನು ಈ ಸಾರಿ ಬಡ್ಜೆಟ್ಟಿನಲ್ಲಿ ತಗೆದು ಇಟ್ಟಿಲ್ಲ, ಈ ಯೋಜನೆಯನ್ನು ಕೈ ಬಿಟ್ಟಿದ್ದಾರೆ ಎನ್ನುವ ಸಂಶಯ ಬರುತ್ತದೆ. ಸಾರ್ವಜನಿಕ ವಿದ್ಯಾರ್ಥಿನಿಲಯಗಳು ಇನ್ನೂ ಹೆಚ್ಚಾಗಿ ಆಗತಕ್ಕಂಥಾದ್ದು ಇದೆ,

ಅಧ್ಯಕ್ಷರು.—ಮಾನ್ಯ ಸದಸ್ಯರು ಎಜುಕೇಷನ್ ಡಿಮ್ಯಾಂಡ್ ಬಂದಾಗ ಈ ವಿಷಯವನ್ನು ಪ್ರಸ್ತಾಪಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಆರನೆಯ ಆರ್ಥಿಕ ಆಯೋಗದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಕೇಂದ್ರ ಸರ್ಕಾರವನ್ನು ನಾವು ನಿರೀಕ್ಷಿಸಿ ನಮ್ಮ ಆಯವ್ಯಯವನ್ನು ರೂಪಿಸಿಕೊಳ್ಳತಕ್ಕ ಸಂದರ್ಭ ಬಂದಿದೆ. ಜೊತೆಗೆ ಹಣಕಾಸಿನ ಪ್ರಶ್ನೆಯನ್ನು ನಾವು ಅತೀವವಾಗಿ ಚರ್ಚೆ ಮಾಡುವುದು. ಇದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇದನ್ನು ಗಮನದಲ್ಲಿಟ್ಟುಕೊಂಡು ಹಣಕಾಸಿನ ಆಯೋಗದವರು ಬಂದಾಗ ಮಾತ್ರ ಆಲೋಚನೆ ಮಾಡುತ್ತೇವೆ, ಅನೇಕ ಸಂದರ್ಭಗಳಲ್ಲಿ ನಾವು ಇದರ ಬಗ್ಗೆ ಚರ್ಚೆ ಮಾಡುವುದನ್ನು ಮರೆಯುತ್ತೇವೆ. ಕೇಂದ್ರ ಸರ್ಕಾರ ನಮಗೆ

(ಶ್ರೀ ಕಾಗೋಡು ತಿಮ್ಮಪ್ಪ)

ಹಣವನ್ನು ಯಾವ ರೀತಿಯಲ್ಲಿ ವಿತರಣೆ ಮಾಡುತ್ತದೆ ಎನ್ನುವುದರ ಬಗ್ಗೆ ನಾವು ಸ್ಪಷ್ಟವಾಗಿ ಚಿಂತ ಮಾಡತಕ್ಕ ಅಭ್ಯಾಸ ಮಾಡತಕ್ಕ ಪ್ರಸಂಗ ಇವತ್ತು ಬಂದಿದೆ. ತಾವು ಈಗ ಏನು 30 ಕೋಟಿ ರೂಪಾಯಿಗಳ ಖೋತ ಬಡ್ಜೆಟ್ ಎಂದು ಹೇಳಿದ್ದಿರಿ ಇದು 54 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಣೆ ಮಾಡಿ. ಕೇಂದ್ರ ಸರ್ಕಾರದಿಂದ ಅಷ್ಟು ಹಣ ಬಾರದ ಹೋದರೆ, ನಮ್ಮ ಕೊರತೆ ಇನ್ನೂ ಜಾಸ್ತಿಯಾಗುತ್ತದೆ ಎನ್ನುವುದು ಇದರಿಂದ ಸಾಬೀತು ಆಗುತ್ತದೆ. ಹೋದ ಆಯ ವ್ಯಯ ಪತ್ರದಲ್ಲಿ ಮೂರು ಕೋಟಿ ರೂಪಾಯಿಗಳನ್ನು ಖೋತ ತೋರಿಸಿ ನಂತರ ಕೇಂದ್ರ ಸರ್ಕಾರ ದಿಂದ ಹಣ ಬಾರದೆ ಇದ್ದುದರಿಂದ 27 ಕೋಟಿ ರೂಪಾಯಿಗೆ ಖೋತ ಹೋಯಿತು. ಕೇಂದ್ರ ಸರ್ಕಾರದವರು ಬರಗಾಲ ಪರಿಹಾರಕ್ಕಾಗಿ 25 ಕೋಟಿ ರೂಪಾಯಿಗಳನ್ನು ಇದುವರೆಗೂ ಕೊಟ್ಟಿದ್ದಾರೆ. 16 ಕೋಟಿ ರೂಪಾಯಿ ಮಾತ್ರ ಇನ್ನು ಉಳಿದಿರುವುದು, ಇದು ಕೇಂದ್ರ ಸರ್ಕಾರ ದಿಂದ ಬಾರದೆ ಹೋದರೆ ಪ್ರಸಕ್ತ ಸಾಲಿನಲ್ಲಿ ಹಣದ ಕೊರತೆ ಎಷ್ಟು ಎನ್ನುವ ನಿಜವಾದ ಸಂಗತಿಯನ್ನು ಹೇಳಬೇಕು ಇಲ್ಲದೆ ಹೋದರೆ, ಈ ಖೋತವನ್ನು ಕಡಿಮೆ ಮಾಡುವುದಕ್ಕಾಗಲೀ ಭರಿಸುವುದಕ್ಕಾಗಲೀ ಬೇರೆ ವಿಧಿಯೇ ಇಲ್ಲ. ಇವತ್ತು, ಕೇಂದ್ರ ಸರ್ಕಾರದಿಂದ 54 ಕೋಟಿ ರೂಪಾಯಿಗಳು ಬಾರದೆ ಹೋದರೆ ನಿಜವಾಗಿ, ಮುಂದಿನ 1973-74ನೇ ಸಾಲಿನಲ್ಲಿ ಬರತಕ್ಕ ಖೋತ ಎಷ್ಟು ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್.—ಏತಕ್ಕೆ ಬರುವುದಿಲ್ಲ ಎಂದು ಹೇಳುತ್ತೀರಿ!

ಶ್ರೀ . ಕಾಗೋಡ ತಿಮ್ಮಪ್ಪ.—ಇವೊತ್ತು 25 ಕೋಟಿ ರೂಪಾಯಿ ನಿರೀಕ್ಷಣೆ ಮಾಡಿದ್ದು ತರತಕ್ಕದ್ದು 16 ಕೋಟಿ ರೂಪಾಯಿ.

ಶ್ರೀ ಡಿ. ದೇವರಾಜ್ ಅರಸ್.—ಇನ್ನು ಬರಬೇಕಾದುದು ಟೈಮ್ ಇದೆ. ವರ್ಷದ ಕೊನೆಯಲ್ಲಿ ಎಷ್ಟು ನಿಲ್ಲುತ್ತದೆ ಆಲೋಚನೆ ಮಾಡಿ ನೋಡೋಣ.

ಶ್ರೀ ಕಾಗೋಡ ತಿಮ್ಮಪ್ಪ.—ಖರ್ಚು ಮಾಡಿದಷ್ಟು ಬರುತ್ತದೆ. ಖೋತಾ ಅಷ್ಟಕ್ಕೆ ನಿಲ್ಲುವುದಿಲ್ಲ. ಜಾಸ್ತಿ ಹೋಗುತ್ತದೆ ಎನ್ನುವ ಶಂಕೆಯನ್ನು ವ್ಯಕ್ತಪಡಿಸಬೇಕಾಗಿದೆ. ಈ ರಾಜ್ಯದ ಜನರಿಗೆ ಕನಿಷ್ಟ ಪ್ರಮಾಣದ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ನಷ್ಟ ಆಗಬಹುದು. ಇಂಗ್ಲೇಂಡಿನಲ್ಲಿ ಅಭ್ಯಾಸ ಮಾಡಿರತಕ್ಕ ಶ್ರೀಮಾನ್ ಘೋರ್ಪಡೆಯವರು ಪಾಶ್ಚಿಮಾತ್ಯ ಸಮಾಜವಾದಕ್ಕೆ ಮಾರು ಹೋಗದೆ ಹೆಚ್ಚಿಗೆ ಭಾರತೀಯ ಸಮಾಜವಾದಗಳನ್ನು ಅನುಸರಿಸಿ ಜನರಿಗೆ ಬೇಕಾದ ಕನಿಷ್ಟ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಒಂದು ವರ್ಷದ ಕಾರ್ಯಕ್ರಮಗಳಲ್ಲಿ ಕರ್ತವ್ಯನಿಷ್ಠರಾಗಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

3-00 P.M.

ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷಣಿಯವರೇ, 1973-74 ನೇ ಇಸವಿ ಬಗ್ಗೆ ಅರ್ಥ ಸಚಿವರು ಈಗ ಸೂಚಿಸಿರುವಂತಹ ಅಂದಾಜುಪಟ್ಟಿಗೆ ಬೆಂಬಲ ನೀಡಲು ನಾನು ನಿಂತಿದ್ದೇನೆ. ಈ ಸಮಯದಲ್ಲಿ ವಿರೋಧಪಕ್ಷದ ಸದಸ್ಯರು ಕೆಲವು ಟೀಕೆಗಳನ್ನು ಮಾಡಿರುವುದು ಸರಿಯಲ್ಲವೆಂದು ನಾನು ಹೇಳಬಯಸುತ್ತೇನೆ. ನಮ್ಮ ಪಕ್ಷದವರು ಚುನಾವಣೆ ಕಾಲಕ್ಕೆ ಕೊಟ್ಟ ಆಶ್ವಾಸನೆಗಳನ್ನು ಸಂಪೂರ್ಣವಾಗಿ ಈ ಸರ್ಕಾರ ಪೂರ್ಣಗೊಳಿಸುವದೃಷ್ಟಿಯಿಂದ ಪ್ರಯತ್ನ ನಡೆಸಿದೆ. ಮೊದಲನೆಯದು ನಮ್ಮ ಪಕ್ಷದವರು ಲ್ಯಾಂಡ್ ಟು ದಿ ಟಿಲ್ಲರ್. ಈ ವಿಷಯವಾಗಿ ಉಳುವವನು ಮಾಲೀಕನಾಗಬೇಕೆಂದು ಮಾಡಬೇಕೆಂಬ ಬಗ್ಗೆ ಲ್ಯಾಂಡ್ ರೀಫಾರಮ್ಸ್ ಬಿಲ್ಲು ಬಂದು ಸೆಲೆಕ್ಟ್ ಕಮಿಟಿ ಕಡಿಗೆ ಹೋಗಿದೆ. ಸ್ವಲ್ಪ ದಿವಸಗಳಲ್ಲೇ ಬಿಲ್ಲು ಅಸೆಂಬ್ಲಿ ಮುಂದೆ ಬಂದು ಉಳುವವನೇ ಮಾಲೀಕ ಆಗುವಂತೆ ಮಾಡುತ್ತಾರೆಂದು ಸಂಪೂರ್ಣ ಭರವಸೆ ಉಳ್ಳವನಾಗಿದ್ದೇನೆ. ಈ ಬಗೆ ಈ ಸದನದಲ್ಲಿ ಯಾವುದು ಭಿನ್ನಾಭಿಪ್ರಾಯವಿಲ್ಲ. ಅನಂತರ ಎರಡನೆಯದು ಭರವಸೆ ಕೊಟ್ಟಿದ್ದು ಎಂಪ್ಲಾಯ್‌ಮೆಂಟ್ ಕೊಡಬೇಕು. ಉದ್ಯೋಗಾವಕಾಶ ಒದಗಿಸಿ ಕೊಡುವ ಭರವಸೆಗಳು ನಮ್ಮ ಪಕ್ಷದವರು ಕೊಟ್ಟಿದ್ದಾರೆ. ನಾವೆಲ್ಲರೂ ಕ್ಷಾಮದಲ್ಲಿ ಸಿಕ್ಕಿದರೂ ಕೂಡ ಯಾವತ್ತು ಕಾರ್ಮಿಕರಿಗೆ ನಮ್ಮ ಕ್ಷಾಮ ಪೀಡಿತ ಪ್ರದೇಶಗಳಲ್ಲಿ 10 ಲಕ್ಷ 76 ಸಾವಿರ ಜನಗಳಿಗೆ ಉದ್ಯೋಗಾವಕಾಶಗಳನ್ನು ನಮ್ಮ ಸರ್ಕಾರದವರು ಮಾಡಿಕೊಟ್ಟಿದ್ದಾರೆ ಈ ಬಗ್ಗೆ 45 ಕೋಟಿ 27 ಲಕ್ಷ ರೂಪಾಯಿ ಹೆಚ್ಚು ತಗಲುವಂತಾದ್ದು ಈಗ ಅಂದಾಜು ಮಾಡಲಾಗಿದೆ. ಅದೇ ಪ್ರಕಾರ ವಿದ್ಯಾವಂತ ನಿರುದ್ಯೋಗಿಗಳಿಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ಕೊಡುವುದಕ್ಕೋಸ್ಕರ ಸರ್ಕಾರ ಪ್ರಯತ್ನ ಮಾಡಲು ಹತ್ತಿದೆ. ಆ ಬಗ್ಗೆ ನಮ್ಮ ಅರ್ಥ ಮಂತ್ರಿಗಳು ತಮ್ಮ ಲಿಖಿತ

ಭಾಷಣದಲ್ಲಿ 17ನೇ ಪೇಜಿನಲ್ಲಿ 7ನೇ ಪ್ಯಾರಾದಲ್ಲಿ ಸ್ಪಷ್ಟವಾಗಿ ಆ ವಿಷಯಗಳನ್ನು ಕಾಣಿಸಿದ್ದಾರೆ. "The problem of creating employment opportunities particularly for the educated unemployed is receiving special attention. The Government of India has provided Rs. 100 crores for this programme in their budget for 1973-74 for the country. The State Government is also preparing schemes for generating employment opportunities for the educated un-employed. Every effort will be made to secure the maximum Central assistance towards this programme" ಎಂದು ಹೇಳಿದ್ದಾರೆ. ಈ ಪ್ರಕಾರವಾಗಿ ನಮ್ಮ ಪಕ್ಷದವರು ಚುನಾವಣೆ ಕಾಲಕ್ಕೆ ಕೊಟ್ಟ ವಚನಗಳನ್ನು ಸಂಪೂರ್ಣವಾಗಿ ಈಗ ಪಾಲಿಸುತ್ತಾ ಇದ್ದಾರೆ. ನಂತರ ಬಡತನ ನಿವಾರಣೆ ಬಗ್ಗೆ ಸರ್ಕಾರದವರು ಬೇರೆ ಬೇರೇ ಯೋಜನೆಗಳನ್ನು ಮಾಡಲಿಕ್ಕೆ ಹತ್ತಿದ್ದಾರೆ. ಸುಮಾರು 2 ಲಕ್ಷ ನಿವೇಶನಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಈ ವರ್ಷ 20 ಸಾವಿರ ಮನೆಗಳನ್ನು ಬಡ ಜನರಿಗೆ ಕೊಡುವುದಕ್ಕೋಸ್ಕರ 5 ಕೋಟಿ ರೂಪಾಯಿ ವೆಚ್ಚದ ಅಂದಾಜು ಮಾಡಲಾಗಿದೆ. ಈ ಪ್ರಕಾರವಾಗಿ ನಮ್ಮ ಸರ್ಕಾರದವರು ಎಲ್ಲರಿಗೂ ಕೊಡಲು ವೆಚ್ಚಗಳನ್ನು ಹಂತಹಂತವಾಗಿ ಪೂರೈಸಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಜನಗಳ ವಿಶ್ವಾಸ ನಮ್ಮ ಪ್ರಧಾನಿ ಮೇಲೆ ಎಷ್ಟು ಇಟ್ಟಿದ್ದಾರೆ ಎನ್ನುವ ಬಗ್ಗೆ ನೋಡಿದರೆ ಆಲಮಟ್ಟಿಗೆ ಬಂದ ಸಮಯದಲ್ಲಿ 30 ಸಾವಿರ ಜನಗಳು ಬಿಸಿಲಿನಲ್ಲಿ ಕಾಯುತ್ತಾ ಕೂತಿದ್ದರು. ಇಂದಿರಾ ಚಲೇಜಾವ್ ಎನ್ನುವ ಘೋಷಣೆ ಕೆಲವರು ಕೂಗಿದಾಗ ಇಂದಿರಾಗಾಂಧಿಯವರನ್ನು ಬರಮಾಡಿಕೊಳ್ಳಲಿಕ್ಕೆ ಅಲ್ಲಿ ಕೂತಿದ್ದಂತ 30 ಸಾವಿರ ಜನರ ಮನಸ್ಸಿನಲ್ಲಿ ಮೆಚ್ಚಿದ್ದು ಕಂಡುಬಂತು. ನೂರಾರು ಸ್ವಯಂಸೇವಕರು ಕೂಗಿದರೂ ಚಲೇಜಾವ್ ಘೋಷಣೆಯನ್ನು ಯಾರೂ ಕೇಳಲಿಲ್ಲ. ಅದೇ ಪ್ರಕಾರ ಇವೊತ್ತಿನ ದಿವಸ ನಮ್ಮ ಇಂದಿರಾ ಗಾಂಧಿಯವರ ಪಕ್ಷದವರ ಪ್ರತಿಷ್ಠೆ ಯಾವರೀತಿಯಲ್ಲಿಯೂ ಕಡಿಮೆಯಾಗಿಲ್ಲ, ಈ ಸಂದರ್ಭದಲ್ಲಿ ನಾನು ಕೆಲವು ಸಲಹೆಗಳನ್ನು ನಮ್ಮ ಸರ್ಕಾರಕ್ಕೆ ಕೊಡಬಯಸುತ್ತೇನೆ. ಸರ್ಕಾರದವರು ಕೂಲಿಕಾರರಿಗೆ ಕೂಲಿಯನ್ನು ಒದಗಿಸಿದ್ದಾರೆ. ಆದರೆ ಮೈಸೂರು ರಾಜ್ಯದಲ್ಲಿ ಇರುವಂಥ ನೇಕಾರರಿಗೆ ಸಾಕಷ್ಟು ಹಣ ಕೊಡಲಿಲ್ಲವೆಂದು ನಾನು ವಿಶೇಷವಾಗಿ ಈ ಸಮಯದಲ್ಲಿ ಹೇಳಬಯಸುತ್ತೇನೆ. ಬಿಜಾಪುರದಲ್ಲಿ 32 ಸಾವಿರ ಮಗ್ಗಗಳು ಇದ್ದು 1 ಲಕ್ಷದ 60 ಸಾವಿರ ನೇಕಾರರು ಈ ಉದ್ದಿಮೆ ಮೇಲೆ ಅವಲಂಬನೆ ಮಾಡುತ್ತಾ ಇದ್ದಾರೆ. ಇದೇ ಪ್ರಕಾರ ಗುಲ್ಬರ್ಗಾ ಜಿಲ್ಲೆಯಲ್ಲಿ 17 ಸಾವಿರ ಮಗ್ಗಗಳು ಇದ್ದು, 85 ಸಾವಿರ ನೇಕಾರರು ಈ ಉದ್ದಿಮೆ ಮೇಲೆ ತಮ್ಮ ಬಾಳುವೆಯನ್ನು ಸಾಗಿಸುತ್ತಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ 25 ಸಾವಿರ ಮಗ್ಗಗಳು ಇದ್ದು 12,500 ನೇಕಾರರು ಈ ಉದ್ದಿಮೆ ಮೇಲೆ ಅವಲಂಬನೆ ಮಾಡುತ್ತಾ ಇದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಪ್ರತಿಯೊಂದು ಮಗ್ಗಕ್ಕೆ 15 ಕೆ. ಜಿ. ನೂಲಿನ ಪ್ರಕಾರವಾಗಿ 4 ಲಕ್ಷ 80 ಸಾವಿರ ಕೆ. ಜಿ. ಪ್ರತಿ ತಿಂಗಳು ನೂಲು ಬೇಕಾಗುತ್ತದೆ. ಸದ್ಯಕ್ಕೆ ಬಿಜಾಪುರ ಜಿಲ್ಲೆಯಲ್ಲಿ ಕೇವಲ 40 ಸಾವಿರ ಕೆ. ಜಿ. ನೂಲನ್ನು ಸರ್ಕಾರಿ ಗೋಡೌನ್ ಮುಖಾಂತರ ವಿತರಣೆ ಮಾಡುತ್ತಿದ್ದಾರೆ. ನೂಲು ಕೇವಲ ಒಂದು ದಿವಸಕ್ಕೆ ಕೂಡ ಸಾಕಾಗುವುದಿಲ್ಲ. ಇದೇ ಪ್ರಕಾರ ಗುಲ್ಬರ್ಗಾ ಜಿಲ್ಲೆಯಲ್ಲಿ 2 ಲಕ್ಷ 50 ಸಾವಿರ ಕೆ. ಜಿ. ನೂಲು ಪ್ರತಿ ತಿಂಗಳು ನೇಕಾರರಿಗೆ ಬೇಕಾಗುತ್ತದೆ. ಈಗ ಕೇವಲ 22 ಸಾವಿರ ಕೆ. ಜಿ. ಸರ್ಕಾರದ ಗೋಡೌನ್ ಮುಖಾಂತರ ವಿತರಣೆಯಾಗುತ್ತದೆ. ಬೀದರ್ ಜಿಲ್ಲೆಯಲ್ಲಿ ಒಂದು ಲಕ್ಷ ಕೆ. ಜಿ. ನೂಲು ಬೇಕಾಗುತ್ತದೆ. ಆದರೆ ಕೇವಲ 66 ಸಾವಿರ ಕೆ. ಜಿ. ನೂಲನ್ನು ಕೊಡುವ ವ್ಯವಸ್ಥೆ ಸರ್ಕಾರದವರು ಮಾಡಿದ್ದಾರೆ. ಈ ಪ್ರಕಾರವಾಗಿ ನೂಲಿನ ಕೊರತೆ ಏನು ಇದೆ ಇದರಿಂದ ಜನಗಳಿಗೆ ನೇಕಾರರು ತಯಾರು ಮಾಡಿದ ಸೀರೆಗಳಿಗೆ ಎಲ್ಲೂ ಗಿರಾಕಿಗಳೂ ಇಲ್ಲ. ಬಿಜಾಪುರ ಜಿಲ್ಲೆಯಲ್ಲಿ ಒಂದು ಲಕ್ಷದ 66ಸಾವಿರ ನೇಕಾರರು ನಿರುದ್ಯೋಗಿಗಳಾಗಿ ಬಹಳ ಕಷ್ಟಕ್ಕೆ ಈಡಾಗಿದ್ದಾರೆ. ಈ ಪರಿಸ್ಥಿತಿಯಲ್ಲಿ ಅವರಿಗೆ ಬೇಕಾಗುವಂತ ಯೋಜನೆ ಯಂವ ಬಿಸಿನೆಸ್ ನಡೆಯಲಿಕ್ಕೆ ಉದ್ಯಮವನ್ನು ಸರ್ಕಾರದವರು ಕಲ್ಪಿಸಿ ಕೊಡುವುದು ಅತ್ಯವಶ್ಯವಿದೆ. ನೇಕಾರರನ್ನು ಬೇರೆ ಉದ್ಯಮಗಳ ಮೂಲಕ ಅವರಿಗೆ ಮುಂದಿನ ಕೆಲಸ ಸರ್ಕಾರವೇ ಪರಿಹರಿಸಬೇಕು. ಬನಹಟ್ಟಿ ನೇಕಾರರಿಗೆ ಗೋಡೆಕಟ್ಟುವುದು ಮಣ್ಣು ತೆಗೆಯುವ ಕೆಲಸ ಅವರ ಕೈಯಿಂದ ಆಗಲ್ಲಲ್ಲ. ಅವರ ಕೈಗಳ ಮೇಲೆ ಗುಳ್ಳೆಗಳು ಎದ್ದು ಕೆಲಸಮಾಡುವುದಕ್ಕೆ ಆಗಲಿಲ್ಲ ಅದಕ್ಕೋಸ್ಕರ ಅವರಿಗೆ ಬನಹಟ್ಟಿಯಲ್ಲಿ ಅನಾಥರ ರೂಮ್ ಮಾಡಿದ್ದಾರೆ. ರಾಜಾಸ್ತಾನದಿಂದ ಬಂದಂಥ ಶ್ರೀಮಂತರು ಅನ್ನದ ಛತ್ರವನ್ನು ಸ್ಥಳದಲ್ಲೇ ಮಾಡಿದ್ದಾರೆ.

ಮೂರು ಸಾವಿರ ಮಠದ ಸ್ವಾಮಿಗಳು ಪಾದಯಾತ್ರೆ ಮಾಡಿ ಎರಡು ಲಕ್ಷ ರೂಪಾಯಿ ಮತ್ತು 200 ಚೀಲ ಧಾನ್ಯವನ್ನು ವಿತರಣೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅದೇ ಪ್ರಕಾರ

(ಶ್ರೀ ಪಿ. ಎಂ. ಬಂಗಿ)

ಪೇಜಾವರ ಮಠದ ಸ್ವಾಮಿಗಳು ಪಾದಯಾತ್ರೆ ಮಾಡಿ ಅವರೂ ಸಾಕಷ್ಟು ಈ ಕ್ಷಾಮ ಪೀಡಿತ ಪ್ರದೇಶದ ಜನಗಳಿಗೆ ಸಹಾಯ ಮಾಡಲಿಕ್ಕೆ ಹೊರಟಿದ್ದಾರೆ. ಈ ಪ್ರಸಂಗದಲ್ಲಿ ನಮ್ಮ ಸಂಸ್ಥಾ ಪಕ್ಷದವರು ಎಲ್ಲ ದೃಷ್ಟಿಯಿಂದಲೂ ಸರ್ಕಾರದ ಜೊತೆಗೆ ಸಹಕಾರ ಮಾಡಿ ಈ ಬಡ ಜನಗಳಿಗೆ ಸಹಾಯ ಮಾಡುವುದನ್ನು ಬಿಟ್ಟು ರಾಷ್ಟ್ರದ ಪುಡಾರಿಗಳಾದ ಶ್ರೀ ನಿಜಲಿಂಗಪ್ಪನವರನ್ನು ಕರೆದುಕೊಂಡು ಬಿಜಾಪುರ ಜಿಲ್ಲೆಯಲ್ಲಿ ಅನ್ನ ಸತ್ಯಾಗ್ರಹದ ತಮಾಷೆ ಮಾಡಲಿಕ್ಕೆ ಹೊರಟಿದ್ದಾರೆ. ಇದರಿಂದ ಜನಗಳಿಗೆ ಸಾಕಷ್ಟು ಉಪಯೋಗವಾಗುವುದಿಲ್ಲ ಮತ್ತು ಜನ ಹೊಟ್ಟೆತೊಂದರೆಯಲ್ಲಿ ಬೀಳಲಿಕ್ಕೆ ಹತ್ತಿದ್ದಾರೆ. ಇವರೂ ಸಹ ಪಾದಯಾತ್ರೆ ಮಾಡಿ ಹಣ ಮತ್ತು ದವಸ ಸಂಗ್ರಹಣೆ ಮಾಡಿ ಜನಗಳಿಗೆ ಸಹಾಯ ಮಾಡಿದರೆ ಹೆಚ್ಚು ಒಳಿತು.

ಇದೇ ತಿಂಗಳು 10ನೇ ತಾರೀಖು ಪ್ರಧಾನಿಯವರು ಆಲಮಟ್ಟಿಗೆ ಬಂದಾಗ ಸಂಸ್ಥಾ ಕಾಂಗ್ರೆಸ್ ಸದಸ್ಯರಾದ ಶ್ರೀ ಜಿ. ಎನ್. ಪಾಟೀಲ್ ಅವರು ಮತ್ತು ಪಕ್ಷದ ಪರವಾಗಿ ನಾನು ಮತ್ತು ನಮ್ಮ ಪಾರ್ಲಿಮೆಂಟ್ ಸದಸ್ಯರು, ಮುಖ್ಯ ಮಂತ್ರಿಗಳು ಕೂಡಿ ಯಾವತ್ತೂ ವಿಷಯಗಳನ್ನು ಅವರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದ್ದೆವು. ಆಲಮಟ್ಟಿ, ನಾರಾಯಣಪುರ ಬಂಡಾರಗಳನ್ನು ರಾಷ್ಟ್ರೀಯ ಯೋಜನೆಗಳನ್ನಾಗಿ ಮಾಡಬೇಕೆಂದೂ, ಅದೇ ಪ್ರಕಾರವಾಗಿ ಲಿಂಕ್ ರೈಲ್ವೆ ಮೀರಜ್-ಹುಬ್ಳಿ, ರಾಯಬಾಗ್-ರಾಯಚೂರು ರೈಲ್ವೆ ಕಾಮಗಾರಿಗಳನ್ನು ಕೇಂದ್ರ ಸರ್ಕಾರ ತೆಗೆದುಕೊಳ್ಳಬೇಕೆಂದು ನಾವು ಮನವಿ ಮಾಡಿಕೊಂಡೆವು. ಅದೇ ಪ್ರಕಾರವಾಗಿ ಸಿಮೆಂಟ್ ಕಾರ್ಖಾನೆಗಳನ್ನು ತಾಳಿಕೋಟೆ ಮುಂತಾದ ಕಡೆ ಪ್ರಾರಂಭ ಮಾಡಬೇಕು ಎಂದು ಅವರ ಮುಂದೆ ಎಲ್ಲ ವಿವರಗಳನ್ನೂ ಇಟ್ಟೆವು. ಯಾವತ್ತೂ ಸಂಗತಿಗಳನ್ನು ವಿಚಾರಮಾಡಿ ಆ ಬಗ್ಗೆ ಯೋಗ್ಯ ಪರಿಹಾರವನ್ನು ಕೊಡುತ್ತೇನೆ, ಆ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ನಮ್ಮೆಲ್ಲರಿಗೂ ವಚನವನ್ನು ಕೊಟ್ಟು ಹೋಗಿದ್ದಾರೆ.

ನೇಕಾರರ ಪರವಾಗಿ ಕೊಟ್ಟಂಥ ವಚನವೆಂದರೆ 15 ಕಾಮನ್ ವೀವಿಂಗ್ ಸೆಂಟರ್‌ಗಳನ್ನು ನಮ್ಮ ರಾಜ್ಯದಲ್ಲಿ ಮಾಡಿ ಪ್ರತಿಯೊಂದು ಕೇಂದ್ರದಲ್ಲಿಯೂ ಸಾಕಷ್ಟು ಜನರಿಗೆ ಕೆಲಸವನ್ನು ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಆ ಬಗ್ಗೆ ಇನ್ನೂ ವ್ಯವಸ್ಥೆಯಾಗಿಲ್ಲ. ಅದನ್ನು ಕೂಡಲೇ ಸರ್ಕಾರದವರು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರವಾಗಿ ಕೈಮಗ್ಗದ ನೇಕಾರರಿಗೋಸ್ಕರ ಪ್ರತ್ಯೇಕ ಡೈರೆಕ್ಟೊರೇಟ್ ಮಾಡುತ್ತೇವೆಂದು ಈ ಸದನದಲ್ಲಿ ಸರ್ಕಾರ ವಚನ ಕೊಟ್ಟಿತ್ತು. ಆದರೆ ಬಜೆಟ್ಟಿನಲ್ಲಿ ಆ ಬಗ್ಗೆ ಏನೂ ಹಣವನ್ನು ಹಿಡಿದಿಟ್ಟಿಲ್ಲ. ಈ ಬಗ್ಗೆ ಕೂಡ ನಮ್ಮ ಅರ್ಥ ಮಂತ್ರಿಗಳು ವಿಚಾರ ಮಾಡಬೇಕೆಂದು ನಾನು ಅವರಿಗೆ ಈ ಸಮಯದಲ್ಲಿ ಸಲಹೆ ಮಾಡುತ್ತಿದ್ದೇನೆ. ಅದೇ ಪ್ರಕಾರವಾಗಿ ಬನಹಟ್ಟಿಯಲ್ಲಿ 9 ಲಕ್ಷ ರೂಪಾಯಿ ವೆಚ್ಚದಲ್ಲಿ ಸ್ಪೈಜಿಂಗ್ ಪ್ಲಾಂಟ್ ಕೊಡುತ್ತೇವೆಂದು ಸರ್ಕಾರದ ಪರವಾಗಿ ಹೇಳಿದ್ದರು. ಇನ್ನೂ ಅದರ ಬಗ್ಗೆ ಏನೂ ಆಗಿಲ್ಲ. ಅದೇ ಪ್ರಕಾರವಾಗಿ ಡಿಸ್ಟ್ರೆಸ್ಡ್ ವೀವರ್ಸ್‌ಗೆ ನಾಲ್ಕು ಲಕ್ಷ ರೂಪಾಯಿ ಸಾಲ ಕೊಡತಕ್ಕ ವ್ಯವಸ್ಥೆ ಮಾಡಲಾಗುವುದೆಂದು ಸರ್ಕಾರದ ಪರವಾಗಿ ಹೇಳಲಾಗಿತ್ತು. ಆದರೆ ಇನ್ನೂ ಆ ಬಗ್ಗೆ ಏನೂ ವ್ಯವಸ್ಥೆಯಾಗಿಲ್ಲ. ರಬಕವಿ, ಬನಹಟ್ಟಿ, ಇಲಕಲ್ ಮುಂತಾದ ಗ್ರಾಮಗಳಲ್ಲಿ ಹತ್ತು ಲಕ್ಷ ರೂಪಾಯಿ ಪ್ಲೆಜ್ ಲೋನ್ ಕೊಡುವುದಾಗಿ ಸರ್ಕಾರದ ಪರವಾಗಿ ವಚನ ಕೊಡಲಾಗಿದ್ದರೂ ಇನ್ನೂ ಆ ಬಗ್ಗೆ ಯಾವುದೇ ವ್ಯವಸ್ಥೆಯಾಗಿಲ್ಲ. ಅದನ್ನು ಮಾಡಬೇಕೆಂದು ಈ ಸಮಯದಲ್ಲಿ ನಾನು ಅರ್ಥ ಮಂತ್ರಿಗಳಿಗೆ ಸೂಚಿಸಬಯಸುತ್ತೇನೆ. ಬನಹಟ್ಟಿ, ಇಲಕಲ್, ಗುರುಮಿಟ್‌ಕಲ್, ಅಲಂದ್, ಬಿದರ್, ರಾಮದುರ್ಗ ಮತ್ತು ಗದಗ್ ಈ ಏಳು ಸ್ಥಳಗಳಲ್ಲಿ ಪ್ರತ್ಯೇಕವಾಗಿ ನೂಲಿನ ಗೋಡೌನ್‌ಗಳು ಪ್ರಾರಂಭವಾಗಿವೆ. ಈ ಗೋಡೌನ್‌ಗಳಲ್ಲಿ ನೂಲಿನ ವಿತರಣೆ ವ್ಯವಸ್ಥೆ ಏನಿದೆ ಅದು ತಪ್ಪು ಇದೆ. ಹತ್ತಿಪ್ಪತ್ತು ಮೈಲಿ ದೂರದಿಂದ ಕೇಂದ್ರ ಸ್ಥಳಗಳಿಗೆ ಹೋಗಿ ಒಂದೊಂದು ಸಲ ಐದು ಪೌಂಡು ಅಥವಾ ಎರಡುವರೆ ಕೆ. ಜಿ. ನೂಲನ್ನು ತೆಗೆದುಕೊಳ್ಳುವುದಕ್ಕೆ ನೇಕಾರರಿಗೆ ಬಹಳ ತೊಂದರೆಯುಂಟು. ಆ ದೃಷ್ಟಿಯಿಂದ ಈ ನೂಲಿನ ಕೇಂದ್ರಗಳು ಹೋಲ್‌ಸೇಲ್ ಗೋಡೌನ್‌ಗಳಾಗಬೇಕು ಮತ್ತು ಪ್ರತಿಯೊಂದು ಗ್ರಾಮದಲ್ಲಿಯೂ ರೀಟೆಲರ್ಸ್ ಅಂಗಡಿಗಳನ್ನು ನಿರ್ಮಾಣ ಮಾಡಿ ನೂಲನ್ನು ವಿತರಣೆ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಮಯದಲ್ಲಿ ಸೂಚಿಸುತ್ತೇನೆ.

ಕುಡಿಯುವ ನೀರಿನ ವ್ಯವಸ್ಥೆಯನ್ನು ಬಿಜಾಪುರ ಜಿಲ್ಲೆಯ ಕೃಷ್ಣ ಎಡದಂಡೆ ಮತ್ತು ಬಲದಂಡೆಯಲ್ಲಿರುವ ಗ್ರಾಮಗಳಿಗೆ ಇನ್ನೂ ಮಾಡಿಲ್ಲ. ರಬಕವಿ ಬನಹಟ್ಟಿ ಮುಂತಾದ ಗ್ರಾಮಗಳಲ್ಲಿ ಲಿಫ್ಟ್ ಮೂಲಕ ಮುನಿಸಿಪಾಲಿಟಿಗಳಿಗೆ ಬರುವ ನೀರು ಸರಬರಾಜಾಗುವುದಿಲ್ಲ. ಜಮ

ಖಂಡಿಯಲ್ಲಿಕೂಡ ಎರಡು ದಿವಸಗಳಿಗೊಮ್ಮೆ ನೀರು ಬಿಡುವ ವ್ಯವಸ್ಥೆಯಾಗಿದೆ. ಅದೇ ಪ್ರಕಾರವಾಗಿ ಕೃಷ್ಣ ಎಡ ಮತ್ತು ಬಲದಂಡೆ ಮೇಲಿನ ಯಾವತ್ತೂ ಹಳ್ಳಿಗಳಲ್ಲಿ ನೀರನ್ನು ಪೂರೈಸುವ ವ್ಯವಸ್ಥೆಯಾಗಿಲ್ಲ. ಸರ್ಕಾರದವರು ಬಿಜಾಪುರ ಜಿಲ್ಲೆಯಲ್ಲಿ, ವಿಶೇಷವಾಗಿ ಜಮಖಂಡಿ, ಬೀಳ್ಗಿ ಮುಂತಾದ ತಾಲ್ಲೂಕುಗಳಲ್ಲಿ ಕೃಷ್ಣ ಎಡ ಮತ್ತು ಬಲದಂಡೆ ಮೇಲಿರುವ ಜನಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ.

ಶಿಕ್ಷಣದ ವಿಷಯವಾಗಿ ಹೇಳಬೇಕಾದರೆ, ಕೆಲವು ಹೈಸ್ಕೂಲುಗಳಲ್ಲಿ ಬಹಳ ಹೇಯವಾದ ಪದ್ಧತಿಯನ್ನು ಅನುಸರಿಸುವ ಹಾಗೆ ಇದೆ. ಬಾಗಲಕೋಟೆ ಊರಿನಲ್ಲಿರುವ ಒಂದು ಹೈಸ್ಕೂಲಿನಲ್ಲಿ ಸರಾಸರಿ ಪಾಸಾಗುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಾಗಿ ತೋರಿಸುವ ದೃಷ್ಟಿಯಿಂದ ಸೊನ್ನೆ ಅಂಕಗಳು ಬಂದ ವಿದ್ಯಾರ್ಥಿಗಳಿಗೆ 35-40 ಮಾರ್ಕ್ಸ್ ಹಾಕಿ ಅಲ್ಲಿನ ವಾರ್ಷಿಕ ಪರೀಕ್ಷೆಗಳಲ್ಲಿ ಪಾಸ್ ಮಾಡಿಸುವ ವ್ಯವಸ್ಥೆ ಇದೆ ಎಂದು ನಾವು ವಿದ್ಯಾ ಮಂತ್ರಿಗಳು ಜಮಖಂಡಿಗೆ ಬಂದ ಸಮಯದಲ್ಲಿ ತೋರಿಸಿದ್ದೇನೆ. ಅದೇ ಪ್ರಕಾರವಾಗಿ ಮೆಟ್ರಿಕ್ ಸೆಂಟರ್‌ಗಳಲ್ಲಿ ಕಾಪಿ ಮಾಡಿಸುವುದರಿಂದ ಆ ಕೇಂದ್ರಗಳಿಗೆ ಕೆಲವು ವಿದ್ಯಾರ್ಥಿಗಳು ಹೋಗುವುದು ಪ್ರೊಸೀಜರ್ ಆಗಿದೆ. ಇಂಥ ಕೇಂದ್ರಗಳನ್ನು ಬಂದ್ ಮಾಡಬೇಕೆಂದು ನಾವು ವಿದ್ಯಾ ಮಂತ್ರಿಗಳಿಗೆ ವಿನಂತಿ ಮಾಡಿಕೊಂಡೆವು. ಆ ಪ್ರಕಾರವಾಗಿ ಅವರು ಮಾಡುವರೆಂದು ನಾವು ನಂಬಿದ್ದೇವೆ ರಾಜ್ಯದಲ್ಲಿ ಸುಮಾರು 300 ಜೂನಿಯರ್ ಕಾಲೇಜುಗಳು ಪ್ರಾರಂಭವಾಗಿವೆ ಅವುಗಳಲ್ಲಿ 200ಕ್ಕೆ ಮೇಲ್ಪಟ್ಟು ಖಾಸಗಿ ಕಾಲೇಜುಗಳಿದ್ದು ಅವುಗಳಿಗೆ ಇನ್ನೂ ವರೆಗೆ ಗ್ರ್ಯಾಂಟ್ ಬರಲಿಲ್ಲ. ಅಲ್ಲಿಯ ಶಿಕ್ಷಕರಿಗೆ ಇನ್ನೂ ಪಗಾರ ಕೊಡುವ ವ್ಯವಸ್ಥೆಯಾಗಿಲ್ಲ. ಅಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಪಗಾರ ಕೊಡುವ ವ್ಯವಸ್ಥೆಯಾಗಬೇಕು. 80 ಪರ್ಸೆಂಟ್ ಗ್ರ್ಯಾಂಟ್ ರೂಪದಲ್ಲಿ ಕೊಡುತ್ತೇವೆಂದು ಸರ್ಕಾರದ ಪರವಾಗಿ ಹೇಳುತ್ತಲೇ ಇದ್ದಾರೆ. ಆದರೆ ಇಂದಿನವರೆಗೂ ಆ ಕಾಲೇಜುಗಳಿಗೆ ಏನೂ ಗ್ರ್ಯಾಂಟ್ ರೂಪದಿಂದ ಹಣ ಕೊಟ್ಟಿಲ್ಲ. ಈ ದೃಷ್ಟಿಯಿಂದ ವಿದ್ಯಾ ಮಂತ್ರಿಗಳು ಆ ಬಗ್ಗೆ ವಿಚಾರ ಮಾಡಿ ಖಾಸಗಿ ಸಂಸ್ಥೆಯವರು ನಡೆಸತಕ್ಕ ಜೂನಿಯರ್ ಕಾಲೇಜುಗಳಿಗೆ ಗ್ರ್ಯಾಂಟ್ ಕೊಟ್ಟು ಅವುಗಳನ್ನು ಚೆನ್ನಾಗಿ ನಡೆಸಲಿಕ್ಕೆ ಸಹಾಯ ಮಾಡಬೇಕೆಂದು ನಾನು ಸೂಚಿಸಬಯಸುತ್ತೇನೆ.

ಉದ್ಯೋಗದ ಬಗ್ಗೆ ವಿಚಾರ ಮಾಡುವುದಾದರೆ, ಬಿಜಾಪುರ ಜಿಲ್ಲೆಯಲ್ಲಿ ವಿಶೇಷವಾಗಿ ಜಮಖಂಡಿ, ಬೀಳ್ಗಿ, ಮುಧೋಳ್ ತಾಲ್ಲೂಕುಗಳಲ್ಲಿ ಸಾಕಷ್ಟು ಎಮ್ಮೆಗಳಿದ್ದು ಹೈನು, ಹಾಲು ಸಿಕ್ಕುತ್ತದೆ. ಅದನ್ನು ಕೊಳ್ಳುವವರು ಇಲ್ಲದ ಮೂಲಕ ಮಾರಾಟ ಮಾಡುವುದಕ್ಕೆ ಅವಕಾಶವಿಲ್ಲವಾಗಿದೆ. ಕೃಷ್ಣನದಿಯ ಎಡ ದಂಡೆ ಮತ್ತು ಬಲದಂಡೆಯ ಹಳ್ಳಿಗಳಲ್ಲಿ ಸಾಕಷ್ಟು ಹೈನು ಕೊಡುವ ಎಮ್ಮೆಗಳಿವೆ. ಅಲ್ಲಿ ಕೊಳ್ಳುವವರಿಲ್ಲದ ಮೂಲಕ ಮಿರಜ್, ಸಾಂಗ್ಲಿ ಊರುಗಳಿಗೆ ನಮ್ಮ ನಾಡಿನಿಂದ ಬೆಣ್ಣೆ, ತುಪ್ಪ ಮುಂತಾದುವು ಹೋಗುತ್ತವೆ. ಅದಕ್ಕಾಗಿ ಬಿಜಾಪುರ ಜಿಲ್ಲೆಯಲ್ಲಿ ಒಂದು ಡೇರಿ ಫಾರಂ ತೆಗೆಯಬೇಕೆಂದು ನಾನು ಸೂಚಿಸಬಯಸುತ್ತೇನೆ.

ಇನ್ನು ಫುಡ್ ಗ್ರೇನ್ಸ್ ವಿಚಾರವಾಗಿ ಹೇಳಬೇಕದಾರೆ ನಮ್ಮ ತಾಲ್ಲೂಕಿನಲ್ಲಿ ವಿಶೇಷವಾಗಿ ನೇಕಾರರಿಗೆ ಯಾವ ರೀತಿಯಿಂದಲೂ ಫುಡ್ ಗ್ರೇನ್ಸ್ ದೊರೆಯುತ್ತಿಲ್ಲ. ಆದುದರಿಂದ ಜಮಖಂಡಿ, ಬನಹಟ್ಟಿ ಮುಂತಾದ ಗ್ರಾಮಗಳಲ್ಲಿ ಸಾಕಷ್ಟು ಫುಡ್ ಗ್ರೇನ್ಸ್ ಕೊಡುವ ವ್ಯವಸ್ಥೆ ಮಾಡಬೇಕೆಂದು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಹಿಪ್ಪರಗಿ ಬ್ಯಾರೇಜ್‌ಗೆ 2 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಇದರಿಂದ 2 ಲಕ್ಷ 4 ಸಾವಿರ ಎಕರೆಯ ಪ್ರದೇಶದಲ್ಲಿ ಆರಂಭದ ಕೆಲಸ ಪ್ರಾರಂಭವಾಗಿ ಅಲ್ಲಿಯ ಜನಗಳಿಗೆ ಸಾಕಷ್ಟು ಕೂಲಿ ದೊರೆತು ಕುಡಿಯುವ ನೀರಿನ ವ್ಯವಸ್ಥೆ ಮತ್ತು ಇರಿಗೇಷನ್ ವ್ಯವಸ್ಥೆ ಆಗುತ್ತದೆಂದು ನಾನು ಭಾವಿಸಿದ್ದೇನೆ. ಅಧ್ಯಕ್ಷಿಣಿಯವರೇ, ಇಷ್ಟು ಹೊತ್ತಿನವರೆಗೆ ಈ ಅಂದಾಜು ಪತ್ರದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಈ ಬಗ್ಗೆ ತುಂಬಾ ಅಭಾರಿಯಾಗಿದ್ದು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಧ್ಯಕ್ಷರೇ, ಈಗ ಅರ್ಥ ಸಚಿವರು ಶ್ರಮವಹಿಸಿ ನಮ್ಮ ಮುಂದೆ ಇಟ್ಟಿರತಕ್ಕ ಈ ವರ್ಷದ ಆಯವ್ಯಯದ ಲೆಕ್ಕಪತ್ರವನ್ನು ಮತ್ತು ಬಹಳ ಉತ್ತಮವಾದ ಶೈಲಿಯಲ್ಲಿ ಬರೆದಿರತಕ್ಕ ಅವರ ಭಾಷಣವನ್ನು ಕೂಡ ಸ್ವಾಗತಿಸಬೇಕಾಗಿದೆ. ಆದರೆ ಈ ಆಯವ್ಯಯ ವಿಚಾರ ತೆಗೆದುಕೊಂಡರೆ ಮತ್ತು ಬರತಕ್ಕಂಥ ವರಮಾನವನ್ನು ತೆಗೆದುಕೊಂಡರೆ ಇದು ಸತ್ಯಕ್ಕೆ ದೂರವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು ಈ ಬಜೆಟಿನಲ್ಲಿ 67 ಕೋಟಿ

(ಶ್ರೀ ಟಿ. ಆರ್. ಶಾಮಣ್ಣ)

ರೂಪಾಯಿ ರೆವಿನ್ಯೂ ಡಿಫಿಸಿಟ್ ತೋರಿಸಿ 36 ಕೋಟಿ ರೂಪಾಯಿಯ ಓವರ್ ಆಲ್ ಡಿಫಿಸಿಟ್ ತೋರಿಸಿದ್ದಾರೆ. ಜೊತೆಗೆ ಬರತಕ್ಕಂಥ ವರಮಾನವನ್ನು ಸಾಕಷ್ಟು ಇನ್‌ಫ್ಲೀಕ್ಟ್ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಮತ್ತು ಖರ್ಚುಗಳನ್ನು ಅಂಡರ್ ಎಸ್ಟಿಮೇಟ್ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಹೋದ ವರ್ಷ ಲ್ಯಾಂಡ್ ರೆವಿನ್ಯೂ ವರಮಾನ 5.40 ಕೋಟಿ ರೂಪಾಯಿ ಇತ್ತು. ಈ ವರ್ಷ ಬರಗಾಲ ಇದ್ದರೂ ಸಹ ಲ್ಯಾಂಡ್ ರೆವಿನ್ಯೂ ಸರಿಯಾಗಿ ವಸೂಲು ಆಗುವುದಿಲ್ಲ ಎಂದು ಗೊತ್ತಿದ್ದರೂ ಕೂಡ 5.60 ಕೋಟಿ ರೂಪಾಯಿ ತೆಗೆದುಕೊಂಡಿದ್ದಾರೆ, ಇದು ಸರಿಯೇ ಎನ್ನುವ ಬಗ್ಗೆ ವಿವರಣೆಯನ್ನು ಕೊಡಬೇಕು. ಈ ವರ್ಷ ಎಲೆಕ್ಟ್ರಿಸಿಟಿ ಕಟ್ ಆಗಿ ವ್ಯಾಪಾರ ಮತ್ತು ಕೈಗಾರಿಕೆಗೆ ಸ್ವಲ್ಪ ತೊಂದರೆಯಾಗಿದ್ದರೂ ಹೋದವರ್ಷ 57 ಕೋಟಿ ರೂಪಾಯಿ ತೆಗೆದುಕೊಂಡಿದ್ದಾರೆ. ಈ ವರ್ಷ 64 ಕೋಟಿ ರೂಪಾಯಿ ವರಮಾನ ತೆಗೆದುಕೊಂಡಿದ್ದಾರೆ. ಈ ಈ ವರ್ಷ 25 ಪರ್ಸೆಂಟ್ ಪವರ್ ಕಟ್ ಆಗಿರುತ್ತದೆ. ಆರು ತಿಂಗಳು ಪವರ್ ಕಟ್ ಆಗಿದೆ ಎಂದು ತೆಗೆದುಕೊಂಡರೂ ಕೂಡ ಹನ್ನೆರಡೂವರೆ ಪರ್ಸೆಂಟ್ ಕಟ್ ಆಗುತ್ತದೆ. ಯಾವಾಗ ಎಲೆಕ್ಟ್ರಿಸಿಟಿ ಕಟ್ ಕಡಿಮೆ ತೋರಿಸುವುದಕ್ಕೆ ಸಾಕಷ್ಟು ಕಾರಣ ಇರುತ್ತದೆ. ಈ ಸಂದರ್ಭದಲ್ಲಿ 57 ರಿಂದ 64 ಕೋಟಿ ರೂಪಾಯಿ ಆಗಬೇಕಾದರೆ ಈಗ ತೆಗೆದುಕೊಂಡಿರತಕ್ಕ ಮೊತ್ತ ಸರಿಯಾದುದು ಅಲ್ಲ ಎಂದು ಹೇಳಬೇಕಾಗಿದೆ. ಆದುದರಿಂದ ಈ ವರ್ಷ ಬರತಕ್ಕ ವರಮಾನವನ್ನು ನಾವು ಸರಿಯಾಗಿ ವಸೂಲು ಮಾಡಿದರೆ ಮಾತ್ರ ಈ ಆಯವ್ಯಯ ಪತ್ರ ಸರಿಹೋಗುತ್ತದೆ. ಇಲ್ಲವೇ ಹೋದರೆ ಖೋತಾ ಹೆಚ್ಚು ಆಗುತ್ತದೆ. ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಹುದು. ಕೇಂದ್ರದಿಂದ ಬರುವ ಹಣವನ್ನು ಹೆಚ್ಚು ನಿರೀಕ್ಷೆ ಮಾಡಿದೇವೆ. ಕೇಂದ್ರಸರ್ಕಾರಕ್ಕೆ ಸಾಕಷ್ಟು ಒತ್ತಾಯ ಮಾಡದೇ ಹೋದ ಪಕ್ಷದಲ್ಲಿ ಖಂಡಿತನಾವು ನಿರೀಕ್ಷೆ ಮಾಡಿದಷ್ಟು ಹಣದ ಸಹಾಯ ದೊರೆಯುವುದಿಲ್ಲ ಎಂದು ಹೇಳುತ್ತೇನೆ. ಮಾನ್ಯ ಪ್ರಧಾನ ಮಂತ್ರಿಗಳು ಮಹಾರಾಷ್ಟ್ರದಲ್ಲಿ ಪ್ರವಾಸ ಮಾಡಿದಾಗ ಆನ್ ಧಿ ಸ್ಪಾಟ್ ಇಂಥಿಂಥ ಕೆಲಸಗಳನ್ನು ಮಾಡಿಕೊಡುತ್ತೇವೆ ಎಂದು ಹೇಳಿದರು. ಮೈಸೂರು ರಾಜ್ಯಕ್ಕೆ ಬಂದಾಗ ನೋಡೋಣ ಎಂದು ಹೇಳಿದರೇ ಹೊರತು ಕಡ್ಡಾಯವಾಗಿ ಇಷ್ಟು ಸಹಾಯ ಮಾಡುತ್ತೇವೆ ಎಂದು ಹೇಳಲಿಲ್ಲ. ಬಹುಶಃ ನಮ್ಮ ರಾಜ್ಯದಿಂದ ಸಾಕಷ್ಟು ಪ್ರಭಾವ ಬೀರಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಮಹಾರಾಷ್ಟ್ರದಲ್ಲಿ ರೈಲ್ವೆ ಲೈನನ್ನು ಸ್ಯಾಂಕ್ಷನ್ ಮಾಡಿದ್ದೇವೆ ಎಂದು ಹೇಳಿದರು. ಆದರೆ ನಮ್ಮ ರಾಜ್ಯದ ವಿಚಾರದಲ್ಲಿ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟರೇ ವಿನಹ ಕಡ್ಡಾಯವಾಗಿ ಇಷ್ಟು ಹಣವನ್ನು ಕೊಡುತ್ತೇವೆ ಎಂಬ ಭರವಸೆಯನ್ನು ಕೊಡದೇ ಇರುವುದು ಬಹಳ ಆಶ್ಚರ್ಯವಾದ ವಿಚಾರ. ಅರ್ಥ ಸಚಿವರು ಮತ್ತು ಮುಖ್ಯ ಮಂತ್ರಿಗಳು ಕೇಂದ್ರದ ಮೇಲೆ ಸಾಕಷ್ಟು ಪ್ರಭಾವ ಬೀರಿ ರಾಜ್ಯ ಸರಕಾರಕ್ಕೆ ಬೇಕಾದಂಥ ಗ್ರಾಂಟನ್ನು, ಸಬ್ಸಿಡಿಯನ್ನು ವಸೂಲು ಮಾಡದೆ ಹೋದ ಪಕ್ಷದಲ್ಲಿ ಬಜೆಟ್ ಖೋತಾ ಆಗುತ್ತದೆಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಖರ್ಚಿಗೆ ಒಂದು ಮಿತಿ ಹಾಕಿಕೊಂಡು ಖರ್ಚನ್ನು ಕಡಿಮೆ ಮಾಡಬೇಕಾಗುತ್ತದೆ. ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್‌ನ್ನು ಕಡಿಮೆ ಮಾಡದೇ ಹೋದ ಪಕ್ಷದಲ್ಲಿ ಬಜೆಟ್ ಸರಿದೂಗಿಸುವುದಕ್ಕೆ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸೇಲ್ಸ್ ಟ್ಯಾಕ್ಸ್, ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಮತ್ತು ಎಕ್ಸ್‌ಸೈಜ್ ಡ್ಯೂಟಿ ಇದು ಸರಿಯಾದಂಥ ರೀತಿಯಲ್ಲಿ ವಸೂಲು ಆಗದೇ ಹೋದ ಪಕ್ಷದಲ್ಲಿ ಬಜೆಟ್‌ನಲ್ಲಿ ಸೂಚಿಸಿರತಕ್ಕ ಹಣವನ್ನು ವಸೂಲು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸೇಲ್ಸ್ ಟ್ಯಾಕ್ಸ್ ಸೋರಿ ಹೋಗದಂತೆ ಅದನ್ನು ಸರಿಪಡಿಸಬೇಕು ಎಂದು ಈ ಸಭೆಯಲ್ಲಿ ಅನೇಕ ಸಂದರ್ಭದಲ್ಲಿ ಒತ್ತಿ ಹೇಳಿದ್ದೇನೆ. ಅರ್ಥ ಸಚಿವರು ಸಾಕಷ್ಟು ಪ್ರಯತ್ನ ಪಟ್ಟಿದ್ದಾರೆ. ಆದರೂ ಸಹ ಸೇಲ್ಸ್ ಟ್ಯಾಕ್ಸ್ ಎಷ್ಟು ವಸೂಲು ಆಗಬಹುದಾಗಿತ್ತೋ ಅಷ್ಟು ವಸೂಲು ಆಗದೆ ಇರುವುದನ್ನು ನಾವು ಪ್ರತಿ ದಿನ ಕಾಣುತ್ತಿದ್ದೇವೆ. ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಸಹ ಒಂದು ಕೋಟಿ 95 ಲಕ್ಷ ರೂಪಾಯಿ ಇದ್ದದ್ದು ಈ ಸಾರಿ ಒಂದು ಕೋಟಿ 50 ಲಕ್ಷ ರೂಪಾಯಿ ಆಗಿದೆ ಮತ್ತು ಲ್ಯಾಂಡ್ ರೆವಿನ್ಯೂ ಸಹ ಕಡಿಮೆ ಆಗಿದೆ. ಏತಕ್ಕೆ ಇದು ಕಡಿಮೆ ಆಯಿತು ಎನ್ನುವ ಬಗ್ಗೆ ವಿವರ ಕೊಡಬೇಕಾಗುತ್ತದೆ. ಸೇಲ್ಸ್ ಟ್ಯಾಕ್ಸ್ ವಸೂಲು ಆಗುವುದಕ್ಕೆ ಈ ವರ್ಷ ಜನಗಳಿಗೆ ಸಹಾಯ ಮಾಡುತ್ತೇವೆ ಎಂದು ಸೇಲ್ಸ್ ಟ್ಯಾಕ್ಸ್‌ನಲ್ಲಿ ಕೆಲವಕ್ಕೆ ಸಿಂಗಲ್ ಪಾಯಿಂಟ್ ಎಂದು ತೋರಿಸಿದ್ದೀರಿ. ಆದರೆ ಸಿಂಗಲ್ ಪಾಯಿಂಟ್ ಹಾಕಿರತಕ್ಕ ವಸ್ತುಗಳು 6 ಪರ್ಸೆಂಟಿಗೆ ಏರಿಸಿದ್ದೀರಿ. ಇದರಿಂದ ಜನಗಳಿಗೆ ಖಂಡಿತವಾಗಿ ಏನೂ ಪ್ರಯೋಜನವಾಗುವುದಿಲ್ಲ. ಯಾವುದನ್ನು ಸಿಂಗಲ್ ಪಾಯಿಂಟ್ ಎಂದು ಹಾಕಿದ್ದೀರಿ ಅದು ದಿನ ನಿತ್ಯ ಬಳಕೆಯಲ್ಲಿ ಇಲ್ಲದೇ ಇರುವ ಸಾಮಾನುಗಳು ಮತ್ತು ಅನೇಕಸಾರಿ ಸರ್‌ಕ್ಯುಲೇಟ್ ಆಗದೇ ಇರುವ

ಸಾಮಾನುಗಳು. ಸಾಮಾನ್ಯವಾಗಿ ಸಿಂಗಲ್ ಪಾಯಿಂಟ್ ಮಾಡಿ ಆರು ಪರ್ಸೆಂಟ್ ಮಾಡಿರುವುದನ್ನು ನೋಡಿದರೆ ಇದರಿಂದ ಜನಗಳಿಗೆ ತೊಂದರೆಯೇ ಹೊರತು ಅನುಕೂಲವಾಗುವುದಿಲ್ಲ. ಸರಕಾರಕ್ಕೆ ಮಾತ್ರ ಹೆಚ್ಚಿನ ಲಾಭ ಬರುತ್ತದೆ. ಅಲ್ಯೂಮಿನಿಯಂ ನೇರವಾಗಿ ರಿಟೇಲರಿಗೆ ಬರುತ್ತದೆ ರೀಟೇಲರಿಂದ ಕನ ಸ್ಯೂಮರ್ ತೆಗೆದು ಕೊಳ್ಳುತ್ತಾರೆ. ಇದು ಒಂದು ಪಾಯಿಂಟ್ ಅಥವಾ ಎರಡು ಪಾಯಿಂಟ್‌ನಲ್ಲಿ ಟರ್ನ್ ಓವರ್ ಆಗಿರುವುದರಿಂದ ಇದಕ್ಕೆ 6 ಪರ್ಸೆಂಟ್ ಟ್ಯಾಕ್ಸ್ ಏರಿಸಿರುವುದರಿಂದ ಜನಗಳಿಗೆ ಹೆಚ್ಚಿನ ತೊಂದರೆಯಾಗುತ್ತದೆ. ಇಂಡಸ್ಟ್ರಿಯಲ್ ಗ್ಯಾಸ್ ಮಲ್ಟಿ ಪಾಯಿಂಟ್, ಸಿಂಗಲ್ ಪಾಯಿಂಟ್ ಮಾಡಿರುವುದರಿಂದ ಹೆಚ್ಚು ತೊಂದರೆಯಾಗುತ್ತದೆ. ಫುಟ್ ವೇರ್ ಸಾಧಾರಣವಾಗಿ ಮ್ಯಾನುಫಾಕ್ಚರ್ ಮತ್ತು ರಿಟೇಲರಿಂದ ಕನ್‌ಸ್ಯೂಮರ್ಸ್‌ಗೆ ನೇರವಾಗಿ ಹೋಗತಕ್ಕದ್ದು. ಇವು ಎರಡಕ್ಕಿಂತ ಹೆಚ್ಚಿಗೆ ಸಾರಿ ಟರ್ನ್ ಓವರ್ ಆಗತಕ್ಕಂಥ ಸಾಮಾನುಗಳು. ವಾಟರ್ ಮೀಟರ್, ಪ್ರೆಜರ್ ಕುಕ್ಕರ್, ಲಿನೋಲಿಯಮ್ ಇವು ಹೆಚ್ಚಿಗೆ ಸರ್ಕ್ಯುಲೇಟ್ ಆಗತಕ್ಕ ಸಾಮಾನುಗಳು ಅಲ್ಲ. ಒಂದು ಕೈಯಿಂದ ಇನ್ನೊಂದು ಕೈಗೆ ಬದಲಾವಣೆ ಆಗುವುದು ಹೆಚ್ಚು. 6 ಪರ್ಸೆಂಟ್ ಮಾಡಿ ಅದನ್ನು ಸಿಂಗಲ್ ಪಾಯಿಂಟ್ ಮಾಡುವುದರಿಂದ ಹೆಚ್ಚಿನ ತೆರಿಗೆ ಹಾಕಿದಂತಾಗುತ್ತದೆ. ಫ್ಯೂಯಲ್, ಗ್ಯಾಸ್, ಕಂಟೇನರ್ಸ್ ಈ ಸಾಮಾನುಗಳಿಗೆ 4 ಪರ್ಸೆಂಟ್ ಹಾಕಿದ್ದೀರಿ. ಅದರಲ್ಲಿಯೂ ಕೂಡ ಒಂದು ಕೈಯಿಂದ ಇನ್ನೊಂದು ಕೈಗೆ ಬದಲಾವಣೆ ಆದರೂ ಕೂಡ ಸಿಂಗಲ್ ಪಾಯಿಂಟ್ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ದಿನ ನಿತ್ಯ ಬಳಕೆ ವಸ್ತುಗಳಿಗೆ ಸಿಂಗಲ್ ಪಾಯಿಂಟ್ ಮಾಡಿದ್ದರೆ ಚೆನ್ನಾಗಿತ್ತು. ಅದು ಬಟ್ಟೆ ಆಹಾರ ಧಾನ್ಯಗಳ ಮೇಲೆ ಮಾಡಿದ್ದೀರಿ. ಅದು ಅನೇಕ ಸಲ ಕೈ ಬದಲಾವಣೆ ಆಗುವ ಸಾಮಾನುಗಳು. ಮತ್ತೆ ಸರಕಾರಕ್ಕೆ ಹೆಚ್ಚು ವರಮಾನ ಬರತಕ್ಕ ಮತ್ತು ಜನಗಳಿಗೆ ಹೆಚ್ಚು ತೊಂದರೆ ಆಗತಕ್ಕ ರೀತಿಯಲ್ಲಿ ವರಮಾನವನ್ನು ಹಾಕಿರುವುದರಿಂದ ಸರಕಾರದಿಂದ ಜನಗಳಿಗೆ ಯಾವ ವಿಧವಾದ ಪ್ರಯೋಜನವೂ ಆಗಲಿಲ್ಲ. ಇದರಿಂದ ಇನ್ನೂ ಹೆಚ್ಚು ತೊಂದರೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ.

3.30 P.M

ಕೇಂದ್ರ ಸರಕಾರದವರು ಬಂಗ್ಲಾ ದೇಶದ ಲೆವಿಯನ್ನು ತೆಗೆದು ಹಾಕಿದರು. ಆದರೆ ನಮ್ಮ ಸರಕಾರ ಅದನ್ನು ಉಳಿಸಿಕೊಂಡು ಇದರಿಂದ ಬರತಕ್ಕ ಹಣವನ್ನು ಬಡವರಿಗೆ ಮನೆ ಕಟ್ಟಿಕೊಳ್ಳುವ ಸಲುವಾಗಿ ಉಪಯೋಗಿಸುತ್ತೇವೆ ಎಂದು ಹೇಳಿ ನಮ್ಮ ಬಾಯನ್ನು ಮುಚ್ಚಲು ಪ್ರಯತ್ನ ಮಾಡಿದ್ದಾರೆ. ಇದಕ್ಕಿಂತ ಬೇರೆ ರೀತಿಯಾದ ಉಳಿತಾಯವನ್ನು ಮಾಡಿದ್ದರೆ ಸರಿಯಾಗುತ್ತಿರಲಿಲ್ಲವೆ ಎನ್ನುವುದು ನನ್ನ ಪ್ರಶ್ನೆ. ಈ ವರ್ಷ ಸುಮಾರು ಎರಡು ಲಕ್ಷ ಜನಕ್ಕೆ ಮನೆ ಇಲ್ಲದವರಿಗೆ ಸೈಟುಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ, ಇಧರಲ್ಲಿ 25 ಸಾವಿರ ಜನಕ್ಕೆ ಮನೆ ಕಟ್ಟಲು ಹಣವನ್ನು ಒದಗಿಸಿದ್ದಾರೆಂದು ಹೇಳುತ್ತಾರೆ. ಎರಡು ಲಕ್ಷ ಜನರಿಗೆ ಸೈಟುಗಳನ್ನು ಹಂಚುವಾಗ ಕೇವಲ 25 ಸಾವಿರ ಜನಕ್ಕೆ ಮಾತ್ರ ಮನೆಕಟ್ಟಲು ಸಹಾಯ ಮಾಡಿದರೆ ಇನ್ನೂ ಹತ್ತು ವರ್ಷಗಳ ಮೇಲಾಗುತ್ತದೆ ಈ ಯೋಜನೆ ಪೂರೈಸಬೇಕಾದರೆ, ಇದು ಯಾವ ರೀತಿ ಆಗುತ್ತದೆ ಎನ್ನುವುದನ್ನು ಆಲೋಚನೆ ಮಾಡಬೇಕಾಗುತ್ತದೆ.

ಇನ್ನು ಸರಕಾರದ ನೌಕರರಿಗೆ ಕೇಂದ್ರದ ನೌಕರರುಗಳಿಗೆ ಕೊಡುವಂತೆ ಸಮಾನವಾದ ರೀತಿಯಲ್ಲಿ ತುಟ್ಟಿಭತ್ಯವನ್ನು ಹೆಚ್ಚಿಸಿರುವುದೇನೋ ಸಂತೋಷದ ವಿಚಾರ. ಆದರೆ ಈ ಸಂದರ್ಭದಲ್ಲಿ ನಾನು ಒಂದು ಮಾತು ಹೇಳಿದರೆ ಅದನ್ನು ತಪ್ಪಾಗಿ ತಿಳಿದುಕೊಳ್ಳಬಾರದು. ಸರಕಾರದ ನೌಕರರುಗಳಿಗೆ ಸಂಬಳಸಾರಿಗೆಗಳನ್ನು ಹೆಚ್ಚು ಮಾಡಬೇಕೆಂದು ಕೇಳುವಾಗ ಅದೇ ರೀತಿಯಲ್ಲಿ ಕೆಲಸ ಮಾಡುವ ವಿಚಾರದಲ್ಲಿ ಸರಕಾರದ ನೌಕರರು ಹೆಚ್ಚು ಗಮನ ಕೊಟ್ಟ ಪಕ್ಷದಲ್ಲಿ ಆದರಿಂದ ಜನಕ್ಕೆ ಬಹು ಅನುಕೂಲವಾಗುತ್ತದೆ, ಇಂದು ನಮ್ಮ ರಾಜ್ಯ ಸರಕಾರದ ಬಡ್ಜೆಟ್ಟಿನಲ್ಲಿ ಹೆಚ್ಚು ಹಣ ಎಸ್ಟಾಬ್ಲಿಷ್‌ಮೆಂಟಿಗೇ ಹೋಗುತ್ತಿದೆ, ಈಗ ಸಂಬಳ ಮತ್ತಷ್ಟು ಹೆಚ್ಚಿಸಿರುವಾಗ ಬಡ್ಜೆಟ್ಟು ಇನ್ನೂ ಹೆಚ್ಚಾಗುತ್ತದೆ. ಆದರೆ ಇಂದು ಸಂಬಳ ಮಾತ್ರ ಹೆಚ್ಚಾಗುತ್ತಿದೆಯೇ ವಿನಾ ನೌಕರರುಗಳು ಕೆಲಸ ಮಾಡುವುದು ಕಡಿಮೆಯಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಕೈಗಾರಿಕೆಗಳಲ್ಲಿ ಯಾವ ರೀತಿ ಕೆಲಸಕ್ಕೆ ತಕ್ಕ ಸಂಬಳ ಕೊಡುತ್ತಿದ್ದಾರೋ ಅದೇ ರೀತಿ ಇಲ್ಲೂ ಕೂಡ ಕೆಲಸ ಮಾಡುವವರಿಗೇ ಹೆಚ್ಚು ಸಂಬಳ ಕೊಟ್ಟರೆ ಸರಿಯಾಗಿರುತ್ತದೋ ಏನೋ ? ನಾವು ಕೆಲವು ಆಫೀಸುಗಳಲ್ಲಿ ನೋಡುವಾಗ ನೌಕರರು ಅಟೆಂಡೆನ್ಸ್‌ಗೆ ರುಜು ಹಾಕಿ ಆ ನಂತರ ಹೋಟೆಲ್‌ಗಳಲ್ಲಿ ಹೋಗಿ ಕಾಫಿ ಕುಡಿಯುತ್ತ ಹರಟೆ ಹೊಡೆಯುವುದನ್ನು ನೋಡುತ್ತಿರುತ್ತೇವೆ. ಹೀಗೆ ಇರುವುದರಿಂದ ಯಾವ ಆಫೀಸಿನಲ್ಲಾಗಲೀ ಸಂಬಳಕ್ಕೆ ತಕ್ಕಂತೆ ಕೆಲಸಗಳು ನಡೆಯುತ್ತಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲು ನೆನಪಿಗೆ ಬರುತ್ತದೆ. ನಮ್ಮ ಬಡಾವಣೆಯಲ್ಲಿ ಡಾಕ್ಟರ್ ಬಿ. ಕೆ. ನಾರಾಯಣ

(ಶ್ರೀ ಟಿ. ಆರ್. ಶಾಮಣ್ಣ)

ರಾವ್ ಎನ್ನುವವರಿದ್ದರು. ಇವರು ಪ್ರಸಿದ್ಧ ವೈದ್ಯರಾಗಿದ್ದರು. ಒಂದು ಸಾರಿ ಇವರು ನನಗೆ ಅವರ ಹುಡುಗನಿಗೆ ಪಾಠ ಹೇಳಲು ಒಬ್ಬರು ಟೀಚರನ್ನು ಗೊತ್ತುಮಾಡಬೇಕೆಂದು ಹೇಳಿದರು. ಅದರಂತೆ ಪಾಠ ಹೇಳಲು ನಾನು ಒಬ್ಬರು ಟೀಚರನ್ನು ಗೊತ್ತು ಮಾಡಿಕೊಟ್ಟೆ. ಮೊದಲು ಆ ಮೇಷ್ಟರಿಗೆ ತಿಂಗಳಿಗೆ ಆಗ 25 ರೂಪಾಯಿ ಕೊಡುವುದಾಗಿ ಗೊತ್ತು ಮಾಡಲಾಗಿತ್ತು. ಅನಂತರ ಆ ಟೀಚರು ಸರಿಯಾಗಿ ಬರುತ್ತಿಲ್ಲ ಎಂದು ಒಂದು ಸಾರಿ ಹೇಳಿದರು. ಆ ನಂತರ ಕೆಲ ಕಾಲಾನಂತರ ಅದೇ ಮೇಷ್ಟರಿಗೆ ತಿಂಗಳಿಗೆ 0 ರೂಪಾಯಿ ಕೊಡುತ್ತೇನೆ ಮತ್ತು ಅವರು ಪ್ರತಿನಿತ್ಯವೂ ಪಾಠಕ್ಕೆ ಬರಬೇಕು ಎಂದು ಹೇಳಿದನು ಮತ್ತು ಯಾವ ದಿನ ಪಾಠಕ್ಕೆ ಬರುವುದಿಲ್ಲವೋ ಅಂತಹ ದಿನಕ್ಕೆ ಮೂರು ರೂಪಾಯಿಗಳು ಹಿಡಿಯುತ್ತೇನೆ ಇಲ್ಲವಿದ್ದರೆ ನಿತ್ಯ ಬರುವುದಾಗಿದ್ದರೆ ದಿನವೂ ಮೂರು ರೂಪಾಯಿಗಳಂತೆ ಕೊಡುತ್ತೇನೆ ಎಂದು ಹೇಳಿದರು. ಆದಾದ ಕೆಲ ದಿನಗಳಾದ ನಂತರ ನಾನು ಒಂದು ಸಲ ಡಾಕ್ಟರು ನಾರಾಯಣರಾಯರನ್ನು ಕೇಳಿದಾಗ ಅವರು ಈಚೆಗೆ ಅವರು ಮಾಡಿದ ಬದಲಾವಣೆಯಿಂದ ಅವರ ಹುಡುಗನಿಗೆ ಸರಿಯಾಗಿ ಪಾಠ ಸಿಗಲು ಅನುಕೂಲವಾಯಿತು ಎಂದು ಹೇಳಿದರು. ಇದನ್ನು ನೋಡಿದರೆ ಕೆಲಸಕ್ಕೆ ತಕ್ಕ ಸಂಬಳ ಎನ್ನುವಂತಾಯಿತು. ಯಾರು ಸರಕಾರದ ಕೆಲಸಗಳನ್ನು ಚೆನ್ನಾಗಿ ಮಾಡುತ್ತಾರೆಯೋ ಅವರಿಗೆ ಹೆಚ್ಚು ವೇತನ ಕೊಟ್ಟು, ಯಾರು ಕೆಲಸಗಳನ್ನು ಸರಿಯಾಗಿ ಮಾಡುವುದಿಲ್ಲವೋ ಅಂತಹವರಿಗೆ ವೇತನವನ್ನು ಜಪ್ತಾ ಮಾಡಬಹುದು, ಅಲ್ಲದೆ ಈಚೆಗೆ ಬರೀ ಆಫೀಸರುಗಳ ಸಂಖ್ಯೆಯೇ ಸರಕಾರದ ಎಲ್ಲ ಕಡೆಗಳಲ್ಲೂ ಹೆಚ್ಚಾಗಿರುವುದು, ಕಂಡು ಬರುತ್ತಿದೆ. ಇದರಿಂದಾಗಿ ಸರಕಾರದ ನೌಕರರುಗಳಿಗೆ ಕೆಲಸ ಮಾಡುವುದರಲ್ಲೂ ತೊಂದರೆಗಳಾಗುತ್ತಿವೆ. ಎಲ್ಲೆ ಮೀರಿ ಇಂದು ಆಫೀಸರುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇನ್ನು ಮುಂದಾದರೂ ಆಫೀಸರುಗಳ ಸಂಖ್ಯೆಯನ್ನು ಹೆಚ್ಚು ಮಾಡಬಾರದು, ಆಫೀಸರುಗಳು ಏನೂ ಕೆಲಸ ಮಾಡುವುದಿಲ್ಲ, ಇವರ ಕೈ ಕೆಳಗಿನ ನೌಕರರುಗಳೇ ಹೆಚ್ಚು ಕೆಲಸ ಮಾಡುವವರು. ಇಂದು ಬ್ಯಾಂಕುಗಳಲ್ಲಿ ಆಫೀಸರುಗಳು ಯಾವ ರೀತಿ ಕೆಲಸ ಮಾಡುತ್ತಾರೆ ಎಂದರೆ ಅವರು ರಾತ್ರಿ 12 ಗಂಟೆಯವರೆಗೂ ಕೆಲಸ ಮಾಡುತ್ತಾರೆ. ಇವರು ಕೆಲಸ ಮಾಡುತ್ತಿದ್ದಾರಲ್ಲ ಎಂದು ಅಲ್ಲಿರುವ ನೌಕರರುಗಳು ಕೂಡ ಅವರ ಜೊತೆ ಕೆಲಸ ಮಾಡುತ್ತಿರುತ್ತಾರೆ. ಆದರೆ ಸರಕಾರದಲ್ಲಿ ಈ ರೀತಿ ಕೆಲಸಗಳಾಗುತ್ತಿಲ್ಲ. ದಿನೇ ದಿನೇ ಜಾಸ್ತಿಯಾಗುತ್ತಿರುವ ಆಫೀಸರುಗಳ ಸಂಖ್ಯೆಯನ್ನು ತಡೆಗಟ್ಟುವುದು ಅಗತ್ಯ. ನಾವುಗಳು ದಿನೇ ದಿನೇ ನೋಡುತ್ತಿದ್ದೇವೆ, ಜಾಯಿಂಟು ಡೈರೆಕ್ಟರುಗಳು, ಡೈರೆಕ್ಟರುಗಳು, ಸ್ಪೆಷಲ್ ಆಫೀಸರುಗಳು ಎಂದು ಇತಿ ಮಿತಿಯಿಲ್ಲದೆ ನೇಮಕಗಳಾಗುತ್ತಿವೆ. ಇದರಿಂದ ಸರಿಯಾಗಿ ಕೆಲಸ ಮಾಡಲು ಸರಕಾರ ಇಂತಹ ಆಫೀಸರುಗಳ ಮೇಲೆ ಬರೆ ಎಳೆಯುವ ಕ್ರಮ ತೆಗೆದುಕೊಂಡರೆ ಆಗ ಸರಕಾರದ ಕೆಲಸಗಳು ಸರಿಹೋಗಬಹುದು. ಇನ್ನು ಎಲ್ಲಿ ನೋಡಿದರೆ ಅಲ್ಲಿ ಲಂಚದ ಹಾವಳಿ ಬಹು ಹೆಚ್ಚಾಗಿರುತ್ತದೆ. ಲಂಚವಿಲ್ಲದೆ ಯಾವ ಕಚೇರಿಯಲ್ಲಾಗಲಿ ಅಲ್ಲಿರುವ ಪೇಪರು ಮುಂದಕ್ಕೆ ಹೋಗುವುದೇ ಇಲ್ಲ. ಇದಕ್ಕಾಗಿ ಸರಕಾರ ಇಂತಿಂಥಹ ಕೆಲಸಗಳು ಇಷ್ಟೇ ದಿನದಲ್ಲಿ ಮುಗಿಯಬೇಕು ಎಂದು ಕಟ್ಟುನಿಟ್ಟಾದ ಕ್ರಮ ಜಾರಿಗೆ ತರಲು ತೀರ್ಮಾನ ತೆಗೆದುಕೊಂಡರೆ ಆಗ ಸ್ವಲ್ಪ ಅನುಕೂಲ ಜನತೆಗೆ ಸಿಗಬಹುದು. ಇದನ್ನು ಸರಕಾರ ವಿಚಾರ ಮಾಡಬೇಕು ಅನೇಕ ನೌಕರರುಗಳು ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಿದ್ದರೂ ಅವರಿಗೆ ಸರಿಯಾದ ಉತ್ತೇಜನ ಸಿಗುತ್ತಿಲ್ಲ. ಇದಕ್ಕೆ ಅವರಿಗೆ ಸರಿಯಾದ ಗಾಡ್ ಫಾದರ್‌ಗಳು ಇರುವುದಿಲ್ಲ, ಕೆಲಸ ಮಾಡದೇ ಇರತಕ್ಕವರು ಬಹಳ ಹೆಚ್ಚಾಗಿದ್ದಾರೆ, ಇದಕ್ಕಾಗಿ ಕೆಲಸಕ್ಕೆ ತಕ್ಕ ಸಂಬಳ ಕೊಡಬೇಕು ಎಂದು ಸರಕಾರ ಏರ್ಪಾಡು ಮಾಡಿದರೆ ಆಗ ಸರಕಾರದ ಕೆಲಸಗಳು ಚೆನ್ನಾಗಿ ಆಗಬಹುದು ಇದರ ಬಗ್ಗೆ ಸೂಕ್ತವಾದ ಎಚ್ಚರಿಕೆ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಮತ್ತು ತೀವ್ರವಾಗಿ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಈ ವರ್ಷದ ಬಡ್ಜೆಟ್ಟಿನಲ್ಲಿ ಓಲ್ಡ್ ಏಜ್ ಪೆನ್‌ಷನರ್ಸ್‌ಗಳಿಗೆ ಇದುವರೆಗೆ 25 ರೂಪಾಯಿ ಕೊಡುತಿದ್ದರು. ಅವರೀಗ 30 ರೂಪಾಯಿನಂತೆ ಮಾಡಿದರು. ಇದನ್ನು ಈಗ 40 ರೂಪಾಯಿಗಳವರೆಗೆ ಹೆಚ್ಚು ಮಾಡಿದ್ದಾರೆ. ಇದು ಸಂತೋಷಪಡುವ ವಿಚಾರ. ಆದರೆ ಇದರಲ್ಲಿ ಅನೇಕ ಶಕ್ತಿಹೀನರಾದವರು ಈಚೆಗೆ ರಿಟೈರು ಆಗಿದ್ದರೂ ಅವರ ಪೆನ್‌ಷನ್ ಪೇಪರುಗಳು ಬೇಗ ಇತ್ಯರ್ಥವಾಗದೆ ಬಹಳ ನಿಧಾನವಾಗುತ್ತಿದೆ. ಹೀಗಾಗಿ ನೂರಾರು ಪೆನ್‌ಷನ್ ಪೇಪರುಗಳು ಇನ್ನೂ ಇತ್ಯರ್ಥವಾಗಿಲ್ಲ. ಇದನ್ನು ತಡವಾಗದಂತೆ ಬೇಗ ಇತ್ಯರ್ಥ ಮಾಡಬೇಕೆಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ. ಸರಕಾರದವರೇನೋ ಇಂದು ಕೆಲಸ ಮಾಡುವ ನೌಕರರುಗಳಿಗೆ ಸಂಬಳಸಾರಿಗೆಗಳನ್ನು ಹೆಚ್ಚು ಮಾಡಿದ್ದಾರೆ ! ಆದರೆ ಅವರ ಗಮನ ಸರಕಾರದಲ್ಲಿ ದುಡಿದಿರುವ ಹಾಗೂ ರಿಟೈರಾಗಿರುವ ಪೆನ್‌ಷನರುಗಳ ಬಗ್ಗೆ ಏಕೆ ಗಮನ ಹರಿಸಲಿಲ್ಲ ಎಂದು ಕೇಳಬೇಕಾಗಿದೆ. ಇಂದು ಅವರಿಗೆ ಏರು

ಬೆಲೆಗಳಿಂದಾಗಿ ಅವರು ಜೀವನ ಮಾಡುವುದೇ ಕಷ್ಟವಾಗಿದೆ. ಅವರಿಗೇನಾದರೂ ಅನು ಮಾಡಿಕೊಟ್ಟರೆ ಚೆನ್ನಾಗಿತ್ತು. ಇಂತಹ ಪೆನ್ಷನರುಗಳು ಬೇರೆ ಕಡೆಗಳಲ್ಲಿ ಹಾಗೂ ಕೆಲವು ರಿಕೆಗಳಲ್ಲಿ ಕೆಲಸ ಮಾಡಬೇಕಾದ ಸಂದರ್ಭ ಬಂದಿವೆ, ಇವರು ಜೀವನ ಮಾಡಲು ಕಷ್ಟವಾಗಿದೆ ಯದ್ವಾ ತದ್ವಾ ಬೆಲೆಗಳು ಗಗನಕ್ಕೇರುತ್ತಿವೆ, ಇದರಿಂದಾಗಿ ಇಂತಹ ಪೆನ್ಷನರುಗಳ ತುಂಬಾ ಶೋಚನೀಯವಾಗಿದೆ. ಇದರ ಬಗ್ಗೆ ಸರಕಾರ ಗಮನ ಕೊಡದೇ ಇರುವುದು ಶೋಚನೀಯವಾದ ವಿಚಾರ. ನೌಕರರುಗಳು ಹೆಚ್ಚು ಸಂಬಳ ಕೇಳುತ್ತಿಲ್ಲ. ಆದರೆ ರದವರು ಏರುತ್ತಿರುವ ದವಸಗಳ ಬೆಲೆಗಳನ್ನು ಇಳಿಸಲು ತಕ್ಕ ಕ್ರಮ ತೆಗೆದುಕೊಂಡಿದ್ದರೆ ಹೆಚ್ಚು ಸಂಬಳ ಕೊಡಬೇಕಾದ ಅಗತ್ಯವೇ ಬರುತ್ತಿರಲಿಲ್ಲ. ಹೆಚ್ಚು ಸಂಬಳ ಕೊಡುವುದ ವರ್ತಕರುಗಳು ದವಸಗಳ ಬೆಲೆಗಳನ್ನು ಏರಿಸುತ್ತಾರೆ. ಇದರಿಂದಾಗಿ ಈ ಸಮಸ್ಯೆ ಬಗೆ ಯುವುದಿಲ್ಲ. ಆದುದರಿಂದ ಕೇಂದ್ರ ಸರಕಾರದವರು ಹಾಗೂ ರಾಜ್ಯ ಸರಕಾರದವರು ಕೂಡಿ ಗಳನ್ನು ಏರಿಸಲು ತಕ್ಕ ಕ್ರಮ ತೆಗೆದುಕೊಂಡರೆ ಬೆಲೆಗಳ ಏರಿಕೆಯನ್ನು ತಡೆಗಟ್ಟಲು ಅನು ವಾಗುತ್ತದೆ.

ಶ್ರೀ ಎಂ. ಮಲ್ಲಪ್ಪ.—ಮಾನ್ಯ ಸದಸ್ಯರು ಬೆಲೆ ಏರಿಕೆ ತಡೆಗಟ್ಟಲು ರಚನಾತ್ಮಕವಾದ ಸಲಹೆಗಳನ್ನು ಇಲ್ಲಿ ತಿಳಿಸಬಹುದಲ್ಲವೇ ?

ಶ್ರೀ ಟಿ. ಆರ್. ಶಾಮಣ್ಣ.—ಒಂದು ಕಡೆ ತೆರಿಗೆ ಹೆಚ್ಚು ಮಾಡುವುದರಿಂದ ಬೆಲೆಗಳು ಏರುತ್ತಿವೆ. ಆದುದರಿಂದ ತೆರಿಗೆಯನ್ನು ಆದಷ್ಟು ಹತೋಟಿಯಲ್ಲಿಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಎರಡನೆಯದಾಗಿ ಅತ್ಯಾವಶ್ಯಕ ವಸ್ತುಗಳ ತಯಾರಿಕೆ ಮತ್ತು ವಿತರಣೆಯನ್ನು ಮಾಡುವಾಗ ಹಿಡಿತದಲ್ಲಿ ಇಟ್ಟುಕೊಳ್ಳಬೇಕು. ಲಾಭ ಮಾಡತಕ್ಕಂತಹ ಲಾಭಕೋರರು ಯಾರು ಇದ್ದಾರೋ ಅವರಿಗೆ ಸರಿಯಾದ ಶಿಕ್ಷೆ ವಿಧಿಸಬೇಕು, ಈ ಕೆಲಸವನ್ನು ಸರ್ಕಾರದವರು ಸಮರ್ಪಕವಾಗಿ ಮಾಡುತ್ತಿಲ್ಲ. ಬೆಲೆಗಳ ಏರಿಕೆಗೆ ಸರ್ಕಾರದವರು ಸೂಕ್ತ ಮಾರ್ಗವನ್ನು ಕಂಡುಹಿಡಿದು ಕಡಿಮೆಯಾಗುವಂತೆ ನೋಡಿಕೊಳ್ಳಬೇಕೇ ಹೊರತು ಅದರ ತಪ್ಪನ್ನು ಬೇರೆಯವರ ಮೇಲೆ ಹಾಕುವುದು ಸರಿಯಲ್ಲ. ಈ ವಿಚಾರದಲ್ಲಿ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರ ಒಂದ ಕಡೆ ಕೂತು ಸೂಕ್ತ ಕಾರ್ಯಕ್ರಮ ಕೈಕೊಳ್ಳದೇ ಹೋದರೆ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಆಡಳಿತ ಕುಸಿದುಬೀಳಬಹುದು. ಆದಕಾರಣ ಇದರ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಈ ಸಮಯದಲ್ಲಿ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಭತ್ತದ ಮೇಲೆ ತೆರಿಗೆಯನ್ನು ಮಾನ್ಯ ಅರ್ಥಸಚಿವರು ತೆಗೆದುಹಾಕಿದ್ದಾರೆ. ಆದರೆ ಅದನ್ನು ವರ್ತಕರು ದುರುಪಯೋಗ ಮಾಡಿಕೊಂಡು ಆ ಒಂದು ಹೊರೆಯನ್ನು ಜನರ ಮೇಲೆಯೇ ಹಾಕದಂತೆ ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ವರ್ಷ ನಮ್ಮ ಆರ್ಥಿಕ ಪರಿಸ್ಥಿತಿ ಬಹಳ ಕಠಿಣವಾಗಿರುವುದರಿಂದ ಆ ಬಗ್ಗೆ ಎಚ್ಚರಿಕೆಯನ್ನು ತೆಗೆದುಕೊಳ್ಳದೇ ಹೋದರೆ ಮುಂದಿನ ವರ್ಷ ಇನ್ನೂ ಕಷ್ಟಪಡಬೇಕಾಗುತ್ತದೆ.

ಹೋದ ವರ್ಷ ವಿದ್ಯಾಭ್ಯಾಸಕ್ಕೆ 61 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ ಈ ವರ್ಷ 67 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇದು ಸಂತೋಷದ ಸಂಗತಿ. 1966—67ರಲ್ಲಿ ಈ ಬಾಬಿಗೆ 28 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ ಈ ಸಾಲಿನಲ್ಲಿ 67 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಕಳೆದ 8 ವರ್ಷಗಳಲ್ಲಿ ವಿದ್ಯಾಭ್ಯಾಸಕ್ಕೆ ಒಂದಕ್ಕೆ ಎರಡರಷ್ಟು ಹೆಚ್ಚು ಹಣವನ್ನು ಒದಗಿಸಿರುವುದು ಉತ್ತಮವಾದಂಥ ಮಾರ್ಗವೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ಶೋಚನೀಯ ವಿಚಾರವೆಂದರೆ ವಿದ್ಯಾಭ್ಯಾಸಕ್ಕೆ ಹಣ ಹೆಚ್ಚು ಒದಗಿಸುತ್ತಿದ್ದರೂ ಸಹ ವಿದ್ಯಾಭ್ಯಾಸದ ಕ್ವಾಲಿಟಿ ಮಾತ್ರ ಹೆಚ್ಚದೆ ನಶಿಸಿ ಹೋಗುತ್ತಿದೆ. ವಿದ್ಯಾಭ್ಯಾಸದ ಮಟ್ಟ, ಅದರ ಕ್ವಾಲಿಟಿ ಹೆಚ್ಚದೆ ಹೋದರೆ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುವ ಹಣದಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಆದಕಾರಣ ಈ ಬಗ್ಗೆ ಸರ್ಕಾರದವರು ಒಂದು ರಚನಾತ್ಮಕವಾದ ಕಾರ್ಯಕ್ರಮವನ್ನು ಇಟ್ಟುಕೊಂಡು, ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚು ಮಾಡುವ ಬಗ್ಗೆ ಗಮನ ಕೊಡಬೇಕಲ್ಲದೆ ವರ್ಷದಿಂದ ವರ್ಷಕ್ಕೆ ಎಷ್ಟು ಅಚೀವ್ ಆಗಿದೆ ಎಂಬುದನ್ನು ಸಹ ನೋಡಬೇಕು. ಪ್ರಯೋಜನಕಾರಿಯಾದಂತಹ ವಿದ್ಯಾಭ್ಯಾಸವನ್ನು ನಾವು ಕೊಡದೇ ಹೋದರೆ ಮುಂದೆ ನಾವು ಕಷ್ಟಪಡಬೇಕಾಗುತ್ತದೆ.

Education must be not only useful, but purposeful, and at the same time quality education must be imparted to the students.

(ಶ್ರೀ ಟಿ. ಆರ್. ಶಾಮಣ್ಣ)

ಇನ್ನು ಮೆಡಿಕಲ್‌ಗೆ ಹೋದ ವರ್ಷ 10·30 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ ಈ ವರ್ಷ 11.38 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇನ್ನೂ ಜಾಸ್ತಿ ಒದಗಿಸಿದ್ದರೆ ಚೆನ್ನಾಗಿರುತ್ತಿತ್ತು. ಈಗ ಜನರಿಗೆ ಸತ್ವವಿಲ್ಲದ ಆಹಾರ ಸಿಗುತ್ತಿರುವುದರಿಂದ ಹೆಚ್ಚಾಗಿ ಕಾಯಿಲೆ ಬೀಳುತ್ತಿದ್ದಾರೆ. ಜನರಿಗೆ ಸರಿಯಾದ ಆರೋಗ್ಯ ಇಲ್ಲದೆ ಕ್ಷೀಣದಿಶೆಗೆ ಹೋಗುತ್ತಿರುವ ಕಾಲದಲ್ಲಿ ಆರೋಗ್ಯಕ್ಕಾಗಿ ಹೆಚ್ಚು ಹಣವನ್ನು ಒದಗಿಸಿದ್ದರೆ ಚೆನ್ನಾಗಿರುತ್ತಿತ್ತು. ಈಗ ಕೇಂದ್ರದಿಂದ ಬೇರೆ ಕುಟುಂಬ ಯೋಜನೆಗಾಗಿ ಹಣ ಬರುತ್ತದೆ. ಆದಕಾರಣ ಜನರಿಗೆ ಹೆಚ್ಚು ಹೆಚ್ಚು ಔಷಧಗಳನ್ನು ಒದಗಿಸುವುದಕ್ಕೆ ಮತ್ತು ಎಲ್ಲ ರೀತಿಯ ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವದಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ಸಂತೋಷದ ಸಂಗತಿ ಎಂದರೆ, ಕೇಂದ್ರದವರು ವರ್ಷೇ ವರ್ಷೇ ತೆರಿಗೆಗಳನ್ನು ಹೆಚ್ಚಿಸುತ್ತಿರುವ ಕಾಲದಲ್ಲಿ ರಾಜ್ಯಸರ್ಕಾರದವರು ಯಾವ ಹೊಸ ತೆರಿಗೆಗಳನ್ನು ಹಾಕದಿರುವುದು. ಸರ್ಕಾರದ ಗಮನಕ್ಕೆ ಒಂದು ವಿಷಯವನ್ನು ತರುವುದೇನೆಂದರೆ ಸರ್ಕಾರಕ್ಕೆ ಹಣ ಬೇಕಾಗಿರುವ ಕಾಲದಲ್ಲಿ ಹೆಚ್ಚು ತೆರಿಗೆಯನ್ನು ಹಾಕುವುದಕ್ಕೆ ಬದಲು ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ಹಣವನ್ನು ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡುವುದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು. ಅನೇಕ ಸಂದರ್ಭಗಳಲ್ಲಿ ಸರ್ಕಾರಕ್ಕೆ ಬರಬೇಕಾದ ಹಣ ಬರದೆ ಮಧ್ಯದಲ್ಲಿಯೇ ಸೋರಿಹೋಗುತ್ತಿದೆ. ಬುಡದಿಂದ ಮೇಲಿನವರೆಗೆ ಲಂಚವಿರುವುದರಿಂದ ಸರ್ಕಾರಕ್ಕೆ ಬರುವ ಆದಾಯ ತಪ್ಪಿಹೋಗುತ್ತಿದೆ. ಮೋಟಾರ್ ವೆಹಿಕಲ್ಸ್ ಟಾಕ್ಸ್‌ನಿಂದ, ಸೇಲ್ಸ್ ಟ್ಯಾಕ್ಸ್‌ನಿಂದ ಮತ್ತು ಎಕ್ಸೈಜ್‌ನಿಂದ ಎಷ್ಟು ವರಮಾನ ಬರಬೇಕಾಗಿತ್ತೋ ಅಷ್ಟು ಬರುತ್ತಿಲ್ಲ. ಕಳ್ಳಭಟ್ಟಿಯಿಂದ ರಾಜ್ಯದ ವರಮಾನ ಕಡಿಮೆಯಾಗಿದೆ. ಬೆಂಗಳೂರು ನಗರದಲ್ಲಿಯೇ [illegible]00 ಕಳ್ಳಭಟ್ಟಿ ಕೇಂದ್ರಗಳಿವೆ. ಇದರಿಂದ ಜನರ ಆರೋಗ್ಯ ಕೆಡುತ್ತಿರುವುದಲ್ಲದೆ, ಸರ್ಕಾರಕ್ಕೆ ಬರುವ ಆದಾಯವೂ ಖೋತಾ ಆಗುತ್ತಿದೆ. ಆದ್ದರಿಂದ ಇದನ್ನು ಮುಟ್ಟುಗೋಲು ಹಾಕಬೇಕು. ಈ ಕಳ್ಳಭಟ್ಟಿ ಕೇಂದ್ರಗಳು ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿರುವುದಕ್ಕೆ ಪೋಲೀಸಿನವರು ಸಹಾಯ ಮಾಡುತ್ತಿರುವುದೇ ಕಾರಣ. ಇಲ್ಲದಿದ್ದರೆ ಅವರು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಪೋಲೀಸರ ಬಗ್ಗೆ ಸಾಕಷ್ಟು ಗಮನ ಕೊಡದೇ ಹೋದರೆ ಕಳ್ಳಭಟ್ಟಿ ವ್ಯಾಪಾರ ಇದೇ ರೀತಿ ನಡೆದುಕೊಂಡು ಹೋಗುತ್ತಿರುತ್ತದೆ ಮತ್ತು ಸರ್ಕಾರಕ್ಕೆ ಬರುವ ಆದಾಯ ಕಡಿಮೆಯಾಗುತ್ತದೆ. ಇದರ ಜೊತೆಗೆ ಇದನ್ನು ಕುಡಿದು ಸಾಯುವವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಬಡವರ ಆರೋಗ್ಯದ ದೃಷ್ಟಿಯಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುವ ದೃಷ್ಟಿಯಿಂದ ಇದರ ಬಗ್ಗೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಆ ರೀತಿ ತೆಗೆದುಕೊಳ್ಳುವುದರಿಂದ ಜನರ ನೈತಿಕ ಮಟ್ಟವೂ ಜಾಸ್ತಿಯಾಗುತ್ತದೆ. ಮಾನ್ಯ ಚೆನ್ನಬಸಪ್ಪನವರು ಗೃಹಮಂತ್ರಿಗಳಾಗಿದ್ದಾಗ ಕಳ್ಳಭಟ್ಟಿ ಮೇಲೆ ದಾಳಿ ನಡೆಸುತ್ತಿದ್ದರು. ಅದೇ ರೀತಿ ಈಗಲೂ ದಾಳಿ ನಡೆಸಬೇಕೆಂದು ಒತ್ತಿ ಹೇಳುತ್ತೇನೆ.

ಇಂದು ಬೆಂಗಳೂರು ನಗರದಲ್ಲಿ ಕ್ಲಬ್‌ಗಳ ಹಾವಳಿ ವಿಪರೀತವಾಗಿದೆ. ನಗರದ ಪ್ರತಿ ಮೂಲೆ ಮೂಲೆಯಲ್ಲಿಯೂ ಕ್ಲಬ್‌ಗಳು ನಡೆಯುತ್ತಿವೆ. ಈ ಕ್ಲಬ್‌ಗಳನ್ನು ನಡೆಸುವವರು ಪೋಲೀಸ್ ಇನ್ಸ್‌ಪೆಕ್ಟರಿಗೆ ಸಾವಿರದಿಂದ ಎರಡು ಸಾವಿರ ರೂಪಾಯಿಗಳವರೆಗೆ ಮಾಮೂಲಿ ಕೊಡುತ್ತಿರುತ್ತಾರೆ. ಈ ಕ್ಲಬ್‌ಗಳಲ್ಲಿ ಕೆಲವು ಪುಡಾರಿಗಳು ಇರುತ್ತಾರೆ. ಅವರು ಈ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಸಾಕುತ್ತಿದ್ದಾರೆ ಅಲ್ಲದೆ, ತಮಗೆ ಬೇಡವೆನಿಸಿದರೆ ವರ್ಗವನ್ನು ಸಹ ಮಾಡಿಸುತ್ತಾರೆ. ಈ ಕ್ಲಬ್‌ಗಳನ್ನು ಸರ್ಕಾರದವರು ಮುಟ್ಟುಗೋಲು ಹಾಕದೇ ಹೋದರೆ ಮನೆಗಳು ಹಾಳಾಗಿ ಹೋಗುತ್ತವೆ. ಈ ಕ್ಲಬ್‌ಗಳನ್ನು ನಡೆಸುವವರು ಕೆಲವು ಪುಂಡರನ್ನು ಸಾಕಿಕೊಂಡಿರುತ್ತಾರೆ. ಅವರ ಸಹಾಯದಿಂದ ಏನು ಬೇಕಾದರೂ ಮಾಡುತ್ತಾರೆ. ಪೋಲೀಸರು ಸಹ ಇವರಿಗೆ ಸಹಾಯ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.— ಕೆಲವು ಕ್ಲಬ್‌ಗಳಲ್ಲಿ ಪಾಪ್ಯುಲರ್ ಮಿನಿಸ್ಟ್ರಿ ಎಂದು ಕೆಲವು ಮಂತ್ರಿಗಳ ಫೋಟೋವನ್ನು ಹಾಕಿದ್ದಾರೆ. ಶಿವಕಾಶಿಯಲ್ಲಿ ಪ್ರಿಂಟ್ ಆಗಿರುವ ಫೋಟೋವನ್ನೇ ಹಾಕಿದ್ದಾರೆ. ಒಬ್ಬ ಕ್ಲಬ್ ಓನರ್ ಮುಖ್ಯಮಂತ್ರಿಗಳಿಗೆ ಒಂದು ದೊಡ್ಡ ಪಾರ್ಟಿಯನ್ನೇ ಕೊಟ್ಟ. ಇಂದು ಪೋಲೀಸ್ ಸ್ಟೇಷನ್‌ಗಳಲ್ಲಿಯೂ ಸಹ ಮಂತ್ರಿಗಳ ಫೋಟೋ ಸಹ ಹಾಕಿದ್ದಾರೆ ಜೊತೆಗೆ ಕೈದಿಗಳ ಫೋಟೋ ಸಹ ಹಾಕಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.— ಬಾರ್‌ಗಳಲ್ಲಿ ಇಂದಿರಾಗಾಂಧಿಯವರ ಫೋಟೋ ಹಾಕಿರಬೇಕಾದರೆ ಕ್ಲಬ್‌ಗಳಲ್ಲಿ ಮಂತ್ರಿಗಳ ಫೋಟೋ ಏತಕ್ಕೆ ಹಾಕಬಾರದು ?

ಶ್ರೀ ವಾಟಾಳ್ ನಾಗರಾಜ್.-- ಮಹಾತ್ಮ ಗಾಂಧೀಜಿಯವರನ್ನು ಬೈಯುವವರೇ ಪಾಪ್ಯುಲರ್ ಮಿನಿಸ್ಟ್ರಿಯಲ್ಲಿ ಮಂತ್ರಿಗಳಾಗಿರಬೇಕಾದರೆ ಇಂದಿರಾಗಾಂಧಿಯವರ ಪರಿಸ್ಥಿತಿ ಏನಾಗಬೇಕು ಎಂಬುದನ್ನು ಮಾನ್ಯ ಅಧ್ಯಕ್ಷರೇ ಹೇಳಬೇಕು ?

Mr. DEPUTY SPEAKER.—Please do not expcet any reply from me on hypothetical issues raised at the spur of the moment.

ಶ್ರೀ ವಾಟಾಳ್ ನಾಗರಾಜ್.—ತಾವು ಉತ್ತರಕೊಡುವುದಕ್ಕಾಗುವುದಿಲ್ಲವೆಂದರೆ, ಮಾನ್ಯ ಚೆನ್ನಬಸಪ್ಪನವರು ಉತ್ತರ ಕೊಡಲಿ. ಏಕೆಂದರೆ ಅವರು ತತ್ವ, ನಿಷ್ಠೆ, ಮತ್ತು ಧರ್ಮದಿಂದ ಇರುವವರಾಗಿದ್ದಾರೆ. ನಾನು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರನ್ನು ಕೇಳುತ್ತೇನೆ. ಕ್ಲಬ್ಬುಗಳಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಫೋಟೋ ಮತ್ತು ನಮ್ಮ ರಾಜ್ಯದ ಮಂತ್ರಿಗಳ ಫೋಟೋವನ್ನು ಇಟ್ಟುಕೊಳ್ಳಬಹುದೇ ?

Sri H. M. CHANNABASAPPA —It is open to anybody to have any photo in his house including the photo of Sri Vatal Nagaraj. I willfurther state that I would request some of the shops and bars to keep the photo of Sri Vatal Nagaraj.

Sri M. S. KRISHNAN.—Do you pass a general order to the effect that the photos of Sri Vatal Nagaraj should hung in the shops ?

Mr. DEPUTY SPEAKER.—We must take the proceedings of the House a little more seriously. Interruptions are tolerable once in a way but the members should not go on dilating upon them in a humourous way.

ಶ್ರೀ ಟಿ. ಆರ್. ಶಾಮಣ್ಣ.—ಕ್ಲಬ್ಬುಗಳ ಕಾಟವನ್ನು ತಪ್ಪಿಸಬೇಕೆಂದು ನಾನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಮತ್ತು ಬಡ್ಜೆಟ್ಟಿನಲ್ಲಿ ಹೆಚ್ಚು ಭಾಗ ಬರಗಾಲದ ಬಗ್ಗೆ ಹೇಳಿದ್ದಾರೆ. ಬರಗಾಲ ಪೀಡಿತ ಪ್ರದೇಶಗಳಲ್ಲಿ ಪರಿಹಾರಕ್ಕಾಗಿ ಖರ್ಚು ಮಾಡತಕ್ಕ ಪ್ರತಿಯೊಂದು ಕಾಸೂ ಸರಿಯಾದ ರೀತಿಯಲ್ಲಿ ಖರ್ಚು ಮಾಡಬೇಕು. ಮತ್ತು ಈ ಬರಗಾಲ ಉತ್ತರ ಕರ್ನಾಟಕ ಮಾತ್ರವಲ್ಲದೆ ಹಳೆಯ ಮೈಸೂರು ಪ್ರದೇಶಗಳಾದ ತುಮಕೂರು, ಬೆಂಗಳೂರು, ಕೋಲಾರ, ಚಿತ್ರದುರ್ಗ ಮುಂತಾದ ಪ್ರದೇಶಗಳಲ್ಲಿಯೂ ಸಹ ಪೂರ್ತಿ ಕ್ಷಾಮ ಪೀಡಿತವಾಗಿರುವ ಪ್ರದೇಶಗಳು ಇವೆ, ಅವರಿಗೂ ಸಾಕಷ್ಟು ಅನುಕೂಲ ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ. ಈಗ ಬರಗಾಲ ಪೀಡಿತ ಪ್ರದೇಶಗಳಲ್ಲಿ ಅನೇಕ ರೈತರು ತಮ್ಮಲ್ಲಿ ಇದ್ದಂತಹ ಹಸು, ದನಕರುಗಳು ದುಡ್ಡು ಕಾಸು ಎಲ್ಲವನ್ನೂ ಕಳೆದುಕೊಂಡಿದ್ದಾರೆ. ಆದ್ದರಿಂದ ಮಳೆ ಬಂದಾಗ ಅವರಿಗೆ ಬೇಕಾದಂತಹ ಸೌಲಭ್ಯವನ್ನು ಒದಗಿಸದಿದ್ದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಆ ಬಗ್ಗೆ ಸರ್ಕಾರದವರು ಗಮನ ಕೊಡಬೇಕು. ಅವರು ಜಮೀನನ್ನು ಉಳುವುದಕ್ಕೆ ಬೇಕಾದ ಸೌಲಭ್ಯ, ಬಿತ್ತನೆಗೆ ಬೇಕಾದ ಬೀಜ ಗೊಬ್ಬರ ಇವುಗಳನ್ನು ಅವರಿಗೆ ಒದಗಿಸದಿದ್ದರೆ ಅವರು ವ್ಯವಸಾಯ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಅವರಿಗೆ ಬೇಕಾದ ಸೌಲಭ್ಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಈ ವರ್ಷದ ಆಯವ್ಯಯದಲ್ಲಿ ರೆವಿನ್ಯೂ ಎಕ್ಸ್‌ಪೆಂಡಿಚರ್ ಬಹಳ ಕಷ್ಟಕರವಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆದ್ದರಿಂದ ಮಾನ್ಯ ಅರ್ಥ ಸಚಿವರು ಆದಷ್ಟೂ ವರಮಾನವನ್ನು ಹೆಚ್ಚಿಸುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಕೈಗೊಳ್ಳಬೇಕು. ಇದರ ಜೊತೆಗೆ ಕೇಂದ್ರ ಸರ್ಕಾರದಿಂದ ಯಾವ ಯಾವ ರೀತಿ ಹಣ ಸಹಾಯವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಸಾಕಷ್ಟು ಗಮನವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ. ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್‌ಗೆ ಖರ್ಚನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರದ ಆಡಳಿತ ದಕ್ಷತೆಯಿಂದ ನಡೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತು ಜನಗಳಿಗೆ ಸೌಕರ್ಯವನ್ನು ಒದಗಿಸುವ ಕಡೆ ಗಮನ ಕೊಟ್ಟು ಆ ಬಗ್ಗೆ ಮಂತ್ರಿಮಂಡಲದವರು ಸಾಕಷ್ಟು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಕೆ. ಯೆಂಕಪ್ಪ (ಶಿಕಾರಿಪುರ).**—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಈ ಸಭೆಯಮುಂದೆ ಮಂಡಿಸಿರತಕ್ಕ 1973-74 ನೇ ಸಾಲಿನ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಇದರಲ್ಲಿ ಮೊದಲನೆಯದಾಗಿ ಇವೊತ್ತು ಸರ್ಕಾರದವರು ಬರಗಾಲ ಪೀಡಿತ ಪ್ರದೇಶಗಳನ್ನು ಗಮನಕ್ಕೆ ತೆಗೆದುಕೊಂಡು ಅಲ್ಲಿ ಮಾಡಿರತಕ್ಕ ಕೆಲಸಕಾರ್ಯಗಳು ಮತ್ತು ವ್ಯವಸ್ಥೆಯನ್ನು ನಾನು ಪೂರ್ಣವಾಗಿ ಸ್ವಾಗತಿಸುತ್ತೇನೆ ಈಗ ಸರ್ಕಾರದವರು ಕೈಗೊಂಡಿರತಕ್ಕ ಪ್ರಯತ್ನಗಳಿಂದಾಗಿ ಈ ಬರಗಾಲ ಪೀಡಿತ ಪ್ರದೇಶಗಳಲ್ಲಿ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿದ್ದರೂ ಮುಂದೆ ಕೆಲವು ಭಾಗಗಳಲ್ಲಿ ಪರಿಸ್ಥಿತಿ ಹದಗೆಡುವ ಸಂದರ್ಭ ಬರಬಹುದು ಎಂದು ಕಾಣುತ್ತದೆ. ಹಿಂದಿನ ಸರ್ಕಾರದ ತಾತ್ಸಾರದ ಭಾವನೆಯಿಂದ ಈ ಬರಗಾಲವನ್ನು ಎದುರಿಸುವುದಕ್ಕೆ ಸಾಧ್ಯವಾಗಲಿಲ್ಲ. ಅದೇ ರೀತಿ ನಮ್ಮ ಸರ್ಕಾರವು ಮಾಡಬಾರದು. ಹಂತಹಂತವಾಗಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಈ ಅಭಾವ ಪರಿಸ್ಥಿತಿ ಇರತಕ್ಕ ಪ್ರದೇಶಗಳಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಬಿಜಾಪುರ, ಬೀದರ್, ಗುಲ್ಬರ್ಗ, ರಾಯಚೂರು, ಬೆಳಗಾಂ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕೆಲವು ಪ್ರದೇಶಗಳಲ್ಲಿ ಸರ್ಕಾರದವರು ಮಾಡಿರತಕ್ಕ ಕಾರ್ಯವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಮಾಡಿದ್ದರೆ ಸಂತೋಷವಾಗುತ್ತಿತ್ತು. ಇದೇ ರೀತಿ ಈ ಬರಗಾಲ ಪೀಡಿತ ಪ್ರದೇಶಗಳಲ್ಲಿ ಮಾಡಬೇಕಾಗಿರತಕ್ಕ ಕೆಲಸಗಳನ್ನು ತ್ವರಿತವಾಗಿ ಮಾಡಬೇಕು ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಜನವಸತಿ ಕಾರ್ಯಕ್ರಮಕ್ಕೆ ಸಂಬಂಧಪಟ್ಟಹಾಗೆ ಸರ್ಕಾರದವರು ಹಾಕಿಕೊಂಡಿರತಕ್ಕ ಯೋಜನೆಯ ಬಗ್ಗೆ ಹಣವನ್ನು ಒದಗಿಸಿರತಕ್ಕ ವಿಷಯವನ್ನು ಮಾನ್ಯ ಹಣಕಾಸಿನ ಸಚಿವರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ 1972-73 ರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಭೂಹೀನರಾದ ಬಡಜನರಿಗೆ ಸುಮಾರು 2.5 ಲಕ್ಷ ಮನೆ ನಿವೇಶನಗಳನ್ನು ಹಂಚಲಾಗಿತ್ತು ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ನಾನು ಒಂದು ವಿಷಯವನ್ನು ಹೇಳುತ್ತೇನೆ. ಇಂದಿನ ದಿವಸದವರೆಗೆ ಸರ್ಕಾರದವರು ಬಡಜನಗಳಿಗೆ ಹಂಚಿಕೆ ಮಾಡಿರತಕ್ಕ ನಿವೇಶನಗಳು ಪೂರ್ಣವಾಗಿ ಅವರ ವಶಕ್ಕೆ ಹೋಗಿಲ್ಲ. ಕಾರಣವೇನೆಂದರೆ ಅಲ್ಲಿರತಕ್ಕ ಅಧಿಕಾರಿಗಳ ವರ್ತನೆ ಮತ್ತು ಮನೋಭಾವನೆಯೇ ಕಾರಣ ಎಂದು ನಾನು ನಂಬಿದ್ದೇನೆ. ಆದ್ದರಿಂದ ಸರ್ಕಾರದವರು ನಿವೇಶಗಳನ್ನು ಹಂಚತಕ್ಕ ರೀತಿಯಲ್ಲಿ ತ್ವರಿತವಾಗಿ ಕೆಲಸ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಪ್ರಸಕ್ತ ವರ್ಷದಲ್ಲಿ ಮನೆಗಳನ್ನು ಕಟ್ಟಿಸುವ ಕಾರ್ಯಕ್ರಮಕ್ಕೆ 5 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ಇದರಲ್ಲಿ 25 ಸಾವಿರ ಮನೆಗಳನ್ನು ಕಟ್ಟಿಸುತ್ತೇವೆ ಎಂದು ಹೇಳಿದ್ದಾರೆ. ಈ 25 ಸಾವಿರ ಮನೆಗಳನ್ನು ಕಟ್ಟಿದರೆ ಈ ಕಾರ್ಯಕ್ರಮದಲ್ಲಿ ಒಂದು ಹಳ್ಳಿಗೆ ಒಂದು ಮನೆ ಬರಬಹುದು ಎಂದು ಕಾಣುತ್ತದೆ. ಆದ್ದರಿಂದ ಮನೆಗಳನ್ನು ಕಟ್ಟಿಸುವ ಕಾರ್ಯಕ್ರಮಕ್ಕೆ 5 ಕೋಟಿ ರೂಪಾಯಿಗಳನ್ನು ಇಟ್ಟಿರುವುದು ಸಾಲುವುದಿಲ್ಲ. ಇದನ್ನು ಹೆಚ್ಚು ಮಾಡಬೇಕು. ಇದಕ್ಕೆ ಕಾರಣವೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಮಧ್ಯಮವರ್ಗದ ಜನ ಮತ್ತು ಹಿಂದುಳಿದ ವರ್ಗದ ಜನ, ಕೂಲಿಗಾರರು ಬಹಳ ಕಷ್ಟದಿಂದ ನರಳುತ್ತಿದ್ದಾರೆ. ಅವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕಾದರೆ ಈಗ ಈ ಕಾರ್ಯಕ್ರಮಕ್ಕೆ ಒದಗಿಸಿರುವ ಹಣವನ್ನು ಎರಡು ಪಟ್ಟು ಮಾಡಬೇಕು, ಪ್ರತಿವರ್ಷ ಪ್ರತಿಯೊಂದು ಹಳ್ಳಿಯಲ್ಲಿಯೂ 5 ಮನೆಗಳನ್ನಾದರೂ ಕಟ್ಟಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಈ ಕಾರ್ಯಕ್ರಮದ ಬಗ್ಗೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಚುನಾವಣಾ ಘೋಷಣೆಯಲ್ಲಿ ಹೇಳಿದಂತಹ ಈ ಒಂದು ಕಾರ್ಯವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ ಎಂದು ಶ್ಲಾಘನೆ ಮಾಡಿದ್ದಾರೆ. ಅದೇರೀತಿ ಸರ್ಕಾರದವರು ಇದನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು, ಮಾನ್ಯ ಅರ್ಥ ಮಂತ್ರಿಗಳು ಈ ಮನೆಗಳನ್ನು ಕಟ್ಟುವ ಕಾರ್ಯಕ್ರಮಕ್ಕೆ 10 ಕೋಟಿ ರೂಪಾಯಿಗಳನ್ನು ಒದಗಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಹಾಗೆ ಯೋಜನೆಗಳನ್ನು ಹಾಕಿಕೊಂಡು ಅದಕ್ಕೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಬೇಕೆಂದಿದ್ದಾರೆ ಎನ್ನುವ ವಿಚಾರವನ್ನು, ಮತ್ತು ಯಾವ ಯಾವ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದಿದ್ದಾರೆ ಎಂಬುಧನ್ನು ಆಯವ್ಯಯ ಪತ್ರದಲ್ಲಿ ಕೊಟ್ಟಿದ್ದಾರೆ. ಆದರೆ ಈ ಯೋಜನೆಗ್ಗಳನ್ನು ಕೆಲವು ಉಪಯುಕ್ತವಾದ ಯೋಜನೆಗಳನ್ನು ಕೈಬಿಟ್ಟಿದ್ದಾರೆ. ಆದ್ದರಿಂದ ಈಗ ಸರ್ಕಾರದವರು ಏನು ನೀರಾವರಿ ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಇದಕ್ಕಿಂತ ಹೆಚ್ಚಿನ ರೀತಿಯಲ್ಲಿ ನೀರಾವರಿ ಯೋಜನೆಗಳ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ನಾನು ಈ ಸಂಧರ್ಭದಲ್ಲಿ ಹೇಳುಬಯಸುತ್ತೇನೆ. ಇದರಲ್ಲಿ ಮಲೆನಾಡಿನಲ್ಲಿ

ಮಾಡತಕ್ಕ ಕೆಲವು ಯೋಜನೆಗಳನ್ನು ಕೈಬಿಟ್ಟಿದ್ದಾರೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ರತಕ್ಕ ಕುಮುದ್ವತಿಯ ಬಗ್ಗೆ ಸಾಕಷ್ಟು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೂ ಅದರ ಬಗ್ಗೆ ನಿಧಾನವಾದ ಕಾರ್ಯಕ್ರಮ ನಡೆದಿದೆ. ಮಲೆನಾಡಿನ ಕೆಲವು ಪ್ರದೇಶಗಳಲ್ಲಿ ರತಕ್ಕ ಕೆರೆಗಳಲ್ಲಿ ಹೂಳು ತುಂಬಿದೆ. ಅಂತಹ ಪ್ರದೇಶಗಳ ಬಗ್ಗೆ ಹೆಚ್ಚಿನ ಕ್ರಮ ತೆಗೆದುಕೊಂಡು ಅವುಗಳ ಅಭಿವೃದ್ಧಿಯ ವಿಚಾರದಲ್ಲಿ ಬಜೆಟ್ಟಿನಲ್ಲಿ ಹಣವನ್ನು ಮೀಸಲಾಗಿಟ್ಟು ಆ ಒಂದು ಐಟಂನ್ನು ಅವರ ಕಾರ್ಯಕ್ರಮದಲ್ಲಿ ಸೇರಿಸಬೇಕಾಗಿತ್ತು, ಅರ್ಥಮಂತ್ರಿಗಳು ಯಾವ ಕಾರಣದಿಂದ ಅದ್ದನ್ನು ಕೈಬಿಟ್ಟಿದಾರೋ ನನಗೆ ಅರ್ಥವಾಗುತ್ತಾ ಇಲ್ಲ. ಆದ್ದರಿಂದ ಮಲೆನಾಡು ಪ್ರದೇಶಗಳಲ್ಲಿ ರತಕ್ಕ ಕೆರೆಗಳಲ್ಲಿ ಹೂಳನ್ನು ತೆಗೆಸುವುದಕ್ಕಾಗಿ ಹೆಚ್ಚಿಗೆ ಹಣವನ್ನು ಬಜೆಟ್ಟಿನಲ್ಲಿ ಪ್ರೊವೈಡ್ ಮಾಡಬೇಕು.

4.00 P.M

ಇನ್ನು ಕನಿಷ್ಟ ಅಗತ್ಯವಾದಂಥ ಕಾರ್ಯಕ್ರಮಗಳು ಅಂದರೆ, ಶಿಕ್ಷಣ ಮತ್ತು ಕುಡಿಯುವನೀರಿನ ಸೌಲಭ್ಯಗಳನ್ನು ಒದಗಿಸುವುದು. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ನನ್ನ ಕೆಲವು ಮಿತ್ರರು ಹಾಗೂ ಹಿರಿಯ ಸದಸ್ಯರು ಶಿಕ್ಷಣದ ಮಟ್ಟ ಬಹಳ ಕೆಳಮಟ್ಟದಲ್ಲಿದೆ, ಇದಕ್ಕೆ ಕಾರಣ ಶಿಕ್ಷಕರದು ಅಂದರೆ ಇದು ಅವರ ಒಬ್ಬರ ಪ್ರಶ್ನೆಯಲ್ಲ. ಇರತಕ್ಕ ಪೋಷಕವರ್ಗದವರೂ ಸಹ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಹಿಂದೆ ಒಂದು ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಸರ್ಕಾರದವರು ಕಡ್ಡಾಯ ಮಾಡಬೇಕೆಂದು ಯೋಜನೆ ಹಾಕಿದಾಗ ಕಡ್ಡಾಯ ಶಿಕ್ಷಣ ಹೇಗಿರಬೇಕೆಂಬುದು ಶಿಕ್ಷಕರಿಗೂ ಹಾಗೂ ಪೋಷಕರಿಗೂ ಗೊತ್ತಿಲ್ಲ. ಕೆಲವು ಕಡೆಗಳಲ್ಲಿ ಕಡ್ಡಾಯ ಶಿಕ್ಷಣವೆಂದರೆ ನಾಲ್ಕನೆಯ ತರಗತಿ ವರೆಗೆ ಒದಲಿಕ್ಕೆ, ಬರೆಯಲಿಕ್ಕೆ ಬಂದರೆ ಸಾಕು, ಬರೀ ಬಜೆಟ್ಟಿನಲ್ಲಿ ಪಾಸ್ ಮಾಡತತಕ್ಕಂಥ ಒಂದು ನಿರ್ಣಯವೆಂದು ತಿಳಿದುಕೊಂಡಿದ್ದಾರೆ, ಆದ್ದರಿಂದ ಪ್ರೈಮರಿ ಶಾಲೆಯ ಹಂತದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದು ನರ್ಸರಿ ಶಾಲೆಯನ್ನು ಕೂಡಲೆ ಪ್ರಾರಂಭಿಸಿದರೆ ನಿಜವಾಗಿಯೂ ಶಿಕ್ಷಣಾಭಿವೃದ್ಧಿಯಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಇನ್ನು ಕುಡಿಯುವ ನೀರಿನ ಬಾವಿ ಬಗ್ಗೆ ಈ ಸರ್ಕಾರ ಪೂರ್ಣ ಭರವಸೆಯನ್ನು ಕೊಟ್ಟಿದೆ. ಆ ರೀತಿಯಾಗಿ ಭರವಸೆಯನ್ನು ಕೊಟ್ಟರೂ ಸಹ ಇದನ್ನು ಈಡೇರಿಸುವ ಕಾರ್ಯ ಏನಿದೆಯೋ ಆ ಕಾರ್ಯವನ್ನು ತಾಲ್ಲೂಕು ಮಟ್ಟದಲ್ಲಿರತಕ್ಕ ಅಧಿಕಾರವರ್ಗದವರೇ ಬಹಳ ನಿಧಾನವಾದ ರೀತಿಯಲ್ಲಿ ಯಾವುದೇ ಒಂದು ಧೃಡಮನಸ್ಸು ಇಲ್ಲದಹಾಗಿ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಸರ್ಕಾರ ಅತಿ ತೀವ್ರವಾಗಿ ಕುಡಿಯುವ ನೀರಿನ ಬಾವಿಗಳ ನಿರ್ಮಾಣದ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಉದ್ಯಮಗಳ ಬಗ್ಗೆ ಹೇಳುವುದಾದರೆ, ಮಾನ್ಯ ಅರ್ಥಸಚಿವರು ಮೈಸೂರು ಐರನ್ ಆಂಡ್ ಸ್ಟೀಲ್, ಲಿಮಿಟೆಡ್, ಭಧ್ರಾವತಿ, ಇದರ ಉತ್ಪಾದನೆ ಬಹಳವಾಗಿದೆಯೆಂದು ಶ್ಲಾಘನೆ ಮಾಡಿದ್ದಾರೆ. ಅದು ಒಳ್ಳೆಯದು. ಇಲ್ಲಿ ರೈತರಿಗೆ ಬೇಕಾಗುವ ಉಪಕರಣಗಳು ಮತ್ತು ಸಣ್ಣ ಕೆಲಸಗಾರರಿಗೆ ಬೇಕಾದಂಥ ಉಪಕರಣಗಳು ಅಲ್ಲಿ ದೊರೆಯುತ್ತಾ ಇಲ್ಲ. ಇದಲ್ಲದೆ ಕಾರ್ಖಾನೆಯಲ್ಲಿ ಕೆಲಸಗಾರರಲ್ಲಿ ಹೆಚ್ಚಿನ ರೀತ್ಯ ಒಂದು ತಾರತಮವನ್ನು ಮಾಡುತ್ತಿದ್ದಾರೆ. ಈ ರೀತಿ ಮಾಡುವುದಕ್ಕೆ ಕಾರಣವೇನೆಂದರೆ, ಅಲ್ಲಿ ಯಾವುದಾದರೂ ಒಂದು ನೌಕರಿಗೆ ಒಬ್ಬರನ್ನು ನೇಮಕಮಾಡಬೇಕಾದರೂ, ಅಥವಾ ಒಬ್ಬ ನೌಕರನಿಗೆ ಒಂದು ಬಡ್ತಿ ಮುಂತಾದ ಸೌಕರ್ಯಗಳನ್ನು ಕೊಡಬೇಕೆಂದರೆ, ಅದರ ಬಗ್ಗೆ ಏನಾದರೂ ಒಂದು ನಿರ್ಧಿಷ್ಟವಾದ ಕಾರ್ಯಕ್ರಮ ಇದೆಯೇ ಇಲ್ಲವೇ ಎಂಬ ಬಗ್ಗೆ ಒಂದು ಸಂಶಯ ಬಂದಿದೆ. ಆದ್ದರಿಂದ ಅಲ್ಲಿ ಇನ್ನು ಮುಂದಾದರೂ ಇವೆಲ್ಲವನ್ನೂ ಸರಿಯಾದ ರೀತಿಯಲ್ಲಿ ಯಾವ ಒಂದು ತಾರತಮ್ಯ ಇಲ್ಲದೆ ನಡೆಸಿಕೊಂಡು ಹೋಗುವ ರೀತಿಯಲ್ಲಿ ಸರ್ಕಾರ ಅವರಿಗೆ ಸೂಕ್ತ ತಿಳುವಳಿಕೆಯನ್ನೂ ಮತ್ತು ಸೂಚನೆಯನ್ನೂ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ವೈದ್ಯಕೀಯ ವಿಷಯದಲ್ಲಿ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಇನ್ನು ಮುಂದೆ ಪ್ರತಿಯೊಂದು ತಾಲ್ಲೂಕು ಮತ್ತು ಗ್ರಾಮದ ಮಟ್ಟದಲ್ಲಿರತಕ್ಕ ಆರೋಗ್ಯ ಕೇಂದ್ರಗಳನ್ನು ತಾಲ್ಲೂಕು ಬೋರ್ಡ್ ಆಸ್ಪತ್ರೆಗಳನ್ನಾಗಿ ಪರಿವರ್ತಿಸಿ ಸರ್ಕಾರದವರೇ ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆ. ಇದನ್ನು ನಾನು ನನ್ನ ತುಂಬುಹೃದಯದಿಂದ ಸ್ವಾಗತಿಸುತ್ತೇನೆ. ಹಾಗೂ ವಂದಿಸುತ್ತೇನೆ. ಇದರ ಜೊತೆಯಲ್ಲಿ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಪ್ರತಿಯೊಂದು ಹೆಲ್ತ್ ಯೂನಿಟ್ಟಿನಲ್ಲಿ ಐದೈದು ಹಾಸಿಗೆಗಳು

(ಶ್ರೀ ಕೆ. ಯಂಕಪ್ಪ)

ಇರತಕ್ಕ ವ್ಯವಸ್ಥೆಯನ್ನು ಈ ವರ್ಷ ಮಾಡಬೇಕು. ಹಾಗೆ ಮಾಡಿದರೆ ನಮ್ಮ ಹಳ್ಳಿಯ ಜನರಿಗೆ ಬಹಳವಾಗಿ ಅನುಕೂಲವಾಗುತ್ತದೆ. ಬಡ ಕೂಲಿಗಾರರಿಗೂ ಅನುಕೂಲ ವಾಗುತ್ತದೆ. ಇವರ ಜೊತೆಯಲ್ಲಿ ಕೊಡತಕ್ಕ ಔಷಧಿಗಳಿಗೆ ಸುಮಾರು ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದು ಒಂದು ವರ್ಷಕ್ಕೆ ಮಾತ್ರ ಕೊಟ್ಟರೆ ಏನೇನು ಸಾಲದು. ಏಕೆಂದರೆ, ನಾನು ತಿಳಿದಿರುವ ಹಾಗೆ ಈಗ ಅನೇಕ ಔಷಧಿಗಳ ಬೆಲೆ ವಿಪರೀತವಾಗಿ ಆಗಿದೆ. ಕೇವಲ ಎರಡೂವರೆ ಸಾವಿರ ರೂಪಾಯಿಗಳಷ್ಟು ಔಷಧಿ ಕೇವಲ ಒಂದು ತಿಂಗಳಿಗೇ ಅಥವಾ ಒಂದೂವರೆ ತಿಂಗಳಿಗೆ ಮಾತ್ರ ಆಗುತ್ತದೆ. ಇನ್ನುಳಿದ ಹತ್ತೂವರೆ ತಿಂಗಳು ಯಾವ ರೀತಿಯಲ್ಲಿ ಔಷಧಿಗಳನ್ನು ಕೊಡಬೇಕು ? ಆಗ ಆಸ್ಪತ್ರೆಯ ಬಾಗಿಲನ್ನು ಮುಚ್ಚಬೇಕಾದ ಪರಿಸ್ಥಿತಿ ಒದಗಿಬರುತ್ತದೆ. ಈ ವಿಚಾರದಲ್ಲಿ ಮಾನ್ಯ ಅರ್ಥಿಕ ಸಚಿವರನ್ನು ಕೇಳಿದಾಗ ಅದನ್ನು ಮಾಡಿಕೊಡುತ್ತೇನೆಂದು ಹೇಳಿದರು. ಆದರೆ ಆಸಂದರ್ಭದಲ್ಲಿ ಇದನ್ನು ಪ್ರಸ್ತಾಪಿಸಲಾಗಲಿಲ್ಲ. ಆದ್ದರಿಂದ ದಯಮಾಡಿ ಇದನ್ನು 5 ಸಾವಿರ ರೂಪಾಯಿಗಳವರೆಗಾದರೂ ಹೆಚ್ಚಿಸಬೇಕು. ಪ್ರತಿಯೊಂದು ಹೆಲ್ತ್ ಯೂನಿಟ್ಟಿನಲ್ಲಿಯೂ ಐದೈದು ಹಾಸಿಗೆಗಳು ಇರುವಂತೆ ವ್ಯವಸ್ಥೆಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಸಮಾಜ ಕಲ್ಯಾಣದ ವಿಷಯ. ಇವರಲ್ಲಿ 15 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೂ ಈಗ ಅದನ್ನು 2 ಕೋಟಿ ರೂಪಾಯಿಗಳವರೆಗೂ ಹೆಚ್ಚಿಸಿದ್ದಾರೆ. ಆದರೂ ಇದು ಬಹಳ ಕಡಿಮೆ. ಈ ಎರಡು ಕೋಟಿ ರೂಪಾಯಿಗಳಲ್ಲಿ ಯಾವರೀತಿಯಾದಂಥ ವ್ಯವಸ್ಥೆಗಳನ್ನು ಮಾಡುವುದಕ್ಕೆ ಸಾಧ್ಯವೆನ್ನುವುದನ್ನು ನಾನು ಇವತ್ತು ಅರ್ಥಿಕ ಸಚಿವರನ್ನು ಕೇಳಬೇಕಾಗಿದೆ. ಏಕೆಂದರೆ ಸಮಾಜ ಕಲ್ಯಾಣದಲ್ಲಿ ಹಲವಾರು ರೀತಿಯಾದಂಥ ವ್ಯವಸ್ಥೆಯನ್ನು ಹಿಂದುಳಿದ ಪಂಗಡಗಳವರಿಗೆ ಮಾಡಬೇಕಾಗಿದೆ. ತಾಲ್ಲೂಕು ಬೋರ್ಡ್ ಮಂಡಲ ಸೇಕಡ 18 ರಷ್ಟು ಭಾಗವನ್ನು ಅಂದರೆ ಅವರ ವರಮಾನದಲ್ಲಿ ಕೇವಲ 20–30 ಸಾವಿರ ರೂಪಾಯಿಗಳನ್ನು ಖರ್ಚುಮಾಡಬಹುದು. ಇವರಲ್ಲಿ ವಿದ್ಯೆ ಕಲಿಸುವ ಬಗ್ಗೆ ಹೆಚ್ಚಿಗೆ ಆದ್ಯತೆ ಕೊಡಬೇಕು. ಆದ್ದರಿಂದ ಈ ಬಾಬಿನಲ್ಲಿ ಇನ್ನೂ ಎರಡೂವರೆ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಪ್ರೊವೈಡ್ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದಿಂದ ಕೊಡತಕ್ಕ ಸವಲತ್ತುಗಳು ಹರಿಜನ ಗಿರಿಜನರಿಗೆ ಸಾಕಷ್ಟು ಸುಲಭವಾಗಿ ತಲುಪುವ ವ್ಯವಸ್ಥೆ ಆಗಬೇಕು

ಇನ್ನೂ ಗ್ರಾಮಾಂತರ ನೀರು ಸರಬರಾಜು ಯೋಜನೆ. ಹಳ್ಳಿಗಳಲ್ಲಿ ಸುಮಾರಾಗಿ ಪಂಚಾಯತಿಗಳು ಸರಿಯಾದ ರೀತಿಯಿಂದ ಕೆಲಸಮಾಡುತ್ತಾ ಇಲ್ಲ. ಹಣವೇ ಇಲ್ಲದೇ ಇರತಕ್ಕ ಕೆಲವು ಪಂಚಾಯತಿಗಳೂ ಸಹ ಇವೆ. ಅಲ್ಲಿರತಕ್ಕವರಿಗೆ ವಿಲೇಜ್ ಅಕೌಂಟೆಂಟ್ಸ್ ಎಂಬುದಾಗಿ ಕರೆಯುತ್ತಾರೆ. ಅವರೂ ಸಹ ಸರಿಯಾದ ರೀತಿಯಲ್ಲಿ ಗ್ರಾಮಪಂಚಾಯತಿಗಳನ್ನು ನೋಡಿಕೊಳ್ಳದೆ, ಅಲ್ಲಿ ವಸೂಲಾಗತಕ್ಕ ಹಣವೂ ಸರಿಯಾಗಿ ಬಾರದೇ ಇರುವುದರಿಂದ ಆ ಊರಿನ ಜನತೆಗೆ ನೀರು ಕೊಡುವುದಕ್ಕೂ ಬಹಳ ಕಷ್ಟವಾಗುತ್ತಿದೆ. ಮಾನ್ಯ ಶ್ರೀ ಮಲ್ಲಿಕಾರ್ಜುನಸ್ವಾಮಿಯವರನ್ನು ಇವತ್ತು ಬೆಳಿಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದಕ್ಕೆ ಅತಿ ತೀವ್ರತರವಾದ ರೀತಿಯಲ್ಲಿ ಉತ್ತರಕೊಟ್ಟರು ಪಂಚಾಯತಿಯಿಂದ ಬರತಕ್ಕ ಆದಾಯವೇನಿದೆ ಅದನ್ನು ನಿಮ್ಮ ಯಂತ್ರದಿಂದಲೇ ಸರಿಯಾಗಿ ಪ್ರತಿವರ್ಷವೂ ವಸೂಲು ಮಾಡುವಂತೆ ಏರ್ಪಾಡುಮಾಡಬೇಕು. ಪಂಚಾಯತಿಯವರು ಎಲ್ಲಾ ಕಾರ್ಯಗಳನ್ನು ಮಾಡುವುದಕ್ಕೆ ಅನುವು ಮಾಡಿಕೊಡಬೇಕು. ಸೇಕಡ 10ರಷ್ಟು ವರಮಾನ ಕೊಡುವುದಕ್ಕೆ ಆಗದೇ ಇದ್ದರೆ ಜನತೆಗೆ ನೀರು ಸಪ್ಲೈ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೀರಿ. ಅದಕ್ಕೆ ನನ್ನ ಒಂದು ಸಲಹೆಯೇನೆಂದರೆ, ಯಾವ ಅಶಕ್ತ ಗ್ರಾಮ ಪಂಚಾಯತಿಗಳಿವೆಯೋ ಅಂತಹವುಗಳಿಗೆ ತಾವೇ ಬಾವಿಗಳನ್ನು ತೆಗೆಸಿಕೊಡುವುದಕ್ಕೆ ಪ್ರಯತ್ನಮಾಡಬೇಕು. ಅಷ್ಟು ಅಲ್ಲದೆ ಸೇಕಡ 10 ರಷ್ಟು ವರಮಾನ ಕೊಡಬೇಕೆಂದು ಏನು ಮಾಡಿದ್ದೀರಿ ಇದನ್ನು ಹಿಂದುಳಿದ ಪಂಗಡಗಳು ಇರುವ ಗ್ರಾಮಗಳಿಗೆ ಸೇರಿದಂತಹ ಪ್ರದೇಶಗಳಿಗೆ ಪೂರ್ಣವಾಗಿ ವಿನಾಯಿತಿ ಕೊಡಬೇಕು. ನ್ಯಾಷನಲ್ ರೂರಲ್ ವಾಟರ್ ಸಪ್ಲೈಯವರು ಕೇಳುವಂತಹ ಸೇಕಡ 10 ರಷ್ಟು ವರಮಾನವನ್ನು ಅಲ್ಲಿಯೂ ಸಹ ತೆಗೆದುಕೊಳ್ಳದೆ ಇರುವ ಹಾಗೆ ಮಾಡಬೇಕು.

ಇನ್ನು ಕನ್ನಡ ಭಾಷಾಭಿವೃದ್ಧಿಗೆ 13 ಲಕ್ಷ ರೂಪಾಯಿಗಳನ್ನು ಅರ್ಥ ಸಚಿವರು ಬಜೆಟ್ಟಿನಲ್ಲಿ ಪ್ರೊವೈಡ್ ಮಾಡಲಾಗಿದೆಯೆಂದು ಹೇಳಿದರು. ನಾನು ಹೇಳುವುದೇನೆಂದರೆ, ಇನ್ನೂ ಹೆಚ್ಚಿಗೆ ಈ ಬಾಬಿನಲ್ಲಿ ಹಣವನ್ನೊದಗಿಸಿ ಅದಷ್ಟು ಶೀಘ್ರದಲ್ಲಿ ಕನ್ನಡ ಭಾಷಾಭಿವೃದ್ಧಿಯನ್ನು ಮಾಡಬೇಕೆಂದು ಸಲಹೆಮಾಡುತ್ತಾ ನಾನು ಅರ್ಥಸಚಿವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ. 13 ಲಕ್ಷ ರೂಪಾಯಿಗಳು ಕೇವಲ ಕನ್ನಡ ಟೈಪ್‌ರೈಟರುಗಳು ಮತ್ತು ಇತರೇ ಸಲಕರಣೆಗಳನ್ನು ತೆಗೆದುಕೊಳ್ಳಲು ಸಾಕಾಗುವುದಿಲ್ಲ. ಆದ್ದರಿಂದ ಈ ಬಾಬಿನಲ್ಲಿ ಇನ್ನೂ ಹೆಚ್ಚಿಗೆ ಹಣವನ್ನು ಒದಗಿಸಿ ಅತಿ ಶೀಘ್ರದಲ್ಲಿಯೇ ಇದಕ್ಕೆ ತಕ್ಕ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿಶೇಷವಾಗಿ ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಬಡ್ಜೆಟ್ಟಿನಲ್ಲಿ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಬಡ್ಜೆಟ್ಟಿನಲ್ಲಿ ಬಹಳ ಕಡಿಮೆ ಹಣವನ್ನು ಒದಗಿಸಿದ್ದಾರೆ. ಇದೇ ರೀತಿ ಮಲೆನಾಡಿನ ಬಗ್ಗೆ ಕಡಿಮೆ ಪ್ರಮಾಣದಲ್ಲಿ ಹಣವನ್ನು ಒದಗಿಸಿದರೆ ಮಲೆನಾಡಿನ ಅಭಿವೃದ್ಧಿ ಆಗುವುದಿಲ್ಲ. ಮಲೆನಾಡಿನ ಜನ ಅಭಿವೃದ್ಧಿಗೆ ಬರಬೇಕಾದರೆ, ಮಲೆನಾಡು ಪ್ರದೇಶ ಅಭಿವೃದ್ಧಿಯಾಗಬೇಕು. ಆದ್ದರಿಂದ ಮಲೆನಾಡಿನಲ್ಲಿ ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು. ಲೋಕೋಪಯೋಗಿ ಶಾಖೆಯ ಮಂತ್ರಿಗಳು ಮಲೆನಾಡಿನಲ್ಲಿರತಕ್ಕ ರಸ್ತೆಗಳನ್ನೂ, ಕೆರೆಗಳನ್ನೂ, ಸೇತುವೆಗಳನ್ನೂ ಮಾಡತಕ್ಕ ಕೆಲಸಗಳನ್ನು ತೆಗೆದುಕೊಳ್ಳದೇ ಹೋದರೆ ಮಲೆನಾಡಿನ ಜನ ಅಂತರೀಕ್ಷದಲ್ಲಿ ಓಡಾಡಬೇಕಾಗುತ್ತದೆ. ಇಂಥಾ ಒಂದು ಪರಿಸ್ಥಿತಿ ಇರುವಾಗ ಸರ್ಕಾರದವರು ಮಲೆನಾಡಿನ ಬಗ್ಗೆ ಹೆಚ್ಚಿನ ಆದ್ಯತೆ ಕೊಡಬೇಕು. ಯಾವ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೆಲಸಕಾರ್ಯಗಳು ಆಗಿವೆ ಅಲ್ಲಿ ಕೆಲಸಗಳನ್ನು ಸ್ಥಗಿತ ಮಾಡಿ ಎಲ್ಲಿ ಕಡಿಮೆ ಕೆಲಸಗಳು ಆಗಿವೆ ಅಲ್ಲಿಗೆ ಹೆಚ್ಚಿನ ಹಣವನ್ನು ಕೊಟ್ಟು ಎಲ್ಲಾ ಪ್ರದೇಶಗಳನ್ನು ಸರಿಸಮಾನ ಮಾಡುವ ಹಾಗೆ ಆಯವ್ಯಯ ಪತ್ರದಲ್ಲಿ ಹಣವನ್ನು ಒದಗಿಸಿದರೆ ಪ್ರತಿಯೊಂದು ಜಿಲ್ಲೆಯ ಜನತೆಗೂ ಅನುಕೂಲ ದೊರೆಯುತ್ತದೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).**—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಈ ಸಭೆಯಲ್ಲಿ ಮಂಡಿಸಿರತಕ್ಕ ಸಮಾಜವಾದದ ಆಯವ್ಯಯ ಪತ್ರದ ಬಗ್ಗೆ ಇವೊತ್ತು ನನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲು ನಾನು ನಿಂತಿದ್ದೇನೆ. ಈ ಸಮಾಜವಾದದ ಆಯವ್ಯಯ ಹೇಗಿದೆ ಎಂದರೆ 'ಬಚ್ಚಲ ನೀರು ತಿಳಿ ಇದ್ದರೇನು ? ಸಲ್ಲದಾ ಹೊನ್ನು ಮತ್ತೆಯಲ್ಲಿದ್ದರೇನು ? ಆಕಾಶದ ಮಾವಿನಫಲವೆಂದರೇನು ? ಕೊಯ್ಯಲಿಲ್ಲಾ ಮೆಲ್ಲಲಿಲ್ಲಾ ! ಇಂತಿಪ್ಪುದಯ್ಯಾ ಇಂದಿರಾ ಅರಸುವಾದ. ಬಚ್ಚಲ ನೀರು ಎಷ್ಟು ತಿಳಿ ಇದ್ದರೂ ಕೂಡ ಅದನ್ನು ಕುಡಿಯುವುದಕ್ಕೆ ಯಾರು ಇಷ್ಟಪಡುತ್ತಾರೆ ? ಸಲ್ಲದಾ ಹೊನ್ನು ಎಂದರೆ ಕೌಂಟರ್‌ಫೀಟ್ ನೋಟ್ಸ್ ಎಷ್ಟು ಇದ್ದರೂ ಏನು ಪ್ರಯೋಜನ ! ಆಕಾಶದಲ್ಲಿ ಮಾವಿನ ಹಣ್ಣು ಎಷ್ಟು ಇದ್ದರೆ ತಾನೆ ಏನು ಪ್ರಯೋಜನ ! ಅದನ್ನು ಕೊಯ್ದು ತಿನ್ನುವುದಕ್ಕೆ ಸಾಧ್ಯವಿದೆಯೇ ? ಎಂದಿಗೂ ಸಾಧ್ಯವಿಲ್ಲ. ಮಾನ್ಯ ಅರ್ಥಸಚಿವರಾದ ಶ್ರೀಮಾನ್ ಘೋರ್ಪಡೆಯವರು ಮಂಡಿಸಿರತಕ್ಕ ಆಯವ್ಯಯದಲ್ಲಿ ಜನತೆಗೆ ತೋರಿಸಿರುವ ಆಶೋತ್ತರಗಳನ್ನು ಪ್ರತಿಬಿಂಬಿಸುವ ಬಡ್ಜೆಟ್ಟಿನ ಮಾದರಿಯಲ್ಲವೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಹೌಸಿಂಗ್ ಬೋರ್ಡಿನಲ್ಲಿ 5 ಕೋಟಿ ರೂಪಾಯಿಗಳನ್ನು ತೊಡಗಿಸಿ ಮನೆ ಇಲ್ಲದೇ ಇರುವವರಿಗೆ ಮನೆಗಳನ್ನು ಒದಗಿಸುವುದಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ, ಮಂತ್ರಿಗಳು ಚುನಾವಣೆಯ ಸಂದರ್ಭದಲ್ಲಿ ಜನಗಳಿಗೆ ಏನು ಆಶ್ವಾಸನೆಯನ್ನು ಕೊಟ್ಟರೋ ಆ ಆಶ್ವಾಸನೆಗಳನ್ನು ಈಡೇರಿಸತಕ್ಕ ದಿಶೆಯಲ್ಲಿ ಸರ್ಕಾರದವರು ಅಡಿ ಇಡುತ್ತಿದ್ದಾರೆ ಎನ್ನತಕ್ಕಂಥಾ ಅಭಿಪ್ರಾಯವನ್ನು ಆ ಕಡೆ ಇರುವ ಕೆಲವು ಗೆಳೆಯರು ವ್ಯಕ್ತಪಡಿಸಿದರು. ಈ ಸಭೆ ಪ್ರಾರಂಭ ಆದಾಗ ಮಾನ್ಯ ಮುಖ್ಯ ಮಂತ್ರಿಗಳ ಹೇಳಿದರು ನಾವು ಯಾರಿಗೂ ಮುಫತ್ತಾಗಿ ಮನೆಗಳನ್ನು ಕಟ್ಟಿಸಿಕೊಡುವುದಿಲ್ಲ, ಯಾರಿಗೆ ಮನೆಯನ್ನು ಕಟ್ಟಬೇಕೋ ಅವರ ತಮ್ಮ ಭಾಗದ ಹಣವನ್ನು ಕೊಟ್ಟು ಅದರ ಜೊತೆಗೆ ಸ್ಥಳೀಯ ಸಂಸ್ಥೆಗಳು, ತಾಲ್ಲೂಕು ಅಭಿವೃದ್ಧಿ ಮಂಡಲಿಗಳು, ಗ್ರಾಮ ಪಂಚಾಯಿತಿಗಳು ಇದರಲ್ಲಿ ಭಾಗವಹಿಸಬೇಕು, ಅದರಲ್ಲಿ ಅವರ ಪಾತ್ರ ಇರಬೇಕು, ಅಂಥಾ ಒಂದು ಯೋಜನೆಯನ್ನು ಅಳವಡಿಸುವುದಕ್ಕೆ ನಾವು ಯೋಚನೆ ಮಾಡುತ್ತಿದ್ದೇವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ನಾನಾದರೂ ಯೋಚನೆ ಮಾಡುವುದಾದರೆ 5 ಕೋಟಿ ರೂಪಾಯಿಗಳಲ್ಲಿ ಮನೆ ಇಲ್ಲದೇ ಇರುವವರಿಗೆ ಮನೆಯನ್ನು ಒದಗಿಸತಕ್ಕ ಯೋಜನೆ ಏನಿದೆ ಇದನ್ನು ಆಕಾಶದಲ್ಲಿರುವ ಮಾವಿನ ಹಣ್ಣಿಗೆ ಹೋಲಿಸಿದರೆ ತಪ್ಪಾಗುವುದಿಲ್ಲ. ಮಾನ್ಯ ಹಣಕಾಸಿನ ಸಚಿವರಾದ ಶ್ರೀಮಾನ್ ಘೋರ್ಪಡೆಯವರು ನಿಜವಾಗಿಯೂ ಕೂಡ ಉತ್ತಮವಾದ ಆಡಳಿತಗಾರರು. ಆದರೆ ಅದನ್ನು ಕಾರ್ಯಗತ ಮಾಡತಕ್ಕವರು ಅಧಿಕಾರಿಗಳು. ಅಧಿಕಾರಿಗಳ ಹಂತದಲ್ಲಿ ಆ ಕೆಲಸವಾಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಬಂದಿದೆ. ಮೊನ್ನೆ ಈ ಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಶ್ರೀಮಾನ್ ಬೈರೇಗೌಡರು ಕೇಳಿದ ಪ್ರಶ್ನೆಗೆ ಮಾನ್ಯ ಸಮಾಜಕಲ್ಯಾಣ ಶಾಖೆಯ ಮಂತ್ರಿಗಳು ಉತ್ತರ ಕೊಡುತ್ತಾ ಕೋಲಾರ ಜಿಲ್ಲೆಯಲ್ಲಿ ಹರಿಜನ ಗಿರಿಜನರಿಗಾಗಿ ಕಟ್ಟಿಸಿದ 100 ಮನೆಗಳ ಪೈಕಿ 60 ಮನೆಗಳು ಬಿದ್ದು ಹೋಗಿವೆ ಎಂದು ಹೇಳಿದರು. ಇದು ನಿಜವಾಗಿಯೂ ಹಾಸ್ಯಾಸ್ಪದವಾದ ವಿಷಯ.

ಉಪಾಧ್ಯಕ್ಷರು.—ಆ ಮನೆಗಳನ್ನು ಯಾವಾಗ ಕಟ್ಟಿಸಿದ್ದು, ಯಾವ ಹಳ್ಳಿಯಲ್ಲಿ ಕಟ್ಟಿದ್ದರು, ಎಷ್ಟು ಮನೆಗಳು ಬಿದ್ದುಹೋಗಿವೆ ಎನ್ನುವ ಮಾಹಿತಿಯನ್ನು ಮಾನ್ಯ ಸದಸ್ಯರು ಕೊಡಬೇಕು.

ಶ್ರೀ ಸಿ. ಬೈರೇಗೌಡ.—ಮೊನ್ನೆ ಮಂತ್ರಿಗಳು ಏನು ಉತ್ತರವನ್ನು ಕೊಟ್ಟಿದ್ದಾರೆಯೋ ಅದನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ಈ ವಿಷಯವನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಸಮಾಜವಾದದ ಹಾದಿಯಲ್ಲಿ ಮಾನ್ಯ ಅರ್ಥ ಸಚಿವರು ಯಾವ ಗುರಿಯನ್ನು ಸಾಧಿಸಬೇಕೆಂದು ಅಪೇಕ್ಷಿಸುತ್ತಾರೆಯೋ ಅದಕ್ಕೆ ಇಮ್ಮಡಿಯಾದ ಆಶೆ ನನಗೆ ಇದೆ. ಜನಗಳು ನೆಮ್ಮದಿಯಿಂದ ಬಾಳುವೆಯನ್ನು ಮಾಡಬೇಕು, ಸುಖಜೀವನವನ್ನು ನಡೆಸಬೇಕು ಎಂಬುದು ಎಲ್ಲರ ಆಶೆ. ಈ ದೃಷ್ಟಿಯಿಂದ ಈಗ ಸರ್ಕಾರದವರು 5 ಲಕ್ಷ ರೂಪಾಯಿಗಳ ಗೃಹನಿರ್ಮಾಣ ಯೋಜನೆಯನ್ನೇನೋ ಹಾಕಿಕೊಂಡಿದ್ದಾರೆ ಇದು ಕನ್ನಡಿಯ ಗಂಟು ಆಗಬಾರದು ಎಂದು ಜನ ನಿರೀಕ್ಷೆ ಮಾಡುತ್ತಾರೆ. ಈ ಯೋಜನೆ ಫಲಕಾರಿಯಾಗುವ ಯೋಜನೆ ಆಗಬೇಕು. ಕೃಷ್ಣಾ ಮೇಲ್ದಂಡೆಯ ನೀರಾವರಿ ಯೋಜನೆಯಲ್ಲಿ, ಬರಗಾಲ ನಿವಾರಣಾ ಯೋಜನೆಯ ಸಂಬಂಧದಲ್ಲಿ ಸರ್ಕಾರ ವೆಚ್ಚ ಮಾಡಿದ ಹಣದಲ್ಲಿ ಅಧಿಕಾರಿಗಳಿಂದ ದುರುಪಯೋಗವಾಗಿದೆ ಎನ್ನತಕ್ಕಂಥದ್ದು ಮನವರಿಕೆಯಾಗಿದೆ. ಆ ಕಡೆಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಈ ಗೃಹನಿರ್ಮಾಣ ಯೋಜನೆ ಆ ರೀತಿ ಆಗಬಾರದು. ಹಾಗೆ ಗಂಟು ಹೊಡೆಯುವುದಕ್ಕೆ ಬದಲು ಆ ಯೋಜನೆಯನ್ನೇ ಕಿತ್ತುಹಾಕಿ ಬಿಡಿ ಎಂದು ಹೇಳುತ್ತೇನೆ. ನಾನು ಒಂದು ಮಾತನ್ನು ತಮಗೆಲ್ಲರಿಗೂ ಸ್ಪಷ್ಟವಾಗಿ ಹೇಳುತ್ತಿದ್ದೇನೆ ಸಮತಾವಾದ ಸಮಾಜದಲ್ಲಿ ಇದೊಂದು ಬಹಳ ಉತ್ತಮವಾದ ಯೋಜನೆ. ಇದನ್ನು ಯಾವರೀತಿ ಮುಂದುವರಿಸಿದರೆ ಇಡೀ ಸಮಾಜಕ್ಕೆಲ್ಲಾ ಕಲ್ಯಾಣವಾಗುತ್ತದೆ ಅನ್ನುವುದನ್ನು ಚಿಂತೆ ಮಾಡಿ ಎಂದು ನಾನು ತಮಗೆ ಹೇಳುತ್ತಿದ್ದೇನೆ. ಅದೇನೋ ಹೇಳುತ್ತಾರಲ್ಲ 'ಆರು ಸಿಟ್ಟನಾದರೂ ಹಾರೆನೆಂದರೆ ಧೀರ ನಿ ನಸ್ಯ ಎಂದು ಹೇಳಬೇಕು' ಅನ್ನುವಂತೆ ನಾನು ಊದತಕ್ಕ ಶಂಖವನ್ನು ಊದುತ್ತಿದ್ದೇನೆ. ನಿಮಗೆ ಇಷ್ಟವಿದ್ದರೆ ಕೇಳಿ, ಇಷ್ಟವಿಲ್ಲದಿದ್ದರೆ ಬಿಡಿ. ಈ ಒಂದು ಯೋಜನೆ ಖಂಡಿತವಾಗಿಯೂ ಗ್ರಾಮಾಂತರ ಪ್ರದೇಶದ ಜನರಿಗೆ ಗೃಹದ ಕೊರತೆಯನ್ನು ನೀಗತಕ್ಕಂಥ ಒಂದು ಒಳ್ಳೆಯ ಯೋಜನೆಯಾಗಿದೆ. ಇದಕ್ಕೆ ಸರ್ಕಾರದವರು ತೆಗೆದಿಟ್ಟಿರತಕ್ಕ 5 ಕೋಟಿ ರೂಪಾಯಿ ಏನೇನು ಸಾಲದು. ನಾನೀಗಲೇ ಹೇಳಿದಂತೆ ಇದೊಂದು ಉತ್ತಮ ಯೋಜನೆ. ಇದರ ಮೂಲಕ ನಿಮಗೆ ದೇಶದಲ್ಲಿರತಕ್ಕ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಳ್ಳುವುದಕ್ಕೆ ಒಂದು ರಾಜಮಾರ್ಗ. ಇಂಥ ಯೋಜನೆಯಲ್ಲಿ ಹೆಚ್ಚು ಹಣವನ್ನು ತೊಡಗಿಸಿ ಎಂದು ನಾನು ತಮಗೆ ಕಿವಿಮಾತನ್ನು ಹೇಳುತ್ತಿದ್ದೇನೆ. ಇದಕ್ಕೆ 5 ಕೋಟಿ ರೂಪಾಯಿ ಇಟ್ಟರೆ ಇದರಲ್ಲಿ ನೀವು ಯಾವ ಹಳ್ಳಿಗೆ ಯಾವ ತಾಲ್ಲೂಕಿಗೆ ಎಂದು ಹಣವನ್ನು ಕೊಡುತ್ತೀರಾ? ಅಥವಾ ನಿಮ್ಮ ಉದ್ದೇಶ ಈ ದಿವಸ ನಿಮ್ಮ ಅಭ್ಯರ್ಥಿಗಳು ಎಲ್ಲಿ ಚುನಾವಣೆಗೆ ನಿಂತು ಗೆದ್ದು ಬಂದಿದ್ದಾರೋ ಅಂಥ ಕ್ಷೇತ್ರಗಳಿಗೆ ಮಾತ್ರ ಈ ಬಾಬಿನಲ್ಲಿ ಹಣವನ್ನು ಒದಗಿಸಬೇಕೆಂದಿದ್ದೀರೋ ಅಥವಾ ನಿಮ್ಮ ಹಿಂದೆ ಯಾರು ಬಾಲಬಡಿದುಕೊಂಡು ತಿರುಗಾಡುತ್ತಿದ್ದಾರೆ ಅಂಥವರಿಗೆ ಅಥವಾ ಅವರು ಹೇಳಿದವರಿಗೆ ಮಾತ್ರ ಹಣವನ್ನು ಒದಗಿಸುತ್ತೀರೋ ಯಾವುದೂ ಗೊತ್ತಾಗುವುದಿಲ್ಲ. ಆದರೆ ಮಾನ್ಯ ಘೋರ್ಪಡೆಯವರು ಸ್ವಭಾವತಃ ಅಂತಹ ವ್ಯಕ್ತಿಗಳಲ್ಲ. ಆದರೂ ಅವರನ್ನು ಹಿಂದಕ್ಕೆ ಮುಂದಕ್ಕೆ ಎಳೆಯತಕ್ಕಂಥ ಅದೃಶ್ಯ ವ್ಯಕ್ತಿಗಳು ಆ ಪಕ್ಷದಲ್ಲಿದ್ದಾರೆ. ಅವರ ಪಕ್ಷದಲ್ಲಿ ಯಾರು ಅಂಥಾ ವ್ಯಕ್ತಿಗಳು ಎಂಬುದು ಆ ಪಕ್ಷದ ವಿಪ್ ಆಗಿರತಕ್ಕ ಶ್ರೀ ಸೂರ್ಯನಾರಾಯಣಗೌಡರಿಗೂ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಮಾನ್ಯ ಅರ್ಥಿಕ ಸಚಿವರಿಗೂ ಚೆನ್ನಾಗಿ ಗೊತ್ತಾಗಿದೆ ಎಂದು ನಮಗೆಲ್ಲರಿಗೂ ಚೆನ್ನಾಗಿ ಮನದಟ್ಟಾಗಿದೆ.

ಇನ್ನು ರಾಜ್ಯದ ನೀರಾವರಿ ಯೋಜನೆಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಆದರೆ ರಾಜ್ಯದ ಕೆಲವು ಭಾಗಗಳಲ್ಲಿ ದೈವದತ್ತವಾದ ನೀರಾವರಿ ಸೌಲಭ್ಯಗಳಿದ್ದರೆ, ಇನ್ನು ಕೆಲವಕ್ಕೆ ಅಂಥಾ ಸೌಲಭ್ಯಗಳು ಇರುವುದಿಲ್ಲ. ಹಾಗೆ ಒಂದು ದೈವದತ್ತವಾದ ನೀರಾವರಿ ಸೌಲಭ್ಯಗಳು ಇಲ್ಲದಿರತಕ್ಕಂಥ ಸ್ಥಳಗಳು ಎಂದರೆ ಉದಾಹರಣೆಗೆ ಹೇಳುವುದಾದರೆ ಚನ್ನರಾಯಪಟ್ಟಣ ಮತ್ತು ನಮ್ಮ ಅರಸೀಕೆರೆ ತಾಲ್ಲೂಕುಗಳು. ಅಲ್ಲಿ ವರ್ಷದಲ್ಲಿ 18 ಇಂಚ್ ಕೂಡ ಮಳೆಯಾಗುವುದಿಲ್ಲ. ಬಾವಿಗಳನ್ನು ತೋಡಿದರೆ 300 400 ಅಡಿ ತೆಗೆದರೂ ನೀರು ಸಿಕ್ಕುವುದಿಲ್ಲ. ಇಂಥಾ ಸ್ಥಳಗಳಿಗೆ ನೀರಾವರಿ ಸೌಲಭ್ಯಗಳ ಅಗತ್ಯ ಬಹಳವಾಗಿರುತ್ತದೆ; ಎಂಬ ಅಂಶವನ್ನು ನಾನು ಸರ್ಕಾರದವರ ಗಮನಕ್ಕೆ ಬಹಳ ಕಳಕಳಿಯಿಂದ ತರುತ್ತಿದ್ದೇನೆ. ಆದರೆ ದುರ್ದೈವದಿಂದ ಇಲ್ಲಿಯತನಕ ಬಂದಿರತಕ್ಕ ಮಂತ್ರಿಗಳಲ್ಲಿ ಯಾರೊಬ್ಬರೂ ಇಂಥಾ ಒಂದು ದುರ್ದೈವದ ಜಾಗಕ್ಕೆ ಸೇರಿದವರು ಮಂತ್ರಿಗಳಾಗಿ ಬಂದಿಲ್ಲ. ಬಂದಿದ್ದರೆ ಅವರಿಗೆ ಇದರ ಕಷ್ಟ ಗೊತ್ತಾಗುತ್ತಿತ್ತು. ಅಪ್ಪಿತಪ್ಪಿ ಬಂದಿರತಕ್ಕವರೆಲ್ಲಾ ನೀರಾವರಿ ಸೌಲಭ್ಯಗಳಿದ್ದ ಜಾಗದಿಂದ ಬಂದವರೇ ಮಂತ್ರಿಗಳಾಗಿ

ದ್ದಾರೆ. ಹಾಗೊಂದುವೇಳೆ ಮಳೆಬಾರದ ಜಾಗದಿಂದ ಬಂದಿದ್ದರೆ ಅವರು ತಮ್ಮ ಒಂದು ಕ್ಷೇತ್ರದ ಕ್ಷೇಮವೇನೋ ಅಷ್ಟಕ್ಕೆ ಮಾತ್ರ ಅವರು ಗಮನಕೊಟ್ಟು ಇನ್ನುಳಿದ ಪ್ರದೇಶಕ್ಕೆ ಅವರು ಮನಸ್ಸನ್ನೇಕೆ ಹರಿಸಲಿಲ್ಲ. ಆದರೆ ಈ ದಿವಸ ಆಡಳಿತಪಕ್ಷದವರು ಹೇಳುತ್ತಿರುವ ಅವರ ಒಂದು ಸಮಾಜವಾದ ಏನಿದೆ ಅದರಲ್ಲಿ ಇಡೀ ಸಮಗ್ರ ದೇಶದ ಜನತೆ ಈ ಸಮಾಜವಾದದ ಸವಿಯನ್ನು ಉಣ್ಣುವುದಕ್ಕೆ ಅವಕಾಶವಾಗುವಂತೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಗಮನ ಹರಿಸಬೇಕಾಗಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಒಟ್ಟಿನಲ್ಲಿ ನಾನು ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತಿರುವುದೇನೆಂಧರೆ ರಾಜ್ಯದಲ್ಲಿ ಎಲ್ಲೆಲ್ಲಿ ನೀರಾವರಿ ಸೌಲಭ್ಯಗಳು ಇರುವುದಿಲ್ಲವೋ ಅಂಥ ಜಾಗಗಳಿಗೆ ಹೆಚ್ಚಿನ ಮಾನ್ಯತೆಯನ್ನು ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಹಿಂದೆ ಇದ್ದಂಥ ರಾಜ ಮಹಾರಾಜರುಗಳ ಕಾಲದಲ್ಲಿ ಪ್ರಜೆಗಳ ಕ್ಷೇಮಕ್ಕಾಗಿ ಅಂದರೆ ಚನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕುಗಳಿಗೆ ನೀರನ್ನು ಒದಗಿಸತಕ್ಕ, ಉದ್ದೇಶದಿಂದ ಯಗಚೀ ನದಿ ನೀರನ್ನು ತರುವುದಕ್ಕೆ ಸಾಕಷ್ಟು ಸರ್ವೆ ಮತ್ತು ಅಂದಾಜುಗಳೆಲ್ಲಾ ಆಗಿದ್ದವು. ಆದರೆ ನಮ್ಮ ದುರಾದೃಷ್ಟದಿಂದ ಪ್ರಜಾಪ್ರಭುತ್ವ ಆಡಳಿತ ಜಾರಿಗೆ ಬಂದ ದೆಸೆಯಿಂದ ಅವುಗಳೆಲ್ಲಾ ಮೂಲೆಗೆ ಬೀಳಬೇಕಾಗಿ ಬಂದಿತು. ಇತ್ತೀಚೆಗೂ ಕೂಡ ಈ ಸರ್ಕಾರಗಳೂ ಬಂದನಂತರ ಇಂಥಾ ಯೋಜನೆಗಳ ಅನೇಕ ಸರ್ವೆ ಕಾರ್ಯಗಳು ನಡೆದಿದ್ದರೂ ಅವು ಮೂಲೆಗೆ ಬಿದ್ದಿರುವುದು ತುಂಬಾ ವಿಷಾದಕರವಾದ ಸಂಗತಿ. ಹಾಗೂ ಬಹಳ ಚಿಂತಾಜನಕವಾದಂಥ ವಿಷಯ ಇದು. ಆದರೆ ಈಗಲಾದರೂ ಈ ತಾಲ್ಲೂಕಿಗೆ ನೀರಾವರಿ ಸೌಲಭ್ಯಗಳನ್ನು ಖಂಡಿತ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾಗಿದ್ದರೆ ಸ್ಥಳೀಯ ಸಂಸ್ಥೆಗಳು ಅಭಿವೃದ್ಧಿಯಾಗಬೇಕು. ಅಂದರೆ ಗ್ರಾಮಪಂಚಾಯಿತಿಗಳೂ, ತಾಲ್ಲೂಕ್ ಬೋರ್ಡುಗಳೂ ಮತ್ತು ತಾಲ್ಲೂಕ್ ಅಭಿವೃದ್ಧಿ ಮಂಡಲಗಳೂ ಯಶಸ್ವಿಯಾಗಿ ಕೆಲಸಮಾಡುವುದಕ್ಕೆ ಅವು ನವಚೈತನ್ಯ ಗಳಿಸಬೇಕು. ಆದರೆ ಆ ಸಂಸ್ಥೆಗಳನ್ನು ಮುಂದಕ್ಕೆ ತಾರದೆ ಇಲ್ಲಿ ಬರೀ ಈ ಒಂದು ಕ್ಯಾಬಿನೆಟ್ಟಿನಿಂದ ರಾಜ್ಯದ ಅಭಿವೃದ್ಧಿಯನ್ನು ಸಾಧಿಸುತ್ತೇವೆಂದರೆ ಅದು ಖಂಡಿತಾ ಸಾಧ್ಯವಿಲ್ಲ. ಪ್ರಜಾಪ್ರಭುತ್ವದ ಅಂಶ ಮನ ಮನೆಗೂ ಮುಟ್ಟಬೇಕು ಅಂದರೆ ಸ್ಥಳೀಯ ಸಂಸ್ಥೆಗಳ ಕಾರ್ಯಚಟುವಟಿಕೆಗಳು ಚೈತನ್ಯಪೂರ್ಣವಾಗಬೇಕು. ಈ ದಿವಸ ನಾನು ಕೂಡ ಒಂದು ಅಭಿವೃದ್ಧಿ ಮಂಡಲಿಗೆ ಸದಸ್ಯನಾಗಿದ್ದೇನೆ. ಆದರೆ ಅಲ್ಲಿ ನಡೆಯತಕ್ಕ ವಿಷಯಗಳನ್ನು ಹೇಳಬೇಕೆಂದರೆ ಬಹಳ ಸಂಕಟವಾಗುತ್ತದೆ. ನಾವು ಎಷ್ಟೇ ಮೆಹನತ್ತು ಮಾಡಿದರೂ ನಾವು ಕಳುಹಿಸತಕ್ಕ ಅನೇಕ ಫೈಲುಗಳು ಜಿಲ್ಲಾಧಿಕಾರಿಗಳ ಆಫೀಸಿನಲ್ಲಿ ಕೊಳೆತು ಬಿದ್ದಿವೆ. ಇನ್ನು ಕೆಲವು ಸಬ್ ಡಿವಿಜನ್ ಮಟ್ಟದಲ್ಲಿ ಅಲ್ಲಿ ಕೊಳೆಯುತ್ತ ಬಿದ್ದಿವೆ. ಹಾಗೂ ಹೀಗೂ ತೂಗಾಡುತ್ತ ರಾಜ್ಯ ಮಟ್ಟದ ಸೆಕ್ರೆಟೇರಿಯಟ್ಟಿಗೆ ಬಂದಾಗ ಅವು ಯಾವ ಮೂಲೆಯಲ್ಲಿ ಬಿದ್ದು ಹೋಗುತ್ತವೋ ಅದು ಗೊತ್ತಾಗುವುದೇ ಕಷ್ಟ. ಆದುದರಿಂದ ನಮ್ಮಲ್ಲಿ ಈ ಪ್ರಜಾರಾಜ್ಯ ಮತ್ತು ಪ್ರಜಾಡಳಿತ ಯಶಸ್ವಿಯಾಗಬೇಕಾಗಿದ್ದರೆ ಮೊದಲು ಸರ್ಕಾರದವರು ಸ್ಥಳೀಯ ಸಂಸ್ಥೆಗಳನ್ನು ಆರ್ಥಿಕವಾಗಿ ಬಲಪಡಿಸಬೇಕು. ಆಗಲೇ ರಾಜ್ಯದಲ್ಲಿ ಪ್ರಜಾಪ್ರಭುತ್ವ ಹಬ್ಬುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಒಂದು ಮಾತು. ಸರ್ಕಾರದವರು ರಾಜ್ಯದಲ್ಲಿ ಭೂಸುಧಾರಣೆಯ ಬಗ್ಗೆ ಏನು ಚಿಂತೆ ಹರಿಸಿದ್ದಾರೆಂಬುದೇ ತಿಳಿಯುತ್ತಿಲ್ಲ. ಬೇಸಾಯ ಅಂದರೆ-ನೀಸಾಯ, ನಿಮ್ಮಪ್ಪಸಾಯ, ನಿಮ್ಮ ಮನೆಮಕ್ಕಳೆಲ್ಲಾ ಸಾಯ ಎಂದು ಈ ವ್ಯವಸಾಯದಲ್ಲಿ ಯಾರು ಎಷ್ಟು ಕಷ್ಟಪಟ್ಟರೂ ಮುಂದಕ್ಕೆ ಬರುವುದಕ್ಕಾಗುವುದಿಲ್ಲ. ಆದರೆ ಈ ದಿವಸ ತಜ್ಞರು ಆಧುನಿಕ ರೀತಿಯಲ್ಲಿ ಬೇಸಾಯ ಮಾಡಬೇಕೆಂದು ಹೇಳುತ್ತಿದ್ದಾರೆ. ಅದಕ್ಕೆಲ್ಲಾ ಟ್ರಾಕ್ಟರ್, ಟ್ರೈಲರ್ ಮತ್ತು ಟಿಲ್ಲರುಗಳು ಬೇಕು. ಆದರೆ ಈ ದಿವಸ ಸರ್ಕಾರದವರು ಸೂಚಿಸತಕ್ಕ ಭೂಮಿತಿಯಲ್ಲಿ ಇಂಥ ಆಧುನಿಕ ಯಂತ್ರೋಪಕರಣಗಳನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ರೈತರ ಆರ್ಥಿಕ ಜೀವನವನ್ನು ಹೇಗೆ ಉತ್ತಮಪಡಿಸಬೇಕು ಎಂಬುದನ್ನು ಇವರಿನ್ನೂ ಕಂಡುಹಿಡಿದಿಲ್ಲ.

4-30 P. M.

ಒಬ್ಬ ರೈತ ಭೂ ಅಭಿವೃದ್ಧಿ ಬ್ಯಾಂಕಿನ ಮೂಲಕ ಅಥವಾ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಟ್ರಾಕ್ಟರ್ ಮುಂತಾದ ಉಪಕರಣ ಕೊಳ್ಳಬೇಕಾದರೆ ಆ ಬ್ಯಾಂಕಿಗೆ ಅಥವ ಕಾರ್ಪೊರೇಷನ್ನಿಗೆ ತನ್ನ ಜಮೀನನ್ನು ಡೀಡು ಮಾಡಬೇಕು. 10 ಎಕರೆ ಡೀಡು ಮಾಡಿದರೆ ಟ್ರಾಕ್ಟರು ಸಿಕ್ಕುವುದಿಲ್ಲ. ಇದನ್ನು ಯೋಚನೆ ಮಾಡಿದ್ದೀರಾ ? 10 ಎಕರೆ ಇರುವವರು ಯಾವ ರೀತಿ ಟ್ರಾಕ್ಟರು ಪಡೆಯಬೇಕು ? ಆಧುನಿಕ ಉಪಕರಣಗಳನ್ನುಪಯೋಗಿಸಿ ವ್ಯವಸಾಯ ಮಾಡಬೇಕು ಎಂದು ಹೇಳುವರು. ಹಾಗೆ ಮಾಡಲು ಬಡ ರೈತರಿಗೆ ಶಕ್ತಿ ಎಲ್ಲಿಂದ ಬರಬೇಕು? ದೇಶದ

(ಶ್ರೀ ಎಚ್. ಎಸ್. ಸಿದ್ದಪ್ಪ)

ಉತ್ಪತ್ತಿ ಹೆಚ್ಚಬೇಕು, ವ್ಯವಸಾಯಾಭಿವೃದ್ಧಿಯಾಗಬೇಕು ರೈತರ ಆರ್ಥಿಕ ಸ್ಥಿತಿ ಉತ್ತಮವಾಗಬೇಕು ಎಂದು ಹೇಳುವಾಗ ಕಡಿಮೆ ಜಮೀನಿರುವವರು ಹೇಗೆ ಮಾಡಬೇಕು, ಯಾವ ರೀತಿ ತಾಂತ್ರಿಕ ಅನುಕೂಲ ಪಡೆಯಬೇಕು ಎಂಬುದನ್ನು ಯೋಚಿಸಿ ಅದಕ್ಕೆ ಅನುಕೂಲವಾಗುವಂತೆ ಒಂದು ಸಮಗ್ರ ಯೋಜನೆ ತಯಾರಿಸಬೇಕು. ಇದರ ಬಗ್ಗೆ ಆಗ್ರಹಪೂರ್ವಕವಾಗಿ ಮನವಿ ಸಲ್ಲಿಸುತ್ತೇನೆ. ಒಬ್ಬ ವ್ಯವಸಾಯದ ಇಲಾಖೆ ಅಧಿಕಾರಿ ತಾಲ್ಲೂಕಿಗೆ ಅಥವ ಬೇರೆ ಕಡೆಗೆ ಬರುವುದಾದರೆ ವ್ಯವಸಾಯದ ಇಲಾಖೆ ಅಧಿಕಾರಿಗಳ ಒಂದು ಸೈನ್ಯ ಹಾಜರಾಗಿರುವುದು. ಗೊಬ್ಬರಕ್ಕೆ ಸಂಬಂಧಪಟ್ಟ ಗೆಜೆಟೆಡ್ ಆಫೀಸರು, ಬೀಜಕ್ಕೆ ಸಂಬಂಧಪಟ್ಟ ಗೆಜೆಟೆಡ್ ಅಧಿಕಾರಿ, ಪ್ಲಾಂಟ್ ಪ್ರೊಟೆಕ್ಷನ್ನಿಗೆ ಸಂಬಂಧಪಟ್ಟ ಗೆಜೆಟೆಡ್ ಅಧಿಕಾರಿ ಹೀಗೆ ಸುಮಾರು 12 ಜನ ಅಧಿಕಾರಿಗಳು ಇರುತ್ತಾರೆ. ಈ ದಿನ ಹೆಬ್ಬಾಳದಲ್ಲಿ ಅಥವಾ ಬೇರೆ ಕಡೆ ಫಾರಂ ಮಾಡಿರುತ್ತಾರೆ, ಅಲ್ಲಿ ಬೀಜವನ್ನು ಎರಡು ಕುಂಟೆಯಲ್ಲಿ ಬೆಳೆಯುವರು, ಅದಕ್ಕೆ ಖರ್ಚೆಷ್ಟು ಎಂದು ಹೇಳುವುದಿಲ್ಲ. ಬಂದು ನೋಡಿ ಎಂದು ಹೇಳಿ ರೈತರಿಗೆ ಅದನ್ನು ತೋರಿಸುವರು. ಎರಡು ಕುಂಟೆಯಲ್ಲಿ ಬೆಳೆದುದನ್ನು ನೋಡಿ ಒಂದು ಎಕರಗೆ ಎಷ್ಟು ಬೆಳೆಯುವುದು, ನೂರು ಎಕರೆಗೆಷ್ಟು ಬೆಳೆಯುವುದು ಎಂದು ಲೆಕ್ಕ ಹಾಕಿ ಪ್ರಿಂಟುಮಾಡಿ ದೇಶಕ್ಕೆ ತಿಳಿಸುವರು. ಹೀಗೆ ಮಾಡಿದರೆ ಎಷ್ಟು ಜಾಸ್ತಿ ಉತ್ಪತ್ತಿಯಾಗುವುದೆಂದು ಹೇಳುವರು. ಆದರೆ ರೈತ ಹಾಗೆ ಬೆಳೆಯಲು ಹೇಗೆ ಸಾಧ್ಯ ? ಅವನಿಗೆ ಹಣ, ಮೆಷೀನರಿ ಅನುಕೂಲವಿರುವುದಿಲ್ಲ. ಅಲ್ಲದೆ ವ್ಯವಸಾಯದ ಇಲಾಖೆ ಅಧಿಕಾರಿ ಕರೆದುಕೊಂಡು ಹೋಗಿ ಸಲಹೆ ಪಡೆಯಲು 50 ರೂಪಾಯಿ ಅವನು ಖರ್ಚುಮಾಡಬೇಕು. ಯಾವುದೇ ವ್ಯವಸಾಯ ಇಲಾಖೆ ಅಧಿಕಾರಿಯಾಗಲಿ ಸ್ವತಃ ತಾನೇ ಭೂಮಿಯ ಬಳಿಗೆ ಬರುವುದಿಲ್ಲ. ರೈತ ಕರೆದುಕೊಂಡು ಹೋಗಿ ಸಮಾರಂಭ ಏರ್ಪಡಿಸಬೇಕು, ಹಾಗೆ ಮಾಡಿದರೆ ಅಧಿಕಾರಿ ಬರುವರು. ಬಂದು ಭಾಷಣ ಮಾಡಿ ವಾಪಸು ಹೋಗುವರು. ವ್ಯವಸಾಯದ ಪರಿಸ್ಥಿತಿ ಹೀಗಿದೆ. ಈ ಪರಿಸ್ಥಿತಿಯನ್ನು ಉತ್ತಮಪಡಿಸಲು ಸರಕಾರ ಇನ್ನೂ ಹಣ ಒದಗಿಸಿಲ್ಲ, ಹೆಚ್ಚು ಆಸಕ್ತಿ ವಹಿಸಿಲ್ಲ. ಇರುವ ಹಣವನ್ನಾದರೂ ಸದ್ವಿನಿಯೋಗ ಮಾಡಿ ತಮ್ಮ ಜೀವನವನ್ನೇ ವ್ಯವಸಾಯದಲ್ಲಿ ತೊಡಗಿಸಿರುವ ರೈತರ ಜೀವನ ಉತ್ತಮಪಡಿಸಲು ದೃಷ್ಟಿಹರಿಸಬೇಕು.

ಉದ್ಯೋಗ. ಶ್ರೀ ಘೋರ್ಪಡೆಯವರ ಆರ್ಥಿಕ ಚಿಂತನೆಯ ಭಾಷಣದಲ್ಲಿ ಇದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಕಳೆದ ಅಧಿವೇಶನದಲ್ಲಿ ಮಾನ್ಯ ಅಜೀಜ್‌ಸೇಟ್‌ರವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಗ್ಗೆ ಹೇಳಿದ್ದರು. ತಾಲ್ಲೂಕು ಮಟ್ಟದಲ್ಲಿ ಒಂದೊಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಸ್ ತೆರೆಯುತ್ತೇವೆ. ಹಣ ಅದಕ್ಕೆ ಒದಗಿಸುತ್ತೇವೆ. ನಿರುದ್ಯೋಗ ಸಮಸ್ಯೆ ಪರಿಹಾರ ಮಾಡುತ್ತೇವೆ. ಇದಕ್ಕೆ ತೀವ್ರ ಗಮನ ಕೊಡುತ್ತೇವೆ ಎಂದು ಹೇಳಿದ್ದರು. ಈ ಸಾರಿ ಅದರ ಬಗ್ಗೆ ಬಜೆಟ್ಟಿನಲ್ಲಿ ಅವಕಾಶ ಮಾಡುವರು ಎಂದು ನಾನು ನಿರೀಕ್ಷಿಸಿದ್ದೆ. ಅದಕ್ಕೆ ಹಾಗೆ ಮಾಡಿಲ್ಲ. ಕೆಲವು ಕಡೆ ನೂರು ಮೈಲಿಗಳವರೆಗೆ ಹೋಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ಹೆಸರು ರಿಜಿಸ್ಟರು ಮಾಡಬೇಕಾದ ಸಂದರ್ಭವಿದೆ. ವೃತ್ತಿಯಿಲ್ಲದೆ ಆಹಾರವಿಲ್ಲದೆ ಇರುವವರಿಗೆ ಅಷ್ಟು ದೂರ ಹೋಗಿಬರಲು ಸಾಧ್ಯವೇ ? ಒಂದು ವೇಳೆ ಹೋಗಿ ಹೆಸರು ರಿಜಿಸ್ಟರ್ ಮಾಡಿಸಿದರೂ ಬೇಕಾದವರಿಗೆ ಇಂದು ಉದ್ಯೋಗ ಸಿಕ್ಕುತ್ತಿಲ್ಲ. ಕಾರಣ ಬೇಕಾದವರಿಗೆ ಅಧಿಕಾರಿಯ ಸೂಚನೆ ಪ್ರಕಾರ ಕೊಡುವರು. ಯಾರಿಗೆ ಕೊಡಬೇಕೆಂದು ಮೊದಲೇ ತೀರ್ಮಾನ ಮಾಡಿಕೊಂಡಿರುವರು. ಇದು ಸರಿಯಲ್ಲ. ದಯವಿಟ್ಟು ಯಾರಿಗೆ ವೃತ್ತಿಯಿಲ್ಲ, ಹೊಟ್ಟೆಗಿಲ್ಲ ಅವರಿಗೆ ನ್ಯಾಯವಾಗಿ ವೃತ್ತಿ ಸಿಕ್ಕುವಹಾಗೆ ವ್ಯವಸ್ಥೆ ಮಾಡಬೇಕು, ಕಳೆದ ಅಧಿವೇಶನದಲ್ಲಿ ಒಂದು ವಿಷಯ ಪ್ರಸ್ತಾಪಮಾಡಿದ್ದೆ. ಇಂದು ಹೆಣ್ಣುಮಕ್ಕಳ ಪರಿಸ್ಥಿತಿಯೇನಾಗಿದೆ ಎಂಬುದನ್ನು ನೋಡಬೇಕು. ಅವರ ಶೀಲಭಂಗವಾಗುತ್ತಿದೆ. ಇದನ್ನು ಸರಕಾರ ಬಹಳ ಕಳಕಳಿಯಿಂದ ಯೋಚನೆ ಮಾಡಿ ಸೂಕ್ತ ಕ್ರಮ ಅದನ್ನು ತಡೆಗಟ್ಟಲು ತೆಗೆದುಕೊಳ್ಳಬೇಕು. ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಟ್ಟಿದ್ದೇವೆ. ಮಹತ್ತರ ಸ್ಥಾನ ಕೊಟ್ಟಿದ್ದೇವೆ ಎಂದು ದೊಡ್ಡ ಭಾಷಣ ಮಾಡುತ್ತಾರೆ. ಆದರೆ ಅವರ ಸ್ಥಿತಿ ನೋಡಿದರೆ ರಾಷ್ಟ್ರದಲ್ಲಿ ಚಿಂತಾಜನಕವಾಗಿದೆ. ಶ್ರೀಮಂತರ ಬಗ್ಗೆ ಚಿಂತೆಮಾಡಬೇಕಾಗಿಲ್ಲ, ಬಡಹೆಣ್ಣುಮಕ್ಕಳು ಕಾರ್ಖಾನೆಗಳಲ್ಲಿ ಹೊಟ್ಟೆಪಾಡಿಗಾಗಿ ಅಲ್ಪ ಸಂಬಳಕ್ಕೆ ದುಡಿಯುತ್ತಿದ್ದಾರೆ. ಆದರೆ ಅವರ ಜೀವನ ಸುಗಮವಾಗಿದೆಯೇ ? ಸಂಜೆ 6 ಗಂಟೆಗೆ ನೆಲಮಂಗಲಕ್ಕೆ ಹತ್ತು ಮೈಲಿ ವೇಗದಲ್ಲಿ ಕಾರಿನಲ್ಲಿ ಹೋದರೆ ವಿಷಯ ಗೊತ್ತಾಗುವುದು. ಹೆಣ್ಣುಮಕ್ಕಳಿಗೆ ವಿಶೇಷ ಸೌಲಭ್ಯ ಕಲ್ಪಿಸಬೇಕು. ಅವರಿಗಾಗಿ ಪ್ರತ್ಯೇಕ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಪ್ರತಿಯೊಂದು ತಾಲ್ಲೂಕಿನಲ್ಲೂ ತೆರೆಯಬೇಕು.

ಇವರಿಗೆ ಹುದ್ದೆಯನ್ನು ಅಮೇಲೆ ಕೊಡುತ್ತಾರೆ. ನಾನು ನಿಮಗೆ ಹೇಳುತ್ತೇನೆ. ಗಂಡು ಮಕ್ಕಳಿಗೆ ಮಾಡಬೇಕು ಎಂದು ಹೇಳುವುದಿಲ್ಲ. ಅವರು ರೈಲ್ವೆ ಸ್ಟೇಷನ್‌ನಲ್ಲಿ, ಬಸ್‌ಸ್ಟ್ಯಾಂಡಿನಲ್ಲಿ,

ರೆಜಿಸ್ಟ್ರೇಷರ್ ಹೋಂನಲ್ಲಿ ಮಾನ್ಯ ಗುಂಡೂರಾಯರ ಮುಂದೆ ಕೂಲಿ ಮಾಡಿ ಹೊಟ್ಟೆ ಹೊರೆಯುತ್ತಾರೆ ಆದರೆ ಹೆಣ್ಣು ಮಕ್ಕಳು ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಅವರಿಗೆ ಸೌಜನ್ಯ ಶೀಲ ಸೃಷ್ಟಿ ನಿಯಮ ಇದೆ. ಮೈ ಬೆವರು ಸುರಿಸುವುದಕ್ಕೆ ಅವರು ತಯಾರು ಇದ್ದರೂ ಕೂಡ ಶೀಲಕ್ಕೆ ಭಂಗ ಬಾರದಂತೆ ದುಡಿಮೆ ಮಾಡಬೇಕಾಗುತ್ತದೆ. ಆ ದುಡಿಮೆಗೆ ಅವಕಾಶಗಳನ್ನು ಮಾಡಲಿ, ನಿಮ್ಮ ಸರ್ಕಾರ ಹೆಣ್ಣು ಮಕ್ಕಳ ಅಭಿಮಾನವನ್ನು ಬೆಳೆಸಿಕೊಳ್ಳಲ ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಇನ್ನು ಆಹಾರದ ವಿತರಣೆಯ ಬಗ್ಗೆ ಹೇಳುತ್ತೇನೆ, ಬ್ಲಾಕ್ ಮಾರ್ಕೆಟ್ ವ್ಯಾಪಾರ, ಕಳ್ಳ ತನದ ವ್ಯಾಪಾರ ಎಷ್ಟು ಓಪನ್ ಆಗಿ ನಡೆಯುತ್ತಿದೆ ಎಂದರೆ, ಅದಕ್ಕೆ ಜನರು ಕಾರಣರು ಎಂದು ಹೇಳುವುದು ಸರಿಯಲ್ಲ. ಇದರಲ್ಲಿ ಅಧಿಕಾರಿಗಳ ಪಾತ್ರ ಮಹತ್ತರವಾಗಿದೆ. ಉದಾಹರಣೆಗೆ, ನಿನ್ನೆ ತಾನೆ ನನಗೆ ಒಂದು ಕಾಗದ ಪೋಸ್ಟಿನಲ್ಲಿ ಬಂದಿದೆ. ಅದನ್ನು ತೋರಿಸುತ್ತೇನೆ. ಇದು ನಿಮ್ಮ ಅಧಿಕಾರಿಗಳು ಮಾಡಿ ಕಳುಹಿಸಿರತಕ್ಕದ್ದು. ಇದನ್ನು ಇಲ್ಲಿ ಓದಿ ಅನ್ನಪೂರ್ಣೇಶ್ವರಿ ಇ. ಮಾ. ವಾಡ್ ಅವರಿಗೆ ತಲುಪಿಸುತ್ತೇನೆ. ಇದು ಅಫಿಷಿಯಲ್ ನೋಟಿಫಿಕೇಷನ್ ಬೈ ದಿ ತಹಸೀಲ್ದಾರ್. ತಹಸೀಲ್ದಾರ್ ಅವರು ಅಲಾಟ್ ಮಾಡಿ, ಜಿಲ್ಲಾಧಿಕಾರಿಗಳಿಗೆ ಕಾಪಿಯನ್ನು ಕಳುಹಿಸಿದ್ದಾರೆ. ಪ್ರತ್ಯೇಕವಾಗಿ ಶಾಸಕರಿಗೂ ಒಂದು ಕಾಪಿ ಹೋಗಿದೆ. ಇವರಿಗೆ ನಿಮ್ಮ ಭಯ ಎಷ್ಟು ಇದೆಯೆಂದರೆ, ಅದರಲ್ಲಿರುವ ಒಂದು ವಾಕ್ಯವನ್ನು ಓದುತ್ತೇನೆ. ಫುಡ್ ಗ್ರೇನ್ಸ್ ಅನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಅವರು ಇಷ್ಟು ಧೈರ್ಯದಿಂದ ಬರೆದಿದ್ದಾರೆ.

> Foodgrains may be lifted on the permits issued......before 23-3-73 and no room should be given for their proper distribution.

ಇದರಲ್ಲಿ ಟೈಪ್ ಮಿಸ್ಟೇಕ್ ಎನ್ನುವುದು ಸ್ವಲ್ಪ ಇದೆ. ನಾನು ಅದರ ಬಗ್ಗೆ ಹೇಳುತ್ತಾ ಇಲ್ಲ, ಏನು ಆಹಾರದ ವಿತರಣೆಯಾಗುತ್ತದೆ. ಅದರ ಬಗ್ಗೆ ತೀವ್ರ ಗಮನವನ್ನು ತಾವು ಹರಿಸಬೇಕೆಂದು ಹೇಳುತ್ತೇನೆ. ತಾವು ಹಾಸನಕ್ಕೆ ಬಂದಾಗ ನಮ್ಮ ಜಿಲ್ಲೆಯ ಎಲ್ಲಾ ಶಾಸಕರು ಸೇರಿ, ನಮ್ಮ ಜಿಲ್ಲೆಯ ಪರಿಸ್ಥಿತಿಯ ಬಗ್ಗೆ ಕೂಲಂಕುಷವಾಗಿ ವಿವರಿಸಿದ್ದೇವೆ. ಆದರೆ ‘‘no room should be given for their proper distribution’’ ಎನ್ನುವುದು ಟೈಪಿಂಗ್ ಮಿಸ್ಟೇಕ್ ಅಲ್ಲ. ತಾವು ಮಾನ್ಯ ಬಸವಲಿಂಗಪ್ಪನವರ ಹಾಗೆ ಗುಮಾಸ್ಥ ಬರೆದ ನಾನು ಸೈನು ಹಾಕಿದೆ ಎನ್ನುವ ಹಾಗೆ ಹೇಳಬೇಡಿ. ಅಧಿಕಾರಿಗಳು ಒಂದು ದಿವಸಕ್ಕೆ 18 ಗಂಟೆ ನಿದ್ದೆ ಮಾಡುವವರು ಇದ್ದಾರೆ. ಇವರ ಬಗ್ಗೆ ನಿಗವಹಿಸಿ. you must pull them up.

ನಿಮ್ಮ ಯೋಜನೆಗಳು ಫಲಕಾರಿಯಾಗಬೇಕಾದರೆ, ಈ ಕಡೆ ಕೂತವರು ಕ್ರಿಟಿಸೈಸ್ ಮಾಡುವುದು ಬೇಡ. ಉತ್ತಮ ಕೆಲಸ ನಡೆಯಬೇಕು ಎನ್ನುವುದಾದರೆ, ನಿಮ್ಮ ಅಧಿಕಾರಿಗಳನ್ನು ಎಚ್ಚರಗೊಳಿಸಿ ಎಂದು ನಾನು ಹೇಳುತ್ತೇನೆ. ಸೆಕ್ರೆಟರಿಯೇಟ್ ಮಟ್ಟದಲ್ಲಿ ಮಂತ್ರಿಗಳಿಂದ ಒಂದು ಕಾಗದ ಹೋದರೆ, ಸಂಬಂಧಪಟ್ಟ ಸೆಕ್ರೆಟರಿಯೇಟ್ ಬಿಡಬೇಕಾದರೆ 3—4 ತಿಂಗಳು ಬೇಕಾಗುತ್ತದೆ. ಉತ್ತಮ ಆಡಳಿತವನ್ನು ನಡೆಸುವ ದೃಷ್ಟಿಯಿಂದ ಹೇಳುತ್ತೇನೆ. ಈ ರೀತಿ ಕಾಗದ ಪತ್ರಗಳು ತಡವಾಗುವುದು ಬೇಡ. ತಕ್ಷಣ ಸರಿಯಾದ ಕ್ರಮ ತೆಗೆದುಕೊಂಡು ಕೆಲಸಮಾಡಬೇಕು. ಆಹಾರದ ಬಗ್ಗೆ ನಾನು ಹೆಚ್ಚು ಹೇಳಬಯಸುವುದಿಲ್ಲ. ಪಕ್ಷಾತೀತವಾಗ ಆಹಾರದ ವಿತರಣೆ ನಡೆಯುತ್ತಿದೆ. ಈ ಬಗ್ಗೆ ತಾವು ತೀವ್ರ ಗಮನ ಹರಿಸಬೇಕು. ಏತಕ್ಕೆ ಇವತ್ತಿನ ದಿವಸ ಆಡಳಿತ ಸರಿಯಾಗಿ ನಡೆಯುತ್ತಿಲ್ಲ ಎಂದು ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ನೀವು ಏನು ಮಾಡಿದ್ದೀರಿ ಎಂದರೆ ಎಲ್ಲಾ ಇಲಾಖೆಗೂ ಒಬ್ಬ ಐ.ಎ.ಎಸ್. ಆಫೀಸರ್ ಅನ್ನು ನೇಮಕ ಮಾಡಿದ್ದೀರಿ. ಉದಾಹರಣೆಗೆ ಭದ್ರಾವತಿ ಕಬ್ಬಿಣ ಕಾರ್ಖಾನೆಗೆ ಆಫೀಸರನ್ನು ನೇಮಕ ಮಾಡುವಾಗ ಅವರು ಮೆಟಲರ್ಜಿಯಲ್ಲಿ ಎಕ್ಸ್‌ಪರ್ಟ್ ಇರಬೇಕು ಅಲ್ಲಿ ನಡೆಯತಕ್ಕ ಉದ್ಯಮದ ಬಗ್ಗೆ ಅವರಿಗೆ ಸಾಕಷ್ಟು ಮಾಹಿತಿ ಇರಬೇಕು. ಅದು ಬಿಟ್ಟು ಅಲ್ಲಿಗೆ ಒಬ್ಬ ಐ. ಎ. ಎಸ್. ಆಫೀಸರನ್ನು ಹಾಕಿದರೆ ಆತನಿಗೆ ಇದರ ಬಗ್ಗೆ ಏನು ಗೊತ್ತಿರುವುದು ? ಆರೋಗ್ಯ ಇಲಾಖೆಗೆ ಇವರನ್ನು ನೇಮಕ ಮಾಡುವಾಗ, ಜನಾರೋಗ್ಯ ಅಭ್ಯಾಸ ಮಾಡಿ ಚೆನ್ನಾಗಿ ಕಲಿತಿರುವ ಪರಿಣಿತರನ್ನು ಹಾಕಿದ್ದಾರೆ. ಆದರೆ ವ್ಯವಸಾಯ ಮತ್ತು ಆಹಾರದ ಇಲಾಖೆಗೆ ಪರಿಣತರನ್ನು ಹಾಕಿಲ್ಲ. ಇದು ಸರಿಯಲ್ಲ. ಇಲಾಖೆಗೆ ಅಧಿಕಾರಿಗಳನ್ನು ನೇಮಿಸುವಾಗ, ಆಯಾ ಇಲಾಖೆಯ ಕೆಲಸಕಾರ್ಯಗಳ ಬಗ್ಗೆ ಅವನಿಗೆ ಮಾಹಿತಿ ಇದೆಯೇ ಎಂದು ನೋಡಬೇಕು, ಮಾಹಿತಿ ಇಲ್ಲದೆ ಇರುವವರನ್ನು ಹಾಕಿದರೆ, ಯಾರು ಹೋಗಿ ಏನು ಕೇಳಿದರೂ ಸಹ, ನೋಡುತ್ತೇನೆ ಎಂದು ಹೇಳುತ್ತಾನೆ. ಟಪಾಲ್ ಲೆವೆಲ್‌ನಲ್ಲಿ ಕಾಗದಕ್ಕೆ, ಇಷ್ಟನೆ ಸೆಕ್ಷನ್ ಪ್ರಕಾರ ಇದನ್ನು ಮಾಡು, ಇಲ್ಲಾ ಬಿಡು, ಎಂದು ಆಜ್ಞೆ ಮಾಡುವವರು ಒಬ್ಬರು

(ಶ್ರೀ ಎಚ್. ಎಸ್. ಸಿದ್ದಪ್ಪ)

ಅಧಿಕಾರಿಗಳು ಇದ್ದಾರೆಯೇ ? ಬರೀ ಪುಟ್ ಅಪ್, ಬ್ರಿಂಗ್ ಅಪ್, ಡಿಸ್ಕಸ್ ಎಂಧರೆ ಏತಕ್ಕೆ ಇದು ? ಈ ರೀತಿಯಾಗಿ ತಿಂಗಳಗಟ್ಟಲೆ ಕಾಗದ ಪತ್ರಗಳು ಸುತ್ತುತ್ತಾ ಇರುತ್ತವೆ. ಇದು ಸರಿಯಲ್ಲ. ಆಯಾ ಇಲಾಖೆಗೆ ನೇಮಿಸತಕ್ಕ ಅಧಿಕಾರಿಗಳಿಗೆ ಆ ಇಲಾಖೆಯಲ್ಲಿ ಸಾಕಷ್ಟು ಮಾಹಿತಿ ಇರಬೇಕು. ಮಾಹಿತಿ ಇಲ್ಲದ ಅಧಿಕಾರಿಗಳನ್ನು ನೇಮಿಸತಕ್ಕ ಪ್ರಯತ್ನ ಮಾಡಬೇಡಿ. ಇಲ್ಲದೆ ಹೋದರೆ ಮಾಹಿತಿಯನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕ ವ್ಯವಸ್ಥೆಯನ್ನು ಆಡಳಿತದಲ್ಲಿ ತರಬೇಕು.

ಅಧ್ಯಕ್ಷರು ಕೊಟ್ಟಿರತಕ್ಕ ಅವಧಿಯ ಮಿತಿಯನ್ನು ಮೀರುವುದಕ್ಕೆ ನನಗೆ ಇಚ್ಛೆ ಇಲ್ಲದೆ ಹೋದರೂ ಸರ್ಕಾರದ ಗಮನವನ್ನು ಪ್ರಮುಖವಾದ ವಿಷಯದ ಬಗ್ಗೆ ಸೆಳೆಯಬೇಕೆಂಬ ಉದ್ದಿಶ್ಯದಿಂದ ಸಮಯ ಯಾಚನೆ ಮಾಡುತ್ತೇನೆ. ಅವಕಾಶ ಕೊಡದೆ ಹೋದರೆ ಕೂತುಕೊಳ್ಳುತ್ತೇನೆ. ಸಹಕಾರದ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಸಹಕಾರ ಇಲಾಖೆ ಏನಾಗಿದೆ ? ಸಾರೋದ್ಧಾರವಾಗಿ ಅದು ಮುಳುಗುವುದು ಬೇಡ. ಬಹುಶೇಕ ನಮ್ಮ ಸರ್ಕಾರದಲ್ಲಿ ಇರುವ ಇಲಾಖೆಗಳಲ್ಲಿ ಮಹಾಪಾಪದ ಇಲಾಖೆ ಎಂದರೆ ಸಹಕಾರ ಇಲಾಖೆ. ಕಳೆದ 25 ವರ್ಷಗಳಲ್ಲಿ ನಾನು ಸಹಕಾರ ಸಂಘಗಳಲ್ಲಿ ಸೇವೆ ಮಾಡಿದ್ದೇನೆ. ನಾನು ನಿಮಗೆ ಹೇಳುತ್ತೇನೆ. ನಿಮ್ಮ ಯೋಜನೆ ಏನು ಇದೆ ಈ ಸಹಕಾರ ಯೋಜನೆ ಬಗ್ಗೆ ಏನು ಕಳಕಳಿ ಇದೆ ಅದನ್ನು ಸ್ವಾಗತಿಸುತ್ತೇನೆ. ಆದರೆ ಭೂ ಅಭಿವೃದ್ಧಿ ಬ್ಯಾಂಕ್ ಕೆಲಸಮಾಡುತ್ತಾ ಇದೆ. ಅದು ಎಪೆಕ್ಸ್ ಇನ್‌ಸ್ಟಿಟ್ಯೂಷನ್, ಸಾಕಷ್ಟು ಸೇವೆ ಸಲ್ಲಿಸುತ್ತಾ ಇದೆ. ಅದಕ್ಕೆ ಒಬ್ಬ ಐ.ಎ.ಎಸ್, ಆಫೀಸರನ್ನು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಹಾಕುತ್ತೀರಿ. ಇದರಲ್ಲಿ ಏನು ಅರ್ಥ ಇದೆ ? ಅವರಿಗೆ ಏನು ಗೊತ್ತಿರುತ್ತದೆ ? ಸಹಕಾರ ಸಂಘಗಳಲ್ಲಿ ಒಬ್ಬ ಗುಮಾಸ್ತನನ್ನು ನೇಮಿಸಿಕೊಳ್ಳುವುದಕೆ ಜಿ.ಡಿ.ಸಿ. ಟ್ರೈನಿಂಗ್ ಆಗಬೇಕೆಂದು ನಿಬಂಧನೆಯನ್ನು ಮಾಡುತ್ತೀರಿ ? ಆದರೆ ಯಾವ ಅನುಭವ ಇಲ್ಲದೆ ಇರುವವರು ಐ.ಎ.ಎಸ್. ಆಫೀಸರನ್ನು ಅಲ್ಲಿ ಹಾಕುತ್ತೀರಿ. ಇವೊತ್ತು ನಿಮ್ಮ ಇಲಾಖೆ, ಕೈವಾಡ ಈ ಸಹಕಾರ ಸಂಘಗಳಲ್ಲಿ ಕಡಿಮೆಯಾಗಿಬೇಕು. ಇದು ಸಾರ್ವಜನಿಕ ಕ್ಷೇತ್ರ. ಇದರಲ್ಲಿ ನಿಮ್ಮ ಇಲಾಖೆ ಅಧಿಕಾರಿಗಳ ಕೈವಾಡ ಕಡಿಮೆಯಾಗಬೇಕು, ಸಹಕಾರದ ತತ್ವ ಬೆಳೆಯಬೇಕು, ಅದರಿಂದ ಜನತೆಗೆ ಪ್ರಯೋಜನವಾಗಬೇಕು ಎಂದರೆ ಅಧಿಕಾರಿಗಳ ಹಸ್ತಕ್ಷೇಪ ಕಡಿಮೆ ಮಾಡುವುದಕ್ಕೆ ಯೋಚನೆ ಮಾಡಬೇಕು ಎಂದು ಕಳಕಳಿಯಿಂದ ಮನವಿಮಾಡುತ್ತೇನೆ.

ಇವೊತ್ತು ಈ ಬಗ್ಗೆ ನೀವು ಗಮನ ಹರಿಸುವುದಾದರೆ ಸನ್ಮಾನ್ಯ ಅಧ್ಯಕ್ಷರೇ ಈ ಸರ್ಕಾರವನ್ನು ನಾನು ನನ್ನ ಭಾಷಣ ಮುಕ್ತಾಯ ಮಾಡತಕ್ಕಹಂತದಲ್ಲಿ ಒಂದು ಸಲಹೆಯನ್ನು ಅವರಿಗೆ ಹೇಳುತ್ತೇನೆ. "ಕಮಲಕ್ಕೆ ಸೂರ್ಯನದೇ ಚಿಂತೆ, ಚಕ್ರವಾಕಕ್ಕೆ ಚಂದ್ರಮ್ಮನ ಚಿಂತೆ, ನಮಗೆ ಸದಾ ಕನ್ನಡ ಜನತೆಯ ಚಿಂತೆ, ಆದರೆ ನಿಮಗೆ ಅಧಿಕಾರ ಚಿಂತೆ, ಇಂತಪ್ಪ ಸನ್ನಿವೇಶದಲ್ಲಿ ಬಡ ಜನರ ಚಿಂತೆ ನಿಮಗೆಲ್ಲಪ್ಪಾ". ಹೀಗೆ ಸಮಾಜವಾದದ ಆರ್ಥಿಕ ನೀತಿ ಎನ್ನತಕ್ಕದ್ದು ಇದೆ. ಅದನ್ನು ಯಶಸ್ವಿಯಾಗಿ ಅಳಿಸಬೇಕು ಆ ಬಗ್ಗೆ ಶ್ರಮಿಸಬೇಕು. ನಿಮ್ಮ ಅಧಿಕಾರಿಗಳು ನಿದ್ರೆ ಮಾಡುವುದನ್ನು ತಪ್ಪಿಸಿ ಅವರು ನಿಮ್ಮ ಯೋಜನೆ ಎಷ್ಟು ಗುರುತರವಾಗಿದೆ, ನಾಗಾಲೋಟದಲ್ಲಿ ಓಡುತ್ತಿದೆ ಅದನ್ನು ಊರ್ಜಿತ ಮಾಡುವುದಕ್ಕೆ ಅಧಿಕಾರಿಗಳನ್ನು ತರಪೇತಿ ಮಾಡಿ ನಿಮ್ಮ ಯೋಜನೆ ಕೈಗೂಡುವುದಕ್ಕೆ ಗಮನವನ್ನು ಹರಿಸಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎ. ಜಿ. ಕೊಡಗಿ (ಬೈಂದೂರು).—ಸಭಾಧ್ಯಕ್ಷರೇ, ಅರ್ಥಸಚಿವರು ಮಂಡಿಸಿದಂತ 1973–74ನೇ ಸಾಲಿನ ಆಯವ್ಯಯ ಪತ್ರವನ್ನು ಸಂಪೂರ್ಣವಾಗಿ ಮತ್ತು ಮನಃಪೂರ್ವಕವಾಗಿ ಅನುಮೋದಿಸುತ್ತಾ ಕೆಲವೊಂದು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಪಕ್ಷಪಾತವಿಲ್ಲದೆ ನಮ್ಮ ಸಚಿವರನ್ನು ನಾವು ಅಭಿನಂದಿಸಬೇಕಾಗುತ್ತದೆ. ಬಹಳ ಚಾಣಾಕ್ಷತನದಿಂದ ಆಯವ್ಯಯ ಮಂಡಿಸಿದ್ದಾರೆ. ಕಳೆದ ಒಂದು ದಿವಸದಿಂದ ಕೂಡ ಬುಡ ಆಧಾರವಿಲ್ಲದೆ ವಿರೋಧಪಕ್ಷದವರು ಮಾತನಾಡಿದ್ದನ್ನು ಕೇಳುತ್ತಾ ಇದ್ದೆನು, ಅವರು ಕೂಡ ಒಪ್ಪುತ್ತಾರೆಂದು ಭಾವಿಸುತ್ತೇನೆ. ಅವರಿಗೂ ಕೂಡ ಟೀಕೆಮಾಡಲಿಕ್ಕೆ ಸಾಕಷ್ಟು ಆಹಾರ ದೊರಕಲಿಲ್ಲ ಎಂದು ನನ್ನ ಭಾವನೆ. ಟೀಕೆಗಾಗಿ ಕೆಲವೊಮ್ಮೆ ಟೀಕಿಸುವ ಮನೋವೃತ್ತಿ ಅವರಿಗೆ ಇದೆ. ಈ ದೃಷ್ಟಿಯಿಂದ ಕೆಲವು ವಿಚಾರಗಳನ್ನು ಟೀಕಿಸುವ ಧೈರ್ಯವನ್ನು ಅವರು ಮಾಡಿರಬಹುದೇ ವಿನಃ ಆಯವ್ಯಯ ಪತ್ರದಲ್ಲಿ ಟೀಕಿಸಲಿಕ್ಕೆ ಸಾಕಷ್ಟು ಅವಕಾಶ ದೊರಕಲಿಲ್ಲ ಎನ್ನುವುದನ್ನು ನಾವು ಒಪ್ಪಲೇಬೇಕಾಗುತ್ತದೆ. ಶ್ರೀಮಾನ್ ತಿಮ್ಮಪ್ಪನವರು ಮಾತನಾಡುತ್ತಾ ಕೆಲವು ವಿಚಾರಗಳನ್ನು

ಹೇಳಿದರು. ಈ ಜನತೆಗೆ ಈ ಒಂದು ವರ್ಷದ ಈ ಆಯವ್ಯಯ ಪತ್ರವನ್ನು ಕಂಡು ಬಹಳ ಆಸಕ್ತಿಯಿಂದ ತಮ್ಮ ಮುಂದಿನ ಜೀವನದ ಯೋಜನೆ ಯಾವ ರೀತಿಯಲ್ಲಿ ಸಾಗವು ಆದೀತು ಎಂದು ಬಹಳ ಆತುರ ತೋರಿಸುತ್ತಿದ್ದಾರೆ. ಇದರಲ್ಲಿ ಅವರಿಗೆ ಸಾಕಷ್ಟು ಅವಕಾಶ ದೊರಕಲಿಲ್ಲ ಎನ್ನುವುದನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಘೋಷಣೆಯಲ್ಲೂ ಕೂಡ ಅಸಮಾನತೆ ಹೋಗಬೇಕು, ಉಳುವವನೇ ಹೊಲದ ಒಡೆಯ ಆಗಬೇಕು, ಎನ್ನುವುದು. ಉದ್ಯೋಗಾವಕಾಶದ ದಿಶೆಯಲ್ಲಿ ಕಾರ್ಯೋನ್ಮುಖರಾಗಿಲ್ಲವೆಂದು ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಆದರೆ ನಾನು ಬಹುಶಃ ಒಂದು ವಿಚಾರವನ್ನು ಹೇಳಿದರೆ ಉತ್ಪ್ರೇಕ್ಷೆ ಎಂದು ಭಾವಿಸುವುದಿಲ್ಲವೆಂದು ಭಾವಿಸಿದ್ದೇನೆ. ಅಸಮಾನತೆ ನೀಗಿಸಲಿಕ್ಕೆ ಯೋಗ್ಯ ಮಾರ್ಗದರ್ಶನವನ್ನು ಈಗಾಗಲೇ ಮಾಡಿದ್ದಾರೆ. ಆ ದಿಶೆಯಲ್ಲಿ ಕಾರ್ಯೋನ್ಮುಖರಾಗಿದ್ದಾರೆಂದು ಒಪ್ಪುತ್ತಾರೆ ಎಂದು ತಿಳಿದಿದ್ದೇನೆ. ಭೂಮಿತಿ ಚರ್ಚೆಯಾಗಿರುವುದು, ಇನ್ನು ನಗರಗಳ ಆಸ್ತಿ ಮಿತಿ ಜಾರಿಗೆ ಬಂದಾಗ ಅಸಮಾನತೆ ಹೋಗಲಾಡಿಸುವುದಕ್ಕೆ ಹೆಜ್ಜೆ ಇಟ್ಟಿದ್ದಾರೆ. ಉಳುವವನೇ ಭೂಮಿ ಒಡೆಯ ಎನ್ನುವುದಕ್ಕೆ ಭೂ ಮಸೂದೆ ಜಾರಿಗೆ ಬಂದಾಗ ಉಳುವವನಿಗೆ ಖಂಡಿತ ನೆಲ ಸಿಕ್ಕುತ್ತದೆ. ಅಸಮಾನತೆ ಹೋಗಲಾಡಿಸುವುದಕ್ಕೆ ಮಾರ್ಗವಾಗುತ್ತದೆ ಎಂದು ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ಕೆಲವೊಂದು ವಿಚಾರ ಹೇಳಬೇಕಾಗುತ್ತದೆ. ತಿಮ್ಮಪ್ಪನವರು ಹೇಳಿದ್ದನ್ನು ವಿರೋಧಪಕ್ಷದವರು ಹೇಳುತ್ತಾರೆ. ಆ ವಿಚಾರವನ್ನು ನಾವು ಒಪ್ಪಲಿಕ್ಕೆ ಬೇಕಾಗುತ್ತದೆ ಅಸಮಾನತೆ ಹೋಗಲಾಡಿಸುವ ವಿಚಾರದಲ್ಲಿ ಉತ್ಪನ್ನದ ಮೇಲೆ ಮಿತಿಯನ್ನು ಹೇರಬೇಕಾಗುತ್ತದೆ. ಭೂಮಿತಿ ಮತ್ತು ನಗರದ ಆಸ್ತಿಮಿತಿಯಿಂದಲೇ ಅಸಮಾನತೆ ಹೋಗಲಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಉತ್ಪನ್ನದ ಮೇಲೆ ಮಿತಿಯನ್ನು ಹೇರಬೇಕಾಗುತ್ತದೆ. ಕನಿಷ್ಟ ಮಿತಿಯನ್ನು ಹೇರಬೇಕಾಗುತ್ತದೆ. ಈ ದಿಶೆಯಲ್ಲಿ ಸೂಕ್ತ ಕಾರ್ಯಕ್ರಮವನ್ನು ನಿರೂಪಿಸಿಕೊಳ್ಳಬೇಕಾಗುತ್ತದೆಂದು ಒಪ್ಪುತ್ತೇನೆ. ಕನಿಷ್ಠ ಸೌಕರ್ಯಗಳು ಈ ವಿಚಾರದಲ್ಲಿ ಮಾತನಾಡುವಾಗ ನಾವು ಸಾಕಾದಷ್ಟು ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆಂದು ಮುಂಗಡ ಪತ್ರವನ್ನು ಅಭ್ಯಾಸ ಮಾಡಿದಲ್ಲಿ ಅವರು ಒಪ್ಪಿಕೊಳ್ಳುತ್ತಾರೆ. ಕನಿಷ್ಠ ಸೌಕರ್ಯಗಳು ಯಾವುದು ಮುಖ್ಯವಾದುವು ಅನ್ನ, ಬಟ್ಟೆ, ವಿದ್ಯೆ ಮತ್ತು ವೈದ್ಯಕೀಯ ಸವಲತ್ತು ಇವೆಲ್ಲವೂ ಮನುಷ್ಯನಿಗೆ ಕನಿಷ್ಠ ದೊರಕಬೇಕು. ಈ ಕಾರ್ಯಕ್ರಮವನ್ನು ನಾವೆಲ್ಲರೂ ಒಪ್ಪಿಕೊಳ್ಳುವ ವಿಚಾರ. ಇದರಲ್ಲಿ ಆಹಾರದ ವಿಚಾರ ಹೆಚ್ಚಿಗೆ ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ. ಸಂದರ್ಭಬಂದಾಗ ಕೆಲವೊಂದು ವಿಚಾರ ಮಾತನಾಡುತ್ತೇನೆ

ವಸತಿ ಸೌಕರ್ಯ ಬಗ್ಗೆ ಮಿತ್ರರು ಮಾತನಾಡಿದ್ದಾರೆ. ಮಾತನಾಡುವಾಗ 5 ಕೋಟಿ ರೂಪಾಯಿ ಮೀಸಲಾಗಿಟ್ಟಿದ್ದೆ, ಗೃಹನಿರ್ಮಾಣಕ್ಕೆ ಏನು ಒದಗಿಸಿದೆ ಅದರ ವಿಚಾರವಾಗಿ ಅಸಮಾನವನ್ನು ವ್ಯಕ್ತಪಡಿಸಿದ್ದಾರೆ. ಸಿದ್ದಪ್ಪನವರು ಅದಕ್ಕೆ ಕಾರಣ ಕಾಣುತ್ತಾ ಇಲ್ಲ, 5 ಕೋಟಿ ರೂಪಾಯಿ ಯೋಜನೆ ಪ್ರಥಮ ಹಂತವಾಗಿ ಸರ್ಕಾರ ತೆಗೆದುಕೊಂಡಿದೆಯೇ ಹೊರತು 5 ಕೋಟಿ ರೂಪಾಯಿನಲ್ಲಿ ರಾಜ್ಯದ ಎಲ್ಲಾ ಸೌಕರ್ಯ ನಿರ್ಮಾಣ ಮಾಡುತ್ತೇವೆಂದು ವ್ಯಕ್ತಪಡಿಸಲಿಲ್ಲ. ಇರುವ ನಮ್ಮ ಸಂಪನ್ಮೂಲಗಳಲ್ಲಿ 5 ಕೋಟಿ ರೂಪಾಯಿ ಬಂಡವಾಳವನ್ನು ವಸತಿ ನಿರ್ಮಾಣ ಕಾರ್ಯಕ್ಕಾಗಿ ತೆಗೆದು ಇಟ್ಟಿದ್ದಾರೆ. ಎಲ್ಲರೂ ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ವೈದ್ಯಕೀಯ ಸೌಲತ್ತು ವಿಚಾರವಾಗಿ ಕೆಲವೊಂದು ವಿಚಾರ ನನ್ನ ಸ್ನೇಹಿತರು ಮಾತನಾಡಿದರು ಅಲ್ಲೂ ಕೂಡ ಅಸಮಾನತೆ ಕಾಣುತ್ತಾ ಇದೆ. ರಾಜ್ಯರಾಜ್ಯದಲ್ಲಿನ ಅಸಮಾನತೆಯನ್ನು ಹೋಗಲಾಡಿಸಲಿಕ್ಕೆ ಸೂಕ್ತಕ್ರಮ ಕೈಗೊಳ್ಳಬೇಕಾಗುತ್ತದೆ. ರಾಜ್ಯರಾಜ್ಯದಲ್ಲಿ ತಾಲ್ಲೋಕುಮಟ್ಟದಲ್ಲಿ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ರಾಜ್ಯಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ವೈದ್ಯಕೀಯ ವಿಚಾರ ಯೋಚಿಸುವುದಾದರೆ ಸಂಪನ್ಮೂಲಗಳು ಏನು ಇವೆ ವೈದ್ಯಕೀಯ ಸವಲತ್ತುಗಳನ್ನು ಉಪಯೋಗಿಸುವುದು ಕೇವಲ ನಗರದಲ್ಲಿ. ಹಳ್ಳಿಗಳಲ್ಲಿ ಅದರಲ್ಲೂ ಮಲೆನಾಡು ಪ್ರದೇಶಗಳಲ್ಲಿ. ಹೆಚ್ಚಿಗೆ ಅಭಿವೃದ್ಧಿಯಾಗುತ್ತಾ ಇಲ್ಲ ಸರ್ಕಾರದ ಧೋರಣೆ ಹಳ್ಳಿಗಳಲ್ಲಿ ಏನಾದರೂ ಆಸ್ಪತ್ರೆ ಪ್ರಾರಂಭಿಸಬೇಕಾದರೆ ಅಲ್ಲಿ ಒಂದು 15 ಸಾವಿರ ಜನಸಂಖ್ಯೆ ಇರಬೇಕು ಎನ್ನುವ ಒಂದು ಧೋರಣೆ ಇದೆ. ಮಲೆನಾಡು ಹಳ್ಳಿಗಳಲ್ಲಿ ನೋಡಲಿಕ್ಕೆ ಕೂಡ 4–6 ಹಳ್ಳಿಗಳನ್ನು ಒಟ್ಟು ಮಾಡಿದರೆ 15 ಸಾವಿರ ಜನಸಂಖ್ಯೆ ಆಗುವುದು ಅಸಾಧ್ಯ. 5–6 ಮೈಲಿ ಅಂತರ ಇರುವಾಗ ಮಲೆನಾಡು ಪ್ರದೇಶಗಳಿಗೆ ವೈದ್ಯಕೀಯ ಸವಲತ್ತು ಒದಗಿಸುವುದು ಸರ್ಕಾರದ ಕರ್ತವ್ಯ ಜನಸಂಖ್ಯೆಯ ರೂಲು ಏನು ಇದೆ ಅದನ್ನು ತೆಗೆದು ಹಾಕಬೇಕಾಗುತ್ತದೆ. ಪ್ರತಿ ಗ್ರಾಮಪಂಚಾಯಿತಿಗೆ ಕೂಡ ವೈದ್ಯಕೀಯ ಸೌಲತ್ತು ಒದಗಿಸುವ ಅತ್ಯವಶ್ಯಕವಾಗಿದೆ ಎಂದು ಭಾವಿಸುತ್ತೇನೆ.

ವಸತಿ ಗೃಹನಿರ್ಮಾಣ ಕಾರ್ಯದಲ್ಲಿ ಮಲೆನಾಡು ಪ್ರದೇಶಕ್ಕೆ ಹೆಚ್ಚಿನ ಸೌಕರ್ಯ ದೊರಕಲಿಕ್ಕೆ ತೊಂದರೆಯಾಗಿದೆ. ಅಲ್ಲಿ ಬೆಟ್ಟಕಾಡುಗಳು ಗುಂಪುಗುಂಪಾಗಿ ಇರುವುದರಿಂದ ವಸತಿ

(ಶ್ರೀ ಎ. ಜಿ. ಕೊಡಗಿ)

ನಿವೇಶನ ಕಟ್ಟುವುದಕ್ಕೆ ಸ್ವಲ್ಪ ಅನಾನುಕೂಲವಿದೆ. ಆದರೆ ಹಳ್ಳಿಗಾಡಿನ ಅದರಲ್ಲೂ ಮರೆನಾಡು ಪ್ರದೇಶಗಳಲ್ಲಿ ಎಲ್ಲಿ ವಾಸಮಾಡುತ್ತಾರೆ. ಎಲ್ಲಿ ಕೆಲಸಕಾರ್ಯಗಳು ಜರುಗುತ್ತವೆ. ಅಲ್ಲಿ ಸ್ಥಳಗಳನ್ನು ಕೊಡಬೇಕಾಗುತ್ತದೆ. 8-10 ಮೈಲಿ ಮಧ್ಯೆ ಹಳ್ಳಿಗಾಡಿನ ಪ್ರದೇಶದಲ್ಲಿ ಕೇಂದ್ರವನ್ನು ಮಾಡಿ ವಸತಿ ಸೌಕರ್ಯ ಏರ್ಪಾಡುಮಾಡಿಕೊಟ್ಟು ಗೃಹನಿರ್ಮಾಣ ಮಾಡಿದರೂ ಅದರಿಂದ ಅನೇಕರಿಗೆ ಉಪಯೋಗ ದೊರಕುತ್ತಾ ಇಲ್ಲ. ಯಾವುದೋ ಮೂಲೆಯಲ್ಲಿ ಮನೆ ಮಾಡಿಕೊಂಡಿದ್ದರೆ ಅವನಿಗೆ ಉಪಯೋಗವಾಗುವುದಿಲ್ಲ. ಆದ್ದರಿಂದ ಆತನು ಎಲ್ಲಿ ವಾಸ ಮಾಡುತ್ತಿದ್ದಾನೆಯೋ ಅಲ್ಲಿ ಅವನಿಗೆ ವಸತಿಗೆ ಅವಕಾಶಮಾಡಿಕೊಟ್ಟು, ಗೃಹ ನಿರ್ಮಿಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

5-00 P.M.

ಬರಗಾಲ ನಮ್ಮ ರಾಜ್ಯದಲ್ಲಿ ಬಂದಿದೆ. ರಾಜ್ಯದ ಸಂಪನ್ಮೂಲಗಳಲ್ಲಿ ಹೆಚ್ಚಿನ ಅಂಶ ಬರಗಾಲ ಪೀಡಿತ ಪ್ರದೇಶಗಳಿಗೆ ಒಯ್ಯುವಂಥ ಸನ್ನಿವೇಶ ಬಂದಿದೆ. ಅದಕ್ಕೆ ನಾನು ಆಕ್ಷೇಪಣೆ ಮಾಡುವುದಿಲ್ಲ. ಕಳೆದ 25 ವರ್ಷಗಳಿಂದ ಬರಗಾಲದ ಪರಿಹಾರಕ್ಕೆ ಶಾಶ್ವತವಾದ ಯಾವ ಕ್ರಮವನ್ನೂ ಕೈಗೊಂಡಿಲ್ಲ. ತಾತ್ಕಾಲಿಕವಾಗಿ ಅಲ್ಲಲ್ಲಿ ರಸ್ತೆಗಳನ್ನು ನಿರ್ಮಿಸಿ ಕೇವಲ ಉದ್ಯೋಗಾವಕಾಶವನ್ನು ಒದಗಿಸಿಕೊಟ್ಟರು. ಆದರೆ ಬರಗಾಲವನ್ನು ತಡೆಗಟ್ಟಲಿಕ್ಕೆ ಶಾಶ್ವತವಾದ ಯಾವ ಪರಿಹಾರ ಕಾರ್ಯವನ್ನೂ ಕೈಗೊಳ್ಳದೆ ಇದ್ದುದರಿಂದ ಈ ಹೊತ್ತು ಈ ಕಷ್ಟವನ್ನು ಅನುಭವಿಸುತ್ತಿದ್ದೇವೆ. ಇನ್ನಾದರೂ ಕೂಡ ಶಾಶ್ವತವಾದ ಪರಿಹಾರ ಕಾರ್ಯವನ್ನು ಕೈಗೊಳ್ಳಲೇ ಬೇಕಾಗುತ್ತದೆ. ಆ ದಿಸೆಯಲ್ಲಿ ಸರ್ಕಾರ ಕಾರ್ಯೋನ್ಮುಖವಾಗಬೇಕು. ಸರ್ಕಾರ ಈಗ ದೊಡ್ಡ ದೊಡ್ಡ ನೀರಾವರಿ ಯೋಜನೆಗಳು, ಮಧ್ಯಮವರ್ಗದ ನೀರಾವರಿ ಯೋಜನೆಗಳು ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳುತ್ತಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳಬೇಕಾಗುತ್ತದೆ. ರಾಜ್ಯದ ಇತರ ಭಾಗಗಳನ್ನು ಕೂಡ ಈ ಸಂದರ್ಭದಲ್ಲಿ ಕಡೆಗಣಿಸುವುದಕ್ಕೆ ಸಾಧ್ಯವಿಲ್ಲ. ರಾಜ್ಯದ ಬೊಕ್ಕಸದಿಂದ 8 ಜಿಲ್ಲೆಗಳಿಗೆ ಸಾಕಷ್ಟು ಹಣವನ್ನು ಒದಗಿಸಿದ್ದಾರೆ. ಕಾಮ ಪರಿಹಾರನಿವಾರಣೆಗಾಗಿ ಖರ್ಚು ಮಾಡುವುದಕ್ಕೆ ನಾನು ಬಹಳ ಸಂತೋಷ ವ್ಯಕ್ತಪಡಿಸುತ್ತೇನೆ. ಇನ್ನೂ ಹಿಂದುಳಿದ ಪ್ರದೇಶಗಳಲ್ಲಿಯೂ ನಮ್ಮ ಸಂಪನ್ಮೂಲಗಳನ್ನು ತೊಡಗಿಸದೆ ಇದ್ದರೆ ಅಸಮತೆಯುಂಟಾಗಲಿಕ್ಕೆ ಸಾಧ್ಯವಾಗುತ್ತದೆ. ರಾಜ್ಯದಲ್ಲಿರುವ ಯಾವತ್ತೂ ಭಾಗ ಅಭಿವೃದ್ಧಿಯಾಗುವಂತೆ ಮಾಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಬರಗಾಲ ಪ್ರದೇಶದಲ್ಲಿ ಖರ್ಚು ಮಾಡುತ್ತಿರುವುದು ಕೇಂದ್ರದಿಂದ ನಿರೀಕ್ಷೆ ಮಾಡಿರುವ ಹಣ. ರಾಜ್ಯದ ಬೇರೆ ಭಾಗದಲ್ಲಿ ಏನು ಖರ್ಚಾಗಬೇಕು ಅದನ್ನು ಆ ಕಡೆ ಖರ್ಚು ಮಾಡುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ವೇಳೆ ಕೇಂದ್ರ ಸರ್ಕಾರದಿಂದ ನಿರೀಕ್ಷೆ ಮಾಡಿದಂಥ ಹಣ ಬರಲಿಲ್ಲವೆಂದರೂ ಖರ್ಚುಮಾಡಬೇಕಾದ ಹಣವನ್ನು ಖರ್ಚು ಮಾಡಲೇಬೇಕು ! ಅವಾಗ ಬೇರೆ ಭಾಗಕ್ಕೆ ಒದಗಿಸಿರುವ ಹಣವನ್ನು ತೆಗೆದುಹಾಕುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ನಾವು ಬರಗಾಲ ಪ್ರದೇಶದಲ್ಲಿ ಎಷ್ಟು ಹಣ ಖರ್ಚು ಮಾಡುತ್ತೇವೆ ಅದು ಕೇಂದ್ರದಿಂದ ಬರುವುದಿಲ್ಲವೆಂದು ಮಾನ್ಯ ಸದಸ್ಯರು ಏಕೆ ನಿರೀಕ್ಷಿಸಬೇಕು ! ನಾವು ಎಷ್ಟು ಖರ್ಚು ಮಾಡುತ್ತೇವೆ ಅಷ್ಟೂ ಕೇಂದ್ರದಿಂದ ಬರುತ್ತದೆ ಎನ್ನುವ ಬರವಸೆ ಸಂಪೂರ್ಣವಾಗಿ ಸರ್ಕಾರಕ್ಕೆ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಬಜೆಟ್ಟಿನಲ್ಲಿರುವ ಅನೇಕ ಕಾಮಗಾರಿಗಳನ್ನು ಬೇರೆ ಕಡೆ ತೆಗೆದುಕೊಳ್ಳದೆ ಹಾಗೆಯೇ ಕೈ ಬಿಟ್ಟಿದ್ದಾರೆ.

ಶ್ರೀ ಎ. ಜಿ. ಕೊಡ್ಗಿ.—ಅರ್ಥಮಂತ್ರಿಗಳು ಹೇಳಿದ ವಿವರಣೆ ಸಮರ್ಪಕವಾಗಿದ್ದರೂ ಕೂಡ ನಮಗೆ ಒಂದು ಆಧೈರ್ಯಕ್ಕೆ ಕಾರಣವಿದೆ. ಗ್ರಾಮಾಂತರ ರಸ್ತೆ ಯೋಜನೆಯನ್ನು ಇಡೀ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿಯೂ ಕೂಡ ಕೈಕೊಂಡಿದ್ದಾರೆ. ಇದು ಬಹಳ ಸ್ತುತ್ಯವಾದ ಕಾರ್ಯ. ಹಳ್ಳಿಗಾಡಿನಲ್ಲಿ ಅಥವಾ ನಮ್ಮ ನಮ್ಮ ಕ್ಷೇತ್ರಗಳಲ್ಲಿ ತಲೆ ಎತ್ತಿಕೊಂಡು ಹೋಗುವ ಪ್ರಸಂಗವಿದ್ದರೆ ಅದು ಗ್ರಾಮಾಂತರ ರಸ್ತೆ ಯೋಜನೆ. ಆದಕ್ಕೆ ಶ್ರೀಮಾನ್ ಚನ್ನಬಸಪ್ಪನವರನ್ನು ಎಷ್ಟೊಂದು ಹೊಗಳಿದರೂ ಸಾಲದು. ಆದರೆ ಈ ಮಧ್ಯದಲ್ಲಿ ಹಣದ ಅಡಚಣೆಯಿಂದ ಆ ಕೆಲಸ ನಿಂತು ಹೋಗಿದೆ

ಎಂದು ನಮ್ಮ ಗಮನಕ್ಕೆ ಬಂದಿದೆ. ಹಳ್ಳಿಗಾಡಿನ ರಸ್ತೆ ಯೋಜನೆ ಅನೇಕ ಕಡೆಗಳಲ್ಲಿ ತೆಗೆದುಕೊಳ್ಳಬೇಕು. ಸಂಕ, ಮೋರಿ ಮುಂತಾದ ಕಾರ್ಯಕ್ರಮಗಳು ನಿಲ್ಲುವಂಥ ಪ್ರಸಂಗ ಬಂದರೆ ಬಹಳಷ್ಟು ಗೊಂದಲವುಂಟಾಗಿ ಬೇರೆ ಬೇರೆ ಜಿಲ್ಲೆಯ ಜನತೆಗೆ ಅಸಂತೋಷ ಅಥವಾ ಅಸಂತೃಪ್ತಿ ಉಂಟಾದೀತು ಎನ್ನುವ ವಿಚಾರವನ್ನು ನಾನು ಅರ್ಥ ಮಂತ್ರಿಗಳ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಕೇವಲ ಕ್ಷಾಮ ಪ್ರದೇಶಗಳಲ್ಲಿ ಮಾತ್ರ ನೀರಾವರಿ ಯೋಜನೆಗಳನ್ನು ಕೈಕೊಂಡು ಇನ್ನಿತರ ಪ್ರದೇಶಗಳಲ್ಲಿ ಕೈ ಬಿಟ್ಟರೆ ಪರಿಣಾಮ ಅಷ್ಟು ಒಳ್ಳೆಯದಾಗುವುದಿಲ್ಲ. ಹಿಂದಿನ ಸರ್ಕಾರ ಏನು ತಪ್ಪು ಮಾಡಿತೋ ಅದನ್ನು ಸರಿಪಡಿಸುವ ಜವಾಬ್ದಾರಿಯನ್ನು ನಾವು ಹೊತ್ತಿದ್ದೇವೆ. ಕಳೆದ 25 ವರ್ಷಗಳಲ್ಲಿ ಈ ಯೋಜನೆಗಳನ್ನು ಕೈಬಿಟ್ಟದ್ದೇ ಈಗ ಬರಗಾಲ ಬರುವುದಕ್ಕೆ ಕಾರಣ. ಬರಗಾಲ ಬಂದಿರುವ ಕಡೆ ಎಲ್ಲ ನೀರಾವರಿ ಯೋಜನೆಗಳನ್ನೂ ತೆಗೆದುಕೊಳ್ಳಬೇಕಾದ್ದು ನಮ್ಮ ಕರ್ತವ್ಯ. ಅದೇ ವೇಳೆಗೆ ಇತರ ಪ್ರದೇಶಗಳಲ್ಲಿನ ನೀರಾವರಿ ಯೋಜನೆಗಳನ್ನು ಕೈಬಿಟ್ಟರೆ ರಾಜ್ಯದ ಭವಿಷ್ಯಕ್ಕೆ ಮುಂದೆ ಗಂಡಾಂತರಕಾರಿ ಪರಿಣಾಮ ಬೀರುಬಹುದು ಎಂದು ಹೇಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇಕಾದಷ್ಟು ನೀರಿನ ಅನುಕೂಲತೆಗಳಿವೆ, ನಿಮಗೆ ತೋಂದರೆ ಇಲ್ಲ. ಸಮೃದ್ಧವಾಗಿ ಬೆಳೆ ತೆಗೆದುಕೊಳ್ಳಬಹುದು ಎಂದು ಹೇಳುತ್ತಾರೆ. ನಮ್ಮ ಭಾಗದಲ್ಲಿ 120 ರಿಂದ 180 ಅಂಗುಲ ಮಳೆಯಾದರೂ, ಸಕಾಲದಲ್ಲಿ ಬಾರದ ಅಕಾಲದಲ್ಲಿ ಮಳೆ ಬಂದು ಬೆಳೆ ಹಾನಿಯಾದಂಥ ನೆರೆ ಹಾವಳಿ ತೊಂದರೆಯುಂಟು ಮಾಡಿದಂಥ ಸನ್ನಿವೇಶಗಳು ಹಲವಾರು ಇವೆ. ಪ್ರತಿ ವರ್ಷ ನಾವು ಇವನ್ನು ನೋಡುತ್ತಿದ್ದೇವೆ. ಅದನ್ನು ತಡೆಗಟ್ಟಲು ಒಂದು ಯೋಜನೆಯನ್ನು ಇದುವರೆಗೂ ತೆಗೆದುಕೊಂಡಿಲ್ಲ. ಶಾಶ್ವತವಾಗಿ ನೆರೆಹಾವಳಿಯನ್ನು ತಡೆಗಟ್ಟಲಿಕ್ಕೆ ಯೋಜನೆಯನು ಸರ್ಕಾರ ತೆಗೆದುಕೊಳ್ಳದೆ ಇದ್ದರೆ ನಮ್ಮ ಜಿಲ್ಲೆಯನ್ನು ಸಂಪೂರ್ಣವಾಗಿ ಕಡೆಗಣಿಸಿದಂತಾದೀತು ಎಂದು ನಾನು ಹೇಳುತ್ತೇನೆ. ನಮ್ಮ ಜಿಲ್ಲೆಯ ನದಿಗಳ ನೀರನ್ನು ಉಪಯೋಗಮಾಡಲಿಕ್ಕೆ ಯಾವ ಯೋಜನೆಗಳನ್ನು ತೆಗೆದುಕೊಂಡಿಲ್ಲ. ಎಲ್ಲ ನದಿಗಳ ನೀರನ್ನೂ ಉಪಯೋಗ ಪಡಿಸಿದರೆ ಲಕ್ಷಾಂತರ ಎಕರೆ ಭೂಮಿಯನ್ನು ಬತ್ತದ ಬೆಳೆ ಬೆಳೆಯಲಿಕ್ಕೆ ಮಾರ್ಪಡಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಇಡೀ ಮೈಸೂರು ರಾಜ್ಯದಲ್ಲಿ ಬೇಕಾದ ಆಹಾರದ ಉತ್ಪಾದನೆಯಲ್ಲಿ ಬಹುಭಾಗವನ್ನು ನಾವು ಬೆಳೆಯಲಿಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ ಮತ್ತು ಹೆಚ್ಚು ಆಹಾರ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃತಕ ಆಹಾರಾಭಾವ ನಿರ್ಮಾಣವಾಗಿದೆ. ಇದನ್ನು ಕೂಡ ಮುಂದೆಹೋಗಲಾಡಿಸುವುದಕ್ಕೆ ಅವಕಾಶವಾಗುತ್ತದೆ 89 ಸಣ್ಣ ನೀರಾವರಿ ಯೋಜನೆಗಳು ಸರ್ಕಾರದ ಮುಂದೆ ಇವೆ. ಯಾವ ಯೋಜನೆಗೂ ಸರ್ಕಾರದ ಮಂಜೂರಾತಿ ದೊರೆಯುತ್ತಿಲ್ಲ. ಇದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ನೀರಾವರಿ ಯೋಜನೆಗಳನ್ನೂ ತೆಗೆದುಕೊಳ್ಳಲು ಅಸಾಧ್ಯವಾದ ಪರಿಸ್ಥಿತಿ ನಿರ್ಮಾಣವಾಗಿದೆ. 10 ಸಾವಿರ, 20 ಸಾವಿರ 25 ಸಾವಿರ ಅಂದಾಜಿನ ಯೋಜನೆಗಳಿಗೆ ಕೂಡ ಸರ್ಕಾರದ ಮಂಜೂರಾತಿ ದೊರಕಬೇಕಾದ ಪರಿಸ್ಥಿತಿ ಇದೆ. ಬೇರೆ ಕಾಮಗಾರಿಗಳಲ್ಲಿ ಒಂದು ಲಕ್ಷ ರೂಪಾಯಿ ವರೆಗೂ ಸೂಪರಿಂಟೆಂಡಿಂಗ್ ಇಂಜನಿಯರ್ ಅವರಿಗೆ ಮಂಜೂರು ಮಾಡಲು ಅಧಿಕಾರ ಇದೆ. ಕೇವಲ ಐದು ಸಾವಿರ ರೂಪಾಯಿ ಅಂದಾಜಿನ ಹೊಸ ನೀರಾವರಿ ಯೋಜನೆ ಕೈಕೊಳ್ಳಬೇಕಾದರೂ ಸರಕಾರದ ಮುಂದೆ ಬಂದು ಅದಕ್ಕೆ ಮಂಜೂರಾತಿ ದೊರಕಬೇಕಾಗುತ್ತದೆ. ಇದರಿಂದ ಅನೇಕ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿಲ್ಲ.

ನಮ್ಮ ಜಿಲ್ಲೆಯಲ್ಲಿ ಒಂದು ಲಕ್ಷ ರೂಪಾಯಿ ವೆಚ್ಚದ ಹಾರಾಡಿ ಯೋಜನೆ ಮದ್ರಾಸ್ ಸರ್ಕಾರದಲ್ಲಿದ್ದಾಗಲೇ ಇನ್‌ವೆಸ್ಟಿಗೇಷನ್ ಆಗಿ, ಹಣ ಕೂಡ ಸಾಕಷ್ಟು ವೆಚ್ಚವಾಗಿದೆ. ಅದರ ವಿಚಾರವಾಗಿ ಕಳೆದ 25 ವರ್ಷಗಳಿಂದ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಅದೇ ರೀತಿ ಬಜೂರ್ ನೀರಾವರಿ ಯೋಜನೆಯನ್ನು ಕೂಡ ಕೈಬಿಟ್ಟಿದ್ದಾರೆ. ಇದಕ್ಕೆ ಕಾರಣ ಗೊತ್ತಾಗಿಲ್ಲ. ನೀರಾವರಿ ಯೋಜನೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ನೀರಿನ ಸದುಪಯೋಗ ಪಡೆಯುವುದಕ್ಕೆ ಅವಕಾಶವಿದೆ. ಕೆಲವು ನೀರಾವರಿ ಯೋಜನೆಗಳಿಗೆ ಮಂಜೂರಾತಿ ದೊರಕಬೇಕು ಮತ್ತು ಜಿಲ್ಲೆಯ ಜನರಲ್ಲಿ ಅಸಮಾಧಾನ ಆಗುವುದಕ್ಕೆ ಅವಕಾಶ ಕೊಡಬಾರದೆಂದು ಈ ಸಂಬಂಧದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಉದ್ಯೋಗಾವಕಾಶದ ವಿಚಾರವಾಗಿ ಕೇಂದ್ರ ಸರಕಾರದ ನೆರವು ನೂರು ಕೋಟಿ ರೂಪಾಯಿಗಳು ನಮ್ಮ ರಾಜ್ಯಕ್ಕೆ ಸಾಕಷ್ಟು ದೊರಕುತ್ತದೆ ಎಂಬ ಭರವಸೆ ಕೊಟ್ಟಿದ್ದಾರೆ. ಬಹಳ ಸಂತೋಷ. ಇಲ್ಲಿಯೂ ಕೂಡ ಒಂದು ಧೋರಣೆ ಕಣ್ಣಿಗೆ ಕಾಣುತ್ತಾ ಇದೆ. ಒಂದು ಲಕ್ಷದ 10 ಸಾವಿರ ರೂಪಾಯಿ ವೆಚ್ಚ ಮಾಡಿದಂತೆ ವೈದ್ಯಕೀಯ ವಿದ್ಯಾರ್ಥಿಗಳಿಗೆ 200 ರೂಪಾಯಿ, 400 ರೂಪಾಯಿ ಕೊಡುವಂಥ ಯೋಜನೆ ಸರಕಾರಕ್ಕೆ ಇದೆ. ಗ್ರಾಜುಯೇಟ್ಸ್, ನಾನ್ ಗ್ರಾಜುಯೇಟ್ಸ್ ಏನು ಇದ್ದಾರೆ, ಅವರಿಗೆ ಯಾವ ತರಹದ ಉದ್ಯೋಗಾವಕಾಶವೂ ಇಲ್ಲಿನವರೆಗೂ ನಿರ್ಮಾಣ

(ಶ್ರೀ ಎ. ಜಿ. ಕೊಡ್ಗಿ)

ಮಾಡಿಲ್ಲ. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುವಂತ ವೈದ್ಯಕೀಯ ಪದವೀಧರರಿಗೆ ಸ್ವಂತವಾಗಿ ಕೆಲಸ ಮಾಡಿ ಸಂಪಾದನೆ ಮಾಡುವ ಮಾರ್ಗಗಳು ಇವೆ. ಅವರಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಆದರೆ ಬಡ ವರ್ಗ ಮತ್ತು ಮಧ್ಯಮ ವರ್ಗದವರಿಗೆ ಅಂಥ ಉದ್ಯೋಗಾವಕಾಶ ಕಲ್ಪಿಸಿಕೊಡುವಂಥ ಯೋಜನೆ ಇಲ್ಲಿಯವರೆಗೆ ಹಾಕಲಿಲ್ಲ. ಶೀಘ್ರವಾದ ಯೋಜನೆಗಳನ್ನು ರೂಪಿಸಿಕೊಳ್ಳುವ ಅಗತ್ಯ ಇದೆ ಎಂದು ನಾನು ಭಾವಿಸುತ್ತೇನೆ.

ಇನ್ನು ವ್ಯವಸಾಯದ ವಿಚಾರವಾಗಿ ಮಾತನಾಡುತ್ತಾ ಕೆಲವು ವಿಚಾರಗಳನ್ನು ಮಾನ್ಯ ಸಿದ್ದಪ್ಪನವರು ಸಭೆಯ ಮುಂದೆ ಇಟ್ಟಿದ್ದಾರೆ. ನಾನು ಅವನ್ನು ಪುಷ್ಟೀಕರಿಸುತ್ತೇನೆ. ವ್ಯವಸಾಯ ಈಗ ಕಡೆಗಣಿಸಲ್ಪಟ್ಟ ಉದ್ಯೋಗವಾಗಿದೆ. ರೈತ ಯಾವಾಗಲೂ ದುಡಿಯುತ್ತಾನೆ. ಬೆಲೆ ಏರಿದಾಗ ಅವನಿಗೆ ಸ್ವಲ್ಪ ಲಾಭ ಸಿಕ್ಕುತ್ತದೆ. ಆದರೆ ಕೂಡಲೇ ಸರಕಾರದವರು ಮಧ್ಯೆ ಪ್ರವೇಶ ಮಾಡಿ ಬೆಲೆ ಕಡಿಮೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆ. ಭತ್ತದ ಧಾರಣೆ ಏರಿದಾಗ ಅದನ್ನು ಇಳಿಸುವ ಕ್ರಮ ತೆಗೆದುಕೊಳ್ಳುತ್ತಾರೆ. ಬೆಲೆ ಕಡಿಮೆ ಆದಾಗ ಮಾತ್ರ ಕೃಷಿಕರಿಗೆ ಹೆಚ್ಚಿನ ಸವಲತ್ತು ದೊರಕಿಸಿ ಕೊಡುವ ಪ್ರಯತ್ನ ಮಾಡುವುದಿಲ್ಲ. ಅಂಥ ಸಂದರ್ಭದಲ್ಲಿ ಅವನಿಗೆ ಹೆಚ್ಚಿನ ಸವಲತ್ತು ದೊರಕುವಂತೆ ಆಗಬೇಕು ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

[MADAM SPEAKER in the Chair]

ಇನ್ನು ಉದ್ದಿಮೆಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಆಡಬೇಕೆಂದು ನನ್ನ ಇಚ್ಛೆ. ಹೆಚ್ಚಿನ ಉದ್ದಿಮೆಗಳು ಆಗುವುದು ಪಟ್ಟಣಗಳಲ್ಲಿ ಮಾತ್ರ ಪಟ್ಟಣಗಳಲ್ಲೇ ಅವು ಕೇಂದ್ರೀಕೃತವಾಗುವ ಹವ್ಯಾಸ ಬೆಳೆದು ಬಂದಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಉದ್ದಿಮೆಗಳನ್ನು ಸ್ಥಾಪಿಸುವಂತ ಒಂದು ಪದ್ಧತಿ ಅಥವಾ ಒಂದು ಧೋರಣೆಯನ್ನು ಸರಕಾರದವರು ರೂಪಿಸಿಕೊಂಡಿದ್ದಾರೆ. ಇದರಿಂದ ಬಹಳಷ್ಟು ಹಾನಿ ಇದೆ. ಆದುದರಿಂದ ಹೊಸ ಉದ್ದಿಮೆಗಳನ್ನು ಸ್ಥಾಪಿಸುವಾಗ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸುವ ಕಾರ್ಯಕ್ರಮವನ್ನು ತೆಗೆದುಕೊಂಡು ಗ್ರಾಮಾಂತರ ಜನರಿಗೆ ಹೆಚ್ಚಿನ ಉದ್ಯೋಗಾವಕಾಶ ನೀಡಿ, ಜನತೆಗೆ ವ್ಯಕ್ತಿ ವ್ಯಕ್ತಿಗಳಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವುದು ಮಾತ್ರವಲ್ಲ ಜಿಲ್ಲೆ ಜಿಲ್ಲೆ, ತಾಲ್ಲೂಕು ತಾಲ್ಲೂಕು, ಹಳ್ಳಿ ಹಳ್ಳಿಗಳಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಿ ಎಲ್ಲರಿಗೂ ಉದ್ಯೋಗಗಳು ಸಿಕ್ಕುವುದಕ್ಕೆ ಅವಕಾಶಮಾಡಿಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಸೂಚನೆಯನ್ನು ನಾನು ಪುಷ್ಟೀಕರಿಸುತ್ತೇನೆ. ಪ್ರತಿ ತಾಲ್ಲೂಕಿನಲ್ಲಿ ಹೊಸ ಉದ್ಯಮವನ್ನು ಸ್ಥಾಪಿಸಿ ಉದ್ಯೋಗಾವಕಾಶವನ್ನು ದೊರಕಿಸಿ ಕೊಡುವುದರ ಜೊತೆಗೆ ಸಂಪನ್ಮೂಲಗಳನ್ನು ಬೆಳೆಸುವುದಕ್ಕೆ ಅವಕಾಶಮಾಡಿಕೊಡಬೇಕು. ನನ್ನ ಜಿಲ್ಲೆಯ ವಿಚಾರ ಹೇಳುವುದಾದರೆ ಅದು ಹಿಂದುಳಿದಂಥ ಜಿಲ್ಲೆ. ನಮ್ಮ ಜಿಲ್ಲೆಯಲ್ಲಿ ಕಬ್ಬಿಣದ ಅದಿರು, ಅಲ್ಯೂಮಿನಿಯಂ, ಬಾಕ್ಸೈಟ್ ಅರಣ್ಯ ಸಂಪತ್ತು ಹೇರಳವಾಗಿದೆ. ಆದುದರಿಂದ ನಮ್ಮ ಜಿಲ್ಲೆಯಲ್ಲಿ ಉದ್ಯಮವನ್ನು ಸ್ಥಾಪಿಸುವುದಕ್ಕೆ ಬಹಳ ಅನುಕೂಲಗಳು ಇವೆ. ಮಂಗಳೂರು ಕೆಮಿಕಲ್ ಕಾರ್ಖಾನೆ ಸ್ಥಾಪನೆಯಾಗುತ್ತಾ ಇದೆ. ಅಲ್ಲಿ ದೊಡ್ಡ ದೊಡ್ಡ ಉದ್ದಿಮೆಗಳು ಇಲ್ಲ. ನಮ್ಮ ಜಿಲ್ಲೆ ಉದ್ದಿಮೆಗಳಲ್ಲಿ ಬಹಳ ಹಿಂದುಳಿದಂಥ ಪ್ರದೇಶವಾಗಿರುವುದರಿಂದ ಅಲ್ಲಿಗೆ ಹೆಚ್ಚಿನ ಗಮನವನ್ನು ಹರಿಸುವುದು ಒಳ್ಳೆಯದು ಎಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ನೂಲಿನ ಗಿರಣಿಯನ್ನು ನಮ್ಮ ಜಿಲ್ಲೆಯಲ್ಲಿ ಸ್ಥಾಪಿಸುವುದಕ್ಕೆ ಅವಕಾಶ ಇದೆ. ನೇಕಾರರ ಇದ್ದಾರೆ. ನೂಲಿನ ಉತ್ಪಾದನೆ ಕೇಂದ್ರದಿಂದ 5—6 ಗಿರಣಿಗಳನ್ನು ಸ್ಥಾಪಿಸುವ ಯೋಜನೆ ಸರಕಾರಕ್ಕೆ ಇದೆ ಎಂದು ನನ್ನ ಗಮನಕ್ಕೆ ಬಂದಿದೆ. ಒಂದು ಗಿರಣಿಯನ್ನು ಸ್ಥಾಪಿಸುವ ಉದ್ದೇಶ ಮುಂಗಡ ಪತ್ರದಲ್ಲಿ ಕಾಣುತ್ತಿದೆ. ನಮ್ಮ ಜಿಲ್ಲೆಯಲ್ಲಿ ಒಂದು ಗಿರಣಿಯನ್ನು ಸ್ಥಾಪಿಸುವ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚನೆ ಕೊಡುತ್ತೇನೆ.

ಇನ್ನು ಕುಟುಂಬ ವೇತನದ ವಿಚಾರ. 30 ರಿಂದ 40 ರೂಪಾಯಿಗಳವರೆಗೆ ಏರಿಸಿರುವುದು ಬಹಳ ಸಂತೋಷದ ವಿಚಾರ. ಇಂಟೆಗ್ರೇಷನ್ ಆಗುವ ಮೊದಲು ನಿವೃತ್ತ ಉಪಾಧ್ಯಾಯರಿಗೆ ಯಾವ ಸವಲತ್ತೂ ದೊರಕುತ್ತಾ ಇರಲಿಲ್ಲ. ಕೆಲವರಿಗೆ ಮಾತ್ರ ಈ ಸವಲತ್ತು ಇರುವುದರಿಂದ ಮಾನ್ಯ ವಿದ್ಯಾ ಮಂತ್ರಿಗಳು ಇದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಆದುದರಿಂದ ಉಳಿದವರಿಗೂ ಕೂಡ ಅದರ ಪ್ರಯೋಜನ ದೊರಕುವಂತಾಗಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶೇಕಡಾ 70 ಜನ ಹಳ್ಳಿಗಳಲ್ಲಿ ಇದ್ದುಕೊಂಡು ಬೇಸಾಯ ಮಾಡುವ ಮತ್ತು ಕೃಷಿ

ಕಾರರು ಇರುವಂಥ ಪ್ರದೇಶ ನಮ್ಮದು. ಅವರಿಗೂ ಕೂಡ ಆ ಸವಲತ್ತನ್ನು ಕೊಡಬೇಕೆಂದು ಹೇಳುತ್ತೇನೆ. ಈಗ ಇರುವ ಯೋಜನೆ ಪ್ರಕಾರ 70 ವರ್ಷದ ನಂತರ ವೇತನ ಕೊಡುವ ಯೋಜನೆ ಇದೆ. ಅದನ್ನು 65ಕ್ಕೆ ಇಳಿಸಿ ಅವರಿಗೂ ಸಹ ಈ ವೇತನವನ್ನು ಕೊಡುವ ಯೋಜನೆ ಮಾಡಬೇಕೆಂದು ಹೇಳುತ್ತೇನೆ. ಸರಕಾರಿ ನೌಕರರಿಗೆ 58—60 ವರ್ಷ ಆದಮೇಲೆ ಅವರಿಗೆ ನಿವೃತ್ತಿ ವೇತನ ಕೊಡುವ ಯೋಜನೆ ಇದೆ. ಅದೇ ತರಹ ಇನ್ನಿತರ ರಂಗದಲ್ಲಿ ಇರುವವರಿಗೂ ಆ ಪ್ರಯೋಜನವಾಗಬೇಕೆಂದು ಹೇಳುತ್ತೇನೆ.

ಇನ್ನು ಕುಡಿಯುವ ನೀರಿನ ವಿಚಾರವಾಗಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟಹಾಗೆ ಹೇಳಬೇಕಾಗಿದೆ. ಸರಕಾರದ ಯೋಜನೆಯಂತೆ ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಬಾವಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ಹಳ್ಳಿಯಲ್ಲಿ ಮನೆಗಳು ಒಂದು ಕಡೆ ಇಲ್ಲ. 2 ಅಥವಾ ಮೂರು ಮೈಲಿ ದೂರದಲ್ಲಿ ಇರುತ್ತವೆ. ಬಯಲು ಸೀಮೆಯಲ್ಲಿ ಇದ್ದಹಾಗೆ ಅಲ್ಲಿ ಮನೆಗಳು ಒಂದೇ ಗುಂಪಿನಲ್ಲಿ ಇಲ್ಲದೇ ಇರುವುದರಿಂದ ಅನೇಕ ಯೋಜನೆಗಳು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಅನ್ವಯಿಸದೇ ಹೋಗುತ್ತದೆ. ನಮ್ಮ ಜಿಲ್ಲೆಯಲ್ಲಿ ಒಂದು ಹಳ್ಳಿಯಲ್ಲಿ ನಾಲ್ಕಾರು ಮನೆಗಳು ಇರುವ ಪ್ರದೇಶ ಇದೆ. ಆದುದರಿಂದ ನಮ್ಮ ಜಿಲ್ಲೆಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಯೋಜನೆಯನ್ನು ಕಾರ್ಯಗತಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕೊನೆಯದಾಗಿ ತೆರಿಗೆ ವಿಚಾರವಾಗಿ ಮಾತನಾಡಿ ಮುಗಿಸುವುದಕ್ಕೆ ಇಚ್ಛೆಪಡುತ್ತೇನೆ. ಭತ್ತದ ಮೇಲಿನ ತೆರಿಗೆಯನ್ನು ರದ್ದುಪಡಿಸುವುದರಿಂದ ಅದರ ಧಾರಣೆ ಕಡಿಮೆಯಾಗಬಹುದು ಎಂಬ ಉದ್ದೇಶದಿಂದ ಮಾಡಿದ್ದಾರೆ ಬಹಳ ಸಂತೋಷ. ಅಕ್ಕಿಯ ಮೇಲಿನ ತೆರಿಗೆ ಹಾಗೆಯೇ ಇದೆ. ಅಕ್ಕಿಯ ಮೇಲಿನ ತೆರಿಗೆಯನ್ನು ಕೂಡ ತೆಗೆದರೆ ಆಹಾರಧಾನ್ಯದ ಬೆಲೆ ಕಡಿಮೆಯಾಗಬಹುದು ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಮೀನುಗಾರಿಕೆ ಅತಿ ದೊಡ್ಡದಾದ ಉದ್ದಿಮೆ. ವರ್ಷ ಒಂದಕ್ಕೆ 3 ಕೋಟಿ ವಿದೇಶಿ ವಿನಿಮಯಗಳಿಸುವ ಉದ್ದಿಮೆಯಾಗಿದೆ. ಸಿಗಡಿ ಮೀನಿಗೆ ಸಿಂಗಲ್ ಪಾಯಿಂಟ್ ಎಂದು 4 ಪರ್ಸೆಂಟ್ ತೆರಿಗೆಯನ್ನು ಹಾಕಿದ್ದಾರೆ. ಅದರಿಂದ ಈ ಉದ್ದಿಮೆಗೆ ಬಹಳಷ್ಟು ತಡೆ ಉಂಟಾಗುತ್ತದೆಂದು ನನ್ನ ಭಾವನೆ. ಸಿಗಡಿ ಆಹಾರ ವಸ್ತು, ಇದು ಪೆರಿಕ್ಷೆಬಲ್ ಆರ್ಟಿಕಲ್ ಇದನ್ನು ಮೀನಿನಂತೆ ಪರಿಗಣಿಸಬೇಕೆಂದು ಅರ್ಥ ಮಂತ್ರಿಗಳ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಯಾವುದಕ್ಕೂ ಸಾಧ್ಯವಾಗದೇ ಹೋದರೆ ಈ ಉದ್ದಿಮೆಗೆ ತಡೆ ಬರಬಹುದು. ನಮ್ಮ ಜಿಲ್ಲೆಯಲ್ಲಿ ಎಲ್ಲಾ ಉದಿಮೆದಾರರು ಸೇರಿ ಒಂದು ನಿರ್ಣಯ ಮಾಡಿ ಅದನ್ನು ಅರ್ಥ ಮಂತ್ರಿಗಳ ಗಮನಕ್ಕೆ ತರಬೇಕೆಂದಿದ್ದಾರೆ. ಅದುದರಿಂದ ಇದರ ಮೇಲಿರುವ ತೆರಿಗೆಯನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ. ಬರಗಾಲದ ಸನ್ನಿವೇಶದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಆಯವ್ಯಯ ಪಟ್ಟಿಯನ್ನು ಮಂಡಿಸುವುದು ಕಷ್ಟ. ವಿರೋಧಪಕ್ಷದವರು ಟೀಕೆ ಮಾಡುವುದಕ್ಕೆ ಅವಕಾಶ ಇಲ್ಲದಂತೆ ಮಂಡಿಸಿದ ಅರ್ಥ ಸಚಿವರನ್ನು ಮನಸಾರೆ ಶ್ಲಾಘಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ಘಾಡಿ (ಹಳಿಯಾಳ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇವೊತ್ತು ಅರ್ಥ ಮಂತ್ರಿಗಳು ಮಂಡಿಸಿದ 1973-74ನೇ ಸಾಲಿನ ಬಜೆಟನ್ನು ನಾನು ಹಾರ್ದಿಕವಾಗಿ ಸ್ವಾಗತಿಸುತ್ತೇನೆ. ಕೆಲವು ಸೂಚನೆಗಳನ್ನು ಕೊಡುವ ಮೊದಲು ವಿರೋಧ ಪಕ್ಷದ ಅದರಲ್ಲೂ ಕೌನ್ಸಿಲಿನ ವಿರೋಧ ಪಕ್ಷದ ನಾಯಕರು 10 ವರ್ಷದ ಪಾಪದ ಗಂಟಿನ ವಿಚಾರದಲ್ಲಿ ತಾವು ಅಧಿಕಾರಕ್ಕೆ ಬಂದಾಗ ಮತ್ತು ಅಧಿಕಾರವನ್ನು ಬಿಟ್ಟಾಗ ಅದರ ಅಂಕಿ ಅಂಶಗಳನ್ನು ವಾರ್ಷಿಕವಾಗಿ ಕೊಟ್ಟಿದ್ದು ಕಂಡುಬರುತ್ತದೆ. ಅವರು ಹೈಸ್ಕೂಲುಗಳ ಸಂಖ್ಯೆ ಎಷ್ಟಿತ್ತು, ಕಾಲೇಜುಗಳ ಸಂಖ್ಯೆ 400 ಇತ್ತು, ಕಾಲೇಜುಗಳ ಸಂಖ್ಯೆ 500 ಇತ್ತು, ಹಾಸ್ಟಲುಗಳು ಇಷ್ಟು ಇತ್ತು, ರಸ್ತೆಗಳು, ಬಾವಿಗಳು ವಗೈರೆ ವಗೈರೆ ಇತ್ಯಾದಿ ಕೆಲಸಗಳ ಬಗ್ಗೆ ಅಂಕೆ ಸಂಖ್ಯೆಗಳನ್ನು ಕೊಟ್ಟು ಮಾತನಾಡುವಾಗ ಇದರ ಎರಡರಷ್ಟು ಇಲ್ಲವೇ ಮೂರರಷ್ಟು ಹೆಚ್ಚಾಗಿತ್ತು ಎಂದು ಹೇಳಿದರು ಮತ್ತು ಇದರ ಬಗ್ಗೆ ಒಂದು ರೀತಿಯ ಶಹಬಾಸ್‌ಗಿರಿಯನ್ನೂ ಪಡೆದುಕೊಂಡರು. ಅವರು ಅಧಿಕಾರ ಮಾಡುವಾಗ ಆಗ ಇದ್ದ ಬಡವರ ಸಂಖ್ಯೆ ಎಷ್ಟು? ಎಷ್ಟು ಜನ ಶ್ರೀಮಂತರಿದ್ದರು ? ಎಷ್ಟು ಜನ ನಿರುದ್ಯೋಗಿಗಳಿದ್ದರು? ಎಷ್ಟು ಜನ ಬಡವರಿದ್ದರು ? ಎಷ್ಟು ಜನ ವಿರೋಧಿಗಳಿದ್ದರು ? ಎಷ್ಟು ಜನ ಕಂಟ್ರಾಕ್ಟರುಗಳಿದ್ದರು ? ಎಷ್ಟು ಜನ ಬ್ಲಾಕ್‌ಮಾರ್ಕೆಟೀಯರುಗಳಿದ್ದರು ? ಎಷ್ಟು ಜನ ಲೈಸನ್ಸ್ ಪಡೆದವರಿದ್ದರು ? ಎಷ್ಟು ಟಿ. ಬಿ. ಗಳು ಹಾಗೂ ಇನ್‌ಸ್ಪೆಕ್ಷನ್ ಬಂಗಲಾಗಳು ಆಗಿದ್ದವು?

(ಶ್ರೀ ವಿ. ಎಂ. ಘೂಡಿ)

ಎಷ್ಟು ಜನ ಕುಡುಕರ ಸಂಖ್ಯೆ ಇತ್ತು ? ಇವೆಲ್ಲ ವಿವರಗಳನ್ನೂ ಅವರು ಕೊಡಲಿಲ್ಲ. ಇವನ್ನು ಕೊಟ್ಟಿದ್ದರೆ ಇವರು ಮಾಡಿರುವ ಸಾಧನೆಗಳೇನು ಎನ್ನುವುದನ್ನು ವಿಚಾರ ಮಾಡಿ ಅದರ ಮೇಲೆ ಹೇಳಲಿಕ್ಕೆ ನಮಗೂ ಸಹಾಯವಾಗುತ್ತಿತ್ತು. ಪಾಪದ ಗಂಟು ಎಂದು ನಮ್ಮ ಮೇಜಿನ ಮೇಲೆ ಇಡುತ್ತಿದ್ದಾರೆ. ಒರೇ ಪಾಪದ ಗಂಟನ್ನು ನಮ್ಮ ಮುಖ್ಯ ಮಂತ್ರಿಗಳ ಮೇಜಿನ ಮೇಲೆ ಇಡುವುದಕ್ಕೆ ಬದಲು ನಿಮ್ಮ ಪಾಪದ ಗಂಟನ್ನೆಲ್ಲಾ ದೇವರ ಮುಂದೆ ಇಟ್ಟಿದ್ದರೆ ಅದಕ್ಕೆ ಸೂಕ್ತ ಪರಿಹಾರವನ್ನು ದೇವರು ಕೊಡುತ್ತಿದ್ದರು ಎಂದು ನಾನು ಹೇಳಬಯಸುತ್ತೇನೆ. ಬರಗಾಲದಲ್ಲಿ ಏನೂ ಮಾಡಲಿಲ್ಲ ಎನ್ನುವ ಶಂಕೆಯನ್ನು ಕೇಳುತ್ತಿದ್ದಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು, ನಮ್ಮ ಆರ್ಥಿಕ ಮಂತ್ರಿಗಳು ಹಾಗೂ ನಮ್ಮ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಪದೇಪದೇ ಹಾಗೂ ಮೇಲಿಂದ ಮೇಲೆ ಆಶ್ವಾಸನೆ ಕೊಟ್ಟಿದ್ದಾರೆ ಯಾವುದೇ ಪರಿಸ್ಥಿತಿ ಬಂದರೂಕೂಡ ಅದನ್ನು ಧೈರ್ಯದಿಂದ ಎದುರಿಸುತ್ತೇವೆ ಮತ್ತು ಇದಕ್ಕೆ ಎಷ್ಟು ಖರ್ಚು ಬಂದರೂ ಅದನ್ನು ಮಾಡಲು ಹೆದರುವುದಿಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಎಷ್ಟು ಹೇಳಿದ್ದರೂ ನಮ್ಮ ವಿರೋಧ ಪಕ್ಷದವರು ನಂಬುವುದಿಲ್ಲ. I cannot understand how this idea entered into their mind, ಹಿಂದೆ ಇಲ್ಲಿ. ಒಂದು ವರದಿಯ ಬಗ್ಗೆ ಶರಾವತಿ ಬೋರ್ಡಿನ ಬಗ್ಗೆ ತನಿಖೆ ಮಾಡಲಿಲ್ಲ ಎಂದು ಹೇಳಿದರು. ನಮ್ಮ ಮುಖ್ಯ ಮಂತ್ರಿಗಳು ಮಾಡಿರುವ ಪಾಪದಕೆಲಸಗಳೇನು ಎನ್ನುವುದನ್ನು ಅವರು ಹೇಳಲಿಲ್ಲ. 25 ವರ್ಷಗಳ ಹಿಂದೆ ಸರಕಾರದವರು ಬರಗಾಲ ಪ್ರದೇಶದಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಲಿಲ್ಲ ಎಂದು ಇವಕ್ಕೆ ಒಂದು ರೀತಿಯ ಮಾಗ್ನಿಫೈಯಿಂಗ್ ಗ್ಲಾಸ್ ಹಾಕಿಕೊಂಡು ಇದನ್ನು ಪಾಪದ ಗಂಟು ಎಂದು ಹೇಳುತ್ತಾರೆ. ಅವರೇ ಅಧಿಕಾರದಲ್ಲಿದ್ದಾಗ ಬರಗಾಲಕ್ಕಾಗಿ ಖರ್ಚು ಮಾಡಿರುವುದು ಕೇವಲ 20-21 ಕೋಟಿಯಷ್ಟು. ಇವೊತ್ತು ಏಳೆಂಟು ತಿಂಗಳಲ್ಲಿ ಬರಗಾಲಕ್ಕಾಗಿ ಸುಮಾರು 40-45 ಕೋಟಿಯವರೆಗೆ ಖರ್ಚು ಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—1968 ರಲ್ಲಿ ಶ್ರೀ ವೀರೇಂದ್ರ ಪಾಟೀಲರು ಅಧಿಕಾರದಲ್ಲಿದ್ದಾಗ ಬಂದ ಬರಗಾಲ ಹೀಗಿರಲಿಲ್ಲ. ಈಗ ಬಂದ ಬರಗಾಲ ಯಾವಾಗಲೂ ಹಿಂದೆ ಬಂದಿರಲಿಲ್ಲ. ಇದು ಅನ್‌ಪ್ರಿಸಿಡೆಂಟೆಡ್ ಬರಗಾಲ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ವಿ. ಎಂ. ಘೂಡಿ.—ಆಗಿನ ಸರಕಾರದಲ್ಲಿದ್ದಾಗ ಎರಡು ಮೂರು ವರ್ಷಕ್ಕಾಗಿ ಸುಮಾರು 30 ಕೋಟಿ ರೂಪಾಯಿ ಖರ್ಚು ಮಾಡಿದರು. ಇಂದು ಈ ಸರಕಾರ ಯಾವ ರೀತಿ ಖರ್ಚು ಮಾಡಿದೆ ಎನ್ನುವುದನ್ನು ಹೇಳದೆ ಬರೀ ಪಾಪದ ಗಂಟು ಎಂದು ಹೇಳಿದರೆ ಇದಕ್ಕೇನು ಹೇಳುವುದು ?

ಶ್ರೀ ಕಾಗೋಡು ತಿಮ್ಮಪ್ಪ – ಆಗ ಇದ್ದ ಶ್ರೀ ಚನ್ನಬಸಪ್ಪನವರೇ ಅಂತಹ ಕರ್ಮಕಾಂಡದ ತನಿಖೆ ಮಾಡಿ ಎಂದು ಹೇಳಿದರೂ ಮಾಡಲಿಲ್ಲ. ಇಂದು ನೀವೇಕೆ ಅದರ ಬಗ್ಗೆ ತನಿಖೆ ಮಾಡಿಸಲು ಪ್ರಯತ್ನ ಮಾಡಬಾರದು ? ಅವರೇನೋ ಪಾಪಮಾಡಿದರು ನೀವು ಅಧಿಕಾರದಲ್ಲಿರುವುದರಿಂದ ಈಗ ನೀವೇ ವಿಚಾರಣೆ ಮಾಡಬಹುದಲ್ಲವೇ ?

ಶ್ರೀ ವಿ. ಎಂ. ಘೂಡಿ.—ಪರಿಷತ್ತಿನ ವಿರೋಧ ಪಕ್ಷದ ನಾಯಕರು ಒಂದು ರಾಜಸ್ಥಾನದ ಗೀತೆಯನ್ನು ಹೇಳಿದರು. ಅದು ಹೀಗಿದೆ :—

> “ ಇದು ಗಾಡಿ ಮಗ ನಿನಗೆ ನಡೆಸಲು ತಿಳಿದಿದ್ದರೆ, ಇದು ಪಾಪದ ಗಾಡಿ ತಾತಾ ನೀನೇ ನಡೆಸು, ಇದು ಆಹಾರ ಮಗು, ನಿನಗೆ ತಿನ್ನಲು ತಿಳಿದಿದ್ದರೆ ಇದು ಪಾಪದ ಆಹಾರ ತಾತ ನೀನೇ ತಿನ್ನು. ಇದು ಉದ್ಯಮ ಮಗು, ನಿನಗೆ ಕಾಲಿಡಲು ರೀತಿ ತಿಳಿದಿದ್ದರೆ, ಇದು ಪಾಪದ ಉದ್ಯಮ ತಾತ, ನೀನೇ ಕಾಲಿಡು, ಇದು ಕುದುರೆ ಮಗು, ನಿನಗೆ ಸವಾರಿ ತಿಳಿದಿದ್ದರೆ ಇದು ಪಾಪದ ಕುದುರೆ ತಾತ ನೀನೇ ಸವಾರಿ ಮಾಡು. ಇದು ರಾಜ್ಯದ ಮಕ್ಕಳೇ ನಿಮಗೆ ಆಡಳಿತ ತಿಳಿದಿದ್ದರೆ, ಇದು ಪಾಪದ ಗಂಟಿನಿಂದ ತಾತ, ರಾಜ್ಯ ಕಳಕೊಂಡಿ. ”

ಈ ಎಲ್ಲ ಪಾಪದ ವಿಚಾರಗಳನ್ನೂ ಅವರು ಅರ್ಥ ಮಾಡಿಕೊಂಡೇ ಅಧಿಕಾರಕ್ಕೆ ಬಂದಿರುವುದು. ಆದರೆ ಇದರಲ್ಲಿ ನನಗೆ ತೋರುವುದು ಅವರು ಇನ್ನೂ ಅಧಿಕಾರಕ್ಕೆ ಬರಬೇಕು ಎನ್ನುವ ಆಸೆಯಿಂದ ಈ ಮಾತುಗಳನ್ನು ಹೇಳಿದ್ದಾರೆ, ಇಂತಹ ಪಾಪದ ಗಂಟನ್ನು ತನಿಖೆ ಮಾಡಲು ಶರಾವತಿ ಕರ್ಮಕಾಂಡ ಅವರ ಕೈಯ್ಯಲ್ಲೇ ಇತ್ತು. ಆಗಲೇ ಏಕೆ ಅವರು ತನಿಖೆ ಮಾಡಲಿಲ್ಲ ? ಆಗಲೇ ಅವರು ಮಾಡಬಹುದಾಗಿತ್ತು, ಇದನ್ನು ನೋಡಿದರೆ ನಮ್ಮ ವಿರೋಧಿ ಪಕ್ಷಕ್ಕೆ ಏನೋ ಒಂದು ರೀತಿಯ

ದೆವ್ವಬಡಿದು ಅದು ಪೆಡಂಭೂತವಾಗಿರುವಂತೆ ಒಂದು ರೀತಿಯ ಸಂಶಯಭೂತ ಬಂದಿದೆ, ಇದರಿಂದಾಗಿ ಮೇಲಿಂದ ಮೇಲೆ ಶಂಕೆಗಳನ್ನೇ ಹೇಳುತ್ತಿದ್ದಾರೆ. ಸಾಧಾರಣವಾಗಿ ನಮ್ಮ ರಾಜ್ಯದ ನೌಕರರಿಗೆ ಸೆಂಟ್ರಲ್ ಡಿ. ಎ. ಕೊಡುವ ಧೈರ್ಯವನ್ನು ನಮ್ಮ ರಾಜ್ಯದ ಅರ್ಥಮಂತ್ರಿಗಳು ಬೇರೆ ಯಾವ ರಾಜ್ಯವೂ ಮಾಡದೇ ಇದ್ದರೂ ಧೈರ್ಯದಿಂದ ನಮ್ಮ ಸರಕಾರ ಮಾಡಿದೆ, ಇದೇ ರೀತಿ ಹಿಂದೆ ಯಾರ್ಡ್ ರಿಪೋರ್ಟ್ ಬಂದಾಗಲೂ ಅಂದಿನ ಪರಿಸ್ಥಿತಿ ಯಾವ ರೀತಿ ಇತ್ತು, ಅದನ್ನು ನೋಡಿ ಅದರ ಪ್ರಕಾರ ಸೆಂಟ್ರಲ್ ಗೌವರ್ನಮೆಂಟು ಲೆವಲ್‌ಗೆ ಇಂದು ರಾಜ್ಯ ನೌಕರರಿಗೂ ಡಿ.ಎ. ಜಾಸ್ತಿ ಮಾಡಿದ್ದಾರೆ. ಆಹಾರ ಪದಾರ್ಥಗಳ ಬೆಲೆ ಏರುತ್ತಿರುವುದನ್ನು ಕಂಟ್ರೋಲು ಮಾಡಬೇಕು, ಬೆಲೆ ಏರುವುದನ್ನು ತಡೆಗಟ್ಟಿದ್ದರೆ ಇಷ್ಟು ಹೆಚ್ಚು ಡಿ ಎ. ಕೊಡುವ ಅವಶ್ಯಕವೇ ಇರಲಿಲ್ಲ. ಬೆಲೆಯನ್ನು ಹತೋಟಿಯಲ್ಲಿಡಲಾಗದುದರಿಂದ ಇಂದು ಡಿ. ಎ. ಹೆಚ್ಚು ಮಾಡಬೇಕಾಗಿ ಬಂದಿದೆ, ಇನ್ನು ಮುಂದಾದರೂ ಬೆಲೆಗಳ ಏರಿಕೆಯನ್ನು ಹತೋಟಿಯಲ್ಲಿಡಬೇಕು.

ಇನ್ನೊಂದು ಬಡ್ಜೆಟ್ಟಿನಲ್ಲಿ ನಮಗೆ ಕಂಡುಬರುವುದು ಐದು ಕೋಟಿ ರೂಪಾಯಿಗಳನ್ನು ಹೌಸಿಂಗಾಗಿ ಒದಗಿಸಿರುವುದು ಸ್ತುತ್ಯಾರ್ಹವಾದುದು ಹಾಗೂ ಸೂಕ್ತವಾದುದು. ಸಮಾಜವಾದವನ್ನು ನಾವು ತರುವ ಹಾದಿಯಲ್ಲಿ ಇದು ಒಂದು ಮೊದಲ ಹೆಜ್ಜೆ. ಇದಕ್ಕೆ ಬೇರೆ ರೀತಿ ನಮ್ಮ ಮಾನ್ಯ ಸದಸ್ಯರಾದ ಶ್ರೀ ಸಿದ್ದಪ್ಪನವರು ಹೋಲಿಸಿದರು. ನಮಗೆ ಐದು ಕೋಟಿ ರೂಪಾಯಿ ಯೋಜನೆ ಮಾಡಿರುವುದು ತುಂಬಾ ಸ್ವಾಗತಾರ್ಹವಾದುದು. ಮುಖ್ಯವಾಗಿ ಜನಕ್ಕೆ ಬೇಕಾಗಿರುವುದು, ವಸತಿ, ಹೊಟ್ಟೆಗೆ ಅನ್ನ ಹಾಗೂ ಉಡಲು ಅರಿವೆ. ಇವು ಮೂರು ಅಗತ್ಯವಾದ ವಸ್ತುಗಳು, ಇದನ್ನು ಹೇಳುವಾಗ ಮಾನ್ಯ ಸದಸ್ಯರಾದ ಶ್ರೀ ಸಿದ್ದಪ್ಪನವರು. ಆಕಾಶದಲ್ಲಿ ಮಾವಿನ ಹಣ್ಣು ಇದ್ದ ಹಾಗೆ ಎಂದರು ಇದು ಹೇಗೆ ಬಂತೋ ಇಲ್ಲವೇ ಅವರು ಸ್ವಪ್ನ ಕಂಡರೋ ನನಗೆ ಗೊತ್ತಿಲ್ಲ. ಇಲ್ಲಿ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ, ಇದು ಬಹು ಮುಖ್ಯವಾದುದು, ಮುಖ್ಯವಾಗಿ ಆಹಾರ, ಮನೆ ಹಾಗೂ ಬಟ್ಟೆ ಇವು ಅಗತ್ಯವಾಗಿ ಬೇಕಾದವುಗಳು. ಎಲ್ಲ ಕೆಲಸಗಳೂ ಆಗಲಿಲ್ಲ ಇವೆಲ್ಲ ಆಗಬೇಕಾಗಿತ್ತು ಎಂದು ಹೇಳಿದರೆ ಸರಕಾರ ಒಂದು ಮ್ಯಾಜಿಕ್ ವ್ಯಾಂಡ್ ಇಟ್ಟುಕೊಂಡು ಮಾಡಲಿಕ್ಕೆ ಸಾಧ್ಯವೇ ? ಹಾಗೆ ಯಾರ ಕೈಯ್ಯಲ್ಲೂ ಮಾಡಲು ಸಾಧ್ಯವಾಗುವುದಿಲ್ಲ. ನಮಗೆ ಕೆಲಸಗಳನ್ನು ಮಾಡಲು ಓವರು ಡ್ರಾಫ್ಟ್‌ಗಳೂ ಸಿಗುತ್ತಿಲ್ಲ; ಹಾಗಿರುವಾಗ ನಮ್ಮ ಅರ್ಥಮಂತ್ರಿಗಳು ಇಲ್ಲಿ ತೆರಿಗೆ ಇಲ್ಲದಂತಹ ಒಂದು ಬಡ್ಜೆಟ್ಟನ್ನು ತಂದು ಇಟ್ಟಿರುವುದನ್ನು ನೋಡಿದರೆ ಇದರಿಂದ ಎಷ್ಟು ಪ್ರಗತಿಯಾದ ಕೆಲಸಗಳನ್ನು ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಇವನ್ನೆಲ್ಲಾ ಸರಿಯಾಗಿ ತುಲನ ಮಾಡಿ ನೋಡಬೇಕೆಂದು ಇಲ್ಲಿ ಹೇಳಬಯಸುತ್ತೇನೆ.

5-30 P. M.

ಎರಡನೆಯದಾಗಿ ಓಲ್ಡ್ ಏಜ್ ಪೆನ್‌ಷನನ್ನು 30 ರೂಪಾಯಿಗಳಿಂದ 40 ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಹಾಸ್ಟಲ್‌ನಲ್ಲಿರತಕ್ಕಂಥ ವಿದ್ಯಾರ್ಥಿಗಳಿಗೆ ಬೋರ್ಡಿಂಗ್ ವೆಚ್ಚಕ್ಕಾಗಿ ಕೊಡುತ್ತಿದ್ದ 30 ರೂಪಾಯಿಗಳನ್ನು 40 ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಈ ವಿಚಾರದಲ್ಲಿ ನಾನು ಒಂದು ವಿಶೇಷ ಸೂಚನೆ ಕೊಡುತ್ತೇನೆ ; ಏನೆಂದರೆ ಹಾಸ್ಟಲ್‌ನಲ್ಲಿರತಕ್ಕಂಥ ಹುಡುಗರಿಗೆ ನೂಲು ತೆಗೆಯುವುದು, ಮುಂತಾದ ಯಾವುದಾದರು ಕೆಲಸಗಳನ್ನು ಕಲ್ಪಿಸಿಕೊಟ್ಟು ಅವರಿಗೆ ಕಲಿಯುವಾಗಲೇ ಸ್ವಲ್ಪ ವರಮಾನ ಬರುವಂತೆ ನೋಡಿಕೊಳ್ಳಬೇಕು. ಗಡಿ ಭಾಗಗಳಲ್ಲಿರುವಂತಹ ಪ್ರದೇಶಗಳ ಬಗ್ಗೆ ಸರ್ಕಾರದವರು ಮಲತಾಯಿ ಧೋರಣೆ ತಾಳಿದ್ದಾರೆಂದು ಮಾನ್ಯ ಸರ್ದೇಸಾಯಿ ಅವರು ಮಾತನಾಡುವಾಗ ಹೇಳಿದರು. ನಾನು ಸಹ ಆ ಗಡಿ ಭಾಗದಿಂದಲೇ ಬಂದಿದ್ದೇನೆ. ಕೆಲವು ಸ್ಕೀಮ್‌ಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಬರೆದಿದ್ದೆ. ಆದರೆ ಇದುವರೆಗೆ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣ ನಮ್ಮ ರಾಜ್ಯದ ಹಲವು ಭಾಗಗಳಲ್ಲಿ ಬರಗಾಲ ಬಂದಿರುವುದು. ಈ ಕಾರಣದಿಂದ ಸರ್ಕಾರದವರಿಗೆ ಹೊಸ ಯೋಜನೆಗಳನ್ನು ತೆಗೆದುಕೊಳ್ಳುವುದು ಕಷ್ಟವಾಗಿದೆ. ಆದಕಾರಣ ಸರ್ಕಾರದವರು ಗಡಿ ಭಾಗಗಳ ಬಗ್ಗೆ ಮಲತಾಯಿ ಧೋರಣೆ ತಳೆದಿದ್ದಾರೆಂದು ಹೇಳುವುದು ಸರಿಯಲ್ಲ. ಕೆಲವು ಸಲ ಸರ್ಕಾರದವರು ಯೋಜನೆಗಳನ್ನು ಮಂಜೂರು ಮಾಡಿ ಸಹ ಅಧಿಕಾರಿಗಳು ಅದನ್ನು ತ್ವರಿತವಾಗಿ ಮಾಡದಿದ್ದಾಗ ಸ್ಪೆಷಲ್ ಇಂಜಕ್ಷನ್ ಕೊಡಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಕೆಲವು ಇರಿಗೇಷನ್ ಯೋಜನೆಗಳ ಬಗ್ಗೆ ಸರ್ವೆಯಾಗಿದೆ. ಸರ್ಕಾರದವರು ಹಣದ ಪರಿಸ್ಥಿತಿ ನೋಡಿಕೊಂಡು ಮುಂದಿನ ವರ್ಷ ತೆಗೆದುಕೊಳ್ಳಬಹುದೆಂದು ನಾನು ಆಶೆ ಮಾಡುತ್ತೇನೆ ಇಂದಿನ ಬಡ್ಜೆಟ್‌ನಲ್ಲಿ ನೀರಾವರಿಗೆ ಮತ್ತು ವಿದ್ಯುಚ್ಛಕ್ತಿ ಯೋಜನೆಗಳಿಗೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ನಮ್ಮ ಹಳಿಯಾಳ

(ಶ್ರೀ ವಿ. ಎಂ. ಘಾಡಿ)

ತಾಲ್ಲೂಕ್‌ನಲ್ಲಿ ನೀರಾವರಿಗೆ ಹೆಚ್ಚು ಗಮನ ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ಹಂಚಿನ ಕಾರ್ಖಾನೆ, ಕಾರ್ಡ್‌ಬೋರ್ಡಿನ ಕಾರ್ಖಾನೆ ಮುಂತಾದವನ್ನು ಸ್ಥಾಪನೆ ಮಾಡಲು ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಮುಖ್ಯವಾಗಿ ಸಕ್ಕರೆ ಕಾರ್ಖಾನೆಗೆ ಬೇಕಾದ ನೀರಾವರಿ ಪ್ರದೇಶಗಳನ್ನು ಬೆಳೆಸಬೇಕೆಂದು ಬೇಡಿಕೊಳ್ಳುತ್ತೇನೆ.

ಇನ್ನು ಮಲೆನಾಡು ಡೆವಲಪ್‌ಮೆಂಟ್ ಸ್ಕೀಮ್ ಏನಿದೆ ಅದನ್ನು ತ್ವರತಗೊಳಿಸುವುದರ ಮೂಲಕ ಮಲೆನಾಡಿನ ಜನರಿಗೆ ಅದರ ಪ್ರಯೋಜನ ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ಬೇಡಿಕೊಳ್ಳುತ್ತೇನೆ. ಕೇಂದ್ರಸರ್ಕಾರದ ಮೇಲೆ ಒತ್ತಾಯ ತರುವುದರ ಮೂಲಕ ಈ ಸ್ಕೀಮನ್ನು ಜಾಗ್ರತೆ ಜಾರಿಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ಹಳಿಯಾಳ ತಾಲ್ಲೂಕ್‌ನ ಯಲ್ಲಾಪುರದಲ್ಲಿ ಬರಬೇಕಾಗಿದ್ದ ಡಬ್ಲ್ಯು. ಎಚ್. ಓ. ಸ್ಕೀಮು ಇನ್ನೂ ಜಾರಿಯಲ್ಲಿ ಬಂದಿಲ್ಲ. ಇದು 23 ಲಕ್ಷ ರೂಪಾಯಿಗಳ ಸ್ಕೀಮ್ ಆಗಿದೆ. ಕೇಂದ್ರಸರ್ಕಾರದ ಒಪ್ಪಿಗೆಗಾಗಿ ಹೋಗಿದೆ ಎಂದು ಕೇಳಿದ್ದೇನೆ. ಕೇಂದ್ರಸರ್ಕಾರಕ್ಕೆ ಹೋಗಿ 6 ತಿಂಗಳಾದರೂ ಅಪ್ರೂವಲ್ ಸಿಕ್ಕಿಲ್ಲ. ಆದಕಾರಣ ಸರ್ಕಾರದವರು ಕೇಂದ್ರದ ಮೇಲೆ ಒತ್ತಾಯ ತಂದು ಈ ಸ್ಕೀಮನ್ನು ಬಳಕೆಯಲ್ಲಿ ತರಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅರ್ಥ ಮಂತ್ರಿಗಳು ಈ ಸಲದ ಬಡ್ಜೆಟ್‌ನ್ನು ಬಹಳ ಜಾಣ್ಮೆಯಿಂದ ತಯಾರು ಮಾಡಿದ್ದಾರೆ. ಅದಕ್ಕಾಗಿ ಅವರನ್ನು ವಂದಿಸಿ, ನನಗೆ ಮಾತನಾಡಲು ವೇಳೆಯನ್ನು ಕೊಟ್ಟ ಅಧ್ಯಕ್ಷರನ್ನು ಸಹ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕಂಥ 1973-74ನೇ ಸಾಲಿನ ಆಯವ್ಯಯ ಪತ್ರವನ್ನು ನಾನು ವಿರೋಧಿಸಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಪ್ರಜಾಪ್ರಭುತ್ವದಲ್ಲಿ ಬಡ್ಜೆಟ್‌ಮಂಡನೆ ಮಾಡುವ ಕಾಲದಲ್ಲಿ ಉಳಿತಾಯದ ಬಡ್ಜೆಟ್ ಅಥವಾ ಕೊರತೆಯಿರುವ ಬಡ್ಜೆಟ್, ಇವೆರಡರಲ್ಲಿ ಒಂದು ಇರುತ್ತದೆ. ಉಳಿತಾಯ ಅಥವಾ ಕೊರತೆ ಇವೆರಡೂ ಸಹ ಇಲ್ಲದಿರುವ ಬಡ್ಜೆಟ್‌ನ್ನು ತಯಾರು ಮಾಡಿ ಇಡುವುದಕ್ಕೂ ಸಹ ತಾವು ಪ್ರಯತ್ನ ಮಾಡಬಹುದು. ಮುಖ್ಯವಾಗಿ ಈ ಬಡ್ಜೆಟ್ ಎಂಬುದು ಆಯಾ ಸರ್ಕಾರಗಳ ಕಾರ್ಯಕ್ರಮಗಳ ಮೇಲೆ ಅವಲಂಬನೆಯಾಗಿರುತ್ತದೆ. ಮುಂದಿನ ಸಾಲಿನಲ್ಲಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಇಚ್ಛೆ ತಮಗೆ ಇರುತ್ತದೋ ಅದರ ಮೇಲೆ ನಿಮ್ಮ ಆಯವ್ಯಯ ಪತ್ರದ ಪ್ರಕೃತಿ ಇರತ್ತದೆ. ರಾಜ್ಯದಲ್ಲಿ ಹೆಚ್ಚಿನ ಕಲಸಕಾರ್ಯಗಳನ್ನು ನಡೆಸದೇ ಹೋದರೆ ಅಭಿವೃದ್ಧಿ ದೃಷ್ಟಿಯಿಂದ ಬಹಳ ಅನ್ಯಾಯವಾಗುತ್ತದೆ ಎನ್ನುವ ವಿಷಯ ಮನವರಿಕೆಯಾದರೆ ತಾವು ಕೊರತೆ ಇರುವ ಬಡ್ಜೆಟ್‌ನ್ನು ತಯಾರು ಮಾಡಲೇ ಬೇಕಾಗುತ್ತದೆ ತಮ್ಮ ಕೆಲವು ಕಾರ್ಯಕ್ರಮಗಳನ್ನು ಕಟ್ ಮಾಡುವುದಾದರೆ ಉಳಿತಾಯದ ಬಡ್ಜೆಟ್‌ನ್ನು ಸಹ ತಯಾರು ಮಾಡಬಹುದು. ತೆರಿಗೆ ಇಲ್ಲದಿರತಕ್ಕಂಥ ಆಯವ್ಯಯ ಪತ್ರವನ್ನು ಮಂಡಿಸುವುದು ಎಂದರೆ ತಮ್ಮ ಕೆಲವು ಕಾರ್ಯಕ್ರಮಗಳನ್ನು ಖೋತಾ ಮಾಡಬೇಕಾಗುತ್ತದೆ. ನಮ್ಮ ದೇಶದ ಯಾವ ಯಾವ ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳು ಇವೆಯೋ ಆ ಸರ್ಕಾರಗಳಿಗೆಲ್ಲಾ ಹೊಸ ತೆರಿಗೆಗಳನ್ನು ಹಾಕುವ ಹವ್ಯಾಸಕ್ಕೆ ಹೋಗಬೇಡಿ ಎಂದು ಕಾಂಗ್ರೆಸ್ ಹೈಕಮ್ಯಾಂಡ್‌ನವರು ಆದೇಶ ಕೊಟ್ಟಿರುವಂತೆ ಕಾಣುತ್ತದೆ. ಉತ್ತರ ಭಾಗದಲ್ಲಿರುವ ಒಂದು ರಾಜ್ಯದಲ್ಲಿ ತೆರಿಗೆಗಳು ಇಲ್ಲದ ಬಡ್ಜೆಟ್‌ನ್ನು ಮಂಡನೆ ಮಾಡಲಾಯಿತು ಎಂಬುದನ್ನು ನಾನು ಮೊನ್ನೆ ಒಂದು ಪತ್ರಿಕೆಯಲ್ಲಿ ಓದಿದೆ. ಈ ದೇಶದಲ್ಲಿರತಕ್ಕಂಥ ಜನರು ನಿಮ್ಮನ್ನು ನೋಡಿ ನಂಬಬೇಕು. ಆ ಒಂದು ಅರ್ಥ ಬರುವ ರೀತಿಯಲ್ಲಿ ಬಡ್ಜೆಟ್‌ನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕೇಂದ್ರದವರು ಈಗಾಗಲೇ ಚರ್ಮ ಸುಲಿಯುವಷ್ಟು ತೆರಿಗೆಯನ್ನು ಹಾಕಿದ್ದಾರೆ. ಮತ್ತೆ ತೆರಿಗೆಯನ್ನು ಹಾಕುವುದಕ್ಕೆ ಇವರಿಗೆ ಜಾಗ ಎಲ್ಲಿದೆ ?

ಶ್ರೀ ಎಸ್. ಬಂಗಾರಪ್ಪ.—ಅದು ನಿಜವೇ ; ಬಡಜನತೆಯ ಮೇಲೆ ಮಧ್ಯಮವರ್ಗದ ಜನತೆಯ ಮೇಲೆ ಹೊಸ ತೆರಿಗೆಗಳನ್ನು ಹೇರುವುದಿಲ್ಲ, ಬಡತನವನ್ನು ಹೋಗಲಾಡಿಸುತ್ತೇವೆಂದು ತಾವು ಚುನಾವಣಾ ಸಮಯದಲ್ಲಿ ಜನರಿಗೆ ಮಾತು ಕೊಟ್ಟು ಅಧಿಕಾರಕ್ಕೆ ಬಂದಿದ್ದೀರಿ. ಗರೀಬಿ ಹಟಾವೋ ಮಾಡುತ್ತೇವೆ ಎನ್ನುವ ಮಹಾ ಮಂತ್ರವನ್ನು ಏನು ಜನರಿಗೆ ಹಾಕಿದಿರಿ, ಅದನ್ನು ಉಳಿಸಿಕೊಳ್ಳಲು ಹೊಸ ತೆರಿಗೆಗಳು ಇಲ್ಲದಿರುವ ಬಡ್ಜೆಟ್‌ನ್ನು ಮಂಡನೆ ಮಾಡಿದ್ದೀರಿ. ಆದರೆ ಇದು

ಕೇವಲ ಕಣ್ಣೊರೆಸುವ ಒಂದು ಮಂತ್ರವಾಗಿದೆ. ಇದು ತೆರಿಗೆಗಳು ಇಲ್ಲದಿರುವ ಬಡ್ಜೆಟ್ ಎಂಬುದು ಸತ್ಯಕ್ಕೆ ದೂರವಾದ ಮಾತು. ಹೊಸ ತೆರಿಗೆಗಳು ಇಲ್ಲ ಎಂದರೋ ಹಿಂದಿನ ತೆರಿಗೆಗಳನ್ನು ಮತ್ತು ಬಾಂಗ್ಲಾ ದೇಶದ ತೆರಿಗೆಗಳನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಕೋಳಿ ಮುಂತಾದುವುಗಳ ಮತ್ತು ದನಕಗುಗಳ ಮೇವಿನ ಮೇಲೆ ತೆರಿಗೆ ಹಾಕಿದ್ದಾರೆ. ಕೀಟನಾಶಕಗಳ ಮೇಲೆ ತೆರಿಗೆ ಹಾಕಿದ್ದಾರೆ. ಮಾನ್ಯ ಅರ್ಥಸಚಿವರು ಈ ಕಡೆ ಇದ್ದಾಗ ನನ್ನ ಪಕ್ಕದಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ಆಗ ಹಸಿರುಕ್ರಾಂತಿಯಾಗಬೇಕೆಂದು ಸಲಹೆ ಕೊಟ್ಟಿದ್ದರು. ಅದು ನನ್ನ ಜ್ಞಾಪಕದಲ್ಲಿ ಇದೆ.

ಶ್ರೀ ಎಂ. ವೈ. ಘೋರ್ಪಡೆ.— ಅದು ಹೊಸ ತೆರಿಗೆಯೇನೂ ಅಲ್ಲ. ಮಲ್ಟಿ ಪಾಯಿಂಟನ್ನು ತೆಗೆದು ಸಿಂಗಲ್ ಪಾಯಿಂಟಾಗಿ ಮಾಡಿದರೆ ಸ್ವಲ್ಪ ಭಾರ ಕಡಿಮೆಯಾಗುತ್ತದೆ. ಮೂರುವರೆ ಪರ್ಸೆಂಟ್ ಮಲ್ಟಿಪಾಯಿಂಟಿನಲ್ಲಿ ಎರಡು ಸಲ ಆದರೆ 7 ಪರಸೆಂಟ್ ಆಗುತ್ತದೆ. ಅದನ್ನು 6 ಪರ್ಸೆಂಟಿಗೆ ಇಳಿಸಿದರೆ ಕಡಿಮೆಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಅದಕ್ಕೋಸ್ಕರವೇ ನಾನು ಹೇಳುವುದು, ಇದು ತೆರಿಗೆ ಇಲ್ಲದ ಬಜೆಟ್ ಅಲ್ಲ ಎಂದು. ಇವತ್ತು ಕೋಳಿ ಮತ್ತು ದನಗಳ ಆಹಾರದ ಮೇಲೆ ಮತ್ತು ಸಿಗಡಿ ಮೀನುಗಳ ಮೇಲೆ ತೆರಿಗೆ ಹಾಕಿದ್ದೀರಿ. ಇದರ ಅರ್ಥ ಬಜೆಟಿನಲ್ಲಿ ತೆರಿಗೆಗಳು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ಪ್ರಜಾಪ್ರಭುತ್ವದಲ್ಲಿ ತೆರಿಗೆ ಇಲ್ಲದೆ ನಡೆಯುವುದಿಲ್ಲವೆಂಬುದನ್ನು ಒಪ್ಪುತ್ತೇನೆ. ಆದರೆ ಜನರಿಗೆ ಬೇಸಿಕ್ ನೀಡ್ಸ್‌ನ್ನು ಪಡೆಯುವ ಶಕ್ತಿ ಬರುವವರೆಗೆ ಈ ರೀತಿ ಹೆಚ್ಚಿನ ತೆರಿಗೆಗಳು ಇರಬಾರದು. ಹೋದ ಸಾರಿ ಮಾನ್ಯ ಅರ್ಥ ಸಚಿವರು ಕೀಟನಾಶಕ ಮತ್ತು ರೋಗನಾಶಕ ವಸ್ತುಗಳ ಮೇಲೆ ತೆರಿಗೆಗಳನ್ನು ಹಾಕುವುದು ಸೂಕ್ತವಲ್ಲವೆಂದು ಹೇಳಿದ್ದಾರೆ. ಮತ್ತು ಎಲ್ಲಿ ಅಶ್ಯೂರ್ಡ್ ನೀರಾವರಿ ಸೌಕರ್ಯಗಳು ಇವೆ, ಅಂಥ ಪ್ರದೇಶಗಳಲ್ಲಿರತಕ್ಕಂತಹ ಜಮೀನುಗಳಿಗೆ ಒದಗಿಸತಕ್ಕಂತಹ ಗೊಬ್ಬರಕ್ಕಾಗಲಿ, ಕ್ರಿಮಿಕೀಟಕ ವಸ್ತುಗಳಿಗಾಗಲಿ ತೆರಿಗೆ ಹಾಕಿದರೆ, ಅದರಲ್ಲಿ ಸ್ವಲ್ಪ ಅರ್ಥ ಇದೆ. ಏಕೆಂದರೆ ಅಂತಹ ಯೋಜನೆಗಳಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಹಲವಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆ. ಆದರೆ ನೀರಾವರಿ ಇಲ್ಲದಿರತಕ್ಕ ಕಡೆಗಳಲ್ಲಿ ಇದನ್ನು ಹಾಕಬಾರದು. ಅಂಥ ಕಡೆಗಳಲ್ಲಿ ರೈತ ಒಂದು ಸಲ ಹೈಬ್ರಿಡ್ ಬೆಳೆದರೆ, ಅದಕ್ಕೆ ರೋಗ ಬಂದರೆ ಇದರ ಅವಶ್ಯಕತೆ ಇರುತ್ತದೆ. ಆಗ ಈ ರೀತಿಯ ತೆರಿಗೆಗಳಿಗೆ ಅವನಿಗೆ ತೊಂದರೆಯಾಗುತ್ತದೆ. ಅದರಿಂದ ಈ ಕ್ರಿಮಿಕೀಟ ನಾಶಕಗಳ ಮೇಲೆ ಮತ್ತು ರೋಗನಾಶಕಗಳ ಮೇಲೆ ತೆರಿಗೆಗಳನ್ನು ಹಾಕಿರುವುದು ಸಮಂಜಸವಲ್ಲವೆಂದ ನಾನು ಹೇಳುತ್ತೇನೆ ಈ ತೆರಿಗೆಗಳನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು ; ಇಲ್ಲದಿದ್ದರೆ ಈ ಹಸಿರು ಕ್ರಾಂತಿ ಎಂದು ಏನು ಹೇಳುತ್ತೀರಿ, ಅದಕ್ಕೆ ನಿಮ್ಮ ಪಾಲಿಸಿ ವಿರುದ್ಧವಾಗುತ್ತದೆ.

ಇನ್ನು ಪ್ರೆಶ್ಯರ್ ಕುಕ್ಕರ್ಸ್‌ಗೂ ತೆರಿಗೆಗಳನ್ನು ಹಾಕಿದ್ದೀರಿ. ಇವುಗಳನ್ನು ಬರೇ ಶ್ರೀಮಂತರು ಮಾತ್ರ ಉಪಯೋಗ ಮಾಡುತ್ತಿಲ್ಲ: ಸಣ್ಣ ಪುಟ್ಟ ನೌಕರ ವರ್ಗದವರು ಸಹ ಉಪಯೋಗಿಸುತ್ತಿದ್ದಾರೆ. ಆದ್ದರಿಂದ ಇದು ಬಡವರಿಗೂ ತಗಲುತ್ತದೆ. ಇವತ್ತು ಕೇಂದ್ರದವರು ಸಹ ಪೆಟ್ರೋಲಿಗೆ 8 ಪೈಸೆ ತೆರಿಗೆ ಹಾಕಿ ಬಡವರಿಗೆ ತಗಲುವುದಿಲ್ಲವೆಂದು ಹೇಳಿದ್ದಾರೆ. ಆದರೆ ಅದು ಸಹ ಬಡ ಜನರಿಗೆ ತಗಲಿಯೇ ತಗಲುತ್ತದೆ. ಇದರ ಜೊತೆಗೆ ಕಾಗದ, ಪಾದರಕ್ಷೆ-ಮುಂತಾದುವುಗಳಿಗೆ ಸಹ ತೆರಿಗೆ ಹಾಕಿರುವುದು ನಿಮ್ಮ ಸಮಾಜವಾದದ ಘೋಷಣೆಗೆ ವಿರೋಧವಾದುದು. ಅದಕ್ಕೋಸ್ಕರವಾಗಿ ನಾನು ಹೇಳುವುದು ಈ ರೀತಿಯ ತೆರಿಗೆಗಳು ನೀವು ಹಾಕಿದರೆ, ಇದು ತಮ್ಮ ನೀತಿಗೆ ವಿರೋಧವಾದ ಪಾಲಿಸಿಗಳು ಎಂದು ಹೇಳುತ್ತೇನೆ. ಇನ್ನು ಟ್ರಾಕ್ಟರ್ ಮೇಲೆ, ಸೋಡಾ ಮೇಲೆ ಹಾಕಿ ಯಾರೂ ಬೇಡ ಎಂದು ಹೇಳುವುದಿಲ್ಲ.

ಅದೇ ರೀತಿ ಅಲ್ಯುಮಿನಿಯಂ ಪಾತ್ರೆಗಳಿಗೆ ಹಾಕಿದ್ದಾರೆ. ಇದನ್ನು ಹೆಚ್ಚಾಗಿ ಉಪಯೋಗ ಮಾಡತಕ್ಕವರು ಬಡವರು. ಶ್ರೀಮಂತರು ಯಾರೂ ಇದನ್ನು ಉಪಯೋಗಿಸುವುದಿಲ್ಲ. ಇದರಿಂದ ಬಡವರಿಗೆ ಮತ್ತು ಮಧ್ಯಮವರ್ಗದವರಿಗೆ ಪೆಟ್ಟುಬೀಳುತ್ತದೆ. ಆದ್ದರಿಂದ ತಮಗೆ ಗರೀಬ ಹಠಾವೋದಲ್ಲಿ ನಂಬಿಕೆ ಇದ್ದರೆ ಅವುಗಳ ಮೇಲಿನ ತೆರಿಗೆಯನ್ನು ತೆಗೆದು ಹಾಕಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಪ್ರೆಶ್ಯರ್ ಕುಕ್ಕರ್ ಯಾರು ಯೂಸ್ ಮಾಡುತ್ತಾರೆ ?

ಶ್ರೀ ಎಸ್. ಬಂಗಾರಪ್ಪ.— ಅಂದರೆ ತಮ್ಮ ಅರ್ಥ ತಮ್ಮಂತಹ ಶ್ರೀಮಂತರು ಮಾತ್ರ ಅದನ್ನು ಖರೀದಿ ಮಾಡುತ್ತಾರೆ, ಬಾಕಿಯವರು ಮಾಡುವುದಿಲ್ಲವೆಂದೇ ? ಇವತ್ತು ಸಿಗರೇಟಿಗೆ ಹಾಕಿದ್ದೀರಿ ; ಆದರಿಂದ ಬಡವರಿಗೆ ಪೆಟ್ಟು ಬೀಳುವುದಿಲ್ಲವೇ ? ಆದ್ದರಿಂದ ತಾವು ಈ ತೆರಿಗೆಯನ್ನು ಮುಂದುವರಿಸಿಕೊಂಡು ಬರತಕ್ಕಂತಹ ಪದ್ಧತಿ ಏನಿದೆ ಇದು ಸರಿಯಾದ ನೀತಿಯಲ್ಲ. ಇನ್ನು ಈ

(ಶ್ರೀ ಎಸ್. ಬಂಗಾರಪ್ಪ)

ಸಿಗಡಿ ಮೀನಿಗೆ ಹಾಕಿದುದರ ಬಗ್ಗೆ ಈಗಾಗಲೇ ಶ್ರೀಮಾನ್ಯ ಮಧ್ವರಾಜರವರು ಅವರ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ ಇದರಿಂದ ಆ ಮೀನಿನ ಕೈಗಾರಿಕೆಗೆ ಪೆಟ್ಟು ಬೀಳುತ್ತದೆ ಎಂದು ಹೇಳಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ. ಅದನು ಕ್ಯಾನಿಂಗ್ ಇಂಡಸ್ಟ್ರಿಯವರು ಕೊಡುತ್ತಾರೆ; ಅದು ಬಡವರ ಮೇಲೆ ಬೀಳುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಾಗಿದ್ದರೆ ಸರಿ. ಇನ್ನು ಬಜೆಟ್ ತಯಾರುಮಾಡತಕ್ಕ ರೀತಿ ನೀತಿಗಳು ಸರಿಯಾಗಿಲ್ಲ. ಮತ್ತು ಕಾರ್ಯಕ್ರಮಗಳು ಅನಿಶ್ಚಿತವಾಗಿವೆ. ತಾವು ಒಪ್ಪಿಕೊಂಡಿರುವ ಹಾಗೆ ಕೇಂದ್ರ ಸರ್ಕಾರದವರು ಎಷ್ಟು ಕೇಳುತ್ತಾರೆ, ಅಷ್ಟು ಕೊಡುತ್ತಾರೆ ಎನ್ನುವ ದಾಟಿಯಲ್ಲಿ ಹೇಳುತ್ತಿದ್ದೀರಿ. ಈಗ ಏನಾಗಿದೆ ಎಂದರೆ ಪ್ರಧಾನ ಮಂತ್ರಿಯು ಮಲಬರಗಾಲ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅರಿತು ಎಷ್ಟು ಹಣವನ್ನಾದರೂ ಕೊಡುತ್ತೇವೆಂದು ಹೇಳಿದ್ದಾರೆ ಎನ್ನುವ ಅಭಿಪ್ರಾಯವನ್ನು ತಾವು ಹೇಳುತ್ತಿದ್ದೀರಿ. ಇದರಲ್ಲಿ ಬಹಳ ತೊಂದರೆ ಇದೆ. ಏಕೆಂದರೆ ಕಳೆದ ಸಾರಿ 5ನೇ ಹಣಕಾಸಿನ ಆಯೋಗದವರು ಏನು ಕಡಿಮೆ ಹಣ ಕೊಟ್ಟಿದ್ದಾರೆ. ಅದಕ್ಕೆ ಹಿಂದಿನ ಸರ್ಕಾರವನ್ನು ಬೈಯುತ್ತಿದ್ದೀರಿ. ನಮಗೆ ಕೇಂದ್ರ ಸರ್ಕಾರದಿಂದ ಸಹಾಯಧನ ಬರುತ್ತದೆ ಮತ್ತು ಓವರ್‌ಡ್ರಾಫ್ಟನ್ನು ತುಂಬಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನ ಮಾಡಿದ್ದೇವೆಂದು ಹೇಳಿದಾರೆ. ಇವತ್ತು ಸಾಲ ತೆಗೆದುಕೊಳ್ಳತಕ್ಕಂತಹ ವಿಚಾರದಲ್ಲಿ ನನ್ನ ವಾದವಿಲ್ಲ. ಆದರೆ ಕೆಲಸಕಾರ್ಯಗಳ ನಿಮಿತ್ತ ಓವರ್‌ಡ್ರಾಫ್ಟನ್ನು ಮುಂದುವರಿಸಬಾರದು ಎಂದು ಕೇಂದ್ರಸರ್ಕಾರದ ನೀತಿ ಏನಿದೆ, ಇದು ಎಲ್ಲಾ ರಾಜ್ಯಗಳಿಗೂ ಅನ್ವಯವಾಗುತ್ತದೆಯೇ ? ಆದರೆ ಅನೇಕ ರಾಜ್ಯಗಳು ಈಗಲೂ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಆದರೆ ತಾವು ಮಾತ್ರ ಸಂಪೂರ್ಣವಾಗಿ ಓವರ್‌ಡ್ರಾಫ್ಟನ್ನು ತೀರಿಸಿದ್ದೇವೆ ಎಂದು ಹೇಳುತ್ತಿದ್ದೀರಿ. ಆ ಮಾತು ಅರ್ಥಹೀನವಾದುದು. 5ನೇ ಆರ್ಥಿಕ ಆಯೋಗದವರು ಜಾಸ್ತಿ ಹಣವನ್ನು ಕೊಟ್ಟಿಲ್ಲವೆಂದು ಹೇಳುತ್ತಿದ್ದೀರಿ. ಆದರೆ ನಮಗೆ ಸ್ಪೆಶಲ್ ಅಸಿಸ್ಟನ್ಸ್ ಕೇಂದ್ರದಿಂದ ಬಂದರೂ ಕೂಡ, ನಮಗೆ 5ನೇ ಆಯೋಗದಲ್ಲಿ ಕಡಿಮೆ ಕೊಟ್ಟಿರತಕ್ಕಂತಹ ಹಣವನ್ನು ತುಂಬಿಸಿಕೊಳ್ಳುವುದಕ್ಕೆ ಮಾಡಿದ ಪ್ರಯತ್ನ ಏನೂ ಸಾಲದು. ಈ ದೃಷ್ಟಿಯಿಂದ ನಾನಾದರೂ ಹೇಳುತ್ತೇನೆ—ಇವತ್ತು ಮೈಸೂರು ರಾಜ್ಯದ 2—3 ಜಿಲ್ಲೆಗಳಲ್ಲಿ ಬರಗಾಲ ಬಂದ ಕ್ಷಣಕ್ಕೆ ಸರ್ಕಾರ ತತ್ತರಿಸಿ ಹೋಗಿದೆ, ಹಾಗಿದ್ದರೆ, ಇರುವ ಎಲ್ಲಾ ಜಿಲ್ಲೆಗಳಲ್ಲಿಯೂ ಇಂಥ ಪರಿಸ್ಥಿತಿ ಬಂದಿದ್ದರೆ ಇವರ ಗತಿ ಏನಾಗುತ್ತಿತ್ತೋ ಎಂದು ಅನುಮಾನ ಬರುತ್ತದೆ. ಇದು ನಿಮ್ಮ ಆಡಳಿತದ ವೈಖರಿಯ ಲಕ್ಷಣವಲ್ಲ. ನಾನು ಇವತ್ತು ಹಿಂದೆ ಕಾಂಗ್ರೆಸ್ ಆಡಳಿತ ಬೇರೆ, ನಿಮ್ಮ ಕಾಂಗ್ರೆಸ್ ಆಡಳಿತ ಬೇರೆ ಎಂದು ಭಾವಿಸುವುದಿಲ್ಲ. ಹಿಂದಿನ ಸರ್ಕಾರದಲ್ಲಿ ನೀವು ಸಹ ಇದ್ದೀರಿ. ಇವತ್ತು ನಿಮ್ಮ ಪಾಪದ ಕೆಲಸ ಎಂದು ಹೇಳುತ್ತಿದ್ದೀರಿ. ಈ ರೀತಿ ನಿಮ್ಮ ಪಾಪದ ಫಲ, ನಿಮ್ಮ ಪಾಪದ ಕೂಸು ಎಂದು ಹೇಳಿ ಜನತೆಯ ಮನಸ್ಸಿನಿಂದ ಗರೀಬಿ ಹಟಾವೋ ಘೋಷಣೆಯನ್ನು ಮರೆಯುವಂತೆ ಮಾಡುತ್ತಿದ್ದೀರಿ.

ಅಧ್ಯಕ್ಷರು.—ತಾವು ಇನ್ನು 4 ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ನನಗೆ ಮಾತನಾಡಲು ಇನ್ನೂ ಸ್ವಲ್ಪ ಕಾಲ ಬೇಕು. ತಾವು ಕೊಡಬೇಕು ಬಹಳ ವಿಷಯ ಮಾತನಾಡಬೇಕಾಗಿದೆ.

ಅಧ್ಯಕ್ಷರು.—ತಾವು ಆಗಲೇ 25 ನಿಮಿಷ ಮಾತನಾಡಿದ್ದೀರಿ. ತಾವು ಈಗ ಮುಗಿಸಬೇಕು.

ಶ್ರೀ ಎಸ್ ಬಂಗಾರಪ್ಪ.—ಕ್ಷಮಿಸಬೇಕು. ಹಾಗಿದ್ದರೆ ನಾನು ನನ್ನ ಭಾಷಣವನ್ನು ಇಲ್ಲಿಗೆ ಮುಗಿಸಿಬಿಡುತ್ತೇನೆ.

† ಶ್ರೀ ಜಿ. ಪುಟ್ಟಸ್ವಾಮಿ.—(ಮೂಡಿಗೆರೆ) ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿಟ್ಟಿರುವ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ವಿರೋಧ ಪಕ್ಷದವರು ಏನು ಇದರ ಬಗ್ಗೆ ಹೇಳಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ನಮ್ಮ ಮಾನ್ಯ ಶ್ರೀ ನಾಯುಡುರವರು ಈಗಾಗಲೇ ಅದಕ್ಕೆ ಜವಾಬು ಕೊಟ್ಟಿದ್ದಾರೆ. ಆದರೆ ಆಯವ್ಯಯ ಪಟ್ಟಿಯಲ್ಲಿ ಇಷ್ಟು ನಮ್ಮ ರಾಜ್ಯದಲ್ಲಿ ಬರಗಾಲ ಇದ್ದರೂ ಕೂಡ ಈ ಕಷ್ಟದ ಪರಿಸ್ಥಿತಿಯಲ್ಲಿ ಅರ್ಥಮಂತ್ರಿಯವರು, ಮತ್ತು ಮಂತ್ರಿಮಂಡಲದವರು ಮತ್ತು ಅರ್ಥ ಶಾಖೆಯವರು ಕಷ್ಟಪಟ್ಟು ಇಷ್ಟು ಜಾಣ್ಮೆಯಿಂದ ಖೋತಾ ಬಜೆಟ್ ಮಾಡಿದ್ದಾರೆಂದರೆ ಇದನ್ನು ಎಲ್ಲರೂ ಒಪ್ಪತಕ್ಕದ್ದು. ಇದನ್ನು ಬಹಳ ವಿಚಕ್ಷಣೆಯಿಂದ ಮಾಡಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಈ ರೀತಿ ಮಾಡಬೇಕಾದರೆ ಅರ್ಥ ಮಂತ್ರಿಗಳು ಅರ್ಥ ಶಾಸ್ತ್ರದಲ್ಲಿ ನಿಪುಣರು ಇರಬೇಕು. ಇಲ್ಲಿ ಖೋತಾ ಇರತಕ್ಕದ್ದು 13 ಕೋಟಿ ಚಿಲ್ಲರೆ ರೂಪಾಯಿ. ಇನ್ನೂ ಕೂಡ ಕಡಿಮೆಯಾಗುವ ಸಂದರ್ಭ ಇದೆ ಎಂದು ಅವರು ಹೇಳಿದ್ದಾರೆ. ಕೆಲವು ಸದಸ್ಯರು ಸರಿದೂಗಿಸುವ ಬಜೆಟ್ ಮಾಡಿಲ್ಲವೆಂದು ಆಪಾದನೆ ಮಾಡಿದರು. ನಾನಾದರೂ ಅವರಿಗೆ ಕೇಳುತ್ತೇನೆ ಹೇಳುವುದು ಸುಲಭ ಮಾಡುವುದು ಕಷ್ಟ. ಒಂದು ಸಲ ಅವರು ಅಂಥ ಬಜೆಟ್ ಮಾಡಿ ತೋರಿಸಲಿ; ನೋಡೋಣ. ಬರೇ ವಿರೋಧ ಮಾಡುವ ಉದ್ದೇಶದಿಂದ ಇದನ್ನು ವಿರೋಧ ಮಾಡುವುದು ಒಳ್ಳೆಯದಲ್ಲ.

ಅಧ್ಯಕ್ಷರು : —ತಾವು ನಾಳೆ ತಮ್ಮ ಭಾಷಣವನ್ನು ಮುಂದುವರಿಸಬಹುದು. ಸಭೆಯು ಈಗ ಎದ್ದು ನಾಳೆ ಒಂದು ಗಂಟೆಗೆ ಸೇರುವುದು.

The House adjourned at Six of the Clock to meet again at One of the Clock on Wednesday the 14th March 1973.

WD 19953—GPB—550—12-6-1974

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 14th March 1973/Phalguna 23, 1894 (Saka Era).

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which Oral Answers were given)

Implementation of I and II Wage Boards' Recommendations

153. **Sri K. SRIRAMULU** (Gandhinagar).—

Will the Minister for Labour be pleased to state:—

the names and address of the Cotton Mills in Mysore State which have not fully implemented the recommendations of the First and Second Wage Boards; reasons for the same, and the action taken by the Government to implement the same ?

Sri AZEEZ SAIT (Minister for Labour).—

The following Cotton Mills in Mysore State have not fully implemented the recommendations :—

1 Chandrodaya Mills, Davanagere.
2 Mahadev Textile Mills, Hubli.
3 Nandi Hasbi Textile Mills (Private) Ltd., Nargund.
4 Doddaballapur Spinning Mills Doddaballpura. Reasons for non-implementation :—

(i) These recommendations are not statutorily binding.

(ii) The Financial commitment has generally impended the implementation.

The managements have been pursuaded by advice and exhortation to implement the same, Further wherever this question has taken the shape of an industrial dispute, it has been referred for adjudicatien so that an award passed by an Industrial Tribunal would be statutorily binding on the parties.

ಶ್ರೀ ಕೆ. ಶ್ರೀರಾಮುಲು;—ಶಿಫಾರಸುಗಳು ಶಾಸನಾತ್ಮಕವಾಗಿ ಕಡ್ಡಾಯವಲ್ಲ. ಎಂದು ಹೇಳಿದ್ದಾರೆ. ಶಾಸನದ ಮೂಲಕ ಕಡ್ಡಾಯವಾಗಿ ತರುವುದಕ್ಕೆ ಏನಾದರೂ ಯೋಚನೆ ಮಾಡಿದ್ದಾರೆಯೇ ?

† ಶ್ರೀ ಅಜೀಜ್ ಸೇಟ್.—ಅವಾರ್ಡ್‌ರೆಕಮೆಂಡೇಷನ್ ಸ್ಟ್ಯಾಟ್ಯೂಟರಿ ಅಲ್ಲವೆಂದು ಹೇಳಿದ್ದೇನೆ. ಅದಕ್ಕೋಸ್ಕರವೇ ಒಂದು ರೆಫರೆನ್ಸ್ ಮಾಡಿದ್ದೇವೆ. ಅವಾರ್ಡ್ ಪಾಸಾದ ಮೇಲೆ ಕಡ್ಡಾಯವಾಗುತ್ತದೆ.

ಶ್ರೀ ಕೆ. ಶ್ರೀರಾಮುಲು.—ಶಿಫಾರಸುಗಳನ್ನು ಜಾರಿಗೊಳಿಸುವುದಕ್ಕೆ ಆರ್ಥಿಕ ಕಟ್ಟಳೆಗಳು ಅಡ್ಡಿಯಾಗಿವೆ ಎಂದು ಹೇಳುತ್ತಾರೆ. ಇದರ ಬಗ್ಗೆ ಸ್ವಲ್ಪ ವಿವರಣೆಯನ್ನು ಕೊಡುತ್ತಾರೆಯೇ ?

ಶ್ರೀ ಅಜೀಜ್ ಸೇಟ್.—ಕೆಲವು ಕಾರ್ಖಾನೆಗಳಲ್ಲಿ ಫೈನಾನ್‌ಶಿಯಲ್ ಡಿಸೆಬಿಲಿಟಿ ಇರುವುದರಿಂದ ಅವರಿಗೆ ಜಾರಿಗೆ ಕೊಡುವುದಕ್ಕೆ ತೊಂದರೆಯಾಗುತ್ತದೆ ಎಂದು ಹೇಳುತ್ತಾರೆ. ನಾವು ಪರ್ಸ್ಯೂ ಮಾಡುತ್ತಿದ್ದೇವೆ. ಕೆಲವು ಕೇಸುಗಳನ್ನು ರೆಫರ್ ಮಾಡಿದ್ದೇವೆ- ಬೇಗ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ದಾವಣಗೆರೆ ಚಂದ್ರೋದಯ ಮಿಲ್ಸ್ ಶಿಫಾರಸುಗಳನ್ನು ಪೂರ್ತಿಯಾಗಿ ಜಾರಿಗೊಳಿಸಿಲ್ಲ ಎಂದು ಹೇಳಿದ್ದಾರೆ. ನಮ್ಮ ಅನುಭವದ ಪ್ರಕಾರ ದಾವಣಗೆರೆ ಕಾಟನ್ ಮಿಲ್ ಮತ್ತು ಇತರ ಮಿಲ್‌ಗಳವರು ಕೂಡ ಜಾರಿಗೆ ಕೊಟ್ಟಿಲ್ಲ. ಅದರ ಬಗ್ಗೆ ಮಾಹಿತಿ ಇದೆಯೇ?

ಶ್ರೀ ಅಜೀಜ್ ಸೇಟ್.—ಈಚೀಚೆಗೆ ಕೆಲವು ಮಿಲ್ಲುಗಳಲ್ಲಿ ಜಾರಿಗೆ ಕೊಟ್ಟಿಲ್ಲ ಎನ್ನುವ ಮಾಹಿತಿ ಬಂದಿದೆ ಆದುದರಿಂದಲೇ ಸ್ಟ್ಯಾಂಡಿಗ್ ಕಮಿಟಿ ಫಾರ್ ಟೆಕ್ಸ್‌ಟೈಲ್ ಮಾಡಬೇಕೆಂದಿದ್ದೇವೆ. ಅದನ್ನು ಮಾಡುವ ಉದ್ದೇಶವಾದರೂ ಇಂಥ ಶಿಫಾರಶುಗಳನ್ನು ಜಾರಿಗೆ ತರಬೇಕೆಂಬುದೇ ಆಗಿದೆ

ಶ್ರೀ ಎಂ. ಎಸ್. ಕೃಷ್ಣನ್.—ಶಿಫಾರಸುಗಳು ಶಾಸನಾತ್ಮಕವಾಗಿ ಕಡ್ಡಾಯವಲ್ಲ ಎಂದು ಹೇಳಿದ್ದಾರೆ. ಆ ಶಿಫಾರಸುಗಳು ಶಾಸನಾತ್ಮಕವಾಗಿ ಬೈಂಡಿಗ್ ಇದೆ, ವೇಜ್ ಬೋರ್ಡಿನ ಸಿಫಾರಸುಗಳಿಗೆ ಫೋರ್ಸ್ ಆಫ್ ದಿ ಸ್ಟ್ಯಾಚ್ಯೂಟ್ ಇದೆ. ಟೆಕ್ಸ್‌ಟೈಲ್ ವೇಜ್ ಬೋರ್ಡ್ ಶಿಫಾರಸುಗಳನ್ನು ಜಾರಿಗೆ ತರಬೇಕೆಂದು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಆದೇಶವನ್ನು ಕೊಟ್ಟಿಲ್ಲವೇ ? ಹೀಗಿರುವಾಗ ಅದನ್ನು ಜಾರಿಗೆ ತರುವುದಕ್ಕೆ ಎಷ್ಟು ದೂರ ಪ್ರಯತ್ನ ಮಾಡಿದ್ದೀರಿ.

ಶ್ರೀ ಅಜೀಜ್ ಸೇಟ್. ತಮಗೆ ಗೊತ್ತಿದ್ದ ಹಾಗೆ ವೇಜ್‌ಬೋರ್ಡ್ ರೆಕ್‌ಮೆಂಡೆಷನ್ನುಗಳನ್ನು ಜಾರಿಗೆ ಕೊಡುವ ಉದ್ದೇಶದಿಂದ ಸ್ಟ್ಯಾಂಡಿಂಗ್ ಕಮಿಟಿ ಫಾರ್ ಟೆಕ್ಸ್‌ಟೈಲ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗ ನಾವು ಪರ್ಸ್ಯೂ ಮಾಡುತ್ತಿದ್ದೇವೆ ಕೆಲವು ಕೇಸುಗಳನ್ನು ಕೋರ್ಟಿಗೆ ರೆಫರ್ ಮಾಡಿದ್ದೇವೆ- ಯಾವ ಯಾವುದು ನಮ್ಮ ಮುಂದೆ ಬಂದಿದೆ ಅವುಗಳ ಬಗ್ಗೆ ಜಾರಿಗೆ ಕೊಡಲು ಸತತವಾದ ಪ್ರಯತ್ನ ಮಾಡುತ್ತಿದ್ದೇವೆ.

Sri MALLIKARJUNA KHARGE.—In an answer you have mentioned the names of only four mills which have not implemented the recommendation of the I and II Wage Boards Recommendations. May I know what is the reason for not mentioning the name of the MSK Mills, Gulbarga, which has not implemented the recommendations of the Wage Board ?

Sri AZEEZ SAIT.—The names of four Mills have come to our notice by way of representations and that is why these names have been mentioned. In respect of MSK Mills, Gulbarga and Vallabhai Patil Mills, these Mills cases have been referred to the Industrial Courts. We have been pursuading these Mills to implement the recommendations.

---

† Indicates that remarks or speeches have not been revised by the member concerned.

ಶ್ರೀ ಕೆ. ಶ್ರೀರಾಮುಲು.—ಸಂಸ್ಥಾನದಲ್ಲಿರುವ ಹತ್ತಿ ಗಿರಣಿಗಳು 37 ಇವೆ, ಇದರಲ್ಲಿ ನಾಲ್ಕು ಕಾರ್ಖಾನೆಗಳು ಮಾತ್ರ ಜಾರಿಗೆ ತಂದಿಲ್ಲವೆಂದು ಹೇಳಿದ್ದಾರೆ. ಉಳಿದಿರತಕ್ಕ ಕಾರ್ಖಾನೆಗಳು ಜಾರಿಗೆ ತಂದಿವೆ ಎಂದು ಹೇಳುತ್ತಾರೆಯೇ ?

ಶ್ರೀ ಅಜೀಜ್ ಸೇಟ್.—ನಮ್ಮ ಗಮನಕ್ಕೆ ಬಂದಿರುವಂತೆ ಉತ್ತರದಲ್ಲಿ ಕೊಟ್ಟಿರುವ ನಾಲ್ಕು ಮತ್ತು ನಾನು ಈಗ ತಾನೇ ಹೇಳಿದ ಎರಡು ಕಾರ್ಖಾನೆಗಳು ಒಟ್ಟು ಆರು ಕಾರ್ಖಾನೆಗಳು ಜಾರಿಗೆ ಕೊಟ್ಟಿಲ್ಲ ಎಂದು ಗೊತ್ತಾಗಿದೆ. ಈಚೀಚೆಗೆ ಇಂಪ್ಲಿಮೇಂಟೇಷನ್ ಎವಾಲ್ಯುಯೇಷನ್ ಕಮಿಟಿಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿದ ಕಾಲದಲ್ಲಿ ಇನ್ನೂ ಅನೇಕ ಮಿಲ್ಲುಗಳು ವೇಜ್ ಬೋರ್ಡ್ ಶಿಫಾರಸುಗಳನ್ನು ಜಾರಿಗೆ ಕೊಟ್ಟಿಲ್ಲ ಎಂದು ಗೊತ್ತಾಗಿದೆ. ಅದಕ್ಕಾಗಿ ಸ್ಟ್ಯಾಂಡಿಗ್ ಕಮಿಟಿ ಫಾರ್ ವೇಜಸ್ ಇನ್ ಟೆಕ್ಸ್‌ಟೈಲ್ಸ್ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಕೆಲವು ದಿವಸಗಳಲ್ಲಿಯೇ ಈ ಕಮಿಟಿಯನ್ನು ಮಾಡುತ್ತೇವೆ. ಈಗ ಎಲ್ಲ ಮಿಲ್‌ಗಳಲ್ಲಿಯೂ ಒಂದೇ ರೀತಿ ಜಾರಿಗೆ ಕೊಟ್ಟಿದ್ದಾರೆ ಎಂದು ಹೇಳುವುದಕ್ಕೆ ತಯಾರಿಲ್ಲ.

EUCALYPTUS TREES

173. **SRI C. BYRE GOWDA** (Vemgal).—

Will the Minister for Agriculture and Forests be pleased to state.–

(*a*) the extent of forest land in the State in which Eucalyptus trees are grown so far and the weight of the Eucalyptus logs so far cut and the extent of land of the same ;

(*b*) to whom the Eucalyptus trees cut are sold and its rate per tonne ;

(*c*) whether there is any agreement between the purchasers and the Government ; if so, the terms and conditions of the same ; whether the purchasing firm of the trees belongs to the Birlas group of industries;

(*d*) the present market rate per ton of wood used for fuel ;

(*e*) if there is difference between the market rate and agreed rate whether the Government would cancel the contract ?

SRI K. H. PATIL (Minister for Agriculture and Forests).—

(*a*) Upto the end of 1971, the Forest Department has brought 1,55,335 acres under eucalyptus plantation ;

During 1972, the Mysore State Forest Corporation raised eucalyptus plantations over an area of 5,528 acres.

An area of 8,361.20 acres has been cleared and the total quantity removed so far is 39,692.78 tonnes

(*b*) The eucalyptus harvested has been supplied to :

(i) M/s. Harihar Polyfibres and

(ii) M/s. West Coast Paper Mills Ltd., at the rate of Rs. 24 per debarked stacked tonne of 81 Cft and Rs. 25 per debarked tonne of 81 Cft respectively,

(*c*) There is an agreement between M/s. Harihar Polyfibers and the Government of Mysore signed on 15th February 1971. The important conditions of this agreement are :—

the lease period is 30 years from 1-9-1971. This period may be renewed further, for such further period as may be mutually agreed upon.

(ii) the rates payable by the Company are as under :—

Period	*Rate payable for debarked stacked tonne of 81 Cft.*
1—9—1971 to 31—8—1986	Rs. 24
1—9—1986 to 31—8—1996	Rs. 30
1—9—1996 to 31—8—2001	Rs. 36

M/s. Harihar Polyfibers is one of the several industrial units set up by M/s. Birlas in this country.

In case of West Cost Paper Mills the Supply is on *ad hoc* basis.

(*d*) This rate will vary depending upon the distance from the forest generally from Rs. 25 to Rs. 80 per tonne.

(*e*) The rate at which the forest raw product is made available to an industry cannot be compared with the market rate of firewood. It depends upon the industrial policy which has to take into consideration several other factors.

The Government of Mysore is however trying to enhance the rates.

ಶ್ರೀ ಸಿ. ಬೈರೇಗೌಡ.—ಬಿರ್ಲಾ ಅವರಿಗೆ ಸೇರಿದ ಹರಿಹರ ಪಾಲಿಫೈಬರ್ಸ್ ಮತ್ತು ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್‌ಗೆ ಅಗ್ರಿಮೆಂಟಾಗಿದೆ ಎಂದು ಹೇಳಿದ್ದಾರೆ. ಇವರನ್ನು ಬಿಟ್ಟು ಇತರೆಯವರು ಯಾರಾದರೂ ಈ ಸರಕು ಬೇಕು ಎಂದು ಕೇಳುತ್ತಿದ್ದಾರೆಯೇ ?

†ಕೆ. ಎಚ್. ಪಾಟೀಲ್.—ಕೆಲವರು ಕೇಳುತ್ತಿದ್ದಾರೆ. ಇವರಿಗೆ ಕೊಟ್ಟಿರುವ ಪ್ರದೇಶ ಬಿಟ್ಟು ಉಳಿದ ಪ್ರದೇಶದಲ್ಲಿ ಬೆಳೆಯುವುದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ.—ಒಪ್ಪಂದದ ಪ್ರಕಾರ 'ಏರಿಯಾ' ಎಂದು ನಿಗದಿ ಮಾಡಿದ್ದೀರೋ ಅಥವಾ ಕನ್‌ಸೇಷನ್ ಏರಿಯಾ, ನಾನ್ ಕನ್‌ಸೇಷನ್ ಏರಿಯಾ ಎಂದು ಮಾಡಿದ್ದೀರೋ ? ಅಥವಾ ವರ್ಷಕ್ಕೆ ಇಷ್ಟು ಟನ್ ಕೊಡಬೇಕು ಎಂದು ನಿಗದಿ ಮಾಡಿದ್ದೀರೋ ?

ಶ್ರೀ ಕೆ. ಎಚ್. ಪಾಟೀಲ್.—ಏರಿಯಾ ಫಿಕ್ಸ್ ಮಾಡಿದೆ ಮತ್ತು 1971 ರಿಂದ 1973ರ ವರೆಗೆ 50 ಸಾವಿರ ಟನ್ ಕೊಡಬೇಕೆಂದು ಅಗ್ರಿಮೆಂಟಿನಲ್ಲಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿ ಒಪ್ಪಂದವನ್ನು ಮಾಡಿಕೊಳ್ಳತಕ್ಕ ಸಂದರ್ಭದಲ್ಲಿ ತಮ್ಮ ಕಾರ್ಖಾನೆಯಲ್ಲಿ ಇಷ್ಟು ಜನ ಕೆಲಸಗಾರರನ್ನು ನೇಮಿಸಿಕೊಳ್ಳಲೇ ಬೇಕು ಎನ್ನುವ ಕಡ್ಡಾಯವನ್ನು ಹಾಕಿದ್ದಾರೆಯೆ ಸ್ವಾಮಿ ?

ಶ್ರೀ ಕೆ. ಎಚ್. ಪಾಟೀಲ್.—ಅಗ್ರಿಮೆಂಟನ್ನು ನೋಡಿದ್ದರಲ್ಲಿ ಅದರಲ್ಲಿ ಆ ರೀತಿಯ ಕರಾರುಗಳಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈ ಒಪ್ಪಂದ ಬಿರ್ಲಾ ಅದರ ಜೊತೆಯಲ್ಲಿ 1971 ರಿಂದ 2001 ವರ್ಷದವರೆಗೆ ಮಾಡಿಕೊಂಡಿದ್ದಾರೆ. ಅದರ ಔಚಿತ್ಯವಾದರೂ ಏನು ಇತ್ತು ! ಏಕೆಂದರೆ ಒಂದು ಟನ್ನಿಗೆ 24 ರೂಪಾಯಿ ದರದಲ್ಲಿ ಕೊಡಬೇಕೆಂದು ಹೇಳಿರುವುದು ತೀರ ಕಡಿಮೆಯಲ್ಲವೇ ? ಅವರು ಬಾಕಿ ಕಡೆ ಕಾರ್ಖಾನೆಗಳನ್ನು ನಡೆಸುತ್ತಿರುವಲ್ಲಿ ಇದಕ್ಕಿಂತ ಹೆಚ್ಚು ಹಣ ಕೊಡುತ್ತಿಲ್ಲವೇ ? ಹಾಗೆ ಕೊಡುತ್ತಿದ್ದರೆ ಅದನ್ನು ಕಂಪೇರ್ ಮಾಡಿದ್ದೀರಾ ! ಬಿರ್ಲಾ ಅವರಿಗೆ ಅನುಕೂಲ ಮಾಡುವುದಕ್ಕೆ ಈ ರೀತಿ ಕೊಡಲಾಗಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಈ ಸರ್ಕಾರ ಬಂದ ಮೇಲೆ ಕೊಟ್ಟಿಲ್ಲ, ಅದನ್ನು ಹಿಂದಿನ ಸರ್ಕಾರ ಮಾಡಿದೆ. ಬಹುಶಃ ಬಿರ್ಲಾ ಕಂಪೆನಿಯವರು ದರವನ್ನು ಬದಲಾಯಿಸುವುದಕ್ಕೆ ವಿಚಾರ ಮಾಡಬಹುದು ಎಂದು ನಾನು ಆಶಯ ಮಾಡುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—1,55,335 ಎಕರೆಯಲ್ಲಿ ನೀಲಗಿರಿ ಮರವನ್ನು ನಡೆಸಲಾಗಿದೆ ಎಂದು ಹೇಳಿದ್ದಾರೆ. ನೀಲಗಿರಿ ಎಣ್ಣೆ ವಿಶೇಷವಾಗಿ ವೈದ್ಯಕೀಯಕ್ಕೆ ಉಪಯೋಗವಾಗುತ್ತದೆ. ಗಂಧದ ಎಣ್ಣೆಯನ್ನು ತೆಗೆಯುವ ಹಾಗೆ ನೀಲಗಿರಿ ಎಣ್ಣೆಯನ್ನೂ ತೆಗೆಯುವುದಕ್ಕೆ ಸರ್ಕಾರದವರು ಒಂದು ಡಿಸ್ಟಿಲರಿ ಮಾಡುವ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಅದು ಒಂದು ಸಲಹೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾರುಕಟ್ಟೆಯಲ್ಲಿ ಒಂದು ಟನ್ ಸೌದೆಗೆ ಏನು ಬೆಲೆ ಇದೆಯೋ ಆ ಬೆಲೆಗಿಂತ ಕಡಿಮೆ ದರಕ್ಕೆ ಕೊಟ್ಟಿರುವುದರ ಉದ್ದೇಶವೇನು ?

ಶ್ರೀ ಕೆ. ಎಚ್. ಪಾಟೀಲ್.—ಬಹುಶಃ ಆಗಿನ ಸರ್ಕಾರ ಕೈಗಾರಿಕೆಗಳು ಮೈಸೂರಿನಲ್ಲಿ ಬೆಳೆಯಬೇಕು ಎನ್ನುವ ಉದ್ದೇಶದಿಂದ ಕೊಟ್ಟಿರಬಹುದು ಎಂದು ನನ್ನ ಭಾವನೆ.

ಶ್ರೀ ಸಿ. ಬೈರೇಗೌಡ.—ದರಗಳನ್ನು ಹೆಚ್ಚಿಸಲು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಒಪ್ಪಂದವಿದ್ದರೂ ಸಹಿತ ಯಾವ ರೀತಿ ದರಗಳನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ ? ಅದು ಹೇಗೆ ಸಾಧ್ಯವಾಗುತ್ತದೆ ?

ಶ್ರೀ ಕೆ. ಎಚ್. ಪಾಟೀಲ್.—ಅವರ ಮನವೊಲಿಸಿ ಬದಲಾವಣೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದಿನ ಸರ್ಕಾರಗಳು ಇಂಥ ಕಂಪೆನಿಗಳ ಜೊತೆ ಮಾಡಿಕೊಂಡ ಒಪ್ಪಂದಗಳಿಂದ ಸರ್ಕಾರಕ್ಕೆ ಲುಕ್ಸಾನಾಗತಕ್ಕ ಸಂದರ್ಭದಲ್ಲಿ ಅಂಥ ಒಪ್ಪಂದವನ್ನು ರದ್ದುಪಡಿಸುವುದಕ್ಕೆ ಸಂಬಂಧಪಟ್ಟಂತೆ ಒಂದು ಕಾನೂನು ತರಬೇಕೆಂದು ಈ ಸದನದಲ್ಲಿ ಮಾನ್ಯ ಚನ್ನಬಸಪ್ಪನವರು ಹೇಳಿದರು. ಅದೇ ರೀತಿ ಇಂಥದಕ್ಕೆ ಕೂಡ ಆ ಕಾನೂನು ಅನ್ವಯ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಒಂದು ಒಪ್ಪಂದದಲ್ಲಿ ಒಂದು ಭಾಗ ಸರ್ಕಾರ, ಇನ್ನೊಂದು ಭಾಗ ಕೈಗಾರಿಕೆಯವರು ಇರುವುದರಿಂದ ಉಭಯತಾಪಿ ಒಪ್ಪಿಕೊಂಡು ಆ ಒಪ್ಪಂದವನ್ನು ಬದಲಾವಣೆ ಮಾಡಬೇಕು. ಕಾನೂನು ಮಾಡಿ ರದ್ದು ಮಾಡಿದರೆ ಸರ್ಕಾರದ ಮಾತಿಗೆ ಬೆಲೆಯಿಲ್ಲದಂತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ಹಿಂದೆ ಒಂದು ಒಪ್ಪಂದವಾಗಿದೆ. ಅದರಲ್ಲಿ ಎಷ್ಟು ವರ್ಷಗಳವರೆಗೆ ಕಾನೂನು ಪ್ರಕಾರ ಇರಬೇಕು ಎನ್ನುವುದು ಎಲ್ಲ ಇದೆ. ಈಗ ಏನು ಒಪ್ಪಂದವಾಗಿದೆ ಅದರಂತೆ ಮುಂದುವರಿದರೆ ಸರಕಾರದ ದೃಷ್ಟಿಯಲ್ಲಿ ನಷ್ಟವಾಗುತ್ತದೆ ಎನ್ನುವುದೂ ನಮ್ಮ ಗಮನಕ್ಕೆ ಬಂದಿದೆ. ಈ ರೀತಿ ಆಗಲೇ ಒಂದು ಒಪ್ಪಂದವಾಗಿರುವುದರಿಂದ ಇದನ್ನು ಹಾಗೇ ಮುಂದುವರಿಸಬೇಕೇ ಇಲ್ಲವೇ ಬೇರೆ ಒಂದು ರೀತಿಯ ಕಾನೂನು ತಿದ್ದುಪಡಿ ಮಾಡಿ ತರಬೇಕೇ ಅಥವಾ ಬೇರೆ ಒಂದು ಕಾನೂನೇ ತರಬೇಕೇ ಇವೆಲ್ಲವನ್ನೂ ಮಾಡುವಾಗ ಕಾನೂನು ಮುಂದಿಟ್ಟುಕೊಂಡೇ ನೋಡಬೇಕಾಗಿದೆ. ನಿಮ್ಮ ಮನಸ್ಸಿನಲ್ಲಿ ಏನಿದೆಯೋ ಅದರಂತೆ ಸಂಬಂಧಪಟ್ಟವರು ಹಿಂದೆ ಮಾಡಿರುವ ಒಪ್ಪಂದದ ಟರ್ಮ್ಸ್ ಅಂಡ್ ಕಂಡಿಷನ್ಸ್ ಯಾವ ರೀತಿ ಇತ್ತು ಅದೇ ರೀತಿ ಈಗಲೂ ಮುಂದುವರಿಸುವುದು ಸಾಧ್ಯವೇ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಕಾನೂನು ಪ್ರಕಾರ ಆಗದೇ ಇದ್ದರೂ ಅವರ ಕನ್‌ಸೆಂಟ ತೆಗೆದುಕೊಂಡು ಈಗಿರುವ ಕಂಡಿಷನ್‌ಗಳನ್ನು ಬದಲಾವಣೆಮಾಡಿ ಅವರನ್ನು ಒಪ್ಪಿಸುತ್ತೇವೆ ಎಂದು ಹೇಳಿದ್ದೇವೆ. ನಮ್ಮ ನಿರೀಕ್ಷೆ ಪ್ರಕಾರ ಫಾಲಿಫೈಬರ್‌ನವರೂ ಒಪ್ಪಬಹುದು, ತಮ್ಮ ಗಮನದಲ್ಲಿರತಕ್ಕದ್ದು ಅಲ್ಯೂಮಿನಿಯಂ ಕಾರ್ಖಾನೆ ಬಗ್ಗೆ. ಇಲ್ಲಿ ಎಲೆಕ್ಟ್ರಿಸಿಟಿಯನ್ನು ಬಹಳ ಕಡಿಮೆ ದರದಲ್ಲಿ ಕೊಡಲಾಗಿದೆ ಎನ್ನುವುದು ಈ ಸಭೆಯಲ್ಲೂ ಬಂದಿದೆ, ಸರಕಾರದ ದೃಷ್ಟಿಯಲ್ಲೂ ಕೂಡ ನಿಮ್ಮ ದೃಷ್ಟಿಯಲ್ಲಿರುವಂತೆ ನಮ್ಮ ದೃಷ್ಟಿಯಲ್ಲೂ, ವಿದ್ಯುಚ್ಛಕ್ತಿಗಾಗಲೀ ಅರಣ್ಯ ಸಂಪತ್ತಿಗಾಗಲಿ ಇಲ್ಲಿ ಕೊಡುತ್ತಿರುವ ರೇಟು ತೀರಾ ಕಡಿಮೆ ಎನ್ನುವುದು ಸರಕಾರದ ಅಭಿಪ್ರಾಯವೇ ಆಗಿದೆ. ಇದು ಸರಿಯಾಗಿವೆ ಎಂದು ನಾವು ಇಲ್ಲಿ ಸಮರ್ಥನೆ ಮಾಡುತ್ತಿಲ್ಲ. ಇವೊತ್ತಿನ ಸನ್ನಿವೇಶದಲ್ಲಿ ಇದನ್ನು ಹೆಚ್ಚಿಸಬೇಕಾದುದು ಖಂಡಿತ ಅಗತ್ಯ. ನಾವು ಇದರ ಬಗ್ಗೆ ಪ್ರಯತ್ನ ಮಾಡಿ ಒಂದು ತೀರ್ಮಾನ ತೆಗೆದುಕೊಂಡು ಆ ಕಂಪನಿಯವರ ಮನ ಒಲಿಸಿ ಖಂಡಿತ ಅವರಿಂದ ಒಪ್ಪಿಗೆ ಪಡೆಯಲು ಮತ್ತು ಅವರ ಒಪ್ಪಂದವನ್ನು ಹೇಗೆ ಮಾಡಬೇಕು ಎಂದು ಪ್ರಯತ್ನ ಮಾಡುತ್ತಿದ್ದೇವೆ. ಇದನ್ನು ನೋಡೋಣ.

Underground Drainage Scheme of Kolar

176. **Sri C. BYRE GOWDA** (Vemgal).—

Will the Minister for Municipal Administration be pleased to state.—

(*a*) when the underground drainage scheme in Kolar was started; the estimated cost of the scheme then;

(*b*) the amount spent so far and the present stage of the scheme;

(*c*) the reason for not completing the work so far;

(*d*) when the work will be completed?

Sri B. BASAVALINGAPPA (Minister for Municipal Administration).—

(*a*) The underground drainage scheme in Kolar was started in September, 1955. The estimated cost of the scheme then was Rs. 7.5 lakhs (revised estimate Rs. 9.23 lakhs).

(*b*) The amount of expenditure incurred so far is Rs. 8,50,705. Except the 12th division (daraga area) all the sanctioned divisions of the scheme are at the stage of completion.

(*c*) The main reasons for not completing the scheme so far are.—

The frequent transfer of work from one division of P. W. D. to other and the revision of estimates.

(*d*) This work will be completed by March, 1974.

ಶ್ರೀ ಸಿ. ಬೈರೇಗೌಡ.—1955ನೇ ಇಸವಿಯಲ್ಲಿ ಆರಂಭವಾದ ಸ್ಕೀಂಗಳು 1973ನೇ ಮಾರ್ಚಿಯೊಳಗೇ ಮುಗಿಸುತ್ತೇವೆಂದು ಹೇಳಿದ್ದರೂ ಇಲ್ಲಿ ಇನ್ನೂ ಸ್ವಲ್ಪ ಕೆಲಸಗಳು ಆಗಿವೆ ಇದರ ಬಗ್ಗೆ ಎನ್‌ಕ್ವೈರಿ ಯಾವಾಗ ಮಾಡಿ ಸರಿಪಡಿಸುತ್ತೀರಿ ? ತಮ್ಮ ಪಾಲಿಸಿ ಪ್ರಕಾರ ತಲೆಮೇಲೆ ಮಲ ಹೊರುವುದು ನಿಲ್ಲಿಸುವುದನ್ನು ಬರುವ ಆಗಸ್ಟು ತಿಂಗಳೊಳಗಾಗಿಯೇ ಜಾರಿಗೆ ತರುತ್ತೇವೆಂದು ಹೇಳಿದಿರಿ ? ಅಷ್ಟರೊಳಗೆ ಇದು ಮಾಡಲು ಸಾಧ್ಯವೇ ? ಆ ನಂತರ ಇದರಲ್ಲಿ (ಡಿ)ಗೆ ಉತ್ತರವಾಗಿ ಈ ಕೆಲಸವನ್ನು 1974ರ ಮಾರ್ಚ್ ತಿಂಗಳೊಳಗಾಗಿ ಮುಗಿಸುತ್ತೇವೆಂದು ಹೇಳಿದ್ದೀರಿ ? ಹೀಗೆ ಹೇಳುವುದು ನಿಮ್ಮ ತತ್ವಕ್ಕೆ ವಿರೋಧವಾಗುವುದಿಲ್ಲವೇ ?

† **ಶ್ರೀ ಬಿ. ಬಸವಲಿಂಗಪ್ಪ.**—ಇದಕ್ಕೆ ಕೆಲವಾರು ಕಾರಣಗಳಿವೆ. ಮೊದಲು ಇದು ಪಿ.ಡಬ್ಲ್ಯು.ಡಿ. ಇಲಾಖೆಗೆ ಸೇರಿತು. ಅನಂತರ ಇದು ಪಿ.ಹೆಚ್.ಇ. ಇಲಾಖೆಗೆ ವರ್ಗವಾಯಿತು. ಅನಂತರ ಇದರ ಅಂದಾಜುಗಳು ಬದಲಾವಣೆ ಮಾಡಬೇಕಾಗಿ ಬಂತು. ಇವೆಲ್ಲ ಕಾರಣಗಳಿಂದ ಇಲ್ಲಿ ಕಾರ್ಯಕ್ರಮದಂತೆ ಕೆಲಸಗಳಾಗುವುದು ಸ್ವಲ್ಪ ನಿಧಾನವಾಗುತ್ತಿದೆ. ಮತ್ತು ಇದಕ್ಕೆ ಯಾರು ಕಾರಣರು ಎನ್ನುವುದನ್ನೆಲ್ಲಾ ವಿಚಾರಮಾಡಿ ಆದಷ್ಟು ಜಾಗ್ರತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಇನ್ನು ನೈಟ್ ಸಾಯಿಲ್ ಬಗ್ಗೆ ಹೇಳಿದರು. ಇದರ ಕೆಲಸಗಳು ಸುವೇಜ್ ಪೈಪುಗಳ ಜೋಡಣೆ ಇತ್ಯಾದಿ ಕೆಲಸಗಳು ಆಗಬೇಕಾಗಿರುವುದರಿಂದ ಇದು ಸ್ವಲ್ಪನಿಧಾನವಾಗುತ್ತದೆ. ಆಗಸ್ಟು 1973ರ ರೊಳಗಾಗಿ ನಿಲ್ಲಿಸುತ್ತೇವೆ ಎಂದು ಏನು ಹೇಳಿದ್ದೇವೆ. ಇದರಲ್ಲಿ ಯಾವ ತಾರತಮ್ಯವನ್ನೂ ಮಾಡಲಾಗುವುದಿಲ್ಲ ಎಲ್ಲೆಲ್ಲಿ ಸೂಯೇಜು ಪೈಪುಗಳಿವೆಯೋ ಅಲ್ಲಿ ಬೇಗನೆ ಕೆಲಸಗಳಾಗುತ್ತವೆ ಎಲ್ಲಿ ಸೂಯೇಜು ಪೈಪುಗಳು ಇಲ್ಲವೋ ಅಂತಹ ಕಡೆಗಳಲ್ಲಿ ಸೋಕ್ ಪಿಟ್‌ಗಳನ್ನು ಮಾಡಿಸಿ ಇದರ ಮೂಲಕ ಮಾಡಬೇಕೆಂದೂ ಇದೆ. ಒಟ್ಟಿನಲ್ಲಿ ಇದನ್ನು ನಿರ್ಮೂಲ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ.

Immovable Properties Belonging to Thirupathi Sri Amargiri Venkataramanaswamy

365. **Sri H. S. SIDDAPPA** (Arsikere) —

Will the Minister for Revenue be pleased to state :—

(*a*) the immovable properties held in the name of Thirupathi Sri Amargiri Venkataramanaswamy in Arasikere Taluk, Kasaba Hobli ;

(*b*) the properties leased out to private parties, the purpose and conditions of lease ;

(*c*) whether the lesse fulfilled the lease conditionse ; if not, why not ; the action proposed for fulfilment of the lease conditions ?

Sri N. HUTCHAMASTHY GOWDA (Minister for Reveue).—

(*a*) An extent of 109 Acres 18 guntas of land, one site and a house are endowed in the name of deity.

(*b*) The lands have been leased out to the private parties subject to the payment of Gutta amount fixed on them.

(*c*) The lessees have fulfilled the lease conditions. So the question of taking action does not arise.

ಶ್ರೀ ಎಚ್. ಎಸ್. ಸಿದ್ದಪ್ಪ.—ಉತ್ತರದಲ್ಲಿ ಒಂದು ಸೈಟು ಹಾಗೂ ಒಂದು ಮನೆ ಎಂದು ಇದೆ, ಇದರ ವಿವರಗಳೇನು ತಿಳಿಸುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ವಿವರಗಳು ಈಗ ನನ್ನಲ್ಲಿಲ್ಲ. ಆದರೆ ಇದರಲ್ಲಿ ಬರಬೇಕಾದ ಬಾಕಿಗಳು ಹಾಗೂ ಗೇಣಿ ಬಂದಿದೆ ಎಂದು ನನ್ನಲ್ಲಿರುವ ವರದಿಯಿಂದ ತಿಳಿದು ಬರುತ್ತದೆ; ಮಿಕ್ಕ ಇತರ ಎಲ್ಲ ವಿವರಗಳನ್ನು ಆ ಮೇಲೆ ತರಿಸಿ ಸಭೆಗೆ ಒದಗಿಸಿಕೊಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಮಂತ್ರಿಗಳು ಇದರ ವಿವರಗಳನ್ನು ಕೊಡಲು ಈಗ ಇಲ್ಲ. ಆ ಮೇಲೆ ಕೊಡುತ್ತೇನೆ ಎಂದು ಹೇಳಿರುವಾಗ ಮಾನ್ಯ ಅಧ್ಯಕ್ಷರು ಇದನ್ನು ತಡೆಹಿಡಿಯಲ್ಪಟ್ಟ ಪ್ರಶ್ನೆಯಾಗಿ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರು ಹಾಗೆ ಅಪ್ಪಣೆ ಕೊಟ್ಟು ತಡೆಹಿಡಿಯಲ್ಪಟ್ಟ ಪ್ರಶ್ನೆಯಾಗಿ ಮಾಡಿದರೆ ಅವಕ್ಕೆ ನನ್ನ ಅಭ್ಯಂತರವಿಲ್ಲ, ಮುಂದೆ ಇದರ ಎಲ್ಲ ವಿವರಗಳನ್ನು ಎಂದರೆ ಮನೆ ಹಾಗೂ ಸೈಟಿನ ಬಗ್ಗೆ ಒದಗಿಸಿ ಕೊಡುತ್ತೇನೆ.

ಅಧ್ಯಕ್ಷರು.—ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

Expenditure incurred during the visit of Prime Minister

404. **Sri KONANDUR LINGAPPA** (Thirthahalli).—

Will the Chief Minister be pleased to state.—

(*a*) the expenditure incurred by the Government during the recent visit of the Prime Minister Smt. Indira Gandhi to Udipi and Mangalore ;

(*b*) the purpose of her visit to these places ?

Sri D. DEVARAJ URS (Chief Minister).—

(*a*) Rupees Three thousand, six hundred and fortynine and fifty-paise are incurred.

(*b*) She had come to inaugurate Dr. Baliga's Surgical Unit at Manipal. During the period she also visited Sri Krishna Temple at Udipi

ಶ್ರೀ ಕೋಣಂದೂರು ಲಿಂಗಪ್ಪ.—ಉತ್ತರದಲ್ಲಿ ರೂ. 3649—50 ಪೈಸೆ ಖರ್ಚಾಗಿದೆ ಎಂದು ತಿಳಿಸಿದ್ದಾರೆ. ಇಷ್ಟು ಕಡಿಮೆ ಖರ್ಚಾಗಿರುವುದರಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚಾಗಿದೆ ತಿಳಿಸುತ್ತಾರೆಯೇ ?

† ಶ್ರೀ ಡಿ. ದೇವರಾಜ ಅರಸ್.—ಟ್ರಾನ್ಸ್‌ಪೋರ್ಟ್‌ಗಾಗಿ ಎರಡು ಸಾವಿರ ರೂಪಾಯಿಗಳು ಹಾಗೂ ಇನ್ನಿತರ ಬಾಬುಗಳ ಎಂದರೆ ಬೆಂಗಳೂರಿಂದ ವೆಹಿಕಲ್ಸ್‌ಗಳಿಗಾಗಿ 345 ರೂಪಾಯಿಗಳು, 290 ರೂಪಾಯಿಗಳು, 305 ರೂಪಾಯಿಗಳು ಮತ್ತು ಮಂಗಳೂರಿನಲ್ಲಿ ಸ್ಟಾಫ್‌ಗಾಗಿ 220 ರೂ. ಕೇಟರಿಂಗ್‌ಗಾಗಿ 25 ರೂಪಾಯಿಗಳು, ಹೀಗೆ ಇವೆಲ್ಲ ಒಟ್ಟು ಸೇರಿ ಮೂರುಸಾವಿರ ಚಿಲ್ಲರೆಯಾಗುತ್ತದೆ:

ಶ್ರೀ ಕೋಣಂದೂರು ಲಿಂಗಪ್ಪ.—ಮಂಗಳೂರು ಜಿಲ್ಲೆಯಲ್ಲಿ ಅಲ್ಲಿಯ ಶಾಸಕರನ್ನೂ ಯಾರನು ಕರೆಯದೇ ಊಟ ಹಾಕಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಬೇರೆಯವರು ಊಟ ಹಾಕಿದಾಗ ಎಲ್ಲರನ್ನೂ ಕರೆಯಬೇಕು ಎಂದು ರೂಲು ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಪ್ರಧಾನ ಮಂತ್ರಿಗಳಿಗೆ ಊಟ ಹಾಕಿದಾಗ ಎಷ್ಟು ಜನ ಊಟಕ್ಕೆ ಸೇರಿದ್ದರು. ಅದರಲ್ಲಿ ಎಷ್ಟು ಜನ ರಾಜ್ಯ ಸರ್ಕಾರದವರು ಇದ್ದರು?

ಶ್ರೀ ಡಿ. ದೇವರಾಜ ಅರಸ್.—ಮಣಿಪಾಲ್ ಇನ್ಸ್ಟಿಟ್ಯೂಟ್‌ನಲ್ಲಿ ಊಟ ಹಾಕಿದರು. ಎಷ್ಟು ಜನ ಸೇರಿದ್ದರು ಎನ್ನುವುದಕ್ಕೆ ಲೆಕ್ಕ ಇಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—3649 ರೂ. ಖರ್ಚಾಗಿದೆ ಎಂದು ತಿಳಿಸಿದ್ದೀರಿ. ಆದರಲ್ಲಿ ರಕ್ಷಣಾ ಇಲಾಖೆಯ ವಿಶೇಷ ಬಂದೋಬಸ್ತಿಗಾಗಿ ಎಷ್ಟು ಖರ್ಚಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಎಲ್ಲಾ ಸೇರಿ ಮೂರು ಸಾವಿರ ಚಿಲ್ಲರೆ ಎಂದು ಹೇಳಿದ್ದು.

ಶ್ರೀ ಎಚ್. ಎಸ್. ಸಿದ್ದಪ್ಪ. ಊಟ ಬೇರೆಯವರು ಹಾಕಿದರು, ಎಂದು ಹೇಳಿದಿರಿ. ಅದರಲ್ಲಿ ಇಷ್ಟು ಜನ ಎಂದು ಹೇಳಲಿಲ್ಲ. ಡಿಷಸ್ ಏನೇನು ಇತ್ತು ಎಂದು ಹೇಳುತ್ತೀರಾ !

ಶ್ರೀ ಡಿ. ದೇವರಾಜ ಅರಸ್.—ಬೆಳ್ಳುಳ್ಳಿ ಚಟ್ನಿ ಇದ್ದಹಾಗೆ ಇರಲಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ. ಪ್ರಧಾನ ಮಂತ್ರಿಗಳು ಉಡುಪಿಯ ದೇವರ ಸಂದರ್ಶನವಾಗುವಂತೆ ಮಾಡಿದಿರಿ. ಅಲ್ಲಿ ಅವರು ಪೂಜೆಗೀಜೆ ಏನಾದರೂ ಮಾಡಿದರೇ ?

ಶ್ರೀ ಡಿ. ದೇವರಾಜ್ ಅರಸ್:—ಮಂಗಳಾರತಿ ಪೂಜೆ ಅನ್ನುವುದಾದರೆ ಮಂಗಳಾರತಿ ಇದ್ದೇ ಇರುತ್ತದೆ.

Smuggling of foreign Goods in Shimoga District

509. **Sri S. M. SHREERNALY CHANDRASEKHAR** (Hosanagar).—

Will the Chief Minister be pleased to state:—

(*a*) whether the Government is aware that smuggling of foreign goods in Shimoga district is on the increase ;

(*b*) if so, the action Government propose to take to prevent it ?

Sri D. DEVARAJ URS (Chief Minister).—

(*a*) and (*b*) Regulation of import of foreign goods and levy of customs duty on such goods are matters which concern the Central Government and the Parliament. State Government is not in a position to furnish the information required in the question.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು (ಅ) ಮತ್ತು (ಆ) ಗೆ ಉತ್ತರವಾಗಿ ವಿದೇಶೀ ವಸ್ತುಗಳ ಆಮದು ಹಾಗೂ ಅವುಗಳ ಬಗ್ಗೆ ಸುಂಕ ವಿಧಿಸುವ ವಿಷಯಗಳು ಕೇಂದ್ರ ಸರ್ಕಾರದ ಸಂಸತ್ತಿಗೆ ಸೇರಿದ ವಿಷಯಗಳಾಗಿವೆ ಎಂದು ಹೇಳಿದ್ದೀರಿ. ನನ್ನ ಪ್ರಶ್ನೆ ಏನೆಂದರೆ ಪೋಲೀಸ್ ಇಲಾಖೆಯವರು ವಿಜಿಲೆಂಟ್ ಆಗಿದ್ದು ತಡೆ ಹಿಡಿಯುವುದಕ್ಕೆ ಆಗುವುದಿಲ್ಲವೇ. ಈವೊತ್ತು ಗೋಲ್ಡ್, ಬಿಸ್ಕತ್ಸ್, ವಿದೇಶಿ ಮದ್ಯಪಾನಗಳು, ವಾಚಸ್ ಇವೆಲ್ಲಾ ಹೇರಳವಾಗಿ ಶಿವಮೊಗ್ಗಾದಲ್ಲಿ ಬರುತ್ತವೆ. ಅವುಗಳು ಮಾರ್ಕೆಟ್‌ನಲ್ಲಿ ಸಿಕ್ಕುತ್ತವೆ. ಅವರು ಬಿಲ್ ಕೊಡದೇ ವ್ಯಾಪಾರ ಮಾಡುತ್ತಿದ್ದಾರೆ. ಇದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ.

† ಶ್ರೀ ಡಿ. ದೇವರಾಜ ಅರಸ್.—ನೀವು ಸುಂಕದ ವಿಷಯ ಕೇಳಲಿಲ್ಲ. ನೀವು ಕೇಳಿದ್ದು whether the Government is aware that smuggling of foriegn goods in Shimoga district is on the increase' ಎಂದು ಕೇಳಿದ್ದೀರಿ ಅದಕ್ಕೆ, we have none of our business. It is Government of India business, ಎಂದು ಹೇಳಿದ್ದೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ರೀತಿ ಪ್ರತಿಯೊಂದು ಅಂಗಡಿಗಳಲ್ಲೂ ದೊರೆಯುತಕ್ಕ ವಿದೇಶೀ ವಸ್ತುಗಳನ್ನು ತಡೆಯಲಿಕ್ಕೆ ಈ ಕೆಲಸ ಪೋಲೀಸ್ ಖಾತೆಗೆ ಒಳಪಡುವುದಿಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಅದು ನಮಗೆ ಇಲ್ಲ ಎಂದು ಗೊತ್ತಾಗುತ್ತದೆ. ಸೆಂಟ್ರಲ್ ಗೌರ್ನಮೆಂಟ್‌ನವರು ಪೂರ್ಣವಾಗಿ ತಮ್ಮ ಅಧಿಕಾರವನ್ನು ನಮಗೆ ಕೊಟ್ಟರೆ ಆಗ ಹಿಡಿಯುವುದಕ್ಕೆ ಪ್ರಯತ್ನ ಮಾಡೋಣ.

Horticultural Training Centres

522. **Smt. SUMATHI B. MADIMAN** (Dharawar Rural).—

Will the Minister for Agriculture and Forests be pleased to state.—

(*a*) the number of Horticultural Training Centres allotted or set up in the State ;

(*b*) whether all are working satisfactorily ?

Sri K. H. PATIL (Minister for Agriculture and Forests).—

(*a*) 17.

(*b*) Yes.

Smt. SUMATHI B. MADIMAN.—May I know whether these Centres are started in the Distrct head-quarters and if so, kindly give the names of the District head-quarters.

†**Sri K.H. PATIL.**—Some of them are in the District head-quarters and some of them are in Taluk head-quarters. The names are like this, madam

1. Lalbagh, Bangalore District,
2. Sakalavara, do
3. Bellary, Bellary District.
4. Chickjogihalli, do
5. Gubbi, Tumkur District.
6. Bellara, do
7. Chandrampalli, Gulbarga District.
8. Siddapura, North Kanara District.
9. Somanahallikaval, Hasan District.
10. B. R. Hills, Mysore District.
11. Bannur, Mysore District
12. Indi, Bijapur District.
13. Sagar, Shimoga District.
14. Halladakere Farm, Bidar District.
15. Iyyanahalli Farm, Chitradurga District.
16. Munirabad, Raichur District.
17. Manday, Manday District.

These are the centres that are now in existence.

Smt. SUMATHI B. MADIMAN.—Were these Centres started recently and have you any plans of starting them in the other Districts ?

Sri K. H. PATIL.—It is the intention of the Government to start at least one such farm in every district,

Smt. SUMATHI B. MADIMAN.—At a time, how many trainees are admitted and so far, how many have been trained ?

Sri K. H. PATIL.—The stregth in each of the schools ranges from 10 to 150 and the total number of students will be 1000·

Sri J. P. SARWESH.—May I know whether the Government is aware that the trainees who have passed from these centres- hundreds and hundreds of them-are unemployed ?

Sri K. H. PATIL.—It is not necessarily the intention of the Government to make them employees, but it is the intention of the Government to make them go to their farms and make them selves good farmers.

Smt. WINNIFRED F FERNANDES.—Is there any proposal to start training centre in South Kanara District ?

it deserves, it will certainly have a centre.

Sri H. S. SIDDAPPA.—What are the norms or the bases for starting such centres. Will it not be helpful to agriculturists if such centres are started in taluk head quarters ?

Sri K. H. PATIL.—Certainly it will be helpful and if more and more interest is shown, more and more centres will be started. Government cannot start all at once centres in all the places, and, therefore, by phased programme we will have it in all the districts.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು 17 ಕೇಂದ್ರಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿದ್ದಾಪುರದ ತಾಲ್ಲೂಕಿನಲ್ಲಿರುವ ಕೇಂದ್ರಗಳಲ್ಲಿ ನೀರು ಇಲ್ಲ, ಮತ್ತು ವಸತಿಯೂ ಕೂಡ ಇಲ್ಲದೆ ನೂರಾರು ಮನಃಗಳನ್ನು ಕಳಿಸಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನಲ್ಲಿ 100 ಸ್ಟ್ರೆಂಗ್ತ್ ಸ್ಯಾಂಕ್ಷನ್ ಇದೆ. ಉತ್ತಮ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಸಾಕಷ್ಟು ನೀರು ಇಲ್ಲದೇ ಇರಬಹುದು. ನೀರಿನ ಸಲುವಾಗಿ ಪ್ರಯತ್ನ ಮಾಡುತ್ತೇವೆ. ನೀರು ಸಿಕ್ಕುವುದು ನಮ್ಮ ಕೈಯಲ್ಲಿ ಇಲ್ಲ.

ಶ್ರೀ ಪಿ. ಎಂ. ಬಂಗಿ.—ಜಮಖಂಡಿ ಹಾರ್ಟಿಕಲ್‌ಚರ್ ಲಿಸ್ಟ್‌ನಲ್ಲಿ ಒಳಪಟ್ಟಿಲ್ಲ, ಕಾರಣ ಏನು?

ಶ್ರೀ ಕೆ. ಎಚ್. ಪಾಟೀಲ್ —ಈಗ ಇಲ್ಲ.

Smt. SUMATI B. MADIMAN.—May I know whether the Government has any idea of starting these centres specially for women ?

Sri K. H. PATIL.—If women candidates are forth coming in more numbers, I will certainly take it as a very valuable suggestion.

Administration of Kamatyanahatti Village

525. **Sri P. P. HEGRE** (Chikkodi).—

Will the Minister for Revenue be pleased to state.—

(*a*) whether Kamatyanahatti Village is under the administration of two taluks Chikodi and Hukeri ;

(*b*) whether it has come to the notice of Government that the Village is divided among 3 Group Panchayat Committees Karoshi, Kumtoli (Chikodi Taluk) and Yabgud (Hukeri Taluka) ;

(*c*) if so, whether there are any proposals before the Government to put these villages under one Taluk and under one Panchayat and the period reqired for doing the same ?

Sri N. HUTCHAMASTHY GOWDA (Minister for Revenue).—

(*a*) No.

(*b*) No.

(*c*) There was representation for the formation of Kamatyanahatti Hamlet as an independent revenue village' after including some lands from villages Karoshi and Bennihalli of Chikoli Taluk and village Yadgud of Hukeri Taluk. The matter is under examination.

ಶ್ರೀ ಪಿ. ಪಿ. ಹೆಗರೆ.—(ಅ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಈ ಗ್ರಾಮ ಯಾವ ತಾಲ್ಲೂಕಿಗೆ ಸೇರ್ಪಟ್ಟಿದೆ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಚಿಕ್ಕೋಡಿ ತಾಲ್ಲೂಕಿನಲ್ಲಿ ಬೆಣ್ಣಿಹಳ್ಳಿಯು ಒಂದು ಮಜರೆ ಗ್ರಾಮಕ್ಕೆ ಸೇರಿದೆ.

ಶ್ರೀ ಪಿ. ಪಿ. ಹೆಗರೆ.—ಇದು ಬೆಣ್ಣಿಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದೆಯೇ ? ಇಲ್ಲ ಸ್ವತಂತ್ರ ಪಂಚಾಯಿತಿ ಇದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬೆಣ್ಣಿಹಳ್ಳಿ ಗ್ರಾಮ ದಾಖಲೆ ಗ್ರಾಮ.

ಶ್ರೀ ಪಿ. ಪಿ. ಹೆಗರೆ.—ಇದೆ ಹಾಗೆಯೇ ಇದು. ಇದನ್ನು ಯಾರೂ ನೋಡಿದಂತೆ ಇಲ್ಲ. ಇದು ಯಾವ ಗ್ರಾಮಕ್ಕೆ ಸೇರಿದೆ ಎನ್ನುವುದನ್ನು ತಿಳಿಸುತ್ತೀರಾ ? ಮತ್ತು ಇದು ಪ್ರತ್ಯೇಕ ಗ್ರಾಮಕ್ಕೆ ಸೇರಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಯಾವ ತಾಲ್ಲೂಕಿಗೆ ಸೇರಿದ್ದು, ಯಾವ ಪಂಚಾಯಿತಿಗೆ ಸೇರಿದ್ದು, ಯಾವ ದಾಖಲೆ ಗ್ರಾಮಕ್ಕೆ ಸೇರಿದ್ದು ಎಂದು ಹೇಳಿದೆ. ಹಿಂದೆ ಒಂದು ಸಾರಿ ಕಮತ್ಯಾನಹಟ್ಟಿ ದಾಖಲೆ ಗ್ರಾಮ ಸ್ವತಂತ್ರವಾಗಿ ಪ್ರತ್ಯೇಕ ಗ್ರಾಮ ಮಾಡಬೇಕು ಎನ್ನುವ ವಿಚಾರ ಆಗಿದ್ದಂಥ ಶಾಸಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇನ್ನು ಚಿಕ್ಕೋಡಿ ಗ್ರಾಮಕ್ಕೆ ಸೇರಿದ ಕೆಲವು ಜಮೀನನ್ನು ಮತ್ತು ಹುಕ್ಕೇರಿ ತಾಲ್ಲೂಕಿನ ಯಾದಗುಡ್‌ಗೆ ಸೇರಿದ ಗ್ರಾಮವನ್ನೂ ಪ್ರತ್ಯೇಕವಾಗಿ ಸೇರಿಸಿ ಪ್ರತ್ಯೇಕ ಗ್ರಾಮ ಮಾಡಬೇಕು ಎಂದು ಮನವಿ ಕೊಟ್ಟಿದ್ದಾರೆ. ಅದರ ಮೇಲೆ ಡೆಪ್ಯೂಟಿ ಕಮೀಷನರ್‌ಗೆ ಕಳುಹಿಸಿದ್ದೇವೆ. ಇದನ್ನು ಹೇಗೆ ಮಾಡುವುದಕ್ಕೆ ಸಾಧ್ಯವಿದೆ ಅದಕ್ಕೆ ವಿವರವನ್ನು ಕಳಿಸಿಕೊಡಿ ಎಂದು ಅಲ್ಲಿಗೆ ಕಳಿಸಲಾಗಿದೆ. ಅದು ಬಂದ ಕೂಡಲೇ ಸೂಕ್ತ ಕಂಡು ಬಂದಲ್ಲಿ ಪ್ರತ್ಯೇಕ ಗ್ರಾಮ ಮಾಡುವುದಕ್ಕೆ ಮಾಡುತ್ತೇವೆ.

1-30 P. M.

Extension of Service to officials

577. **Sri K. SIDDAIAH** (Santhemaranahalli).—

Will the Chief Minister be pleased to state:—

(*a*) the number of extension of service given to Officers holding Gazetted and non-gazetted posts during 1970, 1971 and 1972 (Gazetted and Non-gazetted) ;

(*b*) among them, the number of Officers belonging to Scheduled Castes/Scheduled Tribes ;

(*c*) the reasons for giving extensions of service to these officers ?

Sri D. DEVARAJ URS (Chief Minister).—

(*a*) *Year*	*Gazetted*	*Non-gazetted*
1970	7	7
1971	14	6
1972	14	7
Total...	35	20

(*b*) Gazetted

Non-gazetted

(*c*) In the interest of Public Service.

ಶ್ರೀ ಕೆ. ಸಿದ್ದಯ್ಯ— ನನ್ನ ಮೊದಲನೆ ಪ್ರಶ್ನೆಗೆ ಉತ್ತರವಾಗಿ 35 ಜನ ರಾಜ್ಯ ಪತ್ರಾಂಕಿತ ಅಧಿಕಾರಿಗಳಿಗೆ ಮತ್ತು 20 ಜನ ರಾಜ್ಯ ಪತ್ರಾಂಕಿತರಲ್ಲದ ಅಧಿಕಾರಿಗಳಿಗೆ ಸೇವಾ ವಿಸ್ತರಣೆಯನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ ? ಸಾರ್ವಜನಿಕ ಹಿತದೃಷ್ಟಿಯಿಂದ ಈ ರೀತಿ ಕೊಡಲಾಗಿದೆ ಎಂದು ಹೇಳಿದ್ದೀರಿ ; ಅಂದರೆ ಈ ರೀತಿ ಸೇವೆಯನ್ನು ವಿಸ್ತರಣೆ ಮಾಡದಿದ್ದರೆ ಕಛೇರಿಯ ಕೆಲಸ ಚೆನ್ನಾಗಿ ನಡೆಯುವುದಿಲ್ಲವೆಂದು ಕೊಟ್ಟಿದ್ದೀರಾ ಅಥವಾ ಮೆಟೀರಿಯಲ್ ಫ್ಯಾಕ್ಟ್ಸ್ ಮೇಲೆ ತೀರ್ಮಾನಕ್ಕೆ ಬಂದು ಸೇವಾ ವಿಸ್ತರಣೆಯನ್ನು ಕೊಟ್ಟಿದ್ದೀರಾ ?

† ಶ್ರೀ ಡಿ. ದೇವರಾಜ ಅರಸ್.— ಮೆಟೀರಿಯಲ್ ಫ್ಯಾಕ್ಟ್ಸ್ ಮೇಲೆಯೇ ಹೆಚ್ಚಾಗಿ ಎಕ್ಸ್‌ಟೆನ್‌ಷನ್ ಕೊಡುವುದು. ಮತ್ತು ಈ ರೀತಿ ಕೊಡುವುದು ಟೆಕ್ನಿಕಲ್ ಮತ್ತು ಅಕೌಂಟ್ಸ್ ಇಲಾಖೆಗಳಲ್ಲಿ ಬೇರೆ ಜನರು ಸಧ್ಯಕ್ಕೆ ಸಿಗುವುದಿಲ್ಲವೆಂದು ಕಂಡುಬಂದಾಗ ಎಕ್ಸ್‌ಟೆನ್‌ಷನ್ ಕೊಡುತ್ತೇವೆ. ಕೆಲವು ಸಲ ಅಧಿಕಾರಿಗಳ ಹುಟ್ಟಿದ ತಾರೀಖು ಬದಲಾವಣೆಯಾದ ಪ್ರಯುಕ್ತ ಸೇವಾ ವಿಸ್ತರಣೆ ಸಿಕ್ಕಿರುತ್ತದೆ.

ಶ್ರೀ. ಕೆ. ಸಿದ್ದಯ್ಯ.—ಈ ರೀತಿ ಎಕ್ಸ್‌ಟೆನ್‌ಷನ್ ಕೊಡುವಾಗ ಹಿಂದುಳಿದ ಜನರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವ ದೃಷ್ಟಿಯಿಂದ ಹಿಂದುಳಿದ ಹೆಚ್ಚು ಜನರಿಗೆ ಕೊಡುತ್ತೀರಾ ? ಮತ್ತು ಈ ವಿಚಾರದಲ್ಲಿ ಯಾವ ರೇಷೋವನ್ನು ಅನುಸರಿಸುತ್ತಿದ್ದೀರಿ ? ಅಲ್ಲದೆ ಹಿಂದುಳಿದ ಜನರಿಗೆ ಸೇವೆಯನ್ನು ವಿಸ್ತರಣೆ ಮಾಡುವುದು ಸೂಕ್ತ ಎಂದು ಏನಾದರೂ ಸರ್ಕಾರದವರು ಭಾವಿಸಿದ್ದಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಸಾಮಾಜಿಕ ನ್ಯಾಯ ಇದರಿಂದ ದೊರೆಯುವುದಿಲ್ಲ. ಹಿಂದುಳಿದವರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕೆಂದರೆ ಕೆಲಸಗಳನ್ನು ಹೆಚ್ಚಾಗಿ ಕೊಡಬೇಕಾಗುತ್ತದೆ. ಸರ್ಕಾರದ ಸೇವಾ ದೃಷ್ಟಿಯಿಂದ ಯಾರಿಗೆ ಅವರ ಸೇವೆಯನ್ನು ವಿಸ್ತರಿಸಬೇಕೆಂದು ಕಂಡುಬರುತ್ತದೋ ಅಂತಹವರಿಗೆ ಮಾತ್ರ ಈಗ ಕೊಡಲಾಗುತ್ತಿದೆ. ರಾಜ್ಯಾಂಗದ ಪ್ರಕಾರ ಎಲ್ಲ ಮಟ್ಟಗಳಲ್ಲಿಯೂ ಮೀಸಲು ಹುದ್ದೆಗಳನ್ನು ಕೊಟ್ಟುಕೊಂಡು ಬಂದರೆ ಸಾಮಾಜಿಕ ನ್ಯಾಯ ಸಿಗುತ್ತದೆ ಹೊರತು ಸೇವಾ ವಿಸ್ತರಣೆಯ ಸಮಯದಲ್ಲಿಯೂ ಸಹ ಪ್ರಪೋರ್ಷನೇಟ್ ಆಗಿ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸಾರ್ವಜನಿಕ ದೃಷ್ಟಿಯಿಂದ ಈ ರೀತಿ ಸೇವಾ ವಿಸ್ತರಣೆ ಮಾಡಲಾಗುತ್ತದೆಂದು ಹೇಳಿದ್ದೀರಿ. ಈ ರೀತಿ ಕೊಡುವುದರಿಂದ ಆ ಸ್ಥಾನಗಳಿಗೆ ಪ್ರಮೋಷನ್ ಆಗಿ ಬರುವವರಿಗೆ ತೊಂದರೆಯಾಗುವುದರಿಂದ ಈ ರೀತಿ ಸೇವಾ ವಿಸ್ತರಣೆಯನ್ನು ಕೊಡುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಏಕೆಂದರೆ ಅನೇಕ ಸಲ ಸಾರ್ವಜನಿಕ ಹಿತಕ್ಕಿಂತಲೂ ಬೇರೆ ರೀತಿಯ ಪ್ರಭಾವಕ್ಕೆ ಒಳಗಾಗಿ ಕೊಡುತ್ತಿರುವುದು ಕಂಡುಬಂದಿದೆ.

ಶ್ರೀ ಡಿ. ದೇವರಾಜ ಅರಸ್.—ಹೇರಳವಾಗಿ ಈ ರೀತಿ ಎಕ್ಸ್‌ಟೆನ್‌ಷನ್ ಕೊಡುವುದು ಸರಿಯಲ್ಲ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ. ಈಗ ಕೊಡುತ್ತಿರುವುದು ರೇರ್ ಕೇಸಸ್‌ನಲ್ಲಿ ಮಾತ್ರ. ಸರ್ಕಾರದ ಕೆಲಸದ ದೃಷ್ಟಿಯಿಂದ ಕೊಡಬೇಕಾದ ಸಂದರ್ಭದಲ್ಲಿ ಕೊಡುತ್ತೇವೆಯೇ ಹೊರತು ಯಾರ ಹಿತವನ್ನು ಕಾಯುವುದಕ್ಕೆ ನಾವು ಕೊಡುತ್ತಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಟೆಕ್ನಿಕಲ್ ಇಲಾಖೆಗೆ ಸಂಬಂಧಪಟ್ಟಂತೆ ಈ ರೀತಿ ಸೇವಾ ವಿಸ್ತರಣೆಯನ್ನು ಕೊಡಲಾಗುತ್ತಿದೆಯೆಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು ಈಗ ಇಲ್ಲಿ ಏನು 35 ಜನ ರಾಜ್ಯ ಪತ್ರಾಂಕಿತ ಅಧಿಕಾರಿಗಳಿಗೆ ಮತ್ತು 20 ಜನ ರಾಜ್ಯ ಪತ್ರಾಂಕಿತರಲ್ಲದ ಅಧಿಕಾರಿಗಳಿಗೆ ಸೇವಾ ವಿಸ್ತರಣೆಯನ್ನು ಕೊಡಲಾಗಿದೆ. ಈ ಪೈಕಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದದಿಂದ ಎಷ್ಟು ಜನರು ಕೇಳಿಕೊಂಡಿದ್ದರು. ಆ ರೀತಿ ಕೇಳಿ ಕೊಂಡವರಿಗೆ ಸೇವೆಯನ್ನು ವಿಸ್ತರಣೆ ಮಾಡಲು ನಿರಾಕರಣೆ ಮಾಡಲು ಇದ್ದಂಥ ಅನರ್ಹತೆ ಏನು ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಪರಿಶಿಷ್ಟ ಜನಾಂಗದವರೇ ಅಲ್ಲ, ಸೇವೆಯಿಂದ ಯಾರು ಯಾರು ಬಿಡುಗಡೆಯಾಗುತ್ತಾರೊ ಅವರೆಲ್ಲರೂ ಸಹ ಸೇವೆಯ ವಿಸ್ತರಣೆಯನ್ನು ಕೇಳುವುದಕ್ಕೆ ಪ್ರಯತ್ನ ಮಾಡುತ್ತಾರೆ, ಆದರೆ ಎಲ್ಲರಿಗೂ ಕೊಡುವುದಕ್ಕೆ ಸಾಧ್ಯವಿಲ್ಲ.

Sri ABDUL KHUDUS ANWAR.—Will the same facilities be extended to industrial workers ?

Sri D. DEVARAJ URS.—Industrial workers are different from Government servants.

ಶ್ರೀ ಕೆ. ಸಿದ್ದಯ್ಯ.—ಇನ್ನು ಮುಂದೆ ಯಾರಿಗಾದರೂ ಸೇವಾ ವಿಸ್ತರಣೆಯನ್ನು ಮಾಡುವಾಗ, ಆ ರೀತಿ ಮಾಡದಿದ್ದರೆ ಇಲಾಖೆಯ ಕೆಲಸವೇ ನಡೆಯುವುದಿಲ್ಲವೆಂದು ಕಂಡು ಬಂದರೆ ಮಾತ್ರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಪ್ರತಿಯೊಂದು ಕೇಸ್‌ನಲ್ಲಿಯೂ ಸರ್ಕಾರದ ದೃಷ್ಟಿಯಿಂದ ಅಗತ್ಯವಿದೆ ಎಂದು ಕಂಡುಬಂದಾಗ ಮಾತ್ರ ಆಲೋಚನೆ ಮಾಡಿ ಕೊಡುತ್ತೇವೆಯೇ ಹೊರತು ಸರ್ವೇಸಾಧಾರಣವಾಗಿ ಎಲ್ಲರಿಗೂ ಎಕ್ಸ್‌ಟೆನ್‌ಷನ್ ಕೊಡಬಾರದು ಎಂಬುದೇ ಸರ್ಕಾರದ ಉದ್ದೇಶ.

ELECTION TO MYSORE MUNICIPAL COUNCIL

583. **Sri K. PUTTASWAMY** (Chamundeswari).—

Will the Minister for Municipal Administration be pleased to state.—

(*a*) whether it is a fact that non-completion of delimitation of Divisions on the basis of 1971 population was the reason for not holding elections to Mysore City Municipality in January 1972 ;

(*b*) the date on which the delimitation of the Divisions was done last ;

(*c*) whether there was any legal difficulty in holding the election without fresh delimitation ;

(*d*) whether timely steps were not taken by the Government in calling for the opinion of the City Municipal Council on the draft proposals for fresh delimitation ;

(*e*) whether the opinion of the Municipal Council was not conveyed to them in time ;

(*f*) the reasons for failure to take further action thereon and to hold election ;

(*g*) the reasons for not extending the term of the Municipal Council by another year allowed under the Act but to entrust the same to an Administrator ;

(*h*) whether the Government is considering the question of appointing an Advisory Body to assist the Administrator ;

(*i*) if so, the reasons for the same ?

Sri B. BASAVALINGAPPA (Minister for Municipal Administration).—

(*a*) Yes ; Election to the Municipality was due in December 1972,

(*b*) 6th August 1968.

(*c*) Yes.

(*d*) and (*e*) No opinion of the Municipal Council is called for on the draft proposals received for fresh delimitation from the Municipal Commissioner through the Divisional Commissioner. However steps have been taken in calling for objections and suggestions from all concerned on the delimitation proposals.

(*f*) Further action for the publication of the final notification is being taken.

(*g*) It is not found necessary to extend the term of the Municipal Council.

(*h*) Under consideration.

(*i*) Does not arise.

Sri K. PUTTASWAMY.—May I know from the Government when the proposals are published and what was the last date fixed for receipt of objections and suggestions ?

†**Sri B. BASAVALINGAPPA.**—The Divisional Commissioner, Mysore Division, has sent proposals on 19-1-1973. Objections are being received and Government are examining now.

Sri K. PUTTASWAMY.—Is it not a fact that the Municipal Commissioner sent his proposals as early as October 1972 ?

Sri B. BASAVALINGAPPA.—He had sent it. But it was on the basis of 1961 Census. We had to send it back asking him to send the proposals on the basis of 1971 Census.

Sri K. PUTTASWAMY.—With reference to answer (*b*); the previous delimitation took place on 6 8-1968. When that is so, how did the Municipal Commissioner send his proposals on the basis of 1961 Census, I would like to know.

Sri B BASAVALINGAPPA.—Proposals are there. The Divisional Commissioner forwarded these proposals and that is why we sent it back. I do not know, I fail to understand what the Hon'ble Member is now trying to get out of this question.

Sri K. PUTTASWAMY.—My point is very specific ; when the Divisional Commissioner sent his proposals on the basis of 1971 Census, as early as 1972, the Government have not taken further steps in publishing delimitation proposals finally.

Sri B. BASAVALINGAPPA.—It was not published then. ಯಾವ ಯಾವ ಮುನಿಸಿಪಾಲಟಿಯಲ್ಲಿ ಅವಧಿ ಮುಗಿದು ಹೋಗಿದೆಯೋ ಅಲ್ಲೆಲ್ಲಾ ಸರ್ವೇಸಾಧಾರಣವಾಗಿ ಈ ಒಂದು ನೀತಿಯನ್ನು ಅನುಸರಿಸಿದ್ದೇವೆ. ಆ ಎಲ್ಲಾ ಸ್ಥಳಗಳಲ್ಲಿಯೂ ಅಡ್ಮಿನಿಸ್ಟ್ರೇಟರನ್ನು ನೇಮಿಸಿದ್ದೇವೆ. Except in one case we have not done it anywhere else.

ಶ್ರೀ ಟಿ. ಆರ್. ಶಾಮಣ್ಣ.—ಪ್ರಜಾಪ್ರಭುತ್ವ ತತ್ವಕ್ಕೆ ಅನುಸಾರವಾಗಿ ಪುರಸಭೆಗಳ ಚುನಾವಣೆಯನ್ನು ತಡೆ ಆಗದಹಾಗೆ ಮಾಡುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಪ್ರಜಾಪ್ರಭುತ್ವ ತತ್ವಕ್ಕೆ ಅನುಸಾರವಾಗಿ ಚುನಾವಣೆಯನ್ನು ಮಾಡಬೇಕು ಎಂದು ಸರ್ಕಾರದ ಇಚ್ಛೆ ಇದೆ. ಕೆಲವಾರು ಕಾರಣಗಳಿಂದ ಬರಗಾಲ ಪೀಡಿತ ಪ್ರದೇಶಗಳಲ್ಲಿ ಚುನಾವಣೆಯನ್ನು ಮಾಡುವುದಕ್ಕೆ ಹೋದರೆ when Rome was burning, nero was fiddling, ಅಂತ ಅಂದ ಹಾಗಾಗುತ್ತದೆ.

Sri B. B. SAYANAK.—When the wards have not been finalished in this Municipality, the Government has appointed an Administrator. But in Belgaum Municipality the wards have not been finalised but the Government extended the date. Is that the uniform policy of the Government ?

Sri B. BASAVALINGAPPA.—I have already said that in one case we have not followed this policy. I have already answered the question of the hon. Member yesterday.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದ ನೀತಿಯ ಪ್ರಕಾರ ಪುರಸಭೆಗಳಿಗೆ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದಿರಿ, ಕಳೆದ ಸಾರಿ ಈ ಸಭೆಯಲ್ಲಿ ಉತ್ತರ ಕೊಡುವಾಗ ಚುನಾವಣಾ ಕ್ಷೇತ್ರಗಳ ಪುನರ್ರಚನೆ 1971 ನೇ ಸೆನ್ಸಸ್ ಆಧಾರದಮೇಲೆ ಚುನಾವಣೆ ಆಗಬೇಕಾಗಿತ್ತು, ಅದಕ್ಕಾಗಿ ಪುರಸಭೆಗಳ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೇವೆ ಎಂದು ಹೇಳಿದ್ದೀರಿ. ಈಗ ಇರತಕ್ಕ ವೋಟರ್ಸ್ ಲಿಸ್ಟ್ ಏನಿದೆ ಅದರ ಆಧಾರದ ಮೇಲೆ ಚುನಾವಣೆಯನ್ನು ನಡೆಸುವುದಕ್ಕೆ ಪುರಸಭೆಗಳ ಕಾಯಿದೆಯಲ್ಲಿ ಸಾಧ್ಯವಿಲ್ಲವೇ, ಅಥವಾ ಯಾವ ಕಾರಣದಿಂದ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಕ್ಷಾಮ ಪೀಡಿತ ಪ್ರದೇಶಗಳು ಏನಿವೆ ಅವುಗಳನ್ನು ಬಿಟ್ಟು ಉಳಿದ ಕಡೆ ಚುನಾವಣೆಯನ್ನು ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಯಾವಾಗಬೇಕಾದರೂ ಚುನಾವಣೆ ಕ್ಷೇತ್ರಗಳನ್ನು ಫೈನಲೈಜ್ ಮಾಡಿ ಚುನಾವಣೆಯನ್ನು ಮಾಡುವುದಕ್ಕೆ ಅಭ್ಯಂತರವಿಲ್ಲ. ಇದನ್ನು ಸರ್ಕಾರದವರು ಬಹಳ ತೀವ್ರವಾಗಿ ಯೋಚನೆ ಮಾಡುತ್ತಿದ್ದಾರೆ. ಅದನ್ನು ಮುಂದುವರಿಸಬೇಕೆಂದೇನೂ ಇಲ್ಲ.

Sri K. PUTTASWAMY.—Under Section 13 of the City Municipalities Act it is the function of the Government to delimit the constituencies after previous publication. The 1971 population figures were available in May 1972 itself. What difficulty was there for the Government to take timely steps to finalise the delimitation of constituencies in accordance with this Act ?

Sri B. BASAVALINGAPPA—The census figures were obtained by the Government. We have sent all the figures to the Divisional Commissioner. Now the Divisional Commissioners are taking action to send the proposals. As soon as they are finalised, we will take action as per law.

Sri K. PUTTASWAMY.—May I take it the period from May 1972 to December 1972 was not sufficient time for finalising the delimitation of wards ?

Sri B. BASAVALINGAPPA.—The suggestion of the hon. Member will be kept in view.

Sri K. PUTTASWAMY.—May I know whether there has been any wilful delay on the part of his subordinates ?

Sri B. BASAVALINGAPPA.—I do not think so.

Permission to cut Malki Forest Trees

604. **Sri N. B. SIRDESAI** (Khanapur).—

Will the Minister for Agriculture and Forests be pleased to state :–

(*a*) the number of applications for permission to cut and remove Malki Forests trees from the Malki Forest owners or contractors in the forest ranges in Khanapur Taluk received in the offices of the Range Forest Officers in Khanapur Taluk and Divisional Forest Officer, Belgaum since 1970 and of them, the number of applications disposed of and pending ;

(*b*) whether applications for permission to cut trees of re-growth are disposed of within a fortnight's time and permission is granted at least within a month's time ;

(*c*) whether the Government desire to issue orders giving time limit for the speedy disposal of applications for permission to cut trees;

(*d*) whether the Forest Guards, Round Foresters, Range Forest Officers and a Special Squad party of the Forest Department exercise check over the illicit cutting and removal of the trees belonging to Government ?

Sri K. H. PATIL (Minister for Agriculture and Forests).—

(*a*)	*No. of cases recieved since 1970*	*Disposed off*	*Pending Disposal*
(1) Divisional Forest Officers, Belgaum.	394	260	134
(2) Range Forest Officers, Khanapur Taluk.	712	304	408

(*b*) If the applicants furnish the full particulars with the requisite documents, etc., the permission can be granted within a fortnight's time. If the details are incomplete the permission will be delayed.

(*c*) It is not possible to issue orders fixing time limit for the disposal of such applications. However the Chief Conservator of Forests (Gl) Bangalore and the Revenue authorities have been requested to dispose such applications with the least possible delay.

(*d*) Yes

Sri N. B. SIRDESAI.—Is the Government aware that in spite of furnishing the full particulars with the requisite documents, etc., by the applicants, the Divisional Forest Officer, Belgaum has inordinately delayed the disposal of the applications and it is only after my representation to the Hon. Minister for Forest that he is thinking of disposing of the applications and does the Government still think that the figures showing under the heading 'pending disposal' in the answer are inconsiderable and trivial ?

†**Sri K. H. PATIL.**—Immediately on receipt of this information I have made enquiries with the officer concerned and he says that these matters are kept pending on account of the fact that the relevant records have not been produced by the concerned parties. However, I am taking due care to see that they are disposed of as quickly as possible.

Sri N. B. SIRDESAI.—Is it not a fact that in answer to (*c*) Government have encouraged the officers of the Forest Department to follow their rigid procedure and their usual delaying tactics as a result of which they have caused inconvenience to the public ?

Sri K. H. PATIL.—I am sorry if the hon. Member presumes so. I have disclosed the facts are they as but that does not mean that I am giving shelter to any officer. My intention is quite clear and that is that the officers are expected to dispose of all the cases without giving any lame excuses.

Representations on Behalf of "Ugranies" of North Kanara District

626. **Smt. WINNIFRED F. FERNANDES** (Coondapur).—

Will the Minister for Revenue be pleased to state :—

(*a*) whether the Government has received any representations on behalf of the "Ugranies" of North Kanara District, praying that they be treated as Class IV Government Servants ;

(*b*) if so, whether Government would grant their request ?

Sri N. HUTCHAMASTHY GOWDA (Minister for Revenue).—

(*a*) Yes.

(*b*) No.

Smt. WINNIFRED F. FERNANDES.—Supplementary to (*a*) : May I know what they have represented to the Government ?

† **ಶ್ರೀ ಎನ್ ಹುಚ್ಚಮಾಸ್ತಿಗೌಡ.**—ನಮಗೆ ಖಾಯಂ ಸಂಬಳ ಬರುವ ಹಾಗೆ ವ್ಯವಸ್ಥೆ ಮಾಡಬೇಕು, ನಾಲ್ಕನೇ ದರ್ಜೆಯ ನೌಕರರನ್ನಾಗಿ ನಮ್ಮನ್ನು ಪರಿಗಣಿಸಬೇಕು ಎಂಬುದು ಅವರ ಮನವಿ.

Smt WINNIFRED F. FERNANDES.—What is the reason for not considering them ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದು ಕಾನೂನನ್ನು ಮಾಡುವಾಗ ಮೈಸೂರು ರಾಜ್ಯದ ಎಲ್ಲಾ ಭಾಗಗಳಿಗೂ ಅನ್ವಯವಾಗುವ ರೀತಿಯಲ್ಲಿ ಮಾಡಬೇಕಾಗುತ್ತದೆ. ಈಗ ಆ ನೌಕರರ ಸಂಖ್ಯೆ ಸುಮಾರು 40 ಸಾವಿರ ಇದೆ. ಈಗ ಆ ದರ್ಜೆಯ ನೌಕರರಿಗೆ ಕೊಡುತ್ತಾ ಇರತಕ್ಕ ಸಂಬಳ ಒಂದೊಂದು ಭಾಗದಲ್ಲಿ ಒಂದೊಂದು ತರಹ ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅವರಿಗೆ 38 ರೂಪಾಯಿ ಸಂಬಳ ಇದ್ದದ್ದಕ್ಕೆ 1970 ನೇ ಇಸವಿಯಲ್ಲಿ ಆ ಬಗ್ಗೆ ಒಂದು ಹುಕುಂ ಮಾಡಿ ಆ 38 ರೂಪಾಯಿ ಸಂಬಳದ ಜೊತೆಗೆ 22 ರೂಪಾಯಿ ಸೇರಿಸಿ ಅವರಿಗೆ 60 ರೂಪಾಯಿ ಸಂಬಳ ಬರುವ ಹಾಗೆ ಮಾಡಿದೆ. ಹಳೆಯ ಮೈಸೂರು ಭಾಗದಲ್ಲಿ ಅವರಿಗೆ ಸಂಬಳವೇ ಇಲ್ಲ. ರೈತರು ಕೊಡತಕ್ಕಂಥಾ ಮಿರಾಸೆಯಿಂದ ಅವರು ಜೀವನ ಮಾಡಬೇಕು. ಇದರ ಬಗ್ಗೆ ನಾನಾ ಭಾಗದಲ್ಲಿ

(ಶ್ರೀ ಎನ್. [illegible]ಮಾಸ್ತಿಗೌಡ)

ನಾನಾ ತರಹ ಇರುವುದರಿಂದ ಇವನ್ನು ಯಾವ ರೀತಿ ಮಾಡಬೇಕು, ಎಷ್ಟು ಜನಗಳನ್ನು ನೇಮಿಸಿ ಕೊಳ್ಳಬೇಕು, ಅವರಿಗೆ ಎಷ್ಟು ಸಂಬಳವನ್ನು ಕೊಡಬೇಕು, ಅವರಿಗೆ ಸಂಬಳವನ್ನು ಕೊಡುವುದಾದರೆ ಗ್ರಾಮಪಂಚಾಯಿತಿಯವರು ಅದನ್ನು ವಹಿಸಿಕೊಳ್ಳುವುದಕ್ಕೆ ಸಾಧ್ಯವಿದೆಯೋ ಇವುಗಳನ್ನೆಲ್ಲಾ ಪರಿಶೀಲನೆ ಮಾಡಬೇಕಾಗಿದೆ.

Staffing Pattern of R. T. O. Offices

648. **Sri V. MASIYAPPA** (Challakere).—

Will the Minister for Labour be pleased to state :—

(*a*) the staffing pattern of the Regional Transport Officer's Offices in the State ;

(*b*) the volume of work pending in the Offices of these Regional Transport Officers both in the matter of collection and in the matter of registration of vehicles, R. T. A. work and the matters connected with that as at present ;

(*c*) whether it has come to the notice of the Government that the existing staff is not sufficient to cope up with the volume of work which has increased ten times now ;

(*d*) whether there have been any representations or proposals to re-organise the department by upgrading some posts and increasing the staff so that the pendency may be cleared the work brought up-to-date and the income from the Department may increase ;

(*e*) if so, the action taken by the Government in the matter ?

Sri AZEEZ SAIT (Minister for Labour).—

(*a*) The staffing pattern of the Regional Transport Officer's Office is as indicated in Statement I placed on the Table of the House.*

(*b*) The volume of work is as per Statement II placed on the Table of the House.*

(*c*) Yes. This is under Government consideration.

(*d*) Yes. There have been representations from certain R T.Os. and Deputy Transport Commissioners for augmenting the staff in their offices. There are also proposals from the Transport Commissioner for up grading certain posts.

(*e*) It is reported by the Transport Commissioner that proposals have been called for from the Deputy Transport Commissioners of the other Regions about the necessity of the increase of the staff in the other Regional Transport Officer's Offices. The proposals will be reviewed by the Transport Commissioner and action taken to send the consolidated proposals about all the Regional Transport Offices in the State to the Government.

---

* Copies placed in the Mysore Legislature Library *vide* No. 13 dated 14-3-1973.

ಶ್ರೀ ವಿ. ಮಾಸಿಯಪ್ಪ.—ಸ್ವಾಮಿ ಆರ್.ಟಿ.ಎ.ಗೆ ಸಂಬಂಧಪಟ್ಟಹಾಗೆ ಟ್ಯಾಕ್ಸ್ ಅರಿಯರ್ಸ್, ಟಿ.ಪಿ.ಜಿ. ಟ್ಯಾಕ್ಸ್ ಎಲ್ಲಾ ಸೇರಿ ಸುಮಾರು 4 ಕೋಟಿ ರೂಪಾಯಿಗಳ ಟ್ಯಾಕ್ಸ್ ವಸೂಲಾಗಬೇಕಾಗಿದೆ ಎಂದು ರೆಕಾರ್ಡಿನಿಂದ ಕಂಡುಬರುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ತೀವ್ರವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳುವಳಿಕೆ ಕೊಟ್ಟು ಜಾಗ್ರತೆಯಾಗಿ ಪ್ರಪೋಜಲ್ಸ್ ತರಿಸಿಕೊಂಡು ಸಿಬ್ಬಂದಿಯನ್ನು ಹೆಚ್ಚು ಮಾಡುವ ಬಗ್ಗೆ ಜಾಗ್ರತೆಯಾಗಿ ಆರ್ಡರ್ಸ್ ಹೊರಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಅಜೀಜ್‌ಸೇಟ್.—ಈ ಬಗ್ಗೆ ಈಗಾಗಲೇ ಆಕ್ಷನ್ ತೆಗೆದುಕೊಂಡಿದ್ದೇವೆ. ಅದಕ್ಕೆ ಸಂಬಂಧಪಟ್ಟ ರಿಪೋರ್ಟ್ ಬಂದಿದೆ. ಇದನ್ನು ತಕ್ಷಣ ಸಂಪೂರ್ಣವಾಗಿ ವಿಮರ್ಶೆ ಮಾಡಿ ಸೂಕ್ತ ರೀತಿಯಲ್ಲಿ ಮಾಡೋಣ.

Improvements in traffic needs of residents of Bangalore City

283. **Sri T. R. SHAMANNA** (Fort).—

Will the Minister for Labour be pleased to state :—

(*a*) whether it has come to the notice of the Government that Bangalore Transport Service is not in a position to meet traffic needs of Bangalore City population ;

(*b*) if so, the steps that are taken to improve the traffic needs of the travelling public ?

Sri AZEEZ SAIT (Minister for Labour).—

(*a*) Yes, Government is conscious of the need for improvements.

(*b*) Adequate measures such as,

(1) improving the frequency of services ;

(2) re-routing of services ;

(3) providing extra buses during peak hours ;

(4) providing larger seats capacity buses wherever there is heavy traffic ;

(5) arranging for maintenance of queue and issue of tickets at the stand ;

(6) reduction of break down and minimising cancellation of trips ;

(7) creation of a Public Relation Cell to meet the parties who makes suggestions and to take remedial measures ;

(8) conducting refresher courses for conductors in proper behaviour with the public ;

e been taken to improve the working of B.T.S.

ಶ್ರೀ ಟಿ. ಆರ್. ಶಾಮಣ್ಣ.—ಬೆಂಗಳೂರು ನಗರದಲ್ಲಿ ಸಾರಿಗೆ ವ್ಯವಸ್ಥೆ ಪೂರಾ ಹದಗೆಟ್ಟು ಪ್ರಯಾಣಿಕರಿಗೆ ಕುಳಿತುಕೊಳ್ಳುವುದಕ್ಕೆ ಸ್ಥಳ ಸಿಕ್ಕದೆ, ಅವರು ಪುಟ್‌ಬೋರ್ಡ್ ಮೇಲೆ ನಿಂತು ಅನೇಕ ಅಕ್ಸಿಡೆಂಟುಗಳಾಗುತ್ತಿರುವುದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು ?

† **ಶ್ರೀ ಅಜೀಜ್ ಸೇಟ್.**—ಪೂರಾ ಹದಗೆಟ್ಟಿದೆ ಎಂಬುದನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ತೊಂದರೆಗಳಿವೆ ಎಂಬುದನ್ನು ನಾನೂ ಒಪ್ಪುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಬೆಂಗಳೂರು ನಗರ ಬೃಹದಾಕಾರವಾಗಿ ಬೆಳೆಯುತ್ತಿದೆ. ಹಾಲಿ ಹಾಕುತ್ತಿರುವ ಪಿ. ಎಚ್. ಎಸ್. ಬಸ್ಸುಗಳು ಸಾಲವು. ಅಲಸೂರಿಗೆ ಇನ್ನೊಂದು ಹೆಚ್ಚಿಗೆ ಪಿ.ಎಚ್.ಎಸ್. ಬಸ್ಸನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಅಜೀಜ್ ಸೇಟ್.—ಮಾನ್ಯ ಸದಸ್ಯರು ಅವರಿಗೇನು ತೊಂದರೆ ಇದೆ ಎಂಬುದನ್ನು ಬರೆದು ಕಳುಹಿಸಿದರೆ ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ತಾವೇನು ಕೆಲವು ರೂಟುಗಳಲ್ಲಿ ಅಂದರೆ ರೂಟ್ ನಂಬರ್ 31, 76, 13 (ಎ), 76 (ಬಿ) ಇವುಗಳನ್ನು ಇತ್ತೀಚೆಗೆ ಬದಲಾಸಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಇದರಿಂದ ಆ ಪ್ರದೇಶಗಳಿಂದ ಬರತಕ್ಕ ಸರ್ಕಾರಿ ನೌಕರರುಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್.—ಎಲ್ಲೆಲ್ಲಿ ಇಂಥಾ ವಿಚಾರಗಳನ್ನು ನಮ್ಮ ಗಮನಕ್ಕೆ ತರಲಾಗಿದೆಯೋ ಅಂಥಾ ಕಡೆಗಳಲ್ಲೆಲ್ಲಾ ಅದನ್ನು ಸರಿಪಡಿಸಲಾಗಿದೆ. ಆದರೆ ಈ ಸಾರಿಗೆ ಸಂಸ್ಥೆ ಹುಟ್ಟಿದರಾಗಾಯ್ತಿಂದ ಇಲ್ಲಿಯವರೆಗೂ ಒಂದು ಸರಿಯಾದ ಸರ್ವೆ ಅಂದಾಜನ್ನು ಮಾಡಲಿಲ್ಲ. ಆದರೆ ಈಗ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯವರು ಈ ಸರ್ವೆ ಕಾರ್ಯವನ್ನು ಕೈಗೊಂಡು ಈ ರೂಟ್‌ಗಳನ್ನು ಸರಿಯಾದ ರೀತಿಯಲ್ಲಿ ವಿಂಗಡಿಸಿಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಅವರ ಸರ್ವೆ ನಂತರ ಆ ನ್ಯೂನತೆಗಳನ್ನೆಲ್ಲಾ ಸರಿಪಡಿಸಲಾಗುವುದು.

ಶ್ರೀ ಟಿ. ಆರ್. ಶಾಮಣ್ಣ.—ನಗರದ ನಾಗರೀಕರು 4-5 ಫರ್ಲಾಂಗ್ ಮೇಲೆ ನಡೆಯಬೇಕಾಗಿ ಬಂದಿದೆ. ಅಲ್ಲಲ್ಲಿ ಬಸ್ ಷೆಲ್ಟರುಗಳು ಬೇರೆ ಇಲ್ಲ. ಇದನ್ನು ಸರಿಪಡಿಸುವುದಕ್ಕೆ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ.

ಶ್ರೀ ಅಜೀಜ್ ಸೇಟ್.—ಕೆಲವು ಕಡೆ ರೈಲಿಂಗುಗಳನ್ನು ಹಾಕಲಾಗಿದೆ. ಕೆಲವು ಕಡೆ ಷೆಲ್ಟರುಗಳನ್ನು ನಿರ್ಮಿಸಲಾಗಿದೆ. ಇನ್ನು ಕೆಲವು ಸೀಟಿಂಗ್ ಅಕಾಮಡೇಷನ್ ಇದ್ದಂಥ ಬಸ್ಸುಗಳನ್ನು ಸ್ಟ್ಯಾಂಡಿಂಗಿಗೆ ಕನ್‌ವರ್ಟ್ ಮಾಡಿದೆ. ಇನ್ನೂ 59 ಡಬ್ಬಲ್ ಬಸ್ಸುಗಳನ್ನು ತರಿಸುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಟಿ. ಎಂ. ಮಂಜುನಾಥ್.—ರಾಜ್ಯದ ಬೇರೆ ಬೇರೆ ರಸ್ತೆಗಳಲ್ಲಿ ಕಾಂಟ್ರ್ಯಾಕ್ಟ್ ಪರ್ಮಿಟ್‌ಗಳನ್ನು ಕೊಡುತ್ತಿರುವಂತೆ ಇಲ್ಲಿ ನಗರದಲ್ಲೂ ಕೊಡವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಅಜೀಜ್ ಸೇಟ್.—ಅಂಥಾ ಅವಶ್ಯಕತೆ ಇಲ್ಲಿ ಕಂಡುಬರುವುದಿಲ್ಲ. ಆದುದರಿಂದ ಇಲ್ಲಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಟಿ. ಆರ್ ಶಾಮಣ್ಣ.—ಹನುಮಂತನಗರಕ್ಕೆ ಬಸ್ ಸೌಕರ್ಯಗಳು ಬಹಳ ಕಡಿಮೆ ಇದೆ. ಆದನ್ನು ತಪ್ಪಿಸುವುದಕ್ಕೆ ಕೂಡಲೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಅಜೀಜ್ ಸೇಟ್.—ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಅದರ ಬಗ್ಗೆ ಮಾನ್ಯ ಸದಸ್ಯರು ಇನ್ನೂ ಹೆಚ್ಚಿನ ಡೀಟೈಲ್ಸ್ ಕೊಟ್ಟರೆ ಅನುಕೂಲ, ಅದನ್ನು ಪರಿಶೀಲನೆ ಮಾಡಲಾಗುತ್ತದೆ.

MADAM SPEAKER.—Now Question Hour is over. Short Notice Question No. 12 also lapses.

QUESTIONS FOR ANSWERS ON THE DAY

(BUT NOT TAKEN UP)

Working of Police Stations under one Police Circle Inspector

207. **Sri GATTI CHANDRASEKHAR** (Gubbi).—

Will the Chief Minister be pleased to state :—

(*a*) whether it has come to the notice of the Government that the existence of only one Police Circle Inspector for both Gubbi and Turuvekere Taluks has come in the way of the speedy execution of the works ;

(*b*) whether the Government is considering to bifurcate the said circle of the two taluks into separate Circles ;

(*c*) whether it has come to the notice of the Government that great hardship is being caused to the people due to the present set up ;

(*d*) whether the Government is contemplating to bring all the villages which are within a radius of six miles from a police station under the jurisdiction of each such police station ?

Sri D. DEVARAJ URS (Chief Minister).—

(*a*) The existence of Police Circle Inspector for both the taluks will not come in the way of the speedy execution of works.

(*b*) No.
(*c*) People are not put to hardship due to this set up.
(*d*) It is not under the consideration of the Government.

Acute Scarcity of Drinking Water in Bijapur City

286. **Sri K. D. PATIL** (Huvinahippargi).—

Will the Minister for Municipal Administration be pleased to state :—

(*a*) whether the Government is aware of the acute shortage of drinking water in Bijapur City ;

(*b*) whether they are aware that the water supply in the city is restricted to 30 minutes a day ;

(*c*) whether they are aware that as the Krishna River water supplied to the city is unfiltered, there is threat of spread of cholera there ;

(*d*) if so, the action taken by them to supply adequate quantity of filtered water to Bijapur City which is a District Headquarter and also an international tourist centre ?

Accession No. 6006
Date

Sri B. BASAVALINGAPPA (Minister for Municipal Administration).—

(a) No.

(b) Yes.

(c) No.

(d) In view of reply to clause (c), this question does not arise.

SHORT NOTICE QUESTION AND ANSWER

Tenure of Office of the Chairman, Mysore Public Service Commission

12. **Sri P. C. SHETTAR** (Hangal).—

Will the Chief Minister be pleased to state :—

(a) the date on which the tenure of office of the Chairman of the Mysore Public Service Commission will expire ;

(b) whether the date tallies with the date specified in the Government Order appointing him as a Chairman or does this date tally with the date mentioned by the Accountant General, Mysore in his pay slip as amended at a later date ;

(c) whether there are any differing interpretations regarding the commencement and termination of the term of office of the Chairman of the Mysore Public Service Commission who was earlier a member as between the High Court, Government and the Accountant General ;

(d) if so, what are they ?

Sri D. DEVARAJ URS (Chief Minister).—

(a) The present Chairman assumed office as a Member of the Public Service Commission on 20th March, 1967 and as Chairman on 15th February 1969. As the Chairman is also a Member, his six year tenure of office is due to expire on 20th March 1973.

(b) The period of appointment of a member of the Public Service Commission is not mentioned in the order of appointment since this is governed by Article 316 (2) of the Constitution.

(c) and (d) The entire question is being examined in the light of the several judicial decisions.

Karnataka State Archives,
(Departmental Library)

CALLING ATTENTION TO MATTERS OF URGENT PUBLIC IMPORTANCE

(i) *re* : Acute Scarcity of Foodgrains in South Kanara District

Sri B. V. KAKKILAYA (Bantwal).—I call the attention of the Minister of State for Food and Civil Supplies to the acute scarcity of foodgrains in South Kanara District.

Smt. E. E. VAZ (Minister of State for Food and Civil Supplies).—Madam, in reply to the Call attention Notices given by Sriyuhts Subramanya Gowda, U. T. Fareed, Damodar Moolky, P.D. Bangera, M. Veerappa Moily, B.V. Kakkilaya and Smt. Addy Saldhana, I state as follows :—

During the current year as well as in the year preceding, due to adverse seasonal conditions, crops failed in a number of places all over the State. As such, there has been an upward trend in the prices of foodgrains. In order to counter-act the situation, the stocks of locally procured rice and jowar of the previous years available with the Government, have been rushed to the needy areas, particularly to the scarcity affected districts in the State. Stocks of paddy procured during the current crop season are being hulled and released to the general public through fair price shops. A statement showing the allotment of rice and wheat to South Kanara District from June to end of March, 1973 is enclosed. The number of fair price shops functioning in South Kanara District during the aforesaid period is also indicated in the said statement.

A statement showing the open market prices that prevailed in South Kanara District from April, 1972 to February, 1973 (month-wise) is also enclosed. It can be seen therefrom that the prices of foodgrains have shown a slight upward trend which is not so alarming.

Effective measure have been taken to prevent smuggling of food grains across the borders. It was brought to the notice of Government that consequent to the imposition of restrictions on the intera district movement of paddy, the flow of paddy to the South Kanara District from the neighbouring Districts has come to a stand-still. After detailed discussions with the Deputy Commissioners concerned, it has been decided to grant levy free inter-district export permits to the selected Co-operatives of South Kanara District to the extent of 35,000 quintals of paddy and 15,000 quintal of rice from Shimoga District and 15,000 quintals of paddy from Coorg District for export to South Kanara District, upto end of April, 1973. The paddy would be purchased from growers who will have given levy paddy at rates fixed by the Deputy Commissioners of Shimoga and Mercara, respectively, and the resultant rice sold in South Kanara District at the rates to be fixed by the Deputy Commissioner of South Kanara District. The price of raw rice to be purchased would be subject to purchase price as follows :—

			Cost Price.
1	Fine rice	...	Rs. 125 per quintal
2	Midfine rice	...	Rs. 115 per quintal
3	Medium rice	...	Rs. 105 per quintal
4	Coarse rice	...	Rs. 100 per quintal

It has also been decided that the paddy to be so exported should be hulled after obtaining due authorisation from the Deputy Commissioner South Kanara District. The sale price of the resultant rice would be fixed by the Deputy Commissioner in consultation with the Director of Food and Civil Supplies. Further, it has been decided that about 10,000 quintals of rice per month might be permitted to be exported from Shimoga to South Kanara District, through licensed dealers or millers subject to their surrendering to Government 50 percent of the quantity of rice or paddy to be exported, under each permit. In addition, allocation of rice from Government Stocks to the South Kanara District for public distribution system has been raised to 2,000 quintals per month.

Government hope that arrangements made as above will help to supply adeqaute rice to the general public in South Kanara District. However, Government have kept a keen watch on the food situation in South Kanara District and would take further measures if any, required to arrest the rise in prices.

STATEMENT A

Statement showing Quantity of foodgrains allotted to South Kanara District (Quantity in Tonnes)

	June 72	July 72	August 72	Septr. 72	Oct. 72	Nov. 72	Dec. 72	Jan. 73	Feb. 73	Mar. 73
Wheat	—	100	300	1100	150	150	100	100	100	100
Rice	350	350	350	350	350	150	100	100	100	100
No. of Fair Price Shops	826	826	826	906	906	926	926	926	926	926

STATEMENT B

Statement showing open market prices of foodgrains in South Kanara District (Prices in Rs. per quintal).

Months	Paddy		Rice.		Ragi	Jowar	Maize	Bajra	Sugar
	I	II	I	II					
1972									
April	88-90	85-86	185-190	135-170	72-76	...	...	...	299-302
May	90	86-8	180-185	130-150	72-75	...	...	...	288-290
June	90-92	82-86	165-185	130-150	72-80	...	...	...	280
July	88-90	79-86	165-180	115-160	78-80	...	...	...	287
August	84-86	78-82	160-175	115-150	78-80	...	...	...	340
September	86-88	78-84	100-160	115-145	78	...	...	...	332
October	88-90	78-86	165-185	135-160	85	...	...	...	370
November	82-84	72-80	160-175	125-150	85-90	...	...	...	340
December	88-90	82-86	155-185	115-145	90-95	...	...	...	352
1973									
January	101-102	88-99	178-230	132-175	100	90	...	...	360
February	107	89-103	175-185	145-170	97-100	...	...	...	356

2-00 P. M.

ಶ್ರೀ ಬಿ. ವಿ. ಕಕ್ಕಿಲಾಯ.—ಈಗ ಕೊಟ್ಟಿರುವ ಪಟ್ಟಿಯನ್ನು ನೋಡಿದರೆ ಅದರಲ್ಲಿ 926 ಫೇರ್ ಪ್ರೈಸ್ ಅಂಗಡಿಗಳು ಇವೆ ಅವರು ಮಾರ್ಚ್ 1973ರಲ್ಲಿ ಕೊಟ್ಟಿರುವುದು 100 ಕ್ವಿಂಟಾಲ್ ಭತ್ತ ಮತ್ತು 100 ಕ್ವಿಂಟಾಲ್ ಗೋಧಿ.

ಶ್ರೀಮತಿ ಇ. ಇ. ವಾಜ್.—ಅದು ಕ್ವಿಂಟಾಲ್ ಅಲ್ಲ, ಅದು 100 ಟನ್ನುಗಳು.

ಶ್ರೀ ಬಿ. ವಿ. ಕಕ್ಕಿಲಾಯ.—ಆ 926 ಫೇರ್ ಪ್ರೈಸ್ ಅಂಗಡಿಗಳಿಗೆ ಸರಿಯಾಗಿ ಅಕ್ಕಿ ತಲುಪುತ್ತಾ ಇದೆಯೋ ಅಂದರೆ ಪಟ್ಟಿಯಲ್ಲಿರುವ ಪ್ರಕಾರ ಅಂಗಡಿಗಳಿಗೆ ಅದನ್ನು ಕೊಡುತ್ತಾ ಇಲ್ಲ. ಮಂಗಳೂರಿನಲ್ಲಿ ಒಂದು ತಿಂಗಳಿಗೆ ಒಬ್ಬರಿಗೆ ಅರ್ಧ ಕಿಲೊ ಅಕ್ಕಿ ಕೊಡುತ್ತಾರೆ. ಆದರೆ ಹಳ್ಳಿಗಳಲ್ಲಿ ಯಾವ ಫೇರ್ ಪ್ರೈಸ್ ಅಂಗಡಿಗಳಲ್ಲೂ ಅಕ್ಕಿಯನ್ನು ಕೊಡುತ್ತಾ ಇಲ್ಲ. ಗೋಧಿಯನ್ನೂ ಸಹ ಕೊಡುತ್ತಾ ಇಲ್ಲ. ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಾ ಇದ್ದೇನೆ. ಇನ್ನೊಂದು ವಿಚಾರ. ತಾವು ಪ್ರೈಸ್ ಬಗ್ಗೆ ಕೆಲವು ಅಂಶಗಳನ್ನು ಹೇಳಿದ್ದೀರಿ. ಜನವರಿ ತಿಂಗಳ ನಂತರ ಬೆಲೆ ಬಹಳ ಹೆಚ್ಚಾಗಿಲ್ಲ, ಅದು ಸ್ಲೈಟ್ಲಿ ಇನ್‌ಕ್ರೀಸ್ಡ್. ಅದು ಅಲಾರ್ಮಿಂಗ್ ಆಗಿಲ್ಲ ಎಂಬುದಾಗಿ ಹೇಳಿದ್ದಾರೆ ಆದರೆ ಒಂದು ಕಿಲೋಗೆ ರೂ 1-32 ಪೈಸೆಯಿಂದ ರೂ. 1-75 ಪೈಸೆಗೇರಿದೆ. ಮತ್ತೆ ಅವೇ ರೂ. 1-45 ರಿಂದ ರೂ 1-70 ರವರೆಗೇರಿದೆ. ಕಳೆದ ಮೂರು ತಿಂಗಳುಗಳಲ್ಲಿ ಸಾಮಾನ್ಯವಾಗಿ ಅಕ್ಕಿಯ ಬೆಲೆಯು ವಿಪರೀತವಾಗಿ ಏರಿದೆ. ಇದನ್ನು ಕಂಟ್ರೋಲ್ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ? ಇದರಿಂದ ಜನತೆಗೆ ಏನೂ ಉಪಯೋಗವಾಗುತ್ತಾ ಇಲ್ಲ. ಸ್ಮಗ್ಲಿಂಗ್ ಕ್ರಮವನ್ನು ತಡೆಯುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದರೆ ಬಹಳ ಚೆನ್ನಾಗಿತ್ತು. ಕಾಸರಗೋಡು ತಾಲ್ಲೂಕಿನಲ್ಲಿ ಒಂದು ದಿವಸಕ್ಕೆ 160 ಗ್ರಾಂ ಅಕ್ಕಿ ಮತ್ತು 9.6 ಕಿಲೋ ಗೋಧಿಯನ್ನು 1.20 ಪೈಸೆ ರೇಟಿನಲ್ಲಿ ಕೊಡುತ್ತಾರೆ. ಆದರೆ ನಮ್ಮಲ್ಲಿ ಏನೂ ಸಿಗುತ್ತಾ ಇಲ್ಲ. ಇಲ್ಲಿಂದ ಅಲ್ಲಿಗೆ ಅಕ್ಕಿ ಏಕೆ ಹೋಗುತ್ತಿದೆಯೆಂದರೆ ಅಲ್ಲಿ ಅಕ್ಕಿ ಎಷ್ಟು ಖರೀದಿ ಇದ್ದರೂ ಫುಡ್ ಕಾರ್ಪೊರೇಷನ್ನಿನವರು ಅದೇನೋ ಒಂದು ರೀತಿಯಲ್ಲಿ ವ್ಯವಸ್ಥೆ ಮಾಡಿದ್ದಾರೆ. ಓಪನ್ ಮಾರ್ಕೆಟ್ಟಿನಲ್ಲಿ ಅದು ರೂ. 1 70 ಮತ್ತು ರೂ. 1-80 ರೇಟ್ ಇದ್ದುದು ಈಗ ರೂ. 1-80 ಮತ್ತು ರೂ. 1-90 ಪೈಸೆ ಆಗಿದೆ. ಈ ರೀತಿಯಾಗಿ ಅಲ್ಲಿ ಬೆಲೆ ಏರುವುದಕ್ಕೆ ಬೇರೆ ಬೇರೆ ಕಾರಣಗಳಿವೆ. ಅದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ಗಮನಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಯು. ಟಿ. ಫರೀದ್.—ಮಂಗಳೂರು ತಾಲ್ಲೂಕಿಗೆ ಇಷ್ಟರವರೆಗೆ ಎಷ್ಟು ಕ್ವಿಂಟಾಲ್ ಅಕ್ಕಿ ಶಿವಮೊಗ್ಗಾದಿಂದ ಬಂದಿವೆಯೆಂಬುದನ್ನು ತಿಳಿಸಬೇಕು. ನನಗೆ ತಿಳಿದ ಮಟ್ಟಿಗೆ ಮೊನ್ನೆ ಸೋಮವಾರದವರೆಗೆ 400 ಕ್ವಿಂಟಾಲ್ ಅಕ್ಕಿ ಮತ್ತು 500 ಕ್ವಿಂಟಾಲ್ ಬತ್ತ ಬಂದಿದೆ. ಇದರ ಬೆಲೆ ರೂ. 1-30 ರಿಂದ ರೂ. 1-40ಕ್ಕೆ ಬಂದಿದೆ. ಅದರ ಮೇಲೆ ಖರ್ಚೂ ಸಹ ಸೇರಬೇಕಾಗುತ್ತದೆ. ಅಲ್ಲಿ ರೇಷನ್ ಷಾಪ್ ಮುಖಾಂತರ ಕೊಡಬೇಕೆಂದು ಹೇಳಿದ್ದಾರೆ. ರೂ. 1-50 ರೂ. 1-60 ಹಾಗೂ ರೂ 1-65 ಪೈಸೆಗೆ ಒಂದು ಕಿಲೋ ಅಕ್ಕಿಯಂತೆ ಮಾರುತ್ತಿದ್ದಾರೆ. ಅದಕ್ಕೆ ಕಮ್ಮಿಯೇನೂ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಅದರ ವಿಷಯ ಸರ್ಕಾರಕ್ಕೆ ಗೊತ್ತಿದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಕೆ. ಸುಬ್ರಹ್ಮಣ್ಯಗೌಡ —ಮಡಕೇರಿಯಿಂದ ಈಗ ಹೆಚ್ಚಿಗೆ ಬತ್ತವನ್ನು ತಂದಿದ್ದಾರೆ. ಅದನ್ನು ಇನ್ನೂ ಇಲ್ಲಿಗೆ ತಾರದೇ ಇರುವುದಕ್ಕೆ ಕಾರಣವೇನು ? ಅದನ್ನೇನಾದರೂ ಇಲ್ಲಿಗೆ ತರುವ ಏರ್ಪಾಡು ಆಗುತ್ತಿದೆಯೇ ?

ಶ್ರೀ ದಾಮೋದರ್ ಮುಲ್ಕಿ.—ಇಂಡಿಯಾದೇಶದಲ್ಲೆಲ್ಲಾ ಆಹಾರ ಸಾಮಗ್ರಿಗಳ ಬೆಲೆಗಳು ವಿಪರೀತವಾಗಿ ಏರುತ್ತಲೇ ಇವೆ. ಇವರ ಸ್ಟೇಟ್‌ಮೆಂಟಿನಲ್ಲಿ ಬೆಲೆಗಳು ಮೂರು ತಿಂಗಳಿಂದ ಅಷ್ಟು ಹೆಚ್ಚಾಗಿ ಏರುತ್ತಾ ಇಲ್ಲವೆಂದು ಹೇಳುತ್ತಾರೆ. ಡಿಸೆಂಬರ್, ಜನವರಿ ಮತ್ತು ಫೆಬ್ರುವರಿ—ಈ ಮೂರು ತಿಂಗಳುಗಳಲ್ಲಿ 100 ಟನ್ನುಗಳಿಗಿಂತ ಜಾಸ್ತಿಯಾಗಿ ಸರಬರಾಜು ಮಾಡಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಕಳೆದ ವರ್ಷ ಒಂದು ಕೆ. ಜಿ.ಗೆ ರೂ 1-35 ರಿಂದ 1-70ರವರೆಗೆ ಇತ್ತು. ಈ ವರ್ಷ ರೂ 1-30 ರಿಂದ ರೂ. 1-45 ರವರೆಗೆ ಇದೆಯೆಂದು ಹೇಳುತ್ತಾರೆ. ಆದರೆ ಈ ದರದಂತೆ ನಾರ್ತ್ ಕೆನರಾದಲ್ಲಿ ಅವು ಸರಬರಾಜು ಆಗುತ್ತಾ ಇಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ತಮಗೆ ತಿಳಿದಂತೆ ನಮ್ಮ ಜಿಲ್ಲೆಯಲ್ಲಿ ಬರೀ ಲೆವಿ ಸಾಧಾರಣವಾಗಿ ಸೇಕಡ 90 ರಷ್ಟು ವಸೂಲಾಗಿದೆ. ಶಿವಮೊಗ್ಗಾದಲ್ಲಿ ನನಗೆ ತಿಳಿದಿರುವ ಹಾಗೆ ಕೇವಲ 20ರಷ್ಟು ಮಾತ್ರ ಲೆವಿಯಾಗಿದೆ. ಅದೂ ಅಲ್ಲದೆ ಅಲ್ಲಿ ಯಾವ ಪದಾರ್ಥವನ್ನೇ ಆಗಲೀ ಸಾಕಷ್ಟು ಪರ್ಚೇಜ್ ಮಾಡುವುದಕ್ಕೆ ಆಗದೇ ಇರುವ ಕಾರಣವೇನೆಂದರೆ ಲೆವಿ ಕೊಟ್ಟವರು ಕಡಿಮೆ ಇದ್ದರು. ಅದಕ್ಕಾಗಿ ಇವರೂ ಸಹ ಹೆಚ್ಚಿಗೆ ಪರ್ಚೇಜ್ ಮಾಡುವುದಕ್ಕಾಗಲಿಲ್ಲ. ಈ ಸಭೆಯಲ್ಲಿ ನನ್ನ ಗೆಳೆಯರು ಹೇಳಿದ ಪ್ರಕಾರ ಈ ಜಿಲ್ಲೆಯಲ್ಲಿ ಏನು ಲೆವಿ ವಸೂಲಾಗಿತ್ತೋ ಅದನ್ನು ಎಲ್ಲಾ ಸೊಸೈಟಿಗಳಲ್ಲಿ ಒಂದೇ ಕ್ರಯದಲ್ಲಿ ಮಾರಬೇಕೆಂಬ ಸಂದರ್ಭ ಬಂದಿದೆ. ಆದರೆ ಇತ್ತೀಚೆಗೆ ಅದರ ಬಗ್ಗೆ ತೀವ್ರ ಪರಿಸ್ಥಿತಿ ಮತ್ತೆ ಮುಂದುವರಿಯುತ್ತಿದೆ. ಮತ್ತೆ ಲೆವಿ ವಸೂಲಾತಿಯನ್ನು ಬಿಡುವುದು ಕೆಲವು ತಿಂಗಳುಗಳ ಕಾಲ ಅದನ್ನು ಬಿಟ್ಟು ಆಹಾರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸರ್ಕಾರದವರು ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೋ ?

ಶ್ರೀ ಕೋಣಂದೂರು ಲಿಂಗಪ್ಪ —ಶಿವಮೊಗ್ಗಾ ಜಿಲ್ಲೆಯಲ್ಲಿ ಕಡಿಮೆ ಲೆವಿ ವಸೂಲು ಮಾಡಿದ್ದಾರೆಂದು ಹೇಳಿದರು. ಅದು ಸರಿಯಲ್ಲ. ಅಲ್ಲಿರತಕ್ಕ ಜಿಲ್ಲಾಧಿಕಾರಿಗಳ ನಿರೀಕ್ಷಣೆಯಂತೆ ಸೇಕಡ 80-85ರಷ್ಟು ವಸೂಲ ಮಾಡಿದ್ದಾರೆ.

ಶ್ರೀಮತಿ ಇ. ಇ. ವಾಜ್.—ನಮ್ಮ ಮಾನ್ಯ ಸದಸ್ಯರು ಅಲ್ಲಲ್ಲಿ ತೆಗೆದುಕೊಂಡ ಲೆವಿಯನ್ನು ಅಲ್ಲಲ್ಲಿಯೇ ಬಿಡುಗಡೆ ಮಾಡಬೇಕೆಂದು ಹೇಳಿದರು. ನಾರ್ತ್ ಕೆನರಾದಿಂದ 3200 ಟನ್ನುಗಳಷ್ಟು ಮತ್ತು 1,747 ಟನ್ನುಗಳಷ್ಟು ಆಹಾರಧಾನ್ಯಗಳು ಬಂದಿವೆ. ಅದನ್ನು ಇನ್ನೂ ಬರುವ ತಿಂಗಳಲ್ಲಿ ಅಲ್ಲಿಯೇ ಬಿಡುಗಡೆ ಮಾಡುತ್ತೇವೆ. ಆದರೆ ಶಿವಮೊಗ್ಗಾದಿಂದ ಎಷ್ಟು ಲೆವಿ ಆಗಿದೆಯೆಂಬ ಬಗ್ಗೆ ಅಂಕಿ ಅಂಶಗಳು ಇಲ್ಲ. ಏಪ್ರಿಲ್‌ವರೆಗೂ 32 ಸಾವಿರ ಕ್ವಿಂಟಾಲ್ ಬತ್ತ ಮತ್ತು 10 ಸಾವಿರ ಕ್ವಿಂಟಾಲ್ ಗೋಧಿಯನ್ನು ಅಲ್ಲಿಗೆ ಕಳುಹಿಸುವ ಏರ್ಪಾಡು ಇದೆ. ಹಾಸನಕ್ಕೆ ಈಗಾಗಲೇ ಸೂಕ್ತ ಆದೇಶವನ್ನು ಕೊಟ್ಟಿದೆ. ಅಲ್ಲಿನವರು ಹೋಗಿ ರೆಗ್ಯುಲೇಟೆಡ್ ಮಾರ್ಕೆಟ್ಟಿನಿಂದ ಬತ್ತವನ್ನು ತೆಗೆದುಕೊಂಡಿದ್ದಾರೆ. ಡೆಪ್ಯುಟಿ ಕಮಿಷನರಿಗೆ ಒಂದು ಆದೇಶವನ್ನು ಕೊಟ್ಟಿದೆ. ಅಲ್ಲಿ ಅವರ ಒಂದು ಆಜ್ಞೆಯು ಪ್ರಕಾರ ಮಾಡುವುದಕ್ಕೆ ಆಗುತ್ತದೆ. ಒಂದು ಸಾರಿ ಅಲ್ಲಿನ ಸಹಕಾರ ಸಂಘದವರು ಶಿವಮೊಗ್ಗಾಕ್ಕೆ ಹೋದಾಗ ಅಲ್ಲಿ ಪ್ರಿವೈಲಿಂಗ್ ಮಾರ್ಕೆಟ್ ರೇಟ್ ಏನಿತ್ತು ಅಂದರೆ ರೂ. 84ರಿಂದ ರೂ 85 ರಂತೆ ಇದ್ದರೂ 95ಕ್ಕಿಂತ ಕಡಿಮೆಯಾಗಿ ಸಿಗುವುದಿಲ್ಲವೆಂದು ಹೇಳಿದಮೇಲೆ ಓಪನ್ ಮಾರ್ಕೆಟ್ಟಿನಲ್ಲಿ ಎಷ್ಟು ಬೇಕೋ ಅಷ್ಟನ್ನು ಕೊಂಡುಕೊಳ್ಳುವುದಕ್ಕೆ ಪರ್ಮಿಷನ್ ಕೊಡಬೇಕಾಯಿತು. ಶಿವಮೊಗ್ಗಾ ಜಿಲ್ಲೆಯಲ್ಲಿ 85 ರೂಪಾಯಿಗಳ ಮೇಲೆ ಎಲ್ಲಿಯೂ ಮಾರಿದಂತೆ ನನಗೆ ಕಾಣಲಿಲ್ಲ. ಹೀಗಾಗಿ ಸಹಕಾರ ಸಂಘದವರು ಕಡಿಮೆ ರೇಟಿನಲ್ಲಿ ಮಾರುವುದನ್ನು ಡಿಲೇ ಮಾಡಿದ್ದಾರೆ. ವರ್ತಕರು ತಕ್ಷಣವೇ ಕ್ರಮ ತೆಗೆದುಕೊಂಡರು. ಮತ್ತೆ ರೂ. 95ರ ಪ್ರಕಾರ ತೆಗೆದುಕೊಂಡುಹೋಗಿ ಎಂಬುದಾಗಿ ಸರ್ಕಾರದ ಆಜ್ಞೆಯಾದರೂ ಅವರು ಆ ರೀತಿ ತೆಗೆದುಕೊಂಡು ಹೋಗಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ.

(ii) Re: Report of the Fact Finding Committee the affairs of the National Institute of Social Sciences, Bangalore

Sri M. S. KRISHNAN.—I call the attention of the Hon. Minister for Labour to the report of the Fact finding Committee of the Association of Schools of Social Work in India and the Indian Association of Trained Social Workers into the affairs of National Institute of Social Sciences, Bangalore.

Sri AZEEZ SAIT (Minister for Labour).—In reply to the above calling attention notice by Sri M. S. Krishnan and Sri B. V. Kakkilaya, I state as follows :

As all of us are aware, the National Institute of Social Sciences Bangalore has been in the throes of a group rivalry set up by interested

parties in which the students have joined the fray and made matters difficult for the Management for its smooth running. Faced with the various problems which came in the way of the smooth functioning of the Institute, its Board of Management passed a resolution on 18-6-1972 as follows :—

> "In view of the state of affairs of the Institute at present financially and in the interest of the future of the students, it is resolved unanimously to request the Government to take over the Institute with its liabilities and to hand over to the University. During this interim period, till the Government takes over with liability, the new Board of Management elected by the General Body will manage efficiently within the present aid given by the Government of Mysore and the Centre and further finance to be raised immediately."

2. This Resolution was received by Government from the Secretary of the National Institute of Social Science, Bangalore with his letter dated 19-6-1972. On 6th July, 197', Government addressed the President of the Institute to intimate the up-to-date position of the Institute's assets and liabilities as on 30th June, 1972. Simultaneously, the Commissioner of Labour was requested to get the accounts duly audited by the Controller of State Accounts Department.

3. Many impediments were experienced by the Audit Staff in fulfilling their task as, for some reason or the other, the records were not available for audit. Squatting of the students at the entrance of the Institute also contributed to some extent to the delay in auditing the accounts of the Institute. Ultimately, the Controller of State Accounts Department forwarded the Audit Report on the 20th September 1972. The Audit Report revealed a total liability of Rs. 1,60,949-27 Paise with estimated assets of Rs. 38,596-54. Thus the excess of Liabilities over the assets stood at Rs. 1,22,35?-73 Paise. The major portion of the liabilities consists of unpaid salary of the staff (Rs. 29,966-66); repayment of loans received from Sri Prasad, Founder (Rs. 66,20?-43); outstanding rent (Rs. 3,292-21); unadjusted portion of the State Government's grant (Rs. 63,226-83); unspent portion of Central Government grant (Rs. 537-14) etc.

4. The question with respect to the extent to which Government has to bear the liabilities was examined in consultation with the Finance Department. It was then decided to have a discussion with the President of the Institute to find out how far the Management was able to bear this burden. Accordingly, a meeting was convened on the 20th February, 1973 in which the Minister for Finance, Minister for Labour, Secretaries to Government, Finance, Education and Labour, the Commissioner of Labour and the representatives of the Institute participated. After a discussion, it was decided in principle, to take over the management of the Institution allowing the details including financial implications to be worked out later.

(SRI AZEEZ SAIT)

5. There after the legal aspects of the matter were examined. It was found from the Memorandum of Association of the National Institute of Social Science, Bangalore that there is no provision authorising the Board of Management to do away with the properties of the Institute and that, for a valid transfer, concurrence of the General Body is necessary. It is seen that the Institute, registered under the Societies Registration Act, 1860 (Central Act) and deemed to be a Society registered under the Mysore Societies Registration Act, 1960, after the said act came into force, is formed for the purpose of running the Institute. The Managing Body is no doubt deemed to be vested with the properties belonging to the Society under Section 14 of the Act; but to transfer the Institute would virtually amount to dissolution of the Society. According to Section 22 of the Mysore Societies Registration Act, 1960 not less than 3/4 the of the Members shall have to agree for the dissolution. For this reason, the concurrence of the General Body for the proposed transfer is necessary even though the Management is keen about the transfer of the Institution to Government. Having regard to this legal position, the President of the National Institute of Social Science, Bangalore has been addressed on the 22nd February, 1973 to call for a meeting of the General Body for adopting a Resolution for the transfer of the Institute to Government. As per the information received, the General Body Meeting called on 12-3-1973 dit not transact any business due to lack of quorum, Therefore, no sooner the Resolution is received, than the Government will proceed with the take-over of the Institution.

6. Now coming to the matter relating to the probe by the Fact-Finding-Committee comprising of nominees of the Association of Schools of Social Work in India and the India Association of Trained Social Workers into the affairs of the National Institute of Social Science, Bangalore referred to by the Honourable Members, I have to state that Government is not in receipt of its findings. However, Government have received a copy of the letter written by the President of the Association of Schools of Social Works in India drawing the attention of the President, National Institute of Social Science, Bangalore to some of the defects in the Working of the Institution based on the report of the Fact-Finding-Committee for rectification. The Institute, which is a Member of the Association of Schools of Social Work in India, does not appear to have taken any action to rectify those defects so far. The circumstances leading to and the propriety of this fact-finding Committee on making a report on the administrative and academic aspects of the National Institute of Social Science is not clear. With a view to examining these aspects, certain details were called for from the President of the Association of Schools of Social Work in India. There is no response so far. As reported in the press, this Association has even threatened to derecognise the Institute. I would however wish to point out that as far as this State Government

is concerned, It has accorded recognition to the Diploma awarded by the National Institute of Social Science, Bangalore for purposes of recruitment and appointment of Welfare Officers in the Public and Private Sector undertakings in terms of the Mysore Welfare Officers (Duties, Qualifications and conditions of service) Rules, 1963 and this recognition would continue.

7. I take this opportunity to urge upon the students to eschew agitational approach in solving the administrative problems of the Institution but confine themselves to their academic pursuits by evincing interest in their studies so that they are better qualified to be appointed as Welfare Officers in future.

Sri M. S. KRISHNAN.—I am thankful to the Hon'ble Minister for two things : (1) that the Government has decided to take over this Institute, and (2) that even though the other organisations like the Association of Social Workers, India, have threatened to derecognise, the Government have stated that recognition will continue. May I know how this would be done because the General Body has not met for want of quorum and could not transact business ? Are we to take it that it was wilfully done ? Is it not a fact that a number of members are persons connected with the Government or who could be influenced by the Government and therefore they did not attend the General body ? If that is so, what exactly Government would do in order to see that the General Body is convened and the Institute is taken over by the Government ?

Sri AZEEZ SAIT.—The General Body meeting was called for on the 12th of this month. It was not the wilful act on the part of the members not to assemble. There was a little confusion about the place of meeting. In fact I had sent a representative of the Labour Department...I had sent the Secretary to Government, Labour Department, to participate in the meeting. Again the meeting has been called for on the 18th. I am sure in that meeting the General body will decide and the Government will certainly take over the Institute as soon as the Resolution of the General Body is received. The Resolution is legally required.

I request the hon. member through the Chair kindly to put all questions together so that I can answer them at one stroke.

Sri M. S. KRISHNAN.—I have no objection to put all questions together, but the difficulty arises if the answer is the same for all the questions. So, I do not want the Minister to confuse us by asking us to put so many questions at the same time. We would request him to answer to our questions one by one.

Smt. MADAM SPEAKER.—He has got the capacity to digest all the questions that would be put to him. He never gets confused. Let not the hon. member be bothered about it.

Sri M. S. KRISHNAN.—It has been stated in the statement of the Minister that the Fact-Finding Committee comprising of nominees of of the Association of Schools of Social Work in India and the India Association of Trained Social Workers, went into the affairs and have given a report. May I know whether these two organisations are eminent institutions in India and if it is so, is it not the duty of the Government to get the report from them? Why don't you take action on the various recommendations made by that Committee? What exactly the Government has to say in regard to (1) its take over (2) about the reinstatement of Prof Sridharan, And (3) There is a statement here which says that there are certain liabilities as far as the National Institute of Social Science are concerned; there are some liabilities in regard to the adjustment of the grant by the State Government and repayment of loan received from Sri Prasad which comes to Rs. 6,62,133. He had taken loans and he has not repaid the loans. What exactly is the Government contemplating in regard to this particular liability, allegations against Prof. Sridharan and Sri Prasad and the report of the C. I. D. I would like to know what are you going to do in regard to the above matters.

Sri D .DEVARAJ URS (Chief Minister).—It must be clearly understood that this is a private institute. Government comes into picture in so far as payment of *ad hoc* grant is concerned. Government has paid grant not regularly eversince its inception but in subsequent years.

With regard to the presumption that Government is going to take over this Institute to its fold on the basis of the recommendations made, about which hon. member just now made references quoting from the Fact-Finding Committee, which in my opinion are self-imposed Committees. I do not know who authorised these committees to go into this question. I am not aware any Government authorising any Institute to go into the affairs of another Institute. It is something like a private managed college going into the affairs of some other college. Maybe these committees might have gone there and looked into the affairs of that Institute. I have nothing to say anything about it. But Government cannot take cognisance of what a private body says about some other private body.

Sri M. S. KRISHNAN.—This Institution is affiliated to the All India Body.

Sri D.DEVARAJ URS.—They are all private bodies. The number will not increase its value. So far as this aspect is concerned, let me make it very clear, if on assumptions if hon. members were to make certain suggestions, it becomes very difficult for Government to accept them. That is all my point. So, to say that the Government would take over this Institute, it is not because the Fact-Finding Committees have recommended. That is far from it. Let not these committees take to themselves the credit for having suggested a thing like that and that we have accepted it. This thing is somewhat dangerous, if such an impression is allowed to remain in the minds of the public. I want to state here categorically that the Governmental action has nothing to do with the Fact-Finding Committee Report or are we going to act upon its report. This Committee is alien to us and we are not concerned with it. Government have acted on its own volition along with several suggestions that have been made on the floor of the House from time to time long before this Committee's report was published. This is a point which I wanted to make it clear.

Regarding the question of taking it over, it has already been stated by the concerned Minister.

As regards the allegations and counter-allegations in respect of Government grant not available to this institution, Government will look into this aspect. That is why Government thought it fit that this institute which by and large is going to help our young men and young women from the point of getting this natural social service degrees which will be useful for them to get employment quickly in several industries, not to allow this institute to lapse or fall into disuse or liquidate itself. We want to take it over not because of tussel amongst several members of the General Body but because of its utility to the people. That decision is there and we want to implement it: Supposing the General Body does not want to give this institute to Government, or does not comply with the suggestion made by the Government, the Grant in-aid rules provide for its take over by some law. There are many people who are interested in the existence of this institute because of its service in giving degrees. Beyond this, there is no need to enter into a discussion or take cognisance of the Fact Finding Committee Report.

As regards the loan of Rs. 60,000 and odd, I may inform the members that this is a matter of accounting which will be looked into.

Sri KAGODU THIMMAPPA.—The liability of this institute is more...

Sri D. DEVARAJ URS.—My point is: before taking over this institute, we are going to look into all these aspects. ಅನೇಕರು ತಮ್ಮ ಅಭಿಪ್ರಾಯದಲ್ಲಿ ಇದನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಆ ಲಯಬಿಲಿಟಿಯನ್ನು ತೆಗೆದುಕೊಳ್ಳಬೇಕೇ ಬೇಡವೇ, ಎನ್ನುವುದಕ್ಕೆ ಆಡಿಟರ್ಸ್ ಇದ್ದಾರೆ ಅದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಟೋಕನ್ ಆಗಿ ಏನೂ ಕಾರಣ ಇಲ್ಲದೆ ಅವರು ಹೇಳಿದ್ದನ್ನು ಕೊಟ್ಟುಬಿಡುವುದಕ್ಕಾಗುವುದಿಲ್ಲ. ಅಲ್ಪಸ್ವಲ್ಪ ಲಯಬಿಲಿಟಿ ಹೊತ್ತುಕೊಂಡು, ಆ ಇನ್‌ಸ್ಟಿಟ್ಯೂಷನ್ ಅನ್ನು ತೆಗೆದುಕೊಳ್ಳಬೇಕು ಎಂದು ಕಂಡುಬಂದರೆ ಅದನ್ನು ನಾವು ಪರಿಶೀಲನೆ ಮಾಡುತ್ತೇವೆ. ಲಯಬಿಲಿಟಿ ಜಿನಿಯುನ್ ಆಗಿದ್ದು, ನಾವು ಲಯಬಿಲಿಟಿ ತೆಗೆದುಕೊಳ್ಳಬೇಕು ಎಂದು ಸರ್ಕಾರ ತೀರ್ಮಾನ ಮಾಡಬೇಕು ಎನ್ನುವುದಾದರೆ ಯಾವ ದೃಷ್ಟಿಯಿಂದ ಮಾಡಬೇಕಾಗುತ್ತದೆ! ಕೇವಲ ಇನ್‌ಸ್ಟಿಟ್ಯೂಷನ್ ಅನ್ನು ಬದುಕಿಸಬೇಕು, ಸಾಯಿಸಬೇಕು ಎನ್ನುವ ದೃಷ್ಟಿಯಿಂದಲ್ಲ. ಇನ್‌ಸ್ಟಿಟ್ಯೂಷನ್‌ನ ಉಪಯೋಗ ಏನು ಎಂದು ನೋಡಿ ತೆಗೆದುಕೊಳ್ಳಬೇಕು. ಲಯಬಿಲಿಟಿ ತೆಗೆದುಕೊಳ್ಳುವ ಬದಲು ನಾವೇ ಒಂದು ಇನ್‌ಸ್ಟಿಟ್ಯೂಷನ್ ಅನ್ನು ಪ್ರಾರಂಭ ಮಾಡಬಹುದು. ಈ ಎಲ್ಲಾ ವಿಚಾರಗಳನ್ನು ಯೋಚನೆ ಮಾಡಿ ಮಾಡತಕ್ಕದ್ದು ಇದೆ.

2-30 P. M.

Sri M. S. KRISHNAN.—This is a very important matter. You said that you are not bound by the decisions and recommendations of the Fact Finding Committee and the Government will take its own decision, taking into considerations all aspects of the matter, and take it over. I have no quarrel over it. You need not recognise them. Before taking any decision some merit consideration will have to be taken into account This Institute consists of lecturers etc. If it is the question of taking over the entire staff and lecturers what exactly you are going to do ?

Sri D. DEVARAJ URS.—In every aspect of the Institute including that of the lecturers, we are not going into the fact Finding Report. Even without that we can look into it. Iam not prepared to be influenced or prejudiced by any report of this sort that you have mentioned.. This is what I am stating.

Papers laid on the table

Sri H. N. NANJE GOWDA (Minister of State for Major Irrigation).—On behalf of the P.W.D. Minister I lay :

"First Annual Report of Mysore Power Corporation Ltd., for the year 1970-71.

Under Section 619 A of the Companies Act 1956."

On behalf of the Minister for Industries I lay :

"25th Annual Report of the REMCO for the year 1970-71. Under Section 619 A of the Companies Act 1956."

Sri M.Y. GHORPADE (Minister for Finance).—I lay :

"Notification No. S.O. 14 dated 29th September,1972.

Supersession of Notification No. FD 133 CSL.71 dated 22nd December 1971.

Under Section 39 of the Mysore Sales Tax Act, 1957."

Sri H.N. NANJE GOWDA(Minister of State for Major Irrigation).—I lay :

(1) Notification No. PWD 41 LBW 70 dated 25th January 1973.

The Mysore Irrigation (Levy of Water Rates) (Amendment) Rules, 1972.

Under Section 11 (4) of the Mysore Irrigation (Levy of Betterment Contribution and Water rate) Act, 1957.

Notification No. PWD 41 LBW 70 dated 25th January 1973.

The Mysore Irrigation (Amendment) Rules, 1972.

Under Section 71 (4) of the Mysore Irrigation Act, 1965."

MADAM SPEAKER.—All the Papers are laid on the Table.

Mysore Re-enacting Bill 1973—Governor's Message (Announcement)

MADAM SPEAKER.—I have received a message from the Governor which reads as follows:

> "In pursuance of Clauses (i) and (iii) of Article 7 of the Constitution of India, I Mohalal Sukhadia, Governer of Mysore, do hereby recommend that the Mysore Re-enacting Bill, 1973 be introduced and considered by the Mysore Legislative Assembly."

SRI M. Y. GHORPADE.—I beg to introduce the Mysore Re-Enacting Bill, 1973 under Rule 69 of the Rules of Procedure and Conduct of Business of the Mysore Legislative Assembly.

MADAM SPEAKER.—The Bill is introduced. **

ಶ್ರೀ ಎಸ್. ಬಂಗಾರಪ್ಪ.—ಮೈಸೂರು ರಿ ಎನಾಕ್ಟಿಂಗ್ ಬಿಲ್ ಅನ್ನು ಏನು ಮಾನ್ಯ ಅರ್ಥ ಸಚಿವರು ಇಂಟ್ರಡ್ಯೂಸ್ ಮಾಡಿದ್ದಾರೆ, ಅದರ ಆಬ್ಜೆಕ್ಟ್ಸ್ ಮತ್ತು ರೀಸನ್ಸ್ ಏನು ; ಯಾವ ಉದ್ದೇಶಕ್ಕಾಗಿ ಎಂದು ಗೊತ್ತಾಗುವುದಿಲ್ಲ. ಅರ್ಥಸಚಿವರು ಇದರ ಬಗ್ಗೆ ವಿವರಣೆಯನ್ನು ಕೊಡುವುದು ಒಳ್ಳೆಯದು.

ಅಧ್ಯಕ್ಷರು.—ಅದರಲ್ಲಿದೆ ಓದಿಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಏತಕ್ಕೋಸ್ಕರ ಈ ಬಿಲ್ಲನ್ನು ಇಂಟರ್‌ಡ್ಯೂಸ್ ಮಾಡಿದ್ದಾರೆ ಎನ್ನುವ ಬಗ್ಗೆ ಹೇಳಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಅದನ್ನು ಕನ್‌ಸಿಡರೇಷನ್ ಸ್ಟೇಜಿನಲ್ಲಿ ಹೇಳುವುದು ನನ್ನ ಕರ್ತವ್ಯ. ರೂಲ್ಸ್ ಪ್ರಕಾರ ಇಂಟರ್‌ಡ್ಯೂಸ್ಡ್ ಎಂದು ಮಾತ್ರ ಹೇಳತಕ್ಕದ್ದು. ಕನ್‌ಸಿಡರೇಷನ್‌ಗೆ ಅದನ್ನು ತೆಗೆದುಕೊಳ್ಳುವಾಗ, ಎಲ್ಲವನ್ನು ವಿವರವಾಗಿ ಹೇಳಬೇಕಾಗುತ್ತದೆ. ಸಂಕ್ಷಿಪ್ತವಾಗಿ ತಿಳಿದುಕೊಳ್ಳಬೇಕಾದರೆ, ಬಿಲ್ಲಿನಲ್ಲಿ ಅಚ್ಚು ಹಾಕಿದ್ದೇವೆ, ಅದನ್ನು ಮಾನ್ಯಸದಸ್ಯರು ದಯವಿಟ್ಟು ಓದಬೇಕು.

Personal Explanation of Sri K. H. Patil, Minister for Agriculture and Forests

re : Sri C. M. Arumugham's spech on Governor's Address

† ಶ್ರೀ ಕೆ. ಎಚ್. ಪಾಟೀಲ್ (ವ್ಯವಸಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಣೀಯವರೇ, 21-2-1973ರಂದು, ಗವರ್ನರ್ ಅವರಿಗೆ ಅಭಿನಂದನಾ ಭಾಷಣ ಮಾಡುವಾಗ, ಈ ಸಭೆಯ ಹಿರಿಯ ಸದಸ್ಯರಾದ ಶ್ರೀಮಾನ್ ಸಿ. ಎಂ. ಆರ್ಮುಗಂ ಅವರು ಕೆಲವು ಮಾತುಗಳನ್ನು ಅವರಿಗೆ ಬಂದ ವರದಿಗಳ ಆಧಾರದ ಮೇಲೆ ಹೇಳಿದ್ದಾರೆ. ಅವರು ಹೇಳಿರುವುದನ್ನು, ಉದ್ದೇಶಪೂರ್ವಕವಾಗಿ ಹೇಳಿದ್ದಾರೆ ಎಂದು ನಾನು ಹೇಳಲಕ್ಕೆ ಹೋಗುವುದಿಲ್ಲ. ಮಾನ್ಯ ಆರ್ಮುಗಂ ಅವರ ಬಗ್ಗೆ ನನಗೆ ಗೌರವ ಇದೆ; ನಮ್ಮ ನಡವಳಿಕೆಗಳನ್ನು ಅವರು ಬಯಲಿಗೆ ಎಳೆಯುವುದರಲ್ಲಿ ಬಹಳ ಕಷ್ಟ ಪಟ್ಟು ಕೆಲಸ ಮಾಡುವಂಥ ಹಿರಿಯ ಸದಸ್ಯರು. ಅವರು ಈ ರೀತಿ ಹೇಳಿರಲಾರರು ಅವರು ತಿಳಿದುಕೊಂಡಂಥ ಅಭಿಪ್ರಾಯ, ಸರಿಯಾಗಿ ಅರ್ಥಮಾಡಿಕೊಂಡಿದ್ದರೆ ಆ ರೀತಿ ಅವರು ಹೇಳುತ್ತಾ ಇರಲಿಲ್ಲ. ಅವರು ವಿಷಯದ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗದೆ ವೈಯುಕ್ತಿಕವಾದ ಅರ್ಥವನ್ನು ಕಲ್ಪಿಸುವ ರೀತಿಯಲ್ಲಿ ಭಾಷಣ ಮಾಡಿದ್ದಾರೆ. ಸಹಕಾರ ಸಂಘದವರು ಪತ್ರ ಬರೆದರು, ಪತ್ರದಲ್ಲಿ ಸಹಕಾರ ಸಂಘದ ಹೆಸರು ಗೊತ್ತಾಗಲಿಲ್ಲ. ಆದು ಗದಗ್

** The Bill is reproduced as annexure to this volume.

(ಶ್ರೀ ಕೆ. ಎಚ್. ಪಾಟೀಲ್)

ಕೊ—ಆಪರೇಟೀವ್ ಟೆಕ್ಸ್‌ಟೈಲ್ ಮಿಲ್ಸ್ ಎಂದು ನಾನು ಹೇಳುತ್ತೇನೆ. ಆ ಮಿಲ್ಲಿಗೆ ಸಂಬಂಧಿಸಿದಂತೆ ಅವರು ಭಾಷಣ ಮಾಡುವಾಗ ಹೇಳಿದರು, ಪಾಟೀಲರು ಬುಲ್ಡೋಜರ್ ಕಳುಹಿಸಿ ಪುಕ್ಕಟೆಯಾಗಿ ಕೆಲಸಮಾಡಲು ಹೇಳಿದರು ಎಂದು. ಅಲ್ಲಿರತಕ್ಕ ಆಗ್ರೋ ಇಂಡಸ್ಟ್ರೀಸ್ ಮ್ಯಾನೇಜಿಂಗ್ ಡೈರೆಕ್ಟರ್ ಒಡನೆ ಕೆ. ಎಚ್. ಪಾಟೀಲರು ಮಾತನಾಡಿದರು. ಅವರು ಪುಕ್ಕಟೆಯಾಗಿ ಕೆಲಸ ಮಾಡುವುದಕ್ಕೆ ಒಪ್ಪಲಿಲ್ಲ, ಅದಕ್ಕೋಸ್ಕರ ಪಾಟೀಲರು ಡಿಸ್‌ಪ್ಲೆಷರ್ ಆಗಿ ಅವರನ್ನು ಟ್ರಾನ್ಸ್‌ಫರ್ ಮಾಡಿದರು ಎನ್ನುವ ಮಾತನ್ನು ಹೇಳಿದರು. ಕೆ. ಎಚ್. ಪಾಟೀಲರು ಬಹಳ ದಿವಸದಿಂದ ಇದ್ದಾರೆ ಎನ್ನುವುದೂ ಮಾನ್ಯ ಆರ್ಮುಗಂ ಅವರಿಗೆ ಗೊತ್ತು ಅವರ ಕೈಕೆಳಗೆ ಕೆಲಸಮಾಡುವಂಥ ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಹೀಗೆ ಮಾಡು, ಎಂದು ಹೇಳುವಷ್ಟು ದಡ್ಡತನಕ್ಕೆ ಕೆ. ಎಚ್. ಪಾಟೀಲರು ಹೋಗುವವರಲ್ಲ. ಒಂದು ವೇಳೆ ಸಹಕಾರ ಸಂಘಕ್ಕೆ ಟ್ರ್ಯಾಕ್ಟರನ್ನು ಪುಕ್ಕಟೆಯಾಗಿ ಕೊಡಬೇಕು ಎನ್ನುವ ಭಾವನೆ ಇದ್ದರೆ, ನೇರವಾಗಿ ಅರ್ಜಿಯನ್ನು ತೆಗೆದುಕೊಂಡು ಸರ್ಕಾರದ ಆರ್ಡರ್ ಹೊರಡಿಸಿ, ಪುಕ್ಕಟೆ ಕೊಡಬಹುದಿತ್ತು. ಅದು ನನ್ನ ಮನೆಯಲ್ಲ, ಈ ಸಹಕಾರಿ ಸಂಘದಲ್ಲಿ ಇವರಿಗೆ ಎಷ್ಟು ಹಿತ ಇದೆಯೋ, ನಮಗೂ ಅಷ್ಟೇ ಹಿತ ಇದೆ. ಮೈಸೂರು ಸರ್ಕಾರ ಸಹಕಾರ ಸಂಘದ ಅಭಿವೃದ್ಧಿ ಮಾಡುವುದು ಅವರ ಇಚ್ಛೆ. ಮಾನ್ಯ ಆರ್ಮುಗಂ ಅವರು ಈ ರೀತಿ ಮಾತನಾಡುವವರಲ್ಲ, ಇವರಿಗೆ ಅಧಿಕಾರಿಗೆ ತಪ್ಪು ವರದಿಯನ್ನು ಒಪ್ಪಿಸಿದ್ದಾನೆ. ಯಾವುದನ್ನೂ ಲೆಕ್ಕಿಸದೆ ಸಾಲವನ್ನು ಕೊಟ್ಟು ಹಣವನ್ನು ದುರುಪಯೋಗ ಮಾಡಿದ್ದಾನೆ. ಅವನಿಗೂ ಸಸ್ಪೆಂಡ್ ಆಗಬಹುದಿತ್ತು, ಆದರೆ ವಿಚಾರ ಮಾಡದೆ ಮಾಡುವುದು ಸರಿಯಲ್ಲ ಎಂದು ಹೇಳಿದ್ದೇವೆ. ಅವನು ಇವರಿಗೆ ಬಂದು ವರ್ಗಾವಣೆ ಮಾಡಿದ್ದಾರೆಂದು ಹೇಳಿದ್ದಾನೆ. ಮಾನ್ಯ ಸದಸ್ಯರು ಇದನ್ನು ತೀವ್ರವಾಗಿ, ಈ ಕಡೆಯವರಾಗಲೀ ಆ ಕಡೆಯವರಾಗಲೀ ವಿಚಾರಣೆ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಆಗ್ರೋ ಇಂಡಸ್ಟ್ರೀಸ್ ಮ್ಯಾನೇಜಿಂಗ್ ಡೈರೆಕ್ಟರ್ ಅವರನ್ನು ವರ್ಗಾವಣೆ ಮಾಡಿದ್ದೇವೆ. ಏಕೆಂದರೆ ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಇಬ್ಬರೂ ಒಬ್ಬರೇ ಇರಬೇಕು ಎಂದು ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟಿನವರು 3—4 ತಿಂಗಳ ಹಿಂದೆ ಒಂದು ಆರ್ಡರ್ ಅನ್ನು ಹೊರಡಿಸಿದ್ದಾರೆ. ಈ ಆರ್ಡರಿಗೆ ಅನುಗುಣವಾಗಿ ಲಕ್ಷ್ಮಣರಾಯರು ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಮುಂದುವರಿಯಬೇಕಾಗುತ್ತದೆ. ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಂಥ ಅಧಿಕಾರಿ ಬಹಳ ಕಾಲದಿಂದ ಅಲ್ಲಿಯೇ ಇದ್ದಂಥ ಅಧಿಕಾರಿ. ಅವನನ್ನು ಕೆಳಗಿನ ಸ್ಥಾನಕ್ಕೆ ಹಾಕುವುದು ಸಮರ್ಪಕವಲ್ಲ ಎಂದು ಷುಗರ್ ಮಿಲ್ಸ್‌ನವರು ಇವರನ್ನು ಕೇಳಿದಾಗ, ಮ್ಯಾನೇಜಿಂಗ್ ಡೈರೆಕ್ಟರ್ ಹೆಚ್ಚಿನ ಹುದ್ದೆಗೆ ಇವರನ್ನು ಹಾಕಿದ್ದೇವೆಯೋ ವಿನಹ ಅವನನ್ನು ಯಾವರೀತಿಯಿಂದಲೂ ಕೆಳಮಟ್ಟಕ್ಕೆ ಹಾಕಲಿಲ್ಲ. ಒಂದು ವೇಳೆ ನನ್ನ ಅಭಿಪ್ರಾಯದಲ್ಲಿ ಅಧಿಕಾರಿ ನನ್ನ ಮಾತು ಕೇಳಲಿಲ್ಲವೆಂದರೆ, ಟ್ರ್ಯಾಕ್ಟರ್ ಸಹಾಯ ಮಾಡಲಿಲ್ಲವೆಂದಾಗಿದ್ದರೆ ಆತನನ್ನು ಮ್ಯಾನೇಜಿಂಗ್ ಡೈರೆಕ್ಟರಾಗಿ ಕಳುಹಿಸುವುದಕ್ಕೆ ಸಾಧ್ಯವಿತ್ತೇ ? ಮನೆಗೆ ಕಳುಹಿಸಬಹುದಾಗಿತ್ತು, ಹಾಗೆ ಮಾಡಲಿಕ್ಕೆ ಸಾಧ್ಯವಿತ್ತು. ಆ ಸಹಕಾರಿ ಸಂಘದವರು ಕೂಡ ಪುಕ್ಕಟೆ ಎಂದು ಕೇಳಲಿಲ್ಲ. ಎಲ್ಲರಿಗೂ ಯಾವರೀತಿ ಕೊಡಲಾಗುತ್ತದೆಯೋ ಅದೇ ರೀತಿ ಕೊಡಿರಿ ಎಂದು ಕೇಳಿದ್ದಾರೆ. ಹಾರ್ಟಿಕಲ್ಚರ್ ಸಲುವಾಗಿ ಬುಲ್‌ಡೋಜಿಂಗ್ ಮಾಡುವುದಕ್ಕೆ ಉಳಿದವರಿಗೆ ಉಳಿದವರಿಗೆ ಯಾವರೀತಿ ರೇಟ್ ಹಾಕುತ್ತೀರೋ ಅದೇ ರೀತಿ ನಮಗೂ ಕೊಡಿ, ಅಡ್ವಾನ್ಸ್ ರೊಕ್ಕ ಕೊಡುತ್ತೇವೆಂದು ಬರೆದಿದ್ದಾರೆ. ಅದಕ್ಕಾಗಿ ಮಾನ್ಯ ಸದಸ್ಯರು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು.

ಎರಡನೆಯದಾಗಿ ಟ್ರಸಸ್ ಬಗ್ಗೆ ಒಂದು ಮಾತು ಹೇಳಿದ್ದಾರೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ನವರಿಗೂ ಸಹಕಾರ ಸಂಘಗಳಿಗೂ ಈ ಹೊತ್ತಿನವರೆಗೂ ಸಹಕಾರವಿದೆ. ಮಾಲುಗಳನ್ನು ಎಲ್ಲಿ ಕೊಡಬೆಕು, ಎಲ್ಲೆಲ್ಲಿ ತೆಗೆದುಕೊಳ್ಳಬೇಕು ಎಲ್ಲಿ ತೆಗೆದುಕೊಂಡರೆ ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ. ಟ್ರಸಸ್ ಬೆಲೆ 200-300 ರೂಪಾಯಿ ಆಗುತ್ತದೆ ಎಂದು ಯಾರೂ ಹೇಳುವುದಿಲ್ಲ. ಅದು ಹೇಗೆ ಆಗುತ್ತದೆ ? ಕಬ್ಬಿಣದ ಬೆಲೆ ಎಲ್ಲಾ ಸೇರಿ ಎರಡೂವರೆ ಸಾವಿರ ಮೂರು ಸಾವಿರ ರೂಪಾಯಿ ಆಗುತ್ತದೆ ಬರೀ ಲೇಬರ್ ಚಾರ್ಜಸ್ 200–300 ರೂಪಾಯಿ ಎಂದು ಹೇಳಿದ್ದರೆ ಒಪ್ಪಬಹುದಾಗಿತ್ತು. ಎಷ್ಟು ರೇಟ್ ಸರಿಯಾಗುತ್ತದೆಯೋ ಅಷ್ಟು ರೇಟಿಗೆ ಕೊಡಿರಿ ಎಂದು ಕೇಳಿದ್ದಾರೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮತ್ತು ಸೊಸೈಟಿ ಇವೆರಡೂ ಹೊಂದಿಕೊಂಡು ಹೋಗಬೇಕು. ಟ್ರಸಸ್ ಬಗ್ಗೆ ಸರ್ಕಾರ ಕೈ ಹಾಕುವ ಉದ್ದೇಶವಿಲ್ಲ, ಕೈ ಹಾಕುವುದೂ ಇಲ್ಲ. ಇಂಥ ಕುಲ್ಲಕ ವಿಷಯದೊಳಗೆ ನಾನು ಯಾವತ್ತಿಗೂ ಕೈಹಾಕಲಿಕ್ಕೆ ಇಚ್ಛೆಪಡುವುದಿಲ್ಲವೆಂದು ಹೇಳಲಕ್ಕೆ ಇಚ್ಛೆಪಡುತ್ತೇನೆ.

ಮೂರನೆಯದಾಗಿ ನನಗೆ ವೈಯಕ್ತಿಕವಾಗಿ ಹೇಳಿದ್ದಾರೆ. ಮಂತ್ರಿಗಳಾದ ಕೆ. ಎಚ್. ಪಾಟೀಲರು ಯಾವುದೋ ಒಂದು ಸಭೆಗೆ ಹೋದರು, ಆ ಸಭೆಗೆ 30 ಸಾವಿರ ರೂಪಾಯಿ ಖರ್ಚು ಮಾಡಿದರು ಎಂದು ಹೇಳಿದ್ದಾರೆ. ಮಾನ್ಯ ಸಭಾಧ್ಯಕ್ಷಿಣಿಯವರೇ, ಇದು ದೊಡ್ಡ ಮಾತು ಎಂದು ನಾನು ಹೇಳುವುದಿಲ್ಲ. ನಾನು ಮಂತ್ರಿಯಾದ ನಂತರ ಇಲ್ಲಿಯತನಕ ಅಷ್ಟು ಖರ್ಚುಮಾಡಿಲ್ಲ. 30 ಸಾವಿರ ರೂಪಾಯಿ ಒಂದು ಸಭೆಗೆ ಖರ್ಚು ಮಾಡಿದ್ದೇನೆಂದು ಹೇಳುವುದು ಸರಿಯಲ್ಲ. ತಮಗೇ ಗೊತ್ತಿರುವಂತೆ ನಾವು ಖರ್ಚು ಮಾಡಿ ಬಂದ ಮೇಲೆ ಭತ್ಯ ಕೊಡುತ್ತಾರೆ. ನಾನು ಖರ್ಚು ಮಾಡುವುದಿರಲಿ, ಯಾರೂ ಇಷ್ಟು ಖರ್ಚನ್ನು ಒಂದು ಸಭೆಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಇಷ್ಟು ಹಣ ಖರ್ಚಾಗುವಂಥ ಯಾವುದಾದರೂ ಒಂದು ಮೀಟಿಂಗಿಗೆ ಹಾಜರಾದರೆ ನಮ್ಮ ಮುಖ್ಯ ಮಂತ್ರಿಗಳು ನಮ್ಮನ್ನು ಮನೆಗೆ ಕಳಿಸಲಕ್ಕೆ ಹಿಂಜರಿಯುವುದಿಲ್ಲ ಎನ್ನುವ ಭಾವನೆ ಇದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಏನೇನೋ ಮಾಡಿದವರನ್ನು ಮನೆಗೆ ಕಳಿಸಲಲ್ಲ, 30 ಸಾವಿರ ರೂಪಾಯಿ ಖರ್ಚು ಮಾಡಿದ್ದಕ್ಕೆ ಮನೆಗೆ ಕಳುಹಿಸುತ್ತಾರೆಯೇ ?

ಶ್ರೀ ಕೆ. ಎಚ್. ಪಾಟೀಲ್.—ನನಗೆ 30 ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೆ ಕಾರಣವಿಲ್ಲ. ಹಾಗೆ 30 ಸಾವಿರ ರೂಪಾಯಿ ಖರ್ಚು ಮಾಡಿದ್ದರೆ ಅವರು ನನ್ನನ್ನು ಇಡಬಾರದು ಎಂದು ಹೇಳುತ್ತೇನೆ. ಶ್ರೀ ಆರ್ಮುಗಂ ಅವರು ಬಹಳ ಉತ್ತಮ ವಾಗ್ಮಿಗಳು, ಅಭ್ಯಾಸ ಮಾಡಿ ಮಾತನಾಡುವವರು. ಬರಗಾಲ ಪ್ರದೇಶಕ್ಕೆ ಸಂಬಂಧಪಟ್ಟಂತೆ ಒಂದು ಮಹತ್ವದ ರಿಪೋರ್ಟನ್ನು ಮಾಡಿದವರು. ಅವರು ತಮ್ಮ ಘನತೆ, ಗೌರವಗಳಿಗೆ ಧಕ್ಕೆ ತರುವಂತೆ ಮಾಡಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri C. M. ARUMUGHAM.—Mr Patil has made a small speech. I do not call it as a statement because a copy of it should be given in that case. The Hon. Speaker has forwarded my letter to him and I should have his statement, to put some questions or to have some clarifications.

MADAM SPEAKER.—It is not a statement. Did he read it ?

Sri C. M. ARUMUGHAM.—Reply means he gives a reply to my letter.

Sri K. H. PATIL.—No ; it is a reply to your speech on the floor of the House.

Sri C. M. ARUMUGHAM.—I have great regard and respect for Mr. Patil. So far as Gadag Co-operative Textiles Society is concerned........

MADAM SPEAKER.—He says : ,I wish to give my personal explanation on the personal allegations made against me on 21-2-1973; This is not a statement. For that he wanted permission. The thing should end there. There will be no more discussions on that.

Sri C. M. ARUMUGHAM.—You will have to kindly bear with me for this submission. When I was making these allegations, the Hon. Deputy Speaker who was in the Chair asked me to put it in writing and send it to the address of the Speaker. I think it is giving a sort of reply to my letter.

MADAM SPEAKER.—No more discussion on this please. Let us go to the next subject.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಹೇಳಿದ್ದರ ಮೇಲೆ ಚರ್ಚೆಗೆ ಅವಕಾಶವಿಲ್ಲವೆಂದು ತಾವು ಹೇಳಿದಿರಿ. ಆದರೆ ಸಭೆಯಲ್ಲಿ ಮಾನ್ಯ ಮಂತ್ರಿಗಳು ಹೇಳಿದುದನ್ನೆಲ್ಲ ಕೇಳಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ ? ಅವರು ಸಭೆಯಲ್ಲಿ ಏನು ವಿವರಣೆ ಕೊಟ್ಟಿದ್ದಾರೆ, ಅದರಲ್ಲಿ

(ಶ್ರೀ ಎಚ್. ಡಿ. ದೇವೇಗೌಡ)

ಮತ್ತೊಂದು ಗಹನವಾದ ಆರೋಪವನ್ನು ಮಾಡಿದ್ದಾರೆ. ಲಕ್ಷಾಂತರ ರೂಪಾಯಿ ಹಣವನ್ನು ದುರ್ವ್ಯವಹಾರ ಮಾಡಲಿಕ್ಕೆ ಕಾರಣನಾದ ಅಧಿಕಾರಿಯನ್ನು ನಾನು ಮನೆಗೆ ಕಳುಹಿಸಬಹುದಾಗಿತ್ತು ಎಂದು ಹೇಳಿದ್ದಾರೆ. ಆ ಸಂಸ್ಥೆಯಲ್ಲಿರುವ ಹಣಕಾಸಿನ ಬಗ್ಗೆ ನಮಗೂ ಆಸಕ್ತಿ ಇದೆ. ಇದರ ಬಗ್ಗೆ ವಿವರಗಳನ್ನು ಮಾನ್ಯ ಮಂತ್ರಿಗಳು ಈ ಸಭೆಗೆ ಕೊಡಬೇಕು. ಆ ಅಧಿಕಾರಿ ಏನೇನು ಅವ್ಯವಹಾರ ಮಾಡಿದ್ದಾರೆ ಎನ್ನುವುದರ ಬಗ್ಗೆ ಸಭೆಗೆ ವಿವರಣೆ ಕೊಡಬೇಕು. ಶ್ರೀ ಆರ್ಮುಗಂ ಅವರು ಮಾಡಿರುವ ಆರೋಪದ ಬಗ್ಗೆ ನಮಗೆ ಅವಕಾಶ ಸಿಕ್ಕಿದಾಗ ಮಾತನಾಡೋಣ. ಆದರೆ ಈ ವಿಚಾರದ ಬಗ್ಗೆ ಸ್ಪಷ್ಟೀಕರಣ ಮಾಡಬೇಕು.

ಶ್ರೀ ಕೆ. ಎಚ್. ಪಾಟೀಲ್.—ಸೂಕ್ತ ಸಮಯದಲ್ಲಿ ಸ್ಪಷ್ಟೀಕರಣ ಮಾಡುತ್ತೇನೆ

Speaker to examine notices given under Rule 312.

ಶ್ರೀ ಎಸ್. ಬಂಗಾರಪ್ಪ.—ರೂಲ್ 312ರ ಪ್ರಕಾರ ನಾನು ಈ ಹೊತ್ತು ಒಂದು ಸೂಚನೆಯನ್ನು ಕಳುಹಿಸಿದ್ದೆ. ......

ಅಧ್ಯಕ್ಷರು.—ನಾನು ಆಫೀಸಿನಲ್ಲಿ ಇರುವವರೆಗೂ ಬಂದಿರಲಿಲ್ಲ. ಅದು ಬರಲಿ, ನಾನು ನೋಡುತ್ತೇನೆ. ಅಲ್ಲದೆ ಶ್ರೀ ಮಾನ್ ಪುಟ್ಟಸ್ವಾಮಿಯವರು ಎತ್ತಿದಂಥ ಒಂದು ಪಾಯಿಂಟ್ ಆಫ್ ಆರ್ಡರಿಗೆ ನಾನು ಇನ್ನೂ ರೂಲಿಂಗ್ ಕೊಟ್ಟಿಲ್ಲ.

Sri S. BANGARAPPA.—Tomorrow shall I expect ? Now I will explain the matter.

MADAM SPEAKER.—He cannot do that. Let me see it first as to what it is.

Non - issue of Passes and incidents in the Public Gallery

ಶ್ರೀ ವಾಟಾಳ್ ನಾಗರಾಜ.—ನನ್ನ ಹೆಸರಿನಲ್ಲಿ, ಶ್ರೀ ಕೋಣಂದೂರು ಲಿಂಗಪ್ಪನವರ ಹೆಸರಿನಲ್ಲಿ, ಶ್ರೀ ಕಾಗೋಡು ತಿಮ್ಮಪ್ಪನವರ ಹೆಸರಿನಲ್ಲಿ ಯಾರು ಬರೆದು ಕಳುಹಿಸಿದರೂ ಪಾಸ್‌ಗಳನ್ನು ಕೊಡಬಾರದೆಂದು ಮಾರ್ಷಲ್ ಶಾಸ್ತ್ರಿ ಅವರು ಆಜ್ಞೆ ಮಾಡಿದ್ದಾರೆ. ನಮ್ಮ ಕಡೆಯವರಿಗೆ ಅಪಮಾನ ಅವಹೇಳನ ಮಾಡಿದ್ದಾರೆ. ಶಾಸ್ತ್ರಿ ಅವರು ಈ ರೀತಿ ನಾವು ನಾಲ್ಕೈದು ಜನ ಬರೆದು ಕಳುಹಿಸಿದರೆ ಪಾಸುಗಳನ್ನು ಕೊಡಬಾರದೆಂದು ಹೇಳುವುದಕ್ಕೆ ನಾವು ಏನು ಅಪರಾಧ ಮಾಡಿದ್ದೇವೆ ? ಅವರನ್ನು ಸಭೆಗೆ ಕರೆಸಿ ಇಲ್ಲದೆ ಇದ್ದರೆ ಅವರಿಗೆ ತಕ್ಕ ಶಿಕ್ಷೆ ಮಾಡಬೇಕು. ನಮ್ಮ ಹೆಸರಿನಲ್ಲಿ ಪಾಸುಗಳು ಹೋದರೆ ಯಾರನ್ನೂ ಬಿಡಬೇಡಿ ಎನ್ನುವ ಮೇಲ್ಮಟ್ಟದ ಧ್ವನಿಯಲ್ಲಿ ಮಾತನಾಡತಕ್ಕದ್ದು ಏನು ?

Sri C. M. ARUMUGHAM.—Before the Chair gives a Ruling I would like to make one submission. The regulation of the visitors to this House is, of course, under the control of the Speaker. But then, nowhere in this country both in the Parliament as well as in several States, has the Marshal anything to do with the regulation of the visitors. Only here we have to go to the Marshal ; the Marshal should give a letter, we must then go to a clerk and the clerk issues the visitor's card. I submit that nowhere in the State Assembly or the Parliament–has this Marshal got any power of authorising or directing or issuing the passes, Therefore, I submit that this power must be

taken away from him. He is meant for a different function. It must be with the Secretariat. In fact, there is no Receptionist to receive the M·L As, in the Secretariat. The Notice Office is there only to give notices. My submission is that there must be a Reception Office attached to the Mysore Legislature and this should function both for the Assembly as well as for the Council. That is the practice in Madras, Kerala, Andhra, Maharashtra and all the other States as well as in the Parliament Therefore, I submit that the procedure and practice that is prevalent in the State Assemblies including the Parliament may be brought into force in our Assembly.

Incident in the Public Gallery—Throwing of pamphlets against Speaker

†**Sri D. DEVARAJ URS** (Chief Minister).—Madam Speaker, I would like to make a submission so far as this aspect is concerned. Although I do not claim to know what exactly the arrangement is made in the Legislature Secretariat so far as admission of visitors is concerned, maybe the suggestion given by the Hon'ble Member Sri C M. Armugam may have to be given due consideration. In what manner admission should be made to the gallaries, is left to the legislature. But though there is a separate receptionist office in Parliament the procedure is that whenever an hon'ble member of Parliament wants some guests or visitors are allowed to the gallery, he is required to send the name in advance through a written application, mentioning therein, the qualification etc., for admission. All these things will be sent in advance to the legislature. They have their own method of making enquiries about a person who is recommended by any Hon'ble Member. Even then, they have the right to admit or not to admit. Some times I have seen admission is given and sometimes admission is not given. It is more strict so far as the Central Hall in the Parliament. Therefore, I wish to submit that the ultimate authority to admit or not to admit rests with the Hon. Speaker. Apart from that, the other point that I wanted to submit was this.

The other day, an incident happened in this House. Some visitors sitting in the gallery, all of a sudden stood up shouting slogans and threw pamphlets here. They are stated to be Yuvajana Samajavadis, and socialists. That is not the only affront they made to this House That is not the only incident that occurred here, they did something more.

Sri H. D. DEVE GOWDA.—We are not concerned with it.

Sri D. DEVARAJ URS.—We are concerned with it because it happened in this House.

Sri H. D. DEVE GOWDA.—You cannot drag that into this affair.

Sri D. DEVARAJ URS.—I am not dragging something which happened outside this House, nor am dragging anybody.

The next day, pamphlets were printed and distributed against the Speaker, That thing came in here, Is this the way ? Whoever they are, is this the way to behave ? For an incident that took place in this House, if' the Speaker takes a particular decision and if the Speaker were to say something on the floor of this House in connection with the House, she has said certain things. The pamphlets did not contain any names and it did not contain the name of the press where it was printed. They are a set of cowards who have not published names and published pamphlets and thrown them all over here.

ಶ್ರೀ ಕೋಣಂದೂರು ಲಿಂಗಪ್ಪ.—ಕವರ್ಡ್ಸ್ ಆಗಿದ್ದರೆ, ಅವರು ಬರುತ್ತಾ ಇರಲಿಲ್ಲ. ಅವರನ್ನು ಜೈಲಿಗೆ ಹಾಕಬೇಕಾಗಿತ್ತು. ಯಾತಕ್ಕೆ ಅವರನ್ನು ಬಿಟ್ಟಿರಿ ?

ಶ್ರೀ ವಾಟಾಳ್ ನಾಗರಾಜ್.—ಮುಖ್ಯಮಂತ್ರಿಗಳು ದಾರಿ ಬಿಟ್ಟುಹೋಗುತ್ತಿದ್ದಾರೆ. ಅವರ ಪೋಲೀಸಿನವರೇ ನೀತಿಗೆಟ್ಟು ಇದನ್ನು ಮಾಡಿಸಿದ್ದಾರೆ.

Sri D. DEVARAJ URS.—This people have been responsible for not only the pamphlets, it is a serious reflection on the entire team of legislators. They have made definite allegations against legislators-not this party or that party. They refer to all legislators in the pamphlets thrown the other day. Worse allegations were made against the Speaker. Madam Speaker, this is a Chair for which the entire House has the highest respect. Allegations made against the Speaker is contained in another pamphlet and it makes all shorts of allegations against the Speaker. But they have not given names of persons who have brought the pamphlets nor the name of the press where it was printed. It is a matter to be investigated. I am getting it done by the police. But will still say that those who are responsible for these pamphlets are a set of cowards.

(Sri S. Bangarappa Sri Vatal Nagaraj Sri Konandur Lingappa Sri B. B. Saynak stood up and started speaking in a loud voice all at once)

Madam Speaker, are these people responsible for that. Why are these Members getting up and shouting like this I cannot understand. Are they responsible for that?

MADAM SPEAKER.—Why is it pricking these hon. members ?

ಶ್ರೀ ವಾಟಾಳ್ ನಾಗರಾಜ್.—ಇವರ ಪೋಲಿಸಿನವರೇ ಮಾಡಿಸಿದ್ದು.

3.00 P.M.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಕೆಲವರು ಇದರ ಬಗ್ಗೆ ಏಕೆ ಮನಸ್ಸನ್ನು ಕೆಡಿಸಿಕೊಳ್ಳುತ್ತಾರೋ ಅದು ನನಗೆ ಖಂಡಿತ ಅರ್ಥವಾಗುತ್ತಿಲ್ಲ. ನಾನು ಹೇಳುವಾಗ ಸುಳ್ಳು ಹೇಳುತ್ತಾರೆ ಎಂದು ಹೇಳುವುದಕ್ಕೆ ಅಧ್ಯಕ್ಷರು ಇದರ ಮೇಲೆ ಪಾಂಪಲೆಟ್‌ಗಳನ್ನು ಯಾರು ಹೊರಡಿಸಿರುತ್ತಾರೋ ಅದರ ಬಗ್ಗೆ ಅಬ್‌ಜಕ್ಷನ್ ತೆಗೆದುಕೊಳ್ಳಲು ಇದಕ್ಕೆ ಯಾರು ಕಾರಣರು ಎಂದು ತಿಳಿ

ಯಲು ಈ ಪಾಂಪ್ಲೆಟ್‌ನಲ್ಲಿ ಯಾರ ಹೆಸರೂ ಇಲ್ಲ ಮತ್ತು ಪ್ರಿಂಟಿಂಗ್ ಪ್ರೆಸ್ಸಿನ ಹೆಸರು ಕೂಡ ಇಲ್ಲ. ಆದುದರಿಂದ ಇಂತಹ ಪ್ರಕಟಣೆಗಳನ್ನು ಹೊರಡಿಸತಕ್ಕವರು ಶುದ್ಧ ಕವರ್ಡ್‌ಗಳು ಎಂದು ಒಂದು ಸಲ ಅಲ್ಲ, ಹತ್ತು ಸಾರಿ ಹೇಳುತ್ತೇನೆ. ಆದುದರಿಂದ ಈ ಸಭೆಯ ಗೌರವವನ್ನು ಕಾಪಾಡಿಕೊಂಡು ಬರಬೇಕೆಂಬುದನ್ನು ಹೇಳುವಾಗ ನಮ್ಮ ಜೊತೆಗೆ ಮಾನ್ಯಸದಸ್ಯರು ಧ್ವನಿಗೂಡಿಸುತ್ತಾರೆಂದು ನಾನು ನಂಬುತ್ತೇನೆ. ನನ್ನ ಇನ್ನೊಂದು ಮನವಿ ಏನೆಂದರೆ, ಇಲ್ಲಿ ಯಾರೇ ಅಧ್ಯಕ್ಷ ಸ್ಥಾನದಲ್ಲಿರಲಿ ಅವರಿಗೆ ಈ ಪಕ್ಷ ಆ ಪಕ್ಷ ಎಂಬುದೇನಿಲ್ಲ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರೂ ಒಪ್ಪುತ್ತಾರೆಂದು ನಂಬುತ್ತೇನೆ. ಈ ಸಭೆಯ ಘನತೆ, ಗಾಂಭೀರ್ಯ ಹಾಗೂ ಗೌರವಗಳನ್ನು ನಾವೆಲ್ಲರೂ ಸೇರಿ ಕಾಪಾಡಿಕೊಂಡು ಬರಲು ಯಾರೂ ಹಿಂದೆ ಹೋಗುವುದಿಲ್ಲ. ಇದನ್ನು ಎಲ್ಲರೂ ಒಪ್ಪುತ್ತಾರೆಂದು ಹಾಗೂ ವಿರೋಧ ಪಕ್ಷದವರೂ ಒಪ್ಪುತ್ತಾರೆಂದು ನಂಬುತ್ತೇನೆ. ಆದರೆ ಇಲ್ಲಿ ಕೆಲವರು ಮಾತನಾಡುವುದನ್ನು ನೋಡಿದಾಗ ನನಗೆ ಒಂದು ರೀತಿಯಾದ ಅನುಮಾನ ಮೂಡುತ್ತಿದೆ, ಇಂತಹ ಒಂದು ತುಚ್ಛವಾದ ಪ್ರಕಟನೆಯನ್ನು ಹೊರಡಿಸುವಾಗ ಇದರಲ್ಲಿ ಯಾವ ಹೆಸರೂ ಇಲ್ಲದೆ ಹೊರಡಿಸಿದ್ದಾರೆ. ಇಂತಹವರು ಕವರ್ಡ್‌ಗಳು ಎಂದು ಹೇಳಿದರೆ ನಿಮಗೇಕೆ ಇಷ್ಟು ಕೋಪ ಬರಬೇಕು.

ಶ್ರೀ ವಾಟಾಳ್ ನಾಗರಾಜ್.—ನಮಗೆ ನಿಮ್ಮ ವೇದಾಂತ ಬೇಕಿಲ್ಲ. ಮುಂದೆ ಇದರ ಬಗ್ಗೆ ಹೇಳುತ್ತೇವೆ. ನಮಗೂ ತಲೆ ಇದೆ.

ಶ್ರೀ ಡಿ. ದೇವರಾಜ ಅರಸ್.—ತಲೆಯೂ ಇರಬಹುದು, ಬಾಲಾನೂ ಇರಬಹುದು. ನಾನು ಇದರ ಬಗ್ಗೆ ವಿಚಾರಮಾಡಿ ಒಂದು ಪ್ರಿವಿಲೇಜು ಮೋಷನ್ ತರಬಹುದೇ ಬೇಡವೇ ಎಂದು ಯೋಚನೆ ಮಾಡುವಾಗ ಇದರಲ್ಲಿ ಬರೆದವರ ಹೆಸರು ಇಲ್ಲ, ಹಾಗೂ ಪ್ರಿಂಟಿಂಗ್ ಪ್ರೆಸ್‌ನ ಹೆಸರೂ ಇಲ್ಲ. ಅಲ್ಲದೇ ಇದೇ ಪ್ರಥಮ ಬಾರಿಗೆ ಇದು ಇಲ್ಲಿ ಬಂದುದರಿಂದ ಇದನ್ನು ನೋಡಿ ನನಗೆ ತುಂಬಾ ವ್ಯಥೆಯುಂಟಾಯಿತು. ಆದರಲ್ಲೂ ಈ ಪಾಂಪ್ಲೆಟ್‌ನಲ್ಲಿ ಅಧ್ಯಕ್ಷರ ಬಗ್ಗೆ ಹೇಳಿರುವುದು ತುಂಬಾ ಹೀನಾಯವಾದುದು. ನನ್ನ ಮೂವತ್ತು ವರ್ಷಗಳ ಅಸೆಂಬ್ಲಿ ಅನುಭವದಲ್ಲಿ ಇಂತಹ ಒಂದು ಸಂದರ್ಭವೂ ಬರಲಿಲ್ಲ. ಇಂದು ಅಧ್ಯಕ್ಷರ ಬಗ್ಗೆ ಈ ರೀತಿಯಾಗಿರುವುದು ತೀರಾ ಅನುಚಿತವಾದದ್ದು.

Sri K. PUTTASWAMY.—Madam, is it not sufficient to refer this matter to the Committee on Privileges because they have not mentioned the name or the name of the press. It is all the more reason why it should be referred to the Committee and the Committee must find out truth in its own way and get at the mischief-mongers

ಶ್ರೀ ಡಿ. ದೇವರಾಜ ಅರಸ್.—ಅದೂ ಕೂಡ ಗಮನಿಸಬೇಕಾದ ವಿಚಾರ. ಪ್ರಿವಿಲೇಜ್ ಮೋಷನ್ ಆಗಿ ತರಲು ಬರುತ್ತೋ ಇಲ್ಲವೋ ಎನ್ನುವ ಅನುಮಾನ ಇರುವುದರಿಂದ ಅದನ್ನು ಪರಿಶೀಲಿಸಿ ತರುವುದು ಸೂಕ್ತವಾಗಿದೆ ಎಂದರೆ ಅದನ್ನು ಪ್ರಿವಿಲೇಜು ಕಮಿಟಿಗೆ ಹಾಕಬಹುದು. ಅದಕ್ಕೆ ಕಾಲ ಇನ್ನೂ ಮೀರಿ ಹೋಗಿಲ್ಲ. ಇದನ್ನು ಪ್ರಿವಿಲೇಜಸ್ ಕಮಿಟಿಗೆ ತರಲು ಸಾಧ್ಯವೇ ಎನ್ನುವುದನ್ನು ಪರಿಶೀಲನೆ ಮಾಡಿಸಿ ಮುಂದೆ ಇಂತಹ ಪ್ರಸಂಗಗಳು ಬರದಂತೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಒಂದು ಅವಕಾಶ ಬರುತ್ತದೆ ಎಂದು ನಾನು ಭಾವಿಸುತ್ತೇನೆ. ಇಂತಹ ಒಂದು ಸನ್ನಿವೇಶವಿರುವಾಗ ತಾವು ಇಲ್ಲಿರುವ ಗ್ಯಾಲರಿಗೆ ಯಾರನ್ನು ಬಿಡಬೇಕು ಯಾರನ್ನೂ ಬಿಡಕೂಡದು ಎನ್ನುವುದರ ಬಗ್ಗೆ ತಾವು ನಿಮ್ಮ ಅಧಿಕಾರಿಗಳಿಗೆ ನಿರ್ದೇಶನಗಳನ್ನು ಕೊಟ್ಟಿದ್ದೀರಿ ಎಂದು ಗೊತ್ತಾಗಿದೆ, ಇದು ತಮಗೆ ಸೇರಿರುವ ವಿಚಾರ, ಇದರಲ್ಲಿ ಮಾನ್ಯ ಸದಸ್ಯರು ಯಾರಿಗಾದರೂ ಶಿಫಾರಸು ಮಾಡಿದ್ದರೆ ಅಂತಹ ಪಾಸುಗಳನ್ನು ತಾವು ಪರಿಶೀಲನೆ ಮಾಡಬೇಕಾಗಿ ಬರುತ್ತದೆ. ಇಂತಹವರನ್ನು ಸೇರಿಸಬೇಕೇ ಬೇಡವೇ ಎನ್ನುವುದು ತಮ್ಮ ಕಚೇರಿಗೆ ಸಂಬಂಧಪಟ್ಟ ವಿಚಾರ. ಮತ್ತು ತಮಗೆ ಇದರ ಪ್ರೊಸಿಜರು ಪ್ರಕಾರ ಏನು ಮಾಡಬೇಕೋ ಆದರಂತೆ ವ್ಯವಸ್ಥೆ ಮಾಡಬೇಕಾಗುತ್ತದೆ ಮತ್ತು ಮಾನ್ಯ ಸದಸ್ಯರಾದ ಶ್ರೀ ಆರುಮುಗಂರವರು ಹೇಳಿರುವ ಮಾತುಗಳನ್ನು ತಾವೂ ಗಮನಿಸುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದು ಉಚಿತವಲ್ಲವೇನೋ ಎಂದು ಇದ್ದೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳೇ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ಈ ಸಭೆಯ ಘನತೆ, ಗಾಂಭೀರ್ಯ ಹಾಗೂ ಸಭಾಧ್ಯಕ್ಷರ ಪೀಠಕ್ಕೆಕೊಡಬೇಕಾದ ಗೌರವ, ಘನತೆ ಹಾಗೂ ಗಾಂಭೀರ್ಯಗಳನ್ನು ಉಳಿಸಿಕೊಂಡು ಹೋಗಬೇಕು ಎನ್ನುವುದರಲ್ಲಿ ಬಹುಶಃ ನಾವು ಯಾರೂ ಹಿಂದೆ ಬೀಳುವುದಿಲ್ಲ. ನನ್ನ ಮನಸ್ಸಿನಲ್ಲಿರತಕ್ಕ ಸಂಶಯವನ್ನು ತಾವು ಸ್ವಲ್ಪ ನಿವಾರಣೆ ಮಾಡಬೇಕು. ಈ ವಿಷಯ

(ಶ್ರೀ ಎಚ್. ಡಿ. ದೇವೇಗೌಡ)

ಪ್ರಸ್ತಾಪಕ್ಕೆ ಬಂದ ಸನ್ನಿವೇಶ, ಇವೊತ್ತು ಅಧ್ಯಕ್ಷರ ಗ್ಯಾಲರಿಯಿಂದ ಬಿದ್ದ ಒಂದು ಪೇಪರಿನ ಸನ್ನಿವೇಶದಿಂದ. ಇಂದು ಅಧ್ಯಕ್ಷರ ಪೀಠದ ಘನತೆ ಹಾಗೂ ಗಾಂಭೀರ್ಯದ ಬಗ್ಗೆ ಇಲ್ಲಿ ಪ್ರಿವಿಲೇಜು ಮೋಷನ್ ತರಬೇಕು ಎನ್ನುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರೇಕ್ಷಕರ ಗ್ಯಾಲರಿಗೆ ಪ್ರವೇಶಗಳನ್ನು ಕೊಡುವಾಗ ಲೋಕಸಭೆಯ ನಿಯಮಗಳನ್ನು ಇಲ್ಲಿ ಅನುಸರಿಸಬೇಕು ಎಂದು ಹಿಂದೆ ಪ್ರಸ್ತಾಪ ಬಂದಿತ್ತು. ಹಿಂದಿನಿಂದ ಪ್ರೇಕ್ಷಕರ ಗ್ಯಾಲರಿಗಳಿಗೆ ಯಾವ ರೀತಿಯ ಒಂದು ಸಂಪ್ರದಾಯವಿತ್ತೊ, ಅದನ್ನೇ ಈಗಲೂ ಅನುಸರಿಸಿಕೊಂಡು ಬಂದಿದ್ದಾರೆ. ಇದರ ಬಗ್ಗೆ ಕಾನೂನು ಏನೇ ಇರಲಿ. ನನ್ನ ಬಳಿ ಮಹಾರಾಷ್ಟ್ರದಿಂದ ಎಂಟು ಜನ ಬಂದು ಅವರು ನಮ್ಮ ಸಭೆಯನ್ನು ನೋಡಬೇಕು ಮತ್ತು ನಾವು ಇಲ್ಲಿ ಪ್ರಸ್ತಾಪ ಮಾಡುವುದನ್ನು ಕೇಳಬೇಕು ಎಂದು ಹೇಳಿ ಅದಕ್ಕೆ ಅನುಮತಿ ಪಡೆಯಲು ಪಾಸುಗಳನ್ನು ಕೇಳಿದರೆ, ಅವರ ಪೂರ್ವಾಪರಗಳು ಯಾವುದನ್ನೂ ವಿಚಾರಿಸದೆ ನಾವು ಶಿಫಾರಸು ಮಾಡಿ ಪಾಸಿಗೆ ಬರೆದು ಕೊಡುತ್ತೇವೆ. ಹಾಗೆ ಅವರು ಅಥವಾ ಬೇರೆ ಜನರು ಪ್ರೇಕ್ಷಕರ ಗ್ಯಾಲರಿಗೆ ಬಂದು ಅಲ್ಲಿ ಕುಳಿತಮೇಲೆ ಸಭೆಯೊಳಕ್ಕೆ ಶ್ರೀ ದೇವರಾಜ ಅರಸಿನವರ ಮೇಲೆ ಗುಂಡನ್ನು ಹೊಡೆಯಲು ಬರಬಹುದು ಇಲ್ಲವೇ ಶ್ರೀ ದೇವೇಗೌಡರ ಮೇಲೆ ಚಪ್ಪಲಿ ಎಸೆಯಲೂ ಬರಬಹುದು. ಇದನ್ನು ನಾವು ಹೀಗೇ ಆಗುತ್ತೆ ಎಂದು ಹೇಳಲು ಬರುವುದಿಲ್ಲ.

Sri AZEEZ SAIT (Minister for Labour).—Madam, I rise on a point of order. The hon. Member has used the word 'chappali' ; It is an unparlimentary word and so it should not be used.

Sri M. S. KRISHNAN.—Madam, what is point of order. You should say, Madam, that there is no substance in that point of order.

†**ಶ್ರೀ ಎಚ್. ಡಿ. ದೇವೇಗೌಡ.**—ನಾನು ಇದನ್ನು ಏಕೆ ಹೇಳಿದೆ ಎಂದರೆ ನಮಗೆ ಯಾರು ಗ್ಯಾಲರಿಗೆ ಬರುತ್ತಾರೆಂದು ನೋಡಲು ಆಗುವುದಿಲ್ಲ, ಅಸೆಂಬ್ಲಿ ಪಾಸ್ ಬೇಕೆಂದು ಕೇಳುವಾಗ ಸಾಧಾರಣವಾಗಿ ನಾವು ಎಲ್ಲರಿಗೂ ಬರೆದು ಕೊಡುತ್ತೇವೆ. ಇದೇ ರೀತಿ ಪಾಸುಗಳನ್ನು ತೆಗೆದುಕೊಂಡು ಹಿಂದೆ ವೆಸ್ಟ್ ಬಂಗಾಲ ಅಸೆಂಬ್ಲಿ ಗ್ಯಾಲರಿಗೆ ಬಂದು ಅಲ್ಲಿ ಮುಖ್ಯ ಮಂತ್ರಿಗಳ ಹಣೆಗೆ ಗುಂಡು ಹೊಡೆಯಲು ಕೆಲವರು ಬಂದಿದ್ದರು. ಆಗ ಅಲ್ಲಿ ಅಸೆಂಬ್ಲಿಯ ಹಾಲಿನಲ್ಲಿದ್ದ ಪೇಪರು ವೇಟುಗಳನ್ನೆಲ್ಲಾ ತೆಗೆದು ಇಟ್ಟರು. ಹಾಗೇ ಇಲ್ಲಿನ ಅಸೆಂಬ್ಲಿಯಲ್ಲೂ ಮುಂದೆ ಬರಬಹುದು. ಇವೊತ್ತು ನಾವೇನೊ ಹಾಲಿನೊಳಕ್ಕೆ ಚಪ್ಪಲಿಗಳನ್ನು ಹಾಕಿಕೊಂಡು ಬರುತ್ತಿದ್ದೇವೆ. ಇಂದು ವಾಕಿಂಗ್ ಸ್ಟಿಕ್ ತರುವುದು ಬೇಡ ಎಂದು ಮಾಡಿದ್ದಾರೆ. ಮುಂದೆ ಪರಿಸ್ಥಿತಿ ಹೇಗೆ ಆಗುತ್ತೋ ಅದಕ್ಕೆ ಸರಿಯಾಗಿ ನಾವೂ ಹೊಂದಿಕೊಂಡು ಹೋಗಬೇಕಾಗುತ್ತದೆ. ನಾನು ಈ ಮಾತನ್ನು ಸ್ವಲ್ಪ ಜವಾಬುದಾರಿಯಿಂದ ಇಲ್ಲಿ ಹೇಳುತ್ತಿದ್ದೇನೆ. ನಾನೂ ಕೂಡ ಮೈಸೂರು ವಿಧಾನ ಸಭೆಯಲ್ಲಿ ಶಾಸಕನಾಗಿ ಸುಮಾರು ಹತ್ತು ವರ್ಷಗಳಿಂದಲೂ ಬಂದಿರುವ ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಅವರ 30 ವರ್ಷಗಳ ಅನುಭವದಲ್ಲಿ ಎಂದು ಹೇಳಿದರು, ಅದು ಹೇಗೇ ಇರಲಿ, ಇಂತಹ ಕೆಲಸಗಳು ನಮ್ಮ ಅಸೆಂಬ್ಲಿಯಲ್ಲಿ ಎಂದೂ ನಡೆದಿಲ್ಲ ಎನ್ನುವುದನ್ನು ನಾನೂ ಸಮರ್ಥನೆ ಮಾಡುತ್ತೇನೆ, ಹಿಂದೆ ಕೂಡ ಬಹುಶಃ 1971ರಲ್ಲಿ ಪ್ರೇಕ್ಷಕರಲ್ಲಿ ಮೇಲ್ಗಡೆ ಗಲಾಟೆಯಾದಾಗ, ಗಲಾಟೆ ಮಾಡಿದವರನ್ನು ಹೊರಗಡೆ ಕರೆದುಕೊಂಡು ಹೋಗಲಾಯಿತು. ಅದು ಮಾನ್ಯ ಪುಟ್ಟಸ್ವಾಮಿಯವರಿಗೂ ಸಹ ಗೊತ್ತಿದೆ. ಮೊನ್ನೆ ಬಡ್ಜೆಟ್ ಮಂಡನೆಯಾದ ದಿವಸ ಕರಪತ್ರಗಳನ್ನು ಯಾರು ಎಸೆದರೋ ಅವರು ಕ್ಷಮಾಪಣೆ ಕೇಳಿಕೊಂಡಿದ್ದರಿಂದ ಬಿಟ್ಟುಬಿಡಲಾಯಿತು ಎಂದು ಮಾರನೇ ದಿವಸ ತಾವು ಹೇಳಿದಿರಿ. ಅದರ ಮಾರನೇ ದಿವಸ ಆ ಕರಪತ್ರವನ್ನು ಎಸೆದವರು ತಾವು ಅಧ್ಯಕ್ಷರನ್ನು ಕ್ಷಮಾಪಣೆ ಕೇಳಿದ್ದು ಸುಳ್ಳು ಎಂದು ಹೇಳಿ ಆ ಬಗ್ಗೆ ಮೂರು ಪಾಯಿಂಟ್‌ಗಳು ಇರುವಂತಹ ಒಂದು ಕರಪತ್ರವನ್ನು ಪ್ರಿಂಟ್ ಮಾಡಿಸಿ ಹಂಚಿಕೆ ಮಾಡಿದ್ದಾರೆ. ಈ ವಿಷಯದಲ್ಲಿ ನಾನು ಏತಕ್ಕೆ ವಿವರಣೆ ಕೇಳುತ್ತಿದ್ದೇನೆಂದರೆ, ಈ ರೀತಿಯ ಕರಪತ್ರವನ್ನು ಇಂದು ನಿಮ್ಮ ಮೇಲೆ ಹಂಚಬಹುದು, ನಾಳೆ ನಮ್ಮ ಮೇಲೆ ಹಂಚಬಹುದು. ಆ ಕರಪತ್ರವನ್ನು ಪ್ರಿಂಟ್ ಮಾಡಿದ ಪ್ರೆಸ್‌ನ ಹೆಸರು ಅದರಲ್ಲಿ ಇಲ್ಲ. ಆದ್ದರಿಂದ ಅದನ್ನು ಗಣನೆಗೆ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಈ ಕಾರಣದಿಂದ ಹ್ಯಾಂಡ್ ಬಿಲ್‌ಗಳನ್ನು ಯಾರ ಬಗ್ಗೆಯಾದರೂ ಮಾಡಿಸಬಹುದು. 1962ರಲ್ಲಿ ನನ್ನ ಬಗ್ಗೆಯೇ ಪ್ರಿಂಟ್ ಮಾಡಿ ಹಂಚಿದ್ದರು. ಆಗ ಅದನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ, ಮಾನ್ಯ ಕೆ. ಎಚ್. ರಂಗನಾಥ್ ಅವರು ಅದರ ಬಗ್ಗೆ ಕ್ರಿಯಾಲೋಪ ಎತ್ತಿ ಆ ವಿಚಾರದಲ್ಲಿ ಇಲ್ಲಿ ಪ್ರಸ್ತಾಪ ಮಾಡುವ ಬದಲು

ಮಾನನಷ್ಟ ಮೊಕದ್ದಮೆ ಹೂಡಿ ಎಂದರು. ಮುಖ್ಯವಾಗಿ ಈ ಸಭೆಯ ಕಾರ್ಯಕಲಾಪಗಳ ಹಕ್ಕು ಬಾಧ್ಯತೆಗಳಿಗೆ ಸಂಬಂಧಪಟ್ಟಂತೆ ಯಾರಾದರೂ ಹೀಯಾಳಿಸಿ ಮಾತನಾಡಿದಾಗ ಅದಕ್ಕೆ ಮನ್ನಣೆ ಕೊಡಬೇಕೇ ಅಥವಾ ಬೇಡವೇ ಎಂಬ ಪ್ರಶ್ನೆ ನಮ್ಮ ಮುಂದೆ ಇದೆ. ನಮ್ಮ ರಾಜ್ಯದಲ್ಲಿ 2 ಪೈಸೆ ಮತ್ತು [illegible] ಪೈಸೆಯ ಕೆಲವು ಚಿಕ್ಕ ಚಿಕ್ಕ ಪತ್ರಿಕೆಗಳು ಪ್ರಿಂಟ್ ಆಗುತ್ತಿವೆ. ಅವುಗಳಲ್ಲಿ ಯಾರದೋ ಬಗ್ಗೆ ಪ್ರಿಂಟ್ ಮಾಡಿಸಿ ಬಸ್ ಸ್ಟ್ಯಾಂಡ್‌ಗಳಲ್ಲಿ ಕೂಗಿಕೊಂಡು ಮಾರಾಟ ಮಾಡುತ್ತಿರುತ್ತಾರೆ. ಆ ಪತ್ರಿಕೆಗಳವರು ಕೆಲವರ ಮೇಲೆ ಮಾಡಿರುವ ಅಪಾದನೆಯಲ್ಲಿ ನಿಜವಿದೆಯೇ ಇಲ್ಲವೇ, ಹುರುಳಿದೆಯೇ ಇಲ್ಲವೇ ಎಂಬುದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಈ ಸಭೆಯಲ್ಲಿ ನಡೆದಿರುವ ಘಟನೆಯ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಆ ಬಗ್ಗೆ ತಾವೇನು ರೂಲಿಂಗ್ ಕೊಟ್ಟಿದ್ದೀರಿ, ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಈ ಪ್ರಕರಣ ಅಧ್ಯಕ್ಷರ ಘನತೆ ಗೌರವಗಳಿಗೆ ಧಕ್ಕೆ ತರುವ ವಿಚಾರವಾದ್ದರಿಂದ, ಈ ವಿಷಯ ನಮಗೆಲ್ಲರಿಗೂ ಸಂಬಂಧಪಟ್ಟಿದ್ದಾಗಿದೆ, ಬೇಕಾದರೆ ಸರ್ಕಾರದವರು ಸಿ.ಐ.ಡಿ.ಗಳನ್ನು ಬಿಟ್ಟು ಈ ವಿಚಾರದಲ್ಲಿ ತನಿಖೆ ಮಾಡಿಸಲಿ. ಆದರೆ ನಾವು ಅದರ ಬಗ್ಗೆ ಇಲ್ಲಿ ವಿವರವಾಗಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿದೆಯೇ ಎಂದು ಕೇಳುತ್ತೇನೆ. ಹಿಂದೆ ಮುಗ್ದುಂ ಅವರು ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಅಸೋಸಿಯೇಷನ್‌ನಲ್ಲಿ ಈ ಸಭೆಯ ನಡವಳಿಕೆಯ ಬಗ್ಗೆ ಪ್ರಸ್ತಾಪ ಮಾಡಿದರು. ನಂತರ ಅದು.. ...

ಶ್ರೀ ಎಚ್. ಎನ್. ನಂಜೇಗೌಡ.—ಈ ಸಭೆಯ ನಡೆವಳಿಕೆಯ ಬಗ್ಗೆ ಕರಪತ್ರವನ್ನು ಹಂಚಿದ್ದರೆ ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಪ್ರಸ್ತಾಪಕ್ಕೆ ಬಂತು. ತಾವು ಅವರಿಂದ ವಿವರಣೆ ಪಡೆದ ನಂತರ ತಾವು ಅದನ್ನು ರೂಲ್-ಔಟ್ ಮಾಡಿದಿರಿ. ಆ ವಿಚಾರದಲ್ಲಿ ಮಾನ್ಯ ಚನ್ನಬಸಪ್ಪನವರು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರು, ಆದರೆ ಅದು ಏನಾಯಿತೋ ಗೊತ್ತಿಲ್ಲ. ಮಾನ್ಯ ಹಾವನೂರು ಅವರು ಈ ಶಾಸನಸಭೆಗಳ ಬಗ್ಗೆ ಮಾತನಾಡಿದ್ದರ ಬಗ್ಗೆ ಮಾನ್ಯ ಶೀರನಾಳಿ ಚಂದ್ರಶೇಖರ್ ಅವರು ಕ್ರಿಯಾಲೋಪ ಎತ್ತಿದಾಗ, ತಾವು ಮಾನ್ಯ ಹಾವನೂರ್ ಅವರಿಂದ ವಿವರಣೆ ಕೇಳಿ ಅದನ್ನೂ ರೂಲ್-ಔಟ್ ಮಾಡಿದಿರಿ. ಈಗ ಈ ಕರಪತ್ರದ ಬಗ್ಗೆ ಪುರಸ್ಕಾರ ಕೊಡಬೇಕೇ ಅಥವಾ ಬೇಡವೇ ಎಂಬುದನ್ನು ತಾವು ತಿಳಿಸಬೇಕು. ಇಲ್ಲದಿದ್ದರೆ ಮುಂದೆ ಯಾರು ಮೇಲೆ ಬೇಕಾದರು ಪ್ರಿಂಟ್ ಮಾಡಿಸಿ ಹಂಚಬಹುದು. ಆದ್ದರಿಂದ ಈ ಬಗ್ಗೆ ರೂಲಿಂಗ್ ಕೊಡಬೇಕು.

ಇನ್ನು ಪ್ರೇಕ್ಷಕರ ಗ್ಯಾಲರಿಗೆ ಸಾರ್ವಜನಿಕರನ್ನು ಬಿಡುವ ವಿಷಯದಲ್ಲಿ ನನ್ನ ಕಳಕಳಿಯ ಪ್ರಾರ್ಥನೆ ಏನೆಂದರೆ, ಪ್ರೇಕ್ಷಕರನ್ನು ಒಳಗೆ ಬಿಡುವ ವಿಷಯದಲ್ಲಿ ತಾವು ಇಷ್ಟೊಂದು ಕಠಿಣ ಪರಿಸ್ಥಿತಿಗೆ ತೆಗೆದುಕೊಂಡು ಹೋಗುವುದು ಬೇಡ. ಹಿಂದೆ ವೆಸ್ಟ್ ಬೆಂಗಾಲ್‌ನಲ್ಲಿ 3 ಸಾವಿರ ಜನರು ಅಲ್ಲಿಯ ಅಸೆಂಬ್ಲಿಯೊಳಕ್ಕೆ ನುಗ್ಗಿ, ಗೃಹಮಂತ್ರಿಗಳನ್ನು ಹೊಡಿದಿದ್ದರು. ಆ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇನೂ ಬಂದಿಲ್ಲ. ಬರುವುದಿಲ್ಲ. ಆದ್ದರಿಂದ ಇಷ್ಟೊಂದು ಅಡ್ಡಿಆತಂಕವಿರುವುದು ಬೇಡ. ಆ ರೀತಿ ಸನ್ನಿವೇಶ ಇಲ್ಲಿ ಬಂದಾಗ ಬೇಕಾದರೆ ಯೋಚನೆ ಮಾಡೋಣ. ಆದ್ದರಿಂದ ಈಗ ಈ ವಿಷಯದಲ್ಲಿ ತಮ್ಮ ನಿರ್ಣಯ ಏನಿದೆ ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಮತ್ತು ಮಾನ್ಯ ದೇವೇಗೌಡರು ಹೇಳಿದರು. ಶ್ರೀಮಾನ್ ನಂಜೇಗೌಡರು ಹೇಳಿದ ಹಾಗೆ ಆ ಕರಪತ್ರಗಳನ್ನು ಅಚ್ಚುಹಾಕಿಸಿ ಹಂಚಿಕೆ ಮಾಡಿರುವುದು ಈ ಸಭೆಯ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಿದ್ದು ಆಗಿರುವುದರಿಂದ ಆ ಸುದ್ದಿ ಈಗ ಪ್ರಸ್ತಾಪಕ್ಕೆ ಬಂತು. ಅದು ಪ್ರಿವಿಲೇಜ್ ಆಗುತ್ತದೋ ಇಲ್ಲವೋ ನೋಡೋಣ.

ಇನ್ನು ಮಾರ್ಷಲ್ ಅವರು ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆ, ಎಂಬುದಾಗಿ ಮಾನ್ಯ ಸದಸ್ಯರು ಕೆಲವರು ಹೇಳಿದರು. ರೂಲ್ 319ರಲ್ಲಿ ಈ ರೀತಿ ಹೇಳಲಾಗಿದೆ :—

> "The admission of strangers during the sittings of the Assembly to those portions of the Assembly which are not reserved for the exclusive use of members shall be regulated in accordance with orders made by the Speaker".

ಆದ್ದರಿಂದ ಈ ವಿಚಾರದಲ್ಲಿ ನಾನೇ ಹೇಳಿರುವುದು. ಮಾರ್ಷಲ್ ಅವರು ನಾನು ಹೇಳಿರುವ ಪ್ರಕಾರ, ನನ್ನ ಅಜ್ಞೆಯ ಪ್ರಕಾರ ನಡೆದುಕೊಳ್ಳುತ್ತಿದ್ದಾರೆ. ನನ್ನ ಆಜ್ಞೆಗೆ ವಿರುದ್ಧವಾಗಿ

(ಅಧ್ಯಕ್ಷರು)

ಮಾರ್ಷಲ್ ಯಾವ ರೀತಿಯಲ್ಲಿಯೂ ನಡೆದುಕೊಳ್ಳುತ್ತಿಲ್ಲ. ಮಾನ್ಯ ನಾಗರಾಜ್ ಅವರು ಮೊದಲು ನಾಲ್ಕು ಜನರಿಗೆ ಪಾಸ್‌ಗಳು ಬೇಕೆಂದು ಒಂದು ಕಾಗದ ಕಳುಹಿಸಿಕೊಟ್ಟರು. ಅದರ ಪ್ರಕಾರ 255, 256, 257, 258ನೇ ನಂಬರ್ ಪಾಸ್‌ಗಳನ್ನು ಕೊಡಲಾಯಿತು. ನಂತರ ಎರಡನೇ ಸಲ ಒಂದು ಅಪ್ಲಿಕೇಷನ್ ಕಳುಹಿಸಿದರು. ಆಗ 300ನೇ ನಂಬರ್ ಪಾಸನ್ನು ಕೊಡಲಾಯಿತು. ಮೂರನೇ ಸಲ ನಾರಾಯಣಶಾಸ್ತ್ರಿ ಎಂಬುವರಿಗೆ ಪಾಸ್ ಬೇಕೆಂದು ಕೇಳಿದಾಗ 372ನೇ ನಂಬರ್ ಪಾಸನ್ನು ಕೊಡಲಾಯಿತು. ಮತ್ತೆ ತಿರುಗಿ ಬಂದು ಒಂದು ಅಷ್ಟು ಪಾಸ್‌ಗಳು ಬೇಕು, ಹೆಸರು ಗೊತ್ತಿಲ್ಲ ಎಂದು ಹೇಳಿದಾಗ ಮಾರ್ಷಲ್ ಅವರು ನಿರಾಕರಿಸಿದ್ದಾರೆ. ಇಷ್ಟು ನನಗೆ ಬಂದಿರುವ ವಿಷಯ. ಯಾರಾದರು ಬಂದು ಇಂತಹವರಿಗೆ ಪಾಸ್ ಬೇಕು ಎಂದು ಕೇಳಿದರೆ ಕೊಡಬೇಕೆಂದು ಹೇಳಿದ್ದೇನೆಯೇ ಹೊರತು ಯಾರನ್ನೂ ಬಿಡಬಾರದು, ಇನ್–ಕ್ಯಾಮರಾ ಮೀಟಿಂಗ್ ಮಾಡುತ್ತೀವೆ, ಯಾರಿಗೂ ಅನುಮತಿ ಇಲ್ಲ, ಯಾರೂ ಒಳಗೆ ಬರಬಾರದು ಎಂದು ಯಾರಿಗೂ ನಾನು ಹೇಳಿಲ್ಲ. ಅದರೆ ಮಾನ್ಯ ನಾಗರಾಜ್ ಅವರು ನಾಲ್ಕನೇ ಬಾರಿ ಅಪ್ಲಿಕೇಷನ್ ಕೊಟ್ಟು ಪಾಸ್‌ಗಳು ಬೇಕು ಎಂದು ಕೇಳಿದಾಗ ಆ ಅಪ್ಲಿಕೇಷನ್‌ನಲ್ಲಿ ಈ ಸಭೆಯಲ್ಲಿ ಕರಪತ್ರ ತೂರಿದವರ ಹೆಸರುಗಳೇ ಇದ್ದ ಕಾರಣ ಪಾಸ್‌ಗಳನ್ನು ಕೊಟ್ಟಿಲ್ಲ. ಆ ದಿನ ಕರಪತ್ರಗಳನ್ನು ತೂರಿದವರ ಹೆಸರು ಮತ್ತು ವಿಳಾಸಗಳನ್ನು ನಾವು ತೆಗೆದುಕೊಂಡಿದ್ದೇವೆ, ಅವರ ಹೆಸರಿಗೆ ಪಾಸ್ ಬೇಕೆಂದು ಕೇಳಿದ್ದರಿಂದ ಕೊಟ್ಟಿಲ್ಲ;

ಶ್ರೀ ಡಿ. ದೇವರಾಜ ಅರಸ್.–ಈಗ ಅಧ್ಯಕ್ಷರು ಪ್ರಿವಿಲೇಜ್ ಇಷ್ಯೂ ವಿಚಾರ ಮತ್ತು ಶ್ರೀಮಾನ್ ದೇವೇಗೌಡರು ಇದಕ್ಕೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ಹೌಸ್‌ನಲ್ಲಿ ನಡೆದಂತಹ ನಡೆವಳಿಕೆಗಳ ಬಗ್ಗೆ ಅಧ್ಯಕ್ಷರು ಅಂತಿಮವಾದ ರೂಲಿಂಗ್ ಕೊಟ್ಟಿಲ್ಲ ಎಂದು ನಾನು ಭಾವಿಸುತ್ತೇನೆ. It is still an open question. We have to carefully study it and this is not a matter to be left as it is.

ಶ್ರೀ ವಾಟಾಳ್ ನಾಗರಾಜ್.—ನಾನು ಒಂದು ಪತ್ರವನ್ನು ಬರೆದು ಕಳುಹಿಸಿ ಅದರಲ್ಲಿ 5 ಜನಗಳಿಗೆ ಪಾಸು ಕೊಡಬೇಕೆಂದು ಬರೆದಿದ್ದೆ. ಅದರಲ್ಲಿ ಪಾಸುಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಬರೆದಿದ್ದಾರೆ. ನಾನು ಹೇಳುವುದರಲ್ಲಿ ಅಧ್ಯಕ್ಷರು ನಂಬಿಕೆಯನ್ನು ಇಡಬೇಕು. ಮಾರ್ಷಲ್ ಅವರು ತಮಗೆ ಸತ್ಯಕ್ಕೆ ದೂರವಾದ ಮಾತನ್ನು ಹೇಳುತ್ತಾರೆ ಎಂದು ನನಗೆ ಅನಿಸುತ್ತದೆ.

ಅಧ್ಯಕ್ಷರು.—ಆ ರೀತಿ ಅವರು ಸತ್ಯಕ್ಕೆ ದೂರವಾದ ಮಾತನ್ನು ಹೇಳಿಲ್ಲ. ನಾನು ಯಾವ ರೀತಿ ಹೇಳುತ್ತೇನೆ ಆ ರೀತಿ ಅವರು ನಡೆದುಕೊಳ್ಳುತ್ತಾರೆ.

(ಈ ಸಂದರ್ಭದಲ್ಲಿ ಮಾರ್ಷಲ್ ಅವರ ಬಗ್ಗೆ ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಮಾತನಾಡುವುದಕ್ಕೆ ಎದ್ದರು.)

* * * *

ಅಧ್ಯಕ್ಷರು.—ಇದೆಲ್ಲಾ ರೆಕಾರ್ಡ್ ಮಾಡಬಾರದು.

ಶ್ರೀ ಕಾಗೋಡು ತಿಮ್ಮಪ್ಪ.—ಎರಡು ಪಾಸುಗಳಿಗಿಂತ ಜಾಸ್ತಿ ಯಾರಿಗೂ ಕೊಡಬಾರದು ಎಂದು ಅಧ್ಯಕ್ಷರು ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಈ ಸಭೆಯಲ್ಲಿ ಬಡ್ಜೆಟ್ಟನ್ನು ಮಂಡನೆ ಮಾಡಿದ ದಿವಸ ಯಾರು ಗಲಾಟೆ ಮಾಡಿದರೋ ಅವರ ಹೆಸರಿನಲ್ಲಿ ಪಾಸು ಕೊಡಬೇಕೆಂದು ಬಂದರೆ ಅವರಿಗೆ ಪಾಸು ಕೊಡಬೇಡಿ ಎಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಅಧ್ಯಕ್ಷರು ಏನು ರೂಲಿಂಗ್ ಕೊಟ್ಟಿದ್ದಾರೆ ಅದನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಈಗ ರೂಲ್ ನಂಬರ್ 321ರಲ್ಲಿ ಈ ರೀತಿ ಹೇಳಿದ್ದಾರೆ.—"An officer of the secretariat authorised in this behalf by the Speaker shall remove from the precincts of the Assembly or take into custody, any stranger who he may see or who may be reported to him to be, in any portion of the precincts of the Assembly which is reserved for the exclusive use of members, and also any stranger who, having been admitted into any portion of the precincts of the Assembly misconducts himself or wilfully infringes the regulations made by the Speaker under Rule 319 or does not withdraw when the strangers are directed to withdraw under rule 320 while the Assembly is sitting.'' ಎಂದು ಇದೆ. ಈ ತರಹ ರೇಗ್ಯುಲೇಟ್ ಮಾಡಬೇಕು.

**** Matter not recorded as ordered by the Chair.

MADAM SPEAKER.—If it is desired we will circulate it to all the Members once again.

ಶ್ರೀ ಎಂ. ಎಸ್. ಕೃಷ್ಣನ್.—ದೂರುಗಳು ಬರುತ್ತವೆ. ಈಗ ಘಟನೆ ನಡೆದುಹೋಯಿತು. ಆ ರೀತಿ ಅವರು ಮಾಡಬಾರದಾಗಿತ್ತು. ಅವರು ತಮ್ಮ ಕ್ಷಮಾಪಣೆ ಕೇಳಿದರು. ತಾವು ಕ್ಷಮಿಸಿದ್ದೀರಿ. ಅವರು ಒಂದು ಸಾರಿ ಹೊರಗಡೆ ಹೋದರೆ ಇನ್ನೊಂದು ಸಾರಿ ಬರುತ್ತಾರೆ. ಆಗ ಬಿಡುವುದಿಲ್ಲವೇ ?

ಅಧ್ಯಕ್ಷರು.—ಯಾವಾಗ ಬಿಡಬೇಕೆಂಬುದು ಗೊತ್ತು.

Sri D. DEVARAJ URS.—This leads to further argument. The matter of admission to the galleries is entirely the prerogative of the Hon. Speaker.

Sri M. S. KRISHNAN.—I never questioned the prerogative of the Hon. Speaker. ಈಗ ಅವರು ಮಾತ್ರ ತಮ್ಮ ಹತ್ತಿರ ಬರುತ್ತಾರೆ. ಆ ರೀತಿ ನಾವು ಮಾಡಿದ್ದು ತಪ್ಪು ಎಂದು ಹೇಳುತ್ತಾರೆ. The right which you have is to be enforced according to these regulations. I want to know what those regulations are ?

MADAM SPEAKER.—I will arrange to circulate the regulations to all the Members.

ಶ್ರೀ ಎಸ್. ಬಂಗಾರಪ್ಪ.—ನಾನು ಮೂರು ಸಾರಿ ಪತ್ರವನ್ನು ಬರೆದು ಕಳುಹಿಸಿದರೂ ಕೂಡ ಪಾಸುಗಳನ್ನು ಕೊಟ್ಟಿಲ್ಲ.

ಅಧ್ಯಕ್ಷರು.—ಪಾಸಿನ ವಿಷಯ ಮುಗಿದು ಹೋಯಿತು ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಂ. ಬಿ. ರಾಮಸ್ವಾಮಿ.—ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಜೋಡು ಎನ್ನುವ ಪದವನ್ನು ಬಳಸಿದರು, ಅದು ಸರಿಯಲ್ಲ.

ಅಧ್ಯಕ್ಷರು.—ಅದೇನು ದೊಡ್ಡ ವಿಷಯ. ತೆಗೆಸೋಣ ಬಿಡಿ.

ಶ್ರೀ ಎಂ. ಬಿ. ರಾಮಸ್ವಾಮಿ.—10ನೇ ತಾರೀಖು ಇಂಥಾ ಒಂದು ಘಟನೆ ನಡೆದಾಗ ಮಾನ್ಯ ಸದಸ್ಯರೊಬ್ಬರು ಉದ್ದವಾದ ಪದವನ್ನು ಬಳಸಿದರು. ಅದು ಅನ್‌ಪಾರ್ಲಿಮೆಂಟರಿ ಎಂದು ಹೇಳಿ ರೂಲಿಂಗ್ ಕೊಟ್ಟಿರು. ಅದೇ ರೀತಿ ಮಾನ್ಯ ವಿರೋಧ ಪಕ್ಷದ ನಾಯಕರು ಜೋಡು ಪದವನ್ನು ಬಳಕೆ ಮಾಡಿರುವುದು ಸರಿಯಲ್ಲ.

ಅಧ್ಯಕ್ಷರು.—ಅವರು ಹೇಳಿದ್ದು ಅವರಿಗೆ ಪವಿತ್ರವಾಗಿದ್ದರೆ, ಅಪ್ಯಾಯಮಾನವಾಗಿದ್ದರೆ ಅದು ಹಾಗೆಯೇ ಇದ್ದುಕೊಂಡು ಹೋಗಲ ಬಿಡಿ ; ನಿಮಗೇನು ಕಷ್ಟ ?

3-30 P M.

ಶ್ರೀ ಎಚ್. ಡಿ. ದೇವೇಗೌಡ.—ಸ್ಪೀಕರ್‌ರವರು ಮಾತಿನ ಭರದಲ್ಲಿ ತಪ್ಪು ಮಾಡುವುದಕ್ಕೆ ಹೋಗಬಾರದು. ಆ ರೀತಿ ನೀವು ಟ್ವಿಸ್ಟ್ ಮಾಡುವುದಕ್ಕೆ ಹೋಗಬೇಡಿ. ಅದನ್ನು ಬೇಕಾದರೆ ಕನ್ನಡದಲ್ಲಿ ಸ್ಪಷ್ಟವಾಗಿ ಇನ್ನೊಂದು ಸಾರಿ ಹೇಳುತ್ತೇನೆ.

ಅಧ್ಯಕ್ಷರು.—ನಾನು ಆ ರಿಕಾರ್ಡನ್ನು ತರಿಸಿ ಓದಿ ಬಿಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಹೊಡೆಸಿಕೊಳ್ಳುವಷ್ಟು ಏನೂ ಮಾಡಿಲ್ಲ. ನಾನು ಅದನ್ನು ಇನ್ನೊಂದು ಸಾರಿ ಬೇಕಾದರೆ ಹೇಳುತ್ತೇನೆ.

ಅಧ್ಯಕ್ಷರು.—ಇಲ್ಲ; ಇಲ್ಲ. ನಾನು ಅದನ್ನು ತರಿಸಿ ಓದಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಏನು ಹೇಳಿದೆ ಅಂದರೆ, ಈ ಸಭೆಗೆ ಜನರು ಬರತಕ್ಕ ಕಾಲದಲ್ಲಿ ಕೆಲವು ನಿಯಮಗಳು ಇವೆ. ಅವರು ಕೋಲು, ಪುಸ್ತಕ ಯಾವುದೂ ತೆಗೆದುಕೊಂಡು ಬರಬಾರದು. ನಾಳೆ ನೀವು ವಿಸಿಟರ್ಸ್ ಚಪ್ಪಲಿ ಸಹ ಹೊರಗೆ ಇಟ್ಟು ಬರಬೇಕೆಂದು ಹೇಳುವುದಕ್ಕೆ ಬರುತ್ತದೆ.

ಅಧ್ಯಕ್ಷರು.—ತಾವು ಅಷ್ಟು ಭಾವೋದ್ರಿಕ್ತರಾಗುವುದಕ್ಕೆ ಕಾರಣವಿಲ್ಲ. ನಾನು ಅದನ್ನು ತರಿಸಿ ಓದಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ತಾವು ವಿರೋಧ ಪಕ್ಷದ ನಾಯಕರಿಗೆ ಚಪ್ಪಲಿಯಲ್ಲಿ ಹೊಡೆಸಿಕೊಳ್ಳುವ ಶಬ್ದ ಅಪ್ಯಾಯಮಾನವಾಗಿದ್ದರೆ ಅದು ಇದ್ದುಕೊಳ್ಳಲ ಎಂದು ಹೇಳಿದ್ದೀರಿ. ಸಭಾನಾಯಕರು ಅನೇಕ ಸಲ........

ಶ್ರೀ ವಾಟಾಳ್ ನಾಗರಾಜ್. - ಅವತ್ತು ಪದ ಬಳಸಿದ್ದಕ್ಕೂ ಇವತ್ತು ದೇವೇಗೌಡರು ಮಾತನಾಡಿದ್ದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಮುಖ್ಯಮಂತ್ರಿಯವರ ಮೇಲೆ ಏನಾದರೂ ಮಾಡಬಹುದು; ಅಥವಾ ನನ್ನ ಮೇಲೆ ಏನಾದರೂ ಮಾಡಬಹುದು; ಎಂದು ಹೇಳಿದ್ದಾರೆ. ಆದರೆ ಇವತ್ತಿನ ಮಾತಿಗೂ ಅವತ್ತಿನ ಮಾತಿಗೂ ಬಹಳ ವ್ಯತ್ಯಾಸ ಇದೆ.

ಅಧ್ಯಕ್ಷರು.—ಅದನ್ನು ತೆಗೆಸಿ ಓದುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈಗ ಈ ವಿಚಾರವನ್ನು ಪೂರ್ತಿಯಾಗಿ ಬಿಟ್ಟು ಬಿಡೋಣ.

Nomination to the Taluk Boards

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ನಾನು ಇವತ್ತು ಬೆಳಿಗ್ಗೆ ರೂಲ್ 312 ಪ್ರಕಾರ ಒಂದು ನೋಟೀಸನ್ನು ತಮಗೆ ಕಳುಹಿಸಿದ್ದೇನೆ. ಅದರಲ್ಲಿ ತಾಲ್ಲೂಕು ಬೋರ್ಡು ಅಧಿಕಾರಿಗಳನ್ನು ನೇಮಿಸುವ ಬಗ್ಗೆ ಕೆಲವು ವಿಚಾರವನ್ನು ಸರ್ಕಾರದಿಂದ ತಿಳಿಯಲು ಅಪೇಕ್ಷೆ ಪಟ್ಟಿದ್ದೇನೆ.

ಅಧ್ಯಕ್ಷರು —ಅದು ಈಗ ತಾನೇ ಬಂದಿದೆ. ಇನ್ನೂ ನಾನು ಪುಟ್ಟಸ್ವಾಮಿಯವರು ಹೇಳಿದ್ದಕ್ಕೆ ರೂಲಿಂಗ್ ಕೊಟ್ಟಿಲ್ಲ.

Ill-treatment to the Satyagrahis in Bidar

ಶ್ರೀ ಎಚ್. ಡಿ. ದೇವೇಗೌಡ.—ನಾನು ನಿಮಗೆ ಎರಡು ಕಾಗದಗಳನ್ನು ಕಳಿಸಿದ್ದೇನೆ. ಅದು ಬೀದಾರಿನಲ್ಲಿ ಸತ್ಯಾಗ್ರಹಿಗಳನ್ನು ಅರೆಸ್ಟ್ ಮಾಡಿದ ವಿಚಾರದಲ್ಲಿ. ಅಲ್ಲಿ ಬಂದೀಖಾನೆಯಲ್ಲಿ ಇಲ್‌ಟ್ರೀಟ್ ಮಾಡಿದ್ದಾರೆ ಎಂಬುದರ ಬಗ್ಗೆ ಫೋನ್ ಮೆಸೇಜ್ ಬಂದಿದೆ. ಅದನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಅದನ್ನು ಅವರಿಗೆ ನಾನು ಕಳುಹಿಸುತ್ತೇನೆ.

Budget Estimates for 1973-74 (General Discussion)

Debate continued.

ಶ್ರೀ ಬಿ. ಪುಟ್ಟಸ್ವಾಮಿ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೇ ನಾನು ನಿನ್ನೆ ಪ್ರಾರಂಭ ಮಾಡಿದ ಭಾಷಣವನ್ನು ಈ ದಿವಸ ಮುಂದುವರಿಸುತ್ತಾ ಕೆಲವು ವಿಚಾರಗಳನ್ನು ಹೇಳುತ್ತೇನೆ, ವಿರೋಧ ಪಕ್ಷದ ಸದಸ್ಯರಾದ ಶ್ರೀಮಾನ್ ತಿಮ್ಮಪ್ಪನವರು ನಿನ್ನೆಯ ದಿವಸ ನಮ್ಮ ಪಕ್ಷದ ಚುನಾವಣೆಯ ಪೋಸ್ಟರ್ ತಂದು ಅದರಲ್ಲಿ ಮುದ್ರಿತವಾದ ಘೋಷಣೆಗಳು ಏನಿವೆ, ಅವನ್ನು ಕಾರ್ಯಗತ ಮಾಡಿಲ್ಲ

ವೆಂದು ಹೇಳಿದರು. ಕೇವಲ ಅಧಿಕಾರಕ್ಕೆ ಬಂದ 10 ತಿಂಗಳಲ್ಲಿ ಪ್ರಜಾಪ್ರಭುತ್ವದಲ್ಲಿ ಅದನ್ನು ಕಾರ್ಯಗತ ಮಾಡುವುದಕ್ಕೆ ಕಷ್ಟವಾಗಬಹುದು. ಆದರೂ ಸಹ ಸರ್ಕಾರದವರು ಈಗಾಗಲೇ ಅನೇಕ ಸುಧಾರಣೆಗಳನ್ನು ಮಾಡಿದ್ದಾರೆ. ಪ್ರಜಾಪ್ರಭುತ್ವದ ತತ್ವದ ಮೇಲೆ ಕೆಲಸ ಮಾಡಬೇಕಾದರೆ ಒಬ್ಬ ಆಡಳಿತಗಾರರ ನಾಯಕತ್ವ ಇರಬೇಕು. ಈ ರೀತಿಯ ನಾಯಕತ್ವ ನಮ್ಮಲ್ಲಿ ಇರುವಾಗ ಹೊಸದಾಗಿ ಏನು ಧೋರಣೆಗಳನ್ನು ಹೇಳಿದ್ದಾರೆ, ಅವುಗಳನ್ನು ಈಗಾಗಲೇ ಕಾರ್ಯಗತ ಮಾಡುವುದಕ್ಕೆ ಹೊರಟಿದ್ದಾರೆ. ಉದಾಹರಣೆಗೆ ಇವತ್ತು ಅನೇಕ ಮಸೂದೆಗಳು ನಮ್ಮ ಮುಂದೆ ಬರುತ್ತಿವೆ. ಅವೆಲ್ಲವೂ ಸಮಾಜ ಸುಧಾರಣೆಯ ಕಾಯಿದೆಗಳು. ಈ ರೀತಿಯಾಗಿ ನಾವು ಒಂದು ಪ್ರಗತಿ ಪಥದಲ್ಲಿ ನಡೆಯುತ್ತಿರುವಾಗ ಏನೂ ಕಾರ್ಯಗತವಾಗಿಲ್ಲವೆಂದು ಹೇಳುವುದು ತುಂಬಾ ಆಶ್ಚರ್ಯಕರವಾದ ಸಂಗತಿ. ಇನ್ನೊಂದು ಸುಧಾರಣೆಯ ಮಸೂದೆ ಅಂದರೆ ಭೂಸುಧಾರಣೆಯ ಮಸೂದೆ. ಅದು ಈಗಾಗಲೇ ಸೆಲೆಕ್ಟ್ ಕಮಿಟಿಯ ಮುಂದೆ ಇದೆ. ಅದನ್ನು ಸಹ ಅನೇಕ ವಿರೋಧ ಪಕ್ಷದ ಸದಸ್ಯರು ವಿರೋಧ ಮಾಡುತ್ತಿದ್ದಾರೆ. ನಮ್ಮ ಮೇಲೆ ಅನೇಕ ರೀತಿಯ ಒತ್ತಡ ತಂದು ಅದನ್ನು ತರದ ಹಾಗೆ ಪ್ರಯತ್ನ ನಡೆಯಿತು. ಆದರೆ ಇಂಥಹ ಪ್ರಗತಿದಾಯಕವಾದ ಮಸೂದೆಯನ್ನು ತೆಗೆದುಕೊಂಡು ಬರುವಾಗ ವಿರೋಧ ಪಕ್ಷದವರೇ ಆಗಲಿ ಅಥವಾ ಇನ್ನಿತರ ಸದಸ್ಯರೇ ಆಗಲಿ ವಿರೋಧ ಮಾಡುವುದು ಸರಿಯಲ್ಲ. ಅದಕ್ಕೆ ಸಹಕಾರ ಮತ್ತು ಬೆಂಬಲವನ್ನು ಕೊಡಬೇಕು.

ಇನ್ನು ಆಡಳಿತ ಯಂತ್ರ ಇವತ್ತು ಬಹಳ ಮುಖ್ಯ. ಜನರು ನಮ್ಮನ್ನು ಚುನಾವಣೆ ಮಾಡಿ ಕಳುಹಿಸಿದ್ದಾರೆ. 5 ವರ್ಷಗಳಲ್ಲಿ ನಾವು ಸರಿಯಾದ ಕೆಲಸವನ್ನು ಮಾಡದಿದ್ದರೆ ಅವರು ನಮ್ಮನ್ನು ಪುನಃ ಆರಿಸಲಾರರು. ಜನರು ಇವತ್ತು ನಮ್ಮ ಕೆಲಸವನ್ನು ಕಾದು ನೋಡುತ್ತಿದ್ದಾರೆ. ಇನ್ನು ನಮ್ಮ ಬಜೆಟ್‌ನಲ್ಲಿ ಮಲೆನಾಡಿನ ಬಗ್ಗೆ 10 ವರ್ಷಗಳಿಂದಲೂ ಉಪೇಕ್ಷೆ ಮಾಡಿದ್ದಾರೆ ಈ ಸಲ ಮರಾಮತೆ ಇಲಾಖೆಯ ಮಂತ್ರಿಯವರು ಬಜೆಟಿನಲ್ಲಿ ಸೇರಿಸಿ ಮಲೆನಾಡಿನ ರಸ್ತೆಗಳ ಬಗ್ಗೆ ಸೇತುವೆಗಳ ಬಗ್ಗೆ ಮತ್ತು ಇತರ ಕಾಮಗಾರಿಗಳ ಬಗ್ಗೆ ಬೇಕಾದಷ್ಟು ಹಣವನ್ನು ಒದಗಿಸಿ ಅಭಿವೃದ್ಧಿಗೊಳಿಸಬೇಕಾಗಿದೆ. ಮಲೆನಾಡಿನಲ್ಲಿ ಬೇಕಾದಷ್ಟು ಸಂಪತ್ತು ಇದೆ, ಮತ್ತು ಸರ್ಕಾರಕ್ಕೂ ಅಲ್ಲಿಂದ ಬೇಕಾದಷ್ಟು ವರಮಾನ ಬರುತ್ತದೆ ಅಲ್ಲಿ ಕಾಫಿಯಿಂದ ವಿದೇಶೀ ವಿನಿಮಯ ಸಂಪಾದನೆಯಾಗುತ್ತಿದೆ. ಇನಕಂಟ್ಯಾಕ್ಸ್ ಕಾಫಿಸ್ಸಿವೇಲಿನ ಎಕ್ಸೈಜ್ ಡ್ಯೂಟಿಯಿಂದಲೂ ಕೇಂದ್ರ ಸರಕಾರಕ್ಕೆ ವರಮಾನ ಬರುತ್ತಿದೆ, ಹೀಗಿರುವಾಗ ಅಲ್ಲಿರತಕ್ಕಂತಹ ಕಾಫಿ ಬೆಳೆಗಾರರಿಗೆ ಮತ್ತು ರೈತವರ್ಗದವರಿಗೆ ಬೇಕಾದಂಥ ಅನುಕೂಲಗಳನ್ನು ಕಲ್ಪಿಸಿಕೊಡಬೇಕಾಗಿದೆ. ವ್ಯವಸಾಯದ ವರಮಾನ ತೆರಿಗೆಯಿಂದ ರಾಜ್ಯ ಸರ್ಕಾರಕ್ಕೂ ಸಾಕಾದಷ್ಟು ವರಮಾನ ಬರುತ್ತಿದೆ. ಹೀಗಿದ್ದೂ ಚಿಕ್ಕಮಗಳೂರು ಜಿಲ್ಲೆಯನ್ನು ಉಪೇಕ್ಷೆ ಮಾಡಿ ಆಯವ್ಯಯ ಪಟ್ಟಿಯಲ್ಲಿದ್ದ ಬಜೆಟೆಡ್ ವರ್ಕ್ಸ್‌ಗಳನ್ನೂ ಸಹ ಕೈಬಿಟ್ಟು 1973-74ನೇ ಸಾಲಿಗೆ ಹಣ ಒದಗಿಸದೆ ಇರುವುದು ಸರಿಯಲ್ಲ. ಆದ್ದರಿಂದ ಮಲೆನಾಡಿನಲ್ಲಿ ರಸ್ತೆ ಸಾರಿಗೆ ಸಂಪತ್ತು ಮತ್ತು ಇತರೇ ಕುಡಿಯುವ ನೀರಿನ ಸೌಕರ್ಯ, ವೈದ್ಯಕೀಯ ಸೌಕರ್ಯ ಮುಂತಾದ ಅನುಕೂಲಗಳನ್ನು ಹೆಚ್ಚುಹೆಚ್ಚಾಗಿ ಮಾಡದಿದ್ದರೆ ಅಲ್ಲಿನ ಜನರು ಬಹಳ ಅತೃಪ್ತರಾಗುತ್ತಾರೆ ಏಕೆಂದರೆ ಈಗಾಗಲೇ ಅಲ್ಲಿನವರು ಬಹಳವಾಗಿ ಸಾಲಗಾರರಾಗಿದ್ದಾರೆ. ಕಾಫಿ ಬೆಳೆಗಾರರಿಗೆ, ರೈತವರ್ಗದವರಿಗೆ ಈಗ ಸಾಲ ಎಷ್ಟಿದೆಯೆಂಬುದನ್ನು ಬ್ಯಾಂಕುಗಳಲ್ಲಿ, ಸಹಕಾರ ಸಂಘಗಳಲ್ಲಿ ಹಾಗೇ ಅಗ್ರಿಕಲ್ಚರಲ್ ಫೈನಾನ್ಷಿಯಲ್ ಕಾರ್ಪೊರೇಷನ್ನುಗಳಲ್ಲಿ ವೆರಿಫೈ ಮಾಡಿದರೆ ಗೊತ್ತಾಗುತ್ತದೆ. ಮದ್ರಾಸಿನಲ್ಲಿ ಋಣಮುಕ್ತ ಯೋಜನೆಯನ್ನೂ ಹಾಗೂ ರೈತರ ಋಣ ಪರಿಹಾರ ಯೋಜನೆಯನ್ನು ತಂದಿದ್ದಾರೆಂದು ನಾನು ಕೇಳಿದ್ದೇನೆ. ಹಾಗೆಯೇ ನಮ್ಮ ಸಂಸ್ಥಾನದಲ್ಲಿಯೂ ರೈತವರ್ಗದವರಿಗೆ ಹಾಗೂ ಕಾಫಿ ಬೆಳೆಗಾರರಿಗೆ ಎಷ್ಟು ಸಾಲವಿದೆ ಎನ್ನುವುದನ್ನು ವಿಚಾರಮಾಡುವುದಕ್ಕೆ ಪ್ರಾರಂಭಮಾಡಿ ಅದನ್ನು ತನಿಖೆ ಮಾಡುವುದಕ್ಕೆ ಒಂದು ಸಮಿತಿಯನ್ನು ಈ ಮಾನ್ಯ ಸಭೆ ನೇಮಿಸಬೇಕೆಂದು ನಾನು ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ರೈತರದು ಮಾರ್ವಾಡಿಯವರ ಹತ್ತಿರವೂ ಸಾಲವಿದೆ. ಮಾನ್ಯ ಆಹಾರ ಸಚಿವೆಯರಿಗೆ ಕಾಫಿ ಬೆಳೆಗಾರರ ಕಷ್ಟವೇನೆಂಬುದು ಚೆನ್ನಾಗಿ ಗೊತ್ತಿದೆ. ಅವರು ಕಾಫಿ ಬೆಳೆಗಾರರನ್ನು ಪ್ರತಿನಿಧಿಸುತ್ತಿದ್ದಾರೆ. ಆದ್ದರಿಂದ ಅವರಿಗೆ ಈ ವಿಚಾರ ಬಹಳ ಚೆನ್ನಾಗಿ ಗೊತ್ತೇ ಇರುತ್ತದೆ. ಆದರೆ ನಾನು ತಿಳಿದಿರುವ ಹಾಗೆ ಸಣ್ಣಸಣ್ಣ ಕಾಫಿ ಬೆಳೆಗಾರರ ಬಗ್ಗೆ ಸರ್ಕಾರದವರು ಕೊಡುತ್ತಿರುವ ಸವಲತ್ತು ಬಹಳ ಕಡಿಮೆಯಾಗಿದೆ. ಕೋಟ್ಯಾಂತರ ರೂಪಾಯಿಗಳ ಕಾಫಿಯಿಂದ ಸರಕಾರಕ್ಕೆ ವರಮಾನ ಇದ್ದರೂ ಕೂಡ ಅಂತಹವರಿಗೆ ಸಾಕಷ್ಟು ರೈತರಿಗೆ ಸಾಕಾದಷ್ಟು ಸಹಕಾರ ಕೊಡದೇ ಇದ್ದರೆ ಅವರಿಗೆ ತುಂಬಾ ತೊಂದರೆಯಾಗುತ್ತದೆ. ಮೇಲ್ಮನೆಯ ಸದಸ್ಯರಾದ ಮಾನ್ಯ ಶ್ರೀ ಕಾರ್ಲೆಯವರು ಕಾಫಿ ಪ್ಲಾಂಟೇಷನ್ ಬ್ಯಾಂಕಿಗೆ ಅಧ್ಯಕರಾಗಿ ಕೆಲಸಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಶ್ರೀ ಕಾರ್ಲೆಯವರು ಕಾಫಿ ಬೆಳೆಗಾರರಾಗಿ ಇರುವುದರಿಂದ ಅವರಿಗೂ ಸಹ ಕಾಫಿ ಬೆಳೆಗಾರರಿಗೆ ಕೊಡುವ ಹಾಗೆ ವಿನಾಯತಿ ಬೇಕೇ ?

ಶ್ರೀ ಬಿ. ಪುಟ್ಟಸ್ವಾಮಿ.—ಇವತ್ತಿನದಿವಸ ಕಾಫಿ ಪ್ಲಾಂಟೇಷನ್ನಿನಲ್ಲಿ ಒಂದೂವರೆ ಲಕ್ಷ ಆಳುಗಳಿಗೆ ಕೆಲಸ ಸಿಗುತ್ತಿದೆ. ಅವರಿಗೂ ಸಹ ಪ್ಲಾಂಟೇಷನ್ ಲೇಬರ್ ಆಕ್ಟನ್ನು ಎನ್‌ಫೋರ್ಸ್ ಮಾಡಬೇಕು. ಕಾಫಿ ತೋಟದ ಕಾರ್ಮಿಕರಿಗೆ ಎಲ್ಲಾ ಸವಲತ್ತುಗಳನ್ನೂ ಕೊಡಬೇಕು. ಆ ಕೂಲಿಗಾರರ ಸ್ಥಿತಿ ಚಿಂತಾಜನಕವಾಗಿದೆ. ಅವರಿಗೆ ವಸತಿಸೌಕರ್ಯವಿಲ್ಲ, ವೈದ್ಯಕೀಯ ಸೌಕರ್ಯಗಳಿಲ್ಲ, ಯಾವ ಇತರೇ ಸೌಕರ್ಯಗಳನ್ನು ಅವರಿಗೆ ಇದುವರೆಗೂ ಸರ್ಕಾರದವರು ಕಲ್ಪಿಸಿಕೊಡಲಿಕ್ಕಾಗಲಿಲ್ಲ. ರಾಜ್ಯಾಂಗದ 46ನೇ ಆರ್ಟಿಕಲ್ ಪ್ರಕಾರ ನಾವು ನೋಡುವುದಾದರೆ ಅದರಲ್ಲಿ ಈ ರೀತಿ ಹೇಳಿದೆ :—

> "The State shall promote with special care the educational and economic interests of the weaker section of the people and in particular of the Scheduled Castes and Scheduled Tribes and protect the social injustice from all forms of exploitation."

ಆ ಪ್ರಕಾರ ಸರ್ಕಾರದವರು ಎಲ್ಲ ವಿಧವಾದ ಅನುಕೂಲತೆಗಳನ್ನು ಅವರಿಗೆ ಒದಗಿಸಬೇಕು.

ಶ್ರೀ ಸಿ. ಬೈರೇಗೌಡ.—ಕಾಫಿ ಬೆಳೆಗಾರರು ವೀಕರ್ ಸೆಕ್ಷನ್ನಿನಲ್ಲಿ ಬರುತ್ತಾರೆಯೇ ?

ಶ್ರೀ ಬಿ. ಪುಟ್ಟಸ್ವಾಮಿ.—ಈ ದಿವಸ ನಮ್ಮ ಸಮಾಜಕಲ್ಯಾಣ ಇಲಾಖೆಯ ಮಂತ್ರಿಗಳು ಬಹಳ ಮಟ್ಟಿಗೆ ಈಗಾಗಲೇ ಹರಿಜನ—ಗಿರಿಜನರ ಹಾಗೂ ದುರ್ಬಲ ವರ್ಗದವರ ಸ್ಥಿತಿಯನ್ನು ಉತ್ತಮಪಡಿಸುವುದು ಹೇಗೆಂಬುದನ್ನು ತೋರಿಸುವುದಕ್ಕೆ ಹೊರಟಿದ್ದಾರೆ. ಬಜೆಟ್ಟಿನಲ್ಲಿ ಇವರ ಅಭಿವೃದ್ಧಿಗೆ ಒಂದೂವರೆ ಕೋಟಿ ರೂಪಾಯಿಗಳಷ್ಟು ಹಣವಿದ್ದುದು ಈ ಸಾರಿ 2 ಕೋಟಿ ರೂಪಾಯಿಗಳಷ್ಟು ಹಣವನ್ನು ಮಂಜೂರುಮಾಡಿದ್ದಾರೆ. ಇದು ಬಹಳ ಸಂತೋಷ. ಆದರೂ ಇದು ಏನೇನೂ ಸಾಲದು. ಇನ್ನೂ ಜಾಸ್ತಿ ಮಾಡಬೇಕು. ಏಕೆಂದರೆ ದೇಶದಲ್ಲಿ ನಮ್ಮ ಪಂಗಡದಲ್ಲಿ ಬಡವರು, ದುರ್ಬಲವರ್ಗದವರು ಬಹಳ ಹೆಚ್ಚಾಗಿರುತ್ತಾರೆ. ಆದ್ದರಿಂದ ಈ ಬಾಬಿಗೆ ಇನ್ನೂ ಹೆಚ್ಚಿಗೆ ಹಣವನ್ನು ಒದಗಿಸದಿದ್ದರೆ ಸಮಾಜಕಲ್ಯಾಣ ಇಲಾಖೆಗೆ ಬಹಳ ಕಷ್ಟವಾಗುತ್ತದೆ. ನಿಜವಾಗಿಯೂ ಸಮಾಜಕಲ್ಯಾಣ ಇಲಾಖೆಯ ಆಡಳಿತ ಸರಿಯಾಗಿ ನಡೆಯಬೇಕಾದರೆ ಬಹಳಮಟ್ಟಿಗೆ ಈ ಇಲಾಖೆ ಸುಧಾರಿಸಬೇಕು. ರಾಜ್ಯಾಂಗದ 46ನೇ ಆರ್ಟಿಕಲ್‌ನಲ್ಲಿ ಹೇಳಿರುವ ಪ್ರಕಾರ ಎಳಯ ಪೆರುಮಾಳ್ ಕಮಿಟಿಯಲ್ಲಿ ಬಹಳ ಮಟ್ಟಿಗೆ ಈ ಎಲ್ಲ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಆ ರೀತಿಯಲ್ಲಿ ಪ್ರಸ್ತಾಪಮಾಡಿ ಒಂದು ವರದಿಯನ್ನು ಸರ್ಕಾರಕ್ಕೆ ಈಗಾಗಲೇ ಕೊಟ್ಟಿರುವಾಗ ಅವರ ಒಂದು ವರದಿಯನ್ನು ಸಮಾಜ ಕಲ್ಯಾಣದ ಇಲಾಖೆಯ ಮೂಲಕ ನಮ್ಮ ಈ ಸದನದಲ್ಲಿ ಇಟ್ಟಿದ್ದೇ ಆದರೆ, ಅದರ ಬಗ್ಗೆ ಮಾಡಿರತಕ್ಕ ಶಿಫಾರಸುಗಳನ್ನು ಕಾರ್ಯಗತಮಾಡುವುದಾದರೆ, ನಿಜವಾಗಿಯೂ ಹರಿಜನ ಗಿರಿಜನರಿಗೆ ಮತ್ತು ದುರ್ಬಲ ವರ್ಗದವರಿಗೆ ಬಹಳಮಟ್ಟಿಗೆ ಅನುಕೂಲವಾಗುತ್ತದೆ. ಪ್ರತಿಯೊಂದು ಅಭಿವೃದ್ಧಿ ಇಲಾಖೆಯಲ್ಲಿ ಸೇಕಡ 18ರಷ್ಟನ್ನು ನಮ್ಮ ಜನಾಂಗದವರ ಅಭಿವೃದ್ಧಿಗಾಗಿ ಮೀಸಲಾಗಿಡಬೇಕು. ಅದಕ್ಕಾಗಿ ಒಂದು ಸ್ಪೆಷಲ್ ಏಜೆನ್ಸಿ ಮಾಡಿ, ಒಬ್ಬ ಅಧಿಕಾರಿಯನ್ನು ಇದಕ್ಕಾಗಿಯೇ ನೇಮಕಮಾಡಬೇಕು, ಒಬ್ಬ ಲಯಜನ್ ಆಫೀಸರನ್ನೂ ಸಹ ಈ ಒಂದು ಕಾರ್ಯಕ್ಕಾಗಿ ನೇಮಕ ಮಾಡಬೇಕು. ಆಗ ಪ್ರತಿಯೊಂದು ಇಲಾಖೆಯ ಕೆಲಸಕಾರ್ಯಗಳೂ ತೃಪ್ತಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ನೋಡುವಂತೆ ವ್ಯವಸ್ಥೆಮಾಡಬೇಕು. ಇನ್ನು, ಡೆವಲಪ್‌ಮೆಂಟಲ್ ಆಕ್ಟಿವಿಟೀಸ್‌ಗಳ ಬಗ್ಗೆ ಹೇಳಬೇಕೆಂದರೆ ಆ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಖರ್ಚುಮಾಡತಕ್ಕ ಹಣ ಏನಿದೆಯೋ ಅದು ಸರಿಯಾದ ರೀತಿಯಲ್ಲಿ ವಿನಿಯೋಗವಾಗುತ್ತಾ ಇಲ್ಲ. ಆದ್ದರಿಂದ ಪ್ರತಿಯೊಂದು ಇಲಾಖೆಯಲ್ಲಿ ಬಜೆಟ್ ಹೆಡ್‌ನಲ್ಲಿ ಶೇಕಡ 18ರಷ್ಟನ್ನು ನಮ್ಮ ವರ್ಗದವರ ಅಭಿವೃದ್ಧಿಗಾಗಿ ಮೀಸಲಾಗಿಡಬೇಕೆಂಬ ವ್ಯವಸ್ಥೆಯನ್ನು ಮಾಡಬೇಕು. ಈ ಕೆಲಸಗಳು ತೃಪ್ತಿಕರವಾಗಿ ನಡೆಯಬೇಕಾದರೆ ಸಮಾಜಕಲ್ಯಾಣ ಅಧಿಕಾರಿಗಳು ಏನಿದ್ದಾರೆಯೋ ಅವರ ಸ್ಥಿತಿಯನ್ನು ಹೆಚ್ಚಿನ ರೀತಿಯಲ್ಲಿ ಉತ್ತಮಪಡಿಸಬೇಕು. ಏಕೆಂದರೆ ಅವರ ಸ್ಥಿತಿಯೂ ತುಂಬಾ ಚಿಂತಾಜನಕವಾಗಿದೆ. ಆ ಇಲಾಖೆಯನ್ನು ಆದಷ್ಟು ಬೇಗ ರೀಆರ್ಗನೈಜ್ ಮಾಡಬೇಕು. ಏಕೆಂದರೆ ಈಗಾಗಲೇ ಅವರಿಗೆ ಯಾವೊಂದೂ ಬಡ್ತಿ ಸೌಲಭ್ಯಗಳು ದೊರೆಯಲು ಅವಕಾಶವೇ ಇಲ್ಲ. ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರುಗಳಿಗೆ ಸಾಕಷ್ಟು ವಾಹನ ಸೌಕರ್ಯಗಳೇ ಇಲ್ಲ. ಅವರು ಎಲ್ಲಾ ತಾಲ್ಲೂಕುಗಳಿಗೂ ಹೋಗಿ ಬರುವುದಕ್ಕೆ ವಾಹನ ಸೌಕರ್ಯವನ್ನು ಒದಗಿಸಿಲ್ಲ. ಒಂದು ಜಿಲ್ಲೆಗೆ ವಾಹನ ಸೌಕರ್ಯ ಕೊಟ್ಟರೆ, ಇನ್ನೊಂದು ಜಿಲ್ಲೆಗೆ ಅದನ್ನು ಕೊಡದೇ ಇರುವುದು ಸರಿಯಲ್ಲ. ಚಿಕ್ಕಮಗಳೂರು

ಜಿಲ್ಲೆಗೆ ಸಮಾಜಕಲ್ಯಾಣ ಇಲಾಖೆಗೆ ಜೀಪ್ ಇಲ್ಲ. ಇದರಿಂದ ಅನೇಕ ಕೆಲಸಕಾರ್ಯಗಳಿಗೆ ಧಕ್ಕೆಯುಂಟಾಗುತ್ತದೆ. ಕೆಲವಾರು ಕೆಲಸಗಳಂತೂ ಕುಂಠಿತವಾಗುತ್ತದೆ. ಡೆಪ್ಯುಟಿ ಕಮಿಷನರಿಗೆ ಈ ಸಮಾಜ ಕಲ್ಯಾಣ ಇಲಾಖೆಯ ಕೆಲಸಕಾರ್ಯಗಳನ್ನು ವಹಿಸಬಾರದು. ಅವರಿಗೆ ಅಭಿವೃದ್ಧಿ ಕಾರ್ಯಗಳನ್ನು ಅಷ್ಟಾಗಿ ಆ ಇಲಾಖೆಯಲ್ಲಿ ಮಾಡುವುದಕ್ಕಾಗುವುದಿಲ್ಲ. ಸಮಾಜ ಕಲ್ಯಾಣ ಇಲಾಖೆ ಸ್ವತಂತ್ರವಾದ ಇಲಾಖೆಯಾಗಿ ನಡೆಯಬೇಕು. ಅದಕ್ಕೆ ಬೇರೆ ಅಧಿಕಾರಿ ಪ್ರತ್ಯೇಕವಾಗಿ ಇರಬೇಕು. ಈ ಇಲಾಖೆಯ ಆಡಳಿತ ಸ್ವತಂತ್ರವಾಗಿ ಒಬ್ಬ ಪ್ರತ್ಯೇಕ ಅಧಿಕಾರಿಯಿಂದ ನಡೆದಿದ್ದೇ ಆದರೆ ಮಾತ್ರ ಸಮಾಜ ಕಲ್ಯಾಣದ ಕೆಲಸಗಳು ನಿಜವಾಗಿಯೂ ಚೆನ್ನಾಗಿ ಆಗುತ್ತದೆ ಅದಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೂ ಪ್ರೊಮೋಷನ್ಸ್ ಸೌಲಭ್ಯಗಳನ್ನು ಕೂಡಲೇ ಒದಗಿಸಬೇಕು. ಇನ್ನು ರಾಜ್ಯಾಂಗದ 16 (4) ಆರ್ಟಿಕಲ್ ಪ್ರಕಾರ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಕೂಡಲೇ ಹೊಸದಾಗಿ ತಯಾರುಮಾಡಿ ಜಾರಿಗೆ ಕೊಡಬೇಕು. ಸ್ಕೇಲ್ ಆಫ್ ಅಪಾಯಂಟ್‌ಮೆಂಟ್ಸ್ ಏನಿದೆಯೋ ಅದರ ಬಗ್ಗೆ ಹರಿಜನ ಗಿರಿಜನರಿಗೆ ಪ್ರಥಮ ಸ್ಥಾನವನ್ನು ಕೊಡಬೇಕು. ಏಕೆಂದರೆ ರಾಜ್ಯಾಂಗದ 16 ನೇ (4) ನೇ ಮೇರೆಗೆ—

> The economic interest has a direct bearing on the representation of these classes in the Government, services under the State.

ಒಟ್ಟಿನಲ್ಲಿ ಹರಿಜನ-ಗಿರಿಜನರ ಹಾಗೂ ದುರ್ಬಲವರ್ಗದವರ ಸ್ಥಿತಿ ಈಗಂತೂ ಬಹಳ ಚಿಂತಾಜನಕವಾಗಿದೆ. ಅವರಿಗೆ ವಾಸಿಸಲು ಕಟ್ಟಡವಿಲ್ಲ, ತಿನ್ನುವುದಕ್ಕೆ ಅನ್ನವಿಲ್ಲ, ಇಂತಹವರ ಸಂಖ್ಯೆ ಬಹಳವಾಗಿದೆ. ನಿರಕ್ಷರಸ್ಥರು. ಆದರೆ ನಿರಾಶ್ರಿತರಿಗಾಗಿ ಸರ್ಕಾರದವರು 5—10 ಸಾವಿರ ರೂಪಾಯಿಗಳನ್ನು ಒಂದೊಂದು ಕುಟುಂಬಕ್ಕೂ ಖರ್ಚುಮಾಡುತ್ತಿದ್ದಾರೆ. ಈ ದೇಶದಲ್ಲಿ ಹೊಟ್ಟೆಪಾಡಿಗಾಗಿ ಮತ್ತು ಈ ದೇಶದ ಅಭಿವೃದ್ಧಿಗಾಗಿ ನಮ್ಮೆಲ್ಲರ ಸೇವೆ ಮಾಡತಕ್ಕ ಹರಿಜನ ಗಿರಿಜನ ಕುಟುಂಬಗಳಿಗೆ ಇವರು ಏನು ಖರ್ಚುಮಾಡುತ್ತಾ ಇದ್ದಾರೆಂಬುದನ್ನು ಲೆಕ್ಕ ಹಾಕಿದರೆ ಒಂದು ಸಂಸಾರಕ್ಕೆ ಒಂದು ರೂಪಾಯಿ ಸಹ ವರ್ಷಕ್ಕೆ ಖರ್ಚುಮಾಡುತ್ತಾ ಇಲ್ಲವೆಂದು ಹೇಳಿದರೆ, ಅದೇನೂ ಆಶ್ಚರ್ಯದ ಮಾತಲ್ಲ.

[MR. DEPUTY SPEAKER in the Chair]

ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಹರಿಜನ ಗಿರಿಜನರಿಗೆ ಸರ್ಕಾರಿ ನೌಕರಿಗಳಲ್ಲಿ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕು. ಏಕೆಂದರೆ ಅವರಲ್ಲಿ ಇನ್ನಾವ ಬಂಡವಾಳವೂ ಇರುವುದಿಲ್ಲ. ಬಂಡವಾಳವಿಲ್ಲದ ಮೇಲೆ ಅವರಿಗೆ ಭೂಮಿಯನ್ನು ಕೊಟ್ಟರೂ ಪ್ರಯೋಜನವಿಲ್ಲ. ಆದುದರಿಂದ ಹರಿಜನರಿಗೆ ಅವರ ಎಕನಾಮಿಕ್ ಕಂಡೀಷನ್‌ಗಳನ್ನು ಉತ್ತಮಪಡಿಸುವುದಕ್ಕೆ ಸರ್ಕಾರಿ ನೌಕರಿಗಳಲ್ಲಿ ಹೆಚ್ಚು ಹೆಚ್ಚು ಪ್ರಾತಿನಿಧ್ಯ ಒದಗಿಸಿಕೊಡಬೇಕೆಂದು ಒತ್ತಾಯಮಾಡುತ್ತಿದ್ದೇನೆ. ಇನ್ನು ನಮ್ಮ ರಾಜ್ಯಾಂಗದ ಆರ್ಟಿಕಲ್ 12 ರಲ್ಲಿ ಏನು ಹೇಳಿದೆ ಎಂದರೆ :—

> "In this Part, unless the context otherwise requires "the State" includes the Government and Parliament of India and the Government and the Legislature of each of the States and all local or other authorities within the territory of India or under the control of the Government of India".

ಸ್ವಾಮಿ, ಅಧ್ಯಕ್ಷರೇ ಹೈಕೋರ್ಟಿಗೆ ಜಡ್ಜುಗಳನ್ನು ನೇಮಕ ಮಾಡತಕ್ಕ ಬಗ್ಗೆ ಮತ್ತು ಡಿಸ್ಟ್ರಿಕ್ಟ್ ಜಡ್ಜರನ್ನು ನೇಮಕ ಮಾಡತಕ್ಕ ಬಗ್ಗೆ ಶಿಫಾರ್ಸು ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಇನ್ನು ಆರ್ಟಿಕಲ್ 12ರ ಪ್ರಕಾರ ಜಡ್ಜುಗಳಾಗತಕ್ಕವರಿಗೆ 1500 ರೂಪಾಯಿಗಳಿಂದ 3500 ರೂಪಾಯಿಗಳವರೆಗೂ ಸಂಬಳವಿದೆ.

> "It is crystal clear that the High Court and Supreme Court come under the definition of State and every Judge of the High Court and District Courts are appointed mostly among Lawyers having a monthly income of 5 to 10 thousand rupees."

ಮೈಸೂರು ರಾಜ್ಯದಲ್ಲಿ ಈವರೆಗೂ ಕೇವಲ ಒಬ್ಬರೇ ಒಬ್ಬರು ಹೈಕೋರ್ಟು ಜಡ್ಜರಾಗಿರುವರು. ಆದರೆ ಇವರನ್ನು ಮೊಟ್ಟಮೊದಲನೇಯದಾಗಿ ಪಬ್ಲಿಕ್ ಪ್ರಾಸಿಕ್ಯುಟರನ್ನಾಗಿ ನೇಮಕ ಮಾಡಿದ ಕೀರ್ತಿ ಮಾನ್ಯ ಶ್ರೀ ಕೆಂಗಲ್ ಹನುಮಂತಯ್ಯನವರಿಗೆ ಸಲ್ಲತಕ್ಕದ್ದಾಗಿದೆ. ಆದರೆ ಇತ್ತೀಚೆಗೆ ನಮ್ಮ ರಾಷ್ಟ್ರದಲ್ಲಿ ಕೇವಲ ಇಬ್ಬರು ಮಾತ್ರ ಹರಿಜನ ಜಡ್ಜಗಳಿದ್ದಾರೆಂದರೆ ಇದೇನು ಅಶ್ಚರ್ಯದ ಮಾತಲ್ಲ. ಈಗಿನ ಸರ್ಕಾರದವರು ಈ ಹರಿಜನರಲ್ಲಿ ಇನ್ನೂ ಹೆಚ್ಚು ಜನರನ್ನು ಜಡ್ಜಗಳನ್ನಾಗಿ ನೇಮಕ ಮಾಡುವುದಲ್ಲದೆ ಅವರಿಗೆ ಬೇಗ ಬೇಗ ಭಡ್ತಿಗಳನ್ನೂ ಕೊಡಬೇಕೆಂದು ಅವರ ಆರ್ಥಿಕ ನೆರವಿಗೆ ಸಹಾಯಮಾಡಿ ಆ ಕೀರ್ತಿಗೆ ಭಾಗಿಗಳಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ರಾಜ್ಯಾಂಗದ 17 ನೇ ಆರ್ಟಿಕಲ್ಲಿನಲ್ಲಿ ರಾಜ್ಯದಲ್ಲಿರತಕ್ಕ ಅಸ್ಪೃಶ್ಯತೆಯನ್ನು ನಿವಾರಣೆಮಾಡಬೇಕೆಂದು ಹೇಳಿದೆ. ಆದರೆ ನಾವು ಪ್ರತಿವರ್ಷವೂ ಗಾಂಧಿಜಯಂತಿ ಗಣರಾಜ್ಯೋತ್ಸವ ಇತ್ಯಾದಿಗಳನ್ನು ಆಚರಿಸತಕ್ಕ ಕಾಲದಲ್ಲಿ ನಾವೆಲ್ಲರೂ ಆ ಸಂದರ್ಭದಲ್ಲಿ ಪ್ರಮಾಣವಚನವನ್ನು ಸ್ವೀಕರಿಸುತ್ತೇವೆ. ಆದರೆ ಒಬ್ಬ ದೊಡ್ಡ ಮನುಷ್ಯರು ಈ ವಿಚಾರದಲ್ಲಿ ದೊಡ್ಡ ಮಾತನ್ನು ಹೇಳಿದ್ದಾರೆ—ಏನೆಂದರೆ ಮನುಷ್ಯರು ಪಕ್ಷಪಾತ, ಜಾತಿಭೇದಗಳಿಲ್ಲದೆ ಈ ಮೇಲ್ಕಂಡ ಸಮಾರಂಭಗಳು ನಡೆದಿದ್ದೇ ಆದರೆ ಭಾರತದಲ್ಲಿ ಪಾಕಿಸ್ಥಾನ ಅನ್ನುವುದೊಂದು ನಿರ್ಮಾಣವಾಗುತ್ತಲೇ ಇರಲಿಲ್ಲ ಎಂದು ಈ ಅಸ್ಪೃಶ್ಯತೆಯನ್ನು ಯಾವರೀತಿ ತೊಡೆದುಹಾಕಬೇಕೆಂಬುದನ್ನು ಆರ್ಟಿಕಲ್ 17 ರಲ್ಲಿ ಹೇಳಿರುತ್ತೆ. ಆದರೆ ಈ ದಿವಸ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನರನ್ನು ಕುಡಿಯುವ ನೀರಿನ ಬಾವಿಗಳಲ್ಲಿ ನೀರನ್ನು ಬಳಸುವುದಕ್ಕೆ ಊರಿನ ಜನರು ಅವಕಾಶ ಕೊಡುತ್ತಿಲ್ಲ. ಈ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಲು ಬದ್ಧಕಂಕಣರಾಗಿರತಕ್ಕ ಜನರಲ್ಲಿ ಅಧಿಕಾರಿಗಳಲ್ಲಿ ಈ ಕಾರ್ಯವನ್ನು ದಕ್ಷತೆಯಿಂದ ಪ್ರಾಮಾಣಿಕತೆಯಿಂದ ನಡೆಸಬೇಕೆಂಬ ಭಾವನೆ ಉಂಟಾಗದಿದ್ದರೆ ಇದು ಖಂಡಿತಾ ಸಾಧ್ಯವಾಗುವುದಿಲ್ಲ. ಇದರಲ್ಲಿ ಪೋಲೀಸಿನವರ ಪಾತ್ರ ಬಹಳ ಮುಖ್ಯವಾಗಿರುತ್ತದೆ, ಅವರು ಕೂಡ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕೆಲಸಮಾಡಬೇಕು. ಅದಕ್ಕಾಗಿ ಪೋಲೀಸ್ ಇಲಾಖೆಯನ್ನು ರೀ ಆರ್ಗನೈಜ್ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದಕ್ಕೆ ನನ್ನ ಇನ್ನೂ ಒಂದು ಸಲಹೆ ಏನೆಂದರೆ ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಪೋಲೀಸ್ ಸರ್ಕಲ್‌ಗಳನ್ನು ರಚನೆಮಾಡಬೇಕು. ಹಳೇ ಪದ್ಧತಿಯನ್ನು ಮಾರ್ಪಾಡು ಮಾಡಬೇಕು. ಇದೇ ವಿಚಾರದಲ್ಲಿ ನಾನು ಗೃಹ ಮಂತ್ರಿಗಳಿಗೆ ಪತ್ರಬರೆದಿದ್ದೆ, ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಚ್ಚು ಪೋಲೀಸ್ ಸರ್ಕಲ್‌ಗಳನ್ನು ತೆರೆಯಬೇಕು ಎಂದು. ಅಲ್ಲಿ ಇತ್ತೀಚೆಗೆ ಖೂನಿ ಕೇಸುಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ತರೀಕೆರೆ ಮತ್ತು ಮೂಡಿಗೆರೆಯ ತಾಲ್ಲೂಕಿನ ಒಂದು ಹಳ್ಳಿಯಲ್ಲಿ—ಮಾರ್ಕೋನಹಳ್ಳಿ ಎಂಬ ಗ್ರಾಮದಲ್ಲಿ 14 ವರ್ಷದ ಮೈನರ್ ಕಮ್ಯುನಿಟಿಯಾದ ಕ್ರೈಸ್ತರ ಮತದ ಹುಡುಗಿಯೊಬ್ಬಳನ್ನು ಕೊಲೆ ಮಾಡಲಾಗಿದೆ. ಆದರೆ ಆ ಕೃತ್ಯನಡೆದು 3—4 ತಿಂಗಳು ಕಳೆದವು. ಇನ್ನೂ ಆ ಕೇಸು ಪತ್ತೆಯಾಗಲಿಲ್ಲ. ಪ್ರಜಾರಾಜ್ಯದಲ್ಲಿ ಪೋಲೀಸರ ನಡತೆ ಹೀಗಾದರೆ ಜನರಿಗೆ ಈ ಸರ್ಕಾರದ ಮೇಲಿರತಕ್ಕ ನಂಬಿಕೆ ಹೋಗುತ್ತದೆ. ರಾಜ್ಯದಲ್ಲಿ ಪೋಲೀಸಿನವರು ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸಮಾಡುವಂತಾಗಬೇಕು.

ಇನ್ನು ಹರಿಜನ ಗಿರಿಜನರಿಗೆ ಸಾಲಗಳನ್ನು ಕೊಡತಕ್ಕ ವಿಚಾರದಲ್ಲಿ ಕೆಲವು ಹೌಸಿಂಗ್ ಕೋಆಪರೇಟೀವ್ ಸೊಸೈಟಿಗಳೆಂದು ಮಾಡಿದ್ದರು. ಅವುಗಳೆಲ್ಲಾ ಈಗ ಡಿಫಂಕ್ಟ್ ಆಗಿ ಕೆಲಸ ಮಾಡುತ್ತಿಲ್ಲ. ಆದುದರಿಂದ ಸರ್ಕಾರದವರು ಮತ್ತೆ ರಾಜ್ಯದಲ್ಲಿ ಈ ಹರಿಜನರ ಉದ್ಧಾರಕ್ಕಾಗಿ ಹೆಚ್ಚು ಹೆಚ್ಚಾಗಿ ಗೃಹನಿರ್ಮಾಣ ಸಹಕಾರಿ ಸಂಘಗಳನ್ನು ಮತ್ತು ಮಲ್ಟಿಪರ್ಪಸ್ ಕೋಆಪರೇಟೀವ್ ಸೊಸೈಟಿಗಳನ್ನಾಗಿ ಪರಿವರ್ತಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಲ್ಲದೆ ಈ ಹರಿಜನರಿಗೆ ಕಂಟ್ರಾಕ್ಟ್ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಇವರಿಗೆ ಧನ ಸಹಾಯವನ್ನು ಸರ್ಕಾರದವರು ಕೊಡಬೇಕು. ಇವರಿಗೆ ಪಿ. ಡಬ್ಲ್ಯು. ಡಿ. ಮತ್ತು ಅರಣ್ಯ ಇತ್ಯಾದಿ ಇಲಾಖೆಗಳಲ್ಲಿ ಇವರಿಗೆ ಕಂಟ್ರಾಕ್ಟ್ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶಮಾಡಿಕೊಡಬೇಕು. ಸಹಕಾರಸಂಘಗಳ ಆಕ್ಟನ್ನು ಸರಿಯಾಗಿ ತಿದ್ದುಪಡಿ ಮಾಡಿ ಸಹಕಾರ ಸಂಘಗಳಲ್ಲಿ ಅದರಲ್ಲಿ ಹರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆಯುವಂತೆ ಮಾಡಬೇಕು. ಸಹಕಾರ ಸಂಘಗಳಲ್ಲಿ ಅವರ ಪ್ರಾತಿನಿಧ್ಯ ಇಲ್ಲದಿರುವುದರಿಂದ ಈ ದಿವಸ ಹರಿಜನರಿಗೆ ಈ ಸೊಸೈಟಿಗಳಲ್ಲಿ ಸರಿಯಾಗಿ ಸಾಲಗಳು ಸಿಕ್ಕುತ್ತಿಲ್ಲ. ನಾನು ಮಾನ್ಯ ರೆವಿನ್ಯೂ ಸಚಿವರಿಗೆ ಸಹಕಾರಸಂಘಗಳ ಆಕ್ಟನ್ನು ಅಮೆಂಡ್ ಮಾಡುವಂತೆ ಕೇಳಿದೆ. ಆದರೆ ಅವುಗಳೊಂದನ್ನೂ ಅವರು ಸಭೆಯ ಮುಂದಿರತಕ್ಕ ಸಹಕಾರ ತಿದ್ದುಪಡಿಯ ಮಸೂದೆಯಲ್ಲಿ ಒಂದೂ ಅಮೆಂಡ್‌ಮೆಂಟುಗಳು ಇಟ್ಟಿದ್ದಂತೆ ಕಾಣುವುದಿಲ್ಲ. ಹರಿಜನರಿಗೆ ಗಿರಿಜನರಿಗೆ ಸಾಲದ ಸೌಲಭ್ಯ ದೊರೆಯಬೇಕಾಗಿದ್ದರೆ ಮತ್ತು ಅವರಿಗೆ ಕಾಫೀತೋಟಗಳನ್ನು ಬೆಳೆಸುವುದಕ್ಕೆ ಸಾಲಗಳು ದೊರೆಯುವಂತಾಗಬೇಕಾದರೆ ಸಹಕಾರಸಂಘಗಳ ಆಕ್ಟ್ ತಿದ್ದುಪಡಿ ಆಗಿ ಶಾಸನವನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ಇವರಿಗೆ

(ಶ್ರೀ ಜಿ. ಪುಟ್ಟಸ್ವಾಮಿ)

ನೌಕರಿಗಳಲ್ಲಿ, ಸಾಲಕೊಡುವುದರಲ್ಲಿ, ಕಂಟ್ರಾಕ್ಟ್ ಕೆಲಸಗಳನ್ನು ಪಡೆಯುವುದರಲ್ಲಿ ಮತ್ತು ವಸತಿ ಸೌಕರ್ಯಗಳನ್ನು ಪಡೆಯುವುದರಲ್ಲಿ ಅವರಿಗೆ ಬಡ್ಜೆಟ್ಟಿನಲ್ಲೇ ಶೇಕಡ 18 ರಷ್ಟನ್ನು ಕಡ್ಡಾಯವಾಗಿ ರಿಜರ್ವ್ ಮಾಡಬೇಕೆಂದು ಕೇಳುತ್ತೇನೆ. ಹಿಂದೆ ಹರಿಜನರಿಗೆ ವಸತಿ ಸೌಕರ್ಯದ ಬಗ್ಗೆ ತಲಾ 400 ರೂಪಾಯಿಗಳನ್ನಾದರೂ ಉಚಿತ ಗ್ರಾಂಟು ಕೊಡುತ್ತಿದ್ದರು. ಇತ್ತೀಚೆಗೆ ಅದನ್ನೂ ನಿಲ್ಲಿಸಿ ಇಲ್ಲಿ ಇವರಿಗೆ ಸೊಸೈಟಿಗಳನ್ನು ಮಾಡುತ್ತೇವೆಂದು ಹೇಳಿ ಮನೆ ಕಟ್ಟಲು ಸಾಲಕೊಡುತ್ತೇವೆಂದು ಹೇಳಿ ಅತ್ತ ಅದೂ ಇಲ್ಲ—ಇತ್ತ ಇದೂ ಇಲ್ಲ ಅನ್ನುವಂತೆ ಮಾಡಿದ್ದಾರೆ. ಸರ್ಕಾರದವರು ಸಾಕಷ್ಟು ಸಬ್‌ಸಿಡಿಯನ್ನು ಕೊಟ್ಟು ಹರಿಜನರಿಗೆ ಈ ಗೃಹನಿರ್ಮಾಣ ಸೊಸೈಟಿಗಳನ್ನು ಮತ್ತೆ ಪುನರುಜ್ಜೀವನಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೂಡಿಗೆರೆಗೆ ಸರ್ಕಾರದವರು ಒಂದು ಆಸ್ಪತ್ರೆಯನ್ನು ಕೊಟ್ಟಿದ್ದಾರೆ. ಅದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಓಪನಿಂಗ್ ಸೆರಮನಿಯನ್ನು ಮಾಡತಕ್ಕವರಿದ್ದಾರೆ. ಆದರೆ ಮಲೆನಾಡಿನಲ್ಲಿ ಆಸ್ಪತ್ರೆಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಈಗ ಬಡ್ಜೆಟ್ಟಿನಲ್ಲಿ ಇದಕ್ಕೆ ಒದಗಿಸಿರತಕ್ಕ ಹಣ ಸಾಲದು. ನಮ್ಮ ಮೂಡಿಗೆರೆಯ ತಾಲ್ಲೂಕಿನಲ್ಲಿ ಕಾಫೀ ಕೂಲಿಗಾರರ ಸಂಖ್ಯೆ ಜಾಸ್ತಿ ಇವೆ. ಅಲ್ಲಿಗೆ ಹೆಚ್ಚಿನ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರಾಜ್ಯದಲ್ಲಿ ವಸೂಲಾಗುತ್ತಿರುವ ಆದಾಯತೆರಿಗೆ, ಇತರೇ ಎಕ್ಸೈಜ್ ಸುಂಕ ಮತ್ತು ವ್ಯವಸಾಯದ ಆದಾಯ ತೆರಿಗೆ ಇವುಗಳಲ್ಲಿ ನಮ್ಮ ಜಿಲ್ಲೆಗೆ ಸಾಕಷ್ಟು ಸಹಾಯ ದೊರೆಯುತ್ತಿಲ್ಲ. ಸಂಪೂರ್ಣವಾಗಿ ನಮ್ಮ ರಾಜ್ಯದ ಕಾಫಿ ಎಕ್ಸೈಜ್ ಆದಾಯವೆಲ್ಲಾ ಕೇಂದ್ರಕ್ಕೆ ಹೋಗುತ್ತಿದೆ. ಕಾಫಿ ರಫ್ತಿನಿಂದ ವಿದೇಶಿ ಹಣ ನಮ್ಮ ರಾಷ್ಟ್ರಕ್ಕೆ ಬರುತ್ತಿದೆ. ಈ ಹಣದಲ್ಲಿ ಕೆಲವು ಭಾಗ ರಾಜ್ಯ ಸರಕಾರದವರು ಪಡೆಯಲು ಪ್ರಯತ್ನಮಾಡಿ ಮಲೆನಾಡು ಪ್ರಾಂತ್ಯ ಅಭಿವೃದ್ಧಿಯಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ನಮ್ಮಲ್ಲಿ ಆಸ್ಪತ್ರೆಗಳು ಬಹಳ ಕಡಮೆ ಇವೆ, ಆಸ್ಪತ್ರೆಯಿದ್ದರೆ ಡಾಕ್ಟರಿಲ್ಲ, ಡಾಕ್ಟರಿದ್ದರೆ ಔಷಧಿಯಿಲ್ಲ, ಇಂಥ ಪರಿಸ್ಥಿತಿ ಇದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರೇ ಇಲ್ಲ. ಕಳಸದಲ್ಲಿದ್ದ ಡಾಕ್ಟರನ್ನು ಒಂದು ವರ್ಷದೊಳಗೆ ವರ್ಗಮಾಡಿದರು, ಅವರು ಬಹಳ ಚೆನ್ನಾಗೇ ಕೆಲಸಮಾಡುತ್ತಿದ್ದರು, ಅಂಥ ಡಾಕ್ಟರನ್ನು ಯಾರದೋ ಪ್ರಭಾವದಿಂದ ವರ್ಗಮಾಡಿರುವುದು ಮನಸ್ಸಿಗೆ ನೋವನ್ನುಂಟುಮಾಡಿದೆ. ಎರಡು ವರ್ಷಗಳಿಗೆ ಮುಂಚೆ ವರ್ಗಮಾಡದಂತೆ ಸರಕಾರ ತಿಳಿಸಬೇಕು. ವರ್ಗ ಮುಂಚೆ ಮಾಡಬೇಕಾದರೆ ಆ ಕ್ಷೇತ್ರದ ಒಬ್ಬ ಸದಸ್ಯರನ್ನಾದರೂ ಕೇಳಿ ಮಾಡಬೇಕು ಎಂದು ಕಡ್ಡಾಯಮಾಡಬೇಕು. ಚಿಕ್ಕಮಗಳೂರು ಆಸ್ಪತ್ರೆಯಲ್ಲಿ ಹತ್ತಿ ಕೂಡ ಇಲ್ಲ. ಒಂದು ಔಷಧಿಯೂ ಇಲ್ಲ ವಿ. ಸಿ. ಜಿ. ಮಿಷೀನ್ ಕೂಡ ಕೆಟ್ಟಿದೆ. ಇದನ್ನು ಸರಿಪಡಿಸಬೇಕು.

ಮೂಡಿಗೆರೆ ತಾಲ್ಲೂಕಿನಲ್ಲಿ ಬಿ. ಹೊಸಹಳ್ಳಿ ಎಂಬ ಒಂದು ಗ್ರಾಮವಿದೆ, ಆ ಗ್ರಾಮದವರು ಗ್ರಾಮಾಂತರ ನೀರು ಸರಬರಾಯಿ ಯೋಜನೆ ಪ್ರಕಾರ ತಮ್ಮ ಪಾಲಿನ ಹಣ ಪಾವತಿ ಮಾಡಿದ್ದಾರೆ. ಲಕ್ಷಾಂತರ ರೂಪಾಯಿಗಳ ಅಂದಾಜಾಗಿ ಕೆಲಸ ಪ್ರಾರಂಭವಾಗಿ ನಿಂತಿವೆ, ಅದನ್ನು ಜಾಗ್ರತೆ ಮುಂದುವರೆಸಬೇಕು ಎಂದು ಇಷ್ಟು ಹೇಳಿ ಮಾತನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P. M.

† **Sri C. M. ARUMUGAM** (K.G.F.).—Mr. Deputy Speaker, Sir—, I am thankful to you indeed for having given me a chance to speak on this budget. Sir, the Finanace Minister, while presenting the budget, said that there is no proposal for new taxes. By saying so, he got applause from that side. While presenting the budget, he has also said that it is a deficit budget, but no where has he said how he is going to make up the deficit. What does he mean by saying 'no new' taxes ? Is it that the Government is convinced or satisfied that there is no paying capacity on the part of the people or the merchants or other communities of our State, or that the Government has no intention

(SRI C. M. ARUMUGAM)

of putting new taxes? But at any rate, this deficit means that it is not only deficit in respect of revenue but it is also deficit in the sense that it has not met the requirements and needs of the people of the State of Mysore. I have been very careful in going through his budget speech. Of course, it is very well written in King's English. In that English, he has written. But, Sir, it is no where said that there would be any reformation or re-orientation or any change in the structure of the Finanee Department or more so, in the Commercial Tax Department and Sales Tax Department. Change of Minister or Government should not be construed as change of M.S.R.T.C. driver or a driver of the locomotive or Railway from Bangalore to Madras. All these 25 years, several Finance Ministers came and he is one among them. What is it he has contemplated to do in his own department or in the departments from where he has to get more revenue—like the Commercial Tax and Sales Tax Department? In these departments, officers of all categories are there from the Bill Collector up to the Commissioner of Commercial Taxes. They continue to be there after all these years. The sales tax is roughly about Rs. 60 crores. Bangalore City alone contributes about Rs. 28 crores; Bangalore Division contributes 9 crores and Bangalore Division and Bangalore City put together contribute Rs. 37 crores of rupees and the rest *i.e.*, 23 crores comes from all over the State. It is possible to increase the sales tax by effecting plugging of loop-holes in the department by changing the officers; by removing certain officers and transferring certain officers. Some officers always want to sit tight in Bangalore. Formerly, Bangalore was considered to be an air-conditioned City, but it is no longer so these days. These officers want to be continued in Bangalore by using certain influence If Mr. Ghorpade were to take a little interest, I can suggest that Bagalore City can be divided into two Divisions with two Deputy Commissioners one for the South and one for the North. And then, if you stream line the administration in the Sales Tax Department, both in Bangalore and elsewhere, you can increase the sales tax revenue to the tune of about 10 crores. I hope he will do it in the best interest of getting more revenue, which can be used in the larger interest of the welfare of the people of our State.

I quite appreciate to some extent, the Finance Minister's award of dearness allowance of the employees. He has raised the dearness allowance of the State employees so as to be on par with that of the employees of the Government of India. Then, Sir, I may submit to him that the expenditure incurred on the State Government employees comes to about 35 to 40 per cent of the total budget. Out of Rs. 350 crores, we spend about Rs. 100 crores; that come to about 35-40 per cent and it is being spent on 3.5 lakhs of employees. If you take an average of 5 persons in a family, it works out to about 20 lakhs. For 20 lakhs of persons the employees and their dependents—, we spend about about 100 crores of rupees and for the rest of 230 lakhs or 2 crores 30 lakhs of persons, we spend about 60 per cent. The total figure comes to about 2 crores or 2.5 crores or something like that; whereas, if we take the figures of the Government of India, they spend for their employees about 11 per cent of the total budget and about 89 per cent for the welfare of the general public of the country. I am not suggesting for a moment that the percentage of 40 should be reduced. I am suggesting that the revenue should be increased so that the per centage on the expenditure on Government employees could be reduced in a sense. There are different categories of employees *viz.*, workers in the country side, Government employees, next come the employees in the Public Sector and Private Sector, then come the contract labourers, the agricultural labour and the casual workers. Casual workers are there in the drought affected area. It is a responsible statement from the Minister for Finance. He said that every man is paid Rs. 2-50 per day and every women is paid Rs. 2-00 per day. It is a constitutional provision—both men and women are entitled to equal pay for equal work.

Sri M. Y. GHORPADE.—I have not said that. I have said that rates are so fixed that the average worker is enabled to earn between Rs. 2 to Rs. 2-50 per day. You read my speech properly. Some may earn more and some earn less.

Sri C.M. ARUMUGHAM.—In these areas men are paid Rs. 2-50 and women are paid Rs. 2 per day. I know our P.W D. Minister can verify and let me know.

Sri H. M. CHANNABASAPPA.—Rs. 2-50 and Rs. 2-00 is not fixed for the individual. It is fixed on the basis of work turned out. As the Hon'ble Finance Minister said, the pattern of rates are so fixed that the average worker may earn up to Rs. 2-50 in the case of men and Rs. 2-00 in the case of women.

Sri C.M. ARUMUGHAM.—Sri, the State is passing through a trying period. One-fourth of the total population of the State is affected by drought conditions and failure of monsoons. Yet there is no sign any where, other than these districts, that the State is affected or that the people are suffering. Now for instance, the Government may have good intentions to implement their schemes, and help the drought affected area. More important than that is the taking of permanent measures in that area so that the drought will not raise its head again in those areas. You should root out drought from the State once for all. No doubt the Government may be sincere in implementing the required schemes. But I have to charge the officers for the failure. Of course, these officers, they come from the ICS and IAS. These ICS officers have a tradition of having worked under the British. From that, there is another set of people who are coming up in the country—the IAS officers. Sir, these IAS officers are coming from the upper strata of society and they are not aware of the suffering of the people. They cannot understand how people are living in huts and hovels, who have

(SRI C. M. ARUMUGAM)

not known what is a leaky roof, who have not known what is starvation, who are not aware of the thirst, because they always drink milk whenever they feel thirsty. Therefore, the IAS and the IPS officers who have come from the old ICS beuracratic set up, are not the people who can understand the problem of poor people and they cannot properly implement the schemes meant to ameliorate poor people. Therefore, what I suggest is, stop taking these IAS and IPS officers. Be bold. I know Mr. Ghorpade is a bold man and he must be bold enough to tell the Government of India about this ; he had the boldness to go to the Sixth Finance Commission and explain the needs of the State and he has said that in the Fifth Finance Commission, the State did not get justice. Therefore, he must be bold enough to reject these IAS officeres. Start recruiting the MAS officers—Mysore Administrative Officers Sir, I always feel proud in saying what my friend Mr. S. M. Krishna said at Mandya. Of course, he is the most disappointed person I will take it up later on. He was saying 'sons of the soil' should be given appointments. I welcome that statement. What appoints ?—peons, chaprasis, you want so many menials to clean the chicken for the VIPs ! Take these people for the Mysore Administrative Service. These people who were recruited to the M.A.S. service have proved more competent than the IAS and IPS. I could say that a man who is well trained and becomes a police officer, he can be a better officer. He has qualities of humane understanding of the common man's problems. He is better than persons coming from Scotland Yard with a big emblem on his shoulder—looking at his shoulder every time and feeling proud that he is from the Scotland yard ! Therefore, I say that local people should be encouraged.

MR. DEPUTY SPEAKER.—Scotland Yard is in England.

Sri C.M. ARUMUGHAM.—Some people of this State have also gone to Scotland Yard and come back.

So, I welcome it. Sri S. M. Krishna somewhere in Mandya or Mysore has said that 'sons of the soil' should be given opportunities. I wecome it. Gulbarga people should be given more chances in Gulbarga ; Bangalore people in Bangalore, like that. And they must also give more chances for the people who are affected by drought, because it would be very difficult for them tide over their difficulties they are facing for the last 10 months. I suggest to the Finance Minister that the Government of Mysore should recruit more and more people of this area for higher appointments and reject the idea of IAS as Tamil Nadu did it. Tamil Nadu was very bold. They rejected IAS officers. You cannot thrust upon us these IAS officers. We see an officer coming from UP, who understands neither English nor Kannada and he is an IAS man. You say they have been recruited from the UPSC. Why ? If IAS officers are intelligent, people of Mysore are also intelligent. There is no harm in taking people of Mysore State for administration purpose. It may be enough if we have one officer of the IAS cadre as Chief Secretary. The rest of them could be MAS officers. All these IAS Officers who are working call themselves Commissioners and Secretaries to Government It is surprising that when we attack a man in this Assembly, the very next week, he gets a promotion. From next he becomes a big man. Therefore, I told him: 'do not attack him', but praise him, probably they will be reverted. All these officers should be sent some where else so that the people who know the problem and who are aware of the difficulties of the village people, the sufferings of the people, they can become officers and they will certainly reflect the policies and programmes of your Government or the present Government.

Now, all these publice sector industries are working at a loss. This is because I.A.S. officers are posted at Managing Directors of these undertakings. They hava no qualifications, they know nothing about the industries and they do not have general knowledge also. After passing some test, they appear before the Union P.S.C. and become I.A.S. officers and are posted as Managing Directors. I am sorry a man like Sri Ghorpade who is the Finance Minister has not been able to make these industries self-sufficient. The private industries make huge profits. The profits of the public undertaking go the public funds. The public sector industries are not meant for I.A.S. officers and their families. In a year if an undertaking works at a loss. the I.A.S. officer conrerned should be reverted and his explanation should be called for. The Government Electric Factory has been running at a heavy loss all these years. It has entered into an agrerment with a very big capitalist for selling 6 lakh fans at a cost of Rs. 150 thereby incurring a loss of Rs. 100 per fan. Yet, the Government of Mysore has not taken any action against the Managing Diretor of that concern. He is also an I.A S. officer. This is the fate of all the industries in the State. The reason may be known to the Minister fo Industries. He is surrounded by a big crowd wherever he goes. We all knew how cinema starts attract big crowds. It looks to me that Sri Krishna has not during the last ten months taken any effective steps to improve the working of the public sector industried in the State of Mysore. Sometimes it is necessary that the concerneo Minister must be a dynamic person and he must take lot of interest te improve this department. The failure of a Minister is certainly the failure of the department and ultimately of the Government. We has lot of hopes on Sri Krishna and we expected that he would improvd the Industries Department. On the other hand, his performance is most disappointing. You go to any private industry and you will find that every minute is precious for them and every item is accounted for. That is not the case with Government undertakings. This type of Government is no good. There most be a change in the outlook and we are not seeing that in the public sector industries and in the Industries Department.

We have several times mentioned about drought and the consequent rise in prices. It is one excuse for the rise in prices but there cannot be any excuse for the Government to control the rise in prices in other parts of the State, more particularly for the Food Department. Of course, the Food Department is a very essential department dealing with human beings. If anybody becomes the Director of Food Supplies the problem will not be solved. It requires lot of study. For the last 7 or 8 months there is a Food Director. He encourages only the rich people, the millionnaires and the multi-millionnaires and that reflects badly on the Government. Ha is sitting in his chair and issuing orders. He has no time to control the prices. For the information of the Government and the Minister of State for Food I shall give a comparative list of prices.

Commodity	Price in 1971 Rs.	Current price Rs.
Fine rice	115–120	189–210
Medium rice	110–113	160–170
Coarse rice	102–104	100–160
Ragi (per quintal)	60–70	105–110
Jowar	45–55	95–100
Maize	50–58	98–102
Black gram and green gram	125–130	300–320
Castor oil seed	130–140	250–260
Coconuts (per thousand)	400–500	700–900
Jaggery	80–115	160–190
Tamarind	90–110	140–200
Coriander	215–300	300–350
Onion	20–25	40–50
Potato	40–60	80–100
Gingily oil	50–60	90–95
ground nut oil	30–35	60–65
Coconut oil	42–4	85–90
sugar (essential for baby foods)	172–175	320–325

The department on the whole has not taken any action. When the department has no control over the rising price, I want to know whether there is need for such a department. As I mentioned, the present Director calls himself to be the son of Judge. It is his self-glorification. Therefore, he says that he acts according to rules and regulations.

4-30 P.M.

But, what is he doing ? He helps the rech people and not the poor. He gives permission to open a number of fair-price shops but I am afraid he has never inspected any shop. The Food and Civil Supplies Department create artificial scarcity. Artificial scarcity is creted regarding tyres, steel, cement, etc. There are reactionary forces and blackmarketers in the country and they are taking advantage and the Director of Food Supplies is help them to create artificial scarcity. You have said that you will take over wholesale trade in foodgrains. The moment that news is leaked out, thousands of people who are doing this blackmarketing are trying to exploit the situation and taking advantge of the scarcity condition. Today, where is scarcity ? Foodgrains are there but because the Government announced in the A.I.C.C. that they are going to take over wholesale trade, these people have created this artificial scarcity. If you want to nationalise anything whether it is bus routes or foodgrains or anything, the moment these blackmarketeers come to know they try to exploit the situation. They have their own agents in the Government machinery. Therefore, I submit that the Government should take suitable action immediately to reorganise the Civil Supplies Degartment and to see that foodgralns not only reach the fair price shops but also control the prices.

I have a piece of information to inform the House. There were hundreds of tons wheat and wheat products which were given to wholesale traders to be distributed free at Gulbarga, Bijapur and Belgaum. But these foodgrains given to the wholesale dealers have disappeared. There was some enquiry and the Chief Minister sent some C.I.D. official to enquire. But along with them the Director or one of his associated has gone there. There was no need for him to go. The Chief Minister must take drastic action if those foodgrains have not reached the place.

No doubt the Chief Minister is liberal so far as drought affected areas are concerned. Anything asked for he says that it would be done It is a good sign. But we must also see whether things reaek the places meant for. For instance, so far as Belgaum is concerned it requires about 12,000 tons of wheat. Against this requirement, what is the supply made 5,000 tons are supplied. It is quite insufficient. People sit here in Vidhana Soudha and they do not know the problem there None of your officers have gone to any village and seen what the people eat. Each one of your ministers must go from taluk to taluk, from hobli to hobli, and see whether the foodgrains despatched reach those placed or not. In Gulbarga even sugardust is not seen. You know that people of India are innocent. I was saying that people are so good ; not a single man has raised objection. I want to narrate one incident. During the Prime Minister's visit to those areas, I had he

(SRI C. M. ARUMUGAM)

privilege to go there. There were lakhs of people to see the Prime Minister. Our car was going and I saw the plople running to see the Prime Minister. What does that show ? They are so much enamoured to see her. Even today, of course if our Chief Minister wants to make use of "Indira-wave" in those areas, people in lakhs will come. They were so disciplined that there were only a couple of constables. If they were violent, it would reqdire a regiment of army to look after them. But there was no agitation and the people were so good. That was all I could see.

They are so good. If our Chief Minister were to say that Prime Minister has not come from Delhi she has come from sky they will believe it. If he had said that she is not an ordinary woman like Smt. Vaz but she is an Avatar they will believe it. Inspite of the severe drought situation there it did not affect the gathering of many persons. The people are so innocent; they are unable to express when they are hungry; they merely shed tears. The people are really innocent. But what I say is don't exploit their innocence ? Sir, I was watching the big crowd gathered at a place there. I saw thousands of women gathered there. One of the woman said 'see that Prime Minister; how straight she is standing ; that means she could do anything. To her next they saw our Chief Minister and said : 'look at his personality' Therefore Sir, what it all shows is that the people are very innocent; hey are unable to express their difficulties ; there was not even a single agitation; I thought there would be some agitation from Congress-.O side. But there was none. Sir, though I am not a student of psychology I can study psychology from seeing the people. The people were completely satisfied after hearing the speech ; they were completely satisfied with their empty stomachs. Really I give compliments to our Mysoreans and especially for the people of north Karnatak areas, for their innocence. They are confident even though they are hungry. The law and order situation there is also quite normal. They have self-imposed restrictions. But just because they are innocent don't keep quiet. The Government must take steps to supply foodstuffs and other requirements in those areas for the people who are standing like rocks inspite of sufferings.

Sir, for the last twenty five years I cannot say that the Government has not done anything. They might have done little, little and it might be an increase also. I know all the Chief Ministers. Firstly there was Mr. K.C. Reddy, then Mr. Hanumanthaiah, thereafter the Chitaldurga Leader Mr. S. Nijalingappa, then Jatti and afterwards Mr Kanthi for two months and again Mr. Nijalingappa and then Mr. Veerendra Patil. Continuously the successive Government did something. They have constructed several irrigation projects in the state costing crores of rupees. The completion of Tungabhadrat project will cost Rs. 200 crores; Sharavathi will ultimately cost Rs. 200

crores; there are other projects like Upper Krishna, Kalinadi and Almatti etc. They have spend crores of rupees on these projects and as a result the landlords of the State have become richer and richer. All these works have only helped the landlords of the State of Mysore. A man who was having one car, wants to have two ambassador cars, half-a-dozen bull-dozers, tractors and all that to-day. Thus it has only increased the wealth of the landlords of the State.

Then about the Power Projects on account of which so many industries have been developed and so many industrialists have been benefited; so many contractors have been benefited. A contractor who was having only a motor cycle is having today a car. All the industrialists, landlords, capitalists have been benefitted for the last twenty five years of Congress rule-whether Congress-O or Congress-R. I want the Government to hold an enquiry as to what has been done for the last twenty five years; how many people or what is the percentage of State's population that has been benefitted by these various plans and projects undertaken by Government - the plans means the rich man becoming richer. The Chief Minister said that I am not going to give free sites. Don't give. But is it possible for a poor or a common man to own a site in Bangalore ? Sir I have not visited London but I have read about London. The cost of a site in Bangalore is costlier than the cost of a site in London. That is what people too say. Therefore it is impossible for a poor and common man to own a site in Bangalore. On the other hand, the rich man owns so many sites; so many houses here. Any IAS, IPS officer is not without a house. For instance take Indira Nagar extension in Bangalore. Every IAS and IPS officer is owning a site in Indiranagar and it is a paradise of officers. But it is impossible for a poor man to own a site - a person who is not assured of his next meal is a poor man. For poor people it is impossible to purchase a house or a site. Poor people in villages are residing in huts; there is no bath room or lavatory, and there are no recreation places for them. In Bangalore City in every corner some theatre is coming up at a cost of Rs. 30 to Rs. 40 lakhs. Where from this money comes ? It is all black-market money. The Chairman and officers of the City Improvement Trust Board and the Mysore Housing Board owe an explanation as to how many sites they have given to the poor people, how many houses they have given to the poor and how can they give six sites to one family. I request the Government to appoint a Commission to enquire into these lapses on the part of these officers.

Sir, I am glad that for the first time in the history of our State, Rs. 5 crores has been provided in the Budget towards housing to poor people. I feel that it should be increased to about Rs. 10 crores, and if necessary houses should be constructed and given to the poor people, who have no means to put up a house. We have to wipe out all the reactionary forces in this country. We must see that every man lives in a respectable house. If you spend crores of rupees on irrigation

(SRI C. M. ARUMUGAM)

projects it helps a few landlords Therefore, the Goverument should spend at least Rs. 10 crores a year to provid house for houseless people in the State. I welcome this venture of theGovernment

Of course, problems are always there. If everybody starts crying, we cannot distinguish who is a real sufferer. It appears when there was a heavy rain, three persons were going to the market, one with a basket-full of betel leaves, another with a basket-full of rice and the third with a basket-full of salt. The poor man who was carrying salt started crying as the salt began dissolving. Seeing this person, the man who was carrying the basket of rice also began crying; and on seeing these two persons crying, the man who was carrying the basket of betel leaves also began crying. Sir, today everybody speak about the poor people. In drought areas, some Satyagraha is going on. We have to consider which cry is genuine. I leave it to the House to decide. There is always opposition for any good thing you do. The Party in power is talking about land reforms and urban ceiling. I submit that it should not be a question of ceiling, but it should be a question of necessity. It is not a question of how much land is required to be given to a landlord, but it must be a question of how much land is necessary for his living. Urban ceiling must also be viewed on this line. The set up that is there from Rama's time to Indira's time must be dislodged; the whole set up should be destroyed and a new set up should be rebuilt which will be helpful to one and all. There must be equality. China's revolutionary type of land reforms is necessary for India. Talking about the poor people and yet helping the contractors and black-marketeers is nothing but misleading the country. This should be put an end to. The present Government stands for reforms in all walks of life and to *garibi hatao.* I must accept that they have done some *garibi hatao.* But they are helping their Ministers and the Government machinery. They are very considerate towards officers by creating higher posts, and in this way they are implementing garibi hatao. The garibi hatao of the common man has not been implemented. Therefore, the very structure of their garibi hatao programme must be changed. They must implement progressive policies. I request the Government to implement the policy of garibi hatao properly.

Sir, as we all know, persons who murdered Mahatma Gandhi are today talking in praise of him. Our people are so good that they forget about it, they listen to you and listen to me also

In this Budget there are one or two welcoming features : about housing and abolition of tax on purchase of paddy. Gold has been exempted from purchase tax, cashew nuts have been exempted from purchase tax and wheat and wheat products are exempted from purchase tax. I submit that all the essential commodities and foodgrains must be exempted from purchase tax.

With these words, I thank the Chair for having given me a chance to speak.

ಏಕೆಂದರೆ ಇವತ್ತಿನವರೆಗೆ ಬಳ್ಳಾರಿ ಜಿಲ್ಲೆಯು ಬಹಳ ಹಿಂದುಳಿದ ಪ್ರದೇಶ. ಅಲ್ಲಿ ಇವತ್ತು ಏನೋ ಒಂದು ಪೋಸ್ಟು ಗ್ರ್ಯಾಜ್ಯುವೇಟ್ ಕೋರ್ಸ್ ಮಾಡಬೇಕೆಂದು ಹೊರಟಿದ್ದಾರೆ. ಅದಕ್ಕೆ ಎಲ್ಲರೂ ಸಹಕಾರ ಕೊಟ್ಟರೆ ಅದರಿಂದ ಎಲ್ಲರಿಗೂ ಉಪಯೋಗವಾಗುತ್ತದೆ ಎಂಬುದನ್ನು ಯಾರೂ ಮರೆಯಬಾರದು.

ಆ ಮೇಲೆ ನೀರಾವರಿ ಮತ್ತು ವಿದ್ಯುಚ್ಛಕ್ತಿ ವಿಚಾರ ಹೇಳುವುದಾದರೆ, ಬಹಳವಾಗಿ ಹೇಳಬಹುದು. ಸರ್ಕಾರ ಈಗ ಅವುಗಳ ಕಡೆ ಹೆಚ್ಚು ಗಮನ ಕೊಡುತ್ತಾ ಇದೆ. ನಮ್ಮ ಅಪ್ಪರ್ ಕೃಷ್ಣಾ ಯೋಜನೆ ಏನಿದೆ ಅದನ್ನು ರಾಷ್ಟ್ರೀಯ ಯೋಜನೆಯಾಗಿ ಮಾಡಬೇಕೆಂದು ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಕೇಳಿದ್ದಾರೆ. ಇವತ್ತು ಬರೇ ಕೇಳುವುದರಿಂದ ಏನೂ ಆಗುವುದಿಲ್ಲ. ಆ ಅಪ್ಪರ್ ಕೃಷ್ಣಾ ಯೋಜನೆಯಾದರೆ ಮಾತ್ರ ಅಲ್ಲಿರತಕ್ಕಂತಹ ಬರಗಾಲ ಪೀಡಿತ ಪರಿಸ್ಥಿತಿ ಹೋಗಿ ಒಂದು ಸುಭಿಕ್ಷ ಕಾಲ ಬರುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಗಮನಿಸಿ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಈ ಯೋಜನೆಯ ಕೆಲಸವನ್ನು ಆದಷ್ಟು ಬೇಗನೆ ಕೈಗೊಂಡು 5 ವರ್ಷಗಳಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ವಿಷಯವನ್ನು ಸರ್ಕಾರ ಮರೆತಂತಿದೆ. ಇವತ್ತು ನಮ್ಮ ರಾಜ್ಯದಲ್ಲಿ 75 ಪರ್ಸೆಂಟ್ ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುವವರು. ಅವರನ್ನು ಸರ್ಕಾರ ಮರೆತ ಹಾಗೆ ಕಾಣುತ್ತದೆ. ಇವತ್ತಿನವರೆಗೆ ಸರ್ಕಾರ ಪಟ್ಟಣಗಳಿಗೆ ಹೆಚ್ಚಿನ ಆದ್ಯತೆ ಕೊಡುತ್ತಿತ್ತು. ಆದರೆ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕಾದರೆ, ಅದು ಲಾಭದಾಯಕವಾಗಿದ್ದರೆ ಮಾತ್ರ ಒದಗಿಸುತ್ತಾರೆ; ಇಲ್ಲದಿದ್ದರೆ ಇಲ್ಲ. ಆದ್ದರಿಂದ ಆ ರೀತಿಯ ಒಂದು ಕಂಡಿಶನ್ ಏನಿದೆ ಅದನ್ನು ತೆಗೆದು ಹಾಕಿ ಪ್ರತಿಯೊಂದು ಹಳ್ಳಿಗೂ ಸಹ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಆದರೆ ಈ ಕಂಡಿಶನ್ ತೆಗೆಯದಿದ್ದರೆ ಮಾತ್ರ ನಮ್ಮ ಹಳ್ಳಿಗಳಿಗೆ ಇನ್ನು 20 ವರ್ಷವಾದರೂ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಮುಟ್ಟುವುದಿಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶಗಳ ಜನರ ಹಿತದೃಷ್ಟಿಯಿಂದ ಈ ಕಂಡಿಶನ್ ಹಾಕುವುದು ಸರಿಯಲ್ಲ. ಒಟ್ಟಿನಲ್ಲಿ ಇನ್ನು 5 ವರ್ಷಗಳಲ್ಲಿ ನಮ್ಮ ರಾಜ್ಯದ ಎಲ್ಲಾ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

ಆ ಮೇಲೆ ಇನ್ನೊಂದು ವಿಷಯ. ಜನತಾ ವಸತಿ ಕಾರ್ಯಕ್ರಮಗಳಲ್ಲಿ ಸರ್ಕಾರದವರು ಧೈರ್ಯವಾಗಿ ಯಾರೂ ಮಾಡದಂತಹ ಕೆಲಸವನ್ನು ಮಾಡಿದ್ದಾರೆ. ಈಗ ಬಡ ಬಡ ಜನರಿಗಾಗಿ ಈ ಕಾರ್ಯಕ್ರಮವನ್ನು ಸರ್ಕಾರದವರು ಪ್ರಾರಂಭ ಮಾಡಿದ್ದಾರೆ. ಈಗಾಗಲೇ 1972–73ರಲ್ಲಿ ಭೂಹೀನರಿಗೆ ಎರಡು ಲಕ್ಷ 5 ಸಾವಿರ ಮನೆಯ ನಿವೇಶನಗಳನ್ನು ಹಂಚಿದ್ದಾರೆ. ಅವರೆ ಬರೇ ಇಷ್ಟು ಕಾರ್ಯಗಳನ್ನು ಮಾಡಿದರೆ ಸಾಲದೆಂದು ಹೇಳಿ ಅವರಿಗೆ ಸುಮಾರು 5 ಕೋಟಿ ರೂಪಾಯಿ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಏರ್ಪಾಡು ಮಾಡಿದ್ದಾರೆ. ನಿಜವಾಗಿಯೂ ಇದು ಅಭಿನಂದನಾರ್ಹವಾದ ಕೆಲಸವೆಂದು ಹೇಳಿದರೆ ತಪ್ಪಾಗಲಾರದು. ಇಲ್ಲಿಯವರೆಗೆ ಸರ್ಕಾರ ಪಟ್ಟಣಗಳ ಮೇಲೆ ಗಮನ ಕೊಡುತ್ತಿದ್ದರು. ಸರ್ಕಾರದವರು ವರ್ಷಕ್ಕೆ ಎರಡು ಲಕ್ಷ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನು ಹಾಕಿಕೊಂಡರೆ ಇನ್ನೂ ಹೆಚ್ಚು ಅನುಕೂಲವಾಗುತ್ತದೆ. ನಮ್ಮ ರಾಜ್ಯ ಗ್ರಾಮಾಂತರ ಪ್ರದೇಶಗಳಿಂದ ಕೂಡಿದ ರಾಜ್ಯ; ಮತ್ತು ನೂರಕ್ಕೆ 80ರಷ್ಟು ಬಡ ಜನರು ಇರುವಂತಹ ರಾಜ್ಯ. ಆದ್ದರಿಂದ ಈ ಯೋಜನೆಯನ್ನು ಶೀಘ್ರವಾಗಿ ಜಾರಿಗೆ ತಂದು ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರೈಲ್ವೆ ವಿಷಯದಲ್ಲಿ ಕೆಲವು ವಿಚಾರ ಹೇಳುತ್ತೇನೆ. ಮೊನ್ನೆ ಪಿ ಡಬ್ಲ್ಯು ಡಿ ಇಲಾಖೆಯ ಮಂತ್ರಿಯವರು ನಾನ್ ಅಫೀಶಿಯಲ್ ರಿಸೊಲೂಷನ್ ಮೇಲೆ ಮಾತನಾಡುತ್ತಾ, ಗುಲ್ಬರ್ಗ ಬಳ್ಳಾರಿ ರೈಲ್ವೆ ಮಾರ್ಗವನ್ನು ಹೊಸದಾಗಿ ನಿರ್ಮಾಣ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಕೇಳುತ್ತೇವೆ, ಮತ್ತು ಇದರ ಬಗ್ಗೆ ಒತ್ತಾಯ ಮಾಡುತ್ತೇವೆ; ನೀವು ರಿಸೊಲ್ಯೂಶನ್ ವಾಪಸು ತೆಗೆದುಕೊಳ್ಳಿ ಎಂದು ಹೇಳಿದರು. ಆದರೆ ಇವತ್ತಿನವರೆಗೂ ಏನು ಕಾರ್ಯಕ್ರಮ ಅದರ ಮೇಲೆ ತೆಗೆದುಕೊಂಡಿದ್ದಾರೆ ಎಂದು ಅರ್ಥವಾಗುವುದಿಲ್ಲ. ಪ್ರಧಾನಮಂತ್ರಿಯವರು ಮೊನ್ನೆ ಬಿಜಾಪುರ, ಗುಲ್ಬರ್ಗಕ್ಕೆ ಭೇಟಿ ಕೊಟ್ಟಿದ್ದಾರೆ. ಅವರು ಮಹಾರಾಷ್ಟ್ರಕ್ಕೆ ಹೋದಾಗ ಬರಗಾಲ ಪರಿಸ್ಥಿತಿಯ

(ಶ್ರೀ ಸಿ. ಎಂ. ಆವರ್ಗಂ)

ಬಗ್ಗೆ ಜನರಿಗೆ ಕೆಲಸ ಒದಗಿಸಲು ಕೊಂಕಣ ರೈಲ್ವೆಯನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಸಹ ಗುಲ್ಬರ್ಗ, ಬಿಜಾಪುರ, ಬೀದಾರ್ ಪ್ರದೇಶಗಳಲ್ಲಿ ಜನರ ಪರಿಸ್ಥಿತಿ ಬಹಳ ಭೀಕರವಾಗಿದೆ. ಅಲ್ಲಿ ಹೊಸದಾಗಿ ರೈಲ್ವೆ ಲೈನನ್ನು ನಿರ್ಮಾಣ ಮಾಡಿದರೆ ಅಲ್ಲಿರತಕ್ಕಂತಹ ನಮ್ಮ ರಾಜ್ಯದ ಹಿಂದುಳಿದ ಪ್ರದೇಶಗಳಿಗೆ ಅನುಕೂಲವೂ ಆಗುತ್ತದೆ ಮತ್ತು ಅಲ್ಲಿಯ ಜನರಿಗೆ ಕೆಲಸವನ್ನೂ ಒದಗಿಸಿದ ಹಾಗೆ ಆಗುತ್ತದೆ. ಆದ್ದರಿಂದ ನಮ್ಮ ಮುಖ್ಯ ಮಂತ್ರಿಯವರು ಅದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ಮೇಲೆ ಹೊಸಪೇಟೆ-ಹುಬ್ಬಳ್ಳಿ ಮೀಟರ್ ಗೇಜ್ ಇದ್ದುದನ್ನು ಬ್ರಾಡ್ ಗೇಜ್ ಆಗಿ ಪರಿವರ್ತನೆ ಮಾಡಬೇಕೆಂದು 10 ವರ್ಷಗಳಿಂದಲೂ ಕೇಂದ್ರ ಸರ್ಕಾರವನ್ನು ಕೇಳುತ್ತಿದ್ದೇವೆ. ಆದರೆ ಇವತ್ತಿನವರೆಗೂ ಅದು ಸ್ಯಾಂಕ್ಷನ್ ಆಗಲಿಲ್ಲ. ಇದನ್ನು ಬ್ರಾಡ್ ಗೇಜ್ ಆಗಿ ಪರಿವರ್ತನೆ ಮಾಡುವುದರಿಂದ ಬರೇ ನಮ್ಮ ರಾಜ್ಯಕ್ಕೆ ಮಾತ್ರವಲ್ಲ ; ಇಡೀ ದೇಶಕ್ಕೆ ಇದರಿಂದ ಅನುಕೂಲವಾಗುತ್ತದೆ. ಅದ್ದರಿಂದ ಇದರ ಬಗ್ಗೆ ನಮ ಸರ್ಕಾರದವರು ಕೇಂದ್ರಸರ್ಕಾರಕ್ಕೆ ಒತ್ತಾಯ ಮಾಡಬೇಕು; ಇಲ್ಲದಿದ್ದರೆ ಇದರಿಂದ ನಮ್ಮ ರಾಜ್ಯಕ್ಕೆ ಮತ್ತು ದೇಶಕ್ಕೆ ಬಹಳ ನಷ್ಟವಾಗುತ್ತದೆ. ಆದ್ದರಿಂದ ಇದನ್ನು ಆದಷ್ಟು ಜಾಗ್ರತೆ ಮಾಡಿಸುವಂತೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಮೂರನೆಯದು ಹುಬ್ಬಳ್ಳಿ—ಕಾರವಾರ ರೈಲ್ವೇ. ಇದನ್ನು ಕೇಂದ್ರ ಸರ್ಕಾರದವರು ಸರ್ವೆ ಮಾಡುವುದಕ್ಕೆ ಆರ್ಡರ್ ಮಾಡಿದ್ದಾರೆ. ಇವನ್ನು ಸಹ ಆದಷ್ಟು ಜಾಗ್ರತೆಯಾಗಿ ಬ್ರಾಡ್ ಗೇಜಾಗಿ ಮಾಡುವುದರ್ಕೆ ರಾಜ್ಯಸರ್ಕಾರದವರು ಕೇಂದ್ರಸರ್ಕಾರದವರ ಮೇಲೆ ಒತ್ತಾಯ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಕೊಟ್ಟೂರು—ಹರಿಹರ ರೈಲ್ವೆ. ಇದರ ಸರ್ವೆ ಆಗಿ 10—15 ವರ್ಷಗಳಾಗಿವೆ. ಆದರೆ ಇವತ್ತಿನವರೆಗೂ ಅದು ಯಾವ ಸ್ಥಿತಿಯಲ್ಲಿದೆ ಎಂದು ಅರ್ಥವಾಗುತ್ತಾ ಇಲ್ಲ. ಆದ್ದರಿಂದ ಇದರ ಕೆಲಸವನ್ನು ಜಾಗ್ರತೆಯಾಗಿ ಶುರು ಮಾಡಲು ಕೇಂದ್ರಸರ್ಕಾರವನ್ನು ಒತ್ತಾಯ ಮಾಡಬೇಕು. ಇಲ್ಲದಿದ್ದರೆ ಅವರು ಬರೇ ಮಹಾರಾಷ್ಟ್ರ ಮತ್ತು ನಾರ್ತ್ ಇಂಡಿಯಾದ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದರಲ್ಲಿಯೇ ತಲ್ಲೀನರಾಗಿರುತ್ತಾರೆ. ಆದ್ದರಿಂದ ನಾವು ಸಹ ಸ್ಯಾಂಕ್ಷನ್ ಆದ ರೈಲ್ವೆಯ ಕೆಲಸವನ್ನು ಪ್ರಾರಂಭಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ನ್ಯಾಷನಲ್ ಹೈವೇಸ್ ವಿಚಾರ. ಉದಕಮಂಡಲದಿಂದ ಹುಮ್ನಾಬಾದ್, ಮೈಸೂರು, ಹಿರಿಯೂರು, ಚಳ್ಳಕೆರೆ, ಬಳ್ಳಾರಿ, ಸಿರಗುಪ್ಪ, ಶೋರಾಪುರ, ಗುಲ್ಬರ್ಗ—ಸ್ಟೇಟ್ ಹೈವೇಸ್ ಇದನ್ನು ನ್ಯಾಷನಲ್ ಹೈವೇಸ್ ಆಗಿ ಪರಿವರ್ತನೆ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು ಏಕೆಂದರೆ ನ್ಯಾಷನಲ್ ಹೈವೇಯಾಗಿ ಪರಿವರ್ತನೆಯಾದರೆ, ನಮ್ಮ ರಾಜ್ಯದ 8 ಜಿಲ್ಲೆಗಳಿಗೂ ಇದರಿಂದ ಅನುಕೂಲವಾಗುತ್ತದೆ. ಅದೇ ರೀತಿ ಮೈಸೂರು, ಮಂಡ್ಯ, ಚಿತ್ರದುರ್ಗ, ಬಳ್ಳಾರಿ, ಗುಲ್ಬರ್ಗ, ಬೀದಾರ್—ಈ ರೋಡುಗಳನ್ನು ಸಹ ನ್ಯಾಷನಲ್ ಹೈವೇಸ್ ಆಗಿ ಪರಿವರ್ತನೆ ಮಾಡುವುದಕ್ಕೆ ನಮ್ಮ ಸರ್ಕಾರ ಹೆಚ್ಚಿನ ಪ್ರಯತ್ನ ಮಾಡಿ, ಕೇಂದ್ರದ ಮೇಲೆ ಒತ್ತಾಯ ತರಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5-00 P. M.

† **ಶ್ರೀ ಬಿ. ಇ. ರಾಮಯ್ಯ (ಶಿರಗುಪ್ಪ).**—ಮಾನ್ಯ ಅಧ್ಯಕ್ಷರೇ ಈಗ ನಮ್ಮ ಹಣಕಾಸಿನ ಸಚಿವರು ಈ ಸಭೆಯ ಮುಂದೆ ಮಂಡಿಸಿರುವ 1973-74ನೇ ಸಾಲಿನ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ನಾನು ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ಈಗ ದೇಶದಲ್ಲಿ ಗಂಭೀರವಾದ ಪರಿಸ್ಥಿತಿ ಇದೆ ಎನ್ನತಕ್ಕಂಥಾದ್ದನ್ನು ಎಲ್ಲರೂ ಒಪ್ಪಬೇಕು. ಇದು ಎಲ್ಲರಿಗೂ ಗೊತ್ತಿದೆ. ಇಂಥಾ ಒಂದು ಪರಿಸ್ಥಿತಿ ಇದ್ದರೂ ಕೂಡ ನಮ್ಮ ಹಣಕಾಸಿನ ಸಚಿವರು ನಿಜವಾದ ಪರಿಸ್ಥಿತಿಯನ್ನು ಅರಿತುಕೊಂಡು ವಾಸ್ತವಿಕವಾದ ಬಡ್ಜೆಟ್ಟನ್ನು ನಮ್ಮ ಮುಂದೆ ಮಂಡಿಸಿರುವುದನ್ನು ನೋಡಿದರೆ ನಿಜವಾಗಿಯೂ ನಾನು ಅವರಿಗೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಹಿಂದೆ ಯಾವ ಅರ್ಥ ಮಂತ್ರಿಗಳೂ ಕೂಡ ಇಂಥಾ ವಾಸ್ತವವಾಗಿ ವಿವರವಾಗಿ ಜಿಲ್ಲಾ ಕೆಲಸಗಳನ್ನೂ ಕೂಡ ಬಡ್ಜೆಟ್ಟಿನಲ್ಲಿ ತೋರಿಸಿರಲಿಲ್ಲ. ಇವರು ನಮ್ಮ ಸರ್ಕಾರ ಯಾವ ಯಾವ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನತಕ್ಕಂಥಾದ್ದನ್ನು ಎಲ್ಲವನ್ನು ಕೂಡ ಪುಸ್ತಕದಲ್ಲಿ ತಿಳಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಗುಲ್ಬರ್ಗ,

ಬೀದರ್, ಬಿಜಾಪುರ, ರಾಯಚೂರು, ಬಳ್ಳಾರಿ, ಚಿತ್ರದುರ್ಗದ ಕೆಲವು ಭಾಗಗಳಲ್ಲಿ ಕೂಡ ಅಭಾವ ಪರಿಸ್ಥಿತಿ ಉಂಟಾಗಿದೆ. ನಮ್ಮ ರಾಜ್ಯದಲ್ಲಿ ಇಂಥಾ ಅಭಾವ ಪರಿಸ್ಥಿತಿಯನ್ನು ಹಿಂದೆಂದೂ ಕೂಡ ಕಂಡಿರಲಿಲ್ಲ. ನಮ್ಮ ಹಣಕಾಸಿನ ಸಚಿವರು 1961ರಿಂದ 1973ರವರೆಗೆ ಯಾವ ಯಾವ ಸರ್ಕಾರಗಳು ಎಷ್ಟೆಷ್ಟು ಹಣವನ್ನು ಖರ್ಚು ಮಾಡಿವೆ ಎನ್ನುವುದನ್ನು ವಿವರವಾಗಿ ವಿಶದವಾಗಿ ಕೊಟ್ಟಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಮಾರ್ಚಿ 5ನೇ ತಾರೀಖು ಕಾಂಗ್ರೆಸ್ (ಒ) ಪಾರ್ಟಿಯವರು ಬೀದರ್, ಗುಲ್ಬರ್ಗ ಮತ್ತು ಬಿಜಾಪುರ ಡೆಪ್ಯುಟಿ ಕಮೀಷನರ ಆಫೀಸಿನ ಮುಂದೆ ಸತ್ಯಾಗ್ರಹವನ್ನು ಏರ್ಪಡಿಸಿದ್ದೆವು ಎಂದು ಹೇಳಿದರು. ಅವರು ಈ ಸತ್ಯಾಗ್ರಹವನ್ನು ಏತಕ್ಕೆ ಏರ್ಪಡಿಸಿದ್ದರೋ ನನಗೆ ಅರ್ಥವಾಗಲಿಲ್ಲ. ಇಂಥಾ ಒಂದು ಗಂಭೀರವಾದ ಪರಿಸ್ಥಿತಿಯಲ್ಲಿ ಅವರು ಸರ್ಕಾರಕ್ಕೆ ಸರಿಯಾದ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟು ಸರ್ಕಾರದೊಡನೆ ಸಹಕರಿಸಿ ಜನಗಳ ಕಷ್ಟವನ್ನು ಹೋಗಲಾಡಿಸುವುದನ್ನು ಬಿಟ್ಟು ಅವರು ಸತ್ಯಾಗ್ರಹವನ್ನು ಮಾಡಿದ್ದು ಬರೀ ನಾಟಕೀಯ. ಅವರಿಗೆ ಜನತೆ ಎಷ್ಟರ ಮಟ್ಟಿಗೆ ಬೆಂಬಲವನ್ನು ಕೊಟ್ಟಿದ್ದಾರೆ ಎಂಬುದನ್ನು ಅವರೇ ತೋರಿಸಿಕೊಟ್ಟಿದ್ದಾರೆ. ನಮ್ಮ ಸರ್ಕಾರದೊಡನೆ ಜನತೆಯು ಸಹಕರಿಸಿದ್ದರಿಂದ ಸರ್ಕಾರ ಹೆಚ್ಚಿನ ಕೆಲಸವನ್ನು ಮಾಡಿದೆ ಎಂದು ನಾನು ಹೆಮ್ಮೆಯಿಂದ ಹೇಳಬೇಕಾಗುತ್ತದೆ.

ಲಿಫ್ಟ್ ಇರಿಗೇಷನ್ ಕಾರ್ಯಕ್ರಮಗಳನ್ನು ಸರಿಯಾಗಿ ಕಾರ್ಯಗತ ಮಾಡದೆ ಇಂಥಾ ಒಂಧು ಗಂಭೀರವಾದ ಪರಿಸ್ಥಿತಿ ಉಂಟಾಗುವುದಕ್ಕೆ ಕಾಂಗ್ರೆಸ್ (ಒ) ಸರ್ಕಾರ ಕಾರಣ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅವರು 10 ವರ್ಷಗಳ ಕಾಲ ಆಡಳಿತದಲ್ಲಿದ್ದರೂ ಕೂಡ ಆ ಕಡೆ ಎಂದರೆ ಬರಗಾಲ ಪೀಡಿತ ಪ್ರದೇಶಗಳಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್ ಮತ್ತು ಮೈನರ್ ಇರಿಗೇಷನ್ ಸ್ಕೀಮುಗಳನ್ನು ತೆಗೆದುಕೊಂಡು ಕೆಲಸಗಳನ್ನು ಮಾಡದೆ ಇದ್ದುದರಿಂದ ಇಂಥಾ ಒಂದು ಗಂಭೀರವಾದ ಪರಿಸ್ಥಿತಿ ಉಂಟಾಗುವುದಕ್ಕೆ ಅವಕಾಶವಾಯಿತು. ಈ ವಿಚಾರವನ್ನು ನಮ್ಮ ಸರ್ಕಾರದವರು ಬಡ್ಜೆಟ್ಟಿನಲ್ಲಿ ವಿಶೇಷವಾಗಿ ಕೊಟ್ಟಿದ್ದಾರೆ. ಗುಲ್ಬರ್ಗ, ಬೀದರ್, ಬೆಳಗಾಮ್, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಯಾವ ಯಾವ ಕಡೆ ಎಷ್ಟೆಷ್ಟು ಜನಗಳಿಗೆ ಕೆಲಸವನ್ನು ಕೊಡಬೇಕು ಎಂದು ಯೋಚನೆ ಮಾಡಿಕೊಂಡು ಸುಮಾರು 10 ಲಕ್ಷ 70 ಸಾವಿರ ಜನಗಳಿಗೆ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ಕೆಲಸವನ್ನು ಒದಗಿಸಿ ಕೊಡುತ್ತೇವೆ ಎಂದು ಸರ್ಕಾರದವರು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಸರ್ಕಾರದೊಂದಿಗೆ ಸಹರಿಸಿ ಜನರ ಕಷ್ಟವನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡದೆ ಸುಮ್ಮನೆ ಟೀಕೆ ಮಾಡುವುದು ಉಚಿತವಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗುತ್ತದೆ. ರಚನಾತ್ಮಕವಾದ ಸಲಹೆಗಳು ಇದ್ದರೆ ಕೂಡಲೆ ನ್ಯೂನತೆಗಳೇನಾದರೂ ಇದ್ದರೆ ಅದನ್ನು ಸರಿಪಡಿಸಿ ಎಂದು ಹೇಳುವ ಬದಲು ಬರೀ ಟೀಕೆಯನ್ನು ಮಾಡುತ್ತಾ ಹೋದರೆ ಯಾವ ಗುರಿಯನ್ನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಅವರೂ ಕೂಡ ಸರ್ಕಾರದೊಡನೆ ಸಹಕರಿಸಿ ನಡೆಯಬೇಕು ಎಂದು ನಾನು ವಿರೋಧ ಪಕ್ಷದವರನ್ನು ಕೇಳಿಕೊಳ್ಳುತ್ತೇನೆ. ಸರ್ಕಾರದವರೂ ಸಹ ಈ ಬರಗಾಲ ಏನಿದೆ ಅದನ್ನು ಹೋಗಲಾಡಿಸಲು ಬೇಕಾದಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಲಿಫ್ಟ್ ಇರಿಗೇಷನ್ ಯೋಜನೆಯನ್ನು ಕೂಡಲೇ ಹಾಕಿಕೊಂಡು ಅದಕ್ಕೆ ಹಣವನ್ನು ಖರ್ಚು ಮಾಡಬೇಕು, ಆ ಕೆಲಸವನ್ನು ಮಾಡಬೇಕು ಮೈನರ್ ಇರಿಗೇಷನ್ ಮತ್ತು ಮೇಜರ್ ಇರಿಗೇಷನ್ ನೀರಾವರಿ ಯೋಜನೆಗಳನ್ನು ಹಾಕಿಕೊಂಡು ಆ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆ ಕೆಲಸಗಳನ್ನು ಮಾಡುವುದಕ್ಕೆ ವಿರೋಧ ಪಕ್ಷದವರು ಸಹಕಾರ ಮಾಡಬೇಕು, ಮತ್ತು ಜನರ ಕಷ್ಟಗಳನ್ನು ಪರಿಹಾರ ಮಾಡುವುದಕ್ಕೆ ಭುಜಕ್ಕೆ ಭುಜ ಕೊಟ್ಟು ನಿಂತುಕೊಳ್ಳಬೇಕು ಎಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ಹೇಳುವುದಾದರೆ ಈಗ 2 ವರ್ಷಗಳ ಕೆಳಗೆ ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಫೌಂಡೇಷನ್ ಸ್ಟೋನ್ ಹಾಕಿದರು. ಆದರೆ ಅಲ್ಲಿ ಇವೊತ್ತಿನವರೆಗೂ ಕೆಲಸ ಪ್ರಾರಂಭವಾಗಿಲ. ಈ ಕಾರ್ಖಾನೆಗಾಗಿ ಈಗ ಸರ್ಕಾರದವರು ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾಗಿದೆ. ಇದು ಇಡೀ ದೇಶಕ್ಕೇ ಬಳ್ಳಾರಿಗೇ ಅತ್ಯಂತಿ ಮುಖ್ಯವಾದ ಕಾರ್ಯ. ಮತ್ತು ಒಂದು ಮುಖ್ಯವಾದ ಕಾರ್ಖಾನೆ. ದೇಶದ ದೃಷ್ಟಿಯಿಂದ ಇದು ಅತ್ಯಂತ ಮುಖ್ಯವಾದ ಕಾರ್ಖಾನೆಯಾಗುತ್ತದೆ. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡಿ ಆದಷ್ಟು ಜಾಗ್ರತೆ ಈ ಕಾರ್ಖಾನೆಯ ಕೆಲಸವನ್ನು ಶುರು ಮಾಡಬೇಕು. ಈ ರೀತಿ ಈ ಕೆಲಸವನ್ನು ಮಾಡುತ್ತಾ ಹೋದರೆ ಈ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ 25 ವರ್ಷಗಳು ಬೇಕಾಗುತ್ತದೆ. ಆದ್ದರಿಂದ ರಾಜ್ಯ

(ಶ್ರೀ ಬಿ. ಇ. ರಾಮಯ್ಯ)

ಸರ್ಕಾರದವರು ಈ ಕಾರ್ಖಾನೆಯನ್ನು ಆದಷ್ಟು ಜಾಗ್ರತೆ ಪ್ರಾರಂಭ ಮಾಡಬೇಕೆಂದು ಕೇಂದ್ರ ಸರ್ಕಾರದವರನ್ನು ಕೇಳಿಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ನಂದಿಹಳಿಯಲ್ಲಿ ಒಂದು ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಂದು ಹೇಳಿದ್ದಾರೆ. ಮತ್ತು ಕಾಲಕ್ರಮದಲ್ಲಿ ಈ ಕೇಂದ್ರವು ಪೂರ್ಣ ಪ್ರಮಾಣದ ತಾಂತ್ರಿತ ವಿಶ್ವವಿದ್ಯಾನಿಲಯವಾಗಿ ರೂಪಿತವಾಗುವುದು ಮತ್ತು ಸಂಡೂರಿನ ಕುಮಾರಸ್ವಾಮಿ ಬೆಟ್ಟದಡಿಯಲ್ಲಿರುವ ನಂದಿಹಳ್ಳಿಯು ಈ ಈ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಅದರ್ಶ ಸ್ಥಳ ಎಂದು ಹೇಳಿದ್ದಾರೆ. ಇದು ಅಭಿನಂದನೀಯವಾದ ವಿಚಾರ. ಶ್ರೀಮಾನ್ ದೇವೇಗೌಡರು ಮತ್ತು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಒಂದು ಉಚ್ಚಮಟ್ಟದ ಶಿಕ್ಷಣ ಕೇಂದ್ರವನ್ನು ಅಲ್ಲಿ ಏತಕ್ಕೆ ಸ್ಥಾಪನೆ ಮಾಡಿದರು ಎಂದು ಹೇಳಿದರು. ಈ ವಿಚಾರ ಅವರಿಗೆ ಗೊತ್ತಿಲ್ಲ. ಬಳ್ಳಾರಿಯು ಮೈಸೂರಿಗೆ ಸೇರಿದ್ದು ಕರ್ನಾಟಕ ರಾಜ್ಯ ಆಗುವುದು ನಾಂದಿ ಆಯಿತು ಎಂಬುದನ್ನು ಅವರು ಮರೆತಿದ್ದಾರೆ. ಈಗ 15..20 ವರ್ಷಗಳಿಂದ ಬಳ್ಳಾರಿ ಜಿಲ್ಲೆಯ ಬಗ್ಗೆ ಯಾರೂ ಗಮನ ಕೊಟ್ಟಿಲ್ಲ. ಈಗ ಸರ್ಕಾರದವರು ಕಣ್ಣು ತೆರೆದು ನೋಡುತ್ತಿದ್ದಾರೆ ಅಲ್ಲಿ ಬೇಕಾದಷ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಂದಿಹಳ್ಳಿಯಲ್ಲಿಯೇ ಸ್ನಾತಕೋತ್ತರ ಕೇಂದ್ರವನ್ನು ಏತಕ್ಕೆ ಸ್ಥಾಪನೆ ಮಾಡಬೇಕು.

ಶ್ರೀ ಬಿ ಇ. ರಾಮಯ್ಯ.—ಶ್ರೀಮಾನ್ ಕಾಗೋಡು . ತಿಮ್ಮಪ್ಪನವರು ನಂದಿಹಳ್ಳಿಯನ್ನು ನೋಡಿದಹಾಗೆ ಕಾಣುವುದಿಲ್ಲ. ಅದು ಬಹಳ ಪ್ರಾಶಸ್ತ್ಯವಾದ ಸ್ಥಳ. ಈಗ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಏನು ಸ್ಥಾಪನೆ ಮಾಡುತ್ತಾರೆ ಆ ಜಾಗಕ್ಕೆ ನಂದಿಹಳ್ಳಿಯು 20 ಮೈಲಿ ದೂರ ಆಗುತ್ತದೆ. ಅಲ್ಲಿ ನಂದಿ ಹಿಲ್ ಗಿರಿಧಾಮ ಇದ್ದಹಾಗೆ ಇದೆ. ಅದು ಇಂಥಾ ಒಂದು ವಿದ್ಯಾ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಬಹಳ ಪ್ರಾಶಸ್ತ್ಯವಾದ ಸ್ಥಳ ಎಂದು ಮಾನ್ಯ ಹಣಕಾಸಿನ ಸಚಿವರು ಒಂದು ಒಳ್ಳೆಯ ಉದ್ದೇಶದಿಂದ ಅದನ್ನು ಮಾಡಿದ್ದಾರೆ. ಹಿಂದುಳಿದ ಪ್ರದೇಶವಾದ ಬಳ್ಳಾರಿ ಜಿಲ್ಲೆಗೆ ಇವೊತ್ತಿನವರೆಗೂ ಸರ್ಕಾರದವರು ಗಮನ ಕೊಟ್ಟಿಲ್ಲ. ಆದ್ದರಿಂದ ಈಗ ಸರ್ಕಾರದವರು ಬಳ್ಳಾರಿ ಜಿಲ್ಲೆಯಲ್ಲಿರುವ ನಂಧಿಹಳ್ಳಿಯಲ್ಲಿ ಒಂದು ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪನೆ ಮಾಡಬೇಕು ಎನ್ನುವ ವಿಚಾರವನ್ನು ಬಜೆಟ್ಟಿನಲ್ಲಿ ಹೇಳಿರುವುದಕ್ಕಾಗಿ ನಾನು ನಮ್ಮ ಬಳ್ಳಾರಿ ಜಿಲ್ಲೆಯ ಪರವಾಗಿ ನಮ್ಮ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರಿಗೂ ಮತ್ತು ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರಿಗೂ ಸಂಕುಚಿತ ಭಾವನೆ ಹೋಗಬೇಕು ಎಂದು ನಾನು ಹೇಳುತ್ತೇನೆ.

† ಶ್ರೀ ಗೋಪಿನಾಥ್ ಆರ್. ಸಾಂಧ್ರ (ಹುಬ್ಬಳ್ಳಿ).— ಸನ್ಮಾನ್ಯ ಅಧ್ಯಕ್ಷಣಿಯರೇ, ಕನ್ನಡ ನಾಡಿನ ನಿಷ್ಣಾತ ಅರ್ಥ ಶಾಸ್ತ್ರಜ್ಞರಾದ ಮಾನ್ಯ ಶ್ರೀ ಘೋರ್ಪಡೆಯವರು ಮೈಸೂರು ರಾಜ್ಯದ ಆಯವ್ಯಯ ಪತ್ರಿಕೆಯನ್ನು ನಮ್ಮ ಎದುರಿಗೆ ಇಟ್ಟಿದ್ದಾರೆ. ಈ ಆಯವ್ಯಯ ಪತ್ರಿಕೆಯನ್ನು ತಯಾರಿಸುವ ಮೊದಲು ಶ್ರೀಮಾನ್ ಘೋರ್ಪಡೆಯವರು ರಾಜ್ಯದ ಪ್ರತಿಯೊಂದು ಸಮಸ್ಯೆಗಳ ಅರಿವು ಮಾಡಿಕೊಂಡು ಕರ್ಣಾಟಕ ರಾಜ್ಯದ ಸರ್ವತೋಮುಖ ಏಳಿಗೆಗಾಗಿ ಯಾವ್ಯಾವ ಯೋಜನೆಗಳನ್ನು ಅಳವಡಿಸಿಕೊಳ್ಳಬೇಕು ಎನ್ನುವುದನ್ನು ಚನ್ನಾಗಿ ಅಭ್ಯಾಸಿಸಿ ಇಂದು ನಮ್ಮ ಮುಂದೆ ಆಯವ್ಯಯಪತ್ರಿಕೆಯನ್ನು ಇಟ್ಟಿದ್ದಾರೆ. ಇದು ನಿಜವಾಗಿ ಸ್ತುತ್ಯವಾದ ಕಾರ್ಯ. ಇದನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ನಾನು ಅಷ್ಟೇ ಅಲ್ಲ. ಕರ್ನಾಟಕ ರಾಜ್ಯದ ಮೂರು ಕೋಟಿ ಜನರೂ ಹಾಗೂ ಶ್ರೀಸಾಮಾನ್ಯ ಜನರೂ ಸಹ ಸ್ವಾಗತ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಈ ಆಯವ್ಯಯ ಪತ್ರಿಕೆಯಲ್ಲಿ ಬಹು ಮುಖ್ಯವಾಗಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಗ್ಗೆ ಹೆಚ್ಚಿನ ಹಣವನ್ನು ಸರ್ಕಾರದವರು ಒದಗಿಸಿದ್ದಾರೆ. ಕರ್ನಾಟಕ ರಾಜ್ಯವಾಗಿ 16 ವರ್ಷಗಳಾದರೂ ಉತ್ತರ ಕರ್ಣಾಟಕದ ಜಿಲ್ಲೆಗಳಲ್ಲಿ ಅನೇಕ ವರ್ಷಗಳಿಂದ ಬರಗಾಲ ಬಂದು ಅಲ್ಲಿನ ಜನರು ಅತಿ ಹಿಂದುಳಿದವರಾಗಿದ್ದಾರೆ. ಅಂತಹವರ ಏಳಿಗೆಗಾಗಿ ಅನೇಕ ಸಮಸ್ಯೆಗಳನ್ನು ಸಂಪೂರ್ಣವಾಗಿ ನಿವಾರಿಸಬೇಕೆಂಬ ಉದ್ದೇಶದಿಂದ ಈ ವರ್ಷ ಸರ್ಕಾರದವರು ಅನೇಕ ಯೋಜನೆ ತೆಗೆದುಕೊಂಡಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆ, ಘಟಪ್ರಭಾ, ಮಲಪ್ರಭಾ, ಯೋಜನೆಗಳನ್ನೂ ಸಹ ತೆಗೆದುಕೊಂಡಿದ್ದಾರೆ. ಇವತ್ತಿನ ದಿವಸ ರಾಜ್ಯಾದ್ಯಂತ ಉತ್ತರ ಕರ್ಣಾಟಕದ ರಾಯಚೂರು, ಬಿದರ್, ಬೆಳಗಾಂ ಮತ್ತು ಚಿತ್ರದುರ್ಗದ ಬಹುಭಾಗಗಳು ಈಗಾಗಲೇ ಬರಗಾಲಕ್ಕೆ ತುತ್ತಾಗಿ ಇರುವುದರಿಂದ ಅಲ್ಲಿನ ಜನರು ಅನ್ನ, ನೀರು ಬಡುತ್ತಿದ್ದಾರೆ.

ಜೀವನ ನಡೆಸುವುದಕ್ಕೆ ಬಹಳ ಕಷ್ಟಪಡುತ್ತಿದ್ದಾರೆ. ಅದನ್ನು ಸರ್ಕಾರದವರು ಅರಿತುಕೊಂಡು ಅಲ್ಲಿಗೆ ಸಾಕಷ್ಟು ಹಣವನ್ನು ಒದಗಿಸಿದ್ದಾರೆ. ಅದಕ್ಕಾಗಿ ಅವರಿಗೆ ಉತ್ತರ ಕರ್ನಾಟಕದ ಜನತೆಯ ಪರವಾಗಿ ನಾನು ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಂತರ ನಾನು ಆಯವ್ಯಯ ಪತ್ರಿಕೆಯನ್ನು ನೋಡಿದಾಗ, ಮಾನ್ಯ ಶ್ರೀ ದೇವರಾಜ್ ಅರಸ್ ಅವರ ಮಂತ್ರಿಮಂಡಲ ಇನ್ನೊಂದು ಯೋಜನೆಯನ್ನು ಮಾಡುತ್ತಿದ್ದಾರೆ, ಆ ಯೋಜನೆಗಳನ್ನು ಕೂಡಲೇ ಕಾರ್ಯರೂಪಕ್ಕೆ ತರಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಕ್ರಮ ತೆಗೆದುಕೊಳ್ಳುತ್ತಿದ್ದಾರೆಂಬ ಸ್ಪಷ್ಟವಾದ ಚಿತ್ರ ನನ್ನ ಎದುರಿಗೆ ಈಗ ಕಂಡುಬರುತ್ತಾ ಇದೆ. ಇವತ್ತಿನದಿವಸ ಈ ರಾಜ್ಯದೊಳಗೆ ಯಾವುದೇ ಒಂದು ರೀತಿಯ ಧೋರಣೆಯನ್ನು ಅನುಸರಿಸಿ ಈ ರಾಜ್ಯ ಸರ್ಕಾರದವರು ಏನಾದರೂ ದೇಶದ ಏಳಿಗೆಗಾಗಿ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಸರ್ಕಾರದ ಅಧಿಕಾರಿಗಳು ಹಾಗೂ ಸರ್ಕಾರದ ನೌಕರರು ಅದಕ್ಕೆ ತುಂಬಾ ಜವಾಬ್ದಾರರಾಗಿ ಇರುತ್ತಾರೆನ್ನುವುದನ್ನು ನಾನು ಬೇರೆ ಹೇಳಬೇಕಾಗಿಲ್ಲ. ಕಳೆದ ಎರಡು ವರ್ಷಗಳಲ್ಲಿ ನಮ್ಮ ಸರ್ಕಾರದವರು ಸರ್ಕಾರದಲ್ಲಿ ಸೇವೆ ಮಾಡುತ್ತಿರುವ ತನ್ನ ನೌಕರರಿಗೆ ಯಾವಾಗಲೂ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಕೊಡಬೇಕೆಂದು ಹೋದವರ್ಷದಲ್ಲಿ 5 ರೂಪಾಯಿಗಳ ತುಟ್ಟಿಭತ್ಯವನ್ನು ಕೊಟ್ಟಿದ್ದಾರೆ. ಈ ಸಲ 5 ರೂಪಾಯಿಗಳಿಂದ 37—50 ರೂಪಾಯಿಗಳವರೆಗೆ ಕೇಂದ್ರಸರ್ಕಾರದವರು ಏನೊಂದು ತುಟ್ಟಿಭತ್ಯವನ್ನು ತನ್ನ ನೌಕರರಿಗೆ ಕೊಟ್ಟಿದ್ದಾರೊ ಅದೇ ರೀತಿಯಲ್ಲಿ ಕೊಟ್ಟಿದ್ದಾರೆ. ಈ ಸೌಲಭ್ಯವನ್ನು ಹಿಂದಿನ ಸರ್ಕಾರಗಳು ಕೊಟ್ಟಿರಲಿಲ್ಲವೆಂದು ವಿರೋಧ ಪಕ್ಷಗಳಿಗೆ ಹೇಳಬೇಕಾಗಿದೆ. ಈ ರೀತಿಯಾಗಿ ಹೆಚ್ಚಿನ ತುಟ್ಟಿಭತ್ಯವನ್ನು ಅವರಿಗೆ ಕೊಟ್ಟಾದಮೇಲೆ ಅಧಿಕಾರಿಗಳು ಮತ್ತು ಸರ್ಕಾರದ ನೌಕರರುಗಳಿಗೆ ಅವರ ಒಂದು ಅಧಿಕಾರದ ಜವಾಬ್ದಾರಿ ಹೆಚ್ಚಾಗಿದೆ. ಯಾವುದೇ ರೀತಿಯ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಾಗ ಅದನ್ನು ಬಹಳ ಚೆನ್ನಾಗಿ ಮಾಡಬೇಕು. ಒಂದು ಉದಾಹರಣೆಯನ್ನು ಹೇಳಬೇಕೆಂದರೆ, ಈಗ ಈ ಅಧಿಕಾರಿಗಳ ಮನೋವೃತ್ತಿ ಇಂದು ಬಹಳವಾಗಿ ಬದಲಾವಣೆ ಮಾಡಬೇಕಾಗಿದೆ. ಯಾವುದೇ ಕೆಲಸವಾಗಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೇ ಮಂತ್ರಿಗಳು ಯಾರೇ ಆಗಲಿ ಕೂಡಲೇ ಆಗಬೇಕೆಂದು ಇಚ್ಛಿಪಟ್ಟರೆ, ಅಂತಹ ಕೆಲಸಗಳನ್ನು ಕೂಡಲೇ ಕಾರ್ಯರೂಪಕ್ಕೆ ತರುವಂಥ ಅಧಿಕಾರಿಗಳು, ಹಾಗೂ ನೌಕರರು ಈಗಂತೂ ಬಹಳ ಕಡಿಮೆಯಾಗಿದ್ದಾರೆ. ಈ ಸಂದರ್ಭದಲ್ಲಿ ನಾನು ಕೇವಲ ಒಂದು ಉದಾಹರಣೆಯನ್ನು ಮಾತ್ರ ಕೊಡುತ್ತೇನೆ. ಹುಬ್ಬಳ್ಳಿ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಕಳೆದ 7–8 ದಿವಸಗಳಿಂದ ಬರಗಾಲ ಪೀಡಿತವಾಗಿ ಕೆಲವು ಸ್ಥಳಗಳಲ್ಲಿ ಕುಡಿಯಲಕ್ಕೆ ನೀರು ಸಿಗುವುದಿಲ್ಲ, ಇನ್ನೆರಡು ತಿಂಗಳುಗಳಲ್ಲಿ ಆ ಪ್ರದೇಶಗಳಲ್ಲಿ ನೀರನ್ನು ಒದಗಿಸದಿದ್ದರೆ ಅಲ್ಲಿನ ಜನರು ಬಹಳ ಕಷ್ಟಕ್ಕೆ ಗುರಿಯಾಗುತ್ತಾರೆಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ, ಮತ್ತು ಪಿ. ಡಬ್ಲ್ಯು. ಡಿ ಮಂತ್ರಿಗಳಿಗೆ ಹೇಳಿದಾಗ, ಅವರು ಈ ಕೆಲಸವನ್ನು ತಕ್ಷಣ ಮಾಡಬೇಕೆಂದು ಅಧಿಕಾರಿಗಳಿಗೆ, ನೌಕರರುಗಳಿಗೆ ಆದೇಶವನ್ನು ಕೊಟ್ಟರು. ದುರ್ದೈವದಿಂದ ಸುಮಾರು ಎರಡು ತಿಂಗಳುಗಳಾದರೂ ಅವರ ಒಂದು ಆದೇಶ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಇದನ್ನು ಏಕೆ ಹೇಳಿದೆನೆಂದರೆ, ಅಧಿಕಾರಿಗಳಾಗಿರುವವರು ಆದರಲ್ಲಿಯೂ ನೌಕರವರ್ಗದವರು ಸರ್ಕಾರದ ಆದೇಶಗಳನ್ನೂ ಹಾಗೂ ನೀತಿನಿಯಮಗಳನ್ನು ಯಾವ ರೀತಿಯಲ್ಲಿ ಕಾರ್ಯರೂಪಕ್ಕೆ ತರುತ್ತಿದ್ದಾರೆಂದು ಹೇಳುವುದಕ್ಕೆ ಇದೊಂದು ಉದಾಹರಣೆ. ಆದ್ದರಿಂದ ಸರ್ಕಾರದ ನೌಕರರಿಗೆ ಹೀಗೆ ಹೆಚ್ಚಿಗೆ ಹಣ ಕೊಟ್ಟು ನೀವು ಚೆನ್ನಾಗಿ ನಿಷ್ಠೆಯಿಂದ ಕೆಲಸಮಾಡಿ ಎಂಬುದಾಗಿ ಹೇಳಿದರೆ ಅವರು ಆ ರೀತಿಯಾಗಿ ಕೆಲಸಮಾಡದೆ ವ್ಯರ್ಥವಾಗಿ ಕಾಲ ಕಳೆದರೆ ಅದು ನಿಜವಾಗಿ ಸರಿಯಾದ ನೀತಿಯಲ್ಲವೆಂದು ನಾನು ಹೇಳುತ್ತೇನೆ. ಆದ್ದರಿಂದ ನಾನು ಈ ಸರ್ಕಾರದವರಲ್ಲಿ ಕೇಳಿಕೊಳ್ಳುವುದೇನೆಂದರೆ, ಅಧಿಕಾರಿಗಳಾಗಿರುವವರು ಮಂತ್ರಿಗಳಾದವರು ಯಾವುದೇ ಒಂದು ಕೆಲಸದ ಬಗ್ಗೆ ಏನೊಂದು ನಿರ್ಣಯ ತೆಗೆದುಕೊಳ್ಳುತ್ತಾರೋ ಆ ಒಂದು ನಿರ್ಣಯದ ಪ್ರಕಾರ ಅತಿ ಜಾಗ್ರತೆಯಾಗಿ ಅದನ್ನು ಕಾರ್ಯರೂಪಕ್ಕೆ ತರುವಂತೆ ಸೂಕ್ತ ಸೂಚನೆಗಳನ್ನು ಕೊಡಬೇಕು. ಒಂದುವೇಳೆ ಆ ರೀತಿ ಅವರು ಮಾಡದಿದ್ದರೆ ಅಂತಹವರ ಮೇಲೆ ಅವರ ವಿರುದ್ಧವಾಗಿ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ನಾನು ಹೇಳಿದಹಾಗೆ ಸರ್ಕಾರದ ನೀತಿ, ಧೋರಣೆ ಯಶಸ್ವಿಯಾಗಿ ಆಗಬೇಕಾದರೆ, ಅದು ನೌಕರವರ್ಗದವರ ನಡತೆಯಿಂದ ಮಾತ್ರವೇ ಆಗುತ್ತದೆ. ಆದಕ್ಕಾಗಿ ನೌಕರವರ್ಗದವರು ಇನ್ನು ಮುಂದೆ ಒಳ್ಳೆಯ ರೀತಿಯಲ್ಲಿ ಸರ್ಕಾರದ ನೀತಿನಿಯಮಗಳನ್ನು ಹಾಗೂ ಧೋರಣೆಗಳನ್ನು ಕಾರ್ಯರೂಪಕ್ಕೆ ತರಬೇಕು.

(ಶ್ರೀ ಗೋಪಿನಾಥ ಆರ್. ಸಾಂದ್ರ)

ಇನ್ನು ಈ ಆಯವ್ಯಯ ಪತ್ರಿಕೆಯಲ್ಲಿ ನಾನು ನೋಡಿದಹಾಗೆ ಈ ಕರ್ನಾಟಕದಲ್ಲಿ ಕರ್ನಾಟಕ ಅಗ್ರಿಕಲ್‌ಚರಲ್ ಯೂನಿವರ್ಸಿಟಿಯಾಗಬೇಕು, ಟೆಕ್ನಿಕಲ್ ಯೂನಿವರ್ಸಿಟಿ ಆಗಬೇಕು, ಹಾಗೂ ಮೆಡಿಕಲ್ ಯೂನಿವರ್ಸಿಟಿಯಾಗಬೇಕೆಂದು ಹೇಳಿದ್ದಾರೆ. ಅದಕ್ಕಾಗಿ ಸ್ವಲ್ಪ ಹಣವನ್ನು ಬಡ್ಜೆಟ್ಟಿನಲ್ಲಿ ಇಟ್ಟಿದ್ದಾರೆ, ಅದು ಸ್ವಾಗತಾರ್ಹ. ಇಂತಹ ವಿಶ್ವವಿದ್ಯಾನಿಲಯಗಳು ನಮ್ಮ ರಾಜ್ಯಕ್ಕೆ ಅವಶ್ಯಕವಾಗಿ ಬೇಕು. ನಮ್ಮ ರಾಜ್ಯ ಮುಂದುವರಿಯಬೇಕಾದರೆ ಅತ್ಯವಶ್ಯವಾಗಿ ಬೇಕಾಗಿರತಕ್ಕದ್ದು ಏನೆಂದರೆ, ಈಗಿರುವ ಯೂನಿವರ್ಸಿಟಿಗಳು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿವೆ ಎನ್ನುವುದನ್ನು ನಾವು ಮೊದಲು ತಿಳಿದುಕೊಳ್ಳಬೇಕಾಗಿದೆ. ಇವತ್ತಿನ ದಿವಸ ನಾವು ಕರ್ನಾಟಕ ಯೂನಿವರ್ಸಿಟಿಯನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ಇವತ್ತು ಅಲ್ಲಿ ಅವರ ಮನಸ್ಸಿಗೆ ಬಂದಹಾಗೆ ಆಡಳಿತ ಮಾಡುತ್ತಿದ್ದಾರೆ. ಈ ವಿಚಾರ ಅನೇಕ ಸಾರಿ ಪತ್ರಿಕೆಗಳಲ್ಲಿಯೇ ಬಂದಿದೆ. ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಹಿಂದೆ ಅಲ್ಲಿ ಒಬ್ಬ ಮನುಷ್ಯ ಕೇವಲ 90 ರೂಪಾಯಿಗಳಷ್ಟು ಪಗಾರವನ್ನು ತೆಗೆದುಕೊಳ್ಳುತ್ತಿದ್ದನು. ಇವತ್ತು ಅವರ ಪಗಾರ 900 ರೂಪಾಯಿಗಳು ಆಗಿವೆ. ಅಂದಮೇಲೆ ಕರ್ನಾಟಕ ಯೂನಿವರ್ಸಿಟಿಯ ಆಡಳಿತ ಬಹಳ ಸಡಿಲವಾಗಿದೆ. ಏನಾದರೂ ಸರ್ಕಾರದವರು ಅವರಿಗೆ ಒಂದು ಪತ್ರ ಬರೆದರೆ, ಅವರು ಏನು ಹೇಳುತ್ತಾರೆಂದರೆ, ನಮ್ಮದು ಅಟಾನಮಸ್ ಬಾಡಿ, ಇದರಲ್ಲಿ ಸರ್ಕಾರದ ಅಧಿಕಾರ ಇಲ್ಲವೆಂದು ಕರ್ಣಾಟಕ ಯೂನಿವರ್ಸಿಟಿಯ ಒಂದು ಪದಾಧಿಕಾರದಿಂದ ಹೇಳುತ್ತಾರೆ. ಇದಲ್ಲದೆ ಯು.ಜಿ.ಸಿ. ಅವರು ಕೊಟ್ಟ ಹಣವನ್ನು ಒಳ್ಳೆಯ ರೀತಿಯಲ್ಲಿ ಖರ್ಚು ಮಾಡದೆ ವಿಶೇಷವಾಗಿ ಪೋಲು ಮಾಡುತ್ತಿದ್ದಾರೆ. ಇದೊಂದು ಉದಾಹರಣೆ. ಅಲ್ಲಿ ನಡೆದಿರತಕ್ಕಂಥ ಇನ್ನೊಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಈ ಸಭೆಯ ಅವಗಾಹನೆಗೆ ತರುತ್ತಿದ್ದೇನೆ. ಕರ್ಣಾಟಕ ಯೂನಿವರ್ಸಿಟಿಯವರು ಬಿ.ಇ. ಗ್ರಾಜುಯೇಟ್‌ಗಳಿಗೆ ಪೋಸ್ಟ್ ಗ್ರಾಜುಯೇಟ್ ಕಾಮರ್ಸ್ ಕೋರ್ಸಿಗೆ ಅಡ್ಮಿಷನ್ ಕೊಟ್ಟಿದ್ದಾರೆಂದು ಹೇಳಿದರೆ ಯಾರೂ ನಂಬುವುದಿಲ್ಲ. ಆದರೆ ಸಿಂಡಿಕೇಟಿನವರು ಯೂನಾನಿಮಸ್ಸಾಗಿ ರಿಜಲ್ಯೂಷನ್ ಮಾಡಿ ಆ ರೀತಿ ಕೊಟ್ಟಿದ್ದಾರೆ.

ಶ್ರೀ ಎಚ್. ಎಸ್. ಸಿದ್ಧಪ್ಪ.—ಮಾನ್ಯ ಸದಸ್ಯರು ಕರ್ಣಾಟಕ ಯೂನಿವರ್ಸಿಟಿಯ ಅವ್ಯವಹಾರದ ಬಗ್ಗೆ ಬಹಳ ಅಧಿಕೃತವಾಗಿ ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅದನ್ನು ಗಮನಿಸಬೇಕು.

ಶ್ರೀ ಗೋಪಿನಾಥ್ ಆರ್. ಸಾಂದ್ರ.—ಮೊನ್ನೆಯಿಂದ ಕರ್ನಾಟಕ ಯೂನಿವರ್ಸಿಟಿ ಶಿಕ್ಷಕರು ಉಪವಾಸ, ಸತ್ಯಾಗ್ರಹ ಮಾಡುತ್ತಿದ್ದಾರೆ. ಅದಕ್ಕೂ ನಮಗೂ ಏನು ಸಂಬಂಧವಿಲ್ಲ. ಸರ್ಕಾರದ ಮೇಲೆ ತಪ್ಪು ಹೊರಿಸುವುದಕ್ಕಾಗಿ ಈ ರೀತಿಯಾಗಿ ಪ್ರಯತ್ನಮಾಡುತ್ತಿದ್ದಾರೆ. ಆದ್ದರಿಂದ ಕರ್ಣಾಟಕ ಯೂನಿವರ್ಸಿಟಿಯ ಆಡಳಿತದ ಬಗ್ಗೆ ನಾನು ಎಷ್ಟು ಹೇಳಿದರೂ ಕಡಿಮೆಯೇ. ಒಟ್ಟಿನಲ್ಲಿ ಕರ್ಣಾಟಕ ವಿಶ್ವವಿದ್ಯಾನಿಲಯದ ಅಡ್ಮಿನಿಸ್ಟ್ರೇಷನ್ ಬಗ್ಗೆ ಅಲ್ಲಿ ನಡೆಯುತ್ತಿರುವಂತಹ ಅವ್ಯಹಾರಗಳ ಬಗ್ಗೆ ಕೂಡಲೇ ತನಿಖೆಯಾಗಬೇಕು ಮತ್ತು ಅದರ ಬಗ್ಗೆ ಈಗಲೇ ಸರ್ಕಾರದವರು ಒಂದು ಕಮಿಟಿಯನ್ನು ರಚನೆಮಾಡಿ ಸೂಕ್ತ ಕ್ರಮವನ್ನು ಅವರಮೇಲೆ ತೆಗೆದುಕೊಳ್ಳಬೇಕು.

5-30 P. M.

ಇನ್ನು ಔದ್ಯೋಗಿಕ ಕ್ಷೇತ್ರದಲ್ಲಿ ಅಗ್ರಿಕಲ್ಚರಲ್ ಇಂಡಸ್ಟ್ರಿಯಾದ ಮೇಲೆ ನೇಕಾರರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನನಗೆ ಇವರ ವೃತ್ತಿಯಲ್ಲಿ ಸ್ವಲ್ಪ ಅನುಭವವಿದೆ. ಮಾನ್ಯ ಸಚಿವರಿಗೂ ಇವರ ವಿಚಾರ ಗೊತ್ತಿದೆ. ಆದರೆ ಬಡ್ಜೆಟ್ಟಿನಲ್ಲಿ ಅವರ ಬಗ್ಗೆ ಸಾಕಷ್ಟು ಹಣವನ್ನು ತೆಗೆದಿಟ್ಟಿಲ್ಲ. ಈ ಉದ್ಯಮದಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು ಮೂರು ಲಕ್ಷ ಕುಟುಂಬಗಳೂ ಮತ್ತು ನೇರವಾಗಿ ಈ ಕಸುಬನ್ನು ಅವಲಂಬಿಸಿರತಕ್ಕ ಜನ 15 ಲಕ್ಷ ಇದ್ದಾರೆಂದು ನನಗೆ ಗೊತ್ತಾಗಿದೆ. ಈ ದಿವಸ ಇವರ ಪರಿಸ್ಥಿತಿ ಅತ್ಯಂತ ಕಳವಳಕರವಾಗಿದೆ. ಅವರಿಗೆ ಅಗತ್ಯವಾಗಿ ಬೇಕಾಗಿರತಕ್ಕ ನೂಲು ಸಿಕ್ಕದೆ ಈ ದಿವಸ ಆ ಬಿಜಾಪುರ ಮತ್ತು ಧಾರ್ವಾಡ ಜಿಲ್ಲೆಗಳಲ್ಲಿ ಈ ಜನರು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅವರಿಗೆ ಸರ್ಕಾರದವರು ಬೇಗ ಪರಿಹಾರವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಲ್ಲೇ ಕೆಲವುಕಡೆ ಕೇಂದ್ರಗಳನ್ನೂ ಮತ್ತು ಡಿಪೋಗಳನ್ನೂ ತೆರೆದಿದ್ದಾರೆ. ಆದಾಗ್ಯೂ ಅವರ ಸಮಸ್ಯೆಯೇನೂ ಬಗೆಹರಿಯಲಿಲ್ಲ. ಆದ್ದರಿಂದ ಇವರ ಸಮಸ್ಯೆ

ಬಗೆಹರಿಯಬೇಕಾಗಿದ್ದರೆ ಅವರ ಪೈಕಿ ಕೆಲವು ಜನರನ್ನ ಸರ್ಕಾರದವರು ಕರೆಸಿಕೊಂಡು ಅವರ ಸಲಹೆಯನ್ನು ಪಡೆದು ಅವರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಹುದೆಂದು ಸಲಹೆ ಮಾಡುತ್ತೇನೆ. ಅದನ್ನು ಮಾಡದೆ ಇವರು ಇಲ್ಲಿ ಬೆಂಗಳೂರಿನಲ್ಲಿ ಕುಳಿತು ಅವರ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಇನ್ನಾದರೂ ಇವರಿಗೆ ಹಣವನ್ನು ತುರ್ತಾಗಿ ಒದಗಿಸಬೇಕೆಂದು ಹೇಳುತ್ತೇನೆ. ಈ ದಿವಸ ಅಲ್ಲಿ ಸರ್ಕಾರದವರರೇನು ಡಿಪೋಗಳನ್ನು ತೆರೆದಿದ್ದಾರೆ ಆದರೆ ಅವು ಸಾಲದು. ಅವರಿಗೆ ಸರಿಯಾಗಿ ನೂಲು ಸಿಕ್ಕುತ್ತಿಲ್ಲ. ಆದುದರಿಂದ ಇನ್ನು ಮುಂದೆ ಮೈಸೂರು ಸಹಕಾರ ಸಂಘದ ಹತ್ತಿ ಗಿರಣಿಗಳಲ್ಲಿ ತಯಾರಾಗತಕ್ಕ ನೂಲಿನಲ್ಲಿ ಇವರಿಗೆ ನೂರಕ್ಕೆ ನೂರು ಭಾಗ ಇವರಿಗೇ ಮೀಸಲಾಗಿಡುವಂತೆ ಆಜ್ಞೆ ಮಾಡಬೇಕು. ಇನ್ನು ಉಳಿದ ಖಾಸಗೀ ಮಿಲ್ಲುಗಳಲ್ಲಿ ತಯಾರಾಗತಕ್ಕ ನೂಲಿನಲ್ಲಿ ನೂರಕ್ಕೆ ಐವತ್ತರಷ್ಟು ಇವರಿಗೆ ಮೀಸಲಾಗಿಡುವಂತೆ ಸರ್ಕಾರದವರು ಆಜ್ಞೆ ಮಾಡಬೇಕು. ಹೀಗೆ ಸರ್ಕಾರದವರು ಏನಾದರೂ ಒಂದು ಕ್ರಮ ಕೈಗೊಂಡರೆ ಮಾತ್ರ ಅವರಿಗೆ ಜೀವನಕ್ಕೆ ಒಂದು ಮಾರ್ಗವನ್ನು ಕಲ್ಪಿಸಬಹುದು. ಆದರೆ ಅಲ್ಲಿ ಈ ದಿವಸ ಕೆಲವು ಹಳ್ಳಿಗಳಲ್ಲಿ ಅವರಿಗೆ 60ನೇ ನಂಬರ್ ನೂಲು ಬೇಕಾಗಿದ್ದರೆ, ಅವರಿಗೆ 80ನೇ ನಂಬರ್ ನೂಲನ್ನು ಸರಬರಾಯಿ ಮಾಡುತ್ತಿದ್ದಾರೆ. ಅದರಿಂದ ಅವರಿಗೇನೂ ಉಪಯೋಗವಾಗುವುದಿಲ್ಲ. ಯಾರು ನೇಕಾರರ ಸಮಸ್ಯೆಯನ್ನು ಅರಿತುಕೊಂಡಿದ್ದಾರೆ ಅಂಥವರಿಂದ ಇವರಿಗೆ ಯೋಜನೆಗಳನ್ನು ರೂಪಿಸಿದರೆ ಮಾತ್ರ ಅನುಕೂಲವಾಗುತ್ತದೆ. ಹಾಗಿಲ್ಲದೆ ಸರ್ಕಾರದವರು ಎಷ್ಟೇ ಹಣವನ್ನು ಖರ್ಚು ಮಾಡಿದರೂ ಅದರಿಂದ ಇವರಿಗೇನೂ ಪ್ರಯೋಜನವಾಗುವುದಿಲ್ಲ. ಸರ್ಕಾರದವರ ವೆಚ್ಚವೆಲ್ಲಾ ನಿರರ್ಥಕವಾಗುತ್ತದೆ.

ಇನ್ನು ವಿರೋಧಪಕ್ಷದವರು ನಮ್ಮ ಬಡ್ಜೆಟ್ಟನ್ನು 'ಇಂದಿರಾ ಬಡ್ಜೆಟ್' ಎಂದು ಟೀಕಾ ಮಾಡಿದ್ದಾರೆ. ನಿಜ ಅದು ಇಂದಿರಾ ಬಡ್ಜೆಟ್. ಹಾಗಲ್ಲದೆ ಅದನ್ನು 'ನಿಜಲಿಂಗಪ್ಪ ಬಡ್ಜೆಟ್ ಎಂದು ಕರೆಯಬೇಕಾಗಿತ್ತೋ? ಕೇಂದ್ರ ಸರ್ಕಾರದವರು ನಮಗೆ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ಆದರೆ (ಒ) ಕಾಂಗ್ರೆಸ್ಸಿನವರು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಮತ್ತು ಆಡಳಿತವನ್ನು ಬಹಳ ಸಿಥಿಲಗೊಳಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಅವರಿಂದ ಸಾಧ್ಯವಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಅಧ್ಯಕ್ಷರೇ ಇವರು ಇಷ್ಟು ಜನರಿದ್ದರೂ ಆಡಳಿತ ಇಲ್ಲಿ ಶಿಥಿಲವಾಗುತ್ತಿದೆಂಬುದಕ್ಕೆ ಇನ್ನೂ ಅನೇಕ ನಿದರ್ಶನಗಳಿವೆ. ನೆನ್ನೆ ಮಧ್ಯರಾತ್ರಿಯಿಂದ ಮಾನ್ಯ ಮುಖ್ಯ ಮಂತ್ರಿಗಳ ತಲೆ ಕೆಟ್ಟುಹೋಗಿದೆ. ಕೇಂದ್ರದ ಗೃಹಶಾಖೆಯಿಂದ ಮೈಸೂರು ರಾಜ್ಯದಲ್ಲಿರತಕ್ಕ ಮಂತ್ರಿ ಬಸವಲಿಂಗಪ್ಪನವರನ್ನು ಮಂತ್ರಿಪದವಿಯಿಂದ ಕಿತ್ತುಹಾಕಬೇಕು ಎಂದು ಫೋನ್ ಬಂದಿದೆಯಂತೆ ಅವರನ್ನು ಸಡಿಲಿಸಿದರೆ ನನ್ನ ತಲೆ ಎಲ್ಲಿ ಹೋಗುತ್ತದೋ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ತುಂಬಾ ಯೋಚನೆ ಹತ್ತಿದೆ. ಅವರ ಆ ಯೋಚನೆಯನ್ನು ತಪ್ಪಿಸಿ ಅವರನ್ನು ಪಾರುಮಾಡೋಣ ಎಂದರೆ ನನಗೆ ಸಾಧ್ಯವಾಗುತ್ತಿಲ್ಲ.

ಉಪಾಧ್ಯಕ್ಷರು.—ಮಧ್ಯೆ ಇದು ಎಂಥಾ ಇಂಟರ್‌ಪ್‌ಷನ್ !

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಹೇಳುತ್ತಿರುವುದು ಸತ್ಯವಲ್ಲ ಅನ್ನುವುದಾಗಿದ್ದರೆ ಅದಕ್ಕೆ ಪ್ರತಿ ಮಾತನ್ನು ಅವರು ಹೇಳಲಿ...

ಶ್ರೀ ಡಿ. ದೇವರಾಜ ಅರಸ್.—ತಾವು ನಾನು ಕರೆದಾಗ ನಮ್ಮ ಕಡೆಗೆ ಬರುವುದಾಗಿ ವಾಗ್ದಾನ ಮಾಡಿದ್ದೀರಿ ಅದನ್ನು ತಾವು ತಪ್ಪತಕ್ಕವರಲ್ಲ ಎಂಬುದು ನನಗೆ ಗೊತ್ತಿದೆ...

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಬಸವಲಿಂಗಪ್ಪನವರನ್ನು ತೆಗೆಯತಕ್ಕ ವಿಚಾರದಲ್ಲಿ ತಮಗೆ ಏನೊಂದು ಚಿಂತೆ ಇಟ್ಟುಕೊಂಡಿದೆ ಅದನ್ನು ತಪ್ಪಿಸುವುದಕ್ಕೆ ನಿಮ್ಮ ಕಡೆಗೆ ಬರೋಣ ಎಂದು ಹೇಳಿದ್ದೆ. ನಾನು ಆ ಉದ್ದೇಶದಿಂದ ಹೇಳಿದ ಮಾತು ಅದು...

ಶ್ರೀ ಗೋಪೀನಾಥ ಆರ್. ಸಾಂದ್ರ.—ಇನ್ನು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇರತಕ್ಕ ಕೊಳಚೇ ಪ್ರದೇಶದಲ್ಲಿ ಸ್ಲಂ ಕ್ಲಿಯರನ್ಸ್ ಮಾಡುವುದಾಗಿ ನಾವು ಚುನಾವಣೆಗಳ ಕಾಲದಲ್ಲಿ ತಿಳಿಸಿದ್ದೇವೆ. ಅದನ್ನು ಮಾಡಬೇಕಾಗಿದೆ. ಅದಕ್ಕೆ ಒಂದು ಬೋರ್ಡನ್ನು ರಚಿಸಿ ಮದ್ರಾಸಿನಲ್ಲಿ ಮಾಡಿರತಕ್ಕ ಮಾದರಿಯಲ್ಲಿ ಇಲ್ಲಿಯೂ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸರ್ಕಾರಿ ನೌಕರರ ವಿಚಾರಕ್ಕೆ ಬಂದರೆ ಇವರು "ದೇವರು ವರಕೊಟ್ಟರೂ ಪೂಜಾರಿ ವರಕೊಡಲೊಲ್ಲ." ಅನ್ನುವಂತೆ ವರ್ತಿಸುತ್ತಿದ್ದಾರೆ. ಇದು ಖಂಡಿತಾ ಸರಿಯಲ್ಲ. ನಮ್ಮಲ್ಲಿ ಗರೀಬಿ ಹಟಾವೋ ಮಾಡುವುದಕ್ಕೆ ಅನುಗುಣವಾಗಿ ಇವರು ಕೆಲಸ ಕಾರ್ಯಗಳನ್ನು ನಡೆಸಬೇಕು. ಇನು ನಾನಾಗಲೇ ಕರ್ನಾಟಕ ಯೂನಿವರ್ಸಿಟಿ ವಿಚಾರದಲ್ಲಿ ಸಾಕಷ್ಟು ಹೇಳಿದ್ದೇನೆ.

(ಶ್ರೀ ಗೋಪಿನಾಥ ಆರ್. ಸಾಂಧ್ರ)

ಇನ್ನು ನಮ್ಮ ಹುಬ್ಬಳ್ಳಿಯ ಸುತ್ತಮುತ್ತಲೂ ಕಳೆದ 7-8 ವರ್ಷಗಳಿಂದ ಮಳೆ ಆಗದೆ ಅಲ್ಲಿ ಕೂಡ ಕ್ಷಾಮ ಬಿದ್ದಿದೆ. ಆ ಪ್ರದೇಶಕ್ಕೂ ಯೋಗ್ಯ ಪರಿಹಾರಗಳನ್ನು ಸರ್ಕಾರದವರು ಕೂಡಲೆ ಒದಗಿಸಿಕೊಡಬೇಕಾಗಿ ಕೋರುತ್ತೇನೆ.

ಮತ್ತೊಂದು ವಿಚಾರ. ಸರಕಾರದವರು ಲಂಚವನ್ನು ತಡೆಗಟ್ಟಲು ಪ್ರಯತ್ನ ಮಾಡುತ್ತಿದ್ದಾರೆ. ಜನತಾ ಹೌಸಿಂಗ್ ಸ್ಕೀಮಿಗೆ [illegible] ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ, ಇನ್ನೂ ಹೆಚ್ಚು ಹಣ ಒದಗಿಸುತ್ತೇವೆಂದು ಹೇಳುತ್ತಿದ್ದಾರೆ. ಇದನ್ನು ನೋಡಿ ವಿರೋಧ ಪಕ್ಷದವರು ಸುಮ್ಮನಿರಬೇಕು.

ಕೊನೆಯದಾಗಿ ಹೇಳುವುದು ಶ್ರೀ ದೇವೇಗೌಡರು ಉದ್ದುದ್ದ ಭಾಷಣ ಮಾಡಿದರು. ಅವರ ಹೇಳಿಕೆ, ಭಾಷಣ ಕೇಳಿದ ತತ್‌ಕ್ಷಣ ನನಗೆ ಅನ್ನಿಸಿತು, ಕೆಲವರು ನೆಟ್ಟಗೆ ಇರುವುದನ್ನು ಸೊಟ್ಟಗಿದೆ ಎಂದು ಹೇಳುವರು, ಅಂಥವರಿದ್ದಾರೆ ಅದು ಸರಿಯಲ್ಲ. ಇಂದು ರಾಜ್ಯಸರಕಾರದವರು ಅನೇಕ ಉತ್ತಮವಾದ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಎರಡೂವರೆ ಲಕ್ಷ ನಿವೇಶನಗಳನ್ನು ಹಂಚಿದ್ದಾರೆ, ಪ್ರತಿಯೊಂದು ತಾಲ್ಲೂಕಿನಲ್ಲೂ 50 ಮೈಲ ರಸ್ತೆ ಮಾಡಲು ಉದ್ದೇಶಿಸಿದ್ದಾರೆ, ಮಲಪ್ರಭ, ಘಟಪ್ರಭ, ಕೃಷ್ಣ ಯೋಜನೆಗಳನ್ನು ಬೇಗ ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದ್ದಾರೆ. ಕಾಳಿನದಿ ಮತ್ತು ಲಿಂಗನಮಕ್ಕಿ ವಿದ್ಯುತ್ ಯೋಜನೆಗಳನ್ನು ಕೈಗೊಂಡಿದ್ದಾರೆ. ಧಾರವಾಡ ಮತ್ತಿತರ ಕಡೆ ವಿಶ್ವವಿದ್ಯಾನಿಲಯ ಸ್ಥಾಪಿಸಲು ಪ್ರಯತ್ನ ಮಾಡುತ್ತಿದ್ದಾರೆ. ಬತ್ತದ ಮೇಲೆ ಇದ್ದ ಮಾರಾಟ ತೆರಿಗೆಯನ್ನು ತೆಗೆದುಹಾಕಿದ್ದಾರೆ. ಕರ್ನಾಟಕವೆಂದು ನಮ್ಮ ರಾಜ್ಯಕ್ಕೆ ನಾಮಕರಣಮಾಡಿದ್ದಾರೆ. ಅನೇಕ ನೀರಾವರಿ ಕೆಲಸಗಳನ್ನು ಕೈಕೊಂಡು ಜನರಿಗೆ ಕೆಲಸ ಒದಗಿಸಿದ್ದಾರೆ. ರಾಜ್ಯ ಸರಕಾರದ ನೌಕರರಿಗೆ ಕೇಂದ್ರ ಮಟ್ಟದ ತುಟ್ಟಿಭತ್ಯ ಕೊಟ್ಟಿದ್ದಾರೆ. ಬರಗಾಲ ಪೀಡಿತ ಪ್ರದೇಶದವರಿಗೆ ಸೇಕಡ ನೂರರಷ್ಟು ಸಹಾಯ ಮಾಡಿದ್ದಾರೆ. ಇಷ್ಟೆಲ್ಲಾ ಮಾಡಿದ್ದರೂ ಕೂಡ ಟೀಕೆ ಮಾಡುವುದು ಅರ್ಥವಾಗುವುದಿಲ್ಲ, ಅದು ಪರಿಣಾಮಕಾರಿಯಾಗುವುದಿಲ್ಲ. ದೇವರು ಟೀಕಿಸುವವರಿಗೆ ಸದ್ಬುದ್ಧಿ ಕೊಡಲಿ. ಅವರು ಬರಗಾಲ ಪೀಡಿತ ಪ್ರದೇಶಗಳಿಗೆ ಹೋಗಿ ಸಹಾಯ ಮಾಡಬೇಕು ಎಂದು ಅವರಲ್ಲಿ ಪ್ರಾರ್ಥಿಸುತ್ತೇನೆ. ಇಂದಿರಾ ಗಾಂಧಿಯವರ ಕಡೆಯಿಂದ ಸಹಾಯ ಬರುವುದಿಲ್ಲ ಎಂದು ತಿಳಿದರೆ ಅದು ತಪ್ಪು. ಕನ್ನಡ ನಾಡಿನ ಅಭಿವೃದ್ಧಿಗಾಗಿ ಮಾಡಿರುವ ಎಲ್ಲ ಯೋಜನೆಗಳನ್ನು ಕಾರ್ಯಗತ ಮಾಡಬೇಕು, ಇದಕ್ಕೆಲ್ಲರೂ ಸಹಕಾರ ನೀಡಬೇಕು ಎಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಉಪಸಭಾಪತಿಗಳೇ, ಈಗ ಅರ್ಥ ಸಚಿವರು ಮಂಡಿಸಿರುವ ಆಯವ್ಯಯಪಟ್ಟಿಯನ್ನು ನೋಡಿದರೆ ತೆಲುಗಿನಲ್ಲಿರುವ ಒಂದು ಗಾದೆ ಜ್ಞಾಪಕಕ್ಕೆ ಬರುವುದು. ಐನೋರ್ಗೆ ಬುದ್ಧಿಯೂ ಇಲ್ಲ, ಜಂಬವೂ ಇಲ್ಲ ಎಂದು ಹೇಳುವರು. ಈ ಆಯವ್ಯಯ ಪಟ್ಟಿಯಲ್ಲಿ ಪ್ರಗತಿಪರವಾದ ಕಾರ್ಯಗಳಿಲ್ಲ ಹಾಗೂ ಪ್ರಗತಿಯ ಸೂಚನೆ ಸಹ ಇಲ್ಲ ಎಂದು ಭಾವಿಸಬಹುದು. ಸಮಾಜವಾದೀ ಕಾರ್ಯಕ್ರಮಗಳಿಲ್ಲ. ದೇಶದ ಅರ್ಥಿಕೋನ್ನತಿಗೆ ಶ್ರಮಿಸಬೇಕಾದ ಸರಕಾರ ವಿವೇಚನೆಯನ್ನುಪಯೋಗಿಸಿ ಯಾವ ಸಮಾಜದ ವರ್ಗದವರಿಗೆ ತೆರಿಗೆ ಹಾಕಬೇಕು ಅದನ್ನು ಯಾವ ವರ್ಗದವರ ಹಿತಕ್ಕಾಗಿ ಉಪಯೋಗಿಸಬೇಕು ಎಂದು ಸಾಕಷ್ಟು ಚಿಂತನೆ ಮಾಡಿ ಅಧ್ಯಯನ ಮಾಡಿ ತೆರಿಗೆ ಹಾಕಬೇಕಾಗಿತ್ತು. ಹಾಗೆ ಹಾಕಿದ್ದರೆ ತೆರಿಗೆಯನ್ನು ನಾವು ಸ್ವಾಗತಿಸದೆ ಇರುವವರಲ್ಲ. ತೆರಿಗೆಯನ್ನು ಹಾಕುವಾಗ ವಿವೇಚನೆಯನ್ನುಪಯೋಗಿಸಿ ಬಲ್ಲಿದರಿಗೆ ಹಾಕಿ ಬಡವರ ಉದ್ಧಾರಕ್ಕೆ ಅದನ್ನು ಉಪಯೋಗಿಸಬೇಕಾಗಿತ್ತು. ಆ ರೀತಿ ಮಾಡಿಲ್ಲವೆಂದು ವಿಷಾದದಿಂದ ತಿಳಿಸಬೇಕಾಗಿದೆ.

ಇನ್ನು ನೀರಾವರಿ ಯೋಜನೆಗಳನ್ನು ಶೀಘ್ರಗತಿಯಲ್ಲಿ ಮುಂದುವರೆಸದೆ ಇದ್ದರೆ ಆಹಾರದ ಕೊರತೆಯನ್ನು ಸುಧಾರಿಸುವುದಕ್ಕಾಗುವುದಿಲ್ಲ. ರೈತರಿಗೆ ಈ ದಿವಸ ಬಹಳ ಮುಖ್ಯವಾಗಿ ಬೇಕಾಗಿರುವುದು ನೀರು. ದೇಶದಾದ್ಯಂತ ನಿಜವಾದ ಕ್ರಾಂತಿಯಾಗಬೇಕಾದರೆ ದೇಶ ಆಹಾರದ ವಿಷಯದಲ್ಲಿ ಸ್ವಯಂಪೂರ್ಣತೆ ಪಡೆಯಬೇಕಾದರೆ ನೀರಾವರಿ ಯೋಜನೆಗಳಿಗೆ ಹೆಚ್ಚು ಹೆಚ್ಚಾಗಿ ಹಣ ಖರ್ಚುಮಾಡಬೇಕು. ಇಂದು ಮಂಡಿಸಿರುವ ಆಯವ್ಯಯಪಟ್ಟಿಯಲ್ಲಿ ಉತ್ತರ ಭಾಗದಲ್ಲಿ ನಿರ್ಮಾಣವಾಗುತ್ತಿರುವ ಬೃಹತ್ ನೀರಾವರಿ ಯೋಜನೆಗಳಿಗೆ ಸ್ವಲ್ಪ ಮಟ್ಟಿಗೆ ಹಣ ಒದಗಿಸಿದ್ದಾರೆ ಎಂಬುದು ಅಭಿನಂದನೀಯವಾದ ಮತ್ತು ಸ್ವಾಗತಾರ್ಹವಾದ ವಿಚಾರವಾದರೂ ಸಹ ಅದು ಸಂಪೂರ್ಣವಾಗಿ ಕೇಂದ್ರ ಸರಕಾರದ ಅವಲಂಬನೆ ಮಾಡಿಕೊಂಡಿದೆ. ಇದು ಶಂಕೆಗೆ ಆಸ್ಪದವಾದ

ವಿಚಾರವಾಗಿದೆ. ಕೇಂದ್ರ ಸರ್ಕಾರದಿಂದ ಎಷ್ಟರಮಟ್ಟಿಗೆ ನೆರವು ಬರುವುದು ಎಂದು ನಿಶ್ಚಿತವಾಗಿ ಹೇಳುವಹಾಗಿಲ್ಲ. ಪರಿಹಾರ ಕಾಂಗಾರಿಗಳಿಗೆ ಕೊಡುವ ಹಣವನ್ನು ನೀರಾವರಿ ಯೋಜನೆಗಳಿಗೆ ಖರ್ಚುಮಾಡುವ ಯೋಚನೆಯಿದೆ. ಇಷ್ಟು ಹಣ ಬಂದರೆ ಸಂತೋಷ, ಬಾರದೆ ಇದ್ದರೆ ಆ ಭಾಗದ ಜನರು ಬಹಳ ತೊಂದರೆಗೀಡಾಗುವರು. ಇದರಲ್ಲಿ ಯಾವ ವಿಧವಾದ ಅನುಮಾನವೂ ಇಲ್ಲ. ಕಾವೇರಿ ಜಲಾನಯನ ಭೂಮಿಯಲ್ಲಿರುವ ಯೋಜನೆಗಳಿಗೆ ಒದಗಿಸುವ ಹಣ ಅತ್ಯಲ್ಪ ಎಂದೇ ವ್ಯಸನದಿಂದ ಹೇಳಬೇಕಾಗಿದೆ. ಈ ಪ್ರಮಾಣದಲ್ಲಿ ಹಣ ಒದಗಿಸಿದರೆ ಈ ಸರಕಾರ ಯೋಜನೆ ಪೂರ್ಣಮಾಡಲು 15 ವರ್ಷವಾದರೂ ಆಗುವುದಿಲ್ಲ. ಆದುದರಿಂದ ಆ ಪ್ರದೇಶಕ್ಕೆ ಜಾಗ್ರತೆ ನೀರು ಬರುವಂತಿಲ್ಲ. ಇದರಿಂದ ಆಹಾರದ ಉತ್ಪತ್ತಿಯೂ ಕುಗ್ಗುವುದು, ಇದರ ಪರಿಣಾಮವಾಗಿ ದಿನೇ ದಿನೇ ಬೆಳೆಯುವ ಜನಸಂಖ್ಯೆಗೆ ಆಹಾರ ಒದಗಿಸಲು ಸರಕಾರ ಅಸಮರ್ಥವಾಗುವುದು. ಹೆಚ್ಚು ಹಣ ಕಾವೇರಿ ಜಲಾನಯನ ಭೂಮಿ ಯೋಜನೆಗಳಿಗೆ ಒದಗಿಸದಿರವುದು ದೊಡ್ಡ ಕೊರತೆಯಾಗಿದೆ. ಉದಾಹರಣೆಗೆ ಹೇಮಾವತಿ ಯೋಜನೆಗೆ ಸೂಚಿಸಿರುವುದು 4 ಕೋಟಿ ರೂಪಾಯಿ. ಹಿಂದಿನ ಸರಕಾರ 6 ರಿಂದ 8 ಕೋಟಿ ರೂಪಾಯಿಗಳವರೆಗೆ ಪ್ರತಿವರ್ಷ ಖರ್ಚುಮಾಡುತ್ತಿತ್ತು. ಈ ದಿವಸ ನಂಬಬಹುದಾದ ಮೂಲದಿಂದ ತಿಳಿದ ಪ್ರಕಾರ ಅಲ್ಲಲ್ಲಿ ಕೇಳಿರುವ ಪ್ರಕಾರ, ಇಂಜನಿಯರುಗಳು ಹೇಳುವ ಪ್ರಕಾರ ಈಗ ಒದಗಿಸಿರುವುದರಲ್ಲಿ ಪೆಂಡಿಂಗ್ ಬಿಲ್ಸ್ ಕ್ಲಿಯರ್ ಮಾಡಲು ಸುಮಾರು 2 ಕೋಟಿ ರೂಪಾಯಿ ಬೇಕು. ಆಂದಮೇಲೆ ಈ ಪ್ರಮಾಣವಲ್ಲಿ ಈ ಯೋಜನೆಗಳಿಗೆ ಖರ್ಚುಮಾಡುವುದಾದರೆ ಅವು ಬೇಗ ಪೂರ್ಣವಾಗುವವೇ ಎಂದು ಕೇಳಬೇಕಾಗಿದೆ. ಇದು ಕೇವಲ ಒಂದು ನಾಟಕ ಒಳ್ಳೆಯ ಕೆಲಸ ಮಾಡುತ್ತಿದ್ದೇವೆಂದು ಜನರನ್ನು ನಂಬಿಸಿ ಮೋಸಮಾಡುವ ಕಾರ್ಯಕ್ರಮ ಎಂದು ಹೇಳದೆ ವಿಧಿಯಿಲ್ಲ. ಹಿಂದಿನ ಸರಕಾರ 6 ಕೋಟಿ ಖರ್ಚು ಮಾಡಿದ್ದರೆ ಅದು ಈಗಿನ ಪರಿಷ್ಕೃತ ಪಿ. ಡಬ್ಲ್ಯು. ಡಿ. ದರದ ಪ್ರಕಾರ ರೂ. 12 ಕೋಟಿಯಾಗುವುದು. ಆದುದರಿಂದ ಸರಕಾರ ಒದಗಿಸಿರುವ ಹಣ ತೀರ ಕಡಿಮೆ ಎಂದು ಒತ್ತಿ ಹೇಳುತ್ತೇನೆ.

ಆದ್ದರಿಂದ ಸರ್ಕಾರದವರು ನೀರಾವರಿ ಯೋಜನೆಗಳಿಗೆ ಎಷ್ಟುಮಟ್ಟಿನ ಆದ್ಯತೆ ಕೊಡಬೇಕಾಗಿತ್ತೋ, ಎಷ್ಟುಮಟ್ಟಿನ ಪ್ರಾಮುಖ್ಯತೆಯನ್ನು ಕೊಡಬೇಕಾಗಿತ್ತೋ ಅಷ್ಟು ಕೊಡಲಿಲ್ಲ. ಆದ್ದರಿಂದ ಆಹಾರದ ಕೊರತೆ ನೀಗುವುದಕ್ಕೆ ಈ ಆಯವ್ಯಯ ಪಟ್ಟಿ ಯಾವ ರೀತಿಯಲ್ಲಿಯೂ ಸಹಾಯಕವಾಗಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಎರಡನೆಯ ವಿಚಾರ. ನೀರಿನ ಸಮಸ್ಯೆ, ಈ ಸಮಸ್ಯೆ ರೈತನಿಗೆ ಬಗೆಹರಿಯಬೇಕಾದರೆ ಎಲ್ಲೆಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ನೀರನ್ನು ತಂದು ಕೊಡುವುದಕ್ಕೆ ಸಾಧ್ಯವೋ ಅಂಥ ಕಡೆ ಶೀಘ್ರಗತಿಯಿಂದ ನೀರಾವರಿ ಯೋಜನೆಗಳನ್ನು ಮಾಡಬೇಕು. ಸಣ್ಣ ಪುಟ್ಟ ಕೆರೆಗಳನ್ನು ಎಲ್ಲಿ ಸಾಧ್ಯವೋ ಅಲ್ಲಿ ಕಟ್ಟಿಸಬೇಕು. ಅದಕ್ಕೆ ಒದಗಿಸತಕ್ಕ ಹಣ ತೃಪ್ತಿಕರವಾಗಿಲ್ಲ ಎಂದು ಹೇಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ನಮ್ಮ ಪ್ರಾಂತ್ಯಕ್ಕೆ ಬಂದಾಗ, ಈ ನೀರಾವರಿ ಬಾವಿಗಳ ಬಗ್ಗೆ ಮನವಿಮಾಡಿಕೊಂಡದ್ದೆವು. ಎಲ್ಲೆಲ್ಲಿ ಭೂಗರ್ಭದಲ್ಲಿ ಜಲರಾಶಿ ಹೇರಳವಾಗಿದೆಯೋ ಅಂಥ ಕಡೆ ನೀರಾವರಿ ಬಾವಿಗಳನ್ನು ಮಾಡಿ. ನಮ್ಮಲ್ಲಿ ಸಾಮೂಹಿಕ ನೀರಾವರಿ ಬಾವಿಗಳನ್ನು ಮಾಡಿದ್ದೇವೆ. ಒಂದು ನೀರಾವರಿ ಬಾವಿಗೆ ಖರ್ಚಾಗಿರತಕ್ಕ ಹಣ 20 ಸಾವಿರ ರೂಪಾಯಿ, ಇದರಿಂದ ನೀರಾವರಿಯಾಗತಕ್ಕ ಭೂಮಿಯ ವಿಸ್ತೀರ್ಣ 26 ಎಕರೆ. ಪ್ರಯೋಜನ ಪಡೆಯುತ್ತಾ ಇರತಕ್ಕ ರೈತರ ಸಂಖ್ಯೆ 42 ಜನ. ಸಣ್ಣಪುಟ್ಟ ಹಿಡುವಳಿದಾರರಿಗೆ ಪ್ರಯೋಜನವಾಗುವಂತೆ ಈ ನೀರಾವರಿ ಸಾಮೂಹಿಕ ಬಾವಿಗಳನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಸರ್ಕಾರ ಜವಾಬ್ದಾರಿ ವಹಿಸಿಕೊಂಡು ಈ ಬಾವಿಗಳನ್ನು ತೋಡಿಸಬೇಕು ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಕಾರಣ ಏನೆಂದರೆ, ಈ ನೀರಾವರಿ ಬಾವಿಗಳಿಂದ ಹೆಚ್ಚಿನ ಪ್ರಯೋಜನ ಇದೆ. ಸಣ್ಣ ಪುಟ್ಟ ಹಿಡುವಳಿದಾರರು ಬಾವಿಗಳನ್ನು ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಭೂ ಅಭಿವೃದ್ಧಿ ಬ್ಯಾಂಕಿನವರು ಹೇಳುತ್ತಾರೆ, ಒಂದೇಕಡೆ ಎರಡೂವರೆ ಎಕರೆ ಭೂಮಿ ಇದ್ದರೆ ಮಾತ್ರ ಸಾಲ ಪಡೆಯುವುದಕ್ಕೆ ಸಾಧ್ಯ ಎಂದು. ಕಡಿಮೆ ಇದ್ದರೆ, ಆ ಭೂಮಿ ಇಟ್ಟುಕೊಂಡಿರತಕ್ಕ ರೈತರ ಗತಿ ಏನು ? ಇಂಥವರ ಪ್ರಯೋಜನಕ್ಕೆ ಬರಬೇಕಾದರೆ, ಸರ್ಕಾರವು ಈ ಸಾಮೂಹಿಕ ಬಾವಿಗಳನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಭೂಗರ್ಭ ತಜ್ಞರನ್ನು ಕೇಳಿ ಈ ಕಾರ್ಯವನ್ನು ವ್ಯಾಪಕವಾದ ರೀತಿಯಲ್ಲಿ ಮಾಡಬೇಕು. ನಿಜವಾಗಿಯೂ ದೇಶದಲ್ಲಿ ಹಸಿರು ಕ್ರಾಂತಿ ಬರಬೇಕಾದರೆ ಇದು ಒಂದರಿಂದಲೇ ಸಾಧ್ಯ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಏನೆಂದರೆ, ವ್ಯವಸಾಯದಿಂದ ಬರತಕ್ಕ ಆದಾಯದ ಮೇಲೆ ಸಣ್ಣಹಿಡುವಳಿದಾರರು ತೆರಿಗೆಯನ್ನು ಕೊಡಬೇಕು ಎಂದು ಕೇಂದ್ರ ಸರ್ಕಾರದವರು ತೀರ್ಮಾನ ತೆಗೆದುಕೊಂಡ ಮೇಲೆ ಭೂಕಂದಾಯವನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ ? ಎರಡು ವಿಧವಾದ ತೆರಿಗೆಯನ್ನು

((ಶ್ರೀ ಎಚ್. ಟಿ. ಕೃಷ್ಣಪ್ಪ)

ರೈತ ಏತಕ್ಕೆ ಕೊಡಬೇಕು ? ಕನಿಷ್ಟಪಕ್ಷ ಸಣ್ಣಪುಟ್ಟ ರೈತರಿಗೆ ಅನುಕೂಲವಾಗುವಂತೆ ಯಾವುದೋ ಒಂದು ಕನಿಷ್ಟ ಮಿತಿಯನ್ನು ಗೊತ್ತುಮಾಡಿ, ಆ ಮಿತಿಯೊಳಗೆ ಇರುವ ರೈತರಿಗೆ ಪ್ರಯೋಜನ ಆಗುವ ಹಾಗೆ, ಅನುಕೂಲವಾಗುವ ಹಾಗೆ ಕಂದಾಯವನ್ನು ಏತಕ್ಕೆ ರದ್ದು ಮಾಡಬಾರದು ? ಸರ್ಕಾರ ನಡೆಸತಕ್ಕ ಮಂತ್ರಿಗಳು ಎಷ್ಟೋ ಬಾರಿ ಕಂದಾಯವನ್ನು ರದ್ದು ಮಾಡಬೇಕು ಎಂದು ಕೂಗಾಡಿದ್ದನ್ನು ನಾವು ಕೇಳಿದ್ದೇವೆ. ಹಿಂದಿನ ಸರ್ಕಾರದವರು 10 ಎಕರೆ ಖುಷ್ಕಿ ಭೂಮಿ, ಹಾಗೂ ಎರಡು ಎಕರೆ ತರೀ ಭೂಮಿಗೆ ಕಂದಾಯವನ್ನು ರದ್ದು ಮಾಡಬೇಕು ಎಂದು ತೆಗೆದುಕೊಂಡ ನಿರ್ಣಯವನ್ನು ನೀವು ಕಸದ ಬುಟ್ಟಿಗೆ ಹಾಕಿರುವುದಕ್ಕೆ ಕಾರಣ, ದ್ವೇಷ, ಅಸೂಯೆ. ಎಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ನಿಜವಾಗಿ ಸಣ್ಣಪುಟ್ಟ ರೈತರ ಬಗ್ಗೆ ಅನುಕಂಪ ತೋರಿಸುವ ಸಹಾನುಭೂತಿ ಇವರಿಗೆ ಇದ್ದರೆ ಹಿಂದಿನ ಸರ್ಕಾರದವರು ತೆಗೆದುಕೊಂಡ ತೀರ್ಮಾನವನ್ನು ಈ ಸರ್ಕಾರ ವಿರೋಧಿಸಿದ್ದು ನೋಡಿದರೆ, ಬರೀ ವಂಚನೆಗೋಸ್ಕರ, ಜನಗಳನ್ನು ನಂಬಿಸುವುದಕ್ಕೋಸ್ಕರ, ಭಾಷಣ ಮಾಡುವ ಜನಗಳೇ ಹೊರತು ಖಂಡಿತವಾಗಿ ನಿಮ್ಮ ಮಾಲನಲ್ಲಿ ಸತ್ಯಾಂಶ ಇಲ್ಲ ಎಂದು ನಾವು ತೀರ್ಮಾನಕ್ಕೆ ಬರಬೇಕಾಗುತ್ತದೆ.

ರೈತರ ಎರಡನೆಯ ಅವಶ್ಯಕತೆ, ಗೊಬ್ಬರ. ದೇಶದಲ್ಲಿ ಗೊಬ್ಬರದ ಉತ್ಪಾದನೆಗೆ ಕುಂಠಿತವಾಗಿದೆ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಬೇಗ ಮುಗಿಸಬೇಕು.

SRI H. T. KRISHNAPPA.—Last time also I was made to speak only for 10 minutes. I want a little more time.

Mr. DEPUTY SPEAKER.—The difficulty is that there are many on this side who want to speak. I can give him only 15 minutes more.

ಶ್ರೀ ಎಚ್. ಟಿ. ಕೃಷ್ಣಪ್ಪ.—ಗೊಬ್ಬರದ ವಿಚಾರದಲ್ಲಿ, ಒಂದಕ್ಕೆ ಎರಡರಷ್ಟು, ಎರಡೂವರೆಯಷ್ಟು ಬೆಲೆಯನ್ನು ತೆತ್ತು ದೇಶದಲ್ಲಿ ರೈತ ಗೊಬ್ಬರವನ್ನು ತೆಗೆದು ಕೊಳ್ಳುತ್ತಿದ್ದಾನೆ. ಇದು ಬಹುತೇಕವಾಗಿ ಈ ವ್ಯಾಪಾರಿಗಳಿಂದ ಅಥವಾ ಸರ್ಕಾರದ ದೋಷಯುಕ್ತವಾದಂಥ ನೀತಿಯಿಂದ ಉಂಟಾಗಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ರೈತರಿಗೆ ಗೊಬ್ಬರ ಇಲ್ಲಎಂದು ಹೇಳುವ ಪರಿಸ್ಥಿತಿಯಲ್ಲಿ ಹೆಚ್ಚಿಗೆ ದುಡ್ಡು ಕೊಟ್ಟರೆ ಎಲ್ಲಿ ಬೇಕಾದರೂ ಗೊಬ್ಬರ ಸಿಗುತ್ತದೆ. ಪರಿಸ್ಥಿತಿ ಏನಾಗದೆ ಎಂದರೆ ಸಣ್ಣ ರೈತರಿಗೆ ಎರಡು ಮೂರರಷ್ಟು ಹೆಚ್ಚು ದುಡ್ಡು ಕೊಟ್ಟು ಗೊಬ್ಬರವನ್ನು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ ಯಾವುದೋ ಕಡೆ ದೋಷಪೂರ್ಣ ನೀತಿ ಇರುವುದರಿಂದ ಇಂಥ ಕಷ್ಟ ಪರಿಸ್ಥಿತಿ ಉದ್ಭವವಾಗಿದೆ. ಸರ್ಕಾರ ಇದನ್ನು ಮನಗಾಣಬೇಕು ಎಂದು ಹೇಳುತ್ತೇನೆ. ಇನ್ನು ಮುಂದೆಯಾದರೂ ಗೊಬ್ಬರ ವಿತರಣೆ ಮಾಡುವ ಕಾಲದಲ್ಲಿ ಸಹಕಾರ ಸಂಘಗಳ ಮೂಲಕ ಗೊಬ್ಬರ ಕೊಡಬೇಕು. ಹಾಗೆ ಮಾಡಿದರೆ ರೈತರಿಗೆ ಪ್ರಯೋಜನವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಈಗ ಒಂದು ಸುದ್ದಿ ಬಂದಿದೆ, ಕೆಲವು ಮಂತ್ರಿಗಳ ಬದಲಾವಣೆಯ ಬಗ್ಗೆ. ಆಡಳಿತ ಪಕ್ಷದ ಸದಸ್ಯರು ಹೇಳಿದರು ಮಂತ್ರಿಮಂಡಲದಲ್ಲಿ ಮಂತ್ರಿಗಳ ಬದಲಾವಣೆ ಇದೆಯೆಂದು. ಕಾಂಗ್ರೆಸ್ ಪಕ್ಷದ ಮೀಟಿಂಗ್‌ನಲ್ಲಿ ಗಲಾಟೆಯಾದ ಮೇಲೆ ತಕ್ಷಣ ಡೆಲ್ಲಿಗೆ ಬುಲಾವ್ ಬಂದಿದೆ. ಇದರ ಬಗ್ಗೆ ಮಾನ್ಯ ಚೆನ್ನಬಸಪ್ಪನವರು ಹೇಳಿಕೆ ಕೊಡಬೇಕು. ಮಂತ್ರಿಮಂಡಲ ಪತನವಾಗುವ ಕಾಲ ಬಂದಿದೆ. ಹಣಕಾಸಿನ ಆಯವ್ಯಯದ ಬಗ್ಗೆ ಮಾತನಾಡುತ್ತಿದ್ದೇವೆ, ಮುಂದಿನ ಹಣಕಾಸಿನ ಮಂತ್ರಿಗಳು ಯಾರು ಎಂದು ರಾಜ್ಯದ ಜನತೆಗೆ ಗೊತ್ತಾಗಬೇಕು.

Business of the House

6-00 P. M.

MR. DEPUTY SPEAKER.—The hon. Member may continue his speech tomorrow. I have an announcement to make.

The business Advisory Committee which met today, the 14th March, 1973, has recommended that the following business may be taken up in the House between 15th and 22nd March, 1973.

15th March 1973 ...	(1) Consideration and passing of the Mysore Re-enacting Bill, 1973. (2) General Discussion on the Budget.
16th, 19th and 20th March, 1973. ...	General Discussion on the Budget.

Non-official business may be transacted on the 17th March, 1973 as already scheduled.

21st March 1973 ...	Discussion and voting of supplementary Demands for Grands for the year 197 -73 and voting of demands for grants on account for the year 1973-74.
22nd March 1973 ...	(1) Appropriation Bills. (2) Voting of Demands for Grants for the year 1973-74.

The voting of demands for grants will continue on subsequent days.

Now we will take up next item. Hon. Member Sri B. E. Ramaiah to raise half-an-hour discussion.

Half-an-Hour Discussion arising out of Answers to S. Q. No. 161 on 1-3-1973.

re: Opening of Government College as Siruguppa.

† ಶ್ರೀ ಬಿ. ಇ. ರಾಮಯ್ಯ (ಸಿರುಗುಪ್ಪ) ಅಧ್ಯಕ್ಷರೇ, ಸಿರುಗುಪ್ಪದಲ್ಲಿ ಒಂದು ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರವನ್ನು ಸುಮಾರು ಏಳು ವರ್ಷದಿಂದ ಕೇಳುತ್ತ ಬಂದಿದ್ದೇವೆ. 1972 ರಲ್ಲಿ ಇದೇ ವಿಷಯವಾಗಿ ಮಾನ್ಯ ಮಂತ್ರಿಗಳನ್ನು ಕೇಳಿದಾದ 1973 ರ ಜೂನ್ ತಿಂಗಳೊಳಗೆ ಒಂದು ಕಾಲೇಜನ್ನು ಕೊಟ್ಟೇ ಕೊಡುತ್ತೇವೆಂದು ಇದೇ ಸಭೆಯಲ್ಲಿ ಭರವಸೆ ಕೊಟ್ಟಿದ್ದಾರೆ. ಸಿರುಗುಪ್ಪ ತಾಲ್ಲೂಕಿನಲ್ಲಿ ಐದು ಹೈಸ್ಕೂಲುಗಳಿವೆ. ಕೂಡಾ ಷುಗರ್ ಫ್ಯಾಕ್ಟರಿ ಇದೇ ನವೆಂಬರ್ ತಿಂಗಳಿನಲ್ಲಿ ಷುರುವಾಗುತ್ತದೆ ಅದಕ್ಕೋಸ್ಕರ ನೂರಾರು ವಿದ್ಯಾರ್ಥಿಗಳು ಓದುವುದಕ್ಕೆ ಅನುಕೂಲವಾಗುವಂತೆ ಒಂದು ಸರ್ಕಾರಿ ಕಾಲೇಜನ್ನು ಸಿರುಗುಪ್ಪದಲ್ಲಿ ಸ್ಥಾಪನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅಲ್ಲಿ ಒಂದು ತಾಲ್ಲೂಕು ಬೋರ್ಡ್ ಹೈಸ್ಕೂಲಿದೆ. ಅವರೂ ಜೂನಿಯರ್ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಒಂದು ಅಪ್ಲಿಕೇಷನ್ ಕೊಟ್ಟಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದು ಜೂನಿಯರ್ ಕಾಲೇಜನ್ನು ಸ್ಥಾಪನೆ ಮಾಡುತ್ತೇವೆಂಬ ಸರ್ಕಾರದ ಪಾಲಿಸಿ ಡಿಸಿಷನ್ ಇದೆ. ಆವರ ಪಾಲಿಸಿ ಡಿಸಿಷನ್ ಪ್ರಕಾರವೇ ಸಿರುಗುಪ್ಪದಲ್ಲಿ ಒಂದು ಸರ್ಕಾರಿ ಕಾಲೇಜನ್ನು ಷುರು ಮಾಡಬೇಕು. ಇಲ್ಲವಾದರೆ ಇರತಕ್ಕ ಹೈಸ್ಕೂಲು ಏನಿದೆ ಅದನ್ನೇ ಕಾಲೇಜಾಗಿ ಪರಿವರ್ತನೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಎ. ಆರ್. ಬದರೀನಾರಾಯಣ್ (ವಿದ್ಯಾಶಾಖೆಯ ಮಂತ್ರಿಗಳು) ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಬಿ. ಇ. ರಾಮಯ್ಯನವರು ಸಿರುಗುಪ್ಪದಲ್ಲಿ ಒಂದು ಸರ್ಕಾರಿ ಕಾಲೇಜನ್ನು ಸ್ಥಾಪನೆ ಮಾಡಬೇಕು, ಅದು ಸಾಧ್ಯವಾಗದೆ ಹೋದರೆ ಅಲ್ಲಿರತಕ್ಕ ತಾಲ್ಲೂಕು ಬೋರ್ಡ್ ಹೈಸ್ಕೂಲನ್ನು ಜೂನಿಯರ್ ಕಾಲೇಜಾಗಿ ಪರಿವರ್ತಿಸಬೇಕು ಎನ್ನುವ ವಿಷಯವನ್ನು ತಿಳಿಸಿದ್ದಾರೆ. ಜೂನಿಯರ್ ಕಾಲೇಜುಗಳನ್ನು ಒಂದು ನೀತಿ ನಿಯಮದ ಮೇಲೆ ಸರ್ಕಾರ ಸ್ಥಾಪನೆ ಮಾಡುತ್ತಿದೆ. ಶ್ರೀ ಯೂನಿವರ್ಸಿಟಿ ಬೋರ್ಡಿನವರು ಸಿರುಗುಪ್ಪಕ್ಕೆ ಒಂದು ಕಮಿಷನ್ ಕಳುಹಿಸಿದ್ದರು, ಆ ಕಮಿಷನ್‌ನವರು ಸಿಫಾರಸು ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿಸಿದರು. ಆ ಸಿಫಾರಸು ಬಂದ ಮೇಲೆ, ಶ್ರೀ ಯೂನಿವರ್ಸಿಟಿ ಬೋರ್ಡಿನವರು ಯಾವ ಯಾವ ಅರ್ಜಿಗಳು ಬರುತ್ತವೆ ಅವೆಲ್ಲವನ್ನೂ ಕೂಡ ಪ್ರೋಸೆಸ್ ಮಾಡಿ ಅಲ್ಲಿ ಸಾಕಾದಷ್ಟು ಸೌಕರ್ಯಗಳಿವೆಯೇ, ಅಲ್ಲಿ ಅವಶ್ಯಕತೆ ಇದೆಯೇ ಮತ್ತು ಹತ್ತಿರದಲ್ಲಿ ಕಾಲೇಜುಗಳಿಲ್ಲವೇ ಎನ್ನುವುದನ್ನೆಲ್ಲವನ್ನೂ ವಿಮರ್ಶೆ ಮಾಡಿ ಸರ್ಕಾರಕ್ಕೆ ಸಿಫಾರಸು ಬಂದಾಗ ಸರ್ಕಾರ ಎಲ್ಲ ಅರ್ಜಿಗಳನ್ನೂ ಮತ್ತು ಸಿಫಾರಸುಗಳನ್ನೂ ಪರಿಶೀಲನೆ ಮಾಡಿ, ಆರ್ಥಿಕ ಪರಿಸ್ಥಿತಿಯನ್ನು ಕೂಡ ಅವಲೋಕಿಸಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಸಿರುಗುಪ್ಪ ತಾಲ್ಲೂಕಿನಲ್ಲಿ ಒಂದು ಜೂನಿಯರ್ ಕಾಲೇಜು ಬೇಕು ಎನ್ನುವ ವಿಚಾರದಲ್ಲಿ ಹೇಳಬೇಕೆಂದರೆ, ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿಯೂ ಒಂದು ಜೂನಿಯರ್ ಕಾಲೇಜ್ ಇರಬೇಕು ಎನ್ನುವುದು ಸರ್ಕಾರದ ನೀತಿ. ಆ ದೃಷ್ಟಿಯಿಂದ ಅಲ್ಲಿ ಒಂದು ಕಾಲೇಜು ಕೊಡಬೇಕು ಎನ್ನುವ ದೃಷ್ಟಿಯಿಂದ ಇದ್ದಾಗ್ಯೂ ಇತರ ಕೆಲವು ವಿಚಾರಗಳನ್ನೂ ಪರಿಶೀಲಿಸಬೇಕಾಗುತ್ತದೆ. ಇಂದಿನ ಭೀಕರವಾದ ಬರಗಾಲ ಪರಿಸ್ಥಿತಿಯಲ್ಲಿ ಹೆಚ್ಚು ಕಾಲೇಜುಗಳನ್ನು ಮಾಡತಕ್ಕದ್ದು ಅಷ್ಟು ಸೂಕ್ತವಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ಕೆಲವು ದಿವಸಗಳ ಕೆಳಗೆ ಒಂದು ಹೇಳಿಕೆಯನ್ನು ಕೊಟ್ಟರು. ಅದೂ ಅಲ್ಲದೆ ಗುರಿಯಿಲ್ಲದ ವಿದ್ಯಾಭ್ಯಾಸ ಮಾಡತಕ್ಕದ್ದೂ ಸರಿಯಲ್ಲ ಎನ್ನುವ ನೀತಿಯನ್ನು ಹೇಳುವಾಗ ಇದಕ್ಕೆಲ್ಲ ಯೋಚನೆ ಮಾಡಿ ಒಂದು ತೀರ್ಮಾನವನ್ನು ಕೈಕೊಳ್ಳಬೇಕಾಗುತ್ತದೆ. ಫೈನಾನ್ಷಿಯಲ್ ಇಂಪ್ಲಿಕೇಷನ್ ಏನು, ಎಷ್ಟು ಹಣವನ್ನು ಒದಗಿಸಬೇಕು ಎನ್ನುವುದನ್ನು ಯೋಚನೆ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ. ಸಿರುಗುಪ್ಪದಲ್ಲಿ ಒಂದು ಸರ್ಕಾರಿ ಕಾಲೇಜಿನ ಅವಶ್ಯಕತೆ ಇದೆ, ಬಳ್ಳಾರಿ ಜಿಲ್ಲೆಯಲ್ಲಿ ಆರು ಖಾಸಗಿ ಕಾಲೇಜುಗಳಿವೆ, ಒಂದೂ ಸರ್ಕಾರಿ ಕಾಲೇಜಿಲ್ಲ; ಅಲ್ಲಿಗೆ ಕಾಲೇಜು ಕೊಡಬೇಕು ಎನ್ನುವುದನ್ನು ಒಪ್ಪಿದರೂ ಕೂಡ ನಾನು ಹೇಳಿದ ಹಾಗೆ ಎಲ್ಲ ಪರಿಸ್ಥಿತಿಯನ್ನೂ ವಿಮರ್ಶೆ ಮಾಡಿ ಸರ್ಕಾರ ತೀರ್ಮಾನವನ್ನು ಕೈಕೊಳ್ಳುತ್ತದೆ. ಈ ಸಂದರ್ಭದಲ್ಲಿ ಏನು ತೀರ್ಮಾನವನ್ನು ಕೈಕೊಳ್ಳುತ್ತದೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಸಿರುಗುಪ್ಪದಲ್ಲಿ ತಾಲ್ಲೂಕು ಬೋರ್ಡ್ ಹೈಸ್ಕೂಲಿದೆ ಹಿಂದೆ ಸ್ಥಳೀಯ ಸಂಸ್ಥೆಗಳು ನಡೆಸತಕ್ಕ ಕೆಲವು ಹೈಸ್ಕೂಲುಗಳನ್ನು ಸರ್ಕಾರ ವಹಿಸಿಕೊಂಡಿದೆ. ಇನ್ನೂ ಕೆಲವು ಹೈಸ್ಕೂಲುಗಳು ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವುದು ಇದೆ. ಉಳಿದಿರತಕ್ಕ ಹೈಸ್ಕೂಲುಗಳನ್ನೂ ತೆಗೆದುಕೊಳ್ಳುವುದಕ್ಕೆ ಏಕೆ ಆಲೋಚನೆ ಮಾಡಬಾರದು ?

ಶ್ರೀ ಎ. ಆರ್. ಬದರೀನಾರಾಯಣ್.—ತಾಲ್ಲೂಕು ಬೋರ್ಡ್‌ಗಳು ಒಪ್ಪಬೇಕು. ಅವು ಒಪ್ಪಿರುವ ಕಡೆ ಶಾಲೆಗಳನ್ನು ತೆಗೆದುಕೊಂಡಿದ್ದೇವೆ. ಕೆಲವರ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ.

ಶ್ರೀ ಬಿ. ಇ. ರಾಮಯ್ಯ.—ಸಂದರ್ಭಾನುಸಾರ ಮಾಡುತ್ತೇವೆಂದು ಹೇಳಿದರು. ಅಲ್ಲಿ ಜೂನಿಯರ್ ಕಾಲೇಜು ಮಾಡುವುದರಿಂದ ಸರ್ಕಾರಕ್ಕೆ ಹೆಚ್ಚು ಭಾರವಾಗುವುದಿಲ್ಲ. ಅಲ್ಲಿ ಕಟ್ಟಡವಿದೆ, ಸ್ಥಳವಿದೆ, ಅಲ್ಲಿ ಕಾಲೇಜು ಪ್ರಾರಂಭ ಮಾಡಬೇಕೆಂದು ತಾಲ್ಲೂಕು ಬೋರ್ಡಿನವರು 15 ಸಾವಿರ ರೂಪಾಯಿಗಳನ್ನು 1973—74ರ ಬಡ್ಜೆಟ್ಟಿನಲ್ಲಿ ತೆಗೆದಿಟ್ಟಿದ್ದಾರೆ. ಅದಕ್ಕೋಸ್ಕರ ಸರ್ಕಾರಕ್ಕೆ ಹೆಚ್ಚು ಭಾರವಾಗುವುದಿಲ್ಲ. ಆದ್ದರಿಂದ 1973—74ರಲ್ಲಿ ಸಿರುಗುಪ್ಪದಲ್ಲಿ ಒಂದು ಕಾಲೇಜು ಪ್ರಾರಂಭ ಮಾಡಬೇಕೆಂದು ನಾನು ಮತ್ತೊಮ್ಮೆ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಆರ್. ಬದರೀನಾರಾಯಣ್.—ಇಂದಿನ ಅರ್ಥಿಕ ಪರಿಸ್ಥಿತಿಯಲ್ಲಿ ಎಷ್ಟು ಹೆಚ್ಚು ಜವಬ್ದಾರಿ ವಹಿಸಬೇಕು ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕಾಗಿದೆ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿನ ಜನ, ನಾವು ನೆರವಾಗುತ್ತೇವೆ, ಭೂಮಿಯನ್ನು ಕೊಡುತ್ತೇವೆ, ಹಣ ವಸೂಲು ಮಾಡಿ ಕೊಡುತ್ತೇವೆ, ಹೆಚ್ಚಿನ ಸೌಕರ್ಯಗಳನ್ನು ಕೊಡುತ್ತೇವೆ, ಸರ್ಕಾರದ ಜವಾಬ್ದಾರಿಯನ್ನು ಹಗುರ ಮಾಡುತ್ತೇವೆನ್ನುವ ಜವಾಬ್ದಾರಿ ಹೊತ್ತು ಹೇಳಿದರೆ ಅದೊಂದು ವಿಷಯ ಸರ್ಕಾರ ತೀರ್ಮಾನಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆ.

Mr. DEPUTY SPEAKER.—The House will now rise to meet again tomorrow at 1-00 P. M.

The Housing adjourned at Ten Minutes past Six of the Clock to meet again at One of the Clock on Thursday, the 15th Mach, 1973.

ANNEXURE

THE MYSORE RE-ENACTING BILL, 1973

(L. A. Bill No. 16 of 1973)

A Bill to re-eact certain President's Acts

WHEREAS certain amendments were made to the Mysore Entertainments Tax Act, 1958 (Mysore Act 30 of 1958), the Mysore Motor Vehicles Taxation Act, 1957 (Mysore Act 35 of 1957), the Mysore Stamp Act, 1957 (Mysore Act 34 of 1957) and the Mysore Sales Tax Act, 1957 (Mysore Act 25 of 1957) by the Mysore Entertainments Tax (Amendment) Act, 1971 (President's Act 14 of 1971), the Mysore Motor Vehicles Taxation (Amendment) Act, 1971 (President's Act 16 of 1971), the Mysore Stamp (Amendment) Act, 1971 (President's Act 17 of 1971) and the Mysore Sales Tax (Amendment) Act, 1971 (President's Act 18 of 1971) respectively during the peiod of operation of the proclamation dated 27th March 1971 issued by the President of India under Article 356 of the Constitution of India in relation to the State of Mysore;

AND WHEARES it is expendient to re-enact the said President's Acts;

BE it enacted by the Mysore State Legislature in the Twenty-fourth Year of the Republic of India as follows:—

1. **Short title, commencement and duration.**—(1) This Act may be called the Mysore Re-enacting Act, 1973.

(2) It shall come into force at once.

(3) It shall remain in force upto and inclusive of 31st March 1974.

2. **Re-enactment of certain President's Acts.**—The President's Acts specified in the Schedule below, as in force on the date of commencement of this Act, are hereby re-enacted.

3. **Savings**—Upon the expiry of this Act the amendments made by the President's Acts specified in the Schedule as re-enacted by this Act, in the Mysore Entertainments Act, 1958 (Mysore Act 30 of 1958), the Mysore Motor Vehicles Taxation Act, 1957 (Mysore Act 35 of 1957), the Mysore Stamp Act, 1957 (Mysore Act 34 of 1957) and the Mysore Sales Tax Act 1957 (Mysore Act 25 of 1957) (hereinafter referred to as the Principal Acts) shall cease to have effect and shall be omitted from the Principal Acts and such of the provisions thereof as were affected by the President's Acts as re-enacted by this Act shall stand revived to the extent to which they would have otherwise continued in operation but for the passing of the said President's Acts as re-enacted by this Act, but shall not affect—

(*a*) the previous operation of, or anything duly done or omitted to be done or suffered under, the Principal Acts as amended by this Act or any rule or order made thereunder; or

(*b*) any right, privilege, obligation or liability, acquired, accrued or incurred under the Principal Acts as amended by this Act or any rule or order made thereunder; or

(*c*) any penalty, forfeiture or punishment incurred in respect of any offence under the Principal Acts as amended by this Act or any contravention of any rule or order made thereunder; or

(*d*) any investigation, legal proceeding or remedy in respect of any such right, privilege, obligation, liability, penalty, forfeiture or punishment as aforesaid,

and any such investigation, legal proceeding or remedy may be instituted ctoinued or enforced and any such penalty forfeiture or punishment may be imposed as if the amendments made by this Act had not expired.

THE SCHEDULE

(*See* SECTION 2)

President's Acts

1. The Mysore Entertainments Tax (Amendment) Act, 1971 (President's Act 14 of 1971);
2. The Mysore Motor Vehicles Taxation (Amendment) Act, 1971 (President's Act 16 of 1971).
3. The Mysore Stamp (Amendment) Act, 1971 (Presdient's Act 17 of 1971);
4. The Mysore Sales Tax (Amendment) Act, 1971 (President's Act 18 of 1971).

Statement of objects and reasons

President's Acts 14 of 1971, 16 of 1971, 17 of 1971 and 18 of 1971 had been enacted to raise additional resources for the relief of Bangla Desh Refugees. They expire on 24th March 1973.

It is proposed that while the additional levies for the relief of Bangla Desh Refugees may cease, the levies may be retained till 31st March 1974 to raise additional resources to meet the cost of 'People's Housing Programme' to be undertaken by the State Government.

Hence the Bill.

M. Y. GHORPADE.

TE. HANUMANTHAPPA,
Secretary.

THE MYSORE ENTERTAINMENTS TAX (AMENDMENT) ACT, 1971

President's Act No. 14 of 1971

Enacted by the President in the Twenty-second Year of the Republic of India

An Act further to amend the Mysore Entertainments Tax Act, 1958

In exercise of the powers conferred by section 3 of the Mysore State Legislature (Delegation of Powers, Act, 1971 (23 of 1971), the President is pleased to enact as follows:—

1. Short title and commencement.—(1) This Act may be called the Mysore Entertainments Tax (Amendment) Act, 1971.

(2) It shall come into force on such date as the State Government may, by notification, appoint.

2. Amendment of Section 3A, Mysore Act 30 of 1958: In section 3A of the Mysore Entertainment Tax Act, 1958, for the words "a surcharge of fifty per cent.", the words "a surcharge of sixty per cent." shall pe substituted.

THE MYSORE STAMP (AMENDMENT) ACT, 1971

President's Act No. 17 of 1971

Enacted by the President in the Twenty-second year of the Republic of India.

An Act further to amend the Mysore Stamp Act, 1957

In exercise of the powers conferred by section 3 of the Mysore State Legislature (Delegation of Powers) Act, 1971 (23 of 1971), the President is pleased to enact as follows:—

1. **Short title and commencement.**—(1) This Act may be called the Mysore Stamp (Amendmrnt) Act, 1971.

(2) It shall come into force on such date as the State Government may, by notification in the Official Gazette, appoint.

2. **Insertion of new section 3B.**—In the Mysore Stamp Act, 1957 (Mysore Act 34 of 1957) after section 3A, the following section shall be inserted, namely:—

"**3B. Instruments Chargeable with additional duty.**—(1) Every instrument chargeble with duty under section 3 read with the articles of the Schedule shall, in addition to such duty, be chargeable with a duty of ten paise.

(2) The additional duty with which any instrument is chargeable under sub-section (1) shall be paid and such payment shall be indicated on such instruments by means of adhesive stamps bearing such inscription as the State Government may, by order published in the Official Gazette, specify, whether with or without any other design, picture or inscription.

(3) Except as otherwise provided in sub section (2), the provisions of this Act shall so far as may be, apply in relation to the additional duty chargeable under sub-section (1) as they apply in relation to the duty chargeable under section 3."

THE MYSORE SALES TAX (AMENDMENT) ACT, 1971.

President's Act No. 18 of 1971

Enacted by the President in the Twenty-second year of the Republic of India.

An Act further to amend the Mysore Sales Tax Act, 1957

In exercise of the powers conferred by Section 3 of the Mysore State Legislature (Delegation of Powers) Act, 1971 (23 of 1971), the President is pleased to enact as follows:—

1. **Short title and Commencement.**—(1) This Act may be called the Mysore Sales Tax (Amendment) Act, 1971.

(2) It shall come into force on such date as the State Government may, by notification, appoint.

2. **Insertion of new section 6B Mysore Act 25 of 1957.**—After section 6A of the Mysore Sales Tax Act, 1957 (hereinafter referred to, as the principal Act), the following section shall be inserted, namely:—

> "**6B. Levy of additional tax.**—(1) There shall be levied and collected from every dealer liable to pay tax under section 5 or under section 6, an additional tax on the sale or purchase of goods liable to tax under this Act, at the rate of two paise in the rupee on the sales tax or purchase tax or both payable by such dealer:
>
> Provided that in respect of the sale or purchase of any of the declared goods mentioned in the Fourth Schedule, the tax plus the additional tax shall not exceed three per cent of the sale or purchase price thereof.
>
> (2) The provisions of this Act and the rules made thereunder including those relating to refund or exemption from tax shall, so far as may be, apply in relation th the levy, assessment and collection of the additional sales tax or purchase tax or both as they apply in relation

to the levy, assessment and collection of sales tax and purchase tax under this Act."

3. **Amendment of section 17.**—In section 17 of the principal Act,—

(i) in item (ii), for the words "six hundred rupees per annum", the words 'six hundred and twelve rupees per annum" shall be substituted;

(ii) in item (iv). for the words "one thousand and two hundred rupees per annum" the words "one thousand and two hundred and twenty-four rupees per annum" shall be subatituted.

4. **Amendment of section 43.**—To sub-section (3) of section 43 of the principal Act, the following Explanation shall be added, namely :—

"**Explanation.**—For purposes of this sub-section, the rate of tax shall be deemed to have been revised from the date on which an additional tax is levied under section 6B"

EXTRACT FROM THE MYSORE ENTERTAINMENTS TAX ACT, 1958 (MYSORE ACT 30 OF 1958)

O * *

3. **Tax on payment for admission to entertainments.**—(1) There shall be levied and paid to the State Government on each payment for admission to an entertainment. entertainments tax at the following rates, namely :—

Where the payment (excluding the amount of tax)	*Rate of tax*
(*a*) does not exceed fifty paise ; ...	Twenty per cent of such payment.
(*b*) exceeds fifty paise but does not exceed one rupee and fifty paise ;	Twenty-five per cent of such payment.
(*c*) exceeds one rupee and fifty paise but does not exceed three rupees ;	Thirty per cent of such payment.
(*d*) exceeds three rupees ...	Thirty-five per cent of such payment.

(2) Notwithstanding anything contained in sub-section (1) there shall be levied and paid to the State Government (except as otherwise expressly provided in this Act) on every complimentary ticket issued by the proprietor of an entertainment, the entertainments tax at the appropriate rate specified in sub-section (1) in respect of such entertainment, as if full payment had been made for admission to the entertainment according to the class of seat or accommodation which the holder of such ticket is entitled to occupy or use; and for the purpose of this Act the holder of such ticket shall be deemed to have been admitted on payment.

(3) In the determination of the amount of tax payable on each payment for admission under sub-section (1) o on each complimentary ticket under sub-section (2) fractions of a paisa less than half a paisa shall be disregarded and fractions of a paisa equal to or exceeding half a paisa shall be regarded as one paisa.

3A. Levy of surcharge.—In addition to the entertainments tax payable under section 3, a surcharge of fifty per cent on the rate of such entertainments tax shall be levied and the entire proceeds of the surcharge so levied shall be credited to the consolidated fund of the State.

Extract from the Mysore Motor Vehicles Taxation Act, 1957

* * *

SCHEDULE

PART 'A'

Motor Vehicles Tax

Classes of Vehicles	Quarterly	
	Vehicles fitted with pneumatic Tyres	*Other vehicles*
1	2	3
	Rs. P.	Rs. P.
1. Motor Cycles (including motor scooters and cycles) with attachment for propelling the same by mechanical power, not exceeding 400 kgs. in weight, unladen :—		
(*a*) Bicycles below 3½ horse power if not used for drawing a trailer or side-car.	9 00	12 00
(*b*) Bicycles below 3½ horse power if used for drawing a trailer or side-car and bicycles of and above 3½ horse power whether used for drawing a trailer or side-car or not.	12 00	15 00
(*c*) Tricycles	12 00	15 00
8. Motor Vehicles other than those liable to tax under the foregoing provisions of this schedule—		
(*a*) weighing not more than 750 kgs. in weight unladen.	30 00	39 00
(*b*) weighing more than 750 kgs. but not more than 1,500 kgs. in weight unladen.	40 00	55 00
(*c*) Weighing more than 1,500 kgs. but not more than 2,275 kgs. in weight unladen.	50 00	71 00

1	2	3
	Rs. P.	Rs. P.
(*d*) Weighing more than 2,275 kgs. but not more than 3,050 kgs. in weight unladen.	60 00	84 00
(*e*) Weighing more than 3,050 kgs. in weight unladen.	75 00	105 00
(*f*) Additional tax payable in respect of such vehicles used for drawing trailers—		
(i) For each trailer not exceeding 1,000 kgs. in weight unladen.	12 00	18 00
(ii) For each trailer exceeding 1,000 kgs. in weight unladen.	24 00	36 00
Provided that two or more vehicles shall not be chargeable under this clause in respect of the same trailer.		

PART B

Taxes on motor vehicles belonging to, or in the possession and control of persons, not ordinarily residing in Mysore State and used or kept for use in Mysore State by such persons for periods shorter than half-year or the quarter, as the case may be, but not exceeding thirty days at a time.

Classes of vehicles	*For periods not exceeding seven days at a time*	*For periods exceeding seven days but not exceeding thirty days at a time*
1	2	3
	Rs. P.	Rs. P.
1. Motor Cycles (including motor scooters and cycles with attachment for propelling the same by mechanical power) whether used for drawing a trailer or side-car or not.	2 00	6 00

1	2		3	
	Rs.	P.	Rs.	P.
2. Invalid carriages	1	25	3	75
3. Motor Cars...				
(*a*) Weighing not more than 750 kgs. in weight unladen.	3	00	12	75
(*b*) Weighing more than 750 kgs. but not more than 1,500 kgs. in weight unladen.	5	65	16	65
(*c*) Weighing more than 1,500 kgs. but not more than 2,275 kgs. in weight unladen.	7	30	21	65
(*d*) Weighing more than 2,275 kgs. but not more than 3,050 kgs. in weight unladen.	8	45	25	00
(*e*) Weighing more than 3,050 kgs. in weight unladen.	10	60	31	25
(*f*) Additional tax payable in respect of such vehicles used for drawing trailers—				
(i) For each trailer not exceeding 1,000 kgs. weight unladen.	1	75	5	00
(ii) For each trailer exceeding 1,000 kgs. in weight unladen.	3	50	10	00
Provided that two or more vehicles shall not be chargeable under this clause in respect of the same trailer.				

EXTRACTS FROM THE MYSORE STAMP ACT, 1957.

x x x x x x

3. **Instruments chargeable with duty.**—Subject to the provisions of this Act and the exemptions contained in the Schedule, the following instruments shall be chargeable with duty of the amount indicated in that schedule as the proper duty therefor, respectively, that is to say—

(*a*) every instrument mentioned in that schedule which, not having been previously executed by any person is executed in the territories of the State of Mysore on or after the commencement of this Act; and

(*b*) every instrument mentioned in that schedule which, not having been previously executed by any person is executed out of the State of Mysore on or after that day, relates to any property situate, or to any matter or thing done or to be done, in the territories of the State of Mysore:

Provided that no duty shall be chargeable in respect of—

(1) any instrument, executed by, or on behalf of or in favour of, the State Government in cases where but for this exemption, the Government would be liable to pay the duty chargeable in respect of such instrument;

(2) any instrument for sale, transfer or other disposition, either aboslutely or by way of mortgage or otherwise, of any ship or vessel, or any part, interest, share or property of or in any ship or vessel registered under the Mercnant Shipping Act, 1958.

EXTRACT FROM THE MYSORE SALES TAX ACT, 1957.

(MYSORE ACT 25 OF 1957)

x x x x

5. **Levy of tax on sale or purchase of goods.—(1)** Every dealer shall pay for each year tax on his taxable turnover at the rate of three and a half per cent of such turnover:

Provided further that if and to the extent to which such turnover relates to gur, pulses incuding their dhals, flour and husks, wheat (including aatta, maida, soji and bran), paddy, rice (including parched rice and beaten rice and bran) ragi, jola maize, bajra, navane, samey (ಸಾಮೆ) and gunny bags and bardans(including batars) and hessian cloth, the tax shall be calculated at the rate of one and a half per cent of such turnover

(2) Notwithstanding anything contained in sub-section (5), a dealer registered under the Central Sales Tax Act, 1956, shall, whatever be the quantum of his total turnover, be liable to pay tax at the rate specified in this Act on the sale of any goods which he has purchased in the course of inter-State trade or commerce in respect of which the concessional rate of tax under clause (b) of sub-section (1) of Section 8 of the Central Sales Tax Act, 1956, has been levied—

(3) Notwithstanding anything contained in subsection (1), the tax under this Act shall be levied.

(*a*) in the case of the sale of any of the goods mentioned in column (2) of the Second Schedule, by the first or the earliest of successive dealers in the State who is liable to tax under this Section, a tax at the rate specified in the corresponding entry of column (3) of the said Schedule, on the taxable turnover of sales of such dealer in each year relating to such goods:

Provided that in respect of sale by the State Government of any of the mentioned in serial numbers 38, 99 and 40 of the Second Schedule, the State Government shall be deemed to be the first dealer in the State and shall be entitled to collect the tax under Section 19 :

Provided further that in respect of sale of goods mentioned in sarial number 38 of the Second Schedule, the sale by a licensee of a bonded warehouse to a person not being such a licence shall be deemed to be the sale by first dealer liable to tax under this section.

(*b*) in the case of purchase of any of the goods mentioned in column (2) of the Third Scheducl at the rate and only at the point specified in the corresponding entries of colums (4) and (3) of the said Schedule, on the dealer liable to tax under this Act on his taxable turnover of purchases in each year relating to such goods.

Explanation..—For the purpose of the second proviso to clause (*a*), the expression "bonded warehouse" shall have the same meaning as in the Mysore Excise Act, 1965 (Mysore Act 21 of 1966).

(3A) Notwithstanding anything contained in sub-section (1) or sub-section (3) the tax payable by a dealer in respect of any sale of goods mentioned in the Second Schedule by such dealer to a registered dealer for use by the latter as component part of any other goods mentioned in that Schedule,which he intends to manufacture inside the State for sale, shall be at the rate of two per cent or the rate specified in the Second Schedule in respect of such goods whichever is lower on the turnover relating to such sale :

Provided that the provisions of this sub-section shall not apply to any sale unless the dealer selling the goods furnishes to the assessing authority in the prescribed manner a declaration duly filled in and signed by the dealer to whom the goods are sold containing the prescribed particulars in a prescribed form obtained from the prescribed authority.

Explanation.—For the purpose of this sub-section 'component part' means an article which froms an indentifiable constituent of the finished product and which along with others goes to make up the finished product.

(4) Notwithstanding anything contained in sub-section (1) a tax under this Act shall be levied in respect of the sale or purchase of any of the declared goods mentined in column (2) of the Fourth Schedule at the rate and only at the point specified in the corresponding entries on columns (4) and (3) of the said Schedule on the dealer liable to tax under this Act on his taxable turnover of sales or purchases in each year relating to such goods :

Provided that where tax has been paid in respect of the sale or purchase of any of the declared goods under this sub-section and such goods are subsequntly sold in the course of inter-State trade or commerce, the tax paid under this Act shall be refunded to such person in such manner and subject to such condition as may be prescribed.

Explanation.—The expression "declared goods" means goods declared under section 14 of the Central Sale Tax Act, 1956 (Central Act 74 of 1956), to be of special importance in inter-State trade or commerce.

(5) (*a*) A dealer whose total turnover in any year is less than twenty five thousand rupees shall not be liable to pay tax for that year.

(1) Not exceeding one Kg. in weight in the aggregate by a *bona fide* domestic consumer ;

(2) Not exceeding one Kg. in weight in the aggregate by a *bona fide* traveller as part of his luggage.

Sri P. A. PAWASHE.—Whether it has come to the notice of the Government that great hardship is caused to the people of belt area and harrasment by police due to these restrictions ?

† **Smt. E. E. VAZ.**—There is no room for harassment because every precaution is taken to see that people in the belt area are provided with enough ration.

Sri N. B. SIRDESAI.—Will the Government reconsider to amend the Mysore Foodgrians (Regulation of Transport of Foodgrains) Order, 1966 and allow transport of reasonable quantity of rice and jawar to the areas outside the State limit for personal consuption of the family members of the cultivator owning lands in Mysore State ?

Smt. E. E. VAZ.—For those people who own lands in Mysore State and for the families residing outside, special permits are being granted.

Smuggling of Foodgrains to Maharastra from Belgaum

601. **Sri P. A. PAWASHE** (Uchagaon).—

Will the Minister of State for Food and Civil Supplies be pleased to state.—

(*a*) whether it has come to the notice of the Government that large quantity of foodgrains is smuggled out to the neighbouring State of Maharastra from Belgaum District ;

(*b*) the number of check Nakas and their location in Belgaum District on the Mysore-Maharashtra border to check the movement of foodgrains ;

(*c*) the number of cases of smuggling of foodgrains which have been detected in these check Nakas during the last year ;

(*d*) the total quantity of foodgrains involved in these cases, if any ;

Smt. E. E. VAZ (Minister of State for Food and Civil Supplies).—

(*a*) Yes. But there has been no smuggling of foodgrains from Belgaum Distaict to Maharashtra State, on a large scale and effective steps have been taken to prevent it.

(*b*) These details may be found in the enclosed Statement appended.

(*c*). 303 cases.

(*d*) 1,565 quintals and 30 Kgs. valued at Rs. 1,70,000.

(SMT. E. E. WAZ)

STATEMENT

Showing the number of Check-Posts (Check Nakas) and their location in Belgaum District on the Mysore-Maharashtra border to check the movement of foodgrains.

District	Taluk		Place where check post is set up
Belgaum	Belgaum	1	Uchangaon
	Chikodi	2	Examba
	Nippani	3	Mangur
		4	Karadga
		5	Sharadwad
		6	Janawad
		7	Akkol Cross
		8	Kognolli
		9	Gayakanwadi
		10	Chandur
	Hukkeri	11	Gadhinglaj
		12	Nagaur
		13	Shipur
		14	Ullegaddi-Khanapur
		15	Daddi
	Athani	16	Ananthapur
		17	Pandegaon
		18	Madhavi
		19	Jugul
		20	Kagwadi
		21	Kidsgedi Naka
		22	Mangsuli Naka
		23	Kakmari Naka

Sri P A. PAWASHE.—You have given reply to clause (*a*) of the question as 'Yes' and you have also stated that there is no smuggling of foodgrains from Belgaum District. May I know from which other districts the foodgrains are being smuggled ?

† **Smt.. E. E. VAZ.**—The word 'Yes' is a misprint in the answer.

Sri P. A. PAWASHE.—Besides the Checkposts whether there is any special squad to check these offences ?

Smt.. E. E. VAZ—There are nearly 24 Checkposts in Belgaum District plus a mobile squad to check the smuggling of foodgrains.

Eligibility to Post-Graduate Courses

611 **Sri N. B. SIRDESAI** (Khanapur).—Will the Minister for Education be pleased to state :—

(*a*) whether the selections of the teachers for the post-graduate courses (M.A. and M.Sc.) and for Master of Physical Education course are made by the Director of Public Instruction or by the Selection Committees ;

(*b*) the minimum qualifications and conditions required for the selection for the above courses ;

(*c*) the number of applications for selection to both the courses received from each District of Dharwar Division, under the jurisdiction of the Joint Director of Public Instruction, Dharwar during the last three years ;

(*d*) of them, the number of applicants selected each year ;

(*e*) the names of the members in both the selection Committees ?

Sri A. R. BADARINARAYANA (Minister for Education).—

(*a*) Selection of the Teachers for the post-graduate Courses (M.A. M.Sc. and M.P.Ed.) are made by the Director of Public Instruction.

(*b*) Graduate Teachers of a recognised University in the Graduate Cadre is eligible for selection and should be within the age of 43 years with minimum 5 years of service for deputation to M.A. and M.Sc. courses and within 45 years age with 5 years of experience in Physical Education activities for deputation to M.P. Ed. Course.

(*c*) The number of applications received for Post-Graduate Courses (M.A. and M.Sc.) are as follows :—

District		1969-70	1970-71	1971-72
Dharwar	...	31	61	86
Karwar	...	9	16	13
Belgaum	...	26	29	27
Bijapur	...	80	57	81
Total	...	146	163	207

(SRI A. R. BADARINARAYANA)

(*d*).—

District		1969-70	1970-71	1971-72
Dharwar	...	3	4	2
Karwar	...	—	1	1
Belgaum	...	1	3	4
Bijapur	...	7	11	1
Total	...	11	19	8

(*e*) There is no committee for selection.

Sri N. B. SIRDESAI.—Has it come to the notice of the Government that selections made during the year 1969 and 1971 were in-contravention of the then rules ?

† **Sri A. R. BADRINARAYANA.**—No. They were not in-contravention of the rules. Rules were adhered to.

Sri N, B. SIRDESAI.—May I know out of the applicants selected how many were direct applications and how many were allotted by the University ?

Sri A. R. BADRINARAYANA.—I am not in a position to give the break-up now.

MADAM SPEAKER.—Question Hour is over.

2-00 P. M.

CALLING ATTENTION TO MATTERS OF URGENT PUBLIC IMPORTANCE

(i) *re* : acute famine of fish in the Coastal belt of the State.

Sri B. BHASKAR SHETTY (Kaup).—I call the attention of the Hon, Minister of State for for Fisheries to the acute famine of fish in the Coastal belt of the State.

Sri K. T. RATHOD (Minister of State for Fisheries).—I state as follows .

ಮೈಸೂರು ರಾಜ್ಯದ ಕರಾವಳಿ ಪ್ರದೇಶದಲ್ಲಿ ಮೀನು ದೊರೆಯುವ ಮುಖ್ಯ ಮೀನು ಬಂಗುಡೆ ಮತ್ತು ಭೂತಾಯಿ. ಪ್ರಸಕ್ತ ಮೀನು ಹಂಗಾಮಿನಲ್ಲಿ ದೊರೆತ ಇವೆರಡು ಜಾತಿಗಳ ಮೀನುಗಳ ಪ್ರಮಾಣ ತೀರಾ ಕಡಿಮೆ ಎಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆ. ಈ ಹಿಂದೆ ಪ್ರತಿ ವರ್ಷ ಸುಮಾರು 46,000 ಟನ್ನು ಬಂಗುಡೆ ಮೀನು, 18,000 ಟನ್ನು ಭೂತಾಯಿ ಮೀನು

ದೊರೆಯುತ್ತಿತ್ತು. ಆದರೆ ಕಳೆದ ಆರು ತಿಂಗಳುಗಳಲ್ಲಿ ಕೇವಲ 2,000 ಟನ್ನು ಬಂಗುಡೆ ಮತ್ತು 5,000 ಟನ್ನು ಭೂತಾಯಿ ದೊರೆತಿದೆ. ಮುಂಗಾರು ಮಳೆ ಪ್ರಾರಂಭವಾಗುತ್ತಲೇ, ಈ ಮೀನು ಗುಂಪುಗಳು ದಂಡೆಯ ಹತ್ತಿರ ವಲಸೆ ಬರುವುದುಂಟು. ಆಗ ಮೀನುಗಾರರು ರಂಪಣಿ ಬಲೆಯಲ್ಲಿ ಈ ಮೀನುಗಳನ್ನು ಹಿಡಿಯುತ್ತಾರೆ. ಈ ವರ್ಷ ಈ ಮೀನು ಗುಂಪುಗಳು ವಿರಳವಾಗಿರುವುದರಿಂದ, ರಂಪಣಿ ಮೀನುಗಾರರ ಆರ್ಥಿಕ ಸ್ಥಿತಿ ತುಂಬಾ ಹದಗೆಟ್ಟಿದೆ. ಮೀನು ಕ್ಷಾಮದ ಇಂಥ ಪ್ರಸಂಗ ಬರುವುದು ಹತ್ತು ವರ್ಷಕ್ಕೊಮ್ಮೆ ಎಂದು ತಜ್ಞರು ಸರ್ಕಾರಕ್ಕೆ ತಿಳಿಸಿದ್ದಾರೆ. ಸಮುದ್ರದ ನೀರಿನಲ್ಲಿ ಉಂಟಾಗುವ ಭೌತಿಕ, ರಾಸಾಯನಿಕ ಮತ್ತು ಜೈವಿಕ ಬದಲಾವಣೆಗಳು ಮೀನು ಗುಂಪುಗಳ ವಲಸೆಯ ಮೇಲೆ ಪ್ರಭಾವ ಬೀರುತ್ತವಂತೆ. ಆದರೆ, ಈ ಮೀನು ವಲಸೆ ಎಂದು, ಹೇಗೆ ನಡೆಯುವುದು ಎಂಬುದನ್ನು ಇಂದಿನ ನಮ್ಮ ತಿಳಿವಳಿಕೆಯ ಸ್ಥಿತಿಯಲ್ಲಿ ಹೇಳುವಂತಿಲ್ಲ.

ಸರ್ಕಾರಕ್ಕೆ ಈ ಪರಿಸ್ಥಿತಿ ಕುರಿತು ವರದಿ ಬಂದಿದೆ. ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ರಂಪಣಿ ಮೀನುಗಾರ ಸಂಘ ಮತ್ತಿತರ ಸಂಸ್ಥೆಗಳಿಂದ ಮನವಿಗಳೂ ಬಂದಿವೆ. ಬಂಗುಡೆ ಮತ್ತು ಭೂತಾಯಿ ಮೀನುಗಳ ಕ್ಷಾಮದಿಂದ ಸುಮಾರು 10,000 ರಂಪಣಿ ಮೀನುಗಾರರ ಕುಟುಂಬಗಳು ಸಂಕಟಗ್ರಸ್ತವಾಗಿವೆ ಎಂದು ವರದಿಯಾಗಿದೆ. ರಂಪಣಿ ಮೀನುಗಾರರ ಸಂಕಷ್ಟ ನಿವಾರಣೆಗೆ ಸರ್ಕಾರದವರು ಸಹಾನುಭೂತಿಯಿಂದ ತುರ್ತು ಗಮನ ನೀಡಿದ್ದಾರೆ. ತುರ್ತು ಪರಿಹಾರ ಕ್ರಮವಾಗಿ ಸಹಾಯ ನೀಡಲು ಪ್ರತಿಯೊಂದು ಸಂಕಟಗ್ರಸ್ತ ಮೀನುಗಾರ ಕುಟುಂಬಕ್ಕೆ 250 ರೂಪಾಯಿಯಂತೆ ಸರ್ಕಾರದವರು ಒಟ್ಟು 25.00 ಲಕ್ಷ ರೂಪಾಯಿ ನಿಬಡ್ಡಿ ಸಾಲ ಮಂಜೂರು ಮಾಡಿದ್ದಾರೆ. ನೈಲಾನು ನೂಲು, ಹತ್ತಿ ನೂಲು, ಮೀನು ಬಲೆ ಮುಂತಾದವುಗಳ ಬಗ್ಗೆ ಸೇಕಡಾ 33⅓ ಸಹಾಯ ಧನವನ್ನು ಸಹ ಮಂಜೂರು ಮಾಡಿದ್ದಾರೆ. ಮೀನು ಹಿಡಿಯುವ ತೋಡು ದೋಣಿಗಳ ಬಗ್ಗೆ ಎಂ. ಎಫ್. ಎ. ಎಲ್. ಯೋಜನೆ ಮೇರೆಗೆ ಸಹಾಯ ಧನ ಕೊಡುವ ವಿಚಾರ ಸಹ ಪರಿಶೀಲನೆಯಲ್ಲಿದೆ.

ಈ ಕ್ರಮಗಳಿಂದ ಮೀನುಗಾರರ ಸದ್ಯದ ಸಂಕಟ ಪರಿಸ್ಥಿತಿಯು ನಿವಾರಣೆ ಹೊಂದಬಹುದೆಂದೂ ಮುಂಬರುವ ಮೀನು ಹಂಗಾಮಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೀನು ಹಿಡಿಯುವುದು ಸಾಧ್ಯವಾಗಬಹುದೆಂದೂ ಸರ್ಕಾರದವರು ಆಶಿಸುತ್ತಾರೆ.

ದಕ್ಷಿಣ ಕನ್ನಡ ರಂಪಣ ಮೀನುಗಾರರ ಸಂಘದವರು ಸಲ್ಲಿಸಿದ ಮನವಿಯಲ್ಲಿನ ಇತರ ಬೇಡಿಕೆಗಳು—ಎಂದರೆ, ಮೀನುಗಾರಿಕೆ ರಸ್ತೆಗಳ ಸುಧಾರಣೆ, ಮನೆಯಿಲ್ಲದ ಮೀನುಗಾರರಿಗೆ ಪರಂಬೋಕು ಮತ್ತು ಸಾಗುವಳಿಯಾಗಿಲ್ಲದ ಜಮೀನುಗಳ ಹಂಚಿಕೆ, ಮನೆಕಟ್ಟಿಕೊಳ್ಳಲು ಸಾಲಗಳ ಮಂಜೂರಾತಿ, ಮೈಸೂರು ರಾಜ್ಯ ಮೀನುಗಾರಿಕೆ ಸಲಹಾ ಮಂಡಲಿಯಲ್ಲಿ ಸಂಘಕ್ಕೆ ಪ್ರಾತಿನಿಧ್ಯ, ಮೀನು ಸಾಗಣೆ ಸೌಕರ್ಯಗಳ ಏರ್ಪಾಟು, ಮೀನೆಣ್ಣೆ ತಯಾರಿಕೆಗೆ ಯಂತ್ರೋಪಕರಣದ ಏರ್ಪಾಟು—ಇವೇ ಮುಂತಾದ ಬೇಡಿಕೆಗಳು, ಮೀನು ಕ್ಷಾಮದ ಪರಿಣಾಮವಾಗಿ ಸಂಕಷ್ಟಕ್ಕೀಡಾದ ಮೀನುಗಾರರಿಗೆ ತುರ್ತು ಪರಿಹಾರ ಒದಗಿಸುವ ವಿಚಾರಕ್ಕೆ ನೇರವಾಗಿ ಸಂಬಂಧಿಸಿಲ್ಲ, ಆದರೆ ಕರಾವಳಿ ಪ್ರದೇಶದ ಮೀನುಗಾರರ ಮತ್ತು ಮೀನುಗಾರಿಕೆ ಉದ್ದಿಮೆಯ ಸಮಸ್ಯೆಗಳನ್ನೂ ಕುರಿತು ಕೈಕೊಳ್ಳಬೇಕಾದ ದೀರ್ಘಾವಧಿ ಕ್ರಮಗಳನ್ನೂ ಸ್ಪಷ್ಟಪಡಿಸುತ್ತವೆ. ಈ ವಿಚಾರಗಳು ಪರಿಶೀಲನೆಯಲ್ಲಿದೆ. ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಿ, ಸೂಕ್ತ ಕ್ರಮ ಕೈಕೊಳ್ಳಲಾಗುವುದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಕೆ ಟಿ. ರಾಥೋಡ್ ರವರು ಈ ದಿವಸ ಕನ್ನಡದಲ್ಲಿ ಕಾಲ್ ಅಟೆನ್‌ಷನ್ ನೋಟೀಸಿಗೆ ಉತ್ತರಕೊಟ್ಟಿದ್ದಾಗಿ ಅವರಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು.—ಏಕೆ ಮಾನ್ಯ ಚಿಕೇಗೌಡರೂ ಕೂಡ ಅನೇಕಾವರ್ತಿ ಕನ್ನಡದಲ್ಲೇ ಉತ್ತರ ಕೊಟ್ಟಿದ್ದಾರೆ. ಆದರೆ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸಭೆಯಲಿಲ್ಲದಿದ್ದರೆ ಅದಕ್ಕೆ ಯಾರು ಹೊಣೆಗಾರರು ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಕ್ಷಾಮಕ್ಕೆ ತುತ್ತಾಗಿರತಕ್ಕ ರಂಪಣೀ ಮೀನುಗಾರರಿಗೆ 250 ರೂಪಾಯಿ ಸಾಲವನ್ನು ಕೊಡಲಾಗುತ್ತದೆಂದು ತಿಳಿಸೋಣವಾಯಿತು. ಆದು ಬಹಳ ಕಡಮೆ ಆದುದರಿಂದ ಅದನ್ನು ಒಂದು ಸಾವಿರಕ್ಕಾದರೂ ಹೆಚ್ಚುಮಾಡುವರೇ ? ಮತ್ತು ಆ ಹಣವನ್ನು ಯಾವ ರೂಪದಲ್ಲಿ ಹೇಗೆ ಕೊಡುತ್ತಾರೆ ಎಂಬುದನ್ನು ತಿಳಿಸುತ್ತಾರೆಯೆ ?

ಶ್ರೀ ಕೆ. ಟಿ. ರಾಥೋಡ್.—ಆದರೆ ಕರಾವಳಿಯ ಪ್ರದೇಶದಲ್ಲಿರತಕ್ಕ ಮೀನುಗಾರರ ಪರಿಸ್ಥಿತಿಯೇ ಒಂದು ರೀತಿ, ಮತ್ತು ಒಳನಾಡಿನಲ್ಲಿರತಕ್ಕ ಮೀನುಗಾರರ ಪರಿಸ್ಥಿತಿಯೆ ಒಂದು

(ಶ್ರೀ ಕೆ. ಟಿ. ರಾಥೋಡ್)

ರೀತಿ. ಒಳನಾಡು ಮೀನುಗಾರರಿಗೆ ಬರಗಾಲದಲ್ಲಿ ಮೀನು ಸಿಕ್ಕದೆ ಇದ್ದಾಗ ಅವರು ಬೇರೆ ಕೆಲಸ ಮಾಡುವುದಕ್ಕೆ ಅವಕಾಶವುಂಟು. ಇನ್ನು ಅವರಿಗೆ ಕೊಡತಕ್ಕ 250 ರೂಪಾಯಿಗಳ ಸೌಲಭ್ಯವನ್ನು ಸಾಲದ ರೂಪದಲ್ಲಿ ಸೊಸೈಟಿಗಳ ಮೂಲಕ ಕೊಡಲಾಗುವುದು.

Smt. WINNIFRED F. FERNANDES.—It was stated that about 10,000 families depending upon Rampanibale are reported to have been affected by this famine. It is not so; more than 26,000 families all round the coastal belt have been affected by this famine. The Government has given Rs. 26 lakhs for this gesture. At the same time, I request the Government to give at least Rs. 10,000/- per family, Rs. 500/-as loan and Rs. 500/-as relief. As these people are hard pressed for foodgrains, will the Government arrange for the supply of foodgrains to these people through fair-price shops ?

ಶ್ರೀ ಕೆ. ಟಿ. ರಾಥೋಡ್.—ಮಾನ್ಯ ಸದಸ್ಯಣಿಯರು ಇಂಥಾ ಕಷ್ಟಕ್ಕೆ ಒಳಗಾಗಿರತಕ್ಕ ಜನರ ಸಂಖ್ಯೆ ಬಹಳ ಜಾಸ್ತಿಯಾಗಿವೆ, ಅವರಿಗೆ ಹೆಚ್ಚು ಹಣವನ್ನು ಒದಗಿಸಬೇಕೆಂದಿದ್ದಾರೆ, ಆದರೆ ಸರ್ಕಾರದವರು ಶೇಕರಣೆ ಮಾಡಿರತಕ್ಕ ಅಂಕೀಅಂಶಗಳ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ 8, ರಂಪಣಿ ಮೀನುಗಾರರ ಸಂಘಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 72 ಸಂಘಗಳಿವೆ. ಅಂದರೆ ಎಲ್ಲವೂ ಸೇರಿ ಒಟ್ಟಿಗೆ 152 ಸಂಘಗಳಾದವು. ಒಂದೊಂದು ರಂಪಣೀ ಸೊಸೈಟಿಗಳಲ್ಲೂ ಇರತಕ್ಕ ಸದಸ್ಯರ ಸಂಖ್ಯೆ 40--80 ಎಂದಿಟ್ಟುಕೊಂಡರೂ, ಇವರೆಲ್ಲರ ಒಟ್ಟು ಸಂಖ್ಯೆ 10 ಸಾವಿರಕ್ಕೆ ಮೇಲಿಲ್ಲ. ಇನ್ನು ಅವರಿಗೆ ಕೊಡತಕ್ಕ ಸಾಲದ ಸೌಲಭ್ಯ ಸಾಲದೆಂದು ಹೇಳಿದ್ದಾರೆ ಆದರೆ ಸರ್ಕಾರದವರು ಸಧ್ಯ ಅವರಿಗೆ ಮೂರು ತಿಂಗಳ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಿದ್ದಾರೆ. ಮುಂದಿನ ಮೂರು ತಿಂಗಳಲ್ಲಿ ಅವರ ಮೀನುಗಾರಿಕೆ ಪರಿಸ್ಥಿತಿ ಉತ್ತಮಗೊಳ್ಳಬಹುದೆಂದು ಸರ್ಕಾರದ ಆಶೆಯು. ಹಾಗೆ ಅವರ ಸುಧಾರಣೆ ಈ ಮೂರು ತಿಂಗಳಲ್ಲಿ ಆಗದಿದ್ದರೆ ಮುಂದೆ ಅದನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಸಚಿವರು ಅವರಿಗೆ ಕೊಡತಕ್ಕ ಸಾಲದ ಸೌಲಭ್ಯವನ್ನು ಸೊಸೈಟಿಗಳ ಮೂಲಕ ಕೊಡಲಾಗುತ್ತದೆಂದು ಹೇಳಿದರು. ಅದರಿಂದ ಉದ್ದೇಶಪಟ್ಟ ಕಾರ್ಯ ಸಫಲವಾಗುವುದಿಲ್ಲ. ಏಕೆಂದರೆ ಅನೇಕರಿಗೆ ಆ ಸೊಸೈಟಿಗಳಲ್ಲಿ ಬೇರೆ ಬೇರೆ ಸಾಲಗಳಿರುತ್ತವೆ. ಅದಕ್ಕೆ ಈ ಹಣವನ್ನು ಅವರು ಒತ್ತಾರ ಮಾಡಿಕೊಂಡರೆ ಅವರಿಗೆ ಅನುಕೂಲ ಮಾಡಿದ್ದೆಲ್ಲಾಯಿತು ? ಆದುದರಿಂದ ಇದನ್ನು ಆ ರಂಪಣೀ ಮೀನುಗಾರರಿಗೆ ನೇರವಾಗಿ ಕೊಡುವುದಕ್ಕೆ ಏರ್ಪಾಡನ್ನು ಮಾಡುತ್ತಾರೆಯೇ ?

ಶ್ರೀ ಕೆ. ಟಿ. ರಾಥೋಡ್.—ಅನೇಕರು ಈ ರಂಪಣಿ ಬಲೆಗಾರರ ಸಂಘಕ್ಕೆ ಸದಸ್ಯರಾಗಿರುವುದಿಲ್ಲ. ಆದ್ದರಿಂದ ಈ ಹಣವನ್ನು ಸೊಸೈಟಿಗಳ ಮೂಲಕ ಕೊಡತಕ್ಕದ್ದೇ ಉತ್ತಮವಾದುದು ಎಂಬುದು ಸರ್ಕಾರದವರ ಭಾವನೆ. ಆದರೆ ನೇರವಾಗಿ ಇವರಿಗೆ ಸಾಲ ಕೊಡುವುದಕ್ಕೆ ಅವಕಾಶವಿಲ್ಲ. ಇವರಿಗೆ ಮಾನ್ಯ ಸದಸ್ಯರು ತಿಳಿಸತಕ್ಕಂಥ ತೊಂದರೆಗಳೇನಾದರೂ ಬಂದಾಗ ಅವುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅಂಥವುಗಳ ಬಗ್ಗೆ ಸರ್ಕಾರ ಬೇರೆ ರಿಯಾಯಿತಿಗಳನ್ನು ಕೊಡಲು ಪರಿಶೀಲನೆ ಮಾಡುತ್ತಾರೆಂದು ತಿಳಿಸುವುದಕ್ಕೆ ಇಚ್ಚೆಪಡುತ್ತೇನೆ.

ಶ್ರೀ ಜಯಪ್ರಕಾಶ ಶೆಟ್ಟಿ.—ರಂಪಣಿ ಬಲೆಗಾರರಲ್ಲದವರೂ ಕೂಡ ಸಾವಿರಾರು ಜನ ಕಷ್ಟಕ್ಕೆ ಸಿಕ್ಕಿದ್ದಾರೆ. ಅವರಿಗೇನು ಸಹಾಯ ಮಾಡುತ್ತಾರೆ.

ಶ್ರೀ ಕೆ. ಟಿ. ರಾಥೋಡ್.— ಅವರೂ ಈ ಸಂಸ್ಥೆಗೆ ಸದಸ್ಯರಾದರೆ ಅವರಿಗೂ ಸಹಾಯ ಮಾಡಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಮೀನುಗಳಿಗೆ ಕ್ಷಾಮ ಬರುವುದಕ್ಕೇನು ಕಾರಣ ? ಮೀನು ತಿನ್ನತಕ್ಕವರಲ್ಲದವರೂ ಮೀನನ್ನು ತಿನ್ನುವುದಕ್ಕೆ ಪ್ರಾರಂಭಮಾಡಿದ್ದರಿಂದ ಅಂದರೆ ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ವೀರೇಂದ್ರಪಾಟೀಲರೂ ಇವುಗಳನ್ನು ತಿನ್ನುವುದಕ್ಕೆ ಪ್ರಾರಂಭಮಾಡಿದ್ದರಿಂದಲೇನಾದರೂ ಈ ಕ್ಷಾಮ ಉಂಟಾಯಿತೇ ?

ಶ್ರೀ ಕೆ. ಟಿ. ರಾಥೋಡ್.—ಇಂಥ ಬರ ಹೀಗೆ ಪೀರಿಯಾಡಿಕಲ್ಲಾಗಿ ಬರುತ್ತೇಂಬುದು ತಜ್ಞರ ಅಭಿಪ್ರಾಯ. ಸೀಗಡಿ ಮೀನು ಕಡಿಮೆಯಾಗಿರುವುದರ ಬಗ್ಗೆ ಸಂಶೋಧನೆ ನಡೆಸಲು ಒಂದು ತಜ್ಞರ ಸಮಿತಿಯನ್ನು ಮಾಡಿದೆ. ಆ ಸಮಿತಿಯವರು ಇದಕ್ಕೂ ಕೂಡ ಕಾರಣವನ್ನು ಹುಡುಕಿ ಕೊಡುತ್ತಾರೆಂದು ಹೇಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮೀನುಗಳಿಗೆ ಕ್ಷಾಮ ಉಂಟಾಗುವುದಕ್ಕೆ ಒಂದು ಕಾರಣ ಎಂದರೆ ಅವು ಬಲಿತು ಮರಿಗಳನ್ನು ಹಾಕತಕ್ಕ ವಯಸ್ಸು ಎನಿದೆ ಆ ವಯಸ್ಸಿಗೇ ಮೊದಲೇ ಅವುಗಳನ್ನು ಹಿಡಿಯುತ್ತಿರುವುದರಿಂದ ಹೀಗೆ ಕ್ಷಾಮ ಉಂಟಾಗುವುದಕ್ಕೆ ಕಾರಣವಾಗಿದೆ. ಅದನ್ನು ತಡೆಗಟ್ಟುವುದಕ್ಕೇನು ಕ್ರಮ ಕೈಗೊಳ್ಳುವರು ?

ಶ್ರೀ ಕೆ. ಟಿ. ರಾಥೋಡ್.—ತಾವು ಆ ತಜ್ಞರ ಸಮಿತಿಯ ಮುಂದೆ ಈ ಸಲಹೆಯನ್ನ ಕೊಟ್ಟರೆ ಅವರು ಇದನ್ನು ಪರಿಶೀಲಿಸುತ್ತಾರೆ

(*ii*) *re* : enhancement of fares of M. S. R. T. C. luxury Services etc.,

Sri M. H. JAYAPRAKASH NARAYAN (Sirisi).—I call the attention of the Minister for Labour to the enhancement of fares of luxury services by M.S.R.T.C. and issue of permits for contract carriages on nationalised routes.

Sri AZEEZ SAIT (Minister for Labour).—I state as follows ;

1. The luxury services of Mysore State Road Transport Corporation are equipped and maintained with all modern amenities to provide maximum comforts to the travelling public. The fare charged by the Mysore State Road Transport Corporation for the luxury buses prior to enhancement was 0–30 paise for a stage of 6.4 Kms.

2. Due to rise in prices of chassis, spares and fuel, the operation cost had gone up considerably and it was becoming increasingly difficult to run services of M.S.R.T.C. on economic lines. It was all the more difficult in respect of luxury services, since the number of seats provided in luxury services are only between 30-34. In order to run the luxury services and to continue to provide maximum comforts to the travelling public, without sustaining loss, the M.S.R.T.C. was left with no alternative but to enhance the fares commensurate with the operational cost.

3. The fares were therefore enchanced from 0-30 paise to 0-40 paise for a stage of 6-4 Kms. with effect from 20-12-1972.

4. However, on the basis of representations from the travelling public, and to face the competition from private operators who began to under cut the rates of the M.S.R.T.C. the fares have been revised once again bringing them down from 0-40 paise to 0-35 paise for a stage of 6.4 Kms. with effect from 18–2–1973.

(SRI AZEEZ SAIT)

5. These rates are on par with the rates prevailing in most of the neighbouring States for similar services except Kerala which are slightly lower. The comparative rates are as follows:—

Kerala	...	4.5 Paise per Km.
Andhra Pradesh	...	5.75 Paise per Km.
Maharashtra	...	6.83 Paise per Km.
Mysore	...	5.47 Paise per Km.

6. It is no doubt a fact t at some of the contract carriage services operated by private operators are picking up and setting down passengers enroute on the nationalised routes in violation of the conditions of the permits. This has naturally affected the services and the earnings of the Mysore State Road Transport Corporation and also other stage carriage operators.

7. In order to put down these clandestine operations on the part of the private operators Government have taken the following measures :—

(i) Checking has been intensified by the Officers of Police and the Motor Vehicles Department. In addition 3 Joint Special Squads have been constituted by Government consisting of Officers drown from Police, Motor Vehicles Departments and the Police Officers deputed to M.S.R.T.C. These squads have started functioning from 15-6-1972 and have been doing very satisfactory work since then.

(ii) Rule 111 of the Mysore Motor Vehicles Rules, 1963 has been amended whereby (a) the Contract Carriage Operator has to carry a list in the bus indicating the passengers name and addresses included in the contract' duly attested by the Secretary, Regional Transport Authority, (b) the bus as a whole has to be hired and that a no individul seats to are be booked and (c) that no individual passenger who is not included in the contract shall be picked up or set down along the line of the route.

This rule has been challenged in the High Court and stay has been given by the High Court.

(iii) The other legislative measures which are at the final stage are local amendment of Sections 45 and 60 of the Motor Vehicles Act, 1939.

In order to have better control over the grant of contract carriage permits, the amendment of Section 45 of the Motor Vehicles Act, 1939 has been contemplated. With this amendment the power of granting contract carriage permits for vehicles plying in more than two regions will be vested in the State Transport Authority.

8. Since the existing penal measures in the Acts Rules had no desired effect in curbing the Violation of the conditions of the permit,

Section 60 of the M. V. Act, 1939 is proposed to be amended. This amendment provides for deterrent action. Second breach of the condition of the permit will result in suspension of the permit and the third breach will result in cancellation of the permit. The bill amending the Section will be introduced in the current Session of the Assembly.

9. With these measures and also the fareshaving been reduced from 0-40 Paise to 0-35 Paise for a stage of 6.4 Kms. it would be passible to get over the difficulties faced by the travelling public.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಲಕ್ಷುರಿ ಬಸ್‌ನಲ್ಲಿ ಆಗತಕ್ಕಂಥ ನಷ್ಟವನ್ನು ಸರಿದೂಗಿಸಲು 30 ಪೈಸೆ ಪರ್ ಸ್ಟೇಜು ಇದುದ್ದನ್ನು 40 ಪೈಸೆಗೆ ಏರಿಸಿ ನಂತರ 35 ಪೈಸೆಗೆ ಇಳಿಸಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಲಕ್ಷುರಿ ಬಸ್‌ಗೆ ಒಂದು ಸ್ಟೇಜಿಗೆ 30 ಪೈಸೆ ಇದ್ದಾಗ ಅದರ ಟೋಟಲ್ ಕಲೆಕ್ಷನ್ ಎಷ್ಟು; 40 ಪೈಸೆ ಇದ್ದಾಗ ಅದರ ಟೋಟಲ್ ಕಲೆಕ್ಷನ್ ಎಷ್ಟು; 35 ಪೈಸೆಗೆ ಇಳಿಸಿದಾಗ ಅದರ ಟೋಟಲ್ ಕಲೆಕ್ಷನ್ ಎಷ್ಟು? ಬಸ್ ದರವನ್ನು ಏರಿಸಿದ ತಕ್ಷಣ ಸಿರಸಿ, ಸಿದ್ದಾಪುರ, ಧಾರವಾಡ, ಹುಬ್ಬಳ್ಳಿ, ಶ್ರವಣಬೆಳಗೊಳಗಳಿಗೆ ಹೋಗತಕ್ಕ ಬಸ್ಸುಗಳಲ್ಲಿ ಜನರ ಸಂಖ್ಯೆ 30-34 ಇದುದ್ದು, 10-12ಕ್ಕೆ ಇಳಿದಿದೆ, ಇದು ತಮ್ಮ ಗಮನಕ್ಕೆ ಬಂದಿದೆಯೇ? ಪ್ರೈವೇಟ್ ಕ್ಯಾರೇಜಸ್ ಬಸ್‌ಗಳು ಬಸ್ ಸ್ಟ್ಯಾಂಡಿನಲ್ಲಿ ಪ್ಯಾಸೆಂಜರ್ಸ್ ಅನ್ನು ತುಂಬಿಕೊಂಡು, ಕಡಿಮೆ ಬೆಲೆಗೆ ಕರೆದುಕೊಂಡು ಹೋಗುತ್ತಾರೆ. ಇದರಿಂದ ಸ್ಟೇಟ್ ಟ್ರಾನ್ಸ್‌ಪೋರ್ಟ್ ಬಸ್ಸುಗಳಿಗೆ ಆಗತಕ್ಕ ನಷ್ಟವನ್ನು ವಿವರವಾಗಿ ಹೇಳುತ್ತೀರಾ?

ಶ್ರೀ ಅಜೀಜ್ ಸೇಟ್.—30 ಪೈಸೆಯಿಂದ 40 ಪೈಸೆಗೆ ಏರಿಸಿ ಮತ್ತೆ 35 ಪೈಸೆಗೆ ಒಂದು ಸ್ಟೇಜ್ ಎಂದು ಮೂರು ಹಂತಗಳಲ್ಲಿ ಚೇಂಜಸ್ ಆಗಿದೆ. ಇದರಿಂದ ನಷ್ಟ ಎಷ್ಟಾಗಿದೆ ಎಂದು ಮಾನ್ಯ ಸದಸ್ಯರು ವಿವರವನ್ನು ಕೇಳುತ್ತಿದ್ದಾರೆ. ಅದಕ್ಕೆ ಸಧ್ಯದಲ್ಲಿ ಅಂಕಿ ಅಂಶಗಳು ನನ್ನ ಹತ್ತಿರ ಇಲ್ಲ. 40 ಪೈಸೆಗೆ ಏರಿಸಿದ ಸಂದರ್ಭದಲ್ಲಿ M.S.R.T.C. have undergone sufficient loss. The passengers were not getting into our buses. Therefore the Board has taken a decision to reduce the enhanced fare.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಕ್ಯಾಂಡಿಸ್ಟೈನ್ ಆಪರೇಷನ್ ಅನ್ನು ತೆಗೆದುಹಾಕುವುದಕ್ಕೆ ಮೂರು ಮೆಷರ್ಸ್‌ಗಳನ್ನು ಕೊಟ್ಟಿದ್ದೀರಿ. ಇವನ್ನು ಇಂಟ್ರಡ್ಯೂಸ್ ಮಾಡಿದಮೇಲೆ, ನಿಮ್ಮ ಸ್ಕ್ವಾಡ್‌ನವರು ಎಷ್ಟು ಕೇಸುಗಳನ್ನು ಹಾಕಿದ್ದಾರೆ, ಎಷ್ಟು ತೀರ್ಮಾನವಾಗಿವೆ, ಎಷ್ಟು ಪನಿಷ್‌ಮೆಂಟ್ ಆಗಿದೆ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? 15-6-1972ರಿಂದ ಸ್ಕ್ವಾಡ್ ಚೆಕಿಂಗ್ ಇದೆ. ನಿಮ್ಮ ರೂಲ್ಸ್ ಪ್ರಕಾರ ಪ್ಯಾಸೆಂಜರ್ಸ್ ಲಿಸ್ಟ್ ಇರಬೇಕು, ಪ್ಯಾಸೆಂಜರ್ಸ್ ಇಷ್ಟು ಇರಬೇಕು ಎಂದು ಹೇಳುತ್ತೀರಿ ಅವರ ಹತ್ತಿರ ಲಿಸ್ಟ್ ಇರುವುದಿಲ್ಲ. ಮತ್ತು ಮಧ್ಯ ಪ್ಯಾಸೆಂಜೆರ್ಸ್ ಅನ್ನು ತೆಗೆದುಕೊಳ್ಳಕೂಡದು ಎನ್ನುವ ಕಂಡೀಷನ್ಸ್ ಇಟ್ಟಿದ್ದೀರಿ. ಆದರೆ ಮಧ್ಯದಲ್ಲೂ ಪ್ಯಾಸೆಂಜರ್ಸ್‌ನ್ನು ತೆಗೆದುಕೊಳ್ಳುತ್ತಾರೆ, ಇಂಥಾದ್ದಕ್ಕೆ ಕೇಸ್ ಹಾಕಬೇಕು ಎಂದು ತತ್ವ ಹೇಳುತ್ತೀರಿ, ಈಗ ಎಷ್ಟು ಕೇಸ್ ಬುಕ್ ಮಾಡಿದ್ದೀರಿ, ಎಷ್ಟು ಕ್ಯಾರೇಜಸ್ ಗನ್ನು ಸಸ್ಪೆಂಡ್ ಮಾಡಿದ್ದೀರಿ. ಎಷ್ಟು ಕ್ಯಾರೇಜಸ್‌ಗಳಲ್ಲಿ ಇಂಥ ನ್ಯೂನತೆಗಳನ್ನು ಕಂಡು ಹಿಡಿದಿದ್ದೀರಿ ಎನ್ನುವ ವಿವರ ಹೇಳುತ್ತೀರಾ?

ಶ್ರೀ ಅಜೀಜ್ ಸೇಟ್.—ನಾನು ಈ ಸದನದ ಸದಸ್ಯರಿಗೆ ಒಂದು ವಾರದ ಹಿಂದೆ ಪೂರ್ಣ ಆಗಿ ಒಂದು ನೋಟ್ ಬರೆದುಕೊಟ್ಟಿದ್ದೇನೆ. ಅದರಲ್ಲಿ 15-6-1972ರಿಂದ ಡಿಸೆಂಬರ್‌ವರೆಗೆ 2400ಕೇಸುಗಳನ್ನು ನಾವು ಡಿಟೆಕ್ಟ್ ಮಾಡಿದ್ದೇವೆ. ಪರ್ಮಿಟ್‌ಗಳನ್ನು ಕ್ಯಾನ್ಸಲ್ ಮಾಡಿದ್ದೇವೆ, ಪೆನಾಲ್ಟಿ ಇಂಪೋಸ್ ಮಾಡಿದ್ದೇವೆ. ಒಟ್ಟಿನಲ್ಲಿ ಮಾನ್ಯ ಸದಸ್ಯರು ಒಂದು ವಿಷಯವನ್ನು ತಿಳಿದುಕೊಳ್ಳಬೇಕಾಗಿದೆ. ಈ ಪರ್ಮಿಟ್ ವ್ಯವಹಾರ ಏನು ಇದೆಯೋ ಅದನ್ನು ನಾವು ಕಂಡುಹಿಡಿದು ಸಾಕಾಗಿದೆ. ಅನೇಕ ಡಿಸ್ಟ್ರಿಕ್ಟ್‌ನಲ್ಲಿ ಆರ್. ಟಿ. ಎ ಪರ್ಮಿಟ್ (ಸೀಸನ್) ಕೊಟ್ಟಿದ್ದಾರೆ. ಪಕ್ಕಾ ಪರ್ಮಿಟ್ ಕೊಟ್ಟಿದ್ದಾರೆ. 3-5 ವರ್ಷದ ಪರ್ಮಿಟ್ ಅನ್ನು ಕೊಡುವ ಅಧಿಕಾರ ಅವರಿಗೆ ಇದೆ. ನಾವು ಅದನ್ನು ಕಂಡುಹಿಡಿದು ತಡೆಗಟ್ಟುವ ಹಾಗಿಲ್ಲ. ಅವರಿಗೆ ಪರ್ಮಿಟ್ಸ್ ಅನ್ನು ಕೊಡಬೇಡಿ ಎಂದು ಹೇಳುವ ಅಧಿಕಾರ ನಮಗಿಲ್ಲ. ಅದಕ್ಕೆ ನಾವು ಒಂದು ಅಮೆಂಡ್‌ಮೆಂಟ್ ಈ ಸದನದಲ್ಲಿ ಈ ಅಧಿವೇಶನ ಮುಗಿಯುವುದರೊಳಗೆ ತೆಗೆದುಕೊಂಡು ಬರಬೇಕು ಎಂದು ಇದ್ದೇನೆ. ಇಂಥ ಒಂದು ಅಮೆಂಡ್‌ಮೆಂಟ್ ಅನ್ನು ತೆಗೆದುಕೊಂಡು ಬಂದರೆ, ನಾವು ಆರ್. ಟಿ. ಎ ಮತ್ತು ಎಸ್.

(ಶ್ರೀ ಅಜೀಜ್ ಸೇಟ್)

ಟಿ. ಎ. ಗಳನ್ನು ಸ್ವಲ್ಪ ಕಂಟ್ರೋಲ್ ಮಾಡಬಹುದು ಎಂದು ಹೇಳುತ್ತಿದ್ದೇನೆ. ಈಗ ಎರಡು ಸ್ಕ್ವಾಡ್ಸ್ ಇಟ್ಟಿದ್ದೇವೆ, ಇನ್ನೂ ಮೂರು ಸ್ಕ್ವಾಡ್ ಜಾಸ್ತಿ ಮಾಡಿದ್ದೇವೆ. ಎಷ್ಟೆಷ್ಟು ಕೇಸುಗಳನ್ನು ಹಿಡಿದಿದ್ದೇವೆ ಎಂದು ವಿವರಗಳನ್ನು ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಕಂಟ್ರ್ಯಾಕ್ಟ್ ಕ್ಯಾರೇಜಸ್ ಬಗ್ಗೆ ಉತ್ತರ ಕೊಟ್ಟಿದ್ದೀರಿ. ನಮ್ಮ ರಾಜ್ಯದಲ್ಲಿ ಲಕ್ಷುರಿ ಬಸ್ಸುಗಳು ಎಷ್ಟು ಚೆನ್ನಾಗಿವೆಯೋ ಅಷ್ಟೇ ಅಲಂಕಾರವಾಗಿ ಕಂಟ್ರ್ಯಾಕ್ಟ್ ಬಸ್ಸುಗಳು ಇವೆ. ಇವತ್ತಿನದಿವಸ ಅವರು ಕಡಿಮೆ ರೇಟಿನಲ್ಲಿ ಜನರನ್ನು ತುಂಬಿಸಿಕೊಂಡು ಹೋಗುತ್ತಾ ಇರುವುದು. ನ್ಯಾಷನಲೈಸ್ಡ್ ರೂಟ್ಸ್‌ನಲ್ಲಿ ಬೇರೆಯವರು ಹೋಗಕೂಡದು ಅಂಥ ಕಡೆಗಳಲ್ಲಿಯೂ ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗಳು ಹೋಗುತ್ತಾ ಇರುವುದು ಗಮನಕ್ಕೆ ಬಂದಿರುವುದರಿಂದ, ಎಂ. ಎಸ್. ಆರ್ ಟಿ. ಸಿ. ಗೆ ನಷ್ಟ ಆಗುತ್ತಾ ಇರುವುದರಿಂದ ಎಲ್ಲಾ ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗಳನ್ನು ಸರ್ಕಾರವೇ ತೆಗೆದುಕೊಂಡು, ನಡೆಸುವ ಧೋರಣೆ ಇದೆಯೇ ?

ಶ್ರೀ ಅಜೀಜ್ ಸೇಟ್.—ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗಳು ನ್ಯಾಷನಲೈಸ್ಡ್ ರೂಟ್ಸ್‌ನಲ್ಲಿ ಓಡಾಡುವುದು ಸರ್ಕಾರದ ಗಮನಕ್ಕೆ ಬಂದಿದೆ. ಮಾನ್ಯ ಸದಸ್ಯರ ಗಮನಕ್ಕೆ ನಾನು ಒಂದು ವಿಚಾರವನ್ನು ತರಬೇಕಾಗಿದೆ ಏನೆಂದರೆ, ಈ ಕಂಟ್ರ್ಯಾಕ್ಟ್ ಕ್ಯಾರೇಜಸ್ ಏನು ಇವೆಯೋ, ಇವು ಯಾವ ದಿಕ್ಕಿನಲ್ಲಿ, ಯಾವ ರೂಟಿನಲ್ಲಿ, ಯಾವ ಟೈಮ್ ಹೋಗಬೇಕು ಎನ್ನುವುದು ಏನೂ ಇಲ್ಲ. ಮೋಟಾರ್ ವೆಹಿಕಲ್ಸ್ ಆಕ್ಟ್ ಏನು ಇದೆ ಅದು ಸೆಂಟ್ರಲ್ ಆಕ್ಟ್ ನ್ಯಾಷನಲೈಸ್ ಮಾಡುವ ವಿಷಯದಲ್ಲಿ ನಮ್ಮ ಅಭಿಪ್ರಾಯ ಏನೆಂದರೆ, ಈ ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗಳು ಏನು ಇವೆ ಇವನ್ನು ಎಂ. ಎಸ್. ಆರ್. ಟಿ. ಸಿ. ಯವರಾಗಲಿ, ಟೂರಿಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರಾಗಲೀ ಒಂದು ಕಾಂಪ್ರಹೆನ್ಸೀವ್ ಸ್ಕೀಂ ಮಾಡಿ ತೆಗೆದುಕೊಳ್ಳುವ ಹಾಗಿದ್ದರೆ ಅದಕ್ಕೆ ನಾನು ಮೊದಲು ತಲೆ ಬಾಗುತ್ತೇನೆ. ಕಂಟ್ರ್ಯಾಕ್ಟ್ ಕ್ಯಾರೇಜಸ್ ಇಂದ ಎಂ. ಎಸ್. ಆರ್. ಟಿ. ಸಿ. ಗೆ ಸಾಕಷ್ಟು ನಷ್ಟವಾಗುತ್ತಾ ಇದೆ. ನಷ್ಟವಾಗುತ್ತಾ ಇಲ್ಲ ಎಂದು ನಾನು ಹೇಳಲಿಲ್ಲ. ಇದರ ಜೊತೆಗೆ ಇಂಟರ್ ಸ್ಟೇಟ್ ಪರ್ಮಿಟ್ಸ್ ಅನ್ನು ನ್ಯಾಷನಲೈಸ್ ಮಾಡಬೇಕು ಎಂದು ಹೇಳಿ, ಒಂದು ಕಾಂಪ್ರಹೆನ್ಸೀವ್ ಸ್ಕೀಂ ಕಳುಹಿಸಿ ಎಂದು ಹೇಳಿದ್ದೇವೆ. ಹೇಗೆ ಪ್ರೈವೇಟ್ ಆಪರೇಟರ್ಸ್ ಪರ್ಮಿಟ್ ತೆಗೆದುಕೊಳ್ಳುತ್ತಾರೋ, ಹೇಗೆ ಅಪ್ಲಿಕೇಷನ್ ಹಾಕುತ್ತಾರೋ ಅದೇ ರೀತಿ ಎಂ. ಎಸ್ ಆರ್. ಟಿ. ಸಿ. ಯವರು ಅಪ್ಲೈ ಮಾಡಬೇಕು. ಮಾನ್ಯ ಸದಸ್ಯರು ಈ ಎಲ್ಲಾ ವಿಷಯಗಳನ್ನು ಕೇಳುವುದಕ್ಕೆ ಮೊದಲು ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೆ, ಅವರು ಮೋಟಾರ್ ವೆಹಿಕಲ್ಸ್ ಆಕ್ಟನ್ನು ಸ್ವಲ್ಪ ಅಭ್ಯಾಸ ಮಾಡಿ, ತಿಳಿದುಕೊಂಡು ಹೇಳಲಿ. ನಾನು ಸಹಾಯ ಮಾಡುವ ಹಾಗಿದ್ದರೆ, ನನ್ನ ಕಡೆಯಿಂದ ಸಹಾಯ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ, ಯಾವುದೋ ಒಂದು ವಿಷಯದಲ್ಲಿ ತಾವು ಈ ರೀತಿಯಾಗಿ ಹೇಳುತ್ತಾ ಇದ್ದೀರಿ. ಇದರಿಂದ ನ್ಯಾಷನಲೈಸ್ ಮಾಡುವುದಕ್ಕೆ ಅಡ್ಡಿ ಆತಂಕಗಳು ಬರುವಂಥ ಸಂದರ್ಭ ಹುಟ್ಟುತ್ತದೆ. ನಾನು ಇದ್ದ ವಿಷಯವನ್ನು ಇದ್ದ ಹಾಗೆ ಇಡುತ್ತೇನೆ. ನಿಮ್ಮ ಮನಸ್ಸಿನಲ್ಲಿ ಏನು ಇದೆ ಅದನ್ನು ಹೇಳುವುದಕ್ಕೆ ಬರುವುದಿಲ್ಲ. ನ್ಯಾಷನಲೈಸ್ ಮಾಡಬೇಕಾದರೆ, if the house so desire I am prepared to have a Bill to take not only the permits but also the private vehicles. I am awaiting for an opportunity to see to it. In Madras the Minister for Transport, I am told, is contemplating to bring such a Bill. I have already discussed with him. I have told him to send a copy of the Bill immediately after it is introduced, so that we can also examine. This is not the worry of my own. Even in the Conference of Transport Ministers and Transport Commissioners at Coimbatore, I suggested certain amendments to Security Act, which is a Central Act, and the Conference have sent certain recommendations. The Government of India has to do much in the matter, I can bring law and overcome the shortage of chassis by paying compensation as per technical opinion.

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು ಹೇಳುವಾಗ ಆರ್.ಟಿ.ಎ. ಮತ್ತು ಎಸ್.ಟಿ.ಎ. ಗಳನ್ನು ಇಂಡಿಪೆಂಡೆಂಟ್ ಆಗಿ ಬಿಟ್ಟಿದ್ದೇವೆ, ನಿರ್ಣಯ ತೆಗೆದುಕೊಳ್ಳುವಾಗ ನಾವು ಯಾವುದೇ ತರಹ ಒತ್ತಡ ತರುವುದಕ್ಕೆ ಆಗುವುದಿಲ್ಲ, ಕಂಟ್ರ್ಯಾಕ್ಟ್ ಕ್ಯಾರೇಜಸ್ ಬಗ್ಗೆ ಎಲ್ಲಾ ಸದಸ್ಯರಿಗೆ

ವಿವರಣೆಯನ್ನು ಒದಗಿಸಿದ್ದೇವೆ ಎಂದು ಹೇಳಿದರು. ಒಂದು ವಿವರಣೆಯನ್ನು ಕೊಡುವುದಕ್ಕೆ ಸಾಧ್ಯವಿದ್ದರೆ, ಮಂತ್ರಿಗಳು ಕೊಟ್ಟರೆ, ನಾವು ಒಂದು ನಿರ್ಣಯಕ್ಕೆ ಬರುವುದು ಸಾಧ್ಯ, ಏನೆಂದರೆ 1971-72ರಲ್ಲಿ ಎಷ್ಟು ಕಂಟ್ರಾಕ್ಟ್ ಕ್ಯಾರೇಜಸ್‌ಗಳಿಗೆ ಆರ್. ಟಿ. ಎ. ಮತ್ತು ಎಸ್. ಟಿ. ಎ. ಅವರು ಪರ್ಮಿಟ್ಸ್ ಕೊಟ್ಟಿದ್ದಾರೆ; 1972-73ರಲ್ಲಿ ಎಷ್ಟು ಪರ್ಮಿಟ್ಸ್ ಕೊಟ್ಟಿದ್ದಾರೆ? ಈ ಅಂಕಿ ಅಂಶಗಳನ್ನು ಕೊಡುವುದಕ್ಕೆ ಸಾಧ್ಯವೇ?

2-30 P. M

ಶ್ರೀ ಅಜೀಜ್ ಸೇಟ್.—ಮೊನ್ನೆ ಮಾನ್ಯ ವಿರೋಧಪಕ್ಷದ ನಾಯಕರು what is achieved by the Government of Mysore is giving permits to contract carriages ಎಂದು ಹೇಳಿದರು. ಕೂಡಲೇ ನಾನು I have asked the Home Secretary to get me details as to how many permanent contracts and temporary contracts have been issued by each RTA/RTO in the State of Mysore ಎಂದು ಹೇಳಿದ್ದೇನೆ. ಅದು ಬಂದ ತಕ್ಷಣ ಸ್ಟೇಟ್‌ಮೆಂಟ್ ವನ್ನು ಸದಸ್ಯರಿಗೆ ಕೊಡುವುದಕ್ಕೆ ತಯಾರಿದ್ದೇನೆ. ಇನ್ನು ಒಂದು ವಿಷಯ ಏನು ಎಂದರೆ ನಾನು ಹೇಳುವುದನ್ನು ತೆಗೆದುಕೊಳ್ಳುವುದು ಬೇಡ. ಅದು semi-quasi judicial body ಆದ್ದರಿಂದ ದಯವಿಟ್ಟು ಮೋಟಾರ್ ವೆಹಿಕಲ್ ಆಕ್ಟ್ ಅಭ್ಯಾಸ ಮಾಡಿಕೊಂಡು ಅನಂತರ ನನ್ನ ಮೇಲೆ ಏನು ಬೇಕಾದರೂ ಅಬ್ಜೆಕ್ಷನ್ ಹೇಳಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಮಂತ್ರಿಗಳು ಹೇಳಿದ ಪ್ರಕಾರ ಮೋಟಾರ್ ವೆಹಿಕಲ್ಸ್ ಆಕ್ಟ್ ತಿದ್ದುಪಡಿ ತರಬೇಕೆಂದು ಮನಸ್ಸು ಇದೆ ಆದರೆ ಏನೋ ತೊಂದರೆಗಳು ಇದೆ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ವಿರೋಧಪಕ್ಷದ ವತಿಯಿಂದ ಯಾವ ತೊಂದರೆಯನ್ನು ವ್ಯಕ್ತಪಡಿಸಿಲ್ಲ. ಮತ್ತು ಯಾರೂ ಅದನ್ನು ತರಬಾರದು ಎಂದು ಹೇಳಲಿಲ್ಲ. ಅವರಿಗೆ ತರತಕ್ಕ ಧೈರ್ಯ ಇದ್ದರೆ ನಾಳೆ ತರಲಿ. ನಾವು ವಿರೋಧಪಕ್ಷದ ಸದಸ್ಯರು ತರಬಾರದ ರೀತಿಯಲ್ಲಿ ತಡೆ ಹಿಡಿದಿದ್ದೇವೆ ಎನ್ನುವ ಹಾಗೆ ಮೋಟಾರ್ ವೆಹಿಕಲ್ಸ್ ಆಕ್ಟ್ ಸ್ಟಡಿ ಮಾಡಿ ಎಂದು ಹೇಳುತ್ತಾರೆ. ನಿಮಗೆ ಜವಾಬ್ದಾರಿ ಕೊಟ್ಟಿದ್ದೇವೆ, ನೀವು ಮಂತ್ರಿಗಳು ನಾಳೆ ತನ್ನಿ ಸದನ ಏನು ತೀರ್ಮಾನ ಕೊಡುತ್ತದೆ ಆ ತೀರ್ಮಾನಕ್ಕೆ ಭಾಗಿಯಾಗಿ.

ಶ್ರೀ ಅಜೀಜ್ ಸೇಟ್.—ನಾನು ಯಾವ ಭಾಷೆಯಲ್ಲಿ ಹೇಳಿದೆನೋ ಅದು ನನಗೆ ಅರ್ಥವಾಗಿದೆ. ಮಾನ್ಯ ಸದಸ್ಯರಿಗೆ ನಾನು ಹೇಳಿದ ಅರ್ಥ ಗೊತ್ತಾಗದೆ ಇದ್ದರೆ ಇನ್ನೊಮ್ಮೆ ಹೇಳುತ್ತೇನೆ. ಅಮೆಂಡ್‌ಮೆಂಟ್ ತರುವುದಕ್ಕೆ ಅಡ್ಡಿಯಿಲ್ಲ ಈಗ ತಾನೇ ಕಾಲ್ ಅಟೆನ್‌ಷನ್ ನೋಟೀಸಿಗೆ ಉತ್ತರ ಹೇಳುವ ಸಮಯದಲ್ಲಿ ಪ್ರತಿಯೊಂದೂ ಹೇಳಿದ್ದೇನೆ.

I want you to hear me once again as regards what I have said. "Rule 111 of the Mysore Motor Vehicles Rules, 1963 has been amended whereby (a) the Contract Carriage Operator has to carry a list in the bus indicating the passenger's name and addresses included in the contract, duly attested by the Secretary, Regional Transport Authority, (b) the bus as a whole has to be hired and that no individual seats are to be booked and (c) that no individual passenger who is not included in the contract shall be picked up or set down along the line."

This has been challenged by some of the private operators in the High Court of Mysore and they have got stay order.

"The other legislative measures which are at the final stage are local amendment of Sections 45 and 60 of the Mysore Vehicles Act." The Bill amending these sections will be introduced in the current session of this Assembly. I have not said that there is any difficulty. Before this Session I am bringing this amending Bill before this House. I am very keen to do it,

Sri H. D. DEVE GOWDA.—By the proposed amendment of that particular section, what you are now contemplating is to take away the power of the R. T. A. and give to the S. T. A. That does not solve the problem. As you put it, the S. T. A. is also a quasi body. Can you ask the S. T. A. not to issue any permit if you get that power? That is why we have come to the conclusion that after this Ministry came into power, a large number of permits for contract carriages was issued ; that is our impression. Unless you make it clear with facts and figures, that doubt will not go out of our mind. I want the number of contract carriage permits issued durding this period. You said that we should study the Act. There is no need to study the Act We know that. That Act also existed previous to this Ministry coming into power. That is not a new Act. That is an old Act. Why so many permits were not issued earlier, before you came to power and why were so many permits issued now ?

Sri AZEEZ SAIT.—Why do you ca me to that conclusion

Sri M. S. KRISHNAN.—In addition to what the hon. Member said, the Amendment which you are contemplating to bring......

MADAM SPEAKER.—When I am as king Sri Siddappa to sit down why does Sri M. S. Kristnan get up and talk. Let him sit down.

ಶ್ರೀ ಎಚ್. ಎಸ್. ಸಿದ್ದಪ್ಪ.—ಎಸ್. ಟಿ. ಎ. ಮತ್ತು ಆರ್. ಟಿ. ಎ. ನಲ್ಲಿ ನಿಮ್ಮ ಸರ್ಕಾರದ ಅಧಿಕಾರಿಗಳು ಇದ್ದಾರೆ. ನೀವು ಅಮೆಂಡ್‌ಮೆಂಟ್ ತರುವುದರ ಬಗ್ಗೆ ನನ್ನ ಅಭ್ಯಂತರವಿಲ್ಲ. ಎಸ್. ಟಿ. ಎ. ಮತ್ತು ಆರ್. ಟಿ. ಎ. ನಲ್ಲಿ ನಿಮ್ಮ ಪಕ್ಷದ ಸದಸ್ಯರು ಇದ್ದಾರೆ. ಅವರಿಗೆ ಹೀಗೆ ಮಾಡಬೇಡಿ ಎಂದು ಹೇಳುವ ಚೈತನ್ಯ ನಿಮಗೆ ಇಲ್ಲವೇ ! ನೀವು ಹೇಳಿದರೆ ಜಿಲ್ಲಾಧಿಕಾರಿಗಳು ಮತ್ತು ಆರ್. ಟಿ. ಓ. ನಿಮ್ಮ ಮಾತು ಕೇಳುವುದಿಲ್ಲವೇ ? ನೀವು ಏತಕ್ಕೆ ಹೇಳಬಾರದು ! ಎಸ್. ಟಿ. ಎ. ಮತ್ತು ಆರ್. ಟಿ. ಓ. ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ದೇವಸ್ಥಾನ ಕಟ್ಟಿಸುವುದಕ್ಕೆ, ಮದುವೆ ಮಾಡುವುದಕ್ಕೆ ಹಣ ತೆಗೆದುಕೊಂಡು ಒಂದೊಂದು ಪರ್ಮಿಟ್ ಕೊಡುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿಲ್ಲವೇ ! ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲವೇ ? ತೆಗೆದುಕೊಳ್ಳದೆ ಹೋದರೆ ನೀವು ಅದರಲ್ಲಿ ಭಾಗಿ ಆಗುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ಎಸ್. ಟಿ. ಎ. ಮತ್ತು ಆರ್. ಟಿ. ಎ. ನಲ್ಲಿ ನಡೆಯುತ್ತಾ ಇರುವ ಲಂಚಗುಳಿತನದ ಹಾವಳಿ ಬೇರೆ ವಿಷಯ. ನೀವು ಯೋಚನ ಮಾಡುವ ತಿದ್ದುಪಡಿ ಏನು ಇದೆ ಆ ತಿದ್ದುಪಡಿಯಿಂದ ಮೂಲಭೂತವಾದ ತೊಂದರೆಗಳು ತಪ್ಪುವುದಿಲ್ಲ ಎಂದು ನಾವು ಅಭಿಪ್ರಾಯಕ್ಕೆ ಬರಬಹುದೇ ! ಮೂಲಭೂತವಾಗಿ ಕಾಂಟ್ರಾಕ್ಟ್ ಕ್ಯಾರೇಜಸ್ ತೆಗೆದು ಹಾಕುವುದಕ್ಕೆ ಬಿಲ್ಲು ತರುವುದಕ್ಕೆ ತಯಾರಿದ್ದೀರಾ ? ಈ ತರಹ ಬಿಲ್ ಯಾತಕ್ಕೆ ತೆಗೆದುಕೊಂಡು ಬರಬೇಕು ! ಹುಚ್ಚಾಪಟ್ಟೆ ಅಮೆಂಡ್‌ಮೆಂಟ್ ಏತಕ್ಕೆ ತೆಗೆದುಕೊಂಡು ಬರಬೇಕು ಎಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮೋಟಾರ್ ವೆಹಿಕಲ್ಸ್ ಆಕ್ಟ್ ಸೇಂಟ್ರಲ್ ಆಕ್ಟ್ ಎಂದು ಉತ್ತರ ಕೊಟ್ಟಿದ್ದೀರಾ. ಅದೇ ಮಾತನ್ನು ಕೂಡ ಈಗಿನ ಮಂತ್ರಿಗಳು ಹೇಳುತ್ತಾ ಇದ್ದೀರಿ. ಸೇಂಟ್ರಲ್ ಆಕ್ಟ್ ಪ್ರಕಾರ ಪರ್ಮಿಟ್ ಕೊಡುವುದನ್ನು ಖಂಡಿತ ನಿಮಗೆ ನಿಲ್ಲಿಸುವುದಕ್ಕೆ ಉದ್ದೇಶ್ಯವಿಲ್ಲ. ಯಾವ ಯಾವ ವಿಧದಲ್ಲಿ ಯಾರು ಯಾರಿಗೆ ಅವರ ಪಕ್ಷದ ಉದ್ದೇಶ್ಯದಿಂದ ಕೊಡುತ್ತಾರೋ ಅವರ ಮೇಲೆ ನೀವು ಅಧಿಕಾರ ಮಾಡುವ ಹಾಗಿಲ್ಲ. ಕೇಂದ್ರ ಸರ್ಕಾರದ ಆಕ್ಟ್ ತಿದ್ದುಪಡಿ ಮಾಡಬೇಕು ಎಂದು ಹೇಳಬಹುದು. ಅಲ್ಲಿರತಕ್ಕ ಅಧಿಕಾರ ಇಲ್ಲಿಗೆ ಕೊಟ್ಟರೆ ಏನು ಪ್ರಯೋಜನವಿಲ್ಲ, ನಮ್ಮ ಮೂಲ ಉದ್ದೇಶ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಇದಕ್ಕೆ ಅವಕಾಶ ಇಲ್ಲದ ಹಾಗೆ ಮಾಡುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು.- ಇದು ಏನು ಭಾಷಣ ಮಾಡುತ್ತಿದ್ದೀರಿ ಕಾನೂನು ಪ್ರಕಾರ ಕಾಲಿಂಗ ಅಟೆನ್‌ಷನ್ ನೋಟೀಸ್ ಮೇಲೆ 2-3 ಕ್ಲಾರಿಫಿಕೇಷನ್ಸ್ ?ಬಹುದು. ಮೀರಿದರೆ 4-5 ಕೇಳ್ವ

ಬಹುದು. ಅದುಬಿಟ್ಟು 25 ಕ್ಲಾರಿಫಿಕೇಷನ್ಸ್ ಕೇಳಿದರೆ ಹೇಗೆ ? ಇದಕ್ಕೆ ಕಾಲಿಂಗ್ ಅಟೆನ್‌ಷನ್ ಎಂದು ಹೆಸರೇ ?

ಶ್ರೀ ಎಚ್. ಡಿ. ದೇವೇಗೌಡ.— ಇದು ನಮ್ಮ ಗ್ರಹಚಾರ. ರೂಲ್ 59ರ ಕೆಳಗೆ ಚರ್ಚೆ ಮಾಡಬೇಕು, ಮಾಡುವುದಕ್ಕೆ ಆಗುವುದಕ್ಕೆ ಆಗುವುದಿಲ್ಲ. 49ರ ಕೆಳಗೆ ಎರಡೂವರೆ ಗಂಟೆ ಚರ್ಚೆ ಮಾಡಬಹುದು, ಅದಕ್ಕೆ ಅಪ್ಪಣೆ ಕೊಡುವುದಿಲ್ಲ. ಆಗ ನಾವು ಏನು ಮಾಡಬೇಕಾಗುತ್ತದೆ ? ಇಂಥಾ ಗಹನವಾದ ವಿಷಯದ ಬಗ್ಗೆ ಚರ್ಚೆಯಾಗುತ್ತದೆ. ಇದಕ್ಕೆ ಉತ್ತರ ಬರುವ ಸನ್ನಿವೇಶ ಇಲ್ಲ ಎಂದು ತಿಳಿದುಕೊಂಡು ಔಟ್ ಆಫ್ ವೇ ಹೋಗುತ್ತೇವೆ. ಹೆಚ್ಚು ಕ್ಲಾರಿಫಿಕೇಷನ್ಸ್ ಕೇಳುವುದಕ್ಕೆ ಅವಕಾಶವಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ 30 ಕೋಟಿ ರೂಪಾಯಿ ಬಂಡವಾಳ ಹೂಡಿದಂತಹ ಈ ಸಂಸ್ಥೆ ಪರಿಸ್ಥಿತಿ ಏನು ಎಂದು ಯೋಚನೆ ಮಾಡಬೇಕು.

ಅಧ್ಯಕ್ಷರು.— ಅದರ ಡಿಮ್ಯಾಂಡ್ ಬರುತ್ತದೆ. ನೀವೇ ಹೀಗೆ ಮಾತನಾಡಿದರೆ ಹೇಗೆ ಆಗುತ್ತದೆ? ಅದರ ಡಿಮ್ಯಾಂಡ್ ಚರ್ಚೆಮಾಡುವ ಕಾಲದಲ್ಲಿ ಇದರ ಮೇಲೆ ಮಾತನಾಡುವುದಕ್ಕೆ ಅವಕಾಶ ಇದ್ದರೂ ಕೂಡ ನಮ್ಮ ಗ್ರಹಚಾರ ಹೀಗಾಗಿದೆಯೆಂದು ಹೇಳಿದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ಜನರಲ್ ಡಿಸ್‌ಕಷನ್‌ನಲ್ಲಿ ನಾವು ಏನು ಒಂದು ಮಾತನಾಡಿದರೂ ಜನರಲ್ ಆಗಿ ಉತ್ತರ ಕೊಡುತ್ತಾರೆ !

ಶ್ರೀ ಎಚ್. ಎಸ್. ಸಿದ್ದಪ್ಪ.—ಡಿಮ್ಯಾಂಡ್ಸ್ ಬಂದಾಗ ಸಂಬಂಧಪಟ್ಟ ಮಂತ್ರಿಗಳು ಇರುವುದಿಲ್ಲ. ಸುಮ್ಮನೆ ಯಾರೋ ಬರೆದುಕೊಳ್ಳುವುದು, ಮನಸ್ಸಿಗೆ ಬಂದ ಹಾಗೆ ಹೇಳುವುದು, ಈ ರೀತಿ ಆಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.— ಹೋದ ವರ್ಷ ಇದರ ಬಗ್ಗೆ ಚರ್ಚೆಯಾಯಿತು. ಯಾವ ವಿಧವಾದ ಗಮನವನ್ನೂ ಮಾನ್ಯ ಸಚಿವರು ಕೊಟ್ಟಿಲ್ಲ. ಅವರು ಮಂತ್ರಿಗಳಾದ ಮೇಲೆ ಪ್ರೈವೇಟ್ ಕ್ಯಾರೇಜಸ್ ನೂರಾರು ಹೆಚ್ಚಾಗಿವೆ. ಆದ್ದರಿಂದ ಇದಕ್ಕೆ ಅವರೇ ಜವಾಬ್ದಾರಿಯಿಂದ ಹೇಳಬೇಕಾಗಿ ಬರುತ್ತದೆ. ಅವರು ಮಂತ್ರಿಗಳಾದ ಮೇಲೆ ಇಷ್ಟು ಹೆಚ್ಚಾಗುವುದಕ್ಕೆ ಕಾರಣವೇನು ?

Sri AZEEZ SAIT.—I take strong objection. If my Hon'ble friend has information that I have issued permits, let him put it in writing and give it to the Speaker which are the buses for which I have given permit.

ಶ್ರೀ ಕೆ. ಎಚ್. ಹನುಮೇಗೌಡ.—ಹಿಂದಿನ ಮಂತ್ರಿಮಂಡಲವಿದ್ದಾಗ ಇದ್ದುದಕ್ಕಿಂತ ಹೆಚ್ಚಾಗಿ ನೂರಾರು ಪ್ರೈವೇಟ್ ಕ್ಯಾರೇಜ್ ಬಸ್ಸುಗಳಿಗೆ ಪರ್ಮಿಟ್‌ಗಳನ್ನು ಕೊಡಬೇಕಾದರೆ ಅದಕ್ಕೆ ಕಾರಣವೇನು ?

ಎರಡನೆಯದಾಗಿ ಪ್ರೈವೇಟ್ ಕ್ಯಾರೇಜುಗಳು ರೋಡ್ ಟ್ರಾನ್ಸ್‌ಪೋರ್ಟ್ ಲಕ್ಷುರಿ ಬಸ್ಸುಗಳಿಗಿಂತ ಹೆಚ್ಚು ಅನುಕೂಲ ಕೊಟ್ಟು, ಕಡಿಮೆ ರೇಟಿನಲ್ಲಿ ಪ್ರಯಾಣಿಕರನ್ನು ಒಯ್ಯುತ್ತ ಬಸ್ಸುಗಳನ್ನು ಓಡಿಸಿ ಲಕ್ಷಾಂತರ ರೂಪಾಯಿ ಫಾಯಿದೆ ಮಾಡುತ್ತ ಇರಬೇಕಾದರೆ ಸರ್ಕಾರಿ ಬಸ್ಸುಗಳಲ್ಲಿ ನಷ್ಟವಾಗುವುದಕ್ಕೆ ಕಾರಣವೇನು ? ಇದಕ್ಕೆಲ್ಲ ಜವಾಬ್ದಾರರು ಸಂಬಂಧಪಟ್ಟ ಮಂತ್ರಿಗಳು ಆಗಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಮಂತ್ರಿಗಳು ಬರೆದು ಕೊಡಬೇಕೆಂದು ಚಾಲೆಂಜ್ ತಗೆದುಕೊಂಡರು. ಎಸ್. ಟಿ. ಎ. ಗೆ ಸ್ವತಂತ್ರವಾದ ಕೆಲವು ನಿಯಮಗಳಿದ್ದರೂ ಕೂಡ ಟ್ರಾನ್ಸ್‌ಪೋರ್ಟ್ ಕಮೀಷನರನ್ನು ಮೂರು ಮೂರು ತಿಂಗಳಿಗೆ ವರ್ಗ ಮಾಡಿರುವ ಪ್ರಸಂಗಗಳಿವೆ. ಮಂತ್ರಿಗಳ ಆಜ್ಞೆಯಂತೆ ನಡೆಯದೆ ಹೋದರೆ ಮೂರು ಮೂರು ತಿಂಗಳಿಗೇ ವರ್ಗ ಮಾಡುತ್ತಾರೆ.

Sri AZEEZ SAIT.—You please substantiate your charge.

Sri H. D. DEVE GOWDA.—What made you transfer the Transport Commissioner within three months ? Is that the way to run the administration ? what shall we call it ?

ಶ್ರೀ ವಾಟಾಳ್ ನಾಗರಾಜ್.—ಆರೋಪ ಮಾಡುತ್ತಿರುವಾಗ ಸಚಿವರು ಸಾವಧಾನದಿಂದ ಕೇಳಬೇಕು. ಅದನ್ನು ಬಿಟ್ಟು ಗರಡಿ ಮನೆಯಲ್ಲಿ ಮಾಡುವಂತೆ ಮಾಡಬಹುದೇ ? ನಮ್ಮಲ್ಲಿರುವ ಸಮಾಚಾರವನ್ನು ಹೇಳುತ್ತಿದ್ದೇವೆ. ಅವನ್ನು ತಿಳಿದುಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—'ಬೇಲಿ ಎದ್ದು ಹೊಲ ಮೇಯಿತು' ಎನ್ನುವ ಹಾಗೆ ಆಗಿದೆ. ಜವಾಬ್ದಾರಿ ಇರುವವರು ಹೀಗೆ ಮಾತನಾಡುವುದು ಉಚಿತವೇ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಗಾಜಿನ ಮನೆಯಲ್ಲಿ ವಾಸ ಮಾಡುತ್ತಿರುವ ಮಂತ್ರಿಗಳು ಇಷ್ಟು ಸೂಕ್ಷ್ಮವಾದರೆ ಬಂಡೆ ಮನೆಯಲ್ಲಿ ವಾಸಮಾಡುತ್ತಿರುವ ಜನ ಏನು ಮಾಡಬೇಕು ?

Sri H. M. CHANNABASAPPA (Minister for Public Works and Electricity).—I am on a point of order Madam Speaker and it is only this : This house will be able to hear and also appreciate the discussion if one member speaks at a time If half a-dozen members begin to speak simultaneously, it would be difficult for Government and Members on this side of the House to follow what is going on. Therefore, I would submit that it is not in order for half-a-dozen members to get up and speak.

ಅಧ್ಯಕ್ಷರು.—ಏನು ನಡೆಯುತ್ತಿದೆ ಎಂದು ನನಗೂ ಅರ್ಥವಾಗುವುದಿಲ್ಲ. ದಯಮಾಡಿ ಒಬ್ಬೊಬ್ಬರೇ ಮಾತನಾಡಿದರೆ ಒಳ್ಳೆಯದು. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್, ಕೋಣಂದೂರು ಲಿಂಗಪ್ಪ, ದೇವೇಗೌಡ, ಆರುಮುಗಂ ಹೀಗೆ ಎಲ್ಲರಿಗೂ ಉತ್ಸಾಹ ಒಟ್ಟಿಗೇ ಬಂದರೆ ಹೇಗೆ ?

Sri C M. ARUMUGHAM.—Madam Speaker, I want to bring this point to your kind notice. In the House it is a debate. When we make a debate, could it be right on the part of the Minister concerned to throw a challenge against the Member. The debate in the House as the Hon. Minister knows is something like a debate in the Court when you argue the case. There is no challenge. I am asking the Speaker whether the Minister can throw the challenge.

Sri K. PUTTASWAMY.—If a member can throw a challenge, a Minister also can throw the challenge.

MADAM SPEAKER.—Challenges were on both sides. It is not allowed for anybody.

Sri C. M. ARUMUGHAM.—Secondly, it may be possible for a Member to get up and say so many things. But a Minister cannot say what he wants to say. He has to speak on behalf of the Government ; it is not shouting.

MADAM SPEAKER.—Even members have their own responsibility.

Sri C. M. ARUMUGHAM.—I want the Speaker to give a ruling. Is it in the same way as a member can speak, the Minister also can speak and behave ? I want a ruling.

MADAM SPEAKER.—Both have their own responsibility. They have to behave according to rules. Now let us attend to some business. Let other members also have their chance.

C. M. ARUMUGHAM.—Madam Speaker, I submit I wish to know whether Members and Ministers are equal so far as responsibility is concerned ? Because our Rules of Procedure makes a lot of difference between these two. For instance, a Minister can bring a Bill at any time he likes. Whereas a Member, if he wants to bring a private Member's Bill, he requires about fifteen days notice. He has to get the consent of the Speaker, consent of the Governor—and so many things. That difference is made in order to make the Minister more responsible.

MADAM SPEAKER.—Those things are necessary for the Government also. The Rules are the same.

Sri C. M. ARUMUGHAM.—The Minister can make a statement whenever he wants. A member cannot. The Rules make a distinction between a Member and Minister. Likewise, responsibility also is there. Madam Speaker, I can speak and get away. Is it possible for a Minister in charge of a subject to absent himself like that ? There is a certain fixed responsibility for the Minister.

MADAM SPEAKER.—That is quite correct. You both act according to that. No body denies. They have their responsibility. Members have their responsibility.

ಶ್ರೀ ಸಿ. ಬೈರೇಗೌಡ.—ಇದನ್ನು ಕಾನೂನು ರೀತ್ಯಾ ನಡೆಸುವುದು ಒಂದು ಭಾಗ ಇದೆ. ಇನ್ನೊಂದು ಭಾಗ ಏನು ಎಂದರೆ ಎಸ್. ಟಿ. ಎ. ಮತ್ತು ಆರ್. ಟಿ. ಎ. ಪರ್ಮಿಷನ್ ಇಲ್ಲದೆ ಪೋಲೀಸ್‌ನವರ ಪರ್ಮಿಷನ್ ಮೇಲೆ ಓಡಿಸುತ್ತಿದ್ದಾರೆ. ಇದನ್ನಾದರೂ ತಡೆಗಟ್ಟಲಿ ಎಂದು ಹೇಳುತ್ತೇನೆ.

Sri AZEEZ SAIT.—I have already replied to Sri Deve Gowda that I am getting all the details from all the districts and they will be furnished to members.

Coming to Sri Siddappa, he just said ''ಟೆಂಪರ' ಡೊನೇಷನ್' ಎಂದು ತೆಗೆದುಕೊಂಡು ಪರ್ಮಿಷನ್' ಕೊಡುತ್ತಿದ್ದಾರೆ ಎಂದು ಹೇಳುತ್ತಾ ಇರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ? It is news to me. I have no such information. When I get details from all over the State. I will be able to check up whether it is correct or not. If it is correct, Government will consider how to deal with it. As to what Government has done, this Government after coming into power has enchanced the tax on contract carriage from Rs. 35 to Rs. 100. I do concede that out of 399 contract carriage permits issued I do not know how many were issued in this region and how many in the other regions. Definitely pucca permits were issued during the Governor's regime. Another thing is that they do not want either decentralisation or centralisation. Then what is it that they want actually, I do not know. Even before they asked me to move the Centre, the South Zone Ministers of Transport have already moved the Government of India and we have brought this matter to the notice of the Transport Ministers' Conference also wherein we have asked for amending certain sections of the Central Act. My friends should know that the M.S.R.T.C. is not a losing concern, and it is giving 6 per cent return to Government. Over and above that we have paid tax also. I do concede that there is scope for it to grow but all of a sudden I cannot notionalise all the routes for the simple reason that M.S,R.T.C. has to draw

(SRI AZEEZ SAIT)

up a scheme; that scheme has to be approved by the Government, it has then to be notified and the Chief Minister has to hear the objections For the information of the hon. Member Sri Deve Gowda I may say that the M.S.R.T.C. had sent a scheme for nationalising a pocket in Raichur District since a long time but the then Chief Minister Sri Veerendra Patil shelved it. It is our present Chief Minister who has taken it up and fixed up a date for hearing objections. Before he accuses the Government, he must be sure of his ground. Government is quite capable of doing things in the interest of the people, democracy and socialism and I am prepared to furnish whatever information they want. But let there be a give and take.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಬಹಳ ವೇಗದಿಂದ ಹೇಳಿದ್ದನ್ನು ನಾವು ಇಲ್ಲಿ ಕೂತುಕೊಂಡು ಕೇಳುವುದಕ್ಕೆ ತಯಾರಾಗಿಲ್ಲ. ಡೆಮಾಕ್ರಸಿ, ಯಲ್ಲಿ ಸೋಷಿಯಾಲಿಸಮ್‌ನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರಕ್ಕೆ ಎಷ್ಟು ತಾಕತ್ತು ಇದೆಯೋ, ಈ ಬಗ್ಗೆ ಹೇಳುವುದಕ್ಕೆ ಅವರಿಗೆ ಎಷ್ಟು ತಾಕತ್ತು ಇದೆಯೋ ಅಷ್ಟೇ ನಮಗೂ ಕೂಡ ತಾಕತ್ತು ಇದೆ. ಈ ಬಗ್ಗೆ ನಮಗೆ ಹೇಳುವುದಕ್ಕೂ ಕೂಡ ಅಷ್ಟೇ ಅಧಿಕಾರ ಇದೆ. ಅವರು ಈ ಬಗ್ಗೆ ಏನು ಒಂದು ಪದ ಪ್ರಯೋಗ ಮಾಡಿದ್ದಾರೆ ಎಂದರೆ...

ಶ್ರೀ ಕೋಣಂದೂರು ಲಿಂಗಪ್ಪ.— ನಾವು ಇಲ್ಲಿ ಬಂದು ತಾವು ಹೇಳಿದ್ದನ್ನು ಕೇಳಿಕೊಂಡು ಕೈ ಎತ್ತುವುದಕ್ಕೆ ತಯಾರಾಗಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಮೊಟ್ಟ ಮೊದಲು ಅಧಿಕಾರಕ್ಕೆ ಬಂದಮೇಲೆ ಎಷ್ಟು ಪರ್ಮಿಟ್ ಕೊಟ್ಟಿದ್ದೀರಿ ಎಂದು ಕೇಳುವುದಕ್ಕೆ ನಮಗೆ ಅಧಿಕಾರ ಇದೆ. ಅವರು ಹೇಳಿದರು ಈ ಪರ್ಮಿಟ್ ಕೊಡುವುದನ್ನು ಆರ್. ಟಿ. ಓ. ಅವರಿಂದ ಕಿತ್ತು ಎಸ್. ಟಿ. ಓ.ಗೆ ಕೊಡುತ್ತೇವೆ ಎಂದು ಇದು ಒಂದು ಕ್ಯಾಸಿ ಬಾಡಿ. ನಾನು ಶ್ರೀಮಾನ್ ಹನುಮೇಗೌಡರನ್ನು ಸಮರ್ಥನೆ ಮಾಡುತ್ತೇನೆಂದಲ್ಲ ಈ ಪರ್ಮಿಟ್ ವಿಚಾರದಲ್ಲಿ ಟ್ರಾನ್ಸ್‌ಪೋರ್ಟ್ ಕಮೀಷನರನ್ನು 2-3 ತಿಂಗಳಿಗೊಂದು ಸಾರಿ ಟ್ರಾನ್ಸ್‌ಫರ್ ಮಾಡಿರುವುದು ನನ್ನ ಅನುಭವಕ್ಕೂ ಕೂಡ ಬಂದಿದೆ.

ಶ್ರೀ ಅಜೀಜ್ ಸೇಟ್.—ನೀವೂ ಕೂಡ ಹೇಳಿದ್ದೀರಾ ?

ಶ್ರೀ ಎಚ್. ಡಿ. ದೇವೇಗೌಡ —ನಾನು ಹೇಳಲಿಲ್ಲ. ನಾನು ಅವರನ್ನು ಸಮರ್ಥನೆ ಮಾಡುತ್ತೇನೆ ಅಂತಲ್ಲಾ.

ಶ್ರೀ ಅಜೀಜ್ ಸೇಟ್.—ಅವರೂ ಕೂಡ ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ತಮ್ಮ ವಾದವನ್ನೇ ಪುಷ್ಟೀಕರಿಸಿ ವಿರೋಧ ಪಕ್ಷದವರಿಗೆ ಬುದ್ಧಿ ಹೇಳುವುದಕ್ಕೆ ಹೊರಟಿದ್ದಾರೆ. ಇದನ್ನು ಸರ್ಕಾರ people's Interest, Democracy and Socialism ನಿಂದ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ನಮ್ಮ ಸಂಬಂಧಿಕರು ಯಾರೂ ಆರ್. ಟಿ. ಓ. ಅವರಿಂದ ಪರ್ಮಿಷನ್ ತೆಗೆದುಕೊಂಡು ಬಸ್ಸು ಓಡಿಸುತ್ತಾ ಇಲ್ಲ. ಈವಾಗ ಇವರು ಟ್ಯಾಕ್ಸ್ ಏನು ಜಾಸ್ತಿ ಮಾಡಿದ್ದಾರೆ ಅವನ್ನು ಪ್ಯಾಸೆಂಜರ್ಸ್ ಕೊಡುತ್ತಿದ್ದಾರೆ. ಅದನ್ನು ಬಸ್ಸಿನ ಮಾಲೀಕ ಕೊಡುತ್ತಾ ಇಲ್ಲ. ಇದನ್ನೇ ನಾವು ಒಂದು ಮಾಹಾತ್ಸಾಧನೆ ಮಾಡಿದ್ದೇವೆ ಎಂದು ತಿಳಿದುಕೊಂಡರೆ ತಪ್ಪಾಗುತ್ತದೆ. ಈ ಬಗ್ಗೆ ನಾನು ಕೆಲವು ವಿವರಣೆಗಳನ್ನು ಕೇಳಿದ್ದೇನೆ. ಅವರು ಆ ಸ್ಟೇಟ್‌ಮೆಂಟ್ ಈ ಸಭೆಯ ಮುಂದೆ ಇಟ್ಟಾದಮೇಲೆ ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಟ್ರಾನ್ಸ್‌ಫರ್ ಮಾಡುವುದಕ್ಕೆ ಕೆಲವು ವಿರೋಧಪಕ್ಷದವರೂ ಕೂಡ ಬಂದು ಹೇಳಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದನ್ನು ಯಾವ ಸಂದರ್ಭದಲ್ಲಿ ಹೇಳಿದ್ದಾರೆ. ಯಾವಾಗ ಹೇಳಿದ್ದಾರೆ ಅನ್ನುವುದನ್ನು ಈ ಸಭೆಯಲ್ಲಿ ಮುಚ್ಚಿಡದೆ ತಿಳಿಸಬೇಕು. ಇಲ್ಲದೇ ಹೋದರೆ ಬಹಳ ಅನ್ಯಾಯವಾಗುತ್ತದೆ. ಅಲ್ಲದೆ ಸುಮ್ಮನೆ ವಿರೋಧ ಪಕ್ಷದವರ ಮೇಲೆ ಈ ಒಂದು ಗೂಬೆಯನ್ನು ಕೂರಿಸುವುದಾದರೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಆದುದ

ರಿಂದ ನಾನು ಕೇಳುವುದು ಏನೆಂದರೆ ಯಾವ ಯಾವ ಸದಸ್ಯರು, ಯಾವ ಯಾವ ಪಾರ್ಟಿಯವರು ನಿಮ್ಮಲ್ಲಿಗೆ ಯಾವ ಸಂದರ್ಭದಲ್ಲಿ ಬಂದಿದ್ದರು ಎನ್ನುವುದು ಇಡೀ ಜನಕ್ಕೆ ಗೊತ್ತಾಗಲಿ, ನಾವು ಹೇಳುವುದು ಸತ್ಯವೋ, ನೀವು ಹೇಳುವುದು ಸತ್ಯವೋ ಅನ್ನುವುದು ಎಲ್ಲರಿಗೂ ಗೊತ್ತಾಗಲಿ, ಹಾಗೆ ಮಾಡದೇ ಹೋದರೆ ವಿರೋಧ ಪಕ್ಷದವರ ಮೇಲೆ ಮಸಿ ಬಳಿದಂತಾಗುತ್ತದೆ. ಆದುದರಿಂದ ಮಾನ್ಯ ಸಚಿವರು ಈ ಬಗ್ಗೆ ಒಂದು ಹೇಳಿಕೆಯನ್ನು ಇಡಬೇಕು ಎಂದು ಹೇಳುತ್ತೇನೆ.

ಶ್ರೀ ಅಜೀಜ್ ಸೇಟ್.—ಈ ವಿಚಾರದಲ್ಲಿ ಅವರವರ ಮನಸ್ಸಿನಲ್ಲಿ ಅವರವರೇ ತಿಳಿದುಕೊಂಡರೆ ಸಾಕು. ನಾನು ಅವರ ಪಟ್ಟಿಯನ್ನು ಕೊಡುವುದಕ್ಕೆ ತಯಾರಾಗಿಲ್ಲ.

ಅಧ್ಯಕ್ಷರು.—ಈಗ ಶ್ರೀಮಾನ್ ದೇವೇಗೌಡರು ಈ ಬಗ್ಗೆ ಕೆಲವು ವಿವರಗಳನ್ನು ಕೇಳಿದ್ದೇನೆ. ಅವನ್ನು ಮಾನ್ಯ ಸಚಿವರು ಈ ಸಭೆಯ ಮುಂದೆ ಇಟ್ಟಾದ ಮೇಲೆ ನಾವು ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದಾರೆ. So, this House will get a chance to discuss it after the Minister furnished the information.

ಶ್ರೀ ವಾಟಾಳ್ ನಾಗರಾಜ್.—ಈ ಬಗ್ಗೆ ಮಾನ್ಯ ಸಚಿವರು ನಿರ್ದಿಷ್ಟವಾಗಿ ಹೇಳಬೇಕು. ಈ ವಿಷಯವನ್ನು ಸುಮ್ಮನೆ ಗೋಪ್ಯವಾಗಿ ಇಡಬಾರದು. ಈ ಪ್ರಶ್ನೆ ಬಹಳ ಗಂಭೀರವಾದುದ .

ಶ್ರೀ ಅಜೀಜ್ ಸೇಟ್.—ಸಂದರ್ಭ ಬಂದಾಗ ಹೇಳುತ್ತೇನೆ.

ಅಧ್ಯಕ್ಷರು.—ಹಾಗಾದರೆ ಮಂತ್ರಿಗಳು ಹೇಳುವುದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ನಾನು ರೂಲ್ ನಂಬರ್ 177ರ ಪ್ರಕಾರ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿದ್ದೇನೆ. ಅದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ.

ಅಧ್ಯಕ್ಷರು.—ಅದಕ್ಕೆ ಇನ್ನೂ ಪರ್ಮಿಷನ್ ಬಂದಿಲ್ಲ.

ಶ್ರೀ ಅಜೀಜ್ ಸೇಟ್.—ಅದು ಹೇಳುವುದರಿಂದ ಏನೂ ಪ್ರಯೋಜನವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಈ ವಿಚಾರವನ್ನು ನಿನ್ನೆಯೇ ಎತ್ತಬೇಕೆಂದಿದ್ದೆ. ಮಾನ್ಯ ಮಂತ್ರಿಗಳು ಇದನ್ನು ಅಷ್ಟು ಸುಲಭವಾಗಿ ಹಾರಿಸಬೇಡಿ. ನಾನು ಈ ವಿಚಾರದಲ್ಲಿ ಎದ್ದು ಮಾತನಾಡುವಷ್ಟರಲ್ಲೇ ಮಂತ್ರಿಗಳು ಎದ್ದುನಿಂತುಕೊಂಡು ಅದರಿಂದ ಏನೂ ಪ್ರಯೋಜನ ಇಲ್ಲ ಎಂದು ಹೇಳಿದರೆ ಈ ವಿಷಯವನ್ನು ಅಷ್ಟರ ಮಟ್ಟಿಗೆ ಹಾರಿಸುವಂತೆ ಮಾತನಾಡುವುದನ್ನು ಬಿಡಲಿ.

NOTICE OF QUESTION OF PRIVILEGE

re : Statement by the Minister for Labour about exemption of the Labour Arts Provisions in respect of new Small Scale Industries

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರಲ್ಲಿ ನಾನು ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿರುವ ಬಗ್ಗೆ ಒಂದು ನೋಟೀಸು ಕಳುಹಿಸಿದ್ದೆ. ಅದರಲ್ಲಿ ಹೇಳಿರುವ ವಿಷಯ ಮಾರ್ಚಿ 13 ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ವರದಿಯಾಗಿದೆ, ಅದು ಹೀಗಿದೆ.—

> "The Labour Minister Sri Azeez Sait disclosed here today that the Government was contemplating to exempt from the purview of the Labour Act the newly started small-scale industries"

ಇದರಲ್ಲಿರುವ ಪ್ರಶ್ನೆ ಎಂದರೆ ಲೇಬರ್ ಆಕ್ಟನ್ನು ಆಗಿಂದಾಗ್ಗೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳಿಗೆ ಅನ್ವಯಿಸದ ಹಾಗೆ ಎಕ್ಸೆಂಪ್ಟ್ ಮಾಡಲು ಸರ್ಕಾರ ಯೋಚನೆ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಇದೊಂದು ಮುಖ್ಯವಾದ ಧೋರಣೆ ಪ್ರಶ್ನೆ. ಲೇಬರ್ ಆಕ್ಟ್‌ಗಳು ಎಂದರೆ ಬೇಕಾದಷ್ಟು ಇವೆ, 1936 ರಲ್ಲಿ ಆಗಿರುವ ಇಂಡಸ್ಟ್ರಿಯಲ್ ಇಂಪ್ಲಿಮೆಂಟ್ಸ್ ಆಕ್ಟ್ ಇದೆ, 1946 ರಲ್ಲಿ ಆಗಿರುವ ಲೇಬರ್ ಯೂನಿಯನ್ ಆಕ್ಟ್ ಇದೆ, ಪೇಮೆಂಟ್ ಆಫ್ ವೇಜಸ್ ಆಕ್ಟ್ ಇದೆ, ಹೀಗೆ ಅನೇಕ

(ಶ್ರೀ ಎಂ. ಎಸ್. ಕೃಷ್ಣನ್)

ವಿಧವಾದ ಕಾನೂನುಗಳು ಇವೆ. ಇವೆಲ್ಲಾ ಬಹು ಮುಖ್ಯವಾದ ಸೆಂಟ್ರಲ್ ಆಕ್ಟ್‌ಗಳೇ, ಇವು ನಮ್ಮ ದೇಶಧಲ್ಲಿ ಅನೇಕ ವರ್ಷಗಳಿಂದಲೂ ಜಾರಿಗೆ ಬಂದಿದೆ. ನಮ್ಮಲ್ಲಿ ಅನೇಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳೂ ಇವೆ, ಲಾರ್ಜ್ ಸ್ಕೇಲ್ ಇಂಡಸ್ಟ್ರೀಗಳೂ ಇವೆ, ಇಂತಹ ಕಾನೂನುಗಳನ್ನು ಅನ್ವಯ ಮಾಡುವಾಗ ಇದನ್ನು ಇನ್ನೂ ಕಾರ್ಮಿಕರ ಶೋಷಣೆ ಮಾಡಲು ಸರ್ಕಾರ ಯೋಚ ಮಾಡುತ್ತಾರೆಯೋ ಹೇಗೇ ? ಇದನ್ನು ಮಾಡಿದರೆ ಮುಂದೆ ಕೈಗಾರಿಕೆಗಳಲ್ಲಿರುವ ಕೆಲಸಗಾರರು ಎಂಟು ಗಂಟೆಗಳ ಕೆಲಸ ಮಾಡುವುದಕ್ಕೆ ಬರಲು ರಾತ್ರಿ 12 ಗಂಟೆಯಿಂದ 16 ಗಂಟೆಗಳ ಕಾಲದಷ್ಟು ಕೆಲಸ ಮಾಡಬೇಕೇ ಇವೆಲ್ಲಾ ಧೋರಣೆ ವಿಚಾರಗಳು. ಇದರ ಬಗ್ಗೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬೇಕಾಗಿ ಬಂದಿದೆ.

3-00 P.M.

ಅಧ್ಯಕ್ಷರು.—ಮೊದಲೇ ಒಂದು ರೂಲಿಂಗ್ ಕೊಟ್ಟಿದ್ದೇನೆಂದು ತಾವೇ ಹೇಳುತ್ತೀರಿ. ಮತ್ತೆ ತಾವು ಎಲ್ಲ ವಿಚಾರಗಳನ್ನೂ ಇಲ್ಲಿ ಹೇಳಿದ ಮೇಲೆ ನಾನು ಅದರ ಬಗ್ಗೆ ಏನು ರೂಲಿಂಗು ಕೊಡಬೇಕು ?

ಶ್ರೀ ಎಂ ಎಸ್ ಕೃಷ್ಣನ್.—ಮಾನ್ಯ ಮಂತ್ರಿಗಳು ಕಾನೂನಿಗೆ ವಿನಾಯಿತಿಗಳನ್ನು ಕೊಡಬೇಕೆಂದು ಹೇಳುವ ಸರ್ಕಾರದ ಧೋರಣೆಯನ್ನು ನಾವು ಇಲ್ಲಿ ವಿಚಾರ ಮಾಡಬೇಕಾಗುತ್ತದೆ. ಇದರಲ್ಲಿರುವುದು ಮುಕ್ಕಾಲು ಭಾಗ ಸೆಂಟ್ರಲ್ ಆಕ್ಟ್‌ಗಳೇ, ಇಂತಹ ಕಾನೂನುಗಳಿಂದ ವಿನಾಯಿತಿ ಮಾಡಬೇಕಾದರೆ ಇದೊಂದು ಭಾರಿ ಅನ್ಯಾಯವಾಗುತ್ತದೆ ಮತ್ತು ಇದರಿಂದ ಕಾರ್ಮಿಕ ವರ್ಗಕ್ಕೆ ಬಹಳ ಅನ್ಯಾಯವಾಗುತ್ತದೆ. ಇದಕ್ಕೆ ಅವಕಾಶ ಕೊಡಕೂಡದು ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ.

Procedure under Rule 177 for Raising Question of Privileges

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇದುವರೆಗೆ ಏನು ಹೇಳಿದರು ಎನ್ನುವುದು ಅರ್ಥವಾಗುತ್ತಿಲ್ಲ, ಯಾವುದೋ ವಿಚಾರಗಳನ್ನು ಇಲ್ಲಿ ತೆಗೆದುಕೊಂಡು ಇಷ್ಟು ದೊಡ್ಡದಾಗಿ ವಾಕ್ಯಾರ್ಥ ಮಾಡಲು ಹೊರಟರೆ ಇದರ ಬಗ್ಗೆ ಏನು ತಿಳಿದುಕೊಳ್ಳಬೇಕು ?

ಅಧ್ಯಕ್ಷರು.—ನಾನು ಮಾನ್ಯ ಕೃಷ್ಣನ್ ಅವರ ಸೂಚನೆಗೆ ಅನುಮತಿ ಕೊಟ್ಟಿಲ್ಲ. ಅನುಮತಿ ಕೊಡುವುದಕ್ಕೆ ಮೊದಲೇ ಈ ರೀತಿ ಅವರು ವಾದ ಮಾಡುತ್ತ ಹೋದರೆ ನಾವೇನು ಹೇಳುವುದು ?

ತಮಗೆ ಕಾಗದ ಬರೆಯುತ್ತೇನೆ, ಅಲ್ಲಿಯವರೆಗೂ ಇಲ್ಲಿ ತಾವೇನೂ ಹೇಳುವುದು ಬೇಡ, ತಾವು ಹೀಗೆ ಹೇಳುವುದನ್ನೆಲ್ಲಾ ಹೇಳಿ ಮುಗಿಸಿದ ಮೇಲೆ ನಾಳೆ ನಾನು ಏನು ಹೇಳಲಿಕ್ಕೂ ಉಳಿಯುವುದಿಲ್ಲ,

ಶ್ರೀ ಎಂ ಎಸ್ ಕೃಷ್ಣನ್.—ರೂಲು 177 ರ ಪ್ರಕಾರ,

> "A member may, with the consent of the Speaker, raise a question involving a breach of privilage either of a member, or of the Assembly or of a Committee thereof." ಎಂದು ಇದೆ.

Rule 178 says :

> "A member wishing to raise a question of privilage shall give notice in writing to the Secretary before the commencement of the sitting......"

This has been done. I take it for granted that I have the consent of the Speaker to raise the issue.

† **MADAM SPEAKER**.—It is only the memebers presumption. Is there any consent ?

†**Sri D. DEVARAJ URS.**—The hon. member can explain his stand provided the hon. Speaker wants the member to explain before the question of admissibility or otherwise has to be decided by the Speaker. As I understand the Speaker just now said that she is looking into the question, whether it is to be admitted or not. Sometimes there were occasions when the Speaker used to ask a member under what provisions of law or reasonings a privilege motion sould be admitted before taking a decision. I understand the Chair has not asked the memcber to explain the position. Such being the situation, I cannot really understand why the hon. member is taking so much time of the House unnecessarily, I must say, by explaining the entire subject matter on which he wants to bring the privilege motion. The Speaker will kindly put an end to all this and proceed with the business of the House,

MADAM SPEAKER.—Yes, I have said that I will look into this–whether it is to be admitted or not.

Next introduction of Bill.

Mysore State Civil Services (Regulation of Promotion Pay and Pension) Bill 1973–Introduction

Sri D. DEVARAJ URS.—Madam, I beg to introduce the Mysore State Civil Services (Regulation of Promotion, Pay and Pension) Bill, 1973.

MADAM SPEAKER.—The Mysore State Civil Services (Regulation of Promotion, Pay and Pension) Bill, 1973 is introduced.*

Expunction of words used on 14-3-73

by Sri H. D. Devegowda and Chief Minister.

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರು ನಿನ್ನೆ ಇಲ್ಲಿ ಮಾತನಾಡುತ್ತ, ಮನ ನೊಂದುಕೊಂಡು ಕೆಲವು ವಿಚಾರಗಳನ್ನು ಹೇಳಿರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದರು. ನಾನು ಮಾತನಾಡುವಾಗ ಸ್ವಲ್ಪ ತಪ್ಪು ಮಾಡಿಕೊಂಡು ಹೇಳಿದೆನೋ ಏನೋ ಎಂದು ತಿಳಿದಿದ್ದೆ. ಹಾಗೇನಾದರೂ

---

* The Bill is introduced as annexues to this volume.

(ಅಧ್ಯಕ್ಷರು)

ತಪ್ಪು ಮಾಡಿ ಹೇಳಿದ್ದರೆ ಅದನ್ನು ರಿಕಾರ್ಡು ತರಿಸಿ ನೋಡುತ್ತೇನೆ ಎಂದು ಹೇಳಿದ್ದೆ. ಹಾಗೇನಾದರೂ ನಾನು ತಪ್ಪು ಮಾಡಿದ್ದರೆ ಅದನ್ನು ತಮ್ಮಗಳ ಮುಂದೆ ಹೇಳಿ ತಿದ್ದಿಕೊಳ್ಳಬಹುದು. ತಪ್ಪು ಮಾಡಿರುವವರು ಯಾರೇ ಆಗಲಿ ಅದನ್ನು ಕೆಲ ಸಂದರ್ಭಗಳಲ್ಲಿ ತಿದ್ದಿಕೊಳ್ಳಬೇಕಾಗುತ್ತದೆ. ನಾನು ಹಾಗೆ ತಪ್ಪು ಹೇಳಿದ್ದರೆ ರಿಕಾರ್ಡನ್ನು ತರಿಸಿ ನೋಡುತ್ತೇನೆಂದು ಏನು ಹೇಳಿದ್ದೆ ಅದರ ಪ್ರಕಾರ ನಮ್ಮ ರಿಕಾರ್ಡನ್ನು ಕೂಡ ತರಿಸಿ ನೋಡಿದ್ದರ ಮೇಲೆ ಅದರಲ್ಲಿ ಹೀಗೆ ಇದೆ.

> ‘‘ಶ್ರೀ ದೇವರಾಜ ಅರಸಿನವರ ಮೇಲೆ ಗುಂಡನ್ನು ಹೊಡೆಯಲೂ ಬರಬಹುದು ಇಲ್ಲವೇ ಶ್ರೀ ದೇವೇಗೌಡರ ಮೇಲೆ ಚಪ್ಪಲಿ ಎಸೆಯಲೂ ಬರಬಹುದು........’

ಆ ಸಂದರ್ಭದಲ್ಲಿ ಶ್ರೀ ಎಂ. ಟಿ. ರಾಮಸ್ವಾಮಿಯವರು ಮಾತನಾಡುತ್ತ ವಿರೋಧ ಪಕ್ಷದ ನಾಯಕರು ‘ಜೋಡು‘ ಎನ್ನುವ ಪದ ಬಳಸಿದುದು ಸರಿಯಲ್ಲ ಎಂದು ಹೇಳಿದರು. ಆಗ ನಾನು ಹೀಗೆ ಹೇಳಿದೆ.

> ‘‘ಅವರು ಹೇಳಿದ್ದು ಅವರಿಗೆ ಪವಿತ್ರವಾಗಿದ್ದರೆ, ಅಪ್ಯಾಯಮಾನವಾಗಿದ್ದರೆ ಅದು ಹಾಗೆಯೇ ಇದ್ದುಕೊಂಡು ಹೋಗಲಿ, ಬಿಡಿ. ನಿಮಗೇನು ಕಷ್ಟ?‘

ಆಗ ವಿರೋಧ ಪಕ್ಷದ ನಾಯಕರು ನಾನು ಹೇಳಿದುದನ್ನು ಸರಿಯಾಗಿ ತಿಳಿದುಕೊಳ್ಳದೆ ಅವರು ಹೇಳಿದುದನ್ನು ತಪ್ಪಾಗಿ ಹೇಳುತ್ತಿದ್ದೇನೆಂದು ಅವರು ಆಕ್ಷೇಪಣೆ ಎತ್ತಿದರು. ನಾನು ವಿರೋಧ ಪಕ್ಷದ ನಾಯಕರಿಗೆ ಮನಸ್ಸು ನೋಯುವ ವಿಚಾರವನ್ನು ಹೇಳಲಿಲ್ಲ. ಆದುದರಿಂದ ಅವರು ತಪ್ಪು ಭಾವನೆಯಿಂದ ಏನು ಹೇಳಿದ್ದಾರೋ ಅದನ್ನು ಈ ಸಭೆಯ ನಡವಳಿಕೆಯಿಂದ ತೆಗೆದು ಹಾಕುವುದು ಉಚಿತವೇ ಹೊರತು ಬೇರೆ ಯಾವುದನ್ನೂ ತೆಗೆದು ಹಾಕಬೇಕಾಗಿಲ್ಲ. ಆದ್ದರಿಂದ ನಾನು ಹೇಳಿದ್ದು ಅವರಿಗೆ ಏನಾದರೂ ತಪ್ಪಾಗಿ ಕೇಳಿ ಅವರ ಮನಸ್ಸು ನೊಂದಿದ್ದರೆ, ನಾನು ಮೇಲೆ ಹೇಳಿದ ಕಾರಣದಿಂದ ಅವರ ಮನಸ್ಸನ್ನು ನೋಯಿಸಿಕೊಳ್ಳಬಾರದೆಂದು ಕೇಳಿ ಕೊಳ್ಳುತ್ತೇನೆ. ಆದರೆ ವಿರೋಧಪಕ್ಷದ ನಾಯಕರು ನನ್ನ ಬಗ್ಗೆ ಆ ಸಮಯದಲ್ಲಿ ಏನು ಹೇಳಿದರೋ ಅದನ್ನು ರೆಕಾರ್ಡ್‌ನಿಂದ ತೆಗೆಸಬೇಕಾಗುತ್ತದೆ. ಈ ಪ್ರಕರಣ ನಡೆದ ಸಮಯದಲ್ಲಿ ಶ್ರೀಮಾನ್ ಮಂಜುನಾಥ್ ಅವರು ಸಹ ಸ್ವಲ್ಪ ಮಾತನಾಡಿ ನಾನು ತರಗೆಲ್ಲಾ ಒಂದೇ ಮಂತ್ರ ಉಪಯೋಗಿಸುತ್ತೇನೆ, ವಿರೋಧ ಪಕ್ಷದವರಿಗೆ ಮರ್ಯಾದೆ ಕೊಡುತ್ತಿಲ್ಲ. ಎನ್ನುವ ರೀತಿಯಲ್ಲಿ ಮಾತನಾಡಿದರು. ಅದು ಪತ್ರಿಕೆಗಳಲ್ಲಿಯೂ ವರದಿಯಾಗಿದೆ. ಈ ಸಭೆಯಲ್ಲಿರುವ ಎಲ್ಲ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ಏನೆಂದರೆ ನಾನು ಯಾವ ಪಾರ್ಟಿಯಲ್ಲಿಯೂ ಇಲ್ಲ, ವಿರೋಧಪಕ್ಷದ ಕಡೆಯೂ ಇಲ್ಲ, ರೂಲಿಂಗ್ ಪಾರ್ಟಿಯ ಕಡೆಯೂ ಇಲ್ಲ ಮತ್ತು ಯಾರ ಮನಸನ್ನೇ ಆಗಲಿ ನೋಯಿಸಬೇಕೆಂಬುದು ನನ್ನ ಮನಸ್ಸಿನಲ್ಲಿ ಇಲ್ಲ ಈ ಎಲ್ಲ ಕಾರಣಗಳಿಂದ ನೆನ್ನೆ ನಡೆದ ಪ್ರಕರಣದಲ್ಲಿ ವಿರೋಧಪಕ್ಷದ ನಾಯಕರ ಮನಸ್ಸು ನೊಂದಿದ್ದರೆ, ಅವರು ಮನಸ್ಸನ್ನು ನೋಯಿಸಿಕೊಳ್ಳಬಾರದೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನೆನ್ನೆದಿವಸ ವಿರೋಧಪಕ್ಷದ ನಾಯಕರಿಗೆ ಮನಸ್ಸು ನೋಯುವ ಪ್ರಸಂಗವೇನೂ ನಡೆದಿಲ್ಲ. ಈ ಸಭೆಗೆ ಪ್ರೇಕ್ಷಕರನ್ನು ಬಿಡುವುದಕ್ಕೆ ಕೆಲವು ನಿಯಮಗಳನ್ನು ಪಾಲನೆ ಮಾಡಬೇಕಾಗುತ್ತದೆಂದು ಹೇಳಿದಾಗ ಈ ಮಾತನ್ನು ನಾನು ಹೇಳಿದ್ದೇನೆ. ಇಂದು ನಮ್ಮ ದೇಶದ ಬೇರೆ ರಾಜ್ಯಗಳಲ್ಲಿ ವಿಧಾನಸಭೆಯೊಳಕ್ಕೆ ಜನರು ನುಗ್ಗಿ ಮುಖ್ಯ ಮಂತ್ರಿಗಳ ತಲೆ ಒಡೆದು ರಕ್ತ ಬಿದ್ದ ಪ್ರಸಂಗ ನಡೆದಿದೆ. ಆ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇನ್ನೂ ಬಂದಿಲ್ಲ. ನನಗೆ ಅಪ್ಯಾಯಮಾನವಾಗಿದ್ದಾರೆ ಅದು ಹಾಗೆಯೇ ಇದ್ದುಕೊಂಡು ಹೋಗಲಿ ಎಂದು ತಾವು ಹೇಳುವುದಾದರೆ ಅದು ನನಗೆ ಅಪ್ಯಾಯಮಾನವಾಗಿರಲಿಲ್ಲ. ಈ ಸಭೆಯಲ್ಲಿ ನಡೆಯುವ ಕಾರ್ಯಕಲಾಪಗಳನ್ನು ನೋಡಲು ಪ್ರೇಕ್ಷಕರನ್ನು ಒಳಗೆ ಬಿಡುವುದಕ್ಕೆ ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದಾಗ, ನಾನು ಆ ಸಂದರ್ಭದಲ್ಲಿ ಮಾತನಾಡುತ್ತಾ ಈ ಸಭೆಯ ಘನತೆ ಗೌರವ ಮತ್ತು ಶಿಸ್ತನ್ನು ಕಾಪಾಡಿಕೊಂಡು ಹೋಗುವುದರಲ್ಲಿ ನಮ್ಮೆಲ್ಲರ ಸಹಕಾರವೂ ಇದೆ, ಆದರೆ ಈ ಸಭೆಗೆ ಬರುವ ಪ್ರೇಕ್ಷಕರು ಅಂದು ಪೇಪರ್‌ಗಳನ್ನು ಎಸೆದಂತೆ ಚಪ್ಪಲಗಳನ್ನು ಎಸೆಯಬಹುದು, ಆಯುಧ ತಂದು ಹೊಡೆಯಬಹುದು ಎಂದು ಹೇಳುತ್ತಾ ಆ ಒಂದು ಕಾನ್‌ಟೆಕ್ಸ್ಟ್‌ನಲ್ಲಿ ಹೇಳಿದೆ ಹೊರತು, ಆ ಪದ ನನಗೆ ಅಪ್ಯಾಯಮಾನವಾಗಿದೆ ಎಂದುಕೊಂಡು ಉಪಯೋಗ ಮಾಡಲಿಲ್ಲ. ಆದರೂ ತಾವು ನನಗೆ ಅಪ್ಯಾಯಮಾನವಾಗಿದ್ದರೆ ಉಪಯೋಗ ಮಾಡಿಕೊಳ್ಳಲಿ ಎಂದು

ತಾವು ಹೇಳಿದಿರಿ. ಇಂದು ಬೇರೆ ಕೆಲವು ರಾಜ್ಯಗಳ ಅಸೆಂಬ್ಲಿಗಳಲ್ಲಿ ಚಪ್ಪಲಗಳನ್ನು ಉಪಯೋಗಿಸಿ ಶಾಸಕರುಗಳೇ ಹೊಡೆದಾಟ ಮಾಡಿಕೊಂಡಿದ್ದಾರೆ. ಮೈಸೂರು ರಾಜ್ಯದಲ್ಲಿ ಆ ಒಂದು ಘಟನೆ ಇನ್ನೂ ಬಂದಿಲ್ಲ.

ಅಧ್ಯಕ್ಷರು.—ಅದು ಬರುವುದು ಬೇಡ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಗೆ ಪ್ರೇಕ್ಷಕರನ್ನು ಬಿಡುವ ಬಗ್ಗೆ ಕಟ್ಟುನಿಟ್ಟಾದ ಕ್ರಮ ಕೈಕೊಳ್ಳಲಾಗಿದೆ ಎಂದು ಹೇಳಿದಾಗ, ಆ ಬಗ್ಗೆ ಮಾತನಾಡುವಾಗ ಆ ಮಾತು ಬಂತು. ನನಗೆ ಆ ಪದವನ್ನು ಉಪಯೋಗ ಮಾಡುವುದಕ್ಕೆ ಅಪ್ಯಾಯಮಾನ ಏನಿದೆ? ಆದರೂ ತಾವು ಆ ರೀತಿ ಹೇಳಿದಾಗ ನನ್ನ ಮನಸ್ಸಿಗೆ ನೋವಾಯಿತು. ನನಗೆ ಅಪ್ಯಾಯಮಾನವಾಗಿದ್ದರೆ ಉಪಯೋಗ ಮಾಡಿಕೊಳ್ಳಲಿ ಎಂದರೆ in what way I am so interested to use such a word ? I quoted instances. That is way the Chief Minister also said the matter be dropped. ನನಗೇನೂ ಆ ಪದ ಉಪಯೋಗ ಮಾಡಬೇಕೆಂಬ ಇಚ್ಛೆ ಇರಲಿಲ್ಲ. ಯಾವ ಸಂದರ್ಭದಲ್ಲಿ ಅದನ್ನು ಉಪಯೋಗ ಮಾಡಿದೆ ಎಂಬುದನ್ನು ತಾವು ಮತ್ತೊಮ್ಮೆ ರೆಕಾರ್ಡ್ ನೋಡಿ ಅರ್ಥ ಮಾಡಿಕೊಳ್ಳಿ.

ಅಧ್ಯಕ್ಷರು.—ನಾನು ಪೂರ್ತಾ ಓದಿದ್ದೇನೆ.

ಶ್ರೀ ವಾಟಾಳ್‌ನಾಗರಾಜ್.—ನೆನ್ನೆದಿವಸ ಮಾನ್ಯ ದೇವೇಗೌಡರು ಹೇಳಿದ್ದು ಆ ರೀತಿಯ ಘಟನೆಗಳು ಆಗಬಹುದು ಎಂದು ಹೇಳಿದರು. ಆಗಿನ ಸಂದರ್ಭ ಸ್ವಲ್ಪ ಬಿಸಿ ಆದಾಗ ಆ ರೀತಿ ಹೇಳಿದರು. ತಾವು ಸಹ ಉದ್ದೇಶಪೂರ್ವಕವಾಗಿ ಮಾನ್ಯ ದೇವೇಗೌಡರಿಗೆ ಆ ರೀತಿ ಹೇಳಿದಿರಿ ಎಂದು ನಾವು ತಿಳಿದುಕೊಂಡಿಲ್ಲ. ನಿಮ್ಮ ಗೌರವದ ಬಗ್ಗೆಯಾಗಲೀ, ನಿಮ್ಮ ರೂಲಿಂಗ್ ಬಗೆಯಾಗಲೀ ನಾವು ಪ್ರಶ್ನೆ ಮಾಡುವುದಿಲ್ಲ. ಮತ್ತು ನಿಮ್ಮ ಮೇಲೆ ಅಪಾದನೆ ಮಾಡಬೇಕೆಂಬುದು ನಮ್ಮ ಉದ್ದೇಶವಲ್ಲ. ನಮ್ಮ ಅಪಾದನೆ ಇದ್ದಿದ್ದು ನಿಮ್ಮ ಮಾರ್ಷಲ್ ಮೇಲೆ, ಅವರು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆಂದು ನಾವು ನೆನ್ನೆ ಹೇಳಿದ್ದು, ಅದನ್ನು ತಾವು ಸರಿಪಡಿಸಿದ್ದೀರೆಂದು ಗೊತ್ತಾಗಿದೆ, ಆದ್ದರಿಂದ ಆ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಾನು ನೆನ್ನೆ ದಿವಸ ನನಗೂ ತಲೆ ಇದೆ ಎಂದು ಮುಖ್ಯಮಂತ್ರಿಗಳಿಗೆ ಹೇಳಿದಾಗ ಅವರು ತಲೆಯೂ ಇರಬಹುದು, ಬಾಲವೂ ಇರಬಹುದು ಎಂದು ಹೇಳಿದ್ದು ಇಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಬಾಲ ಯಾರುಯಾರಿಗೆ ಇದೆ, ಯಾರು ಯಾರಿಗೆ ಇಲ್ಲ ಎಂಬುದು ಈ ರಾಜ್ಯದ ಜನತೆಗೆ ಗೊತ್ತಿದೆ.

ಕೆಲವು ಮಾನ್ಯ ಸದಸ್ಯರು— ಎಲ್ಲರಿಗೂ ಇದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶಿವಣ್ಣನವರು ಮಾನ್ಯ ಪ್ರಭಾಕರ ಅವರು ಅನೇಕ ಜನರಿಗೆ ಇದೆ ಎಂದು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿರುವುದರಿಂದ ನನ್ನ ಬಗ್ಗೆ ಜನತೆಯಲ್ಲಿ ಕೆಟ್ಟ ಅಭಿಪ್ರಾಯ ಮೂಡುತ್ತದೆ. ಯಾವ ದೃಷ್ಟಿ ಇಟ್ಟುಕೊಂಡು ಮುಖ್ಯಮಂತ್ರಿಗಳು ಆ ಮಾತನ್ನು ಹೇಳಿದರು ಎಂಬುದನ್ನು ತಿಳಿಸಬೇಕು. ಆ ರೀತಿ ಅವರು ಹೇಳಿರುವುದರಿಂದ ಅದು ಏನು ಅರ್ಥ ಕೊಡುತ್ತದೆ ಎಂಬುದನ್ನು ತಾವೇ ನೋಡಬಹುದು. ಅವರು ಯಾವ ಅರ್ಥದಲ್ಲಿ ಹೇಳಿದರು ಎಂಬುದು ನನಗೆ ಗೊತ್ತಿದೆ. ಆ ಮಾತನ್ನು ಮುಖ್ಯಮಂತ್ರಿಗಳಾಗಿರುವವರು ಮತ್ತು ಉನ್ನತಸ್ಥಾನದಲ್ಲಿರುವವರು ಹೇಳಬಹುದೇ ಎಂದು ನಾನು ತಮ್ಮನ್ನು ಕೇಳುತ್ತೇನೆ. ವಿರೋಧಪಕ್ಷದ ಸದಸ್ಯರಿಗೆ ಈ ರೀತಿ ಹೇಳಿದರೆ ಅದು ಅವರ ಸ್ಥಾನಕ್ಕೆ ಗೌರವವೇ ಎಂದು ಕೇಳುತ್ತೇನೆ. ಅವರು ಆ ರೀತಿ ಹೇಳಿದ್ದು ಸರಿ ಎಂದು ಹೇಳುವುದಾದರೆ ಮುಂದಿನ ಪ್ರಕರಣ ಇದ್ದೇ ಇದೆ. ನಾವೂ ಸಹ ಅವರಿಗೆ ಗೌರವ ಕೊಡಬೇಕಾಗಿದೆ. ಆದ್ದರಿಂದ ಅವರು ಯಾವ ಅರ್ಥದಲ್ಲಿ ಅದನ್ನು ಹೇಳಿದರು ಎಂಬುದನ್ನು ತಿಳಿಸಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಮತ್ತು ಅದನ್ನ ರೆಕಾರ್ಡ್‌ನಿಂದ ತೆಗೆದುಹಾಕಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಏನು ಒಂದು ಹೆಸರು ಉಪಯೋಗ ಮಾಡಿದರು ಅದರ ಬಗ್ಗೆ ಮಾನವಶಾಸ್ತ್ರದಲ್ಲಿ ವಿವರವಾಗಿ ಹೇಳಲಾಗಿದೆ. ಪ್ರತಿ ಮಾನವನಿಗೂ ಬಾಲ ಇದೆ, ಮಾನವ ಕಪಿಕುಲ ಸಂಜಾತ, ಮಾನವ ವಂಶಕ್ಕೆ ಕಪಿಯೇ ಮೂಲ, ಈಗಲೂ ಪ್ರತಿ ನರನಿಗೂ ಚರ್ಮದೊಳಗೆ ಒಂದೂಕಾಲು ಅಂಗುಲ ಬಾಲವಿದೆ ಎಂದು ಅದರಲ್ಲಿ ಹೇಳಿದೆ. ಮಾನ್ಯ ವಾಟಾಳ್ ನಾಗರಾಜ್ ಅವರಿಗೂ ಇದೆ. ಅದು ಅವರಿಗೆ ಗೋಚರವಿಲ್ಲದೆ ಮಾತನಾಡಿದ್ದಾರೆ. ಪ್ರತಿಯೊಬ್ಬರ ಚರ್ಮದೊಳಗೂ ಬಾಲವಿದೆ. ಮತ್ತು ನಿನಗೆ ತಲೆ ಇದೆಯೇ ಎಂದು ಕೇಳುವುದರ ಅರ್ಥ ಬುದ್ಧಿ ಇದೆಯೇ ಎಂದು. ಮನುಷ್ಯ ಕೂಡ ಮಾರುತಿಯಂತೆ ಚೇಷ್ಟಾ ಪ್ರವೃತ್ತಿಯ ವ್ಯಕ್ತಿಯೇ

(ಶ್ರೀ ಕೆ. ಪ್ರಭಾಕರ್)

ಆಗಿದ್ದಾನೆ. ಮಾರುತಿಗೆ ಬಾಲವಿದೆ. ಯಾರಾದರು ಚೇಷ್ಟೆ ಮಾಡಿದರೆ ಅವರನ್ನು ಮಾರುತಿಗೆ ಹೋಲಿಕೆ ಮಾಡುವುದು ಸ್ವಭಾವ. ಮಾನ್ಯ ವಾಟಾಳ್‌ನಾಗರಾಜ್ ಅವರು ಬಹಳ ಬುದ್ಧಿವಂತರು. ಅವರಿಗೆ ಒಂದೊಂದು ಸಲ ಚೇಷ್ಟೆ ಏತಕ್ಕೆ ಬರುತ್ತದೋ ಗೊತ್ತಾಗುವುದಿಲ್ಲ.

ಶ್ರೀ ವಾಟಾಳ್‌ನಾಗರಾಜ್.—ಇದು ಅತಿರೇಕದ ಮಾತು. ಹಿರಿಯ ಸದಸ್ಯರಾದವರು ಈ ರೀತಿ ಮಾತನಾಡುವುದು ಸರಿಯಲ್ಲ. ಅವರಿಗೆ ಅರಳುಮರಳು ಇರಬಹುದು. ಅವರು ಹೇಳಿದಂಥ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಪ್ರಭಾಕರ ಅವರು ಆರೋಗ್ಯಶಾಸ್ತ್ರದ ಬಗ್ಗೆ ಹೇಳುತ್ತಾ ಶ್ರೀಮಾನ್ ವಾಟಾಳ್‌ನಾಗರಾಜ್ ಅವರ ಮೇಲೆ ನೇರವಾದ ಆಪಾದನೆ ಮಾಡಿದರು. ಒಂದೊಂದು ಸಲ ಹೆಚ್ಚು ಮಾತನಾಡಿ ಚೇಷ್ಟಾಪ್ರವೃತ್ತಿಯನ್ನು ತೋರಿಸಿಕೊಳ್ಳುವುದಕ್ಕೆ ಹೋಗುತ್ತಾರೆಂದು ಸಮರ್ಥನೆ ಮಾಡುವುದಕ್ಕೆ ಹೋದರು. ಮುಖ್ಯಮಂತ್ರಿಗಳ ಬಾಯಿಂದ ಆ ರೀತಿಯ ಪದ ಪ್ರಯೋಗವಾದರೂ ಸಹ ಅದು ತಪ್ಪಾಗುತ್ತದೆ. ನಾನು ಹೇಳಿದರೂ ತಪ್ಪಾಗುತ್ತದೆ. ಈ ಸಭೆಯ ಯಾರೇ ಸದಸ್ಯರಾಗಲೀ, ಬೇರೆ ಸದಸ್ಯರ ಬಗ್ಗೆ ನೋವಾಗುವಂತಹ ಪದವನ್ನು ಉಪಯೋಗಮಾಡಿದರೆ ಅದು ತಪ್ಪಾಗುತ್ತದೆ. ಅದು ನನಗೂ ಅನ್ವಯವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಯಾವ ಅರ್ಥದಲ್ಲಿ ಆ ರೀತಿ ಹೇಳಿದರೋ ನನಗೆ ಗೊತ್ತಿಲ್ಲ. ಅವರು ಆ ರೀತಿ ಉಪಯೋಗ ಮಾಡಬಹುದು ಎಂದು ಹೇಳುವುದಾದರೆ ನಾವೂ ಸಹ ಮಾಡುತ್ತೇವೆ. ಆದಕಾರಣ ಮಾನ್ಯ ಮುಖ್ಯಮಂತ್ರಿಗಳು ಆ ರೀತಿಯ ಪದ ಪ್ರಯೋಗ ಮಾಡಿದ್ದು ಉಚಿತವಲ್ಲವೆಂದು ನನ್ನ ಭಾವನೆ. ಅದನ್ನು ರೆಕಾರ್ಡ್‌ನಿಂದ ತೆಗೆಸಿ ಹಾಕುದು ಕ್ಷೇಮ ಎಂದು ನನ್ನ ಅಭಿಪ್ರಾಯ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರಾದ ಶ್ರೀಮಾನ್ ಪ್ರಭಾಕರ್ ಅವರು ಈ ಸಭೆಯ ಸದಸ್ಯರೊಬ್ಬರ ಬಗ್ಗೆ ಆ ರೀತಿ ಮಾತನಾಡುವುದು ಉಚಿತವಲ್ಲ. ಆದಿಮಾನವ ಕಾಲದಿಂದಲೂ ಸಮಾಜದ ಬದಲಾವಣೆಯ ಬಗ್ಗೆ ಅವರು ಹೇಳಬೇಕಾಗಿಲ್ಲ. ಅವರು ಹೇಳಿದ ವಿಷಯ ಗಂಭೀರವಾಗಿದೆ. ಆದ್ದರಿಂದ ಅವರು ಹೇಳಿದ್ದನ್ನು ಆಕ್ಷೇಪಣೆ ಮಾಡುವ ಪರಿಸ್ಥಿತಿ ಬರುತ್ತದೆ. ಮತ್ತು ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮಾತು ಇವೊತ್ತು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು —ನಾನು ಅದನ್ನು ತರಿಸಿ ನೋಡುತ್ತೇನೆ. ಅವರು ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದಾರೆ ಎಂಬುದನ್ನು ನೋಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರ ಮೇಲೆ ತಪ್ಪು ಹೊರಿಸುವುದಕ್ಕಾಗಿ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ ಅದು ಪತ್ರಿಕೆಯಲ್ಲಿ ಕೂಡ ಬಂದಿದೆ. ಅದು ಪತ್ರಿಕೆಯಲ್ಲಿ ಬಂದ ಮೇಲೆ ಆ ಬಗ್ಗೆ ಜನಗಳಿಗೆ ಒಂದು ಅಭಿಪ್ರಾಯ ಬರುವುದಕ್ಕೆ ಅವಕಾಶವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳಿಗೆ ನನಗೆ ತಿಳಿದಮಟ್ಟಿಗೆ ಯಾರಿಗೇ ಆಗಲಿ ಅಗೌರವ ತೋರಿಸಬೇಕು ಎಂದು ಉದ್ದೇಶ ಇರಲಿಲ್ಲ. ಆದ್ದರಿಂದ ಅದು ಯಾವ ಕಾಂಟೆಕ್ಸ್ಟ್‌ನಲ್ಲಿ ಬಂದಿದೆ ಎಂಬುದನ್ನು ನಾನು ನೋಡಿ ಹೇಳುತ್ತೇನೆ

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಹಿರಿಯ ಸದಸ್ಯರಾದ ಶ್ರೀ ಪ್ರಭಾಕರ್ ಅವರು ಆ ರೀತಿ ಹೇಳಿದ್ದು ಮನಸ್ಸಿಗೆ ಬಹಳ ಸಂಕಟವಾಗಿದೆ. ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುವುದು ಏನೆಂದರೆ ನಿಶ್ಚಿತವೂ, ಸ್ಥಿಮಿತವೂ ಇಲ್ಲದೆ ಇರತಕ್ಕ ಮಂತ್ರಿಮಂಡಲ ಈಗ ರಾಜ್ಯದಲ್ಲಿ ಇದೆ. ಕೆಲವರಿಗೆ ಮಂತ್ರಿಮಂಡಲ ಅದಲು ಬದಲಾದರೆ ತಮಗೆ ಅವಕಾಶ ಸಿಕ್ಕುತ್ತದೆ ಎನ್ನುವ ಮನೋಭಾವ ಇದೆ. ಈಗ ಅವಕಾಶ ಸಿಗದ ಅಮಲಿನಲ್ಲಿ ಹೀಗೆ ಮಾತನಾಡುವುದನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ಮುಖ್ಯ ಮಂತ್ರಿಗಳು ನಗುತ್ತಾ ಈ ಸಭೆಯಲ್ಲಿ ಕುಳಿತುಕೊಂಡಿರುವಾಗ ಮಾನ್ಯ ಸದಸ್ಯರಾದ ಶ್ರೀ ಪ್ರಭಾಕರ್ ಅವರು ಛಂಗನೆ ಮಂಗನಂತೆ ನೆಗೆಯುವ ಅವಶ್ಯಕತೆ ಇರಲಿಲ್ಲ. ಇದನ್ನೆಲ್ಲಾ ನೋಡಿದರೆ ನಿಶ್ಚಿತವಿಲ್ಲದೇ ಇರತಕ್ಕ ಮಂತ್ರಿಮಂಡಲದಲ್ಲಿ ಕೆಲವರು ಅವಕಾಶವನ್ನು ಪಡೆಯುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ಅವರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಎಚ್ಚರಿಕೆಯಿಂದ ಇರಬೇಕು ಎಂದು ನಾನು ಅಧ್ಯಕ್ಷರ ಮುಖಾಂತರ ಅವರಿಗೆ ಹೇಳುತ್ತೇನೆ. ಈಗ ಮುಖ್ಯ ಮಂತ್ರಿಗಳು ಉಳಿಯುತ್ತಾರೆಯೋ ಅಥವಾ ಹೋಗುತ್ತಾರೆಯೋ ಹೇಗೆ? ಶ್ರೀಮಾನ್ ಬಸವಲಿಂಗಪ್ಪನವರು ಮುಖ್ಯ ಮಂತ್ರಿಗಳನ್ನು ತೆಗೆದುಹಾಕಿ ಅವರ ಕುರ್ಚಿಯಲ್ಲಿ ಕುಳಿತುಕೊಳ್ಳುವುದಕ್ಕೆ ಹೊರಟಿದ್ದಾರೆ ಎಂದು ನಮಗೆ ಸುದ್ದಿ ಬಂದಿದೆ. ಆದ್ದ

ರಿಂದ ಅವರು ಈ ರಾಜ್ಯಕ್ಕೆ ಮುಖ್ಯ ಮಂತ್ರಿಗಳಾಗಿ ಬರುತ್ತಾರೆಯೇ ಹೇಗೆ ಎಂಬುದು ನಿಶ್ಚಿತವಾಗಿ ಗೊತ್ತಾಗಬೇಕು. ಈಗ ಇರತಕ್ಕ ಮಂತ್ರಿಮಂಡಲ ಖಾಯಂ ಆಗಿ ಇರುತ್ತದೆಯೇ ಹೇಗೆ ಎಂಬುದನ್ನು ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್.—ಈಗ ನಾನು ಮಾತನಾಡುವ ಅವಶ್ಯಕತೆ ಇರಲಿಲ್ಲ. ನಾನು ಹೇಳಿದ್ದರ ಮೇಲೆ ವ್ಯಾಖ್ಯಾನ ಮಾಡಬಾರದು ಎಂದು ಹೇಳಿದವರೇ ಮಂಗನಹಾಗೆ ಆಡುತ್ತಿದ್ದೀರಲ್ಲಾ ಎಂದು ಹೇಳಿದರೆ ಅದಕ್ಕೇನು ಮಾಡುವುದು. ಇದು ಚರ್ಚೆ. ಚರ್ಚೆಯನ್ನು ಕ್ರೀಡಾ ಮನೋಭಾವದಿಂದ ತೆಗೆದುಕೊಳ್ಳಬೇಕು. ನಾನು ಅನ್‌ಪಾರ್ಲಿಮೆಂಟರಿ ಆದದ್ದನ್ನು ಹೇಳಿದರೆ ಅದನ್ನು ತೆಗೆದು ಹಾಕಬೇಕು ಎಂದು ಹೇಳಿದ್ದಾರೆ. ಯಾರಿಗೋ ಲೈಸೆನ್ಸ್ ಕೊಟ್ಟಿರಿ ಲಾಭಪಡೆದು ಕೊಂಡಿರಿ ಎಂದೆಲ್ಲಾ ಹೇಳಿದ್ದೀರಿ. ಅದೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಹೀಗೆ ಅಪಾದನೆಗಳನ್ನು ಮಾಡಿದ ಮಾತ್ರಕ್ಕೇ ಅದು ನಮಗೆ ಅಗೌರವ ಎಂದು ತಿಳಿದುಕೊಳ್ಳಬಾರದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಪಾರ್ಲಿಮೆಂಟರಿ ಯಾವುದು ಅನ್‌ಪಾರ್ಲಿಮೆಂಟರಿ ಯಾವುದು ಎಂಬುದನ್ನು ನಿರ್ಧಾರ ಮಾಡಿ ತೀರ್ಮಾನ ಕೊಡುವ ಅಧಿಕಾರ ಅಧ್ಯಕ್ಷರಿಗೆ ಇದೆ. ಅವರು ಹೇಳಿದ್ದಕ್ಕೆ ನಾನು ತಲೆಬಾಗುತ್ತೇನೆ. ಇಲ್ಲಿ ಪಾರ್ಲಿಮೆಂಟರಿ ಮತ್ತು ಅನ್‌ಪಾರ್ಲಿಮೆಂಟರಿ ಪ್ರಶ್ನೆಯಲ್ಲ. ಯಾವ ಕಾಂಟೆಕ್ಸ್ಟ್‌ನಲ್ಲಿ ಆ ಅರ್ಥ ಬರುವ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರೋ ಗೊತ್ತಿಲ್ಲ. ಆದರೆ ಅವರು ಹೇಳಿದ ಮಾತಿನಿಂದ ಈ ಕಡೆ ಕುಳಿತುಕೊಂಡಿರತಕ್ಕ ಸದಸ್ಯರಿಗೆ ಮನಸ್ಸಿಗೆ ನೋವಾಗಿದೆ. ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮಾತುಗಳು ಪತ್ರಿಕೆಯಲ್ಲಿ ಬಂದಿದೆ. ಆ ಮಾತು ಅವರ ಬಾಯಿಂದ ಬರತಕ್ಕದ್ದು ಅಲ್ಲ. ಆದ್ದರಿಂದ ಅವರು ಆ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಮಾಡಿದಂತಹ ಪದ ಪ್ರಯೋಗದ ಬಗ್ಗೆ ತಾವು ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದಾರೆ ಎಂಬದನ್ನು ನೋಡಿ ನಾನು ನಿರ್ಣಯ ಕೊಡುತ್ತೇನೆ ಎಂದು ತಾವು ಹೇಳಿದ್ದೀರಿ. ಈಗ ಶ್ರೀಮಾನ್ ಪ್ರಭಾಕರ್ ಅವರೂ ಮತ್ತು ಶ್ರೀಮಾನ್ ಬಿ. ಪುಟ್ಟಸ್ವಾಮಯ್ಯನವರು ಉಪಯೋಗಿಸಿದ ಪದಗಳು ಸರಿಯಲ್ಲ. ಈ ಸಭೆಯ ನಡವಳಿಕೆಯಲ್ಲಿ ಇಂಥಾ ಪದ ಪ್ರಯೋಗ ಮಾಡುವುದು ಉಚಿತ ಎಂದು ಹೇಳಿದರೆ ಅದಕ್ಕೆ ನನ್ನ ಅಡ್ಡಿ ಏನೂ ಇಲ್ಲ. ನಡೆದುಕೊಂಡು ಹೋಗಲಿ. ಆ ಎರಡು ಪದಗಳನ್ನು ಎಕ್ಸ್‌ಪಂಜ್ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ನಾನು ಅದನ್ನು ತರಿಸಿ ನೋಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ನಾನು ವೈಯಕ್ತಿಕವಾಗಿ ತಮ್ಮ ಬಗ್ಗೆ ಅಪಾರವಾದ ಗೌರವನ್ನು ಇಟ್ಟುಕೊಂಡಿರತಕ್ಕ ಸದಸ್ಯ. ತಲೆಗೊಬ್ಬ ಒಂದೇ ಮಂತ್ರ ಎಂದು ಮಂಜುನಾಥ್ ಹೇಳಿದರು ಎಂದು ತಾವು ಅಪ್ಪಣೆ ಕೊಡಿಸಿದಿರಿ. ತಮ್ಮ ಬಗ್ಗೆ ನಾನು ಆ ತರಹ ಹೇಳಿಲ್ಲ. ಬಹುಶಃ ನಾನೇನಾದರೂ ಅದನ್ನು ಹೇಳಿದ್ದರೆ ಬೇರೆ ಉದಾಹರಣೆಗೆ ಹೇಳಿರಬಹುದು. ಆದರೆ ತಮ್ಮ ಬಗ್ಗೆ ಮಾತ್ರ ನಾನು ಆ ಮಾತನ್ನು ಹೇಳಿಲ್ಲ.

Converting of a Notice under Rule 312 as a Call Attention Notice

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ 312ನೇ ರೂಲ್ ಪ್ರಕಾರ ನಾನು ಒಂದು ನೋಟೀಸನ್ನು ತಮಗೆ ಕೊಟ್ಟಿದ್ದೆ. ಅದಕ್ಕೆ ತಮ್ಮಿಂದ ನನಗೆ ಉತ್ತರ ಬಂದಿದೆ.

ಅಧ್ಯಕ್ಷರು.—ನಾನು ಅದನ್ನು ಕಾಲ್‌ಅಟೆನ್‌ಷನ್ ನೋಟಿಸ್ ಆಗಿ ಪರಿವರ್ತನೆ ಮಾಡಿದ್ದೇನೆ.

(*Sri Kagodu Thimmpa Stood Up*)

3-30 P.M.

Sri S. BANGARAPPA.—You have converted my notice under Rule 312 into a call attention notice.

MADAM SPEAKER.—He may please resume his seat. I have converted the notice into a call attention notice. If the hon. member persists, how am I to regulate the business of the House. All the hon. members should co-operate with the Chair to regulate the business of the House. I request the hon. member not to raise the same issue again and again.

Sri S. BANGARAPPA.—I request the Chair kindly to bear with me for a minute.

MADAM SPEAKER.—You please resume your seat.
(*Sriyuts Bangarappa and Kagodu Thimmappa were seen talking simultaneously and in the din nothing was heard*)

If the hon. member Sri Bangarappa does not resume his seat, I will be compelled to name him. I request him once agian to resume his seat.

Sri S. BANGARAPPA.—My notice is a very important one. In order to reach my call attention notice, it will take many days. This is a very urgent matter and I therefore request the Chief kindly to allow me to raise this subject.

(*Sri Vatal Nagaraj Stood Up*)

MADAM SPEAKER.—I have converted his notice as calling attention notice.- As soon as I get the statement from the Government, I shall include it in the agenda. Besides, the Hon. Minister who is concerned is not present.

(*Sri Bangarappa continued defying the Chair*)

Sri D. DEVARAJ URS.—I raise a point of order. It is not proper for the hon. member to go on persisting inspite of repeated requests being made by the Hon. Speaker to resume his seat. I would appeal to the hon. member kindly to obey the orders of the Chair.

ಶ್ರೀ ಎಸ್. ಬಂಗಾರಪ್ಪ.—ನಾನು ಸಹ ಒಂದು ಅಪೀಲ್ ಮಾಡುತ್ತೇನೆ. ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿದ್ದುದರಿಂದ ಇದಕ್ಕೆ ಮಹತ್ವವನ್ನು ಕೊಡಬೇಕು. ಮತ್ತು ಅದಕೋಸ್ಕರವೇ ನಾನು ಇದನ್ನು ಇಲ್ಲಿ ಎತ್ತುವುದಕ್ಕೆ ನನಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುವುದು.

Sri D. DEVARAJ URS.—The hon. member cannot hold the House to ransome.

Sri S. BANGARAPPA.—The Chief Minister cannot suppress the rights of the hon. members here. We are appealing to the chair te take up this important matter for discussion.

ಶ್ರೀ ಎಚ್. ಡಿ. ದೇವೇಗೌಡ.—ತಾವು ಆಗಲೇ ಅದನ್ನು ಕಾಲಿಂಗ್ ಅಟೆನ್ಷನ್ ನೋಟೀಸ್ ಅಗಿ ಪರಿವರ್ತಿಸಿದ್ದೀರಿ ಎಂದು ಹೇಳಿದ್ದೀರಿ; ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದಲ್ಲದೆ ಆಗಲೇ ತಾವು ಹೇಳಿದ್ದೀರಿ ದಿವಸಕ್ಕೆ ಎರಡು ಕಾಲಿಂಗ್ ಅಟೆನ್ಷನ್ ನೋಟೀಸುಗಳನ್ನು ತೆಗೆದುಕೊಳ್ಳುತ್ತಿದ್ದೇವೆ ತೊಂಭತ್ತೋ, ನೂರೋ ಇನ್ನೂ ಇವೆ ಎಂದು ಇತ್ಯಾದಿ ಹೇಳಿದ್ದೀರಿ. ದಿವಸಕ್ಕೆ ಎರಡು ತೆಗೆದುಕೊಂಡರೂ 40-50 ದಿವಸ ಬೇಕಾಗುತ್ತದೆ. ಶ್ರೀ ಬಂಗಾರಪ್ಪನವರು ಅದನ್ನು ಕಾಲಿಂಗ್ ಅಟೆನ್ಷನ್ ನೋಟೀಸ್ ಅಗಿ ಪರಿವರ್ತನೆ ಮಾಡಿದರೆ ತೊಂದರೆಯಾಗುತ್ತದೆ. ಆದ್ದರಿಂದ

…mental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ವ್ಯಾಪ್ತಿ ಕ್ರಮಾಂಕ Accession No. 6006
ದಿನಾಂಕ Date

ಅದಕ್ಕೆ ಉತ್ತರ ಜಾಗ್ರತೆ ತರಿಸಿಕೊಡಿ ಎಂದು ಹೇಳುತ್ತಿದ್ದಾರೆ. ಅವರು ಹೇಳತಕ್ಕಂತಹ ವಿಚಾರವೇನೆಂದರೆ ಅಲ್ಲಿ 250 ಕೆಲಸಗಾರರನ್ನು ಕಿತ್ತು ಹಾಕಿದ್ದಾರೆ; ಅವನ್ನು ಸರ್ಕಾರದ ಗಮನಕ್ಕೆ ತಂದು ಒಂದು ಪರಿಹಾರವನ್ನು ದೊರಕಿಸಿ ಕೊಡಬೇಕೆಂಬುದೇ ಅವರ ಉದ್ದೇಶ. ಮೊನ್ನೆ ನಾವು ರೂಲ್ 15ರ ಪ್ರಕಾರ ಒಂದು ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅನುಮತಿಗೆ ತಮ್ಮಲ್ಲಿ ಕಳುಹಿಸಿದ್ದೇವೆ. ಅದಕ್ಕೆ ತಾವು ಆಗುವುದಿಲ್ಲವೆಂದು ಉತ್ತರ ಕಳುಹಿಸಿದ್ದೀರಿ. ತಾವು ಹೀಗೆ ಮಾಡಿದರೆ, ನಾವು ಅಂಥ ಗಹನವಾದ ವಿಚಾರಗಳ ಮೆರಿಟ್ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಬೇಕಾದರೆ ತಮ್ಮ ಅನುಮತಿ ಬೇಕಾಗುತ್ತದೆ. ಹಾಗೆ ನಮಗೆ ತಾವು ಅನುಮತಿ ಯಾ ಕೊಡುವುದು ಯಾ ಬಿಡುವುದು ತಮಗೆ ಸೇರಿದ್ದು. ಕೆಲವು ವಿಷಯಗಳು ನಮ್ಮ ದೃಷ್ಟಿಯಲ್ಲಿ ಬಹಳ ಗಹನವಾದುದು ಎಂದು ಇರುವುದರಿಂದ ಅವುಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ತಮ್ಮ ಅನುಮತಿ ಕೇಳುತ್ತೇವೆ. ಆದರೆ ಅದಕ್ಕೆ ಅನುಮತಿ ನಿರಾಕರಣೆ ಮಾಡುವುದಕ್ಕಿಂತ ಮುಂಚೆ ಯಾವ ಕಾರಣಕ್ಕಾಗಿ ನಿರಾಕರಣೆ ಮಾಡುತ್ತೀರಿ ಎಂದು ಹೇಳದೆ ತಾವು ಒಂದೇ ಸಲ ನಿರ್ಣಯ ಮಾಡಿಬಿಟ್ಟರೆ ನಾವು ಮತ್ತೆ ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ. ಈಗ ರೂಲ್ 49, 312 ಮುಂತಾದುವುಗಳ ಕೆಳಗೆ ನಾವು ಕೆಲವು ವಿಚಾರಗಳನ್ನು ಎತ್ತಬಹುದು. ಆದರೆ ಹಾಗೆ ಎತ್ತುವಾಗ ಅವುಗಳ ಮೆರಿಟ್ ಬಗ್ಗೆ ಪ್ರತಿಪಾದನೆ ಮಾಡುವುದಕ್ಕೆ ನಮಗೆ ಅವಕಾಶ ಬೇಕಾಗುತ್ತದೆ ಅವಕಾಶ ಕೊಟ್ಟ ಮೇಲೆ ತಾವು ಏನು ನಿರ್ಣಯ ಬೇಕಾದರೂ ತೆಗೆದುಕೊಳ್ಳಬಹುದು ಅದಕ್ಕೆ ನಾವು ತಲೆಬಾಗುತ್ತೇವೆ. ಅದುದರಿಂದ ನಮ್ಮನ್ನು ಕೇಳದೆ ಏನಾದರೂ ನಮಗೆ ಎಂಡೋರ್ಸ್‌ಮೆಂಟ್ ಬಂದರೆ ಅದನ್ನು ಪುನಃ ಎತ್ತಿ ಆದರ ಮೆರಿಟ್ ಬಗ್ಗೆ ಇಲ್ಲಿ ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಮಗೆ ಕೆಲವು ಗಂಭೀರವಾದ ಪ್ರಶ್ನೆಗಳು ಬರುತ್ತವೆ. ಅವುಗಳನ್ನು ನಾವು ಇಲ್ಲಿ ಎತ್ತಿ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಅದಕ್ಕೆ ತಾವು ಎಡೆಗೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಹೊರಗಡೆ ನಮಗೆ ಕೆಲವು ತೊಂದರೆಗಳು ಇರುವುದರಿಂದ ಅವುಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ನಾನು ತಮ್ಮ ಮೂಲಕ ಅರಿಕೆ ಮಾಡಿ ಕೊಳ್ಳುವುದೇನೆಂದರೆ ನಾವು ಏನಾದರೂ ರೂಲ್ ಪ್ರಕಾರ ನೋಟೀಸ್ ಕಳುಹಿಸಿದಾಗ ಪ್ರತಿಯೊಂದನ್ನೂ ತಳ್ಳಿಹಾಕಿ ನಮಗೆ ಅವಕಾಶ ಇಲ್ಲದ ಹಾಗೆ ಮಾಡಬಾರದು. ಆದನ್ನು ಸರ್ಕಾರಕ್ಕೆ ಕಳುಹಿಸಿ ನಮಗೆ ಉತ್ತರ ತರಿಸಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಎಲ್ಲರಿಗೂ ಒಪ್ಪಿಗೆ ಕೊಡವೇ ತೊಂದರೆ ಕೊಡತಕ್ಕ ಉದ್ದೇಶ ನಮಗೆ ಇಲ್ಲ; ಮತ್ತು ನಮ್ಮ ಆಫೀಸಿಗೂ ಇಲ್ಲ. ಸದಸ್ಯರು ಹಲವು ರೀತಿಯಲ್ಲಿ ಸರ್ಕಾರದಿಂದ ಉತ್ತರವನ್ನು ತೆಗೆದುಕೊಳ್ಳಬಹುದು. ಪ್ರಶ್ನೆಗಳನ್ನು ಕೇಳಬಹುದು, ಅಡ್‌ಜರ್ನ್‌ಮೆಂಟ್ ಮೋಷನ್ ಕಳಿಸಬಹುದು; ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಬಹುದು, ಅರ್ಧ ಗಂಟೆಯ ಚರ್ಚೆಗೆ ಆವಕಾಶ ಕೇಳಬಹುದು—ಹೀಗೆ ಹಲವು ರೀತಿಯ ಆವಕಾಶಗಳು ಇವೆ. ಆದು ಬಿಟ್ಟು ಪ್ರತೀ ದಿವಸ ರೂಲ್ 312ರ ಪ್ರಕಾರ ಕಾಲ ತಳ್ಳುತ್ತಾ ಇದ್ದರೆ ಹೇಗೆ ? ನೀವೆಲ್ಲಾ ಈ ವಿಚಾರಗಳಲ್ಲಿ ಸಹಕಾರ ಕೊಡದಿದ್ದರೆ ಸಭೆಯ ಕಾರ್ಯಕಲಾಪಗಳನ್ನು ಆದರೂ ಹೇಗೆ ನಡೆಸುವುದು ? ಮಾನ್ಯ ಸದಸ್ಯರು ಈಗ ಕಾಲಿಂಗ್ ಅಟೆನ್‌ಷನ್ ನೋಟೀಸಿಗೆ ಬೇಗನೆ ಉತ್ತರ ತರಿಸಿ ಕೊಡಬೇಕೆಂದು ಹೇಳುವುದು ಬಿಟ್ಟು ಅದನ್ನೇ ಪುನಃ ಪುನಃ ಹೇಳುತ್ತಿದ್ದರೆ ಏನು ಪ್ರಯೋಜನ ?

ಶ್ರೀ ಎಂ. ಎಸ್. ಕೃಷ್ಣನ್.—ಈ ಸಂದರ್ಭದಲ್ಲಿ ಕಾಲ್ ಅಟೆನ್‌ಷನ್ ವಿಷಯವಾಗಿ ಒಂದು ನೋಟೀಸ್ ಕೊಟ್ಟರೂ ಸಹ ಉತ್ತರಗಳು ಬರುವುದು ಬಹಳ ನಿಧಾನವಾಗುತ್ತಿದೆಯೆಂದು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. 17 ದಿನಗಳಾದರೂ ಒಂದು ಉತ್ತರ ಬಂದಿಲ್ಲವೆಂದು ಹೇಳಿದರೆ ಹೇಗೆ ?

ಅಧ್ಯಕ್ಷರು.—ಎಲ್ಲೋ ಒಂದೊಂದು ಕೇಸ್ ಅಪರೂಪವಾಗಿ ಆ ರೀತಿ ಆಗಿರಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಸುಮಾರು 250 ಮಂದಿಯನ್ನು ಸಸ್‌ಪೆಂಡ್ ಮಾಡಿದ್ದಾರೆಂಬ ಅಂಶದ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಆದರ ಬಗ್ಗೆ ಅವರು ಕಾಲ್ ಅಟೆನ್‌ಷನ್ ವಿಷಯ ಕೇಳಿದ್ದೇನೆಂದರೆ ಅದಕ್ಕೆ ಸರ್ಕಾರದವರು ಉತ್ತರ ಹೇಳುವುದು ಬೇಡವೇ ?

ಅಧ್ಯಕ್ಷರು.—ಆದಕ್ಕೆ ನಾನು ಜವಾಬು ತರಿಸಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಅದಕ್ಕೆ ಇದ ವರೆಗೆ ಉತ್ತರ ಬಂದಿಲ್ಲ.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ

ಅಧ್ಯಕ್ಷರು.— ನೀವು ಈ ರೀತಿ ಹಟ ಮಾಡುವುದಾದರೆ ಬಾಕಿಯುವರಿಗೂ ಹಟ ಮಾಡುವುದಕ್ಕೆ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಹಟ ಮಾಡುವ ಪ್ರಶ್ನೆಯೇನೂ ಇಲ್ಲ. ನನ್ನ ಕಾಲ್ ಅಟೆನ್ಷನ್ ನೋಟೀಸಿಗೆ ಇನ್ನೂ ಸರ್ಕಾರದಿಂದ ಉತ್ತರ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಸರ್ಕಾರದ ಅವ್ಯವಸ್ಥೆ ಈ ರೀತಿ ಆಗುತ್ತಿದೆ.

(Both Sriyuths Kagadu Thimmappa and Bangarapa were shouting simultaneously inspite of repeated requests by the Madam Speaker. There was confusion and nothing was heard. Madam Speaker ordered that nothing should be recorded.)

Matter not recorded as ordered by the Chair.

Sri H. M, CHANNABASAPPA.—I am on a point of order. I am sorry to say that we are not able to know what is going on, if 3 to 5 people were to talk simultaneously. The House is not in order. As per rules one member should speak at a time otherwise the House will not be able to understand anything. If some of the members speak simultaneously, I am afraid much time of the House will be wasted. Please give a ruling in the matter so that one member at a time should speak.

Sri K. M. NAGANNA.—Can a Minister give a direction to the Speaker ?

MADAM SPEAKER.—It is a suggestion and not a direction. Inspite of several requests by the Chair Sri Bangarappa went on shouting about the suspension of 250 employees.

MADAM SPEAKER.—I think I have to name the Hon. Member.

Sri H. D DEVE GOWDA.—He is not questioning to revise the ruling.

MADAM SPEAKER.—He must withdraw from the House.

Sri S. BANGARAPPA.–It is not my intention to disobey the Chair.

MADAM SPEAKER.—If he doesnot withdraw I am going to name him now.

(Sri S. Banagarappa still persisted in speaking something)

MADAM SPEAKER.—I name Sri Bangarappa,

Motion for suspension of Bangarappa.

Sri D. DEVARAJ URS.—I beg to move that the Hon. Member Sri S. Bangarappa may be suspended for the day.

SriS. BANGARAPPA.–There isno necessity to go out of the House.

Sri D. DEVARAJ URS.—I beg to mova that the hon. Member may be named and he may withdraw from the House. I move that the Hon. Member may be suspended from this House for the day.

Sri S. BANGARAPPA.—There is no necessity to go out of the House.

MADAM SPEAKER.—He will be sent out if he does not go.

ಶ್ರೀ ಎಸ್. ಬಂಗಾರಪ್ಪ.—ಆ ವಿಷಯ ಮಾತ್ರ ಅಧ್ಯಕ್ಷರಿಗೆ ಬಿಟ್ಟಿದ್ದು......

ಶ್ರೀ ವಾಟಾಳ್ ನಾಗರಾಜ್.—ಅದ್ಯಕ್ಷರ ರೂಲಿಂಗ್ ಬಗ್ಗೆ ಬಂಗಾರಪ್ಪನವರಿಗೆ ವಿರೋಧ ಇಲ್ಲ. ಆದರೆ ಆ 250 ಜನ ಕೆಲಸಗಾರರ ಬಗ್ಗೆ ವಿವರಣೆ......

ಅಧ್ಯಕ್ಷರು.—ಅದನ್ನು ತಿಳಿಸಿದ್ದಾಗಿದೆ.

SRI C. M. ARUMUGHAM.—Madam Speaker, I have a submission.

MADAM SPEAKER.—No speeches are allowed.

SRI C. M. ARUMUGAM.—I am making a submission for consideration. My submission is that Mr. Bangarappa, in the course of his anxiety to bring to the notice of the Government.

MADAM SPEAKER.—Is there no limit for that ?

SRI C. M. ARUMUGHAM.—There was a limit. He was not questioning the authority or the Ruling of the Speaker. He was all the time submitting to the Speaker repeatedly that he must be given some chance to explain. His motion has been converted into a Calling Attention Motion and Government takes a lot of time......

SRI S. M. SHEERNALY CHANDRASEKHAR.—I have a Point of Order.

MADAM SPEAKER.—Will you, Sri Chandrasekhar, please sit down.

SRI C. M. ARUMUGHAM.—I submit on behalf of the Opposition to kindly reconsider the Ruling. I have also a submission to the Chief Minister. This is a point concerning the removal of hundreds of workers and Mr. Bangarappa was only insisting that he should get a chance to explain it. Madam Speaker, it was not his intention to flout your decision.

MADAM SPEAKER.—What is the hon. Member saying ? I have followed everything. I have heard him very patiently and I have requested him repeatedly.

SRI C. M. ARUMUGHAM.—Another point was that when Government was explaining, you have called Mr. Thimmappa and so we have not heard Mr. Bangarappa Mr. Thimmappa was representing about the Taluk Board election. I appeal to the Hon. Chief Minister and to you. Madam Speaker, to kindly reconsider naming Mr. Bangarappa and also suspending him for the day.

SRI D. DEVARAJ URS.—I would very much love to respect the sentiments of the hon. Member Mr Arumugam, who just now made an appeal. I am afraid the appeal must have been made to the proper quarters even before this. The hon. Member was sitting patiently, perhaps sometimes enjoying and sometimes feeling very much for what was going on. But he has chosen to get up a little too late. I wish the hon. Member had made that appeal through the other hon. Member who has thought it fit to flout the Ruling of the Chair. Whether he wanted to say this or that is not the issue at hand. The question is : for the time the Hon. Speaker asked the hon. Member

(SRI D. DEVARAJ URS)

to sit down and I was compelled to do it only after the Speaker named the Member. After naming the hon. Member, if Mr Arumugam were to say that it should be reconsidered, I would appeal to him to reconsider what all he spoke ; whether he was not too late ; whether his appeal should be through the hon. Member who thought it fit to go against the wishes of the Ruling of the Speaker.

Sri C. M. ARUMUGHAM.—The Speaker has abundant patience. At no time she was perturbed. In fact, she has got too much patience and I never thought she would name him. I was under that impression,

MADAM SPEAKER.—I would like to know whether Mr Bangarappa would withdraw or not.

Sri C. M. ARUMUGHAM.—You will have to kindly reconsider. We can appeal to you only. There is no appellate authority.

Sri D. DEVARAJ URS.—It is the House that has passed the resolution.

Sri C. M. ARUMUGHAM.—You moved it; nobody has said yes no to it.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರಲ್ಲಿ ಒಂದು ಪ್ರಾರ್ಥನೆ. ಬಂಗಾರಪ್ಪನವರು ಅಧ್ಯಕ್ಷರ ಕಡೆಗೆ ರೂಲ್ 312 ರ ಪ್ರಕಾರ ಒಂದು ನೋಟೀಸನ್ನು ಕೊಟ್ಟಿದ್ದರು. ಆ ವಿಚಾರದಲ್ಲಿ ಅಧ್ಯಕ್ಷರು ಒಂದು ಎಂಡಾರ್ಸ್‌ಮೆಂಟನ್ನು ಅವರಿಗೆ ಕಳುಹಿಸಲಾಗಿದೆ ಎಂದು ಹೇಳುತ್ತಿದ್ದಾಗ ಮಾನ್ಯ ಬಂಗಾರಪ್ಪನವರು ಆ ವಿಚಾರದಲ್ಲಿ ಒಂದು ಬಹಳ ಗುರುತರವಾದ ವಿಚಾರವಿದೆ ಎಂದು ಹೇಳಿ ಅದನ್ನು ಅಧ್ಯಕ್ಷರ ಗಮನಕ್ಕೆ ತರಬೇಕೆಂದು ಅವರು ಪ್ರಯತ್ನ ಮಾಡುತ್ತಿದ್ದಾಗ ಅಧ್ಯಕ್ಷರು ಮಧ್ಯೆ ಶ್ರೀ ತಿಮ್ಮಪ್ಪನವರನ್ನು ಕರೆದರು. ಬಂಗಾರಪ್ಪನವರಿಗೆ ಒಂದು ನಿಮಿಷ ಅವಕಾಶ ಸಿಕ್ಕಿದ್ದರೆ ಸಾಕಾಗಿತ್ತು. ಅಷ್ಟಕ್ಕೂ ಅಧ್ಯಕ್ಷರು ಅವಕಾಶ ಕೊಡಲಿಲ್ಲ............

ಅಧ್ಯಕ್ಷರು.—ನಮ್ಮ ಆಫೀಸಿಗೆ ಅವರು ಕಳುಹಿಸಿದ ಕಾಲಿಂಗ್ ಅಟೆನ್‌ಷನ್ ನೋಟೀಸು ಬಂದು ತಲುಪಿದ ಕೂಡಲೆ ಅವರಿಗೆ ಆ ವಿಚಾರದಲ್ಲಿ ಒಂದು ಎಡಾರ್ಸ್‌ಮೆಂಟನ್ನು ಕಳುಹಿಸಲಾಗಿದೆ. ಹಾಗಿದ್ದೂ ಕೂಡ ಇಲ್ಲಿ ಇದು ಒಂದು ಪ್ರಾಮುಖ್ಯವಾದ ಅಂಶ ಎಂದು ಹೇಳಿ ಎಲ್ಲಾ ವಿಷಯಗಳನ್ನೂ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡುವುದಾದರೆ ಇನ್ನು ಈ ನಿಯಮಾವಳಿಗಳಾದರೂ ಏತಕ್ಕಿರಬೇಕು ?

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೇ ಹಾಗಾದರೆ ಸದಸ್ಯರು ರೂಲ್ಸ್ ಪ್ರಕಾರ ಅಂದರೆ ರೂಲ್ 59 ಅಥವ 312 ಅಥವ 49 ಪ್ರಕಾರ ನೋಟೀಸನ್ನು ತಮ್ಮ ಒಂದು ಕಾಗದದ ಉತ್ತರಕ್ಕಾಗಿ ಕಳುಹಿಸುವುದಾದರೆ ಅದನ್ನು ಸಂಪೂರ್ಣವಾಗಿ ಕೈಬಿಡುವುದೇ ಲೇಸು. ಅದನ್ನು ಕೈ ಬಿಟ್ಟು ನಮ್ಮ ಅಜೆಂಡಾದಲ್ಲಿ ಏನಿರುತ್ತದೋ ಅಷ್ಟನ್ನೇ ನಾವು ಮಾಡುವುದು ಸರಿ ಅನ್ನುವುದಾದರೆ ಇದಕ್ಕೆ ರೂಲ್ಸ್ ಆದರೂ ಏತಕ್ಕೆ ಬೇಕು ?

ಅಧ್ಯಕ್ಷರು.—ಹಾಗಾದರೆ ಈ ಸಭೆಯವರು ಇಂಥಾ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ತೀರ್ಮಾನ ಮಾಡುವುದಕ್ಕೆ ಅಧ್ಯಕ್ಷರಿಗೆ ಡಿಸ್ಕ್ರಿಷನರಿ ಅಧಿಕಾರವನ್ನು ಕೊಟ್ಟಿಲ್ಲವೇ ? ಹಾಗೆ ಒಂದಾವರ್ತಿ ಡಿಸ್ಕ್ರಿಷನ್ ಉಪಯೋಗಿಸಿ ತೀರ್ಮಾನವಾದುದನ್ನು ಮತ್ತೆ ಪುನರ್‌ಪರಿಶೀಲನೆ ಮಾಡಿ ಎಂದರೆ ಅದರಲ್ಲಿ ಅರ್ಥವಿದೆಯೇ ?

4-00 P. M.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿ ಪುನರಾಲೋಚನೆ ಮಾಡಬೇಕೆಂದು ಕೇಳಲು ಅವಕಾಶವಿದೆಯೋ, ಇಲ್ಲವೇ ಎಂದು ತಮ್ಮನ್ನು ನಾನು ಕೇಳುತ್ತೇನೆ. ಅವಕಾಶವಿದ್ದರೆ ಅದರ ಬಗ್ಗೆ ಹೇಳಲು ಸ್ವಲ್ಪ ಅವಕಾಶ ಕೊಡಿ. ಹಾಗೆ ಪುನರಾಲೋಚನೆ ಮಾಡಬೇಕೆಂದು ಕೇಳಲು ಅವಕಾಶ

ವಿಲ್ಲದಿದ್ದರೆ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಇನ್ನು ಮೇಲೆ ಯಾವುದೇ ಸೂಚನೆ ಕಳುಹಿಸಲು ಅವಕಾಶವಾಗುವುದಿಲ್ಲ. ತಮ್ಮ ಆಫೀಸಿನಿಂದ ಎಂಡಾರ್ಸ್‌ಮೆಂಟ್ ಬರುತ್ತದೆ, ನಾವು ಅದು ಬಂದ ಮೇಲೆ ಸುಮ್ಮನೆ ಕೂಡಬೇಕಾಗುವುದು.

ಅಧ್ಯಕ್ಷರು.—ತಾವೇ ಯೋಚನೆಮಾಡಿ, 100-120 ನೋಟೀಸುಗಳು ಬಂದರೆ ಎಲ್ಲಕ್ಕೂ ಅವಕಾಶ ಕೊಡಬೇಕೆಂದರೆ ಹೇಗೆ ಸಾಧ್ಯ ? ಮುಖ್ಯವಾಗಿರುವುದನ್ನು ಪರಿವರ್ತನೆ ಮಾಡಲು ಅವಕಾಶ ಇದ್ದಾಗ ಕಳುಹಿಸುತ್ತೇವೆ, ಅದನ್ನು ಮುಚ್ಚಬೇಕೆಂಬ ಉದ್ದೇಶವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕಾನೂನು ಪ್ರಕಾರ ಅಧಿಕಾರ ಚಲಾಯಿಸಲು ತಮಗೆ ಸ್ವಾತಂತ್ರ್ಯವಿದೆ, ಅದನ್ನು ನಾನು ಪ್ರಶ್ನೆಮಾಡುವುದಿಲ್ಲ. ಪುನರ್ಪರಿಶೀಲನೆ ಮಾಡಬೇಕೆಂದು ಹೇಳಲು ಒಂದು ನಿಮಿಷ ಅವಕಾಶ ಕೊಡಿ ಅಂದರೆ ಅವಕಾಶ ಕೊಡದೆ ಶ್ರೀ ತಿಮ್ಮಪ್ಪನವರನ್ನು ಕರೆದಿರಿ. ಹೀಗಾದರೆ ನಾವು ಹೇಗೆ ಕೆಲಸಮಾಡುವುದು ?

Sri D. DEVARAJ URS.—I am sorry, the Leader of the Opposition is digressing from the point. He seems to think that only the Opposition has to function here and as if the Government is not functioning. We have also some difficulties as treasury benches. If the Opposition Member feels that merely because he has certain things to submit and he is not given a chance, he should persist in it. Every member has the same right. Could we also go on persisting ? That is not the point at issue.

ಶ್ರೀ ಎಚ್. ಡಿ. ದೇವೇಗೌಡ.—ಹಾಗಾದರೆ ಹೇಗೆ ಮಾಡುವುದು ?

Then guide lines may be given to us from the Leader of the House. As soon as we receive an endorsement from the Speaker, shall we keep quiet ?

Sri DEVARAJ URS.—There are the Rules and it is for you to do what you like under the rules. The Opposition Leader is speaking as if he has become a stranger to democratic functioning. Both of us are bound by the Rules.

Sri H. D. DEVE GOWDA.—Should we not have an opportunity to make a request ?

Sri D. DEVARAJ URS.—Request was made and permission was refused. That is a separate issue. But this issue concerns the behaviour of a particular Member of this House. If he is asked by the Speaker to sit down and if he persists in speaking, what should be done ? That is the issue. Every member feels his point to be important. The Speaker has to guide the House as per rules of business. If the Speaker wants to excuse, it is left to the Speaker. At this stage, I would suggest if the Hon'ble Member should persist in making out his point standing consistently in spite of the Speaker's warning, he does not even regret, he does not keep quiet, and he wants the whole House to act according to his whims and fancies, well it may not be thoroughly safe either to the House or to the Speaker.

MADAM SPEAKER.—I think you should withdraw, Mr. Bangarappa.

ಶ್ರೀ ವಾಟಾಳ್‌ನಾಗರಾಜ್.—ಶಿಕ್ಷೆ ಬಹಳ ದೊಡ್ಡದಾಯಿತು. ಹೀಗೆ ಮಾಡಬಾರದು. ತೀರ ಇಂಥ ಶಿಕ್ಷೆ ವಿಧಿಸಬಾರದು. ನಿಮ್ಮಮೇಲೆ ಆರೋಪಣೆ ಇಲ್ಲ. ಸರಕಾರಿ ಪಕ್ಷಕ್ಕೆ ಮೆಜಾರಿಟಿ ಬೆಂಬಲವಿದೆಯೆಂದು ಅದು ಏನು ಬೇಕಾದರೂ ಮಾಡಬಹುದು. ಅವರು ಮಾಡುವ ಅನ್ಯಾಯ ತಮ್ಮ ಮೂಲಕ ತಿಳಿಸಬೇಕಾಗಿದೆ. ಅವರು ಹೇಳಿದಂತೆ ಕೇಳಲು ನಾವು ತಯಾರಿಲ್ಲ. ದಯಮಾಡಿ ಅಧ್ಯಕ್ಷರು ತಮ್ಮ ರೂಲಿಂಗನ್ನು ಪುನರ್ಪರಿಶೀಲನೆ ಮಾಡಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಬಂಗಾರಪ್ಪನವರು ತಪ್ಪುಮಾಡಿದ್ದರೆ ಅವರು ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡಲಿ. ಆದರೆ ಅವರು ಒಂದು ನಿಮಿಷ ಅವಕಾಶ ಕೇಳಿದರೆ ಸಿಕ್ಕಲಿಲ್ಲ. ಮೊನ್ನೆ ಪತ್ರಿಕೆಯಲ್ಲಿ ವರದಿಯಾಗಿರುವ ಪ್ರಕಾರ ಕೆಲವರಿಗೆ ಅಸಮಾಧಾನವಾಗಿದೆ. ವಿವರಣೆ ಕೊಡಲು ಒಂದು ನಿಮಿಷ ಅವಕಾಶ ಕೇಳಿದರು, ಆ ವಿಷಯದ ಬಗ್ಗೆ ಪರಿಶೀಲನೆ ಮಾಡಬೇಕೆಂದು ಕೇಳಿದರು. ತಮ್ಮ ರೂಲಿಂಗನ್ನು ಕಡೆಗಣಿಸಿದರೆ ಅದರ ಪರಿಣಾಮವನ್ನು ಎದುರಿಸ ಬೇಕಾಗುವುದು.

MADAM SPEAKER.—Mr. Deve Gowda, that is where you are mixing up issues. As Mr. Arumugam said, if he wants really to express regret. it is for him. Otherwise, he will have to withdraw.

ಶ್ರೀ ಎಸ್. ಬಂಗಾರಪ್ಪ.—ನಾನೇನೂ ತಪ್ಪು ಮಾಡಿಲ್ಲ. ನನಗೆ ಅಧ್ಯಕ್ಷರಲ್ಲಿ ಗೌರವ ಇದೆ. ನಾನು ಅವರನ್ನು ಪ್ರರ್ಥನೆ ಮಾಡುತ್ತಿದ್ದೇನೆ. ಪರ್ಸಿಸ್ಟೆಂಟ್ ಅಗಿ ರೆಕ್ವೆಸ್ಟ್ ಮಾಡಿದ್ದೇ ತಪ್ಪು. ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡಲು ನಾನು ತಯಾರಿಲ್ಲ.

MADAM SPEAKER. –I will put it to the House:

The question is :

> "That Sri Bangarappa be suspended from the service of the Assembly for the rest of the day."

The motion was adopted.

MADAM SPEAKER.—The Member Mr. Bangarappa may kindly withdraw from the House, now.

(The Member continued to sit in his seat)

MADAM SPEAKER. —If he does not withdraw, the Marshal will come and take him out.

(ಶ್ರೀ ಎಚ್. ಡಿ. ದೇವೇಗೌಡರು.—ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡುವಂತೆ ಶ್ರೀ ಬಂಗಾರಪ್ಪನವರಿಗೆ ತಿಳಿಸಿದರು.)

ಶ್ರೀ ವಾಟಾಳ್ ನಾಗರಾಜ್.—ಮಾರ್ಷಲ್ ಬಂದರೆ ನಾವು ವಿರೋಧ ಮಾಡುತ್ತೇವೆ, ಸರಕಾರ ತನಗೆ ಇಷ್ಟ ಬಂದ ಹಾಗೆ ಮಾಡಬಾರದು. ಮಾರ್ಷಲ್ ಬಂದರೆ ನಾವು ಘೇರಾವೊ ಮಾಡುತ್ತೇವೆ. ಬಂಗಾರಪ್ಪನವರಿಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ.

ಶ್ರೀ ಶರಣಪ್ಪ.—ಈಗ ಸಭೆಯನ್ನು ಅರ್ಧ ಗಂಟೆ ಅಡ್ಜರ್ನ್ ಮಾಡುವುದು ಒಳ್ಳೆಯದು.

MADAM SPEAKER.—The House stands adjourned for half an hour.

The House rose at Ten Minutes past Four of the Clock and reassembled at Five of the Clock.

[MADAM SPEAKER in the Chair]

Motion to consider Mysore Re-enacting Bill 1973

MADAM SPEAKER.—We shall go to the next item of the business, *viz.*, Legislature Business. Hon. Minister for Finance may please move his Bill.

Sri T. R. SHAMANNA (Fort).—Madam Speaker, I have got an objection for the moving of this Bill.

MADAM SPEAKER.—What is that objection please ?

† **Sri T. R. SHAMANNA.**—This Bill implies collection of more than 5 crores of rupees and further it involves considerable expenses to employment.

MADAM SPEAKER.– Let him move the Bill and he will explain all these things after moving it.

Sri T. R. SHAMANNA.—I am raising my objection for moving the Bill itself. This Bill involves collection of about 5 crores of rupees and more and it incurs expenditure on establishment. Under Rule 68 a bill involving an expenditure shall be accompanied by a financial memorandum which shall invite particular attention to the clauses involving expenditure and shall also give an estimate of the recurring and non-recurring expenditure involved in case the Bill is passed into law. This Bill replaces a Bill that was passed last year and is not attached with a financial memorandum as required under Rule 68. Further it implies the question of delegation of power in many cases such as investigation, legal proceedings and then punishment, penalty and all that and further it is not accompanied with the explanatory note and financial memorandum. Considering all aspects of the matter, the moving of the Bill is out of order and I object for the Bill being moved.

Sri M. S. KRISHNAN (Malleswaram).—There is one more point. Article 304 of the Constitution says–

> "Notwithstanding anything in Article 301 or Article 303, the Legislature of a State may by law--
>
> (*a*) impose on goods imported from other States (or the Union territories) any tax to which similar goods manufactured or produced in that State are subject, so, however as not to discriminate between goods so imported and goods so manufactured or produced and
>
> (*b*) impose such reasonable restrictions on the freedom of trade, commerce or intercourse with or within that State as may be required in the public interest :
>
> Provided that no Bill or amendment for the purposes of Clause (b) shall be introduced or moved in the Legislature of a State without the previous sanction of the President."

This is one aspect. I consider that the President's assent is not obtained. Secondly I draw the attention of the House to Article 207. It reads thus :

> "207. (1) A Bill or amendment making provision for any of the matters specified in sub-clauses (a) to (f) of clause (1) of Article 199 shall not be introduced or moved except on the recommendation of the Governor, and a Bill making such provision shall not be introduced in a Legislative Council."

(SRI M. S. KRISHNAN)

That means we have to look into Article 199. It speaks of money Bill. It reads thus :

> "199. (1) For the purposes of this Chapter, a Bill shall be deemed to be a Money Bill if it contains only provisions dealing with all or any of the following matters, namely-
>
> (*a*) the imposition, abolition, remission, alteration or regulation of any tax ;......"

I consider that this comes under this Article 199 (a) which says imposition, abolition, remission, alteration or regulation of any tax It is the imposition or reimposition of tax. Secondly it also regulate. tax both imposition and regulation. I consider it is the reimposition of the tax which had been levied because of the Bangladesh. But now that is removed. Under another guise the same tax is continued. For the laudable objective of the peoples housing programme the tax is imposed. Under the new name it becomes imposition. When it is once abolished it has been brought again under a new name. Under these circumstances it requires President's assent and it cannot be introduced by the Minister by the virtue of Articles 199 and 207 of the Constitution.

MADAM SPEAKER.—I have read the letter received from the Governor in this connection. ಖರ್ಚಿನ ವಿಚಾರದಲ್ಲಿ ಸರ್ಕಾರದವರು ಏನು ಹೇಳುತ್ತಾರೋ ನೋಡೋಣ ?

Sri M. Y. GHORPADE (Minister for Finance).—Hon. Member Sri Shamanna raised one or two simple objectio ns like non-accompaniment of financial memorandum etc. ಇಲ್ಲಿ ಹಣ ಖರ್ಚು ಮಾಡಬೇಕಾದ ಅವಶ್ಯಕತೆ ಇಲ್ಲ; ಆದ್ದರಿಂದ ಫೈನಾನ್ಸಿಯಲ್ ಮೆಮೋರ್ಯಾಂಡಮ್‌ನ ಅವಶ್ಯಕತೆ ಬರುವುದಿಲ್ಲ. ಮಾನ್ಯ ಸದಸ್ಯರು 5 ಕೋಟಿ ರೂಪಾಯಿಗಳ ವಿಚಾರ ಹೇಳಿದರು. ಅದು ಸರಿಯಲ್ಲ. ಈ ಬಿಲ್‌ನ್ನು ಮೂವ್ ಮಾಡಿದ ನಂತರ ಸಾಕಷ್ಟು ವಿವರಗಳನ್ನು ಕೊಡುತ್ತೇನೆ. ಅವನ್ನೆಲ್ಲಾ ತಿಳಿದುಕೊಂಡು ಏನಾದರು ಪ್ರಶ್ನೆ ಕೇಳುವುದಿದ್ದರೆ ಮಾನ್ಯ ಸದಸ್ಯರು ಕೇಳಬಹುದು. ನಂತರ ನಾನು ನನ್ನ ಉತ್ತರದಲ್ಲಿ ಸ್ಪಷ್ಟೀಕರಣ ಮಾಡುತ್ತೇನೆ.

Sri T. R. SHAMANNA.—Are you going to collect tax without any expenditure ?

Sri M. Y. GHORPADE.—ಆದರ ಬಗ್ಗೆ ಬೇರೆ ಬಿಲ್ ತರುತ್ತೇವೆ. I beg to move

"That the Mysore Re-enacting Bill, 1973 be taken into consideration."

MADAM SPEAKER.—Motion moved :

"That the Mysore Re-enacting Bill, 1973 be taken into consideration."

† ಶ್ರೀ ಎಂ. ವೈ. ಘೋರ್ಪಡೆ — ಮಾನ್ಯ ಅಧ್ಯಕ್ಷರೇ, ಈ ಬಿಲ್‌ನ್ನು ತಂದಿರುವುದರ ಉದ್ದೇಶ ಏನೆಂದರೆ, 1971ನೇ ಇಸವಿಯಲ್ಲಿ ಜಾರಿಗೆ ತರಲಾಗಿದ್ದ ಬಾಂಗ್ಲಾದೇಶದ ನಿರಾಶ್ರಿತರಿಗೆ ಸಂಬಂಧಪಟ್ಟ ತೆರಿಗೆಗಳನ್ನು ಏನು ವಸೂಲಿ ಮಾಡಲಾಗುತ್ತಿತ್ತು, ಅದರ ಅವಧಿ ಈ ತಿಂಗಳ 20ನೇ ತಾರೀಖಿಗೆ ಮುಗಿದುಹೋಗುತ್ತದೆ. ಅದನ್ನು ಮುಂದುವರೆಸಬೇಕಾದರೆ ಈ ಬಿಲ್‌ನ್ನು ಪಾಸ್ ಮಾಡ

ಬೇಕಾಗುತ್ತದೆ. ಬಾಂಗ್ಲಾದೇಶದ ನಿರಾಶ್ರಿತರಿಗೆ ಸಹಾಯ ಮಾಡುವ ದೃಷ್ಟಿಯಿಂದ 1971ನೇ ಇಸವಿಯಲ್ಲಿ ಇಡೀ ದೇಶದಲ್ಲಿ ಅಡಿಷನಲ್ ಲೆವೀಸ್‌ನ್ನು ಕೇಂದ್ರ ಸರ್ಕಾರದವರು ಜಾರಿ ಮಾಡಬೇಕೆಂದು ಹೊರಟಾಗ, ಅವರ ಒಂದು ಸಲಹೆಯ ಪ್ರಕಾರ ಬೇರೆ ಬೇರೆ ರಾಜ್ಯಗಳಲ್ಲಿ ಈ ಒಂದು ತೆರಿಗೆಯನ್ನು ವಸೂಲಿ ಮಾಡುವುದಕ್ಕೆ ಪ್ರಾರಂಭ ಮಾಡಿದರು.

Withdrawal of suspension order of Sri S. Bangarappa

Sri C. M. ARUMUGHAM (K.G.F.).—Sri Bangarappa was named by the Hon Speaker and the House suspended him for the day. Since he has submitted a letter of regret the decision may be revoked and Sri Bangarappa may be permitted to attend the House.

I move that the suspension order of Sri S. Bangarappa may kindly be revoked.

† **Sri K. PUTTASWAMY** (Chamundeshwari).—Such a motion is always preceded by consultation between the Leaders of the parties. I do not know whether the Leader of the House has been consulted. In the absence of the consultation it would be rather very difficult to members like us to react. Perhaps consultation may be done between the leaders of the parties and the Speaker in order to enable the Speaker to permit the moving of the motion. Otherwise it would be very difficult and we will be setting up an inconvenient precedent.

MADAM SPEAKER.—I have received a letter of apology saying 'I do not mean any disrespect to the House or the Chair, I regret to the House and the Chair.' I think this can be accepted.

Sri D. DEVARAJ URS.—If the speaker is satisfied, I have no objection.

MADAM SPEAKER. I put it to the House. The question is "that suspension order of Sri S. Bangarappa be with drawn".

The motion was adopted.

Mysore Re-enacting Bill 1973

Motion to consider [*Contd*]

† ಶ್ರೀ ಎಂ.ವೈ. ಘೋರ್ಪಡೆ.—ನಾನು ಹೇಳುತ್ತಿದ್ದೆ, ಬಾಂಗ್ಲಾದೇಶದ ಲೆವಿ ಪ್ರೆಸಿಡೆಂಟ್ ಆಕ್ಟ್ ಪ್ರಕಾರ ಜಾರಿಯಲ್ಲಿತ್ತು ಎಂದು. ಮಾರ್ಚಿ 20ನೇ ತಾರೀಖಿಗೆ ಇದರ ಅವಧಿ ಮುಗಿದು ಹೋಗುತ್ತದೆ. ಆದಕಾರಣ ಅದಕ್ಕಿಂತ ಮುಂಚೆ ಈ ಸಭೆಯಲ್ಲಿ ಈ ರೀತಿ ಒಂದು ಹೊಸ ಕಾನೂನು ಮಾಡದೇ ಹೋದರೆ ಈ ಲೆವಿಯನ್ನು ಮುಂದುವರಿಸುವುದಕ್ಕೆ ಆಗುವುದಿಲ್ಲ. ಈ ಒಂದು ದೃಷ್ಟಿಯಿಂದ ಸ್ವಲ್ಪ ಅವಸರದಲ್ಲಿ ಈ ಬಿಲ್ಲನ್ನು ಈ ಸಭೆಯ ಮುಂದೆ ತರಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಸೇಲ್ಸ್ ಟ್ಯಾಕ್ಸ್, ವೆಹಿಕಲ್ ಟ್ಯಾಕ್ಸ್ ಮತ್ತು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಮತ್ತು ಸ್ಟ್ಯಾಂಪ್ಸ್ ಈ ತೆರಿಗೆಗಳ ಮೇಲೆ ಭಾಂಗ್ಲಾದೇಶಕ್ಕೋಸ್ಕರ ಸರ್‌ಚಾರ್ಜ್ ಹಾಕಿ ವಿಶೇಷವಾದ ತೆರಿಗೆಯನ್ನು ಹಾಕಿತ್ತು. ಅದರ ಅವಧಿ ಮಾರ್ಚಿ 20ನೇ ತಾರೀಖಿಗೆ ಮುಗಿ

(ಶ್ರೀ ಎಂ. ವೈ. ಘೋರ್ಪಡೆ)

ಯುತ್ತದೆ. ಆದಕಾರಣ ಅದನ್ನು ಮುಂದುವರಿಸುವ ದೃಷ್ಟಿಯಿಂದ ಈಗ ಈ ಬಿಲ್ಲನ್ನು ಈ ಸಭೆಯಮುಂದೆ ತಂದಿದ್ದೇವೆ. ಈಗ ಈ ತೆರಿಗೆಗಳ ಪೈಕಿ ಒಂದು ತೆರಿಗೆಗೆ ಮಾತ್ರ ಪ್ರೆಸಿಡೆಂಟ್ ಒಪ್ಪಿಗೆ ಬೇಕಾಗುತ್ತದೆ. ಪ್ಯಾಸೆಂಜರ್ಸ್, ಟ್ಯಾಕ್ಸ್; ಟ್ರೇಡ್ ಅಂಡ, ಕಾಮರ್ಸ್ ಇದನ್ನು ಪ್ರೆಸಿಡೆಂಟರ ಒಪ್ಪಿಗೆಗೆ ಕಳುಹಿಸಿದ್ದೇವೆ. ಅದು ಅಲ್ಲಿಂದ ಬಂದಮೇಲೆ ಪ್ರತ್ಯೇಕವಾದ ಒಂದು ಬಿಲ್ ರೂಪದಲ್ಲಿ ಸಭೆಯಮುಂದೆ ಇಡಬೇಕಾಗುತ್ತದೆ. ಪ್ಯಾಸೆಂಜರ್ಸ್ ಟ್ಯಾಕ್ಸ್ ಏನಿದೆ ಅದು ಒಂದನ್ನು ಮಾತ್ರ ಬಿಟ್ಟು ಉಳಿಕೆ ಟ್ಯಾಕ್ಸ್‌ಗಳನ್ನೆಲ್ಲಾ ಈ ಬಿಲ್ಲಿನಲ್ಲಿ ಸೇರಿಸಿದೆ. ಈ ಟ್ಯಾಕ್ಸ್‌ನಿಂದ ಎರಡು ಕೋಟಿ ರೂಪಾಯಿಗಳ ಆದಾಯ ರಾಜ್ಯ ಸರ್ಕಾರಕ್ಕೆ ಬರುತ್ತದೆ. ಈಗ ತಂದಿರುವ ಬಿಲ್ಲಿನಿಂದ ಒಂದು ಕೋಟಿ 50 ಲಕ್ಷ ರೂಪಾಯಿಗಳು ಬರುತ್ತದೆ ಆ ಮೇಲೆ ಪ್ಯಾಸೆಂಜರ್ಸ್ ಟ್ಯಾಕ್ಸ್ ಏನಿದೆ ಇದಕ್ಕೆ ಪ್ರೆಸಿಡೆಂಟರ ಒಪ್ಪಿಗೆ ದೊರೆತಮೇಲೆ ಇದರಿಂದ 50 ಲಕ್ಷ ರೂಪಾಯಿಗಳು ಬರುತ್ತದೆ. ಈ ಸಂಬಂಧದ ಬಿಲ್ಲನ್ನು ಈ ಸಭೆಯಮುಂದೆ ತರಬೇಕಾಗುತ್ತದೆ. ಇದೆಲ್ಲವನ್ನೂ ಸೇರಿಸಿದರೆ 2 ಕೋಟಿರೂಪಾಯಿಗಳ ಅಡೀಷನಲ್ ಲೆವಿ ಮುಖಾಂತರ ಸರ್ಕಾರಕ್ಕೆ ಆದಾಯ ಬರುತ್ತದೆ. ಇಂಡಿಯಾ ಸರ್ಕಾರದವರು ಬಾಂಗ್ಲಾದೇಶದ ತೆರಿಗೆಯನ್ನು ತೆಗೆದುಹಾಕಿದ್ದಾರೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಆಗ್ಗೆ ರಾಜ್ಯ ಸರ್ಕಾರಕ್ಕೆ ಆಪ್ಷನ್ ನಮ್ಮಮುಂದೆ ಇತ್ತು. ನಾವು ಇದನ್ನು ಬೇಕಾದರೆ ತೆಗೆದು ಹಾಕಬಹುದು ಎನ್ನುವ ಒಂದು ಆಪ್ಷನ್, ಎರಡನೆಯದು ಬಾಂಗ್ಲಾದೇಶದ ತೆರಿಗೆ ಏನಿದೆ ಅದನ್ನು ಹಣಕಾಸಿನ ತೆರಿಗೆಯ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಬಹುದು ; ಇದು ಎರಡನೆಯ ಆಲ್ಟರ್‌ನೇಟೀವ್ ಮೂರನೆಯದು ಈಗ ಏನು ಮಾಡಿದ್ದೇವೆ ಎಂದರೆ ಇದನ್ನು ಒಂದು ವರ್ಷಕ್ಕೋಸ್ಕರ ಮುಂದುವರಿಸಿದ್ದೇವೆ. ಈಗ ಬಾಂಗ್ಲಾದೇಶ ಎಂಬ ಹೆಸರಿನಲ್ಲಿ ಈ ಒಂದು ಸಂದರ್ಭದಲ್ಲಿ ಅಡೀಷನಲ್ ಲೆವಿ ಏನು ಹಾಕಿದ್ದೇವೆ ಅದನ್ನು ಒಂದು ವರ್ಷ ಮುಂದುವರಿಸುತ್ತಿದ್ದೇವೆ ಈಗ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ ಕೇಂದ್ರ ಸರ್ಕಾರ ಇವನ್ನು ಅಬಾಲಿಷ್ ಮಾಡಿದ್ದಾರೆ ನೀವು ಏತಕ್ಕೆ ಅಬಾಲಿಷ್ ಮಾಡಲಿಲ್ಲ ಎಂದು. ಅದಕ್ಕೆ ನಾನು ಉತ್ತರ ಹೇಳಬಯಸುತ್ತೇನೆ. ಈ ಸಲ ನಮ್ಮ ಬಡ್ಜೆಟ್ ಡಿಫಿಸಿಟ್ ಬಡ್ಜೆಟ್ ಇದೆ. ಅಷ್ಟೇ ಅಲ್ಲ. ನಮ್ಮ ಒಂದು ಯೋಜನೆಯ ವೆಚ್ಚ ಯೋಜನಾ ಮಂಡಲಿ ಏನು ಒಂದು ಒಪ್ಪಿಗೆಯನ್ನು ಕೊಟ್ಟಿದ್ದಾರೆ ನಾವು ಅದಕ್ಕಿಂತ ಜಾಸ್ತಿ ಮಾಡಿದ್ದೇವೆ. ಯೋಜನಾ ವೆಚ್ಚವನ್ನು ನಾವು 91 ಕೋಟಿ ರೂಪಾಯಿ ಮಾಡಿದ್ದೇವೆ. ನಾವು ಯೋಜನಾ ವೆಚ್ಚವನ್ನು ಜಾಸ್ತಿ ಮಾಡುವಾಗ ನ್ಯಾಯವಾಗಿ ನೋಡಿದರೆ ಹೆಚ್ಚಿನ ತೆರಿಗೆಯನ್ನು ಹಾಕಿ ಅದನ್ನು ಮಾಡಬೇಕಾಗುತ್ತದೆ. ಯೋಜನಾ ವೆಚ್ಚವನ್ನು ಜಾಸ್ತಿ ಮಾಡಿದರೂ ಕೂಡ ನಾವು ಹೊಸ ತೆರಿಗೆಯನ್ನು ಯಾವುದನ್ನೂ ಹಾಕಿಲ್ಲ. 1973—1974 ನೇ ಸಾಲಿನ ಯೋಜನಾ ವೆಚ್ಚವನ್ನು ಏತಕ್ಕೆ ಜಾಸ್ತಿ ಮಾಡಿದ್ದೇವೆ ಎಂಬುದನ್ನು ಸ್ಪಷ್ಟವಾಗಿ ನಾನು ನನ್ನ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೇನೆ. ರಾಜ್ಯದ ಹಣಕಾಸಿನ ದೃಷ್ಟಿಯಿಂದ ಯೋಚನೆ ಮಾಡಿದರೆ ಹೊಸ ಟ್ಯಾಕ್ಸ್ ಹಾಕದಿದ್ದರೂ ಬರತಕ್ಕ ಆದಾಯವನ್ನು ಬಿಡುವ ಕಾಲವಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಈಗ ಈ ತೆರಿಗೆಯನ್ನು ಒಂದು ವರ್ಷಕ್ಕೋಸ್ಕರ ಮುಂದುವರಿಸುತ್ತಿದ್ದೇವೆ. ಒಂದು ವರ್ಷ ಆದನಂತರ ಏನು ಮಾಡಬೇಕು ಎಂದು ಯೋಚನೆ ಮಾಡಬೇಕಾಗುತ್ತದೆ. ಈ ಕ್ರಮ ನಮ್ಮ ರಾಜ್ಯದ ಹಣಕಾಸಿನ ದೃಷ್ಟಿಯಿಂದ ಸೂಕ್ತವಾದ ಕ್ರಮ ಎಂದು ನಾನು ಹೇಳುತ್ತೇನೆ. ಇದರ ಬಗ್ಗೆ ನಾನು ಹೆಚ್ಚು ಭಾಷಣವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಅದು ಸೂಕ್ತವಲ್ಲ ಎಂದು ಕಾಣುತ್ತದೆ. ಆದರೆ ಸೂಕ್ಷ್ಮವಾಗಿ ಹೇಳುವುದಾದರೆ ಕೆಲವರು ಬಾಂಗ್ಲಾದೇಶದ ಟ್ಯಾಕ್ಸ್ ಅನ್ನು ಪರ್ಮನೆಂಟ್ ಟ್ಯಾಕ್ಸಾಗಿ ಮಾಡಬಹುದಲ್ಲ ಎಂದು ಹೇಳಿದರು. ಆದರೆ ಈ ಸಂದರ್ಭದಲ್ಲಿ ಆ ರೀತಿ ಮಾಡುವುದು ಸರಿಯಲ್ಲ. ಮುಂದೆ ಕೆಲವು ತಿಂಗಳು ಬಿಟ್ಟು ಇದರ ಬಗ್ಗೆ ಯೋಚನೆ ಮಾಡಬೇಕು.

† **Sri C. M. ARUMUGHAM** (K. G. F.).—I am raising a point of order. The Bill is called as the Mysore Re-Enacting Bill 1973. When it was permitted to be introduced in in this House yesterday, we had no time to see what it was. This was published on 13th March. It was introduced yesterday and is taken up for discussion today. Therefore, we on this side were not able to understand the implications of this Bill. After going through this Bill. I submit that it

is not one Bill, but it seeks to bring in amendments to various Acts which were passed from 1958 onwards : The Mysore Motor Vehicles Act 1957, etc., Here he has put half-a-dozen Bills clubbing together. Under the Rules of Procedure and under the Constitution, at a time he can introduee one bill and at a time take up consideration of one Bill only. I am only questioning the wisdom of the Hon'ble Finance Minister in introducing several amendments for several Acts in one Bill. Is it permissible ? That is what I want to know. My objection is that he should bring separate amendments to the original Act, seperately and not half-a-dozen amendments to half-a-dozen Bills in one Bill and taken up for discussion. Further, this is the first time that it is coming up before this House in this manner. I am seeking your ruling Madam on the point whether several amendments could be brought in one piece of legislation and taken up for discussion: The intention of the Government may be quite a different matter. I am one with him when he says that the extra money derived from this is going to be spent for housing. I am questioning the validity, the legality of introducing such a Bill, whether this can be done in the course of one single Bill. That is my point.

Sri M. Y. GHORPADE.—There is absolutely no illegality involved. For example, the Finance Bill in the Centre also imposes several Central Taxes enactment in one Finance Bill. This is a common practice. There is no illegality involved. Several neighbouring States have also done it. Merely because it is one enacting Bill, it does not become illegal.

Sri M. S. KRISHNAN.—I was trying to find out from the Hon'ble Minister what exactly is the position. Am I to understand that the ruling will be given after hearing the Minister. This is a Bill which could have been introduced only with the recommendation of the Governor.

MADAM SPEAKER.—The recommendation of the Governor was read out here when the Bill was introduced yesterday. Perhaps the hon. member was not here. Legality caunot be questioned on a point of order. It is for the House to accept it or not.

Sri M. Y. GHORPADE.—I have already clarified the position that it is not a new tax, but an existing tax. I can give you details.

1. There was the Entertainment Tax surcharge of 50 per cent which was raised to 60 per cent. That is being retained.
2. Motor Vehicles tax enhancement payable in respect of vehicles other than passenger and goods plying for hire, this was increased by 10 per cent.
3. Stamp Duty additional stamp duty at a flat rate of 10 per cent on every instrument chargeable under the Mysore Stamp Act.

(SRI M. Y. GHORPADE)

4. Sales Tax-additional tax at 2 per cent per rupee on sales tax and purchase tax, liable tax under the Mysore Sales Tax Act.

These are the four additional levies incorporated in this Bill. The only other item is tax on passengers. Increase of tax and fares payable on passenger and stage carriages increased to 10-15 per cent. This one requires the President's assent and therefore, it will come before this House in the form of a seperate Bill.

I was making a very important point.

SRI T. R. SHAMANNA.—Are we making this Bill without passenger tax ?

SRI M. Y. GHORPADE.—Yes, that requires President's Assent and therefore it is not at the moment before this House.

I have already said why Government decided not to abolish these levies, because we have increased the Plan size and the deficit would have been increased if we gave up these taxes or income that we have to get under the existing laws. I think it is a bold step that Government have taken in deciding not to increase or levy fresh taxes at this juncture. It would not have been wise step if the Government had decided to give up the income that we are getting. Several Members in the House and outside have asked why Government has not incorporated fresh taxation instead of continuing this anamoly. Now with the little experience that I have, I certainly feel, we will serve the interest of the State well if I had made an attempt to incorporate the Bangla Desh levy into the permanent tax structure and made it a permanent income of the State at this juncture. This is not the time to consider all these matters. At a later date we will examine to what extent this can be incorporated or not.

When at a later stage when we do to the extent feasible it will be done in a manner that the Government of Mysore will get credit for fresh taxation during the Fifth Plan period. So, it is enough for me to say at this juncture that if at all this has to be retained in this or in some modified form we should think of it later so that the Government of Mysore gets full credit for this during the Fifth Plan period. Therefore, I have made no attempt to incorporate this Bangla Desh levy. After all, it is an *ad hoc* levy. If it is to be incorporated, some thought has to be given to it and at the appropriate time we will decide what to do about it. Right now we have continued this levy for a temporary period of one year. So, it cannot be considered as a permanent part of the income of the State. These additional levies will continue and benefit the State Government and the progressive programmes that the State Government have put before themselves, especially the housing programme which, to my mind, is no less important than the concept of helping the Bangla Desh refugees.

5-30 P.M.

There is only one other point which I would like to mention and that is that if this Bill was not brought before the House or if this House did not pass it, then some other Bill will have to be brought at some other time and retrospective effect will have to be given to it. All members know that this practice of retrospective effect is not appreciated and rightly so by many people because it creates various administrative problems. Take for instance these taxes. Supposing the House asks me to bring this Bill after the budget discussion is over at a later date, then it will have to be given retrospective effect. Whether anybody likes it or not or whatever members may feel about it, there are some practical difficulties. For instance, unless the entertainment tax is collected when a man goes to the cinema, it cannot be collected retrospectively. There are various other problems of this nature which makes it impossible to collect many of these takes retrospectively. Therefore, this is also one more reason why I am coming before this House with this Bill so that these taxes continue till 31st March 1974.

I am taking this opportunity of telling the House that so far as the Government of India is concerned, they have solved this problem of retrospective legislation by having what is called provisional collection of taxes Any tax announced by the Central Finance Minister becomes operative from the 1st of April and later on as a result of the debate in the Parliament at some other date when some of those taxes are reduced refunds are given. In Mysore we do not have such a legislation for provisional collection of taxes as from the date of the budget *viz.* 1st of April. I might inform the house that we are also examining whether we should also have a similar legislation whereby this difficulty of retrospective legislation will be avoided. In Maharashtra and West Bengal they have got such an enabling legislation. However, in the absence of such a legislation we cannot give retrospective effect. Because of the great need not to allow the additional levies to be discontinued and because the effect of the proclamation by which these levies are collected will be over on 20th March, this Bill has been brought before the House and if it is approved, it will have the effect of continuing these additional levies until 31st March 1974 when it would be appropriate to think what should be done about it. I think Sri Shamanna has sent an amendment seeking to extend the period upto 31st October 1973. I do not know why he had the month of October in mind. In any case, after October we can start discussing what we should do about it ; certainly not before October.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ಈಗ ಮಾನ್ಯ ಅರ್ಥ ಸಚಿವರು ಬಹಳ ಬುದ್ಧಿವಂತಿಕೆಯಿಂದ ನಮ್ಮ ಬಾಯನ್ನು ಮುಚ್ಚುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಏಕೆಂದರೆ ತೆರಿಗೆ ಎಂಬ ಒಂದೇ ಪದದ ಒಂದು ಆಧಾರವನ್ನು ನಮ್ಮ ಮುಂದಿಟ್ಟು ಇದನ್ನು ನಾವು ಯಾರೂ ಅಬ್‌ಜೆಕ್ಟ್ ಮಾಡದಹಾಗೆ ಮಾಡಿದ್ದಾರೆ. ಬಡವರಿಗೆ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿ,

(ಶ್ರೀ ಟಿ. ಆರ್. ಶಾಮಣ್ಣ)

ಅದಕ್ಕಾಗಿ ಈ ತೆರಿಗೆಯನ್ನು ಮುಂದುವರಿಸುತ್ತೇವೆಂದು ಬಹಳ ಹುಷಾರಾಗಿ ಈ ಮಸೂದೆಯನ್ನು ನಮ್ಮ ಮುಂದೆ ತಂದಿದ್ದಾರೆ. ಅರ್ಥಸಚಿವರು ಬಡಜನರ ಗೃಹವಸತಿಗಾಗಿ ಹಣ ಹೆಚ್ಚಿಗೆ ಬೇಕಾಗಿದೆ ಯೆಂದು ಹೇಳಿದ್ದರೆ ಅದು ಒಂದು ರೀತಿಯಲ್ಲಿ ಸರಿಹೋಗುತ್ತಿತ್ತು. ಆ ಹಣವನ್ನು ಕೂಡಿಸುವುದ ಕ್ಕೋಸ್ಕರವಾಗಿ ಬಂಗ್ಲಾದೇಶದ ಲೆವಿಯನ್ನು ಮುಂದುವರಿಸಿಕೊಂಡು ಹೋಗುತ್ತೇವೆಂದು ಹೇಳಿ ಅದರ ಬಗ್ಗೆ ಒಂದು ವಾಕ್ಯವನ್ನೂ ಸಹ ಅವರ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ನನ್ನ ಒಂದು ನಿರ್ದಿಷ್ಟವಾದ ಈ ಬಿಲ್ಲಿಗೆ ವಿರೋಧವಾದರೂ ಇಷ್ಟೇ. ಏಕೆ ಹೀಗೆ ಅಪ್ರತ್ಯಕ್ಷವಾಗಿ ಈ ತೆರಿಗೆಯನ್ನು ಹಾಕಬೇಕು ನೇರವಾಗಿ ಇಂತಿಂಥ ಹೊಸ ಹೊಸ ಯೋಜನೆಗಳನ್ನು ತೆಗೆದುಕೊಂಡಿದ್ದೇವೆಂದು ಹೇಳ ಬಹುದಾಗಿತ್ತು. ಕೆರೆಗಳಿಗೆ ಉಪಯೋಗವಾಗುವ ಯೋಜನೆಗಳನ್ನು ತೆಗೆದುಕೊಂಡಿರುತ್ತೇವೆ, ನಮ್ಮ ಬಜೆಟ್ ಖೋತಾ ಆಗಿದೆ, ಅದನ್ನು ಸರಿದೂಗಿಸುವುದಕ್ಕೋಸ್ಕರ ಈ ತೆರಿಗೆಯನ್ನು ಮತ್ತೆ ಹಾಕುತ್ತಿದ್ದೇವೆಂದು ನೇರವಾಗಿ ಸಬೂಬು ಕೊಟ್ಟು ಹಾಕಿದ್ದರೆ ಬಹಳ ಚೆನ್ನಾಗಿತ್ತು. ಆ ರೀತಿ ಮಾಡದೇ ಇರುವುದರಿಂದ, ನಾವು ಈ ಸಂದರ್ಭದಲ್ಲಿ ಇದನ್ನು ಹೇಗೆ ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ. ಕೇಂದ್ರ ಸರ್ಕಾರದ ನೀತಿ ನಿಯಮದ ಪ್ರಕಾರ ಈಗ ಇಡೀ ದೇಶದಲ್ಲಿಯೇ ಈ ಬಾಂಗ್ಲಾ ದೇಶದ ಲೆವಿಯನ್ನು ತೆಗೆದುಹಾಕಿದ್ದೇವೆಂದು ಹೇಳಿದ್ದಾರೆ. ಇವರ ಈ ಒಂದು ಉದ್ದೇಶವನ್ನು ಇಟ್ಟುಕೊಂಡು ಈ ದೇಶದ ಹಣಕಾಸಿನ ಪರಿಸ್ಥಿತಿ ಬಹಳ ಕ್ಲಿಷ್ಟ ಪರಿಸ್ಥಿತಿಯಲ್ಲಿರುವಾಗ ಕೋಟ್ಯಾಂತರ ಜನಗಳಿಗೆ ರಕ್ಷಣೆ ಮಾಡತಕ್ಕ ಸಂದರ್ಭದಲ್ಲಿ, ಅದಕ್ಕೆ ಹಣ ಒದಗಿಸುವ ಸಂದರ್ಭದಲ್ಲಿ ಬಾಂಗ್ಲಾ ದೇಶದ ಲೆವಿಯನ್ನು ಹಾಕಿದರು. ಆದರೆ ಈಗ ಅಂತಹ ಎಕ್ಸ್‌ಟ್ರಾರ್ಡಿನರಿ ಸಿಚುಯೇಷನ್ ಒದಗಿದೆಯೇ ಎಂಬುದಾಗಿ ಯೋಚನೆಮಾಡಬೇಕಾಗಿದೆ. ನನ್ನ ಮೂಲ ಅಬ್‌ಜಕ್ಷನ್ನಾದರೂ ಇಷ್ಟೇ. ಗೃಹನಿರ್ಮಾಣಕ್ಕಾಗಿ ಬಡವರಿಗೆ 2 ಲಕ್ಷ ಸೈಟುಗಳನ್ನು ಹಂಚಲಾಗಿದೆಯೆಂದು ತಿಳಿಸಿದ್ದೀರಿ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸದ್ಯದಲ್ಲಿಯೇ ಇನ್ನೂ ನಾಲ್ಕು ಲಕ್ಷ ಸೈಟುಗಳನ್ನು ಹಂಚುತ್ತೇವೆಂದು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಎರಡು ಲಕ್ಷ ಮನೆಗಳನ್ನು ಕಟ್ಟಬೇಕೆಂದಿರುವಾಗ ನೀವು ಈಗ ತಿಳಿಸಿದ ಹಾಗೆ ಇದರಿಂದ ವರ್ಷಕ್ಕೆ ಬರತಕ್ಕ ವರಮಾನ 2 ಕೋಟಿ ರೂಪಾಯಿಗಳು ಎಂದು ಹೇಳಿದ್ದೀರಿ. ಈಗ ತಾವು 25 ಸಾವಿರ ಮನೆಗಳನ್ನು ಕಟ್ಟಬೇಕೆಂದು ಒಂದು ಯೋಜನೆಯನ್ನು ಮಾಡಿದ್ದೀರಿ. ಇದಕ್ಕೆ 5 ಕೋಟಿ ರೂಪಾಯಿಗಳಾದರೂ ಬೇಕು. ಅದಕ್ಕೆ 5 ಕೋಟಿ ರೂಪಾಯಿಗಳು ಬೇಕಾದಾಗ ಎರಡು ಲಕ್ಷ ಸೈಟುಗಳನ್ನು ಹಂಚಿರುವ ಸಂದರ್ಭದಲ್ಲಿ ಕನಿಷ್ಠ ಪಕ್ಷ 40 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆ ರೀತಿಯಾಗಿ ನಿಮಗೆ 40 ಕೋಟಿ ರೂಪಾಯಿಗಳು ಬೇಕಾದರೆ ಈಗ ಇದರಿಂದ 2 ಕೋಟಿ ರೂಪಾಯಿಗಳು ಬಂದರೂ ಇನ್ನು 20 ವರ್ಷಗಳ ಕಾಲ ಈ ಟ್ಯಾಕ್ಸನ್ನು ಉಳಿಸಿಕೊಂಡು ಬರಬೇಕಾಗುತ್ತದೆ. ಅನಂತರ ಎಲ್ಲರಿಂದಲೂ ಅದನ್ನು ವಸೂಲು ಮಾಡಬೇಕಾಗುತ್ತದೆ. ಮಾನ್ಯ ಸಚಿವರು ಇಲ್ಲಿ ತಿಳಿಸಿರತಕ್ಕ ಪ್ರಕಾರ ಒಂದು ವರ್ಷಕ್ಕೆ ಈ ಹೊಸ ತೆರಿಗೆ ಬಾಬಿನಿಂದ ಸರ್ಕಾರಕ್ಕೆ 2 ಕೋಟಿ ರೂಪಾಯಿ ಬಂದರೆ ಅವರಿಗೆ ಬೇಕಾದ 40 ಕೋಟಿ ರೂಪಾಯಿಗೆ ಅವರು ಇದನ್ನು 20 ವರ್ಷಗಳ ಕಾಲ ಮುಂದುವರಿಸಬೇಕಾಗುವುದು. ಇಲ್ಲದಿದ್ದರೆ ಈ ಹೌಸಿಂಗ್ ಪ್ರಾಬ್ಲಂ ಬಗೆಹರಿಯುವುದಿಲ್ಲ. ಆದುದರಿಂದ ಸರ್ಕಾರದವರು ಈ ದಿವಸ ತಂದಿರತಕ್ಕ ಈ ಒಂದು ತೆರಿಗೆ ಏನಿದೆ ಇದು ಬರುವ 1994 ರವರೆಗೂ ಇರಬೇಕೆಂಬುದನ್ನು ನಾನು ಅವರಿಗೆ ಸ್ಪಷ್ಟಪಡಿಸುತ್ತಿದ್ದೇನೆ. ಅದು ಸಾಧ್ಯವಿಲ್ಲ ಅನ್ನುವುದಾದರೆ ಸರ್ಕಾರದವರು ಇದನ್ನು ಕೇವಲ ಒಂದೇ ವರ್ಷಕ್ಕೆ ಎಂದು ಹೇಳುವುದಕ್ಕೆ ಆಧಾರವೇನಿದೆ ? ಇದು ಆರು ತಿಂಗಳವರೆಗೆ ಏಕೆ ಆಗಬಾರದು ಎಂದು ನಾನು ಇದರ ಬಗ್ಗೆ ಒಂದು ತಿದ್ದುಪಡಿಯನ್ನೂ ಕೂಡ ಕಳುಹಿಸಿದ್ದೇನೆ. ದೇಶದಲ್ಲ ಇಂಥಾ ಒಂದು ಮೆಷರನ್ನು ಜಾರಿಗೆ ತರುವುದಕ್ಕೆ ಇಲ್ಲಿ ಏನು ಅಂಥಾ ಎಕ್ಸ್‌ಟ್ರಾರ್ಡಿನರಿ ಕಂಡೀಷನ್‌ಗಳಿವೆ ಎಂಬುದನ್ನು ಮಾನ್ಯ ಸಚಿವರು ತಿಳಿಸಿಲ್ಲ. ಆದರೆ ಇದನ್ನು ವಿರೋಧ ಮಾಡೋಣ ಎಂದರೆ ಬಡವರಿಗೆ ವಸತಿ ಸೌಕರ್ಯಗಳನ್ನು ಮಾಡುವುದು ಬೇಡ ಎಂದಹಾಗೆ ಆಗುತ್ತದೆಯೇನೊ ಅನ್ನತಕ್ಕ ಸಂಕಟ ಒಂದು ಕಡೆ ಬಾಧಿಸುತ್ತಿದೆ. ಏನೇ ಆಗಲಿ ನಾನು ಈ ಬಿಲ್ಲನ್ನು ವಿರೋಧಿಸುವುದಿಲ್ಲ. ಆದರೆ ಮಾನ್ಯ ಹಣಕಾಸಿನ ಸಚಿವರು ತಮ್ಮ ಭಾಷಣದಲ್ಲ ಜನರ ಮೇಲೆ ಯಾವ ಒಂದು ಹೊಸ ತೆರಿಗೆಯನ್ನೂ ಹಾಕುವುದಿಲ್ಲ ಎಂದು ಹೇಳಿದ್ದರೂ ಈಗ ಈ ಒಂದು ತೆರಿಗೆಯನ್ನು ಜನರ ಮೇಲೆ ಅದರಲ್ಲೂ ಸಾಮಾನ್ಯ ಜನರಮೇಲೆ ಹೇರುವುದಕ್ಕೆ ಹೊರಟಿದ್ದಾರೆ. ಇವರು ಐಶ್ವರ್ಯವಂತರ ಮೇಲೆ ಎಷ್ಟು ಟ್ಯಾಕ್ಸನ್ನು ಬೇಕಾದರೂ ಹಾಕಲಿ ಅದಕ್ಕೆ ನಮ್ಮ ವಿರೋಧವಿಲ್ಲ. ಇಲ್ಲಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ಗೂ ಇದರ ಸಂಬಂಧವಿದೆ. ಆದರೆ ಆ ಮನರಂಜನೆಯ ತೆರಿಗೆಯನ್ನು ಹೆಚ್ಚಿಗೆ ಕೊಡತಕ್ಕವರು ಯಾರು ? ವಾರವೆಲ್ಲಾ ಕಷ್ಟಪಟ್ಟು ದುಡಿದು ದಣಿದಿದ್ದಂಥ ಕೂಲಿಗಾರ

ರೇನಿದ್ದಾರೆ ಅವರಿಗೆ ವಾರಕ್ಕೊಂದಾವರ್ತಿ ಆ ಸಿನೀಮಾ ಬಿಟ್ಟರೆ ಬೇರೇನೂ ಮನರಂಜನೆಗೆ ಅವಕಾಶವಿಲ್ಲ. ಅಂಥವರ ಮೇಲೆ ಈ ತೆರಿಗೆಯನ್ನು ವಿಧಿಸುವುದು ಯಾವ ಧರ್ಮ ? ನನಗಂತೂ ಆ ಸಿನೀಮ ಹೇಗಿರುತ್ತದೆಯೋ ಏನೋ ಅದರ ವಾಸನೆ ಕೂಡ ತಿಳಿಯದು. ಈ ಮಾರಾಟ ತೆರಿಗೆ ವಿಚಾರ ಹೇಳಬೇಕೆಂದರೆ ಹಿಂದೆ ಕುಡಿತವನ್ನು ನಿಲ್ಲಿಸುವುದರಿಂದ ಆ ಬಾಬಿನಿಂದ ಬರತಕ್ಕ ವರಮಾನ ಸರ್ಕಾರಕ್ಕೆ ತಪ್ಪಿಹೋಗುವುದನ್ನು ಭರ್ತಿಮಾಡಿಕೊಳ್ಳುವುದಕ್ಕಾಗಿ ಇದನ್ನು ಜಾರಿಗೆ ತಂದರು. ಈ ದಿವಸ ಯಾವುದಕ್ಕೂ ಮಾತೆತ್ತಿದರೆ ಸೇಲ್ಸ್ ಟ್ಯಾಕ್ಸನ್ನು ಜಾಸ್ತಿ ಮಾಡುತ್ತಿದ್ದಾರೆ. ಅತ್ತಲಾಗಿ ಕುಡಿತದಿಂದಲೂ ಆದಾಯ ಬರುತ್ತಿದೆ. ಇತ್ತ ಸೇಲ್ಸ್ ಟ್ಯಾಕ್ಸಿನಿಂದಲೂ ಆದಾಯ ಬರುತ್ತಿದೆ. ಆದರೆ ಈ ತೆರಿಗೆಯಾದರೂ ಯಾರಿಂದ ಬರುತ್ತಿದೆ ಎಂದರೆ ನೂರಕ್ಕೆ ತೊಂಭತ್ತು ಜನ ಬಡವರು ಯಾರು ಇದ್ದಾರೋ ಅಂಥವರಿಂದ ಇದನ್ನು ವಸೂಲ್ಮಾಡಲಾಗುತ್ತಿದೆ. ಆದರೆ ಅನೇಕ ತೆರಿಗೆ ಬಾಬುಗಳೇನಿವೆ ಅದರಲ್ಲೂ ನನಗೆ ತಿಳಿದುಬಂದಿರುವಂತೆ ಈ ಮಾರಾಟ ತೆರಿಗೆ ಬಾಬಿನಲ್ಲೇ ಇದರ ವಸೂಲಿಯನ್ನು ನಿರ್ದಾಕ್ಷಿಣ್ಯವಾಗಿ ಈ ತೆರಿಗೆಯ ಹಿಡಿತದಲ್ಲಿ ಬರತಕ್ಕವರಿಂದ ವಸೂಲ್ಮಾಡಿದರೆ 2—3 ಕೋಟಿ ರೂಪಾಯಿ ಹೆಚ್ಚು ವರಮಾನ ತಮಗೆ ಇದರಿಂದಲೇ ಬರುತ್ತದೆ. ತಾವು ಇದಕ್ಕಾಗಿ ಯಾವ ಹೊಸ ತೆರಿಗೆಯನ್ನೂ ಹಾಕಬೇಕಾದ್ದಿಲ್ಲ. ನಮ್ಮ ಸರ್ಕಾರದಲ್ಲಿ ಆದರೆ ಈಗಾಗಲೆ 67 ಕೋಟಿ ರೂಪಾಯಿಗಳ ಡಿಫಿಸಿಟ್ಟಿರುವಾಗ ಇನ್ನು ಗೃಹನಿರ್ಮಾಣದ ಸಮಸ್ಯೆಯನ್ನು ಇವರಿಂದ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಹಿಂದೆ ಇದನ್ನು ಕೇಂದ್ರದವರು ಆ ಬಂಗ್ಲಾ ದೇಶದ ನಿರಾಶ್ರಿತರ ಸಹಾಯಕ್ಕಾಗಿ ಒಂದು ತೆರಿಗೆಯನ್ನು ಹಾಕಬೇಕೆಂದು ಹೇಳಿದ್ದರಿಂದ ಇದನ್ನು ಜಾರಿಗೆ ತರಲಾಗಿತ್ತು......

ಶ್ರೀ ಎಂ. ವೈ. ಘೋರ್ಪಡೆ.—ಇದನ್ನು ಕೇಂದ್ರದವರು ಹಾಕುತ್ತಿಲ್ಲ. ರಾಜ್ಯ ಸರ್ಕಾರದವರೆ ಹಾಕುತ್ತಿರುವುದು.

ಶ್ರೀ ಟಿ. ಆರ್. ಶಾಮಣ್ಣ.—ಈ ದಿವಸ ತಮಗೆ ಬೇಕಾಗಿದ್ದರೆ ಇದಕ್ಕೆ ಒಂದು ಹೊಸ ಹೆಸರನ್ನು ಕೊಡಬೇಕು. ಅದೇಕೆ ಬಾಂಗ್ಲಾ ಸ್ಟಾಂಪ್ ಎಂತಲೇ ಇದು ಮುಂದುವರಿಯಬೇಕು. ಇಂಥಾ ಒಂದು ಟ್ಯಾಕ್ಸ್‌ಗೆ ಸರ್ಕಾರದವರು ಮೊದಲೊಂದು ಬೇರೆ ನಾಮಕರಣ ಮಾಡಬೇಕಾದ್ದು ಅಗತ್ಯ.

ಶ್ರೀ ಎಂ. ವೈ. ಘೋರ್ಪಡೆ.—ಒಂದು ವರ್ಷ ಕಳೆಯಲಿ. ಅನಂತರ ಏನು ಹೆಸರಿಡಬೇಕು ಎಂಬುದನ್ನು ನೋಡೋಣ.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಮಂತ್ರಿಗಳು ಹತ್ತಾರು ಬಿಲ್ಲುಗಳಿಗೂ ಅನ್ವಯ ಆಗತಕ್ಕ ರೀತಿಯಲ್ಲಿ ಈ ಒಂದು ಬಿಲ್ಲನ್ನು ಕೇವಲ ಎರಡೇ ಲೈನಿನಲ್ಲಿ ಹೇಳಿ ತಂದಿದ್ದಾರೆ. ಹಿಂದೆ ಈ ಬಿಲ್ಲನ್ನು ತಂದುದರ ಮೂಲವೇನು ಎಂಬುದು ನಮಗೆ ಯಾರಿಗೂ ತಿಳಿಯದು. ಆದುದರಿಂದ ಇದನ್ನು ಹೇಗೆ ವಿರೋಧಿಸಬೇಕೆಂದು ನಮಗೆ ಬಹಳ ಇಕ್ಕಟ್ಟಿಗೆ ತಂದಿದೆ. ಏನು ಒಂದು ಒಳ್ಳೆಯ ಕೆಲಸ ಮಾಡುತ್ತೇವೆಂದರೆ ಅದಕ್ಕೂ ನಿಮ್ಮ ವಿರೋಧವೇ— ಎಂದು ಆಡಳಿತ ಪಕ್ಷದವರು ಕೇಳತಕ್ಕಂಥ ಒಂದು ಪ್ರಶ್ನೆ ಇಲ್ಲಿ ಉದ್ಭವಿಸಬಹುದಲ್ಲವೇ ಎಂಬುದನ್ನು ನಾನು ಬಹಳ ತೀವ್ರವಾಗಿ ಆಲೋಚಿಸುತ್ತಿದ್ದೇನೆ. ಈಗ ವರಮಾನ ಬಂದು ಒಳ್ಳೆಯ ಕಾರ್ಯ ಮಾಡಿದರೆ ಪರವಾಗಿಲ್ಲ. ಸೋರಿಹೋಗುವ ಹಣವನ್ನು ದಕ್ಷತೆಯಿಂದ ವಸೂಲುಮಾಡಿದರೆ ಇನ್ನೂ 50 ಕೋಟಿ ರೂಪಾಯಿಗಳು ಸುಲಭವಾಗಿ ಬರುವುದು, ಕೊಟ್ಟ ಹಣ ಬರುವುದಿಲ್ಲ, ವಸೂಲುಮಾಡುವುದನ್ನು ಸರಿಯಾಗಿ ಮಾಡುವುದಿಲ್ಲ. ಅದು ಬಾರದೆ ಹೇಗೆ ಸರಿದೂಗಿಸಲು ಸಾಧ್ಯ, ಯೋಚನೆಮಾಡಿ. ತೆರಿಗೆಯನ್ನು ಹೊರೆಸುವ ಸ್ವಭಾವ ಬಿಡಿ. ಒಂದು ಕಡೆ ಇಂದಿರಾ ಗಾಂಧಿಯವರ ಸರಕಾರ ಕೇಂದ್ರದಲ್ಲಿ ಬಂದಾಗಿನಿಂದ ಪ್ರತಿವರ್ಷವೂ ಕೂಡ ಒಂದು ಉದ್ದೇಶ ಹೇಳಿ ಬಡವರನ್ನು ಉದ್ಧಾರಮಾಡುತ್ತೇವೆಂದು ಹೇಳಿ ತೆರಿಗೆ ಹೆಚ್ಚಿಸುತ್ತಲೇ ಇದ್ದಾರೆ, ಇನ್ನೊಂದು ಕಡೆ ಪ್ರಾಜೆಕ್ಟು ಮುಂತಾದುವುಗಳನ್ನು ಮಾಡಿ ಜನರಿಗೆ ಪ್ರಯೋಜನವಾಗುತ್ತಿಲ್ಲ. ಪ್ರತಿವರ್ಷ ಹೊಸಹೊಸ ತೆರಿಗೆ ಹಾಕುವುದನ್ನು ನಿಲ್ಲಿಸಬೇಕು. ತೆರಿಗೆ ಕೊಟ್ಟು ಅನೇಕರಿಗೆ ತೊಂದರೆಯಾಗಿದೆ. ಹೊಸ ಸಾಹುಕಾರರಿಂದ ತೆರಿಗೆ ವಸೂಲುಮಾಡಿ. ಎಲ್ಲರಿಗೂ ಅದನ್ನು ಹೊರಿಸಬೇಡಿ. ಹೊಸ ಸಮಾಜದಲ್ಲಿ ಹಳೆಯ ಸಾಹುಕಾರರು ಮೂಲೆಗೆ ಕುಳಿತು ಹೊಸ ಸಾಹುಕಾರರು ಸೃಷ್ಟಿಯಾಗುತ್ತಿದ್ದಾರೆ. ನನ್ನ ಸಲಹೆ ಇಷ್ಟೇ. ಸಮಗ್ರವಾದ ಒಂದು ಕಾಯಿದೆ ತನ್ನಿ. 1947 ರಲ್ಲಿ ಆಸ್ತಿ ಯಾರುಯಾರಿಗೆ ಎಷ್ಟಿತ್ತು, 1973 ರಲ್ಲಿ ಎಷ್ಟಿದೆ ಎಂದು ನೋಡಿ ಅದು ಹೆಚ್ಚಾಗಿದ್ದು ಅನುಮಾನಕ್ಕೆ ಎಡೆ ಕೊಡುವಾಗ ಅದನ್ನು ಹೇಗೆ ಸಂಪಾದನೆ ಮಾಡಿದ ಎಂದು ಕೇಳಿ. ನಾನೂ ಕೂಡ ಈಚೆಗೆ ಸಂಪಾದನೆ ಮಾಡಿದವನು. ಆದರೆ ಪ್ರತಿಯೊಂದು ಕಾಸಿಗೂ ನಾನು ಲೆಕ್ಕ ಕೊಡುತ್ತೇನೆ. ಇದೇ ರೀತಿಯಲ್ಲಿ ಪ್ರತಿಯೊಬ್ಬರಿಂದಲೂ ಲೆಕ್ಕ ತೆಗೆದುಕೊಂಡು ಅಕ್ರಮವಾಗಿ ಸಂಪಾದನೆ ಮಾಡಿರುವುದಿದ್ದರೆ ಅದನ್ನು ಸರಕಾರಕ್ಕೆ ಸೇರಿಸಿಕೊಳ್ಳಿ. ಅದರಿಂದ ಒಂದಕ್ಕೆ ಹತ್ತರಷ್ಟು

(ಶ್ರೀ ಟಿ. ಆರ್. ಶಾಮಣ್ಣ)

ವರಮಾನ ಬರುವುದು. ಹೊಸ ಸಾಹುಕಾರರನ್ನು ಟ್ಯಾಕಲ್ ಮಾಡಿದರೆ ಬಡವರನ್ನು ಉದ್ಧಾರ ಮಾಡಲು ಸರಕಾರ ನಡೆಸಲು ಯಾವವಿಧವಾದ ಕಷ್ಟವಾಗುವುದಿಲ್ಲ. ಹೊಸಹೊಸ ತೆರಿಗೆ ಹಾಕುವುದಕ್ಕೆ ವಿರೋಧಮಾಡಬೇಕಾಗುತ್ತದೆ. ಒಂದು ಕಡೆ ಕೇಂದ್ರ ಸರಕಾರ ಇನ್ನೊಂದು ಕಡೆ ರಾಜ್ಯ ಸರಕಾರ ತೆರಿಗೆ ಹಾಕುವುದರಿಂದ ರಾಜ್ಯ ಸರಕಾರ ವಸೂಲುಮಾಡಲು ಕಷ್ಟವಾಗಿದೆ. ಲೋಕಲ್ ಬಾಡೀಸ್‌ಗೂ ಇದರಿಂದ ಕಷ್ಟವಾಗುವುದು ಸರಕಾರ ತೆರಿಗೆ ಹಾಕುವುದರಿಂದ ಬೆಲೆಗಳು ಏರುತ್ತವೆ, ಇದಕ್ಕೆ ತಡೆಮಾಡಬೇಕು. ಅಕ್ರಮವಾಗಿ ಸಂಪಾದನೆ ಮಾಡುವವರಿಂದ ತೆರಿಗೆ ವಸೂಲು ಮಾಡಬೇಕೇ ಹೊರತು ಎಲ್ಲರ ಮೇಲೂ ಹಾಕಬಾರದು. ಮುಖ್ಯವಾಗಿ ವಿರೋಧವಿರುವುದು ಏತಕ್ಕೆಂದರೆ ಎಲ್ಲರ ಮೇಲೂ ಅದು ಬೀಳುವುದರಿಂದ. ಈ ಬಿಲ್ಲನ್ನು ತಂದಿರುವ ರೀತಿ, ಮಾಡಿರುವ ವಾದ ಸರಿಯಾಗಿಲ್ಲದಿರುವುದರಿಂದ ಅದನ್ನು ಪೂರ್ಣವಾಗಿ ವಿರೋಧಿಸಿ ಈ ತೆರಿಗೆಗೆ ನನ್ನ ಒಪ್ಪಿಗೆ ಇಲ್ಲವೆಂದು ಸೂಚಿಸುತ್ತೇನೆ.

Sri M. S. KRISHNAN.—This is a very uncharitable statement. ನಾನೂ ಅವರನ್ನು ಆಂಟಿ ಲೇಬರ್ ಎಂದು ಕರೆಯಲಿಲ್ಲ. ಅವರನ್ನು ಏತಕ್ಕೆ ತಲೆಮೇಲೆ ಹಾಕಿಕೊಂಡರು ? ಅವರಿಗೆ ಕೆಲಸ ಕೊಡುವಾಗ ಬುದ್ಧಿ ಇರಲಿಲ್ಲವೇ ! ಅವರನ್ನು ಕಾರ್ಮಿಕರ ವಿರೋಧಿ ಎಂದು ಹೇಳಲಿಲ್ಲ. ಕಾರ್ಮಿಕ ವರ್ಗಕ್ಕೆ ಸಂಬಂಧಪಟ್ಟಂತೆ ಕೆಲವು ಕ್ಲಾಸಸ್ ಎಕ್ಸೆಂಪ್ಟ್ ಮಾಡಬಹುದು. ಆ ಕ್ಲಾಸಸ್‌ನ್ನು ಸರ್ಕಾರ ಈವೊತ್ತು ಎಲ್ಲೂ ಮಾಡಿಲ್ಲ, ಮಾಡುತ್ತಲೂ ಇಲ್ಲ. ಆ ವಿಚಾರವಾಗಿ ಬಹಳ ದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಯಾವ ಕೈಗಾರಿಕೆ ಲಾಭ ಮಾಡುತ್ತಾ ಇಲ್ಲ ಅವರಿಗೆ ಬೋನಸ್ ಕೊಡಬೇಕಾಗುತ್ತದೆ. ಪಬ್ಲಿಸಿಟಿಗೋಸ್ಕರ ಮಾಡುತ್ತೇವೆ ಎಂದು ಹೇಳುತ್ತಾರೆ. ಆಂಟಿ ಲೇಬರ್ ಧೋರಣೆಯಿಂದ ಲೇಬರ್ ಆಕ್ಟ್ ಮನ್ನಾ ಮಾಡುತ್ತೇವೆ ಎನ್ನುವ ಸಬೂಬುಗಳು ಕೊಡುವಂತೆ ಮಾಡಿದರೆ we are going to fight him out tooth and nail.

ಶ್ರೀ ಅಜೀಜ್‌ಸೇಟ್.—ಆಗಬಹುದು.

INTRODUCTION OF BILLS

Sri N. HUTCHAMASTHY GOWDA (Minister for Revenue).—Madam, I beg to introduce the following Bills :

(1) The Mysore Prevention of Fragmentation and Consolidation of Holdings (Amendment) Bill, 1973.

(2) The Mysore (Abolition of Cash Grants) (Amendment) Bill, 1973.

(3) The Mysore Inams Abolition Laws (Amendment) Bill, 1973.

(4) The Mysore Public Premises (Eviction of Unauthorised Occupants) Bill, 1973.

Sri AZEEZ SAIT (Minister for Labour) Madam, I beg to introduce:

(1) The Mysore Industrial Establishments (National and Festival Holidays) (Amendment) Bill, 1973.

(2) The Motor Vehicles (Mysore Amendment) Bill, 1973.

MADAM SPEAKER.—The Bills are introduced.*

News Paper items about Stability of the State Cabinet

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ನಾನು ಒಂದು ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈವೊತ್ತು ರಾಜ್ಯದಲ್ಲಿ ಒಂದು ದೊಡ್ಡ ಊಹಾಪೋಹ ಎದ್ದಿದೆ. ಇಷ್ಟು ದಿವಸ ಮಂತ್ರಿಗಳು ಹೋಗುತ್ತಾರೆ ಎನ್ನುವಂತಿತ್ತು. ಈವೊತ್ತು ಮಂತ್ರಿಮಂಡಲವೇ ಹೋಗುತ್ತದೆ ಎನ್ನುವ ಅಭಿಪ್ರಾಯ ಬರುತ್ತಿದೆ. ಡೆಲ್ಲಿಯಲ್ಲಿ ಪಾರ್ಲಿಮೆಂಟ್ ಸದಸ್ಯರುಗಳು ಎಲ್ಲರೂ ಕೂಡ ಒಂದೇ ಪಾರ್ಟಿಯವರಾಗಿದ್ದು ಅವರು ಈ ಮಂತ್ರಿಮಂಡಲದ ಮೇಲೆ ಒಂದು ಆರೋಪಣಾ ಪಟ್ಟಿಯನ್ನು ಮಾಡಿ ಪ್ರಧಾನ ಮಂತ್ರಿಗಳಿಗೆ ಕೊಡುತ್ತಾರೆ.

ಶ್ರೀ ಅಜೀಜ್ ಸೇಟ್ (ಕಾರ್ಮಿಕ ಶಾಖೆಯ ಮಂತ್ರಿಗಳು).—ಇದು ನಮ್ಮ ಪಕ್ಷದ ವಿಷಯ. ಆ ವಿಷಯ ಇವರಿಗೆ ಏತಕ್ಕೆ ಬೇಕು ಸ್ವಾಮಿ.

ಶ್ರೀ ಎಂ. ಎಸ್. ಕೃಷ್ಣನ್. ಮಾನ್ಯ ಅಜೀಜ್ ಸೇಟ್‌ರವರು ಅಷ್ಟು ಸುಲಭವಾಗಿ ಹೇಳಬಾರದು. ನಾಳೆ ದಿವಸ ಶ್ರೀಮಾನ್ ಘೋರ್ಪಡೆಯವರು ಮುಖ್ಯ ಮಂತ್ರಿಗಳಾಗಿ ಬರಬಹುದು ಅಥವಾ ಕೃಷ್ಣ ಅವರು ಮುಖ್ಯ ಮಂತ್ರಿಗಳಾಗಿ ಬರಬಹುದು ಅಥವಾ ಇನ್ನಾರಾದರೂ ಮುಖ್ಯ ಮಂತ್ರಿಗಳಾಗಿ ಬರಬಹುದು. What happens to the Budget ?

ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).—ಅಧ್ಯಕ್ಷರೇ, ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಇದನ್ನು ತಮಾಷೆಯಾಗಿ ಎತ್ತಿದರು ಅಂತಲ್ಲ. It is a serious matter ನಾವು ರಾಜ್ಯದ ಪಾರ್ಲಿಮೆಂಟ್ ಮೆಂಬರ್ಸ್‌ಗಳನ್ನು ಅಭಿನಂದನೆ ಮಾಡಬೇಕಾಗಿದೆ. ಏತಕ್ಕೆಂದರೆ ನಮ್ಮ ರಾಜ್ಯದ ಒಂದೇ ಪಕ್ಷದ ಎಲ್ಲಾ ಸದಸ್ಯರೂ ಈ ಒಂದು ಆರೋಪಣೆ ಮಾಡಿದ್ದಾರೆ. ಆದರೆ ಇಂದು ವಿರೋಧ ಪಕ್ಷದ ಬಲ ಕುಗ್ಗಿದ ಕಾಲದಲ್ಲಿ ಈ ಸರ್ಕಾರ ಮಾಡಿರುವ ಒಂದು ಸತ್ಕಾರ್ಯ ಏನೆಂದರೆ ಈ ಯುವಕ ಕಾಂಗ್ರೆಸ್ಸಿನ ಹೆಸರಿನಲ್ಲಿ ಬಹಿರಂಗವಾಗಿ ಹಣವನ್ನು ಕಲೆಕ್ಟ್ ಮಾಡಿ ಜಮಾ ಮಾಡುತ್ತಿದ್ದಾರೆ. ಈ ಒಂದು ದೊಡ್ಡ ಆಪಾದನೆ ಅವರ ಮೇಲೆ ಇರುವುದರಿಂದ ಈ ವಿಷಯವನ್ನು ನಾವು ಮುಖ್ಯಮಂತ್ರಿಗಳನ್ನು ಕೇಳಬೇಕಾಗಿದೆ. ಮತ್ತು ಇದಕ್ಕೆ ಸರ್ಕಾರದ ವತಿಯಿಂದ ಉತ್ತರ ಪಡೆಯುವುದಕ್ಕೆ ಇಚ್ಛೆಪಡುತ್ತೇನೆ. ಇದು ಜವಾಬ್ದಾರಿಯಾದಂಥ ಹೇಳಿಕೆ. ಇದು ಗಹನವಾದ ವಿಷಯ. It is a very serious charge against the Ministry that the Ministry has allowed the Youth Congress to collect money. I must compliment the Parliament Members for having come out with the truth.

---

* All the Six Bills are reproduced as annexure to this volume.

Sri AZEEZ SAIT.—May I tell the Leader of the Opposition that let us not waste the time of the House. ಇದು ನಮ್ಮ ಮನೆಯ ವಿಚಾರ. ಇದರ ಬಗ್ಗೆ ಏಕೆ ಹೇಳಲು ಹೋಗುತ್ತೀರಿ ! ಪೇಪರುಗಳ ಮೇಲೆ ಏಕೆ ರಿಲೈ ಆಗುತ್ತೀರಿ ?

ಶ್ರೀ ಎಚ್. ಡಿ. ದೇವೇಗೌಡ.—ಪೇಪರುಗಳ ಮೇಲೆ ಹೆಚ್ಚಾಗಿ ರಿಲೈ ಮಾಡ ಬೇಕಾಗಿಲ್ಲ ಎಂದು ಮಾನ್ಯ ಮಂತ್ರಿಗಳು ಇಲ್ಲಿ ಹೇಳುತ್ತಾರೆ. ಆದರೆ ನಿಮ್ಮ ಮಂತ್ರಿಮಂಡಲದಲ್ಲೇ ಇಂದು ಚರ್ಚೆಯಾಗಿದೆ ಹಾಗೂ ನಿಮ್ಮ ಪಕ್ಷದೊಳಗೆ ಇದರ ಬಗ್ಗೆ ಚರ್ಚೆಯು ಯಾವ ಆಧಾರದ ಮೇಲೆ ನಡೆದಿದೆ ಎನ್ನುವುದೆಲ್ಲಾ ಇಂದಿನ ಪತ್ರಿಕೆಗಳಲ್ಲಿ ಬಂದಿವೆ. ನನಗೆ ದೇಶದ ಹಿತದೃಷ್ಟಿಯ ಸಮಸ್ಯೆ ಇರುವುದರಿಂದ ಇಲ್ಲಿ ಕೇಳಬೇಕಾಗುತ್ತದೆ, ನನಗೆ ನಿಮ್ಮ ಪಾರ್ಟಿಯೊಳಗಿನ ಪ್ರಶ್ನೆಯನ್ನು ಇಲ್ಲಿ ತಂದು ಹೇಳುವ ಅವಶ್ಯಕತೆ ಏನಿಲ್ಲ ಅವೆಲ್ಲಾ ನಿಮಗೆ ಬಿಟ್ಟದ್ದು. ನಮಗಿರುವುದು ದೇಶದ ಹಿತದೃಷ್ಟಿ.

ಶ್ರೀ ಅಜೀಜ್ ಸೇಟ್.—ಐದು ವರ್ಷಗಳವರೆಗೆ ಮಂತ್ರಿಮಂಡಲವಿರುವುದು. ಮುಂದೆ ನಾವು ಬರುತ್ತೇವೋ ಇಲ್ಲವೋ ಅಥವಾ ಯಾರು ಬರುತ್ತಾರೋ ಗೊತ್ತಿಲ್ಲ. ಇವರ ಯೋಚನೆ ತಮಗೇಕೆ? ಇಂದು ಈ ಮಂತ್ರಿಮಂಡಲ ಇಲ್ಲದೆ ಇದ್ದರೂ ಇಲ್ಲಿ ವಿಧಾನ ಸೌಧವಿದೆ ಹಾಗೂ ಅಸೆಂಬ್ಲಿಯ ಕಾರ್ಯಕಲಾಪಗಳು ಹೇಗೆ ನಡೆಯುತ್ತದೆ, ಇದರ ಬಗ್ಗೆ ಯೋಚನೆ ಮಾಡಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಇವರಿಗೇಕೆ ಯೋಚನೆ ಬೇಡ ಎಂದು ಹೀಗೆ ಮೇಲೆ ಹಾರಿ ಕೊಂಡು ಹೇಳುತ್ತಾರೆ ? ಇವರೇ ಮಂತ್ರಿಮಂಡಲದಿಂದ ಮೊದಲು ಹೋಗುತ್ತಾರೋ ಏನೋ !!

ಶ್ರೀ ಎಚ್. ಡಿ. ದೇವೇಗೌಡ.—ಐದು ವರ್ಷಗಳ ಕಾಲ ಮಂತ್ರಿಮಂಡಲದಲ್ಲೇ ಇರುತ್ತೇನೆ ಎಂದು ಮಾನ್ಯ ಶ್ರೀ ಅಜೀಜ್ ಸೇಟ್‌ರವರು ತಿಳಿದುಕೊಂಡಿದ್ದರೆ ಅದರ ಬಗ್ಗೆ ನಾವೇನೂ ಮಾಡ ಬೇಕಾಗಿಲ್ಲ.

ಶ್ರೀ ಅಜೀಜ್ ಸೇಟ್.—ಇವೊತ್ತು ದೇವರ ಕರೆ ಬಂದರೆ ನಾವು ಎಲ್ಲಿರುತ್ತೇವೋ ನಮಗೆ ಗೊತ್ತಿಲ್ಲ, ನಿಮಗೂ ಗೊತ್ತಿಲ್ಲ. ನಾಳೆ ಯಾರಾದರೂ ಇಲ್ಲಿಂದ ಹೊರಗೆ ಹೋಗುವಾಗಲೇ ಬೇರೆ ಲೋಕಕ್ಕೆ ಹೋಗಬಹುದು, ಇದು ನಮಗೆ ನಿಮಗೆ ಯಾರಿಗೂ ಗೊತ್ತಾಗುವುದಿಲ್ಲ. ಇನ್ನು ಮಂತ್ರಿ ಮಂಡಲದ ವಿಚಾರ ಇಲ್ಲಿ ಏಕೆ !

ಶ್ರೀ ಎಚ್. ಡಿ. ದೇವೇಗೌಡ.—ಇದು ರಾಜ್ಯಕ್ಕೆ ಸಂಬಂಧಪಟ್ಟದ್ದು, ಮಂತ್ರಿಗಳು ಈ ರೀತಿ ಖಾಜಿ ಸಾಹೇಬರು ಮಾಡುವ ಕೆಲಸಗಳನ್ನು ಇಲ್ಲಿ ಮಾಡಬಾರದು. ನಮಗೂ ಗೊತ್ತು, ಇವೊತ್ತು ಯಾರು ಇರುತ್ತಾರೆ ನಾಳೆ ಯಾರು ಸಾಯುತ್ತಾರೆ ಎಂದು ಹೇಳುವುದು. ಹೀಗೆ ಖಾಜಿ ಸಾಹೇಬರು ಹೇಳುವಂತೆ ಇಲ್ಲಿ ಹೇಳಬಾರದು, ಇದನ್ನು ನೀವು ಇಲ್ಲಿ ಹೇಳುವುದು ಕೆಲಸವಲ್ಲ. ಇವೊತ್ತು ಈ ರಾಜ್ಯದಲ್ಲಿರುವ ಮಂತ್ರಿಮಂಡಲದ ಮೇಲೆ ಗುರುತರವಾದ ಆಪಾದನೆಗಳನ್ನು ತಮ್ಮ ಪಕ್ಷದ 20 ಜನ ಪಾರ್ಲಿಮೆಂಟು ಸದಸ್ಯರು ಏನು ಹೇಳಿದ್ದಾರೆ ಎನ್ನುವ ವರದಿಗಳು ಇಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಒಂದು ಹೇಳಿಕೆ ಕೊಡ ಬೇಕು. ಮುಖ್ಯ ಮಂತ್ರಿಗಳು ಇಂತಹ ಒಂದು ಅನಿಶ್ಚಿತವಾದ ವಾತಾವರಣವನ್ನು ಸರಿಪಡಿಸಲು ಇದರ ಬಗ್ಗೆ ಒಂದು ಹೇಳಿಕೆ ಕೊಡುವುದು ಯೋಗ್ಯವಾದುದು, ಇದರಲ್ಲಿ ಯುವಕ ಕಾಂಗ್ರೆಸ್‌ನವರು ಏನು ಹಣ ವಸೂಲು ಮಾಡಿದ್ದಾರೆ ಅದು ದುರುಪಯೋಗವಾಗುತ್ತಿದೆ ಎಂದು ತಿಳಿದು ಬರುತ್ತದೆ ಇದರ ಬಗ್ಗೆ ಮುಖ್ಯ ಮಂತ್ರಿಗಳು ವಿಮರ್ಶೆ ಮಾಡಿ ವಿವರಣೆಗಳನ್ನು ಕೊಡ ಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಇವೊತ್ತು ಪತ್ರಿಕೆಗಳಲ್ಲಿ ಇನ್ನೊಂದು ವಿಚಾರವೂ ಬಂದಿದೆ. ಅದು 'Mysore is going towards the Orrisa way' ಎಂದು ಇದರಿಂದ ಮೈಸೂರು ರಾಜ್ಯದಲ್ಲಿರುವ ಮಂತ್ರಿಮಂಡಲ ಇರುತ್ತೋ ಇಲ್ಲವೋ ಎನ್ನುವ ಸಂಶಯ ಬರುತ್ತದೆ.

ಶ್ರೀ ಅಜೀಜ್ ಸೇಟ್.—ಒಂದು ದಿನಕ್ಕೆ ಇಲ್ಲಿ 25 ಸಾವಿರ ರೂಪಾಯಿ ಖರ್ಚು ಮಾಡುತ್ತೇವೆ ಹೀಗೆ ಕಾಲ ವ್ಯರ್ಥಮಾಡಬಾರದು.

ಶ್ರೀ ಎಂ. ಎಸ್ ಕೃಷ್ಣನ್.—ಒಂದು ದಿನಕ್ಕೆ ಸುಮಾರು 25 ಸಾವಿರ ರೂಪಾಯಿ ಖರ್ಚಾಗುತ್ತದೆ, ಇದಕ್ಕಾಗಿ ಸುಮ್ಮನೆ ಈ ಸಭೆಯ ಕಾಲವನ್ನು ಏಕೆ ವ್ಯರ್ಥ ಮಾಡುತ್ತೀರಿ ಎಂದು ಮಾನ್ಯ ಮಂತ್ರಿಗಳು ಹೇಳುವುದು ಸರಿಯಲ್ಲ ಇದು ಅವರ ಘನತೆ ಗೌರವಗಳಿಗೆ ಸರಿಯಾದುದಲ್ಲ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಅಧ್ಯಕ್ಷರು.--ಇವೆಲ್ಲ ಮಾನ್ಯ ಸದಸ್ಯರಿಗೂ ಗೊತ್ತಿದೆ. ಮತ್ತು ಪ್ರತಿಯೊಬ್ಬರಿಗೂ ಗೊತ್ತಿದೆ, ಆದರೂತಾವು ಈಗ ಏಕೆ ಇದರ ಬಗ್ಗೆ ಜಾಸ್ತಿ ಹೇಳಬೇಕು ? What is the hon. Minister tryingto do ?

MYSORE RE-ENACTING BILL, 1973

MOTION TO CONSIDER (Debate Continued)

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ದಿವಸ ಮಾತನಾಡುವಾಗ ಎರಡು ಮುಖ್ಯವಾದ ಅಂಶಗಳನ್ನು ತಮ್ಮ ಮೂಲಕ ಸರಕಾರದ ಗಮನಕ್ಕೆ ತಂದಿದ್ದೆ. ಮೊದಲನೆಯದು, ಈ ಶಾಸನದ ಮುಖ್ಯ ಗುರಿ ಏನಿದೆ ಎಂದರೆ ಜನತೆಗೆ ಗೃಹ ನಿರ್ಮಾಣ ಕಾರ್ಯ ಮಾಡುವುದು. ಇದರ ಬಗ್ಗೆ ನಮಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ನಾವೆಲ್ಲರೂ ಜನತಾ ಗೃಹ ನಿರ್ಮಾಣ ಕಾರ್ಯಗಳನ್ನು ಆದಷ್ಟು ಬೇಗ ಮಾಡಲು ಪ್ರಯತ್ನ ಮಾಡಬೇಕು. ಇದರಲ್ಲ ಯಾವ ರೀತಿಯ ಸಂಶಯಇಲ್ಲವೇ ಸಂದೇಹ ಯಾವುದು ಇಲ್ಲ. ಅದೇ ರೀತಿಯಲ್ಲಿ ಇನ್ನೊಂದು ಅಂಶವನ್ನು ಸಹ ಅರಿಕೆಮಾಡಿಕೊಂಡಿದ್ದೆ. ಅದು ಬಂಗ್ಲಾದೇಶದ ರೆಫ್ಯೂಜಿಗಳಿಗಾಗಿ ಹಾಕಿದತೆರಿಗೆಗಳನ್ನು ಮುಂದುವರಿಸಿಕೊಂಡು ಹೋಗುವುದರ ಬಗ್ಗೆ. ಹಿಂದೆ ಇದನ್ನು ಪಾರ್ಲಿಮೆಂಟಿನಲ್ಲಿ ಚರ್ಚೆ ಮಾಡುವಾಗ ಇದರ ಬಗ್ಗೆ ವಿಪುಲವಾದ ಆಕ್ಷೇಪಗಳು ಬಾರದೇ ಇದ್ದರೂಇದನ್ನು ಬಂಗ್ಲಾದೇಶದ ನಿರಾಶ್ರಿತರು ನಮ್ಮ ದೇಶದಿಂದ ವಾಪಸು ಹೋದ ಕೂಡಲೇ ಇಂತಹ ತೆರಿಗೆಯನ್ನು ಮುಂದುವರಿಸುವುದಿಲ್ಲ, ತೆಗೆಯುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಅದರಂತೆ ಈಗ ಕೇಂದ್ರ ಸರಕಾರದವರು ಅವರ ಆಶ್ವಾಸನೆಯನ್ನುಳಿಸಿಕೊಂಡು ಈಗ ಅದನ್ನು ತೆಗೆದುಹಾಕಿದ್ದಾರೆ. ಆದರೆ ನಮ್ಮ ರಾಜ್ಯ ಸರಕಾರದವರು ಇದನ್ನು ಇಲ್ಲಿ ತೆಗೆಯದೇ ಮುಂದುವರಿಸಿಕೊಂಡು ಹೋಗಲು ಒಂದು ಮುಖ್ಯ ಕಾರಣವನ್ನು ಹೇಳಿದರು. ಆದರೆ ಇಂತಹ ಒಂದು ತೆರಿಗೆಯನ್ನು ಅನಗತ್ಯವಾಗಿ ಮುಂದುವರಿಸುವುದು ಸರಿಯಾದುದಲ್ಲ. ಆಗಿನ ಸಂದರ್ಭದಲ್ಲಿ ಪಾರ್ಲಿಮೆಂಟು ಸದಸ್ಯರು ಇವೆ ರೀತಿ ಅಭಿಪ್ರಾಯಗಳನ್ನು ಅಲ್ಲಿನ ವಿರೋಧ ಪಕ್ಷದವರೂ ಕೊಟ್ಟಿರಬಹುದು ಆದರೆ ಅದೇ ರೀತಿ ಆಶ್ವಾಸನೆಯನ್ನು ನಮ್ಮ ಸರಕಾರದವರೂ ಇದರ ಬಗ್ಗೆ ಸರಿಯಾದ ಕಾರಣಗಳನ್ನು ಹೇಳಲಿಲ್ಲ.

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಕೇಂದ್ರ ಸರಕಾರದವರು ಬಾಂಗ್ಲ ದೇಶದ ಟ್ಯಾಕ್ಸ್ ತೆಗೆದು ಹಾಕಿದ್ದಾರೆ, ಆದರೆ ಬೇಕಾದಷ್ಟು ತೆರಿಗೆಗಳನ್ನು ಹಾಕಿದ್ದಾರೆ, ನಾವು ಒಂದು ತೆರಿಗೆಯನ್ನು ಹಾಕಲಿಲ್ಲ, ಇದು ಸ್ವಲ್ಪ ಗಹನವಾದ ವ್ಯತ್ಯಾಸ ಇದೆ ಎನ್ನುವುದನ್ನು ತಾವು ತಿಳಿದುಕೊಳ್ಳಲು ಪ್ರಯತ್ನ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನನಗೂ ಗೊತ್ತು. ಕೇಂದ್ರದವರು ತೆರಿಗೆಯ ವಿನಾಯತಿಯನ್ನು ತೆಗೆದು ಹಾಕಿದರೂ ಅದರಲ್ಲಿ ಅರ್ಧದಷ್ಟು ಉಳಿಸಲು ನಮ್ಮ ಸರಕಾರ ಪೂರ್ತಿವಿಮರ್ಶೆ ಮಾಡಲಿಲ್ಲ ಎನ್ನುವುದು ನನ್ನ ಅಭಿಪ್ರಾಯ ಕೇಂದ್ರ ಸರಕಾರ ತೆರಿಗೆ ತೆಗೆಯುತ್ತೇವೆ ಎಂದು ಆಶ್ವಾಸನೆ ಕೊಟ್ಟಿರುವಾಗ ಮತ್ತೆ ತೆರಿಗೆಯನ್ನು ಇಲ್ಲಿನ ಜನಸಾಮಾನ್ಯರಮೇಲೆ ಹಾಕುವುದು ಸರಿಯಾದುದಲ್ಲ. ಇದರ ಬದಲು ಶ್ರೀಮಂತರ ಮೇಲೆ ಹಾಗೂ ಕಾನೂನುಗಳನು ಕಡಿಯುವವರ ಮೇಲೆ ತೆರಿಗೆ ಹಾಕಬಹುದಾಗಿತ್ತು. ಅದನ್ನು ಮಾಡದೆ ಈ ರೀತಿ ಮುಂದುವರಿಸಿಕೊಂಡು ಹೋಗುವುದು ಅಷ್ಟು ಸಮಂಜಸವಾಗುವುದಿಲ್ಲ. ಮತ್ತು ನ್ಯಾಯ ಬದ್ಧವೂ ಆಗುವುದಿಲ್ಲ, ಇದನ್ನು ಅವರ ಹಾಕಿದ್ದಲ್ಲ, ಹಿಂದೆ ಗವರ್ನರ' ಅವರ ಆರ್ಡರಿತ್ತು, ಇದು ಆಗ ಇದ್ದ ಪ್ರೆಸಿಡೆನ್‌ಷಿಯಲ್ ಆಕ್ಟ ಪ್ರಕಾರ ಆದದ್ದು ಎಂದು ಹೇಳಬಹುದು, ಮಂತ್ರಿಮಂಡಲ ಇದ್ದರೆ ಆಶ್ವಾಸನೆ ಕೊಡಬಹುದಾಗಿತ್ತು ಎಂದು ಹೇಳಬಹುದು. ಆದರೆ ಈಗ ನಿಮ್ಮ ಪಾರ್ಟಿಯವರೇ ಕೇಂದ್ರದಲ್ಲ ಹಾಗೂ ಇಲ್ಲಿ ಇರುವಾಗ ಆಗ ಜನರಿಗೆ ಕೊಟ್ಟ ಆಶ್ವಾಸನೆಯನ್ನು ಉಳಿಸಿಕೊಂಡು ಬರಲು ಏಕೆ ಹಿಂಜರಿಯುತ್ತೀರಿ ?

3-00 P. M.

ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ರೀತಿ ಮನೆಗಳನ್ನು ಕಟ್ಟಿಸಲು ಈ ತೆರಿಗೆಯನ್ನು ಮುಂದುವರಿಸುವ ಬದಲು ನೇರವಾಗಿಯೇ ಮನೆಗಳನ್ನು ಕಟ್ಟಿಸಲು ಹಣ ಬೇಕಾಗಿದೆ.

ಎಂದು ಕೇಳಬಹುದಾಗಿತ್ತು. ಆದರೆ ಅದನ್ನು ನೇರವಾಗಿ ಹೇಳದೆ ಹೊಸ ತೆರಿಗೆಗಳು ಇಲ್ಲದ ಬಜೆಟ್ ಮಂಡನೆ ಮಾಡಿ, ಅದೇ ಸಮಯಕ್ಕೆ ಬೇರೆ ರೀತಿಯಿಂದ ಸ್ವಲ್ಪ ತೆರಿಗೆಗಳನ್ನು ಜನರ ಮೇಲೆ ಹೊರಿಸುವುದಕ್ಕೆ ಹೊರಟಿದ್ದೀರಿ. ಈ ರೀತಿ ಎರಡು ಆಬ್ಜೆಕ್ಟ್‌ಗಳನ್ನು ಉಪಯೋಗ ಮಾಡುವುದಕ್ಕೆ ಹೊರಟಿದ್ದೀರಿ. ಇದು ಸರಿಯಾದ ಮಾರ್ಗವಲ್ಲ. ಈ ಗೃಹನಿರ್ಮಾಣದ ರೂಪುರೇಷೆಗಳನ್ನು ಸಹ ನಮಗೆ ತಾವು ಒರಗಿಸಿಲ್ಲ. ಎಲ್ಲೆಲ್ಲಿ ಮನೆಗಳನ್ನು ಕಟ್ಟುಸುತ್ತೀರಾ, ಪಂಚಾಯಿತಿಯವರು ಏನಾದರೂ ಹಣ ಕೊಡುತ್ತಾರೆಯೇ ಎಂಬ ಬಗ್ಗೆ ವಿವರಗಳನ್ನು ಕೊಟ್ಟಿಲ್ಲ. ಈ ಮನೆಗಳನ್ನು ಕಟ್ಟಿಸುವ ವಿಚಾರವನ್ನು ಯೋಜನೆಯಲ್ಲಿಯೇ ಸೇರಿಸಬೇಕಾಗಿತ್ತು. ಆ ರೀತಿ ಸೇರಿಸಿ ಪ್ರತಿವರ್ಷ ಈ ಯೋಜನೆಗೆ ಇಷ್ಟಿಷ್ಟು ಹಣ ಒದಗಿಸುತ್ತೇವೆಂದು ಹೇಳಬೇಕಾಗಿತ್ತು. ಆ ರೀತಿಯ ಯೋಜನೆ ಸರ್ಕಾರಕ್ಕೆ ಇಲ್ಲವೆಂದು ಕಾಣುತ್ತದೆ

ಶ್ರೀ ಎಂ. ವೈ. ಘೋರ್ಪಡೆ.—ಇದನ್ನು ಯೋಜನೆಯಲ್ಲಿ ಸೇರಿಸಿದ್ದೇವೆ,

ಶ್ರೀ ಎಂ. ಎಸ್. ಕೃಷ್ಣನ್.—ಈ ಸಾಲಿನಲ್ಲಿ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ತಾವು ಹೇಳಿದ್ದೀರಿ. ಆದರೆ ಹಿಂದಿನ ಸಾಲುಗಳಲ್ಲಿ ಈ ರೀತಿ ಪ್ರತ್ಯೇಕ ಯೋಜನೆ ಮಾಡಿ ಹಣವನ್ನು ಒದಗಿಸುತ್ತಿರಲಿಲ್ಲ. ಕೈಗಾರಿಕಾ ಮಾಲೀಕರಿಗೆ ಹಣ ಕೊಡುವ ಪದ್ಧತಿ ಇತ್ತು. ಆ ಹಣವನ್ನು ಸಹ ಕೇಂದ್ರದವರು ಒದಗಿಸುತ್ತಿದ್ದರು. ಅದನ್ನು ಸಹ ಯಾರೂ ಸರಿಯಾಗಿ ಉಪಯೋಗ ಮಾಡಿಕೊಳ್ಳುತ್ತಿರಲಿಲ್ಲ. ಕೇಂದ್ರದವರು ಈ ಬಾಬಿಗೆ ಕೊಡುವ ಹಣವನ್ನು ರಾಜ್ಯ ಸರ್ಕಾರದವರು ಸಹ ಸರಿಯಾಗಿ ಉಪಯೋಗ ಮಾಡಿಕೊಳ್ಳದೆ ಲ್ಯಾಪ್ಸ್ ಆಗಿರುವುದು ಕೇಂದ್ರ ಸರ್ಕಾರದ ಅಂಕಿಅಂಶಗಳಿಂದ ಗೊತ್ತಾಗುತ್ತಿದೆ. ಪರಿಸ್ಥಿತಿ ಈ ರೀತಿ ಇರಬೇಕಾದರೆ, ಈ ಸಾಲಿನಿಂದ ಗೃಹ ನಿರ್ಮಾಣ ಕಾರ್ಯಕ್ರಮವನ್ನು ಜಾರಿಗೆ ತರುತ್ತೇವೆಂದು ತಾವು ಹೇಳಿದರೆ ಅನುಮಾನಕ್ಕೆ ಆಸ್ಪದವಾಗುತ್ತದೆ. ಈ ವಿಚಾರದಲ್ಲಿ ನಂಬಿಕೆ ಬರುವುದು ಕಷ್ಟ. ಕಳೆದ 25 ವರ್ಷಗಳ ಪರಂಪರೆಯ ಸರ್ಕಾರವೇ ಈಗಲೂ ಇದೆ. ಅದನ್ನು ಬ್ರೇಕ್ ಮಾಡಿದೇವೆಂದು ತಾವು ಹೇಳಬಹುದು. ಆದರೆ ಕಳೆದ ಒಂದು ವರ್ಷದ ನಿಮ್ಮ ಆಡಳಿತವನ್ನೇ ನೋಡಿದರೂ ಸಹ, ಈ ಜನತಾ ಗೃಹನಿರ್ಮಾಣ ಯೋಜನೆ ರಾಜ್ಯದ ಎಲ್ಲ ಭಾಗಗಳಲ್ಲಿಯೂ ಖಂಡಿತವಾಗಿಯೂ ಜಾರಿಯಲ್ಲಿ ಬರುತ್ತದೆಯೇ ಎಂಬುದು ಸಂಶಯವಾಗಿದೆ ಈಗ ಸೈಟ್ ಹಂಚುತ್ತಿರುವ ವಿಚಾರವನ್ನು ರಾಜ್ಯಪಾಲರ ಭಾಷಣದಲ್ಲಿ ಮತ್ತು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದೀರಿ. ಸೈಟ್ ಎಲ್ಲಿದೆ ಎಂಬುದೇ ಜನರಿಗೆ ಗೊತ್ತಿಲ್ಲ. ಈ ಬಗ್ಗೆ ಕೂಡ ಜನರಿಂದ ಟೀಕೆಗಳು ಬರುತ್ತಿವೆ. ಆದ್ದರಿಂದ ಈ ಬಾಬಿಗೆ ಇಟ್ಟಿರುವ ಹಣ ಕೂಡ ಅದಕ್ಕೇ ಹೋಗುತ್ತದೋ ಅಥವಾ ಬೇರೆ ಯಾವುದಕ್ಕೆ ಹೋಗುತ್ತದೋ ಎಂಬು ಇನ್ನು ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ನಮಗೆ ತೀರ ಸಂಶಯವಿದೆ. ಒನ್ನೊ ಒಂದು ಕಾರಣದಿಂದ ಇದನ್ನು ವಿರೋಧ ಮಾಡಬೇಕಾಗಿದೆ. ಏನೆಂದರೆ ಸರ್ಕಾರದವರು ಒಂದು ಸಲ ತೆರಿಗೆಯನ್ನು ಮುಂದುವರಿಸಿದರೆ ಮತ್ತೆ ಅದನ್ನು ವಾಪಸ್ ತೆಗೆದುಕೊಳ್ಳದೆ ಒಂದಲ್ಲ ಒಂದು ರೂಪದಲ್ಲಿ ಮುಂದುವರಿಸಿಕೊಂಡು ಹೋಗುತ್ತಾರೆ, ಇದೇ ವಿಚಾರದಲ್ಲಿ ಅನೇಕ ಸಲ ಟೀಕೆಗೂ ಒಳಗಾಗಿದ್ದಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮುಂದಿನ ವರ್ಷ ಮತ್ತೆ ಇದೇ ಟ್ಯಾಕ್ಸ್ ಮೇಲೆ ಬೇಕಾದರೆ ಸರ್‌ಛಾರ್ಜ್ ಸಹ ಹಾಕುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ತಾವು ಸದಸ್ಯರಾಗಿದ್ದಾಗ ಸೇಲ್ಸ್‌ಟ್ಯಾಕ್ಸ್ ಬಗ್ಗೆ ಇದೇ ಸಭೆಯಲ್ಲಿ ಚರ್ಚೆ ನಡೆಯಿತು. ಆಗ ಮಾನ್ಯ ಎಂ. ಸಿ. ನರಸಿಂಹನ್ ಅವರು ಒಂದು ವಿಷಯ ಎತ್ತಿದರು. ಏನೆಂದರೆ ಎಕ್ಸೈಜ್ ಮೇಲೆ ಕೇಂದ್ರಸರ್ಕಾರದವರು ಸೇಲ್ಸ್‌ಟ್ಯಾಕ್ಸ್ ಹಾಕಿರುವಾಗ ರಾಜ್ಯಸರ್ಕಾರದವರು ಮತ್ತೆ ಹಾಕುವುದು ಸರಿಯೇ ಎಂದು; ಆಗ ಸರ್ಕಾರದವರು ಮುಂದೆ ಈ ರೀಲೆ ಮಾಡುವುದಿಲ್ಲ, ಸಧ್ಯಕ್ಕೆ ಮಾಡುತ್ತೇವೆಂದು ಹೇಳಿದರು. ಮುಂದೆ ಆ ತೆರಿಗೆಯನ್ನು ತೆಗೆಯುವುದು ಇರಲಿ, ಅದರ ಮೇಲೆಯೇ ಸರ್‌ಛಾರ್ಜನ್ನು ಹಾಕಿದರು. ಇದರಿಂದ ಎಲ್ಲರ ಅನುಭವದಲ್ಲಿ ಏನು ಅಭಿಪ್ರಾಯ ಬಂದಿದೆ ಎಂದರೆ, ಈ ಸರ್ಕಾರದವರು ತೆರಿಗೆಯ ಮೇಲೆ ತೆರಿಗೆ ಹಾಕುತ್ತಲೇ ಹೋಗುತ್ತಾರೆ, ಒಂದು ಸಲ ಹಾಕಿದ ಮೇಲೆ ಅದನ್ನು ವಾಪಸ್ ತೆಗೆದುಕೊಳ್ಳುವುದಿಲ್ಲ ಎಂಬುದು. ಒಂದಲ್ಲ ಒಂದು ರೂಪದಲ್ಲಿ ಮುಂದುವರಿಸಿಕೊಂಡು ಹೋಗುತ್ತಿರುತ್ತಾರೆ. ಜನಸಾಮಾನ್ಯರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಈ ತೆರಿಗೆಯನ್ನು ಮುಂದುವರಿಸುವುದಕ್ಕೆ ಬದಲು ಅದಕ್ಕೆ ಬೇರೆ ಮಾರ್ಗವನ್ನು ತಾವು ಕಂಡುಹಿಡಿಯಬಹುದಾಗಿತ್ತು. ಇಂತಹ ಯೋಜನೆಗೆ ನಮಗೆ ಹಣ ಬೇಕಾಗಿದೆ ಎಂದು ಸರ್ಕಾರದವರು ಬೇರೆ ರೀತಿಯಿಂದ ಕೇಳಿದ್ದರೆ ನಾವು ವಿರೋಧ ಮಾಡುವುದಕ್ಕಾಗುತ್ತಿರಲಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ನೇರವಾದ ದಾರಿ ಹಿಡಿಯದೆ ಅಡ್ಡದಾರಿ ಹಿಡಿದಿರುವುದು ನೈತಿಕವಾಗಿ ಸರಿಯಾದುದಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ,

ಶ್ರೀ ಎಂ. ವೈ. ಘೋರ್ಪಡೆ.—ಈ ಯೋಜನೆಗಾಗಿಯೇ ಆ ಹಣವನ್ನು ಉಪಯೋಗ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಲಾಗಿದೆ. ಮುಂದೆ ಅದನ್ನು ವಿವರವಾಗಿ ವರ್ಕ್ ಔಟ್ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ವಿವರವಾಗಿ ವರ್ಕ್ ಔಟ್ ಮಾಡದೆ ಈ ರೀತಿ ಹಣವನ್ನು ವಸೂಲಿ ಮಾಡುವುದಕ್ಕೆ ಹೊರಟಿರುವುದು ಸರಿಯಾದ ಮಾರ್ಗವಲ್ಲ. ಇದರ ಕಾರ್ಯಕ್ರಮವೇನು, ಒಂದು ಪಂಚಾಯಿತಿಗೆ ನೂರು ಅಥವಾ 200 ಮನೆಗಳನ್ನು ಕಟ್ಟಿಸಿಕೊಡುತ್ತೀರಾ, ಸಾಮಗ್ರಿಗಳನ್ನು ಎಲ್ಲಿಂದ ತರುತ್ತೀರಾ, ಕೆಲಸಮಾಡುವವರು ಯಾರು ಎಂಬುದನ್ನೆಲ್ಲಾ ಸ್ಪಷ್ಟವಾಗಿ ಇದರಲ್ಲಿ ಹೇಳಬೇಕಾಗಿತ್ತು. ಆ ರೀತಿ ವಿವರಗಳನ್ನು ಕೊಟ್ಟಿದ್ದರೆ, ನಾವು ಸಹ ಆ ಬಗ್ಗೆ ಯೋಚನೆ ಮಾಡಿ ಸಲಹೆಗಳನ್ನು ಕೊಡುವುದಕ್ಕೆ ಅವಕಾಶವಾಗುತ್ತಿತ್ತು. ಮತ್ತು ತೆರಿಗೆ ಮುಂದುವರಿಸುವುದು ಸೂಕ್ತವೇ ಅಥವಾ ಅಲ್ಲವೇ ಎಂಬುದನ್ನು ಹೇಳುವುದಕ್ಕೆ ಅವಕಾಶವಾಗುತ್ತಿತ್ತು. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ನೆರೆಯ ರಾಜ್ಯವಾದ ಕೇರಳದಲ್ಲಿ ಗೃಹ ನಿರ್ಮಾಣದ ಬಗ್ಗೆ ಒಂದು ಬೃಹತ್ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅಲ್ಲಿ ನಮ್ಮ ಮತ್ತು ನಿಮ್ಮ ಪಾರ್ಟಿಯ ಸರ್ಕಾರವೇ ಇದೆ. ಪ್ರತಿಯೊಂದು ಪಂಚಾಯಿತಿಯಲ್ಲಿಯೂ ನೂರು ಮನೆಗಳನ್ನು ಕಟ್ಟಿಸಬೇಕು, ಒಂದು ವರ್ಷದಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಅದಕ್ಕೆ ಬೇಕಾದ ಜಮೀನು ಪಡೆದುಕೊಂಡು ಈಗಾಗಲೇ 60 ಸಾವಿರ ಮನೆಗಳನ್ನು ಕಟ್ಟಿಸಿದ್ದಾರೆಂದು ತಿಳಿದು ಬಂದಿದೆ. ಒಂದು ಮನೆಗೆ 2500 ರೂಪಾಯಿಗಳು ಖರ್ಚಾಗುತ್ತದೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರೇ ಈ ಖರ್ಚನ್ನು ಕೊಟ್ಟಿದ್ದಾರೆ ಅದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಪಂಚಾಯಿತಿಗಳ ಸಹಕಾರ ತೆಗೆದುಕೊಂಡು ಜನರಿಂದಲೇ ಶ್ರಮದಾನ ಮಾಡಿಸಿ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಕಾರ್ಪೆಂಟರ್ಸ್, ಮೇಸನ್ಸ್, ಆರ್ಟಿಜಾನ್ಸ್ ಇವರುಗಳಿಗೆ ಮಾತ್ರ ಕೂಲಿ ಕೊಡಲಾಗುತ್ತಿದೆ.

ಅಧ್ಯಕ್ಷರು.—ತಾವು ಜಾಗ್ರತೆ ಮುಗಿಸಬೇಕು !

ಶ್ರೀ ಎಂ. ಎಸ್. ಕೃಷ್ಣನ್.—ಜಾಗ್ರತೆ ಮುಗಿಸಿಬಿಡುತ್ತೇನೆ. ನನ್ನ ಪ್ರಶ್ನೆ ಏನೆಂದರೆ, ನೆರೆ ರಾಜ್ಯದವರು ಕೇಂದ್ರದಿಂದ ಸಹಾಯ ಪಡೆದು ಮನೆಗಳನ್ನು ಕಟ್ಟಿಸುತ್ತಿರಬೇಕಾದರೆ, ಅದೇ ರೀತಿ ಇಲ್ಲಿಯೂ ಏತಕ್ಕೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು. ಇದನ್ನು ಏನಾದರು ಸರ್ಕಾರದವರು ಯೋಚನೆ ಮಾಡುವ ಪ್ರವೃತ್ತಿಗೆ ಹೋಗಿದ್ದಾರೆಯೇ ! ಅದನ್ನು ಯೋಚನೆ ಮಾಡಿ, ಆ ರೀತಿ ಮಾಡುವುದು ಸಾಧ್ಯವಾಗುವುದಿಲ್ಲ ಎಂದ ತೀರ್ಮಾನಕ್ಕೆ ಬಂದು ಈ ಬಿಲ್ಲನು ತೆಗೆದುಕೊಂಡು ಬಂದಿದ್ದರೆ ಅದು ಬೇರೆ ರೀತಿಯಾಗುತ್ತಿತ್ತು.

ಈ ರೀತಿಯ ಒಂದು ಅಭಿಪ್ರಾಯವನ್ನು ಎಲ್ಲಾ ಕಡೆಯಲ್ಲೂ ಕೊಟ್ಟಿಲ್ಲ. ಆದ್ದರಿಂದ ಇದು ಒಂದು ಸಮಂಜಸವಾದ ಕ್ರಮವಲ್ಲ. ಒಂದುವೇಳೆ ಇಷ್ಟೆಲ್ಲಾ ಆದರೂ ಕೂಡ ನಾವು ಇದರಲ್ಲಿ ಹಣವನ್ನು ಪಡೆಯಲೇ ಬೇಕು ಎಂದರೆ ನೀವು ಮಂತ್ರಿಮಂಡಲದವರು ಜನತೆಗೆ ಅನೇಕ ಆಶ್ವಾಸನೆಗಳನ್ನು ಕೊಟ್ಟು ಗರೀಬಿ ಹಠಾವೋ ಘೋಷಣೆಯನ್ನು ಮಾಡಿ ಬಡವರಿಗೆ ತೆರಿಗೆಯನ್ನು ಹೊರಿಸುವುದಿಲ್ಲ ಎಂದು ಹೇಳಿದ್ದೀರಿ. ಅದನ್ನು ಪುನರ್ ವಿಮರ್ಶೆ ಮಾಡಿ ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಆಕ್ಟಿನಲ್ಲಿ ಯಾವು ಯಾವುದರ ಮೇಲೆ ಜನಸಾಮಾನ್ಯರಿಗೆ ತೆರಿಗೆಗಳು ಬೀಳುತ್ತವೆ, ಜನಸಾಮಾನ್ಯರ ಬಳಕೆ ವಸ್ತುಗಳ ಮೇಲೆ ತೆರಿಗೆಗಳು ಬೀಳುತ್ತವೆ ಅದನ್ನು ತೆಗೆದು ಹಾಕುವುದಕ್ಕೆ ಪ್ರಯತ್ನ ಮಾಡುವುದಕ್ಕೆ ಆಗುತ್ತಿರಲಿಲ್ಲವೇ ? ಮೈಸೂರು ಸೇಲ್ಸ್ ಟ್ಯಾಕ್ಸ್ ಆಕ್ಟಿನ ಷೆಡ್ಯೂಲ್‌ನಲ್ಲಿ ಕೊಟ್ಟಿರುವ ಅಂಶಗಳನ್ನು ನೋಡಿದರೆ ಜನಸಾಮಾನ್ಯರು ಉಪಯೋಗ ಮಾಡುವಂತಹ ವಸ್ತುಗಳ ಮೇಲೆ ತೆರಿಗೆ ಇದೆ. ವನಸ್ಪತಿ, ಸಿಮೆಂಟ್, ಕಬ್ಬಿಣ, ಸೀಮೆ ಎಣ್ಣೆ, ಕಡಲೆಕಾಯಿ ಎಣ್ಣೆ ಮುಂತಾದ ಸಾಮಾನ್ಯ ಜನಗಳು ಉಪಯೋಗಿಸುವ ವಸ್ತುಗಳ ಮೇಲೆ ತೆರಿಗೆ ಬಿದ್ದಿದೆ. ಇದನ್ನು ತೆಗೆದುಹಾಕುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕಾಗಿತ್ತು. ಒಂದು ಫ್ರೆಷ್ ಎನಾಕ್ಟ್‌ಮೆಂಟ್ ತೆಗೆದುಕೊಂಡು ಬಂದು ಅದರಲ್ಲಿ ಯಾವು ಯಾವುದು ಜನ ಸಾಮಾನ್ಯರ ಮೇಲೆ ತೆರಿಗೆ ಬೀಳುತ್ತದೆ ಅದನ್ನು ಸ್ವಲ್ಪಮಟ್ಟಿಗೆ ಪುನರ್‌ವಿಮರ್ಶೆ ಮಾಡಿ ಜನ ಸಾಮಾನ್ಯರಿಗೆ ತೆರಿಗೆ ಬೀಳದಂತೆ ತೆರಿಗೆಯನ್ನು ತೆಗೆದುಹಾಕಿ ಶ್ರೀಮಂತರಮೇಲೆ ಮತ್ತು ಕೈಗಾರಿಕೆಗಳ ಮೇಲೆ ತೆರಿಗೆಯನ್ನು ಹಾಕಿ ಆ 2ಕೋಟಿ ರೂಪಾಯಿಗಳನ್ನು ಈ ಮುಖಾಂತರ ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದರೆ ಅದರಿಂದ ಪೂರ್ತಿ ಸಹಾಯವಾಗುತ್ತಿತ್ತು. ಈಗ ಈ ರೀತಿ ತೆರಿಗೆಯನ್ನು ಹಾಕಿರುವುದು ಸರಿಯಲ್ಲ, ಈ ತರಹ ಮಾಡಿರುವುದು ಮೂರು ರಾಜ್ಯಗಳಲ್ಲಿ ಮಾತ್ರ. ಬೇರೆ ರಾಜ್ಯಗಳಲ್ಲಿ ಈ ತರಹ ರೀ ಎನಾಕ್ಟ್‌ಮೆಂಟ್ ತೆಗೆದುಕೊಂಡುಬಂದಿಲ್ಲ ಎಂದರೆ ಇವರು ಜನಗಳಿಗೆ ಏನು ಆಶ್ವಾಸನೆಯನ್ನು

ಕೊಟ್ಟಿದ್ದಾರೆ ಅದನ್ನು ಇವರು ಈಡೇರಿಸದಿದ್ದರೆ ಈ ಆಶ್ವಾಸನೆಯನ್ನು ಪ್ರತಿಗಾಮಿ ಶಕ್ತಿಗಳು ಉಪಯೋಗ ಮಾಡಿಕೊಂಡು ಬೇರೆ ಕಡೆಗೆ ತೆಗೆದುಕೊಂಡು ಹೋಗಬಹುದು ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡು ಅವರು ಈ ತೆರಿಗೆಯನ್ನು ತೆಗೆದುಕೊಂಡು ಬಂದಿಲ್ಲ. ಅವರು ಈ ತೆರಿಗೆಯನ್ನು ವಿತ್‌ಡ್ರಾ ಮಾಡಿದ್ದಾರೆ. ಈ ದೃಷ್ಟಿಯಿಂದ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).**—ಮಾನ್ಯ ಅಧ್ಯಕ್ಷರೇ ಈಗ ಮಾನ್ಯ ಹಣಕಾಸಿನ ಸಚಿವರು ನಮ್ಮ ಮುಂದೆ ಮಂಡಿಸಿರುವ ಮೈಸೂರು ರೀ ಎನಾಕ್ಟ್‌ಮೆಂಟ್ ಬಿಲ್ಲನ್ನು ನಾವು ತೀವ್ರವಾಗಿ ವಿರೋಧ ಮಾಡಬೇಕಾಗಿದೆ. ಇದಕ್ಕೆ ಮಾನ್ಯ ಅರ್ಥ ಸಚಿವರು ಅಪಾರ್ಥ ಕಲ್ಪನೆ ಮಾಡಬಾರದು. ಈ ಹಣವನ್ನು ಜನತೆಯ ಗೃಹನಿರ್ಮಾಣ ಯೋಜನೆಗೆ ಉಪಯೋಗಿಸುತ್ತೇವೆ ಎಂದು ಹೇಳಿದ್ದಾರೆ. ಇದರಿಂದ ಬರುವ ಹಣವನ್ನು ಜನತೆಯ ಗೃಹನಿರ್ಮಾಣ ಯೋಜನೆಗೆ ಉಪಯೋಗಿಸುತ್ತೇವೆ ಎಂದು ಹೇಳಿದರೂ ಇದನ್ನು ವಿರೋಧ ಮಾಡುತ್ತಾರೆ ಎನ್ನುವ ಕಲ್ಪನೆಯನ್ನು ಇಟ್ಟುಕೊಳ್ಳಬೇಡಿ. ಹಿಂದೆ ಈ ತೆರಿಗೆಯನ್ನು ವಿಧಿಸಿರತಕ್ಕಂಥಾದ್ದು ಬಾಂಗ್ಲಾ ನಿರಾಶ್ರಿತರಿಗೆ ಸಹಾಯ ಮಾಡಬೇಕು ಎನ್ನುವ ಉದಾತ್ತ ಧ್ಯೇಯದಿಂದ ಇದನ್ನು ವಿಧಿಸಿ ಅದನ್ನು ಜನತೆ ಒಪ್ಪಿಕೊಂಡು ಅಲ್ಲಿಯವರೆಗೂ ಆ ತೆರಿಗೆಯನ್ನು ಕೊಡುತ್ತಾ ಬಂದಿದ್ದಾರೆ. ಕೇಂದ್ರ ಸರ್ಕಾರದವರು ಬಾಂಗ್ಲಾ ದೇಶದ ಜನಗಳಿಗೆ ಈಗ ಸಹಾಯ ಮಾಡತಕ್ಕಂಥಾ ಪರಿಸ್ಥಿತಿ ಇಲ್ಲ. ಇದು ಈಗ ಮುಕ್ತಾಯವಾಗಿದೆ. ಕೇಂದ್ರ ಸರ್ಕಾರದವರು ಈಗ ಆ ತೆರಿಗೆಯನ್ನು ಕೈಬಿಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಈ ತೆರಿಗೆಯನ್ನು ಕೈಬಿಟ್ಟಿರುವಾಗ ರಾಜ್ಯಸರ್ಕಾರದವರು ಯಾವ ನೈತಿಕ ಜವಾಬ್ದಾರಿಯಿಂದ ಇದನ್ನು ಮುಂದುವರಿಸಿಕೊಂಡು ಹೋಗತಕ್ಕಂಥಾ ಪ್ರಯತ್ನವನ್ನು ಮಾಡಿದರು ! ಕೇಂದ್ರ ಸರ್ಕಾರದವರು ಅನುಸರಿಸಿದ ಮಾರ್ಗವನ್ನೇ ರಾಜ್ಯ ಸರ್ಕಾರದವರೂ ಅನುಸರಿಸಬೇಕಾಗಿತ್ತು. ಅದು ರಾಜ್ಯ ಸರ್ಕಾರದ ನೈತಿಕ ಜವಾಬ್ದಾರಿಯಾಗಿತ್ತು. ಆ ರೀತಿ ಸರ್ಕಾರದವರು ಮಾಡದೆ ಬೇರೆ ರೀತಿಯಲ್ಲಿ ಅದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಿದ್ದು ನಿಜವಾಗಿಯೂ ವಿಷಾದ ಪಡತಕ್ಕ ಸಂಗತಿಯಾಗಿದೆ. ಸರ್ಕಾರಕ್ಕೆ ಹಣದ ಅಗತ್ಯತೆ ಇದೆ, ಈ ಹಣವನ್ನು ಒಳ್ಳೆಯ ಕೆಲಸಕ್ಕೆ ಉಪಯೋಗಿಸುತ್ತೇವೆ ಎಂದು ಹೇಳುತ್ತಾರೆ. ಅದರೆ ಸರ್ಕಾರದವರು ಬೇರೆ ಮೂಲಗಳಿಂದ ಹಣವನ್ನು ಪಡೆಯುವುದಕ್ಕೆ ಆಗುತ್ತಾ ಇರಲಿಲ್ಲವೇ ? ಔದ್ಯೋಗಿಕ ಕ್ಷೇತ್ರದಲ್ಲಿ ಎಲ್ಲಾ ಕಾರ್ಮಿಕರು ಸಂಘಟನೆ ಮಾಡಿಕೊಂಡು ತಮ್ಮ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕ ಜನಗಳಿಗೆ ಕಾರ್ಖಾನೆಯವರು ಪ್ರಾವಿಡೆಂಟ್‌ಫಂಡ್ ಕೊಡುತ್ತಾರೆ. ಇನ್‌ಷ್ಯೂರೆನ್ಸ್ ಕೊಡುತ್ತಾರೆ. ಒಬ್ಬ ಕಾರ್ಮಿಕನಿಗೆ ಕಾನೂನು ಬದ್ಧವಾಗಿ ಕಡ್ಡಾಯವಾಗಿ ಅವನ ಯೋಗಕ್ಷೇಮದ ಬಗ್ಗೆ ಅವನ ಮುಂದಿನ ಭವಿಷ್ಯದ ಬಗ್ಗೆ ಕಾರ್ಖಾನೆಯವರು ಹಣವನ್ನು ಕೊಡತಕ್ಕ ಕಾನೂನು ವ್ಯವಸ್ಥೆ ಇದೆ. ಆದರೆ ಈ ದೇಶದಲ್ಲಿ ಕೃಷಿ ಕಾರ್ಮಿಕನ ಕಷ್ಟವನ್ನು ಕೇಳುವವರು ಯಾರೂ ಇಲ್ಲ. ಯಾವ ಮೂಲಕವೂ ಅವನಿಗೆ ಸಹಾಯ ದೊರೆಯುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಹತಭಾಗ್ಯನಾದ ಕೃಷಿ ಕಾರ್ಮಿಕನಿಗೆ ಯಾವ ಸಹಾಯವೂ ದೊರೆಯುತ್ತಿಲ್ಲ. ಈ ಹತಭಾಗ್ಯನಾದ ಕೃಷಿ ಕಾರ್ಮಿಕನಿಗೆ ವಸತಿಯನ್ನು ಕಲ್ಪಿಸಿಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಆದರೆ ಸರ್ಕಾರ ಆ ಪ್ರಯತ್ನವನ್ನು ಮಾಡಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ, ಈ ಸದನದಲ್ಲಿ ಒಬ್ಬ ಕೃಷಿ ಕಾರ್ಮಿಕ ಸದಸ್ಯನಾಗಿದ್ದರೆ ಅವನು ತನ್ನ ಕಷ್ಟವನ್ನು ಹೇಳುತ್ತಿದ್ದ. ಅದರೆ ಕೃಷಿ ಕಾರ್ಮಿಕ ಈ ಸದನದಲ್ಲಿ ಸದಸ್ಯನಾಗಿಲ್ಲ. ಇವೊತ್ತು ಕೃಷಿ ಕಾರ್ಮಿಕ ಭೂಮಾಲೀಕರ ಜಮೀನಿನಲ್ಲಿ ಕೆಲಸ ಮಾಡುತ್ತಾನೆ, ಅವನು ಬಹಳ ವರ್ಷಗಳಿಂದಲೂ ಭೂಮಾಲೀಕರ ಸೇವೆಯನ್ನು ಮಾಡುತ್ತಾ ಬಂದಿದ್ದಾನೆ. ಅವನು ಇಡೀ ದೇಶಕ್ಕೇ ಕಾಣಿಕೆಯನ್ನು ಸಲ್ಲಿಸಿದ್ದಾನೆ. ಕೃಷಿ ಕಾರ್ಮಿಕನು ದೇಶಕ್ಕೆ ಸೇವೆಯನ್ನು ಸಲ್ಲಿಸಿದ್ದಾನೆ, ಮತ್ತು ಪ್ರಗತಿಯನ್ನು ಸಾಧನೆ ಮಾಡಿದ್ದಾನೆ ಎಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಯಾವ ಭೂಮಾಲೀಕನ ಕೈಕೆಳಗೆ ಕೆಲಸ ಮಾಡತಕ್ಕ ಕೃಷಿ ಕಾರ್ಮಿಕ ಇದ್ದಾನೆ ಅವನ ಯೋಗಕ್ಷೇಮಕ್ಕೋಸ್ಕರ ಕಾಣಿಕೆ ಸಲ್ಲಬೇಕು. ಅವನಿಗೆ ಸಹಾಯ ಮಾಡಬೇಕು. 100 ಎಕರೆಗಿಂತ ಮೇಲ್ಪಟ್ಟು ಜಮೀನು ಇರುವವರು ಮತ್ತು ಅವರ ಕುಟುಂಬದವರು ಪೂರ್ಣ ಕೆಲಸ ಮಾಡುವುದಕ್ಕಾಗುವುದಿಲ್ಲ. ಅವರ ಜಮೀನನ್ನು ಕೃಷಿ ಕಾರ್ಮಿಕನೇ ಮಾಡಿಕೊಡಬೇಕು. 100 ಎಕರೆಗಿಂತ ಮೇಲ್ಪಟ್ಟು ಇರತಕ್ಕವರ ಜನಸಂಖ್ಯೆ ಸುಮಾರು 27 ಲಕ್ಷ 28 ಸಾವಿರ ಇದೆ. ಅವರಿಗೆ ಒಂದು ಎಕರೆ ಮೇಲೆ 10 ರೂಪಾಯಿ ತೆರಿಗೆ ಹಾಕಿದರೆ ಅದರಿಂದ 2 ಕೋಟಿ 70 ಲಕ್ಷ ರೂಪಾಯಿ ಸಿಕ್ಕುತ್ತದೆ.

(ಶ್ರೀ ಕಾಗೋಡು ತಿಮ್ಮಪ್ಪ)

ಆದ್ದರಿಂದ ನೂರು ಎಕರೆಯ ಮೇಲೆ ಯಾರಿಗೆ ಹಿಡುವಳಿ ಇದೆ ಅವರಿಗೆ ಪ್ರತಿಯೊಂದು ಎಕರೆಗೂ 10 ರೂಪಾಯಿ ವಿಧಿಸಿದರೆ ಇವತ್ತು ಎರಡು ಕೋಟಿ 70 ಲಕ್ಷ ರೂಪಾಯಿ ಆದಾಯ ಸರ್ಕಾರಕ್ಕೆ ಬರುತ್ತದೆ. ಈ ಕೆಲಸವನ್ನು ನೀವು ಏಕೆ ಮಾಡಿಲ್ಲ ? ಇವೊತ್ತಿನ ದಿವಸ ಕೃಷಿ ಕಾರ್ಮಿಕರಿಗೆ ಬೇರೆ ಕಾರ್ಖಾನೆಗಳಲ್ಲಿ ಇರುವಂತಹ ಕಾರ್ಮಿಕರಿಗೆ ಸಿಗುವಂತಹ ಅನುಕೂಲಗಳು ಸಿಗಲಿಲ್ಲ. ಬೇರೆ ಕಡೆ ಕಾರ್ಮಿಕರಿಗೆ ಯಾವ ಅನುಕೂಲಗಳನ್ನು ಒದಗಿಸುತ್ತಿದ್ದಾರೆ, ಅದೇ ಸೌಲಭ್ಯಗಳು ಈ ಕೃಷಿ ಕಾರ್ಮಿಕರಿಗೂ ಸಿಗುವಂತೆ ಮಾಡಬೇಕು. ಇವತ್ತು ಈ ಗೃಹ ನಿರ್ಮಾಣದ ಕಾರ್ಯ ಬಹಳ ಮುಖ್ಯವಾದುದು. ಆದರೆ ಇದಕ್ಕೆ ಹಣ ಬೇರೆ ರೀತಿಯಲ್ಲಿ ಬರುವಂತೆ ಮಾಡಬಹುದು. ಇವತ್ತು ನೀವು ಈ ರೀತಿಯ ಟ್ಯಾಕ್ಸನ್ನು ಅರ್ಧ ವರ್ಷಕ್ಕೆ ಹಾಕಿದರೂ ಸಹ ಒಂದು ಕೋಟಿ 35 ಲಕ್ಷ ರೂಪಾಯಿಯಾಗುತ್ತದೆ.

ಇನ್ನೊಂದು ಉದಾಹರಣೆಯನ್ನು ತಮಗೆ ಹೇಳುತ್ತೇನೆ. ಈಗ ಸರ್ಕಾರಕ್ಕೆ ಬರತಕ್ಕಂತಹ ಹಣವನ್ನು ಎಷ್ಟು ಸುಲಭವಾಗಿ ಬಿಡುತ್ತಿದ್ದೀರಿ ಎಂದು ಹೇಳುತ್ತೇನೆ. ನಿಮಗೆ ತೆರಿಗೆ ಕೊಡತಕ್ಕವರು 30—40 ರೂಪಾಯಿ ಪೆನ್‌ಶನ್ ತೆಗೆದುಕೊಳ್ಳತಕ್ಕ ಜನರು ಮತ್ತು ಇತರ ಕಡಿಮೆ ಸಂಬಳ ಬರತಕ್ಕಂಥವರು. ಅವರು ಪ್ರತೀ ತಿಂಗಳು ಆ 30—40 ರೂಪಾಯಿಯನ್ನು ತೆಗೆದುಕೊಳ್ಳುವಾಗ 20 ಪೈಸೆ ಸ್ಟಾಂಪು ಕೊಡಬೇಕಾಗಿದೆ. ಅದೇ ರೀತಿ ಕೂಲಿ ಮಾಡುವವನು ಸಹ ಕೊಡಬೇಕಾಗಿದೆ. ಆದರೆ ದೊಡ್ಡವರಿಂದ ನೀವು ಯಾವುದನ್ನೂ ವಸೂಲು ಮಾಡುತ್ತಿಲ್ಲ. ಬಡವರಿಂದ ಹಣ ವಸೂಲು ಮಾಡಿ ದೊಡ್ಡವರಿಂದ ವಸೂಲು ಮಾಡದೆ ಬಿಡುವುದು ಸರಿಯಾದ ನೀತಿಯಲ್ಲ. ಉದಾಹರಣೆಗೆ ಒಂದು ಗಾದೆಯನ್ನು ಹೇಳುತ್ತೇನೆ. ''ಶ್ಯಾನುಭೋಗರ ಮದುವೆಯಲ್ಲಿ ಪಟೇಲನು ತಲೆ ಬೋಳಿಸಿಕೊಂಡ'' ಎನ್ನುವ ಹಾಗೆ ಬಡವರ ಕೆಲಸಕ್ಕಾಗಿ ಬಡವರಿಂದಲೇ ಹಣ ತೆಗೆದುಕೊಳ್ಳುವುದಕ್ಕೆ ಟ್ಯಾಕ್ಸ್ ಹಾಕುತ್ತಿದ್ದೀರಿ. ಆದ್ದರಿಂದ ದೊಡ್ಡವರಿಗೆ ಟ್ಯಾಕ್ಸ್ ಹಾಕಿ ಇಂಥ ಕೆಲಸವನ್ನು ಮಾಡಿಸಬೇಕು. ಅದೇ ರೀತಿಯಲ್ಲಿ ಸರ್ಕಾರಕ್ಕೆ ಬರುವಂತಹ ಹಣ ಯಾವ ರೀತಿಯಲ್ಲಿ ಪೋಲಾಗುತ್ತದೆ ಎಂಬುದನ್ನು ಹೇಳುತ್ತೇನೆ. ಹೊನ್ನೆ ಉಡುಪಿ ತಾಲ್ಲೂಕಿನಲ್ಲಿ ಒಬ್ಬ ಎಕ್ಸೈಸ್ ಕಂಟ್ರಾಕ್ಟರ್‌ನಿಂದ ಎಕ್ಸೈಸ್ ಬಾಬಿನಲ್ಲಿ ಸರ್ಕಾರಕ್ಕೆ ಬರಬೇಕಾದ 10 ಲಕ್ಷ ರೂಪಾಯಿಯನ್ನು ಎಷ್ಟು ಸುಲಭವಾಗಿ ಕೈಬಿಟ್ಟುಬಿಟ್ಟರು. ಸರ್ಕಾರಕ್ಕೆ ಬರುವುದು ಹೊರಟು ಹೋಯಿತು. ಹಾಗೆಯೇ ನಮ್ಮ ರಾಜ್ಯಪಾಲರಿಗೆ ವರ್ಷಕ್ಕೆ 50 ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಈಗ ಬರಗಾಲ ರಾಜದಲ್ಲಿ ಬಂದಿದೆ; ಆದ್ದರಿಂದ ಅದರಲ್ಲಿ ಅರ್ಧ ಖರ್ಚು ಮಾಡುತ್ತೇವೆಂದು ಹೇಳಿದರೆ, ಅಲ್ಲಿ 25 ಲಕ್ಷ ರೂಪಾಯಿ ಉಳಿತಾಯ ಮಾಡಬಹುದು. ಈ ರೀತಿ ಸರ್ಕಾರ ಇಂತಹ ಖರ್ಚುಗಳನ್ನು ಎಷ್ಟೋ ಕಡೆಗಳಲ್ಲಿ ಕಡಿಮೆ ಮಾಡಿ ಉಳಿತಾಯ ಮಾಡಬಹುದು. ಆದರೆ ಸರ್ಕಾರಕ್ಕೆ ಬರತಕ್ಕಂತಹ ಹಣವನ್ನು ಸಹ ಯಾವುದೋ ಒಂದು ಮುಲಾಜಿಗೆ ಒಳಗಾಗಿ ಬಿಟ್ಟು ಬಿಡುತ್ತಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರದವರು ಬಿಟ್ಟ ತೆರಿಗೆಯನ್ನು ನಾವು ಮುಂದುವರಿಸಿಕೊಂಡು ಹೋಗಿ ಸಾಮಾನ್ಯ ಜನರ ಕಲ್ಯಾಣ ಮಾಡುತ್ತೇವೆ ಎಂದು ಹೇಳುವುದು ಭೂಷಣವಲ್ಲ. ಆದ್ದರಿಂದ ಈ ತೆರಿಗೆಯನ್ನು ದಯವಿಟ್ಟು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟಲ್ಲದೆ ನಮ್ಮ ರಾಜ್ಯದಲ್ಲಿ ಆದಾಯ ತೆರಿಗೆ ಕೊಡತಕ್ಕ ಜನರೇನು ಇದ್ದಾರೆ ಅವರಿಗೆ ಎರಡು ಪರ್‌ಸೆಂಟ್ ಸರ್‌ಚಾರ್ಜ್ ಹಾಕಿದರೂ ಸಹ ದುಡ್ಡು ಬರುತ್ತದೆ. ಎರಡು ಸಾವಿರ ರೂಪಾಯಿಗಿಂತ ಮೇಲೆ ಯಾರಿಗೆ ಆದಾಯ ಇದೆ, ಅವರು ಮೇಲೆ ತೆರಿಗೆ ಹಾಕಿದರೆ ಸಹ ನಮಗೆ ಬೇಕಾದ ಹಣ ಬರುತ್ತದೆ.

ಇನ್ನು ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಲಿಗೆ ಒಳಗಡೆ ಏರಿಯಾ ಮತ್ತು ಹೊರಗಡೆ ಏರಿಯಾದಲ್ಲಿ ಒಂದೊಂದು ರೇಟ್ ಬಿಂಬುಗಳಿಗೆ 15 ಮತ್ತು 2 ರೂಪಾಯಿ ಪರ್ ಟನ್ ಇದೆಯೆಂದು ತಿಳಿದು ಬಂದಿದೆ. ಅದೊಂದು ವಿಚಾರದಲ್ಲಿಯೇ ಅದನ್ನು 25 ರೂಪಾಯಿ ಮಾಡಿದರೆ ಸರ್ಕಾರಕ್ಕೆ ಎಷ್ಟು ದುಡ್ಡು ಬರುವುದಿಲ್ಲ ! ಅದೇ ರೀತಿ ಇವತ್ತು ಬೆಳಗಾಂನಲ್ಲಿರುವ ಅಲ್ಯೂಮಿನಿಯಂ ಕಾರ್ಖಾನೆಗೆ ಎಲೆಕ್ಟ್ರಿಸಿಟಿ ಕೊಡುವುದರಲ್ಲಿ ವರ್ಷಕ್ಕೆ ಒಂದು ಕೋಟಿ ರೂಪಾಯಿ ಲುಕ್ಸಾನು ಆಗುತ್ತದೆಂದು ಮಾನ್ಯ ಚನ್ನಬಸಪ್ಪನವರೇ ಹೇಳಿದರು ಅದರ ಬಗ್ಗೆ ಒಂದು ಮಸೂದೆ ತರುತ್ತೇವೆಂದು ಸಹ ಅವರು ಹೇಳಿದರು. ಅದನ್ನು ಸಹ ಬರುವಂತೆ ಮಾಡಿದರೆ ಒಂದು ಕೋಟಿ ರೂಪಾಯಿ ಸರ್ಕಾರಕ್ಕೆ ಬರುತ್ತದೆ. ಆದ್ದರಿಂದ ಇವೊತ್ತಿನ ದಿವಸ ಬಡ ಜನರ ಮೇಲೆ ತೆರಿಗೆಯ ಹೊರೆಯನ್ನು ಹಾಕಿ ದೊಡ್ಡವರ ಮೇಲೆ ಹಾಕದೆ, ಬಡವರ ಕಲ್ಯಾಣ ಮಾಡುತ್ತೇವೆಂದು ಹೇಳುವುದು ಸಂಪೂರ್ಣವಾಗಿಯೂ ಸತ್ಯಕ್ಕೆ ವಿರುದ್ಧವಾದ ಮತ್ತು ನ್ಯಾಯಕ್ಕೆ ದೂರವಾದ ಮಾತು ಆದ್ದರಿಂದ ಈ ತೆರಿಗೆಯನ್ನು ಕೈಬಿಟ್ಟು ಬೇರೆ ಮೂಲಗಳಲ್ಲಿ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ, ಈ ಮಸೂದೆಯನ್ನು ವಿರೋಧ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕಂತಹ ಮಸೂದೆಯನ್ನು ವಿರೋಧ ಮಾಡುತ್ತಾ ಕೆಲವು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಪ್ರಜಾಪ್ರಭುತ್ವದಲ್ಲಿ ಸ್ಪಷ್ಟತೆಯಿಂದ ಆಡಳಿತ ಮಾಡುವುದನ್ನು ಎಲ್ಲರೂ ಒಪ್ಪತಕ್ಕ ವಿಷಯ. ನಾನು ಮೊನ್ನೆ ತಾನೇ ಬಜೆಟ್ಟ್ ಮೇಲೆ ಭಾಷಣ ಮಾಡುತ್ತಾ ಯಾವಾಗಲೂ ಪ್ರಜಾಪ್ರಭುತ್ವದಲ್ಲಿ ತೆರಿಗೆ ಹಾಕಬಾರದು ಎಂದು ಹೇಳುವ ವಾದ ಸರಿಯಲ್ಲ. ತೆರಿಗೆ ಇಲ್ಲದೆ ನಾವು ಒಂದು ರೀತಿಯ ಪ್ರಜಾಪ್ರಭುತ್ವ ನಡೆಸುತ್ತೇವೆಂದು ಹೇಳುವ ಮಾತು ಸತ್ಯಕ್ಕೆ ದೂರವಾದುದು. ಆ ದೃಷ್ಟಿಯಿಂದ ತೆರಿಗೆ ಹಾಕಬೇಕಾದ ಕಾಲ ಮತ್ತು ಆವಶ್ಯಕತೆ ಬಂದಾಗ ಹಾಕಬೇಕಾಗುತ್ತದೆ. ಆದರೆ ಡೈರೆಕ್ಟ್ ಟ್ಯಾಕ್ಸೇಶನ್ ಹಾಕುವುದು ಒಳ್ಳೆಯ ಆಡಳಿತದಲ್ಲಿರತಕ್ಕಂತಹ ಲಕ್ಷಣ ಹೌದು. ಆದರೆ ಹಳ್ಳಿಯ ಕಡೆ ಹೇಳುವ ಮಾತಿನ ಹಾಗೆ ಮೈಲಾರಲಿಂಗನ ಸುತ್ತು ಹಾಕಿ ಕೆಲವು ತೆರಿಗೆಗಳನ್ನು ಹಾಕಿ, ನಾವು ಹೊಸ ತೆರಿಗೆಗಳನ್ನು ಯಾವುದೂ ಹಾಕಿಲ್ಲವೆಂದು ಹೇಳುವುದು ಸರಿಯಲ್ಲ. ಆ ರೀತಿ ಹೇಳಿ ತೆರಿಗೆಗಳನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು ಸರಿಯೇ ಎಂದು ಕೇಳುತ್ತೇನೆ. ಈಗಾಗಲೇ ಮಾನ್ಯ ಸದಸ್ಯರು ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಮನೆಗಳನ್ನು ಕಟ್ಟಿಸಿಕೊಡತಕ್ಕಂತಹ ವಿಷಯ ಬಹಳ ಒಳ್ಳೆಯದು. ಅದರ ಬಗ್ಗೆ ಬಿನ್ನಾಭಿಪ್ರಾಯವಿಲ್ಲ. ಆದರೆ ನಿಮ್ಮ ಬಜೆಟ್ಟಿನಲ್ಲಿ ನಾವು ಇಷ್ಟು ತೆರಿಗೆಗಳನ್ನು ಹಾಕುತ್ತೇವೆ, ಎಂಬ ಯಾವ ಒಂದು ಮಾತೂ ಇಲ್ಲ. ಉದಾಹರಣೆಗೆ ಒಂದು 5 ಕೋಟಿರೂಪಾಯಿಯೋ, 6 ಕೋಟಿ ರೂಪಾಯಿಯೋ ಟ್ಯಾಕ್ಸ್ ಹಾಕಿದ್ದೇವೆ ಎನ್ನುವ ಮಾತನ್ನು ಇದರಲ್ಲಿ ಸೇರಿಸಿದ್ದರೆ ಬಹಳ ಒಳ್ಳೆಯದಿತ್ತು ಎಂದು ಹೇಳುತ್ತೇನೆ.

3-30 P.M.

ಇವತ್ತು ಬಂಗ್ಲಾದೇಶಕ್ಕಾಗಿ ಈ ತೆರಿಗೆಯನ್ನು ದೇಶಾದ್ಯಂತ ವಿಧಿಸಿದ್ದಾಗಿದೆ. ಕೇಂದ್ರ ಸರ್ಕಾರದವರು ರಾಜ್ಯಸರ್ಕಾರವನ್ನು ಕೇಳಿಕೊಂಡು ಈ ತೆರಿಗೆಯನ್ನು ವಿಧಿಸಿದ್ದಾರೆ. ನಾವೆಲ್ಲರೂ ಈಗಾಗಲೇ ತೆರಿಗೆಯನ್ನು ಕೊಟ್ಟಿದ್ದೇವೆ. ಆ ದೇಶಕ್ಕೆ ಸಂದರ್ಭಾನುಸಾರವಾಗಿ ಕಷ್ಟ ಬಂದಾಗ ಆ ತೆರಿಗೆಯನ್ನು ಕೊಡುವುದಕ್ಕೆ ಸಿದ್ಧರಾಗಿದ್ದೇವೆಂದು ಈ ದೇಶದ ಜನತೆ ತೋರಿಸಿದ್ದಾರೆ. ಕೇಂದ್ರ ಸರ್ಕಾರದವರು ಬಂಗ್ಲಾದೇಶದ ತೆರಿಗೆಯನ್ನು ಈಗಾಗಲೇ ಕೈಬಿಟ್ಟಿದ್ದಾರೆ. ಅದರಿಂದ ಹಣ ಎಷ್ಟು ಬರುತ್ತದೆಂಬ ವಿಷಯದ ಬಗ್ಗೆ ಅಷ್ಟು ಪ್ರಾಮುಖ್ಯತೆ ಇಲ್ಲ. ಒಂದು ಸಾರಿ ಹಿಂದೆ ಈ ಸದನದ ಮುಂದೆ ತಾತ್ವಿಕವಾಗಿ ಈ ತೆರಿಗೆಯನ್ನು ಹಾಕಬೇಕೆ; ಬೇಡವೇ ಎಂಬ ಪ್ರಶ್ನೆ ಬಂದಾಗ ಇದನ್ನು ಒಂದು ತತ್ವದೃಷ್ಟಿಯಿಂದ ಹಾಕಬೇಕಾಗುತ್ತದೆಂದು ಹೇಳಿದ್ದು ಉಂಟು. ಆದರೆ ಈಗ ರಾಜ್ಯ ಸರ್ಕಾರದವರು ಈ ತೆರಿಗೆಯನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಈ ಹಣವನ್ನು ನಾವು ಬಡವರಿಗೆ ಮನೆ ಕಟ್ಟಿಸುವುದಕ್ಕೆ ಬೇಕಾಗುತ್ತದೆಂದು ಹೇಳುತ್ತಾ ಇರಬಹುದು; ಇವರಿಗೆ ಹಣವೇನೋ ಬೇಕು. ಮನೆ ಕಟ್ಟುವ ವಿಷಯವೂ ಬಹಳ ಒಳ್ಳೆಯದು. ನೀವು ಈ ರೀತಿ ತೆರಿಗೆಗಳನ್ನು ಇಷ್ಟೊಂದು ಹೆಸರಿನಲ್ಲಿ ಮುಂದುವರಿಸಿಕೊಂಡು ಹೋಗುವುದು ತಾತ್ವಿಕವಾಗಿ ಸರಿಯೇ ಎಂಬ ಪ್ರಶ್ನೆ ನಮ್ಮ ಮುಂದಿರುವುದು ಆಗಿದೆ. ಈ ವಿಚಾರವನ್ನು ನನ್ನ ಮಾನ್ಯ ಸ್ನೇಹಿತರು ಬಜೆಟ್ಟಿನಲ್ಲಿಯೇ ಹೇಳಬಹುದಾಗಿತ್ತು. ಮನೆಗಳನ್ನು ಕಟ್ಟುವುದಕೋಸ್ಕರ ಜನತೆಯ ಮೇಲೆ ಈ ತೆರಿಗೆಯನ್ನು ಹಾಕಿದ್ದೇವೆಂದು. ಆದರೆ ನಿಮ್ಮ ಮನಸ್ಸಿನಲ್ಲಿ ಏನಿದೆ, ಚುನಾವಣೆಯ ಕಾಲದಲ್ಲಿ ಗರೀಬಿ ಹಠಾವೋ ಎಂದು ಘೋಷಣೆ ಕೂಗಿ, ಈ ದೇಶಕ್ಕೆ ತೆರಿಗೆ ಇಲ್ಲದಂಥ ಬಜೆಟ್ಟನ್ನು ಕೊಡಬೇಕು, ಒಳ್ಳೆಯ ಹೆಸರನ್ನು ಪಡೆಯಬೇಕೆಂಬುದಾಗಿ ನಮ್ಮ ಅರ್ಥಸಚಿವರು ಬಹಳವಾಗಿ ಪ್ರಯತ್ನಪಟ್ಟಿದ್ದಾರೆ. ಆದರೆ ಈ ರೀತಿಯಾಗಿ ಇಂತಹ ತೆರಿಗೆಗಳನ್ನು ಹಾಕುವುದರಿಂದ ನಿಮ್ಮ ಗರೀಬಿ ಹಠಾವೋ ಫೇಲ್ ಆಗುತ್ತದೆ. ಈಗ ಈ ರೀತಿ ತೆರಿಗೆ ಹಾಕಿ ಕೆಟ್ಟ ಹೆಸರನ್ನು ತೆಗೆದುಕೊಳ್ಳುವುದಕ್ಕೆ ಬದಲಾಗಿ ಡೈರೆಕ್ಟಾಗಿ ಬೇಕಾದರೆ ತೆರಿಗೆ ಹಾಕಿ. ಇದು ಇನ್‌ಡೈರೆಕ್ಟಾಗಿ ಹಾಕುತ್ತಾ ಇರುವ ತೆರಿಗೆ. ನಿಮಗೆ ತಾತ್ವಿಕವಾದಂಥ ವಿಷಯಗಳ ಆಧಾರದಮೇಲೆ ಒಂದು ಒಳ್ಳೆಯ ಆಡಳಿತ ರೂಪುಗೊಳ್ಳಬೇಕೆಂಬ ಆಶೆ ಇದ್ದಿದ್ದರೆ ಈ ರೀತಿಯಾಗಿ ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ಅದನ್ನು ಬಜೆಟ್ಟಿನಲ್ಲಿ ತರುವುದೂ ಸಹ ಒಳ್ಳೆಯದಲ್ಲ. ಡೈರೆಕ್ಟಾಗಿ ಟ್ಯಾಕ್ಸ್‌ಗಳನ್ನು ಈ ಪ್ರಜಾಪ್ರಭುತ್ವದಲ್ಲಿ ಹಾಕಿದರೆ, ಅದರಿಂದೇನೂ ತಪ್ಪು ಇಲ್ಲ. ಪ್ರಜಾಪ್ರಭುತ್ವ ಈ ದೇಶದಲ್ಲಿ ಇರುವವರೆಗೂ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ತಾತ್ವಿಕವಾಗಿ ಮೊದಲು ಈ ಬಂಗ್ಲಾದೇಶದ ತೆರಿಗೆಯ ಹೆಸರಿನಲ್ಲಿ ನೀವು ತೆರಿಗೆಗಳನ್ನು ಮುಂದುವರಿಸಿಕೊಂಡು ಹೋಗುವ ಪದ್ಧತಿಯನ್ನು ಕೈಬಿಡಬೇಕು. ಆದ್ದರಿಂದ ಈ ಬಿಲ್ಲನ್ನು ನೀವು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಒಂದು ಬಿಲ್‌ನಲ್ಲಿ ಹಲವಾರು ವಿಷಯಗಳು ಇದ್ದರೂ

(ಶ್ರೀ ಎಸ್. ಬಂಗಾರಪ್ಪ)

ಎಲ್ಲಾ ಒಂದೇ. ಈ ರಿಇನ್ಯಾಕ್ಟ್‌ಮೆಂಟ್ ಬಿಲ್ ಕಾನೂನು ಪ್ರಕಾರ ಸರಿಯೆಂದು ಹೇಳಿದರೆ ಹೇಗೆ ! ಈ ಒಂದು ಪದ್ಧತಿಯನ್ನು ಬಹಳ ಅಪರೂಪವಾಗಿ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಇದು ಆಗ ಕೂಡದು. ಇದನ್ನು ಈಗಲಾದರೂ ಹಿಂದಕ್ಕೆ ತೆಗೆದುಕೊಳ್ಳಬೇಕು. ಇವತ್ತೂ ನಿಮಗೆ ಚಾನ್ಸ್ ಇದೆ. ಬಡ್ಜೆಟ್ಟಿನಲ್ಲಿ ಇದನ್ನು ಡೈರೆಕ್ಟಾಗಿ ಹಾಕುತ್ತೇವೆಂದು ಹೇಳಬೇಕು. ಇಲ್ಲದಿದ್ದರೆ ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಮನೆ ಕಟ್ಟುವುದಕ್ಕೆ ಹಣಬೇಕೆಂದು ಹೇಳಿದರೂ ಕೂಡ ತಾತ್ವಿಕವಾಗಿ ಈ ಬಿಲ್ಲನ್ನು ವಿರೋಧ ಮಾಡುವ ಸಂದರ್ಭ ಬರುತ್ತಿದೆ. ಆದರೆ ನಾನು ಇದರ ಮೇಲೆ ಹೆಚ್ಚಿಗೆ ಭಾಷಣ ಮಾಡುವುದಕ್ಕಾಗುವುದಿಲ್ಲ. ದಯಮಾಡಿ ಈ ಬಿಲ್ಲನ್ನು ಹಿಂದಕ್ಕೆ ತೆಗೆದುಕೊಳ್ಳಿ. ಏಕೆಂದರೆ ಇದಕ್ಕೆ ನನ್ನ ವಿರೋಧವಿದೆಯೆಂಬುದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ.—(ವೇಮಗಲ್) ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಅರ್ಥ ಸಚಿವರು ಒಂದೇ ಬಿಲ್‌ನಲ್ಲಿ ಹಲವಾರು ಕಾನೂನುಗಳು ಒಳಪಟ್ಟಂತೆ ಹಾಕಿರುವ ಕಾಲಂಗಳಿಗೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದೂ ಒಂದು ಟ್ಯಾಕ್ಸ್ ಎಂದು ಹೇಳುತ್ತಾ ಇದ್ದಾರೆ. ಡೈರೆಕ್ಟ್ ಅಂಡ್ ಇನ್‌ಡೈರೆಕ್ಟ್ ಟ್ಯಾಕ್ಸ್ ಎಂದು ಬೇರೆ ಹಾಕುತ್ತಿದ್ದಾರೆ. ಇನ್‌ಡೈರೆಕ್ಟ್ ಟ್ಯಾಕ್ಸನ್ನು ಇನ್‌ಡೈರೆಕ್ಟಾಗಿ ಬಳಸುವ ದಾರಿಯನ್ನು ಅರ್ಥಸಚಿವರು ಉಪಯೋಗಿಸಿಕೊಳ್ಳುತ್ತಿದ್ದಾರೆ. ನಮ್ಮ ದೇಶದಲ್ಲಿ ಡೈರೆಕ್ಟ್ ಅಂಡ್ ಇನ್‌ಡೈರೆಕ್ಟ್ ಟ್ಯಾಕ್ಸ್‌ಗಳನ್ನು ಪರಿಗಣನೆಗೆ ತೆಗೆದುಕೊಂಡರೆ ಡೈರೆಕ್ಟ್ ಟ್ಯಾಕ್ಸ್ ಬಹಳ ಕಡಿಮೆಯಾಗಿದೆ. ಇನ್‌ಡೈರೆಕ್ಟ್ ಟ್ಯಾಕ್ಸಸ್ ಬಹಳ ಜಾಸ್ತಿಯಾಗಿರುವುದರಿಂದ, ಇದನ್ನು ಹಾಕುವುದು ಅನಾವಶ್ಯಕ. ಏಕೆಂದರೆ ಈ ಇನ್‌ಡೈರೆಕ್ಟ್ ಟ್ಯಾಕ್ಸ್ ಕೊಡುವವರು ಸಾಮಾನ್ಯ ಜನರು. ಅವರ ಮೇಲೆ ಹೊರೆ ಬಹಳವಾಗಿ ಜಾಸ್ತಿಯಾಗುತ್ತಿದೆ. ಅವರ ಗಮನವನ್ನು ಗಮನಿಸಿದಾಗ ಇನ್‌ಡೈರೆಕ್ಟಾಗಿ ಟ್ಯಾಕ್ಸ್‌ಗಳನ್ನು ಇನ್‌ಡೈರೆಕ್ಟಾಗಿ ತರುವುದಕ್ಕೆ ಈ ಸದನದ ಮುಂದೆ ಈ ಒಂದು ಬಿಲ್ಲನ್ನು ಇಟ್ಟಿದ್ದಾರೆ. ಇವತ್ತಿನ ದಿವಸ ಈ ಟ್ಯಾಕ್ ಹಾಕುವುದಕ್ಕೆ ನಾನಾಗಲೀ, ವಿರೋಧಪಕ್ಷದವರು ಯಾರೇ ಆಗಲೀ ಖಂಡಿತವಾಗಿ ವಿರೋಧ ಮಾಡುವುದಿಲ್ಲ. ಸಮಾಜದಲ್ಲಿ ಸಾಕಷ್ಟು ಅಂತರ ಇರಬಾರದೆಂದು ಹೇಳುವಾಗ ಟ್ಯಾಕ್ಸೇಷನ್ ಬಗ್ಗೆ ನ್ಯಾಷನಲೈಜೇಷನ್ ಮಾಡಬೇಕಾಗುತ್ತದೆ. ಈಗ ಯಾರ ಮೇಲೆ ಸುಂಕ ಹಾಕಬೇಕೆಂಬುದೇ ಒಂದು ಪ್ರಶ್ನೆ. ಇವತ್ತು ಇನ್‌ಕಂಟ್ಯಾಕ್ಸ್ ಎಂದು ಕೆಲವು ಡೈರೆಕ್ಟ್ ಟ್ಯಾಕ್ಸ್ಸನ್ನು ಜಾಸ್ತಿ ಮಾಡುವುದಕ್ಕೆ ಅರ್ಥಮಂತ್ರಿಗಳು ಪ್ರಯತ್ನ ಪಟ್ಟಿದ್ದರೆ ನಾನು ಸ್ವಾಗತ ಮಾಡುತ್ತಿದ್ದೆ. ಅಂತಹ ಪ್ರಯತ್ನ ಮಾಡದೇ ಇವತ್ತು ಸಾಮಾನ್ಯ ಜನಗಳಿಗೆ ಅಳವಡಿಸಿರುವ ಹಾಗೆ ಅನೇಕ ರೀತಿಯ ತೆರಿಗೆಗಳನ್ನು ಹಾಕಿದ್ದಾರೆ. ಖಂಡಿತವಾಗಿ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕ. ಏಕೆಂದರೆ ನೇರವಾಗಿ ಇಂಡಸ್ಟ್ರಿಯಲ್ಲಿ ಸಾಕಷ್ಟು ಹಣ ಪೋಲಾಗುತ್ತಿದೆ. ರಾಜ್ಯ ಸಕಾರ ನಡೆಸುವ ಕಾರ್ಖಾನೆಗಳಲ್ಲಿ ಸುಮಾರು 90 ಲಕ್ಷ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಈ ಅಂಶಗಳನ್ನು ಗಮನಿಸಿದ್ದರೂ ಇದು ಒಂದೇ ಅಲ್ಲ. ಫಾರೆಸ್ಟ್ ಇಲಾಖೆಯಿಂದ ರಾಮೆಟೀರಿಯಲ್ಸ್‌ಗೆ ಸಾಕಷ್ಟು ಹಣವನ್ನು ಕೊಡುತ್ತಿದ್ದಾರೆ. ಅಲ್ಲಿಯೂ ಪೋಲಾಗುತ್ತಿದೆ. ಈ ಒಂದು ಬಿಲ್ಲಿನಿಂದ ಸರ್ಕಾರಕ್ಕೆ ಏನು ಉತ್ಪತ್ತಿ ಬರುತ್ತಿದೆ. ಇದರಲ್ಲಿ ಉತ್ಪತ್ತಿ ತರುವುದಕ್ಕೆ ದಾರಿ ಇದ್ದರೆ ಮಾನ್ಯ ಅರ್ಥಮಂತ್ರಿಗಳು ಉಪಯೋಗಿಸಿಕೊಳ್ಳಲಿ. ಒಟ್ಟಿನಲ್ಲಿ ಈ ಬಿಲ್ಲನ್ನು ನಾನು ವಿರೋಧಮಾಡುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸಭಾಪತಿಗಳೇ, ನಾನು ನಿನ್ನೆ ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡುವ ಕಾಲಕ್ಕೆ ಅದರ ಉದ್ದೇಶವೇನೆಂಬುದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅದರೂ ಸಹ ಈ ಚರ್ಚೆಯಲ್ಲಿ ಭಾಗವಹಿಸುವಾಗ ಹಲವಾರು ಹಲವಾರು ಸದಸ್ಯರು ಹಲವಾರು ಸೂಚನೆಗಳನ್ನು ಮಾಡಿದ್ದಾರೆ. ಅವರು ಪ್ರಸ್ತಾಪ ಮಾಡಿರತಕ್ಕ ವಿಷಯಗಳ ಬಗ್ಗೆ ಸ್ಪಷ್ಟೀಕರಣ ಕೊಡಬೇಕಾದುದು ನನ್ನ ಕರ್ತವ್ಯ. ಆದಕಾರಣ ನಾನು ಸಂಕ್ಷಿಪ್ತವಾಗಿ ಅವರ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಇದಕ್ಕೆ ಅಡಿಷನಲ್ ಲೆವಿ ಎಂದು ನಾವು ಕರೆದಿದ್ದೇವೆ. ಇದರಿಂದ ಸರಕಾರಕ್ಕೆ ಎರಡು ಕೋಟಿ ರೂಪಾಯಿಗಳು ಮಾತ್ರ ಬರುತ್ತದೆ. ಇದು ಹೊಸ ತೆರಿಗೆಯಲ್ಲ ಹಿಂದಿದ್ದ ತೆರಿಗೆಯನ್ನೇ ನಾವು ಈಗ ಮುಂದುವರಿಸುತ್ತಿದ್ದೇವೆ. ಈಗ ಕೆಲವು ಅಂಕಿ ಸಂಖ್ಯೆಗಳನ್ನು ನಾನು ಕೊಡಬೇಕಾಗುತ್ತದೆ. ಇದರ ಭಾರ ಎಷ್ಟು ಎಂದು ಸ್ಪಷ್ಟವಾಗಿ ಗೊತ್ತಾಗಬೇಕಾಗುತ್ತದೆ. ಅದನ್ನು ನಾನು ಕೊಡಬೇಕಾಗಿದೆ. 1972-73ನೇ ಸಾಲಿನಲ್ಲಿ ಟ್ಯಾಕ್ಸಸ್ ಆನ್ ವೆಹಿಕಲ್‌ನಿಂದ 11 ಕೋಟಿ 50 ಲಕ್ಷ ರೂಪಾಯಿಗಳು, ಸೇಲ್ಸ್ ಟ್ಯಾಕ್ಸ್‌ನಿಂದ 5 ಕೋಟಿ 25 ಲಕ್ಷ ರೂಪಾಯಿಗಳು ಎಂಟರ್‌ಟೇನ್‌ಮೆಂಟ್ ಟ್ಯಾಕ್ಸಿನಿಂದ 4 ಕೋಟಿ 30 ಲಕ್ಷ ರೂಪಾಯಿಗಳು ಟ್ಯಾಕ್ಸಸ್ ಆನ್ ಪ್ಯಾಸೆಂಜರ್ಸ್‌ನಿಂದ 3 ಕೋಟಿ 38 ಲಕ್ಷ ರೂಪಾಯಿಗಳು ಬರುತ್ತದೆ.

ಮತ್ತು ಬಾಂಗ್ಲಾದೇಶದ್ದೂ ಒಟ್ಟು ಈ ಐದೂ ಬಾಬುಗಳು ಸೇರಿ ನಮಗೆ ಬರತಕ್ಕದ್ದು 83 ಕೋಟಿ 63 ಲಕ್ಷ ರೂಪಾಯಿ ಇದರಲ್ಲಿ ನಮಗೆ ಅಡಿಷನಲ್ ಇನ್‌ಕಂ ಎಷ್ಟು ಬರುತ್ತೆ ಎಂದರೆ ಅದು ಕೇವಲ 2 ಕೋಟಿ ರೂಪಾಯಿ ಮಾತ್ರ. ಅದೂಕೂಡ ಯಾವ ಯಾವ ಬಾಬಿನಿಂದ ಎಷ್ಟೆಷ್ಟು ಬರುತ್ತೆಂಬುದನ್ನೂ ಕೂಡ ನಾನು ತಿಳಿಸಬಲ್ಲೆ.

> " Taxes on vehicles Rs. 10 lakhs. Sales Tax Rs. 80 lakhs. Entertainment tax Rs. 20 lakhs. Taxes on passenger goods Rs. 50 lakhs. "

ಶ್ರೀ ಕಾಗೋಡು ತಿಮ್ಮಪ್ಪನವರು ಈ ಸ್ಟ್ಯಾಂಪ್ ಡ್ಯೂಟಿ ಕೂಡ ಆ ಬಡವರ ಮೇಲೆ ಬೀಳುತ್ತಿದೆ ಎಂದು ಹೇಳಿದರು ಕೇಂದ್ರ ಸರ್ಕಾರದವರು ಯಾವ ಯಾವ ಬಾಬಿನ ಮೇಲೆ ಟ್ಯಾಕ್ಸನ್ನು ಹಾಕಿದ್ದರೆಂದರೆ ;

> "Bills of exchange, promisory notes, letters of credit, Bills of Insurance, transfers of shares, debentures and receipts, Documents other than those in the Union List, Mortgage bond ; Deeds of various types of agreements. "

ಇಷ್ಟರ ಮೇಲೆ ಕೇಂದ್ರ ಸರ್ಕಾರದವರು ಟ್ಯಾಕ್ಸನ್ನು ಹಾಕಿದ್ದರು. ಅದರೆ ಟ್ಯಾಕ್ಸ್ ಆನ್ ಟ್ರಾನ್ಸ್‌ಫರ್ ಅಫ್ ಪ್ರಾಪರ್ಟಿ ಇದೂ ಕೂಡ ಬಡವರ ಮೇಲೆ ಬೀಳುತ್ತದೆ ಎಂದರೆ ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಇದನ್ನು ಮಾಡತಕ್ಕವರಲ್ಲಿ ಅನುಕೂಲಸ್ಥರೇ ಜಾಸ್ತಿ ಇರುತ್ತಾರೆ. ಆದುದರಿಂದ ಇದು ಸಂಪೂರ್ಣವಾಗಿ ಬಡವರ ಮೇಲೇ ಬೀಳುತ್ತದೆ ಎಂಬುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಮಗೆ ಬಡ್ಡಿ ವ್ಯವಹಾರದ ಅನುಭವ ಕಡಮೆ ಅಂದಹಾಗಾಯಿತು.

ಶ್ರೀ ಎಂ. ವೈ. ಘೋರ್ಪಡೆ.—ಹೌದು ನನಗೆ ಅದರ ಅನುಭವ ಇಲ್ಲವೇ ಇಲ್ಲ. ಆದರೆ ನನಗೆ ಏನು ಒಂದು ಅನುಭವ ಇದೆಯೋ ಅದರ ಮೇಲೆ ನಾನು ಇದನ್ನು ಹೇಳುತ್ತಿದ್ದೇನೆ. ಆದರೆ ಈ ಟ್ಯಾಕ್ಸ್ ಕೇವಲ ಬಡವರ ಮೇಲೆ ಬೀಳುತ್ತಿದೆ ಎಂಬುದನ್ನು ನಾನು ಒಪ್ಪಲಾರೆ; ಹಾಗೆ ಹೇಳುವುದಕ್ಕೆ ಇಲ್ಲಿ ಆಸ್ಪದ ಕೂಡ ಇಲ್ಲ. ಕೇಂದ್ರ ಸರ್ಕಾರದವರು ಅವರೇನು ಕೆಲವು ಟ್ಯಾಕ್ಸನ್ನು ಹಾಕಿದ್ದರು ಅವುಗಳನ್ನು ಅವರು ಅಬಾಲಿಷ್ ಮಾಡಿದ್ದಾರೆ. ಆದರೆ ನಾವು ಕೆಲವರು ನಮ್ಮ ಟ್ಯಾಕ್ಸ್‌ಗಳನ್ನು ಇಲ್ಲಿ ಇನ್ನೂ ಮುಂದುವರಿಸುತ್ತ ಇದ್ದೇವೆ. ಆದುದ್ದರಿಂದ ಇಲ್ಲಿ ಆ ಕೇಂದ್ರದವರು ಹಾಕಿದ್ದ ಟ್ಯಾಕ್ಸ್‌ಗಳಿಗೂ ಇಲ್ಲಿ ನಾವು ಹಾಕುತ್ತಿರುವ ಟ್ಯಾಕ್ಸ್‌ಗಳಿಗೂ ಇಲ್ಲಿ ಯಾವ ಸಂಬಂಧವೂ ಇಲ್ಲ. ನಾವು ಈ ತೆರಿಗೆಗಳನ್ನು ರಾಜ್ಯ ಮಟ್ಟದಲ್ಲಿ ಹಾಕುತ್ತಿದ್ದೇವೆ. ಕೇಂದ್ರ ಸರ್ಕಾರದವರು ಹಾಗೆ ಅವರು ಹಾಕಿದ್ದ ತೆರಿಗೆಗಳನ್ನು ತೆಗೆದು ಹಾಕುತ್ತೇವೆಂದು ಅವರು ಹೇಳಿದ್ದರೆ ಅದಕ್ಕೂ ನಮಗೂ ಸಂಬಂಧವಿಲ್ಲ. ಉದಾಹರಣೆಗೆ ಹೇಳುವುದಾದರೆ ವರ್ತಮಾನ ಪತ್ರಿಕೆಗಳವರು ನನ್ನ ಹತ್ತಿರ ಬಂದು ತಾವು ನಮ್ಮ ಮೇಲೆ ತೆರಿಗೆಗಳನ್ನು ಮುಂದುವರಿಸುತ್ತಿದ್ದೀರೆಂದು ಕೇಳಿದರು. ಆದರೆ ಅವರ ಮೇಲೆ ಹಾಕಿರತಕ್ಕ ಟ್ಯಾಕ್ಸ್ ಏನಿದೆ ಅದನ್ನು ನಾವು ಹಾಕಿದ್ದಲ್ಲ. ಅದನ್ನು ಕೇಂದ್ರ ಸರ್ಕಾರದವರು ಹಾಕಿದ್ದರು. ಅದನ್ನೂ ಕೂಡ ಅವರು ಈ ದಿವಸ ತೆಗೆದಿದ್ದಾರೆ. ಆದರೆ ನಾವು ಇಲ್ಲಿ ನಮ್ಮ ಟ್ಯಾಕ್ಸನ್ನು ಮಾತ್ರ ಮುಂದುವರಿಸುತ್ತಿದ್ದೇವೆ. ಇದರಲ್ಲಿ ತಪ್ಪೇನೂ ಇಲ್ಲ. ನಾವು ರಾಜ್ಯದಲ್ಲಿ ಕೈಗೊಂಡಿರತಕ್ಕ ಯೋಜನೆಗಳ ವೆಚ್ಚ 84 ಕೋಟಿ ರೂಪಾಯಿಗಳಿಂದ 91 ಕೋಟಿ ರೂಪಾಯಿಗಳಿಗೇರಿರುವಾಗ ಸಾಕಷ್ಟು ಪ್ರಮಾಣದಲ್ಲಿ ನಾವು ಟ್ಯಾಕ್ಸ್‌ಗಳನ್ನು ಹಾಕಲೇಬೇಕಾಗುತ್ತದೆ. ಆದರೆ ಇದೇನೂ ಒಂದು ಹೊಸ ತೆರಿಗೆಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅಗಲ ತಾವು ಈ ತೆರಿಗೆಯನ್ನು 1974 ರಿಂದ ಮುಂದಕ್ಕೆ ಮುಂದುವರಿಸುವುದಿಲ್ಲ ಎಂದು ಒಂದು ಅಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಸರ್ಕಾರದವರು ಈ ಎಲ್ಲಾ ಯೋಜನೆಗಳನ್ನೂ ಮುಂದುವರಿಸುವುದಾದರೆ ಅವರು ಇನ್ನೂ ಹೆಚ್ಚಿನ ತೆರಿಗೆಗಳನ್ನು ಕೊಡುತ್ತೇವೆಂದು ಹೇಳುತ್ತಿರುವಾಗ ನಾನು ಹೇಗೆ ಬೇಡ ಎಂದು ಹೇಳುವುದು ! ಆದರೆ ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರಕ್ಕೆ ಹೋಲಿಸುವುದು ಸರಿಯಲ್ಲ. ಏಕೆಂದರೆ ಈ ದಿವಸ ಕೇಂದ್ರದಲ್ಲಿ ಅನೇಕ ಹೊಸ ಹೊಸ ತೆರಿಗೆಗಳನ್ನು ಹಾಕಿದ್ದಾರೆ. ನಾವು ಇಲ್ಲಿ ಹಾಕಿಲ್ಲ. ಆದರೆ ಕೆಲವು ಮಾನ್ಯ ಸದಸ್ಯರು ಇಲ್ಲಿ ಹೇಳಿದ್ದನ್ನು

(ಶ್ರೀ ಎಂ. ವೈ. ಘೋರ್ಪಡೆ)

ಕೇಳಿ ನಾನು ಸೂಕ್ಷ್ಮವಾಗಿ ಅದಕ್ಕೆ ಸಕಾಲ ಬರಲಿ ಆಗ ಹೊಸ ತೆರಿಗೆಗಳನ್ನು ಹಾಕುವುದಕ್ಕೆ ಆಲೋಚನೆ ಮಾಡೋಣ ಎಂದು ಇಷ್ಟೇ ಹೇಳಿದೆ. ಮುಂದೆ ಇನ್ನೂ ಇಲ್ಲಿಗೆ ಫೈನಾನ್ಸ್ ಕಮಿಷನ್ ಬರಲಿದೆ. ಅದು ಬಂದ ನಂತರ ನೋಡೋಣ ಎಂದು ಹೇಳಿದೆ. ಆದಾಗ್ಯೂ ನಮಗೆ ಧೈರ್ಯ ವಿಲ್ಲ; ನಾವು ಹೊಸ ತೆರಿಗೆಗಳನ್ನು ಹಾಕುವುದಕ್ಕೆ ಜನರಿಗೆ ಇಲ್ಲಿ ಹೆದರಿಕೊಂಡು ಹಿಂದಕ್ಕೆ ಸರಿಯುತ್ತಿದ್ದೇವೆ, ಚುನಾವಣೆಗಳಿಗೆ ಹೆದರಿ ಹಿಂದಕ್ಕೆ ಸರಿಯುತ್ತಿದ್ದೇವೆಂದು ಹೇಳಿದರು. ಆದರೆ ಅದು ಒಂದೂ ಸಕಾರಣವಲ್ಲ. ಇಂದು ದೇಶದಲ್ಲಿ ಚುನಾವಣೆಗಳು ಯಾವುದೂ ಇಲ್ಲ. ಆದರೆ ತೆರಿಗೆಗಳನ್ನು ಹಾಕಿದರೂ ತಪ್ಪು, ಹಾಕದೆ ಇದ್ದರೆ ಅದೂ ಒಂದು ದೊಡ್ಡ ತಪ್ಪು ಎಂದು ಹೇಳುವುದಾದರೆ ಅದನ್ನು ಅಕ್ಟೋಬರ್ ತಿಂಗಳಲ್ಲಿ ನೋಡೋಣ ಎಂದು ನಾನು ಅಷ್ಟೇ ಹೇಳಿದೆ: ಇನ್ನು ಶ್ರೀ ಕಾಗೋಡು ತಿಮ್ಮಪ್ಪನವರು ಲ್ಯಾಂಡ್‌ರೆವಿನ್ಯೂವನ್ನು ಪ್ರೋಗ್ರೆಸಿವ್ ಆಗಿ ಮಾಡಿ ದೊಡ್ಡ ದೊಡ್ಡ ರೈತರ ಮೇಲೆ ಅದನ್ನು ಹಾಕಿದರೆ ಸರ್ಕಾರಕ್ಕೆ ಇನ್ನೂ 2—3 ಕೋಟಿ ರೂಪಾಯಿಗಳು ಬರುತ್ತವೆಂದು ಹೇಳಿದರು. ಕೇಂದ್ರದವರು ಈ ದಿವಸ ಟ್ಯಾಕ್ಸನ್ನು ಹಾಕಿದ್ದಾರೆ. ಹಾಗಿರುವಾಗ ನಾನು ಇಲ್ಲಿ ಟ್ಯಾಕ್ಸನ್ನೇ ಹಾಕುವುದಿಲ್ಲ ಎಂದು ಹೇಳಿಲ್ಲ. ಸಧ್ಯಕ್ಕೆ ಆ ಆಲೋಚನೆ ಇಲ್ಲ ಎಂದು ಮಾತ್ರ ಹೇಳಿದ್ದೇನೆ. ಆದರೆ ಇಲ್ಲಿ ಟ್ಯಾಕ್ಸ್ ಹಾಕತಕ್ಕ ಸಂದರ್ಭದಲ್ಲಿ ನೈತಿಕ ಪ್ರಶ್ನೆಯಾವುದು? ಬಾಂಗ್ಲಾ ದೇಶದ ನಿರಾಶ್ರಿತರಿಗೆ ಇಲ್ಲೀತನಕ ಕೊಡುತ್ತಿದ್ದುದನ್ನು ಇನ್ನು ಮುಂದೆ ನಮ್ಮ ದೇಶದಲ್ಲೇ ಡೆವಲಪ್‌ಮೆಂಟ್ ಬಾಬಿಗೆ ಉಪಯೋಗಮಾಡಲಾಗುತ್ತದೆ. ಇದರಲ್ಲಿ ಯಾವ ಮೋಸವೂ ಇಲ್ಲ.

Sri H. D. DEVE GOWDA.—In addition to these levies are you bringing in any other levies?

Sri M. Y. GHORPADE.—I am saying, at the proper time I am prepared to consider your suggestions.

Sri M. S. KRISHNAN.—Why not you consider getting money from the Centre for your phased Housing Programmes?

Sri M. Y. GHORPADE.—Bulk of the money comes only from the Centre. If you see the total plan expenditure and how much comes from the Centre, you will see my point. That does not mean to say that we should expect everything—100 per cent from the Centre. That is not a realistic approach to finances. The problem of housing in Rural India and the slums is stupendous but it cannot be ignored. A way will have to be found by which the developed sectors of the economy contribute more meaningfully to the betterment of poverty striken people. This is a social obligation and a social imperative which nobody can escape.

ಆದ್ದರಿಂದ ಇದರಲ್ಲಿ ಯಾವ ಒಂದು ಮೋಸವೂ ಇಲ್ಲ, ನೈತಿಕ ಲೋಪವಿಲ್ಲ, ಇದನ್ನು ಒಪ್ಪುತ್ತೀರಿ ಎಂದು ನಂಬಿದ್ದೇನೆ.

ಕೊನೆಯದಾಗಿ ಒಂದು ಮಾತನ್ನು ಶ್ರೀ ತಿಮ್ಮಪ್ಪನವರಿಗೆ ಹೇಳಬೇಕಾಗಿದೆ. ಈ ದಿವಸ ಹೊಸ ಆದಾಯವನ್ನು ಹುಡುಕಬೇಕಾಗಿದೆ. ಯಾವ ಸೆಕ್ಟಾರಿನಲ್ಲಿ ಡೆವಲಪ್ ಆಗಿದೆ ಎಂದು ನೋಡಿ ಎಲ್ಲಿ ತೆರಿಗೆ ಹಾಕಬೇಕು ಎಂದು ಸತತವಾಗಿ ಯೋಚನೆ ಮಾಡಬೇಕಾಗುತ್ತದೆ. ಇದು ನನಗೆ ಗೊತ್ತಿದೆ, ಸಮಾಜವಾದಿ ದಾರಿಯಲ್ಲಿ ಹೋಗುವುದು ಸುಲಭವಲ್ಲ. ಪ್ರಗತಿ ಮಾರ್ಗದ ಪ್ರಕಾರ ಮುಂದುವರೆಯಬೇಕಾದರೆ ಯಾರು ಪ್ರಗತಿಯಿಂದ ಲಾಭ ಪಡೆದಿದ್ದಾರೆ, ಯಾರು ಪೂರ್ಣವಾಗಿ ಸುಧಾರಿಸಿಕೊಂಡಿದ್ದಾರೆ ಅವರ ಶಕ್ತಿ ಪ್ರಕಾರ ಕೊಡುವಂತೆ ಮಾಡುವುದು ಸಮಾಜವಾದದ ಉದ್ದೇಶ. ಸೂಕ್ತ ಕಾಲ ಬಂದಾಗ ಸಮಾಜವಾದಿ ಪಕ್ಷಕ್ಕೆ ಸೇರಿರುವ ವಿರೋಧ ಪಕ್ಷದ ನಾಯಕರು ಸಹಕಾರ, ಬೆಂಬಲ ಕೊಡುವರು ಎಂದು ನಾನು ನಂಬಿದ್ದೇನೆ. ತೆರಿಗೆ ಹಾಕಬೇಕಾದಾಗ ನೀವು ಹೇಳಿದ ಮಾತನ್ನು ನೆನಪು ಮಾಡಿಕೊಳ್ಳುತ್ತೇನೆ. ಅವಶ್ಯಕ ಬಂದಾಗ ಬೆಂಬಲ ಕೊಡುವಿರೆಂದು ನಂಬಿದ್ದೇನೆ.

MADAM SPEAKER.—I will now put the consideration motion to the vote of the House.

The question is :

"That the Mysore Re-enacting Bill, 1973, be taken in consideration."

The Motion was adopted.

Clauses 2, 3 and the Schedule

MADAM SPEAKER.—Now consideration of Clauses. Since there are no amendments, I will put clause 2, 3 and the Schedule to the vote of the House.

The question is :

"That clauses 2, 3 and the Schedule do stand part of the Bill."

The Motion was adopted.

Clauses, 2 3 and the Schedule were added to the Bill.

Clause 1 etc.

MADAM SPEAKER.—There is an amendment by Sri T. R. Shamanna. He may move it.

Sri T. R. SHAMANNA (Fort).—I beg to move :

"That in clause 1 (3) substitute 31st October 1973, for the figures and words "31st March 1974."

MADAM SPEAKER.—Amendment moved :

That in clause 1 (3) substitute "31st October 1973" for the figures and words "31st March 1974."

† **ಶ್ರೀ ಟಿ. ಆರ್. ಶಾಮಣ್ಣ.**—ಮೊದಲನೆಯದಾಗಿ ನನ್ನ ತಿದ್ದುಪಡಿಯ ಉದ್ದೇಶವಿಷ್ಟೇ. ಹತ್ತಾರು ಬಿಲ್ಲುಗಳನ್ನು ಒಂದೇ ಕಡೆ ಸೇರಿಸಿ ತೆರಿಗೆ ವಿಧಿಸಲು ಅವಕಾಶ ಮಾಡಿ ಬಿಲ್ಲನ್ನು ತಂದಿರುವುದರಿಂದ ನಾವೇನು ತಿದ್ದುಪಡಿ ಸೂಚಿಸಬೇಕೆಂಬುದೇ ತೋಚುವುದಿಲ್ಲ; ಅದಕ್ಕೆ ಅವಕಾಶವಿಲ್ಲ. ಅನೇಕ ಬಿಲ್ಲುಗಳಿಗೆ ಸಂಬಂಧಪಟ್ಟ ಹಾಗೆ ಒಂದೇ ಕಡೆ ಎನ್ಯಾಕ್ಟ್‌ಮೆಂಟ್ ಸಮಗ್ರವಾಗಿ ತಂದಿರುವುದರಿಂದ ಅವಕಾಶವೇನಿದೆಯೆಂದು ತೋರಿತೋ ಅದರಂತೆ ತಿದ್ದುಪಡಿ ತಂದಿದ್ದೇನೆ. ಈ ಬಿಲ್ಲನ್ನು ತೆಗೆದುಕೊಂಡು ಬಂದು ಬಾಂಗ್ಲಾ ದೇಶದ ಪರಿಹಾರ ನಿಧಿಗೆ ಹಣ ಸಂಗ್ರಹಿಸುವುದನ್ನು ಈಗ ತೆಗೆದು ಹಾಕಿರುವಾಗ ನಮಗೆ ಗೃಹ ನಿರ್ಮಾಣ ಕಾರ್ಯಕ್ಕೆ ಹಣ ಬೇಕಾಗಿರುವುದರಿಂದ ಅದನ್ನು ವಸೂಲು ಮಾಡುವ ಉದ್ದೇಶದಿಂದ ಒಂದು ವರ್ಷಕಾಲ ಈ ತೆರಿಗೆ ಮುಂದುವರೆಸಲು ಉದ್ದೇಶಿಸಿದ್ದೇವೆಂದು ತಿಳಿಸಿದ್ದಾರೆ. ಆದರೆ ಗೃಹ ನಿರ್ಮಾಣ ಕಾರ್ಯಕ್ಕೆ 40 ಕೋಟಿ ರೂಪಾಯಿ ಬೇಕು. ಏಕೆಂದರೆ ಮನೆ ಕಟ್ಟಲು 2 ಲಕ್ಷ ನಿವೇಶನಗಳನ್ನು ಕೊಟ್ಟಿದ್ದಾರೆ, 4 ಲಕ್ಷ ಕೊಡುವುದಾಗಿ ಹೇಳಿರುವ ಪ್ರಕಾರ ಲೆಕ್ಕ ಹಾಕಿದರೆ 80 ಕೋಟಿ ರೂಪಾಯಿ ಬೇಕಾಗುವುದು. ಅಷ್ಟು ದೊಡ್ಡ ಮೊತ್ತ ಬೇಕಾಗಿರುವಾಗ ಕೇವಲ 2 ಕೋಟಿಗೆ ದಾರಿ ಮಾಡಿದರೆ ಖಂಡಿತ ಗೃಹ ನಿರ್ಮಾಣ ಕಾರ್ಯವನ್ನು ಸಮರ್ಪಕವಾಗಿ ಮಾಡುವುದಕ್ಕಾಗುವುದಿಲ್ಲ. ಇದಲ್ಲದೆ ನನ್ನ ಮುಖ್ಯ ಉದ್ದೇಶ ಇಷ್ಟು: 2 ಕೋಟಿ ರೂಪಾಯಿಗಳನ್ನು ಈ ತೆರಿಗೆ ಹಾಕದೆ ವಸೂಲು ಮಾಡುವುದಕ್ಕೆ ಸಾಧ್ಯವಿತ್ತು. 80 ಲಕ್ಷ ರೂಪಾಯಿ ಸೇಲ್ಸ್ ಟ್ಯಾಕ್ಸಿನಿಂದ ಇದರಲ್ಲಿ ಬರುವುದು ಎಂದು ಹೇಳುವಾಗ ಸೇಲ್ಸ್‌ಟ್ಯಾಕ್ಸ್ ಸರಿಯಾದ ರೀತಿಯಲ್ಲಿ

(ಶ್ರೀ ಟಿ. ಆರ್. ಶಾಮಣ್ಣ)

ವಸೂಲು ಮಾಡಿದರೆ 57 ಕೋಟಿ ರೂಪಾಯಿ ಇರುವುದನ್ನು 60 ಕೋಟಿ ರೂಪಾಯಿ ಮಾಡಲು ಯಾವ ವಿಧವಾದ ಕಷ್ಟವೂ ಇರಲಿಲ್ಲ. ಸೇಲ್ಸ್‌ಟ್ಯಾಕ್ಸ್‌ನಿಂದ ಲಾಭ ಪಡೆಯುವ ಅಧಿಕಾರಿಗಳು ಅಸತ್ಯವಾದ ಲೆಕ್ಕ ಬರೆಯುವ ವರ್ತಕರೊಂದಿಗೆ ಸೇರಿ ದ್ರೋಹ ಮಾಡುತ್ತಿರುವುದನ್ನು ತಡೆಗಟ್ಟಿದರೆ 2 ಕೋಟಿ ರೂಪಾಯಿಗಿಂತ ಹೆಚ್ಚು ಆದಾಯ ಬರುತ್ತಿತ್ತು.

† **Sri M. Y. GHORPADE.**—I agree that we should make every effort to increase the income from sales-tax. I think you are also a member of the Sales-tax Advisory Committee and with your advice we shall take every possible step to increase the sales-tax income. But even assuming sales tax has increased by Rs. 5 crores, 10 crores or 20 crores, it is not a justification for giving up something which we have. You are not going to increase the sales-tax income to give up other incomes. You will be where you are.

Sri T. R. SHAMANNA.—What I am arguing is that you require Rs. 40 crores to build 2 lakhs houses. Whereas you can get only Rs. 2 crores from this enacting Bill which is not enough for the very laudable welfare work that you have undertaken. This Rs. two crores could have been mobilised without adopting a small measure like this. This extra amount you could have got by Central assistance, by economy in expenditure and by collecting the existing taxes effectively. You could have reserved additional taxes for some other requirements on a larger scale than bringing this small measure.

Sri M. Y. GHORPADE.—You see that the size of the Plan has been increased from Rs. 85 crores to Rs. 91 crores. What shall I reply to the Central Government if they ask me, have you increased your resources as required?

4-00 P. M.

Sri T R. SHAMANNA.—Anyhow, I say that the object with which this tax is being imposed will not in any way touch the fringe of the problem for which this tax is reserved. Further more, it is the practice of the present Government and it has been the practice of the previous Governments to see that taxes are continued. For instance, when prohibition was introduced, sales tax came into existence. Though prohibition has been removed, the Government still continues to levy the sales tax and they are getting a very huge income from this source. When the Government is going to abolish this tax after March 1974, why not abolish it six months earlier because this tax will not meet their full demand. My object in moving this amendment is that according to me it will not touch the fringe of the problem for which they want to use this tax. If the Government say definitely, that they are not going to have this tax after March 1974, then I am prepared to withdraw my amendment.

ಶ್ರೀ ಎಂ. ವೈ. ಘೋರ್ಪಡೆ.—ಇದರಿಂದ ಈಗ ಏನು ಪ್ರಯೋಜನ ಇದೆ, ಅಕ್ಟೋಬರ್‌ನಲ್ಲಿ ರೀಕನ್‌ಸಿಡರ್ ಮಾಡಬೇಕು ಎಂದು ಹೇಳುತ್ತಿದ್ದೀರಿ.

ಶ್ರೀ ಟಿ. ಆರ್. ಶಾಮಣ್ಣ.—ಎರಡು ಕೋಟಿ ರೂಪಾಯಿಗಳು ಆಗುವ ಬದಲು ಒಂದು ಕೋಟಿ ರೂಪಾಯಿ ಸಾಕು ಎಂದು ನನ್ನ ಉದ್ದೇಶ.

ಶ್ರೀ ಎಂ. ವೈ. ಘೋರ್ಪಡೆ. –ಇದನ್ನು ಪರ್ಮನೆಂಟ್ ಟ್ಯಾಕ್ಸ್ ಸ್ಟ್ರಕ್ಚರ್ ಆಗಿ ಮಾಡಿಲ್ಲ. ತಾತ್ಕಾಲಿಕವಾಗಿ ಒಂದು ವರ್ಷ ಮುಂದುವರಿಸಬೇಕು ಎಂದು ಹೇಳುತ್ತಾ ಇದ್ದೇವೆ. ಇದರ ಅರ್ಥ ಏನು ? ಪರ್ಮನೆಂಟ್ ಟ್ಯಾಕ್ಸ್ ಸ್ಟ್ರಕ್ಚರ್‌ನಲ್ಲಿ ಸೇರಿಸಬೇಕಾದರೆ, ಸಾಕಷ್ಟು ಚರ್ಚೆ ಮಾಡಿ, ಇದರ ಬಗ್ಗೆ ಯೋಚನೆ ಮಾಡಿ ಮಾಡಬೇಕಾಗುತ್ತದೆ. ಈಗ ಸಧ್ಯಕ್ಕೆ ಮಾಡುವುದು ಏನು? ಹೊಸ ಟ್ಯಾಕ್ಸ್ ಹಾಕಬಾರದು ಎಂದು ಒಂದು ವರ್ಷಕ್ಕೆ ಮಾತ್ರ ಮುಂದುವರಿಸುವುದು ಮತ್ತು ಪರ್ಮನೆಂಟ್ ಟ್ಯಾಕ್ಸ್ ಸ್ಟ್ರಕ್ಚರ್‌ನಲ್ಲಿ ಸೇರಿಸುತ್ತಾ ಇಲ್ಲ. ನಿಮಗೆ ಸಾಕಷ್ಟು ಅನುಭವ ಇದೆ, ಅಕ್ಟೋಬರ್‌ನಲ್ಲಿ ಚರ್ಚೆ ಮಾಡೋಣ. ಪರಿಸ್ಥಿತಿ ನೋಡಿಕೊಂಡು ಇದರಲ್ಲಿ ಏನು ಬದಲಾವಣೆ ಮಾಡಬೇಕೋ ಅದನ್ನು ಮಾಡೋಣ. ಈಗ ಈ ಬಿಲ್ಲಿನಿಂದ ಆತಂಕ ಏನೂ ಆಗುತ್ತಾ ಇಲ್ಲ. My reply to that is very simple. The Bill enables this tax to be collected till 31st March 1974. If you want to prolong it beyond that, it cannot be done by this Bill ; we will have to do something else. But if we decided to modify, or reduce or give up or delete before 31st March 1974, this Bill does not necessarily prevent us from doing so ; we can always do it. This only enables us to have it upto 31st March 1974. If the Government and the House decides to do something earlier, we can do so. How does it come in the way? As suggested by the hon. Member, if we want to reconsider the entire tax structure in October, how does this Bill come in our way ?

Sri S. BANGARAPPA.—Is the Government going to continue it even after March 1974 ?

Sri M. Y. GHORPADE.—How can I give an assurance what I am going to do next year and how can I know the conditions that will be obtaining then? Can I make a commitment for the next two years without knowing what the conditions will be ; I can commit for one year.

ಇದರಿಂದ ಆತಂಕ ಏನೂ ಆಗುತ್ತಾ ಇಲ್ಲ. ಪರಿಸ್ಥಿತಿ ನೋಡಿಕೊಂಡು ಇದರಲ್ಲಿ ಏನು ಬದಲಾವಣೆ ಮಾಡಬೇಕೋ ಅದನ್ನು ಅಕ್ಟೋಬರ್ ತಿಂಗಳಲ್ಲಿ ಮಾಡೋಣ. This is merely an enabling legislation to continue the additional levies upto 31st March 1974. This does not prevent us from reconsidering the issue even earlier if the circumstances so warrant.

MADAM SPEAKER.—Does the hon. Member press his amendment?

Sri T. R SHAMANNA.—Yes, Madam.

MADAM SPEAKER—The question is "That in clause 1 (3) Substitute '31st March 1974' for the figures and words "31st March 1974'

The motion was negatived and the Amendment was lost.

MADAM SPEAKER.—The question is—

"That clause 1, the Long Title the preamble and the Enacting Formula do stand part of the Bill."

The motion was adopted

Clause I, the long Title the Preamble and the Enacting Formula were added to the Bill.

Motion to Pass

Sri M. Y. GHORPADE.—Madam, I move—

"That the Mysore Re-Enacting Bill, 1973 be passed."

MADAM SPEAKER.—The question is—

"That the Mysore Re-Enacting Bill, 1973, be passed.

The motion was adopted and the Bill was passed.

BUDGET ESTIMATES FOR 1973-74

General discussion (*Debate continued*)

† **ಶ್ರೀ ಎಚ್. ಟಿ. ಕೃಷ್ಣಪ್ಪ** (ನಾಗಮಂಗಲ).—ಕಳೆದ ದಿನ ನಾನು ಮಾತನಾಡುತ್ತಾ,
ವ್ಯವಸಾಯದ ಕ್ಷೇತ್ರದಲ್ಲಿ ನಿಜವಾಗಿ ಹಸಿರು ಕ್ರಾಂತಿ ಆಗಬೇಕಾದರೆ, ನೀರಾವರಿ ಸೌಲಭ್ಯಗಳು
ಹೆಚ್ಚು ಬೇಕು ಹಾಗೂ ರೈತನಿಗೆ ಅವಶ್ಯಕವಾದಂಥ ಗೊಬ್ಬರ ಸಕಾಲದಲ್ಲಿ ಗೊತ್ತು ಮಾಡಿದಂಥ
ದರದಲ್ಲಿ ಸಿಗುವಂತೆ ವ್ಯವಸ್ಥೆ ರೂಪಿತವಾಗಬೇಕೆಂದು ಹೇಳುತ್ತಾ ಇದ್ದೆ. ಮೂರನೆಯದಾಗಿ ವ್ಯವ
ಸಾಯದ ಅಭಿವೃದ್ಧಿಗಾಗಿ, ಭೂ ಅಭಿವೃದ್ಧಿ ಬ್ಯಾಂಕಿನವರು ಹಾಗೂ ಇತರೇ ಅನುಸೂಚಿತ ಬ್ಯಾಂಕು
ಗಳವರು ಸಾಲಗಳನ್ನು ಕೊಡುತ್ತಾ ಇದ್ದಾರೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಸಾಲದ ಅರ್ಜಿ
ಪರಿಷ್ಕರಣವಾಗಿ ಸಾಲ ಮಂಜೂರು ಆಗಬೇಕಾದರೆ, ತುಂಬಾ ವಿಳಂಬವಾಗುತ್ತದೆ. ಮತ್ತು
ಸಾಲಕ್ಕೆ ಅರ್ಜಿ ಹಾಕಿದಂಥ ಒಬ್ಬ ರೈತ ಸಾಲವನ್ನು ಪಡೆಯಬೇಕಾದರೆ ಬಹಳ ಹಣವನ್ನು ವೆಚ್ಚ
ಮಾಡತಕ್ಕಂಥ ದೂರುಗಳನ್ನು ನಾವು ಕೇಳುತ್ತಾ ಇದ್ದೇವೆ. ಎಷ್ಟು ಹಣವನ್ನು ಅವನು ಸಾಲದ
ರೂಪದಲ್ಲಿ ಪಡೆಯುತ್ತಾನೆಯೋ ಅದರ ಐದನೆಯ ಒಂದು ಭಾಗ ಅಥವಾ ಕಾಲು ಭಾಗ ಹಣವನ್ನು
ಅವನ ಕೈಗೆ ಸಾಲ ಬರುವ ಕಾಲಕ್ಕೆ ನಷ್ಟಮಾಡಿಕೊಂಡಿರುತ್ತಾನೆ. ಇದು ಸತ್ಯದ ಸಂಗತಿ, ಬಹುಶಃ
ಇದು ಅನೇಕ ಮಾನ್ಯಸದಸ್ಯರಿಗೆ ತಿಳಿದಿರಬಹುದು. ಆದರೆ ಸಕಾಲದಲ್ಲಿ ಸಾಲದ ಮೊಬಲಗು ರೈತನಿಗೆ
ದೊರೆಯದೆ ಹೋದರೆ ಅನೇಕ ಸಂದರ್ಭದಲ್ಲಿ ಅವನು ಯಾವ ಉದ್ದೇಶಕ್ಕಾಗಿ ಸಾಲವನ್ನು ಪಡೆಯು
ತ್ತಾನೆಯೋ ಆ ಉದ್ದೇಶಕ್ಕೆ ಅದು ಬಳಕೆಯಾಗದೆ ಇದ್ದು, ಅವನ ಅವನತಿಗೆ ಕಾರಣವಾಗುತ್ತದೆ
ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ಆದ್ದರಿಂದ ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡಿ
ಕೊಳ್ಳುವುದು ಏನೆಂದರೆ, ಇನ್ನು ಮುಂದೆ ಸಾಲಗಳನ್ನು ರೈತರಿಗೆ ಕೊಡುವಾಗ ರೈತನ ಕಾರ್ಯ
ಬರೀ ಅರ್ಜಿಯನ್ನು ಹಾಕುವಂಥಾದ್ದು; ಮಾತ್ರ, ಸಂಬಂಧಪಟ್ಟ ದಾಖಲೆಗಳನ್ನು ಬ್ಯಾಂಕಿನವರೇ
ಒದಗಿಸಿಕೊಂಡು, ಅದಕ್ಕೆ ಆದ ಖರ್ಚನ್ನು ಕೊನೆಯಲ್ಲಿ ಸಾಲ ಕೊಡುವಾಗ ವಜಾ ಮಾಡಿ ಉಳಿದ
ಮೊಬಲಗನ್ನು ಅವನಿಗೆ ಕೊಡಲಿಕ್ಕೆ ನಿರ್ದಿಷ್ಟವಾದ ಕಾಲದಲ್ಲಿ ಅಡ್ಡಿ ಆತಂಕ ಇಲ್ಲದೆ ಅವನ
ಮನೆಯ ಬಾಗಿಲಿಗೆ ಸಾಲವನ್ನು ಕೊಡುವ ವ್ಯವಸ್ಥೆ ರೂಪಿತವಾಗಬೇಕಾಗಿದೆ. ಈ ವ್ಯವಸ್ಥೆಯನ್ನು
ಮಾಡದ ಹೊರತು, ಅವರು ಕೊಡುವ ಸಾಲದಿಂದ ಏನೂ ಪ್ರಯೋಜನ ಇಲ್ಲವೆಂದು ಹೇಳುತ್ತೇನೆ.
ಸಾಲವನ್ನು ವಸೂಲು ಮಾಡತಕ್ಕ ಕಾಲದಲ್ಲಿ ಎರಡು ಕಂತುಗಳ ಪ್ರಕಾರ ಕಟ್ಟದೆ ಹೋದರೆ ಸುಸ್ತಿ
ಬಡ್ಡಿಯನ್ನು ಹೇರತಕ್ಕ ಪದ್ಧತಿ ಇದೆ. ಸುಸ್ತಿ ಬಡ್ಡಿಯ ವಿಷ ಚಕ್ರಕ್ಕೆ ಸಿಕ್ಕಿದರೆ ರೈತ ಚೇತರಿಸಿ
ಕೊಳ್ಳುವುದಕ್ಕಾಗುವುದಿಲ್ಲ. ಅವನು ಇರತಕ್ಕ ಹಿಡುವಳಿಯನ್ನು ಮಾರಾಟ ಮಾಡಿ ನಿರ್ಗತಿಕನಾಗುವ
ಸಂದರ್ಭ ಹೆಚ್ಚು. ಇಂಥ ಒಂದೆರಡು ಸನ್ನಿವೇಶಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ಸುಸ್ತಿ
ಬಡ್ಡಿಯನ್ನು ಕಡಿಮೆ ಮಾಡಬೇಕು. ರಿಸರ್ವ್ ಬ್ಯಾಂಕಿನವರು ಕೊಡುವ ಬಡ್ಡಿ ದರಕ್ಕೂ ರೈತ
ರಿಗೆ ಕೊಡುವ ಬಡ್ಡಿ ದರಕ್ಕೂ ಅಜಗಜಾಂತರ ವೆತ್ಯಾಸವಿದೆ. ರೈತರ ಮೇಲೆ ಸುಸ್ತಿ ಬಡ್ಡಿಯನ್ನು
ಹೇರತಕ್ಕದ್ದು ರೈತನನ್ನು ಉದ್ಧಾರ ಮಾಡತಕ್ಕ ಮಾರ್ಗವಲ್ಲ, ತುಳಿಯತಕ್ಕ ಮಾರ್ಗ ಎಂದು ನಾನು
ಹೇಳಬೇಕಾಗುತ್ತದೆ.

(The Chairman (SMT. SUMATI MADIMAN) in the Chair.)

ಇನ್ನು ಉಚಿತ ನಿವೇಶನಗಳ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ. 2 ಲಕ್ಷ ಉಚಿತ ನಿವೇಶನಗಳನ್ನು ಭೂಹೀನರಿಗೆ, ನಿವೇಶನ ರಹಿತ ಜನಗಳಿಗೆ ಗ್ರಾಮಾಂತರ ಪ್ರದೇಶದಲ್ಲಿ ಭೂ ಹೀನರಾದಂಥ ಜನಗಳಿಗೆ ನಿವೇಶನಗಳನ್ನು ಹಂಚಿದಿರಿ, ಯಾವ ಉದ್ದೇಶದಿಂದ ಮಾಡಿದಿರಿ ಎಂದು ಆ ಪ್ರಶ್ನೆಯನ್ನು ತಾವೇ ಹಾಕಿಕೊಳ್ಳಬೇಕು. ಭೂಹೀನ ಜನರಿಗೆ ನಿವೇಶನ ಕೊಟ್ಟರೆ, ಮನೆ ಕಟ್ಟಿಸಿ ಕೊಟ್ಟರೆ ಏನು ಪ್ರಯೋಜನವಾಗುತ್ತದೆ ಎಂದು ಪ್ರಶ್ನೆ ಕೇಳುತ್ತೇನೆ. ಗ್ರಾಮಾಂತರಗಳಲ್ಲಿ ನಮಗೆ ಗೊತ್ತಿರುವ ಹಾಗೆ 2 ವರ್ಗದ ಜನ ಇದ್ದಾರೆ. ಒಂದು ಭೂ ಮಾಲೀಕರಾಗಿರುವುದು ಇನ್ನೊಂದು ಭೂಮಾಲೀಕರ ಹತ್ತಿರ ಕೂಲಿಕಾರರಾಗಿ ಕೆಲಸಮಾಡತಕ್ಕ ಜನಗಳು. ಆ ಕೂಲಿಗಾರ ಜನ ಭೂರಹಿತ ಜನ. ಭೂಹೀನ ಜನರಿಗೆ ನಿವೇಶನ ಕೊಟ್ಟಿರಿ ಎಂದು ಇಟ್ಟುಕೊಳ್ಳೋಣ. ಅವರನ್ನು ಕಾಯಂ ಆಗಿ ಕೂಲಿಗಾರರಾಗಿ ಇಡುವ ಈ ಕ್ರಮ ಕುಟಿಲ ತಂತ್ರ ಎಂದು ಹೇಳಬೇಕಾಗುತ್ತದೆ. ಅವರಿಗೆ ನಿವೇಶನ ಕೊಡಬೇಕು, ಅವರ ಬಾಳು ಹಸನಾಗಬೇಕು ಅವರು ಎಲ್ಲರಂತೆ ಬಾಳುವೆ ಮಾಡಬೇಕು ಎನ್ನುವ ಇಷ್ಟ ಇದ್ದರೆ ಅವರಿಗೆ ಉದ್ಯೋಗ ಕಲ್ಪಿಸಿಕೊಟ್ಟರೆ ಬದುಕುವುದಕ್ಕೆ ಸರಿಯಾದ ಮಾರ್ಗ ಕಲ್ಪನೆ ಮಾಡಿಕೊಟ್ಟು ನಿವೇಶನ ಕೊಡಿ, ಮನೆಗಳನ್ನು ಕಟ್ಟಿಕೊಡಿ. ನಿವೇಶನ ಕೊಟ್ಟುಬಿಟ್ಟಿದ್ದೇವೆ ಭೂಹೀನರಾದಂಥ ಜನರಿಗೆ ಎಂದು ತಾವು ತಿಳಿದುಕೊಂಡಿದ್ದೀರಿ. ಆದರೆ ಅದು ಯಾರ ಅನುಭವದಲ್ಲಿ ಇದೆ ನೋಡಿ ಪರೀಕ್ಷೆಮಾಡಿ. ಯಾವ ಭೂಮಾಲೀಕನ ಹತ್ತಿರ ಭೂಹೀನರಾದಂಥ ಜನರು ಕೆಲಸಮಾಡಿಕೊಂಡು ಇದ್ದಾರೆ ಆ ಭೂಮಾಲೀಕನ ಸ್ವತ್ತು ಆಗಿದೆ. ನೀವು ಕೊಟ್ಟಿರತಕ್ಕ ನಿವೇಶನ ಅಥವಾ ಮನೆ ಕಟ್ಟಿ ಕೊಟ್ಟರೂ ಅದೆಲ್ಲಾ ಆ ಮಾಲೀಕನ ಸ್ವತ್ತು ಆಗುತ್ತದೆ. ಭೂಹೀನ ವರ್ಗಕ್ಕೆ ಸ್ವತ್ತು ಹೋಗುವುದಿಲ್ಲ. ಆದುದರಿಂದ ಸರ್ಕಾರದವರಿಗೆ ಒತ್ತಾಯಮಾಡುವುದು ಇಷ್ಟೇ. ಭೂಹೀನ ಮನುಷ್ಯನಿಗೆ ನಿವೇಶನ ಕೊಡುವ ಕಾಲದಲ್ಲಿ ಉದ್ಯೋಗ ಕಲ್ಪಿಸಿಕೊಡಿ, ಇಲ್ಲದಿದ್ದರೆ ಜಮೀನು ಕೊಡಿ. ಅನಂತರ 2. 3 ಅಥವಾ 4 ಸಾವಿರ ರೂಪಾಯಿ ಖರ್ಚುಮಾಡಿ ಮನೆ ಕಟ್ಟಿಕೊಡಿ. ಇಲ್ಲದೆ ಹೋದರೆ ಕಾಯಂ ಆಗಿ ನೀವು ಕೊಟ್ಟಂಥ ನಿವೇಶನ ಇರುವುದಿಲ್ಲ, ಕಟ್ಟಿದಂಥ ಮನೆ ಪ್ರಭಲವಾದ ವ್ಯಕ್ತಿಯ ಸ್ವತ್ತು ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಈಗ ಒಂದು ವಿಚಾರ ಪ್ರಜಾಪ್ರಭುತ್ವಕ್ಕೆ ಒಂದು ಗಂಡಾಂತರವಾದ ಪರಿಸ್ಥಿತಿ ನಮ್ಮ ದೇಶದಲ್ಲಿ ಬಂದಿದೆ ಎನ್ನತಕ್ಕ ಮಾತನ್ನು ನಾನು ಬಹಳ ಕಳವಳದಿಂದ ಹೇಳಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಮಂತ್ರಿಗಳು ಸಾರ್ವಜನಿಕ ಕೆಲಸಕ್ಕೆಂದು ಪ್ರವಾಸ ಮಾಡುವಾಗ ಬಹು ಸಂದರ್ಭಗಳಲ್ಲಿ ಅವರು ಪಕ್ಷದ ಕೆಲಸಕಾರ್ಯಗಳನ್ನು ಮಾಡತಕ್ಕದ್ದು ಜಾಸ್ತಿಯಾಗಿದೆ. ಸಾರ್ವಜನಿಕ ಸಭೆಗೆ ಹೋಗುವುದಕ್ಕಿಂತ ಮುಂಚೆ ಪಕ್ಷದ ಸಭೆಗೆ ಹಾಜರು ಆಗುತ್ತಾರೆ. ಅನಂತರ ಸಾರ್ವಜನಿಕ ಸಭೆಗೆ ಬರುವ ರೂಢಿಯಾಗಿದೆ. ಇದು ತಪ್ಪಬೇಕು. ಅವರು ಪಕ್ಷದ ಕೆಲಸ ಮಾಡಲಿ ಸಂತೋಷ. ಅವರ ಪಕ್ಷ ಅವರಿಗೆ ಹೆಚ್ಚು. ನಮ್ಮ ಪಕ್ಷ ನಮಗೆ ಹೆಚ್ಚು. ಪಕ್ಷದ ಕೆಲಸಕ್ಕೆ ಹೋಗುವಾಗ ಸಾರ್ವಜನಿಕ ಕೆಲಸಕ್ಕೆ ಹೋಗಕೂಡದು. ಅದಕ್ಕೆ ಪ್ರತ್ಯೇಕ ದಿನ ಗೊತ್ತು ಮಾಡಿ ಹೋಗಲಿ ನಮ್ಮ ಆಕ್ಷೇಪವಿಲ್ಲ. ಇನ್ನು ಮುಂದೆ ಸರ್ಕಾರ ಎಚ್ಚೆತ್ತುಕೊಂಡು ತಮ್ಮ ಪಕ್ಷದ ಪ್ರತಿಷ್ಟೆ ಹೆಚ್ಚುಮಾಡಿಕೊಳ್ಳಬೇಕಾದರೆ ಏನೇನು ಕ್ರಮವನ್ನು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಇಟ್ಟುಕೊಂಡು ಮುಂದುವರಿಯಬೇಕು ಹಾಗೆ ಮಾಡಲಿ. ಆದರೆ ಸಾರ್ವಜನಿಕ ಕೆಲಸಕ್ಕೆ ಹೋಗಿ ಪಕ್ಷದ ಕೆಲಸ ಮಾಡುವ ಕೆಟ್ಟ ಪದ್ಧತಿಯನ್ನು ಇನ್ನು ಮುಂದಾದರೂ ಎಚ್ಚೆತ್ತುಕೊಂಡು ತಪ್ಪು ದಾರಿಯಲ್ಲಿ ಹೋಗಬಾರದು ಎಂದು ಕೇಳಿಕೊಳ್ಳುತ್ತೇನೆ. ಈಗ ಭೂಮಿ ಹಂಚಿಕೆ ಸಮಿತಿಗಳು ಎಲ್ಲಾ ತಾಲ್ಲೂಕುಗಳಲ್ಲಿ ಮಾಡಿದ್ದಾರೆ. ಅಪ್ಪಿತಪ್ಪಿ ಅಲ್ಲಿ ಯಾರಾದರೂ ಅವರ ಪಕ್ಷಕ್ಕೆ ಸೇರಿದಂತ ಮನುಷ್ಯನಿಗೆ ಇಂಥ ಸೇವೆಯನ್ನು ಮಾಡಲಿಕ್ಕೆ ಎಂಥ ಬುದ್ಧಿವಂತನೇ ಇರಲಿ ಅವನಿಗೆ ಮನ್ನಣೆ ಕೊಡದೆ ನೆನ್ನೆ ಮೊನ್ನೆ ಸೇರಿದ ಜನರಿಗೆ ನಾಮಕರಣಮಾಡಿ ಆ ಸಮಿತಿಯಲ್ಲಿ ಸದಸ್ಯತ್ವ ಮಾಡಿಕೊಂಡು ಬಂದಿದ್ದಾರೆ. ಭೂಮಿಗೆ ಸಂಬಂಧಪಟ್ಟ ಸಮಸ್ಯೆ ವ್ಯವಸಾಯಗಾರರಿಗೆ ಸಂಬಂಧಪಟ್ಟ ಸಮಸ್ಯೆ ಯಾವ ಪುರಾವೆ ಇಲ್ಲದ ಜನಗಳನ್ನು ಭೂಮಿ ಹಂಚತಕ್ಕ ಸಮಿತಿಗಳಲ್ಲಿ ನೇಮಕ ಮಾಡುವುದು ಪಕ್ಷದ ಹಿತವನ್ನು ಕಾಯುವುದಕ್ಕೆ ಹೊರಟಿರತಕ್ಕ ಸರ್ಕಾರ ಪ್ರಜಾಪ್ರಭುತ್ವದ ಹಿತವನ್ನು ರಕ್ಷಣೆ ಮಾಡುವುದಕ್ಕೆ ಹೊರಟಿರತಕ್ಕ ಸರ್ಕಾರವಲ್ಲವೆಂದು ರುಜುವಾತು ಮಾಡಿಕೊಳ್ಳಬೇಕಾಗಿದೆ. ಮೊನ್ನೆ ದಿವಸ ಪತ್ರಿಕೆಯಲ್ಲಿ ಒಂದು ವಿಚಾರ ಓದಿದೆವು. ತಾಲ್ಲೂಕು ಬೋರ್ಡ್ ಮಂಡಲಿ ರದ್ದುಮಾಡಿ ಆ ಜಾಗಗಳಲ್ಲಿ ಸರ್ಕಾರಿ ಅಧಿಕಾರಿಗಳನ್ನು ನೇಮಕ ಮಾಡತಕ್ಕಂಥದ್ದು ಕಳೆದ ವರ್ಷ 8 ತಾಲ್ಲೋಕು ಬೋರ್ಡುಗಳ ಚುನಾವಣೆ ಆದಮೇಲೆ 8 ವರ್ಷಗಳು ಇದ್ದುದ್ದನ್ನೇ ಮುಂದುವರಿಸಿಕೊಂಡು ಬಂದದನ್ನು ಕಂಡಿದ್ದೇವೆ. ಪ್ರಜಾಪ್ರಭುತ್ವ ಚುನಾವಣೆ ನಡೆದು ಜನಗಳ ಕಡೆಯಿಂದ ಆರಿಸಿ ಬಂದು ಆಡಳಿತ ನಡೆಸುವ ಕಡೆ ಅಧಿಕಾರ ಶಾಹಿ ಕೂಡಿಸುವುದು ಪ್ರಜಾಪ್ರಭುತ್ವದ ನೀತಿಯಲ್ಲ. ಅದು ಪ್ರಜಾಪ್ರಭುತ್ವಕ್ಕೆ

(ಶ್ರೀ ಹೆಚ್.ಟಿ. ಕೃಷ್ಣಪ್ಪ)

ವಿರುದ್ಧವಾದ ಕ್ರಮ. ತಮ್ಮ ಅಧಿಕಾರವನ್ನು ಪೂರ್ಣ ಬಲಪಡಿಸಬೇಕು ಎನ್ನುವ ದೃಷ್ಟಿಯಿಂದ ಶಾಶ್ವತವಾಗಿ ಅಧಿಕಾರವನ್ನು ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಈ ರೀತಿ ಪ್ರಯತ್ನ ಮಾಡುತ್ತಿದ್ದಾರೆ. ಜನತೆ ಈ ಒಂದು ಕಾರ್ಯಕ್ರಮಕ್ಕೆ ಖಂಡಿತ ಮನ್ನಣೆ ಕೊಡುವುದಿಲ್ಲ. ಹೋಗಲಿ ಅವರ ಅಭಿಪ್ರಾಯ ಸಾಧುವಾದುದು ಅದನ್ನು ಜನತೆ ಒಪ್ಪುತ್ತಾರೆ ಎನ್ನುವುದನ್ನು ಪರೀಕ್ಷೆಮಾಡಲಿ. ಯಾವುದಾದರೂ ಚುನಾವಣೆ ನಡೆಸಲಿ. ಇದೇ ಒಂದು ಪ್ರಶ್ನೆಯನ್ನು ಜನತೆ ಮುಂದೆ ಇಟ್ಟು ಚುನಾವಣೆ ನಡೆಯಬೇಕೇ ಅಥವಾ ನಡೆಯಬಾರದೇ ಎಂದು ತಿಳಿದುಕೊಳ್ಳಲಿ. ಚುನಾವಣೆಗಳನ್ನು ಮುಂದುವರಿಸುವ ಕಾರಣ ಕೊಟ್ಟಿದ್ದಾರೆ ಅದನ್ನು ಒಪ್ಪಿಕೊಂಡು ಜನತೆ ಪ್ರತಿನಿಧಿಗಳು ಕೆಲಸ ಮಾಡಿಕೊಂಡು ಬರುವ ಕಡೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವುದು ಏತಕ್ಕೆ ? ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ತಾವು ತಾಲ್ಲೂಕು ಮಂಡಲಿಗಳು ಬೇರೆ ಪಕ್ಷದವರ ಅಧೀನದಲ್ಲಿ ಇವೆ ಆ ಪಕ್ಷದ ಅಧೀನವನ್ನು ತಪ್ಪಿಸಬೇಕು ಮತ್ತು ತಮ್ಮ ಪ್ರಾಬಲ್ಯವನ್ನು ಬಲಪಡಿಸಿಕೊಳ್ಳಬೇಕು ಎನ್ನುವ ಉದ್ದಿಶ್ಯದಿಂದ ಆಡಳಿತಾಧಿಕಾರಿಗಳನ್ನು ನೇಮಿಸುವುದರ ಅನಂತರ ಸರ್ಕಾರದವರು ಮತ್ತು ಮಂತ್ರಿಗಳು ಪ್ರತಿಯೊಂದು ಹೆಜ್ಜೆಯಲ್ಲೂ ಆಡಳಿತಾಧಿಕಾರಿಗಳಿಗೆ ತಮಗೆ ಬೇಕಾದಂಥ ಆದೇಶಗಳನ್ನು ಹೊರಡಿಸಿ ತಮಗೆ ಬೇಕಾದಂಥ ಕೆಲಸಗಳನ್ನು ಮಾಡಿಕೊಂಡು ಹೋಗುವುದಕ್ಕೆ ಸೌಕರ್ಯ ಮಾಡಿಕೊಂಡಿದ್ದಾರೆ. ಇಂಥ ಪರಿಸ್ಥಿತಿ ಮುಂದೆ ಬರಬಾರದು. ಸಲಹಾ ಮಂಡಲಿಗಳನ್ನು ಮಾಡಿಕೊಳ್ಳುವ ಆಲೋಚನೆ ಇದೆ. ಒಂದು ಸಲಹಾ ಮಂಡಲಿಗಳು ಪುನಃ ಇದೇ ಪಕ್ಷದ ಜನ ಇವರು ನಿಷ್ಪಕ್ಷಪಾತ ದೃಷ್ಟಿಯಿಂದ ಮತ್ತು ಪ್ರಜಾಪ್ರಭುತ್ವದ ತತ್ವವನ್ನು ನಂಬಿ ನಡೆಯತಕ್ಕ ಜನ ಹೆಚ್ಚು ಹೆಚ್ಚು ನಮ್ಮಿಂದ ದೂರ ಹೊರಟು ಹೋಗಿದ್ದಾರೆ. ಆದುದರಿಂದ ಪರೀಕ್ಷಾರ್ಥವಾಗಿ ಪ್ರಯೋಗಾರ್ಥವಾಗಿ ಇದು ಸರಿ ಇಲ್ಲವೇ ಎನ್ನುವುದನ್ನು ಪರೀಕ್ಷೆ ಮಾಡಿ ನೋಡಿ ಯಾವುದಾದರೂ ಒಂದು ಕ್ಷೇತ್ರ ಬುದ್ಧಿಜೀವಿಗಳು ಇರುವ ಪ್ರದೇಶ ನಿರ್ಮಾಣಮಾಡಿ ಸರ್ಕಾರ ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ನಡೆಯುತ್ತದೆ ಇಲ್ಲವೇ ಎನ್ನುವುದನ್ನು ತಿಳಿಯುವುದಕ್ಕೆ ಒಂದು ಚುನಾವಣೆ ನಡೆಸೋಣ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದನ್ನು ಮಂಡ್ಯದಲ್ಲಿ ಇಟ್ಟುಕೊಳ್ಳುವುದಕ್ಕೆ ಒಪ್ಪುತ್ತಾರೆಯೇ? ಶ್ರೀಮಾನ್ ಕೃಷ್ಣರವರು ಇದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಯಾವ ಪ್ರದೇಶದಲ್ಲಾಗಲಿ ಇವರು ಹೋಗತಕ್ಕ ದಾರಿ ಸರಿಯೇ ಇಲ್ಲವೇ ಎಂದು ಜನತೆಯ ಮುಂದೆ ಇಟ್ಟು ಪರೀಕ್ಷೆ ಮಾಡುವುದಕ್ಕೋಸ್ಕರ ಪ್ರಜಾಪ್ರಭುತ್ವ ಎಂದರೆ ಜನತೆಯ ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಡಬೇಕಾಗುತ್ತದೆ.

ಮಾನ್ಯ ಕೈಗಾರಿಕಾ ಮಂತ್ರಿಗಳಿದ್ದಾರೆ. ಒಂದು ವಿಚಾರವನ್ನು ಅವರಲ್ಲ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಯಾವ ರೀತಿ ಪ್ರಜಾಪ್ರಭುತ್ವದಲ್ಲಿ ಅಧಿಕಾರ ವಿಕೇಂದ್ರೀಕರಣವಾಗಬೇಕೆಂದು ಹೇಳುತ್ತೀರೋ ಅದೇ ರೀತಿ ಎಲ್ಲ ಭಾಗಗಳಿಗೂ ಸಮಾನಾವಕಾಶ ದೊರೆಯಬೇಕು ; ಆರ್ಥಿಕ ವಿಕೇಂದ್ರೀಕರಣ ಸಹ ಆಗಬೇಕು. ನಾವಿಬ್ಬರೂ ಮಂಡ್ಯ ಜಿಲ್ಲೆಯಿಂದ ಬರುವವರು. ನಮ್ಮದು ಬಹಳ ಹಿಂದುಳಿದ ಪ್ರದೇಶ. ಅವರದು ಮುಂದುವರಿದ ಪ್ರದೇಶ. ಅಲ್ಲಿ ವ್ಯವಸಾಯ ಮಾಡಿ ಬಹಳ ಉತ್ತಮವಾದ ಬೆಳೆಗಳನ್ನು ತೆಗೆಯುವುದಕ್ಕೆ ಅವಕಾಶವಿದೆ. ರೈತರು ಹೆಚ್ಚು ಹೆಚ್ಚಾಗಿ ಅಭಿವೃದ್ಧಿಯಾಗುವುದಕ್ಕೆ ಅವಕಾಶವಿದೆ. ಆದರೆ ನಮಗೆ ಅಂಥ ಅವಕಾಶವಿಲ್ಲ. ಅಂಥ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಅವರ ಉದ್ದೇಶವಿದ್ದರೆ, ವ್ಯವಸಾಯದ ಮೂಲಕ/ ಆ ಭಾಗವನ್ನು ಅಭಿವೃದ್ಧಿಗೆ ತರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಯಾವುದಾದರೂ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕು. ಕೈಗಾರಿಕೆಗಳೆಲ್ಲ ಮೈಸೂರಿನಲ್ಲಿಯೇ ಇರಬೇಕು, ಬೆಂಗಳೂರಿನಲ್ಲಿಯೇ ಇರಬೇಕು ಎನ್ನುವುದು ಸರಿಯಲ್ಲ. ಬೆಂಗಳೂರಿನಲ್ಲಿರುವಂಥ ಕೈಗಾರಿಕೆಯನ್ನು ನಾಗಮಂಗಲದಲ್ಲಿ ಕೂಡ ಸ್ಥಾಪನೆ ಮಾಡಬಹುದು. ಅದಕ್ಕೆ ಸ್ವಲ್ಪ ವೆಚ್ಚ ಜಾಸ್ತಿಯಾಗಬಹುದು ಅಷ್ಟೆ. ಸ್ವಲ್ಪ ಹೆಚ್ಚು ವೆಚ್ಚವಾದರೂ ಲಾಭ ಉಳಿಯುವುದಾದರೆ ಏಕೆ ಯೋಚನೆ ಮಾಡಬಾರದು ? ಔದ್ಯೋಗೀಕರಣ ಅಂದ ಮೇಲೆ ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತದೆ, ಅಲ್ಲಿಯ ಜನತೆ ಬೇರೆಯವರಂತೆ ಆರ್ಥಿಕ ಸಮಾನತೆಯಿಂದ ಬಾಳುವುದಕ್ಕೆ ಅವಕಾಶವಾಗುತ್ತದೆ. ಇಂಥದ್ದನ್ನೆಲ್ಲ ಯೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬಹು ಮುಖ್ಯವಾಗಿ ಸಣ್ಣಪುಟ್ಟ ಕೈಗಾರಿಕೆಗಳವರು ಬಹುತೇಕ ಹೇಗೆ ಜೀವನ ಮಾಡುತ್ತಿದ್ದಾರೆನ್ನುವುದು ಮಾನ್ಯ ಮಂತ್ರಿಗಳಿಗೆ ಸ್ವಲ್ಪ ಗೊತ್ತಾಗಬೇಕು. ಅಭಾವದ ಕಾರಣದಿಂದ ಕೆಲವು

ಕಚ್ಚಾ ಪದಾರ್ಥಗಳನ್ನು ಹೆಚ್ಚು ಬೆಲೆಗೆ ಮಾರಿ, ಅದರಿಂದ ಲಾಭ ಸಂಪಾದನೆ ಮಾಡಿ ಜೀವನ ಮಾಡುತ್ತಿದ್ದಾರೆ. ಉದಾಹರಣೆಗೆ ಸ್ಟೀಲ್, ಆಲ್ಕೋಹಾಲ್ ಮುಂತಾದುವು. ಇವುಗಳನ್ನು ಪಡೆಯುವ ಕೈಗಾರಿಕಾ ಸಂಸ್ಥೆಗಳಲ್ಲಿ ಯಾವುದು ಅಸ್ತಿತ್ವದಲ್ಲಿದೆ, ಯಾವುದು ಇಲ್ಲ ಎನ್ನುವುದನ್ನು ಕಂಡುಹಿಡಿಯುವುದೇ ದೊಡ್ಡ ಸಮಸ್ಯೆಯಾಗಿದೆ. ಬಹುಶಃ ವ್ಯಾಪಕವಾಗಿ ತನಿಖೆ ಮಾಡಿದರೆ ಗೊತ್ತಾಗುತ್ತದೆ ಎಷ್ಟೋ ಸಂಸ್ಥೆಗಳು ಜೀವಂತವಾಗಿಲ್ಲ. ಕೇವಲ ನೆಪಮಾತ್ರಕ್ಕೆ ಇವೆ. ಅಂಥ ಕೈಗಾರಿಕಾ ನೀತಿಯನ್ನು ಅನುಸರಿಸುವುದರಿಂದ ಔದ್ಯೋಗೀಕರಣವಾಗುವುದಿಲ್ಲ, ನಿರುದ್ಯೋಗ ಸಮಸ್ಯೆ ಬಗೆಹರಿಯುವುದಿಲ್ಲ, ಉತ್ಪಾದನೆ ಜಾಸ್ತಿಯಾಗುವುದಿಲ್ಲ, ಬಡತನ ಹೋಗುವುದಿಲ್ಲ. ಆದುದರಿಂದ ಇನ್ನೂ ಮುಂದೆ ಬೃಹತ್ ಕೈಗಾರಿಕೆಗಳಿಗೆ ಹೆಚ್ಚಿನ ಮಾನ್ಯತೆಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

†ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಅಧ್ಯಕ್ಷರೇ, ಐದು ದಿವಸಗಳಿಂದ ನಡೆದ ಈ ಚರ್ಚೆಯಲ್ಲಿ ಈ ಹೊತ್ತು ನನಗೆ ಕಾಲಾವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ನನ್ನ ಕೃತಜ್ಞತೆಯನ್ನರ್ಪಿಸುತ್ತೇನೆ. ಇಲ್ಲಿ ಮಂಡಿಸಿದಂತ ಈ ಆಯವ್ಯಯ ಪತ್ರವನ್ನು ನಾನು ಪೂರ್ತಿಯಾಗಿ ಸಮರ್ಥಿಸುತ್ತ, ಈ ಐದು ದಿನಗಳವರೆಗೆ ಕೆಲವು ಸದಸ್ಯರು ಅದರ ಮೇಲೆ ಮಾತನಾಡಿದ್ದಾರೆ. ಈ ಅಯವ್ಯಯ ಪತ್ರದತ್ತ ನೋಡುವ ದೃಷ್ಟಿ ಶ್ರೀ ದೇವೇಗೌಡರದು ಬೇರೆ ಇರಬಹುದು, ಶ್ರೀ ಲಿಂಗಪ್ಪನವರದು ಬೇರೆ ಇರಬಹುದು, ಶ್ರೀ ಕಾಗೋಡು ತಿಮ್ಮಪ್ಪ ಅವರದು ಬೇರೆ ರೀತಿ ಇರಬಹುದು. ಇತರ ಸಮೃದ್ಧಿನಾಡಿನಿಂದ ಬಂದವರ ದೃಷ್ಟಿ ಬೇರೆ ಇರಬಹುದು. ಆದರೆ ಬರಗಾಲ ಪ್ರದೇಶದಿಂದ ಬಂತಕ್ಕ ನಮ್ಮ ದೃಷ್ಟಿಕೋನವೇ ಬೇರೆ. ಹೊಟ್ಟೆಗೆ ಹಿಟ್ಟಿಲ್ಲದಂಥ ಪರಿಸ್ಥಿತಿ ನಮಗೆ ಇದ್ದಾಗ, 'ದಿವಸ ಹೇಗೆ ಸಾಗಿಸುವುದು, ಜೀವನ ಮಾಡುವುದು ಹೇಗೆ ಎನ್ನುವ ವಿಚಾರದಲ್ಲಿರುವಾಗ ನಮಗೆ ಮುಂಗಡ ಪತ್ರದಲ್ಲಿ ಏನೇನು ವ್ಯವಸ್ಥೆಯನ್ನು ಮಾಡಲಾಗಿದೆಯೋ ಎಂದು ಕಾತುರತೆಯಿಂದ ಕಾಯುತ್ತ ಇರುವಾಗ ಈ ಮುಂಗಡ ಪತ್ರ ನಮ್ಮ ಮುಂದೆ ಈ ಹೊತ್ತು ಬಂದಿದೆ. ಕೊರತೆ ಬಜೆಟ್, ಆದರೂ ಬರಗಾಲ ನಿವಾರಣೆಗೆ, ಅಭಿವೃದ್ಧಿ ಕಾಮಗಾರಿಗಳಿಗೆ ಅನುಕೂಲವಾಗಿ ಆಗುವಂತೆ ಸಿದ್ಧಪಡಿಸಿದ ಬಜೆಟ್ ಎಂಬ ವಾಕ್ಯವನ್ನು ನೋಡಿ ಅತೀವ ಸಂತೋಷವಾಯಿತು. ಮನಸ್ಸಿಗೆ ಅತೀವ ಸಂತೋಷವಾದಾಗ ಮಾತು ಮೌನವಾಗುತ್ತದೆ. ಆದಕಾರಣ ನಾನು ಈ ವಿಷಯದಲ್ಲಿ ಹೆಚ್ಚು ಮಾತನಾಡಲಿಕ್ಕೆ ಹೋಗದೆ ಈ ಬಜೆಟ್ಟಿನಲ್ಲಿ ಮೊದಲು ನುಡಿದಂಥ ಅಂಶಗಳು, ನಮಗೆ ಏನೇನು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ ಎನ್ನುವುದರ ಕಡೆಗೆ ಹೆಚ್ಚು ಗಮನವನ್ನು ಇಟ್ಟಿದ್ದೇನೆ.

ಈ ಮುಂಗಡ ಪತ್ರದ ಮೇಲೆ ಚರ್ಚೆ ಅನಾವಶ್ಯಕವೆಂದು ನನ್ನ ಅಭಿಪ್ರಾಯ. ಇಂಥ ಸರ್ವಾಂಗಸುಂದರವಾದ, ಸಮೃದ್ಧಿಯುತವಾದ, ತೆರಿಗೆ ರಹಿತವಾದ ಮುಂಗಡ ಪತ್ರದ ಮೇಲೆ ಯಾವ ರೀತಿಯ ಟೀಕೆ ಬರುತ್ತದೆಯೋ ಎಂದು ನಾನು ಶ್ರೀ ದೇವೇಗೌಡರ ಭಾಷಣವನ್ನು ಕಾತುರತೆಯಿಂದ ಕೇಳಿದೆ. ಅವರು ಮಾತನಾಡುತ್ತ, ನೋಡು ನೋಡಿಲ್ಲಿ ಚಂದ್ರ ಬಿಂಬ, ನೋಡು ನೋಡಿಲ್ಲಿ ಲಾಂದ್ರ ಕಂಬ, ಎಂದು ಹೇಳಿದರು. ನಾವು ಜನತೆಗೆ ಲಾಂದ್ರ ಕಂಬವನ್ನೂ ತೋರಿಸಿಲ್ಲ, ಚಂದ್ರ ಬಿಂಬವನ್ನೂ ತೋರಿಸಿಲ್ಲ. ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಆಕರ್ಷಕವಾದ ಘೋಷಣೆಗಳನ್ನು ಕೂಡ ಹೇಳಲಿಲ್ಲ. ನಾವು ಜನತೆಗೆ ಹೇಳಿದ್ದು ಸಮಾಜವಾದ ಸಮಾಜ ರಚನೆ ಮಾಡುವುದರಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟು ಮುಂದೆ ಹೋಗುತ್ತೇವೆಂದು ಹೇಳಿದೆವು. ಜನತೆ ನಮ್ಮಲ್ಲಿ ವಿಶ್ವಾಸವನ್ನಿಟ್ಟು ನಮ್ಮನ್ನು ಆರಿಸಿ ಇಲ್ಲಿಗೆ ಕಳುಹಿಸಿದ್ದಾರೆ. ಯಾವುದಾದರೂ ಒಂದು ರಾಜಕೀಯ ಪಕ್ಷದ ಪರಿಣಾಮಗಳನ್ನು, ಸರ್ಕಾರ ಕೈಗೊಂಡಂಥ ಕಾರ್ಯಕ್ರಮಗಳ ಪರಿಣಾಮಗಳನ್ನು ಎಂಟು ಹತ್ತು ತಿಂಗಳಲ್ಲಿ ನಿರ್ಧರಿಸುವುದು ಬಹಳ ಕಷ್ಟ ಕೆಲಸ. ಈ ಹತ್ತು ತಿಂಗಳಲ್ಲಿ ಸರ್ಕಾರ ಏನೇನು ಮಾಡಿದೆ ಎಂದು ಮೊನ್ನೆ ಶ್ರೀ ದೇವೇಗೌಡರು ಹೇಳಿದರು. ಬಹುಶಃ ಅವರು ಮಾತನಾಡಿದ ಧಾಟಿಯನ್ನು ನೋಡಿದಾಗ, ಶ್ರೀ ರಾಮಕೃಷ್ಣ ಹೆಗಡೆ ಅವರು ಮೇಲ್ಮನೆಯಲ್ಲಿ ಮಾತನಾಡುವಾಗ ಒಂದು ಪಟ್ಟಿಯನ್ನು ಏನು ಕೊಟ್ಟರೋ ಅಂಥ ಒಂದು ಪಟ್ಟಿಯನ್ನು ಇಲ್ಲಿಯೂ ಕೊಟ್ಟು ಬೆನ್ನು ಚಪ್ಪರಿಸಿಕೊಳ್ಳಬಹುದಾಗಿತ್ತು ಎನ್ನುವ ಉದ್ದೇಶವಿತ್ತೋ ಎಂದು ಕಾಣಿಸುತ್ತದೆ.

ಮಾನ್ಯ ಅಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಒಂದು ಸಣ್ಣ ವಿಷಯವನ್ನು ಉದಹರಿಸ ಬಯಸುತ್ತೇನೆ. ಅದೇನೆಂದರೆ ಬೆಳಗಾಂ ಜಿಲ್ಲೆಯಲ್ಲಿ ಅರಟಾಳು ರುದ್ರಗೌಡ ಎಂಬ ಜಮೀನ್ದಾರರಿದ್ದರು. ಆಗ ಬಾಪೂ ರಾವ್ ಎಂಬುವರು ಜಿಲ್ಲಾ ಕಲೆಕ್ಟರಾಗಿದ್ದರು. ಅವರಿಗೆ ಹೈನಗಾಗಿ ಒಂದು ಒಳ್ಳೆಯ ಹಸು ಬೇಕಾಗಿತ್ತು. ಅರಟಾಳು ರುದ್ರಗೌಡರು ತಮ್ಮ ಮಿತ್ರರ ಮನೆಯಿಂದ ಬಹಳ ಹಾಲು ಕೊಡುವ ಒಂದು ಹಸುವನ್ನು ಕಲೆಕ್ಟರ ಮನೆಗೆ ಕಳುಹಿಸಿಕೊಟ್ಟರು. ಅವರ ಮನೆ

(ಶ್ರೀ ಆರ್. ಎಸ್. ಪಾಟೀಲ್)

ಯಲ್ಲಿ ಹಸುವಿಗೆ ಹಸೀ ಹುಲ್ಲು, ಕಡಲೆ ಬೇಳೆಯ ಹೂರ್ಣ ಮಲಗಲಿಕ್ಕೆ ಕೆಳಕ್ಕೆ ತಾಟು ಇಷ್ಟೆಲ್ಲ ವ್ಯವಸ್ಥೆ ಮಾಡಿದರು. ಅದು ಹಾಲು ಕೊಡುವುದನ್ನು ಯಾವತ್ತು ಬಂದ್ ಮಾಡಿತೋ ಆಗ ಕಲೆಕ್ಟರು ಆ ಹಸುವನ್ನು ತಮ್ಮ ಧನ್ಯವಾದಗಳೊಂದಿಗೆ ಮಾಲೀಕನ ಮನೆಗೆ ಕಳುಹಿಸಿದರು. ಮಾಲೀಕ ಸಂತೋಷಪಟ್ಟು, ಅದನ್ನು ಕೊಟ್ಟಿಗೆಯಲ್ಲಿ ' ಕಟ್ಟಿ ಅದಕ್ಕೆ ಹೊಟ್ಟು ಹಾಕಿದ. ಹಸು ಹುಲ್ಲು, ಹೂರ್ಣ ಮೇದ ದನ ಅಂಬಾ ಎನ್ನುವುದಕ್ಕೆ ಷುರು ಮಾಡಿತು. ಹಾಗೆ 20 ವರ್ಷದಿಂದ ರಾಜಕೀಯದ ಅನುಭವ ಉಂಡು, ಹಸಿರು ಮೇವು ಮತ್ತು ಹೂರ್ಣ ಉಂಡು ಅನುಭವವಿದ್ದವರು, ಇವರಿಂದ ನಮಗೆ ಏನೂ ಪರಿಣಾಮವಾಗಲಾರದು ಎಂದು ಜನತೆ ಇವರನ್ನು ಮನೆಗೆ ಕಳುಹಿಸಿತು. ಇವರು ಮನೆಗೆ ವಾಪಸು ಬಂದ ಹಸುವಿನಂತೆ ಅಂಬಾ ಎನ್ನುವುದು ಅತಿಶಯೋಕ್ತಿ ಏನಲ್ಲ.

ಶ್ರೀ ಎಚ್. ಡಿ. ದೇವೇಗೌಡ.– ನಿಮ್ಮ ಮುಖ್ಯ ಮಂತ್ರಿಗಳಿಗೆ ಯಾವ ಹೂರಣದ ಅನುಭವ ಏದೆ ? ಅವರೂ ಆರು ವರ್ಷವಿದ್ದರಲ್ಲ.

ಶ್ರೀ ಆರ್. ಎಸ್. ಪಾಟೀಲ್.—ನಿಮ್ಮ ಸಹವಾಸ ಸಾಕು ಎಂದು ಮಂತ್ರಿ ಪದವಿಯನ್ನು ಬಿಟ್ಟರು.

ರಾಯಚೂರು, ಬೆಳಗಾಂ ಮುಂತಾದ ಎಂಟು ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ತಲೆದೋರಿದಾಗ ಈ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದೋ ಅಂತ ನಾವು ಕಾತುರತೆಯಲ್ಲಿದ್ದೆವು. ಈ ಬಜೆಟ್ಟನ್ನು ನೋಡಿ ನಮಗೆ ಸಂತೋಷವಾಗಿ ಮುಂದಿನ ಸುಗ್ಗಿ ಬರುವವರೆಗೆ ಬದುಕಬಹುದು ಎನ್ನುವ ವಿಶ್ವಾಸ ಹುಟ್ಟಿದೆ.

4-30 P.M.

ಈವಾಗ ನಮ್ಮ ಸರ್ಕಾರದವರು ಖಾಯಂ ಸಂರಕ್ಷಣಾ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಈವಾಗ ನಮ್ಮ ರಾಜ್ಯಕ್ಕೆ 8ನೇ ಬರಗಾಲ ಹೋಗಿ 9ನೇ ಬರಗಾಲ ಬಂದಿದೆ. ಅದಕ್ಕೆ ನಮ್ಮ ಸರ್ಕಾರ ಲಕ್ಷ್ಯಕೊಟ್ಟು ತಾತ್ಕಾಲಿಕ ಪರಿಹಾರ ವ್ಯವಸ್ಥೆಗಳನ್ನು ಮಾತ್ರವಲ್ಲದೆ ಖಾಯಂ ಸಂರಕ್ಷಣಾ ಕಾಮಗಾರಿ ಕೆಲಸಗಳನ್ನೂ ಕೂಡ ತೆಗೆದುಕೊಂಡಿದೆ. ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ನನ್ನ ತಾಲ್ಲೂಕಿಗೆ ಸಂಬಂಧಪಟ್ಟ ಮಲಪ್ರಭಾ ಯೋಜನೆ ಬಗ್ಗೆ ಹೇಳುತ್ತೇನೆ. ಹಿಂದೆ ಈ ಅಣೆಕಟ್ಟನ್ನು ಕಟ್ಟುವಾಗ ಸುಮಾರು 7—8 ಹಳ್ಳಿಗಳು ಮುಳುಗಿ ಹೋಗಿ ಅಲ್ಲಿಯ ಜನರು ನಿರ್ಗತಿಕರಾದರು. ಹಾಗೆ ಅಣೆಕಟ್ಟೆಯನ್ನು ಕಟ್ಟುವಾಗ ಮುಂದಿನ ಜನಾಂಗದವರ ಭವಿಷ್ಯ ನೋಡಿಕೊಂಡು ಕಾಲುವೆಯ ಕೆಲಸವನ್ನೂ ಕೂಡ ಮುಗಿಸಬಹುದಾಗಿತ್ತು. ಆ ಕಾಲುವೆಯ ಕೆಲಸ ಮುಗಿಸದೇ ಇದ್ದುದರಿಂದ ಅದರ ಒಂದು ಹನಿಯೂ ಕೂಡ ಉಪಯೋಗವಾಗಲಿಲ್ಲ. ಇದರಿಂದ ಮನಸ್ಸಿಗೆ ಎಷ್ಟು ನೋವಾಗಿರಬಹುದು. ಹಾಗೆಯೇ ಈ ಬಲದಂಡೆ ಕಾಲುವೆ ಕೆಲಸವನ್ನೂ ಮುಗಿಸಿದ್ದರೆ ನಮ್ಮ ಕಡೆ ಭಾಗ್ಯದ ಲಕ್ಷ್ಮಿ ಬಂದಂತಾಗುತ್ತಿತ್ತು. ಅದೇ ರೀತಿ ಈ ಘಟಪ್ರಭಾ ಯೋಜನೆ ಸುಮಾರು 75-100 ಕೋಟಿ ರೂಪಾಯಿಯ ಯೋಜನೆಯನ್ನು ಪ್ರತಿ ವರ್ಷವೂ ಹಾಕಿಕೊಳ್ಳುತ್ತಿದ್ದಾರೆ. ಇದನ್ನು ಮಾಡಿದ್ದರೆ ಎಂದೋ ಮುಗಿಸಬಹುದಾಗಿತ್ತು. ಅದರ ಅಂದಾಜೂ ಕೂಡ ಆಗಿತ್ತು, ಮತ್ತು 1968-69ರಲ್ಲಿ ಏಜೆನ್ಸಿ ಕೂಡ ಫಿಕ್ಸ್ ಆಗಿತ್ತು. ಆದರೆ ಯಾವುದೋ ಕಾರಣಾಂತರದಿಂದ ಇದನ್ನು ಕೈಬಿಡಲಾಯಿತು. ಈಗ ಅಂಥಾದ್ದಕ್ಕೆ ಮಂಜೂರಾತಿ ಸಿಕ್ಕಿರುವುದು ನೋಡಿದರೆ ಬರಗಾಲ ಪ್ರದೇಶದಲ್ಲಿರತಕ್ಕಂಥ ಜನರಿಗೆ ಒಂದು ಜೀವದಾನ ಕೊಟ್ಟಂತಾಗಿದೆ.

ಇನ್ನು ಸಾಯಿಲ್ ಕನ್‌ಸರ್ವೇಷನ್ ವಿಷಯದ ಬಗ್ಗೆ ಹೇಳುವುದಾದರೆ ಈ ವರ್ಷ ಇದಕ್ಕೆ ಸುಮಾರು $13\frac{1}{2}$ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ· ನಮ್ಮ ದೇಶದಲ್ಲಿ ಇಷ್ಟೊಂದು ಲಿಫ್ಟ್ ಇರ್ರಿಗೇಷನ್ ಸ್ಕೀಂ ಇದೆ ಎನ್ನುವುದು ಈ ಯೋಜನೆಗಳನ್ನು ಹಾಕಿಕೊಂಡ ನಂತರ ಗೊತ್ತಾಗಿದೆ. ಅಲ್ಲದೆ ಹಿಂದೆ ಅವರು ಮೈನರ್ ಇರ್ರಿಗೇಷನ್ ಸ್ಕೀಂಗಳನ್ನೂ ತೆಗೆದುಕೊಂಡು ಮಾಡಬಹುದಾಗಿತ್ತು ಅದನ್ನು ಇಷ್ಟರವರೆಗೂ ಏತಕ್ಕೆ ತೆಗೆದುಕೊಳ್ಳಲಿಲ್ಲ ಎಂದು ಕೇಳುತ್ತೇನೆ. ಈವೊತ್ತು ಸುಮಾರು 120 ಲಿಫ್ಟ್ ಇರ್ರಿಗೇಷನ್ ಸ್ಕೀಂಗಳು ಮಂಜೂರಾಗಿವೆ. ಇನ್ನೂ 50 ಮೈನರ್ ಲಿಫ್ಟ್ ಇರ್ರಿಗೇಷನ್ ಸ್ಕೀಂಸ್ ಈ ಮಾರ್ಚಿಯಲ್ಲಿ ಮಂಜೂರಾತಿ ಆಗುತ್ತವೆ. ಇದನ್ನು ಕೇಳಿದರೆ ಬಹಳ ಸಂತೋಷವಾಗುತ್ತದೆ. ಈ 50 ಮೈನರ್ ಲಿಫ್ಟ್ ಇರ್ರಿಗೇಷನ್ ಸ್ಕೀಂಗೆ ಮಂಜೂರಾತಿ ಕೊಟ್ಟಿದ್ದು ನೋಡಿದರೆ ಕೆಲವು ನಮ್ಮ ದೇಶದಲ್ಲಿ ಬಡತನ ನೀಗುವುದಕ್ಕೆ ಸಹಾಯವಾಗುತ್ತದೆ. ಹಿಂದೆಂದೂ ಕೂಡ ಇಷ್ಟೊಂದು ಕೆಲಸ ನಡೆದಿರಲಿಲ್ಲ ಎಂದು ಹೇಳುತ್ತೇನೆ. ನಾವು ವಾಸ್ತವಿಕವಾದ

ದೃಷ್ಟಿಯಿಂದ ನೋಡಿದರೆ ಈ ಬರಗಾಲದ ಪರಿಹಾರ್ಥವಾಗಿ ಈ ಸಣ್ಣ ಸಣ್ಣ ಕೆಲಸಗಳಿಗೂ ಕೂಡ ನಮ್ಮ ಸರ್ಕಾರ ಎಷ್ಟು ಮುತುವರ್ಜಿ ವಹಿಸಿದೆ ಎನ್ನುವುದು ಈ ಬಡ್ಜೆಟ್ಟಿನಿಂದ ತಿಳಿದು ಬರುತ್ತದೆ. ಇಷ್ಟೇ ಅಲ್ಲದೆ ಹಾಸ್ಟಲ್‌ನಲ್ಲಿರತಕ್ಕಂಥ ವಿದ್ಯಾರ್ಥಿಗಳು ಸೂಟಿನಲ್ಲಿ ಊರಿಗೆ ಹೋದರೆ ಅವರ ಅನ್ನದ ಗತಿ ಏನು ಎಂದು ತಿಳಿದು ಆ ಹಾಸ್ಟಲುಗಳಿಗೆ ಸೂಟಿ ಕೊಡದೆ ಅದನ್ನು ಮುಂದುವರೆಸಬೇಕೆಂದು ಸರ್ಕಾರ ಆಜ್ಞೆ ಕೊಟ್ಟದ್ದು ನೋಡಿದರೆ ಬಹಳ ಸಂತೋಷವಾಗಿದೆ.

ಇನ್ನು ಕುಡಿಯುವ ನೀರಿನ ಬಾವಿಗಳ ಬಗ್ಗೆ ನನ್ನ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ 4 ಸಾವಿರ ಬಾವಿಗಳು ಇವೆ. 3 ವರ್ಷದಿಂದಲೂ ಮಳೆ ಇಲ್ಲದೆ ಅವು ಬತ್ತಿಹೋಗಿವೆ. ಅಂಥವುಗಳನ್ನು ಹೆಚ್ಚು ಆಳ ಮಾಡುವುದಕ್ಕಾಗಿ ಪ್ರತಿ ತಾಲ್ಲೂಕಿಗೂ 5 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದನ್ನು ನೋಡಿದರೆ ನಮಗೆ ಅತಿ ಆನಂದವಾಗುತ್ತದೆ. ಈ ಬಗ್ಗೆ ಒಂದು ಸಂಗತಿಯನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಅದು ಏನೆಂದರೆ ಬಾವಿಯನ್ನು ಆಳವಾಗಿ ತೋಡಿಸುವುದಕ್ಕೆ ಒಂದು ಬಾವಿಗೂ ಮತ್ತೊಂದು ಬಾವಿಗೂ 600 ಅಡಿ ಅಂತರ ಇರಬೇಕು ಎಂದು ಮಾಡಿದ್ದಾರೆ. ಈ ನಿಯಮ ಹಳೆ ಬಾವಿಗೆ ಅನ್ವಯಿಸಬಾರದು ಎಂದು ಹೇಳುತ್ತೇನೆ. ಏತಕ್ಕೆಂದರೆ ಈ ಮಳೆ ಅಭಾವದಿಂದ ಆ ಹಳೇ ಬಾವಿಗಳಲ್ಲಿ ನೀರು ಇಲ್ಲದಂತಾಗಿದೆ. ಆದುದರಿಂದ ಈ ನಿಯಮ ಅವುಗಳಿಗೆ ಅನ್ವಯಿಸಬಾರದೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಇಷ್ಟೇ ಅಲ್ಲದೆ ಹೊಸ ಬಾವಿಗಳನ್ನು ಮಾಡುವ ಸಲುವಾಗಿ ಬೇಕಾದಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. 1974ರ ಅಂತ್ಯದೊಳಗೆ ಎಲ್ಲಾ ಊರುಗಳಿಗೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿರುವುದು ನೋಡಿದರೆ ನಮಗೆ ಬಹಳ ಸಂತೋಷವಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.— ಮಂತ್ರಿಗಳ ವ್ಯವಹಾರ ನೋಡಿದರೆ ನಮಗೆ ಸಂತೋಷವಾಗಿದೆ.

ಶ್ರೀ ಆರ್. ಎಸ್. ಪಾಟೀಲ್.—ಇನ್ನು ಈಗ ಹಿಂಗಾರು ಮಳೆ ಹೋಯಿತು. ಇನ್ನು ಮುಂದೆ ಮುಂಗಾರು ಮಳೆ ಬಿದ್ದಾಗ ಒಕ್ಕಲಿಗರಿಗೆ ಏನು ಮಾಡಬೇಕೆಂದು ಅವರ ಕಷ್ಟವನ್ನು ತಿಳಿದು ಅದಕ್ಕಾಗಿ ಅವರಿಗೆ ಬೀಜ ಮತ್ತು ಕೃಷಿ ಪರಿಕರಗಳನ್ನು ಒದಗಿಸುವುದಕ್ಕಾಗಿ ತಕ್ಕ ಏರ್ಪಾಟು ಮಾಡಿದ್ದಾರೆ. ಅದಕ್ಕಾಗಿ 15 ಕೋಟಿ ರೂಪಾಯಿ ವೆಚ್ಚದಲ್ಲಿ ಗೊಬ್ಬರ ಮುಂತಾದವುಗಳನ್ನು ಒದಗಿಸುವ ವ್ಯಾಪಕ ಕಾರ್ಯಕ್ರಮವನ್ನೂ ಕೂಡ ಈ ಬಡ್ಜೆಟ್ಟಿನಲ್ಲಿ ಸಿದ್ಧಪಡಿಸಲಾಗಿದೆ ಎಂದು ಹೇಳಿರುವುದನ್ನು ನೋಡಿದರೆ ಪ್ರತಿಯೊಬ್ಬ ಒಕ್ಕಲಿಗನಿಗೂ ಹೋಲುವಂಥ ಬಡವರ ಬಡ್ಜೆಟ್ ಎಂದು ಹೇಳಿದರೆ ಅತಿಯೋಕ್ತಿಯಾಗಲಾರದು. ಇಂತಹ ವ್ಯವಸ್ಥೆಯನ್ನು ಮಾಡಿದ್ದು ನಿಜವಾಗಿ ಸ್ವಾಗತಾರ್ಹವಲ್ಲವೇ ?

ಶ್ರೀ ಎಂ. ಎಸ್. ಕೃಷ್ಣನ್.--- ಪ್ರತಿಯೊಂದಕ್ಕೂ ಸಂತೋಷ ಸ್ವಾಗತಾರ್ಹ ಎಂದು ಹೇಳುತ್ತೀರಿ. ಹಾಗಾದರೆ ತಾವು ಮಾತನಾಡುವುದನ್ನು ಒಂದೇ ಲೈನ್‌ನಲ್ಲಿ ಮುಗಿಸಬಹುದಲ್ಲಾ.

ಶ್ರೀ ಆರ್. ಎಸ್. ಪಾಟೀಲ್.—ಇಂತಹ ಒಂದು ಕಾರ್ಯಕ್ರಮವನ್ನು ನಮ್ಮ ಸರ್ಕಾರ ತೆಗೆದುಕೊಂಡಿರುವುದನ್ನು ನೋಡಿದರೆ ಸಂತೋಷವಾಗುವುದಿಲ್ಲವೇ ? ಇದು ನಮಗೆ ಅಂತಲ್ಲ ಅಭಾವ ಪ್ರದೇಶದಲ್ಲಿರತಕ್ಕಂಥವರ ಕಷ್ಟಕಾರ್ಪಣ್ಯಗಳನ್ನು ಅರಿತು ಅವರ ಬಗ್ಗೆ ಏನೇನು ಸಲಹೆ ಮಾಡಿದ್ದಾರೆ ಅದು ಅವರ ಹೃದಯದಲ್ಲಿರತಕ್ಕಂಥ ಅನುಕಂಪವನ್ನು ತೋರಿಸುತ್ತದೆ. ಅವರು ಮಾಡಿರುವ ಕೆಲಸವನ್ನು ನಾವು ಸ್ವಾಗತಿಸುತ್ತೇವೆ. ಅದರ ಜೊತೆಯಲ್ಲೇ ಪೇಜಾವರ ಮಠದ ಸ್ವಾಮಿಗಳವರನ್ನೂ ಮತ್ತು ಮೂರು ಸಾವಿರ ಮಠದ ಸ್ವಾಮಿಗಳವರನ್ನೂ ಕೂಡ ನಾವು ನೆನೆಸಿಕೊಳ್ಳಬೇಕಾಗಿದೆ. ಅವರುಗಳು ಈ ಬರಗಾಲದ ಪೀಡಿನ ಕಡೆಗೆ ಅವರ ಹೃದಯವಂತಿಕೆಯನ್ನೂ ಮತ್ತು ಅವರ ಅನುಕಂಪವನ್ನೂ ತೋರಿಸುತ್ತಾ ಇರುವುದನ್ನು ನೋಡಿದರೆ ಅವರ ಕೃತಜ್ಞತಾ ಭಾವನೆ ಏನು ಇದೆ ಎನ್ನುವುದು ಗೊತ್ತಾಗುತ್ತದೆ.

ಇನ್ನು ಇಡೀ ರಾಜ್ಯದಲ್ಲಿ ನೇಕಾರರ ಪರಿಸ್ಥಿತಿ ಕಷ್ಟವಾಗಿದೆ. ಮಾನ್ಯ ಸಚಿವರಾದ ಶ್ರೀಮಾನ್ ಎಸ್. ಎಂ. ಕೃಷ್ಣ ಅವರು ನೇಕಾರರ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ 55 ಲಕ್ಷ ರೂಪಾಯಿ ವೆಚ್ಚದಲ್ಲಿ ಏಳು ನೂಲಿನ ಡಿಪೋಗಳನ್ನು ತೆರೆಯಲಾಗಿದೆ ಎಂದು ಹೇಳಿದ್ದಾರೆ ಮತ್ತು ನೂಲಿನ ಪೂರೈಕೆ ಮಾತ್ರವಲ್ಲದೆ ಬಟ್ಟೆ ಖರೀದಿ ನಡೆಸುವ 15 ಪರಿಹಾರ ಕೇಂದ್ರಗಳನ್ನೂ ಸಹ ತೆರೆಯುವ ಉದ್ದೇಶವಿದೆ ಎಂದು ಹೇಳಿದ್ದಾರೆ. ಮತ್ತು ರಾಜ್ಯಕ್ಕೆ ಬರುವ ನೂಲಿನ ಹಂಚಿಕೆಯನ್ನು ಹೆಚ್ಚಿಸುವ ಬಗ್ಗೆಯೂ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದ್ದಾರೆ. ಮತ್ತು ಈ ಮನೆಯಲ್ಲಿ 2—3 ಸಲ ಹೇಳಿಕೆಯನ್ನೂ ಸಹ ಕೊಟ್ಟಿದ್ದಾರೆ. ಇದು ರಾಷ್ಟ್ರೀಯ ಸಮಸ್ಯೆ. ರಾಜ್ಯ ಸರ್ಕಾರ ಎಷ್ಟೇ ಪ್ರಯತ್ನ ಮಾಡಿದರೂ ಈ ನೇಕಾರರ ಇಚ್ಛೆಗನುಸಾರವಾಗಿ ಬಡಿಸುವಂತಾಗಲಿಲ್ಲ ಎಂದು ಹೇಳಿದ್ದಾರೆ. ನೇಕಾರರಿಗೆ ವಿವಿಧ ಕೌಂಟ್ಸ್‌ಗಳಲ್ಲಿ ಉಪಯೋಗವಾಗುತ್ತದೆ. ಒಂದು ಉದಾಹರಣೆ ಹೇಳುವುದಾದರೆ ನಮ್ಮ ರಾಮದುರ್ಗದಲ್ಲಿರುವ ನೇಕರರಿಗೆ 40 ಕೌಂಟ್ಸ್ ಇರುವ ನೂಲು

(ಶ್ರೀ ಆರ್. ಎಸ್. ಪಾಟೀಲ್)

ಬೇಕಾಗುತ್ತದೆ. ಅಲ್ಲಿಗೆ 60—80 ಕೌಂಟ್ಸ್ ಇರುವ ನೂಲು ಕಳುಹಿಸಿದರೆ ಉಪಯೋಗವಾಗುವುದಿಲ್ಲ. ಈ ಬಗ್ಗೆ ನಾನು ಒಂದು ಸಲಹೆ ಮಾಡುವುದು ಏನೆಂದರೆ ಇಂತಹ ನೂಲನ್ನು ಇಂತಹ ಧಾರಣೆಗೆ ಮಾರಬೇಕು ಎನ್ನುವ ಒಂದು ಪಟ್ಟಿಯನ್ನು ಇಡುವಂತೆ ಮಾಡಿದರೆ ಬಹಳ ಉಪಕಾರ ಮಾಡಿದಂತಾಗುತ್ತದೆ. ಅದರ ಜೊತೆಯಲ್ಲೇ ಸಹಕಾರ ಸಂಘಗಳಿಗೆ ನೂಲನ್ನು ಕೊಡುತ್ತಾರೆ. ಆ ಸಹಕಾರ ಸಂಘದವರು ಆ ನೂಲನ್ನು ತೆಗೆದುಕೊಂಡು ಹೋಗಿ ಸರಿಯಾಗಿ ಹಂಚುವ ವ್ಯವಸ್ಥೆ ಇಲ್ಲ. ಪ್ರತಿಯೊಂದು ಸಂಘವೂ ಸರಿಯಾಗಿ ವ್ಯವಸ್ಥೆ ಇಲ್ಲ. ಇದನ್ನು ನಿಗಾವಹಿಸಿ. ಇಲ್ಲದಿದ್ದರೆ ಯಾವ ಯಾವ ಸಂಘಕ್ಕೆ ಎಷ್ಟೆಷ್ಟು ನೂರು ಕೊಟ್ಟಿದೆ ಎನ್ನುವುದನ್ನು ಡೈಲಿ ಪತ್ರಿಕೆಯಲ್ಲಿ ಹಾಕಿದರೆ ಅವರಿಗೆ ಅನುಕೂಲ ಮಾಡಿದಂತಾಗುತ್ತದೆ. ಆಗಲಾದರೂ ಆ ಸಂಘದ ಸದಸ್ಯರು ಅವನ ಮೇಲೆ ಕೂತು ನೂಲನ್ನು ತೆಗೆದುಕೊಂಡು ಹೋಗುತ್ತಾರೆ. ಈ ರೀತಿಯಾಗಿ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಪರಿಹಾರ ಕೇಂದ್ರಗಳನ್ನು ತೆಗೆಯುತ್ತೇವೆ ಎಂದು ಹೇಳಿದ್ದಾರೆ. ದಯವಿಟ್ಟು ಅವುಗಳನ್ನು ಬೇಗನೇ ಶುರು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಕೇಂದ್ರ ಸರ್ಕಾರದವರು ಈ ನೂಲನ್ನು ಪೂರ್ತಿಯಾಗಿ ಕಂಟ್ರೋಲ್ ಮಾಡುತ್ತಾರೆ ಎಂದು ಪೇಪರ್‌ನಲ್ಲಿ ಓದಿದೆ. ಆದುದರಿಂದ ಇನ್ನು ಮೇಲಾದರೂ ಕೂಡ ಅವರ ಕಷ್ಟ ಪರಿಸ್ಥಿತಿಯನ್ನು ನಿವಾರಣೆ ಮಾಡಿದರೆ ಆ ಬಡ ನೇಕಾರರು ನಮಗೆ ಸುಖವಾದ ಕಾಲ ಬಂತು ಅನ್ನುವ ಆಸೆ ಮಾಡುತ್ತಾರೆ. ಆ ಜನರ ಕಷ್ಟವನ್ನು ನೋಡಿದರೆ ಅವರ ಮುಖವನ್ನು ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ಅವರು ಸುಖವಾಗಿ ಬಾಳುವಂತೆ ಮಾಡಿದರೆ ನನಗೆ ಒಂದು ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಅಲ್ಲದೆ ಆ ನೇಕಾರರ ಕಷ್ಟವನ್ನು ಪರಿಹಾರ ಮಾಡಿದಂಥ ಒಂದು ಶ್ರೇಯಸ್ಸೂ ಕೂಡ ತಮಗೆ ಬರುತ್ತದೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇಂದು ರಾಜ್ಯದಲ್ಲಿರುವ ಪಂಚಾಯತಿ ರಾಜ್ಯ ಸಂಸ್ಥೆಗಳು ಬಹಳ ನಿಷ್ಕ್ರಿಯವಾಗುತ್ತಿವೆ ನಾಲ್ಕೈದು ವರ್ಷಗಳ ಹಿಂದೆಯೂ ಈ ಪಂಚಾಯತಿ ರಾಜ್ಯ ಸಂಸ್ಥೆಗಳು ನಿಷ್ಕ್ರಿಯವಾಗಿದ್ದವು ಕಾರಣ ಇದರ ಬಗ್ಗೆ ಆಗಿನಿಂದಲೂ ಇದರ ವಿಲ್ಯಮಾಪನವನ್ನು ಸರಿಯಾಗಿ ಮಾಡುವವರೇ ಇಲ್ಲದೆ ಇಂದು ಕೂಡ ಇದು ನಿಷ್ಕ್ರಿಯವಾಗುತ್ತಿದೆ. ಇದರಲ್ಲಿ ಪಿಪಲ್ಸ್ ಪಾರ್ಟಿಸಿಪೇಷನ್ ಇರಬೇಕೆಂದು ಇಂತಹ ಪಂಚಾಯತಿ ರಾಜ್ಯ ಸಂಸ್ಥೆಗಳು ಸ್ಥಾಪಿತವಾದರೂ ಇದು ಸರಿಯಾಗಿ ಕೆಲಸಗಳನ್ನು ಮಾಡುತ್ತಿಲ್ಲ, ಇಂತಹ ಸಂಸ್ಥೆಗಳನ್ನು ಜೀವಂತವಾಗಿ ಉಳಿಸುವುದರ ಕಡೆಗೆ ಸರಕಾರ ಹೆಚ್ಚು ಗಮನ ಕೊಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಇಂತಹ ಸಂಸ್ಥೆಗಳಲ್ಲಿರುವ ಇತರ ಪಕ್ಷದ ಸದಸ್ಯರುಗಳನ್ನೆಲ್ಲಾ ತೆಗೆದು ಎಲ್ಲಾ (ಆರ್) ಪಕ್ಷದ ಸದಸ್ಯರುಗಳನ್ನು ನಾಮಕರಣ ಮಾಡಿದರೆ ಆಗ ಇವು ಚೆನ್ನಾಗಿ ಕೆಲಸ ಮಾಡುತ್ತವೆ ಎನ್ನುವುದು ತಮ್ಮ ಅಭಿಪ್ರಾಯವೇ ?

ಶ್ರೀ ಆರ್. ಎಸ್. ಪಾಟೀಲ್.—ನಾನು ಮಾನ್ಯ ಶ್ರೀ ದೇವೇಗೌಡರವರನ್ನು 1962ನೇ ಇಸವಿಯಿಂದಲೂ ನೋಡುತ್ತಿದ್ದೇನೆ. ಶ್ರೀಮಾನ್ ದೇವೇಗೌಡರು ಕಾಂಗ್ರೆಸ್ ಪಕ್ಷವನ್ನು ಎದುರಿಸಿ ಜನರ ವಿಶ್ವಾಸ ಪಡೆದು ಬಂದಿರತಕ್ಕವರು, ಇಂತಹವರು ಏತಕ್ಕಾಗಿ ಮುಳುಗುವ ದೋಣಿಯಲ್ಲಿ ತೇಲು ಹೋಗಿದ್ದಾರೆನ್ನುವುದು ಅರ್ಥವಾಗುತ್ತಿಲ್ಲ. ಇಂತಹ ಮುಳುಗುವ ದೋಣಿಯನ್ನು ಕೈಬಿಟ್ಟು ನಮ್ಮ ಪಕ್ಷಕ್ಕೆ ಬಂದು ಒಳ್ಳೆಯ ಸಲಹೆಗಳನ್ನು ಕೊಟ್ಟರೆ ಅದು ಜನರ ವಿಶ್ವಾಸ ಗಳಿಸಿದಂತಾಗುತ್ತದೆ. ಇಂತಹ ಮುಳುಗುವ ದೋಣಿಯಲ್ಲಿ ಕುಳಿತರೆ ನಮ್ಮ ದೇಶಕ್ಕೆ ಕಲ್ಯಾಣವಾಗುವುದಿಲ್ಲ ಎನ್ನುವ ಮಾತನ್ನು ಅವರು ಅರಿಯಬೇಕೆಂದು ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ವಿ. ಮುನಿಸ್ವಾಮಿ (ಮಾಲೂರ್).—ಮಾನ್ಯ ಅಧ್ಯಕ್ಷರೇ, ಈ ವರ್ಷ ನಮ್ಮ ಅರ್ಥ ಸಚಿವರು ಮಂಡಿಸಿರುವ ಆಯವ್ಯಯ ಮುಂಗಡ ಪತ್ರವನ್ನು ಸಂಪೂರ್ಣವಾಗಿ ಅನುಮೋದಿಸುತ್ತ ನಾನು ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ.

ಆಯವ್ಯಯ ಪತ್ರದಲ್ಲಿ ಬರಗಾಲದ ಪರಿಸ್ಥಿತಿಯ ಬಗ್ಗೆ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಬೇಕಾದಷ್ಟು ಅಂಶಗಳನ್ನು ಇದರಲ್ಲಿ ಸೂಚಿಸಿರುವುದು ತುಂಬಾ ಸಂತೋಷದ ಸಂಗತಿ. ನಮ್ಮ ಸಮಾಜವಾದ ಯಾವ ರೀತಿ ಇರಬೇಕು ಎಂದು ಪ್ರಜೆಗಳ ಮುಂದೆ ನಿಂತು ಹೇಳಿ ಅವರಿಂದ ಮತ ಪಡೆದು ಇಂದು ಅದರ ಸಾಧನೆಗಾಗಿ ನಾವು ಸ್ವಲ್ಪ ಸ್ವಲ್ಪವಾಗಿ, ಹಂತ ಹಂತವಾಗಿ ನಮ್ಮ ಸಾಧನೆಗಳು ಯಾವರೀತಿ ಇರಬೇಕು ಎನ್ನುವುದರ ಬಗ್ಗೆ ನಮ್ಮ ಅರ್ಥ ಮಂತ್ರಿಗಳು ಆಯವ್ಯಯ ಪತ್ರದಲ್ಲಿ ಹೇಳಿರುವುದು ಬಹಳ ಸಮಂಜಸವಾಗಿದೆ. ಈ ಸಂದರ್ಭದಲ್ಲಿ ನಮ್ಮ

ವಿರೋಧ ಪಕ್ಷದ ನಾಯಕರು ಹಾಗೂ ಉಳಿದ ಪಕ್ಷದ ಸದಸ್ಯರು ಇದರ ಬಗ್ಗೆ ವಿರೋಧವನ್ನು ವ್ಯಕ್ತ ಮಾಡುತ್ತಾ ಕೆಲವು ಅಂಶಗಳನ್ನು ಎತ್ತಿದ್ದಾರೆ. ಒಬ್ಬ ಸದಸ್ಯರು ಕರವಿಲ್ಲದ ಅಯವ್ಯಯ ಪತ್ರವಾದರೂ ಬೇರೆ ರೀತಿಯ ಟ್ಯಾಕ್ಸ್‌ಗಳನ್ನು ಹಾಕುತ್ತಿದ್ದಾರೆಂದು ಹೇಳಿದರು. ಅವರು ಇಂದು ಅಧಿಕಾರದಲ್ಲಿಲ್ಲ. ನಾಳೆ ಅವರು ಅಧಿಕಾರಕ್ಕೆ ಬಂದರೂ ಅವರು ಕೂಡ ಕರವಿಲ್ಲದಂತಹ ಅಯವ್ಯಯ ಪತ್ರವನ್ನು ಮಾಡಿಸಲಾರರು. ಹಾಗೆ ಕರವಿಲ್ಲದೆ ಹೋದರೆ ಹಿಂದೆ ಇಸ್ಟ್ ಇಂಡಿಯಾ ಕಂಪನಿ ಬಂದಾಗ ಅಲ್ಲಿನ ನಾಯಕರಾದ ಶ್ರೀ ಜಯಸಿಂಹರವರಿಗೆ ಎಲ್ಲವನ್ನೂ ಗುತ್ತಿಗೆಗೆ ಕೊಟ್ಟುಬಿಟ್ಟಿದ್ದರು. ಆಗಿನ ಸರಕಾರದಲ್ಲಿ ಒಂದು ತಾಲ್ಲೂಕು ತಹಶೀಲುದಾರಿಗೆ, ಒಂದು ಹೋಬಳಿ ಶೇಕದಾರರಿಗೆ, ಒಂದು ಡಿಸ್ಟ್ರಿಕ್ಟ್ ಒಬ್ಬ ಡೆಪ್ಯೂಟಿ ಕಮಿಷನರ್‌ರವರಿಗೆ ಎಂದು ಪೂರ್ತಿ ಅಧಿಕಾರ ಕೊಡುತ್ತಿದ್ದರೋ ಏನೋ ? ಕರವಿಲ್ಲದೆ ಯಾವ ರಾಜ್ಯದಲ್ಲೂ ಎಂದೂ ಅಯವ್ಯಯ ಪತ್ರವನ್ನು ಮಾಡಲು ಸಾಧ್ಯವಿಲ್ಲ. ನಮ್ಮ ಅರ್ಥಸಚಿವರು ಹೊಸ ತೆರಿಗೆಗಳನ್ನು ಹಾಕಲಿಲ್ಲ, ಹಳೆಯ ತೆರಿಗೆಗಳನ್ನೇ ಸಂಪೂರ್ಣವಾಗಿ ಯಾಶಸ್ವಿಯಾಗುವ ರೀತಿಯಲ್ಲಿ ಮಾಡಿದ್ದಾರೆ. ಇದರಲ್ಲಿ ನನ್ನ ಸಲಹೆ ಏನೆಂದರೆ ಐದನೇ ಫೈನಾನ್ಸ್ ಕಮಿಷನ್ನಿನಿಂದ ನಮ್ಮ ಪ್ರಜಾ ಸಂಖ್ಯೆಗನುಗುಣವಾಗಿ ನಮ್ಮ ಸಂಸ್ಥಾನಕ್ಕೆ ತಕ್ಕಷ್ಟು ಸಹಾಯ ಬಂದಿಲ್ಲ. ಈಚೆಗೆ ಆರನೇ ಆರ್ಥಿಕ ಆಯೋಗ ಕೂಡ ಇಲ್ಲಿ ಬಂದಿತ್ತು. ಇದರ ಮೂಲಕ ನಮ್ಮ ಸರಕಾರ ಇನ್ನೂ ಹೆಚ್ಚು ಪಡೆದು ನಮ್ಮ ಅಯವ್ಯಯ ಪತ್ರವನ್ನು ಸಮತೂಗಿಸಬೇಕು ಎಂದು ಹೇಳಿರುವುದು ಸಮಂಜಸವಾಗಿದೆ. ಈ ಸಂದರ್ಭದಲ್ಲಿ ನಮ್ಮ ಮಾನ್ಯ ಶ್ರೀ ದೇವೇಗೌಡರು ಬೆಲೆಗಳ ಏರಿಕೆ ಬಗ್ಗೆ ಹೇಳುತ್ತಾ ''ಇಂದು ಅಕ್ಕಿಯ ಬೆಲೆ ಎರಡು, ಎರಡೂಕಾಲು ಹಾಗೂ ಮೂರು ರೂಪಾಯಿಗಳ ವರೆಗೆ ಏರುತ್ತಿದೆ'' ಎಂದು ಹೇಳಿದರು, ಇಂತಹ ಬೆಲೆ ಏರಿಕೆ ಹಿಂದೆ ಇದ್ದ ಸರಕಾರದಲ್ಲೂ ಇತ್ತು ಅದರಂತೆ ಈಗಲೂ ಬೆಲೆಗಳು ಏರುತ್ತಿವೆ, ನಿಜ. ಆದರೆ ಅಕ್ಕಿ ಬೆಲೆ ಒಂದೇ ಏರುತ್ತಿಲ್ಲ. ಇದಕ್ಕನುಗುಣವಾಗಿ ಇತರ ಪದಾರ್ಥಗಳ ಬೆಲೆಗಳೂ ಏರುತ್ತಿವೆ, ಕೈಗಾರಿಕೋದ್ಯಮಗಳಲ್ಲಿ ಬೇಕಾದ ಸಾಮಗ್ರಿಗಳು ಕೂಡ ಬೆಲೆಯಲ್ಲಿ ಹೆಚ್ಚಾಗುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗೇ ನಿಮ್ಮ ಬೆಲೆಯೂ ಏರುತ್ತಿದೆ.

ಶ್ರೀ ಎ. ವಿ. ಮುನಿಸ್ವಾಮಿ.—ಇದರ ವಿಚಾರ ಬೇಡ. ನಾನೂರು ಎಕರೆ ಜಮೀನು ಇರುವವರೂ ಕೂಡ ಇಂದು ಬರಗಾಲಕ್ಕೆ ಸಿಕ್ಕಿಕೊಂಡಿರುವಾಗ ನೀವು ಇದನ್ನು ನಿಮ್ಮ ಆತ್ಮಶುದ್ಧಿಯಿಂದ ಇಲ್ಲಿ ಹೇಳಬೇಕಾಗಿದೆ. ನಿಮ್ಮ ಹಿಂದಿನ ಮೆಷಿನರಿ ಹಾಗೂ ನಿಮ್ಮ ಅವ್ಯವಹಾರಗಳನ್ನೆಲ್ಲಾ ನೋಡಿ ಅಂದಿನ ಜನ ಪರದಾಡುತ್ತಿದ್ದುದನ್ನೂ ನಾವು ನೋಡಿದ್ದೇವೆ, ಇಂದು ಕಂದಾಯ ಕೊಡುತ್ತಿರುವವರು ರೈತರು, ಇವರಿಗೆ ಬರುವ ಉತ್ಪತ್ತಿಯಲ್ಲಿ ಬಹುಪಾಲು ಕಂದಾಯಕ್ಕೇ ಕೊಡಬೇಕಾಗಿದೆ, ಇದರ ಮೇಲೆ ಭೂಕಂದಾಯದ ಲೆವಿ 30 ರೂಪಾಯಿ ಎಂದು ವಸೂಲು ಮಾಡುತ್ತಾರೆ. ಇಂತಹ ಎಲ್ಲ ತೆರಿಗೆಗಳನ್ನೂ ಕೊಡುತ್ತಿರುವವರು ರೈತರೇ ಹೊರತು ಇತರರಲ್ಲ ನಿಮ್ಮ ರಾಜ್ಯಭಾರದಲ್ಲಿ ಕೂಡ ರೈತರ ಮೇಲೆ ಏನು ಹೊರಿಸುತ್ತಿದ್ದರೋ ಅದನ್ನೇ ಈಗಲೂ ವಸೂಲು ಮಾಡಿಕೊಂಡು ಬರುತ್ತಿದ್ದಾರೆ, ಇವರ ಬಗ್ಗೆ ಹಿಂದಿನಿಂದಲೂ ಯಾವ ಒಂದು ರೀತಿಯ ನಿರ್ದಿಷ್ಟವಾದ ಪ್ರೋಗ್ರಾಂ ಇರಲಿಲ್ಲ ಮತ್ತು ಜನ ಯಾವ ರೀತಿಯಾಗಿ ಸುಖವಾಗಿದ್ದರು ಎನ್ನುವುದನ್ನು ನಾವೆಲ್ಲರೂ ತಿಳಿದುಕೊಂಡಿದ್ದೇವೆ,

ಶ್ರೀ ಎಂ. ಎಸ್. ಕೃಷ್ಣನ್.—ತಮಗೆ ಎಷ್ಟು ಜಮೀನು ಇದೆ.

ಶ್ರೀ ಎ. ವಿ. ಮುನಿಸ್ವಾಮಿ.—ಭೂಸುಧಾರಣೆಯನ್ನು ನಾನು ಸ್ವಾಗತಿಸಿದ್ದೇನೆ. ಭೂಸುಧಾರಣೆಯನ್ನು ಸಮಾಜವಾದಕ್ಕನುಸಾರವಾಗಿ ತಂದು ರಾಜ್ಯದಲ್ಲಿ ಸಮಾಜವಾದವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದೇವೆ, ಇದರಲ್ಲಿ ಯಾವ ಸಂದೇಹವೂ ಇಲ್ಲ, ನಮ್ಮ ಸೆಲೆಕ್ಟ್ ಕಮಿಟಿಯವರು ಎಷ್ಟು ಭೂಮಿ ಇರಬೇಕೆಂದು ನಿಗದಿ ಮಾಡುತ್ತಾರೋ ಅವನ್ನು ಮಾತ್ರ ಉಳಿಸಿಕೊಂಡು ಉಳಿಕೆಯಾಗುವ ಭೂಮಿಯನ್ನು ನನ್ನ ವಂತಿಗೆಯಾಗಿ ಸರೆಂಡರು ಮಾಡಲು ಸಿದ್ಧವಾಗಿದ್ದೇನೆ, ಇದರ ಬಗ್ಗೆ ನಮ್ಮ ಮಾನ್ಯ ಕಮ್ಯೂನಿಸ್ಟ್ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್‌ರವರು ಪಾಠ ಹೇಳಿ ಕಲಿಸಿಕೊಡಬೇಕಾಗಿಲ್ಲ. ನಾನು ಭೂಮಿಯನ್ನು ಕಳೆದುಕೊಂಡರೆ ನನಗೆ ಬೇರೆ ರೀತಿಯಲ್ಲಿ ಸಂಪಾದನೆ ಮಾಡಿಕೊಳ್ಳುವ ಶಕ್ತಿ ಇದೆ. ಇದರಲ್ಲಿ ಹಿಂಜರಿಯುತ್ತಿದ್ದಾರೆಂದು ನೀವೇನೂ ಹೇಳಬೇಕಾಗಿಲ್ಲ. ನಮ್ಮ ಹನ್ನೊಂದು ತಿಂಗಳ ರಾಜ್ಯಭಾರದಲ್ಲಿ ಬೆಲೆಗಳೇನೂ ಏರುತ್ತ ಬಂದಿಲ್ಲ, ಬೆಲೆಗಳು ಏರುವುದಕ್ಕೆ ನಾನಾ ಕಾರಣಗಳಿರುತ್ತವೆ. ನಾಲ್ಕನೆ ಯೋಜನೆಯ ಅವಧಿ ಐದು ವರ್ಷಗಳಲ್ಲಿ ಮುಗಿಯಲಿಲ್ಲ. ಇದು ಬಹಳ ಉದ್ದವಾಗಿ ಮುಂದುವರಿದುದರಿಂದ ನಮ್ಮ ಸಾಧನೆಗಳೂ ಕೂಡ ಕುಂಠಿತವಾದುವು. ಆದರೆ ಜನಸಂಖ್ಯೆ ಮಾತ್ರ ಕಡಿಮೆಯಾಗಲಿಲ್ಲ. ಇವರಿಂದಾಗಿ ಎಷ್ಟು ಕಾರ್ಯಗಳನ್ನು ಮಾಡಬೇಕೆಂದಿದ್ದೆವೋ ಅಷ್ಟು ಮಾಡಲಕ್ಕಾಗಲಿಲ್ಲ.

(ಶ್ರೀ ಎ. ವಿ. ಮುನಿಸ್ವಾಮಿ)

ಈ ಧಾನ್ಯಗಳ ಬೆಲೆಗಳು ಏರುತ್ತಿರುವುದಕ್ಕೆ ಮತ್ತೊಂದು ಕಾರಣವೆಂದರೆ, ಸರ್ಕಾರದವರು ಧಾನ್ಯದ ಎಲ್ಲ ವಹಿವಾಟನ್ನು ವಹಿಸಿಕೊಳ್ಳಬೇಕೆಂದು ತೀರ್ಮಾನ ಮಾಡಿರುವುದರಿಂದ. ಕಪ್ಪು ಹಣ ಇರುವವರು ಸರ್ಕಾರದ ತೀರ್ಮಾನವನ್ನು ಕೇಳಿದ ನಂತರ ಆಹಾರಧಾನ್ಯಗಳ ದಾಸ್ತಾನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅಕ್ಕಿಯ ಬೆಲೆ ಹೆಚ್ಚುತ್ತಿರುವುದಕ್ಕೆ ಗ್ರಾಹಕರೂ ಸಹ ಕಾರಣರಾಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಹೇಗೆಂದರೆ, ಬೆಳಿಗ್ಗೆ ಅಕ್ಕಿಯಿಂದ ತಯಾರಿಸಿದ ಇಡ್ಲಿ, ಅಥವಾ ದೋಸೆಯನ್ನು ತಿನ್ನುತ್ತಾರೆ. ಮಧ್ಯಾನದ ಊಟಕ್ಕೆ ಅನ್ನ, ಸಾರು, ಹುಳಿ, ಮಜ್ಜಿಗೆಯನ್ನು ಉಪಯೋಗ ಮಾಡುತ್ತಾರೆ. ಮತ್ತೆ ರಾತ್ರಿಗೂ ಸಹ ಅನ್ನ, ಸಾರು, ಹುಳಿ, ಮಜ್ಜಿಗೆಯನ್ನು ಉಪಯೋಗ ಮಾಡುತ್ತಾರೆ. ಅವಲಕ್ಕಿಗೂ ಅಕ್ಕಿಯನ್ನೇ ಉಪಯೋಗ ಮಾಡುತ್ತಾರೆ. ಈ ರೀತಿ ಪ್ರತಿಯೊಬ್ಬರೂ ಅಕ್ಕಿಯನ್ನೇ ಯಾವಾಗಲೂ ಉಪಯೋಗ ಮಾಡುತ್ತಿರುವುದರಿಂದ ಅದರ ಬೆಲೆ ಏರುವುದು ಸಹಜ. ಅಕ್ಕಿಯ ಬೆಲೆ ಕಡಿಮೆಯಾಗಬೇಕಾದರೆ ಊಟದಲ್ಲಿ ಬದಲಾವಣೆ ಮಾಡಿಕೊಳ್ಳುವುದು ಒಳ್ಳೆಯದು. ನಮ್ಮ ಮಾಲೂರು ತಾಲ್ಲೂಕಿನಲ್ಲಿ ಹೆಚ್ಚಾಗಿ ತರಕಾರಿಯನ್ನು ಬೆಳೆಯಲಾಗುತ್ತಿದೆ. 50 ಪೈಸೆಗೆ ಒಂದು ಕೆ. ಜಿ. ಯಂತೆ ಪುಷ್ಟಿಕರವಾದ ತರಕಾರಿಯನ್ನು ನಾವು ಬೇಕಾದರೆ ಒದಗಿಸುತ್ತೇವೆ. ಎಲ್ಲರೂ ಹೆಚ್ಚು ತರಕಾರಿಯನ್ನು ತಿನ್ನುವುದರ ಮೂಲಕ ಅಕ್ಕಿಯ ಬಳಕೆಯನ್ನು ಕಡಿಮೆ ಮಾಡಬಹುದಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಊಟದಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಯು. ಪಿ. ಯಲ್ಲಿ ಘೆಂಡಾಸಿಂಗ್ ಎಂಬ ಮಂತ್ರಿಗಳು ಇಲಿಗಳನ್ನು ತಿಂದರೆ ಒಳ್ಳೆಯದು ಎಂದು ಹೇಳಿದ್ದರು. ಅದನ್ನು ಮಾನ್ಯ ಸದಸ್ಯರು ಪ್ರತಿಪಾದಿಸುತ್ತಾರೆಯೋ ಎಂದು ಕೇಳುತ್ತೇನೆ ?

ಶ್ರೀ ಡಿ. ಬಿ. ಕಲ್ಮಂಕರ್.—ಅವರ ಹೆಸರೇ ಘೇಂಡಾಸಿಂಗ್, ಆದ್ದರಿಂದ ಅ ಸಲಹೆ ಕೊಟ್ಟಿದ್ದಾರೆ.

ಶ್ರೀ ಎ. ವಿ. ಮುನಿಸ್ವಾಮಿ.—ಹೀಗೆ ನಾನಾ ಕಾರಣಗಳಿಂದ ಬೆಲೆಗಳು ಏರುತ್ತಿವೆ. ಅಕ್ಕಿ ಮತ್ತು ಗೋಧಿಯ ಸಗಟು ವ್ಯಾಪಾರವನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ತೀರ್ಮಾನ ತೆಗೆದುಕೊಂಡಮೇಲೆ ತಕ್ಷಣ ಏತಕ್ಕೆ ತೆಗೆದುಕೊಳ್ಳಲಿಲ್ಲ ಎಂದು ವಿರೋಧಪಕ್ಷದವರು ಆಗ್ರಹಪಡಿಸಿದರು. ತಕ್ಷಣ ವಹಿಸಿಕೊಳ್ಳುವುದು ಅಷ್ಟೊಂದು ಸುಲಭವಲ್ಲ. ಅದಕ್ಕೆ ಗೋಡೌನ್ ಬೇಕು, ಸಿಬ್ಬಂದಿ ಬೇಕು, ಹಣ ಬೇಕು, ಆಹಾರವನ್ನು ವಿತರಣೆ ಮಾಡಲು ಮೆಷಿನರಿ ಬೇಕು ಇಷ್ಟೆಲ್ಲಾ ನೋಡಿಕೊಂಡು ನಂತರ ವಹಿಸಿಕೊಳ್ಳಬೇಕಾಗುತ್ತದೆ. ಕೂಡಲೇ ತೆಗೆದುಕೊಂಡರೆ ನಮ್ಮ ಪ್ಲಾನ್ ಫೇಲ್ ಆಗುತ್ತದೆ. ಯಾವುದನ್ನೇ ಆಗಲೀ ಸರಿಯಾದ ತಳಹದಿಯ ಮೇಲೆ ಮಾಡಬೇಕಾಗುತ್ತದೆ. ಹಿಂದಿನ ಸರ್ಕಾರದವರು ಪಾನನಿರೋಧದಲ್ಲಿ ನಂಬಿಕೆ ಇದೆ ಎಂದು ಹೇಳಿದವರು ಮತ್ತೆ ಅದನ್ನು ತೆಗೆದುಹಾಕಿದರು.

ಶ್ರೀ ಎಚ್. ಎಸ್. ಸಿದ್ದಪ್ಪ.—ಅಕ್ಕಿ ಮತ್ತು ಗೋಧಿಯ ಸಗಟು ವ್ಯಾಪಾರವನ್ನು ವಹಿಸಿಕೊಂಡ ಮೇಲೆ ಎರಡು ಕಾಲಿನ ಹೆಗ್ಗಣಗಳು ಜಾಸ್ತಿಯಾಗದಂತೆ ನೋಡಿಕೊಳ್ಳಿ.

ಶ್ರೀ ಎ. ವಿ. ಮುನಿಸ್ವಾಮಿ.—ಹಿಂದಿನ ಸರ್ಕಾರ ಇದ್ದಾಗ ಎಲ್ಲ ಸೊಸೈಟಿಗಳಲ್ಲಿಯೂ ಹಣದ ದುರುಪಯೋಗವಾಗಿದೆ. ಇನ್ನು ಮುಂದೆಯೂ ಸಹ ಆ ರೀತಿಯಾಗದಂತೆ ನೋಡಿಕೊಳ್ಳುವ ಸಲುವಾಗಿ ಅಕ್ಕಿ ಮತ್ತು ಗೋಧಿಯ ಸಗಟು ವ್ಯಾಪಾರವನ್ನು ವಹಿಸಿಕೊಳ್ಳಲು ನಿಧಾನವಾಗಿದೆ. ಯಾವುದನ್ನೂ ಯೋಚನೆ ಮಾಡದೆ ಇದ್ದರೆ ಹಿಂದಿನ ಸರ್ಕಾರಕ್ಕೆ ಆದ ಗತಿಯೇ ನಮ್ಮ ಸರ್ಕಾರಕ್ಕೂ ಆಗಬಹುದು. ಅದಕ್ಕಾಗಿ ಸರ್ಕಾರದವರು ಎಲ್ಲ ವಿವರಗಳನ್ನು ಸಂಗ್ರಹ ಮಾಡುತ್ತಿದ್ದಾರೆ. ಹಿಂದಿನ ಸರ್ಕಾರದ ಆಡಳಿತ ಬೇಡ ಎಂದು ಜನರು ಅಸೆಂಬ್ಲಿ ಚುನಾವಣೆಯಲ್ಲಿ ತಮ್ಮ ತೀರ್ಮಾನ ಕೊಟ್ಟಿದ್ದಾರೆ. ಇದೇ ರೀತಿಯ ತೀರ್ಮಾನವನ್ನು ಪಾರ್ಲಿಮೆಂಟ್ ಚುನಾವಣೆಯಲ್ಲಿಯೂ ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ತಾಲ್ಲೂಕ್ ಬೋರ್ಡ್‌ಗಳನ್ನೇ ಅಬಾಲಿಷ್ ಮಾಡುವುದಕ್ಕೆ ಹೊರಟಿದ್ದಾರೆಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಇಂದು ತಾಲ್ಲೂಕ್‌ಬೋರ್ಡ್‌ಗಳಲ್ಲಿ ಆಗುತ್ತಿರುವ ಗುಂಪುಗಾರಿಕೆ ಏನು ಎಂಬುದು ಜನರಿಗೆ ಗೊತ್ತಿದೆ. ಹಿಂದಿನ ಸರ್ಕಾರ ಇದ್ದಾಗ ಹುಡುಗರೇ ಇಲ್ಲದ ಕಡೆ ಸ್ಕೂಲ್ ಕಟ್ಟಡಗಳನ್ನು ಕಟ್ಟಿಸಿಬಿಟ್ಟರು ; ಹುಡುಗರು ಇರುವ ಕಡೆ ಕಟ್ಟಿಸಲಿಲ್ಲ ; ಅವರ ಗುಂಪಿನ ಜನರು ಇರುವ ಕಡೆಗಳಲ್ಲಿ ಎಲ್ಲ ಕೆಲಸಗಳನ್ನು ಮಾಡಿಸಿದರು, ಬೇರೆ ಕಡೆ ಯಾವ ಕೆಲಸಗಳೂ ಆಗಲಿಲ್ಲ ? ಹಿಂದಿನ ಸರ್ಕಾರದವರು ಹಸಿರು ಕ್ರಾಂತಿಯ ಬಗ್ಗೆ ಸರಿಯಾದ ಕಾರ್ಯ

ಕ್ರಮ ತೆಗೆದುಕೊಂಡಿದ್ದರೆ ಇಂದು ನಾವು ಆಹಾರದ ವಿಷಯದಲ್ಲಿ ಸ್ವಪರಿಪೂರ್ಣತೆಯನ್ನು ಹೊಂದಿರುತ್ತಿದ್ದೆವು. ಹಿಂದಿನವರು ಸರಿಯಾಗಿ ಕೆಲಸ ಮಾಡದಿದ್ದರಿಂದ ಅದರ ಕಷ್ಟವನ್ನು ನಾವು ಈಗ ಅನುಭವಿಸಬೇಕಾಗಿದೆ. ಈಗ ನಮ್ಮ ಸರ್ಕಾರದವರು ಅಭಿವೃದ್ಧಿ ಕೆಲಸಗಳನ್ನು ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಂಡು ಮಾಡುತ್ತಿದ್ದಾರೆ. ಸರ್ಕಾರದ ಕೆಲಸ ದೇವರ ಕೆಲಸ ಎಂದು ವಿಧಾನಸೌಧದ ಮೇಲೆ ಕೆತ್ತಿಸಿದ್ದನ್ನು ತೆಗೆಸಿಹಾಕಿದವರೂ ಸಹ ಹಿಂದಿನ ಸರ್ಕಾರದವರೇ ಪ್ರತಿಯೊಂದು ಕೆಲಸವನ್ನೂ ಮಾಡಬೇಕೆಂದು ವಿರೋಧಪಕ್ಷದವರು ಹೇಳುತ್ತಿದ್ದಾರೆ. ಅದು ಸಾಧ್ಯವಿಲ್ಲದ ಮಾತು. ಜನರ ಒಂದು ಅಭಿಪ್ರಾಯಕ್ಕೆ ತಕ್ಕಂತೆ ಸರ್ಕಾರದವರು ನಡೆದುಕೊಳ್ಳಬೇಕಾಗುತ್ತದೆ. ಈ ವಿಚಾರದಲ್ಲಿ ಮಿಸ್-ಗೈಡ್ ಮಾಡುವುದಕ್ಕೆ ವಿರೋಧಪಕ್ಷದವರು ಹೋಗುವುದು ಸರಿಯಲ್ಲ. ಅರಸನು ಬೇಕಾದರೆ ಒಬ್ಬ ಪ್ರಜೆಯ ತಲೆ ಒಡೆಸಬಹುದು, ಆದರೆ ಪ್ರಜಾಪ್ರಭುತ್ವದಲ್ಲಿ ಆ ರೀತಿ ಮಾಡುವುದಕ್ಕಾಗುವುದಿಲ್ಲ. ನೂರು ಎಕರೆ ಜಮೀನು ಇರುವವರಿಗೆಲ್ಲಾ ಕಂದಾಯ ಜಾಸ್ತಿ ಹಾಕಿ ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು. ನೂರು ಎಕರೆ ಜಮೀನು ಇರುವ ಜಮೀನುದಾರ ಎಲ್ಲ ಕೆಲಸವನ್ನು ತಾನೊಬ್ಬನೇ ಮಾಡುವುದಕ್ಕಾಗುವುದಿಲ್ಲ. ಕೂಲಿಗಳನ್ನು ಇಟ್ಟುಕೊಂಡು ಕೆಲಸ ಮಾಡಿಸಬೇಕಾಗುತ್ತದೆ. ಕೂಲಿ ಕೊಡಬೇಕಾಗುತ್ತದೆ ಆದ್ದರಿಂದ ಆದಾಯವೆಲ್ಲಾ ಒಂದೇ ಕಡೆ ಸೇರುತ್ತದೆಂದು ಹೇಳುವುದು ತಪ್ಪು. ವ್ಯವಸಾಯ ಕಾರ್ಮಿಕರಿಗೆ ಕೂಲಿ ನಿಗದಿ ಮಾಡಬೇಕೆಂದು ಸಲಹೆ ಮಾಡಿದರು. ಆದರೆ ಇಂದು ವ್ಯವಸಾಯ ಕಾರ್ಮಿಕರು ಒಂದೇ ಕಡೆ ಕೆಲಸ ಮಾಡುವುದಿಲ್ಲ. ಇಂದು ಒಂದು ಕಡೆ ಕೆಲಸ ಮಾಡಿದರೆ ನಾಳೆ ಇನ್ನೊಂದು ಕಡೆ ಕೆಲಸ ಮಾಡುತ್ತಾರೆ. ಮತ್ತು ಇವರು ನಗರಗಳಲ್ಲಿರುವ ಕಾರ್ಖಾನೆಗಳಲ್ಲಿ ಕಾರ್ಮಿಕರು ಕೆಲಸ ಮಾಡುವಂತೆ ನಿಗದಿಯಾದ ಸಮಯದಲ್ಲಿ ಅಂದರೆ 8 ಗಂಟೆಯವರೆಗೆ ಕೆಲಸ ಮಾಡುವುದಿಲ್ಲ. ಬೆಳಿಗ್ಗೆ 8—9 ಗಂಟೆಗೆ ಕೆಲಸಕ್ಕೆ ಬಂದರೂ ಕೆಲಸ ಮಾಡಿಸಿಕೊಂಡು ಮಧ್ಯಾಹ್ನ ಊಟ ಹಾಕಿ ಸಾಯಂಕಾಲ ಕೂಲಿ ಕೊಡುತ್ತಾರೆ. ನಾಳೆ ಇನ್ನೊಂದು ಕಡೆ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಈ ಕಾರಣದಿಂದ ವ್ಯವಸಾಯ ಕಾರ್ಮಿಕರನ್ನು ಮತ್ತು ಕಾರ್ಖಾನೆಯ ಕಾರ್ಮಿಕರನ್ನು ಹೊಂದಾಣಿಕೆ ಮಾಡುವುದು ಸರಿಯಲ್ಲ. ಮತ್ತು ಹೆಚ್ಚು ಜಮೀನು ಇರುವವರ ಹತ್ತಿರ ಹೆಚ್ಚು ಕಂದಾಯ ವಸೂಲಿ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಒಟ್ಟಿನಲ್ಲಿ ವಿರೋಧಪಕ್ಷದವರು ಅಡ್ಡಿ ಆತಂಕ ಮಾಡದೆ ನಮ್ಮ ಜೊತೆಯಲ್ಲಿ ಸಹಕರಿಸಿದ್ದೇ ಆದರೆ ದೇಶದಲ್ಲಿ ಸುಭಿಕ್ಷ ಉಂಟಾಗುತ್ತದೆ. ನೆನ್ನೆ ಮೊನ್ನೆ ಗಲಾಟೆ ಮಾಡಿದಂತೆ ಮತ್ತೆ ಮತ್ತೆ ಮಾಡಿ ಕಾಲು ಮುರಿದುಕೊಳ್ಳಬೇಡಿ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಕೃತಜ್ಞತೆಯನ್ನು ಸಮರ್ಪಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲ್ಲಾಯ (ಬಂಟವಾಳ).—ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ನಮ್ಮ ಮಾನ್ಯ ಆರ್ಥಿಕ ಸಚಿವರು ಬಡ್ಜೆಟ್ ಮಂಡಿಸಿದ ಆರಂಭದಲ್ಲಿ, ಅವರು ಮೊದಲನೇ ಬಡ್ಜೆಟ್ ಮಂಡಿಸಿದ್ದಾರೆ, ರಾಜ್ಯದ ಆರ್ಥಿಕ ಪರಿಸ್ಥಿತಿ ಅವರ ಹತೋಟಿಗೆ ಇನ್ನೂ ಬಂದಿರಲಾರದು, ಹಿಂದಿನ ಸರ್ಕಾರದವರು ಏನೇನು ತೊಂದರೆಗಳನ್ನೆಲ್ಲಾ ಮಾಡಿದ್ದಾರೆ ಅದನ್ನು ಸರಿಪಡಿಸುವುದಕ್ಕೆ ಸ್ವಲ್ಪ ಕಾಲ ಬೇಕಾಗಬಹುದು ಎಂದುಕೊಂಡು ಹಿಂದಿನ ವರ್ಷದ ಬಡ್ಜೆಟ್ ಬಗ್ಗೆ ಜನರು ಹೆಚ್ಚು ಆಕ್ಷೇಪ ಎತ್ತಲಿಲ್ಲವೇ ಹೊರತು ಹಿಂದಿನ ವರ್ಷದ ಬಡ್ಜೆಟ್‌ನಿಂದ ಜನರಿಗೆ ಸಮಾಧಾನವೇನೂ ಆಗಿರಲಿಲ್ಲ. ಮತ್ತು ಹಿಂದಿನ ವರ್ಷದ ಬಡ್ಜೆಟ್‌ನ್ನು ಸ್ವಾಗತವನ್ನೂ ಸಹ ಮಾಡಿರಲಿಲ್ಲ, ಮುಂದೆ ಕಾದು ನೋಡೋಣ ಎಂದು ನಿರೀಕ್ಷೆಯಿಂದ ಜನರು ಇದ್ದರು. ಈಗ ಮಾನ್ಯ ಸಚಿವರು ತಮ್ಮ ಎರಡನೇ ಬಡ್ಜೆಟ್‌ನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಕಳೆದ ಒಂದು ವರ್ಷದಲ್ಲಿ ನಮ್ಮ ರಾಜ್ಯದಲ್ಲಿ ಶ್ರೀಮಾನ್ ದೇವರಾಜ ಅರಸ್ ಅವರ ಸರ್ಕಾರ ನಮ್ಮ ರಾಜ್ಯದಲ್ಲಿ ಜನರ ಜೀವನಕ್ಕೆ ಸಂಬಂಧಪಟ್ಟ ಮುಖ್ಯ ವಿಚಾರಗಳಲ್ಲಿ ಯಾವ ಯಾವ ಕ್ರಮಗಳನ್ನು ಕೈಕೊಂಡಿದೆ ಎಂಬುದನ್ನು ಈ ಸಾಲಿನ ಬಡ್ಜೆಟ್‌ನಿಂದ ನಾವು ಪರೀಕ್ಷೆ ಮಾಡಿ ನೋಡಬೇಕಾಗಿದೆ.

5.00 P.M

ಈ ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಏನಾಗಿದೆ ಎಂದರೆ ನಾಲ್ಕು ಜಿಲ್ಲೆಗಳಲ್ಲಿ ಕ್ಷಾಮ ಪರಿಸ್ಥಿತಿ ಇದೆ. ಅಲ್ಲಿ ಜನಗಳಿಗೆ ಅನ್ನ ಇಲ್ಲ, ಉದ್ಯೋಗವಿಲ್ಲ, ಅವರಿಗೆ ಕುಡಿಯುವುದಕ್ಕೆ ನೀರು ಇಲ್ಲ, ಉಳುವುದಕ್ಕೆ ಎತ್ತು ಇಲ್ಲ, ಅದನ್ನು ಸರ್ಕಾರದವರೂ ಸಹ ಒಪ್ಪಿಕೊಂಡಿದ್ದಾರೆ. ಮತ್ತು ಮಾನ್ಯ ಹಣಕಾಸಿನ ಸಚಿವರು ಅವರ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇದು ಹಳೆಯ ಸರ್ಕಾರದ ಪಾಪದ ಫಲ ಎಂದು ಈಗಿನ ಆಡಳಿತ ಪಕ್ಷದವರು ಹೇಳುತ್ತಾರೆ. ಶ್ರೀಮಾನ್ ದೇವೇಗೌಡರು ಮತ್ತು ಮಾಜಿ ಮುಖ್ಯಮಂತ್ರಿಗಳು ಎಲ್ಲರೂ ಇದು ನಮ್ಮ ಪಾಪದ ಫಲ ಅಲ್ಲ, ನಿಮ್ಮ ಲೋಪದ ಫಲ

(ಶ್ರೀ ಬಿ. ವಿ. ಕಕ್ಕಿಲಾಯ)

ಎಂದು ಹೇಳುತ್ತಾರೆ. ಇವರಿಬ್ಬರ ಜಗಳದಲ್ಲಿ ನಮಗೆ ಏನಾಗುತ್ತದೆ ಎಂದರೆ ಹಿಂದಿನ ಸರ್ಕಾರದ ಪಾಪದ ಫಲದಲ್ಲಿ ಈಗಿನ ಸರ್ಕಾರದಲ್ಲಿರತಕ್ಕವರೂ ಕೆಲವರು ಭಾಗಿಗಳಾಗಿದ್ದಾರೆ ಎಂಬುದನ್ನು ಒಪ್ಪಲೇ ಬೇಕು. ಈಗಿನ ಮುಖ್ಯಮಂತ್ರಿಗಳು ಹಿಂದಿನ ಮಂತ್ರಿಮಂಡಲದ(ದ್ದರು. ಆದ್ದರಿಂದ ಇವರೂ ಆ ಪಾಪದಲ್ಲಿ ಭಾಗಿಯಾಗಿದ್ದಾರೆ. ಆದ್ದರಿಂದ ಈಗ ನಾನು ಹೇಳುವುದೇನೆಂದರೆ, ಈಗ ಈ ಪಾಪವನ್ನು ಪರಿಹಾರ ಮಾಡಿ ಕ್ಷಾಮಕ್ಕೆ ಒಳಗಾಗಿರುವ ಜನಗಳಿಗೆ ಸಕಾಲದಲ್ಲಿ ಆವಶ್ಯಕತೆಗಳನ್ನು ಒದಗಿಸಿಕೊಡುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಮುಂದಕ್ಕೆ ಕ್ಷಾಮ ಬಾರದ ಹಾಗೆ ಶಾಶ್ವತವಾದ ಲೇಬಲ್ ಹಚ್ಚಿ ಸರ್ಕಾರ ತನ್ನ ಲೋಪಗಳನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಬರಗಾಲ ಪೀಡಿತ ಪ್ರದೇಶಗಳಲ್ಲಿ ಕಷ್ಟದಲ್ಲಿರುವ ಜನಗಳಿಗೆ ಪರಿಹಾರವನ್ನು ಒದಗಿಸಲು ಚುರುಕಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ವಿರೋಧ ಪಕ್ಷದವರಾದ ನಾವು ನಿಮ್ಮ ಯೋಜನೆಗಳಿಗೆ ಬೆಂಬಲ ಕೊಡುತ್ತೇವೆ. ಮುಖ್ಯವಾಗಿ ಬರಗಾಲ ಪೀಡಿತ ಪ್ರದೇಶಗಳಲ್ಲಿ ಜನಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಆ ಜನಗಳಿಗೆ ಉದ್ಯೋಗವನ್ನು ಒದಗಿಸುವ ದೃಷ್ಟಿಯಿಂದ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕು. ಮಾನ್ಯ ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದಲ್ಲಿ ಅಭಾವಪೀಡಿತ ಪ್ರದೇಶಗಳಲ್ಲಿ ಕೈಗೊಂಡಿರತಕ್ಕ ಕೆಲಸಕಾರ್ಯಗಳ ಬಗ್ಗೆ ಹೇಳಿದ್ದಾರೆ. ಆದರೂ ಸಹ ಸರ್ಕಾರದವರು ಈ ಅಭಾವ ಪೀಡಿತ ಪ್ರದೇಶಗಳನ್ನು ಒಂದು ಸರಿಯಾದಂತಹ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳದೇ ಹೋದರೆ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಕಷ್ಟವಾಗುತ್ತದೆ. ನಮ್ಮ ವಿರೋಧ ಪಕ್ಷದ ಸದಸ್ಯರೊಬ್ಬರ ಆಯೋಗ ಆ ಪ್ರದೇಶಕ್ಕೆ ಹೋಗಿ ಅಲ್ಲಿ ನಿಜವಾದ ಪರಿಸ್ಥಿತಿಯನ್ನು ತಿಳಿದುಕೊಂಡು ಬಂದು ಒಂದು ವರದಿಯನ್ನು ಈ ಸದನದ ಮುಂದಿಟ್ಟಿದ್ದಾರೆ. ಆ ವರದಿಯಲ್ಲಿ ಹೇಳಿರುವಂತೆ ಯಾವುದೇ ಕಾರ್ಯಕ್ರಮಗಳನ್ನೂ ಕೂಡ ಪೂರ್ತಿ ಆಚರಣೆಗೆ ತರುವುದಕ್ಕೆ ನಿಮ್ಮ ಕೈಯಲ್ಲಿ ಆಗಿಲ್ಲ ಎಂದು ಕಂಡು ಬರುತ್ತದೆ. ಮೊನ್ನೆ ಶ್ರೀಮತಿ ಇಂದಿರಾಗಾಂಧಿಯವರು ಗುಲ್ಬರ್ಗ ಮತ್ತು ಬಸವಕಲ್ಯಾಣಕ್ಕೆ ಹೋದಾಗ ಅಲ್ಲಿ ಸಭೆ ನಡೆದಾಗ ಜನಗಳು ಕಣ್ಣೀರು ಸುರಿಸಿದರು ಎಂದು ಒಬ್ಬರು ಸದಸ್ಯರು ಹೇಳಿದರು. ಅವರು ಸಂತೋಷದಿಂದ ಕಣ್ಣೀರು ಸುರಿಸಿದರು ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಹೊಟ್ಟೆಯಲ್ಲಿ ಹಸಿವಿನ ಬೆಂಕಿಯನ್ನು ತಾಳಲಾರದೆ ಕಣ್ಣೀರು ಸುರಿಸಿದ್ದಾರೆ ಆ ಜನಗಳ ಕಣ್ಣೀರನ್ನು ಒರೆಸುವುದಕ್ಕೆ ಪ್ರಯತ್ನ ಮಾಡದಿದ್ದರೆ ನೀವು ಆ ಜನಗಳ ಕಣ್ಣೀರಿನಲ್ಲಿ ಕೊಚ್ಚಿ ಹೋಗುತ್ತೀರಿ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇವೊತ್ತು ಈ ಬರಗಾಲ ಪೀಡಿತ 4 ಜಿಲ್ಲೆಗಳಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಆಹಾರ ಪರಿಸ್ಥಿತಿ ಬಹಳ ಕಷ್ಟಕರವಾಗಿದೆ. ದಿನನಿತ್ಯ ಉಪಯೋಗಿಸತಕ್ಕ ಪ್ರತಿಯೊಂದು ವಸ್ತುವಿನ ಅಭಾವವೂ ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಅದನ್ನು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಂಡು ಜೀವನಾವಶ್ಯಕ ವಸ್ತುಗಳು ಜನತೆಗೆ ಸುಲಭವಾಗಿ ದೊರೆಯುವಂತೆ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಈ ಸಂಸ್ಥಾಕಾಂಗ್ರೆಸಿನವರ ಸತ್ಯಾಗ್ರಹದ ಬಗ್ಗೆ ಹೇಳುವುದಾದರೆ ಈ ಸತ್ಯಾಗ್ರಹ ಮತ್ತು ಹೋರಾಟ ಮಾಡುವವರ ಹಿಂದೆ ಜನ ಬರಬೇಕಾದರೆ ಇವರ ಚರಿತ್ರೆ ಗೊತ್ತಿರುವವರು ಇವರ ಹಿಂದೆ ಬರುವುದಿಲ್ಲ. ಆದ್ದರಿಂದ ಇವರ ಸತ್ಯಾಗ್ರಹ ಯಶಸ್ವಿಯಾಗಿಲ್ಲ. ಇದಕ್ಕೆ ಕಾರಣ ಹಿಂದೆ ಇದ್ದ ಸರ್ಕಾರ ಮಾಡಿದ ಪಾಪದ ಫಲವನ್ನು ಜನತೆ ಅನುಭವಿಸಿದ್ದಾರೆ. ಆದ್ದರಿಂದ ಇವೊತ್ತು ಇವರ ಹಿಂದೆ ಸತ್ಯಾಗ್ರಹಕ್ಕೆ ಜನತೆ ಮುಂದೆ ಬರುವುದಿಲ್ಲ. ಬಸವ ಕಲ್ಯಾಣಕ್ಕೆ ಶ್ರೀಮತಿ ಇಂದಿರಾಗಾಂಧಿಯವರು ಹೋದಾಗ ಒಂದು ತಮಾಷೆ ನಡೆಯಿತು. ಅದು ಏನೆಂದರೆ ಅಲ್ಲಿ ಶ್ರೀಮಾನ್ ವೀರೇಂದ್ರ ಪಾಟೀಲ್ ಅವರ ಸತ್ಯಾಗ್ರಹ ಯಶಸ್ವಿಯಾಗದೆ ಇದ್ದುದರಿಂದ ಅವರ ಶ್ರೀಮಾನ್ ದೇವರಾಜಅರಸು ಅವರಿಗೆ ಸಹಕಾರ ಹಸ್ತ ನೀಡಿದರು. ಶ್ರೀಮತಿ ಇಂದಿರಾಗಾಂಧಿಯವರಿಗೂ, ಶ್ರೀಮಾನ್ ದೇವರಾಜ ಅರಸ್ ಅವರಿಗೂ ಮತ್ತು ವೀರೇಂದ್ರ ಪಾಟೀಲ್ ಅವರಿಗೂ ಪಾಣಿಗ್ರಹಣ ನಡೆಯಿತು. ಎಂದರೆ ಕೈ ಕುಲಿಕಿದರು. ಹಿಂದಿನ ಸರ್ಕಾರದವರು ಜನತೆಯನ್ನು ಮರೆತು ಇಡೀ ದೇಶದಲ್ಲಿ ಗುತ್ತೆದಾರಿ ವರ್ಗವನ್ನು ಬೆಳೆಸಿದ್ದಾರೆ. ಬಡಜನತೆಯನ್ನು ಇನ್ನಷ್ಟು ಬಡತನಕ್ಕೆ ಗುರಿಮಾಡಿದ್ದಾರೆ. ಇದು ಕಳೆದ 25 ವರ್ಷಗಳಿಂದ ನಡೆದು ಬಂದಿದೆ. ನೀವು ಅದೇ ದಾರಿಯಲ್ಲಿ ಹೋದರೆ ಅದು ಸರಿಹೋಗುವುದಿಲ್ಲ. ಶ್ರೀಮಾನ್ ದೇವರಾಜಅರಸ್ ಅವರಿಗೂ ಮತ್ತು ವೀರೇಂದ್ರಪಾಟೀಲ್ ಅವರಿಗೂ ಪಾಣಿಗ್ರಹಣ ಆದ ಬಗ್ಗೆ ನಮಗೆ ಸ್ವಲ್ಪ ಅನುಮಾನ ಬಂದಿದೆ. ಅವರು ಹೇಳುವ ಹಾಗೆ ಈ ಸರ್ಕಾರದವರು ಹೋದರೆ ಅದರಲ್ಲಿ ಅಪಾಯ ಇದೆ. ಬೊಂಬಾಯಿ ಚುನಾವಣೆಯಲ್ಲಿ ಏನಾ

ಯಿತು ನೋಡಿ. ಒರಿಸ್ಸಾದಲ್ಲಿ ಏನಾಯಿತು ನೋಡಿ! ಆದಕ್ಕಾಗಿ ನಾನು ನಿಮಗೆ ಹೇಳುವುದೇನೆಂದರೆ ದಯವಿಟ್ಟು ಸಂಸ್ಥಾ ಕಾಂಗ್ರೆಸ್ಸಿನವರು ಹೋದ ದಾರಿಯಲ್ಲಿ ಹೋಗಬೇಡಿ ಎಂದು. ನೀವು ಬಡ್ಜೆಟ್ಟನ್ನು ಮಂಡಿಸುವಾಗ ಇದು ಆರಂಭದ ಕಾಲ ಸಮಾಜವಾದವನ್ನು ಜಾರಿಗೆ ತರುವುದು ಕಷ್ಟ. ನೀವು ಒಂದು ಹೆಜ್ಜೆಯನ್ನು ಮುಂದಕ್ಕೆ ಇಡಬೇಕಾದರೆ ಸ್ವಲ್ಪ ಹಿಂದಕ್ಕೆ ಜಾರುತ್ತೀರಿ, ಮೇಲಕ್ಕೆ ಹೋಗುವುದು ಕಷ್ಟ. ನೀವು ಇಳಿಜಾರು ದಾರಿಯಲ್ಲಿರುವಾಗ ಮೇಲೆ ಹೋಗುವುದು ಕಷ್ಟ. ನೀವು ಮೇಲಕ್ಕೆ ಹೋಗುವುದಕ್ಕೆ ಪ್ರಯತ್ನ ಮಾಡಿದರೆ ಕೆಲವರು ಹಿಂದೆ ಕಾಲು ಹಿಡಿದು ಜಗುತ್ತಾರೆ. ಆದ್ದರಿಂದ ಕಷ್ಟದ ದಾರಿಯಲ್ಲಿ ಹೋಗುವುದು ಬೇಡ. ಸುಲಭವಾದ ದಾರಿಯಲ್ಲಿ ಹೋಗೋಣ. ಈಗ 25 ವರ್ಷಗಳಿಂದ ಅಧಿಕಾರದಲ್ಲಿದ್ದವರು ಯಾವ ದಾರಿಯಲ್ಲಿ ಹೋಗಿದ್ದಾರೆ ಆ ದಾರಿಯಲ್ಲಿ ನೀವು ಹೋಗುವುದಾದರೆ ನೀವು ಬಹಳ ಕೀಳು ಮಟ್ಟಕ್ಕೆ ಬೀಳುತ್ತೀರಿ. ಆದ್ದರಿಂದ ತಾವು ದಯ ಮಾಡಿ ಈ ಬಗ್ಗೆ ಯೋಚನೆ ಮಾಡಬೇಕು.

ಈಗ ನಾನು ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಭೂಸುಧಾರಣೆಯ ಮಸೂದೆಯಲ್ಲಿ ಮೊದಲು ಸೀಲಿಂಗ್ 10 ಎಕರೆ ಮಾಡುತ್ತೇವೆಂದು ಹೇಳಿದರು. ಅದು ಆಳುವ ಪಕ್ಷದ ವರ್ಕಿಂಗ್ ಕಮಿಟಿಗೆ ಬಂದಾಗ 10 ಎಕರೆ ಇದ್ದದ್ದು 18 ಎಕರೆಯಾಯಿತು. ಇನ್ನು ಮುಂದೆ ಏನು ಮಾಡುತ್ತಾರೆಂದು ನನಗೆ ಗೊತ್ತಾಗುವುದಿಲ್ಲ. ಅದರಲ್ಲಿ ಇನ್ನೂ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ ; ಇನ್ನೂ ಅದು ಚರ್ಚೆಯಲ್ಲಿಯೇ ಇದೆ. ಆ ಮೇಲೆ ಅರ್ಬನ್ ಪ್ರಾಪರ್ಟಿಗೆ ಸೀಲಿಂಗ್ ತಂದು ಎರಡು ಲಕ್ಷದ ಮಿತಿ ಮಾಡುತ್ತೇವೆಂದು ಘೋಷಣೆ ಮಾಡಿದರು. ಈಗ ಅದನ್ನು ಸಹ ಕೈಬಿಟ್ಟಿದ್ದಾರೆ. ಇನ್ನು ನಮ್ಮ ಅಜೀಜ್ ಶೇಟರು ಒಬ್ಬ ಕಾರ್ಮಿಕ ನಾಯಕರು. ಇವತ್ತು ಒಂದು ಕಡೆಯಿಂದ ಅವರು ಎಂ. ಎಸ್. ಆರ್. ಟಿ. ಸಿ. ಯ ಮಾಲೀಕರಾಗಿಯೂ ಇದ್ದಾರೆ. ಇಂದು ಅವರು ಕಾರ್ಮಿಕರ ಹಿತರಕ್ಷಣೆ ಮಾಡುವುದನ್ನು ಬಿಟ್ಟು ಮಾಲಿಕರ ಹಿತರಕ್ಷಣೆ ಮಾಡುವುದಕ್ಕೆ ಹೋಗುತ್ತಿದ್ದಾರೆ ಎಂಬುದು ಅವರು ಮೈಸೂರಿನಲ್ಲಿ ಮಾಡಿದ ಹೇಳಿಕೆಯಿಂದ ಗೊತ್ತಾಗುತ್ತದೆ. ಕಾರ್ಮಿಕರಿಗೆ ನಮ್ಮ ದೇಶದಲ್ಲಿರತಕ್ಕಂತಹ ಕಾನೂನುಗಳಿಂದ ಅಷ್ಟು ರಕ್ಷಣೆ ಇಲ್ಲ ; ಅದಕ್ಕೆ ತಕ್ಕಂತಹ ತಿದ್ದುಪಡಿಗಳನ್ನು ಮಾಡುವ ಬದಲು ಇರತಕ್ಕಂತಹ ಕಾನೂನುಗಳಿಂದ ಸಣ್ಣ ಕೈಗಾರಿಕೆಗಳಿಗೆ ತಕ್ಷಣೆ ಕೊಡುವ ಉದ್ದೇಶದಿಂದ ಕಾನೂನಿನಲ್ಲಿ ವಿನಾಯಿತಿ ಕೊಡಬೇಕೆಂದು ಹೇಳುತ್ತಿದ್ದಾರೆ. ಇದನ್ನು ನೋಡಿದರೆ ನಮ್ಮ ರಾಜ್ಯದಲ್ಲಿರುವಂತಹ ಕಾರ್ಮಿಕರಿಗೆ ಅಜೀಜ್ ಸೇಟರಿಂದ ರಕ್ಷಣೆ ಸಿಗುವುದಿಲ್ಲವೋ ಎಂದು ಕಾಣುತ್ತದೆ. ಅವರು ಹಿಂದಿನದ್ದೆಲ್ಲವನ್ನೂ ಮಂತ್ರಿಯಾದ ಮೇಲೆ ಮರೆತು ಬಿಟ್ಟ ಹಾಗೆ ಕಾಣುತ್ತದೆ.

ಇನ್ನು ಹೋಲ್‌ಸೇಲ್ ಟ್ರೇಡ್ ಇನ್ ಫುಡ್‌ಗ್ರೈನ್ಸ್ ವಿಚಾರದಲ್ಲಿ ಒಂದು ದೊಡ್ಡ ಘೋಷಣೆಯನ್ನು ಮಾಡಿದರು. ಈಗ ಆ ಪ್ರಶ್ನೆ ಎಲ್ಲಿ ಹೋಯಿತು ? ಅದರ ಬಗ್ಗೆ ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಇವರಿಗೆ ಶಕ್ತಿ ಇಲ್ಲದಾಗಿದೆ. ಏಕೆಂದರೆ ಇವರು ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುವಾಗ ಡೆಲ್ಲಿಯಲ್ಲಿರುವ ಹೋಲ್‌ಸೇಲ್ ವ್ಯಾಪಾರಸ್ಥರು ಸತ್ಯಾಗ್ರಹ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಇಲ್ಲಿ ಸತ್ಯಾಗ್ರಹ ಮಾಡಿದಪಕ್ಷದವರು ಸಹ ಅಲ್ಲಿ ಸೇರಿದ ಹಾಗೆ ಕಾಣುತ್ತದೆ.

ಶ್ರೀ ಎಚ್.ಡಿ. ದೇವೇಗೌಡ.—ಅಂದರೆ ಯಾವ ಪಕ್ಷದವರು ?

ಶ್ರೀ ಬಿ. ವಿ. ಕಕ್ಕಿಲಾಯ.—ಯಾವ ಪಕ್ಷದವರು ಅಂದರೆ ನಿಮ್ಮ ಪಕ್ಷದವರೇ ?

ಶ್ರೀ ಎಚ್. ಡಿ. ದೇವೇಗೌಡ.– Can you prove that ?
ತಾವು ಅಷ್ಟು ಲಘುವಾಗಿ ಮಾತನಾಡುವುದಿಲ್ಲವಾದರೆ ಅದನ್ನು ಪ್ರೂವ್ ಮಾಡಬೇಕಾಗುತ್ತದೆ.

Sri B.V. KAKKILAYA.—I am going to prove that. Let us discuss it. I have not made allegation against any individual or against any leader. It is a political question.

ಇವೊತ್ತಿನ ದಿವಸ ಹೋಲ್‌ಸೇಲ್ ಟ್ರೇಡ್ ಇನ್ ಫುಡ್‌ಗ್ರೈನ್ಸ್ ಮಾಡುವುದಕ್ಕೆ ತಮ್ಮ ಪಕ್ಷದ ಪೂರ್ತಿ ಬೆಂಬಲ ಇದೆಯೇ ಅಥವಾ ತಮ್ಮ ಪಕ್ಷದ ವಿರೋಧ ಇದೆಯೇ ಎಂಬುದನ್ನು ಹೇಳಬೇಕು. ಆಹಾರ ಧಾನ್ಯದ ಸಗಟು ವ್ಯಾಪಾರದಲ್ಲಿಯೂ ಅಷ್ಟೆ. ಇವತ್ತು ಪ್ರತಿಗಾಮಿ ಶಕ್ತಿಗಳು ಇದನ್ನು ವಿರೋಧ ಮಾಡುತ್ತವೆ. ಆದ್ದರಿಂದಲೇ ಸರ್ಕಾರದವರು ಇದನ್ನು ಸಕಾಲದಲ್ಲಿ ಮಾಡುವುದಕ್ಕೆ ಹಿಂದೇಟು ಹೊಡೆಯುತ್ತಾರೆಂದು ಭಾವಿಸುತ್ತೇನೆ.

(SRI B. V. KAKKILAYA)

ಇನ್ನು ಬಸ್‌ಗಳ ರಾಷ್ಟ್ರೀಕರಣದ ವಿಚಾರ ಎಷ್ಟೋ ಸಲ ಮಾತನಾಡಿದ್ದೇವೆ. ಆದರೆ ಇವತ್ತಿನ ದಿವಸ ಏನು ನಡೆಯುತ್ತಿದೆ ಅಂದರೆ ರಾಷ್ಟ್ರೀಕರಣ ಬಸ್ಸುಗಳು ಓಡಾಡುವ ರಸ್ತೆಗಳಲ್ಲಿ, ಸಾರಿಗೆ ಸಂಸ್ಥೆಯ ಬಸ್ಸುಗಳಿಗೆ ನಷ್ಟವಾಗುವ ರೀತಿಯಲ್ಲಿ ಬೇರೆ ಖಾಸಗೀಯವರ ಬಸ್ಸುಗಳು ಪರ್ಮಿಟ್ ಇದ್ದೋ ಅಥವಾ ಇಲ್ಲದೆಯೋ ಓಡಾಡುತ್ತಿವೆ. ಇದರಿಂದ ನಮ್ಮ ರಾಜ್ಯದ ಸಾರಿಗೆ ಸಂಸ್ಥೆಯ ಬಸ್ಸುಗಳಿಗೆ ತುಂಬಾ ನಷ್ಟವಾಗುತ್ತಿದೆ.

ಇನ್ನೊಂದು ವಿಚಾರವೇನೆಂದರೆ ನಮ್ಮ ರಾಜ್ಯದ ಬಜೆಟ್ ಮತ್ತು ಕೇಂದ್ರ ಸರ್ಕಾರದ ಬಜೆಟ್ ಇವೆರಡರಲ್ಲಿಯೂ ಒಂದು ಹೊಂದಾಣಿಕೆ ಇರಬೇಕು. ಕೇಂದ್ರದ ಮತ್ತು ನಮ್ಮ ಬಜೆಟನ್ನು ಕೂಲಂಕಷವಾಗಿ ನೋಡಿದರೆ ನಮ್ಮ ಆರ್ಥಿಕ ಪರಿಸ್ಥಿತಿಯಲ್ಲಿ ನಿಮ್ಮ ಧೋರಣೆಗಳನ್ನು ಇಟ್ಟು ಅದನ್ನು ಈಡೇರಿಸುವುದಕ್ಕೆ ಆಗುತ್ತದೆಯೋ ಎಂಬುದು ಸಂಶಯವಾಗುತ್ತಿದೆ. ಕೇಂದ್ರದ ಮತ್ತು ರಾಜ್ಯದ ಒಟ್ಟು ವರಮಾನದಲ್ಲಿ 1950-1951ರಲ್ಲಿ, ಸಾಮಾನ್ಯ ಜನರಿಂದ ವಸೂಲು ಮಾಡಿದಂತಹ ಕಂದಾಯ, ಕಸ್ಟಮ್ಸ್ ಟ್ಯಾಕ್ಸ್ ಇನ್‌ಕಂ ಟ್ಯಾಕ್ಸ್ ಇತ್ಯಾದಿ 62.6 ಪರ್‌ಸೆಂಟ್ ಇತ್ತು. ಇವತ್ತು 71—72ರಲ್ಲಿ ಅದು 25.9ಕ್ಕೆ ಇಳಿದಿದೆ. ಅದೇ ಸಂದರ್ಭದಲ್ಲಿ ಅಪ್ರತ್ಯಕ್ಷ ತೆರಿಗೆಗಳು 63.2 ಪರ್‌ಸೆಂಟ್ ಇದ್ದದ್ದು 76.9 ಪರ್‌ಸೆಂಟಿಗೆ ಏರಿದೆ. ನೇರವಾದ ತೆರಿಗೆಗಳು—ಅಂದರೆ ಸಾಮಾನ್ಯ ಆದಾಯದ ಮೇಲೆ, ಆಸ್ತಿಯ ಮೇಲೆ ಮತ್ತು ಯಾರು ಲಾಭ ಗಳಿಸುತ್ತಾರೆ ಅಂಥವರ ಮೇಲೆ ಬೀಳುವ ತೆರಿಗೆಗಳು ಯಾವ ಪರ್‌ಸೆಂಟೇಜಿನಲ್ಲಿ ಏರಿದೆ ಅದಕ್ಕಿಂತಲೂ ಹೆಚ್ಚು ಸಾಮಾನ್ಯ ಜನರ ಮೇಲೆ ತೆರಿಗೆಯು ಏರುತ್ತಾ ಇವೆ. ಆದ್ದರಿಂದ ಇವರು ತೆರಿಗೆ ಇಲ್ಲದಂತಹ ಬಜೆಟ್ ಎಂದು ಹೇಳಿದರೆ ಅದು ತೃಪ್ತಿಪಡಿಸುವಂತಹ ಮಾತಲ್ಲ. 25 ವರ್ಷಗಳಿಂದ ತಾವು ಪಡೆದಂತಹ ಆದಾಯಗಳನ್ನು ಬಚ್ಚಿಟ್ಟುಕೊಂಡು ಇಂತಹ ತೆರಿಗೆಗಳಿಂದ ಯಾರು ತಪ್ಪಿಸಿಕೊಂಡಿದ್ದಾರೋ ಅಂಥವರ ಮೇಲೆ ಹೊಸ ತೆರಿಗೆಗಳನ್ನು ಹಾಕಲಿಲ್ಲ. ಆದರೆ ತೆರಿಗೆ ಕೊಟ್ಟು ಕೊಟ್ಟು ಮೊದಲೇ ಬೆನ್ನು ಮೂಳೆ ಮುರಿದು ಹೋದಂತಹ ಸಾಮಾನ್ಯ ಜನರ ಮೇಲೆ ಪುನಃ ತೆರಿಗೆಯನ್ನು ಹಾಕುತ್ತಿದ್ದೀರಿ. ಆದ್ದರಿಂದ ಬಡ ಜನರಿಗೆ ಎಷ್ಟು ಜಾಸ್ತಿ ತೆರಿಗೆ ವಿಧಿಸಿದ್ದೀರಿ, ಅದರಿಂದ ವಿನಾಯಿತಿ ಕೊಡಬೇಕು. ರಿಯಾಯಿತಿ ಕೊಡುವುದು ಮಾತ್ರವಲ್ಲದೆ ಬೇರೆ ರೀತಿಯಲ್ಲಿ ತೆರಿಗೆಗಳನ್ನು ತಂದು ಬಡಜನರಿಗೆ ಪೆಟ್ಟಾಗದ ಹಾಗೆ ಈ ಶಾಸನವನ್ನು ಮಂಜೂರು ಮಾಡಬಹುದಿತ್ತು.

ಇವತ್ತು ಬಡಜನರಿಗೆ ಒಂದು ಗೃಹ ನಿರ್ಮಾಣ ಯೋಜನೆ ತಯಾರುಮಾಡುವ ಹೆಸರಿನಲ್ಲಿ ಹೆಚ್ಚಿಗೆ ಬಡಜನರ ಮೇಲೆ ತೆರಿಗೆಯ ಹೊರೆಯನ್ನು ಹಾಕುವುದನ್ನು ಸರ್ಕಾರದವರು ಕೈ ಬಿಡುವ ಕಾರ್ಯಕ್ರಮವನ್ನು ಮಾಡಬಹುದಾಗಿತ್ತು. ಅದನ್ನು ಈಗ ಮುಂದುವರಿಸುವ ಕ್ರಮವನ್ನು ಅನುಸರಿಸಿದ್ದೀರಿ. ಇದನ್ನು ನೋಡಿದರೆ ನಮ್ಮ ಜನತೆ ಯಾವುದನ್ನು ಅಪೇಕ್ಷೆ ಮಾಡಿತ್ತೋ ಆ ಒಂದು ದಾರಿಯಲ್ಲಿ ಇಲ್ಲ. ಕಳೆದ ವರ್ಷ ಭಾಷಣ ಮಾಡುತ್ತಾ ಮಾನ್ಯ ಶ್ರೀ ಭಾಸ್ಕರಶೆಟ್ಟಿಯವರು ಇನ್ನೂ ಈ ಬಾಬಿನಲ್ಲಿ 23.8 ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ವಸೂಲ್ ಮಾಡುವಷ್ಟು ಬಾಕಿ ಇದೆಯೆಂದು ಹೇಳಿದರು. ನಿಮ್ಮ ಕಡೆಯವರೂ ಸಹ ಇಷ್ಟು ಬಾಕಿ ಇನ್ನೂ ಸರ್ಕಾರಕ್ಕೆ ಬರುವುದಿದೆಯೆಂದು ಹೇಳಿದರು. 23.8 ಕೋಟಿ ರೂಪಾಯಿಗಳಷ್ಟು ವರಮಾನ ಬರಬೇಕಾಗಿದ್ದರಲ್ಲಿ ಎಷ್ಟು ಹಣ ವಸೂಲಿಮಾಡಿದ್ದಾರೆಂಬುದನ್ನು ದಯಮಾಡಿ ತಿಳಿಸಬೇಕು. ಏಕೆಂದರೆ ಅನೇಕರು ತೆರಿಗೆಯನ್ನು ಕೊಡದೆಯೇ ಸರ್ಕಾರಕ್ಕೆ ಮೋಸಮಾಡಿದ್ದಾರೆ. ಆದರಿಂದ ಬರತಕ್ಕದ್ದು 23.8 ಕೋಟಿ ರೂಪಾಯಿಗಳೆಂದು ಬೇರೆ ಬೇರೆ ಲೆಕ್ಕದಲ್ಲಿ ಕೊಟ್ಟಿದ್ದಾರೆ. ಅದನ್ನು ನಿಮ್ಮ ಪಕ್ಷದವರೆ ಹೇಳಿದ್ದಾರೆ. ಅದನ್ನು ಎಷ್ಟರ ಮಟ್ಟಿಗೆ ವಸೂಲುಮಾಡಿದ್ದೀರಾ, ಏನು ಕ್ರಮ ಅದರ ಬಗ್ಗೆ ತೆಗೆದುಕೊಂಡಿದ್ದೀರಾ ಎಂಬುದನ್ನು ತಾವು ತಿಳಿಸಬೇಕು.

[MADAM SPEAKER in the Chair]

ಇನ್ನು ನಮ್ಮ ಹೌಸಿಂಗ್ ಪ್ರೋಗ್ರಾಂ ಬಗ್ಗೆ ಮತ್ತು ನಮ್ಮ ಜಿಲ್ಲೆಯ ಆಹಾರ ಪರಿಸ್ಥಿತಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಹೌಸಿಗ್ ಪ್ರೋಗ್ರಾಂ ಬಗ್ಗೆ ನಮಗೆ ವಿಶ್ವಾಸ ಬರುವುದಿಲ್ಲ. ಏಕೆಂದರೆ ಈಗಾಗಲೇ 2½ ಲಕ್ಷ ನಿವೇಸನಗಳನ್ನು ಹಂಚಿದ್ದೇವೆಂದು ಅವರ ಭಾಷಣದಲ್ಲಿ ಹೇಳಿದ್ದಾರೆ. ನಮ್ಮಲ್ಲಿಯೇ ಸುಮಾರು 3 ಸಾವಿರ ನಿವೇಶನಗಳನ್ನು ಹಂಚಿದ್ದಾರೆ, ಆ ನಿವೇಶನಗಳನ್ನು ಮಾನ್ಯ ಮಂತ್ರಿಗಳೇ ಬಂದು ಅಲ್ಲಿ ಒಂದು ಸಮಾರಂಭ ಜರುಗಿಸಿ ಖಾಲಿ ನಿವೇಶನಗಳನ್ನು ಗ್ರಾಂಟ್ ಮಾಡಿರುವ ಬಗ್ಗೆ ಚೀಟಿಗಳನ್ನು ಕೊಟ್ಟಿ

ದ್ದಾರೆ. ಆದರೆ ಆ ಜಮೀನುಗಳು ಎಲ್ಲಿವೆ ಎಂಬುದೇ ಗೊತ್ತಾಗಲಿಲ್ಲ. ಇಡೀ ತಾಲ್ಲೂಕಿನಲ್ಲಿ ಬರೀ 20 ಸಾವಿರ ರೂಪಾಯಿಗಳನ್ನು ಕೇವಲ ಆ ನಿವೇಶನಗಳ ಲೆವಲ್‌ಗಾಗಿ ಒದಗಿಸಿಕೊಟ್ಟಿದ್ದಾರೆ. 3 ಸಾವಿರ ನಿವೇಶನಗಳನ್ನು ಕೇವಲ ಆ 20 ಸಾವಿರ ರೂಪಾಯಿಗಳಲ್ಲಿ ಎಷ್ಟರಮಟ್ಟಿಗೆ ಲೆವಲ್ ಮಾಡುವುದಕ್ಕಾಗುತ್ತದೆ ? ಅದು ಅವರಿಗೆ ಸಿಗುವುದು ಯಾವಾಗ ಇದರ ಬಗ್ಗೆ ಇವರಿಗೆ ಯಾವ ಯೋಚನೆಯೂ ಇಲ್ಲವೆನ್ನುವ ಪರಿಸ್ಥಿತಿಯಲ್ಲಿ ಇದು ಇದೆ. ಬರೀ ಪ್ರಚಾರಕ್ಕೆ ಮಾತ್ರ ಇರುವಂಥ ಈ ಹೊಸ ತೆರಿಗೆಯನ್ನು ಕೊಡುವುದಕ್ಕೆ ಇದೊಂದು ಮುಖವಾಡವಾಗಿ ಇದೆಯೋ ಏನೋ ಎಂದು ನನಗೆ ಅನುಮಾನ ಬಂದಿದೆ. ಆದ್ದರಿಂದ ಈಗಲೇ ಹಂಚಿರತಕ್ಕ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿಸುವ ಯೋಜನೆಯನ್ನು ಹಾಕಬೇಕು. ಮುಂದಿನ ಯೋಜನೆಯಲ್ಲಿ ಹೊಸಹೊಸ ನಿವೇಶನಗಳನ್ನು ನಿರ್ಮಾಣ ಮಾಡುವ ಬಗ್ಗೆ ಆರ್ಥಿಕವ್ಯವಸ್ಥೆಯನ್ನು ಹೆಚ್ಚಿಗೆ ಏರ್ಪಾಡು ಮಾಡುವ ಹಾಗೆ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ಆಹಾರ ಅಭಾವದ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿಯೊಂದು ವಸ್ತುವಿನ ಬೆಲೆ ವಿಪರೀತ ಜಾಸ್ತಿಯಾಗಿದೆ, ಅಲ್ಲಿ ಅಕ್ಕಿ ಎಲ್ಲಿಯೂ ಸಿಗುತ್ತಾ ಇಲ್ಲ. ಸರ್ಕಾರದವರು ಸುಮ್ಮ ಸುಮ್ಮನೆ 100 ಟನ್, ಸಾವಿರ ಟನ್ ನಮ್ಮ ಕ್ಷೇತ್ರಕ್ಕೆ ಕಳುಹಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅದೆಲ್ಲಿಗೆ ಕಳುಹಿಸುತಾರೋ ಗೊತ್ತಿಲ್ಲ. ಯಾವುದೇ ಫೇರ್ ಪ್ರೈಸ್ ಡಿಪೋನಲ್ಲಿ ನಮ್ಮ ಜಿಲ್ಲೆಯಲ್ಲಿ ಅಕ್ಕಿ ಸಿಗುತ್ತಾ ಇಲ್ಲ. ಉದಾಹರಣೆಗೆ ಅರ್ಧ ಕೆ.ಜಿ. ಅಕ್ಕಿಯಲ್ಲಿ ಅವರು ಹೇಗೆ ಜೀವನಮಾಡಬೇಕು ಉಪ್ಪುಡಿ ಬೀಯಮು ಎಂದು ತೆಲುಗಿನಲ್ಲಿ ಹೇಳುತ್ತಾರೆ, ಅಂತಹ ಅಕ್ಕಿಯೂ ಸಿಗುವುದಿಲ್ಲ. ಸ್ಟಾಕ್ ಇಲ್ಲವೆಂದು ಹೇಳುತ್ತಾರೆ. ಯಾವ ಫೇರ್ ಪ್ರೈಸ್ ಷಾಪ್‌ನಲ್ಲಿಯೂ ಅದು ಸಿಗುತ್ತಾ ಇಲ್ಲ. ಸುಮ್ಮನೆ ಯಾರೋ ಕೆಲವರು ಹೆಚ್ಚಿಗೆ ಸ್ಟಾಕ್ ಮಾಡಿ ಒಳಗಡೆಯೇ ಅದನ್ನು ಹಾಗೆಯೇ ಇಟ್ಟಿದ್ದರೆ ಅದಕ್ಕೆ ಹುಳು ಬಿದ್ದು ಕೆಟ್ಟು ಹೋಗುತ್ತದೆ. ಈಗಾಗಲೇ ಬತ್ತ ಒಂದು ಬೆಳೆ ಪೂರ್ಣ ನಷ್ಟವಾಗಿದೆ. ಕೇವಲ ಸೀಮೆಯೆಣ್ಣೆಯನ್ನು ನೀವು ಹೆಚ್ಚಿಗೆ ಒದಗಿಸುವುದಕ್ಕೆ ನಿಮ್ಮ ಕೈಯಿಂದಾಗಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಇಲ್ಲದೆ ಕ್ಷಾಮ ಪರಿಸ್ಥಿತಿ ಯಾವಾಗಲೂ ಬರುವುದೇ ಇಲ್ಲ. ಮಳೆಗಾಲದಲ್ಲಿ ಸಾಮಾನ್ಯವಾಗಿ ಒಂದೊಂದು ಸಾರಿ ಮೂರು ಬೆಳೆ ತೆಗೆಯುತ್ತೇವೆ. ಈ ಸೀಮೆಯೆಣ್ಣೆಯನ್ನು ರೈತರಿಗೆ ಜಾಗ್ರತೆಯಾಗಿ ಒದಗಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ ಹೇಗೆ ? ಎಲ್ಲಾ ಕಾಲದಲ್ಲಿಯೂ ಈ ಜಿಲ್ಲೆಯನ್ನು ಬರಗಾಲಕ್ಕೆ ಮುಂದೆ ಗುರಿಮಾಡುತ್ತಾರೆ. ಮಂಗಳೂರಿಗೆ ಹೋಗಿ ನೋಡಿದರೆ ಒಂದೊಂದು ಪೆಟ್ರೋಲ್ ಬಂಕ್ ಮುಂದೆ ಪೆಟ್ರೋಲ್ ಸಿಗುವುದಿಲ್ಲ, ಡೀಸಲ್ ಆಯಿಲ್ ಸಿಗುವುದಿಲ್ಲ, ರೇಷನಿಂಗ್ ಪದ್ಧತಿಯನ್ನು ಇದರ ಬಗ್ಗೆ ಅನುಸರಿಸುವುದಂದ ಡೀಸಲ್ ಆಯಿಲ್ ಕೊಡಬಹುದು. ಇಲ್ಲದಿದ್ದರೆ ಇದು ಹಾಳಾಗಿ ಹೋಗುತ್ತದೆ. ಆದರೆ ಡೀಸಲ್ ಆಯಿಲ್ ಸರಿಯಾಗಿ ಸಾಕಷ್ಟು ಸಿಗಬೇಕು.

ಇನ್ನು ಸಿಮೆಂಟ್ ವಿಷಯ. ಇದು ಯಥೇಚ್ಛವಾಗಿ ನಮ್ಮ ಜನರಿಗೆ ಸಿಗುವಂತೆ ಮಾಡಬೇಕು. ನನ್ನ ಕ್ಷೇತ್ರದಲ್ಲಿ ಮೂರು ಶಾಲಾ ಕಟ್ಟಡಗಳು ಅರ್ಧಂಬರ್ಧವಾಗಿ ನಿಂತಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಿ. ಡಬ್ಲ್ಯು. ಡಿ. ಇಲಾಖೆಯವರೇ ಆ ಕೆಲಸಗಳನ್ನು ಅರ್ಧಂಬರ್ಧವಾಗಿ ಮಾಡಿಕೊಟ್ಟಿದ್ದಾರೆ. ಅನೇಕ ಕಾಮಗಾರಿಗಳು ಸಿಮೆಂಟ್ ಇಲ್ಲದೆಯೇ ನಿಂತುಹೋಗಿವೆ. ಆದ್ದರಿಂದ ಈಗಿರತಕ್ಕ ಅಲ್ಲಿನ ಅಭಾವ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಇದರಲ್ಲಿ ಎಲ್ಲಿ ಸೋರಿ ಹೋಗುತ್ತಿದೆ, ಎಲ್ಲಿ ಅನ್ಯಾಯವಾಗುತ್ತಿದೆಂಬುದನ್ನು ಪಿ. ಡಬ್ಲ್ಯು. ಡಿ. ಮಂತ್ರಿಗಳು, ಆಹಾರ ಮಂತ್ರಿಗಳು, ಗಂಭೀರವಾಗಿ ಯೋಚನೆ ಮಾಡಿ ನಮ್ಮ ಸಲಹೆಗಳಿಗೆಲ್ಲಾ ಸರಿಯಾದ ಉತ್ತರವನ್ನು ಕೊಟ್ಟು ಆಹಾರದ ಅಭಾವ ಎಷ್ಟರ ಮಟ್ಟಿಗೆ ಇದೆಯೆಂಬುದನ್ನು ತಿಳಿದು ಅದನ್ನು ಕೂಡಲೇ ಸರಿಪಡಿಸುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಇನ್ನು ಬೆಲೆಗಳು ವಿಪರೀತವಾಗಿ ಏರುತ್ತಿದೆ. ಅದನ್ನು ಕೂಡಲೇ ತಡೆಗಟ್ಟುವುದಕ್ಕೆ ಅವಶ್ಯಕವಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಮಾನ್ಯ ಅಧ್ಯಕ್ಷಣಿಯವರು ಇಷ್ಟು ಹೊತ್ತು ನಾನು ಮಾತನಾಡುವುದಕ್ಕಾಗಿ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†**ಶ್ರೀ ಕೆ. ಬಿ. ಕೋಳಿವಾಡ್.**—(ರಾಣಿಬೆನ್ನೂರು).- ಮಾನ್ಯ ಅಧ್ಯಕ್ಷಣಿಯವರೇ ನಮ್ಮ ಆರ್ಥಿಕಸಚಿವರಾದ ಮಾನ್ಯ ಶ್ರೀ ಘೋರ್ಪಡೆಯವರು ಮಂಡಿಸಿದ 1973-74ನೇ ಆಯವ್ಯಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಈ ಆಯವ್ಯಯಕ್ಕೆ ಕರ್ನಾಟಕ ದೇಶದ ಕಾಮದೇನು ಎಂದು ಹೆಸರನ್ನು ಇಡುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಈ ಆಯವ್ಯಯ ಪತ್ರದಲ್ಲಿ ಜನತೆ ಏನು ಬಯಸುತ್ತದೋ ಅವೆಲ್ಲಕ್ಕೂ ಸಾಕಷ್ಟು ಆಸ್ಪದವಿರುತ್ತದೆ. ಆದ್ದರಿಂದಲೇ ಇದಕ್ಕೆ ನಾನು

(ಶ್ರೀ ಕೆ. ಬಿ. ಕೋಳಿವಾಡ)

ಕಾಮಧೇನು ಎಂಬುದಾಗಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ವಿರೋಧಪಕ್ಷದ ಅನೇಕ ಸದಸ್ಯರಿಗೆ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಸರ್ಕಾರ ಮಾಡಿರುವುದನ್ನು ವಿರೋಧ ಮಾಡವುದೇ ಒಂದು ಉದ್ದೇಶವೆಂದು ವಿರೋಧ ಮಾಡದೆ, ಅದಕ್ಕಿಂತ ಉತ್ತಮವಾದ ಕೆಲವಾರು ಸಲಹೆಗಳನ್ನು ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು. ಅವೆಲ್ಲವನ್ನೂ ಕಾರ್ಯರೂಪಕ್ಕೆ ತರುವುದಕ್ಕೆ ತುಂಬಾ ಅನುಕೂಲವಾಗುತ್ತಿತ್ತೆಂದು ಮಾನ್ಯ ಮುಖ್ಯಮಂತ್ರಿಗಳು ಪದೇಪದೇ ಹೇಳುತ್ತಿದ್ದಾರೆ. ಅದಕ್ಕೋಸ್ಕರವೇ ಇಂದು ನಮ್ಮ ದೇಶ ಬರಗಾಲವನ್ನು ಎದುರಿಸುತ್ತಿರುವಾಗ ನಾವು ಟೀಕೆ, ಟಿಪ್ಪಣಿಗಳ ವಿಚಾರವನ್ನು ತಲೆಯಲ್ಲಿಟ್ಟುಕೊಳ್ಳದೆ ಆದಷ್ಟು ತೀವ್ರವಾಗಿ ಈ ಬರಗಾಲವನ್ನು ದೂರ ಮಾಡುವ ಸಲುವಾಗಿ ನಾವೂ ನೀವೂ ಎಲ್ಲರೂ ಕೂಡಿಕೊಂಡು ಈಗಿನ ಬರಗಾಲವನ್ನು ಪರಿಹಾರ ಮಾಡುವುದಕ್ಕೆ ಸರ್ವರಾದಿಯಾಗಿ ಸಕಲ ಪ್ರಯತ್ನಗಳನ್ನು ಮಾಡಬೇಕೆಂದು ಹೇಳುತ್ತೇನೆ. ವಿರೋಧ ಪಕ್ಷದವರು ಕೇವಲ ನಾವು ಮಂಡಿಸಿದ ಆಯವ್ಯಯಪತ್ರವನ್ನು ವಿರೋಧಮಾಡದೆ ನಮಗಿಂತಲೂ ಹೆಚ್ಚಿಗೆ ಆಯವ್ಯಯಪಟ್ಟಿಯನ್ನು ರಚನೆ ಮಾಡುವ ಬಗ್ಗೆ ಒಂದು ದಾರಿಯನ್ನು ತೋರಿಸಿ ಅಂತಹ ಸಲಹೆಗಳನ್ನು ಜನತೆಯ ಎದುರುಗಡೆ ಇಟ್ಟು, ಈ ಸರ್ಕಾರ ನಮ್ಮ ಸಲಹೆಗಳನ್ನು ಒಪ್ಪಲಿಲ್ಲವೆಂದು ಹೇಳಿದ್ದರೆ, ನಿಮ್ಮನ್ನು ಜನತೆ ಒಪ್ಪುತ್ತಿದ್ದರು. ಆ ರೀತಿ ಮಾಡದೇ ಸರ್ಕಾರ ಮಾಡಿದ್ದನ್ನು ವಿರೋಧಿಸುತ್ತಾ ಹೋದರೆ ಜನತೆ ನಿಮ್ಮನ್ನು ಬಿಡುವುದಿಲ್ಲ. ಇವತ್ತು ಆಡಳಿತಪಕ್ಷ ಜನತೆಗೆ ಕೊಟ್ಟಂಥ ಆಶ್ವಾಸನೆಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದಾರೋ ಇಲ್ಲವೋ ಎಂಬುದನ್ನು ಈಗ ಮಂಡಿಸಿನ ಆಯವ ಪತ್ರವೇ ಒಂದು ಕನ್ನಡಿಯಾಗಿದೆ. ಚುನಾವಣೆಯ ಪೂರ್ವದಲ್ಲಿ ಸಾಯುವ ವರೆಗೆ ಉದ್ಯೋಗಗಳನ್ನು ಕಲ್ಪಿಸುತ್ತೇವೆ. ಉಳುವವನಿಗೇ ಹೊಲ, ಅಸಮಾನತೆಯನ್ನು ಆದಷ್ಟು ಜಾಗ್ರತೆಯಾಗಿ ನಿರ್ಮೂಲ ಮಾಡುತ್ತೇವೆಂದು ಹೇಳಿ, ಆ ರೀತಿಯಾಗಿಯೇ ಈಗ ಹೊಸಹೊಸದಾಗಿ ಹಂತಹಂತವಾಗಿ ಹೆಜ್ಜೆಯನ್ನು ಇಡುತ್ತಾ ಇರುವ ಬಗ್ಗೆ ಅನೇಕ ಉದಾಹರಣೆಗಳಿವೆ. ಉದ್ಯೋಗಗಳನ್ನು ಕೊಡುವ ಸಲುವಾಗಿ ಕೇಂದ್ರಸರ್ಕಾರ ಈ ವರ್ಷ 100 ಕೋಟಿ ರೂಪಾಯಿಗಳನ್ನು ಅದರ ಸಲುವಾಗಿ ಮೀಸಲಾಗಿಟ್ಟಿದ್ದಾರೆ. ಉಳುವವನಿಗೆ ಹೊಲ, ಅಸಮಾನತೆಯನ್ನು ಆದಷ್ಟು ಜಾಗ್ರತೆಯಾಗಿ ನಿರ್ಮೂಲಮಾಡುವುದರ ಸಲುವಾಗಿ ಈಗ ನಮ್ಮ ಪಕ್ಷ ಲ್ಯಾಂಡ್‌ರಿಫಾರ್ಮ್ಸ್‌ನು ಮಂಡಿಸಿರುವುದು ಅದಕ್ಕೆ ದ್ಯೋತಕವೆಂದು ನಾನು ಹೇಳುತ್ತೇನೆ. ಅನೇಕ ಜನ ಸದಸ್ಯರು ಈ ಆಯವ್ಯಯ ಪಟ್ಟಿಯಮೇಲೆ ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ. ಇವತ್ತು ಸರ್ಕಾರ ಆ ಸೂಚನೆಗಳನು ಗಮನಿಸಿ ಏನಾದರೂ ಆಪಎದತೆಗಳನು ಮಾಡಿದ್ದರೆ ಅವುಗಳೆಲ್ಲವನೂ ದೂರ ಮಾಡುವುದಕ್ಕೆ ನಿರತರಾಗಬೇಕು ಮತ್ತು ಅವುಗಳ ಬಗೆ ಹೆಚ್ಚಿನ ಮಹತ್ವವನ್ನು ಕೊಡಬೇಕು. ಬಹು ಮುಖ್ಯವಾಗಿ ಆಹಾರಪದಾರ್ಥಗಳನ್ನು ಹೆಚ್ಚುಹೆಚ್ಚಿಗೆ ಬೆಳೆಸುವುದಕ್ಕೆ ಅತ್ಯಂತ ಮಹತ್ವವನು ಕೊಡಬೇಕು ಸರ್ಕಾರದವರು ನೀರಾವರಿ ಸಲುವಾಗಿ ಸಾಕಷ್ಟು ಮಹತ್ವವನ್ನು ಕೊಟ್ಟು ದೊಡ್ಡ ದೊಡ್ಡ ನೀರಾವರೀ ಯೋಜನೆಗಳನ್ನು ಕೈಗೊಳ್ಳಬೇಕು. ಮೈನರ್ ಇರ್ರಿಗೇಷನ್ ಲಿಫ್ಟ್ ಇರಿಗೇಷನ್, ಟ್ಯಾಂಕ್ಸ್ ರಿಪೇರಿ ಮುಂತಾದುವುಗಳಿಗೆ ಸರ್ಕಾರ ಹೆಚ್ಚಿನ ಮಹತ್ವವನ್ನು ಕೊಡಬೇಕು. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒಂದು ಸೂಚನೆಯನ್ನು ಹೇಳಬಯಸುತ್ತೇನೆ. ಕೇವಲ ಬರಗಾಲ ಪ್ರದೇಶಗಳಲ್ಲಿಯೇ ಹೆಚ್ಚಿಗೆ ನೀರಾವರಿಗೆ ಮಹತ್ವವನ್ನು ಕೊಡದೆ ಉಳಿದ ಕಡೆಗಳಲ್ಲಿಯೂ ಈ ನೀರಾವರಿಯ ಬಗ್ಗೆ ಎಷ್ಟು ಮಹತ್ವವನ್ನು ಕೊಟ್ಟರೆ ಅಷ್ಟು ತೀವ್ರದಲ್ಲಿ ಇರತಕ್ಕ ಆಹಾರದ ಕೊರತೆಯನ್ನು ನೀಗಿಸಲಿಕ್ಕೆ ಸಹಾಯವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಉತ್ತರ ಕರ್ನಾಟಕದಲ್ಲಿ ಗಾಜನೂರು ಯೋಜನೆಯನ್ನು ಕೇಂದ್ರ ಸರ್ಕಾರದವರು ಕಾರ್ಯರೂಪಕ್ಕೆ ತರುವುದಾದರೆ ಅಲ್ಲಿ ಸುಮಾರು 4ಲಕ್ಷ ಎಕ್ರೆ ನೀರಾವರಿ ಆಗುವುದಕ್ಕೆ ಅವಕಾಶವಿದೆ. ಅಲ್ಲಿ ಅಷ್ಟು ಅನುಕೂಲವುಂಟು. ಅದೇರೀತಿ ಮದಗ-ಮಾಸೂರು ಕೆರೆಯನ್ನು ಅಭಿವೃದ್ಧಿಮಾಡುವುದಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ ಅಲ್ಲಿ 20 ಎಕ್ರೆ ನೀರಾವರಿಯಾಗುತ್ತದೆ. ಅಲ್ಲಿ ಈ ನೀರಾವರೀ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಬಹಳ ಕಳಕಳಿಯಿಂದ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

5-30 P.M.

ಇನ್ನು ಅಗ್ರಿಕಲ್ಚರಲ್ ವಿಷಯವಾಗಿ ಎರಡು ಮಾತುಗಳನಾಡುವುದಕ್ಕೆ ಇಚ್ಛೆಪಡುತ್ತೇನೆ. ಒಕ್ಕಲುತನದವರ ಅಭಿವೃದ್ಧಿಗಾಗಿ ಸರ್ಕಾರದವರು ಈ ದಿವಸ 15 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಒಳ್ಳೆಯ ಉತ್ತಮ ಬೀಜದ ಥಳಿಯನ್ನು ಒದಗಿಸುವುದಕ್ಕೂ ಗೊಬ್ಬರವನ್ನು

ಒದಗಿಸುವುದಕ್ಕೂ ಮತ್ತು ಪೆಸ್ಟಿಸೈಡ್ಸ್ ಅಂದರೆ ಬೆಳೆಗೆ ಬರತಕ್ಕ ರೋಗಾದಿಗಳನ್ನು ನಾಶಮಾಡುವ ಔಷಧಿಗಳಿಗಾಗಿಯೂ ಒದಗಿಸಿದ್ದಾರೆ. ಹಾಗೇ ಈ ಬಡವರಿಗೆ ಅಗತ್ಯವಾದ ಆಹಾರಧಾನ್ಯ ಮತ್ತು ಬಟ್ಟೆ ಇತ್ಯಾದಿ ವಸ್ತುಗಳನ್ನೂ ಕೂಡ ಕಂಟ್ರೋಲ್ ದರದಲ್ಲಿ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮನೆಗಳನ್ನು ಕಟ್ಟಿಸತಕ್ಕ ಕಾರ್ಯಕ್ಕೆ ಐದು ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಆದರೆ ಈ ಮನೆಗಳನ್ನು ಯಾವ ರೀತಿಯಲ್ಲಿ ಹೇಗೆ ಕಟ್ಟಬೇಕು- ಯಾರು ಕಟ್ಟಬೇಕು ಯಾರ ಮೂಲಕ ಇವುಗಳನ್ನು ಹಂಚಬೇಕು ಎಂಬುದನ್ನು ಸರ್ಕಾರ ಲಕ್ಷ್ಯವಿಡಬೇಕೆಂದು ಇದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹೆಲ್ತ್ ಇಲಾಖೆಯ ಬಗ್ಗೆ ಎರಡು ಮಾತುಗಳು ; ಅನೇಕ ತಾಲ್ಲೂಕುಗಳಲ್ಲಿ ದವಾಖಾನೆಗಳೇ ಇರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ನಮ್ಮ ರಾಣಿಬೆನ್ನೂರು ತಾಲ್ಲೂಕಿನಲ್ಲಿ ದವಾಖಾನೆಯಿಲ್ಲ. ಆದ್ದರಿಂದ ದಯಮಾಡಿ ಆರೋಗ್ಯ ಮಂತ್ರಿಗಳು ಅಲ್ಲಿಗೆ ಒಂದು 20–30 ಬೆಡ್ಡುಗಳಿರತಕ್ಕ ಒಂದು ದವಾಖಾನೆಯನ್ನು ಒದಗಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಈ ಯೂನಿವರ್ಸಿಟಿಗಳ ಬಗ್ಗೆ ಒಂದು ಏಕಮುಖವಾದ ಕಾನೂನಿಲ್ಲ. ಉತ್ತರ ಕರ್ನಾಟಕದಲ್ಲಿ ವಿದ್ಯೆ ಎಂದರೆ ಅದು ಕೇವಲ ಕೆಲವರ ಸ್ವತ್ತಾಗಿದೆ. ಅದು ಕೆಲವು ಹಿತಾಸಕ್ತಿಗಳ ಕೈಸೇರಿ ಅವರ ಮರ್ಜಿಗೆ ಬಂದಹಾಗೆ ಅಲ್ಲಿ ಆಡಳಿತವನ್ನು ನಡೆಸುತ್ತಿದ್ದಾರೆ. ಅಲ್ಲಿ ಅವರಿಗೆ ಬರತಕ್ಕ ಗ್ರ್ಯಾಂಟಿನಲ್ಲಿ ತಮಗೆ ಬೇಕಾದವರಿಗೆ ಪಗಾರ ಹೆಚ್ಚಿಸುವುದಕ್ಕಾಗಿ 5 ಲಕ್ಷ ರೂಪಾಯಿಗಳನ್ನು ಬಳಸಿದ್ದಾರೆ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅಲ್ಲಿ ವಿದ್ಯಾರ್ಥಿಗಳಲ್ಲಿ ಈ ಒಂದು ಅನ್‌ರೆಸ್ಟ್ ಉಂಟಾಗಿ ಅಲ್ಲಿ ಅನೇಕ ಸಾವುನೋವುಗಳಾಗಿವೆ. ಇದರಬಗ್ಗೆ ಸರ್ಕಾರದವರು ಪೂರ್ಣ ವಿಚಾರ ಮಾಡಬೇಕು. ಅದರಲ್ಲಿ ಶಿಕ್ಷಕರದು ತಪ್ಪೋ ಅಥವಾ ಪಾಲಕರದು ತಪ್ಪೋ ಇಲ್ಲವೇ ವಿದ್ಯಾರ್ಥಿಗಳದು ತಪ್ಪೋ ಯಾರದು ತಪ್ಪು ಎಂಬುದನ್ನು ಖಾಯಂ ಮಾಡಿ ಅಲ್ಲಿ ಆ ಅನ್‌ರೆಸ್ಟನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ—ಇಲ್ಲಿ ಖಾಸಗಿ ಮತ್ತು ಪಬ್ಲಿಕ್ ಇಂಡಸ್ಟ್ರಿ ಇವುಗಳೆರಡಕ್ಕೂ ಮಹತ್ವ ಕೊಡಲೇಬೇಕು. ಹಾಗಾದರೇನೇ ದೇಶದಲ್ಲಿರತಕ್ಕ ಉತ್ಪತ್ತಿಯ ಸಂಪನ್ಮೂಲಗಳು ಹೆಚ್ಚುವುದು. ಇದೇ ಸಂದರ್ಭದಲ್ಲಿ ನಾನು ಒಂದಂಶವನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ನಮ್ಮ ಪ್ರಾಂತ್ಯದಲ್ಲಿರತಕ್ಕ ನೇಕಾರರ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಅವರಿಗೆ ಸರಿಯಾಗಿ ನೂಲು ಸಿಕ್ಕುತ್ತಿಲ್ಲ—ಕೂಲಿ ದೊರೆಯದೆ ತುಂಬಾ ತೊಂದರೆಯಲ್ಲಿದ್ದಾರೆ. ಅಲ್ಲಿ 10 ರಿಲೀಫ್ ಸೆಂಟರುಗಳನ್ನು ಮಾಡಿದ್ದಾರೆ. ಅಲ್ಲಿ ಎರಡುವರೆ ಕೋಟಿ ರೂಪಾಯಿಗಳ ಹತ್ತಿಗಿರಣಿ ಸ್ಥಾಪನೆ ಮಾಡಿದ್ದರೂ ಅವರಿಗೆ ನೂಲು ಸರಿಯಾಗಿ ದೊರೆಯುತ್ತಿಲ್ಲ. ಆದರೆ ಸರ್ಕಾರದವರು ಈ ದಿವಸ ಇಟ್ಟಿರತಕ್ಕ ಸರಕಾರಿ ಸಂಘಗಳು ಇವರಿಗೆ ಸರಿಯಾಗಿ ನೂಲನ್ನು ಪಬ್ಲಿಕ್ ಮತ್ತು ಪ್ರೈವೇಟ್ ಮಿಲ್ಲುಗಳಲ್ಲಿ ಉತ್ಪನ್ನವಾಗತಕ್ಕ ನೂಲಿನಲ್ಲಿ ಶೇಕಡ 50 ರಷ್ಟನ್ನು ಮೀಸಲಾಗಿಡುವಂತೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಂದರೆ ಅಲ್ಲಿ ಒಂದು ದೊಡ್ಡ ಹತ್ತಿಗಿರಣಿಯನ್ನು ಸ್ಥಾಪಿಸುವುದಕ್ಕೆ ಪ್ರಯತ್ನ ಮಾಡಬೇಕೆಂದೂ ಅಲ್ಲಿ ಎಷ್ಟು ಮಾಡಿದರೂ ಸಾಲದೆಂದೇ ಹೇಳಬೇಕು.

ಇನ್ನು ಟ್ಯಾಕ್ಸ್ ವಿಚಾರ— ಆದರೆ ಸರ್ಕಾರದವರು ಹೊಸ ತೆರಿಗೆಗಳೇನನ್ನೂ ಹಾಕಿಲ್ಲ. ಇದ್ದ ತೆರಿಗೆಗಳನ್ನೇ ಮುಂದುವರಿಸುತ್ತಿದ್ದಾರೆ. ಇದರಿಂದ ಬಡವರಿಗೂ ಮತ್ತು ಶ್ರೀಮಂತರಿಗೂ ಒಂದೇರೀತಿ ಟ್ಯಾಕ್ಸನ್ನು ಹಾಕಿದಹಾಗೆ ಆಯಿತು. ಆದ್ದರಿಂದ ಬಾಂಗ್ಲಾದೇಶದ ಬಗ್ಗೆ ಹಾಕಿದ ಟ್ಯಾಕ್ಸನ್ನು ವಜಾ ಮಾಡಿ ಬಡವರಿಗೆ ವಿನಾಯಿತಿ ಕೊಟ್ಟು ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ಹಾಕುವುದಕ್ಕೆ ಪ್ರಯತ್ನಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ವಿಚಾರಕ್ಕೆ ಬಂದರೆ ಎಲ್ಲಾ ಇಲಾಖೆಗಳಲ್ಲೂ ಸ್ಟ್ರೈಕ್ ನಡೆಯುತ್ತಿದೆ. ಆದರೆ ಈ ಒಂದು ಇಲಾಖೆಯಲ್ಲಿ ಇಲ್ಲಿಯತನಕ ಯಾವ ಸ್ಟ್ರೈಕೂ ನಡೆದಿಲ್ಲ. ಕಾರಣ ಅಲ್ಲಿ ಅಷ್ಟು ಕರಪ್ಷನ್ ಇದೆ ಎಂದು. ಅದಕ್ಕೆ ಕಾರಣ ಅವರಿಗೆ ಕೊಡತಕ್ಕ ಪಗಾರ ಬಹಳ ಕಡಿಮೆ ಇದೆಯೆಂಬುದೇ ಆಗಿದೆ. ಆದ್ದರಿಂದ ನಾನು ಸರ್ಕಾರದವರಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುವುದೇನೆಂದರೆ ಇವರ ಪಗಾರವನ್ನು ಹೆಚ್ಚಿಸಿ ಅವರಲ್ಲಿ ಲಂಚಕ್ಕೆ ಅವಕಾಶವಿಲ್ಲದಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ರಾಣೀಬೆನ್ನೂರಿನಲ್ಲಿ ಅನೇಕ ಕಳವಿನ ಕೇಸುಗಳು ನಡೆದಿದ್ದರೂ ಒಂದೂ ಇಲ್ಲಿಯವರೆಗೆ ಪತ್ತೆಯಾಗಿಲ್ಲ. ನನ್ನ ಮನೆಯಲ್ಲೇ ಒಂದು ವರ್ಷದಲ್ಲಿ 3–4

(ಶ್ರೀ ಕೆ. ಬಿ. ಕೋಳಿವಾಡ್)

ಕಳವು ಕೇಸುಗಳು ನಡೆದಿವೆ. ಆದರೆ ಒಂದೂ ಪತ್ತೆಯಾಗಿಲ್ಲ. ಆದರೆ ಅಲ್ಲಿ ನಮ್ಮ ರಾಣಿಬೆನ್ನೂರು ಟೌನಿಗೆ ಒಂದು ರೂರಲ್ ಮತ್ತು ಟೌನ್ ಪೋಲೀಸ್ ಸ್ಟೇಷನ್ ಎಂಬುದಾಗಿ ಎರಡು ವಿಭಾಗದ ಪೋಲೀಸ್ ಸ್ಟೇಷನ್ನುಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರ ಸಂಘಗಳ ಬಗ್ಗೆ ಎರಡು ಮಾತುಗಳು—ಇವು ಜನರ ಹಣವನ್ನು ತಿಂದು ಹಾಕತಕ್ಕ ಸಂಸ್ಥೆಗಳೆಂಬ ಭಾವನೆ ಬಂದುಹೋಗಿದೆ. ಆದ್ದರಿಂದ ಇವುಗಳ ಬಗ್ಗೆ ಒಂದು ಪ್ರತ್ಯೇಕ ಆಡಿಟ್ ಸೆಲ್ಲನ್ನು ಮಾಡಿ ಸಾಧಿಸಬೇಕೆಂದಿರುವ ಉದ್ದೇಶ ಸಾಧಿಸುವಂತೆ ಕಾರ್ಯ ಕೈಗೊಳ್ಳಬೇಕೆಂದು ತಿಳಿಸಿ ಈ ಬಡ್ಜೆಟ್ಟಿಗೆ ನನ್ನ ಬೆಂಬಲವನ್ನು ನೀಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ)–ಮಾನ್ಯ ಸಭಾಪತಿಯವರೇ 1973–74ರ ಆಯುವ್ಯಯಪಟ್ಟಿಯನ್ನು ನಾನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಹಾಲಿ ನಮ್ಮ ಮುಂದೆ ಇರತಕ್ಕ ಬಡ್ಜೆಟ್ ಒಂದು ಖೋತಾ ಬಡ್ಜೆಟ್ಟಾಗಿದೆ. ಆದ್ದರಿಂದ ಇಲ್ಲಿ ಖೋತಾ ಬಿದ್ದಿರತಕ್ಕ ಹಣವನ್ನು ನಾವು ಹೇಗಾದರೂ ಮಾಡಿ ಭರ್ತಿಮಾಡದಿದ್ದರೆ ನಮ್ಮ ಮುಖ್ಯ ಯೋಜನೆಗಳೆಲ್ಲಾ ಗಾಳಿ ಗೋಪುರಗಳಾಗುತ್ತವೆ. ಆದ್ದರಿಂದ ಸಾಧ್ಯವಾದಷ್ಟು ನಾವು ಕೇಂದ್ರ ಸರ್ಕಾರದವರಿಂದ ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಹಾಗೆ ಪಡೆದುಕೊಂಡ ನಂತರವೇ ಇಲ್ಲಿ ಇವರು ಬಡ್ಜೆಟ್ಟನ್ನು ತಯಾರಿಸುವುದು ಉತ್ತಮ, ಮತ್ತು ಇದೇರೀತಿ ಬಡ್ಜೆಟ್ಟನ್ನು ತಯಾರಿಸಬೇಕೆಂದು ನಾನು ಒತ್ತಾಯಮಾಡಿ ಹೇಳಬಯಸುತ್ತೇನೆ. ಈಗಿರುವ ಕ್ಷಾಮದ ಬಗ್ಗೆ ಕೂಗು ಎಲ್ಲಾ ಕಡೆಯೂ ಕೇಳಬರುತ್ತಿದೆ. 3 ಜಿಲ್ಲೆಗಳಲ್ಲಿ ಹೆಚ್ಚು ಕ್ಷಾಮವಿದೆ. ದೇಶದ ಎಲ್ಲಾ ಭಾಗಗಳಲ್ಲೂ ಕ್ಷಾಮವಿದೆ ಎಂಬುದನ್ನು ಮನಗಾಣಬೇಕು. ಒಂದು ಭಾಗದಲ್ಲಿ ಹೆಚ್ಚಾಗಿರಬಹುದು, ಇನ್ನೊಂದು ಭಾಗದಲ್ಲಿ ಕಡಮೆ ಇರಬಹುದು. ಕ್ಷಾಮ ನಿವಾರಣೆಗೆ ಕೇವಲ 8 ಜಿಲ್ಲೆಗಳಲ್ಲಿ ಹೆಚ್ಚು ಕಾರ್ಯಕ್ರಮವಿದೆ. ಉಳಿದ 11 ಜಿಲ್ಲೆಗಳಲ್ಲಿ ಕ್ಷಾಮವಿಲ್ಲ ಎಂಬ ಭಾವನೆ ತಳೆದಿದ್ದೇವೆಂದರೆ ತಪ್ಪಾಗಲಾರದು. 11 ಜಿಲ್ಲೆಗಳಲ್ಲೂ ಕೂಡ ಭೀಕರ ಪರಿಸ್ಥಿತಿ ಇದೆ. ಆದರೆ ಅಲ್ಲಿ ಅಲ್ಪಸ್ವಲ್ಪ ಮಳೆಯಾಗಿರುವುದರಿಂದ ಹೆಚ್ಚು ಕೂಗಿಗೆ ಅವಕಾಶವಿಲ್ಲ. ಈ ಪ್ರದೇಶಗಳಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವುದನ್ನು ಕಾರ್ಯರೂಪಕ್ಕೆ ತರದೇ ಇದ್ದರೆ ಎಲ್ಲಾ ಭಾಗಗಳಲ್ಲೂ ಕ್ಷಾಮ ಉದ್ರೇಕವಾಗುವುದು. ಹೆಚ್ಚಾಗಿ ಕೆಲವು ಕಡೆ ಕೆಲಸ ಮಾಡುವುದನ್ನು ನಾನು ವಿರೋಧಿಸುವುದಿಲ್ಲ. ಇತರ ಪ್ರದೇಶಗಳಲ್ಲೂ ಕೂಡ ಕಾಮಗಾರಿಗಳನ್ನು ಷುರುಮಾಡಿ ಸಾಕಷ್ಟು ಜನರಿಗೆ ಕೂಲಿ ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಅಕ್ಕಿ ಮತ್ತು ಸಕ್ಕರೆ, ಗೋಧಿ ಇವುಗಳಮೇಲೆ ನಿಯಂತ್ರಣ ತರುವುದರಿಂದ ಹೆಚ್ಚಿನ ಲಾಭ ಜನರಿಗೆ ಆಗಲಾರದು. ಈ ದಿವಸ ಸಕ್ಕರೆಯ ಮೇಲೆ ನಿಯಂತ್ರಣ ಕೆಲವು ಕಾಲದಿಂದ ಇದೆ. ಇದರಿಂದ ಬಹಳ ಬಿಕ್ಕಟ್ಟು ತಲೆದೋರಿರುವುದು. ಯಾವದರ ಮೇಲೆ ನಿಯಂತ್ರಣ ತರಬೇಕಾದರೂ ಪೂರ್ಣವಾಗಿ ಕಂಟ್ರೋಲ್ ಮಾಡಬೇಕು, ಇಲ್ಲದಿದ್ದರೆ ನಿಯಂತ್ರಣ ತೆಗೆದು ಎಲ್ಲಾ ಕಡೆ ಸಿಕ್ಕುವ ಹಾಗೆ ಮಾಡಬೇಕು. ಅರ್ಧ ನಿಯಂತ್ರಣ ಮಾಡುವುದಕ್ಕೆ ಬದಲಾಗಿ ಬೆಲೆ ಗೊತ್ತುಮಾಡಿ ಅದರಂತೆ ಮಾರದಿರುವವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕು. ಹಾಗೆ ಮಾಡಿ ನಿಯಂತ್ರಣ ತೆಗೆದು ಹಾಕಬಹುದು. ಈಗ ಅಕ್ಕಿ ಮತ್ತು ಗೋಧಿಗಳ ನಿಯಂತ್ರಣ ಬರಲಿದೆ. ಇದರಿಂದ ಸಾಕಾದಷ್ಟು ಆಹಾರವನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಒಂದು ತಿಂಗಳಿಗೆ ಒಂದು ಕೆ.ಜಿ. ಗೋಧಿ ಮತ್ತು ಅಕ್ಕಿ ಕೊಡುವುದರಿಂದ ಪ್ರಯೋಜನವಾಗುವುದಿಲ್ಲ. ಆದುದರಿಂದ ನಿಯಂತ್ರಣ ಪೂರ್ತಿ ತೆಗೆದು ಗೊತ್ತಾದ ಬೆಲೆ ನಿಗದಿಮಾಡಿ ಎಲ್ಲಾ ಪದಾರ್ಥಗಳೂ ತೆರೆದ ಮಾರುಕಟ್ಟೆಯಲ್ಲಿ ಸಿಕ್ಕುವ ಹಾಗೆ ವ್ಯವಸ್ಥೆಮಾಡಬೇಕು.

ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ವಿಷಯವಿದೆ. ಎಲ್ಲಾ ಹಳ್ಳಿಗಳಿಗೂ ಈ ವರ್ಷ ಅಥವಾ ಮುಂದಿನ ವರ್ಷ ನೀರನ್ನೊದಗಿಸುವುದಾಗಿ ತಿಳಿಸಿದ್ದಾರೆ. ಇದರ ಪ್ರಕಾರ ಎಲ್ಲಾ ಹಳ್ಳಿಗಳಿಗೂ 73–74ರ ಒಳಗಾಗಿ ಒದಗಿಸಬೇಕು. ಕೆಲವು ಹಳ್ಳಿಗಳಿಗೆ ವಿದ್ಯುತ್ ಪಂಪುಗಳ ಮೂಲಕ ನೀರನ್ನೊದಗಿಸಲು ಮಂಜೂರಾತಿ ಸಹ ಆಗಿದೆ. ಅಂಥ ಕಡೆ ಜನರು ತಮ್ಮ ಭಾಗವನ್ನು ಅರ್ಧ ಕೊಟ್ಟಿದ್ದಾರೆ. ಪೂರ್ಣ ಹಣ ಕಟ್ಟಿದ ಹೊರತು ಕೆಲಸ ಮಾಡುವುದಿಲ್ಲವೆಂದು ಹೇಳಿದರೆ ತೊಂದರೆಯಾಗುವುದರಿಂದ ಕೆಲವು ಕಡೆ ಪೂರ್ತ ಕಟ್ಟಲು ಸಾಧ್ಯವಾಗದಿರುವುದ

ರಿಂದ ಅಂಥ ಕಡೆ ಕೆಲಸ ಪ್ರಾರಂಭಿಸಿ ಕೊಡಬೇಕಾದ ಬಾಕಿ ಹಣವನ್ನು ಕಂತಿನ ರೂಪದಲ್ಲಿ ತೆಗೆದುಕೊಳ್ಳಲು ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಮತ್ತೊಂದು ವಿಷಯ. 50 ಜನರಿಗಿಂತ ಕಡಮೆ ಇರುವ ಊರುಗಳಿಗೆ ಬಾವಿ ಕೊಡಬಾರದೆಂದು ನಿಯಮ ಮಾಡಿದ್ದಾರೆ. ಈ ವಿಧೇಯಕವನ್ನು ಸಡಿಲಮಾಡಿ ಎಷ್ಟೇ ಜನಸಂಖ್ಯೆ ಇರಲಿ, ಜನಸಂಖ್ಯೆ ಆಧಾರವನ್ನು ಬಿಟ್ಟು ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕು, ಈಗಿರುವ ನಿರ್ಬಂಧ ತೆಗೆಯಬೇಕು ಎಂದು ಸಲಹೆ ಮಾಡುತ್ತೇನೆ.

ವ್ಯವಸಾಯದ ವಿಷಯದಲ್ಲಿ ಒಂದೆರಡು ಸಲಹೆ. ಈ ವಿಷಯದಲ್ಲಿ ಸಾಕಷ್ಟು ಸುಧಾರಣೆ ಆಗಿಲ್ಲ, ಹಿಂದಿನ ರೀತಿಯಲ್ಲೇ ವ್ಯವಸಾಯ ಹೆಚ್ಚಾಗಿ ನಡೆಯುತ್ತಿದೆ. ಕಾರಣ ಜನರಿಗೆ ಬೇಕಾದ ಗೊಬ್ಬರ, ಉಪಕರಣಗಳು, ಔಷಧಿಗಳು ಇವುಗಳ ಬೆಲೆ ವಿಪರೀತವಾಗಿದೆ. ರೈತರು ಬೆಳೆದ ಬೆಳೆಗೆ ಸರಿಯಾಗಿ ಬೆಲೆ ಸಿಕ್ಕುತ್ತಿಲ್ಲ. ಆದುದರಿಂದ ಸರಕಾರ ಲಾಭದಾಯಕವಾದ ಬೆಲೆ ಕೊಟ್ಟು ಸರಕಾರ ಕೊಳ್ಳಲು ಮುಂದೆ ಬರಬೇಕು, ಜನರು ಕೊಳ್ಳಲು ಮುಂದೆ ಬಾರದಿರುವಾಗ ಮತ್ತು ಸರಿಯಾದ ಬೆಲೆ ನೀಡದಿರುವಾಗ ಸರಕಾರ ಕೊಂಡು ದಾಸ್ತಾನಿಟ್ಟು ಕ್ಷಾಮ ಬಂದಾಗ ಉಪಯೋಗಿಸಲು ವ್ಯವಸ್ಥೆ ಮಾಡುವುದರಿಂದ ರೈತರಿಗೆ ಉತ್ತಮವಾದ ಬೆಲೆ ದೊರೆತು ವ್ಯವಸಾಯ ಮಾಡಲು ಅವರು ಮುಂದೆ ಬರುವರು. ನಿರುದ್ಯೋಗ ಸಮಸ್ಯೆ ಕೂಡ ಇದರಿಂದ ಕಡಮೆಯಾಗಬಹುದು. ಕಾರಣ ವ್ಯವಸಾಯ ಲಾಭದಾಯಕವಲ್ಲ ಎಂದು ಮನಗಂಡ ಜನ ಬೇರೆ ಕೆಲಸ ಹುಡುಕಿಕೊಂಡು ಹೋಗುತ್ತಿದ್ದಾರೆ ಸರಕಾರಿ ನೌಕರಿ ಮಾಡಬಹುದು, ಅದರಿಂದ ಸುಖವಾಗಿರಬಹುದು ಹಾಗೆ ಮಾಡಿದರೆ ಕಷ್ಟ ಬರುವುದಿಲ್ಲ ಎಂಬ ಭಾವನೆ ಜನರಲ್ಲಿ ದಿನೇದಿನೇ ಬೆಳೆಯುತ್ತಿರುವುದರಿಂದ ನಿರುದ್ಯೋಗ ಸಮಸ್ಯೆ ಅಧಿಕವಾಗುತ್ತಿದೆ. ಇದನ್ನು ತಡೆಗಟ್ಟಲು ವ್ಯವಸಾಯವು ಲಾಭದಾಯಕವಾಗುವಂತೆ ಬೆಳೆದ ಪದಾರ್ಥಗಳಿಗೆ ಉತ್ತಮವಾದ ಬೆಲೆ ಕೊಡಲು ವ್ಯವಸ್ಥೆಮಾಡಬೇಕು.

ದಿನ ದಿನಕ್ಕೆ ನಿರುದ್ಯೋಗ ಹೆಚ್ಚಾಗುತ್ತಿದೆ, ವಿದ್ಯಾವಂತರ ಸಂಖ್ಯೆ ಹೆಚ್ಚಾಗುತ್ತಿದೆ, ಇದಕ್ಕೆ ಬಜೆಟ್ಟಿನಲ್ಲಿ ಅವಕಾಶ ಮಾಡಿದ್ದಾರೆ. ಆದರೆ ಯಾವ ರೀತಿ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವರೆಂಬುದನ್ನು ತಿಳಿಸಿಲ್ಲ. ಇದನ್ನು ತಡೆಗಟ್ಟುವುದಾಗಿ ತಿಳಿಸಿರುವುದರಿಂದ ತಕ್ಷಣ ಅದರಂತೆ ಕಾರ್ಯಗತಮಾಡಿ ನಿರುದ್ಯೋಗಿ ವಿದ್ಯಾವಂತರಿಗೆ ಉದ್ಯೋಗ ಸಿಕ್ಕುವಂತೆ ವ್ಯವಸ್ಥೆ ಮಾಡಿದರೆ ಅನುಕೂಲ. ಇಲ್ಲದಿದ್ದರೆ ಈ ಸಮಸ್ಯೆ ಉಲ್ಬಣವಾಗಿ ಭೂತಾಕಾರವಾಗಿ ಬೆಳೆದು ಅದನ್ನು ಎದುರಿಸುವುದು ಕಷ್ಟವಾಗುವುದು.

ವಿದ್ಯಾಭ್ಯಾಸದ ಬಾಬನ್ನು ನೋಡಿದರೆ ವಿಶ್ವವಿದ್ಯಾನಿಲಯಗಳಿಗೆ ಹೆಚ್ಚು ಹಣ ಒದಗಿಸಿದ್ದಾರೆ. ಅದಕ್ಕೆ ಆದ್ಯತೆ ಇದೆ. ಅದು ತಪ್ಪು, ತಾಂತ್ರಿಕ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಟ್ಟರೆ ವಿದ್ಯಾರ್ಥಿಯಾದವನು ವಿದ್ಯಾಭ್ಯಾಸವಾದಮೇಲೆ ತನ್ನ ಸ್ವಂತ ಕಾಲಮೇಲೆ ತಾನು ನಿಂತು ತನ್ನ ಉದ್ಯೋಗವನ್ನು ತಾನೇ ನಿರ್ಮಾಣ ಮಾಡಿಕೊಳ್ಳಲು ಅನುಕೂಲವಾಗುವುದು. ಇದಕ್ಕೆ ಹೆಚ್ಚು ಗಮನ ಹರಿಸಬೇಕು. ಇದಕ್ಕೆ ಬಜೆಟ್ಟಿನಲ್ಲಿ ಹೆಚ್ಚು ಹಣ ಒದಗಿಸಬೇಕು ಮತ್ತು ಗಮನ ಹರಿಸಬೇಕು.

ಈಗ ವೈದ್ಯಕೀಯ ಸೌಕರ್ಯ ದೊರೆಯದೆ ಹಳ್ಳಿಗಳಿಗೆ ಕಷ್ಟವಾಗಿದೆ, ಇಂದು ಬಡವರ ಕಷ್ಟ ಕೇಳುವವರೇ ಇಲ್ಲ. ಇಂಥ ಪರಿಸ್ಥಿತಿಯಿದೆ. ಈಗ 5 ಸಾವಿರ ಜನರಿಗೊಂದು ಆಸ್ಪತ್ರೆ ಕೊಡಬೇಕು, ರೂರಲ್ ಆಸ್ಪತ್ರೆಯಲ್ಲಿ ಕೆಲಸ ಮಾಡುವವರಿಗೆ 250 ರೂಪಾಯಿ ಸಂಬಳಕೊಟ್ಟು 100 ರೂಪಾಯಿ ಔಷಧಿ ಖರ್ಚು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕಡಮೆ ಮಾಡಿರುವ ಸ್ಕೀಂ ಫಲದಾಯಕವಾದುದಲ್ಲ. ಡಾಕ್ಟರು ಕೂಡ ಬಂದು ಕೆಲಸ ಮಾಡುತ್ತಿಲ್ಲ. ಅವರಿಗೆ ಸಾಕಷ್ಟು ವೇತನ ಕೊಟ್ಟು ಔಷಧಿ ಒದಗಿಸಿ ಆಸ್ಪತ್ರೆ ನಡೆಸಿದರೆ ಅನುಕೂಲವಾಗುವುದು. ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಹೀಗೆ ಮಾಡಿ ಸುಮ್ಮನೆ ವೈದ್ಯಕೀಯ ಸೌಕರ್ಯ ಒದಗಿಸಿದ್ದೇವೆಂದು ಹೇಳಬಹುದೇ ಹೊರತು ಅದರಿಂದೇನೂ ಪ್ರಯೋಜನವಾಗುವುದಿಲ್ಲ.

ಒಂದು ಇಂಜಕ್ಷನ್‌ಗೆ ಎರಡು ಮೂರು ರೂಪಾಯಿಗಳನ್ನು ಚಾರ್ಜ್ ಮಾಡತಕ್ಕಂಥ ಪ್ರೈವೇಟ್ ಪ್ರಾಕ್ಟೀಷನರ್ಸ್ ಅನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಇವರಿಗೆ ಸರ್ಕಾರದವರು ಅನುಮತಿಯನ್ನು ಕೊಟ್ಟು, ಜೊತೆಗೆ ಸಂಬಳ ಕೊಟ್ಟು, ಏನು ಬೇಕಾದರು ಮಾಡಿಕೊಳ್ಳಿ ಎಂದು ಹೇಳಿದಂತಾಗುತ್ತದೆ. ಅವರು ಏನು ತಪ್ಪು ಮಾಡಿದರೂ ಕೇಳತಕ್ಕ ಅಧಿಕಾರ ಸರ್ಕಾರಕ್ಕೆ ಇಲ್ಲದೆ ಹೋದಾಗ ಜನಗಳಿಗೆ ಬಹಳ ಕಷ್ಟವಾಗುತ್ತದೆಯೇ ಹೊರತು ಅವರ ಕಷ್ಟ ಕಡಿಮೆಯಾಗುವುದಿಲ್ಲ ಆದ್ದರಿಂದ ಸರ್ಕಾರದವರು ವೈದ್ಯಕೀಯದ ಕಡೆಗೆ ಹೆಚ್ಚಿನ ಆದ್ಯತೆ ಕೊಡಬೇಕಾದರೆ ಈ ಆಸ್ಪತ್ರೆಗಳ ಮೇಲೆ ಸರಕಾರ ಪೂರ್ಣ ಅಧಿಕಾರ ಹೊಂದಿರಬೇಕು. ಅವರಿಗೆ ಪೂರ್ಣವೇತನ ಕೊಟ್ಟು

(ಶ್ರೀ ಎಚ್. ಜಿ. ಚನ್ನಪ್ಪ)

ಪೂರ್ತಾ ಔಷಧಿಗಳನ್ನು ಸರಕಾರವೇ ಒದಗಿಸಬೇಕು. ಇನ್ನು ಪಶುಪಾಲನೆಯ ವಿಷಯದಲ್ಲಿ, ಇದಕ್ಕೆ ಸರ್ಕಾರದವರು ಹೆಚ್ಚಿನ ಆದ್ಯತೆ ಕೊಡಬೇಕು; ಮತ್ತು ಜನಗಳ ಬಡತನವನ್ನು ಹೋಗಲಾಡಿಸುವುದಕ್ಕೆ ಸಹಾಯ ಮಾಡಬೇಕು. ಪಶು ವೈದ್ಯಶಾಲೆಗಳು ಇರುವುದು ಅತಿ ವಿರಳ. ಜನಗಳಿಗೆ ಯಾವುದಾದರೂ ಒಂದು ರೀತಿಯಲ್ಲಿ ಆಸ್ಪತ್ರೆಗಳಿಗೆ ಹೋಗುವುದಕ್ಕೆ ಸಾಧ್ಯತೆ ಇದೆ. ಆದರೆ ರೋಗ ರುಜಿನಗಳು ಜಾನುವಾರುಗಳಿಗೆ ಬಂದರೆ, ಅವುಗಳನ್ನು ಸಾಗಿಸಿಕೊಂಡು ಹೋಗಬೇಕಾದರೆ ಕಷ್ಟವಾಗುತ್ತದೆ. ಈಗ ಐದು ಮೈಲಿಗಳ ಅಂತರದಲ್ಲಿ ರೂರಲ್ ವೆಟರಿನರಿ ಹಾಸ್ಪಿಟಲ್ ಅನ್ನು ಮಾಡಬೇಕು ಎಂದು ಮಾಡಿದ್ದಾರೆ ಎಲ್ಲಿ ತಕ್ಷಣ ಆಸ್ಪತ್ರೆಗಳು ಬೇಕಾಗಿವೆಯೋ ಅಲ್ಲಿ ಯಾವ ಷರತ್ತು ಇಲ್ಲದೆ ಪಶು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಇಲ್ಲದೆ ಹೋದರೆ ಜಾನುವಾರುಗಳಿಗೆ ತೊಂದರೆಯಾಗುತ್ತದೆ, ರೈತನ ಸಂಪತ್ತು ಕಡಿಮೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಕುರಿಗಳಿಗೆ ವಿಪರೀತ ಖಾಯಿಲೆ ಬರುತ್ತಿವೆ. ಒಂದು ಹಿಂಡಿಗೆ ಕಾಯಿಲೆ ಬಂದರೆ ಒಂದೂ ಉಳಿಯದಂತೆ ಸಾಯುತ್ತಿವೆ. ಯಾವ ವೈದ್ಯನೂ ರೋಗವನ್ನು ಕಂಡುಹಿಡಿಯುವುದಕ್ಕೆ ಆಗಿಲ್ಲ. ಹೆಬ್ಬಾಳ್‌ನಲ್ಲಿರತಕ್ಕ ಪರೀಕ್ಷಾಲಯಗಳಿಗೆ ಕಳುಹಿಸಿ ಕೊಟ್ಟರೂ ಅವರು ಕೊಟ್ಟಂಥ ಔಷಧಿ ಏನೂ ಪ್ರಯೋಜನವಾಗದೆ, ಕುರಿಗಳು ಸಾಯುತ್ತಲೇ ಇವೆ. ಇಂಥ ರೋಗ ಎಂದು ಕಂಡುಹಿಡಿಯುವುದಕ್ಕೆ ಸಾಧ್ಯವಾಗಿಲ್ಲ. ಈ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ಆದ್ಯತೆ ಕೊಡಬೇಕು, ಮತ್ತು ಪಶು ವೈದ್ಯ ಸೌಲಭ್ಯಗಳನ್ನು ಹೆಚ್ಚಿಸುವುದಕ್ಕೆ ಐದು ಮೈಲಿಗಳ ಅಂತರದಲ್ಲಿ ಒಂದೊಂದು ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಿ ಅವರಿಗೆ ಸೌಲಭ್ಯವನ್ನು ಒದಗಿಸಿಕೊಡಬೇಕು. ಈ ರೀತಿ ಎಲ್ಲಾ ಸೌಲಭ್ಯಗಳನ್ನು ಕೊಟ್ಟರೆ ಮಾತ್ರ ರೈತನ ಸ್ಥಿತಿಗತಿ ಸುಧಾರಿಸುತ್ತದೆ; ಎಂದು ಹೇಳುತ್ತೇನೆ.

ಇನ್ನು ನೀರಾವರಿ ವಿಷಯದಲ್ಲಿ, ಸರ್ಕಾರದವರು ಹೆಚ್ಚು ಗಮನ ಕೊಟ್ಟು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟುವುದಕ್ಕೆ ಗಮನ ಹರಿಸಿದ್ದಾರೆಯೋ ಹೊರತು ಸಣ್ಣ ಸಣ್ಣ ಹಳೆಯ ಕೆರೆಗಳ ಕಡೆಗೂ ತಮ್ಮ ಗಮನವನ್ನು ಹರಿಸಬೇಕು. ನಮ್ಮ ದೇಶದಲ್ಲಿ ಲಿಫ್ಟ್ ಇರಿಗೇಷನ್ ಸೌಲಭ್ಯವನ್ನು ಒದಗಿಸುವುದಕ್ಕೆ ಹೆಚ್ಚು ಸಾಧ್ಯತೆ ಇದೆ. ಎಷ್ಟೋ ಕಡೆ ಲಿಫ್ಟ್ ಇರಿಗೇಷನ್ ಸ್ಕೀಂಗೆ ಸರ್ವೇಯಾಗಿದೆ. ಲಿಫ್ಟ್ ಇರಿಗೇಷನ್ ಮಾಡಿ ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟರೆ ಬರಗಾಲ ಪರಿಸ್ಥಿತಿಯನ್ನು ಸುಧಾರಿಸಲು ಸುಲಭವಾಗುತ್ತದೆ. ಈ ಒಂದು ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ, ನಮ್ಮ ಭಾಷಣಗಳು ಕೇವಲ ಭಾಷಣಗಳಾಗಿ ಉಳಿಯದೆ ಕಾರ್ಯಗತವಾಗಬೇಕು ಎಂದು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎಸ್. ವೈ. ಪಾಟೀಲ್ (ಸಿಂಧಗಿ).—ಮಾನ್ಯ ಸಭಾಪತಿಗಳೇ, ಅರ್ಥಮಂತ್ರಿಗಳು ತಮ್ಮ ಭಾಷಣವನ್ನು ಬರಗಾಲದ ವಿಷಯದಿಂದ ಶುರು ಮಾಡಿದ್ದಾರೆ. ಅದು ಅಷ್ಟೊಂದು ನಮ್ಮ ರಾಜ್ಯಕ್ಕೆ ಶುಭ ಸೂಚಕವಲ್ಲ. ಮಾನ್ಯ ಸಭಾಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿ ಹೇಳುತ್ತೇನೆ ಹಿಂದಿನ ಸರ್ಕಾರದವರ ಮೇಲೆ ಅವರು ಕೆಲಸ ಕಾರ್ಯಗಳನ್ನು ಮಾಡಿಲ್ಲ ಎಂದು ಹೇಳುವುದರಿಂದ ಸಮಂಜಸವಾದ ಪರಿಹಾರವಾಗುವುದಿಲ್ಲ. ಈಗ ಏನು ಕೇಸ್ ನಡೆಸಿದ್ದು ಇದೆ ಅದು ಹಿಂದಿನ ಮೆಜಿಸ್ಟ್ರೇಟರು ನಡೆಸಿಲ್ಲ ಎಂದು ತಿಳಿದುಕೊಳ್ಳುವುದು ಬೇಡ. ತಮ್ಮ ಜವಾಬ್ದಾರಿ ತಿಳಿದುಕೊಂಡು ಅಲ್ಲಿಯ ಕೆಲಸ ಕಾರ್ಯಗಳನ್ನು ಮಾಡಿರಿ ಎಂದು ನಮ್ರತೆಯಿಂದ ಪ್ರಾರ್ಥನೆ ಮಾಡುತ್ತೇನೆ. ದುಷ್ಕಾಲವನ್ನು ಪರಿಹರಿಸಲಿಕ್ಕೆ ಸರ್ಕಾರ ಸರಿಯಾಗಿ ಸಮರ್ಪಕವಾಗಿ ಕೆಲಸ ಮಾಡಿಲ್ಲ ಎಂದು ಕಾಂಗ್ರೆಸ್ ಜನಗಳೇ ಹೇಳುತ್ತಿದ್ದಾರೆ. ನಾವು ಆ ರೀತಿ ಮಾತನಾಡಿದ್ದರೆ, ಟೀಕೆ ಮಾಡುವುದಕ್ಕೋಸ್ಕರ ಹೇಳುತ್ತೇವೆ ಎಂದು ತಿಳಿದುಕೊಳ್ಳಬಹುದಿತ್ತು. ಆದರೆ ಇಂಥ ಭಯಂಕರವಾದ ಬರಗಾಲ ಕಳೆದ 50 ವರ್ಷಗಳಲ್ಲಿ ಎಂದೂ ಬಂದಿರಲಿಲ್ಲ. ಸರ್ಕಾರಕ್ಕೆ ಇದು ಮನವರಿಕೆಯಾದ ಬಳಿಕ ಏತಕ್ಕೆ ಇದನ್ನು ಫ್ಯಾಮಿನ್ ಏರಿಯಾ ಎಂದು ಡಿಕ್ಲೇರ್ ಮಾಡಬಾರದು, ಇದರಿಂದ ಏನು ತೊಂದರೆ ಇದೆ ಎಂದು ಪ್ರಶ್ನೆ ಮಾಡುತ್ತೇನೆ. ತಾವು ಅಪ್ಪಣೆ ಕೊಡಿಸುತ್ತಾ, ನಾವು ಅಲ್ಲಿ ಕೆಲಸಗಳನ್ನು ಮಾಡಿದರೆ ಸಾಕು, ಲೋಕಲ್ ಕ್ಯಾಂಡಿಡೇಟ್ಸ್ ಅನ್ನು ನೇಮಿಸಿದರೆ ಸಾಕು, ಪರ್ಮನೆಂಟ್ ಆಗಿ ಏತಕ್ಕೆ ಬೇಕು ಎನ್ನುವುದು ಸರ್ಕಾರದ ಅಭಿಪ್ರಾಯ ಹೇಳಿದಿರಿ ಇದು ಬೇರೆ ಪಾರ್ಟಿಯ ಸರ್ಕಾರ ಇದ್ದರೂ ಸಹ, ಜನತಾ ಸರ್ಕಾರ ಇದು ಮುಂಬೈ ರಾಜ್ಯದಲ್ಲಿ ಇಲ್ಲಿಗಿಂತ ಕಡಿಮೆ ದುಷ್ಕಾಲ ಬಂದಿದ್ದರೂ ಅಲ್ಲಿ ಅವರು ಫ್ಯಾಮಿನ್ ಏರಿಯಾ ಎಂದು ಡಿಕ್ಲೇರ್ ಮಾಡಿದರು. ಆರ್ ಕಾಂಗ್ರೆಸ್ ಸರ್ಕಾರ ಇದ್ದರೂ, ಇದು ನಾವು ಆರಿಸಿ ಕೊಟ್ಟಂಥ

ಸರ್ಕಾರ, ಜನತಾ ಸರ್ಕಾರದವರು ನಮ್ಮ ಸಲುವಾಗಿ ಇಂಥ ಕಠಿಣ ಪರಿಸ್ಥಿತಿ ಇದೆಯೆಂದು ತಿಳಿದುಕೊಂಡು ಅಲ್ಲಿಗೆ ಹೆಚ್ಚಿಗೆ ಗಮನಕೊಡಬೇಕು. ಸೆಂಟ್ರಲ್ ಗವರ್ನಮೆಂಟಿನ ಡಿ. ಪಿ. ಧರ್ ಅವರು ಬಂದರು, ಎಲ್ಲಾ ಪಾರ್ಟಿಯವರು ಏಕಮುಖವಾಗಿ ಅಲ್ಲಿ ಕೆಟ್ಟ ಪರಿಸ್ಥಿತಿ ಇದೆ ಎಂದು ಹೇಳಿದರು ಅಂದ ಬಳಿಕ ಅದನ್ನು ಫ್ಯಾಮಿನ್ ಏರಿಯಾ ಎಂದು ಡಿಕ್ಲೇರ್ ಮಾಡುವುದಕ್ಕೆ ಲುಕ್ಸಾನು ಏನು ಇದೆ? ಈ ಸರ್ಕಾರದಲ್ಲಿ ಯಾರೇ ಇರಲಿ, ದೇವರಾಜ ಅರಸ್ ಅವರೇ ಇರಲಿ, ಇದು ನಮ್ಮ ಸರ್ಕಾರ ಜನತಾ ಸರ್ಕಾರ, ಆ ಏರಿಯಾವನ್ನು ಫ್ಯಾಮಿನ್ ಏರಿಯಾ ಎಂದು ಡಿಕ್ಲೇರ್ ಏತಕ್ಕೆ ಮಾಡಲಿಲ್ಲ ಎಂದು ಪ್ರಶ್ನೆ ಮಾಡುತ್ತಾ ಇದ್ದೇನೆ. ಫ್ಯಾಮಿನ್ ಏರಿಯಾ ಎಂದು ಡಿಕ್ಲೇರ್ ಮಾಡಿದರೆ, ನಿಯಮಾವಳಿಗಳಿಗೆ ಒಳಪಟ್ಟು ಅಲ್ಲಿಗೆ ಎಲ್ಲಾ ಸವಲತ್ತುಗಳು ಸಿಕ್ಕುತ್ತವೆ. ನಮ್ಮ ಊರಿನ ಜನಸಂಖ್ಯೆ, 1600, ಕಳೆದ 7-8 ತಿಂಗಳಿಂದ ಸುಮಾರು 500 ಮಂದಿ ಬೇರೆ ಕಡೆಗೆ ಕೆಲಸಕ್ಕೆ ಹೋಗಿದ್ದಾರೆ. ಸರ್ಕಾರದವರು ಅಲ್ಲಿಗೆ ಹೋದಾಗ ಜನ ಎಲ್ಲಿ ಎಂದು ಕೇಳಿದರು. ನೀವು ತಡಮಾಡಿ ಕೆಲಸಗಳನ್ನು ಶುರುಮಾಡಿದರೆ, ನಿಮ್ಮ ಕೆಲಸಗಳನ್ನು ಮಾಡುವುದಕ್ಕೆ ಯಾರು ಬರಬೇಕು ? ಅಲ್ಲಿ ಜನರೇ ಇಲ್ಲ, ನೆರೆ ರಾಜ್ಯ ಮಹಾರಾಷ್ಟ್ರ ಮತ್ತು ಬೇರೆ ಕಡೆಗಳಿಗೆ ಹೋದರೋ ಅಥವಾ ಎಲ್ಲಿಗೆ ಹೋದರೋ ಗೊತ್ತಿಲ್ಲ ಈಗಲಾದರೂ ದಯವಿಟ್ಟು ಫ್ಯಾಮಿನ್ ಏರಿಯಾ ಎಂದು ಡಿಕ್ಲೇರ್ ಮಾಡಿ, ಅದಕ್ಕೆ ಅನುಗುಣವಾಗಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ, ಅವನ್ನು ತೆಗೆದುಕೊಂಡು ನಮ್ಮ ಜನಕ್ಕೆ ಉಪಕಾರ ಮಾಡಿರಿ. ನಿಮ್ಮ ಪಾರ್ಟಿಯಿಂದ ನಮಗೆ ಉಪಕಾರ ಬೇಡ್ರಿ, ಈ ಸರ್ಕಾರದಲ್ಲಿ ಜನತೆಯ ದುಡ್ಡು ಇದೆ, ಜನತಾ ಸರ್ಕಾರ ಇದೆ. ಜನತೆಗೆ ದುಡಿದು ಉಪಕಾರ ಮಾಡ್ರಿ. ಎಷ್ಟೋ ಜನರು ಅಲ್ಲಿ ಊಟವಿಲ್ಲದೆ ಸತ್ತಿದ್ದಾರೆ, ನೀವು ಅಲ್ಲಿ ಜನರು ಸತ್ತಿಲ್ಲ ಎಂದು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಬದಲಾಗಿ, ಇಂಥ ಪರಿಸ್ಥಿತಿಯಲ್ಲಿ ಅದನ್ನು ತೀವ್ರವಾಗಿ ಫ್ಯಾಮಿನ್ ಏರಿಯಾ ಎಂದು ಡಿಕ್ಲೇರ್ ಮಾಡಬೇಕು.

ಬಿಜಾಪುರ ಜಿಲ್ಲೆಯಲ್ಲಿ ರೈತರು ಮಧ್ಯಮ ವರ್ಗದ ಕುಟುಂಬದವರು, ನೇಕಾರರ ಕುಟುಂಬದವರು ಇದ್ದಾರೆ. ಇಲ್ಲಿಂದ ಯಾವ ಜವಾಬ್ದಾರಿ ಜನರು ನನ್ನ ಜೊತೆಯಲ್ಲಿ ಬರಲಿ, ಅಲ್ಲಿಯ ನೇಕಾರರ ಸಮಸ್ಯೆ. ಮಧ್ಯಮ ವರ್ಗದವರ ಸಮಸ್ಯೆ ಪರಿಹಾರವಾಗಿದೆಯೇ ಎನ್ನುವುದನ್ನು ತೋರಿಸುತ್ತೇನೆ. ಕೂಲಿಗಾರರು ಜನರು ಎಲ್ಲಾ ಜನರು ನಿರ್ಗತಿಕರಾಗಿದ್ದಾರೆ. ಮಧ್ಯಮ ವರ್ಗದವರು, ಸತ್ತಿದ್ದ ದನಗಳನ್ನು ಬಿಟ್ಟು ಉಳಿದಿದ್ದನ್ನು ಕಾಯ್ದುಕೊಂಡು, 100 ರೂಪಾಯಿ ಬಾಳುವಂಥ ದನಗಳನ್ನು 10 ರೂಪಾಯಿಗೆ ಮಾರಿಕೊಂಡು ಜೀವನ ಮಾಡತಕ್ಕಂಥ ಜನರೂ ಇದ್ದಾರೆ. ಒಂದೊಂದು ಕುಟುಂಬದಲ್ಲಿ ಮುದುಕರು, ಸಣ್ಣ ಸಣ್ಣ ಮಕ್ಕಳು, ಹೆಣ್ಣುಮಕ್ಕಳು, ದುಡಿಯಲಾರದೆ ಇರತಕ್ಕವರು ಇದ್ದು ಭರೀ ಒಬ್ಬರೋ ಇಬ್ಬರೋ ಕೆಲಸ ಮಾಡುವರು ಇದ್ದು, ಕೂಲಿಯಿಂದ ಬಂದ ದುಡ್ಡು ಸಾಲದೆ ಉಪವಾಸ ಬೀಳುವ ಪ್ರಸಂಗ ಇದೆ. ಅವರು ದೇವರನ್ನು ಪ್ರಾರ್ಥನೆ ಮಾಡುವ ಕಾಲ ಬಂದಿದೆ. ಅಲ್ಲಿನ ಜನ ಕಂಗಾಲಾಗಿದ್ದಾರೆ. ಅದರ ಸಲುವಾಗಿ ಅಸೆಂಬ್ಲಿಯೊಳಗೆ ನಾವು ಇಲ್ಲಿ ಕುಳಿತು ಹಗುರವಾಗಿ ವಿಚಾರ ಮಾಡುತ್ತೇವೆಂದರೆ ಸಾಲದು, ಬಡತನ ಎನ್ನತಕ್ಕದ್ದು ಬಹಳ ಕಠಿಣ ಪರಿಸ್ಥಿತಿಗೆ ಹೋಗಿದೆ. ನೀವು ಯಾರಾದರೂ ಪುಣ್ಯಾತ್ಮರು, ನನ್ನ ಸಂಗಡ ಬನ್ನಿರಿ; ದುಷ್ಕಾಲ ಬಂದು ಜನ ಹೇಗೆ ಸಾಯುತ್ತಿದ್ದಾರೆ ಎಂದು ತೋರಿಸುತ್ತೇನೆ ಇಲ್ಲಿ ಕನ್ನಡಿಯೊಳಗೆ ಕುಳಿತು ಮಾತನಾಡುವುದು ಸಮರ್ಪಕವಲ್ಲ ಎಂದು ಹೇಳುತ್ತೇನೆ. ಮೊನ್ನೆ ಪ್ರೈಮ್ ಮಿನಿಸ್ಟರ್ ಬಂದಾಗ, ನಮ್ಮ ಮುಖ್ಯ ಮಂತ್ರಿಗಳು ಒಂದು ದೊಡ್ಡ ಉಪಕಾರ ಮಾಡಿದರು ಏನೆಂದರೆ ನಮಗೆ ಪ್ರೈಮ್ ಮಿನಿಸ್ಟರ್ ಅನ್ನು ಭೇಟಿ ಮಾಡಿಸಿದರು. ತಾವು ಬರುವುದು ತಡ ಮಾಡಿದಿರಿ ಅಡ್ಡಿಯಿಲ್ಲ, ಏನು ಅಪ್ಪಣೆ ಕೊಡಿಸುತ್ತಾ ಇದ್ದೀರಿ ಎಂದು ಕೇಳಿದೆ. ಅದಕ್ಕೆ ಅವರು 'ಐ ವಿಲ್ ಕನ್ಸಿಡರ್ ವೆರಿ ಸಿಂಪ್ಥೆಟಿಕಲಿ' ಎಂದು ಹೇಳಿದರು. ಡಿ. ಪಿ. ಧರ್ ಅವರು ಇದನ್ನೇ ಹೇಳಿದರು. ಆದ್ದರಿಂದ ನಾನು ಇದನ್ನು ಟೀಕೆ ಮಾಡುವುದಕ್ಕೋಸ್ಕರ ಹೇಳುವುದಿಲ್ಲ. ಇದರ ಬಗ್ಗೆ ಟೀಕೆ ಮಾಡುವುದನ್ನು ಬಿಟ್ಟು ಬಿಟ್ಟಿದ್ದೇನೆ. ಇದರ ಬಗ್ಗೆ ಟೀಕೆ ಮಾಡಿದರೂ ಸಾರ್ಥಕವಾಗುವುದಿಲ್ಲ. ಈಗ ನೀವು ಅಪ್ಪರ್ ಕೃಷ್ಣ ಪ್ರಾಜೆಕ್ಟನ್ನು ನ್ಯಾಷನಲ್ ಪ್ರಾಜೆಕ್ಟ್ ಎಂದು ಡಿಕ್ಲೇರ್ ಮಾಡಬೇಕು, ಡಿಕ್ಲೇರ್ ಮಾಡಿ ಇಂತಿಷ್ಟೇ ದಿವಸದೊಳಗೆ ಮುಗಿಸುತ್ತೇವೆ ಎನ್ನುವ ಹೇಳಿಕೆಯನ್ನು ಹೇಳಬೇಕು. ಸಿಂಧಗಿ ತಾಲ್ಲೂಕ್ ಮಟ್ಟಿಗೆ ಹೇಳುವುದಾದರೆ, ಈ ಪ್ರಾಜೆಕ್ಟಿನಿಂದ ಲಕ್ಷಾಂತರ ಎಕರೆ ನೀರಾವರಿಯಾಗುತ್ತದೆ. ಉಳಿದ ಭಾಗ ಏನು ಇದೆ ಅದಕ್ಕೆ ವೆಲ್ ಇರಿಗೇಷನ್ ಮಾಡುವುದು ಒಂದೇ ಸಲ್ಯೂಷನ್. ಅವರ ಸಲುವಾಗಿ ದವಾಖಾನಗಳನ್ನು ಮಾಡಿರಿ; ಏನು ಮಾಡುತ್ತೀರೋ ಅದನ್ನು ಮಾಡಿ ಬಿಡಿ. ಎಷ್ಟು ಪೋಲೀಸ್ ಫೋರ್ಸ್ ಇಟ್ಟಿದ್ದೇವೆ ಎಂದು ತೋರಿಸುತ್ತೀರಿ ಹುಬ್ಬಳ್ಳಿಯಲ್ಲಿ ಪ್ರತಿದಿವಸ ಸಾವಿರಾರು ಟ್ರಕ್‌ಗಳು ಹೋಗುತ್ತಿರುತ್ತವೆ. ಒಂದು ಟ್ರಕ್ ಅನ್ನು ಕಂಪಲ್ಸರಿಯಾಗಿ ಇಟ್ಟುಕೊಳ್ಳುತ್ತೀರಿ. ಯಾರು ಹೋಂ ಮಿನಿಸ್ಟರ್ ಇದ್ದಾರೆ, ಅವರಿಗೆ ಹೇಳುತ್ತಾ ಇದ್ದೇನೆ, ಎಲ್ಲಿ ಲಂಚ ಹೊಡೆಯುವುದಿಲ್ಲ

(ಶ್ರೀ ಎಸ್. ವೈ. ಪಾಟೀಲ್)

Clause 5.—Section 114A proposed to be inserted by this clause empowers the Government to make rules subject to which offences specified therein may be compounded.

The delegation of proposed legislative powers is of a normal character.

AZEEZ SAIT.

Te. HANUMANTHAPPA,
Secretary.

WD 20049—GPB—550—21-6-1974

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday the 17th March 1973/Phalguna 26, 1894 S.E.

The House met in the Assembly Chambers, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Power Supply to Industries

116. **Sri B. G. BANAKAR** (Hirekerur).—

Will the Minister for Public Works and Electricity be pleased state :—

(*a*) the total number and names of various types of industries in the State that have obtained permission from M.S.E.B. to consume electric power of 25 Horse power or more ;

(*b*) the total quantity of electricity consumed by them and the amount of consumption charged to them during the last three years

(*c*) the total amount of consumption charges actually paid by them and the amount due to be recovered from them ?

Sri H. M. CHANNABASAPPA (Minister for Public Works and Electricity).—

(*a*) Power supply to consumers including Industries is classified on the basis of Low Tension and High Tension installations and individual list of Industries consuming power of 25 HP is not maintained by the Board.

(*b*) Does not arise in view of the reply to clause (*a*).

(*c*) Does not arise.

ಶ್ರೀ ಬಿ. ಜಿ. ಬಣಕಾರ್.—ನಮ್ಮ ರಾಜ್ಯದಲ್ಲಿ ಸುಮಾರು 41,222 ಉದ್ಯಮಗಳು ಇದ್ದು ಅನೇಕ ಉದ್ಯಮಿಗಳು 50 ಹಾರ್ಸ್ ಪವರನ್ನು ಉಪಯೋಗ ಮಾಡುತ್ತಿದ್ದರೂ 40 ಹಾರ್ಸ್

(ಶ್ರೀ ಬಿ. ಜಿ. ಬಣಕಾರ್)

ಪವರ್‌ನ ಲೇಬಲ್ ಹಚ್ಚಿಕೊಂಡಿದ್ದಾರೆ. ಮತ್ತೆ ಕೆಲವರು 40 ಹಾರ್ಸ್ ಪವರ್ ಉಪಯೋಗ ಮಾಡುತ್ತಿದ್ದರೂ 30 ಹಾರ್ಸ್ ಪವರ್‌ನ ಲೇಬಲ್ ಹಚ್ಚಿಕೊಂಡು ಸರ್ಕಾರಕ್ಕೆ ಚೀಟಿಂಗ್ ಮಾಡುತ್ತಿದ್ದಾರೆ. ಇಂಥಾದ್ದನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಯೋಗ್ಯ ವಿಚಾರಣೆ ಮಾಡಿ ಉದ್ಯಮಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಮೋಸಕೃತ್ಯಗಳು ಅಲ್ಲಲ್ಲೇ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಆಗಾಗ್ಗೆ ಬರುತ್ತಿರುತ್ತದೆ. ಆ ರೀತಿ ಬಂದಾಗ ಅವುಗಳ ಬಗ್ಗೆ ವಿಮರ್ಶೆ ಮಾಡಿ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತೇವೆ.

ಶ್ರೀ ಬಿ. ಜಿ. ಬಣಕಾರ್.—ಅನೇಕ ಕಡೆ ಉದ್ಯಮಿಗಳು 400 ಅಥವಾ 500 ಯೂನಿಟ್‌ಗಳವರೆಗೆ ಕರೆಂಟನ್ನು ಉಪಯೋಗ ಮಾಡುತ್ತಿದ್ದರೂ ಸಹ ಮೀಟರನ್ನು ಬದಲಾವಣೆ ಮಾಡಿ ತಾವು ಉಪಯೋಗ ಮಾಡುತ್ತಿರುವುದು ಕೇವಲ 200 ಯೂನಿಟ್‌ಗಳು ಮಾತ್ರ ಎಂದು ತೋರಿಸುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಾರದಿದ್ದರೆ ಆ ಬಗ್ಗೆ ತನಿಖೆ ಮಾಡಿಸಿ ಅಂತಹ ಉದ್ಯಮಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂತಹ ಸಂದರ್ಭಗಳು ಕಂಡುಬಂದರೆ ಸೂಕ್ತ ಕ್ರಮವನ್ನು ಸರ್ಕಾರ ಕೈಕೊಳ್ಳುತ್ತದೆ.

ಶ್ರೀ ಬಿ. ಜಿ. ಬಣಕಾರ್.- ಈ ಉದ್ಯಮಿಗಳಿಂದ ಸರ್ಕಾರಕ್ಕೆ 6–7 ಕೋಟಿ ರೂಪಾಯಿಗಳವರೆಗೆ ಬಾಕಿ ಬರುವುದು ಇದೆ. ಇಷ್ಟು ಬಾಕಿ ಇಟ್ಟುಕೊಂಡಿದ್ದರೂ ಸಹ ಅಧಿಕಾರಿಗಳು ಅವರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಅದೇ ಗ್ರಾಮಾಂತರ ಪ್ರದೇಶಗಳಲ್ಲಿಯಾದರೆ ಸಣ್ಣಪುಟ್ಟ ಹಳ್ಳಿಯ ರೈತರು ಮತ್ತು ಮಧ್ಯಮವರ್ಗದ ಜನರು ಏನಾದರು ವಿದ್ಯುಚ್ಛಕ್ತಿಯ ಬಿಲ್‌ನ್ನು ಪಾವತಿ ಮಾಡದಿದ್ದರೆ ಕೂಡಲೇ ಮೀಟರನ್ನು ಕಿತ್ತುಕೊಂಡು ಹೋಗಿಬಿಡುತ್ತಾರೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ! ಬಂದಿದ್ದರೆ ಇನ್ನು ಮುಂದೆಯಾದರೂ ಈ ರೀತಿ ಪಕ್ಷಪಾತ ತೋರಿಸಿದಂತೆ ನೋಡಿಕೊಳ್ಳಬೇಕಲ್ಲದೆ, ಉದ್ಯಮಿಗಳಿಂದ ಬರುವ ಭಾಕಿಯನ್ನು ವಸೂಲ ಮಾಡುವುದಕ್ಕೆ ಸೂಕ್ತ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಶೇಷ ಸಂದರ್ಭಗಳಲ್ಲಿ ದೊಡ್ಡ ದೊಡ್ಡ ಉದ್ಯಮಿಗಳಿಗೆ ಹಣ ಕಟ್ಟಲು ಸ್ವಲ್ಪ ಕಾಲಾವಕಾಶದ ವಿನಾಯಿತಿಯನ್ನು ಎಂ.ಎಸ್.ಇ ಬಿ. ಅವರು ಕೊಟ್ಟಿದ್ದಾರೆ. ವಿಶೇಷ ಕಾರಣಗಳಿಗಾಗಿ ಆ ರೀತಿ ಕೊಟ್ಟಿರುತ್ತಾರೆಯೇ ಹೊರತು ಅನಾವಶ್ಯಕವಾಗಿ ಹಣ ಬಾಕಿ ನಿಲ್ಲುವುದಕ್ಕೆ ಅವಕಾಶ ಕೊಡುವುದಿಲ್ಲ.

Missappropriation of Amount in Kolar Taluk Scheduled Castes Housing Co-operative Society

178. Sri C. BYRE GOWDA (Vemgal).—

Will the Minister for Co-operation be pleased to state :—

(*a*) the amount sanctioned by the Kolar taluk Depressed Class Co-operative Housing Society so far to Depressed Class People of Kolar taluk for construction of houses;

(*b*) the number of houses constructed so far ;

(*c*) whether the said society has paid the amount to applicants who have not completed the construction of house ;

---

† Indicates that the remarks or speechs have not been revised by the member concerned.

(*d*) whether any amount has been misappropriated in this society ;

(*e*) if so, the amount misappropriated and the action the Government have taken in this behalf ?

Sri A. SHANKARA ALVA (Minister for Co-operation). –

(*a*) Rs. 2,60,000.

(*b*) 73 houses.

(*c*) Yes.

(*d*) Yes.

(*e*) Rs. 963-78. The steps have been taken as per rule 16 (2) (*b*) of Mysore Co-operative Societies Rules 1960. The amount has been recovered.

ಶ್ರೀ ಎ. ಶಂಕರ ಆಳ್ವ.—'ಬಿ' ಪ್ರಶ್ನೆಗೆ ಉತ್ತರವಾಗಿ 73 ಎಂದಿರುವುದನ್ನು 70 ಎಂದು ತಿದ್ದಿಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ.—ನನ್ನ ಮೂರನೇ ಪ್ರಶ್ನೆಗೆ ಹಣ ಪಾವತಿ ಮಾಡಲಾಗಿದೆ ಎಂದು ಹೇಳಿದ್ದೀರಿ. ಮನೆಗಳನ್ನು ಕಟ್ಟದಿದ್ದರೂ ಹಣ ಕೊಡುವುದಕ್ಕೆ ಅವಕಾಶ ಏನಾದರೂ ಇದೆಯೇ ?

† **ಶ್ರೀ ಎ. ಶಂಕರ ಆಳ್ವ.**—ಮನೆ ಕಟ್ಟಿದ್ದಾರೆ. ಆದರೆ 29 ಮನೆಗಳನ್ನು ಇನ್ನೂ ಕಟ್ಟಿ ಮುಗಿಸಿಲ್ಲ. ಪೂರ್ತಿ ಕಟ್ಟಿಸದೇ ಇರುವಾಗ ಎರಡು ಮತ್ತು ಮೂರನೇ ಕಂತಿನ ಹಣವನ್ನು ಕೊಟ್ಟಿರುವುದು ತಪ್ಪು.

ಶ್ರೀ ಸಿ. ಬೈರೇಗೌಡ.—ಮನೆಗಳನ್ನು ಕಟ್ಟಿಸದೇ ಹಣ ಕೊಟ್ಟಿರುವ ನಿದರ್ಶನಗಳು ಇವೆ. ಅಂತಹದನ್ನು ತನಿಖೆ ಮಾಡಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಇದರಲ್ಲಿ ಫೇಲ್ ಆಗಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. 70 ಮನೆಗಳನ್ನು ಕಟ್ಟಿ ಮುಗಿಸಲಾಗಿದೆ. 20 ಮನೆಗಳನ್ನು ಕಟ್ಟುತ್ತಿದ್ದಾರೆ. ಕಟ್ಟುತ್ತಿರುವಾಗಲೇ ಬಿಲ್ ಹಣವನ್ನು ಕೊಟ್ಟುಬಿಟ್ಟಿದ್ದಾರೆ. ಈ ರೀತಿ ಕಟ್ಟುತ್ತಿರುವಾಗಲೇ 2 ಮತ್ತು 3ನೇ ಕಂತುಗಳನ್ನು ಕೊಟ್ಟರೆ ಅವು ತಪ್ಪಾಗುತ್ತದೆಂದು ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ.—963-78 ರೂಪಾಯಿಗಳು ದುರುಪಯೋಗವಾಗಿದೆ ಎಂದು ಹೇಳಿದ್ದೀರಿ. ಇದಕ್ಕಿಂತ ಹೆಚ್ಚು ಹಣ ದುರುಪಯೋಗವಾಗಿದೆ ಎಂದು ನನಗೆ ತಿಳಿದುಬಂದಿದೆ. ಕೇವಲ 963-78 ರೂಪಾಯಿಗಳು ದುರುಪಯೋಗವಾಗಿರುವುದು ಎಂದು ಯಾವ ವರ್ಷದ ಆಡಿಟ್ ರಿಪೋರ್ಟಿನಿಂದ ತಮಗೆ ಗೊತ್ತಾಗಿದೆ ?

ಶ್ರೀ ಎ. ಶಂಕರ ಆಳ್ವ.—ಆ ವಿವರ ಈಗ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. 963-78 ರೂಪಾಯಿಗಳು ದುರುಪಯೋಗವಾಗಿರುವುದು ಕಂಡುಬಂದು ಅದನ್ನು ಈಗ ವಸೂಲಿ ಮಾಡಲಾಗಿದೆ.

S.C./S.T. House Building Co-operative Societies

579. **Sri K. SIDDAIAH** (Santhemarahalli).—

Will the Minister for Co-operation be pleased to state :—

(*a*) the total number of House Building Co-operative Societies for SCs. and STs. existing in the State ;

(SRI K. SIDDIAH)

(b) of these the number of societies which are functioning at present and the total amount of loan advanced to their members during the years 1970—71 and 1971-72 ;

(c) of these the number of societies which are defunct for over two years ;

(d) the steps taken or proposed to be taken to make arrangement to advance loans to the members of defunct or societies who have applied for loans ?

Sri A. SHANKARA ALVA (Minister for Co-operation).—

(a) 294.

(b) 211.

		Rs.
1970—71	...	46,91,200.
1971—72	...	62,68,300.

(c) 83.

(d) Necessary steps are being taken either to liquidate or to amalgamate these societies with the concerned taluk SC and ST House Building Co-operative Societies.

ಶ್ರೀ ಕೆ. ಸಿದ್ದಯ್ಯ.—ಕಳೆದ ಎರಡು ವರ್ಷಗಳಿಂದಕೆಲಸ ಮಾಡದಿರುವ ಸಂಘಗಳ ಸಂಖ್ಯೆ 83 ಎಂದು ಹೇಳಿದ್ದೀರಿ. ಇಂತಹ ಸಂದರ್ಭಗಳಲ್ಲಿ ಮನೆ ಕಟ್ಟಿಕೊಳ್ಳುವವರಿಗೆ ಸಾಲ ಕೊಡಲು ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಎ. ಶಂಕರ ಆಳ್ವ.—ಅಂತಹ ಸಂದರ್ಭಗಳಲ್ಲಿ ಬೇರೆ ಗೃಹನಿರ್ಮಾಣ ಸಹಕಾರ ಸಂಘಗಳೊಂದಿಗೆ ವಿಲೀನಗೊಳಿಸಿ ಸಾಲ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಕೆ. ಸಿದ್ದಯ್ಯ.—ಒಂದೇ ತಾಲ್ಲೂಕಿನಲ್ಲಿರುವ ಎರಡು ಸಹಕಾರ ಸಂಘಗಳು ಕೆಲಸ ಮಾಡದಿರುವ ಸ್ಥಿತಿಗೆ ಬಂದಿದ್ದರೆ ಏನು ಮಾಡುತ್ತೀರಿ ?

ಶ್ರೀ ಎ. ಶಂಕರ ಆಳ್ವ.—1961 ರಲ್ಲಿ ಪ್ರತಿ ತಾಲ್ಲೂಕ್‌ನಲ್ಲಿ ಬೇರೆ ಬೇರೆ ಸೊಸೈಟಿಗಳು ಇದ್ದವು. ಆದರೆ 1965 ರಲ್ಲಿ ಒಂದೊಂದು ತಾಲ್ಲೂಕ್‌ಗೆ ಒಂದೊಂದು ಸೊಸೈಟಿ ಮಾತ್ರ ಇರುವಂತೆ ಮಾಡಲಾಗಿದೆ.

ಶ್ರೀ ಟಿ. ಎಂ. ಮಂಜುನಾಥ್.—ನಮ್ಮ ತಾಲ್ಲೂಕ್‌ನಲ್ಲಿಯೂ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯವರ ಗೃಹ ನಿರ್ಮಾಣ ಸಹಕಾರೀ ಸಂಘಗಳು ಇವೆ. ಆ ಸಂಘಗಳಿಗೆ ಹಣ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಎ. ಶಂಕರ ಆಳ್ವ.—ಅದನ್ನು ತನಿಖೆ ಮಾಡುತ್ತೇವೆ.

ಶ್ರೀ ಪಿ. ಪುಟ್ಟಸ್ವಾಮಿ.—ಕೆಲಸ ಮಾಡದೇ ಇರುವ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಮುಚ್ಚಿಬಿಡಲು ಅಥವಾ ಸಂಬಂಧಪಟ್ಟ ತಾಲ್ಲೂಕಿನ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯವರ ಗೃಹನಿರ್ಮಾಣ ಸಹಕಾರಿ ಸಂಘಗಳೊಂದಿಗೆ ವಿಲೀನಗೊಳಿಸಲು ಅವಶ್ಯಕ ಕ್ರಮಗಳನ್ನು ಕೈಕೊಳ್ಳಲಾಗುತ್ತದೆ ಎಂದು ಹೇಳಿದ್ದೀರಿ ಅವುಗಳನ್ನು ವಿಲೀನ ಮಾಡುತ್ತೀರಾ ಅಥವಾ ಬೇರೆ ತಾಲ್ಲೂಕುಗಳಲ್ಲಿ ಅಂಥಾ ಸೊಸೈಟಿಗಳು ಇಲ್ಲದೇ ಇರುವ ಕಡೆಗೆ ಕೊಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಈಗ ಒಟ್ಟು 83 ಸಹಕಾರ ಸಂಘಗಳು ಕೆಲಸ ಮಾಡುತ್ತಿಲ್ಲ. ಆದ್ದರಿಂದ ಈಗ ಎಲ್ಲೆಲ್ಲಿ ಆ ಸೊಸೈಟಿಗಳು ಕೆಲಸ ಮಾಡುತ್ತಿಲ್ಲ ಅವುಗಳನ್ನು ನೆರೆ ತಾಲ್ಲೂಕುಗಳಲ್ಲಿರತಕ್ಕ ಸೊಸೈಟಿಗಳೊಂದಿಗೆ ವಿಲೀನಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಈಗ ನಮ್ಮ ರಾಜ್ಯದಲ್ಲಿ ಅನುಸೂಚಿತಜಾತಿ ಹಾಗೂ ಅನುಸೂಚಿತ ಅದಿಮ ಜಾತಿಯವರ ಗೃಹನಿರ್ಮಾಣ ಸಹಕಾರ ಸಂಘಗಳು 211 ಇದ್ದು ಅ ಪೈಕಿ 83 ಸಹಕಾರ ಸಂಘಗಳು ಕೆಲಸ ಮಾಡುತ್ತಿಲ್ಲ. ಕೆಲಸ ಮಾಡದೆ ಇರುವ ಸಹಕಾರ ಸಂಘಗಳ ಸಂಖ್ಯೆ ಏರುತ್ತಾ ಇದೆ. ಆ ರೀತಿ ಆ ಸಹಕಾರ ಸಂಘಗಳು ಕೆಲಸ ಮಾಡದೆ ಇರುವುದಕ್ಕೆ ಮೂಲ ಕಾರಣ ಈ ಗೃಹನಿರ್ಮಾಣಕ್ಕಾಗಿ ಎಲ್. ಐ. ಸಿ, ಅವರು ಕೊಟ್ಟ 3.4 ಕೋಟಿ ರೂಪಾಯಿಗಳು ವಸೂಲು ಆಗದೇ ಇರುವುದು. ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರು ತುಂಬಾ ಬಡವರು ಅವರು ಸಹಕಾರ ಸಂಘಗಳಲ್ಲಿ ತೆಗೆದುಕೊಂಡ ಸಾಲದ ಹಣವನ್ನು ಕಟ್ಟುವುದಕ್ಕೆ ಬಹಳ ತೊಂದರೆಯಾಗಿದೆ ಎಂದು ಸರ್ಕಾರಕ್ಕೆ ಅವರು ಮನವಿ ಮಾಡಿರುತ್ತಾರೆ. ಆದ್ದರಿಂದ ಸರ್ಕಾರದವರು ಸಾಲದ ಹಣವನ್ನು ಗ್ರಾಂಟ್ ರೂಪದಲ್ಲಿ ಪರಿವರ್ತಿಸಿ ಪ್ರತಿವರ್ಷ ಬಡ್ಜೆಟ್ಟಿನಲ್ಲಿ ಒಂದು ಕೋಟಿ ರೂಪಾಯಿಗಳನ್ನು ಅದಕ್ಕಾಗಿ ಒದಗಿಸಿ ಆ ಕೆಲಸವನ್ನು ಮಾಡಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಇಲ್ಲಿಯವರೆಗೆ ಎಲ್. ಐ. ಸಿ. ಅವರು ಕೊಟ್ಟಂತಹ ಹಣವನ್ನು ವಾಪಸ್ಸು ಕೊಡದಿದ್ದರೆ ಅವರು ಮುಂದೆ ಹಣವನ್ನು ಕೊಡುವುದಿಲ್ಲ. ಆದ್ದರಿಂದ ಇನ್ನು ಮುಂದೆ ಈ ಗೃಹನಿರ್ಮಾಣಕ್ಕೆ ಹಣವನ್ನು ವಿತರಣೆ ಮಾಡಬೇಕಾದರೆ ಒಂದು ಪ್ರತ್ಯೇಕವಾದ ಯೋಜನೆಯನ್ನು ಹಾಕಿಕೊಳ್ಳಬಹುದೇ ಎಂಬುದನ್ನು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್.—ಈಗ ಹರಿಜನ ಗಿರಿಜನರಿಗೆ ಮನೆ ಕಟ್ಟಿಕೊಳ್ಳಲು ಸರ್ಕಾರದವರು ಸಹಕಾರ ಸಂಘಗಳ ಮುಖಾಂತರ 3 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈಗಿನ ಕಾಲದಲ್ಲಿ 3 ಸಾವಿರ ರೂಪಾಯಿಗಳಲ್ಲಿ ಮನೆಯನ್ನು ಕಟ್ಟುವುದು ಕಷ್ಟವಾಗಿದೆ. ಆದ್ದರಿಂದ ಈಗ 3 ಸಾವಿರ ರೂಪಾಯಿಗಳ ಸಾಲವನ್ನು ಕೊಡುವುವನ್ನು 5 ಸಾವಿರ ರೂಪಾಯಿಗಳಿಗೆ ಜಾಸ್ತಿ ಮಾಡುವ ಅಭಿಪ್ರಾಯ ಸರ್ಕಾರಕ್ಕೆ ಇದೆಯೇ ?

ಶ್ರೀ ಎ. ಶಂಕರ ಆಳ್ವ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

Utilisation of Loans Sanctioned to Sc/ST For House Construction

659. **Sri K. M. DORAISWAMY NAIDU** (Bethamangala).—

Will the Minister for Co-operation be pleased to state :—

(*a*) whether the Government is aware that the amounts sanctioned to the SCs. and STs. for the construction of houses are not properly utilised.

(*b*) whether there is any proposal before the Government to appoint an agency such as the Housing Board to construct those houses in the State ?

Sri A. SHANKARA ALVA (Minister Co-operation).

(*a*) In a few caset the loans sanctioned to the SC and ST members through the SC and ST Co-operative Housing Societies are reported to have not been properly utilised. However, the progress of construction of houses is generally satisfactory.

(*b*) Under consideration.

ಶ್ರೀ ಕೆ. ಎಂ. ದೊರೆಸ್ವಾಮಿನಾಯ್ಡು.—ಸ್ವಾಮಿ ನನ್ನ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮಜಾತಿಯವರ ಗೃಹ ನಿರ್ಮಾಣ ಸಹಕಾರಿ ಸಂಘದ ಮೂಲಕ ಅನುಸೂಚಿತ ಹಾಗೂ ಅನುಸೂಚಿತ ಆದಿಮ ಜಾತಿಯವರಿಗೆ ಮಂಜೂರ್ಮಾಡಲಾದ ಸಾಲಗಳನ್ನು ಕೆಲವು ಪ್ರಕರಣಗಳಲ್ಲಿ ಸರಿಯಾದ ರೀತಿಯಲ್ಲಿ ಉಪಯೋಗಿಸಿಲ್ಲ ಎಂದು ವರದಿಯಾಗಿದೆ.

(ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು)

ಮತ್ತು ಆದಾಗ್ಯೂ ಮನೆಗಳ ನಿರ್ಮಾಣ ಕಾರ್ಯದ ಪ್ರಗತಿ ಸಾಮಾನ್ಯವಾಗಿ ತೃಪ್ತಿಕರವಾಗಿದೆ ಎಂದು ಹೇಳಿದ್ದೀರಿ, ಆದರೆ ಅನೇಕ ಹಳ್ಳಿಗಳಲ್ಲಿ ಮನೆಗಳು ಅರ್ಧಂಭರ್ಧಕ್ಕೇ ನಿಂತು ಹೋಗಿ ಹಣ ಪೋಲಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ.—ಸ್ವಲ್ಪ ಹೆಚ್ಚು ಕಡಿಮೆಯಾಗಿದೆ. 22,792 ಮನೆಗಳಿಗೆ ಹಣ ಮಂಜೂರಾಗಿದೆ. ಅದರಲ್ಲಿ ಡಿಸೆಂಬರ್ ತಿಂಗಳವರೆಗೆ 15,375 ಮನೆಗಳು ಕಂಪ್ಲೀಟಾಗಿವೆ. 7,417 ಮನೆಗಳು ಹಾಗೆಯೇ ಇವೆ. ಹಣ ದುರುಪಯೋಗವಾಗಿರುವ ವಿಷಯದಲ್ಲಿ ಈಗ ಸದ್ಯಕ್ಕೆ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ —22,792 ಮನೆಗಳು ಮಂಜೂರಾಗಿತ್ತು, ಆ ಪೈಕಿ 7417 ಮನೆಗಳು ಇನ್ನೂ ಪೂರ್ತಿಯಾಗಿಲ್ಲ ಎಂದು ಹೇಳಿದ್ದೀರಿ ಪ್ರತಿವರ್ಷ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಮನೆಗಳನ್ನು ಪ್ರಾರಂಭ ಮಾಡಿದರು, ಎಷ್ಟು ಮನೆಗಳನ್ನು ಪೂರ್ತಿ ಮಾಡಿದರು ಎನ್ನತಕ್ಕಂಥಾ ಪ್ರೋಗ್ರೆಸ್ ಕೊಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎ. ಶಂಕರ ಆಳ್ವ.—1965 ನೇ ಇಸವಿಯಿಂದ ಈ ಕಾರ್ಯಕ್ರಮ ಮುಂದುವರಿಯುತ್ತಾ ಬಂದಿದೆ

ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು.—ಈ ಹರಿಜನಗಿರಿಜನರಿಗೆ ಮನೆಗಳನ್ನು ಕಟ್ಟಿಸಿ ಕೊಡುವ ಜವಾಬ್ದಾರಿಯನ್ನು ಸರ್ಕಾರದವರೇ ವಹಿಸಿಕೊಂಡು ಅವರಿಗೆ ಮನೆಗಳನ್ನು ಕಟ್ಟಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರಆಳ್ವ.—ಅದಕ್ಕೆ ಒಂದು ಪ್ರತ್ಯೇಕವಾದ ಏಜೆನ್ಸಿ ಮುಖಾಂತರ ಆ ಕಾರ್ಯಕ್ರಮವನ್ನು ಹಾಕಿಕೊಂಡು ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವುದು ಸರ್ಕಾರದ ಗಮನದಲ್ಲಿದೆ.

ಶ್ರೀ ಕಾಗೋಡುತಿಮ್ಮಪ್ಪ.—ಇದಕ್ಕೆ ಬೇರೆ ಒಂದು ಹೌಸಿಂಗ್ ಬೋರ್ಡ್ ಮಾಡಿ ಈ ಹರಿಜನ ಗಿರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡುವ ವಿಷಯದಲ್ಲಿ ಆಂಧ್ರ ಮತ್ತು ತಮಿಳುನಾಡಿನಲ್ಲಿ ಸರ್ಕಾರದವರು ಮನೆಗಳನ್ನು ಕಟ್ಟಿಸಿಕೊಟ್ಟ ಹಾಗೆ ಇಲ್ಲಿಯೂ ಅವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಆ ಹಣವನ್ನು ಅವರಿಂದ ಕಂತುಗಳ ಮುಖಾಂತರ ಸರ್ಕಾರದವರು ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರಆಳ್ವ.—ಅದಕ್ಕೇ ಪ್ರತ್ಯೇಕವಾಗಿ ಒಂದು ಹೌಸಿಂಗ್ ಬೋರ್ಡ್ ಮಾಡಿದರೆ ಖರ್ಚು ಜಾಸ್ತಿಯಾಗುತ್ತದೆ, ಎಸ್ಟಾಬ್ಲಿಷ್‌ಮೆಂಟ್ ಖರ್ಚು ಜಾಸ್ತಿಯಾಗುತ್ತದೆ. ಆದ್ದರಿಂದ ಅದಕ್ಕೆ ಒಂದು ಪ್ರತ್ಯೇಕವಾದ ಒಂದು ಏಜೆನ್ಸಿಯನ್ನು ಮಾಡಿಕೊಂಡು ಅದರ ಮುಖಾಂತರ ಅವರಿಗೆ ಮನೆಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

Advance Increments to Teachers Holding Hindi Degree

243. **Smt. NAGAMMA C. KESHAVAMURTHY** (Davanagere).—

Will the Minister for Education be pleased to state :—

(*a*) the number of primary school teachers in Education Department who have passed in Hindi Degree examinations ;

(*b*) whether the degrees acquired by them are considered equivalent to other Arts, Science and Commerce Degrees ;

(*c*) whether these primary school teachers who have passed the Hindi Degree Examinations are being given four advance increments as has been done in case of other degree holders ?

Sri A. R. BADARINARAYANA (Minister for Education).—

(*a*) 1,802.

(*b*) No.

(*c*) No.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಹಿಂದಿ ಡಿಗ್ರಿ ಪಡೆದುಕೊಂಡವರನ್ನು ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಪದವಿಗಳಿಗೆ ಸರಿಸಮ ಎಂದು ಪರಿಪಣಿಸುವ ಬಗ್ಗೆ ಸರ್ಕಾರದ ಆಜ್ಞೆ ಇದೆಯಲ್ಲವೆ ?

Sri A. R. BADARINARAYANA.—Equivalent for purposes of appointment but not for purposes of salary.

Smt. NAGAMMA C. KESHAVAMURTHY.—According to a G. O. of the Education Department, Hindi Ratna, Praveen and Vidwan degrees are considered equivalent to B. A., B.Sc. and B.Com. examinations of the State. ಹೀಗಿರುವಾಗ ಕೆಲಸಕ್ಕೋಸ್ಕರ ಆ ಡಿಗ್ರಿಯನ್ನು ಕನ್ಸಿಡರ್ ಮಾಡುತ್ತೇವೆ ಬೆನಿಫಿಟ್ ಪ್ರಕಾರ ಇಲ್ಲ ಎಂದರೆ ಅರ್ಥವೇನು ?

Sri A. R. BADARINARAYANA.- They are not trained people.

Sri J. P. SARWESH.—May I know whether the Central Government is giving aid to encourage Hindi in the State and if so, what amount are we getting ?

Sri A. R. BADARINARAYANA.—That supplementary does not arise out of this question.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರಿಗೆ ಟ್ರೈನಿಂಗ್ ಆಗದೆ ಇರುವುದರಿಂದ ಅವರನ್ನು ಬೇರೆ ಡಿಗ್ರಿ ತೆಗೆದುಕೊಂಡಿರುವವರಿಗೆ ಸರಿಸಮನಾಗಿ ಕಾಣುವುದಕ್ಕಾಗುವುದಿಲ್ಲ ಎಂದು ಹೇಳಿದ್ದೀರಿ, ಈಗ ಡಿಗ್ರಿ ಹೋಲ್ಡರುಗಳಿಗೆ ಎಂ. ಇ. ಡಿ. ಮತ್ತು ಬ. ಇ ಡಿ. ಎಂದು ಅಧ್ಯಾಪಕರುಗಳಿಗೆ ಹಿಂದಿ ಪದವೀಧರರಿಗೂ ಟ್ರೈನಿಂಗ್ ವ್ಯವಸ್ಥೆ ಮಾಡಿ ಅವರ ಸ್ಯಾಲರಿಯನ್ನು ಕನ್ಸಿಡರ್ ಮಾಡುತ್ತೀರಾ?

ಶ್ರೀ ಎ. ಆರ್. ಬದರೀನಾರಾಯಣ್.—ಅವರನ್ನು ಡಿಪ್ಲೊಮಾ ಕೋರ್ಸುಗಳಿಗೆ ಅಡ್ಮಿಟ್ ಮಾಡುತ್ತೇವೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ಡಿಗ್ರಿಹೋಲ್ಡರುಗಳನ್ನು ಅಪ್‌ಗ್ರೇಡ್‌ಮಾಡಿ ಪ್ರೈಮರಿ ಸ್ಕೂಲುಗಳಿಗೆ ಹೆಡ್‌ಮಾಸ್ಟರ್ ಆಗಿ ತೆಗೆದುಕೊಳ್ಳುತ್ತಾರೆ. ಅದೇರೀತಿ ಹಿಂದಿ ಡಿಗ್ರಿ ತೆಗೆದುಕೊಂಡಿರತಕ್ಕವರಿಗೆ ಹೆಡ್ಮಾಸ್ಟರಾಗಿ ಏತಕ್ಕೆ ತೆಗೆದುಕೊಳ್ಳಬಾರದು ?

ಶ್ರೀ ಎ. ಆರ್. ಬದರೀನಾರಾಯಣ್.—ಅವರಿಗೆ ಅರ್ಹತೆ ಇದ್ದರ ತೆಗೆದುಕೊಳ್ಳುತ್ತೇವೆ, ಅರ್ಹತೆ ಇಲ್ಲದಿದ್ದರೆ ತೆಗೆದುಕೊಳ್ಳುವುದಿಲ್ಲ.

Construction of Roads and Bridges in Mudigere Taluk

271. **Sri G. PATTASWAMY** (Mudigere).—

Will the Minister for Public Works and Electricity be pleased to state :—

(*a*) when the estimates in respect of Gutti Halike and Kotrakere road, Mudigere taluk of Chickmagalur District, were sanctioned ;

(*b*) the number of bridges on this road in respect of which estimates have been prepared and their estimated amount ;

(**Sri G. Puttaswamy**)

(*c*) the amount likely to be required for the traffic of people and cattle ;

(*d*) whether amount will be provided in the 1972-73 budget for taking up this road work ;

(*e*) whether it has come to the notice of Government that the amount now provided is inadequate ?

Sri H. M. CHANNABASAPPA (Minister for Public Works and Electricity).—

(*a*) Sanction of estimate is under the consideration of the Government.

(*b*) (i) The estimates have been prepared in respect of 3 Major bridges on this road and also about approach roads connecting the said bridges ;

(ii) Estimated cost is Rs. 5.02 lakhs.

(*c*) An amount of Rs. 5 lakhs is required in addition to the above estimate.

(*d*) Rs. 70,000 has been provided in the Budget for construction of bridges only during 1972-73.

(*e*) No.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಚಿಕ್ಕಮಂಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಗುತ್ತಿ, ಹಳಿಕೆ ಕೊಟ್ರಕೆರೆ ರಸ್ತೆ ಕೆಲಸವನ್ನು ಮಾಡುವುದಕ್ಕೆ ಹಣವನ್ನು ಮಂಜೂರುಮಾಡುವುದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಇದು ಯಾವ ಹಂತದಲ್ಲಿದೆ, ಈ ಕೆಲಸಕ್ಕೆ ಬಡ್ಜೆಟ್ಟಿನಲ್ಲಿ 1972-73 ನೇ ಸಾಲಿನಲ್ಲಿಯೇ ಹಣವನ್ನು ಒದಗಿಸಲಾಗಿತ್ತು, 1973 ನೇ ಸಾಲಿನ ಬಡ್ಜೆಟ್ಟಿನಲ್ಲಿ ಈ ಕೆಲಸಕ್ಕೆ ಹಣವನ್ನು ಒದಗಿಸಿದ್ದು ಈ ವರ್ಷದ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣವನ್ನು ಪ್ರೊವೈಡ್ ಮಾಡಿಲ್ಲ. ಆದ್ದರಿಂದ ಈ ವರ್ಷವೇ ಆ ಕೆಲಸಕ್ಕೆ ಹಣವನ್ನು ಮಂಜೂರು ಮಾಡಿ ಆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† **ಶ್ರೀ ಎಚ್. ಎಂ. ಚನ್ನಬಸಪ್ಪ.**—ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತೇವೆ.

MADAM SPEAKER.—Question numbers 3 6 and 387 may he taken together.

M.G.S. Co-operative Consumers' Stores

386. **Sri K. R. SRINIVASULU NAYUDU** (Shantinagar).—

Will the Minister for Co-operation be pleased to state.—

(*a*) the number of officers and afficials working in the Mysore Government Secretariat Co-operative Consumers Stores, Cubbon Park;

(*b*) the amount of expenditure incurred on establishment of the above stores during the last one year (Monthwise details may be furnished);

(*c*) the monthly turnover of society during the last one year ?

SRI A. SHANKARA ALVA (Minister for Co-operation).—

(*a*) 7.

(*b*) Expenditure incurred from January 1972 to December 1972 is Rs. 19,404-10. Monthwise expenditure is given blow :

Month		*Amount*
January 1972	...	1,815-00
February ,,	...	2,012-00
March ,,	...	1,642-00
April ,,	...	1,552-00
May ,,	...	1,552-00
June ,,	...	1,504-00
July ,,	...	1,466-00
August ,,	...	1,507-00
September ,,	...	1,427-60
October ,,	...	1,418-85
November, ,,	...	2,050-25
December ,,	...	1,457-00
		19,404-10

(*c*) Monthly turn over from January 1972 to December 1972.

Month		*Amount*
January 1972	...	27,453-39
February ,,	...	12,081-39
March ,,	...	14,216-43
April ,,	...	13,115-92
May ,,	...	13,995-85
June ,,	...	12,957-93
July ,,	...	9,492-09
August ,,	...	17,419-94
September ,,	..	15,894-62
October ,,	...	6,744-46
November ,,	...	23,399-88
December ,,	...	4,936-02
		1,71,707-92

M.G.S. Consumers' Co-operative Society

387. **Sri K. R. SRINIVASULU NAYUDU** (Shanthinagar).—

Will the Minister for Co-operation be pleased to state :—

(*a*) the amount of profit made or loss incurred by the M.G.S. Consumers Co-operative Society, Cubbon Park, Bangalore, upto the last convenient date (yearwise break up may be furnished) ;

(*b*) whether there is any proposal before the Government to close it, as it is running under loss or run it departmentally ?

Sri A. SHAKARA ALVA (Minister for Co operation).—

(*a*) Details regarding profit or loss from the inception of the stores commencing from 1-7-1965 is as under.—

Year	*Profit* (+)	*Loss*(—)
1965-66	Rs. 19,637-90	...
1966-67	...	54,856-60
1967-68	...	85,015-56
1968-69	...	67,555-03
1969-70	...	38,148-18
1970-71	...	72,902-98
1971-72	...	79,291-68

(*b*) The proposal to close the stores is under consideration.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಮೊದಲನೇ ವರ್ಷ ರೂ 19. 637-90 ಪೈಸಾ ಲಾಭ ಬಂದಿದೆ ಎಂದು ಹೇಳಿದ್ದೀರಿ, ನಂತರ ಪ್ರತಿವರ್ಷವೂ ನಷ್ಟ ಹೆಚ್ಚಾಗಿ ಆಗಿದೆ. ಅದರಲ್ಲಿ ಒಟ್ಟು ಸುಮಾರು 39,770 ರೂಪಾಯಿ ನಷ್ಟವಾಗಿದೆ. ಬೆಂಗಳೂರಿನಲ್ಲಿ ಅರಿತುನುರಿತಂತಹ ಬುದ್ಧಿವಂತರು ಇರುವ ಸೊಸೈಟಿಯಲ್ಲಿ ಇಷ್ಟೊಂದು ಲುಕ್ಸಾನು ಆಗಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿ ಹೆಬ್ಬೆಟ್ಟಿನ ಗುರುತು ಹಾಕುವಂತಹವರು ಇರುವ ಸೊಸೈಟಿಗಳಲ್ಲಿ ನಷ್ಟವಾಗುವುದರಲ್ಲಿ ಆಶ್ಚರ್ಯವಿಲ್ಲ ಅಲ್ಲವೇ ?

ಶ್ರೀ ಎ. ಶಂಕರಆಳ್ವ.—ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಹಳ್ಳಿಗಳಲ್ಲಿ ಕೆಲವು ಸೊಸೈಟಿಗಳು ಚೆನ್ನಾಗಿ ನಡೆಯುತ್ತವೆ, ಕೆಲವು ಸೊಸೈಟಿಗಳು ಚೆನ್ನಾಗಿ ನಡೆಯುವುದಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಆ ಸೊಸೈಟಿಯಲ್ಲಿ ಈ ತರಹ ನಷ್ಟ ಉಂಟಾಗುತ್ತಿರುವುದರಿಂದ ಅದನ್ನು ಲಿಕ್ವಿಡೇಟ್ ಮಾಡಬೇಕೆಂದು 1972 ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಸರ್ಕಾರದ ಆದೇಶ ಬಂದರೂ ಕೂಡ ಅದನ್ನು ಹಾಗೆಯೇ ಉಳಿಸಿಕೊಂಡಿರುವುದಕ್ಕೆ ಕಾರಣವೇನು?

ಶ್ರೀ ಎ. ಶಂಕರಆಳ್ವ.—ಈಗ ಅದು ತನಿಖೆ ನಡೆಯುತ್ತಿದೆ. ಅದರ ವರದಿ ಬಂದಮೇಲೆ ಅದನ್ನು ಲಿಕ್ವಿಡೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ ಆರ್ ಶ್ರೀನಿವಾಸುಲು ನಾಯ್ಡು.—ಅದನ್ನು ಲಿಕ್ವಿಡೇಟ್ ಮಾಡತಕ್ಕ ಕಾಲದಲ್ಲಿ ಈಗ ಹಾಲಿ ಆ ಸೊಸೈಟಿಯಲ್ಲಿರತಕ್ಕ ಹಳೆಯ ಸ್ಟಾಕನ್ನು ಜನತಾ ಬಜಾರಿಗೆ ಕೊಡುತ್ತೀರಾ ? ಅಥವಾ ಸೂಪರ್ ಬಜಾರಿಗೆ ಕೊಡುತ್ತೀರಾ ? ಅಥವ ಆಕ್ಷನ್ ಹಾಕುತ್ತೀರಾ ?

ಶ್ರೀ ಎ. ಶಂಕರಆಳ್ವ.—ಅದನ್ನು ಆಕ್ಷನ್ ಮಾಡಬೇಕೇ ಅಥವಾ ಯಾವರೀತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಆಲೋಚನೆ ಮಾಡಿ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—1966–67ರಿಂದ 1971-72ರವರೆಗೆ ಪ್ರತಿ ವರ್ಷ ಕೂಡ ಲಕ್ಷಗಟ್ಟಲೆ ಹಣ ದುರುಪಯೋಗವಾಗಿದೆ. ಈ ರೀತಿ ಪ್ರತಿ ವರ್ಷ ಲುಕ್ಸಾನು ಆಗುವುದಕ್ಕೆ ಮುಖ್ಯವಾದ ಕಾರಣಗಳಾದರೂ ಏನೆಂದು ಕಂಡು ಹಿಡಿದಿದ್ದೀರಾ ?

ಶ್ರೀ ಎ. ಶಂಕರ ಆಳ್ವ.—ಅನೇಕ ಕಾರಣಗಳು ಇವೆ. ಅಲ್ಲಿ ಸಾಮಾನುಗಳನ್ನು ಪರ್ಚೇಸ್ ಮಾಡುವುದಕ್ಕೆ ಒಂದು ಕಮಿಟಿ ಇಲ್ಲದೆ ಕೆಲವು ಮಾರಾಟವಾಗದೆ ಇರತಕ್ಕಂತಹ ಸಾಮಾನುಗಳನ್ನು ಸಹ ಪರ್ಚೇಸ್ ಮಾಡುವುದರಿಂದ ಕೆಲವು ಸ್ಟಾಕುಗಳು ಹಾಗೆಯೇ ಇರುತ್ತವೆ. ಅದಕ್ಕೆ ತೆಗೆದುಕೊಂಡು ಹಣಕ್ಕೆ ಬಡ್ಡಿ ಸಹ ಕೊಡಬೇಕಾಗುತ್ತದೆ. ಆಮೇಲೆ ಕೆಲವು ಸಿವಿಲ್ ಆರ್ಬಿಟ್ರೇಶನ್ ಆಗಿವೆ ; ಮತ್ತು ಕೆಲವು ದುರುಪಯೋಗವಾಗಿವೆ.

ಶ್ರೀ ಸಿ. ಬೈರೇಗೌಡ.—ಈ ಸಹಕಾರೀ ಸಂಘದಲ್ಲಿ ಸರ್ಕಾರೀ ಷೇರ್ ಕ್ಯಾಪಿಟಲ್ ಎಷ್ಟು; ಮತ್ತು ಸಂಘದ ಷೇರ್ ಕ್ಯಾಪಿಟಲ್ ಎಷ್ಟು ?

ಶ್ರೀ ಎ. ಶಂಕರ ಆಳ್ವ.—ಸಂಘದ ಷೇರ್ ಕ್ಯಾಪಿಟಲ್ 61,530 ರೂಪಾಯಿ ; ಸರ್ಕಾರದವರು 50 ಸಾವಿರ ರೂಪಾಯಿ ಹಾಕಿದ್ದಾರೆ. ಅವರ ಜೊತೆಗೆ 3ಲಕ್ಷ ಸಾಲ 5 ಪರ್‌ಸೆಂಟ್ ಬಡ್ಡಿಯ ಮೇಲೆ ಮತ್ತು ಮೂರು ಲಕ್ಷ 6 ಪರ್‌ಸೆಂಟ್ ಪ್ರಕಾರ ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—1966-67ರಿಂದ ಇದರಲ್ಲಿ ನಷ್ಟವಾಗಿದೆ. ಇದಕ್ಕೆ ಯಾರು ಕಾರಣರೋ ಅವರ ಮೇಲೆ ಕಾರ್ಯಕ್ರಮವನ್ನೇನಾದರೂ ತೆಗೆದುಕೊಂಡಿದ್ದೀರಾ ? ಮತ್ತು ತೆಗೆದುಕೊಳ್ಳದಿದ್ದರೆ ಈಗಲಾದರೂ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಯಾರು ಡಿಫಾಲ್ಟ್ ಮಾಡಿದ್ದಾರೆ ಅವರ ಮೇಲೆ ಅವಾರ್ಡ್ ಹಾಕಿ ಡಿಕ್ರಿಯಾಗಿದೆ. ಆದ್ದರಿಂದ ದುರುಪಯೋಗ ಮಾಡಿದವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಸಂಘವನ್ನು ಮುಚ್ಚುವ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಿರಿ. ಈ ರೀತಿ ಸಹಕಾರೀ ತತ್ವದ ಮೇಲೆ ಇದನ್ನು ನಡೆಸುವುದರ ಬದಲು ಇದನ್ನು ಮುಚ್ಚುತ್ತೇವೆಂದು ಹೇಳಿದರೆ ಹೇಗೆ! ಅಲ್ಲದೆ ಇದು ಸರ್ಕಾರೀ ನೌಕರರದ್ದೇ ಆಗಿರುವುದರಿಂದ ರಿಕವರೀಸ್ ವಸೂಲು ಮಾಡುವುದಕ್ಕೆ ಕಷ್ಟವೇನೂ ಇಲ್ಲ. ಆದ್ದರಿಂದ ರಿಕವರೀಸ್ ಮಾರ್ಗಗಳನ್ನು ಹುಡುಕಿ ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ನಾವು ತನಿಖೆ ಮಾಡಿ ನೋಡಿ, ರಿವೈವ್ ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡುತ್ತೇವೆ. ಇಲ್ಲದಿದ್ದರೆ ಹೊಸ ಸೊಸೈಟಿಯನ್ನು ಬೇಕಾದರೆ ಮಾಡಿಕೊಳ್ಳಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಪ್ರತೀ ವರ್ಷದಲ್ಲಿ ಲುಕ್ಸಾನು ಆಗುವಾಗ ಮುಂದಿನ ವರ್ಷ ಲುಕ್ಸಾನು ಆಗದೆ ಹಾಗೆ ತಡೆಗಟ್ಟುವುದಕ್ಕೆ ನಿಮ್ಮ ಇಲಾಖೆಯ ಅಧಿಕಾರಿಗೆ ಆಗಲಿಲ್ಲವೇ ? ಆಗ ನಿಮ್ಮ ಅಧಿಕಾರಿಗಳು ಏನು ಮಲಗಿಕೊಂಡಿದ್ದರೇ ? ಅಂಥ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಶಂಕರ ಆಳ್ವ.—ಅವೆಲ್ಲವನ್ನೂ ನಾವು ತನಿಖೆ ಮಾಡುತ್ತಿದ್ದೇವೆ. ಏಕೆಂದರೆ ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ.

ಶ್ರೀ ಸಿ. ಅಂದಾನಪ್ಪ.—ಇವರು ಸಾಮಾನುಗಳನ್ನು ಕೊಂಡುಕೊಳ್ಳುವಾಗ ಬಜಾರ್ ರೇಟಿಗಿಂತ ಜಾಸ್ತಿ ಬೆಲೆಗೆ ಕೊಂಡುಕೊಂಡು ಮತ್ತು ಮಾರಾಟವಾಗದ ಸಾಮಾನುಗಳನ್ನು ಕೊಂಡುಕೊಂಡು ಲುಕ್ಸಾನು ಆಗಿದೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಕೋಆಪರೇಟಿವ್ ಆಕ್ಟ್ ಸೆಕ್ಷನ್ 64ರ ಪ್ರಕಾರ ಎನ್‌ಕ್ವಾಯರಿ ಮಾಡಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅದು ಎನ್‌ಕ್ವಾಯರಿಯಲ್ಲಿ ಇದೆ.

Sri J. P. SARWESH.—May I know whether the same office bearers are continuing from 1967 to 1972 ?

Sri A. SHANKAR ALVA.—I cannot give a reply to that.

ಶ್ರೀ ಹಂಪಿ ಶಿವಣ್ಣ.—ಇಷ್ಟು ವರ್ಷಗಳಲ್ಲಿ ಈ ಸೊಸೈಟಿಯಲ್ಲಿ ಲುಕ್ಸಾನು ಆಗುತ್ತಿದೆ ಎಂದು ಹೇಳುತ್ತಿದ್ದೀರಿ. ಹೀಗೆ ಆಗುವಾಗ ನಿಮ್ಮ ಅಸಿಸ್ಟೆಂಟ್ ರಿಜಿಸ್ಟ್ರಾರ್, ಡಿಪ್ಯೂಟಿ ರಿಜಿಸ್ಟ್ರಾರ್‌ರವರು ಏನು ಮಾಡುತ್ತಿದ್ದರು ? ಮತ್ತು ಅಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ !

ಶ್ರೀ ಎ. ಶಂಕರ ಆಳ್ವ.—ಅದನ್ನು ತನಿಖೆ ಮಾಡುತ್ತಿದ್ದೇವೆ. ಯಾವ ಅಧಿಕಾರಿ ಇದಕ್ಕೆ ಕಾರಣ ಇರುತ್ತಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ.—ಈಗ ಸಾಲ ಕೊಟ್ಟಿದ್ದರಲ್ಲಿ ಮತ್ತು ದುರುಪಯೋಗವಾದ ಹಣದಲ್ಲಿ ಟೈಂ ಬಾರ್ಡ್ ಕೇಸುಗಳು ಎಷ್ಟು ಇವೆ?

ಶ್ರೀ ಎ. ಶಂಕರ ಆಳ್ವ.—ಅದರ ವಿವರ ಹೇಳುವುದಕ್ಕೆ ನನ್ನಲ್ಲಿ ಮಾಹಿತಿ ಇಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈ ಸರ್ಕಾರಿ ನೌಕರರು ಬಡ ನೌಕರರು. ಸಹಕಾರಿ ಸಂಘಗಳಿಗೆ ಸೇರಿದರೆ ಸಹಕಾರೀ ತತ್ವದಿಂದ ಅನುಕೂಲವಾಗಬಹುದು ಎಂದು ಇದಕ್ಕೆ ಎಲ್ಲರೂ ಸೇರಿದ್ದಾರೆ. ಆದರೆ ಅವರ ರಿಪೋರ್ಟಿನಲ್ಲಿ ಈ ರೀತಿ ಹೇಳಿದ್ದಾರೆ :—

> "Sustained efforts are being made to recover this amount, since most of the defaulters have to pay heavy sums towards Government dues, we are finding it difficult to effect recoveries from them".

ಅಂದರೆ ಹಣವಂತೂ ಗ್ಯಾರೆಂಟಿ ಬರುವುದಿಲ್ಲ. ಸರ್ಕಾರದವರು ಸುಮಾರು 6 ಲಕ್ಷ ರೂಪಾಯಿಯನ್ನು 5 ಮತ್ತು 6 ಪರ್ಸೆಂಟ್ ಬಡ್ಡಿಗೆ ಕೊಟ್ಟಿದ್ದೀರಿ. ಆಗಲೇ 4 ಲಕ್ಷ ರೂಪಾಯಿ ಹೊರಟು ಹೋಗಿದೆ. ಆದ್ದರಿಂದ ಅದನ್ನು ಆದಷ್ಟು ಜಾಗ್ರತೆ ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ. - ಆದಷ್ಟು ಪ್ರಯತ್ನ ಮಾಡಿ ಯಾರಿಂದ ವಸೂಲು ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ಮಾಡುತ್ತೇವೆ.

Work Charged Establishment of Public Works Department

451. **Sri KAGODU THIMMAPPA** (Sagar).—

Will the Minister for Public Works and Electricity be pleased to state :—

(*a*) the number of persons who are working on the work-charged establishment of the State Public Works Department ;

(*b*) whether demands have been received to make their services permanent and grant them pension etc., also ;

(*c*) if so, the action taken by the Government in this behalf ?

Sri H. M. CHANNABASAPPA (Minister for Public Works and Electricity).—

(*a*) As per figures on 1st January 1972, 12,000 persons were working on the work-charged establishment. Now it may be more.

(*b*) Yes.

(*c*) It is not possible to make them permanent and grant pension.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ 12 ಸಾವಿರ ಜನ ಕೆಲಸ ಮಾಡುತ್ತಿದ್ದಾರೆಂದು ಹೇಳಿದ್ದೀರಿ. ಇದರಲ್ಲಿ ಎಷ್ಟು ಜನ ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುತ್ತೀರಾ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಆಗಾಗ್ಗೆ ವ್ಯತ್ಯಾಸ ಆಗುತ್ತಾ ಇದೆ. 12 ಸಾವಿರ 1-1-1972 ರಲ್ಲಿ ವರ್ಕ್ಸ್ ಚಾರ್ಜ್ಡ್ ಅಂದರೆ ಆಯಾ ಕೆಲಸಕ್ಕೆ ಅವಶ್ಯಕತೆ ಕಂಡಾಗ ಅವಶ್ಯ ಪ್ರಮಾಣದಲ್ಲಿ ನೇಮಕ ಮಾಡಿಕೊಳ್ಳುತ್ತಾರೆ. ಕೆಲಸ ಕಡಿಮೆ ಇದ್ದಾಗ ಜನ ಕಡಿಮೆಯಾಗುತ್ತಾರೆ ಹೆಚ್ಚು ಕೆಲಸ ಇದ್ದಾಗ ಹೆಚ್ಚಾಗುತ್ತಾರೆ. ಅದನ್ನು ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—5 ವರ್ಷಕ್ಕೆ ಮೇಲ್ಪಟ್ಟು ಸೇವೆ ಸಲ್ಲಿಸಿರತಕ್ಕಂತಹ ಜನರು ಎಷ್ಟು ; ಮತ್ತು 10 ವರ್ಷಕ್ಕಿಂತ ಹೆಚ್ಚು ಸೇವೆ ಮಾಡಿರತಕ್ಕಂತಹ ಜನರು ಎಷ್ಟು ಎಂದು ಹೇಳುತ್ತೀರಾ ?

Sri H. M. CHANNABASAPPA.— It would be very difficult to collect the information. If the hon. member wants I have no objection to do some exercise and collect the information.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—12 ಸಾವಿರ ಜನರು ವರ್ಕ್ ಚಾರ್ಜ್‌ಡ್ ಎಸ್ಟೇಬ್ಲಿಷ್‌ಮೆಂಟನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಅನೇಕರು 5—10 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅದ್ದರಿಂದ ಇವರನ್ನು ಸಹ ಸರ್ಕಾರೀ ನಿಯಮದ ಪ್ರಕಾರ ಎಸ್. ಸಿ., ಎಸ್.ಟಿ. ಮತ್ತು ಲ್ಯಾಂಡ್‌ಲೆಸ್ ಜನರಿಗೆ ಯಾವ ಪರ್‌ಸೆಂಟೇಜ್ ಕೊಡಬೇಕು, ಅದನ್ನು ಕೊಟ್ಟು ನೇಮಕ ಮಾಡುತ್ತೀರಾ ?

ಶ್ರೀ ಎಚ್. ಎಂ ಚನ್ನಬಸಪ್ಪ.—ವರ್ಕ್ ಚಾರ್ಜ್‌ಡ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ 18 ಪರ್‌ಸೆಂಟ್ ನಿಗದಿ ಮಾಡುವುದಕ್ಕಾಗುವುದಿಲ್ಲ. ಕೆಲಸಕ್ಕೆ ಕೂಲಿಗಾರರು ಬೇಕಾದಾಗ ಅವರನ್ನು ನೇಮಕ ಮಾಡಿಕೊಳ್ಳುತ್ತಾರೆ. ಅದ್ದರಿಂದ 18 ಪರ್‌ಸೆಂಟ್ ರಿಸರ್ವೇಶನ್ ಇಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಹೈದರಾಬಾದ್ ಕರ್ನಾಟಕದಲ್ಲಿ ವರ್ಕ್ ಚಾರ್ಜ್‌ಡ್ ಎಸ್ಟಾಬ್ಲಿಷ್‌ಮೆಂಟಿನವರದ್ದು ಒಂದು ಯೂನಿಯನ್ ಸಹ ಇದೆ. ಆ ಸಂಘದವರು ಒಂದು ವಿಚಾರವನ್ನು ಕೋರ್ಟಿಗೆ ತೆಗೆದುಕೊಂಡು ಹೋದಾಗ, ಕೋರ್ಟಿನಲ್ಲಿ ಅವರನ್ನು ಕಾನೂನು ಪ್ರಕಾರ ಪರ್ಮನೆಂಟ್ ಮಾಡಬೇಕೆಂದು ತೀರ್ಮಾನ ಕೊಟ್ಟಿಲ್ಲವೇ ; ಮತ್ತು ಹಾಗೆ ಕೋರ್ಟಿನ ತೀರ್ಮಾನದ ಪ್ರಕಾರ,ಅವರನ್ನು ಪರ್ಮನೆಂಟ್ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಜನರು ಇಂಡಸ್ಟ್ರಿಯಲ್ ಕೆಲಸಗಾರರು ಅಲ್ಲ. ಕೋರ್ಟು ಡಿಸಿಷನ್ ಕೊಟ್ಟರೆ ಎನ್ನುವುದಕ್ಕೆ ಉತ್ತರ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಕೆಲಸಗಾರರ ಬಗ್ಗೆ ಮಸ್ಟರ್ ರೋಲ್ ಇಟ್ಟಿದ್ದೀರಾ ? ಮತ್ತು ಅವರಿಗೆ ಕೊಟ್ಟಿರತಕ್ಕಂತಹ ಕೆಲಸ ಒಂದೇ ತರಹದ ಕೆಲಸವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ್ಯಾವ ಕೆಲಸ ಯಾವ್ಯಾವ ತರಹದ್ದು ಎಂದು ಇಲ್ಲಿ ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

9-30 A.M.

Releasing of water from Ramaswamy Nala

573. **Sri K. MADE GOWDA** (Bannur).—

Will the Minister for Public Works and Electricity be pleased to state :—

(*a*) the extent of land under Ramaswamy Nala Actchkat in T. Narasipur Taluk (in acres) ;

(*b*) whether it has come to the notice of the Government if water from Ramaswamy Nala is released for 2 days in the months of February and April, it would be helpful for ragi crop ;

(*c*) the difficulties in releasing the water for few days during the above two months in view of such benefit ?

Sri H. M. CHANNABASAPPA (Minister for Public Works and Electricity).—

(*a*) 4,468 hectors (11,040 acres).

(*b*) Ragi will not grow if water is released for two days. Water will have to be released at least eight days in a month for a period of three months for ragi crop.

(*c*) It has been decided to release water to the atchkat under Ramaswamy nala for growing summer crop.

ಶ್ರೀ ಕೆ. ಮಾದೇಗೌಡ.—(ಇ) ಪ್ರಶ್ನೆಗೆ ಉತ್ತರವಾಗಿ ಹೇಳಿರುವ ಪ್ರಕಾರ, ಇದು ಪ್ರತಿ ವರ್ಷವೂ ಕೊಡತಕ್ಕ ಖಾಯಂ ವ್ಯವಸ್ಥೆಯೇ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಖಾಯಂ ವ್ಯವಸ್ಥೆಯಲ್ಲ.

ಶ್ರೀ ಕೆ. ಮಾದೇಗೌಡ.—ಖಾಯಂ ವ್ಯವಸ್ಥೆಮಾಡುವುದಕ್ಕೆ ಸರ್ಕಾರಕ್ಕೆ ಇರತಕ್ಕ ಕಷ್ಟವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರು ಎಷ್ಟು ಉಳಿಯುತ್ತದೋ ಅದನ್ನು ನೋಡಿಕೊಂಡು ಆಗಾಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೇ ವಿನಹ ಖಾಯಂ ಆಗಿ ಹುಕುಂ ಮಾಡಿದರೆ ನೀರು ಖಾಯಂ ಆಗಿ ಇರುವುದಿಲ್ಲ.

ಶ್ರೀ ಕೆ. ಮಾದೇಗೌಡ.—ಹಾಗಾದರೆ ಕಾವೇರಿ ಬೇಸಿನ್ನಿನಲ್ಲಿ ಲಿಫ್ಟ್ ಇರ್ರಿಗೇಷನ್ ಮಾಡಬೇಕೆಂದರೆ, ನೀರು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟಿಲ್ಲವೇ ? ಹಾಗೆ ಕೊಟ್ಟಿರುವುದರಿಂದ ವ್ಯವಸಾಯಕ್ಕೆ ಧಕ್ಕೆ ಬರುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವ್ಯವಸಾಯಕ್ಕೆ ಧಕ್ಕೆ ಬಾರದೇ ಇರುವ ಹಾಗೆ ನೋಡಿಕೊಂಡು ಲಿಫ್ಟ್ ಇರಿಗೇಷನ್ನಿಗೆ ಅವಕಾಶಕೊಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ನೀರಿನ ವ್ಯವಸ್ಥೆ ನೋಡಿಕೊಂಡು ಇದನ್ನು ಮಾಡಬೇಕಾಗುತದೆಂದು ಕಾವೇರಿ ಬೇಸಿನ್ನಿನಲ್ಲಿ ಇರತಕ್ಕ ನಾಲೆಯಿಂದ 5ಲಕ್ಷ, 6 ಲಕ್ಷ ಎಕರೆಯುವರೆಗೆ ನೀರು ಬಿಡುತ್ತೇವೆಂದು ಮಂತ್ರಿಗಳು ಅವರ ಭಾಷಣದಲ್ಲಿ ಹೇಳಿರುವುದು ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ರಾಮಸ್ವಾಮಿ ನಾಲೆಗೆ ನೀರು ಕೊಡುತ್ತೇವೆ. ಎಂದು ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ರಾಮಸ್ವಾಮಿ ನಾಲೆಗೆ ನೀರನ್ನು ಒದಗಿಸುವುದಕ್ಕೆ ಯಾವುದೇ ತೊಂದರೆ ಇಲ್ಲದೆ ಮಾಡುವುದಕ್ಕೆ ಏನು ಕಷ್ಟ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಾಮಸ್ವಾಮಿ ನಾಲೆ ಜಲಾಶಯದಿಂದ ಬರತಕ್ಕದ್ದು ಅಲ್ಲ. ಇದು ಅಣೆಕಟ್ಟು. ಇದು ಅಣೆಕಟ್ಟಿನಿಂದ ಬರತಕ್ಕದ್ದು. ಬೇಸಿಗೆ ಕಾಲದಲ್ಲಿ ರಾಗಿ ಬೆಳೆಗೆ ಹಂಗಾಮಿಯಾಗಿ ಒಂದೆರಡು ತಿಂಗಳು ನೀರು ಕೊಟ್ಟಿದ್ದೇವೆ. ಎಲ್ಲೆಲ್ಲಿ ನೀರು ಇದ್ದರೆ ಅಲ್ಲಿ ಅದನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲೆಲ್ಲಿ ನೀರು ಕಡಿಮೆ ಇದೆಯೋ ಅಲ್ಲಿ ನೀರನ್ನು ಬೇಸಿಗೆ ಕಾಲದಲ್ಲಿ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ನೀರಿನ ಸಂಗ್ರಹಣೆ ಮತ್ತು ನೀರು ಇರತಕ್ಕದ್ದನ್ನು ನೋಡಿಕೊಂಡು ನೀರು ಹೆಚ್ಚಿಗೆ ಇದ್ದರೆ ಅಲ್ಲಿ ನೀರು ಕೊಡುತ್ತೇವೆ. ಎಲ್ಲಿ ನೀರು ಕಡಿಮೆ ಇರುತ್ತದೋ ಆಗ ನೀರು ಕೊಡುವುದಕ್ಕೆ ನಿರಾಕರಣೆ ಮಾಡಬೇಕಾಗುತ್ತದೆ.

Renovation of major tanks in Hassan Constituency

574. **Sri K. H. HANUME GOWDA** (Hassan).—

Will the Minister for Public Works and Electricity be pleased to state :—

(*a*) when the estimates in respect of repairs to Bandihalli, Gavenahalli and Doddigenigerehalli major tanks of Hassan Constituency were prepared ;

(*b*) the estimated cost of the same ;

(*c*) the reasons for inordinataly delay in repairing these tanks ?

Sri H. M. CHANNABASAPPA (Minister for Public Works and Electricity).—

(*a*) No repair works have been taken up under 43 or 44 INED in respect of Bandihalli major tank, the tank near Gavenahalli and Genigere major tank. But in 1971 72 some repair work was taken up in respect of Bandihalli major tank and the major tank near Genigere under 64 Famine Relief.

The estimates in respect of renovation and repair works of the abovementioned tanks are as follows :—

(i) *Bandihalli Major Tank* :—The estimate for the renovation of this tank prepared in 1971-72.

(ii) *The tank near Gavenahalli* :—The estimate for the repair of this tank has not yet been prepared.

(iii) *Major Tank near Genigere* :—The estimate for renovation of this tank was prepared in 1970-71.

(*b*) (i) The estimated cost of renovating the Bandihalli major tank is Rs. 49,000.

(ii) The estimate for repairing the tank near Gavenahalli is not yet prepared.

(iii) The estimated cost of renovating the major tank near Genigere is Rs. 37,000.

(*c*) The renovation work of Genigere and Bandihalli major tanks could not be taken up due to non-availability of enough funds.

ಶ್ರೀ ಕೆ. ಎಚ್. ಹನುಮೇಗೌಡ.—ನಮ್ಮ ಜಿಲ್ಲೆ ಆಗಾಗ್ಗೆ ಬರಗಾಲಕ್ಕೆ ತುತ್ತಾಗುವ ಪ್ರದೇಶವಾಗಿರುವುದರಿಂದ, ನಮ್ಮ ಕ್ಷೇತ್ರದ ಕೆಲವಾರು ದೊಡ್ಡ ದೊಡ್ಡ ಕೆರೆಗಳ ಜೀರ್ಣೋದ್ಧಾರ ಮಾಡಿ ಗ್ರಾಮಗಳ ಜನರಿಗೆ ಖಾಯಂ ಪರಿಹಾರವನ್ನು ಒದಗಿಸುವ ದೃಷ್ಟಿಯಿಂದ ಈ ಮೂರು ಕೆರೆಗಳ ಎಸ್ಟಿಮೇಟ್ ಮಾಡಿಸಿ ಅವುಗಳ ಬಗ್ಗೆ ಅಂದಾಜನ್ನು ಮಂಜೂರು ಮಾಡಿ ಈಗಲಾದರೂ ಜಾಗ್ರತೆಯಾಗಿ ಕೆಲಸಗಳನ್ನು ಶುರು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಮೂರು ಕೆರೆಗಳು ಸ್ವಲ್ಪಮಟ್ಟಿಗೆ ನಾದುರಸ್ತಿನಲ್ಲಿದೆ ಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಅವುಗಳ ಬಗ್ಗೆ ದುರಸ್ತು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ.

ಶ್ರೀ ಟಿ. ಎಂ. ಮಂಜುನಾಥ್.—ಎಷ್ಟೇ ಕಷ್ಟವಾದರೂ ತಮ್ಮ ಯೋಜನೆಗಳ ಪ್ರಕಾರ ಈ ಮೂರು ಕೆರೆಗಳ ಕಾಮಗಾರಿಯನ್ನು ನಾಳೆಯಿಂದಲೇ ತೆಗೆದುಕೊಳ್ಳುವ ಹಾಗೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾಳೆಯಿಂದ ಮಾಡುವುದಕ್ಕಾಗುವುದಿಲ್ಲ,

ಶ್ರೀ ಎಚ್. ಡಿ. ದೇವೇಗೌಡ.—ಈ ಕೆರೆಗಳ ದುರಸ್ತು ಬಗ್ಗೆ ಅಂದಾಜು ಇನ್ನೂ ತಯಾರಾಗಿಲ್ಲವೆಂದು ಉತ್ತರದಲ್ಲಿ ಹೇಳಿದೆ. ಹಿಂದೆ ಈ ಸಭೆಯಲ್ಲಿ ಭಾಷಣ ಮಾಡಿದಾಗ ಕಳೆದ ಸಾರಿ ಇದಕ್ಕೆ ಜನರು ಮನವಿಯನ್ನು ಕೊಡಬೇಕಾದ್ದಿಲ್ಲ, ಇಧರ ಬಗ್ಗೆ ಯಾರೂ ಏನೂ ಹೇಳಬೇಕಾಗಿಲ್ಲ, ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕೆರೆಗಳ ಬಗ್ಗೆ ಜಾಗ್ರತೆಯಾಗಿ ದುರಸ್ತು ಮಾಡಬೇಕೆಂದು

(ಶ್ರೀ ಎಚ್. ಡಿ. ದೇವೇಗೌಡ)

ಸ್ಪಷ್ಟವಾಗಿ ಸೂಚನೆಗಳನ್ನು ಈಗಾಗಲೇ ಕೊಟ್ಟಿದ್ದೇನೆಂದು ಹೇಳಿದಿರಿ. ಇವತ್ತು ಅಂದಾಜು ಇನ್ನೂ ತಯಾರಾಗಿಲ್ಲವೆಂದು ಹೇಳುತ್ತಿದ್ದೀರಿ. ಇನ್ನೊಂದು ಸಾರಿ ಈ ದೇಶದಲ್ಲಿ ಎಲ್ಲಾ ಕೆರೆಗಳ ದುರಸ್ತು ಬಗ್ಗೆ ಯಾರೂ ಕಾಯಬೇಕಾಗಿಲ್ಲವೆಂದು ಹೇಳುತ್ತಿದ್ದೀರಿ. ನೀವು ಹೇಳುವುದು ಒಂದು, ಮಾಡುವುದು ಒಂದು. ಇದು ಸರಿಯಲ್ಲ ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹೇಳಿದ್ದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳದೇ ಇರುವುದೇ ಮುಖ್ಯ. ಮತ್ತೊಂದು ಸಾರಿ ನಾನು ಹೇಳುತ್ತೇನೆ. ಸಣ್ಣಪುಟ್ಟ ಕಾಮಗಾರಿಗಳು ಏನಿವೆಯೋ ಅವುಗಳ ಮೇಂಟನೆನ್ಸ್ ವರ್ಕ್ಸ್ ನೋಡಿಕೊಂಡು ಕ್ರಮ ತೆಗೆದು ಕೊಳ್ಳಬೇಕೆಂದು ಸೂಚನೆ ಕೊಡಲಾಗಿದೆ. ನಾದುರಸ್ತು ಆಗಿರತಕ್ಕದು, ಒಡೆದು ಹೋಗಿರತಕ್ಕದ್ದು ಅವುಗಳ ಬಗ್ಗೆ ಅಂದಾಜು ಆಗಿದ್ದರೆ ಅವನ್ನು ರೆಸ್ಟೋರ್ ಮಾಡಬೇಕಾದ ಬಗ್ಗೆ ಅವರು ಒಪ್ಪಿಕೊಂಡು ಕೆಲಸ ಮಾಡುತ್ತಾರೆಂದು ನಾನು ಹೇಳುತ್ತೇನೆ.

DISTRIBUTION OF FOODGRAINS, ETC., TO LANDLESS LABOURERS AND SMALL FARMERS

634. **Sri K. SIDDAIAH** (Santhemarahally) .—

Will the Minister of State for Food and Civil Supplies be pleased to state :—

(*a*) the policy and the procedure followed in the distribution of foodgrains, etc., to the landless labourers, (Agricultural or otherwise) and also small farmers in rural parts ;

(*b*) the machinery through which such distribution of foodgrains is undertaken ?

Smt. E. E. VAZ.—Minister of State for Food and Civil Supplies

(*a*) The policy has been to make available foodgrains at cheaper rates to vulnerable sections with a view to neutralising the effect of higher open market prices. Landless labourers are entitled to get foodgrains up to 2 Kgs. Rice 2 Kgs. other foodgrains and 4 Kgs. of wheat or in aggregate 8 Kgs. of wheat subject to the availability of stocks.

(*b*) Through Government Fair Price Shops.

ಶ್ರೀ ಕೆ. ಸಿದ್ಧಯ್ಯ.—ಉತ್ತರದಲ್ಲಿ ಬಡವರೆಲ್ಲರಿಗೂ 8 ಕೆ.ಜಿ.ಯಷ್ಟು ಆಹಾರ ಧಾನ್ಯಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇದು ಒಂದು ತಿಂಗಳಿಗೋ ಅಥವಾ ಎಷ್ಟು ಕಾಲಕ್ಕೆ ?

Smt. E. E. VAZ.—Per adult, per month.

ಶ್ರೀ ಕೆ. ಸಿದ್ದಯ್ಯ.— ವಲ್ನರಬಲ್ ಸೆಕ್ಷನ್ಸ್ ಎಂಬುದಾಗಿ ಉತ್ತರದಲ್ಲಿ ತಿಳಿಸಿದೆ. ಆ ವಲ್ನರಬಲ್ ಸೆಕ್ಷನ್ಸ್ ಯಾವುವು ?

ಶ್ರೀಮತಿ ಇ. ಇ. ವಾಜ್.—ಕಾರ್ಮಿಕರು, ರೈತ ಕೂಲಿಗಾರರ ಮಟ್ಟದಲ್ಲಿದ್ದವರು—ಇದಕ್ಕೆ ಸೇರಿದವರಾಗಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್.—ಎರಡು ಕೆ.ಜಿ. ಅಕ್ಕಿ, ಎರಡು ಕೆ.ಜಿ. ಇತರ ಆಹಾರ ಧಾನ್ಯಗಳು ಅಥವಾ ಒಟ್ಟಾಗಿ 8 ಕೆ.ಜಿ. ಗೋಧಿಯನ್ನು ಇದೇ ರೀತಿಯಲ್ಲಿ ಎಲ್ಲಾ ಕಡೆಯೂ ರಾಜ್ಯಾದ್ಯಂತ ಎಲ್ಲರಿಗೂ ಹಂಚುವುದಕ್ಕೆ ತಾಲ್ಲೂಕುವಾರ್ ಸಪ್ಲೈ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಆ ಅವಶ್ಯಕತೆ ಬಿದ್ದಾಗ ಅದನ್ನು ಪರಿಶೀಲಿಸಲಾಗುವುದು,

ಶ್ರೀ ಕೆ. ಎಂ. ನಾಗಣ್ಣ.—ಬೆಂಗಳೂರು ನಗರದಲ್ಲಿ ಒಬ್ಬ ಮನುಷ್ಯನಿಗೆ ಒಂದು ತಿಂಗಳಿಗೆ 2 ಕೆ.ಜಿ. ಅಕ್ಕಿ ಸಾಕಾಗುತ್ತದೆಯೇ ! ಸಬ್ಜೆಕ್ಟು ಅವೇಲಬಿಲಿಟಿ ಆಫ್ ಸ್ಟಾಕ್ಸ್ ಎಂದು ಬೇರೆ ಹೇಳುತ್ತೀರಿ. ಅದಿಲ್ಲದಿದ್ದರೆ ಏನು ಮಾಡುತ್ತೀರಿ ! ಜನರಿಗೆ ಆಹಾರವನ್ನು ಸಾಕಷ್ಟು ಒದಗಿಸುವುದು ಸರ್ಕಾರದ ಜವಾಬ್ದಾರಿ ಅಲ್ಲವೇ ?

ಶ್ರೀಮತಿ ಇ. ಇ. ವಾಜ್.—ನಾವು ಮಿನಿಮಂ ರಿಕ್ವೈರ್‌ಮೆಂಟ್ಸ್ ಒದಗಿಸುವುದಕ್ಕೆ ಅದಷ್ಟು ಏರ್ಪಾಡುಮಾಡುತ್ತೇವೆ. ಉಳಿದುದನ್ನು ಬಹಿರಂಗವಾಗಿ ಮಾರ್ಕೆಟ್ಟಿನಲ್ಲಿ ಎಲ್ಲಿ ಸಿಗುತ್ತದೋ ಅಲ್ಲಿ ಕೊಂಡುಕೊಳ್ಳಬೇಕಾಗುತ್ತದೆ,

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಆಹಾರ ಧಾನ್ಯಗಳನ್ನು ಕಾರ್ಮಿಕರಿಗೆ ರೈತ ಕೂಲಿಗಾರರಿಗೆ ಕೊಡುತ್ತೇವೆಂದು ಹೇಳಿದಿರಿ. ರಾಜ್ಯದಲ್ಲಿ ಎಷ್ಟು ಕೂಲಿಗಾರರು ಇದ್ದಾರೆ ? ಎಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುತ್ತಿದ್ದೀರಿ.

ಶ್ರೀಮತಿ ಇ. ಇ. ವಾಜ್ —ಎಲ್ಲಾ ಜಿಲ್ಲೆಗಳಲ್ಲಿಯೂ ಆಯಾ ಡೆಪ್ಯುಟಿ ಕಮಿಷನರ್ ಎಲ್ಲೆಲ್ಲಿ ಆಗತ್ಯತೆ ಇದೆಯೆಂದು ತಿಳಿದುಕೊಂಡಿದ್ದಾರೋ ಅಲ್ಲಲ್ಲಿ ಫೇರ್ ಪ್ರೈಸ್ ಡಿಪೋಗಳನ್ನು ತೆಗೆದಿದ್ದಾರೆ. ಆದರೆ ಜನ ಇನ್ನೂ ಜಾಸ್ತಿಯಾಗಿ ಮುಂದೆ ಬಂದರೆ ಅಂತಹ ಕಡೆಗಳಲ್ಲಿ ತೆರೆಯುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ದಿವಸ ಸರ್ಕಾರದವರು ಈ ಆಹಾರ ಧಾನ್ಯಗಳನ್ನು ಸಹಕಾರ ಸಂಘಗಳ ಮೂಲಕ ಹಂಚಿಸುತ್ತಿದ್ದಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಸರ್ಕಾರ ಆ ಸಂಘಗಳಿಗೆ ಧಾನ್ಯಗಳನ್ನು ಒದಗಿಸಿದ್ದಾಗ ಅವನ್ನು ಲಿಫ್ಟ್ ಮಾಡುವುದಕ್ಕೆ ಅವುಗಳಲ್ಲಿ ಹಣವೇ ಇಲ್ಲದೆ ಧಾನ್ಯ ಲ್ಯಾಪ್ಸಾಗಿದೆ. ಅಂಥ ತೊಂದರೆಯನ್ನು ತಪ್ಪಿಸುವುದಕ್ಕೇನು ಮಾರ್ಗವನ್ನು ಸರ್ಕಾರದವರು ಕಂಡುಹಿಡಿದಿದ್ದಾರೆ ?

ಶ್ರೀಮತಿ ಇ. ಇ. ವಾಜ್.—ಎಲ್ಲೆಲ್ಲಿ ಅಂಥಾ ಲೋಪದೋಷಗಳು ಕಂಡುಬರುತ್ತವೆಯೋ ಅಂಥ ಕಡೆಗಳಲ್ಲಿ ಸಾರ್ವಜನಿಕರಿಗೂ ಆಹಾರವನ್ನು ಕೊಡುವುದಕ್ಕೆ ಅವಕಾಶ ಮಾಡಿದ್ದೇವೆ.

Sri J. P. SARVESH.—How many people are benefited by this scheme in the State ? Has the Hon'ble Minister any figures ?

Smt. E. E. VAZ.—I am sorry, I won't be able to give a correct picture. In informal rationing areas about 2 lakhs of people are benefited and in other places 2 to 3 lakhs of people are benefited by this scheme.

ಶ್ರೀ ಎಂ. ಎಸ್, ಕೃಷ್ಣನ್.—ಸರ್ಕಾರದವರು ಮಾರಾಟ ಮಾಡಲು ತೆರೆದಿರತಕ್ಕ ನ್ಯಾಯಬೆಲೆಯ ಅಂಗಡಿಯಲ್ಲಿ ಸಾಮಾನುಗಳು ದೊರೆಯತಕ್ಕ ಬೆಲೆಗೂ ಮತ್ತು ಬಜಾರಿನಲ್ಲಿ ಸಾಮಾನುಗಳು ದೊರೆಯತಕ್ಕ ಬೆಲೆಗಳಿಗೂ ಅಜಗಜಾಂತರ ವ್ಯತ್ಯಾಸವಿರುವುದನ್ನು ತಪ್ಪಿಸಲು ಸರ್ಕಾರದವರು ಕೈಗೊಂಡಿರತಕ್ಕ ಕ್ರಮಗಳೇನು ?

ಶ್ರೀಮತಿ ಇ, ಇ. ವಾಜ್—ಅದಕ್ಕಾಗೇ ಸರ್ಕಾರದವರು ಸಗಟು ವ್ಯಾಪಾರ ಕೈಗೊಳ್ಳಬೇಕೆಂದು ಕ್ರಮಗಳನ್ನು ಕೈಗೊಳ್ಳುತ್ತಿರುವುದು.

ಶ್ರೀ ಪಿ. ಎಂ. ಭಾಂಗಿ.—ಅಭಾವ ಪೀಡಿತ ಪ್ರದೇಶಗಳಿಗೆ ಸಂಬಂಧಪಟ್ಟ ಜಮಖಂಡೀ ತಾಲ್ಲೂಕ್ ಪ್ರದೇಶದಲ್ಲಿ ನೇಕಾರರಿಗೆ ಆಹಾರ ಧಾನ್ಯಗಳು ಸಿಕ್ಕದೆ ಅವರು ಉಪವಾಸದಿಂದ ಸಾಯಬೇಕಾಗಿದೆ ಅದಕ್ಕಾಗಿ ಸರ್ಕಾರದವರು ಕೂಡಲೇ ಅವರಿಗೆ ಆಹಾರಧಾನ್ಯಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀಮತಿ ಇ.ಇ. ವಾಜ್.— ಅದಕ್ಕಾಗೇ ಅಭಾವಪೀಡಿತ ಪ್ರದೇಶಗಳಲ್ಲಿ ಇತ್ತೀಚೆಗೆ ಸರ್ಕಾರದವರು ಹೆಚ್ಚು ಆಹಾರ ಧಾನ್ಯಗಳನ್ನು ಒದಗಿಸುವುದಕ್ಕಾಗಿ 2—3 ಸಾವಿರ ಡಿಪೋಗಳನ್ನು ತೆರೆದಿದ್ದಾರೆ.

ಶ್ರೀ ಸಿ. ಬೈರೇಗೌಡ.—ತಾವು ಗ್ರಾಮಾಂತರ ಪ್ರದೇಶಗಳಿಗೆ ಆಹಾರ ಧಾನ್ಯಗಳನ್ನು ಒದಗಿಸುವ ಬಗ್ಗೆ ರೂರಲ್ ಪ್ರದೇಶದಲ್ಲಿ ಸರ್ಕಾರದವರು ಇಟ್ಟಿರತಕ್ಕ ಅಕ್ಕಿ ಮತ್ತು ಗೋಧಿ ದಾಸ್ತಾನೆಷ್ಟು ಎಂಬುದನ್ನು ತಿಳಿಸುತ್ತಾರೆಯೇ ?

ಶ್ರೀಮತಿ ಇ.ಇ. ವಾಜ್.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆಉತ್ತರ ಒದಗಿಸಲಾಗುತ್ತೆ.

ಶ್ರೀ ಕೆ.ಶ್ರೀರಾಮುಲು.—ಇದೇ ಸಭೆಯಲ್ಲಿಮಾನ್ಯ ಚಿಕ್ಕೇಗೌಡರು ಈ ತಿಂಗಳಲ್ಲಿ ಯಾರಾದರೂ ರೇಷನ್ ಕಾರ್ಡ್ ಹೋಲ್ಡರುಗಳಿಗೆ ಅನಾನುಕೂಲದ ದೆಶೆಯಿಂದ ಅವರಿಗೆ ಸಿಕ್ಕುವ ರೇಷನ್ ಧಾನ್ಯಗಳನ್ನು ಕೊಂಡುಕೊಳ್ಳದೆ ಬಿಟ್ಟಿದ್ದರೆ—ಆ ಸಾಮಾನುಗಳನ್ನು ಮುಂದಿನ ತಿಂಗಳಲ್ಲಿ ಅವರಿಗೆ ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಲಾಗುವುದೆಂದು ಆಶ್ವಾಸನೆ ಕೊಟ್ಟಿದ್ದರು, ಆ ಬಗ್ಗೆ ತಾವು ಸರಿಯಾದ ತಿಳುವಳಿಕೆಯನ್ನು ಇಲಾಖೆಗೆ ಕೊಟ್ಟಿದ್ದೀರಾ ?

ಶ್ರೀಮತಿ ಇ. ಇ. ವಾಜ್.—ಆ ಏರ್ಪಾಡನ್ನೂ ಮಾಡುತ್ತೇವೆ.

Sri K. PRABHAKAR.—Will the Hon'ble Ministet be pleased to state how many fair-price shops are there in rural parts other than urban parts ?

Smt. E. E. VAZ.—I can give the number of fair-price shops that are in the whole State.

Sri K. PRABHAKAR.—I am particular about rural areas, because in rural areas where there is necessity for fair-price depots, they are determined more by the license holders rather than based on the need. To avoid this situation, I wanted to know how many fair-price shops are there in rural areas ?

Smt. E. E. VAZ.—If the hon. member means rural districts, I am prepared to give the figure.

Sri K. PRABHAKAR.—Rural area means other than urban area

Smt. E. E. VAZ.—In every district there will be urban parts and also rural parts.

ಶ್ರೀ ಕೆ. ಪ್ರಭಾಕರ್.—ನಾನು ಕೇಳುತ್ತಿರುವುದು ಸಿಟಿ ಏರಿಯಾ ಮತ್ತು ಮುನಿಸಿಪಲ್ ಏರಿಯಾ ಬಿಟ್ಟು ಇನ್ನುಳಿಯತಕ್ಕ ಗ್ರಾಮಾಂತರ ಪ್ರದೇಶಕ್ಕೆ ಒದಗಿಸಿರತಕ್ಕ ಧಾನ್ಯಗಳ ಪ್ರಮಾಣವೆಷ್ಟು ?

Smt. E. E. VAZ.—Bangalore City —697 and Bangalore District... 767. 1 have figures for the whole State. If the hon. member puts aseparate question about rural parts, I can supply the information.

ಶ್ರೀ ಕೆ. ಸಿದ್ಧಯ್ಯ.—ಇರತಕ್ಕ ದಾಸ್ತಾನಿಗನುಸಾರವಾಗಿ ಎಲ್ಲರಿಗೂ ಅದನ್ನು ಹಂಚುವುದಕ್ಕೆ ಒಂದು ಸಮನಾಗಿ, ಏರ್ಪಾಡು ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್—ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

Raising the Capacity of Gayathri Reservoir

Sri V. MASIYAPPA (Challakere).—

646 Will the Minister for Public Works and Electricity be pleased to state :—

(*a*) whether any representations have been made by the people of Hiriyur Taluk and Sira Taluk for railing the capacity of the

Gaythri Reservoir in Hiriyur Taluk by constructing Crest Gates to a height of 8 feet ;

(*b*) if so the action taken by the Government in this regard ?

SRI H. M. CHANNABASAPPA (Minister for Public Works and (Electricity)

(*a*) Yes.

(b) This is being investigated

ಶ್ರೀ ಎ. ಮುನಿಯಪ್ಪ.—ಇಲ್ಲಿ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಈ ಇನ್‌ವೆಸ್ಟಿಗೇಷನ್ನನ್ನು ಮೇಜರ್ ಇರಿಗೇಷನ್ ಪ್ರಾಜೆಕ್ಟಿನವರು ನಡೆಸುತ್ತಿದ್ದಾರೋ ಅಥವಾ ಮೈನರ್ ಇರಿಗೇಷನ್ ಪ್ರಾಜೆಕ್ಟಿನವರು ನಡೆಸುತ್ತಿದ್ದಾರೋ ?

† **ಶ್ರೀ ಎಚ್. ಎಂ. ಚನ್ನಬಸಪ್ಪ.**—ಒಂದೊಂದು ವೇಳೆ ಆ ಕೆಲಸ ಮೇಜರ್ ಇರಿಗೇಷನ್ನಿಗೆ ಸಂಬಂಧಪಟ್ಟಿದ್ದಾದರೆ ಅವರು ಮಾಡುತ್ತಾರೆ, ಇಲ್ಲವೆ ಮೈನರ್ ಇರಿಗೇಷನ್ ಪ್ರಾಜೆಕ್ಟಿನವರು ಅದನ್ನು ಮಾಡುತ್ತಾರೆ.

ಶ್ರೀ ಎ. ಮುನಿಯಪ್ಪ.—ಅಲ್ಲಿ ಯಾರನ್ನು ಕೇಳಿದರೂ ಆ ಕೆಲಸ ನಮಗೆ ಸಂಬಂಧಪಟ್ಟಿದ್ದಲ್ಲ ನಮಗೆ ಸಂಬಂಧಪಟಿದ್ದಲ್ಲ ಎಂದು ಹೇಳುತ್ತಿದ್ದಾರೆ ಆದಕ್ಕಾಗಿ ನಾನು ಇದನ್ನು ಕೇಳುತ್ತಿದ್ದೇನೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಖರ್ಚು ಎಷ್ಟಾಗುತ್ತದೆಂಬುದನ್ನು ನೋಡಿ ಅದನ್ನು ನಿರ್ಧರಿಸಲಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ಆ ಖರ್ಚು ಎಷ್ಟಾಗಬಹುದೆಂಬುದನ್ನು ಯಾರು ಹೇಳುತ್ತಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ 8 ಅಡಿ ಎತ್ತರಕ್ಕೆ ಏರಿಸಬೇಕೆಂದು ಕೇಳುತ್ತಿದ್ದಾರೆ. ಆದರ ಬಗ್ಗೆ ಹೆಚ್ಚಿನ ಖರ್ಚೇನಾಗಬಹುದೆಂಬುದರ ಮೇಲೆ ಅದನ್ನು ನಿರ್ಧರಿಸಲಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ಆ ಕೆಲಸವನ್ನು ಇಬ್ಬರೂ ಮಾಡದೆ ಕೈಬಿಟ್ಟರೆ ಏನು ಮಾಡಬೇಕು ಎಂಬ ಬಗ್ಗೆ ಈಗ ಇದು ಉದ್ಭವವಾಗಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಯಾರೂ ಕೈ ಬಿಡುವುದಕ್ಕೆ ಬರುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಅಲ್ಲಿ ಬಲನಾಲೆಯನ್ನು ತಾವರೆಕೆರೆ ವರೆಗೂ ವಿಸ್ತರಿಸಿದ್ದಾಗ್ಯೂ ಅಲ್ಲಿ ಒಂದು ಹನಿ ನೀರು ಕೂಡ ಕಾಲುವೆಯಲ್ಲಿ ಬರುವುದಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್.ಎಂ. ಚನ್ನಬಸಪ್ಪ.-ಆ ಗಾಯತ್ರಿ ಪಾಜೆಕ್ಟ್ ಡಿಸ್‌ಚಾರ್ಜ್ ಆಗುತ್ತಿರುವುದು ಎರಡು ವರ್ಷಕ್ಕೆ ಒಂದಾವರ್ತಿ. ಅದರ ಕೆಳಗಡೆ ಇರತಕ್ಕ ನಾರಾಯಣಪುರಕ್ಕೆ ಅದರ ಅಚ್ಚುಕಟ್ಟಿಗೆ ಎಷ್ಟು ನೀರನ್ನು ಬಿಡಬೇಕೋ ಅಷ್ಟನ್ನು ಬಿಡಲೇಬೇಕು. ಆದರೆ ಅಲ್ಲಿ ಹೈಡ್ರೋಲಾಜಿಕಲ್ ಡೇಟ ನೋಡಿ ಅಲ್ಲಿ ಎಷ್ಟು ನೀರು ದೊರೆಯುತ್ತದೆ ಎಂಬುದನ್ನು ತಿಳಿದುಕೊಂಡ ನಂತರ ಇಲ್ಲಿ ಅಂದಾಜು ತಯಾರಿಸತಕ್ಕ ಪ್ರಶ್ನೆ ಬರುತ್ತದೆ. ನಮಗೆ ಬಂದಿರತಕ್ಕದ್ದು ಒಟ್ಟಿನಲ್ಲಿ ಆ ಕಷ್ಟ.

ಶ್ರೀ ಎ. ಮುನಿಯಪ್ಪ.—ನನಗೆ ಗೊತ್ತಿರುವ ಪ್ರಕಾರ ಗಾಯತ್ರಿ ಪ್ರಾಜೆಕ್ಟ್ ವರ್ಷಕ್ಕೆ ಎರಡಾವರ್ತಿ ಕೋಡಿ ಬೀಳುತ್ತಿದೆ. ಆದ್ದರಿಂದ ಮಾನ್ಯ ಸಚಿವರು ಸರಿಯಾದ ವಿಷಯ ತರಿಸಿಕೊಂಡು ಇದನ್ನು ಮತ್ತೆ ಪರಿಶೀಲಸಬೇಕೆಂದೂ ಮತ್ತು ಇದಕ್ಕೆ ಮೇಲ್ಭಾಗದಲ್ಲಿ ಹೊಸದಾಗಿ ಎರಡು ಕೆರೆಗಳನ್ನು ಕಟ್ಟುವುದಕ್ಕೆ ಸರ್ಕಾರದವರು ಅನುಮತಿ ಕೊಡುತ್ತಿದ್ದಾರೆಂದು ಕೇಳಿದ್ದೇನೆ. ಆದ್ದರಿಂದ ಇಲ್ಲಿ ಈ ಪ್ರಶ್ನೆ ಬಗೆಹರಿಯುವ ತನಕ ಮೇಲ್ಭಾಗದಲ್ಲಿ ಯಾವ ಹೊಸಕೆರೆಗಳನ್ನೂ ಕೊಟ್ಟದಂತೆ ತಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಧಿಡೀರನೆ ಅಪ್ಪಣೆ ಕೊಡುವುದಕ್ಕಾಗುವುದಿಲ್ಲ. ಸರ್ಕಾರದವರು ಹೈಡ್ರೋಲಾಜಿಕಲ್ ಸರ್ವೆ ನಡೆಸಿದ ನಂತರ ಬೋರನಕಣಿವೆ ಮತ್ತು ಚಿಕ್ಕನಾಯಕನಹಳ್ಳಿಯ ಒಂದು ಹೊಸ ಕೆರೆ ಇವುಗಳಿಗೆಲ್ಲಾ ಎಷ್ಟು ನೀರು ಬೇಕಾಗುತ್ತದೆಂಬುದನ್ನು ನೋಡಿ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಕೊಂಡು ಅಲ್ಲಿ ಇನ್ನೂ ನೀರು ಹೆಚ್ಚಿಗೆ ಉಳಿದಪಕ್ಷದಲ್ಲಿ ಆ ನೀರನ್ನು ಗಾಯತ್ರಿ ಪ್ರಾಜೆಕ್ಟಿಗೆ ತಂದು ಇಲ್ಲಿ ಅದನ್ನು ತಡೆಯುವುದಕ್ಕೆ ಪ್ರಯತ್ನ ಮಾಡೋಣ. ಆದರೆ ಈ ದಿವಸ ಗಾಯತ್ರೀ ಪ್ರಾಜೆಕ್ಟಿನ ಕೆಳಗೆ ಇರತಕ್ಕ 5 ಸಾವಿರ ಎಕರೆ ಅಚ್ಚುಕಟ್ಟಿನಲ್ಲಿ ಇನ್ನೂ ಒಂದು ಸಾವಿರ ಎಕರೆ ಡೆವಲಪ್ಪೇ ಆಗಿಲ್ಲ. ಇದನ್ನೆಲ್ಲಾ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಬಿ. ಪುಟ್ಟಕಾಮಯ್ಯ.—ಹಿರಿಯೂರು ತಾಲ್ಲೂಕು ಕ್ಷಾಮ ಪ್ರದೇಶವೆಂದು ಕೇಂದ್ರ ಸರ್ಕಾರದವರು ಮತ್ತು ಮೈಸೂರು ಸರ್ಕಾರದವರು ಘೋಷಿಸಿದ್ದಾರೆ. ಅಂಥ ಪ್ರದೇಶದಲ್ಲಿ ಜಲಾಶಯದ ಎತ್ತರವನ್ನು ಹೆಚ್ಚು ಮಾಡಿ ಹೆಚ್ಚು ನೀರನ್ನು ಶೇಖರಿಸುವುದು ಸೂಕ್ತವೆಂದು ಸರ್ಕಾರದವರು ಮನಗಂಡಿದ್ದಾರೆಯೇ ? ಈ ಪ್ರಶ್ನೆ ಸುಮಾರು 10 ವರ್ಷದಿಂದ ಇದೆ. ಈ ವಿಳಂಬ ನೀತಿ ಸರಿಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಳಂಬ ಮಾಡಬೇಕು ಎನ್ನುವುದು ಸರ್ಕಾರದ ಮನಸ್ಸಿನಲ್ಲಿ ಸ್ವಲ್ಪವೂ ಇಲ್ಲ. ಆದರೆ ನೀರು ಎಷ್ಟಿದೆ ಎನ್ನುವುದನ್ನು ಬೇರೆ ಬೇರೆ ಸ್ಥಳಗಳಲ್ಲಿ ಮೂರು ನಾಲ್ಕು ವರ್ಷ ಕಾಲ ಗೇಜ್ ಮಾಡಬೇಕಾಗುತ್ತದೆ. ಆ ನಂತರ ಸಾಕಾದಷ್ಟು ನೀರಿದೆ ಎನ್ನತಕ್ಕದ್ದು ಮನಸ್ಸಿಗೆ ಭಾಸವಾದ ಮೇಲೆ ಮಾನ್ಯ ಸದಸ್ಯರು ಹೇಳತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಿಕ್ಕೆ ಅಡ್ಡಿ ಇಲ್ಲ. ತಕ್ಷಣ ಮಾಡುವುದು ಕಷ್ಟವಾಗುತ್ತದೆ.

Construction of Tanks in Aurad Taluk

612 **Sri BAPU RAO PATIL** (Aurad).—

Will the Minister for Public Works and Electricity be pleased to state :—

(*a*) the number of sites in Aurad Taluka suitable for construction of new tanks ;

(b) the number of sites of Minor Irrigation tanks surveyed so far ;

(*c*) whether plans and estimates have been prepared of the surveyed sites ;

(*d*) whether the estimated and proposed tank works are to be taken up under '64 Famine Relief Works' ;

(*e*) whether Government is aware that Aurad taluk is a drought hit taluk ?

Sri H. M. CHANNA BASAPPA (Minister for Public Works and Electricity),—

(*a*) Twenty-one sites.

(b) Seventeen sites.

(*c*) Yes.

(*d*) Three of the estimated works have been ordered to be taken up under '64 Famine'. They are the following :—

(i) Construction of a new tank near Chikli Janwade village.

(ii) Construction of a new tank near Ekamba village.

(iii) Construction of a new tank near Korekal village.

(e) Yes.

Sri BAPU RAO PATIL.—In answer to (a) you have stated that there are 2I sites only. That is incorrect Sri because there are 100 sites. What do you say for this difference ?

†**Sri H. M. CHANNABASAPPA.**—It may be in the opinion of the hon. Member that there might be 100 sites ; but in the opinion of the PWD there are only 21 feasible sites.

Sri N. B. SIRDESAI.—May I know whether Government have issued instruction to the officers of the PWD asking them not to treat all the proposed tank-sites feasible on account of the paucity of funds and submit infeasible report in Marathi area ?

Sri H. M. CHANNABASAPPA.—In Mysore State we have Mysore area and we do not have Marathi areas in Mysore State.

Sri BAPU RAO PATIL.—Will the Hon. Minister give the names of those 21 sites ?

Sri H, M. CHANNABASAPPA.—Works sanctioned.

1. Construction of a new tank near Santhpur.
2. Construction of a new tank near Nandiyal village
3. Construction of a new tank near Huliyal,
4. Construction of a new tank near Chor Talab near Mudhol
5. Construction of a new tank near Kamalnagar
6. Construction of a an Anicut near Kushnur
7. Construction of a new tank near Tegampur village.
8. Construction of a new tank near Bawalgaon

Projects yet to be Sanctioned

9. Construction of a new tank near Maskal village
10. Constrction of a new tank near Bhopalgadh Belkoni,
11. Construction of a new tank near Banji Nagoor village
12. Construction of a new tank near Chickli Janwada village
13. Construction of a new tank near Ekamba village
14. Construction of a new tank near Madpally
15. Construction of a new tank near Korekal
16. Restoration of breached tank near Chiklijanwada
17 Constructing new tank near Jamlpur

(SRI H. M. CHANNABASAPPA)

Surveys under Progress

18. Constructing new tank near Sorhally
19. Constructing new tank near Bardapur

Proposed to be Surveyed During 1972--73

20. Constructing new tank near Beldal village.
21. Construoting a new barrage near Khanapur.

Sri BAPU RAO PATIL —You have stated that so far 17 sites have been surveyed and plans and estimates are also ready. This being so, may I know why only 3 works have been taken up.

Sri H. M. CHANABASAPPA.—The hon. member make a diffeerence between survery, sanction, estimation and exeeution. These are all the stages to be observed during the course of execution. Merely because they are surveyed, that does not mean that it will be immediately taken up ; surveys will be followed by estimates and estimates will be followed by sanction, sanctions will be followed by execution.

Electrification of Villages in Sadalga Constituency

620. **Sri J. S. AMMANNAVAR** (Sadalga).—

Will the Minister for public Works and Electricity be pleased to state :—

(*a*) the number and the names of the villages which have not been electrified in the Sadalga Constituency ;

(b) of these villages, the villages for which estimates fos the supply of electricity have been prepared and their names ;

(*c*) of them the villages, which have received sanction and their names ;

(d) the villages where work has been started ;

(*e*) when the remaining villages will be electrified ;

(*f*) whether there is any scheme to supply electricity with the assistance of Central Government to the said un-electrified villages ?

Sri H. M. CHANNABASAPPA (Minister for Public Works and Electricity).—

(*a*) 12 villages as indicated in the list appended.

(b) Estimates in respect of following 3 villages have been prepared.

(1) Konganalli, (2) Yadenwadi, (3) Shiradwad.

(c) Estimates in respect of two villages *viz*,

(1) Konganalli, (2) Yadenwadi have been sanctioned.

(d) Work in respect of above two villages has been taken up.

(e) As and when the villages become technically and economically feasible.

(f) Yes, which Covers five of the twelve unelectrified villages.

LIST

Names of Unelectrified Villages in Sadalga, Assembly Constituency

1 Manakapur
2 Kasnal
3 Borgaonwadi
4 Donewadi
5 Hanchinal K. S.
6 Malikwad
7 Adi
8 Hunnargi
9 Mamdapur K. L.
10 Konganalli
11 Yadenwadi
12 Shiradwad

ಶ್ರೀ ಜೆ. ಎಸ್. ಅಮ್ಮಣ್ಣಾವರ್ .— ಯಡೇನವಾಡಿ ಗ್ರಾಮಕ್ಕೆ ವಿದ್ಯುಚ್ಛಕ್ತಿ ಕೊಡಲು ಎಸ್ಟಿಮೇಟುಗಳು ಆಗಿ ಅದಕ್ಕೆ ಒಪ್ಪಿಗೆ ಕೊಟ್ಟಿದ್ದರೂ ಯಡೇನವಾಡಿ ಗ್ರಾಮಕ್ಕೆ ಬದಲಾಗಿ ಯಡಾಚೀವಾಡಿ ಗ್ರಾಮದಲ್ಲಿ ಕೆಲಸ ನಡೆದು ಅಲ್ಲಿ ವಿದ್ಯುಚ್ಛಕ್ತಿ ಕೊಟ್ಟದ್ದು ಕಂಡಿದ್ದೇವೆ. ಇದರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಹೆಸರಿನ ಬದಲಾವಣೆಯಿಂದ ಏನಾದರೂ ಹೆಚ್ಚು ಕಡಮೆಯಾಗಿ ಬೇರೆ ಕಡೆ ಕೊಟ್ಟಿದ್ದರೆ ಅದರ ಬಗ್ಗೆ ತಕ್ಷಣ ಪರಿಶೀಲನೆ ಮಾಡಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜೆ. ಎಸ್. ಅಮ್ಮಣ್ಣಾವರ್ .— ಸೆಂಟ್ರಲ್ ಅಸಿಸ್ಟೆನ್ಸ್ ಯಾವ ಆಧಾರದ ಮೇಲೆ ಕೊಡುತ್ತಿದ್ದಾರೆಂಬುದನ್ನು ಹೇಳುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಬೇರೆ ರೂಲ್ಸ್ ಇವೆ. ಸೆಂಟ್ರಲ್ ಗವರ್ನಮೆಂಟ್ ಒಂದು ತಾಲ್ಲೂಕನ್ನು ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂನಲ್ಲಿ ತೆಗೆದುಕೊಳ್ಳುತ್ತಾರೆ. ಅವಕ್ಕೆ ಕೆಲವು ರೂಲ್ಸ್ ಇವೆ. 18 ಪರ್ಸೆಂಟ್‌ಗೆ ಮೇಲ್ಪಟ್ಟು ಉತ್ಪತ್ತಿ ಬರತಕ್ಕದ್ದನ್ನು ಎಲ್ಲಾ ನೋಡಿಕೊಂಡು ಸಾಲ ಕೊಟ್ಟು ಕೆಲಸ ಮಾಡುತ್ತಿದ್ದಾರೆ. ಅದರ ಪೈಕಿ ಮಾನ್ಯ ಸದಸ್ಯರ ಭಾಗದಲ್ಲಿ ಐದು ಗ್ರಾಮಗಳು ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂನಲ್ಲಿ ಬರುತ್ತವೆ.

Sri N. B. SIR DESAI.—May I know on what basis the technical and economic feasibility of the villages is fixed up ?

Sri H. M. CHANNABASAPPA .—I have issued a memorandum to all the members of this House a printed cyclostyled memorandum, setting out the various rules and procedures which will guide sanction of electricity to the villages. If the hon. member were to go through it, he will be able to know it.

CALLING ATTENTION TO MATTERS OF URGENT PUBLIC IMPORTANCE

(i) *re* : State Claim ofRs. 80 Crores through Sixth Finance Commission

ಶ್ರೀ ಎಸ್. ಬಂಗಾರಪ್ಪ (ಸೊರಬ).—ಆರನೇ ವಿತ್ತೀಯ ಆಯೋಗದ ವರದಿ ಪ್ರಕಾರ ರಾಜ್ಯಕ್ಕೆ ಬರಬೇಕಾಗಿರುವ 80 ಕೋಟಿ ರೂಪಾಯಿಗಳ ಬಗ್ಗೆ ಹಣಕಾಸಿನ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಬಜೆಟ್ ಭಾಷಣದಲ್ಲಿ ಆರನೇ ಹಣಕಾಸಿನ ಆಯೋಗದ ಬಗ್ಗೆ ಎಷ್ಟು ಹೇಳಬಹುದೋ ಅದನ್ನು ಹೇಳಿದ್ದೇನೆ. ಮತ್ತೆ ಮೈಸೂರು ಸರ್ಕಾರದ ಕೇಸ್ ಫೈನಾನ್ಸ್ ಕಮಿಷನ್ ಮುಂದೆ ಇಟ್ಟಿರುವ ಬಗ್ಗೆ ಒಂದು ಬುಕ್‌ಲೆಟ್ ಕೂಡ ಮಾಡಿದೆ. ಆದಕಾರಣ ನಾನು ಅದರ ಮೇಲೆ ಈ ಹೊತ್ತು ಹೆಚ್ಚು ಹೇಳುವ ಅವಶ್ಯಕತೆ ಇಲ್ಲ. ಆದರೂ ಕೂಡ ಸಂಕ್ಷಿಪ್ತವಾದ ಒಂದು ಹೇಳಿಕೆಯನ್ನು ಮಾಡಿದರೆ ಸಾಕು ಎಂದು ನನಗನ್ನಿಸುತ್ತದೆ.

I State as follows :—

1. In my presentation of Mysore's case to the Sixth Finance Commission, I had specifically pointed out that the gross inadequacy of the award of the last Finance Commission, was later accepted by implication and partly reflected in the ad-hoc financial assistance that was considered necessary to enable Mysore to fulfil its Fourth Plan outlays. I had also pointed out that if all the subsequent assistance had been part of the Fifth Finance Commission's Award, it would have been in the form of grant and not loan. The Hon'ble Member is requested to refer to Mysore's case to the Sixth Finance Commission as presented by me and to the Memorandum to the Sixth Finance Commission in which this matter has been dealt with in detail.

2. From this, it will be clear that the case of Mysore has been presented as effectively as possible, with a view to correct the inadequacy of the previous Commission's award. The recommendations of the Sixth Finance Commission will now have to be awaited.

10-00 A. M.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಇದರಲ್ಲಿ ತಾವು gross Inadequancy of the award of the last finance commission, was later accepted by implication ಎಂದು ಹೇಳಿದ್ದೀರಿ. ಇಂಪ್ಲಿಕೇಷನ್ ಯಾವರೀತಿ, ? ಕೇಂದ್ರಸರ್ಕಾರದವರು ಐದನೆಯ ಹಣಕಾಸಿನ ಆಯೋಗದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ ಎಂಬುದನ್ನು ಒಪ್ಪಿದ್ದಾರೆಯೋ ? ಅಡಹಾಕ್ ಅಸಿಸ್ಟೆನ್ಸ್ ಏನು ಕೊಟ್ಟಿದ್ದಾರೆ ಇದು ಐದನೆಯ ಹಣಕಾಸಿನ ಆಯೋಗದವರು ಕಡಿಮೆ ಅವಾರ್ಡ ಮಾಡಿದ್ದರಿಂದ ಅದನ್ನು ತುಂಬುವ ಸಲುವಾಗಿ ಆಡ್‌ಹಾಕ್ ಅಸಿಸ್ಟೆನ್ಸ್ ಕೊಟ್ಟಿದ್ದೇವೆ ಎಂದು ಹೇಳಿದಾರೆಯೋ ?

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಅದಕ್ಕೆ ನಾನು ಹೇಳಿದೆ, ಬೈ ಇಂಪ್ಲಿಕೇಷನ್ ಎಂದು, ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಪ್ಲಾನ್ ಅಸಿಸ್ಟೆನ್ಸ್, ನಾನ್ ಪ್ಲಾನ್ ಅಸಿಸ್ಟೆನ್ಸ್ ಕೊಡಬೇಕು ಎಂದು ಇದೆ. ಐದನೆಯ ಹಣಕಾಸಿನ ಆಯೋಗದವರು ಅವಾರ್ಡ ಮಾಡಿದ ನಂತರ ಪ್ಲಾನಿಂಗ್ ಕಮಿಷನ್‌ನವರು ಬೇರೆ ಬೇರೆ ರಾಜ್ಯದಲ್ಲಿ ಏನೇನು ಕೊರತೆ ಇದೆ, ಅದನ್ನು ಲೆಕ್ಕ ಹಾಕಿಕೊಂಡು by implication ಮೈಸೂರಿಗೆ ಫೈನಾನ್ಸ್ ಕಮಿಷನ್‌ನಿಂದ ಸಾಕಷ್ಟು ಅವಾರ್ಡ ಬಂದಿಲ್ಲ ಎಂದು ಭಾವಿಸಿ ಪ್ಲಾನ್ ಮತ್ತು ನಾನ್ ಪ್ಲಾನ್ ಔಟ್ಲೇಸ್‌ಗೆ ಸ್ಪೆಷಲ್ ಪ್ಲಾನ್ ಅಸಿಸ್ಟೆನ್ಸ್ ಕೊಡಬೇಕೆಂದು ಕೇಂದ್ರಸರ್ಕಾರಕ್ಕೆ ರಕಮಂಡ್ ಮಾಡಿದರು. ಆ ಮೊತ್ತ ಎಷ್ಟು ಎಂದರೆ 60 ಕೋಟಿ

ರೂಪಾಯಿಗಳು ಪ್ಲಾನ್ ಅಸಿಸ್ಟೆನ್ಸ್, ಮತ್ತು 45ಕೋಟಿ ರೂಪಾಯಿಗಳು ನಾನ್ ಪ್ಲಾನ್ ಅಸಿಸ್ಟೆನ್ಸ್. ಪ್ಲಾನ್ಅಸಿಸ್ಟೆನ್ಸ್ ಬೇರೆಯಾಯಿತು, ನಾನ್ ಪ್ಲಾನ್‌ಗೆ 45 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಇನ್ನು ಹೆಚ್ಚಿಗೆ ಬೇಕು ಎಂದು ಹೇಳುತ್ತಾ ಇದ್ದೇವೆ. ಓವರ್ ಡ್ರಾಫ್ಟ್ ಅನ್ನು ಕ್ಲಿಯರ್ ಮಾಡುವುದಕ್ಕೋಸ್ಕರ ಸ್ಪೆಷಲ್ ಆಗಿ ಅಕಾಮಡೇಷನ್ ಕೊಡಬೇಕಾಯಿತು. ಎಲ್ಲಾ ಲೆಕ್ಕ ಹಾಕಿದರೆ, ಸ್ಪೆಷಲ್ ಪ್ಲಾನ್. ನಾನ್ ಪ್ಲಾನ್ ಅಸಿಸ್ಟೆನ್ಸ್ ಓವರ್ ಡ್ರಾಫ್ಟ್ ಕ್ಲಿಯರ್ ಮಾಡುವುದಕ್ಕೋಸ್ಕರ ಏನು ಕೊಡಬೇಕಾಗಿತ್ತೋ ಅದು ನಮಗೆ ಐದನೆಯ ಫಿನಾನ್ಸ್ ಕಮಿಷನ್ ನಿಂದ ಬಂದಿದ್ದರೆ ಈ ರೀತಿ ಸ್ಪೆಷಲ್ ಅಡ್‌ಹಾಕ್ ಅಸಿಸ್ಟೆನ್ಸ್ ಬೇಕಾಗುತ್ತಾ ಇರಲಿಲ್ಲ. ಸ್ಪೆಷಲ್ ಅಸಿಸ್ಟೆನ್ಸ್ ಕೊಟ್ಟಿರುವುದರಿಂದ ಬೈ ಇಂಪ್ಲಿಕೇಷನ್ ಐದನೆಯ ಆಯೋಗದವರಿಂದ ಸಾಕಷ್ಟು ಹಣ ಬರಲಿಲ್ಲ. ನಾನ್ ಪ್ಲಾನ್ ಮತ್ತು ಪ್ಲಾನ್ ಎಕ್ಸ್‌ಪೆಂಡೀಚರ್ ಕೊರತೆ ಬರುವ ಸಂದರ್ಭವನ್ನು ಒಪ್ಪಿಕೊಂಡಿರುವುದು ಸ್ಪಷ್ಟವಾಗುವುದರಿಂದ ಅಸಿಸ್ಟೆನ್ಸ್ ಬೇಕಾಗುತ್ತದೆ, ಇಲ್ಲದಿದ್ದರೆ ಈ ರೀತಿ ಸ್ಪೆಷಲ್ ಅಸಿಸ್ಟೆನ್ಸ್ ಬೇಕಾಗುತ್ತಾ ಇರಲಿಲ್ಲ.

ಶ್ರೀ ಎಸ್ ಬಂಗಾರಪ್ಪ.—ಹಿಂದಿನ ಆರ್ಥಿಕ ಆಯೋಗದವರು ಅವಾರ್ಡ್ ಮಾಡುವುದರಲ್ಲಿ ರಾಜ್ಯಸರ್ಕಾರಕ್ಕೆ ಎಷ್ಟು ಕಡಮೆ ಅವಾರ್ಡ್ ಮಾಡಿದ್ದಾರೆ! ಎರಡನೆಯದು ಸ್ಪೆಷಲ್ ಅಸಿಸ್ಟೆನ್ಸ್ ಅಥವಾ ಗ್ರಾಂಟ್ಸ್ ಏನು ಇವೆ, ಅವನ್ನು ಯಾವುದೇ ಫಿನಾನ್ಸ್ ಕಮಿಷನ್ ಆದರೂ ಕೂಡ ರಾಜ್ಯಕ್ಕೆ ಎಷ್ಟು ಕೊಡಬೇಕೋ ಅಷ್ಟನ್ನು ಕಡಿಮೆ ಮಾಡಿದರೆ. ಕೊರತೆಗೋಸ್ಕರ ಸ್ಪೆಷಲ್ ಅಸಿಸ್ಟೆನ್ ಕೊಟ್ಟಿದಾರೆ ಎಂದಲ್ಲ. ಅವಾರ್ಡನ್ನು ಸರಿಯಾಗಿ ಕೊಡದೆ ಹೋದರೆ ಸ್ಪೆಷಲ್ ಅಸಿಸ್ಟೆನ್ಸ್ ಮತ್ತು ಗ್ರಾಂಟ್ ಇರುತ್ತಾ ಇರಲಿಲ್ಲವೇ! ಐದನೆಯ ಆಯೋಗದವರು ಕೊರತೆ ಮಾಡದೆ ಸರಿಯಾಗಿ ಅವಾರ್ಡ್ ಕೊಟ್ಟಿದ್ದಾರೆ ಎಂದು ಇಟ್ಟುಕೊಳ್ಳೋಣ. ಆಗ ಕೇಂದ್ರಸರ್ಕಾರದವರು ಸ್ಪೆಷಲ್ ಅಸಿಸ್ಟೆನ್ಸ್ ಮತ್ತು ಗ್ರಾಂಟ್ಸ್ ಅನ್ನು ಕೊಡುತ್ತಾ ಇರಲಿಲ್ಲವೆ ?

ಶ್ರೀ ಎಂ. ವೈ. ಘೋರ್ಪಡೆ.—ಸಾಕಷ್ಟು ಹಣ ಬಂದಿದ್ದರೆ, ನಾನ್ ಪ್ಲಾನ್ ನಮ್ಮ ರಾಜ್ಯದಲ್ಲಿ ಇಲ್ಲದೆ ಹೋಗಿದ್ದರೆ, ನಮ್ಮ ಲೆಕ್ಕದ ಪ್ರಕಾರ ಆಯೋಗದವರು ಕೊಟ್ಟಿದ್ದರೆ ಸ್ಪೆಷಲ್ ಅಸಿಸ್ಟೆನ್ಸ್‌ನ ಅವಶ್ಯಕತೆ ಇರುತ್ತಾ ಇರಲಿಲ್ಲ. ಫಿನಾನ್ಸ್ ಕಮಿಷನ್‌ನಿಂದ ಇಷ್ಟು ಕೋಟಿ ಬರಬೇಕಾಗಿತ್ತು, ಇಷ್ಟು ಕೋಟಿ ರೂಪಾಯಿಗಳ ಅನ್ಯಾಯವಾಗಿದೆ ಎಂದು ಹೇಳುವುದು ಬಹಳ ಕಷ್ಟ ಒಂದು ಮಾತು ಹೇಳಬಹುದು, ನಾಲ್ಕನೆಯ ಫಿನಾನ್ಸ ಕಮಿಷನ್ ನಿಂದ ಏನು ಹಣ ಬಂತೋ ಅದಕ್ಕಿಂದ 18 ಕೋಟಿ ರೂಪಾಯಿ ಕಡಿಮೆ ಐದನೆಯ ಫಿನಾನ್ಸ್ ಕಮಿಷನ್ ನವರಿಂದ ಹಣ ಬಂತು ನಾನ್ ಪ್ಲಾನ್ ಗ್ಯಾಪ ಮತ್ತು ಪ್ಲಾನ್ ಗ್ಯಾಪ್ ಬಂದರೂ ಕೂಡ ಅದರಲ್ಲಿ ಇನ್ ಅಡಿಕ್ವೆಸಿ ರಿಫ್ಲೆಕ್ಟ್ ಆಗುತ್ತದೆ. ಲೆಕ್ಕದ ಪ್ರಕಾರ ಫಿನಾನ್ಸ್ ಕಮಿಷನ್‌ನಿಂದ ಇಷ್ಟು ಬರಬೇಕಾಗಿತ್ತು, ಇಷ್ಟೇ ಕೋಟಿ ರೂಪಾಯಿ ಅನ್ಯಾಯವಾಗಿದೆ ಎಂದು ಹೇಳುವುದು ಬಹಳ ಕಷ್ಟ.

(ii) *re* : Demonstration by the post-graduate Students in Manasa Gangothri, Mysore

Sri N. S. GURUSIDDAPPA (Beligere).—Sir I call the attention of the Minister for Education to the demonstration by the post graduates students of Psychology Department in Manasa Gangothri. Mysore

Sri A. R. BADARINARAYANA (Minister for Education).—I wish to make a statement on this behalf. About 50 students consisting of 25 boys and 25 girls studying in the Post-Graduate Course in Manasagangotri, majority of whom belong to the Post-Graduate Department of Psychology submitted on 29-1-1973 a petition to the Registrar alleging that Sri Parashivamurthy, Lecturer in Psychology in the Post-Graduate Department of Psychology conducted himself with a lady student in a manner that was not benefitting. Among the lady students Smt. K. Rajalakshmi, Smt. Shamantha Kamani and Smt. Kalyani Nair submitted individual representations to the effect that Sri Parashivamurthy had behaved in a very unpleasant manner with these lady students.

(SRI A. R. BADARINARAYANA)

2. The students desired that immediate action should be taken against the Teacher and also called on the Vice-Chanceller at his residence and submitted a similar petition and the Vice-Chancellor assured the students that he would initiate immediate necessary action in the matter.

3. On 30-1-1973 the students went on strike. The Professor and Head of the Department of Psychology called for the explanation of Sri Parashivamurthy on the charges made against him by the students and also advised Sri Parashivamurthy that he should not take any classes in the Post-Graduate Department and he was also not entrusted with any examination work.

4. Sri Parashivamurthy applied for a month's leave from 31-1-1973 and he is now undergoing treatment in the Krishnarajendra Hospital. Since the students started a Hunger Strike on 1-2-1973 commencing from 8-00 A. M. the Head of the Department of Psychology and the Dean of Students Welfare met the students on Hunger Strike and after discussion with them and subsequent discussion with the Registrar and the Vice-Chancellor orders were issued transferring Sri Parashivamurthy to Maharaja's College after which the Students called off the strike.

5. But on 5-2-1973 there was a counter agitation of other students of the Post-Graduate Department urging for retransferring of Sri Parashivamurthy to Manasagangotri and to institute a through enquiry. On 6-2-1973 a group of students who originally started their agitation resumed their hunger strike in the morning in order to impress upon the University Authorities that they should not retract from the original decision. An emergent meeting of the University Syndicate was held on 9 2-1973 and the Syndicate has constituted an Enquiry Committee consisting of 5 Members of the Syndicate. The Enquiry Committee is continuing its deliberations and a final decision in this behalf is awaited. The situation is peaceful and normal.

ಶ್ರೀ ಎನ್. ಎಸ್. ಗುರುಸಿದ್ದಪ್ಪ.— ಎನ್‌ಕ್ವೈಯರಿ ರಿಪೋರ್ಟ್ ಬಂದ ಮೇಲೆ ಈ ಸಭೆಯ ಗಮನಕ್ಕೆ ತರುತ್ತೀರಾ, ಅದರಲ್ಲಿ ಯಾರಿಗಾದರೂ ಅನ್ಯಾಯವಾಗಿದ್ದರೆ ಸರಿಪಡಿಸುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಎನ್‌ಕ್ವಯರಿ ರಿಪೋರ್ಟ್ ಬಂದಮೇಲೆ ವಿಮರ್ಶೆ ಮಾಡಿ ನ್ಯಾಯವನ್ನು ಮಾಡುವುದಕ್ಕೆ ಏನೂ ಅಭ್ಯಂತರವಿಲ್ಲ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಈಚೆಗೆ ಮೈಸೂರು ಯೂನಿವರ್ಸಿಟಿಯಲ್ಲಿ ಸ್ವಜಾತಿ, ಜಾತೀಯತೆ ಮತ್ತು ಗುಂಪುಗಾರಿಕೆ ವಿಪರೀತವಾಗಿ ಬೆಳೆಯುತ್ತಿದೆ. ಅದನ್ನು ಏನಾದರೂ ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ಎಜಿಟೇಷನ್ ಮತ್ತು ಕೌಂಟರ್ ಎಜಿಟೇಷನ್ ನೋಡಿದರೆ ನಿಜವಾಗಿ ಗುಂಪುಗಾರಿಕೆ ಕಾಣುತ್ತದೆ. ಅಂಥಾದ್ದು ಏನಾದರೂ ಸರ್ಕಾರದ ಗಮನಕ್ಕೆ ತಂದರೆ, ಅಂಥವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಸರಿಪಡಿಸುತ್ತೇವೆ, ಗುಂಪುಗಾರಿಕೆ ಎಂದು ಹೇಳುವುದನ್ನು ಒಪ್ಪುವುದಿಲ್ಲ. Disgruntled and disatisfied people are there everywhere. They only form themselves into opposition camps and create this situation.

ಶ್ರೀ ಎಚ್. ಡಿ. ದೇವೇಗೌಡ.— ಏನು ಘಟನೆ ನಡೆದಿದೆ ಆ ಘಟನೆ ವಿಷಯದ ಬಗ್ಗೆ ನಾನು ಅದರ ಮೆರಿಟ್ಸ್ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇದು ದುರ್ದೈವದ ಘಟನೆ. ವಿಚಾರಣೆ ಮಾಡುವುದಕ್ಕೆ ಈ ಕಮಿಟಿ ಏನು ಕಾನ್ಸಿಟ್ಯೂಟ್ ಮಾಡಿದ್ದಾರೆ ಇದರ ಬಗ್ಗೆ ಯಾವ ಭಾವನೆಯನ್ನೂ ಎಕ್ಸ್‌ಪ್ರೆಸ್ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಒಂದೇ ಕೋಮಿಗೆ ಸೇರಿದವರು ಈ ಕಮಿಟಿಯಲ್ಲಿದ್ದಾರೆ ಎಂದು ಒಂದು ಕಡೆ ಅಸಮಾಧಾನ ಬೆಳೆಯುತ್ತಿದೆ ಎನ್ನುವ ಮಾತನ್ನು ನಾನು ಕೇಳಿದ್ದೇನೆ. ಏತಕ್ಕೆ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ ಎಂದರೆ ಅಲ್ಲಿ ಜಾತಿಜಾತಿಗಳಲ್ಲಿ ವೈಮನಸ್ಸು ಬೆಳೆಯತಕ್ಕದ್ದಕ್ಕೆ ಕಲವು ಹಿತಾಸಕ್ತಿಗಳು ಕೆಲಸ ಮಾಡುತ್ತಿವೆ. ಅದುದರಿಂದ ಎನ್‌ಕ್ವೈರಿ ಆದ ಮೇಲೆ ಯಾರಿಗೂ ಇದರಿಂದ ಅನ್ಯಾಯವಾಗಬಾರದು; ಯಾವುದೇ ತರಹವಾದ ಪ್ರಚೋದನೆಗೂ ಯಾವರೀತಿಯಾದ ಲೋಪದೋಷಗಳಿಗೂ ಅವಕಾಶವಾಗಬಾರದು. ದಯಮಾಡಿ ಸರ್ಕಾರ ಎಲ್ಲಾ ರೀತಿಯ ಮುಂಜಾಗ್ರತೆ ಕ್ರಮ ವಹಿಸಿ ನ್ಯಾಯ ದೊರಕಿಸಲಿಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ನಂಬಿದ್ದೇನೆ. ಈ ಎನ್‌ಕ್ವೈರಿ ಕಮಿಟಿಯಲ್ಲಿ ಒಂದೇ ವರ್ಗದವರು ಇದ್ದಾರೆಂದು ನನಗೆ ರಿಪೋರ್ಟ್ ಬಂದಿದೆ. ಈಗ ಯಾವುದೇ ಜಾತಿಯ ಹೆಸರು ಹೇಳುವುದು ಬೇಡ. ಇದರಿಂದ ಕೆಟ್ಟ ಪರಿಣಾಮವಾಗಬಾರದು.

Sri A. R. BADARINARAYANA.—I perfectly agree with the Hon. Leader of the Opposition that we should take a very objective view of the whole matter. Government is very deeply interested in seeing that no innocent person is put into inconvenience or trouble. In the first instance, it is the University that has to take the action and the University has referred it to the Syndicate. The Syndicate has referred it to a Sub-Committee. We cannot pre-judge what action we should take. And, if it is found that the Syndicate Members of the University have taken a personal attitude, I think the Government will interfere and see that justice is done.

Providing a debate on the Draft State fifth five year Plan

ಶ್ರೀ ಎಚ್. ಡಿ. ದೇವೇಗೌಡ.—ಫೈನಾನ್ಸ್ ಮಿನಿಸ್ಟರು ಈ ಸಭೆಯಲ್ಲಿ ಇರುವುದರಿಂದ 5ನೇ ಪ್ಲಾನ್‌ನ ಏನು ಡ್ರಾಫ್ಟ್ ರಿಪೋರ್ಟ್ ಇದೆ ಅದನ್ನು ಚರ್ಚೆ ಮಾಡುವುದಕ್ಕೆ ಸಭೆಯಲ್ಲಿ ಅವಕಾಶ ಮಾಡಿಕೊಡಬೇಕು ಎಂದು ಕೇಳುತ್ತೇನೆ. ಬಹುಶಃ ಅವರು ಒಪ್ಪಿಕೊಳ್ಳುತ್ತಾರೆಂದು ನನ್ನ ಭಾವನೆ.

Sri M. Y. GHORPADE.—The suggestion has come all of a sudden. The position regarding the 5th Plan is that the detailed plan is under preparation. So far as the resources are concerned, this will be known only towards the end of the year. As the Hon. Leader of the Opposition knows, the Finance Commission is expected to give its award some time in October and then we expect to have discussion at the Planning Commission level in the last quarter of this year. And, the 5th Plan will be really finalised and synchronised from the next year. Is it not so? So, I think the right time to consider this suggestion would be after the Finance Commission gives its award because the time-table for the actual finalisation of the 5th Plan depends not only on the 6th finance Commission's award but the finalisation of the All-India plan. Let us wait for a few more months when the picture becomes clear and at that time we will consider the suggestion. I think the Hon. Leader of the Opposition would not expect me to make a commitment at this stage.

Sri M. S. KRISHNAN.—The only point is that it is not only a question of finding resources for the 5th Plan and finalisation of the details which you are already trying to do. but, I think the approach to the 5th Plan. Wha exactly is the approch to the 5th Plan that the Mysore Government has got? This is a matter which has already been discussed by the various State Governments. Here also last time when I asked a question something was given. The entire House was in the knowledge of it. A discussion on that might be useful now, so that on the basis of that discussion, a proper approach could be taken regarding the plan and the position could be worked out.

Sri M. Y. GHORPADE.—As the hon. Member knows, in plan documents, there is no attempt to shut out discussion. As a matter of fact, Governments benefit by such public discussion of plan documents. That is the whole idea with which the draft paper plan has been issued by the Planning Commission. Now of course, broad indications have been given. In the absence of detailed knowledge regarding resources we can at this stage, only go on a broad basis. For instance, one indication - that is a very rough indication—would be to have a double sized plan. It is on this basis that sometime earlier, I had indicated what the magnitude of the Mysore Plan is likely to be from the point of view of our needs. I said that it may even be of the order of about a thousand crores. If we draw up a plan based opon our needs and the tempo of development that we would like to achieve, once we make such a projection, it will have to be tempered taking nto account the actuality regarding resources. Therefore, as soon as this exercise is over,—we have already some sort of exercise being done—; a detailed exorcise is being done there; after a few months, we can consider whether discussion in this House could be held regarding the broad plan objectives, so for as Mysore is concerned. Subject to this very important rider that the final Plan will have to be fitted into the resources frame-work that will emerge after the VIth Finance Commission gives its award subject to that rider we can discuss the broad objectives and directions and the aproach. There is no difficulty about it.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರೊಜೆಕ್ಟ್ ಟುವರ್ಡ್ಸ್ ದಿ ಪೀಪಲ್ ಪ್ಲಾನ್ ಎನ್ನುವ ತತ್ವವನ್ನು ಒಪ್ಪಿಕೊಂಡು ಹೇಳುತ್ತಿದ್ದಾರೆ, ಆ ದೃಷ್ಟಿಯಿಂದ 5ನೇ ಪಂಚವಾರ್ಷಿಕ ಯೋಜನೆ ಸಿದ್ಧಪಡಿಸುವ ಮುನ್ನ ನಾವು ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಏನು ಸಲಹೆಗಳನ್ನು ನಾವು ಕೊಡಬೇಕು ಎನ್ನುವುದನ್ನು ಸ್ವಲ್ಪ ಚರ್ಚೆಮಾಡಿ ವಿಚಾರಮಾಡಿ ಸಂಗ್ರಹಣೆ ಆದಂಥ ವಿಚಾರದ ಆಧಾರದ ಮೇಲೆ ಯೋಜನೆ ಸಿದ್ಧಪಡಿಸಿದರೆ ಪೀಪಲ್ ಪ್ಲಾನ್ ಮಾಡುವುದಕ್ಕೆ ಅಂತಿಮವಾಗಿ ಸಾಧ್ಯವಾಗಬಹುದು. ಇಂತಹ ಒಂದು ಅಂತಿಮವಾದ ಯೋಜನೆ ಸಿದ್ಧಪಡಿಸುವುದಕ್ಕೆ ಮುಂಚೆ ಇಲ್ಲಿ ಚರ್ಚೆಗೆ ಸಾಕಷ್ಟು ಅವಕಾಶ ಮಾಡಿಕೊಡಬೇಕು, ಮತ್ತು ಇಲ್ಲಿ ಬಂದ ಎಲ್ಲಾ ಸಲಹೆಗಳನ್ನು ಕ್ರೋಢೀಕರಿಸಿ ಈ ಯೋಜನೆ ಸಿದ್ಧಪಡಿಸುವುದಕ್ಕೆ ಅವಕಾಶಮಾಡಿಕೊಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ನಮ್ಮ ಉದ್ದಿಶ್ಯ ಕೂಡ ಹಾಗೆ ಇದೆ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಸ್ವಲ್ಪ ಇದರ ಬಗ್ಗೆ ಚರ್ಚೆಮಾಡಬೇಕು, ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕು ಈ ಕಾರ್ಯಗಳನ್ನು ರೂಢಿಸಿ ಪೀಪಲ್ ಪ್ಲಾನ್ ಎಂದು ಏನು ಹೇಳುತ್ತಾ ಬಂದಿದ್ದೇವೆ ಆ ರೀತಿ ಮಾಡಲು ಅವಕಾಶ ಕಡಿಮೆ ಇದ್ದರೂ ಕೂಡ ನಾವು ಪ್ರಯತ್ನ

ಮಾಡುತ್ತಿದ್ದೇವೆ. ಉದಾಹರಣೆಗೆ ಬೇಸಿಕ್ ಅಮೆನಿಟೀಸ್ ಏನು ಇವೆ ಆ ಬೇಸಿಕ್ ಅಮೆನಿಟೀಸ್ ತಾಲ್ಲೂಕು ಮಟ್ಟದಲ್ಲಿ ಇಂತಿಷ್ಟು ಎಂದು ಮಾಡಬೇಕಾಗುತ್ತದೆ. ಯಾವ ತಾಲ್ಲೂಕು ಮಟ್ಟದಲ್ಲಿ ಬೇಸಿಕ್ ಅಮೇನಿಟೀಸ್ ಎಷ್ಟರಮಟ್ಟಿಗೆ ಇದೆ ಅದನ್ನು ನೋಡಿಕೊಂಡು ಅದನ್ನು ಉತ್ತಮಪಡಿಸುವ ದೃಷ್ಟಿಯಿಂದ ನಾವು ಹೆಜ್ಜೆ ಇಡಬೇಕಾಗುತ್ತದೆ. ಈಗಾಗಲೇ ಒಂದು ಪ್ರೀಫಾರ್ಮ್ ರೀತಿಯಲ್ಲಿ ಮಾಡುತ್ತಾ ಇದ್ದೇವೆ. ತಾಲ್ಲೂಕು ಮಟ್ಟಕ್ಕೆ ಕೆಲವು ಬೇಸಿಕ್ ಅಮೆನಿಟೀಸ್ ಎಂದರೆ ಎಂಪ್ಲಾಯ್ಮೆಂಟ್ ದೃಷ್ಟಿಯಿಂದ ಅಲ್ಲಿ ಕಷ್ಟದ ಪರಿಸ್ಥಿತಿ ಏನು ಇದೆ ಅದನ್ನು ತಿಳಿದುಕೊಂಡು ಸರಿಮಾಡಬೇಕು. ಅದೇ ರೀತಿ ಬೇಸಿಕ್ ಅಮೆನಿಟೀಸ್ ಇರಿಗೇಷನ್ ಬಗ್ಗೆ ಎಷ್ಟಿದೆ. ಅದನ್ನು ಎಷ್ಟರಮಟ್ಟಿಗೆ ಜಾಸ್ತಿಮಾಡಬೇಕು ಮತ್ತು ಪವರ್ ಎಷ್ಟಿದೆ ಅದನ್ನು ಎಷ್ಟರಮಟ್ಟಿಗೆ ಹೆಚ್ಚಿನ ರೀತಿಯಲ್ಲಿ ಒದಗಿಸಬೇಕು ಎಂಬ ವಿಷಯಗಳು ಇವೆ. ಇದೆಲ್ಲಾ ಹಣಕಾಸಿನ ಮೇಲೆ ಅವಲಂಬನೆ ಆಗುತ್ತದೆ.

ಎಂಪ್ಲಾಯ್ಮೆಂಟ್ ಎಂದರೆ ಸುಲಭವಾಗಿ ಎಂಪ್ಲಾಯ್ಮೆಂಟ್ ಎಕ್ಸ್ಛೇಂಜ್ ಕಡೆ ನೋಡುತ್ತಾರೆ. ಅದು ಒಂದು ಕಡೆ. ಇಲ್ಲಿ ಅನ್ಎಂಪ್ಲಾಯ್ಮೆಂಟ್ ಎಂದರೆ ಬೇರೆ ಬೇರೆ ತರಹ ಅನ್ ಎಂಪ್ಲಾಯ್ಮೆಂಟ್ ಇರುತ್ತದೆ, ಅನ್ಎಂಪ್ಲಾಯ್ಮೆಂಟ್ ಎಂದರೆ ಒಂದೇ ರೀತಿ ಇಲ್ಲ. ಈಗ ಕ್ಷಾಮ ಪರಿಸ್ಥಿತಿ ಇರುವ ಕಡೆ ಜನಗಳಿಗೆ ಕೆಲಸ ಇಲ್ಲ. ಅದೂ ಒಂದು ರೀತಿ ಅನ್ ಎಂಪ್ಲಾಯ್ಮೆಂಟ್. ಕ್ಷಾಮ ಇರುವ ಕಡೆ ಅದನ್ನು ತಡೆಗಟ್ಟಲಿಕ್ಕೆ, ಅದನ್ನು ಸರಿಪಡಿಸುವ ದೃಷ್ಟಿಯಿಂದ ಸಾಕಷ್ಟು ಕೆಲಸವನ್ನು ಎಷ್ಟು ಕೊಡಬೇಕಾಗುತ್ತದೆ ಎಂದು ನೋಡಬೇಕಾಗುತ್ತದೆ. ಇದು ಒಂದು ತರಹ. ಟೆಕ್ನಿಕಲ್ ಅನ್ಎಂಪ್ಲಾಯ್ಮೆಂಟ್ ಒಂದು ತರಹ. ಸಾಯಿಲ್ ಕನ್ಸರ್ವೇಷನ್‌ಗೋಸ್ಕರ ಎಷ್ಟೋಜನ ಡಿಪ್ಲೊಮಾ ಹೋಲ್ಡರ್ಸ್ ಬೇಕು, 200—250 ರೂಪಾಯಿ ಕೊಡುತ್ತೇವೆಂದರೂ ಕೂಡ ಸಾಕಷ್ಟು ಜನ ಸಕಾಲಕ್ಕೆ ಸಿಕ್ಕಲಿಲ್ಲ. ಅದರ ಜೊತೆಗೆ ಎಜ್ಯುಕೇಟೆಡ್ ಅನ್ ಎಂಪ್ಲಾಯ್ಡ್ ಇದ್ದಾರೆ. ಇದನ್ನು ಕೂಡ ತಿಳಿದುಕೊಳ್ಳಬೇಕಾಗುತ್ತವೆ. ಈ ದಿಕ್ಕಿನಲ್ಲಿ ನಾನು ಯೋಚನೆ ಮಾಡುತ್ತಿದ್ದೇನೆ. ಅನ್ ಎಂಪ್ಲಾಯ್ಮೆಂಟ್ ಎಂದರೆ ಅದು ಯಾವ ಯಾವ ತರಹ ಅನ್ ಎಂಪ್ಲಾಯ್ಮೆಂಟ್ ? ತಾಲ್ಲೂಕು ಮಟ್ಟದಲ್ಲಿದೆ, ಏನೊಂದು ಚಿತ್ರವಿದೆ, ಅದಕ್ಕಿಂತ ಸ್ಪಷ್ಟವಾದ ಚಿತ್ರವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಆ ನಂತರ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂಥ ಅನ್ಎಂಪ್ಲಾಯ್ಮೆಂಟಿನ ನಿವಾರಣೆಗೆ, ಮಾಡುವ ಪ್ರಯತ್ನಗಳ ಬಗ್ಗೆ ವಿವರಗಳನ್ನು ಕೊಡಬೇಕಾಗುತ್ತದೆ. ಅದೇ ರೀತಿ ಬೇಸಿಕ್ ಅಮೆನಿಟೀಸ್ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸ್ವಲ್ಪ ಚರ್ಚೆಮಾಡಿ ತಿಳಿದುಕೊಂಡು ಐದನೆಯ ಯೋಜನೆಯಲ್ಲಿ ಅದಕ್ಕೂ ಅವಕಾಶವನ್ನು ಕಲ್ಪಿಸಿ ಗ್ರಾಮಾಂತರ ಪ್ರದೇಶಗಳನ್ನು ರಿಯಲಿಸ್ಟಿಕ್ ಆಗಿ ಮಾಡಲಕ್ಕೆ ಸಾಧ್ಯ. ಇದೂ ಸರ್ಕಾರಕ್ಕೆ ಗೊತ್ತಿದೆ. ನಮಗೆ ಬಹಳ ಕಾಲಾವಕಾಶವಿದೆ. ಈ ಅವಧಿಯಲ್ಲಿ ಆ ದಿಕ್ಕಿನಲ್ಲಿ ಏನು ಮಾಡಲಿಕ್ಕೆ ಸಾಧ್ಯ ಎಂದು ಯೋಚನೆಮಾಡಿ ಆ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತದೆ.

Disturbances at the H. M. T. Bangalore

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—11-12-1972ರಲ್ಲಿ ರೂಲ್ 48ರ ಪ್ರಕಾರ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೇಳಿದ್ದೆ. ಅದಕ್ಕೆ ಅವಕಾಶ ಸಿಕ್ಕಲಿಲ್ಲ ಹಾಗೆಯೇ ಮೊನ್ನೆ 15ನೇ ತಾರೀಖು ಎಚ್. ಎಂ. ಟಿ. ಯಲ್ಲಿ ರಾಷ್ಟ್ರ ನಾಯಕರ ಭಾವಚಿತ್ರಗಳನ್ನು ಸುಟ್ಟು ಹಾಕಿ ಗಲಭೆ ನಡೆದಿದೆ, ಆ ವಿಚಾರ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಅದರ ಬಗ್ಗೆ ಕೂಡ ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು.— ಅದನ್ನು ನಾನು ನೋಡುತ್ತೇನೆ.

Reported Scuffle in the Meeting of the BCC on 16-3-1973

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಅಧ್ಯಕ್ಷರೇ, ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ನಗರಪಿತೃಗಳ ನಡುವೆ ಹೊಡೆದಾಟ, ಪರಸ್ಪರ ಹಲ್ಲೆ, ಮೈಕ್ ನಾಶ- ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಈ ರೀತಿಯ ಅವ್ಯವಸ್ಥೆಗಳು ಆಗುತ್ತಿವೆ. ಕಾಂಗ್ರೆಸ್ ಪಕ್ಷದವರೇ ಅಲ್ಲಿ ಆಡಳಿತ ನಡೆಸುವ ಪಕ್ಷವಾಗಿದ್ದುಕೊಂಡು ಕಾಂಗ್ರೆಸ್ ಸದಸ್ಯರು ಬಾಕಿಯವರ ಮೇಲೆ ಬಿದ್ದು ಹಲ್ಲೆ ಮಾಡುತ್ತಿರುತ್ತಾರೆ. ನನ್ನ ಅನುಭವದಲ್ಲಿ ಹಿಂದೆ...

ಅಧ್ಯಕ್ಷರು.—ಮಾನ್ಯ ಸದಸ್ಯರ ನೋಟೀಸ್ ಈಗ ಬಂದಿದೆ, ಸಭೆಯಲ್ಲಿ ಮಂತ್ರಿಗಳಿಲ್ಲ. ಅವರು ಬರಲಿ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಗಲಾಟೆ ನಡೆದಿದೆ, ಹೊಡೆದಿದ್ದಾರೆ, ಬಡಿದಿದ್ದಾರೆ ಎಂದು ದಪ್ಪ ಅಕ್ಷರಗಳಲ್ಲಿ ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮೇಯರ್ ಅವರ ಮುಂದೆಯೇ ಈ ರೀತಿ ಆಗುತ್ತಿದೆ. ವಿರೋಧಪಕ್ಷದವರು ಇದ್ದರೂ ಯಾರೂ ಹೇಳುವುದಿಲ್ಲ, ಕೇಳುವುದಿಲ್ಲ. ಸರ್ಕಾರ ಅವರ ಪಕ್ಷದ ಕೈಯಲ್ಲಿಯೇ ಇದೆ, ಏನು ತಪ್ಪು ಮಾಡಿದರೂ ನಡೆದುಹೋಗುತ್ತದೆ ಎಂದು ವಿರೋಧ ಪಕ್ಷದವರು ಹೇಳುವುದನ್ನು ಕೇಳುವುದೇ ಇಲ್ಲ. ಹಾಗೆ ಮಾಡುವುದು ಸರಿಯಲ್ಲ ಎಂದು ಹೇಳುವುದಕ್ಕೆ ಹೋದರೆ ತಕ್ಷಣ ಕಾಂಗ್ರೆಸ್ ಸದಸ್ಯರು ಬಂದು ಕತ್ತಿನ ಮೇಲೆ ಏಟು ಹೊಡೆದು ಹಲ್ಲೆ ಮಾಡಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಕಾರ್ಪೋರೇಷನ್ ಒಂದು ಸ್ವತಂತ್ರವಾದ ಸಂಸ್ಥೆ, ಅಲ್ಲಿ ಕಾರ್ಪೋರೇಟರುಗಳಾಗಿರುವವರು ಕೆಲವರು ಇಲ್ಲಿಯೂ ಸದಸ್ಯರಾಗಿದ್ದಾರೆ. ನಡೆದ ವಿಚಾರಗಳ ಬಗ್ಗೆ ಇಲ್ಲಿ ಮಾತನಾಡುವುದು, ಇಲ್ಲಿ ನಡೆದುದರ ಬಗ್ಗೆ ಅಲ್ಲಿ ಹೋಗಿ ಮಾತನಾಡುವುದು ಹೀಗೆ ಇರುವುದರಿಂದ ಎಷ್ಟರಮಟ್ಟಿಗೆ ಈ ಬಗ್ಗೆ ಪ್ರೊಟೆಕ್ಷನ್ ಇರಬೇಕು ಎನ್ನುವುದರ ಬಗ್ಗೆ ವಿವರವಾದ ರೂಲಿಂಗ್ ಕೊಡಬೇಕು ಎಂದು ಉಪನಾಯಕರು ನನ್ನನ್ನು ಕೇಳಿದ್ದಾರೆ. ಈ ಅಧಿವೇಶನದಲ್ಲಿಯೇ ನಾನು ಅದರ ಬಗ್ಗೆ ರೂಲಿಂಗ್ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ನಗರ ಕಾರ್ಪೋರೇಷನ್‌ನಲ್ಲಾಗಲೀ, ಮುನಿಸಿಪಾಲಿಟಿಗಳಲ್ಲಾಗಲೀ, ತಾಲ್ಲೂಕು ಬೋರ್ಡುಗಳಲ್ಲಾಗಲೀ, ವಿರೋಧ ಪಕ್ಷದ ಸದಸ್ಯರು ಉಳಿಯುವುದಕ್ಕೆ ಅಗುತ್ತಿಲ್ಲ. ಅಷ್ಟು ಹದ್ದುಮೀರಿ ವರ್ತಿಸುತ್ತಿದ್ದಾರೆ.

ಅಧ್ಯಕ್ಷರು.—ಒಂದಕ್ಕೊಂದಕ್ಕೆ ಸಂಬಂಧ ಮಾಡಬೇಡಿ.

ಶ್ರೀ ವಾಟಾಳ್ ನಾಗಜ್.—ಬೆಂಗಳೂರು ನಗರ ಕಾರ್ಪೋರೇಷನ್ ವಿರೋಧ ಪ ದ ಸದಸ್ಯರಿಗೆ ರಕ್ಷಣೆ ಇಲ್ಲ. ಸರ್ಕಾರ ರಕ್ಷಣೆ ಕೊಡದೆ ಇದ್ದರೆ ನಾವು ಯಾರೂ ಉಳಿಯುವುದಕ್ಕಾಗುವುದಿಲ್ಲ. ನಾವು ಸಭೆಗಳಿಗೆ ಹೋಗಬೇಕೇ ಬೇಡವೇ ಎನ್ನುವ ಪರಿಸ್ಥಿತಿ ಬಂದಿದೆ. ಮಾನ್ಯ ಮಂತ್ರಿಗಳಿಲ್ಲದೇ ಇದ್ದರೂ ಉಪಸಭಾ ನಾಯಕರು ಸಭೆಯಲ್ಲಿದ್ದಾರೆ, ಅವರು ಒಂದು ಹೇಳಿಕೆ ಕೊಡಬಹುದು,

ಅಧ್ಯಕ್ಷರು.—ಮಂತ್ರಿಗಳು ಈಗ ಇಲ್ಲ, ಅವರು ಬಂದ ನಂತರ ವಿವರಗಳನ್ನು ತಿಳಿದುಕೊಂಡು ಹೇಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಸಂಬಂಧಪಟ್ಟ ಮಂತ್ರಿಗಳು ವಿವರಗಳನ್ನು ಕೊಡಬೇಕು, ಕೊಟ್ಟರೆ ಸಂತೋಷ. ನಮಗೆ ತಿಳಿದಮಟ್ಟಿಗೆ ಬೆಂಗಳೂರು ನಗರ ಪ್ರದೇಶದಲ್ಲಿ ಯಾವುದೋ ರಸ್ತೆಗೆ ಸಿಮೆಂಟ್ ಕಾಂಕ್ರಿಟ್ ಹಾಕಬೇಕು ಎನ್ನುವ ವಿಷಯ ಚರ್ಚೆ ನಡೆದಾಗ ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ಯಾವುದೇ ವಿಷಯದಲ್ಲಿ ಆಡಳಿತ ಪ ಮತ್ತು ವಿರೋಧಪಕ್ಷಗಳು ಚರ್ಚೆ ಮಾಡಿ ಒಂದು ಇತ್ಯರ್ಥ ಮಾಡಬೇಕು. ಚರ್ಚೆ ಮಾಡಿ ಇತ್ಯರ್ಥ ಮಾಡುವುದಕ್ಕೆ ಬದಲು ಚರ್ಚೆ ಮಾಡುವುದಕ್ಕೆ ಎದ್ದು ನಿಂತವರನ್ನೇ ಹೊಡೆದರು.

ಅಧ್ಯಕ್ಷರು.—ನೋಟಿಸ್ ನನ್ನ ಹತ್ತಿರ ಬಂದಿದೆ, ಅದನ್ನು ಇನ್ನೂ ಸರ್ಕಾರಕ್ಕೆ ಕಳುಹಿಸಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀ ವಾಟಾಳ್ ನಾಗರಾಜ್ ಅವರು ಮತ್ತು ಟಿ.ಆರ್. ಶಾಮಣ್ಣನವರು ಆ ದಿನ ಸಭೆಯಲ್ಲಿ ಇರಲಿಲ್ಲ. ಇದ್ದಿದ್ದರೆ ಅವರ ತಲೆಬುರುಡೆ ಒಡೆದು ಅಲ್ಲಿ ಏನು ಪರಿಸ್ಥಿತಿಯಾಗುತ್ತಿತ್ತೋ ಗೊತ್ತಿಲ್ಲ. ಕಾರ್ಪೋರೇಷನ್ ನಡವಳಿಕೆಗಳು ನಗೆಪಾಟಲಾಗಿದೆ. ಗುರುತರವಾದ ಆಪಾದನೆಗಳು ಇವೆ. ಆದಕಾರಣ ಮಾನ್ಯ ಮಂತ್ರಿಗಳು ಸರಿಯಾದ ಹೇಳಿಕೆ ಕೊಡಬೇಕು.

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಬೆಳಿಗ್ಗೆ ನೋಡಿದೆ. ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಹೇಳುವುದನ್ನೆಲ್ಲ ನಾನು ಪೂರ್ತಿಯಾಗಿ ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಒಬ್ಬರ ಮೇಲೆ ಮತ್ತೊಬ್ಬರು ಉತ್ಪ್ರೇಕ್ಷೆ ಮಾಡಿ ಹೇಳತಕ್ಕ ವಿಷಯಗಳು ಇರುವುದರಿಂದ ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಡುವುದಕ್ಕೆ ಮೊದಲು

10-30 A. M.

ಮೇಯರ್ ಅವರನ್ನೂ ಕರೆಸಿ, ಪಾರ್ಟಿ ಅಧ್ಯಕ್ಷರನ್ನೂ ಕರೆಸಿ ಪೂರ್ಣ ವಿವರಗಳನ್ನು ಪಡೆದು ನಂತರ ಸರ್ಕಾರ ಹೇಳಿಕೆ ನೀಡುವುದು ಸೂಕ್ತ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ಹಾಗೆಯೇ ಕಾರ್ಪೊರೇಷನ್ ಅಧ್ಯಕ್ಷರನ್ನೂ ಕರೆಸಿ, ಅವರ ಹೇಳಿಕೆಯನ್ನು ತಗೆದುಕೊಳ್ಳಿ. ಟೇಪ್ ರಿಕಾರ್ಡ್‌ನ್ನೂ ತರಿಸಿ, ಸಂಪೂರ್ಣವಾದ ವಿವರಗಳನ್ನು ತರಿಸಿಕೊಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗೆಯೇ ವಿರೋಧ ಪಕ್ಷದವರನ್ನೂ ಕೂಡ ಕರೆಸಬೇಕು. ಅವರ ಹೇಳಿಕೆಯನ್ನೂ ಕೂಡ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೇ, ನಿನ್ನೆ ನಡೆದಿರತಕ್ಕಂಥ ಘಟನೆ ಈ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಹೊಂದಿರತಕ್ಕಂಥ ಜನಕ್ಕೆ ಒಂದು ರೀತಿ ಅಸಮಾಧಾನ ತಂದಿರತಕ್ಕಂಥ ಘಟನೆಯಾಗಿದೆ. ಲೋಕಸಭೆಯಲ್ಲೂ ಕೂಡ ಸದಸ್ಯರಿಬ್ಬರು ಕೈಕೈ ಮಿಲಾಯಿಸಿದ ಅಪೂರ್ವ ಘಟನೆ ನಡೆದಿದೆ. ಈ ವಿಷಯದಲ್ಲಿ ನಿನ್ನೆ ದಿವಸ ಹೇಳಬೇಕು ಎಂದು ಎದ್ದಾಗ ನೀವು ಸ್ವಲ್ಪ ಹುಲ್‌ಅಪ್ ಮಾಡುವುದಕ್ಕೆ ಪ್ರಯತ್ನ ಮಾಡಿದಿರಿ. ಇದು ಯಾವುದೇ ಒಂದು ಪಕ್ಷಕ್ಕಾಗಲಿ ಸೀಮಿತವಾದುದು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಪ್ರಜಾತಂತ್ರದಲ್ಲಿ ವಿಶ್ವಾಸ ಉಳ್ಳತಕ್ಕಂಥಾವರು ಇಂಥಾ ಘಟನೆ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಅಸೆಂಬ್ಲಿಯಲ್ಲಾಗಲಿ, ಪಾರ್ಲಿಮೆಂಟ್‌ನಲ್ಲೇ ಆಗಲಿ, ಕಾರ್ಪೊರೇಷನ್‌ನಲ್ಲೇ ಆಗಲಿ, ಅದು ಎಲ್ಲೇ ನಡೆಯಲಿ ಇಂಥಾ ಘಟನೆ ನಡೆಯುವುದು ಚೆಂದವಲ್ಲ. ಇವೊತ್ತಿನ ಪರಿಸ್ಥಿತಿ ಎಲ್ಲಿಗೆ ಹೋಗಿ ಮುಟ್ಟಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಹಿಂದೆ ಗೌರ್ನರ್ ಭಾಷಣದಲ್ಲಿ ನಮ್ಮ ಅರ್ಥ ಸಚಿವರು ಹೇಳಿದರು ಡೆಮಾಕ್ರಟಿಕ್ ವೇನಲ್ಲಿ ಆಗತಕ್ಕಂಥ ಕೆಲಸಕ್ಕೆ ಈ ಪ್ರಜಾತಂತ್ರದಲ್ಲಿ ತಿಲಾಂಜಲಿ ಕೊಟ್ಟಿದ್ದೇವೆ ಎಂದು. ಮೊನ್ನೆ ಕಾರ್ಪೊರೇಷನ್‌ನಲ್ಲಿ ಆಗತಕ್ಕಂಥ ಗಲಾಟೆ ಜೊತೆಗೆ ಕೆಲವು ರಿಕಾರ್ಡ್‌ಗಳೇ ಇಲ್ಲ ಎನ್ನುವುದು ಪತ್ರಿಕೆಯಲ್ಲಿ ವರದಿಯಾಗಿದೆ ಮತ್ತು ನಗರಸಭೆ ಮಾಡಿಕೊಂಡಿರುವ ಲಕ್ಷಾಂತರ ರೂಪಾಯಿನ ಲೀಸ್ ಫೈಲುಗಳು ಕಣ್ಮರೆಯಾಗಿದೆ ಎಂದು ಕೂಡ ಪತ್ರಿಕೆಯಲ್ಲಿ ವರದಿಯಾಗಿದೆ. ಆದುದರಿಂದ ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಬೇಕು. ಅಲ್ಲದೆ ಈ ಸಭೆಯು ತನ್ನ ತೀವ್ರತೆಯನು ವ್ಯಕ್ತಪಡಿಸಬೇಕು.

ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಹೇಳುವುದಾದರೆ ಈ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಉಳ್ಳತಕ್ಕಂಥಾವರು ಯೋಚನೆ ಮಾಡುತ್ತಾರೆ. ಇದು ಒಂದು ಕೋಯಿನ್‌ಸಿಡೆನ್ಸ್ ಎಂದು ಹೇಳಬಹುದು. ಇನ್ನೂ ಒಂದು ವಿಷಯ ಪತ್ರಿಕೆಯಲ್ಲಿ ವರದಿಯಾಗಿದೆ. ಹಳಿಯಾಳ್‌ನಲ್ಲಿ ಅದೇ ದಿನ ಒಂದು ಕಡೆ ಪೌರಾಡಳಿತ ಸಚಿವರಾದ ಶ್ರೀ ಬಸವಲಿಂಗಪ್ಪನವರು ಭಾಷಣ ಮಾಡಿದಾಗ ಒಂದು ಗುಂಪಿನವರು ಘೋಷಣೆಗಳನ್ನು ಕೂಗುತ್ತಾ ಕಲ್ಲು ಬೀರಿದರೆಂದು ವರದಿಯಾಗಿದೆ. ಮತ್ತು ದೇಶದಲ್ಲಿನ ಶಿಸ್ತು, ಶಾಂತಿ ರಕ್ಷಣೆಗಾಗಿ ಧಾರವಾಡದಿಂದ ಹೆಚ್ಚಿನ ಪೋಲೀಸರನ್ನೂ ಕರೆಸಿಕೊಳ್ಳಲಾಯಿತು ಎಂದು ವರದಿಯಾಗಿದೆ ಮತ್ತು ಶ್ರೀ ಬಸವಲಿಂಗಪ್ಪನವರ ಕಾರಿಗೂ ಜಖಂ ಆಗಿದೆ ಎನ್ನಲಾಗಿದೆ. ಮತ್ತು ಗಲಭೆಯ ನಂತರ ಪೋಲೀಸ್ ರಕ್ಷಣೆಯಲ್ಲಿ ಹೋದರೆಂದೂ ಕೂಡ ವರದಿಯಾಗಿದೆ. ಮಂತ್ರಿಗಳಿಗೇ ಆಗಲಿ ಈರೀತಿ ಪ್ರಾಣಾಪಾಯವಾಗಬಾರದು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಮುಖ್ಯ ಮಂತ್ರಿಗಳಿಗೆ ಅವರ ರಕ್ಷಣೆಗಾಗಿ ಒಂದು ಪೋಲೀಸ್ ಕಾರ್ ಹೋಗುತ್ತಿದೆ. ನೀವು ಅಧಿಕಾರಕ್ಕೆ ಬಂದ ಮೇಲೆ ಒಂದು ಸಂತೋಷದ ಸುದ್ದಿ ಏನೆಂದರೆ ಡೆಪ್ಯುಟಿ ಮಿನಿಸ್ಟರ್‌ಗೆ, ಸ್ಟೇಟ್ ಮಿನಿಸ್ಟರ್‌ಗೆ ಟಿ. ಬಿ ಯಲ್ಲಿ ಪೋಲೀಸ್‌ನವರು ಗಾರ್ಡ್ ಆಫ್ ಆನರ್ ಕೊಡುತ್ತಿದ್ದಾರೆ.

ಒಬ್ಬ ಸದಸ್ಯರು —ಸ್ವಾಮಿ, ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಈ ರೀತಿ ಇರಲಿಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ.—ತಾವು ಹೊಸಬರು. ನಿಮಗೆ ಗೊತ್ತಿಲ್ಲ. ಶ್ರೀಮಾನ್ ಚನ್ನಬಸಪ್ಪನವರೂ ಕೂಡ ಹಿಂದೆ ಹೋಮ್ ಮಿನಿಸ್ಟರ್ ಆಗಿದ್ದರು. ಹಿಂದೆ ಹೋಮ್ ಮಿನಿಸ್ಟರ್ ಮತ್ತು ಮುಖ್ಯ ಮಂತ್ರಿಗಳಿಗೆ ಮಾತ್ರ ಪೋಲೀಸ್‌ನವರು ಗಾರ್ಡ್ ಆಫ್ ಆನರ್ ಕೊಡುತ್ತಿದ್ದರು. ಆದರೆ ಈ ಸರ್ಕಾರ ಬಂದ ಮೇಲೆ ಎಲ್ಲರಿಗೂ ಗಾರ್ಡ್ ಆಫ್ ಆನರ್ ಕೊಡುತ್ತಿದ್ದಾರೆ. ಹಿಂದೆ ಆ ರೀತಿ ಕೊಡುತ್ತಿರಲಿಲ್ಲ. ನೀವು ಮಾಡತಕ್ಕ ಕೆಲಸಗಳನ್ನು ಮೆಚ್ಚಿ ಜನರು ಕಲ್ಲು ಹೊಡೆಯಲು

(ಶ್ರೀ ಎಚ್. ಡಿ. ದೇವೇಗೌಡ)

ಆರಂಭಿಸಿದ್ದಾರೆ. ಆದುದರಿಂದ ಪ್ರತಿಯೊಬ್ಬ ಮಂತ್ರಿಗೂ ರಕ್ಷಣೆ ಬೇಕಾಗಿರುವುದರಿಂದ ಅವರಿಗೂ ಒಂದು ಪೋಲೀಸ್ ಸೆಕ್ಯೂರಿಟಿಯನ್ನು ಕೊಡುವ ಒಂದು ಹೊಸ ಪದ್ಧತಿಯನ್ನು ಜಾರಿಗೆ ತನ್ನಿ. ದಯಾಮಾಡಿ ಈ ಘಟನೆಯ ಹಿನ್ನಲೆ ಏನು ಎನ್ನುವುದನ್ನು ಯೋಚನೆ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಖೂನಿ ಮಾಡುವ ಜನಕ್ಕೆ ಗಲ್ಲಿಗೆ ಏರಿಸುವಂಥ ಶಿಕ್ಷೆ ಕೊಡುವ ಜಡ್ಜ್‌ಗೆ ರಕ್ಷಣೆ ಇಲ್ಲ ಇವರಿಗೆ ರಕ್ಷಣೆ ಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಜವಾಬ್ದಾರಿ ಹೊತ್ತಿರತಕ್ಕಂಥಾವರು ಯಾರು ಇದ್ದಾರೆ ಅವರೆಲ್ಲರಿಗೂ ರಕ್ಷಣೆ ಕೊಡಬೇಕು. ಈವೊತ್ತಿನ ದಿವಸ ಕಾರ್ಪೋರೇಷನ್‌ನಲ್ಲಿ ಏನು ಘಟನೆ ನಡೆದಿದೆ ಅದರ ಹಿನ್ನಲೆಯನ್ನು ಯೋಚನೆ ಮಾಡಬೇಕು. ಲಕ್ಷಾಂತರರೂಪಾಯಿನ ಲೀಸ್ ಫೈಲುಗಳು ಕಣ್ಮರೆಯಾಗಿವೆ, ಅದರ ಬಗ್ಗೆ ತೀವ್ರ ಗಮನ ತೆಗೆದುಕೊಳ್ಳಬೇಕು. ಇದರ ಬಗ್ಗೆ ಪೌರಾಡಳಿತ ಸಚಿವರು ಹೇಳಿಕೆ ಕೊಡುತ್ತಾರೋ, ಅಥವಾ ಶ್ರೀಮಾನ್ ಚನ್ನಬಸಪ್ಪನವರು ಹೇಳಿಕೆ ಕೊಡುತ್ತಾರೋ ಅಥವಾ ಮುಖ್ಯ ಮಂತ್ರಿಗಳು ಕೊಡುತ್ತಾರೋ ತಿಳಿಸಿ. ಇಲ್ಲದೇ ಹೋದರೆ ನಾವು ಏನು ತಿಳಿದುಕೊಳ್ಳಬೇಕಾಗುತ್ತದೆ ಎಂದರೆ ಈ ಪ್ರಜಾ ಪ್ರಭುತ್ವದಲ್ಲಿ ಅಪಾಯ ಸನ್ನಿಹಿತ ವಾಗಿದೆ ಎಂದು. ಈ ಬಗ್ಗೆ ನಿನ್ನೆ ದಿವಸ ಯಾರೋ ಒಬ್ಬರು ಹೇಳಿದರು, ಅವರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಬಹುಶಃ ನಿಮ್ಮಗಳದೇ ಒಂದು ಕೊನೇ ಆಸೆಂಬ್ಲಿ ಆಗಬಹುದು, ಈ ಪ್ರಜಾಪ್ರಭುತ್ವದಲ್ಲಿ ಇದೇ ಕೊನೆ ಎನ್ನುವ ದಿಶೆಯಲ್ಲಿ ಅರ್ಥ ಬರುವ ಹಾಗೆ ಹೇಳಿದರು. ಅದುದರಿಂದ ದಯಮಾಡಿ ನನಗೆ ನಿನ್ನೆ ನಡೆದ ಘಟನೆ ಬಗ್ಗೆ ಕೊಡಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಅಧ್ಯಕ್ಷರೇ, ನಾನು ಈ ನಗರ ಸಭೆಗೆ ಹಳೆಯ ಸದಸ್ಯ. ಇದರಲ್ಲಿ ಒಂದು ವಿಷಾದದ ವಿಚಾರ ಏನೆಂದರೆ ಡೆಮಾಕ್ರೆಟಿಕ್ ಸೆಟ್‌ಆಪ್‌ನಲ್ಲಿ ಯಾವ ವಿಧದಲ್ಲಿ ಕೇಳಬೇಕೋ ಆ ವಿಧದಲ್ಲಿ ಕೇಳುವುದಕ್ಕೆ ಆಗದಿದ್ದರೆ ಕೈಕ್ಕೈ ಮಿಲಾಯಿಸಿ ಕೇಳುವುದು ಶೋಚನೀಯವಾದ ವಿಚಾರ. ಹಿಂದೆ ಒಂದು ಸಾರಿ ವಿರೋಧ ಪಕ್ಷದಲ್ಲಿ ಇದ್ದಂಥ ಒಬ್ಬ ಸದಸ್ಯರಾದ ಡಾಕ್ಟರನ್ನು ಆಡಳಿತ ಪಕ್ಷದವರೊಬ್ಬರು ಹೊಡೆದು, ಅದು ಕೋರ್ಟಿಗೆ ಹೋಗಿ ಕೊನೇ ಒಳಗೆ ಶ್ರೀಮಾನ್ ಕೆ. ಎಂ. ನಾಗಣ್ಣನವರು ಕೇಳಿಕೊಂಡು ಅದು ಪರ್ಯವ್ಯಸನವಾಯಿತು. ಈ ವೊತ್ತಿನ ದಿವಸ ಕೈ ಮಾಡಿರುವ ವ್ಯಕ್ತಿ ಮಾತೆತ್ತಿದರೆ ಹೊಡೆಯುವುದಕ್ಕೆ ಬರುತ್ತಾನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಮುಂದಿನ ಮೀಟಿಂಗ್‌ಗೆ ಹೋಗುವಾಗ ಒಂದು ವಜ್ರ ಕವಚ ಹಾಕಿಕೊಳ್ಳಿ.

ಶ್ರೀ ಟಿ. ಆರ್. ಶಾಮಣ್ಣ.—ಇದನ್ನು ತಡೆಗಟ್ಟದೇ ಹೋದ ಪಕ್ಷದಲ್ಲಿ ಕಾರ್ಪೋರೇಷನ್ ಸರಿಯಾಗಿ ನಡೆಯುವುದಕ್ಕಾಗುವುದಿಲ್ಲ. ಮೊನ್ನೆ ದಿವಸ ಒಂದು ತೀರ್ಮಾನ ತೆಗೆದುಕೊಂಡರು. ಕಾರ್ಪೋರೇಷನ್ನಿನ ಎಲ್ಲಾ ಕಾಮಗಾರಿ ಕೆಲಸಗಳನ್ನು ಅವರೇ ನಡೆಸಬೇಕು ಕಾಂಟ್ರಾಕ್ಟ್ ಕೊಡಬಾರದು ಎಂದು. ಈರೀತಿ ತೀರ್ಮಾನ ತೆಗೆದುಕೊಂಡು ಪುನಃ ಕೊಟ್ಟರೆ ಇದು ಯಾವ ರೀತಿಯಾದ ಪ್ರಪೋಸಲ್ ಆಗುತ್ತದೆ? ಇದು ಒಂದು ಹದ್‌ಬಸ್ತಿನಲ್ಲಿ ನಡೆಯಬೇಕು. ಇಲ್ಲದೇ ಹೋದರೆ ಯಾರು ತಪ್ಪು ಮಾಡಿದರು ಅಂಥವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳದೇ ಹೋದರೆ ಈ ನಗರಾಡಳಿತವನ್ನು ಸರಿಯಾಗಿ ನಡೆಸುವುದಕ್ಕಾಗುವದಿಲ್ಲ. ಈವಾಗ ಕಾರ್ಪೋರೇಷನ್ ಫೈಲುಗಳು ಒಂದು ಸಾವಿರ ಫೈಲುಗಳು ಮಾಯವಾಗಿವೆ. ಈ ರೀತಿ ಆದರೆ ಇದು ದಕ್ಷತೆಯಿಂದ ಕೆಲಸ ಮಾಡುತ್ತದೆಯೇ? ನಾನು ಕಳೆದ 16 ವರ್ಷಗಳಿಂದಲೂ ನೋಡುತ್ತಿದ್ದೇನೆ. ಇಷ್ಟು ಹದಗೆಟ್ಟಿರುವುದು ಯಾವಾಗಲೂ ಹದಗೆಟ್ಟಿಲ್ಲ ಎಂದು ಹೇಳುತ್ತೇನೆ.

† ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ನೋಟೀಸು ತಮಗೆ ಕೊಟ್ಟಿದ್ದಾರೆ ಅದು ಇನ್ನೂ ನನ್ನ ಹಸ್ತಗತವಾಗಿಲ್ಲ ಮತ್ತು ಇಂದಿನ ಪತ್ರಿಕೆಗಳಲ್ಲಿ ಬಂದಿರುವ ವರದಿಗಳಲ್ಲಿ ಏನೇನು ಘಟನೆಗಳು, ಯಾವ ಯಾವ ವಿಷಯಗಳು ಬಂದಿವೆ ಅವನ್ನೆಲ್ಲಾ ನಾನೂ ಓದಿದ್ದೇನೆ. ಪ್ರತಿ ದಿವಸವೂ ದಿನಚರಿಯ ಆಡಳಿತ ವ್ಯವಹಾರ ಮಾಡುವ ಮುನ್ನ ದೇಶದ ಸಮಸ್ಯೆಗಳ ಬಗ್ಗೆ ವರದಿಗಳೇನು ಬರುತ್ತವೆ ಅವುಗಳನ್ನು ಓದತಕ್ಕದ್ದು ನಮ್ಮ ಪ್ರಥಮ ಕರ್ತವ್ಯ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಪಾರ್ಟಿಯವರೇ ಹೇಳಿರುವುದೆಲ್ಲ ಬಂದಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಲ್ಲಿ ನಮ್ಮ ಪಾರ್ಟಿ, ನಿಮ್ಮ ಪಾರ್ಟಿಯ ಪ್ರಶ್ನೆಯಲ್ಲ ಅಥವಾ ನಿಮ್ಮ ಹಾಗೂ ನಮ್ಮ ಪ್ರಶ್ನೆಯಲ್ಲ. ಪ್ರಜಾಪ್ರಭುತ್ವದಲ್ಲಿ ಯಾವ ಯಾವ ರೀತಿಯಾಗಿ ನಾವು ನಡೆದುಕೊಳ್ಳಬೇಕು, ಯಾವರೀತಿ ನಡೆದುಕೊಂಡರೆ ಸರಿಯಾಗಿರುತ್ತೆ ಎನ್ನತಕ್ಕದ್ದು ನಾವು ಗಮನಿಸಬೇಕಾಗಿರುತ್ತೆ, ಗೌರವಿಸಬೇಕಾಗುತ್ತದೆ ಮತ್ತು ಬಹಳ ಅವಶ್ಯಕವೂ ಆಗಿದೆ. ಈಗ ಈ ಸಭೆಯಲ್ಲಿ ಕೂಡ ನಿಯಮಗಳಿಗನುಸಾರವಾಗಿ ನಡೆಯುತ್ತ ಬಂದಿದೆ, ಅದೇ ರೀತಿ ಮುನಿಸಿಪಾಲಟಿಗಳಲ್ಲಿ ಹಾಗೂ ಕಾರ್ಪೋರೇಷನ್‌ಗಳಲ್ಲಿ ನಡೆಯುತ್ತ ಬಂದಿದೆ ಪ್ರಜಾಪ್ರಭುತ್ವದಲ್ಲಿ ಇರುವ ತತ್ವಗಳಿಗನುಸರವಾಗಿ ನಡೆದುಕೊಂಡರೆ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ ಇಲ್ಲದೇ ಇದ್ದರೆ ಅದು ಯಶಸ್ವಿಯಾಗುವುದಿಲ್ಲ, ಈಗ ಇಲ್ಲಿ ಅನೇಕ ವಿಷಯಗಳು ವರದಿಯಾಗಿವೆ ಮತ್ತು ಇಲ್ಲಿ ಕೆಲವು ವಿಷಯಗಳನ್ನು ಮಾನ್ಯ ಸದಸ್ಯರುತಿಳಿಸಿದ್ದಾರೆ.

ಶ್ರೀ ಕೆ. ಎಂ. ನಾಗಣ್ಣ.—ಈ ಸಭೆಯಲ್ಲಿ ಹೇಳಿರುವುದಕ್ಕಿಂತ ಮಾನ್ಯ ಮಂತ್ರಿಗಳ ಕಾರ್ಪೋರೇಷನ್ನಿನಿಂದ ಟೇಪ್ ರಿಕಾರ್ಡುಗಳನ್ನು ಪೂರ್ತಿಯಾಗಿ ತರಿಸಿಕೊಳ್ಳಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಬಗ್ಗೆ ಸರಕಾರ ಇನ್ನೂ ಮಾಹಿತಿಗಳನ್ನು ತರಿಸಿಲ್ಲ. ಇದರ ಜೊತೆಗೆ ಸಾವಿರಾರು ವಿಚಾರಗಳನ್ನು ಪತ್ರಿಕೆಗಳಲ್ಲಿ ಬಂದಿರುವ ವಿಷಯಗಳನ್ನು ಇಲ್ಲಿ ಹೇಳಿದ್ದಾರೆ. ಪತ್ರಿಕೆಗಳಲ್ಲಿ ಬಂದಿರುವ ವರದಿ ಎಷ್ಟುಮಟ್ಟಿಗೆ ಸತ್ಯ ಎಷ್ಟುಮಟ್ಟಿಗೆ ಅಸತ್ಯ ಎನ್ನುವುದನ್ನು ಪರಿಶೀಲನೆ ಮಾಡಬೇಕು. ವಾಸ್ತವಾಂಶಗಳು ಏನಿವೆ ಅವುಗಳನ್ನು ನೋಡಬೇಕಾಗುತ್ತದೆ ಮತ್ತು ಕೆಲವರು ಇದರ ಬಗ್ಗೆ ದೂರುಗಳನ್ನು ಪೋಲೀಸ್ ಸ್ಟೇಷನ್ನಿಗೆ ಕೊಟ್ಟಿದ್ದಾರೆಂದು ಹೇಳಿದರು ಮತ್ತು ಇನ್ನೂ ಕೆಲವು ವಿವರಗಳನ್ನು ಹೇಳಿದರು ಇವನ್ನೆಲ್ಲಾ ವಿಚಾರಿಸಬೇಕಾಗುತ್ತದೆ, ಒಟ್ಟಿನಲ್ಲಿ ನಾನು ಸ್ಪಷ್ಟಪಡಿಸುವುದು ಇದರಲ್ಲಿ ಈ ಪಕ್ಷ ಆ ಪಕ್ಷ ಎನ್ನುವ ವಿಚಾರವಲ್ಲ ಮತ್ತು ಇದು ಪಕ್ಷಕ್ಕೆ ಸಂಬಂಧಪಟ್ಟ ಪ್ರಶ್ನೆಯೂ ಅಲ್ಲ, ಈ ಸಭೆಯ ಘನತೆಗೆ ಸರಿಯಾಗಿ ನಡೆದುಕೊಳ್ಳದೇ ಹೋದರೆ ಅದು ಯಾವ ಪಕ್ಷದವರೇ ಆಗಲಿ ಅದು ತಪ್ಪು, ಇವನ್ನು ನೀವು ಹಾಗೂ ನಾವು ಎಲ್ಲರೂ ಒಪ್ಪಿಕೊಳ್ಳಬೇಕಾದದ್ದು. ಮಿತಿ ಮೀರಿ ಹದ್ದುಬಸ್ತು ಇಲ್ಲದೆ ಹೋದಾಗ ಅಂತಹ ಸಂದರ್ಭಗಳಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆಯಾಗಲೇ ಬೇಕು. ಇದರಲ್ಲಿ ನಿಮಗೆ ಹಾಗೂ ನಮಗೆ ಯಾವ ವ್ಯತ್ಯಾಸವೂ ಇಲ್ಲ. ಈ ಸಭೆಯಲ್ಲಿರುವ ನಿಯಮಗಳಂತೆ ಅಲ್ಲಿರುವ ಸಭೆಗಳಲ್ಲೂ ನಿಯಮಗಳಿವೆ. ಅಲ್ಲಿನ ಸಭೆಯ ನಿಯಮಗಳೇನು ಅವು ನನ್ನ ಮುಂದೆ ಇಲ್ಲ, ಯಾವ ರೀತಿ ದುರ್ವರ್ತನೆಗಳಾಗಿವೆ ಎನ್ನುವುದು ನನಗೆ ಗೊತ್ತಿಲ್ಲ, ಇದರ ಸಮಗ್ರವಾದ ವಿಷಯಗಳನ್ನು ಪರಿಶೀಲನೆ ಮಾಡಬೇಕಾಗಿದೆ ಮತ್ತು ಸಭೆಯಲ್ಲಿ ಕಳುಹಿಸಿರುವ ಮೋಷನ್ ಕೂಡ ಇನ್ನೂ ಹಸ್ತಗತವಾಗಿಲ್ಲ. ಇವನ್ನೆಲ್ಲಾ ತಿಳಿದು ಅನಂತರ ಒಂದು ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಇದರ ಟೇಪ್ ರಿಕಾರ್ಡನ್ನು ತರಿಸಿಕೊಳ್ಳಿ.

ಶ್ರೀ ಎಚ್, ಎಂ. ಚನ್ನಬಸಪ್ಪ.—ಸರಕಾರ, ಇದಕ್ಕೆ ಬೇಕಾಗುವ ಎಲ್ಲ ವಿವರಗಳನ್ನು ತರಿಸಿಕೊಂಡು ಅವನ್ನೆಲ್ಲಾ ಪರಿಶೀಲಿಸಿ ಇಲ್ಲಿ ತಮಗೆ ತಿಳಿಸುತ್ತೇನೆ. ನಿಮಗೆ ಎಷ್ಟು ಕಳವಳವಿದೆಯೋ ಅಷ್ಟೇ ಕಳವಳ ನಮಗೂ ಇದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಸರಕಾರದ ಪರವಾಗಿ ಹೇಳಬೇಕಾದ ವಿಚಾರಗಳನ್ನು ಒಂದು ಸ್ಟೇಟ್‌ಮೆಂಟ್ ಮೂಲಕ ಹೇಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಇಪ್ಪತ್ತು ಮಂದಿ ಪಾರ್ಲಿಮೆಂಟು ಸದಸ್ಯರು ಲಂಚ ಹಾಗೂ ಇತರ ದುರ್ವ್ಯವಹಾರಗಳ ಅಪಾದನೆಯನ್ನು ಅದರಲ್ಲೂ ಬಹಳ ಗುರುತರವಾದ ಅಪಾದನೆಗಳನ್ನು ಮಾಡಿರುವುದರ ಬಗ್ಗೆ ಇಂದು ಪತ್ರಿಕೆಗಳಲ್ಲಿ ಬಂದಿದೆ, ಇದರ ಹಿನ್ನೆಲೆಯಲ್ಲಿ ಅವಿಶ್ವಾಸವನ್ನು ಕೆಲವು ಸದಸ್ಯರುಗಳು ಸೂಚಿಸಿದ್ದಾರೆಂದು ತಿಳಿದು ಬರುತ್ತದೆ. ಇದರ ಜೊತೆಗೆ ನಮ್ಮ ಸರಕಾರ ಉಳಿಯುತ್ತೋ ಇಲ್ಲವೋ ಎನ್ನುವ ಅನುಮಾನ ನಮಗೆ ಬರುತ್ತಿದೆ. ನಮ್ಮ ರಾಜ್ಯದಲ್ಲಿರುವ ಮಂತ್ರಿಗಳು ಲಂಚ ಹಾಗೂ ಇನ್ನಿತರ ಅವ್ಯವಹಾರಗಳಲ್ಲಿ ತೊಡಗಿರುವುದು ಎಂದು ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ನಮಗೆ ಸರಕಾರದ ಕಡೆಯಿಂದ ಸ್ಪಷ್ಟೀಕರಣ ಕೊಡಲೇ ಬೇಕು.

Presence of C.B.I. C.I.D. and Police staff in the Lounges

ಶ್ರೀ ವಾಟಾಳ್ ನಾಗರಾಜ್.—ಇದರ ಜೊತೆಗೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಮೂರು ನಾಲ್ಕು ದಿವಸಗಳಿಂದಲೂ ನಮ್ಮ ಸಭೆಯ ಸುತ್ತ ಮುತ್ತ ಸ್ಪೆಷಲ್ ಬ್ರಾಂಚಿಗೆ ಸೇರಿದ 15-20 ಜನರು ಬಂದು ಒಂದು ರೀತಿಯ ದಾಂಧಲೇ ನಡೆಸುತ್ತಿದ್ದಾರೆ, ಇವರಲ್ಲಿ

(ಶ್ರೀ ವಾಟಾಳ್ ನಾಗರಾಜ್)

ನಾನು ಏಳೆಂಟು ಜನರನ್ನು ನೋಡಿದ್ದೇನೆ, ಅವರು ನನಗೆ ಗೊತ್ತು. ಇಂತಹ ಪೋಲೀಸಿನವರು ನಮ್ಮ ವಿಧಾನಪರಿಷತ್ತಿನಲ್ಲಿ ಹಾಗೂ ಇಲ್ಲಿ ಬರುತ್ತಿರುವ ಕಾರಣ ತಿಳಿಯಲಿಲ್ಲ. ಇದರ ಬಗ್ಗೆ ತಾವು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆ ಇವರುಗಳು ಸಭೆಗೆ ಬರಲು ತಮ್ಮ ಅಪ್ಪಣೆ ಇಲ್ಲದೆ ಬರಲು ಅವಕಾಶವೇ ಇಲ್ಲ. ಏತಕ್ಕಾಗಿ ಇವರು ಬರುತ್ತಾರೆ? ನಮ್ಮ ಹಿಂದೆ ಬಂದು ಏನೇನು ನಡೆಯುತ್ತಿದೆ ಎಂದು ಇವರುಗಳು ವರದಿ ಮಾಡಬೇಕೇನು ? ನಾನು ಕೆಲವು ಸಿ.ಐ.ಡಿ, ಗಳನ್ನು ಕೇಳಿದಾಗ ಅವರು ಸರಿಯಾಗಿ ಉತ್ತರ ಕೊಡಲಿಲ್ಲ. ಇದರ ಬಗ್ಗೆ ತಾವು ಗಮನಿಸಬೇಕು.

ಇನ್ನು ಮುಖ್ಯ ಮಂತ್ರಿಗಳು ಎಲ್ಲಿರುತ್ತಾರೋ ಇಲ್ಲವೋ ಒಂದು ರೀತಿಯಾದ ಅನುಮಾನ ನಮಗೆ ಇಂದು ಪೇಪರುಗಳನ್ನು ನೋಡಿದ ಮೇಲೆ ಬರುತ್ತಿದೆ. ಲೋಕ ಸಭೆಯ ಸದಸ್ಯರುಗಳು ಅದರಲ್ಲೂ ನಿಮ್ಮ ಪಕ್ಷದವರೇ ಇಷ್ಟು ಉಗ್ರವಾಗಿ ಟೀಕೆ ಮಾಡುತಿದ್ದಾರೆ, ಇದರಲ್ಲಿ ಭ್ರಷ್ಟಾಚಾರದ ಹಾಗೂ ಇನ್ನಿತರ ಅಪಾದನೆಗಳು ಬಂದಿವೆ. ಇದರಿಂದ ಸರಕಾರ ಇಲ್ಲಿ ಉಳಿಯುತ್ತೋ ಇಲ್ಲವೋ ಎನ್ನುವ ಸಂದೇಹ ಬರುತ್ತಿದೆ, ಆದರಲ್ಲೂ ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ಅರಸಿನವರು ಉಳಿಯುತ್ತಾರೋ ಇಲ್ಲವೋ ಗೊತ್ತಿಲ್ಲ. ಮುಂದೆ ಯಾರು ಮುಖ್ಯಮಂತ್ರಿಗಳಾಗುತ್ತಾರೆ ? ಶ್ರೀ ಘೋರ್ಪಡೆಯವರಾಗುತ್ತಾರೆಯೋ! ಹಾಗಾದರೆ ಇಂದು ಮಂಡಿಸಿರುವ ಬಡ್ಜೆಟ್ಟು ಏನಾಗುತ್ತದೆ? ಬೇರೆ ರೀತಿಯ ಬಡ್ಜೆಟ್ಟು ಬರುತ್ತದೆಯೋ! ಇದರ ಬಗ್ಗೆ ಸಹಿಗಳನ್ನು ಸಂಗ್ರಹಿಸುತ್ತಾರೆಂದೂ ಕೇಳುತ್ತಿದ್ದೇವೆ. ಅಲ್ಲದೆ ನಮ್ಮ ಸಭೆಗೆ ಪೋಲೀಸಿನವರು ಏಕೆ ಬರಬೇಕಾಗುತ್ತದೆ? ಇದರ ಬಗ್ಗೆ ತಾವು ವಿಚಾರ ಮಾಡಬೇಕು.

ಅಧ್ಯಕ್ಷರು.—ತಾವು ಹೇಳಿರುವುದನ್ನು ವಿಚಾರಿಸಿ ನೋಡುತ್ತೇನೆ. ಆದರೆ ತಾವು ಹೀಗೆ ಜನರಲ್ ಆಗಿ ಹೇಳುವುದು ಸರಿಯಾಗುವುದಿಲ್ಲ ಎಂದು ಇಷ್ಟುಮಾತ್ರ ವಿನಂತಿ ಮಾಡುತ್ತೇನೆ.

Sri C. M, ARUMUGHAM.—The hon. Member Sri Vatal Nagaraj mentioned about the presence of the CBI staff in the precincts of the Assembly. In that connection, of course, Members have a right to represent to the Chair. Further, the watch and ward staff drawn to work during the session are persons from the regular police force. You have to consider whether it is proper to draw watch and ward staff from regular police force; secondly if any police officer or CBI or CID were to be seen in the lobbies, or in the precincts of the Assembly without the permission of the Speaker it would amount to breach of privilege and it also amounts to coercion on Members. I request you to look into the matter and take immediate action.

MADAM SPEAKER.—I will get it examined.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸನ್ಮಾನ್ಯ ಅಧ್ಯಕ್ಷರೇ. ಈ ದೇಶದಲ್ಲಿ ಎಲ್ಲ ಮಾಲಿನ ಬೆಲೆಗಳು ಏರುತ್ತಿದ್ದರೂ ಅಡಿಕೆ ಬೆಲೆ ಮಾತ್ರ ಇಳಿಯುತ್ತಿದೆ.

ಅಧ್ಯಕ್ಷರು.—ಈ ವಿಷಯ ಮುಗಿದು ಹೋಗಲಿ, ನಂತರ ತಾವು ಅದನ್ನು ಹೇಳಿ.

ಶ್ರೀ ಎಂ. ಎಸ್ ಕೃಷ್ಣನ್.—ಮಾನ್ಯ ವಾಟಾಳ್‌ನಾಗರಾಜ್ ಅವರು ಹೇಳಿದ ಸಿ.ಐ.ಡಿ. ವಿಚಾರದಲ್ಲಿ ನಮಗೂ ಅನುಭವವಾಗಿದೆ. ಆಬಗ್ಗೆ ತಾವು ತನಿಖೆ ಮಾಡಿಸುವುದಾಗಿ ಹೇಳಿದ್ದೀರಿ, ನನಗೆ ಗೊತ್ತಿರುವ ಕೆಲವು ಸಿ.ಐ.ಡಿ. ಗಳು ಕೆಲವರು ಬಂದಿದ್ದರು.

ಅಧ್ಯಕ್ಷರು — ನಿಮಗೆ ಗೊತ್ತಾಗುವಂತೆ ಬರುವ ಸಿ.ಐ.ಡಿ. ಗಳು ಯಾರು !

ಶ್ರೀ ಎಚ್. ಡಿ. ದೇವೇಗೌಡ.— ಪದೇ ಪದೇ ನಮ್ಮ ಹಿಂದೆ ಬಂದಿರುವುದರಿಂದ ಅವರ ಪರಿಚಯವಾಗಿರುತ್ತದೆ.

Comments Of The State Members of Parliament on The State Administration

ಶ್ರೀ ಎಂ. ಎಸ್. ಕೃಷ್ಣನ್.—ಈ ಮಂತ್ರಿಮಂಡಲದ ಬಗ್ಗೆ ಪಾರ್ಲಿಮೆಂಟ್ ಸದಸ್ಯರು ಏನು ಮಾತನಾಡಿದ್ದಾರೆ ಅದರ ಬಗ್ಗೆ ನಮ್ಮ ಮುಖ್ಯಮಂತ್ರಿಗಳು ಕುಪಿತರಾಗಿದ್ದಾರೆಂದು ಗೊತ್ತಾಗಿದೆ ಈ ವಿಚಾರದಲ್ಲಿ ಒಬ್ಬರು ಮಂತ್ರಿಗಳು ನಿಮಗೇಕೆ, ನಮ್ಮ ಪಾರ್ಟಿಯ ಸಮಾಚಾರ ಎಂದು ಹೇಳುತ್ತಾರೆ. ಇದು ಕೇವಲ ಪಾರ್ಟಿಯ ಸಮಾಚಾರ ಎಂದು ಹೇಳುವುದು ಅಷ್ಟು ಸಮಂಜಸವಾದದು ಅಲ್ಲ. ಇದು ದೇಶಕ್ಕೆ ಮತ್ತು ರಾಜ್ಯಕ್ಕೆ ಸಂಬಂಧಪಟ್ಟ ವಿಷಯ.

ಅಧ್ಯಕ್ಷರು.—ತಾವು ಹೇಳುವುದನ್ನೆಲ್ಲಾ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ —ಈ ವಿಷಯವನ್ನು ಪಾರ್ಟಿ ವಿಷಯ ಎಂದು ಹೇಳುವುದು ಸರಿಯಲ್ಲ. ಈ ಮಂತ್ರಿಮಂಡಲ ಬದಲಾವಣೆಯಾದರೆ ಈ ಬಡ್ಜೆಟ್‌ನ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ನೋಡಬೇಕಾಗಿದೆ. ಇದು ಎಲ್ಲರಿಗೂ ಸಂಬಂಧಪಟ್ಟ ವಿಷಯವಾಗಿದೆ. ಪಾರ್ಲಿಮೆಂಟ್ ಸದಸ್ಯರು ಮಂತ್ರಿಮಂಡಲದ ಮೇಲೆ ಮತ್ತು ಕೆಲವು ಮಂತ್ರಿಗಳ ಮೇಲೆ ಏನು ಗುರುತರವಾದ ಆಪಾದನೆಗಳನ್ನು ಹೊರಿಸಿದ್ದಾರೆ ಅದರ ಬಗ್ಗೆ ಮಾನ್ಯ ಚನ್ನಬಸಪ್ಪನವರಾದರೂ ಸಹ ಒಂದು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗಾಗಲೇ ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ.

Sri C. M. ARUMUGHAM.—Madam Speaker, this House is entitled to know the functions of the Government. When the Members of Parliament are makihg certain allegations against the Government it means that Members of the Assembly are not discharging thier duties properly. This being the budget session, the House is entitled to know whether there is going to be any change in the Ministry.

Sri H. M. CHANNABASAPPA.—I rise to a point of order. The proceedings in this House have to take place in accordance with the rules of procedure to which all of us are bound to. Now there is no issue before the House and no motion has been sent and the Speaker has not permitted any motion to be discussed. Further Governmental action must be there to admit any discussion. There may be hundred and odd things appearing in the press. But there are no reports issued from Government either from Delhi or from Mysore. When there is no omission or commission on the part of the Government where is the fun in discussing such a matter It would not be therefore proper to allow matters to be discussed in the House in which thers is no governmental action.

ಶ್ರೀ ವಾಟಾಳ್ ನಾಗರಾಜ್.—ಪಾರ್ಲಿಮೆಂಟ್ ಸದಸ್ಯರು ಈ ರೀತಿ ಮಾಡಿದ್ದು ಸರಿಯಲ್ಲ, ಅದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಮಾನ್ಯ ಮಂತ್ರಿಗಳೇ ಹೇಳಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಸರ್ಕಾರದ ಆಜ್ಞೆಗಳು, ನಡವಳಿಕೆಗಳು ಕೆಲಸಗಳ ಬಗ್ಗೆ ಏನು ಬೇಕಾದರೂ ವ್ಯಾಖ್ಯಾನ ಮಾಡಲಿ; ಅದಕ್ಕೆ ಅಡ್ಡಿ ಇಲ್ಲ. ಆದರೆ ಪತ್ರಿಕೆಗಳಲ್ಲಿ ಡೆಲ್ಲಿಯಲ್ಲಿ ನಡೆದಂಥ ವಿಚಾರಗಳ ಬಗ್ಗೆ ಪ್ರೆಸ್ ನೋಟ್ ಬಂತು, ಇನ್ನೊಂದು ಕಡೆ ಇನ್ನೊಂದು ಪ್ರೆಸ್ ನೋಟ್ ಬಂತು ಎಂದರೆ ಅದರಲ್ಲಿ ಸರ್ಕಾರದ ಪಾತ್ರವಾದರೂ ಏನಿದೆ ?

ಶ್ರೀ ಕಾಗೋಡು ತಿಮ್ಮಪ್ಪ.—ಡೆಲ್ಲಿಯಲ್ಲಿ ನಡೆದ ಘಟನೆಗೂ ಸರ್ಕಾರಕ್ಕೂ ಸಂಬಂಧವಿಲ್ಲ, ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಅನಾವಶ್ಯಕವೆಂದು ಮಾನ್ಯಮಂತ್ರಿಗಳು ಹೇಳಿದರು. ಆದರೆ ಆ ವಿಷಯದ ಬಗ್ಗೆ ಈಗಾಗಲೇ ಮಂತ್ರಿಮಂಡಲದ ಸಭೆ ಸೇರಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆಕೊಂಡಿದೆ. ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಆಲೋಚನೆ ಮಾಡುತ್ತಿರಬೇಕಾದರೆ, ಅದನ್ನು ಇಲ್ಲಿ ಚರ್ಚೆ ಮಾಡುವುದು ಅನರ್ಹವಾದ ವಿಷಯವೆಂದು ಹೇಳುವುದು ಒಪ್ಪತಕ್ಕ ಮಾತಲ್ಲ.

ಅಧ್ಯಕ್ಷರು.— ಚರ್ಚೆ ಮಾಡುವುದಕ್ಕೆ ಅನರ್ಹವಾದ ವಿಷಯವೆಂದು ಅವರು ಹೇಳಲಿಲ್ಲ. ಆದರೆ ಆ ವಿಚಾರ ಯಾವ ಮೂಲಕ, ಯಾವಾಗ, ಯಾವ ರೀತಿ ಬರಬೇಕೆಂದು ಹೇಳುವುದು ನನ್ನ ಕರ್ತವ್ಯ, ಆ ರೀತಿ ಅದು ಬರಲಿ ಎಂದು ಅವರು ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ಆದರೆ ನಾನು ತಿಳಿದುಕೊಂಡಿದ್ದು ಬೇರೆ ತರಹ.

ಅಧ್ಯಕ್ಷರು.—ನೀವು ಸಾವಿರ ತರಹ ತಿಳಿದುಕೊಳ್ಳಬಹುದು; ಆದರೆ ನಾನು ತಿಳಿದುಕೊಂಡಿದ್ದನ್ನು ಹೇಳಬೇಡವೇ?

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನು ಚರ್ಚೆ ಮಾಡುವುದಕ್ಕೆ ಒಂದು ಸೂಚನಾ ಪತ್ರ ಕೊಡಬೇಕೆಂಬುದನ್ನು ನಾನೂ ಒಪ್ಪುತ್ತೇನೆ. ದೆಹಲಿಯಲ್ಲಾಗಲಿ, ಮತ್ತೊಂದು ಕಡೆಯಲ್ಲಾಗಲೀ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಮಗೆ ಪತ್ರಿಕೆಗಳನ್ನು ಬಿಟ್ಟರೆ ಬೇರೆ ವ್ಯವಸ್ಥೆ ಇಲ್ಲ. ಅದರಂತೆ ಇಂದು ಬೆಳಿಗ್ಗೆ ಪತ್ರಿಕೆಗಳನ್ನು ನೋಡಿದಾಗ ಈ ಮಂತ್ರಿಮಂಡಲದ ಮೇಲೆ ಬಲವಾದ ಪರಿಣಾಮ ಉಂಟಾಗಿದೆ, ಈ ಮಂತ್ರಿಮಂಡಲ ಉಳಿಯುವ ಅಥವಾ ಹೋಗುವ ಪರಿಸ್ಥಿತಿ ಉದ್ಭವವಾಗಿರುವುದು ಗೊತ್ತಾಗಿದೆ. ಆದಕಾರಣ ಅದರ ಬಗ್ಗೆ ನಾವು ಹೇಳಬೇಕಾಗಿದೆ. ಮತ್ತು ಚರ್ಚೆ ಮಾಡಬೇಕಾಗಿದೆ. ಈ ಸರ್ಕಾರದಲ್ಲಿ ಏನು ನಡೆಯುತ್ತಿರುತ್ತದೆಂಬುದನ್ನು ತಿಳಿದುಕೊಳ್ಳುವ ಕುತೂಹಲ ಸರ್ವೇಸಾಧಾರಣವಾಗಿ ಎಲ್ಲರಲ್ಲಿಯೂ ಇರುತ್ತದೆ. ಆದಕಾರಣ ಪತ್ರಿಕೆಗಳಲ್ಲಿ ಬಂದಿರುವ ಅಂಶವನ್ನು ಇಲ್ಲಿ ಎತ್ತಬೇಕಾಗುತ್ತದೆ. ಇದು ಬಹಳ ಪ್ರಾಮುಖ್ಯವಾದ ವಿಷಯವಾದ್ದರಿಂದ, ಕೂಡಲೇ ಚರ್ಚೆಯಾಗಬೇಕು. ಆದರೆ ಇದನ್ನು ಚರ್ಚೆ ಮಾಡಲು ನೋಟಿಸ್ ಬೇಕು, ಮೋಷನ್ ಬೇಕು ಎಂದು ಕಟ್ಟುನಿಟ್ಟಾಗಿ ಹೇಳುವುದು ಸರಿಯಲ್ಲ, ಕೆಲವು ಸಂದರ್ಭಗಳಲ್ಲಿ ನಿಯಮಗಳನ್ನು ಬದಲಾವಣೆ ಮಾಡಿಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ಇದನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

11.00 A.M.

Sri C. M. ARUMUGHAM.—We are not interfering with the party affair. There was some party matter–cleansing campaign. We thougt it is a party matter and so we did not interfere. Allegations against Ministers by Members of Parliament is not a party affair.

MADAM SPEAKER.—The Government has understood what you have got to say further.

Sri C. M. ARUMUGHAM.—We want a reply from the Government.

MADAM SPEAKER.—Let the Chief Minister come.

Sri C. M. ARUMUGHAM.—Is the Chief Minister is not there, the Deputy Leader is here who can reply.

Sri H. M. CHANDRABASAPPA (Minister for Public Works and Electricity).—I rise to Point of Order. Is the motion before the House ? I seek a Ruling in the matter. Before the Point of Order is disposed of, I don't think discussion can take place.

Sri H D. DEVE GOWDA.—Please hear us before the Ruling given.

ಶ್ರೀ ವಾಟಾಳ್ ನಾಗರಾಜ್.— ಮಂತ್ರಿಮಂಡಲದ ಮೇಲೆ ಆಪಾದನೆ ಮಾಡಿ ಪಾರ್ಲಿಮೆಂಟ್ ಸದಸ್ಯರು ಪ್ರಧಾನಿಯವರಿಗೆ ಆಪಾದನೆಯ ಪಟ್ಟಿಯನ್ನು ಸಲ್ಲಿಸಿದ್ದಾರೆ. ಆದ್ದರಿಂದ ಇದು ಬಹಳ ಮುಖ್ಯವಾದ ವಿಷಯ.

MADAM SPEAKER.—I know the importance. But, rules have to be followed.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈಗಾಗಲೇ ಕೆಲವು ಮಂತ್ರಿಗಳನ್ನು ಮಂತ್ರಿಮಂಡಲದಿಂದ ತೆಗೆಯುತ್ತಾರೆ ಎಂದೂ, ಒಂದುವೇಳೆ ಅವರನ್ನು ತೆಗೆದರೆ ಅವರು ಕುರ್ಚಿ ಬೆಂಚನ್ನು ಹೊತ್ತುಕೊಂಡು ಹೋಗುತ್ತಾರೆ ಎಂದೂ ಅವರ ಮನೆಯ ಮುಂದೆ ಬಲವಾದ ಪೋಲೀಸ್ ಕಾವಲು ಹಾಕಿದ್ದಾರೆ. ಆದ್ದರಿಂದ ಈ ಬಗ್ಗೆ ಖಚಿತವಾದ ಅಭಿಪ್ರಾಯವನ್ನು ಹೇಳಬೇಕು. ಯಾರು ಮಂತ್ರಿಮಂಡಲದಿಂದ ಹೋಗುತ್ತಾರೆ ಎಂಬುದನ್ನು ಹೇಳಿದರೆ ಒಳ್ಳೆಯದು.

ಅಧ್ಯಕ್ಷರು.—ಇದು ಸಕಾಲವಲ್ಲ. ಮುಖ್ಯಮಂತ್ರಿಗಳು ಬರಲಿ ಆಮೇಲೆ ನೋಡೋಣ.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಪ್ರಾಮುಖ್ಯವಾದ ವಿಷಯ.

ಅಧ್ಯಕ್ಷರು.—ನನಗೆ ಗೊತ್ತಿದೆ.

Sri C.M. ARUMUGHAM.—The Ministers of Mysore are responsible to this House. The members of this House are entitled to know what is going on on the other Side. The Members of Parliament at Dehli have raised ceratian issues against our Ministers. We are entitled to know what it is.

Sri H.M. CHANNABASAPPA.—Let the hon. member move a motion and if the motion is admitted I should have absolutely no objection.

MADAM SPEAKER.—That is exactly the case. Let the hon. member send a notice, I will send it to Government and they will reply.

Sri H. D. DEVE GOWDA.—Hon. member Sri Konandur Lingappa has already sent a notice.

MADAM SPEAKER.—I have sent it to Government. Let the reply come.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಅನೇಕ ಪ್ರಮುಖರು ಯಾವ ಕಡೆ ಇರಬೇಕು, ಯಾವ ಕಡೆ ಹೋಗಬೇಕು ಎಂದು ಕ್ಯಾನ್‌ವಾಸ್ ಮಾಡುತ್ತಿದ್ದಾರೆ. ಹೀಗಿರುವಾಗ ಸುಮ್ಮನೆ ಗೊತ್ತಿಲ್ಲದವರ ಹಾಗೆ ಕುಳಿತುಕೊಂಡರೆ ಹೇಗೆ?

ಅಧ್ಯಕ್ಷರು.—ನೀವು ಆ ರೀತಿ ಉತ್ತರ ಹೇಳಬೇಕು ಎಂದು ಇನ್‌ಸಿಸ್ಟ್ ಮಾಡುವುದು ಸರಿಯಲ್ಲ. He cannot insist for a statement now. The notice has been sent to the Chief Minister's office. May be he may make a statement. Let the reply come. I will see whether I should admit it or not. Afterwards the members can discuss.

ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ಚನ್ನಬಸಪ್ಪನವರಿಗೆ ವಿಷಯ ಗೊತ್ತಿದೆ. ಆದರೆ ಅವರು ಎಲ್ಲಿ ಏನಾಗುತ್ತದೆಯೋ ಎಂದು ಹೇಳಿಕೆ ಕೊಡುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ. ಮುಖ್ಯಮಂತ್ರಿಗಳು ಎಲ್ಲಿದ್ದಾರೆ? ಅವರನ್ನು ಈ ಸಭೆಗೆ ಕರೆಸಿ.

ಅಧ್ಯಕ್ಷರು.—ತಾವು ಈ ರೀತಿ ಮಾಡಿದರೆ ಹೇಗೆ!

Sri C. M. ARUMUGAM.—The Government of Mysore is not directly responsible to the Members of Parliament.

Sri S. M. SHEERNALY CHANDRASEKHAR.—I rise to a point of Order. Without a motion how can the subject be raised ?

Sri M. S. KRISHNAN.—There must be no anxiety for a motion because already there are lot of motions on the other side.

Sri C. M. ARUMUGHAM.—The Hon'ble Minister Sri H.M. Channabasappa stated that there cannot be any action without cause. Members of Parliament have made several charges against our Ministery and they want to present a Memorandum to the Prime Minister. Immediately it was taken note of and they have authorised the Chief Mieister to take action, and the Chief Minister has written a letter to the Prime Minister. We want to know what are the allegations and what the Chief Minister has written to the Prime Minister.

MADAM SPEAKER.—Let the Chief Minister Come. But the Hon. Members cannot insist for a statement now.

ಶ್ರೀ ವಾಟಾಳ್ ನಾಗರಾಜ್.—ಇದು ರಾಜ್ಯದ ಪ್ರಶ್ನೆ, ಬಹಳ ಮುಖ್ಯವಾದುದು.

ಅಧ್ಯಕ್ಷರು.—ನನಗೆ ಗೊತ್ತಿದೆ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಸರ್ಕಾರದ ಅಧಿಕಾರವನ್ನು ದುರುಪಯೋಗ ಮಾಡಿದ್ದಾರೆ ಎಂದು ಆಪಾದನೆ ಮಾಡಿದ್ದಾರೆ.

ಅಧ್ಯಕ್ಷರು.—ನಾನು ಸೀನಿಯರ್ ಮೆಂಬರು ಎಂದು ಒಂದು ಸಾರಿ ಹೇಳುತ್ತೀರಿ, ಈ ರೀತಿ ಮಾತನಾಡಿದರೆ ಹೇಗೆ ?

Sri C. M. ARUMUGAM.—Shall we take up this matter on Monday ?

MADAM SPEAKER.—I cannot assure the Hon. member. Let the reply come and I will examine it

ಶ್ರೀ ಎಚ್. ಡಿ. ದೇವೇಗೌಡ.—ಇದರ ಬಗ್ಗೆ ಮಾನ್ಯ ಕೋಣಂದೂರು ಲಿಂಗಪ್ಪನವರು ಒಂದು ನೋಟಿಸನ್ನು ಕಳಿಸಿದ್ದಾರೆ. ಇದು ಬಹಳ ಗಹನವಾದ ವಿಷಯ. ಇವತ್ತು ಈ ಮಂತ್ರಿ ಮಂಡಲದ ಮೇಲೆ ಪಾರ್ಲಿಮೆಂಟ್ ಸದಸ್ಯರು ಭ್ರಷ್ಟಾಚಾರದ ಆಪಾದನೆಯನ್ನು ಮಾಡಿದ್ದಾರೆ. ಇಂತಹ ನಿಷ್ಠಾವಂತ ಮಂತ್ರಿಮಂಡಲದ ಮೇಲೆ ಆ ರೀತಿ ಮಾಡಿರುವುದು ಬಹಳ ಮುಖ್ಯವಾದ ವಿಷಯ, ಆದ್ದರಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಸೋಮವಾರ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅಧ್ಯಕ್ಷರೇ, ದೇಶದಲ್ಲ ಎಲ್ಲಾ ಬೆಲೆಯು ಏರುತ್ತಿರುವಾಗ ಈ ಅಡಿಕೆ ಬೆಲೆಯು ಇಳಿಯುತ್ತಾ ಇದೆ. ಅದರ ಬಗ್ಗೆ ನಾನು ಒಂದು ನೋಟೀಸ್ ಕಳುಹಿಸಿದ್ದೆ. ಅವರ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡಬೇಕು.

ಅಧ್ಯಕ್ಷರು.—ಮಾನ್ಯ ಶ್ರೀ ಕೆ. ಎಚ್. ಪಾಟೀಲರು ಈಗ ಇಲ್ಲ. ಆ ಮೇಲೆ ನೋಡೋಣ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರದವರು ಇದರ ಬಗ್ಗೆ ಒಂದು ಹೇಳಿಕೆಯನ್ನು ಇವತ್ತೇ ಕೊಡಬೇಕು.

Sri C. M. ARUMUGAM.—We have also observed Sri Gundu Rao canvassing the members both inside and outside the House, He has become very active.

ಅಧ್ಯಕ್ಷರು.—ಮುಂದಿನ ಸಬ್‌ಜೆಕ್ಟ್ ಶ್ರೀ ಶಾಮಣ್ಣನವರ ನಾನ್ ಅಫಿಷಿಯಲ್ ರೆಸಲ್ಯೂಷನ್.

NON-OFFICIAL RESOLUTIONS

(i) *re* : Eradication of mesquito nuisance in Bangalore City

MADAM SPEAKER.—Now, Sri T R. Shamanua will continue his speech.

† **ಶ್ರೀ ಟಿ. ಆರ್. ಶಾಮಣ್ಣ.**—ಮಾನ್ಯ ಸಭಾಧ್ಯಕ್ಷರೇ, ನಗರದ ನಾಗರೀಕರನ್ನು ಕಾಡುತ್ತ ಇರತಕ್ಕಂತಹ ಮುಖ್ಯವಾದ ಸಮಸ್ಯೆಗಳಲ್ಲಿ ಸೊಳ್ಳೆಗಳ ಕಾಟ ಒಂದು ಎಂಬುದು ಕಡಿಸಿಕೊಂಡಿರತಕ್ಕಂತಹ ಅನೇಕ ವ್ಯಕ್ತಿಗಳಿಗೆ ಗೊತ್ತು. ಬೆಂಗಳೂರು ನಗರದಲ್ಲಿ ಕಾರ್ಪೋರೇಶನ್ನಿನವರು ಪ್ರತೀ ವರ್ಷ 12 ಲಕ್ಷ ರೂಪಾಯಿಗಳನ್ನು ಇದಕ್ಕೋಸ್ಕರ ಖರ್ಚು ಮಾಡುತ್ತಿದ್ದಾರೆ. ಆ ಮೇಲೆ ನಗರ ನೈರ್ಮಲ್ಯಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಹಾಗೂ ಒಳ ಚರಂಡಿ ವ್ಯವಸ್ಥೆಗೆ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಬೆಂಗಳೂರು ವಾಟರ್ ಅಂಡ್ ಸಿವರೇಜ್ ಬೋರ್ಡಿನವರು 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ವರ್ಷ ವರ್ಷಕ್ಕೆ ಇಷ್ಟು ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೂ ಕೂಡ ನಾಗರೀಕರಿಗೆ ಈ ಸೊಳ್ಳೆ ಕಾಟದಿಂದ ಪರಿಹಾರ ಸಿಗದಿರತಕ್ಕದ್ದು ಬಹಳ ಶೋಚನೀಯವಾದ ಸಂಗತಿ. ಅದರಲ್ಲೂ ಬೆಂಗಳೂರು ನಗರದ ಮಾಗಡಿ ರೋಡ್. ಚಾಮರಾಜಪೇಟೆ, ಕೆಂಪೇಗೌಡ ನಗರ, ಜಯನಗರ, ವಿಲ್ಸನ್ ಗಾರ್ಡನ್, ಆಡುಗೋಡಿ, ಸೊನ್ನೇನಹಳ್ಳಿ—ಮುಂತಾದ ಕಡೆಗಳಲ್ಲಿ ಸೊಳ್ಳೆಗಳ ಹಾವಳಿ ಬಹಳ ವಿಪರೀತವಾಗಿವೆ. ಅದರ ಬಗ್ಗೆ ನಾನು ಕಳಿಸಿರುವ ನಿರ್ಣಯ ಬ್ಯಾಲೆಟಿನಲ್ಲಿ ಆದ್ಯತೆಯನ್ನು ಪಡೆದು ಇಲ್ಲಿ ಚರ್ಚೆಗೆ ಬಂದಿದೆ. ಇವೊತ್ತಿನ ದಿವಸ ಜನರಿಗೆ ಆಹಾರದ ಅಭಾವ ಇರತಕ್ಕ ಸಮಯದಲ್ಲಿ ಈ ರೀತಿ ಜನರ ರಕ್ತವನ್ನು ಸೊಳ್ಳೆಗಳು ಹೀರುತ್ತಾ ಇದ್ದು ರಾತ್ರಿ ಹೊತ್ತಿನಲ್ಲಿ ನಾಗರೀಕರಿಗೆ ವಿಪರೀತ ತೊಂದರೆಯಾಗುತ್ತಿದೆ. ಅದರಲ್ಲಿಯೂ ವಿದ್ಯಾರ್ಥಿಗಳಿಗೆ ರಾತ್ರಿ ಹೊತ್ತು ಓದಿಕೊಳ್ಳಲು ಬಹಳ ಕಷ್ಟವಾಗುತ್ತದೆ. ಈ ಸೊಳ್ಳೆಗಳು ಕಿವಿಯ ಹತ್ತಿರ ಬಂದು ಉಪದ್ರವ ಕೊಡುವುದರ ಜೊತೆಗೆ ಬಾಯಿಯ ಒಳಗೆ ಸಹ ಹೋಗಿ ಬಿಡುತ್ತದೆ. ಅದರಲ್ಲೂ ಸೊಳ್ಳೆ ಪರದೆ ಇಲ್ಲದಿರುವ ಮತ್ತು ಡಿ ಡಿ ಟಿ ಇತ್ಯಾದಿ ಉಪಯೋಗಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲದಿರತಕ್ಕಂತಹ ಜನರಿಗೆ ವಿಪರೀತವಾದ ಕಷ್ಟವಾಗುತ್ತದೆ. ಇದನ್ನು ಅರಿಯಬೇಕಾದರೆ, ಮಂತ್ರಿಯವರು ಆಡುಗೋಡಿಯಲ್ಲಿ ಮನೆ ಮಾಡಿ ಸೊಳ್ಳೆ ಪರದೆ ಇಲ್ಲದೆ ವಾಸ ಮಾಡಿದರೆ ಇವುಗಳ ಕಾಟ ಎಷ್ಟು ಎಂದು ಗೊತ್ತಾಗುತ್ತದೆ. ಸೆಕೆಗಾಲದಲ್ಲಿ ಅಂತೂ ಬಹಳ ಕಷ್ಟ. ಹೊದ್ದಿಕೊಳ್ಳುವುದಕ್ಕೂ ಆಗುವುದಿಲ್ಲ, ಹೊದ್ದುಕೊಳ್ಳದಿದ್ದರೆ ಇದರ ಕಾಟ ತಪ್ಪಿದ್ದಲ್ಲ. ಒಂದೊಂದು ಸಮಯದಲ್ಲಿ ಈ ಸೊಳ್ಳೆಗಳು ವಿಪರೀತ ಜಾಸ್ತಿಯಾಗುತ್ತವೆ; ಕೆಲವು ಸಮಯದಲ್ಲಿ ಕಡಿಮೆಯಾಗಿರುತ್ತವೆ. ಆದರೆ ಸರ್ಕಾರ ಇಷ್ಟು ಹಣ ಖರ್ಚು ಮಾಡಿದ್ದರೂ ಕೂಡ ಈ ಸಮಸ್ಯೆ ಪರಿಹಾರವಾಗದಿದ್ದುದು ಬಹಳ ಶೋಚನೀಯ. ಸರ್ಕಾರ 1952ನೇ ಇಸವಿಯಲ್ಲಿ ಇದರ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದರು. ಪುನಃ 1967ರಲ್ಲಿ ಒಂದು ಕಮಿಟಿಯನ್ನು ಮಾಡಿದರು. ಈಗ ಎಲ್ಲಾ ಅಸೆಂಬ್ಲಿ ಸದಸ್ಯರನ್ನು ಮತ್ತು ಕೌನ್ಸಿಲ್ ಸದಸ್ಯರನ್ನು ಸೇರಿಸಿ ಒಂದು ದೊಡ್ಡ ಕಮಿಟಿ ಮಾಡಿದ್ದಾರೆ. ಆದರೂ ಸಹ ಯಾವ ಒಂದು ಪರಿಣಾಮಕಾರಿಯಾದಂತಹ ತೀರ್ಮಾನ ಆಗದಿರುವುದು ವಿಷಾದಕರವಾದ ವಿಚಾರ. ಬೆಂಗಳೂರಿನಲ್ಲಿ ಕ್ಯುಲೆಕ್ಸ್ ಎನ್ನತಕ್ಕಂತಹ ಸೊಳ್ಳೆಯ ಕಾಟ ಹೆಚ್ಚಾಗಿದೆ. ಇದು ಹೆಚ್ಚಾಗಿ ಕೊಳಚೆ ಪ್ರದೇಶಗಳಲ್ಲಿ ಬರುತ್ತವೆ. ಕೋರಮಂಗಲ ವ್ಯಾಲಿ, ಕೆಂಪಾಂಬುಧಿ ವ್ಯಾಲಿ, ಹೊಸಹಳ್ಳಿ ವ್ಯಾಲಿ—ಮುಂತಾದ ಕೊಳಚೆ ನೀರಿನ ಜಾಗಗಳಲ್ಲಿ ಈ ಸೊಳ್ಳೆಗಳು ಹೆಚ್ಚಾಗಿ ಬೆಳೆಯುತ್ತವೆ. ಅಲ್ಲದೆ ಬೆಂಗಳೂರಿನ ಕೊಳಚೆ ನೀರು ನಗರದಲ್ಲಿರತಕ್ಕಂತಹ ಕೆರೆಗಳಿಗೆ ಹೋಗಿ ಸೇರತಕ್ಕದ್ದನ್ನು ತಪ್ಪಿಸಬೇಕು ಏಕೆಂದರೆ ಅಲ್ಲಿ ಸೊಳ್ಳೆಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇವತ್ತು ಚಾಮರಾಜಪೇಟೆ ಮತ್ತು ಶಂಕರಪುರದ ನೀರು ಕೆಂಪಾಂಬುಧಿ ಕೆರೆಗೆ, ಬಸವನಗುಡಿಯ ನೀರು ಚನ್ನಮ್ಮ ಕೆರೆಗೆ ಮತ್ತು ಜಯನಗರದ ನೀರು ಸಿದ್ದಾಪುರದ ಕೆರೆಗೆ ಹೋಗಿ ಸೇರುತ್ತದೆ. ಇದನ್ನು ತಪ್ಪಿಸಬೇಕು. ಹೀಗೆ ಕೊಳಚೆ ನೀರು ಹೋಗಿ ಕೆರೆಗಳಲ್ಲಿ ಸೇರಿ ಆ ಕೆರೆಯೊಳಗೆ ಒಂದು ದೊಡ್ಡ ಆಶ್ರಯ ಕೊಡತಕ್ಕ ನಿವೇಶನ ಆಗಿರುವುದನ್ನು ತಡೆಗಟ್ಟದೇ ಇರುವುದು ಬಹಳ ವಿಷಾದಕರವಾದ ವಿಚಾರ. ಕಾರ್ಪೋರೇಷನ್ನಿನವರೂ. ವಾಟರ್ ಸಪ್ಲೈ ಬೋರ್ಡಿನವರು ಇದರ ಬಗ್ಗೆ ಕೈಕಟ್ಟಿಕೊಂಡು ಕೂತಿದ್ದಾರೆನ್ನುವುದನ್ನು ನೋಡಿದರೆ ದುಡ್ಡು ಏನೋ ಖರ್ಚಾಗುತ್ತದೆ, ಜನಗಳಿಗೆ ಯಾವ ವಿಧವಾದ ಸೌಕರ್ಯವನ್ನು ಕೊಡುತ್ತಾ ಇಲ್ಲ. ಇದಕ್ಕೆ ಮುಖ್ಯಕಾರಣ, ಬೆಂಗಳೂರು ನಗರದ ಸುತ್ತಲೂ 700 ಎಕರೆಯಲ್ಲಿ ಹುಲ್ಲು ಬೆಳೆಯುತ್ತಿದೆ. ಕೊಳಚೆ ನೀರಿನಿಂದ ಹುಲ್ಲುಬೆಳೆಸುತ್ತಾರೆ. ಬೆಂಗಳೂರು ನಗರದಲ್ಲಿ ಕೊಳಚೆ ನೀರು ಇಲ್ಲದಿದ್ದರೆ ಹುಲ್ಲಿನ ಅಭಾವ ಬರುತ್ತದೆ. ಆದರೆ ಕೆಲವು ಕಡೆಗಳಲ್ಲಿ ಕೊಳಚೆಯ ನೀರು ಸರಿಯಾಗಿ ಹರಿದು ಹೋಗುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡುತ್ತಾ ಇಲ್ಲ. ಅದು ಓಪನ್ ಆಗಿ ಹರಿದುಹೋಗುತ್ತಿದೆ. ಕಾರ್ಪೋರೇಷನ್ನಿನವರು ಅನೇಕ ಸಂದರ್ಭಗಳಲ್ಲಿ ಸೊಳ್ಳೆಗಳನ್ನು ನಿವಾರಣೆಮಾಡುವ ಉದ್ದೇಶದಿಂದ ಒಂದು ದೊಡ್ಡ ಎಸ್ಟಾಬ್ಲಿಷ್‌ಮೆಂಟನ್ನು ಇಟ್ಟುಕೊಂಡಿದ್ದಾರೆ. ಅನೇಕ ಜನ ಅಲ್ಲಿ ಹೋಗಿ ಆಯಿಲ್ ಮಾಡುತ್ತಿದ್ದರೂ ಏನೂ ಪ್ರಯೋಜನವಾಗುತ್ತಾ ಇಲ್ಲ. ಇದಕ್ಕೆ ಷಾರ್ಟ್‌ರೇಂಜ್ ಪ್ರಾಬ್ಲಂ, ಲಾಂಗ್ ರೇಂಜ್ ಪ್ರಾಬ್ಲಂ ಹಾಕಿಕೊಂಡು ಕೆಲಸ ಮಾಡಬೇಕು. ಇದರ ಬಗ್ಗೆ ನಾನು ಕೆಲವಾರು ಸಲಹೆಗಳನ್ನು ಗುರ್ತು ಮಾಡಿಕೊಂಡು ಬಂದಿದ್ದೇನೆ. ಆದನ್ನು ಸರ್ಕಾರ

(ಶ್ರೀ ಟಿ. ಆರ್. ಶಾಮಣ್ಣ)

ದವರಿಗೆ ಕಳುಹಿಸಿಕೊಡುತ್ತೇನೆ. ಮೊಟ್ಟ ಮೊದಲನೆಯದಾಗಿ ಬೆಂಗಳೂರು ನಗರದ ಕೊಳಚೆ ನೀರನ್ನು ಬೆಂಗಳೂರು ನಗರದ ಗಡಿಯನ್ನು ಬಿಟ್ಟು ಒಂದು ಮೈಲಿ ದೂರ ತೆಗೆದುಕೊಂಡು ಹೋಗಬೇಕು. ಏಕೆಂದರೆ ಒಂದು, ಒಂದೂವರೆ ಮೈಲಿ ದೂರ ಸೊಳ್ಳೆಗಳು ಹಾರಿ ಹೋಗುವುದಕ್ಕಾಗುವುದಿಲ್ಲ. ಎರಡನೆಯದಾಗಿ ಬೆಂಗಳೂರು ನಗರದಲ್ಲಿ ಸೊಳ್ಳೆ ಕಾಟ ಹೆಚ್ಚುವುದಕ್ಕೆ ಅತಿ ಮುಖ್ಯವಾದ ಕಾರಣವೇನೆಂದರೆ, ಕೊಳಚೆಯ ನೀರನ್ನು ಹೆಚ್ಚಿಗೆ ತರಕಾರಿ, ಹುಲ್ಲು, ಬೆಳೆಯುವುದಕ್ಕೆ ಉಪಯೋಗಿಸುತ್ತಾರೆ. ಕೊಳಚೆ ನೀರು ಹೋಗುವ ದಾರಿಯಲ್ಲಿ ತೋಟದ ಬಾವಿಗಳಿಗೆ ನೀರನ್ನು ದೊರಕಿಸಿಕೊಂಡಿದ್ದೇವೆ. ಅದನ್ನು ಸರ್ಕಾರದವರು, ಕಾರ್ಪೊರೇಷನ್ನಿನವರು ನೋಡಿಕೊಂಡು ಹೋಗುತ್ತಿದ್ದಾರೆ. ಕೊಳಚೆ ನೀರನ್ನು ಉಪಯೋಗಿಸುವುದನ್ನು ನೋಡಿಕೊಂಡು ಹಾಗೆಯೇ ಬಿಟ್ಟುಕೊಂಡು ಹೋಗುತ್ತಿದ್ದಾರೆ. ಈ ಕೊಳಚೆ ನೀರಿನಿಂದ ತೋಟಗಾರಿಕೆಯಾಗುವುದನ್ನು ತಪ್ಪಿಸಬೇಕು. ಮೂರನೆಯದಾಗಿ ಕೊಳಚೆಯ ನೀರಿನಿಂದ ಉತ್ಪನ್ನವಾಗತಕ್ಕದ್ದನ್ನು ತಪ್ಪಿಸಬೇಕು. ಆದರಿಂದಾಗಿ ಅನೇಕ ಕೆರೆಗಳನ್ನು ಬ್ರೀಚ್ ಮಾಡಬೇಕು. ಬೆಂಗಳೂರಿನ ಸುತ್ತಲ್ಲೂ ಕೊಳಚೆ ನೀರು ಸೇರುವ ಕೆರೆಗಳು ಅನೇಕ ಇವೆ. ಆದರೆ ಇದು ಅದರ ಪಕ್ಕದಲ್ಲಿಯೇ ಒಂದು ವಿಶಾಲವಾದ ಜಮೀನು ಇದೆ. ಅದು ಡ್ರೈಅಪ್ ಆದಮೇಲೆ ಹರಾಜಿನಲ್ಲಿ ಅದನ್ನು ಮಾರಿದರೆ ಬೇಕಾದಷ್ಟು ದುಡ್ಡು ಬರುತ್ತದೆ ಹೀಗೆ ನಮ್ಮ ಕೆಲವು ಏರಿಯಾಗಳಲ್ಲಿ ಸೊಳ್ಳೆಯನ್ನು ನಿರ್ಮೂಲ ಮಾಡಬಹುದು. ಬೆಂಗಳೂರಿನ ಸುತ್ತಮುತ್ತಲೂ ಒಂದು ವಿಸ್ತಾರವಾದ ಪ್ರದೇಶವನ್ನು ನಾವು ಪಡೆಯಬಹುದು. ದುಡ್ಡು ಸಾಲದೇ ಹೋದರೆ ಅಲ್ಲಿರತಕ್ಕ ಜಮೀನನ್ನು ಹರಾಜುಮಾಡಿ ಇದಕ್ಕೆ ಉಪಯೋಗಿಸಬಹುದು. ಬೆಂಗಳೂರು ನಗರದಲ್ಲಿ ಸ್ಯುಯರೇಜ್ ಡಿಸ್‌ಪೋಜಲ್ ಪ್ಲಾಂಟನ್ನು ಹಾಕಬೇಕೆಂದು ತೀರ್ಮಾನವಾಗಿದೆ. ವಾಟರ್ ಸಪ್ಲೈ ಅಂಡ್ ಸ್ಯೂಯರೇಜ್ ಬೋರ್ಡಿನವರು ಇದನ್ನು ಕಾರ್ಯಗತ ಮಾಡಬೇಕು. ಸೊಳ್ಳೆಯ ಕಾಟ ಮಲೆನಾಡಿನ ಪ್ರದೇಶಗಳಲ್ಲಿ ಬಹಳ ಜಾಸ್ತಿ ಇದೆ. ಆದರೂ ನನಗೆ ಗೊತ್ತಿರುವ ಪ್ರಕಾರ ಮಂಡ್ಯ ಪ್ರದೇಶದಲ್ಲಿ ಈಗ ಅವರ ಕಾಟವನ್ನು ಕಡಿಮೆ ಮಾಡಿದ್ದಾರೆ. ಬೆಂಗಳೂರು ನಗರದಲ್ಲಿ ಹತ್ತಾರು ಲಕ್ಷ ರೂಪಾಯಿಗಳು ಖರ್ಚಾದರೂ ಇವುಗಳ ಕಾಟ ಇನ್ನೂ ಕಡಿಮೆಯಾಗದೇ ಇರುವುದು ಬಹಳ ವಿಷಾದಕರವಾಗಿದೆ. ಬೆಂಗಳೂರು ನಗರದಲ್ಲಿ ವರ್ಷೇ ವರ್ಷೇ 50 ಲಕ್ಷ ರೂಪಾಯಿಗಳವರೆಗೆ ಖರ್ಚುಮಾಡಿದರೂ ಸಂಬಂಧಪಟ್ಟ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದ ಡ್ರೈನೇಜ್ ಸಿಸ್ಟಂ ಏನೂ ಪ್ರಯೋಜನವಾಗಿಲ್ಲ. ಆ ಕೆಲಸಗಳು ಸಮರ್ಪಕವಾಗಿ ಆಗಿಲ್ಲ. ಇದರಲ್ಲಿ ನೀರು ವಿಶೇಷವಾಗಿ ನಿಂತು ಸೊಳ್ಳೆಗಳು ಹೆಚ್ಚಿಗೆ ಉದ್ಭವವಾಗುವುದಕ್ಕೆ ಅನುಕೂಲವಾಗುತ್ತಿದೆ. ಬೆಂಗಳೂರು ನಗರದಲ್ಲಿ ಹೆಚ್ಚಿಗೆ ಸ್ಲಮ್ಸ್ ಇರುವ ಕಡೆ ಅವರಲ್ಲಿಯೂ ಬಡವರು ವಾಸಿಸುತ್ತಿರುವ ಕಡೆಗಳಲ್ಲಿ ಸ್ಯುಯರೇಜ್ ಸಿಸ್ಟಂ ಇಲ್ಲದೇ ಇರುವುದು ಬಹಳ ವಿಷಾದಕರ. ಒಟ್ಟಿನಲ್ಲಿ ಬೆಂಗಳೂರಿನ ಸುತ್ತಲೂ ಸ್ಯುಯರೇಜ್ ಸಿಸ್ಟಂ ಇನ್ನೂ ಜಾರಿಗೆ ಬರಲಿಲ್ಲ. ಇದರಿಂದ ಕೊಳಚೆಯ ನೀರು ಹಾಗೆಯೇ ನಿಂತು ವಿಶೇಷವಾಗಿ ಸೊಳ್ಳೆಗಳು ಉದ್ಭವವಾಗುವುದಕ್ಕೆ ಅನುಕೂಲವಾಗುತ್ತಿದೆ. ಬೆಂಗಳೂರಿನ ಸುತ್ತಮುತ್ತಲೂ ಅನೇಕ ಕಾಲುವೆಗಳನ್ನು ಒಡೆದುಹಾಕಿ ಕೆರೆಗಳನ್ನಾಗಿ ಮಾಡುತ್ತಿದ್ದಾರೆ. ಅಲ್ಲಿ ನೀರು ನಿಲ್ಲುವ ಹಾಗೆ ಏನಾದರೂ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಬೆಂಗಳೂರು ನಗರದಲ್ಲಿ ಟ್ರಸ್ಟ್ ಬೋರ್ಡ್ ಇದೆ, ಕಾರ್ಪೊರೇಷನ್ ಇದೆ, ವಾಟರ್ ಸಪ್ಲೈ ಅಂಡ್ ಸ್ಯುಯರೇಜ್ ಬೋರ್ಡ್ ಇದೆ. ಹೀಗೆ ಈ ಮೂರು ಸಂಸ್ಥೆಗಳೂ ಒಟ್ಟುಗೂಡಿ ಒಂದು ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಒಂದು ಕೋಆರ್ಡಿನೇಟ್ ಅರೇಂಜ್‌ಮೆಂಟ್ ಇರಬೇಕು. ಅದೂ ಅಲ್ಲದೆ ಈಗ ಮೂರು ಮುಖ್ಯವಾದಂಥ ಮೇಜರ್ ವ್ಯಾಲಿಗಳಿವೆ. ಅವು ಯಾವುದೆಂದರೆ ಚಳ್ಳಘಟ್ಟ ಕೋರಮಂಗಲ ಮತ್ತು ವೃಷಭಾವತಿ ಈ ಮೂರು ಜಾಗಗಳಲ್ಲಿ ಸ್ಯುಯರೇಜ್ ಡಿಸ್‌ಪೋಜಲ್ ಪ್ಲಾಂಟ್ ಹಾಕಬೇಕು. ಆದರೆ ದೊಡ್ಡ ಯೋಜನೆಗಳನ್ನು ತೆಗೆದುಕೊಳ್ಳಬೇಕಾದರೆ ಕೋಟ್ಯಾಂತರ ರೂಪಾಯಿಗಳು ಈಗ ಖರ್ಚಾಗುತ್ತದೆ. ಅದರೂ ಇದಕ್ಕೆ ತಗಲುವ ಖರ್ಚನ್ನೆಲ್ಲಾ ಕಾರ್ಪೊರೇಷನ್ ವಹಿಸಿಕೊಳ್ಳುವುದಕ್ಕಾಗುವುದಿಲ್ಲ. ನನಗೆ ತಿಳಿದು ಬಂದಿರುವ ಪ್ರಕಾರ ಬೆಂಗಳೂರು ನಗರದಲ್ಲಿ ಹೆಚ್ಚು ಭಾಗದ ಜನರು ಹುಲ್ಲನ್ನು ಸ್ಯುಯರೇಜ್ ನೀರಿನಿಂದಲೇ ಬೆಳೆಯುತ್ತಾರೆ. ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರು ಹಾಗೂ ಕಾರ್ಪೊರೇಷನ್ನಿನವರು ಈ ಒಂದು ಬಾಬಿಗೆ ಬೇಕಾದಷ್ಟು ಹಣವನ್ನು ಒದಗಿಸಬೇಕಾಗಿದೆ. ಒಂದು ವೇಳೆ ಆ ಹಣ ಸಾಲದೇ ಇದ್ದರೆ ಪಬ್ಲಿಕ್ ಬಾರೊಯಿಂಗ್ ತೆಗೆದುಕೊಂಡು ಈ ಒಂದು ಸಮಸ್ಯೆಯನ್ನು ಬೇಗ ಬಗೆಹರಿಸಬೇಕಾಗಿದೆ. ಇದು ಬಹಳ ದೊಡ್ಡ ಪ್ರಾಬ್ಲಂ. ಈ ಬಾಬಿಗೆ ಹಣವನ್ನು ಹೆಚ್ಚಿಗೆ ಖರ್ಚುಮಾಡುವುದು ವೃಥಾ ವ್ಯರ್ಥವಾಗುತ್ತದೆ. ಜೊತೆಗೆ ಜನಗಳಿಗೆ ಹೆಚ್ಚಿನ ಸೌಲಭ್ಯ ದೊರಕುವುದೂ ಸಹ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈಗ ಯುದ್ಧದ ಪರಿಸ್ಥಿತಿ ಎಂಬುದಾಗಿ ತಿಳಿದುಕೊಂಡು ಸೊಳ್ಳೆಯ ಮೇಲೆ ಯುದ್ಧ

ಮಾಡುವ ಹಾಗೆ ಮಾಡದಿದ್ದರೆ, ಮುಂದೆ ಜನತೆಗೆ ಬಹಳವಾಗಿ ತೊಂದರೆಯಾಗುತ್ತದೆ. ಅನೇಕ ಕಡೆಗಳಲ್ಲಿ ಸರ್ಕಾರದವರು ಇದರ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿರುವುದನ್ನು ಬೇಕಾದರೆ ನಾನು ಸ್ಪಷ್ಟಪಡಿಸುತ್ತೇನೆ. ಸರ್ಕಾರದವರು ಹಾಗೂ ಮುನಿಸಿಪಾಲಿಟಿಯವರು ಇದರ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಅದನ್ನು ಬೇಕಾದರೆ ಟ್ರಸ್ಟ್ ಬೋರ್ಡಿನವರು ಮಾಡಲಿ ಎಂದು ಅವರಿಗೆ ಬಿಟ್ಟುಕೊಟ್ಟು ಎಲ್ಲಾ ತರಹ ಡಿಸೀಜ್‌ಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಇದರ ಬಗ್ಗೆ ಈಗಲೇ ಸಾಕಾದಷ್ಟು ವ್ಯವಸ್ಥೆಯನ್ನು ಮಾಡದೇ ಹೋದರೆ ಜನರು ಮುಂದೆ ಬಹಳ ಪಶ್ಚಾತ್ತಾಪ ಪಡಬೇಕಾಗಿ ಬರುತ್ತದೆ. ಬೆಂಗಳೂರು ನಗರ ಬಹಳ ಸುಂದರವಾದ ನಗರ. ಜನಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದು, ಕ್ಷೋಭೆ ಇದ್ದಾಗ ಜನಗಳಿಗೆ ತೊಂದರೆಯಾಗುತ್ತಿರುವುದನ್ನು ಬಗೆಹರಿಸುವುದು ಸರ್ಕಾರದ ಕರ್ತವ್ಯ. ಹಾಗೆ ಮಾಡದೆ ಬೇಜವಾಬ್ದಾರಿಯಿಂದ ಮತ್ತು ಏನೋ ಸಬೂಬಿನಿಂದ ಇಂತಹ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಇದಕ್ಕೆ ಸೂಕ್ತ ಕ್ರಮ ಬಹಳ ಮುಖ್ಯವಾದುದು. ಏಕೆಂದರೆ ಈ ಸಮಸ್ಯೆಯ ಬಗ್ಗೆ ಸರ್ಕಾರಕ್ಕೆ ಬೇಕಾದಷ್ಟು ವರದಿಗಳು ಬಂದಿವೆ. ನಮಗೂ ಕೂಡ ಬೇಕಾದಷ್ಟು ಕಾಗದಗಳನ್ನು ಕಳುಹಿಸುತ್ತಿದ್ದಾರೆ. ಆದರೆ ಇದಕ್ಕೆ ಸರಿಯಾದ ಪರಿಹಾರ ಸಿಗದೇ ಇರುವುದನ್ನು ನಾನು ಈ ಸಂದರ್ಭದಲ್ಲಿ ನೋಡುತ್ತಿದ್ದೇನೆ. ಒಟ್ಟಿನಲ್ಲಿ ಎಲ್ಲೆಲ್ಲಿ ಸೊಳ್ಳೆಗಳ ಕಾಟವನ್ನು ಪರಿಹಾರಮಾಡಬಹುದೋ ಅಲ್ಲಲ್ಲಿ ಕೂಡಲೇ ಪರಿಹಾರ ಮಾಡಿ ಅದರಿಂದ ಜನಗಳಿಗೆ ಅಗತಕ್ಕ ತೊಂದರೆಯನ್ನು ತಪ್ಪಿಸಬೇಕು. ಅದನ್ನು ಸರ್ಕಾರದವರು ಇನ್ನೂ ಮಾಡದೇ ಇರುವುದು ಬಹಳ ವಿಷಾದಕರ. ಅಹಾರಸಮಸ್ಯೆ, ನೀರಿನ ಸಮಸ್ಯೆ ಹಾಗೂ ಇತರ ಸಮಸ್ಯೆಗಳನ್ನು ಸರ್ಕಾರದವರು ಬಗೆಹರಸುತ್ತಿರುವಂತೆ ಅತಿಮುಖ್ಯವಾದಂಥ ಈ ಸೊಳ್ಳೆ ಕಾಟದ ಸಮಸ್ಯೆಯನ್ನು ಸರ್ಕಾರಕ್ಕೆ ತಗ್ಗಿಸುವುದಕ್ಕೆ ಆಗುವುದಿಲ್ಲವೇ ಎಂದು ನಾನು ಪ್ರಶ್ನೆ ಮಾಡುತ್ತೇನೆ.

11—30 A. M.

ರಾತ್ರಿ ವೇಳೆಯಲ್ಲಿ ನಿದ್ರೆಮಾಡುವುದಕ್ಕೆ ಎಷ್ಟು ಕಷ್ಟಪಟ್ಟರೂ ಸಾಧ್ಯವಾಗುತ್ತಿಲ್ಲ. ಈ ಸೊಳ್ಳೆಗಳ ಕಾಟದಿಂದ ಅದಕ್ಕೆ ಅಸ್ಪದವಿಲ್ಲದಂತಾಗಿದೆ. ಒಟ್ಟಿನಲ್ಲಿ ಈ ಸೊಳ್ಳೆಗಳ ಕಿರುಕುಳವನ್ನು ಇಷ್ಟೇ ಎಂದು ವರ್ಣಿಸುವುದಕ್ಕಾಗುವುದಿಲ್ಲ. ಆದಕಾರಣ ಸರ್ಕಾರದವರು ಇದನ್ನು ಅಷ್ಟು ಲಘುವಾಗಿ ಭಾವಿಸದೆ ಕೂಡಲೇ ತೀವ್ರ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಮಾಡುತ್ತಿದ್ದೇನೆ. ಸರ್ಕಾರದವರು ಉತ್ತರ ಕೊಡತಕ್ಕ ಕಾಲದಲ್ಲಿ ಇದನ್ನು ಇನ್ನು ಒಂದೆರೆಡು ವರ್ಷಗಳಲ್ಲಿ ಬಗೆಹರಿಸುತ್ತೇವೆಂದು ಹೇಳಬಾರದು. ಏನೋ ಶ್ಯಾಮಣ್ಣನವರು ಮಾತನಾಡಿದ್ದಾರೆ, ಆಯಿತು ಇರಲಿ, ನೋಡೋಣ ಅನ್ನತಕ್ಕ ಮನೋಭಾವನೆಯನ್ನು ದೂರ ಮಾಡಿ ಶಾಶ್ವತವಾಗಿ ನಗರದಲ್ಲಿ ಸೊಳ್ಳೆ ಕಾಟವನ್ನು ತಪ್ಪಿಸುವುದಕ್ಕೆ ಸರ್ಕಾರದವರು ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇದರಲ್ಲಿ ಮೂಲಭೂತವಾಗಿ ಸೊಳ್ಳೆಗಳು ಹೇಗೆ ಎಲ್ಲಿ ಉತ್ಪತ್ತಿಯಾಗುತ್ತವೆ, ಅವುಗಳನ್ನು ಮೂಲದಲ್ಲೇ ನಿರ್ಮೂಲಮಾಡುವುದಕ್ಕೇನು ಮಾಡಬೇಕು ಎಂಬುದನ್ನೆಲ್ಲಾ ಕಂಡುಕೊಂಡು ಇದರ ಬಗ್ಗೆ ಒಂದು ಷಾರ್ಟ್‌ರೇಂಜ್ ಮತ್ತು ಲಾಂಗ್ ರೇಂಜ್ ಪ್ಲಾನನ್ನು ಹಾಕಿಕೊಂಡು ಕ್ರಮವಾಗಿ ಶಾಸ್ತ್ರೋಕ್ತವಾಗಿ ಈ ಸಮಸ್ಯೆಯನ್ನು ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ನಾನು ಸ್ವಂತವಾಗಿ ಒಂದು ಕಾರ್ಯಕ್ರಮಗಳ ಪಟ್ಟಿಯನ್ನು ಹಾಕಿದ್ದೇನೆ. ಅದನ್ನು ಮಾನ್ಯ ಸಚಿವರಕಡೆಗೆ ಕೊಡುತ್ತೇನೆ, ಅವರು ಇದನ್ನು ಗಮನಕ್ಕೆ ತೆಗೆದುಕೊಂಡು ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತಿದ್ದೇನೆ. ಇದರಲ್ಲಿ 13—14 ಐಟಂ ವಿಷಯಗಳನ್ನು ಸೇರಿಸಿದ್ದೇನೆ. ಅವುಗಳು ಏನೆಂದರೆ :—

Tackling is most urgent for the first instance and laterly giving attention to the minor aspects. The three major valleys viz.; Challagabatta, Koramangala and Viswa Bharathi are the ones which are to be tackled immediately. Channammakere area is also bad and should be included in the priority list and so also Marenhalli Tank. All this means a very heavy expenditure of a few crores. This finance is to be got—a substantial portion as grants from the State and Central Governments and the balance should be raised as loans. The loans raised may be easily paid back from the savings of the heavy expenditure the Corporation is incurring year after year to tackle the mosquito menace.

(ಶ್ರೀ ಟಿ. ಆರ್. ಶಾಮಣ್ಣ)

This mosquito nuisance is to be tackled on a war footing. After careful planning, the work should be executed speedily and effectively. If concerted measures are not taken and if work is done in a half-hearted manner as is being done so far, large sums of Corporation Funds will be wasted annually and the poor citizens will continue to have the mosquito nuisance.

ಈ ದಿವಸ ಕಾರ್ಪೊರೇಷನ್ನಿನವರು ಈ ಡ್ರೈನೇಜ್ ಕ್ಲೀನಿಂಗ್ ಬಗ್ಗೆ 13 ಲಕ್ಷ ರೂಪಾಯಿಗಳನ್ನು ಪ್ರತಿವರ್ಷ ಖರ್ಚು ಮಾಡುತ್ತಿದ್ದಾರೆ. ಅದು ಮಾಡಿದರೂ ಪ್ರಯೋಜನವಿಲ್ಲದೆ ಅವರು ಮಾಡತಕ್ಕ ಖರ್ಚು ನಿರರ್ಥಕವಾಗುತ್ತಿದೆ. ಆದರೆ ಸಂಪೂರ್ಣವಾಗಿ ಈ ಸೊಳ್ಳೆಗಳ ಕಾಟವನ್ನು ತಪ್ಪಿಸುವುದಕ್ಕೆ ಅವರಲ್ಲಿ ಸಾಕಷ್ಟು ಹಣವಿಲ್ಲ. ಆದ್ದರಿಂದ ಸರ್ಕಾರದವರೇ ಇವಕ್ಕೆ ಹಣವನ್ನು ಒದಗಿಸಿಕೊಳ್ಳಬೇಕೆಂದೂ ಒತ್ತಾಯ ಮಾಡುತ್ತೇನೆ. ಆದರೆ ಸಂಬಂಧಪಟ್ಟ ಸಚಿವರು ಸಭೆಯಲ್ಲಿಲ್ಲದಿರುವುದು ಶೋಚನೀಯ. ಯಾವ ರೀತಿಯಲ್ಲಾದರೂ ಸರ್ಕಾರ ಕ್ರಮವನ್ನು ಕೈಗೊಳ್ಳಲೇಬೇಕೆಂದು ಒತ್ತಾಯ ಮಾಡಿ ಈ ನಿರ್ಣಯವನ್ನು ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ಸಭೆಯ ಮುಂದೆ ಮಂಡಿಸಿ ಇವಕ್ಕೆ ಸರ್ವರೂ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

† **ಶ್ರೀ ಕೆ. ಶ್ರೀರಾಮುಲು (ಗಾಂಧೀನಗರ).**—ಮಾನ್ಯ ಸಭಾಧ್ಯಕ್ಷರೇ ; ಶ್ರೀ ಟಿ. ಆರ್. ಶಾಮಣ್ಣನವರು ತಂದಿರತಕ್ಕ ನಿರ್ಣಯದಲ್ಲಿ ಅವರೇನು ಹೇಳಿದ್ದಾರೆ ಆ ವಿಷಯ ಅನೇಕಾವರ್ತಿ ಇದೇ ಸಭೆಯ ಮುಂದೆ ಚರ್ಚೆಯಾಗಿದೆ. ಸರ್ಕಾರದವರು ಈ ವಿಚಾರದಲ್ಲಿ ಪ್ರತಿಸಲವೂ ಉತ್ತರ ಕೊಡತಕ್ಕ ಕಾಲದಲ್ಲಿ ಇದರ ಜವಾಬ್ದಾರಿ ಕಾರ್ಪೊರೇಷನ್ನಿಗೆ ಸೇರಿದ್ದು ಎಂದು ಹೇಳಿ ಇದನ್ನು ಪರಿಸಮಾಪ್ತಿ ಮಾಡುವುದು ಒಂದು ವಾಡಿಕೆಯಾಗಿ ಬಂದಿದೆ. ನಾನು ಹಾಗೆ ಭಾವಿಸುವುದಿಲ್ಲ. ಈ ಸೊಳ್ಳೆ ಕಾಟವನ್ನು ತಪ್ಪಿಸುವುದಕ್ಕೆ ಹೌಸಿಂಗ್ ಬೋರ್ಡಿನವರಿಂದಲಾಗಲೀ, ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರಿಂದಲಾಗಲಿ ಅಥವಾ ಕಾರ್ಪೊರೇಷನ್ನಿನವರಿಂದಲಾಗಲಿ ಖಂಡಿತಾ ಸಾಧ್ಯವಿಲ್ಲ. ಇವುಗಳಿಗೆ ಬರತಕ್ಕ ಉತ್ಪತ್ತಿ ಏನಿದೆ ಅದು ಅವುಗಳ ಮೈಂಟೆನೆನ್ಸಿಗೇ ಸಾಲದು ಆದುದರಿಂದ ಇದನ್ನು ಪರಿಣಾಮಕಾರಿಯಾದ ರೀತಿಯಲ್ಲಿ ತಡೆಗಟ್ಟಬೇಕಾಗಿದ್ದರೆ ತಜ್ಞರ ಮೂಲಕ ಇದು ಯಾವ ಪ್ರಮಾಣದಲ್ಲಿ ಉತ್ಪನ್ನವಾಗುತ್ತದೆ ಎಂಬುದನ್ನು ಅರಿತು ಅದಕ್ಕೆ ತಕ್ಕ ಪ್ರಮಾಣದಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಈ ದಿವಸ ಕಾರ್ಪೊರೇಷನ್ನಿಗೆ ಬರತಕ್ಕ 8 ಕೋಟಿ ರೂಪಾಯಿ ವರಮಾನದಲ್ಲಿ 4 ಕೋಟಿ ರೂಪಾಯಿ ಸಂಬಳ ಸಾರಿಗೆಗೆ ಹೋಗುತ್ತಿದೆ. ಇನ್ನುಳಿದ ಹಣದಲ್ಲಿ ಅದರ ಅಗತ್ಯವಾದ ಇತರೇ ಅನೇಕ ಬಾಬುಗಳಿಗೆ ಸಾಲದಾಗಿದೆ. ಈ ಹಿಂದೆ 1960 ರಲ್ಲಿ ಈ ನಗರದಲ್ಲಿದ್ದ ಸೊಳ್ಳೆಗಳ ಕಾಟಕ್ಕೂ ಈಗಿರತಕ್ಕ ಸೊಳ್ಳೆಗಳ ಕಾಟಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈಗ ಬಹಳ ಜಾಸ್ತಿಯಾಗಿದೆ. ಇದರಿಂದ ಜನರ ಆರೋಗ್ಯ ಹಾಳಾಗುತ್ತಿದೆ. ಇದು ಖಾಯಿಲೆ ಇರತಕ್ಕವರಿಗೂ ಇಲ್ಲದವರಿಗೂ ಒಂದೇ ಸಮನಾಗಿ ಕಿರುಕುಳವನ್ನು ಕೊಡುತ್ತಿವೆ. ಇದರಿಂದ ನಗರದ ಜನರ ಆರೋಗ್ಯ ಕೆಡುತ್ತಿದೆ. ಆದುದರಿಂದ ನಾನು ಇದರ ಬಗ್ಗೆ ಸಲಹೆಮಾಡುವುದೇನೆಂದರೆ ಇಡೀ ಸಂಸ್ಥಾನಾವಾಳೆ ಐದು ಲಕ್ಷ ಜನ ಸಂಖ್ಯೆವುಳ್ಳ ಎಲ್ಲಾ ಸಣ್ಣ ದೊಡ್ಡ ಪಟ್ಟಣಗಳಿಗೂ ಇದರ ಪಿಡುಗು ಬಹಳವಾಗಿರುವುದರಿಂದ ಇದರ ಬಗ್ಗೆ ಒಂದು ಬೋರ್ಡನ್ನೇ ನೇಮಕ ಮಾಡಿ ಇದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನಮಾಡಬೇಕೆಂದು ಸಲಹೆ ಮಾಡುತ್ತಿದ್ದೇನೆ. ಹುಟ್ಟತಕ್ಕ ಎಳೆಯ ಮಕ್ಕಳು ಅಮ್ಮಮ್ಮ ಎಂದರೆ 4—5 ಪೌಂಡುಗಳು ಇದ್ದರೆ ಹೆಚ್ಚಾಯಿತು. ಆ ಮಕ್ಕಳ ರಕ್ತವನ್ನೆಲ್ಲಾ ಈ ಸೊಳ್ಳೆಗಳು ಹೀರುತ್ತಿವೆ. ಆ ಮಕ್ಕಳ ಗತಿಯನ್ನು ನೋಡುವುದಕ್ಕಾಗುತ್ತಿಲ್ಲ. ಆದರೆ ಇದೇ ವಿಷಯ ಹೋದ ವರ್ಷ ಕೂಡ ಇಲ್ಲಿಗೆ ಬಂದು ಚರ್ಚೆ ಆಯಿತು. ಆ ತೀರ್ಮಾನದ ಪ್ರಕಾರ ಪ್ರಸಕ್ತ ಸಾಲಿನಲ್ಲಿ ಇದರ ಬಗ್ಗೆ ಸರ್ಕಾರದವರು ಬಡ್ಜೆಟ್ಟಿನಲ್ಲಿ ಹಣವನ್ನೇನಾದರೂ ಒದಗಿಸಬಹುದೆಂದು ನಾನು ಆಸೆಯನ್ನು ಇಟ್ಟುಕೊಂಡಿದ್ದೆ. ಅದು ನಮ್ಮ ದುರಾದೃಷ್ಟ ಹಣವನ್ನೇನೂ ಸರ್ಕಾರ ಒದಗಿಸಿಲ್ಲ. ಆದರೆ ತಜ್ಞರ ಅಭಿಪ್ರಾಯದ ಪ್ರಕಾರ ಈ ಸೊಳ್ಳೆಗಳ ಕಾಟವನ್ನು ತಪ್ಪಿಸುವುದಕ್ಕೆ ಕನಿಷ್ಟಪಕ್ಷ 5 ಕೋಟಿ ರೂಪಾಯಿಗಳಾದರೂ ಬೇಕೇ ಬೇಕೆಂದು ಅವರು ಹೇಳುತ್ತಿದ್ದಾರೆ. ಆದ್ದರಿಂದ ಇದು ಕಾರ್ಪೊರೇಷನ್ನಿನವರಿಂದ ಆಗದ ಮಾತು. ಈ ನಗರದಿಂದ ಕಳೆದ 25 ವರ್ಷಗಳಿಂದ ಎಷ್ಟೋ ಜನರು ಈ ಶಾಸನ ಸಭೆಗೆ ಚುನಾಯಿತರಾಗಿ ಇಲ್ಲಿಗೂ ಮತ್ತು ಮೇಲ್ಮನೆಗೂ ಬರುತ್ತಿದ್ದೇವೆ. ಹಾಗೆ ಚುನಾಯಿತರಾಗಿ ಇಲ್ಲಿಗೆ ಬಂದ ಮೇಲೆ ನಾವು ಸಾರ್ವಜನಿಕರ ಬಗ್ಗೆ ಏನೊಂದು ಉಪಕಾರದ ಕೆಲಸವನ್ನು ಮಾಡಿದ್ದೇವೆಯೋ ಎಂದರೆ ಅದು ಎಲ್ಲಿಯೂ

ಕಾಣುತ್ತಿಲ್ಲ. ನಾವು ಒಂದು ಪಾಠಶಾಲೆಯನ್ನು ಕೇಳಲಿ, ಆಸ್ಪತ್ರೆಯನ್ನು ಕೇಳಲಿ ಎಲ್ಲದಕ್ಕೂ ಕಾರ್ಪೊರೇಷನ್ನನ್ನು ಕೇಳಿ ಎಂದು ಹೇಳುತ್ತಿದ್ದಾರೆ. ಹಾಗಾದರೆ ಇಲ್ಲಿ ಎಲ್ಲವೂ ಕಾರ್ಪೊರೇಷನ್ನಿನ ಜವಾಬ್ದಾರಿಯಾದರೆ ಸರ್ಕಾರ ಏನೂ ಮಾಡಬೇಕಾದ್ದೇ ಇಲ್ಲವೋ ? ಹಾಗಾದರೆ ಈ ನಗರದವರು ಸರ್ಕಾರಕ್ಕೆ ಏಕೆ ಕೋಟಿಗಟ್ಟಲೆ ಟ್ಯಾಕ್ಸನ್ನು ಕೊಡಬೇಕು ? ಈ ಒಂದು ಕಾರಣದಿಂದಲೇ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುತ್ತಿದ್ದೇನೆ, ಸಂಸ್ಥಾನಾ ಮಾಳಿ ಎಲ್ಲೆಲ್ಲಿ 5 ಲಕ್ಷ ಪ್ರಜಾ ಸಂಖ್ಯೆ ಇರತಕ್ಕ ದೊಡ್ಡದೊಡ್ಡ ಊರುಗಳಿವೆಯೋ ಅಲ್ಲೆಲ್ಲಾ ಇವುಗಳ ಕಾಟ ಹೆಚ್ಚಾಗಿದೆ. ಅದಕ್ಕಾಗಿ ರಾಜ್ಯಾದ್ಯಂತ ಒಂದು ಸಮಗ್ರ ಯೋಜನೆಯನ್ನು ನಾವು ಇದಕ್ಕಾಗಿ ರೂಪಿಸಬೇಕಾಗಿದೆ. ಈ ವಿಚಾರದಲ್ಲಿ ತಾಲ್ಲೂಕ್ ಬೋರ್ಡುಗಳಿಗಾಗಲಿ, ಮುನಿಸಿಪಾಲಿಟಿಗಳಿಗಾಗಲೀ ಇಲ್ಲವೇ ಕಾರ್ಪೊರೇಷನ್ನಿಗಾಗಲೀ ಇದರ ಜವಾಬ್ದಾರಿಯನ್ನು ಹೊರಿಸುವುದು ಖಂಡಿತ ಸರಿಯಾದ್ದಲ್ಲ. ಈ ಕಾರ್ಯವನ್ನು ಸರ್ಕಾರದವರು ಕೈಗೊಂಡರೆ ಅವರಿಗೆ ಯಾವ ರೀತಿಯಲ್ಲೂ ಲುಕ್ಸಾನೇನೂ ಆಗುವುದಿಲ್ಲ. ಬೆಂಗಳೂರು ಸುತ್ತಮುತ್ತಲು ಸುಮಾರು 15—16 ಮೈಲಿ ಫಾಸಲೆಯವರೆಗೆ ಜನರು ಅನೇಕ ರೀತಿಯಲ್ಲಿ ಬೇಸಾಯ ಮಾಡುತ್ತಾ ಹಣ್ಣಿನ ತೋಟಗಳನ್ನು ಮತ್ತು ಹುಲ್ಲುಗಾವಲುಗಳನ್ನೂ ಬೆಳೆಸುತ್ತಿದ್ದಾರೆ. ಇದರಿಂದ ಸೊಳ್ಳೆಗಳ ಕಾಟ ಜಾಸ್ತಿ ಆಗಿದೆ. ಇದನ್ನು ತಡೆಯುವುದಕ್ಕಾಗಿ ಅಷ್ಟೂ ಜಮೀನನ್ನು ಸರ್ಕಾರ ಅಕ್ವಯರ್ ಮಾಡಿಕೊಂಡರೆ, ಅದನ್ನು ಮತ್ತೆ ಲೇಔಟ್ ಮಾಡಿ ನಿವೇಶನಗಳಾಗಿ ಮಾರಾಟ ಮಾಡಿದರೆ ಅದರಿಂದ ಸರ್ಕಾರಕ್ಕೆ ಬಹಳ ಹಣ ಬರುತ್ತದೆ.

ಆದರೆ ಇನ್ನೊಂದು ವಿಚಾರ—ನಾನು ಅದನ್ನು ಹೇಳಬಾರದು. ಇತ್ತೀಚೆಗೆ ನಗರದ ಆಸ್ತಿಕ ಮಹನೀಯರಲ್ಲಿ ದೈವಭಕ್ತಿ, ವೆಂಕಟೇಶ್ವರನ ಬಗ್ಗೆ ಇದ್ದ ಭಕ್ತಿ ಮಾಯವಾಗಿ ಅದಕ್ಕೆ ಪ್ರತಿಯಾಗಿ ಜನರು ಕೋಡೇಶ್ವರನ ಭಕ್ತರಾಗುತ್ತಿದ್ದಾರೆ. ಈ ಕೋಡೇಶ್ವರನ ಪ್ರಾರ್ಥನೆ ಮಾಡತಕ್ಕ ಜನರೇ ಎಲ್ಲೆಲ್ಲೂ ಜಾಸ್ತಿಯಾಗುತ್ತಿದ್ದಾರೆ. ಮನೆ ಮನೆಗಳಲ್ಲೆಲ್ಲಾ ಹೆಂಡದಂಗಡಿಗಳೂ—ಚಾಕ್ನಾ ಅಂಗಡಿಗಳು ಚಲಾವಣೆಗೆ ಬರುತ್ತಿವೆ. ಸೊಳ್ಳೆಗಳ ನಿವಾರಣೆ ಮಾಡಬೇಕಾದ್ದು ಏನಿದೆ ಇದು ನಮ್ಮ ಮುಂದಿರುವ ಮುಖ್ಯವಾದ ಪ್ರಶ್ನೆ, ಸರಿಯಾದ ಜವಾಬ್ದಾರಿ ವಹಿಸಬೇಕು, ಸರಕಾರ ಒಂದು ಬೋರ್ಡನ್ನು ರಚಿಸಬೇಕು. ಇಂದು ಸ್ವಲ್ಪ ಹಣ ಒದಗಿಸಿ ಪರಿಸ್ಥಿತಿ ನಿವಾರಿಸಬೇಕು. ಪಾಶ್ಚಾತ್ಯ ದೇಶಗಳಲ್ಲಿ ಸರಕಾರದವರು ಮಾಡುವರು. ಕಾರ್ಪೊರೇಷನ್ನಿಗೆ ಹೆಚ್ಚು ವರಮಾನವಿಲ್ಲದಿರುವುದರಿಂದ ಅದಕ್ಕೆ ಸಾಧ್ಯವಾಗುವುದಿಲ್ಲ. ಹಾಗಿರುವಾಗ ಕಾರ್ಪೊರೇಷನ್ ಮಾಡಬೇಕೆಂದು ಹೇಳುವುದು ಸೂಕ್ತವಲ್ಲ. ಹೆಚ್ಚು ತೆರಿಗೆ ಹಾಕಿದರೆ ಬಡವರು ಜಾಸ್ತಿ ಕೊಡಲಾರರು. ನನ್ನ ಕ್ಷೇತ್ರದಲ್ಲಿ ಗುಡಿಸಲುಗಳು ಹೆಚ್ಚಾಗಿವೆ, ಅಲ್ಲಿ ಬಡವರು, ಕೂಲಿಗಾರರು ಹೆಚ್ಚಾಗಿದ್ದಾರೆ. ಆದುದರಿಂದ ಸರಕಾರ ಜವಾಬ್ದಾರಿಯನ್ನು ತಾನು ಬಹಳವಾಗಿ ವಹಿಸಿಕೊಂಡು ಕೆಲಸಮಾಡಬೇಕು. 5 ಲಕ್ಷ ಜನಸಂಖ್ಯೆ ಇರುವ ಪ್ರತಿಯೊಂದು ಪಟ್ಟಣಕ್ಕೂ ಅನ್ವಯಿಸುವಂತೆ ಒಂದು ಬೋರ್ಡ್ ಮಾಡಬೇಕು ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷಣಿಯವರೇ, ಬೆಂಗಳೂರು ನಗರದಲ್ಲಿರುವ ಸೊಳ್ಳೆ ಕಾಟ ಬಹಳವಾಗಿದೆ, ಮುಖ್ಯವಾಗಿ ವಿಲ್ಸನ್ ಗಾರ್ಡನ್, ಶಾಂತಿನಗರ, ಬೆಂಗಳೂರು ಮಧ್ಯಭಾಗ, ಬಸವನಗುಡಿ ಮುಂತಾದ ಅನೇಕ ಕಡೆಗಳಲ್ಲಿ ಸೊಳ್ಳೆ ಕಾಟ ಅಸಾಧ್ಯವಾಗಿದೆ. ಹೋದ ಸಲ ನೀರಿನ ದರ ಏರಿಕೆಯಾದಾಗ ಅದನ್ನು ಕಡಮೆಮಾಡಬೇಕೆಂದು ಚಳವಳಿ ಮಾಡಿದೆವು. ಆಗ ಶ್ರೀ ಎಚ್. ಎನ್. ನಂಜೇಗೌಡರು ವಿರೋಧಪಕ್ಷದಲ್ಲಿ ನಮ್ಮ ಜೊತೆಯಲ್ಲಿದ್ದರು. ನಮ್ಮನ್ನು ದಸ್ತಗಿರಿ ಮಾಡಿದ್ದರು ವಿಲ್ಸನ್‌ಗಾರ್ಡನ್ ಪೋಲೀಸ್ ಸ್ಟೇಷನ್ನಿನಲ್ಲಿ ಒಂದು ದಿವಸ ಇರುವುದಕ್ಕೆ ಸಾಧ್ಯವಾಗಲಿಲ್ಲ, ಆಗ ಶ್ರೀ ಟಿ. ಸುಬ್ರಹ್ಮಣ್ಯರವರ ಸ್ಥಿತಿ ನೋಡಿ ಸಹಿಸಲಾರದೆ ಯಾರೋ ಒಂದು ಬುರುಕ ತಂದು ಹಾಕಿದರು. ಅಲ್ಲಿನ ಕಾನ್‌ಸ್ಟೇಬಲ್ಲುಗಳನ್ನು, ಹೇಗೆ ಇರುತ್ತೀರಿ ಎಂದು ಕೇಳಿದರೆ ಸ್ವಲ್ಪ ಹೊತ್ತಾದ ನಂತರ ಬುರುಕ ತರಹ ಏನಾದರೂ ಉಪಯೋಗ ಮಾಡುವುದಾಗಿ ತಿಳಿಸಿದರು. ಬೆಂಗಳೂರು ನಗರದಲ್ಲಿ ಸೊಳ್ಳೆಗಳದು ಕಠಿಣ ಸಮಸ್ಯೆಯಾಗಿದೆ. ಇದರಿಂದ ಜನರಿಗೆ ಅನಾರೋಗ್ಯ ಮಾತ್ರವಲ್ಲದೆ ರಾಜ್ಯಕ್ಕೆ ವರಮಾನವೂ ಕಡಮೆಯಾಗುವುದು. ವಿದೇಶದಿಂದ ಇಲ್ಲಿಗೆ ಬಹಳ ಮಂದಿ ಬರುತ್ತಿದ್ದಾರೆ. ಸೊಳ್ಳೆ ಕಾಟ ಕಂಡು ಅವರು ಬರುವುದೂ ಕಡಮೆಯಾಗುವುದು. ಹೋಟೇಲುಗಳಲ್ಲೂ ಸೊಳ್ಳೆಕಾಟ ಜಾಸ್ತಿಯಾಗಿದೆ ಎಂದು ಹೇಳುವರು. ಈ ಕಾಟವನ್ನು ಜಾಗ್ರತೆ ತಪ್ಪಿಸಬೇಕಾಗಿದೆ. ಶ್ರೀ ಶಾಮಣ್ಣನವರು ಚೆನ್ನಾಗಿ ವಿವರಿಸಿದ್ದಾರೆ. ಎರಡುಮೂರು ಅಂಶ ಮಾತ್ರ ತಿಳಿಸುತ್ತೇನೆ.

ಬೆಂಗಳೂರಿನ ಸುತ್ತಲೂ ಕೆರೆಗಳಿವೆ, ಅಲ್ಲಿಗೆ ಸ್ಯೂಅರೇಜ್ ವಾಟರನ್ನು ಬಿಡುವರು, ಚಳ್ಳಗಟ್ಟ ಕೆರೆ, ಕೋರಮಂಗಲ ಕೆರೆ, ಅವನ್ನು ಬ್ರೀಚ್ ಮಾಡಬೇಕು, ಅಲ್ಲಿಗೆ ಸ್ಯೂಅರೇಜ್ ವಾಟರನ್ನು ಬಿಡಬಾರದು. ಜೊತೆಗೆ ಕೆಲವು ಪಟ್ಟಭದ್ರ ಹಿತಗಳಿಂದ ತೊಂದರೆಯಾಗಿದೆ. ಎರಡು ತರಹ

(ಶ್ರೀ ಎಂ.ಎಸ್. ಕೃಷ್ಣನ್)

ಪಟ್ಟಭದ್ರ ಹಿತಗಳಿವೆ, ಒಂದು ಮಿಲಿಟರಿಯವರು, ಇನ್ನೊಂದು ಎಸ್ಟೇಟ್ ಓನರ್ಸ್. ಅವರು ಸ್ಯೂಅರೇಜ್ ನೀರನ್ನು ಉಪಯೋಗಮಾಡಿಕೊಂಡು ತರಕಾರಿ ಮತ್ತು ಹುಲ್ಲನ್ನು ಬೆಳೆಯುವರು. ಇದರಿಂದ ಲಾಭ ಸಂಪಾದಿಸುವರು. ಕಾನೂನು ಪ್ರಕಾರ ಅವಕಾಶವಿಲ್ಲದೆ ಇರುವಾಗ ಅಕ್ರಮವಾಗಿ ಕೊಳಚೆ ನೀರನ್ನು ಉಪಯೋಗ ಮಾಡುತ್ತಿದ್ದಾರೆ. ಕಾರ್ಪೊರೇಷನ್ನಿನವರು ಸಾಮೀಲಾಗಿದ್ದಾರೆ, ಅವರು ಅವಕಾಶ ಮಾಡಿಕೊಡುತ್ತಿದ್ದಾರೆ, ಇದರಿಂದ ಸೊಳ್ಳೆ ಜಾಸ್ತಿಯಾಗಲು ಕಾರಣವಾಗಿದೆ. ಆದುದರಿಂದ ಈ ಪಟ್ಟಭದ್ರ ಹಿತಗಳನ್ನು ರಕ್ಷಿಸುವ ನೀತಿಯೇನಿದೆ ಇದನ್ನು ತೊಡೆದುಹಾಕಬೇಕು. ಇದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಅಲ್ಲದೆ ಮಿಲಿಟರಿಯವರು ಕೋರಮಂಗಲದ ಹತ್ತಿರ ಸ್ಯೂಅರೇಜ್ ನೀರನ್ನು ತೆಗೆದುಕೊಂಡು ಹುಲ್ಲು ಬೆಳೆಸುತ್ತಿದ್ದಾರೆ. ಇದಲ್ಲದೆ ನಾಲ್ಕನೆಯದಾಗಿ ನಮ್ಮ ಮನೆಯ ಹತ್ತಿರ ಒಂದು ದೊಡ್ಡ ಡ್ರೈನ್ ಇದೆ, ಅದಕ್ಕೆ ಸ್ಯೂಅರೇಜ್ ನೀರನ್ನು ಬಿಡುತ್ತಿದ್ದಾರೆ. ಇದರಿಂದಲೂ ಸೊಳ್ಳೆಗೆ ಅವಕಾಶವಾಗಿದೆ. ನನ್ನ ಕ್ಷೇತ್ರದವರು ಇದರ ಭಗ್ಗೆ ದೂರು ಕೊಟ್ಟಿದ್ದಾರೆ. ಅಲ್ಲಿರುವ ಡ್ರೈನ್ ಮುಚ್ಚಬೇಕು, ಮಕ್ಕಳಿಗೆ ಅದಿರುವುದು ಅಪಾಯಕರ, ಅದರಲ್ಲಿ ಮಕ್ಕಳು ಬಿದ್ದು ಮುಳುಗಿಹೋಗಲು ಅವಕಾಶವಾಗಿದೆ ಎಂದು ತಿಳಿಸಿದ್ದಾರೆ. ಅಡ್ಮಿನಿಸ್ಟ್ರೇಟರ್ ಇದ್ದಾಗ ಚುನಾವಣೆಯಾದಮೇಲೆ ಹೇಳಿದರೂ ಕೂಡ ಏನೂ ಕ್ರಮ ತೆಗೆದುಕೊಂಡಿಲ್ಲ. ಕೆಂಗೇರಿ ಹತ್ತಿರ ವಾಸನೆ ಬರುವುದು, ವೃಷಭಾವತಿಯ ಬಳಿ ವಾಸನೆ ಬರುವುದು. ಸ್ಯೂಅರೇಜ್ ನೀರನ್ನು ಅಲ್ಲಿ ಬಿಡುವುದರಿಂದ ಮೈಸೂರಿಗೆ ಹೋಗುವವರಿಗೆ ದುರ್ವಾಸನೆ ಗೊತ್ತಾಗುವುದು. ಕೇಳಿದರೆ ಯೋಜನೆ ಇದೆ, ಕ್ರಮ ತೆಗೆದುಕೊಳ್ಳುವುದಾಗಿ ಹೇಳುವರು. ಆದರೆ ಇದುವರೆಗೂ ಸರಿಯಾದ ಕ್ರಮ ತೆಗೆದುಕೊಂಡು ಸೊಳ್ಳೆಕಾಟ ನಿವಾರಣೆಮಾಡಿಲ್ಲ. ಇದರ ಬಗ್ಗೆ 1935 ರಲ್ಲಿ ಬ್ರಿಟಿಷರ ಕಾಲದಲ್ಲಿ ಮಾಡಿದ ಸ್ಕೀಂ ಇನ್ನೂ ಜಾರಿಗೆ ಬಂದಿಲ್ಲ ಎಂದರೆ, ಇದು ಹಾಸ್ಯಾಸ್ಪದ ಎಂದು ಹೇಳಬೇಕಾಗುತ್ತದೆ. ಪಟ್ಟಭದ್ರಹಿತಗಳನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇದನ್ನು ಅಕ್ವೈಯರ್ ಮಾಡಬೇಕು ಎಂದು ಮಾನ್ಯ ಶ್ರೀರಾಮುಲು ಅವರು ಹೇಳಿರುವುದು ಸರಿಯಾದುದು. ಇದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಘಟನಾವಳಿಗಳ ಪ್ರಕಾರ ಅಕ್ವಯರ್ ಮಾಡುವುದಕ್ಕೆ ಅವಕಾಶ ಇದೆ. ಇದಕ್ಕೆ ಪರಿಹಾರ ಕೊಡಬೇಕಾಗಿಲ್ಲ. ಮೊತ್ತ ಕೊಡಬೇಕು ಎಂದು ದೇಶದ ಅನುಕೂಲಕ್ಕೋಸ್ಕರ ಮಾಡಿದೆ. ತಾವು ಇದರ ಬಗ್ಗೆ ಒಂದು ತಿದ್ದುಪಡಿಯನ್ನು ಮಾಡಿದ್ದೀರಿ, ಅದನ್ನು ಉಪಯೋಗ ಮಾಡಿಕೊಂಡು ರಾಜಧಾನಿಯಾದ ಬೆಂಗಳೂರಿಗೆ ಅನುಕೂಲ ಮಾಡಬೇಕು. ಇದರ ಕೆಲಸವನ್ನು ತಕ್ಷಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದು, ಟ್ರಸ್ಟ್ ಬೋರ್ಡು, ವಾಟರ್‌ಸಪ್ಲೈ ಬೋರ್ಡು, ಮತ್ತು ಕಾರ್ಪೊರೇಷನ್ ಇವೆ. ವಾಟರ್‌ಸಪ್ಲೈ ಬೋರ್ಡಿನವರು ಕಾವೇರಿ ನೀರನ್ನು ಬೆಂಗಳೂರಿಗೆ ತೆಗೆದುಕೊಂಡು ಬರುವುದಕ್ಕೆ ಆಸಕ್ತಿ ತೋರಿಸುತ್ತಾರೆ, ಸೂಯರೇಜ್ ವಿಷಯದಲ್ಲಿ ಅದಕ್ಷತೆ ತೋರಿಸುತ್ತಾರೆ. ಅನೇಕ ಕಡೆ ಬೆಂಗಳೂರು ನಗರದಲ್ಲಿ ಪೈಪುಗಳನ್ನು ಹಾಕಿಲ್ಲ. ಸೂಯರೇಜ್ ಬೋರ್ಡಿನವರ ಗಮನಕ್ಕೆ ಇದನ್ನು ತಂದರೆ, ಅವರು ಆ ಕಾರ್ಯಕ್ರಮವನ್ನು ಜಾರಿಗೆ ತಂದಿಲ್ಲ ಎಂದು ಹೇಳುತ್ತಾರೆ. ಸೂಯರೇಜ್ ಸರಿಯಾಗಿ ಹೊರಗಡೆ ಬಿಡಬೇಕು, ಇಲ್ಲದಿದ್ದರೆ ಸೊಳ್ಳೆಗಳ ಬೆಳವಣಿಗೆಯನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಇದು ವಾಟರ್ ಸಪ್ಲೈ ಮತ್ತು ಸೂಯರೇಜ್ ಬೋರ್ಡಿನವರ ಜವಾಬ್ದಾರಿ. ಆದನ್ನು ಅವರು ನಿರ್ವಹಿಸುತ್ತಾ ಇಲ್ಲ. ಇದರ ಮೇಲೆ ಅವರು ಸರಿಯಾದ ನಿಗ ಇಡಬೇಕು. ಅದು ಒಬ್ಬ ಅಧಿಕಾರಿಯಿಂದ ಸಾಧ್ಯವಿಲ್ಲ. ಕಾವೇರಿ ನೀರನ್ನು ತರುವುದಕ್ಕೆ ಹೇಗೆ ಧಕ್ಷತೆ ವಹಿಸಿದ್ದಾರೋ ಹಾಗೆ ಸೂಯರೇಜ್ ಅನ್ನು ಹೊರಗಡೆಗೆ ಬಿಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ದಿಟ್ಟ ಕಾರ್ಯಕ್ರಮ ತೆಗೆದುಕೊಳ್ಳಬೇಕು, ದಿಟ್ಟ ಕಾರ್ಯಕ್ರಮ ತೆಗೆದುಕೊಳ್ಳಬೇಕು ಪಟ್ಟಭದ್ರ ಶಕ್ತಿಗಳನ್ನು ತೊಡೆದು ಹಾಕಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು** (ಶಾಂತಿನಗರ).—ಈಗ ತಾನೆ ಮಿತ್ರರು ಬೆಂಗಳೂರಿನಲ್ಲಿ ಸೊಳ್ಳೆ ಕಾಟದ ಬಗ್ಗೆ ಹೇಳಿದರು. ಮಾನ್ಯ ಕೃಷ್ಣನ್ ಅವರು ಹೇಳಿದ ಹಾಗೆ, ನನ್ನ ಕ್ಷೇತ್ರದಲ್ಲಿ ಕಾರ್ಪೊರೇಷನ್ನಿನವರು ಕೊಟ್ಟಿರತಕ್ಕ ಮ್ಯಾಪಿನ ಪ್ರಕಾರ 100ಕ್ಕೆ 80ರಷ್ಟು ಶಾಂತಿನಗರ ಕ್ಷೇತ್ರದಲ್ಲಿವೆ. ಇದನ್ನು ಸೊಳ್ಳೆಪುರ ಎಕ್ಸ್‌ಟೆನ್‌ಷನ್ ಎಂದರೆ ತಪ್ಪಾಗಲಾರದು. ಸೊಳ್ಳೆ ಕಾಟವನ್ನು ತಪ್ಪಿಸಲಿಕ್ಕೆ ಬೇಕಾದಷ್ಟು ಕಮಿಟಿಗಳು ಆಗಿವೆ, ಆದರೆ ಯಾವ ಕಾರ್ಯಕ್ರಮವೂ ಕಾರ್ಯರೂಪಕ್ಕೆ ಬಂದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನನ್ನ ಮಿತ್ರರು ಹೇಳಿದ ಹಾಗೆ ಸಾಂಕ್ರಾಮಿಕ ರೋಗಗಳು ಸೊಳ್ಳೆಯಿಂದ ಬರುತ್ತವೆ. ಇಡೀ

ಬೆಂಗಳೂರು ಮತ್ತು ಮೈಸೂರು ಸಂಸ್ಥಾನಕ್ಕೆ ಒಂದು ಸೊಳ್ಳೆ ಕಂಟ್ರೋಲ್ ಬೋರ್ಡ್ ಅನ್ನು ಮಾಡಬೇಕು ಎಂದು ನನ್ನ ಮಿತ್ರರು ಹೇಳಿದ್ದನ್ನು ನಾನು ಅನುಮೋದಿಸುತ್ತೇನೆ. ಸೊಳ್ಳೆಗಳು ಬೆಳೆಯುವುದಕ್ಕೆ ಕಾರಣವನ್ನು ಮಿತ್ರರು ವಿವರವಾಗಿ ತಿಳಿಸಿದ್ದಾರೆ. ಸಾಧಾರಣವಾಗಿ ಎಲ್ಲಿ ನೀರು ಜಾಸ್ತಿ ನಿಲ್ಲುತ್ತದೆಯೋ, ಎಲ್ಲಿ ಕ್ಲಿಯರ್ ಪಿಟ್ಸ್ ಇವೆಯೋ ಅಲ್ಲಿ ಸೊಳ್ಳೆಗಳ ಬೆಳವಣಿಗೆಯಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮನೆಯ ಒಳಚರಂಡಿಗಳು ಇಲ್ಲದೆ, ಡ್ರೈನೇಜ್ ಸಿಸ್ಟಮ್ ಸರಿಯಾಗಿಲ್ಲದೆ ಸೊಳ್ಳೆಗಳು ಬೆಳೆಯುತ್ತವೆ. ಸ್ಲಮ್ಸ್ ಎಲ್ಲಿ ಇದೆ, ನೀರು ಸರಿಯಾಗಿ ಹೋಗಲಿಕ್ಕೆ ಅನುಕೂಲ ಇಲ್ಲದೆ ಸೊಳ್ಳೆಗಳು ಬ್ರೀಡ್ ಆಗುತ್ತವೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ಮೊದಲು ವಾಟರ್ ಸಪ್ಲೈ ಸೂಯರೇಜ್ ಬೋರ್ಡಿನವರು ಎಲ್ಲಿ ಸೂಯರ್ ಪೈಪುಗಳ ಕನೆಕ್ಷನ್ ಕೊಟ್ಟಿಲ್ಲವೋ ಅಂಥ ಕಡೆ ಕಂಪಲ್ಸರಿಯಾಗಿ ಸೂಯರೇಜ್ ಬೋರ್ಡಿನವರು ಪೈಪ್ಸ್ ಹಾಕಿ ಸೂಯರ್‌ಲೈನ್‌ಗೆ ಕನೆಕ್ಷನ್ ಕೊಡಬೇಕು. ಅಂಡರ್‌ಗ್ರೌಂಡ್ ಡ್ರೈನೇಜ್ ಸ್ಕೀಂ ಅನ್ನು ಮಾಡಬೇಕೆಂದು ನೋಟೀಸ್ ಮೂಲಕ ಒತ್ತಾಯಪಡಿಸಬೇಕೆಂದು ಹೇಳುತ್ತೇನೆ. ಚಳ್ಳಘಟ್ಟ, ವೃಷಭಾವತಿ ಕೆರೆಗಳು ಡಿ ವೀಡಿಂಗ್ ಆಗಬೇಕು. ಆ ಕೆರೆಗಳಲ್ಲಿ ಹಸಿರು ಬೆಳೆದುಕೊಂಡಿರುತ್ತದೆ; ಸುತ್ತ ಲಾವ ಬೆಳೆದುಕೊಂಡಿರುತ್ತದೆ. ಆ ಕೆರೆಗಳ ಮೇಲೆ ಔಷಧಿಯನ್ನು ಸ್ಪ್ರಿಂಕರ್ ಮಾಡಿದರೆ ಸೊಳ್ಳೆಗಳು ಸರಿಯಾಗಿ ಸಾಯುವುದಿಲ್ಲ. ಡಿ ವೀಡಿಂಗ್ ಮಾಡುವುದನ್ನು ಕಾರ್ಪೊರೇಷನ್ ಅವರಾಗಲೀ, ಅಥವಾ ಯಾರಾದರೂ ಪ್ರೈವೇಟ್ ಏಜನ್ಸಿಯವರಾಗಲೀ ಮಾಡಬೇಕು. ಕೆಂಪಾಂಬುಧಿ ಕರೆ, ಕೋರಮಂಗಲ ಕೆರೆ, ವೃಷಭಾವತಿ ವ್ಯಾಲಿಗಳಲ್ಲಿ ಹುಲ್ಲು ಬೆಳೆದುಕೊಂಡಿದೆ. ಡೀ ವೀಡಿಂಗ್‌ಗೆ ಪ್ರೈವೇಟ್ ಏಜನ್ಸಿಯನ್ನು ನೇಮಕ ಮಾಡಿ ಅಚ್ಚುಕಟ್ಟಾಗಿ ತೆಗೆಯಬೇಕು.

ಇನ್ನೊಂದು ಸಲಹೆ ಏನೆಂದರೆ, ಪಟ್ಟಣಗಳಲ್ಲಿ ಲೇಕ್ಸ್ ಇರುತ್ತವೆ, ಇವು ಇರುವುದು ಚೆಂದ, ಇವುಗಳನ್ನು ಸರಿಯಾಗಿ ಮೇಂಟೇನ್ ಮಾಡುವುದು ಕಾರ್ಪೊರೇಷನ್‌ಗೆ ಸಂಬಂಧ ಪಟ್ಟಿದ್ದು. ಕೆರೆ ಕಟ್ಟೆಗಳನ್ನು ಒಡೆದು ಹಾಕುವುದು ಸರಿಯಲ್ಲ. ನ್ಯಾಷನಲ್ ಎಮರ್ಜನ್ಸಿ ಬಂದಾಗ ನಮಗೆ ನೀರು ಸಿಕ್ಕದ ಹಾಗಾಗುತ್ತದೆ. ಲೇಕ್ಸ್ ಇದ್ದರೆ ನಗರದ ಸೌಂದರ್ಯಕ್ಕೆ ಹೆಚ್ಚಿನ ಮೆರಗನ್ನು ನೀಡುತ್ತದೆ ಮತ್ತು ನೀರು ಸಿಕ್ಕುತ್ತದೆ. ಇಂಥ ಲೇಕ್‌ಗಳನ್ನು ಡೀವೀಡಿಂಗ್ ಮಾಡಿ ಕಸ ಕಡ್ಡಿಗಳನ್ನು ತೆಗೆದು ಸರಿಯಾಗಿ ಕಾರ್ಪೊರೇಷನ್ ನವರು ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ಜೊತೆಗೆ ಸರ್ಕಾರದವರು ಸೊಳ್ಳೆಗಳ ನಿರ್ಮೂಲಕ್ಕೆ ಕಾರ್ಪೊರೇಷನ್‌ನವರಿಗೆ ಲೋನ್ ಕೊಡುತ್ತಿದ್ದಾರೆ. ಇದಕ್ಕೆ ಹೆಚ್ಚು ಹಣ ಬೇಕು. ಸರ್ಕಾರದವರು ಗ್ರಾಂಟ್ ಸ್ವಲ್ಪ ಕೊಟ್ಟು, ಸೆಂಟ್ರಲ್ ಗವರ್ನಮೆಂಟಿನಿಂದ ನ್ಯಾಷನಲ್ ಮಲೇರಿಯಾ ಇರ್ರ್ಯಾಡಿಕೇಷನ್ ಸ್ಕೀಂ ಅವರನ್ನು ಅಪ್ರೋಚ್ ಮಾಡಿ ಅವರಿಂದ ಹಣವನ್ನು ತೆಗೆದುಕೊಂಡು ಸೊಳ್ಳೆ ನಿರ್ಮೂಲನ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಪುದುಕೋಟೆಯಲ್ಲಿ ಮಿಲ್ಲರ್ ಅವರು ಒಂದು ರೀಸರ್ಚ ಮಾಡಿದ್ದಾರೆ, ಈ ಸೊಳ್ಳೆಗಳು ಹೇಗೆ ಬೆಳೆಯುತ್ತವೆ, ಹೇಗೆ ನಿರ್ಮೂಲನ ಮಾಡಬೇಕು ಎನ್ನುವ ಬಗ್ಗೆ. ಬೆಂಗಳೂರು ಸುತ್ತ ಎರಡು ಮೈಲಿ ದೂರದಲ್ಲಿ ವ್ಯವಸಾಯದ ಕ್ರಮವನ್ನು ತೆಗೆದುಕೊಳ್ಳಬಾರದು. ಸರ್ಕಾರದವರು ಒಂದು ಆರ್ಡಿನೆನ್ಸ್ ಹೊರಡಿಸಿದರೂ ಪರವಾಗಿಲ್ಲ, ಬೆಂಗಳೂರಿನ ಸುತ್ತ ಐದು ಮೈಲಿ ರೇಡಿಯಸ್‌ನಲ್ಲಿ ಯಾರು ಕಲ್ಟಿವೇಟ್ ಮಾಡಬಾರದು ಎಂದು ಹೇಳಬೇಕು. ಇದರಿಂದ 18ಲಕ್ಷ ಪ್ರಜೆಗಳಿಗೆ ಅನುಕೂಲವಾಗುತ್ತದೆ. ಈ ಸೊಳ್ಳೆಗಳು ಬಡ ಜನರ ರಕ್ತವನ್ನು ಹೀರುತ್ತವೆ, ಕೋರಮಂಗಲದಲ್ಲಿ ಸುಮಾರು 80ಪರ್ಸೆಂಟ್ ಸೊಳ್ಳೆಗಳು ಇವೆ. ಲೋ ಲೆವೆಲ್ ಏರಿಯಾದಲ್ಲಿ, ಸ್ಲಂ ಏರಿಯಾದಲ್ಲಿ ಬೆಂಗಳೂರಿನ ಮುಕ್ಕಾಲು ಭಾಗ ಆ ಕಡೆಯಿಂದ ಜನರು ಬರುತ್ತಾರೆ. ಆ ಏರಿಯಾದ ಬಗ್ಗೆ ಮಲತಾಯಿ ಧೋರಣೆ ತಾಳಬಾರದು ಎಂದು ಹೇಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸುಂದರವಾದ ರಾಜಕಾರಣಿಗಳ ರಕ್ತವನ್ನು ಹೀರುವ ಸೊಳ್ಳೆಗಳು ನಿಮ್ಮಲ್ಲಿವೆ.

ಶ್ರೀ ಕೆ.ಆರ್. ಶ್ರೀನಿವಾಸುಲು ನಾಯ್ಡು.—ಸೊಳ್ಳೆಗಳು ಸುಂದರವಾದವರನ್ನೂ ಕಚ್ಚುತ್ತವೆ, ಎಲ್ಲರನ್ನೂ ಕಚ್ಚುತ್ತವೆ. ಕೋರಮಂಗಲ ವ್ಯಾಲಿಯ ದೊಡ್ಡ ಚಾನಲ್ ಅನ್ನು ಹಂತಹಂತವಾಗಿ ಮಾಡಿಕೊಂಡು ಬರುತ್ತಿದ್ದಾರೆ. ಮೊನ್ನೆತಾನೆ ಟ್ರಾನ್ಸ್‌ಪೋರ್ಟ್ ಕಂಪನಿಯವರೆಗೆ ಆಯಿತು. ಮೈಕೋ ಫ್ಯಾಕ್ಟರಿಯವರೆಗೆ ಬಂದಿದೆ. ಜನಗಳ ಕ್ಷೇಮದಿಂದ, ಎಲ್ಲಿಯೂ ನೀರನ್ನು ನಿಲ್ಲುವುದಕ್ಕೆ ಆಸ್ಪದ ಕೊಡಬಾರದು. ಅರ್ಧ ಎಕರೆ ಜಾಗದಲ್ಲಿ ನೀರು ನಿಂತಿದ್ದರೆ ಬೇಕಾದಷ್ಟು ಸೊಳ್ಳೆಗಳು ಬೆಳೆಯುವುದಕ್ಕೆ ಕಾರಣವಾಗುತ್ತದೆ. ಈ ಚಾನಲ್‌ಗೆ ಎಷ್ಟೇ ಖರ್ಚಾದರೂ ಪರವಾಗಿಲ್ಲ ಇದನ್ನು

(ಶ್ರೀ ಕೆ.ಆರ್. ಶ್ರೀನಿವಾಸುಲು ನಾಯ್ಡು)

ಮಾಡಬೇಕು. ಅಲ್ಲಿ ಮೂರನೆಯ ಒಂದು ಭಾಗ ಬಡವರು ಇದ್ದಾರೆ, ಅವರಿಗೆ ಕಾರ್ಪೊರೇಷನ್‌ನವರು ಇಲಿಗಳನ್ನು ಹಿಡಿಯುವುದಕ್ಕೆ ಹಿಂದೆ ಬೋನ್ ಅನ್ನು ಹೇಗೆ ಸಪ್ಲೈ ಮಾಡುತ್ತಿದ್ದರೋ ಅದೇ ರೀತಿಯಲ್ಲಿ ಇವರಿಗೆ ಸೊಳ್ಳೆ ಪರದೆಯನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೇಳಿದ್ದರೆ ತಪ್ಪಾಗಲಾರದು. ಏಕೆಂದರೆ ಸೊಳ್ಳೆಗಳು ಬಡ ಜನರ ರಕ್ತವನ್ನು ಹೀರುತ್ತವೆ, ಅವರ ಹತ್ತಿರ ಸೊಳ್ಳೆಪರದೆಯನ್ನು ಕೊಳ್ಳುವುದಕ್ಕೆ ಶಕ್ತಿಯಿಲ್ಲ. ಪುದುಕೋಟೆಯಲ್ಲಿ ಮಸ್ಕಿಟೋ ಇರ್ರ್ಯಾಡಿಕೇಷನ್ ಸ್ಕೀಂ ಯಾವರೀತಿ ಮಾಡಿದ್ದಾರೆಯೋ ಆರೀತಿ ತಾವು ಇಲ್ಲಿ ಎಲ್ಲಿ ಹುಲ್ಲು ಬೆಳೆಯುತ್ತದೆ, ನೀರು ಜಾಸ್ತಿ ನಿಲ್ಲುತ್ತದೆ ಅಂಥ ಕಡೆ ನೀರು ನಿಲ್ಲದಂತೆ ಮಾಡಿ, ಸೊಳ್ಳೆಗಳ ಬೆಳವಣಿಗೆಯನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು, ಪುದುಕೋಟೆಯ ಮಿಲ್ಲರ್ ರಿಪೋರ್ಟ್ ನೋಡಿ, ಅದರಲ್ಲಿರುವ ಕೆಲವು ಕಾರ್ಯಕ್ರಮಗಳನ್ನು ಇಲ್ಲಿ ಅಳವಡಿಸಬೇಕು ಎಂದು ಹೇಳುತ್ತೇನೆ.

12-00 NOON

ಕಾರ್ಪೊರೇಷನ್ ಮಾತೆತ್ತಿದರೆ ಕೋರ್ಟಿಗೆ ಹೋಗುತ್ತಾರೆ. ಕಾರ್ಪೊರೇಷನ್ ಕಮೀಷನರ್‌ಗೆ ಪವರ್ ಕಡಿಮೆ ಇದೆ. ಪಬ್ಲಿಕ್ ಹೆಲ್ತ್ ಆಕ್ಟ್ ಪ್ರಕಾರ ಅವರ ಮೇಲೆ ಚಾರ್ಜ್ ಮಾಡಬಹುದು ಕಾರ್ಪೊರೇಷನ್ ಕಮೀಷನರ್ ವಿಷಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಲಿಕ್ಕೆ ಹೆಚ್ಚಿನ ಪವರ್ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಮಾನ್ಯ ಮಿತ್ರರು ಅನೇಕರು ಹೇಳಿದಹಾಗೆ ಕೋಆರ್ಡಿನೇಷನ್ ಇಲ್ಲ. ನಗರದಲ್ಲಿ ಡ್ರೈನೇಜ್ ಎಲ್ಲಿ ಇದೆ ಅದನ್ನು ಸರಿಯಾಗಿ ನೋಡಿಕೊಳ್ಳುವವರು ಇಲ್ಲ. ವಾಟರ್‌ಬೋರ್ಡಿನವರು ಕಾರ್ಪೊರೇಷನ್‌ನವರಿಗೆ ಸೇರಿದೆ ಎಂದು ಹೇಳುತ್ತಾರೆ, ಕಾರ್ಪೊರೇಷನ್ ನವರು ಸಿಐಟಿಬಿಗೆ ಸೇರಿದೆ ಎಂದು ಹೇಳುತ್ತಾರೆ ಒಬ್ಬರಿಗೊಬ್ಬರಿಗೆ ಕೋಆರ್ಡಿನೇಷನ್ ಇಲ್ಲ. ಈ ದೃಷ್ಟಿಯಿಂದ ಒಂದು ಕೋಆರ್ಡಿನೇಷನ್ ಕಮಿಟಿ ಮಾಡಿ ಎಂದು ಹೇಳಿದ್ದಾರೆ. ಆ ತರಹ ಒಂದು ಕೋಆರ್ಡಿನೇಷನ್ ಕಮಿಟಿ ಇರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಜೋನಲ್ ಮ್ಯಾಪ್ ತಯಾರು ಮಾಡಬಹುದು. ಕಾರ್ಪೊರೇಷನ್ ಆಡಳಿತ ಎಲ್ಲೆಲ್ಲಿ ಇದೆ ಅಲ್ಲಿ ಜೋನಲ್ ಮ್ಯಾಪ್ ತಯಾರುಮಾಡಿ ಪ್ರೈವೇಟ್ ಬೌಂಡ್ಸ್‌ನಲ್ಲಿ ನೀರು ನಿಲ್ಲುವುದಕ್ಕೆ ಅವಕಾಶ ಮಾಡಿದವರಿಗೆ ಶಿಕ್ಷೆ ವಿಧಿಸತಕ್ಕ ಕಾನೂನನ್ನು ತರಬೇಕು. ಜೊತೆಗೆ ಹಾಳು ಬಾವಿಗಳು ಕೆಲವುಕಡೆ ಇವೆ. ಬೆಂಗಳೂರಿನಲ್ಲಿ ಎಷ್ಟು ಹಾಳು ಬಾವಿಗಳಿವೆ ಸರ್ವೆ ಮಾಡಿದ್ದಾರೆ ಅದನ್ನು ನೋಡಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ಹಾಳುಬಾವಿಗಳಲ್ಲಿ ಮೀನುಗಳನ್ನು ಬಿಟ್ಟು ನೋಡಿಕೊಳ್ಳಬೇಕು. ಬೆಂಗಳೂರಿನ ಸ್ವಿವರೇಜ್ ವಾಟರ್ ನ್ಯಾಷನಟ್ ಡೈರಿಯ ಹತ್ತಿರ ಹರಿಯುತ್ತದೆ ಆ ನೀರಿನ ಆಶ್ರಯದಿಂದ ಅಲ್ಲಿ ಹಸಿರು ಹುಲ್ಲು ಬೆಳೆಯುತ್ತದೆ, ಅದು ಬೆಳೆಯುವುದರಿಂದ ಅಲ್ಲಿ ಸೊಳ್ಳೆಗಳು ವಿಪರೀತವಾಗಿ ಉತ್ಪತ್ತಿಯಾಗುತ್ತವೆ. ಅದರಿಂದ ಅಲ್ಲಿ ಬಂದಂಥ ನೀರನ್ನು ಹೊರಗಡೆ ಹಾಕಿದರೆ ಕಂಟ್ರೋಲ್ ಆಗುತ್ತದೆ. ಬಡವರ ರಕ್ತ ಹೀರುವುದು ಕಡಿಮೆಯಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸೊಳ್ಳೆ ಹೆಚ್ಚಾಗಲಿಕ್ಕೆ 10 ವರ್ಷಗಳ ಹಿಂದಿನ ಆಡಳಿತ ಕಾರಣ ತಾನೇ ? ಅದು ಅವರು ಮಾಡಿದ ಪಾಪದ ಫಲವೇ !

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಹಿಂದಿನ ಆಡಳಿತಕ್ಕೂ ಸೊಳ್ಳೆ ಅಭಿವೃದ್ಧಿಗೂ ಸಂಬಂಧವಿಲ್ಲ. ಹಿಂದೆ 40 ಸ್ಲಮ್ಸ್ ಇದದ್ದು ಈಗ 143 ಸ್ಲಮ್ಸ್‌ಗಳು ಆಗಿವೆ. ಡ್ರೈನೇಜ್ ಸಿಸ್ಟಮ್ಸ್ ಸರಿಯಿಲ್ಲ. ಇದನ್ನು ನಿವಾರಣೆ ಮಾಡಬೇಕಾದರೆ ಸರ್ಕಾರದವರು ಒಂದು ಕಾರ್ಯಕ್ರಮವನ್ನು ಏನು ಹಾಕಿದ್ದರೆ ಅದನ್ನು ಕಾರ್ಯರೂಪಕ್ಕೆ ಜಾಗ್ರತೆ ತಂದರೆ ಅನುಕೂಲವಾಗುತ್ತದೆ ಕಾರ್ಪೊರೇಷನ್‌ನಲ್ಲಿ ಸ್ಟಾಫ್ ಏನು ಇದೆ ಅದು ಸಾಲದು. ಸೊಳ್ಳೆಗೋಸ್ಕರ ಡ್ರೈನೇಜ್‌ಗೆ ಎಣ್ಣೆ ಚೆಲ್ಲಿಸುತ್ತಾರೆ ಆ ಎಣ್ಣೆ ಸರಿಯಾಗಿ ಹಂಚುತ್ತಿದ್ದಾರೆಂದು ಗೊತ್ತಾಗುವುದಿಲ್ಲ. ಅದು ಕೂಡ ದುರುಪಯೋಗ ಮಾಡುತ್ತಾರೆಂದು ಗಮನಕ್ಕೆ ಬಂದಿದೆ. ಇದಕ್ಕೆ ಒಂದು ಮಸ್ಕಿಟೋ ಕಂಟ್ರೋಲ್ ಬೋರ್ಡ್ ರಚನೆ ಆದರೆ ಇದನ್ನು ವಾರ್ ಫುಟಿಂಗ್‌ನಲ್ಲಿ ಫೈಟ್ ಮಾಡಬೇಕು. ಹೊರದೇಶದಲ್ಲಿ ಯಾವರೀತಿ ಈ ಸೊಳ್ಳೆಗಳ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಆ ರೀತಿ ನಮ್ಮ ಸರ್ಕಾರದವರು ಸೊಳ್ಳೆಗಳ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ನಮ್ಮ ಬೆಂಗಳೂರು ಗಾರ್ಡನ್ ಸಿಟಿ ಅಫ್ ಇಂಡಿಯಾ ಎಂದು ಹೆಸರು ಬಂದಿದೆ. ಆ ಹೆಸರನ್ನು ಉಳಿಸಿಕೊಳ್ಳಬೇಕೆಂದು ಹೇಳುತ್ತೇನೆ. ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ,...

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸೊಳ್ಳೆ ಕಾಟದ ಮಂತ್ರಿ ಯಾರು ?

ಅಧ್ಯಕ್ಷರು.—ಸದ್ಯಕ್ಕೆ ಶ್ರೀಮಾನ್ ನಂಜೇಗೌಡರು ವಹಿಸಿಕೊಂಡಿದ್ದಾರೆ.

† ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ಶಾಮಣ್ಣನವರು ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ, ಬಹುಶಃ ಇವೊತ್ತಿನ ದಿವಸ ಏನು ಪರಿಸ್ಥಿತಿ ಇದೆ ಅದು ಬಹಳ ವರ್ಷಗಳಿಂದ ಬೆಂಗಳೂರು ನಗರಕ್ಕೆ ಸೊಳ್ಳೆ ಕಾಟ ತಪ್ಪಿದ್ದಲ್ಲ. ಸೊಳ್ಳೆ ಕಾಟದಿಂದ ಬೆಂಗಳೂರು ನಗರದ ಜನತೆಯನ್ನು ತಪ್ಪಿಸುವಲ್ಲಿ ಎಲ್ಲಾ ಸರ್ಕಾರಗಳು ಸಂಪೂರ್ಣವಾಗಿ ವಿಫಲವಾಗಿವೆ. ಹಿಂದೆ ಇದ್ದಂಥ ಕಾಂಗ್ರೆಸ್ ಓ ಈಗ ಇರತಕ್ಕ ಆಡಳಿತ ಕಾಂಗ್ರೆಸ್ ಮುಂದೆ ಬರತಕ್ಕ ಯಾದ ಪಾರ್ಟಿ ಸೊಳ್ಳೆ ಕಾಟವನ್ನು ತಪ್ಪಿಸುವುದರಲ್ಲಿ ವಿಫಲವಾಗಿದ್ದಾರೆ. ಶ್ರೀ ವಿರೇಂದ್ರ ಪಾಟೀಲರ ಕಾಲದಲ್ಲಿ. ಶ್ರೀ ನಿಜಲಿಂಗಪ್ಪನವರ ಕಾಲದಲ್ಲೂ ನೋಡಿದ್ದೇವೆ. ಶ್ರೀ ಕೆ. ಸಿ. ರೆಡ್ಡಿಯವರ ಕಾಲದಲ್ಲೂ ಇತ್ತು. ಎಲ್ಲಾ ಕಾಲದಲೂ ಕಾರ್ಪೊರೇಷನ್ ಸಭೆಯಲ್ಲಿ ಈ ಸೊಳ್ಳೆ ನಿರ್ಮೂಲ ಮಾಡುವುದಕ್ಕೋಸ್ಕರ ಬೇಕಾದಷ್ಟು ಮನವಿಗಳನ್ನು ಮಾಡಿದ್ದೇವೆ. ಆದರೂ ಜನರಿಗೆ ಈ ಸೊಳ್ಳೆಗಳ ಕಾಟದಿಂದ ತೊಂದರೆ ಇದ್ದೇ ಇದೆ. ಸರ್ಕಾರದವರು ಸೊಳ್ಳೆಯನ್ನು ತಪ್ಪಿಸುವುದಕ್ಕೆ ಯಾವುದಾದರೂ ಹೊಸ ಯೋಜನೆ ಕಂಡುಹಿಡಿಯಬೇಕು. ಕೆ. ಸಿ. ರೆಡ್ಡಿಯವರ ಕಾಲದಿಂದ ಹಿಡಿದು ಇವೊತ್ತಿನವರೆಗೂ ಒಂದೇ ಸಮನೆ ಅಲ್ಲಿಂದ ಇಲ್ಲಿಯವರೆಗೂ ಮೆಮೊರಾಂಡಂ ಸಲ್ಲಿಸುತ್ತಿದ್ದೇವೆ ಆದರೆ ಸೊಳ್ಳೆ ಕಾಟ ತಪ್ಪಿಸುವುದಕ್ಕೆ ವರ್ಷಕ್ಕೆ 18 ಲಕ್ಷ ರೂಪಾಯಿ ಖರ್ಚುಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು ಕಾರ್ಪೊರೇಷನ್‌ನಲ್ಲಿ ಬಹಳ ವರ್ಷಗಳಿಂದ ಇದ್ದೀರಿ ಏನು ಮಾಡಿದಿರಿ ?

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಸರ್ಕಾರದ ಕೈಕೆಳಗೆ ನಿಂತಿದ್ದೇವೆ. 18 ಲಕ್ಷ ರೂಪಾಯಿಗಳನ್ನು ನೀವು ಏನು ಖರ್ಚುಮಾಡುತ್ತಿದ್ದೀರಿ, ನನಗನಿಸುತ್ತದೆ ನೀವು ಕೊಡುತ್ತಾ ಇರತಕ್ಕ ಔಷಧಿ ನೋಡಿದರೆ ನಾನು ತಿಳಿದುಕೊಂಡಿದ್ದೇನೆ ಸೊಳ್ಳೆಗಳಿಗೆ ಅದು ಟಾನಿಕ್ ಆಗಿದೆ. ಅದನ್ನು ತಜ್ಞರೇ ನೋಡಬೇಕು. ನಾನು ನೋಡಿದ ಹಾಗೆ 5 ವರ್ಷಗಳಲ್ಲಿ ಸಣ್ಣ ಸೊಳ್ಳೆ ನೋಡುತ್ತಾ ಇದ್ದೆವು. ನಿಮ್ಮ ಆಡಳಿತ ಬಂದು. ತೀರಾ ದೊಡ್ಡ ಸೊಳ್ಳೆ ನೋಡುತ್ತಾ ಇದ್ದೇವೆ. 18 ಲಕ್ಷದ ಪೈಕಿ ರಾಜಕೀಯ ಸೊಳ್ಳೆಗಳಿಗೆ ಎಷ್ಟು ಹೋಗುತ್ತದೋ ಗೊತ್ತಿಲ್ಲ. 18 ಲಕ್ಷ ಖರ್ಚು ಮಾಡ ತಕ್ಕದ್ದು ಸೊಳ್ಳೆ ನಿರ್ಮೂಲನಕ್ಕೆ ಔಷದೋಪಚಾರ ಮಾಡುತ್ತಿದ್ದೀರಿ ಔಷದಿ ಹೋಗಿ ಅವಕ್ಕೆ ಆಹಾರವಾಗಿದೆ. ಅವು ದೊಡ್ಡದಾಗಿ ಬೃಹದಾಕಾರವಾಗಿ ಬೆಳೆಯುತ್ತಾ ಇವೆ. ಮಂತ್ರಿಗಳಿಗೆ ಅವು ತಟ್ಟಿಲ್ಲ. ನಿಮ್ಮ ಮನೆಯಲ್ಲಿ ಹೆಚ್ಚು ಹೆಚ್ಚು ಸೊಳ್ಳೆ ಪರದೆಗಳು ಇವೆ. ಸೊಳ್ಳೆ ಪರದೆ ಇರುವುದರಿಂದ ನಿಮ್ಮ ಕಡೆ ಸೊಳ್ಳೆಗಳು ಬಂದಿಲ್ಲ. ಅದರಿಂದ ಸೊಳ್ಳೆಗಳ ಅನುಭವ ಇವರಿಗೆ ಆಗಲಲ್ಲ. ಆದುದರಿಂದ ಬೆಂಗಳೂರು ನಗರದ ಬಡವರಿಗೆ ಆಗತಕ್ಕ ತೊಂದರೆ ಇವರಿಗೆ ಗೊತ್ತಿಲ್ಲ. ಶ್ರೀಮಂತ ವರ್ಗದವರು ದೊಡ್ಡ ದೊಡ್ಡ ಬಂಗಲೆಗಳಲ್ಲಿ ವಾಸಿಸುತ್ತಾರೆ ಅವರ ಮನೆಗಳಲ್ಲಿ ಐದೈದು ಹತ್ತತ್ತು ಸೊಳ್ಳೆ ಪರದೆಗಳು ಇರುತ್ತದೆ. ಮಂತ್ರಿ ವರ್ಗಕ್ಕೆ ಮತ್ತು ಹೆಚ್ಚು ಜನ ಶಾಸಕರಿಗೆ ಈ ಅನುಕೂಲಗಳು ಇವೆ. ಆದರೆ ನನಗಂತೂ ಇಲ್ಲ. ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಬಡವರಿಗೆ ಆಗಿ ನಾನು ಹೇಳುವುದು ಏನು 18 ಲಕ್ಷ ರೂಪಾಯಿ ಸೊಳ್ಳೆಗಳಿಗಾಗಿ ಖರ್ಚು ಮಾಡುತ್ತಿದ್ದೀರಿ ಸ್ವಲ್ಪ ಜಾಸ್ತಿ ಆದರೂ ಚಿಂತೆಯಿಲ್ಲ ಬಡವರಿಗೆ ಉಚಿತವಾಗಿ ಮೂರು ಮೂರು ಸೊಳ್ಳೆ ಪರದೆಗಳನ್ನು ಕೊಡಬೇಕು. ಸರ್ಕಾರ ಎಲ್ಲಿಯವರೆಗೆ ಸೊಳ್ಳೆ ನಿರ್ಮೂಲ ಮಾಡುವುದಿಲ್ಲ ಅಲ್ಲಿಯವರೆಗೆ ಮೂರು ಮೂರು ಪರದೆಗಳನ್ನು ಬಡವರಿಗೆ ಹಂಚಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮೂರು ಜನಗಳು ಇದ್ದರೆ !

ಶ್ರೀ ವಾಟಾಳ್ ನಾಗರಾಜ್.—ಸಣ್ಣ ಮಕ್ಕಳು ಸೇರಿ ಒಂದರಲ್ಲೇ ಮಲಗಿಕೊಳ್ಳಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಸೊಳ್ಳೆ ಪರದೆ ಕಟ್ಟಿಕೊಳ್ಳುವುದಕ್ಕೆ ಮಂಚ ಬೇಡವೆ !

ಶ್ರೀ ವಾಟಾಳ್ ನಾಗರಾಜ್.—ಮಂಚ ಕೇಳಿದರೆ ಅತಿರೇಕವಾಗುತ್ತದೆ. ಬೇಡ. ಸೊಳ್ಳೆ ಪರದೆ ಕಟ್ಟಿಕೊಂಡು ನೆಲದಲ್ಲಿ ಮಲಗುತ್ತಾರೆ. 5 ವರ್ಷದ ದುಡ್ಡನ್ನು ಉಳಿತಾಯಮಾಡಿ ಕೊಡಬೇಕು. ಆರೋಗ್ಯ ಸಚಿವರಿಗೆ ಒಂದು ಸಲಹೆ ಮಾಡುತ್ತೇನೆ. ಮನುಷ್ಯರಿಗೆ ಕುಟುಂಬ ಯೋಜನೆ ಏನು

(ಶ್ರೀ ವಾಟಾಳ್ ನಾಗರಾಜ್)

ತಂದಿದ್ದೀರಿ ಅದೇ ರೀತಿ ತಮಗೆ ಇದು ಒಪ್ಪುವುದಾದರೆ ತಜ್ಞರಿಂದ ಒಂದು ಯೋಜನೆ ಮಾಡಿಸಿ ಸೊಳ್ಳೆ ನಿರೋಧವನ್ನು ಮಾಡಿದರೆ ಒಳ್ಳೆಯದು. ಲಕ್ಷಾಂತರ ಸೊಳ್ಳೆಗಳು ಒಂದು ದಿನಕ್ಕೆ ಹುಟ್ಟುತ್ತಿವೆ. ಅದಕ್ಕೂ ಕುಟುಂಬ ಯೋಜನೆ ಮಾಡತಕ್ಕ ವ್ಯವಸ್ಥೆ ತಮ್ಮ ಗಮನಕ್ಕೆ ಬರುವುದಾದರೆ ಒಳ್ಳೆಯದು. ಇರುವೆಗಿಂತ ಗಾತ್ರವಾಗಿ ಸೊಳ್ಳೆ ಕಾಣುತ್ತವೆ.

ಒಬ್ಬ ಸದಸ್ಯರು.—ಅದಕ್ಕೆ ನಿಮ್ಮನ್ನೇ ಛೇರ್‌ಮನ್ ಮಾಡಿದರೆ ಒಳ್ಳೆಯದಲ್ಲವೇ?

ಶ್ರೀ ವಾಟಾಳ್ ನಾಗರಾಜ್,—ನನ್ನನ್ನು ಮಾಡಿದರೆ ನಾನು ತಪ್ಪಿಸಿಕೊಂಡು ಹೋಗುವುದಿಲ್ಲ. ಏನು ಕೊಟ್ಟರೂ ಕರಾರುವಾಕ್ಕಾಗಿ ಮಾಡುತ್ತೇನೆ. ಚೇರ್‌ಮನ್ ಮಾಡಿದರೆ ವಾದ ಏನೂ ಇಲ್ಲ. ಕೈಲಾದಷ್ಟು ಕೆಲಸ ಮಾಡುತ್ತೇನೆ. ನಾನು ನೋಡುತ್ತಾ ಇದ್ದೇನೆ ಸಣ್ಣ ಸೊಳ್ಳೆಯಿಂದ ಜನರಿಗೆ ತೊಂದರೆಯಾಗುವುದಿಲ್ಲ. ಹೊಸ ಸರ್ಕಾರ ಬರುತ್ತಾ ಹೊಸ ಸೊಳ್ಳೆಗಳು ಬರುತ್ತಾ ಇವೆ. ಸೊಳ್ಳೆ ಸಂಗೀತ ಕೇಳಿರಬಹುದು. ತಮಗೆ ಅನುಭವವಿಲ್ಲ. ಕರ್ನಾಟಕ ಸಂಗೀತ, ಲಘು ಸಂಗೀತ, ಹಿಂದೂಸ್ಥಾನಿ ಸಂಗೀತ, ಜಾನಪದ ಗೀತೆ, ಪಿಟೀಲುವಾದನ ಎಲ್ಲಾ ಇವುಗಳಿಂದ ಶುರುವಾಗುತ್ತದೆ. 10 ಗಂಟೆ ಆದ ಮೇಲೆ ಕಿವಿ ಹತ್ತಿರ ಪದ ಹೇಳುತ್ತವೆ. ಸಾಮಾನ್ಯ ಜನರಿಗೆ ಸಂಗೀತ ಕೇಳತಕ್ಕ ಈ ಹೊಸ ಒಂದು ಸೌಲಭ್ಯ ಕಲ್ಪಿಸಿದ್ದೀರಿ. ಸೊಳ್ಳೆ ಕಾಟ ಸಂಪೂರ್ಣವಾಗಿ ನಿವಾರಿಸಬೇಕಾದರೆ ಚರಂಡಿ ವ್ಯವಸ್ಥೆ ಚೆನ್ನಾಗಿ ಆಗಬೇಕು. ಇಂದು ಸುಮಾರು 2 ಕೋಟಿ ರೂಪಾಯಿಗಳನ್ನು ಒಳ ಚರಂಡಿ ವ್ಯವಸ್ಥೆಗೆ ಖರ್ಚುಮಾಡುತ್ತಿದ್ದರೂ ಸರಿಯಾದ ಕೆಲಸವಾಗಿಲ್ಲ. ಇದರಿಂದ ಅಲ್ಲಲ್ಲಿ ಕೊಳಚೆ ನೀರು ನಿಂತು ಸೊಳ್ಳೆ ಉತ್ಪತ್ತಿಯಾಗಲು ಅವಕಾಶ ಜಾಸ್ತಿಯಾಗುತ್ತಿದೆ. ಅಲ್ಲಲ್ಲಿ ಅನೇಕ ಹುಲ್ಲುಗಾವಲುಗಳಿವೆ. ಕಂಟ್ರಾಕ್ಟರುಗಳನ್ನು ರಕ್ಷಣೆ ಮಾಡುತ್ತಿರುವುದರಿಂದ, ರಾಜಕೀಯ ಪ್ರಭಾವಕ್ಕೊಳಗಾಗಿರುವುದರಿಂದ ಸೊಳ್ಳೆ ಕಾಟ ಕಡಮೆ ಮಾಡಲು ಅವಕಾಶವಾಗಿಲ್ಲ. ಹುಲ್ಲುಗಾವಲುಗಳಿಗೆ ಅವಕಾಶ ಕೊಡದಂತೆ ಆಜ್ಞೆಯಾಗಿದ್ದರೂ ಕೂಡ ಹಿಂದಿದ್ದ ಮೇಯರುಗಳು ರಾಜಕೀಯ ದೃಷ್ಟಿಯಿಂದ ಆಜ್ಞೆಗೆ ಗಮನಕೊಡದೆ ಸೊಳ್ಳೆ ಜಾಸ್ತಿಯಾಗಿದೆ. ಸೊಳ್ಳೆ ಹೆಚ್ಚಿ ಅವು ಸಂಗೀತ ಹಾಡುತ್ತಿವೆ. ಆದುದರಿಂದ ಪರಿಣಾಮಕಾರಿಯಾಗಿ ವ್ಯವಸ್ಥಿತವಾಗಿ ಯೋಜನೆ ಮಾಡಿ, ಒಳ ಚರಂಡಿ ವ್ಯವಸ್ಥೆ ಸುವ್ಯವಸ್ಥಿತವಾಗಿ ಮಾಡಿ ಪೂರೈಸಿ, ಹುಲ್ಲು ಬೆಳೆಯುವುದನ್ನು ನಿಲ್ಲಿಸಬೇಕು. ಕೋರಮಂಗಲದ ಬಳಿ ಹುಲ್ಲನ್ನು ಹೆಚ್ಚಾಗಿ ಬೆಳೆಯುವರು. ಪ್ರಭಾವಯುತರಾದ ಕಂಟ್ರಾಕ್ಟರುಗಳು ಹುಲ್ಲು ಬೆಳೆಸುತ್ತಲೇ ಇದ್ದಾರೆ. ಹೊರಗಿನವರು ಬೆಂಗಳೂರು ಸುಂದರ ನಗರವೆಂದು ಇಲ್ಲಿಗೆ ಬಂದರೆ ವಿಮಾನ ನಿಲ್ದಾಣದಲ್ಲೇ ಸೊಳ್ಳೆಗಳು ಸ್ವಾಗತಿಸುವುವು, ಹೋಟೆಲು, ಗೆಸ್ಟ್ ಹೌಸು ಮುಂತಾದ ಎಲ್ಲಾ ಕಡೆಗಳಲ್ಲೂ ಹೆಚ್ಚಿವೆ ಅನೇಕ ಸಾರಿ ಈ ಬಗ್ಗೆ ವಾದವಿವಾದ ಮಾಡಿ ಮೆಮೊರಾಂಡಂ ಕೊಟ್ಟರೂ ತಕ್ಕ ಕ್ರಮ ತೆಗೆದುಕೊಂಡಿಲ್ಲ. ಬರುವ ಮೇಯರುಗಳೆಲ್ಲಾ ಹೇಳಿದಾಗ ಸರಕಾರಕ್ಕೆ ತಿಳಿಸಿ ತಕ್ಕ ಕ್ರಮ ತೆಗೆದುಕೊಂಡು ಸೊಳ್ಳೆಕಾಟ ತಪ್ಪಿಸುವುದಾಗಿ ಭರವಸೆ ಕೊಟ್ಟಿದ್ದಾರೆ, ಆದರೆ ಏನೂ ಆಗಿಲ್ಲ. ಆದುದರಿಂದ ಸರಕಾರ ಈಗಾದರೂ ಮನಸ್ಸುಮಾಡಿ ತತ್‌ಕ್ಷಣ ಸೂಕ್ತ ಕ್ರಮ ತೆಗೆದುಕೊಂಡು ಸೊಳ್ಳೆಕಾಟ ತಪ್ಪಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ

†ಶ್ರೀ ಎಚ್. ಎನ್. ನಂಜೇಗೌಡ (ಭಾರಿ ನೀರಾವರಿ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಸೊಳ್ಳೆಗಳಿಗೂ ಕೂಡ ಜನನ ನಿಯಂತ್ರಣ ಯೋಜನೆಯನ್ನು ಜಾರಿಗೆ ತರಬೇಕೆಂದು ಸೂಚಿಸಿದ್ದಾರೆ. ಇದನ್ನು ವಿಚಾರ ಮಾಡಬೇಕಾಗುತ್ತದೆ. ವಿಚಾರ ಮಾಡಿ ಈ ಯೋಜನೆ ಅನುಷ್ಠಾನಕ್ಕೆ ತರುವುದಾದರೆ ಶ್ರೀ ವಾಟಾಳ್ ನಾಗರಾಜ್‌ರವರನ್ನೇ ಈ ಯೋಜನೆ ಕಾರ್ಯಕ್ರಮ ತೆಗೆದುಕೊಳ್ಳಲು ಮಾಡುವ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲು ಸರಕಾರ ಪರಿಶೀಲಿಸುವುದು ಎಂದು ತಿಳಿಸುತ್ತೇನೆ. ಸೊಳ್ಳೆ ಕಾಟ ತಪ್ಪಿಸಲು ಮಾನ್ಯ ಸದಸ್ಯರು ಅನೇಕ ಸಲಹೆ ಕೊಟ್ಟಿದ್ದಾರೆ. ಕಾರ್ಪೊರೇಷನ್ ಸರಕಾರದ ಸಹಾಯದಿಂದ ಸಾಕಾದಷ್ಟು ಕಾರ್ಯಕ್ರಮ ಈಗ ಕೈಕೊಂಡಿದೆ. ಹಾಗೆ ಕೈಕೊಂಡಿದ್ದರೂ ಕೂಡ ಸೊಳ್ಳೆಗಳ ಕಾಟ ಕಡಿಮೆಯಾಗಿದೆ ಎಂದು ಹೇಳುವ ಧೈರ್ಯ ನನಗಿಲ್ಲ. ಕಾರಣ ಇದುವರಗೆ ಕೈಕೊಂಡಿರುವ ಕ್ರಮಗಳಿಂದ ಸಂಪೂರ್ಣವಾಗಿ ಸೊಳ್ಳೆಗಳನ್ನು ನಿರ್ಮೂಲನಮಾಡಲು ಸಾಧ್ಯವಾಗಿಲ್ಲ. ಇದಕ್ಕೆ ಅನೇಕ ಕಾರಣಗಳುಂಟು. ಸಾಕಷ್ಟು ಡ್ರೈನೇಜ್ ಸಿಸ್ಟಂ ಇಲ್ಲ, ಸ್ಟೋರೇಜ್ ಸಿಸ್ಟಂ ಸರಿಯಾಗಿಲ್ಲ. ಮಾನ್ಯ ಸದಸ್ಯರು ಹೇಳಿದಹಾಗೆ ಹುಲ್ಲು ಮುಂತಾದ್ದು ಬೆಳೆಯಲು ಸ್ಯೂಅರೇಜ್ ವಾಟರನ್ನು ಬಳಸುತ್ತಿದ್ದಾರೆ. ಇದಕ್ಕೆ ಅವಕಾಶವಿಲ್ಲದಂತೆ ಮಾಡಬೇಕಾಗಿದೆ. ಅಲ್ಲದೆ ಸುಮಾರು ಒಂದು

Accession No. 6006
Date......

ಒಂದೂವರೆ ವರ್ಷದಿಂದ ಕ್ಷಾಮ ಪರಿಸ್ಥಿತಿಯುಂಟಾಗಿ ಅದರ ಕಡೆಗೆ ಹೆಚ್ಚಾಗಿ ಗಮನ ಹರಿಸಲಾಗಿದೆ ಹೋದ ಜೂನ್ ತಿಂಗಳಲ್ಲಿ ಸೊಳ್ಳೆ ಕಾಟ ನಿರ್ಮೂಲಮಾಡಲು ತ್ವರಿತ ಕಾರ್ಯಕ್ರಮ ಕೈಕೊಳ್ಳಲು ಅಧಿಕಾರವರ್ಗ, ಈ ಸಭೆ ಮತ್ತು ಮೇಲ್ಮನೆ ಸದಸ್ಯರು ಸೇರಿದ ಒಂದು ಸಮಿತಿ ರಚಿಸಿತ್ತು. ಅದರಲ್ಲಿ ಶ್ರೀ ಶಾಮಣ್ಣನವರು ಮತ್ತು ಶ್ರೀ ವಾಟಾಳ್ ನಾಗರಾಜರವರೂ ಇದ್ದಾರೆ. ಸಮಿತಿ ಯಾವಾಗ ಬೇಕಾದ ಸ್ಥಳಗಳಿಗೆ ಭೇಟಿ ಕೊಟ್ಟರು. ತೊಂದರೆ ಯಾವರೀತಿ ನಿವಾರಣಮಾಡಬೇಕೆಂಬುದನ್ನು ಪರಿಶೀಲಿಸಿ ಸರಕಾರಕ್ಕೆ ವರದಿಮಾಡಿದ್ದಾರೆ. ಪೂರ್ಣವಾದ ವರದಿ ಇನ್ನೂ ಬರಬೇಕಾಗಿದೆ. ಅದು ಬಂದನಂತರ ಸರಕಾರ ಈ ವಿಷಯದಲ್ಲೇನು ಮಾಡಬೇಕು ಎಂಬುದನ್ನು ಪರಿಶೀಲಿಸುವುದು ಖಾಸಗಿ ವ್ಯಕ್ತಿಗಳು ಪೈಪುಗಳನ್ನು ಒಡೆದು ಸ್ಯೂಯೇಜ್ ವಾಟರನ್ನು ಉಪಯೋಗಿಸದಂತೆ ತಡೆಯಲು ಕಾನೂನಿಗೆ ತಿದ್ದುಪಡಿ ತರುವುದು ಮುಂತಾದುವುಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಸರಕಾರವೇನೂ ಮಾಡಿಲ್ಲವೆಂಬುದು ಸರಿಯಲ್ಲ. ಕಾರಣ ಮಲೇರಿಯ ಸೊಳ್ಳೆ ನಿರ್ಮೂಲನಕ್ಕೆ ಕಾರ್ಪೋರೇಷನ್ ಖರ್ಚುಮಾಡುವುದರಲ್ಲಿ ಅರ್ಧ ಸರಕಾರ ಕೊಡುತ್ತಿದೆ. ಇಷ್ಟು ಹೇಳಿ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಅವರಲ್ಲಿ ಮನವಿಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಚಿವರು ಉತ್ತರ ಕೊಟ್ಟಿರುವುದು ಸಮಾಧಾನಕರವಾಗಿದೆ. ಅವರು ಆಶ್ವಾಸನೆ ಕೊಟ್ಟಿರುವುದರಿಂದ ನನ್ನ ಉದ್ದೇಶ ಸಾಧಿಸಿದಂತಾಗಿದೆ. ಮತ್ತೊಮ್ಮೆ ಇದರ ಬಗ್ಗೆ ಆಶ್ವಾಸನೆ ಕೊಡಬೇಕೆಂದು ಕೇಳಿಕೊಂಡು ನನ್ನ ನಿರ್ಣಯವನ್ನು ವಾಪಸು ಪಡೆಯಲು ಅನುಮತಿ ಬೇಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಆಗಲೇ ಹೇಳಿದಂತೆ ಸಂಬಂಧಪಟ್ಟ ಸಮಿತಿಯ ವರದಿ ಬಂದನಂತರ ಸರಕಾರ ಸೂಕ್ತವಾದ ಕ್ರಮ ಕೈಕೊಳ್ಳುವುದೆಂದು ಭರವಸೆ ಕೊಡುತ್ತೇನೆ

MADAM SPEAKER.—Has the hon. member leave of the House to withdraw the Resolution ?

Hon'ble Members .—Yes.

The Resolution was, by leave withdrawn

(ii) re: acquiring private land near slums in Bangalore and alloting the same to the slum dwellers.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ನನ್ನ ನಿರ್ಣಯ ಈ ರೀತಿ ಇದೆ .— ಬೆಂಗಳೂರು ನಗರದಲ್ಲಿ ಹಾಲಿ ಕೊಳಚೆ ಪ್ರದೇಶಗಳಲ್ಲಿರುವ ಖಾಸಗೀ ಜಮೀನುಗಳನ್ನು ಸರ್ಕಾರದವರು ವಹಿಸಿಕೊಂಡು ಸದರಿ ಜಮೀನನು ಕೊಳಚೆ ಪ್ರದೇಶದ ನಿವಾಸಿಗಳಿಗೆ ಮಾದರಿ ಮನೆಗಳನ್ನು ನಿರ್ಮಿಸುವುದಕ್ಕಾಗಿ ಹಂಚಬೇಕೆಂದು ಈ ಸಭೆಯವರು ಸರ್ಕಾರದವರಿಗೆ ಶಿಫಾರಸು ಮಾಡುತ್ತಾರೆ.

ಅಧ್ಯಕ್ಷರೇ, ಸೌಂದರ್ಯವಾದ ಬೆಂಗಳೂರು ನಗರದ ನಾಗರೀಕರಿಗೆ ಇರತಕ್ಕ ಮುಖ್ಯವಾದಂಥಾದ್ದು 3 ಸಮಸ್ಯೆಗಳು. ಅವು ಯಾವುವು ಎಂದರೆ (1) ನೀರಿನ ಸಮಸ್ಯೆ, ( ) ಸೊಳ್ಳೆ ಕಾಟ (3) ಊರಿನ ಸುತ್ತಮುತ್ತಲೂ ಇರತಕ್ಕಂಥ ಕೊಳಚೆ ಪ್ರದೇಶ.

ಇದರಲ್ಲಿ ಒಂದನೆಯದಾಗಿ ಹೇಳುವುದಾದರೆ ಈಗಾಗಲೇ ಸರ್ಕಾರದವರು ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ತರುವುದಕ್ಕೆ ಏರ್ಪಾಡು ಮಾಡಿ ಸದ್ಯದಲ್ಲೇ ನೀರಿನ ಒಂದು ಸಮಸ್ಯೆಯನ್ನು ಬಗೆಹರಿಸತಕ್ಕಂಥ ಒಂದು ಕಾರ್ಯಕ್ರಮ ತಗೆದುಕೊಂಡಿರುವುದು ಬಹಳ ಸಂತೋಷದ ವಿಚಾರ.

ಇನ್ನು ಎರಡನೆಯದಾಗಿ ಸೊಳ್ಳೆ ಕಾಟದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಸರ್ಕಾರದವರು ಇದನ್ನು ನಿರ್ಮೂಲ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನೂ ಕೂಡ ಕೊಟ್ಟಿದ್ದಾರೆ.

Karnataka State Archives,

(ಶ್ರೀ ಟಿ. ಆರ್ ಶಾಮಣ್ಣ)—

ಇನ್ನು ಮೂರನೆಯದಾಗಿ ಹೇಳುವುದಾದರ ಬೆಂಗಳೂರು ನಗರದ ಕೊಳಚೆ ಪ್ರದೇಶದ ನಿರ್ಮೂಲದ ಬಗ್ಗೆ ಅದರಲ್ಲೂ ಕೂಡ ಖಾಸಗೀ ಜಮೀನುಗಳು ಇರತಕ್ಕಂಥ ಕಡೆ ಈ ಕೊಳಚೆ ಪ್ರದೇಶದ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ನಿನ್ನೆ ದಿನವೂ ಕೂಡ ಹೇಳಿದೆ. ಈವಾಗ ಬೆಂಗಳೂರಿನಲ್ಲಿ ಒಟ್ಟು 143 ಕೊಳಚೆ ಪ್ರದೇಶಗಳು ಇವೆ ಎಂದು ಅಧಿಕೃತವಾಗಿ ಹೇಳಿ ಕೊಟ್ಟಿದ್ದಾರೆ. ಅದರ ಬಗ್ಗೆ ಖಾಸಗೀ ಜಮೀನುಗಳಲ್ಲಿ ಇರತಕ್ಕಂಥಾದ್ದು 76, ಕಾರ್ಪೋರೇಷನ್ ಜಾಗದಲ್ಲಿ ಇರತಕ್ಕಂಥಾದ್ದು 31, ಟ್ರಸ್ಟ್‌ಬೋರ್ಡ್ ಜಾಗದಲ್ಲಿ ಇರತಕ್ಕಂಥಾದ್ದು 13, ಸರ್ಕಾರದ ಜಾಗದಲ್ಲಿ ಇರತಕ್ಕಂಥಾದ್ದು 23. ಸರ್ಕಾರದವರು ಈಗಾಗಲೇ ಸರ್ಕಾರೀ ಜಮೀನಿನ ಮೇಲೆ, ಕಾರ್ಪೋರೇಷನ್ನಿನವರ ಜಮೀನಿನ ಮೇಲೆ ಮತ್ತು ಟ್ರಸ್ಟ್‌ಬೋರ್ಡ್‌ಗಳ ಜಮೀನಿನ ಮೇಲೆ ಇರತಕ್ಕಂಥ ಕೊಳಚೆ ಪ್ರದೇಶಗಳನ್ನು ಸರಿಪಡಿಸುವುಧಕ್ಕೆ ತಕ್ಕ ಕಾರ್ಯಕ್ರಮಗಳನ್ನು ಆಗಲೇ ತೆಗೆದುಕೊಂಡಿದ್ದಾರೆ. ಶ್ರೀಮತಿ ಇಂಧಿರಾಗಾಂಧಿಯವರು ಈ ಸ್ಲಂಸ್‌ನವರ ಬಗ್ಗೆ ಒಂದು ವಿಶ್ವಾಸವನ್ನಿಟ್ಟುಕೊಂಡು ಇದನ್ನು ಉತ್ತಮಪಡಿಸಬೇಕೆಂದು ಇದಕ್ಕಾಗಿ 1½ ಕೋಟಿ ರೂಪಾಯಿ ಹಣವನ್ನು ಒದಗಿಸಿ ಕೊಟ್ಟಿದ್ದಾರೆ. ಈ ಹಣವನ್ನು ಸಾಧಾರಣವಾಗಿ ನಾನು ಈಗಾಗಲೇ ಹೇಳಿದ ಹಾಗೆ ಕಾರ್ಪೊರೇಷನ್, ಟ್ರಸ್ಟ್‌ಬೋರ್ಡ್ ಮತ್ತು ಸರ್ಕಾರಿ ಜಮೀನುಗಳ ಮೇಲೆ ಇರತಕ್ಕಂಥ ಸ್ಲಂಸ್‌ಗೆ ಖರ್ಚಾಗುತ್ತಿದೆ ಆದರೆ ಖಾಸಗೀ ಜಮೀನಿನ ಬಗ್ಗೆ ಖರ್ಚು ಮಾಡುತ್ತಾ ಇಲ್ಲ. ಈಗ ಖಾಸಗೀ ಜಮೀನುಗಳಲ್ಲಿ ಇರತಕ್ಕಂಥಾ ಸ್ಲಂಸ್ ಒಂದಾನೊಂದು ಕಾಲದಲ್ಲಿ ದೊಡ್ಡ ತೋಟದ ಜಾಗವಾಗಿತ್ತು. ವಿಶಾಲವಾದ ಜಮೀನಾಗಿತ್ತು. ಈವಾಗ ಆ ಜಮೀನಿನ ಮಾಲೀಕರಿಗೆ ಲಕ್ಷಾಂತರ ರೂಪಾಯಿ ಲಾಭವಾಗುತ್ತದೆ. ಇದು ಹೇಗಾದರೂ ಆಗಲಿ ಆ ಖಾಸಗೀ ಜಮೀನುಗಳನ್ನು ಬಿಡಿಸಿಕೊಂಡು ಹೆಚ್ಚಿನ ಲಾಭವನ್ನು ಕೊಡಬೇಕು ಅಂತಲ್ಲ. ಈ ಖಾಸಗೀ ಜಮೀನ್‌ಗಳ ಮಾಲೀಕರಿಂದಲೇ ಈ ಸ್ಲಂಸ್‌ಗಳನ್ನು ತೆಗೆಸುವ ಪ್ರಯತ್ನ ಮಾಡಬೇಕು ಮತ್ತು ಸ್ಲಂಸ್‌ಗಳನ್ನು ಬೆಳೆಸುವುದಕ್ಕೆ ಈ ಖಾಸಗೀ ಜಮೀನುಗಳ ಮಾಲೀಕರೇ ಕಾರಣ ಎಂದು ಹೇಳಿದರೆ ತಪ್ಪಾಗಲಾರದು. ಏತಕ್ಕೆಂದರೆ ಅವರಿಗೆ 10-10 ಅಡಿ ಜಾಗ ಕೊಟ್ಟು ಆ ಜಾಗಕ್ಕೆ 3-3 ರೂಪಾಯಿಯಂತೆ ಬಾಡಿಗೆ ತೆಗೆದುಕೊಂಡಿದ್ದಾರೆ. ಇದರ ಮೇಲೆ ಒಂದು ಹತೋಟಿ ಇಲ್ಲದೇ ಇರುವುದರಿಂದ ಅವರಿಗೆ ಹೆಚ್ಚಿನ ಲಾಭ ಪಡೆಯುವುದಕ್ಕೆ ಅವಕಾಶವಾಗಿದೆ. ಬೆಂಗಳೂರು ನಗರದಲ್ಲಿ ಹೆಚ್ಚಿಗೆ ಸ್ಲಂಸ್‌ಗಳು ಇರತಕ್ಕಂಥಾದ್ದು ಕಳಾಸಿಪಾಳ್ಯಂ, ಮೈಸೂರು ರೋಡ್ ಮತ್ತು ಜಯಚಾಮರಾಜೇಂದ್ರ ರೋಡ್‌ನಲ್ಲಿ ಇದೆ. ಈ ಸ್ಲಂಸ್‌ಗಳು ಅತಿ ಮುಖ್ಯವಾದಂಥ ಜಾಗದಲ್ಲೇ ಇವೆ. ಬೆಂಗಳೂರಿಗೆ ಬರತಕ್ಕಂಥವರು ಇದು ಒಂದು ಸುಂದರವಾದ ನಗರ ಎಂದು ಏನು ಹೇಳುತ್ತಾರೋ ಅವರು ಈ ಸ್ಲಂಸ್‌ಗಳು ಇರುವುದನ್ನು ನೋಡಿದರೆ ಕಣ್ಣಿಗೆ ಕೊರತೆಯನ್ನು ಉಂಟು ಮಾಡುತ್ತದೆ. ಆದುದರಿಂದ ಬೆಂಗಳೂರು ನಾಗರೀಕರಿಗೆ ಅಥವಾ ಬೆಂಗಳೂರು ನಗರದ ಒಂದು ವೈಭವಕ್ಕೆ ಇದು ಇರುವುದು ಸರಿಯಾದುದಲ್ಲ. ಮತ್ತು ಈ ಖಾಸಗೀ ಜಮೀನುಗಳಲ್ಲಿರತಕ್ಕಂಥ ಸ್ಲಂಸ್‌ಗಳನ್ನು ನಿರ್ಮೂಲ ಮಾಡುವುದಕ್ಕೆ ಒಂದು ದೊಡ್ಡ ತೊಡಕು ಏನೆಂದರೆ ಅದಕ್ಕೆ ಅಪಾರವಾದ ಹಣ ಕೊಟ್ಟು ಮಾಡಬೇಕಾಗಿತ್ತು. ಈಗ ಹೆಚ್ಚಿನ ಹಣ ಕೊಡದೆ ಅದನ್ನು ತೆಗೆದುಕೊಳ್ಳುವುದಕ್ಕೆ ಈ ಕಾನೂನಿನಲ್ಲಿ ಸಾಕಷ್ಟು ಅವಕಾಶ ಇದೆ. ಆ ಲೇಔಟ್‌ಗಳಲ್ಲಿ ಒಂದು ಕಕ್ಕಸ್ಸು ಇಲ್ಲ. ಕೇವಲ 2 ಅಡಿ ಅಥವಾ 3 ಅಡಿ ಜಾಗ ಬಿಟ್ಟಿದ್ದಾರೆ. ಸಾಕಷ್ಟು ಬೆಳಕು ಇಲ್ಲ. ಚರಂಡಿ ವ್ಯವಸ್ಥೆ ಇಲ್ಲ, ಆದುದರಿಂದ ಈ ಕೊಳಚೆ ನೀರು ಸುತ್ತಮುತ್ತ ನಿಂತು ಅವರಿಗೆ ಅನಾನುಕೂಲವಾಗುವುದಲ್ಲದೆ ಸುತ್ತಮುತ್ತ ಇರತಕ್ಕಂಥ ಜನಗಳಿಗೂ ಕೂಡ ಆ ದುರ್ಗಂಧದ ಪ್ರಭಾವ ಹರಡಿ ಅವರು ಸಾಯುವ ಜೊತೆಗೆ ಸುತ್ತಮುತ್ತ ಇರತಕ್ಕಂಥ ಜನರಿಗೂ ಕೂಡ ಖಾಯಿಲೆ ಬರುವ ಅವಕಾಶ ಇದೆ. ಎಲ್ಲಕ್ಕಿಂತಲೂ ಇನ್ನೊಂದು ಶೋಚನೀಯವಾದ ವಿಚಾರ ಏನೆಂದರೆ ಸಾವಿರಾರು ಗುಡಿಸಲುಗಳು ಇರತಕ್ಕಂಥಾ ಜಾಗದಲ್ಲಿ ಯಾವ ವಿಧವಾದ ಒಂದು ಕಕ್ಕಸ್ಸೂ ಕೂಡ ಇಲ್ಲ. ಅವರು ಆದಕ್ಕಾಗಿ ಅದರ ಸುತ್ತಮುತ್ತ ಇರತಕ್ಕಂಥ ಒಂದು ಬಯಲು ಪ್ರದೇಶಕ್ಕೆ ಹೋಗಿ ನಾಚಿಕೆಗೇಡಿನ ಒಂದು ಪರಿಸ್ಥಿತಿಯನ್ನು ಉಂಟು ಮಾಡಿರುತ್ತಾರೆ. ಅದರಲ್ಲೂ ರೈಲಿನಲ್ಲಿ ಬರತಕ್ಕಂಥಾವರು ಈ ಒಂದು ಅವ್ಯವಸ್ಥೆಯನ್ನು ನೋಡತಕ್ಕಂಥಾದ್ದು ಎಲ್ಲರಿಗೂ ವ್ಯಸನ ಉಂಟು ಮಾಡತಕ್ಕಂಥ ಪರಿಸ್ಥಿತಿ. ನಾನು ಈಗಾಗಲೇ ಹೇಳಿದ ಹಾಗೆ ಸರ್ಕಾರದ ಜಾಗದಲ್ಲಿ, ಕಾರ್ಪೊರೇಷನ್ ಜಾಗದಲ್ಲಿ ಟ್ರಸ್ಟ್‌ಬೋರ್ಡ್ ಜಾಗದಲ್ಲಿ ಇರತಕ್ಕಂಥಾವರಿಗೆ ಕಕ್ಕಸ್ಸು ಮತ್ತು ಲೈಟ್ ಇವುಗಳನ್ನು ಒದಗಿಸಬೇಕು ಎಂದು ಮಾಡಿದ್ದಾರೆ. ಆದರೆ ಖಾಸಗೀ ಜಮೀನುಗಳಲ್ಲಿರತಕ್ಕಂಥಾವರಿಗೆ ಯಾವುದೂ ಒದಗಿಸುತ್ತಾ ಇಲ್ಲ. ಇದರಿಂದ ಮತ್ತಷ್ಟು ಸ್ಲಂಸ್‌ಗಳು ಉದ್ಭವವಾಗುತ್ತದೆ. ಖಾಸಗೀ ಜಮೀನುಗಳಲ್ಲಿ ಅನೇಕ ಸ್ಲಂಸ್‌ಗಳು 30—40 ವರ್ಷದಿಂದಲೂ ಇವೆ. ಮೈಸೂರು ರೋಡಿನಲ್ಲಿ ಬಾಬಾ ಹಟ್ಸ್ ಬಹಳ ಹಿಂದಿನಿಂದಲೂ

ಇದೆ. ಒಂದೊಂದು ಮನೆಗೆ 5-6 ರೂಪಾಯಿಗಳಂತೆ ಬಾಡಿಗೆ ತೆಗೆದುಕೊಳ್ಳುತ್ತಿದ್ದಾರೆ. ಸುಮಾರು ಒಂದು ಸಾವಿರಕ್ಕಿಂತಲೂ ಜಾಸ್ತಿಯಾಗಿವೆ ಆ ಜಾಗದಿಂದ 3-3½ ಸಾವಿರ ರೂಪಾಯಿ ವರಮಾನ ಬರುತ್ತಿದೆ. ಅದೇ ರೀತಿ ಕಲಾಸೀಪಾಳ್ಯ, ರಾಜಮ್ಮ ಗಾರ್ಡನ್, ರಾಜಗೋಪಾಲ ನಾಯ್ಡು ಗಾರ್ಡನ್, ಮರಿಯಮ್ಮ ಗಾರ್ಡನ್, ಖಾದರ್ ಷರೀಫ್ ಗಾರ್ಡನ್ ಇವೆ. ಮತ್ತು ಅನೇಕ ತೋಟಗಳಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಅಲ್ಲೆಲ್ಲಾ ಸ್ಲಂಸ್‌ಗಳು ಇವೆ. ಈ ಸ್ಲಂಸ್‌ನಲ್ಲಿ ವಾಸ ಮಾಡತಕ್ಕಂಥ ಜನ ಯಾರು ಎಂದರೆ ನಮ್ಮ ನೆರೆ ರಾಜ್ಯದಿಂದ ಬಂದಿರತಕ್ಕಂಥಾವರೇ. ಅವರು ಬಹಳ ಬುದ್ಧಿವಂತರು, ಅಲ್ಲಿರುವ ಅನೇಕ ಜನ ಕೂಲಿ ಮಾಡಿಕೊಂಡಿದ್ದಾರೆ, ಅನೇಕ ಜನ ವ್ಯಾಪಾರ ಮಾಡಿಕೊಂಡಿದ್ದಾರೆ ಮತ್ತು ಕೆಲವರು ಸಣ್ಣಪುಟ್ಟ ಕೈಗಾರಿಕೆಗಳನ್ನೂ ಕೂಡ ಇಟ್ಟುಕೊಂಡಿದ್ದಾರೆ.

12-30 P.M.

ಇವರಲ್ಲಿ ಸಾಧಾರಣವಾಗಿ ಪಟ್ಟಣದೊಳಗಡೆಯೇ ಕೆಲಸ ಮಾಡುವಂತಹ ಜನರು. ಇವರನ್ನು ಊರಿಂದ ಹೊರಗೆ ಹೋಗಬೇಕೆಂದು ಹೇಳಿದರೆ ಇದರಿಂದ ಅವರಿಗೆ ಸೌಕರ್ಯವಾಗುವುದಿಲ್ಲ. ಸ್ಲಂಸ್‌ಗಳನ್ನು ಮೊದಲು ಕ್ಲಿಯರು ಮಾಡಬೇಕು. ಇದಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಮಲ್ಟಿ ಸ್ಟೋರೀಡ್ ಬಿಲ್ಡಿಂಗು ರೀತಿ ಕಟ್ಟಡಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡಬೇಕು. ಬಡವರು ಕಾರ್ಪೋರೇಷನ್ ಜಾಗದಲ್ಲಿರಲಿ ಇಲ್ಲವೇ ಖಾಸಗಿ ಜಾಗದಲ್ಲಿರಲಿ, ಅವರು ಬಡವರೇ. ಆದರೆ ಒಂದು ಭಾಗದ ಜನರಿಗೆ ಅನುಕೂಲ ಮಾಡಿಕೊಟ್ಟು ಮತ್ತೊಂದು ಭಾಗದಲ್ಲಿರತಕ್ಕ ಜನರಿಗೆ ಅನುಕೂಲ ಮಾಡಿಕೊಡದೇ ಇರುವುದು ಸರಿಯಾದುದಲ್ಲ, ಇದಕ್ಕೆ ಬೇಕಾದ ಹಣವನ್ನು ಇಲ್ಲಿರುವ ಜನರಿಂದಲೇ ಸರಕಾರ ವಸೂಲು ಮಾಡಿಕೊಳ್ಳಬಹುದು, ಇದಕ್ಕೆ ಬೇಕಾದ ಕಾಯಿದೆಗಳು ಕೂಡ ಅನುಕೂಲವಾಗಿವೆ, ಇದರ ಬಗ್ಗೆ ಸರಕಾರ ಮೊದಲು ಬೇಕಾಗುವ ಭೂಮಿಯನ್ನು ಅಕ್ವೈರು ಮಾಡಿಕೊಂಡು ಸ್ಲಂಸ್‌ಗಳನ್ನು ಮೊದಲು ತೆಗೆಯಬೇಕು, ಇದಕ್ಕೆ ಬೇಕಾಗುವ ಹಣವನ್ನು ಸಾಲದ ಮೂಲಕವಾಗಿ ಎಲ್ ಐ ಸಿ ಮೂಲಕವೋ ಇಲ್ಲವೇ ಡಿಬೆಂಚರುಗಳ ಮೂಲಕವೋ ಸಾಲ ತೆಗೆದು ಆದಷ್ಟು ಬೇಗ ಇಂತಹ ಸ್ಲಂಸ್‌ಗಳನ್ನು ತೆಗೆಯುವ ಕ್ರಮ ತೆಗೆದುಕೊಳ್ಳಬೇಕು. ಹಿಂದೆ ನಮಗೆ ಕೊಟ್ಟಿರುವ ಅಂಕೆಗಳ ಪ್ರಕಾರ ಆಗ ಸುಮಾರು 100 ಸ್ಲಂಸ್‌ಗಳು ಮಾತ್ರವೇ ಇತ್ತು, ಆದರೆ ಈಗ 147 ಸ್ಲಂಸ್‌ಗಳು ಇವೆ ಎಂದು ಈಚೆಗೆ ನಮಗೆ ಒದಗಿಸಿರುವ ಅಂಕೆಗಳಿಂದ ಗೊತ್ತಾಗುತ್ತದೆ. ಎಂದರೆ ಇದರಿಂದ ನಮಗೆ ತಿಳಿಯುವುದು ಹಿಂದೆ ಇದ್ದ ಸ್ಲಂಸ್‌ಗಳಿಗಿಂತಲೂ ಇನ್ನೂ ಹೆಚ್ಚಾಗುತ್ತ ಬರುತ್ತಿವೆ. ಇದಕ್ಕೆ ಅವಕಾಶ ಕೊಡುವುದು ಸರಿಯಲ್ಲ. ಸ್ಲಂಸ್‌ಗಳನ್ನು ತೆಗೆಯುವಾಗ ಇನ್ನೊಂದು ಕಡೆ ಸ್ಲಂಸ್‌ಗಳು ಆಗಲು ಅವಕಾಶ ಮಾಡಬಾರದು. ಇದರ ಬಗ್ಗೆ ತಮಿಳುನಾಡಿನಲ್ಲಿ ಒಂದು ರೀತಿ ಯೋಜನೆ ಮಾಡಿ ಸ್ಲಂಸ್‌ಗಳನ್ನು ತೆಗೆಯುವುದರಲ್ಲಿ ಸಾಕಾದಷ್ಟು ಮುಂದುವರಿದಿದ್ದಾರೆ. ಅಲ್ಲಿ ಬಡವರಿಗಾಗಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಸುಮಾರು ಐದು ಕೋಟಿ ರೂಪಾಯಿಗಳಷ್ಟು ಹಣವನ್ನು ಬಡವರಿಗಾಗಿ ಮನೆ ಕಟ್ಟಲು ಒದಗಿಸಿದ್ದೇವೆ ಎಂದು ಇಲ್ಲಿ ನಮ್ಮ ಅರ್ಥ ಸಚಿವರೂ ಹೇಳಿದ್ದಾರೆ. ಇದೇ ರೀತಿ ಪಟ್ಟಣಗಳಲ್ಲಿ ಮನೆಗಳನ್ನು ಕಟ್ಟುವಂತೆ ಗ್ರಾಮಾಂತರ ಪ್ರದೇಶಗಳಲ್ಲೂ ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಸಿಕೊಡಲು ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಅವರಿಗೆ ಹೇಳುತ್ತಿದ್ದೇನೆ. ನಾನು ಇಲ್ಲಿ ಸ್ಲಂಸ್‌ಗಳನ್ನು ಬೆಳೆಸಿಕೊಂಡು ಹೋಗಬೇಕೆಂದು ಹೇಳುತ್ತಿಲ್ಲ, ಇನ್ನು ಮುಂದಾದರೂ ಹೆಚ್ಚು ಸ್ಲಂಸ್‌ಗಳು ಹೊಸದಾಗಿ ಉದ್ಭವವಾಗದಂತೆ ನೋಡಿಕೊಳ್ಳಬೇಕಾದುದು ಅಗತ್ಯ. ಆದರೆ ಸ್ಲಂಸ್‌ಗಳನ್ನು ತೆಗೆಯುವಾಗ ಅದಕ್ಕೆ ತಕ್ಕಂತೆ ಮನೆಗಳನ್ನು ಕಟ್ಟಿಸಿ ಅವರಿಗೆ ಕೊಟ್ಟು ಹಳೆಯ ಸ್ಲಂಸ್‌ಗಳನ್ನು ಪೂರ್ತಿ ನಾಶಮಾಡಬೇಕು. ಆದರೆ ಈಚೆಗೆ ಕಲಾಸಿಪಾಳ್ಯದಿಂದ ಸ್ಲಂಸ್‌ಗಳನ್ನು ತೆಗೆದು ಜಯನಗರಕ್ಕೆ ಸ್ಥಳಾಂತರ ಮಾಡಿದ್ದರೂ ಹಿಂದೆ ಇದ್ದ ಸ್ಲಂಸ್‌ಗಳು ಹಾಗೇ ಇವೆ. ಇದರಿಂದ ಸ್ಲಂಸ್‌ಗಳು ನಿವಾರಣೆಯಾಗದೇ ಹಾಗೇ ಉಳಿದುಕೊಂಡು ಬರುತ್ತಿವೆ. ಇಂತಹ ಕ್ರಮಗಳನ್ನು ಸರಕಾರ ಮಾಡಬಾರದು, ಇದನ್ನು ತಪ್ಪಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಹಾಗೆ ಮಾಡದೆ ಇದ್ದರೆ ಬೆಂಗಳೂರು ನಗರದ ಮೇಲೆ ಒಂದು ರೀತಿಯ ಕಪ್ಪು ಚಿಹ್ನೆಗಳು ಬೆಳೆಯಲು ಅವಕಾಶವಾಗುತ್ತವೆ, ಬಡವರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತ ಇಂತಹ ಸ್ಲಂಸ್‌ಗಳು ಬೆಳೆಯಲು ಅವಕಾಶ ಖಂಡಿತ ಕೊಡಕೂಡದು ಎಂದು ಸರಕಾರದಲ್ಲಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ನಮ್ಮ ಸರಕಾರವೇನೋ ಬಡವರನ್ನು ಉದ್ಧಾರ ಮಾಡುತ್ತೇವೆ, ಬಡವರಿಗೆ ಎಲ್ಲ ರೀತಿಯ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಘೋಷಣೆಗಳನ್ನೇನೋ ಮಾಡುತ್ತಿದ್ದಾರೆ. ಆದರೆ ಅದು ಬರೀ ಘೋಷಣೆಯಾಗಿಯೇ ಉಳಿದು ಬರುತ್ತಿದೆ. ಇದು ಕಾರ್ಯಗತವಾಗಬೇಕಾದರೆ ಆದಷ್ಟು ಜಾಗ್ರತೆ ಇಂತಹ ಕೆಲಸಗಳನ್ನು ಮಾಡಿ

(ಶ್ರೀ ಟಿ. ಆರ್. ಶಾಮಣ್ಣ)

ಇರುವ ಸ್ಲಂಸ್‌ಗಳನ್ನು ಕೂಡಲೇ ತೆಗೆಯಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ, ಇಲ್ಲದಿದ್ದರೆ ಇದರ ಸಮಸ್ಯೆ ಬಗೆ ಹರಿಯುವುದಿಲ್ಲ. ನಮ್ಮ ಸರಕಾರವೇನೋ ಸ್ಲಂಸ್‌ಗಳನ್ನು ತೆಗೆಯಬೇಕೆಂದು ಸುಮಾರು ಒಂದು ಕೋಟಿಯಷ್ಟು ಹಣ ಕೊಟ್ಟಿದೆ. ಇದರಲ್ಲಿ ಈಗಾಗಲೇ ಎರಡನೇ ಪ್ಲಾನ್‌ನಲ್ಲಿ ಸುಮಾರು 40 ಲಕ್ಷದಷ್ಟು ಬಹಳ ಖರ್ಚು ಮಾಡಿದ್ದಾರೆ ಮತ್ತು ಈಚೆಗೆ ಐದು ಅಥವಾ ಹತ್ತು ಲಕ್ಷದಷ್ಟು ಖರ್ಚು ಮಾಡಿದ್ದಾರೆ. ಆದರೆ ಸ್ಲಂಸ್‌ಗಳು ಬೆಳೆಯುತ್ತಲೇ ಹೋಗುತ್ತಿವೆ. ಹಿಂದೆ ನೂರು ಇದ್ದದ್ದು ಇಂದು ಇದು 147ರ ವರೆಗೆ ಹೆಚ್ಚಾಗಿವೆ. ಮತ್ತು ಇಂತಹ ಸ್ಲಂಸ್‌ಗಳು ಆಗಲು ರಾಜಕಾರಣಿಗಳೂ ಕಾರಣರು ಎಂದು ಹೇಳಬೇಕಾಗುತ್ತದೆ. ಕೆಲವು ವೇಳೆ ಇದಕ್ಕೆ ಉತ್ತೇಜನ ಕೊಡಬೇಕಾಗುತ್ತದೆ. ರಾಜಕೀಯ ದೃಷ್ಟಿಯಿಂದ ಇದನ್ನು ಬಗೆಹರಿಸಬೇಕಾದರೆ ಇದು ಸ್ವಲ್ಪ ಕಠಿಣವಾಗುತ್ತದೆ. ಇಂತಹ ಸ್ಲಂಸ್‌ಗಳನ್ನು ಇನ್ನು ಮುಂದೆ ಉತ್ತೇಜನ ಕೊಟ್ಟು ಮುಂದುವರಿಸುವುದು ಸರಿಯಾಗಿರುವುದಿಲ್ಲ. ಆದುದರಿಂದ ಸರಕಾರ ಕಟ್ಟುನಿಟ್ಟಾದ ಕ್ರಮ ತೆಗೆದುಕೊಂಡು ಇನ್ನು ಮುಂದೆ ಸ್ಲಂಸ್‌ಗಳು ತಲೆ ಎತ್ತದಂತೆ ಮಾಡಬೇಕಾದುದು ಅಗತ್ಯ, ಬೆಂಗಳೂರು ನಗರದ ಹಿತದೃಷ್ಟಿಯಿಂದ ಬಡವರನ್ನು ಉದ್ಧಾರ ಮಾಡಬೇಕು ಎಂದರೆ ಇದನ್ನು ಮಾನವೀಯತೆ ದೃಷ್ಟಿಯಿಂದ ಪರಿಶೀಲಿಸಿ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ಕೆಲಸ ಮಾಡಬೇಕು. ಯಾವುದನ್ನೂ ಅರ್ಧಂಬರ್ಧ ಕೆಲಸ ಮಾಡಬಾರದು, ಅದರಿಂದೇನೂ ಅನುಕೂಲವಾಗುವುದಿಲ್ಲ. ಯಾವ ಕೆಲಸವನ್ನೂ ಪೀಸ್‌ಮೀಲ್ ಆಗಿ ಮಾಡಿದರೆ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ನಾನು ಆಗಲೇ ಸೂಚಿಸಿದಂತೆ ಇದಕ್ಕೆ ಬೇಕಾದ ಹಣವನ್ನು ಸ್ಲಂಸ್‌ಗಳಲ್ಲಿ ವಾಸ ಮಾಡುವವರಿಂದಲೇ ಬೇಕಾದರೆ ಸ್ವಲ್ಪ ವಸೂಲು ಮಾಡಬಹುದು ಇಲ್ಲವೇ ಎಲ್ ಐ ಸಿ ಮೂಲಕ ಅಥವಾ ಡಿಬೆಂಚರು ಸಾಲದ ಮೂಲಕ ವಸೂಲು ಮಾಡಬಹುದು, ಸರಕಾರದಲ್ಲಿ ಹಣ ಕಾಸಿನ ಸ್ಥಿತಿ ಚೆನ್ನಾಗಿಲ್ಲದೆ ಇರುವುದರಿಂದ ಬೇರೆ ಕಡೆಯಿಂದ ಸುಲಭ ಬಡ್ಡಿಯ ಮೇಲೆ ಸಾಲ ಪಡೆದುಕೊಂಡು ಇದರ ನಿವಾರಣೆಗೆ ಪ್ರಯತ್ನ ಮಾಡಬಹುದು, ಸರಕಾರ ಇದರ ಬಗ್ಗೆ ನಿರ್ದಿಷ್ಟವಾದ ನೀತಿ ಅನುಸರಿಸಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ಬಗ್ಗೆ ಮಾತನಾಡುವಾಗ ಒಂದೆರಡು ವಿಷಯಗಳನ್ನು ಮಾತ್ರ ಇಲ್ಲಿ ಸರಕಾರದ ಗಮನಕ್ಕೆ ತರಬೇಕಾಗಿದೆ. ಒಂದೇ ಒಂದು ಮುಖ್ಯ ವಿಷಯ ಸರಕಾರದ ಗಮನಕ್ಕೆ ತರಬೇಕಾಗಿರುವುದು, ಖಾಸಗೀ ಜಮೀನುಗಳನ್ನು ಅಕ್ವೈರು ಮಾಡಿಕೊಂಡು ಅಲ್ಲಿ ನಿವೇಶನಗಳನ್ನು ಕೊಟ್ಟು ಇದರ ಬಗ್ಗೆ ನಿರ್ಣಯ ಮಾಡಿ ಹರಿಜನರಿಗೆ ಅನುಕೂಲವಾಗಲಿ ಎಂದು ಸರಕಾರ ಒಪ್ಪಿಕೊಂಡು ಕೊಟ್ಟಿರುವ ನೀತಿಯನ್ನು ಈಚೆಗೆ ಬದಲಾವಣೆ ಮಾಡಿದ್ದಾರೆ. ಇದರ ಬಗ್ಗೆ ನಾನು ಈ ಸಭೆಯ ಮಾನ್ಯ ಉಪನಾಯಕರಲ್ಲಿ ಹೇಳುವುದು ಹಿಂದೆ ನಮ್ಮ ಕ್ಷೇತ್ರದಲ್ಲಿ ಪೈಪು ಲೈನಿನಲ್ಲಿ ವಾಸವಾಗಿದ್ದ 72 ಜನ ಹರಿಜನಗಿರಿಜನರಿಗೆ ಎಲ್ಲ ಸೌಕರ್ಯಗಳನ್ನೂ ಕೊಡಬೇಕು ಎಂದು ಇವರಿಗೆ ಇಲ್ಲಿರುವ ಮನೆಗಳಿಗಾಗಿ ಸೈಟುಗಳನ್ನು ಕೊಡಬೇಕೆಂದು ನಿರ್ಣಯವೂ ಆಗಿತ್ತು. ಇದಕ್ಕೆ ತದ್ವಿರುದ್ಧವಾಗಿ ಈಗ ಹೊಸದಾಗಿ ಒಂದು ಸರಕಾರದ ಆರ್ಡರು ಬಂದಿದೆ. ಅದರಲ್ಲಿ ಇಲ್ಲಿರುವ ಈಚೆಗೆ ಬಂದಿರುವ 30 ಜನರಲ್ಲಿ ಏಳು ಜನಕ್ಕೆ ಸೈಟು ಕೊಡಬೇಕು ಎಂದು ಮಾಡಿರುವುದು ಸರಿಯಲ್ಲ. ಇಲ್ಲಿ ಈಚೆಗೆ ಬಂದಿರುವ 30 ಜನರಲ್ಲಿ 15 ಜನರಿಗೆ ಎರಡು ಮೂರು ಮನೆಗಳಿವೆ ಮತ್ತು ಇವರಿಗೆಲ್ಲಾ ತಿಂಗಳಿಗೆ ಎರಡು ಸಾವಿರ ರೂಪಾಯಿಗಳಷ್ಟು ಬಾಡಿಗೆ ಬರುತ್ತಿವೆ. ಇಷ್ಟು ವರಮಾನವಿರುವವರಿಗೇ ಸೈಟುಗಳನ್ನು ಕೊಟ್ಟರೆ ಬಡವರಾಗಿರುವ ಹರಿಜನರ ಗತಿಯೇನು? ಇಂತಹ ಒಂದು ಆಜ್ಞೆ ಸರಕಾರ ಕೊಡಬಾರದಾಗಿತ್ತು. ಸರಕಾರ ಇದನ್ನು ತಡೆಹಿಡಿಯಬೇಕು. ಇಲ್ಲಿರುವ ಖಾಸಗೀ ಜನರು 40-50 ಜನರು ಬೇಕಾದಷ್ಟು ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾರೆ, ಇಂತಹವರಿಗೆ ಸೈಟುಗಳನ್ನು ಕೊಡುವುದು ಸರಿಯಲ್ಲ, ಹಿಂದೆ ಇದ್ದವರಿಗೆ ಇಲ್ಲಿನ ಸೈಟುಗಳನ್ನು ಕೊಡಬೇಕೆಂದು ಇದೆ. ಈಗ ಸರಕಾರ ನೋಟೀಸು ಕೊಟ್ಟು ಇವರನ್ನೆಲ್ಲಾ ಖಾಲಿ ಮಾಡು ಎಂದು ಹೇಳುತ್ತಿದ್ದಾರಂತೆ. ಇವರೆಲ್ಲ ಹರಿಜನರು ಹಾಗೂ ಬಡವರು. ದಯವಿಟ್ಟು ಸರಕಾರ ಇಂತಹ ಒಂದು ಆಜ್ಞೆಯನ್ನು ತಡೆಹಿಡಿದು ಬಡಜನಕ್ಕೆ ಅನುಕೂಲ ಮಾಡಿಕೊಡಬೇಕು, ಹಿಂದಿನ ಸರಕಾರ ಕೂಡ ಇವರ ಬಗ್ಗೆ ಮಾಡಿರಲಲ್ಲ. ಈಗಲಾದರೂ ಬಡವರ ಬಗ್ಗೆ ಪರಿಶೀಲನೆ ಮಾಡಿ ಸರಕಾರದ ನೀತಿಗೆ ವಿರೋಧವಾಗಿರುವ ಆರ್ಡರನ್ನು ಹಿಂತೆಗೆದುಕೊಂಡು ಇಲ್ಲಿನ ಬಡಜನಕ್ಕೆ ಸೈಟುಗಳು ಸಿಗುವ ವ್ಯವಸ್ಥೆ ಮಾಡಬೇಕು ಮತ್ತು ಇದರಿಂದ 72 ಬಡ ಜನರಿಗೆ ತೊಂದರೆಯಾಗುತ್ತದೆ. ಇದನ್ನು ಕೂಡಲೇ ಸರಕಾರ ತಡೆಹಿಡಿಯಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).— ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಶಾಮಣ್ಣನವರು ಗುಡಿಸಲುವಾಸಿಗಳ ಬಗ್ಗೆ ತಂದಿರುವ ನಿರ್ಣಯ ಬಹಳ ಗಮನಾರ್ಹವಾದ ವಿಷಯವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪ್ಪನವರು ಬೆಂಗಳೂರು ನಗರದಲ್ಲಿ ಈ ಬಗ್ಗೆ ತೀವ್ರವಾದ ಆಸಕ್ತಿವಹಿಸಿ ಒಂದು ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಲು ಯೋಚನೆ ಮಾಡುತ್ತಿದ್ದರು. ಈಗಲೂ ಅದೇ ಯೋಚನೆಯಲ್ಲಿಯೇ ಇದ್ದಾರೆಂದು ನಾನು ತಿಳಿಯುತ್ತೇನೆ. ಆದರೆ ಅವರ ಒಂದು ಮಾತಿನ ಬರಾಟೆಯಲ್ಲಿ ಅವರು ಮಂತ್ರಿಗಳಾಗಿ ಉಳಿಯುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಈ ಪ್ರಶ್ನೆ ಮಾತ್ರ ಹಾಗೆಯೇ ಉಳಿಯುತ್ತದೆ. ಈಗ ಬೆಂಗಳೂರು ನಗರದಲ್ಲಿ ಎರಡು ತರಹ ಗುಡಿಸಲುವಾಸಿಗಳಿದ್ದಾರೆ. ಸರ್ಕಾರೀ ಜಮೀನಿನಲ್ಲಿ ಗುಡಿಸಲು ಹಾಕಿಕೊಂಡಿರುವವರದ್ದು ಒಂದು ಗುಂಪಾದರೆ, ಖಾಸಗೀ ಜಮೀನಿನಲ್ಲಿ ಗುಡಿಸಲು ಹಾಕಿಕೊಂಡಿರುವವರದ್ದು ಇನ್ನೊಂದು ಗುಂಪು. ಮಾನ್ಯ ಶಾಮಣ್ಣನವರು ತಂದಿರುವ ನಿರ್ಣಯ ಖಾಸಗೀ ಜಮೀನುಗಳಲ್ಲಿ ಗುಡಿಸಲು ಹಾಕಿಕೊಂಡಿರುವವರ ಬಗ್ಗೆ ಮಾತ್ರ ಸೀಮಿತವಾಗಿದೆ. ಅದರೆ ಎರಡು ತರಹ ಜಮೀನುಗಳಲ್ಲಿಯೂ ಗುಡಿಸಲು ಹಾಕಿಕೊಂಡಿರುವವರ ಪರಿಸ್ಥಿತಿಯೂ ಗಂಭೀರವಾಗಿದೆ. ಅವರುಗಳಿಗೆ ನೀರಿನ ಸೌಕರ್ಯ ಇಲ್ಲ. ದೀಪದ ಸೌಕರ್ಯವಿಲ್ಲ. ವಾಸಮಾಡಲು ಸರಿಯಾದ ಮನೆಗಳಿಲ್ಲ ; ಒಂದು ರೀತಿಯ ಕಠಿನ ಪರಿಸ್ಥಿತಿ ಅವರುಗಳಿಗೆ ಬಂದಿದೆ ಎಂದರೆ ತಪ್ಪಾಗಲಾರದು. ಇವರುಗಳ ಪ್ರಶ್ನೆ ಅನೇಕ ವರ್ಷಗಳಿಂದ ಹಾಗೆಯೇ ಮುಂದುವರಿದುಕೊಂಡು ಬರುತ್ತಿದೆ. ಇನ್ನೊಂದು ಮುಖ್ಯವಾದ ಪ್ರಶ್ನೆಯೆಂದರೆ ಈ ರೀತಿಯ ಗುಡಿಸಲುವಾಸಿಗಳ ಪ್ರದೇಶಗಳು ಬೆಂಗಳೂರು ನಗರದಲ್ಲಿ ಜಾಸ್ತಿಯಾಗುತ್ತಿರುವುದು. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇವರುಗಳಿಗೆಲ್ಲಾ ಬೇರೆ ಕಡೆ ಸ್ಸೈಟ್ ಮಾಡಿ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಘೋಷಣೆ ಹೊರಡಿಸಿದ್ದಾರೆ. ಅದರ ಅರ್ಥವೇನೋ ಒಳ್ಳೆಯದು, ಆದರೆ ಆಗಿರುವುದಾದರೂ ಏನು? ಈಗ ಅನೇಕ ಕಡೆಗಳಲ್ಲಿ ಹೊಸದಾಗಿ ಏನು ಗುಡಿಸಲುಗಳು ಏಳುತ್ತಿವೆ. ಅಲ್ಲಿ ವ್ಯಾಪಾರ ಸಹ ಆಗುತ್ತಿದೆ ಎಂದು ಗೊತ್ತಾಗಿದೆ. ಅದು ಪತ್ರಿಕೆಗಳಲ್ಲಿಯೂ ಸಹ ಪ್ರಕಟವಾಗಿದೆ. ಯಾರೋ ಕೆಲವರು ಸೇರಿಕೊಂಡು, ''ನಮಗೆ ಬಸವಲಿಂಗಪ್ಪನವರು ಗೊತ್ತು, ಆ ಜಾಗವನ್ನು ನಿಮಗೆ ಮಾಡಿಸಿಕೊಡುತ್ತೇವೆಂದು'' ಹೇಳಿ ಗುಡಿಸಲುವಾಸಿಗಳಿಂದ ನೂರು, ಇನ್ನೂರು ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ. ಇಂತಹವರು ಕೆಲವರು ಸೇರಿಕೊಂಡು, ಇಂದಿರಾನಗರ ವೆಲ್‌ಫೇರ್ ಅಸೋಸಿಯೇಷನ್ ಎಂದು ಮಾಡಿಕೊಂಡು, ಮಾನ್ಯ ಬಸವಲಿಂಗಪ್ಪನವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅವರ ಮೆರವಣಿಗೆಯನ್ನು ಸಹ ಮಾಡಿಸಿದರು. ಮತ್ತು ಅವರಿಂದ ಉದ್ಘಾಟನೆಯನ್ನು ಸಹ ಮಾಡಿಸಿದರು. ತಮಗೆ ಅನುಕೂಲ ಮಾಡಿಕೊಳ್ಳುವುದಕ್ಕಾಗಿಯೇ ಇಂತಹ ಕೆಲವು ಪುಡಾರಿಗಳು ಇಂದು ಹುಟ್ಟಿಕೊಂಡಿದ್ದಾರೆ. ಇವರು ಹಣ ಮಾಡಿಕೊಳ್ಳುತ್ತಿರುವುದಲ್ಲದೆ, ಗುಡಿಸಲುಗಳನ್ನು ಬೆಳೆಸಿಕೊಂಡು ಬರುತ್ತಿದ್ದಾರೆ. ಸರ್ಕಾರದವರು ಮಾಡಿದಂತಹ ಘೋಷಣೆಯನ್ನು ಕಾರ್ಯಗತ ಮಾಡದಿದ್ದರಿಂದ ಗುಡಿಸಲುಗಳ ಸಂಖ್ಯೆ ಇಂದು ಬೆಂಗಳೂರು ನಗರದಲ್ಲಿ ಬೆಳೆಯುತ್ತಾ ಹೋಗುತ್ತಿದೆ.

ಶ್ರೀ ಎಚ್. ಎನ್. ನಂಜೇಗೌಡ.—ನೂರು ಇನ್ನೂರು ರೂಪಾಯಿಗಳನ್ನು ಕೆಲವರು ತೆಗೆದುಕೊಳ್ಳುತ್ತಿದ್ದಾರೆಂದು ತಾವು ಹೇಳಿದಿರಿ. ಅದನ್ನು ತಡೆಗಟ್ಟುವುದು ನಮ್ಮ ಮತ್ತು ನಿಮ್ಮ ಕರ್ತವ್ಯವಾಗಿದೆ. ಇಂತಹವರು ಈ ರೀತಿ ಅಪರಾಧ ಮಾಡುತ್ತಿದ್ದಾರೆಂದು ತಾವು ಮಂತ್ರಿಗಳಿಗಾಗಲೀ, ಸರ್ಕಾರಕ್ಕಾಗಲೀ ಹೇಳಿದರೆ ನಮ್ಮ ಕೈಲಾದ್ದು ಮಾಡಬಹುದು. ಲಂಚ ರುಷುವತ್ತು ಇದ್ದರೆ ಅದನ್ನು ಯಾವ ರೀತಿ ತಡೆಗಟ್ಟಬೇಕೆಂಬ ಬಗ್ಗೆ ಎಲ್ಲರ ಜವಾಬ್ದಾರಿಯೂ ಇದೆ ಎಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಬೇಲಿಯೇ ಎದ್ದು ಹೊಲ ಮೇಯುವಾಗ ಯಾರಿಗೆ ಹೇಳಬೇಕು ?

ಶ್ರೀ ಎಚ್. ಎನ್. ನಂಜೇಗೌಡ.—ಯಾರು ಹೊಲ ಮೇಯುತ್ತಿದ್ದಾರೆ ಎಂಬುದು ಗೊತ್ತಿದ್ದರೆ ಹೇಳಿ ; ಅದು ಬಿಟ್ಟು ಸುಮ್ಮನೆ ಭ್ರಮೆ ಇಟ್ಟುಕೊಂಡಿದ್ದರೆ ಅದು ಹೋಗಬೇಕು ?

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ಹಣ ವಸೂಲಿ ಮಾಡುತ್ತಿರುವುದು ಎರಡು ಕಡೆಗಳಲ್ಲಿ ನಡೆಯುತ್ತಿದೆ. ನಮ್ಮ ಪಾರ್ಟಿಯವರೇನಾದರೂ ಆ ರೀತಿ ಮಾಡಿದ್ದರೆ ಅವರನ್ನು ಪಾರ್ಟಿಯಿಂದ ಹೊರಕ್ಕೆ ಹಾಕಿಸಿ ಪಬ್ಲಿಕ್ ಆಗಿ ಎಕ್ಸ್‌ಪೋಸ್ ಮಾಡುತ್ತಿದ್ದೆವು. ಆದರೆ ಅವರು ನಿಮ್ಮ ಪಾರ್ಟಿಯವರೇ ಅಥವಾ ಯಾವ ಪಾರ್ಟಿಯವರು ಎಂಬುದು ಗೊತ್ತಿಲ್ಲ. ಆದರೆ ಅವರು ದೇವರಾಜ ಅರಸ್ ಮತ್ತು ಇಂದಿರಾಗಾಂಧಿಯವರ ಫೋಟೋಗಳನ್ನು ಹಾಕಿಕೊಂಡು ಅವರ ಹೆಸರುಗಳನ್ನು ಹೇಳಿಕೊಳ್ಳುತ್ತಾ ಜನರಿಗೆ ವಂಚನೆ ಮಾಡುತ್ತಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ನಮ್ಮ ಪಾರ್ಟಿಯ ಹೆಸರನ್ನು ಹೇಳಿಕೊಂಡು ಯಾರೋ ಒಬ್ಬರು ತಮ್ಮ ಸ್ವಂತಕ್ಕೆ ಲಾಭ ಮಾಡಿಕೊಳ್ಳುತ್ತಿದ್ದಾರೆಂದು ಗೊತ್ತಾಗಿ, ಅದನ್ನು ತನಿಖೆ ಮಾಡಿಸಿ ನೋಡಿದಾಗ ಅವರು ನಮ್ಮ ಪಾರ್ಟಿಯ ಸದಸ್ಯರಲ್ಲ ಎಂಬುದು ಗೊತ್ತಾಯಿತು. ಯಾರೋ ಮಾಡಿದ ತಪ್ಪಿಗೆ ನನ್ನ ಮಗ ದಂಡ ತೆತ್ತ ಎಂಬಂತೆ, ಆಡಳಿತ ನಡೆಸುತ್ತಿರುವ ಪಕ್ಷದ ಹೆಸರನ್ನು ಹೇಳಿಕೊಂಡು ಯಾರೋ ಕೆಲವರು ಈ ರೀತಿ ಮಾಡಿದರೆ ಅವನ್ನು ಪತ್ತೆ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ಹಣ ವಸೂಲಿ ಮಾಡುವವರಿಗೆ ಪೋಲೀಸರ, ಸರ್ಕಾರದ ಅಧಿಕಾರಿಗಳ ಮತ್ತು ಕಾರ್ಪೊರೇಷನ್ ಅಧಿಕಾರಿಗಳ ಕುಮ್ಮಕ್ಕು ಇದೆ. ಅದು ಇಲ್ಲದೆ ಹೋದರೆ ಅವರು ಮಾಡುವುದಕ್ಕಾಗುವುದಿಲ್ಲ. ಯಶವಂತಪುರದಲ್ಲಿ ಕೆಲವರು ಇದ್ದಾರೆ. ಅವರಿಗೆ ಪೋಲೀಸರ ಬೆಂಬಲವಿದೆ. ಅಧಿಕಾರಿಗಳ ಬೆಂಬಲವಿದೆ. ''ಮುಖ್ಯಮಂತ್ರಿಗಳಿಗೆ ಫೋನು ಮಾಡುತ್ತೇವೆ.'' ''ಬಸವಲಿಂಗಪ್ಪನವರಿಗೆ ಫೋನು ಮಾಡುತ್ತೇವೆ'' ಎಂದು ಯಾವಾಗಲೂ ಜನರಿಗೆ ಹೇಳುತ್ತಿರುತ್ತಾರೆ. ಅವರು ನಿಮ್ಮ ಪಾರ್ಟಿಯ ಜನರೇ ಅಲ್ಲವೇ ಎಂಬುದು ನನಗೆ ಗೊತ್ತಿಲ್ಲ. ಇವರ ವಿಚಾರದಲ್ಲಿ ಹುಷಾರಾಗಿರಿ, ಜಾರಿಬೀಳಬೇಡಿಯೆಂದು ಹೇಳುತ್ತಿದ್ದೇನೆಯೇ ಹೊರತು ಬೇರೆ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಗುಡಿಸಲುವಾಸಿಗಳಿಗೆ ಅನುಕೂಲ ಮಾಡಿಕೊಡಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಸಾಮಾಜಿಕ ದೃಷ್ಟಿಯಿಂದ, ಮಾನವೀಯ ದೃಷ್ಟಿಯಿಂದ ಇವರುಗಳಿಗೆ ಅನುಕೂಲ ಮಾಡಿಕೊಡುವುದು ಅತಿ ಮುಖ್ಯವೆಂದು ಹೇಳುತ್ತೇನೆ. ಆದರೆ ಇದುವರೆಗೆ ಮಾಡಿಕೊಡದಿರುವುದಕ್ಕೆ ಕಾರಣವೇನು ? ಹಳೆಯ ಕಥೆ ಬೇಡ. ಹಿಂದೆ ಶ್ರೀ ಬಿ. ಎಂ. ಪಾಟೀಲರು ಈ ಖಾತೆಯ ಮಂತ್ರಿಗಳಾಗಿದ್ದಾಗ ಎಲ್ಲ ಅನುಕೂಲ ಮಾಡಿಕೊಡುವುದಾಗಿ ಹೇಳಿದರು ; ಆದರೆ ಏನನ್ನೂ ಮಾಡಲಿಲ್ಲ ; ಅವರಿಗೂ ಮುಂಚೆ ಶ್ರೀ ಆರ್. ಎಂ. ಪಾಟೀಲರು ಇದ್ದರು. ಅವರಿಗೆ ಗತ್ತು, ಗಮ್ಮತ್ತು ಜಾಸ್ತಿ, ಆದರೂ ಅವರ ಕೈಯಲ್ಲಿಯೂ ಏನೂ ಆಗಲಿಲ್ಲ. ಮಾನ್ಯ ಬಸವಲಿಂಗಪ್ಪನವರು ಈ ಖಾತೆ ವಹಿಸಿಕೊಂಡ ಮೇಲೆ ಗುಡಿಸಲುವಾಸಿಗಳೆಲ್ಲರ ಫೋಟೋ ಹಿಡಿಸಿದರು, ಜನರ ಪಟ್ಟಿ ಮಾಡಿಸಿದರು. ಯಾರು ಯಾರು ಎಲ್ಲೆಲ್ಲಿ ವಾಸಮಾಡಬೇಕೆಂಬುದನ್ನು ತೀರ್ಮಾನ ಮಾಡುವುದಾಗಿ ಹೇಳಿದರು. ಫೋಟೋ ತೆಗೆಸಿಕೊಳ್ಳದ ಜನರು ಮತ್ತೆ ಫೋಟೋ ತೆಗೆಸಿಕೊಂಡರು. ಒಳ್ಳೆಯ ಅಭಿಪ್ರಾಯದಿಂದಲೇ ಇದನ್ನು ಮಾಡಿಸಿದರು. ನನ್ನ ಕ್ಷೇತ್ರದ ಬಗ್ಗೆ ನಾನು ಹೇಳುತ್ತಿರುವುದು ; ಆದರೆ ಆ ಫೋಟೋಗಳು ಎಲ್ಲಿ ಹೋದವೋ, ಆ ಪಟ್ಟಿ ಎಲ್ಲಿ ಹೋಯಿತೋ ಎಂಬುದು ಇದುವರೆಗೆ ಗೊತ್ತಿಲ್ಲ. ಆದರೆ ಒಂದು ಗೊತ್ತಿದೆ. ಇವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದರೆ, ಫೋಟೋ ತೆಗೆಸಿದ ಜಾಗದಲ್ಲಿದ್ದ ಗುಡಿಸಲುಗಳನ್ನು ಕಾರ್ಪೊರೇಷನ್ ಅಧಿಕಾರಿಗಳು ಬಂದು ನಿರ್ನಾಮ ಮಾಡಿಸಿರುವುದು.

ಶ್ರೀ ಎಚ್. ಡಿ. ದೇವೇಗೌಡ.—ಸ್ಲಮ್ ಕ್ಲಿಯರೆನ್ಸ್ ಪ್ರೋಗ್ರಾಮಿನಲ್ಲಿ ಅದೂ ಒಂದು ಕಾರ್ಯಕ್ರಮ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಕ್ಷೇತ್ರದಲ್ಲಿರುವ ಸ್ಲಮ್‌ಗಳ ಸಂಖ್ಯೆ ಮತ್ತು ಜನರ ಸಂಖ್ಯೆಯನ್ನು ಪಟ್ಟಿ ಮಾಡಿಕೊಡಿ ಎಂದು ನನಗೆ ಹೇಳಿದರು. ಅದರಂತೆ ನನ್ನ ಕ್ಷೇತ್ರದಲ್ಲಿರುವ 12—15 ಸ್ಲಮ್‌ಗಳಿಗೆ ಹೋಗಿ ಜನರೊಡನೆ ಚರ್ಚೆ ಮಾಡಿ ಜಾಸ್ತಿ ಜನರ ಹೆಸರು ಕೊಡಬಾರದೆಂದು ಗಮನಿಸಿ ಒಂದು ಪಟ್ಟಿ ಮಾಡಿದ್ದೂ ಆಯಿತು. ಅದನ್ನು ಸರ್ಕಾರಕ್ಕೆ ಕೊಟ್ಟಿದ್ದೂ ಆಯಿತು. ಇಷ್ಟೆಲ್ಲಾ ಮಾಡಿದ ಮೇಲೆ ಆಗಿದ್ದೇನೆಂದರೆ, ಕಾರ್ಪೊರೇಷನ್ ಅಧಿಕಾರಿಗಳು ಪೋಲಿಸರ ಸಹಾಯದಿಂದ ಬೋವಿಪಾಳ್ಯದಲ್ಲಿರುವ ಎಲ್ಲ ಗುಡಿಸಲುಗಳನ್ನು ನೆಲಸಮ ಮಾಡಿದರು. ಫೋಟೊ ಹಿಡಿದಿದ್ದು ಏತಕ್ಕೆ, ನೆಲಸಮ ಮಾಡಿದ್ದು ಏತಕ್ಕೆ ಎಂದು ಕೇಳುತ್ತೇನೆ. ಗರೀಬಿ ಹಟಾವೊ ಮಾಡುತ್ತೇವೆಂದು ಹೇಳುವ ಜನರು ಬಡಜನರ ಗುಡಿಸಲುಗಳನ್ನು ನೆಲಸಮ ಮಾಡಿದ್ದು ಸರಿಯೇ ಎಂದು ಕೇಳುತ್ತೇನೆ. ಅವರಿಗೆ ವಾಸಕ್ಕೆ ತೊಂದರೆಯಾಗಿ ನನ್ನ ಹತ್ತಿರ ಬಂದು ಗೋಳಿಟ್ಟರು. ಎಲ್ಲರೂ ಬೀದಿಗೆ ಬಂದು ಬೀಳುವಂತೆ ಇವರು ಮಾಡಿದರು.

ಅವರಿಗೆ ಹಿಂದೆ ಆಶ್ವಾಸನೆಯನ್ನು ಕೊಟ್ಟು ಈಗ ಬೇರೆ ಜಾಗ ಕೊಡುತ್ತೇವೆ ಎಂದು ಹೇಳಿದರೆ ಅವರಿಗೆ ಯಾವ ರೀತಿ ನಂಬಿಕೆ ಬರುತ್ತದೆ? ಎಲ್ಲವನ್ನೂ ಮಾತಿನಲ್ಲಿ ಹೇಳುತ್ತಾರೆಯೇ ವಿನಾ ಕೃತಿಯಲ್ಲಿ ಮಾಡುತ್ತಿಲ್ಲ. ಗುಡಿಸಲುಗಳನ್ನು ಇವರು ಧ್ವಂಸ ಮಾಡುವುದು ನ್ಯಾಯವೇ ?ಬೇರೆ ಜಾಗ ಮಾಡಿ ತೋರಿಸಿ ಸ್ಲಮ್‌ಕ್ಲಿಯರೆನ್ಸ್ ಮಾಡುತ್ತೇವೆ ಎಂದು ಭರವಸೆ ಕೊಡುತ್ತೀರಿ, ಆದರೆ

ನೀವು ಏನು ಮಾತು ಕೊಡುತ್ತೀರೋ ಅದರಂತೆ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಬೆಂಗಳೂರಿನ ಸುತ್ತಮುತ್ತ 10 ಸಾವಿರ ಸೈಟುಗಳನ್ನು ಮಾಡಿದ್ದೇವೆ ಎಂದು ಹೇಳಿದಿರಿ, ಏತಕ್ಕೆ ಅವುಗಳನ್ನು ಯಾರಿಗೂ ಹಂಚಿಲ್ಲ, ಅವುಗಳನ್ನು ಏತಕ್ಕೆ ಹಾಗೆಯೇ ಉಳಿಸಿಕೊಂಡಿದ್ದೀರಿ ? ಆ ಸೈಟುಗಳನ್ನು ತಾವು ಹಂಚುವುದಾದರೆ ಬಡವರಿಗೆ ಹಂಚಿ, ಗುಡಿಸಿಲನಲ್ಲಿ ವಾಸಮಾಡುವವರಿಗೆ ಹಂಚಿ. ಈ ಸಂಭಂಧದಲ್ಲಿ ಮಧ್ಯಸ್ಥಗಾರರು ಮತ್ತು ಕೆಲವು ಪುಡಾರಿಗಳು ದುಡ್ಡು ಮಾಡಿಕೊಳ್ಳುತ್ತಾರೆ ಎನ್ನುವ ಆರೋಪಣೆ ಇದೆ.

ಶ್ರೀ ಎಚ್. ಡಿ. ದೇವೇಗೌಡ.--ಕಲೆಕ್ಷನ್ ಮತ್ತು ಕನ್‌ಸಾಲಿಡೇಷನ್ ಆಗದಿದ್ದರೆ ಹೇಗೆ

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀಮಾನ್ ದೇವೇಗೌಡರು ಈ ರೀತಿ ಮಾತನಾಡಬಾರದು ತಮ್ಮ ಮಂತ್ರಿಮಂಡಲದಲ್ಲೂ ಕಲೆಕ್ಷನ್ ಮತ್ತು ಕಾನ್‌ಸಾಲಿಡೇಷನ್ ಬೇಕಾದಷ್ಟು ಇತ್ತು. ಈಗಲೂ ಆಗುತ್ತಿದೆ. ನಾನು ಶ್ರೀಮಾನ್ ದೇವೇಗೌಡರ ಬಗ್ಗೆ ಹೇಳುವುದಿಲ್ಲ. ಅವರ ಮಂತ್ರಿಮಂಡಲ ಎಂದರೆ ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಶ್ರೀಮಾನ್ ವೀರೇಂದ್ರ ಪಾಟೀಲರ ಮಂತ್ರಿಮಂಡಲದ ಬಗ್ಗೆ ನಾನು ಹೇಳುತ್ತಿದ್ದೇನೆ. ಅವರು ಕಲೆಕ್ಷನ್ ಮತ್ತು ಕನ್‌ಸಾಲಿಡೇಷನ್ ಬೇಕಾದಷ್ಟು ಮಾಡಿಕೊಂಡಿದ್ದಾರೆ. ಈಗ 10 ಸಾವಿರ ಸೈಟ್ಟುಗಳನ್ನು ಏನು ಮಾಡಿದ್ದೇವೆ ಎಂದು ಸರ್ಕಾರದವರು ಹೇಳುತ್ತಾರೆ ಆ ಸೈಟಂಗಳಿಗೆ ಇಂತಿಂಥಾ ಸ್ಲಮ್ ಇಂತಿಂಥಾ ಕಡೆ ಹೋಗಬೇಕು ಎಂದು ಹೇಳಿ ಅವರನ್ನು ಸ್ಲಮ್‌ನಿಂದ ಕಳುಹಿಸಿ ಆಮೇಲೆ ಕ್ಲಿಯರೆನ್ಸ್ ಮಾಡಿ. ಈಗ ಕೆಲವು ಖಾಸಗೀ ಜಾಗದಲ್ಲಿ ಸ್ಲಮ್ಸ್ ಇದೆ. ಅದನ್ನು ಏನು ಮಾಡುತ್ತೀರಿ ? ಜಾಗದ ಮಾಲೀಕರು ತಕರಾರು ತರುತ್ತಾರೆ. ಈಗ ತಾವು ಸ್ಲಮ್ ಇಂಪ್ರೂವ್ ಮಾಡುವ ಸ್ಕೀಮನ್ನು ಮಾಡಿದರೆ ಅದಕ್ಕೆ ಕೇಂದ್ರ ಸರ್ಕಾರದವರು ದುಡ್ಡು ಕೊಡುತ್ತಾರೆ. ಆದರೆ ಖಾಸಗೀ ಜಾಗದಲ್ಲಿ ಅನೇಕರು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಆದ್ದರಿಂದ ಆ ಜಮೀನಿನ ಮಾಲೀಕರಿಗೆ ಕಾಂಪೆನ್ಸೇಷನ್ ಕೊಡುವುದಕ್ಕೆ ಮಾಡುವ ಬದಲು ಲ್ಯಾಂಡ್ ವ್ಯಾಲ್ಯು ಅಮೌಂಟ್ ಅನ್ನು ಕೊಟ್ಟು ಆ ಜಾಗವನ್ನು ಸರ್ಕಾರದವರೇ ತೆಗೆದುಕೊಂಡು ಅದನ್ನು ಸ್ಲಮ್ ಇಂಪ್ರೂವ್‌ಮೆಂಟ್ ಮಾಡಿ ಇನ್ನೊಂದು ಕಡೆ ಸ್ಲಮ್ ಕ್ಲಿಯರೆನ್ಸ್ ಮಾಡಿದರೆ ಸ್ಲಮ್ ಇಂಪ್ರೂವ್‌ಮೆಂಟ್ ಆಗುತ್ತದೆ ಮತ್ತು ಸ್ಲಮ್ ಕ್ಲಿಯರೆನ್ಸ್ ಕೂಡ ಆಗುತ್ತದೆ. ಈ ರೀತಿ ಖಾಸಗೀ ಜಮೀನುಗಳಿಗೆ ಲ್ಯಾಂಡ್ ಅಮೌಂಟ್ ಎಂದು ಕೊಡುವುದಾದರೆ ಖಾಸಗೀಯವರಿಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಡುವುದು ತಪ್ಪುತ್ತದೆ. ಆ ಖಾಸಗೀ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ ಅವರಿಗೆ ಮಾರ್ಕೆಟ್ ವ್ಯಾಲ್ಯು ಕೊಡಬೇಕಾಗಿಲ್ಲ. ಆ ರೀತಿ ಅವರಿಗೆ ಮಾರ್ಕೆಟ್ ವ್ಯಾಲ್ಯು ಕೊಡುವುದು ನ್ಯಾಯವೂ ಅಲ್ಲ. ಧರ್ಮವೂ ಅಲ್ಲ. ಈ ಬಗ್ಗೆ ರಾಜ್ಯಾಂಗವನ್ನು ಕೂಡ ತಿದ್ದುಪಡಿ ಮಾಡಿದ್ದಾರೆ. ಆದ್ದರಿಂದ ಸರ್ಕಾರದವರು ಆ ಖಾಸಗೀ ಜಮೀನುಗಳನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಮಾರ್ಕೆಟ್ ವ್ಯಾಲ್ಯು ಕೊಡುವುದಕ್ಕೆ ಬದಲಾಗಿ ಅಮೌಂಟ್ ಎಂದು ಕೊಟ್ಟು ಅದನ್ನು ಅಕ್ವೈರ್ ಮಾಡಿಕೊಳ್ಳಬಹುದು. ಇದನ್ನು ದೇಶದ ಹಿತದೃಷ್ಟಿಯಿಂದ ಮಾಡಿದ್ದಾರೆ. ಇದನ್ನು ಸರ್ಕಾರದವರು ಏತಕ್ಕೆ ಉಪಯೋಗ ಮಾಡಿಕೊಳ್ಳುವುದಿಲ್ಲ ? ಧೈರ್ಯವಾಗಿ ಆ ಜಮೀನನ್ನು ಅಕ್ವೈರ್ ಮಾಡಿಕೊಳ್ಳಿ. ಈಗ ನೀವು ಪರಿಹಾರ ಕೊಡಬೇಕಾಗಿಲ್ಲ. ಕಾನ್‌ಸ್ಟಿಟ್ಯೂಷನ್ ತಿದ್ದುಪಡಿಯಾಗಿದೆ. ಸ್ಲಮ್ ಇಂಪ್ರೂವ್‌ಮೆಂಟ್‌ಗೆ ಕೇಂದ್ರ ಸರ್ಕಾರದವರು ದುಡ್ಡು ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ. ಆದ್ದರಿಂದ ಈಗ ಆ ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಿಂದೆ ಈ ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಒಂದು ತೀರ್ಮಾನವಾಗಿತ್ತು, ಮತ್ತು ಒಂದು ತೀರ್ಮಾನಕ್ಕೆ ಬಂದಿದ್ದರು ಇದಕ್ಕೆ ಟ್ರಸ್ಟ್ ಬೋರ್ಡಿನವರು 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದೂ, ಕಾರ್ಪೊರೇಷನ್‌ನವರು 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದೂ ಸರ್ಕಾರದವರು 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಒಪ್ಪಿಕೊಂಡಿದ್ದರು. ಈ ಒಂದು ಕೋಟಿ ರೂಪಾಯಿಗಳನ್ನು ರಿವಾಲ್ವಿಂಗ್ ಫಂಡ್ ಆಗಿ ಇಟ್ಟು ಈ ಹಣವನ್ನು ಸ್ಲಮ್ ಕ್ಲಿಯರೆನ್ಸಿಗಾಗಿ ಉಪಯೋಗಿಸಬೇಕೆಂದು ಒಂದು ತೀರ್ಮಾನಕ್ಕೆ ಬಂದಿದ್ದರು. ಆ ತೀರ್ಮಾನ ಎಲ್ಲಿ ಹೋಯಿತು ? ಅದು ಏತಕ್ಕೆ ಜಾರಿಗೆ ಬರಲಿಲ್ಲ ? ಅದಕ್ಕೆ ಯಾರು ಹೊಣೆ ! ಈಗ ಆ ಒಂದು ಕೋಟಿ ರೂಪಾಯಿ ಇದ್ದರೆ ತಕ್ಷಣ ಈ ಸ್ಲಮ್ ಕ್ಲಿಯರೆನ್ಸ್ ಕೆಲಸಕ್ಕೆ ಉಪಯೋಗಿಸುವುದಕ್ಕೆ ಅನುಕೂಲವಾಗುತ್ತದೆ. ತಕ್ಷಣ ಈ ಯೋಜನೆಯನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಏತಕ್ಕೆ ಮಾಡಕೂಡದು ? ತಕ್ಷಣ ಅದನ್ನು ತೆಗೆದುಕೊಳ್ಳಿ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಸ್ಲಮ್ ಕ್ಲಿಯರೆನ್ಸಿಗೆ ಒಂದು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಎಂದು ಮಾಡಬೇಕು. ಇದು ಅತಿ ಮುಖ್ಯವಾಗಿ ಆಗ

(ಶ್ರೀ ಎಂ. ಎಸ್. ಕೃಷ್ಣನ್)

ಬೇಕಾಗಿದೆ, ಇದನ್ನು ಮಾಡಿ ಬೆಂಗಳೂರು ನಗರದಲ್ಲಿ ಇರತಕ್ಕ ಸ್ಲಮ್‌ಗಳನ್ನು ಕ್ಲಿಯರ್ ಮಾಡಿ ಬೆಂಗಳೂರು ನಗರವನ್ನು ಸುಂದರ ನಗರವನ್ನಾಗಿ ಮಾಡಿ ಬಡವರಿಗೆ ಸೈಟುಗಳನ್ನು ಕೊಟ್ಟು, ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

MADAM SPEAKER.—The House will now rise and meet again at One of the Clock on Monday the 19th March 1973.

The House adjourned at One of the Clock to meet again at One of the Clock on Monday, the 19th March 1973.

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, the 19th March 1973/Phalguna 28, 1894 S. E.

The House met in the Assembly Chamber, Vidhana Soudha, at One of the Clock.

MADAM SPEAKER (Smt. K. S. NAGARATHNAMMA) in the Chair.

STARRED QUESTIONS

(to which oral answers were given)

Percentage of SC./ST. People in M. S. R. T. C.

139. **Sri MALLIKARJUNA KHARGE** (Gurmitkal).—

Will the Minister for Labour be pleased to state :—

(*a*) the total strength in M.S.R.T.C. Department in the State (In class I, II, III and IV Services);

(*b*) the percentage of the Scheduled Castes and Scheduled Tribes people in the M. S. R. T. C. Department in Class I, II, III, and IV Services ?

Sri AZEEZ SAIT (Minister for Labour).—

(a) Total working strength is 23,341.

(*b*) *Class of Service*	*Scheduled Caste* *Per cent*	*Scheduled Tribe* *Per cent*
I	...	1.79
II	4.97	Nil
III	5.05	1.34
IV	16.55	1.53

Sri MALLIKARJUNA KHARGE.—Supplementary to (*a*) : May I know what are the reasons why the M.S.R.T.C. has not filled up the vacancies of Class I, Class II, Class III and Class IV servants as per the constitutional provisions ?

† **Sri AZEEZ SAIT.**—Ever since intergration, this deficiency is being notice. According to the constitutional provision, we have given

(SRI AZEEZ SAIT)

15 per cent reservation in the services for Scheduled Castes, 3 per cent for Scheduled Tribes and 30 per cent for backward classes. There are lot of vacancies existing in M. S. R. T. C. but they are not being filled up for want of finalisation of the Inter-State Seniority List. The M. S. R. T. C. has completed the gradation List and we will try to see that the deficiency is made up.

Sri MALLIKARJUNA KHARGE,—In view of the deficiency, will the Government recruit directly to fill up the 18 per cent of Class II and Class 1 posts ?

Sri AZEEZ SAIT.—While recruiting we will take care to fill up the dificiency and as a safeguard we have taken two members belonging to the Scheduled Castes on the Board.

ಶ್ರೀ ಎಂ. ಎಚ್ ಜಯಪ್ರಕಾಶ ನಾರಾಯಣ.—ಸ್ವಾಮಿ ಎಂ. ಎಸ್. ಆರ್. ಟಿ. ಸಿನಲ್ಲಿ ತಾವು ಕೊಟ್ಟಿರುವ ವಿವರಣೆಯ ಪ್ರಕಾರ ಕ್ಲಾಸ್. 1. ಕ್ಲಾಸ್ 2. ಕ್ಲಾಸ್ 3. ಕ್ಲಾಸ್ 4 4 ಹುದ್ದೆಗಳಲ್ಲಿ ಯಾವುದರಲ್ಲಿಯೂ ಗೊತ್ತಾದ ಪ್ರಮಾಣದಲ್ಲಿ ಹರಿಜನಗಿರಿಜನರಿಗೆ ಹುದ್ದೆಗಳನ್ನು ಕಲ್ಪಿಸಿ ಕೊಟ್ಟಿಲ್ಲ. ಕೇರಳದಲ್ಲಿರುವಂತೆ ಇಲ್ಲಿಯೂ ಸಹ ಒಂದು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿ ಹರಿಜನಗಿರಿಜನರಿಗೆ ಜಿಲ್ಲಾ ದರ್ಜೆಯಲ್ಲಿಯೂ 18 ಪರ್ಸೆಂಟ್ ಇರುವಂತೆ ಮಾಡುತ್ತೀರಾ ?

ಶ್ರೀ ಅಜೀಜ್‌ಸೇಟ್.—ಇದರಲ್ಲಿ 16 ವರ್ಷಗಳಿಂದ ಮಾಡಿದ ಪಾಪದ ಫಲದಿಂದ ಆ ಕೆಲಸ ನಡೆಯುವುದಕ್ಕೆ ಆಗಿಲ್ಲ. ಆದ್ದರಿಂದ ಶೀಘ್ರದಲ್ಲಿಯೇ ಈಗ ಹರಿಜನರಿಗೆ ಗಿರಿಜನರಿಗೆ ಎಷ್ಟು ಹುದ್ದೆಗಳನ್ನು ಕೊಡಬೇಕಾಗಿದೆ ಅದನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

Sri S. M. YAHYA.—The Government has stated that the total working strength is 23, 341. Is this number not much more than necessary ?

Sri AZEEZ SAIT.—In some cases the recruitment has been in excess of the need, particularly in the case of Conductors. This has been noticed and Government have taken prompt action and have given guidance to the M.S.R.T.C. to set right matters.

Sri DODDA THIMMIAH.—I can understand the reason for deficiency in Class I and Class II posts but I cannot understand the reason or deficiency in Class III and Class IV posts. Will the Government take steps to fill up future vacancies in class III and Claas IV only from Scheduled Castes aud Scheduled Tribes so that the required percentage may be achieved ?

Sri AZEEZ SAIT.—I am quite conscious about the representation for the Scheduled Castes and Scheduled Tribes in M.S.R.T.C. The difficulty is due to the fact that the Conductors have to pass S.S.L.C. and hold condutors' licence. Similarly, the drivers have to hold drivers' licence and they should undergo first aid training. Probably this is the reason why they are not coming forward in good numbers. That is why we have started training centres to train them. I may assure the hon. Members and the House that I will do my best to take the Scheduled Castes and Scheduled Tribes in excess of their requisite percentage.

ಶ್ರೀ ಸಿ. ಬೈರೇ ಗೌಡ.—ಹರಿಜನಗಿರಿಜನರಿಗೆ ಕೊಡಬೇಕಾದ 18 ಪರ್ಸೆಂಟ್ ಹುದ್ದೆಗಳನ್ನು ಭರ್ತಿ ಮಾಡದೆ ಇರುವುದಕ್ಕೆ 1956ನೇ ಇಸವಿಯಲ್ಲಿ ಇಂಟಿಗ್ರೇಷನ್ ಆದದ್ದು ಕಾರಣ ಎಂದು ಹೇಳಿದ್ದೀರಿ 1956 ನೇ ಇಸವಿಯಿಂದ ಈಚೆಗೆ ಬೇಕಾದಷ್ಟು ಅಪಾಯಿಂಟ್‌ಮೆಂಟ್‌ಗಳು ಆಗಿವೆ ಅದರಲ್ಲಿ ರಾಜ್ಯಾಂಗದ ಪ್ರಕಾರ 18 ಪರ್ಸೆಂಟ್ ಹುದ್ದೆಗಳನ್ನು ಅವರಿಗೆ ಕೊಡಬೇಕೆಂದು ಇದ್ದರೂ ಕೂಡ ಏತಕ್ಕೆ ಅವರನ್ನು ರೆಕ್ರೂಟ್‌ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಅಜೀಜ್‌ಸೇಟ್. 16 ವರ್ಷಗಳಿಂದ ಅವರನ್ನು ತೆಗೆದು ಕೊಳ್ಳದೆ ಇರುವುದಕ್ಕೆ ನಾನು ಹೊಣೆಯಲ್ಲ. ಈಗ ನನ್ನ ಕೈಯಲ್ಲಿ ಅಧಿಕಾರ ಬಂದಿದೆ ರಾಜ್ಯಾಂಗದ ಪ್ರಕಾರ ಹರಿಜನಗಿರಿಜನರಿಗೆ ಏನು ಕೊಡಬೇಕೋ ಅದನ್ನು ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

Rural Housing Scheme in Siruguppa Taluk

163. **SRI B. E. RAMAIAH** (Siruguppa).—

Will the Minister for Municipal Administration be pleased to state :—

(*a*) the total Number of houses sanctioned under Rural Housing Scheme in Siruguppa taluk ;

(*b*) the stage of construction of houses under the said scheme in each village in Siruguppa taluk ;

(*c*) whether the Government is aware that the incomplete houses have not been completed due to non-availability of grants ;

(*d*) if so, will the Government take steps to release funds for their completion ;

(*e*) whether the Government is aware that a proposal has been submitted by the Taluk Development Board, Siruguppa, with a request to release the grants ?

SRI B. BASAVALINGAPPA (Minister for Municipal Administration).—

(*a*) 511.

(*b*) *Vide* statement appended.

(*c*) No.

(*d*) Does not arise.

(*e*) Yes.

(SRI B. BASAVALINGAPPA)

Statement

Statement showing the stage of construction of houses taken up under R. H. S. from the inception of the scheme in Siruguppa taluk, Bellary District.

Sl. No.	Name of the Village	No. of houses taken up	No. of houses completed	Amt. spent on completed houses	No. of houses remain incomplete	Physical progress				Amt. spent on in complete houses
						FL	PL	LL	RL	
	A. GOVERNMENT OF INDIA FUNDS									
1	Nadivi	80	55	1,10,000	20	...	...	...	25	45,000
2	Rudrapada	25	23	46,000	2	...	...	...	2	3,600
3	Tekkalakote	16	16	32,000	...	...	...	...	...	...
4	Hirehal	13	12	24,000	1	...	...	...	1	1,800
5	Siraguppa	5	1	1,000	4	4	...	...	...	1,000
	Total ...	139	107	2,13,000	32	4	...	...	28	51,400
	B. L I C FUNDS									
1	Malapura	20	20	40,000	...	...	...	...	...	...
2	Hirehal	72	45	1,20,600	27	...	...	20	7	40,500
3	Rudrapada	26	24	50,700	2	...	...	...	2	3,000
4	Kenchanagudda	19	18	36,000	1	...	...	1	...	1,500
5	Muddatana	53	25	70,500	28	...	18	5	5	28,000
6	Tekkalakote	73	11	33,000	62		20	11	31	62,000
7	Madenur	40	...	...	40	...	...	20	20	72,000
8	Halekote	40	...	...	40	2	22	11	5	32,000
	Total ...	343	143	3,50,850	200	2	60	48	70	2,39,000
	Grand Total (A + B) ...	482	250	5,63,850	232	6	60	48	98	2,90,400

After merger in Mysore Housing Board—Amount drawn by MHB during 1971-72 (Released to B.D.O., Siraguppa) 90,000

Spent on incomplete houses Rs. ... 3,80,400

ಶ್ರೀ ಬಿ. ಇ. ರಾಮಯ್ಯ.—ಸ್ವಾಮಿ ನನ್ನ ಪ್ರಶ್ನೆಗೆ ಪ್ರತಿಯೊಂದಕ್ಕೊ ಗೊತ್ತಿಲ್ಲ; ಪ್ರಶ್ನೆ ಉದ್ಭವಿಸುವುದಿಲ್ಲ, ಗೊತ್ತಿದೆ ಎಂದು ಹೇಳಿದ್ದೀರಿ ಈಗ ಸಿರಗುಪ್ಪದಲ್ಲಿ ಮನೆಗಳನ್ನು ಕಟ್ಟಿ ಅರ್ಧಂಬರ್ಧ ಆಗಿರತಕ್ಕ ಮನೆಗಳಿಗೆ ಸರ್ಕಾರದವರು ಹಣ ಕೊಡದೇ ಇರುವುದರಿಂದ ಅವು ಬಿದ್ದು ಹೋಗುತ್ತಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

† ಶ್ರೀ ಬಿ. ಬಸವಲಿಂಗಪ್ಪ.—ಈಗ ಒಂದು ಮನೆ ಕಟ್ಟುವುದಕ್ಕೆ ಹಂತ ಹಂತವಾಗಿ ಕೆಲಸ ಆದಂತೆ ಹಣ ಕೊಡುವ ಪದ್ಧತಿ ಇದೆ. ಅದರ ಪ್ರಕಾರ ಕೆಲವು ಮನೆಗಳು ಪೂರ್ತಿಯಾಗಿಲ್ಲ ಎಂದು ಸರ್ಕಾರದ ಗಮನಕ್ಕೆ ಬಂದಿದೆ. 25-1-73 ರಲ್ಲಿ ಹೌಸಿಂಗ್ ಬೋರ್ಡಿನವರು ಸಿರಗುಪ್ಪ ಬಿ. ಡಿ. ಒ ಗೆ ಒಂದು ಕಾಗದವನ್ನು ಬರೆದು ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂದು ಕೇಳಿದ್ದಾರೆ. ಅವರಿಂದ ರಿಪೋರ್ಟ್ ಬಂದ ತಕ್ಷಣ ಹಣ ಕೊಡುತ್ತಾರೆ.

ಶ್ರೀ ಬಿ. ಇ. ರಾಮಯ್ಯ.—ಈಗ ಸುಮಾರು 9 ತಿಂಗಳ ಕೆಳಗೆ ಬಿ. ಡಿ. ಒ ಇಷ್ಟು ಹಣ ಬೇಕೆಂದು ಹೌಸಿಂಗ್ ಬೋರ್ಡ್‌ಗೆ ಬರೆದಿದ್ದರೂ 9 ತಿಂಗಳಾದರೂ ಎಕ್ಸಿಕ್ಯೂಟಿವ್ ಇಂಜಿನಿಯರ್ ಹತ್ತಿರ ಬಾರದೆಇರುವುದಕ್ಕೆ ಕಾರಣವೇನು ; ಮತ್ತು ಇನ್ನಾದರೂ ಅದರ ಮೇಲೆ ಕ್ರಮ ತೆಗೆದು ಕೊಂಡು ಹಣಒದಗಿಸಿ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಇನ್ನೂ ಬರದಿರತಕ್ಕದ್ದು ವಾಸ್ತವಾಗಿರತಕ್ಕ ವಿಷಯ. ತೀವ್ರವಾಗಿ ಉತ್ತರ ತರಿಸಿ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಇ. ರಾಮಯ್ಯ.—ತಾವು ಕೊಟ್ಟಿರತಕ್ಕದ್ದು ಹಿಂದುಳಿದ ಮತ್ತು ಡೀನೋಟಿಫೈಡ್ ಜನರಿಗೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಬಂದಿದ್ದರೆ ತೀವ್ರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಸುಮಾರು 1970ನೇ ಇಸವಿಯಿಂದ ಕೆಲಸ ಪ್ರಾರಂಭಮಾಡಿದ್ದರೂ ಇದುವರೆಗೆ ಪೂರ್ತಿ ಮಾಡಿಲ್ಲ. ಅದನ್ನು ತೀವ್ರವಾಗಿ ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

DISTRIBUTION OF HOUSE SITES TO HOUSELESS PEOPLE

281. **Sri T. R. SHAMANNA** (Fort).—

Will the Minister for Muncipal Administration be pleased to state:—

(*a*) the number of building sites formed and distributed to poor houseless people upto the end of 1972 (districtwise figures may be given) ;

(*b*) the number of sites proposed to be formed ;

(*c*) the steps taken to build houses in the allotted sites ?

Sri B. Basavalingappa Minister for (Municipal Administration).—

(*a*) 2,24,822 Districtwise figures are indicated in the statement printed below.

(*b*) About (5) five lakhs sites before the end of 1973-74.

(*c*) Government have under consideration a proposal to provide cheap houses to the people allotted with free sites.

(SRI B. BASAVALINGAPPA)

STATEMENT

Statment showing the number of house sites distributed (in rural only)—districtwise in the State up to 31st December 1972.

Sl. No.	Name of Distirct		No of house sites distributed
1	Bangalore	...	9,228
2	Belgaum	...	8,351
3	Bellary	...	10,534
4	Bidar	...	6,109
5	Bijapur	...	8,094
6	Chickmagalur	...	10,835
7	Chitradurga	...	24,774
8	Coorg	...	12,886
9	Dharwar	...	9,392
10	Gulbarga	...	8,282
11	Hassan	...	17,269
12	Kolar	...	11,911
13	Mandya	...	6,126
14	Mysore	...	15,649
15	North Kanara	...	4,036
16	Raichur	...	8,559
17	Shimoga	...	10,878
18	South Kanara	...	34,445
19	Tumkur	...	7,464
		Totat	2,24,822

ಶ್ರೀ ಟಿ. ಆರ್. ಶಾಮಣ್ಣ.—ತಾವು ಕೊಟ್ಟಿರತಕ್ಕಂತಹ ಉತ್ತರದಲ್ಲಿ ಇದುವರೆಗೂ 2,24,822 ಸೈಟುಗಳು ವಿಂಗಡಿಸಿ ಹಂಚಲಾಗಿದೆ ಎಂದು ಹೇಳಿದ್ದೀರಿ. ಅದರ ಪೈಕಿ 9,228 ಸೈಟ್ಸ್ ಬೆಂಗಳೂರು ಜಿಲ್ಲೆಯಲ್ಲಿ ಕೊಟ್ಟಿದೆ ಎಂದು ಹೇಳಿದ್ದೀರಿ. ಬೆಂಗಳೂರು ಜಿಲ್ಲೆ ಅಂದರೆ ಇದರೊಳಗೆ ಸಿಟಿಯು ಸಹ ಸೇರಿದೆಯೋ ?

†ಶ್ರೀ ಬಿ. ಬಸವಲಿಂಗಪ್ಪ.—ಇದು ರೂರಲ್ ಏರಿಯಾಕ್ಕೆ ಮಾತ್ರ ಸೇರಿದ ಯೋಜನೆಯಾಗಿದೆ.

ಶ್ರೀ ಟಿ. ಆರ್ ಶಾಮಣ್ಣ.—ಇದನ್ನು ಬೆಂಗಳೂರು ನಗರದಲ್ಲಿರುವ ಬಡ ನೌಕರರಿಗೂ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ

ಶ್ರೀ ಬಿ. ಬಸವಲಿಂಗಪ್ಪ.—ಆಗುವುದಿಲ್ಲ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಕೆಲವು ಕಡೆಗಳಲ್ಲಿ ಸೈಟ್ ವಿತರಣೆ ಮಾಡಿ ಸಾಗುವಳಿ ಚೀಟಿ ಕೊಟ್ಟು ಬಹಳ ಕಾಲವಾಯಿತು. ಕೆಲವರಿಗೆ ಅವರು ಗುರುತಿಸಿ ಕೊಟ್ಟಂತಹ ಭಾಗ ಎಲ್ಲಿ ಇದೆ ಎಂದು ಗೊತ್ತಿಲ್ಲ. ಹಾಗಿದ್ದರೆ ಅಂಥವುಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಅಂಥ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಜಿ. ಚನ್ನಪ್ಪ.—ಹೊಸದಾಗಿ ಸೈಟ್ ಕೊಟ್ಟಿರುವವರಿಗೆ ಮನೆಗಳನ್ನು ಕಟ್ಟಿಸಿ ಕೊಡುತ್ತೇವೆಂದು ಹೇಳುತ್ತಿದ್ದಿರಿ. ಹಿಂದೆ ಎಸ್. ಸಿ. ಮತ್ತು ಎಸ್. ಟಿ. ಗಳಿಗೆ ಮನೆಗಳನ್ನು ಕಟ್ಟುವುದಕ್ಕೆ ಸೈಟ್ ಕೊಟ್ಟಿದ್ದಾರೆ. ಅಂಥವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಅವೆಲ್ಲವನ್ನೂ ಸಮಗ್ರವಾಗಿ ತೆಗೆದುಕೊಂಡು ಕೆಲಸ ಮಾಡುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಈಗ ಪಟ್ಟಣದಲ್ಲಿರುವ ಬಡವರಿಗೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೀರಿ. ಒಂದು ಸಮಯ ಕೊಡುವುದಾದರೆ, ಸಿಟಿಯಲ್ಲಿರುವ ಕಾರ್ಪೊರೇಟರ್ಸ್, ಎಂ. ಎಲ್. ಎ. ಮತ್ತು ಎಂ ಎಲ್. ಸಿ. ಗಳನ್ನು ಸೇರಿಸಿ ಇದರ ಬಗ್ಗೆ ಒಂದು ಕಮಿಟಿ ಮಾಡುತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಉತ್ತರ ಸ್ಪಷ್ಟವಾಗಿದೆ. ಇದು ಹಳ್ಳಿಗಾಡಿಗೆ ಸಂಬಂಧಪಟ್ಟ ಯೋಜನೆ. ಇದು ಪಟ್ಟಣಕ್ಕೆ ಅನ್ವಯಿಸುವುದಿಲ್ಲ. ಪಟ್ಟಣದಲ್ಲಿರತಕ್ಕಂತಹ ಯೋಜನೆ ಹಳ್ಳಿಗಾಡಿಗೆ ಅನ್ವಯುವಾಗುವುದಿಲ್ಲ. ಸುಮಾರು ಒಂದು ತಿಂಗಳ ಹಿಂದೆ 8 ಸಾವಿರ ಸೈಟುಗಳನ್ನು ಹಂಚುವ ಯೋಜನೆ ಪ್ರಾರಂಭ ಮಾಡಿದ್ದೇವೆ. ಬಡವರು ಯಾರಿದ್ದಾರೆ ಅವರಿಗೆ ರೂಲ್ಸ್ ಪ್ರಕಾರ ಮನೆಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ,—ಬೆಂಗಳೂರು ನಗರದ ಬಡವರಿಗೆ ಸೈಟ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೀರಿ. ಬೆಂಗಳೂರು ನಗರ ಸಹ ಬೆಂಗಳೂರು ಜಿಲ್ಲೆಯಲ್ಲಿ ಸೇರಿದೆ. ಆದ್ದರಿಂದ ಇಲ್ಲಿಯ ಬಡವರಿಗೂ ಸೈಟುಗಳನ್ನು ಕೊಡುವ ಯೋಚನೆ ಸರ್ಕಾರಕ್ಕೆ ಇದೆಯೇ ; ಮತ್ತು ಯಾವಾಗ ಕೊಡುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಬಡವರಿಗೆ ಅರ್ಧ ಬೆಲೆಯಲ್ಲಿ ಕೊಡಬೇಕೆಂದು ಟ್ರಸ್ಟ್ ಬೋರ್ಡ್ ರೂಲ್ಸ್‌ನಲ್ಲಿ ನಿಗದಿ ಮಾಡಿದ್ದಾರೆ. ಒಂದು ತಿಂಗಳಿನಲ್ಲಿ 8 ಸಾವಿರ ಸೈಟುಗಳನ್ನು ಬಡವರಿಗೆ ಹಂಚಿದ್ದೇವೆ. ಒಂದು ತಿಂಗಳು ಕಾದುನೋಡಿ,

Smt. WINNIFRED F. FERNANDES.—In South Canara District may I know how many sites have been distributed in Coondapur and how many will be built this year ?

Sri B. BASAVALINGAPPA.—There are about 16,000 house sites in Coondapur Taluk. The Deputy Commissioner is taking action to distribute more sites out of the Government land during this year. I do not know about the houses.

ಶ್ರೀ ಕೆ. ಎಚ್. ಹನುಮೇಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಸೈಟುಗಳನ್ನು ಹಂಚುವಾಗ ಕೆಲವು ಭಾಗಗಳಲ್ಲಿ ಲೆವೆಲ್ ಮಾಡಿರುವುದಿಲ್ಲ. ಆದ್ದರಿಂದ ಅಂಥ ಭೂಮಿಯನ್ನು ಲೆವೆಲ್ ಮಾಡಿ ಕೊಡುತ್ತೀರಾ ಅಥವಾ ಸೈಟ್ ಕೊಟ್ಟವರಿಗೆ ಲೆವೆಲ್ ಮಾಡುವಂತಹ ಹಣವನ್ನು ಕೊಡುತ್ತೀರಾ ?

ಶ್ರೀ ಬಿ ಬಸವಲಿಂಗಪ್ಪ.—ಯಾರಿಗೆ ಸೈಟ್ ಕೊಟ್ಟಿದ್ದೇವೆ, ಅವರಿಗೆ ಹಣ ಕೊಡತಕ್ಕ ಯೋಜನೆ ಇಲ್ಲ. ಲೆಔಟ್ ಮಾಡಿ, ರಸ್ತೆಗಳನ್ನು ಮಾಡಿ ಸರಿಯಾಗಿ ಮಾಡಿಕೊಡತಕ್ಕಂತಹ ಯೋಜನೆ ಇದೆ.

ಶ್ರೀ ಜಿ. ಆರ್ ಸಾಂಡ್ರ.—ಬೆಂಗಳೂರು ನಗರದಲ್ಲಿ 8 ಸಾವಿರ ಸೈಟುಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಅದೇ ರೀತಿ ಹುಬ್ಬಳ್ಳಿ ಧಾರವಾಡದಲ್ಲಿ ಸಹ ಕೊಡುವ ಏರ್ಪಾಡು ಮಾಡುತ್ತಿರಾ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಿಗೆ ಹುಬ್ಬಳ್ಳಿ ಸಮಾಚಾರ ಗೊತ್ತು. ಹುಬ್ಬಳ್ಳಿ ಕಾರ್ಪೊರೇಷನಿನ್ನಲ್ಲಿ ಹೆಚ್ಚು ಹೆಚ್ಚು ಜಮೀನನ್ನು ಬಡವರಿಗೆ ವಿತರಣೆ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ಸಿ.ಐ.ಟಿ.ಬಿ. ಯವರು ಸೈಟುಗಳನ್ನು ಪ್ರಭಾವ ಮತ್ತು ಬೇರೆ ಬೇರೆ ರೀತಿಯ ಒತ್ತಡಗಳಿಗೆ ಮಣಿದು ಹಂಚುತ್ತಿದ್ದಾರೆ. ಇದರಿಂದ ನಿಜವಾಗಿಯೂ ಬಡವರಿಗೆ ಸರಿಯಾಗಿ ಸೈಟುಗಳು ಸಿಗುತ್ತಾ ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮತ್ತು ಹಾಗೆ ಬಂದಿದ್ದರೆ ಸರಿಯಾಗಿ ಹಂಚುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ? ಪಟ್ಟಣದಲ್ಲಿರುವ ಬಡವರ ಬಗ್ಗೆ ಕನಿಕರ ತೋರಿಸುತ್ತೀರಾ:

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೇಳತಕ್ಕ ಅಪಾದನೆಗಳು ನನ್ನ ಗಮನಕ್ಕೆ ಬಂದಿಲ್ಲ. ಯಾವುದಾದರೂ ಅಂಥವುಗಳು ಬಂದರೆ ಸರಿಪಡಿಸುತ್ತೇವೆ. ಬಡವರಿಗೆ ಆದಷ್ಟು ಹೆಚ್ಚು ಸೈಟುಗಳನ್ನು ರೂಲ್ಸ್ ಪ್ರಕಾರ ಹಂಚುವುದಕ್ಕೆ ಪ್ರಯತ್ನ ಮಾಡುತ್ತೇವೆ.

STRIKES IN FACTORIES IN THE STATE

235. **Sri. S. KARIYAPPA** (Kanakapura).—

Will the Minister for Labour be pleased to state.—

(*a*) the names of various factories in the State where strikes took place during the last two years;

(*b*) the nature of steps taken by Government to call off such strikes?

Sri AZEEZ SAIT (Minister for Labour).—

(*a*) Details furnished in Statement 'A' for 1971 and in Statement 'B' for 1972 placed on the Table of the House*

(*b*) Indicated in column 3 of the Statement placed on the Table of the House.

ಶ್ರೀ ಎಸ್. ಕರಿಯಾಪ್ಪ.—ಕೆಲವು ಕಾರ್ಖಾನೆಗಳಲ್ಲಿ ಸ್ಟ್ರೈಕ್ ಮಾಡಿರುವವರು ಈಗಾಗಲೇ ವಾಪಸ್ಸು ತೆಗೆದುಕೊಂಡಿದ್ದಾರೆ. ಇನ್ನು ಕೆಲವು ಕಾರ್ಖಾನೆಗಳಲ್ಲಿ ಕೆಲವರು ಅವರವರಲ್ಲಿಯೇ ಒಂದು ತೀರ್ಮಾನಕ್ಕೆ ಬಂದದ್ದರಿಂದ ಸ್ಟ್ರೈಕ್ ನಿಂತಿದೆ. ಇನ್ನು ಕೆಲವು ಕಡೆಗಳಲ್ಲಿ ಸರ್ಕಾರದವರು ಕೈಹಾಕಿ ನಿಲ್ಲಿಸಿದ್ದಾರೆ. ಪೋಲೀಸಿನವರು ಕೈಹಾಕಿ ನಿಲ್ಲಿಸಿದ್ದಾರೆಂದು ಹೇಳಿದ್ದೀರಿ. ಪೋಲೀಸಿನವರು ಮತ್ತು ಸರ್ಕಾರದವರು ಕೈಹಾಕಿ ನಿಲ್ಲಿಸುವುದಕ್ಕೆ ಹೇಗೆ ಪ್ರಯತ್ನಪಟ್ಟರೆಂಬುದನ್ನು ಹೇಳುತ್ತೀರಾ?

ಶ್ರೀ ಅಜೀಜ್ ಸೇಟ್.—ಪೋಲೀಸಿನವರು ಮತ್ತು ಸರ್ಕಾರದವರು ಕೈಹಾಕುವ ಪ್ರಶ್ನೆ ಹೇಗೆ ಆಯಿತೆಂದರೆ, ಎಲ್ಲಾದರೂ ಸ್ಟ್ರೈಕ್ ಆಯಿತೆಂದು ಗಮನಕ್ಕೆ ಬಂದ ತಕ್ಷಣ ಅಸಿಸ್ಟೆಂಟ್ ಲೇಬರ್ ಕಮೀಷನರ್ ಮತ್ತು ಲೇಬರ್ ಆಫೀಸರ್ಸ್ ಒಬ್ಬರಿಗೊಬ್ಬರಿಗೆ ಕನ್‌ಸಿಲಿಯೇಷನ್ ಮಾಡಿ ಇಬ್ಬರಲ್ಲಿಯೂ ಮಾತುಕತೆ ನಡೆಸಿ ಒಂದು ಒಪ್ಪಂದಕ್ಕೆ ಅವರಿಬ್ಬರನ್ನೂ ತರುವುದಕ್ಕೆ ಸರ್ಕಾರ ಕೈ ಹಾಕುವುದು. ಇನ್ನು ಪೋಲೀಸಿನವರು ಯಾವುದೇ ಸ್ಥಳದಲ್ಲಿ ಕಾರ್ಖಾನೆಗಳ ಹತ್ತಿರ ಏನಾದರೂ ಜಗಳ ಏಟುಗಳಾದರೆ, ಪೋಲೀಸಿನವರು ಇಬ್ಬರನ್ನೂ ಕರಿಸಿ ಸಮಾಧಾನಮಾಡಿ ಒಂದು ತೀರ್ಮಾನ ಮಾಡುವುದಕ್ಕೆ ಪೋಲೀಸಿನವರು ಕೈಹಾಕುವುದು.

---

* Copy placed in the Mysore Legislature Library *vide* No. 17/ dated 19-3-1973.

ಶ್ರೀ ಎಸ್. ಕರಿಯಪ್ಪ.—ಸಭೆಯ ಮುಂದೆ ಕೊಟ್ಟಿರುವ ತಃಖ್ತೆಯ ಪ್ರಕಾರ ಈಗ ಇಲ್ಲಿ ವರ್ಷಕ್ಕೆ 168 ಸ್ಟ್ರೈಕ್ಸ್ ಆಗುತ್ತಾ ಇವೆಯೆಂದು ಹೇಳಿದ್ದೀರಿ. ಅಂದರೆ ಮೇಲೆ ಸರಾಸರಿ ತಿಂಗಳಿಗೆ ಸಾಮಾನ್ಯವಾಗಿ 7 ರಂತೆ ಆಯಿತು. ಆದರೆ ಈ ಸ್ಟ್ರೈಕ್ಸ್ ನಿಂದ ಸರ್ಕಾರಕ್ಕಾಗಲೀ ಕಾರ್ಖಾನೆ ಯವರಿಗಾಗಲೀ ಎಷ್ಟರಮಟ್ಟಿಗೆ ನಷ್ಟವಾಗಿದೆಯೆಂಬುದನ್ನು ತಿಳಿಸುತ್ತೀರಾ ?

ಶ್ರೀ ಅಜೀಜ್ ಸೇಟ್.—1971-72ರಲ್ಲಿ ಪ್ರೈವೇಟ್ ಸೆಕ್ಟರ್‌ನಲ್ಲಿ ಕೆಲಸಗಾರರಿಗೆ ವೇಜಸ್ಸಿನಲ್ಲಿ 32 ಲಕ್ಷ 58 ಸಾವಿರ ರೂಪಾಯಿಗಳು ನಷ್ಟವಾಗಿದೆ. ಪಬ್ಲಿಕ್‌ಸೆಕ್ಟರಿನಲ್ಲಿ 25 ಸಾವಿರದ 420 ರೂಪಾಯಿಗಳು ನಷ್ಟವಾಗಿದೆ. ಟೋಟಲ್ ವ್ಯಾಲುಯೇಷನ್ ಆಫ್ ಪ್ರೊಡಕ್ಷನ್-ಪ್ರೈವೇಟ್ ಸೆಕ್ಟರ್‌ನಲ್ಲಿ 3 ಲಕ್ಷ 93 ಸಾವಿರ ರೂಪಾಯಿಗಳು. ಪಬ್ಲಿಕ್ ಸೆಕ್ಟರಿನಲ್ಲಿ 1 ಲಕ್ಷ 49 ಸಾವಿರ ರೂಪಾಯಿಗಳು 1972-73ನೇ ಸಾಲಿನಲ್ಲಿ ಕೂಲಿಗಾರರಿಗೆ ಪ್ರೈವೇಟ್ ಸೆಕ್ಟರಿನಲ್ಲಿ 12 ಲಕ್ಷ 85 ಸಾವಿರದ 221 ರೂಪಾಯಿಗಳು. ಪಬ್ಲಿಕ್ ಸೆಕ್ಟರ್‌ನಲ್ಲಿ ಒಂದು ಕೋಟಿ 2 ಲಕ್ಷ 44 ಸಾವಿರ ರೂಪಾಯಿಗಳು ಕೂಲಿಗಾರರಿಗೆ ಕೂಲಿ ನಷ್ಟವಾಗಿದೆ. ಟೋಟಲ್ ವ್ಯಾಲ್ಯು ಆಫ್ ಪ್ರೊಡಕ್ಷನ್-ಪ್ರೈವೇಟ್ ಸೆಕ್ಟರ್‌ನಲ್ಲಿ 2 ಕೋಟಿ 33 ಲಕ್ಷದ 77 ಸಾವಿರ ರೂಪಾಯಿಗಳು. ಪಬ್ಲಿಕ್ ಸೆಕ್ಟರ್‌ನಲ್ಲಿ 7 ಕೋಟಿ 3 ಲಕ್ಷದ 90 ಸಾವಿರ ರೂಪಾಯಿಗಳು ನಷ್ಟವಾಗಿದೆ.

ಶ್ರೀ ಎಸ್. ಕರಿಯಪ್ಪ.—ಈ ಸ್ಟ್ರೈಕ್ಸ್ ನಿಂದ ನಷ್ಟವಾಗುತ್ತಿರುವುದರಿಂದ ಮುಂದೆ ಈ ಸ್ಟ್ರೈಕ್ ನಡೆಯದೇ ಇರುವಂತೆ ಏನಾದರೂ ವ್ಯವಸ್ಥೆಯನ್ನು ಮಾಡುವ ಆಲೋಚನೆಯನ್ನು ಮಾಡಿದ್ದೀರಾ ?

ಶ್ರೀ ಅಜೀಜ್ ಸೇಟ್.—ಸ್ಟ್ರೈಕ್ಸ್ ನಿಲ್ಲಿಸುವಂಥ ವ್ಯವಹಾರ ಸರ್ಕಾರದ ಗಮನದಲ್ಲಿಲ್ಲ. ಕೇಂದ್ರಸರ್ಕಾರದ ಗಮನದಲ್ಲಿಯೂ ಇಲ್ಲ. ಸ್ಟ್ರೈಕ್ ಎಂಬುದು ಕೆಲಸಗಾರರಿಗೆ ಇರುವ ಹಕ್ಕು. ಅವರು ಕೊನೆಯಲ್ಲಿ ಸ್ಟ್ರೈಕ್ ಮಾಡುವುದು ನ್ಯಾಯ. ಕೆಲವರು ಡಿಮ್ಯಾಂಡ್ ಮಾಡಿ ಇನ್ನೂ ಕನ್‌ಸಿಲಿಯೇಷನ್ ಕೂಡ ಆಗುತ್ತಿರುವಾಗ ಹಾಗೂ ತೀರ್ಮಾನ ಮಾಡುವುದಕೆ ಮೊದಲೇ ಸ್ಟ್ರೈಕ್ ಮಾಡಿ ವಯಲೇಷನ್ ಮಾಡಿರುವುದೂ ಸಹ ಸರ್ಕಾರದ ಗಮನಕ್ಕೆ ಬಂದಿದೆ. ಇದು ದುರಾದೃಷ್ಟ. ಇನ್ನು ಮುಂದೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ಗೆ ಅಮೆಂಡ್‌ಮೆಂಟ್ ಮಾಡುವಂಥ ಸಂದರ್ಭ ಇವೆ. ಆದ್ದರಿಂದ ಬಹುಶಃ ಏನೊಂದು ತೊಂದರೆಗಳು ಇವೆಯೋ ಅವು ಕಡಿಮೆಯಾಗಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಸಿ. ಬೈರೇಗೌಡ.—ಸ್ಟ್ರೈಕ್ ಮಾಡುವಂಥಾದ್ದು ಕೆಲಸಗಾರರ ಹಕ್ಕು ಎಂಬುದಾಗಿ ಹೇಳಿದ್ದೀರಿ. ಅದನ್ನು ನಾನೂ ಸಹ ಒಪ್ಪಿಕೊಂಡಿದ್ದೇನೆ. ಕೇಂದ್ರಸರ್ಕಾರದ ವತಿಯಲ್ಲಿರತಕ್ಕ ಕಾರ್ಖಾನೆಗಳ ಬಗ್ಗೆ ಸ್ಟ್ರೈಕ್ ಮಾಡುವುದಕ್ಕೆ ಏನು ಅಗ್ರಿಮೆಂಟ್ ಮಾಡಬೇಕಾದರೂ ವರ್ಕರ್ಸ್‌ಗೆ ಮತ್ತು ಮ್ಯಾನೇಜ್‌ಮೆಂಟಿನವರಿಗೆ ನಮ್ಮನ್ನು ಕೇಳದೆ ಮಾಡಬಾರದೆಂದು ಸೀಕ್ರೆಟ್ ಸರ್ಕ್ಯುಲರ್ ಕಳುಹಿಸಿರುವುದು ಈ ಸರ್ಕಾರದ ಗಮನಕ್ಕೆ ಬಂದಿದೆಯೋ ? ಆದರಿಂದಲೇ ಸ್ಟ್ರೈಕ್ ಜಾಸ್ತಿಯಾಗಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ? ಕೇಂದ್ರಸರ್ಕಾರದ ಅಪ್ಪಣೆ ಇಲ್ಲದೆ ಆ ರೀತಿ ಮಾಡಬಾರದೆಂದು ಹೇಳಿರುವುದೂ ಸಹ ಒಂದು ಕಾರಣವಲ್ಲವೇ ?

ಶ್ರೀ ಅಜೀಜ್ ಸೇಟ್.—ಅಂತಹ ಯಾವ ಸೀಕ್ರೆಟ್ ಸರ್ಕ್ಯುಲರ್ ಕೇಂದ್ರ ಸರ್ಕಾರದಿಂದ ಹಾಗೂ ಮೈಸೂರು ಸರ್ಕಾರದಿಂದ ಕಾನ್‌ಸ್ಟಿಟ್ಯೂಷನ್ನಿಗೆ ವಿರೋಧವಾಗಿ ಹೋಗಿಲ್ಲ. ಅಂತಹ ಸೀಕ್ರೆಟ್ ಸರ್ಕ್ಯುಲರ್ ತಮಗೆ ಹೇಗೆ ಗಮನಕ್ಕೆ ಬಂತು ! ಬಹುಶಃ ಪಾರ್ಲಿಮೆಂಟಿನಲ್ಲಿ ಮೊನ್ನೆ ವಿರೋಧಪಕ್ಷದವರು ಕೇಳಿರುವ ಪ್ರಶ್ನೆ ನೋಡಿಕೊಂಡು ಮಾನ್ಯ ಸದಸ್ಯರು ಇಲ್ಲಿ ಪ್ರಶ್ನೆ ಕೇಳುತ್ತಿದ್ದಾರೆ ಎಂಬುದಾಗಿ ನನಗೆ ತೋರುತ್ತದೆ:

Sri J.P. SARVESH.—Whether it has come to the notice of the Government that in majority of the cases only after strikes the workers are benefited ?

Sri AZEEZ SAIT.—I don't think it is absolutely correct. Government has made it clear that no work no wages and workers have been helped in their legitimate cause. This Government has never been in the habit of encouraging them to strike and get benefits.

ಶ್ರೀ ಎಸ್. ಕರಿಯಪ್ಪ.—ಕೆಲಸಗಾರರಲ್ಲಿ ಈ ಕಾರ್ಖಾನೆ ನಮಗೆ ಸೇರಿದ್ದು, ನಾವು ಇದಕ್ಕೆ ಭಾಗಸ್ಥರೆಂಬ ಭಾವನೆ ಬರಬೇಕಾದರೆ ಕಾರ್ಖಾನೆಗೆ ಬರತಕ್ಕ ಉತ್ಪತ್ತಿಯಲ್ಲಿ ಇಷ್ಟು ಭಾಗವನ್ನು ಅವರಿಗೆ ಕೊಡುತ್ತೇವೆಂದು ಗೊತ್ತು ಮಾಡಿದರೆ, ಅದರಿಂದಾದರೂ ಸ್ಟ್ರೈಕುಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಅಜೀಜ್ ಸೇಟ್.—ಒಟ್ಟಿನಲ್ಲಿ ನಾವು ಏನು ಇದರ ಬಗ್ಗೆ ಕಾನೂನುಗಳನ್ನು ಮಾಡಿದ್ದೇವೋ ಅವನ್ನು ಪ್ರತಿಯೊಬ್ಬರೂ ಒಪ್ಪಿಕೊಂಡರೆ ಇಂತಹ ಕಷ್ಟಕ್ಕೆ ಅವರು ಗುರಿಯಾಗುವುದಿಲ್ಲ.

Development of Chitradurga District as a Place of Tourist Interest

321. **Sri C. R. MOHAMED SAIFUDDIN** (Chitradurga).—

Will the Minister for Labour be pleased to state:—

(*a*) whether Chitradurga district has been included for development as a place of Tourist interest; the names of places of tourist interest in the district;

(*b*) the number of tourist Homes that have been constructed in the district;

(*c*) whether these tourist homes are utilised properly; if not the reason for the same;

(*d*) the amount spent on development of Tourism in the District?

Sri AZEEZ SAIT (Minister for Labour).—

(*a*) (i) Yes.

(ii) Chitradurga (Fort and Jamia Mosque), Vanivilasa Sagar, Jogimatti, Harihareswara temple.

(*b*) A Forest bungalow at Jogimatti and a Tourist Home at Vanivilasa Sagar Dam.

(*c*) The Forest lodge is being utilised; the tourist home at Vanivilasa Sagar is yet to be commissioned.

(*d*) Rs. 1.70 lakhs.

ಶ್ರೀ ಸಿ. ಆರ್. ಮಹಮದ್ ಸೈಫುದ್ದೀನ್.—ಟೂರಿಸ್ಟ್ ಸೆಂಟರುಗಳಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಸೇರಿಸಿ ಎಷ್ಟು ವರ್ಷಗಳಾಯಿತು? ಆಮೇಲೆ ಅಲ್ಲಿ ಏನೇನು ಯೋಜನೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಏರ್ಪಾಡು ಮಾಡಿದ್ದೀರಿ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

† **ಶ್ರೀ ಅಜೀಜ್ ಸೇಟ್.**—ಅದಕ್ಕೆ ನೋಟೀಸ್ ಬೇಕು. ಆದರೆ ವಾಣಿವಿಲಾಸ ಸಾಗರ ಅಣೆಕಟ್ಟಿನ ಪ್ರವಾಸಿ ಗೃಹವನ್ನು ಪ್ರಾರಂಭಮಾಡುವ ಒಂದು ಯೋಜನೆ ಅಲ್ಲಿ ಇದೆ.

Auction of Toddy Shops

394. **Sri H. G. CHANNAPPA** (Magadi).—

Will the Chief Minister be pleased to state:—

(*a*) whether Government intends to stop the present system of Districtwise auctions of Toddy Shops and adopt the systsm of auctioning of the said shops in respective taluks only as is done in Tamil Nadu ;

(*b*) whether by introducing this system the Government would derive more income than that of present ?

Sri H. M. CHANNABASAPPA (Minister for Public Works and Electricity) [On behalf of **Sri D. DEVARAJ URS** (Chief Minister)].—

(*a*) The Toddy Shops are auctioned at present Shopwise, Groupwise and Talukwise and Districtwise Government do not intend to auction the Toddy shop in Taluks only.

(*b*) Whether more Income will be derived or not it cannot be said.

ಶ್ರೀ ಎಚ್. ಜಿ. ಚನ್ನಪ್ಪ.—ಈಗಿರುವ ರೀತಿಯಲ್ಲಿ ಹರಾಜು ಮಾಡುವುದರಿಂದ, ಇದರಿಂದ ಹೆಚ್ಚಿಗೆ ಆದಾಯ ಬರುತ್ತಾ, ಇಲ್ಲ. ಇದೆಲ್ಲಾ ದೊಡ್ಡ ದೊಡ್ಡ ಅನುಕೂಲಸ್ಥರು ಯಾರು ಇದ್ದಾರೋ ಇವರ ಕೈಗೇ ಸಿಗುತ್ತಿದೆ. ಇದನ್ನು ತಾಲ್ಲೂಕಾವೈಜ್ ಹರಾಜು ಮಾಡುವುದರಿಂದ ಹೆಚ್ಚಿನ ಹಣ ಸರ್ಕಾರಕ್ಕೆ ಬರುತ್ತದೆ. ಮತ್ತು ಬೇರೆ ಬೇರೆ ಜನಗಳಿಗೂ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಂತಾಗುತ್ತದೆಯಲ್ಲವೇ ?

† **ಶ್ರೀ ಎಚ್. ಎಂ. ಚನ್ನಬಸಪ್ಪ.**—ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಇದರಲ್ಲಿ ಕೊಟ್ಟಿರತಕ್ಕ ಉತ್ತರದಲ್ಲಿಯೇ ಸ್ಪಷ್ಟವಾಗಿದೆ. ಅದ್ದರಿಂದ ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೆ ಅರ್ಥವಿಲ್ಲ.

ಶ್ರೀ ಎಚ್. ಜಿ. ಚನ್ನಪ್ಪ.— ಅದು ಜಿಲ್ಲಾಮಟ್ಟದಲ್ಲಿ ನಡೆಯುತ್ತಿರುವುದರಿಂದ, ತಾಲ್ಲೂಕ್ ವೈಸಾಗಿ ಹರಾಜು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಪ್ರಶ್ನೆಗೆ ಇದು ಸಂಬಂಧವಿಲ್ಲ. ಕೇವಲ ಅಡ್ಮಿನಿಸ್ಟ್ರೇಷನ್ ಕನ್‌ವೀನಿಯನ್ಸಿಗೋಸ್ಕರ ಅದನ್ನು ಜಿಲ್ಲಾ ಕೇಂದ್ರದಲ್ಲಿ ಮಾಡಲಾಗಿದೆ.

ಶ್ರೀ ಕೆ. ಎಂ. ನಾಗಣ್ಣ.—ಮದ್ರಾಸಿನಲ್ಲಿ ಈ ಸೇಂದಿ ಅಂಗಡಿಗಳ ಹರಾಜನ್ನು ಏರಿಯಾವಾರ್ ಮಾಡಿದ್ದರಿಂದ ಒಂದೊಂದು ಏರಿಯಾದಲ್ಲಿ ಹರಾಜುಮಾಡಿ ಬೇರೆಬೇರೆಯವರು ಅದನ್ನು ಅಲ್ಲಿ ತಗೆದುಕೊಂಡಿದ್ದಾರೆ. ಹಾಗೆ ಅಲ್ಲಿ ಮಾಡುತ್ತಾ ಇರುವುದರಿಂದ ವರಮಾನ ಜಾಸ್ತಿಯಾಗಿ ಬರುತ್ತಿದೆ. ಅದ್ದರಿಂದ ಅದೇ ರೀತಿಯಾಗಿ ಬೆಂಗಳೂರು ನಗರದಲ್ಲಿಯೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ತರದಲ್ಲಿ ಈಗಾಗಲೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಟ್ಟಿದೆ. ಜಿಲ್ಲಾವಾರು ಮಾಡಬೇಕೆಂಬ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಆದ್ದರಿಂದ ಗ್ರೂಪ್‌ವಾರ್ ಮಾಡಿ ಹರಾಜು ಮಾಡುವುದಕ್ಕೆ ಮಾತ್ರ ಅವಕಾಶವಿದೆ ಎಂದು ಹೇಳಿದರೆ, ಆದರಿಂದ ಫಾಯಿದೆ ಬರುತ್ತದೆಂದರೆ, ಆ ರೀತಿಯಾಗಿಯೇ ಮಾಡುವುದರಲ್ಲಿ ಅಭ್ಯಂತರವಿಲ್ಲ.

Sri D. B. KALMANKAR.—In view of the representation made that the auction should not be districtwise and talukwise but it should be shopwise, and the Government was also considering this question, may I know whether the Government will see that this year it is auctioned shopwise?

1-30 P. M.

Sri H. M. CHANNABASAPPA.—I am really surprised. The answer is quite clear; on the face of facts it is clear that we make it shopwise, groupwise, talukwise and also districtwise. How exactly it has to be done is a matter left to the Deputy Commissioner to consider the situation there and adopt such measuresas as would be most beneficial to the State.

ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು.—ಇದರಿಂದ ಬಡವರು ಮತ್ತು ಮುಖ್ಯವಾಗಿ ಹಿಂದುಳಿದ ವರ್ಗದವರು ಹಾಳಾಗುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಈ ಕುಡಿತವನ್ನು ಕೂಡಲೇ ರದ್ದುಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ರಾಜ್ಯದ ನೀತಿಗೆ ಸಂಬಂಧಪಟ್ಟ ವಿಷಯ. ಇದಕ್ಕೆ ಬೇರೆ ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿದರೆ, ಅದಕ್ಕೆ ಉತ್ತರವನ್ನು ಒದಗಿಸಲಾಗುತ್ತದೆ.

Sri J. P. SARWESH.—In reply to (a) it is stated that the Toddy shops are auctioned at present Shopwise, Groupwise and Talukwise and Districtwise. Instead of that will the Government assure the House that after experimenting they will first auction districtwise and then talukwise, groupwise and shopwise?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಏಕಾಏಕಿ ಭರವಸೆಯನ್ನು ಕೊಡುವುದಕ್ಕಾಗುವುದಿಲ್ಲ. ಒಂದು ಜಿಲ್ಲೆಯಲ್ಲಿರತಕ್ಕ ಪರಿಸ್ಥಿತಿ ಅಲ್ಲಿಗೆ ಅನುಕೂಲವಾಗಿದ್ದರೆ, ಬೇರೆ ಜಿಲ್ಲೆಗೆ ಅದು ಅನಾನುಕೂಲವಾಗಬಹುದು. ಆದ್ದರಿಂದ ಎಲ್ಲೆಲ್ಲಿಗೆ ಯಾವುದು ಫಾಯಿದೆ ಉಳ್ಳದ್ದು ಎಂಬುದನ್ನು ಜಿಲ್ಲಾಧಿಕಾರಿಗಳಿಗೆ ಬಿಟ್ಟ ವಿಷಯ.

ಶ್ರೀ ಎಚ್. ಜಿ. ಚನ್ನಪ್ಪ.—ಇದನ್ನು ಪರೀಕ್ಷಾರ್ಥವಾಗಿ ಯಾವುದಾದರೊಂದು ಜಿಲ್ಲೆಯಲ್ಲಿ ನಾನು ಹೇಳಿದಂತೆ ನಡೆಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಡ್ಮಿನಿಷ್ಟ್ರೇಟೀವ್ ಪರ್ಪಸಸ್‌ಗಾಗಿ ಮಾಡುತ್ತೇವೆ. ಹಣಕಾಸಿನಬಗ್ಗೆ ಅಲ್ಲ.

Sasthan-Kodi Fisheries Road

459. **Sri JAYAPRAKASH SHETTY** (Brahmavar).—

Will the Minister of State for Fisheries be pleased to state:—

(*a*) the reasons for the inordinate dealy in completing the Sasthan-kodi Fisheries Road which was sanctioned during the year 1960;

(*b*) the steps taken to expedite the completion of the same?

Sri K. T. RATHOD (Minister of State for Fisheries).—

(*a*) The delay in taking up the work was on account of the unsuitability of the Original alignment involving acquisition of land and consequent revision of the alignment. No sooner the fresh alignment was decided upon administrative approval was obtained, the work taken up and completed on 30-10-1971.

(*b*) In view of the reply to (*a*) above this does not arise.

ಶ್ರೀ ಜಯಪ್ರಕಾಶ ಸೆಟ್ಟಿ.—ಈ ಸಸ್ಥಾನ್-ಕೋಡಿ ಫಿಷರೀಸ್ ರಸ್ತೆಯನ್ನು ನಿರ್ಮಿಸುವುದಕ್ಕೆ ಮಂಜೂರಾಗಿದ್ದ ಹಣವೆಷ್ಟು ಮತ್ತು ಖರ್ಚಾಗಿರತಕ್ಕ ಹಣವೆಷ್ಟು ?

† ಶ್ರೀ ಕೆ ಟಿ ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿರುವಹಾಗೆ ಮೊದಲು ಈ ಕೆಲಸಕ್ಕೆ ಎಂಟು ಲಕ್ಷ ಐದು ಸಾವಿರ ರೂಪಾಯಿಗಳ ಹಣ ಮಂಜೂರಾಗಿತ್ತು. ಆದರೆ ಅಲ್ಲಿಯ ಕೆಲವು ತೊಂದರೆಗಳಿಂದ ಅದನ್ನು ಬದಲಾಯಿಸಬೇಕಾಗಿ ಬಂದು, ಮತ್ತೆ ಆ ಕೆಲಸಕ್ಕೆ ಹೊಸ ಅಂದಾಜನ್ನು ತಯಾರಿಸಿ ಆ ಕೆಲಸವನ್ನು ಕೈಗೊಳ್ಳಲಾಯಿತು. ಅದಕ್ಕೆ ತಯಾರಾದ ಹೊಸ ಅಂದಾಜದ ಪ್ರಕಾರ ಆದ ವೆಚ್ಚ ಒಂದು ಲಕ್ಷ 44 ಸಾವಿರದ 800 ರೂಪಾಯಿಗಳು. ಈಗ ಈ ಕೆಲಸವನ್ನು ಮುಗಿಸಲಾಗಿದೆ.

ಶ್ರೀ ಜಯಪ್ರಕಾಶ ಶೆಟ್ಟಿ.—ತಾ॥ 30-10-1971ಕ್ಕೇ ಕೆಲಸ ಮುಗಿಯುತೆಂದು ಹೇಳಿದ್ದರೂ ಇನ್ನೂ ಈ ಕೆಲಸ ಆಗದಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಆ ರಸ್ತೆ ಕೆಲಸ ಪೂರ್ತಿಯಾಗಬೇಕಾಗಿದ್ದರೆ ಅಲ್ಲಿ ಒಂದು ಬ್ರಿಡ್ಜಿನ ಕೆಲಸ ಬರುತ್ತೆ. ಅದಕ್ಕೆ ಸುಮಾರು 10 ಲಕ್ಷ ರೂಪಾಯಿ ಖರ್ಚುಬರುತ್ತದೆ. ಇದಕ್ಕೆ ಈಗ ಒಂದು ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿ ಈ ಕೆಲಸವನ್ನು ಪಿ. ಡಬ್ಳ್ಯು. ಡಿ. ಮೂಲಕ ಅಂಡರ್ ರೂರಲ್ ಕಮ್ಯುನಿಕೇಷನ್ ಪ್ರೋಗ್ರಾಂನಲ್ಲಿ ಮುಂದುವರಿಸಬೇಕೆಂದು ತಾರೀಕು 29-11-1972ರಲ್ಲಿ ತಿಳಿಸಿದ್ದೇವೆ, ಅವರು ಅದನ್ನು ಮಾಡುತ್ತಾರೆ.

ಶ್ರೀ ಎಸ್. ಎಂ. ಯಾಹ್ಯಾ.—ಈ ಫಿಷರೀಸ್ ರಸ್ತೆಗಳನ್ನು ಉತ್ತಮಗೊಳಿಸುವುದಕ್ಕೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು ?

ಶ್ರೀ ಕೆ.ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಹಿಂದೆ 1967ರಲ್ಲಿ ಇದನ್ನು ಸರ್ಕಾರದವರು ಮಾಡುವುದಕ್ಕಾಗುವುದಿಲ್ಲ, ಇದನ್ನು ಆಯಾಯ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡುಗಳಿಗೆ ವರ್ಗಾಯಿಸಬೇಕೆಂದು ತೀರ್ಮಾನ ಮಾಡಿ ನಮ್ಮ ಕಂಡೀಷನ್ ಪ್ರಕಾರ ಅವುಗಳಿಗೆ 500 ರೂಪಾಯಿ ಗ್ರಾಂಟನ್ನು ಕೊಟ್ಟು ಆ ಬೋರ್ಡುಗಳು 250 ರೂಪಾಯಿಗಳನ್ನು ಹಾಕಿ ಆ ರಸ್ತೆಗಳನ್ನು ಮೈಂನ್‌ಟೇನ್ ಮಾಡಬೇಕೆಂದಿತ್ತು. ಆದರೆ ಅವುಗಳಿಂದಲೂ ಇದು ಸಾಧ್ಯವಾಗಲಿಲ್ಲ. ಇತ್ತೀಚೆಗೆ ಇವುಗಳ ಮೈನ್‌ಟಿನೆನ್ಸ್ ಕೆಲಸವನ್ನು ಪಿ. ಡಬ್ಳ್ಯು. ಡಿ. ಗೆ ವಹಿಸಬೇಕೆಂದು ತೀರ್ಮಾನ ಮಾಡಿದ್ದೇವೆ, ಅವರು ಅದನ್ನು ಇನ್ನು ಮುಂದಕ್ಕೆ ನಡೆಸಿಕೊಂಡು ಹೋಗುತ್ತಾರೆ.

ಶ್ರೀ ಜಯಪ್ರಕಾಶ ಶೆಟ್ಟಿ.—ಈ ಕೆಲಸವನ್ನು ಇನ್ನೆಷ್ಟು ದಿನಗಳಲ್ಲಿ ಮುಗಿಸುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.—ಅವರು ಹಂತ ಹಂತವಾಗಿ ಅದನ್ನು ತೆಗೆದುಕೊಂಡು ಪೂರ್ತಿ ಮಾಡುತ್ತಾರೆ.

Gradation List of Assistants of M.G.S.

467. **Sri M. H. JAYAPRAKASH NARAYANA** (Sirsi).—

Will the Chief Minister be pleased to state:—

(*a*) whether the Government has finalised the Gradation List of Assistants of Mysore Government Secretariat;

(*b*) if so, when it was prepared and when it was sent to the Mysore Public Service Commission in connection with the proposal for filling up the posts of Section Officers;

(*c*) the reasons for the inordinate delay in finalising the Seniority List of the Assistants?

SRI H. M. CHANNABASAPPA (Minister for Public Works and Electricity) [On behelf of **Sri D. DEVARAJ URS**) (Chief Minister).]—

(*a*) No.

(*b*) Gradation List of Assistants is not required to be sent to the Public Service Commission.

(*c*) The Final I.S.S. List of Assistants was prepared in 1965 which reflected the position as on 1-11-1956. Regarding Assistants appointed after 1-11-1956 after fixation of Seniority, etc., of Local Candidates regularised in 1960, 1961 and 1966 the matter was taken up in 1971 and a provisional Gradation List has been circulated inviting objections.

Sri M. H. JAYAPRAKASH NARAYANA.—I am only concerned with the Gradation list not the Inter State Seniority list. What is the reason for such inordinate delay and why Gradation list is not prepared even though 14 years have elapsed, who are the persons responsible for such inordinate dealy and have the Goverument taken any action on the officers and officials who are responsible for that ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಇದಕ್ಕೆ ಯಾವ ಅಧಿಕಾರಿಗಳೂ ಜವಾಬ್ದಾರರಲ್ಲ, ಆ ಸನ್ನಿವೇಶವೇ ಜವಾಬ್ದಾರಿ. 1965ನೇ ಇಸವಿ ಆಗಸ್ಟ್‌ನಲ್ಲಿ ಒಂದು ಸೀನಿಯಾರಿಟಿ ಅಖೈರು ಪಟ್ಟಿಯನ್ನು ತಯಾರಿಸಲಾಗಿತ್ತು. ಅದಾದನಂತರ ಆಗಿದ್ದ ರೂಲ್ಸ್ ಪ್ರಕಾರ ಕೆಲವು ಜೂನಿಯರ್ ಅಸಿಸ್ಟೆಂಟ್ಸ್ ಪ್ರಮೋಷನ್ನಾಗಿ ಅಸಿಸ್ಟೆಂಟುಗಳಾದರು, ಅವರ ಜೊತೆಗೆ ಪಿ. ಎಸ್. ಸಿ. ಯಿಂದ ಕೆಲವರನ್ನು ಆರಿಸಿ ಕಳುಹಿಸಲಾಯಿತು; ಅದಾದನಂತರ ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಯವರು ಕೆಲವರನ್ನು ಕಳುಹಿಸಿದರು; ಅನಂತರ ಲೋಕಲ್ ಕ್ಯಾಂಡಿಡೇಟುಗಳಲ್ಲಿ ಕೆಲವರು ಇದಕ್ಕೆ ಸೇರಿಕೊಂಡರು. ಇವರ ಜೊತೆಗೆ ಇನ್ನು ಇತರೇ ಇಲಾಖೆಗಳಿಂದ ಡೆಪ್ಯುಟೇಷನ್ ಮೇಲೆ ಬಂದಿದ್ದವರು ಕೆಲವರು ಸೇರಿಕೊಂಡರು. ಅಂತೂ ಒಟ್ಟಿಗೆ ಇವರೆಲ್ಲರ ಒಂದು ಸೀನಿಯಾರಿಟಿ ಪಟ್ಟಿಯನ್ನು ಸಮನ್ವಯಗೊಳಿಸಿ ಅದನ್ನು ತಾ॥ 12-11- 971ರಲ್ಲಿ ಆಬ್‌ಜೆಕ್ಷನ್‌ಗಳನ್ನು ಕಾಲಫಾರ್ ಮಾಡತಕ್ಕ ಬಗ್ಗೆ ಅಡ್ವರ್‌ಟೈಜ್‌ಮಾಡಲಾಗಿದೆ. ಅದನ್ನು ನೋಡಿಕೊಂಡು ಇದರ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

Sri M. H. JAYAPRAKASH NARAYANA.—The Hon'ble Minister explained the position. If there is any complicated procedure in preparing this Gradation list, has the Government consulted the Law Department, and if so, what is its opinion ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರು ಯಾವ ಕೆಲಸವನ್ನು ಮಾಡಬೇಕಾಗಿದ್ದರೂ ಲಾ ಇಲಾಖೆಯನ್ನು ಕೇಳದೆ ಮಾಡುವುದಿಲ್ಲ. ಆ ಇಲಾಖೆ ಇರುವುದೇ ಅದಕ್ಕೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಡೆಪ್ಯುಟೇಷನ್ ಬಂದವಗನ್ನು ಮತ್ತು ಬೇರೆ ಜನರನ್ನು ಇವರಲ್ಲಿ ಸೇರಿಸಿ ಸೀನಿಯಾರಿಟಿ ಮಾಡುವಾಗ ಒಂದೇ ಆಫೀಸಿಗೆ ಸೇರಿ ಅಲ್ಲಿ ಕೆಲಸ ಮಾಡುತ್ತಿದ್ದವರಿಗೆ ಅದರಿಂದ ಅನಾನುಕೂಲವಾಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನಾಗಲೇ ಹೇಳಿದಂತೆ ಅವರೆಲ್ಲರನ್ನು ಸೇರಿಸಿ ಪಟ್ಟಿಯನ್ನು ತಯಾರಿಸಲಾಗಿದೆ. ಅದನ್ನು ಅಡ್ವರ್‌ಟೈಜ್ ಮಾಡಿದೆ. ಆಬ್‌ಜೆಕ್ಷನ್ ಬಂದಮೇಲೆ ತೀರ್ಮಾನವಾಗುತ್ತೆ.

Amendment of Police Act

508. **Sri S. M. SHEERNALY CHANDRASHEKHAR** (Hosanagar).—

Will the Chief Minister be pleased to state :—

(*a*) whether there is any proposal before Government to amend the Police Act so as to fix a time limit between placing first information report and filing a charge sheet by the Police in a Court of law ;

(*b*) if so, the action taken by the Government in this behalf ?

Sri H. M. CHANNABASAPPA (Minister for Public Works and Electricity [On helalf of) SRI DEVARAJ URS (Chief Minist‹r)]

(*a*) No.

(*b*) Does not arise in view of reply to clause (*a*).

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ.— ಎಫ್. ಐ. ಆರ್. ಕೊಟ್ಟು ಛಾರ್ಜ್‌ಷೀಟ್ ಹಾಕುವುದಕ್ಕೆ ಕಾಲವಧಿ ಜಾಸ್ತಿಯಾಗುವುದರಿಂದ ಕೆಲವು ಸಲ ತೊಂದರೆಯಾಗುವುದು. ಅಪರಾಧಿಯಲ್ಲದಿರುವವರು ಅಥವ ಅಪರಾಧಿ ಆಗಿರುವವರಿಗೆ ಕೆಲವು ಸಂದರ್ಭಗಳಲ್ಲಿ ತೊಂದರೆಯಾಗುವುದು ಛಾರ್ಜ್‌ಷೀಟ್ ಹಾಕುವವರೆಗೆ ಕೋರ್ಟಿನಲ್ಲಿ ಬೇಲ್ ಮೇಲೆ ಬಿಡುವುದಕ್ಕಾಗುವುದಿಲ್ಲ. ಪೋಲೀಸ್ ಸ್ಟೇಷನನಿಂದಲೂ ಬಿಡುವುದಿಲ್ಲ. ಇದರಿಂದ ತೊಂದರೆ ಯಾಗುವುದನ್ನು ತಪ್ಪಿಸುವಿರಾ ?

† **ಶ್ರೀ ಎಚ್. ಎಂ. ಚನ್ನಬಸಪ್ಪ.**—ಉತ್ತರ ಕೊಟ್ಟಿರುವುದು ಸರಿಯಾಗಿದೆ, ಮಾನ್ಯ ಸದಸ್ಯರು ಹೇಳುವಂಥಾದ್ದು ನಮ್ಮ ಗಮನಕ್ಕೆ ಬಂದಿಲ್ಲ. The law pertaining to investigation and charge-sheeting is Criminal Procedure Code and not the Police Act.

Sri S. M. YAHYA.—The Minister stated that the matter pertains to Criminal Procedure Code. Since the Law Commission has already recommended the matter relating to investigation and report, whether the Government would consider the recommendation of the Law Commission so far as these matters are concerned ?

Sri H. M. CHANNABASAPPA.—The question is totally different from the present question. The present question is only pertaining to amendment of Police Act. Whether Police Act to be amended on the report of the Law Commission, that is a different issue altogether.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ.—ಈಗಿರುವ ಪೋಲೀಸ್ ಆಕ್ಟಿನಿಂದ ಜನರಿಗೆ ತೊಂದರೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದನ್ನು ಸೂಕ್ತ ರೀತಿಯಲ್ಲಿ ಬದಲಾಯಿಸುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.- ಪೋಲೀಸ್ ಆಕ್ಟ್ ಈಗೇನಿದೆ ಅದರಿಂದ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈಗಿರುವುದು ಹಿನದಿನ ಕಾಲದ ಆಕ್ಟ್. ಈಗ ಆಧುನಿಕ ರೀತಿ ಯಲ್ಲಿ ಆಲ್ ಇಂಡಿಯಾ ಪೋಲೀಸ್ ಆಕ್ಟ್ ಪ್ರಕಾರ ತಿದ್ದುಪಡಿಮಾಡಲು ಪ್ರಯತ್ನ ಮಾಡುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಿರುವ ಪೋಲೀಸ್ ಆಕ್ಟಿನಿಂದ ಸಾರ್ವಜನಿಕರ ಹಿತಕ್ಕೆ ಧಕ್ಕೆ ಬಂದಿದೆ ಎಂಬುದು ಸರಕಾರದ ಗಮನಕ್ಕೆ ಬಂದಿಲ್ಲ. ಅಂಥಾದ್ದೇನಾದರೂ ಗಮನಕ್ಕೆ ಬಂದರೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಯೋಚನೆಮಾಡಲಾಗುತ್ತದೆ.

Supply of Ammonium Sulphate and Urea to Agriculturists In Belgaum Taluk

598 **Sri P. A. PAWASHE** (Uchagaon).—

Will the Minister for Agriculture and Forests be pleased to state:-

(*a*) the Government agencies through which fertilisers like Ammonium Sulphate and Urea are distributed to the Agriculturists in Belgaum Taluk;

(*b*) the quality of Ammonium Suphate and Urea distributed by these agencies during last year;

(*c*) whether the Government is aware that the quota of fertilisers released by the above agencies in Belgaum Taluk is not sufficient to meet the needs of the Agriculturists in the Taluk ?

Sri K. H. PATIL (Minister for Agriculture and Forests).—

(*a*) The Taluk and Primary Agricultural Produce Co-operative Marketing Society and Agro Kendras.

(*b*) Urea	...	550 M. Tons
Ammonium Sulphate	...	498 M. Tons

(*c*) The quota released through the above agencies represents only a part of the total allotments.

Sri P. A. PAWASHE.—May I know the number of Primary Produce Marketing Societies and the Agro Kendras through which these fertilisers are released ?

† **Sri K. H. PATIL.**—All the marketing societies are entitled to release the fertilisers; but how many Marketing Societies are there, is not known to me.

Sri P. A. PAWASHE.—To question (*c*) you have stated that the quota released through the above agencies represents only a part of total allotments. May I know what was the total allotment for the year and whether all the quota that was allotted was distributed or not ?

Sri K. H. PATIL.—The total fertiliser received by Mysore Stat from the Centre is:

Urea	...	46,555 tonnes
C. A. N.	...	9,363 tonnes
Ammonium Sulphate	...	6,055 per cent
Total	...	61,973

Out this, the Belgaum allotment is :

Urea	...	2600 tonnes,
C. A. N.	...	200 tonnes
Ammonium Sulphate	...	944
Total	...	3844

Sri P. A. PAWASHE.—Whether any quota is given to the private Agencies to distribute the fertilisers ?

Sri K. H. PATIL.—Both Taluka Marketing Societies and Agro-Kendras are distributing the fertilisers.

Yuvak Mandals in the State

607. **Sri N. B. SIRDESAI** (Khanapur).—

Will the Minister of State for Youth Services be pleased to state :—

(*a*) the number of Yuvak Mandals (Youth Clubs) in the State, Districtwise and the number of them active and inactive ;

(*b*) the financial or other assistance given by the Government for their encouragement and whether such assistance is sufficient to these institutions for taking up social activities ;

(*c*) whether Government would consider to release cultivable lands to the extent of 5 to 10 acres out of Forest or Revenue lands to the Yuvak Mandals in order to make them self-sufficient and to create a zeal for co-operative farming ;

(*d*) whether copy of the representation dated 10th November 1972 addressed to the Minister for Agriculture and Forests requesting him to consider the question of granting lands to Yuvak Mandals has been forwarded to the Minister for Youth Services for information and necessary action ?

Sri V. S. KOUJALGI (Minister of State for Youth Services).—

(*a*) 3,456.

Districtwise

1.	Dharwar	255
2.	Chickmagalur	127
3.	Shimoga	249
4.	Raichur	269
5.	South Kanara	114
6.	Mysore	247
7.	Chitradurga	180
8.	Tumkur	346
9.	Bangalore	90
10.	Kolar	1 7
11.	North Kanara	84
12.	Bijapur	323
13.	Coorg	87
14.	Bellary	120
15.	Belgaum	361
16.	Hassan	52
17.	Gulbarga	236
18.	Bidar	129
19.	Mandya	60
	Total	3,456

They are all active.

(*b*) Adequate Financial Assistance is provided.

(*c*) Government will consider the suggestion.

(*d*) Government has received the representation.

Sri N. B. SIRDESAI.—With reference to answer (*a*) may I know whether the Hon. Minister of State for Youth Services during his recent visit to the villages in the State has tried to assess the activities or inactivity of the Yuvak Mandals and has issued instructions to them for better functioning ?

† **Sri V. S. KOUJALGI.**—I have assessed the functioning of the youth clubs and I am quite happy with their present functioning.

Sri N. B. SIRDESAI. - With reference to answer (*b*) may I know the quantum of financial assistance given to each of the Yuvak Mandals ?

Sri V. S. KOUJALGI. Adequate financial assistance has been given to them.

Sri N. B. SIRDESAI.—How amount is allotted ?

Sri V. S. KOUJALGI.—It is about 2.5 lakhs.

ಒಬ್ಬ ಮಾನ್ಯ ಸದಸ್ಯರು.—ರಾಜ್ಯದಲ್ಲಿನ ಯುವಕ ಮಂಡಲಗಳು ಸುವ್ಯವಸ್ಥಿತವಾಗಿ ಜನರಿಗೆ ಸಹಾಯಮಾಡುವಂತಾಗಲು ಆ ಮಂಡಲಿಯವರಿಗೆ ಟ್ರೈನಿಂಗ್ ಕೊಡುವುದು ಯೋಗ್ಯವಲ್ಲವೇ ?

ಶ್ರೀ ಎ. ಎಸ್. ಕೌಜಲಗಿ.—ಆ ಮಂಡಲಗಳಿಗೆ ಕಡ್ಡಾಯವಾಗಿ ಯಾವ ಟ್ರೈನಿಂಗೂ ಇಲ್ಲ. ಸ್ವಾವಲಂಬಿಯಾಗಲು ಏನು ಬೇಕೋ ಅದನ್ನು ಮಾಡಿ ಸಾರ್ವಜನಿಕರಿಗೆ ಅವು ಸಹಾಯವಾಗಲು ತಕ್ಕ ಸೌಲಭ್ಯ ಕಲ್ಪಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಅಂಕಿ ಅಂಶದ ಪ್ರಕಾರ ಯುವಕ ಮಂಡಲಗಳಲ್ಲಿ ಮುಕ್ಕಾಲು ಭಾಗದವರು ಸರಕಾರಿ ಪಕ್ಷದವರಿದ್ದಾರೆ. ಅದು ಒಂದು ರೀತಿ ಸರಕಾರಿ ಮಂಡಲ ಕಾಂಗ್ರೆಸ್ ಇದ್ದ ಹಾಗಿದೆಯಲ್ಲವೇ ?

ಶ್ರೀ ಎ. ಎಸ್. ಕೌಜಲಗಿ.—ಅದು ಸತ್ಯಕ್ಕೆ ದೂರವಾದ ಮಾತು.

ಶ್ರೀ ಗೋಪಿನಾಥ ಸಾಂಧ್ರ.—ಈ ಯುವಕ ಮಂಡಲಗಳಿಗೆ ಪೌಲ್ಟ್ರಿ ಫಾರ್ಮಿಂಗ್ ಮುಂತಾದ ಉದ್ಯೋಗಗಳಿಗೆ ಅವಕಾಶ ಮಾಡಿದರೆ ಲಾಭದಾಯಕವಾಗುವುದಿಲ್ಲವೇ ?

ಶ್ರೀ ಎ. ಎಸ್. ಕೌಜಲಗಿ.—ಅಂಥ ಯೋಜನೆಗಳನ್ನು ಕೈಕೊಂಡರೆ ಸಾಧ್ಯವಿರುವ ಸಹಾಯ ಸೌಲಭ್ಯ ನೀಡುವುದಾಗಿ ಈಗಾಗಲೇ ಆದೇಶ ಕೊಡಲಾಗಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ. -(ಎ) ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲಿ ಹಾಸನ ಜಿಲ್ಲೆಯಲ್ಲಿ 52 ಯುವಕ ಮಂಡಲಗಳಿವೆಯೆಂದು ತಿಳಿಸಲಾಗಿದೆ. ಅದು ನೆಗ್ಲೆಟೆಡ್ ಜಿಲ್ಲೆಯೇ ? ಅಲ್ಲಿ ಹೆಚ್ಚು ಯುವಕ ಮಂಡಲಗಳನ್ನು ಸ್ಥಾಪಿಸಲು ಸಂಬಂಧಪಟ್ಟ ಅಧಿಕಾರಿಗೆ ತೀವ್ರವಾಗಿ ಆಜ್ಞೆ ಮಾಡುವಿರಾ ?

ಶ್ರೀ ಎ. ಎಸ್. ಕೌಜಲಗಿ.—ಇದು ಅಧಿಕಾರಿಗಳು ಸ್ಥಾಪನೆ ಮಾಡುವ ಕೆಲಸವಲ್ಲ. ಯುವಕರಿಗೆ ಪ್ರೋತ್ಸಾಹ ಕೊಡಲು ನಾವು ಸಹಾಯ ಮಾಡುತ್ತಿದ್ದೇವೆ. ಅವರು ಇದರ ಬಗ್ಗೆ ಪ್ರಯತ್ನ ಮಾಡಿದರೆ ಸಾಧ್ಯವಾದ ಸಹಾಯ ನೀಡಲಾಗುವುದು.

ಶ್ರೀ ಸಿ. ಬೈರೇಗೌಡ.—ಇಂಥ ಕಡೆ ಭೂಮಿ ಇದೆಯೆಂದು ಅನೇಕರು ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಕೊಟ್ಟರೂ ಇಲ್ಲಯವರೆಗೆ ಒಂದೂ ಕೂಡ ಅಂತಿಮವಾಗಿ ತೀರ್ಮಾನವಾಗಿಲ್ಲ. ಈಗ ಹೊಸದಾಗಿ ಅರ್ಜಿ ಸ್ವೀಕರಿಸಿ ಪರಿಶೀಲಸಿ ಅವರಿಗೆ ಜಮೀನು ಕೊಡಲು ಏರ್ಪಾಡು ಮಾಡುತ್ತೀರಾ?

ಶ್ರೀ ಎ. ಎಸ್. ಕೌಜಲಗಿ.—ಪರಿಶೀಲಿಸುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಯುವಕ ಮಂಡಲಗಳನ್ನು ಸ್ಥಾಪಿಸಲಿಕ್ಕೆ ತಾವು ಯಾವ ಆಧಾರದ ಮೇಲೆ ಫೈನಾನ್ಸಿಯಲ್ ಅಸಿಸ್ಟೆನ್ಸ್ ಅನ್ನು ಕೊಡುತ್ತೀರಿ ? ಯಾವುದಾದರೂ ಗ್ರಾಮದಲ್ಲಿ 2–3 ಯುವಕ ಮಂಡಲಗಳು ಇದ್ದರೆ ಅಂಥವರಿಗೂ ಫೈನಾನ್ಸಿಯಲ್ ಅಸಿಸ್ಟೆನ್ ಕೊಡುತ್ತೀರಾ ! ಜಿಮ್ನಾಸಿಯಂ ಅನ್ನು ಸೇರಿಸಿ.

ಶ್ರೀ ಎ. ಎಸ್. ಕೌಜಲಗಿ.—ಇದು ಜಿಮ್ನಾಸಿಯಂಗೆ ಸಂಬಂಧಪಡುವುದಿಲ್ಲ. ಧನ ಸಹಾಯವನ್ನು ಕೊಡುವುದಕ್ಕೆ ಕಾಯಿದೆ ಕಟ್ಲೆಗಳನ್ನು ಮಾಡಿದೆ, ಆ ಪ್ರಕಾರ ಕೊಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್.—ತಾಲ್ಲೂಕು ಮಟ್ಟದಲ್ಲಿರತಕ್ಕ ಯುವಕ ಮಂಡಲಗಳು ಬಹು ಮುಖ್ಯವಾಗಿ ವ್ಯವಸಾಯಕ್ಕೆ ಸಂಬಂಧಪಟ್ಟ ಯುವಕ ಮಂಡಲಿಗಳು, ಅವರಿಗೆ ವ್ಯವಸಾಯದ ಇಲಾಖೆಯವರು ಬಹು ಮುಖ್ಯವಾದ ಡೆಮಾನ್‌ಸ್ಟ್ರೇಷನ್‌ನನ್ನು, ಸಾಧನೆಗಳನ್ನು ಕೊಡುತ್ತಿದ್ದಾರೆ, ಮತ್ತು ಹಣ ಸಹಾಯವನ್ನು ಮಾಡುತ್ತಿದ್ದಾರೆ. ಅದನ್ನು ಪರಿಪೂರ್ಣವಾಗಿ ಯುವಕ ಮಂಡಲಗಳಿಗೆ ಉಪಯೋಗಿಸುವ ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಎ. ಎಸ್. ಕೌಜಲಗಿ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಕೆಲವು ಯುವಕ ಮಂಡಲಗಳಿಗೆ ಮೂರು ಎಕರೆಯವರೆಗೆ ಜಮೀನು ಕೊಡಬೇಕು ಎಂದು ಸರ್ಕಾರದ ಆದೇಶ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇದು ಇರುವುದು ನಿಜವೇ ?

ಶ್ರೀ ಎ. ಎಸ್. ಕೌಜಲಗಿ. ಜಮೀನು ಕೊಡಬೇಕು ಎನ್ನುವುದು ಪರಿಶೀಲನೆಯಲ್ಲಿದೆ.

ಶ್ರೀ ಕೆ. ಎಂ. ನಾಗಣ್ಣ.— ಮಾನ್ಯ ಕೃಷ್ಣ ಅವರ ಪ್ರಶ್ನೆಗೆ ಕಾಯಿದೆ ಕಟ್ಲೆಗಳು ಇದೆ ಎಂದು ಹೇಳಿದ್ದೀರಿ, ಅದು ಏನು ಎಂದು ತಿಳಿಸುತ್ತೀರಾ ?

ಶ್ರೀ ಎ. ಎಸ್. ಕೌಜಲಗಿ.—ಅದನ್ನು ಸದನದ ಮುಂದೆ ಇಡುತ್ತೇನೆ.

Distribution of House Sites to Houseless and Landless Persons of Belgaum District

551. **Sri P. P. HEGRE** (Chikodi).—

Will the Minister for Municipal Administration be pleased to state :—

(*a*) the total number of house sites distributed free of cost to the houseless and landless persons in Belgaum District up to the end of December 1972 (talukwise figures and in respect of Chikodi taluk villagewise figures may kindly be furniseed) ;

(*b*) whether all the houseless and landless persons have been provided with the house sites free ?

Sri B. BASAVALINGAPPA (Minister for Municipal Administration)—

(*a*) (i) 8,769.

(ii) Talukwise figures for the District and villagewise figures for the Chikodi Taluk are given in the statement appended.

(*b*) No.

STATEMENT

Showing the information regarding distribution of house sites to the landless and houseless workers in Belgaum District and also in Chikodi Taluk.

Sl. No.	Name of the Taluk	No. of sites distributed up to 31-12-1972	Sl. No.	Nameof the village	No. of plots distributed
1	2	3	1	2	3
Belgaum District			*In Chikodi Taluk* up to December 1972		
1	Belgaum ..	780	1	Sadalga ...	77
2	Khanapur ...	951	2	Karoshi ...	52
3	Hukkeri ...	729	3	Mugali ...	12
4	Bailhongal ...	1,115	4	Jainapur ...	10
5	Saundatti ...	858	5	Hattarwat ...	4
6	Ramdurg ...	758	6	Toranahalli ...	7
7	Gokak ...	966	7	Bidrolli ...	2
8	Chikodi ...	857	8	Hirekudi ...	39
9	Raibag ...	991	9	Galataga ...	48
10	Athani ...	864	10	Shiradawad ...	26
			11	Soundalga ...	20
	Total ...	8,769	12	Boragaon ...	25
			13	Shiragaon ...	15
			14	Khadaklat ...	75
			15	Adi ...	36
			16	Konganaolli ...	70
			17	Pattanakudi ..	24
			18	Bedkihal ...	79
			19	Chikodi ...	154
			20	Ankali ...	34
			21	Chikkalwal ...	20
			22	Kodani ...	17
			23	Budalmukh ...	1
			24	Budihal ...	8
			25	Pangire (B) ...	2
				Total ...	857

(SRI B. BASAVALINGAPPA)

1	2	3
	From 1st January 1973 to 28th February 1973	
1	Galataga ...	22
2	Sidnal ...	9
3	Mangur ...	33
4	Appachiwadi ...	5
5	Kurli ...	19
6	Toranahalli ...	5
7	Khajagoudanatti ...	7
8	Majalatti ...	10
9	Wadral ...	12
10	Mattiwade ...	5
11	Manganur ...	5
	Total ...	132

ಶ್ರೀ ಪಿ. ಪಿ. ಹೆಗರೆ.—ಬೆಳಗಾಂ ಜಿಲ್ಲೆಯಲ್ಲಿ 8769 ಸೈಟುಗಳನ್ನು ಹಂಚಲಾಗಿದೆ ಎಂದು ಹೇಳಿದ್ದೀರಿ, ಅದೇ ಪ್ರಕಾರ ಚಿಕ್ಕೋಡಿಯಲ್ಲಿ 857 ಮತ್ತು 132 ಸೈಟುಗಳನ್ನು ಹಂಚಲಾಗಿದೆ ಎಂದು ತಿಳಿಸಿದ್ದೀರಿ, ಅದರೊಳಗೆ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಎಷ್ಟು ನಿವೇಶನ ಹಂಚಲಾಗಿದೆಯೆಂದು ತಿಳಿಸುತ್ತೀರಾ ?

† ಶ್ರೀ ಬಿ. ಬಸವಲಿಂಗಪ್ಪ.—ನನ್ನ ಹತ್ತಿರ ಆ ವಿಷಯವಿಲ್ಲ.

ಶ್ರೀ ಪಿ. ಪಿ. ಹೆಗರೆ.—ನಿವೇಶನಗಳನ್ನು ಹಂಚುವಾಗ ಆಫೀಸರ್ಸ್ 5-10 ಗುಂಟೆ ಜಮೀನು ಇದ್ದವರಿಗೆ ನಿವೇಶನ ಕೊಡುತ್ತಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನರಿಗೆ 5-10 ಗುಂಟೆ ಅಥವಾ ಅರ್ಧ ಎಕರೆ ಒಳಗೆ ಎಲ್ಲರಿಗೂ ಇದೆ, ಚಿಕ್ಕಚಿಕ್ಕ ಮನೆಗಳೂ ಇವೆ. ಅಂಥವರಿಗೆ ನಿವೇಶನ ಕೊಡುತಾ ಇಲ್ಲಾ. ಇವರಿಗೂ ನಿವೇಶನ ಸಿಗುವಂತೆ ಸರ್ಕಾರದವರು ಏನಾದರು ಯೋಜನೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಈ ನ್ಯೂನತೆಗಳು ಸರ್ಕಾರದ ಗಮನದಲ್ಲಿವೆ. ಅದನ್ನು ಗಮನದಲ್ಲಿಟ್ಟುಕೊಂಡು ಲ್ಯಾಂಡ್‌ಲೆಸ್ ಲೇಬರರ್ಸ್ ಎನ್ನು ಇದ್ದಾರೆ ಅವರನ್ನು ಪರಿಗಣಿಸಬಹುದು ಎಂದು ನಿರ್ದೇಶನ ಕೊಟ್ಟಿದೆ.

ಒಬ್ಬ ಸದಸ್ಯರು.—(ಅ) ಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ, ಕಾರಣ ಏನು ?

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲ ಎಂದು ಹೇಳಿದೆ, ಅವರಿಗೆಲ್ಲಾ ಕೊಡುತ್ತೇವೆ, ಒಂದೇ ಸಾರಿ ನಿವೇಶನಗಳನ್ನು ಕೊಡುವುದಕ್ಕಾಗುವುದಿಲ್ಲ.

SRI B. B. SAYANAK.—On page 14 for question No. 363 it is stated that the number of house sites distributed in Belgaum is 8,351 but on page 16 the house sites distributed in Belgaum are 8,769. I want to know which is correct ?

SRI B. BASAVALINGAPPA.—This is a printing mistake.

SRI B. B. SAYANAK.—May I know the definition for landless labourer ?

Sri B. BASAVALINGAPPA.—Landless labourer means a labourer who does not possess any land. Sri Hegde complained that persons who are owning 2 guntas of land are considered to be the land owners and they are not given sites. Therefore, we have modified the Government Order including such persons who own less that 4 acres of land.

Sri B. B. SAYANAK.—My question is not answered. He simply says there is a printing mistake. I want to know which is the correct answer ?

Sri B. BASAVALINGAPPA.—The figure 8351 on page 14 is a mistake and the figure 8,769 is correct.

Sri M. S. KRISHNAN.—May I know on what basis you say that figure 8351 is wrong and the figure 8769 is correct ; Both these figures have come from the Department of your own.

Sri B. BASAVALINGAPPA.—It depends upon the question and when it is received. This figure is received after some time.

Sri M.S. KRISHNAN.—The information is that the other figure is not correct. The information has been provided by the Department up to 31-12-1972. If the information comes from different Departments I can understand. The date fixed for both is the same. When that is the position, how can it be different figures ?

Sri B. BASAVALINGAPPA.—According to information available in my file, what is provided on page 16 is correct.

MADAM SPEAKER.—Now Question Hour is over.

QUESTIONS FOR ANSWERS ON THE DAY

(But not taken up)

Distribution Of Sites to Landless and Houseless in Arsikere Taluk

299. **Sri R. PEERANNA** (Heggadadevanakote).—

Will the Minister for Municipal Administration be pleased to state :—

(*a*) the number of sites distributed in Arsikere Taluk in Hassan District during the last one year to landless and houseless ;

(*b*) of these, the number of sites given to the persons belonging to Scheduled Castes and Scheduled Tribes (Taluk-wise information may be furnished) ;

(*c*) the amount spent or given to each grantee, if any ;

(SRI PEERANA)

(*d*) of these grants, the number of persons who have been granted Government lands, Panchayat land, Municipal Land and individual Hiduvali lands (separate figures may be furnished) ;

(*e*) whether any complaints were received so far in respect of grant of these sites from any source ?

Sri B. BASAVALINGAPPA (Minister for Municipal Administration).—

(*a*) 2,780.

(*b*) 1,491.

(*c*) Rs. 1,446 has been spent for development of sites. No amount has been given to any grantee.

(*d*) Details are indicated in the statement appended.

(*e*) No.

STATEMENT

Showing the number of persons who have been granted sites in Government lands, Panchayat lands, Hiduvali lands and temple lands.

		No. of sites
1 Government lands	...	996
2 Panchayat lands	...	580
3 Hiduvali lands	...	200
4 Lands belonging to temples	...	1,004
	Total	2,780

Distribution of Sites to Siteless People in Ranebennur

464. **Sri K. B. KOLIWAD** (Ranebennur).—

Will the Minister for Municipal Administration be pleased to state :—

(*a*) the number of siteless persons in Ranebennur Municipal limits ;

(*b*) whether sites have been distributed to them ;

(*c*) if not, the difficulties coming in the way ?

Sri. B. BASAVALINGAPPA (Minister for Municipal Administration).—

(*a*) 2,584.

(*b*) No.

(*c*) Transfer of certain Government lands to Municipality is taken up by the Administrator for forming residential sites.

Bangalore Milk Dairy

704. **Sri B. BYRAPPAJI** (Turuvekere).—

Will the Minister of State for Animal Husbandry be pleased to state :—

(*a*) the area of operation fixed for supplying milk to Bangalore Dairy ;

(*b*) the quantum of milk received in the Dairy and products produced out of this milk ;

(*c*) whether it has come to the notice of the Government that it would enable the Dairy to increase its production if the present area of operation is Changed to that of 100 miles ?

Sri N. CHIKKE GOWDA (Minister of State for Animal Husbandry).—

(*a*) 60 Miles.

(*b*) About 55,000 litres of milk is received by the Dairy every day. Out of this milk, Whole milk, Double toned milk, Curds, Butter and Ghee are being prepared.

(*c*) Yes.

2-00 P. M.

Calling Attention to a Matter of Urgent Public Importance

(i) *re.* Scarcity of Kerosene and Diesel

Notice given by

Sriyuths—N. S. Gurusiddappa

T R. Shamanna

B. B. Sayanak

B. G. Banakar

B. Satyanarayana Singh

H. T. Krishnappa

B. V. Kakkilaya

U. T. Fareed

K. Subramanya Gowda

M. Veerappa Moily

Damodar Moolky

A. G. Kadgi and Smt. Addy Saldhana, and Sri N. S. Gurusiddappa was permitted to call the attention of the Minister.

Sri T. R. SHAMANNA (Fort).—I call the attention of the Minister of State for Food and Civil Supplies to the acute Scarcity of Kerosene in Nanjangud and Nagamangala Taluks, Bangalore and Belgaum cities, Dharwar, Bellary and South Kanara Districts, and to the Scarcity of diesel oil in Bellary and South Kanara District.

Smt. E. E. VAZ (Minister of State for Food and Civil Supplies).—Sir, I state as follows :—

The scarcity of kerosene oil was felt in Bangalore City and other parts of the State for a period of only 5 days from 5-2-1973 due to the following reasons :—

(i) Annual Check up and maintenance work like cleaning of Storage Tankers by Refineries resulting in non-arrival of tank-waggons from Madras, Cochin and Vizag ;

(ii) The Government of Tamil Nadu had imposed 75 per cent power cut on industries including continuous processing industries ;

(iii) 25 per cent cut in electricity in this State resulting in increase in kerosene consumption ;

(iv) Short supply of coal for domestic purposes because of the disturbances in Vijayawada region in Andhra Pradesh. With coal not being available, normal users of coal took to the use of kerosene as a substitute ;

(v) Purchases by domestic consumers larger quantities of kerosene than their actual requirements due to sheer apprehension that kerosene might not be available for a longer period.

2. The point for supply of kerosene oil to Bangalore Region which includes the Districts of Bangalore, Kolar, Shimoga, Mysore, Chitradurga, Mandya and Tumkur is Madras. The distribution of kerosene oil in these 7 Districts has been for the past few days on an average 224 Kilo litres per day. Before the 25 per cent cut in the consumption of electricity, the consumption of kerosene in these 7 Districts was around 180 Kilo litres per day. Consequent to the cut in the consumption of electricity, public have changed over to the use of kerosene oil, and now it is in the neighbourhood of 240 Kilo litres per day. At present, the supply is being made at the rate of 224 Kilo litres per day to the Bangalore Region.

3. In the Districts of South Kanara, Hassan, Coorg and Chickmagalur which are attached to the Cochin Oil Refinery, there was shortage of kerosene oil for some time during this month. The reason for the short supply of kerosene was due to the fact that the Cochin Refinery has been closed for some time for the annual check-up and maintenance work. The Refinery has since gone into production and there will be no shortage of kerosene oil in these areas.

4. The point for supply of kerosene oil to Bellary District is Guntakal. This point is being catered by the Vizag Refinery. Due to low stocks of imported crude oil at Vizag Refinery, the output has been reduced. Nevertheless, the Vizag Refinery has been doing its best to see that the flow of these essential commodities into the Bellary District is maintained. As on 14-3-1973, there was a stock of 45 Kilo litres of kerosene oil in Bellary District.

5. Belgaum and Gulbarga Revenue Divisions are under the jurisdiction of the District Manager, Indian Oil Corporation, Belgaum Division, Hindwadi, Belgaum. Supplies of kerosene oil to these Depots are made from the Indian Oil Corporation, Goa Region. The shortage of kerosene oil in the District of Dharwar was felt during the second week of February, 1973 as the wholesalers in Dharwar and Hubli had received only a stock of 2,29,000 litres of kerosene oil upto 14-2-1973, as against the normal receipt of more than 9,00,000 litres of kerosene oil per month. This shortage was mainly due to short supply of kerosene oil by the ESSO Company. BurmahShell Company, Punjim, Goa also caters to the needs of this area. The shortage of kerosene oil in this Division was felt due to delay in arrival of Ocean Tankers at Vasco Terminal, Goa. Now the situation is not alarming owing to equitable distribution of kerosene oil amongst the consumers for domestic purpose.

6. The State Government moved swiftly and took all possible steps for improving kerosene supply position in Bangalore City and other parts of the State. The Government of Tamil Nadu who were also approached agreed to reduce the power cut to 10 per cent on I. O. C's Installations in Madras, which would ensure regular movement of kerosene and other petroleum products to Bangalore, Mysore and Shimoga Regions. The Oil Companies were also moved to rush supplies of kerosene oil in adequate quantities to all parts of the State and in particular to the scarcity areas without any interruption. Instructions have been issued to all agents, dealers and Hawkers to supply enough quantity of kerosene oil every day, except public holidays, to all the parts of Bangalore City. The Deputy Commissioners of Districts have been specially requested to see that whatever quantity that is available to the Districts, is distributed equitably and promptly to consumers in the areas.

7. Regarding Diesel Oil, in the Districts of South Kanara, Hassan, Coorg and Chickmagalur which are attached to the Cochin Oil Refinery, there was shortage of Diesel for some time during this month. The reason for the short supply of diesel was due to the fact that the Cochin Refinery had been closed for some time for the annual check up and maintenance work. The Shortage was also due to the fact that the demand for diesel oil has out-stripped the supply. Besides, on account of power-cut imposed in the State, a good number of generating sets have been installed in the State, and

(SMT. E. E. WAZ)

due to this consumption of Diesel Oil has gone up considerably. The Cochin Refinery has since gone into production and there will be no shortage of diesel in the Districts of South Kanara, Hassan, Coorg and Chickmagalur. The Oil Companies including the Indian Oil Corporation have been specially requested to see that there will be steady and adequate flow of Diesel Oil into these Districts. The Companies are making all out efforts to see that it is done.

8. The point for supply of diesel oil, low speed diesel oil and furnace oil to Bellary District is Guntakal. This point is being catered by the Vizag Refinery. Due to low stock of imported crude oil at Vizag Refinery, the out put there, has been reduced. Nevertheless, the Vizag Refinery has been doing its best to see that the flow of these essential commodities into Bellary District is maintained. There is no shortage of petrol.

9. The Oil Companies have been requested to make all efforts to see that the supply of these essential commodities to Bellary District is maintained without any interruption.

Sri T. R. SHAMANNA.—Madam, after I gave this Call Attention Notice, I am glad to state here that the position in Bangalore City is very much better than in Madras or Madura or any other State, because scarcity conditions there are worse than in Bangalore City. But may I ask as to why there is this sort of trouble for this kerosene from time to time ? Can some arrangement be not done for storing and making up the deficiencies when there are scarcity conditions ? And, furthermore, you have stated that one of the main reasons for the shortage of supply is due to difficulties of supply from oil refineries. Cannot the State urge and get an Oil Refinery for Mysore State so that we may not find these difficulties now and then ?

Smt. E. E. VAZ.—The hon. Member has made a very good suggestion for consideration, but, as we all know, sometimes, there will be disruption of the in-coming wagons and one or the other of the refineries by turns close down, for annual maintenance and cleaning and as such, there is bound to be disruption in the regular supply. Government is taking every step to see that the minimum requirements are met.

I express my thanks to the hon. Member for the kind compliment that he has paid to the Government.

ಶ್ರೀ ದಾಮೋದರ್ ಮುಲ್ಕಿ (ಮೂಡಬಿದ್ರೆ).—ಈ ಷಾರ್ಟೇಜ್‌ಗೆ ಕೆಲವು ಕಾರಣಗಳನ್ನು ಕೊಟ್ಟಿದ್ದೀರಿ. ಒಂದು ಪವರ್ ಕಟ್ ಮಾಡಿದ್ದಾರೆ ಇದಕ್ಕೆ ಕಂಪ್ಲೀಟ್ ರಿಯಾಯಿತಿ ಕೊಡುವಂತೆ ಕೇಳಿಕೊಳ್ಳುತ್ತೀರಾ ? ಸೌತ್ ಕೆನರಾದಲ್ಲಿ ಡೀಸೆಲ್ ಮತ್ತು ಕೆರೋಸಿನ್ ಷಾರ್ಟೇಜ್ ಆದದ್ದು ಕೊಚ್ಚೀನ್ ಆಯಿಲ್ ರಿಫೈನರಿ ಆನ್ಯೂಲ್ ಚೆಕ್ ಅಪ್‌ನಿಂದ ಆದದ್ದು ಎಂದು ಗೊತ್ತಾಗಿದೆ. ಅದು ಈ ವರ್ಷ ಹೊಸದೇನು ಅಲ್ಲ. ವರ್ಷಂಪ್ರತಿ ಇದ್ದೇ ಇರುತ್ತದೆ. ಈ ವರ್ಷ ಮಾತ್ರ ಷಾರ್ಟೇಜ್ ಆಗಲು ಕಾರಣವೇನು ? ಇಂಡಿಯನ್ ಆಯಿಲ್ ಕಂಪನಿಯವರಿಗೆ ಸಪ್ಲೈ ಮಾಡುವುದಕ್ಕೆ ಹೇಳದ್ದೆ

ವೆಂದು ಹೇಳಿದ್ದೀರಿ. ಇಂಡಿಯನ್ ಆಯಿಲ್ ಕಂಪನಿಯವರು ಸೌತ್‌ಕೆನರಾದಲ್ಲಿ ಲಾರಿಯವರು ಡೀಸೆಲ್ ಕೇಳಿದರೆ ಅವರು ನಮ್ಮ ಕಸ್ಟಮರ್ಸ್‌ಗೆ ಮಾತ್ರ ಕೊಡುತ್ತೇವೆ ಉಳಿದವರಿಗೆ ಕೊಡುವುದಿಲ್ಲ. ವೆಂದು ಹೇಳುತ್ತಾರೆ. ಲಾರಿಯವರು ಕ್ಯೂ ನಿಲ್ಲಿಸಿದ್ದಾರೆ. ಸೌತ್‌ಕೆನರಾದಲ್ಲಿ ಅನೇಕ ನ್ಯಾಷನಲ್ ಪ್ರಾಜೆಕ್ಟ್ ಇರುವ ಕಾರಣ ಬಹಳಷ್ಟು ಲಾರಿಗಳು ಕೆಲಸ ಮಾಡುವುದು ಏಪ್ರಿಲ್ ಮತ್ತು ಮೇ ನಲ್ಲಿ ಮಾತ್ರ ನಂತರ ಅಲ್ಲಿ ಆಗುವುದಿಲ್ಲ. ಅವು ಒಂದು ದಿವಸ ನಿಂತು ಬಿಟ್ಟರೆ 3—4 ಸಾವಿರ ಜನರಿಗೆ ಕೆಲಸವಿಲ್ಲದಂತೆ ತೊಂದರೆಯಾಗುತ್ತದೆ. ಅಲ್ಲಿನ ಪರಿಸ್ಥಿತಿ ಇವೊತ್ತಿನವರೆಗೂ ನನಗೆ ತಿಳಿದಮಟ್ಟಿಗೆ ಹೆಚ್ಚಿನ ಲಾರಿಗಳಿಗೆ ಕೆಲಸವಿಲ್ಲದಂತಾಗಿದೆ. ಈ ಕಾರಣದಿಂದ ಫರ್ಟಿಲೈಸರ್ ಮತ್ತು ಅರ್ಬರ್ ಪ್ರಾಜೆಕ್ಟ್ ನಿಂತುಹೋಗುವ ಹಾಗೆ ಆಗಿದೆ. ಇದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀಮತಿ ಇ. ಇ. ವಾಜ್.—ಇಷ್ಟು ವರ್ಷಗಳಿಂದ ಇದ್ದದ್ದು ಈ ವರ್ಷ ಜನರಿಗೆ ತೊಂದರೆ ಕಂಡುಬರುವುದಕ್ಕೆ ಕಾರಣ ನಮ್ಮ ಸ್ಟೇಟ್‌ನಲ್ಲಿ 25 ಪರ್ಸೆಂಟ್ ಪವರ್ ಕಟ್ ಮಾಡಿದ ಕಾರಣ ಜನರೇಟರ್ಸ್‌ಗಳಿಗೆ ಡೀಸೆಲ್ ಉಪಯೋಗಿಸುವುದು, ಇದೂ ಅಲ್ಲದೆ ಸಾವಿರಾರು ಪಂಪುಸೆಟ್ಟುಗಳಿಗೆ ಎಲೆಕ್ಟ್ರಿಸಿಟಿ ಫೇಲ್ಯೂರ್ ಆಗಿರುವುದರಿಂದ ಡೀಸೆಲ್ ಉಪಯೋಗ ಮಾಡುವುದರಿಂದ ಡೀಸೆಲ್‌ನ ಕೊರತೆ ಉಂಟಾಗುವುದಕ್ಕೆ ಕಾರಣವಾಗಿದೆ. ಮತ್ತು ಮದ್ರಾಸ್‌ನಲ್ಲೂ ಕೂಡ ಪವರ್ ಕಟ್ ಆದ್ದರಿಂದ ಅಲ್ಲಿ ಡೀಸೆಲ್‌ನ ಉತ್ಪಾದನೆಯೂ ಕಡಿಮೆಯಾಗಿ ಇಷ್ಟು ದಿವಸ ಬರಲಿಕ್ಕೆ ಆಗಲಿಲ್ಲ. ಮತ್ತು ಸಪ್ಲೈ ಕೂಡ ನಮಗೆ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಆಯಿತು. ಆ ರೀತಿ ನಮಗೆ ಸಪ್ಲೈ ಕಡಿಮೆ ಬಂದದ್ದರಿಂದ ಇಲ್ಲಿ ಈರೀತಿ ತೊಂದರೆಗಳು ಬರಲಿಕ್ಕೆ ಕಾರಣವಾಯಿತು.

Sri B. B. SAYANAK.—This Government is for poor people and their slogan is Garibi Hatao. When there is scarcity for kerosene and power is also cut, and when there was no kerosene for more than 20 days, will it not be a harassment to the poor people and why Government had not taken immediate steps to supply kerosene to poor people?

Smt. E. E. VAZ.—There cannot be stoppage of supplies for 20 days. If it has happened in any place, I am very sorry, if the Hon'ble Member brings it to my notice, I will see that kerosene is rushed to that place. Otherwise, every effort is made to give equal distribution to all parts of the State.

Sri B. SATYANARAYAN SINGH.—So far as Bellary is concerned, it is stated that the supply point is Guntakal which is fed from the Vizag Refinery and it is also stated that there is [illegible] of imported crude oil. I want to know what steps are taken to bring this matter to the notice of the Government of India. I have come from [illegible] yesterday and the transport of iron ore is completely paralysed. I want to know, whether Government is making any arrangement to rush diesel oil immediately to Bellary. The supply of kerosene in Bellary is better.

Smt. E. E. VAZ.—There has been a little less supply from Vizag and as such Mysore Government has moved the Centre to supply 1200 kilo litres at least per month.

Sri M. S. KRISHNAN.—The Hon'ble Minister was pleased to state that there is enough kerosene and diesel for the use of *bona fide* consumers and for industries ; Is it not a fact that the Government has issued an order in February 1973 that the quota for industries would be cut to the extent of 50 per cent of kerosene that they were getting ? Am I to take from your answer that you are going to restore that cut or it has already been restored ?

Smt. E. E. VAZ.—The needs of common man and domestic consumption will be met first. Then only the question of supply to the industries will come. It will be restored to industries when the supply position is better.

Sri H. T. KRISHNAPPA.—May I know what is the normal requirements of kerosene of Nagamangala, and is it not a fact that in place of 72 kilo litres which is the normal requirements of Nagamangala, there was a supply of only 4 kilo litres during the last month ?

Smt. E. E. VAZ.—Government has moved the oil companies and oil agents in Bangalore to make proper supplies to Nagamangala.

Sri H. T. KRISHNAPPA.—I want to know whether it is a fact that there was only a supply of 4 kilo litres as against 72 kilo litres which is its normal requirement ?

Sri E E. VAZ.—I will verify that. But when there is shortage of the commodity, lesser quota has got to be supplied to all the districts.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಈಗಾಗಲೇ ನಮ್ಮ ರಾಜ್ಯದಲ್ಲಿ ರಾಜ್ಯಾದ್ಯಂತ ಪರೀಕ್ಷೆಗಳು ಶುರುವಾಗಿವೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಓದುವುದಕ್ಕೆ ತೊಂದರೆಯಾಗಿದೆ ಕಾರಣ ಒಂದು ಕಡೆ ಸೀಮೆಎಣ್ಣೆಯ ಅಭಾವ ಇದೆ, ಇನ್ನೊಂದು ಕಡೆ ಶ್ರೀಮಾನ್ ಚನ್ನಬಸಪ್ಪನವರು ವಿದ್ಯುಚ್ಛಕ್ತಿ ಹೆಚ್ಚು ಉಪಯೋಗಿಸಬಾರದು ಎಂದು ಮಾಡಿದ್ದಾರೆ. ಆದುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಕ್ಷಣವೇ ಅವರಿಗೆ ಬೇಕಾಗುವಷ್ಟು ಸೀಮೆಎಣ್ಣೆಯನ್ನು ಒದಗಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಆ ಬಗ್ಗೆ ಆದಷ್ಟು ಜಾಗ್ರತೆ ಸೂಚನೆ ಕೊಡಲಿಕ್ಕೆ ಏರ್ಪಾಡು ಮಾಡುತ್ತೇನೆ. ಮತ್ತು ಖಾಸಗಿ ಮನೆಗಳಲ್ಲಿದ್ದವರು ಸ್ವಲ್ಪ ಜಾಗ್ರತೆ ವಹಿಸಿಕೊಂಡು ಅವರ ಮಕ್ಕಳಿಗೆ ಓದಲಿಕ್ಕೆ ಅನುಕೂಲವಾಗುವಂತೆ ಕರೆಂಟನ್ನು ಹೊಂದಿಸಿಕೊಳ್ಳುವುದು ಒಳ್ಳೆಯದು.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಪ್ರತಿ ವರ್ಷವೂ ಈ ಸೀಮೆಎಣ್ಣೆ ಅಭಾವ ಬರುತ್ತಿದೆ, ಆದರೆ ಈ ವರ್ಷ ಇದರ ಜೊತೆಗೆ ಡೀಸಲ್ ಆಯಿಲ್‌ಗೂ ಕೂಡ ಅಭಾವ ಬಂದಿದೆ. ಆದುದರಿಂದ ಕೃತಕ ಅಭಾವ ಬರದೇ ಇರುವ ಹಾಗೆ ಈ ಬಗ್ಗೆ ಏನಾದರೂ ಒಂದು ಶಾಶ್ವತವಾದ ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಏನಾದರೂ ಒಂದು ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳುವಂತೆ ಏರ್ಪಾಡು ಮಾಡುತ್ತೇವೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ವಿದ್ಯುಚ್ಛಕ್ತಿ ಮಂತ್ರಿಗಳು ಹಾಸ್ಟಲುಗಳಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಗೆ ಸಾಕಷ್ಟು ಪವರ್ ಕೊಡುವಂತೆ ಏರ್ಪಾಡು ಮಾಡಿದ್ದಾರೆ, ಆದರೆ ಮನೆಗಳಲ್ಲಿ ಓದುವ ಹುಡುಗರಿಗೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಮನೆಗಳಲ್ಲಿರುವ ಹುಡುಗರು ಸೀಮೆಯೆಣ್ಣೆ ಬುಡ್ಡಿ ಇಟ್ಟುಕೊಂಡು ಓದೋಣ ಎಂದರೆ ಸೀಮೆಯೆಣ್ಣೆಗೂ ಕೂಡ ತೊಂದರೆ ಬಂದಿದೆ. ಸೀಮೆಯೆಣ್ಣೆ ಬರುವ ಮೊದಲು ಹಿಂದಿನ ಕಾಲದಲ್ಲಿ ಹರಳೆಣ್ಣೆ ದೀಪ ಇಟ್ಟುಕೊಂಡು ಓದುತ್ತಿದ್ದರು. ಈಗ ಸೀಮೆಯೆಣ್ಣೆ ಬಂದಮೇಲೆ ಅದನ್ನು ಬಿಟ್ಟು ಬಿಟ್ಟಿದ್ದಾರೆ. ಆದುದರಿಂದ ಈ ಸಭೆಯಲ್ಲಿ ಆಹಾರ ಸಚಿವೆಯರು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಇರುವುದರಿಂದ ವಿದ್ಯಾರ್ಥಿಗಳಿಗೆ ಓದುವುದಕ್ಕೆ ಈ ಸಂದರ್ಭದಲ್ಲಿ ಅವರಿಗೆ ಸೀಮೆಯೆಣ್ಣೆ ಒದಗಿಸುವ ಇಲ್ಲವೇ ವಿದ್ಯುಚ್ಛಕ್ತಿ ಒದಗಿಸುವ ಏನಾದರೂ ಒಂದು ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಹಿಂದಿನ ಕಾಲದಲ್ಲಿ ಹರಳೆಣ್ಣೆ ದೀಪ ಇಟ್ಟು ಏನು ವಿದ್ಯಾಭ್ಯಾಸ ಮಾಡುತ್ತಿದ್ದರೋ ಆರೀತಿ ಹರಳೆಣ್ಣೆ ದೀಪ ಇಟ್ಟುಕೊಂಡು ಓದುವಂತೆ ಸಲಹೆ ಮಾಡುವುದು ಒಳ್ಳೆಯದು ಎಂದು ನನಗೆ ಕಾಣುತ್ತದೆ.

Schedule of Additional Demands for Grants for 1972-73 Second and final instalment.

Presentation

Sri M. Y. GHORPADE (Minister for finance).—I present the Statement showing the schedule of Additional Demands for the year 1972-73 from 1st April 1972 to 31st March 1973, the second and final Instalment, as required under 205 (1) of the Constitution of India.

MADAM SPEAKER.—Statement presented.

Reported Disturbances at Haliyal.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಶ್ರೀಮಾನ್ ಬಸವಲಿಂಗಪ್ಪನವರು ಭಾಗವಹಿಸಿದ್ದ ಹಳಿಹಾಳ್‌ನ ಒಂದು ಸಭೆಯಲ್ಲಿ ದೊಡ್ಡಗಲಾಟೆಯಾಗಿ ಕಲ್ಲು ತೂರಾಟವಾಯಿತು ಎಂದು ಪತ್ರಿಕೆಯಲ್ಲಿ ಬಂದಿದೆ. ಮತ್ತು ಅವರು ಪೋಲೀಸ್‌ನವರ ಬಂದೋಬಸ್ತಿನಿಂದ ಬರಬೇಕಾಯಿತು ಎಂದು ಸುದ್ದಿ ಬಂದಿದೆ. ಈ ಸಭೆಯಲ್ಲಿ ಅವರ ಮುಖ ನೋಡಿದರೆ ಅವರು ಚೆನ್ನಾಗಿದ್ದಾರೆ ಎಂದು ಕಾಣುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಆರೋಗ್ಯವಾಗಿದ್ದಾರೆಯೇ ಎನ್ನುವುದನ್ನು ತಿಳಿಸಬೇಕು.

ಅಧ್ಯಕ್ಷರು.—ಅವರನ್ನು ನೋಡಿದರೆ ಆರೋಗ್ಯವಾಗಿದ್ದಾರೆ ಎನ್ನುವುದು ಕಾಣುತ್ತಾ ಇಲ್ಲವೇ?

Allotment of time for General Discussion on Budget

ಅಧ್ಯಕ್ಷರು.—ಈವೊತ್ತಿನ ದಿವಸ ನಡೆಯುತ್ತಾ ಇರತಕ್ಕಂಥ ಚರ್ಚೆ ಈವೊತ್ತು ಮುಗಿದು ನಾಳೆ ಚರ್ಚೆಗೆ ಉತ್ತರ ಶುರುವಾಗ ಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ದಯವಿಟ್ಟು ಕ್ಷಮಿಸಬೇಕು ಏತಕ್ಕೆಂದರೆ ಇದಕ್ಕಾಗಿ ಇಟ್ಟಿದ್ದ ಕಾಲವನ್ನು ಎರಡು ದಿವಸ ಬೇರೆ ಕಾರ್ಯಕಲಾಪಗಳಿಗೆ ಉಪಯೋಗಿಸಿಕೊಂಡಿದೆ. ಆದುದರಿಂದ ಈ ಎರಡು ದಿವಸಗಳನ್ನು ಕೂಡಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮತ್ತು ಇದಕ್ಕೆ ಸರ್ಕಾರದ ಉತ್ತರವನ್ನು ಗುರುವಾರ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಆಮೇಲೆ ಪುನಃ ಇದರ ಬಗ್ಗೆ ಚರ್ಚೆ ಮಾಡೋಣ.

Taking up some Notices.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ಕಳೆದ ಅಧಿವೇಶನದಲ್ಲಿ ಕೆಲವು ಗಮನ ಸೆಳೆಯುವ ಸೂಚನೆಗಳನ್ನು ಕೊಟ್ಟಿದ್ದೆ. ಒಂದೂ ಬರಲಿಲ್ಲ. ರೂಲ್ 312 ರ ಪ್ರಕಾರ ಒಂದು ವಿಷಯವನ್ನು ಪ್ರಸ್ತಾಪ ಮಾಡಲು ಕೊಟ್ಟಿದ್ದೆ. ಅದು ಕೂಡ ಬಂದಿಲ್ಲ.

ಅಧ್ಯಕ್ಷರು.—ಈ ಅಧಿವೇಶನ ಮುಗಿಯುವುದರೊಳಗಾಗಿ ಬರುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾನು ರೂಲ್ 177 ರ ಪ್ರಕಾರ ಒಂದು ಹಕ್ಕುಬಾಧ್ಯತಾ ನಿರ್ಣಯವನ್ನು ಕಳುಹಿಸಿದ್ದೆ.

ಅಧ್ಯಕ್ಷರು.—ನನಗೆ ಬಂದಿದೆ ; ಅದರ ಬಗ್ಗೆ ಯೋಚಿಸುತ್ತೇನೆ. ಮಾನ್ಯ ಸದಸ್ಯರು ನನ್ನ ಛೇಂಬರಿನಲ್ಲಿ ಬಂದು ಕಾಣಬಹುದು.

ಶ್ರೀ ಟಿ. ಆರ್. ಶಾಮಣ್ಣ.—ಬೆಂಗಳೂರು ನಗರದಲ್ಲಿರುವ ಕ್ಲಿಯರಿಂಗ್ ಹೌಸ್ ಮುಚ್ಚಿದ್ದು ನಾಗರಿಕರಿಗೆ ತೊಂದರೆಯಾಗಿದೆ. ಅದರ ಬಗ್ಗೆ ಒಂದು ನೋಟೀಸ್ ಈ ದಿನ ಕಳುಹಿಸಿದ್ದೇನೆ.

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

Budget Estimates for 1973-74—General Discussion (*Debate Continued*)

† **ಶ್ರೀ ಕೆ. ಪುಟ್ಟಸ್ವಾಮಿ (ಚಾಮುಂಡೇಶ್ವರಿ).**—ಮಾನ್ಯ ಅಧ್ಯಕ್ಷರೇ, 1973-74ನೇ ಸಾಲಿನ ಆಯವ್ಯಯ ಅಂದಾಜನ್ನು ನಾನು ಪುಷ್ಟೀಕರಿಸುತ್ತ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಕಾಲ ಮಿತಿ ಇರುವುದರಿಂದ ನಾನು ಹೆಚ್ಚಿನ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ನಮ್ಮ ದೇಶದ ರಾಜಕೀಯ ಪರಿಸ್ಥಿತಿಯ ವಿಚಾರವಾಗಿ ಕೆಲವು ಮಾತನ್ನು ಆಡುವುದು ಅವಶ್ಯಕ ಎಂದು ನನಗಾದರೂ ಭಾಸವಾಗುತ್ತದೆ.

ಮಾನ್ಯ ಅಧ್ಯಕ್ಷರೇ, 1967ನೇ ಇಸವಿಯಲ್ಲಿ ಸಾರ್ವತ್ರಿಕ ಚುನಾವಣೆಯಾದ ವೇಳೆ ನಮ್ಮ ದೇಶದ ಹಲವು ರಾಜ್ಯಗಳಲ್ಲಿ ಸ್ಥಿರವಾದ ಸರ್ಕಾರಗಳು ಬರುವುದಕ್ಕೆ ಸಾಧ್ಯವಾಗದೆ ಅಲ್ಲಿನ ಜನರಿಗೆ ಬಹಳ ತೊಂದರೆಯಾದದ್ದು ನಮಗೆಲ್ಲರಿಗೂ ಜ್ಞಾಪಕವಿದೆ. ಸುದೈವದಿಂದ ನಮ್ಮ ರಾಜ್ಯದಲ್ಲಿ ಆ ಪರಿಸ್ಥಿತಿ ಒದಗಿರಲಿಲ್ಲ. ಬಹುಶ: ಅದೇ ರಾಜಕೀಯ ಪರಿಸ್ಥಿತಿ ಮುಂದುವರಿದಿದ್ದರೆ 1972ನೇ ಇಸವಿಯಲ್ಲಿ ಚುನಾವಣೆಯಾದಾಗ ಮೈಸೂರು ರಾಜ್ಯದಲ್ಲಿ ಅದೇ ಪರಿಸ್ಥಿತಿ ಬರಬಹುದಾಗಿತ್ತು ಅಥವಾ ಇನ್ನೂ ಎಲ್ಲೆಲ್ಲಿ ಸ್ಥಿರವಾದ ರಾಜಕೀಯ ಪರಿಸ್ಥಿತಿ ಇತ್ತೋ ಅಲ್ಲೂ ಕೂಡ ಅಸ್ಥಿರವಾದ ರಾಜಕೀಯ ಪರಿಸ್ಥಿತಿ ಬರುವ ಸಂಭವವಿತ್ತು. ಈ ಮಧ್ಯೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನಲ್ಲಿ ಒಡಕು ಬಂದು ಶ್ರೀಮತಿ ಇಂದಿರಾಗಾಂಧಿಯವರ ದಿಟ್ಟ ರಾಜಕೀಯ ನಿಲುವಿನ ದೆಸೆಯಿಂದ ನಮ್ಮ ದೇಶದ ರಾಜಕೀಯ ಪರಿಸ್ಥಿತಿ ಬಹಳವಾಗಿ ಬದಲಾವಣೆಯಾಯಿತು. ಅವರು ದೇಶದ ಜನರ ಮುಂದೆ ಇಟ್ಟ ಧ್ಯೇಯ ಧೋರಣೆಗಳ ದೆಸೆಯಿಂದ ನಮ್ಮ ದೇಶದಾದ್ಯಂತ ಎಲ್ಲ ರಾಜ್ಯಗಳಲ್ಲಿಯೂ ಕೂಡ ಭದ್ರವಾದ ಸರ್ಕಾರ ಬರುವುದಕ್ಕೆ ಸಾಧ್ಯವಾಯಿತು. ಅದೆಲ್ಲಕ್ಕಿಂತಲೂ ಹೆಚ್ಚಾಗಿ ಕೇಂದ್ರದಲ್ಲಿ ಸಂಸತ್ತಿನಲ್ಲಿ ಮೂರನೇ ಎರಡು ಭಾಗಕ್ಕಿಂತಲೂ ಹೆಚ್ಚು ಇಂಧಿರಾಗಾಂಧಿಯವರಿಗೆ ಬೆಂಬಲ ಸಿಕ್ಕಿದ ಕಾರಣದಿಂದ ರಾಜ್ಯಾಂಗದಲ್ಲಿ ಬದಲಾವಣೆಯಾಗುವುದಕ್ಕೂ, ಬದಲಾವಣೆಗಳನ್ನು ಮಾಡುವುದಕ್ಕೂ ಸಾಧ್ಯವಾಯಿತು. ರಾಜ್ಯಾಂಗದಲ್ಲಿ ಬದಲಾವಣೆಗಳಾಗುವುದರ ದೆಸೆಯಿಂದ ಇಂದಿರಾಗಾಂಧಿಯವರು ದೇಶದಲ್ಲಿ ಯಾವ ಒಂದು ಆರ್ಥಿಕ ಧೋರಣೆಯನ್ನು ತಾಳಿದರೋ ಆ ಆರ್ಥಿಕ ಧೋರಣೆ ಅನುಷ್ಠಾನಕ್ಕೆ ಬರುವುದಕ್ಕೆ ಬೇಕಾದಂಥ ರಾಜ್ಯಾಂಗ ತಿದ್ದುಪಡಿಗಳನ್ನು ಕೂಡ ಮಾಡುವುದಕ್ಕೆ ಅನುಕೂಲವಾಯಿತು. ಬಹುಶಃ ಇಂದಿರಾಗಾಂಧಿಯವರು ರಾಜಕೀಯದಲ್ಲಿ ಆ ದಿಟ್ಟ ನಿಲುವು ತಾಳದೆ ಇದ್ದಿದ್ದರೆ, ಆರ್ಥಿಕ ಧೋರಣೆಯನ್ನು ತಾಳದೆ ಇದ್ದಿದ್ದರೆ, ನಮ್ಮ ದೇಶದ ಬಹು ರಾಜ್ಯಗಳಲ್ಲಿ ಸ್ಥಿರವಾದ ಸರ್ಕಾರ ಬರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. 1967 ರಿಂದ 1972ರವರೆಗೆ ಪಶ್ಚಿಮ ಬಂಗಾಳದಲ್ಲಿ ಎಂಥ ಪ್ರಕ್ಷುಬ್ಧ ಪರಿಸ್ಥಿತಿ ಇತ್ತು ಎನ್ನುವುದು ನಮಗೆಲ್ಲ ಜ್ಞಾಪಕವಿದೆ. ಆ ಪರಿಸ್ಥಿತಿ ಎಲ್ಲ ನಿವಾರಣೆಯಾಗಿ, ದೇಶಾದ್ಯಂತ ಕೇಂದ್ರದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಕೂಡ ಭದ್ರವಾದ ಸರ್ಕಾರಗಳು ಬಂದು ಇಂದಿರಾಗಾಂಧಿಯವರು ಯಾವ ಆರ್ಥಿಕ ನಿಲುವನ್ನು ತಾಳಿದರೋ ಆ ಆರ್ಥಿಕ ನಿಲುವನ್ನು ಅನುಷ್ಠಾನಕ್ಕೆ ತರುವುದಕ್ಕೆ ಒಳ್ಳೆಯ ವಾತಾವರಣ ಕಲ್ಪನೆಯಾದದ್ದು ಶ್ರೀಮತಿ ಇಂದಿರಾಗಾಂಧಿಯವರ ಧೈರ್ಯ ಮತ್ತು ಸಾಹಸಪೂರ್ಣವಾದ ರಾಜಕೀಯ ಹೆಜ್ಜೆಯಿಂದ ಎನ್ನುವುದನ್ನು ಈ ಸಮಯದಲ್ಲಿ ನಾವೆಲ್ಲರೂ ಸ್ಮರಿಸಿಕೊಳ್ಳಬೇಕು. 1971ರಿಂದೀಚೆಗೆ ಪರಿಸ್ಥಿತಿ ಬದಲಾವಣೆಯಾಗಿದೆ. ರಾಜ್ಯಾಂಗ ಶಾಸನದಲ್ಲಿ ಬೇಕಾದಂಥ ತಿದ್ದುಪಡಿಗಳೆಲ್ಲ ಆಗಿ ದೇಶಾದ್ಯಂತ ಎಲ್ಲ ಸರ್ಕಾರಗಳೂ ಕೂಡ ಆರ್ಥಿಕ ಪರಿಸ್ಥಿತಿಯ ಬದಲಾವಣೆಗೆ ಬೇಕಾದಂಥ ಕಾನೂನುಗಳನ್ನು ಮಾಡುವುದಕ್ಕೆ ಹಾಗೂ ಆಡಳಿತ ದೃಷ್ಟಿಯಿಂದ ಮಾಡಬೇಕಾದ ಬದಲಾವಣೆಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೆ. ಇದಕ್ಕೆ ನಮ್ಮ ದೇಶದಲ್ಲಿರತಕ್ಕ ಎಲ್ಲ ತಿಳಿದ ಜನರ ಬೆಂಬಲವೂ ಕೂಡ ಅತ್ಯಂತಾವಶ್ಯಕ. ನಮ್ಮ ದೇಶದಲ್ಲಿ, ಮೈಸೂರು ರಾಜ್ಯದಲ್ಲಿಯೂ ಕೂಡ ಇಂಥ ದಿಟ್ಟವಾದ ಆರ್ಥಿಕ ಕ್ರಮಗಳಿಗೆ ಎಲ್ಲ ಪಕ್ಷಗಳು ಎಲ್ಲ ಪಂಗಡಗಳ ಬೆಂಬಲ ಇರುವುದನ್ನು ನೋಡಿ ನಾನು ಬಹಳ ಮೆಚ್ಚಿದ್ದೇನೆ ಮತ್ತು ಇಂಥ ಪರಿಸ್ಥಿತಿಗೆ ದೇಶದಲ್ಲಿ

ನಾವು ಏನು ನಿರೀಕ್ಷೆ ಮಾಡಿದೆವೋ ಆ ಮಟ್ಟದ ಪ್ರಗತಿ ಆಗದೆ ಇರುವುದಕ್ಕೆ ಪ್ರಕೃತಿಯ ವಿಕೋಪವೇ ಅಡ್ಡಿಯಾಗಿದೆ, ಈ ವರ್ಷದಲ್ಲಿ ಅನೇಕ ರಾಜ್ಯಗಳಲ್ಲಿ ಕ್ಷಾಮ ಪರಿಸ್ಥಿತಿ ತಲೆದೋರಿತು, ನಮ್ಮ ರಾಜ್ಯದಲ್ಲಿಯೂ ಕೂಡ ಪರಿಸ್ಥಿತಿ ಕೆಲವು ಜಿಲ್ಲೆಗಳಲ್ಲಿ ತೀರ ಹದಗೆಟ್ಟಿದೆ. ಮೂರನೇ ಒಂದು ಭಾಗದ ಜನ ವಾಸಮಾಡುವ ಪ್ರದೇಶ ಬರಗಾಲ ಪರಿಸ್ಥಿತಿಗೆ ಒಳಗಾಗಿದೆ. ಇಂಥ ಭೀಕರ ಬರಗಾಲ ಪರಿಸ್ಥಿತಿಯನ್ನು ನಮ್ಮ ಸರ್ಕಾರ ಬಹಳ ಧೈರ್ಯದಿಂದ ಆ ಸಮಸ್ಯೆಯನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡುತ್ತಿದೆ, ಆ ಪ್ರಯತ್ನಕ್ಕೆ ಕೂಡ ಸಾಕಷ್ಟು ಬೆಂಬಲ ನಮ್ಮ ದೇಶದಲ್ಲಿ ದೊರೆತಿದೆ ಎಂದು ಹೇಳುವುದಕ್ಕೆ ನನಗೆ ಸಂತೋಷ. ಆದರೂ ಅಲ್ಲಿ ಇಲ್ಲಿ ಒಡಕು ಶಬ್ದವಿದೆ. ನಾವು ಎಷ್ಟು ಮಟ್ಟದ ಸಹಕಾರವನ್ನು ಕೆಲವು ಪಕ್ಷಗಳಿಂದ ನಿರೀಕ್ಷೆ ಮಾಡುತ್ತಿದ್ದೇವೆ ಆ ಮಟ್ಟದ ಸಹಕಾರ ನಮಗೆ ದೊರೆತಿಲ್ಲ. ಇದು ಬಹಳ ವಿಷಾದಕರವಾದ ಸಂಗತಿ. ಆದರೂ ಕೂಡ ಸರ್ಕಾರ ತನ್ನ ನೀತಿಯನ್ನು ಮುಂದುವರಿಸುವುದಕ್ಕೆ, ತನ್ನ ಕಾರ್ಯಕ್ರಮಗಳನ್ನು ಮುಂದುವರಿಸುವುದಕ್ಕೆ ಬಹುಶಃ ಈಗ ಇರತಕ್ಕ ಒಂದು ಒಡಕು ಧ್ವನಿ ಅಡ್ಡಿ ಬರಲಾರದು. ಅಡ್ಡಿ ಬಂದರೂ ಕೂಡ ಅದನ್ನು ನಿವಾರಣೆ ಮಾಡಿಕೊಂಡು ಸರ್ಕಾರ ತನ್ನ ಗುರಿಯನ್ನು ಸಾಧಿಸುವುದಕ್ಕೆ ಒಳ್ಳೆಯ ವಾತಾವರಣ ನಮ್ಮ ರಾಜ್ಯದಲ್ಲಿ ಇದೆ ಎಂದು ನನಗಾದರೂ ಭಾಸವಾಗಿದೆ. ನಮ್ಮ ದೇಶದಲ್ಲಿ ಮಧ್ಯಂತರ ಚುನಾವಣೆಗಳಾದ ಮೇಲೆ ಅನೇಕ ಆತಂಕಗಳು ಬಂದವು. ಬಹುಶಃ ಬಾಂಗ್ಲಾ ದೇಶದ ಯುದ್ಧ ಬಾರದೆ ಇದ್ದಿದ್ದರೆ ಇಂಡಿಯಾ ಸರ್ಕಾರ ಇನ್ನೂ ಹೆಚ್ಚಿನ ತ್ವರಿತವಾದ ಕಾರ್ಯಕ್ರಮಗಳನ್ನು ತಗೆದುಕೊಳ್ಳುತ್ತಿತ್ತು ಮತ್ತು ಜನರಿಗೆ ಎಷ್ಟೋ ಪ್ರಮಾಣದಲ್ಲಿ ಅವರ ಕಷ್ಟಗಳನ್ನು ಕಡಿಮೆ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು ಎಂದು ನನಗಾದಗೂ ಅನ್ನಿಸುತ್ತದೆ.

2–30 P.M.

ಆದರೆ ನಮ್ಮ ದುರದೃಷ್ಟದಿಂದ ಚುನಾವಣೆಯಾದ ಕೂಡಲೇ ಬಂಗ್ಲಾ ದೇಶದ ಪರಿಸ್ಥಿತಿ ಬಂತು, ಪೂರ್ವ ಬಂಗಾಲದ ಕಡೆಯಿಂದ ಕೋಟಿಗಟ್ಟಲೆ ಜನ ನಮ್ಮ ದೇಶಕ್ಕೆ ವಲಸೆ ಬಂದರು. ಇದರಿಂದ ರೆಫ್ಯೂಜಿ ಪ್ರಾಬ್ಲಂ ಎನ್ನುವುದು ಬಂದು ಈ ಸಮಸ್ಯೆ ಪರಿಹಾರಕ್ಕಾಗಿ ಇದಕ್ಕೆ ಬೇರೆ ಹಣ ಖರ್ಚು ಮಾಡಬೇಕಾಯಿತು. ಅನಂತರದಲ್ಲಿ ಯುದ್ಧ ಪರಿಸ್ಥಿತಿ ಬಂದಿದೆ. ಯುದ್ಧ ಪರಿಸ್ಥಿತಿ ಮುಗಿದ ಮೇಲೆ ಯುದ್ಧಾನಂತರದ ಪರಿಸ್ಥಿತಿ ಬಂತು. ಇದರಿಂದಾಗಿ ಸಾಮಾನ್ಯವಾಗಿ ದೇಶದಲ್ಲಿ ಆರ್ಥಿಕ ಪ್ರಗತಿ ಸಾಧಿಸುವುದಕ್ಕೆ ಎಡೆಗೊಡದ ಪರಿಸ್ಥಿತಿ ಅಲ್ಲದಿದ್ದರೂ ಪೂರ್ವ ಬಂಗಾಳದಲ್ಲಿ ಆದ ಆಂದೋಳನದ ದೆಸೆಯಿಂದಾಗಿ ನಮ್ಮ ಆರ್ಥಿಕ ಪರಿಸ್ಥಿತಿಯ ಮೇಲೆ ಆದ ಪರಿಣಾಮದ ಜೊತೆಗೆ ಈ ವರ್ಷದಿಂದ ಬಂದಿರುವ ಕ್ಷಾಮ ಪರಿಸ್ಥಿತಿಯಿಂದಾಗುವ ಪರಿಣಾಮವೂ ಆಗಿದೆ. ಎರಡು ವರ್ಷದಿಂದ ಇಂತಹ ಪರಿಸ್ಥಿತಿಗಳು ಬಂದು ಒದಗಿರುವುದರಿಂದಾಗಿ ಇಂಡಿಯಾ ಸರಕಾರದವರು ಯಾವ ಪ್ರಮಾಣದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿತ್ತೋ ಆ ಪ್ರಮಾಣದಲ್ಲಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. ಹಾಗಾದರೂ ಕೂಡ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಸಾಕಷ್ಟು ಹಿಡಿತದಲ್ಲಿಟ್ಟು ಇದರ ಬೆಳವಣಿಗೆಗಳಿಗೆ ಸಾಕಷ್ಟು ಗಮನವನ್ನು ಕೊಡುತ್ತಿರುವುದರಿಂದ ಇದು ನಾವೆಲ್ಲ ಮೆಚ್ಚತಕ್ಕ ವಿಚಾರವೇ ಆಗಿದೆ. ಇದು ದೇಶದಲ್ಲಿ ಈಗಿರುವ ಪರಿಸ್ಥಿತಿ. ಇದರ ಬಗ್ಗೆ ಇರುವ ಪರಿಸ್ಥಿತಿಗಳನ್ನು ವಿಚಾರ ಮಾಡಲು ನಮ್ಮ ರಾಜ್ಯದ ಕೆಲವು ಅಂಕೆ ಸಂಖ್ಯೆಗಳು ನನ್ನಲ್ಲಿವೆ, ಅವುಗಳನ್ನು ಇಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ನಮ್ಮ ರಾಜ್ಯದಲ್ಲಿ ಜೀವನ ಸೂಚ್ಯಾಂಕ ಎಷ್ಟರ ಮಟ್ಟಿಗೆ ನಮ್ಮ ಜೀವನಾವಶ್ಯಕವಾದ ವಸ್ತುಗಳ ಬೆಲೆ ಏರುತ್ತಿದೆ ಎನ್ನುವುದರ ಬಗ್ಗೆ ಒಂಭತ್ತು ಪಟ್ಟಣಗಳ ಅಂಕೆಗಳಿವೆ ಮತ್ತು ಇದಕ್ಕೆ ಸಂಬಂಧಪಟ್ಟ ಅಂಕೆ ಅಂಶಗಳೂ ಇವೆ. 1960ರಲ್ಲಿ ಜೀವನ ಸೂಚ್ಯಂಕ ಬೆಂಗಳೂರಿನಲ್ಲಿ ಒಂದು ನೂರು ಇತ್ತು. 1970ರಲ್ಲಿ 184 ವರೆಗೆ ಆಯಿತು, ಅನಂತರ 1973ನೇ ಜನವರಿವರೆಗೆ 223ಕ್ಕೇರಿದೆ, ಎಂದರೆ 1960ರಿಂದ 1973ನೇ ಜನವರಿಯವರೆಗೆ ಲೆಕ್ಕ ನೋಡಿದಾಗ ಶೇಕಡ 125ರಷ್ಟು ಜೀವನದ ಖರ್ಚು ಹೆಚ್ಚಾಗಿದೆ. 1970ರ ಲೆಕ್ಕ ತೆಗೆದುಕೊಂಡರೆ ಶೇಕಡ 40ರಷ್ಟು ಈ ಮೂರು ವರ್ಷಗಳಲ್ಲಿ ಹೆಚ್ಚಾಗಿದೆ, ಇದು ಬೆಂಗಳೂರಿನಲ್ಲಿನ ಅಂಶಗಳು. ಇದೇ ರೀತಿ ದಾವಣಗೆರೆ ನೋಡಿದರೆ 1960ರಲ್ಲಿ 100 ಇತ್ತು, 1970ರಲ್ಲಿ 188, 1973ನೇ ಜನವರಿಯವರೆಗೆ 226ಕ್ಕೇರಿತು. ಮಂಗಳೂರಿನಲ್ಲಿ 1960ರಲ್ಲಿ 100 ಇತ್ತು, 1970ರಲ್ಲಿ 191ಕ್ಕೇರಿತು, 1973ನೇ ಜನವರಿಯಲ್ಲಿ 226ಕ್ಕೇರಿತು. ಮೈಸೂರಿನಲ್ಲಿ 1960ರಲ್ಲಿ ಶೇಕಡಾ 100 ಇತ್ತು, 1970ರಲ್ಲಿ 188ಕ್ಕೇರಿತು, 1973ನೇ ಜನವರಿಯೊಳಗೆ 231 ಆಗಿದೆ, ಹೀಗೆ ಜೀವನದ ವೆಚ್ಚದ ಮೇಲೆ ಸರಕಾರ ಎಷ್ಟೇ ಪ್ರಯತ್ನ ಮಾಡಿದರೂ ಅದರ ಮೇಲೆ ಸಾಕಷ್ಟು ಹಿಡಿತವನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಇಷ್ಟೊಂದು ಪ್ರಮಾಣದಲ್ಲಿ ಬೆಲೆ

(ಶ್ರೀ ಕೆ. ಪುಟ್ಟಸ್ವಾಮಿ)

ಗಳು ಹೆಚ್ಚುವುದಕ್ಕೆ ನಮ್ಮ ದೇಶದಲ್ಲಿ ಬಂದಿರುವ ಈ ಅಭಾವ ಪರಿಸ್ಥಿತಿಯೂ ಒಂದು ಕಾರಣ ಇರಬಹುದು.

ನಮ್ಮ ಆರ್ಥಿಕ ಮಂತ್ರಿಗಳು ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ನೌಕರರುಗಳಿಗೆ ತುಟ್ಟಿಭತ್ಯವನ್ನು ಹೆಚ್ಚಿಸುವ ಒಂದು ಸಾಹಸವನ್ನು ಮಾಡಿದ್ದಾರೆ. ಇದಕ್ಕಾಗಿ ನಮ್ಮ ರಾಜ್ಯದ ಬೊಕ್ಕಸದಿಂದ ಸುಮಾರು ಐದು ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಈ ರೀತಿ ಹೆಚ್ಚಳ ಕೊಡುವುದರಿಂದ ಇದು ಕೇಂದ್ರ ಸರಕಾರದ ತುಟ್ಟಿಭತ್ಯದ ಮಟ್ಟಕ್ಕೆ ಬರುತ್ತದೆ ಎಂದೂ ಹೇಳಿದ್ದಾರೆ. ಬಹುಶಃ ಈಗ ಇದು ಬಂತಲ್ಲ ಎಂದು ತೃಪ್ತಿಪಟ್ಟುಕೊಳ್ಳಬಹುದು. ಆದರೆ ಇನ್ನು ಕೆಲವೇ ದಿವಸಗಳಲ್ಲಿ ಈ ಅಂತರ ಪುನಃ ಬರುತ್ತದೆ ಎಂದು ಕೆಲವಾರು ಸೂಚನೆಗಳನ್ನೂ ಅವರು ಕೊಟ್ಟಿದ್ದಾರೆ. ಈಗಾಗಲೇ ಕೇಂದ್ರ ಸರಕಾರದವರು ವೇತನ ಆಯೋಗವನ್ನು ನೇಮಕ ಮಾಡಿದ್ದಾರೆ. ಈ ಆಯೋಗದವರು ಈ ತಿಂಗಳ ಅಂತ್ಯದಲ್ಲಿ ಇಲ್ಲವೇ ಮುಂದಿನ ತಿಂಗಳಲ್ಲಿ ಅವರ ಶಿಫಾರಸುಗಳನ್ನು ಕಳುಹಿಸಿಕೊಡುವವರಾಗಿದ್ದಾರೆ. ಆ ಶಿಫಾರಸುಗಳನ್ನು ಮಾಡುವ ವೇಳೆಯಲ್ಲಿ ಕೇಂದ್ರ ಸರಕಾರದ ನೌಕರರುಗಳಿಗೆ ಸುಮಾರು ಇನ್ನೂರು ಕೋಟಿ ರೂಪಾಯಿಗಳವರೆಗೆ ವೇತನ ಹೆಚ್ಚುತ್ತದೆ, ಈ ರೀತಿ ತುಟ್ಟಿಭತ್ಯ ಹೆಚ್ಚಳವಾಗಬಹುದು ಎಂದು ನಮಗೆ ಪತ್ರಿಕೆಗಳಲ್ಲಿ ಬಂದಿರುವ ವರದಿಗಳಿಂದ ಕೇಳಿ ತಿಳಿದಿದ್ದೇವೆ. ಹೀಗೆ ಅವರ ಶಿಫಾರಸುಗಳು ಬಂದಕೂಡಲೇ ನಮ್ಮ ರಾಜ್ಯದ ನೌಕರರುಗಳಲ್ಲಿ ಇರತಕ್ಕ ತೃಪ್ತಿ ಮುಗಿಯುತ್ತದೆ. ಈಗೇನೋ ಮೆಂಟಲ್ ಸಾಟಿಸ್‌ಫ್ಯಾಕ್ಷನ್ ಎಂದು ಹೇಳುವುದು ಇದ್ದರೂ ಅದರಿಂದ ತೃಪ್ತಿಯಾಗುವುದಿಲ್ಲ. ಇದುವರೆಗೆ ಹೋರಾಟ ಮಾಡುತ್ತಿದ್ದರು ಎಂದು ಕೇಂದ್ರ ಸರಕಾರದ ಮಟ್ಟದ ತುಟ್ಟಿಭತ್ಯ ಕೊಡುತ್ತೇವೆಂದು ಈಗತಾನೇ ಹೇಳುತ್ತಿದ್ದಾರೆ. ಇನ್ನು ಒಂದೆರಡು ತಿಂಗಳಲ್ಲೇ ಕೇಂದ್ರ ಸರಕಾರದವರು ಮತ್ತೆ ತುಟ್ಟಿಭತ್ಯವನ್ನು ಹೆಚ್ಚಿಸುತ್ತಿದ್ದಾರೆ. ಆ ಸಮಯದಲ್ಲಿ ನೀವೇನು ಮಾಡಬೇಕು ? ನಮ್ಮ ರಾಜ್ಯ ಸರಕಾರ ಪುನಃ ತುಟ್ಟಿಭತ್ಯವನ್ನು ಹೆಚ್ಚಿಸುವುದಕ್ಕೆ ನಮ್ಮ ಹಣಕಾಸಿನ ಪರಿಸ್ಥಿತಿಯಿಂದಾಗಿ ನಾವು ಮತ್ತೆ ಅವರಿಗೆ ಕೊಡುವುದಕ್ಕಾಗುವುದಿಲ್ಲ ಎಂದು ತಿರಸ್ಕಾರ ಮಾಡುವುದಕ್ಕಾಗುತ್ತದೆಯೋ ಎನ್ನುವ ಒಂದು ಪ್ರಶ್ನೆ ಬರುತ್ತದೆ. ಇದೊಂದು ಜಟಿಲವಾದ ಪ್ರಶ್ನೆ, ಬಹುಶಃ ನಮ್ಮ ಸ್ನೇಹಿತರಾದ ಆರ್ಥಿಕ ಮಂತ್ರಿಗಳಿಗೆ ಇದೊಂದು ಬಿಡಿಸಲಾಗದ ಪ್ರಶ್ನೆ ಎಂದು ನನಗಾದರೂ ಅನಿಸುತ್ತದೆ. ಈ ಸಮಸ್ಯೆಯನ್ನು ವಿಚಾರ ಮಾಡುವಾಗ ಒಂದು ವಿಚಾರ ಹೇಳಬೇಕಾಗಿದೆ. ನಮ್ಮ ಹಣಕಾಸಿನ ಪರಿಸ್ಥಿತಿ ಹೆಚ್ಚು ಕೆಡುವುದಕ್ಕೆ ಕಾರಣ ನಮಗೆ ಐದನೇ ಫೈನಾನ್ಸ್ ಕಮಿಷನ್‌ನಲ್ಲಿ ಬಂದಂತಹ ಹಣಕಾಸಿನ ಸೌಲಭ್ಯ ಕಡಿಮೆ. ಐದನೇ ಆರ್ಥಿಕ ಆಯೋಗದ ಶಿಫಾರಸು ಏನು ಬಂದಿತ್ತೋ ಅಷ್ಟು ಕೂಡ ಬರಲಿಲ್ಲ, ಈ ವಿಚಾರ ಹೇಗೆ ಆಯಿತು ಎನ್ನುವುದನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶ ನಮಗೆ ಇರಲಿಲ್ಲ. ಮತ್ತು ಆ ವಿಚಾರದಲ್ಲಿ ಈ ಸಭೆಯ ಕಾಲವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ನಮ್ಮ ಸರ್ಕಾರದವರು ಆರನೇ ಆಯೋಗಕ್ಕೆ ಏನು ಮೆಮೊರ್‍ಯಾಂಡಂ ಸಲ್ಲಿಸಿದ್ದಾರೆ ಆ ಮೆಮೊರ್‍ಯಾಂಡಂನಲ್ಲಿ ವಾಸ್ತವವಾಗಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಹೇಗಿದೆ, ಇಂಡಿಯಾ ಸರಕಾರದವರು ಆರ್ಥಿಕ ಆಯೋಗವನ್ನು ನೇಮಿಸಿ ರಾಜ್ಯಾಂಗದ ಶಾಸನದ 275ನೇ ಆರ್ಟಿಕಲ್ ಪ್ರಕಾರ ಹೆಚ್ಚು ಹಣವನ್ನು ಯಾವ ಆಧಾರದ ಮೇಲೆ ಮಾಡಬೇಕು ಎನ್ನುವುದನ್ನು ಬಹಳ ಉತ್ತಮವಾದ ರೀತಿಯಲ್ಲಿ ತಿಳಿಸುತ್ತಿದ್ದಾರೆ, ನಾನಾದರೂ ನಿರೀಕ್ಷೆ ಮಾಡುತ್ತೇನೆ ಬಹುಶಃ ನಮ್ಮ ಸರಕಾರ ಆರನೇ ಆರ್ಥಿಕ ಆಯೋಗದ ಮುಂದೆ ಇಟ್ಟಿರತಕ್ಕ ವಾದವನ್ನು ಪುರಸ್ಕರಿಸಿ ನಮ್ಮ ಸರಕಾರ ನಿರೀಕ್ಷೆ ಮಾಡಿದ ರೀತಿಯಲ್ಲಿ ಹಣಕಾಸಿನ ಸಹಾಯ ಮಾಡದೇ ಹೋದರೆ ನಮ್ಮ ಹಣಕಾಸಿನ ಪರಿಸ್ಥಿತಿ ಉತ್ತಮವಾಗುವುದಿಲ್ಲ. ಹಾಗೆ ಉತ್ತಮ ಮಾಡಿಕೊಳ್ಳಬೇಕಾದರೆ ಏನು ಮಾಡಬೇಕು, ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಈ ಸಭೆಯ ಮುಂದೆ ಬರಬೇಕಾಗುತ್ತದೆ. ನಮ್ಮ ಸರಕಾರದವರು ಆರನೇ ಆಯೋಗಕ್ಕೆ ಮಂಡಿಸಿರತಕ್ಕ ಮೆಮೊರ್‍ಯಾಂಡಂನಲ್ಲಿ ಏನಿದೆ ಅದನ್ನು ನಾನು ಸಂಪೂರ್ಣವಾಗಿ ಅಧ್ಯಯನ ಮಾಡಿದ್ದೇನೆ. ಅವರು ಹೇಳಿರತಕ್ಕ ಅನೇಕ ಅಂಶಗಳು ಬಹುಶಃ ಆರ್ಥಿಕ ಆಯೋಗದವರು ಒಪ್ಪುತ್ತಾರೆಂದು ತಿಳಿದಿದ್ದೇನೆ. ಹಾಗೆ ಇಂಡಿಯಾ ಸರಕಾರದವರು ಕೊಡಬೇಕಾದ ಹಣಕಾಸಿನ ಸೌಲಭ್ಯಗಳನ್ನು ಕೊಡದೆ ನಮ್ಮ ಹಣಕಾಸಿನ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಹೇಳಿದರೆ ಖಂಡಿತ ಅದರಿಂದ ಸುಧಾರಿಸುವುದಿಲ್ಲ.

ಈಗ ನಮ್ಮ ಹಣಕಾಸಿನ ಪರಿಸ್ಥಿತಿ ಹೇಗಿದೆ ಎಂಬುದು ಆರನೇ ಆರ್ಥಿಕ ಆಯೋಗಕ್ಕೆ ಕೊಟ್ಟಿರುವ ಮೆಮೊರ್‍ಯಾಂಡಮ್‌ನ 3 ಮತ್ತು 4ನೇ ಪೇಜ್‌ಗಳಲ್ಲಿರುವುದನ್ನು ನೋಡಿದರೆ ಗೊತ್ತಾಗುತ್ತದೆ. ಸಾಮಾನ್ಯವಾಗಿ ನಾವು ಕೇಂದ್ರಸರ್ಕಾರದಿಂದ ವರ್ಷೇ ವರ್ಷೇ ಕೋಟ್ಯಾಂತರ

ರೂಪಾಯಿಗಳ ಸಾಲಗಳನ್ನು ಪಡೆಯುತ್ತಿದ್ದೇವೆ, ಬಹಿರಂಗ ಮಾರುಕಟ್ಟೆಯಿಂದ ಸಾಲ ಎತ್ತುತ್ತಿದ್ದೇವೆ, ಮತ್ತು ಹಣಕಾಸಿನ ಸಂಸ್ಥೆಗಳಿಂದ ಸಾಲ ಪಡೆಯುತ್ತಿದ್ದೇವೆ. ಇದೆಲ್ಲಾ ಹಣವೂ ಅಭಿವೃದ್ಧಿಕಾರ್ಯಗಳಿಗೆ ಖರ್ಚು ಆಗುತ್ತಿದೆ ಎನ್ನುವ ಭಾವನೆ ಸಾಮಾನ್ಯ ಜನರ ಮನಸ್ಸಿನಲ್ಲಿ ಇದೆ. ಆದರೆ ಇರತಕ್ಕಂಥ ಪರಿಸ್ಥಿತಿ ನೋಡುವುದಾದರೆ, ನಮ್ಮ ಹುಟ್ಟುವಳಿ ಏನಿದೆ ಅದರಲ್ಲಿ ಆಡಳಿತವನ್ನು ನಡೆಸಲು ಬೇಕಾದ ಖರ್ಚನ್ನು ಕಳೆದರೆ ಅಭಿವೃದ್ಧಿಕಾರ್ಯಗಳಿಗೆ ಹಣವೇ ಉಳಿಯುತ್ತಿಲ್ಲ. ನಮ್ಮ ದುರಾದೃಷ್ಟ, ನಾವು ಎತ್ತತಕ್ಕಂಥ ಸಾಲದ ಹಣವು ಕೊಡಬೇಕಾದ ಕಂತಿಗೆ ಮತ್ತು ಬಡ್ಡಿಗೆ ಖರ್ಚಾಗುತ್ತಿದೆ. ಸಾಲದ ತೀರುವಳಿಗೆ ಕೊಡಬೇಕಾದಕಂತಿಗೆ ಮತ್ತೆ ಸಾಲ ಮಾಡಿಯೇ ತೀರಿಸುತ್ತಿದ್ದೇವೆ. ಇದು ಚಿಂತಾಜನಕವಾದ ಪರಿಸ್ಥಿತಿ. ಯಾವ ರಾಜ್ಯದ ಹಣಕಾಸಿನ ಪರಿಸ್ಥಿತಿಯೂ ಈ ರೀತಿ ಇರಬಾರದು. ಯಾವಾಗಲೂ ನಾವು ಪ್ರತಿವರ್ಷ ಪಡೆದಂಥ ಸಾಲ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವುದಕ್ಕೆ ಮೀಸಲಾಗಿರಬೇಕು. ಆದರೆ ಆ ಪರಿಸ್ಥಿತಿ ಇಂದು ಇಲ್ಲದಿರುವುದಕ್ಕೆ ರಾಜ್ಯಸರ್ಕಾರ ಹಣಕಾಸಿನ ಬಗ್ಗೆ ಸರಿಯಾದ ನೀತಿಯನ್ನು ಅನುಸರಿಸುತ್ತಿಲ್ಲ, ಆ ಕಾರಣದಿಂದ ಇಂಥಹ ಒಂದು ಕಠಿನ ಪರಿಸ್ಥಿತಿ ಬಂದು ಒದಗಿರಬಹುದು ಎಂದು ಸಾಮಾನ್ಯ ಜನರು ಯೋಚನೆ ಮಾಡುವುದಕ್ಕೆ ಅವಕಾಶವಿದೆ. ಮತ್ತು ಇಂಥಹ ಒಂದು ಪರಿಸ್ಥಿತಿಯನ್ನು ನಿವಾರಣೆ ಮಾಡಬೇಕಾದರೆ ಅದು ರಾಜ್ಯಸರ್ಕಾರದ ಕೈಯಲ್ಲಿಯೇ ಇದೆಯೇ ಅಥವಾ ಕೇಂದ್ರ ಸರ್ಕಾರದ ನೆರವು ಬೇಕಾಗಿದೆಯೇ ಎಂಬುದು ಒಂದು ಪ್ರಶ್ನೆ ಇದ್ದೇ ಇದೆ. ಮುಖ್ಯವಾಗಿ ಈ ಒಂದು ಪರಿಸ್ಥಿತಿ ಬರುವುದಕ್ಕೆ ನಮ್ಮ ಸರ್ಕಾರ ಅನುಸರಿಸಿದಂಥ ನೀತಿ ಕಾರಣವಲ್ಲ, ಇದಕ್ಕೆ ಕಾರಣ ಕೇಂದ್ರಸರ್ಕಾರದವರು 255ನೇ ಆರ್ಟಿಕಲ್ ಪ್ರಕಾರ ಯಾವ ರೀತಿಯಲ್ಲಿ ರಾಜ್ಯಗಳಿಗೆ ಹಣ ಹಂಚಬೇಕಾಗಿತ್ತೋ ಅದರಲ್ಲಿ ವ್ಯತ್ಯಾಸವಾಗಿರುವುದು ಒಂದು ಕಾರಣವಾದರೆ, ಕೇಂದ್ರಸರ್ಕಾರದವರು ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ಕೊಟ್ಟಂತಹ ಹಣವನ್ನು ವಾಪಸ್ ಪಡೆಯತಕಂಥ ರೀತಿಯಲ್ಲಿ ಅವರು ಅನುಸರಿಸಿಕೊಂಡು ಬರುತ್ತಿರುವ ನೀತಿ ಎರಡನೇ ಕಾರಣವಾಗಿದೆ. ಈ ವಿಚಾರದಲ್ಲಿ ನಮ್ಮ ಸರ್ಕಾರದವರು ಆರನೇ ಆರ್ಥಿಕ ಆಯೋಗದ ಮುಂದೆ ಮಂಡಿಸಿರುವ ಮೆಮೊರ್ಯಾಂಡಮ್ ಸ್ಪಷ್ಟವಾಗಿದೆ. ಆ ಮೆಮೊರ್ಯಾಂಡಮ್‌ನಲ್ಲಿ ಹಿಂದಿನ ಸರ್ಕಾರಗಳು ಹಣಕಾಸನ್ನು ದುರುಪಯೋಗ ಮಾಡಿಕೊಂಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹಣಕಾಸಿನ ದುರುಪಯೋಗವಾಗಿಲ್ಲ ಎಂಬ ಬಗ್ಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಸಂಬಳಸಾರಿಗೆಯನ್ನು ತೆಗೆದುಕೊಂಡರೆ ಬೇರೆ ರಾಜ್ಯಗಳ ಸಂಬಳ ಸಾರಿಗೆಗಿಂತ ಕನಿಷ್ಠ ಪ್ರಮಾಣದಲ್ಲಿಯೇ ಇದೆ. ಯಾವ ಒಂದು ಬಾಬಿನಲ್ಲಿಯೇ ಆಗಲಿ, ಪರಿಶೀಲನೆ ಮಾಡಿ ನೋಡಿದರೆ ನಮ್ಮ ಸರ್ಕಾರ ಖರ್ಚು ಮಾಡುತ್ತಿರುವ ಹಣದ ಪ್ರಮಾಣ ಬೇರೆ ರಾಜ್ಯಗಳು ಖರ್ಚು ಮಾಡುತ್ತಿರುವ ಹಣದ ಪ್ರಮಾಣಕಿಂತ ಬಹಳ ಕಡಿಮೆ ಇದೆ. ಈ ಅಂಶವನ್ನು ಸಹ ಆರ್ಥಿಕ ಆಯೋಗದವರಿಗೆ ತಿಳಿಸಿದ್ದಾರೆ. ಮುಂದಿನ 5 ವರ್ಷಗಳಲ್ಲಿ ನಮ್ಮ ಹಣಕಾಸಿನ ಪರಿಸ್ಥಿತಿ ಸುಧಾರಿಸಬೇಕಾದರೆ, ನಮ್ಮ ರಾಜ್ಯದಲ್ಲಿ ಆಗತಕ್ಕಂಥ ಅಭಿವೃದ್ಧಿ ಕಾರ್ಯಗಳು ಸರಿಯಾದಂಥ ಪ್ರಮಾಣದಲ್ಲಿ ನಡೆಯಬೇಕಾದರೆ...

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸದಸ್ಯರು ಈಲ್ಡ್ ಆಗುವುದಾದರೆ ಒಂದು ವಿಷಯವನ್ನು ಅವರಿಂದ ಕೇಳಬೇಕಾಗಿದೆ. ಮಾನ್ಯ ಸದಸ್ಯರು ಹಿರಿಯ ಸದಸ್ಯರಾಗಿದ್ದಾರೆ. ಅವರಿಗೆ ಹೆಚ್ಚಿನ ಅನುಭವವಿದೆ. ಬಹಿರಂಗ ಮಾರುಕಟ್ಟೆಯಲ್ಲಿ ಎತ್ತತಕ್ಕಂಥ ಸಾಲ, ಮತ್ತು ಕೆಲವು ಹಣಕಾಸಿನ ಸಂಸ್ಥೆಗಳಿಂದ ಪಡೆಯತಕ್ಕಂಥ ಸಾಲದ ಹಣ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗವಾಗದೆ ಬಡ್ಡಿಗಾಗಿ ಮತ್ತು ಹಿಂದಿನ ಸಾಲ ತೀರಿಸಲು ಖರ್ಚಾಗುತ್ತಿದೆ ಎಂದು ಹೇಳಿದರು. ಕಳೆದ 25 ವರ್ಷಗಳಲ್ಲಿ ಈ ರಾಜ್ಯ ಅಭಿವೃದ್ಧಿ ದೃಷ್ಟಿಯಿಂದ ಅಷ್ಟೊಂದು ಪ್ರಗತಿದಾಯಕವಾಗಿ ಸಾಗಿರಲಿಲ್ಲವೇ ಎನ್ನುವುದರ ಬಗ್ಗೆ ತಮ್ಮ ನಿಲುವು ಏನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಆಗಿರತಕ್ಕಂಥ ಪ್ರಗತಿಯ ಬಗ್ಗೆ ನಾವೆಲ್ಲರೂ ಹೆಮ್ಮೆ ಪಡಬೇಕಾಗಿದೆ. ಮತ್ತು ನಾವು ಪಡೆದಂಥ ಹಣಕಾಸು ಸದ್ವಿನಿಯೋಗವಾಗಿದೆ ಎಂಬುದಕ್ಕೆ ಈ ಆರನೇ ಆರ್ಥಿಕ ಆಯೋಗದ ಮುಂದೆ ನಮ್ಮ ಸರ್ಕಾರದವರು ಮಂಡಿಸಿರತಕ್ಕಂಥ ಡಾಕ್ಯುಮೆಂಟೇ ಸಾಕು. ಆದರೆ ಕೇಂದ್ರಸರ್ಕಾರದವರು ನಮ್ಮ ಅಭಿವೃದ್ಧಿಗೆ ಕೊಡತಕ್ಕಂಥ ಸಾಲಗಳು, ಆ ಸಾಲಗಳನ್ನು ಉಪಯೋಗಿಸಿದಮೇಲೆ ಆ ಸಾಲಗಳ ಮರುಪಾವತಿಗೆ ಹಾಕಿರುವ ಷರತ್ತುಗಳೇ ಅಭಿವೃದ್ಧಿ ಕಾರ್ಯಗಳು ಹೆಚ್ಚಾಗಿ ಆಗುವುದಕ್ಕೆ ಅವಕಾಶವಿಲ್ಲದಂತೆ ಆಗಿದೆ. ಉದಾಹರಣೆಗಾಗಿ ಹೇಳುವುದಾದರೆ ನೀರಾವರಿ ಕಾಮಗಾರಿಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಆದರೆ ಅದರಿಂದ ಪ್ರತಿಫಲ ಬರಬೇಕಾದರೆ ನಾವು 5-6 ವರ್ಷಗಳ ಕಾಲ ಕಾಯಬೇಕಾಗುತ್ತದೆ. ಅಲ್ಲಿಯವರೆಗೆ ಹಣ ತೀರಿಸುವುದು ಹೇಗೆ? ಉತ್ಪನ್ನ ಇಲ್ಲದೆ ಸಾಲ ತೀರಿಸಬೇಕಾದ ಪರಿಸ್ಥಿತಿ ಬರುತ್ತದೆ. ಈ ಒಂದು ನೀತಿಯನ್ನು

(ಶ್ರೀ ಕೆ. ಪುಟ್ಟಸ್ವಾಮಿ)

ಪರಿಶೀಲಿಸಿ ಒಂದು ವಾಸ್ತವಿಕವಾದಂಥ ಮಾರ್ಗವನ್ನು ಕಂಡುಹಿಡಿಯಬೇಕೆಂದು ನಮ್ಮ ಸರ್ಕಾರದವರು ಆರನೇ ಆರ್ಥಿಕ ಆಯೋಗದವರ ಮುಂದೆ ವಾದ ಮಾಡಿದ್ದಾರೆ. ಆ ಒಂದು ವಾದವನ್ನು ಅವರು ಪುಷ್ಟೀಕರಿಸಿದರೆ ನಮ್ಮ ಆರ್ಥಿಕ ಮಂತ್ರಿಗಳು ಯಾವ ಒಂದು ಪ್ರಗತಿಯನ್ನು ನಿರೀಕ್ಷಿಸಿದ್ದಾರೋ ಅದನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ನಾವು ಏನು ಒಂದು ಮೆಮೊರ್ಯಾಂಡವನ್ನು ಆರನೇ ಆರ್ಥಿಕ ಆಯೋಗದ ಮುಂದೆ ಕೊಟ್ಟಿದ್ದೇವೆ, ಅದರಲ್ಲಿ ಹಿಂದಕ್ಕೆ ಎಷ್ಟರಮಟ್ಟಿಗೆ ದಕ್ಷತೆಯಿಂದ ಹಣ ಖರ್ಚಾಯಿತು-ಅದರ ಬಗ್ಗೆ ವಿವರಗಳನ್ನು ಕೊಡುವ ಅವಶ್ಯಕತೆ ಇರಲಿಲ್ಲ. ಅದಕ್ಕೆ ಪ್ರಯತ್ನವನ್ನೂ ನಾವು ಮಾಡಲಿಲ್ಲ. -ಇರತಕ್ಕಂಥ ವಾಸ್ತವಿಕ ಪರಿಸ್ಥಿತಿ ಏನಿದೆ ಅದನ್ನು ಮಾತ್ರ ಹೇಳಿದ್ದೇವೆ. ಅದರ ಪ್ರಕಾರ ಸಾಲ ತೀರಿಸುವುದಕ್ಕೆ ಮತ್ತು ಬಡ್ಡಿ ಕೊಡಲು ಹಣ ಬೇಕಾಗುತ್ತದೆ, ಅದಕ್ಕಾಗಿ ಸಾಲ ಮಾಡಬೇಕಾಗುತ್ತದೆ, ಹೊಸ ಸಾಲ ಎತ್ತುವುದರಿಂದ ಹೊಸ ಪ್ರಗತಿ ಕೆಲಸಗಳನ್ನು ಮಾಡುವುದು ಕಷ್ಟವಾಗುತ್ತದೆ ಎಂಬತಕ್ಕಂಥ ವಾಸ್ತವಿಕ ಪರಿಸ್ಥಿತಿಯನ್ನು ಅವರ ಮುಂದೆ ಇಟ್ಟಿದ್ದೇವೆ. ಹಿಂದಕ್ಕೆ ಏನೇನು ಆಯಿತು ಅದು ಸರಿಯೋ ತಪ್ಪೋ ಎಂಬುದನ್ನು ಮೆಮೊರ್ಯಾಂಡಮ್‌ನಲ್ಲಿ ಪ್ರಸ್ತಾಪ ಮಾಡಲಿಲ್ಲ.

Sri H. D. DEVE GOWDA.— I want to hear you because you have rich experience in administraion. In the past 25 years so far as development is concerned it is not up to our expectations. That is our charge. What is your opinion ?

Sri K. PUTTASWAMY.—I have already stated that the progress achieved is not to our expectation and I was telling the House the reasons for shortfall in our expectations. I don't want to enter into any controversy with my hon. friend the Finance Minister

Sri M. Y. GHORPADE-—That is precisely what I was suggesting. Let us not try to enter into any controversy over what has happened in the past.

ಶ್ರೀ ಕೋಣಂದೂರು ಲಿಂಗಪ್ಪ.—ಕಳೆದ 25 ವರ್ಷಗಳಿಂದಲೂ ಸಹ ಇದೇ ಜಾಣತನದಲ್ಲಿ ಹೇಳಿಕೊಂಡು ಬಂದಿದ್ದೀರಿ.

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನು ನಾನು ಈ ಬಗ್ಗೆ ಹೆಚ್ಚು ಹೇಳಬೇಕಾದ್ದಿಲ್ಲ. ಈ ಸಭೆಯ ಕಾಲವನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ ತಮ್ಮ ಕಾಲವನ್ನು ಕೊಡುತ್ತೇವೆ ಎಂದು ಹೇಳಿದ ಔದಾರ್ಯಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಮುಂದೆ ಈ ಸಭೆಯ ಮುಂದೆ ಬೇಡಿಕೆಗಳು ಬರುತ್ತವೆ. ಆಗ ಬೇಡಿಕೆಗಳ ಮೇಲೆ ಮಾತನಾಡಬಹುದು. ಈ ದೇಶದಲ್ಲಿ ಯಾವುದೇ ಒಂದು ವಿಚಾರದಲ್ಲಿ ತಪ್ಪು ಕಲ್ಪನೆ ಬರುವಂತೆ ವಿರೋಧ ಪಕದವರಾಗಲೀ, ಆಡಳಿತದ ಪಕ್ಷದವರಾಗಲೀ ಮಾತನಾಡುವುದು ಯೋಗ್ಯವಲ್ಲ. ವಿರೋಧ ಪಕ್ಷದವರು ಈ ಸಭೆ ಪ್ರಾರಂಭವಾದಾಗಾಯಿತು ಇವೊತ್ತಿನವರೆಗೂ ಕೂಡ ಹಿಂದಿನ ಅಧಿವೇಶನದಲ್ಲೂ ಕೂಡ ನಮ್ಮ ಸರ್ಕಾರದವರು ಬರಗಾಲ ಪೀಡಿತ ಪ್ರದೇಶಕ್ಕೆ ಗಮನ ಕೊಟ್ಟಿಲ್ಲ ಎಂದು ಹೇಳಿದರು. ಇದು ವಾಸ್ತವಿಕವಾದ ಸಂಗತಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮಲ್ಲೂ ಹೇಳಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.— ಆಡಳಿತ ಪಕ್ಷದಲ್ಲಿ ಅಂಥಾ ವಿಶೇಷವಾದ ರೀತಿಯಲ್ಲಿ ಯಾರೂ ಹೇಳಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಸತ್ಯಾಗ್ರಹ ಮಾಡುವುದಕ್ಕೆ ಹೊರಟಿದ್ದರು.

ಶ್ರೀ ಕೆ. ಪುಟ್ಟಸ್ವಾಮಿ.—ಮನೆಯಲ್ಲಿ ಭಕ್ಷ್ಯ ಭೋಜನ ಮಾಡುತ್ತೇವೆ ಎಂದರೂ ಕೂಡ ಒಂದು ಗಂಟೆಗೆ ಆಗುವುದು 2 ಗಂಟೆಗೆ ಆದರೆ ನಾವು ಚಡಪಡಿಸುತ್ತೇವೆ. ಇಂಥಾ ಒಂದು ಪರಿಸ್ಥಿತಿ ಇರಬಹುದು. ಅದನ್ನೇ ದೊಡ್ಡದು ಮಾಡುವುದರಿಂದ ಪ್ರಯೋಜನವಿಲ್ಲ. ನಾನು ವಿರೋಧ ಪಕ್ಷದವರಿಗೆ ಒಂದು ಸಲಹೆಯನ್ನು ಕೊಡುತ್ತೇನೆ, ಅದು ಏನೆಂದರೆ ನಿಜವಾಗಿಯೂ

ರಾಜ್ಯದ ಜನತೆಗೆ ಸೇವೆ ಸಲ್ಲಿಸಬೇಕು ಎನ್ನುವ ದೃಷ್ಟಿಯಿಂದ ವಾಸ್ತವವಾಗಿರತಕ್ಕ ಪರಿಸ್ಥಿತಿಯನ್ನು ಹೇಳುವುದು ಅತ್ಯಗತ್ಯ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಇಷ್ಟು ಕಾಲವನ್ನು ಒದಗಿಸಿದ್ದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ.

†ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕ 1973-74ನೇ ಇಸವಿಯ ಆಯವ್ಯಯವನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಡಳಿತ ಪಕ್ಷದ ಕೆಲವು ಮಾನ್ಯ ಸದಸ್ಯರು ಆಯವ್ಯಯವನ್ನು ಹೊಗಳಿದ್ದಾರೆ. ಕೆಲವು ಮಾನ್ಯ ಸದಸ್ಯರು ಈ ಆಯವ್ಯಯ ಕಾಮಧೇನು ಎಂದು ಹೇಳಿದ್ದಾರೆ. ಕೆಲವು ಮಾನ್ಯ ಸದಸ್ಯರು ಇಂಥಾ ಆಯವ್ಯಯವನ್ನು ಹಿಂದೆ ಎಂದೂ ಇಟ್ಟಿಲ್ಲ, ಮುಂದೆ ಇಡುವುದಿಲ್ಲ ಎಂದು ಹೊಗಳಿ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಆಯವ್ಯಯವನ್ನು ಕಾಮಧೇನುವಿಗೆ ಹೋಲಿಸಿರತಕ್ಕ ಔಚಿತ್ಯ ಏನು ಎಂದು ನಾನು ಪ್ರಶ್ನೆ ಮಾಡುತ್ತೇನೆ. ಹಳ್ಳಿಗಳ ಕಡೆ ಕೆಲವು ರೈತರು ಹಾಲು ಕೊಡದೇ ಇರತಕ್ಕ ಗೊಡ್ಡು ಹಸುಗಳನ್ನು ಇಟ್ಟುಕೊಂಡಿರುತ್ತಾರೆ. ಅಂಥಾ ಹಸುಗಳಿಗೆ ಈ ಆಯವ್ಯಯ ಪಟ್ಟಿಯನ್ನು ಹೋಲಿಸಿದ್ದರೆ ಚೆನ್ನಾಗಿತ್ತು. ಈ ಆಯವ್ಯಯದಿಂದ ದೇಶದ ಆರ್ಥಿಕ ಪರಿಸ್ಥಿತಿಗೆ ಉತ್ತೇಜನ ಬರತಕ್ಕಂಥಾ ಯಾವ ವಿಧವಾದ ಒಂದು ಸಂಗತಿಯನ್ನೂ ಇದರಲ್ಲಿ ಅಳವಡಿಸಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಇದಕ್ಕಿಂತ ಉತ್ತಮವಾದ ಬಡ್ಜೆಟನ್ನು ಮಂಡಿಸಬೇಕಾಗಿತ್ತು ಎಂದು ನಾನು ಹೇಳುತ್ತೇನೆ.

ಹಿಂದೆ ಆಡಳಿತ ಪಕ್ಷದವರು ಚುನಾವಣೆಯಲ್ಲಿ ಗೆದ್ದು ಬಂದಾಗ ಜನತೆಯ ಮುಂದೆ ಅನೇಕ ಆಶೋತ್ತರಗಳನ್ನು ಇಟ್ಟಿದ್ದರು. ಈ [illegible] ಅವರ ಆಶೋತ್ತರಗಳ ಈಡೇರಿಕೆಗೆ ಅನುಕೂಲವಾದಂತಹ ಬಡ್ಜೆಟ್ಟನ್ನು ಮಂಡಿಸಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಕಳೆದ ಎರಡು ವರ್ಷಗಳಿಂದ ಜನ ಅನೇಕ ವಿಧವಾದ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಒಂದು ವರ್ಷದ ಹಿಂದೆ ಸಾಧಾರಣವಾಗಿ 200–300 ರೂಪಾಯಿಗಳಿಂದ ಜೀವನ ಮಾಡತಕ್ಕ ಸಂಸಾರ ಇಂದು 500—600 ರೂಪಾಯಿಗಳನ್ನು ಖರ್ಚು ಮಾಡಿದರೂ ಜೀವನ ಮಾಡುವುದಕ್ಕೆ ಕಷ್ಟಪರಿಸ್ಥಿತಿ ಇದೆ. ಇವೊತ್ತು ಜೀವನಾವಶ್ಯಕ ವಸ್ತುಗಳ ಬೆಲೆಗಳು ಒಂದಕ್ಕೆರಡರಷ್ಟಾಗಿ ಬೆಲೆಗಳು ಗಗನಕ್ಕೆ ಏರುತ್ತಿವೆ. ಇದನ್ನು ಒಂದು ಕಂಟ್ರೋಲಿಗೆ ತರುವ ವ್ಯವಸ್ಥೆ ಕೂಡ ಅಳವಡಿಸಿಲ್ಲ. ನಿರುದ್ಯೋಗ ಸಮಸ್ಯೆ ದೇಶದಲ್ಲಿ ಬೃಹದಾಕಾರವಾಗಿ ಬೆಳೆಯುತ್ತಿದೆ. ಇದನ್ನು ಹೋಗಲಾಡಿಸುವುದಕ್ಕೆ ಸರ್ಕಾರ ಸರ್ಕಾರಿ ಅಧಿಕಾರಿಗಳ ವರ್ಗವನ್ನು ಹೆಚ್ಚು ಮಾಡುತ್ತಾ ಹೋಗುತ್ತಿದ್ದಾರೆ. ಯಾವ ವಿಧದಲ್ಲೂ ಕೂಡ ಈ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಇದರಲ್ಲಿ ಕಾರ್ಯಕ್ರಮವನ್ನು ಅಳವಡಿಸಿಲ್ಲ.

(ಈ ಸಂದರ್ಭದಲ್ಲಿ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ನಮ್ಮ ದೇಶದ ವಿದ್ಯಾಭ್ಯಾಸ ಪದ್ಧತಿ ಮಾರ್ಪಾಟಾಗಿದ್ದರೆ ಇಂಥಾ ಒಂದು ಕಷ್ಟಪರಿಸ್ಥಿತಿ ಬರುತ್ತಾ ಇರಲಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇಂದು ನಮ್ಮ ರಾಜ್ಯದ ಉತ್ಪತ್ತಿ 300 ಕೋಟಿ ರೂಪಾಯಿಗಳು ಇದೆ. ಇದರಲ್ಲಿ 137 ಕೋಟಿ ರೂಪಾಯಿಗಳು ಸರ್ಕಾರದ ಅಧಿಕಾರಿಗಳ ಸಂಬಳ ಸಾರಿಗೆಗೇ ಖರ್ಚಾಗುತ್ತಿದೆ. ಈ ರೀತಿ ಉತ್ಪತ್ತಿ ಬಾರದೆ ಇರುವಂತಹ ಈ ರೀತಿ ಹಣವನ್ನು ಖರ್ಚು ಮಾಡುತ್ತಾ ಹೋದರೆ ದೇಶದ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿಯಾಗುವುದು ಅನುಮಾನಾಸ್ಪದ. ಈಗ ಹಾಲಿ ಇರತಕ್ಕ ಅಧಿಕಾರವರ್ಗದವರಿಗೆ ಸಾಕಷ್ಟು ಸಂಬಳ ಸಾರಿಗೆಯನ್ನು ಕೊಟ್ಟು ಹೆಚ್ಚು ಕೆಲಸಕಾರ್ಯಗಳನ್ನು ಮಾಡಿದ್ದರೆ ಅಧಿಕಾರವರ್ಗದವರನ್ನು ಹೆಚ್ಚು ಮಾಡತಕ್ಕ ಅವಶ್ಯಕತೆ ಇರಲಿಲ್ಲ. ಶ್ರೀಮಾನ್ ಪುಟ್ಟಸ್ವಾಮಿಯವರು ಇವೊತ್ತಿನ ದಿವಸ ಈ ದೇಶದಲ್ಲಿರತಕ್ಕ ಪರಿಸ್ಥಿತಿಗೆ ಬಾಂಗ್ಲಾ ದೇಶದ ವ್ಯವಹಾರವೇ ಕಾರಣ ಎಂದು ಹೇಳಿದ್ದಾರೆ. ಬಾಂಗ್ಲಾ ದೇಶದ ಪ್ರಶ್ನೆ ಬಂದಾಗ ಇಡೀ ದೇಶದ ಜನತೆ ಒಂದೂಗೂಡಿ ಒಕ್ಕೊರಲಿನಿಂದ ಕೂಗಿ ಬಾಂಗ್ಲಾ ದೇಶಕ್ಕೆ ಸಹಾಯ ಮಾಡಿದ್ದೇವೆ. ಹೆಚ್ಚಿಗೆ ತೆರಿಗೆ ಕೂಡ ಜನತೆ ಕೊಟ್ಟಿದ್ದಾರೆ. ಯಾವ ಒಂದು ಭಿನ್ನಾಭಿಪ್ರಾಯವೂ ಇಲ್ಲದೆ ಸರ್ಕಾರದ ಅಭಿಪ್ರಾಯವನ್ನು ಒಪ್ಪಿಕೊಂಡು ಆ ಒಂದು ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸರ್ಕಾರಕ್ಕೆ ಜನತೆ ಸಹಾಯ ಮಾಡಿದೆ. ಮತ್ತು ಸರ್ಕಾರದವರು ಮಾಡತಕ್ಕ ಕೆಲಸಕಾರ್ಯಗಳಿಗೆ ವಿರೋಧ ಪಕ್ಷದವರು ಯಾವ ಒಂದು ಅಡಚಣೆಯನ್ನೂ ಮಾಡಿಲ್ಲ. ಸರ್ಕಾರದವರು ಇತ್ತೀಚೆಗೆ ಇನ್ನೊಂದು ವಿಷಯವನ್ನು ಹೇಳುತ್ತಿದ್ದಾರೆ ಅದೇನೆಂದರೆ ಸರ್ಕಾರದವರು ಮಾಡತಕ್ಕ ಪ್ರಗತಿಪರ ಕಾರ್ಯಗಳಲ್ಲಿ ವಿರೋಧ ಪಕ್ಷದವರು ಅಡಚಣೆಯನ್ನುಂಟು ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಈಗ ವಿರೋಧ ಪಕ್ಷದ ಸಂಖ್ಯೆ ಬಹಳ ಕಡಿಮೆ ಇದೆ. ಆಡಳಿತ ಪಕ್ಷದವರ ಸಂಖ್ಯೆ ಜಾಸ್ತಿ ಇದೆ. ರಚನಾತ್ಮಕವಾದ ಮತ್ತು ಉತ್ತಮವಾದ ಕೆಲಸ ಕಾರ್ಯಗಳನ್ನು ವಿರೋಧಪಕ್ಷದವರು ಎಂದಿಗೂ ಕೂಡ ವಿರೋಧ

(ಶ್ರೀ ಕೆ. ಎಚ್. ಹನುಮೇಗೌಡ)

ನಡೆಯಬೇಕಾದ ತಾಲ್ಲೂಕು ಬೋರ್ಡು ಚುನಾವಣೆಯನ್ನು ಸಹ ಮತ್ತೆ ಮುಂದಕ್ಕೆ ಹಾಕಿ ಅಡ್ಮಿನಿಸ್ಟ್ರೇಟರುಗಳನ್ನು ನೇಮಕ ಮಾಡಿರುವುದು ಎಲ್ಲಕಿಂತಲೂ ಹೆಚ್ಚಿನ ಪಾಪದ ಕೆಲಸ. ಈ ರೀತಿ ನಿಮ್ಮ ಪಕ್ಷದವರು ಮಾಡುವುದನ್ನು ಜನರು ಎಂದಿಗೂ ಕ್ಷಮಿಸಲಾರರು ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ ಜನತೆಯ ಮೇಲೆ ನಿಮಗೆ ಅನುಕಂಪ ಮತ್ತು ಮಾನವೀಯತೆ ಇದ್ದರೆ ಅವುಗಳನ್ನು ರದ್ದು ಮಾಡದೆ ಜಾಗ್ರತೆಯಾಗಿ ಚುನಾವಣೆಯನ್ನು ಮಾಡಬೇಕು; ಇಲ್ಲದಿದ್ದರೆ ಕೊನೆಯ ಪಕ್ಷ 6 ತಿಂಗಳಾದರೂ ಇದ್ದ ಪ್ರತಿನಿಧಿಗಳನ್ನೇ ಮುಂದುವರಿಸಬೇಕೆಂದು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಅಂದಾನಪ್ಪ (ಹಡಗಲಿ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಾನ್ಯ ಅರ್ಥಸಚಿವರು ಮಂಡಿಸಿರತಕ್ಕ ಈ ಬಡ್ಜೆಟನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ಅನೇಕ ಕಾರಣಗಳಿಂದ ಈ ಒಂದು ಬಡ್ಜೆಟ್ಟನ್ನು ನಾನು ಬೆಂಬಲಿಸುತ್ತಾ ಇದ್ದೇನೆ. ನನ್ನ ಇತರೇ ಸ್ನೇಹಿತರು ಹಾಗೂ ಮಾನ್ಯ ಶ್ರೀ ಪುಟ್ಟಸ್ವಾಮಯ್ಯನವರು ಕೊಟ್ಟಂಥ ಕಾರಣಗಳನ್ನು ಬಿಟ್ಟು ಒಂದೆರಡು ಎದ್ದು ಕಾಣತಕ್ಕಂಥ ಕಾರಣಗಳನ್ನು ಮಾತ್ರ ನನಗೆ ಕೊಟ್ಟಿರುವ ಸಮಯದಲ್ಲಿ ಹೇಳಬಯಸುತ್ತೇನೆ. ಈಗ ಅರ್ಥಸಚಿವರು ಏನು ಇಲ್ಲಿ ಬಡ್ಜೆಟ್ಟನ್ನು ಮಂಡಿಸಿದ್ದಾರೆಯೋ ಅದು ಬಹಳ ಮುತ್ಸದ್ಧಿತನದ ಹಾಗೂ ದಿಟ್ಟವಾದಂಥ ದೂರದೃಷ್ಟಿಯುಳ್ಳ ಬಡ್ಜೆಟ್ ಎಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ, ಈ ಒಂದು ದೇಶದ ಆರ್ಥಿಕ ಹಿನ್ನೆಲೆಯನ್ನು ನಾವು ಗಮನದಲ್ಲಿಟ್ಟುಕೊಂಡು ನೋಡಿದರೆ ಇಂತಹ ಒಂದು ಆರ್ಥಿಕ ಕಷ್ಟಪರಿಸ್ಥಿತಿಯಲ್ಲಿ ಈ ಬಡ್ಜೆಟ್ ಮತ್ತು ಇದರಲ್ಲಿರತಕ್ಕಂಥ ಒಂದು ಒಳ್ಳೆಯ ಕಾರ್ಯಕ್ರಮವನ್ನು ನಾವು ಗಣನೆಗೆ ತೆಗೆದುಕೊಂಡರೆ ಯಾವ ಕಾಲದಲ್ಲೂ ಇಂತಹ ಮುತ್ಸದ್ದಿತನದ ಬಡ್ಜೆಟ್ ಈ ಸಭೆಯ ಮುಂದೆ ಬಂದಿರಲಿಲ್ಲವೆಂದು ನಾನು ಭಾವಿಸುತ್ತೇನೆ. ಕಾಂಗ್ರೆಸ್ ಪಕ್ಷದ ತತ್ವಗಳು ಏನಿವೆಯೋ ಅವುಗಳ ಪ್ರಕಾರ ಸಮಾಜವಾದೀ ಸಮಾಜ ರಚನೆಯಲ್ಲಿ ದೀನದಲಿತರ ಉದ್ಧಾರ, ಗರೀಬೀ ಹಠಾವೊ ತತ್ವಗಳೂ ಅದೇ ರೀತಿಯಾಗಿವೆ ಇವುಗಳನ್ನು ಸ್ಥಾಪನೆ ಮಾಡುವುದರಲ್ಲಿ ಈ ಬಡ್ಜೆಟ್ ಮೊದಲನೆಯದಾಗಿ ದಿಟ್ಟ ಹೆಜ್ಜೆ ಇಟ್ಟಿದೆ ಎಂಬುದಾಗಿ ನನ್ನ ಅಭಿಪ್ರಾಯವಿದೆ. ನಾನು ಈ ಸಂದರ್ಭದಲ್ಲಿ ಮೊಟ್ಟಮೊದಲನೆಯದಾಗಿ ಯಾವ ಸರ್ಕಾರವೇ ಆಗಲೀ ಯಾವ ಕಾಲದಲ್ಲಾದರೂ ಸ್ವಾತಂತ್ರ್ಯ ಬಂದಮೇಲೆ ಬಡವರ ಮೇಲೆ ದಯೆ ತೋರಿ ಎಂದಾದರೂ ಮನೆ ಕಟ್ಟಿಕೊಡುವುದಕ್ಕೆ ಪ್ರಯತ್ನಮಾಡಿದ್ದಾರೆಯೋ ಎಂದು ನಾನು ಪ್ರಶ್ನೆ ಕೇಳುತ್ತೇನೆ. ಹಿಂದೆ ಬಡವರು ನಾಲ್ಕು ಗುಡಿಸಲುಗಳನ್ನು ಹಾಕಿಕೊಂಡರೆ, ಬಂಡವಾಳಷಾಹಿಗಳು ಅರ್ಜಿ ತೆಗೆದುಕೊಂಡು ಹೋಗಿ ಅವರು ಖುದ್ದು ಒಡಿಸುತ್ತಿದ್ದಂಥ ಸರ್ಕಾರಗಳನ್ನು ನಾವು ನೋಡಿದ್ದೇವೆ. ಇದಲ್ಲದೇ ಇವತ್ತಿನ ದಿವಸ ಅರ್ಥಸಚಿವರು ಬಡವರಿಗಾಗಿ ಮನೆಗಳನ್ನು ಕಟ್ಟಿಕೊಡುವುದಕ್ಕೆ [illegible] ಕೋಟಿ ರೂಪಾಯಿಗಳನ್ನು ಮೊಟ್ಟಮೊದಲನೆಯದಾಗಿ ಅಖಂಡವಾಗಿ ಬಡ್ಜೆಟ್ಟಿನಲ್ಲಿ ಹಾಕಿರುವುದು ನಮ್ಮ ಸಮಾಜವಾದ ಸಮಾಜ ರಚನೆಗೆ ಮೊದಲನೆಯ ಹೆಜ್ಜೆ ಎಂಬುದಾಗಿ ನಾನು ಭಾವಿಸುತ್ತೇನೆ. ಯಾವ ಸರ್ಕಾರವೇ ಆಗಲಿ ಇದುವರೆಗೆ ಬಡವರ ಕಡೆಗೆ ತನ್ನ ದೃಷ್ಟಿಯನ್ನು ಹರಿಸಿರಲಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಈ ದಿನದ ಒಂದು ಬಡ್ಜೆಟ್ ಹಿಂದೆ ಬೇಕಾದಷ್ಟು ಡಿಫಿಸಿಟ್ ಬಡ್ಜೆಟ್‌ಗಳನ್ನು ತಯಾರು ಮಾಡಿದ್ದರೂ ಕೂಡ ಅವುಗಳಲ್ಲಿ ಒದಗಿಸಿದ್ದಂಥ ದುಡ್ಡು ಕಂಟ್ರಾಕ್ಟರ್ಸ್ ಮನೆಗೆ, ಬಂಡವಾಳಷಾಹಿಯಾಗಿರತಕ್ಕವರ ಮನೆಗೆ ಮತ್ತು ದೊಡ್ಡದೊಡ್ಡ ಕಾರ್ಖಾನೆಗಳ ಮಾಲೀಕರುಗಳಿಗೆ ಹೋಗುತ್ತಿತ್ತು. ಇವತ್ತು ಅಂತಹ ಒಂದು ಪರಿಸ್ಥಿತಿಯನ್ನು ತಪ್ಪಿಸಿ ನಿಜವಾಗಿ ಕಾಂಗ್ರೆಸ್ ಪಕ್ಷದ ಧ್ಯೇಯ ಧೋರಣೆಗಳು ಏನಿವೆಯೋ ಆ ಬಗ್ಗೆ ಅರ್ಥಸಚಿವರು ಯೋಚನೆಮಾಡಿ ಬಡವರಿಗೆ ನಿವೇಶನಗಳನ್ನು ಕೊಡುವುದು ಬಡವರಿಗೆ ಮನೆಗಳನ್ನು ಕಟ್ಟುವುದಕ್ಕೆ ದುಡ್ಡು ಕೊಡುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಾಕಿಕೊಟ್ಟಿರುವುದು ಇದೇ ಮೊದಲನೆಯ ಸಲವೆಂದು ನಾನು ಹೇಳಬಯಸುತ್ತೇನೆ. ಮತ್ತೆ ಇನ್ನೊಂದು ಬಹಳ ಪ್ರಾಮುಖ್ಯವಾದಂಥ ಕಾರಣ ಈ ಬಡ್ಜೆಟ್ಟನ್ನು ನಾನು ಬೆಂಬಲಿಸುವುದಕ್ಕೆ ಇಡೀ ಹಿಂದೂಸ್ಥಾನದಲ್ಲಿ ಕೇಂದ್ರಸರ್ಕಾರದ ಮತ್ತು ಪ್ರಾಂತಸರ್ಕಾರಗಳ ನೌಕರರ ಡಿ. ಎ. ಯನ್ನು ಸರಿಸಮಾನಗೊಳಿಸಿರುವುದು ಮೊಟ್ಟಮೊದಲನೆಯದಾಗಿ ನಮ್ಮ ಸರ್ಕಾರ ಎಂಬುದಾಗಿ ನಾನು ಹೇಳಬೇಕಾಗಿದೆ. ಈ ಒಂದು ಕೀರ್ತಿ ಮೈಸೂರು ಸರ್ಕಾರಕ್ಕೆ ಹಿಂದೂಸ್ಥಾನದಲ್ಲಿ ಮೊಟ್ಟಮೊದಲನೆಯದಾಗಿ ಸಲ್ಲಬೇಕು ಮತ್ತು ಇದರ ಕೀರ್ತಿ ಹೆಚ್ಚಿನದಾಗಿ ಮಾನ್ಯ ಅರ್ಥಸಚಿವರಿಗೆ ಸಲ್ಲಬೇಕೆಂದು ನಾನು ಭಾವಿಸುತ್ತೇನೆ. ಯಾವ ಸರ್ಕಾರವೇ ಆಗಲೀ ಇಂತಹ ಒಂದು ದಿಟ್ಟಹೆಜ್ಜೆಯನ್ನು ಇಟ್ಟಿದ್ದನ್ನು ನಾನು ನೋಡಲಿಲ್ಲ. ಇದು ಬಹಳ ಧೈರ್ಯವಾದ

ಹೆಜ್ಜೆ ಎಂದು ನಾನು ಭಾವಿಸುತ್ತೇನೆ. ಇದಲ್ಲದೆ ಮತ್ತೊಂದು ಬಹಳ ಪ್ರಾಮುಖ್ಯವಾದಂಥ ಅಂಶ, ಈ ಬಡ್ಜೆಟಿನಲ್ಲಿ ಈಗ ದೇಶಕ್ಕೆ ಒದಗಿರುವ ಬರಗಾಲ ಪರಿಸ್ಥಿತಿಯಲ್ಲಿ ಹೆಚ್ಚಿಗೆ ಸರ್ಕಾರ ಚಿಕ್ಕ ನೀರಾವರಿ ಯೋಜನೆಗಳ ಕಡೆಗೆ ತನ್ನ ಗಮನವನ್ನು ಹರಿಸತಕ್ಕದ್ದು ಬಹಳ ಪ್ರಾಮುಖ್ಯವಾದಂಥ ವಿಚಾರ. ನಾವು ಈಗ 3—4 ದಿವಸಗಳ ಕೆಳಗೆ ಪತ್ರಿಕೆಯಲ್ಲಿ ಮಾನ್ಯ ಶ್ರೀ ನಿಜಲಿಂಗಪ್ಪನವರ ಹೇಳಿಕೆಯನ್ನೂ ಸಹ ನಾನು ಓದಿದ್ದೇನೆ. ಅದೇನೆಂದರೆ, ಅವರ ಸರ್ಕಾರ ಮಾಡಿದಷ್ಟು ನೀರಾವರಿ ಯೋಜನೆಗಳನ್ನು ಇನ್ನಾವ ಸರ್ಕಾರವು ಇದುವರೆಗೂ ಮಾಡಲಿಲ್ಲವೆಂದು ಹೇಳಿಕೊಂಡಿದ್ದಾರೆ. ಇದು ಬಹಳ ನಿಜವಾಗಿ ಒಂದು ಆಶ್ಚರ್ಯಕರವಾದ ಸುದ್ದಿ. ಇದನ್ನು ನಾವು ಎಲ್ಲಿಯೂ ಕೇಳಿಲಿಲ್ಲ. ಅಂಥಾದ್ದು ಇದ್ದರೆ ಅಂಕಿ ಅಂಶಗಳಿಂದ ಸಂಸ್ಥಾ ಕಾಂಗ್ರೆಸ್ ಸ್ನೇಹಿತರು ಅವುಗಳನ್ನು ಒದಗಿಸಿ ಈ ಸಭೆಗೆ ಒಪ್ಪಿಸುವುದು ಅವರ ಕರ್ತವ್ಯವಿದೆ.

ಶ್ರೀ ಎಸ್. ಎಸ್. ಸಿದ್ಧಪ್ಪ.—ಒಂದು ದಿವಸ ನಿಮ್ಮನ್ನು ಊಟಕ್ಕೆ ಕರೆಯೋಣ.

ಶ್ರೀ ಸಿ. ಅಂದಾನಪ್ಪ.—ನಾವೂ ಆ ರೀತಿ ಬರುವುದಕ್ಕೆ ಸಿದ್ಧವಾಗಿದ್ದೇವೆ. ಆದರೆ ಅಂಕಿ ಅಂಶಗಳನ್ನು ಸನ್ಮಾನ್ಯ ಅರ್ಥಸಚಿವರು ಒದಗಿಸಿದ್ದಾರೆ ಮುಖ್ಯವಾಗಿ 8 ಜಿಲ್ಲೆಗಳ ಕಾರ್ಯಕ್ರಮಗಳ ಬಗ್ಗೆ ನಮ್ಮ ಮುಂದೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ನೋಡಿದರೆ ಎಲ್ಲವೂ ಅರ್ಥವಾಗುತ್ತದೆ. ಈಗ 8 ಜಿಲ್ಲೆಗಳು ಅಂದರೆ, ಹೈದರಾಬಾದ್ ಕರ್ಣಾಟಕ, ಮುಂಬೈ ಕರ್ಣಾಟಕ, ಬೆಳಗಾಂ, ಧಾರವಾಡ, ಬಿಜಾಪುರ, ಬಳ್ಳಾರಿ ಮತ್ತು ಚಿತ್ರದುರ್ಗ, ಮತ್ತು ಬಿದರ್ ಜಿಲ್ಲೆಗಳ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇವುಗಳನ್ನು ನೋಡಿದರೆ ಜೂನ್ ಆಖೈರಿನೊಳಗೆ 3ರಿಂದ 4ಲಕ್ಷ ಎಕರೆಗಳವರೆಗೆ ಚಿಕ್ಕ ನೀರಾವರಿ ಯೋಜನೆಯಲ್ಲಿ ನೀರಾವರಿಯಾಗುತ್ತದೆ. ಇಂತಹ ಒಂದು ಬೃಹತ್ ಯೋಜನೆಯನ್ನು ಹಿಂದೆ ಯಾವ ಸರ್ಕಾರ ಮಾಡಿದೆ ಎಂದು ನಾನು ಪ್ರಶ್ನೆ ಕೇಳುತ್ತೇನೆ. ಇದಲ್ಲದೆ ಇನ್ನೂ ಬಹಳ ಪ್ರಾಮುಖ್ಯವಾದಂಥ ಅಂಶವನ್ನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಅದೇನೆಂದರೆ ಯಾವ ಕಾಲದಲ್ಲಿಯೇ ಆಗಲೀ ಈಗಿನ ಸರ್ಕಾರದಂತೆ ಒಂದು ಯೋಜಿತ ರೀತಿಯಿಂದ ಕೆಲಸಮಾಡತಕ್ಕ ಒಂದು ಪದ್ಧತಿಯನ್ನು ಹಿಂದೆ ನಾವು ನೋಡಲೇ ಇಲ್ಲ. ಏತಕ್ಕೆಂದರೆ ಎಲ್ಲಾ ಯೋಜನೆಗಳು, ಎಲ್ಲಾ ಖರ್ಚಿನ ಬಾಬುಗಳು ದೊಡ್ಡದೊಡ್ಡ ಪಟ್ಟಣಗಳಿಗೆ ಹಾಗೂ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಮಾತ್ರ ಖರ್ಚುಮಾಡಿದರೇ ವಿನಹ ನಿಜವಾಗಿಯೂ ಹಳ್ಳಿಗಳ ಉದ್ಧಾರಕ್ಕಾಗಿ ಸರ್ಕಾರ ತನ್ನ ಗಮನವನ್ನು ಹರಿಸಿರಲಿಲ್ಲ. ಇವತ್ತು ನಮ್ಮ ಬಡ್ಜೆಟ್ಟನ್ನು ಅಂದರೆ ಈಗಿನ ನಮ್ಮ ಆಯವ್ಯಯ ಪತ್ರಿಕೆಯನ್ನು ನೋಡಿದರೆ ಸರ್ಕಾರದ ದೃಷ್ಟಿಯಲ್ಲಿ ಸರ್ಕಾರದ ಉದ್ದೇಶ ಹಾಗೂ ಗಮನ ನಿಜವಾಗಿ ಹಳ್ಳಿಗಳ ಉದ್ಧಾರದ ಕಡೆಗೇ ಹರಿಯುತ್ತಿದೆಂಬುದು ಸ್ಪಷ್ಟವಾಗುತ್ತದೆ. ಯಾವ ಕಾಲದಲ್ಲಿಯೇ ಆಗಲೀ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಮತ್ತು ಪ್ರತಿಯೊಂದು ಹಳ್ಳಿಯಲ್ಲಿಯೂ ಯಾವ್ಯಾವ ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯವಿದೆ ಎನ್ನುವ ಒಂದು ಯೋಜನೆಯನ್ನು ಎಂದಾದರೂ ತಯಾರುಮಾಡಿದ್ದರೆ ಸಂಸ್ಥಾ ಕಾಂಗ್ರೆಸ್ ಸ್ನೇಹಿತರು ಅವುಗಳನ್ನು ತೋರಿಸಬೇಕೆಂದು ನಾನು ಪ್ರಶ್ನೆಮಾಡುತ್ತೇನೆ. ಇವರು ಮಾಡಿದ ಹಾಗೆ ಇದುವರೆಗೂ ಯಾರೂ ತಯಾರುಮಾಡಲಿಲ್ಲ.

ಆದ ಕಾರಣ ಈ ಒಂದು ದೃಷ್ಟಿಯಿಂದ ಈ ಬಡ್ಜೆಟ್ ಬಹಳ ಪ್ರಾಮುಖ್ಯವಾದದ್ದು. ಇದನ್ನು ನಮ್ಮ ಅರ್ಥಸಚಿವರು ಬಹಳ ಮುತ್ಸದ್ದಿತನದಿಂದ ತಯಾರಿಸಿದ್ದಾರೆ ಎಂದು ನಾನು ಹೇಳಬಯಸುತ್ತೇನೆ.

ಇದರಲ್ಲಿ ಸಣ್ಣ ನೀರಾವರಿ ಯೋಜನೆ ಮತ್ತು ಮಧ್ಯವರ್ಗದ ನೀರಾವರಿಯೋಜನೆಗಳನ್ನು ಕೈಗೊಳ್ಳಲು ಈಗಿನ ಬಡ್ಜೆಟ್ಟನಲ್ಲಿ ಸಾಕಷ್ಟು ಹಣವನ್ನು ಒದಗಿಸಿದ್ದಾರೆ. ದೇಶವೆಲ್ಲ ಈ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದು ಸರ್ಕಾರದವರ ಆಧ್ಯಕರ್ತವ್ಯ. ಈ ದಿಶೆಯಲ್ಲಿ ಸಣ್ಣ ಪುಟ್ಟ ನೀರಾವರಿ ಯೋಜನೆಗಳನ್ನು ಅಭಿವೃದ್ಧಿಗೊಳಿಸಿ ತನ್ಮೂಲಕ ಸಣ್ಣ ಪುಟ್ಟ ರೈತರ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವುದಕ್ಕೆ ಒಂದು ಒಳ್ಳೆಯ ಬಡ್ಜೆಟ್ಟನ್ನು ತಯಾರಿಸಿದ್ದಾರೆಂದೂ ಇದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟು ಅಧ್ಯಕ್ಷರು ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

† ಶ್ರೀ ಕೆ. ಶ್ರೀರಾಮುಲು (ಗಾಂಧೀನಗರ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಆಯವ್ಯಯ ಪತ್ರದಲ್ಲಿ ಹಲವಾರು ವಿಷಯಂಗಳಿಗೆ ಸಂಬಂಧ ಪಟ್ಟಂತೆ ಅನೇಕ ಒಳ್ಳೊಳ್ಳೆಯ ವಿಷಯಗಳನ್ನು ಅಳವಡಿಸಿ ತಯಾರಿಸಿರತಕ್ಕ ಒಂದು ಆಯವ್ಯಯ ಪಟ್ಟಿಯನ್ನು ಅವರು ಸಭೆಯ ಮುಂದಿಟ್ಟಿದ್ದಾರೆ. ಅವರು ಬಹಳ ಜಾಣ್ಮೆಯಿಂದ ಈ ಆಯವ್ಯಯ ಪಟ್ಟಿಯನ್ನು ತಯಾರಿಸಿದ್ದಾರೆ. ಇದ್ದ ಹಣಕಾಸಿನ ಪರಿಸ್ಥಿತಿಯಲ್ಲಿ ಎಷ್ಟು ಮಟ್ಟಿಗೆ ದೇಶದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಬಹುದೋ ಅಷ್ಟರ ಮಟ್ಟಿಗೆ ಇದನ್ನು ತಯಾರು ಮಾಡಿದ್ದಾರೆಂದು ಹೇಳಬಹುದು. ಮಾನ್ಯ ಅರ್ಥ ಸಚಿವರು ಬಹಳ ಒಳ್ಳೆಯ ವ್ಯಕ್ತಿಗಳು. ಅವರು ತಮ್ಮ ಬಡ್ಜೆಟ್ಟಿನಲ್ಲಿ ಆದಮಟ್ಟಿಗೆ ನಿಜವನ್ನೇ ಹೇಳಿಕೊಂಡು ಬರುತ್ತಿದ್ದಾರೆ. ಆದರೆ ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳದೆ ಇರಲಾರೆ. ಕಳೆದ 25 ವರ್ಷಗಳಿಂದಲೂ ಹಾದಿಗೆ ಬಾರದೆ ಇದ್ದಂಥ ಆರ್ಥಿಕ ಪರಿಸ್ಥಿತಿಯನ್ನು ಇವರು ಎಷ್ಟೇ ಬುದ್ಧಿವಂತರಾದರೂ ಒಂದೆರಡು ವರ್ಷಗಳಲ್ಲಿ ಇದನ್ನೆಲ್ಲಾ ಸರಿಪಡಿಸುತ್ತಾರೆಂದು ಯಾರಾದರೂ ನಂಬಿದ್ದರೆ ಅದು ಸರಿಯಲ್ಲ ಎಂದು ನಾನು ಹೇಳಬೆ ವಿಧಿಯಿಲ್ಲ. ಆದರೆ ಈ ಸಂದರ್ಭದಲ್ಲಿ ನಾನು ಏನು ಒಂದನ್ನು ಹೇಳಬಹುದು ಅಂದರೆ ನಮ್ಮ ಆರ್ಥಿಕ ಸಚಿವರು ಬಹಳ ಹಳೇ ರಥವನ್ನು ಓಡಿಸುತ್ತಿದ್ದಾರೆ. ಆದರೆ ಈ ಸಾರಥಿಗಳೇನೋ ಬಹಳ ದಕ್ಷರೇ ಹೌದು. ಆದರೆ ರಥ ಹಳೆಯದು. ಇದರ ಅನೇಕ ಭಾಗಗಳು ಸವೆದಿವೆ, ಈ ರಥ ಬ್ರಿಟಿಷರ ಕಾಲದಿಂದಲೂ ಓಡುತ್ತಿದೆ. ಇದರಲ್ಲಿ ಯಾವ ಯಾವ ಭಾಗಗಳು ಎಲ್ಲೆಲ್ಲಿರಬೇಕೋ ಅಲ್ಲಿಂದ ಅವುಗಳನ್ನು ಕಿತ್ತು ಹಾಕಿದ್ದಾರೆ. ಈ ವಿಚಾರವನ್ನು ಯಾರು ನಮ್ಮ ಆರ್ಥಿಕ ಸಚಿವರ ಬಡ್ಜೆಟ್ಟನ್ನು ಟೀಕೆ ಮಾಡುತ್ತಿದ್ದಾರೋ ಅವರು ಇದನ್ನು ಗಮನದಲ್ಲಿಟ್ಟುಕೊಂಡು ಟೀಕೆ ಮಾಡಬೇಕು ಎಂಬುದಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಈ ನಿಜಾಂಶವನ್ನು ತಿಳಿಯದೆ ಟೀಕೆ ಮಾಡುವುದು ಸರಿಯಾದದ್ದಲ್ಲ. ಈ ಮಧ್ಯೆ ಯಾರು ಯಾರು ಅಧಿಕಾರಕ್ಕೆ ಬಂದರೋ ಅವರು ಈ ರಥದಲ್ಲಿದ್ದ ಒಳ್ಳೊಳ್ಳೆಯ ಭಾಗಗಳನ್ನು ಕಿತ್ತು ತಮ್ಮ ಸ್ವಂತಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. ಆದ್ದರಿಂದ ಈ ಪೂರ್ಣಚಿತ್ರ ಕಳೆದ 25 ವರ್ಷಗಳ ಚಿತ್ರವನ್ನು ಗಮನದಲ್ಲಿಟ್ಟುಕೊಂಡು ಟೀಕೆ ಮಾಡಬೇಕಾದ್ದು ಅಗತ್ಯ. ಆದರೆ ನಮ್ಮ ಇಂದಿನ ಅರ್ಥ ಸಚಿವರಾದರೂ ಕಳೆದ 25 ವರ್ಷಗಳ ಆರ್ಥಿಕಾಭಿವೃದ್ಧಿಯ ಒಂದು ಸಂಪೂರ್ಣ ಚಿತ್ರವನ್ನು ಅದರಲ್ಲೂ ದೇಶದಲ್ಲಿ ಉತ್ಪತ್ತಿ ಬಾಬಿನ ವಿಷಯದಲ್ಲಿ ಏನೇನಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಇದನ್ನು ತಯಾರಿಸಿದ್ದಾರೆಯೋ ಎಂದು ನೋಡಿದರೆ ಅದನ್ನು ಮಾಡಿದಂತೆ ನನಗೆ ಕಂಡುಬರುತ್ತಿಲ್ಲ. ಅದರ ಪ್ರಯತ್ನವನ್ನು ಇವರು ಕೂಡ ಮಾಡಿದಂತೆ ಕಂಡುಬರುತ್ತಿಲ್ಲ. ರಾಜ್ಯದಲ್ಲಿರತಕ್ಕ ಕೈಗಾರಿಕಾ ಬಾಬುಗಳಲ್ಲಿ ಯಾವು ಯಾವುದಕ್ಕೆ ಎಷ್ಟೆಷ್ಟು ಉತ್ಪಾದನಾ ಶಕ್ತಿ ಇದೆ ಅದರ ಪ್ರಕಾರ ಅಲ್ಲಿ ಉತ್ಪಾದನೆಯಾಗುತ್ತಿದೆಯೋ ಇಲ್ಲವೇ ಎಂಬುದನ್ನು ನೋಡಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯ. ಆ ಒಂದು ದೃಷ್ಟಿಯಿಂದ ಈ ಬಡ್ಜೆಟ್ಟನ್ನು ಪರಿಶೀಲಿಸಿದರೆ ಇವರು ಅದನ್ನು ಗಮನಕ್ಕೆ ತೆಗೆದುಕೊಂಡು ಇದನ್ನು ತಯಾರಿಸಿದ್ದಾರೆಂದು ಹೇಳಲಾರೆ. ಉದಾಹರಣೆಗೆ ಅನೇಕ ಹತ್ತಿ ಗಿರಣಿಗಳಿವೆ. ಒಂದು ಹತ್ತೀ ಗಿರಣಿಗೆ 30ಸಾವಿರ ಪೌಂಡ್ ಉತ್ಪತ್ತಿ ಮಾಡತಕ್ಕ ಕೆಪ್ಯಾಸಿಟಿ ಇದ್ದರೆ ಅಲ್ಲಿ ಉತ್ಪನ್ನವಾಗುವುದೆಷ್ಟು ಎಂದರೆ ಕೇವಲ 7 ಸಾವಿರ ಪೌಂಡ್ ಮಾತ್ರ. ಅಲ್ಲಿ 30 ಸಾವಿರ ಪೌಂಡ್ ಉತ್ಪನ್ನ ಮಾಡತಕ್ಕ ಮೆಷಿನರಿ ಇದ್ದರೂ ಅಷ್ಟನ್ನು ಮಾಡದೆ ಅಲ್ಲಿ 7 ಸಾವಿರ ಪೌಂಡನ್ನು ಉತ್ಪತ್ತಿಮಾಡಲಾಗುತ್ತಿದೆ. ಅಂದರೆ ಉತ್ಪತ್ತಿಯ ಸ್ಟೇಜಿನಲ್ಲೇ ಒಂದು ಕೋಟಿ 45 ಲಕ್ಷ ರೂಪಾಯಿಗಳ ಲುಕ್ಸಾನಾದಂತೆ. ಹಾಗೇ ಭದ್ರಾವತಿಯಲ್ಲಿ ಮತ್ತು ದಂಡೇಲಿಯಲ್ಲಿ ಪೇಪರ್ ಮಿಲ್ಲುಗಳಿವೆ. ಭದ್ರಾವತಿಯ ಪೇಪರ್ ಮಿಲ್ಲಿನಲ್ಲಿ 180 ಟನ್ ಮತ್ತು ದಾಂಡೇಲಿಯಲ್ಲಿ 60 ರಿಂದ 80 ಟನ್ ಉತ್ಪತ್ತಿಯಾಗುತ್ತದೆ. ಆದರೆ ಅಲ್ಲಿ ಅಷ್ಟು ಉತ್ಪತ್ತಿಯಾಗುತ್ತಿಲ್ಲ. ಆದರೆ ಖರ್ಚು ಮಾತ್ರ ಭದ್ರಾವತಿಯಲ್ಲಿ ಪೇಪರ್ ಮಿಲ್ಲಿನ ಖರ್ಚು ಬಿಲ್ಲು ಒಂದು ಕೋಟಿ ಬಂದರೆ ಆ ದಾಂಡೇಲಿಯ ಮಿಲ್ಲಿನಲ್ಲೂ ಒಂದು ಕೋಟಿಗೆ ಬಿಲ್ಲು ಬರುತ್ತಿದೆ. ನಮ್ಮ ಅರ್ಥಮಂತ್ರಿಗಳು ಇತ್ತ ಕಡೆಗೆ ಗಮನವನ್ನು ಹರಿಸಿಲ್ಲ. ಇವು ಧರ್ಮಛತ್ರಗಳಾಗಿವೆ. ಇದನ್ನು ಕಳೆದ 25 ವರ್ಷಗಳಿಂದ ಇವು ಹೀಗೇ ನಡೆದುಕೊಂಡು ಬರುತ್ತಿವೆ. ಇದನ್ನು ಈ ದಿವಸವಾದರೂ ನಾವು ಸರಿಪಡಿಸದಿದ್ದರೆ ಹೇಗೆ ? ಇವುಗಳನ್ನು ಒಂದು ತಹಬಂದಿಗೆ ತರುವುದು ಬೇಡವೇ ? ಇವುಗಳನ್ನು ಒಂದು ತಹಬಂದಿಗೆ ತಂದು ಉತ್ಪತ್ತಿಯನ್ನು ಉತ್ತಮಪಡಿಸುತ್ತಾರೋ ಇಲ್ಲವೋ ಅನ್ನುವುದು ನನಗೆ ತುಂಬಾ ಕಳವಳವನ್ನು ಉಂಟುಮಾಡಿದೆ. ಅಲ್ಲಿ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಅವಕಾಶ ಇದ್ದರೂ ಅಲ್ಲಿ ಉತ್ಪತ್ತಿಮಾಡುವುದಕ್ಕೆ ಇಷ್ಟವಿಲ್ಲದಂಥ ವ್ಯಕ್ತಿಗಳನ್ನೇ ಮುಂದುವರಿಸಿಕೊಂಡು ಕಳೆದ 25 ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ನಮ್ಮ ರಾಜ್ಯದಲ್ಲಿ ಯಾವ ಯಾವ ಪದಾರ್ಥಗಳಿಗೆ ಎಷ್ಟೆಷ್ಟು ಡಿಮ್ಯಾಂಡಿದೆ, ಯಾವುದನ್ನು ಎಷ್ಟೆಷ್ಟು ಉತ್ಪತ್ತಿ ಮಾಡ

ಬೇಕು ಎಂಬ ಒಂದು ಲೆಕ್ಕಾಚಾರವನ್ನು ಸರ್ಕಾರದವರು ಇಲ್ಲಿಯವರೆಗೂ ಗಮನಕೊಟ್ಟು ಅದನ್ನು ಕಂಡುಹಿಡಿದಂತೆ ಕಾಣುವುದಿಲ್ಲ. ಹೀಗೆ ಒಂದು ಶಾಸ್ತ್ರೀಯವಾದ ವಿಧಾನವಿಲ್ಲದೆ ಕೆಲಸ ಮಾಡುವುದನ್ನು ನಾನು ಒಪ್ಪಲಾರೆ. ನಮ್ಮ ರಾಜ್ಯದಲ್ಲಿ 3 ಕೋಟಿ ಜನರಿದ್ದಾರೆ; ಇವರಲ್ಲಿ ಯಾರ್ಯಾರಿಗೆ ಏನೇನು ಸಾಮಾನುಗಳು ಬೇಕು ಅವು ಯಾವ ಪ್ರಮಾಣದಲ್ಲಿ ಬೇಕು, ಈಗ ರಾಜ್ಯದಲ್ಲಿ ಯಾವ ಯಾವ ಸಾಮಾನುಗಳು ಎಷ್ಟು ಉತ್ಪತ್ತಿಯಾಗುತ್ತಿವೆ, ಇನ್ನು ಎಷ್ಟು ಕೊರತೆ ಇದೆ ಎಂಬುದನ್ನು ಕಂಡು ಹಿಡಿಯಬೇಕಾದ್ದು ಅಗತ್ಯ. ಹೀಗೆ ಒಂದು ಅಂಕೀ ಅಂಶಗಳನ್ನು ತಯಾರಿಸಿಕೊಂಡು ಅದರ ಪ್ರಕಾರ ವಸ್ತುಗಳನ್ನು ಉತ್ಪನ್ನ ಮಾಡಬೇಕಾದ್ದು ಅಗತ್ಯ. ಆದರೆ ಅಂಥಾ ಯೋಜನೆಗಳ್ಯಾವೂ ಇದ್ದಂತೆ ಕಾಣುವುದಿಲ್ಲ. ಆದರೆ ನಮ್ಮ ಅರ್ಥಿಕ ಮಂತ್ರಿಗಳ ಭಾಷಣವನ್ನು ನಾನು ಓದಿದ್ದರೆ ಎಲ್ಲಿಯೂ ಈ ಅಂಶ ನನಗೆ ಕಂಡುಬರಲಿಲ್ಲ. ಇದನ್ನು ಮಾಡದಿರುವುದೇ ರಾಜ್ಯದಲ್ಲಿ ಧಾರಣೆವಾಸಿಗಳು ಏರುವುದಕ್ಕೂ ಕೂಡ ಒಂದು ಕಾರಣವಾಗಿದೆ ಎಂದು ಹೇಳಬಹುದು. ಹಿಂದೆ ರಾಮಕೃಷ್ಣ ಹೆಗ್ಗಡೆಯವರೂ ಕೂಡ ಬಡ್ಜೆಟ್ ತಯಾರಿಸಿದ್ದರು. ಅದನ್ನೂ ನಾವು ನೋಡಿದ್ದೇವೆ. ಈ ದಿವಸ ನಮ್ಮ ಅರ್ಥ ಸಚಿವರೂ ಬಡ್ಜೆಟ್ಟನ್ನು ತಯಾರಿಸಿದ್ದಾರೆ. ಅದಕ್ಕೂ ಇದಕ್ಕೂ ಎನು ವ್ಯತ್ಯಾಸ ? ಆದರೆ ನಮ್ಮ ಬಡ್ಜೆಟ್ಟಿನಲ್ಲಿ ಯಾವ ಯಾವ ಪ್ರದೇಶದಲ್ಲಿ ಏನೇನು ಕಚ್ಚಾಪದಾರ್ಥ ಎಷ್ಟೆಷ್ಟು ಸಿಕ್ಕುತ್ತದೆ, ಅದನ್ನು ಎಷ್ಟರಮಟ್ಟಿಗೆ ಉತ್ಪನ್ನ ಮಾಡತಕ್ಕಶಕ್ತಿ ಜನರಿಗೆ ಇದೆ, ಅದರಲ್ಲಿ ಖೋತಾ ಬೀಳತಕ್ಕದ್ದೆಷ್ಟು ಎಂಬುದನ್ನು ಖಚಿತವಾಗಿ ತಿಳಿದುಕೊಂಡು ಬಡ್ಜೆಟ್ಟನ್ನು ತಯಾರಿಸುವುದು ಒಳ್ಳೆಯದು. ನಾವು ಅಲ್ಲಿ ಜನರಿಗೆ ಸಾವಿರಾರು ರೂಪಾಯಿಗಳ ಸಂಬಳವನ್ನು ಕೊಡುತ್ತಿರುವಾಗ ಅವರು ಮಾಡಿದಂತೆ ಮಾಡಲಿ ಎಷ್ಟು ಉತ್ಪತ್ತಿ ಮಾಡಿದರೆ ಅಷ್ಟೇ ಸಾಕು ಎಂಬ ಮನೋಭಾವನೆ ಏನಿದೆ ಅದು ಸರಿಯಾದ್ದಲ್ಲ. ಕೆಲವು ಕಾರ್ಖಾನೆಗಳು 11 ತಿಂಗಳು ಕಾಲ ಲಾಕೌಟಾಗಿ ಮುಚ್ಚಲ್ಪಟ್ಟಿದ್ದರಿಂದ ದೇಶಕ್ಕೆ ಎಷ್ಟು ನಷ್ಟವಾಯಿತು ಎಂಬ ವಿಚಾರದಲ್ಲಿ ಇದೇ ಸಭೆಯಲ್ಲಿ ಒಂದು ಪ್ರಶ್ನೆಗೆ ಸರ್ಕಾರದವರು ಉತ್ತರ ಕೊಡುತ್ತಾ 11 ಕೋಟಿ ರೂಪಾಯಿ ಎಂದು ಹೇಳಿದ್ದಾರೆ. ಅದು ಮಿಲ್ಲಿನಲ್ಲಿ ಉತ್ಪತ್ತಿ ಬಗ್ಗೆ ಅಂದಾಜು ಮಾಡಿದ ಬೆಲೆ. ಅದು ಮಾರುಕಟ್ಟೆಗೆ ಹೋದರೆ ಅದಕ್ಕೆ 10 ಪರ್ಸೆಂಟ್ ಜಾಸ್ತಿ ಹಾಕಿದರೆ 100 ಕೋಟಿ ರೂಪಾಯಿಯಾಗುತ್ತದೆ. ಅಂದಾಗ ದೇಶ ಮುಂದುವರಿಯುತ್ತದೆಯೇ !

3--30 P. M.

ಈ ಪ್ರಶ್ನೆ ಇದರಲ್ಲಿ ಅಡಕವಾಗಿದೆ. ಸ್ಟ್ರೈಕ್ ಮತ್ತು ಲಾಕೌಟುಗಳಿಂದ ತೊಂದರೆಯಾಗುವುದು. ಇದನ್ನು ನಿವಾರಣೆಮಾಡಬೇಕು. ಇದರಿಂದ ರಾಷ್ಟ್ರದಲ್ಲಿ ಉತ್ಪತ್ತಿ ಕಡಮೆಯಾಗುವುದು. ಇದು ಒಬ್ಬಿಬ್ಬರ ಪ್ರಶ್ನೆಯಲ್ಲ, ಇಡೀ ಕರ್ನಾಟಕದ ಜನತೆಗೆ ಸಂಬಂಧಪಟ್ಟ ಪ್ರಶ್ನೆ. ಇದರ ಬಗ್ಗೆ ಪ್ರತಿಯೊಬ್ಬ ಸದಸ್ಯರೂ ತಮ್ಮ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಸೂಚಿಸಬೇಕು. ಇಧರ ಬಗ್ಗೆ ಸರಕಾರದ ಹೊಣೆ ಕೂಡ ಇದೆ. ಲಾಕೌಟ್ ಆದರೆ, ಸ್ಟ್ರೈಕ್ ಆದರೆ ಒಂದು ತಿಂಗಳಾದರೂ ಯಾವುದೇ ಸೂಚನೆ ಇರುವುದಿಲ್ಲ. ಇದರ ಅರ್ಥವೇನು ? ಉತ್ಪತ್ತಿ ಬಾರದಿದ್ದರೂ ಚಿಂತೆಯಿಲ್ಲ ಮುಖಂಡತ್ವ ಬೆಳೆಯಬೇಕು ಎಂಬುದು. ಸರಕಾರದ ಮೆಷೀನರಿಯನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸದಿದ್ದರೆ ನಿಧಾನಮಾಡುವುದರಿಂದ ರಾಷ್ಟ್ರಕ್ಕೆ ನಷ್ಟವಾಗುವುದು. ಇದಾಗಬಾರದು. ಯಾರ ಕಡೆಯಿಂದಲೂ ಇದಕ್ಕೆ ಅವಕಾಶವಿರಬಾರದು. ರಾಷ್ಟ್ರದ ದೃಷ್ಟಿಯಿಂದ ಈ ಪ್ರಶ್ನೆಯನ್ನು ಯೋಚಿಸಬೇಕು. ಬೆಂಗಳೂರಿನಲ್ಲಿ ಕಾರ್ಮಿಕರ ಸಂಖ್ಯೆ ಹೆಚ್ಚುಕಡಮೆ 4 ಲಕ್ಷಕ್ಕೆ ಮೇಲ್ಪಟ್ಟಿದೆ, ಇಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳಿವೆ. ಆಯವ್ಯಯ ಪಟ್ಟಿಯಲ್ಲಿ ತಮಗಾಗಿ ಏನು ವ್ಯವಸ್ಥೆಯಾಗಿದೆ ಎಂಬುದನ್ನು ಕಾರ್ಮಿಕರು ಪತ್ರಿಕೆಯಲ್ಲಿ ನೋಡುವರು. ಅವರಿಗೆ ನೋಡಿ ನಿರಾಶೆಯಾಗಲು ಅವಕಾಶವಿರಬಾರದು. ಯಾವ ಸರಕಾರ ಬಂದರೂ ನಮ್ಮ ಕಡೆ ದೃಷ್ಟಿ ಹರಿಸಿಲ್ಲ ಎಂದು ಅವರಿಗೆ ಭಾವನೆ ಬಂದರೆ ಉತ್ಪತ್ತಿಗೆ ಧಕ್ಕೆ ಬರುವುದು. ಮತ್ತು ಅಶಾಂತಿ ಹೆಚ್ಚುವುದು. ಈ ಕಡೆ ಕೂಡ ಅರ್ಥಿಕ ಮಂತ್ರಿಗಳು ಗಮನ ಕೊಡಬೇಕು. ಕೈಗಾರಿಕೆಗಳ ಅಗತ್ಯದ ಬಗ್ಗೆ ಯೋಜನೆಯಿದೆಯೇ, ಪ್ಲಾನ್ ಇದೆಯೇ ಎಂಬ ಪ್ರಶ್ನೆ ಬರುವುದು. ಕನಿಷ್ಟವಾಗಿ ಎಷ್ಟು ಕೈಗಾರಿಕೆಗಳಿರಬೇಕು, ಕೊರತೆಯಿದ್ದರೆ ಅದನ್ನು ನಿವಾರಣೆ ಮಾಡಲು ಪ್ಲಾನ್ ಇದೆಯೇ ಎಂಬುದನ್ನು ನೋಡುವರು. ಒಂದೆರಡು ಕಡೆ ಕೈಗಾರಿಕೆಗಳನ್ನು ಶುರುಮಾಡುವರೆಂದು ತಿಳಿಸಲಾಗಿದೆ. ಕಾಂಗ್ರೆಸ್ ಸರಕಾರ ಬಂದು 25 ವರ್ಷವಾದರೂ ದೇಶಕ್ಕೆ ಬೇಕಾದ ಆಹಾರ ಮುಂತಾದುವುಗಳನ್ನು ಸಾಕಷ್ಟು ಒದಗಿಸಲು ಆ ಬಗ್ಗೆ ಖಚಿತವಾದ ಯೋಜನೆ ಇಲ್ಲ. ಹೀಗಾದರೆ ಬಡವರಿಗೆ ಅನುಕೂಲವಾಗುವುದಿಲ್ಲ.

ನೀರಾವರಿ ಬಗ್ಗೆ ಕೋಟ್ಯಾಂತರ ರೂಪಾಯಿ ಖರ್ಚಾಗುವುದು. ಉತ್ಪತ್ತಿ ನಿಧಾನವಾಗುತ್ತಿದೆ ಎಂದು ಪುಟ್ಟಸ್ವಾಮಿಯವರು ತಿಳಿಸಿದರು. ನಿಧಾನವಾದರೂ ಚಿಂತೆಯಿಲ್ಲ, ಎಷ್ಟು ಬರಬೇಕಾಗಿತ್ತೋ ಅಷ್ಟಕ್ಕೆ ಪ್ರಯತ್ನವಾದರೂ ನಡೆದಿರಬೇಕು. ಪವರ್ ರೈತರಿಗೆ ಮತ್ತು ಕಾರ್ಖಾನೆ

(ಶ್ರೀ ಕೆ. ಎಚ್. ಹನುಮೇಗೌಡ)

ಮಾಡಿಲ್ಲ. ಸರ್ಕಾರದವರು ಹಾಕಿಕೊಂಡಿರತಕ್ಕ ಕೆಲಸಕಾರ್ಯಗಳು ವೈಫಲ್ಯ ಆಗಿ, ಆ ಕೆಲಸ ಆಗದಿದ್ದರೆ ಆಗ ಅದಕ್ಕೆ ವಿರೋಧ ಪಕ್ಷದವರು ಸಹಕರಿಸಲಿಲ್ಲ ಎಂದು ಹೇಳುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಇವೊತ್ತು ದೇಶದ ಜನತೆ ಕಷ್ಟಕ್ಕೆ ಒಳಗಾಗಿದ್ದಾರೆ. ಮುಂದೆ ಜನ ನಿಮ್ಮನ್ನು ಕ್ಷಮಿಸುವುದಿಲ್ಲ. ನಿಮ್ಮ ಕಾರ್ಯಕ್ರಮಗಳು ವಿಫಲವಾದಾಗ ಅದಕ್ಕೆ ವಿರೋಧಪಕ್ಷದವರು ಸಹಕರಿಲಿಲ್ಲ ಎಂದು ಅವರನ್ನು ದೂಷಣೆ ಮಾಡುವುದು ಸೂಕ್ತವಲ್ಲ. ಶ್ರೀಮತಿ ಇಂದಿರಾಗಾಂಧಿಯವರ ಪಾಲಿಸಿಗೆ ಜನ ಮಾರುಹೋಗಿ ಮೆಚ್ಚಿಕೊಂಡು ಚುನಾವಣೆಯಲ್ಲಿ ನೀವು ಹೆಚ್ಚು ಸಂಖ್ಯೆಯಲ್ಲಿ ಆರಿಸಿ ಬರುವುದಕ್ಕೆ ಅವಕಾಶವಾಯಿತು. ನಿಮ್ಮ ಘೋಷಣೆಗಳಲ್ಲಿ ಬಹುಪಾಲು ಘೋಷಣೆಗಳು ಪೊಳ್ಳು ಘೋಷಣೆಗಳು ಆಗಿವೆ. ನೀವು ಜನತೆಯನ್ನು ಮರೆತಿದ್ದೀರಿ, ಈಗಲಾದರೂ ನೀವು ಎಚ್ಚೆತ್ತು ಕೊಡಬೇಕಾದ ಕೆಲಸಕಾರ್ಯಗಳನ್ನು ಪ್ರಾಮಾಣಿಕತೆಯಿಂದ ಮಾಡದೇಹೋದರೆ ಜನ ನಿಮ್ಮನ್ನು ಮಿಸುವುದಿಲ್ಲ ಎಂದು ನಾನು ಹೇಳುತ್ತೇನೆ.

ದೇಶದಲ್ಲಿ ದಿನೇ ದಿನೇ ಹೆಚ್ಚುತ್ತಾ ಇರತಕ್ಕಂತಹ ನಿರುದ್ಯೋಗ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಒಂದು ವ್ಯಾಪಕವಾದ ಯಾವ ಕಾರ್ಯಕ್ರಮವನ್ನು ಸಹ ಇದರಲ್ಲಿ ಸರ್ಕಾರದವರು ಹಾಕಿಕೊಂಡಿಲ್ಲ. ಮೊನ್ನೆ ಮಾನ್ಯ ತಿಮ್ಮಪ್ಪನವರು ಮಾತನಾಡುತ್ತಾ, ಪ್ರತೀ ಜಿಲ್ಲೆಯಲ್ಲಿ ಮತ್ತು ತಾಲ್ಲೂಕುಗಳಲ್ಲಿ ಸಾಧ್ಯವಾದಷ್ಟು ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ, ಗ್ರಾಮಾಂತರ ಪ್ರದೇಶಗಳ ಜನರಿಗೆ ಉತ್ತಮ ಜೀವನ ಮಾಡುವುದಕ್ಕೆ ಅನುಕೂಲಮಾಡಿಕೊಡಬೇಕೆಂದು ಹೇಳಿದರು. ಹೊಸ ಸರ್ಕಾರ ಬಂದ ಮೇಲೂ ಇದನ್ನು ಪ್ರಾರಂಭ ಮಾಡಿಲ್ಲ. ಮಂಗಳೂರು ಫರ್ಟಿಲೈಸರ್ ಕಾರ್ಖಾನೆ ಒಂದನ್ನು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಅದು ಸಹ ಹಿಂದಿನ ಸರ್ಕಾರ ಇರುವಾಗ ಪ್ರಾರಂಭವಾದ ಕಾರ್ಖಾನೆ. ಇವತ್ತು ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಹಣವನ್ನು ಇದರಲ್ಲಿ ಒದಗಿಸದೆ ಇರುವುದರಿಂದ ನಮ್ಮ ದೇಶದ ಮುಂದಿನ ಆರ್ಥಿಕ ಸ್ಥಿತಿಯೂ ಸಹ ಕೆಟ್ಟು ಹೋಗುವ ಸಂದರ್ಭ ಇದೆ.

3-00 P.M.

ಇನ್ನು ದೇಶದಲ್ಲಿ ಬಂದಿರತಕ್ಕಂತಹ ಬರಗಾಲದ ಬಗ್ಗೆ ಹೆಚ್ಚು ವ್ಯಾಪಕವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆಂದು ಸರ್ಕಾರದವರು ಹೇಳುತ್ತಿದ್ದರೂ ಕೂಡ ಆ ಕೆಲಸಗಳು ಅಷ್ಟು ಸಮರ್ಪಕವಾಗಿ ನಡೆದಿಲ್ಲ. ಜನರು ಅಲ್ಲಿ ನಿರಂತರವಾಗಿ, ಯಾವುದೇ ರೀತಿಯ ಅಡಚಣೆ ಇಲ್ಲದೆ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ನಮ್ಮ ಯೋಜನೆಗಳನ್ನು ಸ್ವಲ್ಪ ಮಾರ್ಪಾಡು ಮಾಡಬೇಕು. ಮೇಜರ್ ಮತ್ತು ಮೀಡಿಯಂ ಇರಿಗೇಷನ್ ಪ್ರೊಜೆಕ್ಟುಗಳ ಬಗ್ಗೆ ಕಳೆದ 8-10 ವರ್ಷಗಳಿಂದ ಸರ್ಕಾರದವರು ಒಂದು ದಿಟ್ಟ ನಿಲುವನ್ನು ತೆಗೆದುಕೊಂಡು ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ ಕೆಲಸವನ್ನು ಮಾಡಿಲ್ಲ. ಅದನ್ನು ಈಗಲಾದರೂ ಜಾಗ್ರತೆಯಾಗಿ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಕೆಲವು ರಸ್ತೆಗಳ ಮತ್ತು ಕಟ್ಟಡಗಳ ಕೆಲಸ ನಿಂತು ಹೋದರೂ ಪರವಾಗಿಲ್ಲ : ದೇಶದಲ್ಲಿ ಉತ್ಪತ್ತಿಯನ್ನು ಹೆಚ್ಚಿಸುವಂತಹ ಇಂಥ ಯೋಜನೆಗಳನ್ನು ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಹಾಸನ ಜಿಲ್ಲೆಯಲ್ಲಿ ಯಗಚಿ ನದಿಗೆ ಒಂದು ಯೋಜನೆಯನ್ನು ಮಾಡಬೇಕೆಂದು 6—7 ವರ್ಷಗಳಿಂದಲೂ ಪ್ರಯತ್ನ ನಡೆದು ಎಸ್ಟಿಮೇಟ್ ಕೂಡ ತಯಾರಾಗಿದೆ. ಆದರೆ ಇನ್ನೂ ಸಹ ಅದು ಕಾರ್ಯಗತವಾಗಿಲ್ಲ. ಇದನ್ನು ಮಾಡಿದರೆ ಸುಮಾರು 50 ಸಾವಿರ ಎಕರೆ ನೀರಾವರಿಯಾಗುತ್ತದೆ ಇದೇ ರೀತಿ ದೇಶದಲ್ಲಿ ಅನೇಕ ವಿಧವಾದ ಪ್ರೊಜೆಕ್ಟುಗಳು ಇವೆ. ಈಗ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಒಂದೇ ಪಾರ್ಟಿ ಇರುವುದರಿಂದ ಅದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯಬೇಕೆಂಬ ಮನಸ್ಸು ಮಾಡಿದರೆ ಅದನ್ನು ಪಡೆಯಲು ಏನೂ ಕಷ್ಟವಾಗಲಾರದು. ಈ ರೀತಿ ಶಾಶ್ವತವಾದ ಮೇಜರ್ ಮತ್ತು ಮೀಡಿಯಂ ಇರಿಗೇಶನ್ ಇಲ್ಲದಿರತಕ್ಕಂತಹ ಜಾಗಗಳಲ್ಲಿ ಭೂಗರ್ಭದಲ್ಲಿರುವ ಜಲಸಂಪತ್ತನ್ನು ಉಪಯೋಗಿಸಿಕೊಳ್ಳುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಆದರೆ ಈ ಬಜೆಟಿನಲ್ಲಿ ಅದರ ಬಗ್ಗೆ ಯಾವ ಒಂದು ವಿವರಣೆಯನ್ನು ಸಹ ಕೊಟ್ಟಿಲ್ಲ. ಭೂಗರ್ಭದಲ್ಲಿರತಕ್ಕಂತಹ ಜಲ ಸಂಪತ್ತನ್ನು ಉಪಯೋಗಿಸಿಕೊಳ್ಳಲು ತಜ್ಞರ ಒಂದು ಇಲಾಖೆಯನ್ನೇ ತಕ್ಷಣ ರಚನೆ ಮಾಡಬೇಕು. ಅದರ ಮೂಲಕ ಎಲ್ಲೆಲ್ಲಿ ಜಲ ಸಂಪತ್ತು ಇದೆ ಎಂದು ನೋಡಿ, ಸರ್ಕಾರದವರೇ ರಿಗ್ ಮೆಷಿನುಗಳನ್ನು ತರಿಸಿ ಬೋರ್ ವೆಲ್ಸ್‌ಗಳನ್ನು ತೆಗೆಸಬೇಕು. ಅವುಗಳಿಂದ ಬರುವಂತಹ

ನೀರನ್ನು ಯಾವ ರೈತರು ಉಪಯೋಗಿಸುತ್ತಾರೆ, ಅವರಿಗೆ ಈ ಸಾಲವನ್ನು 15-20 ವರ್ಷಗಳ ಕಂತಿನಲ್ಲಿ ತೀರಿಸುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಆ ಮೇಲೆ ಈ ರೀತಿ ಮೇಜರ್ ಮತ್ತು ಮೀಡಿಯಂ ಯೋಜನೆಗಳು ಮತ್ತು ಭೂಗರ್ಭ ಜಲಾಶಯಗಳು ಇಲ್ಲದ ಕಡೆಗಳಲ್ಲಿ ಇತರ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಅದರ ಜೊತೆಗೆ ಕುರಿ, ಪಶುಪಾಲನೆ, ಕೋಳಿ ಸಾಕಾಣಿಕೆ ಇತ್ಯಾದಿಗಳ ಬಗ್ಗೆ ಒಂದು ವ್ಯಾಪಕವಾದ ಯೋಜನೆಯನ್ನು ತಯಾರು ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮಲ್ಲಿ 27 ಪಾಲಿಟೆಕ್ನಿಕ್, 10 ಇಂಜನಿಯರಿಂಗ್ ಕಾಲೇಜುಗಳು ಮತ್ತು ಅನೇಕ ಕೈಗಾರಿಕಾ ಶಿಕ್ಷಣ ತರಬೇತಿ ಕೇಂದ್ರಗಳು ಇವೆ. ಇವತ್ತು ದೇಶ ಮುಂದುವರಿಯಬೇಕಾದರೆ ಹೆಚ್ಚೆಚ್ಚು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಈ ದೆಸೆಯಲ್ಲಿ ಟೆಕ್ನಾಲಾಜಿಕಲ್ ಯೂನಿವರ್ಸಿಟಿ ಒಂದನ್ನು ಸ್ಥಾಪನೆ ಮಾಡಲು ಬಜೆಟಿನಲ್ಲಿ 10 ಲಕ್ಷ ರೂಪಾಯಿ ಹಣ ಒದಗಿಸಿಟ್ಟಿರುವುದು ತುಂಬಾ ಶ್ಲಾಘನೀಯವಾದ ವಿಚಾರ. ಆದರೆ ಇದು ಬರೀ ಕಾಗದದ ಯೋಜನೆಯಾಗಿ ಉಳಿಯದೆ ತಕ್ಷಣ ಜಾರಿಗೆ ಬರುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಮಾನ್ಯ ಕೈಗಾರಿಕಾ ಮಂತ್ರಿಯವರು 6—7 ತಿಂಗಳ ಹಿಂದೆ ಮಂಡ್ಯದಲ್ಲಿ ಒಂದು ಟ್ರಾಕ್ಟರ್ ಕಾರ್ಖಾನೆಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದ್ದರು. ಅದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಆದರೆ ಅದು ಅಲ್ಲಿಗೆಯೇ ನಿಂತು ಹೋಯಿತು. ಬಹುಶಃ ಚುನಾವಣೆಯ ಸಂದರ್ಭದಲ್ಲಿ ಅದನ್ನು ಅವರು ಹೇಳಿರಬೇಕು. ಈಗಲಾದರೂ ದೇಶದ ರೈತರ ಆದಾಯಕ್ಕೆ ಸರಿಹೊಂದುವಂತಹ ಒಂದು ಟ್ರಾಕ್ಟರನ್ನು ತಯಾರು ಮಾಡತಕ್ಕ ಕಾರ್ಖಾನೆಯನ್ನು ತೆಗೆಯಬೇಕು. ಅದರ ಬಗ್ಗೆ ಬಜೆಟಿನಲ್ಲಿ ಯಾವ ಒಂದೂ ಪ್ರೊವಿಜನನ್ನು ಸಹ ಮಾಡದಿರುವುದನ್ನು ನೋಡಿದರೆ, ಅವು ಚುನಾವಣೆಯ ಪ್ರಚಾರಕ್ಕಾಗಿ ಆ ಮಾತು ಹೇಳಿದ್ದಾರೆರೆಂದು ಕಾಣುತ್ತದೆ. ಆದ್ದರಿಂದ ರಾಜ್ಯದ ಯಾವ ಪ್ರದೇಶದಲ್ಲಾದರೂ ಇಂತಹ ಒಂದು ಟ್ರಾಕ್ಟರ್‌ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ದೇಶದಲ್ಲಿ 80 ಭಾಗ ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡತಕ್ಕವರು. ಅವರು ಸಹ ನೆಮ್ಮದಿಯಿಂದ ತಾನು ಬೆಳೆಸಿದ ಪದಾರ್ಥಗಳನ್ನು ಮಾರಿ ಜೀವನ ಮಾಡುವಂತಾಗಬೇಕು. ಇದರ ಬಗ್ಗೆ ಸರ್ಕಾರದವರು ಒಂದು ಕಾರ್ಯಕ್ರಮವನ್ನು ಹಾಕಬೇಕು. ಕೈಗಾರಿಕೆಗಳಲ್ಲಿ ಹೇಗೆ ಒಂದು ಲಾಭಗಳಿಸುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ, ಅದೇ ರೀತಿ ರೈತನು ಸಹ ತಾನು ಬೆಳೆದ ವಸ್ತುಗಳಿಗೆ ನ್ಯಾಯವಾದ ಬೆಲೆ ಸಿಗುವಂತೆ ಮಾಡಬೇಕು. ರೈತರಿಗೆ ಪ್ರತಿ ವರ್ಷವೂ ಮಳೆ ಬೆಳೆಯಾಗದೆ ಕೋಟ್ಯಾಂತರ ರೂಪಾಯಿ ನಷ್ಟವಾಗಿ ಹೋಗುತ್ತದೆ. ಇಂತಹ ಸಂದರ್ಭಗಳಲ್ಲಿ ಬೆಳೆಗಳಿಗೆ ವಿಮಾ ಯೋಜನೆಯನ್ನು ಜಾರಿಗೆ ತರುವುದು ಒಳ್ಳೆಯದು ಎಂದು ಸಲಹೆ ಮಾಡುತ್ತೇನೆ. ಎರಡನೆಯದು ಏನೆಂದರೆ, ರೈತನು ಬೆಳೆದ ಪದಾರ್ಥಗಳಿಗೆ ಕೈಗಾರಿಕೆಯ ವಸ್ತುಗಳಿಗೆ ಕನಿಷ್ಟ ಏನೊಂದು ಬೆಲೆಯನ್ನು ನಿಗದಿ ಮಾಡುತ್ತಾರೆ. ಅದೇ ರೀತಿ ಖರ್ಚು ವೆಚ್ಚ ಎಲ್ಲವೂ ಕಳೆದು 10—15 ಪರ್ಸೆಂಟ್ ಲಾಭ ಸಿಗುವಂತೆ ಬೆಲೆ ನಿಗದಿ ಮಾಡಬೇಕೆಂದು ಹೇಳುತ್ತೇನೆ. ಇದನ್ನು ಬರೀ ಸಾವಿರಗಟ್ಟಲೆ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳು ನಿಗದಿ ಮಾಡಿದರೆ ಸಾಲದು ಇದಕ್ಕೆ ರೈತನ ಪ್ರತಿನಿಧಿ, ಕೊಂಡು ಕೊಳ್ಳತಕ್ಕ ಕನ್‌ಸ್ಯೂಮರ್ಸ್ ಪ್ರತಿನಿಧಿ, ಮತ್ತು ಸರ್ಕಾರದ ಪ್ರತಿನಿಧಿ ಇವರೆಲ್ಲರೂ ಸೇರಿ ಎಷ್ಟು ಇದಕ್ಕೆ ಖರ್ಚಾಗುತ್ತದೆ ಎಂಬುದನ್ನು ಲೆಕ್ಕ ಹಾಕಿ ಕನಿಷ್ಟ ಒಂದು 10—15 ಪರ್ಸೆಂಟ್ ಲಾಭ ಉಳಿಯುವ ಹಾಗೆ ದರವನ್ನು ನಿಗದಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವ್ಯವಸಾಯದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ರೈತನಿಗೆ ಅವಶ್ಯಕವಾಗಿರುವಂತಹ ಸಣ್ಣ ಉಪಕರಣಗಳ ಕಾರ್ಖಾನೆ ಒಂದು ಸಹ ದೇಶದಲ್ಲಿ ಶುರುವಾಗಲಿಲ್ಲ. ಇವತ್ತು ದೊಡ್ಡ ದೊಡ್ಡ ಉಪಕರಣಗಳನ್ನು ಕೊಂಡುಕೊಳ್ಳಲು ನಮ್ಮ ರೈತರಿಗೆ ಶಕ್ತಿಯೂ ಇಲ್ಲ, ಮತ್ತು ಅದು ಉಪಯುಕ್ತವೂ ಅಲ್ಲ. ಇವತ್ತು ಪವರ್ ಟಿಲ್ಲರ್ಸ್ ಉಪಕರಣವು ನಮ್ಮ ರೈತನ ಸ್ಥಿತಿಗತಿಗೆ ಅನುಗುಣವಾಗಿಲ್ಲ. ಅದಲ್ಲದೆ ಅದರ ಬೆಲೆ ಸಹ ಬಹಳ ಜಾಸ್ತಿ. 10— 2 ಸಾವಿರ ರೂಪಾಯಿ ಅದರ ಬೆಲೆ ಇರುವುದರಿಂದ ಸಾಮಾನ್ಯ ರೈತನು ಅದನ್ನು ಕೊಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವು ನಮ್ಮ ರೈತನ ಆದಾಯಕ್ಕೆ ಸರಿಯಾದ ಸಣ್ಣ ರೀತಿಯ ಉಪಕರಣಗಳನ್ನು ತಯಾರು ಮಾಡುವ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕು.

ಕಳೆದ ಒಂದು ವರ್ಷದಿಂದ ಪ್ರಜಾಪ್ರಭುತ್ವದ ತತ್ವಗಳ ಮೇಲೆ ಉದ್ದವಾದ ಭಾಷಣಗಳನ್ನು ಮಾಡಿ ಸುಮಾರು 96 ಪುರಸಭೆಗಳನ್ನು ಈ ಪಕ್ಷದ ಸರ್ಕಾರ ರದ್ದು ಮಾಡಿದೆ. ಈಗ ಮುಂದೆ

(ಶ್ರೀ ಕೆ. ಶ್ರೀರಾಮುಲು)

ಗಳಿಗೆ ಕೊಡುವರೇ ? ಕಾರ್ಖಾನೆಗಳವರು ಇಷ್ಟು ಉತ್ಪತ್ತಿ ಮಾಡಬೇಕು ಎಂದು ಕಂಡೀಷನ್ ಇದೆಯೇ ? ಇಲ್ಲ. ಆ ರೀತಿ ಕಂಡೀಷನ್ ಇಲ್ಲದಿದ್ದರೆ ಹೇಗೆ ಮುಂದುವರಿಯುವುದು ? ಕಾರ್ಖಾನೆಗಳಲ್ಲಿ ಮೂರು ಷಿಫ್ಟ್ ನಡೆಸಬಹುದು, ಉತ್ಪತ್ತಿ ಹೆಚ್ಚಿಸಲು ತಕ್ಕಷ್ಟು ಪವರ್ ಒದಗಿಸಬೇಕು. ಹಾಗೆ ಮಾಡಿ ಉತ್ಪತ್ತಿ ಎಷ್ಟು ನಿರೀಕ್ಷೆ ಇದೆಯೋ ಅದಕ್ಕೆ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಬೇಕು. ಉತ್ಪತ್ತಿ ಕಡಮೆಯಾದರೆ ಜವಾಬ್ದಾರಿ ಯಾರಿಗೆ ವಹಿಸಿದೆಯೋ ಆ ಅಧಿಕಾರಿಯಿಂದ ಸಂಬಳದಲ್ಲಿ ಹಿಡಿಯುವಂಶೆ ಅವರ ಸಂಬಳ ಕಡಮೆ ಮಾಡುವಂತೆ ಅಧಿಕಾರ ಕಾನೂನು ರೀತ್ಯ ಪಡೆಯಬೇಕು. ಅಧಿಕಾರಿಗಳಿಗೆ ಸಂಬಳ ಹೆಚ್ಚಿಸುವ ಜವಾಬ್ದಾರಿ ಮಾತ್ರ ಸರಕಾರಕ್ಕಿರಬಾರದು. ಸಂಬಳ ಪಡೆಯುವಾಗ ದೇಶಕ್ಕಾಗಿ ಪ್ರಾಮಾಣಿಕವಾಗಿ ದುಡಿಯಬೇಕಾದ್ದು ಅಧಿಕಾರಿಗಳ ಕರ್ತವ್ಯ, ಆದರ ಬಗ್ಗೆ ಅವರ ಮೇಲೆ ಹೊಣೆ ಹಾಕಬೇಕು.

ಇನ್ನೊಂದು ಪ್ರಶ್ನೆ 9 ಕೋಟಿ ರೂಪಾಯಿ ಭತ್ಯ ಜಾಸ್ತಿ ಮಾಡಲು ಒದಗಿಸಲಾಗಿದೆ. ಜಾಸ್ತಿ ಮಾಡಬೇಕು. ಆದರೆ ಯಾರಿಗೆ ಮಾಡಬೇಕು ? ನಾಲ್ಕನೆ ದರ್ಜೆಯವರಿಗೆ 5 ರೂಪಾಯಿ ಜಾಸ್ತಿ ಮಾಡಿ ಒಂದು ಸಾವಿರ ರೂಪಾಯಿ ಸಂಬಳ ಇರುವವರಿಗೆ 37 ರೂಪಾಯಿ ಜಾಸ್ತಿಮಾಡುವುದು ಸರಿಯೇ ? 85 ರೂಪಾಯಿ ಸಂಬಳ ಬರುವವರಿಗೆ 5 ರೂಪಾಯಿ ಮಾತ್ರ ಜಾಸ್ತಿ ಮಾಡುವುದರಿಂದ ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಲು ಸಾಧ್ಯವೇ ? ಇಂದಿನ ಪರಿಸ್ಥಿತಿಯಲ್ಲಿ ಒಂದು ಸಾವಿರ ರೂಪಾಯಿಗಳ ಮೇಲೆ ಬರುವವರಿಗೆ ಯಾರಿಗೂ ಸಂಬಳ ವಗೈರೆ ಹೆಚ್ಚಿಸುವ ಹವ್ಯಾಸಕ್ಕೆ ಹೋಗಬಾರದು. ಹೆಚ್ಚಿಸಿದರೆ ಅವರಿಗೆ ಆದಕ್ಕೆ ತಕ್ಕಷ್ಟು ಜವಾಬ್ದಾರಿ ಹೊರಿಸಬೇಕು. ಉತ್ಪತ್ತಿ ಹೆಚ್ಚಿಸುವ ಜವಾಬ್ದಾರಿ ಅಧಿಕಾರಿಗಳಿಗೆ ಹೊರಿಸಿ ಅವರು ಭರವಸೆ ಕೊಟ್ಟಮೇಲೆ ಅವರಿಗೆ ಇನ್‌ಕ್ರಿಮೆಂಟು ಕೊಡಬೇಕು. ಜೀವನ ಸಾಗಿಸುವುದು ಕಷ್ಟವಾಗಿರುವ ಬಡವರಿಗೆ 5 ರೂಪಾಯಿ ಮಾತ್ರ ಕೊಡುವುದು ಸರಿಯಲ್ಲ. ಮೂರು ಮತ್ತು ನಾಲ್ಕನೆ ದರ್ಜೆ ನೌಕರರಿಗೆ ಕನಿಷ್ಟ 15 ರೂಪಾಯಿಗೆ ಕಡಮೆ ಇನ್‌ಕ್ರಿಮೆಂಟ್ ಇರಬಾರದು. ಆರ್ಥಿಕ ಮಂತ್ರಿಗಳು ಇಲ್ಲಿಲ್ಲ.

ಇದನ್ನು ನಾನು ಹೇಳುವಾಗ ಆಶ್ಚರ್ಯವಾಗಬಹುದು. ಕೆಲವು ಸಂದರ್ಭಗಳಲ್ಲಿ ಈ ವಿಷಯಗಳನ್ನು ಪರಿಶೀಲನೆ ಮಾಡಿದರೆ ಕೆಲಸ ಮಾಡತಕ್ಕ ಮೂರೂವರೆ ಲಕ್ಷ ಎನ್.ಜಿ.ಓ ಗಳು ಏನು ಇದ್ದಾರೆ ಅವರು ಬೇರೆ ಸರ್ಕಾರಗಳಲ್ಲಿರತಕ್ಕ ಜನರಿಗೆ ಹೋಲಿಸುವುದಾದರೆ ನಮ್ಮಲ್ಲಿ ಎರಡರಷ್ಟು ಇರುತ್ತಾರೆ. ಇತರೆ ಸರ್ಕಾರಗಳ ಕಡೆ ನಾವು ಗಮನಕೊಟ್ಟು ನೋಡಿದರೆ, ಪಾಶ್ಚಿಮಾತ್ಯ ದೇಶದಲ್ಲಿ 2.5 ರಷ್ಟು ಕೆಲಸಗಾರರು ಇರುತ್ತಾರೆ. ನಮ್ಮ ಉಪಾಧ್ಯಾಯರಿಗೆ 60–70 ಹುಡುಗರು ಸಿಕ್ಕುತ್ತಾರೆ. ಪಾಶ್ಚಿಮಾತ್ಯ ದೇಶದಲ್ಲಿ 25-30 ಜನ ಹುಡುಗರು ಸಿಕ್ಕುತ್ತಾರೆ. ಅವರ ಎಫಿಷಿಯನ್ಸಿ ಜಾಸ್ತಿ ಬರುತ್ತದೆ ನಮ್ಮ ಎಫಿಷಿಯನ್ಸಿ ಕಡಿಮೆಯಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ, ಕೆಲಸಗಾರರು ಮೂರೂವರೆ ಲಕ್ಷ ಜನ ಜಾಸ್ತಿಯಾಗುತ್ತದೆ ಎನ್ನುವ ವಾದ ಬರಬಹುದು. ಅವರಿಗೆ ಕೊಡುವುದಕ್ಕೆ ದುಡ್ಡು ಇಲ್ಲ, ಇನ್ನೂ ಅವರ ಸಂಖ್ಯೆಯನ್ನು ಜಾಸ್ತಿ ಮಾಡಿದರೆ ಹೇಗೆ ದುಡ್ಡು ಕೊಡುವುದಕ್ಕೆ ಸಾಧ್ಯ ಎನ್ನುವ ವಾದವನ್ನು ಇಡಬಹುದು. ಒಂದು ಕಾರ್ಖಾನೆಯಲ್ಲಿ ಒಂದು ವರ್ಷಕ್ಕೆ ಐದು ಕೋಟಿ ರೂಪಾಯಿಗಳಷ್ಟು ಲುಕ್ಸಾನು ಆಗಿ ಬಿಟ್ಟರೆ 37 ಕಾರ್ಖಾನೆಗಳಲ್ಲಿ ಎಷ್ಟು ಕೋಟಿ ರೂಪಾಯಿ ಲುಕ್ಸಾನು ಆಯಿತು ? ಆದ್ದರಿಂದ ಪ್ರೊಡಕ್ಷನ್ ಅನ್ನು ಜಾಸ್ತಿ ಮಾಡಿ, 3–4 ಲಕ್ಷ ಜನರನ್ನು ಕೆಲಸಕ್ಕೆ ತೆಗೆದುಕೊಂಡು ಒಬ್ಬೊಬ್ಬರ ಮೇಲೆ ಜವಾಬ್ದಾರಿಯನ್ನು ನಿಗದಿ ಮಾಡಿದರೆ, ಸಂಬಳವನ್ನೂ ಜಾಸ್ತಿ ಮಾಡಬಹುದು, ಅಷ್ಟು ಜನ ಜಾಸ್ತಿಯಾಯಿತು ಎನ್ನುವ ಹೆದರಿಕೆಯೂ ಬರುವುದಿಲ್ಲ. ನಿಮಗೆ ಕೊಡುವುದಕ್ಕೆ ಗೊತ್ತಿದೆ, ಕೊಟ್ಟಿದ್ದಕ್ಕೆ ಪ್ರತಿಫಲ ತೆಗೆದುಕೊಳ್ಳುವುದಕ್ಕೆ ಗೊತ್ತಾಗದಿದ್ದರೆ ಈ ಪ್ರಶ್ನೆಯನ್ನು ಹೇಗೆ ಇತ್ಯರ್ಥ ಮಾಡುವುದು ? ಅವರಿಗೆ ಹೆಚ್ಚಿಗೆ ಸಂಬಳ ಕೊಡಲೇಬೇಕು ಎಂದರೆ ಅವರಿಂದ ಜಾಸ್ತಿ ಪ್ರೊಡಕ್ಷನ್ ಅನ್ನು ನಿರೀಕ್ಷಣೆ ಮಾಡಬೇಕು. ಈ ಎರಡು ಕೆಲಸ ಆದರೆ ಮಾತ್ರ ದೇಶದ ಅಭಿವೃದ್ಧಿಯಾಗುತ್ತದೆ, ಇಲ್ಲದಿದ್ದರೆ, ಕಷ್ಟವಾಗುತ್ತದೆ. ಒಂದು ಕುಟುಂಬದಲ್ಲಿ ಬಹಳ ಜನ ಪೆನ್‌ಷನ್‌ದಾರರು ಇಲ್ಲ ಎನ್ನುವುದನ್ನು ಮರೆತಿದ್ದಾರೆ. 8 ಸಾವಿರ ಜನಕ್ಕೆ ಮಾತ್ರ 10 ರೂಪಾಯಿಗಳನ್ನು ಜಾಸ್ತಿ ಮಾಡಿದರು. ಪೆನ್‌ಷನ್‌ದಾರರು ಎಂದು ಹೇಳಿದರೆ, ಎಲ್ಲಾ ವರ್ಗದ ಪೆನ್‌ಷನ್‌ದಾರರು ಇದ್ದಾರೆ, ಅವರಿಗೂ ಜಾಸ್ತಿ ಮಾಡಬೇಕಾಗಿತ್ತು, ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕನ್ನಡದ ಬಗ್ಗೆ ಒಂದು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಕನ್ನಡದ ಅಭಿವೃದ್ಧಿಗಾಗಿ ಹೋದವರ್ಷ 10 ಲಕ್ಷ ರೂಪಾಯಿಗಳನ್ನು, ಈ ವರ್ಷ 13 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ, ಇದರ ಅಭಿವೃದ್ಧಿ ಹೇಗೆ ಆಗುತ್ತದೆ ಎಂದು ಅರ್ಥವಾಗುತ್ತಾ ಇಲ್ಲ. ಕನ್ನಡವನ್ನು

ಅಭಿವೃದ್ಧಿ ಮಾಡತಕ್ಕ ವಿಧಾನ ಹೇಗೆ ? ನಮ್ಮ ದೇಶದಲ್ಲಿ ಅನೇಕ ಪಾಠಶಾಲೆಗಳು ಇವೆ, ತಮಿಳು ಪಾಠಶಾಲೆ ಇದೆ, ಉರ್ದು ಮಾಧ್ಯಮ ಪಾಠಶಾಲೆ ಇದೆ. ಕೆಲವು ಕಡೆ ಕನ್ನಡವನ್ನು ನರ್ಸರಿಯಿಂದ ಮೂರನೆಯ ತರಗತಿಯವರಿಗೆ ಹೇಳಿಕೊಡುತ್ತಾರೆ. ಆದರೆ ಇಂಗ್ಲಿಷನ್ನು 1 ರಿಂದ 7ನೇ ತರಗತಿಯವರೆಗೆ ನಡೆಸುತ್ತಾರೆ. ಇದರಿಂದ ಇಂಗ್ಲೀಷ್ ಅಭಿವೃದ್ಧಿಯಾಗುತ್ತದೆಯೇ ಹೊರತು ಕನ್ನಡದ ಅಭಿವೃದ್ಧಿಯಾಗುತ್ತದಿಲ್ಲ. ವಿದ್ಯಾಭ್ಯಾಸಕ್ಕೆ 65-70 ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಇದು [illegible] ಪರ್ಸೆಂಟ್ ಪ್ರೈವೇಟ್ ಸ್ಕೂಲ್‌ಗಳಿಗೆ ಗ್ರಾಂಟ್ ಆಗುತ್ತದೆ. ಈ ತರಹ ಒಂದರಿಂದ 7ನೇ ತರಗತಿಯವರೆಗೆ ಕನ್ನಡ ಕಲಿಯಲಿಕ್ಕೆ ಅವಕಾಶ ಇಲ್ಲದಿದ್ದರೆ ಕನ್ನಡದ ಅಭಿವೃದ್ಧಿ ಹೇಗೆ ಆಗುತ್ತದೆ? ಈ ತರಹ ಕಡ್ಡಾಯವಾಗಿ ಕಾನೂನಾದರೂ ತರದಿದ್ದರೆ ಕನ್ನಡದ ಅಭಿವೃದ್ಧಿ ಹೇಗೆ ಆಗುತ್ತದೆ ? ಇದನ್ನು ಧೀರ್ಘವಾಗಿ ಪರಿಶೀಲನೆ ಮಾಡಿ ತಕ್ಷಣ, ಕನ್ನಡದ ಅಭಿಮಾನದ ಬಗ್ಗೆ ಬೇರೆ ಬೇರೆ ರೀತಿಯಲ್ಲಿ ಮಾತನಾಡುವುದು ಯೋಗ್ಯವಲ್ಲ, ಅದನ್ನು ಸರಿಯಾದ ರೀತಿಯಲ್ಲಿ ಕಾರ್ಯಗತ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಯಾರೂ ಸಲಹೆ ಕೊಟ್ಟಿಲ್ಲ, ಕೊಡುವುದಕ್ಕೆ ಮನಸ್ಸು ಇಲ್ಲವೋ ಅಥವಾ ಗೊತ್ತಿಲ್ಲವೋ ಎರಡು ನನಗೆ ಗೊತ್ತಿಲ್ಲ. ಈ ವಿಷಯವನ್ನು ಪ್ರಮಾಣಪೂರ್ವಕವಾಗಿ ನೋಡುತ್ತಿಲ್ಲ, ಅನ್ಯಾಯ ನಡೆದಿದ್ದರೆ ಮರೆತು ದೇಶದ ಜನರನ್ನು ರಕ್ಷಣೆ ಮಾಡುವುದಕ್ಕೆ ಸ್ವಚ್ಛ ಮನಸ್ಸನ್ನು ಬಿಚ್ಚಿ ಇಡಬೇಕು. ಬರೀ ಭಾಷಣ ಆಗಬಾರದು. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, 1973-74ನೇ ವರ್ಷದ ಆಯವ್ಯಯ ಪಟ್ಟಿಯನ್ನು ನೋಡಿದಾಗ ಇದು ಯಾವುದೇ ರೀತಿಯಲ್ಲಿ ಸಮಾಜದ ಆಯವ್ಯಯ ಆಗಲಾರದು ಎಂದು ನಾನು ನನ್ನ ಅಭಿಮತವನ್ನು ತಿಳಿಸುತ್ತಾ, ಇದು ಒಂದು ರೀತಿಯ ಮಂತ್ರವಾದಿಯ ಆಯವ್ಯಯವಾಗಿದೆ ಎಂದು ಹೇಳದೆ ವಿಧಿಯಿಲ್ಲ ಜನಗಳಿಗೆ ಸುಮ್ಮನೆ ಮಾಯ ಮಂತ್ರ ಮಾಡಿ ಇಲ್ಲಿ ಹಾವು ತೋರಿಸುತ್ತೇವೆ, ಬುಟ್ಟಿ ತೋರಿಸುತ್ತೇವೆ ನೋಡಿ ಎಂದು ಜನಗಳಿಗೆ ಕಪ್ಪು ಹಾಕಿ ಮಾಯಮಂತ್ರ ಮಾಡುತ್ತಾರೆ. ಹಾವಾಡಿಗರು ಹಾವನ್ನು ಆಡಿಸತಕ್ಕ ಮಂತ್ರವಾದಿಯ ತರಹ ಪ್ರದರ್ಶನ ಈ ಆಯವ್ಯಯದಲ್ಲಿ ಆಗಿದೆ. ಅನೇಕ ಜನ ಸದಸ್ಯರುಗಳು ಇದರ ಬಗ್ಗೆ ಮಾತನಾಡಿದರು. ಸಭೆಯ ಹಿರಿಯ ಸದಸ್ಯರು ಮಾಜಿ ಮಂತ್ರಿಗಳು ಆದ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಮಾತನಾಡಿದರು. ಇದು ಬಹಳ ಸುಭದ್ರವಾದ ಸರ್ಕಾರ, ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರ ಆಡಳಿತದಲ್ಲಿ ಬಹಳ ಚೆನ್ನಾಗಿ ಆಡಳಿತವನ್ನು ನಡೆಸಿದ್ದಾರೆ, ಜನತೆಗೆ ಕೊಟ್ಟ ವಚನವನ್ನು ಈಡೇರಿಸಿಧ್ದಾರೆ ಎನ್ನುವ ಧಾಟಿಯಲ್ಲಿ ಮಾತನಾಡಿದರು, ಇದನ್ನು ಅವರು ಹೇಳಬಹುದು, ಕಾರಣ ಅವರು ಆವರ ಪಾರ್ಟಿಯನ್ನು ಸಮರ್ಥಿಸತಕ್ಕದ್ದು ಪ್ರತಿಯೊಬ್ಬ ಪಾರ್ಟಿಪಕ್ಷದ ಸದಸ್ಯನ ಕರ್ತವ್ಯ. ಈ ಸರ್ಕಾರ ಯಾವುದೇ ಒಂದು ಸಮಾಜವಾದದ ಕಾರ್ಯಕ್ರಮ ಮಾಡುವುದಕ್ಕಿಂತ ಬದಲಾಗಿ ಬೇರೆ ಕೆಲಸಗಳನ್ನು ಮಾಡಿದೆ. ಇದಕ್ಕೆ ನಾನು ಕೆಲವು ನಿದರ್ಶನಗಳನ್ನು ಕೊಡುತ್ತೇನೆ ಸನ್ಮಾನ್ಯ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾದಮೇಲೆ ಮಹತ್ತರವಾದಂಥ ಸಮಾಜವಾದದ ಕಾರ್ಯಕ್ರಮವನ್ನು ಮಾಡಿದ್ದಾರೆ ಎನ್ನುವುದಕ್ಕೆ ಇದು ನಿದರ್ಶನ. ಹಿಂದೆ ನಮ್ಮ ರಾಜ್ಯದ ಮಹಾರಾಜರಾಗಿದ್ದಂಥ, ಮಾಜಿ ಮಹಾರಾಜರ ಆಸ್ತಿಯನ್ನು, ಮೈಸೂರಿನಲ್ಲಿ ರಾಯನಕೆರೆ ಫಾರಂ ಅನ್ನು 16 ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡರು. ಇದು ಸಮಾಜವಾದದ ಕಾರ್ಯಕ್ರಮ. ಈಗಾಗಲೇ 25ನೇ ಅಮೆಂಡ್‌ಮೆಂಟ್ ತಂದು, ಮಹಾರಾಜರ ಆಸ್ತಿಯ ಹಕ್ಕನ್ನು ಕಿತ್ತುಕೊಳ್ಳತಕ್ಕಂಥದ್ದು ಪಾರ್ಲಿಮೆಂಟ್ ಮುಂದೆ ತರಬೇಕು ಎಂದು ಇದೆ. ಇದರ ಬಗ್ಗೆ ವಾದ ವಿವಾದ ಇದೆ. ಇಂಥ ಸಂದರ್ಭದಲ್ಲಿ ರಾಯನಕೆರೆ ಡೈರಿ ಫಾರಂ ಅನ್ನು 16ಲಕ್ಷ ರೂಪಾಯಿಗಳಿಗೆ ಕೊಂಡು ಕೊಂಡಿರತಕ್ಕದ್ದು. ಅರಮನೆಗೆ ಸೇರಿದ ಬನ್ನಿಮಂಟಪದ ಜಾಗವನ್ನು ಆರು ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡಿರತಕ್ಕದ್ದು. ಮತ್ತು ಸದಾಶಿವನಗರದ ದ್ವಾರಿಯಲ್ಲಿ ಅರಮನೆಯ ಪಕ್ಕದಲ್ಲಿರತಕ್ಕ ಒಂದು ಪುಟ್‌ಪಾತ್ ಜಾಗಕ್ಕೆ ಕಾರ್ಪೋರೇಷನ್ ಅವರಿಂದ ಸುಮಾರು ಹದಿಮೂರುವರೆ ಲಕ್ಷ ರೂಪಾಯಿಗಳನ್ನು ಕೊಡಿಸಿರತಕ್ಕಂಥಾದ್ದು. ಈ ವ್ಯವಸ್ಥೆಯ ಇವರ ಕಾರ್ಯಕ್ರಮವನ್ನು ನೋಡಿದಾಗ, ನಿಮ್ಮ ಅಧಿಕಾರ ಬಡವರ ಪರ ವಾಲುತ್ತದೆಯೇ ಅಥವಾ ಶ್ರೀಮಂತರ ಮೇಲೆ, ರಾಜಮಹಾರಾಜರ ಮೇಲೆ ವಾಲುತ್ತಿದೆಯೇ ? ಈಗ ರಾಜ ಮಹಾರಾಜರನ್ನು ರದ್ದು ಮಾಡಿದ್ದಾರೆ, ಅವರ ಸವಲತ್ತುಗಳನ್ನು ಕಿತ್ತುಹಾಕಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅಷ್ಟು ಹಣ ಮಹಾರಾಜರಿಗೆ ತಲುಪಿದೆಯೋ ?

ಶ್ರೀ ವಾಟಾಳ್ ನಾಗರಾಜ್.—ನನ್ನ ದೃಷ್ಟಿಯಲ್ಲಿ ಯಾರೇ ರಾಜರು ಆಗಿರಲಿ ಇಡೀ ರಾಜರ ಆಸ್ತಿ ಜನಸಾಮಾನ್ಯರ ಸ್ವತ್ತು. ಯಾವುದು ಬೇಕಾದರೂ ಸರ್ಕಾರ ಜನತೆ ಸ್ವತ್ತು ಎಂದು ತಾವು ಮುಟ್ಟುಗೋಲು ಹಾಕುವುದಕ್ಕೆ ತಮಗೆ ಹಕ್ಕು ಇದೆ. ಆದರೆ ಮುಖ್ಯಮಂತ್ರಿಗಳು ದೇವರಾಜ ಅರಸ್‌ರವರು ಅಧಿಕಾರಕ್ಕೆ ಬಂದನಂತರ ಶ್ರೀಮತಿ ಇಂದಿರಾಗಾಂಧಿಯವರ ಘೋಷಣೆಯಲ್ಲಿ ಮಹಾರಾಜರ ಆಸ್ತಿಯನ್ನು ಕೊಂಡುಕೊಂಡು ಲಕ್ಷಾಂತರ ರೂಪಾಯಿ ದಾನವಾಡಿ ನಿಮಗೆ ಬೇಕಾಗಿರತಕ್ಕ ಹಣಕ್ಕೆ ಟಿಕ್ಕಾಟನೆ ಮಾಡುವುದನ್ನು ಹೇಳಿದ್ದಾರೆಯೇ ? ರಾಜರನ್ನು ಮೆರೆಸುವಂತಹ ವೈಭವ ಜೀವನಕ್ಕೆ ನಿಮ್ಮ ಬೆಂಬಲ ಇರಬೇಕು. ಮೈಸೂರು ಮಹಾರಾಜರ ಬಗ್ಗೆ ನನಗೆ ಅಪಾರವಾದ ಗೌರವ ಇದೆ, ಘನತೆ ಇದೆ, ಎಲ್ಲಾ ಇದೆ. ಆದರೆ ನಿಮ್ಮ ತತ್ವ ಏನಾಯಿತು ? ಇದು ಒಂದು ರೀತಿ ಮಂತ್ರವಾದಿ ತತ್ವ. ಜನತೆಗೆ ಹೇಳತಕ್ಕದ್ದು ಒಂದು ಮಾಡತಕ್ಕದ್ದು ಇನ್ನೊಂದು ಇವೊತ್ತು ಆ ಕಡೆ ಸದಸ್ಯರು ಬಹಳ ಜನ ಹೇಳಿದರು ಇಂದಿರಾಗಾಂಧಿಯವರ ನೇತೃತ್ವದಲ್ಲಿ ಈ ರೀತಿ ನಡೆಯುತ್ತಿದೆ. ಅವರು ಬಂದಮೇಲೆ ಲೋಕಸಭೆಯಲ್ಲಿ ರಾದ್ಧಾಂತ ನಡೆಯುತ್ತಿದೆ. ಮಾರುತಿ ಸಣ್ಣಕಾರಿನ ಕಾರ್ಖಾನೆ ಬಗ್ಗೆ ಲೋಕಸಭೆಯಲ್ಲಿ ವಾದವಿವಾದಗಳು ನಡೆಯುತ್ತಿವೆ.

ಉಪಾಧ್ಯಕ್ಷರು.—ಕಾರ್ಖಾನೆ ವಿಷಯ ಇಲ್ಲಿ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಹರಿಯಾಣದಲ್ಲಿ 400 ಎಕರೆ ಜಮೀನನ್ನು ಪ್ರಧಾನಿ ಪುತ್ರರಿಗೆ ಕೊಟ್ಟಿರತಕ್ಕದ್ದು.....

ಶ್ರೀ ಕೋಣಂದೂರು ಲಿಂಗಪ್ಪ.—ಶಾಸಕರು ಇಂದಿರಾಗಾಂಧಿಯವರ ಹೆಸರನ್ನು ಉಚ್ಚಾರ ಮಾಡಬಾರದು ಎಂದು ಹೇಳುತ್ತೀರಿ ಆ ಕಡೆಯವರು ಏತಕ್ಕೆ ಮಾಡಬೇಕು ?

MR. DEPUTY SPEAKER.—Things which require to be replied can be asked. What the hon. member says does not come within the scope of the debate.

Sri H. D. DEVE GOWDA.—Corruption is not confined only to Mysore Government or Union Government. ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ಭ್ರಷ್ಟಾಚಾರದ ಅಡ್ಮಿನಿಸ್ಟ್ರೇಷನ್ ಹೇಗೆ ಬರುತ್ತದೆ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಅರಮನೆ ಜಾಗಗಳನ್ನು ತೆಗೆದು ಕೊಳ್ಳುವುದರಲ್ಲಿ ಮಾನ್ಯ ಶ್ರೀ ದೇವರಾಜ ಅರಸ್ ರವರ ಅಧಿಕಾರ ಸಂಪೂರ್ಣವಾಗಿ ದುರುಪಯೋಗವಾಗಿದೆ ಎಂದು ತಿಳಿಸುತ್ತೇನೆ.

Mr. DEPUTY SPEAKER.—The hon. members can raise points which come under the State Government. What the hon. member states pertain to the Union Government. Those points can be said elsewhere. That is why I suggested that the hon. member can go to the Lok Sabha.

ಶ್ರೀ ಕೋಣಂದೂರು ಲಿಂಗಪ್ಪ.—ಪ್ರೈಂಮಿನಿಸ್ಟರ್ ಆಫ್ ಇಂಡಿಯಾ, ಇಂದಿರಾಗಾಂಧಿಯವರ ಬಗ್ಗೆ ಒಂದು ವೇಳೆ ಏನಾದರೂ ನನ್ನ ಮಿತ್ರರು ಪ್ರಸ್ತಾಪ ಮಾಡುವುದಕ್ಕೆ ಹೋದರೆ ಆ ರೀತಿ ಮಾಡಬಾರದು ಎಂದು ಹೇಳುತ್ತೀರಿ. ದೇಶದಲ್ಲಿ ಹೇಗೆ ಭ್ರಷ್ಟಾಚಾರ ಬೆಳೆಯುತ್ತಿದೆ ಎಂಬುದನ್ನು ತಿಳಿಸಬೇಕಾದರೆ ಅದನ್ನು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು.—ಇಲ್ಲಿನ ವಿಷಯ ಎಷ್ಟು ಇದೆ ಅಷ್ಟೇ ಹೇಳಬೇಕು. ಅಲ್ಲಿ ವಿಷಯ ಮೈಸೂರು ದೇಶದ ಲೋಕಸಭಾ ಸದಸ್ಯರು ಇದ್ದಾರೆ, ಪಾರ್ಲಿಮೆಂಟಿನಲ್ಲಿ ಅವರು ಹೇಳುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ.—ನಮ್ಮ ಪಾರ್ಲಿಮೆಂಟ್ ಸದಸ್ಯರು ರಾಜ್ಯಸರ್ಕಾರದ ಮೇಲೆ ಹೇಳಿದ್ದಾರೆ. ಚನ್ನಬಸಪ್ಪನವರ ಸರ್ಕಾರದಲ್ಲಿ ಕೇಂದ್ರಸರ್ಕಾರಕ್ಕೆ ಹೇಳುವಷ್ಟು ಧೈರ್ಯ ಇದೆಯೆಂದು ಹೇಳಿದ್ದಾರೆ. ಮುಂದೆ ನೋಡೋಣ.

ಶ್ರೀ ವಾಟಾಳ್ ನಾಗರಾಜ್.—ಇದು ಪಾರ್ಲಿಮೆಂಟಿನ ವ್ಯಾಪ್ತಿ ಅಥವಾ ಲೋಕಸಭೆಯ ವ್ಯಾಪ್ತಿಯ ಪ್ರಶ್ನೆಯಲ್ಲ. ಇಂದಿರಾಗಾಂಧಿಯವರ ನೇತೃತ್ವದಲ್ಲಿ ಸುಭದ್ರ ಸರ್ಕಾರ ಬಂತು, ಆಡಳಿತ ಬಂತು ಎಂದು ಹೇಳಿದರು. ಅವರ ಪುತ್ರರು ಮಾಡಿದ ಆಸ್ತಿ ಏನು ಇದೆ ಅದರ ಬಗ್ಗೆ ವಾದವಿವಾದಗಳು ನಡೆದಿವೆ. ಅದೇ ರೀತಿ ಅರಮನೆ ಆಸ್ತಿ ಬಗ್ಗೆ ನಡೆಯುತ್ತಾ ಇರುವುದನ್ನು ನಾನು ಹೇಳಿದ್ದು. ಇದನ್ನು ಅನೇಕ ಜನ ಸುಭದ್ರವಾದ ಸರ್ಕಾರದ ಆಡಳಿತ ಎಂದು ಹೇಳುತ್ತಿದ್ದಾರೆ.

ನಿಮಗೆ ಬುದ್ಧಿ ಕಲಿಸುವುದಕ್ಕೆ ಅನೇಕ ಚುನಾವಣೆಗಳು ನಡೆದು. ಬಾಂಬೆ ಕಾರ್ಪೋರೇಷನ್ ಚುನಾವಣೆ ನಡೆಯಿತು ಆಗ ನಿಮ್ಮ ಪಾರ್ಟಿ ಗತಿ ಏನಾಯಿತು ಎಂಬುದು ಜನರಿಗೆ ಗೊತ್ತಿದೆ. ಅಹಮದಾಬಾದ್‌ನಲ್ಲಿ ಲೋಕಸಭಾ ಚುನಾವಣೆ ಏನಾಯಿತು ? ನಮ್ಮ ರಾಜ್ಯದಲ್ಲಿ ನಾಗಮಂಗಲದ ಪರಿಸ್ಥಿತಿ ಏನಾಯಿತು ? ಉಡುಪಿ ಚುನಾವಣೆ ಏನಾಯಿತು ? ಚೆನ್ನಗಿರಿ ಪುರಸಭೆ ಚುನಾವಣೆ ಏನಾಯಿತು ? ಇದು ಎಲ್ಲವನ್ನೂ ನೋಡಿ ನೀವು ಏನು ಮಾಡುತ್ತಿದ್ದೀರಿ ಎಂದರೆ ಪ್ರಜಾಪ್ರಭುತ್ವವನ್ನು ಕೊಲೆ ಮಾಡತಕ್ಕ ಕೆಲಸಕ್ಕೆ ಈ ಸರ್ಕಾರ ಕೈಹಾಕಿದೆ. ಶ್ರೀಮಾನ್ ದೇವರಾಜ ಅರಸ್‌ರವರ ಸರ್ಕಾರ ಮಾಡುತ್ತಾ ಇರತಕ್ಕ ಪ್ರಜಾಪ್ರಭುತ್ವದ ಕೊಲೆಯನ್ನು ಹಿಂದೆ 25 ವರ್ಷಗಳಲ್ಲಿ ಬಂದಂಥ ಸರ್ಕಾರ ಯಾವ ಸರ್ಕಾರಗಳು ಮಾಡಿಲ್ಲವೆಂದು ನಾನು ಹೇಳುತ್ತೇನೆ. ಸಂಪೂರ್ಣವಾಗಿ ಮುನಿಸಿಪಾಲಿಟಿಗಳನ್ನೆಲ್ಲಾ ಶ್ರೀಮಾನ್ ಬಸವಲಿಂಗಪ್ಪನವರು ಮುಚ್ಚಿಹಾಕಿದರು. ಮುಂದೆ ಹೇಳುತ್ತಾರೆ ತಾಲ್ಲೂಕು ಬೋರ್ಡು ಚುನಾವಣೆಗಳನ್ನು ನಡೆಸುವುದಿಲ್ಲ ಎಲ್ಲಾ ಕಡೆಯಲ್ಲೂ ಅಡ್ಮಿನಿಸ್ಟ್ರೇಟರ್ಸ್ ಹಾಕಬೇಕೆಂದು ಉದ್ದಿಶ್ಯ ಇಲ್ಲಿ ಇದೆ ಎಂದು. ಇದೆಲ್ಲಾ ನೋಡಿದಾಗ ಏನು ಗೊತ್ತಾಗುತ್ತದೆ ಎಂದರೆ ಇವೊತ್ತಿನ ದಿವಸ ನಿಮಗೆ ಹೆದರಿಕೆಯಾಗಿದೆ. ನಿಮಗೆ ಧೈರ್ಯ ಇದ್ದರೆ ಮುನಿಸಿಪಾಲಿಟಿಗಳಲ್ಲಿ ಇದ್ದಂಥ ಆಡಳಿತಾಧಿಕಾರಿಗಳನ್ನು ಕರೆಸಿ ಚುನಾವಣೆಗಳನ್ನು ನಡೆಸಿ. ಚುನಾವಣೆಯಲ್ಲಿ ನೀವು ಬಹುಮತ ಪಡೆದು ಬಂದದ್ದೇ ಆದರೆ ಈ ಕಡೆ ಇರುವ 48 ಜನ ಶಾಸಕರು ರಾಜೀನಾಮೆ ಕೊಟ್ಟು ಹೊರಗೆ ಹೋಗುತ್ತೇವೆ. ತಾಲ್ಲೂಕು ಬೋರ್ಡು ಮತ್ತು ಪುರಸಭೆಗಳ ಚುನಾವಣೆ ನಡೆಸಿ ಚುನಾವಣೆಯಲ್ಲಿ ಬಹುಮತ ಪಡೆದರೆ 48 ಜನರೂ ಸಂಪೂರ್ಣವಾಗಿ ರಾಜೀನಾಮೆ ಕೊಟ್ಟು ಹೊರಗೆ ಹೋಗುತ್ತೇವೆ. ಇದಕ್ಕೆ ಚೆನ್ನಬಸಪ್ಪನವರು ತಯಾರಿದ್ದಾರೆಯೇ !

ಶ್ರೀ ಎಚ್. ಎಂ. ಚೆನ್ನಬಸಪ್ಪ.—ವಾಟಾಳ್ ನಾಗರಾಜ್ ಹೋದರೆ ಇಲ್ಲಿ ಕಳೆ ಇರುವುದಿಲ್ಲ. ನೀವು ಖಂಡಿತ ಹೋಗಬಾರದು.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಚುನಾವಣೆಗಳು ನಡೆಸುವುದಿಲ್ಲ ಎನ್ನುವ ಅರ್ಥ ಬರುತ್ತದೆ. ಚೆನ್ನಬಸಪ್ಪನವರಿಗೆ ನಾನು ಇರಬೇಕು ಎನ್ನುವ ಇಚ್ಛೆ ಇರಬಹುದು. ಈ ರಾಜ್ಯದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕು ಎಂದು ಘೋಷಣೆ ಮಾಡಿ ಜನಗಳಿಗೆ ಮರಳು ಮಾಡುವ ವಿಚಾರಕ್ಕೆ ಹೋಗಬೇಡಿ. ನಿಮ್ಮಲ್ಲಿ ಏನು ಉಳಿದಿದೆ ! ಎಲ್ಲಾ ಕಡೆ ಇಂದಿರಾಗಾಂಧಿಯವರ ನಾಯಕತ್ವ ನೆಗೆದುಬಿದ್ದಿದೆ. ಒರಿಸ್ಸಾದಲ್ಲಿ ಸಂಪೂರ್ಣ ಸರ್ವನಾಶವಾಯಿತು, ಮೈಸೂರಿನಲ್ಲಿ ಶುರು ಆಗಿದೆ, ದಿವಸಕ್ಕೊಂದು ಸ್ಟೇಟ್‌ಮೆಂಟ್. ನಾಳೆ ಒಂದು ಹೇಳಿಕೆ, ನೆನ್ನೆ ಒಂದು ಹೇಳಿಕೆ ಮೊನ್ನೆ ಒಂದು ಹೇಳಿಕೆ, ನಿಮ್ಮಲ್ಲೇ ಒಳ ಜಗಳ ಶುರುವಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮೈಸೂರು ರಾಜಕಾರಣದ ಅನುಭವ ಶ್ರೀಮಾನ್ ವಾಟಾಳ್ ನಾಗರಾಜ್ ರವರಿಗೆ ಗೊತ್ತಿಲ್ಲ. ಏತಕ್ಕೆಂದರೆ ಅವರು ಇಂಡಿಪೆಂಡೆಂಟ್ ಮೆಂಬರ್ ಆಗಿರುವುದರಿಂದ ಗೊತ್ತಿಲ್ಲ. ಒಂದು ಸಾರಿ ಹೇಳಿಕೆ ಕೊಟ್ಟರೆ ಕೆಲವು ಶಾಖಾಯು ಲವಣಾಯು ನಡೆಯುವುದಕ್ಕೆ ಚೆನ್ನಾಗಿರುತ್ತದೆ. ಈಗ್ಗೆ 6 ತಿಂಗಳ ಹಿಂದೆ ಶ್ರೀಮಾನ್ ಚನ್ನಬಸಪ್ಪನವರ ಒಂದು ಹೇಳಿಕೆ ಶುರುವಾಯಿತು. ಈ ವೊತ್ತು ಪಾರ್ಲಿಮೆಂಟ್ ಸದಸ್ಯರ ಒಂದು ಹೇಳಿಕೆ ಶುರುವಾಗಿದೆ.

4-00 P.M.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಶಾಖಾಯು ಲವಣಾಯು ಎಂದು ಏನು ಹೇಳಿದರೋ ಅದರ ಅರ್ಥ ಏನು ಸ್ವಾಮಿ ?

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ಸುಭದ್ರವಾದ ಸರ್ಕಾರ ಇದೆ ಎಂದು ಯಾರಾದರೂ ನಂಬಿದ್ದರೆ ಕಷ್ಟವಾಗುತ್ತದೆ. ಶ್ರೀಮಾನ್ ಕೆ. ಪುಟ್ಟಸ್ವಾಮಿಯವರಿಗೆ ಈ ವಿಚಾರ ಗೊತ್ತಿದೆ. ಸುಭದ್ರ ಸರ್ಕಾರ ಇಲ್ಲ ಎಂದು. ಆದರೂ ಪಾರ್ಟಿ ದೃಷ್ಟಿಯಿಂದ ಈ ಸಭೆಯಲ್ಲಿ ಒಗ್ಗಟ್ಟು ಇಲ್ಲದಿದ್ದರೆ ಲೋಪವಾಗುತ್ತದೆ. ಆದರೆ ಅನೇಕ ಜನರಿಗೆ ಇದರಲ್ಲಿ ನಂಬಿಕೆ ಇಲ್ಲ. ಶ್ರೀ ದೇವೇಂದ್ರಪ್ಪ ಘಾಳಪ್ಪ, ಶ್ರೀ ಕಿತ್ತೂರ್ ಮತ್ತು ಶ್ರೀ ಶಿವಣ್ಣ ಅವರಿಗೂ ಈ ಸರ್ಕಾರದಲ್ಲಿ ನಾವು ಇರುತ್ತೇವೆಯೋ ಇರುವುದಿಲ್ಲವೋ ಎನ್ನುವ ನಂಬಿಕೆ ಇಲ್ಲ. ನಮ್ಮನ್ನು ತೆಗೆಯಬಹುದು ಎನ್ನುವ ಶಂಕೆ ಅವರಲ್ಲಿ ಇದೆ. ಇದೇ ಶ್ರೀಮಾನ್ ಚನ್ನಬಸಪ್ಪನವರನ್ನು ಹೊರಗಡೆ ಕಳುಹಿಸಬೇಕು ಎಂದು ಅವರು ಮದುವೆ ಮಾಡಿದ ಬಗ್ಗೆ ಒಂದು ದೊಡ್ಡ ರಾಧ್ಯಾಂತ ನಡೆಸಿದರು. ಭಾರಿ ದೊಡ್ಡ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಒಬ್ಬ ಜರ್ನಲಿಸ್ಟ್ ಸೇರಿ ಎಲ್ಲರೂ ಬಾಂಬೆಗೆ ಹೋಗಿ ಟೈಂಸ್ ಆಫ್ ಇಂಡಿಯಾ ಮತ್ತು ಇಲ್ಲ ಸ್ಟ್ರೇಟೆಡ್ ವೀಕ್ಲಿ ಪತ್ರಿಕೆಗಳಲ್ಲಿ ಇವರ ವಿಚಾರ ಬರೆಸಿದರು. ಇದನ್ನು ನೋಡಿ ನನಗೆ ಇವರು ಇಂದಿರಾ ಗಾಂಧಿಯವರ ಸಮಕ್ಕೆ ಬಂದರಲ್ಲಾ ಅಂತ ಅನಿಸಿತು.

ಉಪಾಧ್ಯಕ್ಷರು.—ಅದು ಹಳೆ ಕಥೆ.

ಶ್ರೀ ವಾಟಾಳ್ ನಾಗರಾಜ್.—ನಾನು ಇದನ್ನು ಏತಕ್ಕೆ ಹೇಳಿದೆ ಎಂದರೆ ನಿಮ್ಮ ಸುಭದ್ರವಾದ ಸರ್ಕಾರ ಎಲ್ಲಿಯವರೆಗೆ ಹೋಗಿದೆ ಎಂದರೆ ಶ್ರೀಮಾನ್ ಚೆನ್ನಬಸಪ್ಪನವರಂಥವರ ಹೆಸರು ಹೊರಗಡೆ ಹೋಗುವ ಮಟ್ಟಕ್ಕೆ ಹೋಗಿದೆ ಎಂದು ನನಗೆ ಅನಿಸುತ್ತದೆ. ಇದು ಎಂತಹ ಸುಭದ್ರವಾದ ಸರ್ಕಾರ ಸ್ವಾಮಿ ? ಮತ್ತು ಚೆನ್ನಬಸಪನವರಿಗೆ ಇದ್ದಂಥ ಸಂಪೂರ್ಣ ಅಧಿಕಾರ ಹರಣವಾಗಿದೆ, ಅವರಿಗೆ ಇದ್ದಂಥ ಅಧಿಕಾರವನ್ನು ಕಸಿದುಕೊಂಡಿದ್ದಾರೆ.

Sri H. M. CHANNABASAPPA.—The hon. Member seems to know my mind much more than what I know.

Sri H. S. SIDDAPPA.—Who also should worry about it in your old age ?

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಮೊನ್ನೆತಾನೇ ಪತ್ರಿಕೆಯಲ್ಲಿ ಬಂದಿದೆ. ಇಂಜಿನಿಯರ್ ಇನ್ ಚೀಫ್ ಮುಗ್ಧಂ ಅವರನ್ನು ಬರಗಾಲದ ಪ್ರದೇಶದ ಮುಖ್ಯಸ್ಥರನ್ನಾಗಿ ಮಾಡಿ ಅವರು ಹೇಳಿದ್ದೆಲ್ಲಾ ಸರ್ಕಾರದ ಆಜ್ಞೆ ಎಂದು ಮಾಡಿದ್ದಾರೆ. ಅವರು ಸರ್ಕಾರಕ್ಕೆ ಸಂಬಂಧಪಟ್ಟ ಮಂತ್ರಿಗಳನ್ನೂ ಕೇಳಬೇಕಾಗಿಲ್ಲ, ರೆವಿನ್ಯೂ ಮಂತ್ರಿಗಳನ್ನು ಕೇಳಬೇಕಾಗಿಲ್ಲ, ಕಾಮಗಾರಿ ಸಚಿವರ ಕಣ್ಣನ್ನೂ ತಪ್ಪಿಸಿ, ರೆವಿನ್ಯೂ ಸಚಿವರ ಕಣ್ಣನ್ನು ತಪ್ಪಿಸಿ ಒಬ್ಬ ಅಧಿಕಾರಿಗೆ ಇಷ್ಟೊಂದು ಸ್ಥಾನವನ್ನು ಕೊಡಬೇಕಾದರೆ ನಿಮ್ಮಲ್ಲಿ ಎಷ್ಟರಮಟ್ಟಿಗೆ ಮಂತ್ರಿಮಂಡಲದಲ್ಲಿ ಹೊಂದಾಣಿಕೆ ಇದೆ ಎಂದು ಗೊತ್ತಾಗುತ್ತದೆ. ಸಂಪೂರ್ಣವಾಗಿ ನಿಮ್ಮ ಮಂತ್ರಿಮಂಡಲದಲ್ಲಿ ಹೊಂದಾಣಿಕೆ ಇಲ್ಲ ಎನ್ನುವ ಸ್ಪಷ್ಟವಾದ ಅಭಿಪ್ರಾಯ ಕಾಣುತ್ತದೆ. ನಮ್ಮ ಪಾರ್ಲಿಮೆಂಟ್ ಸದಸ್ಯರು ದೆಹಲಿಯಲ್ಲಿ ಹೇಳಿದ್ದು ನಿಜ. ಪಾರ್ಟಿಯಲ್ಲೇ ಗೊಂದಲವಾಗಿದೆ. ಒಂದು ರೀತಿಯಲ್ಲಿ ಪಾರ್ಟಿ ಉಳಿಸುವುದಕ್ಕೆ ಪತ್ರಿಕೆ ಹೇಳಿಕೆ ಕೊಟ್ಟಿರಬಹುದು. ನಿಮ್ಮ ಅಧಿಕಾರದಲ್ಲಿ ನಂಬಿಕೆ ಇಟ್ಟುಕೊಳ್ಳಬೇಡಿ. ಮುಂದಿನ ಯೋಚನೆ ನೀವು ಮಾಡಬೇಕು. ಶ್ರೀಮಾನ್ ಶಿವಣ್ಣನವರಾಗಲಿ, ಶ್ರೀಮಾನ್ ಕಿತ್ತೂರ್ರವರಾಗಲಿ, ಶ್ರೀ ದೇವೇಂದ್ರಪ್ಪ ಘಾಳಪ್ಪ ಅವರಾಗಲಿ, ಶ್ರೀಮಾನ್ ಬಸವಲಿಂಗಪ್ಪ ಅವರಿಗೇ ಆಗಲಿ ಹೇಳುತ್ತೇನೆ, ನೀವು ಮುಂದಿನ ಯೋಚನೆ ಮಾಡಿಕೊಳ್ಳಿ ಎಂದು. ಇನ್ನು 6 ತಿಂಗಳಲ್ಲಿ ನಿಮ್ಮ ಕೋಟೆ ಕುಸಿದು ಬೀಳತಕ್ಕ ಪರಿಸ್ಥಿತಿ ಬಂದಿದೆ ಎಂದು ಹೇಳುತ್ತೇನೆ.

ಇನ್ನು ಬರಗಾಲದ ಸಮಯದಲ್ಲಿ ಸರ್ಕಾರದ ಶಾಸಕರೂ ಮತ್ತು ಮಂತ್ರಿಗಳೂ ಅಲ್ಲದೆ ಇನ್ನೂ ಕೆಲವರು ಹುಟ್ಟಿಕೊಂಡಿದ್ದಾರೆ. ಯೂತ್ ಕಾಂಗ್ರೆಸ್‌ನ ಎಫ್. ಎಂ ಖಾನ್, ಮತ್ತೊಬ್ಬರು ಕೂಡ ಹೇಳುತ್ತಾರೆ. ಗುಲ್ಬರ್ಗಾದಿಂದ ನಗರಕ್ಕೆ ಬಂದಿರುವ ಸಂತ್ರಸ್ತರಿಗೆ ವಸ್ತ್ರ ಹಂಚಿಕೆ ಯಾರಿಂದ ಎಂದರೆ ಯುವಜನ ಡಾಕ್ಟರ್ ನಟರಾಜ್ ಅವರಿಂದ ಒಂದು ಕಡೆ ಮಾವ ಒಂದು ಕಡೆ ಅಳಿಯ, ಒಂದು ಕಡೆ ಸ್ನೇಹಿತರು ನಿಂತುಕೊಂಡು ಫೋಟೋ ತೆಗೆಸಿಕೊಂಡಿದ್ದಾರೆ. ಆ ಫೋಟೋ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಇದು ಮಾವ—ಅಳಿಯನ ರಾಜ್ಯವಾಯಿತೇ ? ಈ ರಾಜ್ಯದ ಆಡಳಿತವನ್ನು ನಾನು 25 ವರ್ಷದಿಂದಲೂ ನೋಡುತ್ತಿದ್ದೇನೆ. ಅಳಿಯಂದಿರ ಪಾರಪತ್ಯ ಇಷ್ಟರಮಟ್ಟಿಗೆ ನಡೆದಿರಲಿಲ್ಲ. ನಾನು ಬಹಳ ದುಃಖದಿಂದ ಹೇಳುತ್ತೇನೆ. ಎರಡು ವರ್ಷದಿಂದ ಅವರ ಹೆಸರೇ ಇರಲಿಲ್ಲ. ಈಗ ಇದ್ದಕ್ಕಿದ್ದಹಾಗೆ ಲಿಂಗೋದ್ಭವ ಆದ ಹಾಗೆ ಪ್ರತ್ಯಕ್ಷವಾಗಿ ಸರ್ಕಾರದ ಕೆಲಸ ಮಾಡಲಕ್ಕೆ ಇವರು ಯಾರು ?

Sri H. M. CHANNABASAPPA.—Let us not worry about as to who the person is ? He is not prevented from doing anything. He is as much a citizen in this Country and he has a right to do it. To comment on that in a place where he is not able to defend himself is not proper.

ಶ್ರೀ ಎಸ್. ಹಮೀದ್ ಷಾ.—ಶ್ರೀಮಾನ್ ನಿಜಲಿಂಗಪ್ಪ ಅವರಿಗೂ ಮತ್ತು ಶ್ರೀಮಾನ್ ರಾಜಶೇಖರ್ ಅವರಿಗೂ ಏನು ಸಂಬಂಧ ಅದನ್ನೂ ಹೇಳಿಬಿಡಿ.

ಶ್ರೀ ಹೆಚ್. ಡಿ ದೇವೇಗೌಡ.—ಶ್ರೀಮಾನ್ ಚನ್ನಬಸಪ್ಪನವರು ಏನು ಪ್ರಾ ಮಾಡಿದರು ಎನ್ನುವದು ಗೊತ್ತು. ಅವರು ಈ ಜಾಗದಲ್ಲಿ ಇದ್ದಾಗ ನೀವು ಮತ್ತು ಶ್ರೀಮಾನ್ ಸಿದ್ದವೀರಪ್ಪನವರು ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರ ಅಳಿಯಂದಿರ ಮೇಲೆ ಮಾಡಿರುವ ಆರೋಪಣಾ ಪಟ್ಟಿಯನ್ನು ಬೇಕಾದರೆ ತೆಗೆದು ಓದುತ್ತೇನೆ. ಸಿದ್ದವೀರಪ್ಪನವರು, ಗುರುನಾಥ್ ಅವರು ಮತ್ತು ಕಾಂಗ್ರೆಸ್

ಕಮಿಟಿ ಅಧ್ಯಕ್ಷರುಗಳು ಅವರ ಅಳಿಯಂದಿರ ಬಗ್ಗೆ ಆರೋಪಣೆ ಮಾಡಿದ್ದಾರೆ. ಈವೊತ್ತಿನ ದಿವಸ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ್ದನ್ನು ಸಹನೆ ಮೀರಿ ಸರ್ಕಾರವನ್ನು ಡಿಫೆಂಡ್ ಮಾಡುವುದಕ್ಕೆ ಹೊರಟಿದ್ದಾರೆಯೇ ? ತಾವು ಹಿಂದಿನ ನೆನಪು ಮಾಡಿಕೊಳ್ಳಿ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ತಾವು ಅದನ್ನು ಓದಿ. ಅದು ಸರಿಯಾಗಿ ಇದ್ದರೆ, ನನ್ನಲ್ಲಿ ತಪ್ಪು ಇದ್ದರೆ ಕ್ಷಮಾಪಣೆ ಕೇಳುವುದಕ್ಕೆ ಅಡ್ಡಿ ಇಲ್ಲ. If I may recall to the memory of the Hon. Leader of Opposition. I may have made a number of charges against the Ministers and Members who are in a position to defend themselves on the floor of this House. But so far as my memory goes I don't think I have committed that breach of rule to comment on those persons who cannot defend themselves here.

ಶ್ರೀ ವಾಟಾಳ್ ನಾಗರಾಜ್.—ಅವರು ಬರೀ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾ ಇಲ್ಲ. ಅನೇಕ ಸಂಸ್ಥೆಗಳಿಗೆ ಸದಸ್ಯರನ್ನಾಗಿ ನಾಮಕರಣ ಮಾಡಿದ್ದಾರೆ. ಅವರನ್ನು ಸ್ಕೇರ್ಸಿಟಿ ಕೌನ್ಸಿಲ್‌ಗೂ ನಾಮಕರಣ ಮಾಡಿದ್ದಾರೆ. ಆದುದರಿಂದ ಅವರ ಅಧಿಕಾರ ವ್ಯಾಪ್ತಿಯನ್ನು ಕೇಳಬೇಕಾಗಿದೆ. ಅಲ್ಲದೆ ನಿಮ್ಮ ವರ್ಕಿಂಗ್ ಕಮಿಟಿಗೆ ಮಾವನೂ ಮೆಂಬರ್, ಅಳಿಯನೂ ಮೆಂಬರ್, ಅದನ್ನು ಒತ್ತಾಯ ಮಾಡುವುದಕ್ಕೆ ನಾನು ಹೋಗುವುದಿಲ್ಲ.

ಉಪಾಧ್ಯಕ್ಷರು.—ಈ ವಿಷಯಕ್ಕೂ ಎಕ್ಸಿಕ್ಯುಟೀವ್ ಕಮಿಟಿಗೂ ಸಂಬಂಧ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾನು ವಿಷಯಕ್ಕೆ ಹೋಗುವುದಿಲ್ಲ. ಅವರನ್ನು ಸ್ಟೇಟ್ ಉಲ್ಲನ್ ಬೋರ್ಡ್‌ಗೆ ಸದಸ್ಯರನ್ನಾಗಿ ಮಾಡಿದ್ದಾರೆ. ಅದನ್ನು ನಿಮ್ಮ ಪಾರ್ಟಿಯಲ್ಲಿ ಕೇಳುವುದಕ್ಕೆ ಧೈರ್ಯವಿಲ್ಲ. ಯಾವ ಪ್ರಶ್ನೆ ಎತ್ತಿದರೂ ಕೂಡ ಉತ್ತರ ಕೊಡುವುದಕ್ಕೆ ನಾನು ತಯಾರ್ ಎಂದು ಹೇಳುತ್ತಾರೆ. ಇಂದು ಅವರು ಈ ಸಭೆಯಲ್ಲಿ ಇದ್ದಿದ್ದರೆ ಅವರಿಗೆ ಮುಖಕ್ಕೆ ಮುಖ ಕೊಟ್ಟು ಇದು ಸರಿಯೇ ಎಂದು ಕೇಳುತ್ತಿದ್ದೆ- ಈ ರೀತಿ ಸ್ವಜನ ಪಕ್ಷಪಾತ ನಿಮ್ಮಲ್ಲಿ ಇದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅರಸು ಅವರು ಬಿಟ್ಟು ಹೋದರೆ ಉತ್ತರಾಧಿಕಾರಿಯಾಗಿ ಒಬ್ಬರು ಬೇಡವೇ ? ಅದಕ್ಕೆ ಅವರನ್ನೇ ತಯಾರು ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇನ್ನೊಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಮೇಜರ್ ಇರಿಗೇಷನ್ ಬೋರ್ಡ್‌ಗೆ ಶ್ರೀಮಾನ್ ಕೆ. ರಾಮರಾವ್ ಅವರನ್ನು ನಾಮಿನೇಟ್ ಮಾಡಿದ್ದಾರೆ. ಅವರು ಕೇರಳ ರಾಜ್ಯದಲ್ಲಿರುವ ಇಡಿಕ್ಕಿ ಪ್ರಾಜೆಕ್ಟಿನಲ್ಲಿ ಹಿಂದೂಸ್ತಾನ್ ಕನ್‌ಸ್ಟ್ರಕ್ಷನ್ ಕಂಪೆನಿಯ ಪರವಾಗಿ ಪ್ರಾಜೆಕ್ಟ್ ಇಂಜನಿಯರಾಗಿ ಕೆಲಸ ಮಾಡುತ್ತಿದ್ದರು. ಅವರು ಅಲ್ಲಿ ಕೆಲಸ ಮಾಡುವಾಗ ಅವರಿಂದ ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಕೇರಳ ಸರ್ಕಾರದವರು ಮತ್ತು ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪೆನಿಯವರು ಗುರುತರವಾದ ಆರೋಪಗಳನ್ನು ಮಾಡಿ ಅವರನ್ನು ಹೊರಗೆ ಕಳುಹಿಸಿದರು. ನಮ್ಮ ರಾಜ್ಯ ಸರ್ಕಾರ ಅವರಿಗೆ ಪುರಸ್ಕಾರ ಕೊಟ್ಟು ಅವರನ್ನು ಇರಿಗೇಷನ್ ಬೋರ್ಡಿನ ಸದಸ್ಯರನ್ನಾಗಿ ಮಾಡಿದ್ದಾರೆ. ಇದಾದನಂತರ ಇನ್ನೂ ಕೆಲವು ಪ್ರಮುಖವಾದ ಬೋರ್ಡುಗಳಲ್ಲಿ ಸದಸ್ಯರನ್ನಾಗಿ ಮಾಡಿರತಕ್ಕದ್ದು ನಮಗೆ ಗೊತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ಅವರು ಸವರನ್ ಕನ್‌ಸ್ಟ್ರಕ್ಷನ್ ಕಂಪೆನಿಯ ಕಂಟ್ರಾಕ್ಟರಾಗಿ ಈಗಲೂ ಕೆಲಸ ಮಾಡುತ್ತಿದ್ದಾರೆ, ಅವರು ಕಂಟ್ರಾಕ್ಟ್ ಮಾಡುತ್ತಿದ್ದಾರೆ. ಅವರ ಅನುಭವದಿಂದ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಿಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಅವರು ಸರ್ಕಾರದಿಂದ ಕಂಟ್ರಾಕ್ಟ್‌ಗಳನ್ನು ತೆಗೆದುಕೊಂಡು ಬೇರೆಯವರಿಗೆ ಸಬ್‌ಲೀಸ್‌ಗೆ ಕೊಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಿನಲ್ಲಿ ಅಧ್ಯಕ್ಷರಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀ ಕೆ. ರಾಮರಾವ್ ಎನ್ನುವವರು ಶ್ರೀ ಕೆ. ಕೆ. ಮೂರ್ತಿ ಅವರ ಸಹೋದರರು.

ಶ್ರೀ ಎಚ್. ಡಿ. ದೇವೇಗೌಡ.—ಆಡಳಿತ ಭದ್ರತೆಯ ಹಿತದೃಷ್ಟಿಯಿಂದ ಕಂಟ್ರಾಕ್ಟ್ ಮಾಡಿದ್ದ ಅನುಭವವಿರುವವರಿದ್ದರೆ ಒಳ್ಳೆಯದಲ್ಲವೇ ?

ಶ್ರೀ ವಾಟಾಳ್ ನಾಗರಾಜ್.—ನಾನು ಮಾನ್ಯ ಚನ್ನಬಸಪ್ಪನವರ ನಿಷ್ಠೆಯನ್ನು, ದಕ್ಷತೆಯನ್ನು ಪ್ರಶ್ನೆ ಮಾಡುತ್ತಿದ್ದೇನೆ. ನಾನು ಅವರನ್ನು ಬಹಳ ಆಳವಾಗಿ ಅಭ್ಯಾಸ ಮಾಡಿದ್ದೇನೆ. ಒಳ್ಳೆಯ ದಕ್ಷ ಆಡಳಿತಗಾರರು ಎಂದು ತಿಳಿದುಕೊಂಡಿದ್ದೇನೆ. ಈ ಮನುಷ್ಯನನ್ನು ಇರಿಗೇಷನ್ ಬೋರ್ಡಿಗ್ ಹಾಕಿದಾಗ ಏಕೆ ಸುಮ್ಮನೆ ಕುಳಿತಿದ್ದರು ?

ಶ್ರೀ ಎಚ್. ಡಿ. ದೇವೇಗೌಡ.—ಏನು ಮಾಡುತ್ತಾರೆ ; ಅಸಹಾಯಕತೆ ?

Sri H.M. CHANNABASAPPA.-Mr. Deputy Speaker I remember the Chief Minister made certain observations about this long time ago when the same question had been raised by the hon. the Leader of the opposition. The Leader of the Opposition, if my memory serves, made the same allegation. I remember the Chief Minister answered already that question that he himself resigned the job and he is now free from that company.

ಶ್ರೀ ಎಚ್. ಡಿ. ದೇವೇಗೌಡ.—ಕಳೆದ ಬಜೆಟ್ ಅಧಿವೇಶನದಲ್ಲಿ ನಾನು ಭಾಷಣ ಮಾಡತಕ್ಕ ಕಾಲದಲ್ಲಿ ಈ ಅಪಾದನೆಯನ್ನು ಮಾಡಿದೆ. ಅದಕ್ಕೆ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದು ನಿಜ. ಯಾವುದೇ ಆರೋಪಗಳಿಗೆ ಒಳಪಟ್ಟು ರಾಜೀನಾಮೆ ಕೊಟ್ಟು ಬರಲಿಲ್ಲ, ಅವರೇ ಕೆಲಸ ಬಿಟ್ಟು ಬಂದರು, ಅವರು ಬಹಳ ಯೋಗ್ಯ, ದಕ್ಷ ಇಂಜಿನಿಯರ್ ಎಂದು ಹೇಳಿದರು. ಅದಾದ ಮೇಲೆ ಅದಕ್ಕೆ ಸಂಬಂಧಪಟ್ಟ ಎಲ್ಲ ಬಾಖಲಾತಿಗಳನ್ನೂ ನಾನು ತರಿಸಿದ್ದೇನೆ. ನನ್ನ ಹತ್ತಿರ ಸಂಬಂಧಪಟ್ಟ ಎಲ್ಲ ಕಾಗದಪತ್ರಗಳೂ ಇವೆ. ಯಾವ ಕಾರಣಕ್ಕಾಗಿ ರಾಜೀನಾಮೆ ಕೊಟ್ಟರು ಎನುವುದಕ್ಕೆ ಹಿಂದೂಸ್ತಾನ್ ಕನ್‌ಸ್ಟ್ರಕ್ಷನ್ ಕಂಪೆನಿಯ ಒಬ್ಬ ಹಿರಿಯ ಅಧಿಕಾರಿಗಳಿಂದ ಬಂದಿರುವ ದಾಖಲಾತಿಗಳು ನನ್ನಲ್ಲಿವೆ. ಯಾರ ಮುಂದೆ ವಿತರಣೆ ಕೇಳಬೇಕು ? ಮುಖ್ಯ ಮಂತ್ರಿಗಳ ಮುಂದೆಯೋ ಅಥವಾ ಲೋಕೋಪಯೋಗಿ ಮಂತ್ರಿಗಳ ಮುಂದೆಯೋ ? ವಿಚಾರಣೆ ಮಾಡುವುದಕ್ಕೆ ತಯಾರಾಗಿದ್ದರೆ ಅಗ ಉತ್ತರ ಹೇಳುತ್ತೇನೆ.

Sri H. M. CHANNABASAPPA.—It does not matter whether he shall submit it to the Chief Minister or myself. Both myself and the Chief Minister are part and parcel of the Government and so, if the Leader of the Opposition has any record ef evidence, Government would be glad to examine it if he passes it on to us. Otherwise, in the context of the Chief Minister's reply, I think the matter should end there, unless he has enough material to counter-act it and place it in possession of the Chief Minister, who would certainly be glad to examine it.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಹತ್ತಿರ ಇರತಕ್ಕ ಕಾಗದಪತ್ರಗಳನ್ನು ಬೇಕಾದರೆ ಅಧ್ಯಕ್ಷರು ನೋಡಲಿಕ್ಕೆ ಕೊಡಲು ತಯಾರಾಗಿದ್ದೇನೆ. I will take that much of responsibility. I will place such of those records, which I have possessed, for the perusal of the Speaker. But I am not prepared to place it before you, because I doubt your bona fides I am so sorry. Knowing all that you have put him on the Board.

Sri H. M. CHANNABASAPPA.- Sir, I take every serious objection to his questioning our bona fides. I have no objection for his placing the records in possession of the Speaker. But to say that if he places those records with Government for such examination and action as may be necessary, justice will not be done, and it would not amount to correct way of doing things. If any hon. member of this House has a charge to make, it is open to him, and if he has enough evidence it is open to him to place it in the hands of the Government. Without doing that, to simply make a charge, would not be fair.

Sri H. D. DEVE GOWDA.—The Speaker is the custodian of this House. When I have taken the responsibility to place such of those documents, which I possess, for the perusal of the Speaker, I am not shirking my responsibility. I am going to place it before the Speaker, but not before you because I cannot expect justice from you.

Sri H.M. CHANNABASAPPA.—Sir, it would be very unfair to say like that. He may directly give it or through the Speaker. It means the samething.

Mr. DEPUTY SPEAKER.—The Opposition Leader knows the rules about our powers. If he passes on the record to me, I can only pass on that material to the Government for necessary action if I find that there is sufficient evidence. If the hon. the Leader of the Opposition so desires, let him pass on true copies. Action will have to be taken by Government and not by the Presiding Officers.

Sri H. D. DEVE GOWDA.—Why I am hesitating is, the Government is going to shield that particular gentleman. Even now I have that apprehension ; I know the mind of the Government. The Government is bent upon defending that gentleman. I know what reply came from the Government when I made the allegation during the last Session. I do not want to allow this Government to take action against the gentleman who has transferred those documents to me. That is why I said that I want to place those documents before the Speaker for perusal.

Sri H. M. CHANNABASAPPA.—Then, I will have to doubt the bonafides of the hon. the Leader of the Opposition himself. The Leader of the Opposition was good enough to say that here is a Government which will shield a person who has reportedly done something wrong.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಡಲೇಗಿಡದ ಸೊಪ್ಪನ್ನು ತಂದು ಮೇಕೆಗೆ ಕಟ್ಟಿದ ಹಾಗೆ ಮಾಡಬೇಡಿ.

Sri H. M. CHANNABASAPPA.—I might say on behalf of the Government. Government is here to shield every good man in this country. I shall given an undertaking that we shall not shield anybody who does wrong against the Government or the State.

ಶ್ರೀ ಎಚ್. ಡಿ. ದೇವೇಗೌಡ.—ಇದರ ಬಗ್ಗೆ ವಿಚಾರಣೆಗೆ ಆಜ್ಞೆಮಾಡಿದ್ದೇವೆ ಎಂದು ಹೇಳಿದ್ದರು, ಇದರ ಮೇಲೆ ದೊಡ್ಡ ವಾಕ್ಯಾರ್ಥ ಮಾಡಲು ಹೋಗಬೇಡಿ. ಇದರಮೇಲೆ ಏನಾಗಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಬೋನಫೈಡ್‌ಗಳನ್ನು ನೀವು ತಿಳಿದುಕೊಳ್ಳಲು ಅವಕಾಶವೇ ಇಲ್ಲ, ಈಗಲೂ ಹೇಳುತ್ತೇನೆ, even now I will take that responsibility I do not go back upon it. ಯಾವ ಸಂದರ್ಭದಲ್ಲಿ ಸ್ಪೀಕರ್‌ರವರು ಇದರ ಬಗ್ಗೆ ಇರತಕ್ಕ ಕಾಗದಪತ್ರಗಳನ್ನು ಕೊಡಬೇಕೆಂದು ಕೇಳಿದರೆ ಆಗ ಅದನ್ನು ಅವರ ಮುಂದೆ ಇಡುತ್ತೇನೆ. ಸುಮ್ಮನೆ ಇದರ ಬಗ್ಗೆ ನಿಮಗೆ ಹೇಳಲು ಹೋದರೆ ಅದು ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ ಎನ್ನುವಂತಾಗುತ್ತದೆ.

Mr. DEPUTY SPEAKER.—This is a very unfair statement.

Sri M. S. KRISHNAN.—If you are prepared to assure us that no action will be taken against those persons whose documents will be placed in your hands then those documents will be given to you.

Mr. DEPUTY SPEAKER.—The Hon. member defends the persons in the labour courts. He knows well that a person who makes a complaint will not be penalised.

Sri M. S. KRISHNAN.—But that is not the rule in this ministry. The standard here is quite different. The persons who makes a complaint, he will be penalised.

Mr. DEPUTY SPEAKER.—But the hon. member is unnecessarily dragging on the issue.

ಶ್ರೀ ವಾಟಾಳ್ ನಾಗರಾಜ್.—ಸ್ವಾಮೀ, ನಮ್ಮ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರನ್ನು ನೋಡಿದಾಗ ಒಂದು ತರಹದ ಅನುಕಂಪ ನನಗೆ ಬರುತ್ತಿದೆ. ಅವರು ಸುಮ್ಮನೆ ಕೂಗಾಡಿದರೆ ಅದರಿಂದೇನೂ ಆಗುವುದಿಲ್ಲ. ಹೀಗೇಕೆ ಆದರು ಎನ್ನುವುದೂ ನಮಗೆ ಅರ್ಥವಾಗುತ್ತಿಲ್ಲ. ಆದುದರಿಂದ ನಿಮ್ಮ ಬಗ್ಗೆ ಏನು ದಕ್ಷತೆ ಹಾಗೂ ಗೌರವ ನಮಗಿತ್ತೋ ಅದು ಈಗ ತಾವು ಮಂತ್ರಿಮಂಡಲಕ್ಕೆ ಹೋದಮೇಲೆ ಕಳೆದುಕೊಂಡಿದ್ದೀರಿ ಎನ್ನುವ ತೀರ್ಮಾನಕ್ಕೆ ನಾವೆಲ್ಲ ಬಂದಿದ್ದೇವೆ. ಆದರೂ ಮಾನ್ಯ ವಿರೋಧ ಪಕ್ಷದ ನಾಯಕರು ಇವೊತ್ತಿನ ದಿವಸ ಎಲ್ಲ ಡಾಕ್ಯುಮೆಂಟುಗಳನ್ನೂ ಇಲ್ಲಿ ಕೊಡಲು ಸಿದ್ಧರಾಗಿದ್ದಾರೆ. ಇದರ ಮೇಲೆ ಸರಿಯಾಗಿ ತನಿಖೆ ನಡೆಸಿ ಇದರಲ್ಲಿ ಯಾರು ಶಿಕ್ಷೆಗೆ ಅರ್ಹರಾಗಿದ್ದಾರೋ ಅಂಥವರಿಗೆ ಶಿಕ್ಷೆ ವಿಧಿಸಲು ನಿಮಗೆ ಶಕ್ತಿಯಿಲ್ಲ. ನಿಮ್ಮ ಇಂಜನೀಯರು ಶ್ರೀ ಮುಗದುರವರ ಫೈಲನಲ್ಲಿ ಅವರನ್ನು ಚೀಫ್ ಇಂಜನಿಯರಾಗಿ ಮಾಡಕೂಡದು ಎಂದು ಬರೆದಿದ್ದರೂ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಇಂದು ನಿಮ್ಮ ಮಂತ್ರಿಮಂಡಲ ಅವರನ್ನು ಇಂಜನೀಯರ್ ಇನ್ ಚೀಫ್ ಎಂದು ಮಾಡಿದ್ದಾರೆ. ನೀವು ಫೈಲನಲ್ಲಿ ನೋಟ್ಸ್ ಏನು ಬರೆದಿದ್ದೀರಿ ಅದು ನಮಗೆ ಗೊತ್ತು, ನಿಮ್ಮ ಮಾತಿನ ಮೇಲೆ ಮಂತ್ರಿಮಂಡಲದಲ್ಲಿ ವಿರೋಧವಾಗಿ ತೀರ್ಮಾನ ಮಾಡಿದರೆ ಇದಕ್ಕೇನು ಹೇಳಬೇಕು. ಇಲ್ಲಿಯವರೆಗೆ ನೀವು ಯಾವ ರೀತಿ ಇದ್ದಿರೋ ಆ ರೀತಿ ಇಲ್ಲ, ತಮ್ಮ ಒಂದು ಕೀರ್ತಿ ಗೌರವ ಹಾಗೂ ಪ್ರತಿಷ್ಠೆಗೆ ಕುಂದು ತರುವಂತಹ ಒಂದು ತೀರ್ಮಾನ ಮಾಡಿ ನಿಮ್ಮ ವರ್ಚಸ್ಸನ್ನು ಕಡಿಮೆ ಮಾಡಿ ಇಂದು ಬರಗಾಲ ಕೆಲಸಗಳ ನಿರ್ವಹಣೆಯಲ್ಲಿ ಏಕಮೇವಾ ಅಧಿಕಾರಿಗಳನ್ನು ನೇಮಕ ಮಾಡಿರುವುದು ತಮ್ಮ ಗಮನಕ್ಕೆ ಬರಲಲ್ಲವೇ ಎಂದು ಕೇಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಅಭಿಪ್ರಾಯವನ್ನು ಗಮನಕ್ಕೆ ತೆಗೆದುಕೊಳ್ಳದೇ ಈ ರೀತಿ ತೀರ್ಮಾನ ಮಾಡುವುದು ಯಾವ ನ್ಯಾಯ ?

ಶ್ರೀ ಎಚ್.ಡಿ. ದೇವೇಗೌಡ.—ಇವರು ಈಗ 1973 ನೇ ಇಸವಿಯ ಚನ್ನಬಸಪ್ಪನವರಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇನ್ನು ನಿಮ್ಮ ಮಂತ್ರಿಮಂಡಲ ಎಷ್ಟು ಮಟ್ಟಿಗೆ ಇದೆ ಎನ್ನುವುದಕ್ಕೆ ನಿಮ್ಮ ಮಂತ್ರಿಮಂಡಲದಲ್ಲಿರುವ ಶ್ರೀ ಬಸವಲಿಂಗಪ್ಪನವರ ಮೇಲೆ ಗುರುತರವಾದ ಆರೋಪಣೆಗಳಿದ್ದವು. ಹಿಂದೆ ಅವರು ಉಪಮಂತ್ರಿಗಳಾಗಿದ್ದಾಗ ಇವರಿಗೆ ಕೊಟ್ಟ ಕಾರ್ ಹಾಗೂ ಇನ್ನಿತರ ಪೀಠೋಪಕರಣಗಳನ್ನು ಸರ್ಕಾರಕ್ಕೆ ವಾಪಸು ಕೊಡದೆ ಇವರ ಮೇಲೆ ಗುರುತರವಾದ ಅಪಾದನೆಗಳನ್ನು ಮಾಡಿ ಕೋರ್ಟಿನಲ್ಲಿ ಕೇಸು ಕೂಡ ಆಗಿತ್ತು. ಇಷ್ಟೆಲ್ಲಾ ಆಗಿದ್ದರೂ ಇವರನ್ನು ಪ್ರಮೋಷನ್ ಕೊಟ್ಟು ಇಂದು ನಿಮ್ಮ ಮಂತ್ರಿಮಂಡಲದಲ್ಲಿ ಉಳಿಸಿಕೊಂಡಿದ್ದೀರಿ ಇದು ನಿಮಗೆ ಗೌರವ ತರುವಂತಹುದೇ !

ಶ್ರೀ ಎಸ್. ಬಂಗಾರಪ್ಪ.—ಕೋರ್ಟಿನಲ್ಲಿ ಇದು ಡಿಕ್ರಿ ಕೂಡ ಆಗಿತ್ತು.

ಶ್ರೀ ವಾಟಾಳ್ ನಾಗರಾಜ್.—ಕೋರ್ಟಿನಲ್ಲಿ ಡಿಕ್ರಿ ಆಗಿದ್ದರೂ ಇವರಿಗೆ ಪ್ರಮೋಷನ್ ಕೊಟ್ಟು ಮಂತ್ರಿಗಳಾಗಿ ಮಾಡಿದ್ದಾರೆ. ಜನತೆಗೆ ಕೊಟ್ಟ ವಚನವನ್ನು ಪಾಲಿಸದೇ ಇಂತಹ ಮಂತ್ರಿಗಳನ್ನು ನೇಮಕ ಮಾಡಿ ನಿಮ್ಮ ಧ್ಯೇಯ ಧೋರಣೆಗಳಿಗೆ ವಿರೋಧವಾಗಿ ಏಕೆ ಹೋಗುತ್ತಿದ್ದೀರಿ ? ಇನ್ನು ಇದೇ ಮಂತ್ರಿಗಳು ಮೈಸೂರಿನಲ್ಲಿ ಮಹಾತ್ಮ ಗಾಂಧಿಯವರ ಬಗ್ಗೆ ಇಲ್ಲದ ಗೊಂದಲಗಳನ್ನು ಎಬ್ಬಿಸುವಂತಹ ಭಾಷಣವನ್ನು ಮಾಡಲಿಕ್ಕೆ ಹೋಗಿದ್ದಾರೆ, ಇಂತಹ ಘೋಷಣೆಗಳನ್ನು ಮಾಡುತ್ತ ಹೋದರೆ ನಿಮ್ಮ ಮಂತ್ರಿಮಂಡಲಕ್ಕೆ ನೈತಿಕವಾಗಿ ಇರಲು ಹಕ್ಕಿದೆಯೇ !

ನಿಮಗೆ ನೈತಿಕವಾಗಿ ಹಾಗೂ ದಕ್ಷತೆಗೆ ಹೆಸರಾಗಿದ್ದರೆ ಕೂಡಲೇ ಶ್ರೀಮಾನ್ ಬಸವಲಿಂಗಪ್ಪನವರನ್ನು ಮಂತ್ರಿಮಂಡಲದಿಂದ ಹೊರಗೆ ಹಾಕಬೇಕಾಗಿತ್ತು. ಆ ರೀತಿ ಮಾಡದಿದ್ದರೆ ನಿಮ್ಮ ಕಾರ್ಯವನ್ನು ಮೆಚ್ಚುತ್ತಿದ್ದೆ. ಆದುದರಿಂದ ನ್ಯಾಯವಾಗಿ ಹಾಗೂ ನೈತಿಕವಾಗಿ ಇಂತಹ ಘೋಷಣೆಗಳನ್ನು ಹೇಳುವ ಮಂತ್ರಿಗಳು ಮಂತ್ರಿಮಂಡಲದಲ್ಲಿರಲು ಯಾವ ಹಕ್ಕೂ ಇಲ್ಲ.

ಉಪಾಧ್ಯಕ್ಷರು.—ಇದರ ವಿಚಾರ ಆಗಲೇ ಬಂದು ಚರ್ಚೆಯಾಗಿ ಹೋಗಿದೆ. ಬೇರೆ ವಿಚಾರದ ಬಗ್ಗೆ ಇಲ್ಲಿ ತಾವು ಹೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಒಬ್ಬ ಮಂತ್ರಿಗಳು ಕಡಿಮೆಯಾದರೆ ಮಂತ್ರಿಮಂಡಲಕ್ಕೆ ಅಷ್ಟು ಖರ್ಚು ಉಳಿತಾಯವಾಗುವುದಿಲ್ಲವೇ ?

ಶ್ರೀ ವಾಟಾಳ್ ನಾಗರಾಜ್.—ಮಹಾತ್ಮ ಗಾಂಧಿಯವರ ಬಗ್ಗೆ ಇಂತಹ ಘೋಷಣೆಗಳನ್ನು ಹೊರಡಿಸಲು ಇವರಿಗೆ ಯಾವ ಅಧಿಕಾರವೂ ಇಲ್ಲ. ಇಂತಹ ಮಂತ್ರಿಗಳನ್ನು ಕೈ ಬಿಡಬೇಕಾಗಿತ್ತು. ರಾಷ್ಟ್ರಪಿತನ ಬಗ್ಗೆ ಅಗೌರವ ಸೂಚಿಸುವಂತಹ ಮಂತ್ರಿಗಳು ನಮ್ಮ ರಾಜ್ಯದಲ್ಲಿರಕೂಡದು ಇದಕ್ಕೆ ಅವಕಾಶ ಕೊಡಬಾರದಾಗಿತ್ತು.

Mr. DEPUTY SPEAKER.—Anybody who has studied the subject, has a right to diaagree on a particular aspect. That does not mean Sri Basevalingappa has disrespect for Mahathma Gandhi.

ಶ್ರೀ ವಾಟಾಳ್ ನಾಗರಾಜ್.—ನಾನು ಆಯವ್ಯಯವನ್ನು ನೋಡಿದಾಗ ಇದರಲ್ಲಿ ನಿರುದ್ಯೋಗಿಗಳ ಬಗ್ಗೆ ಹಾಗೂ ಬಡತನವನ್ನು ನಿವಾರಣೆ ಮಾಡುವುದರ ಬಗ್ಗೆ ಅದರಲ್ಲೂ ಗರಿಬೀ ಹಠಾವೋ ಎನ್ನುವ ಘೋಷಣೆಗಳನ್ನು ಹೇಳುತ್ತಿರುವ ಸರಕಾರ ಇಂದು ರಾಜ್ಯದಲ್ಲಿರುವ ಬಡತನವನ್ನು ನಿವಾರಣೆ ಮಾಡಲಾಗಲಿಲ್ಲ. ಈಗಲಾದರೂ ಬೀದಿಯಲ್ಲಿ ಭಿಕ್ಷಾಟನೆ ಮಾಡುವವರನ್ನು ಭಿಕ್ಷೆ ಮಾಡದಂತೆ ತಪ್ಪಿಸಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಇದನ್ನು ಬಿಟ್ಟು ಇಂದು ನಮ್ಮ ಸರಕಾರ ಎಲ್ಲ ಕಡೆಗಳಲ್ಲೂ ಮಿನಿಥಿಯೇಟರುಗಳನ್ನು ಮಾಡಲು ಹೊರಟಿದ್ದಾರೆ. ಬೀದಿ ಭಿಕಾರಿಗಳು ಹೆಚ್ಚಾಗುತ್ತಿರುವಾಗ ನಮ್ಮ ಮಂತ್ರಿಮಂಡಲದವರು ಶ್ರೀಮಂತರನು ಬೆಳೆಸಲು ಹೊರಟಿದ್ದಾರೆ ಮತ್ತು ಭ್ರಷ್ಟಾಚಾರಿಗಳು ಇವರ ಸುತ್ತಮುತ್ತ ಇರುವಂತೆ ಅವಕಾಶ ಮಾಡುತ್ತಿದ್ದಾರೆ ಮತ್ತು ಇದರಿಂದ ಅಧಿಕಾರ ದುರುಪಯೋಗ ಮಾಡುತ್ತಿದ್ದಾರೆ ಎನ್ನುವ ಆರೋಪಣೆಯನ್ನು ಇಲ್ಲಿ ಮಾಡಬೇಕಾಗಿದೆ.

4–30 P.M.

ಹಿಂದಿನ ಸರ್ಕಾರದವರು ಮನೆಕಟ್ಟಿಸಲಿಲ್ಲ, ಮಠ ಕಟ್ಟಿಸಲಿಲ್ಲ ಎಂದು ತಾವು ಹೇಳುತ್ತೀರಿ, ತಾವೇನು ಕಟ್ಟಿಸಿದ್ದೀರಿ ? ತಾವೇನು ಮಾಡಿದ್ದೀರಿ ? ಶ್ರೀ ಕೆ. ಕೆ. ಮೂರ್ತಿಯವರಿಗೆ ಬಡವರಿಗೆಂದು ಮೀಸಲಿಟ್ಟಿದ್ದ 70—80 ಅಡಿಯ ಜಾಗವನ್ನು ಕೇವಲ 30 ಸಾವಿರ ರೂಪಾಯಿಗಳಿಗೆ ಕೊಟ್ಟಿದ್ದೀರಿ. ಅದು ಎರಡು ಲಕ್ಷ ರೂಪಾಯಿಗಳ ಆಸ್ತಿಯಾಗಿದೆ. ಈಗ ಪ್ರತಿಯೊಂದಕ್ಕೂ ಹಿಂದಿನ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿದ್ದೀರಿ. ಆದರೆ ನಿಮ್ಮಲ್ಲಿ ಅನೇಕರು ಹಿಂದೆ ಅದೇ ಪಕ್ಷದಲ್ಲಿ ಇದ್ದಿರಿ. ಶ್ರೀಮಾನ್ ಘೋರ್ಪಡೆಯವರು ಸಹ ಅಲ್ಲಿಯೇ ಇದ್ದವರು. ಆದರೆ ನಿಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಅವರ ಮೇಲೆ ಹೇಳುತ್ತಿದ್ದೀರಿ. ಅವರು ವಿರೋಧಪಕ್ಷಕ್ಕೆ ಬಂದಿದ್ದೇ ಗ್ರಹಚಾರವೆಂದು ಕಾಣುತ್ತದೆ. ಈಗ ನೀವು ಅವರನ್ನು ಮತ್ತು ನಮ್ಮನ್ನೂ ಸೇರಿಕೊಂಡು ಬೈಯುತ್ತಿದ್ದೀರಿ. ವಿಧಾನಪರಿಷತ್ತಿನಲ್ಲಿ ರಾಮಕೃಷ್ಣ ಹೆಗಡೆಯವರು ಈ ಸಾಲಿನ ಬಜೆಟ್ ಅಸ್ತಿಪಂಜರದಂತೆ ಇದೆ ಎಂದು ಹೇಳಿದ್ದಾರೆ. ಅವರ ಕಾಲದಲ್ಲಿಯೂ ಅದೇ ತರಹ ಇತ್ತು. ನಿಮ್ಮನ್ನು ಬೈಯಬೇಕೆಂದು ಅವರು ಆ ರೀತಿ ಹೇಳಿದ್ದಾರೆ. ಭ್ರಷ್ಟಾಚಾರ ಮಾಡುವುದರಲ್ಲಿ ನೀವು ಅವರಿಗಿಂತ ಹೆಚ್ಚಿನ ನಿಸ್ಸೀಮರಾಗಿದ್ದೀರಿ. ಆದರೆ ಅವರನ್ನು ಬೈಯುತ್ತಿರುವುದರಿಂದ ನೀವು ಅಧಿಕಾರದಲ್ಲಿ ಉಳಿದುಕೊಂಡಿದ್ದೀರಿ. ಈ ಸಂದರ್ಭದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರನ್ನು ಸ್ವಲ್ಪ ಹೊಗಳಬೇಕಾಗುತ್ತದೆ. ಅವರು ಸ್ವಲ್ಪ ಅಚಾತುರ್ಯ ಮಾಡಿದ್ದರಿಂದ ನಿಮಗೆ ಅಧಿಕಾರ ಬಂತು. ಮಂತ್ರಿಗಳಾಗದೇ ಇದ್ದವರೆಲ್ಲಾ ಮಂತ್ರಿಗಳಾದರು. ಕೆಲವರು ಶಾಸಕರಾದರು. ತಾಲ್ಲೂಕು ಬೋರ್ಡಿನಲ್ಲಿ ಸೋತವರು ವಿಧಾನಸಭೆಗೆ ಗೆದ್ದು ಬಂದರು. ಒಂದುಪಕ್ಷ ನಿಜಲಿಂಗಪ್ಪನವರೇನಾದರೂ ಇಂದಿರಾ ಗಾಂಧಿಯವರೊಡನೆ ಹೊಂದಾಣಿಕೆಯಿಂದ ಹೋಗಿದ್ದರೆ ಇವರೆಲ್ಲಾ ಏನಾಗುತ್ತಿದ್ದರು ? ಆದ್ದರಿಂದ ಇವರೆಲ್ಲಾ ಕದ್ದಾದರೂ ನಿಜಲಿಂಗಪ್ಪನವರ ಫೋಟೋವನ್ನು ತಮ್ಮ ಮನೆಯಲ್ಲಿ ಇಟ್ಟುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಹಿಂದೆ ಹೇಳಿದ ವಿಷಯಗಳನ್ನೇ ತಾವು ಮತ್ತೆ ಈಗ ಹೇಳಿದಿರಿ. ಮತ್ತು ಬಡ್ಜೆಟ್ಟಿಗೆ ಸಂಬಂಧಪಡದ ವಿಷಯಗಳನ್ನೇ ಹೇಳಿದಿರಿ?

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ನಾಳೆಯಿಂದ ನಾನು ಸಭೆಗೆ ಬರುವುದಿಲ್ಲ. ನಾವು ಕೆಲವು ಮುಖ್ಯ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ನೋಟೀಸ್ ಕೊಟ್ಟರೆ ಅದನ್ನು ತಾವು ತಳ್ಳಿಹಾಕುತ್ತೀರಿ. ಆದಕಾರಣ ಇಂತಹ ಸಂದರ್ಭಗಳಲ್ಲಿಯಾದರೂ ಹೇಳಬೇಕಾಗುತ್ತದೆ. ತಮ್ಮ ಬಗ್ಗೆ ವಿರೋಧ ಮಾಡುವುದಕ್ಕಾಗುವುದಿಲ್ಲ. ತಮ್ಮ ಬಗ್ಗೆ ಗೌರವವಿದೆ. ಅಧ್ಯಕ್ಷರ ಬಗ್ಗೆ ನಾನು ಇಟ್ಟಿರುವಷ್ಟು ಗೌರವ ಯಾರೂ ಇಟ್ಟಿಲ್ಲ. ಆದರೂ ಅವರೂ ನನ್ನನ್ನು ಅನೇಕ ಸಲ ಹೊರಗೆ ಹಾಕಿಸಿದ್ದಾರೆ. ಆದರೂ ಅವರ ಮೇಲೆ ನಾನು ಆರೋಪ ಮಾಡಿಲ್ಲ. ತಾವೇನೋ ನನ್ನನ್ನು ಹೊರಗೆ ಹಾಕಿಲ್ಲ.

Mr. **DEPUTY SPEAKER.**—That is a different matter. What am I to do for the other members who want to speak? Should I not help them. The member will please conclude. There are several other members waiting to speak. Things which can be allowed as per rules will certainly be allowed, and things which cannot be allowed will not be allowed. What has been said is being repeated. I expected a lot from the hon. Members the hon. Members should study the subject will and come prepared and give new points. The hon. Members should not take it as touchy.

† ಶ್ರೀ ಜಯಪ್ರಕಾಶ್ ಶೆಟ್ಟಿ ಕೊಳ್ಕೆಬೈಲ್ (ಬ್ರಹ್ಮಾವರ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಗಡಿ ವಿಷಯದಲ್ಲಿ ಎರಡು ಮಾತುಗಳನ್ನು ಆಡಲು ಇಚ್ಛೆಪಡುತ್ತೇನೆ. ಈ ಸಲದ ರಾಜ್ಯಪಾಲರ ಭಾಷಣದಲ್ಲಿ ಈ ಗಡಿ ವಿಷಯವನ್ನು ಪ್ರಸ್ತಾಪ ಮಾಡಿಲ್ಲ. ಸರ್ಕಾರದವರು ಈ ಗಡಿ ಸಮಸ್ಯೆ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬುದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವ ಪ್ರಸ್ತಾಪವನ್ನೂ ಮಾಡದಿರುವುದಕ್ಕಾಗಿ ನನಗೆ ಅಸಂತೋಷ ಉಂಟುಮಾಡಿದೆ. ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನಿಡಬೇಕೆಂದು ನಾವೆಲ್ಲ ಎಷ್ಟು ಆಶೆ ಮತ್ತು ಆತುರದಿಂದ ಇದ್ದೇವೋ ಅಷ್ಟೇ ಒಂದು ಆಶೆ ಮತ್ತು ಆತುರದಿಂದ ನಮ್ಮ ರಾಜ್ಯದ ಹೊರಗಡೆಯಿರುವ ಕನ್ನಡಿಗರು ನಮ್ಮ ರಾಜ್ಯಕ್ಕೆ ಬರಲಿಕ್ಕೆ ಆತುರದಿಂದ ಇದ್ದಾರೆ. ನಮ್ಮ ರಾಜ್ಯದ ಪುನರ್ವಿಂಗಡಣೆ 1956ನೇ ಇಸವಿಯಲ್ಲಿ ನಡೆಯಿತು. 9 ಜಿಲ್ಲೆಗಳಿಂದ ಕೂಡಿದ್ದ ಮೈಸೂರು ರಾಜ್ಯವು ರಾಜ್ಯಗಳ ಪುನರ್ವಿಂಗಡನೆಯಾದ ಮೇಲೆ 19 ಜಿಲ್ಲೆಗಳ ವಿಶಾಲ ರಾಜ್ಯವಾಯಿತು. ನೆಹರೂ ಅವರು ಹೇಳಿದಂತೆ, ವಿಶಾಲ ಮೈಸೂರಿನ ಉದಯ ಅಷ್ಟೇ ಅಲ್ಲ, ಭಾರತದ ಚರಿತ್ರೆಯಲ್ಲಿಯೇ ಒಂದು ಮಹತ್ವಪೂರ್ಣ ಘಟನೆ; ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಕನ್ನಡ ಮಾತನಾಡುವ ಜನ ಒಂದು ಆಡಳಿತಕ್ಕೆ ಒಳಪಟ್ಟರು; ರಾಜ್ಯಗಳ ಪುನರ್ವಿಂಗಡಣೆಯ ಫಲವಾಗಿ ಕನ್ನಡಿಗರ ಬಹುದಿನದ ಆಕಾಂಕ್ಷೆ ಕೈಗೂಡಿತು. ಆದರೂ ನಾವು ಇಂದಿಗೂ ಗಡಿ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಬರುವ ಮುಂಚೆಯೇ ವಿಶಾಲ ಮೈಸೂರು ಆಗಲಿ ಎಂದು ಹಾರೈಸುತ್ತೇನೆ. ವಿಶಾಲ ಮೈಸೂರಾಗಿ 16-17 ವರ್ಷಗಳು ಕಳೆದ ಮೇಲೂ ಸಹ ಈ ನಮ್ಮ ಗಡಿ ಸಮಸ್ಯೆ ಒಂದೇ ರೀತಿಯಲ್ಲಿರುವುದು ಬೇಸರದ ಸಂಗತಿಯಾಗಿದೆ. ಮೈಸೂರು ಮತ್ತು ಮಹಾರಾಷ್ಟ್ರ ಗಡಿ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಮೈಸೂರು ಮತ್ತು ಮಹಾರಾಷ್ಟ್ರ ರಾಜ್ಯಗಳು ಒಪ್ಪಿದ ನಂತರ ಕೇಂದ್ರ ಸರ್ಕಾರದವರು ಮಹಾಜನ್ ಆಯೋಗವನ್ನು ನೇಮಿಸಿತು. ಈ ಆಯೋಗವು ತನ್ನ ವರದಿಯನ್ನು 6 ವರ್ಷಗಳ ಹಿಂದೆಯೇ ಕೇಂದ್ರಸರ್ಕಾರಕ್ಕೆ ಅರ್ಪಿಸಿತು. ಕೇಂದ್ರಸರ್ಕಾರ ಅದನ್ನು ಇನ್ನೂ ಅಂಗೀಕರಿಸಲಿಲ್ಲ; ಶಾಸನ ಮಾಡಲಿಲ್ಲ ಮತ್ತು ಅನುಷ್ಠಾನದಲ್ಲಿ ತರಲಿಲ್ಲ. ಈ ಮಹಾರಾಷ್ಟ್ರ ಸರ್ಕಾರವು ಈ ಒಂದು ಪವಿತ್ರ ಒಪ್ಪಂದವನ್ನು ಕಸದ ಬುಟ್ಟಿಗೆ ಎಸೆಯಲು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ನಾವು ನಮ್ಮ ದೇಶದ ಹಿತದೃಷ್ಟಿಯಿಂದ ಅದನ್ನು ಒಪ್ಪಿದ್ದೇವೆ. ಬೆಳಗಾಂ ನಗರವನ್ನು ಕತ್ತರಿಸುವ ಪಿತೂರಿಯನ್ನು ಸಹ ಮಹಾರಾಷ್ಟ್ರ ಸರ್ಕಾರವು ನಡೆಸಿತು. ಆದರೆ ಅದು ಆಗಲಿಲ್ಲ. ಇತ್ತೀಚೆಗೆ ಕೇಂದ್ರದ ಗೃಹಮಂತ್ರಿಗಳಾದ ಶ್ರೀ ದೀಕ್ಷಿತ್ ಅವರು ಮತ್ತು ಶ್ರೀ ಎಸ್. ಬಿ. ಚವಾಣ್ ಅವರು ಮಹಾರಾಷ್ಟ್ರದ ಸ್ಥಳೀಯ ಮುಖಂಡರೊಡನೆ ಇತ್ತೀಚೆಗೆ ಈ ಗಡಿಗಳ ವಿಷಯದಲ್ಲಿ ಮಾತನಾಡಿದರು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದಲ್ಲದೆ ಕೇಂದ್ರದ ಗೃಹಮಂತ್ರಿಗಳಾದ ಶ್ರೀ ದೀಕ್ಷಿತ್ ಅವರು ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ವಿ. ಪಿ. ನಾಯಕ್ ಅವರು ಈ ಗಡಿಗಳ ವಿಷಯದಲ್ಲಿ ಎರಡು ಮೂರು ಸಲ ಮಾತನಾಡಿದ್ದಾರೆಂದೂ ಸಹ ವರದಿಯಾಗಿದೆ. 16

ವರ್ಷಗಳಿಂದ ಇತ್ಯರ್ಥವಾಗದೇ ಉಳಿದಿರುವ ಮೈಸೂರು-ಮಹಾರಾಷ್ಟ್ರ ಗಡಿ ವಿವಾದವನ್ನು ಬೇಗ ಇತ್ಯರ್ಥಪಡಿಸುವಂತೆ ಒತ್ತಾಯಪಡಿಸುವ ಸಲುವಾಗಿ ಮಹಾರಾಷ್ಟ್ರ ಮುಖ್ಯಮಂತ್ರಿಗಳಾದ ಶ್ರೀ ವಿ. ಪಿ. ನಾಯಕ್ ಅವರು ಪ್ರಧಾನಿ ಬಳಿಗೆ ಸರ್ವಪಕ್ಷಗಳ ನಿಯೋಗವೊಂದನ್ನು ಕರೆದೊಯ್ಯಲಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಗಡಿ ವಿವಾದ ಬೇಗನೇ ಇತ್ಯರ್ಥವಾಗದಿದ್ದರೆ ಆತ್ಮಾರ್ಪಣ್ ಮಾಡುವುದಾಗಿ ವಿಧಾನಪರಿಷತ್‌ನ ಮತ್ತು ಸೋಷಿಯಲಿಸ್ಟ್ ಪಾರ್ಟಿಯ ಸದಸ್ಯರಾದ ಶ್ರೀ ಡಿ. ಬಿ. ತಾವರಡಾನೆಯವರು ಬೆದರಿಕೆ ಹಾಕಿದ್ದಾರೆ. ಇದರಲ್ಲಿ ಏನು ಹಿನ್ನೆಲೆ ಇದೆ ಎಂಬುದನ್ನು ನೋಡಬೇಕಾಗಿದೆ. ನಮ್ಮ ರಾಜ್ಯಕ್ಕೆ ಅಪಾಯ ಉಂಟು ಮಾಡುತ್ತಾರೆಂಬ ಸಂಶಯ ಮೂಡುತ್ತದೆ. ಈ ಹಿನ್ನೆಲೆ ಬೆಳಕಿಗೆ ಬರುವ ಮುಂಚೆ ನಮ್ಮ ಸರ್ಕಾರದವರು ಕೂಡ ಆದಷ್ಟು ಬೇಗ ಸರ್ವಪಕ್ಷಗಳ ನಿಯೋಗವೊಂದನ್ನು ಕೇಂದ್ರಕ್ಕೆ ಕಳುಹಿಸಿ ನಮ್ಮ ಈ ಗಡಿಗಳ ಸಮಸ್ಯೆಯನ್ನು ಪರಿಹರಿಸುವುದು ಸೂಕ್ತವೆಂದು ಸರ್ಕಾರಕ್ಕೆ ಸಲಹೆ ಕೊಡಲು ಇಚ್ಛೆಪಡುತ್ತೇನೆ. ಮಹಾಜನ್ ವರದಿಯ ಶಿಫಾರಸ್ ಪ್ರಕಾರ ಕೆಲವು ಪ್ರದೇಶಗಳು ನಮ್ಮ ರಾಜ್ಯದಿಂದ ಹೋದರೆ, ಮತ್ತೆ ಕೆಲವು ಪ್ರದೇಶಗಳು ಮಹಾರಾಷ್ಟ್ರದಿಂದ ನಮ್ಮ ರಾಜ್ಯಕ್ಕೆ ಬರುತ್ತವೆ ಅದರ ವರದಿಯ ಪ್ರಕಾರ ಅಕ್ಕಲ್‌ಕೋಟೆ, ಜತ್ ತಾಲ್ಲೂಕ್‌ನ 4[illegible] ಗ್ರಾಮಗಳು, ದಕ್ಷಿಣ ಸೊಲ್ಲಾಪುರದ 65 ಗ್ರಾಮಗಳು, ಗಡಿಂಗ್ಲಜ ತಾಲ್ಲೂಕಿನ 15 ಗ್ರಾಮಗಳು, ಸೊಲ್ಲಾಪುರ ಚಂದಘಡ ನಗರಗಳು ಮಹಾರಾಷ್ಟ್ರದಿಂದ ಮೈಸೂರಿಗೆ ಬರುತ್ತವೆ. ಅವುಗಳನ್ನು ಆದಷ್ಟು ಬೇಗ ನಮ್ಮ ರಾಜ್ಯಕ್ಕೆ ವರ್ಗಾಯಿಸುವ ಪ್ರಯತ್ನವನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಮೈಸೂರು ಕೇರಳ ಗಡಿ ಸುಮಾರು 16-17 ವರ್ಷಗಳಿಂದ ಹಾಗೆಯೇ ಉಳಿದುಕೊಂಡು ಬಂದಿದೆ. ಚಂದ್ರಗಿರಿ ಮತ್ತು ಪಯಸ್ವಿನಿ ನದಿಗಳ ಉತ್ತರ ಭಾಗ ಕಾಸರಗೋಡು ತಾಲ್ಲೂಕನ್ನು ಮೈಸೂರು ರಾಜ್ಯಕ್ಕೆ ವರ್ಗಾಯಿಸಬೇಕು. ಈ ಬಗ್ಗೆ ನಮ್ಮ ಸರ್ಕಾರದವರು ಕೂಡಲೇ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗಾಗಲೇ ಆಂಧ್ರಪ್ರದೇಶದಲ್ಲಿ ಆಂಧ್ರ ವಿಭಜನೆಯಾಗಬೇಕೆಂಬ ಬಗ್ಗೆ ಮುಷ್ಕರ ನಡೆಯುತ್ತಿದೆ. ಆಂಧ್ರದ ವಿಭಜನ ಆಗಬೇಕೇ ಬೇಡವೇ ಎಂಬುದು ಕೇಂದ್ರಸರ್ಕಾರಕ್ಕೆ ಸೇರಿದ ವಿಷಯ. ಒಂದುವೇಳೆ ಆಂಧ್ರ ವಿಭಜನೆ ಅನಿವಾರ್ಯ ಎಂದು ಆದರೆ ಆಂಧ್ರದಲ್ಲಿ ಸೇರಿಕೊಂಡಿರುವ ಕನ್ನಡದ ಆಲೂರು, ಆದವಾನಿ ರಾಯದುರ್ಗಗಳನ್ನು ಕರ್ನಾಟಕಕ್ಕೆ ಬಿಟ್ಟು ಕೊಡುವಂತೆ ಕೇಳಿಕೊಳ್ಳುವುದು ಉಚಿತವಾಗಿದೆ ಎಂದು ಹೇಳಬಯಸುತ್ತೇನೆ. ಬಳ್ಳಾರಿ ಜಿಲ್ಲೆಗೆ ಸೇರಿದ್ದ ಆ ಮೂರು ತಾಲ್ಲೂಕುಗಳು ಅಚ್ಚ ಕನ್ನಡ ಜಿಲ್ಲೆಗಳಾಗಿದ್ದು ಅವುಗಳನ್ನು ಕನ್ನಡಿಗರು ಮರಳಿ ಕೇಳುವುದರಲ್ಲಿ ಸಂಪೂರ್ಣ ನ್ಯಾಯ ಇದೆ. ಅಲ್ಲದೆ ಅನಂತಪುರ ಜಿಲ್ಲೆಯ ಮಡಕಸಿರಾದಂತಹ ಅಚ್ಚ ಕನ್ನಡ ಪ್ರದೇಶ ಇದೂ ಸಹ ಮೈಸೂರಿಗೆ ಸೇರುವುದು ಯೋಗ್ಯ ಎಂದು ಹೇಳುತ್ತೇನೆ

ನಮ್ಮ ರಾಜ್ಯದಲ್ಲಿ ನಾಲ್ಕನೇ ವಿಶ್ವವಿದ್ಯಾನಿಲಯವನ್ನು ಸ್ಥಾಪನ ಮಾಡುವ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಅದಕ್ಕೆ ಈಗ 7-8 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದ್ದರಿಂದ ಈಗ ಸದ್ಯಕ್ಕೆ ಅದನ್ನು ಮುಂದಕ್ಕೆ ಹಾಕಬಹುದು. ಎಲ್ಲರೂ ಪದವೀಧರರಾಗಿ ನಿರುದ್ಯೋಗಿಗಳಾಗುವುದಕ್ಕಿಂತ ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸಾದಮೇಲೆ ವೃತ್ತಿ ಶಿಕ್ಷಣವನ್ನು ಪಡೆದು ಬೇರೆ ಬೇರೆ ಕ್ಷೇತ್ರಗಳಿಗೆ ಹೋಗುವುದು ಒಳ್ಳೆಯದು ಎಂದು ನಮ್ಮ ಮುಖ್ಯಮಂತ್ರಿಯವರು ಹೇಳುತ್ತಾರೆ. ಗಜೇಂದ್ರಗಡ್ಕರ್ ಅವರ ವರದಿಯ ಪ್ರಕಾರ ನಮ್ಮ ರಾಜ್ಯದಲ್ಲಿ 3-4 ವಿಶ್ವವಿದ್ಯಾನಿಲಯಗಳು ಆಗುವುದಕ್ಕೆ ಅವಕಾಶ ಇವೆ. ಈಗ ನಮ್ಮ ರಾಜ್ಯದಲ್ಲಿ ಸದ್ಯಕ್ಕೆ ಒಂದು ವಿಶ್ವವಿದ್ಯಾನಿಲಯ ಆಗುವುದು ಅತಿ ಅಗತ್ಯ ಇದೆ. ಈಗ ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳ ಆಡಳಿತ ವಿದ್ಯಾಮಟ್ಟ, ಮತ್ತು ಶಿಸ್ತು ಇವುಗಳು ತೀರಾ ಕೆಳಮಟ್ಟದಲ್ಲಿದೆ. ಇದನ್ನು ಕಾಪಾಡಲು ಒಂದು ವಿಶ್ವವಿದ್ಯಾನಿಲಯ ಅತ್ಯಗತ್ಯ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆ ವಿಶ್ವವಿದ್ಯಾನಿಲಯವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆ ಮಾಡಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ವೈದ್ಯಕೀಯ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದು ಕೇಳಿ ನನಗೆ ಬಹಳ ಸಂತೋಷವಾಯಿತು. ಇದಕ್ಕೆ ಬೇಕಾಗುವ ಹಣವನ್ನು ಒದಗಿಸಿಕೊಂಡು ಇದನ್ನು ಆದಷ್ಟು ಜಾಗ್ರತೆಯಿಂದ ಕಾರ್ಯರೂಪಕ್ಕೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಮತ್ತು ಇದಕ್ಕೆ ಸಂಬಂಧಪಟ್ಟ ಒಂದು ವಿಧೇಯಕವನ್ನು ಈ ಅಧಿವೇಶನದಲ್ಲಿ ಜಾಗ್ರತೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ವೈದ್ಯಕೀಯ ಸೌಲಭ್ಯದಲ್ಲಿ ಬಹಳ ಹಿಂದೆ ಇದೆ. ಇವೊತ್ತು ತಮಿಳುನಾಡಿನಲ್ಲಿ 1988 ಜನಗಳಿಗೆ ಒಬ್ಬರು ವೈದ್ಯರು ಇದ್ದಾರೆ. ಉತ್ತರ ಪ್ರದೇಶದಲ್ಲಿ 3633 ಜನಗಳಿಗೆ ಒಬ್ಬರು ವೈದ್ಯರು ಇದ್ದಾರೆ. ಹರಿಯಾನಾದಲ್ಲಿ 3089 ಜನಗಳಿಗೆ ಒಬ್ಬರು ವೈದ್ಯರು ಇದ್ದಾರೆ. ಬಿಹಾರದಲ್ಲಿ 2644 ಜನಗಳಿಗೆ ಒಬ್ಬರು ವೈದ್ಯರು

(ಶ್ರೀ ಜಯಪ್ರಕಾಶ್ ಶೆಟ್ಟಿ ಕೊಳ್ಕೆಬೈಲ್)

ಇದ್ದಾರೆ. ನಮ್ಮ ರಾಜ್ಯದಲ್ಲಿ 5003 ಜನಗಳಿಗೆ ಒಬ್ಬರು ವೈದ್ಯರು ಇದ್ದಾರೆ. ಇದನ್ನು ನೋಡುವಾಗ ನಮ್ಮ ರಾಜ್ಯ ಬಹಳ ಹಿಂದೆ ಇದೆ ಎಂದು ಈ ಅಂಕಿ ಅಂಶಗಳಿಂದ ನಮಗೆ ಗೊತ್ತಾಗುತ್ತದೆ. ಪ್ರತಿ 3000 ಜನಗಳಿಗೆ ಒಬ್ಬರು ವೈದ್ಯರು ಇರಬೇಕೆಂದು ಮೊದಲಿಯಾರ್ ಸಮಿತಿಯು ಶಿಫಾರಸು ಮಾಡಿದೆ. ಇದನ್ನು ಸರ್ಕಾರದವರು ಅನುಷ್ಠಾನಕ್ಕೆ ತರಬೇಕೆಂದು ನಾನು ಹೇಳುತ್ತೇನೆ. ಮೂಲಭೂತವಾಗಿ ಆರೋಗ್ಯ ಬಹಳ ಮುಖ್ಯವಾದದ್ದು. ಆದ್ದರಿಂದ ಈ ಬಗ್ಗೆ ನಮ್ಮ ಸರ್ಕಾರ ಹೆಚ್ಚಿನ ಗಮನ ಕೊಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಕನ್ನಡದ ಅಭಿವೃದ್ಧಿಗಾಗಿ ಕೇವಲ 13 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದು ಬಹಳ ಕಡಿಮೆ ಆಯಿತು. ಕರ್ನಾಟಕ ರಾಜ್ಯದಲ್ಲಿ ಕನ್ನಡಕ್ಕೆ ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕು. ಈಗ ಕನ್ನಡವನ್ನು ಆಡಳಿತ ಭಾಷೆಯಾಗಿ ಜಿಲ್ಲಾ ಮಟ್ಟದಲ್ಲಿ ತಂದಿದ್ದಾರೆ ಇನ್ನು ಸ್ವಲ್ಪ ಸಮಯದಲ್ಲಿ ರಾಜ್ಯದ ಮಟ್ಟಕ್ಕೆ ಬರುತ್ತದೆ. ಆದ್ದರಿಂದ ನಮ್ಮ ಸರ್ಕಾರದವರು ಕನ್ನಡದ ಅಭಿವೃದ್ಧಿಗಾಗಿ 13 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ಬಹಳ ಕಡಿಮೆ ಆಯಿತು. ಇಧಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ.

ಬರಗಾಲ ನಿವಾರಣೆಗಾಗಿ 54 ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಸರ್ಕಾರದವರು ಒದಗಿಸಿದ್ದಾರೆ. ಈ ಹಣ ಭಾರತ ಸರ್ಕಾರದಿಂದ ಬರುತ್ತದೆ ಎಂದು ನಿರೀಕ್ಷಣೆ ಮಾಡಿ ಈ ಹಣವನ್ನು ಒದಗಿಸಿದ್ದಾರೆ. ಆದ್ದರಿಂದ ಇದು ಕೇಂದ್ರದ ಮೇಲೆ ಅವಲಂಬಿಸಿಕೊಂಡಿದೆ. ನಾಲ್ಕು ಮತ್ತು 5 ನೇ ಫೈನಾನ್ಸ್ ಕಮಿಷನ್ನಿನಿಂದ ನಮ್ಮ ರಾಜ್ಯಕ್ಕೆ ಸಾಕಷ್ಟು ನೆರವು ಸಿಕ್ಕಿಲ್ಲ. ಇದನ್ನು ನೋಡಿದರೆ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ಬೇಕು ಎಂದು ಅನಿಸುತ್ತದೆ. ಪದ್ಧತಿಯ ಪ್ರಕಾರ 5 ವರ್ಷಕ್ಕೊಮ್ಮೆ ಹೊಸ ಹಣಕಾಸು ಆಯೋಗ ಅಸ್ತಿತ್ವಕ್ಕೆ ಬಂದು ವಿವಿಧ ರಾಜ್ಯಗಳಿಗೆ ಮುಂದಿನ 5 ವರ್ಷಗಳ ಅಗತ್ಯ ಬೇಡಿಕೆಗಳನ್ನು ಅಂದಾಜು ಮಾಡಿ ಕೇಂದ್ರ ನಿಗದಿ ಪಡಿಸುವುದು. ಆದರೆ ಅತಿವೃಷ್ಟಿ ಅನಾವೃಷ್ಟಿ ಮುಂತಾದ ಪ್ರಕರಣಗಳು ಕಂಡುಬಂದಾಗ ಅಗತ್ಯವಾದ ತುರ್ತು ನೆರವು ಇದರಲ್ಲಿ ಸೇರುವುದಿಲ್ಲ. ಇವುಗಳನ್ನು ಆರ್ಥಿಕ ಮಂಡಲಿ ಮುಂದಾಗಿಯೇ ಊಹಿಸಿ ಅಂದಾಜು ಮಾಡುವುದು ಹೇಗೆ ? ಇಂತಹ ತುರ್ತು ಪರಿಸ್ಥಿತಿಯನ್ನು ಎದುರಿಸಲು ರಾಜ್ಯಗಳಿಗೆ ಹಣ ಒದಗಿಸಿರುವುದಿಲ್ಲ. ಇದನ್ನು ನಾವು ಅನುಭವಿಸುತ್ತಿದ್ದೇವೆ. ಹೀಗಾಗಿ ಅಂತಹ ಪರಿಸ್ಥಿತಿ ಎದುರಾದಾಗ ರಾಜ್ಯಗಳಿಗೆ ಕೇಂದ್ರದ ಬಗ್ಗೆ ಅಸಮಾಧಾನ ಮೂಡುವುದು ಸಹಜ. ಆಗ ಸಕಾಲಿಕ ಹಣಕಾಸು ಖಾತೆ ಮತ್ತು ಯೋಜನಾ ಆಯೋಗದ ನಡುವೆ ಅಲೆದಾಡಬೇಕು. ಜೊತೆಗೆ ಹೆಚ್ಚುವರಿ ಸಂಪನ್ಮೂಲ ಹುಡುಕಿಕೊಳ್ಳಲು ರಾಜ್ಯಗಳಿಗೆ ಸಂವಿಧಾನಾತ್ಮಕ ಅಥವಾ ಶಾಸನಸಭಾ ಸ್ವಾತಂತ್ರ್ಯವಿಲ್ಲದಿರುವುದು ಮತ್ತಷ್ಟು ಶೋಚನೀಯ. ಪಿ. ವಿ. ರಾಜಮನ್ನಾರ್ ಸಮಿತಿಯು ಕೇಂದ್ರ ಹಾಗೂ ರಾಜ್ಯಗಳ ರಿಲೇಷನ್‌ಷಿಪ್ಪಿಗೆ ಸಂಬಂಧಪಟ್ಟಹಾಗೆ ಒಂದು ವರದಿಯನ್ನು ಮದ್ರಾಸ್ ಸರ್ಕಾರಕ್ಕೆ ಕೊಟ್ಟಿದೆ. ಅದರಲ್ಲಿ ರಾಜ್ಯಗಳಿಗೆ ಯಾವ ತರಹ ಸ್ವಾಯತ್ತತೆ ಇರಬೇಕು ಎಂಬುದನ್ನು ಆ ವರದಿಯಲ್ಲಿ ತಿಳಿಸಿದ್ದಾರೆ.

†**Sri B. B. SAYANAK** (Belgaum).— Mr. Deputy Speaker Sir, I rise to oppose the budget estimates for the year 1973-74 placed by the Hon'ble Finance Minister. This Budget is a deficit one to the tune of Rs 36 14 crores. There is draught in the State. So the Finance Minister is wise, intelligent and shrewed. So he has taken care not to levy any tax on the public. I do not want to congratulate him, because he knows that if there is a levy of tax there will be an agitation. So, he has not levied taxes There is a department in Belgaum-the Department of Commercial Tax and Sales Tax. There is a Deputy Commissioner for Commercial Tax and Sales Tax. The Deputy Commissioner for Sales Tax is there for more than Six years. He is most corrupt and I am requesting the Hon'ble Minister that he must be transferred. He has told me that he is the only man who knows Marathi. I am of the opinion that I do not want any Marathi man. I do not want a corrupt officer. So I request that he may be transferred immediately. Another thing, this sales-tax officer......

Sri H. M. CHANNABASAPPA.—I have no objection if for any member to make anycharges against the Government. To make a charge against anyindividual who is not here in a position to defend himself, would notbe correct. If hehas any material toshow that an officer referred to by him is corrput, he is welcome to pass on to us for taking such action as we deem fit. It is no good making *ad hoc* remarks like that and leave it at that. It would not be fair.

Sri B. B. SAYANAK.—I am a responsible MLA. I have given all material to the Finance Minister.

Sri H. M. CHANNABASAPPA.—I have not said that the Hon. Member has spoken without material. The point is, it would not be fair to make a remark against a person who is not in a position to defend here. And it is open to you to pass on any information you may have about that person for such action as may be deemed fit specially in the circumstances in which we are placed.

Sri B. B. SAYANAK.—Another thing Sir, There is one director of Film Industry in Belgaum. The Sales tax offiicers are visiting the shops along with the Director of film industry in Belgaum. The sales tax officers are forcing and coercing the shop-keepers to purchase shares of this film industry. The Director of Film Industry do not want to disclose the name, she is contesting the elections to the MLC She is taking these officers to the shop-keepers and she is forcing the shop-keepers to purchase the shares of the film industry. That is not fair on the part of officers...

Mr. DEPUTY SPEAKER.—If the hon. member has got anything against any officer, he may please frame charges and hand it over to the Government.

Sri B. B. SAYANAK.—The Finance Minister has stated of in his budget speech that the Government is fully alive to its responsibility and will do its utmost to provide work, water, food for people and fodder for the cattle in the scarcity areas. This was the promise of the Government. I want to ask the Government, why the cattle from Bijapur are coming to Belgaum taluk, Khanapur Taluka, Supa Taluka, Karwar Taluka if Government is providing the required fodder to the cattle in the draught affected area. Not only that, my friend Sri Bapusaheb patil got a letter yesterday that in Aurad Taluk, Bidar District, 200 cattle have died and 500 cattle have gone to other States. I want to ask the Government, whether any centres for fodder has been established and if so how many such centres Government has started for supplying fodder and how much money is spent over in each centre. Not only that, I ask the Government, if Government is providing work for the draught affected people, why people of the draught affected area are going to Maharashtra ? It is stated in the armugam Commission report that people from Draught affected area have gone to Bombay, Sholapur, Poona. Why is it so ? If you are giving work to the people...

Sri H. M. CHANNABASAPPA.—I have said anybody who wants employment, he can come to the Kalinadi Project site.

Sri B. B. SAYANAK.—The Minister may give his reply afterwards. I am not going to yield. People are going to Maharashtra. Is this the Justice you are doing to the people in draught affected area ?

Another thing, you are not giving equal amount of wages to ladies and gents. You are giving Rs. 2-50 for gents and Rs. 1-50 to ladies, whereas the Maharashtra Government is giving equal wages to both ladies and gents. Why this disparity between ladies and gents ?

5-00 P.M.

When we got independence in the year 1947, it was the intention of the Central Government that there must be decentralisation of power. So, we are having the panchayatraj institutions like the Taluk Boards and Municipalities. But what is going on in the Mysore State ? The power is centralised. The drought has come as a boon for Mysore State and they want powers in their hands. They have appointed Administrators for some Municipalities. They have conducted election in Haliyal, thinking that they will get majority. They are under the impression that in Mangalore and Udipi Municipalities they will get majority but I think they will not get it. The Chief Minister of Mysore State, the Chief Minister of Gujarath have gone to Bombay to canvass for the Congress Party in the Bombay City Corporation elections. They have all along with the Maharashtra Chief Minister tried their level best to canvass but what is the result ? The Congress got only 44 seats out of 135 seats. In Belgaum this Government has extended the term of the Municipality. At the time of municipal meetings the police were present and then only the President was able to conduct the meetings.

For the last two years the present Municipal President has been in a minority and he has not been conducting a single meeting. Every meeting has been postponed. Is this good administration. You are giving a recommendation—Siphars as we call it in Marathi. Is this good administration. We know your politics. If you hold elections to Belgaum and Nippani Municipalities, the Maharashtra Ekikaran Samithi will win the elections and we will rout your party. That is why you are not wanting to condct the elections. I will give a challenge to Sri Devaraj Urs. Let him or any Minister come and conduct the elections, we will route the Congress in the elections to the Belgaum and Nippani Municipalities.

Another thing is that the Government has postponed the Taluk Board elections. What was the necessity for that ? I can understand that not conducting elections in drought affected areas but what was the reason for not holding elections in other places ? They want powers in their hards. Since all the Municipalities and the Taluk Boards are in the hands of the Congress (O) and the Opposition, they want to postpone the elections to those bodies. I condemn the Government policy in respect of election of Municipalities.

There was an election only yesterday to the Legislative Council. The Education Minister who is a man of status and integrity has gone to Belgaum. He has called the Head Masters in Milon Hotel and told them that they must vote for the Congress candidate, and that if they did not vote for the Congress candidate, he would not give them grants. It is their bounden duty to give grants to those schools. These are not the paoperties of Government. Sri Koujalgi, Sri R. D. Kittur and so many other Ministers have gone there to canvass for the election. I have no objection to their canvassing but let them not threaten the Head Masters.

The Government has spent so many crores of rupees for soil conservation, and for major, medium and minor irrigation works but I am of the opinion that for the last 17 years the Government has not taken up even a single work in the border area. Government has treated us in a step-motherly way and as second-class citizens. I will give you one instance *viz.* the Bellary nala. We have been fighting for the construction of this nala. Our area is a heavy rainfall area and 2,000 acres of fertile land gets submerged during the rainy season. We have been requesting the Government to consttruct this nala but the Government has not cared to do it. What is the loss? The loss is 50,000 bags of paddy and it comes to Rs. 50 lakhs in terms of rupees.

Sri H. M. CHANNABASAPPA.—The hon. Member does not understand what exactly is to be done to the Bellary Nala. He knows that we have taken up the Rakaskop Water Supply Scheme at a cost of Rs. 60 lakhs and completed and they are enjoying the benefits of it and still he says that nothing has been done during the last 17 years.

Sri B. B. SAYANAK.—The Bellary Nala is a big scheme. It requires desilting.

Sri H. M. CHANNABASAPPA.—Has he any idea of the cost involved in desilting it?

Sri B. B. SAYANAK.—If the Government spends only Rs. 10 lakhs it can be desilted.

Sri H. M. CHANNABASAPPA.—I take a challenge. I will give him Rs. 10 lakhs and can he give a guarantee that he will drain off the Bellary Nala?

Sri B. B. SAYANAK.—I will do it. The then Deputy Commissioner has said that that amount was sufficient for that purpose. The engineer has told me that the plans and estimates are ready and still the Government is not taking it up.

(SRI B. B. SAYANAK)

Another point that I wish to make is, there are 24 Public Undertakings in the State. In more than 50 % of these Public Undertakings the Government has appointed only I. A. S. Officers as General Managers. I want to ask whether it is neceesary to appoint only I. A. S. Officers ? The Central Government hes appointed one Sri Bagaram Tulpule who is a Labour Leader and who is a graduate in engineering, as General Manager in Durgapur Stcel Plant. Therefore, why not this Government also appoint technical persons to the Public Undertakings.

The Administrative Reforms Committee have recommended that an officer should not be nominated for more than 4 or 5 committees. But according to my information there are officers who are members on more than 10 or 15 committees. I do not want to disclose the names. They are appointed either as Chairman or Directors. That is not fair on the part of the Government. The Government should appoint only technical persons so far as tcchnical departments are concerned.

Regarding education, there is one Marathi Training College in Vadgaon. Two widows, who are the wives of military personnel who died in the war wanted admission into this college. The Military Officer Lt. Col. Brar has requested the Management of the Vadgaon Marathi Training College to admit those two widows. Even the Director of Public Instruction has consented but the Joint Director has taken objection. There is a rule that for thr T. C. L. course only VII standard pass teachers should be admitted. These are widows whose husbands served in the Military and who died on the war front during the India—Pakistan war, are given admission in this institution. This must be treated as a national issue.

Mr. DEPUTY SPEAKER.—The hon. member could have discussed this matter with the D. P. I. or with the Education Minister.

Sri B. B. SAYANAK.—I have discussed with so many persons and they tell me to approach the Government.

Sri H. S. SIDDAPPA.—You can be rest assured that they will get it.

Sri B. B. SAYANAK.—Thank you.

Regarding development of Kannada, there are 18 languages in India and we respect all these languages, But we are of the opinion that until and unless the border issue which is pending before the Parliament is solved, the Government should not force on the marathi people this Kannada language. It is very difficult for us to learn this language and I request the Government not to force Kannada language on the people in the border area The status quo must be maintained until and unless the Government of India or the Parliament takes a decision.

Regarding water supply, I am sorry to state that though we got independence about 25 years back, we are not providing water supply to more than 14,000 villages in the State. It is our duty to provide water to all the villages and I request the Government to provide all the facilities to the poor people.

I thank you.

†**Smt. SUMATI B. MADIMAN** (Dharwar Rural).—Mr. Deputy Speaker, I sincerely congratulate the hon. Finance Minister for presenting before the House the budget with minimum taxation despite the fact that the State has been severely affected by drought and scarcity. I fully agree that the success of the drought relief programme is not so much a matter of money but of effective implementation. I would further add that the co-operation and participation of the people is also very important.

The provision of Rs. 5 crores for constructing 25,000 model low cost house during the current year at the taluk level suiting to the local conditions is a real step towards progress.

The brighter aspect in the budget is I feel the minimum needs programme. It is high time that systematic efforts are made to develop all parts of the State and reduce the imbalance and disparities. This kind of planning will solve more than half of our problems.

Regarding the Panchayats, every body agrees that all the Panchayats do not work satisfactorily. But I feel it is not because the people are inefficient but they do not have enough funds to do what they would like to have for the village. Therefore the officers and people's representatives should take more interest to encourage the Panchayats to start some sort of income yielding schemes like orchards or sericulture or diary. I would not suggest poultry farm because it has been a total failure. But I think Orchards, Sericulture and Dairy would really help them in the long run.

The special attention to create employment opportunities for the educated unemployed is a great step taken for solving the problem of unemployment.

The special importance to provide drinking water to village which do not have a drinking water well and also installing of electric pumps to about 5,000 drinking water wells is wonderful and I am sure this will help the women folk a lot. Some time back I had suggested to the Panchayat that they should instal a pump to the well because it would save the women folk. The man expects the women to draw the water from the well and gaind the rice and look after the children. Their explanation is that the women have nothing else to do. The man should see that he gives more facilities to the women so that she could devote her time to look after her children. At the same time, I would like to state that the Government should start a separate Women Welfare Department solely meant for the welfare of women with a separate budget as is being done for other welfare programmes.

(SMT. SUMATI B. MADIMAN)

I wish the Central Government would do this and the State Government will follow it up. I would like to give reasons as to why this separate Department for Women welfare is necessary. In India women has always been given an exalted place. She represents the Goddess of Wealth, Knowledge, Food and Energy. As the mother, she is embodiment of love, compassion and tyaga. She is the destroyer of evil. Even the rivers are given feminine names and are treated as sacred. And now when our nation is at a crucial stage, again a great women is guiding and steering it ably as its Prime Minister. There are quite a number of women participating equally well in all walks of life. But compared to the population of women the percentage of such examples is very negligible. It is in fact bewildering to see the disparity in the status of women. We find a majority of women being identified by thumb impression. This disparity is too great. It is high time that we think about education of women. We have to go to the route cause of this. I would like to explain the reasons for the lack of progress by making a close analysis of the situation. There are three groups of women whose problems have to be tackled by different methods. I have analysed that there are three groups of women and I would like to tell what they are. The first group of women is the well-to do, the status conscious and the conservative. Women belonging to this group are not allowed and so are not interested in participating in Social Welfare programmes ; the second group is the lower middle class women. Absolutely immersed in drudgery they are not bold enough to participate and expect the well-to-do women to stir out of their homes and work; and the third group is the labour class. This group is miserably neglected in all respects, and they do not have a moment of peace or rest and they do all the donkey's work and are beaten up by the drunkard husbands. I would also like to suggest remedies in this behalf.

The extension of welfare programmes to these two latter groups *viz.*, second and third groups should be planned in both direct and indirect method. The first group will find its feet when the land reforms and land celings are implemented. The lower middle class can participate with persuasion, in activities like Mahila Mandals where hygiene, food and nutrition, child-care etc., should be taught to them. Balwadis should be conducted by the Mahila Mandalas and extend the welfare to others and at the same time benefit by it.

The first thing that the Women belonging to this group can be taught is to plan their household work which is now done by fits and starts.

The third group needs indirect method by which I mean taking care of their children. Creches and Balwadis should be started in adequate number which will make the women go to work without anxiety. This will also enable the older children to attend school by relieving them of their present responsibility of looking after the babies and toddlers at home. The Nutrition Programmes can be implemented successfully and will serve the purpose. The problem of compulsory and adult education will automatically be solved. "Catch them young" should be the motto. Adult illiteracy has been presisting all these years, because the problem has not been tackled at the roots. Tall life is made easy for the women and child, she cannot educate herself. Where is the time? If she remains uneducated, any programme planned will take ages to be implemented successfully. Therefore, serious though should be given to the welfare of women. In fect I had mentioned about these things even during last budget speech. But nobody seems to be worried about it. I hope the Government will look into the matter and really do something in this behalf.

Here I may mention that the Social Welfare Board has started a new programme called the Family and Child Welfare Projects in villages. It covers only eight villages. There is a main centre, five sub-centres and two aided centres. In the main centre, training camps for fifteen women are conducted for fifteen days. The expenses are brone by the Board. The women are taught about child-care, cooking in right way, tailoring, preserving, cleanliness, lectures are arranged on Food Nutrition, Family Planning, Health, etc. This programme has caught imagination of the women-folk and there is a great demand for mobile camps, as mothers with little babies cannot stay away from home for long. I feel that when women wants such mobile camps to be arranged, it is correct time for the Government to arrange for such mobile camps and provide them facilities. Now is the proper time to start programmes for them because there is an awakening in the masses and also demand for facilities.

Now I would like to mention about our youths. We always blame the youth, but I find that there is a lot to be done for them. The Youth Welfare Department should start new activities for the youth. Boys should be encouraged to develop some hobbies and athletic skills. Small workshops and gymnasiums should be started in youth centres which enough equipment. Miniature sets of telephones, telegraph, radio sets should be provided so as to enable the youth to learn the working of the system by assembling the sets. Home electricity and first aid courses along with plumbing should be conducted. Carpentary should be encouraged so as to enable them to make utility articles. Judo must be made compulsory for girls. Until they are physically strong and know they can protect themselves, it will be a problem to bring them out of their shell to be worthy citizens of the nation. Our old ways of keeping the children entertained have to be given up. We have to bring in new ideas to keep them away from mischiefs.

(SMT. SUMATI B. MADIMAN)

Then I would also like to mention that while planning for youth the non-school going youth should not be forgotten. This group has to be mobilised as they need more attention because they have been deprived of higher education and other facilities which their brothers enjoy. This is a frustrated and bitter group. So, programmes suiting to their abilities and utility with recreation should be planned for them. Workshops, where they can learn to repair farm implements and tractors, lectures on Animal Husbandry and modern techniques of Agriculture, Sericulture should be arranged with practical training. A certificate should be presented after the course is over to boost up their morale and satisfy their ago.

Before I conclude, I would like to suggest to the Government that when they take up the new housing programmes they should start small Janatha Markets in the villages, so that the villagers need not have to go to towns for their requirements and the essential commodities are available to them in their own places.

With these few words, I conclude my speech and thank the Chair.

5-30 P. M.

ಶ್ರೀ ಬಿ. ಎಸ್. ವೀರಭದ್ರಪ್ಪ (ಕೂಡ್ಲಿಗಿ).—ಸನ್ಮಾನ್ಯ ಅಧ್ಯಕ್ಷರೇ, ಆರ್ಥಿಕ ಮಂತ್ರಿಗಳು ನಮ್ಮ ಮುಂದೆ ಈ ವರ್ಷದ ಆಯುವ್ಯಯ ಪಟ್ಟಿಯನ್ನು ಇಟ್ಟಿದ್ದಾರೆ. ಈ ಆಯುವ್ಯಯದ ಬಗ್ಗೆ ಯಾವ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ನಾನು ಸಿದ್ಧನಿಲ್ಲ. ಈ ಅವ್ಯಯಪಟ್ಟಿಯಲ್ಲಿ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದು ನೋಡಿ ಬಹಳ ಸಂತೋಷವಾಗಿದೆ. ಒಂದು ಜನತೆಯ ವಸತಿ ಕಾರ್ಯಕ್ರಮದ ಬಗ್ಗೆ ; ತಾಲ್ಲೂಕು ಬೋರ್ಡುಗಳು ನಡೆಸುತ್ತಿರುವ ಆಸ್ಪತ್ರೆಗಳನ್ನು ಸರ್ಕಾರ ಸಂಪೂರ್ಣವಾಗಿ ವಹಿಸುವುದು. ಹರಿಜನ ಗಿರಿಜನ ಹಾಸ್ಟಲ್‌ಗಳಲ್ಲಿರುವ ಮಕ್ಕಳಿಗೆ 30-40 ರೂಪಾಯಿಗಳಿಗೆ ಹಣವನ್ನು ಹೆಚ್ಚಿಸಿರುವುದು. ಬರಗಾಲ ಪೀಡಿತ ಪ್ರದೇಶಗಳಲ್ಲಿ, ಬೀಜ ಮತ್ತು ಗೊಬ್ಬರ ಮತ್ತು ಉಪಕರಣಗಳನ್ನು ಒದಗಿಸಿರುವುದು, ಇವೆಲ್ಲಾ ಸಂತೋಷವನ್ನುಂಟುಮಾಡುವ ವಿಚಾರಗಳಾಗಿವೆ. ಮಾನ್ಯ ಮಂತ್ರಿಗಳು ಈ ಅಯುವ್ಯಯ ಪಟ್ಟಿಯನ್ನು ಬಹಳ ಜಾಣ್ಮೆಯಿಂದ ಇಟ್ಟಿದ್ದಾರೆ. ಏಕೆಂದರೆ ಅವರು ರಾಜ ವಂಶದಲ್ಲಿ ಹುಟ್ಟಿದ್ದರಿಂದ ಈ ಜಾಣ್ಮೆಯ ಅಯವ್ಯಯ ಪಟ್ಟಿಯನ್ನು ಇಡಲಿಕ್ಕೆ ಸಾಧ್ಯವಾಗಿದೆ ವಿದರಲ್ಲಿ ಅವರು ಯಾವ ತರಹದ ಒಂದು ಹೊಸ ತೆರಿಗೆಯನ್ನು ಹಾಕದಿದ್ದರೆ ಜನತೆಯ ಇಶ್ವಾಸ ಗಳಿಸಲಿಕ್ಕೆ ಅವರು ಪಾತ್ರರಾಗಿದ್ದಾರೆಂದು ನಾನು ತಿಳಿಸುತ್ತೇನೆ. ಆಯುವ್ಯಯದಲ್ಲಿ ಅನೇಕ ಹೊಸದಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಮಾನ್ಯ ಕಾಂಗ್ರೆಸ್ಸಿನ ಸ್ನೇಹಿತರು ಹಿಂದಿನ ಸರ್ಕಾರ ಏನು ಮಾಡಿದೆ ಏನು ಮಾಡಿದೆ ಎನ್ನುವ ಅಭಿಪ್ರಾಯದಲ್ಲಿ ಹೇಳಿದರು. ಆದರೆ ಈಗ ಅವರಿಗೆ ಉತ್ತರವಾಗಿ ಹೇಳುತ್ತೇನೆ ಹಿಂದಿನ ಸರ್ಕಾರ ಉತ್ತಮವಾದ ಕೆಲಸಗಳನ್ನು ಮಾಡಿಕೊಂಡು ಬಂದಿದ್ದರಿಂದ, ಅದು 25 ವರ್ಷಗಳ ಕಾಲ ದೇಶವನ್ನು ಆಳಲಿಕ್ಕೆ ಸಾಧ್ಯವಾಯಿತು ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. 25 ವರ್ಷದ ನಂತರ ಒಂದು ಬದಲಾವಣೆಯ ಪಕ್ಷ ಬೇಕಿತ್ತು. ಆದ್ದರಿಂದ ಜನ ತಮ್ಮನ್ನು ಆರಿಸಿಕಳುಹಿಸಿದ್ದಾರೆ. ಜನತೆಯ ಆಶೆ ಆಕಾಂಕ್ಷೆಗಳನ್ನು ಈಡೇರಿಸುವುದಕ್ಕೆ ನೀವು ಇನ್ನೂ 25 ವರ್ಷಗಳ ಕಾಲ ಆಡಳಿತ ನಡೆಸುತ್ತೀರಿ ಎಂದು ನಾನು ಆಶಿಸುತ್ತೇನೆ. ಈ ಒಂದು ಆಯುವ್ಯಯದಲ್ಲಿ ಬರಗಾಲದ ವಿಚಾರವಾಗಿ ಅನೇಕ ಕಾರ್ಯಗಳನ್ನು ಕೈಗೊಳ್ಳುವ ಒಗ್ಗೆ ಸೂಚಿಸಿದ್ದಾರೆ. ಹೆಚ್ಚಿನ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಲಿಕ್ಕೆ ಪ್ರಯತ್ನಪಡುತ್ತೇವೆಂದು ಹೇಳಿದ್ದಾರೆ. ಈ ಒಂದು ಕಾರ್ಯ ಯಶಸ್ವಿಯಾಗಬೇಕಾದರೆ, ಹೆಚ್ಚಾಗಿ ಅನೇಕ ಕಾರ್ಯಗಳನ್ನು ಪಿ. ಡಬ್ಲ್ಯು. ಡಿ.ಗೆ ವಹಿಸಿರುತ್ತಾರೆ. ಅಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲ. ಸಿಬ್ಬಂದಿಯನ್ನು ಹೆಚ್ಚಾಗಿ ನೇಮಿಸಿಕೊಂಡರೆ

ಈ ಕಾರ್ಯ ಯಶಸ್ವಿಯಾಗುತ್ತದೆ ಎಂದು ನಾನು ಸೂಚಿಸುತ್ತೇನೆ. ಅನೇಕ ಕಡೆ ಕೊಟ್ಟಂಥ ಹಣ ಖರ್ಚಾಗದೆ, ಇರುವುದಕ್ಕೆ ಈ ಒಂದು ಕಾರಣ, ಎಂದು ನಾನು ತಿಳಿದುಕೊಂಡಿದ್ದೇನೆ. ಬರಗಾಲದ ಪ್ರದೇಶದಲ್ಲಿ ಜನರಿಗೆ ಕೆಲಸ ಕೊಟ್ಟರೆ ಸಾಲದು ಕೆಲಸ ಮಾಡಿದಂಥ ಜನತೆಗೆ ಆಹಾರವನ್ನು ಒದಗಿಸಿಕೊಡುವುದು ಸರ್ಕಾರದ ಕರ್ತವ್ಯ. ಸರ್ಕಾರದವರು ಸುಮಾರು 14-15 ಸಾವಿರ ಅಂಗಡಿಗಳನ್ನು ತೆರೆದಿದ್ದೇವೆಂದು ಹೇಳಿದ್ದಾರೆ. ಅಲ್ಲಿಗೆ ಆಹಾರಧಾನ್ಯವನ್ನು ಒದಗಿಸಿ ಜನತೆಗೆ ಅನುಕೂಲ ಮಾಡಿಕೊಡುವ ಸಹಾಯವನ್ನು ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಪರಿಶೀಲಿಸಿ ಆದಷ್ಟು ತ್ವರಿತವಾಗಿ ನೀರಾವರಿ ಯೋಜನೆಗಳನ್ನು ರಾಜ್ಯದಾದ್ಯಂತ ಕೈಗೊಳ್ಳಬೇಕು ಎಂದು ನಾನು ಸೂಚಿಸುತ್ತೇನೆ. ಏಕೆಂದರೆ, ಕೇವಲ ಮೂರೂವರೆ ಜಿಲ್ಲೆಗಳಲ್ಲಿ ಮಾತ್ರ ತೀಕ್ಷ್ಣವಾದ ಬರಗಾಲವನ್ನು ಕಂಡಿದ್ದಾರೆ. ಆದರೆ ಇಂಥ ಬರಗಾಲ ಅನೇಕ ಜಿಲ್ಲೆಗಳಲ್ಲಿಯೂ ಇದೆ. ಆದ್ದರಿಂದ ಅಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕು. ಮುಖ್ಯವಾಗಿ ಚಿತ್ರದುರ್ಗ ಮತ್ತು ಬಳ್ಳಾರಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬರಗಾಲ ಇದೆ. ಮೊಳಕಾಲ್ಮೂರು, ಮತ್ತು ಚಿತ್ರದುರ್ಗ ಭಾಗಗಳಲ್ಲಿ ಯಾವಾಗಲೂ ಬರಗಾಲ ಇದ್ದೇ ಇದೆ. ಈ ಬರಗಾಲವನ್ನು ಹೋಗಲಾಡಿಸುವುದಕ್ಕೆ ಅಪ್ಪರ್ ಭದ್ರಾ ಯೋಜನೆಯನ್ನು ಸರ್ಕಾರ ಐದನೆಯ ಪಂಚವಾರ್ಷಿಕ ಯೋಜನೆಯೊಳಗೆ ಸೇರಿಸುವುದಕ್ಕೆ ಪ್ರಯತ್ನ ಪಡುತ್ತಾರೆ ಎಂದು ನಾನು ತಿಳಿದಿದ್ದೇನೆ. ಬಳ್ಳಾರಿ ಜಿಲ್ಲೆಯಲ್ಲಿ ವಿಜಯನಗರ ಕಾರ್ಖಾನೆಗೆ ಒಂದು ವರ್ಷದಿಂದಲೂ ಅದಕ್ಕೆ ಜಮೀನನ್ನು ವಶಪಡಿಸಿಕೊಳ್ಳುವುದೇ ಆಗಿದೆ. ಇದರ ಕಾರ್ಯ ಆರಂಭವನ್ನು ಆದಷ್ಟು ತೀವ್ರ ಕಾಲದಲ್ಲಿ ಆಗುವಂತೆ ಕೇಂದ್ರಸರ್ಕಾರಕ್ಕೆ ಬರೆದು ಇದನ್ನು ಕಾರ್ಯಗತ ಮಾಡಬೇಕು ಎಂದು ತಿಳಿಸುತ್ತೇನೆ. ಈ ಒಂದು ವಿಜಯನಗರ ಕಾರ್ಖಾನೆಗೋಸ್ಕರ ಸಣ್ಣ ಸಣ್ಣ ಹಿಡುವಳಿದಾರರು ಭೂಮಿಯನ್ನು ಕಳೆದುಕೊಂಡಿದ್ದಾರೆ, ಸೊಂಡೂರಿನಲ್ಲಿ ಸಾಕಷ್ಟು ಭೂಮಿ ಇದೆ, ಅದನ್ನು ಈ ಸಣ್ಣ ಸಣ್ಣ ಹಿಡುವಳಿದಾರರಿಗೆ ಕೊಟ್ಟು ಅವರಿಗೆ ಸಹಾಯ ಮಾಡಬೇಕು ಎಂದು ಸರ್ಕಾರವನ್ನು ಪ್ರಾರ್ಥಿಸುತ್ತೇನೆ. ಈಗಾಗಲೇ ನಮ್ಮ ಅನೇಕ ಸದಸ್ಯರು ಇದರ ಬಗ್ಗೆ ಹೇಳಿದ್ದಾರೆ, ನಾನು ಮಾನ್ಯ ವಾಟಾಳ್ ನಾಗರಾಜ್ ಅವರ ಅಭಿಪ್ರಾಯವನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಅದೇ ರೀತಿ, ಮಂಗಳೂರಿನ ಕಾಂಗ್ರೆಸ್ ಸದಸ್ಯರು ಗಡಿನಾಡಿನ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು. ಹೊರನಾಡು ಪ್ರದೇಶದಲ್ಲಿರುವ ಕೆಲವು ಭಾಗಗಳನ್ನು ನಮ್ಮ ದೇಶಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡಬೇಕು. ಮಹಾರಾಷ್ಟ್ರ, ಆಂಧ್ರ, ಮದ್ರಾಸ್ ಮತ್ತು ಕೇರಳದಲ್ಲಿರುವ ನಮ್ಮ ಪ್ರದೇಶಗಳನ್ನು ಆದಷ್ಟು ಬೇಗ ತೆಗೆದುಕೊಂಡು ಕರ್ನಾಟಕ ಎಂದು ಹೆಸರಿಟ್ಟ ಕೀರ್ತಿಯನ್ನು ಪಡೆದ ಹಾಗೆ, ಆ ಪ್ರದೇಶಗಳನ್ನು ಪಡೆದು ಹೆಚ್ಚಿನ ಖ್ಯಾತಿಯನ್ನು ಪಡೆಯಬೇಕು ಎಂದು ನಾನು ಹೇಳುತ್ತೇನೆ.

ಮುನಿಸಿಪಾಲಿಟಿ ಮತ್ತು ತಾಲ್ಲೂಕು ಬೋರ್ಡುಗಳನ್ನು ಸೂಪರ್‌ಸೀಡ್ ಮಾಡುವುದು ಪ್ರಜಾಪ್ರಭುತ್ವಕ್ಕೆ ಬಹಳ ಧಕ್ಕೆಯಾಗುತ್ತದೆ; ಎಂದು ನಾನು ಸೂಚಿಸುತ್ತೇನೆ. ಸೊಸೈಟಿಗಳಲ್ಲಿ ಅವ್ಯವಹಾರ ನಡೆದಿದ್ದರೆ, ತನಿಖೆ ಮಾಡಿ, ತಪ್ಪಿತಸ್ಥರು ಯಾರು ಇದ್ದರೂ ಅವರಿಗೆ ಉಗ್ರ ಶಿಕ್ಷೆಯನ್ನು ಕೊಡುವ ಬದಲು ಅಲ್ಲಿಗೆ ಅಡ್ಮಿನಿಸ್ಟ್ರೇಟರನ್ನು ಹಾಕಿದರೆ ಸೊಸೈಟಿಗಳು ಪ್ರಗತಿಯಾಗುವುದಿಲ್ಲ. ಜನತೆಗೆ ಕಷ್ಟವಾಗುತ್ತದೆ ಎಂದು ನಾನು ಹೇಳುತ್ತೇನೆ. ಈ ಸೊಸೈಟಿಗಳ ವ್ಯವಹಾರದಲ್ಲಿ ದುರ್ವ್ಯವಹಾರ ಮಾಡಿದ್ದರೆ. ಅಂಥವರನ್ನು ಪರಿಶೀಲನೆ ಮಾಡಿ ಅವರಿಗೆ ತಕ್ಕ ಪ್ರಾಯಶ್ಚಿತ್ತ ಮಾಡಬೇಕು ಎಂದು ಸರ್ಕಾರವನ್ನು ಪ್ರಾರ್ಥಿಸುತ್ತೇನೆ.

ವೈದ್ಯಕೀಯ ಸೌಲಭ್ಯದ ಬಗ್ಗೆ, ಈ ಒಂದು ಭಾಷಣದಲ್ಲಿ ಸಾಕಷ್ಟು ಹಣವನ್ನು ಇಟ್ಟಿಲ್ಲ ಎಂದು ನಾನು ಹೇಳುತ್ತೇನೆ. ಏಕೆಂದರೆ ಹಿಂದಿನ ಸಲ ಮಾನ್ಯ ಆರ್ಥಿಕ ಮಂತ್ರಿಗಳು ಐದು ಸಾವಿರ ಜನಸಂಖ್ಯೆ ಇರುವ ಹಳ್ಳಿಗಳಿಗೆ ಆಸ್ಪತ್ರೆಯನ್ನು ತೆರೆಯುತ್ತೇವೆಂದು ಹೇಳಿದರು. ಒಂದು ವರ್ಷವಾದರೂ ಕೂಡ ಹೆಚ್ಚಿನ ಆಸ್ಪತ್ರೆಯನ್ನು ತೆರೆದಿಲ್ಲ. ಇದಕ್ಕೆ ಸರ್ಕಾರದವರು ಹೆಚ್ಚಿನ ನಿಗ ಕೊಡಬೇಕು ಎಂದು ಹೇಳುತ್ತೇನೆ. ಅದೇ ರೀತಿ ಸಂಚಾರಿ ಆಸ್ಪತ್ರೆಗಳನ್ನು ಅನೇಕ ತಾಲ್ಲೂಕುಗಳಲ್ಲಿ ಮಾಡಿದರೆ, ಇದರಿಂದ ಜನಗಳಿಗೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಸೂಚಿಸಬಯಸುತ್ತೇನೆ.

ಇನ್ನು ಪಶುವೈದ್ಯಶಾಲೆಗಳನ್ನು ತೆರೆಯುವುದಕ್ಕೆ ಸರ್ಕಾರ ಗಮನ ಹರಿಸಬೇಕು. ಅನೇಕ ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಸಣ್ಣ ಕಾರು ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಪ್ರಯತ್ನಪಟ್ಟರೂ ಅದು ಆಗಲಿಲ್ಲ. ರಾಜ್ಯಸರ್ಕಾರದವರು ಕೇಂದ್ರ ಸರ್ಕಾರದವರೊಡನೆ ವ್ಯವಹಾರ

(ಶ್ರೀ ಬಿ. ಎಸ್. ವೀರಭದ್ರಪ್ಪ)

ಮಾಡಿ ಆ ಕಾರ್ಖಾನೆಯನ್ನು ನಮ್ಮ ರಾಜ್ಯದಲ್ಲಿಯೇ ಮಾಡುವುದಕ್ಕೆ ಪ್ರಯತ್ನಪಡಬೇಕು. ಕೇಂದ್ರಸರ್ಕಾರದ ಮಂತ್ರಿಗಳು, ನಮಗೆ 15 ಸಾವಿರ ಕಾರಿನ ಬೇಡಿಕೆ ಇದೆಯೆಂದು ಹೇಳುವಾಗ, ಆ ಕಾರುಗಳನ್ನು ನಮ್ಮ ರಾಜ್ಯದಲ್ಲಿಯೇ ತಯಾರು ಮಾಡುವುದಕ್ಕೆ ಪ್ರಯತ್ನ ಪಡಬೇಕು.

ತೆರಿಗೆ ವಿಚಾರವಾಗಿ ಹಣಕಾಸಿನ ಮಂತ್ರಿಗಳು ಭತ್ತಕ್ಕೆ ತೆರಿಗೆ ವಿನಾಯಿತಿಯನ್ನು ಕೊಟ್ಟಿದ್ದಾರೆ. ಇದರಿಂದ ಬಡವರಿಗೆ ಹೆಚ್ಚಿನ ಅನುಕೂಲವಾಗುವುದಿಲ್ಲ. ಎಲ್ಲಾ ಆಹಾರ ದವಸಗಳ ಮೇಲಿನ ತೆರಿಗೆಯನ್ನು ತೆಗೆಯಬೇಕು. ಇದರಿಂದ ಬೆಲೆ ಕಡಿಮೆಯಾಗುತ್ತದೆ ಮತ್ತು ಸರ್ವಸಾಮಾನ್ಯರಿಗೆ ಪ್ರಯೋಜನವಾಗುತ್ತದೆ ಎಂದು ನಾನು ಸೂಚಿಸುತ್ತೇನೆ.

ನಮ್ಮ ಜಿಲ್ಲೆಯಲ್ಲಿ, ಎಲ್ಲಾ ತಾಲ್ಲೂಕುಗಳಲ್ಲಿಯೂ ಜೂನಿಯರ್ ಕಾಲೇಜುಗಳು ಇಲ್ಲ, ಯಾವ ಕಾಲೇಜುಗಳೂ ಇಲ್ಲ ಆದ್ದರಿಂದ ತ್ವರಿತವಾಗಿ ಸರ್ಕಾರಿ ಕಾಲೇಜುಗಳನ್ನು ತೆಗೆಯಬೇಕು ಎಂದು ಹೇಳುತ್ತೇನೆ. ಎಲ್ಲೆಲ್ಲಿ ರೈಲುಮಾರ್ಗಗಳ ಅವಶ್ಯವಿದೆ ಎಂದು ತಿಳಿದುಕೊಂಡು ರೈಲುಮಾರ್ಗಗಳನ್ನು ಹಾಕುವುದಕ್ಕೆ ಪ್ರಯತ್ನಪಡಬೇಕೆಂದು ಹೇಳುತ್ತೇನೆ. ಕೊಟ್ಟೂರು—ಹರಿಹರ ರೈಲ್ವೆ ಮಾರ್ಗದ ಬಗ್ಗೆ ಸರ್ಕಾರದವರು ಕೂಡಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇವರ ಸರ್ವೆ ಕೆಲಸ ಆಗಲೆ ನಡೆದಿದೆ. ಇದನ್ನು ರಾಜ್ಯಸರ್ಕಾರ ಒತ್ತಾಯ ಮಾಡಿ ಈ ರೈಲುಮಾರ್ಗವನ್ನು ಹಾಕಲಿಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸೂಚಿಸುತ್ತೇನೆ. ಇದೇ ರೀತಿಯಾಗಿ ತೋರಣಗಲ್ಲು ಹೊಸೂರು ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ ಮಾಡಬೇಕು. ಕಾರವಾರ್ ಮಂಗಳೂರು ಬಂದರಿಗೆ ರಸ್ತೆ ಹೋಗಲಿಕ್ಕೆ ಅನುಕೂಲವಾಗುತ್ತದೆ. ಕೊಟ್ಟೂರು—ಹೊಸೂರು ರಸ್ತೆ ಮಾಡಿದರೆ ಮಂಗಳೂರು ಬಂದರಿಗೆ ಹೋಗಲಿಕ್ಕೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಯುವಜನ ಕಾರ್ಯಕ್ರಮಕ್ಕೆ ಬಜೆಟ್ಟಿನಲ್ಲಿ 2 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ, ಇದು ಸಾಲದು. ಯುವಜನ ಕಲ್ಯಾಣಕ್ಕಾಗಿ ಕನಿಷ್ಟಪಕ್ಷ 70—80ಲಕ್ಷ ರೂಪಾಯಿಗಳನ್ನು ಇಡಲಿಕ್ಕೆ ಸಂಬಂಧಪಟ್ಟ ಮಂತ್ರಿಗಳು ಒತ್ತಾಯಮಾಡಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಯುವಜನ ಕಲ್ಯಾಣಕ್ಕೆ ಒಬ್ಬ ಮಂತ್ರಿಗಳನ್ನು ಕೊಡಿಸಿದ್ದಾರೆ.

ಶ್ರೀ ಬಿ. ಎಸ್. ವೀರಭದ್ರಪ್ಪ.—ಯೋಜನಾ ಮಂತ್ರಿಗಳು ಗರಡಿ ಮನೆಗಳನ್ನು ಕಟ್ಟಲಿಕ್ಕೆ ಸಾಕಷ್ಟು ಗ್ರಾಂಟುಗಳನ್ನು ಕೊಡಬೇಕು. ಗರಡಿ ಮನೆಗಳು ಮುಖ್ಯವಾದುವು. ಇದರ ಬಗ್ಗೆ ಯೋಜನಾ ಮಂತ್ರಿಗಳು ಹೆಚ್ಚಿನ ಗಮನಕೊಡಬೇಕು ಎಂದು ಈ ಸಂದರ್ಭದಲ್ಲಿ ವಿನಂತಿಸುತ್ತೇನೆ. ಪಾನ ನಿರೋಧದಿಂದ ಬಡವರಿಗೆ ಒಂದು ಆರ್ಥಿಕ ಮುಗ್ಗಟ್ಟು ಬಹಳ ಜಾಸ್ತಿಯಾಗಿದೆ. ಪಾನನಿರೋಧವನ್ನು ಪುನಃ ಜಾರಿಗೆ ತಂದು ಆರ್ಥಿಕ ಮಟ್ಟವನ್ನು ಹೆಚ್ಚಿಸಬೇಕು ಎಂದು ಹೇಳಿ ಅಧ್ಯಕ್ಷರು ಕೆಲವು ಮಾತುಗಳನ್ನು ಮಾತನಾಡಲಿಕ್ಕೆ ಕೆಲವು ಸಮಯವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಕೆ. ಸುಬ್ಬಯ್ಯ (ವೀರಾಜಪೇಟೆ).—ಮಾನ್ಯ ಉಪಾಧ್ಯಕ್ಷರೇ, ಅರ್ಥಖಾತೆ ಮಂತ್ರಿಗಳು ಮಂಡಿಸಿರತಕ್ಕ ಆಯವ್ಯಯ ಪತ್ರ 1973—74ನೇ ಸಾಲಿನ ಪತ್ರವನ್ನು ನಾನು ಪುಷ್ಟೀಕರಿಸಿ ನಾಲ್ಕು ಮಾತುಗಳನ್ನು ಆಡುತ್ತೇನೆ. ಬರಗಾಲದ ಪ್ರದೇಶದಲ್ಲಿ ಹೆಚ್ಚಿನ ಕಾಮಗಾರಿ ಕೆಲಸಗಳು ನಡೆಯುತ್ತಿರುವುದು ಸಂತೋಷದ ಕೆಲಸವಾಗಿದೆ. 5 ಜಿಲ್ಲೆಗಳಲ್ಲಿ ಬರಗಾಲ ವಿಪರೀತ ಘಟ್ಟಕ್ಕೆ ಬಂದರೂ ಕೂಡ ಇಡೀ ಜನತೆಗೆ ಎಲ್ಲರಿಗೂ ಕೂಡ ಅದರ ಕಾವು ತಗಲಿ ತೊಂದರೆಗೆ ಈಡಾಗಿದ್ದಾರೆ. ಇಂಥ ಸಂದರ್ಭದಲ್ಲಿ ಕಾಮಗಾರಿಗಳ ಕೆಲಸ ಚೆನ್ನಾಗಿ ನಡೆದಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ. ಕೊಡಗು ಜಿಲ್ಲೆಯಲ್ಲಿ ಈಗತಾನೇ ವಿದ್ಯುಚ್ಛಕ್ತಿ ಕೆಲಸ ನಡೆಯುತ್ತಾ ಇದೆ. ನಮ್ಮ ಜಿಲ್ಲೆಯಲ್ಲಿ ನೀರಾವರಿ ಕೆಲಸಗಳಿಗೆ ಸರ್ಕಾರ ಕೇಳುತ್ತಾ ಇಲ್ಲ. ನಮಗೆ ಬೇಕಾದುದು ವಿದ್ಯುಚ್ಛಕ್ತಿ ಮತ್ತು ರಸ್ತೆ. ರಸ್ತೆಗಳಿಗೆ ಹಣವನ್ನು ಮಂಜೂರು ಮಾಡುವಾಗ ಮಲೆನಾಡು ಪ್ರದೇಶಕ್ಕೂ ಬಯಲು ಪ್ರದೇಶಕ್ಕೂ ವ್ಯತ್ಯಾಸವನ್ನು ತಿಳಿದುಕೊಂಡು ನಮ್ಮ ಜಿಲ್ಲೆಗೆ ಹೆಚ್ಚಿನ ಹಣವನ್ನು ಮಂಜೂರು ಮಾಡುವುದು ಅವಶ್ಯಕವಾಗಿದೆ. ವಿಶೇಷವಾಗಿ ಉದ್ಯೋಗ ಕಾರ್ಯಕ್ರಮಕ್ಕಾಗಿ 100 ಕೋಟಿ ರೂಪಾಯಿಯನ್ನು ಮಂಜೂರು ಮಾಡಿದ್ದಾರೆ. ವಿದ್ಯಾವಂತರಾದವರಿಗೆ ಪದವೀಧರರಾದವರಿಗೆ ಉದ್ಯೋಗ ಕಲ್ಪಿಸಿಕೊಡುವ ಸಂದರ್ಭದಲ್ಲಿ ಎರಡು ವಿಷಯವನ್ನು ವಿಶೇಷವಾಗಿ ಹೆಚ್ಚಿಗೆ ಗಮನಿಸಬೇಕಾಗಿದೆ. ಈಗಾಗಲೇ ಸಾಮಾನ್ಯವಾಗಿ ನಾವು ನೋಡುತ್ತಿದ್ದೇವೆ. ಹೀಗೆ ಉದ್ಯೋಗಾವಕಾಶ ಪದವೀಧರರು ಹೆಚ್ಚಿನ ಅನುಕೂಲತೆ ಇರುವ ಕುಟುಂಬದವರಿಗೆ ಹೆಚ್ಚಿನ ರೀತಿ ಅನುಕೂಲಗಳು ದೊರೆಯುತ್ತಿವೆ. ಉದಾಹರಣೆಗೆ ಹೇಳುವುದಾ

ದರೆ ಮಣಿಪಾಲ್‌ನಲ್ಲಿ ಇರತಕ್ಕಂಥ ಇಂಜಿನಿಯರಿಂಗ್ ಕಾಲೇಜ್, ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಪದವೀಧರರು ಆಗಬೇಕಾದರೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೆ ಮಾತ್ರ ಸಾಧ್ಯವಿದೆ. ಅಂಥ ಜನರು ಪದವೀಧರರು ಆದಮೇಲೆ ಅಂಥವರಿಗೆ ಇದುವರೆಗೆ ಸರ್ಕಾರದಲ್ಲಿ ಕೆಲಸಗಳು ಬೇಗನೆ ಸಿಕ್ಕುತ್ತಾ ಇದೆ. ವಿದ್ಯಾವಂತ ಬಡವರಿಗೆ ಸರ್ಕಾರಿ ಕೆಲಸ ಸಿಕ್ಕುತ್ತಾ ಇವೆಯೇ ಎಂಬುದನ್ನು ನಾವು ನೋಡಬೇಕಾಗಿದೆ. ಒಬ್ಬ ತಂದೆಗೆ ಇರತಕ್ಕ ಸ್ವಂಥ ಜಮೀನಿನಲ್ಲಿ ಜೀವನ ಮಾಡಬೇಕಾದ ಸಂದರ್ಭದಲ್ಲಿ ಅವನು ಅವನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕಾದರೆ ಅವನ ಆಸ್ತಿಯನ್ನು ಖರ್ಚು ಮಾಡಿ ಅವನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿರುವ ಸಂದರ್ಭದಲ್ಲಿ ಸರ್ಕಾರ ಅಂಥವರಿಗೆ ಕೆಲಸ ಏತಕ್ಕೆ ಕೊಡಬಾರದು ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಅವರು -ಸರ್ಕಾರಿ ಕಾಲೇಜುಗಳ ಬಡ ವಿದ್ಯಾರ್ಥಿಗಳು ಪದವೀಧರರಾಗಿ ಬಂದವರಿಗೆ ಹೆಚ್ಚಿಗೆ ಆದ್ಯತೆ ಕೊಡುವುದು ಯೋಗ್ಯವಾಗಿದೆ. ಸರ್ಕಾರಿ ಕಾಲೇಜುಗಳಲ್ಲಿ ಕಡಿಮೆ ಖರ್ಚಿನಲ್ಲಿ ವಿದ್ಯಾಭ್ಯಾಸಮಾಡಿಸಿ ವಿದ್ಯಾವಂತರನ್ನಾಗಿ ಮಾಡುತ್ತಾರೆ ಅಂಥ ಸಂದರ್ಭದಲ್ಲಿ ಅಂಥವರಿಗೆ ಹೆಚ್ಚು ಸರ್ಕಾರಿ ಉದ್ಯೋಗ ಸಿಕ್ಕಲಿಲ್ಲ. ಅದಕ್ಕೆ ಬದಲಾಗಿ ಕೊಡಗು ಜಿಲ್ಲೆಯಿಂದ ಮಣಿಪಾಲ್ ಕಾಲೇಜುಗಳಲ್ಲಿ ಪಧವೀದರರಾಗಿರುವವರಿಗೆ ಉದ್ಯೋಗ ಸಿಕ್ಕುತ್ತದೆ ಇನ್ನು ಮೇಲೆ ಗರೀಬಿ ಮತ್ತು ಬಡವರಾದವರಿಗೆ ಸರ್ಕಾರಿ.ಉದ್ಯೋಗ ಕಲ್ಪಿಸುವ ಯೋಜನೆಯನ್ನು ಸರಿಯಾಗಿ ಮಾಡಿಧರೆ ಮಾತ್ರ ಪದವೀಧರ ಅನ್‌ಎಂಪ್ಲಾಯ್‌ಮೆಂಟ್ ಹೋಗಲಾಡಿಸುವುದಕ್ಕೆ ಸಾಧ್ಯವಿದೆ. ಅದು ಅಲ್ಲದೆ ಯಾವ ಒಂದು ವಿಷಯವನ್ನು ಸರಿಯಾಗಿ ಗಣನೆಗೆ ತೆಗೆದುಕೊಳ್ಳದೆ ಹೋದರೆ ಎಲ್ಲಾ ವಿದ್ಯಾವಂತರಿಗೂ ಸರ್ಕಾರಿ ಉದ್ಯೋಗ ದೊರಕಿಸುತ್ತಾ ಹೋದರೆ ಎಜುಕೇಟೆಡ್ ಅನ್‌ಎಂಪ್ಲಾಯ್‌ಮೆಂಟ್ ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಶ್ರೀಮಂತ ವರ್ಗದ ಪಧವೀದರರಿಗಿಂತ ಮೊದಲು ಬಡತನದಿಂದ ಬಂದ ಪಧವೀದರರಿಗೆ ಉದ್ಯೋಗಾವಕಾಶ ದೊರಕಿಸುವ ಯೋಜನೆಯನ್ನು ಸರ್ಕಾರ ಹಾಕುವುದು ಒಳ್ಳೆಯದೆಂದು ಸೂಚಿಸುತ್ತೇನೆ.

ಇನ್ನು ಸಮಾಜಕಲ್ಯಾಣ ಇಲಾಖೆಗೆ 1973—74ನೇ ಸಾಲಿಗೆ ಯೋಜನೆಗಳು ಇಟ್ಟುಕೊಂಡು ಪ್ರಾಥಮಿಕ ಶಾಲೆಗಳಲ್ಲಿ ಎಷ್ಟು ರೂಪಾಯಿ ಪೋಷಣೆಗೆ ಕೊಡುತ್ತಿದ್ದಾರೆ ಅದು 20 ರೂಪಾಯಿ ಕೊಡಲಾಗಿದೆ ಅದನ್ನು 25 ರೂಪಾಯಿ ಮಾಡಿದ್ದರೆ ಉತ್ತಮವಾಗುತ್ತಿತ್ತು ಎಂದು ನನ್ನ ಸಲಹೆ. ಈಗಾಗಲೇ ಹಾಸ್ಟೆಲ್‌ಗಳಿಗೆ 30 ರೂಪಾಯಿ ಇದ್ದದ್ದನ್ನು 60 ರೂಪಾಯಿಗಳಿಗೆ ಏರಿಸಿದ್ದಾರೆ ಇದು ಸಂತೋಷದ ಸುದ್ದಿಯಾಗಿದೆ. ವಿಶೇಷ ಆಹಾರ ಪೋಷಣೆಗೆ ಈ ಕಾರ್ಯಕ್ರಮವನ್ನು ಅಳವಡಿಸಿಕೊಂಡು ಇದಕ್ಕಾಗಿ ಸರ್ಕಾರದವರು ಹಣ ಮಂಜೂರು ಮಾಡಿದ್ದು ತುಂಬಾ ಸಂತೋಷ ಈ ವಿಶೇಷ ಪೋಷಣೆ ಆಹಾರ ಯಾವರೀತಿ ಸ್ಥಳದಲ್ಲಿ ವಿದ್ಯಾರ್ಥಿಗಳಿಗೆ ಕೊಡುತ್ತಾರೆ ನನ್ನ ತಾಲ್ಲೂಕಿನಲ್ಲಿ ಕಳೆದ ಎರಡು ವರ್ಷಗಳಿಂದ ಸಲ್ಲತಕ್ಕ 20 ಮತ್ತು 10 ರೂಪಾಯಿಗಳ ಭತ್ಯ ಕೊಟ್ಟಿಲ್ಲ. ಎರಡು ವರ್ಷದಿಂದ ಅಲ್ಲಿನ ಅಧಿಕಾರಿಗಳು ಕೊಟ್ಟಿಲ್ಲ. ಇದನ್ನು ವಿಷಾದದಿಂದ ತಿಳಿಸಬೇಕಾಗಿದೆ. ಗಿರಿಜನರ ಅಭಿವೃದ್ಧಿ ಹರಿಜನರ ಅಭಿವೃದ್ಧಿ ಕಾರ್ಯಕ್ರಮವನ್ನು ಈಗಾಗಲೇ ಆಯಾಯ ಬ್ಲಾಕುಗಳಲ್ಲಿ ನೇಮಿಸಲಾಗಿದೆ. ಆ ಬ್ಲಾಕುಗಳಲ್ಲಿ ಸಮಾಜಕಲ್ಯಾಣ ಇಲಾಖೆಗಳಲ್ಲಿ ಕೆಲಸಮಾಡತಕ್ಕ ಉದ್ಯೋಗಸ್ಥರು ಇಲ್ಲದೆ ಹೋಗಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಆ ಬ್ಲಾಕುಗಳಲ್ಲಿ ಬ್ಲಾಕ್‌ಡೆವಲಪ್‌ಮೆಂಟ್ ಆಫೀಸರ್‌ಗಳು ಅವರ ಕೆಲಸಗಳನ್ನು ಹೆಚ್ಚಿಗೆ ನೋಡುತ್ತಾರೆಯೇ ವಿನಃ ಹರಿಜನಗಿರಿಜನರ ಕಲ್ಯಾಣಕ್ಕಾಗಿ ಕೆಲಸಮಾಡತಕ್ಕ ಅಧಿಕಾರಿಗಳಿಲ್ಲ. ಈಗಾಗಲೇ ಕೆಲವು ಹೆಚ್ಚಿನ ಅಗತ್ಯವಾದ ಕೆಲಸಗಳನ್ನು ಕೂಡಗಿರಿಜನರ ಅಭಿವೃದ್ಧಿಗಾಗಿ ಮಾಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಮತ್ತು ಹೆಗ್ಗಡದೇವನಕೋಟೆ ಇನ್ಸ್‌ಪೆಕ್ಟರ್‌ಗಳು ಆ ಬ್ಲಾಕುಗಳಿಗೆ ಅಟ್ಯಾಚ್ ಆಗಿರುವುದರಿಂದ ಕೆಲಸಮಾಡುವುದಕ್ಕೆ ಜನರು ಇಲ್ಲದೆ ತೊಂದರೆಯಾಗಿರುತ್ತದೆ. ಹರಿಜನ ಗಿರಿಜನ ಉದ್ಯೋಗಸ್ತರು ಅವರ ಸಂಬಳವನ್ನು ಅವರಿಗೆ ಕೊಡುವುದಕ್ಕೆ ಜನ ಇಲ್ಲದಷ್ಟು ತೊಂದರೆಯಾಗಿದೆ. ಇದಕ್ಕೆ ಸರ್ಕಾರ ಸರಿಯಾದ ಸ್ಥಿತಿಯಲ್ಲಿ ಕೂಡಲೇ ಎಲ್ಲವನ್ನೂ ಮಾಡುವಂತೆ ಸೂಕ್ತ ಏರ್ಪಾಡುಗಳನ್ನು ಕೊಟ್ಟು ಈ ಸಮಾಜ ಕಲ್ಯಾಣ ಇಲಾಖೆಯವರು ಎಲ್ಲಾ ಬ್ಲಾಕುಗಳಲ್ಲಿ ಕೆಲಸಮಾಡುವಂತ ಸಂದರ್ಭದಲ್ಲಿ ಸರ್ಕಾರ ಯಾವ ಒಂದು ಸಮಾಜ ಕಲ್ಯಾಣ ಇಲಾಖೆಗೆ ಕೊಡತಕ್ಕ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚಾಗಲಕ್ಕೆ ವರ್ಷದ ಅಂತ್ಯದಲ್ಲಿ ಡ್ರಾಮಾಡಿ ತಮ್ಮಲ್ಲಿ ಇಟ್ಟುಕೊಂಡು ಸರಿಯಾದ ಕಾರ್ಯಕ್ರಮವನ್ನು ನಡೆಸುತ್ತಾ ಇರಲಲ್ಲ ಇದುವರೆಗೂ ಅದೇ ರೀತಿ ಅಭ್ಯಾಸವಾಗಿದೆ. ಮಾರ್ಚಿಯಲ್ಲಿ ಕೆಲಸ ಮುಗಿಸದೆ ಮುಂದಿನ ವರ್ಷಕ್ಕೆ ಕೆಲಸ ಇಡುತ್ತಾರೆ, ಸಕಾಲದಲ್ಲಿ ಕೆಲಸವಾಗುವುದಿಲ್ಲ. ತಾಲ್ಲೂಕು ಬೋರ್ಡುಗಳಲ್ಲಿ ಅನೇಕ ವರ್ಷದ ಹಣ ಬಜೆಟ್ಟಿನಲ್ಲಿ ಇರುವುದು ಕಂಡುಬರುತ್ತದೆ ಈ ಎಲ್ಲಾ ಕಾರಣಗಳಿಂದ ಎಲ್ಲಾ ಕೆಲಸಗಳನ್ನು ಸಮಾಜಕಲ್ಯಾಣ ಇಲಾಖೆ ಇದನ್ನೆಲ್ಲಾ ನೇರವಾಗಿ ನಡೆಸಿದರೆ ಅನುಕೂಲವಾಗುತ್ತದೆ. ಸಮಾಜಕಲ್ಯಾಣ ಇಲಾಖೆಯವರು ಕಳುಹಿಸತಕ್ಕ

(ಶ್ರೀ ಜಿ. ಕೆ. ಸುಬ್ಬಯ್ಯ)

ಡಿಸಿ ಬಿಲ್‌ಗಳ ವಿತರಣೆ ಬಹಳ ನಿಧಾನವಾಗಿದೆ. ಪ್ರತ್ಯೇಕವಾಗಿ ಸಮಾಜಕಲ್ಯಾಣ ಇಲಾಖೆ ಹಾಸ್ಟೆಲ್‌ಗಳಲ್ಲಿ ಇರತಕ್ಕ ಬಡ ವಿದ್ಯಾರ್ಥಿಗಳಿಗೆ ಟೈಮ್‌ಗೆ ಸರಿಯಾಗಿ ಊಟ ಹಾಕುವುದಕ್ಕೆ ಹಣ ಮಂಜೂರು ಆಗುತ್ತಾ ಇಲ್ಲ. ಸಮಾಜಕಲ್ಯಾಣ ಜಿಲ್ಲಾಧಿಕಾರಿಗಳ ಅಧೀನದಲ್ಲಿ ಇರುವುದರಿಂದ ಸರಿಯಾಗಿ ಸಮಯಕ್ಕೆ ಕೆಲಸಕಾರ್ಯಗಳು ಆಗುತ್ತಿಲ್ಲ. ಇಡೀ ನಮ್ಮ ಮೈಸೂರು ರಾಜ್ಯದಲ್ಲಿ 2 ಲಕ್ಷದ 40 ಸಾವಿರ ಗಿರಿಜನರು ಇದ್ದಾರೆ. ಇದಕ್ಕಾಗಿ ಪ್ರತ್ಯೇಕ ಶಾಖೆ ಮಾಡಿ ಅದರ ಆದೀನದಲ್ಲಿ ಹಣ ಮಂಜೂರು ಮಾಡಿ ಗಿರಿಜನರ ಸಮಸ್ಯೆಯನ್ನು ಬಿಡಿಸಲು ಒಂದು ಯೋಜನೆ ಹಾಕಿ ಗಿರಿಜನರ ಸಮಸ್ಯೆ ಪರಿಹಾರ ಮಾಡಬೇಕೆಂದು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ಎಸ್. ಅಮ್ಮಣ್ಣವರ್ (ಸಾದಲಗ).—ಮಾನ್ಯ ಅಧ್ಯಕ್ಷರೇ, 1973-74ರ ಆಯವ್ಯಯ ಪಟ್ಟಿಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಅದರ ಜೊತೆಗೆ ನಾನು ಕೆಲವೊಂದು ಸಲಹೆಗಳನ್ನೂ ಕೂಡ ಮಾಡಬಯಸುತ್ತೇನೆ. ಈಗಾಗಲೇ ನಮ್ಮ ವಿರೋಧಿ ಪಕ್ಷದ ಸದಸ್ಯರು ಭಾರಿ ಭಾರಿ ಟೀಕೆಗಳನ್ನು ಮಾಡಿದ್ದಾರೆ. ಇದರಲ್ಲಿ ಗರೀಬಿ ಹಟಾವೋ ಘೋಷಣೆ ಮಾಡಿದ್ದೇವೆ ಎಂದು ಹೇಳಿದರು. ಮತ್ತು ಆರೀತಿ ಗರೀಬಿ ಹಟಾವೋ ಘೋಷಣೆ ಮಾಡಿದರೂ ಕೂಡ ಗರೀಬಿ ಹಟಾವೋ ವಿಚಾರದಲ್ಲಿ ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು. ಈ ಬಗ್ಗೆ ನಾನು ಹೇಳುವುದಾದರೆ ಗರೀಬಿ ಹಟಾವೋ ಅನ್ನುವುದು ಒಂದು ಧ್ಯೇಯ. ಆ ಧ್ಯೇಯದಂತೆ ಹೋಗ ಬೇಕಾದರೆ ಎಷ್ಟೋ ಕೆಲಸಗಳನ್ನು ಮಾಡಬೇಕು. ಈಗ ಜೈ ಜವಾನ್ ಎಂದರೆ ಎಲ್ಲ ಯುದ್ಧದಲ್ಲೂ ಗೆಲ್ಲುವುದಕ್ಕಾಗುವುದಿಲ್ಲ. ಹಾಗೆಯೇ ಜೈ ಕಿಸಾನ್ ಎಂದರೆ ಎಲ್ಲ ರೈತರ ಪುರೋಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವೇ? ಈ ದೃಷ್ಟಿಯಿಂದ ಹೇಳುವಂಥ ಘೋಷಣೆ ಇದು. ಆ ಘೋಷಣೆ ಜನರಿಗೆ ಹಿಡಿಸಿರುವುದರಿಂದ ಅವರು ನಮಗೆ ಓಟು ಹಾಕಿ ಇಲ್ಲಿಗೆ ಆರಿಸಿ ಕಳುಹಿಸಿದ್ದಾರೆ. ನಾನು ಈ ಹಿಂದೆ ಮುಖ್ಯಮಂತ್ರಿಗಳೊಬ್ಬರನ್ನು ಭೇಟಿ ಮಾಡುವುದಕ್ಕೆ ಹೋಗಿದ್ದೆ. ಅವರು ಜಾಗೀರ್‌ದಾರರ ಹಾಗೆ, ರಾಜರ ಹಾಗೆ ಮಾತನಾಡುತ್ತಿದ್ದರು. ಏನಾದರೂ ಹೇಳಿದರೆ ನೋಡುವ, ಮಾಡುವ ಎಂದು ಹೇಳುತ್ತಿದ್ದರು. ಆರೀತಿ ನೋಡುವ, ಮಾಡುವ ಎಂದರೆ ಈ ಕೆಲಸ ಆಗತಕ್ಕಂಥಾದ್ದಲ್ಲ. ನಮ್ಮಲ್ಲಿ ಕಲ್ಪವೃಕ್ಷ ಕಾಮಧೇನೂ ಇಲ್ಲ. ಆದರೆ ಆ ಘೋಷಣೆಯನ್ನು ಪೂರ್ತಿಗಾಗಿ ಮುಂದುವರೆಯೋಣ. ನಾವು ಹೆಮ್ಮೆಯಿಂದ ಹೇಳಬೇಕಾದರೆ ಈ ಸಲ ಮನೆ ಕಟ್ಟುವ ಸಲುವಾಗಿ 5 ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಿರುವುದನ್ನು ಸ್ವಾಗತ ಮಾಡಬೇಕು. ನಮ್ಮಲ್ಲಿ ಎಲ್ಲರೂ ಅದು ಆಗಬೇಕು, ಇದು ಆಗಬೇಕು ಎಂದು ಕೇಳಿದ್ದಾರೆಯೇ ವಿನಾ ಯಾರೂ ಕೂಡ ದೇಶದ ಉತ್ಪನ್ನ ಹೆಚ್ಚು ಮಾಡಲು ಸಲಹೆಗಳನ್ನು ಕೊಡಲಿಲ್ಲ. ಶ್ರೀ ವಾಟಾಳ್ ನಾಗರಾಜ್ ಅವರು ಮಾಯದ ಆಟ ಬಂದು ಏನು ಹೇಳಿದರೋ ಆರೀತಿ ಮಾಯದ ಆಟ ಆಡಿದರೆ ದುಡ್ಡು ಬರುವುದಿಲ್ಲ. ಮಾಯದ ಆಟದಿಂದ ಕಣ್ಣು ಕಟ್ಟಬಹುದೇ ವಿನಾ ದುಡ್ಡು ಬರುವುದಿಲ್ಲ. ಅವರು ದುಡ್ಡು ಬರುವ ಮಹತ್ವದ ಯೋಜನೆಗಳನ್ನು ಹೇಳಬೇಕಾಗಿತ್ತು, ಅದನ್ನು ಹೇಳಲಿಲ್ಲ. ಈ ಬಗ್ಗೆ ನಾನು ಈ ಸಭೆಯಲ್ಲಿ ಒಂದು ಸಲಹೆಯನ್ನು ಇಡುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಹೆಚ್ಚಿಗೆ ಒಕ್ಕಲುತನ ಇರುವುದರಿಂದ ಅವರಿಗೆ ಬಹಳಮಟ್ಟಿಗೆ ಪ್ರೋಷಣೆ ಕೊಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಸಹಕಾರೀ ಪದ್ಧತಿಯಿಂದ ಮಾಡುವಂಥ ಸಕ್ಕರೆ ಕಾರ್ಖಾನೆಗಳಿಗೆ ಸರಕಾರ ಬೇಕಾದಂಥ ಸಹಾಯ ಕೊಡುತ್ತಿದ್ದಾರೆ. ಅವರು 20 ಲಕ್ಷ ರೂಪಾಯಿ ಕೂಡಿಸಿಕೊಟ್ಟಲ್ಲಿ 2 ಕೋಟಿ ರೂಪಾಯಿಗಳವರೆಗೂ ಬೇರೆಬೇರೆ ರೀತಿಯಿಂದ ಸಹಾಯ ಮಾಡುತ್ತಿದ್ದಾರೆ. ಈ ಗರೀಬಿ ಹಟಾವೋ ಘೋಷಣೆ ಧ್ಯೇಯ ಹೀಗಿರುವಾಗ ಈ ನವಯುಗದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳು ನಿರ್ಮಾಣಮಾಡುತ್ತಿದ್ದಾರೆ ಎಂದು ನನಗೆ ಅನಿಸುತ್ತದೆ. ಈಸಹಕಾರಿ ಸಕ್ಕರೆ ಕಾರ್ಖಾನೆಗಳಡೈರಕ್ಟರ್‌ಮಂಡಳಿಯವರ ವರ್ತನೆ ನೋಡಿದರೆ ಜಾಗೀರ್‌ಧಾರರ ರಾಜಮಹರಾಜರ ವರ್ತನೆಯಂತೆ ಇದೆ. ಹಿಂದಿನ ನಮ್ಮ ಚಿಕ್ಕೋಡಿಯಲ್ಲಿ ಒಂದು ಸಕ್ಕರೆ ಕಾರ್ಖಾನೆ ಸ್ಥಾಪನ ಮಾಡಬೇಕೆಂದು ಸುಮಾರು 700 ರಿಂದ 1200 ಜನರವರೆಗೆ 1969 ಕ್ಕೂ ಮುಂಚಿತವಾಗಿ ಹಣ ಕೊಟ್ಟಿದ್ದರೂ ಈವರೆಗೆ ಅವರನ್ನು ಮೆಂಬರ್ಸ್ ಅಂತಾ ಅಡ್ಮಿಟ್ ಮಾಡಲಿಲ್ಲ. ಅದು3ವರ್ಷದಿಂದಲೂ ಪೆಂಡಿಂಗ್ ಇದೆ. ಈ ಸಕ್ಕರೆ ಕಾರ್ಖಾನೆಯಲ್ಲಿ ನೌಕರಿ ಸಿಗುವಂಥಾದ್ದು ಯಾರಿಗೆ ಎಂದರೆ ಯಾರು ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡುತ್ತಾರೋ, ಯಾರು ಪಟ್ಟಭದ್ರ ಹಿತಾಸಕ್ತಿಗಳು ಇರುತ್ತಾರೋ 99 ಪರ್ಸೆಂಟ್ ಭಾಗ ಅವರ ನೆಂಟರಿಗೆ ಬೇಕಾದವರಿಗೆ ಸಿಗುತ್ತದೆ. ಈ ಕಾರ್ಖಾನೆಗೆ ಸರ್ಕಾರ 2 ಕೋಟಿ ರೂಪಾಯಿನವರೆಗೆ ಇನ್‌ವೆಸ್ಟ್ ಮಾಡುವಾಗ ಮತ್ತು ಗ್ಯಾರಂಟಿ ಕೊಡುವಾಗ ಅಲ್ಲಿಗೆ ಬೇಕಾದ ಸಿಬ್ಬಂದಿ ವರ್ಗದಲ್ಲಿ ಬೇರೆಯವರಿಗೂ ಕೆಲಸ ಕೊಡುವಂತೆ ಕಡ್ಡಾಯ ಮಾಡಬೇಕು.

ಆದುದರಿಂದ ಇಂಥ ಅನೇಕ ಕಾರಣಗಳಿಗಾಗಿ ಸಕ್ಕರೆ ಕಾರ್ಖಾನೆಗಳನ್ನು ರಾಷ್ಟ್ರೀಕರಣವಾಗುವಂತೆ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲ ಬಹಳ ಹಣಗಳಿಸುವ ಸಿನಿಮಾ ಥಿಯೇಟರುಗಳನ್ನೂ ಕೂಡ ರಾಷ್ಟ್ರೀಕರಣ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈಗ ಸರ್ಕಾರ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಮಿನಿ ಥಿಯೇಟರುಗಳನ್ನು ಮಾಡಬೇಕು ಎಂದು ಯೋಜನೆ ಹಾಕಿಕೊಂಡಿದ್ದಾರೆ. ಈ ಸಕ್ಕರೆ ಕಾರ್ಖಾನೆಗಳನ್ನೂ ಮತ್ತು ಸಿನಿಮಾ ಥಿಯೇಟರುಗಳನ್ನೂ ಕೂಡ ರಾಷ್ಟ್ರೀಕರಣ ಮಾಡಿದರೆ ನಮ್ಮ ಸರ್ಕಾರಕ್ಕೆ ಹೆಚ್ಚಿನ ಉತ್ಪತ್ತಿ ಬರುವುದರಲ್ಲಿ ಸಂದೇಹವಿಲ್ಲ ಮತ್ತು ಕಾರ್ಖಾನೆಗಳಲ್ಲಿ ನೈತಿಕವಾಗಿ ಕೆಲವು ವಿಷಯಗಳನ್ನೂ ಸಹ ನೋಡಬೇಕಾಗಿದೆ. ರೈತರು ಬೆಲ್ಲದ ಬೆಲೆ ಜಾಸ್ತಿಯಾದಾಗ ಕಬ್ಬನ್ನು ಫ್ಯಾಕ್ಟರಿಗೆ ತಂದು ಕೊಡಿ ಎಂದು ಸರಕಾರದವರು ಹೇಳುತ್ತಾರೆ, ಆದರೆ ಬೆಲ್ಲದ ಬೆಲೆ ಸೋರಿ ಹೋದಾಗ ಕಬ್ಬು ತೆಗೆದುಕೊಳ್ಳಿ ಎಂದು ಸಕ್ಕರೆ ಕಾರ್ಖಾನೆಯವರನ್ನು ಕೇಳಿದಾಗ ಅವರು ಬೇಡ ಎಂದು ಹೇಳುತ್ತಾರೆ. ಆಗ ಸರಕಾರ ಕಾರ್ಖಾನೆಯವರಿಗೆ ಕಬ್ಬು ತಕ್ಕೊಳ್ಳಿಕ್ಕೆ ಹೇಳುವುದಿಲ್ಲ. ಆಗ ಕಬ್ಬಿಗೆ ಸಿಗುವಷ್ಟು ದುಡ್ಡು ಬೆಲ್ಲಕ್ಕೆ ಸಿಕ್ಕುವುದಿಲ್ಲ. ಇದು ರೈತರ ಎಕಾನಮಿ ಮೇಲೆ ಪರಿಣಾಮವಾಗುತ್ತದೆ. ಸಕ್ಕರೆ ಕಾರ್ಖಾನೆಗಳು ಸರ್ಕಾರಿ ರಂಗದಲ್ಲೇ ಇರಲಿ, ಸಹಕಾರೀ ರಂಗದಲ್ಲೇ ಇರಲಿ ಅವುಗಳನ್ನು ರಾಷ್ಟ್ರೀಕರಣ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಅಗ್ರಿಕಲ್ಚರ್ ಪ್ರೊಡಕ್ಷನ್ ವಿಚಾರವಾಗಿ ಮಾತನಾಡುತ್ತೇನೆ. ನಮಗೆ ಬೇಕಾದಂಥ ಕೆರೆ ಆಗಲಿ, ಕಾಲುವೆ ಆಗಲಿ ಮಾಡುವುದಕ್ಕೆ ತಾಲೂಕವಾರ ಅದಕ್ಕೆ ಒಂದು ಸಮಗ್ರವಾದ ಬ್ಲೂ ಪ್ರಿಂಟನು ತಯಾರಿಸಿ ಉಪಯುಕ್ತತೆಯ ಆಧಾರದ ಮೇಲೆ ಅದಕ್ಕೆ ಹಣ ಕೊಡಬೇಕು. ಹಾಗೆ ಬ್ಲೂ ಪ್ರಿಂಟ್ ತಯಾರು ಮಾಡಿ ಕೆಲಸ ಶುರು ಮಾಡಿದರೆ ಅದನ್ನು ಒಂದು ಸೀಮಿತವಾದ ಟೈಂನಲ್ಲಿ ಮುಗಿಸಬೇಕು ಅಂತ ಮಾಡಬೇಕು. ಮೊನ್ನೆ ಶ್ರೀಮಾನ್ ಚನ್ನಬಸಪ್ಪನವರು ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದರು. 1968 ರಲ್ಲಿ ಚಾಲು ಮಾಡಬೇಕಾಗಿದ್ದ ಸ್ಕೀಂ ಇನ್ನೂ ಮಾಡಿಲ್ಲಾ ಇದಕ್ಕೆ ಅನೇಕ ಕಾರಣಗಳಿವೆ ಎಂದು ಹೇಳಿದರು. 5 ವರ್ಷದವರೆಗೂ ಇದು ಪೆಂಡಿಂಗ್ ಇದ್ದು ಈ ಕಾರ್ಯಕ್ರಮ ಆಗದೇ ಹೋದರೆ ಇದು ಯಾರಿಗೆ ಹಾನಿಯಾಗುತ್ತದೆ ಎಂದರೆ ಇದು ರೈತನಿಗೆ ಮಾತ್ರವಲ್ಲದೆ ರಾಷ್ಟ್ರದ ಸಂಪತ್ತಿಗೂ ಹಾನಿಯಾಗುತ್ತದೆ.

ಅದೇ ರೀತಿಯಾಗಿ ಇನ್ನು ರೂರಲ್ ವಾಟರ್ ಸಪ್ಲೈ ವಿಚಾರದಲ್ಲಿ ಹೇಳುವುದಾದರೆ ನಮ್ಮ ಕಡೆ ಸಾಡಲಗಾ ಎಂಬ ಯೋಜನೆ ಕೆಲಸ ಇನ್ನೂ ಮುಗಿದಿಲ್ಲ. ನಮಗೆ ನೀರು ಯಾವಾಗ ಸಿಕ್ಕುತ್ತದೋ ಗೊತ್ತಿಲ್ಲ. ಅದೇರೀತಿ ಇತರ ಯೋಜನೆಗಳೂ ಇವೆ, ಆ ಕೆಲಸಗಳೂ ಕೂಡ ಇನ್ನೂ ಮುಗಿಸಿಲ್ಲ. ಈ ತರಹ ಯೋಜನೆಗಳನ್ನು ಒಂದು ಸೀಮಿತವಾದ ಕಾಲದಲ್ಲಿ ಆಗುವಂತೆ ನೋಡಿಕೊಳ್ಳಬೇಕು. 5 ವರ್ಷದಿಂದಲೂ ಈ ನೀರಿನ ಯೋಜನೆ ಆಗಿಲ್ಲ. ಆದ್ದರಿಂದ ನಾನು ಹೇಳುವುದು ಏನೆಂದರೆ ಇದಕ್ಕೆ ಯಾರೇ ತಪ್ಪಿತಸ್ಥರೇ ಇರಲಿ ಅವರ ಮೇಲೆ ಯೋಗ್ಯ ಕ್ರಮ ತೆಗೆದುಕೊಂಡು ಆ ಕೆಲಸಗಳನ್ನು ಪೂರ್ಣ ಮಾಡುವ ಹಾಗೆ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

6-00 P. M.

ಇನ್ನು ಮೋಟಾರ್ ವೆಹಿಕಲ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ನಮ್ಮ ಚಿಕ್ಕೋಡಿಯಲ್ಲಿ 30 ಅಂಬಾಸಿಡರ್ ಪ್ರೈವೇಟ್ ಟ್ಯಾಕ್ಸಿಗಳನ್ನು ಪರ್ಮಿಟ್ ಇಲ್ಲದೆ ಓಡಿಸುತ್ತಿದ್ದಾರೆ. ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ ಲೈಸೆನ್ಸ್ ತೆಗೆದುಕೊಳ್ಳದೆ ಪೋಲೀಸರ ಹೊಂದಾಣಿಕೆಯಿಂದ ಓಡಿಸುತ್ತಿದ್ದಾರೆ. 30 ಟ್ಯಾಕ್ಸಿಗಳು ಇದ್ದರೂ ಅವರಿಗೆ ಒಂದು ರೇಟು ಏನೂ ಇಲ್ಲ, ಏನು ಬೇಕಾದರೂ ತೆಗೆದುಕೊಳ್ಳಬಹುದು. ಆರು ಮೈಲಿಗೆ 20 ರೂಪಾಯಿ ಬಾಡಿಗೆ ತೆಗೆದುಕೊಳ್ಳುತ್ತಾರೆ, ಚಿಕ್ಕೋಡಿಯಲ್ಲಿ ಪೋಲೀಸ್ ಸ್ಟೇಷನ್ ಇದೆ, ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಆಫೀಸಿದೆ. ಎಲ್ಲಾ ಇದ್ದರೂ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಬಸ್ ಸ್ಟ್ಯಾಂಡಿಗೆ ಬಂದರೆ ಎರಡೂ ಕಡೆ ಸಾಲಾಗಿ ನಿಂತ ಟ್ಯಾಕ್ಸಿಗಳನ್ನು ನೋಡಬಹುದು. ಇವುಗಳ ಮೇಲೆ ಕ್ರಮ ತೆಗೆದುಕೊಂಡರೆ ಹೆಚ್ಚಿನ ಉತ್ಪನ್ನವಾದರೂ ಬರುತ್ತದೆ.

(ಶ್ರೀ ಜೆ. ಎಸ್. ಅಮ್ಮಣ್ಣವರ್)

ಇದೇ ಸದನದಲ್ಲಿ ಸಹಕಾರ ಸಂಘಗಳ ಲೋಪದೋಷಗಳನ್ನು ಕಂಡುಹಿಡಿದು ಅವುಗಳ ಸುಧಾರಣೆಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಬಗ್ಗೆ ಸರ್ಕಾರದವರು ಈ ಸದನದಲ್ಲಿ ಆಶ್ವಾಸನೆ ಇತ್ತಿದ್ದಾರೆ. ಅದರ ಸಲುವಾಗಿ ಒಂದು ಕಮಿಟಿ ನೇಮಿಸುತ್ತೇವೆ, ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆ ಎಂದು. ಈ ಬಗ್ಗೆ ಕೂಡಲೇ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳುತ್ತೇನೆ.

Mr. DEPUTY SPEAKER.—The House now stands adjourned to meet at 1 P. M. to-morrow.

The House adjourned at Two Minutes pat Six of the Clock to meet again at One of the Clock on Tuesday the 20th March 1973.

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 20th March 1973/ Phalguna 29, 1894 S. E.

The House met in the Assembly Chambers, Vidhana Soudha, at One of the Clock.

Madam. SPEAKER (Smt. K. S. NAGARATHNAMMA) in the Chair.

STARRED QUESTIONS

(to which oral Answers were given)

The Bangalore City Industrial Testing Laboratory

148. **Sri K. SRIRAMULU** (Gandhinagar).—

Will the Minister for Health be pleased to state :—

(*a*) when the Government owned Bangalore City Industrial Testing Laboratory was sold to a private firm ;

(*b*) the reasons for its sale, the sale value and the value of the medicines which the Government has purchased from this firm each year after its sale ?

Sri H. SIDDAVEERAPPA (Minister for Health).—

(*a*) The Bangalore City Industrial Testing Laboratory was a public limited company and was under the management of the Government. It is learnt that the said firm was converted into a private limited company with the shares of Government, L. I. C. and Indian Detonators firm of Hyderabad in 1970.

(*b*) It is learnt that the Bangalore Industrial Testing Laboratory was sold as it was lagging behind in its progress and as the above said firm came forward to develop the Laboratory by purchasing shares at higher rates. The share worth of Rs. 5 has been sold to the said firm at about Rs. 6-50. It is understood that during that period the market value of five rupees share was Rs. 3-50. The value of the medicines purchased by the department from that firm is as follows :—

During 1971-72	...	Rs. 20,82,294-80
During 1972-73	...	Rs. 11,98,882-38

(from 1st April 1972 to 20th February 1973)

ಶ್ರೀ ಕೆ. ಶ್ರೀರಾಮುಲು.—ತಮ್ಮ ಉತ್ತರದಲ್ಲಿ ನನಗೆ ನೇರವಾದ ಉತ್ತರ ಹೇಳಲಿಲ್ಲ. ನಾನು ಮಾರಾಟವಾದ ಮೊತ್ತವನ್ನು ಕೇಳಿದ್ದೇನೆ. ತಾವು ಷೇರ್ ಬೆಲೆ ಮೂರುವರೆ ರೂಪಾಯಿ ಇದ್ದದ್ದು ರೂ. 6-50ಕ್ಕೆ ಮಾರಾಟವಾಯಿತು ಎಂದು ಹೇಳಿದ್ದೀರಿ. ನನಗೆ ತಿಳಿದ ಮಟ್ಟಿಗೆ ಇದು 13ಲಕ್ಷ ರೂಪಾಯಿಗೆ ಮಾರಾಟ ಮಾಡಿದ್ದಾರೆ. ಮತ್ತು ವರ್ಷ ಒಂದಕ್ಕೆ ಅಲ್ಲಿಂದ 50ಲಕ್ಷ ರೂಪಾಯಿಯ ಔಷಧವನ್ನು ಕೊಂಡುಕೊಂಡದ್ದು ನಿಜವೇ ?

† ಶ್ರೀ ಎಚ್. ಸಿದ್ದವೀರಪ್ಪ.—ನನ್ನ ಹತ್ತಿರ ಇರುವ ಅಂಕಿ ಅಂಶಗಳ ಪ್ರಕಾರ ಅವರು ಕೊಟ್ಟಿರುವುದು ಹೀಗೆ ಇದೆ :—

Fully paid up shares Rs. 1,12,000

Partly paid up shares Rs. 1,15,360

Government have retained Rs. 1,09,000 partly paid up shares.

The file is coming from the Industries Department. They have given only the amount that has been paid according to the value of those shares.

ಶ್ರೀ ಕೆ. ಶ್ರೀರಾಮುಲು.—ಈ ಕೈಗಾರಿಕೆಯನ್ನು ಸರ್ಕಾರದ ಕೈಯಲ್ಲಿ ಅಭಿವೃದ್ಧಿಪಡಿಸುವುದಕ್ಕಾಗಲಿಲ್ಲ ; ಆದ್ದರಿಂದ ಮಾರಾಟ ಮಾಡಬೇಕಾಗಿ ಬಂತು ಎಂದು ಹೇಳುತ್ತಿದ್ದಾರೆ. ಇದನ್ನು ಮಾರಾಟ ಮಾಡಬೇಕಾದರೆ ಕ್ಯಾಬಿನೆಟ್ ಲೆವೆಲ್ ತೀರ್ಮಾನವಾಯಿತೇ ಅಥವಾ ಬೋರ್ಡ್ ಲೆವಲ್ ತೀರ್ಮಾನವಾಯಿತೇ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ನೋಡಿದ ಹಾಗೆ 1969ನೇ ಇಸವಿಯಲ್ಲಿ ಇದರ ಮಾರಾಟವಾಗಿರುವುದು. ಅದರ ವಿವರ ನನ್ನಲ್ಲಿ ಇಲ್ಲ. ಅದನ್ನು ಕ್ಯಾಬಿನೆಟ್ ತೀರ್ಮಾನದ ಪ್ರಕಾರ ಮಾಡಿದರೇ ಅಥವಾ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಮಾಡಿದರೋ ಎಂದು ಗೊತ್ತಿಲ್ಲ ಒಟ್ಟಿಗೆ ಮಾರಾಟವಾಗಿದೆ.

ಶ್ರೀ ಕೆ. ಶ್ರೀರಾಮುಲು.—ಅವರ ಹತ್ತಿರ ಮಾಹಿತಿ ಪೂರ್ತಿ ಇಲ್ಲದಿರುವುದರಿಂದ ಇನ್ನೊಂದು ಸಲ ಇದನ್ನು ತೆಗೆದುಕೊಳ್ಳಬಹುದು. ಈಗ ಇದನ್ನು ತಡೆಹಿಡಿಯಬೇಕೆಂದು ಅಧ್ಯಕ್ಷರಲ್ಲಿ ವಿನಂತಿ.

ಶ್ರೀ ಎಚ್. ಸಿದ್ದವೀರಪ್ಪ.—ವಿವರಗಳಿಗೆ ತಡೆಹಿಡಿಯಬೇಕೆಂದಿದ್ದರೆ ನನ್ನ ಅಭ್ಯಂತರವಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಬೆಂಗಳೂರು ನಗರದ ಇಂಡಸ್ಟ್ರಿಯಲ್ ಲ್ಯಾಬೋರೇಟರಿಯನ್ನು ರಾಜ್ಯಸರ್ಕಾರದವರು ಮಾರಿರುವುದರಿಂದ ಸರ್ಕಾರಕ್ಕೆ ವಿಶೇಷವಾಗಿ ನಷ್ಟವಾಗುತ್ತಿದೆ. ಇದನ್ನು ಸರಿಪಡಿಸುವುದಕ್ಕೆ ಬೇರೆ ಮಾರ್ಗಗಳನ್ನು ಹುಡುಕುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಕಂಪೆನಿಗೂ ನಮಗೂ ಏನೂ ಸಂಬಂಧವಿಲ್ಲ. ಅವನ್ನು ಕೊಟ್ಟಾಗ ಮರ್ಜ್ ಆಗುವವರೆಗೂ ಅವರ ಹತ್ತಿರ ಏನು ಔಷಧ ಇದೆ, ಅವೆಲ್ಲವನ್ನೂ ಸರ್ಕಾರದವರು ತೆಗೆದುಕೊಳ್ಳಬೇಕೆಂದು ಹೇಳಿದ್ದರು. ಅಂದರೆ ಕಾಸ್ಟ್ ಪ್ರೈಸ್ ಮತ್ತು 10 ಪರ್‌ಸೆಂಟ್ ಲಾಭ ಇಟ್ಟುಕೊಡುವ ಬಗ್ಗೆ ಅಗ್ರಿಮೆಂಟ್ ಆಯಿತು. ಆ ಅಗ್ರಿಮೆಂಟ್ ಆದಮೇಲೆ ನಮಗೆ ನಮ್ಮ ಕಾಲ ಮೇಲೆ ನಿಲ್ಲುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಸಹಾಯ ಮಾಡಬೇಕೆಂದು ಹೇಳಿದರು. ಮೊನ್ನೆಯದಿವಸ ಅಗ್ರಿಮೆಂಟ್ ಆದಮೇಲೆ ನೀವು ಸಹ ಓಪನ್ ಮಾರ್ಕೆಟಿನಲ್ಲಿ ಬರಬೇಕು ; ಅದನ್ನು ಬಿಟ್ಟು ಪ್ರಿಪರೆನ್‌ಷಿಯಲ್ ಟ್ರೀಟ್‌ಮೆಂಟ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇವೆ. ಅದರ ಮೇಲೆ ಮುಖ್ಯಮಂತ್ರಿಯವರ ಛೇಂಬರನಲ್ಲಿ, ನಾನು, ಲೇಬರ್ ಮಂತ್ರಿಯವರು ಮತ್ತು ಕೈಗಾರಿಕಾ ಮಂತ್ರಿಯವರನ್ನೊಳಗೊಂಡಂತೆ ಒಂದು ಮೀಟಿಂಗ್ ಆಗಿ, ಅವರು ಓಪನ್ ಮಾರ್ಕೆಟನಲ್ಲಿ ಬರಬೇಕೇ ಹೊರತು ಅಗ್ರಿಮೆಂಟ್ ಮಾಡಬೇಕಾಗಿಲ್ಲವೆಂದು ತೀರ್ಮಾನ ಮಾಡಿದ್ದೇವೆ. ಹಾಗಿದ್ದರೆ ಯಾವ್ಯಾವ ಷರತ್ತಿನ ಮೇಲೆ ಬರಬೇಕು ಎನ್ನತಕ್ಕಂತಹ ವಿಷಯವನ್ನು ಆರೋಗ್ಯ ಇಲಾಖೆಯ ಕಮಿಶನರ್ ಮತ್ತು ಕೈಗಾರಿಕಾ ಇಲಾಖೆಯ ಕಮಿಶನರ್ ಎಗ್ಸಾಮಿನ್ ಮಾಡಬೇಕೆಂದು ಹೇಳಿದ್ದೇವೆ. ಅಲ್ಲಿಗೆ ಅದು ನಿಂತಿದೆ.

ಶ್ರೀ ಕೆ. ಶ್ರೀರಾಮುಲು.—ತಾವು ಈಗ ರೂ. 13 ಲಕ್ಷಕ್ಕೆ ಮಾರಾಟವಾಗಿರುವುದನ್ನು ಪುನಃ ಪರಿಶೀಲಿಸಿ, ಆ ದುಡ್ಡನ್ನು ವಾಪಸ್ಸು ಕೊಟ್ಟು ನಮಗೆ ಬೇಕಾದಂತಹ ಔಷಧವನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

---

† Indicates that the remarks or speeches have not been revised by the member concerned.

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಕೈಗಾರಿಕಾ ಮಂತ್ರಿಯಾಗಿದ್ದಾಗ ಅದು ಚೆನ್ನಾಗಿ ಲಾಭದಾಯಕವಾಗಿ ನಡೆಯುತ್ತಿತ್ತು. ಆ ಮೇಲೆ ಏನು ಅದಕ್ಕೆ ರೋಗ ಬಂತೋ ನನಗೆ ಗೊತ್ತಾಗಿಲ್ಲ ; ಅದರ ವಿವರ ನನ್ನ ಹತ್ತಿರ ಇಲ್ಲ. ಈಗ ಮಾರಾಟ ಮಾಡಿದ್ದಾರೆ. ಮಾರಾಟ ಮಾಡಿದ್ದನ್ನು ಪುನಃ ತೆಗೆದುಕೊಳ್ಳುವ ಸಲಹೆಯನ್ನು ಕೊಟ್ಟಿದ್ದಾರೆ. ಅವರಿಂದ ಅಂಥ ಆಫರ್ ಬಂದರೆ ನೋಡಬಹುದೇ ಹೊರತು, ಈಗ ಅದು ಖಾಸಗೀ ಕಂಪೆನಿಯೇ ಸರ್ಕಾರ ಕೇವಲ ಕೆಲವು ಷೇರುಗಳನ್ನು ಇಟ್ಟುಕೊಂಡಿದೆ. ಕಂಟ್ರೋಲಿಂಗ್ ವ್ಯಾಸ್ ಸರ್ಕಾರಕ್ಕೆ ಇಲ್ಲ.

MADAM SPEAKER.—Sri B. Satyanarayana Singh may put Question No. 162.

Siruguppa-Hatcholli Road

162. **Sri B. SATYANARAYANA SINGH** (Hospet).[On behalf of SRI B. E. RAMAIAH (Siruguppa)] ,—

Will the Minister for Public Works and Electricity be pleased to state :—

(*a*) whether the Siruguppa-Hatcholli road which connects Andhra Border was included in the State Budget since two years back ;

(*b*) if so, the reasons for not starting the work ;

(*c*) when it would be taken up ;

(*d*) the estimated cost of the said road ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) For want of approval from the Government of India under the programme of "State Roads of Economics of Inter State Importance".

(*c*) After the receipt of approval from Government of India.

(*d*) Rs. 11.37 lakhs.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—(ಎ) ಉತ್ತರಕ್ಕೆ ಹೌದು ಎಂದು ಹೇಳಿದ್ದೀರಿ. ಒಂದು ರೋಡನ್ನು ತೆಗೆದುಕೊಳ್ಳಬೇಕೆಂದು ನಮ್ಮ ಆಯವ್ಯಯ ಪಟ್ಟಿಯಲ್ಲಿ ಸೇರಿಸಿದ್ದರೂ ಕಳೆದ ಎರಡು ವರ್ಷಗಳಿಂದಲೂ ಇದನ್ನು ತೆಗೆದುಕೊಂಡಿಲ್ಲ. ಆಮೇಲೆ (ಬಿ) ಗೆ ಉತ್ತರವಾಗಿ ಕೇಂದ್ರ ಸರ್ಕಾರದ ಒಪ್ಪಿಗೆ ಬಂದಿಲ್ಲವೆಂದು ಹೇಳಿದ್ದೀರಿ. ಇದು ಅಂತರ ರಾಜ್ಯ ಸಾರಿಗೆ ಸಂಪರ್ಕದ ರಸ್ತೆಯಾಗಿರುವುದರಿಂದ ಮತ್ತು ನಮ್ಮ ಆಯವ್ಯಯ ಪಟ್ಟಿಯಲ್ಲಿಯೂ ಬಂದಿರುವುದರಿಂದ ರಾಜ್ಯಸರ್ಕಾರದವರು ಇದಕ್ಕೆ ಖರ್ಚು ಮಾಡಿ ಪುನಃ ಕೇಂದ್ರ ಸರ್ಕಾರದಿಂದ ಹಣ ಬಂದರೆ ಅದನ್ನು ಭರ್ತಿಮಾಡಿಕೊಳ್ಳುತ್ತೀರಾ ?

† ಎಚ್. ಎಂ. ಚನ್ನಬಸಪ್ಪ.—ಕೇಂದ್ರ ಸರ್ಕಾರದವರು ಮಂಜೂರಾತಿ ಕೊಡುವವರೆಗೆ ಕಷ್ಟವಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ರಾಜ್ಯ ಸರ್ಕಾರಕ್ಕೆ ಇದನ್ನು ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ,—ಹಣದ ಅಭಾವ ಇದೆ.

Tubectomy Operations Conducted in the State

206. **Sri GATTI CHANDRASEKHAR** (Gubbi).—

Will the Minister for Health be pleased to state :—

(*a*) the number of tubectomy operations conducted in the State during the year 1971-72 (Districtwise figures may be furnished);

(*b*) the number of persons died due to these operations;

(*c*) whether compensation is being paid by the Government to the relatives of deceased;

(*d*) whether the Government have thought of creating a reserve fund by deducting Rs. 2 per head from the amount that is being paid to those undergoing operations and by adding another Rs. 2 per head from Government;

(*e*) whether the Government would consider payment of at least Rs. 3,000 compensation to the relatives of a deceased from this fund ?

Sri H. SIDDAVEERAPPA (Minister for Health).—

(*a*) 44,798, Districtwise figures are appended.

(*b*) The number of persons died after the operation is 6.

(*c*) There is a proposal to pay compensation to the relatives of the deceased.

(*d*) Yes, Orders have already been issued to the Director of Public Health and Family Planning Department to create a fund for payment of compensation to the dependents of the deceased or disabled due to Family Planning operations. Out of the amount spent in respect of persons who have undergone operation, a sum of 50 paise has been earmarked for this purpose.

(*e*) Decision has not yet been taken.

STATEMENT

	Name of the District		*No. of persons who had undergone Tubectomy operations*
1	Bangalore (Urban)	...	2,174
2	Bangalore (Rural)	...	2,426
3	Chitradurga	...	2,673
4	Kolar	...	2,638
5	Shimoga	...	3,820
6	Tumkur	...	3,009
7	Belgaum	...	4,522
8	Bijapur	...	2,034
9	Dharwar	...	3,390
10	North Kanara	...	1,019
11	Bellary	...	1,519
12	Bidar	...	971
13	Gulbarga	...	479
14	Raichur	...	337
15	Chickmagalur	...	1,945
16	Coorg	...	1,182
17	Hassan	...	2,191
18	Mandya	...	1,986
19	Mysore	...	3,615
20	South Kanara	...	2,868
		Total	44,798

ಶ್ರೀ ಗಟ್ಟಿ ಚಂದ್ರಶೇಖರ್.—1971–72ರಲ್ಲಿ 44,798 ಟ್ಯುಬೆಕ್ಟಮಿ ಅಪರೇಷನ್ಸ್ ಆಗಿವೆ ಮತ್ತು 6 ಜನರು ಅದರಲ್ಲಿ ಸತ್ತಿದ್ದಾರೆಂದು ತಿಳಿಸಿದ್ದೀರಿ. ಅವರಿಗೆ ಪರಿಹಾರ ಕೊಡುವುದಕ್ಕೋಸ್ಕರ ಒಂದು 50 ಪೈಸೆಯನ್ನು ಸಂಗ್ರಹಿಸಲಾಗಿದೆ ಎಂದು ಹೇಳಿದ್ದೀರಿ. ಆ ಮೇಲೆ ಸತ್ತವರಿಗೆ ಪರಿಹಾರ ಕೊಟ್ಟಿಲ್ಲವೆಂದೂ ಸಹ ಹೇಳಿದ್ದೀರಿ. ಆದ್ದರಿಂದ ಆದಷ್ಟು ಜಾಗ್ರತೆ ಪರಿಹಾರ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ !

† ಶ್ರೀ ಎಚ್. ಸಿದ್ದವೀರಪ್ಪ.—ಈ ಪರಿಹಾರದ ಮೊಬಲಗನ್ನು ಇಷ್ಟೇ ಎಂದು ಮೊದಲೇ ತೆಗೆದಿಟ್ಟಿದ್ದಾರೆ. ಇಷ್ಟರಲ್ಲೇ, ಪರಿಹಾರವನ್ನು ಕೊಡಬೇಕಾಗಿತ್ತು. ಅದನ್ನು ಕೊಡದಿರುವುದು ತಪ್ಪು. ಅದನ್ನು ಜಾಗ್ರತೆ ಕೊಡುವಂತೆ ಹೇಳುತ್ತೇನೆ. ಶಸ್ತ್ರ ಚಿಕಿತ್ಸೆಗೆ ಒಳಗಾದವರಿಗೆ ವೆಚ್ಚ ಮಾಡಲಾದ ಹಣದಲ್ಲಿ ಈ ಉದ್ದೇಶಕ್ಕೆ 50 ಪೈಸೆಯನ್ನು ಮೀಸಲಿಡಲಾಗಿದೆ. ಅಂದರೆ 44,798 ಸಂಖ್ಯೆಗೆ 50 ಪೈಸೆಯಂತೆ ಲೆಕ್ಕ ಹಾಕಿದರೆ ಎಷ್ಟು ದುಡ್ಡು ಬರುತ್ತದೆ ಎಂದು ತಾವೇ ಲೆಕ್ಕ ಹಾಕಿಕೊಳ್ಳಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಇದರಲ್ಲಿ 6 ಜನರು ಸತ್ತುಹೋಗಿದ್ದಾರೆಂದು ಹೇಳಿದೆ. ಅವರು ಯಾವ ಕಾರಣಕ್ಕಾಗಿ ಸತ್ತಿದ್ದಾರೆ ! ಅಪರೇಟ್ ಮಾಡಿದಂಥ ಡಾ|| ಆಚಾರ್ಯರಿಂದ ಸತ್ತುಹೋಗಿದ್ದಾರೆಯೇ ? ಅವರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಡಾ|| ಆಚಾರ್ಯ ಅವರಿಂದ ಈ ರೀತಿ ಅವರು ಸತ್ತು ಹೋಗಿದ್ದಾರೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಅದು ತಮಗೆ ಗೊತ್ತಿದೆ. ಕೆಲವರನ್ನು ನಾನು ಕೇಳಿದೆ. ಇದು ಹೇಗೆ ಆಯಿತು, ಏನು ಕಾರಣವಿರಬಹುದೆಂದು. ಅದು ಬೇರೆ ಯಾವುದೋ ಕಾರಣದಿಂದ ಆಪರೇಷನ್ ಆಗಿದೆ. ಆಗ ಅವರು ಸಾಯುವುದಕ್ಕೆ ಕಾರಣವಾಗಿದೆ, ಎಂದು ಗೋಚರವಾಗುತ್ತದೆ. ಅದು ಏನಾಗಿದೆಯೋ, ಬಹಳ ದುರಾದೃಷ್ಟ. ಹಾಗೆ ಈಗ ಆಗಿರುವುದರಿಂದ ಸರಿಯಾದ ಪರಿಹಾರವನ್ನು ಕೊಡುವುದು ನನ್ನ ಕರ್ತವ್ಯ. ಖಂಡಿತವಾಗಿ ಅದನ್ನು ಕೊಡುತ್ತೇನೆ.

ಶ್ರೀ ಗಟ್ಟಿ ಚಂದ್ರಶೇಖರ್.—ಅದನ್ನು ಆದಷ್ಟು ಜಾಗ್ರತೆಯಾಗಿ ಕೊಡುತ್ತೀರಾ !

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಖಂಡಿತವಾಗಿ ಕೊಡುತ್ತೇನೆ.

CONSTRUCTION OF NEW TANKS IN MADHUGIRI TALUK

213. **Sri R. CHIKKAIAH** (Madhugiri).—

Will the Minister for Public Works and Electricity be pleased to state :—

(*a*) whether plans and estimates have been prepared for the construction of new tanks at (1) Gidadagalahalli, (2) Sidadaragal in place of Kumbathikatte (3) Kottagaralahalli in Dodderi Hobli and (4) Construction of a new taluk in place of Doddathimmajjanakatte near Ganjalagunte, Kasaba Hobli, Madhugiri Taluk ;

(*b*) if so, the estimated cost of each tank and when they were prepared ; the reason for not sanctioning them so far ;

(*c*) the steps taken to sanction the same early ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) Details are furnished in Statement appended.

(*c*) Action is being taken to sanction the feasible project

STATEMENT

Sl. No.	Name of Tank	Amount of estimate (as per S. R. 1972-73)	When Prepared	The reasons for not sanction	Remarks
		Rs.			
1	New Tank near Gidadagalahalli.	2,23,000	During November 1971	To know the surplus available from the lower tank *viz.*, Rangapura tank for intercepting the same by the new tank proposed upstream of Rangapura Tank.	The project is with the Executive Engineer, Madhugiri Division, for attending to the technical observations.
2	New tank near Sidadaragallu	78,500	do	The cost per acre exceeds the ceiling limit fixed for Minor Irrigation works. Action is being taken to obtain the revised administrative approval from the Government.	Plans and estimates have been received from the Chief Engineer and are under consideration of Government.
3	New tank near Kotagarlahalli	1,18,000	do	To know the surplus available from the lower tank *viz.*, Pulamaghatta tank.	The project is with the Executive Engineer, Madhugiri Division, for attending to the technical observations.
4	New tank near Thirumaladevarahalli.	58,000 (As per S. R. of 1971-72)	do	The proposal is found to be technically not feasible as it affects the lower tank *viz.*, Nerelkere.	—

ಶ್ರೀ ಆರ್. ಚಿಕ್ಕಯ್ಯ.—ಈ ಕಾಮಗಾರಿಯ ಅಂದಾಜನ್ನು ತಯಾರುಮಾಡಿ ಎಷ್ಟು ವರ್ಷಗಳಾಗಿವೆ ? ಇದುವರೆಗೆ ಅದನ್ನು ಏಕೆ ಮಂಜೂರು ಮಾಡಲಿಲ್ಲ !

† ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಕಾಮಗಾರಿಯ ಅಂದಾಜನ್ನು ತಯಾರು ಮಾಡಿದಂಥ ತಾರೀಖನ್ನ ಈಗಾಗಲೇ ಉತ್ತರದಲ್ಲಿ ಕೊಟ್ಟಿದ್ದೇನೆ.

ಶ್ರೀ ಆರ್. ಚಿಕ್ಕಯ್ಯ.—ಈ ಅಂದಾಜನ್ನು ಇನ್ನೂ ಮಂಜೂರು ಮಾಡದೇ ಇರಲು ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂಜೂರು ಮಾಡುವುದಕ್ಕೆ ಕೆಲವಾರು ಅಡ್ಡಿ ಅತಂಕಗಳಿವೆ. ಒಂದಕ್ಕೆ ಮಾತ್ರ ಆಂತಕವಿದೆ. ಇನ್ನುಳಿದುದಕ್ಕೆ ಯಾವ ಆತಂಕವೂ ಇಲ್ಲವೆಂದು ನನಗೆ ತಿಳಿದು ಬಂದಿರುವ ಮಾಹಿತಿ ಪ್ರಕಾರ ಈ ರೀತಿ ಗೊತ್ತಾಗುತ್ತಿದೆ.

ಶ್ರೀ ಆರ್. ಚಿಕ್ಕಯ್ಯ.—ಗಿಡ್ಡಗಲಹಳ್ಳಿಯ ಹತ್ತಿರ ಹಾಗೂ ಅದರ ಕೆಳಗೆ ರಂಗಪುರ ಕೆರೆ ಒಂದಿದೆ. ಈ ಕೆರೆಗೆ ನೀರು ಸಾಕಷ್ಟು ಬರುತ್ತದೋ ಇಲ್ಲವೋ ಎಂಬುದನ್ನು ಪರೀಕ್ಷೆ ಮಾಡಿ ನೀರು ಯಥೇಚ್ಛವಾಗಿ ಬರುತ್ತದೆಂದು ಮನಸ್ಸಿಗೆ ತೃಪ್ತಿಕರವಾದಮೇಲೆ ಅದನ್ನು ಮಂಜೂರ ಮಾಡಲು ಅಡ್ಡಿ ಇಲ್ಲ. ಎರಡನೆಯ ಕೆರೆ ಸಿಡದರಗಲ್ಲು. ಇದಕ್ಕೆ ಒಂದು ಎಕರೆಗೆ 2240 ರೂಪಾಯಿಗಳಷ್ಟು ಖರ್ಚಾಗುತ್ತದೆ. ನಾವು ಡ್ರಾಟ್ ಏರಿಯಾದಲ್ಲಿ ಏನು ನಿಗದಿ ಮಾಡಿದ್ದೇವೋ ಅದಕ್ಕಿಂತಲೂ ಈಗ ಜಾಸ್ತಿಯಾಗಿದೆ. ಆದ್ದರಿಂದ ಇದನ್ನು ಮಂಜೂರು ಮಾಡಬೇಕೋ ಬೇಡವೋ ಎಂಬುದು ಸರ್ಕಾರದ ಪರಿಶೀಲನೆಯಲ್ಲಿದೆ. ಮೂರನೆಯದು, ಕೊಟಗಾರ್ಲಹಳ್ಳಿ, ಅದರ ಕೆಳಗೆ ಪೂಲ್ಕಗಹಟ್ಟ ಕೆರೆ—ಈ ಕೆರೆಗೆ ನೀರು ಸರ್‌ಪ್ಲಸ್ ಎಷ್ಟು ಬರುತ್ತದೆಂದು ನೋಡಿಕೊಂಡು ಮೇಲಕ್ಕೆ ಎತ್ತಬೇಕು. 4ನೇ ಕೆರೆ ಟೆಕ್ನಿಕಲ ನಾಟ್ ಫೀಜಿಬಲ್.

ಶ್ರೀ ಆರ್. ಚಿಕ್ಕಯ್ಯ.—ಮೊದಲನೆಯ ಮೂರು ಕೆರೆಗಳ ಬಗ್ಗೆ ಈಗಾಗಲೇ ಆಖೈರಾಗಿ ಟೆಕ್ನಿಕಲ್ ಒಪೀನಿಯನ್ ತೆಗೆದುಕೊಂಡು ಅವಕ್ಕೆ ಮಂಜೂರಾತಿ ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಬಂದಿರುವ ವಿಚಾರವನ್ನು ನಾನು ತಿಳಿಸಿದ್ದೇನೆ. ಮೊದಲನೆ ಕೆರೆಗೆ, ರಂಗಾಪುರ ಕೆರೆಗೆ, ನೀರು ಸಾಕಷ್ಟು ಇದೆಯೋ ಇಲ್ಲವೋ ಅದನ್ನು ಪರಿಶೀಲನೆ ಮಾಡಬೇಕು, ಮೂರನೆಯ ಕೆರೆಗೂ ಇದೇ ರೀತಿಯಾಗಿ ನೋಡಬೇಕು. ಅದನ್ನು ನೋಡದೆ ಕೆರೆ ಕಟ್ಟಿದರೆ ದುಡ್ಡು ಪೋಲಾಗುತ್ತದೆ.

ಶ್ರೀ ಆರ್. ಚಿಕ್ಕಯ್ಯ.—ಎರಡು ಕೆರೆಗಳ ಕೆಲಸ ಈಗಾಗಲೇ ಶುರುವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವಕ್ಕೆ ಮಂಜೂರಾತಿ ಇನ್ನೂ ಬಂದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

Rise in Prices of Essential Commodities

220. **Sri R. CHIKKAIAH** (Madhugiri).—

Will the Minister of State for Food and Civil Supplies be pleased to state :—

(*a*) whether it has come to the notice of the Government that the prices of all commodities have abnormally gone up ;

(*b*) if so, the steps taken to reduce the prices of the same ;

(*c*) whether the Government have any scheme to supply commodities to the public at cheaper rates ;

(*d*) if so, when it will be implemented ?

Sri K. H. Patil (Minister for Agriculture and Forests) [On behalf of **Smt. E. E. Vaz** (Minister of State for Food ad Civil Supplies)]—

(a) Yes.

(b) Rice, wheat, wheat products, maize, bajra, jowar and sugar are being sold at fixed prices through fair price shops. Cotton coarse cloth, like sarees, dhoties, long-cloth, shirting and drill is also sold at fixed prices through the Co-operative Institutions. Further, Automobile tyres of the sizes of 825×20, 900×20 and 1000×20 are sold at fixed prices on permits issued by competent authorities. In addition, statutory prices have been fixed in respect of vanaspathi, kerosene, petroleum products and automobile tyres. In respect of the following commodities, orders are issued making it obligatory on dealers to exhibit price list and for maintenance of proper accounts :—

1 Kerosene oil, diesel oil.

2 Vegetable oils (Mustard oil, groundnut oil, gingelly oil and coconut oil).

3 Textiles.

4 Baby foods.

5 Writing papers.

6 Cycle tyres and tubes (including tyres and tubes of Cycle Rickshaws).

7 Torch Cells.

8 Solvent extracted oil, de-oiled meal, edible flour.

9 Dry cells and batteries for Transistor Radios.

10 Tyres of all categories of automobiles such as tyres and tubes of scooters (including scooter rickshaws and auto-rickshaws), cars, buses, jeeps, vans, trucks, automobiles of any other categories whatsoever, tractors and tractor trollies.

Orders banning export of the following outside the State have been issued.

1 Paddy/rice

2 Jowar

3 Ragi

4 Maize

5 Navane

6 Baraga.

The Mysore Guest Control Order enforced with effect from 21st September, 1972 prohibits the preparation, consumption and distribution of food stuffs prepared from or containing cereals or pulses and all sweets for more than 25 guests at ordinary parties or entertainments and 100 in case of marriages and funerals.

(SRI K. H. PATIL)

Action is being taken to strengthen and streamline the public distribution system.

Strict vigilance is kept to ensure compliance of the various Control Orders made under the Essential Commodities Act, 1955 and violations are dealt with as per law.

(*c*) and (*d*) Do not arise in view of reply to clause (*b*) above.

ಶ್ರೀ ಆರ್. ಚಿಕ್ಕಯ್ಯ.—ಇದರ ಬಗ್ಗೆ ಸಾಕಷ್ಟು ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಉತ್ತರದಲ್ಲಿ ಹೇಳಿದೆ. ಆದರೆ ಡೀಸಲ್ ಎಣ್ಣೆ, ಸೀಮೆಯೆಣ್ಣೆ ಇಲ್ಲಿ ದೊರೆಯದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

† ಶ್ರೀ ಕೆ. ಎಚ್. ಪಾಟೀಲ್.—ಅವುಗಳ ಕೊರತೆಯಾಗಿರುವದರಿಂದ ಅವು ಕಡಿಮೆ ಪ್ರಮಾಣದಲ್ಲಿ ಈಗ ಸಿಗುತ್ತಿವೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ. ಇನ್ನು ಮುಂದೆ ಎಲ್ಲಾ ಕಡೆಯೂ ಸಿಗುವಂತೆ ವ್ಯವಸ್ಥೆ ಮಾಡಲು ತ್ವರಿತವಾಗಿ ಕ್ರಮ ತೆಗೆದುಕೊಂಡಿದೆ.

ಶ್ರೀ ಆರ್. ಚಿಕ್ಕಯ್ಯ.—ಡೀಸಲ್ ಆಯಿಲ್ ನಮ್ಮ ದೇಶದಿಂದ ಆಂಧ್ರ ಪ್ರಾಂತಕ್ಕೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಕೆ. ಎಚ್. ಪಾಟೀಲ್.— ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಜೆ. ಎಲ್. ಕಬಾಡೆ.—ಬಿಜಾಪುರದಿಂದ ಕಳ್ಳ ವ್ಯಾಪಾರದಲ್ಲಿ ವ್ಯಾಪಾರಸ್ಥರು ಸಾಗಿಸುತ್ತಿದ್ದಾರೆ. ಅಲ್ಲಿನ ಸ್ಥಳೀಯ ಶಾಸಕರು ಪೋಲೀಸ್ ಸ್ಟೇಷನ್ನಿಗೆ ದೂರು ಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳ ಎಂಬುದಾಗಿ ಹೇಳಿದರೂ ಇಲ್ಲಿಯವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಕಳ್ಳ ಸಾಗಾಣಿಕೆ ಮಾಡುವವರ ಲೈಸೆನ್ಸ್ ರದ್ದುಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅಲ್ಲದೆ ಇನ್ನೂ ಈಗಲೂ ಕಳ್ಳ ವ್ಯಾಪಾರದಲ್ಲಿ ಅನೇಕ ಧಾನ್ಯಗಳು ಆಚೆಗೆ ಹೋಗುತ್ತಾ ಇರುವುದರಿಂದ ನಮ್ಮಲ್ಲಿ ಆ ಪದಾರ್ಥಗಳು ಹೆಚ್ಚು ಬೆಲೆಯಾಗಿ ಅವುಗಳ ಧಾರಣೆ ಏರುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಕೆಲವು ಪದಾರ್ಥಗಳ ಧಾರಣೆಗಳು ಏರಿದ್ದರೂ, ಯೋಗ್ಯ ದರದಲ್ಲಿ ಎಲ್ಲಾ ಕಡೆಯೂ ಕೆಲವು ಪದಾರ್ಥಗಳು ಸಿಗುತ್ತವೆ ಎಂದು ಹೇಳಬಹುದು. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಯಾರಾದರೂ ಬ್ಲಾಕ್‌ಮಾರ್ಕೆಟ್ ಮಾಡುತ್ತಿದ್ದರೆ, ಅದನ್ನು ಸರ್ಕಾರಕ್ಕೆ ತಿಳಿಸಿದರೆ, ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ವೈ. ಪಾಟೀಲ್.—ಬೆಲೆಗಳನ್ನು ತಗ್ಗಿಸುವ ಕ್ರಮದ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ಮಾಡುತ್ತೇವೆಂದು ಕಳೆದ ಸಭೆಯಲ್ಲಿ ಹೇಳಿದ್ದೀರಿ. ಯಾವ್ಯಾವ ಸಾಮಾನುಗಳಿಗೆ ಮೊದಲಿಗಿಂತ ಕಡಿಮೆ ದರವಾಗಿದೆಯೆಂಬುದನ್ನು ತಿಳಿಸುತ್ತೀರಾ ?

Sri K. H PATIL.—Notice, Sir.

ಶ್ರೀ ಬಿ. ವಿ. ಕಕ್ಕಿಲಾಯ.—ನ್ಯಾಯ ಬೆಲೆಯ ಅಂಗಡಿಗಳಲ್ಲಿ ನನಗೆ ತಿಳಿದಿರುವ ಹಾಗೆ ನಮ್ಮ ಜಿಲ್ಲೆಯಲ್ಲಿ ಯಾವ ವಸ್ತುಗಳೂ ಸಹ ಸರಿಯಾದ ಬೆಲೆಗೆ ಮಾರುತ್ತಾ ಇಲ್ಲವೆಂಬುದು ತಮ್ಮ ಗಮನಕ್ಕೆ ತಂದರೆ, ಅದರ ಬಗ್ಗೆ ತಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಯಾವ್ಯಾವ ಪದಾರ್ಥಗಳು ಅಲ್ಲಿ ಸಿಗುತ್ತಾ ಇಲ್ಲವೆಂಬುದನ್ನು ನನ್ನ ಗಮನಕ್ಕೆ ತಂದುಕೊಟ್ಟರೆ, ಅವನ್ನು ಅಲ್ಲಿಗೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್. ಬೆಲೆ ಏರಿಕೆಯ ಬಗ್ಗೆ ಅನೇಕ ಸಾರಿ ಈ ಸಭೆಯಲ್ಲಿ ಚರ್ಚೆಯಾಗಿದ್ದರೂ ಅದನ್ನು ಇನ್ನೂ ಪರಿಶೀಲನೆ ಮಾಡುತ್ತಲೇ ಇದ್ದೀರಿ. ಕೇಂದ್ರ ಸರ್ಕಾರದ ನೀತಿಯನ್ನು ಜಾರಿಗೆ ತರುವುದಕ್ಕೆ ಸಗಟು ವ್ಯಾಪಾರ ತೆಗೆದುಕೊಳ್ಳುವ ಬಗ್ಗೆ ಇತ್ತೀಚಿನ ಪರಿಸ್ಥಿತಿ ಏನು ? ಈಗ ಆಹಾರ ಧಾನ್ಯಗಳ ಸಗಟು ವ್ಯಾಪಾರವನ್ನು ತೆಗೆದುಕೊಂಡು ಅವಕ್ಕೆ ನ್ಯಾಯ ಬೆಲೆಯನ್ನು ಕೊಟ್ಟು, ಹೆಚ್ಚಾಗಿರುವ ಧಾರಣೆಗಳನ್ನು ಕಡಿಮೆ ಮಾಡುವುದರಲ್ಲಿ ತಮ್ಮ ಅಭಿಪ್ರಾಯವೇನು ?

ಶ್ರೀ ಕೆ. ಎಚ್. ಪಾಟೀಲ್.—ಇದರ ಬಗ್ಗೆ ಕೇಂದ್ರಸರ್ಕಾರದ ಧೋರಣೆ ಹಾಗೂ ರಾಜ್ಯ ಸರ್ಕಾರದ ಧೋರಣೆ ಏನೂ ಬದಲಾವಣೆಯಾಗಿಲ್ಲ. ಇದರಲ್ಲಿ ಮತ್ತೊಂದು ರೀತಿ ಮಾರ್ಪಾಟು ಮಾಡಿಲ್ಲ. ಇದನ್ನು ಯಾವಾಗ ತೆಗೆದುಕೊಳ್ಳಬೇಕು, ಯಾವ ರೇಟಿನಲ್ಲಿ ತೆಗೆದುಕೊಳ್ಳಬೇಕು ಎನ್ನುವುದು ಇನ್ನೂ ಕೇಂದ್ರ ಸರ್ಕಾರದ ಜೊತೆಯಲ್ಲಿ ವಾದ ಇದೆ. ಅದಿನ್ನೂ ಪೂರ್ತಿಯಾಗಿಲ್ಲ.

ಶ್ರೀ ಹಂಪಿ ಶಿವಣ್ಣ.—ಟೈರುಗಳನ್ನು ತೆಗೆದುಕೊಳ್ಳುವುದರಲ್ಲಿ ಈಗ ಕಂಟ್ರೋಲ್ ಮಾಡಿದ್ದೀರಿ. ಈಗ ಅರ್ಧ ಟೈರುಗಳನ್ನು ಮಾರಾಟಗಾರರಿಗೆ ಕೊಡುತ್ತಿದ್ದೀರಿ. ಇನ್ನುಳಿದ ಅರ್ಧ ಟೈರುಗಳನ್ನು ಸರ್ಕಾರದ ಪರ್ಮಿಟ್ಟಿನಲ್ಲಿ ಕೊಡುತ್ತಿದ್ದೀರಿ ಎಂಬುದಾಗಿ ತಿಳಿದು ಬಂದಿದೆ. ಈಗ ಒಂದು ಟೈರಿಗೆ 500 ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಕೊಳ್ಳುವ ಪರಿಸ್ಥಿತಿ ಇದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಡೀಸೆಲ್ ಎಣ್ಣೆಯನ್ನು ಲಾರಿಗಳಿಗೆ ಮತ್ತು ಬಸ್ಸುಗಳಿಗೆ ಕೊಡುವಾಗ 2 ಅಥವಾ 2½ ರೂಪಾಯಿಗಳಂತೆ ಮಾರಾಟವಾಗುತ್ತಿದೆ. ಆದ್ದರಿಂದ ಕೂಡಲೇ ಅದನ್ನು ಸಪ್ಲೈ ಮಾಡದಿದ್ದರೆ, ಬಹಳ ಜನರಿಗೆ ತೊಂದರೆಯಾಗುವುದರಿಂದ, ಇದರ ಬಗ್ಗೆ ಆದಷ್ಟು ಜಾಗ್ರತೆ ಸರ್ಕಾರ ಆಸ್ತೆ ವಹಿಸುತ್ತದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಆರ್. ಚಿಕ್ಕಯ್ಯ - ಅನೇಕ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವರ್ತಕರು ಎಲ್ಲಾ ಪದಾರ್ಥಗಳನ್ನು ಬಚ್ಚಿಟ್ಟಿರುವುದರಿಂದ ಬೆಲೆಗಳು ಜಾಸ್ತಿಯಾಗಿವೆ. ಅವರು ಆ ಪದಾರ್ಥಗಳನ್ನು ಹೊರಗೆ ತೆಗೆದರೆ ಈಗಿನ ಧಾರಣೆಗಳನ್ನು ಸ್ವಲ್ಪಮಟ್ಟಿಗಾದರೂ ಸುಧಾರಿಸಬಹುದಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರ ಅಭಿಪ್ರಾಯವೇ ನನ್ನ ಅಭಿಪ್ರಾಯ.

ಶ್ರೀ ಟಿ. ಆರ್. ಶಾಮಣ್ಣ.—ಧಾರಣೆವಾಸಿಗಳು ದಿನ ದಿನಕ್ಕೂ ಗಗನಕ್ಕೇರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ! ಮತ್ತು ಇದಕ್ಕೆ ಕಾರಣ ಸರ್ಕಾರದವರು ಧಾನ್ಯಗಳ ಸಾಗಾಟ ಜಿಲ್ಲೆಯಿಂದ ಜಿಲ್ಲೆಗೆ ಪ್ರತಿಬಂಧಕ ಮಾಡಿದ್ದರಿಂದ ಬೆಲೆಗಳು ಏರಿರುವುದರಿಂದ ಇದನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಬೆಲೆಗಳೇರುವುದಕ್ಕೆ ಅದೊಂದೇ ಕಾರಣವಲ್ಲ. ಅದಕ್ಕೆ ಇನ್ನೂ ಅನೇಕ ಕಾರಣಗಳಿವೆ. ಲೆವಿ ಪದ್ಧತಿಯನ್ನು ಮನ್ನಾ ಮಾಡಿದರೆ ಇದು ಬಗೆಹರಿಯಲಾರದು.

Misappropriation of amount in M.G.S. Consumers' Co-operative Stores

385. **Sri K. R. SRINIVASULU NAYUDU** (Shanthinagar).—

Will the Minister for Co-operation be pleased to state :—

(*a*) when was the Mysore Government Secretariat Consurmers' Co-operative Stores, Cubbon Park, Bangalore was started ;

(*b*) the amount of loan given by the Government to the stores and the share capital of the stores;

(*c*) whether any amount has been misappropriated in the above stores ; the exact amount misappropriated, the persons responsible for the same, the action the Government has taken to recover the amount invested ;

(*d*) the amount yet to be recovered from the Co-operative Stores now ;

(*e*) whether there is any proposal to return the share capital contributed by the employees of the M.G.S. ;

(SRI K. R. SREENIVASULU NAYUDU)

(*f*) whether there is any Administrator appointed, if so when he was appointed and the conditions of his appointment;

(*g*) the progress achieved by him so far?

Sri A. SHANKARA ALVA (Minister for Co-operation).—

(*a*) The Mysore Government Secretariat Consumer's Co-operative Stores Limited was registered under No. 191/ARBI/65 dated 22-3-1965 and started functioning from 1-7-1965.

(*b*) Amount of loan given by the Government to the Stores—Rs. 6,00,000.

Share Capital of the Stores:

1.	Government share capital	...	Rs.	50,000-00
2.	Members' share capital	...	Rs.	11,650-00
	Total	...	Rs.	61,650-00

(*c*) (i) Yes.

(ii) The exact amount misappropriated—Rs. 1,07,156-11.

(iii) Persons responsible for the same:

1. Sri R. S. Rama Rao (Ex. Secretary)
2. Sri N. Brahma Dev do
3. Sri C. Chowdappa (Ex. Treasurer)
4. Sri C. Krishna Gowda (Ex. Salesman)
5. Sri M. Murugesh (Ex. Attender)

(iv) Action taken by Government to recover the amount invested:

Rs. 3.47 lakhs have been recovered out of Government investment. It is proposed to liquidate the stores. The balance amount of loan and Governments' share contribution will be recovered depending on the financial position of the stores after liquidation.

(*d*) Rs. 2.53 lakhs by way of loan.

(*e*) Not at present.

(*f*) Yes; Appointed on 30-6-1969 on foreign service terms and conditions stipulated in the M.C.S. Rs.

(*g*) (i) He has recovered Rs. 1,27,031-54 as against Rs. 1,39,431-54 due from the Members.

(ii) He has filed seven arbitration cases against Ex. Office bearers.

(iii) He has launched four criminal cases against Ex-Office bearers.

(vi) He has got the immovable properties of the two Ex-Secretaries attached for realisation of amounts due.

(v) He has disposed of old stocks and damaged goods with Government's permission to avoid further losses to the stores.

(vi) He has got remitted towards overdue of Government loans a total amount of Rs. 3.47 lakhs.

(vii) Within the financial business and administrative constraints prevailing in the present condition of the stores, he has tried to effect improvements in the business prospets.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಇಲ್ಲಿ ಒದಗಿಸಿರತಕ್ಕ ಉತ್ತರದಲ್ಲಿ ಮಿಸ್‌ಅಪ್ರೋಪ್ರಿಯೇಟಾಗಿರತಕ್ಕ ಹಣ ರೂ. 1,07,156-11, ಆದರೆ ಆ ಸೊಸೈಟಿಯ ವರದಿಯಲ್ಲಿ ತಿಳಿಸಿರುವುದು ರೂ. 3,97,707-03. ಹೀಗೆ ವ್ಯತ್ಯಾಸವಿರುವುದಕ್ಕೆ ಕಾರಣವೇನು ? ಇದಕ್ಕೆ ಕಾರಣರು ಯಾರು ?

† **ಶ್ರೀ ಎ. ಶಂಕರ ಆಳ್ವ.**—ಆ ವಿಚಾರದಲ್ಲಿ ಇನ್ನೂ ವಿಚಾರಣೆ ನಡೆಯುತ್ತಿದೆ. ಆ ವರದಿ ನಮ್ಮ ಕೈಸೇರಿದ ಮೇಲೆ ಇದರ ಪೂರ್ಣ ಮಾಹಿತಿ ನಮಗೆ ಗೊತ್ತಾಗುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಆ ವರದಿಯಲ್ಲಿ ಏನು ಹೇಳಿದ್ದಾರೆಂದರೆ,—

The sales turnover was not enough to earn sufficient profits to meet the heavy expenditure.

ಒಂದು ಕಡೆ ಹೀಗೆ ಹೇಳಿ, ಮತ್ತೊಂದು ಕಡೆಯಲ್ಲಿ ಅವರು ಹೀಗೆ ಹೇಳಿದ್ದಾರೆ.—
This is due to the situation of the Stores in an obscure corner of Cubbon park and shabby appearance of the garages which has failed to attract the customers.

ಹೀಗೇ ಹೇಳಿದ್ದಾರಲ್ಲಾ ಇದು ಸರಿಯಾದ ಕಾರಣವೋ ಅಥವಾ ಅಲ್ಲ ಸೇರಿಕೊಂಡಿದ್ದ ಎರಡು ಕಾಲಿನ ಹೆಗ್ಗಣಗಳು ಕಾರಣವೋ ?

ಶ್ರೀ ಎ. ಶಂಕರ ಆಳ್ವ.—ಈಗಾಗಲೆ ಕೆಲವರ ಮೇಲೆ ಛಾರ್ಜ್‌ನ್ನು ಫಿಕ್ಸ್‌ಮಾಡಲಾಗಿದೆ. ಆ ವರದಿ ಬಂದಮೇಲೆ ಅದರಲ್ಲಿ ಉಳಿದವರ ಬಗ್ಗೆಯೂ ಸೂಕ್ತಕ್ರಮಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಇಲ್ಲಿ ಉತ್ತರದಲ್ಲಿ ತಿಳಿಸಿರತಕ್ಕ ಐದು ಜನರೇನಿದ್ದಾರೆ ಅವರೇನು ಸರ್ಕಾರಿ ನೌಕರರೇ ? ಸರ್ಕಾರಿ ನೌಕರರಾಗಿದ್ದರೆ ಈಗವರು ಕೆಲಸದಲ್ಲಿದ್ದಾರೆಯೋ ಇಲ್ಲವೇ ? ಹಾಗೊಂದುವೇಳೆ ಅವರು ಕೆಲಸದಲ್ಲಿಲ್ಲದಿದ್ದರೆ, ಅವರು ಈ ಪ್ರಪಚಂದಲ್ಲಾದರೂ ಇದ್ದಾರೆಯೋ ಅಥವಾ ಅವರು ಈ ಪ್ರಪಂಚವನ್ನು ಬಿಟ್ಟಿದ್ದಾರೆಯೋ ? ಅಥವಾ ಇಲ್ಲಿಯೇ ಇದ್ದಾರೆಯೋ ?

ಶ್ರೀ ಎ. ಶಂಕರ ಆಳ್ವ.—ಅವರು ಮೊದಲಿಗೆಲ್ಲರೂ ಸರ್ಕಾರಿ ನೌಕರರೇ. ಅವರನ್ನು ರೆಂಟ್ ಬೇಸಿಸ್ ಮೇಲೆ ತೆಗೆದುಕೊಳ್ಳಲಾಗಿತು. ಅವರಲ್ಲಿ ಅನೇಕರನ್ನು ಸಸ್‌ಪೆಂಡ್‌ಮಾಡಲಾಗಿದೆ. ಕೋರ್ಟಿನಲ್ಲಿ ಬೇರೆ ಕೆಲವರ ಬಗ್ಗೆ ಕೇಸುಗಳು ನಡೆಯುತ್ತಿವೆ.

Maintenance of Rural Communication Roads

484. **Sri S. M. SHEERANALY CHANDRASHEKAR** (Hosanagar).–

Will the Minister for Public Works and Electricity be pleased to state :—

(*a*) whether the Government has decided about the machinery to maintain R. C. roads and roads taken under fifty miles scheme in each Taluk ;

(*b*) whether the Government is aware that there is a lot of discrepancy in taking up the above programme ;

(*c*) whether the Government is aware that there is a difference in total mileage from Taluk to Taluk ?

Sri H. M. CHANNABASAPPA (Minister for Public Works and Electricity).—

(*a*) (1) The Rural Communication roads constructed under the R. C. Programme, started in the year 1959-60, are to be maintained by the Taluk Development Boards.

(2) In respect of the rural road works taken up under the Integrated and Comprehensive Rural Communication Programme sanctioned under 19-2-73, the maintenance agency has not been decided as road works are still under construction or improvements.

(*b*) No.

(*c*) Yes. But the average per Taluk in each District in not less than 50 miles in any of the districts in the State except in some taluks. The length tackled varies from 30-50 miles but in majority of the taluks, the length tackled is more than 50 miles.

ಶ್ರೀ ಎಸ್. ಎಂ. ಶ್ರೀರನಾಳಿ ಚಂದ್ರಶೇಖರ್.—ತಾಲ್ಲೂಕ್ ಬೋರ್ಡ್ ರಸ್ತೆಗಳನ್ನು ಪಿ. ಡಬ್ಲ್ಯು. ಡಿ. ಗೆ ಸೇರಿಸಲಾಗಿದೆ. ಆದ್ದರಿಂದ ಅವುಗಳನ್ನು ಮೈಂಟೆನ್ ಮಾಡುವುದು ನಮ್ಮ ಜವಾಬ್ದಾರಿಯಲ್ಲ ಎಂದು ತಾಲ್ಲೂಕ್ ಬೋರ್ಡುಗಳು ಹೇಳುತ್ತಿರುವುದರಿಂದ, ಆ ರಸ್ತೆಗಳನು ಯಾರು ಅಬಾದು ಮಾಡಬೇಕೆಂಬುದನ್ನು ಹೇಳುತ್ತಿರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರಿ ಆಜ್ಞೆಯಲ್ಲೇ ವಿಶದವಾಗಿ ಯಾವಯಾವ ರಸ್ತೆ ಪಿ. ಡಬ್ಲ್ಯು. ಡಿ. ಇಲಾಖೆಯ ವಶದಲ್ಲಿದೆ, ಯಾವ ರಸ್ತೆ ತಾಲ್ಲೂಕ್ ಬೋರ್ಡಿನ ವಶದಲ್ಲಿರುವುದಕ್ಕೆ ರಾಯಖಾಗಿದೆ, ಮತ್ತು ಸಣ್ಣ ಪುಟ್ಟ ಅಪ್ರೋಚ್ ರಸ್ತೆಗಳೇನಿವೆ ಅವುಗಳು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳ ಸುಫರ್ದಿನಲ್ಲಿರತಕ್ಕದ್ದು ಎಂದು ವಿಶದವಾಗಿ ತಿಳಿಸಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಕೆಲಸ ಮಾಡುತ್ತಿದೆ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಕೆಲವು ತಾಲ್ಲೂಕುಗಳಲ್ಲಿ 50 ಮೈಲಿ, ಇನ್ನು ಕೆಲವು ಕಡೆ 30 ಮೈಲಿ, ಇನ್ನು ಕೆಲವು ತಾಲ್ಲೂಕುಗಳಲ್ಲಿ 20 ಮೈಲಿ ಹೀಗೆಲ್ಲಾ ಮೈಂಟೇನೆನ್ಸ್ ಮಾಡುವುದಾಗಿ ಹೇಳಿದ್ದಾರೆ. ಈ ವ್ಯತ್ಯಾಸವನ್ನು ಹೋಗಲಾಡಿಸುವುದಕ್ಕೆ ಏನು ಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ರಸ್ತೆಯಾದ ಕೂಡಲೆ ಅದನ್ನು ಯಾರು ಯಾರು ಮೆಂಟೇನ್ ಮಾಡಬೇಕೆಂಬುದನ್ನೂ ಕೂಡ ಸರ್ಕಾರಿ ಆಜ್ಞೆಯಲ್ಲೇ ವಿಶದಪಡಿಸಲಾಗಿದೆ. ಆದರೆ ಒಂದು ಜಿಲ್ಲೆಯಲ್ಲಿ ಇಲ್ಲವೇ ಒಂದು ತಾಲ್ಲೂಕಿನಲ್ಲಿ ನಾವು ತೆಗೆದುಕೊಂಡಿರತಕ್ಕ ರಸ್ತೆ ಪ್ರಮಾಣ ಹೆಚ್ಚಿಗೆ ಇದ್ದರೆ ಆ ಪ್ರದೇಶದ ರಸ್ತೆಗಳು ಬಹಳ ಹೀನಸ್ಥಿತಿಯಲ್ಲಿವೆಯೆ ಎಂದೂ, ಎಲ್ಲಿ ನಾವು ಕಡಮೆ

ತೆಗೆದುಕೊಂಡಿದ್ದರೆ ಅಲ್ಲಿ ರಸ್ತೆಗಳ ಕಂಡಿಷನ್ ಉತ್ತಮ ಸ್ಥಿತಿಯಲ್ಲಿದೆಯೆಂದೂ ಮತ್ತು ಅಲ್ಲಿ ರಸ್ತೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿದೆಯೆಂದು, ಆ ಕಾರಣದಿಂದ ತಮಗೆ ಈ ವ್ಯತ್ಯಾಸ ಕಾಣುತ್ತಿರಬಹುದೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ರಸ್ತೆಗಳನ್ನೆಲ್ಲಾ ಪಿ. ಡಬ್ಲ್ಯು. ಡಿ. ನವರೇ ಮೇಂಟೇನ್ ಮಾಡಬೇಕೆಂಬುದು ನಮ್ಮ ಆಗ್ರಹದ ವಿನಂತಿ, ಅದಕ್ಕೇನು ಹೇಳುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಎಲ್ಲವನ್ನೂ ಪಿ. ಡಬ್ಲ್ಯು. ಡಿ. ಇಂದಲೇ ಮಾಡಿಸುವುದಕ್ಕಾಗುವುದಿಲ್ಲ ದೊಡ್ಡ ದೊಡ್ಡ ಹೈವೇಗಳೂ, ಎರಡೂ ಮೂರು ಇಂಟರ್ ಸ್ಟೇಟುಗಳನ್ನು ಲಿಂಕ್‌ಮಾಡತಕ್ಕ ರಸ್ತೆಗಳು ಮತ್ತು ನ್ಯಾಷನಲ್ ಹೈವೇಗಳು ಇತ್ಯಾದಿಗಳನ್ನು ಈ ಇಲಾಖೆಯವರು ಮಾಡುತ್ತಾರೆ ಉಳಿದವುಗಳನ್ನ ಆಯಾಯಾ ತಾಲ್ಲೂಕ್ ಬೋರ್ಡ್ ಮತ್ತು ಗ್ರಾಮಪಂಚಾಯಿತಿಗಳು ಮಾಡಬೇಕು. ಅದರ ಕಾಲಕ್ರಮದಲ್ಲಿ ಯಾವ ಯಾವ ರಸ್ತೆಯನ್ನು ಎಷ್ಟೆಷ್ಟು ತೆಗೆದುಕೊಳ್ಳ ಬೇಕು. ಎಂಬುದನ್ನು ಸರ್ಕಾರ ಪರಿಶೀಲಿಸುತ್ತಿದೆ,

ಶ್ರೀ ಎಚ್. ಎಸ್. ಸಿದ್ದಪ್ಪ.—ಹಿಂದೆ ತಾವೇ ಇದೇ ಸಭೆಯಲ್ಲಿ ಈ ರಸ್ತೆಯ ಮೆಂಟೆನೆನ್ಸ್ ಬಗ್ಗೆ 50 ಮೈಲಿ ರಸ್ತೆಯನ್ನು ಸಜೆಸ್ಟ್ ಮಾಡಬೇಕೆಂದು ಹೇಳಲಾಗಿತ್ತು ಆದರೆ ಹಾಗೆ ನಾವು ಸಜಿಸ್ಟ್ ಮಾಡಿದ್ದ ರಸ್ತೆಯಲ್ಲಿ ನಮ್ಮ ಪಕ್ಷದ್ದೆಲ್ಲಾ ಏನೂ ಕೆಲಸವಾಗದೆ, ಆಡಳಿತ ಪಕ್ಷದವರ ರಸ್ತೆ ಕೆಲಸಗಳೆಲ್ಲಾ ಮುಗಿದಿವೆ. ಇದು ಸರಿಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಅನುಚಿತವಾದ ಆಪಾದನೆ. ನನ್ನ ಹತ್ತಿರ ಇರತಕ್ಕ ಸಂಪೂರ್ಣ ಫೈಲನ್ನು ಇಲ್ಲಿ ಅವರ ಸಮಕ್ಷಮ ಇಡುತ್ತೇನೆ. ಅವರು ಓದಿಕೊಂಡು ನಂತರ ಪ್ರಶ್ನೆ ಕೇಳಲಿ. ಈ ದಿವಸ ಸಂಜೆ ಅಥವಾ ನಾಳೆ ಬೆಳ್ಳಿಗ್ಗೆ ಎಲ್ಲಾ ಸದಸ್ಯರುಗಳಿಗೂ ಒಂದುಒಂದು ಪತ್ರ ಬರಲಿದೆ. ನಿಮ್ಮಲ್ಲಿ ಉಳಿದಿರತಕ್ಕ ರಸ್ತೆಯ ಅಂದರೆ ಪಿ. ಡಬ್ಲ್ಯು. ಡಿ. ಹ್ಯಾಂಡೋವರ್ ಮಾಡದೆ ಉಳಿದಿರತಕ್ಕ ರಸ್ತೆಯ ಉದ್ದವೆಷ್ಟು ಎಂಬುದನ್ನು ಕೂಡಲೆ. ತಿಳಿಸಬೇಕೆಂದು ಎಲ್ಲಾ ಎಂ. ಪಿ. ಗಳಿಗೂ ಮತ್ತು ಉಭಯ ಶಾಸನ ಸಭೆಯ ಸದಸ್ಯರುಗಳಿಗೂ ಪತ್ರ ಹಾಕಿದ್ದೇನೆ. ಕಾರಣ ಕೇಂದ್ರದಿಂದ ನಮಗೆ ಬಂದಿರತಕ್ಕ ವರ್ತಮಾನದ ಪ್ರಕಾರ ಇಲ್ಲಿ ಟ್ರಾನ್ಸ್‌ಪೋರ್ಟ್ ಕೌನ್‌ಸಿಲ್ಲಿನ ಮೀಟಿಂಗಿನಲ್ಲಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಒಂದು ಮಾಸ್ಟರ್ ಪ್ಲಾನನ್ನು ತಯಾರಿಸಬೇಕಾಗಿದೆ. ಅದಕ್ಕೆ ನಮಗೆ ಅಂಕಿಅಂಶಗಳು ಬೇಕಾಗಿದೆ. ಅದನ್ನು ತಯಾರಿಸಿ ಆ ಖರ್ಚಿನಲ್ಲಿ ಶೇಕಡ 50 ರಷ್ಟನ್ನು ಕೇಂದ್ರ ಸರ್ಕಾರವೂ ಮತ್ತು ಇನ್ನುಳಿದುದನ್ನು ರಾಜ್ಯ ಸರ್ಕಾರವೂ ವಹಿಸಬೇಕೆಂದು ತೀರ್ಮಾನ ಆಗಿದೆ. ಈ ಖರ್ಚಿನಲ್ಲಿ ಸೇಕಡ 50 ರಷ್ಟು ರಾಜ್ಯ ಸರಕಾರ ವಹಿಸುವುದು, ಉಳಿದುದನ್ನು ಕೇಂದ್ರ ಸರಕಾರ ಕೊಡಬೇಕೆಂದು ಚರ್ಚೆಮಾಡಿ ಕೌನ್ಸಿಲ್‌ನಲ್ಲಿ ತೀರ್ಮಾನವಾಗಿದೆ. ಇದಕ್ಕೆ ಕೇಂದ್ರ ಸರಕಾರದ ಮಂಜೂರಾತಿ ದೊರೆಯುವ ನಿರೀಕ್ಷೆಯಿದೆ.

1.30 P.M.

ಶ್ರೀ ಕೆ. ಎಫ್. ಪಾಟೀಲ್.—ಈಗಾಗಲೆ ಮಂಜೂರಾದ ರಸ್ತೆಗಳಲ್ಲಿ ಅರ್ಧಕ್ಕಿಂತ ಕಡಿಮೆ ಕೆಲಸವಾಗಿ ರೊಕ್ಕವಿಲ್ಲ ಎಂದು ಇಲಾಖೆಯವರು ಹೇಳುತ್ತಿದ್ದಾರೆ. ಆದುದರಿಂದ ಅಸಿಸ್ಟೆಂಟ್ ಎಂಜಿನಿಯರಾಗಲಿ ಅಥವಾ ಎಗ್ಸಿಕ್ಯುಟಿವ್ ಎಂಜಿನಿಯರಾಗಲಿ ಕೆಲಸ, ತೆಗೆದುಕೊಳ್ಳುತ್ತಿಲ್ಲ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಮೂರು ವರ್ಷದ ಫೇಸ್ಡ್ ಪ್ರೋಗ್ರಾಂ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿರಬೇಕು.

ಶ್ರೀ ಕೆ. ಎಫ್. ಪಾಟೀಲ್.—ಅರ್ತ್‌ವರ್ಕ್ ಕೂಡ ಅಗಿಲ್ಲ ಎಷ್ಟೋ ರಸ್ತೆಗಳಲ್ಲಿ. ಶ್ರೀ ಚಿಕ್ಕೇಗೌಡರನ್ನು ಕರೆದುಕೊಂಡುಹೋಗಿ ಪ್ರಾರಂಭೋತ್ಸವ ಕೂಡ ಮಾಡಲಾಗಿದೆ. ಆದರೆ ಇನ್ನೂ ಏನು ಕೆಲಸವೂ ಅಗಿಲ್ಲ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ಷಮಿಸಬೇಕು. ಹಾಗೆ ಬರೀ ಕಲ್ಲು ಹಾಕಿಬಿಡುವವರಲ್ಲ ನಾವು. ಬೇಸಿಗೆಯಲ್ಲಿ ಡಿಸೆಂಬರಿನಿಂದಾಚೆಗೆ ರಸ್ತೆ ಕೆಲಸ ಮಾಡುವುದು ಕಷ್ಟ. ಅದಕ್ಕಾಗಿ ಬಹುಶಃ ನಿಲ್ಲಿಸಿರಬಹುದು. ಅಂತೂ ಈ ಮೂರು ವರ್ಷಗಳಲ್ಲಿ ರಸ್ತೆ ಕೆಲಸಗಳನ್ನು ತೆಗೆದುಕೊಳ್ಳಲು ಆಜ್ಞೆಯಾಗಿರುವಂತೆ ಅದಕ್ಕೆ ಹಣ ಮತ್ತು ಕೆಲಸದ ವ್ಯವಸ್ಥೆ ಎರಡೂ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಲೆನಾಡಿನಲ್ಲಿ ಪೂರ್ಣವಾಗಿ ಜಲ್ಲಿ ರಸ್ತೆ ಮಾಡಬೇಕೆಂದು ಜಿ. ಓ. ಇದೆ. ಅದರೆ ಬರೀ ಮಣ್ಣು ರಸ್ತೆ ಮಾತ್ರ ಇದೆ. ಜೆಲ್ಲಿ ರಸ್ತೆ ಮಾಡಿಲ್ಲ. ಆದುದರಿಂದ ಅಲ್ಲಿ ಪೂರ್ಣವಾಗಿ ಜೆಲ್ಲಿ ರಸ್ತೆ ಮಾಡುವಂತೆ ಅದೇಶ ಕೊಡುವಿರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದೇಶ ಸರಕಾರಿ ಆಜ್ಞೆಯಲ್ಲೇ ಇದೆ. ಮೊದಲು ಮಣ್ಣು ರಸ್ತೆ ಮಾಡದೆ ಜಲ್ಲಿ ರಸ್ತೆ ಮಾಡುವುದಕ್ಕಾಗುವುದಿಲ್ಲ. ಮಣ್ಣು ರಸ್ತೆಯಾಗಿ 3 ರಿಂದ 6 ತಿಂಗಳಲ್ಲಿ ಸೆಟ್ಲ್‌ಡೌನ ಆದಮೇಲೆ ಬೌಲ್ಡರ್ ಹಾಕಿ ಅದು ಸೆಟ್ಲ್ ಆದಮೇಲೆ ಜಲ್ಲಿ ಹಾಕಬೇಕು. ಒಂದೇ ಸಲ ಜಿಲ್ಲಿ ಹಾಕುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಶ್ರೀರನಾಳ ಚಂದ್ರಶೇಖರ್.—ಪ್ರತಿ ತಾಲ್ಲೂಕಿನಲ್ಲೂ 50 ಮೈಲಿಗೆ ಕಡಿಮೆ ಇಲ್ಲದಂತೆ ರಸ್ತೆ ಮಾಡಲಾಗುವುದೆಂದು ತಿಳಿಸಲಾಗುವುದೆಂದು ತಿಳಿಸಲಾಗಿದೆ. ಆದರೆ ಕೆಲವು ಕಡೆ. ಆರ್. ಸಿ. ರಸ್ತೆ 5...10 ಮೈಲಿ ಇರುವುದು, ಉಳಿದುದನ್ನು ತೆಗೆದುಕೊಂಡರೆ 25-30 ಮೈಲಿ ಮಾತ್ರ ರಸ್ತೆ ಕೆಲಸ ಮಾಡಿದಂತಾಗುವುದು. ಇದನ್ನು ಸರಿಪಡಿಸುವಿರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗಲೇ ಹೇಳಿದಂತೆ ಇಡೀ ದೇಶದಲ್ಲಿರುವ ಎಲ್ಲಾ ತಾಲ್ಲೂಕುಗಳಲ್ಲೂ ಕಡಮೆ ಇರುವುದನ್ನು ನೋಡಿ ಹೆಚ್ಚು ಮಾಡಲಾಗಿದೆ. ಈಗ 50 ಮೈಲಿಯು ಪ್ರಶ್ನೆಯಲ್ಲ 150 ಮೈಲಿಯಾದರೂ ಬೇಕಾದರೆ ಸೇರಿಸಿ ತೆಗೆದುಕೊಳ್ಳುತ್ತೇವೆ ನಿಮ್ಮ ತಾಲ್ಲೂಕಿನಲ್ಲಿ.

Construction of Pick up Work Across Hebbala River in Kollegal Taluk

533. **Sri R. RACHE GOWDA** (Hanur).—

Will the Minister for Public Works and Electricity be pleased to state:—

(*a*) when the construction work of pick up across Hebbala river near Surapur village in Kollegal Taluk was started;

(*b*) when the said pick up work was expected to be completed?

Sri H. M. CHANNABASAPPA (Minister for Public Works and Electricity).—

(*a*) The construction work of the pick-up was started in September, 1964.

(*b*) It was expected to be completed before 31st August 1966.

ಶ್ರೀ ಆರ್. ರಾಚೇಗೌಡ.—ಉತ್ತರದಲ್ಲಿರುವ ಪ್ರಕಾರ ಸೆಪ್ಟೆಂಬರಿನಲ್ಲಿ ಪ್ರಾರಂಭವಾದ ಪಿಕಪ್ 31-8-1966ರ ಒಳಗೆ ಮುಗಿಯಬೇಕಾಗಿತ್ತು, ಮುಗಿದಿಲ್ಲ ಎಂಬುದು ಗಮನಕ್ಕೆ ಬಂದಿದೆಯೇ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದಿದೆ.

ಶ್ರೀ ಆರ್. ರಾಚೇಗೌಡ.—ಇದು 6 ವರ್ಷವಾದರೂ ಕೂಡ ಇನ್ನೂ ಮುಗಿಯದಿರಲು ಕಾರಣ ವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದಕ್ಕೆ ಕಾರಣ ಇದೆ; ಅಷ್ಟು ನಿಧಾನವಾದುದು ಶೋಚನೀಯ, ತಕ್ಷಣ ಮುಗಿಸಲು ಏರ್ಪಾಡು ಮಾಡುತ್ತೇವೆ.

Completion of Manchanabele Project

534. **Sri T. V. KRISHNAPPA** (Channapatna).—

Will the Minister of State for Major Irrigation be pleased to state :—

(*a*) the present position of construction of Manchanabele Project ;

(*b*) whether regular construction work is carried on now ; if not, the reasons for the same ;

(*c*) the total amount allotted during 1972–73 and the amount spent so far ;

(*d*) when this project is expected to be complected ?

Sri H. N. NANJE GOWDA (Minister of State for Major Irrigation).—

(*a*) Only preliminary works like approach roads buildings etc., are in progress.

(*b*) The construction of the dam could not be started as the foundations were with a suspected crushed zone and needed further investigations.

(*c*) Grant alloted during 1972–73 is Rs. 6.55 lakhs. The amount spent during the year to end of January 1973 is Rs. 13.39 lakhs.

(*d*) The project is programmed to be completed by the end of Vth Plan period.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಉತ್ತರದಲ್ಲಿ ಅಡಿಪಾಯ ಕುಸಿತವಲಯವಾಗಿದೆ ಎಂಬ ಸಂಶಯ ಬಂದು ತನಿಖೆಯಾಗಬೇಕಾಗಿದ್ದುದರಿಂದ ಕಾರ್ಯ ಪ್ರಾರಂಭಿಸಿಲ್ಲ ಎಂದಿದೆ. ಈಗ ತನಿಖೆ ಮಾಡುವಿರಾ ? ಹೊಸದಾಗಿ ಎಸ್ಟಿಮೇಟ್ ಮಾಡಿದ್ದೀರಾ ? ಯಾವಾಗ ಕಾರ್ಯ ಪ್ರಾರಂಭಿಸುವಿರಿ ?

† ಶ್ರೀ ಎಚ್. ಎನ್. ನಂಜೇಗೌಡ.—ಫೌಂಡೇಷನ್‌ನಲ್ಲಿ ಕ್ರಷ್ಡ್ ಜೋನ್ ಇದೆಯೆಂಬ ಅನುಮಾನ ಬಂದು ಅದನ್ನು ಪರಿಶೀಲಿಸಿ ಈಗ ಫೈನಲೈಜ್ ಮಾಡಿದ್ದಾರೆ. ಇದಕ್ಕೆ ಹೊಸದಾಗಿ ಎಸ್ಟಿಮೇಟ್ ಮಾಡಿದ್ದಾರೆ. ಈಗ 565 ಲಕ್ಷ ರೂಪಾಯಿಗಳಿಗೆ ಬೇರೆ ಎಸ್ಟಿಮೇಟ್ ಆಗಿದೆ, ಟೆಂಡರ್ ಕರೆದು ಕೆಲಸ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಟಿ. ವಿ. ಕೃಷ್ಣಪ್ಪ,—ಇದಕ್ಕೆ ಕೇಂದ್ರ ಸರಕಾರದಿಂದೇನಾದರೂ ನೆರವು ಸಿಕ್ಕಿದೆಯೇ ; ಅಥವಾ ರಾಜ್ಯ ಸರಕಾರವೇ ಪೂರ್ತಿ ಖರ್ಚನ್ನು ವಹಿಸುವುದೇ ?

ಶ್ರೀ ಎಚ್. ಎನ್. ನಂಜೇಗೌಡ.—ಕೇಂದ್ರದಿಂದ ಕ್ಲಿಯರೆನ್ಸ್ ಕೊಡಲಾಗಿದೆ. ಹಣಕಾಸನ್ನು ನಾವು ಒದಗಿಸಿ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ.—ಅನೇಕ ಬಡವರಿಗೆ ರೇಷ್ಮೆ ಬೆಳೆಯುವವರಿಗೆ ನಷ್ಟವಾಗುವುದರಿಂದ ಜಾಗ್ರತೆ ಈ ಕೆಲಸವನ್ನು ಮುಗಿಸುವಿರಾ ?

ಶ್ರೀ ಎಚ್. ಎನ್. ನಂಜೇಗೌಡ.—ಟೆಂಡರು ಕರೆದು ಹಣ ಒದಗಿಸಿ ಈ ಕೆಲಸ ಕೈಕೊಳ್ಳುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸಿಬ್ಬಂದಿ ವರ್ಗಕ್ಕೆ 1973–74 ರಲ್ಲಿ ಒದಗಿಸಿರುವ ಹಣದಲ್ಲಿ ಎಷ್ಟು ಖರ್ಚಾಗುವುದು ?

ಶ್ರೀ ಎಚ್. ಎನ್, ನಂಜೇಗೌಡ.—ಅದಕ್ಕೆ ನೋಟೀಸ್ ಬೇಕು,

Prevenion of Pollusion of air in Cities of the State

622. **Sri J. S. AMMANNANVAR** (Sadalge).—

Will the Minister for Health be pleased to stata :-

(*a*) whether the Government is aware of the pollution of the air which affects the health of the people and human environment in the growing cities like Bangalore, Mangalore, Mysore and Belgaum due to the growing industries and vehicular traffic ;

(*b*) if so, the steps taken by the Government to prevent the same ;

(*c*) if not. the reasons for not taking any steps ?

Sri H. SIDDAVEERAPPA (Minister for Health).—

(*a*) Yes.

(*b*) Government have constituted a committee to go into the question of prevention of pollution of air and also an inter disciplinary team to study the problem regarding industrialisation. In addition, the Police and the Regional Transport Officer are taking appropriate action to stop the menace of air pollution by launching prosecutions under the M.V. Act and Ru'es framed thereunder.

(*c*) Does not arise.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಎರಡು ಸಮಿತಿ ನೇಮಕ ಮಾಡಿರುವುದು ಯಾವಾಗ ? ಅದರಲ್ಲಿ ಯಾರ್ಯಾರು ಇದ್ದಾರೆ ? ಅದರ ವರದಿ ಬಂದಿದೆಯೇ ?

† ಶ್ರೀ ಎಚ್. ಸಿದ್ದವೀರಪ್ಪ.—2 ಸಮಿತಿಗಳನ್ನು ಮಾಡಿಲ್ಲ. ಒಂದು ಸಮಿತಿಯನ್ನು ಈ ಕೆಲಸಕ್ಕಾಗಿ ನೇಮಿಸಿದೆ.

1) To go into the question of prevention of pollution of water and air by the working of different factories in the State *vide* G. O. dated 22nd December 1972.

The Committee consists of the following officers.—

1 Director of Health and Family Planning. ...	Chairman
2 Joint Directer of Health and Family Planning, ...	Member-Secretary
3 Chief Engineer, Minor Irrigation and Public Health, North, Bangalore ...	Member
4 Chief Engineer, Minor Irrigation and Public Health South, Bangalore ..	Member
5 Cheif Inspector of Factories and Boilers, Bangalore ...	Member
6 Sri J. L. Radhakrishna, Professor, Government College of Engineering, Bangalore ...	Member

Any officer the Committee wants to co-opt. or hear, may be invited and heard.

Inter Disciplinary Team to study the problem regarding the industrialisation. The Team consists of the following officers and Industrialists.

(1) Commissioner for Health and Municipal Administration and Secretary to Government.
(2) Director of Health and Family Planning Services in Mysore, Bangalore.
(3) Director of Industries and Commerce.
(4) The Engineer in Chief.
(5) The Director of Town Planning/Housing Commissioner
(6) The Chief Conservator of Forests.
(7) The Managing Director, Kirloskar Limited, Bangalore.
(8) The Managing Director, H.M.T., Bangalore.

The team will be headed by the Commissioner for Health and Municipal Administration and Secretary to Government, Health and Municipal Administration Department.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಪಾಶ್ಚಿಮಾತ್ಯ ದೇಶದಲ್ಲಿ ಮೋಟಾರ್ ವಾಹನಗಳನ್ನು ಬಿಡತಕ್ಕ ಕಪ್ಪನ್ನು ಕಂಟ್ರೋಲ್ ಮಾಡುವ ಸಲುವಾಗಿ ಸ್ಪೆಷಲ್ ಕಾಯಿದೆ ಮಾಡಿದ್ದಾರೆ. ಆ ತರಹ ನಮ್ಮ ರಾಜ್ಯದಲ್ಲಿ ಮಾಡಬೇಕೆಂದು ಆಲೋಚನೆ ಇಟ್ಟುಕೊಂಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ವಿಚಾರ ಮಾಡಿಲ್ಲ, ವಿಚಾರ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಏನು ಒಂದು ಕಮಿಟಿಯ ಸದಸ್ಯರ ಹೆಸರನ್ನು ಓದಿದಿರಿ, ಅದರಲ್ಲಿ ಫ್ಯಾಕ್ಟರಿಯ ಇನ್ಸ್‌ಪೆಕ್ಟರೇಟ್ ಸಹ ಇದ್ದಾರೆ. ಫ್ಯಾಕ್ಟರಿಯ ಇನ್ಸ್‌ಪೆಕ್ಟರೇಟ್ ಅವರು ಅಮ್ಮಸಂದ್ರದಲ್ಲಿರುವ ಬಿರ್ಲಾ ಫ್ಯಾಕ್ಟರಿಯಿಂದ ಏರ್ ಸಲ್ಯೂಷನ್ ಆಗುತ್ತದೆ ಎಂದು ವರದಿ ಕೊಟ್ಟಿದ್ದರೂ ಸಹ ಒಂದೂವರೆ ತಿಂಗಳವರೆಗೆ ಏನೂ ಆಕ್ಷನ್ ತೆಗೆದುಕೊಂಡಿಲ್ಲ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅಥವಾ ಬಿರ್ಲಾ ಅವರನ್ನು ಸೇಫ್‌ಗಾರ್ಡ್ ಮಾಡುವುದಕ್ಕೋಸ್ಕರ ಸುಮ್ಮನೆ ಬಿಟ್ಟಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನಾವು ಬಿರ್ಲಾ ಅವರನ್ನು ನೋಡಿಲ್ಲ, ಅವರನ್ನು ಸೇಫ್‌ಗಾರ್ಡ್ ಮಾಡುವ ಪ್ರಶ್ನೆಯೇ ಇಲ್ಲ. ಕಮಿಟಿ ರಿಪೋರ್ಟ್ ಬಂದು, ಅದನ್ನು ಜಾರಿಗೆ ಕೊಡದಿದ್ದರೆ ತಪ್ಪು. ಏತಕ್ಕೋಸ್ಕರ ಹೀಗೆ ಆಗಿದೆ, ಎಂದು ವಿಚಾರ ಮಾಡೋಣ. ಹರಿಹರದಲ್ಲಿ ಇಂಥ ಒಂದು ಕೆಟ್ಟ ಪರಿಸ್ಥಿತಿ ಇದೆ. "This has become dangerous hazard to the health of the people". ಎಂದು ಹೇಳುತ್ತಾರೆ. ಇದರ ಮೇಲೆ ಏನು ಕ್ರಮ ಕೈಗೊಳ್ಳಬೇಕು ಎನ್ನುವುದನ್ನು ಯೋಚನೆ ಮಾಡುತ್ತಾ ಇದ್ದೇವೆ. ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಸರ್ಕಾರ ಯೋಚನೆ ಮಾಡಿ ಆ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಅರ್. ಶಾಮಣ್ಣ.—ಬೆಂಗಳೂರು ನಗರದಲ್ಲಿ ವಾಯುಗುಣ ಕೆಡತಕ್ಕಂಥಾದ್ದು ಬಿ.ಟಿ.ಎಸ್. ಬಸ್ಸುಗಳ ಮತ್ತು ಕೇಂದ್ರ ಸರ್ಕಾರದ ಕಾರ್ಖಾನೆಗಳ ಬಸ್ಸುಗಳ ಓಡಾಟ ಜಾಸ್ತಿಯಾಗಿರುವುದರಿಂದ ಇದರ ಬಗ್ಗೆ ಸರ್ಕಾರ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಲೋಚನೆ ಮಾಡಿದ್ದೀರಾ !

ಶ್ರೀ ಎಚ್. ಸಿದ್ದವೀರಪ್ಪ.—ವಾಹನಗಳು ಕೆಟ್ಟ ಹೊಗೆಯನ್ನು ಬಿಟ್ಟರೆ, ಅವುಗಳ ಮಾಲೀಕರ ಮೇಲೆ ಪೋಲೀಸ್ ಡಿಪಾರ್ಟ್‌ಮೆಂಟಿನವರು ಕೇಸುಗಳನ್ನು ಹಾಕುತ್ತಾರೆ. ಕೆಟ್ಟ ಗಾಳಿಯನ್ನು ಬಿಡಕೂಡದು ಎಂದು ಹೇಳುತ್ತಾರೆ. 1970ರಲ್ಲಿ 153 ಕೇಸುಗಳನ್ನು 1971ರಲ್ಲಿ 3016 ಕೇಸುಗಳನ್ನು 1972ರಲ್ಲಿ 2426 ಕೇಸುಗಳನ್ನು ದಾಖಲು ಮಾಡಿದ್ದಾರೆ. ಇಂಥ ಸಂದರ್ಭಗಳಲ್ಲಿ ಪೋಲೀಸರು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಈ ವಾತಾವರಣ ಕಲುಷಿತವಾಗುವುದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಲು ಎರಡು ಸಮಿತಿಗಳನ್ನು ರಚನೆ ಮಾಡಿದ್ದೇವೆ ಎಂದು ತಿಳಿಸಿದಿರಿ. ಆ ಸಮಿತಿಯಲ್ಲಿ ಕಾರ್ಖಾನೆಗಳಲ್ಲಿರುವ ಟ್ರೇಡ್ ಯೂನಿಯನ್ ಪ್ರತಿನಿಧಿಗಳನ್ನು ಸೇರಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಒಂದು ಕಮಿಟಿಯಲ್ಲಿ ಟ್ರೇಡ್ ಯೂನಿಯನ್ ಪ್ರತಿನಿಧಿಗಳನ್ನು ಸೇರಿಸೋಣ.

ಶ್ರೀ ಎಸ್. ಬಂಗಾರಪ್ಪ.—ಏರ್ ಪಲ್ಯೂಷನ್ ವಿಷಯದಲ್ಲಿ ಪಾಶ್ಚಿಮಾತ್ಯ ರಾಷ್ಟ್ರವಾದ ಸಿಂಗಪೂರ್‌ನವರು ಕೈಗೊಂಡಿರುವ ಕಾರ್ಯಕ್ರಮದ ಬಗ್ಗೆ ಒಂದು ಆರ್ಟಿಕಲನ್ನು ಬರೆದಿದ್ದೇನೆ, ಅಲ್ಲಿ ಅವರು ಒಂದು ಕಾನೂನನ್ನು ತಂದಿದ್ದಾರೆ. ಎಲ್ಲಿ ಕೆಟ್ಟ ಹೊಗೆ ಬಿಡುವ ಎಂಜಿನ್‌ಗಳು ಇವೆಯೋ ಅವುಗಳನ್ನು ರಸ್ತೆ ಪಕ್ಕದಲ್ಲಿ ಕಂಡಮ್ ಮಾಡಿ ನಿಲ್ಲಿಸಬೇಕು ಎಂದು ಮಾಡಿದ್ದಾರೆ. ಇಂಥ ಒಂದು ಅಧಿಕಾರವನ್ನು ಪೋಲೀಸರಿಗೆ ಕೊಟ್ಟು 70-80 ಪರ್ಸೆಂಟ್ ವಾಹನಗಳು ಬಿಡುವ ಕೆಟ್ಟಗಾಳಿಯನ್ನು ಕಡಿಮೆ ಮಾಡಿದ್ದಾರೆ. ತಾವೂ ಸಹ ಈ ರೀತಿ ಇಲ್ಲಿ ಕಾನೂನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಬಹಳ ದೊಡ್ಡ ಪ್ರಶ್ನೆ ಈ ರೀತಿ ಮಾಡಲಿಕ್ಕೆ ವಾಹನಗಳ ಪರಿಸ್ಥಿತಿ ಏನು ಇದೆ ಎಂದು ತಿಳಿದುಕೊಂಡು ಮಾಡಬೇಕು ಮತ್ತು ಅದರ ಮೇಲೆ ವಿಷಯವನ್ನು ಆಮೂಲಾಗ್ರವಾಗಿ ನೋಡಬೇಕಾದರೆ ಕೇಂದ್ರದ ಆಕ್ಟ್ ಆಗಬೇಕಾಗುತ್ತದೆ.

Electrification of Villages in Jamkhandi Taluk

698. **Sri P. M. BANGI** (Jamkhandi).—

Will the Minister for Public Works and Electricity be pleased state :—

(*a*) whether it is a fact that there are only nine villages in Jamkhandi taluk to be electrified ;

(*b*) whether it is a fact that the department is awaiting sanction from the Government for supplying the said villages with electricity ;

(*c*) if so, the reasons for the delay in the matter ?

Sri H. M. CHANNABASAPPA (Minister for Public Works and Electricity).—

(*a*) No.

(*b*) Nine of the un-electrified villages have been recently proposed by the Board for inclusion in the next years' programme which is being finalised in consultation with the Board.

(*c*) Does not arise in view of reply to clause (*b*) above.

ಶ್ರೀ ಪಿ. ಎಂ. ಬಂಗಿ.—ಜಮಖಂಡಿ ತಾಲ್ಲೂಕಿನ 9-ಹಳ್ಳಿಗಳ ಬಗ್ಗೆ ವಿದ್ಯುಚ್ಛಕ್ತಿ ಮಂಡಲಿಯವರು ಶಿಫಾರಸ್ ಮಾಡಿರುವುದು ನಿಜವೇ ಎಂದು ಕೇಳಿರುವುದಕ್ಕೆ ನಿಜವಲ್ಲ ಎಂದು ಹೇಳಿದ್ದೀರಿ. ಆ 9 ಹಳ್ಳಿಗಳ ಹೆಸರು ಏನು ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಹಳ್ಳಿಗಳ ಹೆಸರು ನನ್ನ ಮುಂದೆ ಇಲ್ಲ.

ಶ್ರೀ ಪಿ. ಎಂ. ಬಂಗಿ.—ಆ 9 ಹಳ್ಳಿಗಳ ಹೊರತಾಗಿ ಮತ್ತೆ ಎಷ್ಟು ಹಳ್ಳಿಗಳು ಜಮಖಂಡಿ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡಬೇಕಾಗಿ ಉಳಿದಿರುತ್ತವೆ ಅವುಗಳ ಸಂಖ್ಯೆಯನ್ನು ಹೇಳಬಹುದೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಟ್ಟು 64 ಹಳ್ಳಿಗಳಲ್ಲಿ 48 ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಆಗಿದೆ. ಇನ್ನೂ 16 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕಾಗಿದೆ. ಇದರಲ್ಲಿ ಈ ವರ್ಷದಲ್ಲಿ ಕೊಡಬೇಕಾದ್ದು ಏನಿದೆ ಅದನ್ನು ಸೇರಿಸಿಕೊಂಡಿದ್ದೇವೆ. ಈ ಹಳ್ಳಿಗಳು ಮುಂದೆ ಪ್ರಪ್ರೋಸ್ಟ್ ಟು ಟ ಇನ್‌ಕ್ಲೂಡೆಡ್ ಇವನ್ನು ಮುಂದೆ ಪರಿಶೀಲನೆ ಮಾಡುತ್ತೇವೆ.

ಶ್ರೀ ದೊಡ್ಡ ತಿಮ್ಮಯ್ಯ.—ತಾವು ವರ್ಷದಲ್ಲಿ ಎಷ್ಟೆಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ನಿಗದಿ ಮಾಡಿಕೊಂಡಿರುತ್ತೀರಿ ? ಕೆಲವು ಕಡೆ ಹಳ್ಳಿಗಳನ್ನು ಕೇಳುವವರೇ ಇಲ್ಲ, ಅದಕ್ಕೋಸ್ಕರವಾಗಿ ಡಿಸ್ಟ್ರಿಕ್ ಲೆವೆಲ್‌ನಲ್ಲಿ ಒಂದು ಯೂಸರ್ಸ್ ಕನ್‌ಸಲ್ಟೇಟೀವ್ ಕಮಿಟಿ ಅಥವಾ ಅಡ್ವೈಸರಿ ಕಮಿಟಿ ಮಾಡುವ ಯೋಜನೆಯನ್ನು ಇಟ್ಟುಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಮಿಟಿಯವರು ಶಿಫಾರಸ್ ಮಾಡಿಕೊಟ್ಟರೆ ವಿದ್ಯುಕ್ತಿಯನ್ನು ಕೊಡುವುದಿಕ್ಕಾಗುವುದಿಲ್ಲ. ವಿದ್ಯುಚ್ಛಕ್ತಿಯನ್ನು ಕೊಡಬೇಕಾದರೆ, ಪಂಚಾಯಿತಿಯು ಗ್ರಾಮಸ್ಥರು ಏನೇನು ಕಾರ್ಯಕ್ರಮವನ್ನು ಅನುಸರಿಸಬೇಕು ಎನ್ನುವ ವಿಧೇಯಕ ಇದೆ. ಆ ವಿಧೇಯಕದ ಪ್ರಕಾರ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ. ಈಗ ಸುಮಾರು 1.60 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸ್ಪೆಷಲ್ ಟ್ರಾನ್ಸ್‌ಮಿಷನ್ ಲೈನ್ ಅನ್ನು ಡ್ರಾ ಮಾಡಬೇಕು ಎಂದು ಇದೆ, ಆಗ ಹೆಚ್ಚು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಮಂಜೂರಾತಿಯನ್ನು ಮಾಡುವುದು ಸರ್ಕಾರದ ಪರಿಶೀಲನೆಯಲ್ಲಿದೆ. ಇಂದೋ, ನಾಳೆಯೋ ಅಥವಾ ನಾಡಿದ್ದೋ ಆಜ್ಞೆಯಾದ ಮೇಲೆ ಯಾವ ಯಾವ ಊರಿನ ಹತ್ತಿರ ಲೈನ್ ಹೋಗುತ್ತದೆಯೋ ಅಂಥ ಕಡೆ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಜಮಖಂಡಿ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಕೊಡದೆ ಇರುವ ಗ್ರಾಮಗಳಲ್ಲಿ ತೊಂದರೆಯಾಗಿದೆ. ಅಲ್ಲಿಯ ನೇಕಾರರಿಂದ ವಿದ್ಯುಚ್ಛಕ್ತಿಯನ್ನು ಬಳಸಲಿಕ್ಕೆ ಬೇಡಿಕೆ ಬಂದರೆ, ಅದನ್ನು ಪರಿಶೀಲನೆ ಮಾಡಿಕೊಡುವದಕ್ಕಾಗುತ್ತದೆಯೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತೀವ್ರವಾದ ಕ್ರಮಗಳನ್ನು ಅನುಸರಿಸಿ, ತೀವ್ರವಾದ ಬೇಡಿಕೆಗಳು ಬಂದರೆ, ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

Bangalore-Madras Train *via*, K.G.F.

660. **Sri K. M. DORAISWAMY NAIDU** (Bethamangala).—

Will the Minister for Public Works and Electricity be pleased to state :—

(*a*) whether the Government has recommended to the Central Government to deviate the Bangalore-Madras Train *via* K.G.F. instead of Kamasamudram to facilitate the passengers who travel from K.G.F. to Bangalore and Madras ;

(*b*) if not, whether they would recommend to the Central Government to divert the above said Train *via* K.G.F. ?

Sri H. M. CHANNABASAPPA (Minister for Public Works and Electricity).—

(*a*) No.

(*b*) This will be examined.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—ತಮ್ಮ ಉತ್ತರದಲ್ಲಿ ಬೆಂಗಳೂರು - ಮದ್ರಾಸ್ ರೈಲು ಬಂಡಿಯ ಮಾರ್ಗವನ್ನು ಬದಲಾಯಿಸುವ ಬಗ್ಗೆ ಇಲ್ಲ ಎಂದು ತಿಳಿಸಿದ್ದೀರಿ, ಬೆಂಗಳೂರು-ಮದ್ರಾಸ್ ರೈಲು ಕಾಮಸಮುದ್ರಂ, ವೈಯು ಉರಿಗಾಂ, ಮಾರಿಕೊಪ್ಪ, ಬಂಗಾರುಪೇಟೆ ಮಾರ್ಗವಾಗಿ ಹೋಗುವಂತೆ ಹಿಂದೆ ದಾಸಪ್ಪನವರ ಕಾಲದಲ್ಲಿ ಮತ್ತು ಈಚೆಗೆ ಹನುಮಂತಯ್ಯನವರ ಕಾಲದಲ್ಲಿಯೂ ಇದಕ್ಕೆ ಸರ್ವೆ ಮಾಡಿ, ಎಸ್ಟಿಮೇಟ್ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—1964ನೇ ಇಸವಿಯಲ್ಲಿ ಇದನ್ನು ಪರಿಶೀಲನೆ ಮಾಡಿ ಇದು ಅನಗತ್ಯ ಎಂದು ಹೇಳಿ ಅದನ್ನು ಕೈ ಬಿಟ್ಟಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಬೆಂಗಳೂರು - ಮದ್ರಾಸ್ ರೈಲು ಬಂಗಾರುಪೇಟೆ ಮಾರ್ಗವಾಗಿ ಹೋಗುವುದರಿಂದ, ಅಲ್ಲಿ ಎನ್.ಜಿ.ಎಫ್. ಫ್ಯಾಕ್ಟರಿ ಬೆಂಗಳೂರು ಬೆಳೆದ ಹಾಗೆ ಫ್ಯಾಕ್ಟರಿ ಬೆಳೆದಿದೆ, ಅಲ್ಲಿ ರೈಲು ಮಾರ್ಗದ ಅವಶ್ಯಕತೆ ಇದೆ. ಈಗಿನ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ, ಅಲ್ಲಿ ರೈಲು ಮಾರ್ಗವನ್ನು ಹಾಕುವುದಕ್ಕೆ ಅವಕಾಶ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ಅಲ್ಲಿ ಒಂದು ಲೂಪ್ ಲೈನ್ ಇದೆ. ಈಗ ಮಾನ್ಯ ಸದಸ್ಯರು ಕೇಳುವುದು, ಬೆಂಗಳೂರು-ಮದ್ರಾಸ್ ರೈಲು ನಮ್ಮ ಊರಿನ ಮಾರ್ಗವಾಗಿ ಹೋಗುವ ಹಾಗೆ ಮಾಡಿ ಎಂದು. ಅದನ್ನು ಪರಿಶೀಲನೆ ಮಾಡೋಣ.

Compensation for Lands Acquired for High Way no.13

774. **Sri K. B. DESAI** (Kushtagi).—

Will the Minister for Public Works and Electricity be pleased to state :—

(*a*) whether National Highway No. 13 is passing through Kushtagi to Kyadiguppa in Raichur District ;

(*b*) whether road formation has been made in the above places and lands for the same have been acquired ;

(c) if so, the reasons why compensation for the lands acquired has not been paid so far ; whether any provision has been made to pay the the same early ?

Sri H. M. CHANNABASAPPA (Minister for Public Works and Electricity) .—

(*a*) Yes.

(*b*) Formation of Kushtagi Bye-pass 1.65 Km. and 3 CD works in this reach have been taken up for execution. The formation of road from Kushtagi to Kyadiguppa has yet to be taken up for execution. Land acquisition proceedings in respect of Kushtagi Bye-pass has not yet been completed. However lands have been taken over with the consent of the land owners.

(*c*) Land acquisition charges will be paid on completion of land acquisition proceedings. Provision for meeting the expenditure therefor has been made in the sanctioned estimates.

ಶ್ರೀ ಕೆ. ಬಿ. ದೇಸಾಯಿ.—ಜಮೀನು ಸ್ವಾಧೀನಪಡಿಸುವುದಕ್ಕೆ ಒಪ್ಪಿಕೊಂಡಿದ್ದಾರೆ. ಸರ್ಕಾರಕ್ಕೆ ಸ್ವಾಧೀನ ಕೊಡಿಸುವ ಮುಂದೆ ಒಟ್ಟಿಗೆ ಕಾಂಪನ್ಸೇಷನ್ ಬರುತ್ತದೆ ಎಂದು ಹೇಳಿದ್ದಾರೆ. ಆದರೆ 6 ತಿಂಗಳಾದರೂ ಬರಲಲ್ಲವಾಗಿದೆ ಏನು ವಿಚಾರ. ಸ್ಟ್ಯಾಂಡಿಂಗ್ ಕ್ರಾಪ್ ಕಾಂಪನ್ಸೇಷನ್ ಬರಲಿಲ್ಲ ಏತಕ್ಕೆ ತಡವಾಯಿತು !

† ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ರಾಪ್ ಕಾಂಪನ್ಸೇಷನ್ ಕೊಡಲಾಗುತ್ತಿದೆ. ಅಕ್ವಿಜಿಷನ್ ಆದಕೂಡಲೇ ಎಲ್ಲಾ ಕೊಡುತ್ತಾರೆ.

ಶ್ರೀ ಕೆ. ಬಿ. ದೇಸಾಯಿ.—ಕುಷ್ಟಗಿಯಲ್ಲಿ ಇನ್ನೊಂದು ರಸ್ತೆ ಇದೆ. ಒಬ್ಬ ರೈತರಿಗೂ ಕಾಂಪನ್ಸೇಷನ್ ಕೊಟ್ಟಿಲ್ಲ ಬಹಳ ದಿವಸಗಳಾಯಿತು ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಪ್ರಶ್ನೆ ನ್ಯಾಷನಲ್ ಹೈವೇ 13ಕ್ಕೆ ಸಂಬಂಧಪಟ್ಟಿದ್ದು ಅಲ್ಲ.

Lift Irrigation Schemes in the State

841. **Sri D. NARAYANA DAS** (Harapanahalli).—

Will the Minister for Public Works and Electricity be pleased to state :—

(*a*) the reasons for not completing the number of lift irrigation works so far even though 5 to 6 years have been passed after starting the said works ;

(*b*) the action taken by the Government to expedite their completion since they are progressing at the low speed ;

(*c*) the action taken by the Government against the Officers for their deriliction of duties in regard to these schemes ;

(*d*) when these schemes will be completed ?

Sri H. M. CHANNABASAPPA (Minister for Public Works and Electricity).—

(*a*) The reasons for non-completion of lift irrigation work within the prescribed time are as under :

The location of some of these schemes being in the difficult interior parts of the District thereby causing hindrance for transportation of materials and equipments, non-supply of plants and machineries at proper time and the delay in their installations.

(*b*) Steps have been taken to transport necessary equipments required. Orders have been issued to supply and instal plants, pipes and machineries expeditiously, All necessary arrangements have been made to complete the works quickly.

(*c*) No Officer is found to have committed deriliction of duties.

(*d*) All necessary steps have been taken to complete all the lift irrigation works in the State before the end of this March.

ಶ್ರೀ ಡಿ. ನಾರಾಯಣದಾಸ್.—ತಮ್ಮ (ಅ) ಉತ್ತರದಲ್ಲಿ ಬೇಕಾದ ಸಾಮಾನು ಸರಂಜಾಮುಗಳನ್ನು ಸಾಗಿಸಲು ಕ್ರಮಗಳನ್ನು ಕೈಕೊಂಡಿದೆ. ಯಂತ್ರೋಪಕರಣಗಳನ್ನು ಪೈಪುಗಳನ್ನು ಬೇಗ ಸರಬರಾಜು ಮಾಡಿ ಜೋಡಿಸಲು ಆದೇಶ ನೀಡಲಾಗಿದೆ ಎಂದು ಹೇಳಿದ್ದೀರಿ ಆದರೆ ಹರಪನಹಳ್ಳಿ, ನಿಟ್ಟೂರು ಲಿಫ್ಟ್ ಇರಿಗೇಷನ್ ಸುಮಾರು 15-16 ಮೈಲಿಗಳು ಅದಕ್ಕೆ ಬೇಕಾದಂತಹ ಪೈಪುಗಳು ಐರನ್ ಅಂಡ್ ಸ್ಟೀಲ್ ಫ್ಯಾಕ್ಟರಿಯಲ್ಲಿ ಸ್ಪೆಷಲ್ ಆಗಿ ಮ್ಯಾನುಫ್ಯಾಕ್ಚರ್ ಮಾಡದೆ ಇರುವುದರಿಂದ ಕೆಲಸ 5-6 ವರ್ಷಗಳಿಂದ ನಿಂತುಹೋಗಿದೆ ಎಂದು ಗಮನಕ್ಕೆ ಬಂದಿದೆಯೇ ? ಹಾಗೆ ಇದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಹರಪನಹಳ್ಳಿ, ತಾವರೆಗುಂಡಿ ಒಂದೇ ಇರುವುದು.

ಶ್ರೀ ಡಿ. ನಾರಾಯಣ ದಾಸ್.—ಇದು ಶುರು ಮಾಡಿ 5-6 ವರ್ಷಗಳಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಬಿಟ್ಟು ಬಿಟ್ಟಿದ್ದೇವೆ.

ಶ್ರೀ ಡಿ. ನಾರಾಯಣದಾಸ್.—ಅದಕ್ಕೆ ಬೇಕಾದಂತಹ ಪೈಪ್‌ಗಳು ಸ್ಪೆಷಲ್ ಆಗಿ ಮ್ಯಾನುಫ್ಯಾಕ್ಚರ್ ಮಾಡಬೇಕು ಎಂದು ಪಿ. ಡಬ್ಲ್ಯು. ಡಿಪಾರ್ಟ್‌ಮೆಂಟ್‌ನವರು ಹೇಳುತ್ತಾರೆ ಅದರಿಂದ ತಡವಾಗಿದೆ ಎಂದು. ಅದಕ್ಕಾಗಿ ತಾವು ಏನು ಹೇಳುತ್ತೀರಿ. ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹರಪನಹಳ್ಳಿ, ತಾವರೆಗುಂಡಿ ಶುರುವಾಗಿರತಕ್ಕದ್ದು 1965ನೇ ಇಸವಿಯಲ್ಲಿ ಮಂಜೂರು ಆದದ್ದು. ಬೇರೆ ಹಲವಾರು ಲಿಫ್ಟ್ ಇರಿಗೇಷನ್ ಸ್ಕೀಮ್‌ನಿಂದ ನೀರು ವಿನಿಯೋಗ ಆಗತಕ್ಕದ್ದು ಸಾಧ್ಯ ಆಗದಿರುವುದರಿಂದ ಇದನ್ನು ಕೈಬಿಟ್ಟಿದೆ.

ಶ್ರೀ ಡಿ. ಸತ್ಯನಾರಾಯಣಸಿಂಗ್.—ಬಳ್ಳಾರಿ ಜಿಲ್ಲೆ ಮಲ್ಲಾಪುರ ತಾಲ್ಲೂಕಿನಲ್ಲಿ ಎಷ್ಟು ಲಿಫ್ಟ್ ಇರಿಗೇಷನ್ ವರ್ಕ್ಸ್ ನಡೆಯುತ್ತವೆ ; ಸ್ಯಾಂಕ್ಷನ್ ಆಗಿರುವುದು ಎಷ್ಟು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಾ ತಾಲ್ಲೂಕುಗಳಲ್ಲಿ ತೆಗೆದುಕೊಂಡಿರತಕ್ಕ ಲಿಫ್ಟ್ ಇರಿಗೇಷನ್ ವರ್ಕ್ಸ್ ಮಾರ್ಚಿ 31ರೊಳಗೆ ಆಗತಕ್ಕದ್ದು ; ಹೆಚ್ಚು ಎಂದರೆ ಜೂನ್ ಒಳಗೆ ಆಗುತ್ತವೆ. ಅದರಲ್ಲಿ ಒಂದು ಅಥವಾ ಎರಡು ಅನಿವಾರ್ಯವಾಗಿ ಡ್ರಾಪ್ ಮಾಡಬೇಕಾಗಿದೆ. ತಮಗೆ ಮೊದಲು ಇದರ ಪಟ್ಟಿಯನ್ನು ಕೊಟ್ಟರೆ ಎಷ್ಟು ಆಯಿತು, ಎಷ್ಟು ಉಳಿಯಿತು ಎಂದು ತಮಗೇ ಗೊತ್ತಾಗುತ್ತದೆ. ಮೊದಲು 31 ಸ್ಯಾಂಕ್ಷನ್ ಆಯಿತು, ಅದರಲ್ಲಿ 28 ಕಂಪ್ಲೀಟ್ ಆಯಿತು, ಎರಡು ಡ್ರಾಪ್ ಮಾಡಿದ್ದೇವೆ, ಒಂದು ಪ್ರೋಗ್ರೆಸ್‌ನಲ್ಲಿದೆ. ಆಮೇಲೆ 131 ಸ್ಯಾಂಕ್ಷನ್ ಆಗಿದೆ. ಅವರಲ್ಲಿ 30 ಕಂಪ್ಲೀಟ್ ಆಗಿವೆ, 20 ವಜಾ ಮಾಡಿದ್ದೇವೆ; ಇನ್ನು 81 ತೆಗೆದುಕೊಳ್ಳಬೇಕಾದ್ದರಲ್ಲಿ 51 ಇನ್ನು ಕ್ರಾಷ್ ಪ್ರೋಗ್ರಾಂನಲ್ಲಿ ತೆಗೆದುಕೊಂಡಿದ್ದೇವೆ. ಇನ್ನು 70ನ್ನು ಮಂಜೂರು ಮಾಡಿದ್ದೇವೆ ಅದರಲ್ಲಿ 30 ಕೂಡ ಸೇರಿಸಿಕೊಂಡಿದ್ದೇವೆ, ಅವು ಕಂಪ್ಲೀಟ್ ಆಗುತ್ತವೆ. ಈಚೆಗೆ 70 ಹೊಸ ಸ್ಕೀಮ್‌ಗಳನ್ನು ತೆಗೆದುಕೊಂಡಿದ್ದೇವೆ, ಜೂನ್ ಆಖೈರೊಳಗೆ ಅವನ್ನು ಪೂರೈಸುತ್ತೇವೆ. ಇವರಿಂದ 75,377 ಎಕರೆ ನೀರಾವರಿಯಾಗುತ್ತದೆ.

ಶ್ರೀ ಡಿ. ನಾರಾಯಣದಾಸ್.—ಇಂಡಿ ತಾಲ್ಲೂಕಿನಲ್ಲಿ ಉಮ್‌ರಾಣಿ ತೆಗೆದುಕೊಳ್ಳಬೇಕು. ಅದು ಸ್ಕೀಮ್‌ನಲ್ಲಿ ಸೇರ್ಪಡೆ ಆಗಿಲ್ಲ, 3 ತಿಂಗಳಾಯಿತು. ಸ್ಕೀಮ್ ಕಾರ್ಯಗತ ಮಾಡುವುದಕ್ಕೆ ಪ್ರಯತ್ನಪಟ್ಟಿಲ್ಲ ಕಾರಣ ಏನು ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಇನ್ನು ಲಿಸ್ಟ್‌ನಲ್ಲಿ ಎಷ್ಟು ಮಂಜೂರು ಆಗಿದೆ ; ಪ್ರತಿ ತಾಲ್ಲೂಕಿನಲ್ಲಿ ಯಾವ ಯಾವುದು ಮಂಜೂರು ಆಗಿದೆ, ಯಾವ ಮಟ್ಟದಲ್ಲಿ ಇವೆ, ಯಾವಾಗ ಪೂರೈಸುತ್ತೇವೆ ಎನ್ನುವ ಮಾಹಿತಿ ಬೇಕಾದರೆ ನನ್ನ ಹತ್ತಿರ ಬಂದರೆ ಕೊಡುತ್ತೇನೆ. ಹೊಸ ಸ್ಕೀಮ್ ಯಾವ ಯಾವುದು ಇದೆಯೋ ಅದರಬಗ್ಗೆ ತಕ್ಷಣದಲ್ಲಿ ಸಮಾಚಾರ ಕೊಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಡಿ. ನಾರಾಯಣದಾಸ್.—ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬರಲಿಲ್ಲ. ಹರಪನಹಳ್ಳಿ ನಿಟ್ಟೂರು ಲಿಫ್ಟ್ ಇರಿಗೇಷನ್ ಸ್ಕೀಮ್‌ಗೆ ಬೇಕಾದ ಪೈಪುಗಳು ಫ್ಯಾಕ್ಟರಿಯಲ್ಲಿ ಸ್ಪೆಷಲ್ ಮ್ಯಾನುಫ್ಯಾಕ್ಚರ್ ಮಾಡಬೇಕು, ಅದಕ್ಕಾಗಿ ನಿಂತುಹೋಗಿದೆ ಎಂದು ಹೇಳುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಪೆಷಲ್ ಮ್ಯಾನುಫ್ಯಾಕ್ಚರ್ ಮಾಡಿಸಬೇಕಾದರೆ ಮಾಡಿಸಬೇಕಾಗುತ್ತದೆ, ನಿಧಾನವಾಗುತ್ತದೆ.

ಶ್ರೀ ಡಿ. ನಾರಾಯಣ ದಾಸ್.—ಮಾರ್ಚಿಯೊಳಗೆ ಮುಗಿಯುತ್ತದೆಂದು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಡಿದರೆ 7-8 ತಿಂಗಳಾದರೂ ಕೂಡ ಕೆಲಸ ಮುಕ್ತಾಯವಾಗತಕ್ಕ ಪರಿಸ್ಥಿತಿಯಲ್ಲಿ ಇಲ್ಲ.

ಶ್ರೀ ಡಿ. ನಾರಾಯಣದಾಸ್.—ಅದು ತಮ್ಮ ಊಹೆ !

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದೋ ಒಂದು ಉದ್ದಿಶ್ಯದಿಂದ ಹೇಳುತ್ತಾರೆ. ವಿಶೇಷವಾದ ರೀತಿ ಪೈಪುಗಳನ್ನು ಹೊಸದಾಗಿ ತಯಾರು ಮಾಡಬೇಕಾದರೆ ಕಾಲ ಬೇಕಾಗುತ್ತದೆ. ಅದು ಒಂದು ಬಿಟ್ಟು ಇತರ ಎಲ್ಲಾ ಸ್ಕೀಮುಗಳು ಜೂನ್ ಒಳಗೆ ಮುಕ್ತಾಯವಾಗುತ್ತದೆಂದು ಹೇಳುತ್ತೇನೆ.

MADAM SPEAKER.—Now Question Hour is over.

QUESTION FOR ANSWER ON THE DAY

(But not taken up)

Scheduled Castes and Scheduled Tribes Employees in Private Educational Institutions

637. **Sri MAHENDRA KUMAR** (Hulsoor).—

Will the Minister for Education be pleased to state :—

(*a*) whether there are any Scheduled Castes and Scheduled Tribes employees working in the Private Educational Institutions which are aided by the Government ;

(*b*) if so, the number of them working in Class I, II and III posts may please be furnished ?

Sri A. R. BADARI NARAYANA (Minister for Education).—

(*a*) Yes.

(*b*) Information is not readily available.

Calling Attention to Matters of Urgent Public Importance :

(i) *re* : Inadequate Teaching Staff in the Medical College, Bellary

Sri B. SATYANARAYANA SINGH (Hospet).—I call the attention of the Minister for Health to the inadequate teaching staff in Medical College, Bellary.

Sri H. SIDDAVEERAPPA (Minister for Health).—Sir, I state as follows :

The sanctioned strength under four categories of teaching cadre in the Medical College, Bellary is 139, the details of which ara as noted below :—

1.	Professors ...	9
2.	Associate Professors and Readers ...	24
3.	Assistant Professors and Assistant Associate Professors ...	31
4.	Lecturers ...	75
	Total	139

The number of posts that are vacant under the four categories indicated above as on 24-2-1973 are 42, the details of which are as follows :—

1.	Lecturers ...	17
2.	Assistant Professors and Assistant Asssotiate Professors ...	20
3.	Associate Professor ...	1
4.	Professors ...	4
	Total	42

The reasons for which the vacancies have arisen, the action taken to fill up these posts and the present position under each category is as nated below :—

1. *Lecturers* : Out of 25 Lecturers posted to Bellary Medical College in December 1972, three did not report to duty & three were transferred to other Colleges. The other vacancies have arisen due to resignation and proceeding of certain Doctors on higher studies. Action has already been taken to release 81 posts of Lecturers to the Public Service Commission (33 posts have been released on 3-8-1972 and 48 posts on 13-2-1973). The existing 17 vacancies will be filled up soon after the receipt of selected list from the Public Service Commission.

2. *Assistant Professors and Assistant Associate Professors* : The number of posts vacant under this category is 20. Most of these posts are in non-clinical subjects in which there is acute dearth of qualified post graduate candidates.

Sixtythree posts of Assistant Professors and Assistant Associate Professors have been released to the Public Service Commission (45 posts have been released on 24-9-1971 and 18 posts on 18-1- 973.) A list of selected candidates has been received from the Public Service Commission on 24-2-1973. The Public Service Commission could selects only 27 candidates against 14 different Departments as no candidates were available for certain posts :

For the following posts there were no cadidates : –

2 Posts of Assistant Prafessors in Anatomy.
1 Post of Assistant Associate Professor in Urology.
1 Post of Assistant Associate Professor in Cardiology.
1 Post of Assistant Associate Professor in Thoracic Surgery.
1 Post of Assistant Associate Professor in Plastic Surgery.
2 Posts of Assistant Associate Professors in Opthalmology.

For the following posts candidates to the extent required were not available :—

2 Posts of Assistant Professors in Physiology.
1 Post of Assistant Professor in Pathology.
1 Post of Assistant Professor in Preventive and Social Medicine.
1 Post of Assistant Associate Professor Skin and V.D.
2 Posts of Assistant Associate Professors in Radiology.
1 Post of Assistant Associate Professor in Orthopaedics.

3. *Associate Professors* : Only one post is vacant. This post could not be filled up for want of qualified candidate in Pathology. The work is now being looked after by Professor of Pathology.

4. *Professors* : Four posts of Professors are vacant. Two posts (one in Medicine and one in Surgery) have fallen vacant due to promotion of Dr. S. Chinnapulley as Dean and due to transfer of Dr. C. Vittai as Professor of Plastic Surgery to Bangalore Medical College. These posts could not however be filled up so far, as the seniority list has not been finalised. The seniority list of Class-I Officers is expected to be finalised shortly and action will be taken to fill up these posts soon after the seniority list is finalised. In the meanwhile, incharge arrangements have been made against these two posts. Incharge arrangements have also been made against the post of Professor of Microbiology and the post of Professor of Preventive & Social Medicine.

Reasons for non-recognition of the College by Indian Medical Council

The main reason for non recognition of the College by the Indian Medical Council is the inadequate staff and bed strength. The staff position is as explained above.

As regards bed strength, sanction has already been accorded for a new 680 bedded hospital at a total cost of Rs. 84 lakhs the first stage consisting of 120 beds and four operation theatres are likely to be completed before 31-3-1973. In view of increased cost of work, revised Plans and estimates for the II Stage consisting of 240 beds amounting to Rs. 39.95 lakhs have been received from the Director of Health & Family Planning Services and are under scrutiny.

(SRI H. SIDDAVEERAPPA)

The proposal for transferring the Health Centre to the Administrative Control of the Dean, Medical College Bellary, has been accepted by the Government in principle.

A new 500 M.A. X-ray plant has also been sanctioned and it is expected to be commissioned by 31-3-1972.

All the other arrangements are in accordance with the standards set by the Indian Medical Council. The Government expects that it would be possible to improve the bed strength and the staff position to secure recognition by the Indian Medical Council in about a year's time.

ಶ್ರೀ ಬಿ. ಸತ್ಯನಾರಾಯಣ ಸಿಂಗ್.— ಸ್ವಾಮಿ, ತಾವು ಈಗ ಕೊಟ್ಟಿರುವ ಹೇಳಿಕೆ ಪ್ರಕಾರ 14ಬೇರೆ ಬೇರೆ ಶಾಖೆಗಳಲ್ಲಿ ತಜ್ಞರು ಇಲ್ಲ ಎಂದು ಹೇಳುತ್ತಿದ್ದೀರಿ. ಈ ವಿಷಯದಲ್ಲಿ ಆ ಮಕ್ಕಳಿಗೆ ವಿದ್ಯಾಭ್ಯಾಸ ಹೇಳುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? ಮತ್ತು ಮುಂದೆ ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅನೇಕ ತೊಂದರೆಗಳು ಇರುವ ಸಲುವಾಗಿಯೇ ಅದನ್ನು ತಪ್ಪಿಸುವುದಕ್ಕೆ ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್ ಅಡ್ಮಿಷನ್ ಸ್ಟ್ರೆಂಗ್ತನ್ನು ಜಾಸ್ತಿಮಾಡಿದೆ. ಈಗ ಕೆಲವರಿಗೆ ಟ್ರೈನಿಂಗ್ ಆಗುತ್ತಾ ಇದೆ. ಅವರು ಆ ಟ್ರೈನಿಂಗ್‌ನ್ನು ಮುಗಿಸಿಕೊಂಡು ಬಂದ ಮೇಲೆ ಬಹುಶಃ ಈ ಸಮಸ್ಯೆ ಬಗೆಹರಿಯುತ್ತದೆ ಎಂದು ಕಾಣುತ್ತದೆ.

(ii) *re* : acquisition of properties at Banthkal and Aligade for Development of Karwar Port.

ಶ್ರೀ ಎಸ್. ಬಂಗಾರಪ್ಪ (ಸೊರಬ).— ಸ್ವಾಮಿ, ಕಾರವಾರ ಬಂದರನ್ನು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಬೈಲ್‌ಕೋಲ್ ಹಾಗೂ ಅಲಿಗಡ್ಡೆಗಳಲ್ಲಿರುವ ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡಿರುವ ವಿಚಾರವನ್ನು ಮಾನ್ಯ ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳವರ ಗಮನಕ್ಕೆ ತರಬಯಸುತ್ತೇನೆ.

Sri H. M. CHANNABASAPPA (Minister for Public Works and Electricity).— Sir, I state as follows :

The land acquisition in Baithkol and Bad villages adjacent to Karwar port was initiated in the year 1962, in pursuance of the recommendations of the Intermediate port Development Committee 196 , which among other things recommended the desirability of immediate acquisition of about 150 acres of land adjacent to Karwar port in order to freeze the land value and to avoid difficulty to acquire the land at a later stage. The development of Karwar port was taken up in two stages. The first stage development as recommeded by the Committee for providing a Lighterage Wharf on stacking area etc., has been completed. The second stage development proposals have been submitted to the Government of India for approval.

An area of 113 acres 13 guntas and 6 1/16 annas is under acquisition for the purpose of development of Karwar port, out of which 71 acres 10 guntas and 9 13/16 annas and 7 buildings were taken possession and the remaining area of 42 acres 2 guntas and 12 4/16 annas yet to be taken over. The properties of about 304 families are under acquisition subject to proper rehabilitation, for the specific purpose of the developmental activities connected with Karwar ports which includes lands and buildings for the port based industries, the shipping interests included Ship Agents, Ship chandlers, labour amenity suppliers, stevedores, fisheries interestes, ship building industry, wharves, Jetties, ore stacking areas, railway interests, roads, waterways, office and quarters for the port departmental staff etc. All the properties so far taken over which include only 7 buildings have been utilised for one or the other of the above purposes. The 7 buildings taken over are used as detailed below :—

	To whom alloted
1. Grand Hotel Building.	1. Port Based Caustic Soda Factory Manager. 2. Iron Ore Sampling Company. 3. Mechanised Ore Loading Co., 4. Departmental Officials' Quarters. 5. Ship Chandlers Office-cum-residence. 6. Mysore Minerals Ltd., Office-cum-residence. 7. Steamer Agents' Office (Baxi and Company)
2. Building Opposite Passenger shed.	Labour Amenity, Provision and Food Suppliers Shop
3. Scindias building.	1. Karwar Bunder Post Office-cum Postmaster's residence. 2. Port Officials Quarters.
4. Municipal Dharmasala Building.	Port Officials Quarters.
5. John D'Souza building	Port Stevedore's office.
6. Edith Mary building (2 Nos.)	Port Officials Quarters.
7. do	do

Open fields are earmarked for ore stacking and location of industrial units The project of Ferro-Cement concrete boat building in the joint sector has been approved by Government and large area of land near Baithkol is required for this purpose shortly.

No acquired lands taken possession by Ports Department have been given to private individuals not connected with the above purpose. No emergent notices have been issued to the people to vacate the

(SRI H. M. CHANNABASAPPA)

houses since the occupants of these acquired lands and buildings are subject to rehabilitation. Though the land acquisition proceedings have taken nearly 10 years and a total compensation of Rs. 21.24 lakhs has been paid, none of the building holders other than 7 buildings mentioned above have been evicted pending provision of alternate sites and rehabilitation of displaced persons affected by the land acquisition. Some agricultural lands taken over possession is proposed to be allotted to the same owners for agricultural purposes under lease to be approved by the Government as in the case of lands acquired for the development of Mangalore Port until such time these lands are actually required for the development of the port.

ಶ್ರೀ ಎಸ್. ಬಂಗಾರಪ್ಪ.—ಏಳು ಕಟ್ಟಡಗಳ ವಿಷಯ ಹೇಳಿದ್ದಾರೆ. ಅದರಲ್ಲಿ ಗ್ರಾಂಡ್ ಹೋಟಲ್ ಕಟ್ಟಡವನ್ನು ಪೋರ್ಟ್ ಬೇಸ್ಡ್ ಕಾಸ್ಟಿಕ್ ಸೋಡಾ ಫ್ಯಾಕ್ಟರಿ ಮ್ಯಾನೇಜರ್ ಅವರಿಗೆ ಅಲಾಟ್ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಕಾಸ್ಟಿಕ್ ಸೋಡ ಫ್ಯಾಕ್ಟರಿ ಬೆಣಿಗ ಎಂಬಲ್ಲಿ ಬರುತ್ತದೆ. ಅದು ಕಾರವಾರ ಬಂದರಿನಿಂದ ಸುಮಾರು ಅರೇಳು ಮೈಲಿ ಇದೆ. ಆ ಕಾರ್ಖಾನೆಯ ಮ್ಯಾನೇಜರಿಗೆ ಕೊಡಲು ಕಾರಣವೇನು ? ಗ್ರಾಂಡ್ ಹೋಟಲ್ ಕಟ್ಟಡ ಪೋರ್ಟ್ ಅಭಿವೃದ್ಧಿಗೋಸ್ಕರ ಅಕ್ವೈರಾಗಿದೆ. ಇದನ್ನು ಅಕ್ವೈರ್ ಮಾಡಿದ ಮೇಲೆ ಅಲ್ಲಿ ಹೋಟೆಲ್ ನಡೆಸುವುದಕ್ಕೆ ಬೇರೆಯವರಿಗೆ ಕೊಡುವ ವ್ಯವಸ್ಥೆಯಾಗುತ್ತಿದೆ ಎಂದು ಗೊತ್ತಾಗಿದೆ. ಇದು ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರೈವೇಟ್ ಪಾರ್ಟಿಗಳಿಗೆ ಯಾರಿಗೂ ಕೊಡಬೇಕೆಂಬ ಅಭಿಪ್ರಾಯವಿಲ್ಲ. ಈ ದೂರು ಸರ್ಕಾರಕ್ಕೆ ಬಂದಿದೆ. ನಾನು ಕಾರವಾರಕ್ಕೆ ತಕ್ಷಣದಲ್ಲಿ ಹೋಗುವವನಿದ್ದೇನೆ. ಆ ರೀತಿ ಏನಾದರೂ ಹೆಚ್ಚು ಕಡಮೆಯಾಗಿದ್ದರೆ ಸರಿಪಡಿಸುತ್ತೇನೆ.

ಕಾಸ್ಟಿಕ್ ಸೋಡ ಫ್ಯಾಕ್ಟರಿ ಪೋರ್ಟ್ ಬೇಸ್ಡ್ ಇಂಡಸ್ಟ್ರಿ. ಆ ಕೈಗಾರಿಕೆಗೂ ಪೋರ್ಟ್‌ಗೂ ಸಂಬಂಧವಿದೆ ಎನ್ನುವ ಕಾರಣದ ಮೇಲೆ ಕೊಡಲಾಗಿದೆ. ನಾನು ಆಗಲೇ ಹೇಳಿದಂತೆ ಇದರಲ್ಲಿ ಏನಾದರೂ ಅವ್ಯವಹಾರಗಳು ನಡೆದಿದ್ದರೆ, ಆಗಲೇ ಜನಗಳು ಬಂದು ದೂರು ಕೊಟ್ಟಿದ್ದಾರೆ. ಏನಾದರೂ ಹೆಚ್ಚು ಕಡಮೆ ಆಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಈಗಾಗಲೇ ಕಾರವಾರಕ್ಕೆ ಹೋಗಬೇಕಾಗಿತ್ತು. ಅಸೆಂಬ್ಲಿ ಅಧಿವೇಶನಕ್ಕೋಸ್ಕರ ನಿಂತಿದ್ದೇನೆ. ಅಸೆಂಬ್ಲಿ ಮುಗಿದ ಕೂಡಲೇ ಹೋಗಿ ಏನಾದರೂ ಹೆಚ್ಚು ಕಡಮೆ ಇದ್ದರೆ ಸರಿಪಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಪೋರ್ಟ್ ಡೆವಲಪ್‌ಮೆಂಟ್ ಮಾಡುವುದಕ್ಕೆ ಜಮೀನು ಅಕ್ವೈರ್ ಮಾಡಿಕೊಂಡಿದ್ದಾರೆ. ಕೆಲವರಿಗೆ ಮೂರು ನಾಲ್ಕು ಬಾರಿ ನೋಟೀಸ್ ಜಾರಿ ಮಾಡಿದ್ದಾರೆ. ಬೇರೆ ಜಮೀನು ಕೊಟ್ಟಿಲ್ಲ, ಮನೆಗೆ ಸ್ಥಳ ಮಾಡಿ ಕೊಟ್ಟಿಲ್ಲ. ಪರಿಹಾರ ಹಣವನ್ನೂ ಕೂಡ ಸಂಪೂರ್ಣವಾಗಿ ಪಾವತಿ ಮಾಡಿಲ್ಲ. ಅಷ್ಟರೊಳಗೆ ನೋಟೀಸ್ ಕೊಟ್ಟು ಬಿಡಿಸುವುದು ಏಕೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವೆಲ್ಲ ವಿವರಗಳನ್ನೂ ನಾವೂ ನೀವೂ ಕರೆತು ಯೋಚನೆ ಮಾಡುವುದರ ಬದಲು ನಾನು ಅಲ್ಲಿ ಹೋಗಿ ಅದರ ಬಗ್ಗೆ ಸಮಗ್ರವಾಗಿ ವಿಚಾರ ಮಾಡಿ ಏನಾದರೂ ಅವ್ಯವಸ್ಥೆ ನಡೆದಿದ್ದರೆ ಅದನ್ನು ಸರಿಪಡಿಸುತ್ತೇನೆ.

(iii) *re* : removal of some workers of Vicon Industries Limited Bangalore

ಶ್ರೀ ಎಸ್. ಬಂಗಾರಪ್ಪ.—ಬೆಂಗಳೂರಿನಲ್ಲಿರುವ ವೈಕಾನ್ ಇಂಡಸ್ಟ್ರೀಸ್‌ನಲ್ಲಿ ಕೆಲಸ ಮಾಡುತ್ತಿದ್ದ ಹಲವಾರು ಜನರನ್ನು ಅಕ್ರಮವಾಗಿ ಕೆಲಸದಿಂದ ತೆಗೆದು ಹಾಕಿರತಕ್ಕ ವಿಷಯದಲ್ಲಿ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನಾನೂ ಸಹ ಮಾನ್ಯ ಮಂತ್ರಿಗಳ ಗಮನವನ್ನು ಇದೇ ವಿಷಯದಲ್ಲಿ ಸೆಳೆಯುತ್ತೇನೆ.

Sri Azeez Sait (Minister for Labour).—Madam I state as follows The Management of Vicon Ltd , issued notice to the employees of Vicon Limited, on 5-3-1973 stating that as the financial position of the Company has deteriorated very much this year due to their inability to sell their product. *viz.*, Combine harvesters, and that they have been able to sell only six Combine harvesters as against the 88 Combine harvesters previous year. Further, they have a stock of over 160Combine harvesters fully assembled and another 80 almost complete for marketing. It is reported that there is no possibility of selling these Combine harvesters which are in stock during the next 2 years.

2. As against the anticipated sale of 200 Combine harvesters to to the Punjab Agro-Industries Corporation Ltd., they have not been able to sell more than 40; and even this sale may not be finalised before the end of March 1973. There is a severe recession in the agricultural machinery industry, and even the sale of tractors has gone down appreciably. The company is reported to have incurred a loss of Rs. 12,30,709-00 up to the year ending 30th June 1972. The only solution that appears possible is to diversify the production and manufacture of simple machines which would take at least 2 years time to develop the concept of the new machine suitable for the changed pattern of demand before any other product can be taken up for commercial production.

3. The Company, therefore, has no other alternative but to retrench the employees and reduce the work force strictly in accordance with the provisions of the Industrial Dispute Act. The seniority list, categorywise, has been prepared and displayed on the establishment's notice board.

4. The President of the Bangalore District Engineering Workers' Union submitted a representation on 9-3-1973 requesting the Conciliation Officer to take up the dispute relating to the apprehended retrenchment of workmen in conciliation.

5. The conciliation notices were issued on the same day, *viz.*, 9-3-1973 fixing up the conciliation proceedings to take place on 13-3-1973 The management, however, wrote a latter on 13-3-1973 requesting the Conciliation Officer to postpone the proceedings to 16-3-1973 since 13-3-1973 was not convenient to them. Accordingly, the next conciliation was fixed for 15-3-1973 Meanwhile, it is learnt the management retrenched 139 workers out of a total of 165 workers and they issued retrenchment notices in Form P (2) on 13-3-1973 as required under Clause C of Section 25-F of Industrial Disputes Act, 1947.

6. On 15-3-1973, the management requested the Conciliation Officer to give a hearing to them separately. Accordingly, Sri

(SRI AZEEZ SAIT)

Vedantan, General Manager, Sampath, Secretary of the Company met the Conciliation Officer and represented that the main reasons for retrenchment are as follows:—

(i) Lack of sales.
(ii) Heavy accumulation of Stocks which will last for the next two years.
(iii) Financial stringency.
(iv) No other product could be marketted easily.
(v) The lead-time of at least 2 years required to develop the concept of new machine suitable for marketing.

7. The management further stated that they discussed the question of retrenchment in great detail with the representative of workmen on various dates prior to putting up the Seniority list and with the President of the Union on 6-3-1973 in their office. They explained the situation and compelling circumstances under which they had to retrench workmen. As the majority of the workmen did not come forward to accept the retrenchment compensation and the notice, pay in lieu of notice, the same was sent to them by Postal Money Order on the same day along with the retrenchment notice Further, they assured that if the situation was to improve and one of the new products to be developed found a good market, they would take back the workmen as per the seniority list and as per rules.

8. The President of the Union stated that the workmen did not agree with any of the statements made by the management and requested the Conciliation Officer to ask the management to produce (1) the Attendance Register and Payment Register of both the workers and the staff, (2) the Stock Book of machines manufactured in Bangalore and other branches, (3) Sales Order, (4) Order forms, (5) Railway Receipt for having sent the machinery from November 1972, (6) Correspondence with the customers (including letters of cancellations) (7) Records pertaining to the manufacture and sale of power-horrows, disc-flow, fertiliser distributors, and (8) Export Order for fly-wheels etc.,

9. The management have been requested by the Conciliation Officer to produce the above records for verification with a view to finding whether the action of the management has been *bonafide*.

10. In the meanwhile the remaining workmen *viz.*, 26 in number, are continuing their strike in protest against the action taken by the management in retrenching 139 workmen.

11. The members have specifically referred to the retrenchment when the conciliation proceedings had been fixed This aspect of the

matter would however, be examined with a view to ascertaining if the restrictions under section 33 of the Industrial Dispute Act, 1947 applies to retrenchment alse.

12. A decision on the dispute raised would be taken after a report is received from the Conciliation Officer.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ಫ್ಯಾಕ್ಟರಿಯಲ್ಲಿ ತಯಾರಾದ ಪವರ್ ಹಾರ್ವೆಸ್ಟರ್ ಹಾಗೂ ಇನ್ನಿತರ ಸರಕುಗಳು ತಯಾರಾಗಿದ್ದರೂ ಅವನ್ನು ಮಾರಲಾಗುತ್ತಿಲ್ಲ ಎಂದು ಇವರಲ್ಲಿ ಹೇಳುತ್ತಿದ್ದಾರೆ. ಆದರೆ ಪಂಜಾಬು ಆಗ್ರೋ ಇಂಡಸ್ಟ್ರೀಯವರು ಮೊದಲು ನೂರು ಮಾಲಗಾಗಿ ಆರ್ಡರು ಕೊಟ್ಟಿದ್ದರೂ ಅವರಿಂದ 30-40ರ ಮೇಲೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿರುವುದರಿಂದಾಗಿ ಇವರು ತಯಾರಿಸಿರುವ ಮಾಲುಗಳನ್ನು ಪೂರ್ತಿ ಮಾರಾಟ ಮಾಡಲಾಗಲಿಲ್ಲ ಎಂದು ಹೇಳುತ್ತಾರೆ. ಇದು ನಿಜವಾಗಿದ್ದರೆ ನಮ್ಮ ರಾಜ್ಯದಲ್ಲಿರುವ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಇದನ್ನು ತೆಗೆದುಕೊಳ್ಳುವುದಾದರೆ ಇವರು ಎಲ್ಲ ಸರಕುಗಳನ್ನೂ ಮಾರಾಟ ಮಾಡಲಾಗುವುದಿಲ್ಲವೇ ?

ಶ್ರೀ ಅಜೀಜ್ ಸೇಟ್.—ಪಂಜಾಬು ಅಗ್ರೊ ಇಂಡಸ್ಟ್ರೀಸ್‌ನವರು ಇಲ್ಲಿನ ಮಾಲುಗಳನ್ನು ಕೇಳಿದ್ದರು, ನಮ್ಮ ರಾಜ್ಯದವರು ಕೇಳಿರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾಲೀಕರು ಮಾಡಿರುವುದು ನ್ಯಾಯವಾಗಿದೆ ಎಂದು ಮಾನ್ಯ ಮಂತ್ರಿಗಳು ಕೊಡುವ ಹೇಳಿಕೆಯಿಂದ ಗೊತ್ತಾಗುತ್ತದೆ. ಇದರ ಬಗ್ಗೆ ಇಲ್ಲಿನ ಕಾರ್ಮಿಕರು ತಮಗೆ 12ನೇ ಮಾರ್ಚಿಯಲ್ಲೇ ಒಂದು ಮೆಮೊರ್ಯಾಂಡಂನ್ನು ಕೊಟ್ಟು ಅದರಲ್ಲಿ ಎಲ್ಲ ವಿವರಗಳನ್ನೂ ತಮಗೆ ತಿಳಿಸಿದ್ದಾರೆ, ಇದರಲ್ಲಿ ಕೆಲವು ಜನ ಕ್ಯಾಷುಯಲ್ ಲೇಬರ್‌ಗಳೆಂದು ಇವರನ್ನು ತೆಗೆದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಹಾಗೆ ಬಂದಿದ್ದರೆ ಅವರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

Sri AZEEZ SAIT.—First of all this is a report based on facts. We are not trying to shield either the management or the workers. I have already stated what the management have stated. I have said that we are examining section 33 and the workmen's representatives have been asked to produce certain documents for verification and to check up the *bona fides* of the management. The matter is still under consideration. The moment I get the report, the Government will think over the matter and take appropriate action.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಬಗ್ಗೆ ಏನು ಮೆಮೊರ್ಯಾಂಡಂ ಕೊಟ್ಟಿದ್ದಾರೆ ಅದನ್ನು ಮಾನ್ಯ ಮಂತ್ರಿಗಳು ತರಿಸಿ ಅದರಲ್ಲಿ ಎರಡು ಮೂರು ಮುಖ್ಯ ವಿಚಾರಗಳನ್ನು ತಿಳಿಸಿದ್ದಾರೆ. ಅವುಗಳ ಬಗ್ಗೆ ಇನ್ನು ಸ್ವಲ್ಪ ಆಳವಾಗಿ ಪರಿಶೀಲನೆ ಮಾಡಿ ಇದನ್ನು ಇತ್ಯರ್ಥ ಮಾಡುವುದಕ್ಕಾಗುವುದಿಲ್ಲವೇ ! ಅದೂ ಅಲ್ಲದೆ ಇಲ್ಲ ತಯಾರು ಮಾಡುತ್ತಿರುವ ಮೆಷಿನರಿಗಳೆಲ್ಲಾ ವ್ಯವಸಾಯಕ್ಕೆ ಅನುಕೂಲವಾಗುವಂತಹವುಗಳಾಗಿರುವುದರಿಂದ ನಮ್ಮ ರಾಜ್ಯದಲ್ಲಿರುವ ಮೈಸೂರು ಅಗ್ರೊ ಇಂಡಸ್ಟ್ರೀಸ್‌ನವರೊಡನೆ ಮಾತುಕತೆ ನಡೆಸಿ ಅವರಿಗೆ ಇದರ ಎಲ್ಲ ಪದಾರ್ಥಗಳನ್ನೂ ಮಾರಲಾಗುವುದಿಲ್ಲವೇ ! ಇಲ್ಲವೇ ಇದನ್ನು ಮುಚ್ಚುವ ಸಂದರ್ಭ ಬರುವುದಾಗಿದ್ದರೆ ಆಗ ಸರಕಾರವೇ ಇದನ್ನು ತಮ್ಮ ವಶಕ್ಕೆ ತೆಗೆದುಕೊಂಡು ಇದು ನಡೆಯುತ್ತಿರುವ ಹಸಿರು ಕ್ರಾಂತಿಗೆ ಸಹಾಯ ಮಾಡಲು ಅನುಕೂಲವಾಗುವುದಿಲ್ಲವೇ ! ಇದರ ಬಗ್ಗೆ ಸರಕಾರ ಏನು ಹೇಳುತ್ತದೆ ?

Sri AZEEZ SAIT.—Already the matter is under consideration at the lower level. I have given a detailed note based on facts. Regarding the point that I should intervene and tell the Agro-Industries Corporation to take over the products, I do not know whether they would like the materials or not because the tendency to purchase tractors has gone down. I cannot say for what reason it is so. Therefore, I am not in a position to know whether the Agro-Industries

(SRI AZEEZ SAIT)

Corporation will take over. At the same time I can see that things are going on in a proper way and we have summoned records. Let us see that the matter is expedited. If Governments' intervention is necessary, I will certainly do it.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮೀ, ಈಗ ನಮ್ಮಲ್ಲಿರುವ ಅಗ್ರೋ ಇಂಡಸ್ಟ್ರೀಸ್‌ನಲ್ಲಿ ಸಾಕಷ್ಟು ಹಣ ಇದೆ. ಇವರಿಗೆ ಟ್ರಾಕ್ಟರುಗಳು ಇತ್ಯಾದಿ ಮೆಷಿನರಿಗಳು ಬೇಕಾಗುತ್ತವೆ. ಇಲ್ಲಿ ತಯಾರಾಗುವ ಅಗ್ರಿಕಲ್ಚರಲ್ ಇಂಪ್ಲಿಮೆಂಟುಗಳನ್ನು ಇವರೇ ತೆಗೆದುಕೊಂಡರೆ ಇಲ್ಲಿ ಹೆಚ್ಚು ಉತ್ಪಾದನೆ ಮಾಡಲು ಅವಕಾಶವಾಗುವುದಿಲ್ಲವೇ ? ಇದು ಸರಿಯಾಗಿ ಕೆಲಸ ಮಾಡಲು ತಕ್ಕ ತೀರ್ಮಾನವನ್ನು ತೆಗೆದುಕೊಂಡು ಇಲ್ಲಿನ ಕೆಲಸಗಾರರಿಗೆ ಸಹಾಯ ಮಾಡುತ್ತಾರೆಯೋ ?

ಶ್ರೀ ಅಜೀಜ್ ಸೇಟ್.—ಯಾವುದಾದರೂ ಇಂಡಸ್ಟ್ರಿಯಲ್ ಕಾರ್ಪೊರೇಷನ್ ತೆಗೆದುಕೊಂಡು ಅದರಿಂದ ಪ್ರಯೋಜನವಾಗುವಂತಿದ್ದರೆ ಅದರ ಪ್ರೋಸ್ ಅಂಡ್ ಕಾನ್ಸ್‌ಗಳೇನು ? ಇವುಗಳನ್ನೆಲ್ಲಾ ವಿಚಾರಮಾಡಿ ನೋಡಬೇಕಾಗುತ್ತದೆ, ಇದರ ಬಗ್ಗೆ ರಾಜ್ಯದ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಶಿಫಾರಸು ಮಾಡಬೇಕೆಂದು ಹೇಳಿದರು. ಅಂತಹ ಶಿಫಾರಸು ಕಳುಹಿಸಲು ನನ್ನದೇನೊ ಅಭ್ಯಂತರವಿಲ್ಲ, ನನ್ನ ಮಿತ್ರರಾದ ವ್ಯವಸಾಯ ಮಂತ್ರಿಗಳೊಡನೆ ಇದರ ಬಗ್ಗೆ ಮಾತನಾಡಿ ಇದನ್ನು ಪರಿಶೀಲನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

PAPERS LAID ON THE TABLE

Sri D. DEVARAJ URS (Chief Minister).—I lay on the Table Annual Report of the Mysore Public Service Commission and Government Memorandum for the year 1970-71 under Article 323(2) of the Constitution of India.

MADAM SPEAKER.—The Report is laid.

Sri K. H. PATIL (Minister for Agriculture and Forest).—Madam...

A Point of Order Opposing the laying of Notification

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ......

Sri D. B. KALMANKAR.—On a point of order, Sir.......

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಮಿತ್ರರಾದ ಶ್ರೀ ಕಲ್ಮಂಕರ್‌ರವರು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ. ಇಂತಹ ಒಂದು ವರದಿಗೆ ಅನುಮತಿ ಕೊಡುವುದಕ್ಕೆ ಸರಕಾರದ ಕಾನೂನಿದೆಯೇ ? ಕಾನೂನು ಇಲ್ಲದೆ ಇಂತಹ ಒಂದು ನಿರ್ಣಯ ತರುವುದಕ್ಕೆ ಸರಕಾರಕ್ಕೆ ಅಧಿಕಾರವಿದೆ ಇದನ್ನು ತಡೆಗಟ್ಟಲಿಕ್ಕೆ ವಿರೋಧ ಪಕ್ಷದವರಿಗೆ ಯಾವುದೇ ತರಹದ ಹಕ್ಕಿಲ್ಲ ಎಂದು ಅವರು ಹೇಳಬಹುದು. ಅದನ್ನು ನಾನು ತಿಳಿದುಕೊಂಡಿದ್ದೇನೆ. ಇದು ಕ್ರಮಬದ್ಧವಾಗಿಲ್ಲ. ಅವರ ಪಾಯಿಂಟ್ ಆಫ್ ಆರ್ಡರ್ ಏನು ಎನ್ನುವುದೂ ನನಗೆ ಗೊತ್ತಿದೆ. ಸೆಕ್ಷನ್ 54ರ ಪ್ರಕಾರ ಯಾವುದೇ ಇನ್‌ಸ್ಟಿಟ್ಯೂಷನ್‌ನನ್ನು ಸರಕಾರ ತನ್ನ ವಶಕ್ಕೆ ತೆಗೆದುಕೊಂಡ ಕಾಲದಲ್ಲಿ ಇಂತಹ ಒಂದು ನೋಟಿಫಿಕೇಷನ್ ಇಡಬೇಕಾಗಿತ್ತು ಎನ್ನುವುದಕ್ಕೆ ಕಾಯಿದೆ ಇರಬೇಕು. ಆದರೆ ನನ್ನ ಮುಂದೆ ಅಂತಹ ಯಾವ ಕಾಯಿದೆಯೂ ಇಲ್ಲ ಈ ರೀತಿ ನಾನು ಸರಕಾರಕ್ಕೆ ಹೇಳಬೇಕಾದರೆ ಅನೇಕ ಇನ್‌ಸ್ಟಿಟ್ಯೂಷನ್‌ಗಳು ಕಳೆದ ಒಂದು ವರ್ಷದಲ್ಲಿ ಯಾವ ರೀತಿ ಕೆಲಸ ಮಾಡಿಕೊಂಡು ಬರುತ್ತಿವೆ ಎನ್ನುವುದನ್ನು ನಾನು ನೋಡುತ್ತಿದ್ದೇನೆ. ಅದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಅದಕ್ಕಾಗಿ ನೀವು ನಮಗೆ ಸ್ವಲ್ಪ ಅವಕಾಶ ಕೊಟ್ಟು ಇಲ್ಲಿ ಸಹಾಯಮಾಡಬೇಕೆಂದು ತಮ್ಮನ್ನು ಕೇಳುತ್ತಿದ್ದೇನೆ. ನಮ್ಮ ಕಷ್ಟವನ್ನು ಸಭೆಯ ಮುಂದೆ

ಇಡುತ್ತೇನೆ. ಇವೊತ್ತು ಆಡಳಿತ ಕಾಂಗ್ರೆಸ್ ಪಕ್ಷಕ್ಕೆ ವಿರೋಧವಾಗಿರತಕ್ಕ ಯಾವ ರಾಜಕೀಯ ಪಕ್ಷವೇ ಆಗಲಿ ಅವು ಸ್ಥಾನಿಕ ಸಂಸ್ಥೆಗಳಲ್ಲಿ ಹಾಗೂ ಇತರ ಸಂಘ ಸಂಸ್ಥೆಗಳಲ್ಲಿ ಚೆನ್ನಾಗಿ ಕೆಲಸಗಳಾಗುತ್ತಿದ್ದರೂ ಅಂತಹ ಸಂಸ್ಥೆಗಳಲ್ಲಿರುವ ಸದಸ್ಯರುಗಳನ್ನು ಹತ್ತಿಕ್ಕಲು ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ನಮಗೆ ತಿಳಿದು ಬಂದಿರುವಂತೆ, ನಿನ್ನೆ ಗುಲ್ಬರ್ಗಾ ಆಗಿದೆ, ಇದಾದ ನಂತರ ಬಿಜಾಪುರ, ಬೆಳಗಾಂನಲ್ಲಿರುವ ಬ್ಯಾಂಕುಗಳಾದವು, ಈಗ ನಮ್ಮ ಅರಸೀಕೆರೆ ಕ್ಷೇತ್ರದ ಶ್ರೀಮಾನ್ ಸಿದ್ದಪ್ಪನವರ ಊರಲ್ಲಿದ್ದ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಸೂಪರ್‌ಸೀಡ್ ಮಾಡುತ್ತಿದ್ದಾರೆ. ಹಾಗೆಯೇ ನಮ್ಮ ಸರಕಾರದವರ ಹೈಕೋರ್ಟ್ ಸ್ಟೇ ಆರ್ಡರು ಇದ್ದರೂ ಶನಿವಾರಸಂತೆ ಮುನಿಸಿಪಾಲಿಟಿ ಸೂಪರ್‌ಸೀಡ್ ಮಾಡಿ ಅಲ್ಲಿಗೆ ಅಡ್ಮಿನಿಸ್ಟ್ರೇಟರನ್ನು ಹಾಕಬೇಕೆಂದು ಮಾಡುತ್ತಿದ್ದಾರೆ, ಹೀಗೆ ಬಹುಮಟ್ಟಿಗೆ ಎಲ್ಲ ಸಂಸ್ಥೆಗಳನ್ನೂ ಸರಕಾರ ತನ್ನ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಯತ್ನ ಮಾಡುತ್ತಿದ್ದಾರೆ. ಇದರಿಂದ ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು, ಇದಕ್ಕಾಗಿ ಇಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ನೀವು ಈಗಾಗಲೇ ನೂರಾರು ಪುರಸಭೆಗಳನ್ನು ರದ್ದು ಮಾಡಿ ಅಡ್ಮಿನಿಸ್ಟ್ರೇಟರನ್ನು ಹಾಕಿದ್ದೀರಿ. ಇನ್ನು ತಾಲ್ಲೂಕು ಬೋರ್ಡುಗಳಲ್ಲೂ ಅಡ್ಮಿನಿಸ್ಟ್ರೇಟರುಗಳನ್ನು ಹಾಕಬೇಕೆಂದು ನಿಮ್ಮ ಪಕ್ಷದ ಸದಸ್ಯರು ನಿರ್ಣಯಕ್ಕೆ ಬಂದಿದ್ದಾರೆಂದು ಗೊತ್ತಾಗಿದೆ, ಸ್ಥಾನಿಕ ಸಂಸ್ಥೆಗಳನ್ನು ರದ್ದು ಮಾಡಿ ಎಲ್ಲವನ್ನೂ ಸರಕಾರಕ್ಕೆ ತೆಗೆದುಕೊಂಡಿರುವಾಗ ಇನ್ನು ಉಳಿದಿರುವುದು ಶಾಸನ ಸಭೆ ಒಂದೇ, ಇದೇ ಶಾಸನ ಸಭೆಯಲ್ಲಿ ವಿರೋಧ ಪಕ್ಷದಲ್ಲಿ ಕೆಲಸ ಮಾಡತಕ್ಕ ಸುಮಾರು 48 ಜನ ಸದಸ್ಯರನ್ನೂ ಹೊರಕ್ಕೆ ಹಾಕುವುದಕ್ಕೆ ತಮ್ಮ ಸಭೆಯಲ್ಲಿರುವ ನಿಯಮಗಳ ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಬಹುದು ಎಂದು ನಮಗೆ ಗೊತ್ತಾಗುತ್ತದೆ. ಇದರಿಂದ ನಾನು ಇಲ್ಲಿ ಮನವಿ ಮಾಡುವುದು, ನಾನು ಕೂಡ ರಾಜಕೀಯದಲ್ಲಿ ಕಳೆದ ಹತ್ತು ವರ್ಷಗಳಿಂದಲೂ ಕೆಲಸ ಮಾಡುತ್ತ ಬಂದಿದ್ದೇನೆ. ಇದು ನನಗೆ ಹನ್ನೊಂದನೆಯ ವರ್ಷ ನಾನು ಈ ಸಭೆಯಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಿರುವುದು, ಎಲ್ಲೆ ಮೀರಿ ಸರಕಾರ ವರ್ತಿಸತಕ್ಕ ಕಾಲದಲ್ಲಿ ನಾವು ಇಲ್ಲ ಯಜ್ಞ ಪಶುಗಳಾಗಿ ಇಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಕರ್ನಾಟಕ ರಾಜ್ಯದಲ್ಲಿ ಇರತಕ್ಕ ಹತ್ತೊಂಬತ್ತು ಜಿಲ್ಲಾ ಬ್ಯಾಂಕುಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎನ್ನುವುದರ ಬಗ್ಗೆ ವಿವರಗಳನ್ನು ಈ ಸಭೆಯ ಮುಂದೆ ಇಟ್ಟಿಲ್ಲ. ಇನ್ನೂ ಕೆಲವು ಜಿಲ್ಲಾ ಬ್ಯಾಂಕುಗಳನ್ನೂ ರದ್ದು ಮಾಡಿಲ್ಲ. ಬೇರೆ ಪಾರ್ಟಿಗಳವರು ಇಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಇಷ್ಟು ಕೀಳು ಮಟ್ಟದಲ್ಲಿ ಅವು ನಮ್ಮ ಪಕ್ಷದಲ್ಲಿಲ್ಲ ಎಂದು ಅವುಗಳನ್ನು ವಶಕ್ಕೆ ಪಡೆಯುತ್ತಿದ್ದೀರಿ. ಈ ಎರಡು ಬ್ಯಾಂಕ್‌ಗಳಲ್ಲಿ ವಿರೋಧಪಕ್ಷದವರು ಅಧಿಕಾರದಲ್ಲಿದ್ದಾರೆಂಬ ಕಾರಣದಿಂದ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಾದರೆ, ನಾವೂ ಸಹ ಇಲ್ಲಿ ವಿರೋಧಪಕ್ಷದಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಮ್ಮನ್ನು ಹೊರಗೆ ಹಾಕಿಸಿ, ನಂತರ ಈ ಅಧಿಸೂಚನೆಗಳನ್ನು ಮಂಡಿಸಿ. ಕಾಯಿದೆ ಕಾನೂನಿಗೆ ನಾವು ಅಗೌರವ ತೋರುತ್ತಿಲ್ಲ. ಆದರೆ ನಾವು ನೊಂದ ಹೃದಯದಿಂದ ಹೇಳುತ್ತಿರುವುದೇನೆಂದರೆ, ಯಾವ ತಪ್ಪೂ ಇಲ್ಲದ ಬ್ಯಾಂಕ್‌ಗಳನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿರುವುದು ಸರಿಯೇ ಎಂದು. ಇದರಿಂದ ನಮಗೆಲ್ಲಾ ಅಸಂತೋಷವಾಗಿದೆ. ತಮ್ಮ ಒಂದು ವರ್ತನೆ, ತಾವು ಹೊರಟಿರುವ ಮಾರ್ಗ ನೋಡಿದರೆ ವಿರೋಧಪಕ್ಷವನ್ನು ನಿರ್ನಾಮ ಮಾಡಬೇಕೆಂಬುದು ತಮ್ಮ ಮನಸ್ಸಿನಲ್ಲಿರುವಂತೆ ಕಾಣುತ್ತಿದೆ. ಆ ವಿಚಾರದಲ್ಲಿ ತಮ್ಮ ಅಸ್ತ್ರಗಳೆಲ್ಲವನ್ನೂ ಉಪಯೋಗ ಮಾಡುವುದಕ್ಕೆ ಹೊರಟಿದ್ದೀರಿ. ನೋಟಿಫಿಕೇಷನನ್ನು ಸಭೆಯ ಮುಂದಿಡುವುದಕ್ಕೆ ಮೊದಲು ತಾವು ನಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಈ ಸಂದರ್ಭದಲ್ಲಿ ನಾವು ಸಭೆಯಲ್ಲಿ ಕೂತುಕೊಳ್ಳುವುದಕ್ಕೆ ತಯಾರಿಲ್ಲ.

2-30 P. M.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಹತ್ತು ದಿವಸಗಳ ಹಿಂದೆ ಮಂಡಿಸಿರುವ ಆಡಿಟ್ ರಿಪೋರ್ಟ್‌ನಲ್ಲಿ ಈ ಬ್ಯಾಂಕ್‌ಗಳ ಬಗ್ಗೆ ಯಾವುದೇ ತಪ್ಪುಗಳು ಇಲ್ಲದಿದ್ದರೂ ಸಹ; ಅಲ್ಲಿ ವಿರೋಧಪಕ್ಷದವರು ಆಡಳಿತ ನಡೆಸುತ್ತಿದ್ದಾರೆಂಬ ಕಾರಣದಿಂದ ಮತ್ತು ರಾಜಕೀಯ ದೃಷ್ಟಿಯಿಂದ ರದ್ದು ಮಾಡುವುದಕ್ಕೆ ಹೊರಟಿದ್ದೀರಿ. ಇದು ಸಂಪೂರ್ಣವಾಗಿ ದುರುದ್ದೇಶದಿಂದ ಕೂಡಿದ್ದಾಗಿದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಬ್ಯಾಂಕ್‌ಗಳಲ್ಲಿ ಆಗಲಿ, ಮುನಿಸಿಪಾಲಿಟಿಗಳಲ್ಲಿಯಾಗಲೀ, ತಾಲ್ಲೂಕು ಬೋರ್ಡ್‌ಗಳಲ್ಲಿಯಾಗಲೀ, ಎಲ್ಲೆಲ್ಲಿ ನಿಮ್ಮ ಪಕ್ಷದವರು ಆಡಳಿತದಲ್ಲಿ ಇಲ್ಲವೋ ಅಲ್ಲೆಲ್ಲಾ ತಮ್ಮ ವಶಕ್ಕೆ ಆಡಳಿತವನ್ನು ತೆಗೆದುಕೊಳ್ಳುವುದು ತಮ್ಮ ಉದ್ದೇಶವಾಗಿದೆ. ಈ ನಿಮ್ಮ ನೀತಿಯನ್ನು ನಾವು ಸಂಪೂರ್ಣವಾಗಿ ವಿರೋಧಿಸುತ್ತೇವೆ. ಇಲ್ಲಿ ನಾವು ಬೇರೆ ಅಲ್ಲ, ಶ್ರೀಮಾನ್ ದೇವೇಗೌಡರು ಬೇರೆ ಅಲ್ಲ; ನಾವೆಲ್ಲರೂ ಸೇರಿಕೊಂಡು ನಿಮ್ಮ ಒಂದು ಕರಾಳ ಪ್ರಜಾಪ್ರಭುತ್ವದ ನೀತಿಯನ್ನು ಈ ಸಭೆಯಲ್ಲಿ ಉಗ್ರವಾಗಿ ಪ್ರತಿಭಟನೆ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರು

(ಶ್ರೀ ವಾಟಾಳ್‌ನಾಗರಾಜ್)

ಪಕ್ಷರಹಿತರಾಗಿರುವುದರಿಂದ, ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಪರಿಸ್ಥಿತಿ ಉಲ್ಬಣವಾಗುವುದಕ್ಕೆ ಬಿಡಬಾರದು, ಆ ಬ್ಯಾಂಕ್‌ನಲ್ಲಿ ವಿರೋಧಪಕ್ಷದವರು ಅಧ್ಯಕ್ಷರಾಗಿದ್ದಾರೆಂಬ ಕಾರಣದಿಂದ ಸರ್ಕಾರದ ವಶಕ್ಕೆ ತೆಗೆದುಕೊಳ್ಳುತ್ತಿರುವುದು ಸರಿಯೇ ಎಂಬುದನ್ನು ತಾವು ತೀರ್ಮಾನ ಮಾಡಬೇಕು. ಹೌಸಿಂಗ್ ಬೋರ್ಡಿನ ಬಗ್ಗೆ ಕೂಡ ಇದೇ ರೀತಿ ಮಾಡುವುದಕ್ಕೆ ಹೊರಟಿದ್ದಾರೆ. ಸಂಸ್ಥಾಕಾಂಗ್ರೆಸ್‌ನವರು ಮತ್ತು ಇತರೇ ವಿರೋಧಪಕ್ಷದವರು ಆಡಳಿತ ನಡೆಸುತ್ತಿದ್ದಾರೆಂಬ ಕಾರಣದಿಂದ ಈ ರೀತಿ ನಡೆದುಕೊಳ್ಳುವುದು ಸರಿಯೇ ? ಅವರಲ್ಲಿಯೂ ಅವರು ಸತ್ಯದಿಂದ ಧರ್ಮದಿಂದ ಮತ್ತು ಲೆಕ್ಕಾಚಾರವಾಗಿ ನಡೆದುಕೊಳ್ಳುತ್ತಿದ್ದರೂ ಸಹ ಅವುಗಳನ್ನು ರದ್ದು ಮಾಡುವುದು ನಿಮ್ಮ ನೀತಿಗೆ, ನಿಮ್ಮ ಆಡಳಿತಕ್ಕೆ ಸರಿಯೇ ಎಂದು ಕೇಳುತ್ತೇನೆ. ನೀತಿ ವಿಮುಖರಾಗುತ್ತಿದ್ದೀರಿ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ. ನಿಮ್ಮ ಒಂದು ನೀತಿಯನ್ನು ನಾವು ಪ್ರತಿಭಟನೆ ಮಾಡದಿದ್ದರೆ ನಾವಾದರೂ ಇಲ್ಲಿ ಏತಕ್ಕೆ ಇರಬೇಕು? ನೀವು ಹೇಳಿದ್ದನ್ನೆಲ್ಲಾ ಕೇಳುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. ನೀವು ಮಾಡುವುದನ್ನೆಲ್ಲಾ ಸಹಿಸಿಕೊಂಡು ಇಲ್ಲಿ ಕುಳಿತುಕೊಳ್ಳುವುದು ಸಾಧ್ಯವಿಲ್ಲ. ನಿಮ್ಮ ಭ್ರಷ್ಟಾಚಾರವಾಗಲೀ, ನಿಮ್ಮ ಹಸ್ತಕ್ಷೇಪವಾಗಲೀ, ಎಲ್ಲವನ್ನೂ ಕಿವಿಯಲ್ಲಿ ಕೇಳುವುದಕ್ಕೆ, ಕಣ್ಣಲ್ಲಿ ನೋಡುವುದಕ್ಕೆ ವಿರೋಧಪಕ್ಷದವರಾರೂ ತಯಾರಾಗಿಲ್ಲ. ನಿಮ್ಮ ಒಂದು ಅನೀತಿಯನ್ನು ನೋಡಿಯೂ ಸಹ ಕಣ್ಣುಮುಚ್ಚಿಕೊಂಡು ಕುಳಿತಿರುವುದಕ್ಕೆ ಸಾಧ್ಯವಿಲ್ಲ. ನಿಮಗೆ 16 ಜನರ ಬೆಂಬಲವಿದೆ, ಮತ್ತು ಅಧಿಕಾರವಿದೆಯಾದ ಕಾರಣ ನಮ್ಮೆಲ್ಲರನ್ನೂ ಬೇಕಾಧರೆ ಹೊರಗೆ ಹಾಕಿ ಸಭೆಯನ್ನು ನಡೆಸಬಹುದೆಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಹುಲಿ ಹಸುಳೆಯಾದ ಕರುವನ್ನು ತಿಂದು ಹೆಬ್ಬುಲಿಯಾಯಿತು ಎಂಬಂತೆ ಎಲ್ಲ ಸ್ಥಳೀಯ ಸಂಸ್ಥೆಗಳನ್ನು ಎಲ್ಲ ಬ್ಯಾಂಕ್‌ಗಳನ್ನು ಈ ಸರ್ಕಾರದವರು ಕಬಳಿಸುತ್ತಿದ್ದಾರೆ. ಇವರಿಗೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿದ್ದದ್ದೇ ಆಗಿದ್ದರೆ, ಬೇರೆ ಯಾವುದೇ ಸಂಸ್ಥೆಗಳಲ್ಲಿ ವಿರೋಧಪಕ್ಷದವರು ಅಧಿಕಾರದಲ್ಲಿದ್ದರೆ ಅವರ ಕತ್ತನ್ನು ಹಿಸುಕುವುದಕ್ಕೆ ಹೋಗಬಾರದಾಗಿತ್ತು. ವಿನಾಕಾರಣ ಕತ್ತು ಹಿಸುಕುವುದಕ್ಕೆ ಹೋದಾಗ ನಾವು ಸಹಿಸಿಕೊಂಡು ಕೂತಿರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಕೆ. ಎಚ್. ಪಾಟೀಲರು ಈ ರಾಜ್ಯದ ಎಲ್ಲ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ. ಅವರು ದೊಡ್ಡ ಅಪಾಯಕಾರಿ ವ್ಯಕ್ತಿಯಾಗಿದ್ದಾರೆ. ಅವರು ಈ ರಾಜ್ಯಕ್ಕೆ ದೊಡ್ಡ ಶಾಪವಾಗಿದ್ದಾರೆಂದು ಖಚಿತವಾಗಿ ಹೇಳುತ್ತೇನೆ. ಅವರು ಇಲ್ಲಿ ಅಧಿಸೂಚನೆಯನ್ನು ಮಂಡನೆ ಮಾಡಬಾರದು, ಅದನ್ನು ಮಂಡನೆ ಮಾಡುವ ವಿಷಯದಲ್ಲಿ ನಾವು ಉಗ್ರವಾಗಿ ಪ್ರತಿಭಟನೆ ಮಾಡುತ್ತೇವೆ. ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ನಮ್ಮ ಕಳಕಳಿಯನ್ನು ಈ ಮೂಲಕ ತೋರಿಸಿಕೊಂಡಿದ್ದೇವೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನನ್ನದೊಂದು ಕ್ರಿಯಾಲೋಪವಿದೆ. ಏನೆಂದರೆ, ಈ ಅಧಿಸೂಚನೆಗಳನ್ನು ಶ್ರೀ ಶಂಕರ ಆಳ್ವ ಪರವಾಗಿ ಶ್ರೀ ಕೆ. ಎಚ್ ಪಾಟೀಲ್ ಅವರು ಓದುವುದಕ್ಕೆ ನಿಂತರು. ಅವರು ಅದನ್ನು ಓದಿದ ಮೇಲೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಾವುಗಳು ಕ್ರಿಯಾಲೋಪ ಎತ್ತಿದ್ದೇವೆ. ವಿಜಾಪುರ ಜಿಲ್ಲೆಯ ಕೇಂದ್ರ ಸಹಕಾರೀ ಬ್ಯಾಂಕ್ ಮತ್ತು ಗುಲ್ಬರ್ಗ ಜಿಲ್ಲೆಯ ಕೇಂದ್ರ ಸಹಕಾರೀ ಬ್ಯಾಂಕ್‌ಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಯೋಚನೆ ಮಾಡಿರುವುದು ಅಷ್ಟೊಂದು ಸುಲಭದ ಪ್ರಶ್ನೆಯಾಗಿಲ್ಲ. ಇದನ್ನು ಜವಾಬ್ದಾರಿಯುತವಾಗಿ ಯೋಚನೆ ಮಾಡಿ ನಂತರ ತೆಗೆದುಕೊಳ್ಳಬೇಕಾದ ಸಂಗತಿ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿ ಈಗ ಕಾಂಗ್ರೆಸ್ (ಒ) ನವರು ಅಧಿಕಾರದಲ್ಲಿ ಇದ್ದಾರೆಂದು ಕಾಣುತ್ತದೆ. ಯಾರೇ ಅಧಿಕಾರದಲ್ಲಿ ಇರಲಿ, ನಾನು ಈಗ ರಾಜಕೀಯಕ್ಕೆ ಹೋಗುವುದಿಲ್ಲ ; ನನಗೆ ಇಲ್ಲಿ ಪಾರ್ಟಿ ಮುಖ್ಯವಲ್ಲ ; ನನ್ನ ಪ್ರಶ್ನೆಯೆಂದರೆ, ಯಾವುದೇ ಒಂದು ಸೊಸೈಟಿಯನ್ನು ಸೂಪರ್‌ಸೀಡ್ ಮಾಡಬೇಕಾದರೆ ಮೊದಲು ನೋಟೀಸ್ ಕೊಟ್ಟು ಅವರಿಂದ ವಿವರ ಪಡೆದು, ಅವರು ಯಾವ ಕೆಲಸಗಳನ್ನೂ ಸರಿಯಾಗಿ ಮಾಡಿಲ್ಲ ಎಂದು ಕಂಡುಬಂದರೆ ಸೊಸೈಟಿ ಆಕ್ಟ್ ಪ್ರಕಾರ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಈ ರೀತಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಮೊದಲು ಹಲವಾರು ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಹಣ ದುರ್ವಿನಿಯೋಗವಾಗಿದ್ದರೆ, ಹಣದ ಲೂಟಿಯಾಗಿದ್ದರೆ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬಹುದಾಗಿತ್ತು. ಈ ಬ್ಯಾಂಕ್‌ಗಳ ವಿಚಾರದಲ್ಲಿ ನೋಟೀಸನ್ನು ಸಹ ಕೊಡದೆ ನೇರವಾಗಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಯೋಚನೆ ಮಾಡಿದ್ದು ಅಷ್ಟೊಂದು ಸರಿಯಾಗಿ ಕಾಣುತ್ತಿಲ್ಲ. ನಮಗೆ ತಿಳಿದು ಬಂದಿರುವ ಪ್ರಕಾರ ಈ ಬಿಜಾಪುರ ಜಿಲ್ಲೆಯ ಕೇಂದ್ರ ಸಹಕಾರೀ ಬ್ಯಾಂಕ್‌ನಲ್ಲಿ

1963-64ರಲ್ಲಿ 1 ಲಕ್ಷ 77 ಸಾವಿರ ರೂಪಾಯಿ ಲಾಭ ಬಂದಿದೆ, 1964-65ರಲ್ಲಿ 2 ಲಕ್ಷದ 26 ಸಾವಿರ ರೂಪಾಯಿ ಲಾಭ ಬಂದಿದೆ, 1965-66ರಲ್ಲಿ 2 ಲಕ್ಷದ 82 ಸಾವಿರ ರೂಪಾಯಿ ಲಾಭ ಬಂದಿದೆ, 1966-67ರಲ್ಲಿ 3 ಲಕ್ಷದ 94 ಸಾವಿರದ 155 ರೂಪಾಯಿಗಳು ಲಾಭ ಬಂದಿದೆ, 1967-68ರಲ್ಲಿ 6 ಲಕ್ಷದ 50 ಸಾವಿರದ 960 ರೂಪಾಯಿಗಳು ಲಾಭ ಬಂದಿದೆ. ಲಾಭದಿಂದಲೇ ನಡೆದುಕೊಂಡು ಬರುತ್ತಿದೆ. ಇಂತಹ ಬ್ಯಾಂಕನ್ನು ಸಹ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳುವುದು ಸರಿಯೇ ? ಇಂತಹ ಬ್ಯಾಂಕ್‌ಗಳ ಬಗ್ಗೆ ನ್ಯಾಯವಾದ ರೀತಿಯಲ್ಲಿ ನಡೆದುಕೊಳ್ಳದಿದ್ದರೆ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಂತೆ ಆಗುತ್ತದೆ. ಸರ್ಕಾರದವರು ಯಾವಾಗಲೂ ಜನರ ಮನಸ್ಸಿಗೆ ಮನದಟ್ಟಾಗುವ ರೀತಿಯಲ್ಲಿ ವರ್ತಿಸಬೇಕು. ಈ ರೀತಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಮೊದಲು ನೋಟೀಸ್ ಕೊಡಬೇಕಾಗಿತ್ತು ಮತ್ತು ವಿರೋಧಪಕ್ಷದವರಿಗೆ ಕನ್‌ವಿನ್ಸ್ ಮಾಡುವ ರೀತಿಯಲ್ಲಿ ಅಂಕಿಅಂಶಗಳನ್ನು ಕೊಡಬೇಕಾಗಿತ್ತು. ಆ ರೀತಿ ಮಾಡದಿರುವುದು ಸರಿಯಲ್ಲ. ಸರ್ಕಾರದ ತೀರ್ಮಾನದಲ್ಲಿ ರಾಜ್ಯದಲ್ಲಿರುವ 19 ಜಿಲ್ಲಾ ಬ್ಯಾಂಕ್‌ಗಳ ಪೈಕಿ ಇವೆರಡರಲ್ಲಿ ಮಾತ್ರ ಮೋಸವಾಗಿದ್ದು ಉಳಿದ ಬ್ಯಾಂಕ್‌ಗಳು ಚೆನ್ನಾಗಿ ನಡೆಯುತ್ತಿವೆಯೇನು ? ಆಡಳಿತಪಕ್ಷದವರ ಕೈಯಲ್ಲಿರುವ ಬ್ಯಾಂಕ್‌ಗಳಲ್ಲಿಯೂ ಸಹ ಅನೇಕ ಅಕ್ರಮ ವ್ಯವಹಾರಗಳು ನಡೆದಿವೆ. ಆದರೆ ಮಾರಿಕಣ್ಣು ಈ ಬ್ಯಾಂಕ್‌ಗಳ ಮೇಲೆಯೇ ಏತಕ್ಕೆ ಬಿತ್ತೋ ಗೊತ್ತಿಲ್ಲ. ಅಧಿಸೂಚನೆಗಳನ್ನು ಓದುವುದಕ್ಕೆ ಮುಂಚೆ ಸರ್ಕಾರದವರು ವಿರೋಧಪಕ್ಷದವರೊಡನೆ ಈ ಬಗ್ಗೆ ಮಾತನಾಡಬೇಕು. ಆ ರೀತಿ ಸೌಜನ್ಯ ತೋರಿಸದೇ ಹೋದರೆ ಪ್ರಜಾಪ್ರಭುತ್ವದ ಕೊಲೆಯಾಗುತ್ತದೆ. ಈಗಾಗಲೇ ಅನೇಕ ಮುನಿಸಿಪಾಲಟಿಗಳನ್ನು ರದ್ದು ಮಾಡಿದ್ದೀರಿ. ಪಂಚಾಯಿತಿಗಳು ಮತ್ತು ತಾಲ್ಲೂಕ್ ಬೋರ್ಡ್‌ಗಳಿಗೆ ಚುನಾವಣೆ ನಡೆಸುವುದಿಲ್ಲವೆಂದು ಹೇಳಿದ್ದೀರಿ. ಈಗ ಎಲ್ಲ ಕೋಆಪರೇಟಿವ್ ಸಂಸ್ಥೆಗಳನ್ನು ಮತ್ತು ಎಲ್ಲ ಬ್ಯಾಂಕ್‌ಗಳನ್ನು ಸಹ ತಮ್ಮ ವಶಕ್ಕೆ ತೆಗೆದುಕೊಳ್ಳುವ ಕೆಲಸಕ್ಕೆ ಕೈಹಾಕುವುದರ ಮೂಲಕ ಪ್ರಜಾಪ್ರಭುತ್ವದ ಪೂರ್ಣ ಕೊಲೆಯಾಗುವುದಕ್ಕೆ ಅವಕಾಶ ಕೊಡಬೇಡಿ. ರಾಜಕೀಯ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿಲ್ಲ ; ದೇವೇಗೌಡರ ಪರವಾಗಿ ಸಹ ಇದನ್ನು ನಾನು ಹೇಳುತ್ತಿಲ್ಲ ; ಏಕೆಂದರೆ ಅವರ ರಾಜಕೀಯವನ್ನು ನಾನು ಒಪ್ಪಿಕೊಳ್ಳುವುದಿಲ್ಲ ; ಕೆಲವು ತತ್ವಗಳ ವಿಚಾರದಲ್ಲಿ ಅವರಿಗೂ ನನಗೂ ವಿರೋಧವಿದೆ. ಆದರೂ ಈ ವಿಚಾರದಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರದವರು ಕಾನೂನು ಪ್ರಕಾರ ಘಟನಾವಳಿಯ ಪ್ರಕಾರ ತೀರ್ಮಾನ ಕೈಕೊಳ್ಳಬೇಕೇ ವಿನಃ ಈ ರೀತಿ ಮಾಡುತ್ತಿರುವುದು ಸಮಂಜಸವಾದುದಲ್ಲ. ವಿರೋಧಪಕ್ಷದ ನಾಯಕರೊಡನೆ ಮೊದಲು ಈ ವಿಚಾರದಲ್ಲಿ ಚರ್ಚೆ ನಡೆಸಿ ಅಮೇಲೆ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದೆಂದು ಮತ್ತು ಆ ರೀತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಪ್ರಭಾಕರ್ (ವರ್ತೂರು .—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದಿರತಕ್ಕ ನೋಟಿಫಿಕೇಷನ್ ಏನಿವೆ ಇದರಿಂದ ದೇಶದಲ್ಲಿ ಉಂಟಾಗತಕ್ಕಂಥಾ ಪರಿಣಾಮವನ್ನು ಕುರಿತು ಮನಸ್ಸು ಕಲಕಿದಂತೆ ನಮ್ಮ ಸ್ನೇಹಿತರು ಈಗ ಮಾತನಾಡಿದ್ದಾರೆ. ಅದರ ಸತ್ಯಾಂಶ ಮತ್ತು ಸಂದರ್ಭ ಏನು ಎಂಬುದನ್ನು ಈ ಸಭೆಗೆ ತಿಳಿಸಬೇಕಾಗಿದೆ. ಈಗಿನ ಸರ್ಕಾರ ಬಂದು ಕೇವಲ ಒಂದು ವರ್ಷವಾಗಿದೆ. ಈಗ ಎಷ್ಟೋ ಪ್ರಜಾಪ್ರಭುತ್ವಕ್ಕೆ ವಿರೋಧವಾದ ಕೆಲಸಗಳು ನಡೆಯುತ್ತಿವೆ ಎಂದು ನಮ್ಮ ಎದುರು ಪಕ್ಷದ ಸದಸ್ಯರು ದುಃಖಮಯವಾಗಿ ಹೇಳುತ್ತಿದ್ದಾರೆ. ಒಂದು ವರ್ಷದಲ್ಲಿ ಪ್ರಜಾಸತ್ತಾತ್ಮಕವಾದ ಮುನಿಸಿಪಾಲಿಟಿಗಳಾಗಲೀ ತಾಲ್ಲೂಕು ಬೋರ್ಡುಗಳಾಗಲೀ, ಕೋ-ಆಪರೇಟೀವ್ ಬ್ಯಾಂಕು ಇವುಗಳ ಅಧಿಕಾರವನ್ನು ಕೈಗೆ ತೆಗೆದುಕೊಳ್ಳುವ ರೀತಿಯಲ್ಲಿ ಮಾಡಿದ್ದಾರೆ ಎಂದು ಹೇಳಿದರು. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಮೈಸೂರಿನಲ್ಲಿ ಒಂದು ಸಂದರ್ಭದಲ್ಲಿ ಏನು ಹೇಳಿದ್ದಾರೆ ಎಂಬುದು ಪತ್ರಿಕೆಗಳಲ್ಲಿ ಬಂದಿದೆ. ಅದು ಏನೆಂದರೆ ಸರ್ಕಾರದವರು ಜನಗಳಿಗೆ ಕೊಟ್ಟಂತಹ ಸಾಲದ ಬಾಕಿ ಮತ್ತು ಕಂದಾಯ ಇವುಗಳನ್ನು ಯಾವ ರಾಜಕೀಯ ಗೊಂದಲಕ್ಕೂ ಅವಕಾಶ ಕೊಡದೆ ವಸೂಲು ಮಾಡಬೇಕೆಂದು ಕಂಠೋಕ್ತವಾಗಿ ಹೇಳಿದ್ದಾರೆ. ಇದರ ಅರ್ಥ ಏನು ತೋರಿಸುತ್ತದೆ ಎಂದರೆ ನಮ್ಮ ಪಕ್ಷದವರೇ ಇರಲಿ ನಿಮ್ಮ ಪಕ್ಷದವರೇ ಇರಲಿ ಎಲ್ಲರಿಗೂ ಒಂದೇ ನೀತಿಯನ್ನು ಅನುಸರಿಸುತ್ತಿದ್ದಾರೆ ಎನ್ನುವುದು ಅರ್ಥವಾಗುತ್ತದೆ. ಇದರಲ್ಲಿ ಇನ್ನೊಂದು ವಿಚಾರವೇನೆಂದರೆ ಬರಗಾಲ ಪೀಡಿತ ಪ್ರದೇಶಗಳಲ್ಲಿ ಈ ಬ್ಯಾಂಕುಗಳಿಂದ ಜನಗಳಿಗೆ ಸಹಾಯವನ್ನು ಕೊಡತಕ್ಕದ್ದು ತಡವಾಗುತ್ತಿದೆ, ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ಹಾಗೆ ವ್ಯವಹಾರ ಮಾಡಿವೆ. ಇದರಿಂದ ಅಲ್ಲಿನ ಜನತೆಗೆ ನೋವನ್ನುಂಟು ಮಾಡಿದೆ. ಬಿಜಾಪುರ ಜಿಲ್ಲೆಯಲ್ಲಾಗಲೀ ಗುಲ್ಬರ್ಗಾ ಜಿಲ್ಲೆಯಲ್ಲಾಗಲೀ ಇರತಕ್ಕಂಥಾ ಬ್ಯಾಂಕುಗಳನ್ನು ನೋಟಿಫಿಕೇಷನ್ ಹಾಕುವುದರ ಮುಖಾಂತರ ಅವುಗಳನ್ನು ಸರ್ಕಾರದ ಕೈಯ್ಯಲ್ಲಿ ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ, ಇದರಿಂದ ಪ್ರಜಾಪ್ರಭುತ್ವ ಕೊಲೆಯಾಯಿತು ಎನ್ನುವಂಥಾ ಶಂಕೆ ಅನಗತ್ಯ. ಯಾವುದೇ ಒಂದು ಬ್ಯಾಂಕು

(ಶ್ರೀ ಕೆ. ಪ್ರಭಾಕರ್)

ಯಾವುದೇ ಒಂದು ಪಕ್ಷದ ಕೈಯಲ್ಲಿ ಇದ್ದರೆ ಅವರು ಸಾಲವನ್ನು ಕೊಡುವ ರೀತಿ ನೀತಿಯಲ್ಲಿ ಪ್ರಜೆಗಳ ಆಶೋತ್ತರವನ್ನು ನೆರವೇರಿಸಬೇಕು. ಇಲ್ಲಿ ಆಡಿಟ್ ರಿಪೋರ್ಟ್ ಮುಖ್ಯವಲ್ಲ. ಈ ಬ್ಯಾಂಕಗಳಿಂದ ಜನತೆಗೆ ಸರಿಯಾದ ಸೇವೆ ಸಲ್ಲುತ್ತಿದೆಯೋ ಎನ್ನುವುದನ್ನು ಗಣನೆಗೆ ತೆಗೆದುಕೊಳ್ಳಬೇಕು. ರಾಜಕೀಯವಾಗಿ ಜನಗಳಿಗೆ ಯಾವ ತೊಂದರೆಯೂ ಆಗಬಾರದು ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಅದಕ್ಕೋಸ್ಕರವಾಗಿ ಏನೋ ಒಂದು ಅನ್ಯಾಯವಾಗುತ್ತದೆ ಎನ್ನುವುದನ್ನು ಕಲ್ಪನೆಗೆ ತೆಗೆದುಕೊಳ್ಳತಕ್ಕದ್ದು ಅಸಂಭವ. ಈ ದೃಷ್ಟಿಯಿಂದ ಮಾನ್ಯ ವಿರೋಧ ಪಕ್ಷದ ಸದಸ್ಯರು ಮಾಡಿದಂತಹ ಟೀಕೆ ಆಧಾರರಹಿತವಾದದ್ದು. ಆದ್ದರಿಂದ ಈ ವಿಚಾರದಲ್ಲಿ ತಾವು ದಯವಿಟ್ಟು ರಾಜಕೀಯ ಗೊಂದಲವನ್ನು ಮಾಡಬೇಡಿ, ಈ ನೋಟಿಫಿಕೇಷನ್ ಒಪ್ಪಿಕೊಳ್ಳಬೇಕು, ಇದರಿಂದ ಯಾವ ಅನ್ಯಾಯವೂ ಆಗುವುದಿಲ್ಲ ಎಂದು ಸೂಚನೆಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮೇಲ್ಮನೆಯಲ್ಲಿ ಈ ಬಗ್ಗೆ ಚರ್ಚೆಯಾಗಿ ನೋಟೀಸ್ ಕೊಟ್ಟಮೇಲೆ ಇದನು ತೆಗೆದುಕೊಂಡು ಬನ್ನಿ ಎಂದು ಹೇಳಿದ ಮೇಲೆ ಅವರು ಮುಂದಿನ ವಿಷಯಕ್ಕೆ ಹೋಗಿದ್ದಾರೆ. ಇದೂ ಅಲ್ಲದೆ ಸ್ಟ್ಯಾಚುಟರಿ ರೂಲ್ ಪ್ರಕಾರ ಮಾನ್ಯ ಮಂತ್ರಿಗಳು ಈ ನೋಟಿಫಿಕೇಷನ್ ಇಡುತ್ತಿದ್ದಾರೆ. ಇದು ಆದ ಮೇಲೆ ಬೇಕಾದರೆ ನೀವು ನಿಯಮದ ಪ್ರಕಾರ ಒಂದು ಮೋಷನ್ ತೆಗೆದುಕೊಂಡು ಬನ್ನಿ. ಆ ಬಗ್ಗೆ ನಾನು ಚರ್ಚೆಗೆ ಅವಕಾಶ ಮಾಡುತ್ತೇನೆ. ಆ ಮೇಲೆ ಅದು ಚರ್ಚೆಯಾಗಲಿ. ಆ ರೀತಿ ಮಾಡದೆ ಈಗ ಹೀಗೆ ಒಬ್ಬರಾದ ಮೇಲೆ ಒಬ್ಬರು ಮಾತನಾಡಿದರೆ ಹೇಗೆ ? ನೀವು ಈ ಬಗ್ಗೆ ನನಗೆ ನೋಟೀಸ್ ಕೊಟ್ಟಿಲ್ಲ ಏನೂ ಇಲ್ಲ. ನೀವು ಈ ರೀತಿ ಮಾಡುವುದು ಸರಿಯಲ್ಲ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಪ್ರಭಾಕರ್ ಅವರು ಒಂದು ಮಾತನ್ನು ಹೇಳಿದರು. ಅದು ಏನೆಂದರೆ ಆಡಿಟ್ ರಿಪೋರ್ಟ್ ಪರಿಪೂರ್ಣವಲ್ಲ ಎಂದು ಹೇಳಿದರು. ಅದಕ್ಕೂ ಮುಂದೆ ಹೋಗಿ ನೋಡಬೇಕು ಎಂದರೆ ನನಗೆ ಒಂದು ಅನಾನಿಮಸ್ ಪತ್ರ ಬಂದಿದೆ. ಅದರ ಕಾಪಿಯನ್ನು ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಕಳುಹಿಸಿದ್ದಾರೆ. ಅದರ ಕಾಪಿಯೇ ನನಗೂ ಬಂದಿದೆ. ಇದರಲ್ಲಿ ಈ ರೀತಿ ಬರೆದಿದ್ದಾರೆ:—

To

The Chief Minister, Government of Mysore,
Vidhana Soudha, Bangalore.

Sir,

There is a fast rumour that the present Health Minister is being gifted in consideration to the appointments in the following manners : an Assistant Surgeon Rs. 300, Medical Officer in Primary Health Centre Rs. 8000 and a District Surgeon or a District Health and Family Planning Officer Rs. 15000. I do not know how far these are correct but to ascertain the fact I request for requesting the Health Minister to declare his assets and liabilities in the House at once. The House should also demand a probe in his black money.

Yours faithfully,
A citizen.

Copies forwarded to the Speaker, etc, etc., ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಅದಕ್ಕೆ ಎಷ್ಟು ತೂಕ ಇದೆ ಎನ್ನುವುದನ್ನು ನೋಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಆಡಿಟ್ ರಿಪೋರ್ಟಿನಲ್ಲಿ ಪುಸ್ತಕದಲ್ಲಿರತಕ್ಕ ಅಂಶಗಳನ್ನು ಸಂಗ್ರಹಣೆ ಮಾಡಿದ್ದಾರೆ. ಅದನ್ನು ನಾವು ನಂಬಬೇಕಾಗುತ್ತದೆ. ಮತ್ತು ಇಂಥವುಗಳನ್ನೂ ನಂಬಬೇಕಾಗುತ್ತದೆ. ಯಾವ ಆಧಾರದ ಮೇಲೆ ಆಡಿಟ್ ರಿಪೋರ್ಟನ್ನು ಮುಂದೆ ಹಾಕಿ ಈ ಬ್ಯಾಂಕುಗಳನ್ನು ಸರ್ಕಾರದವರು ವಶಪಡಿಸಿಕೊಂಡಿದ್ದಾರೆ ಎಂಬುದನ್ನು ಸರ್ಕಾರದವರು ಹೇಳಬೇಕಾಗುತ್ತದೆ. ಈಗ ಮಾನ್ಯ ಅಧ್ಯಕ್ಷರು ಈ ಬಗ್ಗೆ ಒಂದು ಮೋಷನ್ ಕಳುಹಿಸಿದರೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದಾರೆ. ಈಗ ನಮಗೆ ಒಂದು ಹೆದರಿಕೆ

ಬಂದಿದೆ. ಅದು ಏನೆಂದರೆ ಶ್ರೀಮಾನ್ ಲಿಂಗಪ್ಪನವರು ಹೇಳಿದ ಹಾಗೆ ಹುಲಿಗೆ ಮನುಷ್ಯನ ರಕ್ತ ರುಚಿಯಾಗಿದ್ದರೆ ಅದು ಮನುಷ್ಯನನ್ನು ತೀರಿಸದೆ ಬಿಡುವುದಿಲ್ಲ. ಅದು ತಿಂದು ತಿಂದು ಹಾಕುತ್ತದೆ. ಈಗ ಸರ್ಕಾರದವರು ನಗರಸಭೆ, ಸೊಸೈಟಿಗಳು, ಮತ್ತು ತಾಲ್ಲೂಕು ಬೋರ್ಡುಗಳನ್ನು ವಶಪಡಿಸಿಕೊಂಡು ಅವುಗಳನ್ನು ಹತ್ತಿಕ್ಕುವುದಕ್ಕೆ ಸನ್ನಾಹ ಮಾಡುತ್ತಿದ್ದಾರೆ. ಅಧಿವೇಶನ ನಡೆಯುವಾಗ ಈ ರೀತಿ ಸರ್ಕಾರದವರು ಕೋ-ಆಪರೇಟೀವ್ ಬ್ಯಾಂಕುಗಳನ್ನು ವಶಪಡಿಸಿಕೊಳ್ಳತಕ್ಕದ್ದು ಒಳ್ಳೆಯ ಲಕ್ಷಣವಲ್ಲ. ಈಗ ಆ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೇವೆ. ನಿಜವಾಗಿ ಯಾವ ಯಾವ ಸೊಸೈಟಿಗಳಲ್ಲಿ, ಯಾವ ಯಾವ ಸೆಂಟ್ರಲ್ ಕೋಆಪರೇಟೀವ್ ಬ್ಯಾಂಕುಗಳಲ್ಲಿ ಅನ್ಯಾಯವಾಗಿದೆ ಎನ್ನುವುದನ್ನು ಈ ಸದನದಲ್ಲಿ ಇಟ್ಟರೆ ಇದರಲ್ಲಿ ಏನು ಅನ್ಯಾಯ ನಡೆದಿದೆ, ಈ ಎರಡು ಬ್ಯಾಂಕುಗಳಿಗೂ ಸರ್ಕಾರದವರು ಕೈಹಾಕುವುದಕ್ಕೆ ಏನಾದರೂ ರಾಜಕೀಯ ಇದೆಯೋ ಅಥವಾ ಇಲ್ಲವೇ ಎಂಬುದು ಸ್ಪಷ್ಟವಾಗುತ್ತದೆ. ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಲ್ಲಿ ಈ ಬ್ಯಾಂಕುಗಳಲ್ಲಿ ಎಷ್ಟೆಷ್ಟು ಹಣವನ್ನು ಅಪಹರಣ ಮಾಡಿದ್ದಾರೆ, ಎಷ್ಟು ಬಚ್ಚಿಟ್ಟಿದ್ದಾರೆ ಎಂಬುದು ಗೊತ್ತಾಗುತ್ತದೆ. 19 ಜಿಲ್ಲೆಗಳಲ್ಲಿರತಕ್ಕ ಡಿಸ್ಟ್ರಿಕ್ಟ್ ಬ್ಯಾಂಕುಗಳ ಅಪಾದನೆಗಳನ್ನು ವರದಿಯನ್ನು ಈ ಬ್ಯಾಂಕುಗಳಲ್ಲಿ ಇಟ್ಟರೆ ಅದರ ಮೇಲೆ ನಾವು ಚರ್ಚೆ ಮಾಡೋಣ. ಆ ಬ್ಯಾಂಕುಗಳಲ್ಲಿ ಯಾವ ಪಕ್ಷದವರೇ ಹಣವನ್ನು ದುರುಪಯೋಗ ಮಾಡಿರಲಿ ಆ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಮಾಡೋಣ. ಆದ್ದರಿಂದ ಇದನ್ನು ಮುರಿದು ಹಾಕಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಇದರಿಂದ ಅಪಾಯ ಬಂದೊದಗುತ್ತದೆ. ಆದ್ದರಿಂದ ಈ ಸದನದಲ್ಲಿ ಅವರು ಏನು ತಪ್ಪು ಮಾಡಿದ್ದಾರೆ ಎಂಬುದನ್ನು ಹೇಳಬೇಕು ಮತ್ತು ಅದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು. ಆಗ ನಾವು ಅದನ್ನು ಒಪ್ಪುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಮಾನ್ಯ ನಾಡಗೌಡರು ಮಂತ್ರಿಯಾಗಿದ್ದಾಗ ಮಾನ್ಯ ಕೆ. ಎಚ್. ಪಾಟೀಲರ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿದ ಸಂದರ್ಭದಲ್ಲಿ ಇದೇ ಮನೆಯಲ್ಲಿ ಬಹಳ ದೊಡ್ಡ ಗಲಾಟೆಯಾಯಿತು. ಆಗ ಮಾನ್ಯ ದೇವರಾಜ ಅರಸರು, ಮಾನ್ಯ ಸಿದ್ಧವೀರಪ್ಪನವರು ಮತ್ತು ಚನ್ನಬಸಪ್ಪನವರು ಎಲ್ಲಾ ಬಹಳ ಗರ್ಜಿಸಿದರು.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ನಮ್ಮ ಮಾನ್ಯ ಸ್ನೇಹಿತರು ಹೇಳಿದ್ದೆಲ್ಲವನ್ನೂ ನಾನು ಕೇಳಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಸಹ ನಾನು ಸ್ಪಷ್ಟವಾಗಿ ಕೇಳಿದ್ದೇನೆ. ಇವರಿಗೆ ಅರ್ಥವಾತ್ತದೆ, ಇವರು ಕಾನೂನು ಪ್ರಕಾರ ಇದರಲ್ಲಿ ಹೋಗುತ್ತಾ ಇಲ್ಲ. ಆದ್ದರಿಂದ ನಾವು ಬಿಡುವುದಿಲ್ಲವೆಂದು ಹೇಳುತ್ತಿದ್ದಾರೆ. ಇವರು ಪ್ರಜಾಪ್ರಭುತ್ವದ ಕೊಲೆ ಮಾಡುತ್ತಿದ್ದಾರೆಂದು ಸಹ ಹೇಳುತ್ತಿದ್ದಾರೆ. ಇವರು ಕಾನೂನು ಪ್ರಕಾರ ಹೋಗದೆ ಇರುವುದರಿಂದ, ಪ್ರಜಾಪ್ರಭುತ್ವದಲ್ಲಿ ಕಾನೂನಿನ ಅಡಚಣೆ ಮಾಡುವುದು ಇವರು. ಆದ್ದರಿಂದ ಪ್ರಜಾಪ್ರಭುತ್ವದ ಕೊಲೆ ಯಾರು ಮಾಡುವುದು ಎಂಬುದು ಗೊತ್ತಾಗುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಮೆಜಾರಿಟಿ ಮೇಲೆ ಮೈನಾರಿಟಿ ರೂಲ್ ಮಾಡುವುದು ಪ್ರಜಾಪ್ರಭುತ್ವವೇ ; ಮತ್ತು ಕಾನೂನಿನ ವಿರುದ್ಧವಾಗಿ ಹೋಗುವುದು ಪ್ರಜಾಪ್ರಭುತ್ವದ ಲಕ್ಷಣವೇ ? ಅದನ್ನು ಜನತೆ ಒಪ್ಪುವುದಿಲ್ಲವೆಂದು ಮಾತ್ರ ಹೇಳುತ್ತೇನೆ. ಈ ಮನೆಯ ಕಾರ್ಯಕಲಾಪಗಳು ಸಹ ಕಾನೂನಿನ ರೀತಿಯಲ್ಲಿ ನಡೆಯಬೇಕಾಗುತ್ತದೆ ; ಸರ್ಕಾರದ ಕೆಲಸ ಕೂಡ ಕಾನೂನಿನ ರೀತಿಯಲ್ಲಿ ನಡೆಯಬೇಕಾಗುತ್ತದೆ. ಕಾನೂನಿಗೆ ವಿರುದ್ಧವಾಗಿ ನಡೆದರೆ ನ್ಯಾಯಾಲಯವಿರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಕಾನೂನಿನ ದುರುಪಯೋಗವಾದಾಗ ನಿಮಗೆ ಅದನ್ನು ಸರಿಪಡಿಸಬಹುದಲ್ಲ ಎಂದು ಹೇಳುತ್ತಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಕಾನೂನಿಗೆ ವಿರುದ್ಧವಾಗಿ ನಡೆದರೆ ಈ ಸಭೆ ಇದೆ ; ನ್ಯಾಯಾಲಯ ಇದೆ. ಅದಕ್ಕೂ ಮೀರಿ ನಡೆದರೆ ದೇಶದಲ್ಲಿ ಜನತೆ ಇದ್ದಾರೆ. ಅದಕ್ಕಿಂತಲೂ ಹೆಚ್ಚು ಇನ್ನು ಇವರು ಏನು ಮಾಡುತ್ತಾರೆಂದು ನನಗೆ ಗೊತ್ತಾಗುವುದಿಲ್ಲ. ಇವರು ಹೊಡೆದಾಟ ಮಾಡುತ್ತಾರೆಯೋ ; ಯುದ್ಧ ಮಾಡುತ್ತಾರೆಯೋ ಏನೆಂದು ತಿಳಿಯುವುದಿಲ್ಲ. ಯಾರು ಜನತೆಯ ಹಿತಕ್ಕೆ ವಿರುದ್ಧವಾಗಿ ನಡೆಯುತ್ತಾರೆ, ಅದು ಚುನಾವಣೆಯಲ್ಲಿ ಗೊತ್ತಾಗುತ್ತದೆ. ನಾವಾದರೂ ಸಹ

(ಶ್ರೀ ಡಿ. ದೇವರಾಜ ಅರಸ್)

ಇವತ್ತು ಕೋ-ಆಪರೇಟಿವ್ ಸೊಸೈಟೀಸ್ ರೂಲ್ಸ್ 130 ಪ್ರಕಾರ ಒಂದು ನೋಟಿಫಿಕೇಶನನ್ನು ಲೆಜಿಸ್ಲೇಚರ್ ಮುಂದೆ ಇಡಬೇಕೆಂದು ಇದೆ ; ಅದನ್ನು ಇಡುತ್ತಿದ್ದೇವೆ. ನಮ್ಮ ಮಾನ್ಯ ಸ್ನೇಹಿತರು ಅದನ್ನು ಇಡಕೂಡದು ಎಂದು ಹೇಳುತ್ತಿದ್ದಾರೆ. ಒಂದು ವೇಳೆ ನಾವು ಇಟ್ಟರೂ ಸಹ ಅದರ ಮೇಲೆ ನಿಮಗೆ ರಿಸೊಲ್ಯೂಶನ್ ತರಬಹುದು, ಪ್ರಶ್ನೆ ಹಾಕಬಹುದು ಮತ್ತಿತರ ಚರ್ಚೆಯನ್ನು ಸಹ ಮಾಡಬಹುದು. ಆಗ ನಾವು ಅದನ್ನು ಏಕೆ ಮಾಡಿದ್ದೇವೆಂದು ಹೇಳುತ್ತೇವೆ. ಒಂದು ನಾವು ಸಮರ್ಥನೆ ಮಾಡಿಕೊಳ್ಳಬಹುದು, ಇಲ್ಲವೆ ತಪ್ಪು ಇದ್ದರೆ ಅದನ್ನು ಸರಿಪಡಿಸಬಹುದು. ಆದರೆ ತಾವು ಹೇಳುವಂತೆ ಇದರಲ್ಲಿ ಹೋದರೆ ಏನೋ ಮಾಡಿಬಿಟ್ಟಿದ್ದಾರೆಂದು ಜನರಿಗೆ ತಪ್ಪು ಭಾವನೆ ಬರಬಾರದು. ಸೆಕ್ಷನ್ 54ರ ಪ್ರಕಾರ ನಾವು ಕೆಲವು ಕಾರ್ಯಗಳನ್ನು ಮಾಡಬಹುದು. ಈಗ ಸೆಕ್ಷನ್ 54 ಏನು ಹೇಳುತ್ತದೆ ಎಂಬುದನ್ನು ನೋಡೋಣ. ಅದು ಈ ರೀತಿ ಹೇಳುತ್ತದೆ :—

> "Section 54 : Control of Society assisted : Where the State aid amounting to not less than Rs. 2 lakhs is given to any co-operative society, the State Government, if it is satisfied that it is necessary in public interest to do so may by notification in the official Gazette take power to exercise such control over the conduct of business of such a Society as suffice in the opinion of the State Government to safeguard the interest of the State".

ಇದು ರೂಲ್ ಇರತಕ್ಕದ್ದು. ಎರಡು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಯಾವ ಸೊಸೈಟಿಗೆ ಹಣ ಕೊಟ್ಟಿದ್ದೇವೆ, ಅಂಥ ಸೊಸೈಟಿಗಳ ಕಾರ್ಯಕಲಾಪಗಳು ಸರಿಯಾಗಿ ನಡೆಯದಿದ್ದರೆ ಅದನ್ನು ಈ ರೀತಿಯ ನೋಟಿಫಿಕೇಶನ್ ಮೂಲಕ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬಹುದು ಎಂದು ಇದೆ. ಸರ್ಕಾರ ಈ ರೀತಿಯ ಕಾನೂನು ಚಲಾಯಿಸಿದರೆ, ಇನ್ನೂ ಹೆಚ್ಚಿಗೆ ಡೈರೆಕ್ಟರನ್ನು ಹಾಕಿ, ಸರ್ಕಾರದ ಪರವಾಗಿ ಒಬ್ಬರನ್ನು ಚೇರ್ಮನ್ ಆಗಿ ಮಾಡಿ ಈ ಎಕ್ಸಿಕ್ಯೂಟಿವ್ ಅಥಾರಿಟಿಯ ಪ್ರಕಾರ ಆಡಳಿತ ನಡೆಸುತ್ತಾರೆ. ಆದರೆ ಇದು 50 ಸಾವಿರ ರೂಪಾಯಿ ಹಣ ಕೊಟ್ಟಿದ್ದರೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಸರ್ಕಾರಕ್ಕೆ ಇರುವ ಅಧಿಕಾರವನ್ನು ಇಲ್ಲಿ ಚಲಾಯಿಸಿದ್ದೇವೆ. ಆ ರೀತಿ ಚಲಾಯಿಸಿದ ಆರ್ಡರನಲ್ಲಿ ಏನಾದರೂ ತಪ್ಪು ಇದ್ದರೆ ಕೋರ್ಟು ಇದೆ; ಅದು ನೋಡಿಕೊಳ್ಳುತ್ತದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಈ ಮಾನ್ಯ ಸಭೆಗೆ ತಪ್ಪುಗಳು ಇದ್ದರೆ ಸರಿಯಲ್ಲ ಎಂದು ಹೇಳುವುದಕ್ಕೆ ಅಧಿಕಾರ ಇದೆ. ಇವೆಲ್ಲಾ ಮಾರ್ಗಗಳನ್ನು ಪ್ರಜಾಪ್ರಭುತ್ವದಲ್ಲಿ ಅನುಸರಿಸುವುದಕ್ಕೆ ಸಾಧ್ಯವಿದೆ. ಶ್ರೀಮಾನ್ ಕೃಷ್ಣನ್‌ರವರು ಪ್ರಜಾಪ್ರಭುತ್ವದ ಕೊಲೆ ಮಾಡುತ್ತಿದ್ದಾರೆ ಎಂದು ಹೇಳಿದರು. ಇವತ್ತು ಯಾರು ಕೊಲೆ ಮಾಡುತ್ತಿದ್ದಾರೆಂಬುದನ್ನು ಅವರೇ ವಿಚಾರ ಮಾಡಲಿ ಎಂದು ನನ್ನ ಪ್ರಾರ್ಥನೆ. ಇದನ್ನು ನಾವು ಉದ್ದೇಶಪೂರ್ವಕವಾಗಿ ಮಾಡಿದ್ದೇವೆ, ನಮ್ಮ ಪಕ್ಷದವರು ಅಲ್ಲಿ ಇಲ್ಲವೆಂಬ ಭಾವನೆಯಿಂದ ಮಾಡಿದ್ದೇವೆ ಎಂಬ ರೀತಿಯಲ್ಲಿ ಅವರು ಹೇಳಬಹುದು, ಆದ್ದರಿಂದ ನಮಗೆ ಗೊತ್ತಿರತಕ್ಕಂಥಹ ಮಾಹಿತಿಯನ್ನು ನೀಡುವ ಜವಾಬ್ದಾರಿ ನಮ್ಮದು ಇದೆ. ಮಾಹಿತಿ ನೀಡುವುದಾದರೂ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಒಂದು ಅವಕಾಶವಿದೆ. ಇನ್ನು ಚರ್ಚೆಮಾಡಕೂಡದು ಎಂಬ ಭಾವನೆ ನಮಗೆ ಇಲ್ಲ. ನಾವು ಏನೋ ಇದರಲ್ಲಿ ಮಾಡಿದ್ದೇವೆ, ಹೇಗೋ ಇದನ್ನು ಮುಚ್ಚಿಟ್ಟುಕೊಂಡು ಹೋಗಬೇಕು ಎಂಬ ಭಾವನೆಯೂ ನಮಗಿಲ್ಲ. ನೋಟಿಫಿಕೇಶನ್ ಮಾಡಿದಮೇಲೆ ಚರ್ಚೆ ಮಾಡಬಾರದು ಎಂದೇನೂ ಇಲ್ಲ. ನೋಟಿಫಿಕೇಷನ್ ಇಟ್ಟಿರುವ ಬಗ್ಗೆ ಚರ್ಚೆಮಾಡಬೇಕೆಂದು ಹೇಳುವುದಕ್ಕೆ ತಮಗೂ ಅಧಿಕಾರವಿದೆ. ಅದರ ಬಗ್ಗೆ ಚರ್ಚೆಮಾಡುವುದಕ್ಕೆ ಅವಕಾಶ ಇದ್ದೇ ಇದೆ. ಇಷ್ಟು ನನ್ನ ನಮ್ರ ವಿನಂತಿ.

3-00 P. M.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಸೆಕ್ಷನ್ 54ರಲ್ಲಿ ಏನು ಹೇಳಿದೆ ಎಂಬುದನ್ನು ನೋಡಬೇಕು.

ಶ್ರೀ ಎಚ್ ಸಿದ್ದವೀರಪ್ಪ.—ಈ ಸಂದರ್ಭದಲ್ಲಿ ಮಾನ್ಯ ಸ್ನೇಹಿತರಾದಂಥ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದ ಪ್ರಕಾರ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಬಂದಿರುವ ಕಾಗದವನ್ನು ಓದಬೇಕಾಗುತ್ತದೆ. ಅದು ಈ ರೀತಿ ಇದೆ:—

To

The Chief Minister,
Government of Mysore,
Vidhana Soudha, Bangalore.

Sir,

There is fast rumour that the present Health Minister is being gifted in consideration to the appointments in the following manner: An Assistant Surgeon Rs. 3000; a Medical Officer in primary Health Centre Rs. 8000 and a District Surgeon or a District Health and Family Planning Officer Rs. 15,000 I do not know how far these are correct but to ascertain the fact I request for requesting the Health Minister to declare his assets and liabilities in the House at once. The House should also demand a probe in his black-money.

Your faithfully,
A Citizen.

Copy forwarded etc., ಎಂದು ಬಂದಿದೆ.

This is a character assassination. You have grave reason to doubt.

ಮಾನ್ಯ ಶ್ರೀ ದೇವೇಗೌಡರು ಮತ್ತು ಇನ್ನು ಕೆಲವು ಸ್ನೇಹಿತರು ಅವರಿಗೂ ಇದನ್ನು ಕಳುಹಿಸಿದೆ ಎಂಬುದಾಗಿ ಹೇಳಿದರು. ನನ್ನ ವಿಚಾರವಾಗಿ ಬಂದಿರುವ ಬಗ್ಗೆ ನಾನು ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನನಗೆ ಬಹಳ ಸಂತೋಷ. ಈ ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದು ನನ್ನ ಕರ್ತವ್ಯ. ಇದೇ ರೀತಿಯಲ್ಲಿ ಹಿಂದೆ 8 ದಿವಸಗಳ ಕೆಳಗೆ ನನಗೆ ಒಂದು ಕಾಗದ ಬಂದಿದೆ. ಎರಡೂ ಒಂದೇ ಟೈಪರೈಟರ್ ಮಿಷನ್ನಿನಲ್ಲಿ ಟೈಪ್ ಆಗಿದೆ. ಎರಡು ಕಾಗದಗಳನ್ನೂ ಒಂದೇ ಪೋಸ್ಟ್ ಆಫೀಸಿನಲ್ಲಿ ಪೋಸ್ಟ್ ಮಾಡಿದ್ದಾರೆ. ಅದನ್ನು ಸ್ಟಾಂಪಿನಿಂದ ಕಂಡು ಹಿಡಿಯಬಹುದು. ಇದೇನೋ ಕ್ಯಾರೆಕ್ಟರ್ ಅಸಾಸಿನೇಷನ್ ಇರಬಹುದು. ಇದರಲ್ಲಿ ಯಾರೋ ಒಬ್ಬರು ಸೇರಿಕೊಂಡಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಿಮ್ಮನ್ನೇ ಮಂತ್ರಿಮಂಡಲದಿಂದ ತೆಗೆಯುವ ಜನರು ನಿಮ್ಮಲ್ಲೇ ಇದ್ದಾರೆ. ಅಂತಹವರೇ ಇದನ್ನು ಮಾಡಿರುವುದು.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಯಾವಾಗಲೂ ಮಂತ್ರಿಯಾಗಿಯೇ ಇರಬೇಕೆಂದು ಈ ಕುರ್ಚಿಗೇ ಅಂಟಿಕೊಂಡಿಲ್ಲ. ನನಗೆ ಮಂತ್ರಿಯಾಗಿರಬೇಕೆಂಬ ವ್ಯಾಮೋಹವೇನೂ ಇಲ್ಲ. ನಾನು ಮಂತ್ರಿಯಾಗಿರುವುದು ಯಾವ ಪಾರ್ಟಿ ಲೀಡರನ್ನು ಅರಿಸಬೇಕೆಂದಿಲ್ಲ. ಅವರಿಗೆ ನಾನು ಸಹಾಯಕನಾಗಿದ್ದೇನೆಯೇ ಹೊರತು ಇವತ್ತು ನನಗೆ ಬಿಟ್ಟುಬಿಟ್ಟರೆ ದೇವರಿಗೆ 10 ಕಾಯಿ ಒಡಿಸುತ್ತೇನೆ. ಮಂತ್ರಿಯ ಕೆಲಸದ ವ್ಯಾಮೋಹ ಇಟ್ಟುಕೊಂಡು, ಎಲ್ಲರಿಂದ ಅದಹಾಗೆ ಅನ್ನಿಸಿಕೊಂಡು, ಇಲ್ಲಿಯೇ ಉಳಿದುಕೊಂಡು ನಾನು ಇಲ್ಲಿ ಕೂತುಕೊಳ್ಳಬೇಕೆಂದಿಲ್ಲ. ಆ ರೀತಿ ಯಾರಾದರೂ ಯೋಚನೆ ಇಟ್ಟುಕೊಂಡಿದ್ದರೆ ಖಂಡಿತವಾಗಿ ಅದು ಸರಿಯಲ್ಲ. ಆ ಯೋಚನೆ ಮಾಡಬೇಕಾಗಿಲ್ಲ. ಇದು ಕ್ಯಾರೆಕ್ಟರ್ ಅಸಾಸಿನೇಷನ್. ಮಾನ್ಯ ಸಿದ್ದವೀರಪ್ಪನವರು ಸುಮ್ಮನೆ ಇದ್ದಾರೆಂದು ಅವರ ಮೇಲೆ ಏನಾದರೂ ಒಂದು ಹಾವು ಬಿಡೋಣ ಎಂದು ಹೇಳಿದರು. ಇದು ಮಾನ್ಯ ಸಭೆಗೆ ಚೆನ್ನಾಗಿ ಅರ್ಥವಾಗಬೇಕು.

Sri B. PUTTASWÀMAIAH.—I will be liable for investigation or enquiry.

ಶ್ರೀ ಡಿ. ದೇವರಾಜ ಅರಸ್.—ಯಾರೋ ಅನಾಮಧೇಯ ಈ ರೀತಿಯಾಗಿ ಬರೆದುಕೊಂಡು ಹೋದರೆ Sri Thimmappa cannot substantiate it. I wish he had not raised it. He should have thought hundred times before he brought it before the House. This is not a fit case for making an enquiry. Anybody can type anything on anybody and send it.

ಶ್ರೀ ಕೋಣಂದೂರು ಲಿಂಗಪ್ಪ.—ಇಂತಹ ವಿಷಯಗಳಿಗೆ ಬೆಲೆ ಕೊಡಬೇಡಿ.

ಶ್ರೀ ವಾಟಾಳ್ ನಾಗರಾಜ್.—ನೀವು ತಿರುಗಿಸುವುದಕ್ಕೆ ಹೋಗಬೇಡಿ ಆ ರೀತಿ ಪತ್ರಗಳು ನಮಗೆಲ್ಲರಿಗೂ ಬಂದಿವೆ. ಮಾನ್ಯ ಶ್ರೀ ಸಿದ್ಧವೀರಪ್ಪನವರು ಅದನ್ನು ಸ್ವಾಗತ ಮಾಡುತ್ತಾರೆ. ಅವರಲ್ಲಿ ಯಾರಾದರೂ ಈ ರೀತಿಯಾಗಿ ಏಕೆ ಮಾಡಿರಬಾರದು ?

ಶ್ರೀ ಎಚ್. ಸಿದ್ಧವೀರಪ್ಪ.—ಇವತ್ತಿನ ದಿವಸ ಎಲ್ಲರೂ ಅವರವರ ಅಸೆಟ್ಸ್ ಅಂಡ್ ಲಯಬಿಲಿಟೀಸ್ ಎಷ್ಟಿದೆ ಎಂಬುದನ್ನು ಕೊಡಲಿ. ನನ್ನ ಬ್ಲಾಕ್ ಮನಿಯನ್ನು ನಾನು ಮೊದಲೇ ಮಾನ್ಯ ಶ್ರೀ ನಿಜಲಿಂಗಪ್ಪನವರಿಗೇ ಅವರ ಮಂತ್ರಿಮಂಡಲ ಕಾಲದಲ್ಲಿ ಕೊಟ್ಟಿದ್ದೇನೆ. ಮೊನ್ನೆ ಹೋದ ತಿಂಗಳು ಮತ್ತೆ ಕೊಟ್ಟಿದ್ದೇನೆ. ನನ್ನದು, ನಮ್ಮ ಬಂಧುಗಳದೂ ಸಹ ಕೊಟ್ಟಿದ್ದೇನೆ. ನನ್ನ ಬ್ಯಾಂಕ್ ಬ್ಯಾಲೆನ್ಸ್ ಬಗ್ಗೆ ಎಲ್ಲೆಲ್ಲಿ ನನ್ನ ಅಕೌಂಟ್ಸ್ ಇದೆ. ಆ ಬ್ಯಾಂಕುಗಳ ಬ್ಯಾಲೆನ್ಸ್‌ಗಳನ್ನು ನಾಳೆಯ ದಿವಸವೇ ಕೊಟ್ಟು ಅದರ ಒಂದು ಕಾಪಿಯನ್ನು ಈ ಸಭೆಯ ಮುಂದೆ ಇಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇವರು ಇಂದಿರಾ ಗಾಂಧಿಯವರ ಆಶ್ರಯದಲ್ಲಿ ಕಾರ್ಯ ಮಾಡುತ್ತಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ಈ ದೇಶದಲ್ಲಿ ಕ್ಯಾರೆಕ್ಟರ್ ಅಸಾಸಿನೇಷನ್ ಅದರಲ್ಲಿಯೂ ಪ್ರಜಾಪ್ರಭುತ್ವವಿರುವಾಗ ಷುರುವಾದರೆ ಯಾರೂ ಕೂಡ ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೆ ಆಗುವುದಿಲ್ಲ. Since he has placed the letter before the House, I will have to request the Chair and Chief Minister to take such action as they feel necessary and clear this type of character Assassination.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸಚಿವರಾದಂಥ ಶ್ರೀ ಸಿದ್ಧವೀರಪ್ಪನವರ ಬಗ್ಗೆ ನಮಗೆ ತುಂಬಾ ಗೌರವವಿದೆ. ಅನಾಮಧೇಯ ಪತ್ರಗಳು ಅನೇಕರಿಗೆ ನಮ್ಮ ಮೇಲೂ ಬರುತ್ತವೆ. ಅದಕ್ಕೆ ಬೆಲೆ ಕೊಡಬೇಕೆಂಬ ದೃಷ್ಟಿಯಿಂದ ಅದನ್ನು ತಮ್ಮ ಮುಂದೆ ಇಡುತ್ತಿದ್ದಾರೆ. ನಮಗೆ ನಿಮ್ಮ ವ್ಯಕ್ತಿತ್ವದ ಬಗ್ಗೆ ಅಪಾರವಾದ ಗೌರವವಿದೆ. ಇಂತಹ ಪತ್ರಗಳ ಬಗ್ಗೆ ಸರ್ಕಾರ ಗಣನೆಗೆ ತೆಗೆದುಕೊಳ್ಳುವುದಕ್ಕೆ ಎಂದಿಗೆ ಸಾಧ್ಯ ?

ಅಧ್ಯಕ್ಷರು.—ಇದಕ್ಕೆ ಇಷ್ಟು ವ್ಯಾಖ್ಯಾನ ಏಕೆ ?

Sri D. DEVARAJ URS —Because this point has been raised here, the Minister had to give his explanation. I wish the situation had not developed. The Hon Member need not have quoted even because there is no need. Somebody has typed something and posted

ಶ್ರೀ ವಾಟಾಳ್ ನಾಗರಾಜ್.—ಇಂತಹ ಪತ್ರಗಳೂ ನಮಗೂ ಬರುತ್ತವೆ.

ಶ್ರೀ ಡಿ. ದೇವರಾಜ ಅರಸ್. ನೀವು ಅದನ್ನು ದೊಡ್ಡದು ಮಾಡುವುದಕ್ಕೆ ಹೋಗಬೇಡಿ. ಅದು ತಮಗೆ ಬೇಕಾಗಿರಬಹುದು, ಅದನ್ನು ಬೇಕೆಂತಲೇ ನೀವು ಮಾಡುತ್ತಿದ್ದೀರಿ. ಮಾನ್ಯ ಶ್ರೀ ನಾಗರಾಜ್ ಅವರೇ ನೀವು ಏನು ಮಾಡಿದರೂ ನಮ್ಮಲ್ಲಿ ಒಡಕು ತರುವುದಕ್ಕೆ ಆಗುವುದಿಲ್ಲ. ನಿಮಗೆ ಯಾರ ಜೊತೆಯೂ ಇಲ್ಲ. ನೀವು ಯಾವಾಗಲೂ ಒಂಟಿಯಾಗಿರುವವರು. ನಿಮಗೆ ಇದರಿಂದೇನೂ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅಂತಹ ಪರಿಸ್ಥಿತಿ ನಿಮ್ಮಲ್ಲಿಯೂ ಅಡಗಿದೆ. ನಿಮ್ಮವರೇ ನಿಮ್ಮ ಪಕ್ಷದವರೇ ಲೋಕಸಭೆಯಲ್ಲಿರುವವರು ಈ ಮಂತ್ರಿಮಂಡಲ ಬೇಡ ಎಂದು ಹೇಳುತ್ತಿದ್ದಾರೆ. ಅದನ್ನು ನೀವು ಸ್ವಲ್ಪ ಯೋಚನೆಮಾಡಬೇಕು.

ಶ್ರೀ ಡಿ. ದೇವರಾಜ ಅರಸ್.—ಇವರು ಈ ಮಾತನ್ನೇ ಇಲ್ಲಿ ಎತ್ತಬೇಕಾದ ಅವಶ್ಯಕತೆ ಇರಲಿಲ್ಲ. ಇದು ಗಮನಕ್ಕೆ ತೆಗೆದುಕೊಳ್ಳುವುದಕ್ಕೆ ಅಂಥಾ ಲಾಯಖಾದ ವಿಷಯವೇ ಅಲ್ಲ ಎಂಬುದು ನನ್ನ ಖಚಿತವಾದ ಅಭಿಪ್ರಾಯ. ಆದರೆ ಹಾಗೆ ಅವರ ಬಗ್ಗೆ ಅಂಥಾ ಆಪಾದನೆಗಳಿದ್ದರೆ ಅವರು ಅದನ್ನು ಮುಖ್ಯ ಮಂತ್ರಿಗಳಿಗೆ ಬರೆಯಬೇಕಾಗಿತ್ತು.

ಶ್ರೀ ಎಚ್. ಸಿದ್ಧವೀರಪ್ಪ.—ಅದೂ ಕೂಡ ರುಜು ಮಾಡದೇ ಇರುವುದು.

ಶ್ರೀ ಡಿ. ದೇವರಾಜ ಅರಸ್.—ಹಾಗೆ ಯಾರು ಬೇಕಾದರೂ ಸುಮ್ಮನೆ ಟೈಪ್ ಮಾಡಿ ಯಾರ ಮೇಲೆ ಏನು ಬೇಕಾದರೂ ಬರೆದು ಹಾಕಬಹುದು. ಅಂಥಾದ್ದಕ್ಕೇನು ಬೆಲೆ ಇದೆ ? ಇದರ ಬಗ್ಗೆ ಯಾರೂ ಚಿಂತೆ ಮಾಡಬೇಕಾಗಿಲ್ಲ. ಶ್ರೀಮಾನ್ ಸಿದ್ಧವೀರಪ್ಪನವರ ವಿಚಾರದಲ್ಲಿ ನಮಗೆ ಯಾರಿಗೂ ಯಾವ ಅನುಮಾನವೂ ಇಲ್ಲ. ಇಂಥಾ ಒಂದು ಗಾಸಿಪ್ಪಿಂಗ್ ನಮ್ಮ ದೇಶದಲ್ಲಿ ಬಹಳ ವರ್ಷಗಳಿಂದಲೂ ನಡೆದುಕೊಂಡು ಬರುತ್ತಿದೆ. ಇದಕ್ಕೆ ಯಾರೂ ನಿಗಾ ಕೊಡಬೇಕಾದದ್ದಿಲ್ಲ. ಹಾಗೆ ಒಂದು ವೇಳೆ ಬೇಕಾದರೆ ಇದನ್ನು ಯಾರು ಸೃಷ್ಟಿಸಿದವರು ಎಂಬುದನ್ನು ಪತ್ತೆ ಮಾಡುವುದಕ್ಕೆ ಸಿ.ಐ.ಡಿ. ಅವರಿಗೆ ಒಪ್ಪಿಸಬಹುದು. ಮಾನ್ಯ ಸಿದ್ಧವೀರಪ್ಪನವರ ಇಂಟಿಗ್ರಿಟಿ ಬಗ್ಗೆ ಈ ಸಭೆಯಲ್ಲಿ ಯಾರಿಗೂ ಅನುಮಾನವಿಲ್ಲ. ಆದ್ದರಿಂದ ಇದಕ್ಕೆ ಏನೂ ಗಮನ ಕೊಡಬೇಕಾದ್ದಿಲ್ಲ ಎಂದು ಹೇಳುತ್ತೇನೆ.

† **ಶ್ರೀ ಎಸ್. ಬಂಗಾರಪ್ಪ.**—ಮಾನ್ಯ ಅಧ್ಯಕ್ಷರೇ, ಶ್ರೀ ದೇವೇಗೌಡರು ಎತ್ತಿರುವ ಸೆಕ್ಷನ್ 54ರ ಪ್ರಶ್ನೆ ವಿಚಾರದಲ್ಲಿ ಒಂದು ಮಾತನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸೆಕ್ಷನ್ 54ರಲ್ಲಿ ಎರಡು ಮುಖ್ಯವಾದ ಪದಗಳಿವೆ— ಅವು ಯಾವುವು ಎಂದರೆ – "In the Public Interest." ಅನ್ನುವುದೊಂದು ಪದ ಮತ್ತು ಎರಡನೇ ಪದ ಎಂದರೆ "In the Interest of the State" ಅನ್ನುವುದು ಇನ್ನೊಂದು ಪದ. ಈ ಎರಡು ಪದಗಳನ್ನು ನೋಟಿಫಿಕೇಷನ್ನಿನಲ್ಲಿ ಬಳಸಿ ಅವರು ಒಂದು ನೋಟಿಫಿಕೇಷನ್ ಹೊರಡಿಸಿ ಅದರ ಪ್ರಕಾರ ಕ್ರಮ ಜರುಗಿಸಿ ರ್ಯಾಟಿಫೈ ಮಾಡುವುದಕ್ಕಾಗಿ ಸಭೆಯ ಮುಂದೆ ಅದನ್ನು ಇಡುವುದು ಅವಶ್ಯಕವಾದ್ದರಿಂದ ಅದನ್ನು ಇಲ್ಲಿ ತಂದಿದ್ದಾರೆ. ಆದರೆ ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿರುವ ಪ್ರಶ್ನೆ ಏನೆಂದರೆ ಈ ನೋಟಿಫಿಕೇಷನ್ ಇಲ್ಲಿ ಕಾನೂನು ಪ್ರಕಾರ ಮಂಡಿಸಿಲ್ಲ ಎಂಬುದು ಅವರ ಮೂಲ ಪ್ರಶ್ನೆ. ಆದರೆ 19 ಜಿಲ್ಲೆಗಳಲ್ಲೂ ಈ ಸೆಂಟ್ರಲ್ ಬ್ಯಾಂಕುಗಳು ಕೆಲಸ ಮಾಡುತ್ತಿವೆ. ಅವುಗಳಲ್ಲಿ ಕೆಲವು ಲಾಭದಲ್ಲಿ ಕೆಲಸ ಮಾಡುತ್ತಿರಬಹುದು ಇನ್ನು ಕೆಲವು ಲುಕ್ಸಾನಿನಲ್ಲಿ ಕೆಲಸಮಾಡುತ್ತಿರಬಹುದು. ಆದರೆ ಅಂಥ ಒಂದು ಪಟ್ಟಿಯನ್ನು ಸಭೆ ಮುಂದೆ ಮಾನ್ಯ ಸಚಿವರು ಮಂಡಿಸಿಲ್ಲ.....

ಅಧ್ಯಕ್ಷರು—ಅದನ್ನು ಇಲ್ಲಿ ಮಂಡಿಸತಕ್ಕ ಪ್ರಶ್ನೆ ಹೇಗೆ ಉದ್ಭವಿಸುತ್ತದೆ ? ತಾವು ಬೇಕಾದರೆ ಅದರ ಬಗ್ಗೆ ಒಂದು ಪ್ರತ್ಯೇಕ ಮೋಷನ್ ತೆಗೆದುಕೊಂಡು ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಮಾನ್ಯ ಸಚಿವರೇನು ಈ ಕೋಆಪರೇಟೀವ್ ಆಕ್ಟಿನ ಸೆಕ್ಷನ್ 54ನ್ನು ಪ್ರಸ್ತಾಪ ಮಾಡಿದ್ದಾರೆ, ಇಂಥದೇ ಒಂದು ಪ್ರಾವಿಜನ್ ಸಾಮಾನ್ಯವಾಗಿ ಎಲ್ಲಾ ಆಕ್ಟ್‌ಗಳಲ್ಲೂ ಇದ್ದೇ ಇರುತ್ತದೆ. ಮೊನ್ನೆ ಶ್ರೀ ಬಸವಲಿಂಗಪ್ಪನವರು ಒಂದು ಬಿಲ್ಲನ್ನು ತಂದಿದ್ದರು. ಅದರಲ್ಲೂ ಕೂಡ ಇಂಥಾ ಒಂದು ಪ್ರಾವಿಜನ್ ಅಡಕವಾಗಿತ್ತು. ಆದರೆ ಇಂಥಾ ಒಂದು ಪ್ರಾವಿಜನ್ನನ್ನು ಸರ್ಕಾರದವರು ಇಷ್ಟಪಟ್ಟಲ್ಲಿ ಸದುದ್ದೇಶಕ್ಕಾದರೂ ಉಪಯೋಗ ಮಾಡಬಹುದು ಇಲ್ಲವೇ ದುರುದ್ದೇಶಕ್ಕಾದರೂ ಉಪಯೋಗ ಮಾಡಬಹುದು. ಅದಕ್ಕೆ ನಾನು ಈಗ ಸಭೆಗೆ ತಿಳಿಸಬೇಕಾಗಿರುವುದೇನೆಂದರೆ ಈಗ ಸರ್ಕಾರದವರು ಈ ಸೆಕ್ಷನ್ 54ನ್ನು ದುರುದ್ದೇಶದಿಂದಲೇ ಬಳಸಿದ್ದಾರೆಂಬುದಕ್ಕೆ ನನ್ನಲ್ಲಿ ಸಾಕಷ್ಟು ನಿದರ್ಶನಗಳಿವೆ. ಈ ದಿವಸ ಸರ್ಕಾರದವರೇನು ಆ ಬಿಜಾಪುರ ಮತ್ತು ಗುಲ್ಬರ್ಗಾಗಳಲ್ಲಿ ಕ್ರಮಕೈಗೊಂಡಿದ್ದಾರೆ ಆ ಸಂಬಂಧದಲ್ಲಿ ಅಲ್ಲಿನ ಸೆಂಟ್ರಲ್ ಬ್ಯಾಂಕುಗಳು ನಡೆಸಿರತಕ್ಕ ವ್ಯವಹಾರದಲ್ಲಿ ಉಂಟಾಗಿರುವ ಲಾಭ ಅಥವಾ ನಷ್ಟ ಎಷ್ಟೆಂಬುದನ್ನು ತಿಳಿಸಿಲ್ಲ. ಆದರೆ ನನಗೆ ತಿಳಿದಿರುವಂತೆ ಕೋಲಾರ ಜಿಲ್ಲಾ ಸೆಂಟ್ರಲ್ ಬ್ಯಾಂಕಿನಲ್ಲಿ ಸುಮಾರು 5—6 ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ಕೇಳುತ್ತಿದ್ದೇನೆ. ಆದರೂ ಅದನ್ನು ರದ್ದು ಮಾಡದೆ, ಈ ಬಿಜಾಪುರ ಮತ್ತು ಗುಲ್ಬರ್ಗಾಗಳಲ್ಲಿ ಅಂಥಾ ಯಾವ ಲುಕ್ಸಾನಾಗದಿದ್ದರೂ ಅವುಗಳ ಬಗ್ಗೆ ಸೆಕ್ಷನ್ 54ರ ಪ್ರಕಾರ ಕ್ರಮ ತೆಗೆದುಕೊಳ್ಳುವುದರ ಉದ್ದೇಶ ದುರುದ್ದೇಶವಲ್ಲದೆ ಮತ್ತೇನು ? ಇತ್ತೀಚೆಗೆ ಈ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಇಲ್ಲಿದ್ದ ಪ್ರಜಾಪ್ರಭುತ್ವ ಆಡಳಿತ ಸಂಸ್ಥೆಗಳನ್ನು ಈ ಸರ್ಕಾರ ತಿಂದು ಹಾಕಿ ಇಲ್ಲವೇ ನುಂಗಿ ನೀರು ಕುಡಿದು ರಾಜಕೀಯವನ್ನು ನಡೆಸುತ್ತಿವೆ. ಆದ್ದರಿಂದ ಈ ಸರ್ಕಾರಕ್ಕೆ ನಾನು ಇದು ಪ್ರಜಾಪ್ರಭುತ್ವ ಸಂಸ್ಥೆಗಳನ್ನು ನುಂಗಿ ನೀರು ಕುಡಿಯುತಕ್ಕ ಒಂದು ಬಕಾಸುರ ಎಂದು ಏಕೆ ಹೆಸರಿಡಬಾರದು ? ಇಲ್ಲಿ ನಮಗೆ ಸರ್ಕಾರದವರು ಬರೀ ಒಂದು

(ಶ್ರೀ ಎಸ್. ಬಂಗಾರಪ್ಪ)

ನೋಟಿಫಿಕೇಷನ್ ಮಾತ್ರ ಇಟ್ಟಿದ್ದಾರೆ. ಕಾರಣಗಳನ್ನು ತಿಳಿಸಿಲ್ಲ. ಆ ಗುಲ್ಬರ್ಗಾ ಬ್ಯಾಂಕಿನ ವಿಚಾರದಲ್ಲೂ ಅಷ್ಟೇ ಬರೀ ಒಂದು ನೋಟಿಫಿಕೇಷನ್ ಕೊಟ್ಟಿದ್ದಾರೆ. ಕಾರಣಗಳನ್ನು ತಿಳಿಸಿಲ್ಲ. ಸರಕಾರದವರು ಒಂದು ಸಕಾರಣ ಕೊಟ್ಟಿರಬಹುದು, ಆದರೆ ಅದು ಈ ಸಭೆಗೆ ಗೊತ್ತಿರಬೇಕು. ಈ ಸಭೆಗಿಂತ ಸರಕಾರ ದೊಡ್ಡದಾಗುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು.— ನೋಟಿಫಿಕೇಷನ್ ಇಡುವುದಕ್ಕೆ ಕಾರಣ ಎಲ್ಲಿ ಕೊಟ್ಟಿದ್ದಾರೆ ?

ಶ್ರೀ ಎಸ್. ಬಂಗಾರಪ್ಪ.— ಕಾನೂನು ಪ್ರಕಾರ ಅದನ್ನು ಕೇಳುವುದಕ್ಕೆ ಅವಕಾಶವಿದೆ. ಕಾರಣ ಕೊಟ್ಟಿಲ್ಲ. ನೋಟಿಫಿಕೇಷನ್ನಿಗೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಿಲ್ಲ, ದಯವಿಟ್ಟು ಮಾನ್ಯ ಮಂತ್ರಿಗಳು ಈ ಪ್ರಯತ್ನ ಮಾಡಬಾರದು. ಸಕಾರಣವಿಲ್ಲದೆ ನೋಟಿಫಿಕೇಷನ್ನನ್ನು ಸಭೆಯಮುಂದೆ ತರುತ್ತಿದ್ದಾರೆ. ಇದನ್ನು ಇಡದಹಾಗೆ ಮಾಡುವ ಸಂದರ್ಭ ಬರಬಹುದು. ನಮ್ಮ ಹಕ್ಕನ್ನು ಮೊಟಕು ಮಾಡುವುದಾದರೆ ಮುಂದಿನ ಪರಿಣಾಮಕ್ಕೆ ಸಿದ್ಧವಾಗಿರಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಇವತ್ತಿನ ದಿವಸ ಗುಲ್ಬರ್ಗ ಮತ್ತು ಬಿಜಾಪುರದ ಡಿ. ಸಿ ಸಿ. ಬ್ಯಾಂಕುಗಳಮೇಲೆ ಸೆಕ್ಷನ್ 54ರ ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ಇದೇರೀತಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಗೌರಿಬಿದನೂರು ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟ ಸಹಕಾರ ಸಂಘವನ್ನು ಹಿಂದೆ ರಾಜಕೀಯ ಉದ್ದೇಶಕ್ಕಾಗಿ ಸರಕಾರ ವಶಕ್ಕೆ ತಗೆದುಕೊಂಡಿತು. ಖಾಸಗಿ ಜನರ ಕೈಲಿ ಅದು ಚೆನ್ನಾಗಿ ನಡೆಯುತ್ತಿತ್ತು. ಅದರಲ್ಲಿ ನಾನು ಒಬ್ಬ ಡೈರೆಕ್ಟರಾಗಿದ್ದೆ. ಹಿಂದೆ ಯಾವಾಗಲೂ ಬಾರದಿದ್ದ ಲಾಭ ಬರುವಂತೆ ಸಕ್ಕರೆ ಕಾರ್ಖಾನೆ ಅಲ್ಲಿ ಕೆಲಸಮಾಡುತ್ತಿತ್ತು. ಹಿಂದಿನ ಸರಕಾರ ಮಾಡಿದ ರೀತಿಯಲ್ಲಿ ಈ ಸರಕಾರ ಸಹ ಮಾಡುವುದಾದರೆ ಅದಕ್ಕೂ ಈ ಸರಕಾರಕ್ಕೂ ವ್ಯತ್ಯಾಸವೇನು? ನಮ್ಮ ದೇಶದಲ್ಲಿ ಮಾತ್ರವಲ್ಲ, ಇಡೀ ಇಂಡಿಯಾದೇಶದಲ್ಲಿ ದಬ್ಬಾಳಿಕೆ ನಡೆಯುತ್ತಿದೆ, ರಾಜಕೀಯ ಕಾರಣದಿಂದ ದುರುದ್ದೇಶದಿಂದ ಹೀಗೆ ಮಾಡುವುದು ಅನ್ಯಾಯ. 6 ಲಕ್ಷ ರೂಪಾಯಿಗಳವರೆಗೆ ಲಾಭ ಬಂದಿರುವಾಗ ಪಬ್ಲಿಕ್ ಇಂಟರೆಸ್ಟ್ ಏನು, ಸ್ಟೇಟ್ ಇಂಟರೆಸ್ಟ್ ಏನು ಎಂಬುದು ಅರ್ಥವಾಗುವುದಿಲ್ಲ. ಹಾಗಿರುವಾಗ ಸ್ವಾರ್ಥವನ್ನು ಬಿಟ್ಟು ಈ ತಕ್ಷಣ ಈ ನೋಟಿಫಿಕೇಷನ್ನನ್ನು ವಾಪಸು ತೆಗೆದುಕೊಳ್ಳಬೇಕೆಂದು ಮುಖ್ಯಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಪ್ರಜಾಪ್ರಭುತ್ವವನ್ನು ಯಾರು ಕೊಲೆ ಮಾಡುವುದಕ್ಕೆ ಹೋಗಿದ್ದಾರೆ ಎಂದು ದೇಶದ ಜನರು ಅರ್ಥ ಮಾಡಿಕೊಳ್ಳುವರು ಎಂದು ತಿಳಿಸಿದರು. ಕಾರ್ಯಾಂಗದಲ್ಲಿರುವ ತಪ್ಪುಗಳನ್ನು, ಕಾರ್ಯಾಂಗದಲ್ಲಿ ನಡೆಯತಕ್ಕ ಕಾನೂನು ಬದ್ಧವಾದ ಕೆಲಸಗಳನ್ನು ಪ್ರಶ್ನೆಮಾಡಲು ನ್ಯಾಯಾಂಗವಿದೆ, ಶಾಸಕಾಂಗವಿದೆ ಎಂದು ಹೇಳಿ ಅವರ ಅನುಭವದಿಂದ ಸಮರ್ಥನೆ ಮಾಡಿದರು. ಈಗ ನ್ಯಾಯಾಂಗಕ್ಕೆ ಎಷ್ಟುಮಟ್ಟಿಗೆ ಮನ್ನಣೆ ಕೊಟ್ಟಿಲ್ಲ ಎಂಬುದು ಮೊನ್ನೆ ಈ ಸಭೆಯಲ್ಲಿ ಚರ್ಚೆಮಾಡಿದ ವಿಷಯದಿಂದ ಗೊತ್ತಾಗುವುದು ಸರಕಾರ ಹೇಗೆ ಮಾಡುತ್ತಿದೆ ಎಂದು ಆ ವಿಷಯವನ್ನು ನಾನು ಪುನರುಚ್ಚಾರ ಮಾಡಬೇಕಾಗಿಲ್ಲ. ಅಧ್ಯಕ್ಷರೇ, ಕಾರ್ಯಾಂಗ ಹದ್ದುಮೀರಿ ವರ್ತಿಸಿದಾಗ ನ್ಯಾಯಾಂಗ ತಡೆಹಿಡಿದು ಒಂದು ಆರ್ಡರನ್ನು ಮಾಡಿದಾಗ ಸರಕಾರ ಲಂಗುಲಗಾಮಿಲ್ಲದೆ ಹೋಗುವ ಒಂದು ನಿದರ್ಶನ ಈ ಸಭೆಯಲ್ಲಿ ಚರ್ಚೆಯಾಗಿದೆ. ಅಧ್ಯಕ್ಷರು ರೂಲಿಂಗ್ ಕೊಡಲು ತಡೆಹಿಡಿದಿದ್ದಾರೆ. ಹೈಕೋರ್ಟ್ ನಿರ್ದೇಶನವನ್ನು ಉಲ್ಲಂಘಿಸಿ ಕಾರ್ಯಾಂಗ ನಡೆದರೆ ಸರಕಾರ ಅಧಿಕಾರ ದುರುಪಯೋಗ ಮಾಡಿದಂತಾಗುವುದು ನ್ಯಾಯಾಂಗಕ್ಕೆ ಎಷ್ಟು ಮನ್ನಣೆ ಕೊಟ್ಟಿದ್ದಾರೆ ಎಂಬುದಕ್ಕೆ ನಿದರ್ಶನವಿದೆ. ಶಾಸಕಾಂಗದ ವಿಚಾರ ಹೇಳಿದರು. ಇದರ ಕಾರ್ಯವನ್ನು ಹತ್ತು ವರ್ಷಗಳಿಂದ ನಾನು ನೋಡುತ್ತಿದ್ದೇನೆ. ಮುಖ್ಯಮಂತ್ರಿಗಳಿಗೆ ಮೂವತ್ತು ವರ್ಷಗಳ ಅನುಭವವಿರಬಹುದು! ಸರಿಯಾದ ಉತ್ತರ ಸರಕಾರ ಈ ಸಭೆಯಲ್ಲಿ ಕೊಡದಿದ್ದರೆ ಸರಕಾರದೊಡನೆ ವಿರೋಧ ಪಕ್ಷ ಯುದ್ಧಮಾಡಲು ಸಾಧ್ಯವಿಲ್ಲ. ಕಾನೂನು ಪಾಲನೆ ಮಾಡಬೇಕಾಗಿದೆ ದೇಶದ ಜನರು ಅರ್ಥಮಾಡಿಕೊಳ್ಳುವರೆಂದು ಹೇಳುತ್ತಿದ್ದಾರೆ. ಹೌಸಿಂಗ್ ಬೋರ್ಡ್ ವಿಚಾರದಲ್ಲಿ ಈ ಸಭೆಯಲ್ಲಿ ಎಷ್ಟುಮಟ್ಟಿಗೆ ಉತ್ತರ ಕೊಟ್ಟರು ಎಂಬುದು ನಮಗೆ ಗೊತ್ತಿದೆ. ಪ್ರತಿಯೊಂದಕ್ಕೂ ಸಾರ್ವಜನಿಕರ ಹಿತದೃಷ್ಟಿಯಿಂದ ಉತ್ತರ ಕೊಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಈ ದಿವಸ ಹೇಳುವುದು ಕಾರ್ಯಾಂಗದ ಕೆಲಸ ಮುಖ್ಯವಾದುದು ಎಂದು ಹೇಳುವಾಗ ಅದಕ್ಕಿರುವ ಅಧಿಕಾರ ಚಲಾಯಿಸುವುದಕ್ಕೆ ಅವಕಾಶ ಕೊಡದಿದ್ದರೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿದೆಯೇ ಎಂದು ಕೇಳಬೇಕಾಗಿದೆ. ಸರಕಾರ ತನ್ನ ಅಧಿಕಾರ ದುರುಪಯೋಗ ಮಾಡಿದಾಗ ಕೋರ್ಟಿನಲ್ಲಿ ನ್ಯಾಯ ದೊರಕಿಸಿಕೊಳ್ಳಬೇಕಾಗುವುದು. ಸರಕಾರದ ಹತ್ತಿಕ್ಕುವ

ಮನೋವೃತ್ತಿ ಸರಿಯಿಲ್ಲ. ಈಗ ಮಾಡುತ್ತಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ. ಈಗ ಸ್ಥಾನೀಕ ಸಂಸ್ಥೆಗಳನ್ನು ಕಿತ್ತುಹಾಕುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದುವರೆಗೆ ಸುಮಾರು ನೂರಾರು ಪೌರಸಭೆಗಳನ್ನು ರದ್ದು ಮಾಡಿದ್ದಾರೆ. ಇಂದು ತಾಲ್ಲೂಕ ಬೋರ್ಡಿನ ಚುನಾವಣೆ ಮಾಡುವುದು ಸರಕಾರಕ್ಕೆ ಬೇಕಿಲ್ಲ, ಈ ಬಗ್ಗೆ ಯೋಚಿಸಿ ಅವರಿಗೆ ಬೇಕಾದ ನಿರ್ಣಯ ಮಾಡಿದ್ದಾರೆ. ಈ ದಿವಸ ಸಹಕಾರ ಸಂಘಗಳ ಚುನಾವಣೆಯಲ್ಲಿ ಯಾರು ಬೇಕಾದರೂ ಗೆಲ್ಲಬಹುದು. ಜನರು ತಮ್ಮ ಇಚ್ಛೆ ಬಂದವರನ್ನು ಆರಿಸಬಹುದು. ಅಧಿಕಾರ ದುರುಪಯೋಗ ಮಾಡಿದ್ದಾರೆಂಬ ಭಾವನೆ ನಮಗಿದೆ. ಕೆಲವು ವಿಷಯ ಪ್ರಸ್ತಾಪ ಮಾಡಿದರೆ ಇದು ಗೊತ್ತಾಗುವುದು. ಇನ್ನು ಉಳಿದಿರುವುದು ಒಂದೇ ಮಾರ್ಗ. ಕಾನೂನು ಪಾಲನೆ ಮಾಡಲು ಸರಕಾರಕ್ಕೆ ಸಾಧ್ಯವಿಲ್ಲ ಎಂದು ಖಂಡನೆ ಮಾಡುವುದು. ಸರಕಾರದ ವರ್ತನೆಯನ್ನು ವಿರೋಧಿಸುತ್ತೇನೆ. ಸರಕಾರ ತನ್ನ ಸ್ವಾರ್ಥ ಸಾಧನೆಗಾಗಿ ಗುಲ್ಬರ್ಗದ ಬ್ಯಾಂಕನ್ನು ಸೂಪರ್‌ಸೀಡ್ ಮಾಡಿದ್ದಾರೆ. ಹೊಸದಾಗಿ ಅಲ್ಲಿ ಚುನಾವಣೆ ನಡೆದಿದೆ. ಬಾಪುಗೌಡರು 13-2-1973ರಲ್ಲಿ ಪ್ರೆಸಿಡೆಂಟರಾಗಿ ಚುನಾಯಿತರಾಗಿದ್ದಾರೆ. ಹೊಸ ಆಡಳಿತ ಮಂಡಲಿ ಅಲ್ಲಿ ಅಸ್ತಿತ್ವಕ್ಕೆ ಬಂದು ಕೇವಲ ಒಂದು ತಿಂಗಳು ಕೂಡ ಆಗಿಲ್ಲ. ಆ ಮಂಡಲಿಯ ಮೇಲೆ ಏನಾದರೂ ಆರೋಪವಿದೆಯೇ ಅಥವಾ ಅದು ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲಸ ಮಾಡುವುದಿಲ್ಲವೇ? ಯಾವರೀತಿ ಅಲ್ಲಿ ಅಪವ್ಯಯ ಮಾಡುತ್ತಿದ್ದಾರೆ? ಸ್ಟೇಟ್ ಇಂಟರೆಸ್ಟ್‌ಗೆ ಮತ್ತು ಸಾರ್ವಜನಿಕರ ಇಂಟರೆಸ್ಟ್‌ಗೆ ಧಕ್ಕೆ ಬಂದಾಗ 54ನೆ ನಿಯಮದ ಪ್ರಕಾರ ಕ್ರಮ ಕೈಕೊಳ್ಳಬಹುದು. ಇಂದು ಯಾವ ಸೆಕ್ಷನ್ 54ರ ಕೆಳಗೆ ಯಾವ ಸನ್ನಿವೇಶದಲ್ಲಿ ಈ ಅಧಿಕಾರ ಸರಕಾರ ಪಡೆಯಲು ಹೊರಟಿದೆ? ಅದು ಕೇವಲ ಒಂದು ತಿಂಗಳ ಕೆಳಗೆ ಹೊಸ ಮಂಡಲಿ ಅಧಿಕಾರಕ್ಕೆ ಬಂದಿದೆ. ಅದು 'ಒ' ಕಾಂಗ್ರೆಸಗೆ ಸಂಬಂಧಪಟ್ಟಿದೆ, ಆ ಪಕ್ಷದವರು ಅದರಲ್ಲಿ ಹೆಚ್ಚಾಗಿದ್ದಾರೆ, ಆದುದರಿಂದ ಅದನ್ನು ತೆಗೆಯಬೇಕು ಎಂಬ ಇಚ್ಛೆ ಇರುವಂತೆ ಕಾಣುತ್ತದೆ.

ಇದು ನಿಮ್ಮ ಮನಸ್ಸಿನ ಅಭಿಪ್ರಾಯ ಇದ್ದರೆ, ನಾವು ತಾನೆ ಏತಕ್ಕೆ ಇರಬೇಕು? ನೀವು ಸ್ಥಾನೀಕ ಸಂಸ್ಥೆಗಳನ್ನು ನಿರ್ನಾಮ ಮಾಡುವುದಕ್ಕೆ ಹೊರಟಂಥ ಕಾಲದಲ್ಲಿ ಈ ಶಾಸನಸಭೆಯೂ ಬೇಡ.

3-30 P.M:

ಶ್ರೀ ಕೆ. ಎಚ್. ಪಾಟೀಲ್.—ತಾವು ಫ್ಯಾಕ್ಟ್ಸ್‌ಗಳನ್ನು ತಪ್ಪು ಹೇಳುವುದು ಬೇಡ, ಮಾನ್ಯ ಬಾಪೂಗೌಡರು ಮರು ಚುನಾವಣೆಯಲ್ಲಿ ಆರಿಸಿಬಂದಿರಬಹುದು, ಇದು ಒಂದು ವರ್ಷವಲ್ಲ, ಬಹಳ ವರ್ಷವಾಯಿತು. ಅಲ್ಲಿ ಏನು ತಂಟೆ ತಕರಾರುಗಳು ಇವೆಯೆಂದು ಗೊತ್ತಿಲ್ಲ. ಬಾಪೂಗೌಡರು ಆರಿಸಿ ಬಂದು ಒಂದು ತಿಂಗಳಾಯಿತು ಎಂದು ತಪ್ಪು ಕಲ್ಪನೆ ಕೊಡಬೇಡಿರಿ, ತಾವು ಡಿಫೆಂಡ್ ಮಾಡಿ, ಬೇಡ ಎಂದು ಹೇಳುವುದಿಲ್ಲ, ಆದರೆ ಜಗತ್ತಿಗೆ ತಪ್ಪು ಕಲ್ಪನೆ ಕೊಡಬೇಡಿರಿ.

ಶ್ರೀ ಡಿ. ದೇವರಾಜ ಅರಸ್.—ಇದು ಏನಾಗಿದೆ ಎಂದರೆ, ನಾನು ಆಗಲೇ ಅರಿಕೆ ಮಾಡಿದೆ, ಇದನ್ನು ಚರ್ಚೆಗೆ ಕೊಡಬೇಕಾದರೆ ಕೆಲವು ವಿಧಾನಗಳನ್ನು ಅನುಸರಿಸಿ ಮಾಡಲಿ. ನೋಟಿಫಿಕೇಷನ್ ಇರುವಾಗ, ಆ ನೋಟಿಫಿಕೇಷನ್ ಅನ್ನು ಇಟ್ಟರೆ ತಾನೇ ನಿಮ್ಮ ಗಮನಕ್ಕೆ ಬರುವುದು. ನೋಟಿಫಿಕೇಷನ್ ಇಡಬೇಕು ಎಂದು ಕಾನೂನು ಇದೆ. ಏತಕ್ಕೆ ಕಾನೂನು ಮಾಡಿದ್ದೇವೆ ಎಂದರೆ, ಕೆಲವು ವಿಚಾರದಲ್ಲಿ ಸರ್ಕಾರಕ್ಕೆ ಅಧಿಕಾರವನ್ನು ಕೊಟ್ಟುಬಿಟ್ಟಿದ್ದೇವೆ. ಸರ್ಕಾರ ಏನು ಮಾಡಿದರೂ ಶಾಸನಸಭೆಯ ಗಮನಕ್ಕೆ ಅದು ಬರಬೇಕು ಎನ್ನುವ ದೃಷ್ಟಿಯಿಂದ ಕಾನೂನು ಇರತಕ್ಕಂಥದ್ದು. ಆ ಪ್ರಕಾರ ನಿಮ್ಮ ಗಮನಕ್ಕೆ ತಂದಿದ್ದೇವೆ, ನೋಟಿಫಿಕೇಷನ್ ಅನ್ನು ಇಟ್ಟಿದ್ದೇವೆ. ನೋಟಿಫಿಕೇಷನ್ ಇಟ್ಟ ಮೇಲೆ, ರೆಸಲ್ಯೂಷನ್ ತಂದು, ಚರ್ಚೆ ಮಾಡಿದರೆ ತಾನೇ ಉತ್ತರ ಕೊಡುವುದು? ಏನು ತಪ್ಪು ಆಯಿತು ಎಂದು ಹೇಳುತ್ತಾರೋ ಅದಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯ? ಹಾಗೆ ಇಲ್ಲದೆ ಹೋದರೆ, ಹೇಗೆ ಬೇಕಾದರೂ, ಯಾವ ಕಾಲದಲ್ಲಿಯಾದರೂ ಮಾತನಾಡೋಣ ಎಂದು ನಿಮಗೆ ಇಷ್ಟ ಇರಬಹುದು. ಆದರೆ ಅದಕ್ಕೆ ಅಧ್ಯಕ್ಷರು ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ನಾವು ಇಲ್ಲಿ ನಿಯಮಾವಳಿಗಳನ್ನು ಅನುಸರಿಸಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಮುಂದೆ ಚರ್ಚೆ ಮಾಡಿದ್ದರೆ ಸಮಾಧಾನ ಏನು ಹೇಳುತ್ತಾರೋ, ಏನು ಕಾರಣ ಕೊಟ್ಟಿದ್ದಾರೋ ಅದನ್ನು ಹೇಳೋಣ. ಅದಕ್ಕೆ ಒಂದು ಅವಕಾಶವನ್ನು ಮಾಡಿಕೊಂಡು ಹೇಳೋಣ.

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯ ಮಂತ್ರಿಗಳು ಏನು ಹೇಳಿದರು ಎಂದರೆ ಈ ಸಭೆಯ ನಿಯಮಾವಳಿಗಳ ಪ್ರಕಾರ ಈ ವಿಷಯವನ್ನು ಚರ್ಚೆ ಮಾಡಲಿಕ್ಕೆ ಅನುವು ಮಾಡಿಕೊಂಡು ಅಧ್ಯಕ್ಷರ ಅನುಮತಿಯನ್ನು ಪಡೆದು ಚರ್ಚೆ ಮಾಡಿದರೆ ಸರ್ಕಾರ ಉತ್ತರ ಕೊಡಲಿಕ್ಕೆ ಅನುಕೂಲವಾಗುತ್ತದೆ ಎಂದು ಈ ರೀತಿ ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಮೊದಲೇ ಹೇಳಿದೆ, ನಾನು ವಿಷಯವನ್ನು ಪ್ರಸ್ತಾಪ ಮಾಡಿದಾಗ ನಿಭಂದನೆಯನ್ನು ಮೀರಿ ಹೋಗುತ್ತಿದ್ದೇನೆ ; ತಪ್ಪು ಮಾಡುತ್ತಿದ್ದೇನೆ ಎಂದು. ನಾನು ಕಾನೂನು ರೀತ್ಯ ವಿಷಯವನ್ನು ಹೇಳುತ್ತಾ ಇಲ್ಲ, ಸಭೆಯ ಕಾಲವನ್ನು ಕಾಲಹರಣ ಮಾಡುತ್ತಿದ್ದೇನೆ, ನಿಯಮಗಳನ್ನು ಮಾನ್ಯತೆ ಮಾಡದೆ, ಸ್ಥಾನವನ್ನು ದುರುಪಯೋಗ ಮಾಡುತ್ತಿದ್ದೇನೆ ಎಂದು ಸ್ಪಷ್ಟವಾಗಿ ಹೇಳಿದ್ದೇನೆ ಮಾನ್ಯ ಕೆ- ಎಚ್. ಪಾಟೀಲರು ಹೇಳಿದರು, ಬಾಪೂಗೌಡರು ಮುಂಚಿನಿಂದ ಆ ಬ್ಯಾಂಕಿನಲ್ಲಿದ್ದಾರೆ ಈ ಸಾರಿಯೂ ಚುನಾವಣೆಯಲ್ಲಿ ಗೆದ್ದಿದ್ದಾರೆ ಎಂದು.

ಅಧ್ಯಕ್ಷರು.—ನಿಮಗೆ ಜವಾಬು ಹೇಳುವವರು ಯಾರು ?

ಶ್ರೀ ಎಚ್. ಡಿ. ದೇವೇಗೌಡ.—1977ಕ್ಕೆ ಕೆ. ಎಚ್. ಪಾಟೀಲರು ಮಂತ್ರಿಗಳಾಗಿ ಬಂದರೆ, ಅಧಿಕಾರಕ್ಕೆ ಬಂದರೆ ಕೇಂದ್ರ ಸರ್ಕಾರದಲ್ಲಿ ಬೇರೆ ಪಕ್ಷ ಬಂದರೆ ನೀವು ಹಿಂದೆ ಇದ್ದವರು ಎಂದು ಹೇಳಿ ನಿಮ್ಮನ್ನು ಡಿಸ್‌ಮಿಸ್ ಮಾಡುವುದಕ್ಕಾಗುವುದಿಲ್ಲ. ಒಂದೇ ತಿಂಗಳಲ್ಲಿ ನೀವು ನಿಮ್ಮ ಅಧಿಕಾರವನ್ನು ದುರುಪಯೋಗ ಮಾಡಿದ್ದೀರಿ ; ತಾವು ಸಹಕಾರ ಸಂಘಗಳ ಕಾಯಿದೆಯನ್ನು ಪೂರ್ಣವಾಗಿ ಕುಡಿದಿದ್ದೀರಿ ಎಂದು ಗೊತ್ತಿದೆ, ನಾನೂ 10 ವರ್ಷ ಇದನ್ನು ಮಾಡಿ ನೋಡಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸಹಕಾರ ಸಂಘಗಳ ಸಾಕಾರ ಮೂರ್ತಿ ಇವರು.

ಶ್ರೀ ಎಚ್. ಡಿ. ದೇವೇಗೌಡ.—1972ರ ಆಡಿಟ್ ರಿಪೋರ್ಟ್ ನೋಡಿದರೆ, 1972ರವರೆಗೆ ಬಿಜಾಪುರದ ಸೊಸೈಟಿ ಲಾಭ ಮಾಡಿಕೊಂಡು ಬಂದಿದೆ. ಅದು ಉತ್ತಮವಾಗಿ ಕೆಲಸ ಮಾಡುತ್ತದೆ ಎಂದು ಆಡಿಟ್ ರಿಪೋರ್ಟ್ ನನ್ನ ಕೈಯಲ್ಲಿದೆ. ಮಾನ್ಯ ಪ್ರಭಾಕರ್ ಅವರು ಈ ಆಡಿಟ್ ವರದಿ ಏನು ಇದೆ, ಅದನ್ನು ಒಂದು ದೃಷ್ಟಿಯಿಂದ ಸಂಶಯ ಮಾಡಬೇಕಾಗಿ ಬರುತ್ತದೆ ಎಂದು ಹೇಳಿದರು. ಅವರು ಥಿಯರಿಟಿಕಲ್ ಪಾಲಿಟೀಷಿಯನ್.

ಶ್ರೀ ಕೆ. ಪ್ರಭಾಕರ್.—ಆಡಿಟ್ ವರದಿ ಏನು ಇದೆ ಅವರ ಒಂದು ದೃಷ್ಟಿಯನ್ನಿಟ್ಟು ಕೊಂಡು ಸರಿಯೋ, ತಪ್ಪೋ ಎಂದು ತೀರ್ಮಾನಕ್ಕೆ ಬರುವುದು ಒಂದು ದೃಷ್ಟಿ.

ಶ್ರೀ ಎಚ್. ಡಿ. ದೇವೇಗೌಡ.—ಹಿಂದೆ ತಾವು ಈ ಸಭೆಯಲ್ಲಿ ಉಪಮಂತ್ರಿಗಳಾಗಿ ಕೆಲಸ ಮಾಡಿದವರು; ಆಮೇಲೆ ಇಲ್ಲಿ ಸದಸ್ಯರಾಗಿ ಕೆಲಸ ಮಾಡುತ್ತಾ ಇದ್ದೀರಿ. ಒಂದು ಸಾರಿ ಅವರು ಒಂದು ಮಾತು ಹೇಳಿದರು. ರಾಮರಾಜ್ಯ ಹೇಗೆ ಎಂದರೆ, ತ್ರಿಲೋಕ ಸುಂದರಿಯಾದ ಹುಡುಗಿ ಪೂರ್ಣವಾಗಿ ಆಭರಣಗಳನ್ನು ಮೈಮೇಲೆ ಇಟ್ಟುಕೊಂಡು ಕನ್ಯಾಕುಮಾರಿಯಿಂದ ಹಿಮಾಲಯದ ವರೆಗೆ ಹೋದರೂ ಯಾರೂ ಮುಟ್ಟದೆ ಹೋದರೆ ಅದು ರಾಮರಾಜ್ಯ ಎಂದು.

ಶ್ರೀ ಕೆ. ಪ್ರಭಾಕರ್.—ನಾನು ಹೇಳಿದ್ದು ರಾಮರಾಜ್ಯದ ಉದಾಹರಣೆಯಲ್ಲ, ಬ್ರಿಟೀಷ್ ಸಾಮ್ರಾಜ್ಯ ಇದ್ದಂಥ ಕಾಲದಲ್ಲಿ ಲಾ ಅಂಡ್ ಆರ್ಡರ್ ಯಾವ ರೀತಿ ಇಟ್ಟಿದ್ದರು ಎಂದು ಚರ್ಚಿಲ್ ಅವರು ನಮ್ಮ ರಾಜ್ಯವನ್ನು ನಮಗೆ ಕೊಟ್ಟು ಹೋದಾಗ ಪಾರ್ಲಿಮೆಂಟ್‌ನಲ್ಲಿ ಹೇಳಿರತಕ್ಕ ಲಿಟರೇಚರ್‌ನ ಮಾತು ಇದು. ಅದು ಏನೆಂದರೆ, ತ್ರಿಲೋಕ ಸುಂದರಿಯಾದ ಹೆಣ್ಣು ಮಗಳಿಗೆ ಆಭರಣಗಳನ್ನು ಇಟ್ಟು ಪಂಜಾಬ್‌ನಿಂದ ಕನ್ಯಾಕುಮಾರಿಯವರೆಗೆ ಕಳ್‌ಹಿಸಿದರೂ ಕೂಡ, ಅವಳ ಆಭರಣವನ್ನು ಯಾರೂ ಕೀಳಬಾರದು ಶಂಕೆ ಎನ್ನುವ ರೀತಿ ಒಂದು ಭಯವನ್ನು ಕಾನೂನು ರಕ್ಷಣೆಯನ್ನು ಭದ್ರವಾಗಿಟ್ಟುಕೊಂಡು ರಾಜ್ಯಭಾರ ಮಾಡಿದೆವು ಎಂದು ಹೇಳಿದರು ಎಂದು ಅಲ್ಲಿದೆ. ಅದನ್ನು ಓದಿಕೊಳ್ಳಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಹಿಂದೆ ಶ್ರೀಮಾನ್ ಪ್ರಭಾಕರ್ ಅವರು ಆ ಜಾಗದಲ್ಲಿ ಕೂತು ಪ್ರಸ್ತಾಪ ಮಾಡಿದ್ದನ್ನು ನಾನು ಕೂತು ಕೇಳಿದ್ದೆ. ಅಂಥ ರಾಜ್ಯವನ್ನು ನಾವು ನೋಡುತ್ತಿದ್ದೇವೆಯೇ ? ನಾವು ಕನಸು ಕಂಡಂಥ ರಾಜ್ಯವಲ್ಲ ಇದು. ಮಾನ್ಯ ಮಂತ್ರಿಗಳು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಾನೂನು ಪ್ರಕಾರ ಚರ್ಚೆ ಮಾಡೋಣ ಎಂದು ಹೇಳಿದರು ಚರ್ಚೆಗೆ ಕಾನೂನು ಪ್ರಕಾರ ಅನುವು ಮಾಡಿಕೊಳ್ಳತಕ್ಕ ಕಾಲದಲ್ಲಿ ಸಭೆಯ ಕಾಲವನ್ನು ಹರಣ ಮಾಡುವುದು ಬೇಡ. 19 ಜಿಲ್ಲಾ ಬ್ಯಾಂಕುಗಳಲ್ಲಿ, ಆರು ಬ್ಯಾಂಕುಗಳ ವರದಿಯನ್ನು ಸಭೆಯ ಮುಂದೆ ಒದಗಿಸಿ ಕೊಟ್ಟು, ಈ ಎರಡು ಬ್ಯಾಂಕುಗಳ ವರದಿಯನ್ನು ಒದಗಿಸಿಕೊಡುವುದಾದರೆ ಚರ್ಚೆಗೆ ನಾನು ತಯಾರಿದ್ದೇನೆ. ಆಮೇಲೆ ನೋಟಿಫಿಕೇಷನ್ ಇಡಿ. ನೀವು ನಿಷ್ಪಕ್ಷಪಾತದಿಂದ ಹುಕುಂ ಮಾಡಿದ್ದೀವೆ,

ನಿಮ್ಮಲ್ಲಿ ನಿಷ್ಪಕ್ಷಪಾತವಾದ ನಿರ್ಣಯವಾಗಿದೆ ಎನ್ನತಕ್ಕಂಥಾದ್ದನ್ನು ತೋರಿಸಿಕೊಳ್ಳಬೇಕಾದರೆ ಇವತ್ತು ರಾಜ್ಯದಲ್ಲಿ 19 ಜಿಲ್ಲೆಯ, ಜಿಲ್ಲಾ ಬ್ಯಾಂಕುಗಳು ಕೆಲಸ ಮಾಡುತ್ತಾ ಇರತಕ್ಕಂಥ ವರದಿಯನ್ನು ಸಭೆಯ ಮುಂದೆ ಕೊಡಬೇಕು. ನಾವು ಯಾವ ಆಧಾರದ ಮೇಲೆ ಚರ್ಚೆ ಮಾಡಬೇಕು ? ಮುಖ್ಯಮಂತ್ರಿಗಳು ಏನು ಹೇಳಿದರು ಅದನ್ನು ಒಪ್ಪಿಕೊಳ್ಳುತ್ತೇನೆ. ತಾವು ಕೊಡುವ ಆದೇಶಕ್ಕೆ ನಾನು ತಯಾರಿದ್ದೇನೆ. ಎರಡು ಬ್ಯಾಂಕುಗಳಲ್ಲಿ ಪಕ್ಷಾತೀತ ದೃಷ್ಟಿಯಿಂದ ನಿರ್ಧಾರಕ್ಕೆ ಬಂದಿದ್ದೀರಿ ಎನ್ನುವ ಒಂದು ಅಭಿಪ್ರಾಯವನ್ನು ನಿರಾಕರಣೆ ಮಾಡತಕ್ಕ ಕಾಲವಲ್ಲಿ ಬೇರೆ ಬ್ಯಾಂಕುಗಳು ಹೇಗೆ ಕೆಲಸ ಮಾಡುತ್ತಿವೆ ? ನನ್ನ ಮಿತ್ರರು ಕೋಲಾರದ ಬ್ಯಾಂಕಿನ ವಿಷಯ ಹೇಳಿದರು. ನನ್ನ ಜಿಲ್ಲೆಯ ಬ್ಯಾಂಕ್ ವಿಷಯವನ್ನು ಹೇಳುತ್ತೇನೆ. ಬೆಂಗಳೂರು ಜಿಲ್ಲಾ ಬ್ಯಾಂಕ್ ವಿಷಯ ಹೇಳಬಹುದು, ಚಿತ್ರದುರ್ಗ ಜಿಲ್ಲಾ ಬ್ಯಾಂಕ್ ವಿಷಯ ಹೇಳಬಹುದು, ತುಮಕೂರು ಜಿಲ್ಲಾ ಬ್ಯಾಂಕ್. ವಿಷಯ ಹೇಳಬಹುದು, ಆದರೆ ನಮ್ಮ ಪಕ್ಷದವರ ಕೈಯಲ್ಲಿರತಕ್ಕ ಬ್ಯಾಂಕುಗಳು ಇದ್ದುದಕ್ಕಿಂತ ಉತ್ತಮವಾದ ಕೆಲಸ ಮಾಡುತ್ತಿವೆ ಎಂದು ಸಮರ್ಥನೆ ಮಾಡಬಹುದು. ನೀವು ಹೂಡಿರತಕ್ಕ 25 ಲಕ್ಷ ರೂಪಾಯಿ ಬಂಡವಾಳಕ್ಕೆ ಬಿಜಾಪುರ ಜಿಲ್ಲೆಯ ಆಡಳಿತ ಮಂಡಲಿ ಧೋಕ ಹಾಕತಕ್ಕಂಥ ಪರಿಸ್ಥಿತಿಗೆ ಬಂದಿದೆ. ಮತ್ತೆ ಜನತೆಗೆ ಅನ್ಯಾಯ ಮಾಡತಕ್ಕಂಥ ಪರಿಸ್ಥಿತಿಯನ್ನು ಮನಗಂಡು ರೂಲ್ 54ರ ಪ್ರಯೋಗ ಮಾಡುವುದಾದರೆ, ಬೇರೆ ಬ್ಯಾಂಕುಗಳು ಕೆಲಸ ಮಾಡತಕ್ಕ ಅಂಕ ಅಂಶಗಳನ್ನು ಕೊಟ್ಟು ನೀವು ಇದನ್ನು ಸಮರ್ಥನೆ ಮಾಡಬೇಕಾಗುತ್ತದೆ. ದಯಮಾಡಿ ಇದಕ್ಕೆ ತಾವು ಒಪ್ಪಿಗೆ ಕೊಡುವುದಾದರೆ, ನೋಟಿಫಿಕೇಷನ್ ಇಡಿ, ಚರ್ಚೆ ಮಾಡೋಣ. ಇವತ್ತು ಬೇರೆ ಕಾರ್ಯಕ್ರಮಕ್ಕೆ ಹೋಗೋಣ. ನೋಟಿಫಿಕೇಷನ್ ತಡೆಹಿಡಿದು 19 ಜಿಲ್ಲಾ ಬ್ಯಾಂಕುಗಳ ಪರಿಸ್ಥಿತಿಯನ್ನು ಸಭೆಯ ಮುಂದೆ ಇಡಿ, ನೀವು ಏನು ನ್ಯಾಯ ತೀರ್ಮಾನಕ್ಕೆ ಬಂದಿದ್ದೀರಿ ಎಂದು ನೋಡೋಣ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ಒಪ್ಪಿಕೊಂಡಿದ್ದೇನೆ.

ದಯಮಾಡಿ, ಇದರ ಬಗ್ಗೆ ಅನಾವಶ್ಯಕವಾದ ಸನ್ನಿವೇಶಕ್ಕೆ ಹೋಗುವುದು ಬೇಡ, ಚರ್ಚೆಗೆ ಅನುವು ಮಾಡಿಕೊಡಿ ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ತಮ್ಮ ಪ್ರಾರ್ಥನೆಯನ್ನು ಕೇಳುತ್ತಾ ಇದ್ದೇವೆ, ತಮ್ಮ ಪ್ರಾರ್ಥನೆ ಸಲೀಸ್ ಆಗಿ ಆಗಬೇಕು.

ಆದರೆ ಎಲ್ಲವನ್ನೂ ಮಿಕ್ಸ್‌ಅಪ್ ಮಾಡಿ ಅದನ್ನು ಇಡಿ ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. 19 ಜಿಲ್ಲೆಗಳಲ್ಲಿ 30 ಬ್ಯಾಂಕ್‌ಗಳು ಇದ್ದರೆ ಅವನ್ನು ನಿಮ್ಮ ಮುಂದೆ ಇಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಯಾವುದು ಸರಿಯಿಲ್ಲ ಅದು ಹೋಗಲಿ. ನೋಟಿಫಿಕೇಷನ್ ಸಭೆಮುಂದೆ ಇಡುವಾಗ ಅಡ್ಡಿ ಮಾಡುವುದು ಸರಿಯಿಲ್ಲ. ನೋಟಿಫಿಕೇಷನ್ ಇಡುವುದು ಸರಿಯಿಲ್ಲ ಎಂದು ಹೇಳಿದರೆ ಅದು ಅರ್ಥವಾಗದೆ ಇರುವ ಮಾತು, ಅದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಅಡ್ಡಿಮಾಡುವುದು ಸಭೆಯಲ್ಲಿ ಕೆಲಸಮಾಡುವ ರೀತಿ ನೀತಿಯಲ್ಲ. ಕೆಟ್ಟದ್ದನ್ನು ಮುಚ್ಚಿಕೊಂಡು ಇಟ್ಟುಕೊಳ್ಳಬೇಕಾಗಿಲ್ಲ. 19 ಜಿಲ್ಲೆಗಳಲ್ಲಿ ಯಾವ ಬ್ಯಾಂಕುಗಳಲ್ಲಿ ಏನಾದರೂ ಹಾಳುಕು ಇದೆ ಎಂದರೆ ನಮ್ಮ ಪಕ್ಷದವರೇ ಇರಲಿ, ನಿಮ್ಮ ಪಕ್ಷದವರೇ ಇರಲಿ ಕಂಡುಹಿಡಿಯೋಣ ಅದರಮೇಲೆ ಕ್ರಮ ತೆಗೆದುಕೊಳ್ಳೋಣ. ಆದರೆ ನೋಟಿಫಿಕೇಷನ್ ಇಡಬೇಡಿ ಎಂದು ಹೇಳಿದರೆ ಹೇಗೆ ?

ಶ್ರೀ ಎಚ್. ಡಿ. ದೇವೆಗೌಡ.—ಇನ್ನು ಒಂದು ತಿಂಗಳು ಸಭೆ ಇರುತ್ತದೆ ?

ಶ್ರೀ ಡಿ. ದೇವರಾಜ್ ಅರಸ್.—ಒಂದು ತಿಂಗಳು ಇದೆ ಎನ್ನುವುದು ಗೊತ್ತಿದೆ. ಅದಕ್ಕೋಸ್ಕರ ಇದನ್ನು ತಂದು ಇಟ್ಟಿದ್ದೇವೆ. ನೀವು ಬೇಕಾದರೆ ರೆಸಲ್ಯೂಷನ್ ಕಳುಹಿಸಿ. ಇನ್ನು ಯಾವರೀತಿ ಮಾಡಬೇಕೋ ಆ ರೀತಿ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಎಂದರೆ ನೋಟಿಫಿಕೇಷನ್ ಇಟ್ಟುಬಿಡೋಣ ರೂಲ್ಸ್ ಪ್ರಕಾರ ಆಮೇಲೆ ಚರ್ಚೆ ಮಾಡೋಣ ಎಂದು. ನೋಟಿಫಿಕೇಷನ್ ಇಟ್ಟಮೇಲೆ ಚರ್ಚೆ ಮಾಡುವ ಸ್ಥಿತಿ ಪೋಸ್ಟ್‌ಮಾರ್ಟಮ್ ಆಗುತ್ತದೆ ಕಾನೂನು ಪ್ರಕಾರ ಹಕ್ಕು ಇರುವುದು ಗೊತ್ತು. ನೋಟಿಫಿಕೇಷನ್ ಇಟ್ಟಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿರುತ್ತದೆ

ಶ್ರೀ ಕೆ. ಎಚ್. ಪಾಟೀಲ್.—ಅಮೆಂಡ್‌ಮೆಂಟ್ ತಂದು ನೋಟಿಫಿಕೇಷನ್ ಕಿತ್ತು ಹಾಕಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಅದು ಎಲ್ಲಾ ಗೊತ್ತು. ತಾವು ಇದೇ ಗಾಡಿಯೊಳಗೆ ಸವಾರಿ ಮಾಡಿದವರು. ಪ್ರಶ್ನೆ ಅದು ಅಲ್ಲ. ನೀವು ನೋಟಿಫಿಕೇಷನ್ ಸಭೆಯ ಮುಂದೆ ಇಟ್ಟಮೇಲೆ ಮಾತನಾಡುವುದು ಅದು ಶವಪರೀಕ್ಷೆ ಆಗುತ್ತದೆ ಅದು ಚರ್ಚೆಯಾಗುವುದಿಲ್ಲ. ತಾವು ಏನು ಮಾಡಿದ್ದೀರಿ ಅದಕ್ಕೆ ತಮ್ಮ ಕಡೆ ಪುರಾವೆಗಳು ಇರಬಹುದು. ತಾವೇ ರೂಲ್ಸ್‌ಪ್ರಕಾರ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಬೇಕಾದಷ್ಟು ಆಧಾರ ಇರಬಹುದು. ಈ ಕಡೆ ಸದಸ್ಯರಿಗೆ ಆಧಾರ ಇಲ್ಲದೆ ಅನುಮಾನ ಯಾತಕ್ಕೆ ಇರಬೇಕು! ಅದು ಸರಿಯಾದುದಲ್ಲ. ಆದ್ದರಿಂದ ಇದನ್ನು ತಡೆಹಿಡಿಯಬೇಕು ಆತುರಾತುರವಾಗಿ ಮಾಡಿದ್ದಾರೆಂದು ಈ ಕಡೆ ಸದಸ್ಯರು ಹೇಳುತ್ತಿದ್ದಾರೆ. ಇವೊತ್ತೇ ನೋಟಿಫಿಕೇಷನ್ ಇಡದಿದ್ದರೆ ಆಕಾಶ ಭೂಮಿಗೆ ಬೀಳುವುದಿಲ್ಲ. ಅದಕ್ಕೆ ಬದಲು ಈ ಕಡೆಯವರ ಫೀಲಿಂಗ್ ತಿಳಿದುಕೊಂಡು ಮನಃಪೂರ್ವಕವಾಗಿ ಅವರ ಅಭಿಪ್ರಾಯಗಳನ್ನು ಗಮನಕ್ಕೆ ತೆಗೆದುಕೊಂಡು ಚರ್ಚೆಮಾಡಿ ಆಮೇಲೆ ನೋಟಿಫಿಕೇಷನ್ ತರಬಹುದು.

ಶ್ರೀ ಡಿ. ದೇವರಾಜ್ ಅರಸ್.—ಈ ರೀತಿ ವಾದ ಮಾಡಿಕೊಂಡು ಹೋಗುವುದಾದರೆ ಹೇಗೆ? ನೀವು ಹೇಳಿದ್ದೇ ಪ್ರಪಂಚ ಕೇಳಬೇಕು ಎಂದರೆ ಹೇಗೆ?

Sri M. S. KRISHNAN.—Let the Leader of the House and the Leader of the Opposition discuss and come to some understanding. ಇದು ಸರಿಯಲ್ಲ, ನ್ಯಾಯವಲ್ಲ ಎಂದು ಹೇಳುತ್ತೀರಾ? ನೀವು ಹೇಳುತ್ತೀರಿ ನಾವು ಬಿಟ್ಟು ಕೊಡುವುದಿಲ್ಲ ಎನ್ನುವ ಪರಿಸ್ಥಿತಿ ಬಂದಿದೆ. ಆದ್ದರಿಂದ ನಾನು ಮನವಿ ಮಾಡಿಕೊಂಡದ್ದು 19 ಬ್ಯಾಂಕುಗಳ ನೋಟಿಫಿಕೇಷನ್ ಇಡಿ. ಆಗ ಬೇಕಾದರೆ ಭಾಷಣ ಮಾಡೋಣ, ಚರ್ಚೆಮಾಡೋಣ ಅದಕ್ಕೆ ವಿರೋಧವಿಲ್ಲ. ಇದನ್ನು ಸಧ್ಯಕ್ಕೆ ತಡೆಹಿಡಿಯಿರಿ, ಇರಲಿ, ಇದರಿಂದ ಒಳ್ಳೆಯದಾಗುತ್ತದೆ

ಶ್ರೀ ಡಿ. ದೇವರಾಜ್ ಅರಸ್.—ಶ್ರೀಮಾನ್ ಕೃಷ್ಣನ್‌ರವರು ಹೇಳುವುದು ಅರ್ಥವಾಗುವುದಿಲ್ಲ. ಇದು ನಮ್ಮಿಬ್ಬರ ಮನೆ ಪಂಚಾಯತಿಯೇ?

Sri M. S. KRISHNAN.—Let the Leader of the House and the Leader of the Opposition discuss and come to some understanding.

Sri D. DEVARAJ URS.—For what purpose and for what business? I do not understand. ನೀವಿಬ್ಬರೂ ಮಾತನಾಡಿಕೊಳ್ಳಿ ಎಂದು ಹೇಳಿದರೆ ಇದು ಮನೆಯ ವ್ಯವಹಾರವೇ?

ಶ್ರೀ ಎಂ. ಎಸ್. ಕೃಷ್ಣನ್.—ನಿಮಗೆ ಕೋಪವಿರುವುದಾದರೆ......... . ?

ಶ್ರೀ ಡಿ. ದೇವರಾಜ್‌ಅರಸ್.-ಕೋಪ ಏತಕ್ಕೆ ಇರಬೇಕು We are bound by certain procedures. ಅವರು ತಪ್ಪು ಮಾಡುತ್ತೇವೆಂದು ಹೇಳುತ್ತಾರೆ. ಹೀಗೆ ಮಾಡಿದರೆ ಇದು ಪ್ರಜಾಪ್ರಭುತ್ವವೇ? ಈ ರೀತಿ ಮಾಡಿಕೊಂಡು ಹೋಗುವುದಾದರೆ ಸಭೆಯ ಕಾರ್ಯಕ್ರಮಗಳನ್ನು ಮಾಡಿದಂತಾಗುತ್ತದೆಯೇ?

ಶ್ರೀ ಎಂ. ಎಸ್. ಕೃಷ್ಣನ್.—ಇದು ನಿಮ್ಮ ಮನೆ ಮಾತು ಅಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ನೋಟಿಫಿಕೇಷನ್ ತೆಗೆದುಕೊಂಡು ಬರುವುದಕ್ಕೆ ಕಾನೂನು ಇದೆ, ಆದರೂ ಸಹ ವಿರೋಧ ಪಕ್ಷದಲ್ಲಿ ಏನು ಅಭಿಪ್ರಾಯ ಬಂದಿದೆ ಎಂದರೆ ತಾವು ಸರಿಯಾದ ನೀತಿಯನ್ನು ಅನುಸರಿಸಿಕೊಂಡು ಬಂದಿಲ್ಲ ಅನುಸರಿಸಿರುವ ರೀತಿ ಸರಿಯಿಲ್ಲ ಎನ್ನುವ ಪ್ರಶ್ನೆ ಬಂದಿದೆ, ನೋಟಿಫಿಕೇಷನ್ ಇಟ್ಟು ಬಿಟ್ಟು ರೆಸಲ್ಯೂಷನ್ ತೆಗೆದುಕೊಂಡು ಬನ್ನಿ ಎಂದು ಹೇಳಿದರೆ ಅದು ಬೇರೆ ಸಮಾಚಾರ ಕಾನೂನು ಪ್ರಕಾರ ಏನು ಮಾಡಬೇಕೋ ಮಾಡುತ್ತೀರಿ, ಇದನ್ನು ಒಪ್ಪಿಕೊಳ್ಳಬಹುದೋ ಅಥವಾ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲವೋ ಅದು ಬೇರೆ ವಿಷಯ, ಇದು ಪೋಸ್ಟ್‌ಮಾರ್ಟಮ್ ಆಗುತ್ತದೆ, ಆ ಪರಿಸ್ಥಿತಿ ಬರದೇ ಇರಲಿ ಎನ್ನುವ ದೃಷ್ಟಿಯಿಂದ ಲೀಡರ್ ಆಫ್ ದಿ ಅಪೋಸಿಷನ್ ಮತ್ತು ಲೀಡರ್ ಆಫ್ ದಿ ಹೌಸ್ ಒಂದು ತೀರ್ಮಾನಕ್ಕೆ ಬರಲಿ ಎಂದು ನಾನು ಹೇಳಿದೆ.

ಶ್ರೀ ಡಿ. ದೇವರಾಜ್ ಅರಸ್. ಏನು, ನಾವು ಅವರು ಮಾತನಾಡಿಕೊಳ್ಳುವುದು?

Sri M. S. KRISHNAN.—Now the tempers are running high.

Sri D. DEVARAJ URS.—You have the right to criticise and we have the right to execute certain things. If you think they are against rules, you have the right to condemn. Beyond that what is it you propose to do ? According to law it must be placed on the Table. I cannot hide it.

ಶ್ರೀ ವಾಟಾಳ್ ನಾಗರಾಜ್.—ಗುಲ್ಬರ್ಗಾ, ಬಿಜಾಪುರ ಬ್ಯಾಂಕುಗಳನ್ನು ಉದ್ದೇಶಪೂರ್ವಕವಾಗಿ ಸೂಪರ್‌ಸೀಡ್ ಮಾಡಿದ್ದಾರೆ ಎನ್ನುವುದಕ್ಕೆ ಅನೇಕ ಸಕಾರಣಗಳು ಇವೆ. ಒಂದು ನಿದರ್ಶನ ಕೊಡುತ್ತೇನೆ. ಟಿ. ನರಸಿಪುರ ಅಗ್ರಿಕಲ್ಚರಲ್ ಕೋಆಪರೇಟೀವ್ ಸೊಸೈಟಿ ಇದೆ. ಇದೇ ಸಭೆಯಲ್ಲಿ ರಾದ್ಧಾಂತ ನಡೆದು ಎರಡೂವರೆ ಲಕ್ಷ ರೂಪಾಯಿ ಅಪವ್ಯಯ ಆಗಿದ್ದರೂ ಒಬ್ಬ ಗುಮಾಸ್ತನ ಮೇಲೆ ಆರೋಪಣೆ ಹೊರಿಸಿ, ಆ ಗುಮಾಸ್ತನನ್ನು ದಸ್ತಗಿರಿ ಮಾಡಲಿಲ್ಲ ಅದಕ್ಕೆ ಕಾರಣ ಏನು ? ಅವರ ಪಾರ್ಟಿ ಅಧ್ಯಕ್ಷರಾಗಿದ್ದಾರೆ ಎನ್ನುವುದು ಒಂದೇ ಉದ್ದೇಶ ? ಇವೊತ್ತು ಇವರು ಬ್ಯಾಂಕುಗಳನ್ನು ಮುಚ್ಚತಕ್ಕ ಉದ್ದೇಶವಾದರೂ ಏನು ? ಇದು ಸಂಪೂರ್ಣವಾಗಿ ರಾಜಕೀಯವೇ ಹೊರತು ಬೇರೆ ಅಲ್ಲ. ಆದುದರಿಂದ ನಾವು ಇಲ್ಲಿ ಬಂದು ಉದ್ದೇಶಪೂರ್ವಕವಾಗಿ ಸದನದಲ್ಲಿ ಕಾರ್ಯಕಲಾಪಗಳನ್ನು ಕೆಡಿಸಬೇಕೆಂದು ಉದ್ದೇಶವಿಲ್ಲ. ನಿಮ್ಮ ಅಕ್ರಮ ವ್ಯವಹಾರವನ್ನು ಉದ್ದೇಶಪೂರ್ವಕವಾಗಿ ದುರುಪಯೋಗಿಸುವುದನ್ನು ತಡೆಗಟ್ಟಬೇಕಾದರೆ ಬೇರೆ ವಿಧಾನವಿಲ್ಲದೆ ಸದನದಲ್ಲಿ ಬೇರೆ ಮಾರ್ಗವನ್ನು ಅನುಸರಿಸಬೇಕಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಪ್ರಜಾಪ್ರಭುತ್ವದ ವಿಧಾನವನ್ನು ಇಲ್ಲಿ ಅವರಿಂದ ಕಲಿಯಬೇಕಾಗಿಲ್ಲ. ಇವರು ಎಲ್ಲಾ ತಡೆಗಟ್ಟಬೇಕು ಎಂದು ಹೇಳಿದರೆ ನಮ್ಮನ್ನು ಜನ ಬುದ್ಧಿ ಇಲ್ಲದೆ ಇಲ್ಲಿ ಕಳುಹಿಸಿದ್ದಾರೇನು ?

ಶ್ರೀ ವಾಟಾಳ್ ನಾಗರಾಜ್.—ನಾವು ಎಲ್ಲಾ ರಾಜಿನಾಮೆ ಕೊಡುವುದಕ್ಕೆ ಸಿದ್ಧ. ತಾವೂ ರಾಜಿನಾಮೆ ಕೊಡಿ ಜನರ ಹತ್ತಿರ ಹೋಗೋಣ.

ಶ್ರೀ ಡಿ. ದೇವರಾಜ್ ಅರಸ್.—ನೀವು ಒಬ್ಬರು ಹೇಳಿಬಿಟ್ಟರೆ ಕೊಡುವುದಕ್ಕೆ ಆಗುತ್ತದೆಯೇ ?

ಶ್ರೀ ವಾಟಾಳ್ ನಾಗರಾಜ್.—ಜನತೆಯೇ ನಿಮ್ಮನ್ನು ತೆಗೆಯುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ಈಗ ನಾಲ್ಕು ಗಂಟೆ ಆಯಿತು. ಐದೂವರೆ ಗಂಟೆಗೆ ಇದನ್ನು ತೆಗೆದುಕೊಳ್ಳಬೇಕೆಂದು ತಮ್ಮ ಸಲಹೆ ಏನೋ ?

ಶ್ರೀ ಎಂ. ಎಸ್. ಕೃಷ್ಣನ್.—ತೆಗೆದುಕೊಳ್ಳುವ ಪ್ರಶ್ನೆ ಬೇರೆ. There are ways and means of doing things. You can discuss with the Leader of the Opposition and come to some understanding either today or tomorrow as to whether it should be placed or not. It has been done in the House in the past. I do not see any reason why it should not be done now. If you want, let us adjourn the House for half an hour and discuss the things.

ಶ್ರೀ ಎಚ್. ಎಸ್. ಸಿದ್ದಪ್ಪ.—ತಮ್ಮ ಮುಖಾಂತರ ಮುಖ್ಯಮಂತ್ರಿಗಳ ಗಮನಕ್ಕೆ ಎರಡು ವಿಷಯಗಳನ್ನು ತರಬೇಕೆಂದು ಆಶೆ. ಸಭೆಯಲ್ಲಿ ಅನೇಕ ಸಹಕಾರಸಂಘಗಳಲ್ಲಿ ದುರುಪಯೋಗ ಆಗಿರುವ ಬಗ್ಗೆ ಪ್ರಶ್ನೆಗಳು ಬಂದಾಗ ತನಿಖೆ ಮಾಡುತ್ತೇವೆ ಎಂದು ಮಂತ್ರಿಗಳು ಉತ್ತರ ಹೇಳಿದರು. ಆದರೂ ಕೂಡ ಅರಸೀಕೆರೆ ಅರ್ಬನ್ ಕೋಆಪರೇಟೀವ್ ಸೊಸೈಟಿ ನಾಲ್ಕು ವರ್ಷಗಳಿಂದ ಜನರಲ್‌ಬಾಡಿ ಮೀಟಿಂಗ್ ಕರೆದಿಲ್ಲ. ಅದರ ಶೇರ್ ಹಣ ವ್ಯವಹಾರದ ಹಣವನ್ನು ಅಧ್ಯಕ್ಷರು ಇಟ್ಟುಕೊಂಡು ಮಂಡಿ ವ್ಯಾಪಾರ ನಡೆಸುತ್ತಿದ್ದಾರೆ. ಅದನ್ನು ಸೂಪರ್‌ಸೀಡ್ ಮಾಡಿಲ್ಲ. ಏನೂ ಆಧಾರವಿಲ್ಲದೆ ಅಡ್ಮಿನಿಸ್ಟ್ರೇಟರ್‌ನ್ನು ನೇಮಕಮಾಡುತ್ತೀರಿ. ಇದು ಕ್ರಮವೇ ಎಂದು ಕೇಳುತ್ತೇನೆ ?

ಶ್ರೀ ಡಿ. ದೇವರಾಜ್ ಅರಸ್.—ಅವರು ಆ ರೀತಿ ಮಾಡಿದ್ದರೆ ತಪ್ಪು. ಈಗ ತಾವು ಹೇಳಿದ್ದೀರಿ, ವಿಚಾರ ಮಾಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಸಭಾ ನಾಯಕರು ಸರ್ಕಾರದ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ರೂಲ್ 54ರ ಪ್ರಕಾರ ನೋಟಿಫಿಕೇಷನ್ ಇಡಬೇಕು ಎಂದು ಏನು ತಿಳಿಸಿದರೋ ಆದರಂತೆಯೇ ಸರ್ಕಾರದ ಗಮನಕ್ಕೆ ಇಂತಹ ಅಪಾದನೆಗಳು ಬಂದನಂತರ ಸರ್ಕಾರದ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಅವನ್ನು ಈ ಸಭೆಯ

(ಶ್ರೀ ಟಿ. ಎಂ. ಮಂಜುನಾಥ್)

ಮುಂದೆ ಇಡಬೇಕಾಗಿತ್ತು. ಎಷ್ಟೋ ಸಹಕಾರಿ ಬ್ಯಾಂಕುಗಳು ಮುಳುಗುತ್ತಿದ್ದರೂ ಕೂಡ ಸರ್ಕಾರದವರು ಅವರ ಮೇಲೆ ಏತಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ? ಅಲ್ಲದೆ ರಾಜ್ಯದಲ್ಲಿರುವ 19 ಜಿಲ್ಲೆಗಳಲ್ಲಿ ಕೇವಲ ಈ ಎರಡು ಬ್ಯಾಂಕುಗಳನ್ನೇ ಕಬಳಿಸುವ ಉದ್ದೇಶ ಏನು ಎಂದು ತಿಳಿಸುತ್ತೀರಾ ?

† **Sri K. PUTTASWAMY** (Chamundeshwari).—Madam Speaker, the discussion in the House has already become a parallel line. The ruling party taking one line and the Opposition party taking quite a different line. In adopting the suggestion you have made, the other House has wisely come to that decision. The Government has no option. It is obliged to place this notification before the House. Some suggestions were made by the friends from Opposition side that the Government should keep back the notification ; some others said the Government should withdraw the notification and several other suggestions were also made. I submit that Government have no such right at all. They have published the notification and they are under legal obligation to place it on the table of the House.

Sri S. BANGARAPPA.—The Government can issue a fresh notification.

Sri K. PUTTASWAMY.—My young friend Mr. Bangarappa is suggesting that Government could issue a fresh notification. But that does not absolve the Government from placing the first notification on the table of the House. I am very much supprised that the Leader of Opposition is almost threatening a civil disobedience in the House. He may have some justification for that. But we would like to know what are the grounds for the Leader of Opposition for taking such extreme attitude, and that discussion can only be permitted only after the notification is placed on the table of the House; otherwise, it would be very difficult for the Government to agree for any course or any way out. I would very much humbly suggest that the Leader of Opposition may kindly ponder over on the stand he has taken. I am sure the Leader of the House would readily agree for any suitable time for disscussion on that subject. The Leader of Opposition is not going to be precluded at all. After the discussion takes place on the floor of the House and if the Leader of the Opposition and Members of the Opposition are not satisfied by the explanation given by Government and if they feel that the notification was issued on extraneous circumstances and that there was no justification for issue the of that notification, or it did not serve the public interest or interest of the State, then can even take this adamant attitude if they so choose. But they would be on a better ground. Suppoisng the Government is able to convince them of their reasonableness and justification for issuing the notification perhaps they will be convinced. Supposing the grounds that are going to be advanced by Government are not valid and it appears to the House and thereby to the public that the Government have misused their powers and if the opposition resorts to any sort o obstruction with which they are threatening now perhaps the public sympathy will be on their side Now, as it is, the public sympathy will not be on their side because they have not allowed any opportunity for the Government to come forward with grounds or with reasons for taking over these two banks under their control.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಪುಟ್ಟಸ್ವಾಮಿಯವರು ನನಗೆ ಒಂದು ಸಲಹೆ ಕೊಡಮಾಡಿರುವುದು ಬಹಳ ಸಂತೋಷ. ನಾನೇ ಒಪ್ಪಿಕೊಳ್ಳುತ್ತೇನೆ. ನಾನು ಈ ಸಭೆಯಲ್ಲಿ ಡಿಸ್ಒಬಿಡಿಯೆನ್ಸ್ ಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳಲಿಲ್ಲ. ತಾವು ಏನು ಒಂದು ನೋಟಿಫಿಕೇಷನ್ ಇಡಬೇಕು ಎಂದು ಮಾಡಿದ್ದೀರೋ ಅದರಂತೆ ರೂಲ್ 51ರ ಪ್ರಕಾರ ಯಾವುದೇ ಒಂದು ಸಂಸ್ಥೆಯನ್ನು ಸರ್ಕಾರ ತನ್ನ ಅಧಿಕಾರಕ್ಕೆ ವಹಿಸಿಕೊಂಡ ಮೇಲೆ ನೋಟಿಫಿಕೇಷನ್‌ನ್ನು ಈ ಸಭೆಯ ಮುಂದೆ ಇಡಬೇಕು. ಇಂಥಾ ದಿವಸವೇ ಇಡಬೇಕು ಎಂದು ಇಲ್ಲ, ಈ ಸಭೆ ಮುಗಿಯುವುದರೊಳಗೆ ಯಾವತ್ತಾದರೂ ಇಡಬಹುದು. ಈ ಹೊತ್ತಿನ ದಿವಸ ಆ ನೋಟಿಫಿಕೇಷನ್ನು ತಡೆಹಿಡಿದರೆ ನಿಮ್ಮ ಅಸ್ತಿತ್ವದಲ್ಲಿರತಕ್ಕಂಥಾದ್ದನ್ನು ನಾವು ಕಿತ್ತುಕೊಳ್ಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಆ ಸಂಸ್ಥೆಗಳನ್ನು ನಿಮ್ಮ ವಶಕ್ಕೆ ತೆಗೆದುಕೊಂಡಿದ್ದೀರಿ. ಕಾನೂನು ಪ್ರಕಾರ ನೋಟಿಫಿಕೇಷನ್‌ನ್ನು ಸಭೆಯ ಮುಂದೆ ಇಡಬೇಕು ಅದಕ್ಕೋಸ್ಕರ ಇಡುತ್ತೀರಿ. ಇದು ಕಾನೂನು ಬಾಹಿರವಾದ ಘಟನೆ ಅಲ್ಲ. ತಾವು ಈ 19 ಜಿಲ್ಲಾ ಬ್ಯಾಂಕುಗಳು ಈ ಹೊತ್ತಿನ ದಿವಸ ಯಾವರೀತಿ ಕೆಲಸ ಮಾಡುತ್ತಿವೆ, ರಿಸರ್ವ್ ಬ್ಯಾಂಕ್‌ನಿಂದ ಜಿಲ್ಲಾ ಬ್ಯಾಂಕುಗಳಿಗೆ ಏನು ಅಪಾದನೆ ಮಾಡಿದ್ದಾರೆ, ಅಪೆಕ್ಸ್ ಬ್ಯಾಂಕ್‌ನಿಂದ ಜಿಲ್ಲಾ ಬ್ಯಾಂಕುಗಳಿಗೆ ಏನು ಅಪಾದನೆ ಮಾಡಿದ್ದಾರೆ, ಯಾವ ಯಾವ ಬ್ಯಾಂಕುಗಳಲ್ಲಿ ಹಣ ದುರುಪಯೋಗವಾಗಿದೆ ಅವುಗಳನ್ನೇ ಸೇರಿಸಿ ಒಂದು ಪಟ್ಟಿ ನಮಗೆ ಕೊಟ್ಟರೆ ಅದರ ಬಗ್ಗೆ ಚರ್ಚೆ ಮಾಡೋಣ. ಅದು ಬಿಟ್ಟು ದೇಶದಲ್ಲಿರುವ 19 ಜಿಲ್ಲೆಗಳಲ್ಲಿ ಕೇವಲ ಈ ಎರಡು ಬ್ಯಾಂಕುಗಳನ್ನೇ ತಮ್ಮ ವಶಕ್ಕೆ ತೆಗೆದುಕೊಂಡಿರುವುದು ಸಾಧುವಾದುದಲ್ಲ ಇವಕ್ಕಿಂತಲೂ ಕೀಳುಮಟ್ಟದಲ್ಲಿ ನಡೆಯುತ್ತಿರುವ ಬ್ಯಾಂಕ್‌ಗೆ ಯಾವರೀತಿ ಘೋಷಣೆ ಕೊಟ್ಟಿದ್ದೀರಿ, ಅದನ್ನು ತಿಳಿದುಕೊಂಡರೆ ಅರ್ಥವಾಗುತ್ತದೆ. ನಾವು ಈ ಸಭೆಯ ಕಾರ್ಯಕಲಾಪಗಳನ್ನು ತಡಗಟ್ಟಬೇಕು ಎನ್ನುವ ಉದ್ದೇಶ ನಮಗೆ ಇಲ್ಲ. ಇದನ್ನು ಯಾವರೀತಿಯಾಗಿಯೂ ಅಡಚಣೆ ಮಾಡಬೇಕು ಎನ್ನುವ ಉದ್ದೇಶ ಇಲ್ಲ. ನಾನು ತಮ್ಮನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಹೊತ್ತು ಈ ನೋಟಿಫಿಕೇಷನ್ನು ತಡೆ ಹಿಡಿದು ರಾಜ್ಯದ 19 ಜಿಲ್ಲಾ ಬ್ಯಾಂಕುಗಳ ಕೆಲಸಕಾರ್ಯಗಳ ವಿವರಣೆಯನ್ನು ಕೊಟ್ಟು ನಮ್ಮ ಜೊತೆಗೆ ಸಹಕರಿಸಬೇಕು ಎಂದು ಮತ್ತೊಂದು ಸಾರಿ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ಅರ್ಧ ಗಂಟೆ ವಿರಾಮ ಕೊಟ್ಟರೆ ಈ ಪ್ರಶ್ನೆ ಇತ್ಯರ್ಥವಾಗಬಹುದೇನೋ ಎಂದು ನನಗೆ ಅನಿಸುತ್ತದೆ.

MADAM SPEAKER.—The laying of notification is held over. The House will adjourn and re-assemble at Five of the Clock.

The House rose at four of the Clock and re-assembled at Five Munites past five of the Clock.

[MADAM SPEAKER in the Chair.]

Mysore Sales Tax Amendment Bill, 1973—Introduction)

MADAM SPEAKER.—Now we will pass on to the next item the introduction of the Bill. Before I call upon the Minister, I announce that I have received a message from the Governor recommending the introduction of the Mysore Sales Tax Bill 1973.

SRI H. N. NANJE GOWDA (Minister of State for Major Irrigation Introduce the Mysore Sales Tax (Amendment) Bill 1973.

MADAM SPEAKER.—Bill is introduced. * *

Supply of of inadeguate rice in Belgaum.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಧ್ಯಕ್ಷರೇ, ಬೆಳಗಾಂನಲ್ಲಿ ಜನರಿಗೆ ಒಬ್ಬರಿಗೆ ದಿನಕ್ಕೆ ದೊಡ್ಡವರಿಗೆ 2 ಗ್ರಾಂ ಅಕ್ಕಿಯನ್ನು ಕೊಡುತ್ತಿದ್ದಾರಂತೆ. ಅದು ಬಹಳ ಅನ್ಯಾಯ. ಅಷ್ಟರಲ್ಲಿ ಜೀವಿಸಿಕೊಂಡು ಇರುವುದಕ್ಕೆ ಸಾಧ್ಯವೇ ? ತಿಂಗಳಿಗೆ 180 ಗ್ರಾಂ ಕೊಡುವುದೆಂದರೆ ಇದಕ್ಕಿಂತ ದೊಡ್ಡ ಅನ್ಯಾಯ ಇನ್ನಾವುದು ಬೇಕು ?

ಅಧ್ಯಕ್ಷರು.—ಮಾನ್ಯ ಸದಸ್ಯರು ಇನ್ನು ಮೇಲೆ ಇಂಥಾ ವಿಷಯಗಳನ್ನು ಸಭೆಯಲ್ಲಿ ಕಾಪಿಕಿ ತರಬಾರದೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಜನರು ಯಾರೂ ಸದಸ್ಯರಿಗೆ ಇನ್ನು ಮುಂದೆ ಇಂಥ ವಿಚಾರಗಳನ್ನು ಕುರಿತು ಕಾಗದ ಪತ್ರಗಳನ್ನು ಬರೆಯಬಾರದೆಂದು ಒಂದು ಕಾನೂನು ಮಾಡಿದರೆ...

ಅಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

Budget Estimates for 1973-74 - General Discussion (Debate continued)

ಶ್ರೀ ಜೆ. ಎಸ್. ಅಮ್ಮಣ್ಣವರ್ (ಸಾದಲಗ).—ಇನ್ನು ನಮ್ಮ ಈ ಅಂದಾಜ ಪಟ್ಟಿಯಲ್ಲಿ ಜಮೆಯ ಬಾಬುಗಳೇನಿವೆ ಅವುಗಳಲ್ಲಿ ಬರಬೇಕಾದ ಹಣ ಬಹಳವಾಗಿ ಹಾಗೇ ನಿಂತು ಹೋಗಿದೆ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕೇಸುಗಳು 1965 ರಿಂದ 1973ವರೆಗೂ ಇತ್ಯರ್ಥವಾಗದೇ ಇರುವುದರಿಂದ ಬರಬೇಕಾದ ಹಣ ಒಂದೇ ಸಮನಾಗಿ ಮುಂದುವರಿದುಕೊಂಡು ಬರುತ್ತಿದೆ. ಹೀಗೆ ಬರುವ ಹಣವನ್ನು ಕೇಸುಗಳು ಇತ್ಯರ್ಥವಾಗದ ಮೂಲಕ ನಿಲ್ಲಿಸಿಕೊಂಡು ಹೋಗುವುದು ಸರಿಯಲ್ಲ. ಆಯಾ ವರ್ಷದ ಬಾಕಿಯನ್ನು ಆಯಾ ವರ್ಷದಲ್ಲೇ ಅದನ್ನು ನಿಖಾಲೆ ಮಾಡಿಕೊಂಡು ಹೋಗುವುದು ಒಳ್ಳೆಯದು.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ—ಹಿಂದೆ ಪಾಸಾಗುತ್ತಿದ್ದ ಹುಡುಗರ ಸಂಖ್ಯೆಯನ್ನು ಇತ್ತೀಚೆಗೆ ಪಾಸಾಗತಕ್ಕ ಹುಡುಗರ ಸಂಖ್ಯೆಗೆ ಹೋಲಿಸಿದಾಗ ಇತ್ತೀಚೆಗೆ ಪರೀಕ್ಷೆಗಳಲ್ಲಿ ಫೇಲಾಗತಕ್ಕ ವಿದ್ಯಾರ್ಥಿಗಳ ಸಂಖ್ಯೆ ಬಹಳ ಹೆಚ್ಚಾಗುತ್ತಿದೆ. ಇದಕ್ಕೇನು ಕಾರಣ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನಾನು ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನಾನು 30 ವರ್ಷಗಳ ಹೆಡ್ಮಾಸ್ಟರ್ ಕೆಲಸಮಾಡಿ ನಿವೃತ್ತಿ ಹೊಂದಿರತಕ್ಕ ಒಬ್ಬ ಶ್ರೀ ಶರ್ಮಾ ಎಂಬ ಉಪಾಧ್ಯಾಯರನ್ನು ಕೇಳಿದ್ದಕ್ಕೆ ಅವರು ಹೇಳಿದರು ಅವರ ಪೂರ್ಣ ಸರ್ವೀಸಿನಲ್ಲಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಲ್ಲಿ ಒಬ್ಬನು ಮಾತ್ರ ಫೇಲಾಗಿ ಇನ್ನೊಬ್ಬ ವಿದ್ಯಾರ್ಥಿ ಮೂರನೇ ದರ್ಜೆಯಲ್ಲಿ ಪಾಸಾಗಿದ್ದಾನೆಂದು ಹೇಳಿದರು. ಅಂದರೆ ಹಿಂದೆ ಯಾವ ಯಾವ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಪಾಸಾಗುತ್ತಿದ್ದರೆಂಬುದು ಅವರ ಹೇಳಿಕೆಯಿಂದ ವೇದ್ಯವಾಗುತ್ತದೆ.

ಇನ್ನು ಸರ್ಕಾರಿ ನೌಕರಿಯಲ್ಲಿ ಸೇರತಕ್ಕ ತಹಸೀಲ್ದಾರ್, ಅಸಿಸ್ಟೆಂಟ್ ಕಮಿಷನರ್, ಅಯಾ ಜನರೇನಿದ್ದಾರೆ ಅವರನ್ನು ಅವರವರ ಸ್ವಂತ ತಾಲ್ಲೂಕುಗಳಲ್ಲಿ ಕೆಲಸಕ್ಕೆ ನೇಮಕ ಮಾಡಬಾರದೆಂದು ಅಷ್ಟೇ ಅಲ್ಲ ಅವರನ್ನು ಅವರ ಜಿಲ್ಲೆಯಲ್ಲೂ ಕೂಡ ಹಾಕದೆ ಬೇರೆ ಜಿಲ್ಲೆಗಳಲ್ಲಿ ಕೆಲಸಕ್ಕೆ ಹಾಕಬೇಕೆಂದು ಹೇಳುತ್ತಿದ್ದೇನೆ. ಇಲ್ಲವಾದರೆ ಸರ್ಕಾರಿ ಕೆಲಸಕಾರ್ಯಗಳು ಸರಿಯಾಗಿ ನಡೆಯುವುದಿಲ್ಲ. ನಮ್ಮ ಕಡೆ ಒಬ್ಬ ಪಿ. ಎಸ್. ಐ. ನ್ನು ಸಡಲಗಾದಿಂದ ಒಂದಾವರ್ತಿ ವರ್ಗ ಮಾಡಿದಂತೆ ಮಾಡಿ ಮತ್ತೆ

---

* * The Bill is appended as annexure to this volume.

ಅತನನ್ನು ಅದೇ ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿಗೇ ವರ್ಗಾಯಿಸಿದ್ದಾರೆ. ಅತನು ಅದೇ ಸ್ಥಳದಲ್ಲಿ ಸಿಟಿಗೆ ಇದ್ದವನನ್ನು ಪುನಃ ನಿಪ್ಪಾಣಿ ರೂರರ್ ಎಂದು ಅದೇ ತಾಲ್ಲೂಕಿಗೆ ಜಾಗಕ್ಕೆ ಮತ್ತೆ ಹಾಕಿದ್ದಾರೆ. ಹೀಗೆ ಒಂದೇ ತಾಲ್ಲೂಕಿನಲ್ಲಿ ಬಹಳ ವರ್ಷಗಳವರೆಗೆ ಇಡುವುದರಿಂದ ಅವರು ಜನರಿಗೆ ತೊಂದರೆ ಕೊಡುತ್ತಾರೆ. ಇನ್ನಾದರೂ ಹೀಗೆ ಮಾಡುವುದನ್ನು ಕೂಡಲೇ ತಪ್ಪಿಸಬೇಕೆಂದು ಹೇಳುತ್ತೇನೆ.

ಇನ್ನು ಹಾಡುಗರ ಮಟ್ಟದಲ್ಲಿ ರಾಜ್ಯ ಮಟ್ಟದಲ್ಲಿ ಯಾರಿಗೂ ಸ್ವೈತಾ ನಮ್ಮ ರಾಜ್ಯದಲ್ಲಿ ಒಟ್ಟು ಎಷ್ಟು ತಾಲ್ಲೂಕುಗಳಿವೆ ಅನ್ನುವುದು ಗೊತ್ತಿದ್ದಂತೆ ಕಾಣುವುದಿಲ್ಲ. ನಮ್ಮಲ್ಲಿ ನಿಪ್ಪಾಣಿ ಒಂದು ತಾಲ್ಲೂಕ್ ಎಂದು ಹೇಳತಕ್ಕ ಅಧಿಕಾರಿಗಳಿದ್ದಾರೆ. ಬಜೆಟ್ಟಿನಲ್ಲೂ ಅತರಹ ಒಂದು ಕಡೆ ಬರೆದಿದ್ದಾರೆ.

ಇಷ್ಟೇ ಅಲ್ಲದೆ ಕಳೆದ ಶನಿವಾರ ಆಹಾರ ಸಚಿವರು ಸಹ ನಿಪ್ಪಾಣಿ ತಾಲ್ಲೂಕು ಎಂದು ಹೇಳಿದ್ದಾರೆ. ರಾಜ್ಯ ಸರಕಾರಕ್ಕೆ ಇನ್ನೂ ಯಾವ ತಾಲ್ಲೂಕು ಎಂಬುದು ಗೊತ್ತಿಲ್ಲವೋ ಎನೋ ಎಂಬ ಸಂಶಯ ಬರುತ್ತದೆ.

ಮನಗಳನ್ನೊದಗಿಸುವ ವಿಷಯ ಬಜೆಟ್ಟಿನಲ್ಲಿದೆ. ಕೆಲವೊಂದು ಕಡೆ ಜಡ್ಜಸ್‌ಗೆ ಕ್ವಾರ್ಟರ್ಸ್ ಇಲ್ಲ, ನನ್ನ ತಾಲ್ಲೂಕಿನಲ್ಲಿ 6 ಕೋರ್ಟುಗಳಿವೆ, ಎ. ಸಿ., ತಾಸಿಲ್ದಾರ್ ಮುಂತಾದವರಿಗೂ ಸಹ ಕ್ವಾರ್ಟರ್ಸ್ ಇಲ್ಲ, ಇವರಿಗೆ ಮನೆ ಒದಗಿಸಲು ಕ್ರಮ ತಗೆದುಕೊಳ್ಳಬೇಕು. ಕೋ ಅಪರೇಷನ್ ವಿಚಾರ ಹೇಳಬೇಕಾದರೆ ಸ್ಟೇಷನರಿಗೆ ಹಣ ಒದಗಿಸಿಲ್ಲ, ಕೊಡುವ ಸ್ಟೇಷನರಿ ಸಾಕಾಗುವುದಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ಕೈಕೊಂಡು ಈ ಬಾಬಿಗೆ ಹೆಚ್ಚು ಹಣ ಒದಗಿಸಬೇಕು. ಬೆಳಗಾವಿಯಲ್ಲಿ ಡಿ.ಸಿ.ಸಿ. ಬ್ಯಾಂಕ್ ಇದೆ ಅಲ್ಲಿ ಅನಾಹುತವಾಗುತ್ತಿದೆ. ಅಲ್ಲಿ ಬಾಗಲುಕೋಟೆ ಸಿಮೆಂಟ್ ಫ್ಯಾಕ್ಟರಿಯ 5 ಸಾವಿರ ಷೇರುಗಳನ್ನು ತಮ್ಮ ಸಂಬಂಧಿಕರ ಹೆಸರಿಗೆ ವರ್ಗಾಯಿಸಿದ್ದಾರೆ ಮಾರ್ಕೆಟಿನಲ್ಲಿ 13 ರೂಪಾಯಿ ಬೆಲೆ ಇರುವಾಗ 10 ರೂಪಾಯಿಗೆ ಕೊಟ್ಟಿದ್ದಾರೆ. ಎರಡನೇಯವರೆಗೆ ಅಲ್ಲಿ ಸಹಾಯ ನೀಡುತ್ತಿಲ್ಲ. ಈ ವಿಚಾರದಲ್ಲಿ ಸೂಕ್ತ ಕ್ರಮ ಕೈಕೊಳ್ಳುತ್ತಿಲ್ಲ. ಜಿಂಗಬ್ಯಾಳ ಅಂತಾ ಒಂದು ಸ್ಕೀಂಗೆ ಹಣ ಕೊಡಲಿಲ್ಲಾ, ಮುಖ್ಯ ಮಂತ್ರಿಗಳು ಕೊಡಿ ಅಂತಾ ಹೇಳಿ ಹೋದರ್ರಾ ಮಜೂರು ಮಾಡಿ ಹಣ ತರಲಿಕ್ಕೆ ಹೋದರೆ ಮುಖ್ಯ ಮಂತ್ರಿಗಳ ಕಡೆ ಹೋಗಿ ಹಣ ಸಿಕ್ಕುತ್ತದೆ ಅಂತಾ ವ್ಯಂಗ್ಯವಾಗಿ ಮಾತನಾಡುತ್ತಾರೆ.

ಬರಗಾಲ ಅನೇಕ ಕಡೆ ಇದೆ, ಧೀರ್ಘಾವಧಿ ಸಾಲ ಕೊಡಲಾಗಿದೆ, ಈಗ ಕಂತು ಹಣ ಕೊಡುವ ದಿವಸ ಬಂದಿದೆ, ಒಂದು ವರ್ಷ ಮುಂದಕ್ಕೆ ಹಾಕಲು ಶಕ್ಯವಿದ್ದರೆ ಅರ್ಥ ಮಂತ್ರಿಗಳು ಪರಿಶೀಲಿಸಬೇಕು ಎಂದು ಇಷ್ಟು ಹೇಳಿ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಮಾನ್ಯ ಅರ್ಥಮಂತ್ರಿಗಳು 73 74ನೇಯ ಸಾಲಿನ ಆಯವ್ಯಯ ಪಟ್ಟಿಯನ್ನು ಈ ಸಭೆಯ ಮುಂದೆ ಅನುಮೋದನೆಗೆ ಇಟ್ಟಿದ್ದಾರೆ. ಇದನ್ನು ಕೆಲವು ಕಾರಣಗಳಿಂದ ನಾನು ವಿರೋಧಿಸಬೇಕಾಗಿದೆ. ಇವೊತ್ತು 1969 ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಜನರೇನು ಪ್ರತಿಕ್ರಿಯೆ ತೋರಿಸಿದರು ಎಂಬುದಕ್ಕೆ ನಿದರ್ಶನ ಕೊಡಬೇಕೆಂದಿದ್ದೇನೆ. ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಕೂಡ ಜನಸಾಮಾನ್ಯರ ಕಷ್ಟ ನಿವಾರಣೆಯಾಗದಿರುವದರಿಂದ 69 ರ ಮೇಲಾದರೂ ದೇಶದ ಕಲ್ಯಾಣವಾಗುವುದು ಎಂದು ಭಾವಿಸಿದ್ದರು. ಜೂನ್ 72 ರಲ್ಲಿ ಆಯವ್ಯಯ ಮಂಡಿಸಿದಾಗ ಈ ಲೋಕ ಕೆಲವರಿಗೆ ಮಾತ್ರವಿಲ್ಲ, ಸಮಸ್ತರ ಜೀವನವೂ ಸುಖಮಯವಾಗುವಂತೆ ಮಾರ್ಗ ಕಲ್ಪಿಸಬೇಕಾಗಿದೆ, ವಸತಿ ಸೌಕರ್ಯ ಕಲ್ಪಿಸಬೇಕಾಗಿದೆ ಎಂದು ತಿಳಿಸಿದರು. ಈ ಎರಡನ್ನೂ ಎಷ್ಟುಮಟ್ಟಿಗೆ ಈ ಆಯವ್ಯಯ ಪತ್ರ ಪ್ರತಿಬಿಂಬಿಸುವುದು ಎಂಬುದು ಮುಖ್ಯವಾದುದು. ಮಂತ್ರಿಗಳು ಹೇಳಿದಂತೆ ಇಂದು ಸಮಾನಾವಕಾಶ ಎಲ್ಲರಿಗೂ ಒದಗಿಸಲು ಸಾಧ್ಯವಿದೆ. ಆದರೆ ಅವರ ಬಗ್ಗೆ ಆಯ ವ್ಯಯ ಪಟ್ಟಿಯಲ್ಲಿ ಒಂದು ಚಕಾರ ಕೂಡ ಇಲ್ಲ. ಸಮಾಜವಾದವನ್ನು ಜಾರಿಗೆ ತರುವುದರ ವಿರುದ್ಧವಾಗಿ ನಮ್ಮ ರಾಜ್ಯದಲ್ಲಿ ಅನೇಕ ಕೆಲಸಕಾರ್ಯಗಳು ನಡೆಯುತ್ತಿವೆ. ನಮ್ಮ ದೇಶದಲ್ಲಿ ಇಂದು ಇರುವ ಬಂಡವಾಳಗಾರರಲ್ಲಿರುವ ವಿಶೇಷ ಹಣವನ್ನು ಪಡೆಯುವುದರಲ್ಲಿ ಸರಕಾರ ವಿಫಲವಾಗಿದೆ. ಯಾರ ಪರವಾಗಿ ಈ ಸರಕಾರದವರು ಅಧಿಕಾರಕ್ಕೆ ಬಂದರೋ ಅವರು ಅಂಥ ಬಡವರ ಜೀವನ ಸುಖಮಯವಾಗಿ ಮಾಡದೆ ಟಾಟ, ಬಿರ್ಲ, ಸೋಮಾನಿ ಮುಂತಾದವರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಬೆಳಗಾಂನಲ್ಲಿರುವ ಒಂದು ಅಲ್ಯೂಮಿನಿಯಂ ಕಾರ್ಖಾನಗೆ 1.5 ಪೈಸೆಗೆ ಒಂದು ಯೂನಿಟ್ಟಿನಂತೆ ಕರೆಂಟನ್ನು ಕೊಡುತ್ತಿರುವುದರಿಂದ ವಿಶೇಷ ನಷ್ಟವಾಗುತ್ತಿದೆ. ಬಿರ್ಲಾರವರಿಗೆ ಒಂದು ಟನ್‌ಗೆ

(ಶ್ರೀ ಸಿ. ಬೈರೇಗೌಡ)

25 ರೂಪಾಯಿಗಳಂತೆ ಯೂಕಲಿಪ್ಟಸ್ ಮರಗಳನ್ನು ಮಾರಿದ್ದಾರೆ. ಅಲ್ಲದೆ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್‌ಗೆ ಒಂದೂವರೆ ರೂಪಾಯಿನಂತೆ ಬಿದಿರುಬೊಂಬನ್ನು ಮಾರುವುದು ಅವಮಾನಕರ. ಬಂಡವಾಳಸ್ಥರ ಏಜೆಂಟ್‌ರಹಾಗೆ ಸರಕಾರದವರು ಕೆಲಸಮಾಡುತ್ತಿದ್ದಾರೆ. ಇದನ್ನು ಬಡವರು ಮತ್ತು ಶ್ರಮಜೀವಿಗಳು ವಿರೋಧಿಸಬೇಕಾಗಿದೆ. ನಮ್ಮ ದೇಶದ ಸೇಕಡ 40ರಷ್ಟು ಮಂದಿಗೆ ವಾಸಕ್ಕೆ ಮನೆಯಿಲ್ಲ ಮಲಗಲು ಚಾವಣಿಯಿಲ್ಲ. ಹೀಗಿರುವಾಗ ತಾಲ್ಲೂಕಿಗೆ 150 ಮನೆಯಂತೆ ಕಟ್ಟಿಸುವುದು ಅಪಹಾಸ್ಯಮಾಡುವಂತಿದೆ. ಸರಕಾರಿ ನೌಕರರು ಒಂದು ದಿನದ ಸಂಬಳ ಬಿಟ್ಟುಕೊಟ್ಟಿರುವುದರಿಂದ ಬರುವ ಸುಮಾರು 25ಲಕ್ಷ ರೂಪಾಯಿಗಳಿಂದ ಬಡವರಿಗೆ ಬಟ್ಟೆಬರೆ ಕೊಡಲು ವ್ಯವಸ್ಥೆಯಾಗಿದೆ. ಇಂಥ ಪರಿಸ್ಥಿತಿ ಇದೆ. ಆಹಾರಧಾನ್ಯಗಳ ಉತ್ಪತ್ತಿ ನೋಡಿದರೆ 65 ಲಕ್ಷ ಟನ್ನುಗಳ ಗುರಿಯಿದ್ದು 47 ಲಕ್ಷ ಟನ್ ಮಾತ್ರ ಉತ್ಪತ್ತಿಯಾಗಿ 15 ಲಕ್ಷ ಟನ್ನುಗಳ ಕೊರತೆಯಿದೆ.

ಇದನ್ನು ನಾವು ನೋಡುವುದಾದರೆ, ರಾಜ್ಯದಲ್ಲಿ ಎಲ್ಲರಿಗೂ ಕೂಡ ಸಮಾನವಾದ ಜೀವನವನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಇಂಥಹ ರಾಜ್ಯದಲ್ಲಿ ನಮಗೆ ಸಿಗತಕ್ಕದ್ದು ತಿರುಪೆ ಎತ್ತಿರತಕ್ಕ ಬಟ್ಟೆ, ಆಹಾರದ ಕೊರತೆ. ಅದಕ್ಕೆ ಬದಲಾಗಿ ನಮ್ಮ ದೇಶದಲ್ಲಿರತಕ್ಕ ಬಂಡವಾಳಶಾಹಿಗಳಿಗೆ, ಗುತ್ತೇದಾರರಿಗೆ, ಜನರ ಹಿತವನ್ನು ಅಲಕ್ಷಿಸಿ, ರಾಜ್ಯದ ಹಿತವನ್ನು ಅಲಕ್ಷಿಸಿ, ಅವರಿಗೆ ಕೊಡಬಾರದ ಇರತಕ್ಕ ಸೌಲಭ್ಯವನ್ನು ಕೊಡುವುದಕ್ಕೆ ಹೊರಟಿದ್ದಾರೆ. ಅದಕ್ಕೆ ಬೇಕಾದಷ್ಟು ಕಾರಣಗಳನ್ನು ಇವರು ಹೇಳಬಹುದು. ಇದು ನಾವು ಮಾಡಿದ್ದಲ್ಲ, ಹಿಂದಿನ ಸರ್ಕಾರ ಮಾಡಿದ್ದು ಎಂದು. ಇವತ್ತಿನದಿವಸ ಅವರನ್ನು ಕೆಟ್ಟವರು, ನಮ್ಮ ಹಿತವನ್ನು ಸಾಧಿಸುತ್ತಾ ಇಲ್ಲ ಎಂದು, ಇವರಾದರೂ ನಮ್ಮ ಹಿತವನ್ನು ಸಾಧಿಸುತ್ತಾರೆ ಎನ್ನುವ ದೃಷ್ಟಿಯಿಂದ ನಿಮ್ಮನ್ನು ಜನ ಇಲ್ಲಿಗೆ ಕಳುಹಿಸಿರುವುದು. ಯಾವ ಇಂಡಸ್ಟ್ರೀಸ್ ಆಗಲೀ, ಯಾವ ಸಮಸ್ಯೆಗೂ ಪರಿಹಾರವನ್ನು ಹುಡುಕುವುದರಲ್ಲಿ ಇವರು ವಿಫಲರಾಗಿ ರಾಜ್ಯಭಾರ ನಡೆಸುತ್ತಿದ್ದಾರೆ. ಇಂಥ ಒಂದು ಭೀಕರವಾದ ಕರಾಳ ದೃಶ್ಯವನ್ನು ನಾವು ನಮ್ಮರಾಜ್ಯದಾದ್ಯಂತ ನೋಡುತ್ತಿದ್ದೇವೆ. ಎಲ್ಲಾ ಸಮಸ್ಯೆಗೂ ಈ ಆಯವ್ಯಯದಲ್ಲಿ ಪರಿಹಾರ ಇದೆಯೆಂದರೆ ಖಂಡಿತವಾಗಿಯೂ ಇದರಲ್ಲಿ ಯಾವ ಸಮಸ್ಯೆಗೂ ಕೂಡ ಇದರಲ್ಲಿ ಪರಿಹಾರವಿಲ್ಲ. ಗವರ್ನರ್ ಭಾಷಣದ ಮೇಲೆ ನಾನು ಮಾತನಾಡುತ್ತಾ ಹೇಳಿದೆ, ಭೂಮಿ ಕೊಡಿ ಎಂದು ಹೇಳಿದೆ, ಅದೇ ಒಂದು ದೊಡ್ಡ ತಪ್ಪಾಗಿದೆ. ಕೇಳಿದವರನ್ನು ದೇಶದ ಹೊರಗಡೆ ಹಾಕುವ ಪರಿಸ್ಥಿತಿ ಇದೆ. ಇವತ್ತಿನದಿವಸ ನಮ್ಮ ರಾಜ್ಯದಲ್ಲಿ 8 ಜಿಲ್ಲೆಗಳಲ್ಲಿ ಮಾತ್ರ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. [illegible] ದುರ್ಬಲವಾದ, ಕಠಿಣ ಪರಿಸ್ಥಿತಿ ಕೋಲಾರ ಮತ್ತು ಇತರೆ ಕಡೆಗಳಲ್ಲಿ ಇದೆ. ನಮ್ಮ ಜಿಲ್ಲಾ 60-80 ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯವಿಲ್ಲ. ಸರ್ಕಾರ ಅನೇಕ ಕಡೆಗಳಲ್ಲಿ ಕುಡಿಯುವನೀರಿನ ಸಮಸ್ಯೆಯನ್ನು ಬಗೆಹರಿಸಿದೆ, ಆದರೆ ಅದನ್ನು ನಮ್ಮ ಜಿಲ್ಲೆಯಲ್ಲಿ ಬಗೆಹರಿಸುವುದಕ್ಕೆ ಇವರಿಗೆ ಸಾಧ್ಯವಾಗುತ್ತಾ ಇಲ್ಲ. ಶಾಶ್ವತವಾದ ಕ್ಷಾಮ ಪರಿಹಾರ ಕಾರ್ಯಕ್ರಮಗಳನ್ನು ಬೆಂಗಳೂರು, ಕೋಲಾರ ಮತ್ತು ಇತರೆ ಜಿಲ್ಲೆಗಳಲ್ಲಿ ತೆಗೆದುಕೊಳ್ಳಿರಿ ಎಂದು ಹೇಳಿದರೂ ಕೂಡ ಅದನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ತಯಾರಾಗಿಲ್ಲ. ಇದನ್ನು ನಾವು ಆಲೋಚನೆ ಮಾಡುತ್ತಾ ಹೋದರೆ, ನಾವಾದರೂ ಕೂಡ ಏತಕ್ಕೆ ಈ ಸಂದರ್ಭದಲ್ಲಿದ್ದೇವೆ, ಇಂಥ ಸರ್ಕಾರ ಏತಕ್ಕೆ ಇದೆ ಎಂದು ಸಾಮಾನ್ಯ ಜನ ಕೂಡ ಆಲೋಚನೆ ಮಾಡತಕ್ಕ ಪರಿಸ್ಥಿತಿ ಬಂದಿದೆ. ಆದ್ದರಿಂದ ಗತ್ಯಂತರವಿಲ್ಲದೆ ನಾನು ಈ ಆಯವ್ಯಯ ಪತ್ರವನ್ನು ವಿರೋಧ ಮಾಡಬೇಕಾಗಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರನ್ನು ಇಳಿಸಲಿಕ್ಕೆ ತಯಾರಾಗಿ.

ಶ್ರೀ ಸಿ. ಬೈರೇಗೌಡ.—ನಾವು ಅವರ ಜೊತೆಗೆ ಭಾಗ ಕೇಳಬೇಕು ಎಂದು ಜಗಳ ಆಡುತ್ತಾ ಇಲ್ಲ. ಕೋಲಾರದಲ್ಲಿ ಇದಕ್ಕಾಗಿ ಎಷ್ಟು ಹಣ ಖರ್ಚಾಗಿದೆ ಎಂದು ನನಗೆ ಗೊತ್ತಿದೆ. ಅಲ್ಲಿ ಪರಿಸ್ಥಿತಿ ಏನು ಇದೆಯೆಂದೂ ಗೊತ್ತಿದೆ ಆದರೂ ಸಹ ಯಾರೋ ಒಬ್ಬ ಅನಾಮಧೇಯ ನನಗೆ ಒಂದು ಪತ್ರ ಬರೆದಿದ್ದಾನೆ. ಅವನದು ಯಾವ ಊರೋ ಗೊತ್ತಿಲ್ಲ. ಆ ಪತ್ರದಲ್ಲಿ ಬರೆದಂಥ ಒಂದು ಪದ್ಯವನ್ನು ಇಲ್ಲಿ ಓದುವುದು ಅವಶ್ಯಕ ಎಂದು ನಾನು ಭಾವಿಸುತ್ತೇನೆ.

''ನಮ್ಮದೋ ನಾಡೆಲ್ಲಾ,
ನಮ್ಮವರೇ ಜನರೆಲ್ಲಾ
ನಿಲ್ಲಲು ನೆಲೆಯಿಲ್ಲ

ಮಲಗಲು ಮನೆಯಿಲ್ಲ
ಮಹಡಿಯ ಮನೆಯ ಸಾಲುಗಳು
ಒಳಗೆ ಬೆಕ್ಕು ನಾಯಿಗೆ
ಒಳ್ಳೆಯ ಭೋಗಗಳು.
ಬಡವರ ಬಾಳು
ಕಣ್ಣೀರಿನ ಪಾಳು
ಬೀದಿ ನಾಯಿಗಿಂತ ಕೀಳು.'

ಇವತ್ತಿನ ದಿವಸ ಈ ಬಡ್ಜೆಟ್ಟಿನಲ್ಲಿರತಕ್ಕದ್ದು, ಮೈಸೂರು ರಾಜ್ಯದ ಜನತೆಗೆ ಕಣ್ಣೀರಿನ ಪಾಲು ಬಿಟ್ಟರೆ ಮತ್ತೆ ಏನು ಇಲ್ಲ ಎಂದು ನಾನೂ ಈ ಸಂದರ್ಭದಲ್ಲಿ ಒತ್ತಾಯದಿಂದ ಹೇಳಬೇಕಾಗಿದೆ. ಬೀದಿ ನಾಯಿಗಿಂತ ಕೂಡ ನಮ್ಮ ರಾಜ್ಯದ ಜನರ ಪರಿಸ್ಥಿತಿ ಕಡೆಯದಾಗಿದೆ. ಕೋಲಾರ ಜಿಲ್ಲೆಯಲ್ಲಿ ಬಹಳ ಭೀಕರ ಪರಿಸ್ಥಿತಿ ಇದ್ದರೂ ಕೂಡ ಸರ್ಕಾರ ಯಾವ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕ ವಿಫಲವಾಗಿದೆ, ಎಂದು ಸೂಚಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

†**Sri DODDATHIMMAIAH** (Gulur).-Madam Speaker, I must congratulate the Finance Minister for his bold and imaginative approach to the financial problems of our State, particularly those aspects which govern the financial relations between the Centre and the State. It is a known fact that under our Constitution the financial structure has weighed heavily in favour of the Centre and the major and expanding resources of revenue like income tax, customs and excise are all on the Union list while the resources of State revenues are as unimportant as they are unrealistic, and the gap between the expenditure and tax and revenue is not only great but also over-widening. The successive Finance Commissions in the past rather narrowly interpreted Article 275 in the Constitution and placed the principle of financial allocation consistent with the executive responsibilities has not been in evidence so far. Our Finance Minister has broached into this and focussed the anomalies created by the narrow interpretation of Article 275. The non-recurring expenditure on the staff and the maintenance expenditure at the end of the Plan as non-plan expenditure and the progressive increase of administrative expenditure has aggrevated the problem. This is the result of unrealistic approach to the matter and the Finance Minister has rightly approached the problem and his approach is pragmatic and also cuts new ground. By applying the thum rule that we have got an increase of Rs 2 in the *per capita* income of the State above the national *per capita* income the Government of India denied certain portion of devolution of excise duties and on this account alone our Government has lost about Rs. 12 crores. This is a very sad thing and the Finance Minister has rightly represented to the Finance Commission that Article 275 should be interpreted in a meaningful way, and the bold and imaginative use of the section should be made use of in order to keep the finance of all the States on an equitable footing and also to meet the non-plans revenue and the capital gap. The Finance Minister has also suggested that the divisible pool should be increased and the share of the income tax should be raised from 75 per cent to 90 per cent. He has also suggested that the divisional pool, the surcharge and the corporation

(SRI DODDATHIMMAIAH)

tax proceeds should also be included. There are all good suggestions which deserve worthy of acceptance by the Finance Commission. He has also suggested that the revision of the grant in aid on the tax on passenger fairs and that the basis of collection principle should be replaced by the criteria of development and population. These are all very necessary as they are pragmatic and thus deserve due consideration from the India Government and the Finance Commission. Madam Speaker, this Budget contains progressive measures, for example the bold policy with which he has come down about the housing problem. The housing problem, both urban and rural in this country is a problem of unimaginable magnitude.

5-30 P.M.

Even the financial implications are very very enormous. Even in the developed countries, I was told, the problem of Urban housing particularly, is not yet settled to the satisfaction and to their expectation. It is a question of finance. To achieve the maximum results within the ambir of financial allocation. it depends upon the administrative efficiency because the bureauratic machinery sometimes vitiate and negative the imaginative plans. The budget has provided about Rs. 5 crores for the housing and the ambition is to build up 25,000 houses The first and foremost thing that I suggest in this regard is that the design and the technic of construction should be evolved and centres for manufacturing of fabricating materials should be established wherever necessary throughout the State. I am told that in Japan the technique of building light-weight houses out of the prefabricated material has been developed and perfected. So nething modern and revolutionary has to be evolved in substance and procedure. Again, this is a challenga and a test to the administration. I hope the administration will come out successful in that test.

Coming to the local bodies, it is heartening to note that Government has exhibited its anxious concern to streamline the local bodiesi. Today the local bodies which are founded on democratic principles are in a mor bund state. Therefore the ways and means of making them work on scientific principle of public administration and public finance should be found out. My suggestion is that a special talent of high level administrative hierarchy is to be developed and without that I do not think it is possible to lift them up from their moribund state of affairs.

Madam, the Government has come out with progressive employment scheme for providing employment to the unemployed people in this State. Today there is a lot of project works before us. The establishment of a Fertiliser Factory at Mangalore and the proposed Vijayanagar Steel Plant, I think, would provide adequate opportunities to the youths who are revolting because they are unemployed. I remember to have said on the floor of this House on some other occasion that our recruitment policy should be changed to provide employment to the hav e-nots particularly the economicall have-nots who are educated. If we cannot arrest this unrest amongst the youngsters, this unrest will pose a danger to the very foundation of our democratic institutions.

Lastly it is a matter of special satisfaction that a post-graduate centre for metallurgy, soil mechanism and chemical engineering, is proposed to be started at Nandihalli and will be associated with our proposed Steel Plant at Vijayanagar. With the realisation of the Steel Plant and the technical University at Kumaraswamy Hills, I think, will bring back the pride and the glory of our Vijayanagar Empire.

Inspite of the fact that there are drought conditions prevailing in some part of our State, our State Government is meeting the situation in an unprecedented was with an unprecedented machinery, our Finance Minister has come out with a budget which does not impose any new taxes on the people. This is really a progressive and socialistic budget which deserves appreciation and particularly the Finance Minister deserves all our congratulations. Thank you Madam.

†ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಮಾನ್ಯಸಭೆಯ ಸಭಾಧ್ಯಕ್ಷಣಿಯವರೇ, ಈಗ ನಮ್ಮ ಮುಂದೆ ಇರತಕ್ಕ 1973–74ನೇ ಸಾಲಿನ ಆಯವ್ಯಯ ಪತ್ರದ ಬಗ್ಗೆ ನನ್ನ ಸ್ಪಷ್ಟವಾದ ವಿರೋಧವನ್ನು ಸೂಚಿಸುತ್ತಾ ಒಂದೆರಡು ಅಂಶಗಳನ್ನು ಮಾನ್ಯಸಭೆಯ ಅವಗಾಹನೆಗೆ ತರಲು ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಹಲವಾರು ದಿವಸಗಳಿಂದ ಈ ಸಭೆಯ ಮಾನ್ಯ ಸದಸ್ಯರು ಇದರ ಪರವಾಗಿ ಮತ್ತು ವಿರೋಧವಾಗಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಏನಾದರೂ ಸಹ ಈ ಆಯವ್ಯಯ ಪತ್ರದಲ್ಲಿ ರಾಜ್ಯದ ಲೋಪದೋಷಗಳು ಏನಿವೆ, ಇರತಕ್ಕ ಸಂಪನ್ಮೂಲಗಳು ಏನು ಇವುಗಳ ಬಗ್ಗೆ ಸ್ಪಷ್ಟವಾದ ವಿಶ್ಲೇಷಣೆ ನಡೆಸಿ, ಇರತಕ್ಕ ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಅವಶ್ಯಕವಾದ ಸೂಚನೆಗಳನ್ನು ಮಾಡಿ ರಾಜ್ಯದಲ್ಲಿರತಕ್ಕ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಲವಶೇಶವೂ ಪ್ರಯತ್ನಪಟ್ಟಿಲ್ಲ. ಆ ಬಗ್ಗೆ ಈಗರಾದರೂ ಸಹ ಅವರ ದೃಷ್ಟಿಕೋಣವನ್ನು ಹರಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಅಧ್ಯಕ್ಷರೇ, ರಾಜ್ಯದಲ್ಲಿ ತಾವು ನಾವು ಇರುವಾಗಲೇ ವಿಜಯ ವೀರಾಂಗನೆ ಸೆರಗೊಡ್ಡಿ ಬೇಡಿದಳು, ಇಂದಿರಾಗಾಂಧಿ ನಿಮಗೆ ಸೇವೆ ಮಾಡುತ್ತಾರೆ ಎಂದು ಜನತೆಯಿಂದ ಓಟು ಪಡೆದು ಹಿಡಿ ಅನ್ನಕ್ಕಾಗಿ, ನ್ಯಾಯಕ್ಕಾಗಿ, ನೀತಿಗಾಗಿ, ಭ್ರಷ್ಟಾಚಾರ ತೊಡೆಯುವುದಕ್ಕಾಗಿ ಅಧಿಕಾರ ವಹಿಸಿಕೊಂಡು ಆ ಪ್ರಯತ್ನದಲ್ಲಿ ಆಡಳಿತವನ್ನು ನಡೆಸತಕ್ಕ ಮಿತ್ರರು ದೇಶದ ಜನತೆಯನ್ನು ಕಷ್ಟಕ್ಕೆ ಈಡು ಮಾಡಿದ್ದಾದರೆ ಆ ಹೊಣೆಗಾರಿಕೆ ಆಡಳಿತ ನಡೆಸತಕ್ಕವರದ್ದೇ ಶಿವಾಯ ಜನತೆಯ ತಪ್ಪಲ್ಲ. ಬಡವರ ಈ ದೇಶದಲ್ಲಿ ಯಾವ ಇಂದಿರಾಬಾಯಿ ಮುಖ ಕಂಡು ಇಂದಿರಾಬಾಯಿ, ಬಡವರತಾಯಿ ಎನ್ನುವುದರೊಳಗೆ ಈ ರಾಜ್ಯದಲ್ಲಿ ಬಡವರನ್ನು ಬೀದಿಗೆ ಅಟ್ಟಿದ್ದೀರಿ. ಹಿಡಿ ಅನ್ನಕ್ಕಾಗಿ ದೇಹ ದಂಡಿಸಿ; ಶ್ರಮಪಟ್ಟು ಜೀವಿಸುತ್ತೇವೆಂದು ಕೆಲಸ ಕೊಡಿ ಎಂದು ಕೇಳಿದರೆ ಕೆಲಸ ಕೊಡುವ ಪ್ರಯತ್ನ ಸಹ ಮಾಡದೆ ಇರುವುದು ನಿಮ್ಮ ಆಡಳಿತದ ದೌರ್ಭಾಗ್ಯ ಎನ್ನದೇ ವಿಧಿಯಿಲ್ಲ. ಅಧ್ಯಕ್ಷರೇ, ನಾನು ಯಾವಾಗಲೂ ಮಿತ್ರರಿಗೆ ವಿರೋಧ ಮಾಡತಕ್ಕ ಸ್ವಾಭಾವದ ವ್ಯಕ್ತಿಯಲ್ಲ, ನಾವು ನೀವು ಎಲ್ಲರೂ ಸಹೃದಯರು, ಈ ದೇಶದ ಜನ ನಿಮ್ಮಿಂದ ನಿರೀಕ್ಷಣೆ ಮಾಡುವುದು ಏನು ! ಪ್ರಾಯಶಃ ನೀವು ಮಂತ್ರಿಗಳಾಗಿ ಇಂಥ ಮಂತ್ರಿಮಂಡಲ ರಚಿಸುತ್ತೀರಿ ಹೀಗೆ ಎಂದು ಹೇಳಿದ್ದರೆ ಪೂಜ್ಯ ಶ್ರೀ ನಿಜಲಿಂಗಪ್ಪನವರಾಗಲಿ, ಮೊರಾರ್ಜಿದೇಸಾಯಿವರೇ ಆಗಲಿ ಶ್ರೀ ಎಸ್. ಕೆ. ಪಾಟೀಲರೇ ಆಗಲಿ, ಕಾಮರಾಜರೇ ಆಗಲಿ, ಶ್ರೀ ಮಾನ್ ಸಂಜೀವರೆಡ್ಡಿಯವರೇ ಆಗಲಿ ಈ 5 ಜನ ಮುಖಂಡರು ಪಕ್ಷದ ಇಬ್ಭಾಗಕ್ಕೆ ಪ್ರಯತ್ನ ಪಡುತ್ತಾ ಇರಲಿಲ್ಲವೋ ಏನೋ. ಮೈಸೂರು ರಾಜ್ಯದಲ್ಲಿ ಇಂಥ ಮಂತ್ರಿಮಂಡಲ ಬರುತ್ತದೆ ಎಂದು ಅವರ ಕನಸು ಮನಸ್ಸಿನಲ್ಲಿ ಹೊಳೆದಿದ್ದರೆ ಈ ರಾಜ್ಯದ ಹಿತದೃಷ್ಟಿಯಿಂದ ಪಕ್ಷದ ಇಬ್ಭಾಗಕ್ಕೆ ಅವರು ಒಪ್ಪುತ್ತಾ ಇರಲಿಲ್ಲವೆಂದು ಶಂಕೆ ಬರುತ್ತದೆ. ಪ್ರಾಯಶಃ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಶ್ರೀಮಾನ್ ನಿಜಲಿಂಗಪ್ಪನವರ 10 ವರ್ಷದ ಪಾಪದ ಫಲ ಎಂದು ನೀವು ಏನು ಹೇಳುತ್ತೀರಿ ಪ್ರಾಯಶಃ ಆ ಮಹಾಪಾಪದಿಂದರೇ ನೀವು ಮಂತ್ರಿಗಳು ಆಗತಕ್ಕ ಪ್ರಯತ್ನ ಅವರು ಮಾಡಿದರು ಎಂದು ನಾನು ಅವರ ಮೇಲೆ ದೋಷಾರೋಪವನ್ನು ಮಾಡಬೇಕಾಗುತ್ತದೆ. ಇದು ಬರೀ ಪಾಪದ ಫಲವಲ್ಲ, ಮಹಾಪಾಪದ ಫಲ. ಮಾನ್ಯ ಅಧ್ಯಕ್ಷಣಿಯವರೇ ಬೇರೆ ಒಂದು ಕಥೆ ಇದೆ. ಇಂದು ಮಹಾತ್ಮಾಗಾಂಧಿಯವರ ತತ್ವವನ್ನು ಪ್ರಶ್ನೆ ಮಾಡುವ ಮಟ್ಟಕ್ಕೆ ಹೋಗಿದ್ದಾರೆ. ಮೈಸೂರು ಜನತೆಗೆ ಎಷ್ಟು ಅನ್ಯಾಯ ಮಾಡುತ್ತಾ ಇದ್ದರೂ ಸಹ ಮಹಾತ್ಮ ಗಾಂಧಿಯವರ ಪರ ಇನ್ನು ವಾದ ಮಾಡುವವರು ತಾಲ್ಲೂಕು ಮಟ್ಟದಲ್ಲಿ ಇಲ್ಲ. ಅಧ್ಯಕ್ಷರೇ, ನಿಮಗೆ ಒಪ್ಪಿಸುತ್ತೇನೆ. ಈ ಕಾಂಗ್ರೆಸ್ ತತ್ವದಲ್ಲಿ ನಿಷ್ಠೆ ಇರತಕ್ಕ ಜನ ನೀವು ಮಾಡಿರತಕ್ಕ ಅಪರಾಧ ಎಲ್ಲವನ್ನೂ ಮಹಾತ್ಮ ಗಾಂಧಿಯವರಿಗೆ ಹೇಳಬೇಕು. ಅಧ್ಯಕ್ಷರೇ ಮಹಾತ್ಮರು ಈ ಮಂತ್ರಿಗಳ ಗೊಂದಲವಲ್ಲಿ ಸಿಕ್ಕಿಕೊಂಡು ಅವರೂ ಸಹ ದೋಷಾರೋಪಣೆಗೆ ಗುರಿಯಾದ ವ್ಯಕ್ತಿಯಾಗಿದ್ದಾರೆ. ಆ ಮಹಾಪುರುಷರ 'ಹೆಸರನ್ನು ಏತಕ್ಕಾಗಿ ಹೇಳಬೇಕು ? ಇದನ್ನು ಯಾರಿಗೆ ಹೇಳಬೇಕು, ಭಾರತಮಾತೆಗೆ ಹೇಳಬೇಕೇ ?

ಮಾನ್ಯ ಅಧ್ಯಕ್ಷಿಣಿಯವರೇ, ನನ್ನ ದೃಷ್ಟಿಯಲ್ಲಿ ತಾವೇ ಭಾರತಮಾತೆ ಎಂದು ಕಾಣಿಸುತ್ತೀರಿ. ನೀವೇ ಹೇಳಿ. ರಾಜ್ಯಾಡಳಿತದ ಬಗ್ಗೆ ಕಲ್ಯಾಣ ಮಾಡತಕ್ಕದ್ದು ಅವರ ಕರ್ತವ್ಯ ಮತ್ತು ಸೌಜನ್ಯ ಯುತವಾದ ಅಭಿಪ್ರಾಯ ಎಂದು ನನಗೆ ಹೊಳೆಯುತ್ತದೆ. ಆದರೆ ನೀವು ಮಾಡತಕ್ಕಂಥಾದ್ದನ್ನು ಮಹಾತ್ಮಾಗಾಂಧಿಯವರು ಕ್ಷಮಿಸಬಹುದು, ಭಾರತಮಾತೆ ಕ್ಷಮಿಸುವುದಿಲ್ಲ. ಆದುದರಿಂದ ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ, ಗಂಡಸರಿಗೆ ಆಡಳಿತ ಕೊಟ್ಟು ದುರ್ನೀತಿಗೆ ಎಡೆಕೊಟ್ಟಿದೆ. ಅವರು ಅಧಿಕಾರ ವಹಿಸಿಕೊಂಡು ಒಂದು ವರ್ಷ 3 ಗಂಟೆ ಆಗಿರುವುದರಿಂದ ಭಾರತಮಾತೆ ಆಲೋಚನೆ ಮಾಡಿ ದಕ್ಷರಾದ 13 ಹೆಣ್ಣು ಮಕ್ಕಳನ್ನು ಈ ಶಾಸನಸಭೆಗೆ ಕಳುಹಿಸಿಕೊಟ್ಟಿದ್ದಾರೆ. 1 ವರ್ಷ ದುರಾಡಳಿತ ನಡೆಸಿದ ಗಂಡಸರನ್ನು ಹೊರದೂಡಬೇಕು. ನೀವು ಸತ್ಯವಂತರಾಗಿದ್ದರೆ ನಾಳೆಯೇ ಅವರನ್ನು ಇಳಿಸಬೇಕು. ಆಡಳಿತವನ್ನು ವಿರೋಧ ಪಕ್ಷದವರಿಗೆ ಕೊಡಬೇಡಿ. ಏತಕ್ಕೆಂದರೆ ವಿರೋಧ ಪಕ್ಷದವರು 10 ವರ್ಷ ದುರಾಡಳಿತ ನಡೆಸಿ ಪಾಪ ಮಾಡಿದ್ದಾರೆ. ಜನ ಪ್ರಯಾಣ ಮಾಡಬೇಕಾದ ಸರ್ಕಾರಿ ಬಸ್ಸುಗಳು ಜನಗಳ ಮೇಲೆ ಹೋಗುತ್ತಿವೆ. ತಾವು ಪತ್ರಿಕೆಯಲ್ಲಿ ಓದಿರಬಹುದು. ಅಧ್ಯಕ್ಷರೇ, ಪೋಲೀಸ್ ಸ್ಟೇಷನ್‌ಗೆ ಗಂಡಸರು ಫಿರ್ಯಾದಿ ಕೊಡುವುದಕ್ಕೆ ಹೋದರೆ ಅಲ್ಲಿ ಸಬ್‌ಇನ್‌ಸ್ಪೆಕ್ಟರ್ ಕೊಲೆ ಮಾಡುತ್ತಾರೆ. ಹೆಣ್ಣು ಮಕ್ಕಳು ರಕ್ಷಣೆಗೆ ಹೋದರೆ ಮಾನಭಂಗ ಮಾಡುತ್ತಾರೆ. ಅಧ್ಯಕ್ಷರೇ ಇಂತಹ ಸರ್ಕಾರವನ್ನು ಇಟ್ಟುಕೊಳ್ಳುವುದು ನ್ಯಾಯವೇ? ಇದನ್ನು ಭಾರತಮಾತೆ ವಿಮರ್ಶೆ ಮಾಡಿ ಬದಲಿ ಸರ್ಕಾರ ಮಾಡುವುದು ಅವಶ್ಯಕ ಎಂದು ಹೇಳುತ್ತೇನೆ. ನಮ್ಮಿಂದ ಎರಡು ಜನರನ್ನು ಕರೆದುಕೊಂಡಿದ್ದೀರಿ. ಈಗ ಇರುವ 157 ಜನಕ್ಕೂ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸರ್ಕಾರಕ್ಕೆ ಒಂದು ವರುಷ 3 ಗಂಟೆ ಆಯುಸ್ಸಾಗಿದೆ. ಆದುದರಿಂದ ದಯಮಾಡಿ ರಾಜ್ಯದ ಹಿತದೃಷ್ಟಿಯಿಂದ ನೀವೇ ರಾಜೀನಾಮೆ ಕೊಡಿ. ಭಾರತ ಮಾತೆಯ ಹೆಣ್ಣುಮಕ್ಕಳ ಕೈಗೆ ಸರ್ಕಾರ ಕೊಟ್ಟು ಬದಲಿ ಸರ್ಕಾರ ಬರಲಿ ಎಂದು ನಾನು ಸಲಹೆ ಮಾಡುತ್ತೇನೆ. ಇದು ಅವಶ್ಯಕ ಎಂದು ಹೇಳುತ್ತೇನೆ.

ರಾಜ್ಯದ ಮುಖ್ಯ ಮಂತ್ರಿಗಳು ಶ್ರೀಮತಿ ಕೆ. ಎಸ್. ನಾಗರತ್ನಮ್ಮ.........

ಶ್ರೀ ವಾಟಾಳ್ ನಾಗರಾಜ್.—ನಿಮ್ಮನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದಕ್ಕೆ ನಾನು ಸಂಪೂರ್ಣ ಸ್ವಾಗತ ಮಾಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ರಾಜ್ಯಕ್ಕೆ ಬದಲ ಸರ್ಕಾರ ಬರದೇ ಹೋದರೆ ಭ್ರಷ್ಟಾಚಾರ, ಅನಾಚಾರ ಜಾಸ್ತಿಯಾಗುತ್ತದೆ. ನಾನು ಭಗವಂತನ ಪ್ರೇರಣೆಯಿಂದ ಹೇಳುತ್ತಿದ್ದೇನೆ.

ಇನ್ನು (1) ಲೋಕೋಪಯೋಗಿ ಸಚಿವೆ ಶ್ರೀಮತಿ ವಿಜಯ ದೇಸಾಯಿ.
(2) ಜನಾರೋಗ್ಯ ಸಚಿವೆ ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.
(3) ಫೌರಾಡಳಿತ ಸಚಿವೆ ಶ್ರೀಮತಿ ಅಡ್ವಿ ಸಾರ್ವಾನ.
(4) ಸಮಾಜ ಕಲ್ಯಾಣ ಸಚಿವೆ ಶ್ರೀಮತಿ ರೇಣುಕಾ ರಾಜೇಂದ್ರನ್.
(5) ವಿದ್ಯಾ ಸಚಿವೆ ಶ್ರೀಮತಿ ಸುಮತಿ ಮಡಿಮನ್.
(6) ಸಹಕಾರ ಸಚಿವೆ ಶ್ರೀಮತಿ ರಾಧಾಭಟ್ ಕೋಂ ಮಹಾಬಲೇಶ್ವರ್.
(7) ಕಂದಾಯ ಸಚಿವೆ ಶ್ರೀಮತಿ ದಮಯಂತಿ ಬೋರೇಗೌಡ.
(8) ಸಾರಿಗೆ ಸಚಿವೆ ಶ್ರೀಮತಿ ವಿನ್ನಿಫ್ರೆಡ್ ಎಫ್ ಫರ್ನಾಂಡಿಸ್.

(9) ಅರಣ್ಯ ಮತ್ತು ವ್ಯವಸಾಯ ಸಚಿವೆ ಶ್ರೀಮತಿ ಲೀಲಮ್ಮ ಶಿವನಂಜಪ್ಪ,
(10) ಹಣಕಾಸಿನ ಸಚಿವೆ ಶ್ರೀಮತಿ ಮನೋರಮಾ ಮಧ್ವರಾಜ್.
(11) ಕೈಗಾರಿಕಾ ಸಚಿವೆ ಶ್ರೀಮತಿ ಶೈಲಾ ಇರಾನಿ.
(12) ನ್ಯಾಯಾಂಗ ಸಚಿವೆ ಶ್ರೀಮತಿ ಪ್ರಫುಲ್ಲಾ ಸಿ. ಕಮಲಾನಿ.

ಶ್ರೀ ವಾಟಾಳ್ ನಾಗರಾಜ್.—ಶ್ರೀಮತಿ ಈವಾ ವಾಜ್‌ರವರ ಗತಿ ಏನು ? ಅವರೊಬ್ಬರನ್ನು ಸೇರಿಸಿಕೊಳ್ಳಬೇಕೆಂದು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಇನ್ನು ಸ್ಟೇಟ್ ಸಚಿವರನ್ನು ಅನೌನ್ಸ್ ಮಾಡಿಲ್ಲಾ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಾನು ಈ ಮಾನ್ಯ ಸಭೆಯಲ್ಲಿ ನಿಂತು ಹುಡುಗಾಟಿಕೆ ಮಾಡುವುದಕ್ಕಾಗಲೀ, ಕುಚೋದ್ಯ ಮಾಡುವುದಕ್ಕಾಗಲಿ ಇದನ್ನು ಹೇಳಲಿಲ್ಲಾ. ಈ ಮಾನ್ಯ ಸಭೆಯ 13 ಜನ ಗೃಹಿಣಿಯರು ಈ ರಾಜ್ಯದ ಆಡಳಿತವನ್ನು ವಹಿಸಿಕೊಂಡ ಪಕ್ಷದಲ್ಲಿ ಸ್ಟೇಟ್ ಸಚಿವರಾಗಲಿ, ಉಪಸಚಿವರಾಗಲಿ, ಪಾರ್ಲಿಮೆಂಟ್ ಸೆಕ್ರೆಟರಿಯವರಾಗಲಿ ಅವಶ್ಯಕ ಇಲ್ಲ. ವಿನಾ ಕಾರಣ ನಮ್ಮ ಆಡಳಿತದಲ್ಲಿ ಹಣ ದುರುಪಯೋಗ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಂತ್ರಿಮಂಡಲ ಈಚೆ ಕಡೆಗೆ ಬಂದರೆ ತಾವು ಅದರಲ್ಲಿ ಬರುತ್ತೀರಾ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಆ ಗ್ಯಾಂಗ್‌ಗೆ ನಾನು ಬರಬಾರದು. ಹೊಸ ಮಂತ್ರಿಮಂಡಲದಿಂದ ರಾಜ್ಯದ ಜನತೆಗೆ ಸರ್ವ ಕಲ್ಯಾಣವೂ ದೊರೆಯುತ್ತದೆ.

ಶ್ರೀ ವಾಟಾಳ್ ನಾಗರಾಜ್.—ತಾವು ಮುಖ್ಯ ಮಂತ್ರಿಗಳಿಗೆ ಯಾವ ಶಾಖೆ ಎನ್ನುವುದು ಹೇಳಲಿಲ್ಲಾ .

ಶ್ರೀ ಬಿ. ಪುಟ್ಟಸ್ವಾಮಯ್ಯ—ಉಳಿದೆಲ್ಲಾ ಖಾತೆಗಳನ್ನು ಮುಖ್ಯಮಂತ್ರಿಗಳಾಗಿರುವ ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರಿಗೆ ಮೀಸಲಿಡಲಾಗಿದೆ. ಈ ಹೊಸ ಮಂತ್ರಿಮಂಡಲದಲ್ಲಿ ಶ್ರೀಮಾನ್ ಕೆ. ಕೆ. ಮೂರ್ತಿಯವರಿಗಾಗಲಿ, ಇಂಜಿನೀಯರ್-ಇನ್-ಚೀಫ್ ದುರಾಡಳಿತ ನಡೆಸುವ ಅಧಿಕಾರಿಗಳಿಗಾಗಲಿ ಅವಕಾಶ ಇಲ್ಲ. ಸರ್ವೇಜನೋ ಸುಖಿನೋಭವಂತು ಎಂದು ಹೇಳಿ ನಿಮ್ಮ ಕಾಲದಲ್ಲಿ ಹೊಸ ಮಂತ್ರಿಮಂಡಲ ಅಧಿಕಾರ ವಹಿಸಲಿ ಎಂದು ಹಾರೈಸುತ್ತೇನೆ. ಈಗಿನ ನಿಮ್ಮ ಅಧಿಕಾರಕ್ಕೆ ಧಿಕ್ಕಾರ.

‘ಜೈ ಭಾರತ ಮಾತೆ’

† **ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ).**—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದ 1973-74ನೇ ಸಾಲಿನ ಆಯುವ್ಯಯದ ಪತ್ರವನ್ನು ನಾನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ಬಗ್ಗೆ ವಿರೋಧ ಪಕ್ಷದವರು ಸಾಕಷ್ಟು ಟೀಕೆಗಳನ್ನು ಮಾಡಿದ್ದಾರೆ. ಅದರಲ್ಲಿ ಸ್ವಲ್ಪ ಮಟ್ಟಿಗೆ ತಿರುಳು ಇದ್ದರೂ ಕೂಡ ಅನೇಕ ಭಾಗ ತಿರುಳು ಇಲ್ಲ. ತಿರುಳು ಇಲ್ಲದೇ ಇರುವ ಭಾಗವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ಹಿಂದೆ ಇದ್ದಂಥ ಬರಗಾಲವೇ ಈ ವರ್ಷವೂ ಬಂದಿದೆ. ಬಹುಶಃ ಯಾವ ಕಾಲದಲ್ಲೂ ಕೂಡ ಕೈಗೊಳ್ಳದೇ ಇದ್ದಂಥ ದೊಡ್ಡ ಪ್ರಮಾಣದಲ್ಲಿ ಪರಿಹಾರ ಕಾಮಗಾರಿಗಳನ್ನು ಈ ವರ್ಷ ತೆಗೆದುಕೊಂಡಿದ್ದಾರೆ. 1973-74ನೇ ಸಾಲಿಗೆ 54 ಕೋಟಿ ರೂಪಾಯಿಗಳ ಯೋಜನೆಯ ವೆಚ್ಚದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇದೇ ರೀತಿ ಮೊದಲಿನಿಂದಲೂ ಸ್ವಲ್ಪ ಮಟ್ಟಿಗಾದರೂ ಯೋಜನೆ ಹಾಕಿಕೊಂಡಿದ್ದರೆ ಇಂತಹ ಬರಗಾಲ ಬಂದಾಗ ಆ ಜನಗಳ ಕಷ್ಟವನ್ನು ಸ್ವಲ್ಪ ಮಟ್ಟಿಗಾದರೂ ರಕ್ಷಣೆ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು ಎಂದು ನನಗೆ ಅನಿಸುತ್ತಿದೆ. ಇನ್ನು 4ನೇ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷವಾದ 1973-74ಕ್ಕೆ 91 ಕೋಟಿ 84 ಲಕ್ಷ ರೂಪಾಯಿಗಳ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅದರಲ್ಲಿ ಕೃಷಿ ಕಾರ್ಯಕ್ರಮಗಳಿಗೆ ಆದ್ಯತೆ ಕೊಡಲಾಗಿದೆ. ಕೃಷಿ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಮತ್ತು ಕೈಗಾರಿಕೆಗಳ ಬೆಳವಣಿಗೆಗೆ ಆಗುವಷ್ಟು ಇಟ್ಟಿದ್ದಾರೆ. ಇದರಿಂದಾಗಿ ಜನರಿಗೆ ಸುಖ ಸೌಲಭ್ಯಗಳು ಸಿಗುತ್ತವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಜೂನಿಯರ್ ಕಾಲೇಜುಗಳನ್ನು ಸ್ಥಾಪನೆ ಮಾಡಿದ್ದಾರೆ. ಇಡೀ ರಾಜ್ಯದಲ್ಲಿ ಸುಮಾರು 500ಕ್ಕಿಂತ ಹೆಚ್ಚಾಗಿ ತರಾತುರಿಯಲ್ಲಿ ಜೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ ಎಂದು ನನಗೆ ಅನಿಸುತ್ತದೆ. ಆ ಕಾಲೇಜುಗಳಲ್ಲಿ ಬೇಕಾದಂಥ ಲೈಬ್ರರಿ ಮತ್ತು ಲ್ಯಾಬೊರೇಟ

(ಶ್ರೀಮತಿ ದಮಯಂತಿ ಬೋರೇಗೌಡ)

ರೀಸ್ ಅನುಕೂಲಗಳು ಸಿಕ್ಕುತ್ತಾ ಇಲ್ಲ. ಹೀಗಿರುವುದರಿಂದ ಆ ಕಾಲೇಜುಗಳಲ್ಲಿ ಓದುವ ಹುಡುಗರು ಪರೀಕ್ಷೆಗಳಲ್ಲಿ ಯಾವರೀತಿ ತೇರ್ಗಡೆ ಆಗಬಹುದು ಎನ್ನುವುದನ್ನು ಯೋಚನೆ ಮಾಡಿ. ಇದು ಬಹಳ ಕಷ್ಟಕರವಾದ ಪರಿಸ್ಥಿತಿಯಾಗಿದೆ. ಆದುದರಿಂದ ಅವಕ್ಕೆ ಒಂದು ಫೇಸ್ಡ್ ಪ್ರೋಗ್ರಾಂ ಆಗಲಿ ಅಥವಾ ಹಂತ ಹಂತವಾಗಿ ಒಂದು ಯೋಜನೆ ಹಾಕಿಕೊಂಡು ಆದಷ್ಟು ಬೇಗ ಅವರಿಗೆ ಲ್ಯಾಬೊರೇಟರೀಸ್ ಅನುಕೂಲಗಳನ್ನು ಒದಗಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಅನೇಕ ಕಡೆಗಳಲ್ಲಿ ಅದರಲ್ಲೂ ರೂರಲ್ ಏರಿಯಾಸ್‌ನಲ್ಲಿರತಕ್ಕಂಥ ಶಾಲಾ ಕಟ್ಟಡಗಳಿಗೆ ದುಡ್ಡನ್ನು ಒದಗಿಸಿಕೊಡತಕ್ಕಂಥ ಅವಕಾಶ ಇದೆ. ಆದರೆ ನಗರಪ್ರದೇಶದಲ್ಲಿರತಕ್ಕಂಥ ಕಟ್ಟಡಗಳಿಗೆ ಧನಸಹಾಯ ಕೇಳಿದರೆ ಅದು ನಗರ ಸಭೆಯ ಜವಾಬ್ದಾರಿ, ಅವರು ಶೇಕಡ 50 ಪರ್ಸೆಂಟ್ ಅಷ್ಟು ವಂತಿಕೆ ಕೊಡಬೇಕು ಎಂದು ಹೇಳುತ್ತಾರೆ.

ನಮಗೆ ತಿಳಿದಿರುವಂತೆ ಸೇಕಡ 80 ರಷ್ಟು ನಗರಸಭೆಗಳಲ್ಲಿ ಹಣಕಾಸಿನ ಪರಿಸ್ಥಿತಿ ಸಮರ್ಪಕವಾಗಿಲ್ಲ, ಒಂದು ಕಡೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿರುವುದರಿಂದ ಅನೇಕ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಮೂರು ನಾಲ್ಕರಷ್ಟು ಅಗಿದೆ. ಆದರೆ ಸುಮಾರು 10–15 ವರ್ಷಗಳ ಹಿಂದೆ ಮಾಡಿರತಕ್ಕ ಶಾಲೆಗಳಲ್ಲಿ ಚಿಕ್ಕ ಚಿಕ್ಕ ಕೊಠಡಿಗಳಲ್ಲಿ 40—50 ಮಕ್ಕಳು ಪಾಠಗಳನ್ನು ಕಲಿಯುವುದು ಬಹಳ ಕಷ್ಟವಾಗಿದೆ. ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದ ಮೇಲೆ ಭವ್ಯವಾದ ದೊಡ್ಡ ಕಟ್ಟಡಗಳಿಲ್ಲದೇ ಇದ್ದರೂ ಚಿಂತೆ ಇಲ್ಲ, ಸರಳವಾದ ವಿಶಾಲವಾದ ಕಟ್ಟಡಗಳಲ್ಲಿ ವಿದ್ಯಾಭ್ಯಾಸ ನಡೆಯುವುದಕ್ಕೆ ಸಾಕಷ್ಟು ಹಣವನ್ನು ಒದಗಿಸಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಜನತಾ ವಸತಿ ಕಾರ್ಯಕ್ರಮಕ್ಕೆ ಐದು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದಲ್ಲಿ 2,50,000 ನಿವೇಶನಗಳನ್ನು ಹಂಚಿದ್ದೇವೆ. ವಿರೋಧಪಕ್ಷದವರು ಸಮಾಜವಾದವನ್ನು ತರುತ್ತೇವೆಂದು ಹೇಳಿದವರು ಏನು ಮಾಡಿದ್ದೀರಿ ಎಂದು ಪ್ರತಿದಿನ ಸವಾಲನ್ನು ಹಾಕುತ್ತಿರತ್ತಾರ. ಅದರೆ ಇದನ್ನೆಲ್ಲ ಏಕೆ ಮರೆಯುತ್ತಾರೆಯೋ ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಹಂಚಿರುವ 2,50,000 ಸೈಟುಗಳಲ್ಲಿ ಮನೆಗಳನ್ನು ಹಂತಹಂತವಾಗಿ ಕಟ್ಟುವುದಕ್ಕೆ ಐದು ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಲಾಗಿದೆ. ದೇಶದಲ್ಲಿರುವ ದಾರಿದ್ರ್ಯವನ್ನು ನಿರ್ಮೂಲ ಮಾಡುವುದರಲ್ಲಿ ಇದು ಒಂದು ದಿಟ್ಟ ಹೆಜ್ಜೆ ಎಂದರೆ ತಪ್ಪಾಗಲಾರದು.

ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದೂ, ಇನ್ನು ಐದು ವರ್ಷಗಳಲ್ಲಿ ವಿದ್ಯುತ್‌ಉತ್ಪಾದನೆ ಮೂರರಷ್ಟು ಮಾಡಬೇಕೆಂದಿರುತ್ತಾರೆ. 1968—69ರಲ್ಲಿ ವಿದ್ಯುತ್ ಸೌಕರ್ಯ 7882 ಗ್ರಾಮಗಳಲ್ಲಿತ್ತು. ಈ ವರ್ಷದ ಕಡೆಗೆ ಸುಮಾರು 17,500 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ ದೊರೆಯುತ್ತದೆ ಎನ್ನುವುದಕ್ಕೆ ನಾವು ಸಂತೋಷಪಡಬೇಕಾಗುತ್ತದೆ. ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವಾಗ ಉತ್ಸಾಹವಿರುತ್ತದೆ. ಆದರೆ ವಿದ್ಯುಚ್ಛಕ್ತಿಯನ್ನು ಕೊಟ್ಟ ಮೇಲೆ ಪ್ರತಿವರ್ಷ ಅದಕ್ಕಾಗಿ ಕಟ್ಟಬೇಕಾದ ದುಡ್ಡನ್ನು ಕಟ್ಟದೆ ಅನೇಕ ಗ್ರಾಮಗಳಲ್ಲಿ ವಿದ್ಯುಚ್ಛಕ್ತಿಯನ್ನು ಕಡಿದು ಹಾಕಿದ್ದಾರೆ. ನೀರಾವರಿ ಪ್ರದೇಶದಲ್ಲಿರುವ ಗ್ರಾಮಗಳಲ್ಲಿಯೇ ಸುಮಾರು 80 ಪರ್ಸೆಂಟ್ ಗ್ರಾಮಗಳಲ್ಲಿ ಇಂಥ ಪರಿಸ್ಥಿತಿ ಇರಬೇಕಾದರೆ ನೀರಾವರಿ ಇಲ್ಲದೆ ಇರತಕ್ಕ ಪ್ರದೇಶಗಳಲ್ಲಿನ ಪರಿಸ್ಥಿತಿ ಹೇಗಿರಬಹುದು ಎನ್ನುವುದನ್ನು ಊಹಿಸಿಕೊಳ್ಳಬಹುದು.

ನಿರುದ್ಯೋಗ ನಿವಾರಣೆಗೆ ಕೇಂದ್ರ ಸರ್ಕಾರದವರು ಇಡೀ ದೇಶಕ್ಕೆ 100 ಕೋಟಿ ರೂಪಾಯಿ ಒದಗಿಸಿದ್ದಾರೆ. ವ್ಯವಸಾಯ ಮತ್ತು ಅರಣ್ಯ ಅಭಿವೃದ್ಧಿ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ವ್ಯವಸಾಯ ಹೆಚ್ಚಾಗಬೇಕಾದರೆ ಮೈನರ್ ಮತ್ತು ಲಿಫ್ಟ್ ಇರಿಗೇಷನ್, ಮೇಜರ್ ಇರಿಗೇಷನ್‌ಗೆ ಹೆಚ್ಚು ದುಡ್ಡು ಒದಗಿಸಬೇಕು. ಅರಣ್ಯ ಸಂಪತ್ತಿನ ಬಗ್ಗೆ ಹೇಳಬೇಕಾದರೆ ಅನೇಕ ಸದಸ್ಯರು ಅರಣ್ಯಕ್ಕೆ ಸೇರಿದ ಜಮೀನನ್ನು ಬಿಡುಗಡೆ ಮಾಡಿ ಬಡವರಿಗೆ ಅದನ್ನು ಉಳುಮೆ ಮಾಡವುದಕ್ಕೆ ಬಿಟ್ಟು ಕೊಡಿ ಎಂದು ಒತ್ತಾಯ ಮಾಡುತ್ತಿದ್ದಾರೆ. ಮೈಸೂರು ರಾಜ್ಯದಲ್ಲಿ ಅರಣ್ಯ ಸಂಪತ್ತು ಸಾಕಷ್ಟು ಇಲ್ಲ. ಹಿಂದೆ ನಮ್ಮ ಹಿರಿಯರು ಮಾಡುತ್ತಿದ್ದ ಮರಗಳನ್ನು ಬೆಳೆಸುವಂಥ ಒಳ್ಳೆಯ ಕೆಲಸಕ್ಕೆ ಇಂದಿನ ಜನಾಂಗ ಏನೇನೂ ಗಮನ ಕೊಡುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ; ಇರತಕ್ಕ ಅರಣ್ಯಗಳನ್ನು ನಾವು ಉಳಿಸಿಕೊಂಡು ಮತ್ತಷ್ಟು ಅರಣ್ಯಗಳನ್ನು ಬೆಳೆಸದೆ ಹೋದರೆ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ಬರುತ್ತದೆ. ಇನ್ನು ಮೇಲಾದರೂ ಅರಣ್ಯಕ್ಕೆ ಸೇರಿದ ಭೂಮಿಗಳನ್ನು ಜನಗಳಿಗೆ ಬಿಡುಗಡೆ ಮಾಡಬೇಕೆಂದು ಸರ್ಕಾರದ ಮೇಲೆ ಒತ್ತಾಯ ತರದೆ ಇರಲಿ ಎಂದು ನನ್ನ ನಮ್ರ ವಿನಂತಿ.

ರೆಗ್ಯುಲೇಟೆಡ್ ಮಾರುಕಟ್ಟೆಗಳನ್ನು ವರ್ಲ್ಡ್ ಬ್ಯಾಂಕ್ ಸಹಾಯದಿಂದ ಆಧುನೀಕರಣ ಮಾಡುವುದು ಬಹಳ ಒಳ್ಳೆಯ ವಿಷಯವಾಗಿದೆ.

ಉದ್ಯಮಗಳ ಬಗ್ಗೆ ಹೇಳಬೇಕಾದರೆ ದಿವಂಗತ ಎಂ. ವಿಶ್ವೇಶ್ವರಯ್ಯನವರು ಇಂಡಸ್ಟ್ರಿಯಲೈಸ್ ಆರ್. ಪೆರಿಷ್ ಎಂದು ಹೇಳಿದ್ದರು. ಅದು ಈ ಹೊತ್ತಿಗೂ ಅನ್ವಯಿಸುತ್ತದೆ, ಮುಂದೆಯೂ ಅನ್ವಯಿಸುತ್ತದೆ. ನಮ್ಮಂಥ ಬೃಹತ್ ರಾಷ್ಟ್ರದಲ್ಲಿ ಲಕ್ಷಾಂತರ ನಿರುದ್ಯೋಗಿಗಳು, ವಿದ್ಯಾವಂತ ಮತ್ತು ಅವಿದ್ಯಾವಂತ ನಿರೂದ್ಯೋಗಿಗಳು ಇರತಕ್ಕ ದೇಶದಲ್ಲಿ ಉದ್ಯಮಗಳ ಬಗ್ಗೆ ಎಷ್ಟು ಗಮನ ಕೊಟ್ಟರೂ ಸಾಲದು. ಬರಗಾಲವನ್ನು ಎದುರಿಸುವುದಕ್ಕೆ ನಾವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ಅದೇ ರೀತಿ ವಾರ್ ಫುಟಿಂಗ್ ಮೇಲೆ ಕಾರ್ಯಕ್ರಮಗಳನ್ನು ಹಾಕಿಕೊಂಡು ನಿರುದ್ಯೋಗ ಸಮಸ್ಯೆಯನ್ನು ನಾವು ಎದುರಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ವೈದ್ಯಕೀಯದಲ್ಲಿ, ಈ ರಾಜ್ಯದಲ್ಲಿ ನೂರು ಹೊಸ ಔಷಧಾಲಯಗಳನ್ನು ತೆರೆಯುವುದಕೆ ಏರ್ಪಾಡು ಮಾಡಿದ್ದಾರೆ. ಅದರಿಂದ ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲವಾಗುತ್ತದೆ. ಆಸ್ಪತ್ರೆಗಳನ್ನು ತೆರೆದರೆ ಮಾತ್ರ ಸಾಲದು, ಸಾಕಷ್ಟು ಔಷಧಿಗಳು ಇಲ್ಲದೇ ಇರುವುದನ್ನು ಅನೇಕ ಕಡೆ ನಾವು ನೋಡುತ್ತಿದ್ದೇವೆ. ಆಸ್ಪತ್ರೆಗಳನ್ನು ತೆರೆದು ಡಾಕ್ಟರುಗಳನ್ನು, ಮತ್ತು ಇತರ ಸಿಬ್ಬಂದಿಯನ್ನು ಹಾಕಿದ್ದರೂ ಔಷಧಿಗಳು ಎಷ್ಟೋ ಕಡೆ ಇಲ್ಲ. ಇದರ ಕಡೆಗೂ ಗಮನ ಕೊಡಬೇಕು. ತಾಲ್ಲೂಕು ಬೋರ್ಡಿನಿಂದ ಆಸ್ಪತ್ರೆಗಳನ್ನು ಸರ್ಕಾರದವರು ವಹಿಸಿಕೊಳ್ಳಬೇಕು ಎನ್ನುವ ವಿಚಾರವಿದೆ. ಇದರಿಂದ ತಾಲ್ಲೂಕು ಬೋರ್ಡ್ ಮೇಲೆ ಇರುವ ಹಣದ ಹೊರೆ ಕಡಿಮೆಯಾಗುತ್ತದೆ ಮತ್ತು ಅ ದುಡ್ಡನ್ನು ಅವರು ಇತರ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಖರ್ಚು ಮಾಡಬಹುದು.

ಸಮಾಜಕಲ್ಯಾಣದ ಬಗ್ಗೆ ಹೇಳಬೇಕೆಂದರೆ, ಅಂಗವಿಕಲರಿಗಾಗಿ ಕೆಲವು ವಿಶೇಷ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಮಾನ್ಯ ರಾಷ್ಟ್ರಪತಿ ಅವರು ಹೇಳಿ ಅದಕ್ಕೋಸ್ಕರ ತೆರಿಗೆ ಹಾಕಬಹುದೆಂದೂ ಸೂಚಿಸಿದ್ದಾರೆ. ಅಂಗವಿಕಲರ ಪರಿಸ್ಥಿತಿ ಹೇಗಿದೆ ಎಂದರೆ ಸಮಾಜದಲ್ಲಿ ಹರಿಜನಗಿರಿಜನರಿಗಿಂತ, ಅತಿ ಕೆಳಮಟ್ಟದ ಬಡವರಿಗಿಂತ ಶೋಚನೀಯವಾಗಿದೆ. ಎಲ್ಲಿಯೂ ಅವರಿಗೆ ಹಣದ ಸಹಾಯ ಸಿಕ್ಕುವುದಿಲ್ಲ, ಅವರಿಗೆ ಭಿಕ್ಷಾಟನೆ ಮಾಡುವುದಕ್ಕೆ ಕೂಡ ಅವಕಾಶವಿಲ್ಲದೆ ಹಾಗಾಗಿದೆ, ಸರ್ಕಾರಿ ನೌಕರಿಯಲ್ಲಿ ಮತ್ತು ಬೇರೆ ನೌಕರಿಗಳಲ್ಲಿ ಇವರಿಗೆ ಇಂತಿಷ್ಟು ಪರ್ಸೆಂಟೇಜ್ ಸ್ಥಾನಗಳನ್ನು ರೆಸರ್ವ್ ಮಾಡಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ.

ಸ್ಪೆಷಲ್ ನ್ಯೂಟ್ರಿಷನ್ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದವರು ಪೂರ್ತಿಯಾಗಿ ಸಹಾಯ ಧನವನ್ನು ಕೊಡುತ್ತಿದ್ದಾರೆ. ಅದನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಜಾರಿಗೆ ತರಬೇಕಾಗಿದೆ, ಅಲ್ಲಿ ದೊಡ್ಡ ಕೊರತೆ ಏನಿದೆ ಎಂದರೆ ಅಲ್ಲಿ ಸಂಘಸಂಸ್ಥೆಗಳು ವ್ಯವಸ್ಥಿತವಾಗಿ ಕೆಲಸ ಮಾಡುವುದಿಲ್ಲ. ಮತ್ತು ಸರ್ವೆಸಾಮಾನ್ಯವಾಗಿ ಅದಕ್ಕೆ ಬೇಕಾದ ಒಳ್ಳೆಯ ಕಟ್ಟಡಗಳು ಸಿಕ್ಕುವುದಿಲ್ಲ. ಆಹಾರ ಯೋಜನೆಯನ್ನು ಜಾರಿಗೆ ತರಬೇಕಾದರೆ ಆಹಾರ ಪದಾರ್ಥಗಳನ್ನು ಇಟ್ಟುಕೊಳ್ಳುವುದಕ್ಕೆ ಮತ್ತು ಅದನ್ನು ತಯಾರು ಮಾಡುವುದಕ್ಕೆ ಕೂಡ ಸಾಕಷ್ಟು ಸೌಲಭ್ಯಗಳಿಲ್ಲ. ಈ ರೀತಿಯಾಗಿರುವುದರಿಂದ ಈ ಯೋಜನೆಗಳನ್ನು ಜಾರಿಗೆ ತರುವುದಕ್ಕೆ ಸಾಕಷ್ಟು ಅನುಕೂಲತೆಗಳಿವೆಯೇ ಎನ್ನುವುದನ್ನು ಯೋಚನೆ ಮಾಡಬೇಕು.

ಗ್ರಾಮಾಂತರ ನೀರು ಸರಬರಾಜು ಯೋಜನೆಗಾಗಿ ಈ ವರ್ಷ ಒಟ್ಟು 40 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ, ಹೋದ ವರ್ಷ ಒದಗಿಸಿದ್ದ ದುಡ್ಡು ಏನೇನೂ ಸಾಲದೆ ಅನೇಕ ಕಾರ್ಯಕ್ರಮಗಳು ನಿಂತು ಹೋಗಿರುವುದು ಸದಸ್ಯರ ಗಮನಕ್ಕೆ ಬಂದಿರುತ್ತದೆ. ಗ್ರಾಮಪಂಚಾಯಿತಿಗಳಲ್ಲಿ ಹಣಕಾಸಿನ ಪರಿಸ್ಥಿತಿ ತೀರ ಅಸಮರ್ಪಕವಾಗಿದೆ. ಅವರು ಗ್ರಾಮ ನೈರ್ಮಲ್ಯವನ್ನು ನೋಡಿಕೊಂಡು ವಿದ್ಯುಚ್ಛಕ್ತಿಗೆ ದುಡ್ಡನ್ನು ಕಟ್ಟುವುದಕ್ಕೇ ಸಾಮರ್ಥ್ಯವಿಲ್ಲ. ಗ್ರಾಮಗಳಲ್ಲಿ ರಸ್ತೆ, ಚರಂಡಿ ಕೆಲಸಗಳನ್ನೆಲ್ಲ ಗ್ರಾಮ ಪಂಚಾಯಿತಿಯವರೇ ಮಾಡಬೇಕು. ತಾಲ್ಲೂಕು ಬೋರ್ಡಿನವರಾಗಲಿ, ಸರ್ಕಾರದವರಾಗಲೀ ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲ ಗ್ರಾಮಗಳಲ್ಲಿಯೂ ಈ ಹೊತ್ತು ಗ್ರಾಮ ನೈರ್ಮಲ್ಯ ಕಾರ್ಯಕ್ರಮಗಳು ಬಹಳ ಕೀಳು ಮಟ್ಟದಲ್ಲಿದೆ. ಗ್ರಾಮಪಂಚಾಯಿತಿಗಳು ಬಲಯುತವಾಗಿ, ಚೆನ್ನಾಗಿ ಕೆಲಸ ಮಾಡದೆ ಇದ್ದ ಪಕ್ಷದಲ್ಲಿ ಇಡೀ ರಾಷ್ಟ್ರದಲ್ಲಿ ಎಷ್ಟು ವರ್ಷವಾದರೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಏನೇನೂ ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಖಚಿತವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಶ್ರೀಮತಿ ದಮಯಂತಿ ಬೋರೇಗೌಡ)

ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಸಂಸ್ಥೆಗಳು ಎಲ್ಲಿಯವರೆಗೆ ಸಮರ್ಪಕವಾಗಿ ಕೆಲಸ ಮಾಡುವುದಿಲ್ಲ, ಅಲ್ಲಿಯವರೆಗೆ ಯಾವ ಕಾರ್ಯಕ್ರಮಗಳೂ ಯಶಸ್ವಿಯಾಗಿ ನಡೆಯುವುದಕ್ಕೆ ಸಾಧ್ಯವಿಲ್ಲ.

ನಮ್ಮ ರಾಜ್ಯದಲ್ಲಿ ಟೆಕ್ನಿಕಲ್ ಯೂನಿವರ್ಸಿಟಿ ತೆರೆಯುವುದು ಬಹಳ ಸಂತೋಷದ ವಿಷಯ.

ಕೇಂದ್ರ ಮತ್ತು ರಾಜ್ಯದ ತುಟ್ಟಿಭತ್ಯದಲ್ಲಿರುವ ತಾರತಮ್ಯವನ್ನು ಕಡಿಮೆ ಮಾಡುವುದಕ್ಕೆ ಎರಡು ಸಲ ನಮ್ಮ ರಾಜ್ಯದ ಸರ್ಕಾರ ತುಟ್ಟಿಭತ್ಯವನ್ನು ಹೆಚ್ಚಿಸಿದೆ. ಅದರೆ ಕೇಂದ್ರ ಸರ್ಕಾರ ಹೆಚ್ಚಿಸಿದಂತೆಲ್ಲ ನಮ್ಮ ರಾಜ್ಯ ಸರ್ಕಾರ ಹೆಚ್ಚಿಸಿದರೆ ರಾಜ್ಯಕ್ಕೆ ಅದರಿಂದ ಹೊರೆ ಜಾಸ್ತಿಯಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ರಾಜ್ಯದ ಸರಾಸರಿ ವರಮಾನ ಎರಡು ರೂಪಾಯಿ ಜಾಸ್ತಿ ಇದ್ದ ಮಾತ್ರಕ್ಕೆ ಕೇಂದ್ರದಿಂದ ನಮಗೆ ಬರತಕ್ಕ ದುಡ್ಡು ಖೋತ ಆಗಿದೆ. ನಾಲ್ಕನೇ ಮತ್ತು ಐದನೇ ಆಯೋಗದಿಂದ ನಮಗೆ ಸಾಕಷ್ಟು ನ್ಯಾಯ ದೊರೆತಿಲ್ಲ. ಆರನೇ ಹಣಕಾಸಿನ ಆಯೋಗದವರಾದರೂ ನಮ್ಮ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡುತ್ತಾರೆಂದು ನಾನು ಆಶಿಸುತ್ತೇನೆ. ಇಷ್ಟು ಹೇಳಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—The House now stands adjourned to meet again to-morrow at 1 P.M.

The House adjourned at six of the Clock to meet again at One of the Clock on Wednesday the 21st March 1973.

MYSORE LEGISLATIVE COUNCIL

(Thirty-Fourth Session 1973)

The Mysore Sales Tax (Amendment) Bill, 1973

(L. A. Bill No. 22 of 73)

(As Passed by the Legislative Assembly)

A Bill further to amend the Mysore Sales Tax Act, 1957.

Whereas it is expedient further to amend the Mysore Sales Tax Act, 1957 (Mysore Act 25 of 1957) for the purposes hereinafter appearing ;

Be it enacted by the Mysore State Legislature in the Twenty-fourth Year of the Republic of India as follows :—

1. **Short title and commencement.**—(1) This Act may be called the Mysore Salec Tax (Amendment) Act, 1973.

(2) It shall come into force on the 1st day of April, 1973.

2. **Amendment of Section 5.**—In section 5 of the Mysore Sales Tax Act, 1957 (Mysore Act 25 of 1957) (hereinafter referred to as the Principal Act).—

(i) in the proviso to sub-section (1), the word "paddy" shall be omitted ;

(2) in the proviso to sub-section (4),—

(a) for the words " the tax paid under this Act", the words, brackets and figures "and tax has been paid un cr the Central Sales Tax Act, 1956 (Central Act 74 of 1956) in respect o the sale of such goods in the course of Inter-State trade or commerce, the tax paid under this Act" shall be and shall be deemed always to have been substituted ;

(b) for the words "shall be refunded to such person", the words " shall be reimbursed to the person making such sale in the course of Inter-State trade or commerce" shall be substituted.

3. **Amendment of the Second Schedule.**—In the Second Schedule to the principal Act—

(1) the entry relating to serial number 25 shall be omitted ;

(2) after the entry relating to serial number 115, the following entries shall be added, namely :—

"116.	"Poultry feed" and "cattle feed" *i.e.*, processed commodity sold as "poultry feed" and "cattle feed"	...	Two per cent
117.	Insecticides and Pesticides	...	Two per cent
118.	Containers other than gunnies	...	Four per cent

119.	Fuel gas, such as burshane, calgas, indane and the like ...	Four per cent
120.	Aluminium ingots ...	Six per cent
121.	Industrial gas, such as oxygen, acetylene. nitrogen and the like ...	Six per cent
122.	Copper, bronze and brass utensils ...	Six per cent
123.	Footwear ...	Four per cent
124.	Tractor-trailers ...	Six per cent
125.	All kinds of paper including carbon paper but excluding paper falling under serial number 55 ...	Six per cent
126.	Pressure cookers, their parts and accessories ...	Six per cent
127.	Water meters ...	Six per cent
128.	Aerated water ...	Six per cent
129.	Linoleum ...	Six per cent”

4. **Amendment of the Third Schedule.**—In the Third Schedule to the principal Act,—

(1) after the entry relating to serial No. 4, the following entry shall be inserted, namely :—

“4a Cardamom	Purchase by the first or earliest of the successive dealers in the State liable to tax under this Act.	Three per cent”;

(2) after the enrry relating to serial No. 13, the following entry shall be inserted, namely :—

“13a Shrimps, prawns and lobsters.	Purchase by the last dealer in the State liable to tax under this Act.	Four per cent

5. **Amendment of the Fourth Schedule.**—In the Fourth Schedule to the principal Act,—

(1) for the entry in column 2 of serial No. 1, the following entry shall be and shall be deemed always to have been substituted, namely:-

“Coal including coke in all its forms, but excluding charcoal :

Provided that during the period commencing on the 23rd day of February, 1967 and ending with the 1st day of April 1973 this entry shall have effect subject to the modification that the words ‘but excluding charcoal’ shall be omitted.”;

(2) for the entry in column 2 of serial No. 2, the following entry shall be substituted, namely :—

"Iron and steel, that is to say—

(i) pig iron and cast iron including ingot moulds, bottom plates, iron scrap, cast iron scrap, runner scrap and iron skull scrap ;

(ii) steel semis (ingots, slabs, blooms and billets of all qualities, shapes and sizes) ;

(iii) Skelp bars, tin bars, sheet bars, hoe—bars and sleeper bars ;

(iv) steel bars (rounds, rods, squares, flats, octagons and hexagons, plain and ribbed or twisted, in coil form as well as straight lengths) ;

(v) steel structurals (angles, joists, channels, tees, sheet piling sections, Z sections or any other rolled sections);

(vi) sheets, hoops, strips and skelp, both black and galvanised, hot and cold rolled, plain and corrugated, in all qualities, in straight lengths and in coil form, as rolled and in rivetted condition ;

(vii) plates both plain and chequered in all qualities ;

(viii) discs, rings, forgings and steel castings ;

(ix) tool, alloy and special steels of any of the above categories;

(x) steel melting scrap in all forms including steel skull, turnings and borings ;

(xi) steel tubes, both welded and seamless, of all diameters and lengths, including tube fittings ;

(xii) tin-plates, both hot dipped and electrolytic and tinfree plates ;

(xiii) fish plate bars, bearing plate bars, crossing sleeper bars, fish plates, bearing plates, crossing sleepers and pressed steel sleepers, rail-heavy and light crane rails ;

(xiv) wheels, tyres, axles and wheel sets ;

(xv) wire rods and wires—rolled, drawn, galvanised, aluminised, tinned or coated such as by copper ;

(xvi) defectives, rejects, cuttings or end pieces of any of the above categories.";

(3) in column 2 of serial No. 4, for the words "hibiscus cannapinus and hibiscus saldarifavar altissima" the words "Hibicus cannabinus and Hibicus sabdariffa-Var altissima and the fibre known as Sunn or sunnhemp extracted from plants of the species Crotalaria juncea" shall be substituted ;

(4) in column 2 of serial No. 5

(a) in item (a)—

(i) after the words "groundnut seeds" the word "peanut" shall be inserted ;

(ii) for the words and brackets "and copra, till (gingelly)", the brackets, letters and words "(i.e. copra excluding tender coconuts), sesamum or til (gingelly)" shall be substituted ;

(ii) after the words and brackets "kusum (kardi) seeds", the word "Safflower" shall be inserted ;

(b) in item (b)—

(i) the word "cardamom" shall be omitted ;

(ii) for the words "honge seeds and neem seeds" the words "Karanja, Pongam, Honga seeds and neam or vepa seeds" shall be substituted ;

(c) in item (d), for the existing entry, the following shall be substituted, namely :—

> "Other oil seeds, that is to say,—Soyabean, Rapeseed and Mustard (Toria, Ragi, Jamba, Taramira, Sarson, yellow and brown, Banarsi Rai or True Mustard), Linseed, Sun flower, Mahua, Illupai, Ippe, Punna, Undi, Kokum, Sal, Tung and Red Palm."

6. **Amendment of the Fifth Schedule.**-In the Fifth Schedule to the principal Act,—

(1) in the entry relating to serial No. 38A, after the words "**Raw Silk**", the words "thrown silk or twisted silk" shall be inserted ;

(2) after the entry relating to serial No. 43, the following entry shall be inserted, namely :—

"44. Paddy."

Te. HANUMANTHAPPA,
Secretary.

STATEMENT OF OBJECTS AND REASONS

(As appended at the time of Introduction the Bill)

Sections 14 and 15 of the Central Sales Tax Act, 1956 which have a bearing upon sub-section (4) of section 5 of and the Fourth Schedule to the Mysore Sales Tax Act 1957 have been amended by the Central Sales Tax (Amendment) Act, 1972 (Central Act No. 61 of 1972). The gist of the amendments is :—

(1) items which are considered as coming within the scope of iron and steel and oilseeds which are declared goods have been exhaustively enumerated ;

(2) Charcoal is excluded from the purview of coal ;

(3) the refund of the State tax paid in respect of declared goods which are subsequently sold in the course of Inter-State trade have been made subject to the payment of sales tax on the Inter-State sale.

Sub-section (4) of section 5 and the Fourth Schedule of the Mysore Sales Tax Act 1956 have to be suitably modified to bring them in conformity with the amended provisions of sections 14 and 15 of the Central Sales Tax Act 1956. It is proposed to bring into effect the proposed amendment with effect from 1st April 1973, the date on which the amendments to the Central Sales Tax Act 1956 will come into force.

Amendments consequential to the proposals made in the budget speech are also included.

Hence the Bill.

M. Y. GHORPADE.

EXTRACT FROM THE MYSORE SALES TAX ACT, 1957.

(Mysore Act 25 of 1957)

* * * *

5. Levy of tax on sale or purchase of goods.—

(1) Every dealer shall pay for each year tax on his taxable turnover at the rate of three and a half per cent of such turnover :

Provided further that if and to the extent to which such turnover relates to gur, pulses including tur dhals, flour and husks, wheat (including aatta, maida, soji and bran). paddy rice (including parched rice and beaten rice and bran) ragi, jola maize, bajra, navane, samey

(సాపెం), and gunny bags and bardans (including batars) and hessian cloth, the tax shall be calculated at the rate of one and a half per cent of such turnover.

* * * * *

(4) Notwithstanding anything contained in sub-section (1) a tax under this Act shall be levied in respect of the sale or purchase of any of the declared goods mentioned in column (2) of the Fourth Schedule at the rate and only at the point specified in the corresponding entries of columns (4) and (3) of the said Schedule on the dealer liable to tax under this Act on his taxable turnover of sales or purchases in each year relating to such goods :

Provided that where tax has been paid in respect of the sale or purchase of any of the declared goods under this sub-section and such goods are subsequently sold in the course of inter-State trade or commerce, the tax paid under this Act shall be refunded to such person in such manner and subject to such condition as may be prescribed.

Explanation.—The expression "declared goods" means goods declared under section 14 of the Central Sales Tax Act, 1956 (Central Act 74 of 1956), to be of special importance in Inter-State trade or commerce.

* * * * *

SECOND SCHEDULE

Goods on the sale of which a single point tax is leviable on the first or earliest of successive dealers in the State under section 5 (3) (a).

Sl. No.	Description of the goods	Rate of tax
1	2	3
25	Thrown silk ...	Two per sent

* * * * *

FOURTH SCHEDULE

Declared goods in respect of which a single point tax is leviable under section 5 (4)

Sl. No.	*Description of the goods*	*Point of levy*	*Rate of tax*
1	2	3	4
1.	Coal including Coke in all its forms	Sale by the first or earliest of successive dealers in the State liable to tax under this Act.	Three per cent.
2.	Iron and steel, that is to say:— (*a*) Pig iron and iron scrap ; (*b*) Iron plates sold in the same from in which they are directly produced by the rolling mill ; (*c*) Steel scrap, steel ingots, steel billets, steel bars and rods. (*d*) (i) Steel plates (ii) Steel sheets (iii) Steel bars and tin bars (iv) rolled steel sections. (v) tool alloy steel. Sold in the same form in which they are directly produced by the rolling mill.	Sale by the first or earleist of successive dealer in the State liable to tax under this Act.	Three per cent

* * * * *

1	2	3	4
4.	Jute, that is to say, the fibre extracted from plants belonging to the species corchorus capsularises and corchorus olitorious and the fibre known as mesta or bimli extracted from plants of the species hibiscus cannapinus and hibiscus saldarifavar altissima, whether baled or otherwise.	Sale by the first or earliest of successive dealers in the State liable to tax under this Act.	Three per cent
5.	(a) Groundnut including groundnut seeds, coconut and copra, til (gingelly) seeds, kusum (kardi) seeds and nigar (Ramatil).	Purchase by the first or earliest of the successive dealers in the State liable to tax under this Act.	Two per cent
	(b) Cardamom, castor seeds, honge seeds and neem seeds.	Purchase by the first or earliest of the successive dealers in State liable to tax under this Act.	Three per cent
	(d) Other oil seeds, that is to say, seeds other than those mentioned in sub-items (a), (b) and (c) yielding non-volatile oils used for human consumption, or in industry or in the manufacture of varnishes, soaps and the like, or in lubrication and volatile oils used chiefly in medicines, perfumes, cosmetics and the like.	Sale by the first or eariest of successive dealers in the State liable to tax under this Act.	Three per cent

* * * * *

FIFTH SCHEDULE

Goods Exempted from Tax under Section 8

Sl. No.	Description of the goods.
*	* * * *
8-A.	Raw Silk;
*	* * * *

W D 20130—GPB—550—. 28-6-1974

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Wednesday, 21st March 1973/Phalguna 30, 1894 (Saka Era)

The House met in the Assembly Chamber, Vidhana Soudha, at One of the Clock.

MADAM SPEAKER [SMT K. S. NAGARATHNAMMA] in the Chair.

STARRED QUESTIONS

(to which oral Answers were given)

Compensation for Lands submerged under Yelachagere and Narsapur Tanks

199. **Sri DODDA THIMMAIAH** (Gulur).—

Will the Minister for Revenue be pleased to state.—

(*a*) whether it is a fact that the compensation to the owners of the lands submerged by the Yelachagere and Narasapura tanks in Kolala Hobli, Koratagere Taluk is not yet paid ;

(*b*) if so, the reasons therefor ?

Sri N. HUTCHAMASTHY GOWDA (Minister for Revenue).—

(*a*) Yes.

(*b*) As regards lands submerged in Yelachagere tank the matter is pending with the P.W.D. for furnishing certain information and as regards lands submerged in Narasapur tank the acquisition procedings are yet to be initiated by the acquiring body.

Sri DODDA THIMMAIAH.—May I know whether the reasons for not paying the compensation to the owners of the lands is due to paucity of funds or is it due to traditional red-tapism prevailing in the department ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕೆ ಸಮಗ್ರವಾಗಿ ಆ ತರಹ ಪ್ರಶ್ನೆ ಕೇಳಿದರೆ; ಅದಕ್ಕೆ ಸಂಬಂಧಪಟ್ಟ ಹಾಗೆ ಉತ್ತರ ಹೇಳುತ್ತೇನೆ.

ಶ್ರೀ ದೊಡ್ಡತಿಮ್ಮಯ್ಯ.—ಈ ಕೆರೆಗಳಿಂದಾಗಿ ಜಮೀನು ಮುಳುಗಡೆಯಾದವರಿಗೆ ಪರಿಹಾರ ಕೊಡುವುದರಲ್ಲಿ ಇಷ್ಟು ನಿಧಾನ ಆಗಲು ಕಾರಣವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರಿಗೆ ಪರಿಹಾರ ಕೊಡುವುದಕ್ಕೋಸ್ಕರವೇ ತಾರೀಖು 13-1-1970ರಲ್ಲಿಯೇ ಎಗ್ಜಿಕ್ಯುಟಿವ್ ಇಂಜನಿಯರ್ ಅವರಿಗೆ ಪತ್ರ ವ್ಯವಹಾರ ಮಾಡಲಾಗಿದೆ. ಮತ್ತು ಅಕ್ವಿಸಿಷನ್ ಆಫೀಸರಿಗೂ ಕಾಗದ ಬರೆದಿದ್ದೇವೆ. ಇದುವರೆಗೆ 2-3 ಸಾರಿ ವಿವರಣೆಗಳನ್ನು ಕೇಳಿ ಕಾಗದ ಕಳುಹಿಸಿದ್ದರೂ ಇನ್ನು ಉತ್ತರ ಬಂದಿಲ್ಲ. ನಿಧಾನವಾಗಿದೆ, ನರಸಾಪುರದ ಕೆರೆಯ ಮುಳುಗಡೆಯಾದ ಜಮೀನಿನ ಬಗ್ಗೆ ಇಲ್ಲಿಯವರೆಗೂ ಅಕ್ವಿಸಿಷನ್ ಆಗಬೇಕೆಂದು ಇಂಜನಿಯರಿಂಗ್ ಡಿಪಾರ್ಟ್‌ಮೆಂಟ್‌ನವರು ರೆವಿನ್ಯೂ ಇಲಾಖೆಗೆ ಇನ್ನೂ ತಿಳಿಸಿಲ್ಲ. ಆದ್ದರಿಂದ ನಿಧಾನವಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮುಳುಗಡೆಯಾದ ಜಮೀನನ್ನು ನಿಮ್ಮ ವಶಕ್ಕೆ ತೆಗೆದುಕೊಂಡ ಮೇಲೆ ಪರಿಹಾರ ಕೊಡುವುದಕ್ಕೆ ಒಂದು ಗೊತ್ತಾದ ಕಾಲವನ್ನು ಗೊತ್ತು ಮಾಡಿ ಜಾಗ್ರತೆಯಾಗಿ ಪರಿಹಾರ ಕೊಡುವ ಹಾಗೆ ವ್ಯವಸ್ಥೆಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರಿಗೆ ಪರಿಹಾರವನ್ನು ಆದಷ್ಟು ಬೇಗನೆ ಕೊಡಬೇಕೆಂಬುದೇ ಸರಕಾರದ ಅಭಿಪ್ರಾಯ. ಆದರೆ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಕೈಯಲ್ಲಿಯೇ ಪೂರಾ ಅಧಿಕಾರ ಇರುವುದಿಲ್ಲ. ಕೆಲವು ವೇಳೆ ಕೆರೆಗಳ ಬಗ್ಗೆ, ರಸ್ತೆಗಳ ಬಗ್ಗೆ ಲೋಕೋಪಯೋಗಿ ಇಲಾಖೆಗೆ ಬರೆದು ಅವರಿಂದ ಎಷ್ಟು ಭೂಮಿಬೇಕು ಎಂಬುದನ್ನು ವಿಚಾರಮಾಡಬೇಕಾಗಿ ಬರುತ್ತದೆ. ಬೆರೆಯ ವಿಷಯದಲ್ಲಿ ನಮ್ಮ ರೆವಿನ್ಯೂ ಆಫೀಸರು ನಿಷ್ಕರ್ಷೆ ಮಾಡುತ್ತಾರೆ. ಎಷ್ಟು ಪ್ರದೇಶ ಅಕ್ವೈರ್ ಮಾಡಿಕೊಳ್ಳಬೇಕೆಂಬುದು ಇನ್ನೂ ಮಂಜೂರಾಗಬೇಕು. ಅನಂತರ ಅವಾರ್ಡ್ ಎಷ್ಟು ಕೊಡಬೇಕೆಂಬುದು ನಿಗದಿ ಮಾಡಬೇಕಾಗುತ್ತದೆ. ಆದಕ್ಕಾಗಿ ನಿಧಾನವಾಗಿದೆ. ಆದಷ್ಟು ಬೇಗ ಸರಕಾರದವರು ಈ ವಿಚಾರವನ್ನು ತೀರ್ಮಾನ ಮಾಡಬೇಕೆಂದು ಸದಸ್ಯರ ಸಲಹೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ.

Sri DODDA THIMMAIAH.—Is it the policy of the Government to allot lands to those whose lands were submerged for construction of tanks and other things and whether it is a fact that even though the policy of the Government is to allot lands to those whose lands are submerged they are not allotted lands ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನು ಕಳೆದುಕೊಂಡವರಿಗೆ ಪರಿಹಾರ ದ್ರವ್ಯ ಕೊಡಬೇಕೆಂದು ಇದೆ. ಆದರೆ ಜಮೀನಿನ ಜೊತೆಯಲ್ಲಿ ಅದನ್ನು ಸಹ ಕೊಡಬೇಕೆಂದು ನಿರ್ದಿಷ್ಟವಾಗಿ ಏನೂ ಇಲ್ಲ. ಕೆಲವು ಸಂದರ್ಭಗಳಲ್ಲಿ ಆ ರೀತಿಯಾಗಿ ಕೊಡುವುದು ಸರ್ಕಾರದ ನೀತಿಯಾಗಿದೆ. ಅದು ಯಾವ ರೀತಿಯಾಗಿ ಕೊಡಬೇಕೆಂಬ ಬಗ್ಗೆ ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ವಿವರಗಳು ಈಗ ನನ್ನಲ್ಲಿಲ್ಲ.

ಅಧ್ಯಕ್ಷರು.—ಶ್ರೀ ನಾಗಣ್ಣನವರು ಪ್ರಶ್ನೆ ನಂ. 202 ಕೇಳಬಹುದು.

Students Agitation against Enhancement of Tuition fees by Private Colleges

202. Sri K. M. NAGANNA (Chickpet) [On behalf of SRI B. B. SAYANAK (Belgaum)].—

Will the Minister for Education be pleased to state.—

(*a*) whether the private colleges affiliated to the Karnataka University have enhanced the tuition fees more than hundred rupees from the year 1972-73 ;

(*b*) whether there was agitation by the students against this enhanncement of tuition fees in private Colleges ;

(*c*) whether it is a fact that the Karnataka University has passed a resolution to maintain *status-quo* in fee structure in private colleges ;

---

† Indicates that the remarks or speechs have not been revised by the member

(*d*) if so, the number of private colleges which have reduced the tuition fees ;

(*e*) if not; the action the Government has taken against those colleges ;

(*f*) whether the Government would take over such private colleges which have not maintained the *stauts-quo* in tuition fees?

Sri A. R. BADARINARAYANA (Minister for Education).—

(*a*) There has been enhancement of tuition fees by the private colleges affiliated to the Karnataka University. But in no case has the enhancement been more than Rs. 100 from the fee rates of the previous year.

(*b*) Yes.

(*c*) Yes. But subsequently the implementation of the resolution was suspended by the Vice-Chancellor on receipt of a representation under Ordinance 65 read with Section 30, sub-section 6 of the Karnataka University Act, pending consideration of the fee issue by the Senate.

(*d*) No college has reduced tuition fee in view of the holding in abeyance the operation of the Syndicate Resolution as mentioned above.

(*e*) Does not arise in view of replies to clauses (*c*) and (*d*).

(*f*) Does not arise in view of replies to clauses (*c*) and (*d*).

ಶ್ರೀ ಕೆ. ಎಂ. ನಾಗಣ್ಣ.—ಈ ನಿರ್ಣಯ ಯಾವಾಗ ಆಯಿತು ? ಇದರ ಬಗ್ಗೆ ನನಗೆ ಅಂಕಿ ಅಂಶಗಳನ್ನು ಒದಗಿಸುತ್ತೀರಾ ?

† **Sri A. R. BADARINARAYANA.**—At its meeting held on 12th December 1972 another resolution was passed to reduce the fees.

ಶ್ರೀ ಕೆ. ಎಂ. ನಾಗಣ್ಣ.—ಮನವಿಗಳು ತಮಗೆ ಯಾವಾಗ ಬಂದವು? ಆರ್ಡಿನೆನ್ಸ್ ಏನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಅದು ನಮಗೆ ಬರಲಿಲ್ಲ. ಯೂನಿವರ್ಸಿಟಿಗೆ ಬಂತು. ಯೂನಿವರ್ಸಿಟಿಯವರು ಅದನ್ನು ಸಸ್‌ಪೆಂಡ್ ಮಾಡಿದರು.

ಶ್ರೀ ಕೆ. ಎಂ. ನಾಗಣ್ಣ.—ಯೂನಿವರ್ಸಿಟಿಯವರು ಅದನ್ನು ಯಾವಾಗ ಸಸ್‌ಪೆಂಡ್ ಮಾಡಿದರು !

ಶ್ರೀ ಎ.ಆರ್. ಬದರಿನಾರಾಯಣ.—ಶೇಕಡ 50ರಷ್ಟಕ್ಕಿಂತ ಸೆನೇಟ್‌ನಲ್ಲಿ ಒಂದು ನಿರ್ಣಯಕ್ಕೆ ಬೆಂಬಲ ದೊರಕಿದರೆ, ಆಗ ಇಂಥಾದ್ದನ್ನು ಸಸ್‌ಪೆಂಡ್ ಮಾಡುವುದಕ್ಕೆ ಅವರಿಗೆ ಅವಕಾಶ ಇದೆ. ರೂಲ್ಸ್ ಪ್ರಕಾರ ಅದನ್ನು ಸಸ್‌ಪೆಂಡ್ ಮಾಡಿದ್ದಾರೆ. ಅದು ಯಾವ ತಾರೀಖು ಎಂಬುದು ನನಗೆ ನೆನಪಿಲ್ಲ.

Students Strikes in the State

234 Sri S. KARIYAPPA (Kanakapura).—

Will the Minister for Education be pleased to state:—

(*a*) the names of places where students had gone on strike in the State during the past two years ;

(*b*) the reasons for such strikes ;

(*c*) the nature of steps taken by Government to call off such trikes ?

Sri A.R. BADARINARAYANA (Minister for Education).—

(*a*) List is appended.

(*b*) There are several reasons ranging from National events to local demands.

(*c*) Action appropriate to the situation has been taken.

Names of places where students had gone on strike during past two years.

1 Government Multipurpose High School, Ramanagar.
2 Schools in Hassan.
3 T.B.H.S. Bannur, Mysore District.
4 Government High School, Aland, Gulbarga District.
5 Multipurpose High school, Lakshmeswar, Dharwar District.
6 Government Higher Secondary School, Aland, Gulbraga District.
7 Agricultural High School, Lachyan, Indi Taluk.
8 Government Law College, Bangalore.
9 Government College, Chitradurga.
10 do Gulbarga.
11 Government Arts and Science College, Bangalore.
12 R.C. College of Commerce, Bangalore.
13 Government College, Tumkur.
14 do Kolar.
15 do for Boys, Mandya.
16 do Hassan.
17 Sri Mahadeswara College, Kollegal.
18 Government College, Chickmagalur.
19 Sahayadri College, Shimoga.
20 Government College, Sindhanur.
21 K.R.E. College, Surathkal, S.K.

22 Polytechnic, Hassan.
23 Malnad College of Engineering, Hassan.
24 S.J. Polytechnic, Bangalore.
25 Karnataka Polytechnic, Mangalore.
26 Polytechnic, Mysore.
27 do Kushalanagar.
28 do Hassan.
29 do Chintamani
30 do Tumkur.
31 do Gulbarga.
32 B.D.T. College of Engineering, Davanagere.

ಶ್ರೀ ಎಸ್. ಕರಿಯಪ್ಪ.—ಈ ಮುಷ್ಕರ ನಡೆಯುವುದಕ್ಕೆ ವಿದ್ಯಾರ್ಥಿಗಳಲ್ಲದೆ ಇನ್ನು ಯಾರ್ಯಾರು ಇದ್ದರು ? ಅವರೇನಾದರೂ ವಿದ್ಯಾರ್ಥಿಗಳಿಗೆ ಪ್ರೇರೇಪಿಸಿದರೇ ?

† ಶ್ರೀ ಎ. ಆರ್. ಬದರಿನಾರಾಯಣ.—ಆ ರೀತಿಯಾಗಿ ಪ್ರೇರೇಪಿಸುವುದಕ್ಕೆ ಕಾರಣಗಳು ಬೇಕಾದಷ್ಟು ಇವೆ. ಅವರ ಡಿಮ್ಯಾಂಡ್ಸ್ ಬಹಳವಾಗಿವೆ. ಪ್ರೇರೇಪಣೆ ಮಾಡಿರತಕ್ಕವರು ಯಾರ್ಯಾರು ಎಂಬುದನ್ನು ನಾನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಕರಿಯಪ್ಪ.—ತುಮಕೂರಿನಲ್ಲಿ ಮತ್ತು ಮೈಸೂರಿನಲ್ಲಿರತಕ್ಕ ಹೋಟಲುಗಳಲ್ಲಿ ತಿಂಡಿತೀರ್ಥಗಳ ಬೆಲೆ ಬಹಳವಾಗಿ ಹೆಚ್ಚಾಗಿರುವುದರಿಂದ ಈ ರೀತಿಯಾಗಿ ಮುಷ್ಕರವನ್ನು ಹೂಡಿದ್ದಾರೆಂದು ತಿಳಿದಿದೆ. ಇದು ನಿಜವೇ ? ಹಾಗಿಲ್ಲದಿದ್ದಲ್ಲಿ ಈ ಮುಷ್ಕರ ಹೇಗೆ ಕೊನೆಗೊಂಡಿತು ?

Sri A. R. BADARINARAYANA.—The following are the important reasons due to which strikes went on in various institutions :—

1) The Mysore-Maharashtra border issue ;
2) Demanding permission for students of the Engineering classes to appear for the Final examinations irrespective of their having passed III or IV examination or not ;
3) Communal disharmony ;
4) Action taken against malpractices in the examination hall ;
5) Demanding award of separate Degree in Electronics and Communication Engineering ;
6) To express sympathy with the cause of Bangla Desh liberation movement ;
7) To protest against the affairs of Bangalore University's administration.
8) To condemn Pakistan's aggression on Bangala Desh ;
9) Administration of a particular College ;
10) Insufficient number of teachers in the colleges ;

(SRI A. R. BADARINARAYANA)

11) Demanding exemption from payment of fees on account of drought situation in the districts of Raichur, Gulbarga, Bidar and Belgaum etc. ;

These are the reasons on account of which the students went on strike.

ಶ್ರೀ ಎಸ್. ಕರಿಯಪ್ಪ.—ಈ ಮುಷ್ಕರಕ್ಕೆ ಹೋಟಲುಗಳಲ್ಲಿ ತಿಂಡಿ, ಕಾಫಿ, ಚಾರ್ಜು ಜಾಸ್ತಿ ಇದೆಯೆಂಬುದೂ ಕೂಡ ಒಂದು ಕಾರಣವಲ್ಲವೇ ?

ಶ್ರೀ ಎ. ಆರ್. ಬದರಿನಾರಾಯಣ.—ನನಗೆ ಆ ಕಾರಣ ಇದೆಯೇ, ಇಲ್ಲವೇ ಎಂಬುದು ಗೊತ್ತಿಲ್ಲ. ಕಿವಿಗೆ ಬಿದ್ದಿರಬಹುದು. ಆದರೆ ನನಗೆ ಅದರ ಬಗ್ಗೆ ಅಧಿಕಾರಯುತವಾಗಿ ಇನ್ನೂ ಮಾಹಿತಿ ಬಂದಿಲ್ಲ.

SRI K. R SRINIVASULU NAIDU.—As you know the students are the flowers of the Nation and they are something like creepers, what action the Government has taken to focus their attention towards their studies ?

SRI A. R. BADARINARAYANA.—Every effort is made to divert intelligence, energy and various faculties of students towards nation building activities. Now under the Government of India scheme they are also sent for 21 days trip to the drought stricken areas ; they go and work there and see how best they could get themselves involved and participate in people's troubles, difficulties by mixing themselves with those people.

SRI D. B. KALMANKAR.—Has it come to the notice of the Government that mostly it is the teachers who are responsible for so many strikes and in most of the schools there are also groups and they also try to instigate students to go on strikes on flimsy grounds ?

SRI A. R. BADARINARAYANA.—We cannot come to such a decision. There are so many other reasons.

SRI DODDATHIMMAIAH.—Will the Government contemplate to form Parents Council attached to each College so that they are kept informed of the students conduct and behaviour and thereby bring about a sort of discipline ?

SRI A. R. BADARINARAYANA.—The parents also participate and part take in the Students Union celebrations. There is no Parents' Council as such. The suggestion of the hon. member is a good one.

ಶ್ರೀ ಎಸ್. ಕರಿಯಪ್ಪ.—ಈ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ತೆಗೆದುಕೊಂಡಿದ್ದರಿಂದ ಈ ಮುಷ್ಕರಗಳನ್ನು ನಿಲ್ಲಿಸುವುದಕ್ಕೇನಾದರೂ ಅನುಕೂಲವಾಗಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ವಿದ್ಯಾರ್ಥಿಗಳ ಮನಸ್ಸು ಬಹಳ ಸೂಕ್ಷ್ಮ. ಆದರೆ ವಿದ್ಯಾರ್ಥಿಗಳ ಯೂನಿಯನ್ ಇರತಕ್ಕದ್ದು ಬಹಳ ಅಗತ್ಯ. ಹಾಗೊಂದುವೇಳೆ ಅವರು ತಪ್ಪಿ ನಡೆದರೆ ಅವರನ್ನು ತಿದ್ದತಕ್ಕದ್ದು ಎಲ್ಲರ ಕರ್ತವ್ಯವಾಗಿದೆ.

Settlement of Contractors Bills in Tumkur District

227. **Sri T. TARE GOWDA** (Kallambella).—

Will the Minister for Revenue be pleased to state :—

(*a*) whether all the pending bills of the contractors who have executed the relief measure works entrusted by the "Relief Committees" in Tumkur District have been settled as per promises and assurances given by the Revenue Minister, Minister for Industries, Minister for Community Development and Social Welfare during their tours in Tumkur District ;

(*b*) whether the Government is aware that a number of works sanctioned by the Relief Committee in Tumkur District could not be executed due to telegraphic orders of the Chief Minister in November 1972 and as a result of which many relief works could not be brought to safer stages ;

(*c*) the action taken by Government to execute absolutely needed Minor Irrigation works and incomplete road works in Tumkur District at least this year ?

Sri N. HUTCHAMASTHY GOWDA (Minister for Revenue).—

(*a*) Decision has been taken to pay immediately twenty-five per cent of the pending bills and to pay the balance during the next year (1973-74).

(*b*) The works were ordered to be stopped in all the districts where the conditions had improved, as ceiling fixed by Government of India, for expenditure on relief works was exceeded.

(*c*) The action to be taken to bring the works to a safe stage is being examined.

ಶ್ರೀ ಟಿ. ತಾರೇಗೌಡ.—ಈ ಹಿಂದೆ ಮಾನ್ಯ ರೆವಿನ್ಯೂ ಮಂತ್ರಿಗಳೂ, ಕೈಗಾರಿಕಾ ಮಂತ್ರಿಗಳೂ ಮತ್ತು ಪಂಚಾಯಿತಿ ರಾಜ್ಯಗಳ ಸಚಿವರೂ ಕೂಡ ತುಮಕೂರು ಜಿಲ್ಲೆಗೆ ಭೇಟಿ ಇತ್ತಿದ್ದಾಗ ಅಲ್ಲ ಅಭಾವ ಪರಿಸ್ಥಿತಿಯನ್ನು ನೋಡಿ ಅಲ್ಲಿ ರಿಲೀಫ್ ಕಾಂಗಾರಿಗಳನ್ನು 1973 ನೇ ಮಾರ್ಚಿ ಅಖೈರುವರೆಗೂ ಕೈಗೊಳ್ಳಬಹುದೆಂದು ಅಲ್ಲಿನ ಜನತೆಗೆ ಭರವಸೆಯನ್ನು ಕೊಟ್ಟಿರಲಲ್ಲವೇ ?

†**ಶ್ರೀ ಎನ್. ಹುಚ್ಚಮಾಸ್ತಿಗೌಡ.**—ಆಗಿದ್ದ ಪರಿಸ್ಥಿತಿಗನುಗುಣವಾಗಿ ಹಾಗೆ ತಿಳಿಸಿದ್ದುಂಟು: ಆದರೆ ಇತ್ತೀಚೆಗೆ ಅಲ್ಲಿನ ಪರಿಸ್ಥಿತಿ ಉತ್ತಮಗೊಂಡಿದ್ದರಿಂದ ಅಭಿಪ್ರಾಯವನ್ನು ಆಯಾ ಸಂದರ್ಭಗಳಿಗೆ ಅನುಗುಣವಾಗಿ ಬದಲಾಯಿಸಲಾಗುತ್ತದೆ.

ಶ್ರೀ ಟಿ. ತಾರೇಗೌಡ.—ಅಲ್ಲಿ ಸರ್ಕಾರದವರು ಕೊಟ್ಟ ಭರವಸೆಯಮೇಲೆ ಕಂಟ್ರಾಕ್ಟರು ಶೇಕಡ 3-4 ರ ಪ್ರಕಾರ ಬಡ್ಡಿಕೊಟ್ಟು ಸಾಲ ತಂದು ಅಲ್ಲಿ ಕೆಲಸಗಳಮೇಲೆ ಹಾಕಿದ್ದಾರೆ. ಹಾಗೆ ಕೆಲಸಗಳು ಪೂರ್ತಿಯಾಗಿದ್ದರೂ ಹಣ ಪಾವತಿಯಾಗದೆ ಮುಲ್ಕ ನಿಂತಿರತಕ್ಕ ಹಣದ ಪ್ರಮಾಣವೆಷ್ಟೆಂಬಂದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾವು ಮೊಟ್ಟಮೊದಲನೆಯದಾಗಿ ಪ್ರತಿಯೊಂದು ಜಿಲ್ಲೆಗೂ ಹಣವನ್ನು ಒದಗಿಸತಕ್ಕ ಕಾಲದಲ್ಲಿ ಸರ್ಕಾರದವರು ಕೊಡತಕ್ಕ ಹಣದ ಎರಡರಷ್ಟು ಕೆಲಸವನ್ನು ನಡೆಸಬೇಕೆಂಬ ಒಂದು ಷರತ್ತನ್ನು ಹಾಕಲಾಗಿತ್ತು. ಆದರೆ ಅಲ್ಲ ಕೊಟ್ಟ ಹಣದ ನಾಲ್ಕರಷ್ಟು ಅಲ್ಲ ಕೆಲಸ ನಡೆದಿದೆ, ಆದರೆ ಅಲ್ಲಿ ಪೆಂಡಿಂಗ್ ನಿಂತಿರತಕ್ಕ ಹಣದಲ್ಲಿ ನಾಲ್ಕನೇ ಒಂದು ಭಾಗದಷ್ಟು ಹಣವನ್ನು ಆಗಲೆ ಪಾವತಿಮಾಡಲಾಗಿದೆ.

ಶ್ರೀ ಟಿ. ತಾರೇಗೌಡ.—ಕೆಲವು ಕಡೆ ಅರ್ದಮರ್ದ ಕೆಲಸವಾಗಿ ಹಾಗೇ ಉಳಿದಿರತಕ್ಕ ಕೆರೆಯ ಕೋಡಿ ತೂಬು ಇತ್ಯಾದಿ ಕೆಲಸಗಳನ್ನು ರೈತರ ಹಿತದೃಷ್ಟಿಯಿಂದ ಮುಂದುವರಿಸುತ್ತೀರಾ ತಾವು ಅಥವಾ ಆ ಕೆಲಸಗಳನ್ನು ಅಲ್ಲಿಗೇ ನಿಲ್ಲಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಪ್ರಶ್ನೆಗೆ (ಸಿ) ಭಾಗದ ಉತ್ತರವನ್ನು ನೋಡಿ.

ಶ್ರೀ ಹಂಪಿ ಶಿವಣ್ಣ.—ಪರಿಹಾರ ಕಾಮಗಾರಿ ಬಾಬಿನಲ್ಲಿ ಕೈಗೊಂಡ ಅನೇಕ ಕೆಲಸಗಳು ಹಾಗೇ ಅರ್ದಮರ್ದ ನಿಂತಿರುತ್ತವೆ. ಅಧಿಕಾರಿಗಳು ಹಣವಿಲ್ಲ ಎಂದು ಹೇಳುತ್ತಿದ್ದಾರೆ. ಹಾಗೆ ಅರಗೊರ್ತೆ ಆಗಿ ನಿಂತಿರುವ ಕೆಲಸಗಳನ್ನು ಪೂರ್ತಿಮಾಡುವುದು ಅಗತ್ಯವಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಲ್ಲಾ ಅರ್ದಮರ್ದ ಕೆಲಸಗಳೆಂದರೆ ಆಗುವುದಿಲ್ಲ. ಒಂದು ಕಡೆ ಯಾವುದೋ ಒಂದು ರಸ್ತೆ ಅರ್ದಮರ್ದ ಆಗಿದ್ದರೆ ಅದನ್ನ ಪೂರ್ತಿ ಮಾಡುವುದಕ್ಕೆ ಸಧ್ಯದಲ್ಲಿ ಅಂಥ ಅಗತ್ಯ ಕಾಣುವುದಿಲ್ಲ. ಹಣದ ಸೌಕರ್ಯಕ್ಕನುಸಾರವಾಗಿ ಅಲ್ಲಲ್ಲೇ ಯಾವ ಯಾವ ಕೆಲವು ಕೆಲಸಗಳನ್ನು ತಡೆದು ನಿಲ್ಲಿಸಬಹುದೋ ಅಂಥವುಗಳನ್ನು ನಿಲ್ಲಿಸಲೇ ಬೇಕಾಗುತ್ತದೆ.

Bus Service Between Chitradurga and Bangalore

319. **Sri C. R. MOHAMED SAIFUDDIN** (Chitradurga).—

Will the Minister for Labour be pleased to state :—

(*a*) the number of buses running between Chithradurga and Bangalore ;

(*b*) the number of them run as Express services and the number of them as Non-stop services ;

(*c*) whether Corporation intend to start Non-stop services from Chitradurga to Bangalore, if so, when ?

Sri AZEEZ SAIT Minister for Labour).—

(*a*) 21 buses,

(*b*) Express—16 buses
Non-stop–Nil

(*c*) As Chitradurga is at a distance of 202.6 Kms. from Bangalore, it will not be feasible to operate non-stop services for such a long distance. However a Fast Express Service from Chitradurga to Bangalore with stops at Hiriyur, Sira and Tumkur has been introduced from 11th March 1973.

ಶ್ರೀ ಸಿ. ಆರ್. ಮಹ್ಮದ್ ಸೈಪುದ್ದೀನ್.—ಚಿತ್ರದುರ್ಗದಿಂದ ಬೆಂಗಳೂರಿಗೆ ದಿನವೂ ಎಷ್ಟು ಬಸ್ಸುಗಳ ಹೊರಡುತ್ತವೆಂಬುದನ್ನು ಹೇಳುತ್ತೀರಾ ?

ಶ್ರೀ ಅಜೀಜ್ ಸೇಟ್.—ಬೆಂಗಳೂರಿಗೆ ನೇರವಾಗಿ ಚಿತ್ರದುರ್ಗದಿಂದ 5 ಬಸ್ಸುಗಳು ಬರುತ್ತವೆ ಅವುಗಳಲ್ಲದೆ—ಹುಬ್ಬಳ್ಳಿ, ಹರಿಹರ, ಬಾಗಲಕೋಟೆ, ಪಂಜಿಂ, ಬಿಜಾಪುರ ಮತ್ತು ಗುಲ್ಬರ್ಗಾಗಳಿಂದ ಹೊರಡತಕ್ಕ ಬಸ್‌ಗಳೂ ಕೂಡ ಚಿತ್ರದುರ್ಗದ ಮೇಲೆ ಬರುತ್ತವೆ.

ಶ್ರೀ ಸಿ. ಆರ್. ಮಹ್ಮದ್ ಸೈಪುದ್ದೀನ್.—ಅಲ್ಲಿ ನೇರವಾಗಿ ಹೊರಡುವುದು 5 ಬಸ್‌ಗಳೆಂದು ತಿಳಿಸೋಣವಾಯಿತು. ಅವು ಸಾಲದು. ಆದುದರಿಂದ ಇನ್ನೈದು ಬಸ್‌ಗಳನ್ನು ಅಲ್ಲಿಂದ ಬಿಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೋ ?

ಶ್ರೀ ಅಜೀಜ್ ಸೇಟ್.—ಈ ತಿಂಗಳ 11 ನೇ ತಾರೀಖಿನಲ್ಲಿ ಒಂದು ಬಸ್ಸನ್ನು ಅಲ್ಲಿಂದ ಹೊಸದಾಗಿ ಬಿಟ್ಟಿದೆ. ಅದೂ ಸೇರಿ 5 ಬಸ್‌ಗಳೆಂದು ಆಗಲೇ ತಿಳಿಸಿದ್ದೇನೆ. ಅದೂ ಸಾಲದು ಅಂದರೆ ಅಲ್ಲಿಗೆ ಇನ್ನೂ ಹೆಚ್ಚಿನ ಬಸ್‌ಗಳನ್ನು ಹಾಕುವುದಕ್ಕೆ ಆಲೋಚನೆ ಮಾಡೋಣ.

ಶ್ರೀ ಸಿ. ಆರ್. ಮಹ್ಮದ್ ಸೈಫುದ್ದೀನ್.—ಅದರ ಬಗ್ಗೆ ಸರ್ವೇ ಏನಾದರೂ ಮಾಡಿಸುತ್ತೀರಾ !

ಶ್ರೀ ಅಜೀಜ್ ಸೇಟ್.—ಸರ್ವೆ ಅನಗತ್ಯ. ಚಳ್ಳಕೆರೆ ಮೂಲಕ ಬರುವಂತೆ ಒಂದು ಬಸ್‌ನ್ನು ಹೊಸದಾಗಿ ಹಾಕಿದ್ದೇವೆ.

Land Holdings in the State

384. **Sri KAGODU THIMMAPPA** (Sagar).—

Will the Minister for Revenue be pleased to state :—

(*a*) the number of land holdings in the State at present ;

(*b*) the number of land holdings of the following categories in each district and their extent :—

1. the number of land holdings up to 5 acres and their extent ;
2. the number of land holdings from 5 to 10 acres and their extent ;
3. the number of land holdings from 10 to 20 acres and their extent ;
4. the number of land holdings from 20 to 50 acres and their extent ;
5. the number of land holdings from 50 to to 70 acres and their extent ;
6. the number of land holdings from 70 to 100 acres and their extent ;
7. the uumber of land holdings from 100 to 200 acres and their extent ;
8. the number of land holdings from 200 to 300 acres and their extent ;
9. the number of land holdings from 300 to 500 acres and their extent ;
10. the number of land holdings over and above 500 acres ?

Sri N. HUTCHAMASTHY GOWDA (Minister for Revenue).—

(*a*) 35, 18, 809.

(*b*) The required acrewise figures are not available at present. The hectarwar figures which generally tally with acrewise classification are furnished in the statement placed on the Table of the House.*

---

*Copy placed in the Mysore Legislature Library *Vide* No; 18 dated 21-3-1973.

(SRI N. HUTCHAMASTHY GOWDA)

This information relates to the year 1955-56, Although such information is gathered later on it requires time for preparing the table.

ಶ್ರೀ ಕಾಗೋಡು ತಿಮ್ಮಪ್ಪ.—1955 ರಿಂದ ಹಿಂದೆ ಎಷ್ಟು ಹಿಡುವಳಿಗಳಿದ್ದವು, ಇತ್ತೀಚೆಗೆ ಎಷ್ಟು ಹಿಡುವಳಿಗಳು ಹೆಚ್ಚಿದವು ಎಂಬದನ್ನು ಹೇಳುವುದಕ್ಕಾಗುತ್ತದೆಯೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—1955ಕ್ಕೆ ಹಿಂದೆ 24 ಲಕ್ಷದ 66 ಸಾವಿರದ 817 ಹಿಡುವಳಿಗಳಿದ್ದವು ಎಂದು ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮಲ್ಲಿ ಭೂಸುಧಾರಣೆ ಕಾನೂನು 1965 ರಲ್ಲಿ ಜಾರಿಗೆ ಬಂದಿತು. ಅದು ಜಾರಿಗೆ ಬರುವುದಕ್ಕೆ ಮುಂಚೆ ಎಷ್ಟು ಹಿಡುವಳಿಗಳಿದ್ದವು ಮತ್ತು ಇತ್ತೀಚೆಗೆ ಎಷ್ಟು ಹಿಡುವಳಿಗಳು ಜಾಸ್ತಿಯಾಗಿವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ನಮ್ಮಲ್ಲಿ 1961 ರಲ್ಲಿ ಒಂದಾವರ್ತಿ ಮತ್ತು 1965 ರಲ್ಲಿ ಒಂದಾವರ್ತಿ, ಹೀಗೆ ವಿಷಯನ್ನು ಎರಡಾವರ್ತಿ ಸಂಗ್ರಹಣೆ ಮಾಡಿದ್ದಾರೆ. ಆದರೆ ತಾವು ಕೇಳಿರತಕ್ಕ ವಿಸ್ತೀರ್ಣಕ್ಕೆ ತಕ್ಕಂತೆ ಅದನ್ನು ತೋರಿಸಲು ಕೋಷ್ಟಕವನ್ನು ತಯಾರು ಮಾಡುತ್ತಿದ್ದಾರೆ. ಅದು ಪೂರ್ಣವಾದರೆ ತಾವು ಕೇಳತಕ್ಕ ವಿವರಗಳನ್ನು ಕೊಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದವರಲ್ಲಿ ಈ ಅಂಕಿ ಅಂಶಗಳನ್ನು ಇಟ್ಟುಕೊಳ್ಳದೆ ಇರುವುದು ತಮ್ಮ ವಿಫಲತೆಯನ್ನು ಸೂಚಿಸುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಗಲೇ ನಾನು ಹೇಳಿದೆ ಎರಡಾವರ್ತಿ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡಿದ್ದಾರೆ. ಆದರೆ ಅದರ ಕೋಷ್ಟಕವಿನ್ನೂ ತಯಾರಾಗಿಲ್ಲ ಎಂದು. ಆ ವರದಿ ತಯಾರಾದ ಮೇಲೆ ಅಂಕಿ ಅಂಶಗಳು ಸಮಗ್ರವಾಗಿ ಹೊಂದಾವಣಿಕೆ ಮಾಡಿದ ನಂತರ ಅವುಗಳನ್ನು ಜಾರಿಗೆ ಕೊಡತಕ್ಕ ಕಾಲದಲ್ಲಿ ಯಾರಿಗೂ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಲಾಗುವುದೆಂದು ತಿಳಿಸುವುದಕ್ಕೆ ಇಚ್ಚೆಪಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಇಂದು ಭೂಸುಧಾರಣಾ ಕಾನೂನು ತಂದಿದ್ದೀರಿ. ಆದರೆ ಅಂಕಿ ಅಂಶ ಇಲ್ಲದೆ ತಂದಿರುವುದರಿಂದ ಇವರಲ್ಲಿ ಆಸಕ್ತಿ ಇಲ್ಲ. ಹೊಸ ಸರಕಾರ ಅಧಿಕಾರಕ್ಕೆ ಬಂದು ಒಂದು ವರ್ಷವಾಯ್ತು ಪ್ರಯತ್ನ ಮಾಡಿದ್ದರೆ ಅಂಕಿಅಂಶ ದೊರೆಯುತ್ತಿತ್ತು. ಈ ಎರಡು ಕಾರಣದಿಂದ ಸರಕಾರಕ್ಕೆ ಆಸಕ್ತಿಯಿಲ್ಲ, ಸರಿಯಾದ ರೀತಿಯಲ್ಲಿ ಕಾನೂನನ್ನು ಜಾರಿಗೆ ತರಲು ನಿಷ್ಠೆಯಿಲ್ಲ ಎಂಬುದು ಇದರಿಂದ ಗೊತ್ತಾಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಸರಕಾರ ಅಸ್ತಿತ್ವಕ್ಕೆ ಬಂದಮೇಲೆ ಬೇಕಾದ ಅಂಕಿ ಅಂಶ ಶೇಖರಿಸಲು ಪ್ರಯತ್ನಮಾಡುತ್ತಿದೆ. ಇದಕ್ಕೆ ಹಿಂದೆ ಯಾವ ಕಾರಣಕ್ಕಾಗಿ ಪೂರ್ಣವಾದ ಅಂಕಿಅಂಶ ಶೇಖರಿಸಿಲ್ಲ ಎಂಬುದು ನಮಗೆ ತಿಳಿಯದು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈಗ ಭೂಸುಧಾರಣೆ ಶಾಸನವನ್ನು ಜಾರಿಗೆತಂದರೆ ಎಷ್ಟುಮಟ್ಟಿಗೆ ಭೂಮಿಯ ಕೊರತೆಯನ್ನು ನೀಗಲು ಸಾಧ್ಯ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶಾಸನ ಜಾರಿಗೆ ಬರುವವರೆಗೂ ಅದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ, ಲೆಕ್ಕ ಹಾಕುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಹಿಡುವಳಿಗಳು ಹೆಚ್ಚಾಗಿವೆ. 50 ಎಕರೆ ಒಳಗಿರುವ ಹಿಡುವಳಿಗಳು ಹೆಚ್ಚಾಗಿವೆಯೇ ಅಥವಾ ಅದಕಿಂತ ಹೆಚ್ಚಾಗಿರುವ ಹಿಡುವಳಿಗಳು ಜಾಸ್ತಿ ಇವೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ರೀತಿ ಸೂಕ್ಷ್ಮ ಪರಿಶೀಲನೆ ಮಾಡಿಲ್ಲ.

Shortage of Accomodation in First Grade College, Hassan

446. **Sri M. NANJE GOWDA** (Gandasi).—

Will the Minister for Education be pleased to state :—

(*a*) wheather it has come to the notice of the Government that there is shortage of accommodation for the students of First Grade College at Hassan ;

(*b*) if so, the action taken to increase the accommodation ?

Sri A. R. BADARINARAYANA (Minister for Education).—

(*a*) Yes.

(*b*) The sanction has already been accorded in respect of plans and estimates amounting to Rs. 1,86,000 for extension of College building at present.

ಶ್ರೀ ಎಂ. ನಂಜೇಗೌಡ.--ಈ ವರ್ಷ ಈ ಕೆಲಸ ಪೂರ್ಣಮಾಡುವಿರಾ ?

† ಶ್ರೀ ಎ. ಆರ್. ಬದರಿನಾರಾಯಣ.- ಈಗ ಚೀಫ್ ಎಂಜಿನಿಯರಿಂದ 186000 ರೂಪಾಯಿಗಳ ಅಂದಾಜು ಮಂಜೂರಾಗಿದೆ. ಬಜೆಟ್ಟಿನಲ್ಲಿ ರೀಅಪ್ರೋಪ್ರಿಯೇಷನ್ನಿಂದ ಮಾಡಬೇಕೆಂದು ಚೀಫ್ ಎಂಜಿನಿಯರು ಬರೆದಿದ್ದಾರೆ, ಸರಕಾರ ತಕ್ಷಣ ಈ ಕೆಲಸ ಪ್ರಾರಂಭಿಸುವುದು.

ಶ್ರೀ ಎಂ. ನಂಜೇಗೌಡ.— ಜಿಲ್ಲೆಯ ಮುಖ್ಯ ಸ್ಥಳ ಮತ್ತು ತಾಲ್ಲೂಕು ಕೇಂದ್ರವಾಗಿರುವ ಹಾಸನದಲ್ಲಿ ಸ್ಥಳಾವಕಾಶದ ಪ್ರಶ್ನೆ ದೊಡ್ಡದಾಗಿರುವುದರಿಂದ ಆ ಊರಿನಲ್ಲಿರುವ ಸರಕಾರಿ ಮತ್ತು ಮುನಿಸಿಪಾಲಿಟಿಯ ಹೈಸ್ಕೂಲುಗಳಲ್ಲಿ ಜೂನಿಯರ್ ಕಾಲೇಜನ್ನು ಸ್ಥಾಪಿಸಲು ವ್ಯವಸ್ಥೆಮಾಡುವಿರಾ?

ಶ್ರೀ ಎ. ಆರ್. ಬದರಿನಾರಾಯಣ.—ಈ ಪ್ರಶ್ನೆಗೆ ಅದು ಸಂಬಂಧಪಟ್ಟಿಲ್ಲ.

ಶ್ರೀ ಎಂ. ನಂಜೇಗೌಡ.—ಜೂನಿಯರ್ ಕಾಲೇಜನ್ನು ಅಲ್ಲಿ ಸ್ಥಾಪಿಸುವುದರಿಂದ ಸ್ಥಳಾವಕಾಶ ಹೆಚ್ಚಾಗಿ ಒತ್ತಡ ಕಡಮೆಯಾಗುವುದರಿಂದ ಈ ವಿಷಯವನ್ನು ಯೋಚನೆಮಾಡುವಿರಾ ?

ಶ್ರೀ ಎ. ಆರ್. ಬದರಿನಾರಾಯಣ.—ಜೂನಿಯರ್ ಕಾಲೇಜಿನ ಪ್ರಶ್ನೆ ನಿಧಾನವಾಗಿ ತೀರ್ಮಾನವಾಗುವುದು.

Gomal Land for Afforestation in Hosanagar Taluk

516. **Sri M. SHEERANALY CHANDRASEKHAR** (Hosanagar).—

Will the Minister for Revenue be pleased to state :—

(*a*) whether more than one lakh acres of Gomal land in Hosanagar taluk is proposed for afforestation ;

(*b*) whether it has come to the notice of Government that there is not much land available in Hosanagar Taluk for distribution among the landless Agriculturists ;

(*c*) whether there is any proposal to withdraw those lands proposed to be transferred to Forest Department for afforestation with a view to distribute the same among landless agriculturists ?

Sri N. HUTCHAMASTHY GOWDA (Minister for Revenue).—

(*a*) Yes ; but the area actually handed over to Forest Department is 94,413-00 Acres.

(*b*) No.

(*c*) Yes.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—(ಅ) ಪ್ರಶ್ನೆಗೆ ಗಮನಕ್ಕೆ ಬಂದಿಲ್ಲ ಎಂದು ಉತ್ತರ ಕೊಡಲಾಗಿದೆ. ನಾನು ಹಿಂದೆ ಒಂದು ಪತ್ರ ಬರೆದೆ ಲ್ಯಾಂಡ್ ಗ್ರಾಂಟ್ ಕಮಿಟಿ ಮಾಡಿ ಕೆಲವು ದಿವಸಗಳಲ್ಲಿ 4-5 ಸಾವಿರ ಅರ್ಜಿ ಬಂದರೂ 8-10 ಎಕರೆ ಕೂಡ ಇನ್ನೂ ಕೊಟ್ಟಿಲ್ಲ. (ಇ) ಪ್ರಶ್ನೆಗೆ ಇದೆ ಎಂದು ಉತ್ತರವಿದೆ, ಅರಣ್ಯದ ಇಲಾಖೆಗೆ ವರ್ಗಾಯಿಸಲು ಪ್ರಪೋಸ್ ಮಾಡಿರುವ ಜಮೀನಿನ ಬಗ್ಗೆ ಯಾವಾಗ ಆರ್ಡರು ಮಾಡುವಿರಿ ?

† **ಶ್ರೀ ಎನ್. ಹುಚ್ಚಮಾಸ್ತಿಗೌಡ.**—ಹಿಂದೆ ಒಂದು ಜಿ. ಒ. ಆಗಿ ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಈ 4 ಜಿಲ್ಲೆಗಳಿಂದ ರೆವೆನ್ಯೂ ಇಲಾಖೆಯಿಂದ ಅರಣ್ಯ ಇಲಾಖೆಗೆ ಎಷ್ಟು ಜಮೀನನ್ನು ವರ್ಗಾಯಿಸಬೇಕು, ಅರಣ್ಯ ಇಲಾಖೆಯಿಂದ ರೆವೆನ್ಯೂ ಇಲಾಖೆಗೆ ಎಷ್ಟು ಎಷ್ಟು ತೆಗೆದುಕೊಳ್ಳಬೇಕು ಎಂದು ಅದರಲ್ಲಿ ತಿಳಿಸಿದೆ. ಆ ಪ್ರಕಾರ 194599 ಎಕರೆ ಅರಣ್ಯ ಇಲಾಖೆಗೆ ಕೊಡಬೇಕೆಂದು ತೀರ್ಮಾನವಾಗಿದೆ. ಅದಾದಮೇಲೆ ಒಟ್ಟು ಲೆಕ್ಕಾಚಾರ ನೋಡಿದ ಮೇಲೆ 162340 ಎಕರೆ 21 ಗುಂಟೆ ಅರಣ್ಯ ಇಲಾಖೆಗೆ ಕೊಡಬೇಕೆಂದು ತೀರ್ಮಾನವಾಗಿದೆ. ಅದರ ಪ್ರಕಾರ 84413 ಎಕರೆ 10 ಗುಂಟೆ ಅರಣ್ಯ ಇಲಾಖೆಗೆ ಕೊಟ್ಟಿದ್ದಾರೆ. ಉಳಿದ 67930 ಎಕರೆ 11 ಗುಂಟೆ ಇನ್ನೂ ವಶಕ್ಕೆ ಕೊಟ್ಟಿಲ್ಲ. ಅದನ್ನು ಕೊಡಬಾರದು, ರೆವೆನ್ಯೂ ಇಲಾಖೆಯಲ್ಲೇ ಅದನ್ನಿಟ್ಟು ಜಮೀನಿಲ್ಲದಿರುವವರಿಗೆ ಹಂಚಬೇಕು ಎಂದು ತೀರ್ಮಾನವಾಗಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅರಣ್ಯ ಇಲಾಖೆಗೆ ಕೊಟ್ಟಿರುವುದೇನಿದೆ ಅದು ಸಾಗುವಳಿಗೆ ಯೋಗ್ಯವಾದ ನೀರಾವರಿ ಜಮೀನು, ರೆವೆನ್ಯೂ ಇಲಾಖೆಯಲ್ಲಿರುವುದು ಸಾಗುವಳಿಗೆ ಯೋಗ್ಯವಾಗಿಲ್ಲ. ಆದುದರಿಂದ ಅದನ್ನು ಬದಲುಮಾಡಲು ಯೋಚನೆಮಾಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅರಣ್ಯ ಇಲಾಖೆಗೆ ಈಗ ವಹಿಸಿರುವ ಜಮೀನಿನಲ್ಲಿ ಸುಮಾರು 13,179 ಎಕರೆ ವ್ಯವಸಾಯಕ್ಕೆ ಅರ್ಹವಾಗಿದೆ ಎಂದು ಅಂಕಿಅಂಶವಿದೆ. ಈಗ ಇಟ್ಟುಕೊಂಡಿರುವ ಜಮೀನಿನಲ್ಲಿ 13,136 ಎಕರೆ 6 ಗುಂಟೆ ಮಾತ್ರ ವ್ಯವಸಾಯಕ್ಕೆ ಯೋಗ್ಯವಾಗಿದೆ ಎಂಬ ಲೆಕ್ಕವಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ರೆವೆನ್ಯೂ ಮತ್ತು ಅರಣ್ಯ ಇಲಾಖೆಗಳಿಗೆ ವರ್ಗಾಯಿಸುವಾಗ ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿ ಮಾಡಿ ಅದರ ಅಭಿಪ್ರಾಯ ತೆಗೆದುಕೊಳ್ಳುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಎಲ್ಲಾ ಜಿಲ್ಲೆಗಳಲ್ಲೂ ಅರಣ್ಯ ಇಲಾಖೆಗೆ ವಹಿಸಿರುವ ಜಮೀನನ್ನು ರೆವೆನ್ಯೂ ಇಲಾಖೆಗೆ ಕೊಟ್ಟು ಜಮೀನಿಲ್ಲದಿರುವವರಿಗೆ ಕೊಡಬೇಕೆಂದು ತೀರ್ಮಾನವಾಗಿದೆ. ಈಗ ಸಮಿತಿ ರಚಿಸುವ ಅವಶ್ಯಕತೆ ಕಾಣುವುದಿಲ್ಲ.

ಶ್ರೀ ಕೆ. ಯಂಕಟಪ್ಪ.—ಈಗಿರುವ ಜಮೀನನ್ನು ರೆವೆನ್ಯೂ ಇಲಾಖೆಗೆ ವಹಿಸುವುದು ಸಂತೋಷದ ವಿಚಾರ. ಆದರೆ ಈಗಿರುವ ಜಮೀನಿನಲ್ಲಿ ಅಲ್ಪಸ್ವಲ್ಪ ಉಪಯೋಗವಾಗದಿರುವುದಿದೆ. ಇಂಥ ಜಮೀನನ್ನು ಅರಣ್ಯ ಇಲಾಖೆಗೆ ಕೊಟ್ಟು ಹಿಂದೆ ಕೊಟ್ಟಿರುವ ಒಳ್ಳೆಯ ಜಮೀನನ್ನು ತೆಗೆದುಕೊಂಡು ಹಂಚುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಯೋಚನೆ ಇದೆ. ಕಾಡು ಅಭಿವೃದ್ಧಿ ಮಾಡಲು ಸಾಧ್ಯವಿರುವ ಜಮೀನನ್ನು ಅರಣ್ಯ ಇಲಾಖೆಗೆ ಕೊಟ್ಟು ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ಬದಲಗೆ ತೆಗೆದುಕೊಳ್ಳುವುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಈಗ 94,413 ಎಕರೆಯನ್ನು ಅರಣ್ಯ ಇಲಾಖೆಗೆ ವಹಿಸಿಕೊಟ್ಟು ಬಿಟ್ಟು ಇನ್ನು 60 ಸಾವಿರ ಎಕರೆಯಷ್ಟು ಜಮೀನು ಅಲ್ಲದೆ. ಅದು ಗೋಮಾಳವೇ? ಅದು ಅವೇಲಬಲ್ ಲಿಸ್ಟ್‌ನಲ್ಲಿದೆಯೇ ? ಇದು ಎಷ್ಟರಮಟ್ಟಿಗೆ ಉಳುಮೆಗೆ ಅರ್ಹವಾಗಿದೆಯೆಂದು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ 67,930 ಎಕರೆ ಪೈಕಿ 13 ಸಾವಿರ ಚಿಲ್ಲರೆ ಎಕರೆ ವ್ಯವಸಾಯಕ್ಕೆ ಅರ್ಹವಾಗಿದೆ ಎಂದು ಹೇಳಿದೆ. ಭೂಮಿಯಲ್ಲಿ ಅಸ್ಸ್ಡ್ ವೇಸ್ಟ್ ಇರುತ್ತದೆ, ನಾನ್

ಅಸೆಸ್ಡ್ ವೇಸ್ಟ್ ಸೇರಿದೆ. ಗೋಮಾಳ ಕೂಡ ಸೇರಿದೆ. ಇದು 67 ಸಾವಿರ ಎಕರೆ ಅಲ್ಲದೆ, 6099 ಎಕರೆ 20 ಗುಂಟೆ ಅವೇಲಬಲಿಟಿ ಲಸ್ಟ್‌ನಲ್ಲಿದೆ. ಈ 1600 ಎಕರೆಗೋಸ್ಕರ 803 ಅರ್ಜಿಗಳು ಬಂದಿವೆ. ಅದಕ್ಕೆ ಸಂಬಂಧಪಟ್ಟ 6099 ಎಕರೆ 20 ಗುಂಟೆ ಇದೆ. ಇದಕ್ಕೆ 3388 ಅರ್ಜಿಗಳು ಇವೆ. 67 ಸಾವಿರ ಎಕರೆ ಪೈಕಿ 14 ಸಾವಿರ 123 ಎಕರೆ ಬೇಕು ಎಂದು ಹೇಳಿ 3388 ಅರ್ಜಿಗಳು ಇವೆ. ಎಲ್ಲಾ ಅರ್ಜಿಗಳಿಗೂ ಕೊಡುವುದಕ್ಕೆ ಭೂಮಿ ಆ ತಾಲ್ಲೂಕಿನಲ್ಲಿ ಸಾಕಷ್ಟು ಇದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ರೆವಿನ್ಯೂ ಇಲಾಖೆಗೆ ವಹಿಸಿಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆಯೇ ಹೊರತು ಅದು ಕಾರ್ಯಗತವಾಗದೆ ಇರುವುದರಿಂದ ಎಷ್ಟು ದಿವಸದಲ್ಲಿ, ಭೂಮಿಯನ್ನು ರೆವಿನ್ಯೂ ಇಲಾಖೆಯವರಿಗೆ ವಹಿಸಿಕೊಡುತ್ತೀರಿ ? ದರಖಾಸ್ತು ಕಮಿಟಿಯವರು ಕೂತುಕೊಂಡು ಕೆಲಸ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೆವಿನ್ಯೂ ಇಲಾಖೆಯಲ್ಲಿ ಭೂಮಿ ಇದೆ, ಎಷ್ಟು ಭೂಮಿ ವ್ಯವಸಾಯಕ್ಕೆ ಅರ್ಹವಾಗಿದೆ ಎಂದು ಅರಿಸಿ ಭೂಮಿಯನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಏನು ಭೂಮಿಯನ್ನು ಅರಣ್ಯ ಇಲಾಖೆಗೆ ವಹಿಸಿಕೊಟ್ಟಿದ್ದೀರಿ ಅದರಲ್ಲಿ ಗೋಮಾಳಗಳು ಇಲ್ಲವೇ ಇಲ್ಲ. ಆಖೈರು ತೀರ್ಮಾನವನ್ನು ಸರ್ಕಾರ ಮಾಡಿಲ್ಲವೇ!

(ಉತ್ತರ ಇಲ್ಲ)

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಎಷ್ಟು ದಿವಸದೊಳಗೆ ಕೊಡುತ್ತೀರಿ ಎಂದು ಕೇಳಿದೆ. ಅಲ್ಲಿ ಕಮಿಟಿ ಕೆಲಸ ಮಾಡುತ್ತಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಮಿಟಿಯವರು ಕೊಡಬೇಕಾದದು 6099 ಎಕರೆ 20ಗುಂಟೆ ಭೂಮಿ ಇದೆ. ಅರ್ಜಿಗಳನ್ನು ವಿತರಣೆ ಮಾಡಲಿಕ್ಕೆ ಸಮಿತಿಯವರು ಬಹಳ ಬೇಗ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಇರುವ ಭೂಮಿಯನ್ನು ಹಂಚುವ ವ್ಯವಸ್ಥೆ ಮಾಡಬೇಕಾಗಿದೆ.

Bore Wells Scheme In Chikodi Taluk

527. **Sri P. P. HEGRE** (Chikodi).—

Will the Minister for Community Development and Social Welfare be pleased to state.—

(*a*) the names of villages and towns in Chikodi taluk which are included in Bore wells schemes ;

(*b*) of these, the number of villages where bore wells have been sunk and the names of the villages where they are sunk so far ;

(*c*) the number of them successful and the number of wells failed ;

(*d*) the time required to complete sinking of bore wells in the remaining villages ;

(*e*) whether Government has any proposals to take up more villages in Chikodi taluk under BoreWells Schemes ?

Sri M. MALLIKARJUNASWAMY (Minister for Community Development and Social Welfare).—

(*a*)—

1 *Kangadoli*
2 Kamatyanatti
3 Donawad
4 *Kabbur*
5 Chikodi road
6 Mirapurahatti

(SRI M. MALLIKARJUNASWAMY)

7	Jainapur	8	Bidralli
9	*Umarani*	10	Itnal
11	Belkud	12	Bambalwad
13	*Chikodi*	14	Galatga
15	*Sadalga*	16	*Boragaon*
17	*Siradwad*	18	*Janawad*
19	*Shamanewadi*	20	*Bedkihal*
21	*Wadagol*	22	*Bhainaikwadi*
23	*Nej*	24	*Benadi*
25	*Nipani*	26	Adi
27	Appachiwadi	28	*Donewadi*
29	Handyanatti	30	Kuppanati
31	Karoshi	32	Bhoj
33	Kothalli	34	Kurli

(*b*) 16 Villages. They are Serial Numbers 1, 4, 9. 13, 15 to 25 and 28 of the list given against question (*a*).

(*c*) Successful	...	23
Failed	...	15

(*d*) Four months.

(*e*) Yes.

ಶ್ರೀ ಪಿ. ಪಿ. ಹೆಗರೆ.—ಚಿಕ್ಕೋಡಿ ತಾಲ್ಲೂಕಿನಲ್ಲಿ 34 ಗ್ರಾಮಗಳನ್ನು ಬೋರ್‌ವೆಲ್ ಸ್ಕೀಂನಲ್ಲಿ ತೆಗೆದುಕೊಂಡಿದ್ದೇವೆ ಎಂದು ಹೇಳಿದಿರಿ, ಅದರ ಬಗ್ಗೆ 16 ಗ್ರಾಮಗಳಲ್ಲಿ ಮಾತ್ರ ಬೋರ್‌ವೆಲ್ ಆಗಿದೆ. ಇನ್ನು ಉಳಿದ 18 ಗ್ರಾಮಗಳಿಗೆ ಇನ್ನು ನಾಲ್ಕು ತಿಂಗಳು ಬೇಕಾಗುತ್ತದೆ ಎಂದು ಹೇಳುತ್ತೀರಿ, ಅಲ್ಲಿ ನೀರಿನ ಅತ್ಯಂತ ಕೊರತೆ ಇರುವುದರಿಂದ 4 ತಿಂಗಳೊಳಗೆ ಈ 18 ಗ್ರಾಮಗಳಿಗೂ ಆಗಬೇಕು. ಇವಲ್ಲದೆ 67 ಗ್ರಾಮಗಳು ಉಳಿಯುತ್ತವೆ, ಹಾಗಾದರೆ ಪೂರ್ಣವಾಗಿ ಎಲ್ಲಾ ಗ್ರಾಮಗಳಿಗೆ ನೀರನ್ನು ಒದಗಿಸಲಿಕ್ಕೆ ಎಷ್ಟು ಕಾಲಾವಕಾಶ ಬೇಕು ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸಾಧ್ಯವಾದಷ್ಟು ಬೇಗ ಎಲ್ಲಾ ಗ್ರಾಮಗಳಿಗೂ ನೀರನ್ನು ಒದಗಿಸುತ್ತೇವೆ.

ಶ್ರೀ ಪಿ. ಪಿ. ಹೆಗರೆ.—ನೀರಿನ ಬರಗಾಲ ಇದ್ದಲ್ಲಿ, ಕುಡಿಯಲಿಕ್ಕೆ ನೀರು ಎಲ್ಲಿಯೂ ಇಲ್ಲ. ಈ 18 ಗ್ರಾಮಗಳಿಗೆ ನೀರನ್ನು ಒದಗಿಸುವುದಕ್ಕೆ ನಾಲ್ಕು ತಿಂಗಳು ಬೇಕಾಗುತ್ತದೆ, ಎಂದು ಹೇಳುತ್ತೀರಿ, ಈ ವರ್ಷ ಜನ ಎಲ್ಲಿಂದ ನೀರು ತಂದು ಕುಡಿಯಬೇಕು ಎನ್ನುವ ಪ್ರಶ್ನೆ ಇದೆ. ಚಿಕ್ಕೋಡಿ ತಾಲ್ಲೂಕಿನಲ್ಲಿ 101 ಗ್ರಾಮಗಳು ಇವೆ, ಅವುಗಳಲ್ಲಿ 34 ಗ್ರಾಮಗಳಿಗೆ ನೀರನ್ನು ಕೊಡಬೇಕಾದರೆ, ನಾಲ್ಕು ತಿಂಗಳು ಬೇಕು, ಬಾಕಿ ಊರು ಜನಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಏನು ಮಾಡಬೇಕು. ಅಲ್ಲಿಗೆ ಸ್ಪೆಷಲ್ ರಿಗ್ ಮೆಷನ್ಸ್ ಕಳುಹಿಸಿಕೊಟ್ಟು ಎಲ್ಲಾ ಗ್ರಾಮಗಳಿಗೂ 3-4 ತಿಂಗಳಲ್ಲಿ ಬೋರ್‌ವೆಲ್ಸ್ ತೆಗೆಯುವಂತೆ ಆಲೋಚನೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ 34 ಹಳ್ಳಿಗಳು ಮಾತ್ರ ಬೋರ್‌ವೆಲ್ಸ್ ಸ್ಕೀಂಗೆ ಸೇರಿರತಕ್ಕದ್ದು. ಫಲಪ್ರದವಾಗಿರತಕ್ಕ ಬೋರ್‌ವೆಲ್‌ಗಳಿಂದ ಕೆಲವು ಹಳ್ಳಿಗಳಿಗೆ ಲಾರಿಗಳಲ್ಲಿ ನೀರನ್ನು ಒದಗಿಸತಕ್ಕ ಏರ್ಪಾಡು ಮಾಡಿದ್ದೇವೆ. ಯಾವ ಹಳ್ಳಿಗಳಲ್ಲಿ ನೀರು ಇಲ್ಲವೋ, ಅವೆಲ್ಲಕ್ಕೂ ಕೂಡ ನೀರನ್ನು ಒದಗಿಸುವುದಕ್ಕೆ ಸರ್ಕಾರ ತಕ್ಕ ಏರ್ಪಾಡನ್ನು ಮಾಡುತ್ತದೆ.

ಶ್ರೀ ಪಿ. ಪಿ. ಹೆಗರೆ.—ಚಿಕ್ಕೋಡಿ ಪರಿಸ್ಥಿತಿ ಕೆಟ್ಟಿದೆ, ಅಲ್ಲಿ ಜನರಿಗೆ ನೀರನ್ನು ಎಲ್ಲಿಂದ ತರಬೇಕು ಎನ್ನುವುದು ಸಮಸ್ಯೆ ಆಗಿದೆ. ಗಾಡಿಯಿಂದ ಮತ್ತು ಟ್ಯಾಂಕರ್ಸ್‌ನಿಂದ ತರುವುದು ಸಾಲುವುದಿಲ್ಲ, ಅವರಿಗೆ ನೀರನ್ನು ಎಲ್ಲಿಂದ ತರಬೇಕು ಎಂದು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಎಲ್ಲಿ ನೀರು ಸಿಕ್ಕುತ್ತದೆಯೋ ಅಲ್ಲಿಂದ ತೆಗೆದುಕೊಂಡು ಹೋಗಿ ನೀರನು ಒದಗಿಸುತ್ತೇವೆ.

Formation of Separate Baindur Taluk

557. **Sri A. G. KODGI** (Baindur).—

Will the Minister for Revenue be pleased to state.—

(*a*) whether it has come to the notice of the Government that Baindur constituency of South Kanara district is economically, socially and educationally most backward area in the State and that for administrative convenience it is necessary to form a separate taluk ;

(*b*) whether there is any demand before the Government for formation of separate Baindur taluk ; if so, since when ;

(*c*) the estimated recurring and non-recurring expenditure to be incurred for this purpose ;

(*d*) whether the Government would take a suitable and early decision to form a separate taluk with a view to develop this backward area ?

Sri N. HUTCHAMASTHY GOWDA (Minister for Revenue).—

(*a*) The proposals have been received for formation of separate Baindur Taluk.

(*b*) Yes, since 1966.

(*c*) As per the estimates prepared in 1963, the recurring expenditure is Rs.65,000. and non recurring expenditure is Rs. 2,00,000.

(*d*) The question of re-organisation of many Taluks in the State is under the consideration of the Government.

ಶ್ರೀ ಎ. ಜಿ. ಕೊಡಗಿ.—ಮೊದಲನೆಯ ಪ್ರಶ್ನೆಗೆ ನೇರವಾಗಿ, ಆದರಲ್ಲ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಪ್ರವೇಶವೆಂದು, ಆಡಳಿತ ದೃಷ್ಟಿಯಿಂದ ಪ್ರತ್ಯೇಕ ತಾಲ್ಲೂಕನ್ನು ಮಾಡಬೇಕೆಂಬ ಸಲಹೆಗಳು ಬಂದಿವೆ ಎಂದು ಹೇಳಿದ್ದೀರಿ. ನನ್ನ ಪ್ರಶ್ನೆಗೆ ಸರಿಯಾದ ಉತ್ತರ ದೊರಕಲಿಲ್ಲ. ಹಿಂದುಳಿದ ಪ್ರದೇಶ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೋ ಎಂದು ಕೇಳಿದ್ದೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದುಳಿದ ಪ್ರದೇಶವಲ್ಲ ಎಂದು ನೇರವಾಗಿ ಉತ್ತರ ಹೇಳುವುದಕ್ಕೆ ಬದಲಾಗಿ ಅಲ್ಲಿರತಕ್ಕ ಪರಿಸ್ಥಿತಿಯನ್ನು ಹೇಳಿ ಆ ಯೋಚನೆ ಇದೆಯೆಂದು ಹೇಳಿದ್ದೇನೆ ಅಷ್ಟೆ.

ಶ್ರೀ ಎ. ಜಿ. ಕೊಡಗಿ.—ತಾವು ಹಿಂದುಳಿದ ಪ್ರದೇಶವೆಂದು ಒಪ್ಪಿಕೊಂಡಿದ್ದೀರಿ ಎಂದು ನನ್ನ ಭಾವನೆ. ಹೀಗೆ ಇರುವಾಗ 1966 ರಿಂದ ಇದು ಪರಿಶೀಲನೆಯಲ್ಲಿದೆ, ಪ್ರತ್ಯೇಕ ತಾಲ್ಲೂಕನ್ನು ಮಾಡಬೇಕೆಂದು ಸಲಹೆಗಳು ಬಂದಿವೆ ಎಂದು ಹೇಳಿದ್ದೀರಿ. (ಇ) ಗೆ ಉತ್ತರ ನೋಡಿದರೆ ಕೇವಲ ಆವೃತ್ತ ವೆಚ್ಚ 65000 ರೂಪಾಯಿ ಅನಾವೃತ್ತ ವೆಚ್ಚ 2 ಲಕ್ಷ ರೂಪಾಯಿಗಳು ಎಂದು ಹೇಳಿದ್ದೀರಿ. ಆರ್ಥಿಕ ದೃಷ್ಟಿಯಿಂದ ನೋಡಿದಾಗ ಇದು ಸಣ್ಣ ಮೊತ್ತ. ಇದು ಆರ್ಥಿಕವಾಗಿ ಹಿಂದುಳಿದ ಪ್ರದೇಶವಿರುವಾಗ ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಂಡು, ಆಡಳಿತದ ಅನುಕೂಲಕ್ಕಾಗಿ ಬೇರೆ ತಾಲ್ಲೂಕನ್ನು ರಚನೆ ಮಾಡಲಿಕ್ಕೆ ಇಚ್ಛೆಪಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು 1966 ರಲ್ಲಿ ಬಂದಂಥ ಸಲಹೆ. ಆ ಪ್ರಕಾರವಾಗಿ ಖರ್ಚಾಗುತ್ತಾ ಇದ್ದುದು ಇಷ್ಟು, ಈಗ ಆಲೋಚನೆ ಮಾಡಿದರೆ ಒಂದಕ್ಕೆ ಎರಡರಷ್ಟು ಇನ್ನೂ ಹೆಚ್ಚು ಖರ್ಚಾಗಬಹುದು, ಕೂಡಲೆ ಕಾರ್ಯಗತ ಮಾಡದೆ ಇರುವುದಕ್ಕೆ ಇದು ಒಂದು ಕಾರಣ. ಇನ್ನೊಂದು ಕಾರಣ ಇದರಂತೆ ಅನೇಕ ತಾಲ್ಲೂಕುಗಳನ್ನು ಮತ್ತು ಜಿಲ್ಲೆಗಳನ್ನು ಕೂಡ ಪುನರ್ವಿಂಗಡಣೆ ಮಾಡತಕ್ಕ ಅವಕಾಶ ಇದೆ. ಆಗಿಂದಾಗ್ಗೆ ಇದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ. ಅದಕ್ಕೋಸ್ಕರ ಒಂದು ಆಯೋಗವನ್ನು ನೇಮಿಸಿ, ಇಡೀ ರಾಜ್ಯದ ಜಿಲ್ಲೆಗಳು ಮತ್ತು ತಾಲ್ಲೂಕುಗಳನ್ನು ಮತ್ತು ಫಿರ್ಕಾಗಳನ್ನು ಎಲ್ಲೆಲ್ಲಿ ಸೇರಿಸಬೇಕು ಎಂದು ಪೂರ್ಣವಾದ ವಿವರವನ್ನು ಸಂಗ್ರಹಿಸಿ ಆಮೇಲೆ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದು ಸರ್ಕಾರದ ಆಲೋಚನೆಯಲ್ಲಿದೆ.

ಕೆ. ಪ್ರಭಾಕರ್.—ಒಂದು ದೇಶದ ಭಾಗ ಅತಿ ಹಿಂದುಳಿದಿದೆ ಎಂದು ಯಾವ ಯಾವ ಆಧಾರದ ಮೇಲೆ ಸರ್ಕಾರ ತೀರ್ಮಾನ ಮಾಡುತ್ತದೆ !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವರೀತಿ ಹಿಂದುಳಿದಿದೆ ಎನ್ನುವುದು ಅವರ ಪ್ರಶ್ನೆಯಾಗಿದೆ. ಸಭೆಯ ಮುಂದಿರುವ ಪ್ರಶ್ನೆಗೂ, ಇದಕ್ಕೂ ಸಂಬಂಧವಿಲ್ಲ.

ಶ್ರೀ ಎ. ಜಿ. ಕೊಡಗಿ.—ರಾಜ್ಯದ ಇತರೆ ಕಡೆಗಳಲ್ಲಿ, ತಾಲ್ಲೂಕು ರಚನೆ ವಿಚಾರ ತಮ್ಮ ಮುಂದೆ ಪರಿಶೀಲನೆಯ ಹಂತದಲ್ಲಿದೆ. ಬೈಂದೂರು ಮತದಾರರ ಕ್ಷೇತ್ರ ಹಿಂದುಳಿದಿದೆ ಎಂದು ತಾವು ಒಪ್ಪಿಕೊಂಡಿದ್ದೀರಿ. ಆಡಳಿತದಿಂದ ಹಿತದೃಷ್ಟಿಯಿಂದ ಅಲ್ಲಿ ತೊಂದರೆಯಾಗಿದೆ ಎನ್ನುವ ದೃಷ್ಟಿಕೋನವನ್ನು ಮನಸ್ಸಿನಲ್ಲಿಟ್ಟುಕೊಂಡು ಯಾವಾಗ ಪರಿಶೀಲನೆ ಕೊನೆಗೊಳ್ಳಬಹುದು ? ಯಾವಾಗ ಅಂತಿಮ ತೀರ್ಮಾನ ಕೈಗೊಳ್ಳುತ್ತೀರಿ ಎಂದು ಸ್ಪಷ್ಟವಾದ ಉತ್ತರ ಹೇಳುವುದಕ್ಕೆ ಸಾಧ್ಯವೇ !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದುಳಿದ ಪ್ರದೇಶ ಎಂದು ನಾನು ಒಪ್ಪಿಕೊಂಡಿಲ್ಲ ತಾಲ್ಲೂಕುಗಳನ್ನು, ಜಿಲ್ಲೆಗಳನ್ನು ಪುನರ್ವಿಂಗಡಣೆ ಮಾಡಬೇಕಾದರೆ ಬೇಕಾದಂಥ ಅಂಕಿ ಅಂಶಗಳನ್ನು, ಜನಸಂಖ್ಯೆ, ವಿಸ್ತೀರ್ಣ ಮತ್ತು ಆಡಳಿತದ ಸುವ್ಯವಸ್ಥೆ ಇತ್ಯಾದಿ ಕೆಲವು ಅಂಶಗಳನು ತೆಗೆದುಕೊಂಡು ತೀರ್ಮಾನ ಮಾಡುತ್ತೇವೆ. ಅಲ್ಲೊಂದು ಇಲ್ಲೊಂದು ಮಾಡುವುದಕ್ಕೆ ಬದಲಾಗಿ ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳನ್ನು, ತಾಲ್ಲೂಕುಗಳನ್ನು ಪುನರ್ವ್ಯವಸ್ಥೆ ಮಾಡತಕ್ಕ ಆಯೋಗವನ್ನು ನೇಮಿಸಿ, ತೀರ್ಮಾನ ತೆಗೆದುಕೊಂಡ ಮೇಲೆ ಕಾರ್ಯಗತ ಮಾಡುವಾಗ ಯಾವ ಆಧಾರವಾಗಿ ಮಾಡಬೇಕು ಯಾವುದನ್ನು ನಿಧಾನವಾಗಿ ಮಾಡಬೇಕು, ಎಲ್ಲವನ್ನು ಒಟ್ಟಿಗೆ ಮಾಡುವುದಕ್ಕೆ ಸಾಧ್ಯವೇ ಎಂದು ಆಲೋಚನ ಮಾಡುವುದು ಇದೆ.

Political Pension for Freedom Fighters in Belgaum District

619. **Sri J. S. AMMANNAVAR** (Sadalga).—

Will the Minister of State for Home be pleased to state :—

(*a*) the number of applications received for the grant of political pension in each Taluk of the Belgaum District from the Freedom Fighters ;

(*b*) the number of applications sanctioned, rejected and pending in each taluk of Belgaum District ;

(*c*) the steps proposed to be taken to reduce the pendency ?

Sri R. D. KITTUR (Minister of State for Home).—

(*a*) and (*b*) *Vide* statement appended.

(*c*) Every effort is being made to dispose of the pending applications as quickly as possible.

STATEMENT

Sl. No.	Taluk	Number of applications			
		Received	Sanction	Rejected	Pending
1	Athani	59	38	3	18
2	Belgaum	471	289	49	133
3	Chikodi	227	127	21	79
4	Gokak	291	205	31	55
5	Hukeri	278	236	22	20
6	Khanapur	93	59	5	29
7	Parasgad	500	447	24	29
8	Raibag	30	13	3	14
9	Ramdurg	134	89	1	44
10	Sampgaon	414	326	19	69
		2497	1829	178	490

ಶ್ರೀ ಜೆ. ಎಸ್. ಅಮ್ಮಣ್ಣವರ್.—ಇದರೊಳಗೆ ಯಾರು ಸುಳ್ಳು ಮಾಹಿತಿಗಳನ್ನು ಕೊಟ್ಟು ಅರ್ಜಿ ಮಾಡಿಸಿ ಕೊಟ್ಟಿದ್ದಾರೆ ? ಇಂಥಾವು ಎಷ್ಟು ಅರ್ಜಿಗಳು ಇವೆ ? ಇದರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಡಿ. ಕಿತ್ತೂರ್.—ಸುಳ್ಳು ಅರ್ಜಿಗಳು ಬಂದಂಥವುಗಳನ್ನು ಮಂಜೂರು ಮಾಡುವುದಿಲ್ಲ, ತಿರಸ್ಕಾರ ಮಾಡುತ್ತೇವೆ. False applications will be rejected.

ಶ್ರೀ ಹಂಜಿ ಶಿವಣ್ಣ.—ಅರ್ಜಿಗಳನ್ನು ಹಾಕಿಕೊಂಡು ಅನೇಕ ವರ್ಷಗಳಿಂದ ಕೇಳುತ್ತಾ ಇರುವುದು ತಮಗೆ ತಿಳಿದಿರತಕ್ಕ ವಿಷಯ. ಕೆಲವು ಕೇಸುಗಳಲ್ಲಿ ಅರ್ಜಿಗಳನ್ನು ಹಾಕಿದ ತಾರೀಖಿಗೆ ಮಂಜೂರು ಮಾಡಿ ಕೊಟ್ಟಿದ್ದಾರೆ. ಇನ್ನು ಕೆಲವು ಕೇಸುಗಳಲ್ಲಿ ಈಗ ಮಂಜೂರು ಮಾಡಿ ಕೊಟ್ಟಿದ್ದಾರೆ. ಅದರಿಂದ ಈ ಪಾರ್ಟಿಗಳಿಗೆ ಅನ್ಯಾಯವಾಗುವುದಿಲ್ಲವೇ ?

Sri R. D. KITTUR.—There will be some delay in disposal of applications. There are some factors that cause delay in the disposal. They are : (1) Since records have been destroyed in most of the jails, jail certificates are not available. (2) Where jail certificates are produced, it is found that no information is available, to show that the imprisonment was on account of participation in the national movement. In such cases, certificates issued by a responsible person that imprisonment was in connection with the participation in the national movement has to be called for. (3) Where jail records are destroyed, and jail certifieates are not available, the applicant is required to furnish his affidavit of contemporary freedom fighters, regarding former imprisonment or detension. In such cases, it becomes necessary to verify the bonafides of contemporary freedom fighters and ask them to produce certificates from a responsible person regarding participation in the national movement and the period of imprisonment or detension. (4) In some cases they fail

(SRI R. D. KITTUR.)

to furnish the requisite documents and particulars, despite request to them to do so. Finally, in many cases, it becomes necessary to make further verification regarding the annual income of the applicants.

Sri V. N. PATIL.—As has been already expressed by the Hon. Minister regarding the difficulties in disposing the files, there arise two questions; one is *non-bonafide* applicants, who are furnishing false information and the second is really genuine applicants whose applications are pending for more than two or three years; they are made to suffer on account of economic hardship. There should be a penal clause for these non-genuine applications. For falsely reporting to the State, they must be dealt with severely. This is a human problem. Actually for a minor query nearly three to four times the files are transferred to Belgaum, Bidar and other places. The Deputy Commissioners, for making enquiry, take another six months and it takes more than a year for a minor verification. What measure does the Government contemplate to take to speedly dispose of these things ?

Sri R. D. KITTUR.—The hon. Member has made a suggestion and Government will make a note of it.

ಶ್ರೀ ಕೆ. ಯಂಕಟಪ್ಪ.—ರಾಜ್ಯಸರ್ಕಾರ ಕೊಡತಕ್ಕ ವೇತನವನ್ನು ಪಡೆಯಲು ಶಿಕ್ಷೆಯು ಅವಧಿ ಇರಬೇಕು ಎಂದು ಈಗ ಏನು ಸರ್ಕಾರ ಗೊತ್ತು ಮಾಡಿದೆ ಅದನ್ನು ಕಡಿಮೆ ಮಾಡಿ ಇನ್ನು ಕಡಿಮೆ ಅವಧಿಯಲ್ಲಿ ಜೈಲಿಗೆ ಹೋಗಿರುವವರಿಗೆ ವೇತನವನ್ನು ಕೊಡಿಸಲು ಸರ್ಕಾರ ವಿಚಾರ ಮಾಡುತ್ತದೆಯೇ?

Sri R. D. KITTUR.—This matter is under very active consideration of the Government.

Damage caused due to breached tanks in Mysore Taluk

630. **Sri K. PUTTASWAMY** (Chamundeswari).—

Will the Minister for Revenue be pleased to state :—

(*a*) the tanks in Mysore Taluk which breached in the year 1972 due to heavy rain ;

(*b*) the extent of wet, dry and garden lands damged and estimated loss on account of floods ;

(*c*) the estimated loss of standing crop ;

(*d*) whether any relief is given to those who suffered loss ;

(*e*) if so, the nature of relief provided ?

Sri N. HUTCHAMASTHY GOWDA (Minister for Revenue).—

(*a*)
1. Devagahalli Tank
2. Rayanakere Tank
3. Hosakere Tank
4. Doddagowdanakatte
5. Maidanahalli Tank
6. Yennehole

(*b*)—

	Extent	*Estimated Loss*
	A—G	Rs.
Wet	36-07	58,100
Dry	83-29	37,150
Garden	13-31	71,400
Total	133-27	1,66,650

(*c*) 131 acres Rs. 1,66,650

(*d*) Relief by way of cash grant has been sanctioned in 41 cases amounting to Rs, 16,650;

(*e*) *Vide* clause (*d*).

ಶ್ರೀ ಕೆ. ಪುಟ್ಟಸ್ವಾಮಿ.—(ಅ) ಪ್ರಶ್ನೆಗೆ ಉತ್ತರವಾಗಿ 1ಲಕ್ಷದ 66ಸಾವಿರದ 650ರೂಪಾಯಿ ಜಮೀನು ನಷ್ಟಕ್ಕಾಗಿ ಎಂದು ಹೇಳುತ್ತೀರಿ ಆದರ ಮುಂದಿನ ಪ್ರಶ್ನೆಗೂ ಕೂಡ ಏನು ಹೇಳಿದೆ ಯೆಂದರೆ ಪೈರು ಎಷ್ಟು ನಷ್ಟವಾಗಿದೆ ಅದಕ್ಕೂ 1ಲಕ್ಷದ 66 ಸಾವಿರದ 650 ರೂಪಾಯಿಗಳು ಎಂಥುನ್ನ ಹೇಳಿದ್ದೀರಿ. ಈ ಎರಡಕ್ಕೂ ಕೋಯಿನ್‌ಸೈಡ್ ಆಗಿರುವುದಕ್ಕೆ ವಿಶೇಷ ಏನಾದರೂ ಇದೆಯೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಷ್ಟ ಆಗಿರುವುದನ್ನು ಲೆಕ್ಕ ಹಾಕುವಾಗ ಸ್ವಲ್ಪ ಕನ್‌ಫ್ಯೂಷನ್ ಆಗಿದೆ. ಮತ್ತೆ ಬದಲಾವಣೆ ಮಾಡುವುದಕ್ಕೆ ಆಗಲಿಲ್ಲ. ಜಮೀನು ನಷ್ಟ, ಬೆಳೆ ನಷ್ಟ ಎರಡೂ ಒಟ್ಟಿಗೆ ಸೇರಿಸಿ ಹಾಕಿಬಿಟ್ಟಿದ್ದಾರೆ, ಅದು ಎಷ್ಟು ಎನ್ನುವುದನ್ನು ಪ್ರತ್ಯೇಕವಾಗಿ ತಿಳಿದು ಹೇಳಬೇಕಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಇದಕ್ಕೆ ಪರಿಹಾರ 16ಸಾವಿರದ 550 ರೂಪಾಯಿ ಮಂಜೂರು ಮಾಡಿದೆಯೆಂದು ಹೇಳುತ್ತೀರಿ ? ಯಾವಾಗ ಮಂಜೂರು ಮಾಡಿದಿರಿ : ಮಂಜೂರು ಮಾಡುವುದಕ್ಕೆ ಆಧಾರವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಷ್ಟು ನಷ್ಟಕ್ಕೆ ಎಷ್ಟು ಕೊಡಬೇಕೆನ್ನುವುದನ್ನು ನೋಡಿ ಅದರ ಆಧಾರದ ಮೇಲೆ ಗೌರ್ನಮೆಂಟ್ ಆರ್ಡರ್ ಇದೆ. 1000 ರೂಪಾಯಿ ನಷ್ಟವಾದರೆ ಎಷ್ಟು 5ನೂರು ರೂಪಾಯಿ ನಷ್ಟವಾದರೆ ಎಷ್ಟು: 200 ರೂಪಾಯಿ ಒಳಗೆ ನಷ್ಟವಾದರೆ ಆ ನಷ್ಟಕ್ಕೆ ಏನು ಕೊಡಬೇಕು ಎಂದು ಗೌರ್ನಮೆಂಟ್ ಆರ್ಡರ್ ಇದೆ. ಅದರ ಪ್ರಕಾರ ಆ ಆಧಾರದ ಮೇಲೆ ಕೊಡುವುದಕ್ಕೆ ಆರ್ಡರ್ ಮಾಡಿರುವುದು.

ಶ್ರೀ ಕೆ. ಪುಟ್ಟಸ್ವಾಮಿ.—ಯಾವಾಗ ಮಂಜೂರು ಮಾಡಿದಿರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮುಂಜೂರು ಆದದ್ದು ನಷ್ಟವಾದ ಒಂದೂವರೆ ತಿಂಗಳಲ್ಲಿ ಆಗಿದೆ. ನನ್ನ ಹತ್ತಿರ ತಾರೀಖು ಇಲ್ಲ. ನಷ್ಟ ಆದ ಸ್ವಲ್ಪ ದಿವಸದಲ್ಲಿ ಮುಂಜೂರು ಆಗಿದೆ. ಮುಂಜೂರು ಆದ ಮೇಲೆ ಒಟ್ಟಿಗೆ ಜಿಲ್ಲೆಗೆ ಕೊಡಲಾಗಿದೆ. ಆ ಹಣವನ್ನು ಚಿಕ್ಕಹೊಳೆ, ನಷ್ಟವಾದ ಸ್ಥಳದಲ್ಲಿ ಅಧಿಕಾರಿಗಳು ಅದನ್ನು ಉಪಯೋಗಿಸಿಕೊಂಡಿರುವುದು ಗೊತ್ತಾಗಿ ಆದಕ್ಕಾಗಿ ಕೂಡಲೇ ಕೊಡಬೇಕು ಎಂದು ಹೇಳಿದ್ದೇವೆ. 6 ತಿಂಗಳೊಳಗಾಗಿ ಹಣಕೊಡಲಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ವರ್ಷಗಳು ಸಹಿತ ಆದರೂ ಪರಿಹಾರ ದೊರೆಯದೆ ಹೋಗುವುದಕ್ಕೆ ಕಾರಣ ಏನು ? ಚಿಕ್ಕಹೊಳೆ ಪ್ರಕರಣ ಆದದ್ದು ಮೊನ್ನೆ ತಾನೇ ? ಚಿಕ್ಕಹೊಳೆ ಕಾರಣವಲ್ಲದೆ ಇನ್ನು ಏನಾದರೂ ಕಾರಣ ಇದೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್ನು ಯಾವುದೂ ಇಲ್ಲ. ಇತ್ತೀಚೆಗೆ ಇನ್ನೊಂದು ಸ್ವಲ್ಪ ಕಾರಣ ಇದೆ. ಕ್ಷಾಮ ಪ್ರದೇಶಗಳಿಗೆ ಅನುಕೂಲಗಳನ್ನು ಒದಗಿಸಿಕೊಡುವುದಕ್ಕೆ ಈ ಪ್ರದೇಶದಿಂದ ಇನ್ನೊಂದು ಪ್ರದೇಶದ ರೈತರಿಗೆ ಪ್ರೋತ್ಸಾಹ ಕೊಡತಕ್ಕ ಸಂದರ್ಭದಲ್ಲಿ ಕೇಂದ್ರದಿಂದ ಬಂದಿದ್ದ ಅಧ್ಯಯನ ತಂಡ ಗೊತ್ತು ಮಾಡಿರತಕ್ಕ ಹಣಕ್ಕೆ ಮೀರದಂತೆ ಕೊಡಬೇಕು ಎಂದು ಹೇಳಿದ್ದಾರೆ. ಅದರ ಮಿತಿಯೂ ಕೂಡ ಇದ್ದುದರಿಂದ ಸ್ವಲ್ಪ ನಿಧಾನವಾಯಿತು.

Distribution of sites to S.C./S.T. People in Tumkur District

776. **Sri B. BYRAPPAJI** (Turuvekere).—

Will the Minister for Revenue be pleased to state :—

(*a*) the number of villages in each of the taluks of Tumkur district which have been requesting from the last 5 years to acquire lands for building residential houses to Scheduled Castes and Scheduled Tribes people ;

(*b*) the extent of land acquired and the number of sites distributed so far ;

(*c*) whether there is any time limit for disiribution of sites to the remaining applicants ?

Sri N. HUTCHAMASTHY GOWDA (Minister for Revenue).—

(*a*) 88 villages. The details are furnished in the statement appended.

(*b*) (i) The extent of land Acquired : 62 Acres, 31½ Guntas.

(ii) The number of sites distributed : 1207.

(*c*) No.

STATEMENT

Sl. No.	Name of Taluk	*Vide* reply to clause (*a*) of the Question		*Vide* reply to clause (*b*) of the Question.		
				Acres	Guntas	Sites
1	Tumkur	10	Villages	12	22	178
2	Gubbi	13	do	14	10	248
3	Kunigal	23	do	13	14½	299
4	Tiptur	9	do	10	...	145
5	Turuvekere	10	do	3	09	62
6	Chikkanayakanahalli	5	do	2	18	55
7	Madhugiri	5	do	...	...	...
8	Koratagere	3	do	2	02	70
9	Sira	8	do	3	11	120
10	Pavagada	2	do	1	25	60
	Total ...	88	do	62	31½	1237 Sites

ಶ್ರೀ ಬಿ. ಬೈರಪ್ಪಾಜಿ.—88 ಹಳ್ಳಿಗಳಲ್ಲಿ ಎಷ್ಟು ಎಕರೆ ಜಮೀನನ್ನು ಅಕ್ವೈರ್ ಮಾಡಿದ್ದೀರಿ; ಹಂಜನ ಗಿರಿಜನರಿಗೆ ಎಷ್ಟು ಸೈಟುಗಳನ್ನು ಹಂಚಿದ್ದೀರಿ ; ಇನ್ನೂ ಹಂಚುವ ಸಂದರ್ಭ ಇದೆಯೇ ?

† **ಶ್ರೀ ಎನ್. ಹುಚ್ಚಮಾಸ್ತಿಗೌಡ.**—62 ಎಕರೆ ಮೂವತ್ತೊಂದೂವರೆ ಕುಂಟೆ ಜಮೀನು ಬೇಕಾಗಿದೆಯೆಂದು ಕೇಳಿದ್ದಾರೆ. 1237 ಸೈಟುಗಳನ್ನು ಹಂಚಲಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಧೀನಪಡಿಸಿಕೊಂಡಿರುವುದು ಮತ್ತು ಹಂಚಿರುವುದು ಕೊಟ್ಟಿದ್ದೀರಿ. ಸ್ವಾಧೀನ ಪಡಿಸಿಕೊಳ್ಳಬೇಕಾಗಿರತಕ್ಕ ಜಮೀನು ಎಷ್ಟು ಎಕರೆ ; ಹಂಚಬೇಕಾದ ಸೈಟುಗಳ ಸಂಖ್ಯೆ ಎಷ್ಟು !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಧೀನಪಡಿಸಿಕೊಂಡು ಹಂಚಿರತಕ್ಕದ್ದು ನಾನು ಹೇಳಿದೆ. ಉಳಿದಿದ್ದನ್ನು ಆದಷ್ಟು ಬೇಗ ಸ್ವಾಧೀನಪಡಿಸಿಕೊಂಡು ಸೈಟುಗಳನ್ನು ಹಂಚುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಎಷ್ಟು ಎಕರೆ ಜಮೀನನ್ನು ತಾವು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ ; ಎಷ್ಟು ಸೈಟುಗಳನ್ನು ಹಂಚಬೇಕಾಗುತ್ತದೆ. ಈ ಅಂಕಿ ಅಂಶಗಳು ಇದ್ದರೆ ಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಳೆದ 5 ವರ್ಷಗಳಿಂದ 88 ಗ್ರಾಮಗಳಲ್ಲಿ 62 ಎಕರೆ ಮೂವತ್ತೊಂದೂವರೆ ಕುಂಟೆ ಜಮೀನು ಸ್ವಾಧೀನಪಡಿಸಿಕೊಂಡು, 1237 ಸೈಟುಗಳ ಹಂಚಿಕೆಯಾಗಿದೆ ಎಂದು ತಿಳಿಸಿದ್ದೇನೆ. ಉಳಿದ ವಿವರಗಳು ಅಕ್ವಿಸಿಷನ್ ಆಗಬೇಕಾದುದು ಎಷ್ಟು; ಎಷ್ಟು ಎಕರೆ ಭೂಮಿ ಬೇಕು ; ಎಷ್ಟು ಸೈಟುಗಳು ಹಂಚಬೇಕಾಗಿದೆ ಆ ವಿವರಗಳನ್ನು ತರಿಸಿ ನಾನು ಸಭೆಗೆ ತಿಳಿಸಬೇಕಾಗುತ್ತದೆ.

Sri J. P. SARWESH.—It has taken five years to acquire 62 acres of land and in some cases it hastaken even 15-20 years. Will the Government see that in one year the land is acquired ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಕೂಡಲೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ವರ್ಷದ ಅಕ್ವಿಸಿಷನ್ ಕೇಸುಗಳು ಇದೆ ಎಂಬ ಅಂಕಿ ಅಂಶಗಳನ್ನು ಸಂಗ್ರಹಿಸಿದಾಗ 22ವರ್ಷದ ಕೇಸುಗಳು ಇತ್ತು. ಈಗ ಅದನ್ನು 10 ವರ್ಷಕ್ಕೆ ಇಳಿಸಿಕೊಂಡು ಬಂದಿದ್ದೇವೆ. ಅದನ್ನು ಇನ್ನು 3 ತಿಂಗಳೋ ಅಥವಾ 6ತಿಂಗಳೊಳಗಾಗಿ ಒಂದು ವರ್ಷಕ್ಕೆ ಇಳಿಸುವ ಹಾಗೆ ಎಲ್ಲಾ ಅಧಿಕಾರಿಗಳಿಗೂ ನಿರ್ದೇಶನ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಪ್ರಭಾಕರ್.—ಸ್ವಾಮಿ 1237 ಸೈಟುಗಳ ಪೈಕಿ 1972-73ನೇ ಸಾಲಿನಲ್ಲಿ ಹಂಚಿದ ಸೈಟುಗಳ ಸಂಖ್ಯೆ ಎಷ್ಟು ? ಅದರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು : ತಾಲ್ಲೂಕುವಾರ್ ಎಷ್ಟು ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿವರಗಳು ನನ್ನ ಹತ್ತಿರ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅವರ ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿರುವ ಪ್ರಕಾರ ಗುಬ್ಬಿಯಲ್ಲಿ 248 ಸೈಟುಗಳನ್ನು ಹಂಚಿದ್ದಾರೆ, ಕುಣಿಗಲ್‌ನಲ್ಲಿ 249 ಸೈಟುಗಳು ಹಂಚಿದ್ದಾರೆ. ಆದರೆ ತುರುವೇಕೆರೆಯಲ್ಲಿ 67 ಸೈಟುಗಳನ್ನು ಮಾತ್ರ ಹಂಚಿದ್ದಾರೆ. ಇದರ ಅರ್ಥವೇನು ? ಏತಕ್ಕೆಂದರೆ ಕುಣಿಗಲ್ ತಮ್ಮ ಕ್ಷೇತ್ರವಾದ್ದರಿಂದ ತಮ್ಮ ಪ್ರಭಾವ ಬೀರಿ ಜಾಸ್ತಿ ಸೈಟುಗಳನ್ನು ಹಂಚಿದ್ದೀರಾ. ಮತ್ತು ತುರುವೇಕೆರೆ ಶ್ರೀಮಾನ್ ಬೈರಂಪಪ್ಪಾಜಿ ಅವರು ಪ್ರಭಾವ ಬೀರಿಲ್ಲ ಎಂದು ಕಡಿಮೆ ಯವರ ಕ್ಷೇತ್ರವಾದ್ದರಿಂದ ಸೈಟುಗಳನ್ನು ಕೊಟ್ಟಿದ್ದೀರಾ ? ಅಲ್ಲಿ ಕಡಿಮೆ ಸೈಟುಗಳನ್ನು ಹಂಚಿರುವುದಕ್ಕೆ ಕಾರಣ ಏನು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅಲ್ಲಿಯ ಅವಶ್ಯಕತೆಯ ಆಧಾರದ ಮೇಲೆ ಹಂಚಿದ್ದೇವೆ. ಮಂತ್ರಿಗಳ ಪ್ರಭಾವದಿಂದಾಗಲಿ ಅಥವಾ ಸದಸ್ಯರೊಬ್ಬರ ಪ್ರಭಾವದಿಂದಾಗಲಿ ಇದು ಆಗಿರತಕ್ಕಂಥ ಕೆಲಸವಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ 88 ಗ್ರಾಮಗಳಲ್ಲಿ ಪರಿಶಿಷ್ಟ ವರ್ಗ ಮತ್ತು ಪರಿಷ್ಟ ಜನಾಂಗದವರು ಸೈಟುಗಳನ್ನು ಕೇಳಿದ್ದರು. ಅದನ್ನು ಉತ್ತರದಲ್ಲಿ ಹೇಳಲಾಗಿದೆ ಮತ್ತು ಅಕ್ವಿಸಿಷನ್ ಕೇಸಸ್ 22ವರ್ಷ ಇದ್ದುದ್ದನ್ನು 10ವರ್ಷಕ್ಕೆ ಇಳಿಸಿದ್ದೇವೆ ಎಂದು ಹೇಳಿದಿರಿ. ಈ 88 ಗ್ರಾಮಗಳಲ್ಲಿ ಎಷ್ಟು ಜನ ಸೈಟುಗಳನ್ನು ಕೇಳಿದ್ದಾರೋ ಅವರೆಲ್ಲರಿಗೂ ಇನ್ನು ವರ್ಷದೊಳಗೆ ಕೊಡಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕಾಗಿ ನಾನು ಪ್ರಯತ್ನ ಮಾಡುತ್ತೇನೆ ಎಂದು ಈಗಾಗಲೇ ಸಭೆಗೆ ವಿನಂತಿ ಮಾಡಿಕೊಂಡೆ

SHORT NOTICE QUESITON AND ANSWER

Fire Accident in Pallerayana Village, Kunigal Taluk

2. Sri M. H, JAYAPRAKH NARAYAN (Sirsi).—

Will the Minister for Revenu be pleased to state.—

(a) whether it has come to the notice of the Government that the residential houses belonging to Sriyuths : Channe Gowda and Kenchiah of Pallerayana Village, Amrithur Hobli, Kunigal Taluk were victims of accidental Fire at 3-00 P.M. on Friday the 5 th January 1973 ;

(b) if so, the extent of loss sustained by these families in respect of people, cattle etc. ;

(c) the dates on which the affected families have submitted their representations to Tahsildar and B.D.O. ;

(*d*) the date on which the affected families have submitted their representation to the Minister for Revenue ;

(*e*) the extent of loss incurred and the relief granted by the Government ?

Sri N. HUTCHAMASTHY GOWDA.—(Minister for Revenue) :

(*a*) Yes.

(*b*) No danger is caused to people and Cattle. The loss sustained by Sri Channe Gowda.

		Rs.
Paddy and Rice.	...	300
Cloth etc.	...	500
Utensils	...	250
Cash (Currency notes)	...	600
New Wooden ariticles	...	4,000
Ornaments	...	1,500
	Total	7,150

Loss sustained by Sri Kenchiah :—

		Rs.
Paddy and Rice	...	400
Cloth etc.	...	300
Ornaments	...	1,000
Utensils	...	250
Wooden articles	...	2,500
Cash amount	...	400
	Total	4,850

(*c*) It is reported by the Tahsildar that the representation was submitted to him on 6-1-1973.

(*d*) It is not reported.

(*e*) The Total amount of loss caused is Rs 12,000. An amount of Rs. 200 per head has been granted as emergent relief. A report from the Tahsildar has been received to the effect that the records have been forwarded to the Deputy Commissioner for further grant of relief.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರ ನೋಡಿದರೆ 7150 ರೂಪಾಯಿ ನಷ್ಟವಾಗಿದ್ದರೂ ಕೂಡ ಕೊಡತಕ್ಕಂಥ ಪರಿಹಾರ 200 ರೂಪಾಯಿ, 4850 ರೂಪಾಯಿ ನಷ್ಟವಾಗಿದ್ದರೂ ಕೂಡ ಕೊಡತಕ್ಕಂಥ ಪರಿಹಾರ 200 ರೂಪಾಯಿ ಅನ್ವವ ತರಹದಲ್ಲಿ ಇದೆ. ಆದುದರಿಂದ ಆ ನಷ್ಟಕ್ಕೆ ಅನುಗುಣವಾಗಿ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ;

†**ಶ್ರೀ ಎನ್. ಹುಚ್ಚಮಾಸ್ತಿಗೌಡ.**—ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಆ ನಷ್ಟಕ್ಕೆ ಅನುಗುಣವಾಗಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಮಾನ್ಯ ಮಂತ್ರಿಗಳು ನಷ್ಟಕ್ಕನುಗುಣವಾಗಿ ಕೊಡವುದಕ್ಕಾಗುವುದಿಲ್ಲ ಎಂದು ಹೇಳಿದರು. ಗ್ರಾಮಾಂತರ ಪ್ರದೇಶದಲ್ಲಿ ಬೆಂಕಿ ಅನಾಹುತವಾದರೆ ರಕ್ಷಣೆ ಕೊಡುವುದು ಕಷ್ಟವಾಗುತ್ತದೆ. ಸಿಟಿಗಳಲ್ಲಾದರೆ ಫೈರ್ ಬ್ರಿಗ್ರೇಡ್ ಇರುತ್ತದೆ. ಅವರ ಸಹಾಯದಿಂದ ರಕ್ಷಣೆ ದೊರಕುತ್ತದೆ. ಆದುದರಿಂದ ಈ ವಿಷಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಜನರಿಗೆ ರಕ್ಷಣೆ ಕೊಡುವುದಕ್ಕೆ ಪ್ರತಿ ತಾಲ್ಲೂಕಿನಲ್ಲೂ ಒಂದೊಂದು ಫೈರ್ ಬ್ರಿಗೇಡ್ ಇಡುವ ವ್ಯವಸ್ಥೆ ಮಾಡುತ್ತಿರಾ !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರತಕ್ಕಂಥ ವ್ಯವಸ್ಥೆಯಲ್ಲಿ ನಗರಗಳಲ್ಲಿ ಆ ಸೌಲಭ್ಯಗಳನ್ನು ಒದಗಿಸಿ ಕೊಡುವುದಕ್ಕಾಗುವುದಿಲ್ಲ. ಒಂದು ಪಕ್ಷ ಅದು, ತಾಲ್ಲೂಕು ಕೇಂದ್ರಗಳಲ್ಲಿ ಇದ್ದರೂ ಕೂಡ ಯಾವುದೋ ಒಂದು ಊರಿನಲ್ಲಿ ಬೆಂಕಿ ಅನಾಹುತವಾದರೆ ಅದನ್ನು ತೆಗೆದುಕೊಂಡು ಹೋಗುವ ತನಕ ಎಲ್ಲಾ ಸುಟ್ಟು ಹೋಗಿರುತ್ತದೆ. ಹೀಗಿರುವಾಗ ಸರ್ಕಾರದವರು ಇದರಲ್ಲಿ ತಾರತಮ್ಯ ಮಾಡಬೇಕು ಎನ್ನುವ ದೃಷ್ಟಿ ಇಲ್ಲ. ಹಣಕಾಸಿನ ಪರಿಸ್ಥಿತಿ ಅಲ್ಲಿನ ಪರಿಸ್ಥಿತಿ ನೋಡಿಕೊಂಡು ಅವರಿಗೆ ಸೌಲಭ್ಯಗಳನ್ನು ಒದಗಿಸಬೇಕೇ ವಿನಾ ಎಲ್ಲಾ ಊರುಗಳಿಗೂ ಒಂದೇ ಕಾಲದಲ್ಲಿ ಸಹಾಯ ಮಾಡತಕ್ಕಂಥ ಶಕ್ತಿ ಸರ್ಕಾರಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಉತ್ತರ ಕೊಡುವಾಗ ನಷ್ಟಕ್ಕನುಗುಣವಾಗಿ ಪರಿಹಾರವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ. ಬಡವರ ವಿಷಯದಲ್ಲಿ ಕನಿಕರ ತೋರಿಸಿ ಹೆಚ್ಚು ಪರಿಹಾರ ಕೊಡಲಿಕ್ಕೆ ತೀರ್ಮಾನ ಕೈಗೊಳ್ಳುತ್ತೀರಾ !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದೇಶದಲ್ಲಿ ಬೆಂಕಿಯಿಂದ ಅನಾಹುತ ಆಗಿರುವವರಿಗೆ ಮತ್ತು ಪ್ರವಾಹದಿಂದ ನೊಂದಂಥ ಜನರಿಗೆ 300 ರೂಪಾಯಿ ಮತ್ತು ಇತರೆ ಮರ ಮುಟ್ಟು ಸಾಮಾನುಗಳನ್ನು ಕೊಡಬೇಕೆಂದು ಸರ್ಕಾರಿ ಆಜ್ಞೆಯೇ ಇದೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಆರೀತಿ ನೊಂದಂಥ ಜನರಿಗೆ ಕೆಲವು ಭಾಗ ಹಣ ಕೆಲವು ಭಾಗ ಮರಮುಟ್ಟುಗಳನ್ನು ಕೊಡಬೇಕು ಎಂದು ಸರ್ಕಾರದ ಆಜ್ಞೆ ಇದೆ ಎಂದು ಹೇಳಿದರು. ಅದಕ್ಕೆ ನನ್ನ ಪ್ರಶ್ನೆ ಏನೆಂದರೆ ಹಿಂದೆ ಮರ ಒಂದು ರೂಪಾಯಿಗೆ ಒಂದು ಅಡಿ ಸಿಕ್ಕುತ್ತಿತ್ತು. ಆ ರೇಟಿನಂತೆ ಈಗ ಸಿಕ್ಕುವುದಿಲ್ಲ. ಇದಕ್ಕಾಗಿ ಸರ್ಕಾರದವರು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಹಣವನ್ನು ಡಿಪಾಸಿಟ್ ಮಾಡಿಬಿಡುತ್ತಾರೆ, ಆದರೆ ಅಲ್ಲಿಗೆ ಹೋದರೆ ಮರವೇ ಸಿಕ್ಕುವುದಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಕೆಲವು ಭಾಗ ಹಣ ಕೆಲವು ಭಾಗ ಮರವನ್ನು ಒದಗಿಸುವ ಸಲುವಾಗಿ ಸಂಪೂರ್ಣವಾಗಿ ಕ್ಯಾಷ್ ಕೊಡುವುದಾದರೆ ಅವರು ಹೇಗಾದರೂ ಮಾಡಿ ಮನೆ ಕಟ್ಟಿಕೊಳ್ಳುತ್ತಾರೆ. ಈರೀತಿ ಒಂದು ಕಾನೂನು ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದನ್ನು ಎಷ್ಟೋ ಸಾರಿ ಪುನರಾಲೋಚನೆ ಮಾಡಿದ್ದೇವೆ. ಈಗ ಇರತಕ್ಕಂಥ ವಿದ್ಯಮಾನಗಳನ್ನು ಗಮನಕ್ಕೆ ತೆಗೆದುಕೊಂಡರೆ ಸಂಪೂರ್ಣವಾಗಿ ಹಣವನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ ಬೆಂಕಿ ಅನಾಹುತದಿಂದ ನೊಂದಿರತಕ್ಕಂಥಾವರಿಗೆ 200 ರೂಪಾಯಿಯನ್ನು ತಾಲ್ಲೂಕು ಅಧಿಕಾರಿಗಳು ಪಾವತಿ ಮಾಡುವಂತೆ ಮಾಡಬೇಕು. ಈ 200 ರೂಪಾಯಿ ಕೊಡತಕ್ಕಂಥಾದ್ದು ಜಿಲ್ಲಾಧಿಕಾರಿಗಳ ಮಟ್ಟಕ್ಕೆ ಹೋಗಬಾರದು. ಏತಕ್ಕೆಂದರೆ ಇದನ್ನು ಪಾವತಿ ಮಾಡಬೇಕಾದರೆ ಕೆಲವು ಟೈಂನಲ್ಲಿ 1ತಿಂಗಳು 2ತಿಂಗಳಿಗಿಂತಲೂ ಹೆಚ್ಚಾಗುತ್ತದೆ. ಆದುದರಿಂದ ಆದಷ್ಟು ಜಾಗ್ರತೆಯಾಗಿ 3ದಿವಸದೊಳಗೆ ಹಣಪಾವತಿಯಾಗುವಂತೆ ತಾಲ್ಲೂಕ ಅಧಿಕಾರಿಗಳಿಗೆ ಅಧಿಕಾರವನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊಟ್ಟ ಮೊದಲು ಪರಿಹಾರ ಕೊಡುವುದನ್ನು ತಾಲ್ಲೂಕು ಅಧಿಕಾರಿಗಳಿಗೇನೇ ಗೊತ್ತು ಮಾಡಿದ್ದೇವೆ. ಅವರು ಒಂದು ವಾರದೊಳಗೆ ಆ ದುಡ್ಡನ್ನು ಕೊಡುವ ವ್ಯವಸ್ಥೆ ಇದೆ. ಅದಕ್ಕಿಂತ ಹೆಚ್ಚು ಹಣ ಕೊಡುವ ಸಂದರ್ಭದಲ್ಲಿ ಸಬ್ ಡಿವಿಷನ್ ಆಫೀಸರ್ ಮಟ್ಟದಲ್ಲಿಲ್ಲ, ಮತ್ತು ಡೆಪ್ಯೂಟಿ ಕಮೀಷನರ್ ಮಟ್ಟದಲ್ಲಿ ವ್ಯವಸ್ಥೆ ಆಗಬೇಕು. ಇದು ನಿದಾನವಾಗುತ್ತದೆ. ಆದರೆ ಪ್ರಾರಂಭದಲ್ಲಿ ಕೊಡತಕ್ಕಂಥ ಪರಿಹಾರ ಮಾತ್ರ ಅವರೇ ಕೊಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾಲ್ಲೂಕು ಮಟ್ಟದಲ್ಲಿ ಈ ಬೆಂಕಿಯ ಅನಾಹುತವನ್ನು ತಪ್ಪಿಸುವ ಸಲುವಾಗಿ ಅಲ್ಲಿನ ಪುರಸಭೆಯವರು ಒಂದು ಫೈರ್ ಬ್ರಿಗೇಡ್‌ನ್ನು ಇಟ್ಟುಕೊಳ್ಳುತ್ತೇವೆ ಎಂದರೆ ಅವರಿಗೆ ಏನಾದರೂ ಸಹಾಯ ಮಾಡುತ್ತಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ಉತ್ತರ ಒದಗಿಸಿ ಕೊಡುತ್ತೇನೆ.

Sri J. P. SARWESH.—May I know what type of people Government gives more money and to what type of peple do they give less money ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ಬೆಂಕಿ ಮತ್ತು ಪ್ರವಾಹದಲ್ಲಿ ನೊಂದಂಥ ಜನರಿಗೆ ಪರಿಹಾರ ಕೊಡುವುದರಲ್ಲಿ ತಾರತಮ್ಯ ಮಾಡುತ್ತಾರೆ ಎನ್ನುವ ವಿಶ್ವಾಸ ನನಗೆ ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಹೇಳಿದರು ಈ ಬೆಂಕಿ ಮತ್ತು ಪ್ರವಾಹದಲ್ಲಿ ನೊಂದಂಥ ಜನರಿಗೆ ತಾಸೀಲ್ದಾರ್ ಲೆವೆಲ್‌ನಲ್ಲಿ 200 ರೂಪಾಯಿ ಕೊಡಬಹುದು, ಡೆಪ್ಯೂಟಿ ಕಮೀಷನರ್ ಲೆವೆಲ್‌ನಲ್ಲಿ, ಇಷ್ಟು ಕೊಡಬೇಕು ಅಂತ ಇದೆ ಎಂದು. ಮತ್ತು ಸಾರ್ಕಾರದ ಲೆವೆಲ್‌ನಲ್ಲಿ ಬಂದರೆ 500ರೂಪಾಯಿ ಕೊಡುತ್ತಾರೆ. ಆದುದರಿಂದ ಮಾನ್ಯ ಮಂತ್ರಿಗಳಿಗೆ ಅವರಿಗೆ 500ರೂಪಾಯಿ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತಿರಾ !

ಎರಡನೆಯದಾಗಿ ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಜನರು ಅದರಲ್ಲೂ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರು ಗುಡಿಸಲು ಮನೆಗಳಲ್ಲೇ ಹೆಚ್ಚಾಗಿ ವಾಸ ಮಾಡುವುದರಿಂದ ಈ ಒಂದು ಅನಾಹುತಕ್ಕೆ ತುತ್ತಾಗುತ್ತಾರೆ. ಈ ಬಗ್ಗೆ ವರದಿಯಾಗಿದೆ. ಈ ಬಗ್ಗೆ ತಾಹಸೀಲ್ದಾರರ ರಿಪೋರ್ಟ್ ಬಂದರೆ ತಕ್ಷಣವಾಗಿ ಅರಣ್ಯ ಇಲಾಖೆಯವರು 200ರೂಪಾಯಿಯ ಮರವನ್ನೂ ಮತ್ತು ಸಮಾಜ ಕಲ್ಯಾಣ ಇಲಾಖೆಯವರು ತಮ್ಮಲ್ಲಿರುವ ಸ್ಕೀಂನಲ್ಲಿ 700 ರೂಪಾಯಿಯನ್ನು ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಹೆಚ್ಚು ಸಹಾಯವನ್ನು ಕೊಡುವ ಹಾಗೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲೇ ನಾನು ಅರಿಕೆ ಮಾಡಿಕೊಂಡ ಹಾಗೆ ಗುಡಿಸಲುಗಳಲ್ಲಿ ವಾಸ ಮಾಡುವವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಮಾತ್ರವೇ ಅಲ್ಲ ಅನೇಕ ಜನಗಳು ಗುಡಿಸಲುಗಳಲ್ಲಿ ವಾಸ ಮಾಡುತ್ತಾರೆ. ಈ ಬೆಂಕಿ ಅನಾಹುತವಾದಾಗ ಯಾರಿಗಾದರೂ ಕೂಡ ಒಂದು ತತ್ವವನ್ನು ಅನುಸರಿಸಿದರೆ ಅದೇ ತತ್ವವನ್ನು ಎಲ್ಲರಿಗೂ ಅನುಸರಿಸಬೇಕಾಗುತ್ತದೆ.

ಎರಡನೆಯದಾಗಿ ಮಾನ್ಯ ಸದಸ್ಯರು ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ ಜಾತಿಯವರಿಗೆ ಹೆಚ್ಚು ಸಹಾಯ ಕೊಡಬೇಕು ಎಂದು ಏನು ಸಲಹೆ ಮಾಡಿದ್ದಾರೆ ಅದನ್ನು ಆಲೋಚನೆ ಮಾಡುತ್ತಿದ್ದೇವೆ.

MADAM SPEAKER.—Now Question Hour is over

QUESTIONS FOR ANSWERS ON THE DAY

(but not taken up)

Lands Granted by Chintamani Taluk Land Grant Committee

450. **Sri CHOWDA REDDY** (Chintamani).—

Will the Minister for Revenue be pleased to state :—

(*a*) whether it is not a fact that the Darkhast land in S. Nos. 242, 244 and 189 of Anur Village in Kasaba Hobli of Chintamani

(SRI CHOWDA REDDY)

taluk was sanctioned on 7th October 1971 by the Taluk Land Grant Committee, Chintamani ;

(*b*) the reasons for not granting Saguvali Chits so far to the concerned by conducting survey of this land even though the land was sanctioned ?

Sri N. HUTCHAMASTHY GOWDA (Minister for Revenue).—

(*a*) Yes. Sanctioned on 7th October 1970.

(*b*) (i) It has been decided to grant lands to 43 Darkhastdars at IA-20G. per head. While conducting such survey as some of the Darkhastdars have urged to enter their names in the records in respect of the land under their enjoyment, the survey work was stopped.

(ii) The Darkhastdars have not remitted the value.

(iii) The concerned land records have been forwarded to the Assistant Superintendent of Land Records, Chickballapur for conducting a survey of lands sanctioned and under their enjoyment. After the receipt of a report from him the value of the land will be got credited and the Saguvalli Chits will be issued.

2-00 P. M.

CALLING ATTENTION TO MATTERS OF URGENT PUBLIC IMPORTANCE

(i) *re* : Transfer of land in Hosanagar from Revevue Department to the Forest Department.

Sri S. M. SHEERANALY CHANDRASHEKAR Hosanagar).—I call the attention of the Minister for Revenue to the transfer of one lakh acres of land from Revenue Department to Forest Department for afforestation in Hosanagar Taluk.

Sri N. HUTCHAMASTHI GOWDA (Minister for Revenue).—Sir I state as follows :—

This Calling Attention Notice relates to the transfer of an extent of 94,413.00 acres of land from Revenue Department to the Forest Department for afforestation in pursuance of Government Orders No. RD 32 LAD 62 dated 1-8-1964 and 6-7-1965. During 1963, Taluk Commiteees for each Taluk were constituted for examining the extent to which land classified as forest, Amruth Mahal Kaval and date reserve should be thrown open for cultivation and the lands classified as assessed waste in the Revenue Department should be transferred to the Forest Department. On the basis of the recommendations received from the Divisional Commissioners and Deputy Commissioners, an extent of 3,44,865-16 acres was ordered to be transferred from Revenue Department to Forest Department and an extent of 21,291-22 acres from Forest Department to Revenue Department in Shimoga District.

In pursuance of the above orders dated 6-7-1965 an extent of Acres 1,62,343,-21 Gts. of Revenue land in Hosanagar Taluk was to have been transferred to Forest Department. But only an extent of Acres 94,413-00 has been transferred to Forest Department. Government have directed that Revenue land that are ordered to be transferred to Forest Department need not be transferred except those which have already been handed over. The remaining extent of 67,930-11 Acres has not yet been transferred. Out of this area, an extent of Acres 11,239-17 Guntas is reported to fit for cultivation besides Acres 1,896-29 guntas under unauthorised cultivation. In addition to the above, an extent of Acres 6,099-20 guntas is available for disposal according to availability list notified in Taluk Office. So far an extent of 2,109 Acres 02 guntas have been granted to 517 persons for the last 1½ years. Out of 94,413-00 Acres transferred to Forest Department it is reported that an area of 12,020 Acres 38 guntas is only fit for cultivation in addition to 1,149 acres 02 guntas under anauthorised cultivation. It is reported that 4191 applications involving an extent of 15,729-00 Acres are pending and taking into consideration the availability of land for disposal excluding the lands already transferred to forest Department. Sufficient land is even now available for disposal after handidg over 94,413-00 Acres of land to the Forest Department. The balance of 67,930 acres 11 guntas will not be transferred to Forest Department. There is no grave situation in Hosanagar Taluk in regard to distribution of lands to ryots. The local officers are taking prompts action to dispose off the applications for grant of land expeditiously. The Taluk Land Grant Cansultative Committee has also been constituted with effect from 1-9-1972.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ದರಖಾಸ್ತು ಕಮಿಟಿ ರಚನೆಯಾದಾಗಲೇ ಆರು ಸಾವಿರ ಅರ್ಜಿಗಳು ಇದ್ದುವು. ಕೇವಲ ಒಂದು ಸಾವಿರಚಿಲ್ಲರೆ ಎಕರೆ ಡಿಸ್ಪೋಸರ್ ಆಗಿತ್ತು. ಮೊದಲನೇ ಮೀಟಿಂಗಿನಲ್ಲೇ ಇಷ್ಟು ಜಮೀನೂ ಡಿಸ್ಪೋಸರ್ ಆಗಿ ಈಗ ಒಂದು ಎಕರೆ ಜಮೀನು ಕೂಡ ಇಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅಧಿಕಾರಿಗಳು ಕಳುಹಿಸಿರುವ ವರದಿಯಲ್ಲಿ ಆರು ಸಾವಿರ ಎಕರೆ ಇದೆ ಎಂದು ಹೇಳಿರುವುದು ಸರಿಯಲ್ಲ. ಮಾನ್ಯ ಮಂತ್ರಿಗಳು ನನ್ನ ಮಾತನ್ನು ನಂಬಬೇಕು. ದರಖಾಸ್ತು ಕಮಿಟಿ ಏನು ಕಾರ್ಯಕ್ರಮ ತಗೆದುಕೊಳ್ಳುವುದಕ್ಕೂ ಸಾಧ್ಯವಾಗಿಲಲ್ಲ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇದು ಸ್ಪಷ್ಟವಾಗಿ ಅಧಿಕಾರಿಗಳು ಕಳುಹಿಸಿರತಕ್ಕ ವರದಿ. ಸರ್ವೇ ನಂಬರ್ ಪ್ರಕಾರ ಎಷ್ಟೆಷ್ಟು ಜಮೀನಿದೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಆದರಲ್ಲಿ ಅನುಮಾನವಿದ್ದರೆ, ನನಗೆ ತಿಳಿಸಿದರೆ, ಅಧಿಕಾರಿಗಳು ಒದಗಿಸಿರತಕ್ಕ ವರದಿಯಲ್ಲಿ ತಪ್ಪು ಇದ್ದರೆ ಆ ತರಹ ತಪ್ಪು ವರದಿಯನ್ನು ಒದಗಿಸಿರತಕ್ಕ ಅಧಿಕಾರಿಗಳ ಮೇಲೆ ನಾನು ಕಾರ್ಯಕ್ರಮ ತಗೆದುಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ದರಖಾಸ್ತು ಕಮಿಟಿ ಒಂದು ಸಲ ಸೇರಿತ್ತು. ಪುನಃ ಸೇರಿಲ್ಲ ಎನ್ನುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ದರಖಾಸ್ತು ಕಮಿಟಿ ಯಾವ ಕಾರಣದಿಂದ ಸೇರಿಲ್ಲವೋ ನನಗೆ ಗೊತ್ತಾಗಿಲ್ಲ. ಜಮೀನಿಲ್ಲ ಎಂದೇನಾದರೂ ಸೇರದೆ ಇದ್ದರೆ ಅದರ ಬಗ್ಗೆ ಅಧಿಕಾರಿಗಳಿಂದ ವಿವರಣೆಯನ್ನು ತರಿಸಿಕೊಂಡು ನಾನು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಹೊಸನಗರ ತಾಲ್ಲೂಕಿನಲ್ಲಿ ಫಾರೆಸ್ಟ್ ಬೆಳೆಸುವುದಕ್ಕೆ ಭೂಮಿಯನ್ನು ಇಡಲಾಗಿದೆ ಎಂದು ಹೇಳಿದ್ದಾರೆ ನಮ್ಮ ಹತ್ತಿರ ಅಧಿಕಾರಿಗಳ ಪಟ್ಟಿ ಇದೆ. ಆ ಜಮೀನಿನಲ್ಲಿ ಅರಣ್ಯವನ್ನು ಬೆಳೆಸುವುದಕ್ಕಾಗುವುದಿಲ್ಲ. ಮಾನ್ಯ ಕಂದಾಯ ಮಂತ್ರಿಗಳು ಮತ್ತು ಅರಣ್ಯ ಮಂತ್ರಿಗಳು ಬಂದು, ಸ್ಥಳವನ್ನು ನೋಡಿ ಅರಣ್ಯ ಬೆಳೆಸುವುದಕ್ಕೆ ಸಾಧ್ಯ ಎನ್ನುವುದನ್ನು ಹೇಳಿದರೆ ನಾವೂ ಒಪ್ಪಿಗೆಯನ್ನು ಕೊಡುವುದಕ್ಕೆ ತಯಾರು. ಇಲ್ಲದೆ ಹೋದರೆ, ಅರಣ್ಯವನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲ ಎನ್ನುವುದಾದರೆ ಆ ಜಮೀನನ್ನು ರೆವೆನ್ಯೂ ಇಲಾಖೆಗೆ ತೆಗೆದುಕೊಂಡು ದರಖಾಸ್ತು ಕಮಿಟಿ ಮಂಜೂರು ಮಾಡುವುದಕ್ಕೆ ಒಪ್ಪಿಗೆ ಕೊಡುತ್ತಾರೆಯೇ !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನಾಗಲೇ ವಿವರಗಳನ್ನು ಕೊಟ್ಟೆ. ವ್ಯವಸಾಯಕ್ಕೆ ಲಾಯಕ್ ಇಲ್ಲದೆ ಇರುವ ಭೂಮಿಯಲ್ಲಿ ಅರಣ್ಯವನ್ನು ಬೆಳೆಸುತ್ತಾರೆ ; ಅರಣ್ಯವನ್ನೂ ಬೆಳೆಸುವುದಕ್ಕೆ ಸಾಧ್ಯವಿಲ್ಲದೆ ಇರುವ ಕಡೆ ವ್ಯವಸಾಯ ಮಾಡುವುದಕ್ಕೆ ಹೇಗೆ ಸಾಧ್ಯ ! ಮಾನ್ಯ ಸದಸ್ಯರು ಹೇಳತಕ್ಕದ್ದು ವಿಚಿತ್ರವಾಗಿ ಕಾಣುತ್ತದೆ. ನಾನಾಗಲೇ ವಿವರಗಳನ್ನು ಕೊಟ್ಟ ಹಾಗೆ ಅರಣ್ಯ ಇಲಾಖೆಗೆ ಕೊಟ್ಟಿರತಕ್ಕ 94ಸಾವಿರ ಎಕರೆಯಲ್ಲಿ 13ಸಾವಿರ ಎಕರೆ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿದೆ ಎಂದು ವರದಿ ಬಂದಿದೆ. ಅದನ್ನು ಕೂಡ ಪರಿಶೀಲನೆ ಮಾಡಬೇಕು. ಪರಿಶೀಲನೆ ಮಾಡಿ ಮಾನ್ಯ ಸದಸ್ಯರು ಹೇಳುವುದರಲ್ಲಿ ಸತ್ಯಾಂಶವಿದ್ದರೆ ಅದನ್ನೂ ಆಲೋಚನೆ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಈಗಾಗಲೇ ಪ್ರಪೋಸ್ಡ್ ಫಾರೆಸ್ಟ್ ಲ್ಯಾಂಡ್'ನಲ್ಲಿ ಯಾರು ಬೇಸಾಯ ಮಾಡುತ್ತಿದ್ದಾರೆ ಅವರಿಗೆ ಜಮೀನು ಮಂಜೂರು ಮಾಡಿಕೊಡಲಿಕ್ಕೆ ಯೋಚನೆ ಮಾಡುತ್ತೀರಾ !

ಶ್ರೀ ಎನ್. ಹುಚ್ಚಮಾಸ್ತಿಗೌಡ.—1139 ಎಕರೆಯಷ್ಟು ಭೂಮಿ ಈಗ ಅಕ್ರಮ ಸ್ವಾಧೀನವಾಗಿದೆ. ಅದನ್ನು ಅರಣ್ಯ ಇಲಾಖೆಯಿಂದ ಬಿಡಿಸಿಕೊಂಡು ಕ್ರಮಪಡಿಸಿ ಕೊಡಬೇಕೇ ಬೇಡವೇ ಎನ್ನುವ ವಿಚಾರವನ್ನು ನಾನು ಆಲೋಚನೆ ಮಾಡಿ ತಿಳಿಸಬೇಕು.

(ii) re: Exemption from Stamp duty on sale deeds of houses purchased by Government Officials

Sri KAGODU THIMMAPPA (Sagara)—I call the attention of the Minister for Revenue to the exemption from stamp duty on sale deeds of houses purchased by Government Officials.

Sri N. HUTCHAMASTHIY GOWDA.—In Government Order and Notification No. RD/52 EST 69 dated 19th March 1971, Government has exempted stamp duty and registration fee by fifty per cent on mortgage deeds, agreements and surety bonds of Hose Buliding, House Purchase or House Repair advance granted to them by the State Government.

There is no proposal before Government for exemption of stamp duty in respect of sale deeds of Houses purchased by Government officials Such sale deeds are subject to full stamp duty.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮಂತ್ರಿಗಳ ಹೇಳಿಕೆಯಲ್ಲಿ ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ ಮಾಡಲು ಸಲಹೆಗಳು ಯಾವುವೂ ಸರ್ಕಾರದ ಮುಂದೆ ಇಲ್ಲ ಎಂದು ಹೇಳಿದ್ದಾರೆ. ಇಂಥ

ಪ್ರಪೋಸಲ್ ಹಣಕಾಸಿನ ಖಾತೆಯಿಂದ ಪ್ರಾರಂಭವಾಗಿ ಕಾನೂನು ಇಲಾಖೆಯಲ್ಲಿ ಕೂಡ ಅದನ್ನು ಪರಿಶೀಲನೆ ಮಾಡಿ ತಮ್ಮ ಇಲಾಖೆಗೆ ಬಂದಿದೆ. ಜೊತೆಗೆ ಕೆಲವರು ಕೆಲವರು ಕಪ್ಪು ಹಣದಿಂದ ಬೇರೆಯವರ ಹೆಸರಿನಲ್ಲಿ ಮನೆಗಳನ್ನು ಕೊಂಡಿರತಕ್ಕ ದೊಡ್ಡ ದೊಡ್ಡ ಅಧಿಕಾರಿಗಳು ಅಂಥ ಮನೆಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳುವ ದೃಷ್ಟಿಯಿಂದ ಇಂಥ ಪ್ರಪೋಸಲ್ ಹಣಕಾಸಿನ ಇಲಾಖೆಯಿಂದ ಪ್ರಾರಂಭ ಮಾಡಿದ್ದಾರೆ ಎನ್ನುವುದನ್ನು ನೋಡುತ್ತೀರಾ !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ, ಈಗಾಗಲೇ ಸದಸ್ಯರು ಹೇಳಿದ ಹಾಗೆ ಅದರಲ್ಲಿ ದುರುದ್ದೇಶ ಅಡಕವಾಗಿದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದಕ್ಕೆ ಸರ್ಕಾರದ ಮಂಜೂರಾತಿ ದೊರೆಯಲಾರದೆಂದು ನನ್ನ ನಿರೀಕ್ಷೆ.

Papers Laid on the Table

Sri V. S. KOUJALGI.—(Minister of State for Youth Services) :

I lay on the Table :

> "A copy of the list indicating the conditions stipulated for selection of a Lecturer or a Reader for the post of Student Welfare Officer in pursuance of my promise given while replying to Starred Question No. 438 of Shri Kagodu Thimmappa on 7-3-1973.

MADAM SPEKAER.—Papers are laid.**

Bangalore Bundh by the Merchants

ಶ್ರೀ ಎಂ. ಎಸ್. ಕೃಷ್ಣನ್.—(ಮಲ್ಲೇಶ್ವರ) ಮಾನ್ಯ ಅಧ್ಯಕ್ಷರೇ, ಇವೊತ್ತು ಬೆಂಗಳೂರು ಬಂದ್ ನಡೆಯುತ್ತಿದೆ. ಸರಕಾರದ ಅನೇಕ ಫೇರು ಪ್ರೈಸ್ ಡಿಪೋಗಳು ಕೂಡ ಮುಚ್ಚಿರುವುದರಿಂದ ಜನಕ್ಕೆ ಬಹಳ ತೊಂದರೆಯಾಗಿದೆ. ಕೇಂದ್ರ ಸರಕಾರದವರು ಈಗ ಹೋಲ್‌ಸೇಲ್ ವ್ಯಾಪಾರವನ್ನು ತೆಗೆದುಕೊಳ್ಳಬೇಕು ಎಂದು ಇರುವುದರಿಂದ ಅದರಂತೆ ನಮ್ಮ ಸರಕಾರ ಕೂಡ ತೆಗೆದುಕೊಳ್ಳಬೇಕು ಎಂದು ಇದ್ದಾರೆ ಇದಕ್ಕೆ ವಿರೋಧವಾಗಿ ಕೆಲವು ವರ್ತಕರುಗಳು ಹಾಗೂ ಬ್ಲ್ಯಾಕ್‌ಮಾರ್ಕೆಟ್ಟು ಮಾಡುವ ವರ್ತಕರು ಇಂದು ಇಲ್ಲಿಗೆ ಮೆರವಣಿಗೆ ಮೂಲಕ ಕೂಡ ಬಂದಿದ್ದರು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಅಲ್ಲಿಗೆ ಹೋಗಿ ಭಾಷಣ ಮಾಡಿ ಬಂದಿದ್ದಾರೆಂದು ಗೊತ್ತಾಗುತ್ತದೆ. ಇಂದು ಇಂತಹ ಒಂದು ವರ್ತಕರ ಮೆರವಣಿಗೆ ಬರುತ್ತಿರುವಾಗ ಅದೂ ಕೆಂಪೇಗೌಡ ರಸ್ತೆಯಲ್ಲಿ ಯಾವ ಪೋಲೀಸಿನವರೂ ತಡೆಯಲಿಲ್ಲ. ಅವರಿಗೆ ಎಲ್ಲ ಅನುಕೂಲಗಳನ್ನೂ ಮಾಡಿಕೊಟ್ಟಿದ್ದಾರೆ. ಆದರೆ ನಮ್ಮ ಪಾರ್ಟಿಯವರು ಏನಾದರೂ ಇಂತಹ ಪ್ರೊಸೆಷನ್ ತೆಗೆದುಕೊಂಡು ಬಂದರೆ ಆಗ ನಮ್ಮನ್ನು ತಡೆಯುತ್ತಾರೆ. ಹೀಗಿರುವಾಗ ಇದರ ಬಗ್ಗೆ ಸರಕಾರವೇ ಅನುಕೂಲಗಳನ್ನು ಮಾಡಿಕೊಡುತ್ತಿದೆ, ಇದರ ಬಗ್ಗೆ ಸರಕಾರದ ವತಿಯಿಂದ ಒಂದು ಹೇಳಿಕೆ ಕೊಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಇಲ್ಲಿ ಈಗ ಮುಖ್ಯಮಂತ್ರಿಗಳೂ ಇಲ್ಲ, ಫುಡ್ ಮಿನಿಸ್ಟರೂ ಇಲ್ಲ ಅವರು ಬರಲಿ. ಆಗ ಇದರ ಬಗ್ಗೆ ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್.—ನಮ್ಮ ಸಭೆಗೆ ಚೀಫ್ ಮಿನಿಸ್ಟರು ಬರುವುದೇ ಇಲ್ಲ. ಮೊನ್ನೆ ದಿವಸ ಬರುತ್ತಾರೆಂದು ಹೇಳಿದಿರಿ. ಆವತ್ತು ಕೂಡ ಬರಲಿಲ್ಲ. ಊರಿನಲ್ಲಿದ್ದರೂ ಈ ಸಭೆಗೆ ಮುಖ್ಯ ಮಂತ್ರಿಗಳು ಬರುತ್ತಿಲ್ಲ.

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಬರಲಿ.

---

*Copy placed in the Mysore Legislature Library *Vide* No. 19, dated 21th March 1973.

ಶ್ರೀ ವಾಟಾಳ್ ನಾಗರಾಜ್.—ಮೊನ್ನೆ ದಿವಸ ತಾವು ಇಲ್ಲಿಗೆ ಫುಡ್ ಮಿನಿಸ್ಟರು ಹಾಗೂ ಮುಖ್ಯಮಂತ್ರಿಗಳು ಬರುತ್ತಾರೆಂದು ತಿಳಿಸಿದ್ದಿರಿ. ಅದರಂತೆ ಬರಲೇ ಇಲ್ಲ. ಇದರಿಂದ ಅವರು ಬರುತ್ತಾರೋ ಇಲ್ಲವೋ ಎನ್ನುವ ಅನುಮಾನ ನಮಗೆ ಬರುತ್ತಿದೆ.

ಅಧ್ಯಕ್ಷರು.—ನಿಮಗೆ ಯಾವಾಗಲೂ ಅನುಮಾನವೇ ಬರುತ್ತಿರುವುದು.

Alleged murder of one Kari Gowda at Nagamangala

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಸುಮಾರು ಐದು ಗಂಟೆ ವೇಳೆಯಲ್ಲಿ ನಾಗಮಂಗಲದಲ್ಲಿರುವ ಪೋಲೀಸು ಸ್ಟೇಷನ್ನಿಗೆ ಕರೀಗೌಡ ಎನ್ನುವವರನ್ನು ಕರಿಸಿ ಅಲ್ಲಿರುವ ಪೋಲೀಸು ಇನ್ಸ್‌ಪೆಕ್ಟರವರು ಅವರನ್ನು ಕೊಲೆ ಮಾಡಿದ್ದಾರೆ, ನಿನ್ನೆ ಅವರನ್ನು ಪೋಲೀಸು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೊಡೆದರು ಎಂದು ತಮಗೆ ನೋಟೀಸು ಕಳುಹಿಸಿದ್ದೆ. ಇಂದು ಅವರ ಹೊಡೆತದಿಂದಾಗಿ ಆ ಮನುಷ್ಯ ಇಂದು ಸತ್ತಿದ್ದಾನೆ, ಇದರಿಂದಾಗಿ ಅಲ್ಲಿದ್ದ ಜನರು ಗುಂಪುಸೇರಿದರು ಎಂದು ಅವರ ಮೇಲೆ ಪೋಲೀಸಿನವರು ಗುಂಡು ಹಾರಿಸಿದ್ದಾರೆ. ಇದರಿಂದ ಇಲ್ಲಿನ ಜನ ಕಂಗಾಲಾಗಿದ್ದಾರೆ. ನಿನ್ನೆ ಸಂಜೆ ಬಲವಂತದಿಂದ ಇಲ್ಲಿನ ಪೋಲೀಸ್ ಠಾಣೆಗೆ ಕರೀಗೌಡ ಎನ್ನುವವರನ್ನು ಕರೆದುಕೊಂಡು ಹೋಗಿ ಹೊಡೆದು ಇಲ್ಲಿನ ಪೋಲೀಸು ಇನ್ಸ್‌ಪೆಕ್ಟರವರು ಕೊಲೆಮಾಡಿದ್ದಾರೆಂದು ಇಂದು ನನಗೆ ತಂತಿ ಕೂಡ ಬಂದಿದೆ, ಇದರಿಂದ ಜನ ಇಲ್ಲಿ ಸುಖವಾಗಿ ಜೀವನ ಮಾಡಲಾಗುತ್ತಿಲ್ಲ ಪೋಲೀಸರ ಕಾಟ ತಡೆಯಲಾಗುತ್ತಿಲ್ಲ. ಇಂದು ನಮ್ಮ ರಾಜ್ಯದ ಮಂತ್ರಿಮಂಡಲ ಉರುಳಿ ಹೋಗುತ್ತೆ ಎಂದು ಇದಕ್ಕೆ ಸಂಬಂಧಪಟ್ಟ ಖಾತೆಮಂತ್ರಿಗಳು ಈ ಸಭೆಗೂ ಬರಲಿದೇ ಎಲ್ಲೆಲ್ಲೋ ಹೋಗುತ್ತಿದ್ದಾರೆ. ಇಂತಹವರ ಕೈಯಲ್ಲಿ ರಾಜ್ಯ ಕೊಟ್ಟರೆ ಇವರಿಂದ ಜನಕ್ಕೆ ಏನು ಸುಖವಾಗುತ್ತಿಲ್ಲ ಇದರ ಬಗ್ಗೆ ಸರಕಾರದವರು ಕೂಡಲೇ ಹೇಳಿಕೆ ಕೊಡಬೇಕೆಂದು ಒತ್ತಾಯ ಮಾಡಿ ತಾವು ಹೇಳಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

Absence of Some Ministers

ಶ್ರೀ ಎಂ. ಎಸ್. ಕೃಷ್ಣನ್.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ, ಈ ಸಭೆಯಲ್ಲಿ ಹೀರೋ ಅವರಿನಲ್ಲಿ ನಾನಾಗಲೀ ಇಲ್ಲವೇ ಶ್ರೀ ನಾಗರಾಜರಾಗಲೀ ಅಥವಾ ಬೇರೆ ಸದಸ್ಯರೇ ಆಗಲಿ ಕೆಲವು ಮುಖ್ಯವಾದ ವಿಚಾರಗಳನ್ನು ಇಲ್ಲಿ ಹೇಳುವಾಗ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೇ ಇಲ್ಲದೇ ಇದ್ದರೆ ಹೇಗೆ ? ನಾನಾಗಲೇ ಹೇಳಿದೆ ಇಲ್ಲಿ ಫುಡ್ ಮಿನಿಸ್ಟರ್‌ರವರ ಗಮನಕ್ಕೆ ಕೆಲವು ವಿಚಾರಗಳನ್ನು ತಂದೆ ಹಾಗೇ ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಯ್ಯನವರು ಪೋಲೀಸರಿಂದ ಕೊಲೆಯಾಗಿದೆ ಎಂದು ಹೇಳಿದರು. ತಾವೇನೋ ಸಂಬಂಧಪಟ್ಟ ಮಂತ್ರಿಗಳು ಬರಲ ಆಗ ಇದರ ಬಗ್ಗೆ ಹೇಳಿಕೆ ಕೊಡುವುದರ ಬಗ್ಗೆ ಹೇಳಬಹುದು ಎನ್ನುತ್ತೀರಿ. ಆಹಾರದ ಸಚಿವರು ಇಂದು ಇಲ್ಲೇ ಇದ್ದಾರೆ ಎಂದರೆ, ನಾನು ಬಂದಾಗಿನಿಂದ ಅವರನ್ನು ಇಲ್ಲಿ ಕಾಣಲೇ ಇಲ್ಲ.

ಅಧ್ಯಕ್ಷರು.—ಮಾನ್ಯ ಆಹಾರ ಮಂತ್ರಿಗಳು ಇದುವರೆಗೆ ಇಲ್ಲೇ ಇದ್ದರು. ಇದಕ್ಕೆ ತಮಗೆ ಸಾಕ್ಷಿ ಒದಗಿಸಿ ಯಾರ ಕೈಯಲ್ಲಾದರೂ ಹೇಳಿಸಬೇಕೇನು ? ಈಗ ಕೌನ್ಸಿಲ್ ಅಧಿವೇಶನಕ್ಕೆ ಹೋಗಿರಬಹುದು. ಅಲ್ಲೂ ಸಭೆ ನಡೆಯುತ್ತಿರುವುದು ತಮಗೆ ಗೊತ್ತಿರಬಹುದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯನ್ನು ಬಹಳ ಬೇಜವಾಬುದಾರಿಯಿಂದ ನೋಡುತ್ತಿದ್ದಾರೆ. ಇಲ್ಲಿಗೂ ಬರುತ್ತಿಲ್ಲ, ಹಾಗೂ ವಿಧಾನ ಪರಿಷತ್ತಿಗೂ ಬರುತ್ತಿಲ್ಲ ಎಂದು ಕೇಳುತ್ತಿದ್ದೇವೆ.

Police Firing at Nagamangala

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಿನ್ನೆ ನಾಗಮಂಗಲದಲ್ಲಿ ಗೋಳಿಬಾರು ಆಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಸದಸ್ಯರು ಗೋಳಿಬಾರಾಗಿದೆ ಎನ್ನುವ ವಿಚಾರದ ಬಗ್ಗೆ ಅಡಜರ್ನ್‌ಮೆಂಟು ಮೋಷನ್‌ನನ್ನೇ ತರಬಹುದಾಗಿತ್ತು. ಇದರ ಬಗ್ಗೆ ಸರಕಾರಕ್ಕೆ ಸೂಚನೆ

ಕೊಟ್ಟು ಹೇಳಿಕೆ ಕೊಡಬೇಕೆಂದು ಕೇಳುತ್ತಿದ್ದಾರೆ. ಪೋಲೀಸು ಖಾತೆ ಮಂತ್ರಿಗಳಲ್ಲದಿದ್ದರೂ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಘೋರ್ಪಡೆಯವರು ಇದರ ಬಗ್ಗೆ ಇಲ್ಲಿ ಹೇಳಬಹುದು.

Sri M. Y. GHORPADE.—I have sent word requesting the Hon. Chief Minister to come. Since the issues raised are of a serious nature it would be better if they are raised after the Chief Minister comes. ಮಾನ್ಯ ಮುಖ್ಯ ಮಂತ್ರಿಗಳು ಬರಲಿ ಅವರಿಗೆ ಸಂಬಂಧಪಟ್ಟಿರುವ ವಿಚಾರಗಳು ಇಲ್ಲಿ ಬರುತ್ತಿರುವುದರಿಂದ ಅವರು ತಮಗೆ ಎಲ್ಲ ವಿವರಗಳನ್ನೂ ಕೊಡಬಹುದು.

ಶ್ರೀ ವಾಟಾಳ್ ನಾಗರಾಜ್.—ರಾಜ್ಯದಲ್ಲಿ ಒಂದು ಕಡೆ ಗೋಲಿಬಾರು ಆಗಿದೆ. ಹೀಗಿರುವಾಗ ಇಲ್ಲಿಗೆ ಮಾನ್ಯ ಮುಖ್ಯ ಮಂತ್ರಿಗಳು ಬರಬೇಕಾಗಿತ್ತು. ಈಚೆಗೆ ಮುಖ್ಯ ಮಂತ್ರಿಗಳು ಈ ಸಭೆಗೆ ಬರದೇ ಇರುವುದು ತುಂಬಾ ಬೇಜವಾಬ್ದಾರಿಯುತವಾದದ್ದು ಎಂದು ನಾನು ಹೇಳಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಮುಖ್ಯ ಮಂತ್ರಿಗಳಿಗೆ ಹೇಳಿ ಕಳುಹಿಸಿದ್ದೇನೆಂದು ತಿಳಿಸಿದ್ದಾರೆ. ಅದುವರೆಗೆ ಸ್ವಲ್ಪ ತಡೆದರೆ ಅನುಕೂಲ. ಅವರು ಕೌನ್ಸಿಲ್‌ಗೆ ಹೋಗಿರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮಲ್ಲಿ ನಾವು ಅರಿಕೆ ಮಾಡುವುದು. ಇಲ್ಲಿಗೆ ಮುಖ್ಯ ಮಂತ್ರಿಗಳು ಬಂದ ಮೇಲೆ ಇದರ ಬಗ್ಗೆ ವಿವರಗಳು ಬಂದಿಲ್ಲ, ಬಂದ ಮೇಲೆ ಹೇಳುತ್ತೇನೆ ಎನ್ನಬಹುದು, ನಾವು ಈ ಪ್ರಸಂಗ ಇಲ್ಲಿ ತರುವಾಗ ಮಾನ್ಯ ಮುಖ್ಯ ಮಂತ್ರಿಗಳ ಇಲಾಖೆಗೆ ಸೇರಿದಂತೆ ರೇಡಿಯೋ ವೈರ್‌ಲೆಸ್ ಇತ್ಯಾದಿ ಸೌಕರ್ಯಗಳೆಲ್ಲಾ ಇರುವಾಗ ಅದನ್ನು ಐ. ಜಿ. ಪಿ. ಯವರ ಮೂಲಕ ತರಿಸಿ ಕೊಡುತ್ತೇನೆ ಎಂದು ಹೇಳಬಹುದು, ಸರಕಾರಕ್ಕೆ ಎಲ್ಲ ಸೌಕರ್ಯಗಳಿರುವಾಗ ಇದರ ಬಗ್ಗೆ ಏಕೆ ಹೇಳಿಕೆ ಬೇಗ ಕೊಡಬಾರದು ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ನನಗೆ ಇಂದು ಬೆಳಿಗ್ಗೆ ನಾಗಮಂಗಲದ ಘಟನೆ ಬಗ್ಗೆ ಒಂದು ಟೆಲಿಗ್ರಾಂ ಬಂದಿದೆ.

ಅಧ್ಯಕ್ಷರು.—ಟೆಲಿಗ್ರಾಂಗಳೇನು ಬರಬಹುದು. ಆದರೆ ಅದರ ಮಾಹಿತಿಗಳನ್ನು ತರಿಸಿಯಾದ ಮೇಲೆ ಇಲ್ಲಿ ಹೇಳಿಕೆ ಕೊಡಲು ಸಾಧ್ಯವಾಗಬಹುದು. ಇಂತಹ ಮಾಹಿತಿಗಳನ್ನು ತರಿಸಲು ಅವರಿಗೆ ಸ್ವಲ್ಪ ಅವಕಾಶ ಕೊಡಬೇಕಾಗುತ್ತದೆ. ಸರಿಯಾದ ಮಾಹಿತಿ ಇಲ್ಲದೆ ಇಲ್ಲಿ ಹೇಳಿಕೆ ಕೊಟ್ಟರೆ ಅದು ಸರಿಯಾಗದೇ ಇರಬಹುದು. ಇದಕ್ಕೆ ನಾನು ತಮ್ಮಲ್ಲಿ ಹೇಳುವುದು ಮುಖ್ಯ ಮಂತ್ರಿಗಳು ಇಲ್ಲಿಗೆ ಬರಲಿ, ಬಂದ ಮೇಲೆ ಇದರ ಬಗ್ಗೆ ಹೇಳಬಹುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಗುಂಡಿನೇಟಿನಿಂದ ಇಲ್ಲಿನ ಜನ ತತ್ತರಿಸುತ್ತಿದ್ದಾರೆ. ಇದನ್ನು ನೋಡಿದರೆ ಇಂದು ರಾಜ್ಯದಲ್ಲಿ ಸರಕಾರ ಇದೆಯೋ ಇಲ್ಲವೋ ಎನ್ನುವುದು ಇಲ್ಲಿ ನಿರ್ಧಾರವಾಗಬೇಕು.

ಅಧ್ಯಕ್ಷರು.—ಒಬ್ಬರು ಸದಸ್ಯರು ಹೇಳಿದ್ದನ್ನೇ ನಾಲೈದು ಜನ ಮಾನ್ಯ ಸದಸ್ಯರುಗಳು ಮತ್ತೆ ಹೇಳಿದರೆ ಅದರಿಂದ ಏನು ಪ್ರಯೋಜನ ?

ಶ್ರೀ ವಾಟಾಳ್ ನಾಗರಾಜ್.—ಬೇರೆ ವಿಷಯಗಳಿಗಿಂತ ಇದು ಬಹಳ ಪ್ರಾಮುಖ್ಯವಾದುದಾಗಿದೆ.

ಅಧ್ಯಕ್ಷರು.—ತಾವು ಹೇಳುವುದೆಲ್ಲಾ ಪ್ರಾಮುಖ್ಯವಾದುದೇ ಆಗಿದೆ. ಬೇರೆ ಯಾರೂ ಬಡ್ಜೆಟ್ ಮೇಲೆ ಮಾತನಾಡುವುದು ಬೇಡ ಎಂದು ನಿಮ್ಮ ಅರ್ಥವೇ ? ಈ ತರಹದ ಮನೋಭಾವ ತಮ್ಮಲ್ಲಿರುವುದು ಸರಿಯಲ್ಲ. ಮತ್ತು ತಾವು ಹೇಳುವುದೆಲ್ಲಾ ನಡೆಯಬೇಕು ಎಂದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್.—ಪೋಲೀಸ್ ಸ್ಟೇಷನ್‌ನಲ್ಲಿ ಅಮಾನುಷ ಕೃತ್ಯ ನಡೆದಿದೆ. ಇಂತಹ ಪ್ರಕರಣ ಬಂದಾಗಲೆಲ್ಲಾ ಸರ್ಕಾರದವರು ತನಿಖೆ ನಡೆಸುತ್ತೇವೆಂದು ಹೇಳುತ್ತಾರೆ. ಆದರೆ ಇವರ ಮುಖಕ್ಕೆ ಮಂಗಳಾರತಿ......

Mysore Re--enacting (No. 2) Bill 1973—Introduction

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಂಡುಬಿಡಿ. ಯಾವ ವಿಷಯವನ್ನು ಹೇಳಬೇಕಾದರೂ ಒಂದು ಸಲ ಹೇಳುವುದು ಸರಿ. ಪದೇ ಪದೇ ಅದನ್ನೇ ಹೇಳುವುದು ಸರಿಯಲ್ಲ ನೀವು ಹೇಳುವುದೆಲ್ಲಾ ನಡೆಯಬೇಕೆಂದರೆ ಅದು ಸಾಧ್ಯವಿಲ್ಲ. I have received an order of the Governor recommending the introduction of the Mysore Re-Enacting-(No. 2) Bill, 1973. The President has also sanctioned the introduction of the Bill as required by proviso to Article 302 of the Constitution of India.

Sri M. Y. GHORPADE (Minister for Finance).—I introduce the Mysore Re-Enacting (No. 2) Bill, 1973.

MADAM SPEAKER.—The Bill is introduced * *

Matter under Rule 312 *re*: Non-clearings of Cheques by the Clearing House

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—312ನೇ ಸೆಕ್ಷನ್ ಪ್ರಕಾರ ಕ್ಲಿಯರಿಂಗ್ ಹೌಸ್ ಬಗ್ಗೆ ಒಂದು ನೋಟೀಸ್ ಕೊಟ್ಟು 3 ದಿವಸವಾಯಿತು. ಅದು ರಿಲ್ಯಾಕ್ಸ್ ಆದರೂ ತೊಂದರೆ ಮಾತ್ರ ತಪ್ಪಲಿಲ್ಲ. ಇದರ ಬಗ್ಗೆ ಸರ್ಕಾರದವರು ಏನಾದರು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ ಎಂಬ ಬಗ್ಗೆ ವಿವರಣೆ ಕೊಟ್ಟರೆ ಒಳ್ಳೆಯದು ?

ಶ್ರೀ ಎಂ. ಎಸ್. ಕೃಷ್ಣನ್.—ಅದೇ ವಿಷಯದಲ್ಲಿ ನಾನು ಸಹ ನೋಟೀಸ್ ಕೊಟ್ಟಿದ್ದೇನೆ. ಮತ್ತು ಅದರ ಜೊತೆಗೆ ಪೋಲೀಸರು ವಿಜಯಾ ಬ್ಯಾಂಕ್ ನೌಕರರ ಬಗ್ಗೆ ನಡೆದುಕೊಂಡ ಬಗ್ಗೆ ಕೂಡ ಕೇಳಿದ್ದೇನೆ. ಸರ್ಕಾರದವರು ಏನಾದರು ಸ್ಟೇಟ್‌ಮೆಂಟ್ ಮಾಡುವುದಿದ್ದರೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಆ ವಿಚಾರದಲ್ಲಿ ನನ್ನ ಹತ್ತಿರ ಸ್ವಲ್ಪ ವಿವರ ಇದೆ. ಇತ್ತೀಚಿನ ವಿಚಾರ ನಮಗಿಂತ ನಿಮಗೆ ಜಾಸ್ತಿ ಗೊತ್ತಿರಬೇಕೆಂದು ಕಾಣುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನಮಗೆ ಗೊತ್ತಿದ್ದರೆ ನಿಮಗೆ ಏತಕ್ಕೆ ಕೇಳಬೇಕು !

Sri M. Y. GHORPADE.—I am prepared to make a Statement now.

The State Government are not directly concerned with the functioning of the Bangalore Bankers' Clearing House, which is an autonomous body, of which the Manager, Reserve Bank of India is the President and the representatives of various Banks are members.

2. It appears that the decision was taken by the Clearing House on the morning of 15th March, 1973 in view of the boycott programme of the Vijaya Bank transactions launched by the Karnataka Pradesh Bank Employees' Federation as a protest against certain alleged actions by the Vijaya Bank management.

3. It appears that, under the rules of the Clearing House, the clearing house cannot function unless all the member banks are willing to accept cheques from all other member banks. The boycott of the transactions of one bank, therefore, led to the closure of the clearing house.

---

* * Bill appended as annesure to this Valume.

4. With a view to restoring the normalcy and avoiding further inconvenience to the public the State Government have had discussions with the President of the Clearing House, General Manager, State Bank of Mysore, General Secretary and the Organising Secretary of the Karnataka Pradesh Bank Employees' Federation to-day. The KPBEF representatives, in order to avoid inconvenience to the public have offered to accept cheques belonging to various banks presented by the Vijaya Bank in the Clearing House. In making their offer, however, the Federation representatives have clarified that they will confine their boycott programme to the instruments of Vijaya Bank only when tendered over the counters. The normal operations of the other banks are, therefore, expected to be restored from tomorrow.

5. It has to be made clear once again that the State Governments are in no way concerned with the disputes, if any, which has led to the closure of the clearing house and the steps mentioned above are only with a view to restoring normal working of the clearing house in the public interest.

6. Bangalore Bankers Clearing House has resumed clearance of cheques from the 20th March 1973.

Som information regarding this has also appeared in the Press. Subsequently, I understand that some more development has taken place and the matter is likely to be resolved.

Sri M. S. KRISHNAN.—One question that arises is that it was only the boycott of the Vijaya Bank transaction that is undertaken by the employees and not all the Banks. Apart from this, I know the Bank employees specifically stated that they are prepared to carry on the clearing of the cheques of the Banks. Still why is it that the President of this Clearing House, who happens to be the Manager of the Reserve Bank of India, which is also a Government of India institution with which our Government is also connected, chose to see that the entire clearing is closed leading to so much of difficulty to cuctomers? Was it necessary?

Sri M. Y. GHORPADE.—The State Government is not directly concerned with the dispute, and what is the justification on either side is a matter for them to resolve. We have gone out of the way to see that the public is not inconvenienced. After all, we are not directly concerned, at least my Department is not directly concerned with the distpute. We do not know what developments led to the dispute and what was the reaction to that. The hon. member will appreciate that it is not possible for the Finance Department to take more interest than what we have done. We are not controlling the Reserve Bank of India. Therefore, we have done whatever we could to minimise public inconvenience. It is now open for the hon. member to suggest what more does he expect from any Department of Government; then we shall consider.

ಶ್ರೀ ಟಿ. ಆರ್. ಶಾಮಣ್ಣ.—ರಾಷ್ಟ್ರೀಕರಣವಾಗಿರುವ ಬ್ಯಾಂಕ್‌ಗಳು ನಾಗರೀಕರ ಹಿತದ ಬಗ್ಗೆ ಹೆಚ್ಚಿನ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾದುದು ಸರಿಯಲ್ಲವೇ ? ಬ್ಯಾಂಕ್‌ಗಳು ರಾಷ್ಟ್ರೀಕರಣವಾಗಬೇಕೆಂಬ ಧೋರಣೆಯುಳ್ಳ ಈ ಕೆಲಸಗಾರರು ಜನರಿಗೆ ಸಾಧ್ಯವಾದಷ್ಟು ತೊಂದರೆ ಮಾಡದಂತೆ ತಮ್ಮ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗಬೇಕು ಎಂಬ ಬಗ್ಗೆ ಸರ್ಕಾರದ ಅಭಿಪ್ರಾಯವಾದರೂ ಏನು ?

ಶ್ರೀ ಎಂ. ವೈ. ಘೋರ್ಪಡೆ.—ಸರ್ಕಾರದ ಅಭಿಪ್ರಾಯ ಸ್ಪಷ್ಟವಾಗಿ ಹೇಳಿದ್ದೇನೆ. ಅದರ ಬಗ್ಗೆ ಚರ್ಚೆ ಮಾಡಬೇಕಾದ್ದು ಏನೂ ಇಲ್ಲ. ಅಲ್ಲಿ ಏನು ನಡೆಯಿತು ಎಂಬುದನ್ನು ನನ್ನ ಸ್ಟೇಟ್‌ಮೆಂಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಈಗ ಡಿಸ್‌ಪ್ಯೂಟ್‌ನ ಹಿನ್ನೆಲೆ ಏನು. ಆ ಬಗ್ಗೆ ಏನು ತೀರ್ಮಾನವಾಯಿತು ಎಂಬ ಅಂಶ ಸಂಬಂಧಪಟ್ಟ ಬ್ಯಾಂಕ್‌ನೌಕರರಿಗೆ ಸೇರಿದ್ದು, ಅದನ್ನು ತೀರ್ಮಾನ ಮಾಡಲು ಟ್ರೇಡ್ ಯೂನಿಯನ್ ಇದೆ, ಲೇಬರ್ ಮೂವ್‌ಮೆಂಟ್ ಇದೆ ಮತ್ತು ರಿಜರ್ವ್ ಬ್ಯಾಂಕ್ ಇದೆ. ಅಲ್ಲಿ ಅದು ತೀರ್ಮಾನವಾಗುತ್ತದೆ. ಕ್ಲಿಯರಿಂಗ್ ಹೌಸ್‌ಗೆ ಸಂಬಂಧಪಟ್ಟ ವಿಷಯವನ್ನು ಎಷ್ಟು ಹೇಳಬೇಕೋ ಅಷ್ಟನ್ನೂ ಹೇಳಿದ್ದೇನೆ. ಡಿಸ್‌ಪ್ಯೂಟ್‌ಗೆ ಸಂಬಂಧಪಟ್ಟಂತೆ ಕೇಳುವುದಾದರೆ ನಾನು ಏನನ್ನೂ ಹೇಳುವ ಸ್ಥಿತಿಯಲ್ಲಿ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ವಿಜಯಬ್ಯಾಂಕ್ ನೌಕರರನ್ನು ಯಾರೋ ಕೆಲವರು ಒಳಗಿನಿಂದ ಬಂದು ಅವರು ಪ್ರತಿಭಟನೆ ಮಾಡಿದ ದಿವಸ ದೊಣ್ಣೆಯಿಂದ ಹೊಡೆದರು ಮತ್ತು ಪೋಲೀಸರು ಬಂದು ಲಾಟಿಚಾರ್ಜ್ ಮಾಡಿದರು ಎಂದು ಕೇಳಿದ್ದೇನೆ, ಅದಕ್ಕೆ ಕಾರಣವೇನು ? ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರು ಮಾಹಿತಿ ಇದ್ದರೆ ಹೇಳುವುದು ಉತ್ತಮ ;

2-30 P. M.

Sri M. Y. GHORPADE.—I am not in a position to say anything so far as the law and order aspect of the dispute is concerned. I was only making a statement so far as clearing of the cheques was concerned. To that extent we are concerned indirectly. I am certainly not concerned with other aspect of the dispute. If you want to raise it, I am afraid, you will have to raise it on some other occasion. My statement is concerned only with regard to the clearance of the cheques.

Sri M. S. KRISHNAN.—I request the Chair kindly to give me permission to raise both aspect of the question. ನಾನು ಎರಡು ಪ್ರಶ್ನೆಯನ್ನು ಕೇಳಿದೆ. ಆದರೆ ಮಾನ್ಯ ಹಣಕಾಸಿನ ಸಚಿವರು ಒಂದು ಪ್ರಶ್ನೆಗೆ ಮಾತ ಉತ್ತರವನ್ನು ಹೇಳಿದರು. ಇನ್ನೊಂದು ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ, ಆದ್ದರಿಂದ ನನ್ನ ಇನ್ನೊಂದು ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು.

ಅಧ್ಯಕ್ಷರು.—ಅದು ಇನ್ನೊಂದು ಸಾರಿ ನೋಡೋಣ. Please rusume your seat.

Ruling by the Speaker

re : Scope of Rule 312 of the Rules of Procedure.

MADAM SPEAKER.—On 12th March, 1973 when some members wanted to raise certain matters under Rule 312 of the Rules of procedure and Conduct of Business in the Legislative Assembly Hon'ble Member Sri K. Puttaswamy raised a Point of Order seeking to know the exact scope of Rule 312. It was his contention that matters to be raised under Rule 312 should have some bearing on the subject matter before the House. He felt that the use of Rule 312 by Members to

raise important matters in the House which have no connection with the Business of the House was not correct. He pleaded that the Members should take recourse to other provisions of rules for bringing such matters before the House such as Call Attention Notice, Discussion for Short Duration etc. I stated that there was considerable force in the point of order raised by Sri K. Puttaswamy and promised to examine the matter in some depth. Several other Members were of the view that if they obtained Speaker's permission to raise matters in the House they could do so under this rule. They were of the view that to raise matters under this rule it was not necessary that the subject matter should have any connection with the Business before the House.

I have considered the whole matter. It is clear from the Rules of Procedure that save as otherwise provided in the rules, no business not included in the list of business for the day, shall be transacted at any time without the leave of the Speaker. [Rule 31 sub-rule (3)]. In other words it is clear that unless an item of business is put on the order paper, it would not be proper for that item to be taken up. There may, however, be cases where certain representations have to be made by members in respect of matters outside the order paper. In such cases the Speaker has to determine whether the time of the House could be taken up for raising such matters. My predecessors in this House and the Speaker of the Lok Sabha have ruled on a number of occasions that no matter can be raised by any member which is not on the order paper without the permission of the Speaker. I find that Rule 312 of our Rules of procedure is identical to Rule 377 of the Rules of Procedure in Lok Sabha. I have looked into the Proceedings of the Lok Sabha where the Speaker of Lok Sabha has permitted such matters to be raised in the House with prior permission, although the subject matter raised by members had no connection with the business before the House. Such cases have, however, been very few and far between, I feel that the subject matter to be raised under Rule 312 need not be one connected with the business before the House, If it is to be connected with the business of the House, it can be raised on a point of order or in any other manner with the permission of the Chair. In such cases no notice is needed. It does not at the same time, mean that the members could bring every conceivable matter under the purview of this rule. This rule should be taken recourse to very very sparingly. Only some broad matters of policy or principles which are urgently required to be brought to the notice of the Government and there is likelyhood of delay if they are to be brought under other rules of Procedure could be raised under this rule. Matters requiring collection of information cannot be raised under this rule. I hope members will bear in mind these principles while seeking my permission to raise matters under Rule 312. I would like to add that there is no discussion as such on such occasions. The member who has given notice and who is

(MADAM SPEAKER)

permitted by the Speaker will state briefly the point. The Minister oncerned may explain the position.

I propose to allow such matters only on one or two days in a week after the day's business.

Business of the House — Announcement

MADAM SPEAKER :— I have to make an announcement to the House. The discussion on the Budget will conclude to-day and the Minister for Finance will reply to the Debate on the discussion tomorrow. Besides the reply to the Debate on general discussion, the House will transact the following Business tomorrow :—

On 22-3-1973 :—

(1) Discussion and Voting of the Supplementary Demands for Grants for the year 1972-73.

(2) Voting of Demands for Grants on Account for the year 1973-74.

On 23-3-1973 :—

The House would take up the consideration and passing of the following Bills :—

(i) The Mysore Sales Tax (Amendment) Bill, 1973.

(ii) The Mysore Re-enacting (No. 2) Bill, 1973.

(iii) The Mysore Appropriation Bill, 1973.

(iv) The Mysore Appropriation Vote on Account Bill.

The Voting of Demands for Grants for the year 1973-74 will commence on Monday, the 26th March 1973.

Budget Estimates for 1973-74—General Discussion

(*Debate continued*

†ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷಿಣಿಯವರೇ ನಮ್ಮ ಹಣಕಾಸಿನ ಸಚಿವರು ಬಹಳ ಶ್ರಮಪಟ್ಟು ತಮ್ಮ ವರದಿಯನ್ನು ಈ ಸದನಕ್ಕೆ ಒಪ್ಪಿಸಿದ್ದಾರೆ. ಈ ವರದಿಯು ಬಹುಮಟ್ಟಿಗೆ ವಾಸ್ತವಾಂಶಗಳಿಗೆ ಬಹಳ ದೂರವಾಗಿದೆ ಎಂದು ಹೇಳದೇ ವಿಧಿಯಿಲ್ಲ, ಈ ಬಗ್ಗೆ ಕೆಲವು ವಿಷಯಗಳನ್ನು ಅವರ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಮಾನ್ಯ ಹಣಕಾಸಿನ ಸಚಿವರು ಮೊಟ್ಟಮೊದಲನೆಯದಾಗಿ ಏನು ಹೇಳಿದ್ದಾರೆ ಎಂದರೆ ಹೊಸ ತೆರಿಗೆಗಳು ಯಾವುದೂ ಇಲ್ಲ ಎಂದು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ಇಂಡಿಯಾ ಸರ್ಕಾರದವರು ಬಾಂಗ್ಲಾ ದೇಶದ ತೆರಿಗೆಯನ್ನು ಏಪ್ರಿಲ್ ತಿಂಗಳಿಂದ ರದ್ದು ಮಾಡಿದ್ದಾರೆ. ಆದರೆ ನಮ್ಮ ರಾಜ್ಯ

ಸರ್ಕಾರದವರು ಬಾಂಗ್ಲಾ ದೇಶದ ತೆರಿಗೆಯನ್ನು ಹಾಗೆಯೇ ಮುಂದುವರಿಸಿದ್ದಾರೆ. ಇದು ಹೊಸ ತೆರಿಗೆ ಆಗಲಿಲ್ಲವೇ ಎಂಬುದನ್ನು ಮಾನ್ಯ ಅರ್ಥ ಸಚಿವರು ಯೋಚನೆ ಮಾಡಬೇಕಾಗಿದೆ. ಈಗ ಮಾನ್ಯ ಹಣಕಾಸಿನ ಸಚಿವರು ಕೆಲವಾರು ಬಾಬುಗಳಮೇಲೆ ತೆರಿಗೆಯ ಹೊರೆಯನ್ನು ಹೊರೆಸಿದ್ದಾರೆ. ಅದು ಹೊಸ ತೆರಿಗೆಯಾಗುವುದಿಲ್ಲವೇ ? ಕೆಲವಾರು ಬಾಬುಗಳ ಮೇಲೆ ಸರ್ಕಾರದವರು ತೆರಿಗೆಯನ್ನು ಹಾಕಿದರೆ ಅದು ಹೊಸ ತೆರಿಗೆಯಾಗುವುದಿಲ್ಲ ಎಂದು ಮಾನ್ಯ ಸಚಿವರು ಅಭಿಪ್ರಾಯವನ್ನು ಇಟ್ಟುಕೊಂಡಿದ್ದರೆ ಅದು ಸರಿಯಲ್ಲ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಅವರ ವರದಿ ವಾಸ್ತವಾಂಶಕ್ಕೆ ದೂರವಾಗಿದೆ ಎಂದು ಹೇಳಿದರೆ ತಪ್ಪೇನು ಇಲ್ಲ. ಮಾನ್ಯ ಹಣಕಾಸಿನ ಸಚಿವರು ಆಯವ್ಯಯ ಪತ್ರದಲ್ಲಿ ನಮ್ಮ ರಾಜ್ಯದ ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರದ ನೌಕರರ ಮಟ್ಟಕ್ಕೆ ಡಿ. ಎ. ಹೆಚ್ಚಿಸಿದ್ದೇವೆ ಎಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ಸಂತೋಷ. ಆದರೆ ಈ ರೀತಿ ಸರ್ಕಾರದವರು ಡಿ. ಎ. ಹೆಚ್ಚಿಸಿರುವುದರಿಂದ ನೌಕರರಿಗೆ ಏನಾದರೂ ಫಾಯಿದೆ ಬರುತ್ತದೆಯೇ ಎಂದು ನೋಡಿದರೆ 10 ರೂಪಾಯಿ ಡಿ. ಎ. ಜಾಸ್ತಿಯಾದರೆ ದಿನಬಳಕೆ ವಸ್ತುಗಳ ಬೆಲೆ 40 ರೂಪಾಯಿ ಜಾಸ್ತಿಯಾಗಿದೆ. ಹೀಗಿರಬೇಕಾದರೆ ನೌಕರರಿಗೆ ಡಿ. ಎ. ಜಾಸ್ತಿ ಮಾಡುವುದರಿಂದ ಸರ್ಕಾರದ ಖಜಾನೆಗೇನೋ ಖರ್ಚು ಬರುತ್ತದೆ. ಆದರೆ ಆಹಾರದ ಬೆಲೆಗಳನ್ನು ಇಳಿಸುವುದಕ್ಕೆ ಬದಲಾಗಿ ಜಾಸ್ತಿ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತಿದೆ. ಇದು ಸರಿಯಾದ ವರ್ತನೆಯಲ್ಲ ಎಂದು ಹೇಳಬೇಕಾಗುತ್ತದೆ. ಆಹಾರದ ಬೆಲೆ ಬಹಳ ಜಾಸ್ತಿಯಾಗಿದೆ. ಈ ಸರ್ಕಾರ ಆಡಳಿತಕ್ಕೆ ಬರುವುದಕ್ಕೆ ಮುಂಚೆ ಶ್ರೀಮಾನ್ ವೀರೇಂದ್ರ ಪಾಟೀಲ್ ಅವರ ಸರ್ಕಾರ ಇದ್ದಾಗ ಮತ್ತು ಗವರ್ನರ್ ಆಡಳಿತ ಇದ್ದಾಗ ಒಂದು ಕೇಜಿ ಅಕ್ಕಿಗೆ 1 ರೂಪಾಯಿ 50 ಪೈಸೆಗಿಂತ ಯಾವಾಗಲೂ ಜಾಸ್ತಿಯಾಗಿರಲಿಲ್ಲ. ಈಗ ಒಂದು ಕೇಜಿ ಅಕ್ಕಿಗೆ 2 ರೂಪಾಯಿ 30 ಪೈಸಾ ಆಗಿದೆ. ಮೈಲೋ ಒಂದು ಕೇಜಿಗೆ 1 ರೂಪಾಯಿ 17 ಪೈಸೆ ಇದ್ದದ್ದು 2 ರೂಪಾಯಿ 20 ಪೈಸೆ ಆಗಿದೆ. ರವೆ ಒಂದು ಕೇಜಿಗೆ 1 ರೂಪಾಯಿ 40 ಪೈಸೆ ಇದ್ದದ್ದು ಇವೊತ್ತು ಬ್ಲಾಕ್‌ಮಾರ್ಕೆಟ್‌ನಲ್ಲಿ 2 ರೂಪಾಯಿ 40 ಪೈಸೆಯಂತೆ ಮಾರಾಟವಾಗುತ್ತಿದೆ. ಕಡಲೆಕಾಯಿ ಎಣ್ಣೆ 3½ ರೂಪಾಯಿ ಇದ್ದದ್ದು ಇವೊತ್ತು ಒಂದು ಕೇಜಿಗೆ 7 ರೂಪಾಯಿಗಳಾಗಿದೆ. ಇದನ್ನು ನೋಡಿದರೆ ಸರ್ಕಾರದವರು ಯಾವ ರೀತಿ ಅಧಿಕಾರವನ್ನು ನಡೆಸುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ಈಗ ಸರ್ಕಾರಿ ಡಿಪೋಗಳಲ್ಲಿ ಜನಗಳಿಗೆ ಗೋಧಿಯನ್ನು ಕೊಡುತ್ತಿದ್ದಾರೆ. ಅದು ಜನಗಳಿಗೆ ಎಷ್ಟರಮಟ್ಟಿಗೆ ಸಿಕ್ಕುತ್ತಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಮಂತ್ರಿಗಳು ಯಾರಾದರೂ ಸರ್ಕಾರಿ ಡಿಪೋಗಳಿಗೆ ಹೋಗಿ ಸಾಮಾನುಗಳನ್ನು ತೆಗೆದುಕೊಂಡು ಬಂದ ಅಭ್ಯಾಸ ಇಲ್ಲ. ಆದ್ದರಿಂದ ಅವರಿಗೆ ಜನಗಳ ಕಷ್ಟ ಗೊತ್ತಾಗುವುದಿಲ್ಲ. ಇವರು ಕೊಡತಕ್ಕಂತಹ ಗೋಧಿಯಲ್ಲಿ ಕಸವೇ ತುಂಬಿದೆ. 10 ಕೆಜಿ ಇವರು ಕೊಟ್ಟರೆ ಅದರಲ್ಲಿ ಗೋಧಿ ಕೇವಲ ಎಂಟುವರೆ ಕೆಜಿ ಮಾತ್ರ ಉಳಿಯುತ್ತದೆ. ಬಾಕಿದ್ದು ಕಸವೇ ಇರುತ್ತದೆ. ಅಂಥ ಗೋಧಿಯನ್ನು ಕೊಟ್ಟು ಜನರಿಗೆ ಏಕೆ ತೊಂದರೆಯನ್ನು ಕೊಡುತ್ತೀರಿ. ಇನ್ನು ಸಿಮೆಂಟಿನ ಗತಿ ದೇವರೇ ಗತಿ. 12 ರೂಪಾಯಿಗೆ ಮಾರತಕ್ಕ ಸಿಮೆಂಟನ್ನು ರೈಲ್ವೇ ಗೂಡ್ಸ್ ಶೆಡ್ಡಿನಲ್ಲಿ 22 ರೂಪಾಯಿಯಂತೆ ಬೇಕಾದವರಿಗೆ ಮಾರಾಟ ಮಾಡುತ್ತಿದ್ದಾರೆ. ಅದನ್ನು ಇವತ್ತು ತಡೆಹಿಡಿಯುವುದಕ್ಕೆ ಸರ್ಕಾರ ವಿಫಲವಾಗಿದೆ ಎಂದರೆ ಬಹಳ ನಾಚಿಕೆಕೇಡು. ನೀವು ಇವತ್ತು ಯಾರ್ಯಾರಿಗೆ ಏಜೆನ್ಸಿ ಕೊಟ್ಟಿದ್ದೀರಿ, ಅವರು ರೈಲ್ವೆ ಗೂಡ್ಸ್ ಶೆಡ್ಡಿನಲ್ಲಿ ವ್ಯಾಗನ್ ಪೂರ್ತಿ ಬ್ಲಾಕ್‌ನಲ್ಲಿ ಮಾರಾಟ ಮಾಡುತ್ತಿರುವುದನ್ನು ತನಿಖೆ ಮಾಡಿದ್ದೀರಾ ಎಂದು ಕೇಳುತ್ತೇನೆ. ಇದರಿಂದಾಗಿ ಇವತ್ತು ಸಾಮಾನ್ಯ ಜನರು ಏನಾದರೂ ಮನೆಗಳನ್ನು ಕಟ್ಟಿಸುವುದಕ್ಕೆ ಹೋಗಿದ್ದರೆ, ಅದನ್ನು ಅರ್ಧದಲ್ಲಿಯೇ ನಿಲ್ಲಿಸಬೇಕಾಗಿದೆ. ಆ ಪರಿಸ್ಥಿತಿಯನ್ನು ತಪ್ಪಿಸಲು ಸರ್ಕಾರದವರು ವಿಫಲರಾಗಿದ್ದಾರೆಂದು ಹೇಳುತ್ತೇನೆ.

ಇನ್ನು ಇದರ ಜೊತೆಗೆ ಹೋಲ್‌ಸೇಲ್ ಟ್ರೇಡ್ ಸರ್ಕಾರ ವಹಿಸಿಕೊಂಡರೆ ಜನರಿಗೆ ಆಹಾರ ಪದಾರ್ಥವಾದರೂ ಸರಿಯಾಗಿ ದೊರೆಯುತ್ತದೆ ಎಂದು ನಾನು ನಂಬುವುದಿಲ್ಲ. ಒಂದು ವೇಳೆ ಸರ್ಕಾರ ಒದಗಿಸಿದರೂ ಅದು ಹುಳಗಳು ಬಿದ್ದಿರುವ ಆಹಾರವಾಗುತ್ತದೆ. ಏಕೆಂದರೆ ನಿಮ್ಮ ಹತ್ತಿರ ಅದಕ್ಕೆ ಬೇಕಾದಂತಹ ಮೆಶಿನರಿ ಇಲ್ಲ. ಇಲ್ಲಿ ಇರುವುದು ಲಂಚಕೋರ ಮೆಶಿನರಿ. ಆದ್ದರಿಂದ ಇದರಿಂದ ಸಹ ಜನರಿಗೆ ಹೆಚ್ಚು ಕಷ್ಟ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆಯೇ ವಿನಹ ಅನುಕೂಲವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ. ಆದ್ದರಿಂದ ಸರ್ಕಾರ ಈ ಹೋಲ್‌ಸೇಲ್ ಟ್ರೇಡನ್ನು ತೆಗೆದುಕೊಳ್ಳುವುದರಿಂದ ಜನರಿಗೆ ಏನೂ ಪ್ರಯೋಜನವಾಗುವುದಿಲ್ಲ. ಮೊನ್ನೆ ತಾನೇ ಶಾಮಣ್ಣನವರು ಆಹಾರ ಸಚಿವರಿಗೆ ಕೆರೊಸಿನ್ ಬಗ್ಗೆ ಪ್ರಶಂಸೆ ಮಾಡಿದರು. ಆದರೆ ಅವರು ಎಕ್ಸ್‌ಟೆನ್‌ಶನ್‌ನಲ್ಲಿರುವುದರಿಂದ ಅಲ್ಲಿ ಪರಿಸ್ಥಿತಿ ಆ ರೀತಿ ಇರಬಹುದು. ಆದರೆ ನಮ್ಮ ಹಳೆಯ ಸಿಟಿಯಲ್ಲಿ ಸೀಮೆ ಎಣ್ಣೆಯ ಗೋಳು ಹೇಳತೀರದು. ಅದಲ್ಲದೆ ನನಗೆ ಇನ್ನೆ ಯಾವ

(ಶ್ರೀ ಕೆ. ಎಂ. ನಾಗಣ್ಣ)

ಪಂಪ್‌ನಲ್ಲಿಯೂ ಸಹ ಪೆಟ್ರೋಲ್ ಸಿಗಲಿಲ್ಲ. ಕೊನೆಗೆ ಇವತ್ತು ಸಿಕ್ಕಿತು. ಆದ್ದರಿಂದ ಸರ್ಕಾರಕ್ಕೆ ಜನತೆಗೆ ಅನುಕೂಲ ಮಾಡಬೇಕೆಂಬ ಮನೋಭಾವ ಇಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ.

ಇನ್ನು ಈ ಸ್ಥಳೀಯ ಸಂಸ್ಥೆಗಳ ಮಂತ್ರಿಗಳು ಇಲ್ಲಿ ಇಲ್ಲ. ನಮ್ಮ ಮಂತ್ರಿಗಳಾದ ಬಸವಲಿಂಗಪ್ಪನವರು ಸ್ಲಂ ಕ್ಲಿಯರೆನ್ಸ್ ಪ್ರೋಗ್ರಾಂ ಹಾಕಿಕೊಂಡಿದ್ದಾರೆ. ಆದರೆ ಎಲ್ಲಿ ಇವರು ಸ್ಲಂ ಕ್ಲಿಯರ್ ಮಾಡಿದ್ದಾರೆ ಎಂದು ಹೇಳಬೇಕು. ಹಿಂದೆ 100 ಸ್ಲಂ ಇದ್ದದ್ದು ಈಗ ಅದರ ನಾಲ್ಕರಷ್ಟು ಆಗಿದೆ. ಇವರು ಬರೀ ಬಾಯಿ ಮಾತಿನಲ್ಲಿ ಹೇಳುತ್ತಿದ್ದಾರೆ ಅಲ್ಲದೆ ಕಾರ್ಯದಲ್ಲಿ ಏನೂ ಮಾಡುತ್ತಾ ಇಲ್ಲ. ಇನ್ನು ಹೌಸ್ ಸೈಟ್ಸ್ ವಿಚಾರದಲ್ಲಿ ಹೇಳುವುದಾದರೆ, ಕೆಲವು ವಾರಗಳ ಹಿಂದೆ ಕೆಲವು ಜನರ ಮೆರವಣಿಗೆಯನ್ನು ನಾನು ಮತ್ತು ಶಾಮಣ್ಣನವರು ಕರೆದುಕೊಂಡು ಬಂದಿದ್ದೆವು. ಅದರ ಬಗ್ಗೆ ನಾನು ಜೀರೋ ಅವರಿನಲ್ಲಿ ಆ ವಿಚಾರವನ್ನು ಇಲ್ಲಿ ಎತ್ತಿದ್ದೇನೆ. ಆಗ ಮಾನ್ಯ ಮಂತ್ರಿಯವರು ''ಏನು ಇಬ್ಬರು ಜನರನ್ನು ಇಲ್ಲಿಗೆ ಕರೆದುಕೊಂಡು ಬಂದರೆ ಅವರಿಗೆ ನೀವು ಹೇಳಿದ ಹಾಗೆ ಮಾಡಬೇಕೇನು ? ಎಂದು ಹೇಳಿದರು. ಈ ರೀತಿ ನಮಗೆ ಇವರು ಮಾತನಾಡುತ್ತಾ ಇರುವಾಗ ಸಾಮಾನ್ಯ ಜನರು ಇವರನ್ನು ಕಾಣಲು ಕಚೇರಿಗೆ ಬಂದರೆ ಯಾವ ರೀತಿ ಮಾತನಾಡಬಹುದು ಎಂದು ಊಹಿಸಬಹುದು. ನಮ್ಮ ಬಗ್ಗೆ ಇಷ್ಟು ಕೇವಲವಾಗಿ ಮಾತನಾಡತಕ್ಕ ಮಂತ್ರಿ ಅಲ್ಲಿ ಬಾಕಿ ಜನರೊಡನೆ ಯಾವ ರೀತಿ ವರ್ತನೆ ಮಾಡಬಹುದೆಂಬುದನ್ನು ಯೋಚನೆ ಮಾಡಬಹುದು. ಅದಕ್ಕೋಸ್ಕರ ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ—ತಮ್ಮ ಕಚೇರಿಗೆ ಎಲ್ಲಾ ಮಂತ್ರಿಗಳನ್ನು ಕರೆಸಿಕೊಂಡು ''ಅಯ್ಯಾ ಮಂತ್ರಿಗಳೇ, ಈ ಮಂತ್ರಿ ಪದವಿ ಎಂಬುದು ಶಾಶ್ವತವಲ್ಲ ; ಆ ಮೇಲೆ ಜನರು ನಿಮ್ಮನ್ನು ಯಾವ ರೀತಿ ಮರ್ಯಾದೆ ಕೊಟ್ಟು ನೋಡುತ್ತಾರೆ ಎಂಬುದನ್ನು ತಿಳಿದುಕೊಂಡು ಸಾರ್ವಜನಿಕರಲ್ಲಿ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಿ. ಎಂದು ಹೇಳಬೇಕು. ಇನ್ನು ಈ ಸ್ಥಳೀಯ ಸಂಸ್ಥೆಗಳ ಮಂತ್ರಿಗಳ ಕೆಲಸ ಅಂದರೆ ಮುನಿಸಿಪಾಲಿಟಿಗಳನ್ನು ರದ್ದು ಮಾಡುವುದು. ರಾತ್ರಿ ಕನಸಿನಲ್ಲಿ ಏನಾದರೂ ಅವರಿಗೆ ಕಂಡರೆ ಮರುದಿನ ಬೆಳಿಗ್ಗೆ ಅಂಥ ಮುನಿಸಿಪಾಲಿಟಿಗಳನ್ನು ರದ್ದು ಮಾಡುವುದು. ಅದೇ ರೀತಿ ಮೊನ್ನೆ ಬೆಳ್ಳೂರು ಮುನಿಸಿಪಾಲಿಟಿಯನ್ನು ಸಹ ರದ್ದು ಮಾಡಿದ್ದಾರೆ. ಇಂಥ ಮಂತ್ರಿಯನ್ನು ನಾನು ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ನೋಡಿಲ್ಲ. 1966ನೇ ಇಸವಿಯಲ್ಲಿ ರಿಯಾಲೂರ್ ರೈಲ್ವೆ ಏಕ್ಸಿಡೆಂಟ್ ಆಯಿತು. ಮಾರನೆಯ ದಿವಸವೇ ಶಾಸ್ತ್ರಿಯವರು ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟರು. ಮೊನ್ನೆಯ ದಿವಸ ಏರೋ ವಿಮಾನ ಅಪಘಾತವಾಯಿತು ಎಂದು ಮಂತ್ರಿಯಾಗಿದ್ದ ಕರಣ್‌ಸಿಂಗ್‌ರವರು ರಾಜಿನಾಮೆ ಕೊಟ್ಟರು. ಆದರೆ ನಮ್ಮ ಮಂತ್ರಿಯವರು ತಪ್ಪು ಮಾಡಿದರೂ ಕೂಡ ಇನ್ನೂ ಚೇರಿಗೆ ಅಂಟಿಕೊಂಡು ಭದ್ರವಾಗಿ ಕೂತಿದ್ದಾರೆ. ನೀವು ಮಂತ್ರಿಪದವಿ ಬಿಡಿ ಎಂದು ಎಷ್ಟು ಹೇಳಿದರೂ ಕೂಡ ನಿಮಗೆ ಏಕೆ ನನ್ನ ಮೇಲೆ ಹೊಟ್ಟೆ ಉರಿ ಎಂದು ಕೇಳುತ್ತಿದ್ದಾರೆ. ಮಂತ್ರಿ ಪದವಿ ಎಷ್ಟು ಕಷ್ಟವಾದುದು ಎಂದು ನನಗೂ ಗೊತ್ತಿದೆ. ಆದರೆ ಇಂಥ ಮಂತ್ರಿಯವರು ಅಧಿಕಾರದಲ್ಲಿರುವುದು ಬೇಡ. ಮೊದಲು ಮಂತ್ರಿಮಂಡಲವನ್ನು ಏನಾದರೂ ವ್ಯತ್ಯಾಸ ಮಾಡುವುದಾದರೆ, ಇವರನ್ನು ತೆಗೆದುಹಾಕಬೇಕು. ಇಲ್ಲದಿದ್ದರೆ ನಿಮಗಂತೂ ಹೆಸರು ಬರುವುದಿಲ್ಲ. ಈಗಾಗಲೇ ಇವರಿಂದಾಗಿ ಮುಖ್ಯ ಮಂತ್ರಿಯವರಿಗೆ ಕೆಟ್ಟ ಹೆಸರು ಬಂದಿದೆ. ಆದ್ದರಿಂದ ಬಸವಲಿಂಗಪ್ಪನವರು ಮಾಡಿದ ಪಾಪದ ಹೊರೆ ನಿಮ್ಮ ಮೇಲೆ ಜಾಸ್ತಿಯಾಗಿ ಬೀಳುತ್ತದೆ. ಇದನ್ನು ಮಾನ್ಯ ಮುಖ್ಯ ಮಂತ್ರಿಯವರು ಗಮನಿಸಬೇಕೆಂದು ಹೇಳುತ್ತೇನೆ. ಇನ್ನೊಂದು ಬಸವಲಿಂಗಪ್ಪನವರ ಮುಖ್ಯವಾದ ಕೆಲಸವೇನೆಂದರೆ, ಹಿಂದೆ ಬಸವೇಶ್ವರರು ಮತ್ತು ರಾಮಾನುಜಾಚಾರ್ಯರು ಪಾರಮಾರ್ಥಿಕ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದರು. ಇವತ್ತು ನಮ್ಮ ಬಸವಲಿಂಗಪ್ಪನವರು ಸಹ ಒಬ್ಬ ಆಧುನಿಕ ಬಸವೇಶ್ವರರಾಗಿದ್ದಾರೆ. ದೇವರನ್ನು ಏಕೆ ಪೂಜೆ ಮಾಡಬೇಕು, ಸತ್ಯ ಎಲ್ಲಿದೆ—ಇತ್ಯಾದಿ ಕೇಳುತ್ತಿದ್ದಾರೆ. ದೇವರಿಗೂ ಇವರಿಗೂ ಏನು ಸಂಬಂಧ ಎಂದು ಕೇಳುತ್ತೇನೆ. ಆದ್ದರಿಂದ ಇವರು ಭಾಷಣ ಮಾಡುವಾಗ ಸ್ವಲ್ಪ ಹದ್ದುಮೀರಿ ಹೋಗದ ಹಾಗೆ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬೆಂಗಳೂರು ನಗರ ಕಾರ್ಪೊರೇಶನ್ನಿನಲ್ಲಿ ಕೇಡರ್ ಅಂಡ್ ರಿಕ್ರುಟ್‌ಮೆಂಟ್ ರೂಲ್ಸ್ ಜಾರಿಗೆ ತರುತ್ತೇವೆಂದು 1964ನೇ ಇಸವಿಯಿಂದ ಹೇಳುತ್ತಿದ್ದರು. ಆರ್. ಎಂ. ಪಾಟೀಲರು ಮಂತ್ರಿಯಾಗಿದ್ದಾಗ ಕಾರ್ಪೊರೇಷನಿಗೆ ನೋಟೀಸ್ ಕೊಟ್ಟಿದ್ದರು. ಆದರಲ್ಲಿ ಈ ಕೇಡರ್ ಅಂಡ್ ರಿಕ್ರುಟ್‌ಮೆಂಟ್ ರೂಲ್ಸ್‌ನ್ನು ಏಕೆ ಜಾರಿಗೆ ಕೊಟ್ಟಿಲ್ಲವೆಂದು ಹೇಳಿದ್ದರು. ಆದರೆ 1964 ಹೋಗಿ 1973ನೇ ಇಸವಿ ಬಂದರೂ ಇದುವರೆಗೂ ಅದನ್ನು ಜಾರಿಗೆ ಕೊಟ್ಟಿಲ್ಲ. ಏಕೆಂದರೆ ಇದನ್ನು ಜಾರಿಗೆ ಕೊಟ್ಟರೆ ಇವರಿಗೆ ಬೇಕಾದವರನ್ನು ಬೇರೆ ಕಡೆಗೆ ವರ್ಗ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಮಂತ್ರಿ

ಗಳಿಗೆ ಯಾರು ಬೇಕೋ ಅವರನ್ನು ಇಲ್ಲಿ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆ ಕಾರಣದಿಂದ ಇದನ್ನು ಜಾರಿಗೆ ತರುವುದರಲ್ಲಿ ಸರ್ಕಾರ ವಿಫಲವಾಗಿದೆ ಎಂದು ನಾನು ಹೇಳುತ್ತೇನೆ. ಇನ್ನು ನಗರ ಕಾರ್ಪೊರೇಷನ್ನಿನಲ್ಲಿ ಅನೇಕ ಅವ್ಯವಹಾರಗಳು ನಡೆಯುತ್ತಿವೆ.

'ನ್ಯೂಟ್ರಿಷನ್ ಪ್ರೊಗ್ರಾಮ್ಸ್ ಫಾರ್ ಚಿಲ್ಡ್ರನ್ ಆಫ್ ಸ್ಲಂ ಡ್ವೆಲರ್ಸ್' ಎಂಬುದಾಗಿ ಬೇರೆ ಇದೆ. ಇದು ಗುಡಿಸಲುಗಳಲ್ಲಿ ವಾಸಮಾಡುವವರಿಗೆ ಹೋಗುತ್ತದೆಯೋ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇದು ಬಾಂಗ್ಲಾದೇಶದವರಿಗೆ ಹೋಗುತ್ತದೆಯಷ್ಟೆ. ನನ್ನ ಸಲಹೆ ಏನೆಂದರೆ, ರೆಡ್‌ಕ್ರಾಸ್, ರೋಟರಿ, ಲಯನ್ಸ್ ಕ್ಲಬ್, ಚೈಲ್ಡ್ ವೆಲ್‌ಫೇರ್ ಸೆಂಟರ್ಸ್ ಮತ್ತು ಮಿಲ್ ಸರ್ವಿಂಗ್ ಸೆಂಟರ್ಸ್ ಎಂಬುದಾಗಿ ಏನು ಸಂಸ್ಥೆಗಳಿವೆಯೋ ಅಂತಹವರಿಗೆ ಈ ಪ್ರೋಗ್ರಾಂ ಕೆಲಸಗಳನ್ನು ವಹಿಸಿದರೆ, ಆಗ ಯಾರಿಗೆ ನ್ಯೂಟ್ರಿಷನ್ ಸಲ್ಲಬೇಕೋ ಅವರಿಗೆ ಸಲ್ಲುತ್ತದೆ. ಆದ್ದರಿಂದ ಈಗಿನ ಪ್ರಕಾರ ಅದನ್ನು ಮಾಡಿದರೆ ಖಂಡಿತವಾಗಿ ಅನುಕೂಲವಿಲ್ಲ.

ಇನ್ನು ಮಿಲ್ಕ್ ಸರ್ವಿಂಗ್ ಸೆಂಟರ್ಸ್ ಎಂಬುದಾಗಿ ಮಾಡಿದ್ದೀರಿ. ಸಿಟಿಯಲ್ಲಿ ಒಂದೇ ಅಲ್ಲ. ಇದನ್ನು ಕೆಲವಾರು ಬಡಾವಣೆಗಳಲ್ಲಿಯೂ ಮಾಡಬೇಕು. ಅದನ್ನು ಹೆಚ್ಚಿಗೆ ಮಾಡದಿದ್ದರೆ ಅದರ ಬಗ್ಗೆ ಸರ್ಕಾರದ ಗೌರವಕ್ಕೆ ಧಕ್ಕೆ ಬರುತ್ತದೆ ಎಂದು ಯೋಚನೆ ಮಾಡಬಹುದು.

ಇನ್ನು ಈಗ ಪ್ರೊಹಿಬಿಷನ್ ಪ್ರತಿಭಟನೆ ಮಾಡತಕ್ಕ ಕಾಲದಲ್ಲಿ ಸರ್ಕಾರದವರು ಮನೆ ಬಾಗಿಲನಲ್ಲಿ ಒಂದೂ ಕಾಲು, ಒಂದೂವರೆ ಗ್ರಾಂಗಳ ಬಾಟಲ್ ಗಳನ್ನು ಮಾರುವುದಕ್ಕೆ ಅವಕಾಶ ಕೊಟ್ಟು ಹುಡುಗರು ರಸ್ತೆಗಳಲ್ಲಿ ಹೋಗುತ್ತಿರುವವರು ಅದನ್ನು ನೋಡುತ್ತಿದ್ದಾರೆ. ಮನೆಗಳಲ್ಲಿ ಬಾಗಿಲನಲ್ಲಿ ಸಂಸಾರಿಗಳು ಇರುವ ಕಡೆ ಕುಡಿದು ಅನೇಕ ರೀತಿಯಲ್ಲಿ ಗಲಾಟೆ ಮಾಡುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಸಿಟಿಗಳಲ್ಲಿ ಬಾಟಲ್‌ಗಳನ್ನು ಮಾರುವುದನ್ನು ತಪ್ಪಿಸಬೇಕು. ಒಂದು ವೇಳೆ ಆ ರೀತಿ ಮಾಡದಿದ್ದರೆ ಜನರು ದಂಗೆ ಏಳುತ್ತಾರೆ.

ಇನ್ನೊಂದು ಮುಖ್ಯವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ತ್ರೋನ್ ಸಿಲ್ಕ್ ಬಗ್ಗೆ ಮಾನ್ಯ ಸಚಿವರಾದ ಶ್ರೀ ನಾಗರಾಳ್ ಅವರು ಜನವರಿ ತಿಂಗಳಲ್ಲಿ ನನ್ನೊಡನೆ ಒಂದು ಸಭೆಯಲ್ಲಿ ಈ ವಿಚಾರವಾಗಿ ಮಾತನಾಡಿದಾಗ, ಅದರ ಬೆಲೆ ಬಹಳ ಜಾಸ್ತಿಯಾಗಿದೆ, ಬಡ ಜನರು ಅವರಲ್ಲಿಯೂ ನೇಕಾರರು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ, ಇದರಿಂದ ಬಹಳ ಜನರಿಗೆ ಕಷ್ಟವಾಗುತ್ತಿದೆ ಎಂದು ಹೇಳಿದಾಗ ಅವರು ಫೆಬ್ರುವರಿ ಕೊನೆಯೊಳಗೆ ಆ ಬೆಲೆಗಳನ್ನು ಇಳಿಸುತ್ತೇವೆಂದು ಹೇಳಿದರು. ಅವರು ಆಗ ಏನು ಆಶ್ವಾಸನೆಯನ್ನು ನನಗೆ ಕೊಟ್ಟರೋ ಅದನ್ನು ಅವರು ಇನ್ನೂ ಮರೆತಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಜನವರಿ ಆಯಿತು, ಫೆಬ್ರುವರಿ ಮುಗಿಯಿತು ಮಾರ್ಚ್ 21ನೇ ತಾರೀಖಾಯಿತು ಆಗ ಏನು ಅದರ ಬೆಲೆ ಇತ್ತೋ ಅದಕ್ಕಿಂತ ಒಂದು ಕೆ.ಜಿ.ಗೆ 30-40 ರೂಪಾಯಿಗಳು ಜಾಸ್ತಿಯಾಗಿದೆ. ಮಾನ್ಯ ಸಚಿವರು ಆಶ್ವಾಸನೆ ಕೊಟ್ಟಿದ್ದರೂ ಆ ರೀತಿಯಾಗಿ ಅದರ ಬೆಲೆ ಜಾಸ್ತಿಯಾಗುತ್ತಲೇ ಇದೆ. ಅವರಿಗೆ ಈ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಇದನ್ನು ಮಾಡುವುದಕ್ಕೆ ನಮ್ಮ ಕೈಲಾಗುವುದಿಲ್ಲವೆಂದು ಹೇಳಬಹುದಾಗಿತ್ತು. ಖಂಡಿತವಾಗಿ ಆ ರೀತಿ ಬೆಲೆ ಕಡಿಮೆ ಮಾಡುವುದಕ್ಕಾಗುತ್ತದೆಂದು ಈ ಸಭೆಯಲ್ಲಾದರೂ ಅವರು ಹೇಳಿದರೆ ಒಳ್ಳೆಯದು ಇಲ್ಲದಿದ್ದರೆ ಜನ ಇವರನು ನಂಬುವುದಿಲ್ಲ.

ಒಬ್ಬ ಸದಸ್ಯರು.—ಈಗ ರಾಮನಗರದಲ್ಲಿ ಸಿಲ್ಕ್ ಬೆಲೆ 10 ರೂಪಾಯಿಗಳಷ್ಟು ಕಡಿಮೆಯಾಗಿದೆ.

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಶ್ರೀ ನಾಗರಾಳ್ ಅವರು ಹೇಳಿದ ಹಾಗೆ ಸುಮಾರು 8 ದಿನಗಳಿಂದ ಅದರ ಬೆಲೆ ಕಡಿಮೆಯಾಗಿತ್ತು. ಆದರೆ ಪುನಃ 15 ದಿವಸಗಳಿಂದ ವ್ಯಾಪಾರಸ್ಥರ ವೈವಾಟಿನಿಂದ ಬೆಲೆ ಜಾಸ್ತಿಯಾಗಿದೆ. ಒಂದು ಕೆ. ಜಿ.ಗೆ 40 ರೂಪಾಯಿಗಳಷ್ಟು ಬೆಲೆ ಜಾಸ್ತಿಯಾಗಿದೆ. ಅವರು ಹೇಳಿದ್ದು ಒಂದು ವಾರದ ಮಾತು. ನಾನು ಮಾನ್ಯ ಸಚಿವರ ಮುಂದೆ ಒಂದು ವಿಷಯವನ್ನು ಪ್ರಸ್ತಾಪ ಮಾಡಿದೆ. ಮಾನ್ಯ ಶ್ರೀ ಘೋರ್ಪಡೆಯವರು ತ್ರೋನ್ ಸಿಲ್ಕ್ ಮೇಲೆ ಬಹಳ ಉದಾರಿಗಳಾಗಿ ಇದ್ದಾರೆ. ನಮ್ಮ ಸರ್ಕಾರದವರು ಸೇಲ್ಸ್‌ಟ್ಯಾಕ್ಸನ್ನು ಹಾಕುತ್ತಾ ಇಲ್ಲ. ಅದನ್ನು ಯಾವ ಒಂದು ದೃಷ್ಟಿಯಿಂದ ಮಾಡಿದರೋ ಗೊತ್ತಿಲ್ಲ. ಇದರಿಂದ ಎಷ್ಟು ಲುಕ್ಸಾನು ಆಗಬಹುದೆಂದರೆ ಒಟ್ಟು ಮೈಸೂರು ದೇಶಕ್ಕೆ 18 ರಿಂದ 20 ಲಕ್ಷ ಕೆ ಜಿ. ಸಿಲ್ಕ್ ತಯಾರಾಗುತ್ತಿದೆ. ಸರ್ಕಾರದ ಕಾರ್ಖಾನೆಗಳಲ್ಲಿ ಕೇವಲ ಸೇಕಡ 10 ರಷ್ಟು ಮಾತ್ರ ತಯಾರಾಗುತ್ತಿದೆ. ಬಾಕೀದು ಪ್ರೈವೇಟ್ ಕಾರ್ಖಾನೆಗಳಿಂದ ತಯಾರಾಗುತ್ತಿದೆ. ಇದರಲ್ಲಿ ಒಂದು ಲಕ್ಷ ಕೆ.ಜಿ.ಗೆ ಕಡಿಮೆ ಇಲ್ಲದ

(ಶ್ರೀ ಕೆ. ಎಂ. ನಾಗಣ್ಣ)

ಹಾಗೆ ಈ ದಿವಸ ಹೊರಗಡೆ ಹುರಿ ಮಾಡಿದ ರೇಷ್ಮೆ ಹೊಗುತ್ತಿದೆ. ಆದ್ದರಿಂದ ತ್ರೋನ್ ಸಿಲ್ಕ್ ಮೇಲೆ ಸೇಲ್ಸ್‌ಟ್ಯಾಕ್ಸನು ತೆಗೆಯಕೂಡದು. ವರ್ತಕರು ಸರ್ಕಾರವನು ಉಪಾಯಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರದವರು ಒಪ್ಪಬಾರದು. ಒಟ್ಟಿನಲ್ಲಿ ತ್ರೋನ್ ಸಿಲ್ಕ್ ಮೇಲೆ ತೆರಿಗೆ ತೆಗೆಯುವುದಕ್ಕೆ ಬಿಡುವುದಿಲ್ಲವೆಂದು ಹಿಂದೆಯೇ ಹೇಳಿದ್ದರು.

ಶ್ರೀ ಎಸ್. ಬಿ. ನಾಗರಾಳ್.—ಇದರ ಮೇಲೆ ಹಾಕಿರತಕ್ಕ ಸೇಲ್ಸ್‌ಟ್ಯಾಕ್ಸನು ತೆಗೆಯಬೇಕೆಂದು ಎಷ್ಟೋ ವೀವರ್ಸ್ ಕಡೆಯಿಂದ ಮನವಿಗಳು ಬಂದಿರುವುದರಿಂದ, ವೀವರ್ಸ್‌ಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ನಾನು ಆ ರೀತಿ ಹೇಳಿದನೇ ಹೊರತು ಮತ್ತೆ ಯಾವುದೇ ದ್ವೇಷವೇನೂ ಇಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಮೊದಲೇ ತಾವು ಈ ಸಭೆಯಲ್ಲಿ ಹೇಳಿದ್ದೀರೋ ಅಥವಾ ಇಲ್ಲವೋ ಗೊತ್ತಿಲ್ಲ. ಆದರೆ ತಾವು ಯಾವಾಗಲೂ ಸುಳ್ಳು ಹೇಳುವವರಲ್ಲ.

ಶ್ರೀ ಎಸ್. ಬಿ. ನಾಗರಾಳ್.—ನಾನು ಇಲ್ಲಿ ಏನು ಅಭಿಪ್ರಾಯವನ್ನು ತಿಳಿಸಿದರೂ ಅದು ಜನತಾ ಅಭಿಪ್ರಾಯ. ಅಂದ ಮೇಲೆ ನಾನು ಹೇಳಿದ್ದನ್ನು ನೀವು ಗಮನಿಸಿಲ್ಲವೆಂದು ಹೇಳಿದರೆ ಹೇಗೆ ?

ಶ್ರೀ ಕೆ. ಎಂ. ನಾಗಣ್ಣ.—ತಾವು ಆ ರೀತಿ ಹೇಳಿದ್ದೀರೋ, ಇಲ್ಲವೋ ಎಂಬುದನ್ನು ನಾನು ಹೇಗೆ ಒಪ್ಪಿಕೊಳ್ಳಲಿ ? ಇವತ್ತು ರಾತ್ರಿ ಬೆಂಗಳೂರು ಗುಂತಕಲ್ ಟ್ರೈನ್‌ಗೆ ಹೋಗಿ ನೋಡಿ. ಗುಂತಕಲ್‌ನಿಂದ ಗಾಡಿ ಬೊಂಬಾಯಿಗೆ ಹೋಗುತ್ತದೆ. ಪ್ರತಿದಿವಸವೂ ಸುಮಾರು 15 ರಿಂದ 30 ಮೂಟೆಗಳವರೆಗೆ ತ್ರೋನ್ ಸಿಲ್ಕ್ ರಫ್ತಾಗುತ್ತಿದೆ. ಆ ಕಡೆಯಿಂದಲೂ ನಮಗೆ ರೇಷ್ಮೆಯನ್ನು ಕಳುಹಿಸುತ್ತಾರೆ. ಗುಂತಕಲ್‌ನಿಂದ ಮದ್ರಾಸಿಗೆ ಬೇರೆ ಹೋಗುತ್ತದೆ. ವರ್ಷದಲ್ಲಿ ಎಷ್ಟೋ ಹುರಿಮಾಡಿದ ರೇಷ್ಮೆ ಮೂಟೆಗಳು ರೈಲ್ವೆಗಳಲ್ಲಿ, ಪೋಸ್ಟ್‌ಗಳಲ್ಲಿ, ಬಸ್ಸುಗಳಲ್ಲಿ ಹಾಗೂ ಲಾರಿಗಳಲ್ಲಿಯೂ ಹೋಗುತ್ತವೆ. ಅಲ್ಲಿಗೆ ರಾಸಿಲ್ಕ್ ಮಾಡುವುದಕ್ಕೋಸ್ಕರ ಕಳುಹಿಸುತ್ತಾರೆ. ರಾ ಸಿಲ್ಕ್‌ಗೆ ಸೇಕಡ 2ರಷ್ಟು ಸೇಲ್ಸ್‌ಟ್ಯಾಕ್ಸ್ ಇಲ್ಲ. ಅದನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ತ್ರೋನ್ ಸಿಲ್ಕ್ ಬಗ್ಗೆ ಸೇಕಡ 9 ರಷ್ಟು ಸೇಲ್ಸ್‌ಟ್ಯಾಕ್ಸ್ ಹಾಕಿದರೆ ಎರಡು ಸರ್ಕಾರಕ್ಕೂ ಹಣ ಬರುವುದಕ್ಕೆ ಅನುಕೂಲವಾಗುತ್ತದೆ. ಅವರು ಬರೀ ಸೇಲ್ಸ್‌ಟ್ಯಾಕ್ಸ್ ಹಾಕುತ್ತಾ ಇಲ್ಲ. ಭಾರತ ಸರ್ಕಾರದವರು ಇನ್‌ಕಂಟ್ಯಾಕ್ಸ್ ಬೇರೆ ಹಾಕುತ್ತಿದ್ದಾರೆ. ಆದರೂ ವರ್ತಕರು ಇದನ್ನು ತಪ್ಪಿಸಿಕೊಳ್ಳುತ್ತಿದ್ದಾರೆ. ಇದನ್ನು ಬೇರೆ ಅನೇಕರು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದಾರೆ. ಆದರೆ ಅವರಲ್ಲಿ ಜಮಾ, ಖರ್ಚು ಪಟ್ಟಿ ಹಾಗೂ ರೆಸೀಟ್ ಬುಕ್ ಏನೂ ಇಲ್ಲ. ಆದರೆ ಈಗ ಜನಗಳ ಬೇಡಿಕೆ ಬಂದಿದೆ. ಆದ್ದರಿಂದ ಇದನ್ನು ತೆಗೆಯಬೇಕೆಂದು ತಾವು ಹೇಳಿದಿರಿ. ಆದರೆ ಜನಾಭಿಪ್ರಾಯಕ್ಕೆ ಮನ್ನಣೆ ಕೊಡಬಹುದು. ತ್ರೋನ್ ಸಿಲ್ಕ್ ಮೇಲೆ ತೆರಿಗೆ ತೆಗೆಯಬೇಕೆಂದು ಹೇಳುವವರು ಸೇಕಡ 40 ರಷ್ಟು 50 ರಷ್ಟು ಜನರಿದ್ದಾರೆ. ಸುಮಾರು 50 ಸಾವಿರ ಜನರು ಅದನ್ನು ಉಪಯೋಗಿಸುವವರು ಇದ್ದಾರೆ. ಆದರೆ ರೇಷ್ಮೆ ಜವಳಿ ತಯಾರುಮಾಡುವ ಮನುಷ್ಯನಿಗೆ ಇದರಿಂದ ಮೂರು ಕಾಸೂ ಕೂಡ ಲಾಭವಿಲ್ಲ. ವರ್ತಕರಿಗೆ ಮಾತ್ರ ಸೇಕಡ 40 ರಿಂದ 50 ರವರೆಗೆ ಇದರಿಂದ ಲಾಭವಾಗುತ್ತದೆ. ಆರ್ಥಿಕ ಸಚಿವರು ತಮ್ಮ ಭಾಷಣದ 36ನೇ ಪುಟದಲ್ಲಿ ಈ ರೀತಿಯಾಗಿ ಹೇಳಿದ್ದಾರೆ. "A sales tax of 2 per cent is at present levied on Thrown Silk. Raw Silk and Silk Fabrics are exempt from Salestax. The tax on thrown silk appears to be acting as a discouragement of local weaving units, as they have to pay sales tax while units outside the State are able to avoid it."

3-00 P.M.

ಪೇಜ್ ಮೂವತ್ತಾರರಲ್ಲಿ ಹೀಗೆ ಹೇಳಿದ್ದಾರೆ —

"Raw silk and silk fabrics are exempt from sales tax. The tax on thrown silk appears to be acting as a discouragement to local weaving units, as they have to pay sales tax while units out side the State are able to avoid it. Government attach great importance to the Sericulture Industry, which provides substantial employment with relatively low investment in addition to being an earner of valuable foreign exchange for the country.''

ಇದು ವಾಸ್ತವಾಂಶಕ್ಕೆ ದೂರವಾದಂಥ ವಿಷಯ. ಇದರಲ್ಲಿ ವೀವರ್ಸಿಗೆ ಮೂರು ಕಾಸಿನ ಫಾಯಿದೆ ಇಲ್ಲ. ಇವರ ವಾಸ್ತವಾಂಶವನ್ನು ಮಾನ್ಯ ಘೋರ್ಪಡೆಯವರು ಮನಗಾಣಬೇಕಾಗಿತ್ತು. ಅದನ್ನು ಮಾಡದೆ ಅವರು ಅವರ ಹಿಂದೆ ಮುಂದೆ ಇರತಕ್ಕ ಜನರ ಮಾತನ್ನು ಕೇಳಿಕೊಂಡು ಇದರಿಂದ ಬಹಳ ಫಾರಿನ್ ಎಕ್ಸ್‌ಛೇಂಜ್ ಬರುತ್ತೆಂದು ಅವರು ಭಾವಿಸಿದ್ದಾರೆ. ಆದರೆ ಅವರು ಭಾವಿಸಿರತಕ್ಕ ರೀತಿಯಲ್ಲಿ ಬರುವುದಿಲ್ಲ. ಇಲ್ಲಿ ಇದಕ್ಕೆ ಟ್ಯಾಕ್ಸ್ ಹಾಕಿದ್ದರೆ ಇದರಿಂದ ಸರ್ಕಾರಕ್ಕೆ ಮಾರಾಟ ತೆರಿಗೆಯೊಂದರಿಂದಲೇ 40 ಲಕ್ಷ ರೂಪಾಯಿಗಳಿಗೂ ಹೆಚ್ಚು ಬರುತ್ತಿತ್ತು. ಆದರೆ ಸರ್ಕಾರದವರ ಲೆಕ್ಕಾಚಾರದ ಪ್ರಕಾರ ಈ ದಿವಸ ಅಷ್ಟು ಕೂಡ ಬರುತ್ತಿಲ್ಲ. ಅವರಿಗೆ ಇಲಾಖೆಯವರು ಅತಿ ಹೆಚ್ಚೆಂದರೆ ಈ ಬಾಬಿನಿಂದ 8 ಲಕ್ಷ ರೂಪಾಯಿ ಬರಬಹುದೆಂದು ತಿಳಿಸಿದ್ದಾರೆಂದು ನಾನು ತಿಳಿಯುತ್ತೇನೆ ಅವರು ಸರಿಯಾಗಿ ವಸೂಲ್ಮಾಡಿದರೆ ಇದರಿಂದ 40-50 ಲಕ್ಷಕ್ಕೆ ಕಡಿಮೆ ಇಲ್ಲದೆ ಬರುತ್ತದೆ. ಇಷ್ಟು ವರಮಾನವನ್ನು ಸರ್ಕಾರದವರು ಯಾರಿಗೋಸ್ಕರವಾಗಿ ಕೈಬಿಟ್ಟಿದ್ದಾರೆ ಎಂದರೆ ಯಾರು ಈ ಕಳ್ಳ ವ್ಯಾಪಾರದಲ್ಲಿ ತಲ್ಲೀನರಾಗಿದ್ದಾರೋ ಅಂಥ 40-50 ಜನರ ಹಿತದ ಸಲುವಾಗಿ ಇಷ್ಟು ತೆರಿಗೆ ಹಣವನ್ನು ಬಿಟ್ಟಿದ್ದಾರೆ. ಅಂದಾಗ ತಾವುಗಳೆಲ್ಲರೂ ಯೋಚನೆ ಮಾಡಬೇಕು ಇದು ಸಮಾಜವಾದ ಸರ್ಕಾರದ ಲಕ್ಷಣವೇ ಎಂದು.

ಶ್ರೀ ಎಂ. ವೈ. ಘೋರ್ಪಡೆ.—ನಮಗೆ ಅಷ್ಟು ಹಣವೇನೂ ಲುಕ್ಸಾನಾಗುವುದಿಲ್ಲ. ತಾವು ಸರಿಯಾಗಿ ನನ್ನ ಭಾಷಣವನು ಓದಿ ನೋಡಿ. ಇದರಲ್ಲಿ ಮುಖ್ಯವಾಗಿ ನಮ್ಮ ಮೈಸೂರಿನವರಿಗೆ ಬಹಳ ಪೆಟ್ಟು ಬೀಳುತ್ತಿದೆ. ಹೊರಗಡೆಯವರು ಇದರ ಮೇಲೆ ಟ್ಯಾಕ್ಸನ್ನು ಹಾಕಿಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಈ ಕೈಗಾರಿಕೆಯಲ್ಲಿ ತೊಡಗಿರತಕ್ಕ ಸುಮಾರು 50 ಸಾವಿರದ ಮೊದಲುಗೊಂಡು ಒಂದು ಲಕ್ಷದವರೆಗೂ ಇರತಕ್ಕ ಜನರಿಗೆ ಇದರಿಂದ ಮೂರು ಕಾಸಿನ ಫಾಯಿದೆ ಇಲ್ಲ. ಆದರೆ ಇದರ ಕಳ್ಳಸಾಗಾಣಿಕೆಯಲ್ಲಿ ಕಾಳಸಂತೆ ವ್ಯಾಪಾರದಲ್ಲಿ ತೊಡಗಿರತಕ್ಕ 40-50 ಜನರೇನಿದ್ದಾರೆ ಅವರಿಗೆ ಮಾತ್ರ ಇದರಿಂದ ಬಹಳ ಅನುಕೂಲವಾಗಿದೆ.

ಇನ್ನು ಆರ್ಟ್ ಶಿಲ್ಕಿನ ವಿಚಾರಕ್ಕೆ ಬಂದರೆ ಇಲ್ಲಿಂದ ದಿನವಹಿ 2500 ಪೆಟ್ಟಿಗೆ ಮೇಲೆ ಹೋಗುತ್ತಿದೆ. ಅಂದರೆ ಸುಮಾರು 50 ಲಕ್ಷದವರೆಗೂ ವ್ಯಾಪಾರ ನಡೆಯುತ್ತಿದೆ. ಇದರ ಮೇಲೆ ಶೇಕಡ ಒಂದೂವರೆ ಪ್ರಕಾರ ಟ್ಯಾಕ್ಸ್ ಹಾಕಿದರೂ ಸರ್ಕಾರಕ್ಕೆ 6 ಕೋಟಿ ರೂಪಾಯಿ ಫಾಯಿದೆ ಬರುತ್ತದೆ. ಇಷ್ಟು ಕೇಂದ್ರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಬರುತ್ತದೆ. ನಮ್ಮ ರಾಜ್ಯ ಸರ್ಕಾರ ಒಂದಕ್ಕೇ ತೆಗೆದುಕೊಂಡರೆ ಮಾರಾಟ ತೆರಿಗೆಯ ಬಾಬಿನಿಂದ 12 ಲಕ್ಷಕ್ಕೆ ಕಡಿಮೆ ಇಲ್ಲದೆ ಬರುತ್ತದೆ. ಇಲ್ಲಿ ಈ ಉದ್ಯಮ ನಡೆಸತಕ್ಕ ಜನರು ಸುಮಾರು ಎರಡು ಲಕ್ಷ ಜನ ಇದ್ದಾರೆ. ಇದರಲ್ಲೂ ಕೂಡ ಸರ್ಕಾರಕ್ಕೆ ಆಕ್ಟ್ರಾಯಿ ಮೂಲಕ 12 ಲಕ್ಷ ರೂಪಾಯಿ ವರಮಾನ ಬರುತ್ತಿತ್ತು. ಕೇವಲ 30-40 ಜನ ಇದರ ಮಾರಾಟಗಾರರು ಯಾರಿದ್ದಾರೆ ಅವರಿಗಾಗಿ ಅದನ್ನು ವಜಾ ಮಾಡಿದ್ದಾರೆ. ಹಾಗೆ ಇದರಿಂದ ಬರತಕ್ಕ ಮಾರಾಟ ತೆರಿಗೆಯನ್ನೂ ಕೂಡ ವಜಾ ಮಾಡಿದ್ದಾರೆ. ಎಲ್ಲಿ ಹೆಚ್ಚು ಜನರಿಗೆ ಅನುಕೂಲವಾಗುತ್ತದೋ ಅಂಥಾ ಕಡೆಯಲ್ಲಿ ಸರ್ಕಾರದವರು ತೆರಿಗೆಯನ್ನು ವಜಾಮಾಡದೆ ಎಲ್ಲಿ ಕೇವಲ ಹತ್ತಾರು ಜನರಿಗೆ ಅನುಕೂಲವಾಗುತ್ತದೋ ಅಂಥಾ ಕಡೆಯಲ್ಲಿ ಅದನ್ನು ವಜಾ ಮಾಡಿರುವುದು ಬಹಳ ಅನ್ಯಾಯ. ಆದರೆ ಕೆಲವರು ಈ ತೆರಿಗೆಯನ್ನು ಸರ್ಕಾರದವರಿಂದ ರದ್ದು ಮಾಡಿಸುತ್ತೇವೆಂದು ಎಲ್ಲಾ ವರ್ತಕರಿಂದಲೂ ಕಳೆದ ಏಪ್ರಿಲ್-ಮೇ ತಿಂಗಳುಗಳಲ್ಲಿ ಹಣವನ್ನು ಎತ್ತಿದ್ದಾರೆ. ಹಾಗೆ ಎತ್ತಿರತಕ್ಕ ಹಣವೇನೂ ಅಲ್ಪಸ್ವಲ್ಪವಾದದ್ದಲ್ಲ. ಲಕ್ಷಾಂತರ ಗಟ್ಟಲೇ ಹಣವನ್ನು ವಸೂಲ್ಮಾಡಿದ್ದಾರೆ. ಹಾಗೆ ಹಣವನ್ನು ವಸೂಲ್ಮಾಡಿರತಕ್ಕ ಜನರು ಯಾರು ಯಾರು ಎಂಬ ಬಗ್ಗೆ ನನ್ನಲ್ಲಿ ಎಲ್ಲರ ಹೆಸರುಗಳೂ ಇವೆ. ಅದಕ್ಕೆ ಸಂದರ್ಭಬಂದಾಗ ಅದನ್ನು ಬಹಿರಂಗ ಮಾಡುತ್ತೇನೆ. ಸುಮಾರು 2-3 ಲಕ್ಷ ರೂಪಾಯಿಗಳನ್ನು ವಸೂಲ್ಮಾಡಿದ್ದಾರೆ. ಸರ್ಕಾರವನ್ನು ಇನ್‌ಫ್ಲುಯನ್ಸ್ ಮಾಡಿ ಟ್ಯಾಕ್ಸನ್ನು ವಜಾಮಾಡಿಸುತ್ತೇವೆಂದು ಹೇಳಿ ಹಣವನ್ನು ಎತ್ತಿದ್ದಾರೆ.

ಶ್ರೀ ಎಸ್. ಬಿ. ನಾಗರಾಳ್.—ಅಷ್ಟೊಂದು ಹಣವನ್ನು ಯಾರು ಕೊಡುತ್ತಾರೆ ?

ಶ್ರೀ ಕೆ. ಎಂ. ನಾಗಣ್ಣ.—ತಮಗೆ ಈ ಲಂಚದ ವಿಷಯ ಅಷ್ಟಾಗಿ ಪರಿಚಯವಿಲ್ಲ. ತಾವಿನ್ನೂ ಹೊಸದಾಗಿ ಮಂತ್ರಿ ಪದವಿಗೆ ಬಂದಿದ್ದೀರಿ. ನಾನು ಲಂಚ ನಿರ್ಮೂಲವಾಗಬೇಕೆಂಬ ವಿಚಾರದಲ್ಲಿ ಹಗಲು ರಾತ್ರಿ ಮತ್ತು ಮಳೆ ಬಿಸಿಲು ಎನ್ನದೆ ಸತ್ಯಾಗ್ರಹ ಮಾಡಿರತಕ್ಕವನು. ನನಗೆ ಇದರ ಪೂರ್ಣ ಮಾಹಿತಿ ಇದೆ. ತಾವಿನ್ನೂ ಹೊಸಬರು ತಮಗೆ ಇದರ ವಾಸನೆ ಇನ್ನೂ ಗೊತ್ತಿಲ್ಲ; ನನಗೆ ಚೆನ್ನಾಗಿ ತಿಳಿದು ಬಂದಿದೆ ಅವರು 2 ಲಕ್ಷ ರೂಪಾಯಿಗಳನ್ನು ವಸೂಲ್ಮಾಡಿದ್ದಾರೆ ಎಂದು. ಆದರೆ ನಾನು ಹೋಗಿ ಅವರು ಯಾರು ಯಾರು ಎಂಬುದನ್ನು ನೋಡಿಲ್ಲ. ನೆನ್ನೆಯ ದಿವಸ ಇದೇ ಸಭೆಯಲ್ಲಿ ಮಾನ್ಯ ಸಿದ್ದವೀರಪ್ಪನವರ ಬಗ್ಗೆ ಯಾವುದೋ ಅನಾನಿಮಸ್ ಪೆಟಿಷನ್ ಬಂದುದರ ಬಗ್ಗೆ ಇಲ್ಲ ಚರ್ಚೆ ನಡೆಯುತ್ತಿದ್ದ ಕಾಲಕ್ಕೆ ನಮ್ಮ ಮುಖ್ಯಮಂತ್ರಿಗಳವರು ಆ ಅನಾನಿಮಸ್ ಅರ್ಜಿಯನ್ನು ಯಾರು ಎಲ್ಲಿ ಟೈಪ್ ಮಾಡಿದ್ದಾರೆಂಬುದನ್ನು ಪತ್ತೆ ಹಚ್ಚಲು ಸಿ.ಐ.ಡಿ. ಇಲಾಖೆಗೆ ತಿಳಿಸಬೇಕೆಂದು ಹೇಳಿದರು. ಆದರೆ ಈ ಒಂದೂ ಸಂದರ್ಭದಲ್ಲೂ ಕೂಡ ಸರ್ಕಾರದವರು ಇದನ್ನು ತನಿಖೆ ಮಾಡಲೇಬೇಕೆಂದು ಒತ್ತಾಯ ಮಾಡುತ್ತೇನೆ. ಆದರೆ ಇದರ ತನಿಖೆಯನ್ನು ನಮ್ಮ ರಾಜ್ಯದ ಪೋಲೀಸಿನವರಿಂದ ಇಲ್ಲವೇ ಅಧಿಕಾರಿಗಳಿಂದ ಮಾಡಿಸಿದರೆ ಪ್ರಯೋಜನವಿಲ್ಲ. ಇದರ ತನಿಖೆಯನ್ನು ಸೆಂಟ್ರಲ್ ಸಿ.ಬಿ.ಐ. ಅವರ ಮೂಲಕ ವಿಚಾರಣೆ ನಡೆಸಬೇಕೆಂದು ಒತ್ತಾಯ ಮಾಡುತ್ತೇನೆ. ಇದರಲ್ಲಿ ಯಾವ ಮಂತ್ರಿಗಳೇ ಇನ್‌ವಾಲ್ವ್ ಆಗಿರಲಿ, ಮುಖ್ಯಮಂತ್ರಿಗಳೇ ಇದರಲ್ಲಿ ಆಸಕ್ತಿ ವಹಿಸಿರಲಿ, ಇದನ್ನು ಹಿಂದಕ್ಕೆ ತಳ್ಳದೆ ವಿಚಾರಣೆ ಆಗಬೇಕೆಂದು ಒತ್ತಾಯ ಮಾಡುತ್ತೇನೆ. ಸರ್ಕಾರ ಇದಕ್ಕೆ ಲೋಪ ಮಾಡಿದರೆ ಇದರ ಬಗ್ಗೆ ಮಂತ್ರಿಗಳಲ್ಲೂ ಏನೋ ಲೋಪವಿದೆ, ಅದರಿಂದಲೇ ಅವರು ಹೆದರಿ ಇದರ ವಿಚಾರಣೆಯನ್ನು ಹಿಂದಕ್ಕೆ ಇಡುತ್ತಿದ್ದಾರೆಂಬುದಕ್ಕೆ ಇದೇ ಆಧಾರ ಸಾಕೆಂದು ನಾನು ಹೇಳುವುದಕ್ಕೆ ಸಿದ್ಧನಿದ್ದೇನೆ. ಆದರೆ ವಿರೋಧ ಪಕ್ಷದ ಮಾನ್ಯ ನಾಯಕರಾದ ಶ್ರೀ ದೇವೇಗೌಡರು ಈ ಸರ್ಕಾರದವರು ನಡೆಸಿರತಕ್ಕ ಅನೇಕ ಜನೋಪಕಾರಿ ಕೆಲಸಗಳ ಒಂದು ಪಟ್ಟಿಯನ್ನು ತಯಾರಿಸಿದ್ದಾರೆ ಅದೇನು ಕಾರಣದಿಂದಲೋ ಇದನ್ನು ಅವರು ಕೈಬಿಟ್ಟಿದ್ದಾರೆ ಇದನ್ನೂ ಒಂದನ್ನು ಆ ಪಟ್ಟಿಯಲ್ಲಿ ಸೇರಿಸಬೇಕೆಂದು ಹೇಳುತ್ತಿದ್ದೇನೆ. ಏನೆಂದರೆ—ಸರ್ಕಾರ ಸಾಧಿಸಿರತಕ್ಕ ಮಹತ್ಕಾರ್ಯಗಳಲ್ಲಿ ತೆರಿಗೆ ಕಳ್ಳರಿಗೆ ತೆರಿಗೆಯನ್ನು ವಜಾಮಾಡಿರತಕ್ಕದ್ದು ಒಂದ ವಿಷಯವನ್ನು ಆ ಪಟ್ಟಿಯಲ್ಲಿ ಸೇರಿಸಬೇಕಾಗಿದೆ. ಆದರೆ ಅನೇಕರು ಈಗಿರತಕ್ಕ ಮುಖ್ಯಮಂತ್ರಿಗಳು ಹೋಗಬೇಕೆಂದು ಹೇಳುತ್ತಿದ್ದರೆ ನಾನು ಅವರು ಇರಲೇಬೇಕು ಎನ್ನತಕ್ಕವನು. ನಾವು ಕಳೆದ 25 ವರ್ಷಗಳಿಂದ ರಾಜ್ಯದಲ್ಲಿ ಆಡಳಿತ ಹೇಗೆ ನಡೆಯಿತು ಎಂಬುದನ್ನು ನೋಡಿದ್ದಾಯಿತು. ಆದರೆ ಇವರ ಆಡಳಿತವನ್ನೂ ಕೂಡ 5 ವರ್ಷಕಾಲ ಕಾದು ನೋಡಬೇಕೆಂದು ಹೇಳತಕ್ಕವರ ಪೈಕಿ ನಾನೂ ಒಂದು ವಿಷಯವನ್ನು ನಿರ್ದಾಕ್ಷಿಣ್ಯವಾಗಿ ವಿಧಿ ಇಲ್ಲದೆ ಹೇಳಬೇಕಾಗಿದೆ—ನಮ್ಮ ಮುಖ್ಯ ಮಂತ್ರಿಗಳು ಶ್ರೀಮಾನ್ ಬಸವಲಿಂಗಪ್ಪನವರನ್ನು ಮಂತ್ರಿಮಂಡಲದಿಂದ ವಜಾ ಮಾಡಬೇಕು, ಮತ್ತು ಕೆ. ಕೆ, ಮೂರ್ತಿಯವರನ್ನು ವಜಾ ಮಾಡಬೇಕು. ಇಲ್ಲದಿದ್ದರೆ ಮುಖ್ಯ ಮಂತ್ರಿಗಳಿಗೆ ಉಳಿಗಾಲವಿರುವುದಿಲ್ಲ. ಈ ಎರಡು ಮಾತುಗಳನ್ನಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ

† **ಶ್ರೀ ಎಸ್. ಹಮೀದ ಷಾ (ಶಿವಾಜಿನಗರ).**—ಮಾನ್ಯ ಅಧ್ಯಕ್ಷರೇ, ನಮ್ಮ ಹಣಕಾಸಿನ ಸಚಿವರು ಮಂಡಿಸಿರುವ ಬಜೆಟ್ಟಿಗೆ ಬೆಂಬಲ ಕೊಟ್ಟು ಎರಡು ಮಾತುಗಳನ್ನು ಹೇಳುತ್ತೇನೆ. ಅವರು ಹೊಸ ತೆರಿಗೆ ಹಾಕಿಲ್ಲದಿರುವುದರಿಂದ ಅವರನ್ನು ಅಭಿನಂದಿಸುತ್ತೇನೆ. ಹೊಸ ತೆರಿಗೆ ಹಾಕುವುದು, ಅದರಿಂದ ಲಾಭ ಪಡೆಯಬಹುದು ಎಂದು ಅಂಗಡಿಯಲ್ಲಿ ಸಾಮಾನುಗಳನ್ನು ಅಡಗಿಸಿಡುವರು. ತೆರಿಗೆ ಹಾಕಿದ್ದರೆ ವ್ಯಾಪಾರಗಾರರಿಗೆ ಲಾಭ ಬರುತ್ತಿತ್ತು. ತೆರಿಗೆ ಇಲ್ಲದಿದ್ದರೂ ಕೆಲವು ಸಾಮಾನುಗಳ ಬೆಲೆ ಏರುತ್ತಿದೆ. ತೆರಿಗೆ ಹಾಕಿಲ್ಲವೆಂದು ಸರಕಾರದಮೇಲೆ ಅಪಾದನೆ ಸಹ ಮಾಡುತ್ತಿದ್ದಾರೆ. ಸರಕಾರ ಇದರ ಮೇಲೆ ಕಣ್ಣಿಡಬೇಕು, ಸುಮ್ಮನೆ ಸಾಮಾನುಗಳ ಬೆಲೆ ಏರಿಸಲು ಅವಕಾಶ ಕೊಡಬಾರದು.

ಬಡವರಿಗೆ 5 ಕೋಟಿ ರೂಪಾಯಿ ಖರ್ಚುಮಾಡಿ ಮನೆ ಕಟ್ಟಿಕೊಡುವರು. ಆದರೆ ಎಷ್ಟು ಜನರಿಗೆ ದೊರೆಯುವುದು ಎಂದು ಲೆಕ್ಕ ಹಾಕಿಲ್ಲ. ಮೈನಾರಿಟೀಸ್ ಮರೆಯಬಾರದು. ಹಾಗೆ ಮಾಡಿ ಹಿಂದಿನ ಸರಕಾರದ ಗತಿ ಏನಾಗಿದೆ ಎಂಬುದನ್ನು ಯೋಚನೆ ಮಾಡಬೇಕು.

ಆಡಳಿತದ ಬಗ್ಗೆ ಒಂದು ಮಾತು, ಸರಕಾರ ಸ್ವಲ್ಪ ಕಣ್ಣು ತೆರೆದು ನೋಡಬೇಕಾಗಿದೆ. ಎಂತೆಂಥ ಸಿನೀಮ ಪೋಸ್ಟರುಗಳನ್ನು ಹಾಕುತ್ತಿದ್ದಾರೆಂಬುದನ್ನು ನೋಡಬೇಕು. ಅವನ್ನು ನೋಡಿದರೆ ನಾಚಿಕೆಯಾಗುವುದು. ಅದಕ್ಕೆ ಅವಕಾಶವಿರಬಾರದು. ಬೆಂಗಳೂರಿನ ಬಗ್ಗೆ ಆರ್ಥಿಕ ಸಚಿವರು ಒಂದು ಮಾತನ್ನೂ ಹೇಳಿಲ್ಲ, ಇದು ರಾಜಧಾನಿ. ಇಲ್ಲಿ ಸರಕಾರಕ್ಕೆ ಎಷ್ಟೋ ಲಾಭ ಬರುತ್ತಿದೆ, ಒಳ್ಳೆಯ ಹೆಸರು ಬರುತ್ತಿದೆ ಕಾರ್ಪೊರೇಷನ್ನಿನವರು ಶಾಲೆಗಳನ್ನು ನಡೆಸುತ್ತಿದ್ದಾರೆ, ರಸ್ತೆಗಳನ್ನು ಮಾಡು

ತ್ತಿದ್ದಾರೆ, ಮ್ಯಾಟಿನಿ ಷೋಗಳನ್ನು ನಡೆಸುತ್ತಿದ್ದಾರೆ. ಅವರಿಗೆ ಸ್ವಲ್ಪ ಸಹಾಯ ಬೇಕಾಗಿದೆ, ಅವರು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ನಾಗರಿಕರಿಗೆ ಸೌಲಭ್ಯ ಒದಗಿಸುತ್ತಿದ್ದಾರೆ, ಅವರಿಗೆ ಲಾಭ ಬರುತ್ತಿಲ್ಲ. ಹುಡುಗರು ನೋಡಿದರೆ ಇಂದು ಹಿಪ್ಪಿಗಳಾಗುತ್ತಿದ್ದಾರೆ. ಪ್ರೈವೇಟ್ ಇನ್‌ಸ್ಟಿಟ್ಯೂಷನ್ನುಗಳ ಮೇಲೆ ಹಿಡಿತವಿಲ್ಲ. ಆಡಳಿತ ಯಾವ ರೀತಿ ನಡೆಯುತ್ತಿದೆಯೆಂಬುದನ್ನು ಗಮನಿಸಬೇಕು. ಸರಕಾರಿ ಕಾಲೇಜುಗಳಲ್ಲಿ ಯಾರಿಂದ ತಪ್ಪಾಗುತ್ತಿದೆ, ಜನಾಂಗ ಯಾವರೀತಿ ಮುಂದುವರೆಯುತ್ತಿದೆ ಎಂದು ನೋಡಿ ಸ್ವಲ್ಪ ಹಿಡಿತ ಇಟ್ಟುಕೊಳ್ಳಬೇಕು. ಕಾರ್ಪೋರೇಷನ್ ಶಾಲೆಗಳಿಗೆ ಸ್ವಲ್ಪ ಸಹಾಯ ಮಾಡಬೇಕು, ಹಾಗೆ ಮಾಡಿದರೆ ಸ್ವಲ್ಪ ಹಿಡಿತವಿರುವುದು. ರಸ್ತೆ ವಿಸ್ತಾರ ಮಾಡಿದರೆ ಕಾರ್ಪೋರೇಷನ್ನಿಗೆ ಸಹಾಯ ಮಾಡಬೇಕು. ಕಾರ್ಪೋರೇಷನ್ನಿಗೆ ಬರುವ 8 ಕೋಟಿ ರೂಪಾಯಿಗಳ ಆದಾಯದಲ್ಲಿ ಸಿಬ್ಬಂದಿಗೆ ಸಂಬಳ ಕೊಡಬೇಕು, ಹೆರಿಗೆ ಆಸ್ಪತ್ರೆ, ಶಾಲೆ ಮುಂತಾದ್ದನ್ನು ನಡೆಸಬೇಕು, ರಸ್ತೆ ಮಾಡಬೇಕು. ಹೆರಿಗೆ ಆಸ್ಪತ್ರೆಗಳನ್ನು ಕಾರ್ಪೋರೇಷನ್ ಹೆಚ್ಚಾಗಿ ನಡೆಸುವುದು. ಬೆಂಗಳೂರು ಬೆಳೆಯುತ್ತಿದೆ, ಸುಂದರ ನಗರ ಎಂದು ಹೆಸರು ಬೆಂಗಳೂರು ಪಡೆದಿರುವುದು ಉಳಿಯುವಂತೆ ನೋಡಿಕೊಳ್ಳಬೇಕು.

ಪೋಲೀಸಿನವರು ಯಾವರೀತಿ ಹೋಗುತ್ತಿದ್ದಾರೆಂಬುದನ್ನು ನೋಡಬೇಕು, ವಿರೋಧ ಪಕ್ಷದವರು ಈ ವಿಚಾರ ಹೇಳಿರುವುದರಿಂದ ಹೆಚ್ಚಾಗಿ ಹೇಳುವುದು ಬೇಡ. ಪೋಲೀಸ್ ಸ್ಟೇಷನ್ನಿಗೆ ದೂರು ಕೊಡಲು ಹೋದರೆ ಹೊಡೆಯುವರು, ಯಾವುದಕ್ಕೂ ಹಣ ಕೊಡಬೇಕು. ಕಾಂಚಾಣಂ ಕಾರ್ಯಸಿದ್ಧಿ ಎಂಬಂತಾಗಿದೆ. ಹೋಂ ಇಲಾಖೆ ಅವರ ಮೇಲೆ ಕಣ್ಣಿಡಬೇಕು.

ಕನ್ನಡದ ಅಭಿವೃದ್ಧಿಯ ಬಗ್ಗೆ 13 ಲಕ್ಷ ಒದಗಿಸಿರುವುದು ಸಾಲದು, ಹೆಚ್ಚು ಒದಗಿಸಬೇಕು. ಒಂದು ಕೋಟಿ ರೂಪಾಯಿಯಾದರೂ ಕೊಡಬೇಕು ಕರ್ನಾಟಕದಲ್ಲಿ ಎರಡನೇ ಭಾಷೆಯೊಂದಿದೆ. ಆ ಭಾಷೆಯವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ಅದನ್ನು ಮರೆತರೆ ಮೈನಾರಿಟೀಸಿಗೆ ಮಾನನೋಯುವುದು. ಉರ್ದುಭಾಷೆಯನ್ನು ಮರೆಯಬಾರದು. ಚುನಾವಣೆ ಸಮಯ ಬಂದಾಗ ಜ್ಞಾಪಕ ಮಾಡಿಕೊಂಡರೆ ಸಾಲದು. ಕರ್ನಾಟಕದಲ್ಲಿ 30 ಲಕ್ಷ ಜನ ಉರ್ದು ಮಾತನಾಡುವವರಿದ್ದಾರೆ, ಅವರಿಗೆ ತಿಲಾಂಜಲಿ ಕೊಡುತ್ತಿದ್ದಾರೆ, ಇದರಿಂದ ಮೈನಾರಿಟೀಸಿಗೆ ಬೇಜಾರಾಗಿದೆ. ಅವರನ್ನು ಕೈಬಿಟ್ಟರೆ ತೊಂದರೆಯಾಗುವುದು. ಅವರ ಕೈ ಬಿಡಬಾರದು. ಅವರಿಗೆ ರಕ್ಷಣೆ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ, ಅದರಂತೆ ನಡೆದುಕೊಳ್ಳಬೇಕು ಎಂದು ಇಷ್ಟು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ಬಜೆಟ್ಟಿಗೆ ಬೆಂಬಲ ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

† **ಶ್ರೀ ಎಂ ಎಸ್ ಕೃಷ್ಣನ್ (ಮಲ್ಲೇಶ್ವರಂ)**:—ಸನ್ಮಾನ್ಯ ಅಧ್ಯಕ್ಷರೇ, ಈ ಆಯವ್ಯಯ ಪಟ್ಟಿಯನ್ನು ವಿರೋಧಿಸುತ್ತಾ ಬೇಗ ನನ್ನ ಭಾಷಣವನ್ನು ಮುಗಿಸಲು ಪ್ರಯತ್ನಪಡುತ್ತೇನೆ. ಇದರ ಬಗ್ಗೆ ಅನೇಕ ಮಿತ್ರರು ಮಾತನಾಡಿದ್ದಾರೆ, ಕೆಲವು ರಾಜಕೀಯ ಪ್ರಶ್ನೆಗಳನ್ನೆತ್ತಿದ್ದಾರೆ ಕಾಂಗ್ರೆಸ್ ಮಿತ್ರರಾದ ಶ್ರೀ ಪುಟ್ಟಸ್ವಾಮಿಯವರು ಮಾತನಾಡುತ್ತಾ ಎಷ್ಟು ಮುಂದುವರೆಯಬೇಕಾಗಿತೂ ಅಷ್ಟಾಗಿಲ್ಲವೆಂದು ತಿಳಿಸಿದ್ದಾರೆ. ಪಾಕೀಸ್ತಾನದ ಪ್ರಶ್ನೆ ಮುಂತಾದುವು ಅದಕ್ಕೆ ಅಡ್ಡಿಯಾಗಿಲ್ಲ ಎಂದು ಹೇಳಿದ್ದಾರೆ. ಹಿಂದೆ ಕೂಡ ಇದೇ ರೀತಿ ತಿಳಿಸಿದ್ದಾರೆ.

ಹಿಂದೆ ಇದ್ದಂಥ ಸರ್ಕಾರಗಳು ಇದೇ ರೀತಿ ಹೇಳಿಕೊಂಡು ಬಂದವು. ನಾನಾದರೂ ಹೇಳುವುದು ಇಷ್ಟೇ, ಒಂದು ರೀತಿಯಲ್ಲಿ ಈಗತಾನೆ ಸ್ವಾತಂತ್ರ್ಯ ಬಂದಿದೆ, 10 ವರ್ಷವಾದ ಮೇಲೆ ಇನ್ನು ಸ್ವಲ್ಪ ಸಮಯ ನಮ್ಮ ಪರಿಸ್ಥಿತಿ ಸುಧಾರಿಸಲಿಕ್ಕೆ ಬೇಕು ಎಂದು ತಿಳಿದುಕೊಂಡು 25 ವರ್ಷವಾದರೂ ಸಹ ನಮ್ಮ ಪರಿಸ್ಥಿತಿ ಉತ್ತಮಗೊಂಡಿಲ್ಲ. ಕ್ಷಾಮ ಮೇಲಿಂದ ಮೇಲೆ ಬರುತ್ತಿದೆ, ಒಂದಲ್ಲ ಒಂದು ರೀತಿಯಿಂದ ಪ್ರಕೃತಿ ನಿಯಮ ಸರಿಯಾಗಿಲ್ಲ ಎಂದು ಸುಳ್ಳು ನೆಪಗಳನ್ನು ಹೇಳಿ, ದೇಶದ ಪ್ರಗತಿಗೆ ಅಡ್ಡಿಯಾಗಿದೆ ಎಂದು ಹೇಳಿದರು. ತಪ್ಪು ಕಾರಣಗಳನ್ನು ಕೊಟ್ಟರು; ಸತ್ಯಕ್ಕೆ ದೂರವಾದ ಕಾರಣಗಳನ್ನು ಕೊಟ್ಟರು. ಯುದ್ಧವಾಯಿತು, ಪ್ರಕೃತಿನಿಯಮ ಸರಿಯಿಲ್ಲ. ಈ ರೀತಿಯ ಕಾರಣಗಳನ್ನು ಹೇಳಿಕೊಂಡು ಮುಂದೆ ಮುಂದೆ ಹೋಗುವುದಕ್ಕೆ ಪ್ರಯತ್ನ ಪಟ್ಟರು. ಹಿಂದೆ ಆಗಿದ್ದು ಹೋಗಲಿ, ತಮ್ಮ ಸರ್ಕಾರ ಬಂದ ಮೇಲೆ ಎಲ್ಲಾ ಸರಿಹೋಗುತ್ತದೆ, ಎಂದು ಯೋಚನೆ ಮಾಡಿದ್ದೆವು; ಆದರೆ ಇದು ಕೂಡ ಪೂರ್ತಿಯಾಗಿ ಯಾವ ಕೆಲಸವನ್ನು ಮಾಡಿಲ್ಲ ಎಂದು ಹೇಳಬೇಕಾಗಿದೆ. ಹೆಚ್ಚು ವಿವರಗಳನ್ನು ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದಕ್ಕೆ ಯಾರು ಜವಾಬ್ದಾರರು, ಎಂದರೆ ಸ್ವಲ್ಪಮಟ್ಟಿಗೆ ವಿರೋಧಪಕ್ಷದವರು ಕಾರಣರು ಎನ್ನುವುದಕ್ಕೆ ಸಕಾರಣ ನೀಡಲಿಲ್ಲ. ಬೆಲೆ ಏರಿಕೆಯಾಗಲಿಕ್ಕೆ ಮಾನ್ಯ ದೇವೇಗೌಡರು ಕಾರಣ ಅಲ್ಲ, ಅಥವಾ ನನ್ನ ಪಾರ್ಟಿಯವರು ಕಾರಣ ಅಲ್ಲ ಬೇರೆ ಅಕ್ರಮ ವ್ಯವಹಾರ ನಡೆಯುವುದಕ್ಕೆ ನಾವು ಕಾರಣ ಅಲ್ಲ. ದೇಶದ ಪರಿಸ್ಥಿತಿ ಈ ರೀತಿ

(ಶ್ರೀ ಎಂ. ಎಸ್. ಕೃಷ್ಣನ್)

ಇರುವುದಕ್ಕೆ ಮಾನ್ಯ ದೇವೇಗೌಡರು ಆಗಲೀ ಕಮ್ಯೂನಿಸ್ಟ್ ಪಾರ್ಟಿಯವರಾಗಲೀ ಕಾರಣರಲ್ಲ. ಹಿಂದಿನವರ ಮೇಲೆ ಈ ಧೋರಣೆಯನ್ನು ಇಟ್ಟುಕೊಳ್ಳಬಹುದು, ಅದನ್ನು ಅವರಿಗೆ ಬಿಟ್ಟಿದ್ದೇವೆ. ಈ ಒಂದು ಹೊಣೆಗಾರಿಕೆಯನ್ನು ವಿರೋಧಪಕ್ಷದ ಮೇಲೆ ಕೂರಿಸಿ ನೀವು ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಪಟ್ಟರೆ ಅದು ಸರಿಯಾದದ್ದಲ್ಲ. ದೇಶದ ಪ್ರಗತಿಯಾಗಬೇಕು, ಇದಕ್ಕೆ ಎಷ್ಟು ಕಾರ್ಯಗಳನ್ನು ಕೈಗೊಂಡಿದ್ದಾರೆ, ಎಷ್ಟು ಯೋಜನೆಯಿಂದ ರಿಸೋರ್ಸಸ್ ಸಿಕ್ಕಬೇಕಾಗಿತ್ತೋ ಅದು ಸಿಕ್ಕುತ್ತಾ ಇಲ್ಲ ಎಂದು ನನ್ನ ಅಭಿಪ್ರಾಯ. ಉದಾಹರಣೆಗೆ ನಮ್ಮ ದೇಶದ ಪ್ರಜಾಪ್ರಭುತ್ವದಲ್ಲಿ ಪ್ರಗತಿಪರವಾದ ದಾರಿಯಲ್ಲಿ ಹೋಗಬೇಕು ಎಂದು ನಾವೆಲ್ಲರೂ ಸೂಚನೆಗಳನ್ನು ಕೊಟ್ಟಿದ್ದೇವೆ. ನಮ್ಮಲ್ಲಿರುವ 75 ಗುತ್ತೆದಾರಿ ಮನೆತನಗಳನ್ನು ತೆಗೆಯಬೇಕು ಎಂದು ಹೇಳಿದ್ದೆವು. ಅದನ್ನೂ ಮಾಡಲಿಲ್ಲ. ಆಹಾರ ಪದಾರ್ಥಗಳ ಸಗಟು ವ್ಯಾಪಾರವನ್ನು ತಾವೇ ವಹಿಸಿಕೊಳ್ಳಬೇಕು ಎಂದು ಮಾಡಿದರು ಅದು ಕೂಡ ಪೂರ್ತಿಯಾಗಿಲ್ಲ. ಸಕ್ಕರೆ ಎಣ್ಣೆ, ಡ್ರಗ್ಸ್, ಟೆಕ್ಸ್‌ಟೈಲ್ಸ್ ಇದೆಲ್ಲವೂ ಕೂಡ ರಾಷ್ಟ್ರೀಕರಣ ಮಾಡಬೇಕು, ತಾವೇ ವಹಿಸಿಕೊಳ್ಳಬೇಕು ಎಂದು ಹೇಳಿದ್ದರು. ಅದೂ ಕೂಡ ಮಾಡಲಿಲ್ಲ. ಪಬ್ಲಿಕ್ ಸೆಕ್ಟರ್ ಬೆಳೆಸಬೇಕು, ಅದಷ್ಟು ಮಟ್ಟಿಗೆ ಕಮಾಂಡಿಂಗ್ ಹೈಟ್ ಆಫ್ ಎಕಾನಮಿ ಮಾಡಬೇಕು, ಅದು ನಮ್ಮ ಅಭಿಪ್ರಾಯ ಇದೆಯೆಂದು ಹೇಳಿಕೊಳ್ಳುತ್ತಿದ್ದೀರಿ, ಇದೂ ಮಾಡಲಿಲ್ಲ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ, ಪ್ರಗತಿ ಮುಂದೆ ಹೋಗದೆ, ಪ್ರಗತಿಯಾಗದೆ ಇರುವುದಕ್ಕೆ ಬೇರೆ ಕಾರಣ ಇಲ್ಲ ಎಂದು. ಇದಕ್ಕೆ ಒಂದು ಉದಾಹರಣೆ ಕೊಡಬೇಕಾದರೆ, ಬೇರೆ ಸಮಾಜವಾದಿ ರಾಷ್ಟ್ರಗಳಿಂದ ನಾವು ಕಲಿಯಬೇಕಾಗಿದೆ ; ಸೋವಿಯಟ್ ನೇಷನ್ ನವರು ಯಾವ ರೀತಿ ಬಜೆಟ್ ತಯಾರು ಮಾಡುತ್ತಾರೆ ಎಂದರೆ, ನ್ಯಾಷನಲ್ ಎಕಾನಮಿಗೆ ಶೇಕಡ 80 ರಷ್ಟು ಅಗ್ರಿಕಲ್ಚರ್ ಮತ್ತು ಇಂಡಸ್ಟ್ರೀಸ್ ಟ್ರೇಡ್‌ನಿಂದ ಬರುತ್ತದೆ. ನಮ್ಮಲ್ಲಿ ಸಾಮಾನ್ಯ ಜನಗಳ ಮೇಲೆ ಹಾಕತಕ್ಕ ಪ್ರತ್ಯಕ್ಷ ಮತ್ತು ಪರೋಕ್ಷತೆರಿಗೆಯಿಂದ 80 ಪರ್ಸೆಂಟ್ ನ್ಯಾಷನಲ್ ಎಕಾನಮಿಗೆ ಬರುತ್ತಾ ಇರುವುದು. ಇದೆ ಸಮಾಜವಾದಿ ರಾಷ್ಟ್ರಕ್ಕೂ ಮತ್ತು ಬಂಡವಾಳಶಾಹಿ ರಾಷ್ಟ್ರಕ್ಕೂ ಇರುವ ವ್ಯತ್ಯಾಸ. ನಮ್ಮಲ್ಲಿ ಪರೋಕ್ಷ ತೆರಿಗೆ ಜಾಸ್ತಿಯಿದೆ. ಇಂಥ ಕೈಗಾರಿಕೆಗಳನ್ನು ನ್ಯಾಷನಲೈಸ್ ಮಾಡುವ ದಾರಿಯಲ್ಲಿ ಹೋಗಬೇಕು, ಹೋಗಿಲ್ಲ ಇವರು ಎಂದು ಹೇಳಬೇಕಾಗಿದೆ. ಆದ್ದರಿಂದ ಇಂಥ ಪರಿಸ್ಥಿತಿ ಬಂದಿದೆ ; ಬೆಲೆಗಳ ಏರಿಕೆ, ಅತ್ಯಾಚಾರ, ಅನಾಚಾರ ಈ ಎಲ್ಲಾ ಬರೀ ಕಾರಣಗಳನ್ನು ಕೊಟ್ಟರೆ ಸಾಧುವಾದದು ಅಲ್ಲ ಎಂದು ಹೇಳಬೇಕಾಗಿದೆ. ಈ ಒಂದು ಹಿನ್ನಲೆಯಲ್ಲಿ ನಮ್ಮ ರಾಜ್ಯದ ಒಂದು ಫಿನಾನ್ಸಿಯಲ್ ಪೊಜಿಷನ್ ಅನ್ನು ನೋಡೋಣ.

(ಉಪಸಭಾಪತಿಗಳು ಪೀಠವನ್ನು ಅಲಂಕರಿಸಿದರು)

Eighty per cent comes out of taxes, direct as well as indirect and mostly from indirect taxes. In Soviet Russia, taxation is very little and the resources produced by industry and agriculture itself comes to 80 percent.

Sri M. Y. GHORPADE (Minister for Finance).—When the whole economy is nationalised, as in Soviet Russia the taxation is built into the profit of all the commodities.

Sri M. S. KRISHNAN.—In an nationalised economy the taxation structure is such that tax does not become part of cost of production or cost of manufacture. No doubt, there is an element of taxation but in an economy like ours, the so-called mixed economy, taxation is more upon the common man and less upon the people who can afford to pay and the generation of resources from the nationalised sector is less.

Sri M. Y. GHORPADE.—I do not accept that proposition. Suppose in Soviet Russia they manufacture coats, shirts or shoes, the shirt or

the coat or the shoes contains an element of taxation; there it is built into the price structure of the commodity, and the shirt or coat or shoes are worn by the common man in Soviet Russia.

Sri M. S. KRISHNAN.—In Soviet Russia there is overall planning. How many shoes are to be manufactured, how much of textile goods are to be manufactured, at what rate, how much of it should be consumer goods—all these factors are taken into consideration and then price is fixed. No doubt there is an element of profit but not the huge profit that goes to the private sector. This is a thing which has to be stopped. Secondly, in addition to the taxes which the common man pays, he has also to bear the additional taxes which are levied upon the big industrialists. That is why generation of resources becomes rather difficult in a capitalistic society.

ಇವತ್ತಿನ ದಿವಸ ಸೋವಿಯಟ್ ರಷ್ಯಾದಲ್ಲಿ 80 ಪರ್ಸೆಂಟ್ ಟ್ಯಾಕ್ಸ್ ಇಲ್ಲ. ಈಗ ತಾವು ಹೋಗುತ್ತಿರುವ ದಾರಿ ಸರಿಯಲ್ಲ. ತಮ್ಮ ಆರ್ಥಿಕ ನೀತಿಯನ್ನು ಬದಲಾವಣೆ ಮಾಡಿಕೊಂಡರೆ ಮಾತ್ರ ರಿಸೋರ್ಸಸ್ ಜಾಸ್ತಿ ಬರುವುದಕ್ಕೆ ಅನುಕೂಲವಾಗುತ್ತದೆ. ತೊಂದರೆಗಳು ಕಡಿಮೆಯಾಗುತ್ತವೆ. ಅಲ್ಲದೆ ತಮ್ಮ ಹಿಂದಿನ ಬಡ್ಜೆಟ್ಟನ್ನು ನೋಡಿದರೆ, ಈ ಬಡ್ಜೆಟ್ಟಿಗೆ ಮಹತ್ವ ಕೊಟ್ಟಿದ್ದಾರೆ. 1973-74 ರ ಬಡ್ಜೆಟ್ಟಿನಲ್ಲಿ ಏನಾಗಿದೆ ಎಂದರೆ, ಪೇಜ್ 53 ರಲ್ಲಿ ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅದರಲ್ಲಿ 2—3 ಅಂಕಿ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಎಕ್ಸೆಸ್ ಆಫ್ ಅಸೆಟ್ಸ್ ಓವರ್ ಲಯಬಿಲಿಟೀಸ್ ನೋಡಿದರೆ, 172.23 ಕೋಟಿ ರೂಪಾಯಿ 1972 ರ ಮಾರ್ಚ್ 31 ರಲ್ಲಿ ಇದ್ದುದು 7-3-1974 ಕ್ಕೆ 180.2 ಕೋಟಿ ರೂಪಾಯಿಗೆ ಬರುತ್ತದೆ. ಅದೇ ಸಮಯದಲ್ಲಿ ಲೋನ್ಸ್ ಬಗ್ಗೆ ತೆಗೆದುಕೊಂಡರೆ, ಸೆಂಟ್ರಲ್ ಗವರ್ನ್‌ಮೆಂಟ್‌ನಿಂದ ಲೋನ್ ಮತ್ತು ಇತರೆ ಲೋನ್‌ಗಳು 1972 ರ ಮಾರ್ಚ್‌ನಲ್ಲಿ 502.47 ಕೋಟಿ ರೂಪಾಯಿಗಳಿಂದ ಹಿಡಿದು 1973-74 ರಲ್ಲಿ 650 ಕೋಟಿ ರೂಪಾಯಿಗಳಷ್ಟು ಜಾಸ್ತಿಯಾಗುತ್ತದೆ. ಇದರ ಅರ್ಥ ಏನಾಗುತ್ತದೆ ಎಂದರೆ, ಒಂದು ಕಡೆ ನಿಮ್ಮ ಸಾಲದ ಹೊರೆ ಜಾಸ್ತಿಯಾಗುತ್ತಾ ಹೋಗುತ್ತದೆ, ಇನ್ನೊಂದು ಕಡೆ ನಿಮ್ಮ ಅಸೆಟ್ಸ್ ಕಡಿಮೆಯಾಗುತ್ತಿದೆ. You are denuding assets while your loans are increasing. Previously assets and the liabilities position was, there was more liabilities than assets. Assets were created two years back and now you are decreasing. That is the financial picture. If you take the outlook for two more years, it is decreasing.

3-30 P. M.

Another aspect is, public debts or loans, are created to the tune of Rs. 325 crores in March 1972 which increased to Rs 509 crores by March 1974. At the same time how are you going to build up assets in this period ? Is it increasing or diminishing ? If you leave the capital outlay on electricity schemes, in fact the position remains the same. So, the financial picture is not one of happy affair.

If you see page 2 of the Memorandum, you will find that the share of central tax is Rs. 54.7 crores in 1972-73 ; in 1973-74 Rs. 52.37 crores ; debt services Rs. 45 crores.

This is most unhappy state of affairs

Mr. DEPUTY SPEAKER.—There are a large number of members who are desirous to speak, please conclude.

Sri M. S. KRISHNAN.—If you do not want me to speak, I will sit down.

Mr. DEPUTY SPEAKER.—The hon. member cannot display auy contempt or demeanour. I appeal to the hon member. Plese resume your seat.

ಶ್ರೀ ಎಂ. ಎಸ್. ಕೃಷ್ಣನ್.— ನೀವು ಹಣಕಾಸಿನ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ 6 ನೇ ಫೈನಾನ್ಸ್ ಕಮೀಷನ್‌ಗೆ ಒಂದು ಮೆಮೋರ್ಯಾಂಡಂ ಕೊಟ್ಟಿದ್ದೀರಿ, ಅದು ಸರಿಪಡಿಸಬೇಕಾದ ದೃಷ್ಟಿಯಿಂದ ಕೊಟ್ಟಿದ್ದೀರಿ. ನಿಮ್ಮ ಮೆಮೋರ್ಯಾಂಡಂನಲ್ಲಿ ಒಳ್ಳೆಯ ಅಂಶಗಳು ಇವೆ, ಅವನ್ನು ಸ್ವಾಗತಿಸುತ್ತೇನೆ, ವಿರೋಧ ಮಾಡುವುದಿಲ್ಲ. ಆದರ ಜೊತೆಯೊಳಗೆ ನಮ್ಮಲ್ಲಿ ಕೇಳಿಕೊಳ್ಳುವುದು ಏನು ಎಂದರೆ ಘಟನಾವಳಿಯಲ್ಲಿ ತಿದ್ದುಪಡಿ ತರಬೇಕು. ಟಾಕ್ಸ್ ಷೇರ್ ಎಷ್ಟು ಇರಬೇಕು ಎಂಬುದು ಘಟನಾವಳಿಯಲ್ಲಿ ಅಡಕವಾಗಿದ್ದರೆ, ಅದರಿಂದ ಎಷ್ಟೋ ತೊಂದರೆಗಳು ಕಡಿಮೆಯಾಗುತ್ತವೆ. ಇದನ್ನು ಯೋಚನೆ ಮಾಡಬೇಕು. ಎರಡನೆಯದು ನಾನ್ ಪ್ಲಾನ್ ಗ್ರಾಂಟಿಗೆ ಫೈನಾನ್ಸ್ ಕಮಿಷನ್ ರೆಫರ್ ಮಾಡಿದ್ದಾರೆ, ಆದುದರಿಂದ ಪ್ಲಾನ್ ಗ್ರ್ಯಾಂಟ್ಸ್ ಮಾಡುವುದಕ್ಕೆ ಅಡ್ಡಿಯಿಲ್ಲ. ಮೂರನೆ ಸೂಚನೆ ಒಂದು ಎಕ್ಷಪರ್ಟ್ ಕಮಿಟಿ ಕಾನ್ಸ್ಟಿಟ್ಯೂಟ್ ಮಾಡಬೇಕು ಎಂದು ಹೇಳುತ್ತೇನೆ.

Mr DEPUTY SPEAKER.—The hon member will please resume his seat.

Sri M. S. KRISHNAN.—Thank you

Mr. DEPUTY SPEAKER.—The Chief Minister would like to make a statement.

Statement by the Chief Minister.

re : Death of one Sri Kari Gowda at Nagamangala

Sri D. DEVARAJ URS (Chief Minister)—With reference to the issue raised by the hon. member Sri Puttaswamaiah I would like to make a statement with your permission.

It is reported that Sri Karigowda, an ex-employee of Mysore Sugars was interrogated at Mandya on the afternoon of 19th March 1973, by the Circle Inspector, Nagamangala as he was a complaint in a criminal case in No. 18/73 under section 307 I. P. C. and also a witness in another case in Bellur, Criminal case No. 6/73 under section 420 of I. P. C. Sri Karigowda was allowed to go as he promised to collect additional information in crime No. 6/73. The Circle Inspector was returning in a lorry as he could not get any conveyance. It is learnt that Sri Karigowda go into the same lorry at Chickamandya toll gate at about 20 hours. When the lorry was running Sri Karigowda jumped from the running lorry and sustained head injuries and spilled blood on the road. A mahajar was drawn up and Sri Karigowda was taken to the hospital in the same lorry. But before he could reach the hospital he died. The relatives were kept informed on 20-3 1973 and the dead body was subjected to post mortem examination. But the relatives did not claim the body A crowd of 1000 persons gathered round the police station at Nagamangala and demanded an enquiry regarding the death of Sri Karigowda. The mob indulged in pelting stones at the police station and damaged the windows and tiles

of the police station. Five policemen were injured. As the situation became tense the police resorted to lathi charge. As lathi charged proved futile the police had to open fire disperse the mob and control the situation. Five members of the public have sustained injuries and one of them is injured due to gun shot. The Superintendent of Police and the Deputy Superintendent of Police are camping at the place, The Deputy Inspector General of Police, Southern Range, Mysore, has proceeded to Nagamangala to make enquiries. The situation at present is peaceful.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮುಖ್ಯಮಂತ್ರಿಗಳಿಗೆ ಅಧಿಕಾರಿಗಳು ಒದಗಿಸಿಕೊಟ್ಟಿರತಕ್ಕ ವರದಿ ಸತ್ಯಕ್ಕೆ ದೂರವಾದುದು. ಪ್ರಾಯಶಃ ಅವರಿಗೆ ಸತ್ಯವಾದಂಥ ಅಂಶ ಗೊತ್ತಾಗಬೇಕಾದರೆ ಅದಕ್ಕೆ ಸೂಕ್ತ ನ್ಯಾಯಾಂಗ ತನಿಖೆ ಆಗುವುದು ಅವಶ್ಯಕ. ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ ಪೋಲೀಸ್ ಸ್ಟೇಷನ್ನಿನಲ್ಲಿ ಆತನಮೇಲೆ ಅಪರಾಧ ಇದೆ, ವಿಚಾರಣೆ ಮಾಡಬೇಕು ಎಂದು ಕರೆ ಕಳುಹಿಸಿದಾಗ........

ಶ್ರೀ ಡಿ. ದೇವರಾಜ್ ಅರಸ್.—ಅವರು ಕೊಟ್ಟಿದ್ದು ಕಂಪ್ಲೈಂಟ್ ಅವರ ಮೇಲಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕರೀಗೌಡ ಪೋಲೀಸ್ ಸ್ಟೇಷನ್‌ಗೆ ಹೋದಾಗ ಅವರು ಹೇಳಿ ಕಳುಹಿಸಿದಾಗ ಬರಲಿಲ್ಲವೆಂದು ಕುಪಿತರಾದರು. ಕುಪಿತರಾಗಿ ಅಲ್ಲಿದ್ದಂಥ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿವರ್ಗ ಸಮೇತರಾಗಿ ಪೋಲೀಸ್ ಸ್ಟೇಷನ್ ಬಾಗಿಲು ಮುಚ್ಚಿ ಬೋಲ್ಟ್ ಹಾಕಿಕೊಂಡು ಸಿಕ್ಕಾಪಟ್ಟೆ ಅವರನ್ನು ಥಳಿಸಿದ್ದಾರೆ. ಆ ವ್ಯಕ್ತಿ ಪೋಲೀಸ್ ಸ್ಟೇಷನ್ನಲ್ಲಿ ಸತ್ತಿದ್ದಾನೆ. ಸತ್ತಂಥ ವ್ಯಕ್ತಿಯನ್ನು ಪೋಸ್ಟ್‌ಮಾರ್ಟಮ್ ಮಾಡಬೇಕೆಂದು ಗೊತ್ತಾದಮೇಲೆ ಅಲ್ಲಿದ್ದಂಥ ಗ್ರಾಮಾಂತರ ಜನ ಪೋಲೀಸ್ ಸ್ಟೇಷನ್ನಿನಲ್ಲಿ ನಡೆದಂತಹ ದುರಂತವನ್ನು ನೋಡಲು ಹೋದಾಗ ಗೋಲಿಬಾರ್ ಆಗಿದೆ. ಇದು ನಡೆದಂತಹ ಸತ್ಯ ಸಂಗತಿ. ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ಪ್ರಾರ್ಥನೆ ಮಾಡುವುದು ಇಂಥ ಘಟನೆಗಳು ನಡೆದಾಗ ಅಧಿಕಾರಿಗಳು ಕೊಟ್ಟಂಥ ವರ್ತಮಾನದಮೇಲೆ ಸಭೆಗೆ ವರದಿ ಸಲ್ಲಿಸುವುದಾದರೆ ತಮಗೆ ಆಗಲಿ ತಮ್ಮ ಸರ್ಕಾರಕ್ಕೆ ಆಗಲಿ ಗೌರವ ಬರತಕ್ಕದ್ದು ಅಲ್ಲ. ದಯಮಾಡಿ ತಾವು ಸೂಕ್ತ ನ್ಯಾಯಾಂಗ ವಿಚಾರಣೆ ನಡೆಸಿ ನಿಮ್ಮ ಕೀರ್ತಿಯನ್ನು ಹೆಚ್ಚಿಸಿಕೊಳ್ಳಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರಿಗೆ ಬರತಕ್ಕಂಥಾ ವರ್ತಮಾನವೂ ಕೂಡ ಬೇರೆಯವರಿಂದಲೇ ಬರಬೇಕು. ಇವರು ಖುದ್ದಾಗಿ ಕಂಡ ಸಾಕ್ಷಿಗಳಲ್ಲ. ನಿಮ್ಮ ಸೋರ್ಸಸ್ ಪಬ್ಲಿಕ್‌ನಿಂದಲೇ ಬರುತ್ತದೆ ಎಂದು ಇಟ್ಟುಕೊಳ್ಳೋಣ. ಸರ್ಕಾರಕ್ಕೆ ಅಧಿಕಾರಿಗಳಿಂದಲೇ ಬರಬೇಕು. ಅಲ್ಲಿ ಫೈರಿಂಗ್ ಆಯಿತು ಅಂತ ಇನ್ನು ಹಲವಾರು ವಿಷಯಗಳನ್ನು ಹೇಳಿದರು. ಅವನ್ನು ಅವರು ನೋಡಿರಬಹುದು, ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಪೋಲೀಸ್ ವರದಿ ಪ್ರಕಾರ ಇಂತಹ ಘಟನೆಗಳು ನಡೆದಾಗ ಮ್ಯಾಜಿಸ್ಟ್ರೇಟ್‌ರಿಂದ ಎನ್‌ಕ್ವೈರಿ ನಡೆಸುತ್ತೇವೆ. ಇದರಲ್ಲಿ ನಿಜಾಂಶ ತಿಳಿಯಬೇಕಾದರೆ ಎನ್‌ಕ್ವೈರಿ ಮಾಡಬೇಕು. ಆದುದರಿಂದ ಶ್ರೀಮಾನ್ ಪುಟ್ಟಸ್ವಾಮಿಯವರು ಏನು ಹೇಳುತ್ತಿದ್ದಾರೆ ಅದು ಸತ್ಯ ಎಂದು ಹೇಳುವುದಕ್ಕಾಗುವುದಿಲ್ಲ. ಇನ್ನೊಬ್ಬರು ಹೇಳಿದ್ದನ್ನೇ ಅವರೂ ಹೇಳಬೇಕಾಗುತ್ತದೆ. ನಾಳೆ ನೀವು ಇಲ್ಲಿ ಬಂದು ಸರ್ಕಾರ ನಡೆಸಿದರೂ ಕೂಡ ಅಧಿಕಾರಿಗಳು ಹೇಳಿದ್ದನ್ನೇ ನೀವೂ ಕೂತು ಕೇಳಬೇಕಾಗುತ್ತೆ. ಬೇರೆಯವರನ್ನು ಕೇಳಿಕೊಂಡು ಉತ್ತರ ಹೇಳುವುದಕ್ಕಾಗುವುದಿಲ್ಲ. ಅವರು ಹೇಳಿದ್ದು ಸರಿಯಲ್ಲ ಎಂದರೆ ಎನ್‌ಕ್ವೈರಿ ಮಾಡುವ. ಕೇಸ್ ಕಂಡಕ್ಟ್ ಮಾಡಿದಾಗ ಇವೆಲ್ಲಾ ಕಂಡು ಬರುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಚಿಕ್ಕಮಂಡ್ಯ ಎನ್ನುವುದು ಮಂಡ್ಯಕ್ಕೆ 15 ಮೈಲಿ ಫಾಸಲೆಯಲ್ಲಿ ಇದೆ. ಈ ಘಟನೆ ನಡೆದಿರುವುದು ಅಲ್ಲಿ. ಆ ಲಾರಿಯಲ್ಲಿ ಇನ್‌ಸ್ಪೆಕ್ಟರು ಇದ್ದರೂ ಕೂಡ ಆ ಕರೀಗೌಡ ಎನ್ನುವ ಮನುಷ್ಯ ಲಾರಿಯಿಂದ ನೆಗೆಯುವುದಕ್ಕೆ ಕಾರಣ ಏನು ? ಹೋಗತಕ್ಕಂಥ ಲಾರಿಯನ್ನು ನಿಲ್ಲಿಸಿ ಸಾಯತಕ್ಕಂಥ ಅಗತ್ಯ ಏನು ! ಇದರಲ್ಲಿ ಸ್ವಯಂ ಪ್ರೇರಿತನಾಗಿ ಸತ್ತಿದ್ದಾನೆಯೇ ಎನ್ನುವುದು ಅರ್ಥವಾಗುತ್ತದೆಯೇ ? ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಸತ್ಯಕ್ಕೆ ದೂರವಾದ ಸಂಗತಿಯನ್ನು ಹೇಳಿದ್ದಾರೆ. ಅಧ್ಯಕ್ಷರೇ, ಆದುದರಿಂದ ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳುತ್ತೇನೆ ಇದಕ್ಕೆ ವಿಶೇಷ ನ್ಯಾಯಾಧಿಕಾರಿಯನ್ನು ಗೊತ್ತು ಮಾಡಿ ಸರಿಯಾದ ಇನ್‌ವೆಸ್ಟಿಗೇಷನ್ ಮಾಡಿಸುತ್ತೀರಾ ?

ಉಪಾಧ್ಯಕ್ಷರು.—ಮ್ಯಾಜಿಸ್ಟ್ರೇಟ್‌ರವರಿಂದ ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದ್ದಾರಲ್ಲಾ.

ಶ್ರೀ ವಾಟಾಳ್ ನಾಗರಾಜ್.--ಬಹುಶಃ ಇದು ಮುಖ್ಯಮಂತ್ರಿಗಳಿಗೆ ಬಂದಿರತಕ್ಕಂಥ ಹೇಳಿಕೆ. ನಾನು ಅವರನ್ನು ಆರೋಪಣೆ ಮಾಡುವುದಿಲ್ಲ. ಅಧಿಕಾರಿಗಳಿಂದ ಬಂದಿರತಕ್ಕಂಥ ವರದಿಯನ್ನು ಅವರು ಈ ಸಭೆಯಲ್ಲಿ ಓದಿದ್ದಾರೆ. ಇದರ ಬಗ್ಗೆ ಯೋಚನೆ ಮಾಡಿದಾಗ ಒಬ್ಬ ಇನ್‌ಸ್ಪೆಕ್ಟರ್ ಈ ಕರೀಗೌಡ ಎಂಬುವನನ್ನು ಜೊತೆಯಲ್ಲಿ ಕರೆದುಕೊಂಡು ಬರುತ್ತಾ ಇರುವಾಗ ಈ ಘಟನೆ ನಡೆದಿದೆ. ಆದುದರಿಂದ ಇದನ್ನು ಅಷ್ಟು ಸುಲಭವಾಗಿ ಹೇಳುವುದಕ್ಕೆ ಬರುವುದಿಲ್ಲ. ಇದು ಬಹಳ ಗುರುತರವಾದ ವಿಷಯ. ಅವನು ತಾನಾಗೆ ಬಿದ್ದು ಸತ್ತಿಲ್ಲ. ಅವನಾಗೇ ಬಿದ್ದಿದ್ದು ಸತ್ತಿದ್ದರೆ ನಾಗಮಂಗಲದ ಪೋಲೀಸ್ ಸ್ಟೇಷನ್ ಮುಂದೆ ಜನ ಏತಕ್ಕೆ ಮುತ್ತಿಗೆ ಹಾಕಬೇಕಾಗಿತ್ತು ? ಏತಕ್ಕೆ ಇವರು ಗೋಲಿಬಾರ್ ಮಾಡಬೇಕಾಗಿತ್ತು ? ಮೊನ್ನೆ ದಿವಸ ಗುಲ್ಬರ್ಗಾದಲ್ಲೂ ಕೂಡ ಒಂದು ಘಟನೆ ನಡೆದಿದೆ. ಇವರಿಗೆ ಗೋಲೀಬಾರ್ ಮಾಡುವುದು ಸಾಮಾನ್ಯವಾಗಿ ಆಗಿಬಿಟ್ಟಿದೆ. ಇಂತಹ ಹೇಳಿಕೆ ಕೊಟ್ಟುಬಿಟ್ಟು ಮುಖ್ಯಮಂತ್ರಿಗಳು ತಪ್ಪಿಸಿಕೊಂಡು ಹೋಗುವುದಲ್ಲ. ಇದಕ್ಕೆ ಉಗ್ರವಾದಂಥ ಗಾಳಿ ಏನೆಂದರೆ ಜನರು ಈ ಸರ್ಕಾರದ ಮೇಲೆ ಬೀಳಬೇಕು. ಪೋಲೀಸಿನವರು ಹದ್ದುಮೀರಿ ಹೋಗುತ್ತಿದ್ದಾರೆ. ಅವರು ಸತ್ಯಕ್ಕೆ ದೂರವಾದ ಹೇಳಿಕೆಗಳನ್ನು ಕೊಡುತ್ತಾರೆ. ನಮ್ಮ ಪೋಲೀಸರು ಕ್ರಮವಾಗಿ ನಡೆದುಕೊಂಡು ಹೋಗುವ ರೀತಿ ಸರಿಯಾಗಿಲ್ಲ. ಇನ್‌ಸ್ಪೆಕ್ಟರನ್ನಾಗಲಿ, ಸಬ್ ಇನ್‌ಸ್ಪೆಕ್ಟರನ್ನಾಗಲೀ ಯಾರನ್ನೂ ಸಸ್ಪೆಂಡ್ ಮಾಡಿಲ್ಲ. ನಮಗೆ ಟೆಲಿಗ್ರಾಂ ಬಂದಿದೆ. ಜನ ನೋಡಿದ್ದಾರೆ, ಪೋಲೀಸರು ಉದ್ದೇಶಪೂರ್ವಕವಾಗಿಯೇ ಕೊಂದಿದ್ದಾರೆ ಎಂದು ಹೇಳುತ್ತಾರೆ.

Mr. DEPUTY SPEAKER.—Are you not satisfied when the Hon. Chief Minister says that a Majesterial Enquiry will be held ?

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ಪ್ರಶ್ನೆ. ಪೋಲೀಸಿನವರು ಲಾಕ್‌ಅಪ್‌ನಲ್ಲಿ ತೆಗೆದುಕೊಂಡು ಹೋಗಿ ಚೆನ್ನಾಗಿ ಒದ್ದು, ಹೊಡೆದು ಮಾಡಿದಾಗ, ಅವರ ಹೊಡೆತ ತಡೆಯಲಾರದೆ ಬಿದ್ದುಬಿಟ್ಟ; ಅವನಿಗೆ ಬೇಧಿ ಆಯಿತು, ಅವನು ತಲೆ ತಿರುಗಿ ಬಿದ್ದುಬಿಟ್ಟ ಎಂದು ಅವರು ಹೇಳಿಬಿಡುತ್ತಾರೆ. ಇದರಿಂದ ಜನಗಳಿಗೆ ಸುರಕ್ಷಿತವಾದ ರಕ್ಷಣೆ ಇಲ್ಲ. ಇಂತಹ ವಿಚಾರಗಳಲ್ಲಿ ಅವರು ರಕ್ಷಣೆ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಸ್ವಾಮಿಯವರು ಎತ್ತಿರತಕ್ಕಂಥ ಪ್ರಶ್ನೆ ಬಹಳ ಮುಖ್ಯವಾದದ್ದು ಎಂದು ಹೇಳುತ್ತೇನೆ. ಇದರಲ್ಲಿ ಅಡಕವಾಗಿರತಕ್ಕಂಥ ಪ್ರಶ್ನೆ ಇಷ್ಟೆ ಈವೊತ್ತು ರಕ್ಷಣಾ ಇಲಾಖೆ ನಮ್ಮ ರಾಜ್ಯದಲ್ಲಿ ಏನು ಇದೆಯೋ ಅದರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಜನರಿಗೆ ರಕ್ಷಣೆ ಕೊಡತಕ್ಕಂಥಾ ಜವಾಬ್ದಾರಿ ಇವರ ಮೇಲೆ ಇದೆ. ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಗುಲ್ಬರ್ಗಾ ನಗರದ ಲೂಟಿ ಬಗ್ಗೆ ನಾನು ಹೇಳುವುದಕ್ಕೆ ಇಚ್ಛೆ ಪಡುವುದಿಲ್ಲ. ಆದರೆ ಇದರಲ್ಲಿ ಸರ್ಕಾರದ ನೀತಿ ಪ್ರಶ್ನೆ ಅಡಕವಾಗಿದೆ. ಪೋಲೀಸ್ ಸ್ಟೇಷನ್‌ನಲ್ಲಿ ಒಬ್ಬ ಸಾರ್ವಜನಿಕ ವ್ಯಕ್ತಿ ಈ ರೀತಿ ಪೋಲೀಸರ ದೌರ್ಜನ್ಯದಿಂದ ಸತ್ತಿದ್ದಾನೆ ಎಂದರೆ ಜನತೆಗೆ ಅನುಮಾನ ಬರುತ್ತದೆ. ಏತಕ್ಕೆಂದರೆ ಯಾವನಾದರೂ ಕಂಪ್ಲೈಂಟ್ ಕೊಡುವುದಕ್ಕೆ ಪೋಲೀಸ್ ಸ್ಟೇಷನ್‌ಗೆ ಹೋದರೆ ಅವನು ಹಿಂದಕ್ಕೆ ಬರುತ್ತಾನೆಯೇ ಎನ್ನುವುದು ಅನುಮಾನ ಮೂಡಿದೆ. ಈ ಸಂದರ್ಭದಲ್ಲಿ ನಾನಾದರೂ ಹೇಳುವುದು ಇಷ್ಟೆ. ಈವೊತ್ತು ನನಗೂ ಕೂಡ ಇನ್‌ಫರ್ಮೇಷನ್ ಬಂದಿದೆ ಅದರಲ್ಲಿ ಏನು ಇದೆ ಎಂದರೆ ಪೋಲೀಸಿನವರು ಕರೀಗೌಡ ಅವರನ್ನು ಒಳಗೆ ಕರೆದುಕೊಂಡು ಹೋದುದನ್ನು ನಾವು ನೋಡಿದ್ದೇವೆ, ಅವನು ಸತ್ತಿದ್ದನ್ನೂ ನೋಡಿದ್ದೇವೆ, ಶವವನ್ನು ಹೊರಗೆ ತಂದದ್ದನ್ನೂ ನೋಡಿದ್ದೇವೆ ಎಂದು ನನಗೆ ಇನ್‌ಫರ್ಮೇಷನ್ ಬಂದಿದೆ. ಆದರೆ ಈವೊತ್ತು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಹೇಳಿಕೆ, ಅದು ಇಲಾಖೆಯವರು ಕೊಟ್ಟಂಥ ಹೇಳಿಕೆ. ಅದರಲ್ಲಿ ಅವನು ಚಲಿಸುತ್ತಿದ್ದ ಲಾರಿಯಲ್ಲಿ ಬಿದ್ದು ಸತ್ತಿದ್ದಾನೆ ಎಂದು ಇದೆ. ಮತ್ತು ಸರ್ಕಲ್ ಇನ್‌ಸ್ಪೆಕ್ಟರ್ ಅದೇ ಲಾರಿಯಲ್ಲಿ ಬರುತ್ತಿದ್ದರು ಎನ್ನುವ ಹೇಳಿಕೆ ಇಟ್ಟಿದ್ದಾರೆ. ಆದುದರಿಂದ ಇದು ಇಲಾಖೆಯವರ ಹೇಳಿಕೆಯಾದುದರಿಂದ ಇವರು ಸತ್ಯಕ್ಕೆ ದೂರವಾದ ವಿಷಯಗಳನ್ನು ಕೊಟ್ಟಿದ್ದಾರೆ ಎಂದು ನಾನು ಹೇಳಬಯಸುತ್ತೇನೆ. ಇವನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಅವನು ಬಿದ್ದು ಸತ್ತಿದ್ದರೆ ಅಂಥ ಸಂದರ್ಭದಲ್ಲಿ, ನಾನು ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ; ಸರಿಯಾದ ನ್ಯಾಯಾಂಗ ವಿಚಾರಣೆಯನ್ನು ನಡೆಸಬೇಕು. ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಮಾಡಿದ್ದಾರೆ, ಹಿಂದೆ ಇದೇ ರೀತಿ ಶಿವಮೊಗ್ಗದಲ್ಲಿ ಮತ್ತು ಬೇರೆ ಕಡೆ ಆಗಿದೆ. ಸರ್ಕಾರದ ಘನತೆ, ಗೌರವ ಹೆಚ್ಚಬೇಕು, ಒಳ್ಳೆಯ ಆಡಳಿತ ಇರಬೇಕು, ಘನತೆಯಿಂದ ಕೂಡಿದ ಆಡಳಿತವಿರಬೇಕು, ಜನತೆಗೆ ನ್ಯಾಯ ಸಿಕ್ಕಬೇಕು ಎನ್ನುವುದಾದರೆ ಒಂದು ನಿಷ್ಪಕ್ಷಪಾತವಾದ ನ್ಯಾಯಾಂಗ ವಿಚಾರಣೆಯನ್ನು ನಡೆಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಇನ್‌ಸ್ಪೆಕ್ಟರ್ ಮತ್ತು ಕರೀಗೌಡ ಎಂಬುವವನು ಆ ಲಾರಿಯಲ್ಲಿ ಹೋಗುವಾಗ ಯಾವ ಜಾಗದಲ್ಲಿ ಲಾರಿಯಿಂದ ಹಾರಿ ಸತ್ತ ಎಂದು ಹೇಳಲಾಗಿದೆಯೋ ಅಲ್ಲಿ ಏನಾದರೂ ಮಹಜರ್ ಆಗಿದೆಯೋ ? ಎಷ್ಟು ಹೊತ್ತಿಗೆ ಪೋಸ್ಟ್‌ಮಾರ್ಟಂಗೆ ಕರೆದುಕೊಂಡು ಹೋದರು ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ಪ್ರಕಾರ ಪೋಲೀಸ್ ಇನ್‌ಸ್ಪೆಕ್ಟರ್ ಲಾರಿಯಲ್ಲಿ ಹೋದ, ಆತನೂ ಲಾರಿ ಹತ್ತಿದ, ಲಾರಿಯಿಂದ ಹಾರಿದ ಎನ್ನುವ ವರ್ಷನ್ ಇದೆ. ನಮಗೆ ಬಂದಿರುವ ವರ್ತಮಾನದ ಪ್ರಕಾರ ಪೋಲಿಸ್ ಸ್ಟೇಷನ್ನಿಗೆ ಹೋದ, ಪೋಲೀಸ್ ಸ್ಟೇಷನ್‌ನಲ್ಲಿ ಹೊಡೆದರು ಎಂದು ಇದೆ. ಒಂದಕ್ಕೊಂದು ತೀರಾ ವ್ಯತ್ಯಾಸವಿದೆ.

ಎರಡನೆಯದು ಮಾನ್ಯ ಮಂತ್ರಿಗಳು ಹೇಳಿರುವಂತೆ ನಡೆದಿದ್ದರೆ ಜನ ಅಷ್ಟೊಂದು ಉದ್ರೇಕಗೊಂಡು ಪೋಲೀಸ್ ಸ್ಟೇಷನ್ ಮೇಲೆ ಧಾಳಿ ಮಾಡಬೇಕಾಗಿತ್ತು ಎನ್ನುವುದು ಬರುತ್ತದೆ. ಲಾರಿಯಿಂದ ಹಾರಿ ಸತ್ತಿದ್ದರೆ ಜನ ಅಷ್ಟೊಂದು ಉದ್ರೇಕಗೊಳ್ಳುವುದಕ್ಕೆ ಮತ್ತು ಪೋಲೀಸ್ ಸ್ಟೇಷನ್ ಮೇಲೆ ಧಾಳಿ ಮಾಡುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ಆದ್ದರಿಂದ ಅವರು ಹೇಳಿದ್ದಕ್ಕಿಂತ ಆಳವಾಗಿ ಏನೋ ಇರಬೇಕು, ಹೆಚ್ಚು ವಿವರಗಳನ್ನು ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

ನಾವು ಈ ಮನೆಗೆ ಬಂದ ಮೇಲೆ ಇಂಥ ಹಲವಾರು ಪ್ರಕರಣಗಳು ನಡೆದಿರುವುದನ್ನು ನೋಡುತ್ತಿದ್ದೇವೆ. ಇದರಿಂದ ಏನೋ ತಪ್ಪಿರಬೇಕೆಂದು ಅರ್ಥವಾಗುತ್ತದೆ. ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಮಾಡುತ್ತೇವೆಂದು ಹೇಳುತ್ತಾರೆ, ಆದರೆ ಪೋಲೀಸಿನವರ ವರ್ತನೆ ಬಗ್ಗೆ ಸ್ವಲ್ಪ ಆಳವಾಗಿ ಅಭ್ಯಾಸ ಮಾಡಬೇಕು. ನನ್ನ ಅನುಭವದಲ್ಲಿ ಪೋಲೀಸ್ ಠಾಣೆಗೆ ಹೋದ ತಕ್ಷಣ ಸಿಕ್ಕಾಪಟ್ಟೆ ಮಾತನಾಡುತ್ತಾರೆ. ಆಳವಾಗಿ ಸಮಗ್ರ ದೃಷ್ಟಿಯಿಂದ ಎನ್‌ಕ್ವೈರಿ ಮಾಡಿ ಪೋಲೀಸ್ ಅಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ನಡೆಯುವಂತೆ ಮತ್ತು ಹದ್ದುಮೀರಿ ಬಡಿಯುವಂತೆ ಹೇಳುವ ಅವಶ್ಯಕತೆ ಬಂದಿದೆ ಎಂದು ಕಾಣಿಸುತ್ತದೆ.

Sri .D DEVARAJ URS.—Sir, I have already stated that at about 20 hours (8 'O' clock) in the night when the lorry was at a distance of about 2 miles from Nagamangala...... It was going towards Nagamangala.

ಶ್ರೀ ಕಾಗೋಡು ತಿಮ್ಮಪ್ಪ.—ಈತನು ಹತ್ತಿದಂಥ ಲಾರಿ ಮತ್ತು ಸಂಬಂಧಪಟ್ಟ ಪೋಲೀಸ್ ಇನ್‌ಸ್ಪೆಕ್ಟರ್ ಲಾರಿಯಲ್ಲಿರುವುದಕ್ಕೆ ಏನು ಸಂಬಂಧ ?

ಶ್ರೀ ಡಿ. ದೇವರಾಜ ಅರಸ್.—ನನಗೆ ಬಂದಿರುವ ರಿಪೋರ್ಟನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಮಂಡ್ಯ ಪೋಲೀಸ್ ಸ್ಟೇಷನ್ನಿಗೆ ಹೋಗಿರುವುದು ನಿಜ. ಅದನ್ನು ಇಲ್ಲ ಎಂದು ಹೇಳಲಲ್ಲ. ಎರಡು ಕ್ರಿಮಿನಲ್ ಕೇಸುಗಳಿದ್ದು, ಅವರಲ್ಲಿ ಕರೀಗೌಡ ಒಬ್ಬ ಕಂಪ್ಲೇನೆಂಟ್. ಆತನನ್ನು ಮಂಡ್ಯಕ್ಕೆ ಹೋಗು ಎಂದು ಹೇಳಿದ್ದು, ಅಲ್ಲಿಂದ ಬರುವಾಗ ಹೀಗಾಯಿತು ಎಂದು ಇದೆ. ಇದು ನಮಗೆ ಬಂದಿರುವ ವರದಿ. ಜನರು ಹೇಳುವ ರೀತಿಯಲ್ಲಿ ಮಂಡ್ಯ ಪೋಲೀಸ್ ಸ್ಟೇಷನ್‌ನಲ್ಲಿ ಹೊಡೆದರು-.........

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾಗಮಂಗಲ ಪೋಲೀಸ್ ಸ್ಟೇಷನ್‌ನಲ್ಲಿ ಹೊಡೆದರು ಎಂದು ನಮಗೆ ವರ್ತಮಾನ ಬಂದಿದೆ.

Sri D. DEVARAJ URS.—The Circle Inspector was returning to Nagamangala in a lorry as he could not get any conveyance. It is learnt that Kari Gowda got into the same lorry at Chikkamandya Toll gate.

ಶ್ರೀ ಎಸ್. ಬಂಗಾರಪ್ಪ.—ಸರ್ಕಲ್ ಇನ್‌ಸ್ಪೆಕ್ಟರಿಗೆ ಹೆದರಿ ಕಂಪ್ಲೇನೆಂಟ್ ಲಾರಿಯಿಂದ ಹಾರಿದ.........

ಶ್ರೀ ವಾಟಾಳ್ ನಾಗರಾಜ್.—ಮುಖ್ಯ ಮಂತ್ರಿಗಳು ಬಹಳ ಸತ್ಯವಂತರಂತೆ ಮಾತನಾಡುತ್ತಿದ್ದಾರೆ, ಇವರು ಮಹಾ ಸತ್ಯವಂತರು.

ಶ್ರೀ ಡಿ. ದೇವರಾಜ ಅರಸ್.—ಇವರೊಬ್ಬರೇ ಸತ್ಯವಂತರು ಎಂದು ಆಗಿದ್ದರೆ ನಾವು ಇರುತ್ತಲೇ ಇರಲಿಲ್ಲ. ಇವರೊಬ್ಬರೇ ಉಳಿದುಕೊಳ್ಳುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್.—ಇವರು ತಮ್ಮ ಸ್ವಂತ ಶಕ್ತಿಯಿಂದ ಬರಲಿಲ್ಲ. ಬಲವಾದ ಗಾಳಿ ಬೀಸಿ ಬಂದರು, ಮುಖ್ಯ ಮಂತ್ರಿಗಳಾಗಿದ್ದಾರೆ; ಸುಂಟರ ಗಾಳಿ ಹೋಗುತ್ತಿದೆ. ಆಗ ಏನಾಗುತ್ತದೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.- ಶ್ರೀ ವಾಟಾಳ್ ನಾಗರಾಜ್ ಅವರು ಹೇಳುವುದು ಇದೊಂದೇ. ಅಸೆಂಬ್ಲಿಯಲ್ಲಿಯೂ ಮತ್ತು ಹೊರಗೂ ಇದನ್ನೇ ಹೇಳುತ್ತಾರೆ. ಅವರಿಗೆ ಯಾವಾಗಲೂ ಇದೇ ವಿಚಾರವೇ.

ಶ್ರೀ ವಾಟಾಳ್ ನಾಗರಾಜ್.—ಅವರು ಹೇಳುವುದು ಸತ್ಯಕ್ಕೆ ಹತ್ತಿರ ಹತ್ತಿರವಾಗಿದೆಯಂತೆ ಆದರೆ ಸತ್ಯಕ್ಕೆ ಎಷ್ಟು ದೂರವಾದ ಮಾತುಗಳನ್ನು ಆಡುತ್ತಿದ್ದಾರೆಂದು ನಾವು ಹೇಳುತ್ತಿದ್ದೇವೆ.

Sri S. BANGARAPPA.—Sir, are we to hear the untruthful statement of the Chief Minister ?

Mr. DEPUTY SPEAKER.—The hon. member knows the powers of the Speaker, and also knows the Rules of Procedure.

4-00 P.M.

Sri D. DEVARAJ URS.—I would respectfully submit to the House that if the hon. members were to say that what I am stating here is far from truth, there is absolutely no iota of evidence to show what the hon. members are alleging is nearer the truth. This is all my submission. So, let us not indulge in these talks.

Sri KAGODU THIMMAPPA.—There is no real truth in the statement of the Chief Minister.

Sri D. DEVARAJ URS.—What is the basis for you to say that my statement is far from the truth ?

Sri KAGODU THIMMAPPA.— There are circumstances . ...

Sri D. DEVARAJ URS.— Your circumstances have been told by some one else. Anybody has to rely on the officers report.

Sri S. BANGARAPPA.—The statement made by the Chief Minister is the dirty police statement.

Sri D. DEVARAJ URS.—I refute the insinuation made by the hon. member and he shall not make such allegations.

Sri S. BANGARAPPA—I do make an allegation against the Police Department.

Sri D. DEVARAJ URS.—It is not fair on the part of the hon. member to make an allegation. That is all I can say.

Sri S. BANGARAPPA.—I have got every right to speak. I am exercising the right to speak.

Mr. DEPUTY SPEAKER.—This is not the proper forum for the hon. member to cross-examine.

Sri D. DEVARAJ URS.—Allegation is different from the words used.

Sri S. BANGARAPPA.—I prove to the hilt.

Sri D. DEVARAJ URS.—I am not yielding Sir.

(Sri S. Bangarappa stood up.)

Mr. DEPUTY SPEAKER.—If you want to speak, the Hon. Chief Minister must yield ; otherwise you cannot speak.

ಶ್ರೀ ವಾಟಾಳ್ ನಾಗರಾಜ್.—ಒಂದು ಕಡೆ ಪೋಲೀಸಿನವರು ಕಾನೂನಿನಂತೆ ಮಾಡುತ್ತಿದ್ದಾರೆಂದು ಹೇಳುತ್ತೀರಿ. ಅದರೆ ಇಲ್ಲಿ ಪೋಲೀಸು ರಾಜ್ಯ ಮಾಡಲು ಹೊರಟಿದ್ದಾರೆ? ಈ ರೀತಿ ಪೋಲೀಸು ರಾಜ್ಯ ಏಕೆ ಮಾಡುತ್ತೀರಿ ?

Sri D. DEVARAJ URS.—I have already stated that in every case there is no magisterial enquiry. That has not been properly understood by the hon. members. You as the lawer know very well that in every case there must be an inquiry of this sort. In this particular case, we are going to order for a magisterial enquiry which is as good as an inquiry which they want. Therefore I cannot say anything beyond what has been stated by me. Here also I wish to categorically state that Government has no intention of shielding anybody, whether he is a Circle Inspector or any other person. I have time again stated here whenever we have come to know that an officer is at fault, I have no hesitation in suspending or even arresting that officer. Even officers have been arrested. Sir, I have placed before all the facts and I have told the house what the Government intends to do in this matter.

ಶ್ರೀ ವಾಟಾಳ್ ನಾಗರಾಜ್ —ಸತ್ಯಕ್ಕೆ ದೂರವಾದ ಹೇಳಿಕೆ ಇಲ್ಲಿ ಕೊಡುತ್ತಾರೆ. ಇದಕ್ಕಾಗಿ ನಾವು ಈ ಸರಕಾರದ ಧೋರಣೆಯನ್ನು ಧಿಕ್ಕರಿಸುವುದಕ್ಕಾಗಿ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಅದಕ್ಕಾಗಿ ನಾವು ಸಭೆಯಿಂದ ವಾಕ್‌ಔಟು ಮಾಡುತ್ತೇನೆ. ನಮಗೆ ಪೋಲೀಸರ ಸರಕಾರ ಬೇಕಾಗಿಲ್ಲ.

(Sri Vatal Nagaraj staged a walk out at this state)

Mr. DEPUTY SPEAKER.—Hon member Sri Sanadi may begin his speech.

ಶ್ರೀ ಬಿ. ಪುಟ್ಟಸ್ವಾಮಯ್ಯ. - ಸರಕಾರದವರು ಇಲ್ಲಿ ಸತ್ಯಕ್ಕೆ ದೂರವಾದ ಹೇಳಿಕೆ ಕೊಡುತ್ತಿದ್ದಾರೆ, ದಯವಿಟ್ಟು ಎಲ್ಲ ವಿವರಗಳನ್ನೂ ಪೂರ್ತಿಯಾಗಿ ತಿಳಿದು ನಾಳೆ ದಿನ ಇಲ್ಲಿ ವಿವರ ಕೊಡುತ್ತೇನೆಂದು ಸರಕಾರದವರು ಭರವಸೆ ಕೊಡುತ್ತಾರೆಯೇ ? ಇದರ ಬಗ್ಗೆ ನಾವು ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಗೋಲಿಬಾರ್ ಆಗಿದೆ, ಮತ್ತು ಹೀಗೆ ಇಲ್ಲಿ ಗೋಲಿಬಾರು ಮಾಡಲು ಸರಕಾರದಿಂದ ಅಪ್ಪಣೆ ಕೊಡಲಾಗಿತ್ತೇ ಇಲ್ಲವೇ ಎನ್ನುವುದರ ಬಗ್ಗೆ ಇನ್ನೂ ಕೂಲಂಕಷವಾಗಿ ವಿಚಾರ ಮಾಡಿ ನಾಳೆಯಾದರೂ ನಮಗೆ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟು ಕೊಡುವ ಭರವಸೆ ಕೊಡುತ್ತಾರೆಯೇ ? ಇಲ್ಲವಾದರೆ ಇದನ್ನು ನಾವು ತೀವ್ರವಾಗಿ ಪ್ರತಿಭಟನೆ ಮಾಡಬೇಕಾಗಿ ಬರುತ್ತದೆ ಮತ್ತು ಸತ್ಯಾಂಶವನ್ನು ಮರೆಮಾಚುತ್ತಿದ್ದಾರೆ ಇದಕ್ಕಾಗಿ ಸರಿಯಾದ ಹೇಳಿಕೆ ಕೊಡದೇ ಇದ್ದರೆ ಮುಂದೆ ನಾವು ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

Mr. DEPUTY SPEAKER.—I have called hon. member Sri Sanadi to speak.

ಶ್ರೀ ಕಾಗೋಡು ತಿಮ್ಮಪ್ಪ.—ಪೋಲೀಸ್ ಸ್ಟೇಷನ್ ಕಾಗದದ ಆಧಾರದ ಮೇಲೆ ಹೇಳುತ್ತಿರುವುದರಿಂದ ನಮಗೆ ಇಲ್ಲಿ ಅನುಮಾನ ಬರುತ್ತಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ತಮ್ಮ ಮುಂಚೇನ ಪ್ರಾರ್ಥನೆ ಮಾಡುತ್ತಿರುವುದು ನಾಳೆ ನಮಗೆ ಇಲ್ಲಿ ಸ್ಟೇಟುಮೆಂಟನ್ನು ಮುಖ್ಯ ಮಂತ್ರಿಗಳು ಕೊಡುತ್ತಾರೆಯೋ ?

Mr. DEPUTY SPEAKER.—Do you want me to act as a judge in this particular case, yourself giving evidence and somebody arguing for and against ?

Sri D. DEVARAJ URS.—The hon. members feel that that they are the only champions of justice and right and no one else is here. People know you and us very well.

ಶ್ರೀ ಕಾಗೋಡು ತಿಮ್ಮಪ್ಪ.—ಸರಿಯಾದ ಅಂಶಗಳನ್ನು ಇಲ್ಲಿ ತಿಳಿಸಬೇಕಾಗುತ್ತದೆ.

Mr. DEPUTY SPEAKER.—I have called sri Sanadi to speak.

Sri D. DEVARAJ URS.—An inquiry is going on ; what more do you want ?

ಶ್ರೀ ಎಸ್. ಬಂಗಾರಪ್ಪ.—ನಾವು ಇದನ್ನು ಪ್ರತಿಭಟಿಸಬೇಕಾಗುತ್ತದೆ.

Mr. DEPUTY SPEAKER.—If you obstruct the House, you shall have to face the consequences.

ಶ್ರೀ ಎಸ್. ಬಂಗಾರಪ್ಪ.—ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳುತ್ತಿರುವುದರಿಂದ ನಾನು ಇಲ್ಲಿ ಪ್ರತಿಭಟಿಸಬೇಕಾಗಿದೆ.

Mr. DEPUTY SPEAKER.—I may inform Sri Bangarappa not to hold the House to ransome.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾಳೆಯಾದರೂ ಇದರ ಬಗ್ಗೆ ವಿವರವಾದ ಹೇಳಿಕೆ ಕೊಡುತ್ತಾರೆಯೋ ಎಂದು ತಮ್ಮ ಮೂಲಕ ಸರಕಾರದಲ್ಲಿ ಕೇಳುತ್ತಿದ್ದೇವೆ. ಅವರಿಂದ ಯಾವ ಭರವಸೆಯೂ ಬರುತ್ತಿಲ್ಲ.

Sri D. DEVARAJ URS.—I have already stated this. ಸರಕಾರದವರು ಏನು ಮಾಡಬೇಕಾದರೂ ವಿಚಾರಣೆ ಮುಗಿದ ಮೇಲೆ ಇದರ ಬಗ್ಗೆ ಏನಿದೆ ಅವನ್ನೆಲ್ಲಾ ಸರಿಯಾಗಿ ವಿಚಾರ ಮಾಡೋಣ, ಇದರ ಬಗ್ಗೆ ಸುಮ್ಮನೆ ಒತ್ತಾಯ ಮಾಡಿದರೆ ನಾವೇನು ಹೇಳಲಿಕ್ಕಾಗುತ್ತದೆ! ಸತ್ಯಕ್ಕೆ ದೂರವಾಗಿರುವುದು ಎಂದು ಹೇಳಿದರೆ Government servant means, he is the servant of the people. The hon. member must know this elementary principle. If an officer has committed a blunder, there is another officer above him to look into. I have given a report that everything will be looked into. I have been stating this time and again. ನಾವೇನೂ ಇಲ್ಲಿ ಯಾವ ಅಧಿಕಾರಿಯನ್ನೂ ಷೀಲ್ಡ್ ಮಾಡುವುದಕ್ಕೆ ಹೋಗುತ್ತಿಲ್ಲ. ಎಲ್ಲವನ್ನೂ ಪರಿಶೀಲನೆ ಮಾಡೋಣ.

I have said, we are going to order for a Magisterial enquiry to look into this matter ಇದರಲ್ಲಿ ಯಾವ ಜಾತಿಯವರನ್ನೂ ವಿಚಾರಣೆ ಮಾಡಲು ಹಾಕಿಲ್ಲ. ನನ್ನ ಜಾತಿಯವರು ಯಾರೂ ಇದರಲ್ಲಿಲ್ಲ ಮತ್ತು ನಾವು ಯಾರನ್ನೂ ಇಲ್ಲಿ ಷಿಲ್ಡ್ ಮಾಡಬೇಕಾದ ಅಗತ್ಯವಿಲ್ಲ.

[*Sri M. S. Krishnan stood up to speak*]

Mr. DEPUTY SPEAKER.—I have not called you to speak.

Sri M. S. KRISHNAN.—I am speaking on a different subject but not on the subject discussed so far. When I was speaking you were pleased to say that I should resume my seat. I sat down.

Mr. DEPUTY SPEAKER.—I appreciate the clever attitude of the Hon. Member. I have admiration for it. Earlier before you were assuming your seat I said you have taken 3 minutes for which you said only 2 minutes you had taken and there is one more minute. But the question is you must help me to help the other members. You are escaping your responsibility.

Sri M. S. KRISHNAN.—You were pleased to say that since the Chief Minister is making a statement I should resume my seat. Accordingly I resumed my seat. I never want to escape and have a chance to speak. Kindly allow me only 2 or 3 minutes.

Mr. DEPUTY SPEAKER.—It is not possible.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ......

* * * *

ಉಪಾಧ್ಯಕ್ಷರು.--ರೆಕಾರ್ಡ್ ಮಾಡಬೇಡಿ.

(ಶ್ರೀ ಬಿ. ಪುಟ್ಟಸ್ವಾಮಯ್ಯನವರು ಮತ್ತು ಇನ್ನಿತರ ಸದಸ್ಯರುಗಳು ಸಭಾತ್ಯಾಗ ಮಾಡಿದರು)

Budget Estimates for 1973-74 (General Discussion)

(Debate Continued)

† ಶ್ರೀ ಐ. ಜಿ. ಸನದಿ (ಹುಬ್ಬಳ್ಳಿ).—ಮಾನ್ಯ ಉಪಾಧ್ಯಕ್ಷರೇ, ನೈಸರ್ಗಿಕ ಪ್ರಚಂಡ ಸವಾಲನ್ನು ಅಪೂರ್ವ ಸಾಹಸದಿಂದ ಅರ್ಥಮಂತ್ರಿಗಳು ಎದುರಿಸಿ ಮಂಡಿಸಿದಂಥ 1973-74ನೇ ಸಾಲಿನ ಆಯವ್ಯಯ ಪತ್ರವನ್ನು ಕನ್ನಡ ಕುಲಕೋಟಿಯ ಪರವಾಗಿ ಸ್ವಾಗತ ಮಾಡುತ್ತಿದ್ದೇನೆ. ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸ್ ಅವರು ಅಭಾವ ಪೀಡಿತ ಪ್ರದೇಶಗಳಲ್ಲಿ ಅಗತ್ಯವಾದಂಥ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಂಡಿರುವ ಸಮಯದಲ್ಲಿಯೇ ಮಾನ್ಯ ಅರ್ಥಿಕ ಮಂತ್ರಿಗಳು ಮಂಡಿಸಿದಂತಹ ಈ ಬಜೆಟ್ ಬರಗಾಲದ ಬುತ್ತಿಯಾಗಿದೆ ಎಂದರೆ ತಪ್ಪಾಗಲಾರದು. ಗ್ರಾಮಾಂತರ ಪ್ರದೇಶಗಳಲ್ಲಿರುವ ದಾರಿದ್ರ್ಯ ಜೀವಿಗಳು, ಹತಭಾಗ್ಯರು ಈ ಹೆಡಂಭೂತವಾದಂಥ ಕ್ಷಾಮವನ್ನು ಎದುರಿಸುತ್ತಿರುವಾಗಲೇ ಪ್ರಧಾನಿಯವರ ಆಗಮನವಾಯಿತು. ಪ್ರಧಾನಿಯವರ ಆಗಮನ ಅಲ್ಲಿಯ ಪ್ರಜೆಗಳ, ಪ್ರಾಣಿಗಳ ಮೂಕವೇದನೆಯನ್ನು ಪ್ರಧಾನಿಯವರೇ ಪಡೆದಂತಾಯಿತೆಂದು ನಾನು ಭಾವಿಸಿದ್ದೇನೆ. ಅವರು ಅಲ್ಲಿಗೆ ಬಂದಾಗ ಕೇವಲ ಮೌನವಾಗಿ ಇದ್ದುದ್ದು ಬಹುಶಃ ನನ್ನ ಅರ್ಥದಲ್ಲಿ ವಿಧಿಯನ್ನು ಕಂಡು ಮೌನವಾಗಿರಬೇಕೆಂದು. ಅವರ ರಾಜಕೀಯ ಜೀವನದಲ್ಲಿ ಪಾರ್ಲಿಮೆಂಟ್ ಚುನಾವಣೆಯಾದ ಮೇಲೆ ಬರಗಾಲದ ಸಮಸ್ಯೆ ಸ್ವಲ್ಪ ಬಂತು. ಆದರೆ ವಿಧಾನಸಭೆಗಳ ಚುನಾವಣೆಯಾದ ಮೇಲೆ, ಪ್ರಚಂಡ ಬಹುಮತದಿಂದ ಗೆದ್ದು ಬಂದಮೇಲೆ ಈ ಬರಗಾಲದ ಸಮಸ್ಯೆ ಜಾಸ್ತಿಯಾಗುತ್ತಾ ಬಂದಿದೆ. ಈ ಬರಗಾಲ ಪ್ರದೇಶದ ಜನರು ಅನುಭವಿಸುತ್ತಿರುವ ಮೂಕ ವೇದನೆಯನ್ನು ಪ್ರಧಾನಿಯವರು ನೋಡಿ ನೈಸರ್ಗಿಕ ಒಡ್ಡಿದ ಈ ಕ್ಷಾಮ ಏನಿವೆ ಅದನ್ನು ಎದುರಿಸಲಿಕ್ಕೆ ನನ್ನನ್ನು ಪರೀಕ್ಷೆಗಾಗಿ ಒಡ್ಡಿದೆಯೇ ಎಂದು ಪ್ರಧಾನ ಮಂತ್ರಿಗಳು ವಿಚಾರ ಮಾಡಿರಬೇಕೆಂದು ಕಾಣುತ್ತದೆ. ಕರ್ನಾಟಕದ ಜನತೆಯ ಕಂಬನಿಯನ್ನು ಅವರ ಅಂತರಾಳದಲ್ಲಿರುವ ದುಃಖವನ್ನು ಅವರು ಅರ್ಥ ಮಾಡಿಕೊಂಡಿದ್ದಾರೆ. ಅದರಂತೆ ಅದನ್ನು ಹೋಗಲಾಡಿಸಲು ಬೇಕಾದ ಸವಲತ್ತುಗಳನ್ನೆಲ್ಲಾ ಒದಗಿಸುವ ಭರವಸೆಯನ್ನು ಶ್ರೀಮತಿ ಇಂದಿರಾ ಗಾಂಧಿಯವರು ನಮಗೆ ಕೊಟ್ಟಿದ್ದಾರೆ. ಅವರು ಅಂದು ಮೌನವಾಗಿದ್ದರು, ಮಾತನಾಡಲಿಲ್ಲ, ನಗಲಿಲ್ಲ, ಕಣ್ಣೀರು ಸುರಿಸಲಿಲ್ಲ ಎಂಬ ಮಾತನ್ನು ಕೆಲವರು ಹೇಳಿದ್ದಾರೆ. ಅದರ ಬಗ್ಗೆ ನನ್ನ ಅರ್ಥದಲ್ಲಿ ಹೇಳಬೇಕೆಂದರೆ, ಅಂದು ಅವರು ನಗುವ ಪ್ರಶ್ನೆ ಇರಲಿಲ್ಲ ; ಅವರ ಉದ್ದೇಶ ಈಶ್ವರ

**** Matter not recorded as ordered by the Chair.

(ಶ್ರೀ ಐ. ಜಿ. ಸನದಿ)

ಸಣಕಲ್ ಅವರು ಹೇಳಿರುವ ಹಾಗೆ ಇವೊತ್ತು ದೇಶದಲ್ಲಿರತಕ್ಕಂಥ ದಾರಿದ್ರ್ಯವನ್ನು ತೊಲಗಿಸಬೇಕು ; ಆಗ ಜನರು ಬದುಕುತ್ತಾರೆ, ಜನರು ಬದುಕಿದರೆ ಸರಕಾರ ಬದುಕುತ್ತದೆ. ಸರ್ಕಾರ ಬದುಕಿದರೆ ಸಮಾಜ ಬದುಕುತ್ತದೆಂಬ ಮಾತನ್ನು ಅವರು ಹೇಳಿದ್ದಾರೆ. ಅದನ್ನು ಪ್ರಧಾನಮಂತ್ರಿಗಳು ಅರ್ಥಮಾಡಿಕೊಂಡಿರಬೇಕು. ಆ ಜನರ ಕಷ್ಟವನ್ನು ನೋಡಿದರೆ ನಿಜಕ್ಕೂ ನಮಗೆ ದುಃಖವಾಗುತ್ತದೆ. ನೈಸರ್ಗಿಕ ವಿಕೋಪಕ್ಕೆ ಅವರು ಒಳಗಾಗಿದ್ದಾರೆ. ಮತ್ತು ಅದರ ವಿರುದ್ಧ ಹೋರಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಒಂದೇ ಎಲ್ಲವನ್ನೂ ಮಾಡಬೇಕೆಂದು ವಿರೋಧ ಪಕ್ಷದವರು ಹೇಳುತ್ತಿದ್ದಾರೆ. ಅದು ಸರಿಯಲ್ಲ. ಇದರಲ್ಲಿ ನಾವೆಲ್ಲರೂ ಭಾಗಿಗಳಾಗಬೇಕು. ನಮ್ಮ ಹಿಂದೂ ಧರ್ಮದಲ್ಲಿ ಹೇಳಿರುವಂತೆ ಎಲ್ಲರಲ್ಲಿಯೂ ಚತುರ್ವಿಧ ಪುರುಷಾರ್ಥಗಳಿರಬೇಕು. ಚತುರ್ವಿಧ ಪುರುಷಾರ್ಥಗಳೆಂದರೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ಮೊದಲು ನಾವು ಧರ್ಮ ಮತ್ತು ಅರ್ಥವನ್ನು ಸಂಪಾದನೆ ಮಾಡಬೇಕು ನಂತರ ಉಪಭೋಗ ಮಾಡಬೇಕು. ಎಲ್ಲರೂ ಧರ್ಮದಿಂದ ನಡೆದುಕೊಳ್ಳಬೇಕು, ಕೊನೆಯದು ಮೋಕ್ಷ. ಅಲ್ಲಿ ಜನರು ಕಷ್ಟದಿಂದಿರುವಾಗ ನಾವುಗಳು ಇಲ್ಲಿ ಅರ್ಥ ಮತ್ತು ಕಾಮಗಳ ಜೊತೆಯಲ್ಲಿ ಹೋರಾಡುವುದು ಸರಿಯಲ್ಲ. ಅವರೊಡನೆ ನಾವೂ ಸಹ ಭಾಗಿಗಳಾಗಿ ಅವರ ಕಷ್ಟದಲ್ಲಿ ಪಾಲ್ಗೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಸದಸ್ಯರು ನಾವು ನಾವು ಎಂದು ಹೇಳುತ್ತಿದ್ದಾರೆ ; ನಾವು ಅಂದರೆ ಯಾರು ಎಂದು ಹೇಳಬೇಕು.

ಶ್ರೀ ಐ. ಜಿ. ಸನದಿ.—ಇಂದು ನಮ್ಮ ಕರ್ನಾಟಕ ರಾಜ್ಯದಲ್ಲಿ ತಮಗೆಲ್ಲರಿಗೂ ಗೊತ್ತಿರುವಂತೆ ಲಕ್ಷಾಂತರ ಜನರು ಕಷ್ಟದಲ್ಲಿದ್ದಾರೆ. ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವುದು ಸರ್ಕಾರದ ಮತ್ತು ನಮ್ಮೆಲ್ಲರ ಕರ್ತವ್ಯವೂ ಸಹ ಆಗಿದೆ. ಹಿಂದೆ ಯಾವಾಗಲೂ ಇಲ್ಲದಂಥ ಬರಗಾಲ ಇಂದು ಬಂದಿದೆ. ಈ ಬರಗಾಲ ಬಡಜನರ ರಕ್ತವನ್ನು ಹೀರುತ್ತಿರುವುದರಿಂದ ಇಂದು ಸಮಾಜದಲ್ಲಿ ಹಲಾಹಲ ಎದ್ದಿದೆ. ಸಮಾಜದ ನಂಜನ್ನು ಕುಡಿದು ಸಮತಾವಾದ ಸಮಾಜವನ್ನು ಜಾರಿಗೆ ತರುವುದು ಸಾಧ್ಯವಿಲ್ಲ. ಇಂದು ದೇಶದಲ್ಲಿರುವ ಬಡತನವನ್ನು ಹೋಗಲಾಡಿಸಬೇಕೆಂಬುದೇ ಇಂದಿರಾಗಾಂಧಿಯವರ ಕಡೆಯ ಮಂತ್ರವಾಗಿದೆ. ಹಿಂದಿನಿಂದ ಬಂದಿರುವ ಈ ಬಡತನವನ್ನು ಅಧಿಕಾರ ವಹಿಸಿಕೊಂಡ ಕೂಡಲೇ ಹೋಗಲಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ದ್ವಾಪರಯುಗದಲ್ಲಿಯೂ ಬಡತನ ಇತ್ತು. ಆಗ ಬಡತನದಲ್ಲಿದ್ದ ಸುಧಾಮನ ಕಷ್ಟವನ್ನು ಶ್ರೀಕೃಷ್ಣನು ಕಂಡು ತನ್ನಲ್ಲಿದ್ದ ಸೌಭಾಗ್ಯವನ್ನು ಅವನಿಗೆ ಕೊಟ್ಟ. ಅದರಂತೆ ಸರ್ಕಾರವೇ ಆಗಲೀ, ಶಾಸಕರೇ ಆಗಲೀ, ನಾವೆಲ್ಲರೂ ಕೂಡ ಸಮಾಜದಲ್ಲಿರುವ ಬಡತನವನ್ನು ತೆಗೆದುಕೊಂಡು ನಮ್ಮಲ್ಲಿರುವ ವೈಭವವನ್ನು ಅವರಿಗೆ ಕೊಟ್ಟು ಸುಖೀ ಸಮಾಜವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಅದಕ್ಕೆ ಎಲ್ಲರೂ ಸಹಕಾರ ಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಶ್ರೀಮಾನ್ ಘೋರ್ಪಡೆಯವರು ಏನ ತಮ್ಮ ಆಯವ್ಯಯ ಪತ್ರದಲ್ಲಿ ಈ ಬರಗಾಲವನ್ನು ಹೋಗಲಾಡಿಸಲು ಕ್ರಮ ತೆಗೆದುಕೊಂಡಿದ್ದಾರೆ, ಆ ಒಂದು ಅಂಕೆಅಂಶಗಳ ಕಡೆಗೆ ಗಮನ ಕೊಟ್ಟು ನೋಡಿದಾಗ ಬಹುಶಃ ಇದರಿಂದ ಸಾಕಷ್ಟು ಪ್ರಮಾಣದಲ್ಲಿ ಬರಗಾಲವನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಇಲ್ಲಿಯವರೆಗೆ ಆಡಳಿತವನ್ನು ವಹಿಸಿಕೊಂಡಿದ್ದವರು ಈ ಬರಗಾಲವನ್ನು ಹೋಗಲಾಡಿಸುವುದರಲ್ಲಿ ವಿಫಲರಾಗಿದ್ದಾರೆಂದು ಹೇಳಬಹುದು. ಹಿಂದಿನವರು ಪಾಪ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಆಗ ಏನನ್ನೂ ಮಾಡದಿದ್ದವರು ಈಗ ಯಾವ ಮಾತುಗಳನ್ನು ಆಡುತ್ತಿದ್ದಾರೆಂಬ ಬಗೆ, ನಾನು ಏನನ್ನೂ ಹೇಳುವುದಕ್ಕೆ ಬಯಸುವುದಿಲ್ಲ. ಈಗಲೂ ಅವರು ಪಿಕೆಟಿಂಗ್ ಮಾಡುತ್ತಿದ್ದಾರೆ. ಮಾಡುವ ನೀಡುವ ನಿಜಗುಣ ಅವರಲ್ಲಿ ಇಲ್ಲ.

ಬಜೆಟ್ಟಿನ ಬಗ್ಗೆ ಕೆಲವು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಅದರಲ್ಲಿ ವಿದ್ಯಾ ಸಂಸ್ಥೆಗಳ ಬಗ್ಗೆ ಕೆಲವೊಂದು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಮೈಸೂರು ಮತ್ತು ಬೆಂಗಳೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳಿಗೆ ನಮ್ಮ ಸರ್ಕಾರದವರು ಈಗಾಗಲೇ 2 ಕೋಟಿ 59 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಧಾರವಾಡದಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನೂ ಸೊಂಡೂರಿನಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯವನ್ನೂ ಸ್ಥಾಪನೆ ಮಾಡುವುದಕ್ಕೆ ನಮ್ಮ ಅರ್ಥಮಂತ್ರಿಗಳಾದ ಘೋರ್ಪಡೆಯವರು ಪ್ರಯತ್ನ ಮಾಡುತ್ತಿದ್ದಾರೆ. ವಿಶ್ವವಿದ್ಯಾನಿಲಯಗಳು ನಮ್ಮ ನಮ್ಮ ರಾಜ್ಯದ ಸಂಪತ್ತು ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಮ್ಮ ವಿಶ್ವವಿದ್ಯಾನಿಲಯಗಳು

ನಳಂದ ವಿಶ್ವವಿದ್ಯಾನಿಲಯದ ರೀತಿ ಆಗಬೇಕು. ದುರ್ದೈವದಿಂದ ಸರ್ಕಾರ ಎಷ್ಟೇ ಸೌಲಭ್ಯಗಳನ್ನು ಈ ವಿಶ್ವವಿದ್ಯಾನಿಲಯಗಳಿಗೆ ಒದಗಿಸಿದರೂ ಕೂಡ ಪರಂಪರೆಯಾಗಿ ವಿಶ್ವವಿದ್ಯಾನಿಲಯಗಳಲ್ಲಿ ಸ್ವಜನಪಕ್ಷಪಾತವಾಗಲೀ ದುರುಪಯೋಗವಾಗಲೀ ಇವುಗಳನ್ನು ತಡೆಗಟ್ಟಲು ಸರ್ಕಾರ ಈ ಕಡೆ ಗಮನವನ್ನು ಹರಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಕಳಕಳಿಯಿಂದ ಹೇಳಬಯಸುತ್ತೇನೆ.

ಕಾಳಿನ ಯಲ್ಲಿ ಏನು ಕೆಲಸ ನಡೆಯುತ್ತಿದೆ ಎನ್ನುವುದನ್ನು ಶಾಸಕರಿಗೆ ಸರ್ಕಾರದವರು ತೋರಿಸಬೇಕು. ಅಲ್ಲಿ ಒಂದು ಗಿರಿಧಾಮವನ್ನು ಕಟ್ಟಿಸಿದರೆ, ಅದರಿಂದ ಪ್ರವಾಸಿಗರಿಗೆ ಆಕರ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಕ್ಷಾಮ ಪೀಡಿತ ಪ್ರದೇಶಗಳಾದ ಗುಲ್ಬರ್ಗ, ರಾಯಚೂರು, ಬೀದರ್, ಬೆಳಗಾವ್, ಬಿಜಾಪುರ ಮತ್ತು ಧಾರವಾಡ ಈ ಪ್ರದೇಶಗಳ ಜನಗಳಿಗೆ ಪರಿಹಾರವನ್ನು ಒದಗಿಸುವುದರಲ್ಲಿ ಸರ್ಕಾರದ ಜವಾಬ್ದಾರಿ ಮಾತ್ರವಲ್ಲ ನಮ್ಮೆಲ್ಲರ ಮೇಲೆಯೂ ಇದೆ. ಅಲ್ಲಿ ಸರ್ಕಾರದ ಹಣ ಪೋಲಾಗುವ ಬಗ್ಗೆ ಅವ್ಯಗವಾನ ಕೊಡಬೇಕು. ಅಲ್ಲಿರತಕ್ಕ ಜನಗಳು ದನಕರುಗಳನ್ನು ಕಳೆದುಕೊಂಡಿದ್ದಾರೆ. ಇದ್ದಂತಹ ಹಣ ಒಡವೆ ವಸ್ತುಗಳನ್ನೆಲ್ಲಾ ಕಳೆದುಕೊಂಡಿದ್ದಾರೆ. ಆದ್ದರಿಂದ ಅವರಿಗೆ ವ್ಯವಸಾಯಕ್ಕೆ ಅನುಕೂಲವಾಗುವ ಹಾಗೆ ಬೀಜ ಗೊಬ್ಬರ ಇತ್ಯಾದಿಗಳನ್ನು ಒದಗಿಸಿ ಅವರಿಗೆ ಅನುಕೂಲ ಮಾಡಿಕೊಡಬೇಕು ಎಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹುಬ್ಬಳ್ಳಿ ಧಾರವಾಡ ಮಹಾ ನಗರದಲ್ಲಿ ಡೆಪ್ಯುಟಿ ಕಮಿಷನರ, ಅಸಿಸ್ಟೆಂಟ್ ಕಮಿಷನರ್ ಮುಂತಾದ ದೊಡ್ಡ ದೊಡ್ಡ ಅಧಿಕಾರಿಗಳು ಇದ್ದಾರೆ. ಅನೇಕ ಜನ ಕೂಲಿಗಾರರು ಇದ್ದಾರೆ. ಮತ್ತು ಅದು ಕರ್ನಾಟಕದ ಪ್ರಮುಖವಾದ ಸ್ಥಳ. ಆದ್ದರಿಂದ ಅಲ್ಲಿ ಒಂದು ಏರೋಡ್ರೋಮ್ ಮಾಡಬೇಕು. ಅದು ಕೈಗಾರಿಕೆಯಲ್ಲಿ ಬ್ಯಾಕ್‌ವರ್ಡ್ ಏರಿಯಾ ಆದ್ದರಿಂದ ಅಲ್ಲಿ ಕೆಲವು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಮತ್ತು ಹುಬ್ಬಳಿಯಲ್ಲಿಯೂ ಕೆಲವು ಸ್ಲಮ್ ಏರಿಯಾದಲ್ಲಿ ಯಾವ ಹೂವೂ ಇಲ್ಲ, ಬಳ್ಳಿಯೂ ಇಲ್ಲ. ಆದ್ದರಿಂದ ಅಲ್ಲಿರತಕ್ಕ ಸ್ಲಮ್ ನಿರ್ಮೂಲ ಮಾಡಲು ಮತ್ತು ಅಲ್ಲಿ ಕೆಲವು ಹೂವಿನ ಗಿಡ ಬಳ್ಳಿಗಳನ್ನು ಬೆಳೆಸುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕು. ಅಲ್ಲಿ ಚಿಕ್ಕಪುಟ್ಟ ಕೈಗಾರಿಕೆಗಳು ಸ್ಥಾಪನೆಯಾಗಬೇಕಾದರೆ ಅಲ್ಲಿ ಏರೋಡ್ರೋಮ್ ಆಗಬೇಕು. ಇದರ ಜೊತೆಗೆ ಹುಬ್ಬಳ್ಳಿ ಕಾರವಾರ ರೈಲ್ವೆ ಮಾರ್ಗವನ್ನು ಕಲ್ಪಿಸಬೇಕು. ಹುಬ್ಬಳ್ಳಿ, ಗದಗ್ ಶಿವಮೊಗ್ಗ-ಮಂಗಳೂರು ರೈಲ್ವೆ ಮಾರ್ಗವನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು ಎಂದು ನಾನು ಹೇಳುತ್ತೇನೆ.

ಸಂಸ್ಕೃತ, ವಿಜ್ಞಾನ, ಸಾಹಿತ್ಯ ಇವುಗಳಲ್ಲಿರತಕ್ಕ ಆಳವಾದ ನೈತಿಕ ಹಿನ್ನೆಲೆ ಬೇಕಾದಷ್ಟು ಇದೆ. ಆದಕ್ಕಾಗಿ 5-6 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಮೀಸಲಾಗಿಟ್ಟು ಅದನ್ನು ಅಭಿವೃದ್ಧಿ ಪಡಿಸಬೇಕು. ಕನ್ನಡದ ಅಭಿವೃದ್ಧಿ ಹೆಚ್ಚಿನ ಮಟ್ಟದಲ್ಲಿ ಆಗಬೇಕು. ಕರ್ನಾಟಕಕ್ಕೆ ಕೀರ್ತಿ ತರುವಂತಾಗಬೇಕು ಎಂದು ಹೇಳಿ ಮಾನ್ಯ ಅರ್ಥಸಚಿವರು ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬೆಳಗೆರೆ).**—ಮಾನ್ಯ ಅಧ್ಯಕ್ಷರೆ, ಮಾನ್ಯ ಅರ್ಥ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ 1973-74ನೇ ಸಾಲಿನ ಆಯ್ಯವ್ಯಯ ಪತ್ರದ ಬಗ್ಗೆ ಕೆಲವು ವಿಷಯಗಳನ್ನು ನಾನು ಹೇಳಬಯಸುತ್ತೇನೆ. ಮೊದಲನೆಯದಾಗಿ ನಮ್ಮ ಮೈಸೂರು ರಾಜ್ಯದಲ್ಲಿ 8 ಜಿಲ್ಲೆಗಳಲ್ಲಿ ಬರಗಾಲ ಪರಿಸ್ಥಿತಿ ಇದೆ. ಆದಕ್ಕಾಗಿ 45 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬರಗಾಲ ಪರಿಸ್ಥಿತಿಯನ್ನು ಎದುರಿಸಲು 10 ಲಕ್ಷ ಜನಗಳಿಗೆ ಉದ್ಯೋಗವನ್ನು ಒದಗಿಸುತ್ತೇವೆ ಎಂದು ಹೇಳಿದ್ದಾರೆ. 8 ಜಿಲ್ಲೆಗಳಲ್ಲಿ 10 ಲಕ್ಷ ಜನಗಳಿಗೆ ಉದ್ಯೋಗವನ್ನು ಒದಗಿಸುತ್ತೇವೆ ಎಂದು ಹೇಳಿದರೆ ಸಾಲದು. ಇನ್ನೂ ಹೆಚ್ಚಿನ ಜನಗಳಿಗೆ ಉದ್ಯೋಗವನ್ನು ಒದಗಿಸಬೇಕು ಎಂಬುದು ನನ್ನ ಅಭಿಪ್ರಾಯ. ಮತ್ತು ಅಲ್ಲಿ ಪರಿಹಾರ ಕೆಲಸಕಾರ್ಯಗಳಲ್ಲಿ ಕೆಲಸ ಮಾಡತಕ್ಕ ಕೂಲಿಗಾರರಿಗೆ 2 ರೂಪಾಯಿ $2\frac{1}{2}$ ರೂಪಾಯಿ ಕೂಲಿಯನ್ನು ಕೊಟ್ಟರೆ ಅದು ಅವರಿಗೆ ಸಾಕಾಗುವುದಿಲ್ಲ. ಸಾಯಿಲ್ ಕನ್‌ಸರ್‌ವೇಷನ್ನಿಗೆ 13 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಎಲ್ಲಿ ಮಳೆ ಜಾಸ್ತಿ ಇದೆಯೋ ಅಲ್ಲಿ ಭೂಸವೆತ ಇದೆ. ಭೂಸಾರ ರಕ್ಷಣೆಯಾಗಿದೆ. ಆದ್ದರಿಂದ ಅದಕ್ಕೆ 13 ಕೋಟಿ ರೂಪಾಯಿಗಳನ್ನು ಈಗಿನ ಪರಿಸ್ಥಿತಿಯಲ್ಲಿ ಖರ್ಚು ಮಾಡಬೇಕಾಗಿರಲಿಲ್ಲ. ಆ ಹಣವನ್ನು ನೀರಾವರಿಗೆ ಉಪಯೋಗಿಸಿಕೊಂಡಿದ್ದರೆ ಚೆನ್ನಾಗಿತ್ತು. 8 ಕೋಟಿ ರೂಪಾಯಿಗಳನ್ನು ರಸ್ತೆಗಳಿಗೆ ಖರ್ಚುಮಾಡಬೇಕು ಎಂದು ಏರ್ಪಾಟು ಹಾಕಿಕೊಂಡಿದ್ದಾರೆ. ರಸ್ತೆಗಳಿಗೆ ಇಷ್ಟು ಹಣವನ್ನು ಖರ್ಚು ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಅದನ್ನೂ ಕೂಡ ನೀರಾವರಿಗೆ ಉಪ

(ಶ್ರೀ ಎನ್. ಎಸ್. ಗುರುಸಿದ್ಧಪ್ಪ)

ಯೋಗಿಸಿಕೊಂಡಿದ್ದರೆ ಚೆನ್ನಾಗಿತ್ತು. ಮೈನರ್ ಇರಿಗೇಷನ್, ಮೀಡಿಯಂ ಇರಿಗೇಷನ್ ಮತ್ತು ಮೇಜರ್ ಇರಿಗೇಷನ್ ಇದಕ್ಕಾಗಿ 22 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಹೊರಟಿದ್ದಾರೆ. ಅದನ್ನು ಹೆಚ್ಚು ಮಾಡಿ 32 ಕೋಟಿ ರೂಪಾಯಿಗಳನ್ನು ಮಾಡಬೇಕಾಗಿತ್ತು. ಎರಡೂವರೆ ಲಕ್ಷ ನಿವೇಶನಗಳನ್ನು ಬಡವರಿಗೆ ಹಂಚಿದ್ದೇವೆ ಎಂದು ಹೇಳಿದ್ದಾರೆ. ಆ ನಿವೇಶನಗಳಲ್ಲಿ ಅನೇಕ ನಿವೇಶನಗಳು ಕೆಲಸಕ್ಕೆ ಬಾರದ ನಿವೇಶನಗಳಾಗಿವೆ. ಆ ನಿವೇಶನಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಬೇಕಾದರೆ 2ರಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ನಿವೇಶನಗಳನ್ನು ಹಂಚುವಾಗ ಅವು ಮನೆಗಳನ್ನು ಕಟ್ಟುವುದಕ್ಕೆ ಯೋಗ್ಯವಾಗಿವೆಯೇ ಅಥವಾ ಇಲ್ಲವೇ ಎಂಬುದನ್ನು ಯೋಚನೆ ಮಾಡಿ ಹಂಚಬೇಕಾಗಿತ್ತು. 25 ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರದವರು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಆ ಮನೆಗಳನ್ನು ಕಟ್ಟುವಾಗ ಮಿಡ್ಲ್ ಇಂಜಿನಿಯರ್ಸ್ ಮತ್ತು ಕಂಟ್ರಾಕ್ಟರುಗಳ ಪಾಲು ಆಗಬಾರದು. ಮನೆಗಳನ್ನು ಬಂದೋಬಸ್ತಾಗಿ ಕಟ್ಟಬೇಕು. ನೀರಾವರಿಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕು. ನಮ್ಮ ರಾಜ್ಯದ ನೀರಾವರಿ ಯೋಜನೆಗಳನ್ನು ಮುಗಿಸಬೇಕಾದರೆ 250 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈಗ ನೀರಾವರಿ ಯೋಜನೆಗಳಿಗೆ ಹಣವನ್ನು ಒದಗಿಸುವ ರೀತಿಯಲ್ಲಿ ಹಣವನ್ನು ಒದಗಿಸಿದರೆ ಇನ್ನು 10 ವರ್ಷವಾದರೂ ನೀರಾವರಿ ಯೋಜನೆಗಳು ಮುಗಿಯುವುದಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಹೆಚ್ಚು ನಿಗಾವಹಿಸಬೇಕು ಎಂದು ನಾನು ಹೇಳುತ್ತೇನೆ.

4-30 P.M.

ಹಳೆಯ ಮೈಸೂರಿನಲ್ಲಿ ಕಬನಿ ಯೋಜನೆ 10 ವರ್ಷವಾದರೂ ಇನ್ನೂ ಮುಗಿದಿಲ್ಲ. ಈಗ ನಮ್ಮ ಬಜೆಟ್‌ನಲ್ಲಿ ಹಣ ಒದಗಿಸಿದ ರೀತಿಯಲ್ಲಿ ಹೋದರೂ ಸಹ ಇನ್ನು 10 ವರ್ಷವಾದರೂ ಅದು ಮುಗಿಯುವುದಿಲ್ಲ. ಹೇಮಾವತಿ, ಹಾರಂಗಿ, ಯೋಜನೆಗಳ ಕೆಲಸ ಸಹ ಬಹಳ ಕುಂಠಿತವಾಗಿದೆ. ಇವಕ್ಕೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ನಮಗೆ ಈಗ 60 ಲಕ್ಷಟನ್ ಆಹಾರ ಬೇಕಾಗಿದ್ದರೂ ಸಹ ಕೇವಲ 47 ಲಕ್ಷ ಟನ್ ಮಾತ್ರ ಬರುತ್ತದೆ. ಇದರಿಂದ 13 ಲಕ್ಷದಷ್ಟು ಕೊರತೆಯಾಗುತ್ತದೆ. ಅವಕ್ಕೆ ಈ ನೀರಾವರಿಯನ್ನು ಹೆಚ್ಚು ಮಾಡದಿದ್ದರೆ ಈ ಅಭಾವ ಇನ್ನೂ ಹೆಚ್ಚಾಗಿ ಜನರಿಗೆ ತುಂಬಾ ತೊಂದರೆಯಾಗುವ ಸಂದರ್ಭ ಬರುತ್ತದೆ. ಆದ್ದರಿಂದ ಈ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಹೆಚ್ಚು ಕೆಲಸಗಳನ್ನು ಮಾಡಬೇಕು. ಮೈಸೂರು ಜಿಲ್ಲೆಯಲ್ಲಿ ಇನ್ನೂ ಪ್ಲಾನುಗಳನ್ನು ಮಾಡುತ್ತಾರೆಯೇ ಹೊರತು ಕಾರ್ಯಗತ ಮಾಡುತ್ತಾ ಇಲ್ಲ. ಕೃಷ್ಣಾ ಬಲದಂಡೆಯಲ್ಲಿ ಯೋಜನೆಯಾದರೆ, 1ಕಾಲು ಲಕ್ಷ ಎಕರೆ ನೀರಾವರಿಯಾಗುತ್ತದೆ; ಮೂಗು ಯೋಜನೆಯಲ್ಲಿ ಒಂದೂಕಾಲು ಲಕ್ಷ ಎಕರೆ ನೀರಾವರಿಯಾಗುತ್ತದೆ; ಮತ್ತು ಗುಂಡಲ್ ಪ್ರೊಜೆಕ್ಟಿನಲ್ಲಿ ಒಂದು ಲಕ್ಷ ಎಕರೆ ನೀರಾವರಿಯಾಗುತ್ತದೆ. ಇವೆಲ್ಲವನ್ನೂ ಮಾಡಿದರೆ ಸುಮಾರು 40 ಪರ್ಸೆಂಟ್ ಪ್ರದೇಶಗಳಿಗೆ ನೀರಾವರಿಯಾಗುತ್ತದೆ. ಇಂತಹ ಯೋಜನೆಗಳನ್ನು ನಾವು ಮುಗಿಸಿದರೆ ನಮ್ಮ ಆಹಾರದ ಕೊರತೆಯನ್ನು ಕಡಿಮೆ ಮಾಡಿ ನಾವು ಹೊರಗಡೆ ಸಹ ಆಹಾರವನ್ನು ಕಳಿಸಬಹುದು. ಆದ್ದರಿಂದ ನೀರಾವರಿಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ಇನ್ನು ವ್ಯವಸಾಯಗಾರರಿಗೆ ಸಾಕಷ್ಟು ಸಕಾಲದಲ್ಲಿ ಸರಕಾರದಿಂದ ಸಹಾಯ ಮತ್ತು ಸಹಕಾರ ಸಿಗುತ್ತಾ ಇಲ್ಲ. ಈ ಸಾರಿ ಫರ್ಟಿಲೈಸರ್ಸ್ ಅಭಾವ ಜಾಸ್ತಿಯಾಗಿ ಅರ್ಧ ಬೆಳೆಯೇ ಕಡಿಮೆಯಾಗಿದೆ. ಆದ್ದರಿಂದ ಸರ್ಕಾರದವರು ಗೊಬ್ಬರ, ಬೀಜ ಮುಂತಾದವುಗಳನ್ನು ಸರಿಯಾದ ಸಮಯದಲ್ಲಿ ರೈತರಿಗೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಒಂದು ಲಕ್ಷ 90 ಸಾವಿರ ಪಂಪ್‌ಸೆಟ್ಟುಗಳಿಗೆ ಎಲೆಕ್ಟ್ರಿಸಿಟಿ ಒದಗಿಸುತ್ತೇವೆಂದು ಹೇಳಿದ್ದಾರೆ. ಈಗಾಗಲೇ ಇರತಕ್ಕಂತಹ ಪಂಪ್‌ಸೆಟ್ಟುಗಳು ವೋಲ್ಟೇಜ್ ಡ್ರಾಪ್ ಆಗಿ, ಮೋಟರ್ ಸುಟ್ಟುಹೋಗಿ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಅವುಗಳನ್ನು ಸರಿಮಾಡತಕ್ಕ ಕೆಲಸವನ್ನು ಮಾಡಬೇಕು. ಆದ್ದರಿಂದ ಈಗ ಇರುವ ಪಂಪ್‌ಸೆಟ್ಟುಗಳೇ ಸರಿಯಾಗಿ ಕೆಲಸ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದಲ್ಲದೆ ಇನ್ನೂ ಹೆಚ್ಚಿನ ಕರೆಂಟ್ ಕೊಟ್ಟರೆ ಪ್ರಯೋಜನವಿಲ್ಲ.

ಇನ್ನು ನಿರುದ್ಯೋಗ ಸಮಸ್ಯೆಗೆ ಬಜೆಟಿನಲ್ಲಿ ಏನೂ ಪ್ರೊವಿಜನ್ ಮಾಡಿಲ್ಲ. ದಿನಬೆಳಗಾದರೆ ನೂರಾರು ಜನರು ಬಂದು ಕೆಲಸ ಕೊಡಿ ಎಂದು ಕೇಳುತ್ತಿದ್ದಾರೆ. ಅದಕ್ಕೆ ಬಜೆಟಿನಲ್ಲಿ ಯಾವ ತರದ ಯೋಜನೆಯನ್ನು ಸಹ ಹಾಕಿಲ್ಲ.

ಇನ್ನು ಅರಣ್ಯ ಸಂಪತ್ತು ಅವ್ಯವಹಾರ ವಿಪರೀತವಾಗಿ ನಡೆಯುತ್ತಿದೆ. ದಿನಬೆಳಗಾದರೆ ಸ್ಯಾಂಡಲ್‌ವುಡ್ ಸ್ಮಗ್ಲಿಂಗ್ ವಿಪರೀತವಾಗಿ ನಡೆಯುತ್ತಿದೆ. ಆದರೆ ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಇನ್ನು ಲಂಚರುಷುವತ್ತುಗಳ ಬಗ್ಗೆ ಹೇಳಿ ಸುಖವಿಲ್ಲ. ಯಾವ ಇಲಾಖೆಯಲ್ಲಾದರೂ ದುಡ್ಡು ಕೊಡದೆ ಕೆಲಸವಾಗುವುದಿಲ್ಲ. ಇನ್ನು ತೆರಿಗೆ ಕೊಡುವುದರಲ್ಲಿ ಸಹ ಅನೇಕ ಜನರು ತಪ್ಪಿಸಿಕೊಳ್ಳುತ್ತಿದ್ದಾರೆ ಬರುವಂತಹ ತೆರಿಗೆಗಳನ್ನು ಸರಿಯಾಗಿ ವಸೂಲು ಮಾಡಿದ್ದೇ ಆದರೆ ನಾವು ಹೊಸ ತೆರಿಗೆಗಳನ್ನು ಹಾಕುವ ಅವಕಾಶವಿಲ್ಲ. ಆದ್ದರಿಂದ ಸರ್ಕಾರದವರು ಶ್ರೀಮಂತರಿಂದ ಏನು ತೆರಿಗೆ ಬರಬೇಕೋ, ಅದನ್ನು ವಸೂಲು ಮಾಡುವುದಕ್ಕೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಅಮೇಲೆ ಸರ್ಕಾರ ಕಾಯಿದೆಗಳನ್ನು ಜಾರಿಗೆ ತಂದರೂ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತಾ ಇಲ್ಲ. ಆ ವೇಳೆ 13 ಸಾವಿರ ನ್ಯಾಯ ಬೆಲೆಯ ಅಂಗಡಿಗಳನ್ನು ಮೈಸೂರು ರಾಜ್ಯದಲ್ಲಿ ತೆಗೆದಿದ್ದೇವೆಂದು ಹೇಳಿದ್ದಾರೆ. ಆದರೆ ಅದಕ್ಕೆ ಸರಿಯಾಗಿ ಆಹಾರಸಾಮಗ್ರಿಗಳನ್ನು ಒದಗಿಸಿದೆ ಇದ್ದರೆ ಏನೂ ಪ್ರಯೋಜನವಿಲ್ಲ. ಆದ್ದರಿಂದ ಬಡವರಿಗೆ ನ್ಯಾಯ ಬೆಲೆಯ ಅಂಗಡಿಯ ಮೂಲಕ ಆಹಾರ ಧಾನ್ಯಗಳನ್ನು ಒದಗಿಸುವಂತಹ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಬರಗಾಲ ಪ್ರದೇಶದಲ್ಲಿ ನೀರು ಸರಬರಾಜಿಗೆ ಮೂರು ಕೋಟಿ ಮತ್ತು ಕುಡಿಯುವ ನೀರಿನ ಪ್ರೋಗ್ರಾಂಗೆ ಎರಡು ಕೋಟಿ ರೂಪಾಯಿ ಇಟ್ಟಿದೆ ಎಂದು ಹೇಳಿದ್ದಾರೆ. ಆದರೆ ಈ ರೀತಿ ಎರಡು ಕೋಟಿ ಕುಡಿಯುವ ನೀರಿಗೆ ಒದಗಿಸಿದೆ ಎಂದು ಹೇಳಿರುವುದು ಸರಿಯಲ್ಲ. ಇದಕ್ಕೆ ಸರ್ಕಾರ ಎಷ್ಟುಬೇಕಾದರೂ ಖರ್ಚು ಮಾಡಬೇಕು. ಈ ರೀತಿ ಇಷ್ಟು ಎಂದು ಫಿಕ್ಸ್ ಮಾಡಿರುವುದು ವಿಷಾದಕರವೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[The **Chairman** (Smt. SUUMATI **S. Madiman**) in the **Chair**.]

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಅಕಾಲ ಚಂಡಿಕಾ, ಚಿನ್ನಮಸ್ತಿಕಾ, ರಕ್ತಪಿಪಾಸಿನಿಯ ಈ ಯುಗದಲ್ಲಿ ಎಲ್ಲವೂ ಅಸ್ತವ್ಯಸ್ತವಾಗಿದೆ. ಉದಾಹರಣೆಗೆ ಸಂಪ್ರದಾಯವಾಗಿ ಈ ಬಜೆಟ್ ಚರ್ಚೆ ಆರಂಭ ಆಗಬೇಕಾದುದು ಈ ಸಭೆಯಲ್ಲಿ. ಆದರೆ ಅದರ ವಿರುದ್ಧವಾಗಿ ಈ ಸಾರಿ ಪರಿಷತ್ತಿನಲ್ಲಿ ಇದರ ಚರ್ಚೆ ಆರಂಭವಾಗಿದೆ. ಇದರಿಂದ ಒಂದು ವಿಷಯ ಸುಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ರಾಜ್ಯದಲ್ಲಿ ಸಾರ್ವಜನಿಕರಿಂದ ಚುನಾಯಿಸಲ್ಪಟ್ಟದ್ದು ಈ ಸದನ. ಹಾಗಿರು ಈ ಸದನಕ್ಕೆ ಸರ್ಕಾರ ಗೌರವ ಕೊಡದೆ ಪರಿಷತ್ತಿಗೆ ಮಹತ್ವವನ್ನು ಕೊಟ್ಟಿದೆ. ಪರಿಷತ್ತಿನ ಮಹತ್ವವನ್ನು ವರ್ಣನೆ ಮಾಡತಕ್ಕ ಯಾವನೇ ಆಗಲಿ, ಅವನು ಪ್ರಾಮಾಣಿಕತನದ ಸಮಾಜವಾದಿಯಾಗಲಾರ. ಈ ಪರಿಷತ್ತು ಎಂದು ಏನು ಕರೆಯುತ್ತೇವೆ, ಇದನ್ನು ಮೊದಲು ರದ್ದು ಮಾಡತಕ್ಕದ್ದು ಮೊಟ್ಟಮೊದಲಿನ ಕರ್ತವ್ಯ. ಅದನ್ನು ಮಾಡದೆ ಇದಕ್ಕೆ ಮಹತ್ವತೆಯನ್ನು ಕೊಟ್ಟಿದ್ದು ಪ್ರಜಾಪ್ರಭುತ್ವಕ್ಕೆ ಮಾಡಿದ ದ್ರೋಹ. ಈ ನೀತಿಯನ್ನು ಅನುಸರಿಸಿಕೊಂಡು ಬಜೆಟ್ ಚರ್ಚೆಯನ್ನು ಇಲ್ಲಿ ಮೊದಲು ಪ್ರಾರಂಭ ಮಾಡದೆ ಅಲ್ಲಿ ಮಾಡಿರುವ ಸರ್ಕಾರದ ಮನೋಭಾವಕ್ಕೆ ನನ್ನ ಧಿಕ್ಕಾರ. ಇನ್ನು ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಮುಂಚೆ ನಾನು ಈ ಮಂತ್ರಿಮಂಡಲದ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾದುದು ಅವಶ್ಯವೆಂದು ತಿಳಿಯುತ್ತೇನೆ. ಈಗ ಬಂದಿರತಕ್ಕಂತಹ ಮಂತ್ರಿಮಂಡಲ ಒಂದು ದೃಷ್ಟಿಯಲ್ಲಿ ಶೂದ್ರ ಸಚಿವ ಸಂಪುಟವೆಂದು ಹೇಳಬಹುದು. ಇದನ್ನು ನಾನು ಯೋಚನೆ ಮಾಡಿ ಹೇಳುತ್ತಿದ್ದೇನೆ. ಸ್ವಾಮಿ ವಿವೇಕಾನಂದರು ಹೇಳಿದ ಮಾತಿನಲ್ಲಿ ಕೂಡ ಇದು ನಿಜ. ಹಿಂದುಸ್ಥಾನದಲ್ಲಿ ಮೊದಲು ನಾಲ್ಕು ವರ್ಣಗಳು ಇದ್ದುವು. ಆದರೆ ಈಗ ಇಲ್ಲಿರುವುದು ಎರಡು ವರ್ಣಗಳು. ಅದು ವೈಶ್ಯ ವರ್ಣ ಮತ್ತು ಶೂದ್ರ ವರ್ಣ. ವೈಶ್ಯ ವರ್ಣವೆಂದರೆ ಈ ಬಂಡವಾಳ ಶಾಹೀ ವರ್ಗ. ಇನ್ನೊಂದು ಶೂದ್ರ ವರ್ಣ ಅಂದರೆ, ಸಮಾಜವಾದಿ ವರ್ಗ. ತಾವು ಸಮಾಜವಾದಿಗಳು ಎಂದು ಹೇಳಿ ಬಂದಿದ್ದೀರಿ. ಆದರೆ ಶೂದ್ರರಿಗೆ ನಿಜವಾಗಿ ಇರಬೇಕಾದಂತಹ ಸಿಟ್ಟು ಮತ್ತು ಕೆಚ್ಚು ನಿಮಗೆ ಇಲ್ಲ. ಆದ್ದರಿಂದ ನೀವು ಅರೆ ಶೂದ್ರರಾಗಿದ್ದೀರಿ. ಆದ್ದರಿಂದ ಪೂರ್ಣ ಶೂದ್ರ ಸಚಿವ ಸಂಪುಟ ಆಗಬೇಕು ; ಆದರೆ ಅದು ಆಗಲಿಲ್ಲ, ಆಗುವ ಸಂಭವವೂ ಇಲ್ಲ. ಅಧಿಕಾರ ಗದ್ದುಗೆಗೆ ಬಂದನಂತರ ತಮ್ಮಲ್ಲಿ ವೈರ್ಯಮನೋಭಾವ ತಳೆದು ಹಿಂದಿನ ಬಂಡವಾಳ ಶಾಹೀ ಮನೋಭಾವ ಬೆಳೆದಿದ್ದುದರಿಂದ ನಿಮ್ಮಲ್ಲಿ ನಮಗೆ ಸಂಪೂರ್ಣವಾದ ವಿಶ್ವಾಸ ಕಡಿದು ಹೋಗಿದೆ. ನಿಮ್ಮ ಮಂತ್ರಿಮಂಡಲದಲ್ಲಿರುವ ಮಂತ್ರಿಗಳು ಉದ್ದುದ್ದ ಭಾಷಣಗಳನ್ನು ಮತ್ತು ಹೇಳಿಕೆಗಳನ್ನು ಮಾಡಿ ಬರೆ ಮಾತಿನಲ್ಲಿ ಮಾತಾಗಿ ಬಿಟ್ಟಿದೆ. ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಟ್ಟ ಮುಖ್ಯಮಂತ್ರಿಯವರು

(ಶ್ರೀ ಕೋಣಂದೂರು ಲಿಂಗಪ್ಪ)

ಸಹಪ್ರತಿಯೊಂದಕ್ಕೂ ಮಾತನ್ನೇ ಆಡುತ್ತಿದ್ದಾರೆ. ಯಾವ ಪೋರ್ಟ್‌ಫೋಲಿಯೋದ ಮಂತ್ರಿಯ ಪ್ರಶ್ನೆಯೇ ಬರಲಿ, ಇವರು ಎದ್ದು ಬಿಟ್ಟು ಮಾತನಾಡುತ್ತಾರೆ. ಬರೀ ಮಾತು ಆದ್ದರಿಂದ ಪ್ರತಿಯೊಂದಕ್ಕೂ ಉದ್ದುದ್ದ ಹೇಳಿಕೆಗಳನ್ನು ಕೊಡತಕ್ಕ ಮತ್ತು ಭಾರೀ ಭಾಷಣಗಳನ್ನು ಮಾಡತಕ್ಕ ಮಂತ್ರಿಗಳಿಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯವಿಟ್ಟು ನಿಮ್ಮ ಬಾಯನ್ನು ಮುಚ್ಚಿ ಇಂಗ್ಲೀಷನಲ್ಲಿ ಹೇಳುವುದಾದರೆ 'ಪ್ಲೀಸ್ ಯು ಶಟ್ ಅಪ್' ಎಂಬ ಮಾತನ್ನು ಹೇಳುತ್ತೇನೆ. ಮೊದಲು ಬಾಯಿ ಮುಚ್ಚಿ ಎಷ್ಟು ನಿಮಗೆ ಹೇಳಬೇಕೋ ಅಷ್ಟನ್ನು ಮಾತ್ರ ಹೇಳುತ್ತೇನೆ. ಪ್ರತಿಯೊಂದಕ್ಕೂ ಹಿಂದೆ ನಡೆದಂಥ ಮಾತುಗಳನ್ನು ಹೇಳಬೇಡಿ ಎಂದು ಹೇಳಿದರೆ ಹೇಗೆ! ಬರೀ ವಾಕ್ ರೂಪದಲ್ಲಿ ಹಾಲಿನ ಹೊಳೆಯನ್ನು ಹರಿಸುತ್ತಿದ್ದಾರೆ. ಸಂಕೀರ್ಣವಾಗಿ ಹಾಗೂ ಸಮಗ್ರವಾಗಿ ಹೇಳುವುದಾದರೆ, ಮಂತ್ರಿ ಮಂಡಲದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಹುಂಬತನ, ದುರುದುಂಬೆತನ, ಮೈದುಂಬಿನಿಂತ ಅರೆ ಶೂದ್ರತನ, ಟೊಳ್ಳು ಘೋಷಣೆಯ ಗಾಳಿಜನ, ನೀತಿಶೂನ್ಯ ಈ ಮಂತ್ರಿಗಣ. ಇವರಿಂದ ಸಮಾಜವಾದವನ್ನು ಈ ರಾಜ್ಯದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಅರ್ಥಮಂತ್ರಿಗಳಾದ ಶ್ರೀ ಘೋರ್ಪಡೆಯವರು ಬಡ್ಜೆಟ್ ಭಾಷಣ ಮಾಡಿದ್ದಾರೆ. ನನಗೆ ಅವರ ಬಗ್ಗೆ ಬಹಳ ಗೌರವ ಇದೆ. ಆದರೆ ಅವರ ವಿಚಾರ ಹೊಂದಿಕೆಯ ಬಗ್ಗೆ ನನಗೆ ಆಕ್ರೋಶವಿದೆ. ಅವರು ಮಂಡಿಸಿರುವ ಬಡ್ಜೆಟ್ಟನ್ನು ನೋಡಿದರೆ ಪ್ರಾರಂಭದ ಪುಟದಿಂದ ಕಡೆಯ ಪುಟದವರೆಗೂ ಓದಿ ನೋಡಿದರೆ ಒಂದು ಕಡೆಯಾದರೂ ಸಮಾಜವಾದ ಎಂಬ ಶಬ್ದವನ್ನು ಹೇಳಿದ್ದಾರೆಯೇ ಎಂದು ನಾನು ಪ್ರಶ್ನೆಮಾಡುತ್ತೇನೆ. 36 ಪುಟಗಳಲ್ಲಿಯೂ ಒಂದು ಕಡೆಯಾದರೂ ಸಮಾಜವಾದ ಎನ್ನುವ ಒಂದು ಶಬ್ದವನ್ನು ಉಚ್ಚರಿಸಿಲ್ಲ. ಇವರು ಸ್ವತಃ ಮಾಜೀ ಮಹಾರಾಜರು. ಸೊಂಡೂರಿನಲ್ಲಿ ಇವತ್ತಿನವರೆಗೂ ಅಲ್ಲಿನ ಬಡವರಿಗೆ ಉಸಿರಾಡಲು ಬಿಟ್ಟಿಲ್ಲ. ರಾಜ ದರ್ಬಾರ್ ನಡೆಸುತ್ತಿದ್ದಾರೆ. ಆದರೆ ಅಲ್ಲಿ ಬಡವರು ಅಜ್ಞಾನ, ಅಂಧಕಾರದಲ್ಲಿದ್ದ ಹಾಗೆ ಇದ್ದಾರೆ. ಇಂತಹ ಮಾಜೀ ರಾಜರು ಇಲ್ಲಿ ಅರ್ಥಸಚಿವರಾಗಿ ಸಮಾಜವಾದವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಬಡವರಿಗೆ ಮೋಸಮಾಡಿ ಕಣ್ಣು ಕಟ್ಟಿ ಸಮಾಜವಾದಿ ಎಂಬುದಾಗಿ ಮುಖವಾಡ ಹಾಕಿಕೊಂಡು ಮೆರೆಯತಕ್ಕ ನಮ್ಮ ಅರ್ಥಮಂತ್ರಿಗಳ ಭಾಷಣದಲ್ಲಿ ಸಮಾಜವಾದ ಎಂಬ ಶಬ್ದ ಒಂದು ಕಡೆಯೂ ಅವರ ಭಾಷಣದಲ್ಲಿ ಬಾರದೇ ಇರುವುದಕ್ಕೆ ಏನಾದರೂ ಅರ್ಥವಿದೆಯೇ ಎಂದು ಕೇಳಬೇಕಾಗಿದೆ. ಅದು ಅನ್ವರ್ಥವಾಗಿದೆ. ಅವರು ಪರದೇಶಗಳಲ್ಲಿ ಹೋಗಿ ಓದಿ ಬಂದಂಥವರು. ನಮ್ಮ ರಾಜ್ಯದ ಒಳ್ಳೆಯ ಅರ್ಥಶಾಸ್ತ್ರಜ್ಞರಲ್ಲಿ ಇವರು ಒಬ್ಬರು. ನನಗೆ ಅವರ ಬಗ್ಗೆ ಹೆಚ್ಚಿಗೆ ಮೆಚ್ಚುಗೆ ಇದೆ. ಆದರೆ ಆ ವಿಚಾರದಲ್ಲಿ ಇವರು ಸಮಾಜವಾದಕ್ಕೆ ಬುದ್ಧಿಪೂರ್ವಕವಾಗಿ ಚೂರಿ ಹಾಕತಕ್ಕ ಜನರು. ಸೊಂಡೂರಿನ ಬಡವರು, ರೈತರು ಇವರ ಮುಂದೆ ಹೋಗಿ ಅವರ ಮುಖವಾಡವನ್ನೂ ಮತ್ತು ಅಲ್ಲಿನ ಜನರ ಭವಣೆಯನ್ನು ನೋಡಿ ಬಂದು ನಾನು ಒಂದು ಮಾತನ್ನು ಹೇಳುತ್ತೇನೆ. 23ನೇ ತಾರೀಖು ಸೊಂಡೂರು ವಿಮೋಚನಾ ಸ್ಮರಣ ಸಮಾರಂಭವನ್ನು ಬೆಂಗಳೂರಿನಲ್ಲಿ ಪ್ರಾರಂಭ ಮಾಡಲಿದ್ದೇವೆ. ಪ್ರಾರಂಭ ಮಾಡುತ್ತೇವೆ. ಅಂತೂ ಇಡೀ ರಾಷ್ಟ್ರದ ಎಲ್ಲಾ ಕಡೆಗಳಿಂದಲೂ ನಮ್ಮ ನಾಡಿಗೆ ಎಲ್ಲ ಪಕ್ಷದವರೂ ಹಾಗೂ ನಮ್ಮ ಪಕ್ಷದವರೆಲ್ಲರೂ ಬರುತ್ತಾರೆ. ಆಗ ನಿಮ್ಮ ಮಾಜೀ ಮಹಾರಾಜರು ಇಂದಿನ ಸಮಾಜವಾದಕ್ಕೆ ಮುಖವಾಡ ಹಾಕುವ ನಿಮ್ಮ ಅರ್ಥಮಂತ್ರಿಗಳ ನೈಜ ಚಿತ್ರವನ್ನು ಬಹಿರಂಗಪಡಿಸುತ್ತೇವೆ. ಈಗ ನಮಗೆ ಬೇಕಾದುದು ಸಮಾಜ ವಾದ. ಆದರೆ ಸೊಂಡೂರಿನ ಮಹಾರಾಜರ ಸಮಾಜವಾದ ಸೊಂಡೂರಿನ ಸಮಾಜವಾದ, ಇದು ನಿಜವಾದ ಸಮಾಜವಾದವೆಂದು ಹೇಳುತ್ತಾರೆ.

ಇನ್ನು ಬಡ್ಜೆಟ್ ಅಂದರೆ ಸಾಮಾನ್ಯವಾಗಿ ಅದರ ಡೆಫಿನಿಷನ್‌ನಿಂದ ಏನಾದರೂ ಪರಿಣಾಮವಾಗಬೇಕು. ಈ ವರ್ಷದಲ್ಲಿ ಮಂಡನೆ ಮಾಡಿರತಕ್ಕ ಬಡ್ಜೆಟ್ ಸಮಾಜದ ಮೇಲೆ ಪರಿಣಾಮವಾಗಬೇಕು. ಬಡ್ಜೆಟ್ ಮಂಡನೆ ಮಾಡುವ ಹಿಂದಿನ ದಿವಸ ಜನಗಳ ಮನಸ್ಸಿನಮೇಲೆ ಏನಿರುತ್ತದೆ, ಬಡ್ಜೆಟ್ ಭಾಷಣ ಮಾಡಿದ ಮರುದಿನ ಆಗತಕ್ಕ ಪರಿಣಾಮವೇನು—ಹೀಗೆ ಪ್ರತಿವರ್ಷವೂ ಹಂತಹಂತವಾಗಿ ಸಮಾಜವನ್ನು ಪ್ರವರ್ತಿಸತಕ್ಕ ಒಂದು ಆದೇಶವೇ ಈ ಬಡ್ಜೆಟ್. ಆದರೆ ಈಗ ಇಲ್ಲಿಟ್ಟಿರತಕ್ಕ ಬಡ್ಜೆಟ್ಟನ್ನು ನಾವು ನೋಡಿದರೆ ಕಳೆದ 25 ವರ್ಷಗಳಲ್ಲಿ ಮಾಡಿರತಕ್ಕ ಭಾಷಣಗಳನ್ನು ನೋಡಿದರೆ ಹಿಂದಿನ 10 ವರ್ಷಗಳಲ್ಲಿ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಏನು ಬಡ್ಜೆಟ್ಟನ್ನು ಮಾಡಿದ್ದರೋ ಅದೇ ಬಡ್ಜೆಟ್ ರೀತಿ ಇದೆ. ಆದರೆ ಇವರು ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಮತ್ತೇನೂ ವ್ಯತ್ಯಾಸವಿಲ್ಲ, ಮೂಲಭೂತವಾಗಿ ಇವರಿಗೂ ಅವರಿಗೂ ಯಾವ ವ್ಯತ್ಯಾಸವೂ ಇಲ್ಲ. ಆದ್ದರಿಂದ ನಾವು ಈಗ ಹೇಳುವುದೇನೆಂದರೆ, ಬಡವರಿಗೆ ಅದರಲ್ಲಿಯೂ ಸಾಮಾನ್ಯ ಜನರು ಪ್ರತಿನಿತ್ಯ ಬಳಸುವ ವಸ್ತುಗಳ ಮೇಲೆ ಸಮಾಜವಾದೀ ಬಡ್ಜೆಟ್ಟಿನಲ್ಲಿ ತೆರಿಗೆಯನ್ನು ಹಾಕಬಾರದು. ಏಕೆಂದರೆ ಇದು ಮಧ್ಯಮ

ವರ್ಗದ ಬಡ್ಜೆಟ್ ಸ್ವಲ್ಪ ಶ್ರೀಮಂತ ವರ್ಗದವರ ಮೇಲೆ ಬರಬಹುದು. ಅವರಿಗೆ ತೆರಿಗೆ ಹಾಕಬಹುದು. ಆದ್ದರಿಂದ ಸಮಾಜವಾದಿ ರೂಪರೇಖೆಗಳು ಇದಕ್ಕೆ ತದ್ವಿರುದ್ಧವಾಗಿ ನಡೆದಿವೆ. ಇದರಲ್ಲಿ ಸಮಾಜವಾದದ ಲಕ್ಷಣವು ಕಾಣದೇ ಇರುವ ರೀತಿಯಲ್ಲಿ ಈ ಬಡ್ಜೆಟ್ ಮಂಡನೆ ಇವತ್ತು ಆಗಿದೆಯೆಂಬುದು ಮುಖ್ಯ ಸಮಾಜವಾದಿ ಬಡ್ಜೆಟ್ ಎಂದು ಹೇಳಿದರೆ, ಅದರಲ್ಲಿ ಸರ್ಕಾರೀ ಕಾರ್ಖಾನೆಗಳು ಏನಿವೆಯೋ ಅವುಗಳಲ್ಲಿ ಹಣ ಹಾಕಿರುವುದು ಎಷ್ಟು? ಆ ಹಣದಿಂದ ನಮಗೆ ಬಂದಿರುವ ಲಾಭವೆಷ್ಟು, ಆ ಲಾಭದಿಂದ ಅಭಿವೃದ್ಧಿ ಕೆಲಸಕ್ಕೆ ಎಷ್ಟು ತೊಡಗಿಸಿದೆ, ಹಾಗೆಯೇ ಬೇರೆಬೇರೆ ಮೂಲಗಳಿಂದ ಬರತಕ್ಕ ಉತ್ಪತ್ತಿ, ಸರ್ಕಾರದ ಕ್ಷೇತ್ರದಿಂದ ಬಂದಿರತಕ್ಕ ಉತ್ಪತ್ತಿ, ಅದರ ಖರ್ಚಿನ ವಿವರಗಳೇನೆಂಬ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಒಂದು ದೃಷ್ಟಿಯಿಂದ ಇದು ನಮ್ಮ ಡಿಕೆನ್ಸ್ ಸ್ಕ್ಮಾರ್ ಸ್ಟೋರಿ ಇದ್ದ ಹಾಗೆ ಇವೆ. ಇದರಲ್ಲಿ ಇಷ್ಟೇ ಹೊರತು ಇನ್ನೇನೂ ಮಹತ್ವವಿಲ್ಲ. ಇದನ್ನು ಅರ್ಥಶಾಸ್ತ್ರಜ್ಞರಾದ ಮಾನ್ಯ ಶ್ರೀ ಘೋರ್ಪಡೆಯವರು ಮಾಡಿದಂಥಾದ್ದು ಅಲ್ಲವೆಂದು ಕಾಣುತ್ತದೆ. ಇದನ್ನು ಕೇಸ ವರ್ಕರ್ಸ್ ಯಾರೋ ತಯಾರು ಮಾಡಿರಬೇಕು. ಸಮಾಜ ವಾದವನ್ನು ಹೇಳತಕ್ಕ ಅರ್ಥಮಂತ್ರಿಗಳು ಮಂಡನೆ ಮಾಡತಕ್ಕ ಬಡ್ಜೆಟ್ ಇದು ಖಂಡಿತವಾಗಿಯೂ ಅಲ್ಲ.

ಇನ್ನು ಅಭಿವೃದ್ಧಿಯ ಬಗ್ಗೆ ಸಮಾಜವಾದೀ ಸರ್ಕಾರದ ಕಲ್ಪನೆ ಏನೆಂಬುದು ಇವರಿಗೆ ಆ ಕಲ್ಪನೆಯೇ ಇಲ್ಲ. ಇವತ್ತು ನಮ್ಮ ರಾಜ್ಯದ ಸರಾಸರಿ ತಲಾ ಉತ್ಪತ್ತಿ ಎಷ್ಟು ಎಂಬುದರ ಬಗ್ಗೆ ಅವರ ಭಾಷಣದಲ್ಲಿ ಎಲ್ಲಿಯೂ ಮಾಹಿತಿ ಇಲ್ಲ. ಅದರ ಬಗ್ಗೆ ಒಂದು ಅಕ್ಷರವೂ ಕಾಣುವುದಿಲ್ಲವೆಂದು ನಾನು ಹೇಳುತ್ತೇನೆ. ನಮ್ಮ ರಾಜ್ಯದ ಒಬ್ಬ ಮನುಷ್ಯನ ಒಂದು ದಿನದ ಆದಾಯ ಕೇವಲ 8ಆಣೆ. ನಾವು ಅನೇಕ ಲೆಕ್ಕಗಳನ್ನು ಪರಿಶೀಲನೆ ಮಾಡಿ ಅಂಕಿ ಅಂಶಗಳ ಆಧಾರದ ಮೇಲೆ ನಾವು ಈ ರೀತಿಯಾಗಿ ಲೆಕ್ಕ ಹಾಕಿದ್ದೇವೆ. ಇದು ಅಲ್ಲವೆಂದು ಹೇಳಿದರೆ ಹೇಗೆ ? ಅಂಕಿ ಅಂಶಗಳ ಮೂಲಕ ಹೇಳುತ್ತೇನೆ. 8ಆಣೆ ಪಡೆದಂಥ ಮನುಷ್ಯ ಈ ರಾಜ್ಯದಲ್ಲಿ ಬದುಕುತ್ತಿದ್ದಾನೆ. ಕಾರಣ ಇಷ್ಟೇ. ನಮ್ಮ ಜನರಿಗೆ ಸಿಟ್ಟು ಇಲ್ಲ. ಅವರು ಸಿಟ್ಟು ಮಾಡುವುದನ್ನು ಮರತಿದ್ದಾರೆ. ಆದ್ದರಿಂದ ಅವರು ಸತ್ತಜನರು ಆಗಿದ್ದಾರೆ. ನಮ್ಮ ಮಾನ್ಯ ಶ್ರೀ ಬೇಂದ್ರೆಯವರು ಒಂದು ಕವನವನ್ನು ಹಾಡಿದ್ದಾರೆ. 'ಇಳಿದು ಬಾ ತಾಯೇ, ಇಳಿದು ಬಾ, ತಾಯೇ ನಡೆದು ಬಾ, ಎಂದು. ಸತ್ತ ಜನರನ್ನು ಎತ್ತು ಬಾ ಎಂದು ಕರೆದುದಾಗಿದೆ. ಅಂತಹ ಚೈತನ್ಯ ರೂಪವಾದ ಶಕ್ತಿ ನಮ್ಮಲ್ಲಿ ಬರಬೇಕು. ಆದ್ದರಿಂದಲೇ ನೀವು ಈಗ ಇಂದು ಅಧಿಕಾರ ಗದ್ದುಗೆಯಲ್ಲಿ ಉಳಿದುಕೊಂಡಿದ್ದೀರಿ, ಆದರೆ ನಿಮ್ಮ ಪೋಲೀಸ್ ನಾಯಿಗೆ ಒಂದು ದಿನಕ್ಕೆ 5 ರೂಪಾಯಿಗಳಷ್ಟು ಖರ್ಚಾಗುತ್ತದೆ. ತಾವೇ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ನಿಮ್ಮ ಪೋಲೀಸ್ ನಾಯಿಗೆ 5 ರೂಪಾಯಿಗಳನ್ನು ಖರ್ಚುಮಾಡುವ ನೀವು ಈ ರಾಜ್ಯದ ಒಬ್ಬ ಮನುಷ್ಯನಿಗೆ ಎಷ್ಟು ಒಂದು ದಿವಸಕ್ಕೆ ಖರ್ಚುಮಾಡುತ್ತೀರಿ ಎಂಬುದನ್ನು ತಾವು ಕೊಟ್ಟಿಲ್ಲ. 8 ಆಣೆ ಮಾತ್ರ ಈ ರಾಜ್ಯದಲ್ಲಿ ಒಬ್ಬ ಮನುಷ್ಯನಿಗೆ ಸರಾಸರಿ ಇರತಕ್ಕ ಉತ್ಪತ್ತಿ.

ಶ್ರೀ ಡಿ. ಬಿ. ಕಲ್ಮಂಕರ್.—ಪರ್ ಕ್ಯಾಪಿಟಾ ಇನ್‌ಕಂ 480.

ಶ್ರೀ ಕೋಣಂದೂರು ಲಿಂಗಪ್ಪ.—ಅದು ಸರಿಯಲ್ಲ.

(MADAM SPEAKER in the Chair.)

ಇನ್ನು ಈ ಭಾಷಣದಲ್ಲಿ ಈ ಆಯುವ್ಯಯ ಪಟ್ಟಿಯನ್ನು ಕ್ಷಾಮದ ಆಯುವ್ಯಯ ಪತ್ರ ಎಂದು ಕರೆದಿದ್ದಾರೆ; ಆದರೆ ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಕಳೆದ 25 ವರ್ಷಗಳಿಂದಲೂ ಆಡಳಿತವರ್ಗದವರು ಕೃಷಿರಂಗವನ್ನು ನಿರ್ಲಕ್ಷಿಸಿದ್ದೇ ಇಂದು ದೇಶದಲ್ಲಿ ಕ್ಷಾಮ ತಲೆದೋರುವುದಕ್ಕೆ ಮೂಲಕಾರಣ ಎಂದು ಹೇಳದೆ ವಿಧಿಯಿಲ್ಲ. ಆಯಿತು 25 ವರ್ಷಗಳ ಆಡಳಿತ ಸರಿಯಾಗಿರಲಲ್ಲ ಎಂದು ಟೀಕೆ ಮಾಡತಕ್ಕ ಇಂದಿನ ಆಡಳಿತವರ್ಗದವರಾದರೂ ಕಳೆದ 11 ತಿಂಗಳಲ್ಲಿ ಇವರಾದರೂ ಮಾಡಿರತಕ್ಕದ್ದೇನು ? ಹಿಂದೆ ಇದ್ದವರೇನೋ ಮಾಡಿದ್ದೆಲ್ಲಾ ಪಾಪದ ಹೊರೆಯೆಂದು ಹೇಳತಕ್ಕ ಜನರು ಇಂದು ಇವರು ಕಳೆದ ಹನ್ನೊಂದು ತಿಂಗಳಲ್ಲಿ ಸಾಧಿಸಿರತಕ್ಕ ಪುಣ್ಯದ ಹೊರೆಯಾದರೂ ಏನು ? ತಿಳಿಸುವರೆ ? ದುಡ್ಡನ್ನೇನೋ ಅಗಾಧವಾಗಿ ಖರ್ಚುಮಾಡಿದ್ದಾರೆ. ಆದರೆ ದೇಶದಲ್ಲಿ ಆ ಬರ ಬಾರದಂತೆ ಕ್ರಮಗಳನ್ನು ಕೈಗೊಳ್ಳತಕ್ಕ ಬಗ್ಗೆ ಜನರಲ್ಲಿ ಒಂದು ಪ್ರಜ್ಞೆಯನ್ನು ಮೂಡಿಸುವುದಕ್ಕೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು ? ಈ ಶಾಸನ ಸಭೆಯ ಮುಂದೆ ಅಂಥಾ ಯಾವ ಯೋಜನೆಯನ್ನು ಮಂಡಿಸಿಲ್ಲ. ಹೋಗಲಿ ಇಂಥ ಒಂದು ಅಂಧೋಳನವನ್ನು ಆ ಕ್ಷಾಮಪೀಡಿತ ಪ್ರದೇಶಗಳಾದ ಬೀದಾರ್, ಗುಲ್ಬರ್ಗ, ರಾಯಚೂರು ಇತ್ಯಾದಿ ಜಿಲ್ಲೆಗಳಲ್ಲಿ ನಡೆಸಬಹುದಾಗಿತ್ತು. ಇಂಥ ಒಂದು ದುರಂತಕಾಲದಲ್ಲಿ ಜನರಲ್ಲಿ ಒಂದು ಹೊಸ ಪ್ರಜ್ಞೆಯನ್ನು ಮೂಡಿ

ಶ್ರೀ ಕೋಣಂದೂರು ಲಿಂಗಪ್ಪ)

ಸುವುದಕ್ಕೆ ಸಾಧ್ಯವಿತ್ತು; ಅದರಿಂದ ದೇಶಕ್ಕೂ ಅನುಕೂಲವಾಗುತ್ತಿತ್ತು. ಅದನ್ನು ಮಾಡಿದ್ದರೆ ಇಂದು ಒಂದು ಹೊಸ ಸಮಾಜವನ್ನೇ ಅಲ್ಲಿ ಸೃಷ್ಟಿಮಾಡಬಹುದಾಗಿತ್ತು. ಅವರೆ ಜನರಲ್ಲಿ ಅಂಥಾ ಒಂದು ಸಾಮೂಹಿಕ ಪ್ರಜ್ಞೆ ಬೆಳೆಸುವುದಕ್ಕೆ ಸರ್ಕಾರದವರು ಏನೇನೂ ಕೆಲಸ ಮಾಡಿಲ್ಲ. ಮಾಡುವುದಕ್ಕೆ ಇವರಿಗೆ ಸಾಧ್ಯವಿತ್ತು. ಅಲ್ಲಿ ಒಂದು ಭೂಸೈನ್ಯವನ್ನಾದರೂ ನಿರ್ಮಾಣ ಮಾಡಬಹುದಿತ್ತು. ಅದನ್ನಾದರೂ ಮಾಡಿದ್ದರೆ ಅದೊಂದು ಹೊಸ ಸಮಾಜಕ್ಕೆ ಬುನಾದಿಯಾದರೂ ಆಗುತ್ತಿತ್ತು. ಅದನ್ನೂ ಕೂಡ ಸರ್ಕಾರ ಮಾಡಲಿಲ್ಲ. ಹೀಗೆ ಸರ್ಕಾರ ನಮ್ಮ ರಾಜ್ಯದಲ್ಲಿ ಅನ್ನ ಕ್ಷಾಮವನ್ನು ಉಳಿಸಿಕೊಂಡು ಬರುತ್ತಿರುವಂತೆ ಅನಕ್ಷರಸ್ಥರ ಸಮಸ್ಯೆಯನ್ನೂ ಹಾಗೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇನ್ನು ಕನ್ನಡ ಭಾಷಾಭಿವೃದ್ಧಿಗೆ ಈ ಸಾಲಿಗೆ 13 ಲಕ್ಷ ರೂಪಾಯಿ ಮಾತ್ರ ಇಟ್ಟಿದ್ದಾರೆ. ಹಿಂದೆ ಇಟ್ಟಿದ್ದುದಕ್ಕಿಂತ ಈ ವರ್ಷ ಇದು ಬಹಳ ಕಡಮೆ ಆಗಿದೆ. ಆದುದರಿಂದ ಇದನ್ನು ಮತ್ತೆ ಒಂದು ಲಕ್ಷ ರೂಪಾಯಿಗೆ ಏರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇಷ್ಟನ್ನು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಆರ್. ರಾಚೇಗೌಡ (ಹಾನೂರ್).—ಮಾನ್ಯ ಸಭಾಧ್ಯಕ್ಷರೇ, ಈಗ ಸಭೆಯ ಮುಂದೆ ಏನು ನಮ್ಮ ಮಾನ್ಯ ಅರ್ಥ ಸಚಿವರು 1973–74 ಕ್ಕೆ ಒಂದು ಆಯವ್ಯಯ ಪಟ್ಟಿಯನ್ನು ಮಂಡಿಸಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಅರ್ಥ ಮಂತ್ರಿಗಳು ತಮ್ಮ ಭಾಷಣದ ಮೊದಲನೇ ಪುಟದಲ್ಲೇ ಅಭಾವ ಪರಿಸ್ಥಿತಿಯ ಬಗ್ಗೆ ಅನೇಕ ವಿಷಯಗಳನ್ನು ಬಹಳ ಚನ್ನಾಗಿ ಪ್ರಸ್ತಾಪಮಾಡಿದ್ದಾರೆ. ಆದರೆ ಇದನ್ನು ಗಣನೆಗೆ ತೆಗೆದುಕೊಳ್ಳದೆ ವಿರೋಧ ಪಕ್ಷದ ಸದಸ್ಯರುಗಳು ಅಭಾವ ಪರಿಸ್ಥಿತಿಯ ಬಗ್ಗೆ ಸರ್ಕಾರ ಸಾಕಷ್ಟು ಪರಿಹಾರಗಳನ್ನು ಒದಗಿಸಿಲ್ಲ ಎಂದು ಹೇಳಿರತಕ್ಕದ್ದು ನನಗೆ ಬಹಳ ಆಶ್ಚರ್ಯವನ್ನು ಉಂಟುಮಾಡಿದೆ. ಆ ಅಭಾವ ಪ್ರದೇಶಗಳಲ್ಲಿ 54 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಆ ಪ್ರದೇಶದಲ್ಲಿ ಹೋದ ವರ್ಷ ನಡೆಸಿರತಕ್ಕ ಕೆಲಸ ಕಾರ್ಯಗಳಿಗೂ ಈ ವರ್ಷ ಅಲ್ಲಿ ನಡೆಸಿರತಕ್ಕ ಕೆಲಸಕಾರ್ಯಗಳಿಗೂ ಹೋಲಿಸಿ ನೋಡಿದರೆ ಅಲ್ಲಿ ಈ ವರ್ಷ ಹೆಚ್ಚು ಹಣವನ್ನು ಖರ್ಚುಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಆದರೆ ನಾನು ಈಗ ನಮ್ಮ ಹಿಂದೆ ಇದ್ದ ಸರ್ಕಾರಗಳು ಏನೂ ಮಾಡಲಿಲ್ಲ ಎಂಬ ವಿಷಯಕ್ಕೆ ನಾನೀಗ ಪ್ರವೇಶಮಾಡುವುದಿಲ್ಲ. ಹಾಲಿ ಆ ಬೀದಾರ್, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಏನು ಒಂದು ಬರ ಬಂದಿದೆ ಅದು ಹೀಗೇ ಹತ್ತು ವರ್ಷಗಳಿಗೊಮ್ಮೆ ಬರುತ್ತಿರುತ್ತೆಂದು ಆ ಭಾಗದ ಜನರಿಂದ ನಾನು ಕೇಳುತ್ತಿದ್ದೇನೆ. ಅಂದಾಗ ಹಿಂದೆ ಇದ್ದಂಥ ಮಾನ್ಯ ಮಂತ್ರಿಗಳು ಆ ಅಭಾವ ಪ್ರದೇಶಗಳಿಂದಲೇ ಬಂದವರಾಗಿದ್ದರೂ ಅಲ್ಲಿ ಅದನ್ನು ತಡೆಯತಕ್ಕ ಬಗ್ಗೆ ಏನೊಂದೂ ಶಾಶ್ವತವಾದ ಕಾರ್ಯಕ್ರಮಗಳನ್ನು ಅವರು ಕೈಗೊಳ್ಳಲಿಲ್ಲ. ಅವರು ಈ ಬಗ್ಗೆ ಏನಾದರೂ ಒಂದು ಕ್ರಮವನ್ನು ಹಾಕಿಕೊಂಡು ಕೆಲಸ ನಡೆಸಿದ್ದರೆ ಚೆನ್ನಾಗಿತ್ತು. ಆದರೆ ಆ ಹಿಂದಿನ ಸರ್ಕಾರಗಳೆಲ್ಲಾ ಒಟ್ಟು ಖರ್ಚುಮಾಡಿರತಕ್ಕ ಹಣವನ್ನು ನಾವು 1966–67 ರಿಂದ 1971–72ಕ್ಕೆ ಲೆಕ್ಕ ಹಿಡಿದರೆ ಅದೂ ಬಹಳವೆ ಆಗುತ್ತದೆ. ಆದರೆ ಅಲ್ಲಿ ಕ್ಷಾಮ ಪರಿಹಾರದ ಬಗ್ಗೆ ಅಷ್ಟೊಂದು ಹಣವನ್ನು ಖರ್ಚುಮಾಡಿದ್ದರೂ ಅಲ್ಲಿ ಈ ದಿವಸ ಜನರಿಗೇನೂ ಕಷ್ಟ ತಪ್ಪಲಿಲ್ಲ. ಅದಕ್ಕೆ ಕಾರಣ ಆ ಹಿಂದಿನವರು ಅಲ್ಲಿ ಆ ಕ್ಷಾಮದ ಬಗ್ಗೆ ಖರ್ಚುಮಾಡಿದ ಹಣವನ್ನು ನೀರಾವರಿ ಬಾಬುಗಳಿಗೆ ವಿನಿಯೋಗ ಮಾಡದೆ ಆ ಹಣ ವನ್ನು ರಸ್ತೆ ರಿಪೇರಿ ಇತ್ಯಾದಿಗಳಿಗೆ ವೆಚ್ಚ ಮಾಡಿದ್ದರಿಂದ ಜನಕ್ಕೆ ಈ ದಿವಸ ಆ ತೊಂದರೆಗಳು ಉಂಟಾಗುವುದಕ್ಕೆ ಕಾರಣವಾಗಿದೆ. ಅಲ್ಲಿ ನೀರಾವರಿ ಕಾಮಗಾರಿಗಳನ್ನು ಅಭಿವೃದ್ಧಿಮಾಡಿದ್ದರೆ ಈ ವರ್ಷ ಅಲ್ಲಿ ಕ್ಷಾಮಬರುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಈ ಅಂಶವನ್ನು ನಮ್ಮ ಸರ್ಕಾರ ಗಮನಕ್ಕೆ ತೆಗೆದುಕೊಂಡು ಅಲ್ಲಿ ಈಗ 54 ಕೋಟಿ ರೂಪಾಯಿಗಳನ್ನು ಸಣ್ಣ ನೀರಾವರಿ ಮತ್ತು ಮಧ್ಯಮನೀರಾವರಿ, ಬಾಬುಗಳಿಗೆ ಖರ್ಚುಮಾಡುವುದಕ್ಕೆ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅಲ್ಲದೆ ದೊಡ್ಡ ನೀರಾವರಿ ಯೋಜನೆ ಗಳಿಗೂ ಕೂಡ ಹಣವನ್ನು 101 ಕೋಟಿ ರೂಪಾಯಿಗಳ ವರೆಗೂ ಒದಗಿಸುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಇದನ್ನು ಗಮನಿಸದೆ ವಿರೋಧ ಪಕ್ಷದ ಸದಸ್ಯರು ಮಾತನಾಡಿದ್ದು ಸರಿಯಲ್ಲ ಎಂದು ಈ ಒಂದು ಅಂಶವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಇನ್ನು ಆ ಕ್ಷಾಮಕ್ಕೆ ತುತ್ತಾಗಿರತಕ್ಕ 4–5 ಜಿಲ್ಲೆಯಲ್ಲಿರತಕ್ಕ ಜನರಿಗೆ ಅಂದರೆ ನೇಕಾರರಿಗೆ ನೂಲನ್ನು ಒದಗಿಸುವುದಕ್ಕಾಗಿ 55 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಅಲ್ಲದೆ ಅವರು ತಯಾರಿಸಿದ ಬಟ್ಟೆಗಳನ್ನು ಕೊಳ್ಳುವುದಕ್ಕೂ ಕೂಡ ವ್ಯವಸ್ಥೆ ಮಾಡಿದ್ದಾರೆ. ಈ ವಿಚಾರವನ್ನು ವಿರೋಧ ಪಕ್ಷದವರು ಗಮನಿಸಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಸರ್ಕಾರ ಜನವಸತಿ ಸೌಕರ್ಯವನ್ನು-ಉಂಟುಮಾಡುವುದಕ್ಕೆ ಐದು ಕೋಟಿ ರೂಪಾಯಿಗಳನ್ನು ಒದಗಿಸಿದೆ. ಆದರೆ ಒಂದೊಂದು ತಾಲ್ಲೂಕಿನಲ್ಲೂ 100-150 ಮನೆಗಳನ್ನು ಕಟ್ಟಿಸಬೇಕೆಂದು ಹೇಳಿದ್ದಾರೆ. ಆದರೆ ಅವು ಏತಕ್ಕೂ ಸಾಲದು, ಆದುದರಿಂದ ಪ್ರತಿ ಒಂದು ತಾಲ್ಲೂಕಿನಲ್ಲೂ ಕನಿಷ್ಟಪಕ್ಷ 500 ಮನೆಗಳನ್ನಾದರೂ ಕಟ್ಟಿಸುವುದಕ್ಕೆ ಹಣವನ್ನು ಒದಗಿಸಬೇಕಾದ್ದು ಅಗತ್ಯ ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಆಹಾರದ ವಿಷಯ ಹೇಳುವುದಾದರೆ ನಮ್ಮಲ್ಲಿ 13 ಲಕ್ಷ ಟನ್ ಆಹಾರದ ಕೊರತೆ ಇದೆ ಎಂದು ಹೇಳಲಾಗಿದೆ. ಆ ಕೊರತೆಯನ್ನು ನಮ್ಮ ಸರ್ಕಾರ ಮಾಡಿದ್ದಲ್ಲ. ಅದು ಕೇವಲ ಮಳೆಯ ಅಭಾವದಿಂದುಂಟಾದ ಪರಿಸ್ಥಿತಿ. ಇದನ್ನು ವಿರೋಧಪಕ್ಷದವರು ಅರಿತುಕೊಳ್ಳಬೇಕು. ಬಹುಶಃ ಚನ್ನಾಗಿ ಮಳೆಯಾಗಿದ್ದರೆ ಈ ಕೊರತೆ ಬರುತ್ತಿರಲಿಲ್ಲ, ಬೆಳೆ ಚೆನ್ನಾಗಿ ಆಗಿ ಆಹಾರದಲ್ಲಿ ಸ್ವಯಂ ಸಂಪೂರ್ಣತೆ ಬರುತ್ತಿತ್ತು. ನಮ್ಮ ವ್ಯವಸಾಯಾಭಿವೃದ್ಧಿಯಾಗಬೇಕಾದರೆ ನೀರು ಮತ್ತು ಗೊಬ್ಬರ ಇವೆರಡೂ ಮುಖ್ಯವಾದುವು. ನೀರಿನ ಅವಶ್ಯಕತೆ ಮನಗಂಡು ಕಪಿನಿ ಹಾರಂಗಿ ಮುಂತಾದ ಅನೇಕ ಪ್ರಾಜಕ್ಟುಗಳನ್ನು ತೆಗೆದುಕೊಂಡಿದ್ದಾರೆ. ಅಭಾವ ಪರಿಸ್ಥಿತಿ ಇರುವ ಪ್ರದೇಶಗಳಲ್ಲೂ ಹೆಚ್ಚು ನೀರಾವರಿ ಯೋಜನೆಗಳನ್ನು ಕೈಕೊಂಡಿದ್ದಾರೆ. ಗೊಬ್ಬರ ಕಡಮೆ ಒದಗುತ್ತಿದೆ. ಆದುದರಿಂದ ಕೈಗಾರಿಕಾ ಮಂತ್ರಿಗಳಲ್ಲಿ ವಿನಂತಿಮಾಡುವುದು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರ್ಕಾರ ಮಂಜೂರುಮಾಡುವ ಗೊಬ್ಬರದ ಕಾರ್ಖಾನೆಗಳ ಜೊತೆಗೆ ಇನ್ನೂ ಎರಡುಮೂರು ಹೆಚ್ಚು ಕಾರ್ಖಾನೆಗಳನ್ನು ಪಡೆಯಲು ಪ್ರಯತ್ನ ಮಾಡಬೇಕು ಎಂದು.

5-00 P. M.

ನಮ್ಮ ಸರಕಾರಿ ನೌಕರರಿಗೆ 30 ರೂಪಾಯಿಗಳಿಂದ 40 ರೂಪಾಯಿಗಳವರೆಗೆ ಹೆಚ್ಚಿಸಿದ್ದಾರೆ. ಆದರೆ ವಿರೋಧ ಪಕ್ಷದವರು ಇದು ಕಡಮೆ ಎಂದು ಲಘುವಾಗಿ ಮಾತನಾಡಿದ್ದಾರೆ. ಸರಕಾರ ಈ ದೆಶೆಯಲ್ಲಿ ಸಾಕಷ್ಟು ಮುನ್ನಡೆದಿದೆ ಎಂದು ನಾನಾದರೂ ಹೇಳುತ್ತೇನೆ. ಕನ್ನಡದ ಬೆಳವಣಗೆಗೆ ಬಹಳ ಕಡಮೆ ಕೊಟ್ಟಿದ್ದಾರೆಂದು ತಿಳಿಸಿದ್ದಾರೆ. ರಾಜ್ಯದಲ್ಲಿ ಎಲ್ಲಾ ಕಡೆ ಕನ್ನಡಭಾಷೆ ಬಳಸುವಂತೆ ಮತ್ತು ಕನ್ನಡವನ್ನು ಕೋರ್ಟ್ ಲಾಂಗ್ವೇಜ್ ಮಾಡುವಂತೆ ಕ್ರಮ ತೆಗೆದುಕೊಳ್ಳಬೇಕು.

ನಾನು ರೇಷ್ಮೆ ವಿಷಯದಲ್ಲಿ ಸ್ವಲ್ಪ ಮಾತನಾಡಬೇಕಾಗಿದೆ. ರೇಷ್ಮೆ ಬೆಲೆ ಹೆಚ್ಚಿದೆ, ಇದರಿಂದ ಬಟ್ಟೆ ನೇಯುವವರಿಗೆ ತೊಂದರೆಯಾಗಿದೆ, ಕಡಮೆಮಾಡಬೇಕು ಎಂದು ಹೇಳಿದರು. ಕಷ್ಟಪಟ್ಟು ದುಡಿದು ಸುಮಾರು ಒಂದು ತಿಂಗಳು ರಕ್ಷಣೆಮಾಡಿದರೆ 10-15 ಮಣ ಗೂಡು ದೊರೆಯುವುದು. ಅವರಿಗೆ ಸರಿಯಾದ ಪ್ರತಿಫಲವಿಲ್ಲದಿರುವಾಗ ಹೆಚ್ಚು ಬೆಲೆ ಬೇಡ ಎಂದರೆ ಹೇಗೆ ? ಈಗ ಗುಲ್ಬರ್ಗ, ಬಿದರೆ ಮುಂತಾದ ಕಡೆಗಳಲ್ಲಿ ಬರಗಾಲ ಪ್ರಾಪ್ತವಾಗಿದೆ. ರೇಷ್ಮೆ ಕೆಲವು ಕಡೆ ಬೆಳೆಯುತ್ತಿರುವುದರಿಂದ ಮತ್ತು ಅದಕ್ಕೆ ಬೆಲೆ ಹೆಚ್ಚಿರುವುದರಿಂದ ಬರಗಾಲವಿದ್ದರೂ ಕೆಲವರಿಗೆ ಅನುಕೂಲವಾಗಿದೆ. ಕೆಲವು ಕಡೆ ಎರಡಾಣೆ ಬೆಳೆ ಕೂಡ ಆಗಿಲ್ಲ, ಮಳೆಯೇ ಇಲ್ಲ, ಅಂಥ ಕಡೆ ರೇಷ್ಮೆ ಬೆಳೆಯುವುದರಿಂದ ಸ್ವಲ್ಪ ಅನುಕೂಲವಾಗಿದೆ. ಹಾಗಿರುವಾಗ ರೇಷ್ಮೆ ಬೆಲೆ ಕಡಮೆ ಮಾಡಬೇಕೆಂದು ಹೇಳುವುದು ಸಲ್ಲದು ಕೆಲವರಿಗೆ ಕೊಳ್ಳಲು ಶಕ್ತಿಯಿಲ್ಲ, ಅಂಥವರಿಗೆ ಸೊಸೈಟಿ ಮಾಡಿ ಅಥವ ಸಿಲ್ಕ್ ಫಿಲೇಚರಿನಲ್ಲಿ ಲೂಮ್ಸ್ ಜಾಸ್ತಿ ಮಾಡಿ ನೇಕಾರರಿಗೆ ಕೆಲಸ ಕೊಟ್ಟು ಅವರನ್ನು ಕಾಪಾಡಬೇಕೇ ಹೊರತು ಬೆಲೆ ಕಡಮೆ ಮಾಡಿದರೆ ನಿಜವಾಗಿಯೂ ಅದರಲ್ಲಿ ನಿರತರಾಗಿರುವವರಿಗೆ ಕೆಡಕು ಮಾಡಿದಂತಾಗುವುದು. ರೇಷ್ಮೆ ಕೈಗಾರಿಕೆ ಅಭಿವೃದ್ಧಿಯಾಗಲು ಅದರಮೇಲಿರುವ ಎಲ್ಲ ತೆರಿಗೆಗಳನ್ನೂ ತೆಗೆದುಹಾಕಬೇಕು. ಈ ಕೈಗಾರಿಕೆ ಅಭಿವೃದ್ಧಿಯಾದಾಗ ಯಾವ ತೆರಿಗೆ ಬೇಕಾದರೂ ಹಾಕಿ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಕೆ. ಎಂ ದೊರೆಸ್ವಾಮಿ ನಾಯ್ಡು (ಬೇತಮಂಗಲ).—ಸನ್ಮಾನ್ಯ ಅಧ್ಯಕ್ಷರೇ, ಅರ್ಥ ಸಚಿವರು ಮಂಡಿಸಿರುವ ಆಯವ್ಯಯ ಪಟ್ಟಿಯ ಬಗ್ಗೆ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಮೈಸೂರು ದೇಶದಲ್ಲಿ 8 ಜಿಲ್ಲೆಗಳಲ್ಲಿ ಹೆಚ್ಚು ಅಭಾವ ಪರಿಸ್ಥಿತಿ ಇದೆಯೆಂದು ಅಲ್ಲಿ ಮಾತ್ರ ಪರಿಹಾರ ಕಾರ್ಯಗಳನ್ನು ಕೈಕೊಂಡಿದ್ದಾರೆ, ಹೆಚ್ಚು ಜನರಿಗೆ ಕೆಲಸ ಕೊಡುತ್ತಿದ್ದಾರೆ. ಮೊದಲಿಂದಲೂ ಕೋಲಾರ ಜಿಲ್ಲೆ ಬರಗಾಲ ಪರಿಸ್ಥಿತಿಯನ್ನು ದುರಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲ. ಇದನ್ನು ಗಮನಿಸಿ ಅಲ್ಲೂ ಕೂಡ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು.

ವ್ಯವಸಾಯಕ್ಕೆ ಕೋಟ್ಯಾಂತರ ರೂಪಾಯಿ ಖರ್ಚುಮಾಡುತ್ತಿರುವುದಾಗಿ ತಿಳಿಸಿದ್ದಾರೆ ಆದರೆ ನಿಜವಾಗಿಯೂ ವ್ಯವಸಾಯಮಾಡುವವರಿಗೆ ಸರಿಯಾದ ಸಹಾಯ ದೊರೆಯುತ್ತಿಲ್ಲ.

(ಶ್ರೀ ಕೆ. ಎಂ. ದೊರೆಸ್ವಾಮಿ)

ಇದು ಎಲ್ಲರಿಗೂ ಗೊತ್ತಿರುವ ವಿಚಾರ. ದೇಶದಲ್ಲಿ ಸೇಕಡ 80 ಮಂದಿ ವ್ಯವಸಾಯಗಾರರಾಗಿದ್ದಾರೆಂದು ಲೆಕ್ಕದಲ್ಲಿದ್ದರೂ ಸೇಕಡ 20 ಮಂದಿ ಮಾತ್ರ ವ್ಯವಸಾಯಮಾಡುತ್ತಿದ್ದು ಉಳಿದ 80 ಜನರು ವ್ಯಾಪಾರ, ಬೇರೆ ನೌಕರಿ ಮುಂತಾದುವುಗಳಲ್ಲಿ ತೊಡಗಿದ್ದಾರೆ. ಇದರಿಂದ ಆಹಾರದ ಅಭಾವ ಹೆಚ್ಚುತ್ತಿದೆ. ಎಲ್ಲರಿಗೂ ಸುಖಜೀವನ ಸಾಗಿಸಬೇಕೆಂಬ ಹಂಬಲ ಜಾಸ್ತಿಯಾಗಿದೆ, ಇದರಿಂದ ವ್ಯವಸಾಯದ ಕೆಲಸಮಾಡುವವರಿಗೆ ಕಷ್ಟವಾಗಿದೆ. ಅನೇಕರು ವ್ಯವಸಾಯದ ಕೆಲಸ ಬಿಟ್ಟು ಬೇರೆ ಉದ್ಯೋಗಗಳಲ್ಲಿ ತೊಡಗುತ್ತಿದ್ದಾರೆ, ಅವರು ಪಟ್ಟಣಗಳಿಗೆ ಸುಖಜೀವನ ನಡೆಸಲು ಬರುತ್ತಿದ್ದಾರೆ. ಆದುದರಿಂದ ಇದನ್ನು ತಪ್ಪಿಸಿ ಆಹಾರದ ಕೊರತೆ ನೀಗಲು ಪ್ರತಿಯೊಂದು ತಾಲ್ಲೂಕಿನಲ್ಲೂ ವ್ಯವಸಾಯದ ಕಾಲೇಜನ್ನು ತೆರೆದು ಹೆಚ್ಚು ಜನರನ್ನು ಅಲ್ಲಿ ವಿದ್ಯಾವಂತರನ್ನಾಗಿ ಮಾಡಿ ಅಲ್ಲಿ ಕಲಿತ ತರುಣರ ಹಳ್ಳಿಗಳಲ್ಲಿ ನೆಲಸಿ ವ್ಯವಸಾಯಮಾಡುವಂತೆ ಪ್ರೋತ್ಸಾಹ ನೀಡಬೇಕು.

ಭೂಸಾರ ಸಂರಕ್ಷಣೆ ವಿಚಾರ. ಇದಕ್ಕೆ ಕೋಟಿಗಟ್ಟಲೆ ಹಣ ಖರ್ಚಾಗುತ್ತಿದೆ, ರೈತರು ಇದರ ಬಗ್ಗೆ ಖರ್ಚುಮಾಡುವ ಹಣವನ್ನು ವಾಪಸು ಕೊಡಬೇಕಾಗುವುದೆಂದು ತಿಳಿಯದೆ ಅಭಾವ ಕಾಮಗಾರಿಗಳ ಹಣದಿಂದ ಈ ಕೆಲಸಮಾಡುತ್ತಿದ್ದಾರೆಂದು ಭಾವಿಸಿದ್ದಾರೆ. ಸರ್ಕಾರದವರು ಮುಂದೆ ಒಡ್ಡುಗಳು ಹಾಕುತ್ತಾ ಹೋಗುತ್ತಿದ್ದಾರೆ; ಹಿಂದುಗಡೆ ಒಡ್ಡುಗಳನ್ನು ಹೊಡೆದು ಚದರ ಮಾಡುತ್ತಾರೆ, ಇದರಿಂದ ಲಕ್ಷಗಟ್ಟಲೆ ಹಣ ಪೋಲಾಗುವುದು. ಮೊದಲು ಹಳ್ಳ ಕಡೆ ಮಾಡಿರುವ ಕೆಲಸಗಳನ್ನು ನೋಡಿದರೆ ಇದು ಗೊತ್ತಾಗುವುದು. ಇದಕ್ಕೆ ಮಾಡುವ ಖರ್ಚನ್ನು ನೀರಾವರಿ ಅಂದರೆ, ಕೆರೆ ಕಟ್ಟೆ ನಾಲೆ ಒಡ್ಡು ಮುಂತಾದುವುಗಳಿಗೆ ಉಪಯೋಗಿಸಿದರೆ ನೀರಾವರಿಗೆ ಅನುಕೂಲವಾಗುವುದು, ಮೈನರ್ ಇರಿಗೇಷನ್‌ಗೆ ಒದಗಿಸಿರುವ ಹಣ ಸಾಲದು.

ಸಹಕಾರ ಸಂಘ. ಇವು ಮೊದಲಿನಿಂದಲೂ ಸರಿಯಾಗಿ ಕೆಲಸಮಾಡುತ್ತಿಲ್ಲ. ಅನೇಕ ಸಂಘಗಳು ದಿವಾಳಿಯಾಗಿವೆ. ಈ ಸಂಘಗಳಲ್ಲಿ ಸಾಲ ತೆಗೆದುಕೊಂಡಿರುವುದನ್ನು ಐದಾರು ವರ್ಷಗಳಾದರೂ ವಸೂಲುಮಾಡುತ್ತಿಲ್ಲ. ವಸೂಲಿ ಕ್ರಮ ಕಾಲಕ್ಕೆ ಸರಿಯಾಗಿ ತೆಗೆದುಕೊಳ್ಳದೆ ಒಂದೇ ಸಲ ಜಪ್ತಿ ವಗೈರೆ ಮಾಡಿ ಪಂಪುಸೆಟ್ಟು, ದನಕರುಗಳು ಮುಂತಾದುವುಗಳನ್ನು ವಶಪಡಿಸಿಕೊಂಡು ಅವಮಾನ ಮಾಡುತ್ತಿದ್ದಾರೆ. ಕಾಲು ಭಾಗ, ಅರ್ಧ ಭಾಗ ಪಾವತಿ ಮಾಡಿದರೂ, ಜಪ್ತಿ ಮಾಡಿರುವ ಸ್ವತ್ತುಗಳನ್ನು ವಾಪಸ್ ಕೊಡಿ ಎಂದರೂ ಸಹ ವಾಪಸು ಕೊಡದೆ ತೊಂದರೆ ಕೊಡುತ್ತಾ ಇರುತ್ತಾರೆ. ವರ್ಷಗಟ್ಟಲೆ ಸುಮ್ಮನೆ ಇದ್ದುಬಿಟ್ಟು ಒಂದೇ ಸಲ ವಸೂಲಿಗೆ ಹೋಗಿ, ಮಳೆಬೆಳೆ ಇಲ್ಲದ ಕಾಲದಲ್ಲಿ ಈ ರೀತಿ ತೊಂದರೆ ಕೊಟ್ಟು ವಸೂಲಿ ಮಾಡುವುದು ಆಶ್ಚರ್ಯವಾಗಿದೆ. 2-3 ಕಂತುಗಳ ಮೂಲಕ ವಸೂಲು ಮಾಡಲು ಆದೇಶ ಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದೇಶದಲ್ಲಿ ಅರಣ್ಯ ಸಂಪತ್ತು ದಿನೇ ದಿನೇ ಕ್ಷೀಣವಾಗುತ್ತಿದೆ. ಅರಣ್ಯ ಸಂಪತ್ತನ್ನು ಹೆಚ್ಚು ಮಾಡಲು ಪ್ರೋತ್ಸಾಹಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಮತ್ತು ದೇಶದಲ್ಲಿ ಪಶುಸಂಪತ್ತೂ ಕ್ಷೀಣವಾಗುತ್ತಿದೆ. ದನಗಳ ಮೇವಿಗಾಗಿ ಹೊಸ ಹುಲ್ಲು ಬೆಳೆಯಲಿಕ್ಕೆ ಬಾವಿಗಳನ್ನು ತೆಗೆಯುವುದಕ್ಕೆ ಹಣದ ಸಹಾಯ ಪಡೆಯಲು ಅವಕಾಶವನ್ನು ಮಾಡಿಕೊಡಬೇಕು. ಇದಕ್ಕೆ ಸಬ್ಸಿಡಿ ಮೂಲಕ ಧನ ಸಹಾಯ ಮಾಡಿ ಪ್ರತಿಯೊಂದು ಹೋಬಳಿಯಲ್ಲಿಯೂ ಬಾವಿಗಳನ್ನು ತೆಗೆಯಲು ಹೆಚ್ಚಾಗಿ ಹಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಪಿ ಹೆಗರೆ (ಚಿಕ್ಕೋಡಿ) —ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಮಾನ್ಯ ಅರ್ಥ ಸಚಿವರು ಈ ಸದನದ ಮುಂದೆ ಇಟ್ಟ 1973-74 ನೇ ಸಾಲಿನ ಆಯವ್ಯಯ ಪತ್ರವನ್ನು ನಾನು ಸ್ವಾಗತಿಸುತ್ತಾ ಈ ಬಗ್ಗೆ ಕೆಲವು ಸಲಹೆಗಳನ್ನು ಮಾಡಬಯಸುತ್ತೇನೆ. ಈ ಈ ಆಯವ್ಯಯ ಪಟ್ಟಿಯ ವಿಷಯ ಬಗ್ಗೆ ಮಾತನಾಡುವ ಮೊದಲು ಈ ವರ್ಷ ನಮ್ಮ ರಾಜ್ಯದಲ್ಲಿ ತೊಂದರೆಗೀಡಾದ ಬರಗಾಲದ ಪರಿಸ್ಥಿತಿಯ ವಿಷಯ ಮಾತನಾಡಲು ಬಯಸುತ್ತೇನೆ. ಬರಗಾಲದ ವಿಷಯದಲ್ಲಿ ವಿರೋಧಿ ಮಿತ್ರ ಸದಸ್ಯರು ಕಟುವಾಗಿ ಟೀಕಿಸಿದ್ದಾರೆ. ಇದು ನೈಸರ್ಗಿಕ ಕೋಪ ನಾವು ಎಂದೂ ನೋಡದ ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಈ ಬರಗಾಲದಲ್ಲಿ ತೊಂದರೆಗೀಡಾದ ಜನಕ್ಕೆ, ಸಂಕಷ್ಟದಲ್ಲಿರುವವರಿಗೆ ಆಹಾರ ಒದಗಿಸುವುದು, ನೀರು ಒದಗಿಸುವುದು, ದನಗಳಿಗೆ ಮೇವು ಒದಗಿಸುವುದು, ಈ ಎಲ್ಲವನ್ನೂ ಒದಗಿಸುವುದರಲ್ಲಿ ಸರ್ಕಾರ ಹಿಂದೆ ಬಿದ್ದಿಲ್ಲ, ಸರ್ಕಾರ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿದೆ. 23 ಕೋಟಿ ರೂಪಾಯಿ ತನಕ ಹಣವನ್ನು ಖರ್ಚು ಮಾಡಿದೆ. ಇವತ್ತು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದು ಸದಸ್ಯರಿಗೆ ಗೊತ್ತಿರಬೇಕು, ನಮ್ಮ ತಾಲ್ಲೂಕಿನಲ್ಲಿ ನೀರು ಇಲ್ಲ ಎಂದು ಹೇಳಿದ ತಕ್ಷಣ, ಎಲ್ಲಿ ನೀರು ಇದೆಯೋ ಅಲ್ಲಿಂದ

ತಂದು ಒದಗಿಸುತ್ತೇವೆಂದು ಮಂತ್ರಿಗಳು ವಚನ ಕೊಟ್ಟಿದ್ದಾರೆ. ಇಷ್ಟು ಕಾರ್ಯವನ್ನು ನಮ್ಮ ಸರ್ಕಾರದವರು ಮಾಡಿದರೂ ಕೂಡ ಏನೂ ಕಾರ್ಯ ಮಾಡಿಲ್ಲ ಎಂದು ಟೀಕಿಸುವುದು ಸರಿಯಲ್ಲ. ಯಾವ ಸರ್ಕಾರವೂ ಕೂಡ ಎಲ್ಲರನ್ನು ಸುಖವಾಗಿಡುವುದಕ್ಕೆ ಸಾಧ್ಯವಿಲ್ಲ. ದೇವರಿಂದಲಾದರೂ ಸಾಧ್ಯವಿಲ್ಲ. ಮಳೆಯಿಲ್ಲದ ಹೊರತು ಜನರಿಗೆ ಸುಖ ಸಂತೋಷ ಕೊಡಲು ಸಾಧ್ಯವಿಲ್ಲ. ಈ ಆಯವ್ಯಯ ಪತ್ರದ ವಿಷಯದಲ್ಲಿ ವಿಶೇಷವಾಗಿ ಕೆಲವೊಂದು ಮಾತುಗಳನ್ನು ಆಡಲು ಬಯಸುತ್ತೇನೆ. ಇದರಲ್ಲಿ ಮೊದಲನೆಯ ವಿಚಾರ, ಈ ಸರ್ಕಾರ ಘೋಷಿಸಿದ್ದು ಸಮಾಜವಾದವನ್ನು ಜಾರಿಗೆ ತರುತ್ತೇವೆ, ದಾರಿದ್ರ್ಯವನ್ನು ದೂರ ಮಾಡುತ್ತೇವೆ, ಎಂದು. ಈ ವಿಷಯದಲ್ಲಿ ನಮ್ಮ ಸರ್ಕಾರದವರು ಜನರಿಗೆ ಏನು ಸಹಾಯ ಮಾಡಿದ್ದಾರೆ ಎಂದು ನೋಡುವುದಾದರೆ, ಕುಟುಂಬದ ಪೆನ್‌ಷನ್ ವೇತನವನ್ನು 30 ರೂಪಾಯಿ ಇದ್ದುದನ್ನು 40 ರೂಪಾಯಿಗೆ ಏರಿಸಿದ್ದಾರೆ. ಕೆಳಗಿನ ಜನಗಳಿಗೆ ಇನ್ನೂ ಸೌಲಭ್ಯಗಳನ್ನು ಮಾಡುವ ಯೋಚನೆ ನಮ್ಮ ಸರ್ಕಾರದವರಿಗೆ ಇದೆ. ಇದು ಬಡತನವನ್ನು ನಿರ್ಮೂಲನ ಮಾಡುವುದಕ್ಕೆ ಒಂದು ಉಪಾಯ. 1200 ರೂಪಾಯಿ ಒಳಗಿನ ನೌಕರರಿಗೆ ತುಟ್ಟಿ ಭತ್ಯವನ್ನು ಕೇಂದ್ರ ಸರ್ಕಾರದ ನೌಕರರ ಜೊತೆಗೆ ಸೇರಿಸಿದ್ದಾರೆ. ಬಡತನವನ್ನು ನಿರ್ಮೂಲನ ಮಾಡಬೇಕಾದರೆ, ಸಮಾಜವಾದವನ್ನು ಜಾರಿಗೆ ತರಬೇಕಾದರೆ, ಕೆಳಗಿನ ವರ್ಗದವರು ಅಭಿವೃದ್ಧಿಯಾಗಬೇಕು. ಈ ಮಾತನ್ನು ಮಹಾತ್ಮ ಗಾಂಧಿಯವರು ಹೇಳಿದರು, ಯಾವ ಕಾರ್ಯ ಮಾಡಿದರೂ ಸಹ ಬಡ ರೈತ, ಬಡ ಕೂಲಿಗಾರರು ಏನು ಇದ್ದಾರೆ ಅವರನ್ನು ಅಭಿವೃದ್ಧಿ ಮಾಡುವುದನ್ನು ವಿಚಾರ ಮಾಡಿ ಆ ಕೆಲಸವನ್ನು ಮಾಡಿರಿ. ಈಗ ಸಮಾಜವಾದವನ್ನು ನೀವು ಘೋಷಣೆ ಮಾಡಿದ್ದೀರಿ, ಬಡತನ ನಿರ್ಮೂಲನ ಮಾಡುವ ಘೋಷಣೆ ಮಾಡಿದ್ದೀರಿ, ಕೆಳಗಿನ ವರ್ಗದ ಜನಕ್ಕೆ ಭತ್ಯ ಹೆಚ್ಚು ಮಾಡಿ ಅವರದನ್ನೇ ಆಧರಿಸಿ 1200 ರೂಪಾಯಿಗಳ ಪಗಾರದವರಿಗೂ ಕೂಡ ಭತ್ಯವನ್ನು ಹೆಚ್ಚು ಮಾಡಿರುವುದರ ಅರ್ಥ ಏನು ಎಂದು ಗೊತ್ತಾಗುವುದಿಲ್ಲ.

ಸರ್ಕಾರ ನೀರಾವರಿ ವಿಷಯದಲ್ಲಿ, ವಿದ್ಯುಚ್ಛಕ್ತಿ ವಿಷಯದಲ್ಲಿ ಸಾಕಷ್ಟು ಯೋಜನೆಗಳನ್ನು ಕೈಗೊಂಡಿದೆ. ಸರ್ಕಾರದ ಯೋಜನೆಯ ಪ್ರಕಾರ ಐದು ವರ್ಷಗಳಲ್ಲಿ ನಮ್ಮಲ್ಲಿ ಏನೂ ವಿದ್ಯುತ್ ಇಲ್ಲದ ಗ್ರಾಮಗಳು ಇವೆಯೋ ಆ ಎಲ್ಲಾ ಗ್ರಾಮಗಳಿಗೂ ವಿದ್ಯುತ್ ಕೊಡುವ ಭರವಸೆಯನ್ನು ಕೊಟ್ಟಿದ್ದಾರೆ. ಅದೇ ರೀತಿ ನೀರಾವರಿ ಯೋಜನೆಯನ್ನು ಕೈಗೊಂಡಿದ್ದಾರೆ. ಭಾರಿ ನೀರಾವರಿ ಯೋಜನೆ ಮಧ್ಯಮ ತರಗತಿಯ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು, ಈಗ ಏನು ನೀರಾವರಿ ಸೌಲಭ್ಯ ಇದೆಯೋ ಅದಕ್ಕಿಂತ ಮೂರರಷ್ಟು ನೀರಾವರಿ ಕೊಡುವ ಯೋಜನೆಯನ್ನು ನಮ್ಮ ಸರ್ಕಾರದವರು ಇಟ್ಟುಕೊಂಡಿದ್ದಾರೆ. ಇಷ್ಟಾದರೂ ಸಹಿತ ನಾವು ಒಂದು ವಿಚಾರವನ್ನು ಮಾಡಬೇಕಾಗುತ್ತದೆ, ಇಷ್ಟು ನಮ್ಮ ದೇಶದಲ್ಲಿ ಪ್ರಗತಿಯನ್ನು ಸಾಧಿಸಿದರೂ ಕೂಡ ಈ ಸೌಲಭ್ಯ ಯಾರಿಗೆ ಹೋಗುತ್ತಿದೆ ? ಇದನ್ನು ನಾವು ಸ್ವಲ್ಪ ವಿಚಾರ ಮಾಡಬೇಕು, ಸರ್ಕಾರದವರು ವಿಚಾರ ಮಾಡಬೇಕಾಗುತ್ತದೆ. ಮತ್ತು ನಾವೆಲ್ಲರೂ ವಿಚಾರ ಮಾಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಕಳೆದ 25 ವರ್ಷಗಳಲ್ಲಿ ಏನೂ ಪ್ರಗತಿಯಾಗಿಲ್ಲ ಎಂದು ಯಾರೂ ಹೇಳಲಾರರು. ಸೌಲಭ್ಯಗಳು ಒದಗಿವೆ, ಆದರೆ ಅವುಗಳು ಆಸ್ತಿವಂತರಿಗೆ, ಹಣ ಇದ್ದವರಿಗೆ ಹೋಗಿವೆ. ಮೂಲಭೂತವಾದ ಸಮಸ್ಯೆಯಾದ ಬಡತನವನ್ನು ನಿರ್ಮೂಲ ಮಾಡುತ್ತೇವೆ ಎನ್ನುವ ಘೋಷಣೆಯನ್ನು ಮಾಡಿದ್ದೇವೆ, ಸಮಾಜವಾದವನ್ನು ತರುತ್ತೇವೆ ಎನ್ನುವ ಘೋಷಣೆ ಇದೆ, ಆದರೆ ಈ ಘೋಷಣೆಗೆ ಅನುಗುಣವಾಗಿ ಏನೂ ಆಗುತ್ತಿಲ್ಲ. ಇದು ಅತ್ಯಂತ ದುಃಖದ ಸಂಗತಿ. ಯಾರಿಗೆ ಬಡತನ ಇದೆ ಅವರು ಬಡವರಾಗಿಯೇ ಇರುತ್ತಾರೆ, ಶೇಕಡ 40 ರಷ್ಟು ಜನಕ್ಕೆ ಎರಡು ಹೊತ್ತು ಊಟಕ್ಕೆ ಸಿಕ್ಕುವುದಿಲ್ಲ. ಶೇಕಡ 60 ರಷ್ಟು ಜನ ತೊಂದರೆಯಲ್ಲಿದ್ದಾರೆ. ಇಂಥ ಜನರ ಪ್ರಶ್ನೆಯನ್ನು ಹೇಗೆ ಬಿಡಿಸಿಕೊಳ್ಳಬಹುದು ಎಂದು ವಿಚಾರ ಮಾಡಬೇಕು. ಇದರ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆಯೇ ? ಇಲ್ಲಿಯತನಕ ಲ್ಯಾಂಡ್ ರಿಫಾರಂ ಮಾಡಬೇಕು ಎಂದು ಸರ್ಕಾರದ ಜಮೀನು ಎಲ್ಲಿ ಇದೆಯೋ ಅಲ್ಲಿ ಭೂಮಿ ಇಲ್ಲದವರಿಗೆ ಕೊಡಬೇಕು, ಉತ್ಪಾದನೆ ಹೆಚ್ಚಿಗೆ ಮಾಡಬೇಕು ಎಂದು ಮಾತನಾಡುತ್ತಾ ಬಂದಿದ್ದೇವೆ. ನಮ್ಮ ಲ್ಯಾಂಡ್ ರಿಫಾರಂ ತಂದರೂ ಸಹಿತ ಭೂಹೀನ ಜನರಿಗೆ, ಕೂಲಿಗಾರರಿಗೆ, ಒಂದು ಗುಂಟೆ ಜಮೀನು ಸಿಕ್ಕುವುದಿಲ್ಲ ಎಂದು ಸ್ಪಷ್ಟವಾಗಿದೆ. ಆ ಜನಕ್ಕೆ ಏನಾದರೂ ಉಪಾಯ ಮಾಡಲೇಬೇಕು, ಹಾಗಾದರೆ ಏನು ಮಾಡಬೇಕು, ಇದಕ್ಕೆ ಉಪಾಯ ಏನೆಂದರೆ, ಕೂಲಿ ಮಾಡುವವನ ಪಗಾರವನ್ನು ಹೆಚ್ಚು ಮಾಡಬೇಕು, ಉಪಜೀವನಕ್ಕೆ ಏನಾದರೂ ಸಾಧನೆಯನ್ನು ತೋರಿಸಿಕೊಡಬೇಕು. ನಮ್ಮ ದೇಶದಲ್ಲಿ ಸಮಾಜವಾದವನ್ನು ತರಬೇಕು ಎಂದು ಸರ್ಕಾರ ಉದ್ದೇಶ. ಆದರೆ, ಜಾತಿ ವಗ್ಗೈರೆ, ಸ್ವಜನ ಪಕ್ಷಪಾತ, ಇವೆಲ್ಲ ಆ ಕಾರ್ಯದಲ್ಲಿ ಅಡ್ಡಿಯಾಗುತ್ತಲಿವೆ ಈ ಆತಂಕಗಳನ್ನು ಸರ್ಕಾರದವರು ನಿರ್ಮೂಲನ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದನ್ನು ಸರ್ಕಾರದವರು ನಿರ್ಮೂಲನ ಮಾಡುವುದಕ್ಕೆ

(ಶ್ರೀ ಪಿ. ಪಿ. ಹೆಗರೆ)

ಹೋಗುವ ಮೊದಲು, ನಮ್ಮ ಹಿಂದೂಸ್ಥಾನದಲ್ಲಿ ಈ ಅಸ್ಪೃಶ್ಯತೆ ಏನು ಇದೆ, ಒಬ್ಬ ಮನುಷ್ಯನನ್ನು ಇನ್ನೊಬ್ಬ ಮನುಷ್ಯ ಮುಟ್ಟಕೂಡದು ಎಂದು ಏನು ಇದೆ ಇದು ಬಹಳ ದೊಡ್ಡದು, ಇದನ್ನು ನಿವಾರಣೆ ಮಾಡಬೇಕು. ಇದಕ್ಕಾಗಿ ಮಾನ್ಯ ಮಂತ್ರಿಗಳು ಬಡ್ಜೆಟ್ಟಿನಲ್ಲಿ 50 ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರಿಂದ ಏನಾಗುತ್ತದೆ ? ಸರ್ಕಾರದವರು ಅಸ್ಪೃಶ್ಯತೆ ನಿವಾರಣೆಯ ಬಗ್ಗೆ ಕಾಯಿದೆ ಮಾಡಿದ್ದಾರೆ, ಅದರಿಂದ ಏನೂ ಸಾಧನೆಯಾಗಲಿಲ್ಲ. ಆ ಬಗ್ಗೆ ನಮ್ಮ ಲೀಡರ್ ಅವರು ಕಳೆದ ವರ್ಷದಲ್ಲಿ ಸುಮಾರು 50 ಕೇಸುಗಳನ್ನು ರಿಜಿಸ್ಟರ್ ಮಾಡಿದ್ದೇವೆ ಎಂದು ಈ ಸದನದಲ್ಲಿ ಹೇಳಿದರು. ಈ ರೀತಿಯಿಂದ ಅಸ್ಪೃಶ್ಯತೆ ಹೋಗಲು ಸಾಧ್ಯವಿಲ್ಲ. ಏನು ಮಾಡಬೇಕುಎಂಬುದನ್ನು ನೋಡಬೇಕು. ಇಲ್ಲಿ ನನಗೆ ಲಿಯೋ ಟಾಲಸ್ಟಾಯ ಅವರು ಹೇಳಿದ ಮಾತು ನೆನಪು ಬರುತ್ತದೆ. ಈಗ ಜನ ಸೂರ್ಯ, ಚಂದ್ರರ ಮೇಲೆ ಹೋಗುವ ಕಾಲ ಬಂದಿದೆ. ಸೈನ್ಸ್‌ನ ಪ್ರಗತಿ ಇಷ್ಟರ ಮಟ್ಟಿಗೆ ಆಗಿದೆ, ಇದನ್ನು ನೆನಸಿ ಅವರು ಇನ್ನು ಮೇಲೆ ಎಲ್ಲ ಶಾಸ್ತ್ರವನ್ನು ಬಂದು ಮಾಡಿರಿ, ಒಬ್ಬ ಮನುಷ್ಯ ಇನ್ನೊಬ್ಬನನ್ನು ಹೇಗೆ ನೋಡಿಕೊಳ್ಳಬೇಕು, ಅವನಲ್ಲಿ ಹೇಗೆ ನಡೆದುಕೊಳ್ಳಬೇಕು ಎನ್ನುವ ಶಾಸ್ತ್ರವನ್ನು ಶೋಧನೆ ಮಾಡಿರಿ. ಇದು ಭಾರತೀಯರಿಗೆ ಉದ್ದೇಶಿಸಿ ಹೇಳಿದಂತಾಗಿದೆ. ಇದನ್ನು ಭಾರತೀಯರು ವಿಚಾರ ಮಾಡಬೇಕು. ಬಡತನ ನಿರ್ಮೂಲನ ಮಾಡಬೇಕು ಎನ್ನುವ ಘೋಷಣೆ ಮಾಡಿದ್ದೇವೆ. ಬಡತನ ನಿರ್ಮೂಲ ಮಾಡಬೇಕಾದರೆ ಒಂದೇ ಒಂದು ದಾರಿ ಸಮಾಜವಾದ. ನಾವು ನೀವು ಹೋಗತಕ್ಕಂಥ ದಾರಿಯಲ್ಲಿ ಕೆಲವರು ಅಸಮಾಧಾನ ಪಟ್ಟಿದ್ದಾರೆ. ನಮ್ಮ ಮುಂದಿನ ಯೋಜನೆ ಪ್ರಕಾರ ಯಾವನಲ್ಲಿ ಆಸ್ತಿ ಇದೆಯೋ ಯಾವನ ಆದಾಯ ಹೆಚ್ಚಿಗೆ ಇದೆಯೋ ಆ ಆಸ್ತಿ ಮೇಲೆ ಮಿತಿ ಹಾಕಲೇಬೇಕು. ಮತ್ತು ಆದಾಯದ ಮೇಲೆ ಮಿತಿ ಹಾಕಲೇ ಬೇಕಾಗುತ್ತದೆ. ಬಡತನ ನಿರ್ಮೂಲ ಮಾಡುವ ಸಲುವಾಗಿ ಇದನ್ನು ಮಾಡಬೇಕು. ಇನ್ನು ನಾನು 2—3 ಸೂಚನೆಗಳನ್ನು ಮಾಡಬಯಸುತ್ತೇನೆ. ಈಗ ನಮ್ಮ ಭೂಕಂದಾಯ ಎಷ್ಟೋ ಕಾಲದ ಹಿಂದೆ ನಮ್ಮ ಮೇಲೆ ಹಾಕಿದ್ದಾರೆ ಈಗ ಭೂಮಿ ಉತ್ಪತ್ತಿ ಎಷ್ಟು ಪಟ್ಟು ಹೆಚ್ಚಾಗಿದೆ ಕಾರಣ ಅದಕ್ಕೆ ಅನುಗುಣವಾಗಿ ಭೂಕಂದಾಯ ಹೆಚ್ಚಿಗೆ ಮಾಡಬೇಕು ಆಹಾರ ಧಾನ್ಯ ಮತ್ತು ಜೀವನಕ್ಕೆ ಅವಶ್ಯಕವಾಗಿ ಬೇಕಾದ ಎಲ್ಲಾ ವಸ್ತುಗಳ ಮೇಲೆ ಸರ್ಕಾರ ಹತೋಟಿ ಇಟ್ಟುಕೊಳ್ಳಬೇಕು. ಬಡ ಜನರಿಗೆ ತೊಂದರೆಯಾಗದಂತೆ ಆಹಾರ ಧಾನ್ಯಗಳು ಅವರಿಗೆ ಸಿಕ್ಕುವಂತೆ ಮಾಡಬೇಕು. ಬಡಜನರಿಗೆ ಯಾವತ್ತು ಸರ್ವೀಸಿನಲ್ಲಿ ಅವಕಾಶ ಸಿಕ್ಕಿಲ್ಲ. ಹರಿಜನಗಿರಿಜನರಿಗೆ ಸರಿಯಾದ ಅವಕಾಶ ಸಿಕ್ಕಿಲ್ಲ. ಈಗ ಸರ್ಕಾರದ ಖಾತೆಯಲ್ಲಿ ಸಹ ನಾಲ್ಕನೇ ದರ್ಜೆಗಳಲ್ಲಿ ಸಹ 15 ಪರ್ಸೆಂಟ್ ಕೊಟ್ಟಿಲ್ಲ. ಈ ರೀತಿ ಅನ್ಯಾಯ ಇರುವಾಗ ಪ್ರೈವೇಟ್ ಇಂಡಸ್ಟ್ರೀಸ್, ಪ್ರೈವೇಟ್ ಶಾಲಾ ಸಂಸ್ಥೆಗಳಲ್ಲಿ ಇನ್ನು ಸಾಕಷ್ಟು ಸ್ಥಾನ ಕೊಟ್ಟಿಲ್ಲ. ಸರ್ಕಾರ ಕಟ್ಟುನಿಟ್ಟಾಗಿ ನಿರ್ಧಾರ ಮಾಡಬೇಕು. ಯಾರಿಗಾದರೂ ಪ್ರೈವೇಟ್ ಶಾಲೆಗಳಿಗೆ ಮತ್ತು ಕಾಲೇಜುಗಳಿಗೆ ಉದ್ಯಮಗಳಿಗೆ ಲೈಸೆನ್ಸ್ ಕೊಡುವ ಮಟ್ಟದಲ್ಲಿ ಈ ಹರಿಜನಗಿರಿಜನ ಇಷ್ಟು ಪರ್ಸೆಂಟ್ ಕೊಟ್ಟರೆ ಲೈಸೆನ್ಸ್ ಕೊಡುತ್ತೇವೆ ಇಲ್ಲದಿದ್ದರೆ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕು. ಕೊನೆಗೆ ನೋಡಿದರೆ ಜಾತಿ ಧರ್ಮ ಬಹಳ ದಿವಸ ಉಳಿಯಲಾರದು. ಧರ್ಮ ಅತಿರೇಕವಾದ್ದರಿಂದ ಪಾಕೀಸ್ತಾನವಾಯಿತು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷಣಿಯವರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಕೆ. ಕುಲಕರ್ಣಿ (ನವಲಗುಂದ).—ಮಾನ್ಯ ಅಧ್ಯಕ್ಷರೇ, ಈ ವರ್ಷದ ಆಯವ್ಯಯದ ಬಗ್ಗೆ ವಿರೋಧಿಸಿ ನಾನು ನಾಲ್ಕು ಸೂಚನೆಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಮೊದಲನೆಯದಾಗಿ ನಮ್ಮ ತಾಲ್ಲೂಕು ಧಾರವಾಡ ಜಿಲ್ಲೆಯಲ್ಲಿ ಕ್ಷಾಮ ಪೀಡಿತ ಪ್ರದೇಶಗಳಿಗೆ ಒಂದು ಅಗದಿ ವರ ಮಲಪ್ರಭಾ ಯೋಜನೆ. ಈ ಮಲಪ್ರಭಾ ಯೋಜನೆ ಆದಷ್ಟು ತೀವ್ರಗತಿಯಿಂದ ಆಗಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅದು ಈಗ ಸದ್ಯ ಕಾರ್ಯ ನಡೆದಿದೆ. ಬಲದಂಡೆ ಕಾಲುವೆ ಕಾರ್ಯ ಆದಷ್ಟು ಬೇಗ ನಮ್ಮ ನವಲಗುಂದ ತಾಲ್ಲೂಕಿಗೆ ಬಹಳ ಉಪಯೋಗವಾಗುತ್ತದೆ ಅದರ ಸಲುವಾಗಿ ಬಲದಂಡೆ ಕಾಲುವೆ ಕಾರ್ಯ ಆದಷ್ಟು ತೀವ್ರಗತಿಯಿಂದ ಕೈಗೆದುಕೊಳ್ಳಬೇಕು. ಕುಡಿಯುವ ನೀರಿನ ಸಲುವಾಗಿ ಇವೊತ್ತಿನ ದಿವಸ ಸ್ವತಃ ನಮ್ಮ ತಾಲ್ಲೂಕಿನಲ್ಲಿ ಒಂದು ಪರಿಸ್ಥಿತಿ ಉಂಟಾಗಿದೆ. ಏತಕ್ಕೆಂದರೆ ಅಲ್ಲಿ ಬಾವಿಗಳನ್ನು ತೆಗೆದರೂ ಸವಳು ನೀರು ಇರುತ್ತದೆ. ಅದರ ಸಲುವಾಗಿ ನಮ್ಮ ತಾಲ್ಲೂಕಿನಲ್ಲಿ ಕೆರೆಗಳಿಂದ ಕುಡಿಯುವ ನೀರಿನ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ತಾವು ಅಲ್ಲಿಗೆ 1.5 ಕೋಟಿ ರೂಪಾಯಿ ಭಾವಿ ಸಲುವಾಗಿ ಇಟ್ಟಿದ್ದೀರಿ. ತಾವು ಅದನ್ನು ತಮ್ಮ ಬಡ್ಜೆಟ್‌ನೊಳಗೆ ನಮೂದು ಮಾಡಬೇಕು. ಅದರಲ್ಲಿ ಕುಡಿಯುವ ನೀರಿನ ಸಲುವಾಗಿ ನಮ್ಮ ತಾಲ್ಲೂಕಿಗೆ ಎಷ್ಟೋ ದಿವಸಗಳ ಲೆಕ್ಕದ

ಪ್ರಕಾರ ಇದು ದೊಡ್ಡ ಊರು ಅಣ್ಣಿಗೇರಿ. ಯಾವ ಹಣ ಇದುವರೆಗೆ ಖರ್ಚು ಮಾಡಿಲ್ಲ. ಆದಷ್ಟು ತೀವ್ರಗತಿಯಿಂದ ಸರ್ಕಾರ ಇದನ್ನು ಮನಸ್ಸಿಗೆ ತೆಗೆದುಕೊಂಡು ಕುಡಿಯುವ ನೀರಿನ ಬಗ್ಗೆ ಹಣವನ್ನು ಒದಗಿಸಬೇಕು. ಏನಾದರೂ ಸೌಕರ್ಯ ಬೇಗ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹುಡುಗರಿಗೆ ಸರ್ಕಾರಿ ಬೋರ್ಡಿಂಗ್‌ನಲ್ಲಿ ಈಗ 30 ರಿಂದ 40 ರೂಪಾಯಿಗೆ ಏರಿಸಿದೆ. ಆದರೆ 40 ರೂಪಾಯಿ ಸಾಲುವುದಿಲ್ಲ. ಇವೊತ್ತಿನ ದಿವಸ ಈ 40 ರೂಪಾಯಿ ಯಾವ ಕಾಲದಲ್ಲೋ ಏರಿಸಬೇಕಿತ್ತು ಈಗ 40 ರೂಪಾಯಿ ಮಾಡಿದ್ದಾರೆ ಇದು ಸಾಲುವುದಿಲ್ಲ. ಅಗದಿ ಕನಿಷ್ಟ ಪಕ್ಷ 50—60 ರೂಪಾಯಿ ಹುಡುಗರಿಗೆ ಕೊಟ್ಟರೆ ಅದು ಅನುಕೂಲವಾಗುತ್ತದೆ.

ಇನ್ನು ನವಲಗುಂದ ತಾಲ್ಲೂಕಿನೊಳಗೆ ನೇಕಾರ ಜನರು ಇದ್ದಾರೆ ಆದರಲ್ಲಿ ನರಗುಂದದಲ್ಲಿ ಸರ್ಕಾರೀ ಗೋಡೌನ್ ಮಾಡಿ ನೂಲನ ವಿತರಣೆ ಮಾಡಬೇಕು ಎನ್ನುವ ಬಗ್ಗೆ ಸರ್ಕಾರದ ಮುಂದೆ ಸೂಚನೆ ಇಡುತ್ತೇನೆ. ಈ ಮನೆಯಲ್ಲಿ ನಡೆದಂತಹ ಚರ್ಚೆಯಲ್ಲಿ ಮಸ್ಕಿಟ್ ವಿಚಾರ ತೆಗಿದಿದ್ದಾರೆ, ಹುಬ್ಬಳ್ಳಿ ಧಾರ್‌ವಾರ್ ಕಾರ್ಪೊರೇಷನ್‌ನಲ್ಲಿ ಮಸ್ಕಿಟೋ ಕಂಟ್ರೋಲ್ ಮಾಡುವ ಸಲುವಾಗಿ ಯೋಜನೆಯನ್ನು ಇದರ ಜೊತೆಯಲ್ಲಿ ಸೇರಿಸಿಕೊಳ್ಳಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† **Sri A. M. BELLIAPPA** (Mercara).—Madam Speaker, while supporting the Budget I thank for you having given me this opportunity to speak on the Budget placed by the Hon'ble Minister for Finance for the year 1973-74. From the last seven days we have been hearing speeches for and against the Budget presented by the Hon'ble Finance Minister. Many friends of mine on this side have said that it is a socialistic budget. But very strangely enough and surprisingly also, some of the friends from the Opposition have stated that it is non-socialistic, more exceptionally Sri Konandur Lingappa called it non-socialistic, because according to him not a single word 'socialism' is mentioned in the entire Budget. I am sorry, Madam, that some of the Opposition members, who have criticised this budget, have not realised the spirit with which this Budget is drafted. There are certain things in the Budget which goes to show that the budget is entirely socialistic. Which is the Government which has framed the scheme of giving sites to the houseless people in the past ?

For the last 25 years though there was lot of thinking for the removal of poverty and all help to be given to the poor people, no Government in the past had done anything to the poor people. The present Congress Government though holding the reigns for the last one year, has distributed 2½ lakhs of sites to the houseless people. Apart from this, our Finance Minister has provided Rs. 5 crores for the construction of houses to those poor people who have suffered all these years.

5-30 P. M.

Madam Speaker, I also join with the criticism made by some of our friends that there are some irregularities at the district level. Only for statistical purposes they have said that houses have been given to the poor people. The responsibility of the Government is to give direction to the District Officers for distribution of houses ; but the

(SRI A. M. BELLIAPPA)

District officers for statistical purposes they announce that so many sites have been distributed to the poor people. It is the duty of the Government to rectify the defects, if any, and the irregularities that are committed, atleast hereafter Government should take all possible care to see that these irregularities do not occur and see that really needy people are given house-sites. As already pointed out by some of my friends that some people have been given sites far away from the places of residence or far away from the places of their avocation. I might also say that this sort of distrsbution does not serve any useful purpose. I therefore request the Government to open their eyes and see that such criticisms by the members are avoided and they must also give a direction to the concerned officers that the allotment must be made correctly and do real justice to the people. Secondly, it is an age-old cry that the salary given to the Government servants is not sufficient to maintain themselves. Immediately our party took reigns of Government, they have given dearness allowance once in the month of July and another in the month of November 1972. Again it is very pleasant to note that our Government has increased the dearness allowance on par with the Central Government employees. My submission is that by enhancing the dearness allowance, no real purpose is served because six month's of D. A. will be credited to the P. F. account of the employees. The low paid officials and teachers were crying for D. A. If the D. A. is credited to their accounts, it would work as a great hardship to them. I therefore plead that the enhanced D. A. may be paid to them. Such of those officers and officials who are eligible to get Rs. 37.50 by way of D. A., their enhanced D. A. might be credited to the PF account.

With regard to the budget, the Finance Minister has really done well in removing the sales tax on certain items. I am sorry that the agriculturists are not helped to the extent that is required. The Finance Minister should have taken care to see that the entire sales tax on the pesticides and insecticides and on manures was removed in the interests of agriculturists. In order to held the poor, the sales tax on foodstuffs should have been removed. That would have served the purpose so far as the poor people are concerned.

Coming to the development activities, I might say that this budget is not only a socialist budget but also a drought development oriented budget. With regard to developments, my submission is this: so far as the minor and medium irrigation projects are concerned, Government should take all care to see that all these projects are executed. In Coorg District, the water that is there is being otherwise wasted. If small dams are put across the streams, we can double the food production. I therefore plead that more number of minor irrigation projects should be taken up in the district of Coorg.

A reference has been made in the budget that power cut has been imposed due to failure of monsoon. I request the Government to find out the real causes for the failure of monsoon. The Coorg District used to get 300-400" of rainfall every year. But for the last few years, the rainfall has fallen to 250". Why there has been a down fall in the rain in Coorg and other malnad parts of our State is a thing which is intriguing to my mind. To my mind the reason for the low rainfall is that too for the last 16 years, is due to eradication of forest.

In fact, in Coorg District, thousands of acres of forest area has been given to the industrialists which has resulted in the removal of forest. A few days ago, I had been to Talakaveri where the Cauvery river takes its birth. Formerly, the rainfall of that place was about 400"; now it has fallen to 220". If the Government wants to see that the irrigation projects reservoirs are filled, they must stop cutting of forest.

Mercara town has been recognised by the Central Government as a Hill Station. The Central Government employees at Mercara are being paid Hill station allowance. Unfortunately our State Government employees are not paid that allowance. Besides, the Government servants working at Mercara are not being paid house-rent allowance whereas in all other Districts, such an allowance is being paid to the Government servants. The reason given by the State Government is that Mercara town is not having a population of more than 25,000, hence the Government servants are not eligible for house-rent allowance The population of Mercara will not arise because there are hundreds of villages round about Mercara and it is very difficult to reach that figure. I therefore request the Government to give house-rent allowance to the Goveroment servants working at Mercara. Thank you.

† ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನ ಹಳ್ಳಿ).—ಪೂಜ್ಯ ಅಧ್ಯಕ್ಷಿಣಿಯವರೇ, ಆರ್ಥಿಕ ಮಂತ್ರಿಗಳು ಮಂಡಿಸಿರತಕ್ಕ ಅಂದಾಜು ಆಯವ್ಯಯದ ಬಗ್ಗೆ ನಾನು ಎರಡು ಮಾತನಾಡಲಿಕ್ಕೆ ಇಚ್ಛೆ ಪಡುತ್ತೇನೆ. ಈಗಾಗಲೇ ಈ ಅಂದಾಜು ಪತ್ರಿಕೆಯಲ್ಲಿ ಬರಗಾಲಕ್ಕೆ ಒಳಗಾಗಿರುವ ಪ್ರದೇಶಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಒದಗಿಸಿರುವುದು ಒಳ್ಳೆಯದು ಎನ್ನುವುದನ್ನು ಒಪ್ಪುತ್ತೇನೆ. ಆದರೆ ಈ ಪ್ರದೇಶಗಳಲ್ಲದೆ ಹಳೇ ಮೈಸೂರಿನ ಅನೇಕ ಭಾಗಗಳಲ್ಲಿ ಭಾಗಶಃ ಬರಗಾಲ ಒದಗಿದೆ. ತುಮಕೂರು ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಕೆಲವು ಹೋಬಳಿಗಳಲ್ಲಂತೂ ಬರಗಾಲದ ದೆಸೆಯಿಂದ ಜನಗಳಿಗೆ ಕೆಲಸವಿಲ್ಲ, ತಿನ್ನುವುದಕ್ಕೆ ಆಹಾರವಿಲ್ಲ, ದನಗಳಿಗೆ ಮೇವು ಕೂಡ ಸಿಕ್ಕುವುದು ತೊಂದರೆಯಾಗಿದೆ. ಸರ್ಕಾರ ಇತ್ತ ಕಡೆ ಕೂಡ ಗಮನ ಹರಿಸಬೇಕು. ಅಲ್ಲದೆ ಮುಂದೆ ಇಂಥ ಬರಗಾಲ ಬಾರದೆ ಇರುವಂತೆ ನೀರಾವರಿ ಸೌಕರ್ಯಗಳನ್ನು ತುಮಕೂರು ಜಿಲ್ಲೆಯ ಚಿಕ್ಕನಾಯ್ಕನಹಳ್ಳಿ, ತುಮಕೂರು, ತಿಪಟೂರು, ಗುಬ್ಬಿ, ಸಿರಾ, ಪಾವಗಡ, ಮಧುಗಿರಿ ಈ ತಾಲ್ಲೂಕುಗಳಿಗೆ ಬರಗಾಲ ಆಗಾಗ ತುತ್ತಾಗುತ್ತಿರುವ ಭಾಗಗಳಿಗೆ ಹೇಮಾವತಿ ಮತ್ತು ಅಪ್ಪರ್ ಭದ್ರದಿಂದ ನೀರನ್ನು ಒದಗಿಸುವ ಕಡೆಗೆ ಗಮನಹರಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ನಿರುದ್ಯೋಗ ಸಮಸ್ಯೆಯನ್ನು ತೆಗೆದುಕೊಂಡರೆ ವಿದ್ಯಾವಂತ ತರುಣದಲ್ಲಿ ಮಾತ್ರ ನಿರುದ್ಯೋಗವಿದೆ ಎಂದು ತಿಳಿಯಬಾರದು. ರೈತ ಕಾರ್ಮಿಕರು, ಕಾರ್ಮಿಕ ವರ್ಗ ಇಂಥವರ ದುಸ್ಥಿತಿಯನ್ನು ಹೇಳತೀರದು. ಅವರಿಗೆ ಎರಡು ಹೊತ್ತು ಇರಲಿ ಒಂದು ಹೊತ್ತು ಊಟ ಮಾಡುವುದಕ್ಕೆ ಕೂಡ ತೊಂದರೆಯಾಗಿದೆ. ಕೈಗಾರಿಕಾ ಸಚಿವರು ಕೇವಲ ವಿದ್ಯಾವಂತ ತರುಣರ ಮುಖ ನೋಡಿಕೊಂಡು ಅವರ ನಿರುದ್ಯೋಗವನ್ನು ನಿವಾರಿಸಲು ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ.

(ಶ್ರೀ ಎನ್. ಬಸವಯ್ಯ

ಇದಕ್ಕೆ ಬದಲು ಪ್ರತಿ ತಾಲ್ಲೂಕಿನಲ್ಲಿಯೂ ಕೈಗಾರಿಕಾ ಘಟಕಗಳನ್ನು ಪ್ರಾರಂಭ ಮಾಡಿ ಅಲ್ಲಿರುವ ಕೂಲಿಕಾರರಿಗೆ ಉದ್ಯೋಗಗಳನ್ನು ಒದಗಿಸಿಕೊಡಬೇಕು. ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದುರು ತೆಗೆಯುತ್ತಾರೆ. ಅದನ್ನು ಪರಿಷ್ಕರಣ ಮಾಡುವ ಉದ್ಯಮವನ್ನು ಹಾಗೂ ತೆಂಗಿನ ನಾರಿನ ಉದ್ಯಮವನ್ನೂ ಪ್ರಾರಂಭ ಮಾಡಬೇಕು. ಇತ್ತ ಕಡೆ ಸರ್ಕಾರ ತನ್ನ ಗಮನ ಹರಿಸಬೇಕೆಂದು ನಾನು ಸರ್ಕಾರವನ್ನ ಪ್ರಾರ್ಥನೆ ಮಾಡುತ್ತೇನೆ.

ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸರ್ಕಾರ ಒಂದು ಉಪಕಾರ ಮಾಡಿದೆ. ಅನೇಕ ಕಂಬಳಿ ನೇಕಾರರು ಅಲ್ಲಿದ್ದಾರೆ. ಅವರಿಗೋಸ್ಕರ ಉಲನ್ ಮತ್ತು ಷೀಪ್ ಡೆವಲಪ್‌ಮೆಂಟ್ ಬೋರ್ಡು ಮಾಡಿದ್ದಾರೆ. ಅದು ಕೇವಲ ಸಲಹಾ ಸಮಿತಿಯಾಗಿದೆ. ಬಹಳ ಜನ ನೇಕಾರರಿಗೆ ಕುರಿ ಉಣ್ಣೆ ಸಿಕ್ಕುತ್ತಿಲ್ಲ, ಕುರಿಸಾಕಾಣಿಕೆ ಕಡಮೆಯಾಗುತ್ತಿದೆ. ಎಲ್ಲ ಜನಾಂಗದವರೂ ಮಾಂಸವನ್ನು ತಿನ್ನುವುದಕ್ಕೆ ಪ್ರಾರಂಭ ಮಾಡಿರುವುದರಿಂದ ಕುರಿಗಳು ನಾಶವಾಗುತ್ತಿವೆ. ಕಂಬಳಿ ನೇಕಾರರು ಕುರಿ ಉಣ್ಣೆಯಿಂದ ಜೀವನ ಮಾಡುತ್ತಿದ್ದಾರೆ, ಅದಕ್ಕಾಗಿ ಈ ಬೋರ್ಡನ್ನು ಒಂದು ಶಾಸನಬದ್ಧ ಮಂಡಲಿಯನ್ನಾಗಿ ಮಾಡಿ ಕುರಿ ಸಾಕಾಣಿಕೆಗೆ ಮತ್ತು ಕುರಿ ನೇಕಾರರಿಗೆ ಸಹಾಯ ಮಾಡಲು ಹೆಚ್ಚು ಹಣವನ್ನು ಒದಗಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ರಾಜ್ಯದಲ್ಲಿ ಡೆಂಟಲ್ ಕಾಲೇಜನ್ನು ತೆರೆದಿದ್ದು ಅದರಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿ ಬಂದಂಥ 30—40 ಜನ ದಂತ ವೈದ್ಯರು ತ್ರಿಶಂಕು ಸ್ವರ್ಗದಲ್ಲಿದ್ದಾರೆ. ಅವರಿಗೆ ಕೆಲಸವನ್ನು ಕೊಟ್ಟಿಲ್ಲ. ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಸ್ಟೈಪೆಂಡ್ ಕೊಡುವ ಯೋಜನೆಯನ್ನು ತಂದಿದ್ದಾರೆ. ಇದರಿಂದ ಏನಾಗಿದೆ ಎಂದರೆ ಬೆಂಗಳೂರಿನವರನ್ನು ಕಾರವಾರಕ್ಕೆ ಹಾಕುವುದು, ಕಾರವಾರದವರನ್ನು ಬೆಂಗಳೂರಿಗೆ ಹಾಕುವುದು ಹೀಗಾಗಿ ಅವರಿಗೆ ಕೊಡುವ 200-300 ರೂಪಾಯಿನಿಂದ ಜೀವನ ಮಾಡುವುದಕ್ಕೂ ಆಗದೆ ಇದೆ. ಎಂ. ಬಿ. ಬಿ. ಎಸ್ ಆದವರಿಗೆ, ವೆಟರ್‌ನರಿ ಪಾಸ್ ಮಾಡಿದವರಿಗೆ ಏನು ಸವಲತ್ತುಗಳನ್ನು ಕೊಟ್ಟಿದ್ದಾರೆ ಅದೇ ರೀತಿಯ ಸವಲತ್ತನ್ನು 30—40 ಜನ ದಂತವೈದ್ಯ ಪದವೀಧರರಿಗೆ ಕೊಟ್ಟು ಅವರಿಗೆ ಕೆಲಸವನ್ನು ಒದಗಿಸ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಸಮಾಜಕಲ್ಯಾಣ ಸಚಿವರು ಪ್ರತಿಯೊಂದು ತಾಲ್ಲೂಕಿಗೂ ಒಂದು ಸಮುದಾಯ ಕಲ್ಯಾಣ ಮಂದಿರವನ್ನು ರಚನೆ ಎಲ್ಲ ಜನಾಂಗಗಳವರಿಗೆ ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಅನುಕೂಲ ಮಾಡಿಕೊಡಬೇಕು.

ಸಹಕಾರ ಸಂಘಗಳ ಬಗ್ಗೆ ಹೇಳುವುದಾದರೆ, ಮಾನ್ಯ ಶಂಕರ ಆಳ್ವ ಅವರು ಈ ಶಾಖೆಯನ್ನು ವಹಿಸಿಕೊಳ್ಳಬಾರವಾಗಿತ್ತು ಅವರು ಬಹಳ ಸೌಮ್ಯ ಸ್ವಭಾವದವರು, ಸೌಮ್ಯ ಮೂರ್ತಿ. ಅಲ್ಲಿರುವ ಹೆಗ್ಗಣಗಳನ್ನು ಬೋನಿಗೆ ನುಗ್ಗಿಸುವುದಕ್ಕೆ ಇವರಿಂದ ಆಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಒಬ್ಬ ಜಾಯಿಂಟ್ ರಿಜಿಸ್ಟ್ರಾರ್ ಅವರು ವೆಂಕಟೇಶ್ವರ ಫರ್ಟಿಲೈಸರ್ಸ್‌ನಿಂದ ಗೊಬ್ಬರವನ್ನು ತೆಗೆದುಕೊಳ್ಳಬೇಕೆಂದು ಫೋನ್ ಮಾಡಿಸಿದರು ತಾಲ್ಲೂಕು ಅಗ್ರಿಕಲ್ಚರಲ್ ಮಲ್ಟಿ ಪರ್ಪಸ್ ಕೋಆಪರೇಟಿವ್ ಸೊಸೈಟಿಯವರು ಗೊಬ್ಬರ ತೆಗೆದುಕೊಂಡರು. ಆದರಲ್ಲಿ 99 ಪರ್ಸೆಂಟ್‌ನಷ್ಟು ಸುದ್ದೆಯನ್ನು ಬೆರೆಸಿದ್ದರು. ಅದರ ಬಗ್ಗೆ ಈ ಹೊತ್ತಿನವರೆಗೂ ಏನೂ ಮಾಡುವುದಕ್ಕಾಗಿಲ್ಲ. ಅಲ್ಲಿದ್ದ ಬಡ ಮ್ಯಾನೇಜರನ್ನು ಸಸ್ಪೆನ್‌ಷನಲ್ಲಿಟ್ಟಿರುತ್ತಾರೆ. ಜಾಯಿಂಟ್ ರಿಜಿಸ್ಟ್ರಾರ್ ಅವರು ಮಾಡಿರುವುದು ಯಾರ ಗಮನಕ್ಕೂ ಬಂದಿಲ್ಲ. ಈ ಇಲಾಖೆಯಲ್ಲಿ ಅನೇಕ ಸೊಸೈಟಿಗಳನ್ನು ಮುಳುಗಿಸುವವರಿದ್ದಾರೆ. ಅದಷ್ಟು ಬೇಗ ಈಗಿರುವಂಥ ಕಾನೂನನ್ನು ಬದಲಾವಣೆ ಮಾಡಿ ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಸಂಚಾರಿ ನ್ಯಾಯಾಲಯವನ್ನು ತಾಲ್ಲೂಕಿಗೆ ಒಂದರಂತೆ ಮಾಡಬೇಕು. ಸಾರ್ವಜನಿಕ ಕ್ಷೇತ್ರದಲ್ಲಿ ಸಾರ್ವಜನಿಕ ಮುಖಂಡರೇ ಆಗಲೀ, ಅಧಿಕಾರಿಗಳೇ ಆಗಲೀ, ಏನಾದರೂ ಅನ್ಯಾಯಗಳನ್ನು ಮಾಡಿದರೆ ತಕ್ಷಣ ವಿಚಾರಿಸುವ ವ್ಯವಸ್ಥೆ ಮಾಡಬೇಕು. ಆರ್ಬಿಟ್ರೇಟರನ್ನು ನೇಮಿಸುವುದರಿಂದ ಅವರು ದುಡ್ಡು ತಿಂದು ಸಹಕಾರ ಸಂಘದ ಕಡೆ ಅಥವಾ ಬೇರೆ ಕಡೆ ಹೇಳಿದರೂ ಆಶ್ಚರ್ಯವಿಲ್ಲ. ಸಹಕಾರ ಸಂಘಗಳಿಗೋಸ್ಕರ ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದೆ. ಜಿಲ್ಲಾ ಬ್ಯಾಂಕುಗಳಿಂದ ಬೇಕಾದಷ್ಟು ಹಣವನ್ನು ಸಾಲವಾಗಿ ಕೊಟ್ಟಿದ್ದಾರೆ. ಇದರಲ್ಲಿ ವಸೂಲಾಗದೆ ಇರುವುದನ್ನು ವೇವ್ ಮಾಡಬೇಕೆಂದು ಯೋಚಿಸುತ್ತಿರುವಾಗಿ ತಿಳಿದು ಬಂದಿದೆ. ಒಂದು ವೇಳೆ ಹಾಗೇನಾದರೂ ಮಾಡಿದರೆ ಸಹಕಾರ ಸಂಘಗಳು ಖಂಡಿತವಾಗಿ ಬೆಳೆಯುವುದಿಲ್ಲ, ಸಹಕಾರ ತತ್ವದ ಬಗ್ಗೆ ಜನಗಳಿಗೆ ನಂಬಿಕೆ

ಬರುವುದಿಲ್ಲ. ಸಾಲ ತೆಗೆದುಕೊಂಡುದನ್ನು ನುಂಗಿ ಹಾಕುವುದಕ್ಕೆ ಸಹಾಯ ಮಾಡಿದಂತಾಗುತ್ತದೆ. ಮಾನ್ಯ ಮಂತ್ರಿಗಳು ಬೋಲ್ಡ್ ಸ್ಟೆಪ್ ತೆಗೆದುಕೊಂಡು ರಿಫಾರಂ ಮಾಡುತ್ತೇವೆನ್ನುವ ರೀತಿಯಲ್ಲಿ ಮುನ್ನುಗ್ಗಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಯುವಜನ ಕಲ್ಯಾಣದ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಯಾವುದೋ ಹಳೇ ಸಂಪ್ರದಾಯವನ್ನು ಇಟ್ಟುಕೊಳ್ಳಬಾರದು.— ಯುವಕರಲ್ಲಿ ನವಚೈತನ್ಯ ಮೂಡಿ ರಚನಾತ್ಮಕ ಕಾರ್ಯಗಳನ್ನು ಅವರು ಮಾಡತಕ್ಕ ರೀತಿಯಲ್ಲಿ ಯಾವುದಾದರೂ ವಿದ್ಯಾಭ್ಯಾಸವನ್ನು ಕೊಡತಕ್ಕ ರೀತಿಯಲ್ಲಿ, ಸ್ಫೂರ್ತಿ ಬರತಕ್ಕ ರೀತಿಯಲ್ಲಿ ಸಂಘಸಂಸ್ಥೆಗಳನ್ನು ಮಾಡಿ ಆ ಮುಖೇನ ರಾಷ್ಟ್ರದ ಅಭಿವೃದ್ಧಿಯ ಕಡೆಗೆ ಅವರು ಗಮನ ಕೊಡುವಂತೆ ಮಾಡಬೇಕು. ಹಿಪ್ಪಿ ಟೈಪ್ ಅನುಕರಣೆ ಮಾಡುವ ರೀತಿಯಲ್ಲಿ ಅನುಕರಣೆ ಮಾಡುವುದು ಬೆಳೆಯುತ್ತದೆ. ನಮ್ಮ ಧರ್ಮ, ನಮ್ಮ ಸಂಪ್ರದಾಯ ಇವೆಲ್ಲಕ್ಕೂ ಕುಂದು ಬಂದು ಭಾರತಕ್ಕೆ ಕೆಟ್ಟ ಹೆಸರು ತರುವ ರೀತಿಯಲ್ಲಿ ಬೆಳೆವಣಿಗೆಯಾಗುತ್ತಿದೆ. ಯುವಜನ ಕಲ್ಯಾಣ ಮಂತ್ರಿಗಳು ಯುವಕರು, ಅವರನ್ನು ನೋಡಿದರೆ ನವಚೈತನ್ಯ ತುಂಬಿದೆ. ಅವರು ನಮ್ಮ ದೇಶದಲ್ಲಿ ಯುವಕರಲ್ಲಿ ಸ್ಫೂರ್ತಿ ಬರುವ ರೀತಿಯಲ್ಲಿ ಕಾರ್ಯಕಲಾಪಗಳನ್ನು ಹಾಕಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ವ್ಯವಸಾಯ ಕ್ಷೇತ್ರದಲ್ಲಿ ರೈತರಿಗೆ ಸರಿಯಾದ ಸಹಾಯ ಸವಲತ್ತುಗಳು ಸಿಕ್ಕುವುದು ಕಡಮೆ ಸರ್ಕಾರದವರು ಎರಡು ಮೂರು ಎಕರೆ ಜಮೀನು ಕೊಟ್ಟರೆ, ವ್ಯವಸಾಯ ಮಾಡುವುದಕ್ಕೆ ಎತ್ತು ಮತ್ತು ಗಾಡಿ ಬೇಕು. ಒಂದು ಜೊತೆ ಎತ್ತು ಮತ್ತು ಒಂದು ಗಾಡಿಯನ್ನು ಇಟ್ಟುಕೊಳ್ಳಬೇಕಾದರೆ ಮೂರು ಸಾವಿರ ರೂಪಾಯಿವರೆಗೂ ಬೇಕಾಗುತ್ತದೆ. ಅಷ್ಟು ಹಣವನ್ನು ಖರ್ಚು ಮಾಡಿ ವ್ಯವಸಾಯ ಮಾಡುವುದಕ್ಕೆ ಅವನಿಂದ ಆಗುವುದಿಲ್ಲ. ಆದ್ದರಿಂದ ಬರೀ ಭೂಮಿ ಕೊಡುವದರಿಂದ ಏನೂ ತೃಪ್ತಿಯಾಗುವುದಿಲ್ಲ. ಸರ್ಕಾರದವರು ಜಿಯಾಲಜಿಸ್ಟ್ ಅವರಿಂದ ಸರ್ವೇ ಕೆಲಸ ಮಾಡಿಸಿ. ನೀರು ಸಿಕ್ಕುವ ಕಡೆ ಬಾವಿ ತೆಗೆಸಿ ಪಂಪ್‌ಸೆಟ್ ಹಾಕಿಸಿ ವ್ಯವಸಾಯ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ಅದರಲ್ಲಿ ಬರುವ ಉತ್ಪಾದನೆಯಿಂದ ಸುಲಭ ಕಂತುಗಳಲ್ಲಿ ಹಣವನ್ನು ವಸೂಲು ಮಾಡಿಕೊಳ್ಳಬಹುದು. ಸಾಲ ಕೊಟ್ಟರೆ ಅದನ್ನು ವಸೂಲು ಮಾಡುವುದಕ್ಕಾಗುವುದಿಲ್ಲ. ಕೊಟ್ಟ ದುಡ್ಡನ್ನು ಹಿಂದೆ ಮಾಡಿರುವ ಸಾಲವನ್ನು ತೀರಿಸುವುದಕ್ಕೆ, ಮದುವೆ ಮುಂತಾದ ಕಾರ್ಯಗಳನ್ನು ಮಾಡುವುದಕ್ಕೆ ಖರ್ಚು ಮಾಡುತ್ತಾರೆ. ಇದಲ್ಲದೆ ಅವನಿಗೆ ಬೇಕಾದ ವ್ಯವಸಾಯದ ಉಪಕರಣಗಳನ್ನು ಕೂಡ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಿ, ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಕೃಷ್ಣರಾವ್ (ಗೌರಿಬಿದನೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಸಚಿವರು ಮಂಡಿಸಿರತಕ್ಕ 1973-74ನೇ ಆಯವ್ಯಯವನ್ನು ಹೃತ್ಪೂರ್ವಕವಾಗಿ ಸುಸ್ವಾಗತಿಸುತ್ತ ಕೆಲವಾರು ಸಲಹೆಗಳನ್ನು ಹೇಳಬಯಸುತ್ತೇನೆ.

ನಮ್ಮ ದೇಶದಲ್ಲಿ ಕಾಂಗ್ರೆಸ್ಸು ಸರಕಾರ ಅಧಿಕಾರಕ್ಕೆ ಬಂದ ಮೇಲೆ ಈ ದೇಶದಲ್ಲಿ ಕಟುವಾದ ಕ್ಷಾಮ ಪರಿಸ್ಥಿತಿಗೆ ಈಡಾಗಿ ಬಹಳ ಜನ ತೊಂದರೆ ಪಡತಕ್ಕ ಈ ಸ್ಥಿತಿಯಲ್ಲಿ ಸರಕಾರ ಸುಮಾರು 54 ಕೋಟಿರೂಪಾಯಿಗಳಷ್ಟು ಖರ್ಚು ಮಾಡಿದ್ದಾರೆಂದು ಹೇಳಿದರೆ, ಹಿಂದೆಂದೂ ಇಡದೇ ಇರತಕ್ಕಂತಹ ದಿಟ್ಟ ಹೆಜ್ಜೆಯನ್ನು ನಮ್ಮ ಸರಕಾರ ಇಟ್ಟಿದೆ ಎಂದು ಹೇಳಿದರೆ ನಾವೆಲ್ಲರೂ ಹಾಗೂ ದೇಶದ ಜನರೂ ಇದನ್ನು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಹಿಂದೆ ಇಂತಹ ಒಂದು ಪರಿಸ್ಥಿತಿಯನ್ನು ಎಂದೂ ಯಾವ ಸರಕಾರ ಕೂಡ ಎದುರಿಸಿರಲಿಲ್ಲ. ಇಂತಹ ಕಟುವಾದ ಪರಿಸ್ಥಿತಿಯಲ್ಲಿ ಇವೊತ್ತಿನ ದಿವಸ ನಾವುಗಳು ಇದನ್ನು ಎದುರಿಸಿ ಮುನ್ನುಗ್ಗಬೇಕಾಗಿದೆ. ನಮ್ಮ ವಿರೋಧ ಪಕ್ಷದ ಸದಸ್ಯರುಗಳು ಅನೇಕ ವಿಧವಾದ ಟೀಕೆ ಮಾಡುತ್ತಿದ್ದಾರೆ. ನಮ್ಮ ಸಮಾಜವಾದ ಎಲ್ಲಿದೆ, ನಿಜವಾಗಿ ನೀವು ಬಡವರಿಗೆ ಸಹಾಯ ಮಾಡುವಂತೆ ಮಾಡುತ್ತಿದ್ದೀರಾ ಎಂದು ಅನೇಕ ವಿಧವಾದ ಟೀಕೆ ಟಿಪ್ಪಣಿಗಳನ್ನು ಮಾಡುವುದನ್ನು ಕೇಳಿದಾಗ ನನಗಂತೂ ಬಹಳ ಆಶ್ಚರ್ಯವಾಯಿತು. ಏಕೆಂದರೆ ಹಿಂದೆ ಎಂದೂ ಮಾಡದೇ ಇರತಕ್ಕ ಕೆಲಸವನ್ನು ನಮ್ಮ ಸರಕಾರ ಕೈಗೊಂಡಿರುವುದರಿಂದ ವಿರೋಧ ಪಕ್ಷದ ಸದಸ್ಯರೂ ಇದನ್ನು ಖಂಡಿತ ಅವರೂ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಸರ್ಕಾರದವರು ಸುಮಾರು ಐದು ಕೋಟಿ ರೂಪಾಯಿಗಳನ್ನು ವಸತಿ ಇಲ್ಲದೆ ಇರತಕ್ಕ ಜನಗಳಿಗೆ ನಿವೇಶನಗಳನ್ನು ಹಂಚಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಒಂದು ರೀತಿಯಾದ ಹೆಜ್ಜೆ ಮುಂದೆ ಇಟ್ಟು ಮಾಡುತ್ತಾ ಇರುವುದು ನಿಜವಾಗಿಯೂ ನಾವೆಲ್ಲರೂ ಸಂತೋಷಪಡಬೇಕಾದ ವಿಚಾರ. ಇಂತಹ ಒಳ್ಳೆಯ ಕೆಲಸಗಳನ್ನು ನಮ್ಮ ಸರಕಾರ ಮಾಡುತ್ತಿರುವುದಕ್ಕಾಗಿ ನಾನು ನಮ್ಮ ಸರಕಾರವನ್ನು ಸ್ವಾಗತಿಸುತ್ತೇನೆ ಮತ್ತು ಅವರು ಕೂಡ ಇದನ್ನು

(ಶ್ರೀ ವಿ. ಕೃಷ್ಣರಾವ್)

ಸ್ವಾಗತಿಸುತ್ತಾರೆಂದು ಭಾವಿಸುತ್ತೇನೆ, ಇಂತಹ ಚರಿತ್ರಾರ್ಹವಾದ ಕೆಲಸಗಳನ್ನು ನಮ್ಮ ಅರ್ಥ ಸಚಿವರು ನಮ್ಮ ದೇಶದ ಮುಂದೆ ಇಟ್ಟಿದ್ದಾರೆ, ಇಂತಹ ಒಂದು ಪರಿಸ್ಥಿತಿಯಲ್ಲಿ ಈ ದೇಶ ಸಮಾಜವಾದದಲ್ಲಿ ಖಂಡಿತ ಮುಂದುವರಿಯುವುದರಲ್ಲಿ ಯಾವ ಸಂದೇಹವೂ ಇಲ್ಲ ಎಂದು ನಾನು ಭಾವಿಸುತ್ತೇನೆ. ಇಂದು ರೈತರು ಬಹಳ ಕಠಿಣ ಪರಿಸ್ಥಿತಿಯಲ್ಲಿ ಇದ್ದಾರೆ. ಎಷ್ಟು ಆಹಾರ ಬೆಳೆಯಬೇಕೆಂದು ಇವರಿಂದ ನಿರೀಕ್ಷಿಸಿದ್ದೆವೋ ಅಷ್ಟು ಆಹಾರ ಬೆಳೆಯಲು ಮಳೆ ಇಲ್ಲದೇ ಇರುವುದೇ ಒಂದು ಮುಖ್ಯವಾದ ಕಾರಣ. ಮಳೆ ಬಾರದೇ ಇರುವುದಕ್ಕೆ ಅರಣ್ಯ ಸಂಪತ್ತು ಹಾಳಾಗುತ್ತಿದೆ ಎಂದು ತಜ್ಞರು ತಿಳಿಸುತ್ತಿದ್ದಾರೆ. ಸಾಧ್ಯವಾದಷ್ಟು ಮಟ್ಟಿಗೆ ಅರಣ್ಯ ಸಂಪತ್ತನ್ನು ಕಡಿಯದಂತೆ ಅದು ಇನ್ನೂ ಹೆಚ್ಚಾಗಿ ಬೆಳೆಯುವಂತೆ ಮಾಡಬೇಕು ಎಂದು ನಾನು ಇಲ್ಲಿ ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಎರಡನೆಯದು ಪ್ರತಿಯೊಬ್ಬ ರೈತನಿಗೂ ಅವನ ಆರ್ಥಿಕ ಮಟ್ಟವನ್ನು ಉತ್ತಮ ಮಾಡಿಕೊಳ್ಳಲು ಜಮೀನು ಕೊಡುವುದರಿಂದ ಅಲ್ಲಿಗೆ ಮುಗಿಯುವುದಿಲ್ಲ. ಅವನ ಭೂಮಿ ಇರತಕ್ಕ ಪ್ರದೇಶಕ್ಕೆ ತಜ್ಞರನ್ನು ಕರೆದುಕೊಂಡು ಹೋಗಿ ಅವನ ಭೂಮಿ ಚೆನ್ನಾಗಿದೆಯೋ ಇಲ್ಲವೇ ಎನ್ನುವುದನ್ನು ಪರೀಕ್ಷಿಸಿ ತಕ್ಕ ಸಲಹೆಗಳನ್ನು ಕೊಡದೇ ಇದ್ದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಉತ್ತಮವಾದ ಬೀಜ ಹಾಗೂ ಪಂಪುಸೆಟ್ಟುಗಳನ್ನು ಒದಗಿಸಿ ಅದರ ಮೂಲಕ ಅವನ ಆರ್ಥಿಕ ಮುಗ್ಗಟ್ಟನ್ನು ಸರಿಪಡಿಸಲು ಸರಕಾರವೇ ಇಂತಹ ಅವಕಾಶಗಳನ್ನು ಮಾಡಿಕೊಡಬೇಕಾಗಿದೆ.

ಮೂರನೇದು ಸಹಕಾರ ಸಂಘಗಳು: ಇಂದು ಕೆಲವಾರು ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡಿಕೊಂಡು ಬರುತ್ತಿವೆ ಮತ್ತು ಕೆಲವು ದೊಡ್ಡ ದೊಡ್ಡ ಸಹಕಾರ ಸಂಘಗಳೂ ಚೆನ್ನಾಗಿ ಕೆಲಸ ಮಾಡುತ್ತಿವೆ. ಆದರೆ ಅಲ್ಲಲ್ಲಿ ಒಂದೆರಡು ಕೆಟ್ಟ ಸಹಕಾರ ಸಂಘಗಳಿರುವುದರಿಂದ ಒಳ್ಳೆಯ ಸಹಕಾರ ಸಂಘಗಳಿಗೂ ಕೆಟ್ಟ ಹೆಸರು ಬರುತ್ತಿವೆ. ಒಟ್ಟಿನಲ್ಲಿ ಕೆಲವಾರು ಸಹಕಾರ ಸಂಘಗಳು ಸಾಲಗಳನ್ನು ಕೊಡದೇ ನಿಲ್ಲಿಸಿರುವುದರಿಂದಾಗಿ ರೈತರು ಬಹಳ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಬಹು ಹಿಂದೆಯೇ ಇದು ಕ್ಷಾಮಡಾಮರುಗಳಿಗೆ ಸಿಕ್ಕಿದೆ ಮತ್ತು ಇಲ್ಲಿನ ರೈತರು ಬಹು ಸಂಕಟ ಪರಿಸ್ಥಿತಿಯಲ್ಲಿದ್ದಾರೆ. ಇದನ್ನು ತಮಗೆ ಪ್ರತ್ಯಕ್ಷವಾಗಿ ಇವೊತ್ತಿನ ದಿವಸ ತೋರಿಸಬೇಕಾದರೆ ಎಷ್ಟೋ ಮನೆಗಳಲ್ಲಿ ರೈತರು ಎರಡು ಹೊತ್ತು ಊಟ ಕೂಡ ಮಾಡುತ್ತಿಲ್ಲ ಮತ್ತು ರೈತರಿಗೆ ಕೂಲಿ ಕೆಲಸಗಳೂ ಸಿಗುತ್ತಿಲ್ಲ. ಇಂತಹ ಕೋಲಾರ ಜಿಲ್ಲೆಯ ಬಗ್ಗೆ ಆಯವ್ಯಯದಲ್ಲಿ ಇಟ್ಟಿರುವ ಪಟ್ಟಿಯಲ್ಲಿ ನಮ್ಮ ಅರ್ಥ ಸಚಿವರು ಏಕೆ ಸೇರಿಸಲಿಲ್ಲ ನನಗೆ ಗೊತ್ತಾಗಲಿಲ್ಲ. ಕೋಲಾರ ಜಿಲ್ಲೆ ಕ್ಷಾಮ ಪರಿಸ್ಥಿತಿಗೆ ಸಿಕ್ಕಿರತಕ್ಕ ಎಂಟು ಜಿಲ್ಲೆಗಳ ಜೊತೆಗೆ ಇದನ್ನು ಸೇರಿಸಬೇಕು ಎಂದು ನಾನು ಅವರಲ್ಲಿ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ. ಇವೊತ್ತಿಗೂ ಕೂಡ ನಮ್ಮ ಕೋಲಾರ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ನದಿಗಳು ಯಾವುವೂ ಇಲ್ಲ. ಇಲ್ಲಿರುವುದೆಲ್ಲ ಕೆರೆಗಳು. ಇದಕ್ಕಾಗಿ ಇಲ್ಲಿ ಮೈನರು ಇರಿಗೇಷನ್ ಕೆಲಸಗಳನ್ನು ಹೆಚ್ಚು ವ್ಯವಸ್ಥೆ ಮಾಡಬೇಕು. ಇಲ್ಲದೆ ಹೋದರೆ ಬಾವಿಗಳನ್ನು ತೋಡಿಸಿ ಅದರ ಮೂಲಕ ನೀರಾವರಿ ವ್ಯವಸ್ಥೆ ಮಾಡಬೇಕು. ಸರಾಸರಿ ಇಲ್ಲ ಮಳೆ ಬರುವುದು ನೋಡಿದರೆ 16 ರಿಂದ 25 ಇಂಚುಗಳಷ್ಟು ಮಳೆ ಕೂಡ ಆಗುತ್ತಿಲ್ಲ. ಕೇವಲ ಒಂದೆರಡು ಕೆರೆಗಳನ್ನು ಬಿಟ್ಟರೆ ಇತರ ಕಡೆಗಳಲ್ಲಿ ಬಾವಿಗಳನ್ನು ತೆಗೆಸಬೇಕು. ಇಂತಹ ಕ್ಷಾಮದ ಪರಿಸ್ಥಿತಿಯಿರುವ ನಮ್ಮ ಜಿಲ್ಲೆಗೆ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಇವೊತ್ತಿನ ದಿವಸ ಗುಲ್ಬರ್ಗಾ, ಬೀದರು ಇಲ್ಲಿಗೆ ಯಾವ ರೀತಿ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೋ ಅದೇ ರೀತಿ ಇಲ್ಲೂ ಕೆಲವಾರು ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಮಾಡಿಸಿಕೊಡಬೇಕೆಂದು ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಸರಕಾರ ಬಂದು ಸುಮಾರು 25 ವರ್ಷಗಳಾದವು. ಅದೂ ಸ್ವಾತಂತ್ರ್ಯ ಬಂದ ಮೇಲೆ ಬಂದು ಸರಕಾರ, ನಮ್ಮ ರಾಜ್ಯದಲ್ಲಿ ಸರಿಯಾದ ಕಾರ್ಯಕ್ರಮ ಹಾಕಿಕೊಂಡು ನಿಜವಾಗಿ ಅದಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಟ್ಟಿದ್ದ ಪಕ್ಷದಲ್ಲಿ ಇವೊತ್ತಿನ ದಿವಸ ನಾವು ಇಷ್ಟು ಕಷ್ಟಗಳನ್ನು ಎದುರಿಸಬೇಕಾದ ಪರಿಸ್ಥಿತಿಯೇ ಬರುತ್ತಿರಲಿಲ್ಲ. ಬಹು ಭಾಗದಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಖರ್ಚು ಮಾಡಿ ಮಾಡಬೇಕಾದ ನೀರಾವರಿ ಕೆಲಸಗಳನ್ನು ಆದಷ್ಟು ಬೇಗನೆ ಮಾಡಿದ್ದರೆ ನಮಗೆ ಇಂದು ಒದಗಿರುವ ಕಷ್ಟಗಳು ಇರುತ್ತಿರಲಿಲ್ಲ. ಇವೊತ್ತಿನ ದಿವಸ ಇದರ ಫಲವನ್ನು ಅನುಭವಿಸಬೇಕಾಗಿ ಬಂದಿದೆ ಎಂದು ಹೇಳಿದರೆ ಇದು ತಪ್ಪಾಗಲಾರದು, ಇಂತಹ ಒಂದು ಸಂದರ್ಭದಲ್ಲಿ ಕೋಲಾರ ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿರುವ ಜನರು ಬಹು ಕಷ್ಟಗಳನ್ನು ಅನುಭವಿಸು

ತ್ತಿದ್ದಾರೆ, ಆದುದರಿಂದ ಈ ಸಂದರ್ಭದಲ್ಲಿ ಕೋಲಾರ ಜಿಲ್ಲೆಯ ಬಗ್ಗೆ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಒಂದು ಬೋರ್ಡನ್ನು ರಾಯಲಸೀಮಾ ಬೋರ್ಡು ಎಂದು ಆಂಧ್ರ ಪ್ರದೇಶದಲ್ಲಿರುವಂತೆ ಇಲ್ಲೂ ಒಂದು ಬೋರ್ಡನ್ನು ಸ್ಥಾಪನೆ ಮಾಡಿದರೆ ಕೋಲಾರ ಜಿಲ್ಲೆಯ ಬಗ್ಗೆ ಅನುಕೂಲವಾಗುತ್ತದೆ. ನಮ್ಮ ಕೋಲಾರ ಜಿಲ್ಲೆಯಲ್ಲಿರುವ, ಮುಳಬಾಗಿಲು, ಶ್ರೀನಿವಾಸಪುರ, ಚಿಂತಾಮಣಿ, ಸಿಡಲಗಟ್ಟ, ಬಾಗೇಪಲ್ಲಿ, ಗುಡಿಬಂಡ, ಗೋರಿಬಿದನೂರು, ತುಮಕೂರು ಜಿಲ್ಲೆಯಲ್ಲಿ ಮಧುಗಿರಿ ಹಾಗೂ ಪಾವಗಡ ಇವು ಕೂಡ ನಮ್ಮ ಬಾರ್ಡರಿನಲ್ಲಿದೆ. ಇದಕ್ಕಾಗಿ ಇಲ್ಲಿ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಮಾಡಲು ಒಂದು ಬೋರ್ಡನ್ನು ಮಾಡಿ ಅದರ ಮೂಲಕ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಸಹಾಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಮಾನ್ಯ ಅರ್ಥ ಸಚಿವರಿಗೆ ಸಲಹೆ ಮಾಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಶ್ರೀ ಎಂ. ವಿ. ಕೃಷ್ಣಪ್ಪನವರಿಗೆ ಹೇಗೂ ಕೆಲಸವಿಲ್ಲ. ಅವರನ್ನು ಈ ಬೋರ್ಡಿಗೆ ಚೇರ್ಮನ್ನರಾಗಿ ಮಾಡಿಬಿಡಿ.

ಶ್ರೀ ವಿ. ಕೃಷ್ಣರಾವ್.—ಇಂದು ಇಲ್ಲಿ ಕ್ಷಾಮಕ್ಕೆ ಸಿಕ್ಕಿರುವ ಈ ಭಾಗಗಳಿಗೆ ಶಾಶ್ವತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ ಎಂದು ಪುನಃ ಒತ್ತಾಯ ಮಾಡುತ್ತಿದ್ದೇನೆ, ಇಲ್ಲಿನ ಜನ ಬಹು ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಪ್ರತಿ ವರ್ಷವೂ ಕ್ಷಾಮಕ್ಕೆ ತುತ್ತಾಗುತ್ತಿರುವ ಇಲ್ಲಿನ ಭಾಗದಲ್ಲಿ ರಸ್ತೆ ಕೆಲಸಗಳನ್ನು ಮಾಡುತ್ತೇವೆಂದು ಸುಮ್ಮನೆ ಮಣ್ಣು ಹಾಕಿ ಸರಿ ಮಾಡಿದರೆ ಮತ್ತೆ ಅದೇ ರಸ್ತೆ ಹಾಳಾಗಿ ಹೋಗುತ್ತದೆ. ಇವಕ್ಕಾಗಿ ಇಲ್ಲಿ ಸಣ್ಣ ನೀರಾವರಿ ಕಾರ್ಯಕ್ರಮಗಳನ್ನು ಹೆಚ್ಚು ತೆಗೆದುಕೊಂಡರೆ ಅನುಕೂಲವಾಗುತ್ತದೆ. ಇಂತಹ ಕೆಲಸಗಳನ್ನು ತಾಲ್ಲೂಕು ಬೋರ್ಡುಗಳ ಮೂಲಕ ಮಾಡಿಸಲು ಅವಕ್ಕೆ ಐದಾರು ಸಾವಿರದಷ್ಟು ಗ್ರಾಂಟುಗಳನ್ನು ಕೊಟ್ಟು ನಮ್ಮ ಭಾಗದ ಮೈನರು ಇರಿಗೇಷನ್ ಕೆಲಸಗಳನ್ನು ಬೇಗನೆ ಮಾಡಲು ಸಾಧ್ಯವಾಗುತ್ತದೆ ಎಂದು ಇಂತಹ ಸಂಸ್ಥೆಗಳಿಗೆ ಸಹಾಯ ಮಾಡಿದರೂ ಇಲ್ಲಿ ಬೇಗ ಕೆಲಸಗಳು ಆಗುತ್ತಿಲ್ಲ. ಇದಕ್ಕಾಗಿ ಸರಕಾರದವರೇ ನೇರವಾಗಿ ಪಿ.ಡಬ್ಲ್ಯು.ಡಿ. ಮೂಲಕ ಇಲ್ಲಿನ ಸಣ್ಣ ನೀರಾವರಿ ಕೆಲಸಗಳನ್ನು ಮಾಡಿಸಿಕೊಟ್ಟರೆ ನಮ್ಮ ಭಾಗದ ಜನಕ್ಕೆ ಸಹಾಯವಾಗುತ್ತದೆ. ಇದಕ್ಕಾಗಿ ಸರಕಾರ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ನಿರ್ದಿಷ್ಟವಾದ ಸಲಹೆಗಳನ್ನು ಏನು ಕೊಟ್ಟಿದ್ದೇನೋ ಅದಕ್ಕೆ ಸರಕಾರ ಗಮನಕೊಡಬೇಕು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P. M.

HALF-AN-HOUR DISCUSSION ARISING OUT OF ANSWERS

to Starred Question No. 572

re: Misappropriation of manure in TACM Society, T.Narsipur

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಟಿ. ನರಸೀಪುರ ತಾಲ್ಲೂಕ್ ಅಗ್ರಿಕಲ್ಚರಲ್ ಕೋ ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಸುಮಾರು 2 ಲಕ್ಷ 65 ಸಾವಿರ ರೂಪಾಯಿ ಮೊತ್ತದ ಗೊಬ್ಬರ ದುರುಪಯೋಗವಾಗಿರುವ ಅಂಶ ಹೊರಬಿದ್ದಿದೆ. ಇಷ್ಟೊಂದು ಪ್ರಮಾಣದಲ್ಲಿ ಹಣ ದುರುಪಯೋಗವಾಗಿದ್ದರೂ ಸಹ ನಮ್ಮ ರಾಜ್ಯದ ಪ್ರಮುಖ ಅಧಿಕಾರಿಗಳಾದ ರಿಜಿಸ್ಟ್ರಾರ್, ಡೆಪ್ಯೂಟಿ ರಿಜಿಸ್ಟ್ರಾರ್ ಮತ್ತು ನಮ್ಮ ಮಂತ್ರಿಗಳು ಈ ಕಡೆಗೆ ಗಮನ ಹರಿಸದೇ ಇದ್ದುದು ಮತ್ತು ಈ ಹಣ ಸಾರ್ವಜನಿಕರಿಗಾಗಲೀ ದೇಶಕ್ಕಾಗಲೀ ಸೇರಿದ್ದಲ್ಲ, ಯಾರು ಬೇಕಾದರೂ ತಿಂದುಹಾಕಬಹುದು ಎಂಬ ಪ್ರವೃತ್ತಿಯನ್ನು ಅನುಸರಿಸಿಕೊಂಡು ಬಂದಿರುವುದನ್ನು ನೋಡಿ ನಾವು ವಿಷಾದ ಪಡಬೇಕಾಗಿದೆ. ಇದು ಯಾರಮನೆ ದುಡ್ಡು ಎಂದು ಕೇಳುತ್ತೇನೆ. ಅಧಿಕಾರಿಗಳು ಮನಸ್ಸಿಗೆ ಬಂದ ಹಾಗೆ ಉತ್ತರ ಬರೆದು ಕಳಿಸಿದ್ದನ್ನು ಇಲ್ಲಿ ಮಂತ್ರಿಗಳು ಹೇಳಿಬಿಟ್ಟಿದ್ದಾರೆ. ಇಂದು ಪ್ರತಿ ತಿಂಗಳೂ ಗೊಬ್ಬರದ ಸ್ಟಾಕನ್ನು ಚೆಕ್ ಮಾಡುವ ಅಧಿಕಾರವನ್ನು ಬಿ. ಡಿ. ಒ. ಅವರಿಗೆ ಕೊಟ್ಟಿದ್ದಾರೆ. ಇದು ದುರುಪಯೋಗವಾಗಿರುವುದು 1971 ನೇ ಇಸವಿಯಲ್ಲಿ. ಒಬ್ಬ ಗುಮಾಸ್ತ

(ಶ್ರೀ ಕಾಗೋಡು ತಿಮ್ಮಪ್ಪ)

ನಿಂದ ದುರುಪಯೋಗವಾಗಿದೆ ಎಂದು ಮೇನೇಜಿಂಗ್ ಕಮಿಟಿಯವರು ಗುಮಾಸ್ತನ ಮೇಲೆ ಗೂಬೆ ಕೂರಿಸುವುದಕ್ಕೆ ಹೊರಟಿದ್ದಾರೆ. ಇಷ್ಟೊಂದು ದುರುಪಯೋಗವಾಗಿದ್ದರೂ ಆ ಕಮಿಟಿಯವರು ಸ್ಟಾಕನ್ನು ಏತಕ್ಕೆ ವೆರಿಫೈ ಮಾಡಲಿಲ್ಲ ಎಂದು ಕೇಳಬೇಕಾಗಿದೆ. ಆಡಿಟ್ ರಿಪೋರ್ಟ್‌ನಲ್ಲಿ ಇದರ ಪ್ರಸ್ತಾಪವಾಗಿದ್ದರೂ ಸಹ ಸಂಬಂಧಪಟ್ಟ ಮೇಲಿನ ಅಧಿಕಾರಿಗಳು ಕ್ರಮ ಕೈಕೊಳ್ಳದೆ ಏನು ಮಾಡುತ್ತಿದ್ದರು ಎಂದು ಕೇಳಬೇಕಾಗಿದೆ. ಸ್ಟಾಕನ್ನು ಚೆಕ್ ಮಾಡುವ ಬಿ.ಡಿ.ಒ. ಅವರು 1971ನೇ ಇಸವಿಯಿಂದ 1972ನೇ ಇಸವಿಯ ಕೊನೆಯವರೆಗೆ ಎಷ್ಟು ಸಲ ಚೆಕ್ ಮಾಡಿದ್ದರು ಎಂಬ ಬಗ್ಗೆ ರಿಪೋರ್ಟನ್ನು ಮಾನ್ಯ ಮಂತ್ರಿಗಳು ಸಭೆಯ ಮುಂದೆ ಇಡಬೇಕು. ಆ ರೀತಿ ಇಡದಿದ್ದರೆ ಈ ವಿಚಾರದಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆಂದು ಅರ್ಥ ಬರುತ್ತದೆ. ಇದು ಕೇವಲ ಒಂದೆರಡು ದಿನಗಳಲ್ಲಿ ನಡೆದ ದುರುಪಯೋಗವಲ್ಲ, ಒಂದು ಅಥವಾ ಒಂದೂವರೆ ವರ್ಷಗಳಲ್ಲಿ ನಡೆದಿರಬೇಕು. ಸ್ಟಾಕ್ ಇಲ್ಲದಿದ್ದರೂ ಸ್ಟಾಕ್ ಇದೆ ಎಂದು ತೋರಿಸಿರಬೇಕು. ಈ ಕಾರಣಗಳಿಂದ ಕೂಡಲೇ ಈ ಬಗ್ಗೆ ಆಡಿಟ್ ಮಾಡಿಸಿ ಯಾರು ಯಾರು ಇದಕ್ಕೆ ಜವಾಬ್ದಾರರು ಎಂದು ಕಂಡುಬರುತ್ತಾರೋ ಅಂತಹವರಿಂದ ದುರುಪಯೋಗದ ಹಣವನ್ನು ವಸೂಲಿ ಮಾಡಬೇಕು. ಆದರೆ ಇದುವರೆಗೆ ಯಾವ ಒಂದು ಕ್ರಮವನ್ನೂ ತೆಗೆದುಕೊಂಡಿಲ್ಲ. ನಿಮ್ಮ ಹಿತಚಿಂತಕರು ಅಲ್ಲಿರುವ ಕಾರಣದಿಂದ ತನಿಖೆ ಮಾಡಿಸಿಲ್ಲವೆಂದು ಕಾಣುತ್ತದೆ. ಮೊನ್ನೆ ತಾನೆ ಒಂದು ವಿಮಾನ ಅಪಘಾತವಾದ ಕಾರಣ ಶ್ರೀ ಕರಣ್‌ಸಿಂಗ್ ಅವರು ರಾಜೀನಾಮೆ ಕೊಟ್ಟರು. ಆದರಂತೆ ನಿಮಗೂ ಸಹ ಇರುವುದು ಒಂದೇ ಒಂದು ಶಿಕ್ಷೆ ಎಂದರೆ ರಾಜೀನಾಮೆ ಕೊಡುವುದು. ಅಲ್ಲಿಯ ಕಮಿಟಿಯವರು ಕೇಸ್ ಹಾಕಿದ್ದಾರೆಂಬ ಸಮಾಧಾನದಿಂದ ಸರ್ಕಾರದವರು ಸುಮ್ಮನಿರುವುದಕ್ಕೆ ಸಾಧ್ಯವಿಲ್ಲ. ಸೆಕ್ಷನ್ 30ರ ಪ್ರಕಾರ ತಾವು ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ಎಂದು ಕೇಳುತ್ತೇನೆ. ಈ ಸೊಸೈಟಿಯಲ್ಲಿ ಮೋಸವಾಗಿದೆ ಎಂದು ತಿಳಿದಮೇಲೂ ರಿಜಿಸ್ಟ್ರಾರ್ ಅವರು ತಮ್ಮ ಜವಾಬ್ದಾರಿಯನ್ನು ಏತಕ್ಕೆ ನಿರ್ವಹಣೆ ಮಾಡಲಿಲ್ಲ! ಇವರಲ್ಲಿ ಏನೋ ಮೋಸ ನಡೆದಿದೆ ಎಂದು ಗೊತ್ತಾದ ಮೇಲೆ ಆ ಮೇನೇಜಿಂಗ್ ಕಮಿಟಿಯನ್ನೇ ರದ್ದು ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಆದರೂ ಅಧಿಕಾರವನ್ನು ಏತಕ್ಕೆ ಚಲಾಯಿಸಲಿಲ್ಲವೆಂದು ಕೇಳುತ್ತೇನೆ. ತಾವೂ ಸಹ ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿದ್ದೀರೆಂದು ಕಾಣುತ್ತದೆ. ಇಲ್ಲದಿದರೆ ಇದನ್ನು ಇಲ್ಲಿಯವರೆಗೆ ಬಿಡುವುದಕ್ಕೆ ಕಾರಣವೇ ಇಲ್ಲ. 1971ನೇ ಇಸವಿಯ ಆಡಿಟ್ ವರದಿಯಲ್ಲಿ ಇದನ್ನು ಹೇಳಿದ್ದರೂ ಸಹ ಸರ್ಕಾರದವರು ತಪ್ಪಿಸ್ತರ ಮೇಲೆ ಕ್ರಿಮಿನಲ್ ಕೇಸ್ ಹಾಕದೆ ಮುಂದುವರಿಸಿಕೊಂಡು ಬಂದಿರುವುದಕ್ಕೆ ಕಾರಣವೇನು? ನಿಮ್ಮ ಪ್ರಮುಖರು ನಿಮ್ಮ ಹಿತಚಿಂತಕರು ಅಲ್ಲಿದ್ದಾರೆಂಬ ಕಾರಣದಿಂದ. ನಿಮ್ಮ ಇಲಾಖೆಯಲ್ಲಿರುವ ಅಧಿಕಾರಿಗಳು ಮಾಡಿರುವ ಅತ್ಯಾಚಾರಕ್ಕೋಸ್ಕರ, ಆ ಒಂದು ಪಾಪದ ಹೊರೆಯನ್ನು ತಾವೇ ಹೊತ್ತುಕೊಂಡು ಅಧಿಕಾರ ತ್ಯಾಗಮಾಡುವುದೊಂದೇ ತಮಗೆ ಉಳಿದಿರತಕ್ಕಂಥ ಮಾರ್ಗ. ಅದೇ ತಮಗೆ ಮೋಕ್ಷದ ದಾರಿ. ಆಗಿರುವ ಅನ್ಯಾಯವನ್ನು ಬಯಲಿಗೆ ಇಡಲೇ ಬೇಕು. ಮೊನ್ನೆ ಬೆಂಗಳೂರು ನಗರದಲ್ಲಿ ಇದೇ ರೀತಿ ಒಂದು ಕಡೆ ಆಗಿರುವ ಅನ್ಯಾಯದ ಬಗ್ಗೆ ತಾವು ಕೈಹಾಕಿಲ್ಲ; ಆದರೆ ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲಾ ಬ್ಯಾಂಕ್‌ಗಳಲ್ಲಿ ಮಾತ್ರ ಅನ್ಯಾಯವಾಗಿರದಿದ್ದರೂ ಕೈ ಹಾಕುತ್ತಿದ್ದೀರಿ. ಈ ರೀತಿ ದುರುಪಯೋಗವಾಗಿರುವುದಕ್ಕೆ ನಿಮ್ಮ ಅಧಿಕಾರಿಗಳ ಅಲಕ್ಷತನವೇ ಮುಖ್ಯ ಕಾರಣ. ಅವರನ್ನು ಮೊದಲು ಸರಿಪಡಿಸಬೇಕು. ಈ ರೀತಿ ಅಧಿಕಾರ ದುರುಪಯೋಗ ಮಾಡಿಕೊಂಡ ಅಧಿಕಾರಿಗಳನ್ನು ಅವರ ಸ್ಥಾನದಿಂದ ತೆಗೆದುಹಾಕಿ, ಇಲ್ಲವೇ ನೀವಾದರೂ ಅಧಿಕಾರ ಬಿಡಿ. ಇವೆರಡೂ ಆಗದೆ, ಇದೇ ರೀತಿ ಮುಂದುವರಿಯಲ್ಲಿ ಎಂದರೆ, ಅದು ಸರಿಹೋಗುವುದಿಲ್ಲ. ಸಾರ್ವಜನಿಕರ ಹಣವನ್ನು ಅಧಿಕಾರಿಗಳು ತಿಂದುಹಾಕುವುದಕ್ಕೆ ಬಿಡುವುದು ಸರಿಯಲ್ಲ. ಯಾರು ಜವಾಬ್ದಾರಿಯಿಂದ ವರ್ತಿಸಿದ್ದಾರೆ, ಅವರನ್ನು ಆ ಸ್ಥಾನದಿಂದ ತೆಗೆಯಲೇ ಬೇಕು ಮತ್ತು ಈಗ ಆಗಿರುವ ದುರುಪಯೋಗವನ್ನು ಸರಿಪಡಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ವಾಟಾಳ್ ನಾಗರಾಜ್.**—ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ಪ್ರಶ್ನೆ. ನೆನ್ನೆ ತಾನೆ ಈ ಸಭೆಯಲ್ಲಿ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲಾ ಬ್ಯಾಂಕ್‌ಗಳ ಬಗ್ಗೆ ದೊಡ್ಡ ಚರ್ಚೆಯೇ ನಡೆದಿದೆ. ಆ ಬ್ಯಾಂಕಿನ ಆಡಿಟ್ ರಿಪೋರ್ಟಿನಲ್ಲಿ ಆಡಳಿತ ಬಹಳ ಚೆನ್ನಾಗಿದೆ, ಕೆಲಸ ಚೆನ್ನಾಗಿ ನಡೆದಿದೆ ಎಂದು ಹೇಳಿದ್ದರೂ ಸಹ ಸರ್ಕಾರದವರು ಅದನ್ನು ರದ್ದು ಮಾಡಿ ಅಲ್ಲಿದ್ದ ಅಧ್ಯಕ್ಷರನ್ನು ಮನೆಗೆ ಕಳುಹಿಸಿ ಅದರ ಆಡಳಿತವನ್ನು ಸರ್ಕಾರದವರೇ ವಹಿಸಿಕೊಳ್ಳುವುದಕ್ಕೆ ಹೊರಟಿದ್ದಾರೆ. ಆದರೆ ಇಲ್ಲಿ ಗೊಬ್ಬರದ ಮಾರಾಟದಲ್ಲಿ ಎರಡು ಲಕ್ಷದ 65 ಸಾವಿರ ರೂಪಾಯಿಗಳ

ಅಪವ್ಯಯವಾಗಿದೆ ಎಂದು ಕಂಡಾಗಲೂ ಸಹ ಸರ್ಕಾರ ಸುಮ್ಮನೆ ಕುಳಿತಿದೆ ಎಂದರೆ ಇದರಲ್ಲಿ ಏನೋ ರಾಜಕೀಯ ಇರಬೇಕು. ಈ ಇಲಾಖೆಯ ಮಂತ್ರಿಗಳನ್ನು ಕಂಡರೆ ನನಗೆ ಬಹಳ ಅನುಕಂಪ. ನಿಮ್ಮ ಹಾಗೆಯೇ ಶ್ರೀಮಾನ್ ಬದರಿನಾರಾಯಣ್ ಅವರೂ ಸಹ ಇದ್ದಾರೆ. ನಿಮ್ಮನ್ನು ನೋಡಿದಾಗಲೆಲ್ಲಾ ಗೋವು ಮತ್ತು ಕರುವಿನ ಕಥೆ ಜ್ಞಾಪಕಕ್ಕೆ ಬರುತ್ತದೆ. ನಿಮ್ಮ ಜಾತಕವೇ ಆ ರೀತಿ ಇದೆಯೆಂದು ಕಾಣುತ್ತದೆ. ಸಂಪೂರ್ಣವಾಗಿ ನಿಮ್ಮನ್ನೇ ನುಂಗುವ ಇಲಾಖೆಗೆ ತಾವು ಮಂತ್ರಿಗಳಾಗಿದ್ದೀರಿ. ಇಂದು ಜನರು ಗೊಬ್ಬರವನ್ನೇ ತಿನ್ನುವ ಮಟ್ಟಕ್ಕೆ ಬಂದಿದ್ದಾರೆ. ಅಧಿಕಾರಿಗಳನ್ನು ಬೈಯುವುದಕ್ಕೆ ನಾನು ಹೋಗುವುದಿಲ್ಲ. ಇಂದು ಈ ಸೊಸೈಟಿಯಲ್ಲಿ ನಿಮ್ಮ ಪಾರ್ಟಿಯವರೇ ಅಧ್ಯಕ್ಷರಾಗಿದ್ದಾರೆ. ಆದ ಕಾರಣ ಆ ಸೊಸೈಟಿಯಲ್ಲಿ ಇಷ್ಟೊಂದು ಹಣದ ಅಪವ್ಯಯವಾಗಿದ್ದರೂ ಸಹ ತಾವು ಕೇವಲ ಒಂದು ಸಣ್ಣ ಕಂಪ್ಲೈಂಟನ್ನು ಲಾಡ್ಜ್ ಮಾಡಿದ್ದೀರಿ. ಅದೂ ಒಬ್ಬ ಬಡ ಗುಮಾಸ್ತನ ಮೇಲೆ. ಆತ ಎರಡನೇ ದರ್ಜೆಯ ಗುಮಾಸ್ತ. ಆತನ ಹೆಸರು ನಂಜಯ್ಯ ಎಂದು ಆತನ ಮೇಲೆ ಕೇಸ್ ಹಾಕಿದ್ದೀರಿ. ನಾಮಕಾವಸ್ತೆ ಕೇಸ್ ಹಾಕಿದ್ದೇವೆ, ನಿನ್ನನ್ನು ಬಚಾವ್ ಮಾಡುತ್ತೇವೆ, ನೀನು ಧೈರ್ಯವಾಗಿರು ಎಂದು ಆ ಗುಮಾಸ್ತನಿಗೆ ಹೇಳಿರುವುದು ನಮಗೆ ಗೊತ್ತಿದೆ. ಇದಕ್ಕೆಲ್ಲಾ ಕಾರಣ ನಿಮ್ಮ ಪಾರ್ಟಿಯವರೇ ಆದ ಶ್ರೀಮಾನ್ ಟಿ. ಪಿ. ಬೋರಯ್ಯನವರು ಅದರ ಅಧ್ಯಕ್ಷರಾಗಿರುವುದು. ನಮಗೆ ತಿಳಿದುಬಂದಿರುವಂತೆ ಈ ಹಣದ ಅಪವ್ಯಯದಲ್ಲಿ ಅಧ್ಯಕ್ಷರ ಕೈವಾಡ ನಡೆದಿದೆ.

ಅದರಲ್ಲಿ ಸಂಪೂರ್ಣವಾದ ಒಂದು ಪಾರ್ಟಿ ಒಂದು ಪಕ್ಷದ ಧೋರಣೆಯಿಂದ ಇಷ್ಟು ಅನ್ಯಾಯ ನಡೆದಿದೆ. ಅದರೂ ಅದನ್ನು ಮುಚ್ಚಿಕೊಂಡು ಕುಳಿತುಕೊಂಡಿದ್ದಾರೆ. ಸರ್ಕಾರದವರನ್ನು ನಾನು ನೇರವಾಗಿ ಆಕ್ಷೇಪಣೆ ಮಾಡುತ್ತೇನೆ. ಅಲ್ಲಿ ನಿಜವಾಗಿ 1969 ನೇ ಇಸವಿಯಿಂದ 72ರ ವರೆಗೆ ಜನರಲ್ ಬಾಡಿ ಮೀಟಿಂಗ್ ಕರೆದಿಲ್ಲ. ಅಲ್ಲಿ ಪ್ರತಿವರ್ಷ 3-3 ಜನ ಡೈರೆಕ್ಟರು ನಿವೃತ್ತಿಯಾಗತಕ್ಕ ಜಾಗದಲ್ಲಿ ಇದುವರೆಗೂ ಯಾರನ್ನೂ ನಾಮಕರಣ ಮಾಡದೆ ತನ್ನವರನ್ನೇ ತಮ್ಮ ಗುಂಪಿನ ಜನರನ್ನೇ ಡೈರೆಕ್ಟರನ್ನಾಗಿ ಮಾಡಿಕೊಂಡು ಅಲ್ಲಿ ಭ್ರಷ್ಟಾಚಾರ ನಡೆಯುವುದಕ್ಕೆ ಸರ್ಕಾರ ಹೊಣೆಯಾಗಿದೆ. ಇದನ್ನು ತಪ್ಪಿಸದಿದ್ದರೆ ನಿಮ್ಮ ಪಾರ್ಟಿಯ ಕೀರ್ತಿಗೆ ಧಕ್ಕೆ ಬರುತ್ತದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಮಾವೇಗೌಡ (ಬನ್ನೂರು).—ಸ್ವಾಮಿ, ಮೊನ್ನೆ ನಾನು ಈ ಟೀನರಸೀಪುರದಲ್ಲಿನ ಅಗ್ರಿಕಲ್ಚರಲ್ ಕೋಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಗೊಬ್ಬರ ದುರುಪಯೋಗವಾಗಿರುವ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದಾಗ ಬಹಳ ಬೇಜವಾಬ್ದಾರಿಯುತವಾದ ಉತ್ತರ ಬಂದಿದೆ. ಆ ಸೊಸೈಟಿಯಲ್ಲಿ 2,06,248 ರೂಪಾಯಿಗಳು ದುರುಪಯೋಗವಾಗುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಈ ಹಣ ದುರುಪಯೋಗವಾಗಿದೆ ಎಂದು ಹೇಳಿ ಯಾವಾಗ ಈ ಸಂಘದ ಸದಸ್ಯರು ತೀರ್ಮಾನವನ್ನು ಕೈಗೊಂಡರು ಎಂದು ಹೇಳಿದರೆ ನಾನು ಈ ಪ್ರಶ್ನೆಯನ್ನು ಕೇಳಿದ ನಂತರ ಈ ತೀರ್ಮಾನವನ್ನು ಕೈಗೊಂಡು ಕೇವಲ ಒಬ್ಬ ಅಧಿಕಾರಿಯ ಮರೆಯಲ್ಲಿ ಇದರಿಂದ ತಪ್ಪಿಸಿಕೊಳ್ಳುವ ಕೆಲಸವನ್ನು ಮಾಡಿ ಸಂಘದ ಸೇಲ್ಸ್ ಕ್ಲಾರ್ಕ್ ಶ್ರೀ ನಂಜಯ್ಯ ಎನ್ನುವವರ ಮೇಲೆ ಅಪಾದನೆಯನ್ನು ಹೊರಿಸತಕ್ಕದ್ದು ಸರ್ಕಾರಕ್ಕಾಗಲೀ, ಆಡಳಿತವನ್ನು ನಡೆಸತಕ್ಕವರಿಗೆ ಆಗಲೀ, ಸರಿಯೇ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಶ್ರೀಮಾನ್ ನಂಜಯ್ಯನವರ ಸುಮಾರು ಒಂದೂವರೆ ತಿಂಗಳ ಕೆಳಗೆ ಹುಷಾರಿಲ್ಲದೆ ಅವರು ಆಸ್ಪತ್ರೆಯಲ್ಲಿರುವ ಕಾಲದಲ್ಲಿ ಅವನು ಗೋಡೌನ್ ಜವಾಬ್ದಾರಿಯನ್ನು ಸಂಘಕ್ಕೆ ಕೊಡದೆ ಹೋಗಿದ್ದ ಸಂದರ್ಭದಲ್ಲಿ ಸಂಘದ ಸದಸ್ಯರ ತೀರ್ಮಾನದ ಪ್ರಕಾರ ಸಂಘದ ಇಬ್ಬರು ಡೈರೆಕ್ಟರುಗಳ ಸಮಕ್ಷಮದಲ್ಲಿ ಆ ಗೋಡೌನಿನ ಬೀಗವನ್ನು ಒಡೆದು ವ್ಯಾಪಾರ ಮಾಡತಕ್ಕದ್ದು ಎಂದು ಹೇಳಿ ತೀರ್ಮಾನ ಮಾಡಿ ವ್ಯಾಪಾರ ಮಾಡಿದ್ದಾರೆ. ಇದರಲ್ಲಿ ಮೂಲ ಪ್ರಶ್ನೆ ಏನೇಂದರೆ ನಂಜಯ್ಯನವರ ಗೈರುಹಾಜರಿಯಲ್ಲಿ ಸಂಘದ ಡೈರೆಕ್ಟರುಗಳು ಬೀಗ ಹೊಡೆದು ಅವರು ತಿಂಗಳು ಗಟ್ಟಲೇ ವ್ಯಾಪಾರವನ್ನು ಮಾಡಿರುವ ಕಾಲದಲ್ಲಿ ಅದರ ಜವಾಬ್ದಾರಿಯನ್ನು ಯಾರ ಮೇಲೆ ಹಾಕಬೇಕಾಗುತ್ತದೆ ? ಜವಾಬ್ದಾರಿಯುತವಾಗಿ ನಡೆಯತಕ್ಕ ಸಂಘ ಸಂಸ್ಥೆಯವರು ಯಾವ ನಂಬಿಕೆಯಿಂದ ಇದನ್ನು ಮಾಡಿದ್ದಾರೆ ? ಈ ಬಗ್ಗೆ ಸಹಕಾರ ಇಲಾಖೆಯವರು ಯಾವ ಕ್ರಮವನ್ನು ಕೈಗೊಂಡಿದ್ದಾರೆ ? ಇದು ನನ್ನ ಆರೋಪ., ಸಹಕಾರ ಇಲಾಖೆಯವರು ಆ ಸಂಘದವರು ಮಾಡಿರತಕ್ಕ ನಿರ್ಣಯವನ್ನು ನಂಬಿ ಆ ಸಂಘಕ್ಕೆ ಸಂಬಂಧಪಟ್ಟ ಗುಮಾಸ್ತನ ಮೇಲೆ ಕೇಸನ್ನು ಹಾಕಿದ್ದಾರೆ ಈ ಸಂಘದವರು ಸೇರಿ ಈ ಕೇಸನ್ನು ವಜಾ ಮಾಡತಕ್ಕ ಸಾಹಸವನ್ನು ಮಾಡಿದ್ದಾರೆ. ಆ ಕೇಸು ವಜಾ ಆದಂತಹ ಕಾಲದಲ್ಲಿ ಈ ಒಂದು ಸಂಘದ ಹಣ ದುರುಪಯೋಗವಾಗಿರುವುದಕ್ಕೆ ಯಾರು ಜವಾಬ್ದಾರರು ? ಇದಕ್ಕೆ ಇವೊತ್ತು ಸರ್ಕಾರದವರು ಉತ್ತರವನ್ನು ಹೇಳಬೇಕು ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ವಿಚಾರ

(ಶ್ರೀ ಕೆ. ಮಾದೇ ಗೌಡ)

ದಲ್ಲಿ ಸಂಘದ ಆಡಳಿತ ವರ್ಗದವರು ಸಂಬಂಧಪಟ್ಟ ಗುಮಾಸ್ತನಿಗೆ ಪತ್ರವ್ಯವಹಾರ ನಡೆಸಿ ಈ ಗೊಬ್ಬರದ ಟ್ರಾನ್ಸ್‌ಯಾಕ್ಷನ್ನಿನಲ್ಲಿ ಕೆಲವು ವ್ಯವಸ್ಥೆಯನ್ನು ಮಾಡಿಕೊಂಡಿದ್ದರು ಎನ್ನುವ ದೂರು ಇದೆ. ಅಧ್ಯಕ್ಷರ ಕೈ ಬರವಣಿಗೆಯನ್ನು ನೋಡಿಕೊಂಡು ಗೊಬ್ಬರವನ್ನು ಸಾಗಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ ಎನ್ನುವ ಅಪಾದನೆಗಳು ಇವೆ. ಇಂಥಾ ಪತ್ರಗಳನ್ನು ತನಿಖಾ ಕಮಿಟಿಯ ಮುಂದೆ ಇಡಬೇಕೆಂದು ಒತ್ತಾಯ ಮಾಡಿದರೂ ಕೂಡ ಅವನ್ನು ಇಟ್ಟರೆ ತೊಂದರೆಯಾಗುತ್ತದೆ ಎಂದು ಆ ಪತ್ರವ್ಯವಹಾರವನ್ನು ತನಿಖಾ ಕಮಿಟಿಯ ಮುಂದೆ ಇಟ್ಟಿಲ್ಲ. ಈ ಬಗ್ಗೆ ವಿವರವಾದ ತನಿಖೆಯಾದರೆ ಇಂಥಾ ಪತ್ರವ್ಯವಹಾರವನ್ನು ತನಿಖಾ ಕಮಿಟಿಯ ಮುಂದೆ ಇಡುವುದಕ್ಕೆ ತಯಾರಾಗಿದ್ದಾರಾ ? ಇದನ್ನು ಸರ್ಕಾರದವರು ಯಾವ ರೀತಿ ತನಿಖೆಯನ್ನು ನಡೆಸುತ್ತಾರೆ, ಯಾವ ರೀತಿಯಲ್ಲಿ ಸರ್ಕಾರ ಇದರ ವಿಚಾರದಲ್ಲಿ ಮಾದರಿಯಾಗುತ್ತದೆ ಎಂಬುದನ್ನು ನಾವು ಕಾದು ನೋಡುತ್ತೇವೆ. ಈ ಬಗ್ಗೆ ಸರ್ಕಾರದವರು ಉತ್ತರವನ್ನು ಕೊಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ ಶಂಕರ ಆಳ್ವ (ಸಹಕಾರ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಕೆಲವು ಮಾನ್ಯ ಸದಸ್ಯರ ಸವಾಲಿಗೆ ಪ್ರಶ್ನೋತ್ತರ ವೇಳೆಯಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ಈ ಸಂಘದಲ್ಲಿ ಎಷ್ಟು ಹಣ ಕಾಣೆಯಾಗಿದೆ ಮತ್ತು ಆ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದೇವೆ ಎನ್ನುವ ಬಗ್ಗೆ ನಾನು ಈಗಾಗಲೇ ಕೆಲವು ವಿವರಗಳನ್ನು ಈ ಸಂಬಂಧದ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಕೊಟ್ಟಿದ್ದೇನೆ. ಇದಕ್ಕೆ ಯಾರು ಜವಾಬ್ದಾರರು ಎನ್ನುವ ಬಗ್ಗೆ ಒಂದು ಸರಿಯಾದ ತನಿಖೆಯಾಗಬೇಕು ಎಂದು ಮಾನ್ಯ ಸದಸ್ಯರು ಹೇಳಿದರು. ಇದನ್ನು ತನಿಖೆ ಮಾಡುವುದಕ್ಕೆ ನಾನು ಆದೇಶವನ್ನು ಕೊಡುತ್ತೇನೆ. ಇದರಲ್ಲಿ ತಮಗೆ ತಿಳಿದಹಾಗೆ ಏನಾಗಿದೆ ಎಂದರೆ ಹಿಂದೆ ಫೆಡರೇಷನ್ನಿನವರು ಗೊಬ್ಬರವನ್ನು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಿಗೆ ಕೊಡುತ್ತಿದ್ದರು. ಅದರಿಂದ ಯಾವ ತೊಂದರೆಯಾಗುತ್ತಾ ಇರಲಿಲ್ಲ. ಈಗ ಸ್ವಲ್ಪ ತೊಂದರೆಯಾಗಿದೆ. 1970ನೇ ಇಸವಿಯಲ್ಲಿ ಆ ಸಹಕಾರಸಂಘದ ಸೆಕ್ರೆಟರಿಯವರು ಪೋಲೀಸಿನವರಿಗೆ ಒಂದು ಕಂಪ್ಲೇಂಟ್ ಕೊಟ್ಟು ಗೋಡೌನ್‌ನಲ್ಲಿ ಗೊಬ್ಬರ ಕಳವು ಆಗಿದೆ ಇದನ್ನು ತನಿಖೆ ಮಾಡಬೇಕೆಂದು ಹೇಳಿದರು. ನಂತರ 1971–72 ರಲ್ಲಿ ಕೋ ಆಪರೇಟೀವ್ ಸೊಸೈಟಿಯ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಮತ್ತು ಮಾರ್ಕೆಟಿಂಗ್ ಫೆಡರೇಷನ್ನಿನವರು ಇದರಲ್ಲಿ ತನಿಖೆಯನ್ನು ನಡೆಸಿದರು. ಆಗ ಅದರಲ್ಲಿ 2,06,248 ರೂಪಾಯಿ ಬೆಲೆಬಾಳುವ ಗೊಬ್ಬರ ಕೆಲವು ಇನಸೆಕ್ಟಿಸೈಡ್ಸ್, ಇತ್ಯಾದಿಗಳು ದುರುಪಯೋಗವಾಗಿದೆ ಎಂಬುದು ಗೊತ್ತಾಯಿತು. ಅದರಲ್ಲಿ ಸುಮಾರು 50 ಸಾವಿರ ಚಿಲ್ಲರೆ ರೂಪಾಯಿಗಳು 4 ಪರ್ಸೆಂಟಿನಂತೆ ನಮಗೆ ಷಾರ್ಟೇಜ್ ಕೊಡಬೇಕೆಂದು ಸೊಸೈಟಿಯವರು ಫೆಡರೇಷನ್ನಿನವರನ್ನು ಕೇಳಿಕೊಂಡರು. ಆದರೆ ಅದಕ್ಕೆ ಅವರು ಒಪ್ಪಲಿಲ್ಲ. ಅದರಲ್ಲಿ 2,06,248 ರೂಪಾಯಿಗಳು ಬೆಲೆ ಬಾಳುವ ಗೊಬ್ಬರ ಕಾಣೆಯಾಗಿದೆ ಇದನ್ನು ಪತ್ತೆ ಮಾಡಲು ಒಂದು ಕಮಿಟಿಯನ್ನು ಮಾಡಬೇಕೆಂದು ಮ್ಯಾನೇಜ್‌ಮೆಂಟಿನವರು ಮತ್ತು ಸರ್ಕಾರದವರು ಹೇಳಿದ ಹಾಗೆ ಒಂದು ಕಮಿಟಿಯನ್ನು ನೇಮಕ ಮಾಡಿದರು. ಆ ಕಮಿಟಿಯವರು ಆ ಹಣದ ದುರುಪಯೋಗದ ಅಪಾದನೆಯನ್ನು ಸಂಘದ ಸೇಲ್ ಕ್ಲಾರ್ಕ್ ಶ್ರೀ ನಂಜಯ್ಯ ಎನ್ನುವವರ ಮೇಲೆ ಹೊರಿಸಿದರು. 20–12– 971ರಲ್ಲಿ ಒಂದು ಕಮಿಟಿ ಮಾಡಿದರು. ಅದರಲ್ಲಿ ಸಹ ಯುನಾನಿಮಿಟಿಯ ಅಭಿಪ್ರಾಯ ಬರಲಿಲ್ಲ. ಮೆಜಾರಿಟಿಯಲ್ಲಿ ನಂಜಯ್ಯನ ಮೇಲೆ ಜವಾಬ್ದಾರಿಯಾಗಿದ್ದಾನೆ, ಅವನ ಮೇಲೆ ಕೇಸ ಹಾಕಬೇಕೆಂದು ತೀರ್ಮಾನವಾಯಿತು. ಅದರ ಪ್ರಕಾರ ಆರ್ಬಿಟ್ರೇಶನ್ ಕೇಸ್ ಹಾಕಿದರು ಮತ್ತು ಫಿರ್ಯಾದಿ ಹಾಕಿದರು. ಈ ಬಗ್ಗೆ ನಂಜಯ್ಯನ ಆಸ್ತಿಯನ್ನು ಅಟಾಚ್ ಮಾಡಬೇಕೆಂದು ರಿಜಿಸ್ಟ್ರಾರವರಿಗೆ ಒಂದು ಲಿಸ್ಟ್ ಕೊಟ್ಟಿದ್ದರು. ಆ ಲಿಸ್ಟ್ ನೋಡಿದರೆ, ಸ್ವಲ್ಪ ಆಸ್ತಿ ಮಾತ್ರ ಅವನ ಹೆಸರಿನಲ್ಲಿ ಇದೆ ಹೊರತು ಹೆಚ್ಚು ಇಲ್ಲ. ಆದ್ದರಿಂದ ಡಿಕ್ರಿ ಪಡಕೊಂಡರೂ ಎಲ್ಲಾ ವಸೂಲು ಆಗುವುದಿಲ್ಲವೆಂದು ಕ್ರಮ ತೆಗೆದುಕೊಂಡಿದ್ದಾರೆ ಮಾನ್ಯ ಸದಸ್ಯರು ಸೆಕ್ಷನ್ 30ರ ಪ್ರಕಾರ ಹಾಕಬೇಕೆಂದು ಹೇಳಿದರು. ಅದರ ಬಗ್ಗೆ ಕೂಡಲೇ ಎನ್‌ಕ್ವಯರಿ ಆಗಬೇಕೆಂದು ಆದೇಶ ಕೊಟ್ಟಿದ್ದೇನೆ. ಅದರಲ್ಲಿ ತನಿಖೆ ಮಾಡಿ ಯಾರ್‍ಯಾರು ಡೈರೆಕ್ಟರು, ಸೆಕ್ರೆಟರಿ ಮತ್ತು ಇನ್ನಿತರರು ಜವಾಬ್ದಾರರಾಗಿದ್ದಾರೆ, ಅವರ ಮೇಲೆ ಕ್ರಮತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಆದ್ದರಿಂದ ಯಾರನ್ನೂ ಬಿಡುವ ಹಾಗೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ಇಲಾಖೆಗೆ ಇದು ಯಾವಾಗ ಗೊತ್ತಾಯಿತು ! ರಿಜಿಸ್ಟ್ರಾರ್‌ರವರ ಮುಂದೆ ಏನಾದರೂ ದೂರುಗಳು ಬಂದಿವೆಯೇ !

ಶ್ರೀ ಎ. ಶಂಕರ ಆಳ್ವ.—ಸೊಸೈಟಿಯ ಸೆಕ್ರಟರಿಯೇ ದೂರನ್ನು ಕೊಟ್ಟಿದ್ದಾರೆ. ಆದ್ದರಿಂದ ಯಾರ್ಯಾರು ತಪ್ಪು ಮಾಡಿದ್ದಾರೆ, ಯಾರ್ಯಾರು ಇದಕ್ಕೆ ಜವಾಬ್ದಾರರು ಇದ್ದಾರೆ ಅವೆಲ್ಲವನ್ನೂ ತನಿಖೆ ಮಾಡುತ್ತಿದ್ದಾರೆ. ಅದು ಬಂದ ಮೇಲೆ ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಎರಡೂವರೆ ಲಕ್ಷ ರೂಪಾಯಿ ದುರುಪಯೋಗ ಮಾಡಬೇಕಾದರೆ ಒಬ್ಬ ಗುಮಾಸ್ತನ ಕೈಯಲ್ಲಿ ಆಗುವುದಿಲ್ಲ. ಇದಕ್ಕೆ ಕೆಲವು ಹಿಂದಿನ ಡೈರೆಕ್ಟರು ಮತ್ತಿತರರು ಸೇರಿದ್ದಾರೆಂದು ಅರ್ಥವಾಗುತ್ತದೆ. ಆದ್ದರಿಂದ ಇದಕ್ಕೆ ಒಂದು ಜುಡಿಶಿಯಲ್ ಎನ್‌ಕ್ವಾಯರಿ ಮಾಡುತ್ತೀರಾ ? ಆಗ ನಿಜ ಸಂಗತಿ ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ,—ನಿಮ್ಮ ಇಲಾಖೆಯ ಅಧಿಕಾರಿಗಳಿಗೆ ಗೊತ್ತಾಗಿ ಏನು ಕ್ರಮ ಅವರು ತೆಗೆದುಕೊಂಡಿದ್ದಾರೆ ?

ಶ್ರೀ ಎ. ಶಂಕರ ಆಳ್ವ.—ಕಾನೂನು ಪ್ರಕಾರ ಏನು ಅಧಿಕಾರ ಉಂಟು, ಅದರಂತೆ ಕ್ರಮ ತೆಗೆದುಕೊಂಡಿದ್ದಾರೆ. ಈಗ ತನಿಖೆ ಮಾಡಿ ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಎರಡು ವರ್ಷವಾದರೂ ಏನೂ ಕ್ರಮ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವೇನು ?

ಶ್ರೀ ಎ. ಶಂಕರ ಆಳ್ವ.—ಸೊಸೈಟಿಯವರು ಕ್ರಮ ಕೈಗೊಂಡಿದ್ದಾರೆ. ನಂಜಯ್ಯನ ಮೇಲೆ ಸೂಟ್ ಹಾಕಿದ್ದಾರೆ. ಅದರಲ್ಲಿ ಬೇರೆಯವರು ಸಹ ಇದ್ದಾರೆಯೇ ಎಂದು ತನಿಖೆ ಮಾಡುತ್ತಿದ್ದೇವೆ.

ಶ್ರೀ ಕೆ. ಮಾದೇ ಗೌಡ.—ತನಿಖೆ ಮಾಡುವುದಾದರೆ ರಿಜಿಸ್ಟ್ರಾರರನ್ನು ಹಾಕಿ ತನಿಖೆ ಮಾಡಿದರೆ ಇದರಲ್ಲಿದ್ದ ನಿಜವಾದ ಸಂಗತಿ ಹೊರಗೆ ಬರುತ್ತದೆ. ಆ ರೀತಿ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅದಕ್ಕೆ ಯಾರ್ಯಾರು ಸಂಬಂಧಪಟ್ಟಿದ್ದಾರೆ, ಅವರನ್ನು ಹಾಕುವುದಿಲ್ಲ ಬೇರೆಯವರನ್ನು ಹಾಕುತ್ತೇವೆ. ಆ ವಿಚಾರದಲ್ಲಿ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ—ಎರಡು ವರ್ಷವಾದರೂ ರಿಜಿಸ್ಟ್ರಾರ್ ಅಲ್ಲಿಗೆ ಏಕೆ ಭೇಟಿ ಕೊಟ್ಟಿಲ್ಲ ?

ಶ್ರೀ ಕೆ. ಮಾದೇ ಗೌಡ.—ಸಹಕಾರೀ ಸಂಘಗಳ ರಿಜಿಸ್ಟ್ರಾರ್‌ರವರಿಗೆ 1971 ರಲ್ಲಿ ನಾನು ಪಿಟಿಶನರಾಗಿ ಒಂದು ಅರ್ಜಿಯನ್ನು ಕೊಟ್ಟಿದ್ದೇನೆ. ಅದು ರೆಕಾರ್ಡಿನಲ್ಲಿ ಸಹ ಇದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಶಂಕರ ಆಳ್ವ.—ಏನು ಕೊಟ್ಟಿದ್ದಾರೆ, ಏನು ಇದೆ ಇತ್ಯಾದಿಗಳನ್ನು ವಿಚಾರಣೆ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸಚಿವರು ಉತ್ತರ ಹೇಳುವಾಗ ಅವರು ಫಿರ್ಯಾದಿ ಕೊಟ್ಟಿದ್ದನ್ನು ಏಕೆ ಹೇಳಿಲ್ಲ ! ಮತ್ತು ಮಾನ್ಯ ಸದಸ್ಯರು ಕೊಟ್ಟ ಫಿರ್ಯಾದಿಯ ಮೇಲೆ ಏನು ವಿಚಾರಣೆ ನಡೆಸಿದ್ದಾರೆ ?

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಇದನ್ನು ತಾವು ಬಹಳ ಸೀರಿಯಸ್ ಆಗಿ ತೆಗೆದುಕೊಳ್ಳಬೇಕು ಅವರು ಸರಿಯಾಗಿ ಇದಕ್ಕೆ ಉತ್ತರ ಹೇಳುತ್ತಿಲ್ಲ.

ಶ್ರೀ ಎ. ಶಂಕರ ಆಳ್ವ.—ನಾನು ಹೇಳುವುದನ್ನು ಎಲ್ಲವನ್ನು ಹೇಳಿದ್ದೇನೆ.

ಅಧ್ಯಕ್ಷರು.—ಸಭೆ ಈಗ ಮುಕ್ತಾಯವಾಗಿ ನಾಳೆ ಒಂದು ಗಂಟೆಗೆ ಸೇರುತ್ತದೆ.

The House adjourned at Thirty Minutes past Six of the Clock to meet again at One of the Clock on Thursday the 22nd March, 1973.

ANNEXURE

The Mysore Re-enacting (No. 2) Bill, 1973

(L.A, Bill No. 23 of 73)

A Bill to re-enact the Mysore Motor Vehicles (Taxation on Passengers and Goods (Amendment) Act, 1971.

Whereas certain amendments were made to the Mysore Motor Vehicles (Taxation on Passengers and Goods) Act, 1961 (Mysore Act 10 of 1961) by the Mysore Motor Vehicles (Taxation on Passangers and Goods) (Amendment) Act, 1971 (President's Act 15 of 1971) during the period of operation of the proclamation dated 27th March 1971 issued by the President of India under article 356 of the Constitution of India in relation to the State of Mysore ;

And Whereas it is expedient to re-enact the Mysore Motor Vehicles (Taxation on Passengers and Goods) (Amendment) Act, 1971 (President's Act, 15 of 1971) ;

Be it enacted by the Mysore State Legislature in the Twenty-fourth Year of the Republic of India as follows .—

1. **Short title, commencement and duration.**—(1) This Act may be called the Mysore Re-enacting (No. 2) Act, 1973.

(2) It shall come into force at once.

(3) It shall remain in force upto and inclusive of 31st March 1974.

2. **Re-enactment of President's Act 15 of 1971.**—The Mysore Motor Vehicles (Taxation on Passengers and Goods) (Amendment) Act, 1971. (President's Act 15 of 1971) is hereby re-enacted.

3 **Savings.**—Upon the expiry of this Act, the amendments made by the Mysore Motor Vehicles (Taxation on Passengers and Goods) (Amendment) Act, 1971 (President's Act 15 of 1971) as re-enacted by this Act in the Mysore Motor Vehicles (Taxation on Passengers and Goods) Act, 1961 (Mysore Act 10 of 1961) (hereinafter referred to as the Principal Act) shall cease to have effect and shall be omitted from the Principal Act and such of the provisions thereof as were affected by the said President's Act as re-enacted by this Act shall stand revived to the extent to which they would have otherwise continued in operation but for the passing of the said President's Act as re-enacted by this Act, but shall not affect—

(a) the previous operation of, or anything duly done or omitted to be done or suffered under, the Principal Act as amended by this Act or any rule or order made thereunder ; or (*b*) any right, privilege, obligation or liability acquired, accrued or incurred under the Principal Act as amended by this Act or any rule or order made thereunder ; or

(*c*) any penalty, forfeiture or punishment incurred in respect of any offence under the Principal Act as amended by this Act or any contravention of any rule or order made thereunder ; or

(*d*) any investigation, legal proceeding or remedy in respect of any such right, privilege, obligation, liability, penalty, forfeiture or punishment as aforesaid.

And any such investigation, legal proceeding or remedy may be instituted, continued or enforced and any such penalty, forefeiture or punishment may be imposed as if the amendments made by this Act had not expired.

Statement of Objects and Reasons

President's Act 15 of 1971 had been enacted to raise additional resources for the relief of Bangla Desh Refugees.

It is proposed that while the additional levys for the relief of Bangla Desh Refugees may cease the levy may be retained till 31st March 1974 to raise additional resources to meet the cost of 'People's Housing Programme' to be undertaken by the State Government.

Hence the Bill.

M. Y. GHORPADE.

TE. HANUMANTHAPPA,
Secretary,

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Thursday, the 22nd March 1973/Chaitra 1, 1895 S.E.

The House met in the Assembly Chamber, Vidhana Soudha, at One of the Clock.

MADAM SPEAKER [SMT. K. S. NAGARATHNAMMA] in the Chair.

STARRED QUESTIONS

(to which oral answers were given)

Road under Public Works Department in Kolar Taluk

171. **Sri C. BYRE GOWDA** (Vemgal).—

Will the Minister for Public Works and Electricity be pleased to state :—

(*a*) the road mileage in Kolar taluk under Public Works Department other than the National and State Highways and their names ;

(*b*) out of them, the road mileage which has been tarred ;

(*c*) the road mileage which has been asphalted and the road mileage of mud roads ;

(*d*) whether there is a proposal before the Government to tar or to asphalt the mud roads ?

Sri H. M. CHANNABASAPPA (Minister for Public Works and Electricity).—

(*a*) The length of these roads is 202.26 Kilo meters. The details regarding names etc., are furnished in the statement appended.

(*b*) 91.40 Kms.

(*c*) (i) The length of the Asphalted Road is 54.11 Kms.

(ii) The length of the mud road is 56.75 Kms.

(*d*) Yes. Depending upon the financial position of the Government, as many works as possible will be taken up every year.

(SRI H. M. CHANNABASAPPA)

STATEMENT

showing the roads in charge P. W. D. as on 31st March 1972 in Kolar Taluk, excluding National Highways and State Highways.

Sl. No.	Name of Road	Total Length in Kms.
1	2	3
	Major District Roads :—	
1	Cudapah Railway Feeder road 1/14 to 8/19 ...	9·66
2	Malur–Vemagal road 6/10 to 5/12, 5/13 to 8/17 ...	9·17
3	Kolar–Venkatagirikote road 3/44 to 8/53 ...	15·45
4	Kolar–Antharaganga road 0 to 8/2 ...	3·22
5	Kolar–Malur–Hosur road 1/9 to 6/16 ...	12·23
6	Kolar–Sompur road 0 to 8/16 ...	25·76
	Other District Roads :—	
7	Kolar-Tekal road 2/6 to 2/12 ...	9.88
8	Bangarpet–Vokkaleri road 1/7 to 8/11 ...	8.21
9	Volgerahalli-Holur-Yedarur road 1/1 to 8/4 ...	6.44
10	Road from 8/13 to K. S. Road to Kyalanur ...	4.83
11	Malur-Ramasandra Road 1/9 to 2/11 ...	3.54
	Village Roads :	
12	Muthakadahalli-Madanahalli road (*via*) Jeedarahalli 1/1 to 6/3 ...	4.18
13	Road from K. S. road circle to Sharda talkies circle along P.W.D. Colony ...	1.20
14	Road connecting Bangalore-Madras road at Devarayasamudram and K. V. Road ...	8.01
15	Muduvadi-Kothamangala road ..	13.68
16	Road from 1/30 mile of M. C. road to join K. S. Road *via* Chakarasanahally ...	11.59
17	Road from Vemgal to Hosahalli *via* Veerapura Mudderi etc., ...	23.18
18	Approach road leading to Doddavallbi village ...	6.44
19	Bangarpet to Harati upto K. V. road ...	3.22
20	Road from 6/7th mile of K. S. Road to join Medihalla Naganala Settihalli and Gurugempet on to join K. S. road at 8/9th mile ...	8.05
21	Road from Vokkaleri connecting Kolar, Bangalore Road (*via*) Markandapura, Thyavanahalli Doddalyur Arabikothanur ...	10.30
22	Road from Kyallnur to join 6/35th mile of Bangalore Cuddapah road (*via*) Padiganahalli ...	4.02
	Total	202.26

ಶ್ರೀ ಸಿ. ಬೈರೇಗೌಡ.—ಇಲ್ಲಿ ಉತ್ತರದಲ್ಲಿ ತಿಳಿಸಿರತಕ್ಕ ಪ್ರಕಾರ 111 ಕಿಲೋಮೀಟರ್ ನಂತರ ಉಳಿಯತಕ್ಕ ರಸ್ತೆಗೂ ಬೇಗ ಟಾರನ್ನು ಹಾಕಿಸಿ ಇನ್ನು ಕೆಲವು ರಸ್ತೆಗಳಿಗೆ ಜಲ್ಲಿಯನ್ನು ಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಉಳಿದೆಲ್ಲಾ ರಸ್ತೆಗೂ ಟಾರ್ ಮಾಡಿಸಲಾಗುತ್ತದೆಂದು ಭರವಸೆಯನ್ನು ಕೊಡುವುದಕ್ಕಾಗುವುದಿಲ್ಲ ; ಅದು ಸಾಧ್ಯವೂ ಇಲ್ಲ.

ಶ್ರೀ ಸಿ. ಬೈರೇಗೌಡ.—ಇಲ್ಲಿ ತಾವು ತಿಳಿಸಿರತಕ್ಕ ಮಣ್ಣು ರಸ್ತೆಗೆ ಜಲ್ಲಿಯನ್ನಾದರೂ ಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಆಯಾಯ ರಸ್ತೆಯ ಮೇಲಿರತಕ್ಕ ಸಂಚಾರದ ಒತ್ತಡ ಹಾಗೂ ಹಣದ ಸೌಲಭ್ಯದ ಮೇಲೆ ಹೋಗತಕ್ಕದ್ದಾಗಿದೆ.

ಶ್ರೀ ಸಿ. ಬೈರೇಗೌಡ.—ಇಲ್ಲಿ ತಾವು ಪರಿಶಿಷ್ಟದಲ್ಲಿ ಹೇಳಿರತಕ್ಕ ಗ್ರಾಮಾಂತರ ರಸ್ತೆಗಳಿಗೆ ಜಲ್ಲಿ ಹಾಕಿಸುವುದಕ್ಕೆ ಆಜ್ಞೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವು ಯಾವು ಮಣ್ಣು ರಸ್ತೆಗಳಾಗಿ ಉಳಿಯಬೇಕೋ ಅವು ಮಣ್ಣು ರಸ್ತೆಗಳಾಗೇ ಉಳಿಯಬೇಕು. ಇನ್ನು ಯಾವ ಯಾವ ರಸ್ತೆಗಳಿಗೆ ಜಲ್ಲಿ ಹಾಕಿಸಬೇಕು ಅನ್ನುವುದು ಆಯಾ ರಸ್ತೆಯ ಮೇಲಿರತಕ್ಕ ಸಂಚಾರದ ಒತ್ತಡ ಮತ್ತು ಹಣದ ಸೌಲಭ್ಯವನ್ನು ಅವಲಂಬಿಸಿರುತ್ತೆ.

ಶ್ರೀ ಸಿ. ಬೈರೇಗೌಡ.—ಈ ರಸ್ತೆಗಳಲ್ಲೂ ಸಂಚಾರದ ಒತ್ತಡ ಸಾಕಷ್ಟು ಇದೆ...

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದರೆ ಹಣದ ವಿಚಾರವನ್ನೂ ನಾವು ನೋಡಬೇಕು.

Air Strip at Gulbarga or Raichur

196. **Sri RAJA PID NAIK** (Shorapur).—

Will the Minister for Public Works and Electricity be pleased to state :—

(*a*) whether there is any proposal before the Government to construct an Air-strip at Gulbarga or Raichur ;

(*b*) if so, the action taken by the Government and at what stage the matter stands at present ?

Sri H. M. CHANNABASAPPA (Minister for Public Works and Electricity).—

(*a*) No.

(*b*) Dose not arise in view of reply to clause (*a*) above.

Sri RAJA PID NAIK.—Is the Government aware that the previous Government had a proposal to construct an aerodrome at Gulbarga ?

† **Sri H. M. CHANNABASAPPA.**—It is not correct.

Sri RAJA PID NAIK.—In view of the convenience to the travelling public and the importance of the place, will the Government take up this matter with the Central Government ?

---

†Indicates that the remarks or speeches have not been revised by the member concerned.

Sri H. M. CHANNABASAPPA.—We have already taken up the matter with the Central Government. The present proposal is only to have a gliding centre. Action is being taken to have a gliding centre there.

Sri V. N. PATIL.—Considering the proximity of Gulbarga to Bangalore, considering the importance of Gulbarga as a Divisional Headquarter and considering the fact that it is subjected to droughts and other calamities from time to time, in the interest of speedy disposal of works will the Government consider the starting of an airstrip there afresh ?

Sri H. M. CHANNABASAPPA.—Action will be taken to expedite the establishment of a gliding centre there as early as possible.

Sri J. P. SARWESH.—It is stated that the A.C.C. has got an airstrip at Shahabad and that they are prepared to sell it. May I know whether the Government has any plan to purchase it ?

Sri H. M. CHANNABASAPPA.—Government has no plan to purchase it.

ಅಧ್ಯಕ್ಷರು.—ಶ್ರೀ ಆರ್. ಚಿಕ್ಕೇಗೌಡರ ಪ್ರಶ್ನೆ ನಂ. 214 ಕೇಳಲು ಶ್ರೀ ಮುದ್ದುರಾಮಯ್ಯ ಅವರಿಗೆ ಅನುಮತಿಯನ್ನು ನೀಡಲಾಗಿದೆ.

Minor Irrigation Project in Madhugiri Taluk

214. **Sri MUDDURAMIAH** (Koratagere) [on behalf of Sri R. Chikkaiah (Madhugiri)].—

Will the Minister for Public Works and Electricity be pleased to state :—

(*a*) the number of Minor Irrigation projects pending survey in Madhugiri Taluk ;

(*b*) when they will be surveyed, estimates prepared and submitted for sanction ;

(*c*) whether there is any proposal before the Government to take up all Minor Irrigation Projects early as one of the measures to eradicate the drought conditions prevailing in this Sub-Division ;

(*d*) whether the Government has issued directions to the Minor Irrigation officers to survey the Minor Irrigation Projects and to prepare the plans and estimates for sanction immediately ?

Sri H. M. CHANNABASAPPA (Minister for Public Works and Electricity).—

(*a*) 19.

(*b*) The surveying, preparation of plans and estimates for the 19 works is programmed under a Master Plan covering a period of 5 years.

(*c*) No.

(*d*) Does not arise in view of reply to clause (*c*).

ಶ್ರೀ ಮುದ್ದುರಾಮಯ್ಯ.—ತುಮಕೂರು ಮತ್ತು ಕೋಲಾರ ಜಿಲ್ಲೆಗಳನ್ನು ಬಹಳ ಅಭಾವ ಪ್ರದೇಶಗಳೆಂದು ಪರಿಗಣಿಸಿಲ್ಲವೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹೇಳುತ್ತಿರುವುದು ಅಲ್ಲಿರತಕ್ಕ ಎಲ್ಲಾ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಏಕಕಾಲಕ್ಕೇ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು.

ಶ್ರೀ ಮುದ್ದುರಾಮಯ್ಯ.—ಅಲ್ಲಿ ಇನ್ನೊಂದು ಸಬ್‌ಡಿವಿಜನ್ನನ್ನು ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಲಿ ಅಲ್ಲಿರತಕ್ಕ ಸಬ್‌ಡಿವಿಜನ್ನಿನಿಂದರೇ ಅಲ್ಲಿಯ ಕೆಲಸಗಳನ್ನ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಮುದ್ದುರಾಮಯ್ಯ.—ಹಾಗಾದರೆ ಇಲ್ಲಿ ಏಕೆ ಈ 19 ಕೆಲಸಗಳ ಸರ್ವೆ ಮತ್ತು ಪ್ಲಾನ್ ವಗೈರೆ ಮಾಡುವುದಕ್ಕೆ 5 ವರ್ಷಗಳು ಬೇಕೆಂದು ಹೇಳಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಹೇಳಿರತಕ್ಕದ್ದು ಎಲ್ಲಾ ಕೆರೆಗಳ ಕೆಲಸವನ್ನೂ ಒಂದು ವರ್ಷದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ತಿಳಿಸಿದೆ.

Lift Irrigation Project at Iggalur

231. **Sri S. KARIAPPA** (Kanakapura).—

Will the Minister of State for Major Irrigation be pleased to state :—

(*a*) whether an estimate for Lift Irrigation Project at Iggalur, Channapatna Taluk has been prepared and sent for sanction to the Government of India ;

(*b*) if so, the estimated cost of the project ;

(*c*) the estimated extent of land that would come under irrigation ;

(*d*) the stage at which the project stands at present :

(*e*) the year in which the project was prepared ?

Sri H. N. NANJE GOWDA (Minister of State for Major Irrigation).—

(*a*) Yes. Iggalur Project provides both flow and Lift Irrigation.

(*b*) Rs. 132 lakhs.

(*c*) 8,000 Acres. (3,500 acres under flow canal, 4,500 acres by Lift).

(*d*) The project is pending clearance with the Central Water and Power Commission.

(*e*) During 1971.

ಶ್ರೀ ಎಸ್. ಕರಿಯಪ್ಪ.—ಈ ಇಗ್ಗಲೂರು ಲಿಫ್ಟ್ ಇರಿಗೇಷನ್ ಪ್ರಾಜೆಕ್ಟನ್ನು ಸರ್ಕಾರ ಮಂಜೂರು ಮಾಡಿದ್ದು ಯಾವಾಗ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಸಿ. ಡಬ್ಲ್ಯು. ಪಿ. ಸಿ.ಗೆ ಹೋಗಿದೆ ಇನ್ನೂ ಮಂಜೂರಾಗಿಲ್ಲ.

ಶ್ರೀ ಎಸ್. ಕರಿಯಪ್ಪ.—ದಯವಿಟ್ಟು ಪೇಪರನ್ನು ಇನ್ನೊಮ್ಮೆ ನೋಡಿ ಹೇಳಬೇಕು. ಇದು ಕಳೆದ 2–3 ತಿಂಗಳ ಹಿಂದೆ ಮಂಜೂರಾಗಿದೆ ಎಂದು ಕೇಳಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಇನ್ನೂ ಮಂಜೂರು ಆಗಿಲ್ಲ, ನನ್ನ ಬಳಿ ಇರತಕ್ಕ ಕಾಗದ ಪತ್ರಗಳಲ್ಲಿ ಇರುವುದರ ಆಧಾರದ ಮೇಲೆ ಹೇಳುತ್ತಿದ್ದೇನೆ. Advisory Committee on the multipurpose Irrigation and Food Control Project ಅದರ ಕಡೆಗೆ ಇದನ್ನು ತಾರೀಖು 2–6–1972ರಲ್ಲಿ ಕಳುಹಿಸಲಾಗಿದೆ. ಅವರು ಪರಿಶೀಲನೆ ಮಾಡಿದ ನಂತರ ಅದನ್ನು ಕ್ಲಿಯರ್ ಮಾಡಲಾಗುವುದು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ತಾವು ಆ ಸಿ. ಡಬ್ಲ್ಯು. ಪಿ. ಸಿ.ಗೆ ಇದನ್ನು ಕಳುಹಿಸಿದ್ದು ಯಾವಾಗ ! ಅವರಿಂದ ಒತ್ತಾಯ ಮಾಡಿ ಅದನ್ನು ಜಾಗ್ರತೆ ತರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ !

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ನಾವು 1971ನೇ ಜೂನ್ ತಿಂಗಳಲ್ಲಿ ಕಳುಹಿಸಿದೆವು. ಅವರಿಂದ ನಮಗೆ 1971ನೇ ಅಕ್ಟೋಬರಿನಲ್ಲಿ ಉತ್ತರ ಬಂತು. ಫೈನಲ್ ಕ್ಲಿಯರೆನ್ಸಿಗೆ ನಾವು ಮತ್ತೆ ತಾ. 22–2–1972ಕ್ಕೆ ಬರೆದಿದ್ದೇವೆ. ಅವರಿಂದ ಇನ್ನೂ ಉತ್ತರ ಬಂದಿಲ್ಲ. ಬಂದಕೂಡಲೆ ಅದನ್ನು ಎಕ್ಸ್‌ಪಿಡೈಟ್ ಮಾಡಲಾಗುವುದು.

Borewells in Imangala Hobli

315. **Sri C. R. MOHAMED SAIFUDDIN** (Chitradurga).—

Will the Minister for Public Works and Electricity be pleased to state :—

(*a*) the number of borewells that have been dug in Imangala Hobli, Hiriyur Taluk ;

(*b*) the number of them fitted with hand pumps ;

(*c*) the number of pumps that are in working condition ;

(*d*) the amount spent on these borewells so far and under what scheme ;

(*e*) whether any complaint regarding defective working of these hand pumps have been received, If so, the steps taken to rectify the defects ?

Sri H. M. CHANNABASAPPA (Minister for Public Works and Electricity).—

(*a*) 104 Borewells.

(*b*) 93 Borewells.

(*c*) 80 Borewells.

(*d*) 1,59,100 to end of January 1973 under 32 R. D. (UNICEF aided Scheme).

(e) A few complaints from the people have been received, regarding the working of the hand pumps. Often the pumps go out of order mostly due to improper handling by the people. The defects have been rectified two to three times in some cases.

Action is being taken to rectify the hand pumps also which are out of order.

Sri C. R. MOHAMED SAIFUDDIN.—Ninety per cent of the bore-wells have failed and the people of the locality are put to hardship for getting drinking water. May I know what has the Government done to remove the difficulty.

† ಶ್ರೀ ಎಚ್. ಎಂ. ಚನ್ನಬಸಪ್ಪ.— ತಮ್ಮ ಪ್ರಶ್ನೆ ಒಪ್ಪಿದ್ದರೆ ತಾನೆ ಮುಂದೆ ಉತ್ತರ ಕೊಡುವುದಕ್ಕೆ ಸಾಧ್ಯ. 13 ಹ್ಯಾಂಡ್ ಪಂಪುಗಳು ಮಾತ್ರ ಸರಿಯಾಗಿ ಕೆಲಸಮಾಡುತ್ತಿಲ್ಲ.

Sri C. R. MOHAMED SAIFUDDIN.—I have brought this to the notice of the Chief Minister also ?

Sri H. M. CHANNABASAPPA.—I cannot agree that not even one hand pump is working.

Sri M. MALLAPPA.—Has it come to the notice of the Government that handpumps installed are of inferior quality and they are not properly working throughout the State ?

Sri H. M. CHANNABASAPPA.—It has come to my knowledge that the authority which maintains these handpumps they are also not using the pumps properly. On account of improper use of hand pumps by the people in the village level, sometimes these breakdowns do happen.

Sri V. N. PATIL.—Similar problem of breakdown of pumps is there throughout the State. Has the Government thought of having a suitable machinery to repair these pumps whenever they go out of order ?

Sri H. M. CHANNABASAPPA.—The difficulty is that even for small things they go bad. There should be an administrative machinery to look to these things. The Government will take the suggestion and see that a mobile unit is arranged where there is a cluster of pumps and see immediate attention is given.

ಶ್ರೀ ಸಿ. ಆರ್. ಮಹಮದ್ ಸೈಫುದ್ದೀನ್.—ಮೊಬೈಲ್ ಯೂನಿಟ್ ಎಷ್ಟು ದಿವಸಗಳಲ್ಲಿ ಕೊಡುವುದಕ್ಕೆ ಸಾಧ್ಯ ? ಹೋದ ವರ್ಷ ಅದನ್ನು ಕೊಡುವುದಾಗಿ ಹೇಳಿದ್ದಿರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಆದಷ್ಟು ಬೇಗ ಕೊಡುತ್ತೇವೆ, ಹೋದ ಸಲ ಹೇಳಿರುವುದು ಜ್ಞಾಪಕವಿಲ್ಲ.

Health Unit Dispensary at Kenkere Village

413. **Sri M. NANJE GOWDA** (Gandasi).—

Will the Minister for Health be pleased te state :—

(a) whether it is a fact that the people of round about villages have been demanding for the establishment of Health Unit Dispensary at Kenkere Village of Gandasi Hobli ;

(SRI M. NANJE GOWDA)

(*b*) as this part of Gandasi Hobli is economically very backward, there is no hospital facilities nearby and the people have already deposited about Rs. 8,500 regarding hospital whether a hospital would be sanctioned there immediately ?

Sri H. SIDDAVEERAPPA (Minister for Health).—

(*a*) Yes.

(*b*) Kenkere Village is included in 15,000 population blocks of Gandasi Village. As there is already one L. F. dispensary in Gandasi Village it is not possible to grant a separate hospital at Kenkere for the present.

ಶ್ರೀ ಎಂ. ನಂಜೇಗೌಡ.—ಕೆಂಕೆರೆ ಗ್ರಾಮಕ್ಕೆ ಯಾವಾಗ ಆಸ್ಪತ್ರೆಯನ್ನು ಮಂಜೂರು ಮಾಡಲಾಗುವುದು ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಸ್ಕೀಂ ಪ್ರಕಾರ 5 ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆ ಇರಬೇಕು. ಈಗಿರುವ ಪ್ರಕಾರ 15 ಸಾವಿರ ಯೂನಿಟ್ಟಿನೊಳಗೆ ಬಂದರೆ ಆಸ್ಪತ್ರೆ ಕೊಡುವುದು ಕಷ್ಟ. ಅನಿರ್ಧಿಷ್ಟವಾದ ಪ್ರದೇಶಗಳು ಬಹಳವಿದೆ. ಒಂದೇ ಕಡೆ ಕೇಂದ್ರೀಕರಿಸುವುದಕ್ಕಿಂತ ಇಲ್ಲದಿರುವ ಕಡೆಗೆ ಮೊದಲು ಕೊಟ್ಟು ಉಳಿದ ಕಡೆಗೆ ಆಮೇಲೆ ಕೊಡುವುದು ಸೂಕ್ತ. ಈಗಿರುವ ಪ್ರಕಾರ ಅಲ್ಲಿಗೆ ಕೊಡುವುದು ಸ್ವಲ್ಪ ಕಷ್ಟವಾಗಿದೆ.

ಶ್ರೀ ಎಂ. ನಂಜೇಗೌಡ.—ಅಲ್ಲಿ ಹೆಚ್ಚು ಸಂಖ್ಯೆಯ ಕಾರ್ಮಿಕರಿರುವುದರಿಂದ ಮತ್ತು ಈಗಾಗಲೇ ಎಂಟೂವರೆ ಸಾವಿರ ರೂಪಾಯಿ ನಾವು ಡಿಪಾಸಿಟ್ ಮಾಡಿರುವುದರಿಂದ, ಅವಶ್ಯಕತೆ ಅಲ್ಲಿ ಬಹಳವಾಗಿರುವುದರಿಂದ ಸಹಾನುಭೂತಿಯಿಂದ ನಮ್ಮ ಬೇಡಿಕೆಯನ್ನು ಪರಿಶೀಲಿಸುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ವಿಚಾರ ಮಾಡೋಣ. ಈಗಿರುವ ಪ್ರಕಾರ ಸರಕಾರದವರು 100 ಹೊಸ ಸೆಂಟರುಗಳನ್ನು ಮಾಡಬೇಕೆಂದಿದ್ದೇವೆ, ಅದನ್ನು ರ್ಯಾಷನಲೈಜ್ ಮಾಡಿ ಕೊಡಬೇಕಾಗಿದೆ. ಎಲ್ಲಾ ಕಡೆ ಇದರ ಬಗ್ಗೆ ಡಿಮ್ಯಾಂಡ್ ಇದೆ. ಅನಸರ್ಟನ್ ಏರಿಯಾ ಇರುವ ಕಡೆ ಮೊದಲು ಗಮನ ಕೊಟ್ಟು ಉಳಿದ ಕಡೆ ಮಾಡೋಣ. ಆಸ್ಪತ್ರೆ ಬೇಕೆಂದು ಜನರು ಕೇಳುತ್ತಿದ್ದಾರೆ. ಯೋಚನೆ ಮಾಡಿ ಸಾಧ್ಯವಾದರೆ ಖಂಡಿತ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸುಮಾರು 10 ವರ್ಷದ ಹಿಂದೆ ಕೆಂಕೆರೆ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಹಣ ಡಿಪಾಸಿಟ್ ಮಾಡಿರುವುದರಿಂದ ಆಸ್ಪತ್ರೆ ಕೊಡಬೇಕು, ಇಲ್ಲದಿದ್ದರೆ ಹಣ ವಾಪಸ್ಸು ಕೊಡಬೇಕು. ಇದನ್ನು ಯೋಚಿಸುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹಣ ಬೇಕಾದರೆ ವಾಪಸ್ಸು ಕೊಡೋಣ. ಆದರೆ ಅದು ಸರಿಯಲ್ಲ. ಹಣ ಕೊಡಿ ಎಂದು ಕೇಳಿಲ್ಲ. ಕೊಟ್ಟಿರುವುದಿದೆ. ಆದರೆ ಬರೀ ಎಂಟೂವರೆ ಸಾವಿರ ರೂಪಾಯಿಗಳಿಂದ ಆಸ್ಪತ್ರೆಯಾಗುವುದಿಲ್ಲ, ರೆಕರಿಂಗ್ ಎಕ್ಸ್‌ಪೆಂಡಿಚರ್ ಸುಮಾರು 25 ಸಾವಿರ ರೂಪಾಯಿಗಳವರೆಗೆ ಬರುವುದು. ಕಟ್ಟಡವಿಲ್ಲ. ಎಲ್ಲಾ ನೋಡಿ ರ್ಯಾಷನಲೈಜ್ ಮಾಡೋಣ. ಅರಸೀಕೆರೆ ತಾಲ್ಲೂಕಿನಲ್ಲಿ ಎಷ್ಟೋ ಕಡೆ 25ಮೈಲಿ ದೂರಹೋದರೂ ಆಸ್ಪತ್ರೆಯಿಲ್ಲ.

ಶ್ರೀ ಸಿ. ಬೈರೇಗೌಡ.—ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಭಿಪ್ರಾಯ ಆಸ್ಪತ್ರೆಯ ಬಗ್ಗೆ ಏನಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಕೊಡಬೇಕೆಂದು ಹೇಳಿದ್ದಾರೆ.

ಶ್ರೀ ಕೆ. ಯಂಕಟಪ್ಪ.—5ಸಾವಿರ ಜನಸಂಖ್ಯೆ ಇರುವ ಪ್ರದೇಶಕ್ಕೆ ಆಸ್ಪತ್ರೆ ಕೊಡಬೇಕೆಂದಿದೆ. ಇದರಂತೆ ಎಷ್ಟು ದಿವಸದಲ್ಲಿ ಕಾರ್ಯರೂಪಕ್ಕೆ ತರುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಹೇಳುವುದಕ್ಕಾಗುವುದಿಲ್ಲ. ಮುಂದೆ ಬರುವ ಪ್ಲಾನಿನಲ್ಲಿ 5 ಸಾವಿರ ಜನರಿಗೆ ಒಂದು ಆಸ್ಪತ್ರೆ ಇರುವಂತೆ ಮಾಡಬೇಕೆಂಬ ಅಭಿಪ್ರಾಯವಿದೆ. ಅದು

ಆಯುರ್ವೇದಿಕ್ ಆಸ್ಪತ್ರೆ ಆಗಬಹುದು, ಅಲೋಪತಿಕ್ ಆಸ್ಪತ್ರೆಯಾಗಬಹುದು, ಯಾವುದೇ ಆಗಬಹುದು. ಒಟ್ಟಿನಲ್ಲಿ ಇಷ್ಟು ಜನರಿಗೆ ಒಂದು ಆಸ್ಪತ್ರೆ ಇರಬೇಕೆಂಬ ಅಭಿಪ್ರಾಯವಿದೆ. ಇದರ ಬಗ್ಗೆ ಕೇಂದ್ರ ಸರಕಾರದ ಒಂದು ನೀತಿಯಿದೆ. ಅದರ ಪ್ರಕಾರ ಇಷ್ಟೇ ದಿವಸದಲ್ಲಿ ಆಸ್ಪತ್ರೆ ಬರುವುದು ಎಂದು ಹೇಳುವುದಕ್ಕಾಗುವುದಿಲ್ಲ. ಇದು ಕೊನೇ ಗುರಿ.

ಶ್ರೀ ಎಂ. ನಂಜೇಗೌಡ.—ಈ ವಿಚಾರವಾಗಿ ಮೊಖ್ತ ಮಾತನಾಡಿದಾಗ ಎಂಟೂವರೆ ಸಾವಿರ ರೂಪಾಯಿ ಅಲ್ಲದೆ ಇನ್ನೂ ಹೆಚ್ಚಿಗೆ ಹಣಕೊಟ್ಟರೆ ಆಸ್ಪತ್ರೆ ಕೊಡಲು ಸಾಧ್ಯ ಎಂದು ಹೇಳಿದ್ದಂತೆ ಹಾಗೆ ಕೊಟ್ಟರೆ ಆಸ್ಪತ್ರೆಕೊಡಲು ಸಾಧ್ಯವೇ ?

ಶ್ರೀ ಎಚ್. ಸಿದ್ಧವೀರಪ್ಪ.—ಕಟ್ಟಡ ಕೊಡಬೇಕು, ಡಾಕ್ಟರುಗಳಿಗೆ ಇರುವುದಕ್ಕೆ ಜಾಗ ಕೊಡಬೇಕು, ಬಾಕಿ ಮೆಡಿಕಲ್ ಸ್ಟ್ಯಾಫ್‌ಗೆ ಅವಕಾಶ ಮಾಡಬೇಕು. ಇಷ್ಟೆಲ್ಲಾ ಮಾಡಿಕೊಟ್ಟರೆ ರೆಕರಿಂಗ್ ಎಕ್ಸ್‌ಪೆಂಡಿಚರ್ ಬೇಕಾದರೆ ಸರಕಾರದಿಂದ ಕೊಡುತ್ತೇವೆ.

Varahi Project

485. **Sri S. M. SHEERNALY CHANDRASEKHAR** (Hosanagar).—

Will the Minister for Public Works and Electricity be pleased to state.—

(*a*) whether the Varahi project would be taken up in the year 1973-74 ;

(*b*) whether the Government has published in the Gazette about the area that comes under submersion ;

(*c*) the action the Government propose to take for rehabilitation of the people who will be affected by the above said project ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) No.

(*c*) A detailed scheme to rehabilitate the people coming within the submersion area will be worked out in due course.

ಶ್ರೀ ಎಸ್. ಎಂ. ಶೀರನಾಳಿ ಚಂದ್ರೇಖರ್.—ಮುಳುಗಡೆಯಾಗುವ ಪ್ರದೇಶದವರಿಗೆ ಪುನರ್ವಸತಿ ಯೋಜನೆ ಮಾಡುತ್ತಿದ್ದೀರಾ ? ಯಾವ ಗ್ರಾಮಗಳು ಮುಳುಗಡೆಯಾಗುವುವು ಎಂಬುದನ್ನು ಹೇಳುವಿರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಸಕಾಲದಲ್ಲಿ ಪಬ್ಲಿಕೇಷನ್ ಕೊಡುತ್ತೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮುಳುಗಡೆ ಪ್ರದೇಶವರಿಗೆ ಪುನರ್ವಸತಿಗೆ ಸಂಬಂಧಪಟ್ಟ ಕೆಲಸಕಾರ್ಯ ಎಷ್ಟು ದಿವಸದಲ್ಲಿ ಪ್ರಾರಂಭವಾಗುವುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಪ್ರಾರಂಭಿಸಿರುವುದು ಪ್ರಿಲಿಮಿನರಿ ಕೆಲಸ ಮಾತ್ರ. ಅದಾದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಸಕಾಲದಲ್ಲಿ ಪುನರ್ವಸತಿಗೆ ತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ವರಾಹಿ ನದಿಯಿಂದ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ಯೋಜನೆ ಕೈಗೊಂಡಿದ್ದಾರೆ ಎಂದು ಕೇಳಿದ್ದೇನೆ, ಇದನ್ನು ಕೈಬಿಟ್ಟು ಶಿವಮೊಗ್ಗ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಿಗೆ ನೀರು ಸರಬರಾಜು ಮಾಡಬೇಕು ಎಂದು ಹೇಳಿ ತುಮಕೂರು ಜಿಲ್ಲೆಯ ಶಾಸಕರು ಈಗಾಗಲೇ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ ; ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮನವಿಗಳು ನನ್ನ ಹತ್ತಿರ ಇಲ್ಲ, ಆದಾಗ್ಯೂ ಕೂಡ ವರಾಹಿ ನದಿಯಿಂದ ಇರಿಗೇಷನ್ ಅಭಿವೃದ್ಧಿ ಮಾಡುವ ಸಾಧ್ಯಾಸಾಧ್ಯತೆಗಳನ್ನು ಆಲೋಚನೆಮಾಡಿ, ಎರಡಕ್ಕೂ ಲಾಭದಾಯಕವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಗೊತ್ತಾಗಿದೆ. ಇದರಿಂದ ಇರಿಗೇಷನ್ ಮಾಡುವುದು ಲಾಭದಾಯಕವೇ. ಪವರ್ ಪ್ರಾಜೆಕ್ಟ್ ಮಾಡುವುದು ಲಾಭದಾಯಕವೇ ಎಂದು ವಿಚಾರಮಾಡಿ ಕೆಲಸ ಮಾಡುತ್ತಿದ್ದೇವೆ.

ಶ್ರೀ ಎ. ಜಿ. ಕೊಡಗಿ.—ವರಾಹಿ ನದಿಯಿಂದ ನೀರಾವರಿ ಯೋಜನೆಯನ್ನು 1973-74ರಲ್ಲಿ ಕೈಗೊಳ್ಳುವುದಕ್ಕೆ ಯೋಜನೆ ಇದೆಯೇ ? ಇದನ್ನು ಇದೇ ವರ್ಷದಲ್ಲಿ ಪ್ರಾರಂಭಮಾಡುವ ಯೋಚನೆ ತಮಗೆ ಇದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಪ್ರಾರಂಭಮಾಡತಕ್ಕದ್ದು ಎಲ್ಲವೂ ಪ್ರಿಲಿಮಿನರಿ ವರ್ಕ್ಸ್. ಪ್ರಿಲಿಮಿನರಿ ವರ್ಕ್ಸ್ ವರಾಹಿನದಿಯಿಂದ ವಿದ್ಯುಚ್ಛಕ್ತಿ ಯೋಜನೆ ಮಾಡಿದರೂ ಬೇಕು, ಜಲ ಯೋಜನೆಯನ್ನು ಮಾಡಿದರೂ ಬೇಕು. ಎರಡಕ್ಕೂ ಪ್ರಿಲಿಮಿನರಿ ವರ್ಕ್ಸ್ ನಡೆಯುತ್ತಾ ಇದೆ. ಜಲವಿದ್ಯುತ್ ಯೋಜನೆ ಮಾಡಬೇಕೇ ಅಥವಾ ನೀರಾವರಿ ಯೋಜನೆ ಮಾಡಬೇಕೇ ಎಂದು ಎರಡನ್ನೂ ಸಮನ್ವಯ ಮಾಡಿ ಮಾಡಬೇಕು, ಎರಡನ್ನೂ ಯೋಚನೆ ಮಾಡುತ್ತಾ ಇದ್ದೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮುಳುಗಡೆಯಾದ ರೈತರ ಸಮ್ಮೇಳನ 17ರಂದು ನಡೆದು 12 ಅಂಶದ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. ಮುಖ್ಯ ಮಂತ್ರಿಗಳಿಗೂ ಇದರ ಬಗ್ಗೆ ಮನವಿ ಪತ್ರ ಕೊಟ್ಟಿದ್ದೇವೆ. ಅದನ್ನು ಪರಿಶೀಲನೆಮಾಡಿ ಮನವಿ ಪತ್ರದ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮನವಿ ಪತ್ರ ನಮ್ಮ ಕೈಗೆ ಬಂದಮೇಲೆ ವಿಚಾರ ಮಾಡುತ್ತೇವೆ.

ಶ್ರೀ ಕೆ. ಯಂಕಟಪ್ಪ.—ಪ್ರಿಲಿಮಿನರಿ ಕೆಲಸ ಮುಗಿದ ಮೇಲೆ ಜಲಾಶಯ ಅಥವಾ ಪವರ್ ಪ್ರಾಜೆಕ್ಟ್ ಎಂದು ತೀರ್ಮಾನ ಮಾಡಲಾಗುತ್ತದೆ ಎಂದು ಹೇಳುತ್ತೀರಿ, ಆ ಪ್ರಿಲಿಮಿನರಿ ಕೆಲಸ ಯಾವಾಗ ಮುಗಿಯುತ್ತದೆ ? ಇದರಲ್ಲಿ ನೀರಾವರಿಗೆ ಅಗತ್ಯವಾಗಿ ಗಮನ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಿಲಿಮಿನರಿ ವರ್ಕ್ಸ್ ಯಾವಾಗ ಮುಗಿಯುತ್ತದೆ ಎಂದು ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ. ಪ್ರಿಲಿಮಿನರಿ ವರ್ಕ್ಸ್ ನಾನಾ ಅಂಗಗಳನ್ನು ಒಳಗೊಂಡಿದೆ. ಪ್ರಿಲಿಮಿನರಿ ವರ್ಕ್ಸ್ ನಡೆಯುತ್ತಾ ಇರುವುದರಿಂದ ಸೈಮಲ್ಟೇನಿಯಸ್‌ಆಗಿ ವಿಚಾರ ಮಾಡುವುದು, ವಿಚಾರ ಸರಣಿಯಾಗಿ ನಡೆದುಕೊಂಡು ಹೋಗುತ್ತದೆ.

Construction of Roads in Shikaripur Taluk

542. **Sri K. YENKATAPPA** (Shikaripur)—

Will the Minister for Public Works and Electricity be pleased to state.—

(*a*) whether the Government has prepared a list of road mileage to be constructed in Shikaripur taluk and its extent ;

(*b*) the towns which are proposed to be connected and the mileage of roads ;

(*c*) when the said roads were included in the P. W. D. list by Government;

(*d*) the number of roads in respect of which the works were completed; and the years in which they were completed;

(*e*) whether an important road *viz.* Road connecting Shikaripur from Choradikalmane *via.* Hittala has been completed;

(*f*) the revenue income derives from this road whether it is possible for the Government to asphalt this road immediately and if so, the time within which it is possible to do it;

(*g*) the length of the road from Harogoppa to Chickerur *via.* Arishanagere, Salur, Chunchanakoppa, Kuskur and Hirejambur;

(*h*) when this road was taken over by Government;

(*i*) the estimated cost of this road and when this will be implemented?

Sri H. M. CHANNABASAPPA (Minister for Public Works and Electricity).—

(*a*) 114.80 Kms. Out of this laying of new road to the extent of 43.80 Kms. and repairing the existing road of 71 Kms.

(*b*) Details are furnished in the statement placed on the Table of the House.*

(*c*) Not yet included.

(*d*) Some of them have been started recently.

(*e*) Yes. Part of it has been undertaken.

(*f*) Revenue income is not known. Asphalting of this road is dependent on financial position.

(*g*) 66 Kms.

(*h*) Horogoppa Salur road was taken over by Government in 1969 and the road from 4/4 mile leading to Mallenahalli on Shikaripur-Ambligola road was taken over by Government in 1961.

(*i*) The estimate of this road is not yet prepared. The implementation is dependent on the financial position.

ಶ್ರೀ ಕೆ. ಯಂಕಟಪ್ಪ.— ನನ್ನ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಒಂದು ಪಟ್ಟಿಯನ್ನು ಕಳುಹಿಸಿದ್ದಾರೆ. ಇದು ರೂರಲ್ ಕಮ್ಯುನಿಕೇಷನ್‌ಗೆ ಸಂಬಂಧಪಟ್ಟ ಪಟ್ಟಿ, ಇದರಲ್ಲಿ ಪೂರ್ಣಮಾಹಿತಿ ಇದೆ. ಇದು ಅಲ್ಲದೆ ಲೋಕೋಪಯೋಗಿ ಇಲಾಖೆಯವರು ವಹಿಸಿಕೊಂಡ ದುರಸ್ತಿ ಕಾರ್ಯಗಳ ಬಗ್ಗೆ ಪ್ರಗತಿ ಏನಾಗಿದೆ?

† **ಶ್ರೀ ಎಚ್. ಎಂ. ಚನ್ನಬಸಪ್ಪ.**— ಪಿ.ಡಬ್ಲ್ಯೂ ಡಿ. ರಸ್ತೆಗಳು ಎಷ್ಟು ಇವೆ. ಎನ್ನುವುದರ ಬಗ್ಗೆಯೋ, ಅಥವಾ ಪ್ರಗತಿ ಯಾವುದರ ಬಗ್ಗೆ ತಿಳಿಸಬೇಕು ಎಂದು ಅರ್ಥವಾಗುತ್ತಾ ಇಲ್ಲ.

---

* Copy placed in the Mysore Legislature Library *vide* No. 20 dated 22-3-1973.

ಶ್ರೀ ಕೆ. ಯಂಕಟಪ್ಪ.—ಹಾರೇಗೊಪ್ಪ, ಕಾನ್ಸೂರು, ಚೋರುಡಿ, ಶಿಕಾರಿಪುರ ರಸ್ತೆ ಬಹಳ ಮಹತ್ವವಾದದ್ದು ಎಂದು ತಮ್ಮ ಗಮನಕ್ಕೆ ತಂದಿದ್ದೇವೆ. ತಾವು ಹಣದ ಪರಿಸ್ಥಿತಿ ನೋಡಿಕೊಂಡು ಮಾಡಲಾಗುತ್ತದೆ ಎಂದು ಹೇಳುತ್ತೀರಿ. ಇದು 1961ರಿಂದಲೂ ಪಿ.ಡಬ್ಲ್ಯೂ.ಡಿ.ಗೆ ಸೇರಿರುವುದರಿಂದ ಇದೇ ವರ್ಷ ಈ ಕಾರ್ಯವನ್ನು ಪೂರ್ಣಗೊಳಿಸಿ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಸ್ತೆಗಳ ಪ್ರಗತಿ ಕೆಲಸವನ್ನು ಒಂದು ಫೇಸ್ಡ್ ಪ್ರೋಗ್ರಾಂನಲ್ಲಿ ಮಾಡಬೇಕಾಗಿದೆ. ಒಂದು ಕಡೆ ಎಲ್ಲಾ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಕಷ್ಟವಾಗುತ್ತದೆ, ಕಾರಣ ಹಣದ ಅಭಾವ. ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಸಾಧ್ಯವಾದಷ್ಟು ಕೂಡ ಇವುಗಳನ್ನು ಉತ್ತಮ ಪಡಿಸಲಿಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಕೆ. ಯಂಕಟಪ್ಪ.—ತಾವು ಜೋರುಡಿ ಮಾರ್ಗದ ಬಗ್ಗೆ ಆದಾಯ ಇದೆಯೇ ಎಂದು ಕೇಳಿದ್ದಕ್ಕೆ ತಾವು ಗೊತ್ತಿಲ್ಲ ಎಂದು ಹೇಳಿದ್ದೀರಿ, ಇದರಲ್ಲಿ ವಾಹನಗಳು ಸಾಕಷ್ಟು ರೀತಿಯಲ್ಲಿ ಓಡಾಡುತ್ತಾ ಇರುವುದರಿಂದ ಸರ್ಕಾರಕ್ಕೆ ಇದರಿಂದ ಉತ್ಪನ್ನ ಬರುತ್ತದೆ. ದಯಮಾಡಿ ಫೇಸ್ಡ್ ಪ್ರೋಗ್ರಾಂ ಎಂದು ಏನು ಹೇಳುತ್ತೀರೋ ಅದರಲ್ಲಿ ಜೋರುಡಿ ಕಲ್ಮನೆ ರಸ್ತೆಯನ್ನು ಹಂತ ಹಂತವಾಗಿ ಮಾಡಿಸಿಕೊಡುತ್ತೇವೆ ಎನ್ನುವ ಭರವಸೆ ಕೊಡಬೇಕು !

ಶ್ರೀ ಎಚ್. ಎಂ. ಚನ್ನಬಸಪ್ಪ.—ಚೋರುಡಿ, ಕಲ್ಮನೆ ಮತ್ತು ಹಿರೇಕೊಪ್ಪ ಸಾಲೂರಿನ ರಸ್ತೆ, ಎರಡು ರಸ್ತೆಗಳು ಕೆಟ್ಟಿರತಕ್ಕಂಥಾದ್ದು ಸರ್ಕಾರದ ಗಮನದಲ್ಲಿದೆ. ಇದರ ಬಗ್ಗೆ ಫೇಸ್ಡ್ ಪ್ರೋಗ್ರಾಂನಲ್ಲಿ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಡುತ್ತೇವೆ.

ಶ್ರೀ ಬಿ. ಬೈರೇಗೌಡ.—ಪಿ.ಡಬ್ಲ್ಯೂ.ಡಿ. ರಸ್ತೆಗಳಿಗೆ ಕಲ್ಲು ಇಲ್ಲದ ಕಡೆ ಕಲ್ಲು, ಟಾರು ಇಲ್ಲದ ಕಡೆ ಟಾರು ಹಾಕುವ ಯೋಚನೆಯನ್ನು ರಾಜ್ಯದಾದ್ಯಂತ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಲ್ಲು ಇಲ್ಲದ ಕಡೆ ಕಲ್ಲು, ಟಾರು ಇಲ್ಲದ ಕಡೆ ಟಾರು ಹಾಕುವುದಕ್ಕೆ ಸಾಧ್ಯವಿಲ್ಲ, ಎಲ್ಲಿ ಅವಶ್ಯಕತೆ ಇದೆ ಎಂದು ನೋಡಿಕೊಂಡು ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಅದನ್ನು ಮಾಡುತ್ತೇವೆ. ತಾವು ಹೇಳುವ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ.

Constitution of Coconut Development Council

706. **Sri B. BYRAPPAJI** (Tusuvekere).—

Will the Minister for Agriculture and Forests be pleased to state:—

(*a*) whether the Government propose to constitute a coconut Development Council ;

(*b*) if so, the salient features and programmes of the same?

Sri K. H. PATIL (Minister for Agriculture and Forests).—

(*a*) No.

(*b*) Does not arise.

ಶ್ರೀ ಬಿ. ಬೈರಪ್ಪಾಜಿ.—ನಮ್ಮ ದೇಶದಲ್ಲಿ ಕಾಫಿ ಬೋರ್ಡ್ ಮಂಡಲ ಇದೆ, ಏಲಕ್ಕಿ ಅಭಿವೃದ್ಧಿ ಮಂಡಲ ಇದೆ, ಆದರೆ ತಾವು ತೆಂಗು ಅಭಿವೃದ್ಧಿ ಮಂಡಲಿಯನ್ನು ರಚಿಸುವುದಕ್ಕೆ ಸಿದ್ಧವಾಗಿಲ್ಲ ಎಂದು ಹೇಳಿದ್ದೀರಿ, ಲಕ್ಷಾಂತರ ಎಕರೆಯಲ್ಲಿ ತೆಂಗನ್ನು ಬೆಳೆಯಬೇಕು ಎಂದು ಹೊರಟಿರತಕ್ಕ ರೈತರ ಹಿತದೃಷ್ಟಿಯಿಂದ ತೆಂಗಿನ ಬೋರ್ಡ್ ಒಂದನ್ನು ರಚಿಸುವುದು ಸೂಕ್ತವಲ್ಲವೇ ?

† ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದ ಉದ್ದೇಶವನ್ನು ಅಲ್ಲಿ ನಮೂದು ಮಾಡಿದ್ದೇವೆ. ಮಾನ್ಯ ಸದಸ್ಯರು ಇಚ್ಛೆ ಪಡುವುದಾದರೆ, ಒಂದು ಉಪದೇಶಿಕ ಮಂಡಲಿಯನ್ನು ನೇಮಿಸುವುದಕ್ಕೆ ಪ್ರಯತ್ನ ಪಡೋಣ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ರಾಜ್ಯದಲ್ಲಿ ಸಾವಿರಾರು ಜನ ಮಾತ್ರವಲ್ಲ, ಲಕ್ಷಾಂತರ ಜನ ತೆಂಗಿನ ಬೆಳೆಯನ್ನು ಅವಲಂಬಿಸಿದ್ದಾರೆ. ತೆಂಗಿನ ಬೋರ್ಡಿನಿಂದ ನಾನಾ ರೂಪದಲ್ಲಿ ಪ್ರಗತಿಯನ್ನು ಹೊಂದುವುದಕ್ಕೆ ಸಾಧ್ಯವಿದೆ, ಆದ್ದರಿಂದ ಇಂಥ ಒಂದು ದೋರ್ಡು ಅವಶ್ಯಕ, ಇದನ್ನು ಆದಷ್ಟು ಬೇಗ ಪರಿಶೀಲನೆ ಮಾಡಿ ರಚನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಇದನ್ನು ಪರಿಶೀಲಿಸೋಣ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ವಾಮಿ, ಕೋಕೊನೆಟ್ ಬೋರ್ಡು ಬಗ್ಗೆ ಹತ್ತಾರು ವರ್ಷಗಳಿಂದ ತೆಂಗಿನ ಬೆಳೆಗಾರರು ಸರ್ಕಾರದಲ್ಲಿ ಒಂದಲ್ಲ ಒಂದು ವಿಧದಲ್ಲಿ, ಮೇಲಿಂದ ಮೇಲೆ ನಿವೇದನೆ ಮಾಡುತ್ತಾ ಬಂದಿದ್ದಾರೆ. ತೆಂಗಿನ ಬೆಳೆಯ ಅಭಿವೃದ್ಧಿಗೆ ಅಗ್ರಿಕಲ್ಚರ್ ರಿಫೈನಾನ್ಸ್ ಕಾರ್ಪೋರೇಷನ್ ನವರು ಹಣ ಕೊಡುತ್ತಾರೆ. ತೆಂಗಿನ ಬೆಳೆ ಸಾಫಲ್ಯವಾಗಬೇಕಾದರೆ ಇಂಥ ಒಂದು ಬೋರ್ಡು ಅವಶ್ಯಕ. ತೆಂಗಿನ ಬೆಳೆಗಾರರ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಬೋರ್ಡನ್ನು ರಚನೆ ಮಾಡುವುದಕ್ಕೋಸ್ಕರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈ ಮೊದಲೇ ಹೇಳಿದ ಉತ್ತರವನ್ನು ಮಾನ್ಯ ಸದಸ್ಯರಿಗೂ ಹೇಳಬಯಸುತ್ತೇನೆ.

ಶ್ರೀ ಕೆ. ಯಂಕಟಪ್ಪ.—ತೆಂಗಿನ ಬೆಳೆಗೆ ಸಾಲವನ್ನು ಕೋಆಪರೇಟೀವ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಕೊಡುತ್ತಾರೆ. ಅದನ್ನು ಕೊಡಬೇಕಾದರೆ ಇಷ್ಟು ಭೂಮಿ ಆಧಾರ ಇರಬೇಕು ಎಂದು ಅದರಲ್ಲಿ ನಿಗದಿ ಮಾಡಿದ್ದಾರೆ. ಆ ನಿಗದಿ ಇರುವುದರಿಂದ ಒಂದು ಎಕರೆ, ಅಥವಾ ಎರಡು ಎಕರೆ ಇರುವ ತೆಂಗಿನ ಬೆಳೆಗಾರರಿಗೆ ಸಾಲದ ಸೌಲಭ್ಯ ದೊರೆಯುತ್ತಾ ಇಲ್ಲ. ಆದ್ದರಿಂದ ಎರಡು ಎಕರೆ ತೆಂಗಿನ ತೋಟ ಇರುವವರಿಗೂ ಸಾಲ ಕೊಡುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈ ಪ್ರಶ್ನೆ ಉದ್ಭವಿಸುವುದಿಲ್ಲ, ಮಾನ್ಯ ಸದಸ್ಯರು ಹೇಳಿದ ಒಂದು ವಿಷಯವನ್ನು ಗಮನದಲ್ಲಿಟ್ಟುಕೊಂಡು ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ

1-30 P.M.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ ಈ ದೇಶದಲ್ಲಿ ಯಾವ ಯಾವ ತಾಲ್ಲೋಕಿನಲ್ಲಿ ಎಷ್ಟೆಷ್ಟು ಎಕರೆ ತೆಂಗು ಬೆಳೆಯುತ್ತಿದ್ದಾರೆ ಮತ್ತೆ ತೆಂಗಿನ ಬೆಳೆಯ ವ್ಯವಸಾಯಗಾರರು ಎಷ್ಟು ಎಕರೆಯಲ್ಲಿ ಬೆಳೆಯುವುದಕ್ಕೆ ಸಿದ್ಧರಾಗಿದ್ದಾರೆ ಎನ್ನುವ ಅಂಕಿಅಂಶಗಳನ್ನು ಆದಷ್ಟು ಬೇಗ ತಯಾರುಮಾಡುವುದಕ್ಕೆ ಸೂಕ್ತ ನಿರ್ದೇಶನವನ್ನು ನೀಡಿ ತನ್ಮೂಲಕ ಬೋರ್ಡ್ ರಚನೆ ಆಗುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈಗಾಗಲೇ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಅಂಕಿಸಂಖ್ಯೆಗಳು ಇವೆ, ಮಾನ್ಯ ಸದಸ್ಯರು ಕೇಳಿದ್ದರೆ ಒದಗಿಸಬಹುದಿತ್ತು. ಆದರೂ ಸಹ ಬೋರ್ಡ್ ರಚನೆ ಮಾಡಬೇಕು ಎಂದು ಸಭೆಯಲ್ಲಿ ಅಭಿಪ್ರಾಯ ಇದೆ ಅದನ್ನು ಗಮನಕ್ಕೆ ತೆಗೆದುಕೊಂಡು ಬೋರ್ಡ್ ರಚನೆ ಮಾಡುವುದಕ್ಕೆ ತೀವ್ರ ಕ್ರಮ ಕೈಗೊಳ್ಳುತ್ತೇವೆ.

Leasing of Land for Removal of Sand

707. **Sri B. BYRAPPAJI** (Turuvekere).—

Will the Minister for Industries be pleased to state :—

(*a*) whether it is a fact that the Mines and Geology Department has granted on long term lease the gomal lands of Hapala village in Turuvekere Taluk for removing the sand ;

(SRI B. BYRAPPAJI)

(*b*) if so, the date of lease ;

(*c*) whether they have obtained the permission of the Revenue Department as the said land belongs to Revenue Department ;

(*d*) whether it has come to the notice of the Government that due to removal of sand from this land damage has been caused to the garden and other lands worth lakhs of rupees belonging to ryots ; and thereby loss is boing caused ;

(*e*) if so, the steps taken to prevent the loss caused to ryots ?

Sri S. M. KRISHNA (Minister for Industries).—

(*a*) No lease has been granted to remove the sand in Hapala village of Turuvekere Taluk.

(*b*) to (*e*) Do not arise.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ ತುರುವೇಕೆರೆ ತಾಲ್ಲೋಕಿನಲ್ಲಿ ತಾವು ಕೊಟ್ಟಿರುವುದು ಹೆಸರು ಹಾವಾಡ ಎಂದು ಅದು ಹಾವಾಳ ಎಂದು ಇರಬೇಕಿತ್ತು. ಆ ರೀತಿ ಇದ್ದರೆ ಸರಿಯಾಗುತ್ತದೆ. ಅಲ್ಲಿಂದ ಸಾವಿರಾರು ಲಾರಿ ಮರಳು ತೆಗೆದುಕೊಂಡು ಹೋಗುತ್ತಿದ್ದಾರೆ ಆದರೆ ಉತ್ತರದಲ್ಲಿ ಪರವಾನಗೆ ಕೊಟ್ಟಿಲ್ಲ ಎಂದು ಹೇಳಿದ್ದೀರಿ ನನಗೆ ಸಮಂಜಸವಾದ ಉತ್ತರಬೇಕು.

† ಶ್ರೀ ಎಸ್. ಎಂ. ಕೃಷ್ಣ.—ಬಹುಶಃ ಅವರು ಹೇಳುತ್ತಾ ಇರುವ ಜಮೀನು ಹಾವಾಳ ಅಥವಾ ಹಾಪಾಳ ಗ್ರಾಮದ ಚೌಕಟ್ಟಿನಲ್ಲಿ ಬರುವುದಿಲವೋ ಏನೋ ?

ಶ್ರೀ ಬಿ. ಬೈರಪ್ಪಾಜಿ.—ತುರುವೇಕೆರೆ ಮತ್ತು ಹಾವಾಳ ಎರಡರ ಮಧ್ಯೆ ಒಂದು ಪರ್ಲಾಂಗ್‌ನಲ್ಲಿ ಜಮೀನು ಇದೆ. ಸ್ವಲ್ಪ ವ್ಯತ್ಯಾಸ ಆಗಿರಬಹುದು, ಅಲ್ಲಿ ಏನು ಆಗುತ್ತ ಇದೆ ಎಂದರೆ ವರ್ಷದಲ್ಲಿ ಲಕ್ಷಾಂತರ ಲಾರಿ ಮರಳು ಹೇರಿಕೊಂಡು ಹೋಗಿ ತೆಂಗು ತೋಟ ಕೊರೆದು ಹೋಗುತ್ತದೆ. ತೋಟಗಳು ಕೊರೆಯುತ್ತಾ ಇರುವುದನ್ನು ತಪ್ಪಿಸಲು ಈ ರೀತಿ ಮರಳು ತೆಗೆದುಕೊಂಡು ಹೋಗದಂತೆ ಸೂಕ್ತವಾದ ನಿರ್ದೇಶನ ನೀಡುವುದಕ್ಕೆ ಆಗುತ್ತದೆಯೋ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಲಕ್ಷಾಂತರ ಲಾರಿಗಳು ಮರಳು ತೆಗೆಯುತ್ತಿದ್ದಾರೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತೇನೆ. ಆದರೆ ಮಳೆಗಾಲದಲ್ಲಿ ಬರತಕ್ಕ ಮರಳನ್ನು ತೆಗೆಯುವುದರಿಂದ ಜಮೀನಿಗೆ ತೊಂದರೆಯಾಗುವುದಿಲ್ಲ ಎನ್ನತಕ್ಕದ್ದು ಸರ್ಕಾರದ ಅಭಿಪ್ರಾಯ. ಮಾನ್ಯ ಸದಸ್ಯರು ಕರಾರುವಾಕ್ಕಾಗಿ ಹೇಳಿ ಆ ರೀತಿ ಪರವಾನಗಿ ಇಲ್ಲದೆ ಮರಳನ್ನು ತೆಗೆಯುತ್ತಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಸಿರುವುದರಿಂದ ಮರಳು ತೆಗೆಯದೆ ಇರುವುದಕ್ಕೆ ನಾನು ಏನು ಬೇಕು ಅದನ್ನು ಮಾಡುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ರೆವಿನ್ಯೂ ಮಂತ್ರಿಗಳನ್ನು ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿದೆ. ಅವರು ಕೂಡ ನೋಡಿಕೊಂಡು ಬಂದಿದ್ದಾರೆ, ತಮಗೂ ಕೂಡ ತಿಳಿಸುತ್ತೇನೆ. ಅಲ್ಲಿ ವರ್ಷಕ್ಕೆ ನೂರಾರು ಲಾರಿ ಮರಗಳು ಬಿದ್ದು ಹೋಗುತ್ತಿವೆ. ಮರಳನ್ನು ತೆಗೆಯುವುದರಿಂದ ಭೂಮಿ ಕೊರೆದು ಹೋಗುತ್ತಿದೆ. ರೆವಿನ್ಯೂ ಮಂತ್ರಿಗಳು ನೋಡಿಕೊಂಡು ಬಂದಿದ್ದಾರೆ. ಲಕ್ಷಾಂತರ ರೂಪಾಯಿ ವರ್ಷಕ್ಕೆ ರೈತರಿಗೆ ನಷ್ಟವಾಗುತ್ತಿದೆ. ಆದುದರಿಂದ ದಯಮಾಡಿ ಮಂತ್ರಿಗಳು ಈ ಬಗ್ಗೆ ಸೂಕ್ತ ನಿರ್ದೇಶನ ಕೊಟ್ಟು ಮರಳು ತೆಗೆಯುವುದು ಸರಿಯಲ್ಲ ಎಂದು ಕಂಡುಬಂದರೆ ಅದನ್ನು ನಿಲ್ಲಿಸತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಯಾವ ಸ್ಥಳದಲ್ಲಿ ಕೊರೆದು ಹೋಗಿದೆ ಎಂದು ಸರಿಯಾಗಿ ವಿವರ ಕೊಟ್ಟರೆ 24 ಗಂಟೆಯೊಳಗೆ ಮರಳು ತೆಗೆದುಕೊಂಡು ಹೋಗುವುದನ್ನು ನಿಲ್ಲಿಸುತ್ತೇನೆ.

Contribution paid by the Market Committees to the Consolidated Fund

801. **Sri A. G. KODGI** (Baindur).—

Will the Minister for Co-operation be pleased to state :—

the total contribution paid by the Market Committees in the State from 1968-69 to 1971-72 under Section 91 of the Mysore Agricultural Produce Marketing (Regulations) Act., to the consolidated fund and the total expenditure incurred in this regard during the above period (Committeewise particulars may be furnished) ?

Sri A. SHANKARA ALVA (Minister for Co-operation).—

Vide Statement placed on the Table of the House. *

ಶ್ರೀ ಎ. ಜಿ. ಕೊಡಗಿ.—ತಾವು ಕೊಟ್ಟಿರುವ ತಃಖ್ತೆಯನ್ನು ಪರಿಶೀಲಿಸಿದರೆ ಗೊತ್ತಾಗುತ್ತದೆ. 1968-69ರಲ್ಲಿ 13 ಲಕ್ಷ ರೂಪಾಯಿಗಳಲ್ಲಿ ಶೇಕಡ 65 ಪರ್ಸೆಂಟ್ ವಂತಿಕೆ ಇದ್ದರೆ 1969-70ರಲ್ಲಿ 4ಲಕ್ಷದ 67 ಸಾವಿರದ 578 ರೂಪಾಯಿ ಇದೆ. 1971-72ರಲ್ಲಿ 22 ಲಕ್ಷದ 975 ರೂಪಾಯಿಗಳಷ್ಟು ಮಾರ್ಕೆಟಿಂಗ್ ಕಮಿಟಿ ವಂತಿಗೆ ಹೆಚ್ಚಿಗೆ ಉಂಟು. ಒಂದು ಅಂಶ ಇಲ್ಲ ತಮ್ಮ ಗಮನಕ್ಕೆ ತರಬೇಕಾಗಿದೆ. ಸೆಕ್ಷನ್ 91ರ ಪ್ರಕಾರ ನಿಗದಿ ಮಾಡಿದಾಗ ಇದು ಸರ್ಕಾರಿ ನೌಕರರ ಸಂಬಳ ಭತ್ತೆಗೆ ಅನುಗುಣವಾಗಿ ಇದೆಯೇ ಎಂಬುದನ್ನು ಪರಿಶೀಲಿಸಿದಾಗ ವ್ಯತ್ಯಾಸ ಕಾಣುತ್ತದೆ. ಅದು ವಂತಿಕೆಗೆ ಹೊಂದಾಣಿಕೆಯಾಗಿಲ್ಲ ಎಂದು ನನ್ನ ಭಾವನೆ ಎಂದು ಹೇಳುತ್ತೇನೆ.

ಶ್ರೀ ಎ. ಶಂಕರ ಆಳ್ವ.—ಸರ್ಕಾರದವರು ಹೇಳಿದ್ದು ಸರಿ. ಆದರೆ ಎಸ್ಟಿಮೇಟ್ ಮಾಡುವಾಗ ಎಲೆಕ್ಷನ್‌ಮಟ್ಟಿಗೆ ಕೆಲವು ನೌಕರರಿಗೆ ಸರ್ಕಾರಿ ನೌಕರರು ಎಂದು ಮಾಡುವುದಕ್ಕೆ ಅಂದಾಜು ಮಾಡಿದ್ದೇವೆ ಖರ್ಚು ಕಡಿಮೆಯಾಗಿದೆ, ವಸೂಲು ಮಾಡುವುದು ಜಾಸ್ತಿಯಾಗಿದೆ. ಅವರ ನಂತರ 30 ಪರ್ಸೆಂಟ್ ಇರುವುದನ್ನು 25ಪರ್ಸೆಂಟ್‌ಗೆ ಕಡಿಮೆ ಮಾಡಿದ್ದೇವೆ. 1-4-73ಕ್ಕೆ 20 ಪರ್ಸೆಂಟಿಗೆ ಇಳಿಸಿದ್ದೇವೆ. ಲೆಕ್ಕ ಆದನಂತರ ರೀ ಫಂಡ್ ಮಾಡುತ್ತೇವೆ

ಶ್ರೀ ಎ. ಜಿ. ಕೊಡಗಿ.—'0 ಪರ್ಸೆಂಟ್‌ನಿಂದ 20 ಪರ್ಸೆಂಟ್‌ಗೆ ಇಳಿಸಿದ್ದೀರಿ. 25ರಿಂದ 20ಕ್ಕೆ ಇಳಿಸುತ್ತೇವೆಂದು ಹೇಳುತ್ತಿದ್ದೀರಿ. ಅಲ್ಲಿ ಇರುವ ಸಮಸ್ಯೆ ಮುಂದಿನ ವರ್ಷದ ಉತ್ಪನ್ನ ಮತ್ತು ವೆಚ್ಚಗಳನ್ನು ಪರಿಶೀಲಿಸಿದರೆ ಹೆಚ್ಚು ಉಂಟು ಒಂದೇ ಸಲ ಹಣಕೊಡಬೇಕು ಎಂದು ಇದೆ. ಹೆಚ್ಚು ವಸೂಲು ಮಾಡಿದ್ದೀರಿ. ಅದನ್ನು ಮಾರ್ಕೆಟಿಂಗ್ ಕಮಿಟಿಗೆ ಮರು ಪಾವತಿ ಮಾಡುವ ಆದೇಶ ಕೊಡುತ್ತೀರಾ ? ಈ ದೃಷ್ಟಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕಡಿಮೆ ಪರ್ಸೆಂಟೇಜ್ ಫಿಕ್ಸ್ ಮಾಡುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಎ. ಶಂಕರ ಅಳ್ವ.—ಕೆಲವು ಜನರಿಗೆ ಸರ್ಕಾರಿ ನೌಕರರಾಗಿ ತೆಗೆದುಕೊಂಡಿದ್ದೇವೆ. ಮೊದಲು ಸರ್ಕಾರಿ ನೌಕರರಾಗಿರಲಲ್ಲ. ಅನೇಕ ಜನರಿಗೆ ಗೌರ್ನಮೆಂಟ್ ಸರ್ವೆಂಟ್ಸ್ ಎಂದು ಪರಿಗಣಿಸಿದ ನಂತರ ಸ್ವಲ್ಪ ಖರ್ಚು ಹೆಚ್ಚಾಗಲಕ್ಕೆ ಸಾಕು. ಅದನ್ನು ಇನ್ನು ಪರಿಶೀಲಿಸಿ ಎಷ್ಟು ಕಡಿಮೆ ಮಾಡಬೇಕು ನೋಡುತ್ತೇವೆ.

ಶ್ರೀ ಎಚ್. ಎಸ್. ಸಿದ್ಧಪ್ಪ.—ಕಡಿಮೆ ಖರ್ಚು ಆಗಿದೆ. ಹೆಚ್ಚು ವಸೂಲು ಮಾಡಿ ಮತ್ತೆ 25 ಪರ್ಸೆಂಟ್ ಕಡಿಮೆ ಮಾಡುವುದಕ್ಕೆ ಬದಲು ಇಲಾಖೆ ಅಧಿಕಾರಿಗಳು ಹೆಚ್ಚು ಖರ್ಚುಮಾಡುವ ಮಾರ್ಗ ಯೋಚನೆ ಮಾಡಿ ಹೆಚ್ಚು ಖರ್ಚು ಮಾಡುವ ಮಾರ್ಗ ತೋರಿಸುತ್ತಾರೆ. ಅದನ್ನು ಕಡಿಮೆ ಮಾಡುವ ಬಗ್ಗೆ ಏನು ನೀತಿ ಇಟ್ಟಿದ್ದೀರಿ ?

---

* Copy placed in the Mysore Legislature Library *vide* No. 21 dated 18-6-1973.

ಶ್ರೀ ಎ. ಶಂಕರ ಆಳ್ವ.—ಎಸ್ಟಿಮೇಟ್ ಮಾಡುವಾಗ ಪರ್ಸೆಂಟೇಜ್ ಜಾಸ್ತಿ ಫಿಕ್ಸ್ ಮಾಡುತ್ತೇವೆ. ಕೆಲವು ಕಡೆ ಒಂದೆರಡು ವರ್ಷಗಳಲ್ಲಿ ಎಲೆಕ್ಷನ್ ಇರಲಿಲ್ಲ. ಎಲೆಕ್ಷನ್‌ಗೆ ಖರ್ಚು ಮಾಡಬೇಕು ಎಂದು ಲೆಕ್ಕಕ್ಕೆ ಹಿಡಿದಿದ್ದಾರೆ. ಕೆಲವರನ್ನು ಗವರ್ನ್‌ಮೆಂಟ್ ಸರ್ವೆಂಟ್ ಎಂದು ಪರಿಗಣಿಸಬೇಕು, ಸರ್ಕಾರಿ ಸಂಬಳ ಕೊಡಬೇಕು ಅದನ್ನು ಮಾರ್ಕೆಟಿಂಗ್ ಕಮಿಟಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ಎಸ್ಟಿಮೇಟ್ ಮಾಡುವಾಗ ಇಷ್ಟೇ ಖರ್ಚಾಗುತ್ತದೆ ಎಂದು ಗೊತ್ತಾಗುವುದಿಲ್ಲ. ಜಾಸ್ತಿ ಎಸ್ಟಿಮೇಟ್ ಮಾಡಿ ತೆಗೆದುಕೊಂಡಿದ್ದಾರೆ ಅದನ್ನು ಕಡಿಮೆ ಮಾಡುತ್ತಾ ಬರುತ್ತಾರೆ. ಜಾಸ್ತಿ ಇದ್ದದನ್ನು ಪ್ರತಿಯೊಂದು ಕಡೆ ಕಮಿಟಿಗೆ ರೀ ಫಂಡ್ ಮಾಡುತ್ತಾರೆ.

Communication facilities in some villages of Coondapur Taluk

806. **Sri A. G. KODGI** (Baindur).—

Will the Minister for Public Works and Electricity be pleased to state:—

(*a*) the number of villages in Coondapur Taluk (South Kanara) which have no access to roads during the monsoon ;

(*b*) whether there are any proposals before the Government to provide communication facilities to those villages ;

(*c*) the number of bridges that are needed on the above roads and the estimated costs of the same ?

Sri H. M. CHANNABASAPPA (Minister for Public Works and Electricity).—

(*a*) 25 villages.

(*b*) Yes. For twelve villages.

(*c*) 26 bridges at an approximat cost of Rs. 75.00 lakhs.

ಶ್ರೀ ಎ. ಜಿ. ಕೊಡಗಿ.—ತಾವು ಉತ್ತರದಲ್ಲಿ ಹೇಳಿದ್ದೀರಿ ಕುಂದಾಪುರ ತಾಲ್ಲೂಕಿನ 25ಗ್ರಾಮಗಳಿಗೆ ಮಾನ್‌ಸೂನ್ ಕಾಲದಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆಯಿಲ್ಲ ಎಂದು. ಸ್ವಾತಂತ್ರ್ಯ ಬಂದು ಕಳೆದ 25 ವರ್ಷಗಳಾದರೂ 25 ಊರುಗಳಿಗೆ ಸಾರಿಗೆ ಸಂಪರ್ಕ ವ್ಯವಸ್ಥೆ ಇಲ್ಲ ಎಂದರೆ ಬಹಳ ಅತೃಪ್ತಿಕರವಾಗಿ ಕಾಣುತ್ತದೆ. ಈ ದಿಶೆಯಲ್ಲಿ ಸಂಪರ್ಕ ವ್ಯವಸ್ಥೆಯನ್ನು ಸರಿಯಾಗಿ ಒದಗಿಸುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಎಚ್.ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈಗಾಗಲೇ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎ. ಜಿ. ಕೊಡಗಿ.—ಸಾರಿಗೆ ಸಂಪರ್ಕಗಳನ್ನು ಒದಗಿಸಿಕೊಡಬೇಕಾದರೆ ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಮ್ ಪ್ರಕಾರ ರಸ್ತೆಗಳನ್ನು ಮಂಜೂರಾತಿ ಮಾಡುವುದಕ್ಕೆ ಹೋದಾಗ ಈ ವಿಷಯಗಳನ್ನು ತೆಗೆದುಕೊಳ್ಳುತ್ತೀರೆಂದು ನನ್ನ ಭಾವನೆ. ಆದರೆ ಮಲೆನಾಡು ಪ್ರದೇಶದಲ್ಲಿ ಸೇತುವೆಗಳು ಅವಶ್ಯಕವಿರುವುದರಿಂದ ಸಾರಿಗೆ ಸಂಪರ್ಕ ಸಂಪೂರ್ಣವಾಗಿ ಆಗಬೇಕಾದರೆ ಸೇತುವೆಗಳು ರಚನೆಯಾಗಬೇಕು. 76 ಸೇತುವೆಗಳು ರಚನೆಯಾಗಬೇಕು. 75 ಲಕ್ಷ ರೂಪಾಯಿ ವೆಚ್ಚಮಾಡಿ ವರ್ಷ ಒಂದಕ್ಕೆ ನಾಲ್ಕಾರು ಸೇತುವೆಗಳನ್ನು ತೆಗೆದುಕೊಂಡು ನಾಲ್ಕು ವರ್ಷಗಳಲ್ಲಿ ಎಲ್ಲಾ ಗ್ರಾಮಗಳಿಗೂ ಸಾರಿಗೆ ಸಂಪರ್ಕ ಒದಗಿಸುವ ಯೋಜನೆ ಹಾಕಿದ್ದೀರಾ ? ನಿರ್ದಿಷ್ಟವಾದ ಗುರಿ ಇಟ್ಟುಕೊಂಡಿದ್ದೀರಾ ? ಈ ಕೆಲಸಮಾಡುವುದಕ್ಕೆ ಭರವಸೆ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಭೆಯಲ್ಲಿ ಈಗಾಗಲೇ ಘೋಷಣೆ ಮಾಡಿದ್ದೇನೆ. ದೊಡ್ಡ ದೊಡ್ಡ ಸೇತುವೆಗಳು ಎಲ್ಲೆಲ್ಲಿ ನಮ್ಮ ರಾಜ್ಯದಲ್ಲಿ ಇವೆ. ಅವು ಎಲ್ಲವನ್ನೂ ಕೂಡ ತೆಗೆದುಕೊಳ್ಳಲಿಕ್ಕೆ

ಕಾರ್ಪೊರೇಷನ್ ಮುಖಾಂತರ ತೆಗೆದುಕೊಂಡು 5-6 ಅಥವಾ ನಿರ್ಧಿಷ್ಟವಾಗಿ ಇಷ್ಟು ಸೇತುವೆಗಳನ್ನು ಪೂರೈಸಬೇಕೆಂದು ಸರ್ಕಾರದ ಇಚ್ಛೆ ಇದೆ. ಸಭೆಯಲ್ಲಿ ಮಾನ್ಯ ಸದಸ್ಯರಿಗೆ ಹೋದ ಸೆಷನ್‌ನಲ್ಲಿ ತಿಳಿಸಿದ್ದೇನೆ. ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳುತ್ತಿದ್ದೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಚಿಕ್ಕ ಚಿಕ್ಕ ಸೇತುವೆಗಳ ಬಗ್ಗೆ ಆದರೂ ಸಾಕಷ್ಟು ಹೆಚ್ಚಿಗೆ ಗಮನಕೊಡದಿದ್ದರೆ ಮಲೆನಾಡಿನಲ್ಲಿ ಇರುವ ಹಳ್ಳಿಗಳಲ್ಲಿ ಹೆಚ್ಚಿಗೆ ಬೆಳೆ ಬೆಳೆಯುವುದಕ್ಕೆ ಮತ್ತು ಸರ್ಕಾರ ಹೆಚ್ಚಿಗೆ ಆಹಾರಧಾನ್ಯ ಒದಗಿಸುವುದಕ್ಕೆ ಆಗುವುದಿಲ್ಲ. ಆ ಬಗ್ಗೆ ಸಾಕಷ್ಟು ಹಣ ಒದಗಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂಟಿಗ್ರೇಟೆಡ್ ಪ್ರೋಗ್ರಾಮ್ಸ್ ಮತ್ತು ರೂರಲ್ ಪ್ರೋಗ್ರಾಮ್ಸ್ ಹೊರಡಿಸಿ ಇಂಟಿಗ್ರೇಟೆಡ್ ಪ್ರೋಗ್ರಾಂಗಾಗಿ ಮಾಸ್ಟರ್ ಪ್ಲಾನ್ ಮಾಡಬೇಕು ಎಂದು ತಮಗೆ ಈಗಾಗಲೇ ನೆನ್ನೆ ದಿವಸ ಪತ್ರ ಬರೆದಿದ್ದೇನೆ. ನಿಮ್ಮ ಮಾಹಿತಿಗಳು ಬಂದಮೇಲೆ ದೇಶವಲ್ಲ ಇಡೀ ರಾಜ್ಯಕ್ಕೆ ಅನುಕೂಲ ಆಗುವ ಹಾಗೆ ಮಾಸ್ಟರ್ ಪ್ಲಾನ್ ತಯಾರುಮಾಡಿ ರಸ್ತೆಗಳು, ಸಿ.ಡಿ. ವರ್ಕ್ಸ್ ಆಗಬೇಕು ಎಂದು ಸರ್ಕಾರ ನಿರ್ಧಾರ ತೆಗೆದುಕೊಂಡಿದೆ.

Immovable properties belonging to Thirupathi Sri Amaragiri Venkataramanaswamy

365. **Sri H. S. SIDDAPPA** (Arsikere).—

Will the Minister for Revenue be pleased to state :—

(*a*) the immovable properties held in the name of Thirupathi Sri Amargiri Venkataramanaswamy in Arasikere Taluk, Kasaba Hobli ;

(*b*) the properties leased out to private parties, the purpose and conditions of lease ;

(*c*) whether the lessee fulfilled the lease conditions ; if not, why not ; the action proposed for fulfilment of the lease conditions ?

Sri N. HUTCHAMASTHY GOWDA (Minister for Revenue).—

(*a*) An extent of 109 Acres 18 guntas of land, one site and a house are endowed in the name of the deity.

(*b*) The lands have been leased out to the private partties subject to the payment of Gutta amount fixed on them.

(*c*) The lessees have fuffilled the lease conditions. So the question of taking action does not arise.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಸ್ವಾಮಿ. ತಾವು ಈ ಪ್ರಶ್ನೆಗೆ ಉತ್ತರವಾಗಿ ಈ ದೇವಸ್ಥಾನಕ್ಕೆ ಸೇರಿದ ಹಾಗೆ ಒಂದು ಸೈಟು ಮತ್ತು ಒಂದು ಮನೆ ಇದೆ ಎಂದು ಹೇಳಿದ್ದಿರೆ ಈಗ ಆ ಸೈಟು ಮನೆ ಎಲ್ಲಿದೆ ಎನ್ನುವುದನ್ನು ಹೇಳುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸೈಟನ್ನು ಸಿನಿಮಾ ಥಿಯೇಟರನ್ನು ಕಟ್ಟುವುದಕ್ಕೋಸ್ಕರ ಶ್ರೀ ಎಂ. ಆರ್. ಪುಟ್ಟಸ್ವಾಮಯ್ಯ ಅನ್ನುವವರಿಗೆ ಕೆಲವು ಷರತ್ತುಗಳನ್ನು ಹಾಕಿಕೊಟ್ಟಿದೆ. ಮೊದಲು 30 ವರ್ಷದ ಷರತ್ತು ಹಾಕಿತ್ತು. ಅದಾದಮೇಲೆ ಮತ್ತೆ ವಾಯಿದೆ ಹೆಚ್ಚು ಮಾಡಿದೆ. ಮತ್ತು ಅದರಲ್ಲಿ ಆ ಸೈಟನ್ನು ಸ್ವಾಧೀನಕ್ಕೆ ಕೊಟ್ಟ ಮೇಲೆ ಅವರಿಗೆ ತಿಂಗಳು ಒಂದಕ್ಕೆ 60 ರೂಪಾಯಿ ಗ್ರೌಂಡ್ ರೆಂಟ್ ಕೊಡಬೇಕು ಎನ್ನುವ ಷರತ್ತು ಹಾಕಿದೆ. ಇನ್ನೂ ಕೆಲವಾರು ಷರತ್ತುಗಳನ್ನು ಹಾಕಿದೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಆ ಷರತ್ತುಗಳ ವಿವರಗಳನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅಧ್ಯಕ್ಷರ ಅಪ್ಪಣೆ ಆದರೆ ಹೇಳುತ್ತೇನೆ.

ಅಧ್ಯಕ್ಷರು.—ಹೇಳಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಸಿನಿಮಾ ಥಿಯೇಟರನ್ನು 85 ಸಾವಿರ ರೂಪಾಯಿ ಖರ್ಚಿನಲ್ಲಿ ಕಟ್ಟಬೇಕೆಂದು ಷರತ್ತು ಹಾಕಿದೆ. ತಾರೀಖು 23-5-1959 ರಲ್ಲಿ ಆ ಸೈಟನ್ನು ಪೊಸಿಷನ್‌ಗೆ ಕೊಟ್ಟಿತು. ಒಂದು ವರ್ಷ ಕಳೆಯಿತು, ಕಟ್ಟಡ ಪ್ರಾರಂಭವಾಗಲಿಲ್ಲ. ಮತ್ತು ಅವರು ಟೈಂ ಎಕ್ಸ್‌ಟೆಂಡ್ ಮಾಡುವುದಕ್ಕೆ ಅರ್ಜಿ ಕೊಟ್ಟರು 1968 ರವರೆಗೂ ಇನ್ನೂ ಆ ಬಗ್ಗೆ ತೀರ್ಮಾನವಾಗಲಿಲ್ಲ. ಅವಾದ ಮೇಲೆ 2 ವರ್ಷ ಟೈಂ ಎಕ್ಸ್‌ಟೆಂಡ್ ಮಾಡಬೇಕು ಎಂದು ಕೇಳಿದರು. ಒಂದು ವರ್ಷ ಕೊಟ್ಟರು. ಅದಾದಮೇಲೆ 1972 ನೇ ಇಸವಿ ಫೆಬ್ರುವರಿಯಲ್ಲಿ ಇನ್ನು 6 ತಿಂಗಳು ಟೈಂ ಎಕ್ಸ್‌ಟೆಂಡ್ ಮಾಡಬೇಕು ಎಂದು ಅರ್ಜಿ ಕೊಟ್ಟರು ಈಗ ಅದು ರೂಫಿಂಗ್ ಮಟ್ಟಕ್ಕೆ ಬಂದಿದೆ. ಇಷ್ಟರಲ್ಲೇ ಆ ಕೆಲಸ ಅಖೈರು ಆಗಬಹುದು ಎಂದು ನಾನು ತಿಳಿದಿದ್ದೇನೆ.

ಶ್ರೀ ಹೆಚ್. ಎಸ್ ಸಿದ್ದಪ್ಪ.—ಈಗ ತಾವು ಹೇಳಿದಂತೆ 1959ನೇ ಇಸವಿಯಲ್ಲಿ ಆ ಸೈಟನ್ನು ಪೊಸಿಷನ್‌ಗೆ ಕೊಟ್ಟು ಒಂದು ವರ್ಷವಾದರೂ ಕಟ್ಟಡ ಆಗಲಿಲ್ಲ, ಮತ್ತು 1968 ರಲ್ಲಿ ಇನ್ನೂ ಒಂದು ವರ್ಷ ಟೈಂ ಕೊಟ್ಟರೂ ಕಟ್ಟಡ ಆಗಲಿಲ್ಲ, ಪುನಃ 1972 ನೇ ಇಸವಿಯಲ್ಲಿ 6 ತಿಂಗಳು ಟೈಂ ಕೇಳಿದರೂ ಕೂಡ ಕಟ್ಟಡ ಆಗಲಿಲ್ಲ ಎಂದು. ಈ ಹೊತ್ತಿನ ದಿವಸ ಆ ದೇವಸ್ಥಾನಕ್ಕೆ ಅದರಿಂದ ಏನು ಲುಕ್ಸಾನು ಆಗಿದೆಯೋ ಅದಕ್ಕೆ ಜವಾಬ್ದಾರರು ಯಾರು ? ಆದರಿಂದ ಲೀಸ್ ಕಂಡೀಸನ್‌ನ್ನು ಉಲ್ಲಂಘನೆ ಮಾಡಿದಂತಾಗುವುದಿಲ್ಲವೇ ? ಈವಾಗ ಆ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಅವರು ಕಟ್ಟಡ ಕಟ್ಟದೇ ಇದ್ದರೂ ಕೂಡ ತಿಂಗಳು ಒಂದಕ್ಕೆ 60 ರೂಪಾಯಿ ಬಾಡಿಗೆ ಕೊಡಬೇಕು ಎಂದು ಏನು ಷರತ್ತು ಹಾಕಿದ್ದೇವೋ ಅದು ಬರುತ್ತಾ ಬಾಡಿಗೆ ಇದೆ. ಬಾಕಿ ಇಲ್ಲಾ. ಆದುದರಿಂದ ದೇವಸ್ಥಾನಕ್ಕೆ ಏನೂ ನಷ್ಟವಾಗಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಸ್ವಾಮಿ, ಸಿನಿಮಾ ಥಿಯೇಟರ್ ಲೀಸ್‌ನ್ನು 30 ವರ್ಷ ಇದ್ದುದನ್ನು 40 ವರ್ಷಕ್ಕೆ ಹೆಚ್ಚು ಮಾಡಿದ್ದೀರಿ, ಆ ಕಟ್ಟಡವನ್ನು ಇನ್ನು 20 ವರ್ಷಕ್ಕೆ ಕಟ್ಟಿದರೆ, ಅಲ್ಲಿಂದ 40 ವರ್ಷ ಲೀಸ್‌ಗೆ ಅವರಿಗೆ ಕೊಟ್ಟರೆ ಇದರಿಂದ ಲುಕ್ಸಾನು ಆಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾರೀಖು 28-4-1958 ರಿಂದ 40 ವರ್ಷವಾಯಿದೆ ಬರುತ್ತದೆ. ಥಿಯೇಟರ್ ಕಟ್ಟಿದ ಮೇಲೆ ವಾಯಿದೆ ಬರುವುದಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಇದರಲ್ಲಿ ಒಂದು ಸಲಹಾ ಮಂಡಲಿ ಇದೆ. ಅವರಿಗೆ ಈ ಬಗ್ಗೆ ಅಗ್ರೀಮೆಂಟ್ ಆದದ್ದು, ಲೀಸ್ ಡೀಡ್ ಆದುದ್ದು ಗೊತ್ತಿಲ್ಲ. ಇದರ ವ್ಯವಹಾರ ನೋಡಿದರೆ ಇಷ್ಟೊಂದು ತಡವಾಗಿದೆ. ಆದುದರಿಂದ ಅಗ್ರಿಮೆಂಟ್‌ನಲ್ಲಿ ಏನು ಇದೆ ? ಲೀಸ್ ಕಂಡೀಷನ್ಸ್‌ನಲ್ಲಿ ಏನು ಇದೆ ? ಅದನ್ನು ಸಭೆಯ ಮುಂದೆ ಒದಗಿಸುವುದಕ್ಕೆ ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಹತ್ತಿರ ಅಗ್ರಿಮೆಂಟ್ ಮತ್ತು ಲೀಸ್ ಕಂಡೀಷನ್ಸ್ ಎಲ್ಲಾ ಇದೆ, ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದರೆ ಬಂದು ಆ ಷರತ್ತುಗಳನ್ನು ನೋಡಬಹುದು.

SHORT NOTICE QUESTION AND ANSWER

Co-operative Appellate Tribunal

(9) **Sri J. L. KABADE** (Ballolli).—

Will the Minister for Co-operation be pleased to state :—

(a) whether the Government is aware that Co-operative Appellate Tribunal was closed from 12th to 19th February 1973 as one of the members had gone to Calcutta ;

(*b*) the steps taken to amend the Act to enable the three Members of this Tribunal to decide the matters as per the decision of High Court ?

Sri A. SHANKAR ALVA (Minister for Co-operation).—

(*a*) Yes.

(*b*) An amendment to the relative section of the Mysore Co-operative Societies Act has been included in the Mysore Co-operative Societies Amendment Bill 1973 containing several other amendments which has been introduced in the Assembly during February 1973.

ಶ್ರೀ ಜೆ. ಎಲ್. ಕಬಾಡಿ.—ಸಹಕಾರೀ ಮೇಲ್ಮನವಿ ನ್ಯಾಯ ಮಂಡಲಿ ಸದಸ್ಯರೊಬ್ಬರು ಗೈರು ಹಾಜರಾಗಿದ್ದರು. ಅವರ ಗೈರು ಹಾಜರಿಯಲ್ಲಿ ಎಷ್ಟು ಕೇಸುಗಳು ಉಳಿದಿವೆ ?

ಶ್ರೀ ಎ. ಶಂಕರ ಆಳ್ವ.—ಅವರು ಯಾವುದೋ ಒಂದು ಕೋರ್ಟಿಗೆ ಎವಿಡೆನ್ಸ್ ಕೊಡುವ ಸಲುವಾಗಿ ಕಲ್ಕತ್ತೆಗೆ ಹೋಗಿದ್ದರು. ಅವರ ಗೈರು ಹಾಜರಿಯಲ್ಲಿ ಆ ಕೇಸ್‌ಗಳನ್ನು ಇತ್ಯರ್ಥ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈಗ ಇಬ್ಬರು ಸೇರಿ ಒಂದು ಬೆಂಚ್ ಮಾಡಿ ಕೊಡಬಹುದು ಎಂಬುದನ್ನು ಮಾಡಿದ್ದೇವೆ.

ಶ್ರೀ ಜಿ. ಎಲ್. ಕಬಾಡಿ.—ಸ್ವಾಮಿ, ಪ್ರಶ್ನೆ ಏನೆಂದರೆ ಅವರು ಎಷ್ಟು ದಿವಸ ಗೈರು ಹಾಜರಾಗಿದ್ದರು ಮತ್ತು ಆ ದಿವಸದಲ್ಲಿ ಎಷ್ಟು ಕೇಸುಗಳು ಉಳಿದಿವೆ ತಿಳಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅವರು 12 ನೇ ದಿನಾಂಕದಿಂದ 19ನೆ ದಿನಾಂಕದವರೆಗೆ ಹಾಜರಾಗಿದ್ದಾರೆ. ಎಷ್ಟು ಕೇಸುಗಳು ಉಳಿದಿವೆ ಎಂದು ಹೇಳುವುದಕ್ಕೆ ಅದರ ವಿವರ ನನ್ನಲ್ಲಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಸಹಕಾರ ಸಂಘಗಳಲ್ಲಿ ಸಾಲ ತೆಗೆದುಕೊಂಡರೆ ಅದು 2 ವರ್ಷವಾದರೆ ಅದರ ಲಿಮಿಟೇಷನ್ ಮುಗಿದು ಹೋಗುತ್ತದೆ. ಆದ್ದರಿಂದ ಅದರೊಳಗಾಗಿ ಎಷ್ಟು ಕೇಸುಗಳು ಟ್ರಿಬ್ಯೂನಲ್ ಮುಂದೆ ಬಂದಿವೆ ? ಆರೀತಿ ಸರಿಯಾದ ಟೈಂನಲ್ಲಿ ದಾಖಲ್ ಮಾಡದೇ ಇರುವುದರಿಂದ 10 ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ತಿಳಿದಿದ್ದೇನೆ. ಅದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎ. ಶಂಕರ ಆಳ್ವ.— ಆ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಸ್ವಾಮಿ ಉಚ್ಚ ನ್ಯಾಯ ಮಂಡಲಿಯವರು ಮೂರು ಸದಸ್ಯರನ್ನೊಳಗೊಂಡ ಸಮಿತಿಯನ್ನು ನೀವು ಮಾಡಿ ಎಂದು ಹೇಳಿದ್ದಾರೆ. ಅದರಲ್ಲಿ ಜುಡಿಷಿಯರಿಂದ ಒಬ್ಬರು, ಜಾಯಿಂಟ್ ರಿಜಸ್ಟ್ರಾರ್ ಇಲಾಖೆಯವರು ಒಬ್ಬರು, ಇನ್ನೊಬ್ಬರು 10 ವರ್ಷ ಪ್ರಾಕ್ಟೀಸ್ ಇರತಕ್ಕಂಥಾವರು ಒಬ್ಬರು ಎಂದು ಹೇಳಿದ್ದಾರೆ. ಅದಕ್ಕೆ ಬದಲಾಗಿ ಇದನ್ನು ಜುಡಿಷಿಯಲ್‌ಗೇ ಏತಕ್ಕೆ ಒಪ್ಪಿಸಬಾರದು ?

ಶ್ರೀ ಎ. ಶಂಕರ ಆಳ್ವ.—ನಿಮ್ಮ ಆಲೋಚನೆ ಪ್ರಕಾರ ಅದೇ ಕಂಟಿನ್ಯೂ ಆದರೆ ಸಾಕು. ಈವಾಗ ಇಬ್ಬರು ಸೇರಿದರೆ ಒಂದು ಬೆಂಚು ಕೊಡಬಹುದು ಎಂದು ಮಾಡಿದ್ದೇವೆ. ಈ ವಿಚಾರದಲ್ಲಿ ನಾವು ಒಂದು ಅಮೆಂಡ್‌ಮೆಂಟ್ ಬಿಲ್ಲನ್ನು ಮಾಡುವುದು ಒಳ್ಳೆಯದು ಎಂದು ಕಾಣುತ್ತದೆ.

ಶ್ರೀ ಜೆ. ಎಲ್. ಕಬಾಡಿ – ಸಹಕಾರೀ ಸಂಘಗಳಲ್ಲಿ ಸಾಲ ತೆಗೆದುಕೊಂಡು ಅವರಿಂದ ವಸೂಲಾಗದೇ ಇದ್ದರೆ, ಆ ಅವಧಿ 2 ವರ್ಷ ಮೀರಿದಲ್ಲಿ ಕಾನೂನಿನ ಪ್ರಕಾರ ಆ ಹಣವನ್ನು ವಸೂಲ್ಮಾಡಲು ಟ್ರಿಬ್ಯೂನಲ್ ಮುಂದೆ ಹೋಗುವುದಕ್ಕೆ ಅವಕಾಶವಿಲ್ಲ. ಆ ಬಗ್ಗೆ ಸಹಕಾರ ಸಂಘಗಳಿಂದಾಗಲಿ ಅಥವಾ ಸರ್ಕಾರದಿಂದಾಗಲಿ ಈ ವಿಚಾರದಲ್ಲಿ ಒಂದು ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಹಣ ಲ್ಯಾಪ್ಸ್ ಆಗುತ್ತದೆ. ಈ ಅಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಿದ್ದೀರಾ ? ಮತ್ತು ಇದಕ್ಕೆ ಜವಾಬ್ದಾರರು ಯಾರು ಎಂದು ಸರ್ಕಾರ ಕಂಡುಹಿಡಿದು ಆ ಹಣ ಲ್ಯಾಪ್ಸ್ ಆಗಿದೇ ಇರುವ ಹಾಗೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಎ. ಶಂಕರ ಆಳ್ವ.—ಹಣ ಲ್ಯಾಪ್ಸ ಆದರೆ ಅವರಿಗೆ ಸರ್‌ಚಾರ್ಜ್ ಮಾಡುತ್ತೇವೆ ಈವಾಗ 2 ವರ್ಷ ಅವಧಿ ಇರುವುದನ್ನು 6 ವರ್ಷ ಮಾಡಬೇಕು ಅಂತ ಮಾಡಿದ್ದೇವೆ.

MADAM SPEAKER.—Question Hour is over.

QUESTIONS FOR ANSWERS ON THE DAY

(but not taken up)

Left Bank Canal of Upper Krishna in Gulbarga District

208. **Sri BAPU GOWDA** (Shahapur).—

Will the Minister of State for Major Irrigation be pleased to state :—

(*a*) whether the left bank canal of Upper Krishna Excavation work in Gulbarga District has been started ;

(*b*) if so, the length of the left Bank canal of which excavation work is to be taken up in Gulbarga District (Figures in miles may be provided) ;

(*c*) the number of labourers engaged in this work in the month of December 1972 and January 1973 ?

Sri H. N. NANJE GOWDA (Minister of State for Major Irrigation).—

(*a*) Yes.

(*b*) 167 Miles of the Narayanapur Left Bank Canal and its Branch Canals.

(*c*) December 1972 ... Average daily labour 6,312.
January 1973 ... Average daily labour 6,097.

Payment of Compensation to Labourers of Dathathreya Industries

477. **Sri CHOWDA REDDY** (Chinthamani).—

Will the Minister for Labour be pleased to state :—

(*a*) whether it is not a fact that a dispute between the Management and the labourer of Dathathreya Industries at Kallahalli of Kaiwar Hobli in Chinthamani Taluk was referred to the Labour Tribunal and that the Presiding Officer, Sri P. T. Kadkol had passed the compensation award numbering 19-66 LMA 321 LLD 66, Bangalore, dated 14th December 1967.

(*b*) if so, the reasons for not awarding compensation to him so far ?

Sri AZEEZ SAIT (Minister for Lobour).—

(*a*) Yes.

(*b*) Reasons are not known. The labourer has also not claimed compensation so far.

CALLING ATTENTION TO MATTERS OF URGENT PUBLIC IMPORTANCE

(i) *re* : Strike by Students of the Siddaganga Institute of Technology, Tumkúr.

Sri GATTI CHANDRASHEKAR (Gubbi).—I call the attention of the Hon. Minister for Education to a strike by the students of Siddaganga Institute of Technology, Tumkur.

Sri A. R. BADARINARAYANA (Minister for Education).–Sir, I state as follows :—

In the Magazine 'Science To-day' an article has appeared in which the list of Engineering Colleges offering Degree Courses is shown. In this list, there are a few Engineering Colleges which are not getting any financial assistance from the State or Central Government and in the foot note, it has been indicated that some Colleges in Mysore State are not being given any financial assistance and hence indicated as unapproved institutions. However, they are all recognised Institutions.

2. These unaided Institutions are affiliated to the University of Mysore (Mysore University-2 and Bangalore University-2) and they are given affiliation and recognition by the State Government. The Degree awarded by the respective Universities are recognised.

3. The term 'unapproved Colleges' has created some doubts and anxiety in the minds of the students and they were afraid that this would come in their way of employment which was responsible for the strike. It has been explained that the approval of the Institutions for assistance and recognition of the Institutions for the award of Degree are two separate issues. This matter was discussed with the student leaders and they were also convinced and the students have returned to their classes.

re : Taking over Playground for constructing Buildings for the State Home, Hubli

ಶ್ರೀ ಕೆ. ಯಂಕಟಪ್ಪ.—ಹುಬ್ಬಳ್ಳಿಯಲ್ಲಿ ಪ್ರತಿಪ್ರೇಕ್ಷಣ ಗೃಹದ ಕಟ್ಟಡಗಳನ್ನು ನಿರ್ಮಿಸುವುದಕ್ಕೆ ಸರ್ಕಾರದವರು ಎರಡನೇ ವಾರ್ಡಿನಲ್ಲಿರುವ ಆಟದ ಮೈದಾನವನ್ನು ವಹಿಸಿಕೊಂಡಿರುವ ವಿಚಾರದ ಬಗ್ಗೆ ಮಾನ್ಯ ಸಮಾಜವಿಕಾಸ ಹಾಗೂ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಚನ್ನಬಸಪ್ಪನವರು ಸಂಬಂಧಪಟ್ಟ ಹೇಳಿಕೆಯನ್ನು ಓದುತ್ತಾರೆ. ಅದರ ಮೇಲೆ ಏನಾದರೂ ವಿವರಣೆಗಳನ್ನು ಕೇಳಿದರೆ ಅದನ್ನು ಹೇಳುವುದಕ್ಕೆ ಅವರಿಗೆ ಅವಕಾಶವಿಲ್ಲದೆ ಇರುವುದರಿಂದ ಸಂಬಂಧಪಟ್ಟ ಮಂತ್ರಿಗಳು ಬಂದನಂತರ ಇದನ್ನು ತೆಗೆದುಕೊಳ್ಳುವುದು ಸೂಕ್ತ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೇಳಿದ ಪ್ರಶ್ನೆಗೆ ಎಷ್ಟು ಉತ್ತರ ಸಿಕ್ಕುತ್ತದೆ ಅದನ್ನು ಹೇಳುವುದಕ್ಕೆ ಸಾಧ್ಯ. ಆದರೆ ಅಧ್ಯಕ್ಷರು ಅವರ ಇಚ್ಛೆಬಂದಂತೆ ಮಾಡಲು ನನ್ನ ಅಭ್ಯಂತರವಿಲ್ಲ.

ಅಧ್ಯಕ್ಷರು.—ಈ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳು ಬಂದನಂತರ ತೆಗೆದುಕೊಳ್ಳುತ್ತೇನೆ.

Matter under Rule 312 *re* : Statement of some Congress M. Ps. against the Ministry

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ನಾನು ರೂಲ್ 312 ರ ಪ್ರಕಾರ ಒಂದು ವಿಷಯವನ್ನು ಪ್ರಸ್ತಾಪಮಾಡಲು ಕಳುಹಿಸಿದ್ದೆ.

ಅಧ್ಯಕ್ಷರು.—ರೂಲ್ 312 ಹೇಗೆ ಉಪಯೋಗಿಸಿಕೊಳ್ಳಬೇಕು ಎನ್ನುವ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ. ಅದನ್ನು ವಾರಕ್ಕೆ ಒಂದು ದಿನ ಅಥವಾ ಎರಡು ದಿನ ತೆಗೆದುಕೊಳ್ಳಬೇಕೆಂದಿದ್ದೇನೆ. ಯಾವ ದಿನ ಅಜೆಂಡಾವಲ್ಲಿ ಹಾಕಲಾಗುತ್ತದೆ ಆ ದಿವಸ ಮಾತ್ರ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಮಂತ್ರಿಗಳು ಇದ್ದಾರೆ. ಅವರಲ್ಲಿ ತಮ್ಮ ಮೂಲಕ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ನಮ್ಮ ರಾಜ್ಯದ ಮಂತ್ರಿ ಮಂಡಲದ ಮೇಲೆ ಪಾರ್ಲಿಮೆಂಟ್ ಸದಸ್ಯರು ಕೆಲವು ಆರೋಪಗಳನ್ನು ಪ್ರಧಾನಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆ ಆರೋಪಗಳೇನು, ಅವುಗಳ ಬಗ್ಗೆ ನಮ್ಮ ಮಂತ್ರಿಮಂಡಲದ ಪ್ರತಿಕ್ರಿಯೆ ಏನು ? ಪಾರ್ಲಿಮೆಂಟ್ ಸದಸ್ಯರು ಡೆಲ್ಲಿಯಿಂದ ಬೆಂಗಳೂರಿಗೆ ಬಂದಮೇಲೆ ಒಬ್ಬಬ್ಬರು ಒಂದೊಂದು ರೀತಿಯ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಅವರ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಬಜೆಟ್ ಮೇಲಿನ ಚರ್ಚೆಯಲ್ಲಿ ಬೇಕಾದಷ್ಟು ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್.—ಇತ್ತೀಚೆಗೆ ಬಂದಿರುವ ಸಮಾಚಾರದ ಪ್ರಕಾರ ಪ್ರಧಾನಿಯವರು ಸಹಿತ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಿವಿ ಮಾತಿನಲ್ಲಿ ಕೆಲವು ಸಚಿವರನ್ನು ತೆಗೆದುಹಾಕಬೇಕು, ಇಲ್ಲದೆ ಇದ್ದರೆ ನಿಮಗೂ ಕೆಟ್ಟ ಹೆಸರು ಬರುತ್ತದೆ ಎಂದು ಹೇಳಿದ್ದಾರೆ. ಸಭೆ ನಡೆಯುವಾಗ ಅವರನ್ನು ತೆಗೆದುಹಾಕಿದರೆ ಪಕ್ಷದಲ್ಲಿ ಒಡಕು ಬರುವ ಸಂಭವವಿದೆ. ಅಧಿವೇಶನ ಮುಗಿದನಂತರ ಪರಿಶೀಲನೆ ಮಾಡೋಣವೆಂದು ಹೇಳಿದ್ದಾರೆಂದು ಸಮಾಚಾರ ಅವರ ಪಕ್ಷದವರಿಂದಲೇ ನಮಗೆ ಬಂದಿದೆ. ಹಾಗೆ ಮಾಡುವುದಾದರೆ ಹೊಸದಾಗಿ ಯಾರನ್ನು ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ನಮಗೂ ಸ್ವಲ್ಪ ಗೊತ್ತಾಗುವಂತೆ ಹೇಳಲಿ. ಇದು ಪಕ್ಷದ ಪ್ರಶ್ನೆ ಮಾತ್ರವಲ್ಲ ಅವರ ಪಕ್ಷದ ಸಭೆಯಲ್ಲಿ ಗೊಂದಲವಾಗಿ ಎರಡು ಭಾಗವಾಯಿತು ಎಂದೂ ತಿಳಿದು ಬಂದಿದೆ. ಯಾರು ಬಂದರೂ ಚಿಂತೆ ಇಲ್ಲ, ನನ್ನನ್ನು ಅಲ್ಲಾಡಿಸುವುದಕ್ಕೆ ಸಾಧ್ಯವಿಲ್ಲ, ನಾನು ಭದ್ರವಾಗಿದ್ದೇನೆಂದು ಹೇಳುತ್ತಿದ್ದಾರೆಂದು ಕೇಳಿದ್ದೇವೆ. ಈಗಿನ ಮಂತ್ರಿಮಂಡಲದಲ್ಲಿ ನಮಗೆ ಅಪನಂಬಿಕೆ ಬಂದಿದೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಕಾತುರತೆಯನ್ನು ಹೋಗಲಾಡಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಸಾಮಾನ್ಯ ಜನರು ಆಪಾದನೆ ಮಾಡಿದ್ದರೆ ನಾವೇನೂ ಕಾತುರ ಪಡಬೇಕಾದ್ದಿರಲಲ್ಲ. ಆದರೆ ರಾಜ್ಯದ ಸಂಸತ್ ಸದಸ್ಯರೇ ಹೇಳಿರಬೇಕಾದರೆ, ಇದು ಪ್ರತಿಯೊಬ್ಬರೂ ಕೂಡ ಚಿಂತೆ ಮಾಡಬೇಕಾದ ಪ್ರಶ್ನೆಯಾಗಿದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಏನು ಅಭಿಪ್ರಾಯ ತಾಳಿದ್ದಾರೆನ್ನುವುದನ್ನು ಹೇಳಿದರೆ ಅನೇಕ ಅನುಮಾನಗಳು ಬಗೆಹರಿಯುತ್ತವೆ.

2-00 P.M

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ಇವರ ಮೇಲೆ ಇಷ್ಟೊಂದು ಆಸಕ್ತಿ ವಹಿಸಿರತಕ್ಕದ್ದು ಬಹಳ ಸಂತೋಷ. ಬಹುಶಃ ನಾನು ಹೇಳಿದರೆ ಶ್ರೀಮಾನ್ ನಾಗರಾಜರವರೂ ಎಲ್ಲರಿಗಿಂತ ಹೆಚ್ಚಾಗಿ ಒಪ್ಪುತ್ತಾರೆಂದು ಭಾವಿಸುತ್ತೇನೆ. ಅದಕ್ಕಾಗಿ ಅವರಿಗೂ ನನ್ನ ಧನ್ಯವಾದಗಳು ನಮ್ಮ ಸದಸ್ಯರುಗಳಿಗೆ ಮಂತ್ರಿಮಂಡಲದಲ್ಲಿ ಭದ್ರತ ಇದೆಯೋ ಹೇಗೆ ಎಂದು ಕೇಳುತ್ತಿದ್ದಾರೆ. ಬಹುಶಃ ನಮ್ಮ ಮಂತ್ರಿಮಂಡಲ ಭ್ರ

ವಾಗಿರಲ ಎಂದು ಹಾಗೆ ಕೇಳುತ್ತಾರೆಂದು ನಾನು ಭಾವಿಸುತ್ತೇನೆ. ಆ ರೀತಿ ಕೇಳುವುದೂ ಒಳ್ಳೆಯದು, ಇದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು. ಇದು ಭದ್ರವಾಗಿಯೇ ಇದೆ. ಈಗಲೂ ಇದೆ, ನಾಳೆಯೂ ಇರುತ್ತದೆ. ಪತ್ರಿಕೆಗಳಲ್ಲಿ ಇದರ ಬಗ್ಗೆ ಏನೇನೋ ಬಂದಿದೆ ಎಂದು ಹೇಳಿದರು. ಇದರ ಬಗ್ಗೆ ಹೇಳಬೇಕಾದ ಅಗತ್ಯವೇ ಇಲ್ಲ ಇದರಲ್ಲಿ ಯಾರು ಹೇಳಿದ್ದಾರೋ ಅವರೇ ಮತ್ತೆ ಇದರ ಬಗ್ಗೆ ಹೇಳಿದ್ದಾರೆ. ಇದರಲ್ಲಿ ಯಾರೋ ಕೆಲವರು ನನಗೆ ಅರ್ಜಿಗಳನ್ನು ಕೊಟ್ಟಿದ್ದಾರೆಂದು ಹೇಳಿದರು, ಅಂತಹ ಯಾವುದೂ ಬರವಣಿಗೆಯಲ್ಲಿ ಬಂದಿಲ್ಲ, ನನಗೆ ಗೊತ್ತಿರುವ ಪ್ರಕಾರ ನಾವು ಯಾರೂ ಕೊಟ್ಟಿಲ್ಲ. ಇದು ಇರತಕ್ಕ ಪರಿಸ್ಥಿತಿ.

CALLING ATTENTION TO A MATTER OF URGENT PUBLIC IMPORTANCE (*Contd.*)

(*ii*) *re*: Taking over of Playground for constructing Buildings for State Home, Hubli.

SRI K. YENKATAPPA (Shikaripur).—I beg to call the attention of the Hon. Minister for Community Development and Social Welfare to the taking over of the playground in Ward No. II of Hubli by Government for constructing buildings for the State Home, Hubli.

SRI S. M. MALLIKARJUNA SWAMY (Minister for Community Development and Social Welfare).—I beg to make the following statement in respect of Calling Attention notice by Sri K. Yenkatappa:

The plot measuring 400′ × 300′ bearing C. T. S. Nos. 4518/2, 4519/2 and 3083 in Ward No. II of Hubli (Ex-Settlement Criminal Tribes area of Hubli), has been allotted to the Probation and After Care Services Department for the construction of buildings for the State Home for Men, Hubli. Hence the site bearing No. C. T. S. 3083/I-A in Ward No. II of Hubli and the buildings thereon belong to Government. This has not been given by the Government to anybody for use as a playground. The whole site of nearly 5 acres is quite essential for the construction of buildings of the State Home for Men, Hubli.

Approval is accorded in the G. O. No. SWD 166 SJD 71, dated 11-1-1972, to the revised Plans and Estimates for Rs. 6,70,000 for the construction of the buildings for Residential School and Workshop in the State Home for men, Hubli. Permission is also accorded in the Government letter No. SWD 36 SJD 72 dated 8-8-1972 to execute the said construction work in relaxation of the Economy Orders and restrictions in taking up the construction of works. Accordingly, the P.W.D. is taking action for the construction of the said buildings.

The Carpentary Workshop buildings which had been earlier allotted to the Shantiniketan Co-operative Industrial Settlement Society, Hubli and which had been taken possession of by the Department latter and which was in a dilapidated condition, has been dismantled by the P.W.D. Authorities to facilitate the construction work of the buildings for the State Home, Hubli.

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮೊನ್ನೆ ನಾಗಮಂಗಲದಲ್ಲಿ ನಡೆದ ಘಟನೆಯ ಬಗ್ಗೆ ಸ್ಥಳಕ್ಕೆ ಹೋಗಿ ನಿಜಾಂಶವನ್ನು ತಿಳಿದುಕೊಂಡು ಬರೋಣ ಎಂದು ನಾನು ನನ್ನ ಕ್ಷೇತ್ರಕ್ಕೆ ಹೋಗಿದ್ದೆ. ಅಲ್ಲಿ ನಡೆದಂತಹ ಘಟನೆ ಏನು ಎನ್ನುವ ಬಗ್ಗೆ ವಿಷಯವನ್ನು ಸಂಗ್ರಹಿಸಿ ಅದನ್ನು ಈ ಸದನದಲ್ಲಿ ಇಡಬೇಕಾದ್ದು ನನ್ನ ಕರ್ತವ್ಯ. ಅದನ್ನು ಮಾಡದಿದ್ದರೆ ನಾನು ನನ್ನ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ಆದ್ದರಿಂದ ಈಗ ನಾನು ತಮ್ಮ ಅಪ್ಪಣೆಯನ್ನು ಪಡೆದು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು.—ನೋಟೀಸ್ ಕೊಡದೆ ಆ ರೀತಿ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನು ಈ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು.—ಅದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನು ತಮ್ಮಲ್ಲಿ ನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ನನಗೆ 5 ನಿಮಿಷ ಅವಕಾಶವನ್ನು ಕೊಡಿ.

ಅಧ್ಯಕ್ಷರು.—ಈ ವಿಷಯ ನಿನ್ನೆ ಬೇಕಾದಷ್ಟು ಚರ್ಚೆಯಾಗಿ, ಈ ಬಗ್ಗೆ ಮುಖ್ಯ ಮಂತ್ರಿಗಳು ಮಾತು ಕೊಟ್ಟಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಇದು ಅವರ ಊರಿಗೆ ಸಂಬಂಧಪಟ್ಟ ವಿಷಯ. ಆದ್ದರಿಂದ ಅವರು ಅದನ್ನು ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನು ಸ್ಥಳಕ್ಕೆ ಹೋಗಿ ವಿಚಾರ ಮಾಡಿ ನಿಜಾಂಶವನ್ನು ತಿಳಿದುಕೊಂಡು ಬಂದಿದ್ದೇನೆ. ಆದ್ದರಿಂದ ಅದನ್ನು ಹೇಳುವುದಕ್ಕೆ ನನಗೆ 5 ನಿಮಿಷ ಅವಕಾಶವನ್ನು ಕೊಡಿ. ಪೋಲೀಸಿನವರ ಮಧ್ಯದಲ್ಲಿ ಕರೀಗೌಡ ಇದ್ದಾಗ ಮೃತನಾಗಿದ್ದಾನೆ ಎಂದು ಗೊತ್ತಾಗಿದೆ. ಈ ಬಗ್ಗೆ ಪೋಲೀಸಿನವರನ್ನು ಬಿಟ್ಟು ಬೇರೆಯವರು ಸಾಕ್ಷಿ ಹೇಳುವುದು ಕಷ್ಟವಾಗುತ್ತದೆ. ಆದ್ದರಿಂದ ಈಗ ಆ ಪೋಲೀಸ್ ಸ್ಟೇಷನ್ನಿನಲ್ಲಿರತಕ್ಕ ಪೋಲೀಸ್ ಅಧಿಕಾರಿಗಳನ್ನು ಅದೇ ಜಾಗದಲ್ಲಿ ಮುಂದುವರಿಸಿಕೊಂಡು ಎನ್‌ಕ್ವೈರಿ ಮಾಡಿದರೆ ಅದರ ಫಲಿತಾಂಶ ಏನಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆ ಹೆಣವನ್ನು ನೋಡಬೇಕು ಎಂದು ಸಾರ್ವಜನಿಕರು ಪೋಲೀಸ್ ಸ್ಟೇಷನ್ನಿಗೆ ಹೋದಾಗ ಸುತ್ತಲೂ ಭದ್ರತೆಯನ್ನು ಮಾಡಿ ಯಾರೂ ಬರಕೂಡದು ಎಂದು ಪೋಲೀಸಿನವರು ಆಜ್ಞೆ ಮಾಡಿದಾಗ ಜನಗಳು ಅದನ್ನು ನೋಡಲೇಬೇಕು ಎಂದು ಪ್ರತಿಭಟನೆ ಮಾಡಿ ಪೋಲೀಸ್ ಸ್ಟೇಷನ್ನಿನೊಳಕ್ಕೆ ನುಗ್ಗುವುದಕ್ಕೆ ಹೋದಾಗ ಪೋಲೀಸಿನವರು ಲಾಠಿ ಚಾರ್ಜ್ ಮಾಡಿದರು. ಟೀರ್‌ಗ್ಯಾಸ್ ಹೊಡೆದರು. ಈ ರೀತಿ ನಡೆಯಬೇಕಾದರೆ ಆ ಸಮಯದಲ್ಲಿ ಪೋಲೀಸಿನವರ ದೌರ್ಜನ್ಯ ಎಷ್ಟರಮಟ್ಟಿಗೆ ಇತ್ತು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ರೀತಿ ಅಲ್ಲಿ ಸಂಶಯಪಡತಕ್ಕ ಒಂದು ಘಟನೆ ನಡೆದಿದೆ ಅದರ ನಿಜಾಂಶವನ್ನು ತಿಳಿದುಕೊಳ್ಳಬೇಕು ಎಂದು ಸಾರ್ವಜನಿಕರು ಅಲ್ಲಿಗೆ ಹೋದರು.

ಅಧ್ಯಕ್ಷರು.—ನಿಜಾಂಶವನ್ನು ತಿಳಿದುಕೊಳ್ಳುವುದಕ್ಕೆ ಎನ್‌ಕ್ವೈರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಇನ್ನೇನು ಮಾಡಬೇಕು ಎಂಬುದನ್ನು ಹೇಳಿ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಎನ್‌ಕ್ವೈರಿ ಮಾಡುವುದು ಈ ಸಮಸ್ಯೆಗೆ ಪರಿಹಾರವಲ್ಲ. ನಿರಾಯುಧರಾಗಿರತಕ್ಕ ಜನ ಬಂದೂಕವನ್ನು ಹಿಡಿದುಕೊಂಡಿರತಕ್ಕವರ ಮೇಲೆ ನುಗ್ಗಿ ಆ ಹೆಣವನ್ನು ನೋಡುವುದಕ್ಕೆ ಹೋಗಬೇಕಾದರೆ ಅದು ಯಾವ ಮಟ್ಟಕ್ಕೆ ಹೋಗಿದೆ ಎಂಬುದನ್ನು ತಾವೇ ಊಹೆ ಮಾಡಿ. ಆ ಜನಗಳನ್ನು ಪೋಲೀಸಿನವರು ಕೆರಳಿಸಿ ಆ ಜನಗಳ ಮನಸ್ಸಿಗೆ ನೋವಾಗಿರುವುದರಿಂದ ಅವರು ಪೋಲೀಸಿನವರ ಮೇಲೆ ಪ್ರತಿಭಟನೆ ಮಾಡಿದ್ದಾರೆ. ಇದರಿಂದ ಪೋಲೀಸಿನವರಲ್ಲಿ ಒಂದು ಸೌಜನ್ಯ ಇಲ್ಲ ಎಂದು ತಿಳಿಯುತ್ತಿದೆ. ಆ ಪೋಲೀಸಿನವರು ರಿಜರ್ವ್ ಪೋಲೀಸ್ ಬೇರೆ ಕರೆಸಿ ಆ ಸಾರ್ವಜನಿಕರ ಮೇಲೆ ಗುಂಡು ಇಟ್ಟರು. ಇದರಿಂದ 5 ಜನಗಳಿಗೆ ಗಾಯವಾಗಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿಕೆಯನ್ನು ಕೊಟ್ಟಿದ್ದಾರೆ ಇಂಥಾ ಒಂದು ಪರಿಸ್ಥಿತಿ ಇರುವಾಗ ಆ ಪೋಲೀಸ್ ಅಧಿಕಾರಿಗಳನ್ನು ಆಯಾ ಸ್ಥಳದಲ್ಲಿ ಮುಂದುವರಿಸಿಕೊಂಡು ಹೋಗುವುದು ನ್ಯಾಯವೇ ! ಪೋಲೀಸಿನವರಿಗೆ ರಕ್ಷಣೆಯನ್ನು ಕೊಟ್ಟುಕೊಂಡು ಹೋಗತಕ್ಕಂಥಾದ್ದನ್ನು ಖಂಡಿತಾ ತ್ಯಾಜ್ಯ ಮಾಡಬೇಕು. ಇವೊತ್ತು ಅಲ್ಲಿ ನಡೆದಂತಹ ಒಂದು ಕೃತ್ಯಕ್ಕೋಸ್ಕರ ನಾಗಮಂಗಲದ ಜನ ಪೋಲೀಸ್ ಠಾಣೆಯನ್ನು ಧಾಳಿ ಮಾಡಿದರು. ಇಂಥಾ ಅನ್ಯಾಯಗಳು ನಡೆದರೆ ನಾಳೆ ಕರ್ನಾಟಕದ ಜನ

ವಿಧಾನಸೌಧವನ್ನು ಧಾಳಿ ಮಾಡುತ್ತಾರೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ತೀವ್ರವಾಗಿ ತಮ್ಮ ಗಮನವನ್ನು ಹರಿಸಿ ಕೂಡಲೇ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿ ಇಡಬೇಕು, ಕೆಲವರನ್ನು ವರ್ಗಾವಣೆ ಮಾಡಬೇಕು ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಹಲಗೇಗೌಡ (ಪಾಂಡವಪುರ).—ಸ್ವಾಮಿ ಈ ಘಟನೆಯಲ್ಲಿ ಸತ್ತ ವ್ಯಕ್ತಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟವನು. ಇದರಲ್ಲಿ ಯಾವ ಮುಚ್ಚು ಮರೆಯಿಲ್ಲ. ಪೋಲೀಸ್ ಇನ್‌ಸ್ಪೆಕ್ಟರು ಹೋದಂತಹ ಲಾರಿಯಲ್ಲಿ ಶ್ರೀ ಕರೀಗೌಡನನ್ನು ಕರೆದುಕೊಂಡು ಹೋಗುವಾಗ್ಯೆ ಅವನು ಲಾರಿಯಿಂದ ಕೆಳಗೆ ಬಿದ್ದು ಗಾಯವಾಗಿ ರಕ್ತಸಿಕ್ತವಾಗಿದ್ದ ಎನ್ನುವ ವರದಿ ನಿಜ. ಅದನ್ನು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಈ ಹೆಣವನ್ನು ಲಾರಿಯಲ್ಲಿ ಪೋಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋದಮೇಲೆ ಶಾಂತಿಪ್ರಿಯರಾದ ನಾಗಮಂಗಲದ ಜನ ಪೋಲೀಸ್ ಸ್ಟೇಷನ್ನಿನಲ್ಲಿದ್ದ ಹೆಣವನ್ನು ನೋಡುವುದಕ್ಕೆ ಹೋದಾಗ ಗೋಲಿಬಾರ್ ಮಾಡುವ ಮಟ್ಟಕ್ಕೆ ಈ ವಿಷಯ ಹೋಯಿತು ಎಂದರೆ ಅಲ್ಲಿದ್ದ ಅಧಿಕಾರಿಗಳು ಯಾವ ರೀತಿ ವರ್ತಿಸಿದ್ದಾರೆ ಎಂಬುದು ಗೊತ್ತಾಗುತ್ತದೆ. ಬಹುಶಃ ಆ ಕೊಲೆಯಲ್ಲಿ ಪೋಲೀಸಿನವರು ಭಾಗವಹಿಸಿಲ್ಲ ಎನ್ನುವ ವಿಷಯ ನನಗೆ ಗೊತ್ತಾಗಿದೆ. ನಾನು ಈ ವಿಷಯವನ್ನು ಆ ಪ್ರದೇಶದ ಜನಗಳಿಂದ ಸಂಗ್ರಹ ಮಾಡಿದ್ದೇನೆ. ಇದು ಪೋಲೀಸಿನವರಿಂದ ಆದಂಥ ಕೊಲೆ ಅಲ್ಲ. ಅವನು ತಾನಾಗಿಯೇ ಲಾರಿಯಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ನನಗೆ ಬಹುಮಂದಿ ತಿಳಿಸಿದ್ದಾರೆ. ಶ್ರೀ ಕರೀಗೌಡ ಲಾರಿಯಲ್ಲಿ ಹೋಗುವಾಗ ಪೋಲೀಸ್ ಅಧಿಕಾರಿ ಕರೀಗೌಡನನ್ನು ಕುರಿತು ನಾಗಮಂಗಲಕ್ಕೆ ಹೋದಮೇಲೆ ''ನೇಣು ಹಾಕುತ್ತೇನೆ'' ಎಂದು ಹೇಳಿದ, ನಂತರ 2 ಮೈಲಿ ದೂರ ಹೋದ ಮೇಲೆ ಅವನು ಲಾರಿಯಿಂದ ಕೆಳಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಎಂದು ಗೊತ್ತಾಗಿದೆ. ಆ ಪೋಲೀಸ್ ಅಧಿಕಾರಿ ಆ ರೀತಿ ಹೇಳಬೇಕಾದರೆ ಆ ಕರೀಗೌಡನ ಮೇಲೆ ಕಳೆದ ಒಂದೂವರೆ ತಿಂಗಳಿಂದ ಕೆಲವು ಆಪಾದನೆಗಳು ಇದ್ದುವು. ಆದ್ದರಿಂದ ಇನ್ನು ನಾಗಮಂಗಲಕ್ಕೆ ಹೋದಮೇಲೆ ನನ್ನನ್ನು ವಿಚಾರಣೆಗೆ ಗುರಿಪಡಿಸುತ್ತಾರೆ, ನನಗೆ ತೊಂದರೆಯಾಗುತ್ತದೆ ಎಂದು ಅವನು ತಿಳಿದು ಈ ರೀತಿ ಅವನು ಆತ್ಮಹತ್ಯ ಮಾಡಿಕೊಂಡಿದ್ದಾನೆ. ಆದರೆ ಪೋಲೀಸ್ ಅಧಿಕಾರಿ ಪಕ್ಕದಲ್ಲಿದ್ದು ಇದಕ್ಕೆ ಅವಕಾಶ ಮಾಡಿರುವುದು ಅಧಿಕಾರಿಯ ಅವಿವೇಕತನ. ಈತ ಬುದ್ಧಿವಂತಿಕೆ ಪ್ರದರ್ಶಿಸಿಲ್ಲ. ಆದ್ದರಿಂದ ಈ ಕೂಡಲೇ ಆ ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ವಿಚಾರಣೆ ಮಾಡಬೇಕು. ಆದರೆ ಸರ್ಕಾರದವರು ಪೋಲೀಸ್ ಅಧಿಕಾರಿಗಳನ್ನು ವಹಿಸಿಕೊಂಡಿದ್ದಾರೆ ಎಂದು ಏನು ವಿರೋಧ ಪಕ್ಷದ ಸದಸ್ಯರು ಹೇಳಿದರು ಅದನ್ನು ಒಪ್ಪತಕ್ಕದ್ದಲ್ಲ. ಕೊನೆಯ ಪಕ್ಷ ಅವರ ತೃಪ್ತಿಗೋಸ್ಕರ ಆ ಘಟನೆ ನಡೆಯುವುದಕ್ಕೆ ಅವಕಾಶ ಕೊಟ್ಟಂತಹ ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಅವರನ್ನು ವಿಚಾರಣೆ ನಡೆಸಿದರೆ ಸಾಕು ಎಂದು ಅನಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಫೇರ್ ಎನ್‌ಕ್ವೈರಿ ದೃಷ್ಟಿಯಿಂದ ಆ ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು.

2-30 P.M.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಮಾನ್ಯ ಅಧ್ಯಕ್ಷರೇ, ನಾನು ನಿನ್ನೆಯ ದಿವಸ ನಾಗಮಂಗಲದಲ್ಲಿ ನಡೆದಂತಹ ಘಟನೆಯ ಬಗ್ಗೆ ಇಲ್ಲಿ ಚರ್ಚೆಯಾಗಿರುವುದನ್ನು ಪತ್ರಿಕೆಯಲ್ಲಿ ಓದಿದೆ. ನಿನ್ನೆ ಸಾಯಂಕಾಲ ಅಲ್ಲಿಗೆ ಹೋಗಿದ್ದೆ. ಈಗ ನಾನು ಅಲ್ಲಿ ನಡೆದಂತಹ ವಿಚಾರದ ಬಗ್ಗೆ ಪೂರ್ಣವಾದ ವಿವರಗಳನ್ನು ಹೊಂದುವುದಕ್ಕೆ ಮೊದಲು ಖಂಡಿತವಾಗಿ ಏನನ್ನೂ ಹೇಳುವುದಕ್ಕೆ ತಯಾರಿಲ್ಲ. ಒಂದೊಂದು ಸಾರಿ ಸರ್ಕಾರದಿಂದ ಬರತಕ್ಕ ಉತ್ತರ ಸಹ ಹಾಗೆ ಇದೆ. ನೀವು ವಿಷಯ ಸಂಗ್ರಹಣೆ ಮಾಡದೆ ಈ ರೀತಿ ಮಾತನಾಡುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ. ಆದರೆ ಈ ಘಟನೆಯಲ್ಲಿ ಒಂದು ಸಂಶಯಾತ್ಮಕವಾದ ಪರಿಸ್ಥಿತಿ ಏನೆಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಮಂಡ್ಯಕ್ಕೆ ಅಪರಾಧಿಯನ್ನು ಪೋಲೀಸ್ ಇನ್ಸ್‌ಪೆಕ್ಟರ್ ಕರಕೊಂಡು ಹೋದರು ಮತ್ತು ಸಂಜೆ ವಾಪಸ್ಸು ಲಾರಿಯಲ್ಲಿ ಕರಕೊಂಡು ಬಂದರು. ಇದರಲ್ಲಿ ಎರಡು ರೀತಿಯ ವರ್ಷನ್ಸ್ ಇವೆ. ಒಂದು ಲಾರಿಯಲ್ಲಿ ಕರಕೊಂಡು ಬರುವಾಗ ಅವನು ಹಾರಿ ಬಿದ್ದು ಜಖಂ ಆಗಿ ಸತ್ತು ಹೋದ. ಇನ್ನೊಂದು ಮಂಡ್ಯದಲ್ಲಿ ಅವನಿಗೆ ಚೆನ್ನಾಗಿ ಹೊಡೆದು ಬಿಟ್ಟು ಅವನ ಸ್ಥಿತಿ ಚಿಂತಾಜನಕವಾಗಿದ್ದರೂ, ಲಾರಿಯಲ್ಲಿ ಬರುವಾಗ ನೆಗೆದು ಬಿದ್ದು ಸತ್ತು ಹೋದ ಎಂದು ಹೇಳುವಂತಹ ಪೋಲೀಸ್ ಅಧಿಕಾರಿಗಳ ಮಾತು. ಈ ರೀತಿ ಎರಡು ತರಹ ಇದೆ. ಅವನಿಗೆ ಬಿದ್ದಮೇಲೆ ಟ್ರೀಟ್‌ಮೆಂಟ್ ಮಾಡಿದರೂ ಅತನು ಸತ್ತು ಹೋದ ಎಂದು ಹೇಳುತ್ತಿದ್ದಾರೆ. ಮಂಡ್ಯಕ್ಕೆ ಕೈದಿಯನ್ನು

ಶ್ರೀ ಎ. ಆರ್. ಬದರಿನಾರಾಯಣ.—ಈ ಯೋಜನೆಯ ಉದ್ದೇಶವೇನೆಂದರೆ ವಿದ್ಯಾರ್ಥಿಗಳು ಹಳ್ಳಿಯ ಜನರೊಡನೆ ಮತ್ತು ಹಳ್ಳಿಯ ಜೀವನದೊಂದಿಗೆ ಮಿಳಿತವಾಗಬೇಕು ಮತ್ತು ಆ ಒಂದು ಸನ್ನಿವೇಶವನ್ನು ಕಲ್ಪನೆ ಮಾಡಬೇಕೆಂಬ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಈ ಯೋಜನೆ ತಯಾರು ಮಾಡಿ ನಮಗೂ ಸಹ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಈ ಹಣ ವ್ಯರ್ಥವಾಗಿ ಖರ್ಚಾಗದಂತೆ ನೋಡಿಕೊಳ್ಳಬೇಕಲ್ಲದೆ, ಅದು ಯಾವ ರೀತಿಯಿಂದ ಖರ್ಚಾಯಿತು ಎಂಬ ಬಗ್ಗೆ ಮುಂದಿನ ವರ್ಷ ಈ ಸಭೆಯಲ್ಲಿ ಒಂದು ವರದಿಯನ್ನು ಇಡುತ್ತೀರಾ ?

ಶ್ರೀ ಎ ಆರ್. ಬದರಿನಾರಾಯಣ.—ಈ ಕೆಲಸವನ್ನು ನೋಡಿಕೊಳ್ಳಲು ಅರಿತಂತಹ ಮತ್ತು ನುರಿತಂತಹ ಜನರು ಇರುತ್ತಾರೆ. ಅವರ ಸುಪರ್ದಿಗೆ ಹಣ ಕೊಡಲಾಗುತ್ತದೆ. ಅವರು ಹಣ ಪೋರಾಗದಂತೆ ನೋಡಿಕೊಳ್ಳುತ್ತಾರೆ. ಬೇಕಾದರೆ ಹಣದ ಖರ್ಚಿನ ಬಗ್ಗೆ ರಿಪೋರ್ಟ್ ಕೊಡೋಣ.

ಶ್ರೀ ಡಿ. ಹಲಗೇಗೌಡ.—ಬರಗಾಲ ಪ್ರದೇಶದಲ್ಲಿರುವ ಬಡತನವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಲಿ ಎಂಬ ಕಾರಣದಿಂದ ಅವರನ್ನು ಅಲ್ಲಿಗೆ ಕಳುಹಿಸಲಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಕೆಲವು ಕಡೆಗಳಲ್ಲಿ ಸೇವಾದಳದ ಕ್ಯಾಂಪ್ ಎಂದು ಮಾಡಿಸುತ್ತಾರೆ. ಅಲ್ಲಿ 500 ರೂಪಾಯಿಗಳ ಕೆಲಸವಾಗಿರುವುದಿಲ್ಲ ; ಆದರೆ 5 ಸಾವಿರ ರೂಪಾಯಿಗಳು ಖರ್ಚಾಗಿರುತ್ತದೆ. ಆ ರೀತಿ ಇಲ್ಲಿಯೂ ಆಗಬಾರದು. ವಿದ್ಯಾರ್ಥಿಗಳ ಮೂಲಕ ಇಷ್ಟೊಂದು ಹಣವನ್ನು ವ್ಯರ್ಥವಾಗಿ ಖರ್ಚು ಮಾಡಿಸುವ ಬದಲು ಅಲ್ಲಿರುವ ಜನರಿಗೆ ಕೆಲಸ ಒದಗಿಸುವುದು ಒಳ್ಳೆಯದಲ್ಲವೇ ?

ಶ್ರೀ ಎ. ಆರ್. ಬದರಿನಾರಾಯಣ.—ಅಲ್ಲಿ ಕೆಲಸ ಮಾಡುವ ಜನರಿಗೆ ತೊಂದರೆ ಇದರಿಂದ ಬರುವುದಿಲ್ಲ. ಅಲ್ಲಿ ಎಷ್ಟು ಜನರಿಗೆ ಬೇಕಾದರೂ ಕೆಲಸ ಕೊಡಲಾಗುತ್ತದೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಕಾಲೇಜಿನ ವಿದ್ಯಾರ್ಥಿಗಳು ರಜಾ ವೇಳೆಯಲ್ಲಿ ಹಳ್ಳಿಯಲ್ಲಿ ಇದ್ದುಕೊಂಡು ಅವರ ಜೀವನ, ಅವರ ಕಷ್ಟಸುಖಗಳನ್ನು ತಿಳಿದುಕೊಳ್ಳಲಿ, ಅವರೊಡನೆ ಮಿಳಿತವಾಗಲೀ ಎಂಬ ಉದ್ದೇಶದಿಂದ ಈ ಯೋಜನೆಯನ್ನು ಕೈಕೊಳ್ಳಲಾಗುತ್ತಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇಂದು ಗಂಡುಹುಡುಗರು ಮತ್ತು ಹೆಣ್ಣುಮಕ್ಕಳೆಲ್ಲರೂ ಟೈಟ್ ಪ್ಯಾಂಟ್ ಹಾಕಿಕೊಂಡು ಒಬ್ಬರ ಹಿಂದೆ ಒಬ್ಬರು ಓಡಾಡಿಕೊಂಡು ಇದ್ದಾರೆ. ಇಂತಹವರನ್ನು ಅಲ್ಲಿಗೆ ಕಳುಹಿಸುವುದರಿಂದ ಆ ಯೋಜನೆ ನಿಜವಾಗಿಯೂ ಕಾರ್ಯಗತವಾಗುತ್ತದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಪ್ರಯತ್ನ ಮಾಡಿರುವುದು ಒಳ್ಳೆಯ ಉದೇಶದಿಂದ. ಸಫಲವಾಗುವುದಿಲ್ಲ ಎಂದು ಏತಕ್ಕೆ ಹೇಳುತ್ತೀರಿ ? ನಿರಾಶವಾದಿ ಆಗಿ ನೀವು ಏಕೆ ಇದ್ದೀರಾ ?

Notice of adjournment Motion :

re : Statement of the Chief Minister in respect of death of one Sri Kari Gowda at Nagamangala

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ಪೇಟೆ).—ನೆನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ನಾಗಮಂಗಲದ ಪ್ರಕರಣದ ಬಗ್ಗೆ ಏನು ಹೇಳಿಕೆ ಕೊಟ್ಟರು ಅದು ಸರಿಯಲ್ಲ. ಅಲ್ಲಿ ಈಗ ಪರಿಸ್ಥಿತಿ ಸಂಪೂರ್ಣವಾಗಿ ಹದಗೆಟ್ಟಿದೆ. ಮತ್ತು ಪೋಲೀಸ್ ಸ್ಟೇಷನ್ನಲ್ಲಿಯೇ ಅತನನ್ನು ಕೊಂದಿರುವ ಬಗ್ಗೆ ಆಧಾರಗಳು ಸಹ ಇವೆ. ಮತ್ತು ಈ ಪ್ರಕರಣದಲ್ಲಿ ಅನೇಕ ಸಂಶಯಗಳು ಉದ್ಭವವಾಗಿವೆ.

ಅಧ್ಯಕ್ಷರು.—ನೆನ್ನೆ ದಿವಸ ಅದರ ಬಗ್ಗೆ ಪ್ರಸ್ತಾಪವಾಗಿ, ಮುಖ್ಯ ಮಂತ್ರಿಗಳು ತನಿಖೆ ಮಾಡಿಸುವುದಾಗಿ ಒಪ್ಪಿಕೊಂಡಿದ್ದಾರೆ. ತಾವು ಸಂಶಯ ಇಟ್ಟುಕೊಂಡು ನೋಡಿದರೆ ಅದು ಸಂಶಯವಾಗಿಯೇ ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಈ ಬಗ್ಗೆ ತಮ್ಮ ಗಮನಕ್ಕೆ ಒಂದು ಅಂಶವನ್ನು ತರುತ್ತೇನೆ. ಬಾಕಿ ವಿವರಗಳನ್ನು ಆ ಕ್ಷೇತ್ರದ ಸದಸ್ಯರಾದ ಶ್ರೀ ಕೃಷ್ಣಪ್ಪನವರು ಹೇಳುತ್ತಾರೆ. ಮುಖ್ಯವಾಗಿ ಆ ವಿಚಾರದಲ್ಲಿ ತನಿಖೆ ನಡೆಸುವುದಕ್ಕೆ ಮೊದಲು ಸರ್ಕಾರದವರು ಸಂಬಂಧಪಟ್ಟ ಪೋಲೀಸ್ ಇನ್‌ಸ್ಪೆಕ್ಟರನ್ನು ಸಸ್ಪೆಂಡ್ ಮಾಡಬೇಕು. ಹಿಂದೆ ಮಧುಗಿರಿ ಪ್ರಕರಣ ನಡೆದಾಗಲೂ ಸಹ ಇವರೇ ಇದ್ದರು. ಆದ್ದರಿಂದ ಇವರನ್ನು ಮೊದಲು ಸಸ್ಪೆಂಡ್ ಮಾಡಬೇಕು.

ಅಧ್ಯಕ್ಷರು.—ತನಿಖೆ ನಡೆಸಿದಾಗ ಅದೆಲ್ಲಾ ಹೊರಗೆ ಬಂದೇ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ತಪ್ಪಿತಸ್ಥರನ್ನು ಇಟ್ಟುಕೊಂಡು ತನಿಖೆ ಮಾಡಿಸಿದರೆ ನ್ಯಾಯ ಸಿಗುವುದಿಲ್ಲ. ಆದ್ದರಿಂದ ಆ ಪೋಲೀಸ್ ಇನ್‌ಸ್ಪೆಕ್ಟರನ್ನು ಸಸ್ಪೆಂಡ್ ಮಾಡಬೇಕು, ಇಲ್ಲವೇ ಜೈಲನಲ್ಲಿಡಬೇಕು. ಮಧುಗಿರಿ ಪ್ರಕರಣದಲ್ಲಿಯೇ ಆ ಅಧಿಕಾರಿಯನ್ನು ಮನೆಗೆ ಕಳಿಸಬೇಕಾಗಿತ್ತು. ಆದರೆ ಆ ರೀತಿ ಮಾಡದೆ ಅದೇ ಅಧಿಕಾರಿಗೆ ಪ್ರಮೋಷನ್ ಕೊಟ್ಟುಬಿಟ್ಟಿದ್ದಾರೆ. ಮುಖ್ಯಮಂತ್ರಿಗಳು ನೆನ್ನೆ ಕೊಟ್ಟ ವಿವರ ಈ ರೀತಿ ಇದೆ. "ಮಂಡ್ಯದ ಸಕ್ಕರೆ ಕಾರ್ಖಾನೆಯ ನೌಕರ ಕರಿಗೌಡ ಎಂಬುವವರು ಒಂದು ಕ್ರಿಮಿನಲ್ ಕೇಸಿನಲ್ಲಿ ದೂರಿತ್ತವರಾಗಿದ್ದು ಮತ್ತೊಂದರಲ್ಲಿ ಸಾಕ್ಷಿಯಾಗಿದ್ದರು. ಮಾರ್ಚಿ 19 ರಂದು ಅದರ ಸಂಬಂಧದಲಿ ನಾಗಮಂಗಲ ಪೋಲೀಸು ಸರ್ಕಲ್ ಇನ್ಸ್‌ಪೆಕ್ಟರ್ ಅವರು ಮಂಡ್ಯದ ಪೋಲೀಸ್ ಠಾಣೆಗೆ ಹಲವು ಪ್ರಶ್ನೆಗಳನ್ನು ಕೇಳುವುದಕ್ಕಾಗಿ ಅವರನ್ನು ಕರೆಸಿದರು. ಅಪಾದಿತನ ವಿಚಾರದಲ್ಲಿ ಇನ್ನೂ ಕೆಲವು ಮಾಹಿತಿ ಸಂಗ್ರಹಿಸುವುದಾಗಿ ಕರಿಗೌಡ ಹೊರಟುಹೋದರು. ಬೇರೆ ವಾಹನ ದೊರಕದಿದ್ದುದರಿಂದ ಇನ್ಸ್‌ಪೆಕ್ಟರರು ಒಂದು ಲಾರಿಯಲ್ಲಿ ನಾಗಮಂಗಲಕ್ಕೆ ಹೊರಟರು ಎಂದು ಹೇಳಿದ್ದಾರೆ. ಅವರಿಗೆ ಜೀಪ್ ಇದ್ದರೂ ಸಹ ಲಾರಿಯಲ್ಲಿ ಏತಕ್ಕೆ ಹೋದರು ? ಲಾರಿ ಚಿಕ್ಕಮಂಡ್ಯದ ಹತ್ತಿರ ಹೋದಾಗ ಕರಿಗೌಡ ಆ ಲಾರಿಯನ್ನು ತಡೆದು ನಿಲ್ಲಿಸಿ ಹತ್ತಿದ. ಯಾವುದೋ ಕೆಲಸಕ್ಕಾಗಿ ಆತ ನಾಗಮಂಗಲಕ್ಕೆ ಹೊರಟಿದ್ದ ಒಬ್ಬ ಮನುಷ್ಯನನ್ನು ಮುಖ್ಯಮಂತ್ರಿಗಳು ಹೇಳಿಕೆ ಕೊಡುವಾಗ ಲಾರಿಯಿಂದ ಬಿದ್ದು ಸತ್ತ ಎಂದು ಹೇಳಿಕೆ ಕೊಟ್ಟರೆ ಅದು ಸಮಂಜಸವಾಗುತ್ತದೆಯೇ ?

ಅಧ್ಯಕ್ಷರು.—ಎಲ್ಲವನ್ನೂ ತನಿಖೆ ಮಾಡಿಸುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಿಮ್ಮ ತೀರ್ಮಾನವನ್ನು ಈಗ ಯಾರು ಕೇಳಿದರು ? ತನಿಖೆಯಾದ ಮೇಲೆ ಏನು ನಿಜಾಂಶ ಹೊರ ಬರುತ್ತದೋ ಆಗ ಬೇಕಾದರೆ ತಾವು ತಮ್ಮ ಅಭಿಪ್ರಾಯವನ್ನು ತಿಳಿಸಿ. ಈಗ ನಿಮ್ಮ ಅಭಿಪ್ರಾಯಗಳನ್ನೆಲ್ಲಾ ಹೇಳುವುದರಿಂದ ಏನು ಪ್ರಯೋಜನ ?

ಶ್ರೀ ವಾಟಾಳ್ ನಾಗರಾಜ್.—ನಾಗಮಂಗಲಕ್ಕೆ ಇನ್ನೂ ಎರಡು ಮೈಲ ದೂರ ಇರುವಾಗಲೇ ಆತ ಲಾರಿಯಿಂದ ಹಾರಿ ಸತ್ತಿದ್ದರೆ, ಸತ್ತ ಹೆಣವನ್ನು ಸ್ಟೇಷನ್ನಿಗೆ ಏತಕ್ಕೆ ತೆಗೆದುಕೊಂಡು ಹೋದರು ? ಇದು ನಿಜ ಸಂಗತಿಯಲ್ಲ. ಆತನನ್ನು ಪ್ರಶ್ನೆ ಮಾಡುವುದಕ್ಕೆ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅಲ್ಲಿ ಸಾಯುವವರೆಗೆ ಹೊಡೆದಿದ್ದಾರೆ. ಈ ರೀತಿಯ ಅನ್ಯಾಯವನ್ನು ಜನರು ನೋಡಲಾರದೆ ಪೋಲೀಸ್ ಸ್ಟೇಷನ್ ಮುಂದೆ ಸೇರಿದಾಗ ಅವರ ಮೇಲೆ ಮತ್ತೆ ಪೋಲೀಸಿನವರು ವಿನಾಕಾರಣ ಗೋಲೀಬಾರ್ ಮಾಡಿದ್ದಾರೆ. ಗೋಲೀಬಾರ್‌ನಿಂದ ಗಾಯಗೊಂಡ ಜನರಿಂದ ರಕ್ತದ ಬಟ್ಟೆಗಳನ್ನು ತರಿಸುವುದಕ್ಕೆ ಹೇಳಿದ್ದೇನೆ ಸರ್ಕಾರದವರು ಈ ಬಗ್ಗೆ ತನಿಖೆ ಮಾಡಿಸುವುದಕ್ಕೆ ಮೊದಲು ಸಂಬಂಧಪಟ್ಟ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಇದನ್ನು ಆಳವಾಗಿ ಪರಿಶೀಲನೆ ಮಾಡಿದಾಗ ಏನು ಕಂಡುಬಂತು ಎಂದರೆ ಆ ಕರೀಗೌಡ ಎನ್ನುವ ಮನುಷ್ಯ ಯಾವ ಸ್ಥಳದಲ್ಲಿ ಸತ್ತು ಬಿದ್ದಿದ್ದ ಅವನನ್ನು ಎಂದರೆ ಹೆಣವನ್ನು ನೇರವಾಗಿ ಪೋಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋಗತಕ್ಕಂಥ ಆವಶ್ಯಕತೆ ಇರಲಿಲ್ಲ. ಯಾವ ಜಾಗದಲ್ಲಿ ಹೆಣ ಬಿದ್ದಿರುತ್ತದೆ ಆ ಹೆಣವನ್ನು ಆ ಜಾಗದಿಂದ ಎತ್ತಬೇಕಾದರೆ ಸಾಮಾನ್ಯವಾಗಿ ಆ ಸ್ಥಳದಲ್ಲಿ ಒಂದು ಮಹಜರ್ ಬರೆದು, ಕ್ರಿಮಿನಲ್ ಪ್ರೊಸಿಜರ್ ಪ್ರಕಾರ ಪೋಲೀಸ್ ಆಕ್ಟ್ ಪ್ರಕಾರ ಮಾಡಬೇಕಾದ ಕೆಲಸವನ್ನು ಮಾಡಿ ಇನ್‌ಕ್ವೆಸ್ಟ್ ಮಾಡಬೇಕು. ಆದರೆ ಆ ಸ್ಥಳದಲ್ಲಿ ಮಹಜರ್ ಮಾಡಿಲ್ಲ, ಇನ್‌ಕ್ವೆಸ್ಟ್ ಮಾಡಿಲ್ಲ. ಪೋಲೀಸ್ ಅಧಿಕಾರಿಗಳು ಈ ಹೆಣವನ್ನು ಪೋಲೀಸ್‌ನವರು ತೆಗೆದುಕೊಂಡು ಹೋಗತಕ್ಕಂಥಾ ಸಂದರ್ಭದಲ್ಲಿ ಅವರು ನೇರವಾಗಿ ಪೋಸ್ಟ್‌ಮಾರ್ಟಂಗೆ ತೆಗೆದುಕೊಂಡು ಹೋಗಬೇಕಾಗಿತ್ತು. ಅವರು ಅದನ್ನು ಪೋಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋಗತಕ್ಕಂಥಾ ಆವಶ್ಯಕತೆ ಇರಲಿಲ್ಲ. ಇದರಲ್ಲಿ ಪೋಲೀಸಿನವರು ತಪ್ಪು ಮಾಡಿದ್ದಾರೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಆದ್ದರಿಂದ ಇದರಲ್ಲಿ ಮೊದಲು ನ್ಯಾಯ ದೊರೆಯಬೇಕಾದರೆ ಮೊದಲು ಇದಕ್ಕೆ ಸಂಬಂಧಪಟ್ಟ ಇನ್‌ಸ್ಪೆಕ್ಟರನ್ನು ಸಸ್ಪೆನ್‌ಷನ್‌ನಲ್ಲಿಟ್ಟು ಈ ಬಗ್ಗೆ ವಿಚಾರಣೆ ನಡೆಸಿದರೆ ಆಗ ಸತ್ಯ ತಿಳಿಯುತ್ತದೆ. ಅವರು ನಿಜವಾದ ವಿಚಾರವನ್ನು ಬಚ್ಚಿಡುವ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ ಎಂದು ಕಾಣುತ್ತದೆ.

ಶ್ರೀ ಕೆ. ಯಂಕಟಪ್ಪ.—ಇಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಿರುವ ಸ್ಟೇಟ್‌ಮೆಂಟು ನೋಡಿದರೆ ಇದರ ಜಾಗವನ್ನು ಕ್ರಿಮಿನಲ್ ಟ್ರೈಬ್ಸ್‌ನವರಿಗೆ ಕೊಟ್ಟಿರಲಲ್ಲ ಎನ್ನುವ ಹಾಗೆ ಇದೆ, ಇದನ್ನು ಹುಬ್ಬಳ್ಳಿ ಕಾರ್ಪೊರೇಷ ನವರು ಪ್ಲೇ ಗ್ರೌಂಡಿಗಾಗಿ ಬಿಟ್ಟುಕೊಟ್ಟಿದ್ದರು, ಆದುದರಿಂದ ಈಗಲಾದರೂ ಮಾನ್ಯ ಮಂತ್ರಿಗಳು ಇದನ್ನು ಕೂಲಂಕುಷವಾಗಿ ಪರಿಶೀಲಿಸಿ ಅವರಿಗೆ ಈ ಜಾಗವನ್ನು ಬಿಟ್ಟುಕೊಡಲು ಸಹಾಯ ಮಾಡುತ್ತಾರೆಯೇ !

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ.—ಇದು ಸರಕಾರಕ್ಕೆ ಸೇರಿದಂತಹ ಸ್ಥಳ. ಇವರಿಗೆ ನಾವು ಕೊಟ್ಟಿರಲಿಲ್ಲ, ಸಾರ್ವಜನಿಕ ಹಿತದೃಷ್ಟಿಯಿಂದಲೇ ಇಂತಹ ಒಂದು ಸಂಸ್ಥೆಯ ಕಟ್ಟಡವನ್ನು ಇಲ್ಲಿ ಕಟ್ಟಬೇಕಾಗಿರುವುದರಿಂದ ಇದನ್ನು ವಾಪಸು ತೆಗೆದುಕೊಂಡು ಇಷ್ಟು ಹಣ ಇದಕ್ಕೆ ಖರ್ಚು ಮಾಡಬೇಕೆಂದು ಏರ್ಪಾಡು ಮಾಡಲಾಗುತ್ತಿದೆ.

ಶ್ರೀ ಕೆ. ಯಂಕಟಪ್ಪ.—ಹಿಂದೆ ಇದನ್ನು ವರ್ಕ್‌ಷಾಪಿಗಾಗಿ ಕೊಟ್ಟಿತ್ತು. ಆಮೇಲೆ ಇದನ್ನು ಡಿಪಾರ್ಟ್‌ಮೆಂಟಿನವರು ವಾಪಸು ತೆಗೆದುಕೊಂಡು ಇಲ್ಲಿ ಒಂದು ಸ್ಟೇಟು ಹೋಂನ್ನು ಕಟ್ಟಲು ಪ್ರಯತ್ನ ಮಾಡುತ್ತಿದ್ದಾರೆ. ಹುಬ್ಬಳ್ಳಿ ಕಾರ್ಪೊರೇಷನ್‌ನವರು ಈ ಜಾಗವನ್ನು ಪ್ಲೇ ಗ್ರೌಂಡಿಗಾಗಿ ಬಿಟ್ಟುಕೊಟ್ಟಿದ್ದರು ಮತ್ತು ಇಲ್ಲಿಂದ ಅನೇಕ ಅಭ್ಯರ್ಥಿಗಳು ಆಟಪಾಟಗಳಲ್ಲಿ ಗೆದ್ದು ಹಾಕಿ ಹಾಗೂ ಕಬಡ್ಡಿ ಆಟಗಳಲ್ಲಿ ಸ್ಟೇಟ್ ಚಾಂಪಿಯನ್‌ಶಿಪ್‌ಗಳನ್ನೂ ಪಡೆದಿದ್ದಾರೆ. ಇದನ್ನು ಕ್ರಿಮಿನಲ್ ಟ್ರೈಬ್ಸ್‌ಗಳ ಪ್ಲೇಗ್ರೌಂಡಿಗಾಗಿ ಕೊಡಬೇಕೆಂದು ಹೇಳಿದ್ದರೂ ಇದನ್ನು ಮಾಡದೆ ಸರಕಾರ ಇಲ್ಲಿ ಕಟ್ಟಡ ಕಟ್ಟಬೇಕೆಂದು ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ ಈಗಲಾದರೂ ಸರಕಾರದವರು ಈ ಪ್ಲೇಗ್ರೌಂಡನ್ನು ಬಿಟ್ಟುಕೊಡುತ್ತಾರೆಯೇ !

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಮಾನ್ಯ ಸದಸ್ಯರು ಹೇಳುವಂತೆ ಇದನ್ನು ಆಟದ ಮೈದಾನಕ್ಕೆ ಕೊಟ್ಟಿರಲಲ್ಲ. ಜಾಗ ಖಾಲಿ ಇದ್ದಾಗ ಮಕ್ಕಳು ಆಟಗಳನ್ನು ಆಡಲು ಹೋಗುತ್ತಿರಬಹುದು, ಇದರಲ್ಲಿ ನಾನು ಆಗಲೇ ಹೇಳಿದ ಹಾಗೆ ಇರುವ ಸರ್ವೆ ನಂಬರಿನಲ್ಲಿ ಕಟ್ಟಡ ಕಟ್ಟಬೇಕೆಂದು ಸರಕಾರ ತೀರ್ಮಾನ ಮಾಡಿರುವುದು ಅಚಲವಾದುದು ಈ ನಿರ್ಧಾರವನ್ನು ತೆಗೆಯಲು ಸಾಧ್ಯವಿಲ್ಲ..

ಶ್ರೀ ಕೆ. ಯಂಕಟಪ್ಪ.—ಇದು ಸಿ ಟಿ ಎಸ್ ನವರ ಹೆಸರಿನಲ್ಲೇ ಇತ್ತು ಎನ್ನುವುದನ್ನು ಸರಕಾರಕ್ಕೆ ತೋರಿಸಿಕೊಟ್ಟರೆ ಆಗಲಾದರೂ ಈ ಜಾಗವನ್ನು ಬಿಟ್ಟುಕೊಡುತ್ತಾರೆಯೇ ?

Sri M. MALLIKARJUNA SWAMY.—I have already stated that the site bearing No.C.T.S.3083/I-A in Ward No. II of Hubli and the buildings thereon belong to Government. I reiterate the statement once again.

MADAM SPEAKER.—The Hon'ble Education Minister will now make an important statement.

Statement by the Minister for Education

re : Involvement of Youth in the National Development Programme

Sri A. R. BADARINARAYANA (Minister for Education).—I wish to make an important statement in regard to the involvement of youth in the National Development Programme.

The question of involving Youth in the programme of nation building and also to impart a social relevance to education has been engaging the attention of the Government of India and the State Government. It has now been held that an average college student should be brought into the main-stream of Indian society.

With a view to test the validities of these assumptions at the national level, a Conference was held and a scheme prepared for participation of one lakh youth in certain programmes mainly directed towards relief to famine-stricken areas.

The objectives of the scheme are to involve sizeable number of Indian youth in the struggle against famine and to prepare these youths for constructive national tasks besides giving them a training in positive and healthy attitude and also to initiate them to be active citizens of a meaningful society and a peaceful world. The entire programme will be divided into 1000 camps each involving roughly about 100 youth. The distribution of one lakh participants among the various States, indicates that Mysore gets a quota of 8000 participants, of which 6000 will be student and 2000 will be non-student. The work camps will be administered by the N S.S. Co-ordinators and teachers of Universities and Colleges and each camp will be assisted by a Camp Organiser.

Construction of earthen dams for water conservation, digging water tanks, constructing very small earthen dams for soil conservation, kutcha contour bunding and helping in afforestation are some of the projects in which the youths will be involved besides taking up other social and recreational activities.

5. This is a programme fully financed by the Government of India and the project is estimated to cost Rs. 1,40,50,000 of which Government of Mysore will receive approximately Rs 11,24,000 towards this programme for the participation of 8000 colleges and non-college youths. The State Government have agreed to participate in the programme ; The Universities, the Gandhi Peace Foundation, the Department of Education and Youth Services along with the co-operation of voluntary agencies working for the youth in the State are finalising the details. In view of impending examinations, it is proposed that this project be initiated during May-June 1973 and each Camp will be for a duration of 21 days and these programmes will primarily be located in the drought affected areas.

ಶ್ರೀ ಕೋಣಂದೂರು ಲಿಂಗಪ್ಪ—ಮಾನ್ಯ ಮಂತ್ರಿಗಳು ಕೊಟ್ಟ ಹೇಳಿಕೆಯ ಪ್ರಕಾರ ವಿದ್ಯಾರ್ಥಿಗಳನ್ನು ಬರಗಾಲದ ಪ್ರದೇಶದ ಜನರ ಸೇವೆಗೆ ತೊಡಗಿಸುವುದು ಒಂದು ದೃಷ್ಟಿಯಿಂದ ಅಭಿನಂದನಾರ್ಹವಾದ ವಿಷಯವೇ ಆಗಿದೆ. ಆದರೆ ಸಣ್ಣ ಸಣ್ಣ ಡ್ಯಾಮ್‌ಗಳನ್ನು ಕಟ್ಟುವುದು, ಕಟ್ಟೆಗಳನ್ನು ಕಟ್ಟುವುದು, ಮನೆ ಕಟ್ಟುವುದು, ರಸ್ತೆ ಕೆಲಸ ಮುಂತಾದ ಕೆಲಸಗಳಿಗೆ ಅವರನ್ನು ಉಪಯೋಗ ಮಾಡಿಕೊಳ್ಳುವ ಯೋಜನೆ ಏನಿದೆ ಅದು ಒಂದು ದೃಷ್ಟಿಯಿಂದ ವಿಫಲವಾದ ಯೋಜನೆ ಎಂದು ಹೇಳಬಹುದು. ವಿದ್ಯಾರ್ಥಿಗಳನ್ನು ಶ್ರಮಜೀವಿಗಳನ್ನಾಗಿ ಮಾಡುವ ಬದಲು ಅವರಿಂದ ಬರಗಾಲ ಪ್ರದೇಶದಲ್ಲಿರುವ ಅನಕ್ಷರಸ್ಥ ಜನರಿಗೆ ಅಕ್ಷರಾಭ್ಯಾಸ ಮಾಡಿಸಿದರೆ ಆ ಜನರಿಗೆ ಒಂದು ದೊಡ್ಡ ಅಸ್ತ್ರವನ್ನು ಕೊಟ್ಟಂತಾಗುತ್ತದೆ. ಆ ಜನರಿಗೆ ನಾಲ್ಕು ಅಕ್ಷರ ಬರೆಯುವುದಕ್ಕೆ ಬಂದರೆ ಮುಂದೆ ಯಾರೂ ಸಹ ಅವರ ಮೇಲೆ ದಾಳಿ ಮಾಡುವುದಕ್ಕಾಗುವುದಿಲ್ಲ. ಈ ರೀತಿಯಾಗಿ ಹಣ ಖರ್ಚು ಮಾಡದೆ ಬೇರೆ ಬಾಬಿಗಾಗಿ 11 ಲಕ್ಷ 54 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದು ವ್ಯರ್ಥ ಎಂದು ವಿಷಾದ ವ್ಯಕ್ತಪಡಿಸಬೇಕಾಗುತ್ತದೆ. ಈ ಹಣದಲ್ಲಿ ವಿದ್ಯಾರ್ಥಿಗಳಿಂದ ವಯಸ್ಕರಿಗೆ ವಿದ್ಯಾಭ್ಯಾಸ ಕೊಡಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

(ಶ್ರೀ ಎಚ್. ಡಿ. ದೇವೇಗೌಡ)

ಕರಕೊಂಡು ಹೋದರೆ ವಾಪಸ್ಸು ಬರುವಾಗ ಬಸ್ಸಿನಲ್ಲಿ ಕರಕೊಂಡು ಬರಬೇಕಾಗಿತ್ತು. ಅದು ಬಿಟ್ಟು ಎಂ ವೈ ಎಕ್ಸ್ 7272 ನಂಬರಿನ ಲಾರಿಯಲ್ಲಿ ಕರಕೊಂಡು ಬರುವ ಅವಶ್ಯಕತೆ ಏನಿತ್ತು? ಈ ಪೋಲೀಸ್ ಅಧಿಕಾರಿಯಾದ ಗೋಪಾಲಮೂರ್ತಿಯ ಪೂರ್ವ ಚರಿತ್ರೆಯಿಂದ ಆ ಸ್ಥಳದ ಜನರ ಅಭಿಪ್ರಾಯವೇನೆಂದರೆ, ಈತನಿಗೆ ಮಂಡ್ಯದಲ್ಲಿ ಚೆನ್ನಾಗಿ ಹೊಡೆದು ತೆಗೆದುಕೊಂಡು ಬಂದಿದ್ದಾರೆ ಎಂದು. ಈತ ಮಧುಗಿರಿಯಲ್ಲಿ ಏನು ಪ್ರಕರಣ ನಡೆಯಿತೊ ಅದಕ್ಕೆ ಕೂಡ ಕಾರಣನಾದವನು. ಈತನ ಅಭ್ಯಾಸವೇನೆಂದರೆ ಸ್ಟೇಷನಿಗೆ ಯಾರಾದರೂ ಬಂದರೆ ಹೊಡೆಯುವುದು, ಉಗಿಯುವುದು, ಮತ್ತಿತರ ರೀತಿಯ ಕೆಟ್ಟ ವರ್ತನೆಯನ್ನು ತೋರಿಸುವುದು. ಅದು ಆತನ ಅಭ್ಯಾಸದಲ್ಲಿಯೇ ಬಂದು ಬಿಟ್ಟಿದೆ. ಆದ್ದರಿಂದ ಜನರಿಗೆ ಇವನೇ ಹೊಡೆದು ಸಾಯಿಸಿದ್ದಾನೆಂದು ಭಾವನೆ ಬಂದಿದೆ. ಅದಲ್ಲದೆ ಲಾರಿಯಿಂದ ಬಿದ್ದರೆ, ತಲೆ ಒಂದಕ್ಕೆ ಏಟು ಮಾತ್ರ ಬೀಳುವುದಿಲ್ಲ; ಬೇರೆ ದೇಹದ ಭಾಗಗಳಿಗೂ ಏಟು ಬೀಳುತ್ತದೆ. ಅದರಲ್ಲಿ ಸ್ವಲ್ಪ ಸಂಶಯ ಬರುತ್ತದೆ. ಆ ಅಧಿಕಾರಿಯ ಪೂರ್ವ ಚರಿತ್ರೆ ಚೆನ್ನಾಗಿಲ್ಲದಿರುವುದರಿಂದ ಈ ರೀತಿಯ ಸಂಶಯಕ್ಕೆ ಕಾರಣವಾಗಿದೆ. ಆದರೆ ತಾವು ಎನ್‌ಕ್ವಯರಿ ಮಾಡಿಸುವಾಗ ಆ ಅಧಿಕಾರಿ ಅದೇ ಜಾಗವಲ್ಲಿ ಇದ್ದರೆ ನಿಷ್ಪಕ್ಷವಾದ ಎನ್‌ಕ್ವಯರಿ ಯಾಗುವುದಿಲ್ಲ. ಆದ್ದರಿಂದ ಈ ಪ್ರಕರಣ ಮುಗಿಯುವವರೆಗೆ ಆತನನ್ನು ಸಸ್‌ಪೆನ್ಸಿನಲ್ಲಿ ಇಡಬೇಕು. ಆ ಮೇಲೆ ಸ್ಥಳದಲ್ಲಿರತಕ್ಕಂತಹ ಇತರ ಸಣ್ಣ ಅಧಿಕಾರಿಗಳು ಏನಿದ್ದಾರೆ ಅವರು ಹಲವು ವರ್ಷಗಳಿಂದಲೇ ಅಲ್ಲಿ ಇದ್ದುಕೊಂಡು ಪೋಲೀಸ್ ಇಲಾಖೆಗೆ ಏನೊಂದು ಕೆಟ್ಟ ಹೆಸರನ್ನು ತರುವುದಕ್ಕೆ ಕಾರಣರಾಗಿದ್ದಾರೆ, ಅಂಥವರನ್ನು ಹೊರಗಡೆ ಹಾಕಿ ಅಲ್ಲಿಯ ಜನರಿಗೆ ನ್ಯಾಯ ದೊರಕುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಅಧ್ಯಕ್ಷರೆ, ನಿನ್ನೆಯೇ ಈ ವಿಷಯ ಚರ್ಚೆಗೆ ಬಂದು ನಾನು ಹೇಳಿಕೆ ಕೊಟ್ಟಿದ್ದೇನೆ. ನಂತರ ಇವತ್ತು ಅದೇ ವಿಚಾರ ಬಂದಿದೆ. ನಾನು ನಿನ್ನೆ ಹೇಳಿದ್ದಕ್ಕಿಂತ ಹೆಚ್ಚು ವಿವರಗಳನ್ನು ಇವತ್ತು ಹೇಳಬೇಕೆಂಬ ಭಾವನೆಯಿಂದ ಸದಸ್ಯರು ಮಾತನಾಡಿದ್ದಾರೆ. ಮತ್ತು ದೇವೇಗೌಡರು ಸಹ ಹೇಳಿದ ವಿಚಾರವನ್ನು ನಾನು ಕೇಳಿದ್ದೇನೆ. ಬಹುಶಃ ಅವರು ಹೇಳಿದ ಪ್ರಕಾರ ಖಚಿತವಾಗಿ ಇವರೇ ಮಾಡಿದ್ದಾರೆಂದು ಹೇಳುವುದು ಕಷ್ಟವಾಗುತ್ತದೆ. ಅವರೂ ಅದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ. ಈಗ ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ ಎಂದು ಹೇಳಿದರೆ, ಅದನ್ನು ಸದಸ್ಯರು ಒಪ್ಪದೆ ಇರಬಹುದು. ಅದಕ್ಕೋಸ್ಕರ ಪೂರ್ತಿಯಾಗಿ ಎನ್‌ಕ್ವಾಯರಿ ಮಾಡಿಸೋಣ. ನಾವು ಯಾರನ್ನೂ ಶೀಲ್ಡ್ ಮಾಡುವ ಅಗತ್ಯ ಇಲ್ಲ. ಅವರು ಯಾರೇ ಆಗಲಿ, ಪೋಲೀಸ್ ಅಧಿಕಾರಿಯೇ ಇರಲಿ ಅಥವಾ ಇನ್ನಿತರರೇ ಆಗಿರಲಿ—ಶೀಲ್ಡ್ ಮಾಡುವ ಅಗತ್ಯ ಇಲ್ಲ. ಆದರೂ ಮತ್ತೂ ಮತ್ತು ಕೆಲವು ವಿಚಾರಗಳನ್ನು ಸದಸ್ಯರು ಹೇಳಿ ಪರಿಸ್ಥಿತಿ ಹದಗೆಟ್ಟಿದೆ ಎಂದು ಹೇಳುತ್ತಿದ್ದಾರೆ. There are some assertations; I have heard the opposition leader. He has not asserted. Whereas some other member assert ಇಲ್ಲ ಇಲ್ಲ, ಹೀಗಿಯೇ ಆಗಿಬಿಟ್ಟಿದೆ; ಅದರಲ್ಲಿ ಏನೋ ಆಗಿಬಿಟ್ಟಿದೆ ಎಂದು ಹೇಳುತ್ತಿದ್ದಾರೆ. ಅದು ನನಗೆ ಗೊತ್ತಿಲ್ಲ. ಅದಕ್ಕೋಸ್ಕರವಾಗಿ ವಿವರವಾದ ರಿಪೋರ್ಟ್ ಏನಿದೆ ಅದನ್ನು ತಮಗೆ ಓದುತ್ತೇನೆ.

Madam, on 1-2-1973 in the morning, information was received in Mandya Town Police Station that one Karigowda of Pandavapur (a retired Supervisor of Mysore Sugar Company) was admitted in the General Hospital, Mandya with bleeding injuries on his neck. On this information a case in Mandya Town Police Station Cr. No. 18/73 u/s 307 IPC was registered. During the investigation the following facts came to light:

Shri Karigowda had approached Shri Srinivasa Guptha, a merchant of Mandya Town with an offer that two persons Ramaiah and Ningaiah are prepared to sell 4000 one rupee silver coins for rupees 10,000-- He wanted Shri Guptha to buy this silver. Shri Guptha promised to buy the silver coins after making arrangements for money. On 31-1-1973 Shri Karigowda went to Mandya and told Shri Guptha that the coins will be ready that day and that they will be available in a house near Javarnahalli in Nagamangala Taluk. Accordingly, Shri Guptha accompanied by his son and a goldsmith went along with Karigowda to Jawaranahalli in a car. Ningaiah and Ramaiah came to the appointed place and pointed to a small gunny bag which was placed under a tree as containing the silver coins. It was dust by then. They prevented Guptha or his son approaching and examining it, on the plea that unless they are shown the amount brought by Shri Guptha they would not allow them to touch the bag. Shri Karigowda asked Shri Guptha to show the currency. Accordingly, when Shri Guptha removed the bundle of currency notes amounting to Rs. 10,000 from inside his coat pocket, Ningaiah jumped at Shri Guptha, snatched the bundle of currency notes and ran away raising a loud cry. Ramaiah followed Ningaiah. Immediately stones started being thrown at Guptha and party. They immediately retreated for fear of injury and returned to Mandya in the car without lodging a complaint as Karigowda advised them that it would be a matter of shame and that he would see that the amount lost would be made good.

At Mandya, Shri Karigowda went to the house of his friend. It was about 23.30 hours. After having food there, he slept in the front room closing the door. In the dying declaration, recorded by the Sub-Divisional Magistrate, Mandya, Shri Karigowda has stated that in the middle of the night when he was fast asleep, two persons knocked at his door and when he opened it, they threw something on his face, dragged him to the road and threw him in the road-side drainage. He stated that he could not identify who these two persons were as he became unconscious as soon as they threw something on his face. The investigation of this case was taken up by the Mandya Town Police.

On 2-2-73 Shri Guptha lodged a complaint at Mandya Town Police Station for having been cheated Rs. 10,000. This case was transferred to Bellur Police Station on point of jurisdiction, where a case in Cr. No. 6/73 u/s 420 IPC was registered against Ramaiah and Ningaiah. As this case was fairlyan important one, the Superintendent of Police, Mandya, in this memo dated 23-2-73 directed the Circle Inspector of Police, Nagamangala Circle to take up further investigation himself. Accordingly, the C. I. took up investigation of this case on 7 3-73.

During the course of investigation of this case, the C. I. issued a notice dated 14-3-73 to to Shri Karigowda through P.C. 274 to appear before him. On 16-3-73 P. C. 274 Govindappa pruduced Shri Karigowda before the C. I. The C. I. recorded the statement of Shri Kari gowda. On 17-3-73 the C. I. secured the complainant Shri Guptha and his son from Mandya and confronted them with Shri Karigowda and enquired further about the transaction that took place on 31-1-1973. Shri Kar gowda requested the C. I. to give him the assistance of a Constable in mufty to assist him to trace the accused in the above case. On 18-3-73 Karigowda returned with P. C. 370 Aradhya and

(ಶ್ರೀ ಡಿ. ದೇವರಾಜ ಅರಸ್)

stated that they searched for the accused in Bellur, Dommanahalli, Javarahalli and Kadaballi shandy, but they were not traced. He requested the C. I. to continue to give him the assistance of a P. C. so that he can search for the accused at Chunchanagiri Jathra. Even there, their search was in vain and Shri Karigowda came to the C. I. and reported this on 19-3-73. Shri Karigowda took P. C. 370 Aradya to Mandya on 19-3-73 to trace the accused. The C. I. instructed the P. C. to keep the accused if traced in Mandya Town Police Station and that he would join them later on. Accordingly Shri Karigowda and P. C. 370 left for Mandya earlier and the Inspector also left for Mandya at 4 P. M. At Mandya, the C. I. produced Shri Karigowada before the Deputy Superintendent of Police of Mandya Sub-Division in his office. The Deputy Superintendent of Police advised Shri Karigowda to assist the C. I. in the investigation of the cheating case wholeheartedly as Shri Karigowda was the main witness in this case. For this Sri Karigowda stated before the Deputy Superintendent of Police that he would trace the accused, failing which he was prepared to make good the loss sustained by Shri Guptha. It is learnt that at that time Shri Govindaraju, Assistant Engineer, Mandya was present in the office of the Deputy Superintendent of Police. The Deputy Superintendent of Police told Sri Karigowda that the question of his paying money to Shri Guptha does not arise as the police is interested in the detection of the case by securing the accused. Then they left the D. S. P.' s office.

Sri Karigowda told the C. I. that he would go to Pandavapura, his native place to get the assistance of one of his relatives to trac the accused persons. The C. I. left him near the T. B. and came to the bus stand along with P. C. 70 Aradhya. As there was no bus available he caught a lorry MYX 7272 (loaded with arrack barrels from Mandya Distillery which was on its way to Mangalore via Nagamangala. The C. I. sat in the cabin, the cleaner Padma nabha and the P. C. Aradhya sat in the body of the lorry at the rear. When the lorry came near the Toll gate situated on Nagamangala Road, the driver stopped the lorry as the road was blocked by three bullock carts. When the lorry had stopped Sri Karigowda came from behind the lorry and wanted to board it but the cleaner objected saying that they would not carry any persons over the load. When Sri Karigowda prevailed upon saying that he has to go to Bellur on some urgent work, the P. C. Aradhya requested the cleaner to allow him to get into the lorry. Accordingly Sri Karigowda boarded the lorry and sat on the barrel. It was about 18–30 hours at that time. As the lorry was proceeding to Nagamangala, Karigowda requested the P. C. Aradhya not to inform the C. I. about his presence in the lorry. The driver of the lorry Narayana and the C. I. who was sitting in the cabin were unaware of Karigowda having boarded the lorry at the tollgate.

When the lorry was about two miles from Nagamangala Sri Karigowda suddenly jumped out of the lorry. The P. C. Aradhya tried to prevent him, but could not. In the attempt the P. C. was also about to fall off, but the cleaner caught hold of him. The cleaner signalled the lorry to be stopped by tapping over the cabin and the driver and the C I. enquired as to what the matter was. He informed them about the jumping out of Karigowda. They came down and walked back some distance and noticed Karigowda having sustained severe injury on his head and blood was flowing. He was unconscious. They removed him to the hospital at Nagamangala in the same lorry. The Medical Officer who examined Karigowda told them that he was already dead.

On the statement of Sri Padmanabha, Cleaner of the said lorry a case in Nagamangala Police Station Crime No. 22/73 u/s. 174 Cr. P. C. was registered. The S. I. held inquest and handed over the body to the Medical Officer for P. M. examination in the afternoon of 20-3-73. The Doctor conducted the P. M. examination on 20-3-73 and after wards handed over the body to the Police. The relatives of the deceased namely Lakshmegowda and others who came from Pandavapura refused to take over the body and demanded an enquiry. They moved in the town and spread rumours that Sri Karigowda was murdered by the Police. On these rumours a mob, 1000 strong collected in front of the Police Station at 6-30 P. M. demanding an immediate enquiry into the affair and wanted to assault the C. I. Persuasion by the local Police was in vain. The mob started pelting stones at the Police and at the Police Station. They surged forward towards the Police Station. The C. I. who was present in the Police Station ordered a lathi charge. The mob which retreated a little again pressed forward pelting more stones damaging the Police van which was stationed in the Police Station compound. Due to stone throwing 1 H. C. and 4 P Cs of the D. A. R. sustained injuries. The mob blocked the road in front of the Police Station by placing boulders. When the crowd was surging forward pelting stones heavily and demanding the C. I. to come out, the C. I. ordered the D. A. R. to open fire, in self defence as well as to protect the Police Station and the arms and ammunition therein. The Armed Reserve Police opened five rounds with 303 rifles.

Due to stone throwing, lathi charge, 5 persons amongst the crowd sustained injuries. On receipt of information the Deputy S. P. Mandya Sub-Division arrived at Nagamangala at about 20-00 hours and the Superintendent of Police, Mandya at about 20-45 hours. They pecified the crowd and assured them of an immediate enquiry. The injured wore subjected to medical examination. The Medical Officer opined that the injuries sustained by both the Police and the public are all simple in nature and treated them as out-patients. He also opined that the injuries sustained by the one Sri Hanumaiah of Nagamangala may be a gun shot injury, though it was also simple in nature.

(ಶ್ರೀ ಡಿ. ದೇವರಾಜ ಅರಸ್)

From the statements of the driver and cleaner of the lorry in which the deceased travelled, apart from the statement of the C. I. and P. C. Aradhya, Karigowda has died when he jumped out of the moving lorry. The opinion of the Medical Officer, Combined Dispensary, Nagamangala is as follows : "I am of opinion that death is due to shock and haemarrhage as a result of fracture of the skull."

Due to the stone throwing, damages to the tune of about Rs. 100/- is caused to the Police Station and the damages caused to the Police van is about Rs. 500/-. The crowd dispersed at about 01.30 hours after an assurance of an impartial enquiry by the Supdt. of Police. The relatives of the deceased then took the dead body of Karigowda to Pandavapura for purpose of burial.

The Dy. Supdt. of Police, Mandya has been directed to take up investigation of Cr. No. 22/73/ u/ s. 174 Cr. P. C relating to the death of Karigowda. A case is registered in Cr. No. 23/73 / u/s. 143-147-427-332 IPC against 14 and other rioters. The Supdt. of Police is instructed to round up the accused in this case without unnecessary delay and expedite the investigation. He is also instructed to send situation reports from time to time and further detailed report in continuation about the names of the persons injured, the names of the accused and the number of them arrested etc.

The situation in Nagamangala town is peaceful at present. However, vigilant patrolling in the town is continued. A contingent of DAR 2 HCs. and 20 PCs. is also stationed there.

ಇಷ್ಟನ್ನು ಹೇಳಿದ ಮೇಲೆ ನಾನು ಇದಕ್ಕಿಂತ ಹೆಚ್ಚಿಗೆ ಏನು ಹೇಳುವುದಕ್ಕೂ ತಯಾರಿಲ್ಲ. ಆದರೆ ಇದರಲ್ಲಿ ಒಂದು ವಿಚಾರ, ವಿರೋಧ ಪಕ್ಷದ ನಾಯಕರು ಅಲ್ಲಿನ ಆ ಒಂದು ಸನ್ನಿವೇಶ ಏನಿತ್ತು ಮತ್ತು ಅಲ್ಲಿದ್ದ ಸರ್ಕಲ್ ಇನ್‌ಸ್ಪೆಕ್ಟರ್ ಚಾರಿತ್ರ್ಯದ ಬಗ್ಗೆ ಅಲ್ಲಿಯ ಜನರ ಮನಸ್ಸಿನಲ್ಲಿ ಏನಿತ್ತು ಅನ್ನುವುದನ್ನೆಲ್ಲಾ ಅವರು ತಿಳಿಸಿದ್ದಾರೆ. ಅದನ್ನೂ ಕೂಡ ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಆದರೆ ಅಲ್ಲಿ ಈಗಾಗಲೇ ಜಿಲ್ಲಾಧಿಕಾರಿಯವರಿಂದ ಒಂದು ಎನ್‌ಕ್ವೈರಿ ನಡೆಯುತ್ತಿದೆ ಎಂಬುದಾಗಿ ನನಗೆ ವರದಿ ಬಂದಿದೆ. ಅದು ಇನ್ನು ಒಂದೆರೆಡು ದಿನಗಳಲ್ಲೇ ಮುಗಿಯಬಹುದು. ಮಾನ್ಯ ವಿರೋಧ ಪಕ್ಷದ ನಾಯಕರೇನು ತಿಳಿಸಿದ್ದಾರೆ ಆ ಅಂಶಗಳನ್ನೆಲ್ಲಾ ನಾನು ಗಮನದಲ್ಲಿಟ್ಟುಕೊಂಡು ಇದರಲ್ಲಿ ಯಾರೂ ಕೈಹಾಕುವುದಕ್ಕೆ ಆಸ್ಪದ ಕೊಡದಂತೆ ಒಂದು ನಿರ್ದೋಷವಾದ ವಿಚಾರಣೆ ನಡೆಯುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕಾದುದು ನನ್ನ ಆದ್ಯ ಕರ್ತವ್ಯ. ನಾನು ಆ ನನ್ನ ಕರ್ತವ್ಯವನ್ನು ನಿಷ್ಪಕ್ಷಪಾತದಿಂದ ನಿರ್ವಹಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—19 ನೇ ತಾರೀಖು ಪ್ರಜ್ಞೆ ತಪ್ಪಿದ ಮನುಷ್ಯನನ್ನು ರಾತ್ರಿಯೆಲ್ಲ ಪೋಲೀಸ್ ಸ್ಟೇಷನ್ನಿನಲ್ಲಿ ಇಟ್ಟುಕೊಂಡಿದ್ದು ಅನಂತರ 20ನೇ ತಾರೀಖು ಸ್ಟೇಷನ್...

ಅಧ್ಯಕ್ಷರು.—ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ನಿಷ್ಪಕ್ಷಪಾತವಾದ ವಿಚಾರಣೆ ನಡೆಸುವುದಕ್ಕೆ ಪ್ರಯತ್ನ ಮಾಡುವುದಾಗಿ ಹೇಳಿದ್ದಾರೆ...

ಶ್ರೀ ವಾಟಾಳ್ ನಾಗರಾಜ್.—ಅವನು ಸತ್ತಿರುವುದೇ ಪೋಲೀಸ್ ಸ್ಟೇಷನ್ನಿನಲ್ಲಿ. ಇದು ಈಗ ಕೊಟ್ಟ ಹೇಳಿಕೆಯಿಂದಲೇ ಅನುಮಾನ ಹುಟ್ಟುತ್ತದೆ.

ಅಧ್ಯಕ್ಷರು.—ಯಾರಿಗೂ ಸಂಶಯಬಾರದ ರೀತಿಯಲ್ಲಿ ಎನ್‌ಕ್ವೈರಿ ಮಾಡಿಸುವುದಾಗಿ...

ಶ್ರೀ ವಾಟಾಳ್ ನಾಗರಾಜ್.—ಆ ಪೋಲೀಸ್ ಅಧಿಕಾರಿಯನ್ನು ಮೊದಲು ಸಸ್ಪೆಂಡ್ ಮಾಡಲಿ. 19ನೇ ತಾರೀಖು...

3-00 P.M.

ಶ್ರೀ ಎಚ್. ಟಿ. ಕೃಷ್ಣಪ್ಪ.—ಪಕ್ಷಪಾತ ರಹಿತವಾಗಿ ತನಿಖೆಯಾಗಬೇಕಾದರೆ ತನಿಖೆ ಮಾಡುವಾಗ ಪೋಲೀಸರ ಕೈವಾಡ ಇರಬಾರದು, ಅವರು ದೂರವಿರಬೇಕು ; ಪೋಲೀಸರ ಅಧಿಕಾರ ಅದರಲ್ಲಿರಬಾರದು. ಆ ರೀತಿ ಮಾಡಬೇಕೆಂದು ಕೇಳುತ್ತೇನೆ. ಮುಖ್ಯಮಂತ್ರಿಗಳು ಇದನ್ನು ಸ್ಪಷ್ಟವಾಗಿ ಹೇಳಿದರೆ ಮನಸ್ಸಿಗೆ ಸಮಾಧಾನವಾಗುವುದು.

ಶ್ರೀ ಎಚ್. ಡಿ. ದೇವೇಗೌಡ.—ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕಾದರೆ ಸಂಬಂಧಪಟ್ಟ ಪೋಲೀಸು ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು. ಆ ಅಧಿಕಾರಿ ಸಾರ್ವಜನಿಕರಲ್ಲಿ ಸಾಕಷ್ಟು ಭಯಭೀತಿಯನ್ನುಂಟು ಮಾಡುತ್ತಿದ್ದಾರೆ. The concerned Police Officer may be kept under suspension pending enquiry. Suspension is not a punishment. An impartial inquiry might be held keeping that Police Officer under suspension.

SRI D. DEVARAJ URS.—Madam Speaker, I have already said that I have borne in mind what all the Hon. Leader of the Opposition and the other hon. member from that constituency has said. That is why I might say in one word that you please allow me sometime, I will look into the matter. I have also stated that I might create an atmosphere which should also appear to the rest of the people that under such an atmosphere an impartial inquiry is possible. What is that I can say beyond that ?

ಶ್ರೀ ಎಸ್. ಬಂಗಾರಪ್ಪ.—ಸಸ್ಪೆಂಡ್ ಮಾಡಿ ಎನ್‌ಕ್ವೈರಿ ಮಾಡಿದರೆ ಅದು ಫೇರ್ ಆಗಿರುವುದು. ಹಾಗೆ ಮಾಡುವುದರಲ್ಲಿ ತಪ್ಪೇನು !

MADAM SPEAKER.—The matter is closed now.

(Sri Bangarappa continued to stand)

MADAM SPEAKER.—What more does the hon. member want ?

SRI S. BANGARAPPA.—Let the Chief Minister say that he would suspend the Police Officer.

Statement made by the Ministers Private Secretary in the incident at Haliyal

ಶ್ರೀ ವಾಟಾಳ್ ನಾಗರಾಜ್.—ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರಬೇಕಾಗಿದೆ. ಮಂತ್ರಿಗಳ ಒಬ್ಬ ಅಪ್ತ ಕಾರ್ಯದರ್ಶಿಯವರು ಹಳಿಯಾಳದಲ್ಲಿ ಗಲಾಟೆಯಾಗಿರುವ ಬಗ್ಗೆ ಹೇಳಿಕೆ ನೀಡಿದ್ದಾರೆ. ಸಚಿವರು ಹೇಳಿಕೆ ಕೊಡಬೇಕೇ ವಿನಾ ಕಾರ್ಯದರ್ಶಿಯ ಮೂಲಕ ಹೇಳಿಕೆ ಕೊಡಿಸುವುದು ಸರಿಯಲ್ಲ. ಹಳಿಯಾಳದಲ್ಲಿ ಶ್ರೀ ಬಸವಲಿಂಗಪ್ಪನವರ ಕಾರಿನಮೇಲೆ ಕಲ್ಲು ಹೊಡೆದಿರುವ ಬಗ್ಗೆ ಅವರ ಆಪ್ತ ಕಾರ್ಯದರ್ಶಿ ಒಂದು ಹೇಳಿಕೆ ಕೊಟ್ಟಿದ್ದಾರೆ. ಶ್ರೀ ಬಸವಲಿಂಗಪ್ಪನವರು ಮೂರು ದಿವಸಗಳಿಗೊಂದು ಸಲ ಸಭೆಗೆ ಬರುವರು ; ಸಭೆಯಲ್ಲಿ ಬಹಳ ಹೊತ್ತು ಇರುವುದಿಲ್ಲ.

ಅಧ್ಯಕ್ಷರು.—ತಾವು ನಿಲುವಳಿ ಸೂಚನೆಗೆ ಅನುಮತಿ ಕೇಳಿದ್ದೀರಿ, ನಾನು ಕೊಟ್ಟಿಲ್ಲ. ಹಾಗಿರುವಾಗ ನೀವು ಮಾತನಾಡಲು ಅವಕಾಶವೆಲ್ಲಿದೆ !

ಶ್ರೀ ಎಚ್. ಡಿ. ದೇವೇಗೌಡ.—ಸಭೆ ನಿಯಮಗಳನ್ನು ಪಾಲಿಸಬೇಕು, ಅದಕ್ಕೆ ಒಪ್ಪುತ್ತೇನೆ. ಆದರೆ ವಾಟಾಳ್ ನಾಗರಾಜರವರು ಎತ್ತಿರುವುದು ಗಹನವಾದ ವಿಚಾರ. ಮೇಲ್ಮನೆಯಲ್ಲಿ ಇದರ ಬಗ್ಗೆ ಪ್ರಸ್ತಾಪವಾಗಿದೆ. ಹಾಗಿರುವಾಗ ಈ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಲು ಅವಕಾಶ

(ಶ್ರೀ ಎಚ್. ಡಿ. ದೇವೇಗೌಡ)

ಕೇಳಿದರೆ ನಿರಾಕರಣೆ ಮಾಡಿದರೆ ಬಹುಶಃ ಈ ಸಭೆಯ ಗೌರವಕ್ಕೆ ಚ್ಯುತಿ ಬರುವುದು. ಈ ಸಭೆ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಾಹ ಮಾಡುತ್ತಿಲ್ಲವೇನೋ ಎಂಬ ಭಾವನೆ ಬರಬಹುದು. ನಮ್ಮ ಕಷ್ಟ ಹೇಳುತ್ತೇನೆ. ನೀವು ಕೊಡುವ ರೂಲಿಂಗ ನಾವು ಕೇಳಬೇಕು.

ಅಧ್ಯಕ್ಷರು.—ರೂಲ್ 312 ರ ಕೆಳಗೆ ಶ್ರೀ ಬಂಗಾರಪ್ಪನವರು ಒಂದು ಸೂಚನೆ ಕಳುಹಿಸಿದ್ದಾರೆ, ಶ್ರೀ ವಾಟಾಳ್ ನಾಗರಾಜ್‌ರವರು ನಿಲುವಳಿ ಸೂಚನೆ ಕಳುಹಿಸಿದ್ದಾರೆ. ನಿಲುವಳಿ ಸೂಚನೆಯ ಬಗ್ಗೆ ಜವಾಬು ಹೋಗಿದೆಯೋ ಇಲ್ಲವೋ ಗೊತ್ತಿಲ್ಲ. ರೂಲ್ 312ರ ಪ್ರಕಾರ ಹೇಗೆ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ. ಅದರಂತೆ ವಾರದಲ್ಲಿ ಎರಡು ದಿವಸ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್ ಕಾರ್ಯಕರ್ತರು ಸಿದ್ಧಪಡಿಸಿದ್ದ ವೇದಿಕೆಯನ್ನು ಸಂಸ್ಥಾ ಕಾಂಗ್ರೆಸ್ಸಿನವರು ಮತ್ತು ಜನಸಂಘದವರು ಒಡೆದುಹಾಕಿದ್ದಾರೆ ಎಂದು ತಿಳಿಸಿದ್ದಾರೆ. ಇದಕ್ಕೆ ಮಂತ್ರಿಗಳ ಆಪ್ತ ಕಾರ್ಯದರ್ಶಿ ಸಹಿ ಹಾಕಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಪಾಯಿಂಟ್ ಆಫ್ ಆರ್ಡರ್. ಶ್ರೀ ಬಂಗಾರಪ್ಪನವರ ಪ್ರಶ್ನೆ ಬೇರೆ, ಶ್ರೀ ನಾಗರಾಜ್‌ರವರ ಪ್ರಶ್ನೆ ಬೇರೆ. ಅಧ್ಯಕ್ಷರು ಅವೆರಡಕ್ಕೂ ಅವಕಾಶ ಕೊಟ್ಟಿಲ್ಲವೆಂದು ಹೇಳಿದರು.

ಅಧ್ಯಕ್ಷರು.—ಬೇರೆ ಬೇರೆ ರೂಲ್ ಪ್ರಕಾರ ಇಬ್ಬರೂ ಒಂದೇ ಪ್ರಶ್ನೆ ಕಳಿಸಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ವಿಷಯ ಚರ್ಚೆಮಾಡಬಹುದು, ಅದಕ್ಕೆ ನಾನು ಅಡ್ಡ ಬರುವುದಿಲ್ಲ. ಇಂಥ ಚರ್ಚೆಗೆ ಅವಕಾಶ ಕೊಡದೆ ಕಂಟ್ರೋಲ್ ಮಾಡಿ ನಿಗದಿ ಮಾಡಿರುವ ಪ್ರಕಾರ ಪ್ರೊಸೀಡಿಂಗ್ಸ್ ನಡೆಸಲು ಅವಕಾಶ ಮಾಡಬೇಕು.

ಅಧ್ಯಕ್ಷರು.—ನನಗೂ ಆ ರೀತಿ ಮಾಡಬೇಕೆಂಬ ಆಸೆಯಿದೆ. ಎಲ್ಲಾ ಸದಸ್ಯರೂ ಸಹಕರಿಸಿದರೆ ರೂಲ್ಸ್‌ಗೆ ವಿರೋಧವಾಗಿ ಹೋಗುವುದಕ್ಕೆ ಅವಕಾಶವಿರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಒಬ್ಬ ಸಚಿವರು ಮಾಡಿರುವ ಕೆಲಸದ ಬಗ್ಗೆ ಇಲ್ಲಿ ನಾನು ಪ್ರಶ್ನೆ ಮಾಡುತ್ತಿದ್ದೇನೆ.

ಅಧ್ಯಕ್ಷರು.—ತಮಗೆ ಅನುಮತಿ ಕೊಟ್ಟಿಲ್ಲ, ಶ್ರೀ ಬಂಗಾರಪ್ಪನವರ ಪ್ರಶ್ನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ, ವಿಧಾನಪರಿಷತ್ತಿನಲ್ಲಿ ಈ ವಿಷಯ ಬೇರೆ ತರಹ ಚರ್ಚೆಯಾಗಿದೆ. ಇವತ್ತು ಸಾಯಂಕಾಲ ಬೇಕಾದರೆ ರೂಲ್ 312ರ ಕೆಳಗೆ ಇದನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ ನೀವು ಆ ಸಮಯದಲ್ಲಿ ಇರುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ವಿಧಾನಪರಿಷತ್ತಿನಲ್ಲಿ ನಡೆದಿರತಕ್ಕ ಚರ್ಚೆ ಏನು ಇದೆ, ಅದು ಬೇರೆ ಯಾವುದೇ ಒಂದು ಕಾನೂನು ನಿಯಮಾವಳಿಯೊಳಗೆ ನಡೆದಿರಬಹುದು. ಅದರ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ತಯಾರು ಇಲ್ಲ. ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುವುದು ಇಷ್ಟೆ, ನಿನ್ನೆ ಏನು ನೀವು ರೂಲಿಂಗ್ ಕೊಟ್ಟಿದ್ದೀರೋ ಅದನ್ನು ಪತ್ರಿಕೆಯಲ್ಲಿ ಓದಿದ್ದೇನೆ. 312ರ ಕೆಳಗೆ ಬರತಕ್ಕ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಕಾಲವನ್ನು ಗೊತ್ತುಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಆ ಸಭೆಯಲ್ಲಾಗಲಿ, ಈ ಸಭೆಯಲ್ಲಾಗಲೀ...

ಅಧ್ಯಕ್ಷರು.—ಆ ಸದನದ ವಿಚಾರ ಬೇರೆ.

ಶ್ರೀ ಎಚ್. ಡಿ. ದೇವೇಗೌಡ.—ಒಂದು ವಾರದಲ್ಲಿ ಎರಡು ದಿವಸವನ್ನು ಗೊತ್ತುಮಾಡುತ್ತೇವೆ ಎಂದು ರೂಲಿಂಗ್ ಕೊಟ್ಟಿದ್ದೀರಿ. ಇದು ಏನಾಗುತ್ತದೆ ಎಂದರೆ, ಆ ಸದನದವರು ಯಾವುದೇ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಗೊತ್ತುವಳಿ ಮಾಡಿದ್ದಾರೋ ಅದೇ ರೀತಿ ತಾವು ಇಲ್ಲಿ ಅದೇ ಪದ್ಧತಿಯನ್ನು ಅನುಸರಿಸುತ್ತಾ ಹೋದರೆ, ಅವರು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದ ಮೇಲೆ ಈ ಸದನದಲ್ಲಿ ಹಳಸಿ ಹೋದ ವರ್ತಮಾನವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ತಯಾರು ಇಲ್ಲ. ಈ ಸಭೆಯಲ್ಲಿ ನಾವು ಏನು ಕೆಲಸ ಮಾಡಬೇಕು, ಅದಕ್ಕೆ ಕಷ್ಟವಾಗುತ್ತದೆ. ಈ ಸದನದ ಒಂದು ಗೌರವ ಘನತೆಗೆ ಧಕ್ಕೆ ಇದರಿಂದ ಬಂದರೆ ಬಂದೀತು. ಏಕೆಂದರೆ, 4–5 ದಿವಸದ ಹಿಂದಿನ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದರಲ್ಲಿ ಅರ್ಥವಿಲ್ಲ. ಈ ಬಗ್ಗೆ ಒಂದು ವೇಳೆ ಹೊಸ ಸಂಪ್ರದಾಯವನ್ನು ಹಾಕಲಿಕ್ಕೆ ಪ್ರಯತ್ನ ಮಾಡುವುದಾದರೆ, ಕಾನೂನು ನಿಯಮಾವಳಿಗಳನ್ನು

ಮಾರ್ಪಾಡು ಮಾಡುವುದಕ್ಕೆ ಇಚ್ಛೆ ಇದ್ದರೆ, ಎರಡು ಸದನದ ಅಧ್ಯಕ್ಷರು ಕೂತು ಒಂದು ತೀರ್ಮಾನಕ್ಕೆ ಬರಬಹುದು. ಹೊಸ ಸಂಪ್ರದಾಯವನ್ನು ಮಾಡಬೇಕಾದರೆ, ಹೊಸ ರೂಪ ರೇಖೆಯನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ಒಂದು ಅಂತಿಮ ನಿರ್ಣಯವಾಗಬೇಕು. ಅರ್ಥಸಚಿವರ ಉತ್ತರ ಆದ ಮೇಲೆ ಈ ಒಂದು ಕಾರ್ಯರೂಪವನ್ನು ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟರೆ, ನಾವು ಒಪ್ಪುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು.—ಇವತ್ತು ಸಾಯಂಕಾಲ ತೆಗೆದು ಕೊಳ್ಳೋಣ.

Re : Satyagraha by College Lecturers

ಶ್ರೀ ಕೋಣಂದೂರು ಲಿಂಗಪ್ಪ.—ನಾನು ನಿನ್ನೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ರಾಜ್ಯದ ಕಾಲೇಜು ಅಧ್ಯಾಪಕರು ತಮ್ಮ ಬೇಡಿಕೆಗಳನ್ನು ಇಟ್ಟು ಸತ್ಯಾಗ್ರಹ ಆರಂಭ ಮಾಡಿದ್ದಾರೆ. ನಾಳೆ ಮಂತ್ರಿಗಳಿಂದ ಹೇಳಿಕೆ ಕೊಡಿಸಿದರೆ ಒಳ್ಳೆಯದು.

ಅಧ್ಯಕ್ಷರು.—ಮಂತ್ರಿಗಳು ಇಲ್ಲ, ಮಂತ್ರಿಗಳು ಬರಲಿ ನೋಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಎರಡು ದಿವಸದ ಹಿಂದೆ ನೋಟೀಸ್ ಕಳುಹಿಸಿದ್ದೆ, ಅರ್ಧ ಭಾಗಕ್ಕೆ ಅರ್ಥ ಸಚಿವರು ಉತ್ತರ ಕೊಟ್ಟರು, ಇನ್ನೊಂದು ಅರ್ಧ ಭಾಗಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ಹೇಳಿದರು. ಆದರೆ ಮುಖ್ಯಮಂತ್ರಿಗಳು ಇಲ್ಲ ಇಲ್ಲ. ಇದರ ಬಗ್ಗೆ ನಾಳೆ ಉತ್ತರ ಕೊಡಿಸುತ್ತೀರಾ ?

ಅಧ್ಯಕ್ಷರು.—ನೋಡೋಣ, ಮುಖ್ಯಮಂತ್ರಿಗಳು ಬರಲಿ.

Budget Estimates for 1973-74—General Discussion

(Debate Continued)

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಣೀಯವರೇ, ನಮ್ಮ ರಾಜ್ಯದಲ್ಲಿ ಬರಗಾಲದ ದೃಷ್ಟಿಯಿಂದ ಕಷ್ಟ ಪರಿಸ್ಥಿತಿ ಇದ್ದಾಗ ಈ ವರ್ಷದ ಬಡ್ಜೆಟ್ಟನ್ನು ಮಂಡಿಸುವ ಜವಾಬ್ದಾರಿ ನನ್ನ ಪಾಲಿಗೆ ಬಂತು. ಬಡ್ಜೆಟ್ ಮಂಡಿಸುವಾಗ ನಾನು ಬಹಳ ಸ್ಪಷ್ಟವಾದ ಮಾತನ್ನು ಹೇಳಿದೆ. ಬರಗಾಲ ಪರಿಸ್ಥಿತಿ ಎಷ್ಟೇ ಕಷ್ಟಕರವಾಗಿದ್ದಾಗ್ಯೂ, ಈ ಸರ್ಕಾರ ಕೆಲಸ ಕೊಡುವ ದೃಷ್ಟಿಯಿಂದ, ಕುಡಿಯುವ ನೀರಿನ ಸೌಕರ್ಯದ ದೃಷ್ಟಿಯಿಂದ, ಕಾಳು ಮತ್ತು ಮೇವಿನ ದೃಷ್ಟಿಯಿಂದ ಸರ್ವ ಪ್ರಯತ್ನವನ್ನು ಮಾಡುತ್ತಿದ್ದಾರೆ, ಇದು ಬರೀ ಭಾಷಣವಲ್ಲ, ಆ ಪ್ರಯತ್ನವನ್ನು ನಿರ್ದಿಷ್ಟವಾದ ಕಾರ್ಯಕ್ರಮದ ರೂಪದಲ್ಲಿ ಈ ಸಭೆಯ ಮುಂದೆ ಇಟ್ಟಿದ್ದೇನೆ. ಬರಗಾಲದ ಕಾರ್ಯಕ್ರಮದ ಒಂದು ವೈಶಿಷ್ಟ್ಯ ಏನೆಂದರೆ, ಇದು ಬರೀ ತಾತ್ಕಾಲಿಕವಾಗಿ ಆ ಜನಕ್ಕೆ ಅನುಕೂಲ ಮಾಡಿಕೊಡುವುದು ಅಷ್ಟೇ ಅಲ್ಲ, ಶಾಶ್ವತವಾದ ರೀತಿಯಿಂದ ಆ ಪ್ರದೇಶದ ಆರ್ಥಿಕ ಶಕ್ತಿಯನ್ನು ಬೆಳೆಸುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ವಿಶೇಷವಾಗಿ ಸಾಯಿಲ್ ಕನ್ಸರ್ವೇಷನ್, ಸಣ್ಣ ನೀರಾವರಿ ಯೋಜನೆಗಳು. ಯಾವ ಕಾಲಕ್ಕೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಲ್ಲಿ ನಡೆದಿರಲ್ಲಿಲ್ಲ. ಅಂಥ ಪ್ರಮಾಣದಲ್ಲ ಕೆಲಸಗಳನ್ನು ನಾವು ಪ್ರಾರಂಭ ಮಾಡಿದ್ದೇವೇ. ಅದಕ್ಕೆ ಒಂದೇ ವಾಕ್ಯದಲ್ಲಿ ನಾನು ಹೇಳಿದೆ ಇದು ಡ್ರಾಟ್ ಕಂ ಡೆವೆಲಪ್‌ಮೆಂಟ್ ಬಡ್ಜೆಟ್ ಎಂದು. ಈ ಡ್ರಾಟ್ ಸಮಸ್ಯೆಯನ್ನು ಎದುರಿಸುವಾಗ, ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಹಿಂದುಳಿದಿರತಕ್ಕಂಥ ಜಿಲ್ಲೆಗಳ ಬೆಳವಣಿಗೆಯನ್ನು ಸಂಪೂರ್ಣವಾಗಿ ದೃಷ್ಟಿಯಲ್ಲಿಟ್ಟುಕೊಂಡು ಬೃಹತ್ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ನನಗೆ ತಿಳಿದಮಟ್ಟಿಗೆ, ಈ ಕಾರ್ಯಕ್ರಮಕ್ಕೆ ಸಾಕಷ್ಟು ಸ್ವಾಗತ ಸಾಮಾನ್ಯ ಜನ ಸಂಬಂಧಪಟ್ಟ ಜಿಲ್ಲೆಯಲ್ಲಿ ಅಷ್ಟೇ ಅಲ್ಲ, ಇಡೀ ರಾಜ್ಯದಲ್ಲ ನೀಡಿದೆಯೆಂದರೆ ಅದು ಅತಿಶಯೋಕ್ತಿಯಾಗಲಾರದು.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಬೆನ್ನನ್ನು ನೀವೇ ತಟ್ಟಿಕೊಳ್ಳುವುದಕ್ಕೆ ಹೋದಿರಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಹೇಳಿದರು, ಬರಗಾಲದ ಕಾರ್ಯಕ್ರಮದಲ್ಲಿ ನಾವು ಸಂಪೂರ್ಣವಾಗಿ ಸಹಕಾರವನ್ನು ಸರ್ಕಾರಕ್ಕೆ ಕೊಡುತ್ತೇವೆ ಎಂದು. ಅವರ ಬಹಳ ಜವಾಬ್ದಾರಿಯಿಂದ ಈ ಮಾತನ್ನು ಹೇಳಿದರು, ನಾನು ಅಷ್ಟೆ ಜವಾಬ್ದಾರಿಯಿಂದ ಸರ್ಕಾರದ ವತಿಯಿಂದ ಅವರ ಸಹಕಾರವನ್ನು ಸ್ವಾಗತಮಾಡುತ್ತೇನೆ. ಏಕೆಂದರೆ, ನಾನು ಬಹಳ ಪ್ರಾಮಾಣಿಕತೆಯಿಂದ ಬಡ್ಜೆಟ್ ಭಾಷಣದಲ್ಲಿ ಹೇಳಿದೆ, ಬರಗಾಲ ಪರಿಸ್ಥಿತಿ ಏನು ಇದೆ ಅದು ಯಾರೊಬ್ಬರೂ ಮಾಡಿರತಕ್ಕದ್ದಲ್ಲ, ಅದು ನೈಸರ್ಗಿಕವಾಗಿ ಬಂದಿರತಕ್ಕಂಥ ಅನಾಹುತ ಎಂದು. ಇದನ್ನು ಎದುರಿಸುವಾಗ, ರಾಜಕೀಯಕ್ಕೆ ಗುರಿ ಮಾಡದೆ, ಇದು ಎಲ್ಲರ ಜವಾಬ್ದಾರಿ, ಯಾರೇ ಆಗಲಿ, ಯಾವ ಪಕ್ಷಕ್ಕೆ ಸೇರಿರಲಿ, ಎಂದು ಇದನ್ನು ಎದುರಿಸಬೇಕು. ಈ ವಿಷಯವನ್ನು ರಾಜಕೀಯದಿಂದ ಸ್ಪಷ್ಟವಾಗಿ ತೆಗೆದಿಟ್ಟು ನಾವು ಹೆಜ್ಜೆ ಇಟ್ಟರೆ, ಈ ಪರಿಸ್ಥಿತಿಯನ್ನು ಶಾಶ್ವತವಾಗಿ, ಎಲ್ಲಾ ಜನಕ್ಕೆ ತೃಪ್ತಿಯಾಗುವ ರೀತಿಯಲ್ಲಿ ಎದುರಿಸಲಿಕ್ಕೆ ಸಾಧ್ಯ. ಇಂಥ ಒಂದು ವಾತಾವರಣ ನಮ್ಮ ರಾಜ್ಯದಲ್ಲಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ವಿಶೇಷವಾಗಿ ವಿರೋಧಪಕ್ಷದ ನಾಯಕರು ಆ ಮಾತನ್ನು ಏನು ಹೇಳಿದರು ಅದನ್ನು ಪುನಃ ಸರ್ಕಾರದ ವತಿಯಿಂದ ಸ್ವಾಗತ ಮಾಡುತ್ತೇನೆ. ಇಂಥ ಒಂದು ಪರಿಸ್ಥಿತಿಯಲ್ಲೂ ಕೂಡ ಮಾನ್ಯ ಸದಸ್ಯರು ಗಮನಕೊಡಬೇಕು, ಯಾವ ಒಂದು ಬೆಳವಣಿಗೆ ಕೆಲಸಗಳಿಗೆ ಅಡ್ಡಿಯಾಗದೆ ನಾವು ಬರಗಾಲದ ಕೆಲಸವನ್ನು ಮಾಡುತ್ತಿದ್ದೇವೆ. ಆ ಬಗ್ಗೆ ಡೆವಲಪ್‌ಮೆಂಟ್ ಏನು ಇದೆ ಅದರ ವೇಗ ಏನು ಇದೆ ಅದನ್ನು ಕಡಿಮೆ ಮಾಡಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೇಳುವುದಾದರೆ, ಡೆವಲಪ್‌ಮೆಂಟ್ ಟೆಂಪೋ ಅನ್ನು ಜಾಸ್ತಿ ಮಾಡಿದ್ದೇವೆ. ಬರಗಾಲದಲ್ಲಿ ಖರ್ಚು ಮಾಡಿರುವ ದುಡ್ಡು ಕೇಂದ್ರದಿಂದ ಬರುತ್ತದೆ ಎಂದು ನಿರೀಕ್ಷೆ ಮಾಡುತ್ತೇವೆ. ಬಡ್ಜೆಟ್‌ನಲ್ಲಿ ಸ್ಪಷ್ಟವಾಗಿ 1972-73ನೇ ವರ್ಷಕ್ಕೆ 25ಕೋಟಿ ರೂಪಾಯಿಗಳು ಕೇಂದ್ರದಿಂದ ಬರುತ್ತವೆ ಎಂದು ನಿರೀಕ್ಷೆ ಮಾಡಿದ್ದೇವೆ. ಆಗಲೇ 10ಕೋಟಿ ರೂಪಾಯಿಗಳು ಬಂದಿರುವುದು ಎಲ್ಲರಿಗೂ ಗೊತ್ತಿದೆ. ಬರುವ ವರ್ಷದಲ್ಲಿ, 1973-74ರಲ್ಲಿ ಬರಗಾಲದ ಎಂಟು ಜಿಲ್ಲೆಗಳಲ್ಲಿ 10-11 ಲಕ್ಷ ಜನಕ್ಕೆ ಕೆಲಸಕೊಡುವ ದೃಷ್ಟಿಯಿಂದ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಅದಕ್ಕೆ 54 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಂದರೆ ಮುಂದೆ ಬರುವ ಹಾರ್ವೆಸ್ಟ್‌ನವರೆಗೆ ಜನರಿಗೆ ಕೆಲಸ ಕೊಡುವುದಕ್ಕೆ ನಾವು ಹೆದರಬೇಕಾಗಿಲ್ಲ. ಇದಕ್ಕಿಂತ ಹೆಚ್ಚು ಹಣಬೇಕಾದರೂ ಸರ್ಕಾರ ಖರ್ಚು ಮಾಡುವುದರಲ್ಲಿ ಹಿಂಜರಿಯುವುದಿಲ್ಲ. ನಮಗೆ ಗೊತ್ತಿದೆ, ಇಂಥ ಪರಿಸ್ಥಿತಿಯಲ್ಲಿ ದುಡ್ಡು ಮುಖ್ಯವಲ್ಲ, ಕಾರ್ಯಕ್ರಮ ಮುಖ್ಯವಾದದು. ಮೊದಲೆ ಜನಕ್ಕೆ ಕೆಲಸಬೇಕು, ಅದನ್ನು ಕೊಡಬೇಕಾದದು ನಮ್ಮ ಆದ್ಯ ಕರ್ತವ್ಯ. 10 ಲಕ್ಷ ಜನರಿಗೆ ಅಷ್ಟೇ ಅಲ್ಲ, ಬರಗಾಲ ಪೀಡಿತ ಪ್ರದೇಶದಿಂದ ಯಾರೇ ಆಗಲೀ ಕೆಲಸ ಇಲ್ಲ ಎಂದು ಬಂದರೆ ಪ್ರತಿಯೊಬ್ಬರಿಗೂ ಕೆಲಸ ಕೊಡುವ ಜವಾಬ್ದಾರಿ ಸರ್ಕಾರದ್ದು. ದಯವಿಟ್ಟು ಮಾನ್ಯ ಸದಸ್ಯರು, ಬರಗಾಲದ ಪರಿಸ್ಥಿತಿಯಿಂದ ಬಂದವರು 10 ಅಲ್ಲ 100 ಅಲ್ಲ, ಸಾವಿರ ಜನ ಇರಲಿ, ಇಂಥ ಕಡೆ ಕೆಲಸ ಇಲ್ಲ ಎಂದು ತಿಳಿಸಿದರೆ, ತಕ್ಷಣ ಕೆಲಸಕೊಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಇದಕ್ಕಿಂತ ಸ್ಪಷ್ಟವಾದ ಪದಗಳಲ್ಲಿ ಸರ್ಕಾರದ ಜವಾಬ್ದಾರಿ ನಾವು ಹೇಳುವುದಕ್ಕೆ ಸಾಧ್ಯವಿಲ್ಲ. ಇಷ್ಟೊಂದು ಪರಿಸ್ಥಿತಿ ಇದ್ದರೂ ಇವೊತ್ತು ಡಿ. ಎ. ವಿಷಯದಲ್ಲಿ ಕೂಡ ವರ್ಷಕ್ಕೆ 5 ಕೋಟಿ ರೂಪಾಯಿ ಖರ್ಚಾಗುವ ತೀರ್ಮಾನ ನಾವು ಕೈಕೊಂಡಿದ್ದೇವೆ. ಅಷ್ಟೇ ಅಲ ಗೃಹನಿರ್ಮಾಣ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದಕ್ಕೆ 25 ಸಾವಿರ ಮನೆಗಳು ಕಟ್ಟುವ ಕಾರ್ಯಕ್ರಮಕ್ಕೆ 5 ಕೋಟಿ ರೂಪಾಯಿ ಬೇಕಾಗುತ್ತದೆ. ಸಾಧ್ಯವಾದರೆ 50 ಸಾವಿರ ಮನೆಗಳನ್ನು ಕಟ್ಟಿ 10 ಕೋಟಿ ರೂಪಾಯಿ ಪಂಚವಾರ್ಷಿಕ ಯೋಜನೆಯಲ್ಲಿ 10-20 ಕೋಟಿ ರೂಪಾಯಿಯವರೆಗೂ ನಾವು ಏರಿಸುತ್ತಾ ಹೋಗಬೇಕು ಎಂದು ಸ್ಪಷ್ಟವಾದ ಧೋರಣೆ ಹಾಕಿಕೊಂಡಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಹೌಸಿಂಗ್ ಬಗ್ಗೆ ಗೃಹನಿರ್ಮಾಣಕ್ಕೆ 5 ಕೋಟಿ ರೂಪಾಯಿ ಸಾಲದು- ಸ್ವಲ್ಪ ಜಾಸ್ತಿಮಾಡಿ.

ಶ್ರೀ ಎಂ. ವೈ. ಘೋರ್ಪಡೆ.—ನೀವು ಭಾಷಣ ಮಾಡುವಾಗ ನಾನು ಶಾಂತವಾಗಿ ಕೇಳಿದ್ದೇನೆ. ನಾನು ಹೇಳುವುದು ಶಾಂತವಾಗಿ ಕೇಳಿ. ವಿವರಗಳು ಬೇಕಾದರೆ ಪ್ರಶ್ನೆಗಳಿದ್ದರೆ ಕೇಳಿ, ಸಂತೋಷ, ಉತ್ತರ ಕೊಡುತ್ತೇನೆ. ಆದಕಾರಣ ಹೌಸಿಂಗ್ ಪ್ರೋಗ್ರಾಂ ಏನು ಇದೆ ಅದಕ್ಕೆ ಹೆಚ್ಚಿನ ಮಹತ್ವ ಸರ್ಕಾರ ಕೊಡುತ್ತದೆ. ಈ ಕೆಲಸದಲ್ಲಿ ಕೆಲವು ಸದಸ್ಯರು ಅನುಮಾನ ವ್ಯಕ್ತಮಾಡಿದರು. ದುಡ್ಡು ಏನು ಕೊಟ್ಟಿದ್ದಾರೆ ಅದು ದಕ್ಷತೆಯಿಂದ, ವೇಗದಿಂದ ಖರ್ಚುಮಾಡಿ ಈ ಕೆಲಸ ಮಾಡುವ ಮನಸ್ಸು ಸರ್ಕಾರಕ್ಕೆ ಇದೆ. We will give highst-Importance ಆ ದೃಷ್ಟಿಯಿಂದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಅದಕ್ಕೋಸ್ಕರ ಮಾಡಬೇಕೆಂಬ ತೀರ್ಮಾನಕ್ಕೆ ಕೂಡ ಸರ್ಕಾರ ಬಂದಿದೆ. ಆದಕಾರಣ ಡ್ರೌಟ್ ಕಂಡೀಷನ್‌ಗೆ

ಯಾವರೀತಿ ಬಹಳ ಹೈಯೆಸ್ಟ್ ಇಂಪಾರ್ಟೆನ್ಸ್ ಕೊಡುತ್ತಿದ್ದೇವೆ ಅಷ್ಟೇ ಮಟ್ಟದಲ್ಲಿ ಕೆಲಸ ಕೂಡ ನಡೆಯಬೇಕು ಎಂದು ಸರ್ಕಾರಂದ ವಿಚಾರ ಇದೆ. ಇಂಥ ಒಂದು ಪರಿಸ್ಥಿತಿಯಲ್ಲಿ ರಾಜ್ಯ ಇದ್ದಾಗ ಕೂಡ ನಮ್ಮ ಯೋಜನೆಗಳಿಗೆ ಯಾವ ಒಂದು ಧಕ್ಕೆ ಬರಲಿಲ್ಲ. ಸಂತೋಷದಿಂದ ಹೇಳಬೇಕು ಎಂದರೆ ಯೋಜನೆ ಮಟ್ಟ ಜಾಸ್ತಿಯಾಗಿದೆ ಹೊರತು ಕಡಿಮೆಯಾಗಿಲ್ಲ, ಇದು ಸಮಾಧಾನದ ಮಾತು ಇದೆ. ಹೆಚ್ಚು ಭಯ ಇತ್ತು, ಇಂಥ ಪರಿಸ್ಥಿತಿಯಲ್ಲಿ ನಾಲ್ಕನೇ ಪಂಚವಾರ್ಷಿಕ ಯೋಜನೆ ಏನಾಗುತ್ತದೆ ಎಂದು ಸುದೈವದಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆ ಯಾವ ಮಟ್ಟದಲ್ಲಿ ನಡೆಯಬೇಕು ಆ ಮಟ್ಟದಲ್ಲಿ ನಡೆಯುತ್ತಿದೆ. ತಮಗಾದರೂ ಈ ವರ್ಷದ ಅನ್ಯೂಯಲ್ ಪ್ಲಾನ್ 1973-74ಕ್ಕೆ 84 ಕೋಟಿ ರೂಪಾಯಿ ಸಾಕು ಎಂದು ಹೇಳಿದರೂ ಸಹ ನಾವು 91 ಕೋಟಿ ರೂಪಾಯಿ ಪ್ಲಾನ್ ಹಾಕಿಕೊಂಡಿದ್ದೇವೆ. ಅದರ ಪರಿಣಾಮವಾಗಿ ನಾಲ್ಕನೇ ಪಂಚವಾರ್ಷಿಕಯೋಜನೆ ಏನು ಇದೆ ಅದರಲ್ಲಿ 5 ವರ್ಷದಲ್ಲಿ ಒಟ್ಟು 386 ಕೋಟಿ ರೂಪಾಯಿ ಆಗುತ್ತದೆ. 350 ಕೋಟಿ ರೂಪಾಯಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಆಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಕೆಲವು ದಿವಸಗಳ ಹಿಂದೆ ಇತ್ತು. ಇವೊತ್ತು ಆ 350 ಕೋಟಿ ರೂಪಾಯಿ ಇದ್ದದ್ದು 380 ಕೋಟಿ ರೂಪಾಯಿ ಯೋಜನೆ ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಆಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ. ಕಾಳಿನದಿ ಪ್ರಾಜೆಕ್ಟಿನ 3 ಕೋಟಿ ರೂಪಾಯಿ ಸೇರಿಸಿದರೆ ಇನ್ನೂ ಜಾಸ್ತಿಯಾಗುತ್ತದೆ ಎಂದು ನನ್ನ ಭಾಷಣದಲ್ಲಿ ಹೇಳಿದೆ. ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಲೆಕ್ಕ ಹಾಕಿಕೊಂಡಿದ್ದೇವೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 500 ಕೋಟಿ ರೂಪಾಯಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಮಾಡಿದ್ದೇವೆ, ಅದರಲ್ಲಿ ಅರ್ಧ ಭಾಗ ಎರಡನೇ ವರ್ಷದಲ್ಲಿ 1972-73, 1973-74 ಆದಕಾರಣ ಡೆವಲಪ್‌ಮೆಂಟ್ ದೃಷ್ಟಿಯಿಂದ ಬಹಳ ತೃಪ್ತಿಕರವಾಗಿವೆ. ಇಂಥ ಹಣಕಾಸಿನ ಕಷ್ಟಪರಿಸ್ಥಿತಿ ಇದ್ದರೂ ಕೂಡ ನಮ್ಮ ಯೋಜನೆಗಳು ಏನು ಇವೆ ಅವು ಬಹಳ ತೃಪ್ತಿಕರವಾಗಿ ನಡೆದಿವೆ ಎಂದು ನಾನು ಹೇಳಬಯಸುತ್ತೇನೆ. ಅಷ್ಟೇ ಅಲ್ಲ 5ನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಕೂಡ ಈ ಸಂದರ್ಭದಲ್ಲಿ ಇಷ್ಟು ಹೇಳಲಿಕ್ಕೆ ಸಾಧ್ಯ, ಅಷ್ಟು ಹೇಳಿದ್ದೇನೆ. ಉದಾಹರಣೆಗಾಗಿ ನೀರಾವರಿ ನಮ್ಮ ರಾಜ್ಯದಲ್ಲಿ ಇರತಕ್ಕ ಮತ್ತು ವಿದ್ಯುಚ್ಛಕ್ತಿ ಇದು ಡಬ್ಬಲ್ ಅಲ್ಲ ತ್ರಿಬ್ಬಲ್ ಮಾಡಬೇಕೆಂದು ಹೇಳಿದೆ. ಇದನ್ನು ನಾವು ಮಾಡಬೇಕಾದರೆ ಸುಮಾರು 500 ಕೋಟಿ 600 ಕೋಟಿ ರೂಪಾಯಿ ಖರ್ಚಾಗುತ್ತದೆ. ವಿದ್ಯುಚ್ಛಕ್ತಿ ಮತ್ತು ನೀರಾವರಿ 5ನೇ ಪಂಚವಾರ್ಷಿಕ ಯೋಜನೆಯಾಗಿದೆ. ನಾನು ಮೊನ್ನೇ ಹೇಳಿವೆ 1000 ಕೋಟಿ ರೂಪಾಯಿ, 1200 ಕೋಟಿ ರೂಪಾಯಿ ಆದರೂ ಅದರಲ್ಲಿ 600 ಕೋಟಿ ರೂಪಾಯಿ ವಿದ್ಯುಚ್ಛಕ್ತಿ ಮತ್ತು ನೀರಾವರಿಗೋಸ್ಕರ ಬೇಕೇ ಬೇಕು. ಆ ರೀತಿಯಲ್ಲಿ ಪಂಚವಾರ್ಷಿಕಯೋಜನೆ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಬಹಳ ಧೈರ್ಯವಾಗಿ ಯೋಜನೆ ಮಾಡುತ್ತಿದ್ದೇವೆ 5ನೇ ಪಂಚವಾರ್ಷಿಕ ಯೋಜನೆ ಏನಿದೆ ಅದನ್ನು ಆದಷ್ಟು ಮಟ್ಟಿಗೂ ಜಾಸ್ತಿ ಮಾಡುವ ಪ್ರಯತ್ನ ನಾವು ಮಾಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಎಷ್ಟು ಕೋಟಿ ರೂಪಾಯಿಗಳು ?

ಶ್ರೀ ಎಂ. ವೈ. ಘೋರ್ಪಡೆ.—ಇಷ್ಟೇ ಎನ್ನುವುದನ್ನು ತೀರ್ಮಾನ ಮಾಡಿಲ್ಲ. ಆದರೂ ಕೂಡ ಮೈಸೂರು ರಾಜ್ಯದಲ್ಲಿ ಇರಿಗೇಷನ್ ಮತ್ತು ಪವರ್ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಈಗ ಏನು ಇದೆ ಅವಕ್ಕೆ ಮೂರರಷ್ಟು ಮಾಡಬೇಕಾದರೆ ಇರಿಗೇಷನ್ ಬಗ್ಗೆ 500-600 ಕೋಟಿ ರೂಪಾಯಿ ಖರ್ಚು ಮಾಡಬೇಕು ಎಂದು ಹೇಳಿದೆ.

[MR DEPUTY SPEAKER in the Chair]

ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದರು. ಹಳ್ಳಿಗಾಡುಗಳಲ್ಲಿ ಏನು ಮಾಡುತ್ತೀರಿ ಎಂದು ಹಳ್ಳಿಗಳು ಮತ್ತು ತಾಲ್ಲೋಕು ತಾಲ್ಲೋಕುಗಳಲ್ಲಿ ಏನು ವ್ಯತ್ಯಾಸ ಇದೆ, ಒಂದೇ ಜಿಲ್ಲೆಯಲ್ಲಿ ಏನು ವ್ಯತ್ಯಾಸ ಇದೆ ಎಂಬುದು ತಮಗೆ ಗೊತ್ತು. ಒಂದು ತಾಲ್ಲೋಕು ಅಭಿವೃದ್ಧಿಯಾಗಿದೆ, ಇನ್ನೊಂದು ತಾಲ್ಲೋಕು ಅಭಿವೃದ್ಧಿಯಾಗಿಲ್ಲ ಇದು ಕೂಡ ಗೊತ್ತಿದೆ. ಇದನ್ನು ನೇರವಾಗಿ ತಿಳಿದುಕೊಂಡು ಅದಕ್ಕೆ ಅನುಗುಣವಾಗಿ 5ನೇ ಪಂಚವಾರ್ಷಿಕ ಯೋಜನೆ ಮಾಡಬೇಕೆಂಬ ಸ್ಪಷ್ಟವಾದ ಅಭಿಪ್ರಾಯ ಇದೆ. ಬೇಸಿಕ್ ಅಮೆನಿಟೀಸ್ ಏನು ಆಗಬೇಕು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಯಾವ ಯಾವ ತಾಲ್ಲೋಕಿನಲ್ಲಿ ಯಾವ ದೃಷ್ಟಿಯಲ್ಲಿ ತಾಲ್ಲೋಕುಗಳು ಮುಂದೆ ಬಂದಿವೆ, ಯಾವ ದೃಷ್ಟಿಯಲ್ಲಿ ಹಿಂದುಳಿದಿವೆ ಎಂಬುದನ್ನು ಸ್ಪಷ್ಟವಾಗಿ ವಿಚಾರ ಮಾಡಬೇಕಾಗುತ್ತದೆ, ಒಂದು ಪ್ರೋಫಾರ್ಮ ಮಾಡುತ್ತಿದ್ದೇವೆ. ಅದನ್ನು ಪ್ರತಿಯೊಂದು ತಾಲ್ಲೋಕುಗಳಿಗೂ

(ಶ್ರೀ ಎಂ. ವೈ ಘೋರ್ಪಡೆ)

ಕಳುಹಿಸಿಕೊಡುತ್ತಿದ್ದೇವೆ. ಇದರ ಉದ್ದಿಶ್ಯ ಇಷ್ಟೇ, ಯಾವುದು ಹಿಂದುಳಿದಿದೆ, ಯಾವುದು ಹಿಂದುಳಿದಿಲ್ಲ ಎಂಬ ಸ್ಪಷ್ಟವಾದ ಚಿತ್ರ ನಮಗೆ ಬರಬೇಕು. ಸುಲಭವಾಗಿ ಹೇಳುತ್ತೇನೆ. ಜಿಲ್ಲೆಯಲ್ಲಿ ಎಲ್ಲಾ ಹಿಂದುಳಿದಿಲ್ಲ, ಜಿಲ್ಲೆಯಲ್ಲಿ ಎಲ್ಲಾ ಮುಂದುವರಿದಿಲ್ಲ. ಕೆಲವು ಜಿಲ್ಲೆಗಳಲ್ಲಿ ನೀರಾವರಿ ಇದೆ, ಕೆಲವು ಭಾಗಗಳಲ್ಲಿ ಬಹಳ ಮುಂದೆ ಬಂದಿದೆ, ಹಿಂದುಳಿದ ಭಾಗ ಯಾವುದಿದೆ ಅಲ್ಲಿ ಹೆಚ್ಚು ಡ್ರಾಟ್ ಇರಬಹುದು. ಪ್ರತಿ ತಾಲ್ಲೋಕು ಮಟ್ಟದಲ್ಲಿ ಬೇಸಿಕ್ ಅಮೆನಿಟೀಸ್ ಪರಿಸ್ಥಿತಿ ಏನು ಇದೆ, ಎಜುಕೇಷನ್ ಹೆಲ್ತ್, ಬೇಸಿಕ್ ಡೆವಲಪ್‌ಮೆಂಟ್, ಕುಡಿಯುವ ನೀರಿನ ಪರಿಸ್ಥಿತಿ ಏನು ಇದೆ, ಇದನ್ನೆಲ್ಲಾ ಸ್ಪಷ್ಟವಾಗಿ ಈಗಲೇ ತಿಳಿದುಕೊಳ್ಳುವುದು ಅಗತ್ಯ. ಅಷ್ಟೇ ಅಲ್ಲ ಎಂಪ್ಲಾಯ್‌ಮೆಂಟ್ ಪೊಸಿಷನ್ ಕೂಡ ತಿಳಿದುಕೊಳ್ಳಬೇಕಾಗುತ್ತದೆ. ಅದರ ಸ್ವರೂಪ ಬಹಳ ವಿವರವಾಗಿ ತಿಳಿದುಕೊಳ್ಳಬೇಕು. ಎಂಪ್ಲಾಯ್‌ಮೆಂಟಿನ ಕಷ್ಟ ಆ ಕಡೆ ನೋಡಿ, ಜನರಲ್ ಸ್ಟೇಟ್‌ಮೆಂಟ್ ಮಾಡಿದರೆ ಸಾಲದು. ನಮ್ಮ ದೇಶದಲ್ಲಿ ಎಷ್ಟು ಅನ್ ಎಂಪ್ಲಾಯ್‌ಮೆಂಟ್ ಇದೆ; ಗ್ರಾಜ್ಯುಯೆಟ್ ಅನ್ ಎಂಪ್ಲಾಯ್‌ಮೆಂಟ್ ಎಷ್ಟು ಇದೆ; ಅನ್ ಎಂಪ್ಲಾಯ್‌ಮೆಂಟ್ ಯಾವ ಯಾವ ತಾಲ್ಲೋಕಿನಲ್ಲಿ ಇದೆ; ಎಂತಹ ಅನ್ ಎಂಪ್ಲಾಯ್‌ಮೆಂಟ್ ಇದೆ ಎಂಬುದನ್ನೆಲ್ಲಾ ಅಭ್ಯಾಸಮಾಡಬೇಕು, ಹೊಸ ರೀತಿಯಲ್ಲಿ ಅಂಕಿಅಂಶ ಸಂಗ್ರಹಿಸಬೇಕು. ಹಾಗೆ ಮಾಡಿದರ ವಾಸ್ತವಿಕ ಸ್ಥಿತಿ ಗೊತ್ತಾಗುತ್ತದೆ. ಕೆಲವು ತಾಲ್ಲೋಕಿನಲ್ಲಿ ಜನರಿಗೆ ಸೀಸನಲ್ ಅನ್ ಎಂಪ್ಲಾಯ್‌ಮೆಂಟ್ ಇರುತ್ತದೆ, ನಾಲ್ಕು ತಿಂಗಳು ಮಾತ್ರ ತೊಂದರೆ ಇರುತ್ತದೆ. ಇನ್ನೊಂದು, ಕೆಲವು ತಾಲ್ಲೋಕುಗಳಲ್ಲಿ 8 ತಿಂಗಳು ತೊಂದರೆ ಇರಬಹುದು. ಅನ್‌ಸ್ಕಿಲ್ಡ್ ಅನ್ ಎಂಪ್ಲಾಯ್‌ಮೆಂಟ್ ಇರಲಿಕ್ಕೆ ಇಲ್ಲ; ಟೆಕ್ನಿಕಲ್ ಅನ್‌ಎಂಪ್ಲಾಯ್‌ಮೆಂಟ್ ಇರಬಹುದು, ಬೀದರ್‌ನಲ್ಲಿ ಇರತಕ್ಕ ಅನ್ ಎಂಪ್ಲಾಯ್‌ಮೆಂಟ್ ಎಂತಹದು ; ಮಲೆನಾಡು ಪ್ರದೇಶದಲ್ಲಿ ಇರತಕ್ಕ ಅನ ಎಂಪ್ಲಾಯ್‌ಮೆಂಟ್ ಎಂತಹದು ; ಬಳ್ಳಾರಿಯಲ್ಲಿ ಇರತಕ್ಕ ಅನ್ ಎಂಪ್ಲಾಯ್‌ಮೆಂಟ್ ಎಂತಹದು ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ. ತಿಳಿದುಕೊಂಡು ಅನ್‌ಸ್ಕಿಲ್ಡ್, ಎಜುಕೇಟೆಡ್ ಅನ್ ಎಂಪ್ಲಾಯ್ಡ್ ಅಂಥ ಬೇರೆಬೇರೆ ರೀತಿ ಅನ್, ಎಂಪ್ಲಾಯ್‌ಮೆಂಟ್ ಪ್ರಶ್ನೆ ಬಿಡಿಸುವುದಕ್ಕೋಸ್ಕರ ನೇರವಾಗಿ ಯೋಜನೆಗಳನ್ನು ಹಾಕಿಕೊಂಡು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬಹುದು, ಆಗ ಏನಾಗುತ್ತದೆ, ಖರ್ಚು ಏನು ಮಾಡಬೇಕು ಎಂಬುದು ಗೊತ್ತಾಗುತ್ತದೆ. ಆದರಿಂದ ಅನ್ ಎಂಪ್ಲಾಯ್‌ಮೆಂಟ್ ಪರಿಸ್ಥಿತಿಯನ್ನು ನೇರವಾಗಿ ನಾವು ಎದುರಿಸುವುದಕ್ಕೆ ಆಗುತ್ತದೆ. ಇಲ್ಲದೆ ಹೋದರೆ ಎಲ್ಲಿ ಖರ್ಚುಮಾಡಬೇಕು ಅಲ್ಲಿ ಖರ್ಚಾಗುವುದಿಲ್ಲ, ಎಲ್ಲಿ ಖರ್ಚು ಮಾಡಬಾರದು ಅಂಥ ಕಡೆ ಖರ್ಚಾಗುತ್ತದೆ. ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಲಿಮಿಟೆಡ್ ರಿಸೋರ್ಸ್‌ಸ್ ಇರುವುದರಿಂದ ನಾವು ಏನು ಖರ್ಚುಮಾಡುತ್ತೇವೆ ಅದನ್ನು ಹೆಚ್ಚು ತಿಳುವಳಿಕೆಯಿಂದ ಅಭ್ಯಾಸಮಾಡಿ, ಬೇಸಿಕ್ ಅಮೆನಿಟೀಸ್ ದೃಷ್ಟಿಯಿಂದ, ಅನ್ ಎಂಪ್ಲಾಯ್‌ಮೆಂಟ್ ಸಮಸ್ಯೆಯನ್ನು ಪರಿಹರಿಸುವ ದೃಷ್ಟಿಯಿಂದ, ಒಂದು ಸರ್ವಸಾಮಾನ್ಯವಾದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉಂಟುಮಾಡುವ ದೃಷ್ಟಿಯಿಂದ, ತಾಲ್ಲೋಕು ಮಟ್ಟದಲ್ಲಿ ವ್ಯತ್ಯಾಸವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮಾಡಬೇಕು. ಆ ರೀತಿ ಮಾಡುವ ಪ್ರಯತ್ನ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಖಂಡಿತ ಮಾಡುತ್ತೇವೆ, ಇಂಥ ಪ್ರಯತ್ನ ಮಾಡಿ ಅಂಕಿಅಂಶಗಳನ್ನು ಸಂಗ್ರಹಿಸಿ ಅದರ ಬಗ್ಗೆ ನಾವು ಚರ್ಚೆಮಾಡೋಣ. ಒಂದು ಪಂಚವಾರ್ಷಿಕ ಯೋಜನೆ ತಯಾರು ಮಾಡುವ ಧಾಟಿ ಸರಿಯೋ ತಪ್ಪೋ ಅವರ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಲು ಮಾನ್ಯಸದಸ್ಯರಿಗೆ ಅವಕಾಶ ಇದ್ದೇ ಇರುತ್ತದೆ. 5ನೇ ಪಂಚವಾರ್ಷಿಕ ಯೋಜನೆ ಅದು ಪೀಪಲ್ಸ್ ಪ್ಲಾನ್ ಆಗಬೇಕು. ವಿಧಾನಸೌಧದಲ್ಲಿ ಅಥವಾ ಡೆಲ್ಲಿಯಲ್ಲಿ ಕೂತು ಮಾಡುವುದು ಅಲ್ಲ. ಹಳ್ಳಿ ಪರಿಸ್ಥಿತಿ ಸರಿಯಾಗಿ ತಿಳಿದುಕೊಂಡು ಮಾಡತಕ್ಕ ಜನತಾಪ್ಲಾನ್ ಮಾಡಬೇಕಾಗುತ್ತದೆ. ಈ ಒಂದು ದಿಶೆಯಲ್ಲಿ ನಾವು ಸಾಕಷ್ಟು ಪ್ರಯತ್ನ ಮಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಪ್ಲಾನಿಂಗ್ ಬೋರ್ಡ್ ಎಲ್ಲಾ ಪಟ್ಟಣದಲ್ಲಿರುವುದು, ಹಳ್ಳಿಯಲಲ್ಲ.

3-30 P.M.

ಶ್ರೀ ಎಂ. ವೈ. ಘೋರ್ಪಡೆ.—ಒಂದು ಪ್ರೊಫಾರ್ಮಾ ತಯಾರು ಮಾಡಿ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ ನಾನು ಪ್ರತಿಯೊಂದು ಜಿಲ್ಲೆಗೆ ಹೋಗಿ ಅಲ್ಲಿರತಕ್ಕಂಥ ಪ್ರತಿನಿಧಿಗಳ ಜೊತೆಗೆ ಚರ್ಚೆ ಮಾಡಿ ಈ ಪ್ರಶ್ನೆಗಳನ್ನು ನೇರವಾಗಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯವನ್ನು ರೂಪಿಸುವ ಪ್ರಯತ್ನ ಸಾಕಷ್ಟು ಪ್ರಮಾಣದಲ್ಲಿ ಆಗುತ್ತದೆ ಎಂದು ನಾನು ಆಶ್ವಾಸನ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—5ನೇ ಪಂಚವಾರ್ಷಿಕ ಯೋಜನೆ ರೂಪಿಸುವ ದೃಷ್ಟಿಯಿಂದ ಫೇಸ್ಡ್ ಪ್ಲಾನ್ ಮಾಡುವ ದೃಷ್ಟಿಯಿಂದ ಯೂನಿವರ್ಸಿಟಿ ಮತ್ತು ಸ್ಥಳೀಯ ಶಾಲೆಗಳಲ್ಲಿರತಕ್ಕಂಥ ಇನ್‌ಟೆಲಿಜೆನ್ಸ್ ಕ್ಲಾಸ್ ಏನು ಇದೆ ಅದಕ್ಕೂ ಕೂಡ ಸ್ವಲ್ಪ ಕೆಲಸ ಹಚ್ಚತಕ್ಕ ಪ್ರಯತ್ನ ಮಾಡಬೇಕು. ಆ ಬಗ್ಗೆ ನಾನು ಹೇಳುತ್ತೇನೆ. ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ವಿಚಾರಗೋಷ್ಠಿ ಮಾಡಿ ಅವರಿಂದ ಏನು ಬರುತ್ತರೆ ಅದನ್ನು ಸ್ವಲ್ಪ ತೆಗೆದುಕೊಂಡು ಇದಕ್ಕೆ ಸೇರಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಇದು ಏನಾಗುತ್ತದೆ ಎಂದರೆ ನಾವು ಇದನ್ನು ಬಹಳ ದೊಡ್ಡದಾಗಿ ಮಾಡಿದರೆ ಏನೂ ಆಗುವುದಿಲ್ಲ. ನಾವು ಪ್ರೋಗ್ರಾಂ ಹಾಕಿಕೊಂಡಿದ್ದೇವೆ. ಸಾಯಿಲ್ ಕನ್‌ಸರ್ವೇಷನ್ ಸ್ಪಷ್ಟವಾಗಿದೆ, ಸುಲಭವಾಗಿಯೂ ಇದೆ, ಹಳ್ಳಿಗಳ ಜನಕ್ಕೆ ಗೊತ್ತಾಗುವ ರೀತಿಯಲ್ಲಿ ಮಾಡಿದೆ. ಬೇಸಿಕ್ ಅಮಿನಿಟೀಸ್ ಮತ್ತು ಅನ್‌ಎಂಪ್ಲಾಯ್‌ಮೆಂಟ್ ಇಷ್ಟು ಮಾತ್ರ ತೆಗೆದುಕೊಂಡು ಇದರ ಬಗ್ಗೆ ಚರ್ಚೆ ಬೇಕಾದರೆ ಮಾಡೋಣ. ಈ ವಿಷಯದಲ್ಲಿ ಯಾರು ಯಾರಿಗೆ ಆಸಕ್ತಿ ಇದೆಯೋ ಅವರ ಜೊತೆಗೆ ಚರ್ಚೆ ಮಾಡುವುದರಲ್ಲಿ ತೊಂದರೆ ಇಲ್ಲ. Issue is a very simple one. ಇದು ಹಳ್ಳಿ ಜನಗಳಿಗೆ ಗೊತ್ತಾಗುತ್ತದೆ. ಇದರಲ್ಲಿ ಏನೂ ತೊಡಕು ಇಲ್ಲ.

ಇನ್ನು 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಪ್ರಾಮುಖ್ಯತೆ ಕೊಡಬೇಕೋ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡೋಣ. Let us not complicate it. ಇಲ್ಲದೇ ಹೋದರೆ ಬಹಳ ಚರ್ಚೆ ಆಗುತ್ತದೆ. Basic issues are forgotten. The basic issues are simple. ಈ ದೃಷ್ಟಿಯಿಂದ ಫೈನಾನ್ಸ್ ಕಮೀಷನ್ ಮುಂದೆ ನಮ್ಮ ರಾಜ್ಯದ ವತಿಯಿಂದ ಏನು ಮೆಮೋರ್ಯಾಂಡಂ ಕೊಟ್ಟಿದ್ದೇವೆ ಅದು ಸ್ಪಷ್ಟವಾಗಿದೆ. ಧೈರ್ಯವಾಗಿ ಹೇಳಲಿಕ್ಕೆ ಏನೇನು ಸಾಧ್ಯ ಅಷ್ಟೂ ಅದರಲ್ಲಿ ಹೇಳಿದ್ದೇನೆ ಎಂದು ನನಗೆ ಅನಿಸುತ್ತದೆ. ಅದಕ್ಕಿಂತ ಹೆಚ್ಚಿಗೆ ಯಾವ ರಾಜ್ಯದಲ್ಲೂ ಕೂಡ ಕೇಳಲಿಲ್ಲ. ಪತ್ರಿಕೆಯಲ್ಲಿ ಕಾಮೆಂಟ್ ಬಂದಿರುವುದನ್ನು ನೋಡಿದರೆ ತಮಿಳು ನಾಡಿನವರು ಮಾಡಿರತಕ್ಕಂಥ ವಾದಕ್ಕೂ, ಮೈಸೂರಿನವರು ಮಾಡಿರತಕ್ಕಂಥ ವಾದಕ್ಕೂ ಹೋಲಿಸಿದರೆ ಮೈಸೂರಿನವರು ಮಾಡಿರತಕ್ಕಂಥ ವಾದ ಸೌಮ್ಯ ಇದೆ. ಈ ವಾದ ಏನು ಇದೆ ಅದು ಕೇಂದ್ರಕ್ಕೆ ಹೆದರಿ ಮಾಡಿರತಕ್ಕಂಥಾದ್ದಲ್ಲ. ಕರ್ನಾಟಕದ ಹಿತ ದೃಷ್ಟಿಯಿಂದ ಏನೇನು ಕೇಂದ್ರಕ್ಕೆ ಹೇಳಬೇಕಾಗಿತ್ತೋ ಅವನ್ನೆಲ್ಲಾ ನಿರ್ದಿಷ್ಟವಾಗಿ, ಸ್ಪಷ್ಟವಾಗಿ ಹೇಳಿದ್ದೇನೆ. ಇನ್ನು ಮುಂದೂ ಕೂಡ ಹೇಳುತ್ತೇನೆ. ಹಾಗೆ ಹೇಳಿದಾಗ ನೀವು ಬೆಂಬಲ ಕೊಡಬೇಕು, ಸಹಕಾರ ಕೊಡಬೇಕು. ಶ್ರೀಮಾನ್ ದೇವೇಗೌಡರು Demands one sky high ಎಂದು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಬೆನ್ನನ್ನು ನೀವೇ ಚಪ್ಪರಿಸುತ್ತಿದ್ದೀರಿ. ಏನೇನು ಕೇಳಬೇಕೋ ಅದನ್ನು ಕೇಳಿದರೆ ಅದು ಅನ್‌ರಿಯಾಲಿಸ್ಟಿಕ್ ಎಂದು ಹೇಳುತ್ತೀರಿ. I have noted down your own words, our demands should not go sky high ಎಂದು ಹೇಳಿದ್ದೀರಿ. I have made my remarks according to the assurances of the Finance Minister. According to his ex-pectation, if the award is in our favour it is well and good.

Sri M.Y.GHORPADE.—The award is not in our hands. We have made a full and proper representation. I expect the Leader of the opposition and members of all political parties to strongly support. ನೀವು ಬಡ್ಜೆಟ್‌ಮೇಲೆ ಟೀಕೆ ಮಾಡುವಾಗ ಯಾವ ಯಾವ ಅಂಕಿ ಅಂಶಗಳನ್ನು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದು ಇದೆ ಎಂದು ಅದನ್ನು ಬಾಯಿಬಿಟ್ಟು ಹೇಳಬೇಕು. ಅದು ನಿಮ್ಮ ಜವಾಬ್ದಾರಿ. ಒಬ್ಬರೂ ಆ ಮಾತನ್ನು ಹೇಳವೇ ಹೋದರೆ ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕಾಗುವುದಿಲ್ಲ. ನಾವೂ ನೀವೂ ಒಂದೇ. ರಾಜ್ಯದ ಹಿತದೃಷ್ಟಿಯಿಂದ ಮಾಡುವ ಕೆಲಸಕ್ಕೆ ಸಂಪೂರ್ಣ ಬೆಂಬಲವನ್ನು ಎಲ್ಲರೂ ಕೊಡಬೇಕು ಎಂದು ಈ ಸನ್ನಿವೇಶದಲ್ಲಿ ಹೇಳುತ್ತೇನೆ.

ಇನ್ನು ನಾನು ಇಷ್ಟು ಮಾತ್ರ ಹೇಳುತ್ತೇನೆ. ಫೈನಾನ್ಸ್ ಕಮೀಷನ್ ಮುಂದೆ ನಾವು ಮೆಮೋರ್ಯಾಂಡಂ ಇಟ್ಟಾಗ ಅವರೂ ಕೂಡ ಇದನ್ನು ಮೆಚ್ಚಿ ಹೇಳಿದರು. ಈ ವಾದ ಏನು ಇದೆ ಇದನ್ನು ಪ್ರತ್ಯೇಕವಾಗಿ ಬುಕ್‌ಲೆಟ್ ಮಾಡಿ ಕಳುಹಿಸಿ ಎಂದು. ಹಾಗೆ ಇದನ್ನು ಬುಕ್‌ಲೆಟ್ ಮಾಡಿ ಕಳುಹಿಸಿದ್ದೇನೆ. ಮಾನ್ಯ ಸದಸ್ಯರಿಗೂ ಹಂಚಿದ್ದೇನೆ. ಫೈನಾನ್ಸ್ ಕಮೀಷನ್‌ಗೆ ಏನೇನು ಹೇಳಿದ್ದೇವೆ ಅದು ಬರೀ ಅಫಿಷಿಯಲ್ ಮೆಮೋರ್ಯಾಂಡ ಅಷ್ಟೇ ಅಲ್ಲ, ಏನೇನು ವಾದ ಮಾಡಿದ್ದೇವೆ ಅದನ್ನು ಬುಕ್‌ಲೆಟ್ ಮಾಡಿ ಎಲ್ಲರಿಗೂ ಹಂಚಿದ್ದೇವೆ. ಆ ವಾದವನ್ನು ಏನಾದರೂ ಕೇಂದ್ರ ಸರ್ಕಾರ

(SRI M. Y. GHORPADE)

ದವರು ಒಪ್ಪುತ್ತಾರೆ ಎಂದು ನಾನು ನಂಬಿದ್ದೇನೆ. ಅವರು ಸಾಕಷ್ಟು ಪ್ರಮಾಣದಲ್ಲಿ ಒಪ್ಪುತ್ತಾರೆ. ಆ ಕೇಂದ್ರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಹಣಕಾಸಿನ ಸಂಬಂಧ ಏನು ಇದೆ ಅದು ಒಂದು ಹೊಸ ಅಧ್ಯಾಯ ಇದರಲ್ಲಿ ಪ್ರಾರಂಭವಾಗುತ್ತದೆ ಎಂದು ನನಗೆ ಅನಿಸುತ್ತದೆ. ಅದನ್ನು ಮಾಡದೇ ಹೋದರೆ ಹಣಕಾಸಿನ ಪರಿಸ್ಥಿತಿ ಹಲವಾರು ರಾಜ್ಯಗಳಲ್ಲಿ ಏನು ಕೆಟ್ಟಿದೆ ಅದನ್ನು ಸುಧಾರಿಸುವುದಕ್ಕೆ ಆಗುವುದಿಲ್ಲ. ಸಾಕಷ್ಟು ಪ್ರಮಾಣದಲ್ಲಿ ಫೈನಾನ್ಸ್ ಕಮೀಷನ್ ಒಪ್ಪಬೇಕಾಗುತ್ತದೆ. ಒಪ್ಪಿದರೆ ಸೆಂಟ್ರಲ್ ಸ್ಟೇಟ್ ರಿಲೇಷನ್‌ಗೆ ಒಂದು ಹೊಸ ಛಾಪ್ಟರ್ ತೆಗೆದಂತಾಗುತ್ತದೆ. ಈ ಒಂದು ಸೆಂಟ್ರಲ್ ರಿಲೇಷನ್ಸ್ ಬಗ್ಗೆ ಈ ಒಂದು ಪರಿಸ್ಥಿತಿ ಇರುವಾಗ ಮೈಸೂರಿನ ಒಂದು ಕಾಂಟ್ರಿಬ್ಯೂಷನ್ ಏನು ಇದೆಯೋ ಅದನ್ನು ನಾವು ಮಾಡಬೇಕಾಯಿತು. ಅದನ್ನು ಸ್ಪಷ್ಟವಾಗಿ, ಧೈರ್ಯವಾಗಿ ಮಾಡಿದ್ದೇವೆ. ನಿಮ್ಮೆಲ್ಲರ ವತಿಯಿಂದ ಮಾಡಿದ್ದೇವೆ ಎಂದು ಹೇಳಿದರೆ ಅತಿಶಯೋಕ್ತಿಯಾದ ಮಾತು ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಟ್ಯಾಕ್ಸ್ ಹಾಕುವ ವಿಷಯದಲ್ಲಿ ನಾನು ಆಗಲೇ ಹೇಳಿದ್ದೇನೆ. ಬರಗಾಲ ಪರಿಸ್ಥಿತಿ ಇರುವುದರಿಂದ ಫೈನಾನ್ಸ್ ಕಮೀಷನ್ ದೃಷ್ಟಿಯಿಂದ, ಎಲ್ಲ ದೃಷ್ಟಿಯಿಂದಲೂ ಇದು ಟ್ಯಾಕ್ಸ್ ಹಾಕುವ ಕಾಲವಲ್ಲ. ಟ್ಯಾಕ್ಸ್ ಹಾಕುವ ಕಾಲ ಬಂದಾಗ ಆ ಮೇರೆ ಸಮಾಜವಾದಿ ಪಕ್ಷಕ್ಕೆ ಸೇರಿದವರು ಹೇಳಿದ ಪ್ರಕಾರ ಟ್ಯಾಕ್ಸ್ ಹಾಕುವ ಕಾಲ ಬರುತ್ತದೆ. ಟ್ಯಾಕ್ಸ್ ಹಾಕದೇ ಯಾವ ಪ್ರಗತಿಯನ್ನೂ ಕೂಡ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹ ಟ್ಯಾಕ್ಸ್ ಕಾಲ ಬಂದಾಗ ಆ ಪ್ರಪೋಸಲ್ಸ್‌ನ್ನು ಎಷ್ಟರಮಟ್ಟಿಗೆ ಬೆಂಬಲಿಸಲಿಕ್ಕೆ ಸಾಧ್ಯವೋ, ವಿರೋಧಪಕ್ಷದವರು ಎಲ್ಲಾ ಬೆಂಬಲ ಕೊಡುತ್ತಾರೆ ಎಂದು ನಾನು ನಂಬಿದ್ದೇನೆ. ಬಾಂಗ್ಲಾ ದೇಶದ ವಿಷಯದಲ್ಲಿ ಒಂದು ಪಾಯಿಂಟ್ ಎತ್ತಿ ಕ್ರಿಟಿಸೈಸ್ ಮಾಡಿದ್ದಾರೆ. ಕೆಲವರಿಗೆ ಏನಾಗಿದೆ ಎಂದರೆ ಸರ್ಕಾರವನ್ನು ಟೀಕಿಸಲಿಕ್ಕೆ ಆಸ್ಪದ ಕೊಡಲಿಲ್ಲ ಎಂದು ಒಂದು ಸಿಟ್ಟು ಬಂದಿದೆ. ಬಾಂಗ್ಲಾ ದೇಶದ ಟ್ಯಾಕ್ಸ್ ಒಂದು ವರ್ಷ ಅಂತ ಇತ್ತು. ಎಲ್ಲರೂ ಇದರ ಬಗ್ಗೆ ಪಾಸು ಮಾಡಿದ್ದಾರೆ. ಇದರ ಬಗ್ಗೆ ಎಷ್ಟು ಹೇಳಬೇಕೋ ಅಷ್ಟನ್ನು ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಒಂದರಲ್ಲೇ ಮುಂದುವರಿಸುತ್ತೇವೆ ಅಂತಲ್ಲ ನಮ್ಮ ದೇಶದ 8 ರಾಜ್ಯಗಳಲ್ಲಿ ಬಾಂಗ್ಲಾ ದೇಶದ ಲೆವಿಯನ್ನು ಮುಂದುವರಿಸಿದ್ದಾರೆ. 3 ರಾಜ್ಯದಲ್ಲಿ ತೆಗೆದಿದ್ದಾರೆ. ಆದರೆ ಮೈಸೂರು ರಾಜ್ಯದಲ್ಲಿ ಯಾವ ಒಂದು ವರ್ಷಕ್ಕೋಸ್ಕರ ಎಕ್ಸ್‌ಟೆಂಡ್ ಮಾಡಿದ್ದೇವೆ ಎಂದು ಗೊತ್ತಿದೆ. ನಾವು ಈ ಸಂದರ್ಭದಲ್ಲಿ ಅದು ಬಿಟ್ಟು ಏನೂ ಮಾಡಲಿಕ್ಕೂ ಆಗುತ್ತಿರಲಿಲ್ಲ. ಏತಕ್ಕೆಂದರೆ 4 ನೇ ಆನ್ಯುಯಲ್ ಪ್ಲಾನ್ 1973-74 ಕ್ಕೆ 91 ಕೋಟಿ ರೂಪಾಯಿಗೆ ಪ್ಲಾನಿಂಗ್ ಕಮೀಷನ್‌ನವರನ್ನು ಕೇಳದೆ ಏರಿಸಿದ್ದೇವೆ.

ಬಾಂಗ್ಲಾ ದೇಶದ ಅಡಿಷನಲ್ ಲೆವಿಯಿಂದ ಬರುವುದು ಎರಡು ಕೋಟಿ ರೂಪಾಯಿ ಮಾತ್ರ. 80 ಕೋಟಿ ರೂಪಾಯಿ ಟ್ಯಾಕ್ಸ್ ಬರುವುದರಲ್ಲಿ ಎರಡು ಕೋಟಿ ರೂಪಾಯಿ ಮಾತ್ರ ಇದರಿಂದ ಬರುತ್ತದೆ ಅಲ್ಲದೆ ಇದನ್ನು ಒಂದು ವರ್ಷಕ್ಕೆ ಮಾತ್ರ ಮುಂದುವರಿಸುತ್ತಿದ್ದೇವೆ. ಮುಂದೆ ಬೇಕಾದರೆ ಇದನ್ನು ಮುಂದುವರಿಸಬೇಕೋ ಬೇಡವೋ ಎನ್ನುವುದರ ಬಗ್ಗೆ ಸುದೀರ್ಘವಾಗಿ ನಾವು ಯೋಚನೆ ಮಾಡಲಿಕ್ಕೆ ಆಸ್ಪದವಿರುತ್ತದೆ. ಈಗಂತೂ ಇದನ್ನು ತೆಗೆಯಲಿಕ್ಕೆ ಸಾಧ್ಯವಿಲ್ಲ.

ಮಾನ್ಯ ದೇವೇಗೌಡರು ಮಾತನಾಡುವಾಗ ಎಷ್ಟರಮಟ್ಟಿಗೆ ಮಾಡುತ್ತಾರೆ ನೋಡೋಣ ಎನ್ನುವ ರೀತಿಯಲ್ಲಿ ಹೇಳಿದರು. ಹಾಗೆ ಅನ್ನಬಾರದು ಎಂದು ಮಾತ್ರ ಹೇಳುತ್ತೇನೆ. ನಾನು ಕೊಟ್ಟಿರುವ ಬುಕ್‌ಲೆಟ್‌ನಲ್ಲಿ ಪ್ರತಿಯೊಂದು ವಿಷಯವನ್ನೂ ತಿಳಿಸಿದ್ದೇನೆ, ನಮ್ಮಲ್ಲಿ ಯಾವ ಯಾವ ಕೆಲಸವಾಗಬೇಕು ಎಂದೂ ಬರೆದಿದೆ. ಎಸ್ಟಿಮೇಟ್ಸ್ ಮತ್ತು ಫೈನಾನ್ಷಿಯಲ್ ಪ್ರಾವಿಷನ್ ಮಾಡುವಾಗ ರಿಯಲಿಸ್ಟಿಕ್ಕಾಗಿ ಮಾಡಿದ್ದೇವೆ. ಉದಾಹರಣೆಗೆ ಮೈನರ್ ಇರಿಗೇಶನ್ ತೆಗೆದುಕೊಂಡರೆ ಅದರಲ್ಲಿ ಇನ್‌ಕಂಪ್ಲೀಟ್ ವರ್ಕ್ಸ್ ಪೂರ್ತಿ ಮಾಡುವುದಕ್ಕೆ ಎಷ್ಟು ದುಡ್ಡು ಬೇಕೋ ಅದನ್ನು ಪ್ರೊವೈಡ್ ಮಾಡಿದ್ದೇವೆ. ಹೊಸ ಮೈನರ್ ಇರಿಗೇಷನ್ ಕೆಲಸಗಳಿದ್ದರೆ, ಸಾಮಾನ್ಯವಾಗಿ ಎರಡು ವರ್ಷದಲ್ಲಿ ಅದನ್ನು ಪೂರೈಸುವುದಕ್ಕೆ ಆಗುವ ಹಾಗೆ ಇದ್ದರೆ ಅದಕ್ಕೆ ಅರ್ಧ ಭಾಗದಷ್ಟು ಹಣವನ್ನು ಒದಗಿಸಿದ್ದೇವೆ. ಹಾಗೆಯೇ ಲಿಫ್ಟ್ ಇರಿಗೇಷನ್ ಒಂದು ವರ್ಷದಲ್ಲಿ ಪೂರೈಸಬಹುದು ಎಂದು ಅದಕ್ಕೆ ಪೂರ್ತಿ ಹಣವನ್ನು ಒದಗಿಸಿದ್ದೇವೆ. ಅದೇ ರೀತಿಯಾಗಿ ರಸ್ತೆ ಕೆಲಸ, ಸಾಯಿಲ್ ಕನ್ಸರ್ವೇಷನ್ ಕೆಲಸ ಇವುಗಳಿಗೆ ಸಂಪೂರ್ಣವಾಗಿ ಹಣವನ್ನು ಒದಗಿಸಿದ್ದೇವೆ. ಕಾರ್ಯಕ್ರಮ ದೊಡ್ಡದು ಹಾಕಿಕೊಂಡು ಟೋಕನ್ ಗ್ರ್ಯಾಂಟ್ ತೆಗೆದುಕೊಂಡಿದ್ದರೆ ಆ ಮಾತು ಹೇಳಬಹುದಾಗಿತ್ತು. ಕಾರ್ಯಕ್ರಮ ಎಷ್ಟು ದೊಡ್ಡದಿದೆ ಅಷ್ಟೇ ಪ್ರಮಾಣದಲ್ಲಿ ರಿಯಲಿಸ್ಟಿಕ್ಕಾಗಿ

ಫೈನಾನ್‌ಷಿಯಲ್ ಪ್ರಾವಿಷನ್ ಮಾಡಿದ್ದೇವೆ, ಫಿಸಿಕಲ್ ಅಚೀವ್‌ಮೆಂಟ್ ಕಡಿಮೆಯಾಗುವುದಿಲ್ಲ. ಸ್ವಲ್ಪ ಹೆಚ್ಚು ಕಡಿಮೆಯಾದರೂ ಕೂಡ ಸಾಕಷ್ಟು ಪ್ರಮಾಣದಲ್ಲಿ ಫಿಸಿಕಲ್ ಆಚೀವ್‌ಮೆಂಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ ಯಾರಿಗೂ ಅನುಮಾನ ಇರಬೇಕಾಗಿಲ್ಲ.

ಮೈನರ್ ಇರಿಗೇಷನ್ ಒಂದೇ ಬಾಬಿನಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ಮೊದಲಿನಿಂದ ಇಲ್ಲಿಯವರೆಗೂ ನೋಡಿದರೆ ಮೈನರ್ ಇರಿಗೇಷನ್ ಪೊಟೆನ್‌ಷಿಯಲ್ 53 ಸಾವಿರ ಎಕರೆ ಎಂದು ಲೆಕ್ಕಕ್ಕೆ ಹಾಕಿದ್ದಾರೆ. ಆದರೆ ನಿಜವಾಗಿ ನೀರಾವರಿಯಾಗಿರತಕ್ಕ ಪ್ರದೇಶ 14 ಸಾವಿರ ಎಕರೆ ಮಾತ್ರ; ಬದರೆ ಜಿಲ್ಲೆಯಲ್ಲಿ ಇರಿಗೇಷನ್ ಪೊಟೆನ್‌ಷಿಯಲ್ ಮಾರ್ಚಿ 1972 ರಲ್ಲಿ 16 ಸಾವಿರ ಎಕರೆ ಇತ್ತು, ಆಕ್ಚುಯಲ್ ಇರಿಗೇಷನ್ 2400 ಎಕರೆ ಮಾತ್ರ. ನಾವು ಹೊಸದಾಗಿ ಹಾಕಿಕೊಂಡಿರುವ ಕಾರ್ಯಕ್ರಮದಂತೆ 44 ಸಾವಿರ ಎಕರೆ ನೀರಾವರಿ ಮಾಡುವ ಉದ್ದೇಶವಿದೆ. ಅದೇ ರೀತಿ ಬಿಜಾಪುರದಲ್ಲಿ 48 ಸಾವಿರ ಎಕರೆ ನೀರಾವರಿ ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಸಾಯಿಲ್ ಕನ್‌ಸರ್ವೇಷನ್ ನೋಡಿದರೆ, ಇನ್ನೂ ಬಹಳ ಆಶ್ಚರ್ಯವಾಗುತ್ತದೆ. ಮೊದಲಿನಿಂದ ಇಲ್ಲಿಯವರೆಗೂ ಎಂದರೆ ಮಾರ್ಚಿ 1972ರ ವರೆಗೂ ನಡೆದಿರುವಷ್ಟು ಕೆಲಸ ಒಂದೇ ವರ್ಷದಲ್ಲಿ ನಡೆದಿದೆ. ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ 1973–74 ರಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಬಿದರ್‌ನಲ್ಲಿ ಮಾರ್ಚಿ 197-ರ ವರೆಗೂ 31 ಸಾವಿರ ಎಕರೆಯಲ್ಲಿ ಮಾತ್ರ ಸಾಯಿಲ್ ಕನ್‌ಸರ್ವೇಷನ್ ಆಗಿತ್ತು; ನಾವು 1972–73 ಒಂದು ವರ್ಷದಲ್ಲೇ 41 ಸಾವಿರ ಎಕರೆಯಲ್ಲಿ ಸಾಯಿಲ್ ಕನ್‌ಸರ್ವೇಷನ್ ಮಾಡಿದ್ದೇವೆ. 1973-74ಕ್ಕೆ 3 ಲಕ್ಷ 24 ಸಾವಿರ ಎಕರೆ ಸಾಯಿಲ್ ಕನ್‌ಸರ್ವೇಷನ್ ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದೇ ರೀತಿಯಾಗಿ ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳಲ್ಲಿಯೂ ಹಾಕಿಕೊಂಡಿದ್ದೇವೆ. ಗುಲ್ಬರ್ಗದಲ್ಲಿ 1972ರ ವರೆಗೂ 1 ಲಕ್ಷ 26 ಸಾವಿರ ಎಕರೆ ಮಾತ್ರ ಸಾಯಿಲ್ ಕನ್‌ಸರ್ವೇಷನ್ ನಡೆದಿದ್ದರೆ, 1972-73 ಒಂದು ವರ್ಷದಲ್ಲೇ 1 ಲಕ್ಷ 36 ಸಾವಿರ ಎಕರೆಯಲ್ಲಿ ಮಾಡಿದ್ದೇವೆ. ಮುಂದಿನ ವರ್ಷದಲ್ಲಿ ಅದಕ್ಕಿಂತ ಬಹಳ ದೊಡ್ಡ ಪ್ರಮಾಣದಲ್ಲಿ ಎಂದರೆ 8 ಲಕ್ಷ ಎಕರೆಯಲ್ಲಿ ಸಾಯಿಲ್ ಕನ್‌ಸರ್ವೇಷನ್ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆದಕಾರಣ ಇದು ಸರ್ಕಾರದ ದೃಷ್ಟಿಯಿಂದ ಮಾತ್ರ ಸಮಾಧಾನದ ಮಾತಲ್ಲ. ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ಸಾಯಿಲ್ ಕನ್‌ಸರ್ವೇಷನ್ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಯಾವರೀತಿಯ ಪ್ರಾಮುಖ್ಯತೆ ಸಿಕ್ಕಬೇಕಾಗಿತ್ತೋ ಅದು ಸಿಕ್ಕಿದ್ದರೆ ಈಗಿನ ಬರಗಾಲ ಪರಿಸ್ಥಿತಿಯಲ್ಲಿ ಇಷ್ಟು ಕಷ್ಟಕ್ಕೆ ಜನ ಗುರಿಯಾಗುತ್ತಿರಲಿಲ್ಲ. ಅಷ್ಟು ಮಾತ್ರ ನಿಜ.

ಡಿಫಿಸಿಟ್ ಬಗ್ಗೆ ಶ್ರೀ ದೇವೇಗೌಡರು ಹೇಳಿದ್ದಾರೆ. ಫೈನಾನ್‌ಷಿಯಲ್ ಡಿಸಿಪ್ಲಿನ್ ಎಲ್ಲಿ ಉಳಿಯಿತು, ಇಷ್ಟೊಂದು ಡಿಫಿಸಿಟ್ ಅಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನನ್ನ ಭಾಷಣದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ಡಿಫಿಸಿಟ್ ಆಗಲಕ್ಕೆ ಕಾರಣವೇನು, ಯಾವ ಯಾವ ಬಾಬಿನಲ್ಲಿ ರೆವೆನ್ಯೂ ಕಡಿಮೆಯಾಗಿದೆ, ಯಾವ ಯಾವ ಬಾಬಿನಲ್ಲಿ ನಾವು ಬಜೆಟ್ಟಿಗಿಂತ ಹೆಚ್ಚು ಹಣ ಖರ್ಚು ಮಾಡಬೇಕಾಯಿತು ಎಂಬುದನ್ನು ನನ್ನ ಭಾಷಣದ 15ನೇ ಪ್ಯಾರಾ, (1) ಮತ್ತು (2) ರಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಲ್ಯಾಂಡ್ ರೆವೆನ್ಯೂನಲ್ಲಿ ಒಂದೂವರೆ ಕೋಟಿ ರೂಪಾಯಿ ಕಡಿಮೆಯಾಯಿತು. ಅದೇ ರೀತಿಯಾಗಿ ಸೇಲ್ಸ್‌ಟ್ಯಾಕ್ಸ್‌ನಲ್ಲಿ ನಾವು 60 ಕೋಟಿ ರೂಪಾಯಿ ನಿರೀಕ್ಷೆ ಮಾಡಿದ್ದೆವು. 57 ಕೋಟಿ ರೂಪಾಯಿ ಬಂದಿದೆ. ಕಳೆದ ವರ್ಷ 51 ಕೋಟಿ ರೂಪಾಯಿ ಮಾತ್ರ ಬಂದಿತ್ತು. ಆದ್ದರಿಂದ 1971-72 ಕ್ಕಿಂತ 6 ಕೋಟಿ ರೂಪಾಯಿ ಜಾಸ್ತಿ ಬಂದಿದೆ. ನಾವು ನಿರೀಕ್ಷೆಗಿಂತ ಮೂರು ಕೋಟಿ ರೂಪಾಯಿ ಕಡಿಮೆ ಬಂದಿದೆ. ಅದಕ್ಕೂ ಕಾರಣವಿದೆ. ಡಿಫಿಸಿಟ್ ಅಗಲಕ್ಕೂ ಕಾರಣ ಯಾವ ಒಂದು ಫೈನಾನ್‌ಷಿಯಲ್ ಇನ್‌ಡಿಸಿಪ್ಲಿನ್‌ನಿಂದ ಅಥವಾ ಹತೋಟಿ ಇಲ್ಲದೆ ಖರ್ಚು ಮಾಡಿರುವುದರಿಂದ ಆಗಿರತಕ್ಕದ್ದಲ್ಲ. ನಮ್ಮ ಡೆವಲಪ್‌ಮೆಂಟ್ ಟೆಂಪೊ ಮೇಂಟೇನ್ ಮಾಡಿಕೊಂಡು ಹೋಗಬೇಕು. ಬಜೆಟ್ ಮಾಡಿದ ನಂತರ ಅತ್ಯಗತ್ಯ ಕೆಲಸ ಮಾಡಬೇಕಾಗಿ ಬಂದರೆ, ಡೆವಲಪ್‌ಮೆಂಟ್ ಕೆಲಸ ಬಂದರೆ ಅದಕ್ಕೆ ಹಿಂಜರಿಯಬಾರದು. ಡೆವಲಪ್‌ಮೆಂಟ್ ಟೆಂಪೊ ಸಾಕಷ್ಟು ಪ್ರಮಾಣದಲ್ಲಿ ಕಾಪಾಡುವ ದೃಷ್ಟಿಯಿಂದ ಮಾಡಿದ್ದೇವೆ. ಡಿಫಿಸಿಟ್‌ಗೆ ಹೆದರಿಕೊಂಡು ಬಜೆಟ್ ಮಾಡಿದರೆ ಅದು ಆರ್ಟಿಫಿಷಿಯಲ್ ಬಜೆಟ್ ಆಗುತ್ತದೆ ಮತ್ತು ನಮ್ಮ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ. ಆದಕಾರಣ ಫೈನಾನ್ಸ್ ಕಮಿಷನ್ ನಮ್ಮ ಬೆಳವಣಿಗೆಯ ದೃಷ್ಟಿಯಿಂದ ಯಾವ ರೀತಿಯಲ್ಲಿ ನಾವು ಬಜೆಟ್ ತಯಾರು ಮಾಡಬೇಕೋ ಆ ರೀತಿಯಲ್ಲಿ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಆಕ್ಚುಯಲ್ಸ್ ಪ್ರಕಾರ ಡಿಫಿಸಿಟ್ ಎಷ್ಟಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—27 ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಆಗಲಾರದು,

ಶ್ರೀ ಎಚ್. ಡಿ. ದೇವೇಗೌಡ.—ಕಂಟ್ರಾಕ್ಟರುಗಳಿಗೆ ಕೊಡಬೇಕಾದ ಬಿಲ್ಲುಗಳನ್ನು ನಿಲ್ಲಿಸಲಾಗಿದೆಯಲ್ಲವೇ ?

ಶ್ರೀ ಎಂ. ವೈ. ಘೋರ್ಪಡೆ.—ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಒಂದು ತಿಂಗಳು ಕೊಡಬೇಡಿ ಎಂದು ಹೇಳಿದ್ದೇವೆ. ಒಂದು ಕಡೆ ಫೈನಾನ್ಷಿಯಲ್ ಡಿಸಿಪ್ಲಿನ್ ಇರಬೇಕು ಎಂದು ಹೇಳುತ್ತೀರಿ, ಇನ್ನೊಂದು ಕಡೆ ಬಜೆಟ್ಟಿಗಿಂತ ಜಾಸ್ತಿ ಆದರೂ ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಬಿಲ್ಲುಗಳು ಕೊಡುವುದನ್ನು ನಿಲ್ಲಿಸಬೇಡಿ ಎಂದು ಹೇಳುತ್ತೀರಿ. ಹೀಗಾದರೆ ನಾವು ಏನು ಮಾಡುವುದಕ್ಕಾಗುತ್ತದೆ ?

ಪುಟ 42ರಲ್ಲಿ Budget at a glance ಎನ್ನುವ ಸ್ಟೇಟ್‌ಮೆಂಟು ನೋಡಿದರೆ ನಿಮಗೆ ಇದರ ಎಲ್ಲ ವಿವರಗಳೂ ಗೊತ್ತಾಗುತ್ತದೆ. ಇದ ರಲ್ಲಿ ಎಕ್ಸ್‌ಪೆಂಡಿಚರಿನಲ್ಲಿ ಸೋಷಿಯಲ್ ಅಂಡ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರಿನ ಐಟಂಗಾಗಿ 165 ಕೋಟಿ ರೂಪಾಯಿ ಇದರ ಜೊತೆಗೆ ಡ್ರಾಟ್ ರಿಲೀಫ್‌ಗಾಗಿ ಮೂರು ಕೋಟಿ ರೂಪಾಯಿ ಮತ್ತು ಇತರ ಖರ್ಚುಗಳಿಗಾಗಿ ಎಂದು 62 ಕೋಟಿ ರೂಪಾಯಿ ಖರ್ಚು ತೋರಿಸಲಾಗಿದೆ. ಎಂದರೆ ಒಟ್ಟು ಇದು 230 ಕೋಟಿ ರೂಪಾಯಿಯವರೆಗೆ ಬರುತ್ತದೆ, ಇದು 1971-72ರಲ್ಲಿ ಖರ್ಚಾಗಿರುವುದು. 1972-73ರಲ್ಲಿ ಇದೇ ಸೋಷಿಯಲ್ ಅಂಡ್ ಡೆವಲಪ್‌ಮೆಂಟ್ ಖರ್ಚಿಗಾಗಿ 194 ಕೋಟಿ ರೂಪಾಯಿ ಡ್ರಾಟ್‌ಗಾಗಿ 25 ಕೋಟಿ ರೂಪಾಯಿ ಇತರ ಖರ್ಚು 74 ಕೋಟಿ ರೂಪಾಯಿ ಹೀಗೆ ಮೂರು ಬಾಬುಗಳಿಗೆ ಒಟ್ಟು 291 ಕೋಟಿ ರೂಪಾಯಿ ಖರ್ಚು ಬರತ್ತದೆ. 1973–74ರಲ್ಲಿ ಇವು ಮೂರು ಬಾಬುಗಳಿಗೂ 344 ಕೋಟಿ ರೂಪಾಯಿಯಷ್ಟು ಹೋಗುತ್ತದೆ. ಇದನ್ನು ನೋಡಿದರೆ 1971-72 ರಲ್ಲಿ 50–60 ಕೋಟಿ ರೂಪಾಯಿ ಡೆವಲಪ್‌ಮೆಂಟಿಗಾಗಿ ಜಾಸ್ತಿ ಖರ್ಚಾಗಿದೆ, 972–73ರಲ್ಲಿ 50 ಕೋಟಿ ರೂಪಾಯಿ ಜಾಸ್ತಿ ಖರ್ಚಾಗಿದೆ ಮತ್ತು ಇದು 1973–74 ರಲ್ಲಿ ಇದಕ್ಕಿಂತ ಹೆಚ್ಚು ಖರ್ಚಾಗಿರುವುದು ನಮಗೆ ಕಂಡುಬರುತ್ತದೆ, ಈ ದೃಷ್ಟಿಯಿಂದ tempo of development ವರ್ಷ ವರ್ಷಕ್ಕೂ ಸುಮಾರು 50 ಕೋಟಿ ರೂಪಾಯಿಯಷ್ಟು ಜಾಸ್ತಿಯಾಗುತ್ತಲೇ ಬರುತ್ತಿದೆ, ಕಡಿಮೆಯಾಗುತ್ತಿಲ್ಲ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿವೆ. ಮತ್ತು ಇದಕ್ಕೆ ಯಾವ ಧಕ್ಕೆಯೂ ಆಗಿಲ್ಲ. ಹೀಗೆ ಇದನ್ನು ಇನ್ನೂ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಮತ್ತು ನಮಗಿರುವ ಡೆಫಿಸಿಟ್‌ನ್ನು ಆದಷ್ಟು ಸರಿ ಮಾಡಿಕೊಳ್ಳುತ್ತೇವೆ, ಇದರ ಬಗ್ಗೆ ವಿವರವಾಗಿ ನನ್ನ ಬಡ್ಜೆಟ್ಟು ಭಾಷಣದಲ್ಲಿ ವಿವರವಾಗಿ ಹೇಳಿದ್ದೇನೆ. ಇದರಲ್ಲಿ repayment ಬಗ್ಗೆ ಹಾಗೂ Postpone ಮಾಡುವುದರ ಬಗ್ಗೆ ನಾವು ಕೇಂದ್ರದವರೊಡನೆ ಚರ್ಚೆ ಮಾಡಿದ್ದೇನೆ, ಅವರೂ ಕೂಡ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನು ಡೆವಲಪ್ ಮಾಡಬೇಕೆಂದು ಹೇಳುತ್ತಿದ್ದಾರೆ,ಆದುದರಿಂದ ನಮ್ಮರಾಜ್ಯದ ಯಾವ ಕೈಗಾರಿಕೆಗಳಿಗೂ ಪೆಟ್ಟು ಬೀಳುವಂತಹ ಕಾರ್ಯಕ್ರಮಗಳನ್ನು ನಾವು ಮಾಡುತ್ತಿಲ್ಲ. ಮತ್ತು ಕ್ಷಾಮ ಪರಿಹಾರ ಕಾರ್ಯಕ್ರಮಗಳನ್ನು ಮಾಡುವಾಗ ಇದರ ಖರ್ಚನ್ನು ಪೂರ್ತಿಯಾಗಿ ಕೇಂದ್ರದವರು ಕೊಡಬೇಕೆಂದು ಅವರಲ್ಲಿ ಒತ್ತಾಯ ಮಾಡಿದ್ದೇವೆ. ಹೀಗೆ ವಾದ ಮಾಡಿರುವುದೂ ಶ್ರೀ ದೇವೇಗೌಡರಿಗೂ ತಿಳಿದಿದ್ದರೂ ಅವರು ಇಲ್ಲಿ ಹೇಳುವಾಗ ಪ್ರಾಮಾಣಿಕತೆಯಿಂದ ಯಾವುದನ್ನೂ ಮಾಡಿಲ್ಲ ಎಂದು ಹೇಳಿರುವುದನ್ನು ನೋಡಿ ವಿಷಾದವಾಗಿದೆ. ನಾವು ಪ್ರಾಮಾಣಿಕತೆಯಿಂದ ಮಾಡುತ್ತಿದ್ದರೂ ಇದರ ಬಗ್ಗೆ ಟೀಕೆ ಮಾಡುವಾಗ ಈ ರೀತಿ ಮಾಡುವುದು ಸರಿಯಲ್ಲ ಮತ್ತು ಈ ಸಭೆಯ ಎಲ್ಲ ಮಾನ್ಯ ಸದಸ್ಯರೂ ಇದನ್ನು ಒಪ್ಪುತ್ತಾರೆಂದು ನಮ್ಮ ಭಾವನೆ.

ಇನ್ನು ಪ್ಲಾನ್ ಔಟ್ ಲೇ ಇದರ ಬಗ್ಗೆ ಕೆಲವರು ಹೇಳುತ್ತಾ ಇದರ ಟೆಂಪೋ ಕಡಿಮೆಯಾಗಿದೆ ಎಂದರು. ನಮ್ಮ ರಾಜ್ಯದ ಪ್ಲಾನಿಗೆ ಎಷ್ಟು ಹಣ ಕೊಡಬೇಕೋ ಅಷ್ಟನ್ನೂ ಕೊಡುತ್ತಿಲ್ಲ ಎಂದು ಹೇಳಿದರು, ಇದರ ಬಗ್ಗೆ ನಾನು ನನ್ನ ಭಾಷಣದಲ್ಲೇ ಎಲ್ಲ ವಿವರಗಳನ್ನೂ ಹೇಳಿರುವುದರಿಂದ ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಲು ಇಲ್ಲಿ ಹೋಗಬಾರದು ಎಂದು ಇದ್ದೆ. ಆದರೆ ಇಲ್ಲಿ ಟೀಕೆ ಬಂದ ಮೇಲೆ ಉತ್ತರ ಕೊಡಬೇಕಾಗಿದೆ. ಮಾನ್ಯ ಸದಸ್ಯರು ಇದರ ಬಗ್ಗೆ ಹೇಳುವ ವಾದ ಸರಿಯಲ್ಲ. ನಾಲ್ಕನೇ ಯೋಜನೆಗೆ ಕೇಂದ್ರ ಸರಕಾರದಿಂದ 173 ಕೋಟಿ ರೂಪಾಯಿಯವರೆಗೆ ಪ್ಲಾನ್ ಅಸಿಸ್ಟೆನ್ಸ್ ಬಂದಿದೆ, ಇದರ ಜೊತೆಗೆ 60 ಕೋಟಿ ರೂಪಾಯಿಯಷ್ಟು ಸ್ಪೆಷಲ್ ಅಸಿಸ್ಟೆನ್ಸ್ ಬಂದಿದೆ. ಮತ್ತು ಕಾಳಿ ನದಿ ಯೋಜನೆಗಾಗಿ 38 ಕೋಟಿ ರೂಪಾಯಿಯವರೆಗೆ ಬಂದಿದೆ, ಇವು ಮೂರು ನಾನ್ ಪ್ಲಾನ್ ಎಕ್ಸ್‌ಪೆಂಡಿಚರಿಗಾಗಿ ಬಂದಿರುವುದು. ಒಟ್ಟು 270 ಕೋಟಿ ರೂಪಾಯಿಯವರೆಗೆ ಬರುತ್ತದೆ, ಇದರ ಸರಾಸರಿಯನ್ನು ವರ್ಕ್‌ಔಟ್ ಮಾಡಿದರೆ ಪರ್ ಹೆಡ್ 92 ರೂಪಾಯಿಗಳಷ್ಟು ಆಗುತ್ತದೆ.

This is more than the National Average.

ಇದರಿಂದ ಪ್ಲಾನ್ ಅಸಿಸ್ಟೆನ್ಸ್ ಸರಿಯಾಗಿ ಬರಲಿಲ್ಲ ಎಂದು ಯಾರೂ ಅಸಮಾಧಾನ ಪಡಬೇಕಾಗಿಲ್ಲ. ಕಾಳೀ ನದಿ ಯೋಜನೆ ನಾನ್ ಪ್ಲಾನ್ ಎಕ್ಸ್‌ಪೆಂಡಿಚರು, ಇದಕ್ಕೆ ಒಂದು ರೀತಿಯಾದ ಹಿಸ್ಟಾರಿಕಲ್ ಬ್ಯಾಂಕ್‌ಗ್ರೌಂಡು ಇದೆ. ಇದರ ಹಿಂದೆ ಐತಿಹಾಸಿಕವಾದ ಅನೇಕ ವಿಚಾರಗಳೂ ಇವೆ. ಇದಲ್ಲದೆ ಮೈಸೂರು ರಾಜ್ಯದಲ್ಲಿರುವ ನೌಕರರುಗಳಿಗೆ ಡಿ. ಎ. ಕೊಟ್ಟಿರುವುದರಿಂದ ಇದೂ ಕೂಡ ನಾನ್ ಪ್ಲಾನ್ ಎಕ್ಸ್‌ಪೆಂಡಿಚರು. ಹೀಗೆ ನನ್ನ ಭಾಷಣದಲ್ಲಿ ನಾನ್ ಪ್ಲಾನ್ ಗ್ಯಾಪ್‌ಗಳ ಬಗ್ಗೆ ಸಾಕಷ್ಟು ಯೋಚನೆ ಮಾಡಿದ್ದೇವೆ ಎನ್ನುವುದರ ಬಗೆಗೆ ಕೂಡ ಹೇಳಿದ್ದೇನೆ. ಸರಕಾರವೂ ಸಾಕಷ್ಟು ಪ್ರಯತ್ನ ಮಾಡಿ ಕೆಲಸ ಮಾಡುತ್ತಿದೆ ಎಂದು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ನಾನ್ ಪ್ಲಾನ್ ಎಕ್ಸ್‌ಪೆಂಡಿಚರಿನಿಂದಾಗಿ ನಮ್ಮ ರಾಜ್ಯದ ಯೋಜನೆಗಳಿಗೆ ಯಾವ ವಿಧವಾದ ಧಕ್ಕೆಯೂ ಬಾರದಂತೆ ನೋಡಿಕೊಳ್ಳುತ್ತಿದ್ದೇವೆ. ಇದರ ಬಗ್ಗೆ ನಾವು ಸಮಾಧಾನಪಡಬೇಕಾಗಿದೆ. ಇನ್ನು ಆರನೇ ಫೈನಾನ್ಸ್ ಕಮಿಷನ್ ಬಗ್ಗೆ ಪದೇ ಪದೇ ಇಲ್ಲಿ ಇದಕ್ಕೆ ಒಂದು ರೀತಿಯಾದ ಕಾನ್‌ಸ್ಟಿಟ್ಯೂಷನ್ ಅಮೆಂಡುಮೆಂಟು ಮಾಡಬೇಕು ಎಂದು ಇಲ್ಲಿ ಹೇಳುತ್ತಿದ್ದಾರೆ. ಇನ್‌ಕಂಟ್ಯಾಕ್ಸ್ ಜಾಸ್ತಿ ಮಾಡಬೇಕು ಶೇಕಡಾ 75ರಷ್ಟು ಕೇಂದ್ರ ಕೊಡುತ್ತಿರುವುದನ್ನು ಶೇಕಡಾ 90ರ ವರೆಗೆ ಹೆಚ್ಚು ಮಾಡಬೇಕು ಎಂದು, ಎಕ್ಸೈಜು ಬಾಬಿನಲ್ಲಿ ಶೇಕಡಾ 20 ಕೊಡುವುದನ್ನು 40ರವರೆಗೆ ಕೊಡಲು ಹೇಳಬೇಕು ಎಂದು ಹೇಳುವಾಗ ಇದಕ್ಕೆ ಕಾನ್‌ಸ್ಟಿಟ್ಯೂಷನ್ ಅಮೆಂಡುಮೆಂಟು ಮಾಡುವ ಅವಶ್ಯಕತೆ ಇಲ್ಲ. ಕಾರ್ಪೊರೇಷನ್ ಟ್ಯಾಕ್ಸ್ ಒಂದಕ್ಕೆ ಮಾತ್ರ ಕಾನ್‌ಸ್ಟಿಟ್ಯೂಷನ್ ಅಮೆಂಡುಮೆಂಡು ಮಾಡಬೇಕೇ ವಿನಾ ಇತರ ಯಾವ ಬಾಬುಗಳಿಗೂ ಮಾಡಲು ಬರುವುದಿಲ್ಲ. ಡಿವಿಜನಲ್ ಪೂಲ್‌ನಲ್ಲಿ ಇದನ್ನು ಸೇರಿಸಬೇಕು ಎಂದು ಹೇಳಬಹುದು, ಇವಕ್ಕಾಗಿ ಕಾನ್‌ಸ್ಟಿಟ್ಯೂ ಅಮೆಂಡಮೆಂಟುಗಳನ್ನು ಮಾಡಬೇಕೆಂದು ಹೇಳುವುದೊಳ್ಳೆಯದಲ್ಲ. ಜಾಸ್ತಿ ಕೊಡಬೇಕು ಎಂದು ಹೇಳುವ ಒಂದು ಪ್ರಶ್ನೆ ಇದೆ, ಇವನ್ನು ಯಾವ ರೀತಿ ಡಿವಿಜನಲ್ ಪೂಲಿನೊಳಗೆ ಹಂಚಬೇಕು ಎನ್ನುವುದು ಒಂದು ದೊಡ್ಡ ಪ್ರಶ್ನೆ. ಇದರಲ್ಲಿ ಎರಡು ಮುಖ್ಯ ವಿಚಾರಗಳಿವೆ. ಒಂದು ಡಿವಿಜನಲ್ ಪೂಲಿನಲ್ಲಿ ಹಂಚಿಕೆ ಮಾಡುವುದನ್ನು ಜಾಸ್ತಿ ಮಾಡಬೇಕು, ಇದನ್ನು ಮಾಡುವಾಗ ಎಲ್ಲ ರಾಜ್ಯಗಳ ಫೈನಾನ್ಸ್‌ಗಳ ಪರಿಮಿತಿ ಯಾವ ರೀತಿ ಹೋಗುತ್ತದೆ ಅದನ್ನು ತಿಳಿದುಕೊಳ್ಳಬೇಕಾಗುತ್ತದೆ, ಎಲ್ಲ ರಾಜ್ಯಗಳಲ್ಲೂ ಸರ್‌ಪ್ಲಸ್ ಬಡ್ಜೆಟು ಬರಬೇಕಾದರೆ ಫೈನಾನ್ಸ್ ಕಮಿಷನ್‌ನವರು ಸರಿಯಾದ ಅವಾರ್ಡನ್ನು ಕೊಟ್ಟರೆ ಅದರಿಂದ ಎಲ್ಲ ರಾಜ್ಯಕ್ಕೂ ಬೇಕಾದಷ್ಟು ದುಡ್ಡು ಬರುತ್ತದೆ ಮತ್ತು ಅದರಿಂದ ಹಣವೂ ಉಳಿಯುತ್ತದೆ. ನಮ್ಮ ರಾಜ್ಯದ ಬಗ್ಗೆ ಫೈನಾನ್ಸ್ ಕಮಿಷನ್ ಮುಂದೆ ಹೇಳುವಾಗ ರೀಪೇಮೆಂಟು ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಕೂಡ ಹೇಳಲಾಗಿದೆ, ಇದನ್ನು ಸರಿಪಡಿಸಬೇಕು. ಪ್ರತಿಯೊಂದು ರಾಜ್ಯದಲ್ಲೂ ಓವರು ಡ್ರಾಫ್ಟ್‌ಗಳಿಲ್ಲದೆ ಸರ್‌ಪ್ಲಸ್ ಬರುವಂತೆ ಮಾಡಬೇಕಾದರೆ ಫೈನಾನ್ಸ್ ಕಮಿಷನ್‌ನವರು ಹೆಚ್ಚು ಸಹಾಯ ಮಾಡಬೇಕಾಗುತ್ತದೆ, ಆದರಂತೆ ಜಾಸ್ತಿ ಹಣ ಬಂದಾಗ ಯಾವ ರೀತಿ ಹಂಚಬೇಕು ಎನ್ನುವುದನ್ನು ಶಾಸ್ತ್ರೀಯವಾಗಿ ಹಾಗೂ ಸರಿಸಮವಾಗಿ ಹಂಚಿಕೆ ಮಾಡಿದರೆ ಆಗ ಸರ್‌ಪ್ಲಸ್ ಬರಲು ಅವಕಾಶವಾಗುತ್ತದೆ. ಆ ರೀತಿ ಹೆಚ್ಚು ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಇದಿಲ್ಲದಿದ್ದರೆ ಇನ್ ಈಕ್ವಾಲಿಟಿ ಜಾಸ್ತಿಯಾಗುತ್ತದೆ, ಇದಕ್ಕೋಸ್ಕರ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ ಮಾಡಬೇಕು ಎಂದು ಹೇಳುವುದು ಸರಿಯಲ್ಲ. ಇದರ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಫೈನಾನ್ಸ್ ಕಮಿಷನ್ ಮುಂದೆ ಅವರೂ ಇದರ ಕಡೆಗೆ ಗಮನಕೊಡಬೇಕೆಂದು ಹೇಳಿದ್ದೇವೆ ಎಂದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ಡಿಫಿಸಿಟ್ ಇಲ್ಲದಂತೆ ಜಾಸ್ತಿ ಮಾಡುವುದರ ಬಗ್ಗೆ ಯೋಜನೆ ಮಾಡುವಾಗ ಇವೆಲ್ಲವನ್ನೂ ಪೂರ್ಣವಾಗಿ ಯೋಚನೆ ಮಾಡಿ ನಮ್ಮ ರಾಜ್ಯಕ್ಕೆ 275 ಕೋಟಿ ರೂಪಾಯಿಯಷ್ಟು ಉಪಯೋಗ ಮಾಡಬೇಕೆಂದು ಹೇಳಿದ್ದಾರೆ, ಇದರಲ್ಲಿ ನಮ್ಮ ಕೇಸು ಏನಿದೆ ಅದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು, ಇದು ಅವಶ್ಯ, ಇನ್ನು ಇದರ ಬಗ್ಗೆ ಹೆಚ್ಚು ಹೇಳಬೇಕಾದ ಅವಶ್ಯಕತೆಯಿಲ್ಲ ಎಂದು ಹೇಳುತ್ತೇನೆ.

ಇನ್ನು ಬೆಲೆ ಏರಿಕೆ ಬಗ್ಗೆ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ದಿನೇ ದಿನೇ ಬೆಲೆಗಳು ಹೆಚ್ಚುತ್ತಿದ್ದರೆ ಅದು ಒಳ್ಳೆಯದೆಂದು ಯಾರೂ ಅನ್ನುವುದಕ್ಕೆ ಸಾಧ್ಯವಿಲ್ಲ. ಇದು ಒಂದು ಘೋರವಾದ ಪರಿಸ್ಥಿತಿ ಇದೆ. ಆಹಾರಧಾನ್ಯಗಳ ಬೆಲೆಗಳು ಹೆಚ್ಚುತ್ತಿರುವುದಕ್ಕೆ ಕಾರಣ, ಇಂಡಿಯಾ-ಪಾಕಿಸ್ತಾನದ ಯುದ್ಧವಾಗಿದ್ದು, ಬಾಂಗ್ಲಾದೇಶದಿಂದ ನಿರಾಶ್ರಿತರು ನಮ್ಮ ದೇಶಕ್ಕೆ ಬಂದಿದ್ದು, ಇಂದು ದೇಶದಲ್ಲಿರುವ ಮತ್ತು ರಾಜ್ಯದಲ್ಲಿರುವ ಬರಗಾಲ ಪ್ರದೇಶಗಳ ಜನರಿಗೆ ಆಹಾರ ಹಂಚಬೇಕಾಗಿರುವುದು, ಬೆಳೆ ಸರಿಯಾಗಿ ಆಗದಿರುವುದು, ಇದೆಲ್ಲಾ ಕಾರಣ. ರಾಜ್ಯಸರ್ಕಾರ ಮಾಡಿರ್ತಕ್ಕಂಥ ಪರಿಸ್ಥಿತಿಯಿಂದ ಬೆಲೆಗಳು ಹೆಚ್ಚಿಲ್ಲ. ಇಡೀ ದೇಶದಲ್ಲಿ ಸಮಗ್ರವಾದ ಆರ್ಥಿಕ ಪರಿಸ್ಥಿತಿ

(ಶ್ರೀ ಎಂ. ವೈ. ಘೋರ್ಪಡೆ)

increased the rate takiog into account that if a man also has agricultural income they have increased the incometax rate. So the Central Government will get a little more from incometax as a result of partial integration. As it is, the bulk of it is given to the States. ಆದ್ದರಿಂದ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಬಜೆಟ್ಟಿನಲ್ಲಿ ವಾದ ಮಾಡುವುದಕ್ಕೆ ಸಾಕಷ್ಟು ಅಸ್ಪದ ಇರಬೇಕು ಮುಚ್ಚು ಮರೆ ಇಲ್ಲದೆ ಎಲ್ಲವನ್ನು ಹೇಳಿದ್ದೇವೆ. ಮುಚ್ಚು ಮರೆ ಮಾಡತಕ್ಕ ಯಾವ ಕೆಲಸವೂ ನಡೆದಿಲ್ಲ. ಸ್ಪಷ್ಟವಾಗಿ ಸರಳವಾಗಿ ಬಜೆಟ್ಟನ್ನು ಮಂಡಿಸಿದ್ದೇನೆ. ಯಾವ ಕನ್‌ಸೀಲ್ ಮಾಡುವ ಪ್ರಶ್ನೆ ಇಲ್ಲ ಆ ಕಾಲ ಕೂಡ ಇದು ಅಲ್ಲ. ನಾವು ಕೇಂದ್ರ ಸರ್ಕಾರದವರನ್ನು ಹೆಚ್ಚು ಕೇಳುವ ಕಾಲದಲ್ಲಿದ್ದೇವೆ.

ಸರ್ಕಾರಿ ನೌಕರರಿಗೆ ಡಿ. ಎ. ಅನ್ನು ನವಂಬರ್ ತಿಂಗಳಿನಲ್ಲೇ ಕೊಡಬಹುದಾಗಿತ್ತು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವಾದದಲ್ಲಿ ಅರ್ಥ ಇಲ್ಲ. ಫೈನಾನ್ಸ್ ಕಮಿಷನ್ನಿನವರು ಹೇಳುವ ಪ್ರಕಾರ 1-1-197-ರ ನಂತರ 'ಏನು ಡಿ. ಎ. ಕೊಟ್ಟಿದ್ದೀರಿ ಅದನ್ನು ಗಮನದಲ್ಲಿ ಇಟ್ಟುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ನಾವು ನವಂಬರ್ ತಿಂಗಳಿನಿಂದ ಕೊಟ್ಟಿದ್ದರೂ ಅಷ್ಟೇ ಆಗುತ್ತಿತ್ತು. ಆದ್ದರಿಂದ ನವಂಬರ್ ತಿಂಗಳಿನಿಂದ ಡಿ.ಎ. ಕೊಟ್ಟಿದ್ದರೂ ಅನುಕೂಲವಾಗುತ್ತಿರಲಿಲ್ಲ. ಫೈನಾನ್ಸ್ ಕಮಿಷನ್ನಿನವರ ಹೇಳಿಕೆ ಪ್ರಕಾರ 1-1-1972ರಲ್ಲಿ ಡಿ. ಎ. ಕೊಟ್ಟಿದ್ದರೂ ಅದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಅವರು ಹೇಳಿದ್ದಾರೆ. ಅವರು ಆ ರೀತಿ ಡೆಡ್ ಲೈನ್ ಹಾಕಿದ್ದು ಸರಿಯಲ್ಲ.

ಸ್ಪೆಷಲ್ ಎಂಪ್ಲಾಯ್‌ಮೆಂಟ್ ಬಗ್ಗೆ ಒಂದು ಮಾತು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರದವರು ಸ್ಪೆಷಲ್ ಎಂಪ್ಲಾಯ್‌ಮೆಂಟ್‌ಗೋಸ್ಕರ 10 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅದರಲ್ಲಿ ನಮಗೆ 6-7 ಕೋಟಿ ರೂಪಾಯಿಗಳು ಬರಬಹುದು. ಆದಕಾರಣ ನಾವು ಆ ಬಗ್ಗೆ 7ಕೋಟಿ 60ಲಕ್ಷ ಬಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಹೋದ ವರ್ಷ 1 ಕೋಟಿ 43ಲಕ್ಷ ರೂಪಾಯಿಗಳ ಸ್ಪೆಷಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್ ಹಾಕಿಕೊಂಡಿದ್ದೆವು ಇದನ್ನು ಮುಂದುವರಿಸಿ ಈ ವರ್ಷಕ್ಕೆ 3 ಕೋಟಿ 37 ಲಕ್ಷ ರೂಪಾಯಿಗಳ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ 6-7ಕೋಟಿ ರೂಪಾಯಿಗಳನ್ನು ಸೇರಿಸಿ 10-98 ಕೋಟಿ ರೂಪಾಯಿಗಳ ಒಂದು ಸ್ಪೆಷಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ರೆಗ್ಯುಲರ್ ಎಂಪ್ಲಾಯ್‌ಮೆಂಟ್ 24 ಸಾವಿರ ಜನಗಳಿಗೆ, ಕ್ಯಾಷ್ ಎಂಪ್ಲಾಯ್‌ಮೆಂಟ್ 16 ಸಾವಿರ ಜನಗಳ ಹಾಗೂ 40 ಸಾವಿರ ಜನಗಳಿಗೆ ಕೊಡುವುದು ಈ ರೀತಿ ಒಂದು ಪ್ರೋಗ್ರಾಮ್ ಇದೆ.

Programme designed to cover among others are the following.—Assistance to techical person to set up their own indnstrial units; assistance in the from of seed, money on hire prchase system setting up agro-based service industries, survey of forests, minerals ground water survey, etc., ಈ ರೀತಿ ಎಂಪ್ಲಾಯ್‌ಮೆಂಟ್ ಕೊಡುವ ದೃಷ್ಟಿಯಿಂದ ಮಾಡಿದ್ದಾರೆ. ಈ ರೀತಿಯಾದಂತಹ 10ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮ ನಮ್ಮ ಮುಂದೆ ಇದೆ;

ಸೋಷಿಯಲ್ ವೆಲ್‌ಫೇರಿಗೆ ಜಾಸ್ತಿ ಹಣವನ್ನು ಕೊಡಬೇಕೆಂದು ಹೇಳಿದ್ದಾರೆ. ಹೌಸಿಂಗ್ ಕಾರ್ಯಕ್ರಮ ಮತ್ತು ಸೋಷಿಯಲ್ ಕಾರ್ಯಕ್ರಮಕ್ಕೋಸ್ಕರ 5 ಕೋಟಿ ರೂಪಾಯಿಗಳ ಒಂದು ದೊಡ್ಡ ಕಾರ್ಯಕ್ರಮ ಇದೆ. ಅದು ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಕಾರ್ಯಕ್ರಮ ಮುಂದುವರಿಯುತ್ತದೆ. ಅವರಿಗೂ ಇದರಲ್ಲಿ ಹೆಚ್ಚಿನ ಆಸಕ್ತಿ ಇದೆ. ಅವರು ಈ ಬಗ್ಗೆ ಎಷ್ಟೋ ವಿಚಾರಗಳನ್ನು ಹೇಳುತ್ತಿದ್ದಾರೆ. ನಮ್ಮಲ್ಲಿರತಕ್ಕ ಲೋಕಲ್ ಮೆಟೀರಿಯಲ್ಸ್ ಉಪಯೋಗ ಮಾಡಿಕೊಂಡು ಮನೆಗಳನ್ನು ಕಟ್ಟುವಂಥದ್ದು ಆಗಬೇಕು, ಆ ಕೆಲಸ ಬಹಳ ವೇಗವಾಗಿ ಹೋಗಬೇಕು ಎಂದು ಅವರ ನೇತೃತ್ವದಲ್ಲಿ ಈ ಕೆಲಸಗಳು ನಡೆಯುತ್ತಿವೆ. ಮೈಸೂರು ರಾಜ್ಯದಲ್ಲಿ ಈ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿ ನಡೆಯುತ್ತಿವೆ. ಆದ್ದರಿಂದ ನಾನು ಇದರ ಬಗ್ಗೆ ಹೆಚ್ಚು ಹೇಳಬೇಕಾದ್ದು ಇಲ್ಲ. ಶ್ರೀಮಾನ್ ಕೃಷ್ಣಪ್ಪನವರು ಕೆಲಸವನ್ನು ಕೊಡಿ ಮನೆ ಬೇಡಿ ಎಂದು ಹೇಳಿ

ದ್ದಾರೆ. ಕೆಲಸವನ್ನೂ ಕೊಡಬೇಕು. ಮನೆಗಳನ್ನ ಕಟ್ಟಬೇಕು ದೇಶದ ಪರಿಸ್ಥಿತಿಯನ್ನು ಸುಧಾರಣೆಮಾಡಬೇಕು. ಈಗ 20 ವರ್ಷಗಳಿಂದ ಕೆಲವು ಜನಗಳು ಮನೆ ಇಲ್ಲದೇ ಇದ್ದಾರೆ. ಇವೊತ್ತಿನ ದಿವಸ ಈ ಒಂದುಹೊಸ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವದ ಶಕ್ತಿ ಏನು ಅದು ನಮ್ಮದೇಶದಲ್ಲಿ ಕೆಲಸ ಮಾಡುತ್ತಿದೆ. ಈ ಒಂದು ಪರಿಸ್ಥಿತಿಯಲ್ಲಿ ನಮಗೆ ಎಷ್ಟು ಸಾಧ್ಯವೊ ಅಷ್ಟು ಮಾಡಬೇಕಾಗುತ್ತದೆ.

ಜನರು ದಡ್ಡರೇನೂ ಅಲ್ಲ. ಪ್ರತಿಯೊಬ್ಬರೂ ಸರ್ಕಾರ ದೊಡ್ಡ ಮನೆ ಕಟ್ಟಿಸಿಕೊಡುತ್ತದೆ ಎಂದು ತಿಳಿದುಕೊಳ್ಳುವುದಿಲ್ಲ. ಇದರ ಬಗ್ಗೆ ಹಳೆಯ ಕಾರ್ಯಕ್ರಮ ರಿಯಾಲಸ್ಟಿಕ್ ಆಗಿರಲಲ್ಲ. ಆದನ್ನು ರೀಪೇಮೆಂಟ್ ಕೆಪೇಸಿಟಿ ನೋಡದೆ ಮಾಡಿದ್ದಾರೆ. ಹಾಗೆ ನಾವು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಡಿಟೈಲ್ಸ್ ವಿಚಾರ ನನ್ನ ಬಜೆಟ್ ಭಾಷಣದಲ್ಲಿ ಎಷ್ಟು ಬೇಕೋ ಅಷ್ಟು ಹೇಳಿದ್ದೇನೆ. ಇದರ ಬಗ್ಗೆ ನಾವು ಒಂದು ರಿಯಲಸ್ಟಿಕ್ ಕಾರ್ಯಕ್ರಮವನ್ನು ಹಾಕಿಕೊಂಡು ಮುಂದುವರಿಯಬೇಕಾಗಿದೆ.

ಇನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಗ್ರಾಂಟ್ ಕಡಿಮೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಬಹುಶಃ ಅವರು ಪ್ಲಾನ್ ಗ್ರಾಂಟ್ 50ಸಾವಿರ ರೂಪಾಯಿ ಇದ್ದುದನ್ನು ನೋಡಿಕೊಂಡು ಆ ಮಾತು ಹೇಳಿದ್ದಾರೆಂದು ಕಾಣುತ್ತದೆ. ಆ ಮೇಲೆ ನಾನ್ ಪ್ಲಾನ್ ಬಜೆಟ್ ಅಂಡರ್ 28 ಎಜುಕೇಶನ್‌ನಲ್ಲಿ 4 ಲಕ್ಷ 50ಸಾವಿರ ರೂಪಾಯಿ ಒದಗಿಸಿದೆ. ಅದರಲ್ಲಿ ಒಂದು ಲಕ್ಷ ರೂಪಾಯಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಇದೆ. ಅದಲ್ಲದೆ 15ಲಕ್ಷ ರೂಪಾಯಿಗಳ ಕನ್ನಡ ಡವಲಪ್‌ಮೆಂಟ್ ಕಾರ್ಯಕ್ರಮ ಬೇರೆ ಇದೆ. ಅದು ಸಹ ಕನ್ನಡ ಸಾಹಿತ್ಯ ಪರಿಷತ್ತಿಗೆ ಸಂಬಂಧಪಟ್ಟದ್ದು ಎಂದು ಹೇಳಿದರೆ ತಪ್ಪಾಗಲಾರದು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ 10 ಲಕ್ಷ ರೂಪಾಯಿ ಮಾತ್ರ ಖರ್ಚಾಗಿದೆ. ಈಗ 5ನೇ ಪಂಚವಾರ್ಷಿಕ ಯೋಜನೆಯಲ್ಲಿ 50ಲಕ್ಷ ರೂಪಾಯಿನ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಆದ್ದರಿಂದ ಕನ್ನಡ ಬೆಳವಣಿಗೋಸ್ಕರ ಹಣದ ಅಭಾವ ಏನೂ ಇಲ್ಲ. ಆದರೆ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡು ಮುಂದುವರಿಯಬೇಕಾಗುತ್ತದೆ. ಆದ್ದರಿಂದ ಕನ್ನಡವನ್ನು ಬೆಳೆಸುವುದಕ್ಕೋಸ್ಕರ ಏನು ಕಾರ್ಯಕ್ರಮವನ್ನು ಹಾಕುವುದಕ್ಕೂ ಸಾಧ್ಯ ಮತ್ತು ಅದಕ್ಕೆ ಸರ್ಕಾರ ಸಂಪೂರ್ಣವಾದ ಸಹಕಾರವನ್ನು ಕೊಡುತ್ತಾರೆ. ಈ ರೀತಿ ಇರುವಾಗ ಮಾನ್ಯ ಸದಸ್ಯರು 50ಸಾವಿರ ರೂಪಾಯಿ ಕೊಟ್ಟಿದ್ದಾರೆಂದು ಹೇಳುವುದು ಸರಿಯಲ್ಲ. ಇದನ್ನು ನೋಡಿಕೊಂಡು ನಮ್ಮ ಉರ್ದು ಭಾಷೆಯ ಸದಸ್ಯರು ಸಹ ನಮಗೆ ಏನೂ ಕೊಟ್ಟಿಲ್ಲವೆಂದು ಹೇಳಿದರು. ನೀವು ಸಹ ಅದರ ಬಗ್ಗೆ ಪ್ರೋಗ್ರಾಂ ಹಾಕಿಕೊಳ್ಳಿ ಕೊಡೋಣ ಎಂದು ಹೇಳಿದ್ದೇನೆ. ಏಕೆಂದರೆ ನಮಗೆ ಭಾಷೆಗಳು ಬೇಕು. ಮೈನಾರಿಟಿ ಭಾಷೆಗಳು ಸಹ ಬೆಳೆಯಬೇಕು.

ಶ್ರೀ ಟಿ. ಎಂ. ಮಂಜುನಾಥ.—ಉರ್ದು ಪಾಠ ಶಾಲೆಗಳಿಗೆ ಕಟ್ಟಡಗಳು ಸಹ ಇಲ್ಲ. ಎಜ್ಯುಕೇಷನ್ ಡಿಪಾರ್ಟ್‌ಮೆಂಟಿಂದ ಮೂರು ಸಾವಿರ ರೂಪಾಯಿ ಮಾತ್ರ ಕೊಡುತ್ತಿದ್ದಾರೆ. ಅದು ಎಲ್ಲಿಗೂ ಸಾಲುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಉರ್ದು ಬಗ್ಗೆ ಸ್ಕೀಮುಗಳನ್ನು ಮಾಡಿ ನನ್ನ ಹತ್ತಿರ ತೆಗೆದುಕೊಂಡು ಬನ್ನಿ, ನಾನು ಸ್ಯಾಂಕ್ಷನ್ ಮಾಡುತ್ತೇನೆ.

ಆ ಮೇಲೆ ಸಿಂಗಲ್ ಪಾಯಿಂಟ್ ಬಗ್ಗೆ ಬಹಳ ಟೀಕೆ. ಮಾನ್ಯ ಶಾಮಣ್ಣನವರು ಮಾಡಿದ್ದಾರೆ. ಅವರು ಸಹ ಸೇರ್ಸ್ ಟ್ಯಾಕ್ಸ್ ಆಡ್‌ವೈಸರಿ ಕಮಿಟಿಯಲ್ಲಿ ಇದ್ದಾರೆ. ಮಲ್ಟಿ ಪಾಯಿಂಟಿಂದ ಜನರಿಗೆ ತೊಂದರೆಯಾಗುತ್ತದೆ. ಇವರ ಪ್ರಕಾರ 15 ಐಟಮುಗಳಿಗೆ ಸಿಂಗರ್ ಪಾಯಿಂಟ್ ಹಾಕಿದರೆ ತಾವು ಸ್ವಾಗತ ಮಾಡುತ್ತೀರೆಂದು ತಿಳಿದುಕೊಂಡಿದ್ದೇನೆ. ಆ ಮೇಲೆ ಶಾಮಣ್ಣನವರು ಎಜ್ಯುಕೇಶನಿಗೆ ಸಾಕಷ್ಟು ಪ್ರೊವಿಜನ್ ಮಾಡಿದ್ದಾರೆಂದು ಹೇಳಿದರು. ಅವರಿಂದ ಒಂದು ಒಳ್ಳೆಯ ಮಾತು ಬಂದದ್ದಕ್ಕೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಿಗಡಿ ಮೀನಿಗೆ ಟ್ಯಾಕ್ಸ್ ಹಾಕಿದ್ದೀರಲ್ಲ.

ಶ್ರೀ ಎಂ. ವೈ ಘೋರ್ಪಡೆ.—ಇದು ಕ್ಯಾನಿಂಗ್ ಇಂಡಸ್ಟ್ರಿಯವರ ಮೇಲೆ ಬೀಳುತ್ತದೆ. ಲಾಸ್ಟ್ ಪರ್ಚೇಸ್ ಮೇಲೆ ಈ ಟ್ಯಾಕ್ಸ್ ಬೀಳುತ್ತದೆ. ಇವರು ಮೂರು ಪರ್‌ಸೆಂಟ್ ಕೊಡುತ್ತಿದ್ದರು. ಧರ್ಮವೀರರ ಕಾಲಕ್ಕೆ ಅದನ್ನು ಒಂದೂವರೆ ಪರ್‌ಸೆಂಟಿಗೆ ಇಳಿಸಿದರು. ಈಗ 3 ಮಲ್ಟಿ ಪಾಯಿಂಟ್ ಇದ್ದುದನ್ನು 4 ಸಿಂಗರ್ ಪಾಯಿಂಟ್ ಮಾಡಿದ್ದೇವೆ. ಹೀಗೆ ಮಾಡಿದರೆ ಟ್ಯಾಕ್ಸ್ ಜಾಸ್ತಿ ಮಾಡಿದ ಹಾಗೆ ಆಗುವುದಿಲ್ಲ. ಒಟ್ಟಿನಲ್ಲಿ ಕ್ಯಾನಿಂಗ್ ಇಂಡಸ್ಟ್ರಿಯವರು ಇದನ್ನು ಕೊಡಬೇಕಾಗುತ್ತದೆ.

(ಶ್ರೀ ಎಂ. ವೈ. ಘೋರ್ಪಡೆ)

ಏನಿದೆ ಅದರ ಒಂದು ಕಾರಣದಿಂದ ಈ ಪರಿಸ್ಥಿತಿ ಉಂಟಾಗುತ್ತಿದೆ. ಇದನ್ನು ರಾಜ್ಯಸರ್ಕಾರವೇ ನೇರವಾಗಿ ಮಾಡಿರತಕ್ಕದ್ದಲ್ಲ. ಈ ಒಂದು ಅಪಾಯಕಾರಿ ಬೆಳವಣಿಗೆ ಏನಿವೆ, ಅದನ್ನು ಕಡಿಮೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬಹುದು ಎಂಬ ಬಗ್ಗೆ ಬೇಕಾದರೆ ರಾಜ್ಯಸರ್ಕಾರದ ಮಟ್ಟದಲ್ಲಿ ಚರ್ಚೆ ಮಾಡಬಹುದು. ಎಸೆನ್ಸಿಯಲ್ ಕಮಾಡಿಟೀಸ್ ಮೇಲೆ ಸರ್ಕಾರದ ಹತೋಟಿ ಏನಿದೆ ಅದನ್ನು ಹೆಚ್ಚಿಸಬೇಕು ಎನ್ನುವ ವಿಚಾರವನ್ನು ನಾನು ನನ್ನ ಬಡ್ಜೆಟ್ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಅತ್ಯವಶ್ಯ ವಸ್ತುಗಳನ್ನು ಈಗ ಸರ್ಕಾರದವರು ಏನು ಹಂಚಿಕೆ ಮಾಡುತ್ತಿದ್ದಾರೆ ಅದರ ಒಂದು ಪ್ರಮಾಣವನ್ನು ಕೇಂದ್ರ ಸರ್ಕಾರದವರು ಹೆಚ್ಚು ಮಾಡಿದರೆ ಬಡವರಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಂಚುವುದಕ್ಕೆ ಸಾಧ್ಯವಾಗುತ್ತದೆ. ಮೈಸೂರು ರಾಜ್ಯದಲ್ಲಿ ಈಗ ಕೆಲವು ಭಾಗಗಳಲ್ಲಿ ಬರಗಾಲ ಇದೆ. ಅದು ಇಲ್ಲದಿದ್ದರೂ ಸಹ ವರ್ಷದ 3-4 ತಿಂಗಳಲ್ಲಿ ಸಾಮಾನ್ಯ ಜನರು ಆಹಾರವಸ್ತುಗಳನ್ನು ಕೊಳ್ಳುವುದು ಕಷ್ಟವಾಗುತ್ತದೆ. ಬಿಲೋ ಪಾವರ್ಟಿ ಜನರಿಗೆ ಕೊಳ್ಳುವುದು ಕಷ್ಟವಾಗುತ್ತದೆ. ಕೇವಲ ನಾವು ವರ್ತಕರನ್ನು ಅಪೀಲ್ ಮಾಡಿಕೊಂಡರೆ ಬೆಲೆಗಳು ಕಡಿಮೆಯಾಗುವುದಿಲ್ಲ. ಫ್ರೀ ಕಾಂಪಿಟಿಷನಲ್ಲಿ ವರ್ತಕರನ್ನು ಬೈಯುವುದರಲ್ಲಿ ಅರ್ಥವಿರುವುದಿಲ್ಲ. ಸಾಕಷ್ಟು ಪ್ರಮಾಣದಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರವಸ್ತುಗಳನ್ನು ಹಂಚುವುದಕ್ಕೆ ಸರ್ಕಾರಕ್ಕೆ ಮೊದಲು ಶಕ್ತಿ ಇರಬೇಕಾಗುತ್ತದೆ. ಇದನ್ನು ಹೋಲ್‌ಸೇಲ್ ಟ್ರೇಡ್ ಎಂದು ಬೇಕಾದರೆ ಕರೆಯಿರಿ. ಒಟ್ಟಿನಲ್ಲಿ ಹೇಳಬೇಕಾದರೆ State control over essential commodities and enlarging the distribution system of essential commodities ಇದನ್ನು ಜಾಸ್ತಿ ಮಾಡಬೇಕಾಗುತ್ತದೆ. ಇದರ ಬಗ್ಗೆ ವಾದ ಮಾಡಬೇಕಾದ ಅಗತ್ಯವಿಲ್ಲ. ಈ ವಿಚಾರದಲ್ಲಿ ರಾಜಕೀಯ ವಾದಕ್ಕೆ ಆಸ್ಪದವಿಲ್ಲವೆಂದು ನನ್ನ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. Public distribution of essential commodities must be increased. ಇದು ಆದಾಗ ಬೆಲೆಗಳನ್ನು ಸ್ಥಿಮಿತದಲ್ಲಿಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಯಾವ ರೀತಿಯಿಂದ ಮಾಡಬೇಕು, ಇದರ ವಿವರ ಏನಿವೆ ಎಂಬುದನ್ನೆಲ್ಲಾ ಸರ್ಕಾರ ಲೆಕ್ಕ ಹಾಕುತ್ತಿದೆ.

4·00 P. M.

ಇನ್ನು ಕೇಂದ್ರಸರ್ಕಾರದವರು ನೇಮಕ ಮಾಡಿರುವ ಪೇಕಮಿಷನ್ ವಿಚಾರವನ್ನು ಶ್ರೀ ದೇವೇಗೌಡರು ಹೇಳಿದರು. ಪೇಕಮಿಷನ್ ಅವರು ತಮ್ಮ ರಿಪೋರ್ಟ್ ಕೊಟ್ಟಮೇಲೆ ಏನಾಗುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಈಗ ಡಿ.ಎ. ಕೊಟ್ಟಿದ್ದೇವೆ. ನಮಗೆ ಆರ್ಥಿಕ ಶಕ್ತಿ ಇತ್ತು; ಆದ್ದರಿಂದ ಕೊಟ್ಟಿದ್ದೇವೆ. ನಮ್ಮ ಶಕ್ತಿ ಮೀರಿ ಏನೂ ಕೊಟ್ಟಿಲ್ಲ. It is a question whether we could afford. Fortunately we could afford D·A. parity, ಪೇಕಮಿಷನ್ ಆದಮೇಲೆ ಏನಾಗುತ್ತದೆ ಎಂಬುದು ಗೊತ್ತಿಲ್ಲ. ಎಲ್ಲಾ ರಾಜ್ಯಸರ್ಕಾರಗಳೂ ಕೇಂದ್ರಕ್ಕೆ ಹೇಳುತ್ತಿರುವುದೇನೆಂದರೆ, ನೀವೇನಾದರು ಸಂಬಳ ಜಾಸ್ತಿ ಮಾಡಿದರೆ ಅದರಿಂದ ರಾಜ್ಯ ಮಟ್ಟದಲ್ಲಿ ಏನಾಗುತ್ತದೆಂಬುದನ್ನು ಗಮನದಲ್ಲಿಟ್ಟುಕೊಂಡು ಮಾಡಿ ಎಂಬುದಾಗಿ. ಮುಂದೆ ಬರುವ 5 ವರ್ಷಗಳಲ್ಲಿ ಏನೇನಾಗುತ್ತದೆಂದು ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಪೇಕಮಿಷನ್ ರಿಪೋರ್ಟನ್ನು ಜಾರಿಗೆ ಕೊಡುವಾಗ ನ್ಯಾಷನಲ್ ಪಾಲಿಸಿಯನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ಕೇಂದ್ರಕ್ಕೆ ತಿಳಿಸಿದ್ದೇವೆ. ಈ ವಿಚಾರದಲ್ಲಿ ರಾಜ್ಯಗಳಿಗೆ ಏನಾದರೂ ಹಣಕಾಸಿನ ತೊಂದರೆ ಬಂದರೆ ಅದನ್ನು ಒದಗಿಸುವುದಕ್ಕೂ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೇವೆ. ಆರನೇ ಆರ್ಥಿಕ ಆಯೋಗದ ಮುಂದೆ ಸಹ ಇದನ್ನೇ ಹೇಳಿದ್ದೇವೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಡಿ.ಎ. ವಿಚಾರದಲ್ಲಿಯಾದರೂ ಸಹ ಕೇಂದ್ರದ ಡಿ.ಎ. ಅನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಕೇಂದ್ರಸರ್ಕಾರದ ನೌಕರರಿಗೆ ಸಿಗುತ್ತಿರುವ ಸಂಬಳವನ್ನೂ ಸಹ ನಮ್ಮ ನೌಕರರಿಗೆ ಕೊಡಬೇಕೆಂದರೆ ಸಾಧ್ಯವಾಗುವುದಿಲ್ಲ. ಆದಷ್ಟು ಮಟ್ಟಿಗೆ ಡಿ.ಎ. ನಲ್ಲಿರುವ ವ್ಯತ್ಯಾಸವನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರ ಬಗ್ಗೆ ರಾಜಕೀಯ ಮಾಡಬಾರದೆಂದು ನನ್ನ ಅಭಿಪ್ರಾಯ. ಬಂಗಾರುಪೇಟೆಯಲ್ಲಿ ನಡೆದ ಎನ್.ಜಿ.ಒ. ಕಾನ್‌ಫರೆನ್ಸ್‌ನಲ್ಲಿ ರಾಜ್ಯದ ನೌಕರರಿಗೆ ಸ್ಪಷ್ಟವಾಗಿ ಹೇಳಿದ್ದೇನೆ: ನೀವು ನಮ್ಮನ್ನು ಹೊಗಳಿದರೂ ಮಾಡುತ್ತೇವೆ, ಟೀಕೆ ಮಾಡಿದರೂ ಮಾಡುತ್ತೇವೆ; ಆದರೆ ಮಾಡುವಾಗ ನಮ್ಮ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಎಷ್ಟು ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು ಮಾಡುತ್ತೇವೆಂದು

ಸ್ಪಷ್ಟವಾಗಿ ಹೇಳಿದ್ದೇನೆ. This is a matter of what is financially possible and not one of politics. ಈ ವಿಚಾರದಲ್ಲಿ ಯಾರಾದರೂ ಹೆದರಿಸಲಿಕ್ಕೆ ಬಂದರು ಎಂದುಕೊಂಡು ಬೇಜವಾಬ್ದಾರಿಯಿಂದ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಶಕ್ತಿ ಮೀರಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ ಇಂದು ನಮ್ಮ ರಾಜ್ಯದಲ್ಲಿ ಮೂರೂವರೆ ಲಕ್ಷ ಮಂದಿ ಸರ್ಕಾರೀ ನೌಕರರಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಇವರನ್ನು ಆಧುನಿಕ ಸೈನ್ಯ ಎಂದು ಕರೆಯಬಹುದು. ಇವರಿಗೆ ಸಂಬಳಸಾರಿಗೆಗಳನ್ನು ಸರಿಯಾಗಿ ಕೊಡಬೇಕಾಗುತ್ತದೆ. ಅದರಂತೆ ದಕ್ಷತೆಯಿಂದ ಕೆಲಸ ಮಾಡಬೇಕಾದುದು ಇವರ ಜವಾಬ್ದಾರಿ ಇದೆ.

ಕೇಂದ್ರಸರ್ಕಾರದ ಕೃಪಾಕಟಾಕ್ಷದಲ್ಲಿ ಈ ಸರ್ಕಾರ ಅವಲಂಬಿಸಿದೆ ಎಂದು ಕೆಲವರು ಹೇಳಿದರು. ಟ್ಯಾಕ್ಸ್, ಇನ್‌ಕಮ್-ಟ್ಯಾಕ್ಸ್, ಎಕ್ಸೈಜ್, ಕೇಂದ್ರದ ಸ್ವಾಧೀನದಲ್ಲಿರುವುದರಿಂದ ಅವರ ಕಡೆಯಿಂದ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ರಾಜ್ಯಗಳಿಗೆ ಸಹಾಯ ಬರಬೇಕು. ಆ ರೀತಿ ಅವರಿಂದ ಬಂದಾಕ್ಷಣ ನಾವು ಅವರ ಕೃಪಾಕಟಾಕ್ಷದಲ್ಲಿದ್ದೇವೆಂದು ಹೇಳುವುದು ಸರಿಯಲ್ಲ. ನಾವು ಅವರಿಗೆ ಡಿಪೆಂಡಿಂಗ್ ಆಗಿದ್ದೇವೆಂದು ಹೇಳುವುದು ಸರಿಯಲ್ಲ. ನ್ಯಾಯವಾಗಿ ಅವರಿಂದ ನಮಗೆ ಬರುವುದು ಬರುತ್ತಿದೆ. ಅವರಿಂದ ನಾವು ಜೀವನ ಮಾಡುತ್ತಿದ್ದೇವೆಂದು ಹೇಳುವುದು ಸರಿಯಲ್ಲ. ಈಗ ಕೇಂದ್ರದಹಣ ವಿತರಣೆ ರಾಜ್ಯಗಳಿಗೆ ಯಾವ ರೀತಿ ಆಗುತ್ತಿದೆ ಅದು scientific and systematic ಆಗಿರಬೇಕೆಂದು ಆರ್ಥಿಕ ಆಯೋಗದ ಮುಂದೆ ಸಹ ಹೇಳಿದ್ದೇವೆ.

ಇನ್ನು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಮತ್ತು ನಾನ್ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬಗ್ಗೆ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ರಾಜ್ಯಸರ್ಕಾರದ ಹಕ್ಕು ಬಾಧ್ಯತೆಗಳನ್ನು ಕಸಿದುಕೊಳ್ಳುವ ಒಂದು ಕ್ರಮವಾಗಿದೆ ಎಂದು ಹೇಳಿದರು. ಇದರ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗುತ್ತದೆ. Partial integration of incomes ಬಗ್ಗೆ ಕೆ. ಎನ್. ರಾಜ್ ಕಮಿಟಿಯವರು ಶಿಫಾರಸ್ ಮಾಡುವುದಕ್ಕೆ ಮೊದಲು ಲಾ ಕಮಿಷನ್ ಅಭಿಪ್ರಾಯ ಸಹ ತೆಗೆದುಕೊಂಡಿದ್ದಾರೆ.

The Law Commission's opinion on the subject which has been cited in the Raj Committee Report states :

> "That inclusion of the agricultural income within the scope of total income for the limited purpose of computing rate of tax is only a method of computation of tax and it does not amount to levying of tax on the income. The power of taxation on the non-agricultural income has to be increased for purposs of determining the rate of tax if it is found to be necessary for the efficient exercise of that power."

Therefore it does not amount to direct taxation on agricultural income but only changing the rate of agricultural income after taking into account the non-agricultural income. ಈಗ ನಗರಾಸ್ತಿಯ ಮೇಲೆ ಟ್ಯಾಕ್ಸ್ ಜಾಸ್ತಿ ಇದೆ, ನಾನ್-ಅಗ್ರಿಕಲ್ಚರಲ್ ಇನ್‌ಕಮ್ ಮೇಲೆ ಜಾಸ್ತಿ ಟ್ಯಾಕ್ಸ್ ಇದೆ, ಆದರೆ ಅಗ್ರಿಕಲ್ಚರಲ್ ಇನ್‌ಕಂ ಮೇಲೆ ಜಾಸ್ತಿ ಟ್ಯಾಕ್ಸ್ ಇಲ್ಲ ಎಂದು ಹೇಳುವವರೂ ಸಹ ಇದ್ದಾರೆ. ಈಗ ಲಾ ಕಮಿಷನ್ ಅವರು ಏನು ಅಭಿಪ್ರಾಯ ಕೊಟ್ಟಿದ್ದಾರೆ ಅದರ ಪ್ರಕಾರ ವಿಲೆಮಾಡಿದರೆ ಮತ್ತು ಇನ್‌ಕಮ್ ಟ್ಯಾಕ್ಸ್ ಜಾಸ್ತಿ ವಸೂಲಿ ಮಾಡಿದರೆ ಅದು ರಾಜ್ಯಸರ್ಕಾರಕ್ಕೆ ಬರುತ್ತದೆ.

Raj Committee's recommendation is that this incomea should go to the States. ಆದಕಾರಣ ಅವರೇ ತೆಗೆದುಕೊಂಡು ಹೋಗುತ್ತಾರೆ ಎನ್ನುವಂಥಾದ್ದು ಇಲ್ಲ. ಇನ್‌ಕಂಟ್ಯಾಕ್ಸ್ 75 ಪರ್ಸೆಂಟ್ ಸ್ಟೇಟಿಗೆ ಬರುತ್ತದೆ. ಅದು 90 ಪರ್ಸೆಂಟ್ ಸೇರಬೇಕು ಎಂದು ನಾವು ಹೇಳಿದ್ದೇವೆ. ಆದ್ದರಿಂದ ಇನ್ ಕಂಟ್ಯಾಕ್ಸಿನಿಂದ ರಾಜ್ಯಕ್ಕೆ ಹೆಚ್ಚು ಭಾಗ ಬರುತ್ತದೆ. The point is, this does not compete with your agricultural incometax. Agricultural Income Tax remains ; it is a State tax. It is not as though it affects your agricultural incometax. The Centre has not taken away the power of the State to tax agricultural income What they have done is, in taxing non-agricultural income they have

(ಶ್ರೀ ಎಂ. ವೈ. ಘೋರ್ಪಡೆ)

ಆ ಮೇಲೆ ನಮ್ಮ ನಾಗಣ್ಣನವರು ಒಂದು ಪ್ರಶ್ನೆ ಎತ್ತಿದರು. ಸೇಲ್ ಟ್ಯಾಕ್ ಅನ್‌ಟ್ವಿಸ್ಟೆಡ್ ಸಿಲ್ಕ್ ತೆಗೆದುಹಾಕಿದ್ದಾರೆಂದು ಹೇಳಿದರು. ತಮಗೆ ಗೊತ್ತಿರುವಂತೆ ರಾ ಸಿಲ್ಕ್ ಮೇಲೆ ನಮ್ಮ ರಾಜ್ಯದಲ್ಲಿ ಟ್ಯಾಕ್ಸ್ ಇಲ್ಲ. ಟ್ವಿಸ್ಟೆಡ್ ಸಿಲ್ಕ್ ಮೇಲೆ ಟ್ಯಾಕ್ ಇದ್ದದನ್ನು ತೆಗೆದಿದ್ದೇವೆ. ರಾ ಸಿಲ್ಕ್ ಬೇರೆ ರಾಜ್ಯಕ್ಕೆ ಹೋಗುತ್ತದೆ. ಆ ಮೇಲೆ ಕಂಪೋಸಿಟ್ ಯುನಿಟ್ಸ್‌ನವರು ಟ್ವಿಸ್ಟಿಂಗ್ ಯುನಿಟ್ ಇಟ್ಟುಕೊಂಡು ಮಾಡಿದರೂ ಆ ಯಾರ್ನ್ ಮೇಲೆ ಟ್ಯಾಕ್ಸ್ ಬೀಳುವುದಿಲ್ಲ. ಆದರೆ ಯಾರು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಕಂಪೋಸಿಟ್ ಯುನಿಟ್ ಇಟ್ಟುಕೊಂಡು ಮಾಡುತ್ತಾರೆ ಅಂಥ ಸ್ಮಾಲ್ ಟ್ವಿಸ್ಟರ್ಸ್ ಮಾತ್ರ ಟ್ಯಾಕ್ಸ್ ಕೊಡಬೇಕಾಗುತ್ತದೆ. ಇದರಿಂದ ಸುಮಾರು ಎರಡು ಲಕ್ಷ 20 ಸಾವಿರ ರೂಪಾಯಿ ಮಾತ್ರ ಬರುತ್ತದೆ. ಇದು ದೊಡ್ಡ ಆದಾಯವೇನೂ ಅಲ್ಲ ಇದರಲ್ಲಿ ಒಂದು ಲಕ್ಷ 60 ಸಾವಿರ ರೂಪಾಯಿ ಬರೇ ಗೌರ್ನ್‌ಮೆಂಟ್ ಫಿಲೇಚರಿನಿಂದ ಬರುತ್ತದೆ. ಹೀಗೆ ಸುಮ್ಮನೆ ಸಿಲ್ಕ್ ಕೈಗಾರಿಕೆಯ ಮೇಲೆ ಟ್ಯಾಕ್ಸ್ ಇರಕೂಡದು ಎಂದು ವಾದ ಇರುವಾಗ ನಾವು ಅದನ್ನು ಏಕೆ ಇಡಬೇಕೆಂದು ಯೋಚನೆ ಮಾಡಿ ಅದರ ಬಗ್ಗೆ ಸಿರಿಕಲ್ಚರ್ ಇಲಾಖೆಯಿಂದ ಪ್ರೊಪೋಸಲ್ ಬಂದಾಗ ಸಿಲ್ಕ್ ಮೇಲೆ ಟ್ಯಾಕ್ಸ್ ಇಡಬಾರದು ಎಂದು ತೆಗೆದು ಹಾಕಿದ್ದೇವೆ. ಇದರಿಂದ ಯಾರೊಬ್ಬರಿಗೂ ಫಾಯಿದೆ ಮಾಡಿಕೊಡುವ ದೃಷ್ಟಿ ಇಲ್ಲ. ಸಿಲ್ಕ್ ಇಂಡಸ್ಟ್ರಿಯಿಂದ ಫಾಯಿದೆ ಇದ್ದರೆ ನಮಗೆ ಬಹಳ ಒಳ್ಳೆಯದು. ಟ್ಯಾಕ್ಸ್ ವಿಷಯ ಬಹಳ ಮುಖ್ಯವಲ್ಲ. ಇದು ಸುಮ್ಮನೆ ರೊಟೇಷನ್ ಆಗುತ್ತಾ ಇದೆ. ಕಾಂಪೋಸಿಟ್ ಯೂನಿಟ್‌ಗಳಿಗೂ ಮತ್ತು ಸ್ಮಾಲ್ ಟ್ವಿಸ್ಟಿಂಗ್ ಯೂನಿಟ್ಟುಗಳಿಗೆ ಮೊದಲಿನಿಂದಲೂ ಬಹಳ ವ್ಯತ್ಯಾಸವಿತ್ತು. ಹಿಂದೆ ಕಾಂಪೋಸಿಟ್ ಯೂನಿಟ್‌ಗಳವರು ರಾ ಸಿಲ್ಕನ್ನು ಬೇರೆ ರಾಜ್ಯಗಳಿಗೆ ಟ್ರೇಡ್‌ಗೋಸ್ಕರ ಕಳುಹಿಸುತ್ತಿದ್ದರು. ಆದರೆ ಅದನ್ನು ಕನ್‌ಸೈನ್‌ಮೆಂಟ್ ಬೇಸಿಸ್ ಮೇಲೆ ಕಳುಹಿಸಿಕೊಡುತ್ತಾ ಇರಲಿಲ್ಲ. ಕಾಂಪೋಸಿಟ್ ಯೂನಿಟ್‌ಗಳವರು ಸಣ್ಣ ಪ್ರಮಾಣದಲ್ಲಿಯೂ ಇದನ್ನು ತಯಾರು ಮಾಡುತ್ತಿದ್ದರು. ಆದ್ದರಿಂದ ರಾಜ್ಯಕ್ಕೆ ಹಣಕಾಸಿನ ದೃಷ್ಟಿಯಿಂದ ಅಪಾಯ ಆಗಲಿಲ್ಲ. ಸೆಂಟ್ರಲ್ ಸಿಲ್ಕ್ ಬೋರ್ಡಿನವರು ಆ ಒಂದು ದೃಷ್ಟಿಯಿಂದ ಇದನ್ನು ಕೈಬಿಟ್ಟಿದ್ದಾರೆ. ಆದ್ದರಿಂದ ಅದರ ಮೇಲೆ ಕರಾರುವಾಕ್ಕಾದ ಆಪಾದನೆಯನ್ನು ಮಾಡಬೇಕಾಗಿಲ್ಲ. ಮಾನ್ಯ ಶ್ರೀ ನಾಗಣ್ಣನವರು ಆ ರೀತಿ ಮಾತನಾಡಬಾರದಾಗಿತ್ತು. ಅದರ ಬಗ್ಗೆ ಚೆನ್ನಾಗಿ ವಿಷಯಗಳನ್ನು ಇನ್ನೂ ತಿಳಿಯಬೇಕಾಗಿತ್ತು.

4-30 P.M.

ಇನ್ನು ಮಾನ್ಯ ಶ್ರೀ ಸರ್‌ದೇಸಾಯಿಯವರು ಬಜೆಟ್ಟಿನಲ್ಲಿ ಮರಾಠಿ ಮಾತನಾಡುವ ಜನಗಳಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಕೊಟ್ಟಿಲ್ಲವೆಂದು ಹೇಳಿದರು. ಇದು ನ್ಯಾಯವಾದ ಮಾತಲ್ಲ. ಅವರಿಗೆ ಗೊತ್ತಿದೆ. ನಾನು ಬೆಳಗಾಂಗೆ ಹೋದಾಗ ಖಾನಾಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆಲಸಗಳನ್ನು ಮಾಡಬೇಕೆಂದು ಹೇಳಿದಾಗ ಅಲ್ಲಿ ಬರಗಾಲವಿಲ್ಲದಿದ್ದರೂ ನಾನೂ ಒಪ್ಪಿದ್ದೇನೆ. ಖಾನಾಪುರ ತಾಲ್ಲೂಕ್ ಸಹ ಕರ್ನಾಟಕದ ಒಂದು ಭಾಗವಾಗಿರುವುದರಿಂದ ಅಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಹಿಂಜರಿಯುವುದಿಲ್ಲವೆಂದು ಹೇಳಿದೆ ನಮ್ಮ ರಾಜ್ಯದಲ್ಲಿ ಅಲ್ಲಿಯೂ ಮರಾಠಿ ಮಾತನಾಡುವವರು ಹೆಚ್ಚಿಗೆ ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ಅವರದು ಸಂಬಂಧಪಡುವುದಿಲ್ಲ. ಅವರು ಮಹಾರಾಷ್ಟ್ರದಲ್ಲಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಆದರೆ ಮರಾಠಿ ಜನರು ಇರುವ ಪ್ರದೇಶದಲ್ಲಿ ಬೆಳವಣಿಗೆ ಆಗಬಾರದೆಂಬ ಸಣ್ಣತನಕ್ಕೆ ನಾನು ಹೋಗುವುದಿಲ್ಲ. ಬೆಳಗಾಂಗೆ ನಾನೂ ಮತ್ತು ರೆವಿನ್ಯೂ ಮಂತ್ರಿಗಳು ಹೋಗಿದ್ದಾಗ ಅಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಆ ರೀತಿಯಾಗಿ ಮಾತನಾಡಬಾರದಾಗಿತ್ತು.

ಇನ್ನು ಮಾನ್ಯ ಶ್ರೀ ಕೃಷ್ಣನ್ ಅವರು ಈಗ ಈ ಸಭೆಯಲ್ಲಿಲ್ಲ. ಆವರು ಈ ಟ್ಯಾಕ್ಸೇಷನ್ ಬಗ್ಗೆ ಬಹಳ ದೊಡ್ಡದಾಗಿ ಚರ್ಚೆ ಮಾಡಿದರು. ಆದರ ಬಗ್ಗೆ ಅವರು ಒಂದು ಮಾತನ್ನು ಹೇಳಿದರು. ಸೋವಿಯಟ್ ರಷ್ಯಾದಲ್ಲಿ ಇಂತಹ ಟ್ಯಾಕ್ಸೇಷನ್ ಇದೆಯೆಂದು ಹೇಳಿದರು. ಆದರೆ ಸೋವಿಯಟ್ ರಷ್ಯಾದಲ್ಲಿ ಎಲ್ಲಾ ಪದಾರ್ಥಗಳನ್ನು ಅಲ್ಲಿನ ಸರ್ಕಾರ ತಯಾರು ಮಾಡಿದರೂ ಆ ಪದಾರ್ಥಗಳ ಪ್ರೈಸಿಂಗ್ ಪಾಲಿಸಿಯಲ್ಲಿ ಸಾಕಷ್ಟು ಪ್ರಾಫಿಟ್ ಇಟ್ಟಿರುತ್ತಾರೆ. ಅದೇ ಇನ್‌ಡೈರೆಕ್ಟ್ ಟ್ಯಾಕ್ಸ್, ಅಂಥಾದ್ದು ಅಲ್ಲದೆ.

ಮಾನ್ಯ ಶ್ರೀ ಜಿ. ಪುಟ್ಟಸ್ವಾಮಿಯವರು ಷೆಡ್ಯೂಲ್ಡ್ ಕ್ಯಾಸ್ಟ್ ಜನಗಳಿಗೆ ಕೆಲವು ಪ್ರದೇಶಗಳಲ್ಲಿ ರತಕ್ಕ ಬಾವಿಗಳಿಂದ ನೀರು ಕುಡಿಯಲಿಕ್ಕೆ ಆಸ್ಪದವಿಲ್ಲವೆಂದು ಹೇಳಿದರು. ಷೆಡ್ಯೂಲ್ ಕ್ಯಾಸ್ಟ್ ಜನರಿಗೆ ಬಾವಿಗಳಲ್ಲಿ ನೀರು ಕುಡಿಯಲಿಕ್ಕೆ ಆಸ್ಪದ ಕೊಡಬಾರದೆಂದು ಸರ್ಕಾರದ ಉದ್ದೇಶವಲ್ಲ. ಹಾಗೂ ಸರ್ಕಾರದ ಅಭಿಪ್ರಾಯವೂ ಇಲ್ಲ. ಯಾರೂ ಆ ರೀತಿಯಾಗಿ ಹೇಳಲಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾವೂ ತುಂಬಾ ಒಳ್ಳೆಯವರು. ಮಂತ್ರಿಗಳ ಮೇಲೆ ಲಂಚದ ಆಪಾದನೆ ಇದೆ. ತಾವು ಉತ್ತಮವಾದಂಥ ಜನರು. ಆದ್ದರಿಂದ ಬಡ್ಜೆಟ್ಟಿನಲ್ಲಿ ಸ್ವಲ್ಪ ಹಣವನ್ನು ಇದಕ್ಕಾಗಿಯೇ ಇಷ್ಟಿಷ್ಟು ಎಂಬುದಾಗಿ ಇಂತಹ ಮಂತ್ರಿಗಳಿಗೆ ಕೊಟ್ಟು ಸ್ವಚ್ಛ ಆಡಳಿತವನ್ನು ಜನರಿಗೆ ಕೊಡುವುದು ಒಳ್ಳೆಯದಲ್ಲವೇ ?

ಶ್ರೀ ವಾಟಾಳ್ ನಾಗರಾಜ್.— ಇದರ ಅರ್ಥವೇನೆಂದರೆ, ಲಂಚದ ಇಲಾಖೆಯೆಂದು ಪ್ರತ್ಯೇಕವಾಗಿ ಮಾಡಿ ಲಂಚಮಂತ್ರಿಗಳು ಇಷ್ಟು ಎಂಬುದಾಗಿ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

